ಟೆಲಿಫೋನ್ ನಂ. 792

ಲಗ್ನದ ಜವಳಿ
ಗೌ॥ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಅರ್ನಿ, ಬೆಂಗಳೂರ್
ರೇಷ್ಮೆ ಮತ್ತು ನೂಲಿನ ಸೀರೆಗಳು
ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ. ಎ., ಡಿ. ಪ್ರೊಪ್ರೈಟರ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು • ಫೋನ್ 446

ಬಿಡಿ ಪ್ರತಿಗೆ 3 ಕಾಸು

ಕೂರ್ಗ್ ಜ್ಯೂಯೆಲರ್ಸ್
ಸ್ಥಾಪಿತ 1932 ಫೋನ್ 811
ಶ್ರೀ ಕೃಷ್ಣಾ ಜ್ಯೂಯೆಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ನವನವ ಮಾದರಿಯ ಚಿನ್ನ, ಬೆಳ್ಳಿ ಒಡವೆಗಳು, ವಜ್ರದ ಒಡವೆಗಳು ಮತ್ತು ಕಲ್ಲಿನ ಒಡವೆಗಳು ಸಹ ದೊರೆಯುತ್ತವೆ

ಸಂಪುಟ : ೧೯] SADHVI : FRIDAY 1—6—1956 ಮೈಸೂರು : ಶುಕ್ರವಾರ ೧—೬—೧೯೫೬ [ಸಂಚಿಕೆ : ೨೨೦

ಉತ್ತರ ಕೊರಿಯದಿಂದ ತಾಟಸ್ಥ್ಯ ಒಪ್ಪಂದದ ಉಲ್ಲಂಘನೆ

ಕಂದಾಯದ ಪುನರ್ವಿಮರ್ಶೆಯಲ್ಲಿ ಲೋಪದೋಷಗಳು

ಪೌರಸಭಾಧಿವೇಶನದಲ್ಲಿ ಸದಸ್ಯರ ಟೀಕೆ

ಮೈಸೂರು ೧

ನೆನ್ನೆ ಸಂಜೆ ಪುರಸಭೆಯ ಸಾಮಾನ್ಯ ಅಧಿವೇಶನವು ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಎಕ್ಸ್ಟೀರಿಯ ಬಾಲಕಿಯರ ಶಾಲೆಯನ್ನು ವಶಪಡಿಸಿಕೊಳ್ಳುವ ಬಗ್ಗೆಯೂ ಮತ್ತು ಉಮಾ ಟಾಕೀಸಿನ ರಹದಾರಿಯ ಕ್ರಮದ ಬಗ್ಗೆಯೂ ಪುರಸಭೆಯು ಮಾಡಿದ ನಿರ್ಣಯಗಳು ಇನ್ನೂ ಕಾರ್ಯಗತವಾಗದಿದ್ದುದಕ್ಕೆ ಶ್ರೀ ಮಿರ್ಜಾ ನೂರ್ ಹುಸೇನರು ಆಕ್ಷೇಪಿಸಿದಾಗ ಕಮೀಷನರರು ಉತ್ತರವಿತ್ತು, ಶಾಲೆಯ ವಿಷಯದಲ್ಲಿ ಸಧ್ಯದಲ್ಲಿಯೇ ಸರ್ಕಾರಿ ಆಜ್ಞೆಯಾಗಲಿರುವುದೆಂದೂ ಮತ್ತು ಉಮಾ ಟಾಕೀಸಿನ ಬಗ್ಗೆ ಜಿಲ್ಲಾಧಿಕಾರಿಗಳಲ್ಲಿ ಪುನಃ ಪ್ರಸ್ತಾಪಿಸಲಾಗುವುದೆಂದೂ ತಿಳಿಸಿದರು.

ನಗರದಲ್ಲಿ ಕಂದಾಯದ ಪುನರ್ವಿಮರ್ಶೆ ಮಾಡುವಾಗ ಮನೆಗಳ ಶಿಥಿಲತೆ, ಮತ್ತಿತರ ನಷ್ಟಕರ ವಿಷಯಗಳನ್ನು ಗಣನೆಗೆ ತೆಗೆದುಕೊಳ್ಳದೆ ಸುಮ್ಮನೆ ಹೆಚ್ಚಿಸಲಾಗುತ್ತಿದೆಯೆಂದೂ, ಹಾಗೆಯೇ ಇನ್ನೂ ಅನೇಕ ರೀತಿಯ ಅನ್ಯಾಯಗಳಾಗಿವೆಯೆಂದೂ ಡಾ॥ ಬಿ. ಪಿ. ದಾಸರು ತಿಳಿಸಿದಾಗ ಅಧ್ಯಕ್ಷರು ಉತ್ತರವಿತ್ತು, ವಿಮರ್ಶನಾ ಕಾರ್ಯದ ಬಗ್ಗೆ ಆ ರೀತಿ ಮಾತನಾಡುವುದು ಸರಿಯಾದುದಲ್ಲವೆಂದು ತಿಳಿಸಿ ಏನಾದರೂ ಲೋಪಗಳಿದ್ದಲ್ಲಿ ಅದನ್ನು ತಿಳಿಸಿ ಅನಂತರ ಸರಿಪಡಿಸುವ ಅವಕಾಶವಿರುವುದೆಂದು ಹೇಳಿದರು.

ಕಾನೂನಿನ ಹೆಸರಿನಲ್ಲಿ ಜನತೆಗೆ ವಿಪರೀತ ಕಂದಾಯದ ಭಾರ ಹೊರಿಸಿ ಅನ್ಯಾಯ ಮಾಡಲಾಗುತ್ತಿದೆಯೆಂದು ಶ್ರೀ ಗೋವಿಂದಯ್ಯನವರು ನುಡಿದರು. "ಕಂದಾಯವನ್ನು ಹೆಚ್ಚಿಸುತ್ತಿರುವಂತೆಯೇ ಕಡಿಮೆ ಮಾಡಿರುವಿರಾ?" ಎಂದು ಶ್ರೀ ಮಹಮದ್ ಸೇಟರು ಕೇಳಿದಾಗ ಕಮೀಷನರು ಉತ್ತರವಿತ್ತು ಆ ರೀತಿ ನಿದರ್ಶನಗಳೂ ಇವೆಯೆಂದೂ, ಅಂತಹ ಸಂದರ್ಭಗಳಲ್ಲಿ ಕಂದಾಯವನ್ನು ಹೆಚ್ಚಿಸದೆ ಹಾಗೆಯೇ ಬಿಡಲಾಗಿದೆಯೆಂದೂ ಹೇಳಿದರು. ಪುನರ್ವಿಮರ್ಶೆಯಲ್ಲಿ ಹಲವೆಡೆ ಅನ್ಯಾಯವಾಗಿರುವುದೆಂದೂ ಅವರು ಒಪ್ಪಿ ಮತ್ತೆ ಹಲವು ಕಡೆ ಉಪಯೋಗವೂ ಆಗಿದೆಯೆಂದೂ ತಿಳಿಸಿದರು.

ಅಕ್ಟ್ರಾಯ್ ಸುಂಕದ ವಸೂಲಿ ಬಗ್ಗೆ ಸದಸ್ಯರು ನಾನಾ ಲೋಪಗಳನ್ನು ಎತ್ತಿ ತೋರಿಸಿ ಸದ್ಯ ಈ ಕರದಲ್ಲಿ ಲಂಚವು ತಾಂಡವವಾಡುತ್ತಿದೆಯೆಂದು ಆಕ್ಷೇಪಿಸಿದರು. ಅಧ್ಯಕ್ಷರು ಉತ್ತರವಿತ್ತು, ಈ ಬಗ್ಗೆ ಅಕ್ಟ್ರಾಯ್ ಅಧಿಕಾರಿಗಳು ಸಾಧ್ಯವಾದಷ್ಟು ಮಟ್ಟಿನ ಕ್ರಮಗಳನ್ನು ಕೈಗೊಂಡಿದ್ದಾರೆಂದೂ, ನಗರಕ್ಕೆ ಬರುವ ಸರ್ಕಾರಿ ಬಸ್ಸುಗಳಲ್ಲಿ ಸುಂಕದ ಸಾಮಾನುಗಳು ಸುಂಕ ಕೊಡದೆ ಸಾಗಿಸಲ್ಪಡುತ್ತಿವೆಯೆಂಬ ದೂರು ಬಂದಿದೆಯೆಂದೂ ಇದರ ಬಗ್ಗೆ ಆ ಅಧಿಕಾರಿಗಳೊಡನೆ ವ್ಯವಹರಿಸಲಾಗುವುದೆಂದೂ ತಿಳಿಸಿದರು.

ನಗರದಲ್ಲಿ ೬೦೦ ರೂ ಬಾಡಿಗೆ ಕಂದಾಯ ಹೊಂದುವರಿಗೆ ಮಾತ್ರವೇ ನಲ್ಲಿ ಮೀಟರ್ ಹಾಕುವುದರಿಂದ ಅವರು ತಮ್ಮ ಅವಶ್ಯಕ್ಕಿಂತ ಮಿತಿ ಯಷ್ಟು ನೀರನ್ನು ಉಪಯೋಗಿಸಿಕೊಂಡು ಕೇವಲ ಮೀಟರ್ ಬಾಡಿಗೆ ಕೊಡುತ್ತಿದ್ದಾರೆಂದೂ ಆದರೆ ಜನ ೫೦೦ ರೂ ಮತ್ತು ಕೆಳಗಿನವರು ಫ್ಲಾಟ್ ರೇಟನಂತೆ ಮಿತಿಯಿಲ್ಲದೆ ಕಂದಾಯ ತೆರಬೇಕಾಗಿರುವುದು ಸರಿಯಲ್ಲವೆಂದೂ ಅವರಿಗೂ ಮೀಟರ್ ಹಾಕಿ ಸೌಲಭ್ಯ ಕೊಡಬೇಕೆಂದೂ ಶ್ರೀ ಎಂ. ಕೆ. ಲಿಂಗಣ್ಣನವರು ಕೋರಿದರು.

ಆಯುರ್ವೇದ ಕಾಲೇಜು ವರ್ಗಾವಣೆ ಸಧ್ಯಕ್ಕಿಲ್ಲ

ಮೈಸೂರು ೧

ನಗರದಲ್ಲಿರುವ ಆಯುರ್ವೇದ ಕಾಲೇಜನ್ನು ಬೆಂಗಳೂರಿಗೆ ವರ್ಗಾಯಿಸುವಂತೆ ಸರ್ಕಾರದವರು ಈ ಹಿಂದೆ ಮಾಡಿದ್ದ ಆಜ್ಞೆಯನ್ನು ತಾತ್ಕಾಲಿಕವಾಗಿ ರದ್ದುಗೊಳಿಸಿ ಅದರ ಬಗ್ಗೆ ವರದಿ ಮಾಡಿದೆ. ಕಾಲೇಜಿನ ಭವಿಷ್ಯವನ್ನು ಕುರಿತು ಪರಿಶೀಲಿಸಲು ಮಾಜಿ ಪ್ರಿನ್ಸಿಪಾಲ್ ವೈದ್ಯ ಶ್ರೀ ಶ್ರೀನಿವಾಸಮೂರ್ತಿಯವರನ್ನು ನೇಮಿಸಲಾಗಿದೆ. ಅವರು ವರದಿ ಮಾಡಿದನಂತರ ಕಾಲೇಜಿನ ವರ್ಗಾವಣೆ ವಿಷಯದ ಬಗ್ಗೆ ಸರ್ಕಾರದವರು ತೀರ್ಮಾನ ಮಾಡಲಿರುವರು. ಆ ವರೆಗೆ ಕಾಲೇಜು ಮೈಸೂರು ನಗರದಲ್ಲೇ ಒಂದಿರುವುದು.

ಇತ್ತೀಚೆಗೆ ಪ್ರತಿ ಭಾನುವಾರವೂ ವಿದ್ಯುಚ್ಛಕ್ತಿಯಿಲ್ಲದ ಕಾರಣ ನೀರು ಸರಬರಾಜನ್ನು ನಿಲ್ಲಿಸುತ್ತಿರುವುದು ಹೆಚ್ಚು ತೊಂದರೆಯಾಗಿ ಜನರಿಗೆ ವಿಪರೀತ ತೊಂದರೆಯಾಗುತ್ತಿದೆಯೆಂದೂ ಶ್ರೀ ಶ್ರೀಕಂಠಶರ್ಮರು ತಿಳಿಸಿದಾಗ ಕಮೀಷನರರು ಉತ್ತರವಿತ್ತು, ಹಬ್ಬ ಹರಿದಿನಗಳು ಬೀಳುವ ಭಾನುವಾರಗಳಲ್ಲಿ ಕರೆಂಟ್ ನಿಲ್ಲಿಸದಂತೆ ಅಧಿಕಾರಿಗಳನ್ನು ಕೋರಿರುವುದಾಗಿ ತಿಳಿಸಿದರು.

ನಗರದಲ್ಲಿ ಆರ್. ಜಿ. ಬ್ರಾಂಡ್ ತುಪ್ಪದ ತಯಾರಿ ರೀತಿಯ ಬಗ್ಗೆ ಹಲವಾರು ಸದಸ್ಯರು ಆಕ್ಷೇಪಿಸಿ ಮೇಲ್ಕಂಡ ಪದಾರ್ಥವನ್ನು ಪುರಸಭೆಯ ಕೆಮಿಸ್ಟರ ಪರೀಕ್ಷೆಗೆ ಗುರಿಪಡಿಸಬೇಕೆಂದು ಕೋರಿದರು. ತುಪ್ಪವು ಮನುಷ್ಯರ ಉಪಯೋಗಕ್ಕೆ ಅರ್ಹವಾದುದೇ ಎಂಬುದನ್ನು ಪುರಸಭಾಧಿಕಾರಿಗಳು ಪರಿಶೀಲಿಸಬೇಕೆಂದೂ ಮತ್ತು ತಯಾರಿಯ ಸ್ಥಳದ ಸುತ್ತಲೂ ಉಂಟಾಗುವ, ಸಹಿಸಲಾಗದ ದುರ್ಗಂಧದ ನಿವಾರಣೆಗೆ ಕ್ರಮಕೈಗೊಳ್ಳಬೇಕೆಂದೂ ಶ್ರೀ ಚೌಡಯ್ಯನವರು ಕೋರಿದರು.

ಈ ತುಪ್ಪದ ತಯಾರಿಕೆಯಲ್ಲಿ ವೈಟ್ ಆಯಿಲ್ ಮುಂತಾದ ಹಾನಿಕರ ವಸ್ತುಗಳು ಮತ್ತು ಬಹುಜನರ ಧರ್ಮಹಾನಿ ಮಾಡಬಹುದಾದ ಸಾಮಾನುಗಳನ್ನು ಉಪಯೋಗಿಸಲಾಗುತ್ತಿದೆಯೆಂದು ಶ್ರೀ ಮಿರ್ಜಾ ನೂರ್ ಹುಸೇನರು ಆಪಾದಿಸಿ, ಆ ಬಗ್ಗೆ ಸೂಕ್ತ ತನಿಖೆಯಾಗಿ ಬೇಕೆಂದು ಕೋರಿದರು. ಆರೋಗ್ಯಾಧಿಕಾರಿಗಳು ಉತ್ತರವಿತ್ತು, ಮೇಲ್ಕಂಡ ವಸ್ತುವು ಕಾನೂನಿನನುಸಾರವಾಗಿ ವನಸ್ಪತಿಯೆಂದು ಹೇಳಲು ಬಾರದೆಂದೂ, ಆದ್ದರಿಂದ ತಯಾರಕರ ಮೇಲೆ ಕ್ರಮ ಕೈಗೊಳ್ಳಲು ಸಭೆಗೆ ಅಧಿಕಾರ ಉಂಟಾಗುವುದಿಲ್ಲವೆಂದೂ ತಯಾರಕರು ಪರೀಕ್ಷೆಗೆ ಒಳಪಡಲು ತಿರಸ್ಕರಿಸಿದರೆ ಲೈಸೆನ್ಸು ಸಹ ಆಗುವುದಿಲ್ಲವೆಂದೂ ತಿಳಿಸಿದರು.

ಲಂಚ ಪಡೆದುದಕ್ಕಾಗಿ ನ್ಯಾಯ ಇಲಾಖೆ ನೌಕರರ ವಜಾ

ಬೆಂಗಳೂರು ೧

ಸಂಸ್ಥಾನದ ನ್ಯಾಯಾಂಗ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರ್ ಶ್ರೀ ಅಬ್ದುಲ್ ರಬ್ ಮತ್ತು ಇತರ ಮೂವರು ಇನ್ಸ್‌ಪೆಕ್ಟರುಗಳು ಲಂಚ ಸ್ವೀಕರಿಸಿದರೆಂಬ ಆಪಾದನೆಗಾಗಿ ಅವರನ್ನು ಕೆಲಸದಿಂದ ವಜಾ ಮಾಡಲಾಗಿದೆ. ಇಬ್ಬರದ ಸಂಬಳದಲ್ಲಿ ಸುಮಾರು ೩೦ ರೂಪಾಯಿ ವರೆಗೆ ದುರುಪಯೋಗವಾಗಿದೆಯೆಂದು ಹೇಳಲಾಗಿದೆ.

ಸಂಸ್ಥಾನದ ಗೃಹ ವಸತಿ ಸಮಿತಿಯ ಸದಸ್ಯರ ನೇಮಕ

ಮೈಸೂರು ಗೃಹ ವಸತಿ ಸಮಿತಿಯ ಶಾಸನವು ಜಾರಿಯಿಂದ ಸಂಸ್ಥಾನಾದ್ಯಂತ ಜಾರಿಗೆ ಬರಲಿವೆ. ಶಾಸನದ ಅಂಗವಾಗಿ ಸರ್ಕಾರದವರು ಸ್ಥಳೀಯ ಸಂಸ್ಥೆಗಳ ಕಮೀಷನರರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುತ್ತಾರೆ. ಅದರಲ್ಲಿ ಬೆಂಗಳೂರು ನಗರ ಅಭಿವೃದ್ಧಿ ಸಮಿತಿ ಅಧ್ಯಕ್ಷರು, ಸಹಕಾರ ಸಂಘಗಳ ರಿಜಿಸ್ಟ್ರಾರ್, ಶ್ರೀಗಳಾದ ಎ. ರಾಮಣ್ಣ, ಕೆ. ಎಸ್. ಕುಮಾರ ಮತ್ತು ಬಳ್ಳಾರಿಯ ಡಿ. ಗುಂಡೂರಾಯರು ಸದಸ್ಯರಾಗಿರುವರು.

ಬೊಂಬಾಯಿ ಮೇಯರರ ಮೇಲೆ ಮಹಾರಾಷ್ಟ್ರರ ಧಾಳಿ

ಬೊಂಬಾಯಿ ನಗರದ ಮೇಯರ್ ಎಸ್. ಎ. ಕಾಶೀರ್ ರವರು ನೆನ್ನೆ ಪ್ರಧಾನ ನೆಹರೂರವರು ಭಾಷಣ ಮಾಡಿದ ಸಭೆಯೊಂದರಿಂದ ಹಿಂದಿರುಗುತ್ತಿದ್ದಾಗ, ಅವರ ಕಾರನ್ನು ಮಹಾರಾಷ್ಟ್ರ ಪರ ಘೋಷಣೆಗಳನ್ನು ಕೂಗುತ್ತಿದ್ದ ಗುಂಪಿನ ಜನರು ತಡೆದು ಅವರನ್ನು ಹೊಡೆದರೆಂದು ವರದಿಯಾಗಿದೆ. ಮೋಟಾರಿನ ಕಿಟಕಿ ಗಾಜುಗಳನ್ನು ಒಡೆಯಲಾಯಿತು. ಕಾರಿನ ಮೇಲೆ ಹಾಕಲಾಗಿದ್ದ ಪೌರಸಭಾ ಧ್ವಜವನ್ನು ಕಿತ್ತು, ಮೇಯರರ ಸೇವಕರು ಧರಿಸಿದ್ದ ಗಾಂಧಿ ಟೋಪಿಯನ್ನು ಕಸಿದು ಎಸೆಯಲಾಯಿತು.

ಸಿಂಹಳದಲ್ಲಿ ಗಲ್ಲು ಶಿಕ್ಷೆ ರದ್ದಿಗೆ ಸೆನೆಟ್ಟಿನ ತಿರಸ್ಕಾರ

ಸಿಂಹಳದ ಪಾರ್ಲಿಮೆಂಟಿನ ಮೇಲ್ಮನೆಯಾದ ಸೆನೆಟ್ ಸಭೆಯು ಆ ರಾಷ್ಟ್ರದಲ್ಲಿ ಮೂರು ವರ್ಷ ಕಾಲ ಗಲ್ಲು ಶಿಕ್ಷೆಯ ರದ್ದು ಮಾಡಬೇಕೆಂಬ ಶಾಸನವನ್ನು ನೆನ್ನೆ ೧೨–೧೦ ಓಟುಗಳಿಂದ ತಿರಸ್ಕರಿಸಿತು. ಸಿಂಹಳದ ಇತಿಹಾಸದಲ್ಲಿ ಕೆಳಗಿನ ಸಭೆಯು ಅಂಗೀಕರಿಸಿದ ಮಸೂದೆಯೊಂದನ್ನು ಮೇಲ್ಮನೆಯು ತಿರಸ್ಕರಿಸಿರುವುದು ಇದೇ ಮೊದಲು. ಮಸೂದೆಯು ಈಗ ಪುನಃ ಕೆಳ ಸಭೆಯ ಪರಿಶೀಲನೆಗೆ ಹೋಗಲಿದೆ.

ಮೈಸೂರು ಜೈಲಿನ ವೀಕ್ಷಕರು

ಮೈಸೂರು ನಗರದ ಜೈಲಿನ ವೀಕ್ಷಕರಾಗಿ ಶ್ರೀಗಳಾದ ಟಿ. ಎಸ್. ಸುಬ್ಬಣ್ಣ, ಟಿ. ವೆಂಕಟರಮಣಯ್ಯ, ಕೆ. ಎಸ್. ಸೂರ್ಯನಾರಾಯಣರಾವ್, ಎಲ್. ಶ್ರೀಕಂಠಯ್ಯ ಮತ್ತು ಶ್ರೀಮತಿ ಸುನಂದಮ್ಮನವರನ್ನು ೨ ವರ್ಷ ಅವಧಿಗೆ ನೇಮಿಸಲಾಗಿದೆ.

ಡಾ॥ ಲೋಹಿಯಾರವರ ಆಗಮನ

ಸ್ವೀ. ವ. ಸಂ.] ಬೆಂಗಳೂರು ೧

ಭಾರತದ ಸಮಾಜವಾದಿ ಪಕ್ಷದ ಕಾರ್ಯದರ್ಶಿ ಡಾ॥ ರಾಮಮನೋಹರ ಲೋಹಿಯಾರವರೂ, ಇತರ ಮುಖಂಡರೂ ಈ ದಿನ ಇಲ್ಲಿಗೆ ಆಗಮಿಸಿದರು. ಅವರು ಪಕ್ಷದ ಕಾರ್ಯಕಾರಿ ಸಮಿತಿಯ ಸಭೆಯಲ್ಲಿ ಭಾಗವಹಿಸಲು ೪ ದಿನಗಳವರೆಗೆ ಇಲ್ಲಿ ತಂಗುವರು.

ರೇಷ್ಮೆ ಕಾರ್ಮಿಕರ ಮುಷ್ಕರವಿಲ್ಲವೇ?

ಇಲ್ಲಿನ ಸರಕಾರಿ ರೇಷ್ಮೆ ಕಾರ್ಖಾನೆಯ ಕೆಲಸಕ್ಕೆ ಈ ಮಧ್ಯಾಹ್ನ ೨ ಗಂಟೆವರೆಗೂ ೮೦೦ ಕಾರ್ಮಿಕರಾರೂ ಸತ್ಯಾಗ್ರಹ ಹೂಡಲು ಬಂದಿರಲಿಲ್ಲ. ಪೋಲೀಸರು ಬಂದು ಹೆಚ್ಚಿನ ಮುನ್ನೆಚ್ಚರಿಕೆ ಕ್ರಮ ತೆಗೆದುಕೊಂಡಿರುತ್ತಾರೆ. ಈ ದಿನ ಸತ್ಯಾಗ್ರಹ ನಡೆಸುವುದಾಗಿ ಕಾರ್ಮಿಕರು ನಿರ್ಧರಿಸಿದ್ದರು.

ಕೊರಿಯದ ಕಮ್ಯೂನಿಸ್ಟರಿಂದ ಶಾಂತಿ ಒಪ್ಪಂದದ ಉಲ್ಲಂಘನೆ

ಕೊರಿಯಾ ಶಾಂತಿ ಒಪ್ಪಂದವನ್ನು ಕಮ್ಯೂನಿಸ್ಟರು ಮುರಿದರೆಂಬ ಕಾರಣಕ್ಕಾಗಿ ತಾಟಸ್ಥ್ಯ ಸಮಿತಿಯು ತನ್ನ ಕೆಲಸವನ್ನು ತಾತ್ಕಾಲಿಕವಾಗಿ ನಿಲ್ಲಿಸಿರುವುದೆಂದು ವರದಿಯಾಗಿದೆ. ಉತ್ತರ ಕೊರಿಯದವರು ಎಲ್ಲಾ ಶರತ್ತುಗಳನ್ನು ಪಾಲಿಸುವವರೆಗೂ ಸಮಿತಿಯು ಕೆಲಸವು ನಡೆಯುವುದಿಲ್ಲವೆಂದು ವಿಶ್ವಸಂಸ್ಥೆಯ ಪ್ರಧಾನ ಕಛೇರಿಯು ತಿಳಿಸಿದೆ.

ಸಮಿತಿಯು ಕೈಕೆಳಗೆ ಇರುವ ಪೋಲೆಂಡು ಮತ್ತು ಚೆಕೊಸ್ಲೊವೇಕಿಯಾ ಪರಿಶೀಲಕರು ತಾಟಸ್ಥ್ಯ ನಿಯಮಗಳನ್ನು ಉಲ್ಲಂಘಿಸಿದ್ದರೆಂದು ಹೇಳಲಾಗಿದೆ. ದಕ್ಷಿಣ ಕೊರಿಯದಿಂದ ಕಮ್ಯೂನಿಸ್ಟ್ ಇನ್ಸ್‌ಪೆಕ್ಟರುಗಳನ್ನು ಒಂದು ವಾರದೊಳಗೆ ಹೊರಕ್ಕೆ ಕಳುಹಲಾಗುವುದೆಂದು ವರದಿಯಾಗಿದೆ.

ಬೊಂಬಾಯಿಗೆ ನೆಹರೂರವರ ಆಗಮನ

ಸಂಯುಕ್ತ ಮಹಾರಾಷ್ಟ್ರ ವಾದಿಗಳಿಂದ ಕಪ್ಪು ಬಾವುಟ ಪ್ರದರ್ಶನ

ಪ್ರಧಾನ ನೆಹರೂರವರು ಎ. ಐ. ಸಿ. ಸಿ. ಅಧಿವೇಶನದಲ್ಲಿ ಭಾಗವಹಿಸುವುದಕ್ಕಾಗಿ ನೆನ್ನೆ ದೆಹಲಿಯಿಂದ ಬೊಂಬಾಯಿಗೆ ವಿಮಾನದಲ್ಲಿ ಆಗಮಿಸಿದರು. ಅವರನ್ನು ರಾಜಭವನಕ್ಕೆ ಮೋಟಾರಿನಲ್ಲಿ ಕರೆದೊಯ್ಯುತ್ತಿದ್ದಾಗ ಮಾರ್ಗದಲ್ಲಿ ಹಲವೆಡೆ ನೂರಾರು ಜನರು ಮತ್ತು ಶಾಲಾ ಬಾಲಕರು ಬೊಂಬಾಯಿ ರಾಜಧಾನಿಯಾಗುಳ್ಳ ಸಂಯುಕ್ತ ಮಹಾರಾಷ್ಟ್ರದ ರಚನೆಯಾಗಬೇಕೆಂದು ಸೂಚಿಸುವ ಬೋರ್ಡುಗಳನ್ನು ಪ್ರದರ್ಶಿಸಿದರು. ಕೆಂಪು ಬಣ್ಣದ ಪ್ಲಾಕಾರ್ಡುಗಳನ್ನು ಕೆಲವು ಸ್ಥಳಗಳಲ್ಲಿ ಪ್ರದರ್ಶಿಸಲಾಯಿತು. ಅನೇಕ ಕಡೆ ಪ್ರದರ್ಶನಗಳು ಮೌನದಿಂದ ನಡೆಯುತ್ತ ಉತ್ತರ ಬೊಂಬಾಯಿಯಲ್ಲಿ ಭವನಗಳ ಮೇಲೆ ಕಪ್ಪು ಬಾವುಟವನ್ನು ಹಾರಿಸಲಾಗಿತ್ತು. ಮನೆಯ ಬಿದಿರುಮಟ್ಟಿನ ಮೇಲೆ ಕಪ್ಪು ಬಣ್ಣದ ಬಟ್ಟೆಗಳನ್ನು ಕಟ್ಟಲಾಗಿತ್ತು.

ಮೈಸೂರು ಬೆಂಗಳೂರು ಮಧ್ಯೆ ಬ್ರಾಡ್‌ಗೇಜ್ ರೈಲ್ವೆಗಾಗಿ ಒತ್ತಾಯ

ಪುರಸಭೆಯಲ್ಲಿ ನಿರ್ಣಯ

ಮೈಸೂರು ೧

ಮೈಸೂರು ನಗರ ಮತ್ತು ಸುತ್ತಲ ಪ್ರದೇಶಗಳ ಕೈಗಾರಿಕಾಭಿವೃದ್ಧಿಯ ದೃಷ್ಟಿಯಿಂದ ಬೆಂಗಳೂರು ಮೈಸೂರು ನಗರಗಳ ನಡುವಿನ ಮೀಟರ್ ಗೇಜ್ ರೈಲು ಮಾರ್ಗವನ್ನು ಬ್ರಾಡ್‌ಗೇಜಿಗೆ ಪರಿವರ್ತಿಸಲು ಕೇಂದ್ರ ಸರ್ಕಾರವನ್ನು ಪ್ರಾರ್ಥಿಸಬೇಕೆಂದು ನೆನ್ನೆ ನಡೆದ ಪುರಸಭೆಯ ಸಾಮಾನ್ಯ ಅಧಿವೇಶನದಲ್ಲಿ ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಈ ಬಗ್ಗೆ ನಿರ್ಣಯವನ್ನು ಶ್ರೀ ಎಂ ಕೆ ಲಿಂಗಯ್ಯನವರು ಮಂಡಿಸಿ ಮಾತನಾಡುತ್ತಾ, ಆದಾಯಕ್ಕೂ ವಿಸ್ತಾರದ ಸಾಲದ ದೊರೆ [illegible] ಪುರಸಭೆಯ ಸ್ಥಿತಿ ಸುಧಾರಿಸಲು ಮತ್ತು ನಗರದಲ್ಲಿ ನಿರುದ್ಯೋಗವು ತೊಲಗಲು ಕೈಗಾರಿಕಾಭಿವೃದ್ಧಿಯು ಅತ್ಯಗತ್ಯವೆಂದೂ, ಇದಕ್ಕೆ [illegible] ಯಂತ್ರೋಪಕರಣಗಳನ್ನು ತರಲು ನಗರಕ್ಕೆ ಬ್ರಾಡ್ ಗೇಜ್ ರೈಲು ಮಾರ್ಗ ಅವಶ್ಯವೆಂದೂ ತಿಳಿಸಿ ಈ ಬಗ್ಗೆ ಕೇಂದ್ರ ಸರ್ಕಾರದ ಮುಖಂಡರನ್ನು [illegible] ಬೇಕೆಂದರು.

ಶ್ರೀ [illegible] ಯ ಬೇಡಿಕೆಗೆ ಇತ್ಯರ್ಥಕ್ಕೆ ಸ್ಪಷ್ಟವಾದ ಕಾರ್ಯಕ್ರಮವಿರಬೇಕೆಂದು ಸೂಚಿಸಿ [illegible]

[illegible]

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ [illegible] ಸರ್ಕಾರವನ್ನು [illegible]

ಸತ್ಯಾಗ್ರಹದ ದುರುಪಯೋಗದ ಬಗ್ಗೆ ನೆಹರೂರವರ ಖಂಡನೆ

ನೆಹರೂರವರು ಲೋಕಸಭೆಯಲ್ಲಿ ಮಾತನಾಡುತ್ತಾ, ಸತ್ಯಾಗ್ರಹದ ದುರುಪಯೋಗವನ್ನು ಖಂಡಿಸಿದ್ದಾರೆ. ಪ್ರತಿಯೊಬ್ಬನೂ ಈಗ ಸತ್ಯಾಗ್ರಹ ಮಾಡುವವನಾಗಿದ್ದಾನೆಂದು ಅವರು ಹೇಳಿದರು. ಕಲ್ಲು ಬೀರುವವನು, ಕಾನೂನು ಭಂಗ ಮಾಡುವವನು, ಮತ್ತೊಬ್ಬನ ತಲೆ ಒಡೆಯುವವನು—ಇವರೆಲ್ಲರೂ ಸತ್ಯಾಗ್ರಹಿಗಳಾಗಿರುತ್ತಾರೆಂದು ಅವರು ನುಡಿದು "ಸತ್ಯಾಗ್ರಹ" ಪದದ ದುರುಪಯೋಗವು ಅಸಾಧಾರಣವಾದುದೆಂದು ತಿಳಿಸುತ್ತಾರೆ.

ಪಾಕಿಸ್ತಾನದಲ್ಲಿ ೪ ಲಕ್ಷ ಟನ್ ಆಹಾರ ಧಾನ್ಯ ಕೊರತೆ

ಪೂರ್ವ ಪಾಕಿಸ್ತಾನದಲ್ಲಿ ಸುಮಾರು ೪ ಲಕ್ಷ ಟನ್ ಆಹಾರ ಧಾನ್ಯದ ಕೊರತೆ ಎಂದಿರುವುದರಿಂದ ಉದ್ಭವ ಪರಿಸ್ಥಿತಿಯನ್ನು ತೀವ್ರತೆಯಿಂದ [illegible] ಈಗ [illegible] ಉತ್ಪತ್ತಿಯು [illegible] ಪಾಕಿಸ್ತಾನದ ಆಹಾರ [illegible]

ದೇವಾಂಗ ಸಂಘದ ವಿದ್ಯಾರ್ಥಿ ನಿಲಯ

[illegible] ದೇವಾಂಗ ವಿದ್ಯಾರ್ಥಿಗಳಿಗೆ [illegible]

ಬೊಂಬಾಯಿಗೆ ಮುಖ್ಯ ಮಂತ್ರಿ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಇಂದು ವಿಮಾನದಲ್ಲಿ ಬೊಂಬಾಯಿಗೆ ತೆರಳಿ [illegible]

[illegible]

ವಿವಾಹ ಮಹೋತ್ಸವಗಳು

ನಂಜನಗೂಡಿನ ಶ್ರೀ ವೇದವ್ಯಾಸಾಚಾರ್ಯರು ತಮ್ಮ ಸಹೋದರ ಶ್ರೀ ರಾಮಚಂದ್ರರಾಯರ ದ್ವಿತೀಯ ಕುಮಾರಿ ಸೌ॥ ಸರಳಾದೇವಿಯನ್ನು ಬನವಾಳನ [illegible] ಶ್ರೀ ಎಸ್ ಕೃಷ್ಣಮೂರ್ತಿಯವರ ಮಗ ಶ್ರೀ [illegible] ರವರಿಗೆ ಕೊಟ್ಟು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು.

ಶ್ರೀ ಹೆಚ್ ಎಸ್ ಶ್ರೀನಿವಾಸ ದೇಶಿಕರ್‌ರವರು ತಮ್ಮ ಕುಮಾರಿ ಸೌ॥ ಎಸ್ [illegible] ರವರನ್ನು ಮಂಡ್ಯ ತಾಲ್ಲೂಕು ದಣಾಯಕನಪುರದ ಶ್ರೀ ಡಿ ಎ ಶ್ರೀನಿವಾಸರವರ ಕಿರಿಯ ಸಹೋದರ ಶ್ರೀ ಡಿ ಎ ಸಂಪತ್ಕುಮಾರ್‌ರವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು.

ವಿದ್ಯಾ ಇಲಾಖೆಯ ನಿವೃತ್ತ ನೌಕರರಾದ ಶ್ರೀ ವೈ ವೇದವ್ಯಾಸಾಚಾರ್ಯರು ತಮ್ಮ ಸೋದರಳಿಯ ಶ್ರೀ ಎ ಶ್ರೀನಿವಾಸರಾಯರ ಕುಮಾರಿ ಸೌ॥ ಲಕ್ಷ್ಮಮ್ಮನನ್ನು ಮಾವಿನಕಾಯಿಹಳ್ಳಿ ಶ್ಯಾನುಭೋಗ್ ಶ್ರೀ ಶೇಷಗಿರಿರಾಯರ ಪುತ್ರ ಶ್ರೀ ಎಂ ಸುಬ್ಬರಾಯರಿಗೆ ಕೊಟ್ಟು ಗುಡಿಬಂಡೆ ತಾಲ್ಲೂಕಿನ [illegible] ನೆನ್ನೆ ವಿವಾಹವನ್ನು ನಡೆಸಿದರು.

ಸಂಸ್ಥಾನದ ರಾಜಪುತ್ರರ ಸಮ್ಮೇಳನ

ಸಂಸ್ಥಾನದಲ್ಲಿರುವ ರಾಜಪುತ್ರರ ಸಮ್ಮೇಳನವು ಇದೇ ೭ ಮತ್ತು ೭ನೇ ತಾರೀಖುಗಳಲ್ಲಿ ಬೆಂಗಳೂರಿನ ಸರ್ ಕೆ ಪಿ ಪುಟ್ಟಣ್ಣಚೆಟ್ಟರ ಪುರಭವನದಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರಿಂದ ಉದ್ಘಾಟಿಸಲ್ಪಡುವುದು. ಹೈದರಾಬಾದಿನ ಮಾಜಿ ಸಚಿವ ಶ್ರೀ [illegible] ರವರು ಅಧ್ಯಕ್ಷತೆ ವಹಿಸುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಜೂಜಾಟಕ್ಕಾಗಿ ಶಿಕ್ಷೆ

ಸ್ವಂ ವ] ನಂಜನಗೂಡು

ಬೆಳಗಲಿ ಗ್ರಾಮದ ಮಲ್ಲಪ್ಪ ಎಂಬಾತನ ಮನೆಯಲ್ಲಿ ಕಳೆದ ೨೩ ನೇ ತಾರೀಖು ಗುರುಮಲ್ಲಪ್ಪ ವಗೈರೆ ೧೭ ಜನರು ಇಸ್ಪೀಟು ಜೂಜಾಡುತ್ತಿದ್ದುದನ್ನು ಪತ್ತೆ ಹಚ್ಚಿ ಇಲ್ಲಿನ ವಿಶೇಷ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಹೂಡಲಾದ ಮೊಕದ್ದಮೆಯಲ್ಲಿ ನ್ಯಾಯಾಧೀಶ ಶ್ರೀ [illegible] ಎಂ ಸಿದ್ದಪ್ಪನವರು ಆಪಾದಿತರಿಗೆ ತಲಾ [illegible] ರೂ ದಂಡವನ್ನೂ ಮತ್ತು ಮನೆ ಮಾಲೀಕ ಮಲ್ಲಪ್ಪ ಎಂಬಾತನಿಗೆ ೨೦೦ ರೂ ದಂಡ ಮತ್ತು ಒಂದು ತಿಂಗಳು ಸಜಾ, ಜುಲ್ಮಾನೆ ಕೊಡಲು ತಪ್ಪಿದರೆ ಮತ್ತೆ ೮ ತಿಂಗಳು ಸಜಾ ವಿಧಿಸಿರುವರು.

ಮೈಸೂರು ಪೇಟೆ ಧಾರಣೆ

	ರೂ	ಮುಂದ	ರೂ ಪೇ
ಕಡಲೇಕಾಯಿ	೧೩ ೦ ೦		
ಹುರುಳಿ	೨೪ ೧೨ ೦		೨೦ ೧೪
ಹೆಸರು	೫೨ ೧೦ ೦		
ಹಲಸಂದೆ	೪೪ ೧೪ ೦		೫೨ ೧೨
ಹುಣಿಸೇಕಾಯಿ	೭ ೧೪ ೦		
ಹುಣಸೇಹಣ್ಣು	೮ ೭ ೦		
ಮೆಣಸಿನಕಾಯಿ	೧೧ ೨ ೦		೨೦ ೮
ತೆಂಗಿನಕಾಯಿ ೧೦೦೦	೧೧೨ ೮ ೦		೨೨೭ ೦

"ಮದುರೈ ವೀರನ್" ಚಿತ್ರದ ೫೦ನೇ ದಿನೋತ್ಸವ

ನಗರದ ಲಕ್ಷ್ಮಿ ಚಿತ್ರ ಮಂದಿರದವರು ತಮ್ಮಲ್ಲಿ ಪ್ರದರ್ಶಿತವಾಗುತ್ತಿರುವ "ಮದುರೈ ವೀರನ್" ಚಿತ್ರದ ೫೦ನೇ ದಿನೋತ್ಸವವನ್ನು ನೆನ್ನೆ ಆಚರಿಸಿದಾಗ ನಗರದ ಪತ್ರಿಕೋದ್ಯೋಗಿಗಳನ್ನು ಆಹ್ವಾನಿಸಿ ಸತ್ಕರಿಸಿದರು.

ಜಾಯಿಕಾಯಿ ಹಲಗೆಗಳು

ಉತ್ತಮವಾದ ಜಾಯಿಕಾಯಿ ಹಲಗೆಗಳು ದೊರೆಯುತ್ತವೆ ಕೂಡಲೇ ವಿಚಾರಿಸಿ

ಸಾಧ್ವಿ ಆಫೀಸ್, ಮೈಸೂರು

Paly
BRONKOL
for ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
71/1 A S Street,
BANGALORE-2

COMMERCIAL INSTITUTE
Attached to
SARADA VILAS HIGH SCHOOL,
Krishnamurthypuram, Mysore

ADMISSIONS are being received for Typewriting Shorthand, ACCOUNTANCY, COMMERCE, BANKING and COMMERCIAL GEOGRAPHY Expert Coaching by Experienced Staff. For particulars apply to the undersigned during working hours of the Institute

K V Ramaya,
Head Master

ಹಾಸಿಗೆ - ದಿಂಬು

[illegible]

ಬಾಬುಸಾಬ್ ಕಂಪೆನಿ,

[illegible] ಮೈಸೂರು

SREE GANESHA
TALKIES
TO-DAY LAST DAY
FABULOUS SENORITA
From 2-6-56
ROMEO AND JULIET
(Technicolor)
(These pictures shall be shown in wide angle.
From 5-6-56 For 3 Days
THE FINAL TEST
A rare opportunity for Cricket enthusiasts

ಒಲಂಪಿಯಾ ಟಾಕೀಸ್
1-6-56 ರಿಂದ [illegible]
ಎ ವಿ ಎಂ ರವರ ಹಿಂದಿ ಚಿತ್ರ
ಭಾಯ್ ಭಾಯ್
ಪಾತ್ರ — [illegible] ಕುಮಾರ್, [illegible]

ಮೋತಿಲಾಲ್ ಟಾಕೀಸ್
[illegible]
3-6-56 ರಿಂದ [illegible]
[illegible] ಹಿಂದಿ ಚಿತ್ರ
ಸುಲ್ತಾನಾ ಡಾಕು
ಪಾತ್ರ – [illegible]
ಕೊನೆ ಎರಡು ದಿನಗಳು [illegible]

Edited Printed and Published by A R Nagaraja at Sadhvi Press D Subbiah Road Mysore

ಪ್ರಭಾ ★ [illegible]
[illegible]
ಇಕ್ಸ್‌ಪ್ರೆಸ್
[ವಯಸ್ಕರಿಗೆ ಮಾತ್ರ]
[illegible] 1-6-56 ರಿಂದ [illegible] ಬಾಬ್ ಅಂಡ್ ಸ್ಯಾಲಿ

ಪ್ರಭುದೇವಾ ಥಿಯೇಟರ್
(ಸದ್ದು ಟಾಕೀಸ್)
1-6-56 ರಿಂದ : [illegible]
ಸಿ. ಐ. ಡಿ. ★ C. I. D.
ಕನ್ನಡ ಚಿತ್ರ ಪಾತ್ರ - [illegible]
ಮುಂದಿನ ಬದಲಾವಣೆ ★ ಕಣ್ಣಿನ ಮಣಿಗಳ್ ★ ತಮಿಳು ಚಿತ್ರ

ಟೆಲಿಫೋನ್ ನಂ. 792

ನಮ್ಮಲ್ಲಿ ಎಲ್ಲಾ ತರಹ
ಉತ್ತಮವಾದ
ಕನ್ನಡಕಗಳು
ಸುಲಭ ಬೆಲೆಗೆ ದೊರೆಯುತ್ತವೆ
ವಿಷನ್ ಹೌಸ್
— ಮಾಲೀಕರು —
S. V. ಗೋಕುಲ್ B.Sc.,
ಧನ್ವಂತರಿ ರಸ್ತೆಯಲ್ಲಿರುವ ಸ್ಟ್ಯಾ
ಮುನಿಸಿಪಲ್ ಕಟ್ಟಡದ ಮುಂದೆ
ಮನೆ 4ನೇ ನಂಬರು ರೂಮು
ಒಮ್ಮೆ ಪರೀಕ್ಷಿಸಿ ತೃಪ್ತಿಹೊಂದಿರಿ !

ಬಿಡಿ ಪ್ರತಿ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : SATURDAY 2—6—1956 ಮೈಸೂರು : ಶನಿವಾರ ೨—೬—೧೯೫೬ [ಸಂಚಿಕೆ : ೨೩೦

ರಷ್ಯಾ ವಿದೇಶಾಂಗ ಮಂತ್ರಿ ಮೊಲಟೋವರ ರಾಜೀನಾಮೆ

ರೇಷ್ಮೆ ಕಾರ್ಮಿಕರಿಗೂ ಪೊಲೀಸರಿಗೂ ಘರ್ಷಣೆ

ಲಘು ಲಾಠಿ ಪ್ರಹಾರ : ೩೦ ಮಂದಿಗೆ ಗಾಯ

ಬೆಂಗಳೂರು ೨

ನೆನ್ನೆ ಅರಸರ ಕಛೇರಿಗೆ ಹೋಗಿ ಪ್ರದರ್ಶನ ನಡೆಸಲು ಉದ್ಯುಕ್ತರಾಗಿದ್ದ ೫೦೦ ಮಂದಿ ರೇಷ್ಮೆ [illegible]ಲಸಗಾರರಿಗೂ, ಪೊಲೀಸರಿಗೂ ವಿದ್ಯುಚ್ಛಕ್ತಿ [illegible]ಛೇರಿ ಬಳಿ ಘರ್ಷಣೆಯಾಗಿ ೯ ಮಂದಿ ಪೊಲೀ[illegible]ರೂ ಸೇರಿ ೩೦ ಜನರಿಗೆ ಅಲ್ಪಸ್ವಲ್ಪ ಗಾಯಗ[illegible]ದಮವು. ರೇಷ್ಮೆ ಕಾರ್ಖಾನೆಗಳನ್ನು ಮಾಲೀ[illegible]ರು ೧೫ ದಿನಗಳಿಂದ ಮುಚ್ಚಿರುವುದರ ಬಗ್ಗೆ ತ[illegible]ಮಗೆ ನ್ಯಾಯ ದೊರಕಿಸಿಕೊಳ್ಳಲು ಕಾರ್ಮಿಕರು ಮೆರವಣಿಗೆಯಲ್ಲಿ ಬಂದಿದ್ದರು. ಅದರಲ್ಲಿ ೫೦ [illegible]ಂದಿ ಮಹಿಳೆಯರೂ ಇದ್ದರು. ಕೃಷ್ಣರಾಜೇಂ[illegible]ದ್ರ ಸರ್ಕಲ್ ಬಳಿ ಮೊದಲು ಪೊಲೀಸರು ಅವ[illegible]ನ್ನು ತಡೆಯಲು ಪ್ರಯತ್ನಿಸಿದರು. ಆದರೂ, ಅವರ[illegible] ಕಾರ್ಮಿಕರು ಮುಂದೆ ಹೋದಾಗ ಪೊಲೀಸರು [illegible]ವರನ್ನು ವಿದ್ಯುಚ್ಛಕ್ತಿ ಕಛೇರಿ ಬಳಿ ನಿಲ್ಲಿಸಿದ[illegible] ಎಂದೂ ಹೇಳಲಾಗಿದೆ. ಪೊಲೀಸರು ಲಘುವಾದ ಪ್ರ[illegible]ಹಾರ ಮಾಡಿದರು. ೬ ಜನ ಕೆಲಸಗಾರರಿಗೆ ತೀ[illegible]ವ್ರ ಗಾಯವಾಗಿ ಅವರನ್ನು ಆಸ್ಪತ್ರೆಗೆ ಕರೆದೊ[illegible]ಯ್ಯಲಾಯಿತು.

ಅನಂತರ ಅವರ ಪ್ರತಿನಿಧಿಗಳಾದ ಶ್ರೀಗಳು [illegible] ಎಸ್ ಕೃಷ್ಣನ್, ಜಯರಾಂ ಮತ್ತು ಎಂ [illegible] ಸಿದ್ದಪ್ಪ ಮುಂತಾದವರು ಪೊಲೀಸು ಅಧಿಕಾ[illegible]ರಿಗಳೊಡನೆ ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನ[illegible]ವರನ್ನು ಅವರ ಕಛೇರಿಯಲ್ಲಿ ಭೇಟಿ ಮಾಡಿದ್ದ[illegible] ಕಾರ್ಮಿಕರ ಸಂಘದವರು ಕಳೆದ ೨೦ನೇ ತಾ[illegible] ಮಾಲೀಕರು ಮತ್ತು ಕಾರ್ಮಿಕ ಪ್ರತಿನಿಧಿಗ[illegible]ಳಿಗೆ ಆದ ಒಪ್ಪಂದದ ಪ್ರಕಾರ ಎಲ್ಲಾ ಮೊಕದ್ದ[illegible]ಮೆಗಳನ್ನು ಕೈಗಾರಿಕಾ ನ್ಯಾಯ ಮಂಡಲದಿಂದ [illegible]ವಾಪಸು ತೆಗೆದುಕೊಳ್ಳಬೇಕೆಂದೂ, ಕಾರ್ಖಾನೆ[illegible]ಗಳನ್ನು ತೆರೆಯುವಂತೆ ಮಾಡಲು ತಾವು ಧರಣ[illegible]ಿ ಮಾಡುವುದಾಗಿಯೂ ಸಚಿವರು ತಿಳಿಸಿದರು. [illegible] ವಿಷಯವನ್ನು ಕಾರ್ಮಿಕ ಪ್ರತಿನಿಧಿಗಳು ಸಭ್ಯ[illegible]ರಿಗೆ ತಿಳಿಸುವುದಾಗಿ ಹೇಳಿ ಕಾಲಾವಕಾಶವನ್ನು [illegible] ಕೇಳಿದರು. ಹಲವು ಕಾರ್ಮಿಕರು ರಾತ್ರಿ ಬಹಳ [illegible]ಹೊತ್ತಿನವರೆಗೂ ಸೆಕ್ರೆಟೇರಿಯೆಟ್ ಕ್ಲಬ್ ಬಳಿ [illegible] ಕಾದಿದ್ದರು.

ಮಾಲೀಕರು ತಮ್ಮ ೩೦೦ ಕಾರ್ಖಾನೆಗಳನ್ನು ಮುಂದೆಯೂ ಮುಚ್ಚಲು ನಿರ್ಧರಿಸಿರುವರೆಂದು [illegible]ತಿಳಿದು ಬಂದಿದೆ. ಕಾರ್ಮಿಕರು ಸತ್ಯಾಗ್ರಹ ನಡೆಸುತ್ತಿ[illegible]ರುವರೆಂದು ಅವರು ಆಕ್ಷೇಪಿಸಿದ್ದಾರೆ.

ಪೂರ್ವ ಪಾಕಿಸ್ತಾನದಲ್ಲಿ ಅಧ್ಯಕ್ಷರ ಆಡಳಿತದ ರದ್ದು

ಪೂರ್ವ ಪಾಕಿಸ್ತಾನದಲ್ಲಿ ಕಳೆದ ಶನಿವಾರ [illegible]ದಿಂದ ಹೇರಲಾಗಿದ್ದ ಅಧ್ಯಕ್ಷರ ಆಡಳಿತವನ್ನು ನೆ[illegible]ನ್ನೆ ರದ್ದುಗೊಳಿಸಲಾಯಿತು. ಆ ಪ್ರಾಂತದಲ್ಲಿ [illegible] ಸಂವಿಧಾನಬದ್ಧವಾಗಿ ಆಡಳಿತವು ನಡೆಯುವ ಪ[illegible]ರಿಸ್ಥಿತಿಯುಂಟಾಗಿ ಅಧ್ಯಕ್ಷ ಇಸ್ಕಂದರ್ ಮಿರ್ಜಾರವ[illegible]ರು ತಮ್ಮ ಆಡಳಿತವನ್ನು ರದ್ದುಗೊಳಿಸಿರುತ್ತಾ[illegible]ರೆ. ಅಲ್ಲಿ ಪುನಃ ಹಿಂದೆ ಇದ್ದಂತೆ ಸಂಯುಕ್ತರಂಗ[illegible]ದ ನಾಯಕ ಅಬುಹುಸೇನ್ ಸರ್ಕಾರ್‌ರವರ ಮಂ[illegible]ತ್ರಿಮಂಡಲವು ಮುಂದುವರಿಯುವುದು.

ಜಾಯಿಂಟ್ ಸ್ಟಾಕ್ ಸಂಸ್ಥೆಗಳಾಗಿ ಸರ್ಕಾರಿ ಕೈಗಾರಿಕೆಗಳ ಪರಿವರ್ತನೆ

ವಿದ್ಯಾ ಮಂತ್ರಿ ಎ. ಜಿ. ರಾಮಚಂದ್ರ ರಾಯರ ಹೇಳಿಕೆ

ಬೆಂಗಳೂರು ೨

ಸಂಸ್ಥಾನ ಸರ್ಕಾರದವರು ನಡೆಸುತ್ತಿರುವ ಕೈಗಾರಿಕೆಗಳೆಲ್ಲವನ್ನು ಜಾಯಿಂಟ್ ಸ್ಟಾಕ್ ಕಂಪೆನಿಗಳಾಗಿ ಪರಿವರ್ತಿಸಲು ಆಲೋಚಿಸಲಾಗುತ್ತಿದೆಯೆಂದು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ನೆನ್ನೆ ವ್ಯವಸ್ಥಾಪಕ ಶಾಲೆಯ ಉತ್ಪತ್ತಿ ಯೊ ಜನಾ ಸಮಾರಂಭದ ಅವಂ ಭೋತ್ಸವವನ್ನು ನೆರವೇರಿಸಿ ಭಾಷಣ ಮಾಡುವಾಗ ತಿಳಿಸಿದರು. ಈಗ ಆಗುತ್ತಿರುವ ಕೆಲಸದ ವಿಧಾನದ ಬಗ್ಗೆ ಸರ್ಕಾರಕ್ಕೆ ತೃಪ್ತಿಯಿಲ್ಲವೆಂದೂ ಇಲಾಖಾ ಪತೋಟಿ ಮತ್ತು ಮೇಲ್ವಿಚಾರಣೆಯಲ್ಲಿ ನಡೆಯುತ್ತಿರುವ ಸರ್ಕಾರಿ ಕೈಗಾರಿಕೆಗಳು ಅತ್ಯಂತ ಉಪಯೋಗಕರವಾಗಿ ಕೆಲಸವನ್ನು ನಿರ್ವಹಿಸುತ್ತಿಲ್ಲವೆಂದೂ, ಆದುದರಿಂದ ಆಡಳಿತ ವ್ಯವಸ್ಥಾ ಬದಲಾವಣೆಯು ಅಗತ್ಯವಾಗಿರುವುದೆಂದೂ ಅವರು ಹೇಳಿದರು.

ವಿನೋಬಾ ಭಾವೆಯವರ ಉಪವಾಸಾರಂಭ

ಆಚಾರ್ಯ ವಿನೋಬಾ ಭಾವೆಯವರು ನೆನ್ನೆ ಬೆಳಗ್ಗೆ ೮ ಘಂಟೆಯಿಂದ ತಮ್ಮ ೩ ದಿನಗಳ ಉಪವಾಸವನ್ನು ಆರಂಭಿಸಿದರು. ಅದಕ್ಕೆ ಮುಂಚೆ ಜೇನುತುಪ್ಪ ಬೆರಸಿದ ಮೊಸರನ್ನು ಸೇವಿಸಿದರು. ಉಪವಾಸ ಕಾಲದಲ್ಲಿ ಪ್ರಾರ್ಥನಾ ಗೀತೆಗಳನ್ನು ಹಾಡಲಾಗುವುದು. ತಮಗೆ ನಾಡಿನ ಭೂದಾನ ಚಳುವಳಿಯ ಪ್ರವಾಸದ ಸಂಬಂಧವಾಗಿ ತಮ್ಮ ಆತ್ಮ ಶಕ್ತಿಯನ್ನು ವೃದ್ಧಿಗೊಳಿಸಿಕೊಳ್ಳಲು ಅವರು ಉಪವಾಸ ಕೈಗೊಂಡಿದ್ದಾರೆ. ಉಪವಾಸದ ದಿನಗಳಲ್ಲಿ ಅವರು ಕಾಂಚೀಪುರದಲ್ಲೇ ಇರುವರು.

ಮುಷ್ಕರದ ಬ್ಯಾಲಟ್ ತೆಗೆದುಕೊಳ್ಳಲು ರೈಲ್ವೆ ಕಾರ್ಮಿಕರ ಬೆಂಬಲ

ದಕ್ಷಿಣ ರೈಲ್ವೆಯ ನೌಕರರ ಸಂಘದ ಮೈಸೂರು ನಗರ ಶಾಖಾ ಸದಸ್ಯರ ಸಭೆಯು ಮೊನ್ನೆ ಶ್ರೀ ಬಿ ಎಸ್ ಶಿವಶಂಕರಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ಟಿ ಎ ಆನಂದರಾವ್‌ರವರು ಭಾಗವಹಿಸಿದ್ದರು. ಸಭೆಯು ದಿವಂಗತ ಕೆ ಟಿ ಭಾಷ್ಯಂರವರ ನಿಧನಕ್ಕಾಗಿ ಸಂತಾಪವನ್ನು ಸೂಚಿಸಿತು. 'ಕೇಂದ್ರ ಕಾರ್ಯಕಾರಿ ಸಮಿತಿಯು ಇದೇ ತಿಂಗಳು ೧೫ನೇ ತಾರೀಕು ಮುಷ್ಕರದ ಬ್ಯಾಲಟ್ ತೆಗೆದುಕೊಳ್ಳಬೇಕೆಂದು ಕೈಗೊಂಡ ನಿರ್ಧಾರವನ್ನು ಸಭೆಯು ಅನುಮೋದಿಸಿತು. ಮಾಜಿ ಮೈಸೂರು ಸಂಸ್ಥಾನದ ರೈಲ್ವೆ ನೌಕರರ ಬಗ್ಗೆ ಅಸಿಸ್ಟೆಂಟ್ ಟ್ರಾಫಿಕ್ ಸೂಪರಿಂಟೆಂಡೆಂಟ್ ಶ್ರೀ ಸುಬ್ರಹ್ಮಣ್ಯಂರವರು ಮಾಡಿರುವ ಆರೋಪಣೆಗಳಿಗಾಗಿ ಖಂಡಿಸಲಾಯಿತು. ಸಭೆಯಲ್ಲಿ ಶ್ರೀಗಳಾದ ಟಿ ಎ ಆನಂದು, ಎಸ್ ರಾಜು ಮುದಲಿಯಾರ್, ಹೆಚ್. ಡಿ ರಾಘವರಾಜ್‌ರವರು ಭಾಷಣ ಮಾಡಿದರು.

ಭಾರತದಲ್ಲಿ ಔಷಧಿ ತಯಾರಿಕೆ ಕಾರ್ಖಾನೆಯ ಸ್ಥಾಪನೆ

ಬೆಂಗಳೂರು ೨

ಕೇಂದ್ರ ಮಂತ್ರಿ ಕೆ ಸಿ ರೆಡ್ಡಿಯವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ, ಭಾರತ ಸರ್ಕಾರದವರು ಔಷಧಿ ತಯಾರಿಕಾ ಕಾರ್ಖಾನೆಯೊಂದನ್ನು ಸ್ಥಾಪಿಸಲಾಲೋಚಿಸುತ್ತಿರೆಂದೂ, ಈ ಸಂಬಂಧವಾಗಿ ಪೂರ್ವಭಾವಿ ವಿಷಯಗಳ ಚರ್ಚೆಯಾಗುತ್ತಿರುವುದೆಂದೂ ತಿಳಿಸಿದರು. ಪೆನಿಸಿಲಿನ್ ಕಾರ್ಖಾನೆಯಲ್ಲಿ ಸ್ಟ್ರೆಪ್ಟೋಮೈಸಿನ್ ಔಷಧಿಯನ್ನು ತಯಾರಿಸಲು ನಿರ್ಧರಿಸಲಾಗಿದೆಯೆಂದೂ ನುಡಿದರು.

ಜೀವನದಾನ ಮಾಡುವವರಿಗಾಗಿ ನಿಯಮಾವಳಿ

ಜಯಪ್ರಕಾಶ ನಾರಾಯಣ್‌ರವರ ಸೂತ್ರ

ಸರ್ವೋದಯ ಕೆಲಸವನ್ನು ಸಾಧಿಸುವುದಕ್ಕಾಗಿ ಜೀವನ ದಾನ ಮಾಡಲು ಮುಂದೆ ಬರುವವರಿಗಾಗಿ ಜಯಪ್ರಕಾಶ ನಾರಾಯಣ್‌ರವರು ೧೫ ಅಂಶಗಳ ಕಾರ್ಯಕ್ರಮ ಪಟ್ಟಿಯನ್ನು ಸಿದ್ಧಗೊಳಿಸಿದ್ದಾರೆ. ಜಮೀನು ಇದ್ದವರು ಒಂದು ಭಾಗವನ್ನು ಭೂದಾನಕ್ಕೆ ಕೊಡುವುದು, ಜಮೀನು ಇಲ್ಲದವರು ಸಂಪತ್ತಿದಾನವೀಯುವುದು, ಅವೆರಡೂ ಇಲ್ಲದವರು ಶ್ರಮದಾನ ಮಾಡುವುದು, ಸತತ ಖಾದಿ ಧಾರಿಗಳಾಗುವುದು ಮತ್ತು ಅವರ ಮನೆತನದವರು ನೂಲು ತೆಗೆಯುವುದು, ಗೃಹ ಕೈಗಾರಿಕೆ ಮತ್ತು ಸ್ವದೇಶೀ ವಸ್ತುಗಳನ್ನೇ ಉಪಯೋಗಿಸುವುದು, ಮಾದಕ ದ್ರವ್ಯವನ್ನು ಸೇವಿಸದಿರುವುದು, ಅಸ್ಪೃಶ್ಯತೆಯನ್ನು ತೊರೆಯುವುದು, ವ್ಯಾಜ್ಯಗಳನ್ನು ಕೋರ್ಟಿಗೆ ಒಯ್ಯದೆ ಪಂಚಾಯತಿಯಲ್ಲಿ ತೀರ್ಮಾನಿಸುವುದು, ಜಮೀನು ದಾರರಾಗಿರುವ ಕಾರ್ಯಕರ್ತರು ಕೈಸಹಿಸ್ನ ಗೇಣಿಯಿಂದ ತಪ್ಪಿಸದಿರುವುದು, ಚುನಾವಣೆಗಳಲ್ಲಿ ಉಮೇದುವಾರರಾಗಿ ನಿಲ್ಲದಿರುವುದು, ಭೂದಾನ ಮತ್ತು ಇತರ ರಚನಾತ್ಮಕ ಕೆಲಸಗಳನ್ನು ನಡೆಸುವುದು, ಸರ್ವೋದಯ ವಸ್ತುಗಳು ಸುಳ್ಳು ಲೇಖನಗಳನ್ನು ತೆಗೆದುಕೊಳ್ಳದಿರುವುದು, ಸರ್ವೋದಯ ವೈದ್ಯರು ರೋಗಿಗಳಿಂದ ಹಣ ಸ್ವೀಕರಿಸದಿರುವುದು, ಸರ್ವೋದಯ ವ್ಯಾಪಾರಿಗಳು ಕಾಳಸಂತೆ, ತೆರಿಗೆ ಕೊಡದೆ ತಪ್ಪಿಸಿಕೊಳ್ಳುವುದು ಇವನ್ನು ತೊರೆಯಬೇಕು ಮತ್ತು ಸ್ಥಾನಗಳು ಸರ್ವೋದಯ ಧ್ಯೇಯವನ್ನು ಪ್ರಚಾರ ಮಾಡಬೇಕು—ಇವೇ ಹದಿನೈದು ಕಾರ್ಯಕ್ರಮಗಳು.

ಮೈಸೂರು ಪ್ರೊಫೆಸರರಿಗೆ ನ್ಯೂಯಾರ್ಕಿನ ಗೌರವ ಪ್ರಶಸ್ತಿ

ಮೈಸೂರು ವಿಶ್ವವಿದ್ಯಾಲಯದ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಜಿ ಟಿ ಹುಚ್ಚಪ್ಪನವರಿಗೆ ನ್ಯೂಯಾರ್ಕಿನ ವಿಶ್ವವಿದ್ಯಾಲಯವು ಗೌರವ ಪಿ ಹೆಚ್. ಡಿ ಪ್ರಶಸ್ತಿಯನ್ನು ಕೊಟ್ಟಿದೆ. ಅದನ್ನು ಘಟಿಕೋತ್ಸವ ಸಮಯದಲ್ಲಿ ಸ್ವೀಕರಿಸಲು ಅವರನ್ನು ಆಹ್ವಾನಿಸಲಾಗಿದೆ.

ವಿದೇಶಾಂಗ ಮಂತ್ರಿ ಸ್ಥಾನಕ್ಕೆ ಮೊಲಟೋವರ ರಾಜೀನಾಮೆ

ರಷ್ಯದ ವಿದೇಶಾಂಗ ಮಂತ್ರಿ ವ್ಯಾಚಿಸ್ಲಾವ್ ಮೊಲಟೋವ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಟ್ಟಿರುವರೆಂದು ಪ್ರಕಟಿಸಲಾಗಿದೆ. ಅವರ ಬದಲು ಪ್ರಾವ್ದಾ ಪತ್ರಿಕೆ ಸಂಪಾದಕರಾದ ಡಿ. ಟಿ. ಷೆಪಿಲಾವ್‌ರವರು ವಿದೇಶಾಂಗ ಸಚಿವರಾಗುವರು. ಮೊಲಟೋವರು ರಷ್ಯದ ಉಪಪ್ರಧಾನಿಯಾಗಿ ಮುಂದುವರಿಯುವರೆಂದು ವರದಿಯಾಗಿದೆ. ಯುಗೊಸ್ಲೇವಿಯದ ಅಧ್ಯಕ್ಷ ಮಾರ್ಷಲ್ ಟಿಟೋರವರು ರಷ್ಯಕ್ಕೆ ಭೇಟಿ ಕೊಡುವ ಸಂದರ್ಭದಲ್ಲಿ ಈ ರಾಜೀನಾಮೆಗೆ ಮಹತ್ವವನ್ನು ಕಲ್ಪಿಸಲಾಗಿದೆ.

ಕಾಂಗ್ರೆಸ್ಸಿನಿಂದ ಹಿಂಸಾತ್ಮಕ ಚಟುವಟಿಕೆಗಳ ಖಂಡನೆ

ರೈಲ್ವೆ ಮುಷ್ಕರ ಮತ್ತು ಸಂಸ್ಥಾನ ಪುನರ್ವಿಂಗಡಣೆ ಚಳುವಳಿ ಬಗ್ಗೆ ನಿರ್ಣಯ

ಇಂದು ಬೊಂಬಾಯಿಯಲ್ಲಿ ಸೇರಲಿರುವ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಅಧಿವೇಶನದಲ್ಲಿ ಮಂಡಿಸುವ ಸಲುವಾಗಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ನೆನ್ನೆ ನಿರ್ಣಯವೊಂದನ್ನು ಮಾಡಿ ದೇಶದಲ್ಲಿ ಪ್ರಜಾಸತ್ತೆ ಮತ್ತು ಪ್ರಗತಿಗೆ ಹಾನಿಯನ್ನು ತಂದೊಡ್ಡುವ ರೀತಿಯಲ್ಲಿ ಹಿಂಸೆ, ಶಿಸ್ತು ಮತ್ತು ವಿವೇಚನಾ ರಹಿತ ಸಾಹಸ ಚಟುವಟಿಕೆಗಳ ಬಗ್ಗೆ ರಾಷ್ಟ್ರವು ಎಚ್ಚರಿಕೆ ವಹಿಸುವಂತೆ ಸೂಚಿಸಿತು. ಹಿಂಸೆಯಿಂದ ಕಾರ್ಮಿಕರಾಗಲೀ, ಅವರ ಸಂಘಗಳಾಗಲೀ ಬಲಗೊಳ್ಳುತ್ತಿಲ್ಲವೆಂದೂ ಸಮಿತಿಯು ಅಭಿಪ್ರಾಯಪಟ್ಟಿತು. ಸಂಸ್ಥಾನ ಪುನರ್ವಿಂಗಡಣೆ ವಿವಾದ ಮತ್ತು ರೈಲ್ವೆ ನೌಕರರು ಮುಷ್ಕರದ ಸಂಬಂಧವಾಗಿ ನಡೆಯುತ್ತಿರುವ ಹಾನಿಕರ ಚಟುವಟಿಕೆಗಳನ್ನು ಸಮಿತಿಯು ಟೀಕಿಸಿದೆ.

ಗೋವಾ ಬಗ್ಗೆ ನಿರ್ಣಯವೊಂದನ್ನು ಮಾಡಿ, ವಿಶ್ವದ ಪ್ರಜೆಗಳೂ, ನಾಗರಿಕ ರಾಷ್ಟ್ರಗಳೂ ಪೋರ್ಚುಗೀಸರ ನೀತಿಯನ್ನು ಖಂಡಿಸುವಂತೆ ಸಮಿತಿಯು ಸೂಚಿಸಿ, ಗೋವಾ ರಾಷ್ಟ್ರೀಯರ ಧ್ಯೇಯಕ್ಕೆ ಸಹಾನುಭೂತಿ ತೋರುವಂತೆ ಪ್ರತಿಭಟಿಸಿದ ಫ್ರೆಂಚ್ ವಸಾಹತುಗಳನ್ನು ಸ್ವಾತಂತ್ರ್ಯದ ಬಗ್ಗೆ ಅಭಿನಂದನಾ ನಿರ್ಣಯವನ್ನು ಅಂಗೀಕರಿಸಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೬.೫ ಗಂಟೆಯಿಂದ, ೬-೪೦ ರೀಜನಲ್ ೩ ನ್ಯೂಸ್ ಸಮುದ್ರಗೀತೆಯು [illegible] ೭.೩೦ ಚಿತ್ರ ಸಂಗೀತ ೮ ಸಾಹಿತ್ಯ ಮತ್ತು ಕಲಾ ಕಾರ್ಯಕ್ರಮ ೮ ೪೦ ಬಾಲಕರ—ಮಕ್ಕಳ ಕಾರ್ಯಕ್ರಮ ೧೦ ರಾಷ್ಟ್ರೀಯ ಕಾರ್ಯಕ್ರಮ [illegible] ಗಂಗೂಬಾಯಿ ಹಾನಗಲ್ ಮತ್ತು ೧೦ ಸಾವಿರ ಸಂಗೀತ ಸುಬ್ಬಾಲಕ್ಷ್ಮಿ ೧೧ ಮತ್ತು ೨ ನ್ಯೂಸ್ [illegible] ವಿ. ಶಂಕರ [illegible] ಸಂಗೀತ ೧ ವಿದ್ಯಾ ಮಂದಿರ ಗೀತೆಗಳು ೧ ೩೦ ಗಂಟೆಯಿಂದ [illegible] ಕನ್ನಡ ಸಂಗೀತ ೫ ೪೦ ಮತ್ತು ೬-೪೦ ಎಂ ಎಸ್. ೫ ರಾಮ ಅಯ್ಯಂಗಾರ್ [illegible] ೬ ನ್ಯೂಸ್ [illegible] ೭ ೪೦ ನಾಟಕ [illegible] ೧೦ ಎಸ್. ಎಲ್ ಕೃಷ್ಣ—ಗಾಯನ ೮ ೪೦ [illegible] ೯ ನ್ಯೂಸ್ ಕನ್ನಡ ಗೀತೆಗಳು

ವಿದ್ಯುಚ್ಛಕ್ತಿ ಇಲಾಖೆ ಸಾಮಾನು ಗಳ ಮೇಲೆ ಆಕ್ಟ್ರಾಯ್ ಸುಂಕ

ಮೈಸೂರು ೨

ಇನ್ನು ಮುಂದೆ ವಿದ್ಯುಚ್ಛಕ್ತಿ ಇಲಾಖೆಯವರು ನಗರಕ್ಕೆ ತರಿಸುವ ಸಾಮಾನುಗಳ ಮೇಲೆ ಆಕ್ಟ್ರಾಯ್ ಸುಂಕವನ್ನು ವಸೂಲು ಮಾಡಲು ಮೊನ್ನೆ ನಡೆದ ಪುರಸಭಾಧಿವೇಶನದಲ್ಲಿ ತೀರ್ಮಾನಿಸಲಾಯಿತು. ಇದಕ್ಕೆ ಸರ್ಕಾರವು ಸಮ್ಮತಿಸಿ ಬರೆದಿದ್ದ ಪತ್ರವನ್ನು ಸಭೆಯು ಪರಿಶೀಲಿಸಿ ತನ್ನ ಒಪ್ಪಿಗೆಯನ್ನಿತ್ತಿತು.

ವಿದ್ಯುತ್ ಇಲಾಖೆಯವರು ನಗರಕ್ಕೆ ತರುವ ಸಾಮಾನುಗಳ ಉಪಯೋಗದಿಂದ ಲಾಭ ಪಡೆಯುತ್ತಿರುವುದರಿಂದ ಆ ಸಾಮಾನುಗಳ ಮೇಲೆ ಸುಂಕವನ್ನು ವಿಧಿಸಲು ಅನುಮತಿಯನ್ನು ಕೋರಿ ಪುರಸಭೆಯು ಬರೆದಿದ್ದ ಪತ್ರಕ್ಕೆ ಉತ್ತರವಿತ್ತ ಸರ್ಕಾರ ಇದಕ್ಕೆ ಯಾವುದೇ ತೊಂದರೆಯ ಒಪ್ಪಂದವು ಯಾವುದೂ ಇಲ್ಲದಿದ್ದರೆ ಸುಂಕವನ್ನು ವಿಧಿಸಬಹುದೆಂದು ಸರ್ಕಾರದವರು ಸೂಚಿಸಿದ್ದರು.

ಹೋಟೇಲು ಮಾಲೀಕರುಗಳಿಗೆ ಜುಲ್ಮಾನೆ

ರಾಜಧಾನಿಯ ಕಾಳಮ್ಮನ ಗುಡಿ ಬೀದಿಯಲ್ಲಿ ರುವ ಶ್ರೀಕೃಷ್ಣ ವಿಲಾಸ ಹೋಟೇಲಿನ ಮಾಲೀಕರಾದ ಶ್ರೀ ವಾಸುದೇವರಾಯರು ಕೆಲಸದ ವೇಳೆ ಪಟ್ಟಿ, ರಜಾಪ್ಪಟ್ಟಿ ಮುಂತಾದುವನ್ನು ಇಡದೆ, ಕೆಲಸಗಾರರಿಂದ ದಿನಕ್ಕೆ ೮ ಗಂಟೆಗಿಂತ ಹೆಚ್ಚು ಕಾಲ ದುಡಿಸಿಕೊಂಡರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಮಾಲೀಕರಿಗೆ ೨೦ ರೂ ದಂಡವನ್ನು ವಿಧಿಸಲಾಗಿದೆ. ಅದೇ ಬೀದಿಯ ಉಡುಪವನ ಹೋಟೇಲಿನ ಮ್ಯಾನೇಜರ್ ಶ್ರೀ ಸಂಪತ್ತಯ್ಯಂಗಾರ್ಯರಿಗೆ ಇದೇ ಅಪರಾಧಕ್ಕಾಗಿ ೫ ರೂ ಜುಲ್ಮಾನೆಯಾಗಿದೆ. ಕೃಷ್ಣರಾಜಾ ಆಸ್ಪತ್ರೆ ರಸ್ತೆಯಲ್ಲಿರುವ ಲಕ್ಷ್ಮೀಭವನದ ಮ್ಯಾನೇಜರ್ ಶಿವಶಂಕರರವರಿಗೆ ೨೦ ರೂ ದಂಡ ವಿಧಿಸಿದೆ.

ಹರಿಕಥೆ

[illegible] ಶ್ರೀರಾಮ ಮಂದಿರ ದೇವಸ್ಥಾನದಲ್ಲಿ ಈ ದಿನದಿಂದ ಪ್ರತಿದಿನ [illegible] ಶ್ರೀ [illegible] ಶ್ರೀ ಮಾಧವಾಚಾರ್ಯ ... ಹರಿಕಥೆಯನ್ನು ಏರ್ಪಡಿಸಲಾಗಿದೆ. ಸರ್ವರಿಗೂ ಸ್ವಾಗತವುಂಟು.

ಛಾಪಖಾನೆ ಸ್ಥಾಪನೆಯ ಮುಂಬಲಿಗೆ ಕಾಣಿಕೆ

[illegible] ರಸ್ತೆಯಲ್ಲಿರುವ ಶ್ರೀ ಸಿದ್ಧ ಮುನಿಸಾಮಿಯವರು ... ಸಿದ್ದ ಚೆನ್ನಪ್ಪನವರ ಮಗ ಸಿ ಶಿವಶಂಕರರಾಯರನ್ನು ... ಹೊಸ ಸಮಾರಂಭದಲ್ಲಿ ಮೈಸೂರು ಛಾಪಖಾನೆ ಸ್ಥಾಪನೆಯ ಮುಂಬಲಿಗೆ ... ರೂಪಾಯಿಗಳನ್ನು ಕಾಣಿಕೆಯಾಗಿ ಅರ್ಪಿಸಿದರು.

ರೈಲಿಗೆ ಸಿಕ್ಕಿ ಮಹಿಳೆಯ ಮರಣ; ಇಬ್ಬರು ಸದಿಯ ಪಾಲು

ಸೋಲಾಪುರದ ಬಳಿ ಸೀನಾ ನದಿ ಸೇತುವೆ ಮೇಲೆ ಕಳೆದ ರಾತ್ರಿ ಹೋಗುತ್ತಿದ್ದ ಜನತಾ ಎಕ್ಸ್‌ಪ್ರೆಸ್ ರೈಲಿಗೆ ಸಿಕ್ಕಿ ಒಬ್ಬ ಮಹಿಳೆಯು ಮೃತಪಟ್ಟು, ಇನ್ನಿಬ್ಬರು ಹೆಂಗಸರು ನದಿಗೆ ಎಸೆಯಲ್ಪಟ್ಟರೆಂದು ವರದಿಯಾಗಿದೆ. ಅದಕ್ಕೆ ಮುಂಚೆ ಅವರೂ ಮತ್ತು ಇನ್ನೊಬ್ಬನೂ ರಸ್ತೆ ಮೇಲೆ ನಡೆದುಕೊಂಡು ಹೋಗುತ್ತಿದ್ದರೆಂದೂ, ಇನ್ನೊಬ್ಬನು ರೈಲನ್ನು ಕಂಡು ತನ್ನ ಕೈಯಲ್ಲಿದ್ದ ಎರಡು ಮಕ್ಕಳನ್ನು ಹೊತ್ತುಕೊಂಡು ಓಡಿ ತಪ್ಪಿಸಿಕೊಂಡನೆಂದೂ ಹೇಳಲಾಗಿದೆ.

ಹೆಚ್ಚು ಜನರನ್ನು ಕೂಡಿಸಿದ್ದಕ್ಕೆ ರೈಲು ನರಪಳಿ ಎಳೆದ ಪ್ರಸಂಗ

ಕ್ರೋಸಾ ಪುಸಾ ಸೆಂಟ್ರೋವ್ ಪಟ್ಟಣದಿಂದ ಓಡುವ ರೈಲಿನಲ್ಲಿ ಹೆಚ್ಚು ಜನರನ್ನು ಕೂಡಿಸಿ ಪ್ರಯಾಣಿಕರಿಗೆ ತೊಂದರೆಯನ್ನುಂಟು ಮಾಡಲಾಗುತ್ತಿರುವುದೆಂಬ ಕಾರಣಕ್ಕಾಗಿ ಕಳೆದ ವಾರ ರಕ್ಷಣಾ ಕಾರ್ಖಾನೆ ಕೆಲಸಗಾರರು ರೈಲು ಸರಪಳಿಯನ್ನು ಅನೇಕ ಬಾರಿ ಎಳೆದರೆಂದೂ, ೨೨ ನಿಮಿಷಗಳಲ್ಲಿ ಪೆಸುಪೋದಿಸಿದ ಪ್ರೋಸಾ ನಗರಕ್ಕೆ ಬರಬೇಕಾದ ರೈಲು ೩ ಗಂಟೆಗಳಲ್ಲಿ ... ಮೈಲಿ ಮಾತ್ರ ಹೋಯಿತೆಂದೂ ವರದಿ ಮಾಡಿದೆ.

ವಿವಾಹ ಮಹೋತ್ಸವಗಳು

ಕನ್ನಡ ವಿಶ್ವಕೋಶದ ವಿಶೇಷ ಅಧಿಕಾರಿಗಳಾದ ಶ್ರೀ ಕೆ ಎಸ್. ಧರಣೇಂದ್ರಯ್ಯನವರು ತಮ್ಮ ಕುಮಾರಿ ಶಕುಂತಲಾರವರನ್ನು ನಿವೃತ್ತ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ಎ ಪಿ ರತ್ನರಾಜಯ್ಯನವರ ಪುತ್ರ ಶ್ರೀ ಎ ಆರ್ ನಾಗರಾಜ್‌ರವರಿಗೆ ಕೊಟ್ಟು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು.

ಬೆಂಗಳೂರಿನ ಶ್ರೇಷ್ಠ ವ್ಯಾಪಾರಿಗಳಾದ ಶ್ರೀ ಡಿ ಅರಸಪ್ಪನವರು ತಮ್ಮ ಸಹೋದರರಾದ ಬಿ ಕೆ ಅರಸಪ್ಪನವರ ಪುತ್ರಿ ಸೌ॥ ಜಯಲಕ್ಷ್ಮಿಯನ್ನು ಲಲಿತ ರೇಷ್ಮೆ ಕಾರ್ಖಾನೆಯ ಶ್ರೀ ಕೆ ಶಂಕರಪ್ಪನವರ ಕುಮಾರ ಶ್ರೀ ಎಸ್ ಭೀಮಶಂಕರರಿಗೆ ಕೊಟ್ಟು ಮೊನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು.

ಕುದೇರು ಹೊಸ ಮಠದ ಪಟ್ಟದ ಶ್ರೀ ಕೆ ವಿ ಎಸ್. ನಿತ್ಯಾನಂದಸ್ವಾಮಿಗಳವರು ಹೊಂಗನೂರಿನ ಶ್ರೀ ಚ ಶಿವಣ್ಣನವರ ಪುತ್ರಿ ಸೌ॥ ಅಕ್ಕ ಮಹಾದೇವಿಯನ್ನು ಹಿಂಡಿಯೂರಿನ ಶ್ರೀ ಚನ್ನವೀರಪ್ಪನವರ ಮಕ್ಕಳು ಶ್ರೀ ಶಿವರುದ್ರಪ್ಪನವರಿಗೆ ಕೊಟ್ಟು ವಿವಾಹವನ್ನು ನೆನ್ನೆ ಕುದೇರಿನಲ್ಲಿ ನೆರವೇರಿಸಿದರು.

ಬೊಂಬಾಯಿಯಲ್ಲಿ ಪ್ರದರ್ಶಕರ ಮೇಲೆ ಲಾಠಿ ಪ್ರಹಾರ

ಬೊಂಬಾಯಿಯಲ್ಲಿ ಪ್ರತಿಬಂಧಕಾಜ್ಞೆಯ ಉಲ್ಲಂಘನೆಗಾಗಿ ಮೊನ್ನೆ ಪೋಲೀಸರು ಸಂಯುಕ್ತ ಮಹಾರಾಷ್ಟ್ರ ಪುಢಾರಿಗಳನ್ನು ದಸ್ತಗಿರಿ ಮಾಡಿದಾಗ ಜನರು ಪೋಲೀಸರ ಮೇಲೆ ಕಲ್ಲು ಬೀರಿದರೆಂದೂ, ಪೋಲೀಸರು ಲಘುವಾದ ಲಾಠಿ ಪ್ರಹಾರ ಮಾಡಿದರೆಂದೂ ವರದಿಯಾಗಿದೆ. ಪ್ರದರ್ಶನ ನಡೆಸಿದ ೧೩ ಜನರನ್ನು ಬಂಧಿಸಲಾಯಿತು. ಪ್ರತಿಬಂಧಕಾಜ್ಞೆ ಉಲ್ಲಂಘನೆಗಾಗಿ ೧೦೩ ಮಂದಿ ಬಂಧಿತರಾಗಿರುವರು.

ಏಕಪತ್ನೀತ್ವ ಶಾಸನದಿಂದ ಮುಸ್ಲಿಮರ ಹಕ್ಕುಬಾಧ್ಯತೆಗೆ ಧಕ್ಕೆ

ಇಂಡಿಯನ್ ಪೀನಲ್ ಕೋಡಿನ ತಿದ್ದುಪಡಿ ಮಸೂದೆಯ ಮೇಲೆ ಲೋಕ ಸಭೆಯಲ್ಲಿ ಮದ್ರಾಸಿನ ಮುಸ್ಲಿಂ ಲೀಗ್ ಸದಸ್ಯ ಬಿ ಪೋಕರ್‌ರವರು ಮಾತನಾಡಿ, ಮುಸ್ಲಿಮರು ತಮ್ಮ ಮತೀಯ ಕಾನೂನನ್ನು ಅನುಸರಿಸಲು ಮಸೂದೆಯು ಅಡ್ಡಿ ತಂದಿದೆಯೆಂದು, ಅದು ವ್ಯಕ್ತಿಯ ಮೂಲಭೂತ ಹಕ್ಕಿಗೆ ವ್ಯತಿರೇಕವೆಂದೂ ಸೂಚಿಸಿರುತ್ತಾರೆ. ತಿದ್ದುಪಡಿ ಕಾನೂನಿಂದ ಮೊದಲನೇ ಹೆಂಡತಿಯು ಬದುಕಿರುವಾಗಲೇ ಬೇರೊಬ್ಬಳನ್ನು ವಿವಾಹ ಮಾಡಿಕೊಳ್ಳುವುದು ಅಪರಾಧ. ಏಕಪತ್ನೀತ್ವವನ್ನೇ ಹೆಚ್ಚು ಮಂದಿ ಅನುಸರಿಸುತ್ತಿರುವ ಕಾರಣ, ಈ ಮಸೂದೆಯನ್ನು ಅಲ್ಪ ಸಂಖ್ಯಾತರ ಮೇಲೆ ಹೊರಿಸಬಾರದೆಂದೂ ಅವರು ಅಭಿಪ್ರಾಯಪಟ್ಟರು.

ತಿದ್ದುಪಡಿ

ಮೈಸೂರು-ಬೆಂಗಳೂರು ರೈಲ್ವೆಯನ್ನು ಬ್ರಾಡ್ ಗೇಜಾಗಿ ಪರಿವರ್ತಿಸಬೇಕೆಂಬ ನಿರ್ಣಯದ ಮೇಲೆ ಮೊನ್ನೆ ಪೌರಸಭೆಯಲ್ಲಿ ಶ್ರೀ ಬಿ ಎನ್ ಕೆಂಗೇಗೌಡರು ಕೇಂದ್ರ ಮತ್ತು ಪ್ರಾಂತ ಸರ್ಕಾರಗಳ ಔದಾಸೀನ್ಯವನ್ನು ಟೀಕಿಸಿದರು-ಎಂಬುದಾಗ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿತ್ತದೆ. ಈ ವಿಚಾರದಲ್ಲಿ ಮುಖ್ಯಮಂತ್ರಿ ಹನುಮಂತಯ್ಯನವರು ಭಾರತ ಸರ್ಕಾರದೊಡನೆ ನಡೆಸುತ್ತಿರುವ ವ್ಯವಹಾರಗಳನ್ನು ಸಮರ್ಥಿಸಿದರು. ಪ್ರಾಂತ ಸರ್ಕಾರದ ಬಗ್ಗೆ ಟೀಕೆ ಮಾಡಲಿಲ್ಲ ಎಂಬುದಾಗಿ ವಾಚಕರು ದಯವಿಟ್ಟು ಓದಿಕೊಳ್ಳಬೇಕು.

ಮೋಟಾರು ಸೈಕಲ್ ಬಿಕರಿಗಿದೆ

ಕಾಲೇಜು ವಿದ್ಯಾರ್ಥಿಗಳಿಗೂ, ಡಾಕ್ಟರುಗಳಿಗೂ, ಮತ್ತು ಇತರರಿಗೂ ಅನುಕೂಲವಾಗಿರುತ್ತೆ. ವಿಚಾರಿಸಿ —

ಆರ್. ಬಸವಣ್ಣ,
ಚಾಮರಾಜನಗರ

Edited, Printed and Published by A. R. Nagarajan at Sadhvi Press D Subbiah Road, Mysore

ಪ್ರವಾಹದಲ್ಲಿ ಮೋಟಾರು ವಾಹನ ಕೊಚ್ಚಿ ನಾಲ್ವರ ಮರಣ

ಬರೋಡಾ ಬಳಿ ಕರಾಡ ನದಿಯ ಅಣೆಕಟ್ಟಿನ ಸಮೀಪ ವಿಪರೀತ ನೀರು ಬಂದು ಭೂಮಿ ಮತ್ತು ನೀರುಗಳ ಮೇಲೆ ಚಲಿಸಬಲ್ಲ ಮೋಟಾರು ವಾಹನವೊಂದು ಕೊಚ್ಚಿ ಹೋಗಿ ಅದರಲ್ಲಿದ್ದ ಡೆಪ್ಯುಟಿ ಇಂಜನಿಯರ್, ಒಬ್ಬ ಓವರ್‌ಸಿಯರ್, ಒಬ್ಬ ಗುಮಾಸ್ತೆ ಮತ್ತು ಒಬ್ಬ ಜವಾನ ಇವರುಗಳು ಕೊಚ್ಚಿ ಹೋಗಿರುವುದಾಗಿ ವರದಿಯಾಗಿದೆ. ಪ್ರವಾಹವು ಹಠಾತ್ತನೆ ಬಂದುದಾಗಿ ಹೇಳಲಾಗಿದೆ.

ಕುದೇರು ಹೊಸ ಮಠದ ಪಟ್ಟಾಧಿಕಾರ

ಕುದೇರಿನ ಹೊಸ ಮಠದ ಪಟ್ಟಾಧಿಕಾರದ ಉತ್ತರಾಧಿಕಾರಿಗಳನ್ನಾಗಿ ಉಡಿಗಾಲದ ಶ್ರೀ ದೊಡ್ಡ ಬಸವಣ್ಣನವರ ಮಕ್ಕಳು ಶ್ರೀ ಗುರುಸ್ವಾಮಿಯವರನ್ನು ಸ್ವೀಕರಿಸಿ, ಅವರಿಗೆ ಶ್ರೀಮಠದ ಪಟ್ಟಾಧಿಕಾರ ಮತ್ತು ನಾಮಕರಣ ಮಹೋತ್ಸವವನ್ನು ಶ್ರೀ ಪಟ್ಟದ ಕೆ ವಿ ಎಸ್ ನಿತ್ಯಾನಂದ ಸ್ವಾಮಿಗಳವರು ನೆನ್ನೆ ನೆರವೇರಿಸಿದರು.

ರಾಜಪರಿವಾರ ಸಂಘದ ಸಡವಳಿಕೆಗಳು

ರಾಜಧಾನಿಯ ವೀರನಗೆರೆ ರಾಜಪರಿವಾರ ಸಂಘದ ಕಾರ್ಯದರ್ಶಿ ಶ್ರೀ ಪಿ ರಾಮಸ್ವಾಮಿ ಜೀವಯ್ಯನವರು ಈ ರೀತಿ ಬರೆದಿರುತ್ತಾರೆ — ತಾ॥ ೧೮-೫-೧೯೫೬ನೇ ಸಾಧ್ವಿ ಪತ್ರಿಕೆಯಲ್ಲಿ "ರಾಜಪರಿವಾರ ನಾಯಕರ ಸಂಘದಲ್ಲಿ ಸ್ಪರ್ಧೆಗಳು" ಎಂಬ ಶಿರೋನಾಮೆಯಿಂದ ಪ್ರಕಟವಾಗಿರುವ ಸುದ್ದಿಯು ಸತ್ಯಕ್ಕೆ ದೂರವಾದದ್ದು. ತಮಗೆ ಸಂಘದಲ್ಲಿ ಅಧಿಕಾರ ಸ್ಥಾನಮಾನಗಳು ಸಿಗಲಿಲ್ಲವೆಂಬ ಸಂಕುಚಿತ ಭಾವನೆಯಿಂದ ಸಂಘದ ಡೈರೆಕ್ಟರಾಗಿದ್ದ ಶ್ರೀ ಬಿ ಸಿದ್ದಯ್ಯನವರು ಈ ರೀತಿ ಪ್ರಕಟಿಸಿದ್ದಾರೆ. ಸಂಘದ ಲೆಕ್ಕಗಳಲ್ಲಿ ಯಾವ ಲೋಪವೂ ಆಗಿಲ್ಲ. ಸದರಿಯವರೂ ಸೇರಿದ ಕಾರ್ಯಕಾರಿ ಸಮಿತಿ ಮತ್ತು ಸರ್ವ ಸದಸ್ಯ ಸಭೆಗಳು ಸಂಘದ ವಾರ್ಷಿಕ ಲೆಕ್ಕಗಳನ್ನು ಪರೀಕ್ಷಿಸಿ ಅನುಮೋದಿಸಿವೆ. ಇದೇ ಸಾಲಿಗೆ ಚುನಾಯಿತರಾಗಿದ್ದ ಖಜಾಂಚಿ ಶ್ರೀ ಬಿ ಸಿದ್ದಯ್ಯನವರು ಚುನಾಯಿತರಾದಾಗಿನಿಂದ ಇತರರ ಪ್ರೇರಣೆ ಮೇರೆ ಸಮಿತಿಯ ಸಭೆಗಳಿಗೆ ಕ್ರಮವಾಗಿ ಬಂದು ಲೆಕ್ಕಗಳನ್ನು ಕೊಡದೆ ಸಂಘದ ಕಾರ್ಯಕಲಾಪಗಳು ಸುಗಮವಾಗಿ ನಡೆಯಲು ಅನಾನುಕೂಲಪಡಿಸುತ್ತಿದ್ದುದರಿಂದ ಸಭೆಯು ಅವರನ್ನು ಖಜಾಂಚಿ ಕೆಲಸದಿಂದ ವಜಾ ಮಾಡಿ ಅವರಲ್ಲಿರುವ ಹಣವನ್ನೂ ಮತ್ತು ಲೆಕ್ಕವನ್ನೂ ಸಂಘಕ್ಕೆ ಒಪ್ಪಿಸುವಂತೆ ನೋಟೀಸ್ ಕೊಟ್ಟಿರುತ್ತದೆ. ಸಂಘದ ಕಾಗದಪತ್ರಗಳೂ ವ್ಯಕ್ತಿಗಳ ವಶದಲ್ಲಿ ಇರಲು ಅವಕಾಶವೇ ಇಲ್ಲ. ಅವು ಸಂಘದ ಆಫೀಸಿನಲ್ಲಿ ಇರಬೇಕಾದದ್ದು ಸರ್ವರಿಗೂ ವಿದಿತವಾದ ವಿಷಯವಾಗಿದೆ.

SRI KRISHNARAJENDRA MILLS' CO-OPERATIVE SOCIETY, Ltd., MYSORE

ಬಿಕರಿಗೆ ಇರುತ್ತೆ

ಉತ್ತಮ ಸ್ಥಿತಿಯಲ್ಲಿರುವ ಸಿಂಗರ್ ಹೊಲಿಗೆ ಯಂತ್ರವು ಬಿಕರಿಗೆ ಇರುತ್ತೆ. ಕೊಳ್ಳಲು ಅಪೇಕ್ಷಿಸುವವರು ತಮ್ಮ ಸೀಲಾದ ಟೆಂಡರುಗಳನ್ನು 10-6-56ರ ಒಳಗೆ ಸೊಸೈಟಿಯ ಆಫೀಸಿಗೆ ಕಳುಹಿಸತಕ್ಕದ್ದು. ಯಂತ್ರವನ್ನು ಸೊಸೈಟಿಯ ಕೆಲಸದ ಕಾಲದಲ್ಲಿ ಪರೀಕ್ಷಿಸಬಹುದು. ಕವರಿನ ಮೇಲೆ "ಹೊಲಿಯುವ ಯಂತ್ರದ ಟೆಂಡರು" ಎಂದು ನಮೂದಿಸಬೇಕು.

ಗೌರವ ಕಾರ್ಯದರ್ಶಿ,
ಶ್ರೀ ಕೃಷ್ಣರಾಜೇಂದ್ರ ಮಿಲ್ಸ್ ಕೋ ಆಪರೇಟಿವ್ ಸೊಸೈಟಿ, ಲಿಮಿಟೆಡ್.
ಮೈಸೂರು

ನಾಳೆ ಬದಲು ಎರಡು ನೀರು ನಿಲ್ಲುವುದು

ನಗರದಲ್ಲಿ ನಾಳೆ ಬೆಳಗ್ಗೆ ೮ ರಿಂದ ಸಂಜೆ ೫ರ ವರೆಗೆ ನೀರನ್ನು ನಿಲ್ಲಿಸಲಾಗುವುದೆಂದು ಪೌರಸಭೆಯವರು ಪ್ರಕಟಿಸಿದ್ದರಷ್ಟೆ? ನಾಳೆ ದಿನ ನೀರು ನಿಲ್ಲುವುದಿಲ್ಲವೆಂದೂ, ಅದಕ್ಕೆ ಬದಲಾಗಿ ೫ನೇ ತಾರೀಖು ಮಂಗಳವಾರ ನಿಲ್ಲಿಸಲಾಗುವುದೆಂದೂ ಸೂಚಿಸಲಾಗಿದೆ.

Vidya Tutorial College
(Dalvoy High School Buildings)
MYSORE
Classes Formed For
Inter C B. Z. & H. E. L.
Classes From 4—6—56
Ladies also Admitted
All Other Classes In Full Swing
Join At Once

SREE GANESHA
TALKIES
From 2-6 56 For 3 days
ROMEO AND JULIET
(Technicolor)
From 5-6 56 For 2 Days
THE FINAL TEST
From 7-6 56 For 2 days
WHITE CHRISTMAS
(In Technicolor-Vistavision)

ಪ್ರಸಿದ್ಧ ಪತ್ರಿಕೆ

ಮೈಸೂರು ಸಂತೆಪೇಟೆಯಲ್ಲಿರುವ ಮರ್ಚೆಂಟ್ಸ್ ಮೆಸರ್ಸ್ ಎ ಎಂ ಸಿ ಅಂಡ್ ಸನ್ಸ್‌ರವರು ಈ ಮೂಲಕ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ನಾವು ಕಳೆದ ಹತ್ತು ವರ್ಷಗಳಿಂದಲೂ ತಯಾರಿಸುತ್ತಿರುವ ಆರ್ ಜಿ ಬ್ರಾಂಡ್ ಕುಕಿಂಗ್ ಮೀಡಿಯಂ (ಅಡಿಗೆ ಸಾಧನ) ನ ವಿಚಾರದಲ್ಲಿ ನೆನ್ನೆಯ ದಿವಸ, ಅಂದರೆ 1-6-1956ನೇ ಗುರುವಾರ ದಿನದ 'ಸಾಧ್ವಿ' ಪತ್ರಿಕೆಯಲ್ಲಿ ಮೈಸೂರು ಸಿಟಿ ಮುನಿಸಿಪಲ್ ಕೌನ್ಸಿಲ್‌ನಲ್ಲಿ ಹಲವು ಸದಸ್ಯರು ಕೆಲವು ಆಪಾದನೆಗಳನ್ನು ಮಾಡಿರುವಂತೆ ಪ್ರಕಟಿಸಿರುತ್ತಾರೆ. ಮೇಲ್ಕಂಡ ಮುನಿಸಿಪಲ್ ಕೌನ್ಸಿಲರ್‌ಗಳು ಮಾಡಿರತಕ್ಕ ಆಪಾದನೆಗಳು ನಿರಾಧಾರವಾದದ್ದು. ಮೇಲ್ಕಂಡ ಅಡಿಗೆ ಸಾಧನದ, ಅಂದರೆ ಆರ್ ಜಿ ಬ್ರಾಂಡ್ ತಯಾರಿಕೆಯಲ್ಲಿ ನಾವು ವೈಟ್ ಆಯಿಲ್ ಆಗಲೀ, ಹಾನಿಕರ ವಸ್ತುಗಳನ್ನಾಗಲೀ ಮತ್ತು ಜನಗಳ ಧರ್ಮ ಹಾನಿ ಮಾಡತಕ್ಕುದಾದ ನಾನಾ ಸುಗಳನ್ನಾಗಲೀ ಯಾವುದನ್ನೂ ಉಪಯೋಗಿಸುತ್ತಿಲ್ಲ. ಈ ರೀತಿ ನಮ್ಮ ಮೇಲೆ ಮಾಡಿರತಕ್ಕ ಆಪಾದನೆಗಳು ನಿರಾಧಾರವಾದದ್ದಾಗಿರುತ್ತೆ. ನಮ್ಮ ಈ ತಯಾರಿಕೆ ವಿಚಾರದಲ್ಲಿ ಇದುವರೆಗೂ ಯಾವ ವಿಧವಾದ ಆಪಾದನೆಯೂ ಬಂದಿರುವುದಿಲ್ಲ. ಈ ಅಡಿಗೆ ಸಾಧನವು ಆರೋಗ್ಯಕ್ಕೂ ಕೂಡಾ ಒಳ್ಳೆಯದಾಗಿರುವುದಲ್ಲದೆ ಶರೀರಕ್ಕೆ ಪುಷ್ಟಿ ಕೊಡುವಂಥಾದ್ದಾಗಿರುತ್ತೆ.

Estd. 1917
CHAMPION METROPOLITAN COLLEGE OF COMMERCE
(Co-operators' Home, 100' Road, Mysore)
APPLICATIONS FOR ADMISSION to classes leading to DIPLOMAS in Commerce Shorthand and Typewriting are now being received in the mornings & evenings
Training for COSTS & WORKS ACCOUNTANTS is also given
(Sd) M. S PUTTANNA, Vice-Principal
(Sd) P. SUBBARAYA SASTRY, Principal

ಟೆಲಿಫೋನ್ ನಂ. 792

ನಮ್ಮಲ್ಲಿ ಎಲ್ಲಾ ತರಹ
ಉತ್ತಮವಾದ
ಕನ್ನಡಕಗಳು
ಸುಲಭ ಬೆಲೆಗೆ ದೊರೆಯುತ್ತವೆ
ವಿಷನ್ ಹೌಸ್
— ಮಾಲೀಕರು —
S T ಗೋಪಾಲ್ B Sc.,
ಧನ್ವಂತರಿ ರಸ್ತೆಯಲ್ಲಿರುವ ಮ್ಯುನಿಸಿಪಲ್ ಕಟ್ಟಡದ ಮಹಡಿ ಮೇಲೆ 4 ನೇ ನಂಬರು ರೂಮು
ಬನ್ನಿ ಪರೀಕ್ಷಿಸಿ ತೃಪ್ತಿಯಿಂದಿರಿ

ಸಾಧ್ವಿ

ಇಂದಿನ ಪತ್ರಿಕೆ 6 ಪುಟ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : SUNDAY 3—6—1956 ಮೈಸೂರು : ಭಾನುವಾರ ೩—೬—೧೯೫೬ [ಸಂಚಿಕೆ : ೫೬೨

ಬೊಂಬಾಯಿ ಎ.ಐ.ಸಿ.ಸಿ. ಅಧಿವೇಶನದ ಬಳಿ ಪುಂಡಾಟ

ಬೊಂಬಾಯಿಯಲ್ಲಿ ಎ.ಐ.ಸಿ.ಸಿ. ಅಧಿವೇಶನ

ಢೇಬರ್‌ರವರಿಂದ ಧ್ವಜಾರೋಹಣ

ಬೊಂಬಾಯಿಯಲ್ಲಿ ನೆನ್ನೆ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸಿದ್ಧಾರ್ಥನಗರವೆಂದು ನಾಮಕರಣ ಮಾಡಲ್ಪಟ್ಟ ಸ್ಥಳದಲ್ಲಿ ಸೇರಿತು. ಕಾಂಗ್ರೆಸ್ ಅಧ್ಯಕ್ಷರು ಯು. ಎನ್. ಢೇಬರ್‌ರವರು ಅಧ್ಯಕ್ಷಾಸನ ವಹಿಸಿದ್ದರು.

ಬೆಳಿಗ್ಗೆ ಅವರು ತ್ರಿವರ್ಣ ಧ್ವಜವನ್ನು ಆರೋಹಣ ಮಾಡಿ, ರಾಷ್ಟ್ರದ ಚರಿತ್ರೆಯಲ್ಲಿ ಈಗ [illegible]ಗಿರುವ ಉತ್ಕಟ ಸ್ಥಿತಿಯಲ್ಲಿ ಬೊಂಬಾಯಿ ನಗರದಲ್ಲಿ ಅಧಿವೇಶನವು ನಡೆಯುವುದು [illegible]ವಾಗಿರುವುದೆಂದು ತಿಳಿಸಿದರು.

ಅಧಿವೇಶನದಲ್ಲಿ ಢೇಬರ್‌ರವರು ಪೀಠಿಕಾ ಭಾಷಣ ಮಾಡುತ್ತಾ, ಕಾಂಗ್ರೆಸ್ಸಿನವರು ಪರಸ್ಪರ ಮನಸ್ತಾಪ ಮತ್ತು ಭಿನ್ನಾಭಿಪ್ರಾಯಗಳನ್ನು ಪರಿಹರಿಸಿಕೊಂಡು ಒಗ್ಗಟ್ಟಾಗಿ ರಾಷ್ಟ್ರಕ್ಕೆ ಸರಿಯಾದ ಮಾರ್ಗದರ್ಶನ ಮಾಡುವಂತೆ ಸೂಚಿಸಿದರು.

ಸಂಸ್ಥಾನ ಪುನರ್ವಿಂಗಡಣೆಯ ಸಮಸ್ಯೆಯು [illegible] ಅನೇಕ ಕಡೆ ಪರಿಹರಿಸಲಾಗಿರುವುದೆಂದು ಅವರು ಹೇಳಿದರು. ರಾಷ್ಟ್ರವು ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸಲು ದ್ವಿತೀಯ ಯೋಜನೆಯನ್ನು ಕೈಗೊಂಡಿರುವುದೆಂದೂ, ಎಲ್ಲ ಸಮಸ್ಯೆಗಿಂತ [illegible]ಗಿ ಸಂಸ್ಥೆಯ ವ್ಯವಸ್ಥಾ ವಿಷಯವು ಅತ್ಯಂತ ಕಠಿಣವಾಗಿರುವುದೆಂದೂ ಅವರು [illegible], ಶಿಸ್ತನ್ನು ಬೆಳೆಸುವುದು ಅಗತ್ಯವೆಂದು ಹೇಳಿದರು.

ಅಧಿವೇಶನದಲ್ಲಿ ಜಿ. ವಿ. ಮಾವಲಂಕರ್, ಆಚಾರ್ಯ ನರೇಂದ್ರದೇವ, ಡಾ|| ಮೇಘನಾದಸಹ, ಎಸ್. ಕೆ. ಬಸು, ಮತ್ತು ಕೆ. ಟಿ. ಭಾಷ್ಯಂರವರ ನಿಧನಕ್ಕಾಗಿ ಸಂತಾಪ ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಸದಸ್ಯರು ಎದ್ದುನಿಂತು ಎರಡು ನಿಮಿಷ ಮೌನವನ್ನಾಚರಿಸಿದರು.

ಪಂಡಿತ ಗೋವಿಂದ ವಲ್ಲಭ ಪಂತರು ಸೀಟೊ ಮತ್ತು ಬಾಗ್ದಾದ್ ಒಪ್ಪಂದಗಳಿಂದ ಅಂತರ್ರಾಷ್ಟ್ರ ತಿಳುವಳಿಕೆಗೆ ಧಕ್ಕೆಯೆಂದು ಸೂಚಿಸುವ ನಿರ್ಣಯವನ್ನು ಮಂಡಿಸಿ ಭಾಷಣ ಮಾಡಿ, ಕಾಶ್ಮೀರದ ವಿಷಯವನ್ನು ಎರಡು ಕೂಟಗಳಲ್ಲಿ ಪ್ರಸ್ತಾಪಿಸಿರುವುದನ್ನು ಖಂಡಿಸಿದರು. ಅದು ಸರ್ವಾನುಮತದಿಂದ ಅಂಗೀಕೃತವಾಯಿತು.

ಹಿಂಸಾಕೃತ್ಯ, ಅಶಿಸ್ತು, ಮೊದಲಾದುವನ್ನು [illegible] ವ ಬಗ್ಗೆ ಬಿ. ಸಿ. ರಾಯರು ನಿರ್ಣಯವನ್ನು ಮಂಡಿಸಿದರು. ನೆಹರೂರವರು ಭಾಷಣ ಮಾಡಿ, ಹಿಂಸಾತ್ಮಕ ಬಲಗಳು ಅಭಿವೃದ್ಧಿಗೊಳ್ಳುತ್ತದಕ್ಕೆ ಅವಕಾಶವಿತ್ತು ಭಾರತವು ತನ್ನ ಗೌರವವನ್ನು ದೇಶದಲ್ಲೂ ಹೊರಗಡೆಯೂ ಕಳೆದುಕೊಳ್ಳಬೇಕೇ—ಎಂದು ಪ್ರಶ್ನಿಸಿದರು. ಸಂಸ್ಥಾನ ಬಾಹಿರತನ ಮುಂತಾದ ಮನೋಭಾವಗಳ ವಿರುದ್ಧ ಕಾಂಗ್ರೆಸ್ಸಿನವರು ಹೋರಾಡುವುದು ಅತ್ಯವಶ್ಯಕವೆಂದು ತಿಳಿಸಿದರು. ಗಾಂಧಿಜಿಯವರ ಶಾಂತಿ ಮತ್ತು ಅಹಿಂಸೆ ತತ್ವಗಳನ್ನು ಪಾಲಿಸಬೇಕೆಂದು ಸೂಚಿಸಿದರು. ನಿರ್ಣಯವು ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು.

ಆಹಾರ ಧಾನ್ಯದ ಬೆಲೆ ಏರಿಕೆ ವಿರುದ್ಧ ದೇಶಾದ್ಯಂತ ಚಳುವಳಿ

ಸಮಾಜವಾದಿ ಪಕ್ಷದ ಶಾಖೆಗಳಿಗೆ ರಾಷ್ಟ್ರೀಯ ಸಮಿತಿಯ ಕರೆ

ಬೆಂಗಳೂರು ೨.

ಆಹಾರದ ಬೆಲೆಯು ವಿಪರೀತವಾಗಿ ಹೆಚ್ಚಿ, ಬೆಳೆಯುವವರಿಗೂ ಮತ್ತು ಕೊಳ್ಳುವವರಿಗೂ [illegible] ತೊಂದರೆಯಾಗಿರುವುದರ ವಿರುದ್ಧವಾಗಿ ದೇಶಾದ್ಯಂತ ಶಾಂತಿಯುತವಾದ ಸಾಮೂಹಿಕ ಚಳುವಳಿಯನ್ನು ಪಕ್ಷದ ಶಾಖೆಗಳು ನಡೆಸುವಂತೆ ನೆನ್ನೆ ಇಲ್ಲಿ ಸೇರಿದ್ದ ಸಮಾಜವಾದಿ ಪಕ್ಷದ ರಾಷ್ಟ್ರೀಯ ಸಮಿತಿಯು ಕರೆಯಿತ್ತಿತು. ಬೆಲೆ ಏರುತ್ತಿರುವುದಕ್ಕೆ ದಾಸ್ತಾನುಗಾರರು, ಒಟ್ಟು ವ್ಯಾಪಾರಗಾರರು ಮತ್ತು ಸರ್ಕಾರಗಳು ಕಾರಣವೆಂದು ಸಮಿತಿಯು ಅಭಿಪ್ರಾಯಪಟ್ಟಿತು. ಆಗಸ್ಟ್ ತಿಂಗಳಲ್ಲಿ ಬಿಹಾರಿನಲ್ಲಿ ಚಳುವಳಿಯನ್ನಾರಂಭಿಸಲು ೧೨,೦೦೦ ಸತ್ಯಾಗ್ರಹಿಗಳು ಸಿದ್ಧವಾಗುವರೆಂದೂ ಸೂಚಿಸಲಾಯಿತು. ಆಗಸ್ಟ್ ೮ರಿಂದ ೧೪ರವರೆಗೆ ಸಮಾಜವಾದಿಗಳ ವಾರವನ್ನು ಆಚರಿಸುವಂತೆಯೂ ತೀರ್ಮಾನವಾಯಿತು.

ಕಬ್ಬನ್ ಪಾರ್ಕ್ ಬಳಿ ರೇಷ್ಮೆ ಕಾರ್ಮಿಕರ ಕೂಟ

ಅಠಾರಾ ಕಛೇರಿ ಮುಂದೆ ಪ್ರದರ್ಶನ ನಡೆಸುವ ಉದ್ದೇಶದಿಂದ ಮೊನ್ನೆ ಹೊರಟ ರೇಷ್ಮೆ ಕಾರ್ಮಿಕರ ಪೈಕಿ ೩೦೦ ಜನರು ನೆನ್ನೆಯೆಲ್ಲಾ ಕಬ್ಬನ್ ಪಾರ್ಕ್ ಬಳಿಯೇ ಕುಳಿತು ಅಸಮಾಧಾನವನ್ನು ವ್ಯಕ್ತಪಡಿಸಿದರೆಂದು ಹೇಳಲಾಗಿದೆ. ನೆನ್ನೆ ಅವರ ಇಬ್ಬರು ಪ್ರತಿನಿಧಿಗಳು ಕಾರ್ಮಿಕ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರನ್ನು ಭೇಟಿ ಮಾಡಿದ್ದರು. ಮಾಲೀಕರು ಮತ್ತು ಕಾರ್ಮಿಕರ ಪ್ರತಿನಿಧಿಗಳಿಗೆ ಕಳೆದ ೨೦ನೇ ತಾರೀಕು ಆದ ಒಪ್ಪಂದದ ಸಂಬಂಧವಾಗಿ ಸಂಧಾನ ನಡೆಸಿದ ಗ್ರಾಮ ಕೈಗಾರಿಕಾ ಡೈರೆಕ್ಟರ್ ಶ್ರೀ ಬಿ. ವೀರಪ್ಪನವರನ್ನು ಕಾರ್ಮಿಕರು ಭೇಟಿ ಮಾಡುವಂತೆ ಸಚಿವರು ಸೂಚಿಸಿದರು. ಪೋಲೀಸರು ಅಠಾರಾ ಕಛೇರಿ ಬಳಿ ಕಾವಲಿರುವರು.

ಸೈಪ್ರಸ್ ನಗರದ ಜನರ ಮೇಲೆ ಸಾಮೂಹಿಕ ದಂಡ

ಕಳೆದ ಹಲವಾರು ತಿಂಗಳಲ್ಲಿ ಹಿಂಸಾತ್ಮಕ ಕಾರ್ಯ ಚಟುವಟಿಕೆಗಳನ್ನು ನಡೆಸಿದರೆಂದು ಫಾಮಗುಸ್ತ ಎಂಬ ಸೈಪ್ರಸ್ ದ್ವೀಪದ ನಗರದಲ್ಲಿರುವ ಗ್ರೀಕರ ಮೇಲೆ ಗವರ್ನರ್ ಸರ್ ಹಾರ್ಡಿಂಜರು ೪೦ ಸಾವಿರ ಪೌಂಡು ಸಾಮೂಹಿಕ ದಂಡವನ್ನು ವಿಧಿಸಿರುತ್ತಾರೆ. ೨೫ ಸಾವಿರ ಗ್ರೀಕರು ಈ ದಂಡವನ್ನು ತೆರಬೇಕಾಗುವುದು.

ಸರ್ವಾನುಮತದಿಂದ ಅಂಗೀಕರಿಸಲ್ಪಟ್ಟಿತು

ಹೊರಗಡೆ ಸಂಯುಕ್ತ ಮಹಾರಾಷ್ಟ್ರವಾದಿಗಳು ಮುಂಬೈ ಕೋಣಾಚೆ-ಹಂಚೆ (ಬೊಂಬಾಯಿ ಯಾರದ್ದು-ನಮ್ಮದು) ಎಂದು ವಿಪರೀತ ಜೋರಾಗಿ ಕೂಗುತ್ತಿದ್ದುದು ಅಧಿವೇಶನದಲ್ಲೆಲ್ಲಾ ಪ್ರತಿಧ್ವನಿತವಾಗುತ್ತಿತ್ತು.

ಬೊಂಬಾಯಿಯಲ್ಲಿ ಪೋಲೀಸರಿಗೆ ಕಲ್ಲೇಟು

ಎ. ಐ. ಸಿ. ಸಿ. ಅಧಿವೇಶನದ ಬಳಿ ಪುಂಡಾಟಿಕೆ

ಬೊಂಬಾಯಿಯಲ್ಲಿ ಎ. ಐ. ಸಿ. ಸಿ. ಸಭೆಯು ನಡೆಯುತ್ತಿರುವ ಸಿದ್ಧಾರ್ಥನಗರದ ಹೊರಗಡೆ ಕಾವಲಿದ್ದ ಪೋಲೀಸರ ಮೇಲೆ ನೆನ್ನೆ ಸಂಯುಕ್ತ ಮಹಾರಾಷ್ಟ್ರದ ಪರ ಗುಂಪುಗಳು ಕಲ್ಲುಗಳನ್ನು ಬೀರಲಾಗಿ ಐದು ಮಂದಿ ಅಧಿಕಾರಿಗಳೂ ಸೇರಿ ೧೬ ಜನ ಪೋಲೀಸರಿಗೆ ಪೆಟ್ಟು ಬಿದ್ದಿತೆಂದೂ, ಪೋಲೀಸರು ಲಾಠಿ ಪ್ರಹಾರ ಮಾಡಿದರೆಂದೂ ವರದಿಯಾಗಿದೆ. ಜನರು ಸಿದ್ಧಾರ್ಥನಗರಕ್ಕೆ ಹೋಗುತ್ತಿದ್ದ ವಾಹನಗಳನ್ನು ಅಡ್ಡಗಟ್ಟಿ ಕಲ್ಲುಗಳನ್ನೂ, ಪಾದರಕ್ಷೆಗಳನ್ನೂ ಎಸೆಯುತ್ತಿದ್ದರೆಂದು ಹೇಳಲಾಗಿದೆ. ಆ ಪ್ರದೇಶದಲ್ಲಿ ೬೦ ಮಂದಿಯನ್ನು ಬಂಧಿಸಲಾಯಿತು. ಮಧ್ಯ ಬೊಂಬಾಯಿಯಲ್ಲಿ ಗಾಂಧಿ ಟೋಪಿಯನ್ನು ಹಾಕಿದ್ದ ೨ ವ್ಯಕ್ತಿಗಳ ದಹನವೂ ನಡೆಯಿತು.

ಕನ್ಯೆಯ ಅಪಹಾರಕ್ಕೆ ಪ್ರಯತ್ನಿಸಿದವನ ಮರಣ: ವಧುವಿನ ಬಂಧನ

ಕೋಲಾರಕ್ಕೆ ೫ ಮೈಲಿ ದೂರವಿರುವ ಬೆಟ್ಟ ಪೇಟೆಯಲ್ಲಿ ವಿವಾಹದ ಸಮಾರಂಭದ ಹಿಂದಿನ ದಿನ ವಧುವನ್ನು ಅಪಹರಿಸಲೆತ್ನಿಸಿದ ತರುಣನಿಗೆ ಮರಣ ಸಂಭವಿಸಿದ ವಿಷಯವು ವರದಿಯಾಗಿದೆ. ವಧು ವೆಂಕಟಮ್ಮನನ್ನು ಪೋಲೀಸರು ಬಂಧಿಸಿ ತನಿಖೆ ನಡೆಸುತ್ತಿರುವರು. ಮೃತಪಟ್ಟ ೪೦ ವರ್ಷ ವಯಸ್ಸಿನ ರಾಮಣ್ಣನು ತನ್ನ ಆಕಾಂಕ್ಷೆಯು ನೆರವೇರದೆಹೋಗಲು, ಬೇರೊಬ್ಬರಿಗೆ ವಧುವಿನ ವಿವಾಹವಾಗಬೇಕಾಗಿದ್ದ ಹಿಂದಿನ ದಿನ ಸಮಾರಂಭಕ್ಕೆ ನುಗ್ಗಿ ಆಕೆಯನ್ನು ಎಳೆದೊಯ್ಯಲು ಯತ್ನಿಸಿದನೆಂದೂ, ಆಕೆಯು ಪ್ರತಿಭಟಿಸುವಲ್ಲಿ ಅವನನ್ನು ಹೊಡೆದು ಗಾಯಪಡಿಸಿದಳೆಂದೂ, ಪರಿಣಾಮವಾಗಿ ಅವನು ಹೊರಗೆ ಓಡಿ ದಾರಿಯಲ್ಲೇ ಬಿದ್ದು ಮೃತಪಟ್ಟನೆಂದೂ ಹೇಳಲಾಗಿದೆ. ಮೃತನು ವಧುವಿನ ಸೋದರಮಾವನೆಂದು ಗೊತ್ತಾಗಿದೆ.

ನಂಜನಗೂಡು ಗ್ರಾಮಗಳಲ್ಲಿ ಹುಲ್ಲು ಮತ್ತು ನೀರಿಗೆ ಕೊಂಚತೆ

ವಿಧಾನಸಭಾ ಸದಸ್ಯರಾದ ಶ್ರೀ ಹೆಜ್ಜಿಗೆ ಎಂ. ಲಿಂಗಣ್ಣನವರು ನಂಜನಗೂಡು ತಾಲ್ಲೂಕಿನ ಗ್ರಾಮಾಂತರ ಪ್ರದೇಶದಲ್ಲಿ ಪ್ರವಾಸ ಮಾಡಿ ಪಶುಗಳು ಹುಲ್ಲು ಮತ್ತು ನೀರಿಗಾಗಿ ಬಹಳ ಕಷ್ಟಪಡುತ್ತಿರುವುದನ್ನು ಪರಿಶೀಲಿಸಿರುತ್ತಾರೆ. ಫೇರ್ ಪ್ರೈಸ್ ಡಿಪೋಗಳಲ್ಲಿ ಸಾಲವಾಗಿ ಧಾನ್ಯವನ್ನೂ, ಬೇರೆ ಪ್ರದೇಶಗಳಿಂದ ಹುಲ್ಲನ್ನೂ ತರಿಸಿ ಅವರುಗಳಿಗೆ ಹಂಚುವುದಲ್ಲದೆ ೨ ಲಕ್ಷ ರೂ. ವೆಚ್ಚದ ಕಾಮಗಾರಿ ಕೆಲಸಗಳನ್ನು ನಡೆಸಬೇಕೆಂದು ಅವರು ಸಂಸ್ಥಾನದ ಎಲ್ಲಾ ಸಚಿವರುಗಳು ಮತ್ತು ಮೈಸೂರು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿಕೊಂಡಿರುವರು.

ಚಾಮುಂಡಿಬೆಟ್ಟದ ದೇವಸ್ಥಾನದ ಬಳಿ ಮೂತ್ರ ವಿಸರ್ಜನೆ ಮಾಡಿದನೆಂದು ಸೈಯದ್ ಜಾಫರ್ ಎಂಬ ತ್ರೈವರನಿಗೆ ೩ ರೂ. ದಂಡವನ್ನು ದ್ವಿತೀಯ ನಗರ ನ್ಯಾಯಾಧೀಶರು ವಿಧಿಸಿರುತ್ತಾರೆ.

ವಿಮಾ ಸಂಸ್ಥೆ ಡೈರೆಕ್ಟರುಗಳಿಗೆ ಸಜಾ ಮತ್ತು ದಂಡ

ಜೂಪಿಟರ್ ಜನರಲ್ ಇನ್ಷೂರೆನ್ಸ್ ಕಂಪೆನಿಯ ಮಾಜಿ ಡೈರೆಕ್ಟರುಗಳಾದ ಶ್ರೀಯುತರ ಸಾಥೆ ಆರ್. ಕೌಲ್ ಮತ್ತು ವಲ್ಲಭದಾಸ್ ಪೂಲ್‌ಚಂದ್ ಮೆಹತಾರವರಿಗೆ ಬೊಂಬಾಯಿಯ ಸಿಟಿ ಸೆಷನ್ಸ್ ನ್ಯಾಯಾಧೀಶರು ತಲಾ ೫ ವರ್ಷ ಸಜಾ ಮತ್ತು ೧೦ ಸಾವಿರ ರೂ. ದಂಡವನ್ನು ವಿಧಿಸಿರುತ್ತಾರೆ. ವಿಮಾ ಕಂಪೆನಿಯ ೩೭,೬೫,೦೦೦ ರೂ.ಗಳನ್ನು ಅವರು ದುರುಪಯೋಗ ಮಾಡಿದ್ದರೆಂದು ಅಪಾದನೆಯಾಗಿತ್ತು. ಎಸ್. ಪಿ. ಗುಪ್ತಾ ಮತ್ತು ಸರ್ದಾರ್ ಶಾರ್ದೂಲಸಿಂಗ್ ಕವೀಶ್ವರ್‌ರವರು ಈ ಬಗ್ಗೆ ಪಿತೂರಿ ಮತ್ತು ಸಹಾಯ ಮಾಡಿದರೆಂದು ಅವರಿಗೆ ತಲಾ ೩ ವರ್ಷ ಕಠಿಣ ಸಜಾ ಮತ್ತು ೫,೦೦೦ ರೂ. ದಂಡವನ್ನು ವಿಧಿಸಲಾಗಿದೆ. ಮತ್ತೊಬ್ಬ ಅಪಾದಿತ ಆರ್. ಕೆ. ಝುವೇರಿ ಎಂಬುವರನ್ನು ಖುಲಾಸೆ ಮಾಡಲಾಗಿದೆ. ಇವರಲ್ಲದೆ ಇನ್ನಿಬ್ಬರು ಅಪಾದಿತರಾದ ಛೋಟಾಲಾಲ್ ಮತ್ತು ಉಮೇದ್‌ಚಂದ್ ಜೋಷಿಯವರು ವಿಚಾರಣೆ ಕಾಲದಲ್ಲಿ ಮೃತಪಟ್ಟರು. ಮತ್ತೊಬ್ಬರಾದ ಲಾಲಾ ರಾಮಶರಣದಾಸ್‌ರವರಿಗೆ ತುಂಬಾ ಖಾಯಿಲೆಯಾಗಿರುವುದರಿಂದ ಅವರ ಮೇಲೆ ಪ್ರತ್ಯೇಕವಾಗಿ ಮೊಕದ್ದಮೆ ನಡೆಸಲು ನ್ಯಾಯಾಧೀಶರು ಆಜ್ಞೆ ಮಾಡಿರುವರು.

ನಾಲ್ವರು ಮೈಸೂರಿನವರಿಗೆ ಕೇಂದ್ರ ಸಂಶೋಧನಾ ವೇತನ

ಕೇಂದ್ರ ಸರ್ಕಾರದವರು ೧೩ ಮಂದಿಗೆ ರಾಷ್ಟ್ರೀಯ ಸಂಶೋಧನಾ ವಿದ್ಯಾರ್ಥಿ ವೇತನವನ್ನು ಕೊಟ್ಟಿರುತ್ತಾರೆ. ಆ ಪೈಕಿ ರಸಾಯನ ಶಾಸ್ತ್ರದಲ್ಲಿ ವೇತನ ಪಡೆದವರಲ್ಲಿ ಬೆಂಗಳೂರು ವಿಜ್ಞಾನ ಶಾಲೆಯ ಶ್ರೀ ಜಿ. ಎಸ್. ಕೃಷ್ಣನ್ ಮತ್ತು ಪ್ರೇಮರಾಜು ನರಸಿಂಹನ್, ಭೌತಶಾಸ್ತ್ರದಲ್ಲಿ ಅದೇ ಶಾಲೆಯ ಡಾ|| ವಿ. ಟಿ. ಕೃಷ್ಣಮೂರ್ತಿ ಮತ್ತು ಇಂಜಿನಿಯರಿಂಗ್ ವಿಭಾಗದಲ್ಲಿ ಶ್ರೀ ಎನ್. ಅನಂತನಾರಾಯಣರವರು ಇರುವರು. ಗಣಿತ ಶಾಸ್ತ್ರ, ಆರೋಗ್ಯ ಶಾಸ್ತ್ರ, ಸಸ್ಯ ಮತ್ತು ಪ್ರಾಣಿ ಶಾಸ್ತ್ರಗಳಲ್ಲೂ ಇತರರಿಗೆ ವೇತನಗಳು ಬಂದಿವೆ. ಪ್ರತಿಯೊಬ್ಬರಿಗೂ ಮಾಸಿಕ ೪೦೦ ರೂ. ವೇತನವನ್ನು ಮೂರು ವರ್ಷ ಮತ್ತು ವಿಶೇಷ ಸಂಧರ್ಭಗಳಲ್ಲಿ ೫ ವರ್ಷ ಕಾಲ ಕೊಡಲಾಗುವುದು. ಅಲ್ಲದೆ ೧,೦೦೦ ರೂ.ಗಳನ್ನು ಈ ಕೆಲಸಕ್ಕಾಗಿ ಬೇಕಾಗುವ ಸಾಧನಗಳಿಗಾಗಿ ಕೊಡಲಾಗುವುದು.

ಪ್ರಾದೇಶಿಕ ಸೈನ್ಯಕ್ಕೆ ಸೇರಬಿಚ್ಛಿಸುವವರಿಗೆ ಸೂಚನೆ

ಪ್ರಾದೇಶಿಕ ಸೈನ್ಯಕ್ಕೆ ಜನರನ್ನು ಸೇರಿಸುವ ಸಂಬಂಧದಲ್ಲಿ ನಾಳೆ ನಗರಕ್ಕೆ ಬೆಂಗಳೂರಿನಿಂದ ಎಕ್ಸ್‌ಪ್ರೊ ಅಸಿಸ್ಟೆಂಟ್ ರಿಕ್ರೂಟಿಂಗ್ ಅಧಿಕಾರಿಗಳು ಬರುವರು. ನಾಳಿದ್ದೂ ಇಲ್ಲಿ ಅವರು ಇರುವರು. ಸೇರಬಿಚ್ಛಿಸುವವರು ನಗರದಲ್ಲಿರುವ ಉದ್ಯೋಗ ವಿನಿಮಯ ಸಂಸ್ಥೆಯ ಅಧಿಕಾರಿಗಳೊಡನೆ ಕೂಡಲೇ ಸಂಪರ್ಕ ಪಡೆಯಬಹುದು.

ವಾರ ಭವಿಷ್ಯ

ತಾ॥ ೩—೬—೫೬ರಿಂದ ೧೦—೬—೫೬ರವರೆಗೆ

ಮೇಷ - ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಶುಭ ಕಾರ್ಯಗಳು ಜರುಗುವುವು ಪ್ರವಾಸ ಸಂಭವ

ವೃಷಭ — ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ನಿರುತ್ಸಾಹ ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ಮಿಥುನ — ಆರೋಗ್ಯ ಸಮರ್ಪಕ ಆರ್ಥಿಕ ಸಂಸ್ಥಿತಿ ಬಿಗಡಾಯಿಸುವುದು ಮಿತ್ರರಿಂದ ದ್ರೋಹ, ವೃಥಾ ವಿವಾದ ವ್ಯಾಪಾರವ್ಯವಹಾರಗಳಲ್ಲಿ ಅಷ್ಟೆ ನೌಕರಿಯಲ್ಲಿ ಸಮಸ್ಯೆ

ಕರ್ಕ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ನೌಕರಿಯಲ್ಲಿ ಯಶಸ್ಸು

ಸಿಂಹ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ಉದ್ಯೋಗದಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಸಾಮಾನ್ಯ ಪರಿಸ್ಥಿತಿ

ಕನ್ಯಾ - ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವೃಥಾ ಅಪಮಾನ ಮಿತ್ರರಿಂದ ವಂಚನೆ ಉದ್ಯೋಗದಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಸಾಮಾನ್ಯ ಪರಿಸ್ಥಿತಿ

ತುಲಾ — ಆರೋಗ್ಯ, ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಶುಭ ಕಾರ್ಯಗಳು ಜರುಗುವುವು

ವೃಶ್ಚಿಕ - ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ಸಮಸ್ಯೆ ಆಸ್ತಿಪಾಸ್ತಿಗಳ ಬಗ್ಗೆ ಕಲಹ ಸಂಭವ

ಧನು — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ, ಕೈಗೊಂಡ ಕಾರ್ಯಗಳಲ್ಲಿ ಜಯ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ

ಮಕರ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು ಶತ್ರುಗಳಿಂದ ಕಾಟ ಉದ್ಯೋಗದಲ್ಲಿ ಕಿರುಕುಳ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ

ಕುಂಭ — ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಪರಿಸ್ಥಿತಿ ಅಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಉದ್ಯೋಗದಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು

ಮೀನ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಶತ್ರುಗಳಿಂದ ತೊಂದರೆ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ನೌಕರಿಯಲ್ಲಿ ಪ್ರಗತಿ ಇಲ್ಲ

ಮೈಸೂರು ಪೇಟೆ ಧಾರಣೆ

	ರೂ ಮೊದಲು	ರೂ ವರೆಗೆ
ಕಡಲೆಕಾಯಿ	[illegible]	
ಹೊಂಗೆಬೀಜ	[illegible]	
ಹುರುಳಿ	[illegible]	
ರಾಗಿ	[illegible]	[illegible]
ಉದ್ದು	[illegible]	[illegible]
ಹಲಸಂದೆ	[illegible]	[illegible]
ಹುಣಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]

Vidya Tutorial College
(Dalvoy High School Buildings)
MYSORE
Classes Formed For
Inter C. B. Z. & H. E. L.
Classes from 4—6—56
Ladies Are Admitted
All Other Classes in Full Swing
Join At Once

ಪೆಡತಲೆಯಲ್ಲಿ ಶಂಕರಾಚಾರ್ಯರ ಪ್ರತಿಷ್ಠಾ ಮಹೋತ್ಸವ

ಮೈಸೂರಿನ ದಿವಂಗತ ಕುಮಾರಾವಧಾನಿಗಳ ಪತ್ನಿ ಶ್ರೀಮತಿ ವೆಂಕಟಲಕ್ಷ್ಮಮ್ಮನವರು ನಂಜನಗೂಡು ತಾಲ್ಲೂಕು ಪೆಡತಲೆ ಗ್ರಾಮದಲ್ಲಿ ಕಟ್ಟಿಸಿರುವ ಕಾಶಿ ವಿಶ್ವೇಶ್ವರಸ್ವಾಮಿ ದೇವಾಲಯದಲ್ಲಿ ಕಳೆದ ತಿಂಗಳು ೧೭, ೧೮ ಮತ್ತು ೧೯ ನೇ ತಾರೀಕುಗಳಲ್ಲಿ, ಕಾಶಿಯಲ್ಲಿ ತಯಾರಿಸಿದ ಶ್ರೀ ಜಗದ್ಗುರು ಶಂಕರಭಗವತ್ಪಾದಾಚಾರ್ಯರ ವಿಗ್ರಹದ ಪ್ರತಿಷ್ಠಾಪನಾ ಮಹೋತ್ಸವವು ನೆರವೇರಿತು ಪ್ರತಿಷ್ಠಾಪನಾ ಮಹೋತ್ಸವಕ್ಕೆ ಮೈಸೂರಿನ ವೇ॥ ದ ರತ್ನಂ ಸುಂದರಾವಧಾನಿಗಳು, ವೇ॥ ಬ್ರ॥ ಶ್ರೀ ಗುಂಡಲಕ್ಷ್ಮೀನಾರಾಯಣಶಾಸ್ತ್ರಿಗಳು ನಾಗೇಶ್ವರ ಸೋಮಯಾಜಿಗಳು (ಆತ್ರೇಯರು), ಜೆ. ವಿ. ವೆಂಕಟೇಶಯ್ಯನವರು ಮತ್ತು ನಂಜನಗೂಡು ಪುಟ್ಟರಾಮಾವಧಾನಿಗಳು ಬಂದಿದ್ದರು ೧೮ ನೇ ತಾರೀಕು ಪ್ರಾತಃಕಾಲ ೮ ರಿಂದ ಗಣಪತಿ ಪೂಜೆ, ಮಾರನೇ ದಿನ ಪ್ರತಿಷ್ಠಾಂಗ ಹೋಮ, ದೇವರಿಗೆ ಅಭಿಷೇಕ ಮತ್ತು ಮಂಗಳಾರತಿಗಳೂ ಆದವು ಶಂಕರಾಚಾರ್ಯರ ವಿಗ್ರಹವನ್ನು ಪಲ್ಲಕ್ಕಿಯಲ್ಲಿಟ್ಟು, ವೇದ ಘೋಷ ಮತ್ತು ವಾದ್ಯ ಸಮೇತ ಉತ್ಸವದಲ್ಲಿ ತೆಗೆದುಕೊಂಡು ದೇವಸ್ಥಾನದಲ್ಲಿ ವಿಧ್ಯುಕ್ತವಾಗಿ ಪ್ರತಿಷ್ಠೆ ಮಾಡಲಾಯಿತು ಉತ್ಸವಕ್ಕೆ ಯಶಸ್ಸನ್ನು ಕೋರಿ ಕಾಮಕೋಟಿ ಪೀಠಾಧೀಶರು ಶಿವಗಂಗಾ ಮಠದ ಶ್ರೀ ಸಚ್ಚಿದಾನಂದ ಸುಬ್ರಹ್ಮಣ್ಯ ಭಾರತೀ ಸ್ವಾಮಿಗಳವರು ಮತ್ತು ಗೃಹ ಸಚಿವ ಶ್ರೀ ಸಿದ್ಧವೀರಪ್ಪನವರು ಸಂದೇಶ ಕಳುಹಿಸಿದ್ದರು ಕಾರ್ಯಕ್ರಮಗಳು ಸುಗಮವಾಗಿ ನೆರವೇರಲು ಸಹಕರಿಸಿದವರಿಗೆಲ್ಲ ಆ॥ ವಿ॥ ಪಂಡಿತ ಗೋಪಾಲಕೃಷ್ಣಾವಧಾನಿಗಳು ಕೃತಜ್ಞತೆಗಳನ್ನು ಸಲ್ಲಿಸಿದ್ದಾರೆ

ರೈಲ್ವೆ ವರ್ಕ್‌ಷಾಪ್ ನೌಕರರ ಸಭೆ

ನಗರದ ರೈಲ್ವೆ ವರ್ಕ್‌ಷಾಪಿನ ನೌಕರರ ಸಭೆಯು ಕಳೆದ ಬುಧವಾರ ಶ್ರೀ ಹೆಚ್. ಡಿ. ರಾಘವಾಚಾರ್‌ರವರ ಅಧ್ಯಕ್ಷತೆಯಲ್ಲಿ ನಡೆಯಿತು ಮದ್ರಾಸಿನ ರೈಲ್ವೆ ನೌಕರರ ನಾಯಕ ಟಿ. ವಿ. ಆನಂದನ್‌ರವರು ಭಾಗವಹಿಸಿದ್ದರು ರೈಲ್ವೆ ಕೆಲಸಗಾರರು ಜುಲೈ ೧೧ನೇ ತಾರೀಖು ಮುಷ್ಕರದ ಬ್ಯಾಲೆಟ್ ತೆಗೆದುಕೊಳ್ಳಬೇಕೆಂಬ ಸಲಹೆಯನ್ನು ಅನುಮೋದಿಸಲಾಯಿತಲ್ಲದೆ, ಆ ಮೂಲಕ ಪ್ರಧಾನ ಮಂತ್ರಿಯವರಿಗೆ ಎಚ್ಚರಿಕೆಯನ್ನು ಕೊಡಬೇಕೆಂದೂ ಸೂಚಿಸಲಾಯಿತು ರೈಲ್ವೆಯಲ್ಲಿ ಹೆಚ್ಚು ಸಂಬಳದ ಅಧಿಕಾರಿಗಳನ್ನು ತೆಗೆದು ಹಾಕಬೇಕೆಂದೂ ಸೂಚಿಸಲಾಯಿತು ಅಧಿಕಾರ ವರ್ಗ ಮತ್ತು ನಾಲ್ಕನೇ ದರ್ಜೆ ಕೆಲಸಗಾರರನ್ನು ಬಿಟ್ಟು ಮಿಕ್ಕ ಎಲ್ಲಾ ನೌಕರ ವರ್ಗಗಳಿಗೂ ಹೊರಗಿನಿಂದ ನೌಕರರನ್ನು ತೆಗೆದುಕೊಳ್ಳುವುದನ್ನು ಕೂಡಲೇ ನಿಲ್ಲಿಸಬೇಕೆಂದೂ, ಮುಂದೆ ಹಾಗೆ ತೆಗೆದುಕೊಳ್ಳಕೂಡದೆಂದೂ ಸಹ ನಿರ್ಣಯ ಮಾಡಲಾಯಿತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಕನ್ನಡ ಗೀತೆ [illegible] ಮಧ್ಯಾಹ್ನ [illegible] ಸಂಗೀತ [illegible] ಎನ್ [illegible] ಕರ್ನಾಟಕ ಸಂಗೀತ [illegible] ಎಸ್ ಕೃಷ್ಣ [illegible] ಗ್ರಾಮಾಂತರ ಕಾರ್ಯಕ್ರಮ [illegible] ಎನ್ ಕೃಷ್ಣಯ್ಯಂಗಾರ್—ಕರ್ನಾಟಕ [illegible]

Pulv
BRONKOL
for ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists
71|1 A.S Street,
BANGALORE 2

ನೆಹರೂರವರಿಗೆ ವೈದ್ಯ ಸಂಘದ ಗೌರವ ಸದಸ್ಯತ್ವ

ಪ್ರಧಾನಿ ನೆಹರೂರವರಿಗೆ ಮೊನ್ನೆ ಬೊಂಬಾಯಿಯಲ್ಲಿ ಫಿಸಿಷಿಯನ್ಸ್ ಮತ್ತು ಸರ್ಜನ್ನುಗಳ ಕಾಲೇಜಿನ ಗೌರವ ಸದಸ್ಯತ್ವವನ್ನು ವಿಶೇಷ ಘಟಿಕೋತ್ಸವದಲ್ಲಿ ಕೊಡಲಾಯಿತು ಅವರು ಭಾಷಣ ಮಾಡಿ, ತಮ್ಮನ್ನು ವೈದ್ಯರ ಸಂಘಕ್ಕೆ ಸೇರಿಸುವುದರಿಂದ ಯಾರಾದರೂ ತಮ್ಮ ಬಳಿ ಚಿಕಿತ್ಸೆಗಾಗಿ ಬಂದರೆ ತಮ್ಮ ಪಾಡೇನು-ಎಂಬುದಾಗಿ ಪ್ರಶ್ನಿಸಿದರು ಈಚೆಗೆ ಕೊಡಲಾಗುತ್ತಿರುವ ಡಾಕ್ಟರೇಟುಗಳು ಜನರಲ್ಲಿ ಗೊಂದಲವನ್ನುಂಟುಮಾಡುತ್ತಿವೆಯೆಂದೂ, ಒಬ್ಬಾತನಿಗೆ ಕೊಡಲಾದ ಅಮೇರಿಕನ ಡಾಕ್ಟರ್ ಆಫ್ ಫಿಲಾಂತ್ರಫಿ (ದಾನಿ) ಎಂಬ ಪ್ರಶಸ್ತಿಯ ವಿಷಯವನ್ನು ಕೇಳಿ ಆತನ ಸ್ನೇಹಿತರೇ ವಿಸ್ಮಯಗೊಂಡರೆಂದೂ ನೆಹರೂರವರು ಹೇಳಿದರು ಅಲಹಾಬಾದಿನ ಸುಪ್ರಸಿದ್ಧ ವಕೀಲರೊಬ್ಬರಿಗೆ ಡಾಕ್ಟರ್ ಪ್ರಶಸ್ತಿಯನ್ನು ಕೊಡಲಾಗಿತ್ತೆಂದೂ, ಜನರು ಆತನು ಸಹ ವೈದ್ಯರೆಂದು ತಪ್ಪು ಭಾವನೆ ಹೊಂದಿದ್ದರೆಂದೂ ತಿಳಿಸಿದರು

ಹಿಟ್ಟಿನ ಗಿರಣಿ ಮಾಲೀಕರಲ್ಲಿ ಮನವಿ

ಸರ್ಕಾರದವರು ಈಚೆಗೆ ವಿದ್ಯುಚ್ಛಕ್ತಿ ದರಗಳನ್ನು ಹೆಚ್ಚಿಸಿ ಆಜ್ಞೆ ಮಾಡಿರುವ ವಿಚಾರದಲ್ಲಿ ಹಿಟ್ಟಿನ ಗಿರಣಿ ಸಂಘದವರು ತಮ್ಮ ಕಷ್ಟನಷ್ಟಗಳನ್ನು ಮತ್ತು ಅಹವಾಲುಗಳನ್ನು ಸರ್ಕಾರದವರಲ್ಲಿ ನಿವೇದಿಸಿಕೊಂಡಿರುವುದು ಸರಿಯಷ್ಟೆ ಈ ವಿಷಯವಾಗಿ ಫ್ಲೋರ್ ಮಿಲ್ ಮಾಲೀಕರುಗಳಿಗೆ ಸೂಕ್ತವಾದ ಪರಿಹಾರವು ಸಿಕ್ಕುವ ಭರವಸೆ ಇರುವುದರಿಂದ, ಸಧ್ಯದಲ್ಲಿ ಎಲ್ಲರೂ ಹಿಂದೆ ಇದ್ದಂತೆಯೇ ಹಣ ಪಾವತಿ ಮಾಡುತ್ತಿರುವಂತೆಯೇ ಈಗಲೂ ಸಹಾ ಅದೇ ದರದಂತೆ ಪಾವತಿ ಮಾಡಿ, ತಮ್ಮ ಉದ್ಯಮವನ್ನು ನಿಲ್ಲಿಸದೆ ಮುಂದುವರಿಸಬೇಕಾಗಿಯೂ ಮತ್ತು ಈ ವಿಷಯದಲ್ಲಿ ಸಂಘದ ಕಾರ್ಯದರ್ಶಿಗಳನ್ನು ಕಂಡು ಸರಿಯಾದ ರೀತಿಯಲ್ಲಿ ಅರ್ಜಿಯನ್ನು ಬರೆದುಕೊಡಬೇಕಾಗಿಯೂ ಕಾರ್ಯದರ್ಶಿಗಳಾದ ಹೆಚ್ ಕೆ ಕೃಷ್ಣಮೂರ್ತಿಯವರು ತಿಳಿಸಿರುತ್ತಾರೆ

ರಾಜಪರಿವಾರ ನಾಯಕರ ಸಂಘ

ನೆನ್ನೆ ಮೊನ್ನೆ ಸಂಘದ ವಿಚಾರವಾಗಿ ಪ್ರಕಟವಾಗಿರುವ ಹೇಳಿಕೆಯಲ್ಲಿ ಖಜಾಂಚಿ ಶ್ರೀ ಬಿ ಸಿದ್ದಯ್ಯನವರು ಎಂಬುದರ ಬದಲಾಗಿ ಖಜಾಂಚಿ ಶ್ರೀ ಪಾಪಣ್ಣ ನಾಯಕರು ಎಂದು ಓದಿಕೊಳ್ಳಬೇಕಾಗಿ ಕಾರ್ಯದರ್ಶಿಯವರು ತಿಳಿಸುತ್ತಾರೆ

ಶಾರದಾ ಪೂಜೆ

ನಂಜನಗೂಡಿನ ಶ್ರೀ ರಾಮಾ ಲೀಗ್ ಸಂಸ್ಥೆಯಲ್ಲಿ ಕಳೆದ ಗುರುವಾರ ಶ್ರೀ ಶಾರದಾ ಪೂಜೆಯನ್ನು ಶ್ರೀ ಬಿ ಎಲ್ ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು ವಿದ್ಯಾರ್ಥಿಗಳು ಮತ್ತು ಅಧ್ಯಕ್ಷರ ಭಾಷಣಗಳಾದಮೇಲೆ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗದೊಡನೆ ಸಭೆಯು ಮುಕ್ತಾಯವಾಯಿತು

ಮೈಸೂರು ಸರ್ಕಾರಿ ಉದ್ಯಾನವನಗಳ
ಸೂಪರಿಂಟೆಂಡೆಂಟರ ಕಛೇರಿ
ಲಾಲ್‌ಬಾಗ್, ಬೆಂಗಳೂರು-2
ನೋಟಿಫಿಕೇಷನ್

ಇದೇ 1956ನೇ ಜೂನ್ 15 ರಿಂದ 3 ವರ್ಷಗಳ ಅವಧಿಗಾಗಿ ಮೈಸೂರಿನಲ್ಲಿರುವ ಶ್ರೀ ಚಾಮರಾಜೇಂದ್ರ ಪ್ರಾಣಿ ಸಂಗ್ರಹಾಲಯದ ಉಪಾಹಾರ ಮಂದಿರವನ್ನು ಲೀಸಿಗಾಗಿ ಕೊಡುವ ಬಗ್ಗೆ 1956ರ ಜೂನ್ 4ನೇ ತಾ॥ ಮಧ್ಯಾಹ್ನ 4 ಗಂಟೆವರೆಗೆ ಮೊಹರಾದ ಟೆಂಡರುಗಳನ್ನು ಕೆಳಗೆ ರುಜು ಮಾಡಿರುವವರ ಕಛೇರಿಯಲ್ಲಿ ಸ್ವೀಕರಿಸಲಾಗುವುದೆಂದು ಸಾರ್ವಜನಿಕರ ತಿಳುವಳಿಕೆಗಾಗಿ ಪ್ರಕಟಿಸಲಾಗಿದೆ.

ಮೈಸೂರು ಪ್ರಾಣಿ ಸಂಗ್ರಹಾಲಯದಲ್ಲಿ ಹೊಸದಾಗಿ ಭಾರತೀಯ ಉಪಾಹಾರ ಗೃಹಕ್ಕಾಗಿ ಕಟ್ಟಿಸಲಾಗಿರುವ ಸ್ಥಳದಲ್ಲಿ ಉಪಾಹಾರ ಮಂದಿರವನ್ನು ನಡೆಸಬೇಕಾಗುವುದು

ಲೀಸಿನ ಷರತ್ತು ಮತ್ತು ಇತರ ವಿಷಯಗಳನ್ನು ಮೈಸೂರು ಜೂ ಗಾರ್ಡನ್ಸಿನ ಸೂಪರಿಂಟೆಂಡೆಂಟರಿಂದ ಯಾವ ಕೆಲಸದ ದಿನದಲ್ಲಾದರೂ ಪಡೆಯಬಹುದು

ಎಂ ಹೆಚ್. ಮರಿಗೌಡ,
ಸೂಪರಿಂಟೆಂಡೆಂಟ್

ಪೊಲೀಸು ವೇಷ ಧರಿಸಿದ್ದ ಮೋಸಗಾರನ ಬಂಧನ

ಕೋಲಾರದ ಬಳಿ ಹಳ್ಳಿಯೊಂದರಲ್ಲಿ ಅಂತರ್‌ಪ್ರಾಂತೀಯ ಮೋಸಗಾರನೆಂದು ಪ್ರಸಿದ್ಧನಾದ ಮುನಿಸ್ವಾಮಿ ಕೌಂಡರ್ ಎಂಬುವನನ್ನು ದಸ್ತಗಿರಿ ಮಾಡಲಾಗಿದೆ ಅವನನ್ನು ಬಂಧಿಸಿದಾಗ ಅವನು ಮದ್ರಾಸ್ ಸಂಸ್ಥಾನದ ಪೊಲೀಸರ ವೇಷ ಧರಿಸಿದ್ದನೆಂದು ಹೇಳಲಾಗಿದೆ ಒಂದು ಜೊತೆ ಕೈ ಬೇಡಿ, ಸೇಲಂ ಜಿಲ್ಲಾ ಪೊಲೀಸು ಅಧಿಕಾರಿಯ ರುಜುವಿರುವ ದಸ್ತಗಿರಿ ವಾರಂಟು, ಗುರುತಿನ ಕಾರ್ಡು ಇವುಗಳು ಅವನ ಬಳಿ ದೊರೆತುವು ಅವನಿಗೆ ಈಗಾಗಲೇ ಎರಡು ಬಾರಿ ಸಜಾ ಆಗಿದೆ. ತಿರುಪತ್ತೂರು, ಚಿತ್ತೂರು, ಬೆಂಗಳೂರು ಮತ್ತು ಕೋಲಾರಗಳಲ್ಲಿ ಅವನು ಅನೇಕ ಅಪರಾಧಗಳನ್ನು ಮಾಡಿರುವುದಾಗಿ ಹೇಳಲಾಗಿದೆ ತಿರುಪತ್ತೂರಿನಲ್ಲಿ ಪೊಲೀಸರ ವಶದಿಂದ ಅವನು ತಪ್ಪಿಸಿಕೊಂಡಿದ್ದುದಾಗಿಯೂ ಗೊತ್ತಾಗಿದೆ

ಪ್ರಮುಖ ಯೋಜನೆಗಳ ಬಗ್ಗೆ ತನಿಖೆ ಸಮಿತಿ ರಚನೆ

ಕೇಂದ್ರ ಮತ್ತು ಪ್ರಾಂತ್ಯ ಸರ್ಕಾರಗಳವರು ಪಂಚ ವಾರ್ಷಿಕ ಯೋಜನೆ ಸಂಬಂಧದಲ್ಲಿ ಸಿದ್ಧಪಡಿಸಿರುವ ಪ್ರಮುಖ ಯೋಜನೆಗಳ ಬಗ್ಗೆ ತನಿಖೆ ನಡೆಸಲು ಕೇಂದ್ರ ಸರ್ಕಾರದ ಗೃಹ ಸಚಿವ ಶ್ರೀ ಗೋವಿಂದವಲ್ಲಭಪಂತರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ ಅದರಲ್ಲಿ ಕೇಂದ್ರ ಯೋಜನಾ ಸಚಿವರು, ಅರ್ಥ ಸಚಿವರು ಯೋಜನಾ ಮಂಡಲಿಯ ಉಪಾಧ್ಯಕ್ಷರು ಮತ್ತು ಎರಡು ಪ್ರಾಂತ್ಯಗಳ ಮುಖ್ಯಮಂತ್ರಿಗಳು ಸದಸ್ಯರಾಗಿರುವರು

ಮಾರ್ಕೆಟ್ ವರ್ತಕರ ಸಂಘದ ಸರ್ವ ಸದಸ್ಯರ ಸಭೆ

ನಗರದ ಪೌರಸಭಾ ಮಾರ್ಕೆಟ್ ವರ್ತಕರುಗಳ ಸಂಘದ ಸರ್ವ ಸದಸ್ಯರ ಸಭೆಯು ಇದೇ ತಿಂಗಳು ೧೫ನೇ ತಾರೀಕು ಸಂಜೆ ೬-೩೦ ಗಂಟೆಗೆ ತೆಂಗಿನಕಾಯಿ ವರ್ತಕರ ಸಂಘದ ಕಛೇರಿಯಲ್ಲಿ ನಡೆಯುವುದು ಸದಸ್ಯರೆಲ್ಲರೂ ತಪ್ಪದೆ ಬರುವಂತೆ ಅಧ್ಯಕ್ಷ ಶ್ರೀ ಎಂ ಗೋಪಾಲರಾಯರು ಪ್ರಾರ್ಥಿಸಿರುತ್ತಾರೆ

ನರಗಳು ನಾಶವಾದರೆ
ಎಲ್ಲವೂ ನಾಶವೇ !
★ ಮರವ್ವಸ್ಪ
★ ಮಿತಿಮೀರಿ ಕೆಲಸ
★ ಕೊರಗು
★ ಚಿಕ್ಕ ಚಟ್ಟದ ಅಜೀರ್ಣ
ಇವೆಲ್ಲ ನರ ದೌರ್ಬಲ್ಯಕ್ಕೆ
ಸಾಧಾರಣ ಕಾರಣಗಳು
★
★ ಮರವು
★ ಭ್ರಾಂತಿ ಕಲ್ಪನೆಗಳು
★ ಭೀತಿ ಮನೋಭಾವ
★ ಆತ್ಮಹತ್ಯೆ ಭಾವನೆಗಳು
★ ಮನೋನ್ಯೂನತೆಗಳು
ಇವು ಅದರ ಭೀಕರ ಪರಿಣಾಮಗಳು
ನರ ದೌರ್ಬಲ್ಯವನ್ನು ಕತ್ತರಿಸುವ ಬಲು
ವಿಶ್ವವಿಖ್ಯಾತ ಔಷಧಿ
ನವರತ್ನ ಕಲ್ಪ
ಸೇವಿಸಿ
ಇದು ಒಂಭತ್ತು ಅಮೂಲ್ಯ ಹರಳುಗಳ ಯೋಗ ಭಸ್ಮ ವಜ್ರ, ಕೆಂಪು, ಮುತ್ತು, ಟೋಪಾಜ್, ಪಚ್ಚೆ, ನೀಲ, ಗೋಮೇಧಿಕ, ಕ್ಯಾಟ್—ಇವೆಲ್ಲ ಇವೆ.
— ಇವನ್ನು ಕಂಡುಹಿಡಿದವರು —
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ,
ವೈದ್ಯ ವಾಚಸ್ಪತಿ.
ಇವರ ಪುಸ್ತಕ ವಿವರ ಸಾಹಿತ್ಯಕ್ಕೆ ಬರೆಯಿರಿ
NAVRATNA KALPA PHARMACY,
Jullundur City (India)
Grams NAVRATNA

Edited, Printed and Published by A. R. Nagarajan at Sadhvi Press, D Subbiah Road, Mysore

ರಿಜಿಸ್ಟರ್ ನಂ. 792
ಲಗ್ನದ ಜವಳಿ
ಗ್ಯಾರಂಟಿ ಸಿಲ್ಕ್ ಸೀರೆಗಳು
ಧರ್ಮಾವರಂ, ಕೊಳ್ಳೇಗಾಲ, ಆರ್ಣಿ, ಬಿನ್ನಿಗಳ್
ರೇಷ್ಮೆ ಮತ್ತು ನೂಲಿನ ಸೀರೆಗಳು
M.V. ಭೋಜಯ್ಯ
ಅಂಡ್ ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು
ಕೋರ್ಟ್ ಮಾರ್ಕೆಟ್
ಸ್ಥಾಪನೆ 1932 · ಫೋನ್ 811
ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸವರನ್ ಚಿನ್ನದಿಂದ ತಯಾರಾದ ನೆಕ್ಲೇಸ್‌ಗಳು, ಬಳೆಗಳು, ಮತ್ತು ಪಲ್ಲೀಸ್ ಒಡವೆಗಳು ಸಹ ದೊರೆಯುತ್ತವೆ

ಪುಟ : ೧೮] SADHVI : MONDAY 4—6—1956 ಮೈಸೂರು : ಸೋಮವಾರ ೪—೬—೧೯೫೬ [ಸಂಚಿಕೆ : ೨೬೬

ಬೊಂಬಾಯಿಯಲ್ಲಿ ೫ ವರ್ಷ ಕಾಲ ಕೇಂದ್ರದ ಆಡಳಿತ

ಮೈಸೂರು ಜಿಲ್ಲೆಯ ಹಲವು ತಾಲ್ಲೂಕುಗಳಲ್ಲಿ ಅಭಾವ ಪರಿಸ್ಥಿತಿ

ಪತ್ರಿಕೋದ್ಯೋಗಿಗಳ ಪ್ರವಾಸದಲ್ಲಿ ಕಂಡುಬಂದ ದೃಶ್ಯಗಳು

ಮೈಸೂರು ೪

ಮಳೆಯ ಅಭಾವದ ದೆಸೆಯಿಂದ ಕಷ್ಟಕ್ಕೀಡಾಗುವ ಮೈಸೂರು ಜಿಲ್ಲೆಯ ಟಿ ನರಸೀಪುರ, ನಂಜನಗೂಡು ಮತ್ತು ಚಾಮರಾಜನಗರ ತಾಲ್ಲೂಕು ಪ್ರದೇಶಗಳಿಗೆ ನೆನ್ನೆ ಪತ್ರಿಕಾ ಪ್ರತಿನಿಧಿಗಳ ತಂಡವೊಂದು ಭೇಟಿಯಿತ್ತು, ಪರಿಶೀಲನೆ ನಡೆಸಿತು. ವಿಧಾನ ಸಭಾ ಸದಸ್ಯ ಶ್ರೀ ಎಂ ರಾಜಶೇಖರಮೂರ್ತಿಯವರು ತಂಡದೊಡನೆ ಪ್ರವಾಸ ಮಾಡಿದರು

ಮಳೆಯೇ ಆಧಾರವಾಗಿರುವ ಈ ಪ್ರದೇಶದ ಸುಮಾರು ೩೦೦ ಗ್ರಾಮಗಳು ಅಭಾವದ ದೆಸೆಯಿಂದ ನೊಂದಿವೆ ಜೋಳ ಮುಂತಾದ ಮುಖ್ಯ ಬೆಳೆಗಳಿಗೆ ಧಕ್ಕೆಯಾಗಿರುವುದಲ್ಲದೆ, ಮೇವಿನ ತೀವ್ರ ಅಭಾವವಾಗಿ ಜಾನುವಾರುಗಳು ಬಳಲುತ್ತಿವೆ

ಇಲ್ಲಿ ಸ್ವಲ್ಪ ಹುಲ್ಲು ಮುಂತಾದುವು ದೊರಕಿದರೂ ಸಹ ಬೆಲೆ ದುಬಾರಿಯಾಗಿ ದನಗಳಿಗೆ ಕೊಂಡು ಹಾಕಲು ಅಸಾಧ್ಯವಾಗಿದೆ. ಜನರು ಸಾಲು ಮರಗಳಿಂದ ಆಲದೆಲೆ, ಕೆರೆ ಬಯಲಿನ ಜೊಂಡು ಮುಂತಾದುವುಗಳನ್ನು ಕಡಿದು ದನಗಳಿಗೆ ಹಾಕುತ್ತಿದ್ದಾರೆ. ಪತ್ರಿಕೋದ್ಯೋಗಿಗಳು ಮಾರ್ಗದಲ್ಲಿ ಸಾಗುತ್ತಿದ್ದಾಗ ಹಲವಾರು ಕಡೆ ಸಾಲು ಮರಗಳ ಎಲೆ ಕೀಳುತ್ತಿದ್ದ ಜನರು ಎಲೆಗಳನ್ನು ಅಲ್ಲಲ್ಲೇ ಬಿಟ್ಟು ಗಾಬರಿಯಿಂದ ಓಡಿದುದು ಕಂಡುಬಂತು

ಹೀಗೆ ದನಗಳ ಮೇವಿಗಾಗಿ ಸಾಲು ಮರಗಳ ಎಲೆಗಳನ್ನೆಲ್ಲಾ ಉಪಯೋಗಿಸಿದ್ದುದರಿಂದ ಅನೇಕ ಕಡೆಗಳಲ್ಲಿ ಸಾಲು ಮರಗಳು ಬೋಳುಬೋಳಾಗಿ ನಿಂತಿದ್ದ ದೃಶ್ಯವು ಸರ್ವಸಾಮಾನ್ಯವಾಗಿತ್ತು

ಬೆಳೆಗಳ ಬೆಳವಣಿಗೆಗೆ ಧಕ್ಕೆಯಾದುದರಿಂದ ಆಹಾರ ಧಾನ್ಯಗಳ ಬೆಲೆಯು ಏರಿ ಬಡವರು ಮತ್ತು ಕೂಲಿಗಾರರಿಗೆ ಉಪವಾಸವು ಪ್ರಾಪ್ತವಾಗುತ್ತಿದೆ ಎಷ್ಟೋ ಬಡ ಸಂಸಾರಗಳು ಮನೆಯ ಸಾಮಾನುಗಳನ್ನು ಬಿಕ್ಕರಿಟ್ಟು ಮಾರುತ್ತಿದ್ದಾರೆ. ಹಲವರು ಕೆಲಸಗಳನ್ನು ಹುಡುಕಿಕೊಂಡು ಮನೆಮಠಗಳನ್ನು ತೊರೆದು, ದೂರದ ಪ್ರದೇಶಗಳಿಗೆ ಕೆಲವರು [illegible] ಹೊಟ್ಟೆಗೆ ಕೊಂಡೊಯ್ಯಲಾಗಿದ್ದಾರೆ.

ಗ್ರಾಮಸ್ಥರನ್ನು ಪರಿಹಾರದ ಬಗ್ಗೆ ವಿಚಾರಿಸಿದಾಗ, ಈ ವರ್ಷ ಕಂದಾಯದ ಮಾಫಿ ಮಾಡಿಕೊಡಬೇಕೆಂದೂ ಮತ್ತು ಸರ್ಕಾರಿ ಸಾಲದ ವಸೂಲಿಯನ್ನು ತಾತ್ಕಾಲಿಕವಾಗಿ ನಿಲ್ಲಿಸಬೇಕೆಂದೂ ಮುಖ್ಯವಾಗಿ ಅಭಿವೃದ್ಧಿ ಕಾರ್ಯಕ್ರಮಗಳನ್ನು ಶೀಘ್ರದಲ್ಲಿಯೇ ಕೈಗೊಂಡು ಅದರಲ್ಲಿ ಜನರ ದುಡಿಮೆಗೆ ಸಂಬಳ ರೂಪದಲ್ಲಿ ಫೇರ್ ಪ್ರೈಸ್ ಡಿಪೋಗಳ ಮೂಲಕ ಆಹಾರ ಧಾನ್ಯಗಳನ್ನು ಹಂಚಬೇಕೆಂದೂ ಕೋರಲಾಯಿತು

ಹಿಪ್ಪಲಿನೇರಳೆ ಮುಂತಾದ ವ್ಯವಸಾಯವನ್ನು ಕೈಗೊಂಡಿರುವವರು ಮತ್ತು ಕೆಲವು ಹಿಡುವಳಿದಾರರು ತಮಗೆ ಅವಶ್ಯಕವಾದ ಹಣವನ್ನು ಸಾಲದ ರೂಪದಲ್ಲಿ ಕೊಡಿಸಿಕೊಡಬೇಕೆಂದೂ ಸಹ ಕೇಳಿದರು. ಈ ಸ್ಥಿತಿಯನ್ನು ಶೀಘ್ರದಲ್ಲಿಯೇ ತಡೆಗಟ್ಟದಿದ್ದರೆ ಅಭಾವವು ಆ ಪ್ರದೇಶವನ್ನು ಆವರಿಸುವುವೆಂಬ ಭೀತಿಯು ಜನರಲ್ಲಿ ಮೂಡಿರುತ್ತದೆ.

ರೇಷ್ಮೆ ಕಾರ್ಮಿಕರ ಪ್ರದರ್ಶನ ಈ ದಿನ ಮುಕ್ತಾಯವೇ?

ಬೆಂಗಳೂರು ೪

ಮೂರು ದಿನಗಳಿಂದ ಇಲ್ಲಿ ಪ್ರದರ್ಶನ ನಡೆಸುತ್ತಿರುವ ರೇಷ್ಮೆ ಕಾರ್ಮಿಕರ ಮುಷ್ಕರವು ಈ ಸಂಜೆ ಮುಕ್ತಾಯವಾಗುವ ನಿರೀಕ್ಷೆಯಿದೆ. ನೆನ್ನೆ ಗ್ರಾಮಾಂತರ ಕೈಗಾರಿಕಾ ಡೈರೆಕ್ಟರ್ ಶ್ರೀ ಎಲ್ ರಪ್ಪನವರು ಜಿಲ್ಲಾಧಿಕಾರಿ ಶ್ರೀ ಮುನಿಸ್ವಾಮಿ ಮತ್ತು ಜಿಲ್ಲಾ ಪೊಲೀಸು ಸೂಪರಿಂಟೆಂಡೆಂಟರೊಡನೆಯೂ, ಕಾರ್ಮಿಕರ ಪ್ರತಿನಿಧಿಗಳೊಡನೆಯೂ ಮಾತುಕತೆ ನಡೆಸಿದರು. ಕೈಗಾರಿಕಾ ನ್ಯಾಯಮಂಡಲದ ಮುಂದೆ ತಂದಿರುವ ಎಲ್ಲಾ ವ್ಯಾಜ್ಯಗಳನ್ನೂ ವಾಪಸು ಪಡೆಯುವುದಕ್ಕೆ ಕಾರ್ಮಿಕರ ಪ್ರತಿನಿಧಿಗಳು ಒಪ್ಪಿಗೆ ಸೂಚಿಸಿದರೆಂದು ಹೇಳಲಾಗಿದೆ. ಈ ದಿನ ಅವರುಗಳು ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರನ್ನು ಭೇಟಿ ಮಾಡಲಿರುವರು

ವ್ಯಾಜ್ಯಗಳನ್ನು ವಾಪಸು ತೆಗೆದುಕೊಂಡನಂತರ ಕಾರ್ಖಾನೆಗಳನ್ನು ತೆರೆಯುವ ಪ್ರಯತ್ನ ಮಾಡುವುದಾಗಿ ಜಿಲ್ಲಾಧಿಕಾರಿಗಳು ಒಪ್ಪಿರುವರೆಂದು ಹೇಳಲಾಗಿದೆ

ಏತನ್ಮಧ್ಯೆ ೧೫೦ ಮಂದಿ ಕಾರ್ಮಿಕರು ಪೊಲೀಸ್ ಕಛೇರಿ ಕಟ್ಟಡದ ಬಳಿ ಇನ್ನೂ ಕುಳಿತಿರುವರು

ಜಪಾನ್ ಶಾಸನ ಸಭೆಯಲ್ಲಿ ಸದಸ್ಯರ ಮುಷ್ಟಿ ಕಾಳಗ

ಜಪಾನಿನ ಪಾರ್ಲಿಮೆಂಟಿನ ಕೆಳ ಮನೆಯಲ್ಲಿ ಮೊನ್ನೆ ಸದಸ್ಯರುಗಳು ಪರಸ್ಪರ ಮುಷ್ಟಿ ಪ್ರಹಾರ ಮಾಡಿದರೆಂದೂ, ಸೀಸೆಗಳು, ಕಾಗದಪತ್ರ ಮತ್ತು ಪೀಠಗಳನ್ನು ಎಸೆದರೆಂದೂ ವರದಿಯಾಗಿದೆ. ಸದಸ್ಯರೊಬ್ಬರ ಅಂಗವಸ್ತ್ರ ಹರಿದುಹೋಯಿತು, ಜಗಳದಲ್ಲಿ ತಾಗಿದ ಏಟಿನ ಪರಿಣಾಮವಾಗಿ ಸದಸ್ಯರೊಬ್ಬರು ಎಚ್ಚರ ತಪ್ಪಿ ಬಿದ್ದರೆಂದು ಹೇಳಲಾಗಿದೆ. ಸಭಾಧ್ಯಕ್ಷರು ತಮ್ಮ ಆಸನದಲ್ಲಿ ಕೂಡಲು ಅವಕಾಶ ಕೊಡದೆ ಹಲವು ಸದಸ್ಯರು ಅಡ್ಡಿಬಂದಾಗ ಜಗಳವಾಯಿತು.

ಜಪಾನಿನ ವಿದ್ಯಾಭ್ಯಾಸ ಪದ್ಧತಿಯನ್ನು ಬದಲಾಯಿಸುವ ಬಗ್ಗೆ ಶಾಸನ ಸಭೆಯಲ್ಲಿ ತರಲಾದ ಮಸೂದೆಗೆ ಸಮಾಜವಾದಿಗಳು ಅಡ್ಡಿಪಡಿಸಿದರು. ಸಭೆಯ ಲಿಬರಲ್ ಸದಸ್ಯರು ಉಪಾಧ್ಯಕ್ಷರನ್ನು ಅಧ್ಯಕ್ಷ ಸ್ಥಾನದಲ್ಲಿ ಕೂಡಿಸಿ ಸಭಾ ಕಾರ್ಯವನ್ನು ಮುಂದುವರಿಸಲು ಪ್ರಯತ್ನಿಸಿದರು. ಆದು ಸಫಲವಾಗಲಿಲ್ಲ. ಕಿಟಿಕಿ ಬಾಗಿಲುಗಳವರೆಗೂ ಹೋರಾಟ ನಡೆಯಿತು. ಒಂದು ವಾರದಿಂದಲೂ ಸಭೆಯಲ್ಲಿ ಕೋಲಾಹಲ, ಮೊನ್ನೆ ವಿಪರೀತಕ್ಕಿಟ್ಟುಕೊಂಡಿತು. ಕಡೆಗೆ ಸಮಾಜವಾದಿಗಳು ತಂದ ಅವಿಶ್ವಾಸ ನಿರ್ಣಯವನ್ನು ಅಧ್ಯಕ್ಷರು ತಳ್ಳಿಹಾಕಿ ಶಾಂತ ಗದ್ದಲವಾಗದಂತೆ ಮಾಡಲು ಸಭೆಯನ್ನು ಮುಂದುವರಿಸಿದರು

ಬೊಂಬಾಯಿಯ ಉದ್ರಿಕ್ತ ಗುಂಪಿನ ಮೇಲೆ ಗುಂಡು

ಒಬ್ಬನ ಮರಣ: ೨೬ ಮಂದಿಗೆ ಗಾಯ

ಬೊಂಬಾಯಿಯಲ್ಲಿ ನೆನ್ನೆ ಪೊಲೀಸರು ಮೂರು ಕಡೆ ಒಟ್ಟು ೩೧ ರೌಂಡು ಗುಂಡು ಹಾರಿಸಿದ ಪರಿಣಾಮವಾಗಿ ಒಬ್ಬನು ಮಡಿದು ಮತ್ತೊಬ್ಬನಿಗೆ ಗಾಯವಾಯಿತು. ಪ್ರಧಾನಿ ನೆಹರೂರವರು ಬಹಿರಂಗ ಸಭೆಯೊಂದರಲ್ಲಿ ಭಾಷಣ ಮಾಡಿದನಂತರ, ಉದ್ರಿಕ್ತ ಜನರ ಮೇಲೆ ಸಭೆ ಸ್ಥಳಕ್ಕೆ ಸ್ವಲ್ಪ ದೂರದಲ್ಲೂ, ಮತ್ತೆರಡು ಪ್ರದೇಶಗಳಲ್ಲೂ ಪೊಲೀಸರು ಗುಂಡು ಹಾರಿಸಿದರು. ಪ್ರದರ್ಶನಕಾರರು ಪ್ರಯಾಣಿಕರ ಒಂದು ಬಸ್ಸನ್ನು ಪ್ರತಿಭಟಿಯಾಗಿ ಮಾರ್ಗ,ವಾಹನ ಸಂಚಾರವೇ ಇಲ್ಲದಂತೆ ಮಾಡಲು ಪ್ರಯತ್ನಿಸಿದರು. ಮತ್ತೊಂದು ಕಡೆ ಬಿ.ಟಿ ಬಸ್ಸಿಗೆ ಬೆಂಕಿ ಹಚ್ಚಲಾಯಿತು. ಬಸ್ಸಿನ ಕಂಡಕ್ಟರು ಮತ್ತು ಡ್ರೈವರು ಕಲ್ಲೇಟಿನಿಂದ ಪಾರಾಗಲು ಮೊದಲೇ ಬಸ್ಸನ್ನು ತ್ಯಜಿಸಿ ಓಡಿದರು. ಅಗ್ನಿಗೆಂದ ಬೆಂಕಿ ಆರಿಸುವ ಯಂತ್ರವನ್ನು ಜನರು ತಡೆದಾಗ, ಪೊಲೀಸು ಅಧಿಕಾರಿಯು ರಿವಾಲ್ವರನ್ನು ಹಾರಿಸಿ ಅಗ್ನಿಶಾಮಕ ವಾಹನಕ್ಕೆ ದಾರಿಮಾಡಿಕೊಟ್ಟರು

ನೆಹರೂರವರು ಭಾಷಣ ಮಾಡುತ್ತಿದ್ದಾಗ ವೇದಿಕೆ ಬಳಿ ಗಲಾಟೆಯೇನೂ ಆಗಲಿಲ್ಲ. ಆದರೆ ಸಭೆಗೆ ಹೋಗುವ ಮಾರ್ಗಗಳು ಮತ್ತು ಗಲ್ಲಿಗಳಲ್ಲಿ ಗಲಾಟೆಗಳಾಗಿ, ಪೊಲೀಸರು ಅಶ್ರುವಾಯು ಮತ್ತು ಲಾಠಿ ಪ್ರಯೋಗಗಳನ್ನು ಪದೇಪದೇ ಮಾಡಿದರು

ಅನೇಕ ಕಡೆ ಕಲ್ಲು ಬೀರಿ ಬಸ್ಸುಗಳನ್ನು ನಿಲ್ಲಿಸಿ, ಪ್ರಯಾಣಿಕರನ್ನು ಕೆಳಗೆ ಇಳಿಸಿ ಖಾಲಿ ವಾಹನಗಳು ಹೋಗುವಂತೆ ಮಾಡಲಾಯಿತು. ಸಂಜೆ ಹೊತ್ತಿಗೆ ಅವ್ಯವಸ್ಥೆಯಾಗಿ ಪೊಲೀಸರು ಜನರ ಗುಂಪನ್ನು ತಡೆಯಲು ವಿಪರೀತ ಪ್ರಯಾಸಪಡಬೇಕಾಯಿತು. ಬಹಿರಂಗ ಸಭೆಯು ಆರಂಭವಾಗಲು ಜನರ ಮಧ್ಯೆ ಪಟಾಕಿಗಳನ್ನು ಹಾರಿಸಿದಾಗ ಸ್ವಲ್ಪ ಮಟ್ಟಿನ ಗದ್ದಲವಾಗಿ ಅನಂತರ ಶಾಂತಿಯುಂಟಾಯಿತು. ಹಲವು ಕಡೆ ಕಪ್ಪು ಧ್ವಜಗಳನ್ನೂ ಪ್ರದರ್ಶಿಸಲಾಗಿತ್ತು. ನೆಹರೂರವರು ತಮ್ಮ ಭಾಷಣದ ಕಡೆಯಲ್ಲಿ ಜನರಿಂದ ಮೂರು ಬಾರಿ ಜೈಹಿಂದ್ ಎಂದು ಬಹಳ ಜೋರಾಗಿ ಕೂಗಿಸಿದರು

ಲಾಠಿ ಪ್ರಹಾರದಿಂದ ಒಟ್ಟು ೨೫ ಮಂದಿಗೆ ಗಾಯವಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಸಲಾಯಿತು

ಉಡುಪಿ ಪೇಜಾವರ ಸ್ವಾಮಿಗಳವರ ಭಾಷಣ

ಮೈಸೂರು ೪

ಈ ದಿನ ಸಂಜೆ ೭ ಘಂಟೆಗೆ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ವ್ಯಾಸರಾಯ ಮಠದಲ್ಲಿ, ಉಡುಪಿ ಶ್ರೀ ಪೇಜಾವರ ಮಠಾಧೀಶರಾದ ವಿಶ್ವೇಶತೀರ್ಥ ಶ್ರೀಪಾದಂಗಳವರು ಭಾಷಣ ಮಾಡುವರು ಸರ್ವರಿಗೂ ಸ್ವಾಗತವಿದೆ. ಶ್ರೀ ಶ್ರೀಗಳವರು ಕೊಡಿಯಮತ್ತೂರಿನಿಂದ ನೆನ್ನೆ ನಗರಕ್ಕೆ ಆಗಮಿಸಿದರು ಇನ್ನು ಮೂರು ದಿನಗಳು ಇಲ್ಲಿ ಬಿಡಾರ ಮಾಡುವರು.

ಬೊಂಬಾಯಿ ಬಗ್ಗೆ ಪ್ರಕಟಣೆ ೫ ವರ್ಷಗಳನಂತರ ತೀರ್ಮಾನ

ಸದ್ಯಕ್ಕೆ ಕೇಂದ್ರಾಡಳಿತದಲ್ಲಿರುವುದು, ನೆಹರೂರವರ ಸ್ಪಷ್ಟ ಹೇಳಿಕೆ

ಸಿದ್ಧಾರ್ಥ ನಗರದಲ್ಲಿ ಸೇರಿದ್ದ ಎ. ಐ. ಸಿ. ಸಿ. ಅಧಿವೇಶನದಲ್ಲಿ ಪ್ರಧಾನಿ ನೆಹರೂರವರು ನೆನ್ನೆ ಮಾತನಾಡಿ, ಸದ್ಯಕ್ಕೆ ಬೊಂಬಾಯಿ ನಗರವು ಕೇಂದ್ರ ಸರ್ಕಾರದ ಆಡಳಿತದಲ್ಲಿರುವುದೆಂದು ಸ್ಪಷ್ಟಪಡಿಸಿದರು. ಭಾಷಾವಾರು ನಿರ್ಣಯದ ಮೇಲೆ ಮಾತನಾಡುತ್ತಾ, ಬೊಂಬಾಯಿ ನಗರದ ಬಗ್ಗೆ ಬೇರೆ ನಿರ್ಧಾರವನ್ನೇನಾದರೂ ತೆಗೆದುಕೊಳ್ಳಬೇಕಾದರೆ ಸುಮಾರು ೫ ವರ್ಷಗಳನಂತರ, ನಗರದಲ್ಲಿ ಉದ್ರೇಕ, ಕ್ರೋಧ ಮುಂತಾದುವೆಲ್ಲವೂ ಶಾಂತವಾದ ಮೇಲೆ ಸಾಧ್ಯವಾಗಬಹುದೆಂದು ಅವರು ಹೇಳಿದರು. ರಾಷ್ಟ್ರದ ಆರ್ಥಿಕ ಜೀವನದಲ್ಲಿ ಐದು ವರ್ಷಗಳ ಅವಧಿಯು ಗಣನೆಗೆ ಬಾರದ ವಿಷಯವೆಂದು ಅಭಿಪ್ರಾಯಪಟ್ಟರು. ನಗರದಲ್ಲಿ ಶಾಂತಿ ಸ್ಥಾಪನೆಯಾಗಬೇಕಿಲ್ಲದೆ, ವಿಪರೀತ ಕೋಲಾಹಲವಿರುವುದರಿಂದ ಅದರ ಭವಿಷ್ಯವನ್ನು ಈಗ ನಿರ್ಧರಿಸುವ ಅರ್ಹತೆಯನ್ನು ನಗರವು ಕಳೆದುಕೊಂಡಿರುವುದೆಂದೂ, ಕಾಲದಲ್ಲಿ ಮತ್ತು ಸೂಕ್ತವಾದ ಸನ್ನಿವೇಶದಲ್ಲಿ ನಗರದ ಭವಿಷ್ಯದ ಬಗ್ಗೆ ಜನರು ನಿರ್ಧಾರ ಮಾಡುವ ಹಕ್ಕನ್ನು ಹೊಂದಬೇಕಾಗುವುದೆಂದೂ ಅವರು ತಿಳಿಸಿದರು. ಹೊಸ ಆಡಳಿತ ವ್ಯವಸ್ಥೆಯಲ್ಲಿ ಇತರ ಸ್ಥಾನಮಾನ ಜೀವನಕ್ಕೆ ಅಡಚಣೆಯೇನೂ ಇರುವುದಿಲ್ಲವೆಂದೂ ಭರವಸೆಯಿತ್ತರು. ಸಂಸ್ಥಾನ ಪುನರ್ವಿಂಗಡಣೆ ಪ್ರಶ್ನೆಯನ್ನು ಈಗಾಗಲೇ ನಿರ್ಧರಿಸಲಾಗಿರುವುದೆಂದೂ, ಪುನಃ ಅದನ್ನು ಎತ್ತುವ ಸಲ್ಲದೇ ಇಲ್ಲವೆಂದೂ ಅವರು ಘೋಷಿಸಿದರು.

ಬೆಂಗಳೂರಿನ [illegible] ಶ್ರೀ ಎಂ. ಆರ್. [illegible] ತಮ್ಮ ಕುಮಾರಿ ಸೌ|| [illegible] ಬೇಲೂರಿನ ಶ್ರೀ ವಿ. ಎಸ್. ಕೃಷ್ಣರಾಯರ ಪುತ್ರ ಶ್ರೀ ವಿ. ಕೆ. [illegible] ರವರಿಗೆ ಕೊಟ್ಟು [illegible] ಬೆಂಗಳೂರಿನಲ್ಲಿ ವಿವಾಹವನ್ನು ನಡೆಸಿದರು.

ಬೆಂಗಳೂರಿನ ಶ್ರೀ ಸಿ. ಬಿ. [illegible] ತಮ್ಮ ಪುತ್ರ ಶ್ರೀ ವಿ. [illegible] ಸ್ವಾಮಿಯವರಿಗೆ ಶ್ರೀ ವಿ. ಎಸ್. [illegible] ಚಂದ್ರರಾಯರ ಪುತ್ರಿ ಸೌ|| [illegible] ನ್ನು ತಂದುಕೊಂಡು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನಡೆಸಿದರು.

Latest C. T. C. Publications
[illegible]
ಬೆಳುವಲದ ಮಡಿಲಲ್ಲಿ ಒಬ್ಬರಿಗೆಳೆ
ತೊರವೆಯ ರಾಮಾಯಣ
ಕನ್ನಡ ಕುಮಾರ ಸಂಭವ
[illegible]
136 ಪುಟಗಳು ಬೆಲೆ 1-1-0
— Publisher —
CITY TUTORIAL COLLEGE, MYSORE
Agents: M/s J. Hanumal & Sons, Mysore
(*Kannada guide to Arts students*
— *IN PRINT*)

ನಗರಾಭಿವೃದ್ಧಿ ಸಮಿತಿ ಸುವರ್ಣೋತ್ಸವ

ನೆನ್ನೆ ನಮ್ಮ ಪತ್ರಿಕೆಯಲ್ಲಿ ನಗರಾಭಿವೃದ್ಧಿ ಸಮಿತಿಯ ಸುವರ್ಣ ಮಹೋತ್ಸವದ ವರದಿಯೊಳಗೆ ಶ್ರೀಮತಿ ಎಂ. ಎಸ್. ರಾಜಮ್ಮನವರಿಂದ ಪ್ರಾರ್ಥನೆ ಎಂಬುದಾಗಿ ಪ್ರಕಟಿಸಲಾಗಿದೆ. ಅದನ್ನು ಸಂಗೀತ ವಿದುಷಿ ಕುಮಾರಿ ಗಾಯತ್ರಿಯವರಿಂದ ಎಂದು ಓದಿಕೊಳ್ಳಬೇಕಾಗಿ ವಿನಂತಿ.

ನಗರಾಭಿವೃದ್ಧಿ ಸಮಿತಿ,
ಮೈಸೂರು

ಅಲ್ಪ ವರಮಾನ ವರ್ಗದ ಗೃಹ ನಿರ್ಮಾಣ ಯೋಜನೆ

ಮೇಲ್ಕಂಡ ನಿಯಮಗಳಿಗೆ ಅನುಸಾರವಾಗಿ ಮೈಸೂರು ನಗರಾಭಿವೃದ್ಧಿ ಸಮಿತಿಯವರಿಂದ ಮೈಸೂರು ಸಿಟಿಯ ಬಡಾವಣೆಗಳಲ್ಲಿ ಮಾದರಿ ಮನೆಗಳನ್ನು ಕಟ್ಟಬಾಗುತ್ತೆ. ಸರ್ಕಾರಿ ನೌಕರರೂ ಮತ್ತು ಸ್ಥಳೀಯ ಸಂಸ್ಥೆಗಳು, ಬ್ಯಾಂಕುಗಳು, ಕೈಗಾರಿಕಾ ಸಂಸ್ಥೆಗಳು ಮತ್ತು ಇತರ ರಿಜಿಸ್ಟರ್ಡ್ ಸಂಸ್ಥೆಗಳಲ್ಲಿ ಮಾಹೆಯಾನ ೫೦೦ ರೂಪಾಯಿಗಳಿಗೆ ಜಾಸ್ತಿ ಇಲ್ಲದ ವರಮಾನ ಪಡೆಯುತ್ತಿರುವ ಖಾಯಂ ನೌಕರರು ಮನೆಗಳಿಗಾಗಿ ಅರ್ಜಿ ಹಾಕಿಕೊಳ್ಳಬಹುದು. ಇದಕ್ಕೆ ಸಂಬಂಧಿಸಿದ ನಿಯಮಾವಳಿ, ತರತೇವಾರಿ ಮನೆಗಳ ಪ್ಲಾನುಗಳು ಮತ್ತು ಅರ್ಜಿ ಫಾರಂಗಳು ಇವುಗಳನ್ನೊಳಗೊಂಡ ಪ್ರತಿ ಪುಸ್ತಕದ ಬೆಲ್ಲ ಒಂದು ರೂಪಾಯಿ. ಅಪೇಕ್ಷೆ ಉಳ್ಳವರು ಆಫೀಸಿನಿಂದ ಈ ಪುಸ್ತಕಗಳನ್ನು ಪಡೆದು ಅದರಲ್ಲಿ ನಮೂದಾಗಿರುವ ಫಾರಂನಲ್ಲೇ ಅರ್ಜಿಗಳನ್ನು ತಾರೀಖು ೩೦-೬-೫೬ರ ಒಳಗಾಗಿ ನಗರಾಭಿವೃದ್ಧಿ ಸಮಿತಿಯ ಛೇರ್ಮನ್‌ರವರಿಗೆ ತಲುಪಿಸಬಹುದು.

(ಸಹಿ) ಎಸ್. ಲಿಂಗಣ್ಣ,
ಅಧ್ಯಕ್ಷರು

ಮಿಡ್ಲರ್ ಪರಸ್ಪರ ಸಹಾಯ ಸಂಘ
ಲಿಮಿಟೆಡ್
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು

ಅಂಬರ್ ಚರಖಾ ಶಿಕ್ಷಣ ಬೇಕಾಗಿದ್ದಾರೆ

ಆ|| ಭಾ|| ಖಾದಿ ಬೋರ್ಡಿನ ಹುಬ್ಬಳ್ಳಿ ಕೇಂದ್ರದಲ್ಲಿ ಅಂಬರ್ ಚರಖಾ ತಯಾರಿಕೆಯಲ್ಲಿ ಶಿಕ್ಷಣ ಪಡೆಯಲು ನಾಲ್ಕು ಜನ ಕುಶಲಿಗಳಿಂದ ಬಡಗಿಗಳೂ ಮತ್ತು ಅಂಬರ್ ಚರಖಾದಲ್ಲಿ ಪರಿಶ್ರಮ ಪಡೆಯಲು ಕನಿಷ್ಠ ಪಕ್ಷ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ಉತ್ತೀರ್ಣರಾದವರೂ, ವೃತ್ತಕಾರರೂ, ಪೂರ್ವ ವಯಸ್ಸಿನವರೂ ಆದ ಇಬ್ಬರು ಹುಡುಗರು ಬೇಕಾಗಿದ್ದಾರೆ.

ಚುನಾಯಿತರಾದ ಶಿಕ್ಷಣಾರ್ಥಿಗಳಿಗೆ ತರಪೇತು ಹೊಂದುವ ಕಾಲದಲ್ಲಿ ಈ ಕೆಳಗೆ ಕಂಡಂತೆ ಮಾಹೆಯಾನ ಸಂಘದವರು ಕೊಡಲಾಗುವುದು.

(ಎ) ಬಡಗಿಗಳಿಗೆ 60 ರೂ ಗಳು
(ಬಿ) ನೂಲುವಿಕೆಯಲ್ಲಿ ಶಿಕ್ಷಣ ಹೊಂದುವವರಿಗೆ 40 ರೂ ಗಳು

ಶಿಕ್ಷಣ ಪಡೆಯಲು ಸಂಘದಿಂದ ಚುನಾಯಿತರಾಗಿ ಕಳುಹಿಸಲ್ಪಡುವವರು ಶಿಕ್ಷಣ ಮುಗಿದ ನಂತರ ಕನಿಷ್ಠ ಪಕ್ಷ 4 ವರ್ಷಗಳ ಕಾಲವಾದರೂ ಸಂಘದಲ್ಲಿ ಕೆಲಸ ಮಾಡಲು ಬದ್ಧರಾಗಿರತಕ್ಕದ್ದು. ತರಪೇತು ಹೊಂದಲಪೇಕ್ಷಿಸುವವರು ತಾ|| 15-6-56ರ ಒಳಗೆ ಸಂಘಕ್ಕೆ ಅರ್ಜಿಗಳನ್ನು ಸಲ್ಲಿಸತಕ್ಕದ್ದು.

ಹೆಚ್ಚಿನ ವಿವರಗಳನ್ನು ಸಂಘದ ಕೆಲಸದ ವೇಳೆಯಲ್ಲಿ ಗೌ|| ಕಾರ್ಯದರ್ಶಿಗಳಿಂದ ಪಡೆಯಬಹುದು.

(ಸಹಿ) ಹೆಚ್. ಎಸ್. ರಾಮಶಾಸ್ತ್ರಿ
ಗೌ|| ಕಾರ್ಯದರ್ಶಿ
ಮೈಸೂರು
ತಾ|| 11-6-56

ಯಳಂದೂರು ತಾಲ್ಲೂಕು ಅಗರದಲ್ಲಿ ನಿರ್ಮಿಸಲಾಗಿರು[illegible]

ಕಾಂಗ್ರೆಸ್ ಕುಟೀರ

ಚಾಮರಾಜನಗರದ ಪೌರಸಭಾಧ್ಯಕ್ಷರ ಚುನಾ[illegible]

ಚಾಮರಾಜನಗರ-ರಾಮಸಮುದ್ರ ಮುನಿಸಿಪಲ್ ಕೌನ್ಸಿಲ್ಲಿಗೆ ಕಳೆದ [illegible] ನಡೆದ ವಿಶೇಷ ಸಭೆಯಲ್ಲಿ [illegible] ವ್ಯಕ್ತಿಗಳಾದ ಜನಾಬ್ ಅನ್ವರ್ [illegible] ನ್ನು ಸರ್ವಾನುಮತದಿಂದ ಪುರಸಭಾಧ್ಯಕ್ಷರನ್ನಾಗಿ ಚುನಾಯಿಸಲಾಯಿತು. ಅಮಲ್ದಾರ್ ಮತ್ತು ಮುನಿಸಿಪಲ್ ಕೌನ್ಸಿಲರ್ ಶ್ರೀ [illegible] ರಾಮಯ್ಯನವರು ಅಧ್ಯಕ್ಷರ ನಿಷ್ಪಕ್ಷಪಾತತೆ, ಇವುಗಳನ್ನು ಪ್ರಶಂಸಿಸಿದರು.

Dear R. Gs!
Please elect (No. 39)
H. S. Venkata Rao, B.A.,
as a **SENATOR**
of the
MYSORE UNIVERSITY

ಮೈಸೂರಿನಲ್ಲಿ ಪ್ರತಿ ತಿಂಗಳ 17ನೇ ತಾರೀಖು

ವಿಶ್ವ ವಿಖ್ಯಾತವಾಗಿರುವ

ನವರತ್ನ—ಕಲ್ಪ

ದಿವ್ಯೌಷಧವನ್ನು ಕಂಡುಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17 ನೇ ತಾರೀ[illegible]
ಮೈಸೂರಿಗೆ ಬರುವರು
ಮೈಸೂರು [illegible] ರಸ್ತೆಯಲ್ಲಿರು
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು [illegible]
— ಭೇಟಿಯ ಕಾಲ —
ಬೆಳಿಗ್ಗೆ 7-30 ರಿಂದ 12-30 ರ
ಮಧ್ಯಾಹ್ನ 4 ರಿಂದ 7-30
ಇವರು ಕಾಲಕ್ಕೆ ಸರಿಯಾಗಿ [illegible]
ವಿಮಾನದಲ್ಲಿ ಸಂಚರಿಸುವರು
ನವರತ್ನ—ಕಲ್ಪ
ಉಪಯೋಗಗಳು
ಇದು ಪಚನ ಕೇಂದ್ರ [illegible], ಹೃದಯ [illegible] ನೀಲ, ಪದ್ಮರಾಗ, ಮುತ್ತು ಮುಂತಾದ 9 ಅಮೂಲ್ಯ ರತ್ನ[illegible] ಯೋಗ [illegible] ದೌರ್ಬಲ್ಯ, [illegible] ವ್ಯಾಧಿಗಳು, [illegible] ವ್ಯಾಧಿ, [illegible] ಮತ್ತು ಇತರ ಎಲ್ಲಾ [illegible] ಹೊಂದುವವು. ಅತ್ಯುತ್ತಮ ಆರೋಗ್ಯ [illegible] ಔಷಧ ಇದೊಂದೇ.

ವಿಶಾಖಪಟ್ಟಣ, ರಾಜಮಹೇಂದ್ರಿ, ಗುಂಟೂರು, ಮದ್ರಾಸು, ಬೆಂಗಳೂರು, [illegible], ಮಧುರೆ, [illegible], ತಂಜಾವೂರು, ಕಲ್ಲಿಕೋಟೆ, ಎರ್ನಾಕುಲಂ, [illegible], ತಿರುನಲ್ವೇಲಿ, [illegible], ಹೈದರಾಬಾದುಗಳ ನಗರ ಮತ್ತು ಇತರ ಸಾಹುಕಾರಗಳಿಗೆ ಏರಿದ —

NAVRATNA KALPA PHARMA
Jullundur City (India)
Grams: NAVRATNA

ಟೆಲಿಫೋನ್ ನಂ. 792

ಚಂದಾ ದರ

ವಿಜಯಂಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗಾರ್ಡ್ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಅರ್ನಿ, ದಿಂಡಿಗಲ್
ರೇಷ್ಮೆ ಮತ್ತು ಜರಿಯ ಸೀರೆಗಳು
ಒಂದೇ ಕಡೆ ದೊರೆಯುವ ಸ್ಥಳ
M.V. ಭೋಜಯ್ಯ
ಬಿ. ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು · ಫೋನ್ 445

ಪುಸ್ತಕ : ೧೯] SADHVI : WEDNESDAY 13–6–1956 ಮೈಸೂರು : ಬುಧವಾರ ೧೩–೬–೧೯೫೬ [ಸಂಚಿಕೆ : ೨೪೩

ಅಂಬರ್ ಚರಖಾ ಪ್ರಚಾರಕ್ಕಾಗಿ ಈ ವರ್ಷ ೭೦ ಲಕ್ಷ ರೂ.

ಬೇಲೂರರ ಕೊಲೆ ಪ್ರಕರಣ

ಬಂಧಿತ ವ್ಯಕ್ತಿಯಿಂದ ಉಪವಾಸ ಮುಷ್ಕರ

ಬೆಂಗಳೂರು ೧೨

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಪ್ರಕರಣದಲ್ಲಿ ಬಂಧಿಸಲ್ಪಟ್ಟಿರುವ ಕೃಷ್ಣನು ಪೋಲೀಸು ಠಾಣೆಯಲ್ಲಿ ನೆನ್ನೆ ಬೆಳಿಗ್ಗೆಯಿಂದ ಆಹಾರವನ್ನು ಸೇವಿಸಲು ನಿರಾಕರಿಸಿ ಮುಷ್ಕರ ಹೂಡಿರುವುದಾಗಿ ವರದಿಯಾಗಿದೆ. ತನ್ನ ಪರ ಪೋಲೀಸರು ೨೦೦೦ ರೂ ಕೊಡಬೇಕೆಂದು ಅವನು ಹೇಳುತ್ತಾ ಅದಕ್ಕಾಗಿ ಉಪವಾಸ ಮಾಡುತ್ತಿರುವನೆಂದೂ, ಹೆಂಡತಿ ಮತ್ತು ಮಗುವನ್ನು ನೋಡಬೇಕೆಂದು ಪೋಲೀಸರನ್ನು ಅಂಗಲಾಚಿ ಬೇಡುತ್ತಿರುವನೆಂದೂ ಹೇಳಲಾಗಿದೆ. ಅವನು ಕಾಫಿಯನ್ನು ಮಾತ್ರ ಸೇವಿಸುತ್ತಿರುವನು. ವರ್ತಮಾನ ಪತ್ರಿಕೆಗಳನ್ನೊದಗಿಸುವಂತೆಯೂ ಅವನು ಕೇಳುತ್ತಿರುವನೆಂದು ಗೊತ್ತಾಗಿದೆ

ಉಳಿದ ಇಬ್ಬರು ಬಂಧಿತರೂ ಆಹಾರವನ್ನು ಸೇವಿಸಕೊಳ್ಳುತ್ತಿರುವರು. ಇದೇ ಸೋಮವಾರ ಪೋಲೀಸರು ಚಾರ್ಜ್‌ಶೀಟನ್ನು ಹಾಕುವರೆಂದು ಹೇಳಲಾಗಿದೆ

ಕೊಲೆಗಾರರು ಬೇಲೂರರ ಮನೆಯಲ್ಲಿ ೩ ಚಿನ್ನದ ಆಭರಣಗಳನ್ನು ಮಾತ್ರ ಉಳಿಸಿದ್ದರೆಂದೂ, ಮನೆಯಲ್ಲಿದ್ದ ಆಭರಣಗಳ ಪಟ್ಟಿಯೊಂದು ಅವರ ಬಳಿ ದೊರಕಿದುದಾಗಿಯೂ, ಕಳುವಾದ ಚಿನ್ನವು ೫ ಕೈ ದಾಟಿದೆ ಎಂದೂ ಹೇಳಲಾಗಿದೆ. ಗೋವಿಂದರಾಜನ ಮನೆಯಲ್ಲಿ ಕೊಲೆ ಒಳಸಂಚು ನಡೆದಿತ್ತೆಂದೂ ಹೇಳಲಾಗಿದೆ

ಒಟ್ಟಿನಲ್ಲಿ ದಸ್ತಗಿರಿಯಾದವರು ಹಣದಾಸೆಗಾಗಿ ಕೊಲೆಗಳಲ್ಲಿ ಪಾತ್ರವಹಿಸಿದ್ದರೆಂದು ಪೋಲೀಸರು ಭಾವಿಸಿದ್ದಾರೆ

ಆಸ್ಪತ್ರೆಯಲ್ಲಿರುವ ರಂಗಲಕ್ಷ್ಮಿಯು ನೆನ್ನೆ ಅಸ್ಪಷ್ಟವಾಗಿ ಮಾತನಾಡಿದಳೆಂದೂ, ಆಕೆಗೆ ಪೂರ್ಣವಾಗಿ ಪ್ರಜ್ಞೆ ಬಂದಿರುವುದೆಂದೂ ಗೊತ್ತಾಗಿದೆ

ಸಂಸ್ಥಾನದ ಪೋಲೀಸರು ಮದ್ರಾಸು, ಬೊಂಬಾಯಿ, ಪೂನಾ, ಹುಬ್ಬಳ್ಳಿ, ಧಾರವಾಡಗಳಲ್ಲಿ ಹಲವು ವ್ಯಕ್ತಿಗಳಿಗಾಗಿ ಹುಡುಕುತ್ತಿರುವರೆಂದೂ, ಮಡಕೇರಿ, ಬೊಂಬಾಯಿ ಮತ್ತು ಮದರಾಸಿಗೂ ಅವರು ಹೋಗಲಿರುವರೆಂದೂ ಹೇಳಲಾಗಿದೆ

ಮೈಸೂರು ಸರ್ಕಾರದವರಿಂದ ಜೀವ ವಿಮಾ ಯೋಜನೆ

ಸಂಸ್ಥಾನ ಸರ್ಕಾರದ ಜೀವ ವಿಮಾ ಸಾರ್ವಜನಿಕ ಶಾಖೆಯು ಕೇಂದ್ರಕ್ಕೆ ಹೋಗಲಿರುವ ಪರಿಣಾಮವಾಗಿ ಸರ್ಕಾರದವರು ಜೀವ ವಿಮಾ ಯೋಜನೆಯನ್ನು ಸ್ವತಃ ನಡೆಸಲು ಆಲೋಚಿಸುತ್ತಿರುವರೆಂದು ವರದಿಯಾಗಿದೆ

ಮಾರ್ಷಲ್ ಸ್ಟಾಲಿನ್ನರ ವಿಚಾರಣೆ

ರಷ್ಯದ ಮಾಜಿ ಪ್ರಧಾನಿ ಮಾರ್ಷಲ್ ಸ್ಟಾಲಿನ್ನರನ್ನು ಮರಣಾನಂತರದ ವಿಚಾರಣೆಗೆ ಒಳಪಡಿಸಲಾಗುವುದೆಂದು ಪ್ರತ್ಯಕ್ಷರು ತಿಳಿಸಿರುವುದಾಗಿ ಲಂಡನ್ನಿನ ಡಾಯಿಲ್ ಪತ್ರಿಕೆ ಪ್ರಕಟಿಸಿದೆ. ಸ್ಟಾಲಿನ್ ಜೀವ ಬದುಕಿದ್ದಾಗ ಅನೇಕ ಅಪರಾಧಗಳನ್ನು ಮಾಡಿದ್ದರೆಂದು ಹೇಳಲಾಗಿದೆ

ಚಿನ್ನದ ಗಣಿ ರಾಷ್ಟ್ರೀಕರಣದ ಪ್ರಶ್ನೆ

ಪರಿಹಾರ ದ್ರವ್ಯದ ನಿಗದಿ ಬಗ್ಗೆ ಕೇಂದ್ರ ಸರ್ಕಾರದ ನೀತಿ

ಬೆಂಗಳೂರು ೧೨

ಕೇಂದ್ರ ಸರ್ಕಾರದ ಪ್ರಕೃತಿ ಸಂಪತ್ತಿನ ಮಂತ್ರಿ ಕೇಶವದೇವ ಮಾಳವೀಯರು ನೆನ್ನೆ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿ ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಅಂಗವಾಗಿ ಕೊಡಬೇಕಾಗಿರುವ ಪರಿಹಾರ ದ್ರವ್ಯದ ಬಗ್ಗೆ ಗಣಿ ಕಂಪೆನಿಗೂ ಸಂಸ್ಥಾನ ಸರ್ಕಾರಕ್ಕೂ ಒಡಂಬಡಿಕೆಯಾಗದಿದ್ದರೆ ಕೇಂದ್ರ ಸರ್ಕಾರದವರು ಮಧ್ಯೆ ಪ್ರವೇಶಿಸಿ ಅದನ್ನು ಇತ್ಯರ್ಥಗೊಳಿಸಬೇಕಾಗುವುದೆಂದು ತಿಳಿಸಿದರು. ದೆಹಲಿಯಲ್ಲಿ ಈಗ ಕಂಪೆನಿ ಪ್ರತಿನಿಧಿಗಳಿಗೂ ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳ ಪ್ರತಿನಿಧಿಗಳಿಗೂ ಮಾತುಕತೆ ನಡೆಯುತ್ತಿರುವುದೆಂದೂ ಅವರು ಹೇಳಿದರು

ದರೋಡೆ ಪಿತೂರಿಯಲ್ಲಿ ಆನೆಗಳ ದಸ್ತಗಿರಿ

ಉತ್ತರ ಪ್ರದೇಶ ಪ್ರಾಂತದ ಬರೈಲಿ ಜಿಲ್ಲೆಯ ಹಳ್ಳಿಯೊಂದರಲ್ಲಿ ದರೋಡೆ ಪಿತೂರಿ ಸಂಬಂಧವಾಗಿ ಪೋಲೀಸರು ಎರಡು ಆನೆಗಳನ್ನು ಬಂಧಿಸಿ ಜಾಮೀನು ಮೇಲೆ ಬಿಟ್ಟಿದ್ದಾರೆ. ಐವರನ್ನು ಬಂಧಿಸಲಾಗಿದೆ. ಬಹರಾಂಪುರ ಎಂಬಲ್ಲಿ ದರೋಡೆ ನಡೆಸಲು ಲಾಲ್‌ಷಹಾ ಮತ್ತು ಶ್ರೀರಾಂ ಎಂಬ ಇಬ್ಬರು ದರೋಡೆಕಾರರು ಹೊರಟಿರುವರೆಂಬ ಸುದ್ದಿ ತಿಳಿದ ಪೋಲೀಸರು ಹಳ್ಳಿಯವರೊಡನೆ ದಾರಿಯಲ್ಲೇ ಅಡ್ಡಹಾಕಲು ಹೋಗಿದ್ದರು. ದರೋಡೆಕಾರರು ವಿವಾಹಕ್ಕೆ ಸಂಬಂಧಪಟ್ಟ ಗುಂಪಿನವರ ವೇಷ ಧರಿಸಿ, ಎರಡು ಆನೆಗಳು ಮತ್ತು ಎರಡು ಕುದುರೆಗಳ ಮೇಲೆ ಬರುತ್ತಿದ್ದರು. ಪೋಲೀಸರು ಸಮೀಪಿಸಿದಾಗ ದರೋಡೆಕಾರರು ಆನೆಗಳಿಂದ ಇಳಿದು ಪರಾರಿಯಾದರು. ೫ ಮಂದಿಯನ್ನು ಬಂಧಿಸಲಾಯಿತು

ಗಂಡಹೆಂಡಿರ ಜಗಳದಲ್ಲಿ ಪತ್ನಿಯ ಮರಣ

ಬಳ್ಳಿಕಟ್ಟೆಗೆ ಹತ್ತಿರದ ವಾಸಲಿನಲ್ಲಿ ವಾಸವಿದ್ದ ಟ್ರೈನಿಂಗ್ ಕಾಲೇಜು ಉಪಾಧ್ಯಾಯನ ಜಯಮ್ಮ ಎಂಬಾಕೆಗೂ, ಆಕೆಯ ಗಂಡ ರಾಮಕೃಷ್ಣನಿಗೂ ಕಳೆದ ಗುರುವಾರ ಜಗಳವಾಗಿ ಜಯಮ್ಮನು ಗಾಯಗೊಂಡು ಆಸ್ಪತ್ರೆಗೆ ಸೇರಿದ್ದಳಷ್ಟೆ. ಆಕೆಯು ಮೊನ್ನೆ ಮೃತಪಟ್ಟಳು

ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಘಂಟೆ [illegible] ಮಂಗಳ—ದೇವರ ನಾಮಗಳು ೭–೪೦ ಮತ್ತು [illegible] ರಾಘವೇಂದ್ರರಾವ್—ಶಾಸ್ತ್ರ ವಾಚನ [illegible]. ಮಧ್ಯಾಹ್ನ ೧೨ ೮ ಎಸ್ ಶ್ರೀನಿವಾಸಯ್ಯಂಗಾರ್—ಸಂಗೀತ ೧೨–೪೦ ಮತ್ತು ರಾತ್ರಿ ೮–೪೦ ಸುಶೀಲ ದೇವಿಯವರ ಪಿಟೀಲು ೧ ಹಿಂದಿ ಸಂಗೀತ ೧ ೩೦ ಘಂಟೆ ಸಂಜೆ ೬ ೧೫ ಪ್ರೌಢ [illegible] ಗಾಗಿ ಸಂಜೆ ೫ ೪೦ ಹಿಂದೂಸ್ತಾನಿ ಸಂಗೀತ ೬ ೧೫ ಜಾನಪದ ಗೀತೆ ೭ ೪೦ ರೇಡಿಯೋ [illegible] ಮಕ್ಕಳ ಗೀತೆಗಳು ೯ ೧೫ ಭಾಷಣ ಗಾಂಧಿ ತತ್ವದ ಬಗ್ಗೆ, ೯ ೪೦ ಯಾತ್ರಿಕರ [illegible] ಸಾಂಘಿಕ ವಿಚಾರಗೋಷ್ಠಿ ೯ ೫೦ ರೇಡಿಯೋ ೧೦ [illegible] ಯುಗ್ ಟೀಚರ್ ಕನ್ನಡ ಪಾಠ

ರೇಷ್ಮೆ ಕಾರ್ಮಿಕರಿಂದ ಆಮರಣಾಂತ ಉಪವಾಸ

ಬೆಂಗಳೂರು ೧೨

ರೇಷ್ಮೆ ಕಾರ್ಮಿಕರು ಮತ್ತು ಮಾಲೀಕರಿಗೆ ಕಳೆದ ತಿಂಗಳು ೨೦ ನೇ ತಾರೀಖು ಆದ ಒಪ್ಪಂದದ ಕರಾರುಗಳನ್ನು ಜಾರಿಸುವ ಸಂಬಂಧವಾಗಿ ಒತ್ತಾಯ ತರಲು ಶ್ರೀಮತಿ ಲಕ್ಷ್ಮಮ್ಮ ಮತ್ತು ಶ್ರೀ ಎಂ. ಚೌಡಪ್ಪ ಎಂಬ ಇಬ್ಬರು ರೇಷ್ಮೆ ಕಾರ್ಮಿಕರೂ, ಬಿನ್ನಿಮಿಲ್ ಕಾರ್ಮಿಕರ ಸಂಘದ ಉಪಾಧ್ಯಕ್ಷ ಶ್ರೀ ಎ ರಾಮಚಂದ್ರನವರೂ ಅಂಚೆ ಕಛೇರಿ ಬಳಿ ಸಂಜೆ ನೆನ್ನೆ ಆಮರಣಾಂತ ಉಪವಾಸವನ್ನು ಆರಂಭಿಸಿದರು. ಉಪವಾಸಕ್ಕೆ ಮುಂಚೆ ಬಹಿರಂಗ ಸಭೆಯೊಂದು ನಡೆದು, ವಿವಾದವನ್ನು ಇತ್ಯರ್ಥಪಡಿಸಲು ಕಾರ್ಮಿಕ ಮಂತ್ರಿಗಳು ಪ್ರಯತ್ನಿಸಬೇಕೆಂದು ಒತ್ತಾಯಪಡಿಸಲಾಯಿತು

ಸಂಸ್ಥಾನದಲ್ಲಿ ಸುಶೀಲಾ ನಯ್ಯಾರ್‌ರವರ ಪಾದಯಾತ್ರೆ

ದೆಹಲಿ ಶಾಸನ ಸಭೆಯ ಡೆಪ್ಯುಟಿ ಸ್ಪೀಕರ್ ಆದ ಡಾ|| ಸುಶೀಲಾ ನಯ್ಯಾರ್‌ರವರು ಪ್ರಸ್ತುತ ಮೈಸೂರು ಸಂಸ್ಥಾನದಲ್ಲಿ ಭೂದಾನ ಪಾದಯಾತ್ರೆಯನ್ನು ಕೈಗೊಂಡಿದ್ದು ಈಗ ಅವರು ಚಿತ್ರದುರ್ಗ ಜಿಲ್ಲೆಯಲ್ಲಿ ಪ್ರವಾಸ ಕೈಗೊಂಡು ಇದುವರೆಗೆ ೪೦೦ ಎಕರೆ ಮತ್ತು ಭೂದಾನ ಪಡೆದಿರುವರು

ಕನ್ನಡ ಸಂಘದ ಪ್ರಾರಂಭೋತ್ಸವ

ರಾಜಧಾನಿಯ ಮರಿಮಲ್ಲಪ್ಪನವರ ಪ್ರೌಢಶಾಲೆಯ ಕನ್ನಡ ಸಂಘದ ಪ್ರಾರಂಭೋತ್ಸವವು ನಾಳೆ ಮಧ್ಯಾಹ್ನ ೬ ಗಂಟೆಗೆ ಶಾಲೆಯ ಆವರಣದಲ್ಲಿ ನೆರವೇರುವುದು. ವಿದ್ಯಾ ಇಲಾಖಾ ಡೆಪ್ಯುಟಿ ಡೈರೆಕ್ಟರ್ ಶ್ರೀ ಟಿ ಎನ್ ಕೃಷ್ಣರಾಯರು ಆರಂಭ ಭಾಷಣ ಮಾಡುವರು. ಮುಖ್ಯೋಪಾಧ್ಯಾಯರಾದ ಶ್ರೀ ಕೆ ಬಸವಯ್ಯನವರು ಅಧ್ಯಕ್ಷತೆ ವಹಿಸುವರು

ಶ್ರೀರಾಮ ಪಟ್ಟಾಭಿಷೇಕ

ನಂಜನಗೂಡಿನ ಭಾವಸಾರ ಕ್ಷತ್ರಿಯ ಮಂಡಲಿಯವರ ಮಂದಿರದಲ್ಲಿ ನಾಳೆ ಶ್ರೀರಾಮ ಪಟ್ಟಾಭಿಷೇಕದ ಮಹಾ ಮಂಗಳಾರತಿಯು ನೆರವೇರುವುದು. ಶ್ರೀ ಸುಬ್ರಹ್ಮಣ್ಯಂರವರಿಂದ ಶಾಸ್ತ್ರ ವಾಚನವೂ, ಮಕ್ಕಳಿಗೆ ಸಂತರ್ಪಣೆಯೂ ಏರ್ಪಾಡಾಗಿದೆ

ರೈಲು ನಿಲ್ದಾಣದಲ್ಲಿ ಶವದ ಪತ್ತೆ

ನಗರದ ರೈಲ್ವೆ ಸ್ಟೇಷನ್ನಿನಲ್ಲಿ ಒಂದು ಕಡೆ ಅಪರಿಚಿತ ವ್ಯಕ್ತಿಯ ಶವವೊಂದು ಮೊನ್ನೆ ಬಿದ್ದಿದ್ದುದು ಪತ್ತೆಯಾಯಿತು. ಅವರ ಎಡಗೆ ಪ್ಲಾಸ್ಟರ್ ಹಾಕಿತ್ತು. ಪಕ್ಕದಲ್ಲಿ ಕುಷ್ಠ ರೋಗ ನಿವಾರಕ ಗುಳಿಗೆಗಳು ಇದ್ದುವು. ಪೋಲೀಸರು ಶವವನ್ನು ಪರೀಕ್ಷೆಗೆ ಕಳುಹಿಸಿದರು

ಬರ್ಮಾದ ನೂತನ ಪ್ರಧಾನಿ

ಬರ್ಮಾದ ರಕ್ಷಣಾ ಮಂತ್ರಿ ಯು ಬಾ ಸ್ವೇಯವರನ್ನು ಪ್ರಧಾನಿಯಾಗಿ ನೇಮಿಸಲು ಅಲ್ಲಿನ ಪ್ರತಿನಿಧಿ ಸಭೆಯು ಒಪ್ಪಿರುತ್ತದೆ.

ಅಂಬರ್ ಚರಖದ ಪ್ರಚಾರಕ್ಕಾಗಿ ೭೦ ಲಕ್ಷ ರೂ.

೧೯೫೬–೫೭ನೇ ಸಾಲಿನಲ್ಲಿ ೧೦ ಸಾವಿರ ಅಂಬರ್ ಚರಖಾಗಳನ್ನು ತಯಾರಿಸಲಾಗುವುದೆಂದೂ, ಈ ಕಾರ್ಯಕ್ರಮಕ್ಕಾಗಿ ೭೦ ಲಕ್ಷ ರೂ.ಗಳನ್ನು ಕೇಂದ್ರ ಸರ್ಕಾರದವರು ಮಂಜೂರು ಮಾಡಿರುವರೆಂದೂ ವರದಿಯಾಗಿದೆ. ೧೫ ಶಿಕ್ಷಣ ಕೇಂದ್ರಗಳು, ೧೦೦ ಉತ್ಪತ್ತಿ ಮತ್ತು ಶಿಕ್ಷಣ ಕೇಂದ್ರಗಳು ಮತ್ತು ೫೦ ಕಛೇರಿಗಳನ್ನು ಈ ವರ್ಷ ತೆರೆಯಲಾಗುವುದು. ೧ ವರ್ಷ ಕಾಲ ಅದನ್ನು ನಡೆಸಲಾಗುವುದು. ೨೦೦ ಜನ ಬಡಗಿಗಳಿಗೆ ತಿಂಗಳಿಗೆ ೭೦ ರೂ ಸಂಭಾವನೆ ಕೊಟ್ಟು ೬ ತಿಂಗಳ ತರಬೇತು ಕೊಡಲಾಗುವುದು. ೧೫ ಶಿಕ್ಷಣ ಕೇಂದ್ರಗಳಲ್ಲಿ ೭೫೦ ಅಂಬರ್ ಚರಖಾ ಶಿಕ್ಷಕರಿಗೆ ೬ ತಿಂಗಳ ತರಬೇತನ್ನು ಕೊಡಲಾಗುವುದು. ಅವರಿಗೆ ೭೦ ರೂ ತಿಂಗಳ ಸಂಭಾವನೆಯು ದೊರೆಯುವುದು. ಹುಬ್ಬಳ್ಳಿಯೂ ಸೇರಿ ಒಟ್ಟು ೭ ಸ್ಥಳಗಳಲ್ಲಿ ಮೇಲ್ವಿಚಾರಣೆ ಕಛೇರಿಗಳು ಇರುತ್ತವೆ

ಆರ್ಯ ವೈಶ್ಯ ಬಾಲಕ ಭಕ್ತ ಮಂಡಳಿ

ತ್ರಿರಾಂಪೇಟೆ ಶ್ರೀ ರಾಮಮಂದಿರದಲ್ಲಿ ಆರ್ಯವೈಶ್ಯ ಬಾಲಕ ಭಕ್ತ ಮಂಡಳಿಯವರು ಈ ರಾತ್ರಿ ೯ ಗಂಟೆಗೆ ಉತ್ಸವೋತ್ಸವವನ್ನು ನಡೆಸುವರು. ೧೬ ನೇ ತಾರೀಖು ಮಧ್ಯಾಹ್ನ ೩ ಗಂಟೆಗೆ ವಸಂತೋತ್ಸವವನ್ನು ನೆರವೇರಿಸುವರು. ಅಂದು ಸಂಜೆ ೭ ಗಂಟೆಗೆ ಕುಮಾರಿ ರಾಜಲಕ್ಷ್ಮಮ್ಮನವರಿಂದ ಸಂಗೀತವಿದೆ

ಅಭಾವ ಪ್ರದೇಶಗಳಲ್ಲಿ ಪ್ರಜಾಸಮಾಜವಾದಿ ನಾಯಕರ ಪ್ರವಾಸ

ಪಾರ್ಲಿಮೆಂಟ್ ಸದಸ್ಯರೂ ಮತ್ತು ಪ್ರಜಾ ಸೋಷಲಿಸ್ಟ್ ಮುಖಂಡರೂ ಆದ ಶ್ರೀ ಎಂ ಎಸ್ ಗುರುಪಾದಸ್ವಾಮಿ ಮತ್ತು ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ಜಂಟಿ ಕಾರ್ಯದರ್ಶಿ ಶ್ರೀ ವೇದಾಂತ ಹೆಮ್ಮಿಗೆಯವರು ನಾಳೆ ಮತ್ತು ನಾಡಿದ್ದು ಮೈಸೂರು ಜಿಲ್ಲೆಯ ಅಭಾವ ಪ್ರದೇಶಗಳಲ್ಲಿ ಪ್ರವಾಸ ಮಾಡುವರು

ಸೇವಾದಳದಲ್ಲಿ ಹಿಂದಿ ತರಗತಿಗಳು

ರಾಜಧಾನಿಯ ಸದ್ವಿದ್ಯಾ ಪಾಠಶಾಲೆಯ ಆವರಣದಲ್ಲಿರುವ ಭಾರತ ಸೇವಾದಳ ನಗರ ಕಾರ್ಯಾಲಯದಲ್ಲಿ ಹಿಂದೀ ಪ್ರಥಮ, ಮಧ್ಯಮ ಪರೀಕ್ಷೆಗಳಿಗೆ ಶಿಕ್ಷಣ ಕೊಡಲಾಗುವುದು. ತರಗತಿಗಳು ನಾಳೆಯಿಂದ ಪ್ರತಿದಿನ ಸಂಜೆ ೬ ಘಂಟೆಗೆ ಪ್ರಾರಂಭವಾಗುವುವು. ಸೇರಬಯಸುವವರು ಕಾರ್ಯಾಲಯದಲ್ಲಿ ವಿಚಾರಿಸಬಹುದು

ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಹುಣಸೂರು, ಕೃಷ್ಣರಾಜನಗರ ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಇದೇ ತಿಂಗಳು ೧೭, ೧೮ ಮತ್ತು ೧೯ನೇ ತಾರೀಖು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಕೆ ಪುಟ್ಟಸ್ವಾಮಿಯವರೊಡನೆ ಪ್ರವಾಸ ಮಾಡುವರು. ತಾಲ್ಲೂಕಿನ ಮಹಾಜನರೂ ಸಂಸ್ಥೆಗಳೂ ಕಾಂಗ್ರೆಸ್ ಕಾರ್ಯಕರ್ತರೂ ಸಹಕರಿಸಬೇಕೆಂದು ಪ್ರಾರ್ಥಿಸಲಾಗಿದೆ

ಅಭಾವ ಪ್ರದೇಶಗಳಲ್ಲಿ ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಮೂರು ಗ್ರಾಮಗಳಲ್ಲಿ ವಿರೋಧಿಗಳಿಂದ ಪ್ರದರ್ಶನ

ಮೈಸೂರು ೧೩

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಚನ್ನಯ್ಯನವರು ಕಳೆದ ಶನಿವಾರ ಮೂಗೂರು ಕಂದಹಳ್ಳಿ, ಯಳಂದೂರು, ಗುಂಬಳ್ಳಿ, ಕೆಸ್ತೂರು, ಮಲ್ಲಿಗಳ್ಳಿ, ಮಾಂಬಳ್ಳಿಗಳಿಗೆ ಭೇಟಿಯಿತ್ತು ಅಲ್ಲಿನ ಆಹಾರ ಅಭಾವ ಪರಿಸ್ಥಿತಿಯನ್ನೂ ಮತ್ತು ಇತರ ವಿದ್ಯಮಾನಗಳನ್ನೂ ಪರಿಶೀಲಿಸಿದರು ಎಲ್ಲ ಕಡೆಗಳಲ್ಲಿಯೂ ಅವರಿಗೆ ಸಾರ್ವಜನಿಕರು ಉತ್ಸಾಹ ಭರಿತವಾದ ಸ್ವಾಗತವನ್ನು ನೀಡಿದರು ಅಧ್ಯಕ್ಷರು ಸಾರ್ವಜನಿಕ ಸಭೆಗಳಲ್ಲಿ ಭಾಷಣ ಮಾಡಿ ಕಾಂಗ್ರೆಸ್ಸಿನ ಸಂದೇಶವನ್ನು ಸಾರಿದುದಲ್ಲದೆ ಇಂದಿನ ಪರಿಸ್ಥಿತಿಯಲ್ಲಿ ಮಹಾಜನರು ಧೈರ್ಯಗೆಡದೆ ಆತ್ಮಾವಲಂಬನೆಯಿಂದ ರಾಷ್ಟ್ರಾಭ್ಯುದಯ ಕಾರ್ಯಗಳಲ್ಲಿ ಭಾಗಿಗಳಾಗಿ ದೇಶದ ಉನ್ನತಿಯನ್ನು ಸಾಧಿಸಬೇಕೆಂದು ತಿಳಿಸಿದರು

ಮೂಗೂರಿನಲ್ಲಿ ಶ್ರೀ ಚನ್ನಯ್ಯನವರು ಆದಿಜಾಂಬವರ ರಾಮ ಮಂದಿರದ ಶಂಕುಸ್ಥಾಪನೆಯನ್ನು ನೆರವೇರಿಸಿದರು ಯಳಂದೂರಿನ ಬಸ್ ನಿಲ್ದಾಣಕ್ಕೆ ಅಸ್ತಿಭಾರ ಹಲಗೆಯನ್ನು ಹಾಕಿದರು ಅಲ್ಲಿನ ಪೌರಸಭೆಯ ಮಾನಪತ್ರವನ್ನು ಸ್ವೀಕರಿಸಿದರು. ಪ್ರೌಢ ಶಾಲೆಯ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ಮಾಡಿ ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನು ನುಡಿದರು

ಎರಗಂಬಳ್ಳಿ ಮಹಾಜನರು ಕಾಂಗ್ರೆಸ್ ಅಧ್ಯಕ್ಷರಿಗೆ ೫೦ ರೂ ಕಾಣಿಕೆಯನ್ನು ಸಲ್ಲಿಸಿದರು ಮಲ್ಲಿಗಳ್ಳಿಯ ಪಟೇಲ್ ಶ್ರೀ ಎಂ ಸಿ ರಾಜೇಅರಸ್ಪನವರು ಕಾಂಗ್ರೆಸ್ಸಿಗೆ ೫೦ ರೂ ನಿಧಿಯನ್ನು ಕೊಟ್ಟರು ಅವರ ತಮ್ಮ ತಾಯಿಯವರಾದ ಶ್ರೀಮತಿ ರತ್ನಮ್ಮನವರ ಹೆಸರಿನಲ್ಲಿ ಕಟ್ಟಿರುವ ಪ್ರಾಥಮಿಕ ಶಾಲೆಯ ಕಟ್ಟಡದ ಶಂಕುಸ್ಥಾಪನೆಯನ್ನು ಅಧ್ಯಕ್ಷರು ನೆರವೇರಿಸಿದರು

ಕೆಸ್ತೂರು, ಸಂತೇಮರಹಳ್ಳಿ ಮತ್ತು ಕಾಗಲವಾಡಿಗಳಲ್ಲಿ ಶ್ರೀ ಗಂಗಾಧರ ಕೆ ಪಿ ಎಂ ರಂಗನಾಥನ್ ಮತ್ತು ಎ ವಿ ಮಲ್ಲಪ್ಪನವರು ತಮ್ಮ ಕೆಲವು ಅನುಯಾಯಿಗಳೊಡನೆ ವಿರೋಧ ಪ್ರದರ್ಶನವನ್ನು ಮಾಡಿ ಕಪ್ಪು ಬಾವುಟಗಳನ್ನು ತೋರಿಸಿ ಗುಲ್ಲು ಎಬ್ಬಿಸಿ ಘೋಷಣೆಗಳನ್ನು ಕೂಗಿದರು ರಸ್ತೆ ನೀಡಿದರೆ ನಿರುದ್ಯೋಗಿಗಳಿಗೆ ಉದ್ಯೋಗ ಕೊಡುವ ವಿಷಯದಲ್ಲಿ ಕಾಂಗ್ರೆಸ್ ಏನೂ ಮಾಡಿಲ್ಲವೆಂದು ಘೋಷಣೆಗಳನ್ನು ಕೂಗುತ್ತಿದ್ದರು ಆದರೆ ಯಾವ ಘರ್ಷಣೆಯೂ ನಡೆಯಲಿಲ್ಲ

Poly BRONKOL

For ASTHMA & BRONCHITIS

Sole Distributors for Mysore State and Coorg

SATHYA & CO.

Chemists & Druggists

71/1 A. S Street,

BANGALORE 2

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ಸಮೂಹಗಳ

ಗಡಿಯಾರಗಳು ಮತ್ತು ಕನ್ನಡಕಗಳು ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು ಅಶೋಕ ರಸ್ತೆ, ಮೈಸೂರು [Estd 1911]

Printed and Published by A. K. Nagaraja at Sadhvi Press D. Subbiah Road, Mysore

ಭಾರತ ಮತ್ತು ಪಾಕಿಸ್ತಾನಕ್ಕೆ ಯುದ್ಧ ಅನಿವಾರ್ಯ ?

ಸಿಂಧ್ ಪ್ರಾಂತದಲ್ಲಿರುವ ಪಾಕಿಸ್ತಾನದ ರಾಯಭಾರಿ ಲಾಲ್ ಪದ ಚೌಧರಿಯವರು ಪಾಕಿಸ್ತಾನ ಮತ್ತು ಭಾರತಗಳ ನಡುವೆ ಕಾಶ್ಮೀರದ ವಿಷಯವಾಗಿ ಯುದ್ಧವು ಅನಿವಾರ್ಯವೆಂದು ತಿಳಿಸುತ್ತಾರೆ ಭಾರತವು ಬಲೋದ್ಧಂದಿಯಿಂದ ಕಾಶ್ಮೀರವನ್ನು ಆಕ್ರಮಿಸಿ, ಅಲ್ಲಿ ಜನಮತಗಣನೆ ನಡೆಸಲು ಎಲ್ಲಾ ಪ್ರಯತ್ನಗಳನ್ನೂ ತಿರಸ್ಕರಿಸಿದೆಯೆಂದೂ, ಪಾಕಿಸ್ತಾನದವರು ಬಲಾತ್ಕಾರವಾಗಿ ದ್ದರೆ ಕಾಶ್ಮೀರವನ್ನು ವಶಪಡಿಸಿಕೊಳ್ಳಲು ಬಲಪ್ರಯೋಗ ಮಾಡುತ್ತಿದ್ದು ದಿಟವೆಂದೂ ಅವರು ಹೇಳಿರುವರು

ಕೇಡಿಗಳಿಬ್ಬರ ಬಂಧನ

ನಂಜನಗೂಡಿನಲ್ಲಿ ಕಳೆದ ಭಾನುವಾರ ರಾತ್ರಿ ಪೋಲೀಸರು ಸಿದ್ದರಾಮು ಮತ್ತು ದೊಡ್ಡ ಎಂಬ ಇಬ್ಬರು ಕೇಡಿಗಳನ್ನು ಬಂಧಿಸಿದರು ಅವರು ಕೆಲವು ದಿನಗಳ ಹಿಂದೆ ಜೈಲಿನಿಂದ ಹೊರಕ್ಕೆ ಬಂದಿದ್ದರು ಇಬ್ಬರಿಗೂ ಹಿಂದೆ ಐದೈದು ಬಾರಿ ಸಜಾ ಆಗಿದೆ

ಕನ್ಯಕಾಪರಮೇಶ್ವರಿ ದೇವಸ್ಥಾನದ ಶಂಕುಸ್ಥಾಪನೆ

ನಂಜನಗೂಡು ಶ್ರೀ ವಾಸವೀ ಕನ್ಯಕಾ ಪರಮೇಶ್ವರಿ ಅಮ್ಮನವರ ದೇವಸ್ಥಾನದ ನೂತನ ಕಟ್ಟಡದ ಶಂಕುಸ್ಥಾಪನಾ ಮಹೋತ್ಸವವು ಆರ್ಯವೈಶ್ಯ ಮಂಡಲಿಯ ಅಧ್ಯಕ್ಷರಾದ ಶ್ರೀ ಕಟ್ಟಾ ನಾಗಪ್ಪಶೆಟ್ಟಿಯವರಿಂದ ಮೊನ್ನೆ ನೆರವೇರಿಸಲ್ಪಟ್ಟಿತು ಅನೇಕ ಪುರವಾಸಿಗಳು ಭಾಗವಹಿಸಿದ್ದರು

ಉಪನಯನ

ಇಂಜನಿಯರಿಂಗ್ ಕಂಟ್ರಾಕ್ಟರ್ ಶ್ರೀ ಬೆಳಗೋಳ ಲಿಂಗಯ್ಯಂಗಾರ್ಯರು ತಮ್ಮ ಸಹೋದರ ಬಿ ಕೃಷ್ಣಯ್ಯಂಗಾರ್ಯರ ಪುತ್ರ ಚಿ॥ ದಯಾನಿಧಿಗೆ ಮೊನ್ನೆ ಉಪನಯನವನ್ನು ರಾಜಧಾನಿಯಲ್ಲಿ ನೆರವೇರಿಸಿದರು

ಬೊಂಬಾಯಿ ಆನಂದ ಭವನ ಸ್ಟೋರ್ಸ್

ಹೊಸ ಸಯ್ಯಾಜಿ ರಾವ್ ರಸ್ತೆಯಲ್ಲಿರುವ ಬೊಂಬಾಯಿ ಆನಂದ ಭವನ ಸ್ಟೋರ್ಸ್‌ನವರು ಕಳೆದ ಭಾನುವಾರ ತಮ್ಮ ಅಂಗಡಿಯ ಪ್ರಥಮ ವಾರ್ಷಿಕ ದಿನವನ್ನು ನೆರವೇರಿಸಿ ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು.

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತರಾಗಿರುವ

ನವರತ್ನ — ಕಲ್ಪ

ಔಷಧಾಲಯದವರು ರೋಗಿಗಳ ಕಾಣುವರು

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17 ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು ಫೋನ್ ನಂ 590

— ಭೇಟಿಯ ಕಾಲ —

ಬೆಳಿಗ್ಗೆ 7-30 ರಿಂದ 12 30 ಮತ್ತು ಮಧ್ಯಾಹ್ನ 4 ರಿಂದ 7-30

ಆವರು ರೋಗಿಗಳ ನಾಡಿ ಪರೀಕ್ಷೆ ಮಾಡಿ ಉಚಿತವಾಗಿ ಸಲಹೆ ಕೊಡುವರು

ನವರತ್ನ — ಕಲ್ಪ

ಉಪಯೋಗಿಸಿರಿ

ಇದು ಶಕ್ತಿ, ಕಾಂತಿ, ಮುತ್ತು, ಹವಳ, ಚಿನ್ನ, ಗೋರೋಚನ, ಕಸ್ತೂರಿ, ಅಭ್ರಕ ಮುಂತಾದ 9 ಅಮೂಲ್ಯ ಪದಾರ್ಥಗಳ ಸಂಯೋಗ. ಇದರಿಂದ ನರಗಳ ದೌರ್ಬಲ್ಯ, ಅಜೀರ್ಣ ಸಂಬಂಧದ ವ್ಯಾಧಿಗಳು ಬೇಗ ಗುಣವಾಗುವುವು ಮೂಲವ್ಯಾಧಿ, ನಾರಿಪುಣ್ಣು, ಬಿಳುಪು, ಅಸ್ತಮಾ ಮತ್ತು ಇತರ ಎಲ್ಲಾ ಕಾಯಿಲೆಗಳು ಹಾಗೂ ಕ್ಷಯ ರೋಗಗಳು ಸಂಪೂರ್ಣವಾಗಿ ಗುಣಹೊಂದುವುವು. ಅತ್ಯುತ್ತಮ ಆರೋಗ್ಯದಾಯಕ ಔಷಧಿ ಇದೊಂದೇ

NAVRATNA KALPA PHARMACY,

Jullundur City (India)

Grams NAVRATNA

ವಿವಾಹ ಮಹೋತ್ಸವಗಳು

ರಾಜಧಾನಿಯ ಸರಸ್ವತಿಪುರದಲ್ಲಿರುವ ಸಿವಿಲ್ ಇಂಜಿನಿಯರ್ ಶ್ರೀ ಕೆ ರಂಗಣ್ಣನವರು ತಮ್ಮ ಪುತ್ರ ಶ್ರೀ ಕೆ ಆರ್ ರಾಮಚಂದ್ರರವರಿಗೆ ಚಾಮುಂಡಿ ಬೆಟ್ಟದಲ್ಲಿರುವ ಶ್ರೀ ತಿತ್ತೂರು ವೆಂಕಟರಮಣಯ್ಯನವರ ಪುತ್ರಿ ಸೌ॥ ಲಲಿತಾರವರನ್ನು ತಂದುಕೊಂಡು ಮೊನ್ನೆ ಚಾಮುಂಡಿ ಬೆಟ್ಟದಲ್ಲಿ ವಿವಾಹವನ್ನು ನಡೆಸಿದರು

ರಾಜಧಾನಿಯ ಸೋನಾರ್ ಬೀದಿಯಲ್ಲಿರುವ ಶ್ರೀ ಎ ವಾಸುದೇವಯ್ಯನವರು ತಮ್ಮ ಪುತ್ರಿ ಸೌ॥ ಮನೋರಮರವರನ್ನು ಬೊಂಬಾಯಿನ ವಕೀಲರಾದ ಶ್ರೀ ಹೀರಾಲಾಲ್ ಮೆಹ್ತಾರವರ ಸಹೋದರರ ಪುತ್ರ ಶ್ರೀ ಕುಮಾರಚಂದ್ರರವರಿಗೆ ಕೊಟ್ಟು ವಿವಾಹವನ್ನು ಮೊನ್ನೆ ಬೆಂಗಳೂರು ಥಿಯಸಾಫಿಕಲ್ ಸೊಸೈಟಿಯಲ್ಲಿ ನೆರವೇರಿಸಿದರು

ಕೃಷ್ಣರಾಜನಗರದ ತಾಲ್ಲೂಕು ಸಾಲಿಗ್ರಾಮದ ಶಾಸನಸಭಾ ಸದಸ್ಯರಾದ ಶ್ರೀ ಎಸ್ ಹೆಚ್ ತಮ್ಮಯ್ಯನವರ ಪುತ್ರಿ ಸೌ॥ ನಾಗಲಕ್ಷ್ಮಿಯನ್ನು ಶ್ರೀರಂಗಪಟ್ಟಣದ ತಾಲ್ಲೂಕು ಸಬ್ಬನಕುಪ್ಪೆಯ ಶ್ರೀ ತಮ್ಮೇಗೌಡರ ಪುತ್ರ ಶ್ರೀ ಎಸ್ ಟಿ ನಾಗರಾಜ್‌ರವರಿಗೆ ಕೊಟ್ಟು ಮೊನ್ನೆ ವಿವಾಹವು ಜರುಗಿತು

ರಾಜಧಾನಿಯ ಅಶೋಕಪುರದ ಶ್ರೀ ಎಗ್ ಆರ್ ರಾಮಯ್ಯನವರ ಪುತ್ರ ಶ್ರೀ ಎಗ್ ಆರ್ ಪುಟ್ಟದಾಸಯ್ಯನವರಿಗೆ ಬೆಂಗಳೂರಿನ ಲೇಬರ್ ಹೌಸಿಂಗ್ ಕಾರ್ಪೋರೇಷನ್ನಿನ ಅಕೌಂಟೆಂಟ್ ಶ್ರೀ ಎಂ ನಂಜುಂಡಯ್ಯನವರ ಮಗಳು ಸೌ॥ ದೇವಾಜಮ್ಮನನ್ನು ತಂದುಕೊಂಡು ಮೊನ್ನೆ ಅಶೋಕಪುರದಲ್ಲಿ ವಿವಾಹವು ಜರುಗಿತು

ಹಾಸಿಗೆ - ದಿಂಬು

ಮಿತವ್ಯಯದಲ್ಲಿ ಹತ್ತಿ ವಿವಿಧ ತಯಾರು ಮಾಡುತ್ತೇವೆ

ಬಾಹುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

Dear R Gs!

Please elect (No 39)

H. S. Venkata Rao, B A., B L.,

as a **SENATOR**

of the

MYSORE UNIVERSITY

ಮಹಾ ಪಂಜಾಬ್ ಚಳುವಳಿ ಸೇರಲು ೧೦,೦೦೦ ಜನರ ಪ್ರತಿಜ್ಞೆ

ಮಹಾ ಪಂಜಾಬು ಸ್ಥಾಪನೆಯ ಬಗ್ಗೆ ಚಳುವಳಿಯಲ್ಲಿ ಭಾಗವಹಿಸಿ ಸರ್ವ ತ್ಯಾಗಕ್ಕೂ ಸಿದ್ಧರಾಗಿರುವುದಕ್ಕೂ ೧೦ ಸಾವಿರ ಜನ ಪುರುಷರು ಪ್ರತಿಜ್ಞೆ ತೊಟ್ಟಿರುವರೆಂದು ಗೊತ್ತಾಗಿದೆ ಮೊನ್ನೆ ಪಂಜಾಬು, ಪೆಪ್ಸು ಮತ್ತು ಹಿಮಾಚಲ ಪ್ರದೇಶ ಪ್ರಾಂತಗಳಲ್ಲಿ ಪ್ರತಿಜ್ಞಾ ದಿನಾಚರಣೆಯನ್ನು ನೆರವೇರಿಸಲಾಯಿತು.

ವಿದ್ಯಾರ್ಥಿಗಳ ಎಸ್‌ಎಸ್‌ಎಲ್‌ಸಿ ಅನುಕೂಲವಾದ ದಿನಗಳಲ್ಲಿ ವಿಶಾಲವಾದ ಮನೆಯೊಂದು ಕಾಲೇಜಿಗೆ ಬೇಕಾದ ಕಟ್ಟಡ ಬಾಡಿಗೆಗೆ ಕೇಳಿ ಸಮಾಚಾರದಲ್ಲಿ ಬರೆಯಿರಿ

CITY TUTORIAL COLLEGE

Near V V. Market, Mysore

SARADA VILAS HIGH SCHOOL, MYSORE

Wanted an experienced Hindi teacher. Persons qualified to teach Kannada also preferred.

Please apply with details of qualifications etc, before 20-6-1956

K V NARAYA[...]

Head Master

SREE GANESH TALKIES

From 14 6-56 For 2 days

Paramount's

SABRINA

With Humphrey Bogart, William Holden and Audrey Hepburn

(All Academy Winners)

From 16 6—56

THE WOMAN FOR JOE

(In Technicolor Vistavision)

A picture full of Circus, thrills Acrobatics & wild animals

Movie entertainment for all

Estd 1917

CHAMPION METROPOLITAN COLLEGE OF COMMERCE

(Co-operators' Home, 100' Road Mysore)

APPLICATIONS FOR ADMISSION to classes leading to DIPLOMAS in Commerce Shorthand and Typewriting are now being received in the mornings & evenings

Training for COSTS & WORKS ACCOUNTANTS also given

Situated in fine building-Best and experienced staff including Holders of Master's Degree in Commerce and Arts Latest equipment including new Typewriters - a good Library - Excellent results

(Sd) M. S PUTTANNA, Vice-Principal

(Sd) P SUBBARAYA SASTRY, Principal

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

13- 6—56ನೇ : ಬುಧವಾರದಿಂದ : ಅನೋಘ 2ನೇ ವಾರ

★ **ಕಣ್ಣಿನ್ ಮಣಿಗಳ್** ★

(ತಮಿಳು)

ಗೇವಾ ಕಲರ್ ಚಿತ್ರ ಪ್ರದರ್ಶನ

ಮುಂದಿನ ಬದಲಾವಣೆ . ಇಲವೇಲು ಶ್ರೀ ತೆಲುಗು ಚಿತ್ರ (ಮಣಿಯ ದೇವಿ)

ಟೆಲಿಫೋನ್ ನಂ. 792

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಪುಟ : ೧೯] SADHVI : THURSDAY 14-6-1956 ಮೈಸೂರು : ಗುರುವಾರ ೧೪-೬-೧೯೫೬ [ಸಂಚಿಕೆ : [illegible]

- ಭಾರತದೊಡನೆ ಸಂಧಾನಕ್ಕೆ ಪೋರ್ಚುಗಲ್ಲು ಸಿದ್ಧ? -

[illegible]ಲೂರರ ಕೊಲೆ ಮೊಕದ್ದಮೆ [illegible]ಚಾರಣೆಗೆ ವಿಶೇಷ ಕೋರ್ಟ್?

ಮುತ್ತೊಬ್ಬನ ದಸ್ತಗಿರಿಯ ನಿರೀಕ್ಷೆ

[illegible] ಕುತೂಹಲಕರ ವಿಷಯಗಳು ಬಯಲಾಗುವ ಸಂಭವ

ಬೆಂಗಳೂರು ೧೪

[illegible]ಲೂರು ಶ್ರೀನಿವಾಸಯ್ಯಂಗಾರ್ಯರ ಕೊಲೆ [illegible] ಪ್ರಕರಣದಲ್ಲಿ ದಸ್ತಗಿರಿಯಾಗಿರುವವರ ವಿ[illegible]ಣೆಗಾಗಿ ವಿಶೇಷ ನ್ಯಾಯಾಲಯವೊಂದ[illegible] ಏರ್ಪಡಿಸುವ ಸಂಭವವಿರುವುದೆಂದು ವರದಿ[illegible]ಗಿವೆ

[illegible]ಕ್ಕಾಂಡಕ್ಕೆ ಸಂಬಂಧಪಟ್ಟಂತೆ ಮತ್ತೊ[illegible] ಪೊಲೀಸರು ಬಂಧಿಸಬಹುದೆಂದು ಹೇ[illegible] ವಿಚಾರಣೆಯು ಆರಂಭವಾದಾಗ ಆ[illegible] ಕರ ವಿಷಯಗಳು ಬಹಿರಂಗಕ್ಕೆ ಬರ[illegible] ವೆಂದು ಪಿ ಪಿ ಶ್ರೀ ತಿಮ್ಮರಾಜೇ[illegible] ಹೇಳಿದ್ದಾರೆ

[illegible]ಸ್ತಗಿರಿಯಾಗಿರುವ ಗೋವಿಂದರೆಡ್ಡಿಯು [illegible] ಸಾವಿರ ರೂ ಬೆಲೆಯ ಆಭರಣಗ[illegible]ಪನೆಂದೂ, ಅವುಗಳನ್ನು ಬೇಲೂರರ ಇಬ್ಬ[illegible] ಯರು ಗುರುತಿಸಬೇಕಾಗಿರುವುದೆಂದೂ [illegible]ಸರು ಅಭಿಪ್ರಾಯ ಹೊಂದಿದ್ದಾರೆ

[illegible] ಕಪ್ಪಿನಲ್ಲಿರುವ ಕೃಷ್ಣನು ಹೊನ್ನೆ ರಾತ್ರಿ [illegible] ಮಾಡಿದನು ಅವನು [illegible] ಬಳಿ [illegible] ಕೊಲೆ ಕೃತ್ಯದಲ್ಲಿ ಪಾತ್ರವಹಿಸಿದ್ದ [illegible] ವಿಷಯವು ಬೆಳಕಿಗೆ ಬಂದಿದೆ. [illegible], [illegible]ನ ಅಲ್ಲಿ ದರೋಡೆ ಮಾಡಿ, [illegible] [illegible]ಗಳ ಹಂಚಿಕೆಯಲ್ಲಿ ಭಿನ್ನಾಭಿಪ್ರಾಯ [illegible] ದಿಂದಲೂ, ಆ ಕಾರಣ ಕೃಷ್ಣನು ತನ್ನ [illegible]ನನ್ನು ಕೊಂದನೆಂದೂ ವ್ಯಕ್ತಪಟ್ಟಿದೆ [illegible] ಕೊಲೆಯ ಬಗ್ಗೆ ಡಿ ಎಸ್ ಪಿ ರೇವಣ್ಣ [illegible]ನ್ನು ಇನ್‌ವೆಸ್ಟಿಗೇಟಿಂಗ್ ಅಧಿಕಾರಿಗಳಾಗಿ [illegible]ಸಲಾಗಿದೆ

[illegible] ತಾಲ್ಲೂಕುಗಳಲ್ಲಿ ಹಾಲು ಮತ್ತು ಗಂಜಿ ಕೇಂದ್ರ

[illegible] ಜಿಲ್ಲೆಯ ಯಳಂದೂರು, ನಂಜನ[illegible] ನರಸೀಪುರ, ಚಾಮರಾಜನಗರ ಮ[illegible] [illegible]ಪೇಟೆ ತಾಲ್ಲೂಕುಗಳಲ್ಲಿರುವ ಅಭಾವ [illegible]ಗಾಗಿ ಪರಿಹಾರ ಒದಗಿಸಲು ಹಾಲು ಮ[illegible] ಕೇಂದ್ರಗಳನ್ನು ರೆಡ್‌ಕ್ರಾಸ್ ಸಂಸ್ಥೆಯ[illegible] [illegible] ಮಾಡಲಿರುವರೆಂದು ವರದಿಯಾಗಿ[illegible] [illegible]ಸ್ಥಾನದ ರೆಡ್‌ಕ್ರಾಸ್ ಸಂಸ್ಥೆಯ ಉಪ[illegible] [illegible] ಕಾರ್ಯದರ್ಶಿಯವರು ಇಂದಿನಿಂದ [illegible] [illegible] ವರೆಗೆ ಈ ಸಂಬಂಧವಾಗಿ ಪ್ರವಾಸ ಮಾ[illegible]ರು

[illegible]ಕಾಶವಾಣಿ ನಾಳೆ ಕಾರ್ಯಕ್ರಮ

[illegible]

ಮೈಸೂರು ಜಿಲ್ಲೆಯಲ್ಲಿ ಅಭಾವ ಪರಿಸ್ಥಿತಿ

ಸರ್ಕಾರದ ನಾನಾ ಪರಿಹಾರ ಕ್ರಮಗಳು

ಬೆಂಗಳೂರು ೧೪

ಮುಂಗಾರು ಮಳೆಯೂ ಬಾರದೆ ಮೈಸೂರು ಜಿಲ್ಲೆಯ ನಂಜನಗೂಡು ಚಾಮರಾಜನಗರ, ಟಿ ನರಸೀಪುರ ಗುಂಡ್ಲುಪೇಟೆ ಮತ್ತು ಯಳಂದೂರು ತಾಲ್ಲೂಕುಗಳಲ್ಲಿ ಪರಿಸ್ಥಿತಿಯು ಆತಂಕ[illegible]ವಾಗಿದೆಯೆಂದು ಸರ್ಕಾರದವರು ಪ್ರಕಟಣೆಯೊಂದರಲ್ಲಿ ತಿಳಿಸಿರುತ್ತಾರೆ ಆ ಪ್ರದೇಶಗಳಲ್ಲಿ ಕಳೆದ [illegible] ವರ್ಷಗಳಿಂದ [illegible] [illegible] [illegible] ವರೆಗೆ ಆಗಿರುವ ಮಳೆಯೂ ಬಹಳ [illegible]ವಾಗಿ ತಿಳಿಸಲಾಗಿದೆ [illegible] ಮಳೆಯಾಗುವ ಕಡೆ ಈ ಸಾರಿ ಒಂದೂ [illegible] ಅಂಗುಲದಷ್ಟು ಮಳೆಯಾಗಿದೆ [illegible] ತಾಲ್ಲೂಕುಗಳಲ್ಲಿ [illegible] ಸ್ಥಿತಿ [illegible] ಮಾಸಿನಲ್ಲಿ ಬಿತ್ತನೆಯೇ ಆಗಿಲ್ಲವೆಂದೂ, ಇತರ ಕಡೆ ಹೋದ ವರ್ಷ ಫಸಲು ಅತ್ಯಲ್ಪಕರವಾಗಿರುವುದೆಂದೂ, ಮೇವಿನ ಅಭಾವವೂ ಒದಗಿರುವುದೆಂದೂ ಪ್ರಕಟಣೆಯು ತಿಳಿಸಿದೆ ಈ ಬಗ್ಗೆ ಸರ್ಕಾರದವರು ಪರಿಹಾರ ಕಾರ್ಯವನ್ನು ಕೈಗೊಂಡು ಕೆಳಗ ಕಂಡಂತೆ ಕ್ರಮ ಜರುಗಿಸಲು ಸೂಚಿಸಿದ್ದಾರೆ —

ಪ್ರಸಕ್ತ ಸಾಲಿನ ಬಾಕಿಯುಳ್ಳ ಎಲ್ಲಾ [illegible] ರಾವರಿ ಮತ್ತು ಇತರ ಕೆಲಸಗಳನ್ನೂ, ಕೆರೆಯ ಹೂಳು ತೆಗೆಯುವ ಕಾರ್ಯವನ್ನು ಕೈಗೊಳ್ಳುವುದು, ಸಾಧ್ಯವಿದ್ದಕಡೆ ಸ್ಥಳೀಯರಿಗೇ ಕೆಲಸವನ್ನು ವಹಿಸುವುದು, [illegible] ಸಾವಿರ ರೂ ಗೆ ಪಟ್ಟಿಸಿದ್ದ [illegible] ರಾವರಿ ಕಾರ್ಯವನ್ನು ನಡೆಸುವುದು

ಅಭಾವ ಪ್ರದೇಶಗಳಲ್ಲಿ ದನಗಳು [illegible] ತಿಂಗಳ ಕಾಲ ಸರ್ಕಾರಿ ಅರಣ್ಯಗಳಲ್ಲಿ ಉಚಿತವಾಗಿ ಮೇಯಲು ಅವಕಾಶ ಕೊಡಲಾಗುವುದು [illegible] ವಿಜರ್ ಅಧಿಕಾರಿಗಳು ಭೂ ಕಂದಾಯದ ಬಾಕಿಯ ವಸೂಲಾತಿಗಾಗಿ ಅಗತ್ಯವಿದ್ದ ಕಡೆ ಕಾಲಾವಧಿ ಕೊಡುವುದು ಮತ್ತು ಯಾವ ವಿಧ್ಯಮಾನದಲ್ಲೂ ಬಲವಂತದ ವಸೂಲಿ ಕ್ರಮ ಜರುಗಿಸದಂತೆ ನೋಡುವುದು ರೈತರಿಗಾಗಿ ಬಿತ್ತನೆಯ ರಾಗಿ ಮತ್ತು ಭತ್ತವನ್ನು ಸರಬರಾಜಿಸಲಾಗುವುದು

ಪರಿಹಾರ ಕ್ರಮ ಜರುಗಿಸಲು ಜಿಲ್ಲಾಧಿಕಾರಿಗಳಿಗೆ ಈಗಾಗಲೇ ವಹಿಸಿರುವ [illegible] ಸಾವಿರ ರೂ ಅನ್ನು [illegible] ಸಾವಿರಕ್ಕೆ ಹೆಚ್ಚಿಸಲಾಗುವುದು, ಮೇವಿಗಾಗಿ ಇನ್ನೂ [illegible] ಸಾವಿರ ರೂ ಒದಗಿಸಲ್ಪಡುವುದು ಮೇವನ್ನು ಅಸಲು ಬೆಲೆಗೆ ಕೊಡಲು ವ್ಯವಸ್ಥೆಯಾಗಿದೆ.

ಮೇಲ್ಕಂಡ ತಾಲ್ಲೂಕುಗಳಲ್ಲಿ ತಕಾವಿ ಸಾಲಕ್ಕಾಗಿ [illegible] ಸಾವಿರ ರೂ ಗಳನ್ನು ಒದಗಿಸಲ್ಪಾಗಿದೆ ಗ್ರಾಮ ಪಂಚಾಯಿತಿಗಳ ಮೂಲಕ ಕೆಲಸವನ್ನು ನಡೆಸಬಹುದೆಂದು ಜಿಲ್ಲಾಧಿಕಾರಿಗಳಿಗೆ ಸೂಚಿಸಲಾಗಿದೆ

ಈಗಲೇ ಆಹಾರದ ಧಾನ್ಯಗಳಿಗೆ ಸಹಾಯ [illegible]ನ್ನಿತ್ತು ಕಡಿಮೆ ಬೆಲೆಗೆ ಮಾರುವುದಾಗಲೀ, ಅದರ ಮೇಲೆ ಹತೋಟಿ ಹೊಂದುವುದಾಗಲೀ ಅಥವಾ ಬಹಿರಂಗ ಪರಿಹಾರದ ಅನ್ನ ಕೇಂದ್ರಗಳನ್ನು ಏರ್ಪಡಿಸುವುದಾಗಲೀ ಅವಶ್ಯಕವಿಲ್ಲವೆಂದು ಸರ್ಕಾರದವರು ಭಾವಿಸಿರುತ್ತಾರೆ. ಹಾಂ

ಉಪ ಸಭಾಪತಿಗಳಾಗಿ ಕೆ. ವಿ. ಪುಟ್ಟಪ್ಪನವರ ನೇಮಕ

ಸ್ವಂ ಸು ತಂತಿ] ಬೆಂಗಳೂರು ೧೪

ವಿಶ್ವವಿದ್ಯಾಲಯದ ಉಪ ಸಭಾಪತಿಗಳಾಗಿ ಡಾ॥ ಕೆ ವಿ ಪುಟ್ಟಪ್ಪನವರನ್ನು ನೇಮಿಸಲು ಸರ್ಕಾರದ ಆಜ್ಞೆಯಾಗಿದೆ ಅವರು ನಿವೃತ್ತರಾಗಲಿರುವ ಶ್ರೀ ವಿ. ಎಲ್ [illegible]ರಿಂದ ನಾಳೆ ಅಧಿಕಾರವನ್ನು ಸ್ವೀಕರಿಸುವರು

ಗೋವಾ ಗವರ್ನರ್ ಜನರಲ್ಲರ ಮೇಲೆ ಗುಂಡಿನೇಟು

ಇಬ್ಬರು ಅಧಿಕಾರಿಗಳಿಗೆ ಪೆಟ್ಟು, ಒಬ್ಬ ರಾಷ್ಟ್ರೀಯನ ಮರಣ

ಗೋವಾ ಗವರ್ನರ್ ಜನರಲ್ಲರಾದ ಜನರಲ್ ಪೌಲೊ ಬೆನಾರ್ಡ್ ಗ್ಯುಡೆಸ್‌ರವರು ಪಂಜಿಮ್ಮಿನ ಸರ್ಕಾರಿ ಕಛೇರಿಯಲ್ಲಿ ಆಫೀಸ್ [illegible] ಹಿರಿಯ ಅಧಿಕಾರಿಗಳೊಡನೆ ಸಭೆ ನಡೆಸಿ ತಮ್ಮ ನಿವಾಸಕ್ಕೆ ಹಿಂದಿರುಗುತ್ತಿದ್ದಾಗ ಸಂಜೆ [illegible] ಮೈಲಿ ದೂರದಲ್ಲಿ ಪೋರ್ಚುಗೀಸ್ ಪೊಲೀಸನಂತೆ ಉಡುಪು ಧರಿಸಿದ್ದ [illegible] ಜನ ರಾಷ್ಟ್ರೀಯರು ಅವರ ಮೋಟಾರಿನ ಮೇಲೆ ಗುಂಡು ಹಾರಿಸಲಾಗಿ, ಅವರಿಗೂ, ಇಬ್ಬರು ಅಧಿಕಾರಿಗಳಿಗೂ ಪೆಟ್ಟು ಬಿದ್ದಿತೆಂದು ವರದಿಯಾಗಿದೆ ಅವರ [illegible] ಪೋರ್ಚುಗೀಸ್ ಪೊಲೀಸರು ಕೂಡಲೇ [illegible] ಒಬ್ಬ ರಾಷ್ಟ್ರೀಯನನ್ನು ಹೊಡೆದುಹಾಕಿದರು

ಗವರ್ನರ್ ಜನರಲ್ಲರಿಗೆ ಸ್ವಲ್ಪ ಗಾಯವಾಗಿರುವುದೆಂದೂ, ಅವರು ತಮ್ಮ ಭವನದಲ್ಲಿ [illegible] ಪಡೆಯುತ್ತಿರುವರೆಂದೂ, ಉಳಿದ ಇಬ್ಬರು ಅಧಿಕಾರಿಗಳು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರೆಂದೂ ಗೊತ್ತಾಗಿದೆ

ಧಾಳಿ ನಡೆಸಿದವರನ್ನು ಹಿಡಿಯಲು ಬಲವಾದ ಶೋಧನಾ ಕ್ರಮ ಜರುಗಿಸಲಾಗುತ್ತಿದೆ ಯಾರೂ ದಸ್ತಗಿರಿಯಾಗಿಲ್ಲ

ಪೌರಸಭಾ ಮಾರ್ಕೆಟ್ ವರ್ತಕರ ಸಂಘ

ಪೌರಸಭಾ ಮಾರ್ಕೆಟ್ ವರ್ತಕರ ಸಂಘದ ಸರ್ವ ಸದಸ್ಯರ ಸಭೆಯು ನಾಳೆ ಸಂಜೆ [illegible] ಗಂಟೆಗೆ ದೇವರಾಜಾ ಮಾರ್ಕೆಟ್ಟಿನಲ್ಲಿ ಸೇರುವುದು ಶ್ರೀ ಎಸ್ ಗೋಪಾಲರಾಯರು ಅಧ್ಯಕ್ಷತೆ ವಹಿಸುವರು

ಲಾರಿ ಹರಿದು ಮರಣ

[illegible]ಗೆ ಸೇರಿದ [illegible] ನಿನ್ನೆ [illegible] ಆಸ್ಪತ್ರೆಯಲ್ಲಿ ಮೃತಪಟ್ಟನು ಲಾರಿಯ ಚಾಲಕನನ್ನು ಬಂಧಿಸಲಾಗಿದೆ.

[illegible]ರುವವರಿಗೆ ಆಹಾರವನ್ನು ಉಚಿತವಾಗಿ ಒದಗಿಸಲು ಸ್ವಲ್ಪ ಧಾನ್ಯವನ್ನು ಕೊಡಲಿರುವರು

ಗ್ರಾಮ ಕೈಗಾರಿಕೆಗಳನ್ನು ಏರ್ಪಡಿಸಲೂ, ಬಡನವಾಳು [illegible] ಕೇಂದ್ರಕ್ಕೆ ಸಾಕಾದಷ್ಟು ಹತ್ತಿಯನ್ನು ಒದಗಿಸಿ ಜನರು ಹೆಚ್ಚು ನೂಲು ತೆಗೆಯುವಂತೆ ಮಾಡಲೂ ಕ್ರಮ ಕೈಗೊಳ್ಳಲಾಗುವುದು [illegible] ತಾಲ್ಲೂಕು ಪರಿಹಾರ ಸಮಿತಿಗಳನ್ನು ರಚಿಸಲಾಗುವುದು

ಪರಿಸ್ಥಿತಿಯನ್ನು ಸರ್ಕಾರದವರು ಸೂಕ್ಷ್ಮವಾಗಿ ಪರಿಶೀಲಿಸುತ್ತಿರುವರೆಂದೂ, ಅಗತ್ಯವಾದರೆ ಹೆಚ್ಚಿನ ಪರಿಹಾರ ಒದಗಿಸಲಾಗುವುದೆಂದೂ ಸೂಚಿಸಲಾಗಿದೆ

ಸಂಸ್ಥಾನದಲ್ಲಿ ಪ್ರಥಮ ಪಂಚ ವಾರ್ಷಿಕ ಯೋಜನೆ ಪ್ರಗತಿ

ರೆವಿನ್ಯೂ ಮಂತ್ರಿಗಳ ವಿವರಣೆ

ಸ್ವಂ ಸು ತಂತಿ] ಬೆಂಗಳೂರು ೧೪

ಸಂಸ್ಥಾನದ ಪ್ರಥಮ ಪಂಚವಾರ್ಷಿಕ ಯೋಜನೆಯು ಕಳೆದ [illegible] ವರ್ಷಗಳ ಅವಧಿಯಲ್ಲಿ ಸಾಧಿಸಲಾಗಿರುವ ಕಾರ್ಯಗಳನ್ನು ಇಂದು ಬೆಳಿಗ್ಗೆ ಪತ್ರಿಕಾ ಗೋಷ್ಠಿಯಲ್ಲಿ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ವಿವರಿಸಿದರು.

[illegible] ನೀರಾವರಿ ಯೋಜನೆಗಳ ಪೈಕಿ [illegible] ಮುಗಿದು ಉಳಿದವು ಅಂತಿಮಘಟ್ಟದಲ್ಲಿವೆ ತುಂಗಾ ಮತ್ತು ಭದ್ರಾ ಜಲಾಶಯಗಳು ಮುಗಿಯುತ್ತ ಬಂದಿವೆ. ಈ ಎಲ್ಲ ನೀರಾವರಿ ಯೋಜನೆಗಳಿಂದ [illegible] ಎಕರೆ ಜಮೀನು ಹೊಸದಾಗಿ ವ್ಯವಸಾಯಕ್ಕೆ ಬರುವುದು ಎರಡನೇ ಪಂಚ ವಾರ್ಷಿಕ ಯೋಜನೆಯಲ್ಲಿ [illegible] ನೀರಾವರಿ ಯೋಜನೆಗಳನ್ನು ಕೈಗೊಳ್ಳಲಾಗುವುದು ಅವುಗಳ ಪೈಕಿ ಅತಿ ದೊಡ್ಡದಾದ ಕಬಿನಿ ಜಲಾಶಯಕ್ಕೆ [illegible] ಕೋಟಿ ರೂ ಗಳನ್ನು ಒದಗಿಸಲಾಗುವುದೆಂದು ಸಚಿವರು ನುಡಿದರು

ಸಂಸ್ಥಾನದಲ್ಲಿ ಗ್ರಾಮೀಣ ಮತ್ತು ವೈಯಕ್ತಿಕ ಇನಾಂ ಶಾಸನಗಳೆರಡನ್ನೂ ಒಟ್ಟಿಗೆ ಜಾರಿಗೆ ಕೊಡಲಾಗುವುದೆಂದೂ, ಅವುಗಳನ್ನು ಪೂರ್ಣವಾಗಿ ಕಾರ್ಯಗತ ಮಾಡಲು [illegible] ವರ್ಷಗಳು ಹಿಡಿಯುವುದೆಂದೂ ಸಚಿವರು ನುಡಿದರು [illegible]ನಗಳ ಸರ್ವೆ ಕಾರ್ಯವು ಈಗಾಗಲೇ ಆರಂಭವಾಗಿರುವುದೆಂದೂ ಅವರು ತಿಳಿಸಿದರು

ಲಂಚ ನಿರೋಧ ಸಮಿತಿಯ ಕಾರ್ಯ [illegible] [illegible]ಗಳಿಂದ ಸಂಸ್ಥಾನದಲ್ಲಿ ಲಂಚಗುಳಿತನವು [illegible] ಕಡಿಮೆಯಾಗಿರುವುದೆಂದೂ ಸಚಿವರು ಹೇಳಿದರು

ಸಂಸ್ಥಾನದಲ್ಲಿ ಜಮೀನ್ದಾರಿ ವ್ಯವಸಾಯಗಾರರಾಗಿ ಒಟ್ಟು [illegible] ಎಕರೆ ಭೂಮಿಯನ್ನು ಹಂಚಲಾಗಿದೆಯೆಂದೂ ಆ ಪೈಕಿ [illegible] ಎಕರೆಯನ್ನು ನಿಮ್ನ ವರ್ಗದವರಿಗೂ, [illegible] ಎಕರೆಗಳನ್ನು ೭೦೦ ಜನ ರಾಜಕೀಯ ಸಂತ್ರಸ್ತರಿಗೂ ಕೊಡಲಾಗಿದೆಯೆಂದೂ ಅವರು ತಿಳಿಸಿದರು.

ಗೋವಾ ಸಮಸ್ಯೆ ಪರಿಹಾರಕ್ಕೆ ಪೋರ್ಚುಗಲ್ಲು ಸಿದ್ಧವೇ?

ಫ್ರಾಂಚರು ತಮ್ಮ ಸ್ವಾಮ್ಯಗಳನ್ನು ವಿಧಿವತ್ತಾಗಿ ಭಾರತಕ್ಕೆ ಒಪ್ಪಿಸಿರುವುದರಿಂದ ಭಾರತದಲ್ಲಿರುವ ಪೋರ್ಚುಗೀಸ್ ವಸಾಹತು ಪ್ರಶ್ನೆಯನ್ನು ಇತ್ಯರ್ಥಗೊಳಿಸಲು ಭಾರತ ಮತ್ತು ಪೋರ್ಚುಗಲ್ಲುಗಳ ನಡುವೆ ಸಂಧಾನವಾಗುವ ಸಂಭವವಿರುವುದಾಗಿ ಗೋವಾ [illegible] ನೆನ್ನೆ ಪ್ರಸಾರ ಮಾಡಿತು ನೆಹರೂರವರ ಸಂದ[illegible] ನಿವಾರಣೆಗಾಗಿ ಈ ಪ್ರಶ್ನೆಯನ್ನು ಕುರಿತು ಚರ್ಚಿಸಲು ತಮ್ಮ ಸರ್ಕಾರವು ಸಿದ್ಧವಿರುವುದೆಂದು ಪೋರ್ಚುಗಲ್ಲಿನ ಪ್ರಧಾನಿ ಡಾ॥ ಸಾಲಜಾರ್ ಹೇಳಿರುವುದಾಗಿಯೂ ರೇಡಿಯೋವು ಸೂಚಿಸಿದೆ ಪೋರ್ಚುಗಲ್ಲು ನ್ಯಾಯ ರೀತಿಯಲ್ಲಿ ನಡೆದು, ಸಂಧಾನದ ಮೂಲಕ ಭಾರತದಲ್ಲಿರುವ ತನ್ನ ವಸಾಹತುಗಳ ಪ್ರಶ್ನೆಯನ್ನು ಬಗೆಹರಿಸಿಕೊಳ್ಳುವಂತೆ ಪಶ್ಚಿಮ ರಾಷ್ಟ್ರಗಳು ಒತ್ತಾಯ ಮಾಡಿದ್ದುವೆಂದು ವರದಿಯಾಗಿದೆ.

ವಿದ್ಯುಚ್ಛಕ್ತಿ ತೆರಿಗೆ ವಸೂಲಿಯಲ್ಲಿ ಅಕ್ರಮ

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿಯಿಂದ ನಡೆಸಲಾಗುತ್ತಿರುವ ಯಂತ್ರಗಳ ಬಾಬ್ತು ತೆರಿಗೆ ವಸೂಲು ಮಾಡುವಾಗ ವಿಧಾಯಕವಾಗಿರುವ ಕನಿಷ್ಠ ಪ್ರಮಾಣದ ಯೂನಿಟ್ಟುಗಳ ಮೇಲೆ ಶೇಕಡ ೨೦ ರಷ್ಟು ಸರ್‌ಚಾರ್ಜನ್ನು ಹೆಚ್ಚಾಗಿ ವಸೂಲು ಮಾಡಲಾಗುತ್ತಿದೆಯಷ್ಟೆ? ಇದು ಕಾನೂನಿಗೆ ವಿರುದ್ಧವಾಗಿರುತ್ತದೆ. ವಾಸ್ತವವಾಗಿ ಉಪಯೋಗವಾಗಿರುವ ವಿದ್ಯುಚ್ಛಕ್ತಿ ಯೂನಿಟ್ಟುಗಳ ಮೇಲೆ ಮಾತ್ರ ಸರ್‌ಚಾರ್ಜನ್ನು ವಸೂಲು ಮಾಡಬೇಕೆಂದು ಕಾನೂನಿನ ಉದ್ದೇಶ. ಇದು ಬಹಳ ದಿನಗಳಿಂದಲೂ ಸರ್ಕಾರದ ಮೇಲೆ ಆರೋಪಿಸಲಾಗುತ್ತಿದೆ. ಈ ಪದ್ಧತಿಯು ನ್ಯಾಯಸಮ್ಮತವಲ್ಲವೆಂಬ ಅಂಶಕ್ಕೆ ಇಲಾಖೆಯವರು ಈಗತಾನೆ ಗಮನ ಕೊಟ್ಟಿರುವಂತಿದೆ.

ಈ ರೀತಿ ಸಂಸ್ಥಾನದ ಅನೇಕ ಸಂಸ್ಥೆಗಳಿಂದ ಇದುವರೆಗೆ ಲಕ್ಷಾಂತರ ರೂಪಾಯಿ ಹೆಚ್ಚಾಗಿ ವಸೂಲಾಗಿರುತ್ತದೆ. [illegible] ಪೂರ್ಣವಾಗಿಯೂ [illegible]

ಇತ್ತೀಚೆಗೆ ವಿದ್ಯುಚ್ಛಕ್ತಿ ದರಗಳನ್ನು [illegible] ಪ್ರಮಾಣದ [illegible] ವಿದ್ಯುಚ್ಛಕ್ತಿ [illegible] ಆಡಳಿತ [illegible] ನ ವಿದ್ಯುಚ್ಛಕ್ತಿಯ ಮೇಲೆ ಈ ತೆರಿಗೆಯನ್ನು ವಸೂಲು ಮಾಡುವಂತೆ ನಿರ್ಧರಿಸಿರುವುದು ಅತ್ಯಂತ [illegible] ತೆರಿಗೆ ಸಲ್ಲಿಸಿರುವವರಿಗೆ ಪರಿಹಾರ ದೊರೆಯುವುದು ನ್ಯಾಯ.

ಇದಕ್ಕಿದೆ ಇದುವರೆಗೆ ಹೇಳಿದಂತೆ ಅಕ್ರಮವಾಗಿ ವಸೂಲಾಗಿರುವ ಮೊಬಲಗನ್ನು ಆಕ ಸಾಮರಿಗೆ ವಾಪಸು ಕೊಡಲು ಸರ್ಕಾರ [illegible] ಕರ್ತವ್ಯವಾಗಿದೆ.

ವಿದ್ಯುಚ್ಛಕ್ತಿ ತೆರಿಗೆದಾರ

ಭಾರತಕ್ಕೆ ಪಾಕಿಸ್ತಾನದಿಂದ ೭೦ ಸಾವಿರ ಟನ್ ಸಿಮೆಂಟ್

ಭಾರತವು ಪಾಕಿಸ್ತಾನದಿಂದ [illegible] ಟನ್ ಸಿಮೆಂಟನ್ನು [illegible] ವ್ಯವಹಾರ ಮಾತುಕತೆ ನಡೆಸಲು ಸದ್ಯದಲ್ಲೇ ಕರಾಚಿಗೆ ಭಾರತದ ಅಧಿಕಾರಿಯೊಬ್ಬರು ತೆರಳುವರೆಂದು ಗೊತ್ತಾಗಿದೆ.

ವಿಮಾ ಏಜೆಂಟರುಗಳ ಸಮ್ಮೇಳನ

ಅಂಗೀಕೃತ ನಿರ್ಣಯಗಳು

ಮೈಸೂರು ೧

ಸಂಸ್ಥಾನ ಸರ್ಕಾರದ ವಿಮಾ ಇಲಾಖೆಯ ಏಜೆಂಟರುಗಳ ಸಮ್ಮೇಳನವು ಶ್ರೀ ಟಿ ಎಸ್ ರಾಜಗೋಪಾಲ ಅಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಮೊನ್ನೆ ಚಾಮರಾಜ ಬಹದ್ದೂರ್ ಛತ್ರದಲ್ಲಿ ನಡೆಯಿತು.

ಈಗಿರುವ ಅರ್ಗನೈಸರುಗಳು ಮತ್ತು ಇನ್ಸ್‌ಪೆಕ್ಟರುಗಳನ್ನು ಆಡಳಿತದ ಸಿಬ್ಬಂದಿಗೆ ಸೇರಿಸಿಕೊಂಡು ಏಜೆಂಟರು ಮತ್ತು ಇಲಾಖೆಗಳ ನಡುವೆ ಮಧ್ಯವರ್ತಿಗಳು ಇರದಂತೆ ಮಾಡಬೇಕೆಂದೂ ನೇರವಾದ ವಿಜಿನೆಸ್ ಪದ್ಧತಿಯನ್ನು ನಿರ್ಧರಿಸಬೇಕೆಂದೂ ಕೇಂದ್ರ ಸರ್ಕಾರವನ್ನು ಪ್ರಾರ್ಥಿಸಲಾಯಿತು. ಏಜೆಂಟರುಗಳಿಗೆ ಮನೆ ನಿರ್ಮಾಣದ ಸಾಲವನ್ನು ಮತ್ತು ವಸತಿ ಭತ್ಯವನ್ನೂ ಕೊಡಬೇಕೆಂದು [illegible] ಸರ್ಕಾರಿ ನೌಕರರ [illegible] ವಿಮಾ ಕಂತುಗಳನ್ನು ಸರ್ಕಾರವೇ ಹಿಡಿದುಕೊಳ್ಳಬೇಕೆಂದು [illegible] ಪ್ರತಿ ಸಂಸ್ಥಾನವನ್ನು ಒಂದು ಪ್ರದೇಶವಾಗಿ [illegible] ಎರಡು ಅಥವಾ ಮೂರು ಸಂಸ್ಥಾನಗಳನ್ನು ಒಂದುಗೂಡಿಸಿ ಒಂದು ಪ್ರದೇಶವನ್ನಾಗಿ ಮಾಡಬಾರದೆಂದೂ ಈಗಿರುವ [illegible] ಸಂಸ್ಥೆಯನ್ನು [illegible] ಅದರಲ್ಲಿ [illegible] ಆದುವು.

ಮಧುರೆ ದೇವಾಲಯದ ಗೋಪುರದ ಚಿನ್ನದ ಕಳುವು

ಮದರಾಸು ಸಂಸ್ಥಾನದ ದೇವಸ್ಥಾನದಲ್ಲಿ ಕಳೆದ ಸೋಮವಾರ ಮಧ್ಯ ರಾತ್ರಿಯಲ್ಲಿ ಇದ್ದಂತೆ [illegible] ಗೋಪುರಕ್ಕೆ ಹತ್ತಿ ಗೋಪುರದಲ್ಲಿದ್ದ ಚಿನ್ನವನ್ನು ಕೆರೆದು ತೆಗೆಯುತ್ತಿದ್ದು ದೇವಸ್ಥಾನದ [illegible] ಮ ಕೂಡಲೇ ಪೊಲೀಸರಿಗೆ ಸುದ್ದಿ ಮಾಡಲಾಗಿ [illegible] ಬಂಧಿಸಲ್ಪಟ್ಟರು.

ಮನೆ ಕ್ರಯಕ್ಕಿದೆ

ಮೈಸೂರು [illegible] ಡಿ. ಸುಬ್ಬಯ್ಯ ರಸ್ತೆ 1 ನೇ [illegible] ನಂಬರು 3318 [illegible] ಹೊಸ [illegible] ಸರ್ಕಾರಿ [illegible] ಮನೆ [illegible] ದಾಖಲೆಗಳೊಂದಿಗೆ 1933 ನೇ [illegible]

ನಗರಾಭಿವೃದ್ಧಿ ಸಮಿತಿ ಸುವರ್ಣ ಮಹೋತ್ಸವದ ಕೈಪಿಡಿ

ನಗರಾಭಿವೃದ್ಧಿ ಸಮಿತಿಯ ಸುವರ್ಣ ಮಹೋತ್ಸವದ ಅಂಗವಾಗಿ ಸಮಿತಿಯವರು ಒಂದು ಕೈಪಿಡಿಯನ್ನು ಪ್ರಕಟಿಸಿರುತ್ತಾರೆ. ಸಮಿತಿಯು ಸ್ಥಾಪನೆಯಾದಾಗಿನಿಂದ ಇದುವರೆಗೆ ೨೧ ಮಂದಿ ಮಹನೀಯರು ಅದರ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವರು. ಪ್ರಧಾನ ಶಿರೋಮಣಿ ಎಂ ಮಾಧವರಾವ್, ಆರ್ ರಾಮಚಂದ್ರರಾವ್, ಘಾಂಭೋರೆ ಎಂ ಎ ಶ್ರೀನಿವಾಸನ್, ಬಿ ಎಸ್ ರಾಘವೇಂದ್ರರಾವ್, ಸಿ ನರಸಿಂಹಮೂರ್ತಿ, ಡಾ|| ನಾಗಿರಾವ್, ಟಿ ಮರಿಯಪ್ಪ, ಹೆಚ್ ಓ ರಾಮಕೃಷ್ಣಯ್ಯ ಮುಂತಾದ ಅನೇಕ ಮಹನೀಯರು ಟ್ರಸ್ಟ್‌ಬೋರ್ಡಿನ ಕಾರ್ಯಗಳನ್ನು ವಿವರಿಸಿ ಲೇಖನಗಳನ್ನು ಬರೆದಿರುವರು. ಶ್ರೀಮನ್ಮಹಾರಾಜರು, ಮುಖ್ಯ ಮಂತ್ರಿಗಳು, ಸ್ಥಳೀಯ ಸಂಸ್ಥೆಗಳ ಸಚಿವರು, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರು ಮತ್ತು ಕಾರ್ಯಕರ್ತರುಗಳ ಚಿತ್ರಗಳನ್ನು ಅದರಲ್ಲಿ ಕೊಡಲಾಗಿದೆ. ನಗರಾಭಿವೃದ್ಧಿ ಸಮಿತಿಯು ಮಾಡುತ್ತಿರುವ ಕೆಲಸಗಳನ್ನು ವಿವರಿಸುವ ಬಗ್ಗೆ ಹಲವು ಚಿತ್ರಗಳನ್ನೂ ಕೊಡಲಾಗಿದೆ.

ವಿಧಾನ ಸೌಧದ ಮೇಲೆ ವೀಕ್ಷಕ ವೇದಿಕೆ

ವಿಧಾನ ಸೌಧದ ಮಧ್ಯ ಭಾಗದ ಗೋಪುರದ ಮೇಲೆ ಭೂಮಿಗಿಂತ ೨೦೦ ಅಡಿ ಎತ್ತರದ ಮಟ್ಟದಲ್ಲಿ ಒಂದು ವೀಕ್ಷಕ ವೇದಿಕೆಯನ್ನು ನಿರ್ಮಿಸಲಾಗುವುದೆಂದು ಗೊತ್ತಾಗಿದೆ. ಅಲ್ಲಿ ನಿಂತು ಇಡೀ ಬೆಂಗಳೂರನ್ನು ನೋಡಬಹುದೆಂದು ಹೇಳಲಾಗಿದೆ. ವಿಧಾನ ಸೌಧದ [illegible] ಕಛೇರಿ ಪುಸ್ತಕ ಭಂಡಾರ, ಸಂಸ್ಕೃತಿ ಪ್ರದರ್ಶನ ಇಲಾಖೆ ಮತ್ತು ಇತರ ಶಾಖೆಗಳು ಹೋಗಿವೆ. ಮುಂದಿನ ತಿಂಗಳಲ್ಲಿ ಖಜಾನೆ ಮತ್ತು ಸಂಟ್ರಲ್ ರೆಕಾರ್ಡುಗಳು ಅಲ್ಲಿಗೆ ವರ್ಗಾಯಿಸಲ್ಪಡುತ್ತವೆ.

An appeal to the Registered Graduates

Kindly Elect

G S JOSYER, M A

as a Senator of the Mysore University

Latest C T C Publications

ಇಂಟರ್ ಮೀಡಿಯೆಟ್ ಪರೀಕ್ಷೆಗೆ ನಿಯಮಿತವಾದ

ಬೆಳುವಲದ ಮಡಿಲಲ್ಲಿ-ಬಿರುಗಾಳಿ

ಕೊರವಂಜಿಯ ರಾಮಾಯಣ

ಕನ್ನಡ ಕುಮಾರ ಸಂಭವ

ಈ ನಲ್ಕು ಗ್ರಂಥಗಳಿಂದ ಆರಿಸಿದ ಪ್ರಶ್ನೋತ್ತರಗಳು

136 ಪುಟಗಳು ಬೆಲೆ 1-14-0

— Publishers —

CITY TUTORIAL COLLEGE, MYSORE

Agents M/s J Nanumal & Sons, Mysore

(*Kannada guide to Arts students* — *IN PRINT*)

ವಿಶ್ವಸಂಸ್ಥೆಗೆ ಆಲ್ಜೀರಿಯದ ಪ್ರ[illegible] ಒಯ್ಯಲು ಭಾರತದ ವಿರೋ[illegible]

ವಿಶ್ವಸಂಸ್ಥೆಯ ಭದ್ರತಾ ಸಮಿತಿ ಮುಂದೆ ಆಲ್ಜೀರಿಯದ ಪ್ರಶ್ನೆ ಒಯ್ಯಲು ಭಾರತವು [illegible] ಬೆಂಬಲ ನೀಡುವುದಿಲ್ಲವೆಂದು ಏಷ್ಯಾ-ಆ[illegible] ರಾಷ್ಟ್ರಗಳ ಕೂಟದ ಸಭೆಯಲ್ಲಿ ಭಾರತದ [illegible] ಶ್ರೀ ವಿ ಕೆ ಕೃಷ್ಣ ಮೆನನ್ನರು ತಿಳಿಸಿರುತ್ತಾ[illegible]

ಭಿಕ್ಷುಕ ಪರಿಹಾರ ಸಮಿತಿ ಛೇರ್ಮೆನ್ನರ ಕಛೇರಿ

ಮುನಿಸಿಪಲ್ ಆಫೀಸಸ್,

ಮೈಸೂರು

ತಾ|| 12—6—1956

ಪ್ರಕಟಣೆ

ಇದೇ ಮೈಸೂರು ಚಾಮರಾಜ ಬಹದ್ದೂರ್ ಛತ್ರದ ೩ನೇ ಬ್ಲಾಕಿನಲ್ಲಿರುವ ಭಿಕ್ಷುಕರ [illegible] ಗೃಹಕ್ಕೆ ಬೇಕಾಗುವ ಆಹಾರ ಪದಾರ್ಥ [illegible] ಗಳನ್ನು ಸಪ್ಲೈ ಮಾಡಲು ಸೀಲು ಮಾಡಿದ ದರುಗಳನ್ನು ತಾರೀಖು 25-6-1956ನೇ [illegible] ಮವಾರ ಮಧ್ಯಾಹ್ನ 12ರಿಂದ 12-30ರ [illegible] ಸದರಿ ಭಿಕ್ಷುಕ ಪರಿಹಾರ ಸಮಿತಿ ಛೇ[illegible] ರಾದ ಮುನಿಸಿಪಲ್ ಪ್ರೆಸಿಡೆಂಟರ ಆಫೀ[illegible] ತೆಗೆದುಕೊಳ್ಳಲಾಗುತ್ತ. ವಿವರಗಳನ್ನು [illegible] ಛೇರ್ಮೆನ್ನರ ಆಫೀಸಿನಲ್ಲಿ ಪಡೆಯಬಹುದು.

(ರುಜು) ಎ. ಕೃಷ್ಣಮೂರ್ತಿರಾ[illegible]

ಛೇರ್ಮೆನ್ನರು,

ಭಿಕ್ಷುಕ ಪರಿಹಾರ ಸ[illegible]

ಮೈಸೂರು

ಮೈಸೂರಿನಲ್ಲಿ ಪ್ರತಿ ತಿಂಗಳ 17ನೇ ತಾರೀಖು

ವಿಶ್ವ ವಿಖ್ಯಾತವಾಗಿರುವ

ನವರತ್ನ—ಕಲ್ಪ

ದಿವ್ಯೌಷಧವನ್ನು ಕಂಡುಹಿಡಿದಿರುವ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17 ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು ರೂಂ ನಂ 5[illegible]

— ಭೇಟಿಯ ಕಾಲ —

ಬೆಳಿಗ್ಗೆ 7 30 ರಿಂದ 12 30 ಮತ್ತು ಮಧ್ಯಾಹ್ನ 4 ರಿಂದ 7-30

ಇವರು ಕಾಲಕ್ಕೆ ಸರಿಯಾಗಿ ಸೂಚನೆ [illegible] ವಿಷಯದಲ್ಲಿ ತಿಳಿಸುತ್ತಾರೆ

ನವರತ್ನ—ಕಲ್ಪ

[illegible]

ನರದ ಶಕ್ತಿ, ತಿಂಪು ಮುತ್ತು, [illegible] ಗೊನೋರಿಯ [illegible] ರೋಗ, ಪಿತ್ಥ, ರಕ್ತ [illegible] ಮತ್ತು [illegible] 9 ಅಮೂಲ್ಯ ಪದಾರ್ಥ[illegible] ಯೋಗ [illegible] ದೌರ್ಬಲ್ಯ, [illegible] ವ್ಯಾಧಿ [illegible] ಆರೋಗ್ಯ [illegible]

NAVRATNA KALPA PHARMACY,

Jullundur City (India)

Grams NAVRATNA

SREE GAYATHRI TALKIES

From 16-6-56 Daily 3 Shows

TO DAY & TOMORROW

EGYPTIAN

ಲಕ್ಷ್ಮಿ ★ 14-6-56 ರಿಂದ ಯಶಸ್ವೀ 10 ನೇ ವಾರ

ಕೃಷ್ಣಾ ಪಿಕ್ಚರ್ಸ್‌ರವರ ತಮಿಳು ಚಿತ್ರ

★ ಮಧುರೈ ವೀರನ್

ತಾರೆ: ಎಂ ಜಿ ರಾಮಚಂದ್ರನ್, ಭಾನುಮತಿ ಮುಂತಾದವರು

ಚಾಮುಂಡೇಶ್ವರಿ ಟಾಕೀಸ್

15-6-56 ರಿಂದ ಚಿತ್ರರಂಗದ ಇತಿಹಾಸದಲ್ಲಿ ಪ್ರದರ್ಶಿತವಾಗುತ್ತಿರುವ ಅನೋಖಿ [illegible]

ಪಿಕ್ಚರ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ

ಮೈನಾವತಿ ಜಯಶ್ರೀ ರೇವತಿ ವೀರಪ್ಪ, ಕಲ್ಯಾಣ್‌ಕುಮಾರ್ ಮೂಡಾಸೂರು ಕೃಷ್ಣಮೂರ್ತಿ, ಬಾಲಕೃಷ್ಣ ನಟಿಸಿರುವ

★ ಮುತ್ತೈದೆ ಭಾಗ್ಯ

ನಿರ್ಮಾಪಕ ನಿರ್ದೇಶಕ ಬಿ ವಿ ಆಚಾರ್ಯ ಕಥೆ ಗೌತಮ ಸ್ಟುಡಿಯೋ ಮಾಹಿತಿ

ರಾಜಕಮಲ್ ★ 15—6—56 ರಿಂದ ಅವಿಸ್ಮರಣೀಯ ಪ್ರಾರಂಭ ಪ್ರತಿ ದಿನ 3 ಆಟಗಳು

ಭರಣಿಯವರ ತೆಲುಗು ಚಿತ್ರ

ಭಾನುಮತಿ, ಜಮುನ, ಬಸ್ಸೇಂದ್ರಮಣಿ, ಎನ್ ಟಿ ರಾಮರಾವ್, ರೇಲಂಗಿ ಮತ್ತು ಎಸ್ ವಿ ರಂಗರಾವ್ ಪಾತ್ರವಹಿಸಿರುವ

★ ಚಿಂತಾಮಣಿ ★

Morning Shows From 15—6—56 for 3 Days only ★ MISSISSIPI GAMBLER ★ (Technicolor)

Edited Printed and Published by A. R. Nagarajan at Sadhvi P[illegible] D. Subbiah Road Mysore

ಟೆಲಿಫೋನ್ ನಂ. 792

ಕೋರ್ಗ್ ಮ್ಯಾರ್ಕೆಟ್
ಸ್ಥಾಪಕ 1932 : ಫೋನ್ 811
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸವರನ್ ಚಿನ್ನದಿಂದ ತಯಾರಾದ ಶೃಂಗಾರಗಳೂ, ಬೆಳ್ಳಿ ಸಾಮಾನುಗಳೂ, ಮುತ್ತು, ನವೀನ ರೀತಿಯ ಕಲ್ಲಿನ ಒಡವೆಗಳೂ ಸಹ ದೊರೆಯುತ್ತವೆ

ಸಾಧ್ವಿ

ಬಿಡಿಸಿ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೌ|| ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ಣಿ, ಬಿಂಡಿಗಲ್
ರೇಷ್ಮೆ ಮತ್ತು ಜರಿಯ ಸೀರೆಗಳು ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಅ ಪ , ಡಿ ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಪುಟ : ೧೯] SADHVI : FRIDAY 15—6—1956 ಮೈಸೂರು : ಶುಕ್ರವಾರ ೧೫—೬—೧೯೫೬ [ಸಂಚಿಕೆ : ೨೬೯

ಅಫ್ಘಾನಿಸ್ತಾನದ ಭೂಕಂಪದಲ್ಲಿ ೬೦೦ ಜನರ ಮರಣ—

ಬೇಲೂರರ ಮನೆ ಕೊಲೆ ಪ್ರಕರಣ

ಬಾವಿಯಲ್ಲಿ ೫|| ಅಂಗುಲದ ಎರಡು ಅಲಗಿನ ಚಾಕು ಪತ್ತೆ

ಬೆಂಗಳೂರು ೧೫

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ... ಆದ ಕೊಲೆ ಪ್ರಕರಣದಲ್ಲಿ ಉಪಯೋಗಿಸ ... ತ್ತೆಂದು ಹೇಳಲಾಗಿರುವ ಒಂದು ಚಾಕುವ ... ಪೊಲೀಸರು ಜಲಪೂರಿನಲ್ಲಿ ಕೃಷ್ಣನು ವಾಸವಿ ... ಮನೆ ಬಳಿ ಒಂದು ಬಾವಿಯಲ್ಲಿ ಮುಳುಗು ... ನ ಸಹಾಯದಿಂದ ಪತ್ತೆ ಹಚ್ಚಿ ವಶಪಡಿಸಿ ... ದಿರುತ್ತಾರೆ ಅದು ಕೆಂಪು ಹಿಡಿಯು ೫|| ಅಂ ... ದ ಎರಡಲಗಿನದು ದಸ್ತಗಿರಿಯಾದ ಕೃಷ್ಣನ ... ನ್ನು ಪೂರ್ವಾರಳಾದ ಜಯಮ್ಮನನ್ನು ಪ್ರಶ್ನಿಸಿ ಪೊ ... ರು ಈ ವಿಷಯವನ್ನು ತಿಳಿದುಕೊಂಡಿದ್ದರು ... ಜರನ್ನು ನಡೆಸಿ, ಅದನ್ನು ವೈದ್ಯ ಪರೀಕ್ಷೆಗೆ ... ಕಳುಹಲಾಯಿತು ಅದರ ಮೇಲೆ ಗುಲಾಬಿ ಬ ... ಣ್ಣದ ತುಕ್ಕುಗಳಿದ್ದುವೆಂದು ಹೇಳಲಾಗಿದೆ

ಆಸ್ಪತ್ರೆಯಲ್ಲಿ ರಂಗಲಕ್ಷ್ಮಿಯು ಈಗ ಸರಿ ... ಯಾಗಿ ಮಾತನಾಡತೊಡಗಿದ್ದಾಳೆ ಆಹಾರ ಮ ... ತ್ತು ನೀರನ್ನು ಕೇಳುತ್ತಿರುವಳು ಜಾಗ್ರತೆಯಾಗಿ ... ಯು ಗುಣ ಹೊಂದುವ ಆಶೆ ಮೂಡಿದೆ ಆಕೆ ... ಯ ಮೇಲೆ ಇರಲಾಗಿರುವ ಕಾವಲನ್ನು ಈಗ ಹೆ ... ಚ್ಚಿಸಲಾಗಿದೆ. ಆಕೆಯನ್ನು ನೋಡಲು ಯಾರ ... ನ್ನೂ ಬಿಡುತ್ತಿಲ್ಲ ಸಮೀಪ ಬಂಧುಗಳೆಂದು ಹೇ ... ಳಿಕೊಂಡು ಕಣ್ಣೀರು ಸುರಿಸುತ್ತಿದ್ದವರೊಬ್ಬರು ... ಬೇಡಿದರೂ ಆಕೆಯನ್ನು ನೋಡಲು ಸಾಧ್ಯ ... ವಾಗದೆ ಕಡೆಗೆ ಹೊರದ ಬಾಗಿಲು ಸಂದಿ ಮೂಲ ... ನೋಡಲು ವೈದ್ಯರು ಅವಕಾಶವಿತ್ತರು ರಂಗ ... ಲಕ್ಷ್ಮಿಗೆ ಪೂರ್ಣ ಪ್ರಜ್ಞೆ ಇದ್ದರೂ ವಿಚಾರ ಮಾ ... ಡುವ ಶಕ್ತಿ ಬಂದಿಲ್ಲ

ಅಫ್ಘಾನಿಸ್ತಾನದಲ್ಲಿ ಭೂಕಂಪ ದಿಂದ ೬೦೦ ಜನರ ಮರಣ

ಕಳೆದ ಭಾನುವಾರದಿಂದ ಅಫ್ಘಾನಿಸ್ತಾನದ ... ಭಾಗಗಳಲ್ಲಿ ಆದ ಭೂಕಂಪದ ಪರಿಣಾ ... ಮವಾಗಿ ೬೦೦ ಜನರು ಮೃತಪಟ್ಟಿರುವರೆಂದು ... ತಿಳಿಸಲಾಗಿದೆ ಭೂಕಂಪವು ಅತ್ಯಂತ ಭಾರಿ ಪ್ರ ... ಮಾಣದ್ದೆಂದೂ, ಉತ್ತರಭಾಗದ ಬೆಟ್ಟ ಪ್ರದೇಶ ... ದಲ್ಲಿ ಅದು ಹೆಚ್ಚಾಗಿತ್ತೆಂದೂ ವರದಿಯಾಗಿದೆ ... ಕಾಬೂಲ್ ನಗರದ ಹೊರ ವಲಯಗಳಲ್ಲಿ ಅನೇಕ ... ಮನೆಗಳು ಕುಸಿದು, ವಿಪರೀತ ಜನರು ರಾಶಿ ... ಯಲ್ಲಿ ಹೂತುಹೋದರೆಂದು ಗೊತ್ತಾಗಿದೆ ಒಂದಿ ... ರ ಕಾಲ ಪದೇಪದೇ ಭೂಕಂಪವಾಯಿತು ... ದ ಪರಿಣಾಮವಾಗಿ ನದಿಗಳು ಪ್ರವಹಿಸುವ ... ಮಾರ್ಗವೂ ಬದಲಾಯಿತೆಂದು ಹೇಳಲಾಗಿದೆ

ಬಳಿಕ ಹೊಸದ ಮೊಕದ್ದಮೆಯಲ್ಲಿ ದಂಡ ... ಕ್ರಮವಾದ ಅಳತೆಯನ್ನು ಉಪಯೋಗಿಸದೆ ... ಇದ್ದುದಕ್ಕಾಗಿಯೂ, ಅದನ್ನು ಪ್ರಸಕ್ತ ಸಾಲಿನಲ್ಲಿ ... ಮಾಡಿಸದಿರುವುದಕ್ಕಾಗಿಯೂ ಆದಿಗದ ... ಅಂಗಡಿಯ ಅಬು ಬೇಕರ್ ಎಂಬ ವರ್ತ ... ೨ ಅಪರಾಧಗಳಿಗಾಗಿ ಪ್ರತಿ ೨೫ ರೂ ದಂ ... ಡ, ತಪ್ಪಿದರೆ ೨ ವಾರ ಸಾದಾ ಸಜವನ್ನು ... ವಿಧಿಸಲಾಗಿದೆ.

ಡಾ|| ಕೆ. ವಿ. ಪುಟ್ಟಪ್ಪನವರಿಂದ ಅಧಿಕಾರ ಸ್ವೀಕಾರ



ಮೈಸೂರು ೧೫

ವಿಶ್ವವಿದ್ಯಾನಿಲಯದ ಉಪಕುಲಪತಿಗಳಾಗಿ ನೇಮಿಸಲ್ಪಟ್ಟಿರುವ ಡಾ|| ಕೆ ವಿ ಪುಟ್ಟಪ್ಪನವರು ಈ ದಿನ ಶ್ರೀ ಎ ಎಲ್. ಮುದಲಿಯಾರವರಿಂದ ಅಧಿಕಾರವನ್ನು ವಹಿಸಿಕೊಂಡರು. ಶ್ರೀ ಪುಟ್ಟಪ್ಪನವರನ್ನು ಸದ್ಯಕ್ಕೆ ಒಂದು ವರ್ಷದ ವರೆಗೆ ಉಪಕುಲಪತಿಗಳಾಗಿ ನೇಮಿಸಲಾಗಿದೆ

ಶ್ರೀ ಪುಟ್ಟಪ್ಪನವರು ರಚಿಸಿರುವ ರಾಮಾಯಣ ದರ್ಶನ ಮಹಾಕಾವ್ಯಕ್ಕೆ ಕಳೆದ ವರ್ಷ ರಾಷ್ಟ್ರಪ್ರಶಸ್ತಿ ಪ್ರಶಸ್ತಿಯು ದೊರಕಿತು

ಕಳೆದ ತಿಂಗಳಲ್ಲಿ ಅವರಿಗೆ ಮೈಸೂರು ವಿಶ್ವವಿದ್ಯಾನಿಲಯದವರು ಗೌರವ ಡಾಕ್ಟರೇಟ್ ಪ್ರಶಸ್ತಿಯನ್ನು ನೀಡಿದರು

ಭಾರತದಲ್ಲಿ ಪ್ರತಿಗಾಮೀ ಪತ್ರಿಕೆಗಳಿಗೆ ವಿದೇಶಗಳ ನೆರವು

ಪ್ರಧಾನಿ ನೆಹರೂರವರ ಆಪಾದನೆ

ಭಾಷೆಯ ಹೆಸರಿನಲ್ಲಿ ರಾಷ್ಟ್ರದ ಐಕ್ಯತೆಯನ್ನು ಶಿಥಿಲಗೊಳಿಸಲೆತ್ನಿಸುವವರ ಬಗ್ಗೆ ಜನತೆಯು ಎಚ್ಚರಿಕೆ ವಹಿಸಬೇಕೆಂದು ಪ್ರಧಾನಿ ನೆಹರೂರವರು ಲಿಟ್ಬರ್ಗ್ ಎಂಬಲ್ಲಿ ನಿನ್ನೆ ಭಾಷಣ ಮಾಡುತ್ತಾ ತಿಳಿಸಿದರು. ಸಮಾಜವಾದಿ ಸಮಾಜದ ದಾರಿಯಲ್ಲಿ ರಾಷ್ಟ್ರವು ಮುಂದುವರಿಯಲು ಸಾಧ್ಯವಾಗದಂತೆ ಜನರ ಗಮನವನ್ನು ಬೇರೆ ಕಡೆ ಪ್ರತಿಗಾಮಿ ಶಕ್ತಿಗಳು ಎಳೆದು ದೇಶದಲ್ಲಿ ಹಿಂಸಾತ್ಮಕ ಚಟುವಟಿಕೆಗೆ ಕಾರಣವಾಗಿವೆಯೆಂದು ಅವರು ಹೇಳಿದರು ದೇಶವು ಹಿಂದೆ ಇಬ್ಭಾಗವಾದಾಗ ಅಧಿಕಾರ ಪಡೆಯಲು ಹೊಂಚುಹಾಕಿ ಸಾಫಲ್ಯಹೊಂದದವರು ರಾಷ್ಟ್ರೀಯ ಸ್ವಯಂಸೇವಕ ಸಂಘ, ಭಾರತೀಯ ಜನಸಂಘ ಮತ್ತು ಮಹಾಸಭಾ ಸಮಿತಿಗಳ ಹೆಸರಿನಲ್ಲಿ ಈಗ ಚಳುವಳಿ ನಡೆಸುತ್ತಿರುವುದಾಗಿ ಅವರು ನುಡಿದರು ಇತ್ತೀಚೆಗೆ ಭಾರತದಲ್ಲಿ ಆದ ಹಿಂಸಾಕೃತ್ಯಗಳನ್ನು ಕಂಡು ಪಾಕಿಸ್ತಾನವು ಸಂತೋಷಪಡುತ್ತಿರುವಂತಾಗಿದೆಯೆಂದೂ ಅವರು ಹೇಳಿದರು ಹಲವು ಪ್ರತಿಗಾಮಿ ಪತ್ರಿಕೆಗಳಿಗೆ ಕೆಲವು ವಿದೇಶಗಳು ಧನ ಸಹಾಯ ಮಾಡುತ್ತಿರುವುದಾಗಿಯೂ ಅವರು ಆಪಾದನೆ ಮಾಡಿದರು

ದಸರಾ ವಸ್ತು ಪ್ರದರ್ಶನ

ಬರುವ ಅಕ್ಟೋಬರ್ ೫ ರಿಂದ ೨೦ರವರೆಗೆ ಈ ಸಾರಿಯ ದಸರಾ ವಸ್ತು ಪ್ರದರ್ಶನವು ನಡೆಯುವುದು ಕಳೆದ ವರ್ಷ ಆದ ಪ್ರದರ್ಶನದಲ್ಲಿ ಒಟ್ಟು ೩೫,೦೦೦ ರೂ ನಿವ್ವಳ ಲಾಭ ದೊರೆತು, ವಸ್ತು ಪ್ರದರ್ಶನದ ಇತಿಹಾಸದಲ್ಲೇ ಅತ್ಯಂತ ಹೆಚ್ಚಿನ ಲಾಭ ಬಂದುದಾಗಿ ಹೇಳಲಾಗಿದೆ

ಹರಿಕಥೆ

ಒಂಟಿಕೊಪ್ಪಲು ಶ್ರೀನಿವಾಸ ದೇವಸ್ಥಾನದಲ್ಲಿ ನೆನ್ನೆಯಿಂದ ಪ್ರತಿದಿನ ಸಾಯಂಕಾಲ ೫ ಗಂಟೆಗೆ ಹರಿಕಥಾ ವಿದ್ವಾನ್ ಶೇ|| ಹೆಚ್ ಟಿ ಕಾಮಣ್ಣನವರಿಂದ ವೆಂಕಟೇಶ್ವರ ಎಂಬ ಹರಿಕಥೆಯು ನಡೆಯುವಂತೆ ಏರ್ಪಾಡಾಗಿದೆ.

ಮಹಾರಾಜರ ಮಿಲಿಟರಿ ಬಕ್ಷಿ ಮತ್ತು ಎ.ಡಿ.ಸಿ. ರಾಜೀನಾಮೆ

ಮೈಸೂರು ೧೫

ಶ್ರೀಮನ್ಮಹಾರಾಜರ ಎ ಡಿ ಸಿ ಮತ್ತು ಮಿಲಿಟರಿ ಬಕ್ಷಿಯವರಾದ ಶ್ರೀ ಬಿ ಮದನಗೋಪಾಲರಾಜೆ ಅರಸಿನವರು ತಮ್ಮ ಹುದ್ದೆಗೆ ರಾಜೀನಾಮೆಯಿತ್ತಿರುವರೆಂದೂ, ಅದನ್ನು ಇನ್ನೂ ಅಂಗೀಕರಿಸಲಾಗಿಲ್ಲವೆಂದೂ ವರದಿಯಾಗಿದೆ.

ಇತ್ತೀಚೆಗಷ್ಟೆ ಎ ಡಿ ಸಿ ಯವರಾದ ಶ್ರೀ ನಂಜರಾಜೆ ಅರಸಿನವರೂ ರಾಜೀನಾಮೆ ಕೊಟ್ಟಿರುವರೆಂದೂ, ಅದನ್ನು ಮಹಾರಾಜರು ಅಂಗೀಕರಿಸಿರುವರೆಂದೂ ಗೊತ್ತಾಗಿದೆ ದೇಹಾಲಸ್ಯವೇ ಮೇಲ್ಕಂಡ ರಾಜೀನಾಮೆಗಳಿಗೆ ಕಾರಣವೆಂದು ಹೇಳಲಾಗಿದೆ

ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲರ ಅಧಿಕಾರವನ್ನು ಶ್ರೀ ಪುಟ್ಟಪ್ಪನವರು ಶ್ರೀ ಸಿ ಡಿ ನರಸಿಂಹಯ್ಯನವರಿಗೆ ಇಂದು ವಹಿಸಿಕೊಟ್ಟರು

ವೈಜಯಂತಿಮಾಲಾರವರ ಆಭರಣಗಳ ಕಳುವು

ಸುಪ್ರಸಿದ್ಧ ಚಲನಚಿತ್ರ ನಟಿ ವೈಜಯಂತಿಮಾಲಾರವರ ೧೨ ಸಾವಿರ ರೂ ಬೆಲೆಯ ಆಭರಣಗಳು ಕಳುವಾಗಿರುವುದಾಗಿಯೂ, ಈ ಸಂಬಂಧದಲ್ಲಿ ಆಕೆಯ ಸೇವಕನನ್ನು ಮದ್ರಾಸು ಪೊಲೀಸರು ಬಂಧಿಸಿರುವರೆಂದೂ ವರದಿಯಾಗಿದೆ ಆಕೆಯು ಕಳೆದ ೯ನೇ ತಾರೀಕು ರಾತ್ರಿ ಮದ್ರಾಸಿನಿಂದ ಬೊಂಬಾಯಿಗೆ ವಿಮಾನದಲ್ಲಿ ತೆರಳಿದರೆಂದೂ, ತನ್ನೊಡನೆ ತಂದಿದ್ದ ಟ್ರಂಕನ್ನು ಬೊಂಬಾಯಿಯಲ್ಲಿ ತೆಗೆದು ನೋಡಲಾಗಿ, ಒಂದು ಸರ ಮತ್ತು ನಾಲ್ಕು ಕೈಯುಂಗುರಗಳು ಮಾಯವಾಗಿದ್ದುವೆಂದೂ, ಸೇವಕನು ಟ್ರಂಕನ್ನು ಮದ್ರಾಸಿನಲ್ಲಿ ವಿಮಾನ ನಿಲ್ದಾಣಕ್ಕೆ ತಂದುಕೊಟ್ಟನೆಂದೂ ಹೇಳಲಾಗಿದೆ

ಗುಂಡಿನೇಟಿನಿಂದ ಗೋವಾ ಸ್ವಾತಂತ್ರ್ಯವಾದಿಯ ಕೊಲೆ

ಗೋವಾ ಜೈಲಿನಲ್ಲಿ ಬಂಧಿಸಲ್ಪಟ್ಟಿದ್ದ ರಾಷ್ಟ್ರೀಯ ಸ್ವಾತಂತ್ರ್ಯವಾದಿಯೊಬ್ಬನು ಜೈಲಿನಿಂದ ತಪ್ಪಿಸಿಕೊಳ್ಳಲೆತ್ನಿಸಿದಾಗ ಅವನ ಮೇಲೆ ಪೊಲೀಸರು ಗುಂಡು ಹಾರಿಸಲಾಗಿ ಆತನು ಮೃತಪಟ್ಟನೆಂದು ವರದಿಯಾಗಿದೆ.

ಬೇಲೂರರ ಕೊಲೆ ತನಿಖೆ ಮುಕ್ತಾಯ

ಹೆಚ್ಚಿನ ದಸ್ತಗಿರಿಗಳ ಸಂಭವವಿಲ್ಲ

ಸ್ವಂ ಸು ತಂತಿ] ಬೆಂಗಳೂರು ೧೫

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಕೊಲೆ ಸಂಬಂಧದ ತನಿಖೆ ಕಾರ್ಯಗಳು ಮುಗಿದು ಸದ್ಯದಲ್ಲಿಯೇ ಛಾರ್ಜಿಷೀಟು ಹಾಕಲು ಸಿದ್ಧತೆಗಳಾಗುತ್ತಿವೆಯೆಂದೂ ಮತ್ತು ಈ ಬಗ್ಗೆ ಇನ್ನು ಹೆಚ್ಚಿನ ದಸ್ತಗಿರಿಗಳ ಸಂಭವವಿಲ್ಲವೆಂದೂ ತಿಳಿದುಬಂದಿದೆ

ಶ್ರೀ ಶ್ರೀನಿವಾಸಯ್ಯಂಗಾರ್ಯರ ಉಳಿದಿರುವ ಇಬ್ಬರು ಮಕ್ಕಳನ್ನು ಅವರ ಚಿಕ್ಕಮ್ಮನೊಡನೆ ಶ್ರೀಮತಿ ವೆಂಗಮ್ಮನವರಿಗೆ ಸೇರಿದ ಹಲವು ಪದಾರ್ಥಗಳನ್ನು ಗುರುತಿಸಲು ಅವರ ಮನೆಗೆ ಇಂದು ಕರೆತರಲಾಗಿತ್ತು

ಅಂತರ ಪ್ರಾಂತ ಸಮಿತಿ ಸಭೆ

ನೂತನ ಪ್ರಾಂತ ರಚನೆ ಬಗ್ಗೆ ಸಮಾಲೋಚಿಸಲು ಅಂತರ ಪ್ರಾಂತ ಸಚಿವ ಮಂಡಲಿಯು ಮುಂದುವರಿದ ಸಭೆಯು ಇಂದು ಮುಖ್ಯಮಂತ್ರಿ ಮಂತ್ರಿಗಳ ಕಛೇರಿಯಲ್ಲಿ ಆರಂಭವಾಯಿತು ನಾಲ್ಕು ಜನ ಮಂತ್ರಿಗಳಲ್ಲದೆ, ವಿಶೇಷ ಆಹ್ವಾನದ ಮೇಲೆ ಉತ್ತರ ಕರ್ನಾಟಕದ ಶ್ರೀ ಜಂಬಲಿ ಮತ್ತು ಹೈದರಾಬಾದ್ ಕರ್ನಾಟಕದ ಅಣ್ಣಾರಾವ್ ಜ್ಞಾನದೇವಪ್ಪಯವರುಗಳು ಸಹ ಸಭೆಯಲ್ಲಿ ಭಾಗವಹಿಸಿದ್ದರು ಸಮಿತಿಯು ನಾಳೆಯೂ ಸೇರುವುದು

ಮೈಸೂರು ಜಿಲ್ಲಾ ಅಭಾವ ಪ್ರದೇಶಗಳಿಗೆ ನೆಹರೂ ನೆರವು

೨೫ ಸಾವಿರ ರೂ. ಪರಿಹಾರ ದ್ರವ್ಯ

ಬೆಂಗಳೂರು ೧೫

ನೆಹರೂರವರು ಪ್ರಧಾನಿಯವರ ಸಂಕಷ್ಟ ಪರಿಹಾರ ನಿಧಿಯಿಂದ ೨೫,೦೦೦ ರೂ. ಸಹಾಯ ದ್ರವ್ಯವನ್ನು ಮೈಸೂರು ಜಿಲ್ಲೆಯ ಹಲವು ಅಭಾವ ಪ್ರದೇಶಗಳಲ್ಲಿ ಪರಿಹಾರವೀಯಲು ಕಳುಹಿಸಿರುತ್ತಾರೆ

ಈಗಾಗಲೇ ಸಂಸ್ಥಾನ ಸರ್ಕಾರದವರು ಒದಗಿಸಿರುವ ೧ ಲಕ್ಷ ೫ ಸಾವಿರ ರೂ ಪರಿಹಾರ ದ್ರವ್ಯದ ಜೊತೆಗೆ ಇನ್ನೂ ೫೦ ಸಾವಿರ ರೂ ಲಕ್ಷ್ಮ ಮಂಜೂರು ಮಾಡಿರುತ್ತಾರೆ

ಜೀಪು ಕಾರು ಕಲ್ಲಿಗೆ ಡಿಕ್ಕಿ ಹೊಡೆದು ಅಪಘಾತ

ಡ್ರೈವರ್ ಮತ್ತು ಇಬ್ಬರು ಹೆಣ್ಣು ಮಕ್ಕಳ ಮರಣ

ಮೈಸೂರು ೧೫

ವಿವಾಹವೊಂದರ ಸಂಬಂಧವಾಗಿ ನೆನ್ನೆ ಪಿ ಹೆ ಕೇರಿಯಿಂದ ಪಶ್ಚಿಮವಾಹಿನಿಗೆ ಬಂದಿದ್ದ ಒಂದು ಗುಂಪಿನವರ ಪೈಕಿ ಹಲವರು ಜೀಪುಕಾರಿನಲ್ಲಿ ಶ್ರೀರಂಗಪಟ್ಟಣಕ್ಕೆ ಹೋಗಿ ವಾಪಸು ಬರುತ್ತಿದ್ದಾಗ ಕಾರು ರಸ್ತೆ ಪಕ್ಕದ ಕಲ್ಲಿಗೆ ಡಿಕ್ಕಿ ಹೊಡೆದು ಡ್ರೈವರ್ ದಸ್ತಗೀರಾಚಾರಿ ಎಂಬಾತನೂ, ಇಬ್ಬರು ಹೆಣ್ಣು ಮಕ್ಕಳೂ ಗಾಯಗೊಂಡು ಇಲ್ಲಿನ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಮೃತಪಟ್ಟರೆಂದು ತಿಳಿದುಬಂದಿದೆ ಇತರ ೧೨ ಜನರಿಗೆ ಗಾಯವಾಗಿವೆ

ಮುಂದಿನ ವರ್ಷವೂ ಢೇಬರ್ ರವರೇ ಕಾಂಗ್ರೆಸ್ ಅಧ್ಯಕ್ಷರು

ಬರುವ ಜನವರಿ ಮೊತ್ತಿಗೆ ೨ ವರ್ಷ ಅವಧಿಯು ಮುಗಿದನಂತರ, ಮುಂದೆಯೂ ಒಂದು ವರ್ಷ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಢೇಬರ್‌ರವರು ಇರಬೇಕೆಂದು ಕಾಂಗ್ರೆಸ್ ವ್ಯಕವರ್ಗ್ಯಂ ನಿರ್ಧರಿಸುವುದಾಗಿ ಗೊತ್ತಾಗಿದೆ

ಕಲ್ಕತ್ತದಲ್ಲಿ ರೇಡಿಯೊ ಚಲಿತ ಕಣಗಳ ವ್ಯಾಪನೆ ?

ಕಲ್ಕತ್ತ ವಿಶ್ವವಿದ್ಯಾಲಯದ ವಿಜ್ಞಾನಿ ತಂಡವೊಂದು ಕಂಡುಹಿಡಿದಿರುವ ಪ್ರಕಾರ ಅಲ್ಲಿನ ಜನರು ಉಪಯೋಗಿಸುವ ಹಾಲು ತುಪ್ಪ ಮತ್ತು ಅಕ್ಕಿಯಲ್ಲಿ ರೇಡಿಯೊ ಚಲನವುಳ್ಳ ಕಣಗಳು ಸೇರಿರುವುದಾಗಿ ಗೊತ್ತಾಗಿದೆ. ಇತ್ತೀಚೆಗೆ ಆದ ಜಲಜನಕ ಬಾಂಬುಗಳ ಆಸ್ಫೋಟನೆಯಿಂದ ಹೊರಟ ಕಣಗಳು ಮಳೆಯಲ್ಲಿ ಸೇರಿರುವುದಾಗಿಯೂ, ತರಕಾರಿಗಳಲ್ಲೂ ಇವು ಬೆರೆತಿರಬಹುದೆಂದೂ ಹೇಳಲಾಗಿದೆ

ಮುದ್ರಣಾಲಯಕ್ಕೆ ಪತ್ರಿಕೋದ್ಯಮ ವಿದ್ಯಾರ್ಥಿಗಳ ಭೇಟಿ

ನಗರದ ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ವಿದ್ಯಾರ್ಥಿಗಳು ಕಳೆದ ಮಂಗಳವಾರ ಅಲ್ಲಿನ ಪ್ರಾಧ್ಯಾಪಕರಾದ ಶ್ರೀ ನಾಡಿಗ ಕೃಷ್ಣಮೂರ್ತಿಯವರ ನೇತೃತ್ವದಲ್ಲಿ ಸಾಧ್ವಿ ಮುದ್ರಣಾಲಯಕ್ಕೆ ಭೇಟಿ ಕೊಟ್ಟು, ನವೀನ ತರಹದ ಲಿನೋಟೈಪ್ ಮಾನೋಟೈಪ್ ಮುಂತಾದ ಯಂತ್ರಗಳನ್ನೂ ಇತರ ಸಾಧನಗಳನ್ನೂ ನೋಡಿ, ಮುದ್ರಣ ಕಲೆಯ ಹಿನ್ನೆಲೆ ವಿಷಯಗಳನ್ನು ತಿಳಿದುಕೊಂಡರು

ಚಾಮರಾಜಪುರಂ ಹಿಂದಿ ಪ್ರಚಾರ ಕೇಂದ್ರದ ವಿದ್ಯಾರ್ಥಿ ಸಂಘ

ಚಾಮರಾಜಪುರಂ ಹಿಂದಿ ಶಿಕ್ಷಣ ಕೇಂದ್ರದ ವಿದ್ಯಾರ್ಥಿ ಸಂಘದ ಸಭೆಯು ಮೊನ್ನೆ ನಡೆದು ಕಾರ್ಯಕಾರಿ ಸಮಿತಿಗೆ ಶ್ರೀ ಕೆ ಪದ್ಮನಾಭಾಚಾರ್ಯರು ಅಧ್ಯಕ್ಷರಾಗಿಯೂ, ಶ್ರೀ ಎಂ ಎಸ್ ಕೃಷ್ಣಮೂರ್ತಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಎಂ. ಕೆ. ಸಿಂಗಪ್ಪ ಮತ್ತು ಎಸ್ ವೆಂಕಟಕೃಷ್ಣಯ್ಯನವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಬಿ ವಿ ವಸಂತರಾವ್, ಎಸ್ ನಾರಾಯಣ್, ಸಿ ಎಲ್ ಶ್ರೀಕಂಠನ್, ಎಂ ಕೆ ಪಾರ್ಥಸಾರಥಿ ಮತ್ತು ಶ್ರೀಮತಿಗಳಾದ ಎಸ್ ವಿಶಾಲಾಕ್ಷಮ್ಮ, ಎಸ್ ಕೆ ಸರಸ್ವತಿ, ಲಲಿತಾ, ಎಸ್ ಭಾಗ್ಯಲಕ್ಷ್ಮಿ ಮತ್ತು ವಿ ಎಸ್ ಶಾರದಮ್ಮನವರು ಸದಸ್ಯರಾಗಿಯೂ ಚುನಾಯಿತರಾದರು

ಉಪನಯನಗಳು

ನಂಜನಗೂಡಿನಲ್ಲಿರುವ ಶ್ರೀ ಮಗಳಂ ಶ್ರೀನಿವಾಸಾಚಾರ್ಯರು ಹೆಚ್ ಕೆ ವೇದವ್ಯಾಸಾಚಾರ್ಯರ ಮಗ ಚಿ॥ ಪವಮಾನನಿಗೂ, ಶ್ರೀ ವೇಣುಗೋಪಾಲಾಚಾರ್ಯರು ತಮ್ಮ ಕುಮಾರ ಚಿ॥ ಸಿ॥ ಜಯರಾಮನಿಗೂ ಕಳೆದ ಸೋಮವಾರ ಉಪನಯನವನ್ನು ನಂಜನಗೂಡಿನಲ್ಲಿ ನೆರವೇರಿಸಿದರು. ಈ ಸಂಬಂಧವಾಗಿ ಮಾರನೇ ದಿನ ಸಂಜೆ ಸ್ವಾಗತ ಸಮಾರಂಭವು ಏರ್ಪಡಿಸಿತ್ತು. ವಿ॥ ಎಸ್ ಸಂಜೀವಸ್ವಾಮಿಯವರ ಗಾಯನವು ವಿ॥ ಹೆಚ್ ವಿ॥ ಕೃಷ್ಣರಾಯರ ಪಿಟೀಲು ಮತ್ತು ವಿ॥ ಟಿ ಎಲ್ ಮುದ್ದುಲಿಂಗಪ್ಪನವರ ಮೃದಂಗದೊಡನೆ ಸುಸೂತ್ರವಾಗಿ ನಡೆಯಿತು

Pale

BRONKOL

for ASTHMA

&

BRONCHITIS

Sole Distributors for Mysore State and Coorg

SATHYA & CO,

Chemists & Druggists

71|1 A. S. Street,

BANGALORE-2

Edited Printed and Published by A. R. Nagarajan at Sadhvi Press 3 Subbiah Road, Mysore

ನೆಹರೂರವರಿಗೆ ಲಂಡನ್ನಿನ ಅತ್ಯುನ್ನತ ಗೌರವ ಪ್ರಶಸ್ತಿ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕಾಗಿ ಲಂಡನ್ನಿಗೆ ಹೋಗಲಿರುವ ನೆಹರೂರವರಿಗೆ ಬರುವ ತಿಂಗಳ ೨ ನೇ ತಾರೀಖು ಲಂಡನ್ನಿನ ಗೌರವ ಸ್ವಾತಂತ್ರ್ಯ ಎಂಬ ನಗರದ ಅತ್ಯಂತ ಹೆಚ್ಚಿನ ಗೌರವ ಪ್ರಶಸ್ತಿಯನ್ನು ಕೊಡಲಾಗುವುದು

ಹಿಮಾಲಯದಲ್ಲಿ ಮತ್ತೊಂದು ಪ್ರಸ್ಥಭೂಮಿ ಪತ್ತೆ

ಹಿಮಾಲಯದ ಪಶ್ಚಿಮ ಶ್ರೇಣಿಯ ಗೌರಿಶಂಕರ ಶಿಖರದ ಹತ್ತಿರ ೨೨ ೦೦೦ ಅಡಿ ಎತ್ತರದಲ್ಲಿ ೨ ಮೈಲಿ ಉದ್ದದ ಪ್ರಸ್ಥಭೂಮಿಯೊಂದು ಇರುವುದೆಂದು ಸ್ವಿಟ್ಜರ್ಲೆಂಡಿನ ಪರ್ವತಾರೋಹಿ ಗುಂಪಿನಲ್ಲಿದ್ದ ಬ್ರಿಟಿಷ್ ಪ್ರಜೆ ಪೀಟರ್ ಡಾರ್ ವೆಬ್‌ಸ್ಟರ್ ಎಂಬುವರು ತಿಳಿಸಿರುತ್ತಾರೆ. ಕಮ್ಮಲ್ ಮತ್ತು ಸೂಲಿಕುಂಭುಗಳ ನಡುವೆ ೯ ೦೦೦ ಅಡಿ ಎತ್ತರದ ಪ್ರದೇಶವೊಂದನ್ನು ಹತ್ತಿದಾಗ ಪ್ರಸ್ಥಭೂಮಿಯು ಗೋಚರಿಸಿತೆಂದು ಹೇಳಲಾಗಿದೆ. ಪ್ರಸ್ಥಭೂಮಿಯ ಮೇಲೆ ವಿಮಾನಗಳು ಇಳಿಯಬಹುದೆಂಬ ಅಭಿಪ್ರಾಯಪಡಲಾಗಿದೆ

ವರುಣ ಹೋಬಳಿ ಕೇಂದ್ರದ ಉಪಾಧ್ಯಾಯರ ಸಂಘ

ಮೇಲ್ಕಂಡ ಸಂಘದ ಸಭೆಯು ಕಳೆದ ೨ನೇ ತಾರೀಕು, ದೇವಲಾಪುರದ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಶ್ರೀನಿವಾಸರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಸುಬ್ರಯ್ಯನವರಿಂದ ದೇವತಾ ಪ್ರಾರ್ಥನೆ ಮತ್ತು ಶ್ರೀ ನಾರಾಯಣರಾಯರಿಂದ ಸ್ವಾಗತ ಭಾಷಣ ನಡೆದನಂತರ, ಪ್ರಸಕ್ತ ಸಾಲಿಗೆ ಕಾರ್ಯನಿರ್ವಾಹಕ ಸಮಿತಿಯ ರಚನೆಯಾಯಿತು. ಮೈಸೂರು ತಾಲ್ಲೂಕು ರೇಂಜ್ ಇನ್ಸ್‌ಪೆಕ್ಟರ್ ಶ್ರೀ ಬಿ ಕೃಷ್ಣಾಚಾರಾಯರು ಅಧ್ಯಕ್ಷರಾಗಿಯೂ, ವರುಣ ಹೋಬಳಿ ಅಟೆಂಡೆನ್ಸ್ ಆಫೀಸರ್ ಶ್ರೀ ಬಿ ರಾಘವೇಂದ್ರರಾಯರು ಉಪಾಧ್ಯಕ್ಷರಾಗಿಯೂ ಸರ್ವಾನುಮತದಿಂದ ಆರಿಸಲ್ಪಟ್ಟರು. ಶ್ರೀ ಕೆ ಶ್ರೀನಿವಾಸರಾಯರು ಕಾರ್ಯದರ್ಶಿಗಳಾಗಿಯೂ, ಶ್ರೀ ಎಸ್ ಕಾಳಯ್ಯನವರು ಖಜಾಂಚಿಗಳಾಗಿಯೂ ಮತ್ತು ಎಂಟು ಮಂದಿ ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಚುನಾಯಿತರಾದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

CENTRAL INSTITUTE OF COMMERCE,

Vanivilas Market,

MYSORE

Admissions to diploma courses in Commerce, Shorthand and Typewriting are being received on all working days Make haste and join immediately

Please note Change of Programme

At

SREE GAYATHRI

TALKIES

From TO DAY 15—6—56

Daily 3 Shows

QUENTIN DURWARD

Morning Shows on 16th & 17th

DECAMERON NIGHTS

ಪ್ರೆಜಿಲ್ಲಿನಿಂದ ಭಾರತದ ವಿದ್ಯಾರ್ಥಿಯ ಗಡೀಪಾರು

ಬ್ರೆಜಿಲ್ ರಾಜಧಾನಿ ರಯೊಡಿ ಜನೈರೊವಿನಲ್ಲಿ ಬಹುಮೇಲು ಚಳುವಳಿ ನಡೆಸಿದರೆಂದು ಭಾರತದ ಮತ್ತು ಈಕ್ವಡಾರಿನ ಇಬ್ಬರು ವಿದ್ಯಾರ್ಥಿಗಳನ್ನು ಬ್ರೆಜಿಲ್ ಸರ್ಕಾರದವರು ಗಡೀಪಾರು ಮಾಡಿದ್ದಾರೆ. ಅವರಿಬ್ಬರು ಅಲ್ಲಿ ನಡೆದ ವಿದ್ಯಾರ್ಥಿಗಳ ಚಳುವಳಿಯ ಹಿಂದಿನ ದಿನ ರಯೊಡಿ ಜನೈರೊವಿಗೆ ಹೋಗಿದ್ದರೆಂದೂ, ಕಮ್ಯೂನಿಸಂ ತತ್ವವನ್ನು ಅವರು ಪ್ರಸಾರ ಮಾಡಿದರೆಂದೂ ಹೇಳಲಾಗಿದೆ. ಭಾರತೀಯ ವಿದ್ಯಾರ್ಥಿ ಹೆಸರು ಸುಧಾಂಶು ಚೌಧುರಿ. ಅವರುಗಳನ್ನು ವಿಮಾನದಲ್ಲಿ ಲಿಸ್ಬನ್ನಿಗೆ ಕಳುಹಿಸಲಾಯಿತು

ಮೈಸೂರು ನಿವಾಸಿಗೆ ಚಿಕಾಗೊ ವಿಶ್ವವಿದ್ಯಾಲಯದ ಡಾಕ್ಟರ್ ಪ್ರಶಸ್ತಿ

ಮೈಸೂರು ನಗರದ ಶ್ರೀ ಅಹಮದ್ ಜಿ. ಮುನೀರ್‌ರವರಿಗೆ ಅಮೆರಿಕದ ಚಿಕಾಗೊ ವಿಶ್ವವಿದ್ಯಾಲಯದ ಭೂಗೋಳ ಶಾಸ್ತ್ರಕ್ಕೆ ಸಂಬಂಧಪಟ್ಟ ಡಾಕ್ಟರ್ ಆಫ್ ಫಿಲಾಸಫಿ ಎಂಬ ಪ್ರಶಸ್ತಿಯು ದೊರೆತಿದೆ. ಅವರು ಮೈಸೂರಿನ ಹಕೀಂ ಮಹಮದ್ ನೌಷ್‌ರವರ ಮಕ್ಕಳು. ಎಂ ಎ ಮತ್ತು ಎಲ್‌ಎಲ್ ಬಿ ಗಳನ್ನು ಭಾರತದಲ್ಲೂ ಮತ್ತು ಎಂ. ಎಸ್. ಡಿಗ್ರಿಯನ್ನು ಚಿಕಾಗೋವಿನಲ್ಲೂ ಈಗಾಗಲೇ ಪಡೆದಿರುವರು

ತೆಂಗಿನಕಾಯಿ ವರ್ತಕರ ಸಂಘ

ನಗರದ ತೆಂಗಿನಕಾಯಿ ವರ್ತಕರ ಸಂಘದ ಆಡಳಿತ ಮಂಡಲಿಯವರು ಸಂಘದ ವ್ಯವಹಾರಗಳನ್ನು ಕ್ರಮಬದ್ಧವಾಗಿ ನಡೆಸುತ್ತಿಲ್ಲ. ಕ್ರಮವಾದ ಲೆಕ್ಕಪತ್ರಗಳನ್ನು ಇಟ್ಟಂತೆ ಕಾಣಬರುತ್ತಿಲ್ಲ. ಆದಾಯ ವೆಚ್ಚಗಳನ್ನು ಸಂಘದ ಕಾರ್ಯಕಾರಿ ಸಮಿತಿಗೆ ತಿಳಿಸುತ್ತಿಲ್ಲ. ಚಂದಾ ವಸೂಲಿ ಕ್ರಮದಲ್ಲಿ ೨ ಬಗೆಯಿದ್ದು ಲೋಪದೋಷಗಳಿಗೆ ಕಾರಣವಾಗಿದೆ. ಹಲವು ಸದಸ್ಯರನ್ನು ವಿನಾಕಾರಣ ಸಮಿತಿಯಿಂದ ವಜಾ ಮಾಡಲಾಗಿದೆ. ಈ ಲೋಪದೋಷಗಳನ್ನು ಜಾಯಿಂಟ್ ಸ್ಟಾಕ್ ಕಂಪೆನಿಯ ರಿಜಿಸ್ಟ್ರಾರ್‌ರವರ ಗಮನಕ್ಕೆ ತರಲಾಗಿದೆ ಎಂಬುದಾಗಿ ಸಂಘದ ಸದಸ್ಯರೊಬ್ಬರು ಪತ್ರ ಬರೆದು ತಿಳಿಸಿದ್ದಾರೆ

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಕಡಲೆಕಾಯಿ	[illegible]	[illegible]
ಹಲಸಂದೆ	[illegible]	[illegible]
ಉಪ್ಪು	[illegible]	[illegible]
ಜೀರಿಗೆ	[illegible]	
ಹುಣಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ ೧೦೦೦	[illegible]	[illegible]

ಹಾಸಿಗೆ - ದಿಂಬು

ಮಿತವ್ಯಯದಲ್ಲಿ ಹತ್ತಿ ಬಿಡಿಸಿ ತಯಾರು ಮಾಡುತ್ತೇವೆ

ಬಾಹುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಒಲಂಪಿಯಾ ಟಾಕೀಸ್

15—6—56 ರಿಂದ ಜನಪ್ರಿಯ 6ನೇ ವಾರ

ಭಾಯ್ ಭಾಯ್

ಪಾತ್ರ -ಅಶೋಕ್ ಕುಮಾರ್, ಕಿಶೋರ್ ಕುಮಾರ್, ರೂಪ್ ಕುಮಾರ್, ಓಂ ಪ್ರಕಾಶ್, ನಿಮ್ಮಿ ಮತ್ತು ನಿರೂಪರಾಯ್

ಬೇಡಿಕೆಗಳ ಒತ್ತಾಯಕ್ಕೆ ಬೆತ್ತಲೆಯಾಗಿ ಮೆರವಣಿಗೆ

ಮಲಬಾರಿನಲ್ಲಿ ನಿರ್ಮಿಸಲಾಗುತ್ತಿರುವ ಲಂಪುಳ ಅಣೆಕಟ್ಟು ಯೋಜನೆಗಾಗಿ ವಶಪಡಿಸಿಕೊಳ್ಳಲಾದ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದ ೩೦೦ ಸಂಸಾರಗಳಿಗೆ ಜಮೀನು ಮತ್ತು ಮನೆಗಳಿಲ್ಲದೆ ತೊಂದರೆಯಾಗಿರುವುದರಿಂದ ಅವರ ಬೇಡಿಕೆಗಳನ್ನು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಈಡೇರಿಸುವಂತೆ ಮಾಡಲು ಆದಿವಾಸಿಗಳು ೧೫ ದಿನಗಳೊಳಗೆ ಪಾಲಕ್ಕಾಡಿನ ಮುಖ್ಯ ಬೀದಿಗಳಲ್ಲಿ ಬೆತ್ತಲೆಯಾಗಿ ಮೆರವಣಿಗೆ ನಡೆಸಿ, ಸಬ್ ಡಿವಿಜನ್ ಅಧಿಕಾರಿಗಳ ಮುಂದೆ ಪ್ರದರ್ಶನ ನಡೆಸಲಿರುವರೆಂದೂ ಗೊತ್ತಾಗಿದೆ

ನಂಜನಗೂಡು ಹಳ್ಳಿಗಳಲ್ಲಿ ಅಭಾವ

ನಂಜನಗೂಡು ತಾಲ್ಲೂಕು ಕಸಬಾ ಹೋಬಳಿ ಕೂಗಲೂರು, ಸಿದ್ದಯ್ಯನಹುಂಡಿ, ಕೃಷ್ಣಾಪುರ, ಎಲಚಗೆರೆ, ಸೂರಹಳ್ಳಿ, ಕಮಲಿನಗರ ನವಲೂರು, ಹೊಸಪುರ ಮುಂತಾದ ಸ್ಥಳಗಳಲ್ಲಿ ಮಳೆಯಿಲ್ಲದೆ ಪೈರು ನಾಶವಾಗಿದೆ. ಜನರು ಆಹಾರವಿಲ್ಲದೆ ಪರಿತಪಿಸುತ್ತಿದ್ದಾರೆ. ಸರ್ಕಾರದವರು ಜನರಿಗೆ ಧಾನ್ಯವನ್ನೂ, ದನಕರುಗಳಿಗೆ ಮೇವನ್ನೂ ಒದಗಿಸುವುದಲ್ಲದೆ ಕೆರೆ ಕಾಮಗಾರಿಗಳನ್ನು ಏರ್ಪಡಿಸಬೇಕು-ಎಂಬುದಾಗಿ ಸಿದ್ದಯ್ಯನಹುಂಡಿಯ ಶ್ರೀ ಹೆಚ್ ವಿ ಕುಮಾರಾಧ್ಯರು ತಿಳಿಸಿರುತ್ತಾರೆ

○ ಕೃಷ್ಣರಾಜನಗರದಲ್ಲಿರುವ ಮುನ್ಸಿಫ್ ಕೋರ್ಟನ್ನು ಸರ್ಕಾರದವರು ರದ್ದುಗೊಳಿಸುತ್ತಾರೆ

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತವಾಗಿರುವ

ನವರತ್ನ — ಕಲ್ಪ

ಆವಿಷ್ಕಾರವನ್ನು ಕಂಡುಹಿಡಿದಿರುವ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17 ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು ಫೋನ್ ನಂ. 59

— ಭೇಟಿಯ ಕಾಲ:—

ಬೆಳಿಗ್ಗೆ 7-30 ರಿಂದ 12 30 ಮತ್ತು ಮಧ್ಯಾಹ್ನ 4 ರಿಂದ 7 30

ಇತರರು ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು ವಿಮಾನದಲ್ಲಿ ಸಂಚರಿಸುವರು

ನವರತ್ನ — ಕಲ್ಪ

ಉಪಯೋಗಿಸಿರಿ

ಇದು ವೀರ್ಯ, ಕೆಮ್ಮು, ಮುಟ್ಟು, ಹಳೆ, ದ ಗೋನೋರಿಯ, ಕ್ಷಯ, ಪಕ್ಷ ರೋಗಿಗಳ, ಮುಟ್ಟಿನ ರೀತಿ ಮುಂತಾದ 9 ಅಮೂಲ್ಯ ಪದಕಗಳ ಯೋಗ, ಇದರಿಂದ ನರಗಳ ದೌರ್ಬಲ್ಯ. ಅದರ ಸಂಬಂಧದ ವ್ಯಾಧಿಗಳು. ದೀರ್ಘ ಕೆಮ್ಮು ವ್ಯಾಧಿ ಹಾಗು ಬಹುಮೂತ್ರ, ಅಶಕ್ತತೆ ಇನ್ನು ಇತರ ಎಲ್ಲಾ ಸಾಮಾನ್ಯ ಹಾಗೂ ಗುಪ್ತ ವ್ಯಾಧಿಗಳೂ ಸಂಪೂರ್ಣವಾಗಿ ಹೋಗುವುವು. ಅತ್ಯುತ್ತಮ ಆರೋಗ್ಯ ಕೊಡುವ ಔಷಧಿ ಇದೊಂದೇ

NAVRATNA KALPA PHARMACY,

Jullundur City (India)

Grams NAVRATNA

ಅಭಿನಯ ಪ್ರಾರಂಭ : 17—6—56 ನೇ ಭಾನುವಾರದಿ

ಪ್ರತಿದಿನ ಸಂಜೆ 6—30 ಘಂಟೆಗೆ

ಶ್ರೀ ಶಾರದಾ ಸಂಗೀತ ನಾಟಕ ಮಂಡಲಿ,

ಗೋಕಾಕ್

ಇವರು ಮೈಸೂರು ಟೌನ್ ಹಾಲಿನಲ್ಲಿ, ಅಲ್ಲಿಂದ ಜನರ ಮೆಚ್ಚಿಗೆಗೆ ಪಾತ್ರವಾ

★ ಮಾ ನ ವ ತಿ ★

ಎಂಬ ಸಾಮಾಜಿಕ ನಾಟಕವನ್ನು, ಹಲವು ಚಿತ್ರದಲ್ಲಿ ಪಾತ್ರವಹಿಸಿರುವ ನಟನಟಿಯರಿಂದ ಅಭಿನಯಿಸುವರು ಮಹಾಜನರು ಪ್ರೋತ್ಸಾಹಿಸಬೇಕಾಗಿ ವಿನಂತಿ.

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ

ಹನ್ನೆರಡು ತಿಂಗಳಿಗೆ ಹತ್ತು ರೂ.
ಆರು ತಿಂಗಳಿಗೆ ಐದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೪] SADHVI : SATURDAY 16—6—1956 ಮೈಸೂರು : ಶನಿವಾರ ೧೬—೬—೧೯೫೬ [ಸಂಚಿಕೆ : ೧೬೮

ವಿಶ್ವ ಕೋರ್ಟಿನಲ್ಲಿ ಭಾರತದ ಮೇಲೆ ಪೋರ್ಚುಗಲ್ ದೂರು

ಪೂರ್ವ ಸಿಂಹಳದಲ್ಲಿ ಪ್ರದರ್ಶಕರ ಮೇಲೆ ಗುಂಡಿನೇಟು

ಪೂರ್ವ ಸಿಂಹಳದ ಗಾಲ್‌ಓಯಾ ಕಣಿವೆಯ ... ಬಂಡರ್ಗೆ ಎಂಬಲ್ಲಿ ತಡಬಂದಿಗೆ ಬರದ ಪ್ರದರ್ಶನಕಾರರ ಮೇಲೆ ಪೋಲೀಸರು ಗೋಲಿ ... ಹಾರಿಸಲಾಗಿ ಇಬ್ಬರು ಮೃತಪಟ್ಟರೆಂದು ಗೊತ್ತಾಗಿದೆ. ಸಿಂಹಳೀಯನ್ನು ಅಲ್ಲಿನ ಏಕ ... ಭಾಷೆಯಾಗಿ ಮಾಡುವ ಕೆಲಸವು ಅಷ್ಟು ... ಕ್ಕೆ ಬರುತ್ತಿರುವುದರ ಬಗ್ಗೆ ಆ ಪ್ರದೇಶ ಜನರಿಗೆ ಉದ್ರೇಕವಾಗಿ ಅವರು ಸರ್ಕಾರಿ ... ದ ಮುಂದೆ ಪ್ರದರ್ಶನ ನಡೆಸಿದಾಗ ಗುಂಡೇಟು ಆಯಿತು. ಹಲವು ಬೆಂಕಿ ಮತ್ತು ಹೊ... ಪ್ರಕರಣಗಳೂ ಆದುವೆಂದು ಹೇಳಲಾಗಿ ... ಕೊಲಂಬೊ ನಗರದಲ್ಲಿ ತೀವ್ರವಾದ ಭದ್ರ... ಕ್ರಮಗಳನ್ನು ಕೈಗೊಳ್ಳಲಾಗಿದೆ

ಜುಲೈ ೧೫ರಿಂದ ಉಪ್ರಯಾಣದಲ್ಲಿ ರಿಯಾಯಿತಿ

ಬರುವ ತಿಂಗಳು ೧೫ರಿಂದ ಸೆಪ್ಟೆಂಬರ್ ೧೫ರ ... ಗೆ ಭಾರತದ ರೈಲ್ವೆಯು ಮೂರು ತರಗತಿಗಳ ... ದರವಂತೆ ಹೋಗಿಬರುವ ರಿಯಾಯಿತಿ ... ದ ಟಿಕೆಟ್ಟುಗಳನ್ನು ಕೊಡಲಿರುವುದು. ಕನಿಷ್ಠವಾಗಿ ೩೦೦ ಮೈಲಿ ದೂರದವರೆಗಾ... ಹೋಗಬೇಕು ವಾಪಸು ಬರುವಾಗ ಮ... ದಲ್ಲಿ ಇಳಿಯಲು ಅವಕಾಶವಿಲ್ಲ. ಆದರೆ ಹೋ... ಗ ಇಳಿಯುವುದು. ವಾಪಸು ಬರುವ ಸ್ಥಳದ ... ಕಛೇರಿಗೆ ರಿಟರ್ನ್ ಟಿಕೆಟ್ಟಿನ ಅರ್ಧ ಭಾ... ವನ್ನು ತೋರಿಸಿ ಅದಕ್ಕೆ ಹಿಂದಿರುಗುವ ತಾರೀಕ... ಹಾಕಿಸಬೇಕು. ಇಲ್ಲವಾದರೆ ಅಂತಹವರ ... ಟಿಕೆಟ್ಟಿಲ್ಲದ ಪ್ರಯಾಣಿಕರೆಂದು ಪರಿಗಣಿಸ... ಲಾಗುವುದು ೩೦೧ ರಿಂದ ೫೦೦ ಮೈಲಿವರೆಗೆ ... ಬರುವ ಪ್ರಯಾಣದ ಟಿಕೆಟ್ಟು ೩೦ ದಿ... ನಗಳು, ೫೦೧ ರಿಂದ ೭೫೦ ಕ್ಕೆ ೪೫ ದಿನಗಳು ... ೭೫೧ ರಿಂದ ಹೆಚ್ಚು ದೂರಕ್ಕೆ ೬೦ ದಿನಗ... ಸಿಗುವುದು ಸೆಪ್ಟೆಂಬರಿನ ಹೊತ್ತಿಗೆ ಪ್ರ... ಯಾಣಗಳು ಮುಗಿದಿರಬೇಕು

ನಗರ ಮೇಯರರ ಸದಸ್ಯತನ ರದ್ದು

...ದೇ ಸಮನಾಗಿ ಮೂರು ತಿಂಗಳುಗಳ ಅ... ವೇಶನಗಳಿಗೆ ಬರದೆ ಇದ್ದುದರಿಂದ ಬೆಂಗಳೂರಿನ ನಗರ ಮೇಯರ್ ಶ್ರೀ ಹೆಚ್. ಎಸ್. ಸೀ... ಮತ್ತು ನಗರ ಉಪ ಮೇಯರ್ ಶ್ರೀ ... ಓಬಯ್ಯ ದೇಸಾಯಿಯವರು ತಮ್ಮ ಸ... ಸ್ಥಾನವನ್ನು ಕಳೆದುಕೊಂಡಿರುತ್ತಾರೆ ಬೆಂಗ... ಳೂರು ಪೌರಸಭೆಯ ಇತಿಹಾಸದಲ್ಲಿ ಹೀಗೆ ಸದ... ಸ್ಯತ್ವ ರದ್ದಾಗಿರುವುದು ಇದೇ ಮೊದಲು.

ಮಿತ್ರ ವೃಂದದ ಆರಂಭೋತ್ಸವ

...ರಾಜಧಾನಿಯ ಸರಸ್ವತಿಪುರದಲ್ಲಿರುವ ಅಖಿಲ ... ಭಾರತ ಮಾಧ್ವ ಮಹಾ ಮಂಡಲಿಯ ವಿದ್ಯಾ ... ನಿಲಯದ "ಮಿತ್ರ ವೃಂದ"ದ ಆರಂಭೋ... ತ್ಸವವನ್ನು ನಾಳೆ ಸಂಜೆ ೫ ಘಂಟೆಗೆ ಡಾ|| ಎಂ ... ಕೃಷ್ಣರಾಯರು ನೆರವೇರಿಸುವರು ನಿವೃತ್ತ ... ನ್ಯಾಯಾಧೀಶರಾದ ಶ್ರೀ ಜಿ. ಕೃಷ್ಣಮೂರ್ತಿಯ... ವರ ಅಧ್ಯಕ್ಷತೆ ವಹಿಸುವರು ಸರ್ವರಿಗೂ ಸ್ವಾ... ಗತವಿದೆ

ಚಿನ್ನದ ಗಣಿ ರಾಷ್ಟ್ರೀಕರಣದ ಬಗ್ಗೆ ಬಿಕ್ಕಟ್ಟು ?

ಬೆಂಗಳೂರು ೧೭

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಬಗ್ಗೆ ಭಾರತ ಮತ್ತು ಮೈಸೂರು ಸರ್ಕಾರಗಳ ನಿಲುವಿನಲ್ಲಿ ಭಿನ್ನತೆಯುಂಟಾಗಿ ಬಿಕ್ಕಟ್ಟೊದಗಿರುವುದೆಂದು ವರದಿಯಾಗಿದೆ ಮೈಸೂರು ಸರ್ಕಾರದವರು ರಾಷ್ಟ್ರೀಕರಣದ ಪ್ರಶ್ನೆಯನ್ನು ತಮ್ಮ ಪ್ರತಿಷ್ಠೆಯ ದೃಷ್ಟಿಯಿಂದ ನೋಡುತ್ತಿರುವರೆಂದೂ ರಾಷ್ಟ್ರೀಕರಣದ ತತ್ವಕ್ಕೆ ಕೇಂದ್ರದವರು ಒಪ್ಪಿರುವರಾದರೂ ಪರಿಹಾರದ ಪ್ರಶ್ನೆಯಲ್ಲಿ ಕೇಂದ್ರದವರಿಂದ ಅಡಚಣೆಯಾಗಿರುವುದೆಂದೂ, ಪರಿಹಾರ ದ್ರವ್ಯದ ಬಗ್ಗೆ ಅವರು ಇನ್ನೂ ಒಪ್ಪಿಲ್ಲವೆಂದೂ ಹೇಳಲಾಗಿದೆ ಈ ಪ್ರಕರಣದಲ್ಲಿ ವಿದೇಶಿ ಬಂಡವಾಳ ಹಾಕುವುದಕ್ಕೆ ಪ್ರತಿಕೂಲವಾಗದ ರೀತಿಯ ರಾಷ್ಟ್ರೀಕರಣವನ್ನು ಅವರು ಅನುಮೋದಿಸುವರೆಂದು ಹೇಳಲಾಗಿದೆ

ಕೃಷ್ಣನ ಮೋಟಾರು ಬೈಸಿಕಲ್ ಪೋಲೀಸರ ವಶಕ್ಕೆ

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆಗಳ ಸಂಬಂಧವಾಗಿ ಬಂಧಿತನಾಗಿರುವ ಕೃಷ್ಣ ಎಂಬುವನ ಮೋಟಾರು ಬೈಸಿಕಲ್ಲನ್ನು ಪೋಲೀಸರು ತಮ್ಮ ವಶಕ್ಕೆ ತೆಗೆದುಕೊಂಡಿರುತ್ತಾರೆ ಬಂಧನದಲ್ಲಿರುವವರ ರಿಮ್ಯಾಂಡನ್ನು ಇನ್ನೂ ಒಂದು ವಾರ ಹೆಚ್ಚಿಸಲಾಗುವುದೆಂದೂ ಹೇಳಲಾಗಿದೆ ಚಾರ್ಜ್‌ಷೀಟ್ ಹಾಕಲು ಈ ತಿಂಗಳು ೩೦ರ ವರೆಗೂ ಕಾಲಾವಕಾಶವಿರುವುದು ಬೇಲೂರರ ಹೆಣ್ಣು ಮಕ್ಕಳಿಬ್ಬರು ನೆನ್ನೆ ಬೆಂಗಳೂರಿಗೆ ಹೋಗಿ ಕೊಲ್ಲಲ್ಪಟ್ಟ ತಮ್ಮ ತಾಯಿ ವೇಂಗಡಮ್ಮನವರ ಹಲವು ಆಭರಣಗಳನ್ನು ಗುರುತಿಸಿದರೆಂದು ಹೇಳಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೦ ರಿಂದ. ೭ ೧೫ ಉದ್ಯಾನ ಸಾಹಿತ್ಯ ವಚನ-ಭಾಷಣ ೭ ೩೦ ರಿಂದ ... ೮-೧೫ ಕನ್ನಡ ನಾಟಕ ೮ ೪೫ ಚಿತ್ರ ಗೀತೆ. ೯ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ೯.೩೦ ... ಮಕ್ಕಳ ಕಾರ್ಯಕ್ರಮ ... ಸಂಗೀತ : ರಾಷ್ಟ್ರೀಯ ಸಂಗೀತ ಕಾರ್ಯಕ್ರಮ-ದೆಹಲಿ ... ಮಧ್ಯಾಹ್ನ ... ೧-೧೫ ... ವಾದ್ಯ ವೃಂದ. ... ಮಕ್ಕಳ ಗೀತೆಗಳು. ... ಸಂಜೆ ... ಸಂಗೀತ. ... ಮತ್ತು ... ರಂಗಪ್ಪ ಕೊಳಲು ... ಮತ್ತು ... ೭ ೩೦ ... ವಾರ್ತೆ ... ಮತ್ತು ... ಸಂಗೀತ ೮-೩೦ ... ಕೃಷ್ಣಪ್ಪನವರ ಕೃತಿಗಳು ೯-೧೫ ಕನ್ನಡ ಗೀತೆಗಳು

ಬಲೂಚಿಸ್ತಾನದ ನಾಯಕನ ಬಂಧನ

ಬಲೂಚಿಸ್ತಾನದ ಗಾಂಧಿಯೆಂದು ಹೆಸರುವಾಸಿಯಾಗಿರುವ ಖಾನ್ ಅಬ್ದುಸ್ ಸಮದ್‌ಖಾನರನ್ನು ಕ್ವೆಟ್ಟಾದಲ್ಲಿ ನೆನ್ನೆ ಬೆಳಿಗ್ಗೆ ದಸ್ತಗಿರಿ ಮಾಡಲ್ಪಟ್ಟಿತು. ಪಾಕಿಸ್ತಾನದ ಪ್ರಜೆಗಳಲ್ಲಿ ಭೇದ ಮತ್ತು ದ್ವೇಷವುಂಟುಮಾಡುವುದರಲ್ಲಿ ಅವರು ತೊಡಗಿರುವರೆಂಬುದೇ ದಸ್ತಗಿರಿಗೆ ಕಾರಣ ಅವರು ಫಕ್ತೂನ್ ಸಹೋದರ ಸಂಸ್ಥೆಯ ಸಂಸ್ಥಾಪಕರು

ನೂತನ ಕನ್ನಡ ಸಂಸ್ಥಾನದಲ್ಲಿ ಸಂಬಳದ ಮಟ್ಟ

ಅಂತರ ಸಂಸ್ಥಾನ ಸಮಿತಿಯಲ್ಲಿ ಪರಿಶೀಲನೆ

ಬೆಂಗಳೂರು ೧೭

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನೆನ್ನೆ ಸೇರಿದ ಅಂತರ ಸಂಸ್ಥಾನ ಸಮಿತಿಯು ಕನ್ನಡ ಪ್ರದೇಶಗಳ ಏಕೀಕರಣಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಪರಿಶೀಲಿಸಲು ನಾಲ್ಕು ಶ್ರೇಷ್ಠ ಕಾರ್ಯದರ್ಶಿಗಳು ಅಥವಾ ಅವರಿಂದ ನೇಮಿಸಲ್ಪಟ್ಟ ಅಧಿಕಾರಿಗಳ ಉಪ ಸಮಿತಿಯನ್ನು ರಚಿಸಲು ನಿರ್ಧರಿಸಿತು. ಅಖಿಲ ಭಾರತ ಸರ್ವೀಸ್ ಕೇಡರ್, ಹೊರಗಿನಿಂದ ಬರುವ ಅಧಿಕಾರಿಗಳು ಮತ್ತು ಸಿಬ್ಬಂದಿಯವರಿಗೆ ವಾಸಸ್ಥಳ, ವಿವಿಧ ಕಾನೂನು ನಿಬಂಧನೆ ನಿಯಮಗಳ ಹೊಂದಾಣಿಕೆ, ದ್ವಿತೀಯ ಯೋಜನೆ ಮತ್ತು ಆಸ್ತಿ ಮತ್ತು ಜವಾಬ್ದಾರಿಗಳ ವಿಷಯವನ್ನು ಪರಿಶೀಲಿಸಲಾಯಿತು ಹೊಸ ಪ್ರಾಂತದಲ್ಲಿ ಸಂಬಳದ ಮಟ್ಟದ ವಿಷಯವನ್ನೂ ಸಹ ಚರ್ಚಿಸಲಾಯಿತು.

ವಿಶ್ವ ನ್ಯಾಯಾಲಯದಲ್ಲಿ ಭಾರತದ ವಿರುದ್ಧ ದೂರು

ಹೇಗ್ ನಗರದಲ್ಲಿರುವ ಅಂತರ ರಾಷ್ಟ್ರೀಯ ನ್ಯಾಯಾಲಯದಲ್ಲಿ ನೆನ್ನೆ ಪೋರ್ಚುಗಲ್ಲು ಭಾರತದ ಪ್ರದೇಶಗಳ ಮೂಲಕ ದಾದ್ರಾ, ನಗರಹವೇಲಿ ಮುಂತಾದ ತನ್ನ ಒಳನಾಡಿನ ವಸಾಹತುಗಳಿಗೆ ಹೋಗಲು ಅವಕಾಶಬೇಕೆಂದು ಅರ್ಜಿ ಸಲ್ಲಿಸಿತು ನೆನ್ನೆ ದಿನ ಈ ಬಗ್ಗೆ ಮನವಿ ಸಲ್ಲಿಸುವ ದಿನವೆಂದು ಕೋರ್ಟು ಮೊದಲೇ ತಿಳಿಸಿದ್ದಿತು ೧೮೫೪ ರಿಂದಲೂ ಪೋರ್ಚುಗಲ್ಲು ಈ ಹಕ್ಕನ್ನು ಪಡೆಯುತ್ತಿತ್ತೆಂದೂ, ಅದನ್ನು ಭಾರತವು ಎರಡು ವರ್ಷಗಳ ಹಿಂದೆ ಮುಕ್ತಾಯ ಮಾಡಿತೆಂದೂ, ಭಾರತದಿಂದ ಸಶಸ್ತ್ರರಾಗಿ ದಾದ್ರಾ, ಮುಂತಾದ ಪ್ರದೇಶಗಳಿಗೆ ನುಗ್ಗಿದ ಜನರನ್ನು ತಡೆಯಲು ಪೋರ್ಚುಗೀಸರಿಗೆ ಸಾಧ್ಯವಾಗಲಿಲ್ಲವೆಂದೂ ಸೂಚಿಸಲಾಗಿದೆ ಭಾರತವು ತನ್ನ ನಿಲುವಿನ ಬಗ್ಗೆ ಮನವಿಯನ್ನು ಈ ವರ್ಷ ಡಿಸೆಂಬರ್ ೧೫ರಂದು ಸಲ್ಲಿಸಬೇಕೆಂದು ಸೂಚಿಸಲಾಗಿದೆ

ಸಿಂಹಳೀಯೇ ಸಿಲೋನಿನ ಏಕ ಭಾಷೆ

ಶಾಸನ ಸಭೆಯಲ್ಲಿ ಬಹುಮತದಿಂದ ಅಂಗೀಕಾರ

ಸಿಂಹಳೀಯೇ ಸಿಲೋನಿನ ದೇಶ ಭಾಷೆಯಾಗಬೇಕೆಂದು ಸಾರುವ ಸರ್ಕಾರಿ ಮಸೂದೆಯನ್ನು ನೆನ್ನೆ ಅಲ್ಲಿನ ಪ್ರತಿನಿಧಿ ಸಭೆಯು ೧೪ ಗಂಟೆಗಳ ಚರ್ಚೆಯನಂತರ ಅಂಗೀಕರಿಸಿತು ೬೬ ಮಂದಿ ಪರವಾಗಿಯೂ, ೨೯ ಸದಸ್ಯರು ವಿರೋಧವಾಗಿಯೂ ಓಟು ಮಾಡಿದರು ಮೂರನೇ ಎರಡು ಭಾಗದಷ್ಟು ಮತಗಳು ಬರಲಿಲ್ಲ ಅದು ಅಲ್ಲಿನ ಸೆನೆಟ್ ಸಭೆಯ ಪರಿಶೀಲನೆಗೆ ಹೋಗುವುದು ೧೯೬೦ ನೇ ಡಿಸೆಂಬರ್ ೩೦ ನೇ ತಾರೀಕಿನೊಳಗೆ ಸಿಂಹಳೀಯೇ ಅಲ್ಲಿನ ಏಕ ಮಾತ್ರ ಸರ್ಕಾರಿ ಭಾಷೆಯಾಗಬೇಕೆಂದು ಮಸೂದೆಯು ಸೂಚಿಸಿದೆ

ಬೊಂಬಾಯಿ ಬಗ್ಗೆ ಮಹಾರಾಷ್ಟ್ರ ಕಾಂಗ್ರೆಸ್ಸಿನವರ ಭಿನ್ನಾಭಿಪ್ರಾಯ

ಬೊಂಬಾಯಿ ನಗರವನ್ನು ಕೇಂದ್ರದ ಆಡಳಿತದ ಬಗ್ಗೆ ಮಹಾರಾಷ್ಟ್ರ ಕಾಂಗ್ರೆಸ್ ಮಂಡಲದಲ್ಲಿ ತೀವ್ರ ಭಿನ್ನಾಭಿಪ್ರಾಯವುಂಟಾಗಿರುವುದೆಂದು ವರದಿಯಾಗಿದೆ ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿರುವ ಒಟ್ಟು ೧೧೦ ಜಿಲ್ಲಾ ಪ್ರತಿನಿಧಿಗಳ ಪೈಕಿ ೬ ಜಿಲ್ಲೆಯವರು ಕೇಂದ್ರ ಸರ್ಕಾರದ ತೀರ್ಮಾನವನ್ನು ತಿರಸ್ಕರಿಸಬೇಕೆಂದು ಹೇಳುವುದಾಗಿ ವರದಿಯಾಗಿದೆ ಆಡಳಿತ ಸಂಸ್ಥೆಗಳಲ್ಲಿರುವ ಮಹಾರಾಷ್ಟ್ರ ಕಾಂಗ್ರೆಸ್ ಸದಸ್ಯರೂ, ಮಂತ್ರಿಗಳೂ ತಮ್ಮ ಪದವಿಗಳಿಗೆ ರಾಜೀನಾಮೆ ಕೊಡಬೇಕೆಂದೂ, ಅಕ್ಟೋಬರಿನಲ್ಲಿ ಸ್ಥಾಪಿತವಾಗುವ ನೂತನ ಮಹಾರಾಷ್ಟ್ರ ಸಂಸ್ಥಾನದ ಮಂತ್ರಿಮಂಡಲದ ರಚನೆಯ ಜವಾಬ್ದಾರಿಯನ್ನು ಕಾಂಗ್ರೆಸ್ಸಿನವರು ವಹಿಸಿಕೊಳ್ಳಬಾರದೆಂದೂ ಅವರುಗಳು ಹೇಳುತ್ತಿರುವರೆಂದು ಗೊತ್ತಾಗಿದೆ

ಆದರೆ ಉತ್ತರ ಸತಾರ, ಕೊಲ್ಹಾಪುರ, ಶೋಲಾಪುರ ಮತ್ತು ಪೂರ್ವ ಖಾನ್‌ದೇಶದ ಪ್ರತಿನಿಧಿಗಳು ತೀವ್ರ ಕ್ರಮ ಕೈಗೊಳ್ಳುವುದನ್ನು ಒಪ್ಪಿಲ್ಲ ವಿಧೇಯರಾಗಿ ಕಾಂಗ್ರೆಸ್ಸಿನ ತೀರ್ಮಾನಗಳನ್ನು ಒಪ್ಪಿ ಅದರಂತೆ ನಡೆಯುವುದು ಒಳ್ಳೆಯದೆಂದು ಅವರು ಹೇಳುತ್ತಿದ್ದಾರೆ. ೧೯ ರಂದು ಮಹಾರಾಷ್ಟ್ರ ಪ್ರದೇಶ ಸಮಿತಿ ಸಭೆ ಸೇರಲಿದೆ.

ಸಂಸ್ಕೃತ ವಿದ್ಯಾಭ್ಯಾಸದ ಸಮಿತಿಯ ಪುನಸ್ಸ್ರಚನೆ

ಸರ್ಕಾರದವರು ಬರುವ ತಿಂಗಳು ೧೫ರಿಂದ ೩ ವರ್ಷಗಳ ಅವಧಿಗಾಗಿ ಸಂಸ್ಕೃತ ವಿದ್ಯಾಭ್ಯಾಸ ಮತ್ತು ಪರೀಕ್ಷಾ ಸಮಿತಿಯನ್ನು ಪುನಸ್ಸ್ರಚಿಸಿರುತ್ತಾರೆ ವಿದ್ಯಾ ಇಲಾಖೆಯ ಡೈರೆಕ್ಟರು ಅದರ ಅಧ್ಯಕ್ಷರು ಮತ್ತು ಮಾಧ್ಯಮಿಕ ವಿದ್ಯಾಭ್ಯಾಸದ ಸಮಿತಿಯ ಕಾರ್ಯದರ್ಶಿಯವರು ಕಾರ್ಯದರ್ಶಿಯಾಗಿರುವರು ಸೀನಿಯರ್ ಡಿ. ಡಿ. ಪಿ. ಐ. ಯವರು ಸಮಿತಿಯ ಉಪಾಧ್ಯಕ್ಷರು. ಬೆಂಗಳೂರಿನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರು ಮತ್ತು ಅಲ್ಲಿನ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರು, ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರು, ಮಹಾರಾಜಾ ಕಾಲೇಜಿನ ಸಂಸ್ಕೃತ ಪ್ರೊಫೆಸರು, ಶ್ರೀ ಶಿವಕುಮಾರಸ್ವಾಮಿಗಳು, ಪ್ರೊ|| ಎಂ. ಎಸ್. ರಂಗಾಚಾರ್, ಎಂ ಪಿ ಎಲ್. ಶಾಸ್ತ್ರಿ, ಪಂಡಿತ ರಕ್ಷ ಸುಬ್ರಹ್ಮಣ್ಯಶಾಸ್ತ್ರಿ, ಡಾ|| ಮ|| ವಿ|| ನ್ಯಾಯತೀರ್ಥ ಎ ಸುಬ್ರಹ್ಮಣ್ಯಶಾಸ್ತ್ರಿ, ಬಿ. ಎಸ್. ವಿಜಯದೇವ, ಡಾ|| ಎಂ.ಎ. ಗೋವಿಂದಸ್ವಾಮಿ, ಪ್ರೊ|| ಆರ್. ನಾರಾಯಣಸ್ವಾಮಿ ದೀಕ್ಷಿತ್, ದೇವುಡು ನರಸಿಂಹಶಾಸ್ತ್ರಿ, ವಿ|| ಟಿ. ವೆಂಕಟಾಚಲ ಗುಪ್ತ, ವಿ|| ಹಾನಗಲ್ ಚಂದ್ರಶೇಖರಭಟ್ಟರು, ಮೇಲುಕೋಟೆ ಸಂಸ್ಕೃತ ಕಾಲೇಜು ಪ್ರಿನ್ಸಿಪಾಲರು ಮತ್ತು ಪ್ರೊ|| ಎಸ್. ರಾಮಚಂದ್ರರಾಯರು ಸದಸ್ಯರಾಗಿರುವರು

○ ಬೆಂಗಳೂರಿನ ೨ನೇ ಮುನ್ಸೀಫರಾದ ಶ್ರೀ ಎಂ ಎಲ್. ರಾಮಸ್ವಾಮಿಯವರನ್ನು ಹೊಳೆನರಸೀಪುರಕ್ಕೂ ಅಲ್ಲಿರುವ ಶ್ರೀ ಬಿ. ಗೋಪಾಲಯ್ಯನವರನ್ನು ಬೆಂಗಳೂರಿಗೂ ವರ್ಗಾಯಿಸಲಾಗಿದೆ.

ಸೌಂದರ್ಯ ಸ್ಪರ್ಧೆಗೆ ಪಾಕಿಸ್ತಾನದಲ್ಲಿ ವಿರೋಧ

[illegible]

ಕಾಲೇಜುಗಳಲ್ಲಿ ಮಂದಿರ ಮತ್ತು ಇತರ ಸೌಲಭ್ಯಕ್ಕೆ ಕೇಂದ್ರದ ನೆರವು

[illegible]

ನೇರದಲ್ಲಿ ರೇಷನಿಂಗಿನಷ್ಟು ಹೆಚ್ಚು ಆಹಾರ ಬೆಳೆ

[illegible]

ಮುಖ್ಯಮಂತ್ರಿಗಳಿಗಾಗಿ ಅಂಗರಕ್ಷಣಾ ಗೃಹಗಳು

[illegible]

ವಿವಾಹ ಮಹೋತ್ಸವಗಳು

೨೧ನೇ ಅಗ್ರಹಾರದ ಕೊತ್ವಾಲರಾಮಯ್ಯನವರ ಬೀದಿಯಲ್ಲಿರುವ ಶ್ರೀ ಎಂ ಚನ್ನಪ್ಪರಾಯರು ತಮ್ಮ ಮಗಳು ಸೌ|| ಲೀಲಾವತಿಯನ್ನು ಚಿಕ್ಕಮಗಳೂರಿನ ವಕೀಲರಾದ ಶ್ರೀ ನಾಗರಾಜರಾಯರ ಮಕ್ಕಳೂ, ಬೊಂಬಾಯಿ ಸೆಂಟ್ರಲ್ ರೈಲ್ವೆ ನೌಕರರಾಗಿರುವ ಶ್ರೀ ಹೆಚ್ ಎನ್ ಭೀಮರಾಯರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ವಿಶಾಲ ಕೃಷ್ಣಪ್ಪನವರ ಬೀದಿಯಲ್ಲಿರುವ ವರ್ತಕರಾದ ಶ್ರೀ ರಂಗಯ್ಯನವರು ತಮ್ಮ ಪುತ್ರಿ ಸೌ|| ಪುಟ್ಟಲಕ್ಷಮ್ಮನನ್ನು ಹೊಸಗ್ರಹಾರಹಳ್ಳಿಯ ಶ್ರೀ ಮಂಚೇಗೌಡರ ಪುತ್ರ ಶ್ರೀ ಹೆಚ್ ಎಂ ಪುಟ್ಟಸ್ವಾಮಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ಅಗ್ರಹಾರದಲ್ಲಿ ಜರುಗಿಸಿದರು

ಅಬ್ರಹಾಂ ಲಿಂಕನ್ ಚಿತ್ರ ಪ್ರದರ್ಶನ

ನಗರದ ರೋಟರಿ ಕ್ಲಬ್ಬಿನ ಆಶ್ರಯದಲ್ಲಿ ಅಮೆರಿಕಾ ಸಂಯುಕ್ತ ಸಂಸ್ಥಾನಗಳ ವಾರ್ತಾ ಸಂಸ್ಥೆಯವರು ಅಬ್ರಹಾಂ ಲಿಂಕನ್ ಎಂಬ ಚಲನ ಚಿತ್ರದ ಪ್ರದರ್ಶನವನ್ನು ಕಳೆದ ಭಾನುವಾರ ಗಾಯತ್ರಿ ಚಿತ್ರ ಮಂದಿರದಲ್ಲಿ ಏರ್ಪಡಿಸಿದ್ದರು ರೋಟರಿ ಕ್ಲಬ್ಬಿನ ಅಧ್ಯಕ್ಷ ಡಾ|| ಲಿಂಗರಾಜುರವರು ಸ್ವಾಗತ ಭಾಷಣ ಮಾಡಿದನಂತರ ಅಮೆರಿಕಾ ವಾರ್ತಾ ಸಂಸ್ಥೆಯ ಚಾರ್ಜ್ ಪಿ ಫೆಕೆರಾರವರು ಭಾಷಣ ಮಾಡಿ, ಪ್ರದರ್ಶನದ ಉದ್ದೇಶವನ್ನು ವಿವರಿಸಿದರು ನೀಗ್ರೋ ಕಾಲದಲ್ಲಿ ಹುಟ್ಟಿ ಅಮೆರಿಕದ ಅಧ್ಯಕ್ಷ ಪದವಿಗೆ ಏರಿದ ಲಿಂಕನ್‌ರವರು ಪರಮಾವಧಿ ನೀತಿಯನ್ನು ತೋರಿಸುವುದಕ್ಕೆ ಶ್ರಮಿಸಿದ ಬಗೆಯನ್ನೂ, ಅವರ ಜೀವನ ಚರಿತ್ರೆಯನ್ನೂ ಮನೋಜ್ಞವಾಗಿ ಚಿತ್ರಿಸಲಾಗಿದೆ

ಚಾಮರಾಜನಗರದ ಛತ್ರದಲ್ಲಿ ಧರ್ಮ ಕಾರ್ಯಗಳಿಗೆ ಅಡ್ಡಿ

ಚಾಮರಾಜನಗರದಲ್ಲಿರುವ ಶ್ರೀ ಗುರುಸಿಂಗಶೆಟ್ಟರ ಧರ್ಮ ಛತ್ರವನ್ನು ಮದುವೆ ಮುಂತಾದ ಶುಭ ಕಾರ್ಯಗಳಿಗೆ ಉಚಿತವಾಗಿ ಬಿಟ್ಟುಕೊಡಲಾಗುತ್ತಿದೆ ಇದು ಶ್ಲಾಘನೀಯ ವಿಚಾರ ಆದರೆ ಶುಭ ಕಾರ್ಯಗಳು ನಡೆಯದಂತೆ ಉದ್ದೇಶಕ್ಕೆ ಬೇರೆ ಕಾರಣದಿಂದ ಭಂಗ ಬರುತ್ತಿದೆ ಛತ್ರದಲ್ಲಿ ಎರಡು ಸಂಸಾರಗಳು ವಾಸ ಮಾಡಿಕೊಂಡಿದ್ದು, ಒಟ್ಟು ಕೊಠಡಿಗಳನ್ನು ಆಕ್ರಮಿಸಿಕೊಂಡಿರುವರು ಇರುವ ಬಚ್ಚಲು ಮನೆಗಳನ್ನೂ ಸಹ ಅವರು ವಶಕ್ಕೆ ತೆಗೆದುಕೊಂಡಿರುವರು ಇದರಿಂದ ಆಗುವ ತೊಂದರೆಯನ್ನು ಛತ್ರದ ಅಧಿಕಾರಿಗಳು ಗಮನಕ್ಕೆ ತಂದುಕೊಂಡು ಸೂಕ್ತ ಏರ್ಪಾಡು ಮಾಡಿ ಸಾರ್ವಜನಿಕರು ಅದನ್ನು ಯಾವ ತೊಂದರೆಯೂ ಇಲ್ಲದಂತೆ ಉಪಯೋಗಿಸಲು ಅವಕಾಶ ಮಾಡಿಕೊಡುವರೆಂದು ನಂಬಲಾಗಿದೆ — ಎಂಬುದಾಗಿ ಅಲ್ಲಿನ ವರ್ತಕರಾದ ಶ್ರೀ ಮರಿಮುತ್ತುಶೆಟ್ಟರು ಪತ್ರ ಬರೆದು ತಿಳಿಸಿರುತ್ತಾರೆ

ಮೈಸೂರು ಪೇಟೆ ಧಾರಣೆ

	ರೂ ಮುಂದೆ	ರೂ ವರೆಗೆ
ಕಡಲೆಕಾಯಿ	[illegible]	[illegible]
ಹುಚ್ಚೆಳ್ಳು	[illegible]	
ಎಳ್ಳು	[illegible]	
ಹಲಸಂದೆ	[illegible]	[illegible]
ಹೆಸರು	[illegible]	
ಉದ್ದು	[illegible]	[illegible]
ಹುರುಳಿಕಾಳು	[illegible]	
ಮೆಣಸಿನಕಾಯಿ	[illegible]	[illegible]
ಬೆಲ್ಲ	[illegible]	
ತೆಂಗಿನಕಾಯಿ ೧೦೦೦	[illegible]	[illegible]

ನಾಳೆ ನಗರಕ್ಕೆ ಜೈನ ಸನ್ಯಾಸಿನಿಯ ಭೇಟಿ

ಮಹಾ ಸತೀಜಿ ಸಾಯರ್ ಕುವರ್‌ಜಿಯವರು

ಮೈಸೂರು [illegible]

ನಗರಕ್ಕೆ ನಾಳೆ ಜೈನಗುರು ಮಹಾಸತಿ [illegible] ಸಾಯರ್ ಕುವರ್‌ಜಿಯವರು ಆಗಮಿಸುವ[illegible] ಅವರನ್ನು ಛಲೊಮಿನಾ ಕಾಲೇಜು ಬಳಿ [illegible] ಗ್ಗೆ [illegible] ಗಂಟೆಗೆ ಸ್ವಾಗತಿಸಲಾಗುವುದು ಅ[illegible] ನಗರದ ಟೌನ್‌ಹಾಲಿಗೆ ಮೆರವಣಿಗೆಯಲ್ಲಿ ಬರ[illegible]ರು ಅವರಿಗೆ ಜೈನ ಸಂಘದವರು ಸ್ವಾಗತ [illegible] ವನ್ನು ಅರ್ಪಿಸುವರು ಜೈನ ಸನ್ಯಾಸಿನಿಯ[illegible] ರೊಡನೆ ಅವರ ನಾಲ್ವರು ಶಿಷ್ಯೆಯರೂ ಇರು[illegible]ರು ಅವರು ಶ್ರೀ ಜೈನ ವಿದ್ಯಾರ್ಥಿಗಳ ಮಂದಿ[illegible]ದಲ್ಲಿ ವಿಹಾರ ಮಾಡುವರು

ಮಹಾಸತಿ ಸಾಯರ್ ಕುವರ್ಜಿಯವರು [illegible] ದರಾಬಾದು ಸಂಸ್ಥಾನದವರು ಅವರು ಉತ್ತ[illegible] ಮನೆತನದಲ್ಲಿ ಜನಿಸಿ, ಕೇವಲ ೨೨ ವಯಸ್ಸಿನಲ್ಲಿ [illegible] ವೈರಾಗ್ಯವನ್ನು ತಾಳಿ, ಐಶ್ವರ್ಯಾದಿಗಳನ್ನು [illegible] ಟ್ಟು ಆತ್ಮ ಕಲ್ಯಾಣಕ್ಕಾಗಿ ಜೈನ ಸನ್ಯಾಸ ಧ[illegible] ವನ್ನು ಸ್ವೀಕರಿಸಿದರು

ಕಳೆದ ೩೨ ವರ್ಷಗಳಿಂದಲೂ ಜೈನ ಸನ್ಯಾ[illegible] ಧರ್ಮಕ್ಕನುಸಾರವಾಗಿ ಅಹಿಂಸೆ ಸತ್ಯ, ಬ್ರ[illegible] ಚರ್ಯ, ಅಪರಿಗ್ರಹ, ಮುಂತಾದ ವ್ರತಗಳನ್ನು[illegible] ನಿಷ್ಠೆಯಿಂದ ಪಾಲಿಸಿಕೊಂಡುಬರುತ್ತಿರುವವರು [illegible] ಪಾದರಕ್ಷೆ, ಛತ್ರಿ, ವಾಹನ ಮುಂತಾದ ಸಾ[illegible]ಧನಗಳನ್ನು ಅವರು ಉಪಯೋಗಿಸುತ್ತಿಲ್ಲ [illegible] ತ್ಯವೂ ತಾವು ಉಪಯೋಗಿಸುವ ವಸ್ತುಗಳನ್ನು ತಾವೇ ತೆಗೆದುಕೊಂಡುಬರುವರು ಯಾರಿಂದ[illegible]ಯೂ ಕಾಣಿಕೆಯನ್ನು ಸ್ವೀಕರಿಸುವುದಿಲ್ಲ ಪಾ[illegible] ದಾಂಗಳಾಗಿಯೇ ಸಂಚರಿಸುವರು

ಕೇವಲ ಅಹಿಂಸಾ ಧರ್ಮವನ್ನು ಪ್ರಚಾ[illegible] ಮಾಡುತ್ತಾ ಇದುವರೆಗೆ ಉ|| ಪ್ರದೇಶ, ಗುಜರಾ[illegible]ತ್, ಮಧ್ಯ ಭಾರತ, ಆಂಧ್ರ ಮತ್ತು ಮದ್ರಾಸ್ ಪ್ರಾಂತಗಳಲ್ಲಿ ಸಂಚಾರ ಮಾಡಿ ಈಗ ಸಂಸ್ಥಾ[illegible]ಕ್ಕೆ ಆಗಮಿಸುವರು ಅವರು ಸಂಚರಿಸುವ [illegible] ದೇಶದಲ್ಲೆಲ್ಲಾ ಜನೋಪಯೋಗಿ ಕಾರ್ಯಗಳನ್ನೂ, ವಿದ್ಯಾ ವ್ಯಾಸಂಗಕ್ಕೆ ಸೌಲಭ್ಯಗಳನ್ನೂ ತಮ್ಮ [illegible]ಕ್ತ ಮಂಡಲಿಯವರ ಮೂಲಕ ಏರ್ಪಡಿಸಿ[illegible]ದ ಕೀರ್ತಿಯು ಇವರದು ಜಗತ್ತಿಗೆ ಧರ್ಮ ಮಾ[illegible] ನೆಯನ್ನು ಮಾಡುತ್ತಿರುವರು

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

[illegible]

ನವರತ್ನ—ಕಲ್ಪ

[illegible]

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17 ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು [illegible] ರಸ್ತೆಯಲ್ಲಿರುವ

[illegible]

[illegible] ಫೋನ್ ನಂ 590

— ಭೇಟಿಯ ಕಾಲ —

ಬೆಳಿಗ್ಗೆ 30 ರಿಂದ 12 30 ಮತ್ತು ಮಧ್ಯಾಹ್ನ 4 ರಿಂದ 7 30

[illegible]

ನವರತ್ನ—ಕಲ್ಪ

ಉಪಯೋಗಗಳು

[illegible]

NAVRATNA KALPA PHARMACY,

Jullundur City (India)

Grams NAVRATNA

SREE GANESHA

TALKIES

From 16 6 [illegible]

THE WOMAN FOR JOE

(In Technicolor Vistavision)

A picture full of C[illegible]u[illegible] t[illegible]ls Acrobatics [illegible] & [illegible]

ಶ್ರೀ ಶಾರದಾ ಸಂಗೀತ ನಾಟಕ ಮಂಡಲಿ,

ಗೋಕಾಕ್

17 6-56 ನೇ　　ಭಾನುವಾರ

[illegible]

ಶ್ರೀ ಎ ಕೃಷ್ಣಮೂರ್ತಿ [illegible]

[illegible]

ಮೈಸೂರು ಟೌನ್‌ಹಾಲಿನಲ್ಲಿ

[illegible]

★ [illegible] ★

[illegible]

Edited Printed and Published by A R [illegible] Sadhvi Press D Subbaiah Road Mysore

Estd 1917

CHAMPION METROPOLITAN COLLEGE OF COMMERCE

(Co-operators Home 100 Road Mysore)

APPLICATIONS FOR ADMISSION to classes leading to DIPLOMAS in Commerce Shorthand and Typewriting are now being received in the mornings & evenings

Training for COSTS & WORKS ACCOUNTANTS also given

Situated in fine building Best and experienced staff including Holders of Master's Degree in Commerce and Arts-Latest equipment including new Typewriters good Library Excellent results

(Sd) M S PUTTANNA Vice-Principal　　*(Sd) P SUBBARAYA SASTRY,* Principal

ರಿಜಿಸ್ಟರ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ ೬ ಕಾಸು

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೭] SADHVI : SUNDAY 17-6-1956 ಮೈಸೂರು : ಭಾನುವಾರ ೧೭-೬-೧೯೫೬ [ಸಂಚಿಕೆ : ೨೦೬

ವಿವಾಹದಲ್ಲಿ ನೃತ್ಯದ ನಿಷೇಧಕ್ಕೆ ಆಂಧ್ರ ಸರ್ಕಾರದ ಶಾಸನ

ಮೈಸೂರು ಕಲಾವಿದರಿಂದ ಜಪಾನ್ ಪ್ರವಾಸದ ವಿವರಣೆ

ಮೈಸೂರು ೧೬

ಇಲ್ಲಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಅಸಿಸ್ಟೆಂಟ್ ಸೂಪರಿಂಟೆಂಡೆಂಟರಾದ ಶ್ರೀ ಎಂ. ವೀರಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳನ್ನು ತಮ್ಮ ನಿವಾಸಕ್ಕೆ ಬರಮಾಡಿಕೊಂಡು ಸತ್ಕರಿಸಿದರಲ್ಲದೆ, ಜಪಾನಿನಲ್ಲಿ ತಮ್ಮ ಪ್ರವಾಸದ ಅನುಭವವನ್ನು ವಿವರಿಸಿದರು. ಅಲ್ಲಿನ ಕಲೆ [illegible] ಬದಿಯಿಂದ ತಯಾರಿಸಿದ ಕಲಾ ವಸ್ತು ವಿಶೇಷಗಳು, ಫೋಟೋಗಳು ಮತ್ತು ಎಣ್ಣೆಯ ಚಿತ್ರಗಳನ್ನು ಅವರು ಪ್ರದರ್ಶಿಸಿದರು. ಜಪಾನೀಯರು ಕಲೆ ಮತ್ತು ಕುಶಲ ಕೆಲಸಗಳಲ್ಲಿ ವಿಶೇಷ ಆಸಕ್ತಿ ಹೊಂದಿರುವರೆಂದು ಅವರು ಹೇಳಿದರು. ಅಲ್ಲಿನ ಮಹಿಳೆಯರು ರಾಷ್ಟ್ರದ ಆರ್ಥಿಕ ರಂಗದಲ್ಲಿ ವಿಶೇಷ ಸಹಾಯಕರಾಗಿರುವರೆಂದೂ, ಕೈಗಾರಿಕೆಯಲ್ಲಿ ಜಪಾನು ಬಹಳ ಮುಂದುವರಿಯಲು ಇದೂ ಒಂದು ಕಾರಣವೆಂದೂ ತಿಳಿಸಿದರು.

ಶ್ರೀ ವೀರಪ್ಪನವರು ಕೇಂದ್ರ ಸರ್ಕಾರದ ವೇತನವನ್ನು ಪಡೆದು ಜಪಾನಿಗೆ ಹೋಗಿದ್ದರು. ಟೋಕಿಯೋದಲ್ಲಿ ಇಂಡಸ್ಟ್ರಿಯಲ್ ಆರ್ಟ್ ರಿಸರ್ಚ್ ಇನ್‌ಸ್ಟಿಟ್ಯೂಟಿನಲ್ಲಿ ಆರು ತಿಂಗಳ ಕಾಲ ಅವರು ತರಬೇತು ಪಡೆದು ಈ ತಿಂಗಳು ಹಿಂತಿರುಗಿದ್ದಾರೆ.

ಮದ್ರಾಸಿನಲ್ಲಿ ಒಂಟಿಕೊಪ್ಪಲಿನ ತರುಣ ಮತ್ತು ಸೇವಕನ ಬಂಧನ

ನಗರದ ಒಂಟಿಕೊಪ್ಪಲಿನಲ್ಲಿರುವ, ಕೃಷ್ಣ [illegible] ಕೌಂಟ್ಸ್ ಕಛೇರಿಯ ಅಧಿಕಾರಿಗಳಾದ ಶ್ರೀ ರಾಮಸ್ವಾಮಿ ಅಯ್ಯಂಗಾರ್ಯರ ಪುತ್ರ ಭೂಮ ಎಂಬುವರು ಸುಮಾರು ೧½ ತಿಂಗಳ ಹಿಂದೆ ಮನೆಯ ಸೇವಕ ಸ್ವಾಮಿನಾಥ ಎಂಬುವನೊಡನೆ ಸಿನಿಮಾ ನೋಡುತ್ತೇನೆಂದು ಹೇಳಿ ಹೊರಟು ಇನ್ನೂ ಹಿಂತಿರುಗದಿರಲು ಮದರಾಸಿನ ಪೊಲೀಸರು ಮೈಲಾಪುರದಲ್ಲಿ ಅವರನ್ನು ನೆನ್ನೆ ಬಂಧಿಸಿರುವರೆಂದೂ, ಅವರನ್ನು ಕರೆತರಲು ನಗರದ ಪೊಲೀಸರು ಮತ್ತು ಭೂಮನ ತಂದೆಯೂ ಮದರಾಸಿಗೆ ತೆರಳಿರುವರೆಂದೂ ವರದಿಯಾಗಿದೆ.

ಬೆಂಗಳೂರು ಆಕಾಶವಾಣಿ ಕಾರ್ಯಕ್ರಮ

[illegible]

ದೋಣಿ ಮುಳುಗಿ ೪ ಜನರು ಮತ್ತು ೧೦೦ ಕುರಿಗಳ ಮರಣ

[illegible] ದೋಣಿಯೊಂದು ಮುಳುಗಿ ನಾಲ್ಕು ಜನರು ಮತ್ತು ೧೦೦ ಕುರಿಗಳು ಮೃತಪಟ್ಟಿರುವುದಾಗಿ ವರದಿಯಾಗಿದೆ.

ಬೇಲೂರಿನ ಕೊಲೆ ಪ್ರಕರಣದಲ್ಲಿ ಇನ್ನೂ ೨೦ರ ವರೆಗೆ ರಿಮ್ಯಾಂಡ್

ಬೆಂಗಳೂರು ೧೬

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಪ್ರಕರಣದಲ್ಲಿ ದಸ್ತಗಿರಿಯಾಗಿರುವ ಮುದ್ದಿತರನ್ನು ನೆನ್ನೆ ನಗರ ನ್ಯಾಯಾಧಿಕಾರರ ಮುಂದೆ ಪೊಲೀಸರು ಪುನಃ ಹಾಜರು ಮಾಡಿ [illegible] ತನಕ ರಿಮ್ಯಾಂಡ್ ಪಡೆದುಕೊಂಡರು. ಶ್ರೀ ಎಚ್. ಎಲ್. ರೇವಣ್ಣ ಮತ್ತು ಎ. ಎಸ್. ಪಿ. [illegible] ಪೊಲೀಸ್ ತನಿಖೆಯ ಸಾಕ್ಷ್ಯ ಸಾಮಗ್ರಿಗಳನ್ನು ಶೇಖರಿಸುತ್ತಿದ್ದಾರೆ.

ತುಂಗಭದ್ರಾ ನೀರಿನ ಹಂಚಿಕೆ ಬಗ್ಗೆ ಮಾತುಕತೆ

ತುಂಗಭದ್ರಾ ಹೈಲೆವೆಲ್ ಕಾಲುವೆಯ ನೀರನ್ನು ಹಂಚಿಕೊಳ್ಳುವ ಸಂಬಂಧವಾಗಿ [illegible] ಬೆಂಗಳೂರಿನಲ್ಲಿ ಆಂಧ್ರ ಮತ್ತು ಮೈಸೂರು ಸರ್ಕಾರದ ಪ್ರತಿನಿಧಿಗಳಿಗೆ ಮಾತುಕತೆಯು ನಡೆಯುವುದು. ಕೇಂದ್ರ ಯೋಜನಾ ಮಂಡಲದ ಉಪಾಧ್ಯಕ್ಷರಾದ ವಿ. ಟಿ. ಕೃಷ್ಣಮಾಚಾರಿಯವರು ಅಧ್ಯಕ್ಷತೆ ವಹಿಸುವರು.

ಖಾದಿಗೆ ಉತ್ತೇಜನಕ್ಕಾಗಿ ಶಾಸನ

ಖಾದಿ ಮತ್ತು ಇತರ ಗೃಹ ಕೈಗಾರಿಕೆಗಳಿಗೆ ಉತ್ತೇಜನವೀಯುವ ಸಲುವಾಗಿ ಸರ್ಕಾರದವರು ಅವುಗಳ ಬೋರ್ಡನ್ನು ಶಾಶ್ವತವಾಗಿ ಮಾಡಲು ಸಭೆಯಲ್ಲಿ ಶಾಸನವೊಂದನ್ನು ತರಲಿರುವರು.

ಆಂಧ್ರದಲ್ಲಿ ವಿವಾಹ ಕಾಲದ ನರ್ತನಗಳಿಗೆ ನಿಷೇಧ

ಶಾಸನ ತರಲು ಸರ್ಕಾರದ ನಿರ್ಧಾರ

ಆಂಧ್ರ ಸಂಸ್ಥಾನದಲ್ಲಿ ನಡೆಯುವ ವಿವಾಹಗಳಲ್ಲೂ ಮತ್ತು ಸಾರ್ವಜನಿಕ ಸ್ಥಳಗಳಲ್ಲೂ ದೇವದಾಸಿಯರು ನೃತ್ಯಗಳನ್ನು ನಿಷೇಧಿಸಲು ಆಂಧ್ರ ಸರ್ಕಾರದವರು ನಿರ್ಧರಿಸಿರುತ್ತಾರೆ. ಈ ಬಗ್ಗೆ ಶಾಸನವನ್ನು ಅವರು ತರಲಿರುವರು.

ತೆಂಗಿನಕಾಯಿ ವರ್ತಕರ ಸಂಘ

ನಗರದ ತೆಂಗಿನಕಾಯಿ ವರ್ತಕರ ಸಂಘದ ಅಧ್ಯಕ್ಷರಾದ ಶ್ರೀ ಆರ್. ರಂಗಪ್ಪನವರು ಹೇಳಿಕೆಯೊಂದನ್ನಿತ್ತು, ಈ ರೀತಿ ತಿಳಿಸಿರುತ್ತಾರೆ:—

"ತೆಂಗಿನಕಾಯಿ ವರ್ತಕರ ಸಂಘ" ಎಂಬ ಶಿರೋನಾಮೆಯಲ್ಲಿ ಸಂಘದ ಮೇಲೆ ಕೆಲವು ಆರೋಪಣೆ ಬಂದಿರುವುದಾಗಿ ತಮ್ಮ ತಾರೀಖು ೧೧-೬-೧೯೫೬ರ ಪತ್ರಿಕೆಯಲ್ಲಿ ಪ್ರಕಟಿಸಿದ ಪ್ರತಿಯೊಂದು ಅಂಶವೂ ಸತ್ಯಕ್ಕೆ ದೂರವಾದದ್ದು. ಸಂಘದಲ್ಲಿ ಕ್ರಮವಾದ ಲೆಕ್ಕಪತ್ರಗಳನ್ನು ಇಟ್ಟು ಸಂಘದ ವ್ಯವಹಾರವನ್ನು ಕ್ರಮಬದ್ಧವಾಗಿ ನಡೆಸಿಕೊಂಡುಬರುತ್ತಿದ್ದೇವೆ. ಆಡಳಿತ ಕಾರ್ಯಕಾರಿ ಸಮಿತಿಯನ್ನು ಕರೆದು ಸಂಘದ ಆದಾಯ ವೆಚ್ಚಗಳನ್ನೂ ಲೆಕ್ಕಪತ್ರಗಳನ್ನೂ ಪರಿಶೀಲನೆ ಮಾಡಿಸಿ ಸಮಿತಿಯ ಒಪ್ಪಿಗೆಯನ್ನು ಪಡೆಯಲಾಗುತ್ತಿದೆ.

ಪ್ರತಿ ವರ್ಷವೂ ಕ್ರಮಬದ್ಧವಾಗಿ ಸರ್ವ ಸದಸ್ಯರ ಸಭೆ ಮತ್ತು ಚುನಾವಣೆಯನ್ನು ನಡೆಸಿ ಸರಿಯಾದ ಕಾರ್ಯವನ್ನು ಜಾರಿಯಲ್ಲಿ ಇಡಲಾಗಿದೆ.

ಜೈನ ಸನ್ಯಾಸಿನಿ ಶ್ರೀ ಸಾಯರ್ ಕವರ್‌ಜಿಯವರ ಆಗಮನ

ಪುರ ಭವನದಲ್ಲಿ ಸನ್ಮಾನ ಸಮಾರಂಭ

ಮೈಸೂರು ೧೬

ಮೊದಲೇ ಪ್ರಕಟವಾಗಿದ್ದಂತೆ ಜೈನ ಸನ್ಯಾಸಿನಿಯಾದ ಶ್ರೀ ಸಾಯರ್ ಕವರ್‌ಜಿಯವರು ತಮ್ಮ ಶಿಷ್ಯೆಯರೊಡನೆ ಈ ದಿನ ಬೆಳಿಗ್ಗೆ ಪಾದಚಾರಿಗಳಾಗಿ ನಗರಕ್ಕೆ ಆಗಮಿಸಿದರು. ಮೈಸೂರು ಉತ್ತರ ಭಾಗದ ಊರ್ಹೊರಗೆ ಅವರನ್ನು ಜೈನ ಸಮಾಜದ ಪ್ರಮುಖರೂ ಇತರರೂ ಸ್ವಾಗತಿಸಿ ದೊಡ್ಡ ಮೆರವಣಿಗೆಯಲ್ಲಿ ಪುರಭವನಕ್ಕೆ ಕರೆತಂದರು.

ಪುರಭವನದಲ್ಲಿ ನಡೆದ ಸ್ವಾಗತ ಸಭೆಗೆ ನೂರಾರು ಜನ ಜೈನ ಮಹಿಳೆಯರೂ, ಮಹನೀಯರೂ ಮತ್ತು ಇತರ ಪ್ರಮುಖರೂ ನೆರೆದಿದ್ದರು. ಶ್ರೀಮತಿ ಇಂದಿರಾ [illegible] ಸ್ವಾಗತ ಪದ್ಯ ಹಾಡಿದ ನಂತರ ಶ್ರೀ ಸಿ. ವಿ. [illegible] ಪ್ರಸಾದರವರು ಬಿನ್ನವತ್ತಳೆಯನ್ನು ಓದಿ ಸನ್ಯಾಸಿನಿಯವರಿಗೆ ಸಮರ್ಪಿಸಿದರು.

ಶ್ರೀ ಕವರ್‌ಜಿಯವರು ಭಾಷಣ ಮಾಡಿ ಸನ್ಮಾನಕ್ಕಾಗಿ ಮೆಚ್ಚುಗೆಯನ್ನು ಸೂಚಿಸಿ, ಸಕಲರೂ ತಮ್ಮತಮ್ಮ ಧರ್ಮಾಚರಣೆಯಲ್ಲಿ ತತ್ಪರರಾಗಿ ಸುಖ ಶಾಂತಿಗಳನ್ನು ಪಡೆಯಬೇಕೆಂದು ಸೂಚಿಸಿದರು. ತಮ್ಮ ಪ್ರವಾಸ ಕಾಲದಲ್ಲಿ ಜೈನ ಧರ್ಮದ ಮುಖ್ಯ ತತ್ವಗಳಾದ ಅಹಿಂಸೆ, ಸತ್ಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ—ಈ ಉದಾತ್ತ ಧ್ಯೇಯಗಳನ್ನು ತಾವು ಪ್ರಸಾರ ಮಾಡುತ್ತಿರುವುದಾಗಿ ಅವರು ಹೇಳಿದರು. ತಾವು ಬಿಡಾರ ಮಾಡಿರುವ ಜೈನ ವಿದ್ಯಾರ್ಥಿ ನಿಲಯದಲ್ಲಿ ತಮ್ಮನ್ನು ಯಾರು ಬೇಕಾದರೂ ಬಂದು ಭೇಟಿ ಮಾಡಿ ವಿಚಾರ ವಿನಿಮಯ ಮಾಡಿಕೊಳ್ಳಬಹುದೆಂದೂ ಸೂಚಿಸಿದರು.

ಶ್ರೀ [illegible] ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ವಿದ್ಯುಚ್ಛಕ್ತಿ ಹರಿದು ನೂತನ ಮದುವಣಿಗನ ಮರಣ

ಸೇಲಂ ಜಿಲ್ಲೆಯ ಅತ್ತೂರು ತಾಲ್ಲೂಕಿನ [illegible] ಎಂಬ ಗ್ರಾಮದಲ್ಲಿ ಕಳೆದ ಸೋಮವಾರ ವಿವಾಹವಾದ ಒಬ್ಬ ತರುಣನು ಮಾವನ ಮನೆಯಿಂದ ಸಂಜೆ ತನ್ನ ಮನೆಗೆ ಹಿಂದಿರುಗಿ ಅಲ್ಲಿ ವೀಣೆಯ ಸತ್ಕಾರಕ್ಕಾಗಿ ಸಿದ್ಧಪಡಿಸಿದ್ದ ಬಗ್ಗೆ ಪರಿಶೀಲನೆ ನಡೆಸುತ್ತಿದ್ದಾಗ ಅವನಿಗೆ ತಗುಲಿದ [illegible] ತಂತಿಯಿಂದ ವಿದ್ಯುಚ್ಛಕ್ತಿ ಹರಿದು ಮೃತಪಟ್ಟನೆಂದು ವರದಿಯಾಗಿದೆ.

ಒರಿಸ್ಸಾ ಮುಖ್ಯ ಮಂತ್ರಿಯಿಂದ ಭೂದಾನ ಚಳುವಳಿ

ಒರಿಸ್ಸಾ ಮುಖ್ಯ ಮಂತ್ರಿ ನಭಕೃಷ್ಣ ಚೌಧರಿಯವರು ಮುಂದಿನ ಸಾರ್ವಜನಿಕ ಚುನಾವಣೆಯಲ್ಲಿ ಭಾಗವಹಿಸುವುದಿಲ್ಲವೆಂದು ಗೊತ್ತಾಗಿದೆ. ಅವರು ಭೂದಾನ ಚಳುವಳಿಯಲ್ಲಿ ಸೇರಿ ಕೆಲಸ ಮಾಡಲು ಉದ್ದೇಶ ಹೊಂದಿರುವರು.

ಅಖಿಲ ಭಾರತ ವಿದ್ಯುಚ್ಛಕ್ತಿ ನೌಕರರ ಸಮ್ಮೇಳನ

ವಿ. ವಿ. ಗಿರಿಯವರಿಂದ ಉದ್ಘಾಟನೆ

ಬೆಂಗಳೂರು ೧೬

ಅಖಿಲ ಭಾರತ ವಿದ್ಯುಚ್ಛಕ್ತಿ ನೌಕರರ ಸಮ್ಮೇಳನದ ಅಧಿವೇಶನವನ್ನು ನೆನ್ನೆ ಇಲ್ಲಿ ಕೇಂದ್ರ ಸರ್ಕಾರದ ಮಾಜಿ ಕಾರ್ಮಿಕ ಮಂತ್ರಿ ವಿ. ವಿ. ಗಿರಿಯವರು ಉದ್ಘಾಟಿಸಿದರು. [illegible] ಭಾಷಣ ಮಾಡಿ, ಒಂದು ಕೈಗಾರಿಕೆಗೆ ಒಂದೇ ಕಾರ್ಮಿಕ ಸಂಘವಿರಬೇಕೆಂದು ತಿಳಿಸಿದರು. ಕಾರ್ಮಿಕರ ಸಂಘಗಳಲ್ಲಿ ರಾಜಕಾರಣದಲ್ಲಿರುವ [illegible] ಪ್ರವೇಶಿಸಬಾರದೆಂದೂ, ಕಾರ್ಮಿಕರೇ ತಮ್ಮ ಹಿತವನ್ನು ರಕ್ಷಿಸಿಕೊಳ್ಳಲು ಅವಕಾಶವಾಗಬೇಕೆಂದೂ ಅವರು ತಿಳಿಸಿದರು.

ಖಾನ್ ಅಬ್ದುಲ್ ಗಫಾರ್ ಖಾನರ ದಸ್ತಗಿರಿ ಸಂಭವ

ಪಾಕಿಸ್ತಾನದ ಗಡಿನಾಡಿನ ಮುಖಂಡರಾದ ಖಾನ್ ಅಬ್ದುಲ್ ಗಫಾರ್ ಖಾನರನ್ನು ಬಂಧಿಸಲಾಗುವುದೆಂಬ ವದಂತಿಯು ಹರಡಿದೆ. ಖಾನ್ ಅಬ್ದುಲ್ ಗಫಾರ್ ಖಾನರ ವಿಚಾರಣೆ ಮಾಡಲು ಪೆಷಾವರಿನ ಅಡಿಷನಲ್ ಕಮೀಷನರಿಗೆ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರ ವಿಶೇಷಾಧಿಕಾರವನ್ನು ಪಶ್ಚಿಮ ಪಾಕಿಸ್ತಾನದ ಗವರ್ನರರು ಕೊಟ್ಟಿರುತ್ತಾರೆ.

ಸಂಸ್ಥಾನಗಳೊಡನೆ ಜಹಗೀರುಗಳೂ ಪುನರ್ವಿಂಗಡಣೆ

ಸಂಸ್ಥಾನ ಪುನರ್ವಿಂಗಡಣೆ ವ್ಯವಸ್ಥೆಯು [illegible] ದ್ದಾಗ ಸಂಸ್ಥಾನದಲ್ಲಿರುವ ಜಹಗೀರುಗಳೂ ಅನ್ವಯಿಸುವುದೆಂದೂ ಅದರ ಪರಿಣಾಮವಾಗಿ ಕೊಳ್ಳೇಗಾಲ [illegible] ಮತ್ತು ಸೈನಾಹಿಲ್ಲದಿರುವ [illegible] ತಾಲೂಕುಗಳು ಮತ್ತು [illegible] ತಾಲ್ಲೂಕುಗಳನ್ನು [illegible] ಸಂಸ್ಥಾನಕ್ಕೆ ಸೇರಿಸಲು [illegible] ಜಹಗೀರುಗಳನ್ನು [illegible] ಬಿಡುತ್ತಾರೆ. ಜಹಗೀರುಗಳು ತಮ್ಮ ಹೊಸ ಸಂಸ್ಥಾನಕ್ಕೆ ಈ ತಿಂಗಳು ಅಕ್ಟೋಬರಿಗೆ ಬರುವುವು.

ಮನೆ ಅಡಿಪಾಯ ತೆಗೆಯುತ್ತಿದ್ದಾಗ ಚಿನ್ನದ ನಾಣ್ಯ ಪತ್ತೆ

ಭಟ್ಕಳದಲ್ಲಿ ಒಂದು ಭವನದ ಪುನರ್ನಿರ್ಮಾಣಕ್ಕಾಗಿ ನೆನ್ನೆ ಅಡಿಪಾಯ ತೆಗೆಯುತ್ತಿದ್ದಾಗ ೨೫ ಕೊಡಗಳಲ್ಲಿ ತುಂಬಿದ್ದ ಚಿನ್ನ ಮತ್ತು ಬೆಳ್ಳಿ ನಾಣ್ಯಗಳು ಪತ್ತೆಯಾದುವು. ಇನ್ನೂ ಹೆಚ್ಚಿನ ನಾಣ್ಯಕ್ಕಾಗಿ ಶೋಧನೆ ನಡೆಸಲಾಗುತ್ತಿದೆ. ಭವನವನ್ನು ಪಾಲೀಸರು ಅಲ್ಲಿನ ಕಾವಲಿಗೊಂದಕ್ಕೆ [illegible] ಮಾಡಿರುವರು. [illegible] ನಾಣ್ಯಗಳ [illegible] ಪರಿಶೀಲನೆಯಲ್ಲಿರುವ ಅಧಿಕಾರಿಗಳು [illegible] ತಮ್ಮ ವಶಕ್ಕೆ ತೆಗೆದುಕೊಂಡಿರುವರು.

ರಾಣಿಪೇಟೆಯಲ್ಲಿ ಸೇರಿದ್ದ ತಮಿಳುನಾಡಿನ ಅಸ್ಪೃಶ್ಯತಾ ನಿರೋಧ ಸಮ್ಮೇಳನದಲ್ಲಿ ಮಾಧ್ಯಮಿಕ ಶಾಲೆ ಮತ್ತು ಕಾಲೇಜುಗಳಲ್ಲಿ ಹರಿಜನರಲ್ಲದೆ ಬೇರೆ ಕೆಲಸ ಹೇಳಿಕೊಡಬೇಕೆಂದು [illegible] ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು.

ವಾರ ಭವಿಷ್ಯ

ತಾ|| ೧೭-೬-೫೬ ರಿಂದ ೨೩-೬-೫೬ ರವರೆಗೆ

ಮೇಷ — ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ. ಪ್ರವಾಸ ಸುಖಕರ. ಶುಭ ವರ್ತಮಾನ.

ವೃಷಭ — ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಾಧಾರಣ. ಸ್ಪರ್ಧಾ ವಿವಾದ ಸಂಭವ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ನಲಗು. ನೌಕರಿಯಲ್ಲಿ ನಿರುತ್ಸಾಹ.

ಮಿಥುನ — ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು. ವ್ಯಾಪಾರ ಕಲಹ. ವ್ಯಾಪಾರವ್ಯವಹಾರಗಳಲ್ಲಿ ಪರಾಜಯ. ಉದ್ಯೋಗದಲ್ಲಿ ಅಡಚಣೆ.

ಕರ್ಕ — ಆರೋಗ್ಯ ಅತೃಪ್ತಿಕರ. ಆರ್ಥಿಕ ಸ್ಥಿತಿ ಅಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ತಿರುಕುಳ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ನೌಕರಿಯಲ್ಲಿ ಕಿರುಕುಳ.

ಸಿಂಹ — ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರೋತ್ಸಾಹ. ನೂತನ ಪರಿಚಯಗಳು.

ಕನ್ಯಾ — ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು. ಕೈಗೊಂಡ ಕಾರ್ಯಗಳಲ್ಲಿ ಜಯ. ಉದ್ಯೋಗದಲ್ಲಿ ಪ್ರಶಂಸೆ. ವ್ಯವಹಾರಗಳಲ್ಲಿ ಪ್ರಗತಿ.

ತುಲಾ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ. ಮಿತ್ರರಿಂದ ವಂಚನೆ. ಉದ್ಯೋಗದಲ್ಲಿ ನಷ್ಟ.

ವೃಶ್ಚಿಕ — ಆರೋಗ್ಯ ಚೆನ್ನಾಗಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಸಾಧಾರಣ. ಅಧಿಕಾರಿಗಳ ಬಗ್ಗೆ ಜಾಗ್ರತೆ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲ. ಉದ್ಯೋಗದಲ್ಲಿ ಕಿರುಕುಳ.

ಧನು — ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಪ್ರೋತ್ಸಾಹ.

ಮಕರ — ಆರೋಗ್ಯ ಉತ್ತಮವಾಗಿರುವುದು. ಆರ್ಥಿಕ ಪರಿಸ್ಥಿತಿ ಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಡಿಮೆ. ಉದ್ಯೋಗದಲ್ಲಿ ನಿರಾಶಾದಾಯಕ ಪರಿಸ್ಥಿತಿ.

ಕುಂಭ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ. ಉದ್ಯೋಗದಲ್ಲಿ ಸಮಸ್ಯೆ. ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ.

ಮೀನ — ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ. ಉದ್ಯೋಗದಲ್ಲಿ ಅಡ್ಡಿ. ಶುಭ ಕಾರ್ಯಗಳು ಜರುಗುವುವು.

ನಂಜನಗೂಡು ತಾಲ್ಲೂಕಿನಲ್ಲಿ ಹಾಲಿನ ಕೇಂದ್ರಗಳು

ರೆಡ್‌ಕ್ರಾಸ್ ಸಂಘದವರು ನಂಜನಗೂಡು ತಾಲ್ಲೂಕಿನಲ್ಲಿ ಹನ್ನೆರಡು ಕಡೆ ಹಾಲಿನ ಕೇಂದ್ರಗಳನ್ನು ತೆರೆದರು.

ಫರ್ನೀಚರುಗಳು ದಿನವಹಿ ಮತ್ತು ತಿಂಗಳಿಗೆ ಬಾಡಿಗೆ ಮೇಲೆ ದೊರೆಯುತ್ತವೆ. ಕೂಡಲೇ ವಿಚಾರಿಸಿ.— ಸಳಿನ್ಸ್, ಸರ್ಕಸ್ ಸರ್ವೀಸರ್ಸ್, 602 ಕಾಲೇಜು ರಸ್ತೆ, ಮೈಸೂರು

CENTRAL INSTITUTE OF COMMERCE,
Vanivilas Market,
MYSORE

Admissions to diploma courses in Commerce, Shorthand and Typewriting are being received on all working days. Make haste and join immediately.

ಸಿಟಿ ಬಸ್ ಸಂಚಾರದಲ್ಲಿ ಬದಲಾವಣೆ

ಮೈಸೂರು ೧೩

ನಗರದಲ್ಲಿ ಏರ್ಪಾಡಾಗಿರುವ ಸರ್ಕಾರಿ ಬಸ್ ಸರ್ವೀಸಿನ ೫, ೯ ಮತ್ತು ೩ನೇ ಮಾರ್ಗಗಳಲ್ಲಿ ಸ್ವಲ್ಪ ಬದಲಾವಣೆಗಳನ್ನು ಇದೇ ೧೫ನೇ ತಾರೀಕಿನಿಂದ ಮಾಡಲಾಗುವುದು. ಜಲಪುರಿಯಿಂದ ಚಾಮುಂಡಿಪುರಕ್ಕೆ ದೇವರಾಜ ಮಾರ್ಕೆಟ್ ಮತ್ತು ಕೃಷ್ಣಮೂರ್ತಿಪುರದ ಮೂಲಕ ಹೋಗುವ ೫ನೇ ನಂಬರು ಬಸ್ಸು ಇನ್ನು ಮುಂದೆ ಕೃಷ್ಣಮೂರ್ತಿಪುರದವರೆಗೆ ಮಾತ್ರ ಹೋಗುವುದು. ನಾರಾಯಣಶಾಸ್ತ್ರಿ ರಸ್ತೆ, ಗನ್ ಹೌಸ್ ರಸ್ತೆ, ರಾಮಸ್ವಾಮಿ ಸರ್ಕಲ್, ಕೋರ್ಟ್ ಫೈರ್ ಬ್ರಿಗೇಡ್‌ಗಳ ಮೂಲಕ ಹಾದುಹೋಗುವುದು.

ದೇವರಾಜ ಮಾರ್ಕೆಟ್ಟಿನಿಂದ ಹಿನಕಲ್ಲಿಗೆ ಹೋಟೆಲು ಮೆಟ್ರೋಪೋಲ್ ಮತ್ತು ಜಲದರ್ಶಿನಿ ಮಾರ್ಗದಲ್ಲಿ ಹೋಗುವ ೯ನೇ ನಂಬರು ಬಸ್ಸು ಕೃಷ್ಣರಾಜ ಆಸ್ಪತ್ರೆ, ರೈಲ್ವೆ ಸ್ಟೇಷನ್, ಮೆಟ್ರೋಪೋಲ್ ಹೋಟೆಲ್‌ವರೆಗೆ ಹೋಗಿ ಅಂತರ ಪೆಟ್ರೋಲ್ ಬಂಕಿಗೆ ಬಂದು ಅಲ್ಲಿಂದ ಆಕಾಶವಾಣಿ ಕಟ್ಟಡ, ಪಡುವಾರಹಳ್ಳಿ, ಪ್ರೀಮಿಯರ್ ಸ್ಟುಡಿಯೋ ಮಾರ್ಗವಾಗಿ ಹಿನಕಲ್ಲಿಗೆ ಹೋಗುವುದು.

ಸರಸ್ವತಿಪುರದ ಓವರ್‌ನೆಸ್ಸಿನಲ್ಲಿ ನಿಲ್ಲುವ ೩ನೇ ನಂಬರ್ ಬಸ್ಸು ೧ನೇ ಕ್ರಾಸ್ ಮೂಲಕ ಮುಂದಕ್ಕೆ ಹೋಗಿ ವಾಪಸು ಬರುತ್ತಾ ೩ನೇ ಕ್ರಾಸು ಮೂಲಕ ಹಿಂದಿರುಗುವುದು. ಈಗಿರುವಂತೆ ಫೈರ್ ಬ್ರಿಗೇಡ್‌ವರೆಗೆ ಹೋಗುವುದಿಲ್ಲ.

ಸೇವಾದಳದ ಸಭೆ

ನಗರದಲ್ಲಿರುವ ಸೇವಾದಳದ ವರ್ಷದ ಸಮಾವೇಶ ಸಂಘ ಕಳೆದ ಶನಿವಾರ ಸದ್ವಿದ್ಯಾ ಪಾಠಶಾಲೆಯಲ್ಲಿ ಶ್ರೀ ಎಂ. ಎನ್. ರಾಮಚಂದ್ರ ಜೋಯಿಸರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಪ್ರಾರ್ಥನೆಯಾದ ನಂತರ ಕೇಂದ್ರ ಸಂಘಟನಾ ಕಾರ್ಯದರ್ಶಿ ಶ್ರೀ ರುದ್ರಾಳಿ ಚೆನ್ನಬಸವಯ್ಯನವರು ಭಾಷಣ ಮಾಡಿ, ಸೇವಾದಳದ ಕಾರ್ಯಕ್ಷೇತ್ರವನ್ನು ವಿವರಿಸಿದರು. ಸಭೆಯ ಕಾರ್ಯದರ್ಶಿ ಶ್ರೀ ಕೆ. ಎನ್. ನಾರಾಯಣಸ್ವಾಮಿಯವರು ಸೇವಾದಳ ಮಾಡಿರುವ ಕಾರ್ಯಗಳ ಸಂಕ್ಷಿಪ್ತ ಪರಿಚಯ ಮಾಡಿಕೊಟ್ಟರು. ಶ್ರೀ ಎಂ. ಗಂಗಾಧರ್‌ರವರು ಒಪ್ಪಿಸಿದ ವರದಿ ಮತ್ತು ಲೆಕ್ಕಪತ್ರಗಳನ್ನು ಅಂಗೀಕರಿಸಲಾಯಿತು. ೫೬-೫೭ನೇ ಸಾಲಿನ ಕಾರ್ಯನಿರ್ವಾಹಕ ಸಮಿತಿಯ ಚುನಾವಣೆ ನಡೆದು, ಹೆಚ್. ಸುಬ್ಬರಾಯರು ಅಧ್ಯಕ್ಷರಾಗಿಯೂ, ಎಂ. ಎನ್. ರಾಮಚಂದ್ರ ಜೋಯಿಸರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್. ಕೆ. ಲಕ್ಷ್ಮೀನರಸಿಂಹಯ್ಯನವರು ಗೌ|| ಕಾರ್ಯದರ್ಶಿಗಳಾಗಿಯೂ, ಶ್ರೀ ಸಿ. ನರಸಿಂಗರಾಯರು ಸಹಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಕೆ. ಎಸ್. ನಾರಾಯಣಸ್ವಾಮಿ, ಕೆ. ರಾಮಕೃಷ್ಣ, ಎಂ. ಸಿ. ತಿಪ್ಪಯ್ಯ, ಡಾ|| ಶಿವರಾಮಯ್ಯ, ಸಿ. ಎಸ್. ಅನಂತಯ್ಯ, ಹೆಚ್. ಆರ್. ಕೃಷ್ಣಾಚಾರ್, ಎಂ. ಪಿ. ಶ್ರೀನಿವಾಸರಾವ್, ಎ. ಬಾಲಯ್ಯ ಮತ್ತು ಶ್ರೀಮತಿಗಳಾದ ಕಮಲಮ್ಮ, ರುಕ್ಮಿಣಿ, ಸರೋಜಿನಿ ಪುರುಷೋತ್ತಮ್, ಬಿ. ಎಸ್. ರಾಜಮ್ಮನವರುಗಳು ಸದಸ್ಯರಾಗಿ ಚುನಾಯಿತರಾದರು.

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ

ಗಡಿಯಾರಗಳು ಮತ್ತು ಕನ್ನಡಕಗಳು

ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ. ಇಂದೇ ಭೇಟಿ ಕೊಡಿ.

ಕೆ. ಎಸ್. ಲಕ್ಷ್ಮಣ ಐಯ್ಯರ್

ಅಂಡ್ ಸನ್ಸ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು, ಅಶೋಕ ರಸ್ತೆ, ಮೈಸೂರು [Estd. 1911]

Edited Printed and Published by A. R. Nagarajan at Sadhvi Press, D. Subbiah Road, Mysore

ರಷ್ಯದಲ್ಲಿ ಆಹಾರದ ಬೆಲೆ ಇಲ್ಲಿಗಿಂತ ೩೦ ರಷ್ಟು ಹೆಚ್ಚು

ರಷ್ಯದಲ್ಲಿ ಆಹಾರ ಧಾನ್ಯಗಳ ಬೆಲೆಯು ಭಾರತದಲ್ಲಿರುವುದಕ್ಕಿಂತ ೩೦ ರಷ್ಟು ಹೆಚ್ಚಾಗಿರುವುದೆಂದೂ ಇತರ ಸಾಮಾನುಗಳಿಗೂ ವಿಪರೀತ ಬೆಲೆಯಾಗುತ್ತಿರುವುದಾಗಿಯೂ, ಅಲ್ಲಿಗೆ ಹೋಗಿ ವಾಪಸು ಬಂದಿರುವ ಹಿಂದ್ ಮಜದೂರ್ ಸಭೆಯ ಅಧ್ಯಕ್ಷ ಜೆ. ಎಸ್. ಮತ್ತ್ಯಾರವರು ತಿಳಿಸಿದ್ದಾರೆ. ಅಲ್ಲಿ ಒಂದು ಬಾಚಣಿಗೆಗೆ ೪|| ರೂ. ಮತ್ತು ಒಂದು ಜೊತೆ ಷೂಗೆ ೨೦೦ ರೂ.

ಕೈ ಗಡಿಯಾರ ಕದ್ದುದಕ್ಕಾಗಿ ಶಿಕ್ಷೆ

ಕಳೆದ ಫೆಬ್ರವರಿ ೯ನೇ ತಾರೀಕು, ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ಎಂ. ಕೆ. ತಿಂಗರಾಚಾರ್ಯರ ಮನೆಗೆ ಭಕ್ತವನ್ನು ಹೇರಿಕೊಂಡು ಬಂದಿದ್ದ ಶ್ರೀರಂಗಪಟ್ಟಣದ ತಾಲ್ಲೂಕು ಚಿನ್ನಹಳ್ಳಿ ಗವಿಗೌಡ ಎಂಬುವನು ಶ್ರೀ ತಿಂಗರಾಚಾರ್ಯರ ಕೈ ಗಡಿಯಾರವೊಂದನ್ನು ಕದ್ದಿದ್ದನೆಂದು ಲಕ್ಷ್ಮೀಪುರದ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರ ನ್ಯಾಯಾಧೀಶರು ಈ ಕೃತ್ಯ ಅಪರಾಧಿತನಿಗೆ ಒಂದು ವಾರ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ ವರೆಗೆ
ಕಡಲೆಕಾಯಿ	೧೩ ೦ ೦	೨೨ ೪ ೦
ಹೊಂಗೆಬೀಜ	೨೯ ೧೩ ೦	
ಎಳ್ಳು	೮೫ ೧೪ ೦	
ಹುರುಳಿ	೩೭ ೮ ೦	
ಹೆಸರು	೫೫ ೩ ೦	೫೫ ೪ ೦
ಹಲಸಂದೆ	೪೭ ೩ ೦	೫೦ ೧೨ ೦
ಹುಣಿಸೇಹಣ್ಣು	೪ ೧೦ ೨	
ನುಗ್ಗೆಕಾಯಿ	೧೫ ೦ ೦	೧೮ ೧೨ ೦
ತೆಂಗಿನಕಾಯಿ ೧೦೦೦	೧೭೨ ೨ ೦	೧೮೪ ೦ ೦

Pale
BRONKOL
for ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists
711 A. S. Street,
BANGALORE 2

ಕಾವೇರಿ ಸರ್ಕಲ್ ಸೂಪರಿಂಟೆಂಡಿಂಗ್ ಇಂಜಿನೀಯರವರ ಆಫೀಸು, ಮೈಸೂರು

ಪ್ರಕಟಣೆ

ವಿಶ್ವೇಶ್ವರಯ್ಯ ನಾಲಾ ಮತ್ತು ಅದರ ಸೀಳು ನಾಲೆಗಳಿಗೆ ಸಂಬಂಧಪಟ್ಟ ರೈತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಕೃಷ್ಣರಾಜಸಾಗರದ ನೀರಿನ ಮಟ್ಟವು ಬಹಳ ಕಡಿಮೆಯಾಗಿರುವುದರಿಂದಲೂ ಮತ್ತು ಜಲಾಶಯಕ್ಕೆ ನೀರು ಬರದೇ ಇರುವುದರಿಂದಲೂ ಹೈನು ಬೆಳೆಗಳಿಗೆ ಈ ಸಾಲಿನಲ್ಲಿ ನೀರನ್ನು ಸರಬರಾಜು ಮಾಡುವ ಕಾಲವನ್ನು ಜಲಾಶಯಕ್ಕೆ ತೃಪ್ತಿಕರವಾಗಿ ನೀರು ಬರುವವರೆವಿಗೆ ಮುಂದುವರಿಸಲಾಗಿದೆ.

ಹೆಚ್. ಎಸ್. ನರಸಿಂಹ ಅಯ್ಯಂಗಾರ್,
ಸೂಪರಿಂಟೆಂಡಿಂಗ್ ಇಂಜಿನೀಯರವರು,
ಕಾವೇರಿ ಸರ್ಕಲ್, ಮೈಸೂರು

ಲಾರಿ ಉರಿದು ಕ್ಲೀನರನ ಮರಣ

ತೀರ್ಥಹಳ್ಳಿಯಿಂದ ಶಿವಮೊಗ್ಗೆಗೆ ಕಳೆದ ೧೬ನೇ ತಾರೀಕು ಹೋಗುತ್ತಿದ್ದ ಸೌದೆ ತುಂಬಿದ ಲಾರಿಯೊಂದು ಹತ್ತಿಕೊಂಡು ಅದರ ಕ್ಲೀನರ್ ಕುಂಬುರಾಮ ಎಂಬುವನು ಸುಟ್ಟು ಮೃತಪಟ್ಟನು. ಲಾರಿಯ ಪೆಟ್ರೋಲ್‌ಟ್ಯಾಂಕು ಸೋರಿ ಬೆಂಕಿ ಹತ್ತಿಕೊಂಡಿತೆಂದೂ, ಲಾರಿಯೂ ಸೌದೆಯೂ ಉರಿದುಹೋದುವೆಂದೂ ಹೇಳಲಾಗಿದೆ. ಡ್ರೈವರ್ ಪಣ್ಣೇಗೌಡ ಮತ್ತು ಮೂವರು ಶಿವಮೊಗ್ಗಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವರು.

ಪ್ರವಾಹ ಪ್ರದೇಶಗಳಿಗೆ ಕೇಂದ್ರ ಆಹಾರ ಸಂಸ್ಥೆಯ ಬಿಸ್ಕತ್ತು

ಮೈಸೂರು ಕೇಂದ್ರ ಆಹಾರ ಸಂಶೋಧನಾಲಯದವರು ಬೆಂಗಳೂರಿನ ಶಾಖಾ ವಿಜ್ಞಾನ ಮಂದಿರದವರ ಸಹಾಯದೊಡನೆ ವಿವಿಧೋದ್ದೇಶದ ಬಿಸ್ಕತ್ತುಗಳನ್ನು ಸಿದ್ಧಗೊಳಿಸಿದ್ದಾರೆ. ಅದರಲ್ಲಿ ಸಾಮಾನ್ಯ ಬಿಸ್ಕತ್ತುಗಳಿಗಿಂತ ೩ರಷ್ಟು ಹೆಚ್ಚು ಪೌಷ್ಟಿಕಾಂಶವಿರುವುದು ಅಲ್ಲದೆ ಲವಣ ಮತ್ತು ವಿಟಮಿನ್‌ಗಳು ಹೆಚ್ಚಾಗಿವೆ. ಇಂತಹ ಒಂದು ಟನ್ನಿನಷ್ಟು ಬಿಸ್ಕತ್ತನ್ನು ತಯಾರಿಸಿ ದೆಹಲಿಯಲ್ಲಿ ಗಣ್ಯ ಮನುಷ್ಯರ ಎದುರಿನಲ್ಲಿ ಪ್ರದರ್ಶಿಸಲಾಯಿತು. ನೆಹರೂರವರು ಅದನ್ನು ಪರೀಕ್ಷಿಸಿ, ೧ ಲಕ್ಷ ರೂ ಬೆಲೆಯ ಬಿಸ್ಕತ್ತನ್ನು ತಯಾರಿಸಿ ಪ್ರವಾಹ ಮತ್ತು ಅಭಾವ ಪೀಡಿತ ಪ್ರದೇಶಗಳಿಗೆ ಕಳುಹಿಸುವಂತೆ ಸೂಚಿಸಿರುವುದಾಗಿ ಗೊತ್ತಾಗಿದೆ. ನಾಲ್ಕೈದು ವಾರಗಳಲ್ಲಿ ಈ ಬಿಸ್ಕತ್ತುಗಳನ್ನು ಒದಗಿಸಲಾಗುವುದು.

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ—ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು • ಫೋನ್ ನಂ. 590
— ಭೇಟಿಯ ಕಾಲ —
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ಇವರು ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು ವಿಮಾನದಲ್ಲಿ ಸಂಚರಿಸುವರು
ನವರತ್ನ—ಕಲ್ಪ
ಉಪಯೋಗಗಳು
ಇದು ವಶ್ಯ, ಕೆಂಪು, ಮುಗ್ಗು, ಹವಳ, ಪಚ್ಚೆ, ಗೋಮೇಧಿಕ, ನೀಲ, ವಜ್ರ ರಾಗಿಣಿ, ಮುತ್ತುಪ್ರಕಾಶ ಇವೆ ಮುಂತಾದ 9 ಅಮೂಲ್ಯ ರತ್ನಗಳ ಸಂಯೋಗ. ಇದರಿಂದ ನರಗಳ ದೌರ್ಬಲ್ಯ, ಅಜೀರ್ಣ ಸಂಬಂಧದ ವ್ಯಾಧಿಗಳು, ದೀರ್ಘ ಕೆಮ್ಮು, ಕ್ಷಯ ವ್ಯಾಧಿ, ಸಾಕಿಣಿ ಬಹುಮೂತ್ರ, ಅಸ್ತಮಾ ಮತ್ತು ಇನ್ನು ಇತರ ಎಲ್ಲಾ ಸಾಮಾನ್ಯ ಹಾಗೂ ಅಸಾಧ್ಯ ವ್ಯಾಧಿಗಳೂ ಸಂಪೂರ್ಣವಾಗಿ ಗುಣಹೊಂದುವುವು. ಅತ್ಯುತ್ತಮ ಆರೋಗ್ಯದಾಯಕವಾದ ದಿವ್ಯೌಷಧಿ ಇದಾಗಿದೆ.
NAVRATNA KALPA PHARMACY,
Jullundur City (India)
Grams. NAVRATNA

ಪ್ರಭಾ ★ ಲಕ್ಷ್ಮೀದಲ್ಲೀ
ಬರಲಿದೆ
ರಾಜ್‌ಕಮಲ್ ಕಲಾ ಮಂದಿರ್ ರವರ ಮನಮುಗ್ಧ ಮತ್ತು ಹಿಂದೆಂದೂ ತೆರೆಯ ಮೇಲೆ ನೋಡದಂತಹ ಹೊಸ ರೀತಿಯ ಚಿತ್ರ



ತೂಫಾನ್ - ಔರ್ ದೀಯ
ಮೈಸೂರಿನ ಚಲನಚಿತ್ರ ಪ್ರೇಮಿಗಳಿಗೆ ರಸದೌತಣ
ಪಾತ್ರ:—ನಂದ, ಸತೀಶ್ ವ್ಯಾಸ್, ಉಲ್ಲಾಸ್, ಕೇಶವರಾವ್ ದಾತೆ
ಸಂಗೀತ : ವಸಂತದೇಸಾಯ್ : ದಿಗ್ದರ್ಶನ : ಪ್ರಭಾತ್‌ಕುಮಾರ್

ಟೆಲಿಫೋನ್- ನಂ. 792
ಕೊರ್ಗ್ ಮ್ಯಾಚ್
ಸ್ಥಾಪಿತ 1932 : ಫೋನ್ 811
ಶ್ರೀ ಕೃಷ್ಣಾ ಜ್ಯುಯೆಲರಿ ಮಾರ್ಟ್,
ಸಯ್ಯಾಜಿರಾವ್ ರಸ್ತೆ, ಮೈಸೂರು
[illegible]

ಅಂಚಿನ ಪತ್ರಿಕೆ 3 ಕಾಸು
ಲಗ್ನದ ಜವಳಿ
ಗೌ॥ ಸಿಲ್ಕ್ ಸೀರೆಗಳು
ಕರ್ನಾಟಕಂ, ಫ್ಲಾನ್ನೆಲ್, ಲಿನೆನ್, ಡಿಂಪಿಗಲ್
[illegible]
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ ೧೯] SADHVI : MONDAY 18-6-1956 ಮೈಸೂರು : ಸೋಮವಾರ ೧೮-೬-೧೯೫೬ [ಸಂಚಿಕೆ : ೨೬೬

ಬೊಂಬಾಯಿ ಬಗ್ಗೆ ನಿರ್ಧಾರಕ್ಕೆ ಮಹಾರಾಷ್ಟ್ರದ ಅಸಮ್ಮತಿ

ಮೈಸೂರು ಜಿಲ್ಲೆಯಲ್ಲಿ ಕ್ಷಾಮದ ಪರಿಸ್ಥಿತಿ

ತಕ್ಷಣ ಪರಿಹಾರಕ್ಕಾಗಿ ಗುರುಪಾದಸ್ವಾಮಿಯವರ ಒತ್ತಾಯ

ಮೈಸೂರು ೧೮

ಮೈಸೂರು ಜಿಲ್ಲೆಯ ಯಳಂದೂರು, ಚಾಮರಾಜನಗರ, ಗುಂಡ್ಲುಪೇಟೆ ಮತ್ತು ನಂಜನಗೂಡು ತಾಲ್ಲೂಕುಗಳಲ್ಲಿನ ಪರಿಸ್ಥಿತಿಯನ್ನು ಕ್ಷಾಮ ಅಭಾವವೆಂದು ಕರೆಯುವುದು ಸರಿಯಲ್ಲ. ಅಲ್ಲಿ ತೀವ್ರ ಕ್ಷಾಮ ಉಂಟಾಗಿದೆ. ಆದ್ದರಿಂದ ಸರ್ಕಾರವು ಪರಿಹಾರ ಕಾರ್ಯಕ್ಕೆ ಇನ್ನೂ ಹೆಚ್ಚಿನ ಗಮನ ನೀಡಬೇಕು ಎಂಬುದಾಗಿ ಪಾರ್ಲಿಮೆಂಟ್ ಸದಸ್ಯ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಆ ಪ್ರದೇಶಗಳಲ್ಲಿ ಇತ್ತೀಚೆಗೆ ಪ್ರವಾಸ ಮಾಡಿದ ನಂತರ ಪತ್ರಿಕಾ ಗೋಷ್ಠಿಯೊಂದರಲ್ಲಿ ತಿಳಿಸಿದರು.

ತಾವು ಸಂಚರಿಸಿದ ಭಾಗಗಳಲ್ಲಿನ ಪರಿಸ್ಥಿತಿಯನ್ನು ಅವರು ವಿವರಿಸಿ, ಹಲವು ಕಡೆ ಮೇವಿನ ಅಭಾವದಿಂದ ಜಾನುವಾರುಗಳನ್ನು ಅಲ್ಪ ಬೆಲೆಗೆ [illegible] ಮಾರಲಾಗುತ್ತಿದೆಯೆಂದೂ ಚಾಮರಾಜನಗರ ತಾಲ್ಲೂಕಿನ [illegible] ಗ್ರಾಮದಲ್ಲಿ ಉಪವಾಸದಿಂದ ೩೦ ಜನ ಮೃತಪಟ್ಟರೆಂಬ ಸುದ್ದಿ ತಿಳಿದುಬಂದುದಾಗಿ ಹೇಳಿದರು.

ಸರ್ಕಾರವು ಪರಿಸ್ಥಿತಿಯ ತೀವ್ರತೆಯನ್ನು ಪೂರ್ಣವಾಗಿ ಅರಿತಿಲ್ಲವೆಂದೂ ಮತ್ತು ಕೃಷಿಕರಿಗೆ [illegible] ಕಾಲದಲ್ಲಿ ಸಾಧಾರಣವಾಗಿ ಕೊಡಬೇಕಾದ [illegible] ಲಂಚದ ರೂಪದಲ್ಲಿ ಖಾಲಿಯಾಗುತ್ತಿದೆಯೆಂದೂ ಅವರು ಆಕ್ಷೇಪಿಸಿದರು.

ಕ್ಷಾಮದಿಂದ ನರಳುತ್ತಿರುವ ೪॥ ಲಕ್ಷ ಜನರಿಗೆ ಸರ್ಕಾರವು ಒದಗಿಸಿರುವ ೧॥ ಲಕ್ಷ ರೂ. ಗಳು ಏತಕ್ಕೂ ಸಾಲದೆಂದೂ ಕೊನೆಯ ಪಕ್ಷ ೧೦ ಲಕ್ಷ ರೂ. ದ್ರವ್ಯ ಸಹಾಯವನ್ನಾದರೂ ನೀಡಬೇಕೆಂದೂ ಸೂಚಿಸಿದರು.

ಕ್ಷಾಮ ನಿವಾರಣೆಗಾಗಿ ಅವರು ಸಲಹೆಗಳನ್ನಿತ್ತು, ಜಿಲ್ಲೆಯ ಆ ಭಾಗಗಳನ್ನು ಕ್ಷಾಮಪ್ರದೇಶವೆಂದು ಸರ್ಕಾರವು ತಕ್ಷಣ ಘೋಷಿಸಿ ಕೇಂದ್ರದ ಸಹಾಯದಿಂದ ಆಹಾರ ಮತ್ತು ಮೇವನ್ನು ಅಲ್ಲಿ [illegible] ಕೇಂದ್ರದಲ್ಲಿ ಶೇಖರಿಸಿ ಅಲ್ಪ ಬೆಲೆಗೆ ಜನರಿಗೆ ದೊರಕಬೇಕೆಂದೂ, ಸಾಧ್ಯವಾದರೆ ಉಚಿತ ಗಂಜಿ ಕೇಂದ್ರಗಳನ್ನು ತೆರೆಯಬೇಕೆಂದೂ [illegible] ನಗರ-ಸತ್ಯಮಂಗಲ ರೈಲ್ವೆ [illegible] ಕಾರ್ಯವನ್ನು ಕ್ಷಾಮ ಪರಿಹಾರ ಕ್ರಮವಾಗಿ ಆರಂಭಿಸಿ, ಆ ಕೇಂದ್ರವನ್ನು ಸರ್ಕಾರವು ಒತ್ತಾಯಿಸಬೇಕೆಂದೂ ಕೋರಿದರು.

ಬೆಂಗಳೂರು ಲೇಡಿಸ್ ಕ್ಲಬ್ ಶಾಲೆ ಕಾರ್ಯಕ್ರಮ

[illegible]

ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರು

ಡಾ. ಶಿವಮೂರ್ತಿಶಾಸ್ತ್ರಿಯವರ ಆಯ್ಕೆ

ಬೆಂಗಳೂರು ೧೭

ಆಸ್ಥಾನ ವಿದ್ವಾನ್ ಬಿ. ಶಿವಮೂರ್ತಿಶಾಸ್ತ್ರಿಗಳವರು ಕನ್ನಡ ಸಾಹಿತ್ಯ ಪರಿಷತ್ತಿನ ನೂತನ ಅಧ್ಯಕ್ಷರಾಗಿ ನಿನ್ನೆ ಚುನಾಯಿತರಾದರು. ಪರಿಷತ್ತಿನ ಸಕಲ ಸದಸ್ಯರ ವಿಶೇಷ ಅಧಿವೇಶನದಲ್ಲಿ ಚುನಾವಣೆ ನಡೆದು ಶ್ರೀಗಳಾದ ಬಿ. ಶಿವಮೂರ್ತಿಶಾಸ್ತ್ರಿಯವರಿಗೆ [illegible], ಶ್ರೀ [illegible] ಕೃಷ್ಣರಾಯರಿಗೆ [illegible] ಮತ್ತು ಶ್ರೀ ಹೆಚ್. [illegible] ಓಟುಗಳು ಬಂದುವು. ಒಂದು ಮತಪತ್ರ ತಿರಸ್ಕೃತವಾಯಿತು.

ಶ್ರೀಗಳಾದ ಡಿ. ಆರ್. [illegible] ಮತ್ತು [illegible] ವೆಂಕಟಸುಬ್ಬಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಹೆಚ್. ಎಸ್. [illegible] ಅವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು.

ಗಫಾರ್ ಖಾನರ ಬಂಧನ

ಪಾಕಿಸ್ತಾನ ರಾಷ್ಟ್ರದ ಸಾರ್ವಭೌಮತ್ವಕ್ಕೆ ಧಕ್ಕೆ ತಂದ ಆಪಾದನೆ

ಪಾಕಿಸ್ತಾನದ ಗಡಿನಾಡು ಪ್ರದೇಶದ ಮುಂದಾಳು ಖಾನ್ ಅಬ್ದುಲ್ ಗಫಾರ್ ಖಾನರನ್ನು ನಿನ್ನೆ ಪೆಷಾವರ್ ಬಳಿ [illegible] ಎಂಬಲ್ಲಿ ಬಂಧಿಸಲಾಯಿತು. ಪಾಕಿಸ್ತಾನ ರಾಷ್ಟ್ರದ ಸಾರ್ವಭೌಮತ್ವಕ್ಕೆ ಚ್ಯುತಿ ತರುವಂತೆ ಭಾಷಣ ಮಾಡುತ್ತಿರುವುದು, ಪಾಕಿಸ್ತಾನದ ಭದ್ರತೆ ಮತ್ತು ಪ್ರಾದೇಶಿಕ ಅಸ್ತಿತ್ವಕ್ಕೆ ಧಕ್ಕೆ ಬರುವಂತೆ ಮತ್ತು ಶಾಸನಬದ್ಧ ಸರ್ಕಾರದ ಮೇಲೆ ದ್ವೇಷ ಮತ್ತು ಅವಹೇಳನ ಉಂಟಾಗುವಂತೆ ಮಾಡುತ್ತಿರುವುದು ಇವೇ ಮುಂತಾದ ಕಾರಣಗಳನ್ನು ವಸ್ತಗಿರಿಗೆ ಕೊಡಲಾಗಿದೆ.

ಗಫಾರ್ ಖಾನರನ್ನು ಪೆಷಾವರಿನ ಅಡಿಷನಲ್ [illegible] ಕೋರ್ಟಿನಲ್ಲಿ ಬಹಿರಂಗವಾಗಿ [illegible] ತಿಂಗಳು ೨೭ ರಿಂದ ವಿಚಾರಣೆಗೆ ಗುರಿಪಡಿಸಲಾಗುವುದು. ಅವರ ವಿಚಾರಣೆಗಾಗಿಯೇ ಈ ಕೃತ್ಯ [illegible] ವಿಶೇಷವಾಗಿದೆ. [illegible] ವರ್ಷಗಳ ಹಿಂದೆ ಅವರನ್ನು ಬಿಡುಗಡೆ ಮಾಡಲಾಗಿತ್ತು.

ಭಾರತಕ್ಕೆ ಫ್ರಾನ್ಸಿನ ೧೧೦ ಜೆಟ್ ವಿಮಾನಗಳು

ಫ್ರಾನ್ಸಿನ ೧೧೦ ಜೆಟ್ ವಿಮಾನಗಳನ್ನು ಭಾರತಕ್ಕೆ ಮಾರಾಟ ಮಾಡುವ ಸಂಬಂಧವಾಗಿ ಈವಾರ ಭಾರತ ಮತ್ತು ಫ್ರಾನ್ಸುಗಳಿಗೆ ದೆಹಲಿಯಲ್ಲಿ ಒಪ್ಪಂದಕ್ಕೆ ರುಜು ಆಗುವುದೆಂದು ಹೇಳಲಾಗಿದೆ. ಇದಲ್ಲದೆ ಇನ್ನೂ ೧೦೦ ಶಿಕ್ಷಣ ಜೆಟ್ ವಿಮಾನವನ್ನು ಭಾರತವು ಕೊಳ್ಳಲಿದೆ.

ಮಹಾ ಪಂಜಾಬು ಚಳುವಳಿಗಾರರ ಮೇಲೆ ಲಾಠಿ ಪ್ರಹಾರ

ಪಂಜಾಬಿನ ಹೋಷಿಯಾರ್‌ಪುರ [illegible] ೨೦೦ ಜನ ಮಹಾ ಪಂಜಾಬು ಚಳುವಳಿ ದೊಂಬಿಗರ ಮೇಲೆ ಪೊಲೀಸರು ಲಾಠಿ ಪ್ರಹಾರ ಮಾಡಿದರು. ೪೦ ಜನರನ್ನು ಬಂಧಿಸಿದರು. ಚಳುವಳಿಗಾರರು ಪೊಲೀಸರ ಮೇಲೆ ಕಲ್ಲು ಬೀರಿ ೫ ಜನರನ್ನು ಗಾಯಗೊಳಿಸಿದರೆಂದು ಹೇಳಲಾಗಿದೆ.

ಹುಣಸೂರಿನಲ್ಲಿ ಕಾಂಗ್ರೆಸ್ ನಿಧಿಗೆ ೮೦೧ ರೂ. ಕಾಣಿಕೆ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ವೈಭವದ ಸ್ವಾಗತ

ಮೈಸೂರು ೧೮

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್. ಚನ್ನಯ್ಯನವರು ನಿನ್ನೆ ಹುಣಸೂರು, ಕಟ್ಟೆ ಮಳಲವಾಡಿ, ಹನಗೋಡು, ಹುಸೇನಪುರ ಮುಂತಾದ ಕಡೆಗಳಲ್ಲಿ ಪ್ರವಾಸ ಮಾಡಿದರು. ಅವರಿಗೆ ಮಹಾಜನರು ಅದ್ಭುತವಾದ ಸ್ವಾಗತವನ್ನಿತ್ತರು. ಒಟ್ಟು ೮೦೧ ರೂ. ಕಾಣಿಕೆಯನ್ನು ಕಾಂಗ್ರೆಸ್ಸಿಗಾಗಿ ಅರ್ಪಿಸಿದರು. ಹುಣಸೂರಿನಲ್ಲಿ ಅಧ್ಯಕ್ಷರ ಮೆರವಣಿಗೆ ಮಾಡಲಾಯಿತು. ಪೌರಸಭೆಯವರು ಮಾನಪತ್ರವನ್ನು ಅರ್ಪಿಸಿದರು.

ನೇಣು ಹಾಕಿಕೊಂಡು ಮರಣ

ರಾಜಧಾನಿಯ ನಂಜನಗೂಡು ಉಕ್ಕಡದ ಬಳಿ ಹುಣಸೆ ಮರವೊಂದಕ್ಕೆ ಸುಮಾರು ೫೦ ವರ್ಷ ವಯಸ್ಸಿನವನೊಬ್ಬನು ನೇಣು ಹಾಕಿಕೊಂಡು ಮೃತಪಟ್ಟಿರುವುದಾಗಿ ವರದಿಯಾಗಿದೆ. ಅತನು ತಳ್ಳುವ ಗಾಡಿಯವನೆಂದು ಹೇಳಲಾಗಿದೆ. ಮರದ ಕೆಳಗೆ ಒಂದು ಚೀಲ ಮತ್ತು ಛತ್ರಿಯೂ ಇದೆಯೆಂದೂ, ಮೃತನು ಕಂಬಳಿಯನ್ನು ಹೊದ್ದುಕೊಂಡಿರುವನೆಂದೂ ಗೊತ್ತಾಗಿದೆ.

ಕಾಂಗ್ರೆಸ್ ಕಾರ್ಯಕರ್ತರ ಮೇಲೆ ಶಿಸ್ತಿನ ಕ್ರಮದ ಖಂಡನೆ

ಮಾರ್ಕೆಟ್ ವರ್ತಕರ ಸಂಘದ ನಿರ್ಣಯ

ಮೈಸೂರು ೧೮

ನಗರದಲ್ಲಿರುವ ದೇವರಾಜ ಮಾರ್ಕೆಟ್ ವರ್ತಕರ ಸಂಘದ ಸರ್ವಸದಸ್ಯರ ಸಭೆಯು ಕಳೆದ ಶುಕ್ರವಾರ ನಡೆದು ಸಂಘದ ಅಧ್ಯಕ್ಷ ಶ್ರೀ ಎಂ. ಗೋಪಾಲರಾವ್ ಮತ್ತು ಇತರ ಕಾಂಗ್ರೆಸ್ ಪ್ರಮುಖರುಗಳಾದ ಶ್ರೀಗಳು ಎ. ರಾಮಣ್ಣ ಮತ್ತು ಬಿ. ಬಾಲಸುಬ್ಬಯ್ಯನವರ ಮೇಲೆ ಶಿಸ್ತಿನ ಕ್ರಮವನ್ನು ನಗರ ಕಾಂಗ್ರೆಸ್ ಸಮಿತಿಯು ಕೈಗೊಂಡಿರುವುದನ್ನು ಖಂಡಿಸಲಾಯಿತು. ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿಯು ಉನ್ನತ ವರ್ಗವು ನಗರ ಸಮಿತಿಯ ನಿರ್ಣಯವನ್ನು ತಳ್ಳಿ ಹಾಕಿ ಮೂವರಿಗೂ ನ್ಯಾಯ ದೊರಕಿಸಿಕೊಡಬೇಕೆಂದು ಕೋರಲಾಯಿತು.

ಸ್ವಾಗತ ಸಮಾರಂಭ

ಧರ್ಮ ರತ್ನಾಕರ ಶ್ರೀ ನಂದಿಬಸಪ್ಪನವರು ತಮ್ಮ ಸಹೋದರರ ಮೊಮ್ಮಕ್ಕಳೂ, ಶ್ರೀ ಆರ್. ಪುಟ್ಟಣ್ಣನವರ ಮಕ್ಕಳೂ ಆದ ಶ್ರೀ ಪಿ. ಸದಾನಂದರವರಿಗೆ ಗುಬ್ಬಿಯ ಟಿ. ಎಸ್. ಚಂದ್ರಪ್ಪನವರ ಕುಮಾರಿ ಸೌ॥ ಲೀಲಾಂಬಿಕೆಯನ್ನು ತಂದುಕೊಂಡು ವಿವಾಹ ನಡೆಸಿದ ಸಂಬಂಧದಲ್ಲಿ ನಿನ್ನೆ ರಾಜಧಾನಿಯಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು.

ಬೆಂಗಳೂರಿನ ಶ್ರೀ ಬಾಳಾಚಾರ್ಯರು ಶ್ರೀ ಕಂಬಳಿ ರಾಮಾಚಾರ್ಯರ ದತ್ತುಪುತ್ರ ಶ್ರೀ ಎ. ಆರ್. ಸ್ವಾಮಿರಾಜರಿಗೆ ಶ್ರೀ ಎಸ್. ಎಸ್. ರಾಮಚಂದ್ರರಾಯರ ಕುಮಾರಿ ಸೌ॥ ಪದ್ಮಾವತಿಯನ್ನು ತಂದುಕೊಂಡು ವಿವಾಹ ನಡೆಸಿದ ಸಂಬಂಧದಲ್ಲಿ ನಿನ್ನೆ ನಗರದಲ್ಲಿ ಸ್ವಾಗತ ಸಮಾರಂಭವನ್ನು ಜರುಗಿಸಿದರು.

ತಂದೆತಾಯಿಯನ್ನು ನೋಡಲು ರಂಗಲಕ್ಷ್ಮಿಯ ಹಂಬಲ

ಬೆಂಗಳೂರು ೧೮

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಕೊಲೆ ಪ್ರಕರಣದಲ್ಲಿ ಪೆಟ್ಟು ತಿಂದು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿರುವ ಅವರ ಮಗಳು ರಂಗಲಕ್ಷ್ಮಿಯು ಮನೆಗೆ ಹಿಂದಿರುಗಲೂ ಮತ್ತು ಮಾತಾಪಿತೃಗಳನ್ನು ನೋಡಲೂ ಅತಿ ವ್ಯಕ್ತಪಡಿಸುತ್ತಿರುವಳೆಂದು ವರದಿಯಾಗಿದೆ. ಕೊರೆಯುವ ರಾತ್ರಿ, ಅಫೀಮು ತಿಂದ ಅವರ ಮನೆ ನಾಯಿಯು ಮೊನ್ನೆ ರಾತ್ರಿ ಸತ್ತಿತು.

ಬೊಂಬಾಯಿ ಬಗ್ಗೆ ನಿರ್ಧಾರಕ್ಕೆ ಮಹಾರಾಷ್ಟ್ರ ಕಾಂಗ್ರೆಸ್ಸಿನ ಅತೃಪ್ತಿ

ಅಧಿಕಾರ ಸ್ಥಾನಗಳಿಗೆ ರಾಜೀನಾಮೆಯೂ ಅಸಾಧ್ಯ

ಮಹಾರಾಷ್ಟ್ರ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ನಿನ್ನೆ ನಿರ್ಣಯವೊಂದನ್ನು ಅಂಗೀಕರಿಸಿ ಬೊಂಬಾಯಿಯನ್ನೊಳಗೊಂಡ ಸಂಯುಕ್ತ ಮಹಾರಾಷ್ಟ್ರ ಸಂಸ್ಥಾನದ ಗುರಿಯನ್ನು ಪ್ರಜಾಸತ್ತಾತ್ಮಕ ಮಾರ್ಗಗಳ ಮೂಲಕ ಸಾಧಿಸುವುದೇ ಎಕೈಕ ಮಾರ್ಗವೆಂದು ತಿಳಿಸಿತು. ಸಂಯುಕ್ತ ಮಹಾರಾಷ್ಟ್ರದ ರಚನೆ ಸಂಬಂಧದಲ್ಲಿ ಕಾಂಗ್ರೆಸ್ ಹೈಕಮಾಂಡಿನ ನಿರ್ಧಾರದ ಬಗ್ಗೆ ತೀವ್ರ ಅಸಮಾಧಾನ ಮತ್ತು ಅತೃಪ್ತಿಯನ್ನು ಸೂಚಿಸಲಾಯಿತು. ಪ್ರಾದೇಶಿಕ ಸಮಿತಿಯು ಜನತೆಯ ಒಪ್ಪಿಗೆಯನ್ನು ಪಡೆಯುವ ಸಂಬಂಧವಾಗಿ ಸರ್ಕಾರದ ಅಧಿಕಾರ ಸ್ಥಾನಗಳಲ್ಲಿರುವ ಕಾಂಗ್ರೆಸ್ಸಿನವರು ತಮ್ಮ ಸ್ಥಾನಗಳನ್ನು ಬಿಟ್ಟುಕೊಡುವುದನ್ನು ಅವರ ಇಚ್ಛೆಗೆ ಬಿಡಲಾಯಿತು.

ಕೋಸಿ ಮತ್ತು ಇತರ ನದಿಗಳ ಪ್ರವಾಹ

೨೦೦ ಚದರ ಮೈಲಿ ಪ್ರದೇಶದಲ್ಲಿ ನೀರು

ಬಿಹಾರದ ಕೋಸಿ ಮತ್ತು ಇತರ ನದಿಗಳಲ್ಲಿ ಪ್ರವಾಹವು ಬಂದು ಪೂರ್ಣಿಯಾ, ದರ್ಭಾಂಗ ಜಿಲ್ಲೆಯ ೨೦೦ ಚದರ ಮೈಲಿ ಪ್ರದೇಶವು ನೀರಿನಲ್ಲಿ ಮುಳುಗಿದೆ. ೨೦೦ ಹಳ್ಳಿಗಳ ಸಹಸ್ರಾರು ಎಕರೆ ಪ್ರದೇಶದಲ್ಲಿ ಬೆಳೆಗಳು ನಷ್ಟವಾಗಿವೆ. ಬಲವಾದ ಸೆಳೆತದಿಂದ ೨೫ ಮನೆಗಳು ಕೊಚ್ಚಿ ಹೋಗಿ, ಅನೇಕ ಗುಡಿಸಲುಗಳು ನೀರಿನಲ್ಲಿ ಮುಳುಗಿವೆ. ಈ ಪ್ರವಾಹಗಳಿಂದ ಗಂಗಾ ನದಿಯ ಮಟ್ಟವು ಹೆಚ್ಚಿ ಮುಜಫರ್ ಜಿಲ್ಲೆಯ ೧೧ ಹಳ್ಳಿಗಳಿಗೆ ಅಪಾಯ ಒದಗಿದೆ.

ಉಪನಯನಗಳು

ಆಸ್ಥಾನ ಮಹಾ ವಿದ್ವಾನ್ ಕೆ. ಶ್ರೀನಿವಾಸಾಚಾರ್ಯರ [illegible] ಮದ್ರಾಸಿನ ಕೇಂದ್ರ ಸಿವಿಲ್ ಆಫೀಸಿನ ಶ್ರೀ ಎಸ್. ಆರ್. ಕೃಷ್ಣಸ್ವಾಮಿಯವರು ಮತ್ತು ಮತ್ತೊಬ್ಬ [illegible] ಮಂದಿರದ ಬನ್ನೂರು ಪ್ರಾ॥ ಕೆ. ಜಿ. ರಾಮಚಂದ್ರರವರು ತಮ್ಮ ಪುತ್ರರುಗಳಾದ ಚಿ॥ ಕ॥ [illegible] ನಾಗರಾಜ ಮತ್ತು ಕೆ. ಬಾಲಕೃಷ್ಣರವರಿಗೆ ಉಪನಯನವನ್ನು ನಿನ್ನೆ ನಗರದಲ್ಲಿ ನೆರವೇರಿಸಿದರು.

ಹನುಮರ್ಗಾ ಸಂಘದ ವಾರ್ಷಿಕೋತ್ಸವ

ಮೈಸೂರು ಗಲ

ನಗರದ ಹನುಮರ್ಗಾ ಸಂಘದ ದ್ವಿತೀಯ ವಾರ್ಷಿಕೋತ್ಸವವು ಮೊನ್ನೆ ಮುನಿಸಿಪಲ್ ಕಮೀಷನರ್ ಶ್ರೀ ಎ ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ಬನುಮಯ್ಯನವರ ಪ್ರೌಢಶಾಲೆಯಲ್ಲಿ ನೆರವೇರಿತು

ಪ್ರಾರ್ಥನೆ ಮತ್ತು ಸಂಘದ ಅಧ್ಯಕ್ಷರಾದ ಶ್ರೀ ಕೆ ಕೃಷ್ಣಸ್ವಾಮಿ ಅಯ್ಯಂಗಾರ್ಯರಿಂದ ಸ್ವಾಗತ ಭಾಷಣವಾದನಂತರ ಕಾರ್ಯದರ್ಶಿ ಶ್ರೀ ಎಸ್ ನಾಗರಾಜರಾಯರು ವರದಿಯನ್ನು ಒಪ್ಪಿಸಿದರು

ವಿವಿಧ ಸ್ಪರ್ಧೆಗಳಲ್ಲಿ ಜಯಗಳಿಸಿದವರಿಗೆ ಬಹುಮಾನಗಳನ್ನು ಹಂಚಲಾಯಿತು ಈ ವರ್ಷದ ಛಾಂಪಿಯರ್ ಆದ ಹೆಚ್ ಎಸ್ ಫೂಲ ಸೋತ್ರನ್ ಮತ್ತು ಶ್ರೀ ಸಂಘ ಟಿ ಎಸ್ ನಾಗರಾಜರಾಯರಿಗೆ ವಿಶೇಷ ಬಹುಮಾನಗಳು ದೊರೆತುವು ನಂತರ ಪ್ರೊಫೆಸರಾದ ಎಂ ಎಸ್ ತಿಮ್ಮಯ್ಯ ? ಎಸ್ ನಾರಾಯಣರಾವ್ ಮತ್ತು ಪಿ ಪಿ ಗೋಪಾಲರಾಯರು ಮಾತನಾಡಿ ಸಂಘದ ಯುವಕರಿಗೆ ಸೂಕ್ತ ಸಲಹೆಗಳನ್ನಿತ್ತರು ಅಧ್ಯಕ್ಷರು ಸಂಘದ ಚಟುವಟಿಕೆಗಳನ್ನು ಶ್ಲಾಘಿಸಿದರು

[illegible] ವಂದನಾರ್ಪಣ ಮಾಡಿದನಂತರ ಸಂಘದ ಸದಸ್ಯರಿಂದ [illegible] ಮತ್ತು [illegible] ಲೌಕಿಕ [illegible] ನಾಟಕಗಳನ್ನು ಅಭಿನಯಿಸಲಾಯಿತು

ಮುಂಬಯಿಗಾಗಿ ಕೆರನಿರಾಕರಣ ಸತ್ಯಾಗ್ರಹ

ಬೊಂಬಾಯಿ ನಗರವನ್ನು ಮಹಾರಾಷ್ಟ್ರದಲ್ಲಿ ಸೇರಿಸುವಂತೆ ಮಾಡಲು [illegible] ಬೆಳಗಾವಿ ನಡೆಸಿ [illegible] ವಿಧಾನ [illegible] ಯದ ತಿ ಮಹಾರಾಷ್ಟ್ರ [illegible] ಸಮಿತಿ ಕಾರ್ಯದರ್ಶಿ ಎಸ್ ಎಂ ಜೋಷಿಯವರು [illegible] ತಮ್ಮ ಬೇಡಿಕೆಗಳನ್ನು [illegible] ಮುಗಿದನಂತರ ಕಂದಾಯ ನಿರಾಕರಣ [illegible] ಆರಂಭವಾಗುವುದೆಂದೂ ಅವರು ತಿಳಿಸಿದ್ದಾರೆ

ಹಾಸಿಗೆ-ದಿಂಬು

ಎಲ್ಲವನ್ನೂ [illegible] ಮಾಡುತ್ತೇವೆ

ಬಾಹುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಪ್ರಖ್ಯಾತಿ ಹೊಂದಿರುವ

ಕಣ್ಣಾನೂರ್ ಬನೀನುಗಳನ್ನು

ಉಪಯೋಗಿಸಿ

ದಿ ಚಿನೋಲಿ ಹೊಸ್ಯೆರಿ ಫ್ಯಾಕ್ಟರಿ,

ಕಣ್ಣಾನೂರು

[illegible] 27 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ಬನೀನುಗಳ [illegible] ಗಿರಾಕಿಗಳನ್ನು ಮಹಾಜನರು ಗಮನಿಸಬೇಕಾಗಿ [illegible]

ಎಕ್ಸ್‌ರೇ ಪರೀಕ್ಷೆಯಿಂದ ಸಂತತಿಯ ವಿಕಾರ

ಅಣು ವಿಜ್ಞಾನಿಗಳ ಅಭಿಪ್ರಾಯ

ಬ್ರಿಟನ್ನಿನ ವಿಖ್ಯಾತ ವೈದ್ಯರು ಮತ್ತು ಅಣು ವಿಜ್ಞಾನಿಗಳ ಸಂಯುಕ್ತ ಮಂಡಲಿಯೊಂದು, ಆಸ್ಪತ್ರೆಗಳಲ್ಲಿ ನಡೆಯುವ ಎಕ್ಸ್‌ರೇ ಪರೀಕ್ಷೆಗಳನ್ನು ಕಮ್ಮಿ ಮಾಡಬೇಕೆಂಬ ಆಶ್ಚರ್ಯಕರವಾದ ತೀರ್ಮಾನವನ್ನು ಮಾಡಿದೆ

ಸ್ವಾಭಾವಿಕವಾದ ಅಣು ಪ್ರಸರಣ ಕಾರ್ಯ, ಅಣು ಅಸ್ತ್ರಗಳ ಪ್ರಯೋಗದಿಂದ ಉಂಟಾಗುವ ಪ್ರಸರಣ ಮತ್ತು ದಿನವಹಿ ಜನರು ಎಕ್ಸ್‌ರೇ ಪರೀಕ್ಷೆಗಳ ಪ್ರಭಾವಕ್ಕೆ ಒಳಗಾಗುತ್ತಿರುವುದೇ ಮನುಷ್ಯನ ಜನನ ವಿಕಾರಗಳಿಗೆ ಕಾರಣವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ ಈ ಒಗ್ಗೆ ಎಕ್ಸ್‌ರೇ ಯಿಂದ ಉಂಟಾಗುವ ಪರಿಣಾಮವು ಬಹಳ ತೀವ್ರವಾದುದರಿಂದ ಅದನ್ನು ಕಮ್ಮಿ ಮಾಡಬೇಕೆಂದೂ, ಅವರಲ್ಲೂ ಗರ್ಭಿಣಿಯರ ಹೊಟ್ಟೆಯನ್ನು ಅಂತಹ ಪರೀಕ್ಷೆಗೆ ಗುರಿಪಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದೂ ಅವರು ತಿಳಿಸಿದ್ದಾರೆ

ಪ್ರಸರಣವು ಮಾನವನ ಜನನಾಂಗಗಳಿಗೆ ತಗುಲಿದರೆ ಅವು ಮೂಲ ಬೀಜಗಳಲ್ಲಿ ವಿಪರೀತ ಮಾರ್ಪಾಟನ್ನುಂಟುಮಾಡುವುದರಿಂದ ಮುಂದೆ ಜನನವಾಗುವ ಸಂತತಿಯು ವಿಕಾರಪಡೆಯುವುದೆಂದೂ ಅಣು ಅಸ್ತ್ರಗಳ ಪ್ರಯೋಗದ ಫಲವಾಗಿ [illegible] ಅಣು ಪ್ರಸರಣದಲ್ಲಿ ಇರುವ ಸ್ಟ್ರಾನ್ಷಿಯಂ [illegible] ಮೂಳೆಗಳಿಗೆ ವಿಕಾರವನ್ನುಂಟುಮಾಡುವುದೆಂದೂ [illegible] ಪ್ರಯೋಗಗಳನ್ನು ಮಾಡಬಾರದೆಂದು ಸೂಚಿಸಿದ್ದಾರೆ

ಬಸೂರಿನ ಪತ್ರಯಲ್ಲಿರುವ ಶ್ರೀ ನಂಜುಂಡಯ್ಯನವರು ತಮ್ಮ ಕುಮಾರಿ ಚಂದ್ರಮ್ಮನನ್ನು ನಂಜನಗೂಡಿನ ಶ್ರೀ ಹೊನ್ನಪ್ಪನವರ ಪುತ್ರ ಶ್ರೀ ನಂಜಪ್ಪನವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನಡೆಸಿದರು

ಮೈಸೂರು ಸರ್ಕಲ್ ಸೂಪರಿಂಟೆಂಡಿಂಗ್ ಇಂಜಿನಿಯರವರ ಆಫೀಸು, ಮೈಸೂರು

ಪ್ರಕಟಣೆ

ಮೈಸೂರು ನಗರದ [illegible] ನಾಲಾ ಮತ್ತು ಅದರ [illegible] ಸಂಬಂಧಪಟ್ಟ [illegible] ಸಾರ್ವಜನಿಕರಿಗೆ [illegible] ತಿಳಿಯಪಡಿಸುವುದೇನೆಂದರೆ, ಕೃಷ್ಣರಾಜಸಾಗರದ ನೀರಿನ ಮಟ್ಟವು ಬಹಳ ಕಡಿಮೆಯಾಗಿರುವುದರಿಂದಲೂ ಮತ್ತು ಜಲಾಶಯದ [illegible] ಇರುವುದರಿಂದಲೂ ಬೆಳಗಿನ ಈ ನಾಲೆಯಲ್ಲಿ ನೀರನ್ನು ಸರಬರಾಜು ಮಾಡುವ ಕಾಲವನ್ನು ಜಲಾಶಯಕ್ಕೆ ತೃಪ್ತಿಕರವಾಗಿ ನೀರು ಬರುವವರೆವಿಗೆ ಮುಂದುವರಿಸಲಾಗಿದೆ

ಹೆಚ್ ಎಸ್ ನರಸಿಂಹ ಅಯ್ಯಂಗಾರ್,

ಸೂಪರಿಂಟೆಂಡಿಂಗ್ ಇಂಜಿನಿಯರವರು

ಮೈಸೂರು ಸರ್ಕಲ್ ಮೈಸೂರು

ವಿವಾಹ ಮಹೋತ್ಸವಗಳು

ರಂಜಥ ನಿಯ ದೊಡ್ಡಪೇಟೆ ನಿವಾಸಿ ಶ್ರೀ ಎಂ ಸಿ ರಾಚಯ್ಯನವರು ಶ್ರೀ ಚಲುವಯ್ಯನವರ ಪುತ್ರ ಶ್ರೀ ಸಿ ಕೃಷ್ಣಪ್ಪನವರಿಗೆ ಗುಡ್ಡಗುರಿಕೆ ಶ್ರೀ ಗೋವಿಂದೇಗೌಡರ ಕುಮಾರಿ ಸೌ॥ ಜಯಲಕ್ಷ್ಮಮ್ಮನನ್ನು ತಂದುಕೊಂಡು ನೆನ್ನೆ ವಿವಾಹವನ್ನು ನಗರದಲ್ಲಿ ನೆರವೇರಿಸಿದರು

ಬಟ್ಟೆವರ್ತಕರಾದ ಶ್ರೀ ಎಂ ಶೇಷಗಿರಿರಾಯರು ತಮ್ಮ ಕುಮಾರಿ ಸೌ॥ ಪ್ರಮೀಳಾಬಾಯಿಯನ್ನು ಶ್ರೀ ಎಂ ಎಲ್ ಭಗವಂತರಾಯರ ಕುಮಾರ ಶ್ರೀ ಬಿ ಗೋಪಾಲರಾಯರಿಗೆ ಕೊಟ್ಟು ನೆನ್ನೆ ವಿವಾಹವನ್ನು ಜರುಗಿಸಿದರು

ಬಟ್ಟೆ ವರ್ತಕರಾದ ಶ್ರೀ ಮಹೇಂದ್ರಕರ್ ಶೇಷಗಿರಿರಾಯರು ತಮ್ಮ ಕುಮಾರ ಶ್ರೀ ಎಂ. ಎಸ್ ಶ್ರೀನಿವಾಸರಾಯರಿಗೆ ಛಾಲೆ ಸುಬ್ಬರಾಯರ ಕುಮಾರಿ ಸೌ॥ ಕಮಲಾಬಾಯಿಯನ್ನು ತಂದುಕೊಂಡು ನೆನ್ನೆ ವಿವಾಹವನ್ನು ನಡೆಸಿದರು

ಚಿಕ್ಕಪೇಟೆಯ ಶ್ರೀ ಹೆಚ್ ಶ್ರೀಕಂಠಯ್ಯನವರು ತಮ್ಮ ಪುತ್ರ ಶ್ರೀ ಬಿ ಎಸ್ ಶ್ರೀನಿವಾಸರಾಯರಿಗೆ ರುದ್ರಪಟ್ಟಣದ ಶ್ರೀ ಆರ್ ಎಸ್ ಶ್ರೀಕಂಠಯ್ಯನವರ ಕುಮಾರಿ ಸೌ॥ ವಸಂತಕುಮಾರಿಯವರನ್ನು ತಂದುಕೊಂಡು ನೆನ್ನೆ ವಿವಾಹವನ್ನು ಜರುಗಿಸಿದರು

ಪ್ರಕಟಣೆ

ಪೋಲಿಯೋ ಸ್ಪೆಷಲಿಸ್ಟ್

ಕವಿರಾಜ

ಓಂ ಪ್ರಕಾಶ್

ಬಿ. ಎ., ದೆಹಲಿ

ಮೈಸೂರಿನಲ್ಲಿ

ಧನ್ವಂತರಿ ರಸ್ತೆಯಲ್ಲಿರುವ

ಇಂದ್ರಭವನದಲ್ಲಿ 23-6-56ನೇ ತಾರೀಖು

ಬೆಳಗ್ಗೆ 8ರಿಂದ 12 ಮತ್ತು ಮಧ್ಯಾಹ್ನ 4ರಿಂದ 6ರ ವರೆಗೂ

ಕೆಳಗೆ ಕಂಡ ಖಾಯಿಲೆಗಳಿಂದ ನರಳುತ್ತಿರುವ ರೋಗಿಗಳು ಆಸ್ಪತ್ರೆಯ ಸಲಹೆ ಮತ್ತು ಔಷಧಗಳನ್ನು ಪಡೆಯಬಹುದು

1 ಮುಖ ಕಣ್ಣು ಕೈಕಾಲು, ಅರ್ಧ ಶರೀರ, ಪೂರ್ತಿ ಶರೀರದ ಪಾರ್ಶ್ವವಾಯು, 2. ರಕ್ತದ ಒತ್ತಡ, 3 ಮೂರ್ಛೆ, 4 ಕಿವುಡು, 5 ಕುರುಡು ಅಥವಾ 6 ಮಾನಸಿಕ ತೊಂದರೆಗಳು

ARYAVARTA POLIO ASHRAM,

Phone 27858

114 E Kamla Nagar, DELHI 6.

ಇದಲ್ಲದೆ ಮತ್ತು ಬಿಳಿ ರೋಗ

ಆಯುರ್ವೇದಿಕ್ ಪೋಲಿಯೋ ಆಸ್ಪತ್ರೆ

ಸುಲಭದ ಖಾಯಿಲೆಗಳಿಗೆ ಔಷಧಿ ತಿಳಿಸುವ

ಪೋಲಿಯೋಮೈಲಿಟಿಸ್ ಮತ್ತು ಆಯುರ್ವೇದ

ಎಂಬ ಪುಸ್ತಕ ಇಂಗ್ಲಿಷ್ ಪುಸ್ತಕಕ್ಕೆ ಬೆಲೆ

ರೂ 7 8 0, ಪೋಸ್ಟೇಜು 14 ಆಣೆ

ಹಿಂದಿ ಇಂಗ್ಲಿಷ್ ಅಥವಾ ಹಿಂದಿಯಲ್ಲಿ

ಪತ್ರ ವ್ಯವಹಾರ

○ ಪೌರಸಭಾ ಅಕೌಂಟ್ಸ್ ಅಧಿಕಾರಿಗಳಾದ ಶ್ರೀ ಕೆ. ರಾಮಚಂದ್ರರಾವ್ ಸಿಂಧ್ಯರವರು ತಮ್ಮ ಕುಮಾರಿ ಸೌ॥ ಶಾಂತಾಬಾಯಿಯನ್ನು ಬೆಂಗಳೂರಿನ ಪಟೇಲ್ ಶ್ರೀ ಸುಬ್ಬಣ್ಣರಾವ್ ಮೋಹಿತೆಯವರ ಪುತ್ರ ಶ್ರೀ ಎಸ್ ಮುಕ್ತಾಜಿರಾವ್ ಮೋಹಿತೆಯವರಿಗೆ ಕೊಟ್ಟು ಕಳೆದ ಶುಕ್ರವಾರ ನಗರದಲ್ಲಿ ವಿವಾಹವನ್ನು ನೆರವೇರಿಸಿದರು.

ಶ್ರೀ ಶಾರದಾ ಸಂಗೀತ ನಾಟಕ ಮಂಡಲಿ,

ಗೋಕಾಕ್

17-6-56 ನೇ ಭಾನುವಾರದಿಂದ

ಪ್ರತಿದಿನ ಸಂಜೆ 6—30 ಘಂಟೆಗೆ

ಅರಮನೆ ಮೈಸೂರು ಬೀರಾಂಗಣದಲ್ಲಿ

★ ಮಾನವತಿ ★

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಕಣ್ಣಿಯೂ ಕೋವಿಯೂ

ಕಣ್ಣು ಗುರಿಯನ್ನು ಕಳ್ಳಬಹುದು

ರವಿಯೂ ಹಸ್ತಮದಲ್ಲಿ

ಉದಯಿಸಬಹುದು !!

ಅದರೆ ಡಾ॥ [illegible] ವೈದ್ಯರ ಚಿಕಿತ್ಸೆಯು [illegible] ಯಲ್ಲಿ ವಿಕಾರವನ್ನು [illegible] ಸಂಶಯವಿಲ್ಲ

[illegible] ಅತ್ಯಂತ ಶಕ್ತಿಯನ್ನು, ಆರೋಗ್ಯವನ್ನು [illegible] ಸಂಶಯವಿಲ್ಲ

ಭಾರತದ [illegible] ವಿಧಾನದ ಚಿಕಿತ್ಸೆಗಳನ್ನು [illegible] ಭಾರತದಲ್ಲಿ ಪ್ರಪ್ರಥಮವಾಗಿ [illegible] ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ [illegible] ಉಂಟುಮಾಡಿರುವರು [illegible] ಚಿಕಿತ್ಸೆಯನ್ನು ಮೆಚ್ಚಿದ್ದಾರೆ

[illegible] ಡಾ॥ [illegible] ದೇಶದಲ್ಲಿ ಮತ್ತು ವಿದೇಶದಲ್ಲಿ [illegible]

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ [illegible]

ಬೆಳಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4ರಿಂದ ರಾತ್ರಿ 9 ಘಂಟೆ ವರೆಗೆ

ರಾಜಾ ಮೆಡಿಕಲ್ ಹಾಲ್,

ಎಲ್ ನಂ 1 745 ಅಶೋಕಾ ರಸ್ತೆ ಮೈಸೂರು

(ಮೈಸೂರು ಬ್ಯಾಂಕ್ ಬಳಿ ಬಾಗಿಲಿನ 3ನೇ ಕಟ್ಟಡ)

Edited Printed and Published by A. R. Nagarajan at Sadhvi Press D Subbiah Road Mysore

BRIGHT COLLEGE OF COMMERCE,

MYSORE

(Estd 1925)

Offers th[illegible] coaching for the Diploma Courses in Commerce and Stenograph

Expert and Staff-Individual Attention-Monthly Tests-Ex[illegible] results-Maximum returns-Many compliments in [illegible] work A Speciality

ADMISSIONS RECEIVED

From 15th June 1956 · ONLY FOR SIX DAYS

The Management of

SREE GAYATHRI TALKIES, Mysore

Are very happy to announce that to day the 18th June 1956 happens to be their Nineth Anniversary Day and on this happy occasion convey to the patrons their best wishes for continued patronage

Also they proudly present M/s Metro Goldwyn Mayer India's latest special Production of the famous Novel of Sir Walter Scott

★ QUENTIN DURWARD ★

In exquisite Technicolor Cinemascope released in the State for the first time in recognition of this great festive occasion

ಪ್ರಭುದೇವಾ ಥಿಯೇಟರ್ (ಪದ್ಮಾ ಟಾಕೀಸ್)

21—6—56 ನೇ ಗುರುವಾರದಿಂದ ಅನೇಕ ಪ್ರಾರಂಭ ಪ್ರತಿ ದಿನ 3 ಆಟಗಳು

ಎಸ್. ಸೌಂದರ್ರಾಜನ್‌ರವರ ತೆಲುಗು ಚಿತ್ರ

★ ಮನೆಯ ದೇವರು ★ (ಇಲವೇಲುಪು)

ಪಾತ್ರ - ನಾಗೇಶ್ವರರಾವ್ ಜಮುನ, ಅಂಜಲಿ, ಕೃಷ್ಣಕುಮಾರಿ, ರೇಲಂಗಿ ಮುಂತಾದವರು

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ವಿವರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ: ೧೪] SADHVI : TUESDAY 19-6-1956 ಮೈಸೂರು : ಮಂಗಳವಾರ ೧೯-೬-೧೯೫೬ [ಸಂಚಿಕೆ : ೨೪೪

ಸೆರ್ವೀಸ್ ಕೋರ್ಟಿನಲ್ಲಿ ಬೇಲೂರರ ಕೊಲೆ ಮೊಕದ್ದಮೆ ?

ರಂಗಲಕ್ಷ್ಮಿಯೊಡನೆ ಸಹೋದರಿಯರ ಭೇಟಿ

ಮಾನಸಿಕ ರೋಗಗಳ ವೈದ್ಯರಿಂದ ಆಕೆಯ ಪರೀಕ್ಷೆ

ಬೆಂಗಳೂರು ೧೮

ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮಗಳು ರಂಗಲಕ್ಷ್ಮಿಯನ್ನು ನೋಡಲು ಆಕೆಯ ಇಬ್ಬರು ತಂಗಿಯರಾದ ಪ್ರಸನ್ನ ಮತ್ತು ರತ್ನರವರು ಬಂದಿದ್ದು ಅವರ ಮುಖವನ್ನು ನೋಡಿದ ಕೂಡಲೇ ನೆನಪಾಗಿ ರಂಗಲಕ್ಷ್ಮಿಯು ತನ್ನ ಸಹೋದರಿಯರನ್ನು ಗುರುತಿಸಿದಳೆಂದು ಹೇಳಲಾಗಿದೆ. ಆಕೆಯನ್ನು ... ದಿನಗಳಲ್ಲಿ ಬೇಲೂರರ ಮನೆಗೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ವಾಪಸು ಕರೆತರಲಾಗುವುದೆಂದು ಹೇಳಲಾಗಿದೆ. ಆಕೆಯು ತನ್ನ ಮಾತಾಪಿತೃಗಳನ್ನೂ ಸಹೋದರರನ್ನೂ ನೋಡಬೇಕೆಂದು ಹೇಳುತ್ತಿರುವಳು.

ಆಕೆಯ ತಲೆ ಸೀಳಿಹೋಗಿರುವಂತೆ ಪೆಟ್ಟು ಬಿದ್ದಿರುವುದೆಂದು ಗೊತ್ತಾಗಿದೆ. ಇಲ್ಲಿನ ಮಾನಸಿಕ ರೋಗಗಳ ಆಸ್ಪತ್ರೆ ಸೂಪರಿಂಟೆಂಡೆಂಟರಾದ ಡಾ|| ಎಂ. ವಿ. ಗೋವಿಂದಸ್ವಾಮಿಯವರು ಆಕೆಯನ್ನು ಪರೀಕ್ಷಿಸಿದರು. ಎರಡು ದಿನಗಳನಂತರ ಮತ್ತೆ ಪರೀಕ್ಷಿಸುವರು.

ಈ ವಾರದ ಮಧ್ಯಭಾಗದಲ್ಲಿ ಕೊಲೆಗೆ ಸಂಬಂಧಪಟ್ಟಂತೆ ಛಾರ್ಜ್‌ಷೀಟನ್ನು ಹಾಕಲಾಗುವುದೆಂದೂ, ಸುಮಾರು ೧೫೦ಕ್ಕಿಂತಲೂ ಹೆಚ್ಚು ಜನರನ್ನು ಸಾಕ್ಷಿಗಳಾಗಿ ಕರೆಯಬಹುದೆಂದೂ ಹೇಳಲಾಗಿದೆ. ಸೆಷ್ಯದಲ್ಲಿ ದಸ್ತಗಿರಿಯಾದವರ ಪೂರ್ವ ಚರಿತ್ರೆಯನ್ನು ಪೋಲೀಸರು ಅಧ್ಯಯನ ಮಾಡುತ್ತಿರುವರು.

೯,೦೦೦ ಕಬ್ಬು ಬೆಳೆಗಾರರಿಗೆ ೧೨ ಲಕ್ಷ ರೂ. ಬೋನಸ್ಸು

ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ಕಾಲುವೆ ಪ್ರದೇಶದಲ್ಲಿರುವ ೯ ಸಾವಿರ ಮಂದಿ ಕಬ್ಬು ಬೆಳೆಗಾರರಿಗೆ ೧೯೫೪-೫೫ರಲ್ಲಿ ಸರಬರಾಜು ಮಾಡಿದ ಕಬ್ಬಿಗಾಗಿ ಟನ್ನಿಗೆ ೩ ರೂ. ನಂತೆ ಒಟ್ಟು ೧೨ ಲಕ್ಷ ರೂಗಳ ಬೋನಸ್ಸನ್ನು ಹಂಚಲಾಗುವುದು.

ದೇಶಮುಖ್‌ರ ರಾಜೀನಾಮೆಗೆ ನೆಹರೂರವರ ಸಮ್ಮತಿ

ಮತ್ತೆ ಅಧಿಕಾರ ತ್ಯಾಗ

ಬೊಂಬಾಯಿ ನಗರವನ್ನು ಮಹಾರಾಷ್ಟ್ರ ಸಂಸ್ಥಾನದಲ್ಲಿ ಐಕ್ಯಗೊಳಿಸದಿರುವ ಬಗ್ಗೆ ಅತೃಪ್ತಿ ಸೂಚಿಸಿ ಕೇಂದ್ರ ಹಣಕಾಸಿನ ಮಂತ್ರಿ ಸಿ. ಡಿ. ದೇಶಮುಖ್‌ರವರು ರಾಜೀನಾಮೆಯಿತ್ತಿರುವರು. ಅದಕ್ಕೆ ನೆಹರೂರವರು ಸಮ್ಮತಿಸಿರುವರೆಂದು ಹೇಳಲಾಗಿದೆ. ಪ್ರಧಾನಿಯವರು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಿಂದ ಜುಲೈ ತಿಂಗಳ ಆದ್ಯಂತಕ್ಕೆ ವಾಪಸು ಬಂದನಂತರ ದೇಶಮುಖ್‌ರವರನ್ನು ಅಧಿಕಾರದ ಜವಾಬ್ದಾರಿಯಿಂದ ವಿಮುಕ್ತರನ್ನಾಗಿ ಮಾಡಲಾಗುವುದು. ಕೇಂದ್ರ ಗೃಹ ಮಂತ್ರಿ ಗೋವಿಂದ ವಲ್ಲಭ ಪಂತರು ಹಣಕಾಸು ಮಂತ್ರಿಗಳಾಗುವರೆಂದು ಹೇಳಲಾಗುತ್ತಿದೆ.

ಶ್ರೀ ಎಸ್. ಕೆ. ಸುಬ್ಬಯ್ಯಶೆಟ್ಟರಿಗೆ ಮಾನಪತ್ರ

'ವಾಸವೀ ನಿಲಯ' ಧರ್ಮಛತ್ರದ ದಾನಿಗಳಾದ ಶ್ರೀ ಎಸ್. ಕೆ. ಸುಬ್ಬಯ್ಯಶೆಟ್ಟರವರಿಗೆ ಮೊನ್ನೆ ಬಿನ್ನವತ್ತಳೆಯನ್ನು ಸಮರ್ಪಿಸಿದಾಗ ತೆಗೆದ ಚಿತ್ರ

[ಪಡಿಯಚ್ಚು ಶ್ರೀ ಶಾರದಾ ಪ್ರೆಸ್

ಧಾನ್ಯದ ಬೆಲೆ ಏರದಂತೆ ಎಲ್ಲಾ ಕ್ರಮ

ಕೇಂದ್ರ ಆಹಾರ ಉಪ ಮಂತ್ರಿ ಕೃಷ್ಣಪ್ಪನವರ ಹೇಳಿಕೆ

ಅಕ್ಕಿಯ ಬೆಲೆಯು ಹೆಚ್ಚುವುದರ ಕಡೆಯನ್ನು ವಿಸಾರದಂತೆ ಮಾಡಲು ಸಮಸ್ತ ಕ್ರಮಗಳನ್ನೂ ಕೈಗೊಳ್ಳಲಾಗುವುದೆಂದು ಕೇಂದ್ರ ಆಹಾರ ಉಪ ಮಂತ್ರಿ ಎಂ. ವಿ. ಕೃಷ್ಣಪ್ಪನವರು ತಿಳಿಸಿದ್ದಾರೆ. ಕಳೆದ ೧೮ ತಿಂಗಳಲ್ಲಿ ಕೇಂದ್ರ ಸರ್ಕಾರದವರು ೪೦ ಕೋಟಿ ರೂ. ಅಕ್ಕಿಯನ್ನು ನ್ಯಾಯವಾದ ಬೆಲೆಗೆ ಮಾರಾಟಕ್ಕೆ ಕೊಟ್ಟಿದ್ದಾರೆಯೂ, ಎರಡು ತಿಂಗಳು ೧೯ರಿಂದ ನವೆಂಬರ್ ೧೯ರ ವರೆಗಿನ ಕ್ಷೀಣ ಮಾಸಗಳಲ್ಲಿ ಇನ್ನೂ ೪೦ ಕೋಟಿ ರೂ. ಅಕ್ಕಿಯನ್ನು ಹೊರಕ್ಕೆ ಕೊಡಲಾಗುವುದೆಂದೂ ಅವರು ಹೇಳಿದ್ದಾರೆ.

ಮೈಸೂರು ನಗರದ ಶ್ರೀಗಳಾದ ಎನ್. ಗೋಪಾಲರಾವ್, ಬಿ. ಬಾಲಯ್ಯ ಮತ್ತು ಆರ್. ಎಸ್. ಮುರಳಿಯವರು ಶ್ರೀ ಎಂ. ವಿ. ಕೃಷ್ಣಪ್ಪನವರಿಗೆ ತಂತಿಯೊಂದನ್ನು ಕಳುಹಿಸಿ ಸರ್ಕಾರದವರ ಹೇಳಿಕೆಗಳು ಬರಿ ಕಣ್ಣೊರೆಸುವ ಮಾತಿನಂತಿವೆಯೆಂದೂ, ಕಾರ್ಯತಃ ಯಾವ ಪ್ರಯೋಜನವೂ ಆಗಿಲ್ಲವೆಂದೂ ತಿಳಿಸಿದ್ದಾರೆ.

ಕಾವ್ಯ ವಾಚನ ಮತ್ತು ವ್ಯಾಖ್ಯಾನ

ಜಯನಗರದ ಶ್ರೀ ಪೌಂಡರೀಕ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ವ್ಯಾಸ ಪ್ರತಿಷ್ಠೆ, ನಾಳೆ ಸಂಜೆ ೬-೩೦ ಘಂಟೆಗೆ 'ಶ್ರೀ ಶಂಕರ ದಿಗ್ವಿಜಯ' ಎಂಬ ಕಾವ್ಯ ವಾಚನವನ್ನು ಸೂಕ್ತ ವ್ಯಾಖ್ಯಾನದೊಡನೆ ಶ್ರೀ ಬಿ. ಎಸ್. ಎಸ್. ಕೌಶಿಕರಿಂದ ಏರ್ಪಡಿಸಿರುತ್ತೆ. ಸರ್ವರಿಗೂ ಆಹ್ವಾನವುಂಟು.

ತುಂಗಭದ್ರಾ ನೀರಿನ ಹಂಚಿಕೆ ಬಗ್ಗೆ ಒಡಂಬಡಿಕೆ

ಆಂಧ್ರಕ್ಕೆ ಶೇಕಡ ೬೩ ಮತ್ತು ಮೈಸೂರಿಗೆ ೩೭ ರಂತೆ ಪಾಲು

ಬೆಂಗಳೂರು ೧೮

ತುಂಗಭದ್ರಾ ಅಣೆಕಟ್ಟು ನೀರಿನ ಹಂಚಿಕೆ ಬಗ್ಗೆ ಆಂಧ್ರ ಮತ್ತು ಮೈಸೂರು ಸಂಸ್ಥಾನಗಳಿಗೆ ಬಹಳ ದಿನಗಳಿಂದಲೂ ಇದ್ದ ವಿವಾದವು ನೆನ್ನೆ ಇತ್ಯರ್ಥವಾಯಿತು. ಆಂಧ್ರ ಮತ್ತು ಮೈಸೂರು ಮಂತ್ರಿಗಳು ಮತ್ತು ಇಂಜನಿಯರುಗಳು ಕೇಂದ್ರ ಯೋಜನಾ ಮಂಡಲಿಯ ಉಪಾಧ್ಯಕ್ಷ ಶ್ರೀ ವಿ. ಟಿ. ಕೃಷ್ಣಮಾಚಾರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಆಂಧ್ರದವರು ತುಂಗಭದ್ರಾ ಅಣೆಕಟ್ಟು ನೀರಿನಲ್ಲಿ ಶೇಕಡ ೬೩ರಂತೆಯೂ, ಮೈಸೂರಿನವರು ೩೭ರಂತೆಯೂ ಹಂಚಿಕೊಳ್ಳಲು ಒಪ್ಪಿದರು. ಉಭಯರಿಗೂ ಅನ್ವಯವಾಗುವ ಯೋಜನೆಯ ಕೆಲಸಗಳನ್ನು ತುಂಗಭದ್ರಾ ಬೋರ್ಡಿನವರು ನಡೆಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಸಮ್ಮೇಳನಾನಂತರ ಆಂಧ್ರದ ಉಪ ಮುಖ್ಯಮಂತ್ರಿ ಶ್ರೀ ನೀಲಂ ಸಂಜೀವರೆಡ್ಡಿಯವರು ಮಾತನಾಡಿ, ಯೋಜನೆಯ ಕೆಲಸವು ಶೀಘ್ರವಾಗಿ ಆರಂಭವಾಗುವುದೆಂದು ಹೇಳಿದರು. ಮೈಸೂರಿನ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಉಭಯ ಸರ್ಕಾರಗಳ ಸೌಹಾರ್ದದಿಂದ ಒಪ್ಪಂದಕ್ಕೆ ಬರಲಾಯಿತೆಂದೂ, ಮೈಸೂರಿಗೂ ಆಂಧ್ರಕ್ಕೂ ಇರಬಹುದಾದ ಇತರ ಪ್ರಶ್ನೆಗಳೂ ಹೀಗೆಯೇ ಸುಲಲಿತವಾಗಿ ಬಗೆಹರಿಯಲೆಂದೂ ತಿಳಿಸಿದರು.

ಬೇಲೂರರ ಕೊಲೆ ಮೊಕದ್ದಮೆ ನೇರವಾಗಿ ಸೆಷನ್ಸ್ ಕೋರ್ಟಿಗೆ?

ದಸ್ತಗಿರಿಯಾಗಬೇಕಾದ ಮತ್ತೊಬ್ಬ ಅಪರಾಧಿ ಪರಾರಿ

ಸ್ವಂ. ವ. ತಂತಿ] ಬೆಂಗಳೂರು ೧೮

ಸಾರ್ವಜನಿಕರ ಕೊಲೆಗಳ ಪ್ರಕರಣದಲ್ಲಿ ಮತ್ತೊಬ್ಬ ಅಪರಾಧಿಯನ್ನು ದಸ್ತಗಿರಿ ಮಾಡಲು ಪೋಲೀಸರು ಹುಡುಕುತ್ತಿರುವರೆಂದೂ, ಅವನು ಪರಾರಿಯಾಗಿರುವನೆಂದೂ ಹೇಳಲಾಗಿದೆ. ಇದೇ ವಾರದಲ್ಲಿ ಪ್ರಿಲಿಮಿನರಿ ವಿಚಾರಣೆ ಆರಂಭವಾಗುವ ಸಂಭವವಿದೆ.

೭೦ ಲಕ್ಷ್ಮಿಯು ಸಮರ್ಪಕವಾಗಿ ಮಾತನಾಡುತ್ತಿದ್ದು ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆಗೆ ಇನ್ನೂ ಕಾವಲನ್ನು ಹಾಕಲಾಗಿದೆ.

ಸೆಷನ್ಸ್ ನ್ಯಾಯಾಸ್ಥಾನದಲ್ಲಿ ನೇರವಾಗಿ ಚಾರ್ಜ್‌ಷೀಟನ್ನು ಏಕೆ ಹಾಕಬಾರದೆಂದು ಪೋಲೀಸರು ಯೋಚಿಸುತ್ತಿರುವರೆಂದು ಹೇಳಲಾಗಿದೆ. ಈ ಬಗ್ಗೆ ಶಾಸನಕ್ಕೆ ತಿದ್ದುಪಡಿಯಾಗಿರುವ ವಿಷಯವು ಪರ್ಯಾಲೋಚನೆಯಲ್ಲಿರುವುದಾಗಿ ಗೊತ್ತಾಗಿದೆ.

○ ಗೃಹ ಮಂತ್ರಿ ಸಿದ್ದವೀರಪ್ಪನವರು ಆ ದಿನ ಬೆಂಗಳೂರಿಗೆ ತೆರಳಿದರು.

ಸೂಯೆಜ್ ಕಾಲುವೆ ಮೇಲೆ ಬ್ರಿಟಿಷ್ ಅಧಿಕಾರದ ಕೊನೆಯಾಟ್ಟ

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಬ್ರಿಟನ್ನಿನ ೭೪ ವರ್ಷಗಳ ಅಧಿಕಾರದ ಮುಕ್ತಾಯದ ಸೂಚನೆಯಾಗಿ ನೆನ್ನೆ ಈಜಿಪ್ಟಿನ ಪ್ರಧಾನಿ ನಾಸಿರ್‌ರವರು ಪೋರ್ಟ್ ಸೈಯದ್ ಲೇವಿನ ನೌಕಾ ಕಛೇರಿಯ ಮೇಲೆ ಈಜಿಪ್ಟಿನ ಧ್ವಜವನ್ನು ಆರೋಹಣ ಮಾಡಿದರು. ಈಜಿಪ್ಟಿನ ೬,೦೦೦ ವರ್ಷದ ಇತಿಹಾಸದಲ್ಲಿ ಹೊಸ ಅಧ್ಯಾಯದ ಪ್ರಾರಂಭದ ಸಂಕೇತವಾಗಿ ನೆನ್ನೆಯ ದಿನ ೪ ದಿನಗಳ ಸಮಾರಂಭವನ್ನು ಏರ್ಪಡಿಸಲಾಗಿದೆ. ನಾಸಿರ್‌ರವರು ಭಾಷಣ ಮಾಡಿ ಈಜಿಪ್ಟು ಸ್ವತಂತ್ರವಾಯಿತೆಂದು ಘೋಷಿಸಿದರು. ಅಲ್ಲಿ ನೆರೆದಿದ್ದ ಭಾರಿ ಜನಸಮೂಹವು ಹರ್ಷಧ್ವನಿ ಮಾಡಿತು. ಕೇವಿನಲ್ಲಿದ್ದ ಅನೇಕ ರಾಷ್ಟ್ರಗಳ ಹಡಗುಗಳು ಸ್ವರ ಕೂಗಿ ಕುತೂಹಲ ತೋಪುಗಳನ್ನು ಹಾರಿಸಿದುವು.

ಬೊಂಬಾಯಿ ಬಗ್ಗೆ ಸೂತ್ರಕ್ಕೆ ನಾಗಪುರ ಕಾಂಗ್ರೆಸ್ಸಿನ ಒಪ್ಪಿಗೆ

ಬೊಂಬಾಯಿ ನಗರವನ್ನು ಕೇಂದ್ರ ಆಡಳಿತಕ್ಕೆ ಒಳಪಡಿಸಿ ಐದು ವರ್ಷಗಳನಂತರ ಅದರ ಭವಿಷ್ಯದ ಬಗ್ಗೆ ಜನಾಭಿಪ್ರಾಯ ಕೇಳಬೇಕೆಂದು ನೆಹರೂರವರು ಎ. ಐ. ಸಿ. ಸಿ. ಸಭೆಯಲ್ಲಿ ಮಾಡಿದ್ದ ಸಲಹೆಯನ್ನು ನಾಗಪುರ ನಗರ ಕಾಂಗ್ರೆಸ್ ಸಮಿತಿಯು ಸ್ವಾಗತಿಸಿದೆ. ಮಹಾರಾಷ್ಟ್ರದ ಜನರು ನೆಹರೂರವರ ತೀರ್ಮಾನವನ್ನು ಒಪ್ಪಿ ಶಾಂತ ವಾತಾವರಣವನ್ನು ಮುಕ್ತಾಯ ಮಾಡಬೇಕೆಂದು ಸಮಿತಿಯು ಕೋರಿದೆ.

ಮಾಸ್ಕೋಯಲ್ಲಿ ಮಹಾ ಚುನಾವಣೆ

ಗಣರಾಜ್ಯ ನಾಲ್ಕರಲ್ಲಿ ಮಹಾ ಚುನಾವಣೆಗಳಾಗುವ ನಿರೀಕ್ಷೆಯಿರುವುದಾಗಿ ಪ್ರಧಾನಿ ನೆಹರೂರವರು ತಿಳಿಸಿದ್ದಾರೆ.

ಹನುಮರ್ರಾ ಸಂಘದ ವಾರ್ಷಿಕೋತ್ಸವ

ಮೈಸೂರು ೧೬

ನಗರದ ಹನುಮರ್ರಾ ಸಂಘದ ದ್ವಿತೀಯ ವಾರ್ಷಿಕೋತ್ಸವವು ಮೊನ್ನೆ ಮುನಿಸಿಪಲ್ ಕಮೀಷನರ್ ಶ್ರೀ ಎ ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ಬನುಮಯ್ಯನವರ ಪ್ರಾಥಶಾಲೆಯಲ್ಲಿ ನೆರವೇರಿತು

ಪ್ರಾರ್ಥನೆ ಮತ್ತು ಸಂಘದ ಉಪಾಧ್ಯಕ್ಷರಾದ ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್‌ರವರಿಂದ ಸ್ವಾಗತ ಭಾಷಣವಾದನಂತರ ಕಾರ್ಯದರ್ಶಿ ಶ್ರೀ ಎಸ್ ನಾಗರಾಜರಾಯರು ವರದಿಯನ್ನು ಒಪ್ಪಿಸಿದರು

ವಿವಿಧ ಸ್ಪರ್ಧೆಗಳಲ್ಲಿ ಜಯಗಳಿಸಿದವರಿಗೆ ಬಹುಮಾನಗಳನ್ನು ಹಂಚಲಾಯಿತು ಈ ವರ್ಷದ ಛಾಂಪಿಯನ್ ಆದ ಹೆಚ್ ಎಸ್ ಶ್ರೀಕಂಠೇಶ್ವರ್ ಮತ್ತು ಶ್ರೀ ಸಂಘ ಬಿ ಎಸ್ ನಾಗರಾಜಭಟ್ಟಾಚಾರ್ಯರಿಗೆ ವಿಶೇಷ ಬಹುಮಾನಗಳು ದೊರಕುತ್ತ ನಂತರ ಶ್ರೀಗಳಾದ ಎಂ ಎಸ್ ತಿಮ್ಮಯ್ಯ, ಸಿ ಎಸ್ ನಾರಾಯಣರಾವ ಮತ್ತು ಎ ವಿ ಗೋಪಾಲರಾಯರು ಮಾತನಾಡಿ ಸಂಘದ ಯುವಕರಿಗೆ ಸೂಕ್ತ ಸಲಹೆಗಳನ್ನಿತ್ತರು ಅಧ್ಯಕ್ಷರು ಸಂಘದ ಚಟುವಟಿಕೆಗಳನ್ನು ಶ್ಲಾಘಿಸಿದರು

ಉಪಾಧ್ಯಕ್ಷರಿಂದ ವಂದನಾರ್ಪಣೆ ಮಾಡಿದನಂತರ ಸಂಘದ ಸದಸ್ಯರಿಂದ ವಾಯಲಿನ್ ಸೋಲೊ ಮತ್ತು ವೈವಿಧ್ಯ ವಿನೋದ ಲೋಕದ ನೋಟ ಎಂಬ ಎರಡು ನಾಟಕಗಳನ್ನು ಅಭಿನಯಿಸಲಾಯಿತು

ಮುಂಬಯಿಗಾಗಿ ಕರನಿರಾಕರಣ ಸತ್ಯಾಗ್ರಹ

ಬೊಂಬಾಯಿ ನಗರವನ್ನು ಮಹಾರಾಷ್ಟ್ರದಲ್ಲೇ ಸೇರಿಸುವಂತೆ ಮಾಡಲು ಇದೀಗ ಮುಂಬಯಿ ಪ್ರದೇಶದಲ್ಲಿ ಚಳುವಳಿ ನಡೆದಿದೆ ಸರ್ಕಾರದ ಆಡಳಿತವು ನಡೆಯದಂತೆ ಮಾಡಬೇಕೆಂದು ಸರ್ವಪಕ್ಷಗಳ ಸಂಯುಕ್ತ ಮಹಾರಾಷ್ಟ್ರ ಸಮಿತಿ ಕಾರ್ಯದರ್ಶಿ ಎಸ್ ಎಂ ಜೋಷಿಯವರು ಹೇಳುತ್ತಾರೆ ತಮ್ಮ ಬೇಡಿಕೆಗಳನ್ನು ಪ್ರಾರ್ಥಿಸಲು ಎಲ್ಲಾ ಕ್ರಮಗಳೂ ಮುಗಿದನಂತರ ಕಂದಾಯ ನಿರಾಕರಣ ಚಳುವಳಿ ಹೂಡಲಾಗುವುದೆಂದೂ ಅವರು ತಿಳಿಸುತ್ತಾರೆ

ಹಾಸಿಗೆ - ದಿಂಬು

ಯಾವತ್ತಲ್ಲಿ ಹತ್ತಿ ಹಾಸಿಗೆ ತಯಾರು ಮಾಡುತ್ತೇವೆ

ಬಾಹುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು ಮೈಸೂರು

ಪ್ರಖ್ಯಾತಿ ಹೊಂದಿರುವ

ಕಣ್ಣಾನೂರ್ ಬನೀನುಗಳನ್ನು

ದಯವಿಟ್ಟು ಉಪಯೋಗಿಸಿರಿ

ದಿ ಚಿನೋಲಿ ಹೊಸೈರಿ ಫ್ಯಾಕ್ಟರಿ,

ಕಣ್ಣಾನೂರು

ಸುಮಾರು 27 ವರ್ಷಗಳಿಂದ ಸೇವೆ ಸಲ್ಲಿಸುತ್ತಿರುವ ಈ ಬನೀನುಗಳ ಮೇಲೆ ಸೀಲಿ ಬಿಲ್ಲದ ಲೇಬಲ್‌ಗಳನ್ನು ಮರೆಯದೆ ಗಮನಿಸಬೇಕಾಗಿ ವಿನಂತಿ

ಎಕ್ಸ್‌ರೇ ಪರೀಕ್ಷೆಯಿಂದ ಸಂತತಿಯ ವಿಕಾರ

ಅಣು ವಿಜ್ಞಾನಿಗಳ ಅಭಿಪ್ರಾಯ

ಬ್ರಿಟನ್ನಿನ ವಿಖ್ಯಾತ ವೈದ್ಯರು ಮತ್ತು ಅಣು ವಿಜ್ಞಾನಿಗಳ ಸಂಯುಕ್ತ ಮಂಡಲಿಯೊಂದು, ಆಸ್ಪತ್ರೆಗಳಲ್ಲಿ ನಡೆಯುವ ಎಕ್ಸ್‌ರೇ ಪರೀಕ್ಷೆಗಳನ್ನು ಕಮ್ಮಿ ಮಾಡಬೇಕೆಂಬ ಆಶ್ಚರ್ಯಕರವಾದ ವಿಚಾರವನ್ನು ಮಾಡಿದೆ

ಪ್ರಾಕೃತಿಕವಾದ ಅಣು ಪ್ರಸರಣ ಕಾರ್ಯ, ಅಣು ಅಸ್ತ್ರಗಳ ಪ್ರಯೋಗದಿಂದ ಉಂಟಾಗುವ ಪ್ರಸರಣ ಮತ್ತು ದಿನವೂ ಜನರು ಎಕ್ಸ್‌ರೇ ಪರೀಕ್ಷೆಗಳ ಪ್ರಭಾವಕ್ಕೆ ಒಳಗಾಗುತ್ತಿರುವುದೇ ಮನುಷ್ಯನ ಜನನ ವಿಕಾರಗಳಿಗೆ ಕಾರಣವೆಂದು ಅವರು ಅಭಿಪ್ರಾಯಪಟ್ಟಿದ್ದಾರೆ ಈ ಬಗ್ಗೆ ಎಕ್ಸ್‌ರೇ ಯಿಂದ ಉಂಟಾಗುವ ಪರಿಣಾಮವು ಬಹಳ ತೀವ್ರವಾದುದರಿಂದ ಅದನ್ನು ಕಮ್ಮಿ ಮಾಡಬೇಕೆಂದೂ ಅವರಲ್ಲೂ ಗರ್ಭಿಣಿಯರ ಹೊಟ್ಟೆಯನ್ನು ಎಂತಹ ಪರೀಕ್ಷೆಗಳಿಗೆ ಗುರಿಪಡಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಬೇಕೆಂದೂ ಅವರು ತಿಳಿಸಿದ್ದಾರೆ

ಪ್ರಸಂಗಾವು ಮಾನವನ ಜನಸಾಂಗಗಳಿಗೆ ತಗಲುವ ಮೂಲ ಬೀಜಗಳಲ್ಲಿ ವಿಪರೀತ ಮಾರ್ಪಾಡನ್ನುಂಟುಮಾಡುವುದರಿಂದ ಮುಂದಿನ ಜನಾಂಗ ಎಂದ ಸಂತತಿಯು ವಿಕಾರಪಡೆಯುವುದೆಂದೂ ಅಣು ಅಸ್ತ್ರ ಪ್ರಯೋಗದ ಫಲವಾಗಿ ಬೀಳುವ ಅಣು ಪ್ರಸರಣದಲ್ಲಿ ಇರುವ ಸ್ಟ್ರಾನ್ಸಿಯಂ 90 ಎಂಬ ವಸ್ತುವು ಮೂಳೆಗಳಿಗೆ ವಿಪರೀತ ಅಪಾಯವನ್ನುಂಟುಮಾಡುವುದೆಂದೂ ಅವರು ವಿವರಿಸಿ ಈ ಪ್ರಯೋಗಗಳನ್ನು ನಿಲ್ಲಿಸಬೇಕೆಂದು ಸೂಚಿಸಿದ್ದಾರೆ

ಸೂರಾಡಿ ಪೇಟೆಯಲ್ಲಿರುವ ಶ್ರೀ ರಂಗನಾಥಯ್ಯನವರು ತಮ್ಮ ಮಗಳು ಕೆಂಪಮ್ಮನನ್ನು ಸಂಜನಗೂಡಿನ ಶ್ರೀ ಪೊನ್ನಪ್ಪನವರ ಪುತ್ರ ಶ್ರೀ ನಂಜಪ್ಪನವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನಡೆಸಿದರು

ವೇದಿ ಸರ್ಕಲ್ ಸಾಸರಿಂ ಮಹಿಳಾ ... ಜ್ಯೋತಿರ್ವಿದರ ಆಫೀಸು

ಮೈಸೂರು

ಪ್ರಕಟಣೆ

ವಿದ್ಯಾರ್ಥಿಗಳು ನ ಲಾಭ ಮತ್ತು ಅದರ ಕೀಲು ಗಳೆಗಳಿಗೆ ಸಂಬಂಧಪಟ್ಟ ಕೃತ ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ ಕೃಷ್ಣರಾಜಸಾಗರದ ಸೇರಿದ ಮಸ್ತಿಯು ಬಹಳ ಕಡಿಮೆಯಾಗಿರುವುದರಿಂದಲೂ ಮತ್ತು ಜಲಾಶಯಕ್ಕೆ ನೀರು ಬರದೇ ಇರುವುದರಿಂದಲೂ ಪೈರು ಬೆಳೆಗಳಿಗೆ ಈ ನಾಲೆಯಲ್ಲಿ ನೀರನ್ನು ಸರಬರಾಜು ಮಾಡುವ ಕಾಲವನ್ನು ಜಲಾಶಯಕ್ಕೆ ತೃಪ್ತಿಕರವಾಗಿ ನೀರು ಬರುವವರೆವಿಗೆ ಮುಂದುವರಿಸಲಾಗಿದೆ

ಹೆಚ್ ಎಸ್ ನರಸಿಂಹ ಅಯ್ಯಂಗಾರ್,

ಸೂಪರಿಂಟೆಂಡಿಂಗ್ ಇಂಜಿನಿಯರವರು

ನೀರ ಸರ್ಕಲ್ ಮೈಸೂರು

ವಿವಾಹ ಮಹೋತ್ಸವಗಳು

ರಂಜಧಾನಿಯ ದೊಡ್ಡಪೇಟೆ ನಿವಾಸಿ ಶ್ರೀ ಎಂ ಸಿ ರಾಜಯ್ಯನವರು ಶ್ರೀ ಚಲುವಯ್ಯನವರ ಪುತ್ರ ಶ್ರೀ ಸಿ ಕೃಷ್ಣಪ್ಪನವರಿಗೆ ಗುತ್ತಗುರಿಕೆ ಶ್ರೀ ಗೋವಿಂದೇಗೌಡರ ಕುಮಾರಿ ಸೌ॥ ಜಯಲಕ್ಷ್ಮಮ್ಮನನ್ನು ತಂದುಕೊಂಡು ನೆನ್ನೆ ವಿವಾಹವನ್ನು ನಗರದಲ್ಲಿ ನೆರವೇರಿಸಿದರು

ಚಟ್ಟಿವರ್ತಕರಾದ ಶ್ರೀ ಎಂ ಶೇಷಗಿರಿರಾಯರು ತಮ್ಮ ಕುಮಾರಿ ಸೌ॥ ಪ್ರಮೀಳಾಬಾಯಿಯನ್ನು ಶ್ರೀ ಎಂ ಎಲ್ ಭಗವಂತರಾಯರ ಕುಮಾರ ಶ್ರೀ ಬಿ ಗೋಪಾಲರಾಯರಿಗೆ ಕೊಟ್ಟು ನೆನ್ನೆ ವಿವಾಹವನ್ನು ಜರುಗಿಸಿದರು

ಬಟ್ಟೆ ವರ್ತಕರಾದ ಶ್ರೀ ಮಹೇಂದ್ರಕರ್ ಶೇಷಗಿರಿರಾಯರು ತಮ್ಮ ಕುಮಾರ ಶ್ರೀ ಎಂ ಎಸ್ ಶ್ರೀನಿವಾಸರಾಯರಿಗೆ ಲಾಲೆ ಸುಬ್ಬರಾಯರ ಕುಮಾರಿ ಸೌ॥ ಕಮಲಾಬಾಯಿಯನ್ನು ತಂದುಕೊಂಡು ನೆನ್ನೆ ವಿವಾಹವನ್ನು ನಡೆಸಿದರು

ಬೆಟ್ಟದಪುರದ ಶ್ರೀ ಹೆಚ್ ಶ್ರೀಕಂಠಯ್ಯನವರು ತಮ್ಮ ಪುತ್ರ ಶ್ರೀ ಬಿ ಎಸ್ ಶ್ರೀನಿವಾಸರಾಯರಿಗೆ ರುದ್ರಪಟ್ಟಣದ ಶ್ರೀ ಆರ್ ಎಸ್ ಶ್ರೀಕಂಠಯ್ಯನವರ ಕುಮಾರಿ ಸೌ॥ ವಸಂತಮಾಲಾರವರನ್ನು ತಂದುಕೊಂಡು ನೆನ್ನೆ ವಿವಾಹವನ್ನು ಜರುಗಿಸಿದರು

ಪ್ರಕಟಣೆ

ಪೋಲಿಯೋ ಸ್ಪೆಷಲಿಸ್ಟ್

ಕವಿರಾಜ

ಓಂ ಪ್ರಕಾಶ್

ಬಿ ಎ ಅವರಲ್ಲಿ

ಮೈಸೂರಿನಲ್ಲಿ

ಧನ್ವಂತರಿ ರಸ್ತೆಯಲ್ಲಿರುವ ಇಂದ್ರಭವನದಲ್ಲಿ 23 6 56ನೇ ತಾರೀಖು ಬೆಳಿಗ್ಗೆ 9ರಿಂದ 12 ಮತ್ತು ಮಧ್ಯಾಹ್ನ 4ರಿಂದ 6ರ ವರೆಗೂ

ಕೆಳಗಿನ ಪೋಲಿಯೋ ರೋಗಿಗಳನ್ನು ಉಚಿತವಾಗಿ ಪರೀಕ್ಷಿಸುತ್ತಾರೆ ರೋಗಿಗಳು ಅತ್ಯುತ್ತಮ ಸಲಹೆ ಮತ್ತು ಔಷಧಿಗಳನ್ನು ಪಡೆಯಬಹುದು

1 ಮನುಷ್ಯ ಶಕ್ತಿ ಕೈಕಾಲು ಅರ್ಧ ಶರೀರ ಪೂರ್ತಿ ಶರೀರದ ಪಕ್ಷವಾಯು 2 ರಕ್ತದ ಒತ್ತಡ 3 ಮೂರ್ಛೆ 4 ಕೆಮ್ಮು 5 ಕುಷ್ಠ ರೋಗ 6 ಮಾನಸಿಕ ತೊಂದರೆಗಳು

ARYAVARTA POLIO ASHRAM

Phone 27858

114 E Kamla Nagar DELHI 6

ಇನ್ ಡೋರ್ ಮತ್ತು ಔಟ್ ಡೋರ್ ಆಯುರ್ವೇದಿಕ್ ಪೋಲಿಯೋ ಆಸ್ಪತ್ರೆ

ಪೋಲಿಯೋ ರೋಗಿಗಳಿಗೆ ಔಷಧಿ ಕಳಿಸುವ "ಪೋಲಿಯೋಮೈಲಿಟಿಸ್ ಮತ್ತು ಆಯುರ್ವೇದ" ಎಂಬ ಸಚಿತ್ರ ಇಂಗ್ಲೀಷ್ ಪುಸ್ತಕಕ್ಕೆ ಬೆಲೆ ರೂ 7 8 0 ಪೋಸ್ಟೇಜು 14 ಆಣೆ ಹಿಂದಿ ಇಂಗ್ಲೀಷ್ ಅಥವಾ ಉರ್ದುವಿನಲ್ಲಿ ಪತ್ರ ವ್ಯವಹಾರ

○ ಪೌರಸಭಾ ಹೆಲ್ತ್ ಆಫೀಸರ ಆಧಿಕಾರಿಗಳಾದ ಕೆ ರಾಮಚಂದ್ರರಾವ್ ಸಿಂಧ್ಯೆರವರು ತಮ್ಮ ಕುಮಾರಿ ಸೌ॥ ಶಾಂತಾಬಾಯಿಯನ್ನು ಬೆಂಗಳೂರಿನ ಪಟೇಲ್ ಶ್ರೀ ಸುಬ್ಬಪ್ಪರಾವ್ ಕೋಟಿಕರ್‌ರವರ ಪುತ್ರ ಶ್ರೀ ಎಸ್ ಮಲ್ಹಾರರಾವ್ ಮೊಹಿತೆರವರಿಗೆ ಕೊಟ್ಟು ಕಳೆದ ಶುಕ್ರವಾರ ನಗರದಲ್ಲಿ ವಿವಾಹವನ್ನು ನೆರವೇರಿಸಿದರು

ಶ್ರೀ ಶಾರದಾ ಸಂಗೀತ ನಾಟಕ ಮಂಡಲಿ,

ಗೋಕಾಕ್

17-6-56 ನೇ ಭಾನುವಾರದಿಂದ

ಪ್ರತಿದಿನ ಸಂಜೆ 6—30 ಘಂಟೆಗೆ

ಇವರು ಮೈಸೂರು ಟೌನ್ ಹಾಲಿನಲ್ಲಿ

★ ಮಾನವತಿ ★

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

ಶಕ್ತಿಯೂ ಕೋಬಿಯೂ ತಮ್ಮ ಗುರಿಯನ್ನು ತಪ್ಪಬಹುದು ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು !!

ಆದರೆ ರಾಜಾ ಮೆಡಿಕಲ್ ಹಾಲಿನ ಚಿಕಿತ್ಸೆಯು ಮಾತ್ರ ಒಂದೇ ದಿನದ ಅವಧಿಯಲ್ಲಿ ಖಾಯಿಲೆಯನ್ನು ಹೋಗಲಾಡಿಸದೆ ಸಂತೋಷವನ್ನುಂಟುಮಾಡಲು ತಪ್ಪುವುದಿಲ್ಲ

ಅನುಭವದ ಸಹಯೋಗವನ್ನೂ ಅತ್ಯುತ್ತಮ ಔಷಧಿಯನ್ನೂ, ಆರೋಗ್ಯವನ್ನೂ ಹೊಂದಲು ಶೀಘ್ರದಲ್ಲಿ ಹೆಸರಾಂತ ಡಾ ಎ ವಿ ರಾಜಾರವರ ಸಲಹೆಯನ್ನು ಪಡೆಯಿರಿ

ಭಾರತದ ಹೆಸರಾಂತ ಡಾ॥ ರಾಜಾರವರು ಆಧುನಿಕ ವಿಧಾನದ ಚಿಕಿತ್ಸೆಗಳಿಗಿಂತಲೂ ಅದ್ಭುತವಾಗಿ ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ಜನಗಳಿಗೆ ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವನವನ್ನು ದಯಪಾಲಿಸುತ್ತಿರುವರು ದೇಶ ಜನಗೀರ್ದಾರರುಗಳೂ ಸಾಹುಕಾರರುಗಳೂ ರಾಜರುಗಳೂ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ

ಅಪೂರ್ವ ಡಾ॥ ರಾಜಾರವರನ್ನು ಭೇಟಿ ಮಾಡಿ ಸರಳ ಜೀವನ ದೀರ್ಘಾಯುಷ್ಯ ಮತ್ತು ಆರೋಗ್ಯವನ್ನು ಹೊಂದಿರಿ

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ಮನೋವ್ಯಥೆಯಿಂದ ಪಾರಾಗಲು ಇದು ಸುವರ್ಣ ಸುಸಮಯ

ಕಾಲ ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ರ ವರೆಗೆ ಮತ್ತು ಮಧ್ಯಾಹ್ನ 4ರಿಂದ ರಾತ್ರಿ 9 ರ ವರೆಗೆ

ರಾಜಾ ಮೆಡಿಕಲ್ ಹಾಲ್,

ಎಲ್ ನಂ 1 74ಬಿ ಅಶೋಕಾ ರಸ್ತೆ ಮೈಸೂರು

(ಮೈಸೂರು ಬ್ಯಾಂಕ್ ಬಳಿ ಬಲಗಡೆಯಿಂದ 3ನೇ ಕಟ್ಟಡ)

Edited Printed and Published by A R Nagarajan at Sadhvi Press D Subbiah Road Mysore

From 15th June 1956 ONLY FOR SIX DAYS

The Management of

SREE GAYATHRI TALKIES, Mysore

Are very happy to announce that to-day the 18th June 1956 happens to be their Nineth Anniversary Day and on this happy occasion convey to the patrons their best wishes for continued patronage

Also they proudly present M/s Metro Goldwyn Mayer India's latest special Production of the famous Novel of Sir Walter Scott

★ QUENTIN DURWARD ★

In exquisite Techn color Cinemascope released in the State for the first time in recognition of this great festive occasion.

BRIGHT COLLEGE OF COMMERCE,

MYSORE

(Estd 1925)

Offers the best coaching for the Diploma Courses in Commercial Stenography

Experienced Staff Individual Attention -Monthly Tests Excellent results Maximum returns Many accomplishments in short work A Speciality

ADMISSIONS RECEIVED

ಪ್ರಭುದೇವಾ ಥಿಯೇಟರ್ (ಪದ್ಮಾ ಟಾಕೀಸ್)

ಲಕ್ಷ್ಮೀ ಪ್ರೊಡಕ್ಷನ್ಸ್‌ರವರ ತೆಲುಗು ಚಿತ್ರ

21—6—56 ನೇ : ಗುರುವಾರದಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

★ ಮನೆಯ ದೇವರು ★ (ಇಲವೇಲುಪು)

ಪಾತ್ರ ನಾಗೇಶ್ವರರಾವ್, ಜಮುನ, ಅಂಜಲಿ ಕೃಷ್ಣಕುಮಾರಿ, ರೇಲಂಗಿ ಮುಂತಾದವರು

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವಿವರಗಳಿಗೆ ಬರೆಯಿರಿ

ಬಿಡಿ ಪ್ರತಿ 3 ಕಾಸು

ಚಂದಾ ದರ
—
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಟ ೧೪] SADHVI : TUESDAY 19—6—1956 ಮೈಸೂರು : ಮಂಗಳವಾರ ೧೯—೬—೧೯೫೬ [ಸಂಚಿಕೆ · ೩೬೬

ಸೆಷನ್ಸ್ ಕೋರ್ಟಿನಲ್ಲಿ ಬೇಲೂರರ ಕೊಲೆ ಮೊಕದ್ದಮೆ ?

ರಂಗಲಕ್ಷ್ಮಿಯೊಡನೆ ಸಹೋದರಿಯರ ಭೇಟಿ

ಮಾನಸಿಕ ರೋಗಗಳ ವೈದ್ಯರಿಂದ ಆಕೆಯ ಪರೀಕ್ಷೆ

ಬೆಂಗಳೂರು ೧೮

ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಯಲ್ಲಿರುವ ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮಗಳು ರಂಗಲಕ್ಷ್ಮಿಯನ್ನು ನೋಡಲು ಆಕೆಯ ಇಬ್ಬರು ತಂಗಿಯರಾದ ಪ್ರಸನ್ನ ಮತ್ತು ರತ್ನರವರು ಅವರ ಚಿಕ್ಕಮ್ಮನೊಡನೆ ನೆನ್ನೆ ಬಂದರಲ್ಲಾಗಿ ರಂಗಲಕ್ಷ್ಮಿಯು ತನ್ನ ಸಹೋದರಿಯರನ್ನು ನೋಡಿದಳೆಂದು ಹೇಳಲಾಗಿದೆ. ಆಕೆಯನ್ನು ದಿನಗಳ ಬೇಲೂರರ ಮನೆಗೆ ಕರೆದುಕೊಂಡು ಹೋಗಿ ಆಸ್ಪತ್ರೆಗೆ ವಾಪಸು ಕರೆತರಲಾಗುವುದು ಎಂದು ಹೇಳಲಾಗಿದೆ. ಆಕೆಯು ತನ್ನ ಮಾತಾಪಿತೃಗಳನ್ನೂ, ಸಹೋದರರನ್ನೂ ನೋಡಬೇಕೆಂದು ಕೇಳುತ್ತಿರುವಳು.

ಆಕೆಯು ಸರಿ ಸ್ಥಿತಿಗೆ ಬರುತ್ತಿರುವಂತೆ ಕಾಣುತ್ತಿದೆಯೆಂದು ಗೊತ್ತಾಗಿದೆ. ಇಲ್ಲಿನ ಮಾನಸಿಕ ರೋಗಗಳ ಆಸ್ಪತ್ರೆ ಸೂಪರಿಂಟೆಂಡೆಂಟರಾದ ಎಂ. ವಿ. ಗೋವಿಂದಸ್ವಾಮಿಯವರು ಆಕೆಯನ್ನು ಪರೀಕ್ಷಿಸಿದರು. ಎರಡು ದಿನಗಳವರೆಗೆ ಮತ್ತೆ ಪರೀಕ್ಷಿಸುವರು.

ಈ ವಾರದ ಮಧ್ಯಭಾಗದಲ್ಲಿ ಕೊಲೆಗೆ ಸಂಬಂಧಿಸಿದಂತೆ ಚಾರ್ಜ್‌ಷೀಟನ್ನು ದಾಖಲಾಗುವುದೆಂದೂ, ಸುಮಾರು ಇಪ್ಪತ್ತೆಂಟಕ್ಕೂ ಹೆಚ್ಚು ಜನರನ್ನು ಸಾಕ್ಷಿಗಳಾಗಿ ಕರೆಯಬಹುದೆಂದೂ ಹೇಳಲಾಗಿದೆ. ಸಧ್ಯದಲ್ಲಿ ದಸ್ತಗಿರಿಯಾದವರ ಪೂರ್ವ ಚರಿತ್ರೆಯನ್ನು ಪೊಲೀಸರು ಅಧ್ಯಯನ ಮಾಡುತ್ತಿರುವರು.

೦೦೦ ಕಬ್ಬು ಬೆಳೆಗಾರರಿಗೆ ೧೨ ಲಕ್ಷ ರೂ. ಮೋಸವಾಯ್ತು

ಮಂಡ್ಯ ಜಿಲ್ಲೆಯ ವಿಶ್ವೇಶ್ವರಯ್ಯ ನಾಲೆ ಕ್ಷೇತ್ರದಲ್ಲಿರುವ ೯ ಸಾವಿರ ಮಂದಿ ಕಬ್ಬು ಬೆಳೆಗಾರರಿಗೆ ೧೯೫೫–೫೬ರಲ್ಲಿ ಸರಬರಾಜು ಮಾಡಿದ ಕಬ್ಬಿಗಾಗಿ ಟನ್ನಿಗೆ ೭ ರೂ. ನಂತೆ ಒಟ್ಟು ೧೨ ಲಕ್ಷ ರೂ. ಗಳ ಮೋಸವನ್ನು ಹಂಚಲಾಗುವುದು.

ದೇಶಮುಖ್‌ರ ರಾಜೀನಾಮೆಗೆ ನೆಹರೂರವರ ಸಮ್ಮತಿ

ಪ್ರಧಾನಿ ಅಪ್ಪರು ನಂತರ ಅಧಿಕಾರ ತ್ಯಾಗ

ಬೊಂಬಾಯಿ ನಗರವನ್ನು ಮಹಾರಾಷ್ಟ್ರ ಸಂಸ್ಥಾನದಲ್ಲಿ ಸೇರ್ಪಡೆಗೊಳಿಸದಿರುವ ಬಗ್ಗೆ ಅತೃಪ್ತಿ ವ್ಯಕ್ತಪಡಿಸಿ ಕೇಂದ್ರ ಹಣಕಾಸಿನ ಮಂತ್ರಿ ಸಿ. ಡಿ. ದೇಶಮುಖ್‌ರವರು ರಾಜೀನಾಮೆಯಿತ್ತಿರುವುದಕ್ಕೆ ನೆಹರೂರವರು ಸಮ್ಮತಿಸಿರುವರೆಂದು ಹೇಳಲಾಗಿದೆ. ಪ್ರಧಾನಿಯವರು ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಿಂದ ಜುಲೈ ತಿಂಗಳ ಆರಂಭದಲ್ಲಿ ವಾಪಸು ಬಂದ ನಂತರ ದೇಶಮುಖ್‌ರವರನ್ನು ಅಧಿಕಾರದ ಜವಾಬ್ದಾರಿಯಿಂದ ಬಿಡುಗಡೆ ಮಾಡಲಾಗುವುದು. ಈಗ ಗೃಹ ಮಂತ್ರಿ ಗೋವಿಂದ ವಲ್ಲಭ ಪಂತರು ಹಣಕಾಸು ಮಂತ್ರಿಗಳಾಗುವರೆಂದು ಹೇಳಲಾಗಿದೆ.

ಶ್ರೀ ಎಸ್. ಕೆ. ಸುಬ್ಬಯ್ಯಶೆಟ್ಟರಿಗೆ ಮಾನಪತ್ರ

'ವಾಸವೀ ನಿಲಯ' ಧರ್ಮಛತ್ರದ ದಾನಿಗಳಾದ ಶ್ರೀ ಎಸ್. ಕೆ. ಸುಬ್ಬಯ್ಯಶೆಟ್ಟಿಯವರಿಗೆ ನೆನ್ನೆ ಬಿನ್ನವತ್ತಳೆಯನ್ನು ಸಮರ್ಪಿಸಿದಾಗ ತೆಗೆದ ಚಿತ್ರ

[ಪಡೆಯಚ್ಚು ಶ್ರೀ ಶಾರದಾ ಸ್ಟುಡಿಯೋ

ಧಾನ್ಯದ ಬೆಲೆ ಏರದಂತೆ ಎಲ್ಲಾ ಕ್ರಮ

ಕೇಂದ್ರ ಆಹಾರ ಉಪ ಮಂತ್ರಿ ಕೃಷ್ಣಪ್ಪನವರ ಹೇಳಿಕೆ

ಅಕ್ಕಿಯ ಬೆಲೆಯು ಕೆಲ್ಸದವರ ಶಕ್ತಿಯನ್ನು ಮೀರದಂತೆ ಮಾಡಲು ಸಮಸ್ತ ಕ್ರಮಗಳನ್ನೂ ಕೈಗೊಳ್ಳಲಾಗುವುದೆಂದು ಕೇಂದ್ರ ಆಹಾರ ಉಪ ಮಂತ್ರಿ ಎಂ. ವಿ. ಕೃಷ್ಣಪ್ಪನವರು ತಿಳಿಸುತ್ತಾರೆ. ಕಳೆದ ೧೮ ತಿಂಗಳಲ್ಲಿ ಕೇಂದ್ರ ಸರ್ಕಾರದವರು ೪೦ ಕೋಟಿ ರೂ. ಅಕ್ಕಿಯನ್ನು ನ್ಯಾಯವಾದ ಬೆಲೆಗೆ ಮಾರಾಟಕ್ಕೆ ಕೊಟ್ಟಿದ್ದಾಗಿಯೂ, ಬರುವ ತಿಂಗಳು ಇಂದ ನವೆಂಬರ್‌ವರೆಗಿನ ಕ್ಷೀಣ ಮಾಸಗಳಲ್ಲಿ ಇನ್ನೂ ೪೦ ಕೋಟಿ ರೂ. ಅಕ್ಕಿಯನ್ನು ಹೊರಕ್ಕೆ ಕೊಡಲಾಗುವುದೆಂದೂ ಅವರು ಹೇಳಿರುತ್ತಾರೆ.

ಮೈಸೂರು ನಗರದ ಶ್ರೀಗಳಾದ ಎ. ಗೋಪಾಲರಾವ್, ಬಿ. ಬಂಗಯ್ಯ ಮತ್ತು ಆರ್. ಎಸ್. ಮುರಲಿಯವರು ಶ್ರೀ ಎಂ. ವಿ. ಕೃಷ್ಣಪ್ಪನವರಿಗೆ ತಂತಿಯೊಂದನ್ನು ಕಳುಹಿಸಿ ಸರ್ಕಾರದವರ ಹೇಳಿಕೆಗಳು ಬರಿ ಕಣ್ಣೊರೆಸುವ ಮಾತಿನಂತಿವೆಯೆಂದೂ, ಕಾರ್ಯತಃ ಯಾವ ಪ್ರಯೋಜನವೂ ಆಗಿಲ್ಲವೆಂದೂ ತಿಳಿಸಿರುತ್ತಾರೆ.

ಕಾವ್ಯ ವಾಚನ ಮತ್ತು ವ್ಯಾಖ್ಯಾನ

ಜಯನಗರದ ಶ್ರೀ ಪೌರ ನೇಕ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ದ್ವಾದಶಿ ಪ್ರಯುಕ್ತ, ನಾಳೆ ಸಂಜೆ ೬.೩೦ ಘಂಟೆಗೆ "ಶ್ರೀ ಶಂಕರ ಸೋಪಾನಯುಕ್ತ" ಎಂಬ ಕಾವ್ಯ ವಾಚನವನ್ನು ಸಹಿತ ವ್ಯಾಖ್ಯಾನದೊಡನೆ ಶ್ರೀ ಬಿ. ಎಸ್. ಎಸ್. ಶಾಸ್ತ್ರಿಗಳಿಂದ ಏರ್ಪಡಿಸಿರುತ್ತೆ. ಸರ್ವರಿಗೂ ಆಹ್ವಾನವುಂಟು.

ತುಂಗಭದ್ರಾ ನೀರಿನ ಹಂಚಿಕೆ ಬಗ್ಗೆ ಒಡಂಬಡಿಕೆ

ಆಂಧ್ರಕ್ಕೆ ಶೇಕಡ ೬೫ ಮತ್ತು ಮೈಸೂರಿಗೆ ೩೫ ರಂತೆ ಪಾಲು

ಬೆಂಗಳೂರು ೧೮

ತುಂಗಭದ್ರಾ ಅಣೆಕಟ್ಟಿನ ನೀರಿನ ಹಂಚಿಕೆ ಬಗ್ಗೆ ಆಂಧ್ರ ಮತ್ತು ಮೈಸೂರು ಸಂಸ್ಥಾನಗಳಿಗೆ ಬಹಳ ದಿನಗಳಿಂದಲೂ ಇದ್ದ ವಿವಾದವು ನೆನ್ನೆ ಇತ್ಯರ್ಥವಾಯಿತು. ಆಂಧ್ರ ಮತ್ತು ಮೈಸೂರು ಮಂತ್ರಿಗಳು ಮತ್ತು ಇಂಜಿನಿಯರುಗಳು ಕೇಂದ್ರ ಯೋಜನಾ ಮಂಡಲಿಯ ಉಪಾಧ್ಯಕ್ಷ ಶ್ರೀ ವಿ. ಟಿ. ಕೃಷ್ಣಮಾಚಾರಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಆಂಧ್ರದವರು ತುಂಗಭದ್ರಾ ಅಣೆಕಟ್ಟು ನೀರಿನಲ್ಲಿ ಶೇಕಡ ೬೫ರಂತೆಯೂ, ಮೈಸೂರಿನವರು ೩೫ರಂತೆಯೂ ಹಂಚಿಕೊಳ್ಳಲು ಒಪ್ಪಿದರು. ಉಭಯರಿಗೂ ಅನ್ವಯವಾಗುವ ಯೋಜನೆಯ ಕೆಲಸಗಳನ್ನು ತುಂಗಭದ್ರಾ ಬೋರ್ಡಿನವರು ನಡೆಸತಕ್ಕದ್ದೆಂದು ತೀರ್ಮಾನಿಸಲಾಯಿತು.

ಸಮ್ಮೇಳನಾನಂತರ ಆಂಧ್ರದ ಮುಖ್ಯ ಮಂತ್ರಿ ಶ್ರೀ ಬಿ. ಸಂಜೀವರೆಡ್ಡಿಯವರು ಮಾತನಾಡಿ, ಯೋಜನೆಯ ಕೆಲಸವು ಸಧ್ಯದಲ್ಲೇ ಆರಂಭವಾಗುವುದೆಂದು ಹೇಳಿದರು. ಮೈಸೂರಿನ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಉಭಯ ಸರ್ಕಾರಗಳ ಸೌಹಾರ್ದದಿಂದ ಒಪ್ಪಂದಕ್ಕೆ ಬರಲಾಯಿತೆಂದೂ, ಮೈಸೂರಿಗೂ ಆಂಧ್ರಕ್ಕೂ ಇರಬಹುದಾದ ಇತರ ಪ್ರಶ್ನೆಗಳೂ ಹೀಗೆಯೇ ಸುಲಭವಾಗಿ ಬಗೆಹರಿಯಬೇಕೆಂದೂ ತಿಳಿಸಿದರು.

ಬೇಲೂರರ ಕೊಲೆ ಮೊಕದ್ದಮೆ ನೇರವಾಗಿ ಸೆಷನ್ಸ್ ಕೋರ್ಟಿಗೆ?

ದಸ್ತಗಿರಿಯಾಗಬೇಕಾದ ಮುಖ್ಯ ಅಪರಾಧಿಯ ಪರಾರಿ

ಸ್ವಂತ ವರದಿಗಾರ] ಬೆಂಗಳೂರು ೧೮

ಗಾಂಧಿನಗರದ ಕೊಲೆಗಳ ಪ್ರಕರಣದಲ್ಲಿ ಮುಖ್ಯ ಅಪರಾಧಿಯನ್ನು ದಸ್ತಗಿರಿ ಮಾಡಲು ಪೊಲೀಸರು ಪ್ರಯತ್ನಿಸುತ್ತಿರುವರೆಂದೂ, ಅವನು ಪರಾರಿಯಾಗಿರುವನೆಂದೂ ಹೇಳಲಾಗಿದೆ. ಇದೇ ಅಲ್ಲದೆ ಇನ್ನೊಬ್ಬ ಪ್ರಮುಖನ ಪತ್ತೆಗೂ ಪ್ರಯತ್ನ ನಡೆಯುತ್ತಿದೆ.

೧೦ ಜನ್ನರ ಕಾವಲಿನ ಸಮೇತವಾಗಿ ಮಾಹಿತಿ ತಿಳಿದು ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆಗೆ ಸಶಸ್ತ್ರ ಕಾವಲನ್ನು ಹಾಕಲಾಗಿದೆ.

ಸೆಷನ್ಸ್ ನ್ಯಾಯಸ್ಥಾನದಲ್ಲಿ ನೇರವಾಗಿ ಚಾರ್ಜ್‌ಷೀಟನ್ನು ಹಾಕಬೇಕೆಂದು ಪೊಲೀಸರು ಯೋಚಿಸುತ್ತಿರುವರೆಂದು ಹೇಳಲಾಗಿದೆ. ಈ ಬಗ್ಗೆ ಸಂಸತ್ತಿನಲ್ಲಿ ಪ್ರಸ್ತಾಪವಾಗಿರುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿರುವುದಾಗಿ ಗೊತ್ತಾಗಿದೆ.

○ ಗೃಹ ಮಂತ್ರಿ ಸಿದ್ದವೀರಪ್ಪನವರು ಈ ದಿನ ಪತ್ರಿಕೆಗೆ ತಿಳಿಸಿದರು.

ಸೂಯೆಜ್ ಕಾಲುವೆ ಮೇಲೆ ಬ್ರಿಟಿಷ್ ಅಧಿಕಾರದ ಸಮಾಪ್ತಿ

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಬ್ರಿಟನ್ನಿನ ೭೪ ವರ್ಷಗಳ ಅಧಿಕಾರದ ಮುಕ್ತಾಯದ ಸೂಚನೆಯಾಗಿ ನೆನ್ನೆ ಈಜಿಪ್ಟಿನ ಪ್ರಧಾನಿ ನಾಸಿರ್‌ರವರು ಪೋರ್ಟ್ ಸೈಯದ್ ನೌಕಾ ಕಟ್ಟಡದ ಮೇಲೆ ಈಜಿಪ್ಟಿನ ಧ್ವಜವನ್ನು ಆರೋಹಣ ಮಾಡಿದರು. ಈಜಿಪ್ಟಿನ ೭,೦೦೦ ವರ್ಷದ ಇತಿಹಾಸದಲ್ಲಿ ಹೊಸ ಅಧ್ಯಾಯದ ಪ್ರಾರಂಭದ ಸಂಕೇತವಾಗಿ ನೆನ್ನೆಯ ೩ ದಿನಗಳ ಸಮಾರಂಭವನ್ನು ಏರ್ಪಡಿಸಲಾಗಿದೆ. ನಾಸಿರ್‌ರವರು ಭಾಷಣ ಮಾಡಿ ಈಜಿಪ್ಟ್ ಸ್ವತಂತ್ರವಾಯಿತೆಂದು ಘೋಷಿಸಿದರು. ಅಲ್ಲಿ ನೆರೆದಿದ್ದ ಭಾರಿ ಜನಸಮೂಹವು ಹರ್ಷಧ್ವನಿ ಮಾಡಿತು. ರೇವಿನಲ್ಲಿದ್ದ ಅನೇಕ ರಾಷ್ಟ್ರಗಳ ಹಡಗುಗಳು ಸ್ವಾಗತ ಸೂಚಕವಾಗಿ ತೋಪುಗಳನ್ನು ಹಾರಿಸಿದುವು.

ಬೊಂಬಾಯಿ ಬಗ್ಗೆ ಸೂತ್ರಕ್ಕೆ ನಾಗಪುರ ಕಾಂಗ್ರೆಸ್ಸಿನ ಒಪ್ಪಿಗೆ

ಬೊಂಬಾಯಿ ನಗರವನ್ನು ಕೇಂದ್ರ ಆಡಳಿತಕ್ಕೆ ಒಳಪಡಿಸಿ ಐದು ವರ್ಷಗಳನಂತರ ಅದರ ಭವಿಷ್ಯದ ಬಗ್ಗೆ ಜನಾಭಿಪ್ರಾಯ ಕೇಳಬೇಕೆಂದು ನೆಹರೂರವರು ಎ. ಐ. ಸಿ. ಸಿ. ಸಭೆಯಲ್ಲಿ ಮಾಡಿದ್ದ ಸಲಹೆಯನ್ನು ನಾಗಪುರ ನಗರ ಕಾಂಗ್ರೆಸ್ ಸಮಿತಿಯು ಸ್ವಾಗತಿಸಿದೆ. ಮಹಾರಾಷ್ಟ್ರದ ಜನರು ನೆಹರೂರವರ ತೀರ್ಪನ್ನು ಒಪ್ಪಿ ಶಾಂತ ವಾತಾವರಣವನ್ನು ಮುಕ್ತಾಯ ಮಾಡಬೇಕೆಂದು ಸಮಿತಿಯು ಕೋರಿದೆ.

ನಾರ್ವೆಯಲ್ಲಿ ಮಹಾ ಚುನಾವಣೆ

೧೯೫೭ನೇ ಮಾರ್ಚಿಯಲ್ಲಿ ಮಹಾ ಚುನಾವಣೆ ನಡೆಯುವ ನಿರೀಕ್ಷೆಯುಳ್ಳದಾಗಿ ಪ್ರಧಾನಿ ನೆಹರೂರವರು ತಿಳಿಸಿರುತ್ತಾರೆ.

"ಮಾನವತಿ" ನಾಟಕಾಭಿನಯ

(ಒಂದು ವಿಮರ್ಶೆ)

ಮೈಸೂರು ೧೮

ಗೋಕಾಕಿನ ಶಾರದಾ ಸಂಗೀತ ನಾಟಕ ಮಂಡಲಿಯವರು ರಾಜಧಾನಿಗೆ ಬಂದು ಪುರಭವನದಲ್ಲಿ ಪ್ರತಿ ದಿನ ಸಂಜೆ ತಮ್ಮ ನಾಟಕಗಳನ್ನು ಅಭಿನಯಿಸುತ್ತಿದ್ದು ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರ ನೇತೃತ್ವದಲ್ಲಿ ನಾಟಕಗಳ ಆರಂಭೋತ್ಸವ ಮೊನ್ನೆ ನಡೆಯಿತು

ಮಂಡಲಿಯವರು 'ಮಾನವತಿ' ಎಂಬ ನಾಟಕವನ್ನು ಬಹಳ ಉತ್ತಮವಾಗಿ ಅಭಿನಯಿಸಿ, ಪ್ರೇಕ್ಷಕರ ಮೆಚ್ಚುಗೆಗೆ ಪಾತ್ರರಾದರು ನಾಟ್ಯಕಲಾವಿಶಾರದ ಶ್ರೀ ಎಂ ಸಿ ಮಹದೇವಸ್ವಾಮಿಯವರು ಮಂಡಲಿಯವರ ಪರಿಚಯವನ್ನು ಮಾಡಿಕೊಟ್ಟು, ಅವರ ಸಾಮಾಜಿಕ, ಐತಿಹಾಸಿಕ ಮತ್ತು ಪೌರಾಣಿಕ ನಾಟಕಗಳು ಈಗಾಗಲೇ ಸಂಸ್ಥಾನದ ಹಲವು ಭಾಗಗಳಲ್ಲಿ ಮಹಾಜನರ ಮನಸ್ಸನ್ನು ಸೆಳೆದಿರುವ ವಿಚಾರವನ್ನು ತಿಳಿಸಿದರು ಕರ್ನಾಟಕ ಪ್ರಾಂತವು ಉದಯವಾಗಲಿರುವ ಈ ಸಮಯದಲ್ಲಿ ಕನ್ನಡ ರಂಗಭೂಮಿಯ ಕಲಾಸೇವಕರು ಮೈಸೂರು ಸಂಸ್ಥಾನಕ್ಕೆ ಬಂದು ತಮ್ಮ ಕೌಶಲ್ಯವನ್ನು ಪ್ರದರ್ಶಿಸಿ ನಾಡಿನ ಸಾಂಸ್ಕೃತಿಕ ಸಂಬಂಧವನ್ನು ಬೆಳೆಸುತ್ತಿರುವುದಕ್ಕಾಗಿ ಸಂತೋಷವನ್ನು ಸೂಚಿಸಿದರು

ಅಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ತಮ್ಮ ಭಾಷಣದಲ್ಲಿ, ನಾಟಕ ಮಂಡಲಿಯವರಿಗೆ ಪುರಜನರ ಪರವಾಗಿ ಸುಸ್ವಾಗತವನ್ನು ಬಯಸಿದುದಲ್ಲದೆ ಉತ್ತಮವಾದ ಕಥಾವಸ್ತು, ಪಾತ್ರರಚನೆ, ರಸಭರಿತ ಸಾಹಿತ್ಯ, ಇಂಪಾದ ಗಾಯನ ಮತ್ತು ಹೃದಯಂಗಮವಾದ ವಿನೋದಗಳಿಂದ ಕೂಡಿದ ನಾಟಕಾಭಿನಯಕ್ಕಾಗಿ ಅವರನ್ನು ಅಭಿನಂದಿಸಿ ಅವರ ಉದ್ಯಮಕ್ಕೆ ಯಶಸ್ಸನ್ನು ಕೋರಿದರು

ನಾಟಕ ಪ್ರದರ್ಶನವು ಮೈಸೂರಿನ ಮಹಾಜನರಿಗೆ ವಿಶೇಷವಾಗಿ ಮೆಚ್ಚಿಗೆಯನ್ನುಂಟುಮಾಡುವಂತಿತ್ತು ಅತ್ಯುನ್ನತವಾದ ಕನ್ನಡ ಭಾಷಾ ಶೈಲಿಯು ಪ್ರಧಾನವಾಗಿದ್ದು ಅದನ್ನು ಹೆಚ್ಚುಹೆಚ್ಚಾಗಿ ಸಂಭಾಷಣೆಗಳನ್ನು ಕೇಳಬೇಕೆಂದೆನಿಸುತ್ತಿತ್ತು ಸಾಮಾಜಿಕ ನಾಟಕಗಳ ಪೈಕಿ ಇಷ್ಟುಮಟ್ಟಿನ ಉನ್ನತ ದರ್ಜೆ ಮಟ್ಟಿ ಅಭಿನಯಿಸಲ್ಪಡುವ ನಾಟಕಗಳು ಬಹಳ ವಿರಳವೆಂದು ಹೇಳಬೇಕು

ಮನೆಗೆ ಬಂದ ಸೊಸೆಯನ್ನು, ಅವಳ ಮಾತಾಪಿತೃಗಳನ್ನೂ ಕ್ಷುಲ್ಲಕ ಕಾರಣಗಳ ಮೇಲೆ ಐಶ್ವರ್ಯ ಮದದಿಂದ ದೂರೀಕರಿಸಿ ಒಬ್ಬ ರಾವ್‌ಸಾಹೇಬ್ ಬರುದಾಂಡಿತನು ಸಿರಿಯೋಪಿಯೂ, ಪತಿವ್ರತಾ ಶಿರೋಮಣಿಯೂ ಆದ ತನ್ನ ಸೊಸೆಯ ಸಚ್ಚಾರಿತ್ರ್ಯವನ್ನು ಕಟ್ಟಕಡೆಗೆ ಮನಗಂಡು ಪರಿತಾಪಪಡುವ ಪ್ರಸಂಗವೇ ಮುಖ್ಯ ಕಥಾವಸ್ತು ಎಲ್ಲ ಪಾತ್ರಧಾರಿಗಳೂ ತಮ್ಮ ಕರ್ತವ್ಯವನ್ನು ಸಮರ್ಪಕವಾಗಿ ನಿರ್ವಹಿಸಿರುವರು ಕಾಶಿನಾಥ ಮತ್ತು ಕವಿತಾ ಇವರಿಬ್ಬರೂ ತೋರ್ಪಡಿಸಿರುವ ಹಾಸ್ಯ ರಸವು ಉನ್ನತ ಮಟ್ಟದ್ದಾಗಿರುತ್ತದೆ

ಒಂದೆರಡು ಸಿನಿಮಾ ಮಟ್ಟಿನ ಹಾಡುಗಳು ಜನರಂಜನೆಯನ್ನು ಉಂಟುಮಾಡುತ್ತಿದ್ದನ್ನು ಬಿಟ್ಟರೆ ಮೈಸೂರಿನ ಜನತೆಗೆ ಬೇಕಾದಷ್ಟು ಸಂಗೀತವು ಇರುವುದಿಲ್ಲ ಮಾನವತಿಯ ವೇಷಭೂಷಣಗಳ ಅಲಂಕಾರವು ಸಾಕಾದಷ್ಟು ಇರುವುದಿಲ್ಲ ಹಲವು ಕಡೆ ಸಂಭಾಷಣೆಗಳಲ್ಲಿ ಪ್ರಯೋಗಿಸುವ ಅಶ್ಲೀಲ ಪದಗಳನ್ನು ಅಗತ್ಯವಾಗಿ ತ್ಯಜಿಸಬೇಕು ಅಲ್ಲದೆ ಕಾಶಿನಾಥನು ಹೇಳುವ ಕೆಲವು ಮಾತುಗಳ ವಿಶೇಷ ಪುನರುಕ್ತಿಗಳನ್ನು ಬಿಡಬೇಕು ಹೀಗೆ ಮಾಡಿದರೆ ನಾಟಕವು ಇನ್ನೂ ಪರಿಷ್ಕಾರ ಹೊಂದಿ ಪ್ರೇಕ್ಷಕರ ಪೂರ್ಣವಾದ ಪ್ರಶಂಸೆಗೆ ಪಾತ್ರವಾಗುವುದರಲ್ಲಿ ಸಂದೇಹವಿಲ್ಲ ಕನ್ನಡ ಬಾಂಧವರೆಲ್ಲರೂ ಇವರ ನಾಟಕಗಳನ್ನು ನೋಡಿ ಅವರಿಗೆ ಬೇಕಾದ ಪ್ರೋತ್ಸಾಹವನ್ನು ನೀಡಬೇಕಾದ್ದಾಗಿದೆ

ಶಾಸ್ತ್ರದಲ್ಲಿರುವ ಅಸಂಪೂರ್ಣ ಕಾನೂನುಗಳು

ಭಾರತದಲ್ಲಿ ಅಪರಾಧಗಳಿಗೆ ಸಂಬಂಧಪಟ್ಟ ಕ್ರಿಮಿನಲ್ ಶಾಸನದಲ್ಲಿ ಅಸಂಪೂರ್ಣತೆಯು ವಿಶೇಷವಾಗಿರುವುದೆಂದು ಮದ್ರಾಸಿನ ನ್ಯಾಯಾಧೀಶ ಎ ಎಸ್ ಪಿ ಅಯ್ಯಂಗಾರ್‌ರವರು ಹೇಳುತ್ತಾರೆ ಶಾಸನದ ಪ್ರಕಾರ ವ್ಯಭಿಚಾರ ಮಾಡುವವನು ಜೈಲಿಗೆ ಕಳುಹಿಸಲ್ಪಡುವನು ಆದರೆ ವ್ಯಭಿಚಾರಕ್ಕೆ ಸಹಕಾರಿಯಾಗುವ ಮಹಿಳೆಯನ್ನು ಕಳುಹಿಸುವಂತಿಲ್ಲ, ಬಡವನಾದ ಗಂಡನಿಂದಲೂ ಐಶ್ವರ್ಯವಿರುವ ಹೆಂಡತಿಯು ಜೀವನಾಂಶ ಪಡೆಯಬಹುದು, ಆದರೆ ಧನವಂತ ಹೆಂಡತಿಯಿಂದ ಬಡವನಾದವನು ಜೀವನಾಂಶ ಕೇಳುವಂತಿಲ್ಲ ಹಸಿವಿನಿಂದ ನರಳುವವನ ಶವ ಪರೀಕ್ಷೆಗಾಗಿ ೧೫ ರೂಪಾಯಿಗಳಿಂದಲೂ ಕನಿಷ್ಠವಾಗಿ ವೆಚ್ಚವಾಗುವುದು ಆದರೆ ಅವನಿಗೆ ಸಾವು ತಪ್ಪಿಸಲು ಆ ಹಣವನ್ನೂ ಖರ್ಚು ಮಾಡುವಂತಿಲ್ಲ ಮದ್ರಾಸಿನಲ್ಲಿರುವ ಒಬ್ಬ ಮುಸ್ಲಿಮನು ನಾಲ್ಕು ಮಂದಿ ಹೆಂಡಿರನ್ನು ಒಂದೇ ಕಾಲದಲ್ಲಿ ಪಡೆದಿರಬಹುದು ಆದರೆ ಒಬ್ಬ ಹಿಂದುವಾಗಲಿ, ಒಬ್ಬ ಕ್ರಿಶ್ಚಿಯನ್ನಾಗಲಿ ಹಾಗೆ ಮಾಡಿದರೆ ಜೈಲಿಗೆ ಹೋಗಬೇಕಾಗುವುದು ಎಂದು ಅವರು ಹೇಳುತ್ತಾರೆ

ಹಿಂದಿ ಪರೀಕ್ಷೆಗಳಿಗೆ ಆವೇದನ ಪತ್ರ

ಬರುವ ಆಗಸ್ಟ್ ತಿಂಗಳಲ್ಲಿ ನಡೆಯುವ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ, ಮಾಧ್ಯಮ ಮತ್ತು ರಾಷ್ಟ್ರಭಾಷಾ ಪರೀಕ್ಷೆಗಳಿಗೆ ಆವೇದನ ಪತ್ರಗಳನ್ನು ಸ್ವೀಕರಿಸಲು ಜೂನ್ ೩೦ನೇ ತಾರೀಕು ಶುಕ್ರವಾರ ಕಡೆಯ ದಿನವಾಗಿರುವುದು ವಿಳಂಬ ಶುಲ್ಕದೊಡನೆ [illegible] ವರೆಗೆ ತೆಗೆದುಕೊಳ್ಳಲಾಗುವುದು ಅವನ್ನು ಹಿಂದೀ ಪ್ರಚಾರ ಸಭೆಯ ಕಾರ್ಯಾಲಯದಲ್ಲಿ ಪಡೆಯಬಹುದು

ವಿದ್ಯುಚ್ಛಕ್ತಿ ದರದ ಏರಿಕೆ ಬಗ್ಗೆ ಸಚಿವರೊಡನೆ ಅಕ್ಕಿ ಗಿರಣಿಯವರ ಭೇಟಿ

ವಿದ್ಯುಚ್ಛಕ್ತಿ ದರಗಳ ಏರಿಕೆಯ ವಿಷಯವನ್ನು ಕುರಿತು ಸಂಸ್ಥಾನದ ಅಕ್ಕಿ ಗಿರಣಿ ಮಾಲೀಕರುಗಳ ಸಂಘದ ಸದಸ್ಯರು ಉಪಾಧ್ಯಕ್ಷರಾದ ಶ್ರೀ ರಟ್ಟಿಹಳ್ಳಿ ರಂಗಪ್ಪನವರ ನೇತೃತ್ವದಲ್ಲಿ ಕಳೆದ ಗುರುವಾರ ಗೃಹಮಂತ್ರಿ ಶ್ರೀ ಹೆಚ್ ಸಿದ್ದಯ್ಯನವರನ್ನು ಭೇಟಿ ಮಾಡಿ, ಹೊಸ ದರಗಳಿಂದ ಅಕ್ಕಿ ಮತ್ತು ಹಿಟ್ಟಿನ ಗಿರಣಿಯ ಮಾಲೀಕರಿಗೆ ಆಗಿರುವ ತೊಂದರೆಗಳನ್ನು ಅರಿಕೆ ಮಾಡಿ, ಮನವಿಯೊಂದನ್ನು ಸಲ್ಲಿಸಿದರು ಸಚಿವರು ಸಾವಧಾನದಿಂದ ಅವರ ಅಹವಾಲುಗಳನ್ನು ಕೇಳಿ, ಮಂತ್ರಿಮಂಡಲದ ಸಭೆಯಲ್ಲಿ ಈ ವಿಷಯವನ್ನು ಪರಿಶೀಲಿಸಲಾಗುವುದೆಂದು ಭರವಸೆಯಿತ್ತರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಮತ್ತು [illegible] ಮತ್ತು [illegible] ಮತ್ತು [illegible] ಮಧ್ಯಾಹ್ನ [illegible] [illegible] ಮತ್ತು [illegible] [illegible] ದೆಹಲಿಯಿಂದ [illegible] [illegible] ಸಂಗೀತ

ನೆಹರೂ ನೋಡಲು ವೃದ್ಧನ ೨೦೦ ಮೈಲಿ ಸೈಕಲ್ ಸವಾರಿ

ಬಹು ಕಾಲದ ಆಸೆಯನ್ನು ಪೂರೈಸಿಕೊಳ್ಳಲು ಒಬ್ಬ ನಿವೃತ್ತ ರೈಲ್ವೆ ಕಾರ್ಮಿಕ ೭೫ ವರ್ಷದ ಸಾಧೂರಾಂ ಧೀರ್ ಎಂಬಾತನು ಪ್ರಧಾನಿ ನೆಹರೂರವರನ್ನು ಕಾಣಲು ಜಲಂಧರ್ ಬಳಿ ಮಾಂಕ ಎಂಬ ಹಳ್ಳಿಯಿಂದ ದೆಹಲಿಗೆ ೨೦೦ ಮೈಲಿ ದೂರ ಸೈಕಲ್ ಮೇಲೆ ಪ್ರವಾಸ ಮಾಡಿದನು ಅವನಿಗೆ ನೆಹರೂರವರು ಭೇಟಿಯಿತ್ತರು ರೈಲಿನಲ್ಲಿ ಯಾತಕ್ಕಾಗಿ ಬರಲಿಲ್ಲವೆಂದು ಅವನನ್ನು ನೆಹರೂರವರು ಕೇಳಲು, ಅವರಲ್ಲಿರುವ ಪ್ರೀತಿಗಾಗಿ ತಾನು ಸೈಕಲ್‌ಮೇಲೆ ಬಂದುದಾಗಿ ಅವನು ತಿಳಿಸಿದನು. ಅವನಿಗೆ ನೆಹರೂರವರು ತಮ್ಮ ಫೋಟೋ ಕೊಟ್ಟರು

ನೆಹರೂ-ನಾಸಿರ್-ಟಿಟೋ ಭೇಟಿ

ಬರುವ ತಿಂಗಳು ಮಧ್ಯಭಾಗದಲ್ಲಿ ಉತ್ತರ ಆಡ್ರಿಯಾಟಿಕ್ ಸಮುದ್ರದಲ್ಲಿರುವ ಬ್ರಿಯೋನಿ ಎಂಬ ದ್ವೀಪದಲ್ಲಿ ನೆಹರೂ, ಈಜಿಪ್ಟಿನ ಪ್ರಧಾನಿ ನಾಸಿರ್ ಮತ್ತು ಯುಗೊಸ್ಲೇವಿಯಾ ಅಧ್ಯಕ್ಷ ಮಾರ್ಷಲ್ ಟಿಟೋರವರ ಭೇಟಿಯಾಗುವುದೆಂದು ಗೊತ್ತಾಗಿದೆ

ಇಂಜನಿಯರಿಂಗ್ ಕಾಲೇಜಿನಲ್ಲಿ ಸ್ಥಾನಗಳ ಹಂಚಿಕೆ

ಬೆಂಗಳೂರಿನ ಇಂಜನಿಯರಿಂಗ್ ಕಾಲೇಜಿನಲ್ಲಿ ಈ ವರ್ಷ ೨೪ ಮಂದಿ ಸಿಸ್ಸು ವರ್ಗದವರೂ ಸೇರಿ ಒಟ್ಟು ೧೨೦ ಮಂದಿಗೆ ಪ್ರವೇಶಾವಕಾಶವನ್ನು ಕೊಡಲಾಗಿದೆ ೧೫೫೦ ಅರ್ಜಿಗಳು ಬಂದಿದ್ದವು ೩೭ ಮಂದಿ ಸಿಸ್ಸು ವರ್ಗದವರು ಅರ್ಜಿ ಹಾಕಿಕೊಂಡಿದ್ದರು ಕಳೆದ ವರ್ಷ ೧೩೬೨ ಅರ್ಜಿಗಳು ಬಂದಿದ್ದು ೧೦೦ ಸ್ಥಾನಗಳಿಗೆ ಪ್ರವೇಶಾವಕಾಶ ಕೊಡಲಾಗಿತ್ತು ಅಖಿಲ ಭಾರತ ಪಾಲಿಟೆಕ್ನಿಕ್ ವಿದ್ಯಾಭ್ಯಾಸ ಸಮಿತಿಯವರು ಕಳೆದ ವರ್ಷ ಬೆಂಗಳೂರಿಗೆ ಬಂದು ಕಾಲೇಜನ್ನು ಪರಿಶೀಲನೆ ನಡೆಸಿ ಅಲ್ಲಿನ ಸಾಧನ ಸಲಕರಣೆಗಳನ್ನು ನೋಡಿ ೧೨೦ ಸ್ಥಾನಗಳು ಇರಬೇಕೆಂದು ಗೊತ್ತು ಪಡಿಸಿದ್ದಾಗಿ ಹೇಳಲಾಗಿದೆ

ಬಸ್ಸರ್ ಮೊಹಲ್ಲಾ ಪೌರಸಭಾ ಕಛೇರಿ

ಪೌರಸಭೆಯ ಕಮೀಷನರ್ ಶ್ರೀ ಎ ವಿಶ್ವನಾಥರವರು ನಾಳೆ ಬೆಳಿಗ್ಗೆ ೮-೩೦ ಗಂಟೆಯಿಂದ ೯-೩೦ ಗಂಟೆಯ ವರೆಗೆ ಬಸ್ಸರ್ ಮೊಹಲ್ಲಾ ಪರಿಶೀಲನೆ ಮಾಡಿ ಅನಂತರ ವೀರನಗೆರೆ ಮಾರ್ಕೆಟ್ಟಿನಲ್ಲಿ ಮೊಹಲ್ಲಾ ಕಛೇರಿಯನ್ನು ನಡೆಸುವರು ಮೊಹಲ್ಲದ ರೇಟ್ ಪೇಯರುಗಳು ತಮ್ಮ ಕುಂದುಕೊರತೆಗಳನ್ನು ಮೇಲ್ಕಂಡ ಕಾಲದಲ್ಲಿ ಅರಿಕೆ ಮಾಡಿಕೊಳ್ಳಬಹುದು

ಕಾನ್ಪುರ ಸಕ್ಕರೆ ಕಾಲೇಜಿಗೆ ಮೈಸೂರಿನವರ ನೇಮಕ

ಕಾನ್ಪುರದಲ್ಲಿರುವ ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಶುಗರ್ ಟೆಕ್ನಾಲಜಿ ಸಂಸ್ಥೆಯ ಡೈರೆಕ್ಟರಾಗಿ ಮೈಸೂರಿನ ಶ್ರೀ ಎಸ್ ಎಂ ಗುಂಡೂರಾಯರನ್ನು ನೇಮಿಸಲಾಗಿದೆ ಅವರು ಮಂಡ್ಯ ಸಕ್ಕರೆ ಕಾರ್ಖಾನೆಯಲ್ಲಿ ಹಿಂದೆ ಕೆಲಸ ಮಾಡುತ್ತಿದ್ದರು

CENTRAL INSTITUTE OF COMMERCE,
Vanivilas Market
MYSORE
Admissions to diploma courses in Commerce, Shorthand and Typewriting are being received on all working days. Make haste and join immediately

ವಿವಾಹ ಮಹೋತ್ಸವ

ಮಹದೇವಪ್ಪ-ಸಾವಿತ್ರಮ್ಮ

ನರಸಿಂಹರಾಜ ಮೊಹಲ್ಲೆಯ ಶ್ರೀ ಸಂಜೀವಯ್ಯನವರ ಪುತ್ರ ಶ್ರೀ ಮಹದೇವಪ್ಪ ಮತ್ತು ಶ್ರೀ ಬಸಿದ್ದಯ್ಯನವರು ಮತ್ತು ಶ್ರೀಮತಿ ಪುಟ್ಟಸಿದ್ದಮ್ಮನವರುಗಳ ಪುತ್ರಿ ಚಿ॥ ಸೌ॥ ಸಾವಿತ್ರಮ್ಮ ಇವರ ವಿವಾಹವು 14-6-56ರಲ್ಲಿ ಮಹದೇವಪುರದಲ್ಲಿ ನಡೆಯಿತು ಅನೇಕ ಮಹನೀಯರು ದಯಮಾಡಿಸಿದ್ದರು ತಾರೀಕು 17-6-56ರಲ್ಲಿ ಮೈಸೂರು ಸಿಟಿ ನರಸಿಂಹರಾಜ ಮೊಹಲ್ಲಾ 473ನೇ ಡೋರ್ ನಂಬರು ಮನೆಯಲ್ಲಿ ಆರತಕ್ಷತೆಯೂ ಸಹ ಏರ್ಪಾಡಾಗಿತ್ತು

ವಿವಾಹ ಮಹೋತ್ಸವಗಳು

ರಾಜಧಾನಿಯ ಲಲಿತಾ ಮೋಟಾರು ಸರ್ವೀಸಿನ ಮಾಲೀಕರಾದ ಶ್ರೀ ಸಿ ಕೃಷ್ಣಸ್ವಾಮಿ ಅಯ್ಯಂಗಾರ್‌ರವರು ತಮ್ಮ ಕುಮಾರಿ ಸೌ॥ ಕಮಲಾಮಣಿಯನ್ನು ಮೈಸೂರು ವಿದ್ಯಾ ಇಲಾಖೆ ನೌಕರರಾದ ಬೆಂಗಳೂರಿನ ಶ್ರೀ ಎಂ ರಂಗಸ್ವಾಮಿ ಅಯ್ಯಂಗಾರ್‌ರ ಮಗ ಶ್ರೀ ಕೃಷ್ಣಸ್ವಾಮಿ ಅಯ್ಯಂಗಾರ್‌ರಿಗೆ ಕೊಟ್ಟು ನೆನ್ನೆ ವಿವಾಹವನ್ನು ನಗರದಲ್ಲಿ ನೆರವೇರಿಸಿದರು

ಅರಸೀಕೆರೆ ಪ್ರೌಢ ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಎ ಆರ್ ಕೃಷ್ಣಸ್ವಾಮಿಯವರು ತಮ್ಮ ಸಹೋದರ ಶ್ರೀ ಎ ಆರ್ ರಾಜಗೋಪಾಲ್‌ರವರಿಗೆ ತುಮಕೂರಿನ ಮಾಧ್ಯಮಿಕ ಶಾಲೆಯ ಉಪಾಧ್ಯಾಯರಾದ ಶ್ರೀ ಎ ಎನ್ ನರಸಿಂಹಮೂರ್ತಿಯವರ ಕುಮಾರಿ ಸೌ॥ ಶಾಂತಲಕ್ಷ್ಮಮ್ಮನವರನ್ನು ತಂದುಕೊಂಡು ತುಮಕೂರಿನಲ್ಲಿ ನೆನ್ನೆ ವಿವಾಹವನ್ನು ನೆರವೇರಿಸಿದರು

ಹರಿಕಥೆ

ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ಈ ದಿನ ರಾತ್ರಿ ೮ ಘಂಟೆಗೆ ವಿ॥ ಗಮಕಿ ವಿ ನಾರಾಯಣ ಶಾಸ್ತ್ರಿಗಳಿಂದ ಹರಿಕಥಾ ಕಾಲಕ್ಷೇಪವನ್ನು ಏರ್ಪಡಿಸಲಾಗಿದೆ

Take
BRONKOL
for ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
71/1 A. S Street,
BANGALORE 2

Edited, Printed and Published by A. R. Nagarajan at Sadhvi Press D. Subbiah Road Mysore

ಪ್ರಭುದೇವಾ ಥಿಯೇಟರ್ (ಪದ್ಮಾ ಟಾಕೀಸ್)
21-6-56 ನೇ : ಗುರುವಾರದಿಂದ ಅನೋಘ ಪ್ರಾರಂಭ ಪ್ರತಿ ದಿನ 3 ಆಟಗಳು
ಲಕ್ಷ್ಮಿ ಪ್ರೊಡಕ್ಷನ್ಸ್‌ರವರ ತೆಲುಗು ಚಿತ್ರ
★ ಮನೆಯ ದೇವರು ★ (ಇಲವೇಲುಪು)
ಪಾತ್ರ - ನಾಗೇಶ್ವರರಾವ್, ಜಮುನ, ಅಂಜಲಿ, ಕೃಷ್ಣಕುಮಾರಿ, ರೇಲಂಗಿ ಮುಂತಾದವರು

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೌಜಿ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ನಿ, ಬಿಂಗಳೂರ್
ದೊಡ್ಡ ಮತ್ತು ಸಣ್ಣ ಸೀರೆಗಳು
ಬಂದಿವೆ ಬಂದು ನೋಡಿ
M.T. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೪] SADHVI : WEDNESDAY 20-6-1956 ಮೈಸೂರು : ಬುಧವಾರ ೨೦-೬-೧೯೫೬ [ಸಂಚಿಕೆ : ೨೪೯

- ಚನ್ನಬಸಪ್ಪನವರಿಂದ ಪ್ರಮಾಣ ವಚನ ಸ್ವೀಕಾರ -

ಪರೀಕ್ಷೆಗಾಗಿ ಕಲ್ಕತ್ತಕ್ಕೆ ರಕ್ತದ ಬಟ್ಟೆಗಳ ರವಾನೆ

ಬೇಲೂರಿನ ಕೊಲೆ ಪ್ರಕರಣದ ಪ್ರತಿಧ್ವನಿ

ಬೆಂಗಳೂರು ೨೦

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆಯಲ್ಲಾದ ಕೊಲೆಗಳ ಸಂಬಂಧವಾಗಿ ಪೊಲೀಸರು ವಶಪಡಿಸಿಕೊಂಡಿರುವ ಹಲವು ರಕ್ತದ ಬಟ್ಟೆಗಳನ್ನು ಸರ್ಕಾರದ ರಸಾಯನಿಕ ಪರೀಕ್ಷಕರು ಪರೀಕ್ಷಿಸಿ, ರಕ್ತವು ಪ್ರಾಣಿಯದೆಂದು ತಿಳಿಸಿರುತ್ತಾರೆ. ಅದು ಮನುಷ್ಯನ ರಕ್ತದ ಕಲೆಯೋ ಎಂಬುದನ್ನು ಪರಿಶೀಲಿಸಲು ಕಲ್ಕತ್ತಾ ಇನ್ಸ್ಟಿಟ್ಯೂಟಿಗೆ ಬಟ್ಟೆಗಳನ್ನು ಕಳುಹಲಾಗುವುದು

ದಸ್ತಗಿರಿಯಾಗಿರುವವರ ಪೈಕಿ ಒಬ್ಬನಾದ ಮುನಿಸ್ವಾಮಿರೆಡ್ಡಿಯು ಪೊಲೀಸರಿಗೆ ತಪ್ಪೊಪ್ಪಿಗೆ ಹೇಳಿಕೆಯನ್ನು ಕೊಟ್ಟಿರುವುದಾಗಿ ಗೊತ್ತಾಗಿದೆ. ಉಳಿದವರಿಬ್ಬರೂ ಏನನ್ನೂ ಹೇಳಿಲ್ಲ ರಂಗಲಕ್ಷ್ಮಿಯು ಬದುಕಿರುವಳೇನು ತಿಳಿದ ದಸ್ತಗಿರಿಯಾದವನೊಬ್ಬನು ದಂಗುಬಡಿದವನಾಗಿರುವನೆಂದು ಹೇಳಲಾಗಿದೆ

ರಂಗಲಕ್ಷ್ಮಿಯು ಬಹು ದಿನಗಳ ಹಿಂದೆ ಸತ್ತು ಹೋದ ತನ್ನ ಅಣ್ಣನನ್ನು ನೋಡಬೇಕೆಂದು ಅಪೇಕ್ಷಪಟ್ಟಳೆಂದು ಗೊತ್ತಾಗಿದೆ

ಮೈಸೂರು ಜಿಲ್ಲಾ ಅಭಾವ ಪ್ರದೇಶಗಳಿಗೆ ಕ್ರಿಸ್ತ ಸಂಸ್ಥೆ ನೆರವು

ಮದ್ರಾಸಿಗೆ ಆಗಮಿಸಿರುವ ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರನ್ನು ಕ್ರಿಸ್ತರ ಪ್ರಪಂಚ ಸೇವೆ ಸಂಸ್ಥೆ ಮತ್ತು ಕ್ಯಾಥೊಲಿಕ್ ಸಮಾಜದ ಪ್ರತಿನಿಧಿಗಳು ನೆನ್ನೆ ಭೇಟಿ ಮಾಡಿ, ಮೈಸೂರು ಜಿಲ್ಲೆಯ ಅಭಾವ ಪ್ರದೇಶಗಳಲ್ಲಿ ಪರಿಹಾರವೀಯಲು ೩೦,೦೦೦ ಪೆಟ್ಟಿಗೆ ಮತ್ತು ೯೦೦ ಡ್ರಮ್ಮುಗಳಷ್ಟು ಹಾಲನ್ನೂ ಮತ್ತು ೮೦೦ ಪೆಟ್ಟಿಗೆಗಳಷ್ಟು ಬೆಣ್ಣೆಯನ್ನೂ ಕೊಡುವುದಾಗಿ ಸೂಚಿಸಿದರು

ಸೀರೆಗಳ ಕಳುವಿಗಾಗಿ ಬಂಧನ

ಹೊಸ ಸ್ವಾಮ್ಯ ಜೌಳಿದ ಅಂಗಡಿಯೊಂದರಲ್ಲಿ ಸುಮಾರು ೬೫ ರೂ ಬೆಲೆಬಾಳುವ ೪ ಸೀರೆಗಳನ್ನು ಅಪಹರಿಸಿ ಸಾಗಿಸುತ್ತಿದ್ದ ಪೂಜಾರಿ ಗೋವಿಂದಸ್ವಾಮಿಯನ್ನು ಮಾಲು ಸಮೇತ ಬಂಧಿಸಲಾಗಿದೆ ಅವನ ಬಳಿ ಇನ್ನೂ ನೂರು ಸೀರೆಗಳು ದೊರೆಕುವೆಂದೂ ಗೊತ್ತಾಗಿದೆ

ಸೈಕಲ್ ಡಿಕ್ಕಿಯಾಗಿ ವೃದ್ಧ ಕೊಲ್ಪರ ಮರಣ

ಅರಮನೆ ಕೋಟೆಯಲ್ಲಿರುವ ಶ್ರೀ ಭುವನೇಶ್ವರೀ ದೇವಸ್ಥಾನದ ನೌಕರರಾದ ಶ್ರೀ ಸುಬ್ರಹ್ಮಣ್ಯಶಾಸ್ತ್ರಿ ಎಂಬ ೬೦ ವರ್ಷದವರು ನೆನ್ನೆ ಸಂಜೆ ದೇವರಾಜಾ ಮಾರ್ಕೆಟ್ ಬಳಿ ಹೋಗುತ್ತಿದ್ದಾಗ ಇಟ್ಟಿಗೆಗೂಡಿನ ೧೧ ವರ್ಷದ ಗೋಪಾಲ ಎಂಬುವನು ಸೈಕಲ್ ಬಿಟ್ಟುಕೊಂಡು ಬಂದು ಅವರಿಗೆ ಡಿಕ್ಕಿ ಹೊಡೆಸಿದ ಸಂದರ್ಭದಲ್ಲಿ ಅವರು ಕೆಳಗೆ ಬಿದ್ದು ಗಾಯಗೊಂಡು ನೆನ್ನೆ ಆಸ್ಪತ್ರೆಯಲ್ಲಿ ಮೃತಪಟ್ಟರು ಪೊಲೀಸರು ಬಾಲಕನನ್ನು ಬಂಧಿಸಿರುತ್ತಾರೆ.

ಸಚಿವರಾಗಿ ಎಚ್. ಎಂ. ಚನ್ನಬಸಪ್ಪನವರ ಪುನರ್ನೇಮಕ

ಇಂದು ಬೆಳಗ್ಗೆ ಅರಮನೆಯಲ್ಲಿ ಪ್ರಮಾಣವಚನ ಸ್ವೀಕಾರ

ಮೈಸೂರು ೨೦

ಪಿರಿಯಾಪಟ್ಟಣ ಕ್ಷೇತ್ರದಿಂದ ಇತ್ತೀಚೆಗೆ ಅವಿರೋಧವಾಗಿ ಚುನಾಯಿತರಾದ ಮಾಜಿ ಕೈಗಾರಿಕಾ ಮಂತ್ರಿ ಶ್ರೀ ಎಚ್. ಎಂ. ಚನ್ನಬಸಪ್ಪನವರನ್ನು ಮತ್ತೆ ಸಚಿವರಾಗಿ ನೆನ್ನೆ ನೇಮಕ ಮಾಡಲಾಯಿತು

ಇಂದು ಬೆಳಗ್ಗೆ ೮ ಗಂಟೆಗೆ ಶ್ರೀ ಯುವರಾಜರು ಅರಮನೆಯಲ್ಲಿ ದರ್ಬಾರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದರು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯ, ಮತ್ತು ಸರ್ಕಾರದ ಶ್ರೇಷ್ಠ ... ಪಟೇಲ್ ಶ್ರೀ ಎಲ್ ಪುಟ್ಟರಂಗಸ್ವಾಮಿಯವರು ಹಾಜರಿದ್ದರು

ಅನಂತರ ಶ್ರೀ ಚನ್ನಬಸಪ್ಪನವರು ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸುತ್ತಾ, ತಮ್ಮನ್ನು ಅವಿರೋಧವಾಗಿ ಆರಿಸಿದ ಪಿರಿಯಾಪಟ್ಟಣ ಕ್ಷೇತ್ರದ ಜನತೆಗೆ ಕೃತಜ್ಞತೆಯನ್ನರ್ಪಿಸಿದರು ಹನ್ನೆರಡು ಕೋಟಿಯ ಬಡವ ಪಿರಿಯಾಪಟ್ಟಣದ ಜನತೆಯ ಶೀಘ್ರಾಭಿವೃದ್ಧಿಗೆ ಶಕ್ತಿಯಾಗಲು ಸಿದ್ಧರಿರುವ ತಮಗೆ ಹೊಸತು ಬೇಬಲ್ಲಾಗಿ ಸಚಿವರು ಮುಖ್ಯಮಂತ್ರಿಯವರನ್ನು ವಂದಿಸಿದರು

ಅವರು ಇಂದು ಪಿರಿಯಾಪಟ್ಟಣಕ್ಕೆ ಹೊರಟು ಅಲ್ಲಿಂದ ನಗರಕ್ಕೆ ವಾಪಸಾಗಿ ಸಂಜೆ ಬೆಂಗಳೂರಿಗೆ ತೆರಳಿ ಅಧಿಕಾರವನ್ನು ವಹಿಸಿಕೊಳ್ಳುವರು

ಶ್ರೀ ಚನ್ನಬಸಪ್ಪನವರು ಇನ್ನುಮುಂದೆ ವ್ಯವಸಾಯ ಮಂತ್ರಿಗಳಾಗಿರುವರು ವಿದ್ಯುಚ್ಛಕ್ತಿ, ರಾಷ್ಟ್ರೀಯ ವಿಸ್ತರಣೆ, ಸಹಕಾರ ಮುಂತಾದ ಹಲವು ಇಲಾಖೆಗಳು ಅವರಿಗೆ ಸೇರುವವು ಡಾ|| ನಾಗನಗೌಡರು ಕೈಗಾರಿಕಾ ಸಚಿವರಾಗುವರು

ಪ್ರೊಬೇಷನರ್ ಹುದ್ದೆಗಳಿಗೆ ಹೊರಗಿನವರಿಂದಲೂ ಅರ್ಜಿ

ಮುಖ್ಯ ಮಂತ್ರಿ ಹನುಮಂತಯ್ಯನವರ ವಿವರಣೆ

ಬೆಂಗಳೂರು ೨೦

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಮೈಸೂರು ಸಂಸ್ಥಾನಕ್ಕೆ ಸೇರಲಿರುವ ಪ್ರದೇಶಗಳ ಜನರೂ ಸಂಸ್ಥಾನದ ಪ್ರೊಬೇಷನರು ಹುದ್ದೆಗಳಿಗೆ ಅರ್ಜಿ ಹಾಕಿಕೊಳ್ಳಬಹುದೆಂದು ಸೂಚಿಸಿದರು ಮೈಸೂರಿನವರಿಗೆ ಮಾತ್ರ ಅವು ಮೀಸಲಿಲ್ಲವೆಂದೂ, ಎಲ್ಲ ಭಾರತೀಯರಿಗೂ ಅವಕಾಶವಿರುವುದೆಂದೂ ಅವರು ಸೂಚಿಸಿದರು ಈ ಬಾರಿ ೧೦೦ ಜನ ಪ್ರೊಬೇಷನರುಗಳ ಸ್ಥಾನಗಳಿಗೆ ಅರ್ಜಿಗಳನ್ನು ಕರೆಯಲಾಗಿತ್ತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೬-೩೦ ವೀಣೆ ೭-೧೫ ಕೆ ಎಸ್ ... ಶಾಸ್ತ್ರಿ ಮತ್ತು ಕೆ ಎಸ್ ಜಯಲಕ್ಷ್ಮಿ—ಕನ್ನಡ ಗೀತೆಗಳು. ೭-೪೦ ಮತ್ತು ... ಎಸ್ ... ಮಧ್ಯಾಹ್ನ ... ಎ ಎಸ್. ಪ್ರಸನ್ನಕುಮಾರ—ಸಂಗೀತ ... ಸಂಜೆ ... ಸಂಗೀತ ... ಗಾಯನ ... ಭಾರತೀಯ ವಿಶ್ವವಿದ್ಯಾಲಯಗಳು ... ಕನ್ನಡ ನಾಟಕ ... ಚೀಲು

ಕೆ. ವಾಸುದೇವಾಚಾರ್ಯರ ವರ್ಧಂತಿ

ಸಂಗೀತ ಶಾಸ್ತ್ರ ವಿಶಾರದ ಮೈಸೂರು ಆಸ್ಥಾನ ವಿದ್ವಾಂಸ ಕೆ ವಾಸುದೇವಾಚಾರ್ಯರ ಜನ್ಮದಿನೋತ್ಸವ ಸಂದರ್ಭದಲ್ಲಿ ಇದೇ ತಿಂಗಳು ೨೩ನೇ ತಾರೀಖು ಭಾನುವಾರ ಸಂಜೆ ೬ ಗಂಟೆಗೆ ಮದ್ರಾಸಿನ ಕಲಾಕ್ಷೇತ್ರದಲ್ಲಿ ರುಕ್ಮಿಣಿ ದೇವಿಯವರು ಸಮಾರಂಭವೊಂದನ್ನು ಏರ್ಪಡಿಸಿರುವರು ಸಂಗೀತ ಕಲಾನಿಧಿ ಟಿ ಎಲ್. ವೆಂಕಟರಾಮಯ್ಯರವರು ಅಧ್ಯಕ್ಷತೆ ವಹಿಸುವರು ಶ್ರೀ ವಾಸುದೇವಾಚಾರ್ಯರು ರಚಿಸಿರುವ ನವರತ್ನ ರಾಗಮಾಲಿಕೆಯನ್ನು ಆ ಸಂದರ್ಭದಲ್ಲಿ ಪ್ರಕಟಿಸಲಾಗುವುದು

ಭೂಮಿ ಮತ್ತು ಸ್ವಾಮಿಕಾರ್ಯ ವಾಪಸು

ಕಲವು ದಿನಗಳಿಂದ ಪತ್ತೆಯಿಲ್ಲದಿದ್ದ ಘೂಮಾ ಎಂಬ, ಇಲ್ಲಿನ ಕೈಲ್ಪೆ ಸರ್ಕಾರಿ ನೌಕರರೊಬ್ಬರ ಮಗಳು ಮತ್ತು ಮನೆ ಸೇವಕ ಸ್ವಾಮಿಯನ್ನು ಪೊಲೀಸರು ಮದ್ರಾಸಿನಿಂದ ಕರೆತಂದು, ಹುಡುಗಿಯನ್ನು ತಂದೆ ತಾಯಿಗಳ ವಶಕ್ಕೆ ಒಪ್ಪಿಸಿ, ಸೇವಕನನ್ನು ಬಂಧಿಸಿರುವರು

ನಂಜನಗೂಡಿನಲ್ಲಿ ಪರ್ಜನ್ಯ ಜಪ

ಮಳೆಗಾಗಿ ನಂಜನಗೂಡಿನ ಶ್ರೀಕಂಠೇಶ್ವರ ದೇವಾಲಯದಲ್ಲಿ ಕಳೆದ ಗುರುವಾರ ತಾರೀಖಿನಿಂದ ಪರ್ಜನ್ಯ ಜಪವು ನಡೆಯುತ್ತಿದೆ ಧರ್ಮದರ್ಶಿಗಳಾದ ಶ್ರೀಗಳು ಕೆ ವೆಂಕಟಯ್ಯ, ಎನ್ ಸೀತಾರಾಮಯ್ಯ ಮತ್ತು ಶ್ರೀಕಂಠ ಘನಪಾಠಿಗಳು ಇದನ್ನು ಏರ್ಪಡಿಸಿರುವರು

ವಿದ್ಯುಚ್ಛಕ್ತಿ ದರಗಳ ಪುನರ್ಪರಿಶೀಲನೆ

ಪತ್ರಿಕಾ ಗೋಷ್ಠಿಯಲ್ಲಿ ಸಚಿವ ಚನ್ನಬಸಪ್ಪನವರ ವಿವರಣೆ

ಮೈಸೂರು ೨೦

ಇತ್ತೀಚೆಗೆ ಹೆಚ್ಚಿಸಲಾದ ವಿದ್ಯುಚ್ಛಕ್ತಿ ದರಗಳಿಂದ ಜನತೆಗೆ ಆಗಿರುವ ತೊಂದರೆಯನ್ನು ಪರಿಶೀಲಿಸಿ ಸೂಕ್ತ ನಿವಾರಣೋಪಾಯಗಳನ್ನು ಕೈಗೊಳ್ಳಲು ಸಿದ್ಧವಿರುವುದಾಗಿ ನೂತನ ಸಚಿವ ಶ್ರೀ ಚನ್ನಬಸಪ್ಪನವರು ಇಂದು ಪತ್ರಿಕಾ ಗೋಷ್ಠಿಯಲ್ಲಿ ಭರವಸೆಯಿತ್ತರು ಈ ಬಗ್ಗೆ ಇದೇ ೨೪ನೇ ತಾರೀಖು ನಗರದಲ್ಲಿ ವಿದ್ಯುಚ್ಛಕ್ತಿ ಬಳಕೆಗಾರರಿಗೆ ಭೇಟಿ ಕೊಡುವುದಾಗಿ ಅವರು ತಿಳಿಸಿದರು

ಇಲಾಖೆಯು ಲಾಭದ ಬದಲು ನಷ್ಟದಿಂದ ನಡೆಯುತ್ತಿದೆಯೆಂದೂ, ಇದುವರೆಗೂ ಆ ಉದ್ಯಮದಲ್ಲಿ ಹಾಕಿದ ಬಂಡವಾಳಕ್ಕೆ ತಕ್ಕ ಬಡ್ಡಿಯೂ ಸಹ ಬರುತ್ತಿಲ್ಲವೆಂದೂ ಹೀಗೆ ಉಂಟಾಗುವ ನಷ್ಟವನ್ನು ವಿದ್ಯುಚ್ಛಕ್ತಿಯನ್ನು ಬಳಸದಿರುವ ಸಾಮಾನ್ಯರ ಹಣದಿಂದ ತುಂಬುವುದು ಸರಿಯಲ್ಲವೆಂದೂ ನುಡಿದರು ಈ ಬಗ್ಗೆ ಸೂಕ್ತ ಅಂಕಿ ಅಂಶಗಳನ್ನು ಒದಗಿಸಲು ಸಿದ್ಧವಾಗಿರುವುದಾಗಿಯೂ ಹೇಳಿದರು

ಸಣ್ಣ ಪ್ರಮಾಣದ ಬಳಕೆಗಾರರಿಗೆ ಹೆಚ್ಚು ಸೌಲಭ್ಯ ಕಲ್ಪಿಸುವುದು, ಈಗಿನ ಕನಿಷ್ಠದ ಮಿತಿಯನ್ನು ಇಳಿಸುವುದು, ಮತ್ತು ಬಳಕೆದಾರರಿಗೆ ತಮ್ಮ ಯಂತ್ರಗಳನ್ನು ಮಾರ್ಪಡಿಸಲು ಕಾಲಾವಧಿ ನೀಡುವುದೇ ಮುಂತಾದ ಹಲವು ಸಲಹೆಗಳನ್ನು ಸಚಿವರಿಗೆ ನೀಡಲಾಯಿತು

ಅನಂತರ ಆಹಾರ ಧಾನ್ಯಗಳ ಬೆಲೆ ಏರುವ ಬಗ್ಗೆ ಸರ್ಕಾರದ ಕ್ರಮವೇನೆಂದು ಸಚಿವರನ್ನು ಪ್ರಶ್ನಿಸಲಾಯಿತು

ಈಗ ಜಿಲ್ಲೆಯಲ್ಲಿ ಉಂಟಾಗಿರುವ ಅನಾವೃಷ್ಟಿ ಮತ್ತು ಅಭಾವ ಪರಿಸ್ಥಿತಿಯೂ ಸಹ ಬೆಲೆಗಳ ಏರಿಕೆಗೆ ಕಾರಣವಾಗಿರಬಹುದೆಂದೂ, ಆದರೂ ಸರ್ಕಾರವು ಬೆಲೆಗಳು ಮಿತಿಮೀರದಂತೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದಾಗಿಯೂ ಭರವಸೆಯಿತ್ತರು

● ವಿದ್ಯಾರಣ್ಯ ಸ್ಮಾರಕೋತ್ಸವ

ಇಂದಿನಿಂದ ಶ್ರೀ ಶಂಕರ ಜಯಂತಿ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ದಿನ ಶ್ರೀ ವಿದ್ಯಾರಣ್ಯರ ಸ್ಮಾರಕೋತ್ಸವವು ಸಂಸ್ಕೃತ ಪಾಠಶಾಲೆಯಲ್ಲಿ ನೆರವೇರುವುದು ಪಂಡಿತ ರತ್ನಂ ಎಂ ಎನ್ ವೆ ಕಟೇಶ ಶಾಸ್ತ್ರಿಗಳವರು ಅಧ್ಯಕ್ಷತೆ ವಹಿಸುವರು ಅದರ ಅಂಗವಾಗಿ ಬೆಳಗ್ಗೆ ಪೂಜೆ ಮತ್ತು ಮಂಗಳಾರತಿ, ಸಂಜೆ ೬ ಗಂಟೆಗೆ ಶ್ರೀ ವಿದ್ಯಾರಣ್ಯರ ಕಾಲದ ಶಾಸ್ತ್ರ ಮತ್ತು ಆರ್ಯ ಧರ್ಮೋದ್ಧಾರ ಎಂಬ ವಿಷಯವಾಗಿ ಯುವರಾಜಾ ಕಾಲೇಜಿನ ಶ್ರೀ ಎನ್ ಅನಂತರಂಗಾಚಾರ್ಯರಿಂದ ಉಪನ್ಯಾಸವು ನಡೆಯುವುದು.

○ ತೊಂದರೆಗಳ ಕಾಣಿಕೆನ ... ಗಳಲ್ಲಿ ರೆವಿನ್ಯೂ ಕಮಿಷನರ್ ಶ್ರೀ ಜಿ. ಎ ... ಪ್ರವಾಸ ಮಾಡಿ ಸ್ಥಿತಿ ಪರಿಹಾರಕ್ಕೆ ತಮ್ಮ ಕೈಲಾದುದೆಲ್ಲವನ್ನೂ ಮಾಡುವುದಾಗಿ ಭರವಸೆಯಿತ್ತರು

ವಿದೇಶೀ ವಿದ್ಯುಚ್ಛಕ್ತಿ ಕಾರ್ಖಾನೆಗಳ ರಾಷ್ಟ್ರೀಕರಣಕ್ಕೆ ಒತ್ತಾಯ

ಬೆಂಗಳೂರು ೧೯

ಅಖಿಲ ಭಾರತ ವಿದ್ಯುಚ್ಛಕ್ತಿ ನೌಕರರ ಸಮ್ಮೇಳನವು ರಾಷ್ಟ್ರದಲ್ಲಿರುವ ವಿದೇಶೀ ವಿದ್ಯುಚ್ಛಕ್ತಿ ಕಾರ್ಖಾನೆಗಳನ್ನು ರಾಷ್ಟ್ರೀಕರಣ ಮಾಡುವಂತೆ ಒತ್ತಾಯಗೊಳಿಸಿ ನೆನ್ನೆ ನಿರ್ಣಯ ಮಾಡಿತು. ವಿದೇಶೀ ಸಂಸ್ಥೆಗಳು ಭಾರತದಲ್ಲಿರುವವರೆಗೆ ಭಾರತವು ರಾಷ್ಟ್ರೀಯ ಪುನರ್ರಚನೆಯ ಗುರಿಯನ್ನು ಸಾಧಿಸಲು ಸಾಧ್ಯವಿಲ್ಲವೆಂದೂ, ವಿದೇಶಗಳಿಗೆ ದೇಶದಿಂದ ಅಪರಿಮಿತ ಹಣವು ಲಾಭದ ರೂಪದಲ್ಲಿ ಹೋಗುತ್ತಿರುವುದೆಂದೂ ಸಮ್ಮೇಳನವು ತಿಳಿಸಿತು. [illegible] ವಿದ್ಯುಚ್ಛಕ್ತಿ ಕಾರ್ಮಿಕರ ಸಂಘಗಳ [illegible] ಪ್ರತಿನಿಧಿಗಳು ಸಮ್ಮೇಳನದಲ್ಲಿ ಭಾಗವಹಿಸಿದರು.

ವಿವಾಹದ ಗುಂಪಿನವರ ಮೇಲೆ ದರೋಡೆ

ಬಿಹಾರಿನ ಹಜಾರಿಬಾಗ್ ಜಿಲ್ಲೆಯ [illegible] ಕಳೆದ ಶುಕ್ರವಾರ [illegible] ಮೇಲೆ ಸಶಸ್ತ್ರರಾದ [illegible] ಜನರ ಸಮೂಹವೊಂದು [illegible] ದಾಳಿ ಮಾಡಿ [illegible] ಇಬ್ಬರು ವರ್ತಕರೆಂದೂ [illegible] ಗಳನ್ನು ದೋಚಿದರು [illegible] ಗಳನ್ನೂ ಹಣ ಅವರು [illegible] ಧಿಕಾರಿಗಳನ್ನು ಹುಡುಕು [illegible] ಗಿದೆ

ಚಳ್ಳೀರಿಯವಲ್ಲಿ ಹರಿಜನರ ದೇವಾಲಯ ಪ್ರವೇಶಕ್ಕೆ ಸ್ಪೃಶ್ಯರ ವಿರೋಧ

[illegible] ಮಾಡಿ [illegible] ದೇವಸ್ಥಾನ [illegible] ಪ್ರಶ್ನೆಯನ್ನು [illegible] ರವೆಂದು [illegible] ಪರಿಸ್ಥಿತಿಯು [illegible] ವರು ಸೂಚಿಸಿದರು

ರಾಜೀನಾಮೆಯಿಂದಲೂ ಮುಂಬಯಿ ಮಂತ್ರಿಯ ನಿರ್ಧಾರ

ಮಹಾರಾಷ್ಟ್ರದ [illegible] ಯ ರೆವಿನ್ಯೂ ಮಂತ್ರಿ [illegible] ಎಸ್ [illegible] ನೆನ್ನೆ ಮುಖ್ಯ ಮಂತ್ರಿ [illegible] ರನ್ನು ಭೇಟಿ ಮಾಡಿ ತಮ್ಮ ಮಂತ್ರಿ ಸ್ಥಾನಕ್ಕೆ ರಾಜೀನಾಮೆ ಕೊಡುವ [illegible] ಸಿದರು

ಸ್ವಾಗತ ಸಮಾರಂಭ

ಶ್ರೀ ಎಂ ಎಸ್ ಶ್ರೀಕಂಠಯ್ಯನವರು ತಮ್ಮ ಕುಮಾರ ಶ್ರೀ ಎಸ್ [illegible] ನವರಿಗೆ ಮೈಸೂರಿನ ಶ್ರೀ ಬೋರಲಿಂಗೇಗೌಡರ ಕುಮಾರಿ ಶಾಂತಮ್ಮನವರನ್ನು ತಂದುಕೊಂಡು ವಿವಾಹ ನಡೆಸಿದ ಸಂಬಂಧದಲ್ಲಿ ನೆನ್ನೆ ನಗರದಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು

ದ್ವಿತೀಯ ಯೋಜನೆಯಲ್ಲಿ ಬಟ್ಟೆ ಹಂಚಿಕೆ ವಿಧಾನ

ದ್ವಿತೀಯ ಪಂಚವಾರ್ಷಿಕ ಯೋಜನೆ ಅವಧಿಯಲ್ಲಿ ಬಟ್ಟೆ ಉತ್ಪತ್ತಿ ಬಗ್ಗೆ ಉತ್ಪತ್ತಿ ವಿಧಾನವನ್ನು ಕೇಂದ್ರ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ಪ್ರಕಟ ಮಾಡಿದ್ದಾರೆ. ಬಟ್ಟೆ ಬೇಕಾಗುವ [illegible] ಕೋಟಿ ಗಜ ಬಟ್ಟೆಯಲ್ಲಿ [illegible] ಕೋಟಿಯನ್ನು ಗಿರಣಿ ನೂಲು, [illegible] ಕೋಟಿ ಗಜಗಳನ್ನು [illegible] ನೂಲು ಮತ್ತು [illegible] ಕೋಟಿ ಗಜವನ್ನು ವಿದ್ಯುಚ್ಛಕ್ತಿ ಮಗ್ಗಗಳೂ ಹಂಚಲಾಗುವುದು ಉಳಿದ [illegible] ಕೋಟಿ ಗಜವನ್ನು ಗಿರಣಿಗಳಿಗೆ ಬಿಡಲಾಗುವುದು

ನಷ್ಟವಾಗುವ ಬಳಿ ಜೀವನಕ್ಕೆ ಕಾರ್ಮಿಕರ ನಿಯೋಗ

[illegible] ಕಾರ್ಖಾನೆಗಳನ್ನು ಮುಚ್ಚಿರುವ ಸಂಬಂಧದಲ್ಲಿ [illegible] ದಿನಗಳಿಂದಲೂ ಬಟ್ಟೆ [illegible] ಮೂವರು ಕಾರ್ಮಿಕರು [illegible] ಅವರು ನಿರುದ್ಯೋಗಿಗಳಾಗಿರುವ [illegible] ಸ್ಥಿತಿಯು ತೀವ್ರವಾಗಿರುವುದು [illegible] ಅನೇಕ ಕಾರ್ಮಿಕ ಸಂ[illegible] ಮತ್ತು [illegible] ಮತ್ತು [illegible] ಪ್ರತಿನಿಧಿ [illegible] ಮತ್ತು [illegible] ಜನ ಸದಸ್ಯರು [illegible] ಪ್ರತಿನಿಧಿಗಳನ್ನು [illegible] ಭೇಟಿ ಮಾಡಿ [illegible]

ಒಕ್ಕಲಿಗರ ವಿದ್ಯಾರ್ಥಿ ನಿಲಯದಲ್ಲಿ ಮಲೆನಾಡಿನವರಿಗೆ ಪ್ರವೇಶವಿಲ್ಲವೇ ?

[illegible] ವಿದ್ಯಾರ್ಥಿ ನಿಲಯವು ಪ್ರಾರಂಭ [illegible] ವರ್ಷಗಳಾಗಿವೆ ಪ್ರತಿವರ್ಷವೂ [illegible] ವಿದ್ಯಾರ್ಥಿಗಳಿಗೆ ಅಲ್ಲಿ [illegible] ಮಲೆನಾಡು [illegible] ವಿದ್ಯಾರ್ಥಿಗಳಿಗೆ [illegible] ಅರ್ಜಿಗಳು [illegible] ಅವರಿಗೆ [illegible] ವಿದ್ಯಾರ್ಥಿಗಳು ತಿಳಿಸುತ್ತಾರೆ

ಹಾಸಿಗೆ - ದಿಂಬು

ಇನ್ನಿತರ [illegible] ಮಾಡುತ್ತೇವೆ

ಬಾಹುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಸಂಸ್ಥಾನಕ್ಕೆ ಭೂದಾನ ಪಾದಯಾತ್ರಿಯವರ ಪ್ರವೇಶ

ಅಖಿಲ ಭಾರತ ಭೂದಾನ ಪಾದಯಾತ್ರಿ ತಂಡದವರು ಕಳೆದ ಭಾನುವಾರ [illegible] ಬಳಿ ಮೈಸೂರು ಸಂಸ್ಥಾನವನ್ನು ಪ್ರವೇಶಿಸಿದರು. ಜೇರಿಯನ್ ಥಾಮಸ್‌ರವರು ತಂಡದ ನಾಯಕರಾಗಿರುವರು. ಡಾ|| ಸುಶೀಲಾ ನಯ್ಯಾರ್‌ರವರು ತಂಡಿಯೊಂದಿಗೆ ಬಂದ ನಿಮಿತ್ತ ದೆಹಲಿಗೆ ಪ್ರಯಾಣ ಮಾಡಿದರು. ಪಾದಯಾತ್ರಿಯವರನ್ನು ಕೋಲಾರದ ಶಾಸನಸಭಾ ಸದಸ್ಯ ಶ್ರೀ ಕೆ ಚೆಂಗಲರಾಯರೆಡ್ಡಿ, ಸಂಸ್ಥಾನ ಭೂದಾನ ಯಜ್ಞ ಸಮಿತಿ ಕಾರ್ಯದರ್ಶಿ ಶ್ರೀ ಹೆಚ್ ಆರ್ ವೆಂಕಟರಮಣ ಅಯ್ಯರ್ ಮುಂತಾದವರು ಸ್ವಾಗತಿಸಿದರು.

ಡಾ|| ಸುಶೀಲಾ ನಯ್ಯಾರ್‌ರವರು [illegible] ತಾರೀಕು ದೆಹಲಿಯಿಂದ ಹಿಂದಿರುಗಿ ತಂಡವನ್ನು ಸೇರುವರು. ಅವರಿಗೆ ಕೋಲಾರ ಪೌರಸಭೆಯವರು [illegible] ಪೌರ ಸ್ವಾಗತವನ್ನು ನೀಡುವರು. ತಂಡದವರು ಜುಲೈ [illegible] ರವರೆಗೆ ಕೋಲಾರ ಮತ್ತು ಬೆಂಗಳೂರು ಜಿಲ್ಲೆಗಳಲ್ಲಿ ಸಂಚರಿಸುವರು.

ಹರಿಕಥೆ

ರಾಜಧಾನಿಯ ಮಂಡಿ ಮೊಹಲ್ಲ ಕಾಳಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಪ್ರದೋಷ ಪ್ರಯುಕ್ತ ಈ ಸಂಜೆ [illegible] ಗಂಟೆಗೆ ಶ್ರೀ [illegible] ಸ್ವಾಮಿನಾಯ್ಡುರವರಿಂದ "ವೀರಮಣಿ ಚರಿತ್ರೆ" ಎಂಬ ಹರಿಕಥೆಯು ಪೌರಸಭಾ ಸದಸ್ಯ ಶ್ರೀ ಎಂ ಎನ್ ತಿಮ್ಮಯ್ಯನವರ ಸಮ್ಮುಖದಲ್ಲಿ ನಡೆಯುವುದು

ಮೈಸೂರು ಪೇಟೆ ಧಾರಣೆ

	ಹೊ	ಯಾದ	ಹೊ	ವರೆಗೆ
ಕಡಲೆಕಾಯಿ	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
ಹೆಸರು	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
ಉಪ್ಪು	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]
ಹುಣಸೇಹಣ್ಣು	[illegible]	[illegible]	[illegible]	[illegible]
ಮೆಣಸಿನಕಾಯಿ	[illegible]	[illegible]	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]	[illegible]	[illegible]

ರಾಧಾಕೃಷ್ಣರಿಗೆ ಮಾಸ್ಕೊ ವಿದ್ಯಾಲಯದ ಪ್ರೊಫೆಸರ್‌ಗೌ[illegible]

ಮಾಸ್ಕೊ ವಿಶ್ವವಿದ್ಯಾಲಯದ ಗೌರವ ಪ್ರಾಧ್ಯಾಪಕರಾಗಿ ಭಾರತದ ಉಪಾಧ್ಯಕ್ಷ [illegible] ಎಸ್ ರಾಧಾಕೃಷ್ಣನವರನ್ನು ತೆಗೆದುಕೊ[illegible] ಲಾಗಿದೆ. ಈ ರೀತಿ ಗೌರವ ಪ್ರಾಧ್ಯಾಪಕರಾಗಿ [illegible] ಅವರಿಗೆ ಲಭಿಸಿರುವುದು ಹಾಲ್ಕನೇ ಬಾರಿ [illegible] ತ್ರ, ಕಾಶಿ ಮತ್ತು ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲಯಗಳು ಅವರನ್ನು ಗೌರವ ಪ್ರಾಧ್ಯಾಪಕ[illegible] ಈಗಾಗಲೇ ತೆಗೆದುಕೊಂಡಿವೆ

[illegible] ಸ್ಥಾಪಿತವಾಗಿರುವ [illegible] ಕಾರ್ಖಾನೆಯಲ್ಲಿ ಕಳೆದ ತಿಂಗಳು [illegible] ಮೆಗಾ ಯೂನಿಟ್ಟುಗಳನ್ನು ಪೂರೈಸಿದ್ದ [illegible] ತ್ಪತ್ತಿಯಾಗಿದೆ

SREE GANESH TALKIES

From 21-6-56 · For 2 Da[ys]

THE RAINBOW JACKET

Starring : Kay Walsh and Robert Morley

(A hilarious comedy hit showi[ng] horse racing thrill in Technicolo[r]

From 23 6 56 · For 3 Da[ys]

You Are Never Too You[ng]

(In Technicolor)

Uproaring Comedy by Martin and Lewis

ಪ್ರಭಾ ★ 21-6-56 ರಿಂದ 29-6-56ರ ವರೆಗೆ 8 ದಿನಗಳು ಮಾತ್ರ

[illegible] ಈ ಕೆಳಗೆ ಕಂಡ 3 ಚಿತ್ರ[illegible] ಪ್ರದರ್ಶಿಸಲಾಗುತ್ತದೆ. ಚಿತ್ರಪ್ರೇಮಿಗಳಿಗೆ [illegible] ಯಾವ ಕಾರಣದಿಂದಲೇ [illegible] ಚಿತ್ರಗಳನ್ನು ನಿಯಮಿತ ದಿನಗಳಿಗಿಂತ [illegible] ಮುಂದುವರಿಸುವುದಿಲ್ಲ

ವಿದ್ಯಾರ್ಥಿಗಳಿಗೆ ರಿಯಾಯಿತಿ ದರದಲ್ಲಿ ಪ್ರವೇಶವುಂಟು

(ಟೋಕನ್ [illegible])

1) 21 6 56 ರಿಂದ 1 ದಿನಗಳು ● ಆ ದಿ[illegible]

ಪಾತ್ರ [illegible], [illegible]

ದಿಗ್ದರ್ಶನ [illegible]

2) 24 6 56 ರಿಂದ 3 ದಿನಗ[ಳು]

ಸಂತ ಧ್ಯಾನೇಶ್ವರ್

ಪಾತ್ರ [illegible]

3) 27 6 56 ರಿಂದ 2 ದಿನಗ[ಳು]

ದುನಿಯಾ ನಮೂನೆ

ಪಾತ್ರ [illegible]

ದಿಗ್ದರ್ಶನ [illegible]

29-6-56 ರಿಂದ ಅಮೋಘ ಪ್ರಾರಂ[ಭ]

ರಾಜ್ ಕಮಲ್ ರವರ

ತೂಫಾನ್ ಔರ್ ದೀಯಾ

SREE GAYATHRI TALKIES

TO DAY · LAST DAY

QUENTIN DURWARD

From 21-6 56 · For 2 Days

M G M s Greatest Picture

In Cinemascope & Technicolor

INTERRUPTED MELODY

Starring Glenn Ford and Eleanor Parker

— NEXT CHANGE —

20,000 LEAGUES UNDER THE SEA

Edited Printed and Published b[y] A R. Nagarajan at Sadhvi Press D. Subbiah Road Mysore

Estd 1917

CHAMPION METROPOLITAN COLLEGE OF COMMERCE

([illegible] 100 Feet [illegible] Mysore)

APPLICATIONS FOR ADMISSION [illegible] classes leading to DIPLOMAS [illegible] Shorthand and Typewriting [illegible] being received [illegible]

Training [illegible] COSTS & WORKS ACCOUNTANTS also given

[illegible] Masters Degree [illegible] Commerce and Arts [illegible]

Excellent results

(Sd) M S PUTTANNA · Vice Principal

(Sd) P SUBBARAYA SASTRY · Principal

ಪ್ರಭುದೇವಾ ಥಿಯೇಟರ್ ([illegible] ಟಾಕೀಸ್) · 21—6—56 ರ : ಗುರುವಾರದಿಂದ ಅಮೋಘ ಪ್ರಾರಂಭ · ಪ್ರತಿ ದಿನ 3 ಆಟಗಳು

[illegible] ರವರ ತೆಲುಗು ಚಿತ್ರ

☆ **ಮನೆಯದೇವರು** ★ (ಇಲವೇಲುಪು)

ಪಾತ್ರ – ನಾಗೇಶ್ವರರಾವ್, ಜಮುನ, ಅಂಜಲಿ, ಕೃಷ್ಣಕುಮಾರಿ, ರೇಲಂಗಿ ಮುಂತಾದವರು

ಸಂಪುಟ : ೧೪] SADHVI THURSDAY 21—6—1956 ಮೈಸೂರು ; ಗುರುವಾರ [ಸಂಖ್ಯೆ : ೨೯೦

ಹೊಸ ಯುದ್ಧವಾದರೆ ರಷ್ಯಾ-ಯುಗೊಸ್ಲಾವಿಯ ಒಂದು

ರೇಷ್ಮೆ ಕಾರ್ಮಿಕರ ಉಪವಾಸ ಮುಕ್ತಾಯ

ಬೆಂಗಳೂರು ೨೧

ರೇಷ್ಮೆ ಕಾರ್ಖಾನೆಗಳಲ್ಲಿ ... ತಮ್ಮ ... ಉಪವಾಸ ಕೈಗೊಂಡಿದ್ದ ... ರೇಷ್ಮೆ ಕಾರ್ಮಿಕರು ಸರ್ಕಾರದಿಂದ ಸೂಕ್ತ ಭರವಸೆ ದೊರೆತನಂತರ ಇಂದು ಬೆಳಿಗ್ಗೆ ಉಪವಾಸವನ್ನು ಮುಕ್ತಾಯಗೊಳಿಸಿದರು. ಇವರ ಉಪವಾಸಕ್ಕೆ ಸಹಾನುಭೂತಿ ತೋರಿಸಿ ನೆನ್ನೆ ಸುಮಾರು ... ಜನ ಕಾರ್ಮಿಕರು ಭಾರಿ ಮೆರವಣಿಗೆ ನಡೆಸಿದರು. ನಾನಾ ಕಾರ್ಮಿಕ ಸಂಘಗಳ ನಾಯಕರು ಕಾರ್ಮಿಕ ಮಂತ್ರಿಗಳೊಡನೆ ... ಸಂಧಾನವನ್ನು ಆರಂಭಿಸಿದರು.

ಚಿಕ್ಕ ಹುಡುಗಿ ... ಕೊಲೆ

ಬೆಂಗಳೂರು ... ಎಂಬಾತನ ... ಮಗ ... ಎಂಬುವನನ್ನು ಅವನ ತಾಯಿಯೊಡನೆ ಅಕ್ರಮ ಸಂಬಂಧ ಬೆಳೆಸಿಕೊಂಡಿದ್ದವನೆಂದು ಹೇಳಲಾದ ... ಪುಟ್ಟಸ್ವಾಮಿ ಎಂಬುವನು ಕಳೆದ ವಾರ ಕತ್ತು ಹಿಸುಕಿ ಕೊಂದನೆಂದು ವರದಿಯಾಗಿದೆ. ಪುಟ್ಟಸ್ವಾಮಿಯನ್ನು ಪೋಲೀಸರು ದಸ್ತಗಿರಿ ಮಾಡಿರುತ್ತಾರೆ. ಬಾಲಕನು ಪುಟ್ಟಸ್ವಾಮಿ ಮತ್ತು ತನ್ನ ತಾಯಿಯ ನಡುವೆ ಅಕ್ರಮ ಸಂಬಂಧಕ್ಕೆ ಅಡ್ಡಿಯಾಗಿದ್ದನೆಂಬುದೇ ಕೊಲೆಗೆ ಕಾರಣವೆಂದು ಹೇಳಲಾಗಿದೆ.

ಸಂಸ್ಥಾನದ ... ಪ್ರದೇಶಗಳ ಮಕ್ಕಳಿಗೆ ... ಚಿಕಿತ್ಸೆ

ಮೈಸೂರು ಸಂಸ್ಥಾನದ ... ಪ್ರದೇಶಗಳ ಮಕ್ಕಳಿಗೆ ... ಸಾವಿರ ... ತಿಳಿದುಬಂದಿದೆ.

ಸೇತುವೆಯಿಂದ ಬಸ್ಸು ಹಳ್ಳಕ್ಕೆ ಉರುಳಿ ... ಮರಣ

... ಒಂದು ... ಬಸ್ಸು ... ಹಳ್ಳಕ್ಕೆ ... ಪ್ರಯಾಣಿಕರು ... ಗಾಯಗೊಂಡರು.

ಅಶ್ಲೀಲ ಸಾಹಿತ್ಯಕ್ಕಾಗಿ ದಂಡ

... ಪತ್ರಿಕೆ ... ದಂಡ ... ವಿಧಿಸಲಾಗಿದೆ.

ಬೊಂಬಾಯಿ ಮಂತ್ರಿಯ ರಾಜೀನಾಮೆಗೆ ನಾಯಕರ ಒಪ್ಪಿಗೆ ಇಲ್ಲ

ಬೊಂಬಾಯಿ ನಗರದ ಭವಿಷ್ಯದ ಸಂಬಂಧವಾಗಿ ರಾಜೀನಾಮೆ ಕೊಡಲು ಆಲೋಚಿಸುತ್ತಿರುವ ಬೊಂಬಾಯಿ ರೆವಿನ್ಯೂ ಮಂತ್ರಿ ... ಕಾಂಗ್ರೆಸ್ ಅಧ್ಯಕ್ಷ ... ಭೇಟಿ ಮಾಡಿದ್ದರು. ಅವರುಗಳು ರಾಜೀನಾಮೆ ಕೊಡುವುದಕ್ಕೆ ನಾಯಕರು ಒಪ್ಪಿಗೆ ನೀಡಿಲ್ಲ ... ನಾಯಕರ ಸೂಚನೆ ಪ್ರಕಾರ ... ಕಾಂಗ್ರೆಸ್ಸಿನವರೂ ... ನೂತನ ಸಂಸ್ಥಾನದ ರಚನೆ ಕೆಲಸದಲ್ಲಿ ತೊಡಗುವರೆಂಬ ನಂಬಿಕೆಯನ್ನು ... ಗೊತ್ತಾಗಿದೆ.

ಪೋರ್ಚುಗೀಸರಿಂದ ಗೋವಾ ಪೋಲೀಸು ಅಧಿಕಾರಿಯ ಬಂಧನ

ಗೋವಾದಲ್ಲಿ ಅಂತರಂಗ ಚಳವಳಿಗೆ ಸೇರಿದ ರಾಷ್ಟ್ರೀಯ ಕಾರ್ಯಕರ್ತರಿಗೆ ... ಎಂಬ ಅಲ್ಲಿನ ಒಬ್ಬ ಪೋಲೀಸು ಇನ್ಸ್ಪೆಕ್ಟರನ್ನು ಬಂಧಿಸಲಾಗಿದೆ. ಅಲ್ಲಿನ ಪೋಲೀಸು ಮುಖ್ಯಾಧಿಕಾರಿ ... ಅವರನ್ನು ಖುದ್ದು ದಸ್ತಗಿರಿ ಮಾಡಿರುತ್ತಾರೆ.

ವೆನಿಜುಲಾ ವಿಮಾನ ಮುರಿದು ... ಜನರ ಮರಣ

ನ್ಯೂಯಾರ್ಕ್ ... ಅಟ್ಲಾಂಟಿಕ್ ಸಾಗರದಲ್ಲಿ ನೆನ್ನೆ ದಕ್ಷಿಣ ಅಮೆರಿಕದ ವೆನಿಜುಲಾ ರಾಜ್ಯದ ವಿಮಾನವೊಂದು ಮುರಿದು ... ಪರಿಣಾಮವಾಗಿ ... ಜನ ... ಮತ್ತು ... ಪ್ರಯಾಣಿಕರು ಪ್ರಾಣಬಿಟ್ಟರೆಂದು ... ವಿಮಾನವು ಸಮುದ್ರಕ್ಕೆ ಬಿದ್ದು ಹತ್ತಿಕೊಂಡಿತೆಂದು ಹೇಳಲಾಗಿದೆ.

ಹಾಲು ... ಕಲಬೆರಕೆ ... ದಂಡ

ನಗರದ ... ಹಾಲು ಮಾರುತ್ತಿದ್ದ ... ಎಂಬುವನಿಗೆ ನೆನ್ನೆ ... ರೂ ದಂಡ, ತಪ್ಪಿದರೆ ... ದಿನ ಸಾದಾ ಶಿಕ್ಷೆ ವಿಧಿಸಲಾಗಿದೆ.

ಹಿಟ್ಟಿನ ಗಿರಣಿಗಳ ಮಾಲೀಕರಿಗೆ ಸೂಚನೆ

ನಗರದ ಹಿಟ್ಟಿನ ಗಿರಣಿಗಳ ಮಾಲೀಕರು ವಿದ್ಯುಚ್ಛಕ್ತಿ ... ಮುಖ್ಯಾಧಿಕಾರಿಗಳಾದ ಶ್ರೀ ... ಕೃಷ್ಣಮೂರ್ತಿಯವರು ತಿಳಿಸಿರುತ್ತಾರೆ.

ರಂಗಲಕ್ಷ್ಮಿಗೆ ಪೂರ್ಣ ಗುಣ

ಬೆಂಗಳೂರು ೨೧

ಗಾಂಧಿ ನಗರದ ಕೊಲೆಗಳ ಸಂಬಂಧವಾಗಿ ... ಬದುಕಿರುವ ರಂಗಲಕ್ಷ್ಮಿಯು ಈಗ ಪೂರ್ಣ ಗುಣಹೊಂದಿರುತ್ತಾಳೆ ... ಎಂದೂ, ಹೇಳಿದ ... ಉತ್ತರ ಕೊಡಬಲ್ಲಳೆಂದೂ ಹೇಳಲಾಗಿದೆ ...

ಅರಬ್ಬರೊಡನೆ ಸಂಧಾನ ನಡೆಸಿದ ಇಸ್ರೇಲ್ ಮಂತ್ರಿಯ ವಜಾ

ಅರಬ್ ರಾಷ್ಟ್ರಗಳೊಡನೆ ಸಂಧಾನ ನಡೆಸುವುದಕ್ಕಾಗಿ ಇಸ್ರೇಲಿನ ವಿದೇಶಾಂಗ ಮಂತ್ರಿ ... ಅವರನ್ನು ಪ್ರಧಾನಿ ಬೆನ್ ಗುರಿಯನ್ ಅವರು ವಜಾ ಮಾಡಿ ಅವರ ಸ್ಥಾನದಲ್ಲಿ ತಮ್ಮ ಪೂರ್ಣ ಬೆಂಬಲಿಗರಾದ ಕಾರ್ಮಿಕ ಮಂತ್ರಿ ಗೋಲ್ಡಾ ಮೈಯರ್ ಎಂಬ ಮಹಿಳೆಯನ್ನು ನೇಮಿಸಿದ್ದಾರೆ ...

ಏಕಕಾಲದಲ್ಲಿ ೪ ಮಕ್ಕಳ ಜನನ

ಇಟಲಿಯ ... ನಗರದ ಒಬ್ಬ ಮಹಿಳೆಯು ಮೊನ್ನೆ ಏಕಕಾಲದಲ್ಲಿ ಮೂರು ಗಂಡು ಮತ್ತು ಒಂದು ಹೆಣ್ಣು ಮಕ್ಕಳನ್ನು ಪ್ರಸವಿಸಿದಳೆಂದೂ, ಅವುಗಳೆಲ್ಲವೂ ಆರೋಗ್ಯದಿಂದಿರುವವೆಂದೂ ವರದಿಯಾಗಿದೆ ...

ರೈಲು ಹರಿದು ಮರಣ

ಪಾಂಡವಪುರ ಮತ್ತು ಶ್ರೀರಂಗಪಟ್ಟಣಗಳ ನಡುವೆ ರೈಲು ರಸ್ತೆಯ ಮೇಲೆ ... ಶವವೊಂದು ಬಿದ್ದಿರುವುದು ಪತ್ತೆಯಾಗಿದೆ ... ನೆನ್ನೆ ರಾತ್ರಿ ಒಬ್ಬ ... ರೈಲಿಗೆ ಸಿಕ್ಕಿ ಸತ್ತಿರಬಹುದೆಂದು ಹೇಳಲಾಗಿದೆ.

ಬೇಲೂರರ ಕೊಲೆ ಪ್ರಸಂಗ

ಬೆಂಗಳೂರು ೨೧

ರಂಗವಿಲಾಸದಲ್ಲಿ ... ನಡೆದ ಕೊಲೆ ಪ್ರಕರಣದ ಬಗ್ಗೆ ... ರಂಗಲಕ್ಷ್ಮಿಯನ್ನು ... ಶ್ರೀ ಬೇಲೂರರ ... ಪೋಲೀಸರು ... ರಂಗಲಕ್ಷ್ಮಿಯು ಪತ್ರಿಕೆಗಳನ್ನೋದುವ ... ವ್ಯಕ್ತಪಡಿಸಿದ್ದಾರೆ.

... ಶ್ರೀ ... ಈ ದಿನ ... ನ್ಯಾಯಾಲಯದ ... ಪ್ರಕಟಿಸಲು ... ಮುಂದೂಡಿದ್ದಾರೆ.

ಮತ್ತೆ ಯುದ್ಧ ಸಂಭವಿಸಿದರೆ ರಷ್ಯಾ-ಯುಗೊಸ್ಲಾವಿಯಾ ಸಹಕಾರ

ರಷ್ಯದ ... ಮಂತ್ರಿ ... ನೆನ್ನೆ ... ಯುದ್ಧವು ಸಂಭವಿಸಿದರೆ ರಷ್ಯವೂ ಮತ್ತು ಯುಗೊಸ್ಲಾವಿಯವೂ ಒಟ್ಟಾಗಿ ... ತಿಳಿಸಿರುತ್ತಾರೆ. ರಷ್ಯಾ ಮತ್ತು ಯುಗೊಸ್ಲಾವಿಯಗಳ ಸಂಬಂಧವನ್ನು ... ಒಪ್ಪಂದವೊಂದಕ್ಕೆ ... ಮತ್ತು ... ನೆನ್ನೆ ... ರಾಷ್ಟ್ರಗಳ ... ವರದಿಯಾಗಿದೆ.

ಭೂಕಂಪದಿಂದ ಭಾರಿ ಹಾನಿ ಉಂಟಾಗಿದೆ

ಅಫ್ಘಾನಿಸ್ತಾನದಲ್ಲಿ ... ಭೂಕಂಪದ ಪರಿಣಾಮವಾಗಿ ಅಲ್ಲಿನ ... ಹಳ್ಳಿಗಳು ... ವರದಿಯಾಗಿದೆ ...

ಬೊಂಬಾಯಿ ಬಗ್ಗೆ ... ನಿಲ್ಲಿಸಲು ... ಮನವಿ

ಬೊಂಬಾಯಿ ನಗರದ ಬಗ್ಗೆ ಮಹಾರಾಷ್ಟ್ರರು ತಮ್ಮ ಹೋರಾಟವನ್ನು ನಿಲ್ಲಿಸಬೇಕೆಂದು ನೆನ್ನೆ ... ಬೊಂಬಾಯಿ ... ಮಾಡಿದ್ದಾರೆ ...

ವಿದ್ಯುಚ್ಛಕ್ತಿ ಕಚೇರಿ ...

ಮೈಸೂರಿನ ವಿದ್ಯುಚ್ಛಕ್ತಿ ಇಲಾಖಾ ಮುಖ್ಯಾಧಿಕಾರಿಗಳಾದ ಶ್ರೀ ... ನಗರದಲ್ಲಿರುವ ವಿದ್ಯುಚ್ಛಕ್ತಿ ಕಛೇರಿಯ ... ಶ್ರೀ ... ನೀಡಿದ್ದಾರೆ ...

ಚಿನ್ನ ಬೆಳ್ಳಿ ಸಾಮಾನು ಕಳುವಿಗೆ ೬ ತಿಂಗಳ ಸಜಾ

ಮೈಸೂರು ೨೧

ರಾಜಧಾನಿಯ ನ್ಯಾಷನಲ್ ಇನ್ಸ್‌ಟ್ಯೂಟ್ ಆಫ್ ಇಂಜನಿಯರಿಂಗಿನ ಶ್ರೀ ಕೃಷ್ಣಸ್ವಾಮಿಯವರ ಮನೆಗೆ ಕಳೆದ ತಿಂಗಳು ೩ನೇ ತಾರೀಕು ಬೆಳಗಿನ ಅನಂತರಾಜು ಎಂ ... ರೇದ್ರಪ್ಪ ಉರುಫ್ ಶ್ರೀರಂಗರಾಜು ಎಂಬುವನು ಹೋಗಿ, ಕಳ್ಳ ಬೀಗದ ಕೈಯನ್ನು ... ಬಾಗಿಲು ತೆಗೆದು ಚಿನ್ನ ಬೆಳ್ಳಿ ಸಾಮಾನುಗಳನ್ನು ಕದ್ದು ಕೊಂಡು ಹೋಗುತ್ತಿದ್ದಾಗ ಸಿಕ್ಕಿಬಿದ್ದ. ಅವನ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ನೆನ್ನೆ ಆಪಾದಿತನಿಗೆ ೬ ತಿಂಗಳ ಕಠಿಣ ಸಜಾವನ್ನು ನಗರದ ಪ್ರಥಮ ನ್ಯಾಯಾಧೀಶರು ವಿಧಿಸಿದರು.

ಟ್ರೈನಿಂಗ್ ಕಾಲೇಜಿನ ಉಪಾಧ್ಯಾಯ ವಿದ್ಯಾರ್ಥಿ ಸಂಘ

ಇಲ್ಲಿನ ಸರ್ಕಾರಿ ಟ್ರೈನಿಂಗ್ ಕಾಲೇಜಿನ ಉಪಾಧ್ಯಾಯ ವಿದ್ಯಾರ್ಥಿಗಳ ಸಂಘದ ಆಧಿಕಾರ ವರ್ಗದ ಚುನಾವಣೆಯು ಕಳೆದ ೧೬ನೇ ತಾರೀಕು ನಡೆಯಿತು. ಶ್ರೀ ಎ ವೆಂಕಟರಾಮಯ್ಯನವರು ಅಧ್ಯಕ್ಷರಾಗಿಯೂ, ಎಸ್ ಕೆಂಪಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್ ಎ ಲತೀಫ್‌ರವರು ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಬಿ ಆರ್ ಶ್ರೀಕಂಠಮೂರ್ತಿ ಯವರು ಸಹಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು.

ಕುಕ್ಕರಹಳ್ಳಿ ಕೆರೆ ಬಳಿ ಉದ್ಯಾನವನ

ನಗರದ ಸ್ಟ್ಯಾಂಡಿಂಗ್ ಕೌನ್ಸಿಲ್ ಸಭೆಯು ಪೌರಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆದು ಕುಕ್ಕರಹಳ್ಳಿಕೆರೆಯ ಮೈದಾನ ಪ್ರದೇಶದಲ್ಲಿ ಉದ್ಯಾನವನವನ್ನು ನಿರ್ಮಿಸುವ ವ್ಯವಸ್ಥೆ ಮಾಡಲು ನಿರ್ಧರಿಸಿತು. ಈ ಬಗ್ಗೆ ಆಗತ್ಯವಾದ ಸಹಾಯವನ್ನು ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿಯವರು ಮಾಡಬೇಕೆಂದು ಕೋರಲಾಯಿತು.

ಟೆಂಗಿನಕಾಯಿ ವರ್ತಕರ ಸಂಘದ ಸರ್ವ ಸದಸ್ಯರ ಸಭೆ

ರಾಜಧಾನಿಯ ತೆಂಗಿನಕಾಯಿ ವರ್ತಕರ ಸಂಘದ ಸರ್ವ ಸದಸ್ಯರ ಸಭೆಯು ಇದೇ ೨೪ನೇ ತಾರೀಕು ಭಾನುವಾರ ಸಂಜೆ ೪ ಗಂಟೆಗೆ ಸಂಘದ ಕಛೇರಿಯಲ್ಲಿ ಅಧ್ಯಕ್ಷ ಶ್ರೀ ಆರ್ ರಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಸದಸ್ಯರೆಲ್ಲರೂ ಭಾಗವಹಿಸಬೇಕೆಂದು ಪ್ರಾರ್ಥಿಸಲಾಗಿದೆ.

ವಿದ್ಯುಚ್ಛಕ್ತಿ ದರಗಳ ಏರಿಕೆ

ಚೀಫ್ ಇಂಜನಿಯರೊಡನೆ ಗಿರಣಿಗಳವರ ಸಮಾಲೋಚನೆ

ಮೈಸೂರು ೨೧

ಮೊನ್ನೆ ಸಂಜೆ ನಗರದ ಅಕ್ಕಿ ಗಿರಣಿ ಮಾಲೀಕರ ಸಂಘದ ಆಶ್ರಯದಲ್ಲಿ ವಿದ್ಯುಚ್ಛಕ್ತಿ ಇಳಾಖೆಯ ಮುಖ್ಯಾಧಿಕಾರಿಗಳಾದ ಶ್ರೀ ... ಸಾಹೇಬರೊಡನೆ ಸಮಾಲೋಚನೆ ನಡೆಸಿ, ವಿದ್ಯುಚ್ಛಕ್ತಿಯ ದರಗಳ ಏರಿಕೆ ಬಗ್ಗೆ ಸರ್ಕಾರದವರು ಹೊರಡಿಸಿರುವ ಆಜ್ಞೆಯಿಂದ ಉಂಟಾಗಿರುವ ಅನಾನುಕೂಲಗಳನ್ನು ವಿವರಿಸಿದರು. ಈ ಆಜ್ಞೆಯು ಹಠಾತ್ತಾಗಿ ಜಾರಿಯಾಗಿರುವುದರಿಂದ ಏರಿಸಿದ ದರಗಳನ್ನು ಕೊಡಲು ಸಾಧ್ಯವಿಲ್ಲದೆ ಅನೇಕರು ತಮ್ಮ ಉದ್ಯಮಗಳನ್ನು ಮುಚ್ಚಬಿಡುವ ಪರಿಸ್ಥಿತಿಯುಂಟಾಗಿರುವುದೆಂದು ಅವರು ತಿಳಿಸಿ, ಹೊಸ ಆಜ್ಞೆಯನ್ನು ಇನ್ನು ಆರು ತಿಂಗಳ ನಂತರ ಜಾರಿಗೆ ತರಬೇಕೆಂದೂ, ಅಲ್ಲಿಯವರೆಗೆ ಹಳೆಯ ದರದ ಪ್ರಕಾರ ಚಾರ್ಜು ಅನ್ನು ವಸೂಲು ಮಾಡಬೇಕೆಂದೂ ಈ ಮಧ್ಯೆ ಮೋಟಾರುಗಳನ್ನು ಬದಲಾಯಿಸಲು ಸರ್ಕಾರದವರೇ ನೆರವು ನೀಡಬೇಕೆಂದೂ, ಕನಿಷ್ಠಾಂಶದ ವಿದ್ಯುಚ್ಛಕ್ತಿ ಪ್ರಮಾಣವನ್ನು ಬಹಳ ಮಟ್ಟಿಗೆ ಇಳಿಸಿ ಸಂಸ್ಥಾನಕ್ಕೆಲ್ಲಾ ಒಂದೇ ಪ್ರಮಾಣವನ್ನು ಗೊತ್ತುಮಾಡಬೇಕೆಂದೂ ಕೋರಿದರು.

ಶ್ರೀ ... ರವರು ಉತ್ತರವಿತ್ತು ಈ ಸಂಬಂಧವಾಗಿ ಸಂಸ್ಥಾನದ ಅನೇಕ ಭಾಗಗಳಿಂದ ಬಂದಿರುವ ಮನವಿಗಳನ್ನು ಗಮನಿಸಿ ಸರ್ಕಾರಕ್ಕೆ ಹಲವು ಶಿಫಾರಸುಗಳನ್ನು ಮಾಡಲಾಗಿದೆಯೆಂದೂ ಈ ಮಧ್ಯೆ ಯಾವ ಯಂತ್ರಗಳಿಗೂ ವಿದ್ಯುಚ್ಛಕ್ತಿಯನ್ನು ನಿಲ್ಲಿಸಲಾಗುವುದಿಲ್ಲವೆಂದೂ ತಿಳಿಸಿದರು.

ಶ್ರೀ ಪಟ್ಟಣದ ... ರಾಮಪ್ಪನವರು ಅತಿಥಿಗಳಿಗೆ ವಂದನಾರ್ಪಣೆ ಮಾಡಿದರು.

CENTRAL INSTITUTE OF COMMERCE,
Vanivilas Market Mysore
Admissions to diploma courses in Commerce, Shorthand and Typewriting are being received on all working days

Edited Printed and Published by A R Narayana Sadhvi Press D Subbiah Road Mysore

ನಗರದ ಬಸ್ ಸಂಚಾರದ ಬದಲಾವಣೆಗಳು

ಮೈಸೂರು ನಗರದ ಬಸ್ ಸಂಚಾರ ವ್ಯವಸ್ಥೆಯಲ್ಲಿ ಹಲವು ಮಾರ್ಪಾಟುಗಳು, ಇಂದಿನಿಂದ ಜಾರಿಗೆ ಬರಲಿವೆಯಂತೆ.

ಈ ವರೆಗೆ ಜಲಪುರಿಯಿಂದ ಮಾರ್ಕೆಟ್ ಮಾರ್ಗವಾಗಿ ಚಾಮುಂಡಿಪುರಂಗೆ ಹೋಗುತ್ತಿದ್ದ ಬಸ್ಸು ಇನ್ನುಮುಂದೆ ಕೃಷ್ಣಮೂರ್ತಿಪುರಂನ ಬಳಿಯೇ ನಿಂತು, ಅಲ್ಲಿಂದ ವಾಪಸು ಹೊರಟುಹೋಗುತ್ತವೆಂದು ಹೇಳಲಾಗಿದೆ. ಈವರೆಗಿರುವ ಬಸ್ ಸಂಚಾರ ವ್ಯವಸ್ಥೆಯು ಬಹಳ ಅನುಕೂಲವಾಗಿದ್ದು ರಾಮವಿಲಾಸ ಅಗ್ರಹಾರ, ಚಾಮರಾಜಪುರಂ ಕೃಷ್ಣಮೂರ್ತಿಪುರಂ ಮುಂತಾದ ಪ್ರದೇಶಗಳಿಂದ ಚಾಮುಂಡಿಪುರಂಗೆ ಹೋಗುವವರಿಗೂ ಮತ್ತು ಮಾರ್ಗದಲ್ಲಿರುವ ಈ ಪ್ರದೇಶಕ್ಕೆಲ್ಲಾ ಒಂದೇ ಆದ ಹೆರಿಗೆ ಆಸ್ಪತ್ರೆಗೆ ಹೋಗಬಯಸುವವರಿಗೂ ಬಸ್ ಸೌಕರ್ಯ ಒದಗಿದೆ. ಅದೇ ರೀತಿ ಚಾಮುಂಡಿಪುರಂನಿಂದ ಈ ಪ್ರದೇಶಗಳಿಗೆ ಬರುವವರಿಗೂ, ಕಾಲೇಜಿಗೆ ಹೋಗುವ ವಿದ್ಯಾರ್ಥಿಗಳಿಗೂ ಬಸ್ ಅನುಕೂಲ ಒದಗಿದೆ. ಆದರೆ ಈಗ ಉದ್ದೇಶಿಸಲಾಗಿರುವ ಬದಲಾವಣೆಯಿಂದಾಗಿ, ಚಾಮರಾಜಪುರಂ, ಕೃಷ್ಣಮೂರ್ತಿಪುರಂ ಮತ್ತು ಚಾಮುಂಡಿಪುರಂಗಳಿಗಿದ್ದ ಏಕಮಾತ್ರ ಬಸ್ ಸಂಪರ್ಕ ಕಡಿದುಹೋಗುತ್ತದೆ.

ಈ ಬದಲಾವಣೆಗೆ ಸಾಕಷ್ಟು ಪ್ರಯಾಣಿಕರು ನಂ ೫ನೇ ಬಸ್ಸಿಗೆ ದೊರೆಯದಿರುವುದೇ ಕಾರಣವೆಂದು ಹೇಳಲಾಗಿದೆ. ಈ ಬಗ್ಗೆ ಅವಶ್ಯಕವಾಗಿ ಹೇಳಬೇಕಾದುದೇನೆಂದರೆ ಮೈಸೂರು ನಗರದಲ್ಲಿ ಈರೀತಿ ಬಸ್ ವ್ಯವಸ್ಥೆ ಪರಿಗೊಳಿಸಲ್ಪಟ್ಟುದು ಕೇವಲ ಕೆಲವು ತಿಂಗಳಿಂದೀಚೆಗೆ. ರಾಷ್ಟ್ರೀಕರಣದ ಉದ್ದೇಶ ವ್ಯಾಪಾರದ ಗಮನಕೊಡಬೇಕಾದರೂ, ಅದರೊಂದಿಗೇ ಜನರಿಗೆ ಸೌಲಭ್ಯಗಳನ್ನು ಒದಗಿಸಿಕೊಟ್ಟು, ತನ್ಮೂಲಕ ಪ್ರಯಾಣಿಕರನ್ನು ಆಕರ್ಷಿಸುವುದು ಉಚಿತ. ಉತ್ತಮ ವ್ಯಾಪಾರಕ್ಕೆ ಮುನ್ನ ಜನರಲ್ಲಿ, ಬಸ್ ಮನೋಭಾವ ವನ್ನುಂಟುಮಾಡಬೇಕೇ ವಿನಹ, ಒಂದೆರಡು ತಿಂಗಳ ಪ್ರಯೋಗದಿಂದಲೇ ಯಾವುದೇ ವ್ಯವಸ್ಥೆಯು ಸರಿಯಿಲ್ಲವೆಂದುಕೊಳ್ಳುವುದು ಸರಿಯಾಗಲಾರದು.

ಇಲಾಖಾಧಿಕಾರಿಗಳು ನಗರದ ಸಾರ್ವಜನಿಕರ ಉಪಯೋಗಕ್ಕಾಗಿಯೇ ಇರತಕ್ಕ ಬಸ್ ಸರ್ವಿಸ್ಸಿನಲ್ಲಿ ಏನೇ ಬದಲಾವಣೆಯಾಗುವ ಮುನ್ನ ಜನಾಭಿಪ್ರಾಯವನ್ನು ತಿಳಿದು, ಮುಂದಿನ ಕ್ರಮ ತೆಗೆದುಕೊಳ್ಳಲೆಂದೂ ಸೂಚಿಸಬಯಸುತ್ತೇನೆ.

ಎಂ ಎಸ್. ಆರ್

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೧೫ ಕ್ಕೆ ... ಸರೋಜಮ್ಮ-ದೇವರ ನಾಮಗಳು ... ಎಸ್ ರಾಜಯ್ಯಂಗಾರ್-ಸಂಗೀತ ... ೧೨ ಜಯಂ ಮತ್ತು ಭಾಗ್ಯಂ, ಸಂಗೀತ ೧೨-೪೦ ವಾದ್ಯ ವೃಂದ ೧ ಮಹಿಳಾ ವಿಭಾಗ ... ೪೦ ಜಯಂ ಮತ್ತು ಭಾಗ್ಯಂ-ಸಂಗೀತ ... ಉದಯ ಕವಿತಾ ವಾಚನ ೭ ೪೦ ಪುಸ್ತಕ ವಿಮರ್ಶೆ ... ಕುಮಾರ ವೆಂಕಣ್ಣ ೮ ಮಧುರೆ ಮಣಿ ಅಯ್ಯರ್ ಸಂಗೀತ ... ಮದ್ರಾಸ್ ಪ್ರಸಾರ ೯ ೧೫ ವಾರ್ತೆಗಳು

ಮೈಸೂರು ಪೇಟೆ ಧಾರಣೆ

	ರೂ ಯಿಂದ			ರೂ ವರೆಗೆ	
ಕಡಲೆಕಾಯಿ	೧೨	೦	೦	೨೦	೦
ಹೊಂಗೆಬೀಜ	೨೫	೪	೦		
ಹುರುಳಿ	[illegible]	೦	೦		
ಹೆಸರು	[illegible]	೦	೬	[illegible]	[illegible]
ಹಲಸಂದೆ	[illegible]	[illegible]	[illegible]	[illegible]	೧೦
ರಾಗಿ	[illegible]	[illegible]	೦	[illegible]	[illegible]
ಧನಿಯ	[illegible]	೧೨	೦		
ಸೀಗೆಕಾಯಿ	೬	೧೦	೦		
ಹುಣಿಸೇಹಣ್ಣು	[illegible]	೬	೦	[illegible]	[illegible]
ಮೆಣಸಿನಕಾಯಿ	[illegible]	[illegible]	೦	[illegible]	೧೦
ತೆಂಗಿನಕಾಯಿ ೧೦೦೦	[illegible]	೦	೦	[illegible]	[illegible]

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪೆನಿಗಳ ಶ್ರೇಷ್ಠ ದರ್ಜೆಯ ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಇಂದೇ ಭೇಟಿ ಕೊಡಿ
ಕೆ. ಎಸ್ ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ ಮೈಸೂರು [Estd 1911]

Poly
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO,
Chemists & Druggists
71/1 A S Street
BANGALORE 2

ಲಕ್ಷ್ಮಿ ★ 21 6-56 ರಿಂದ ಅನೋಘ 11 ನೇ ಕಡೇ ವಾರ
ಕೃಷ್ಣಾ ಪಿಕ್ಚರ್ಸ್‌ರವರ ತಮಿಳು ಚಿತ್ರ
★ **ಮಧುರೈ ವೀರನ್**
ಪಾತ್ರ ಎಂ ಜಿ ರಾಮಚಂದ್ರನ್, ಭಾನುಮತಿ ಮುಂತಾದವರು

ಚಾಮುಂಡೇಶ್ವರಿ ಟಾಕೀಸ್
22-6-56 ರಿಂದ ಯಶಸ್ವೀ 4ನೇ ವಾರ ಪ್ರತಿ ದಿನ 3 ಆಟಗಳು
ದೇಶಾದ್ಯಂತ ಲಕ್ಷಾಂತರ ಮಂದಿಗೆ ಮನರಂಜನೆ ನೀಡಿ ಮೆಚ್ಚುಗೆ ಪಡೆದಿರುವ,
ವಿಠಲ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ
ಮೈನಾವತಿ ಜಯಶ್ರೀ ರೇವತಿ,
ರಮಾದೇವಿ ಕಲ್ಯಾಣ್‌ಕುಮಾರ್ ★ **ಮುತ್ತೈದೆ ಭಾಗ್ಯ**
ಹುಣಸೂರು ಕೃಷ್ಣಮೂರ್ತಿ, ಬಾಲಕೃಷ್ಣ ನಟಿಸಿರುವ
ನಿರ್ದೇಶಕ ನಿರ್ಮಾಪಕ ಬಿ ವಿ ಆಚಾರ್ಯ ಕವಿ ಗೌತಮ ಸ್ಟುಡಿಯೊ ವಾಹಿನಿ
[Vijaya Talkie Distributors Release

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
21- 6—56 ನೇ ಗುರುವಾರದಿಂದ ಅನೋಘ ಪ್ರಾರಂಭ
ರಾಜ್ಯ ಪ್ರೊಡಕ್ಷನ್ಸ್‌ರವರ ತೆಲುಗು ಚಿತ್ರ
★ ★
★ **ಮನೆಯದೇವರು** ★
(ಇಲವೇಲುಪು)
ಪಾತ್ರ ನಾಗೇಶ್ವರರಾವ್, ಜಮುನ, ಅಂಜಲಿ, ಕೃಷ್ಣಕುಮಾರಿ, ರೇಲಂಗಿ ಮುಂತಾದವರು

ಮೈಸೂರು ಸಿಟಿ ಮರದ ಗಾಣದ ಎಣ್ಣೆ ಕೈಗಾರಿಕಾಗಾರರ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್

ವಾಣಿವಿಲಾಸ ರೋಡ್, (ಮಾಧವರಾವ್ ಸರ್ಕಲ್ ಬಳಿ) ಮೈಸೂರು

ಗಾಣದಿಂದ ತಯಾರಾದ ಅಪ್ಪಟ ಎಣ್ಣೆಗಳು ಶರೀರಕ್ಕೆ ಆರೋಗ್ಯಕರವೂ ಪುಷ್ಟಿಕರವೂ ಆದದ್ದೆಂದು ಲೋಕ ಪ್ರಸಿದ್ಧವಾಗಿದೆ. ಆದರೆ ಸಾರ್ವಜನಿಕರಿಗೆ ಅವರಿಗೆ ಅಪ್ಪಟವಾದ ಗಾಣದ ಎಣ್ಣೆ ದೊರೆಯುವುದು ಕಷ್ಟವಾಗಿತ್ತು. ದೊರೆತರೂ ಮಿತಿಮೀರಿದ ಬೆಲೆಯನ್ನು ತೆರಬೇಕಾಗಿತ್ತು. ಈಗ ನಮ್ಮ ಸೊಸೈಟಿಯಿಂದ ಈ ತೊಂದರೆಯು ನಿವಾರಿಸಲ್ಪಟ್ಟಿರುತ್ತದೆ. ಅಲ್ಲದೆ ಅಖಿಲ ಭಾರತ ಖಾದಿ ಮತ್ತು ಗೃಹ ಕೈಗಾರಿಕಾ ಬೋರ್ಡಿನವರು ಈ ಸೊಸೈಟಿಯಲ್ಲಿ ಮಾರಾಟವಾಗುವ ಎಣ್ಣೆಗೆ ಮಣ 1 ಕ್ಕೆ 0 1 0 ಆಣೆಯನ್ನು ಕೊಳ್ಳುವವರಿಗೆ ಉಚಿತ ಸಹಾಯವನ್ನು ದೊರಕಿಸಿರುವರು. ಆದ್ದರಿಂದ ನಿಮಗೆ ಅಪ್ಪಟವಾದ ಎಣ್ಣೆ ಇತರ ಕಡೆ ಕೊಳ್ಳುವ, ಮಿಲ್ಲಿನಿಂದ ತಯಾರಾದ ಎಣ್ಣೆ ಕಡಿಮೆ ಧಾರಣೆಯಲ್ಲಿ ದೊರೆಯುವುದು. ಸಾರ್ವಜನಿಕರು ಆರೋಗ್ಯಕರವೂ, ಪುಷ್ಟಿಕರವೂ, ಲಾಭದಾಯಕವೂ ಆಗಿರುವ ಈ ಸೊಸೈಟಿಯ ಎಣ್ಣೆಯನ್ನೇ ಉಪಯೋಗಿಸಬೇಕಾಗಿ ಕೋರುತ್ತೇವೆ. ನಮ್ಮಲ್ಲಿ ಸಧ್ಯಕ್ಕೆ ಹುಚ್ಚೆಳ್ಳೆಣ್ಣೆ ಮತ್ತು ಅಚ್ಚೆಳ್ಳೆಣ್ಣೆ ದೊರೆಯುತ್ತದೆ.

	ದರ	ಉಚಿತ ಸಹಾಯ	ನೀವು ಕೊಡಬೇಕಾದುದು
ಹುಚ್ಚೆಳ್ಳೆಣ್ಣೆ ವೀಸೆ 1 ಕ್ಕೆ	—3–6	0–1–6	2–2–0
ಅಚ್ಚೆಳ್ಳೆಣ್ಣೆ ,,	4–15–0	0–1–6	3–13–6

ಕೆಲವೇ ದಿನಗಳಲ್ಲಿ ಕಡಲೆಕಾಯಿ ಎಣ್ಣೆಯೂ ದೊರೆಯುತ್ತದೆ

ಟೆಲಿಫೋನ್ ನಂ. 792

ಕೂರ್ಗ್ ಮ್ಯಾರ್ಕೆಟ್
ಸ್ಥಾಪಿತ 1932 ಫೋನ್ 811
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸವರನ್ ಚಿನ್ನದಿಂದ ತಯಾರಾದ ನೆಕ್ಲೇಸ್‌ಗಳು, ಬಳೆಗಳು, ಮುತ್ತು, ನವರತ್ನ ರೀತಿಯ ಕಲ್ಲಿನ ಒಡವೆಗಳು ಸಹ ದೊರೆಯುತ್ತವೆ

ಅಂಚಿನ ಪತ್ರಿಕೆ 3 ಕಾಸು

ಲಗ್ನದ ಜವಳಿ
ಗೌನ್ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ಣಿ, ಬೆಂಗಳೂರ್
ರೇಷ್ಮೆ ಮತ್ತು ಜರಿಯ ಸೀರೆಗಳು ಬಂದಿವೆ ಬಂದು ನೋಡಿ
M.V. ಭೋಜಯ್ಯ
ಬಿ. ಎ., ಪ್ರಾಪ್ರೈಟರ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು. ಫೋನ್ 446

ಸಂಪುಟ : ೧೪] SADHVI : FRIDAY 22—6—1956 ಮೈಸೂರು : ಶುಕ್ರವಾರ ೨೨—೬—೧೯೫೬ [ಸಂಚಿಕೆ : ೫೭೦

ಇಂಗ್ಲೆಂಡ್-ಅಮೆರಿಕಾ ಭೇಟಿಗಾಗಿ ನೆಹರೂ ಪ್ರಯಾಣ

ಬಿ.ಟಿ.ಸಿ.ಯ ರಾಷ್ಟ್ರೀಕರಣ ಮತ್ತೆ ಮುಂದಕ್ಕೆ

ಬೆಂಗಳೂರು ೨೨

ಇಲ್ಲಿನ ಬಿ ಟಿ ಸಿ ಕಂಪೆನಿಯ ರಾಷ್ಟ್ರೀಕರಣವನ್ನು ಇನ್ನೂ ೩ ತಿಂಗಳ ಕಾಲ ಮುಂದಕ್ಕೆ ಹಾಕಲಾಗಿರುವುದೆಂದು ವರದಿಯಾಗಿದೆ. ಬರುವ ತಿಂಗಳು ೧ನೇ ತಾರೀಖು ಅದರ ರಾಷ್ಟ್ರೀಕರಣವಾಗಬೇಕಾಗಿದ್ದಿತು

ಮುಸ್ಸೂರಿಗೆ ವ್ಯವಸಾಯ ಮಂತ್ರಿಗಳ ಭೇಟಿ

ಮುಸ್ಸೂರಿಯಲ್ಲಿ ಈ ತಿಂಗಳು ೨೮ರಿಂದ ೩ ದಿವಸಗಳವರೆಗೆ ನಡೆಯುವ ವ್ಯವಸಾಯ ಸಚಿವರುಗಳ ಸಮ್ಮೇಳನದಲ್ಲಿ ಭಾಗವಹಿಸಲು ಸಂಸ್ಥಾನದ ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ತೆರಳುವರು. ಅವರೊಡನೆ ವ್ಯವಸಾಯ ಇಲಾಖಾಧಿಕಾರಿಗಳಾದ ಶ್ರೀ ಮಲ್ಲಾರಾಧ್ಯರು ಮತ್ತು ಸಹಕಾರ ಸಂಘಗಳ ರಿಜಿಸ್ಟ್ರಾರ್ ಶ್ರೀ ಮರುದೇವೇಗೌಡರು ಹೋಗುವರು

ಚುನಾವಣೆಗಳಲ್ಲಿ ಸ್ಪರ್ಧಿಸುವ ಕಾಂಗ್ರೆಸ್ ಉಮೇದುವಾರರ ಅರ್ಹತೆ

ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಪರವಾಗಿ ಉಮೇದುವಾರರನ್ನು ಆರಿಸುವಾಗ ಅನುಸರಿಸಬೇಕಾಗುವ ವಿಧಾನವನ್ನು ಕೇಂದ್ರ ಕಾಂಗ್ರೆಸ್ ಚುನಾವಣಾ ಸಮಿತಿಯು ಗೊತ್ತುಪಡಿಸಿರುತ್ತದೆ. ಉಮೇದುವಾರನಾಗುವವನು ಕಾಂಗ್ರೆಸ್ಸಿನ ಕ್ರಿಯಾ ಸದಸ್ಯನ, ಅವನು ಸಾಧಿಸಿರುವ ಕೆಲಸ, ಅವನ ಸಾಮಾಜಿಕ ಮನೋಭಾವ, ನಿಸ್ಪೃಹತೆ, ಸಚ್ಚಾರಿತ್ರ್ಯ, ರಚನಾತ್ಮಕ ಕಾರ್ಯಗಳಲ್ಲಿ ಪಾತ್ರ, ಶಾಸನ ಸಭೆ ಅಥವಾ ಸ್ಥಳೀಯ ಸಂಸ್ಥೆಗಳಲ್ಲಿ ಅನುಭವ, ಕಾಂಗ್ರೆಸ್ ಮತ್ತು ಶಾಸನ ಸಭಾ ಪಕ್ಷಕ್ಕೆ ವಿಧೇಯತೆ ಮತ್ತು ಚುನಾವಣಾ ಕ್ಷೇತ್ರದವರೊಡನೆ ನಿಕಟ ಸಂಪರ್ಕ ಇವುಗಳೇ ಅರ್ಹತೆಯ ನಿಯಮಗಳೆಂದು ಹೇಳಲಾಗಿದೆ

ಬೆಳಗಾಂ ಸತ್ಯಾಗ್ರಹಕ್ಕೆ ೧೦೦ ಜನ ಮಹಾರಾಷ್ಟ್ರರು

ಬೆಳಗಾವಿನಲ್ಲಿ ಇದೇ ತಿಂಗಳು ೨೬ರಂದು ನಡೆಸಲಾಗುವ ಸಾಮೂಹಿಕ ಸತ್ಯಾಗ್ರಹದಲ್ಲಿ ಭಾಗವಹಿಸಲು ಸಂಯುಕ್ತ ಮಹಾರಾಷ್ಟ್ರ ಸಮಿತಿಯು ಬೊಂಬಾಯಿಶಾಖೆಯು ೧೦೦ ಜನ ಸ್ವಯಂಸೇವಕರನ್ನು ಕಳುಹಲಿದೆ. ಅವರು ಬೆಳಗಾವಿಗೆ ಇಂದು ಅಥವಾ ನಾಳೆ ತೆರಳುವರು

ಟಾಂಗಾ ಹರಿದು ಬಾಲಕನಿಗೆ ಗಾಯ

ರಾಜಧಾನಿಯ ನ್ಯೂ ಸಯ್ಯಾಜಿರಾವ್ ರಸ್ತೆಯಲ್ಲಿ ನೆನ್ನೆ ಸಂಜೆ ಟಾಂಗಾ ಗಾಡಿಯೊಂದು ಇಲ್ಲಿನ ಮಾಂಟಿಸ್ಸೋರಿ ಶಾಲೆಯ ನೌಕರರಾದ ಶ್ರೀ ನಾರಾಯಣಶಾಸ್ತ್ರಿಯವರ ಮಗ ಸುಮಾರು ೧೪ ವರ್ಷದ ರಾಮಚಂದ್ರಶಾಸ್ತ್ರಿ ಮೇಲೆ ಹರಿದು, ಹೊಟ್ಟೆ ಮತ್ತು ದವಡೆಗಳಿಗೆ ಪೆಟ್ಟಾಗಿ ಅವನನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಯಿತೆಂದು ತಿಳಿದುಬಂದಿದೆ. ಈಗ ಬಾಲಕನು ಸ್ವಲ್ಪ ಉತ್ತಮಗೊಂಡಿದ್ದಾನೆ

ಬೇಲೂರರ ಕೊಲೆ ಆಪಾದಿತ ಮುನಿಸ್ವಾಮಿ ಬಳ್ಳಾರಿಗೆ

ಬೆಂಗಳೂರು ೨೨

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆಗಳ ಸಂಬಂಧವಾಗಿ ಪತ್ತೆಗಿರಿಯಾಗಿರುವ ಪರಿಪಲ್ಲಿ ಒಬ್ಬನಾದ ಮುನಿಸ್ವಾಮಿಯನ್ನು ಕಳೆದ ವಾರ ಗುರುವಾರ ರಾತ್ರಿ ಬೆಂಗಳೂರು ಪೊಲೀಸರು ಬಳ್ಳಾರಿಗೆ ಕರೆದುಕೊಂಡು ಹೋಗಿದ್ದರು. ಅನೇಕ ಸಾರಿ ಶಿಕ್ಷಿತನಾಗಿರುವ ಮುನಿಸ್ವಾಮಿಯು ಕಳೆದ ತಿಂಗಳು ೧೯ನೇ ತಾರೀಖು ಬಳ್ಳಾರಿಗೆ ಹೋಗಿದ್ದನೆಂದೂ ಅದಕ್ಕೆ ಮುಂಚೆ ಅವನು ತುಮಕೂರು ಮತ್ತು ಇತರ ಜಿಲ್ಲೆಗಳಲ್ಲಿ ಕಳವು ಮಾಡಿದ್ದ ಪತ್ತೆಯಾದ ಅನೇಕ ಸಾಮಾನುಗಳನ್ನು ಕೊಂಡಿದ್ದನೆಂದೂ ಹೇಳಲಾಗಿದೆ. ಎಸ್ಪಿಯವರು ಮಾರಿದವರು, ಹೇಳಿಕೊಂಡಿದ್ದವರು ಅಲ್ಲಿನ ಮ್ಯಾಜಿಸ್ಟ್ರೇಟರ ಮುಂದೆ ಹೇಳಿಕೆ ಕೊಟ್ಟರು. ನೋಡಿದವರು ಕಳವಾದ ವಸ್ತುಗಳ ಪಟ್ಟಿಗಳನ್ನು ಮ್ಯಾಜಿಸ್ಟ್ರೇಟರು ತೆಗೆದಾಗ ಅವರು ಅವುಗಳನ್ನು ಗುರುತಿಸಿದರು

ಮುನಿಸ್ವಾಮಿಯನ್ನು ಎ ಎಸ್ ಪಿ ಶ್ರೀ ಕೆ ಎಸ್ ವಶಿಷ್ಠ ಮತ್ತು ಇನ್ಸ್‌ಪೆಕ್ಟರ್ ಶ್ರೀ ಪುಟ್ಟಪ್ಪನವರು ಬಳ್ಳಾರಿಗೆ ಕರೆದುಕೊಂಡುಹೋಗಿದ್ದರು

ಆರೋಪಿತರಾಗಿರುವವರ ಪೈಕಿ ಒಬ್ಬನ ಒಳ ಡ್ರೈವರ್ ಕೆಲಸಕ್ಕಿದ್ದವನನ್ನು ೩ ದಿನಗಳ ಹಿಂದೆ ಪೊಲೀಸರು ತಮ್ಮ ವಶಕ್ಕೆ ತೆಗೆದುಕೊಂಡರೆಂದೂ, ಅವನ ಹೇಳಿಕೆಯು ತನಿಖೆಗೆ ಸಹಕಾರಿಯಾಯಿತೆಂದೂ, ಇಲ್ಲದೆ ಅವರಿಂದ ಆರೋಪಿತರೂ ಸಹ ಬಾಯಿ ಬಿಡಲೂ ಸಹಕಾರಿಯಾಯಿತೆಂದೂ ಹೇಳಲಾಗಿದೆ

ರಂಗಲಕ್ಷ್ಮಿ ಇನ್ನೂ ೩ ೪ ವಾರಗಳವರೆಗೆ ಆಸ್ಪತ್ರೆಯಲ್ಲಿ

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮಗಳು ರಂಗಲಕ್ಷ್ಮಿಯು ಆಸ್ಪತ್ರೆಯಲ್ಲಿ ಇನ್ನೂ ೩ ೪ ವಾರಗಳ ಕಾಲ ಇರಬೇಕಾಗುವುದೆಂದು ಗೊತ್ತಾಗಿದೆ. ಆಕೆಯು ವೈದ್ಯಾಧಿಕಾರಿಗಳೊಡನೆ ಮಾತನಾಡುತ್ತಾ, ತನಗೆ ಇಂಟರ್ ಪರೀಕ್ಷೆಯಾಗಿದೆಯೆಂದೂ, ಮೆಡಿಕಲ್ ಕಾಲೇಜಿಗೆ ಸೇರುವ ಅಭಿಲಾಷೆಯಿದೆಯೆಂದೂ ತಿಳಿಸಿರುತ್ತಾಳೆ

ನೋವು ಸಹಿಸಲಾರದೆ ರೋಗಿಯೊಬ್ಬನ ಕ್ರೂರ ಚಿಕಿತ್ಸೆ

ಅಂಡವಾಯುವಿನಿಂದ ತುಂಬಾ ನೊಂದರಳುತ್ತಿದ್ದ ರೋಗಿಯೊಬ್ಬನು ಬೇಸರಗೊಂಡು ತನ್ನ ಶಪ್ರಾಣ ನೀಗಿದುದಾಗಿ ವರದಿಯಾಗಿದೆ. ಕುಪ್ಪತ್ತಿಯ ಕೋಲಂದರ್ ಅಲಿ ಎಂಬುವನು ಚಿಕಿತ್ಸೆ ನಂತರ ಆಸ್ಪತ್ರೆಯಿಂದ ಬಿಡುಗಡೆ ಹೊಂದಿದ್ದನೆಂದೂ, ಆದರೂ ನೋವು ಇದ್ದುದರಿಂದ ಅವನಿಗೆ ಬೇಸರವುಂಟಾಗಿ ಆಸ್ಪತ್ರೆ ಬಳಿಯೇ ಚಾಕುವಿನಿಂದ ಹೊಟ್ಟೆ ಬಗೆದುಕೊಂಡು, ೧೦ ಅಡಿ ಉದ್ದದಷ್ಟು ಕರುಳಿನ ಭಾಗವನ್ನು ಚೂರುಚೂರಾಗಿ ಕತ್ತರಿಸಿಕೊಂಡನೆಂದೂ, ಅದರ ಪರಿಣಾಮವಾಗಿ ಅವನು ೨ ಗಂಟೆ ನಂತರ ಮೃತಪಟ್ಟನೆಂದೂ ವರದಿಯಾಗಿದೆ

ಸಿ. ಡಿ. ದೇಶಮುಖ್‌ರವರಿಂದ ರಾಜಕೀಯ ತ್ಯಾಗ

ಕೇಂದ್ರ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ರಾಜಕೀಯಕ್ಕೆ ಪುನಃ ಪ್ರವೇಶಿಸಬಾರದೆಂದು ನಿಶ್ಚಯಿಸಿರುತ್ತಾರೆ. ತಾವು ಸರ್ಕಾರದೊಡನಾಗಲೀ ಅಥವಾ ರಾಷ್ಟ್ರದೊಡನಾಗಲೀ ಅಸಹಕಾರ ಮಾಡುತ್ತಿಲ್ಲವೆಂದು ಅವರು ಹೇಳಿರುತ್ತಾರೆ. ಒಂದು ಪಿರಿಯಡ್ ನಿಸಮುವಾಗಿ ತಾವು ತಮ್ಮ ಹಳೆಯ ಕವನಗಳಿಗೆ ರಾಜೀನಾಮೆ ಕೊಟ್ಟಿರುವುದಾಗಿಯೂ, ತಮ್ಮ ಮುಂದಿನ ಅಥವಾ ಸಾಹಸದ ಕಾರ್ಯಗಳ ನಿಷ್ಠೆ ಇನ್ನೂ ಇದೆಯೆಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ

ಪೂರ್ವ ಜರ್ಮನಿಯಲ್ಲಿ ೧೯,೦೦೦ ಖೈದಿಗಳಿಗೆ ರಾಜಕ್ಷಮೆ

ಪೂರ್ವ ಜರ್ಮನಿಯಲ್ಲಿ ೧೯,೦೦೦ ಖೈದಿಗಳು ಅವಧಿ ಪೂರ್ತಿಯಾಗುವ ಮೊದಲೇ ಬಿಡುಗಡೆ ಹೊಂದುವ ಬಗ್ಗೆ ಅಲ್ಲಿನ ಸರ್ಕಾರದವರು ರಾಜಕ್ಷಮೆ ಕೊಟ್ಟಿರುತ್ತಾರೆಂದು ವರದಿಯಾಗಿದೆ. ಆ ಪೈಕಿ ಗೊತ್ತುಗುರಿಯಿಲ್ಲದೆ ಜೈಲಿನಲ್ಲಿಡಲ್ಪಟ್ಟಿದ್ದ ೬೯೧ ಮಂದಿ ಸೋಷಿಯಲ್ ಡೆಮೊಕ್ರಾಟ್ ಪಕ್ಷದವರೂ ಇರುವರು. ಪಕ್ಷದ ಮೇಲೆ ಇನ್ನೂ ಹೆಚ್ಚಿನ ಜನರನ್ನು ಬಂಧವಿಮೋಚನೆ ಮಾಡಲೂ ಶಿಕ್ಷಾವಧಿಯನ್ನು ಕಡಿಮೆ ಮಾಡಲೂ ಆಲೋಚಿಸಲಾಗುತ್ತಿದೆಯೆಂದೂ ವರದಿಯಾಗಿದೆ

೪೪ ಸಾವಿರ ರೂ. ದರೋಡೆ

ಬೊಂಬಾಯಿಯಲ್ಲಿ ನೆನ್ನೆ ಮಧ್ಯಾಹ್ನದ ಒಬ್ಬ ಸಂಬಳ ಬಟವಾಡೆ ನೌಕರನು ರಿಸರ್ವ್ ಬ್ಯಾಂಕಿನಿಂದ ೪೪,೦೦೦ ರೂ ಗಳನ್ನು ತೆಗೆದುಕೊಂಡ ಸ್ವಲ್ಪ ಹೊತ್ತಿನಲ್ಲೇ ಅವನ ಕೈಯಿಂದ ಹಣವನ್ನು ಅಪಹರಿಸಲಾಯಿತೆಂದು ವರದಿಯಾಗಿದೆ. ದುಡ್ಡನ್ನು ತೆಗೆದುಕೊಂಡು ಅವನು ಹೊರಗಡೆ ಇದ್ದ ವಾಹನವನ್ನು ಹತ್ತಲು ಹೋದಾಗ, ಹತ್ತಿರದಲ್ಲೇ ಓಡಾಡುತ್ತಿದ್ದ ಇಬ್ಬರು ಯುವಕರು ಅವನ ಬಳಿ ಬಂದು ಮಾತನಾಡಿಸಿದರೆಂದೂ, ಆ ಪೈಕಿ ಒಬ್ಬನು ಹಿಂಭಾಗದಿಂದ ಚೀಲಕ್ಕೆ ಕೈ ಹಾಕಿ ನಗದನ್ನು ಎತ್ತಿಕೊಂಡು ಪರಾರಿಯಾದನೆಂದೂ ಹೇಳಲಾಗಿದೆ

ಸಮಾಜ ವಿರೋಧಿಗಳ ಪರವಾಗಿ ವಕಾಲತ್ತು ವಹಿಸಲಾಗದು

ಗುಜರಾತಿನ ಸಕ್ರಿಯ ಕಾಂಗ್ರೆಸ್ ಸದಸ್ಯರಾದ ವಕೀಲರುಗಳು ಸಮಾಜ ವಿರೋಧಿಗಳ ಪರ ವಕಾಲತ್ತು ವಹಿಸಕೂಡದೆಂದು ಅಲ್ಲಿನ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸೂಚಿಸಿರುತ್ತದೆ. ಕಳ್ಳಸಾಗಾಣಿಕೆ ಮಾಡುವವರು, ಲಂಚ ಕೊಡುವವರು ಮತ್ತು ಹಣದ ದುರುಪಯೋಗಗಳನ್ನು ಮಾಡುವವರ ಪರ ವಾದಿಸಕೂಡದೆಂದು ಸೂಚಿಸಲಾಗಿದೆ. ಯಾವುದಾದರೂ ವಿದ್ಯಮಾನದಲ್ಲಿ ವಕಾಲತ್ತು ವಹಿಸಲೇಬೇಕಾಗಿ ಬಂದರೆ ಆಗ ವಕೀಲರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಅನುಮತಿ ಪಡೆಯಬೇಕೆಂದು ತಿಳಿಸಲಾಗಿದೆ

○ ಭಾರತದಲ್ಲಿ ವಿ ಎ ಯಂತ್ರಗಳನ್ನು ತಯಾರಿಸುವುದರ ಬಗ್ಗೆ ಪಾರಿಭಾಷಿಕ ಸಲಹೆ ನೀಡಲು ಭಾರತಕ್ಕೆ ರಷ್ಯಾ ಮತ್ತು ಬ್ರಿಟನ್ನುಗಳಿಂದ ೨ ಪ್ರವೀಣರ ತಂಡಗಳು ಸಧ್ಯದಲ್ಲೇ ಬರಲಿವೆ

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನಕ್ಕೆ ನೆಹರೂ ಪ್ರಯಾಣ

ವಿದೇಶಗಳಲ್ಲಿ ಐದು ವಾರಗಳ ಪ್ರವಾಸ

ಪ್ರಧಾನಿ ನೆಹರೂರವರು ನೆನ್ನೆ ದೆಹಲಿಯಿಂದ ೫ ವಾರಗಳ ವಿದೇಶ ಪ್ರವಾಸಕ್ಕಾಗಿ ವಿಮಾನದಲ್ಲಿ ಲಂಡನ್ನಿಗೆ ಪ್ರಯಾಣ ಮಾಡಿದರು. ಅಲ್ಲಿ ಸೇರುವ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನದಲ್ಲಿ ಅವರು ಭಾಗವಹಿಸುವರು. ಅವರೊಡನೆ ಅವರ ಪುತ್ರಿ ಇಂದಿರಾ ಗಾಂಧಿ ಮತ್ತು ಮೊಮ್ಮಕ್ಕಳಾದ ರಾಜೀವ ಮತ್ತು ಸಂಜೀವಿಯವರೂ ಹೊರಟರು. ಈ ದಿನ ಅವರು ಲಂಡನ್ ತಲುಪುವರು

ನೆಹರೂರವರ ವಿಮಾನವು ಮಧ್ಯೆ ಕರಾಚಿ ನಗರದಲ್ಲಿ ಇಳಿದಾಗ ಸೌರಾಷ್ಟ್ರದ ರಾಜಪ್ರಮುಖರಾದ ಜಾಂಸಾಹೇಬರು, ದಕ್ಷಿಣ ಸೇನಾಧಿಪತಿ ಲೆ॥ ಜ॥ ತಿಮ್ಮಯ್ಯ ಮತ್ತು ಮಾಜಿ ಪ್ರಧಾನ ಸೇನಾಧಿಪತಿ ಜ॥ ರಾಜೇಂದ್ರ ಸಿಂಹಜಿಯವರು ಸ್ವಾಗತಿಸಿದರು. ಜಾಂಸಾಹೇಬರು ನೆಹರೂರವರಿಗೆ ಸೌರಾಷ್ಟ್ರದಲ್ಲಿ ಬೆಳೆಯುವ ಅತ್ಯುತ್ತಮ ಮಾವಿನಹಣ್ಣುಗಳ ಒಂದು ಪೆಟ್ಟಿಗೆಯನ್ನು ಸಮರ್ಪಿಸಿದರು

ನೆನ್ನೆ ಸಂಜೆ ನೆಹರೂರವರು ಸಿರಿಯಾ ರಾಜಧಾನಿ ಡಮಾಸ್ಕಸ್ ನಗರವನ್ನು ತಲುಪಿದರು. ಅಲ್ಲಿನ ಪ್ರಧಾನಿ ಸಬ್ರಿಎಲ್ ಅಸ್ಸಾಲಿ ಮತ್ತು ವಿದೇಶಾಂಗ ಮಂತ್ರಿ ಸಾಲಬಿತಾರ್‌ರವರು, ಸಹಸ್ರಾರು ಜನರ ಹರ್ಷಧ್ವನಿಗಳ ನಡುವೆ ಸ್ವಾಗತಿಸಿದರು. ನೆಹರೂರವರು ಸಿರಿಯಾ ಅಧ್ಯಕ್ಷ ಕುವಾಟ್ಲಿಯವರ ಅರಮನೆಗೆ ತೆರಳಿ ಅವರೊಡನೆ ೧ ಗಂಟೆ ಕಾಲ ಸಂಭಾಷಣೆ ನಡೆಸಿದರು.

ನೆಹರೂರವರು ಲಂಡನ್ ತಲುಪುವ ಮುಂಚೆ ಗ್ರೀಸಿನ ರಾಜಧಾನಿ ಅಥೆನ್ಸ್ ಮತ್ತು ಇಟಲಿಯ ರಾಜಧಾನಿ ರೋಂ ನಗರಗಳಲ್ಲಿ ಇಳಿಯುವರು. ವಾಪಸು ಬರುವಾಗ ಪಶ್ಚಿಮ ಜರ್ಮನಿಯ ಕಲೋನ್, ಬಾನ್ ಮತ್ತು ಹ್ಯಾಂಬರ್ಗ್‌ಗಳಲ್ಲೂ, ಡಬ್ಲಿನ್, ಯುಗೋಸ್ಲಾವಿಯದ ಪೂಲಾ, ಕೈರೊ, ಬೀರೂಟ್ ಮತ್ತು ಬಹ್ರೈನ್‌ಗಳಲ್ಲೂ ತಂಗುವರು

ಮಧ್ಯೆ ಅವರು ಐರಿಷ್ ರಿಪಬ್ಲಿಕ್ ಅಧ್ಯಕ್ಷ ಡಿ ವಲೇರಾರವರನ್ನು ಭೇಟಿ ಮಾಡುವರು. ಅಲ್ಲದೆ ಯುಗೊಸ್ಲಾವಿಯಾ ಅಧ್ಯಕ್ಷ ಟಿಟೊ ಮತ್ತು ಈಜಿಪ್ಟಿನ ಪ್ರಧಾನಿ ನಾಸಿರ್‌ರವರನ್ನೂ ಜಂಟಿಯಾಗಿ ಏಡ್ರಿಯಾಟಿಕ್ಕಿನ ಬ್ರಿಯೋನಿ ದ್ವೀಪದಲ್ಲಿ ಸಂಧಿಸುವರು

ಭಾರತಕ್ಕೆ ಬರುತ್ತಿದ್ದ ಇಬ್ಬರು ಗೋವಾ ಪೊಲೀಸರ ಕೊಲೆ

ಭಾರತಕ್ಕೆ ಕಳೆದ ೧೮ರಂದು ಓಡಿಬರುತ್ತಿದ್ದ ೪ ಜನ ಗೋವಾ ಪೊಲೀಸರ ಮೇಲೆ ಪೋರ್ಚುಗೀಸರು ಗುಂಡು ಹಾರಿಸಿ ಇಬ್ಬರನ್ನು ಕೊಂದಿರುತ್ತಾರೆ. ಇನ್ನಿಬ್ಬರನ್ನು ದಸ್ತಗಿರಿ ಮಾಡಿ ಬಲವಾಗಿ ಹೊಡೆಯಲಾಯಿತು. ಅವರುಗಳನ್ನು ಭಾರತ ಗೋವಾ ಗಡಿ ಬಳಿ ಕಾವಲಿಗಾಗಿ ನೇಮಿಸಲಾಗಿತ್ತು

ಸುದರ್ಶನ ಚರಖಾ ಪ್ರದರ್ಶನ

ಅಂಬರ್ ಚರಖಾಕ್ಕಿಂತ ಉತ್ತಮವೇ?

ಬೆಂಗಳೂರು ೨೨

ತರೀಕೆರೆಯ ಶ್ರೀ ಎಸ್ ಆರ್ ಜಗದೀಶಪ್ಪ ಎಂಬುವರು ಮೊನ್ನೆ ಇಲ್ಲಿ ಕೈಗಾರಿಕಾ ಮಂತ್ರಿ ಡಾ|| ನಾಗನಗೌಡರ ಮುಂದೆ, ತಾವು ನಿರ್ಮಿಸಿರುವ ಸುದರ್ಶನ ಚರಖವನ್ನು ಪ್ರದರ್ಶಿಸಿದರು ತಮ್ಮ ಮಾದರಿಯು ಅಂಬರ್ ಚರಖಾಕ್ಕಿಂತಲೂ ಉತ್ತಮವಾಗಿರುವುದೆಂದು ಅವರ ತಿಳಿಸಿ, ಅದಕ್ಕಿಂತಲೂ ಕಡಿಮೆ ಬೆಲೆಯುಳ್ಳ ಈ ಚರಖದಿಂದ ೧ ಕಡಿರಿನಿಂದಲೇ ಗಂಟೆಗೆ ೧ ೦೦೦ ಗಜ ನೂಲನ್ನು ತೆಗೆಯಬಹುದೆಂದೂ, ೪ ಕದಿರುಗಳುಳ್ಳ ಅಂಬರ್ ಚರಖಾದಲ್ಲಿ ಗಂಟೆಗೆ ೬೦೦ ಗಜದಾರ ಮಾತ್ರ ದೊರೆಯುತ್ತದೆಂದೂ ಅವರು ಹೇಳಿದರು ತಮ್ಮ ಚರಖವನ್ನು ಕೇವಲ ೫೦ ರೂ ವೆಚ್ಚದಿಂದ ತಯಾರಿಸಬಹುದೆಂದೂ ಬೆರಳೆಣಿಕೆ ನಡೆಸಲ್ಪಡುವ ಆ ಚರಖದ ಕದಿರು ನಿಮಿಷಕ್ಕೆ ೧೫,೦೦೦ ಆವರ್ತ ತಿರುಗುವುದೆಂದೂ ಅವರು ನುಡಿದರು ೧೦೦ ಸುದರ್ಶನ ಚರಖಗಳನ್ನು ತಯಾರಿಸಲು ಅವರು ಸರ್ಕಾರದ ಸಹಾಯವನ್ನು ಕೋರಲಿರುವರು

ಉತ್ತರ ಕರ್ನಾಟಕದಲ್ಲಿ ಮುಖ್ಯ ಮಂತ್ರಿಗಳ ಪ್ರವಾಸ

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಇದೇ ತಿಂಗಳು ೨೫ ರಿಂದ ಉತ್ತರ ಕರ್ನಾಟಕದಲ್ಲಿ ಸಂಚರಿಸುವರು ಮೈಸೂರು ಸಂಸ್ಥಾನಕ್ಕೆ ಸೇರಲಿರುವ ಆ ಪ್ರದೇಶಗಳ ಮುಖಂಡರನ್ನು ಅವರು ಭೇಟಿ ಮಾಡಿ ಭಾವಿ ಸಂಸ್ಥಾನದ ಬಗ್ಗೆ ಅವರ ಅಭಿಪ್ರಾಯಗಳನ್ನು ಪಡೆಯುವರೆಂದು ವರದಿಯಾಗಿದೆ

ಚೀಣದಲ್ಲಿ ಪ್ರವಾಹದಿಂದ ವಿಪರೀತ ಹಾನಿ

ಮಧ್ಯ ಚೀಣದ ಪೂರ್ವ ಭಾಗದಲ್ಲಿರುವ ಹುವೆ ನದಿಯಲ್ಲಿ ಪ್ರವಾಹ ಬಂದು ವಿಪರೀತ ನಷ್ಟವುಂಟಾಗಿರುವುದೆಂದು ವರದಿಯಾಗಿದೆ ೦ ಸಾವಿರ ಜನರನ್ನು ಪ್ರವಾಹ ಸುಗ್ಗಿದ ಮನೆಗಳಿಂದ ಖಾಲಿ ಮಾಡಿಸಿ ಸುರಕ್ಷಿತ ಪ್ರದೇಶಗಳಿಗೆ ಕಳುಹಲಾಗಿದೆ

ವೇಣು ವಾದನ

ರಾಮಕೃಷ್ಣನಿಯ ಸಂಗೀತ ಕಲಾಭಿವರ್ಧಿನಿ ಸಭೆಯ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಸನ್ನಿಧಿ ರಸ್ತೆಯಲ್ಲಿ ವಿ|| ಬಿ ಆರ್ ರಾಮಾಚಾರ್ಯರ ವೇಣುವಾದನವೂ ವಿ|| ಎ ವೀರಭದ್ರಯ್ಯನವರ ಪಿಟೀಲು ಮತ್ತು ವಿ|| ವಿ|| ಡಿ ಚಂದ್ರಶೇಖರಯ್ಯನವರ ತಬಲಗಳೊಡನೆ ನಡೆಯಲಿದೆ

ವಿವಾಹ ಮಹೋತ್ಸವ

ಟಿ ನರಸೀಪುರ ತಾಲ್ಲೂಕು ಕಾಳಿಹುಂಡಿಯ ಬಾಲಕರ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಂ ಮಲ್ಲಯ್ಯನವರು ತಮ್ಮ ಕುಮಾರ ಶ್ರೀ ಎಂ ಮಲ್ಲಿಕಾರ್ಜುನಸ್ವಾಮಿಯವರಿಗೆ ಮಳವಳ್ಳಿ ತಾಲ್ಲೂಕು ಹನವಾಡಿ ಗ್ರಾಮದ ಶ್ರೀ ಕೆ ಕೆಂಪಯ್ಯನವರ ಕುಮಾರಿ ಸೌ ಜಯಮ್ಮನನ್ನು ತಂದುಕೊಂಡು ನೆನ್ನೆ ಕಾಳಿಹುಂಡಿಯಲ್ಲಿ ವಿವಾಹವನ್ನು ನೆರವೇರಿಸಿದರು

ಗೋಕರ್ಣ ಮಠಾಧಿಪತಿಗಳಿಗೆ ಮದ್ರಾಸಿನಲ್ಲಿ ಮಾನಪತ್ರ

ಮದ್ರಾಸಿನ ಮಾಧ್ವ ಸಂಘದವರು ಕಳೆದ ಸೋಮವಾರ ಅಲ್ಲಿನ ದಾಸಪ್ರಕಾಶದಲ್ಲಿ ಶ್ರೀ ಸಂಸ್ಥಾನ ಗೋಕರ್ಣ ಜೀವೋತ್ತಮ ಮಠಾಧಿಪತಿಗಳಾದ ಶ್ರೀ ದ್ವಾರಕಾನಾಥತೀರ್ಥ ಶ್ರೀಪಾದಂಗಳವರಿಗೆ ಮಾನಪತ್ರವನ್ನು ಅರ್ಪಿಸಿದರು ಕುಮಟಾ ಶ್ರೀ ಭಂಡಾರಕೇರಿ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರು ಅಧ್ಯಕ್ಷತೆ ವಹಿಸಿದ್ದರು

ಪ್ರಾರ್ಥನೆಯನಂತರ ಶ್ರೀ ವ್ಯಾಸರಾಯ ಶಾಸ್ತ್ರಿಗಳವರು ಶ್ರೀ ಶ್ರೀಗಳವರನ್ನು ಸ್ವಾಗತಿಸಿದರು ಸಂಘದ ಅಧ್ಯಕ್ಷರಾದ ಶ್ರೀ ಕೆ ಸೀತಾರಾಮರಾಯರು ಫಲಪುಷ್ಪ ಸಮೇತ ಕಾಣಿಕೆಯನ್ನು ಸಮರ್ಪಿಸಿದರು

ಶ್ರೀ ಭಂಡಾರಕೇರಿ ಸ್ವಾಮಿಗಳವರು ಭಾಷಣ ಮಾಡಿ ಶ್ರೀ ಗೋಕರ್ಣದ ಸ್ವಾಮಿಗಳವರ ಗುಣಾತಿಶಯ ವಿದ್ಯಾನುಭವ ಮುಂತಾದುವುಗಳನ್ನು ವಿವರಿಸಿದರು

ಮಾಧ್ವ ಸಂಘದ ಕಾರ್ಯದರ್ಶಿಯವರಾದ ಶ್ರೀ ಎ ರಾಘವೇಂದ್ರರಾಯರು ಮಾನಪತ್ರವನ್ನು ಸಮರ್ಪಿಸಿದರು ಶ್ರೀ ಗೋಕರ್ಣಸ್ವಾಮಿಗಳವರು ಸೂಕ್ತ ಉತ್ತರವಿತ್ತರು

ಶ್ರೀ ತ್ರಿನಯನೇಶ್ವರ ಸ್ವಾಮಿಯವರ ಗಿರಿಜಾ ಕಲ್ಯಾಣ

ನಗರದ ಅರಮನೆ ಕೋಟೆ ಆವರಣದಲ್ಲಿರುವ ಶ್ರೀ ತ್ರಿನಯನೇಶ್ವರ ದೇವಾಲಯದಲ್ಲಿ ಇದೇ ೨೯ನೇ ತಾರೀಖು ಗಿರಿಜಾ ಕಲ್ಯಾಣೋತ್ಸವವು ಜರಗುವುದು ತತ್ಸಂಬಂಧವಾದ ವಿವಿಧ ಕಾರ್ಯಕ್ರಮಗಳು ೨೫ನೇ ತಾರೀಖಿನಿಂದ ಆರಂಭವಾಗಿ ಬರುವ ತಿಂಗಳು ೩ನೇ ತಾರೀಖಿನ ವರೆಗೆ ನಡೆಯುತ್ತವೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ದಿಲ್ರುಬಾ ೮ ೧೫ ಮತ್ತು ೮ ೧೫ ಕನ್ನಡ ಗೀತೆಗಳು ಮಧ್ಯಾಹ್ನ ೧೨ ೩ ಕೆ ರಾಜಲಕ್ಷ್ಮಿ ಸಂಗೀತ ೨ ೪೦ ರೇಡಿಯೊ ೧೨ ೪೫ ಬಾಲ ಜಗತ್ ಮಕ್ಕಳ ಕಾರ್ಯಕ್ರಮ ೧ ೩೦ ದಿಲ್ರುಬಾ ಸಂಜೆ ೬ ೪೦ ಮತ್ತು ೮ ಆರ್ ಆನಂದ ದಾಸ್ ಮತ್ತು ಆರ್ ರಾಜು ಸಂಗೀತ ೬ ೧೫ ಗುರುವಿನ ಹೆಜ್ಜೆಯಲ್ಲಿ ಕನ್ನಡ ರೂಪಕ ೭ ೪೦ ವಿಜ್ಞಾನದ ಮುನ್ನಡೆ ೮ ೪೦ ರೇಡಿಯೊ ಸುದ್ದಿ ಚಿತ್ರ ೯ ೪೦ ೧೦ ೧೫ ವಾದ್ಯ ಮೇಳ ೯ ೪೦ ಜೀವನಕೋಟೆ ನಾರಾಯಣ ಅಯ್ಯಂಗಾರ್ ಸಂಗೀತ ರಾಷ್ಟ್ರೀಯ ಕಾರ್ಯಕ್ರಮ ದೆಹಲಿ ಪುನಃಪ್ರಸಾರ

○ವಸ್ಸಣ ಪೆಸಿಫಿಕ್ಕಿನ ವರಾಂಟಿವೆಲ್ಲೊ ದ್ವೀಪದಲ್ಲಿ ಮೊನ್ನೆ ಬ್ರಿಟನ್ನು ಈ ವರ್ಷದ ತನ್ನ ಹಿಡಿಎ ಜನ್ ಬಾಂಬಿನ ಪರೀಕ್ಷಾ ಸ್ಫೋಟನವನ್ನು ನಡೆಸಿತೆಂದು ವರದಿಯಾಗಿದೆ

ಪೌರಸಭೆಯ ಉಪಾಧ್ಯಕ್ಷರ ಚುನಾವಣೆ

ನಂಜನಗೂಡು ೨೨

ಇಲ್ಲಿನ ಪೌರಸಭೆಯ ಉಪಾಧ್ಯಕ್ಷರ ಚುನಾವಣೆಯು ಮೊನ್ನೆ ನಡೆದು, ಶ್ರೀ ವೈ ಕೆ ಎಸ್ ಲಕ್ಷ್ಮಣಶೆಟ್ಟರು ಶ್ರೀ ಕಾಳೇಗೌಡರಿಗಿಂತ ಹೆಚ್ಚು ಬಹುಮತವನ್ನು ಗಳಿಸಿ ಜಯಶಾಲಿಗಳಾದರು ಶ್ರೀ ಶೆಟ್ಟರು ಕಳೆದ ೧೭ ವರ್ಷಗಳಿಂದಲೂ ಉಪಾಧ್ಯಕ್ಷರಾಗಿರುವರಲ್ಲದೆ, ೨೫ ವರ್ಷಗಳಿಂದ ಸಭಾ ಸದಸ್ಯರಾಗಿರುವರು

ನಂಜನಗೂಡಿನಲ್ಲಿ ಪರಿಹಾರ ಕಾರ್ಯ

ನಂಜನಗೂಡು ತಾಲ್ಲೂಕಿನ ಹಲವು ಅಭಾವ ಪ್ರದೇಶಗಳಲ್ಲಿ ಪರಿಹಾರ ಕಾರ್ಯದ ಅಂಗವಾಗಿ ೩ ೦೦೦ ರೂ ವೆಚ್ಚದ ರಸ್ತೆ ಮತ್ತು ಕಾಲುವೆ ರಿಪೇರಿ ಕೆಲಸವನ್ನು ನಡೆಸಲಾಯಿತೆಂದೂ, ಒಳನಾಡಿನ ಹಳ್ಳಿಗಳಲ್ಲಿ ೧೦ ಲಾರಿ ಭರ್ತಿ ಹುಲ್ಲನ್ನು ಒದಗಿಸಲಾಯಿತೆಂದೂ ವರದಿಯಾಗಿದೆ ದಾಸ್ತಾನು ಬಂದಕೂಡಲೇ ರಾಗಿಯನ್ನೂ ಒದಗಿಸಲಾಗುವುದೆಂದೂ ತಾಲ್ಲೂಕು ಅಮಲ್ದಾರ್ ಶ್ರೀ ಬಂಗಾರಯ್ಯನವರು ತಿಳಿಸಿರುವರು

ಮದ್ರಾಸು ನಾನ್ ಗೆಜೆಟೆಡ್ ನೌಕರರಿಗೆ ನೆಹರೂ ಭೇಟಿಯಿಲ್ಲ

ಮದ್ರಾಸಿನ ನಾನ್ ಗೆಜೆಟೆಡ್ ನೌಕರರ ಸಂಘದ ಪ್ರತಿನಿಧಿಗಳಿಗೆ ಭೇಟಿ ಕೊಡಲು ಪ್ರಧಾನಿ ನೆಹರೂರವರು ನಿರಾಕರಿಸಿರುವುದಾಗಿ ವರದಿಯಾಗಿದೆ ಸಂಸ್ಥಾನ ಸರ್ಕಾರದ ವ್ಯವಹಾರದಲ್ಲಿ ಕೇಂದ್ರದವರು ಪ್ರವೇಶಿಸುವುದಿಲ್ಲವೆಂದು ಅವರು ಸೂಚಿಸಿರುವುದಾಗಿ ಹೇಳಲಾಗಿದೆ ಭೇಟಿಗಾಗಿ ಸಂಘದ ... ಜನರು ದೆಹಲಿಗೆ ಹೋಗಿ ಈಗ ವಾಪಸು ಹೋಗುವುದರಲ್ಲಿ ಉದ್ಯುಕ್ತರಾಗಿರುವರು

ಮೈಸೂರು ಪೇಟೆ ಧಾರಣೆ

	ರೂ ಯಿಂದ			ರೂ ವರೆಗೆ		
ಕಡಲೆಕಾಯಿ	[illegible]	[illegible]	[illegible]	[illegible]	[illegible]	[illegible]
ಎಳ್ಳು	[illegible]	[illegible]	[illegible]	[illegible]	[illegible]	[illegible]
ಹುರುಳಿ	[illegible]	[illegible]	[illegible]			
ಹೆಸರು	[illegible]	[illegible]	[illegible]			
ಹಲಸಂದೆ	[illegible]	[illegible]	[illegible]	[illegible]	[illegible]	[illegible]
ಉದ್ದು	[illegible]	[illegible]	[illegible]	[illegible]	[illegible]	[illegible]
ಹುಣಸೇಹಣ್ಣು	[illegible]	[illegible]	[illegible]			
ಮೆಣಸಿನಕಾಯಿ	[illegible]	[illegible]	[illegible]	[illegible]	[illegible]	[illegible]
ತೆಂಗಿನಕಾಯಿ ೧೦೦೦ಕ್ಕೆ	[illegible]	[illegible]	[illegible]	[illegible]	[illegible]	[illegible]

ಪ್ರಕಟನೆ



ಪೋಲಿಯೊ ಸ್ಪೆಷಲಿಸ್ಟ್
ಕವಿರಾಜ
ಓಂ ಪ್ರಕಾಶ್
ಬಿ ಎ, ದೆಹಲಿ
ಮೈಸೂರಿನಲ್ಲಿ
ಧನ್ವಂತರಿ ರಸ್ತೆಯಲ್ಲಿರುವ
ಇಂದ್ರಭವನದಲ್ಲಿ 23 6 56ನೇ ತಾರೀಖು ಬೆಳಗ್ಗೆ 8ರಿಂದ 12 ಮತ್ತು ಮಧ್ಯಾಹ್ನ 4ರಿಂದ 6ರ ವರೆಗೂ

ಕೆಳಗೆ ಕಂಡ ವ್ಯಾಧಿಗಳಿಂದ ನರಳುತ್ತಿರುವ ರೋಗಿಗಳು ಅತ್ಯುತ್ತಮ ಸಲಹೆ ಮತ್ತು ಔಷಧಿಗಳನ್ನು ಪಡೆಯಬಹುದು

1 ಪೋಲಿಯೊ ಮತ್ತು ಕೈ ಕಾಲು, ಅರ್ಧ ಶರೀರ, ಪೂರ್ತಿ ಶರೀರದ ಪಾರ್ಶ್ವವಾಯು. 2 ರಕ್ತದ ಒತ್ತಡ 3 ಮೂರ್ಛೆ. 4 ಸಿಹಿಮೂತ್ರ. 5 ಕುರುಡು ಅಥವಾ 6 ಮಾನಸಿಕ ತೊಂದರೆಗಳು

ARYAVARTA POLIO ASHRAM
Phone 17856
114 B Kamla Nagar, DELHI 6

ಇತರ ಸ್ಥಳಗಳಲ್ಲಿ ... ಪೋಲಿಯೊ ಆಸ್ಪತ್ರೆ ... ಪೋಲಿಯೊ ... ಮತ್ತು ... ಪುಸ್ತಕ ... ರೂ 7 8 0, ... ಇಂಗ್ಲಿಷ್ ಅಥವಾ ಹಿಂದಿಯಲ್ಲಿ ... ಪತ್ರ ವ್ಯವಹಾರ

ರಷ್ಯಾ-ಭಾರತ ಜಂಟಿ ಚಿತ್ರದಲ್ಲಿ ಪದ್ಮಿನಿಯ ಪಾತ್ರ

ದಕ್ಷಿಣ ಭಾರತದ ಚಲನ ಚಿತ್ರ ನಟಿಯಾದ ಪದ್ಮಿನಿಯು ರಷ್ಯಾ-ಭಾರತದ ಜಂಟಿ ಚಿತ್ರವೊಂದರಲ್ಲಿ ಅಭಿನಯ ಮಾಡಲಿರುವುದಾಗಿ ವರದಿಯಾಗಿದೆ ಚಿತ್ರದ ಹೆಸರು "ಪರದೇಶಿ" ಚಿತ್ರವನ್ನು ಈಗ ಹಿಂದಿ ಮತ್ತು ರಷ್ಯಾ ಭಾಷೆಯಲ್ಲಿ ತೆಗೆಯಲಾಗುತ್ತಿದೆ ಅದರಲ್ಲಿ ಪದ್ಮಿನಿ ಮುಖ್ಯ ಪಾತ್ರ ವಹಿಸಿರುವಳು

ರೈಲು-ಲಾರಿ ಡಿಕ್ಕಿಯಿಂದ ಏಳು ಜನರ ಮರಣ

ಆಗ್ನೇಯ ರೈಲ್ವೆಯ ಖೇಲ್ಡ ನಿಲ್ದಾಣದ ಬಳಿ ಬೊಂಬಾಯಿ—ಹೌರಾ ರೈಲೊಂದಕ್ಕೂ ಲಾರಿಯೊಂದಕ್ಕೂ ಡಿಕ್ಕಿಯಾಗಿ ಲಾರಿಯಲ್ಲಿದ್ದ ೭ ಜನರ ಪೈಕಿ ೭ ಜನರು ಸ್ಥಳದಲ್ಲೇ ಸತ್ತರು ... ರಭಸಕ್ಕೆ ಒಬ್ಬನು ಲಾರಿಯಿಂದ ಎಸೆಯಲ್ಪಟ್ಟು ಇಂಜನ್ನಿನ ಕ್ಯಾಚರ್ ಮೇಲೆ ಕುಳಿತು ಬದುಕಿಕೊಂಡನು ಲಾರಿಯು ಪುಡಿಯಾಗಿ ... ಫರ್ಲಾಂಗ್ ದೂರ ರೈಲಿನಿಂದ ಎಳೆದೊಯ್ಯಲ್ಪಟ್ಟಿತು

ಹುಡುಗಿ ತಪ್ಪಿಸಿಕೊಂಡಿದ್ದಾಳೆ

ದೊಡ್ಡಣ್ಣಶೆಟ್ಟಿಯವರ ೧೦ ವರ್ಷದ ತಿಮ್ಮಮ್ಮ ಎಂಬ ಹುಡುಗಿಯು ತಾ| 15 6 ರಂದು ಶುಕ್ರವಾರ ಮಧ್ಯಾಹ್ನದ ಬಳಿಕ ಕಾಣೆಯಾಗಿರುತ್ತಾಳೆ ಇದುವರೆಗೂ ಪತ್ತೆಯಾಗಿರುವುದಿಲ್ಲ ಅವಳು ಬೆಳ್ಳನೆ ಬಣ್ಣ ಮತ್ತು ಬೇಟೆ ಜಂಪರ್ ಹಾಕಿಕೊಂಡಿದ್ದಾಳೆ ಪತ್ತೆ ಮಾಡಿಕೊಟ್ಟವರಿಗೆ ಸೂಕ್ತ ಬಹುಮಾನ ಕೊಡಲಾಗುತ್ತದೆ

ಕೆ ಶಿ ಪ ಯ್ಯ,
ಡೋರ್ ನಂ 407 ರಾಜಪುರ ರೋಡ್,
ಲಷ್ಕರ್ ಮೊಹಲ್ಲ, ಮೈಸೂರು

ಮೈಸೂರು ಸಿಟಿ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್

ಗಾಂಧಿ ಚೌಕ, ಮೈಸೂರು

ಬೆಳ್ಳಿಹಬ್ಬದ ಸಹಕಾರ ಸಂಘದ ಬೆಳ್ಳಿಹಬ್ಬ ಮಹೋತ್ಸವವು ಇದೇ ಮಾಹೆ 23ನೇ ತಾರೀಖು ಶನಿವಾರ ಪ್ರಾತಃ 10 45 ಗಂಟೆಗೆ ರಂಗಾಚಾರ್ಲು ಮೆಮೋರಿಯಲ್ ಹಾಲ್ (ಟೌನ್ ಹಾಲ್) ನಲ್ಲಿ ನಡೆಯುತ್ತೆ ಆಹ್ವಾನ ಪತ್ರಿಕೆಗಳನ್ನು ಟಪಾಲು ಮೂಲಕ ಎಲ್ಲಾ ಸದಸ್ಯರಿಗೂ ಕಳುಹಿಸಿರುತ್ತೆ ಕೆಲವು ಸದಸ್ಯರ ವಿಳಾಸಗಳು ಸರಿಯಾಗಿ ಇಲ್ಲದಿದ್ದ ಪ್ರಯುಕ್ತ, ಕೆಲವು ಆಹ್ವಾನ ಪತ್ರಿಕೆಗಳು ಎಲ್ಲಾ ಸದಸ್ಯರಿಗೆ ತಲುಪದಿರಬಹುದಾದ್ದರಿಂದ ಈ ಪ್ರಕಟಣೆಯನ್ನೇ ಆಹ್ವಾನವೆಂದು ಭಾವಿಸಿ, ಈ ಬೆಳ್ಳಿಹಬ್ಬ ಮಹೋತ್ಸವಕ್ಕೆ ಸದಸ್ಯರುಗಳೆಲ್ಲರೂ ತಪ್ಪದೆ ದಯಮಾಡಿಸಿ ಈ ಮಹೋತ್ಸವವು ಯಶಸ್ವಿಯಾಗಿ ನಡೆಯಲು ತಮ್ಮ ಸಹಭಾಗಿತ್ವವನ್ನು ಬಯಸುತ್ತೇವೆ

ಮ್ಯಾನೇಜಿಂಗ್ ಕಮಿಟಿ ಅಪ್ಪಣೆ ಮೇರೆಗೆ
ಎಸ್ ಸುಬ್ರಹ್ಮಣ್ಯ
ಸೆಕ್ರಟರಿ

★

24 6—56ನೇ ಭಾನುವಾರ ಬೆಳಗ್ಗೆ 9 ಗಂಟೆಗೆ ಸರಿಯಾಗಿ ಮೈಸೂರು ದಸರಾ ವಸ್ತು ಪ್ರದರ್ಶನ ಕಟ್ಟಡದ ಆವರಣದಲ್ಲಿ ಸಹಕಾರ ಮಹೋತ್ಸವದ ಸ್ವಾಗತಾರ್ಥವಾಗಿ ಸದಸ್ಯರುಗಳಿಗೆ ಮಾತ್ರ ಉಪಹಾರವನ್ನು ಏರ್ಪಡಿಸಿದ್ದು ಆಹ್ವಾನಪತ್ರಿಕೆಯಿಲ್ಲದುದರಿಂದ ಈ ಪ್ರಕಟಣೆಯನ್ನೇ ಆಹ್ವಾನವೆಂದು ಭಾವಿಸಿ, ಈ ಸಂಘದ ಮೆಂಬರುಗಳು ಉಪಹಾರಕ್ಕೆ ತಪ್ಪದೆ ದಯಮಾಡಿಸಿ ಸಹಕರಿಸಬೇಕಾಗಿ ಪ್ರಾರ್ಥನೆ

ಮ್ಯಾನೇಜಿಂಗ್ ಕಮಿಟಿ ಅಪ್ಪಣೆ ಮೇರೆಗೆ
ಎಸ್ ಸುಬ್ರಹ್ಮಣ್ಯ
ಸೆಕ್ರಟರಿ

ಹಾಸಿಗೆ-ದಿಂಬು

ಮಿತವ್ಯಯದಲ್ಲಿ ಹತ್ತಿ ದಿಂಬು ತಯಾರು ಮಾಡುತ್ತೇವೆ

ಬಾಬುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು ಮೈಸೂರು

Edited Printed and Published by A R Nagaraja at Sadhvi Press, D Subbiah Road Mysore

ರಣಜಿತ್

22 6 56ನೇ ಶುಕ್ರವಾರದಿಂದ
ಅಮೋಘ 2ನೇ ವಾರ

ಧರ್ಮೇಂದ್ರ ಅನಿತಾ ಗುಹ, ... ಇತರರು ನಟಿಸಿರುವ

ಯೆಹೂದಿ ಕಿ ಬೇಟಿ

ಇದರ ಜೊತೆಯಲ್ಲಿ ಮಿಳ್ಳನ ನಟನಟಿಯರಾದ ರಾಜ್ ಕಪೂರ್ ದಿಲೀಪ್ ಕುಮಾರ್ ... ಕಾಮಿನಿ ಕೌಶಲ್ ಭರತಭೂಷಣ್ ... ರೊಡಗೂಡಿದ

ಸಿತಾರೋಂ ಕಿ ದುನಿಯಾ

ಎಂಬ ಸ್ಪೆಷಲ್ ರೀಲ್ ಸಹ ಪ್ರದರ್ಶಿಸಲಾಗುತ್ತದೆ

SRI GAYATHRI TALKIES ★

Gala Release On 23—6—56 Daily 3 Shows

A Marvelous picture to be remembered for ever

Walt Disney's Cinemascope in Technicolor ★ 20,000 LEAGUES UNDER THE SEA ★ Starring Kirk Douglas & James Mason

To-day Last Day
INTERRUPTED MELODY

Morning Shows on Saturday & Sunday
SAINT GIRL FRIDAY — A detective Picture

ರಿಜಿಸ್ಟರ್ಡ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪ್ರತಿಗೆ ಮೂರು ಕಾಸು

ಸಾಧ್ವಿ

ಬಿಡಿ ಪ್ರತಿಗೆ 3 ಕಾಸು

ಸಂಸ್ಥಾನದ ಪತ್ರಿಕೆಗಳಲ್ಲಿ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : SATURDAY 23—6—1956 ಮೈಸೂರು : ಶನಿವಾರ ೨೩—೬—೧೯೫೬ [ಸಂಚಿಕೆ : ...

– ಚೀಣಕ್ಕೆ ಸಧ್ಯದಲ್ಲೇ ಭಾರತದ ಸಹಕಾರ ನಿಯೋಗ –

ಮೈಸೂರು ಸಿಟಿ ಕೋ-ಆಪರೇಟಿವ್ ಸೊಸೈಟಿ ಸುವರ್ಣ ಮಹೋತ್ಸವ

ಶ್ರೀಮನ್ಮಹಾರಾಜರಿಂದ ಆರಂಭ

ಮೈಸೂರು ೨೨.

ನಗರದ ಗಾಂಧಿ ಚೌಕದಲ್ಲಿರುವ ಮೈಸೂರು ಕೋ-ಆಪರೇಟಿವ್ ಸೊಸೈಟಿಯ ಸುವರ್ಣ ಮಹೋತ್ಸವವನ್ನು ಇಂದು ಶ್ರೀಮನ್ಮಹಾರಾಜರು ಟೌನ್ ಹಾಲಿನಲ್ಲಿ ನೆರವೇರಿಸಿದರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಕೈಗಾರಿಕಾ ಸಚಿವ ಡಾ. ಆರ್. ನಾಗನಗೌಡರು ಸೊಸೈಟಿ ಅಧ್ಯಕ್ಷರಾಗಿದ್ದ ರಾಜಸೇವಾಸಕ್ತ ದಿ. ಶ್ರೀ ಸಿ. ನರಸಿಂಹಯ್ಯನವರ ಭಾವಚಿತ್ರದ ಅನಾವರಣ ಮಾಡಿದರು. ಸಮಾರಂಭಕ್ಕೆ ಕೇಂದ್ರ ಆಹಾರ ಉಪಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪ ಮತ್ತು ಸಂಸ್ಥಾನ ಸಹಕಾರ ಸಚಿವ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಆಗಮಿಸಿದ್ದರು.

ಶ್ರೀಮತಿ ಸೀತಾ ಮತ್ತು ವೃಂದದವರಿಂದ ಗಾಯನವಾದನಂತರ ಸೊಸೈಟಿ ಅಧ್ಯಕ್ಷ ಶ್ರೀ ಬಿ. ಎಸ್. ಕೆಂಗೇಗೌಡರು ಸ್ವಾಗತ ಭಾಷಣ ಮಾಡಿದರು. ಡೈರೆಕ್ಟರುಗಳಾದ ಶ್ರೀ ಸುಬ್ರಹ್ಮಣ್ಯಂರವರು ಸ್ಥಾಪನೆಯ ಕಾಲದಿಂದ ಇಲ್ಲಿಯವರೆಗಿನ ಸಂಸ್ಥೆಯ ಪ್ರಗತಿಯನ್ನು ವಿವರಿಸಿದರು. ಶ್ರೀ ಕೆಂಪೇಗೌಡರು ಸಂದೇಶಗಳನ್ನು ಓದಿದರು. ಅನಂತರ ಶ್ರೀ ಕೆಂಗೇಗೌಡರು ರಾಜಪ್ರಮುಖರಿಗೂ ಎ. ಕೃಷ್ಣಮೂರ್ತಿರಾಯರು ಅಜಿತ್ ಪ್ರಸಾದ್ ಜೈನರಿಗೂ, ಎಂ. ಎಲ್. ರಾಮಸ್ವಾಮಿಯವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೂ ಮತ್ತು ಎಂ. ಎಸ್. ತಿಮ್ಮಯ್ಯನವರು ಡಾ|| ನಾಗನಗೌಡರಿಗೂ ಪುಷ್ಪಮಾಲೆಗಳನ್ನರ್ಪಿಸಿದರು.

ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ಸಮಾಜವಾದ ಸಮಾಜ ರಚನೆಯ ಕಾರ್ಯದಲ್ಲಿ ಸಹಕಾರ ತತ್ವದ ಸಾಧನೆಗೆ ಬಹಳ ಅವಕಾಶಗಳಿವೆಯೆಂದು ತಿಳಿಸಿದರು.

ಸಹಕಾರ ತತ್ವದ ಹಿರಿಮೆಯನ್ನು ಅವರು ವಿವರಿಸಿ ರಾಷ್ಟ್ರದ ಆರ್ಥಿಕ ವ್ಯವಸ್ಥೆಯಲ್ಲಿ ರೈತರು ಮತ್ತು ಸಣ್ಣ ಉದ್ದಿಮೆಗಾರರು ಭಾಗವಹಿಸಲು ಸಹಕಾರದ ಮೂಲಕವೇ ಸಾಧ್ಯವೆಂದೂ, ಆದ್ದರಿಂದ ಅದನ್ನು ಬೆಳೆಸಲು ಬೆಳೆಗಾರರ ಮತ್ತು ಸಕಲ ಕೆಲಸಗಾರರ ಮಾರಾಟ ಸಂಸ್ಥೆಗಳಿಗೂ, ಕೃಷಿಕರ ಸಾಲದ ವ್ಯವಸ್ಥೆ ಮುಂತಾದುವುಗಳಿಗೂ ಪ್ರೋತ್ಸಾಹ ನೀಡಬೇಕೆಂದೂ ಸೂಚಿಸಿದರು.

ಕೇಂದ್ರ ಆಹಾರ ಸಚಿವ ಶ್ರೀ ಅಜಿತ್‌ಪ್ರಸಾದ್ ಜೈನರು ಭಾಷಣ ಮಾಡಿ ಭಾರತದಲ್ಲಿ ಸಹಕಾರದ ಅಭಿವೃದ್ಧಿಗಾಗಿ ೩೫ ಕೋಟಿ ರೂ. ಕೊಟ್ಟು ಒಂದು ಮಂಡಲಿಯನ್ನು ಸ್ಥಾಪಿಸಲಾಗಿದೆಯೆಂದೂ, ಸರ್ಕಾರವು ಇನ್ನು ಮುಂದೆ ಸಹಕಾರ ಚಳುವಳಿಯಲ್ಲಿ ಹೆಚ್ಚು ಪಾತ್ರ ವಹಿಸುವುದೆಂದೂ, ಇದಕ್ಕಾಗಿ ಸರ್ಕಾರ ಮತ್ತು ಜನತೆಯವರ ನಡುವೆ ಸಾಮರಸ್ಯವು ಅಗತ್ಯವೆಂದೂ ಹೇಳಿದರು.

ಅಧ್ಯಕ್ಷ ಭಾಷಣವಾದಮೇಲೆ ಶ್ರೀ ಕೆ. ಎಸ್. ವೆಂಕಟಗಿರಿರಾಯರು ವಂದನಾರ್ಪಣೆ ಮಾಡಿದರು.

ಸಂಸ್ಥೆಯ ಹಿರಿಯ ಮೆಂಬರುಗಳಿಗೆ ಒಂದೊಂ...

ವಿ. ಎಲ್. ಡಿಸೋಜಾರವರಿಗೆ ಬೀಳ್ಕೊಡುಗೆ

ಮೈಸೂರು ೨೨.

ಮೈಸೂರು ಪ್ರಾಚ್ಯ ವಿದ್ಯಾ ಸಂಶೋಧನಾ ಸಂಸ್ಥೆಯವರು ನಿವೃತ್ತ ಪ್ರೈಸ್ ಡಾ. ವೈ. ಆರ್. ಶ್ರೀ ವಿ. ಎಲ್. ಡಿಸೋಜಾರವರನ್ನು ಬೀಳ್ಕೊಡುವ ಸಮಾರಂಭವೊಂದನ್ನು ಕಳೆದ ಸೋಮವಾರ ಏರ್ಪಡಿಸಿದ್ದರು.

ಶ್ರೀ ತ ಮೂರ್ತಿಗಳಿಂದ ವೇದ ಮಂಗಳ ಪಠಣೆ ಮತ್ತು ಸಂಸ್ಥೆಯ ಪ್ರಧಾನ ಪಂಡಿತರಾದ ವಿ. ನ. ರಾಮಣ್ಣ ಶ್ರೀಗಳ ಭಗವದ್ಗೀತಾ ಪಠಣದ ನಂತರ ಪೂರ್ವ ಸದಸ್ಯರು ಸಮಾರಂಭ ನಡೆಸಿದರು. ಡಾ|| ಕೃಷ್ಣಸ್ವಾಮಿ ಅವರು ಸಭೆಯ ಉದ್ದೇಶ ತಿಳಿಸಿದರು.

ಸಂಸ್ಥೆಯ ಡೈರೆಕ್ಟರ್ ಶ್ರೀ ಪಿ. ವಿ. ವೆಂಕಟಪ್ಪನವರು ಮಾತನಾಡಿ, ಶ್ರೀ ಡಿಸೋಜಾರವರು ಪ್ರಾಚ್ಯ ವಿದ್ಯಾ ಸಂಶೋಧನಾ ಸಂಸ್ಥೆಯ ಅಭಿವೃದ್ಧಿಗಾಗಿ ನಡೆಸಿರುವ ಪ್ರಯತ್ನಗಳನ್ನು ವಿವರಿಸಿದರು.

ಸಭೆಯ ಅತಿಥಿಗಳಾಗಿ ಬಂದಿದ್ದ ಕಾಲೇಜಿನ ಸಂಸ್ಕೃತ ಅಧ್ಯಾಪಕರಾದ ಶ್ರೀ ಎಸ್. ಅನಂತರಂಗಾಚಾರ್ಯರು ಅವರ ಗುಣಗಾನ ಮಾಡಿದರು.

ಶ್ರೀ ಡಿಸೋಜಾರವರು ಉತ್ತರವಿತ್ತು ತಮ್ಮ ಪೂರ್ವಿಕರು ಯಜ್ಞ ಯಾಗಾದಿಗಳನ್ನು ಮಾಡುತ್ತಿದ್ದ ಸಾರಸ್ವತ ಬ್ರಾಹ್ಮಣರೆಂದೂ ೪೦೦ ವರ್ಷಗಳಿಂದ ಕ್ರೈಸ್ತ ಮತಾನುಯಾಯಿಗಳಾದರೂ ಪೂರ್ವದ ಸಂಸ್ಕೃತಿಯನ್ನು ತಮ್ಮ ಮನೆತನದವರು ಮರೆತಿಲ್ಲವೆಂದೂ ತಿಳಿಸಿದರು. ಸಂಸ್ಕೃತ ಪಂಡಿತರು ತಮಗೆ ಮಾಡಿರುವ ಸನ್ಮಾನವೇ ತಮ್ಮ ಸಂಸ್ಕಾರ ಏನೆ ಎಂಬುದು ಹೇಳಿದರು. ಪ್ರಾಚ್ಯ ಸಂಶೋಧನಾ ಸಂಸ್ಥೆಯ ವಿದ್ವಾಂಸರುಗಳ ವೇತನವು ಕಾಲೇಜು ಅಧ್ಯಾಪಕರ ಸಂಬಳಕ್ಕೆ ಸರಿಸಮನಾಗುವಂತೆ ಕ್ರಮ ಕೈಗೊಳ್ಳುವುದು ಅಗತ್ಯವೆಂದು ತಿಳಿಸಿದರು.

ಮಂಗಳಾರತಿ ಮತ್ತು ಪುಷ್ಪಫಲ ವಿನಿಯೋಗದೊಡನೆ ಸಮಾರಂಭವು ಮುಕ್ತಾಯವಾಯಿತು.

ಬೇಲೂರರ ಕೊಲೆ ಅಪಾದನೆಯಲ್ಲಿ ೧೧೦ ಜನರ ಸಾಕ್ಷ್ಯ

ಬೆಂಗಳೂರು ೨೨.

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮಗಳ ಕೊಲೆಗಳ ಮೊಕದ್ದಮೆಯಲ್ಲಿ ೧೧೦ ಜನರನ್ನು ಪ್ರಾಸಿಕ್ಯೂಷನ್ ಪರ ಸಾಕ್ಷಿಗಳಾಗಿ ವಿಚಾರಿಸಲಾಗುವುದೆಂದು ಗೊತ್ತಾಗಿದೆ.

ನೆನ್ನೆ ಪೋಲೀಸರು ಕೃಷ್ಣನನ್ನು ಬಂದೂಸ್ತಾಗಿ ವಿಮಾನ ನಿಲ್ದಾಣದಿಂದ ಒಂದು ಪ್ರದೇಶಕ್ಕೆ ಕರೆದುಕೊಂಡು ಹೋಗಿದ್ದರು.

ಬೇಲೂರು ಶ್ರೀನಿವಾಸಯ್ಯಂಗಾರ್ಯರು ತಮ್ಮಲ್ಲಿದ್ದ ಹಳೇ ನಗಗಳನ್ನು ಮಾರಾಟ ಮಾಡುವುದಾಗಿ ಕೆಲವು ತಿಂಗಳ ಕೆಳಗೆ ಜಾಹಿರಾತು ಮಾಡಿದ್ದನ್ನು ಅಪಾದಿತರುಗಳು ನೋಡಿ ಅವರ ಮನೆಯಲ್ಲಿ ಹೆಚ್ಚಾಗಿ ಆಭರಣಗಳಿರಬೇಕೆಂದು ಊಹಿಸಿದ್ದರೆಂದು ಹೇಳಲಾಗಿದೆ.

ಮ ಹಾರ್ ಪೇ ಮತ್ತು ಹಣ ಸದಸ್ಯರಿಗೆ ಒಂದೊಂದು ಶಾಲನ್ನು ಬಹುಮಾನವಾಗಿ ಕೊಡಲಾಯಿತು.

ಕಳೆದ ವರ್ಷ ಅತ್ಯಧಿಕ ಕಾಫಿ ಬೆಳೆ

ವಿದೇಶಗಳಿಗೆ ೩,೭೦೦ ಟನ್ ಕಾಫಿ ರಫ್ತಿಗೆ ನಿರ್ಧಾರ

ಬೆಂಗಳೂರು ೨೨.

ಭಾರತದ ಕಾಫಿ ಬೋರ್ಡಿನ ಇಂದಿನ ಸಭೆಯು ನೆನ್ನೆ ಶ್ರೀ ಕೆ. ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ಸೇರಿತು. ಅವರು ಮಾತನಾಡಿ ೫೫-೫೬ನೇ ಸಾಲಿನ ಬೆಳೆಯಿಂದ ಅತಿ ಹೆಚ್ಚಿನ ಕಾಫಿ ಉತ್ಪತ್ತಿಯು ಬಂದಿದೆಯೆಂದೂ, ಇನ್ನು ಮುಂದೆ ಸಾರಿಗೆ ಮೂಲಕ ೬೩,೦೦೦ ಟನ್ ಬೆಳೆಯು ರವಾನೆಯಾಗುವುದೆಂದೂ ತಿಳಿಸಿ, ಈ ದಿನ ಸಾಲಿನಲ್ಲಿ ಉತ್ತಮ ಬೆಳೆಯಾಗುತ್ತದೆಂದು ಅವರು ನಿರೀಕ್ಷಿಸಿದರು.

ಈ ವರ್ಷ ೩,೭೦೦ ಟನ್ ಕಾಫಿಯನ್ನು ರಫ್ತು ಮಾಡಲು ಮಾರ್ಕೆಟಿಂಗ್ ಸಮಿತಿಯು ನಿರ್ಧರಿಸಿರುವುದೆಂದು ಅವರು ತಿಳಿಸಿದರು. ಅಂತರ್ರಾಷ್ಟ್ರೀಯ ಬ್ರೆಜಿಲ್ ದೇಶಗಳಲ್ಲಿ ಈ ಬೆಳೆ ತೆಗೆಯುವ ಸಂಘ ಸಂಸ್ಥೆಗಳನ್ನು ಪರಿಶೀಲಿಸಲು ಅಲ್ಲಿಗೆ ಸಂಶೋಧನಾ ಧಿಕಾರಿ ಡಾ|| ಬಿ. ಡಿ. ನಾರಾಯಣ್ ಆರ್. ಎಲ್. ನರಸಿಂಹಮೂರ್ತಿ ಮತ್ತು ಇಬ್ಬರು ಕಾಫಿ ಬೋರ್ಡಿನ ಸದಸ್ಯರುಗಳನ್ನು ಕಳುಹಿಸಲಾಗುವುದೆಂದೂ ಅವರು ನುಡಿದರು.

ನೆಹರೂ ಲಂಡನ್ ತಲಪಿದರು

ಪ್ರಧಾನಿ ನೆಹರೂರವರು ನೆನ್ನೆ ಲಂಡನ್ ನಗರವನ್ನು ತಲುಪಿದರು. ಕಾಮನ್‌ವೆಲ್ತ್ ಸಮ್ಮೇಳನದಲ್ಲಿ ಕಾಶ್ಮೀರ ಅಥವಾ ಗೋವಾ ವಿಷಯವನ್ನು ತಾವು ಎತ್ತುವುದಿಲ್ಲವೆಂದು ಅವರು ಹೇಳಿದರು. ಸೈಪ್ರಸ್ ದ್ವೀಪದ ವಿಷಯವನ್ನೂ ಲಂಡನ್ನಿನಲ್ಲಿ ಪ್ರಸ್ತಾಪಿಸುವುದಿಲ್ಲವೆಂದೂ ಅವರು ಹೇಳಿದರು.

LATEST NEWS

ಬೇಲೂರರ ಕೊಲೆ ಪ್ರಕರಣ

ಅಪಾದಿತರುಗಳು ಜುಡಿಷಿಯಲ್ ಕಸ್ಟಡಿಗೆ

(ಸ್ವಂ. ಸು. ಪೋ.) ಬೆಂಗಳೂರು ೨೨.

ಈ ಮಧ್ಯಾಹ್ನ ಪೋಲೀಸರು ಬೇಲೂರರ ಮನೆ ಕೊಲೆಗಳ ಪ್ರಕರಣದಲ್ಲಿ ದಸ್ತಗಿರಿಯಾಗಿರುವ ಮೂವರನ್ನು ನ್ಯಾಯಾಧೀಶರ ಮುಂದೆ ಹಾಜರುಪಡಿಸಿ ಜುಡಿಷಿಯಲ್ ಕಸ್ಟಡಿಗೆ ಒಪ್ಪಿಸಿದರು.

ರಂಗಲಕ್ಷ್ಮಿಯನ್ನು ವಿಚಾರಣೆ ಮಾಡಿದನಂತರ ಅಪ್ರೂವರ್ ಆಗಿ ಹಾಜರಾಗುವುದೆಂದು ಹೇಳಲಾಗಿದೆ. ಆಕೆಯ ತನಿಖೆ ನಡೆಸುವ ಬಗ್ಗೆ ಪೋಲೀಸರು ವೈದ್ಯರ ಅಭಿಪ್ರಾಯಕ್ಕಾಗಿ ಕಾಯುತ್ತಿದ್ದಾರೆ.

ಮೈಸೂರು ಬೆಂಗಳೂರುಗಳಲ್ಲಿ ಫೇರ್ ಪ್ರೈಸ್ ಡಿಪೋಗಳು

ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಈ ದಿನ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಸಂಸ್ಥಾನದಲ್ಲಿ ಆಹಾರ ಪರಿಸ್ಥಿತಿಯೇನೂ ಉಲ್ಬಣವಾಗಿಲ್ಲವೆಂದೂ, ಅಕ್ಕಿಯ ಬಗ್ಗೆ ತೊಂದರೆಯಿದೆಯೆಂದೂ ಹೇಳಿ, ಮೈಸೂರು, ಬೆಂಗಳೂರು, ಕೆ. ಜಿ. ಎಫ್. ಮತ್ತು ದಾವಣಗೆರೆಗಳಲ್ಲಿ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಲಿರುವುದಾಗಿಯೂ ಸೂಚಿಸಿದರು.

ಚೀಣಕ್ಕೆ ಭಾರತದ ಸಹಕಾರ ನಿಯೋಗ

ಕೇಂದ್ರ ಮಂತ್ರಿ ಅಜಿತ ಪ್ರಸಾದ ಜೈನ್‌ರವರ ಸೂಚನೆ

ಮೈಸೂರು ೨೨.

ಈ ದಿನ ಇಲ್ಲಿನ ಸಿಟಿ ಕೋ-ಆಪರೇಟಿವ್ ಸೊಸೈಟಿಯ ಸುವರ್ಣ ಮಹೋತ್ಸವದಲ್ಲಿ ಕೇಂದ್ರ ಆಹಾರ ಮಂತ್ರಿ ಅಜಿತ ಪ್ರಸಾದ್ ಜೈನರು ಮಾತನಾಡಿ ಸಧ್ಯದಲ್ಲೇ ಕೇಂದ್ರ ಆಹಾರ ಉಪಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರ ನೇತೃತ್ವದಲ್ಲಿ ಸಹಕಾರ ವ್ಯವಸಾಯ ನಿಯೋಗವನ್ನು ಚೀಣಕ್ಕೆ ಕಳುಹಲು ನಿರ್ಧರಿಸಲಾಗಿದೆಯೆಂದು ತಿಳಿಸಿದರು.

ದೇಶದ್ಯಂತ ೧೦ ಸಾವಿರ ದೊಡ್ಡ ಸಹಕಾರ ಸಂಸ್ಥೆಗಳನ್ನು ತೆರೆಯಲಾಗುವುದೆಂದೂ, ಇದರಿಂದ ಭಾರತದ ಮೂರನೇ ಒಂದು ಭಾಗದ ಹಳ್ಳಿಗರು ಫಲ ಹೊಂದುವರೆಂದೂ ತಿಳಿಸಿದರು.

ಹಲವು ಮಾರ್ಗಗಳಲ್ಲಿ ಸರ್ಕಾರಿ ಬಸ್ ಸಂಚಾರ ರದ್ದು

ಒಂದನೇ ತಿಂಗಳು ೧ ರಿಂದ ಮೈಸೂರು ಸರ್ಕಾರದವರು ಮೈಸೂರು–ಚನ್ನಪಟ್ಟಣ, ಮೈಸೂರು–ನೇರಳೆ, ಮೈಸೂರು–ಕಾಂತವಪುರ, ಮೈಸೂರು ನಾಗಮಂಗಲ ಮತ್ತು ಬೆಂಗಳೂರಿನ ಹಲವು ಮಾರ್ಗಗಳಲ್ಲಿ ತಮ್ಮ ಬಸ್ಸು ಸಂಚಾರವನ್ನು ನಿಲ್ಲಿಸುವರು.

ಸೈಪ್ರಸ್ ವಿವಾದಕ್ಕೆ ನೆಹರೂ ನೆರವಿಗಾಗಿ ಕೋರಿಕೆ

ಕಾಮನ್‌ವೆಲ್ತ್ ಪ್ರಧಾನಿಗಳ ಸಭೆಯಲ್ಲಿ ಭಾಗವಹಿಸಲು ತೆರಳಿರುವ ಭಾರತದ ಪ್ರಧಾನಿ ನೆಹರೂರವರು ನೆನ್ನೆ ಗ್ರೀಸಿನ ರಾಜಧಾನಿ ಅಥೆನ್ಸಿನಲ್ಲಿ ಇಳಿದಾಗ ಅವರನ್ನು ಅಲ್ಲಿನ ಪ್ರಧಾನಿ ಕರಮಾನ್ಲಿಸ್ ಮತ್ತು ವಿದೇಶಾಂಗ ಮಂತ್ರಿ ಅವೆರಾಫ್‌ರವರು ಸ್ವಾಗತಿಸಿದರು. ವಿಶ್ವ ಸಂಸ್ಥೆಯಲ್ಲಿ ಸೈಪ್ರಸ್ ವಿವಾದದ ವಿಷಯವು ಪ್ರಸ್ತಾಪಿಸಲ್ಪಟ್ಟಾಗ ಗ್ರೀಸಿಗೆ ಭಾರತವು ಬೆಂಬಲ ನೀಡಬೇಕೆಂದು ಗ್ರೀಸು ಕೇಳಿರುವುದಾಗಿಯೂ, ನೆಹರೂರವರಿಗೆ ಗ್ರೀಸಿನ ಪ್ರಧಾನಿಗಳು ಸೈಪ್ರಸ್ ವಿಚಾರವಾಗಿ ತಮ್ಮ ಅಭಿಪ್ರಾಯವನ್ನು ಸೂಚಿಸಿದರೆಂದೂ ಹೇಳಲಾಗಿದೆ.

ವಿಜಾರತ್ತಿನಲ್ಲಿ ಎಸ್. ಎಸ್. ಲಾಲನ ಬಂಧನ

ಬೆಂಗಳೂರು ೨೨.

ಇಲ್ಲಿನ ಹಲವು ವ್ಯಾಪಾರಸ್ಥರಿಗೆ ಮೋಸಮಾಡಿದ ಸಂಬಂಧದಲ್ಲಿ ದಸ್ತಗಿರಿಯಾಗಿ ತಲೆತಪ್ಪಿಸಿಕೊಂಡಿದ್ದ ಅನೇಕ ಹೆಸರುಗಳನ್ನು ಇಟ್ಟುಕೊಂಡಿರುವ ಎಸ್. ಎಸ್. ಲಾಲನನ್ನು ವಿಜಾರತ್ತಿನ ಪೋಲೀಸರು ಬಂಧಿಸಿರುವುದಾಗಿ ವರದಿಯಾಗಿದೆ. ಅವನನ್ನು ಕಳೆದ ಜೂನಿನಲ್ಲಿ ಇದೇ ಊರಿನಲ್ಲಿ ದಸ್ತಗಿರಿ ಮಾಡಲಾಗಿತ್ತು. ದೆಹಲಿ ಪೋಲೀಸರು ಅವನನ್ನು ಬೇರೊಂದು ಮೋಸದ ಪ್ರಕರಣದಲ್ಲಿ ಹಾಜರುಪಡಿಸಲು ಕರೆದುಕೊಂಡು ಹೋಗಿದ್ದರು. ಅವನು ಅಲ್ಲಿಂದ ಪರಾರಿಯಾಗಿದ್ದನು. ಅವನು ಬಿಡುಗಡೆಯಾದ ನಂತರ ಹಲವು ಮೋಸದ ಪ್ರಕರಣಗಳನ್ನು ನಡೆಸಿರುವನೆಂದು ಹೇಳಲಾಗಿದೆ.

ಮಾನವ ಸ್ವಾತಂತ್ರ್ಯಕ್ಕಾಗಿ ವಿಶ್ವದ ನೂತನ ಘೋಷಣೆಗೆ ಕರೆ

ಅಮೇರಿಕದ ಮಾಜಿ ಅಧ್ಯಕ್ಷ ಹ್ಯಾರಿ ಟ್ರೂಮನ್ನರು ಬ್ರಿಟನ್ನಿನ ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಸಮಾರಂಭವೊಂದರಲ್ಲಿ ಮೊನ್ನೆ ಭಾಷಣ ಮಾಡಿ, ಉತ್ತಮ ಜೀವನದ ಮಟ್ಟವನ್ನು ಸಾಧಿಸುವಂತಹ [illegible] ಬಗ್ಗೆ ವಿಶ್ವವು ಘೋಷಣೆ ಮಾಡಬೇಕೆಂಬುದು ಅಗತ್ಯವೆಂದು ತಿಳಿಸಿರುತ್ತಾರೆ. ಇದಕ್ಕಾಗಿ ಹೊಸ ಮ್ಯಾಗ್ನಕಾರ್ಟ (ಪ್ರಣಾಳಿಕೆ)ಯನ್ನು ಹೊರಡಿಸಬೇಕಾಗಿದೆಯೆಂದು ನುಡಿದರು. ಜಗತ್ತಿನ ಎಲ್ಲಾ ಕಡೆಗಳಲ್ಲೂ ಜಾಗೃತಿಯುಂಟಾಗಿ, ಹಿಂದಿನ ಕಾಲದಲ್ಲಿ ಪೂರ್ವೀಕರುಗಳು ಇದ್ದಂತೆ ಜನರು ಇರಲೊಪ್ಪದೆ ಮುಂದುವರಿದ ರಾಷ್ಟ್ರಗಳವರು ಜೀವಿಸುವ ರೀತಿಯಲ್ಲಿ ಈಗಲೇ, ಈ ವರ್ಷವೇ, ಈ ದಶಕದಲ್ಲೇ ಬಾಳಲು ಬಯಸುತ್ತಿರುವರೆಂದು ಅವರು ಹೇಳಿದರು. ಇನ್ನೊಂದು ಯುದ್ಧವು ಆಗಬಾರದೆಂದೂ, ಮುಂದಿನ ಯುದ್ಧವು ಅಣು ಯುದ್ಧವಾಗಿ ಪರಿಣಮಿಸುವುದೆಂದೂ, ಅದರಲ್ಲಿ ಯಾರೂ ಗೆಲ್ಲಲಾರರೆಂದೂ ಟ್ರೂಮನ್ನರು ಹೇಳಿರುವರು.

ಹಿಂದೀ ಪರೀಕ್ಷೆ

ಅಖಿಲ ಭಾರತ ಹಿಂದಿ ಸಾಹಿತ್ಯ ಪ್ರಚಾರ ಮಂಡಲಿಯ ಆಶ್ರಯದಲ್ಲಿ ಎಂದು ತಿಂಗಳೊಮ್ಮೆ ಕಡೆಯ ಭಾನುವಾರ ಹಿಂದಿ ಪ್ರಾಥಮಿಕ ಪ್ರಥಮ ಪರೀಕ್ಷೆಯನ್ನು ಸ್ವೀಕೃತ ಕೇಂದ್ರಗಳಲ್ಲಿ ನಡೆಸಲಾಗುವುದೆಂದೂ, ಯಾರು ಬೇಕಾದರೂ ಅದರಲ್ಲಿ ಭಾಗವಹಿಸಬಹುದೆಂದೂ, ಮಂಡಲಿಯ ಪ್ರಧಾನ ಸಂಚಾಲಕರಾದ ಹಾಸನದ ಶ್ರೀ ಕೆ ಎಸ್ ಶ್ರೀನಿವಾಸಮೂರ್ತಿಯವರು ತಿಳಿಸಿರುತ್ತಾರೆ. ಹೈಸ್ಕೂಲು, ಕಾಲೇಜು ಮತ್ತು ಮಿಡಲ್ ಸ್ಕೂಲು ವಿದ್ಯಾರ್ಥಿಗಳು ಸೇರಬಹುದೆಂದೂ ಅವರಿಗೆ ಸ್ವಲ್ಪವಾದರೂ ಹಿಂದಿಯ ಪರಿಚಯವಿರಬೇಕೆಂದೂ, ಸಧ್ಯದಲ್ಲಿ ಇಂಗ್ಲಿಷ್ ಮತ್ತು ಕನ್ನಡಗಳಲ್ಲಿ ಪರೀಕ್ಷೆಯನ್ನು ನಡೆಸಲಾಗುವುದೆಂದೂ ತಿಳಿಸಲಾಗಿದೆ. ಸೇರಬಿಚ್ಛಿಸುವವರು ಹೆಚ್ಚಿನ ವಿವರಗಳಿಗಾಗಿ ವ್ಯವಹರಿಸಿ, ಬರುವ ತಿಂಗಳು [illegible] ರೊಳಗೆ ತಮ್ಮ ಅರ್ಜಿಗಳನ್ನು [illegible] ಕಳುಹಿಸಬೇಕೆಂದು, ಹಾಸನದ ಈ ವಿಳಾಸಕ್ಕೆ ಕಳುಹಿಸಿಕೊಳ್ಳಬಹುದೆಂದು ಅವರು ಸೂಚಿಸಿರುತ್ತಾರೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

Paly
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists
71/1 A. S Street,
BANGALORE-2

ಬೊಂಬಾಯಿ ಪೌರಸಭೆಗೆ ಬಿರ್ಲಾರವರ ಭಾರಿ ಭವನದ ದಾನ

ಬೊಂಬಾಯಿ ನಗರದ ಚೌಪಾತಿ ಪ್ರದೇಶದಲ್ಲಿ [illegible] ಲಕ್ಷ ರೂ ವೆಚ್ಚದಿಂದ ಕಟ್ಟಲಾಗಿರುವ ತಮ್ಮ ವಿಹಾರ ಭವನವನ್ನು ಭಾರತದ ಪ್ರಸಿದ್ಧ ಕೈಗಾರಿಕೋದ್ಯಮಿ ಜಿ ಡಿ. ಬಿರ್ಲಾರವರು ಬೊಂಬಾಯಿ ಪೌರಸಭೆಗೆ ಬಹುಮಾನವಾಗಿ ಕೊಡಲು ಮುಂದೆ ಬಂದಿರುತ್ತಾರೆ. ಅದರಲ್ಲಿ [illegible] ಜನರ ಗಡಹಿಸಿರುವ ಹಾಲ್, ಭಾರಿ ಉಪ್ಪರಿಗೆ ಉದ್ಯಾನವನ ಮತ್ತು ನೆಲದೊಳಗಿರುವ ಮೋಟಾರು ಷೆಡ್ಡುಗಳು ಇವೆ. ಅಲ್ಲದೆ ತಪ್ಪಿಸಿಕೊಂಡು ಹೋದ ಮಕ್ಕಳ ಕೇಂದ್ರವನ್ನು ಅವರು ನಿರ್ಮಿಸುವರು.

ಚೀಣದಲ್ಲಿ ಜೆಟ್ ಇಂಜನ್ನಿನ ತಯಾರಿಕೆ

ಚೀಣವು ಪ್ರಾಯೋಗಿಕವಾಗಿ ಇದೇ ಮೊದಲು ಜೆಟ್ ವಿಮಾನ ಇಂಜನ್ನನ್ನು ತಯಾರಿಸಿರುವುದೆಂದು ವರದಿಯಾಗಿದೆ.

ಸಾಯಿಬಾಬ ಮಂದಿರಕ್ಕೆ ಅಜಿತ್ ಪ್ರಸಾದ್ ಜೈನರ ಭೇಟಿ

ಕೇಂದ್ರ ಆಹಾರ ಮಂತ್ರಿ ಶ್ರೀ ಅಜಿತ್ ಪ್ರಸಾದ್ ಜೈನ್‌ರವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯ ಮತ್ತು ಕೇಂದ್ರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರೊಡನೆ ಈ ದಿನ ಬೆಳಗ್ಗೆ ನಗರದ ಶ್ರೀ ಸಾಯಿಬಾಬ ಮಂದಿರಕ್ಕೆ ಭೇಟಿಯಿತ್ತು, ನೂತನ ಕಟ್ಟಡದ ಬಗ್ಗೆ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು. ಮಂದಿರದ ಕಾರ್ಯಕಾರಿ ಸಮಿತಿಯ ಸದಸ್ಯರುಗಳು ಅವರನ್ನು ಸ್ವಾಗತಿಸಿದರು.

ಅಜಿತ್ ಪ್ರಸಾದ್ ಜೈನ್‌ರವರಿಗೆ ಸತ್ಕಾರ ಕೂಟ

ನೆನ್ನೆ ರಾತ್ರಿ ನಗರಕ್ಕೆ ಆಗಮಿಸಿದ ಕೇಂದ್ರ ಆಹಾರ ಸಚಿವ ಶ್ರೀ ಅಜಿತ್ ಪ್ರಸಾದ್ ಜೈನ್‌ರವರ ಗೌರವಾರ್ಥವಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಒಂದು ಭೋಜನ ಕೂಟವನ್ನು ಏರ್ಪಡಿಸಿದ್ದರು. ಕೇಂದ್ರ ಉಪ ಆಹಾರ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಮತ್ತು ಶ್ರೀಗಳಾದ ಪೆಚ್ ಸಿ ದಾಸಪ್ಪ, ಎಚ್ ರಾಜಯ್ಯ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿ ರಾವ್, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್ ಲಿಂಗಣ್ಣ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ವೆಂಕಟರಾಮ್, ಪೌರಸಭಾ ಕಮಿಷನರ್ ಶ್ರೀ ಎ ವಿಶ್ವನಾಥ್ ಮೈಸೂರ್ ಕಾರ್ಯದರ್ಶಿ ಶ್ರೀ ಜೆ. ಬಿ ಮಲ್ಲಾರಾಧ್ಯ ಮತ್ತು ಇತರ ಗಣ್ಯ ಮಹನೀಯರುಗಳು ಭಾಗವಹಿಸಿದ್ದರು.

ಶ್ರೀ ಜಗದಂಬಾ ಶಿಶುವಿಹಾರ
ದಿವಾನರ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ಸಾಧನಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ತ್ವರೆಯಿಂದ ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ವಿ. ಕೃಷ್ಣಮೂರ್ತಿ,
ಡೈರೆಕ್ಟರ್

Edited Printed and Published by A. R Nagarajan at Sadhvi Press D Subbiah Road Mysore

ಅಣು ವಿಜ್ಞಾನದಲ್ಲಿ ಎಲ್ಲರಿಗಿಂತ ರಷ್ಯದವರದೇ ಮೇಲುಗೈ

ಬರುವ ದಶಕದಲ್ಲಿ ಶುದ್ಧ ಅಣು ವಿಜ್ಞಾನ ಸಂಶೋಧನೆಯಲ್ಲಿ ರಷ್ಯವು ಇತರ ರಾಷ್ಟ್ರಗಳೆಲ್ಲವನ್ನು ಮೀರಿಸುವುದೆಂದು ಅಲ್ಲಿ ಪರಿಶೀಲನೆ ನಡೆಸಿ ಹಿಂತಿರುಗಿರುವ ಅಮೇರಿಕದ ವಿಜ್ಞಾನಿಗಳು ಅಭಿಪ್ರಾಯಪಟ್ಟಿರುತ್ತಾರೆ. ತಾವು ನೋಡಬೇಕೆಂದು ಅಪೇಕ್ಷಿಸಿದ ಪ್ರತಿಯೊಂದು ಸ್ಥಳವನ್ನೂ ಸಂದರ್ಶಿಸಿದುದಾಗಿಯೂ, ಫೋಟೋಗಳನ್ನು ತೆಗೆಯಲೂ ಸಾಧ್ಯವಾಯಿತೆಂದೂ ಅವರು ಹೇಳಿರುತ್ತಾರೆ.

ಅಮೇರಿಕದ ಅತ್ಯಂತ ಹೆಚ್ಚಿನ ಸಂಭಾವನೆ ಪಡೆಯುವವರು

ಕಳೆದ ವರ್ಷ ಅಮೇರಿಕದಲ್ಲಿ ಅತ್ಯಂತ ಹೆಚ್ಚಿನ ಸಂಬಳ ಪಡೆದವರು ಮೂವರೆಂದೂ, ತೆರಿಗೆಯನ್ನು ಕೊಡುವ ಪೂರ್ವಭಾವಿಯಾಗಿ ಅವರು ಒಬ್ಬೊಬ್ಬರೂ 5 ಲಕ್ಷ ಡಾಲರಿಗಿಂತ ಹೆಚ್ಚು ಹಣವನ್ನು ಸಂಪಾದಿಸಿದರೆಂದೂ ವರದಿಯಾಗಿದೆ. ಜನರಲ್ ಮೋಟಾರಿನ ಅಧ್ಯಕ್ಷ ಹಾರ್ಲೋ ಕರ್ಟಿಸ್‌ರವರಿಗೆ 7,76,100 ಡಾಲರ್, ಜನರಲ್ ಮೋಟಾರಿನ ಚೇರ್ಮನ್ ಆಲ್ಫ್ರೆಡ್ ಸ್ಲೋನ್‌ರವರಿಗೆ 6,86,[illegible] ಡಾಲರ್ ಮತ್ತು ಬೆತ್ಲಹೆಂ ಉಕ್ಕಿನ ಕಾರ್ಖಾನೆಯ ಅಧ್ಯಕ್ಷ ಯೂಜೆನಿ ಆರ್ ಗ್ರೇಸ್‌ರವರಿಗೆ [illegible] ಡಾಲರ್ ಹಣವೂ ಬಂದಿದೆ. ತೆರಿಗೆ ಕೊಟ್ಟನಂತರ ಕರ್ಟಿಸ್‌ರವರಿಗೆ [illegible] ಡಾಲರ್ ಉಳಿಯಿತೆಂದೂ ಹೇಳಲಾಗಿದೆ.

ಏಳು ಕೊಡಗಳಲ್ಲಿ ೮ ಲಕ್ಷ ಬೆಳ್ಳಿ ನಾಣ್ಯ

[illegible] ಮಹಾರಾಜರಿಗೆ ಸೇರಿದ ಕಳೆಯ [illegible]ವನ್ನು ಕೆಡವಿ ಕಾಲೇಜೊಂದನ್ನು ನಿರ್ಮಿಸಲು ಅಡಿಪಾಯ ತೆಗೆಯುತ್ತಿದ್ದಾಗ ಅಲ್ಲಿ [illegible] ಹಿತ್ತಾಳೆ ಮತ್ತು ತಾಮ್ರದ ಕೊಡಗಳಲ್ಲಿ [illegible] ಲಕ್ಷ ರೂ ಬೆಲೆಯ [illegible] ಬೆಳ್ಳಿ ನಾಣ್ಯಗಳು ಸಿಕ್ಕಿವೆಯೆಂದೂ, ಅವು ಷಹ ಆಲಂ ಮತ್ತು ವಿಕ್ಟೋರಿಯಾ ರಾಣಿ ಕಾಲದ ನಾಣ್ಯಗಳೆಂದೂ ವರದಿಯಾಗಿದೆ.

ಮೈಸೂರು ಸರ್ಕಾರ ಉದ್ಯಾನವನಗಳ ಸೂಪರಿಂಟೆಂಡೆಂಟರ ಕಛೇರಿ,
ಲಾಲ್‌ಬಾಗ್ ಬೆಂಗಳೂರು 2

ನೋಟಿಫಿಕೇಷನ್

[illegible] 6—19 6

ಶ್ರೀರಂಗಪಟ್ಟಣದ ದರಿಯಾದೌಲತ್ ಬಾಗಿನಲ್ಲಿ ಸುಮಾರು 4 ಎಕರೆ 27 ಗುಂಟೆ ಮತ್ತು 50 ಗಜ ವಿಸ್ತೀರ್ಣವಿರುವ ಬಂಗಲೆ [illegible] ಜಮೀನನ್ನು ಉಳುಮೆ ಮಾಡುವುದಕ್ಕಾಗಿ 1956ನೇ ಜುಲೈ 1ರಿಂದ 1959 ಜೂನ್ 30ರ ವರೆಗೆ 3 ವರ್ಷಗಳ ಅವಧಿಗೆ ಗುತ್ತಿಗೆ ಕೊಡುವ ಬಗ್ಗೆ ಮೊಹರಾದ ಟೆಂಡರುಗಳನ್ನು ಬೆಂಗಳೂರು ಲಾಲ್‌ಬಾಗಿನಲ್ಲಿರುವ ಮೈಸೂರು ಸರ್ಕಾರ ಉದ್ಯಾನವನಗಳ ಸೂಪರಿಂಟೆಂಡೆಂಟರು 1956 ಜೂನ್ 25ರಂದು ಮಧ್ಯಾಹ್ನ 4 ಗಂಟೆವರೆಗೆ ಸ್ವೀಕರಿಸುವರೆಂದು ಈ ಮೂಲಕ ಸಾರ್ವಜನಿಕರಿಗೆ ತಿಳುವಳಿಕೆ ಕೊಡಲಾಗಿದೆ.

(ರುಜು) ಎಂ. ಎಚ್. ಮರಿಗೌಡ,
ಸೂಪರಿಂಟೆಂಡೆಂಟ್

ರಷ್ಯಕ್ಕೆ ಭಾರತದ ಚಹಾ

ರಷ್ಯವು ಭಾರತಕ್ಕೆ ಕೊಡಲಿರುವ [illegible] ಬದಲು ಸ್ವಲ್ಪ ಭಾಗವಾಗಿ ಚಹಾವನ್ನು [illegible] ಕೊಳ್ಳಲಿದೆ. ಈಗ 30 ಲಕ್ಷ ಪೌಂಡು ಚಹಾವನ್ನು ಬಹಿರಂಗ ಮಾರುಕಟ್ಟೆಯಲ್ಲಿ ಕೊಳ್ಳಲಿದ್ದು [illegible] ಅಥವಾ 300 ಲಕ್ಷ ಪೌಂಡು [illegible] ಸ್ವಲ್ಪ ಕಾಲಾನಂತರ ಅದು ಕೊಳ್ಳುವುದು [illegible] ವರ್ಷಗಳ ಹಿಂದೆ ರಷ್ಯವು 30 ಲಕ್ಷ ಪೌಂಡಿನಷ್ಟು ಚಹಾವನ್ನು ಭಾರತದಿಂದ ಕೊಂಡಿದ್ದಿತು.

ಪಿಯಾನೊ ವಾದನದಲ್ಲಿ ಹೊಸ ರಿಕಾರ್ಡು

ಬ್ರಿಟನ್ನಿನ [illegible] ಎಂಬುವನು ಸತತವಾಗಿ [illegible] ಗಂಟೆ ಕಾಲ ಪಿಯಾನೊ ವಾದ್ಯವನ್ನು ಬಾರಿಸಿ, [illegible] ತಿಂಗಳ [illegible] ಸ್ಥಾಪಿಸಿದ್ದ ರಿಕಾರ್ಡನ್ನು ಮುರಿದಿದ್ದಾನೆ.

ಪುರಾಣ ಪಠಣ

ಹಳೇ ಸಂತೆಪೇಟೆ ಅವಲಕ್ಕಿ ವೆಂಕಟಪ್ಪನವರ ಮನೆ ಬಳಿ ಶ್ರೀ ಎ ನಂಜಪ್ಪನವರ ಕಟ್ಟಡದಲ್ಲಿ ಇದೇ 23 ನೇ ತಾರೀಖಿನಿಂದ [illegible] ದಿನ ಸಂಜೆ 6-30 ರಿಂದ 8 ಘಂಟೆವರೆಗೆ ಆರ್ ಎಸ್ ಶೇಷಗಿರಿದಾಸರಿಂದ ಪುರಾಣ ಪಠಣವು ನಡೆಯುವುದರಿಂದ ಸರ್ವರೂ ಶ್ರವಣ ಲಾಭ ಪಡೆಯಬೇಕಾಗಿ ಕೋರಲಾಗಿದೆ.

[illegible] ಗುಜರಾತು ವಿಶ್ವವಿದ್ಯಾಲಯಕ್ಕೆ ಸೇರಿದ ಎಲ್ಲಾ ಕಾಲೇಜುಗಳಲ್ಲಿ ಗುಜರಾತಿ ಭಾಷೆಯನ್ನು ಶಿಕ್ಷಣ ಮಾಧ್ಯಮವಾಗಿ ಜಾರಿಗೆ ತರಲಾ[illegible]

CENTRAL INSTITUTE OF COMMERCE
Vanivilas Market Mysore

Admissions to diploma courses in Commerce, Shorthand and Typewriting are being received on all working days.

SREE GANESHA TALKIES

From 23-6-56 For 3 Days
Paramount's Vistavision
Technicolor Comedy Feature
YOU ARE NEVER TOO YOUNG
With — Martin & Lewis

From 26-6-56 For 2 Days
REAR WINDOW
(Technicolor)
Masterpiece of Suspense Drama
Starring James Stewart, and Grace Kelly

From 28-6-56 For 2 days
LUCY GALLANT
(Technicolor Vistavision)
With Jane Wyman and Charlton Heston

ಮೈಸೂರು ಸಿಟಿ ಮರದ ಗಾಣದ ಎಣ್ಣೆ ಕೈಗಾರಿಕಾಗಾರರ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್

ವಾಣಿವಿಲಾಸ ರೋಡ್, (ಮಾಧವರಾವ್ ಸರ್ಕಲ್ ಬಳಿ) ಮೈಸೂರು.

ಗಾಣದಿಂದ ತಯಾರಾದ ಅಪ್ಪಟ ಎಣ್ಣೆಗಳು ಶರೀರಕ್ಕೆ ಆರೋಗ್ಯಕರವೂ, ಪುಷ್ಟಿಕರವೂ ಆಗಿದ್ದೆಂದು ಲೋಕ ಪ್ರಸಿದ್ಧವಾಗಿದೆ. ಆದರೆ ಸಾರ್ವಜನಿಕರಿಗೆ ಈವರೆಗೆ ಅಪ್ಪಟವಾದ ಗಾಣದ ಎಣ್ಣೆ ದೊರೆಯುವುದು ಕಷ್ಟವಾಗಿತ್ತು. ದೊರೆತರೂ ಮಿತಿಮೀರಿದ ಬೆಲೆಯನ್ನು ತೆರಬೇಕಾಗಿತ್ತು. ಈಗ ನಮ್ಮ ಸೊಸೈಟಿಯಿಂದ ಈ ತೊಂದರೆಯು ನಿವಾರಿಸಲ್ಪಟ್ಟಿರುತ್ತದೆ. ಅಲ್ಲದೆ ಅಖಿಲ ಭಾರತ ಖಾದಿ ಮತ್ತು ಗೃಹ ಕೈಗಾರಿಕಾ ಬೋರ್ಡಿನವರು ಈ ಸೊಸೈಟಿಯಲ್ಲಿ ಮಾರಾಟವಾಗುವ ಎಣ್ಣೆ ಮಣ 1 ಕ್ಕೆ 0-12-0 ಆಣೆಗಳನ್ನು ಕೊಳ್ಳುವವರಿಗೆ ಉಚಿತ ಸಹಾಯವನ್ನು ದೊರಕಿಸಿರುವರು. ಆದ್ದರಿಂದ ನಿಮಗೆ ಅಪ್ಪಟವಾದ ಎಣ್ಣೆ ಇತರ ಕಡೆ ಕೊಳ್ಳುವ, ಮಿಲ್ಲಿನಿಂದ ತಯಾರಾದ ಎಣ್ಣೆಗಿಂತ ಕಡಿಮೆ ಧಾರಣೆಯಲ್ಲಿ ದೊರಕುವುದು. ಸಾರ್ವಜನಿಕರು ಆರೋಗ್ಯಕರವೂ, ಪುಷ್ಟಿಕರವೂ ಲಾಭದಾಯಕವೂ ಆಗಿರುವ ಈ ಸೊಸೈಟಿಯ ಎಣ್ಣೆಯನ್ನೇ ಉಪಯೋಗಿಸಬೇಕಾಗಿ ಕೋರುತ್ತೇವೆ. ನಮ್ಮಲ್ಲಿ ಸದ್ಯಕ್ಕೆ ಹುಚ್ಚೆಳ್ಳೆಣ್ಣೆ ಮತ್ತು ಅಚ್ಚೆಳ್ಳೆಣ್ಣೆ ದೊರೆಯುತ್ತದೆ.

	ದರ	ಉಚಿತ ಸಹಾಯ	ತೀರ್ವ ಕೊಡಬೇಕಾದುದ
ಹುಚ್ಚೆಳ್ಳೆಣ್ಣೆ ವೀಸೆ 1ಕ್ಕೆ	2-3-6	0-1-6	2-2-0
ಅಚ್ಚೆಳ್ಳೆಣ್ಣೆ ,,	3-15-0	0-1-6	3-13-6

ಕೆಲವೇ ದಿನಗಳಲ್ಲಿ ಕಡಲೆಕಾಯಿ ಎಣ್ಣೆಯೂ ದೊರೆಯುತ್ತದೆ.

Est'd 1917
CHAMPION METROPOLITAN COLLEGE OF COMMERCE
(Co-operators Home, JLB Road, Mysore)

APPLICATIONS FOR ADMISSION to classes leading to DIPLOMAS in Commerce Shorthand and Typewriting are now being received in the mornings & evenings.

● Training for COSTS & WORKS ACCOUNTANTS also given

Situated in fine building-Best and experienced staff including Holders of Master's Degree in Commerce and Arts-latest equipment including new Typewriters — a good Library. Excellent results.

(Sd) M S PUTTANNA, Vice-Principal
(Sd) P SUBBARAYA SASTRY, Principal

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಅಂದಿನ ಪತ್ರಿಕೆ ೩ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
. ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : SUNDAY 24—6—1956 ಮೈಸೂರು : ಭಾನುವಾರ ೨೪—೬—೧೯೫೬ [ಸಂಚಿಕೆ : ೨೧೬

ಸಂಸ್ಥಾನದ ಅಭಾವ ಪ್ರದೇಶಗಳಿಗೆ ೩೦,೦೦೦ ಪಲ್ಲ ಅಕ್ಕಿ

ಜಿಲ್ಲೆಯ ಅಭಾವ ಪ್ರದೇಶಗಳಿಗಾಗಿ ೧೦ ಲಕ್ಷ ರೂ. ನೆರವು

ರೂ ಗೆ ೨॥ ಸೇರು ಅಕ್ಕಿ ಒದಗಿಸಲು ಕ್ರಮ

ಮುಖ್ಯ ಮಂತ್ರಿ ಮತ್ತು ಕೇಂದ್ರ ಆಹಾರ ಉಪ ಮಂತ್ರಿಗಳ ಹೇಳಿಕೆ

ಮೈಸೂರು ೨೪

ಜಿಲ್ಲೆಯಲ್ಲಿನ ಅಭಾವ ಪ್ರದೇಶಗಳ ಕಷ್ಟ ನಿವಾರಣಾ ಕ್ರಮಗಳ ಬಗ್ಗೆ ಸೂಕ್ತ ಸಲಹೆಗಳನ್ನು ಪಡೆಯುವ ಸಲುವಾಗಿ ನೆನ್ನೆ ಮಧ್ಯಾಹ್ನ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಜಿಲ್ಲಾ ಪ್ರಮುಖರ ಸಭೆಯೊಂದನ್ನು ಕರೆದಿದ್ದರು ಸಚಿವರಾದ ಶ್ರೀ ಹೆಚ್ ಎಂ ಚನ್ನಬಸಪ್ಪ ಮತ್ತು ಡಾ॥ ನಾಗನಗೌಡರೂ, ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರೂ ಭಾಗವಹಿಸಿದರು

ಪ್ರಾರಂಭದಲ್ಲಿ ಜಿಲ್ಲಾಧಿಕಾರಿ ಶ್ರೀ ಎಂ ಎಸ್ ರಂಗರಾಜುರವರು ಮತ್ತು ಎಕ್ಸಿಕ್ಯುಟಿವ್ ಇಂಜಿನಿಯರ್‌ರವರು ಈ ವರೆಗೆ ಕೈಗೊಳ್ಳಲಾದ ನಾನಾ ಕ್ರಮಗಳನ್ನೂ, ಅವುಗಳಿಗಾದ ವೆಚ್ಚವನ್ನೂ ವಿವರಿಸಿದರು.

ಅಂಗಡಿಯವರು ಮತ್ತು ಕೈಲಾಗದವರಿಗೆ ಕಚ್ಚಾ [illegible] ಸೇರು ಧಾನ್ಯದಂತೆ ಹಂಚಲಾಗಿದೆ ಗಂಡಸಿಗೆ ೧೨ ಮತ್ತು ಹೆಂಗಸಿಗೆ ೮ ಆಣೆ ಕೂಲಿ ಕೊಟ್ಟು ಗುಂಡ್ಲುಪೇಟೆಯಲ್ಲಿ ೧,೪೦೦ ಮತ್ತು ಚಾಮರಾಜನಗರ ತಾಲ್ಲೂಕಿನಲ್ಲಿ ೧,೯೦೦ ಮಂದಿಗೆ ಉದ್ಯೋಗ ಕಲ್ಪಿಸಲಾಗಿದೆ ಗುಂಡ್ಲುಪೇಟೆಯಲ್ಲಿ ಹತ್ತಿ ಹಿಂಜುವ ಕಸುಬಿನವರ ಉತ್ತೇಜನಕ್ಕಾಗಿ ಸೌಲಭ್ಯಗಳನ್ನು ಕಲ್ಪಿಸಲಾಗಿದೆ ಇದಕ್ಕಾಗಿ ಮಾಹೆಯಾನಾ ೫೦,೦೦೦ ರೂ ಗಳಂತೆ ವೆಚ್ಚವಾಗುತ್ತಿದೆ ಆದ್ದರಿಂದ ಮತ್ತೊಂದು ಲಕ್ಷ ರೂ ಸಹಾಯಕ್ಕಾಗಿ ಸರ್ಕಾರವನ್ನು ಪ್ರಾರ್ಥಿಸಲಾಗಿದೆ.

ಸರ್ಕಾರವು ಕ್ಷಾಮ ಪ್ರದೇಶದಲ್ಲಿ ಒಟ್ಟು ೨೨ ಉಚಿತ ಹಾಲಿನ ಕೇಂದ್ರಗಳನ್ನು ತೆರೆಯಲಿದೆ ಗಂಜಿ ಕೇಂದ್ರಗಳನ್ನು ತೆರೆಯಲು ರೆಡ್ ಕ್ರಾಸ್ ಸಂಸ್ಥೆಯವರೂ ಮತ್ತು ಇನ್ನೆರಡು ಹಾಲಿನ ಕೇಂದ್ರಗಳನ್ನು ತೆರೆಯಲು ನಗರದ ರೋಟರಿ ಕ್ಲಬ್ಬಿನವರೂ ಮುಂದೆ ಬಂದಿದ್ದಾರೆ ಕೇಂದ್ರ ಆಹಾರ ಸಂಶೋಧನಾಲಯದವರು ಪೌಷ್ಟಿಕಾಂಶವುಳ್ಳ ಬಿಸ್ಕತ್ತುಗಳನ್ನು ಕೊಡಲಿರುವರು

ಕೆರೆ ರಿಪೇರಿ ಮುಂತಾದ ಕೆಲಸಗಳ ಬಗ್ಗೆ ಕಾನೂನಿನ ಹಲವಾರು ತೊಡಕುಗಳನ್ನು ನಿವಾರಿಸಲು ಸರ್ಕಾರಕ್ಕೆ ಶಿಫಾರಸು ಮಾಡಲಾಗಿದೆ ರೈತರಿಗೆ ತಕಾವಿ ಸಾಲವನ್ನು ಕೊಡಲು ಇನ್ನೂ ೫೦ ಸಾವಿರ ರೂ ಬೆಟ್ಟಿಗೆ ಸರ್ಕಾರವನ್ನು ಕೇಳಲಾಗಿದೆ

ಹುಲ್ಲು ಮತ್ತು ಮೇವನ್ನು ಹೊಂದಿಗೆ ೪॥ ಕಾಸಿನಂತೆ ಮಾರಲಾಗುತ್ತಿದೆ ಎತ್ತೀಚೆಗೆ ಬಿಳಿಗಿರಿರಂಗನ ಬೆಟ್ಟದಲ್ಲಿ ಮಳೆಯಾಗಿ ಹುಲ್ಲು ಬೆಳೆದಿರುವುದರಿಂದ ಚಾಮರಾಜನಗರ ತಾಲ್ಲೂಕಿನಲ್ಲಿ ಮೇವಿನ ಸಮಸ್ಯೆಯು ಸುಧಾರಿಸಿದೆ

ಕಳೆದ ೧೫ ದಿನಗಳಿಂದ ಆಹಾರ ಧಾನ್ಯದ ಬೆಲೆ ಏರಿತು. ಸರ್ಕಾರವು ಧಾನ್ಯಗಳನ್ನು ಕೊಂಡರೆ, ವರ್ತಕರು ಅದರ ಬೆಲೆಯನ್ನು ಮತ್ತೂ ಏರಿಸುವರು ಆಗಿನಂತೆ ಧಾನ್ಯವೂ ಹೊರಗಿನಿಂದ ದೊರೆಯುತ್ತಿರದು ಆದುದರಿಂದ ಆ ಕ್ರಮವನ್ನು ಅನುಸರಿಸಲಸಾಧ್ಯ ಕಾಂಗಾರಿ ಕೆಲಸಗಳ ಕೂಲಿ ದರವನ್ನು ೧೨ ಮತ್ತು ೧೦ ಆಣೆಗಳಿಗೆ ಹೆಚ್ಚಿಸಲು ಶಿಫಾರಸು ಮಾಡಿದೆ—ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು

ಅನಂತರ ನಾನಾ ಪ್ರಮುಖರು ಮಾತನಾಡಿ ಅವರ್ಕವಲ್ಲ ನಿಧಾನ ಕ್ರಮಗಳ ಟೀಕಿಸಿದರು, ನಿವಾರಿಸಬೇಕೆಂದೂ ಜಿಲ್ಲೆಯ ಈ ಭಾಗಗಳನ್ನು ಕ್ಷಾಮ ಪ್ರದೇಶವೆಂದು ಘೋಷಿಸಬೇಕೆಂದೂ ಕೋರಿದರು

ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಮಾತನಾಡಿ ೧೦ ಲಕ್ಷ ರೂ ಹಣವನ್ನೂ, ಹಾಲಿನ ಪುಡಿ ಹಾಲು ಮತ್ತು ಅಕ್ಕಿಯನ್ನು ಮೈಸೂರು ಜಿಲ್ಲೆಗೆ ಕಳಿಸಲು ಕ್ರಮ ಕೈಗೊಳ್ಳಲಾಗಿದೆಯೆಂದು ತಿಳಿಸಿ ಅಭಾವ ಪ್ರದೇಶದಲ್ಲಿ ರೂ ಗೆ ೨॥ ಸೇರಿನಂತೆ ಅಕ್ಕಿ ಮಾರಲು ಕೇಂದ್ರದವರು ಸಂಸ್ಥಾನ ಸರ್ಕಾರಕ್ಕೆ ಅಕ್ಕಿಯನ್ನು ಒದಗಿಸುವುದಾಗಿ ಘೋಷಿಸಿದರು

ಮುಖ್ಯ ಮಂತ್ರಿಗಳು ಮಾತನಾಡಿ ಕ್ಷಾಮದಿಂದ ಜನರ ಜೀವವನ್ನು ಕಾಪಾಡುವುದರ ಜೊತೆಗೆ ಗೌರವವನ್ನು ಕಾಪಾಡಿಕೊಳ್ಳಬೇಕೆಂದೂ, ಗಂಜಿ ಕೇಂದ್ರಗಳಿಗಾಗಿ ಅಪವಾದ ಬರದಂತೆ ಕ್ಷಾಮ ನಿವಾರಣೆಗೆ ಒಂದು ಕೋಟಿ ರೂ ವೆಚ್ಚವಾದರೂ ಸರ್ಕಾರವು ಹಿಂದೆಗೆಯುವುದಿಲ್ಲವೆಂದೂ ಹೇಳಿ, ಈಗ ಕೊಟ್ಟಿರುವ ಸಹಾಯಧನವನ್ನು ೧೦ ಲಕ್ಷಕ್ಕೆ ಏರಿಸಲು ಒಪ್ಪಿದರು ಕೆಲಸ ಕಾರ್ಯಗಳನ್ನು ಸುಗಮವಾಗಿ ನಡೆಸಲು ಶ್ರೀ ಹೆಚ್. ಎಂ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲು ಸೂಚಿಸಿದರು ಒಟ್ಟಿನಲ್ಲಿ ಅಮಲ್ದಾರರಿಗೆ ಇದ್ದಿರು ಹಿಂದಿನ ವಿಷಯಗಳನ್ನು ಒದಗಿಸುವುದಾಗಿಯೂ, ಜಿಲ್ಲೆಯ ಅಭಾವ ಸ್ಥಳಗಳನ್ನು ಕ್ಷಾಮ ಪ್ರದೇಶವಾಗಿ ಘೋಷಿಸಲು ಸರ್ಕಾರದವರು ಆಲೋಚಿಸುವರೆಂದೂ ತಿಳಿಸಿದರು

ಕೇಂದ್ರ ಸರ್ಕಾರದವರು ಪ್ರವಾಹ ಪೀಡಿತ ಪ್ರದೇಶಗಳಲ್ಲಿ ಕೈಗೊಳ್ಳುತ್ತಿರುವ ಪರಿಹಾರದ ಕ್ರಮದಷ್ಟೇ ಮುತುವರ್ಜಿಯನ್ನು ಇಲ್ಲಿನ ಅಭಾವ ಪ್ರದೇಶಗಳಿಗೂ ತೋರಿಸಬೇಕೆಂದೂ ಸಲಹೆ ಮಾಡಿದರು

ಆಡಳಿತದಲ್ಲಿ ನಿಧಾನ ಕ್ರಮದ ಆಕ್ಷೇಪಣೆ ಬಗ್ಗೆ ಉತ್ತರವಿತ್ತು, ಅದು ಅನಿವಾರ್ಯವೆಂದೂ, ರೆಡ್ ಟೇಪಿಸಂ ಇಲ್ಲದಿದ್ದರೆ ಸರ್ಕಾರದ ಕೆಲಸಕ್ಕೆ ಮುಂದೆ ತುಂಬಾ ತೊಂದರೆಯಾಗುವುದೆಂದೂ ಹೇಳಿದರು ಜರೂರು ಪರಿಸ್ಥಿತಿಯಲ್ಲಿ ಕೈಗೊಳ್ಳುವ ವೆಚ್ಚವನ್ನು ಅದರಿಂದ ಉಪಯೋಗ ಪಡೆದವರೇ ಹಿಂತಿರುಗಿಸಬೇಕೆಂದೂ ಅವರು ನುಡಿದರು

ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಮಾತನಾಡಿ, ಅಭಾವ ನಿವಾರಣೆಗೆ ಸಹಾಯಧನ ನೀಡಿದ ಸಹಕಾರವನ್ನು ಕೋರಿದರು

ಪಾಕಿಸ್ತಾನದವರಿಂದ ಆಕ್ರಮಿತವಾಗಿರುವ ಕಾಶ್ಮೀರ ಪ್ರದೇಶದಲ್ಲಿ ಜನಮತಗಣನೆಯಾದರೆ ಆ ಪ್ರದೇಶವೆಲ್ಲವೂ ಭಾರತಕ್ಕೆ ಸೇರುವುದೆಂದು ಕಾಶ್ಮೀರದ ಮುಖ್ಯ ಮಂತ್ರಿ ಬಕ್ಷಿ ಗುಲಾಂ ಮಹಮ್ಮದರವರು ತಿಳಿಸಿರುತ್ತಾರೆ

ಸಂಸ್ಥಾನದ ಅಭಾವ ಪ್ರದೇಶಗಳಿಗಾಗಿ ೩೦ ಸಾವಿರ ಪಲ್ಲ ಅಕ್ಕಿ

ಕೇಂದ್ರದವರ ನೆರವಿನ ಬಗ್ಗೆ ಅಜಿತ ಪ್ರಸಾದ ಜೈನರ ವಿವರಣೆ

ಮೈಸೂರು ೨೪

ಮೈಸೂರು ಜಿಲ್ಲೆಯ ಅಭಾವಕ್ಕೊಳಗಾದ ಪ್ರದೇಶದಲ್ಲಿ ರೂ ಗೆ ೨॥ ಸೇರಿನಂತೆ ಮಾರಾಟ ಮಾಡಲು ಕೇಂದ್ರ ಸರ್ಕಾರವು ೩೦,೦೦೦ ಪಲ್ಲ ಅಕ್ಕಿಯನ್ನು ಸಂಸ್ಥಾನಕ್ಕೆ ಒದಗಿಸುವುದೆಂದೂ, ಈ ರೀತಿ ಮಾರಾಟದಿಂದ ಉಂಟಾಗುವ ನಷ್ಟದಲ್ಲಿ ಅರ್ಧದಷ್ಟನ್ನು ಕೇಂದ್ರವು ವಹಿಸಿಕೊಳ್ಳುವುದೆಂದೂ ಕೇಂದ್ರ ಆಹಾರ ಮಂತ್ರಿ ಶ್ರೀ ಅಜಿತ್ ಪ್ರಸಾದ್ ಜೈನರವರು ನೆನ್ನೆ ಸಂಜೆ ಪತ್ರಿಕಾ ಗೋಷ್ಠಿಯೊಂದರಲ್ಲಿ ತಿಳಿಸಿದರು

ಮೇಲ್ಕಂಡ ಪ್ರಮಾಣವಲ್ಲದೆ ಇಲ್ಲಿವರೆಗೆ ಅಮೆರಿಕದ ೩,೫೦೦ ಮಣ ಹಾಲಿನ ಪುಡಿ, ಅಕ್ಕಿ ಅಕ್ಕಿ ಮತ್ತು ಹುಡ್ಡದನ್ನು ನಮ್ಮ ಆಹಾರ ಕೇಂದ್ರಗಳ ಮೂಲಕ ಜನರಿಗೆ ಹಂಚಲಾಗುವುದು ಒದಗಿಸಲಿರುವುದ ಗಿ ೨೫,೦೦೦ ಒಟ್ಟು ಬೆಲೆಯು ೧೦ ಲಕ್ಷ ರೂ ಗಳಾಗುವುದೆಂದೂ ಅವರು ತಿಳಿಸಿದರು ಇತರ ಪರಿಹಾರ ಕಾರ್ಯಗಳಿಗೆ ತಗಲುವ ವೆಚ್ಚದಲ್ಲಿ ಸಹ ಕೇಂದ್ರವು ಅರ್ಧ ಭಾಗ ವಹಿಸುವುದೆಂದೂ, ಒಟ್ಟು ಮೊತ್ತ ೧ ಕೋಟಿಗೆ ಮೀರಿದರೆ ಮುಕ್ಕಾಲು ಭಾಗ ಮತ್ತ ನ್ನು ವಹಿಸಿಕೊಳ್ಳುವುದೆಂದೂ, ಸಂಸ್ಥಾನ ಸರ್ಕಾರವು ತನ್ನ ಭಾಗವನ್ನು ವಹಿಸಲು ಅದಕ್ಕೆ ಸಾಲ ಕೊಡಲು ಸಹ ಸಿದ್ಧವೆಂದೂ ಅವರು ಸಾರಿದರು

ಏರುತ್ತಿರುವ ಆಹಾರ ಧಾನ್ಯಗಳ ಬೆಲೆಯನ್ನು ತಡೆಗಟ್ಟಲು ಕೇಂದ್ರವು ಎಚ್ಚರಿಕೆಯಿಂದಿರುವುದೆಂದೂ ಅಕ್ಕಿಯನ್ನು ಮಣ ೧೫ ಕ್ಕೆ (೨॥ ಸೇರು) ೧೬ ರೂ ರಂತೆ ಮಾರಲು ನಿರ್ಧರಿಸಿದೆಯೆಂದೂ, ಸಕ್ಕರೆ ಬೆಲೆ ಏರಿರುವ ಬಗ್ಗೆ ಶ್ರೀ ಎಂ ವಿ ಕೃಷ್ಣಪ್ಪನವರು ಸದ್ಯದಲ್ಲಿಯೇ ಮುಂಬೈ ಸಕ್ಕರೆ ಕಾರ್ಖಾನೆ ಮಾಲೀಕರೊಂದಿಗೆ ಸಮಾಲೋಚಿಸಲಿದ್ದಾರೆಂದೂ ತಿಳಿಸಿದರು ಅವರೆ ಅಪಾಯದ ಅಭಾವವನ್ನು ನೀಗಲು ದಕ್ಷಿಣ ಭಾರತದಲ್ಲಿ ಸಕ್ಕರೆಯನ್ನು ದಾಸ್ತಾನು ಮಾಡುವುದಕ್ಕೆ ಪ್ರಯತ್ನ ನಡೆಸುತ್ತಿರುವುದಾಗಿಯೂ ತಿಳಿಸಿದರು

ಮೈಸೂರು ಮತ್ತಿತರ ೩ ನಗರಗಳಲ್ಲಿ ಫೇರ್‌ಪ್ರೈಸ್ ಡಿಪೋಗಳು

ಗೃಹ ಮಂತ್ರಿ ಸಿದ್ದವೀರಪ್ಪನವರ ಹೇಳಿಕೆ

ಬೆಂಗಳೂರು ೨೩

ಗೃಹ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ನೆನ್ನೆ ಪತ್ರಿಕಾ ಗೋಷ್ಠಿಯಲ್ಲಿ ಮಾತನಾಡಿ, ಗಬೆ ಪಡಬೇಕಾದ ರೀತಿಯಲ್ಲಿ ಆಹಾರದ ಅಭಾವ ಪರಿಸ್ಥಿತಿ ಏರ್ಪಡದಂತೆ ಪರಿಸ್ಥಿತಿ ಒದಗದಂತೆ ಸರ್ಕಾರದವರು ಎಮಿಸಬಲ್ಲರೆಂದೂ ತಿಳಿಸಿದರು ಬೆಂಗಳೂರು, ಮೈಸೂರು, ಕೆ ಜಿ ಎಫ್ ಮತ್ತು ಅವಶ್ಯವಿದ್ದರೆ ದಾವಣಗೆರೆಗಳಲ್ಲಿ ಸಹ ರ ಸಂಸ್ಥೆಗಳ ಮೂಲಕ ಅಕ್ಕಿಯನ್ನು ಮಾರಾಟ ಮಾಡಲು ಫೇರ್ ಪ್ರೈಸ್ ಡಿಪೋಗಳನ್ನು ತೆರೆಯುವುದನ್ನು ಪರಿಶೀಲಿಸಲಾಗುತ್ತಿದೆಯೆಂದು ಅವರು ಹೇಳಿದರು ಸಂಸ್ಥಾನ ನಗರದಲ್ಲಿ ಸರ್ಕಾರದವರು ಒದಗಿಸುತ್ತಿರುವ ಬೆಲೆಗೆ ಒಳ್ಳೆ ಅಕ್ಕಿಯು ಮಾರಾಟವಾಗುತ್ತಿರುವುದೆಂದೂ ನುಡಿದರು.

ಬೇಲೂರರ ಕೊಲೆ ಪ್ರಕರಣ

ನಗರ ನ್ಯಾಯಾಧೀಶರ ಕೋರ್ಟಿನಲ್ಲಿ ಪೋಲೀಸರ ಪೂರ್ವಭಾವಿ ವರದಿ

ಬೆಂಗಳೂರು ೨೩

ಬೇಲೂರು. ಶ್ರೀನಿವಾಸಯ್ಯಂಗಾರ್ಯರ ಖೂನಿ ಕೊಲೆ ಪ್ರಕರಣದಲ್ಲಿ ನೆನ್ನೆ ಇಲ್ಲಿನ ನಗರ ನ್ಯಾಯಾಧೀಶ ಶ್ರೀ ಸಂಜೀವಶೆಟ್ಟಿಯವರ ಮುಂದೆ ಕೃಷ್ಣಮೂರ್ತಿಯವರು ಮತ್ತು ಗೋವಿಂದರಾಜುರವರನ್ನು ಹಾಜರುಪಡಿಸಲಾಯಿತು ಅವರನ್ನು ಜುಡಿಷಿಯಲ್ ಕಸ್ಟಡಿಗೆ ರಿಮ್ಯಾಂಡು ಮಾಡಲಾಯಿತು ಕೋರ್ಟಿನಲ್ಲಿ ಪೋಲೀಸರು ಕೊಲೆಗಳಿಗೆ ಸಂಬಂಧಿಸಿದಂತೆ ಪೂರ್ವಭಾವಿ ವರದಿಯನ್ನು ಒಪ್ಪಿಸಿ, ಚಾರ್ಜ್‌ಷೀಟ್ ಹಾಕಲು ೧೪ ದಿನಗಳ ಅವಧಿಯನ್ನು ಕೇಳಿದರು ಈ ಬಗ್ಗೆ ನಾಳೆ ಪರಿಶೀಲನೆ ಮಾಡಲಾಗುವುದು

ಕೊಲೆ ಬಗ್ಗೆ ತನಿಖೆಯು ಮುಗಿದಿದೆ ರಂಗಲಕ್ಷ್ಮಮ್ಮ ಹೇಳಿಕೆಗಾಗಿ ಪೋಲೀಸರು ಆಕೆಯ ದೇಹಸ್ಥಿತಿ ಬಗ್ಗೆ ವೈದ್ಯರ ಅಭಿಪ್ರಾಯಕ್ಕಾಗಿ ಕಾದಿದ್ದಾರೆ

ಮೊಕದ್ದಮೆಯಲ್ಲಿ ಒಟ್ಟು ೧೪೧ ಜನರನ್ನು ಪ್ರಾಸಿಕ್ಯೂಷನ್ ಪರ ಸಾಕ್ಷಿಗಳಾಗಿ ಕರೆಸಲಾಗುವುದು

ಜಿಲ್ಲೆಯಲ್ಲಿ ಅಭಾವದಿಂದ ಯಾರೂ ಮೃತಪಟ್ಟಿಲ್ಲ

ಸರ್ಕಾರದವರ ಹೇಳಿಕೆ

ಬೆಂಗಳೂರು ೨೩

ಮೈಸೂರು ಜಿಲ್ಲೆಯ ಅಭಾವ ಪ್ರದೇಶಗಳಲ್ಲಿ ಹಸಿವಿನ ಪರಿಣಾಮವಾಗಿ ಮೃತಪಟ್ಟರೆಂಬ ಸರ್ಕಾರದವರು ಪ್ರಕಟಣೆ ಹೊರಡಿಸಿ ತಿಳಿಸಿದ್ದಾರೆ ಚಾಮರಾಜನಗರ ತಾಲ್ಲೂಕಿನ ಬದನಗುಪ್ಪೆಯಲ್ಲಿ ೩೦ ಜನರು ಈ ಕಾರಣಕ್ಕಾಗಿ ಸತ್ತಿದ್ದಾರೆಂದು ಹೇಳಿರುವ ಬಾತ್ಮಿಯವರು ತಿಳಿಸಿದ್ದ ಸಂಬಂಧದಲ್ಲಿ ಈ ಪ್ರಕಟಣೆಯನ್ನು ಹೊರಡಿಸಲಾಗಿದೆ

ರೇಷ್ಮೆ ಕಾರ್ಖಾನೆ ವಿವಾದದಲ್ಲಿ ಒಪ್ಪಂದ

ಬೆಂಗಳೂರು ೨೩

ಬೆಂಗಳೂರಿನ ರೇಷ್ಮೆ ಕಾರ್ಖಾನೆಗಳನ್ನು ಮುಚ್ಚಿರುವ ಸಂದರ್ಭದಲ್ಲಿ ನೆನ್ನೆ ಕಾರ್ಮಿಕ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರ ಕಛೇರಿಯಲ್ಲಿ ಪ್ರತಿನಿಧಿಗಳ ಸಮ್ಮೇಳನವು ನಡೆದು ಕಾರ್ಮಿಕರ ಬೇಡಿಕೆಗಳ ಪೈಕಿ ೨ ಅಂಶಗಳನ್ನು ಒಪ್ಪಲಾಯಿತೆಂದು ಗೊತ್ತಾಗಿದೆ ಮಜೂರಿ ಕಾರ್ಯಕರ್ತರನ್ನು ವಾಪಸು ಕೆಲಸಕ್ಕೆ ಸೇರಿಸಿಕೊಳ್ಳುವ ವಿಷಯದಲ್ಲಿ ನಾನೆ ಒಪ್ಪಿರುವ ಇತ್ಯರ್ಥವಾಗುವುದು

ಲೇಆಫ್ ಅವಧಿಯಲ್ಲಿ ಕಾರ್ಮಿಕರಿಗೆ ಸಂಬಳ ಕೊಡಬೇಕೆ ಬೇಡವೆ ಎಂಬುದನ್ನೂ ಹಾಗೂ ಸರ್ಕಾರದ ಪ್ರತಿನಿಧಿಗಳು ಪರಿಶೀಲಿಸಲಿರುವರು [illegible] ಈ ವಿಷಯವನ್ನು ತೀರ್ಮಾನಿಸುವವರು ಸಾವಿ ಕರ್ಮಾಗಾರದ ಇರುವ ಎಲ್ಲಾ ವಿವಾದಗಳನ್ನು [illegible] ತ್ರಿಪಕ್ಷ ಸಮಿತಿಯೊಂದನ್ನು ಸರ್ಕಾರದವರು ರಚಿಸಬೇಕೆಂದೂ ತೀರ್ಮಾನಿಸಲಾಯಿತು

ವಾರ ಭವಿಷ್ಯ

ತಾ|| ೨೪ — ೬ — ೫೬ ರಿಂದ ೩೦ — ೬ — ೫೬ ರವರೆಗೆ

ಮೇಷ — ಆರೋಗ್ಯ ಸಾಧಾರಣ. ಆರ್ಥಿಕ ಸ್ಥಿತಿ ತೃಪ್ತಿಕರ. ಹೊಸ ಉದ್ಯೋಗಗಳಿಗೆ ಪ್ರಯತ್ನ. ಬೇರೆ ಆಸ್ತಿಯಿಂದ ಲಾಭ. ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ ಕಡಿಮೆ. ಸೋಮವಾರದಲ್ಲಿ ಎದುರಿಸ್ಯ

ವೃಷಭ — ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ಶುಭ ಕಾರ್ಯಗಳು ಜರುಗುವವು. ಸೋಮವಾರದಲ್ಲಿ ಪ್ರಶಂಸೆ. ವ್ಯಾಪಾರ ಸ್ಥಿರವಿಲ್ಲ

ಮಿಥುನ — ಆರೋಗ್ಯ ತೃಪ್ತಿಕರ. ಆರ್ಥಿಕ ಸ್ಥಿತಿ ಸಮರ್ಪಕ. ಮಂಗಳ ಕಾರ್ಯಗಳು ನಡೆಯುವುವು. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ

ಕರ್ಕ — ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಉತ್ತಮ. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು. ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರೋತ್ಸಾಹ. ಪ್ರವಾಸ ಸಂಭವ

ಸಿಂಹ — ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಬಿಕ್ಕಟ್ಟು ಹೆಚ್ಚುವುದು. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ. ಸಾಮಾಜಿಕ ಕ್ಷೇತ್ರದಲ್ಲಿ ಅಪಯಶಸ್ಸು. [illegible]

ಕನ್ಯಾ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಸಾಧಾರಣ. ಪ್ರವಾಸ ಸಂಭವ. ವ್ಯಾಪಾರ ವ್ಯವಹಾರಗಳಲ್ಲಿ ಕಷ್ಟದ ಪರಿಸ್ಥಿತಿ. ಸೋಮವಾರದಲ್ಲಿ ಪ್ರಗತಿ ಕಡಿಮೆ

ತುಲ — ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. [illegible] ವ್ಯಾಪಾರ ವ್ಯವಹಾರದಲ್ಲಿ [illegible] ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ

ವೃಶ್ಚಿಕ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಸಾಧಾರಣ. [illegible] ಸೋಮವಾರದಲ್ಲಿ [illegible]

ಧನು — ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರದಲ್ಲಿ [illegible] ಸೋಮವಾರದಲ್ಲಿ [illegible] ಧನನಷ್ಟ ಸಂಭವ

ಮಕರ — ಆರೋಗ್ಯ [illegible] ಆರ್ಥಿಕ ಪರಿಸ್ಥಿತಿ ತೃಪ್ತಿಕರ. [illegible]

ಕುಂಭ — ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಸಮರ್ಪಕ. [illegible] ಉದ್ಯೋಗದಲ್ಲಿ ಪ್ರಗತಿ. ವ್ಯಾಪಾರ ವ್ಯವಹಾರಗಳಲ್ಲಿ ಉತ್ತಮ ಫಲಗಳು

ಮೀನ — ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಉತ್ತಮ. ಮಂಗಳ ಕಾರ್ಯಗಳು ನೆರವೇರುವುವು. ವ್ಯಾಪಾರ ವ್ಯವಹಾರಗಳಲ್ಲಿ ಯಶಸ್ಸು. ಉದ್ಯೋಗದಲ್ಲಿ ಪ್ರಶಂಸೆ

ಹೂವಿನ ಪಲ್ಲಕ್ಕಿ ಉತ್ಸವ

ರಾಜಧಾನಿಯ ತಿರುಮಲೆಯ ಶ್ರೀ [illegible] ಯ ಶ್ರೀ ವೈಷ್ಣವ [illegible] ಮಂಡಲಿಯವರಿಂದ ಈ ಸಂಜೆ ೭ ಘಂಟೆಗೆ ಶ್ರೀ ರಾಮಚಂದ್ರಸ್ವಾಮಿ ಹೂವಿನ ಪಲ್ಲಕ್ಕಿ ಉತ್ಸವವನ್ನು ಏರ್ಪಡಿಸಿರುತ್ತಾರೆ. ಉತ್ಸವವು [illegible] ಬೀದಿ [illegible] ಬೀದಿ [illegible] ಮಾಡುವುದು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಮಹಾರಾಷ್ಟ್ರ ಸಂಸ್ಥಾನದ ವಿಭಜನೆ ಯೇ?

[illegible] ಮಹಾರಾಷ್ಟ್ರ ಸಂಸ್ಥಾನವನ್ನು [illegible] ಪ್ರದೇಶಗಳಾಗಿ ವಿಂಗಡಿಸಲು [illegible] ಪ್ರತಿ ಪಕ್ಷ [illegible] ಅಧಿಕಾರಿಯಿದ್ದರೆ [illegible] ಮಧ್ಯ ಪ್ರದೇಶ ಮತ್ತು [illegible] ಮಂತ್ರಿಗಳ ಅಂತರ ಪ್ರಾಂತೀಯ ಸಚಿವ [illegible] ಸಮಿತಿ ಸಭೆಯು [illegible] ಬೊಂಬಾಯಿ [illegible] ಕಾಂಗ್ರೆಸ್ ಸಂಸ್ಥಾನದ [illegible] ತಾರೀಖಿನ ದಿನ [illegible] ಹೇಳಲಾಗಿದೆ

ಸಿ ಡಿ ದೇಶಮುಖ್‌ರವರ ರಾಜೀನಾಮೆ ವಾಪಸಿಗೆ ಷರತ್ತು

[illegible] ಕೇಂದ್ರ [illegible] ಮಂತ್ರಿ [illegible] ಸೂತ್ರವನ್ನು [illegible] ಪುನರ್ವಿಂಗಡಣೆ [illegible] ಮಂತ್ರಿಯ [illegible] ಸಿ ಡಿ ದೇಶ [illegible] ನಗರವನ್ನು [illegible]

ಕಾಳಿಗೆ ಬಾಲಕಿಯನ್ನು ಬಲಿ ಕೊಟ್ಟುದಕ್ಕೆ ಸಾಧುವಿಗೆ ಗಲ್ಲು

[illegible]

ಪಂಜಾಬಿನಲ್ಲಿ ಮಂತ್ರಿಮಂಡಲದ ಪುನರ್ರಚನೆಗೆ ಒತ್ತಾಯ

[illegible]

ಫೇರ್‌ಪ್ರೈಸ್ ಔಷದಾಲಯ

[illegible] ಸರಕಾರದ ವೈದ್ಯಾಧಿಕಾರಿ [illegible] ದ್ಘಾಟನೆ ಮಾಡಿ ವೈದ್ಯಕೀಯ ಸೇವೆ [illegible] ಕಂಕಣಬದ್ಧರಾಗಬೇಕೆಂದು ಹೇಳಿದರು

ಮೈಸೂರು ಪೇಟೆ ಧಾರಣೆ

	ರೂ	ಮೂ	ಪೈ	ರೂ	ಆ	ಪೈ
ಕಡಲೆಕಾಯಿ	[illegible]			[illegible]		
ಎಳ್ಳು	[illegible]			[illegible]		
ಹೆಸರು	[illegible]			[illegible]		
ಹಲಸಂದೆ	[illegible]			[illegible]		
ಹುರುಳಿ	[illegible]			[illegible]		
ಸೀಗೆಕಾಯಿ	[illegible]					
ಕಾಟನ್‌ಸೀಡ್	[illegible]			[illegible]		
ಮೆಣಸಿನಕಾಯಿ	[illegible]			[illegible]		
ತೆಂಗಿನಕಾಯಿ ೧೦೦೦ ಕ್ಕೆ	[illegible]			[illegible]		

Edited Printed and Published by A R Nagarajan at Sadhvi Press D Subbiah Road Mysore

ಅಭಾವ ಪ್ರದೇಶಗಳಲ್ಲಿ ಜರೂರು ಪರಿಹಾರ ಕ್ರಮ

ಸರ್ಕಾರಕ್ಕೆ ಜಿಲ್ಲಾ ಪ್ರತಿನಿಧಿಗಳ ಒತ್ತಾಯ

ಮೈಸೂರು ೨೪

ನೆನ್ನೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕರೆದಿದ್ದ ಜಿಲ್ಲಾ ಪ್ರತಿನಿಧಿಗಳ ಸಭೆಯಲ್ಲಿ ಅಭಾವ ಪರಿಹಾರದ ಬಗ್ಗೆ ಅವರುಗಳು ಹಲವಾರು ಸಲಹೆಗಳನ್ನಿತ್ತರು

ಗುಂಡ್ಲುಪೇಟೆಯ ಶ್ರೀಗಳಾದ ಕೆ ಶಿವರುದ್ರಪ್ಪ ಮತ್ತು ಬಿ ಬಸಪ್ಪನವರು [illegible] ಉದ್ಯೋಗ ಕಲ್ಪಿಸಬೇಕೆಂದು [illegible]

ಮೈಸೂರು ತಾಲ್ಲೂಕಿನ ಶ್ರೀ ಶಿವಣ್ಣೇಗೌಡ, ಚನ್ನಪಟ್ಟಣದ [illegible] [illegible]

[illegible] ಶ್ರೀ ರಾಜಶೇಖರ ಮೂರ್ತಿ [illegible]

[illegible] ಶ್ರೀ ಎಚ್ ಲಿಂಗಣ್ಣ ಮತ್ತು [illegible]

ಶ್ರೀ ಎಸ್ ರಾಚಯ್ಯನವರು ಮಾತನಾಡಿ ಕೇಂದ್ರ ಸರ್ಕಾರವು ಈ ವಿಷಯದಲ್ಲಿ ಹೆಚ್ಚು ಮುತುವರ್ಜಿ ವಹಿಸಬೇಕೆಂದೂ ಪರಿಹಾರ ಕಾರ್ಯವನ್ನು [illegible] ನೇಮಿಸಬೇಕೆಂದೂ ಸೂಚಿಸಿದರು

ಕುರುಡ ಹುಡುಗಿಗೆ ಕೋಳಿಮರಿ ಕಣ್ಣು

ಟೋಕಿಯೋವಿನ ಕಿಯೋ ವಿಶ್ವವಿದ್ಯಾಲಯದ [illegible] ಕೋಳಿ ಮರಿಯ ಕಣ್ಣು [illegible] ಜೋಡಿಸಿ ಸ್ವಲ್ಪಮಟ್ಟಿನ ದೃಷ್ಟಿ ಬರುವಂತೆ ಮಾಡಿರುವರೆಂದು ವರದಿಯಾಗಿದೆ

ಶ್ರೀ ಜಗದಂಬಾ ಐಸುವಿಹಾರ

ದಿವಾನರ ರಸ್ತೆ ಮೈಸೂರು

ಮೇಲ್ಕಂಡ ತಿರುವಿಹಾರವನ್ನು ಅತ್ಯಾಧುನಿಕ [illegible] ಹೊಂದುವುದರ ಮೂಲಕ [illegible] ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ನಗರಕ್ಕೆ ಗೋಕರ್ಣ ಮಠಾಧೀಶರ ಭೇಟಿ

ಮೈಸೂರು ೨೪

ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶರಾದ ಶ್ರೀ ಶ್ರೀ ದ್ವಾರಕಾನಾಥ ತೀರ್ಥರವರು [illegible] ನಗರಕ್ಕೆ ಬಿಜಯಮಾಡುವರು. ಅವರು [illegible] ಬೊಂಬಾಯಿ ಬಜಾರ್ ಎದುರು ಮನೆಯಲ್ಲಿ [illegible] ತಂಗುವರು. [illegible] ಘಂಟೆಗೆ [illegible] ಪೂಜೆಯಾದನಂತರ ಭಕ್ತಾದಿಗಳಿಗೆ ಭೇಟಿ ಕೊಡುವರು. [illegible] ಧಾರ್ಮಿಕ ಪ್ರವಚನಗಳು ಜರುಗುವುವು

ರಷ್ಯಕ್ಕೆ ಟಿ. ಚೌಡಯ್ಯನವರ ಭೇಟಿ

ಸಂಗೀತ ರತ್ನ ಟಿ ಚೌಡಯ್ಯ ಮತ್ತು [illegible] ದಕ್ಷಿಣ ಹಿಂದೂಸ್ಥಾನಿ ಸಂಗೀತಗಾರರಾದ [illegible] ಬರುವ ತಿಂಗಳು ರಷ್ಯಕ್ಕೆ ತೆರಳಲಿರುವ ಭಾರತೀಯ ಸಾಂಸ್ಕೃತಿಕ ನಿಯೋಗದ ಸದಸ್ಯರಾಗಿರುವರೆಂದು ಗೊತ್ತಾಗಿದೆ

ಚಿನ್ನದ ಗಣಿಗಳ ಪರಿಹಾರ ದ್ರವ್ಯದ ಬಗ್ಗೆ ಕೇಂದ್ರದ ಸೂಚನೆ

ಕೋಲಾರದ ಚಿನ್ನದ ಗಣಿಗಳನ್ನು ರಾಷ್ಟ್ರೀಕರಣ ಮಾಡುವ [illegible] ಪರಿಹಾರ ದ್ರವ್ಯದ ಬಗ್ಗೆ [illegible] ಮೈಸೂರು ಸರ್ಕಾರದವರು [illegible] ಪರಿಹಾರ ದ್ರವ್ಯವನ್ನು ಗೊತ್ತುಪಡಿಸುವರೆಂದು [illegible]

ಶ್ರೀ ಶಾರದಾ ಸಂಗೀತ ನಾಟಕ ಮಂಡಲಿ,

ಗೋಕರ್ಣ

ಈ ದಿನ ಎರಡು ಆಟಗಳು

ಸಂಜೆ ೬—೩೦ ಮತ್ತು ರಾತ್ರಿ 10 ಘಂಟೆಗೆ

ಇವರು ಮೈಸೂರು [illegible]

★ ಮಾನವತಿ ★

[illegible]

ಇವನನ್ನು ನೋಡಿರಿ

ಇವನ ಮುಖವು ಬಾಡಿದಂತಿದೆ [illegible]

★ [illegible]

★ ಇವನು [illegible]

★ ಇವನ [illegible] ಕಡಿಮೆಯಾಗಿ ಮುಖದ ಕಳೆ [illegible]

★ ಇವನ [illegible]

★ ಇವನು [illegible]

★ ಇವನ ಕುಟುಂಬಗಳು [illegible]

★ ಇವನ [illegible]

ಇದೇ ಅಸ್ತ್ರ

[illegible] ಮತ್ತು [illegible] ಶಕ್ತಿ [illegible] ಆಸೆ ಮತ್ತು ಹರ್ಷಗಳಿಗೆ ಬಲಕೊಡುವುದು

[illegible]

ದುಗ್ಗ ದತ್ತ ಕಮಲ

ವೈದ್ಯ ಶಾಸ್ತ್ರ ಜಗದ್ವಿಖ್ಯಾತ

ನವರತ್ನ ಕಲ್ಪ

[illegible]

ವಿಷ್ಣು ವೈದ್ಯ ಮತ್ತು ಹವಳ ಇತ್ಯಾದಿ [illegible] ಉಚಿತ [illegible]

NAVRATNA KALPA PHARMACY,

Jullundur city (India)

Telegram NAVRATNA

ಟೆಲಿಫೋನ್ ನಂ. 792

ಕೂರ್ಗ್ ವರ್ಕ್ಸ್
ಸ್ಥಾಪಿತ 1932 ಫೋನ್ 811
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,
ನ್ಯೂ ಸಯ್ಯಾಜಿ ಸರ್ಕಲ್,
ಮೈಸೂರು
[illegible]

ಇಂದಿನ ಪತ್ರಿಕೆ 3 ಆಣೆ

ಲಗ್ನದ ಜವಳಿ
ಗೋ॥ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ಣಿ, ಬೆಂಗಳೂರ್
[illegible]
M.V. ಭೋಜಯ್ಯ
ಬಿ. ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು ಫೋನ್ 446

ಸಂಪುಟ : ೧೮ } SADHVI : MONDAY 25—6—1956 ಮೈಸೂರು : ಸೋಮವಾರ ೨೫—೬—೧೯೫೬ [ಸಂಚಿಕೆ : ೩೮೪

ಸೈಪ್ರಸ್ ದ್ವೀಪದ ಸ್ವಾತಂತ್ರ್ಯದ ಬಗ್ಗೆ ಈಡನ್-ನೆಹರೂ ಚರ್ಚೆ

ಸಹಕಾರ ಸಂಘಗಳ ಮೂಲಕ ಸಕ್ಕರೆ ಮಾರಾಟ

ಬೆಂಗಳೂರು ೨೪

ಎಳಸುವವರಿಗೆ ಸಹಕಾರ ಸಂಘಗಳ ಮೂಲ ಸಕ್ಕರೆಯನ್ನು ಒದಗಿಸಲು ಮೈಸೂರು ಸರ್ಕಾರ ವ್ಯವಸ್ಥೆ ಮಾಡಲಿದ್ದಾರೆ ಒಟ್ಟು ವ್ಯಾಪಾರಗಾರರಿಗೆ [illegible] ಒದಗಿಸಲಾಗುವುದು

ಮೈಸೂರು ಅಭಾವ ಪ್ರದೇಶಗಳಿಗೆ ಅಮೆರಿಕಾ ಕ್ರಿಸ್ತ ಸಂಸ್ಥೆಯ ನೆರವು

ಮೈಸೂರಿನ ಅಭಾವ ಪ್ರದೇಶಗಳಲ್ಲಿ ಹಂಚುವುದಕ್ಕೆ ಅಮೆರಿಕದ ವಿಶ್ವ ಕ್ರಿಸ್ತ ಸೇವಾ ಸಂಸ್ಥೆಯವರು [illegible] ಪೌಂಡು ಹಾಲನ್ನು ಒದಗಿಸಲು ಒಪ್ಪಿರುತ್ತಾರೆ [illegible]

ಬೆಂಗಳೂರಿನಲ್ಲಿ ರಕ್ತ ಪ್ರಾಣಿಯಾಗಳ ಕಾಟ ಇಲ್ಲ

ಗೃಹ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪನವರು ಪ್ರತಿನಿಧಿಗಳೊಡನೆ ಮೊನ್ನೆ ಮಾತನಾಡಿ ಬೆಂಗಳೂರಿನ ಶಾಲಾ ಕಾಲೇಜುಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿನಿಯರಿಗೆ [illegible] ರಕ್ತ ಪ್ರಾಣಿಯಾಗಳ ಕಿರುಕುಳವನ್ನು ಪೂರ್ಣವಾಗಿ ತಪ್ಪಿಸಲಾಗಿದೆಯೆಂದು ತಿಳಿಸಿದರು [illegible] ಬಸ್ ನಿಲ್ದಾಣಗಳಲ್ಲಿ [illegible] ವಿದ್ಯಾರ್ಥಿನಿಯರಿಗೆ ಈ ಜನರು [illegible] ಕೊಡುತ್ತಿದ್ದರೆಂದು ಈ ಮೊದಲೇ ವರದಿಯಾಗಿತ್ತು

ಜಪಾನಿನಲ್ಲಿ ರೇಡಿಯೊ ಕಣಗಳ ಬಿಸಿ ಮಳೆ

ಜಪಾನಿನಲ್ಲಿ ಕಳೆದ [illegible] ರೇಡಿಯೊ [illegible] ಕಣಗಳುಳ್ಳ [illegible] ಅವರಿಸಿ, ಕೋರಾದ ಬಿಸಿ ಮಳೆಯು ಬಂದಿತೆಂದು ವರದಿಯಾಗಿದೆ ಕಳೆದ ತಿಂಗಳು [illegible] ಯಲ್ಲಿ ಅಮೆರಿಕದವರು ಜಲಜನಕ ಬಾಂಬನ್ನು ಸಿಡಿಸಿದಾಗ ಒಂದು ತಿಂಗಳಲ್ಲಿ ರೇಡಿಯೊ [illegible] ಮಳೆಯಾಗುವುದೆಂದು ಜಪಾನಿನ ವಿಜ್ಞಾನಿಗಳು ತಿಳಿಸಿದ್ದರು ಬಿಸಿ ಮಳೆ ಬಿದ್ದ ತರುವಾಯ [illegible] ಹವಾಮಾನ ಕೇಂದ್ರಗಳು ರೇಡಿಯೊ [illegible] ಕಣಗಳ ವ್ಯಾಪ್ತಿಯು ವಿಶೇಷವಾಯಿತೆಂದು ವರದಿ ಮಾಡಿವೆ ಆಸ್ಟ್ರೇಲಿಯದ ವಾಯು [illegible] ನ್ಯೂಜಿಲೆಂಡಿನ [illegible] ಎಂಬಲ್ಲೂ ರೇಡಿಯೊ ಕಣಗಳ ಮಳೆ ಬಿದ್ದುದಾಗಿ ಗೊತ್ತಾಗಿದೆ

ದೆಹಲಿಯಲ್ಲಿ ಮುಂದಿನ ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನ?

ಕಾಮನ್‌ವೆಲ್ತ್ ಪ್ರಧಾನಿಗಳ ಸಮ್ಮೇಳನವನ್ನು ಮುಂದಿನ ಸಾರಿ ದೆಹಲಿಯಲ್ಲಿ ನಡೆಸುವ ಬಗ್ಗೆ ಸೂಚನೆಗಳು ಬಂದಿರುವುದಾಗಿ ವರದಿಯಾಗಿದೆ ಇದುವರೆಗೆ ಈ ಸಮ್ಮೇಳನವು ಲಂಡನ್ನಿನಲ್ಲಿ ಸೇರುವುದು ವಾಡಿಕೆಯಾಗಿದ್ದಿತು ಕಾಮನ್‌ವೆಲ್ತ್ ವಿದೇಶಾಂಗ ಮಂತ್ರಿಗಳ ಸಭೆಯನ್ನು ಸಿಂಹಳದ ರಾಜಧಾನಿ ಕೊಲಂಬೊವಿನಲ್ಲಿ ನಡೆಸಲೂ ಸಲಹೆ ಬಂದಿದೆ

ಅಭಾವ ಪ್ರದೇಶಗಳಲ್ಲಿ ರೂ. ಗೆ ೩ ಸೇರು ಅಕ್ಕಿ

ಕೇಂದ್ರ ಆಹಾರ ಉಪ ಮಂತ್ರಿ ಎಂ. ವಿ. ಕೃಷ್ಣಪ್ಪನವರ ಹೇಳಿಕೆ

ಮಂಡ್ಯ ೨೪

ಈ ಜಿಲ್ಲೆಯ [illegible] ಪ್ರದೇಶಗಳಲ್ಲಿ ನೆನ್ನೆ ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಸಂಚರಿಸಿ ನಾಗಮಂಗಲ [illegible] ಅಭಾವ ಪ್ರದೇಶಗಳಲ್ಲಿ [illegible]

ತುಂಗಭದ್ರಾ ಕಾಲುವೆ ವೆಚ್ಚ

೧೨ ಕೋಟಿಗೆ ಹೆಚ್ಚಿಸಲು ಮೈಸೂರು ಮತ್ತು ಆಂಧ್ರ ಸರ್ಕಾರಗಳ ಮನವಿ

ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ತುಂಗಭದ್ರಾ [illegible] ಯ ನಿರ್ಮಾಣದ ವೆಚ್ಚವನ್ನು [illegible] ಕೋಟಿ ರೂಗಳಿಂದ ೧೨ ಕೋಟಿಗೆ ಹೆಚ್ಚಿಸುವಂತೆ ಮೈಸೂರು ಮತ್ತು ಆಂಧ್ರ ಸರ್ಕಾರಗಳು ಕೋರಲಿರುವುದಾಗಿ ಆಂಧ್ರ ಮುಖ್ಯ ಮಂತ್ರಿ ನೀಲಂ ಸಂಜೀವ ರೆಡ್ಡಿಯವರು ತಿಳಿಸಿರುತ್ತಾರೆ

ಫೆಬ್ರವರಿಯಲ್ಲಿ ಮಹಾ ಚುನಾವಣೆಗಳಿಗೆ ಸಿದ್ಧತೆ

ದೇಶಾದ್ಯಂತ ಬರುವ ಫೆಬ್ರವರಿ ತಿಂಗಳಲ್ಲಿ ಮಹಾ ಚುನಾವಣೆಗಳನ್ನು ನಡೆಸುವ ಬಗ್ಗೆ ಎಲ್ಲಾ ಸಂಸ್ಥಾನಗಳಲ್ಲೂ ಸಿದ್ಧತೆ ಮಾಡಿಕೊಳ್ಳಲಾಗುತ್ತಿದೆಯೆಂದು ವರದಿಯಾಗಿದೆ ಈ ಸಂಬಂಧವಾಗಿ ಭಾರತದ ಚುನಾವಣಾ ಕಮಿಷನರ್‌ರವರು ಎಲ್ಲಾ ಸಂಸ್ಥಾನಗಳಿಗೂ ಭೇಟಿ ಕೊಡುವರು ಈ ಸಾರಿ [illegible] ದಿನಗಳಲ್ಲೇ ಎಲ್ಲ ಕಡೆಯೂ ಒಟ್ಟಿಗೆ ಚುನಾವಣೆಗಳನ್ನು ನಡೆಸಲಾಗುವುದೆಂದು ಹೇಳಲಾಗಿದೆ

ಮಹಾರಾಜಾ ಕಾಲೇಜಿನ ವಿದ್ಯಾರ್ಥಿ ನಿಲಯದ ಚುನಾವಣೆಗಳು

ಇಲ್ಲಿನ ಮಹಾರಾಜಾ ಕಾಲೇಜು ವಿದ್ಯಾರ್ಥಿ ನಿಲಯದ ವಾರ್ಷಿಕ ಚುನಾವಣೆಗಳು ನೆನ್ನೆ ನಡೆದು ಶ್ರೀ ಎ. ಪಿ. ತ್ರಿಶಂಕಯ್ಯನವರು ಪ್ರಧಾನ ಕಾರ್ಯದರ್ಶಿಗಳಾಗಿಯೂ, ಶ್ರೀ ವಿಭೂಷಣ್‌ರವರು ಕ್ರೀಡಾ ಕಾರ್ಯದರ್ಶಿಗಳಾಗಿಯೂ ಶ್ರೀಗಳಾದ ಕೆ. ಎನ್. ಸುಬ್ಬಾರೆಡ್ಡಿ, ಚನ್ನರಾಯಪ್ಪ, ಎಸ್. ಎಮ್. ಚಂದ್ರಶೇಖರ್ ಮತ್ತು ಶಿವಮೂರ್ತಿಯವರು ಸಾಹಿತ್ಯ ಸಮಿತಿಯ ಸದಸ್ಯರುಗಳಾಗಿಯೂ, ಬಿ. ಕೆಂಪಯ್ಯ, ಎನ್. ನಾರಾಯಣಸ್ವಾಮಿ, ಟಿ. ಎನ್. ಜಯದೇವ್ ಮತ್ತು ಪಾಲಕ್ಷನವರುಗಳು ಕ್ರೀಡಾ ಸಮಿತಿಯ ಸದಸ್ಯರುಗಳಾಗಿಯೂ ಚುನಾಯಿತರಾದರು

ವಲ್ಲಿ ನೀರಿನ ಜಗಳದಲ್ಲಿ ಇರಿತದಿಂದ ಒಬ್ಬನ ಮರಣ

ಅಪಾದಿತನ ಪರಾರಿ

ಸ್ವಂ. ಸು. ಸಂ.] ಬೆಂಗಳೂರು ೨೪

ಮೈಸೂರು ರಸ್ತೆಯಲ್ಲಿರುವ ಪೊಲೀಸು ನಿವಾಸ ಕ್ಷೇತ್ರದಲ್ಲಿ ನೆನ್ನೆ ರಾತ್ರಿ [illegible] ಎಂಬುವನಿಗೆ [illegible] ಶ್ರೀಕಂಠಯ್ಯ ಎಂಬ [illegible] ಸ್ಥಳದಲ್ಲಿ [illegible]

ಶ್ರೀಕಂಠಯ್ಯನು ಪೊಲೀಸು ನಿವಾಸದಲ್ಲಿರುವ [illegible] ಘಟನೆಯಾದ [illegible]

ಲಂಡನ್ನಿನಲ್ಲಿ ಪಾಕಿಸ್ತಾನದ ಪ್ರಧಾನಿ

ಪಾಕಿಸ್ತಾನದ ಪ್ರಧಾನಿ ಚೌಧರಿ ಮಹಮದ್ ಅಲಿಯವರು ನೆನ್ನೆ [illegible] ಕಾಶ್ಮೀರದ ಪ್ರಶ್ನೆ ಬಗ್ಗೆ [illegible] ಇತರ ಕಾಮನ್‌ವೆಲ್ತ್ ಪ್ರಧಾನಿಗಳೊಡನೆ ಸಂಭಾಷಣೆ ನಡೆಸುವುದಾಗಿ ಅವರು ತಿಳಿಸಿದ್ದಾರೆ [illegible] ಕಾಶ್ಮೀರದ ಸಮಸ್ಯೆಯನ್ನು ಇತ್ಯರ್ಥ ಪಡಿಸಲು [illegible] ಒಪ್ಪುವುದಿಲ್ಲವೆಂದು ಅವರು ಹೇಳಿದ್ದಾರೆ

ಈಜಿಪ್ಟಿನ ಅಧ್ಯಕ್ಷತೆಗೆ ನಾಸಿರ್‌ರವರ ಆಯ್ಕೆ

ಈಜಿಪ್ಟಿನಲ್ಲಿ ಮೊನ್ನೆ ರಾಷ್ಟ್ರದ ನೂತನ ಸಂವಿಧಾನಕ್ಕೆ ಸಮ್ಮತಿ ಸೂಚಿಸಿ, ಅಲ್ಲಿನ ಪ್ರಜೆಗಳು ಮತದಾನ ಮಾಡಿದರು ಅಲ್ಲಿನ ಅಧ್ಯಕ್ಷ ಚುನಾವಣೆಗೆ ಸ್ಪರ್ಧಿಸಿದ್ದ ಏಕಮಾತ್ರ ಉಮೇದುವಾರರಾದ ಪ್ರಧಾನಿ ಕರ್ನಲ್ ನಾಸಿರ್‌ರವರಿಗೆ [illegible] ಓಟುಗಳು ಬಂದು ಅವರು ಅಧ್ಯಕ್ಷರಾದರು

Stop Press

ವಿಶ್ವವಿದ್ಯಾನಿಲಯದ ಸೆನೆಟ್ಟಿನ ಚುನಾವಣೆ ಫಲಿತಾಂಶ

ಮೈಸೂರು ೨೪

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿನ [illegible] ಚುನಾವಣೆಯ ಎಣಿಕೆಗಳು ಈ ದಿನ ಮುಗಿದುವು ಶ್ರೀಗಳಾದ [illegible] ಶ್ರೀಕಂಠಯ್ಯನವರು [illegible] ಶ್ರೀಗಳಾದ ಚನ್ನೇಗೌಡ [illegible]

ಸೈಪ್ರಸ್ ದ್ವೀಪದ ಬಗ್ಗೆ ಬ್ರಿಟನ್ನಿನ ನೂತನ ಸೂತ್ರ

ಬ್ರಿಟನ್ನಿನ ಪ್ರಧಾನಿ ಆಂಟೊನಿ ಈಡನ್ನರು ತಮ್ಮ ಗ್ರಾಮಾಂತರ ಅಧಿಕೃತ ನಿವಾಸದಲ್ಲಿ ನೆನ್ನೆ ಪ್ರಧಾನಿ ನೆಹರೂರವರೊಡನೆ ಸೈಪ್ರಸ್ ದ್ವೀಪದ ಭವಿಷ್ಯದ ಬಗ್ಗೆ ಬ್ರಿಟಿಷ್ ಸರ್ಕಾರದ ಹೊಸ [illegible] ಚರ್ಚಿಸಿದರು ನೆಹರೂರವರು ಗ್ರೀಸ್ ಪ್ರಧಾನಿಯವರೊಡನೆ [illegible] ಬಗ್ಗೆ ನಡೆಸಿದ ಮಾತುಕತೆಗಳನ್ನು ಈಡನ್ನರಿಗೆ ವಿವರಿಸಿದರೆಂದು ವರದಿಯಾಗಿದೆ [illegible] ಸೈಪ್ರಸ್ ಆಡಳಿತದ ಭವಿಷ್ಯವನ್ನು ನಿರ್ಧರಿಸಲು ಅಲ್ಲಿನ ಜನರಿಗೆ ಸ್ವಾತಂತ್ರ್ಯವೀಯಲಾಗುವುದೆಂಬ ಅಂಶವು ಬ್ರಿಟಿಷ್ ಸರ್ಕಾರದ ಸೂತ್ರದಲ್ಲಿ ಅಡಕವಾಗಿದೆ ಈ ಬಗ್ಗೆ ಸಂಧಾನಗಳನ್ನು ನಡೆಸುವ ಪೂರ್ವಭಾವಿಯಾಗಿ ದ್ವೀಪದಲ್ಲಿ ಭಯೋತ್ಪಾದಕ ಕೃತ್ಯಗಳು ನಿಲ್ಲಬೇಕೆಂದು ಬ್ರಿಟಿಷ್ ಸರ್ಕಾರದವರು ಹೇಳುತ್ತಿದ್ದಾರೆ

[illegible] ಜೆಟ್ [illegible] ವಿಮಾನಗಳನ್ನು [illegible] ಪ್ರತಿನಿಧಿಗಳಿಗೆ ನೆನ್ನೆ ಪ್ರದರ್ಶಿಸಲಾಯಿತು ಅವನ್ನು ನೆನ್ನೆ ಮಾಸ್ಕೊವಿನಲ್ಲಿ [illegible] ಲಕ್ಷ ಜನರು ವೀಕ್ಷಿಸಿದರು ಈ ಪ್ರದರ್ಶನವನ್ನು ನೋಡುವುದಕ್ಕಾಗಿ ಉನ್ನತ ಬ್ರಿಟಿಷ್ ಮತ್ತು ಅಮೆರಿಕದ ವಿಮಾನಾಧಿಕಾರಿಗಳು ಮಾಸ್ಕೊವಿಗೆ ಹೋಗಿದ್ದರು

ಭೋಜನ ಕೂಟ

ಬಲ ಪಿಯೂ ಸಿನಿಮಾ ಮ್ಯಾನೇಜರ್ ಶ್ರೀ ಬಿ. ಶಿ. ಪಗಿರಿಂಗಪ್ಪ ತಮ್ಮ ಕುಮಾರಿ ಸೌ॥ ಸರಸ್ವತಿಯನ್ನು ಶ್ರೀ ಕೆ. [illegible] ರಿಗೆ ಕೊಟ್ಟು ನಡೆಸಿದ ವಿವಾಹದ ಸಂಬಂಧವಾಗಿ ನೆನ್ನೆ ರಾತ್ರಿ ತ್ಯಾಗರಾಜ ರಸ್ತೆಯಲ್ಲಿರುವ ಕಲ್ಯಾಣ ಭವನದಲ್ಲಿ ಭೋಜನ ಕೂಟವೊಂದನ್ನು ಏರ್ಪಡಿಸಿ ಹಲವಾರು ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

LATEST NEWS

೭ನೇ ತಾ॥ ವರೆಗೆ ಬೇಲೂರರ ಕೊಲೆ ಅಪಾದಿತರ ರಿಮ್ಯಾಂಡ್

ಪ್ರಾಸಿಕ್ಯೂಟರ್ ಪರ ಜಿ. ಶಂಕರಶೆಟ್ಟರ ವಾದ

ಸ್ವಂ. ಸು. ಫೋನ್] ಬೆಂಗಳೂರು ೨೪

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆಗಳ ಪ್ರಕರಣದಲ್ಲಿ ಬಂಧಿಸಲಾಗಿರುವ ಕೃಷ್ಣ, ಮುನಿಸ್ವಾಮಿ ಮತ್ತು ಗೋವಿಂದರೆಡ್ಡಿಯವರನ್ನು ಈ ದಿನ ಮತ್ತೆ ಇಲ್ಲಿನ ನಗರ ನ್ಯಾಯಾಧೀಶರ ಮುಂದೆ ಹಾಜರುಪಡಿಸಲಾಯಿತು

[illegible] ದಿನಗಳ ಅವಧಿಯನ್ನು ಕೇಳಿದ ಸಂಬಂಧವಾಗಿ ಅಸಿಸ್ಟೆಂಟ್ ಪಬ್ಲಿಕ್ ಪ್ರಾಸಿಕ್ಯೂಟರ್ [illegible] ಶ್ರೀ ಜಿ. ಶಂಕರಶೆಟ್ಟರು ವಾದ ಮಾಡಿದರು [illegible] ನ್ಯಾಯಾಧೀಶರು [illegible] ೭ನೇ ತಾರೀಖಿನವರೆಗೆ [illegible] ರಿಮ್ಯಾಂಡ್ ಮಾಡಿದರು

ಸಹಕಾರ ತತ್ವವು ಇನ್ನೂ ಹೆಚ್ಚಾಗಿ ಬೆಳೆಯಬೇಕು

ಸತ್ಕಾರ ಸಮಾರಂಭದಲ್ಲಿ ಅಜಿತ್ ಪ್ರಸಾದ್ ಜೈನರ ಸೂಚನೆ

ಮೈಸೂರು ೨೫

ಸಂಸ್ಥಾನದ ಸಹಕಾರ ಸಂಸ್ಥೆಯವರು ಕೇಂದ್ರ ಆಹಾರ ಸಚಿವ ಶ್ರೀ ಅಜಿತ್ ಪ್ರಸಾದ್ ಜೈನರ ಗೌರವಾರ್ಥವಾಗಿ ಮೊನ್ನೆ ಸಂಜೆ ಸಹಕಾರ ಭವನದಲ್ಲಿ ಸತ್ಕಾರ ಕೂಟವೊಂದನ್ನು ಏರ್ಪಡಿಸಿದ್ದರು

ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಸ್ವಾಗತ ಭಾಷಣ ಮಾಡಿ, ಈಗ ದೇಶದಲ್ಲಿ ನಡೆಯುತ್ತಿರುವ ೩ ಪ್ರಾಂತೀಯ ಸಹಕಾರ ಶಿಕ್ಷಣ ಸಂಸ್ಥೆಗಳ ಜೊತೆಗೆ ದ್ವಿತೀಯ ಪಂಚವಾರ್ಷಿಕ ಯೋಜನೆಯ ಕಾಲದಲ್ಲಿ ಸ್ಥಾಪಿಸಲಾಗುವ ಇನ್ನೆರಡು ಶಾಲೆಗಳಲ್ಲಿ ಒಂದನ್ನು ಮೈಸೂರಿಗೆ ಕೊಡಬೇಕೆಂದು ಪ್ರಾರ್ಥಿಸಿದರು.

ಶ್ರೀ ಜೈನರವರು ಮಾತನಾಡಿ, ಕಳೆದ ೫೦ ವರ್ಷಗಳ ಸಹಕಾರ ಚಳುವಳಿಯ ಪ್ರಗತಿಯನ್ನು ಪ್ರಸ್ತಾಪಿಸಿ, ಅದು ಬಹಳ ಕಮ್ಮಿಯೆಂದೂ ಮತ್ತು ಮಾರಾಟ, ವಸ್ತುಗಳ ಶೇಖರಣೆಯ ಕ್ಷೇತ್ರಗಳಲ್ಲಿ ಇತ್ತೀಚಿಗೆ ಸಹಕಾರ ತತ್ವವು ಆರಂಭವಾಗಿದೆಯೆಂದೂ ಹೇಳಿದರು

ಸಹಕಾರ ಚಳುವಳಿಯನ್ನು ಬಲಪಡಿಸಲು ಪ್ರತಿ ಸಂಸ್ಥಾನ ಸರ್ಕಾರದ ಸಹಕಾರ ಶಾಖಾ ಸಚಿವರು ಪ್ರಾಂತದಾದ್ಯಂತ ಸಂಚರಿಸಿ ಪ್ರಮುಖರೊಡನೆ ಸಮಾಲೋಚನೆ ಮಾಡಿ ಜನರಲ್ಲಿ ಸಹಕಾರ ತತ್ವದ ಪ್ರಚಾರ ಮಾಡಬೇಕೆಂದು ಅವರು ಸೂಚಿಸಿದರು

ಸಹಕಾರ ತತ್ವದ ಬೆಳವಣಿಗೆಗೆ ಪ್ರತ್ಯಕ್ಷ ಕಾರ್ಯಸಾಧನೆಯು ನೂರು ಭಾಷಣಗಳು ಮತ್ತು ಪ್ರಚಾರ ಸಾಧನಗಳಿಗಿಂತ ಉತ್ತಮವೆಂದು ಸಚಿವರು ಹೇಳಿ, ಸಹಕಾರಿಗಳು ವೃಥಾ ಸರ್ಕಾರದ [illegible] ಕಾರ್ಯೋನ್ಮುಖರಾಗಬೇಕೆಂದು ಎಚ್ಚರಿಸುತ್ತಲು ಡಾ|| ಶ್ರೀಕಂಠೇಶ್ವರ್‌ರವರು ವಂದನಾರ್ಪಣೆ ಮಾಡಿದರು

ಪಬ್ಲಿಕ್ ಲೈಬ್ರರಿಯ ಆಡಳಿತ ಸಮಿತಿ

ರಾಜಧಾನಿಯ ಸಾರ್ವಜನಿಕ ಪುಸ್ತಕ ಭಂಡಾರದ ಆಡಳಿತದ ಸಮಿತಿಗೆ ೫೬-೫೭ನೇ ಸಾಲಿಗೆ ಕೆಳಗೆ ಕಂಡವರು ಸದಸ್ಯರಾಗಿ ಚುನಾಯಿತರಾಗಿದ್ದಾರೆ:- ಶ್ರೀಗಳಾದ ಪಿ. ಗೋಪಾಲಕೃಷ್ಣಶೆಟ್ಟಿ, ಡಾ|| ಬಿ. ಎಸ್. ನಾರಾಯಣಶೆಟ್ಟಿ, ಎಂ. ನಾರಾಯಣರಾವ್, ವಿ. ಪ್ರಫುಲ್ಲಚಂದ್ರ, ಡಾ|| ಎ. ಎಲ್. ನರಸಿಂಹಯ್ಯ, ಜಿ. ಜನಾರ್ದನನಾಯ್ಡು, ಕೆ. ರಂಗಶಾಸ್ತ್ರಿ, ಎಸ್. ವಿ. ಷರೀಫ್, ಡಿ. ನರಸಿಂಹಾಚಾರ್ ಮತ್ತು ಎಂ. ಬಿ. ರಾಮಲಿಂಗಯ್ಯ

ಹುಡುಗ ತಪ್ಪಿಸಿಕೊಂಡಿದ್ದಾನೆ

ನರಸಿಂಹರಾಜಾ ಪೊ|| ಠಾಣೆ ಕಾನ್‌ಸ್ಟೇಬಲ್ ಚೌಡಯ್ಯನವರ ಮಗ ೧೬ ವರ್ಷದ ಚಿಕ್ಕಲಕ್ಷ್ಮೀಗೌಡ ಉರುಫ್ ಶಿವ ಎಂಬುವನು ಕಳೆದ ೧೬ನೇ ತಾರೀಖಿನಿಂದ ತಪ್ಪಿಸಿಕೊಂಡಿರುತ್ತಾನೆ. ಪುಷ್ಟನಾಗಿರುತ್ತಾನೆ, ಸ್ಕೂಲ್ ಫೈನಲ್ ತರಗತಿಯಲ್ಲಿ ಓದುತ್ತಿದ್ದಾನೆ ದುಂಡನೆಯ ಮುಖ ಯಾರಾದರೂ ಕಂಡಲ್ಲಿ ನಜರ್‌ಬಾದು ಪೊಲೀಸು ಠಾಣೆಗೆ ತಿಳಿಸುವಂತೆ ಕೋರಲಾಗಿದೆ.

NOTIFICATION

This is to notify that Sri M R G Naidu has no connection whatsoever with the Institute of Education, Mysore in any capacity All information regarding the Institute may be had from the undersigned.

K. S. Suryanarayana,
Secretary,
The Institute of Education
MYSORE

Edited, Printed and Published by A. R. Nagarajan at Sadhvi Press, D. Subbiah Road, Mysore

ಮೈಸೂರು ಪ್ರೊಫೆಸರರಿಗೆ ಯುನೆಸ್ಕೊ ಹುದ್ದೆ

ಮೈಸೂರು ವಿಶ್ವವಿದ್ಯಾಲಯದ ರಸಾಯನ ಶಾಸ್ತ್ರದ ಅಸಿಸ್ಟೆಂಟ್ ಪ್ರೊಫೆಸರ್ ಕೆ. ಆರ್. ಆಚಾರ್ಯರನ್ನು ಆಫ್ರಿಕದ ಸೀರಾ ಲಿಯೋನಿಯಲ್ಲಿ ವಿಶ್ವ ಸಂಸ್ಥೆಯ ಶಿಕ್ಷಣ ಮತ್ತು ವಿಜ್ಞಾನ ಸಮಿತಿಯ ಹುದ್ದೆಗೆ ನೇಮಿಸಲಾಗಿದೆ ಅವರು ಇದುವರೆಗೆ ಲೈಬೀರಿಯದಲ್ಲಿದ್ದರು

ಆಲಿಕಲ್ಲಿನೇಟಿನಿಂದ ೭೫ ಮಂದಿಗೆ ಗಾಯ

ಸಣ್ಣ ಚೆಂಡಿನಷ್ಟು ಗಾತ್ರದ ಆಲಿಕಲ್ಲು ವೃಷ್ಟಿ ಈ ಜಪಾನಿನ ಗಿಫು ಪ್ರದೇಶದಲ್ಲಿ ಬಿದ್ದು ೭೫ ಮಂದಿಗೆ ಗಾಯವಾದುದಾಗಿಯೂ, ೧,೩೦ ೦೦೦ ರೂ. ಆಸ್ತಿ ನಷ್ಟವಾದುದಾಗಿಯೂ ವರದಿಯಾಗಿದೆ ಇದರಿಂದ ೨ ಲಕ್ಷ ಕಿಟಕಿಗಳು ಮುರಿದುಹೋದವೆಂದೂ, ೧೦೦ ಮನೆಗಳ ಛಾವಣಿಗಳು ನಷ್ಟವಾದುವೆಂದೂ ಹೇಳಲಾಗಿದೆ

ದಕ್ಷಿಣ ಭಾರತಕ್ಕೆ ವಿಶೇಷ ರೈಲುಗಳಲ್ಲಿ ಸಕ್ಕರೆ ರವಾನೆ

ಸಕ್ಕರೆಯ ಅಭಾವಪೀಡಿತವಾಗಿರುವ ದಕ್ಷಿಣ ಭಾರತದ ಪ್ರದೇಶಗಳಿಗೆ ಉತ್ತರದಲ್ಲಿರುವ ಕಾರ್ಖಾನೆಗಳಿಂದ ಅದನ್ನು ಒದಗಿಸಲು ಭಾರತ ಸರ್ಕಾರದವರು ವ್ಯವಸ್ಥೆ ಮಾಡಿರುತ್ತಾರೆ ಬರುವ ವಾರ ವಿಶೇಷ ರೈಲುಗಳನ್ನು ಬಿಡಲಾಗುವುದು ಬೆಂಗಳೂರಿಗೂ, ಇತರ ದಕ್ಷಿಣದ ಮುಖ್ಯ ನಗರಗಳಿಗೂ ರೈಲುಗಳಲ್ಲಿ ಸಕ್ಕರೆ ಬರಲಿದೆ

ಸ್ಟಾಲಿನ್ನರ ರಹಸ್ಯ ಅಪರಾಧಗಳ ಬಗ್ಗೆ ಚಲನ ಚಿತ್ರ

ರಷ್ಯದ ಮಾರ್ಷಲ್ ಸ್ಟಾಲಿನ್ನರು ರಹಸ್ಯವಾಗಿ ನಡೆಸಿದರೆಂದು ಹೇಳಲಾದ ಅಪರಾಧಗಳನ್ನು ಕುರಿತು ಹಾಲಿವುಡ್ಡಿನ ಚಿತ್ರ ಸಂಸ್ಥೆಯೊಂದು ಚಲನಚಿತ್ರವನ್ನು ತೆಗೆಯಲಿದೆ ರಷ್ಯದ ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ನಿಕಿಟ ಕ್ರುಶ್ಚೇವರು ಮಾಡಿರುವ ಆರೋಪಣೆಗಳ ಆಧಾರದ ಮೇಲೆ ಇದನ್ನು ತೆಗೆಯಲಾಗುವುದು

ವಿವಾಹ ಮಹೋತ್ಸವ

ಟಿ ನರಸೀಪುರದ ತಾಲ್ಲೂಕು ಸೋಸಲೆಯ ಶ್ರೀ ಗಂಗಾಧರಯ್ಯನವರು ತಮ್ಮ ಪುತ್ರ ಶ್ರೀ ಹೆಚ್. ಜಿ. ಕೃಷ್ಣಮೂರ್ತಿಯವರಿಗೆ ಆನೇಕಲ್ಲಿನ ಶ್ರೀ ಎಸ್. ಕೃಷ್ಣಪ್ಪನವರ ಪುತ್ರಿ ಸೌ|| ಸುಮಿತ್ರಳನ್ನು ತಂದುಕೊಂಡು ಬೆಂಗಳೂರಿನಲ್ಲಿ ಮೊನ್ನೆ ವಿವಾಹವನ್ನು ನೆರವೇರಿಸಿದರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಎಲ್ಲರಿಗೂ [illegible] ಭಾವಗೀತ ಸಂಗೀತ ೭ ೪೦ ಗೀತ ವಿಚಾರ ೮ ೧೫ ರೆಕಾರ್ಡ್ ಮಧ್ಯಾಹ್ನ ೧೨ ಮತ್ತು ೧-೩೦ ಕೆ ಎಸ್ ರಂಗಲಕ್ಷ್ಮಯ್ಯ ವೀಣೆ ೧೨ ೪೦ ರೆಕಾರ್ಡ್ ೧ ವನಿತಾ ವಿಹಾರ ಮಹಿಳೆಯರ ಕಾರ್ಯಕ್ರಮ ೩ ರೆಕಾರ್ಡ್ [illegible] ಪ್ರೌಢಶಾಲೆಗಳಿಗಾಗಿ ಸಂಜೆ ೬ ೪೦ ಮತ್ತು ೯ ೧೫ [illegible] ಕೃಷ್ಣಯ್ಯಂಗಾರ್ ಸಂಗೀತ ೬ ೧೫ ಕೆ ಎಸ್ ವೆಂಕಟೇಶಯ್ಯ-ಕಾವ್ಯ ವಾಚನ ೭ ೪೦ ನನ್ನ ದಿನಚರಿಯ ಹಾಳೆಗಳಿಂದ ೮ ಕರ್ನಾಟಕ ಕನ್ನಡದ ಜಾನಪದ ಕಾರ್ಯಕ್ರಮ ೮-೪೦ ರೆಕಾರ್ಡ್, ೧೦ ೧೫ [illegible] ಆರ್ಕೆಸ್ಟ್ರಾ

ಹಾಸಿಗೆ-ದಿಂಬು

ಮಿತವ್ಯಯದಲ್ಲಿ ಹತ್ತಿ ದಿಂಬು ತಯಾರು ಮಾಡುತ್ತೇವೆ

ಬಾಪುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ಸಾಧನಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ತ್ವರೆಯಿಂದ ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ಡಿ. ಕೃಷ್ಣಮೂರ್ತಿ,
ಡೈರೆಕ್ಟರ್

ಬಿಹಾರಿನ ೧೪ ನದಿಗಳಲ್ಲಿ ಪ್ರವಾಹ

ಬಿಹಾರಿನ ೧೪ ನದಿಗಳಲ್ಲಿ ಪ್ರವಾಹ ಬಂದು ೬ ಲಕ್ಷ ಜನರು ವಾಸವಿರುವ ೬೦೦ ಹಳ್ಳಿಗಳಿಗೆ ಕ್ಷತಿಯುಂಟಾಗಿದೆ ಈಗಾಗಲೇ ಕೋಸಿ ನದಿಯ ಪ್ರವಾಹದಿಂದ ೩೦೦ ಹಳ್ಳಿಗಳಿಗೆ ನೀರು ನುಗ್ಗಿದೆ [illegible] ಲಕ್ಷ ರೂ. ಬೆಲೆಯ ಬೆಳೆಯು ನಾಶವಾಗಿದೆ ರಸ್ತೆ ಸಂಚಾರ ನಿಂತು ದೋಣಿಗಳ ಓಡಾಟ ಆರಂಭವಾಗಿದೆ

ಹಿಂದೀ ಪ್ರಚಾರಕ ವಿದ್ಯಾಲಯ

ರಾಜಧಾನಿಯಲ್ಲಿ ಹೊಸದಾಗಿ ಸ್ಥಾಪಿತವಾಗಿರುವ ಮೇಲ್ಕಂಡ ವಿದ್ಯಾಲಯವು ಕಳೆದ ಬುಧವಾರ ದಳವಾಯಿ ಪ್ರೌಢಶಾಲೆಯ ಕಟ್ಟಡದಲ್ಲಿ ಪ್ರಾರಂಭವಾಯಿತು ಕರ್ನಾಟಕ ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿ ಶ್ರೀ ಬಿ ವೆಂಕಟಾಚಲಶರ್ಮ, ಮೈಸೂರು ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿ ಶ್ರೀ ಎಂ ಕೆ ರಾಜಗೋಪಾಲ್ ಮತ್ತು ಮೈಸೂರು ವಿಶ್ವವಿದ್ಯಾಲಯದ ಹಿಂದೀ ವಿಭಾಗದ ಅಧ್ಯಕ್ಷ ಶ್ರೀ ಎಸ್. ನಾಗಪ್ಪನವರೂ ಹಿಂದಿ ಶಿಕ್ಷಣದ ಮಹತ್ವವನ್ನು ಕುರಿತು ಭಾಷಣ ಮಾಡಿ, ವಿದ್ಯಾಲಯಕ್ಕೆ ಯಶಸ್ಸನ್ನು ಕೋರಿದರು ವಿದ್ಯಾ ಸಚಿವ ಶ್ರೀ ಎ ಜಿ. ರಾಮಚಂದ್ರರಾಯರು ಶುಭ ಸಂದೇಶವನ್ನು ಕಳುಹಿಸಿದ್ದರು ಶಾಲೆಗಳು ಮತ್ತು ಹಿಂದೀ ಪ್ರಚಾರ ಸಂಸ್ಥೆಗಳಲ್ಲಿ ಕೆಲಸ ಮಾಡುತ್ತಿರುವ ಹಿಂದೀ ಉಪಾಧ್ಯಾಯರ ಅನುಕೂಲಕ್ಕಾಗಿ ವಿದ್ಯಾಲಯದ ಕೆಲಸದ ಕಾಲವನ್ನು ಬೆಳಗ್ಗೆ ಮತ್ತು ಸಂಜೆಯ ವೇಳೆಗಳಲ್ಲಿ ಏರ್ಪಡಿಸಲಾಗಿದೆ ವಿಶಾರದ ಅಥವ ಪ್ರವೀಣ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರು ಒಡನೆ [illegible] ಸೇರಲು ಅವಕಾಶವಿದೆ ವಿವರಗಳನ್ನು ಕಾರ್ಯದರ್ಶಿ, ಹಿಂದೀ ಪ್ರಚಾರ ಸಭಾ, ನ್ಯೂ ಸಯ್ಯಾಜಿರಾವ್ ರಸ್ತೆ, ಮೈಸೂರು ಇವರಿಂದ ತಿಳಿಯಬಹುದು

ಅಭಾವ ಪ್ರದೇಶಗಳಿಗೆ ಕೇಂದ್ರ ಆಹಾರ ಸಂಸ್ಥೆಯ ಹಿಟ್ಟು

ಸಂಸ್ಥಾನದ ಅಭಾವ ಪ್ರದೇಶಗಳಲ್ಲಿ ಉಚಿತವಾಗಿ ಹಂಚಲು ಇಲ್ಲಿನ ಕೇಂದ್ರ ಆಹಾರ ಸಂಶೋಧನಾಲಯದವರು ೪ ಟನ್ನಿನಷ್ಟು 'ಮೈಸೂರು ಹಿಟ್ಟನ್ನು' ಒದಗಿಸಲಿರುವರು ಅದನ್ನು ಮರಗೆಣಸು ಮತ್ತು ಕಡಲೆಕಾಯಿ ಹಿಟ್ಟನ್ನು ಬೆರೆಸಿ ತಯಾರಿಸಲಾಗಿದೆ ಅದರಲ್ಲಿ ಶೇಕಡ ೧೪ರಷ್ಟು ಪೌಷ್ಟಿಕಾಂಶವಿರುವುದೆಂದೂ, ಸಾಮಾನ್ಯ ಕಾಲವೆಲ್ಲೂ ಅದನ್ನು ಬಳಸಬಹುದೆಂದೂ ತಿಳಿಸಲಾಗಿದೆ ಅದರಲ್ಲಿ ಗಂಜಿ, ಚಪಾತಿ, ಪೂರಿ ಮುಂತಾದುವನ್ನು ಮಾಡಬಹುದು ಅದನ್ನು ಗುಂಡ್ಲುಪೇಟೆ ತಾಲ್ಲೂಕಿನಲ್ಲೂ, ಅಕ್ಕಪಕ್ಕದ ಪ್ರದೇಶಗಳಲ್ಲೂ ಇಲ್ಲಿನ ರೋಟರಿ ಸಂಸ್ಥೆಯವರು ಹಂಚಲು ವ್ಯವಸ್ಥೆ ಮಾಡಿರುವರು ಹಿಂದೆ ಚಿತ್ರದುರ್ಗದ ಕ್ಷಾಮ ಪ್ರದೇಶದಲ್ಲೂ ಮದರಾಸಿನ ಹಲವಾರು ಪ್ರವಾಹ ಪೀಡಿತ ಸ್ಥಳಗಳಲ್ಲೂ ಹಿಟ್ಟನ್ನು ಉಪಯೋಗಿಸಲಾಗಿತ್ತು

Pale
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists
71/1 A.S Street,
BANGALORE-2

ಗಡಿಯಾರಗಳು ಮತ್ತು ಕನ್ನಡಕಗಳು

ಎಲ್ಲಾ ಕಂಪನಿಗಳ ಪ್ರಸಿದ್ಧ ಜರ್ಮನಿಯ
ಹೊಸ ನಮೂನೆಗಳ
ಗಡಿಯಾರಗಳು ಮತ್ತು ಕನ್ನಡಕಗಳು
ನಮ್ಮಲ್ಲಿ ಅತ್ಯಂತ ಸುಲಭ ಬೆಲೆಗೆ ದೊರೆಯುತ್ತವೆ
ಒಂದೇ ಭೇಟಿ ಕೊಡಿ

ಕೆ. ಎಸ್. ಲಕ್ಷ್ಮಣ ಐಯ್ಯರ್
ಅಂಡ್ ಸನ್ಸ್
ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಿಗಳು
ಅಶೋಕ ರಸ್ತೆ, ಮೈಸೂರು [Estd. 191[illegible]]

ಬಾಲಕರ ಶಾಲೆಗಳಿಗೂ ಮಹಿಳಾ ಮುಖ್ಯೋಪಾಧ್ಯಾಯರು

ತಿರುವಾಂಕೂರಿನಲ್ಲಿ ಸಹವಿದ್ಯಾಭ್ಯಾಸವಿರುವ ಮತ್ತು ಬಾಲಕಬಾಲಕಿಯರಿಗೆ ಪ್ರತ್ಯೇಕ ಶಿಕ್ಷಣ ವ್ಯವಸ್ಥೆಯಿರುವ ಎಲ್ಲಾ ಮಾಧ್ಯಮಿಕ ಶಾಲೆಗಳಲ್ಲೂ ಪದವೀಧರ ಮಹಿಳೆಯರನ್ನು ಮುಖ್ಯೋಪಾಧ್ಯಾಯಿನಿಯರಾಗಿ ನೇಮಿಸಲು ಅಲ್ಲಿನ ಸರ್ಕಾರದವರು ಅವಕಾಶಕೊಟ್ಟಿರುತ್ತಾರೆ. ಇದುವರೆಗೆ ಮಹಿಳಾ ಶಾಲೆಗಳಿಗೆ ಮಾತ್ರ ಅವರು ಮುಖ್ಯೋಪಾಧ್ಯಾಯಿನಿಯರಾಗುವ ಅವಕಾಶವಿತ್ತು

ಶ್ರೀ ಶಾರದಾ ಸಂಗೀತ ನಾಟಕ ಮಂಡಲಿ,

ಗೋಕಾಕ್
ಇವರು ಮೈಸೂರು ಟೌನ್‌ಹಾಲಿನಲ್ಲಿ
ಈ ರಾತ್ರಿ 9-45 ಘಂಟೆಗೆ

★ ಮಾನವತಿ ★

ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸುವರು

CENTRAL INSTITUTE OF COMMERCE,
Vanivilas Market, Mysore
Admissions to diploma courses in Commerce, Shorthand and Typewriting are being received on all working days.

ನಗರಾಭಿವೃದ್ಧಿ ಸಮಿತಿ,

ಮೈಸೂರು

ಪ್ರಕಟಣೆ

ತಾರೀಖು 7—6—1956

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿ ವಾಣಿವಿಲಾಸ ಮೊಹಲ್ಲಾ ವಾಲ್ಮೀಕಿ ಮತ್ತು ಆದಿ ಪಂಪ ರಸ್ತೆಯಲ್ಲಿ, ಮೂರು ನಮೂನೆಯ 44 ಮಾದರಿ ಮನೆಗಳನ್ನು ಕಟ್ಟಿರುವುದು ಸರಿಯಷ್ಟೆ. ಈ ಮನೆಗಳ ಪೈಕಿ ಈಗಾಗಲೇ ವಿಲೆಯಾಗಿರುವ 32 ಮನೆಗಳು ಬಿಟ್ಟು ಉಳಿದ 12 ಮನೆಗಳು ಬಾಕಿ ಇವೆ ಇಚ್ಛೆಯುಳ್ಳವರು ಈ ಕೆಳಗೆ ನಮೂದಿಸಿರುವ ಬೆಲೆಯ ಕಾಲು ಭಾಗವನ್ನು ಮುಂಗಡವಾಗಿ ಪಾವತಿ ಮಾಡಿ ನಿಗದಿಯಾಗಿರುವ ಅರ್ಜಿ ಫಾರಂನಲ್ಲಿ ತಾರೀಖು 20-7-1956ನೇ ಶುಕ್ರವಾರ ಮಧ್ಯಾಹ್ನ 1 ಗಂಟೆಯೊಳಗೆ ಅರ್ಜಿ ಹಾಕಿಕೊಳ್ಳಬಹುದು ಬಾಕಿ ಮೊಬಲಗನ್ನು ತಿಂಗಳು 1ಕ್ಕೆ 100 ರೂಪಾಯಿಗಳ ಮೇರೆ ಶೇಕಡ ಆರೂಕಾಲು ಬಡ್ಡಿ ಸೇರಿಸಿ ಪಾವತಿ ಮಾಡಬಹುದು. ಮನೆ ಮಂಜೂರಾದ ಅರ್ಜಿದಾರರಿಂದ ವಿಧಾಯಕವಾದ ಹೈರ್ ಪರ್ಚೇಸ್ ಅಗ್ರಿಮೆಂಟ್ ತೆಗೆದುಕೊಂಡು ಕೂಡಲೆ ಮನೆ ಸ್ವಾಧೀನ ಕೊಡಲಾಗುವುದು. ಮನೆ ಮಂಜೂರಾಗದ ಅರ್ಜಿದಾರರ ಮುಂಗಡದ ಹಣವನ್ನು ವಾಪಸು ಮಾಡಲಾಗುವುದು. ಮುಂಗಡ ಹಣ ಪಾವತಿ ಮಾಡದ ಅರ್ಜಿಗಳಿಗೆ ಬೆಲೆ ಕೊಡಲಾಗುವುದಿಲ್ಲ. ಈ ಪೈಕಿ A ಮಾದರಿ ಮನೆಗಳಿಗೆ ನಲ್ಲಿ ಮತ್ತು ನೆಲಚರಂಡಿ ವ್ಯವಸ್ಥೆ ಮಾಡಿದೆ B ಮತ್ತು C ನಮೂನೆ ಮನೆಗಳಿಗೆ ನೆಲಚರಂಡಿ ವ್ಯವಸ್ಥೆ ಮಾತ್ರ ಮಾಡಿದೆ. ಮತ್ತು ಹತ್ತಿರದಲ್ಲೇ ನೀರಿನ ಮತ್ತು ದೀಪದ ಲೈನುಗಳು ಇವೆ

—ಮನೆಗಳ ಬೆಲೆಯ ವಿವರ:—

A ನಮೂನೆ 9,600 ರಿಂದ 10,100

B ನಮೂನೆ 8,500 ರಿಂದ 9,300

C. ನಮೂನೆ 7,400ರಿಂದ 7,600.

ಹೆಚ್ಚಿಗೆ ವಿವರಗಳನ್ನು ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

(ಸಹಿ) ಎಸ್. ಲಿಂಗಣ್ಣ,
ಅಧ್ಯಕ್ಷರು

ರಿಜಿಸ್ಟರ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಅಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : TUESDAY 26—6—1956 ಮೈಸೂರು : ಮಂಗಳವಾರ ೨೬—೬—೧೯೫೬ [ಸಂಚಿಕೆ : ೨೯೫

ನೆಹರೂ ಮತ್ತು ಅಧ್ಯಕ್ಷ ಐಸೆನ್‌ಹೋವರರ ಭೇಟಿ ರದ್ದು

ವಿದ್ಯುಚ್ಛಕ್ತಿ ಬಳಸುವವರೊಡನೆ ಮಂತ್ರಿಗಳ ಸಮಾಲೋಚನೆ

ನಾಳೆ ಸಂಜೆ ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ಸಭೆ

ಮೈಸೂರು ೨೫

ವಿದ್ಯುಚ್ಛಕ್ತಿ ದರಗಳನ್ನು ಹೊಸದಾಗಿ ಬದಲಾಯಿಸಿ ಸರ್ಕಾರದವರು ಹೊರಡಿಸಿರುವ ಆಜ್ಞೆಯಿಂದ ಉಂಟಾಗಿರುವ ತೊಂದರೆಗಳನ್ನು ಪರಿಶೀಲಿಸಲು ಹೊಸದಾಗಿ ಗೊತ್ತಾಗಿದ್ದಂತೆ ವಿದ್ಯುಚ್ಛಕ್ತಿ ಶಾಖಾ ಮಂತ್ರಿಗಳಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಇದೇ ೨೭ನೇ ತಾರೀಖು ಸಂಜೆ ೪॥ ಗಂಟೆಗೆ ಮೈಸೂರು ಜಿಲ್ಲಾಧಿಕಾರಿಗಳ ಕಛೇರಿಯಲ್ಲಿ ವಿದ್ಯುಚ್ಛಕ್ತಿ ಬಳಸುವವರೊಡನೆ ಸಮಾಲೋಚನೆ ನಡೆಸುವರು. ವಿದ್ಯುಚ್ಛಕ್ತಿಯಿಂದ ಯಂತ್ರಗಳನ್ನು ನಡೆಸುವ ಎಲ್ಲಾ ಕೈಗಾರಿಕೋದ್ಯಮಿಗಳಿಗೂ ಇದರಲ್ಲಿ ಭಾಗವಹಿಸಲು ಅವಕಾಶವಿರುತ್ತದೆ.

ಶ್ರೀ ಹೆಚ್. ಎಂ. ಚನ್ನಬಸಪ್ಪನವರು ವ್ಯವಸಾಯ ಮಂತ್ರಿಗಳ ಸಮ್ಮೇಳನಕ್ಕಾಗಿ ಮುಸ್ಸೂರಿಗೆ ಹೋಗಬೇಕಾಗಿದ್ದ ಕಾರ್ಯಕ್ರಮವನ್ನು ರದ್ದುಗೊಳಿಸಿರುತ್ತಾರೆ.

ನೆಹರೂರವರ ಅಮೆರಿಕಾ ಭೇಟಿ ಮುಂದಕ್ಕೆ

ಬರುವ ತಿಂಗಳು ೭ ರಿಂದ ೯ ದಿನಗಳ ಕಾಲ ಪ್ರಧಾನಿ ನೆಹರೂರವರೊಡನೆ ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರು ನಡೆಸಬೇಕಾಗಿದ್ದ ಮಾತುಕತೆಯನ್ನು ಮುಂದೆ ಹಾಕಲಾಗಿದೆ. ಮುಂದೆ ಇಬ್ಬರ ಭೇಟಿಗಾಗಿ ಐಸೆನ್‌ಹೋವರರು ನೆಹರೂರವರಿಗೆ ಪುನಃ ಆಹ್ವಾನವನ್ನಿತ್ತಿದ್ದಾರೆ. ಅಮೆರಿಕದ ಅಧ್ಯಕ್ಷರು ಇತ್ತೀಚೆಗೆ ಅನಾರೋಗ್ಯರಾಗಿದ್ದು ಈಗ ಗುಣ ಹೊಂದುತ್ತಿರುವರು. ವೈಯಕ್ತಿಕ ಸಂಭಾಷಣೆಗಳಿಂದ ಐಸೆನ್‌ಹೋವರರಿಗೆ ಮತ್ತಷ್ಟು ಶ್ರಮವಾಗಬಾರದೆಂದು ನೆಹರೂರವರು ತಿಳಿಸಿದ್ದರ ಮೇಲೆ ಮಾತುಕತೆಗಳನ್ನು ಅಮೆರಿಕಾ ಅಧ್ಯಕ್ಷರು ಮುಂದುವರಿಸಿರುತ್ತಾರೆ.

ಸೈಪ್ರಸ್ ನ್ಯಾಯಾಧೀಶರಿಗೆ ಗುಂಡೇಟು

ಸೈಪ್ರಸ್ ದ್ವೀಪದ ಹಿರಿಯ ನ್ಯಾಯಾಧೀಶರಾದ ಬ್ರಿಟಿಷ್ ದೇಶದ ಬರ್ನಾರ್ಡ್ ಶಾರವರ ಮೇಲೆ ನೆನ್ನೆ ಭಯೋತ್ಪಾದಕರು ಗುಂಡು ಹಾರಿಸಿದರು. ಅವರ ತಲೆ ಮತ್ತು ಕುತ್ತಿಗೆಗೆ ಗಾಯವಾಗಿದೆ. ಅವರು ಅನೇಕರನ್ನು ಗಲ್ಲು ಶಿಕ್ಷೆಗೆ ಗುರಿಪಡಿಸಿರುವರು.

ಟಿ. ನರಸೀಪುರದ ವಿದ್ಯಾರ್ಥಿ ನಿಲಯದ ಶಂಕು ಸ್ಥಾಪನೆ

ಟಿ. ನರಸೀಪುರದಲ್ಲಿರುವ ವಿದ್ಯೋದಯ ವಿದ್ಯಾರ್ಥಿ ನಿಲಯದ ಶಂಕುಸ್ಥಾಪನೆಯನ್ನು ನಾಳೆ ಬೆಳಗ್ಗೆ ೯ ಘಂಟೆಗೆ ಕೇಂದ್ರ ವಿದ್ಯಾ ಉಪಮಂತ್ರಿ ಡಾ॥ ಕೆ. ಎಲ್. ಶ್ರೀಮಾಲಿಯವರು ನೆರವೇರಿಸುವರು. ಸಂಸ್ಥಾನದ ವಿದ್ಯಾ ಸಚಿವರಾದ ಶ್ರೀ ಎ. ಜಿ. ರಾಮಚಂದ್ರರಾಯರು ಶ್ರೀ ತಾ. ವೆತ್ತಿ ಸಭಾ ಸದನದ ಶಂಕು ಸ್ಥಾಪನೆಯನ್ನು ಮಾಡುವರು. ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ಅಧ್ಯಕ್ಷತೆ ವಹಿಸುವ ...

ಬೇಲೂರರ ಕೊಲೆ ಅಪಾದಿತರಿಗೆ ಹೆಚ್ಚಿನ ಜೈಲು ರಿಮ್ಯಾಂಡು

ಬೆಂಗಳೂರು ೨೫

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಪತ್ನಿ ಕೊಲೆ ಪ್ರಕರಣದಲ್ಲಿ ಬಂಧಿತರಾಗಿರುವ ಮೂವರನ್ನು ಇಲ್ಲಿನ ನಗರ ನ್ಯಾಯಾಧೀಶರ ಸಮ್ಮುಖದಲ್ಲಿ ಪುನಃ ಹಾಜರುಪಡಿಸಿ ಬರುವ ತಿಂಗಳು ೭ನೇ ತಾರೀಖಿನವರೆಗೆ ಮತ್ತೆ ಜೈಲು ರಿಮಾಂಡ್ ಕಳುಹಲಾಯಿತು. ಅಡಿಷನಲ್ ಅಸಿಸ್ಟೆಂಟ್ ಅಡ್ವೊಕೇಟ್ ಜನರಲ್ಲಾದ ಶ್ರೀ ಬಿ. ವೆಂಕಟಶೆಟ್ಟರು ವಾದಿಸುತ್ತಾ, ಈಗಾಗಲೇ ಪ್ರೊಸಿಕ್ಯೂಷನ್ ಕೋರ್ಟಿಗೆ ಪ್ರಿಲಿಮಿನರಿ ವರದಿಯನ್ನು ಒಪ್ಪಿಸಿರುವರೆಂದೂ, ರಂಗಲಕ್ಷ್ಮಿಯ ವಿಚಾರಣೆ ಮಾಡಬೇಕಾಗಿರುವುದರಿಂದ ತನಿಖೆಯು ಮುಕ್ತಾಯವಾಗಿಲ್ಲವೆಂದೂ ತಿಳಿಸಿದರು.

ಬರುವ ೩ ವಾರದೊಳಗೆ ರಂಗಲಕ್ಷ್ಮಿಯು ಸಾಕ್ಷ್ಯವೀಯುವನ್ನು ಮುಗಿಸಲಾಗುವುದೆಂದು ನ್ಯಾಯಾಧೀಶರು ಕೇಳಲಾಗಿ, ಇದ್ದ ಸಾಕ್ಷ್ಯ ಸಾಹಿತ್ಯದ ಸಹಾಯದಿಂದಲೇ ಮುಂದಿನ ನಡವಳಿಕೆಯನ್ನು ಆರಂಭಿಸಲಾಗುವುದೆಂದು ಶ್ರೀ ವೆಂಕಟಶೆಟ್ಟರು ನುಡಿದರು. ಆಪಾದಿತರಿಗೆ ಭಾರಿ ಪೋಲೀಸು ಕಾವಲನ್ನು ಹಾಕಲಾಗಿತ್ತು. ಕೋರ್ಟ್ ಪಡಸಾಲೆಯಲ್ಲೂ, ಪ್ರೇಕ್ಷಕರಿಂದಲೂ ಕಿಕ್ಕಿರಿದು ತುಂಬಿತ್ತು.

ನೆಹರೂ-ಟ್ರೂಮನ್ ಭೇಟಿ

ಅಮೆರಿಕದ ಮಾಜಿ ಅಧ್ಯಕ್ಷ ಹ್ಯಾರಿ ಟ್ರೂಮನ್ನರು ತಮ್ಮ ಪತ್ನಿಯ ಸಮೇತರಾಗಿ ನೆನ್ನೆ ಲಂಡನ್ನಿನಲ್ಲಿ ಪ್ರಧಾನಿ ನೆಹರೂರವರನ್ನು ಭೇಟಿ ಮಾಡಿದರು. ಆಗ ನೆಹರೂರವರೊಡನೆ ಸಿಂಹಳದ ಪ್ರಧಾನಿ ಭಂಡಾರನಾಯಕೆಯವರೂ ಇದ್ದರು.

ಸಂಸ್ಥಾನದ ಆಹಾರ ಅಭಾವ ಪರಿಸ್ಥಿತಿ

ಪತ್ರಿಕಾ ಸಮ್ಮೇಳನದಲ್ಲಿ ಎಂ. ವಿ. ಕೃಷ್ಣಪ್ಪನವರ ವಿವರಣೆ

ಸ್ವಂ ಸು ಪ್ರೋ॥] ಬೆಂಗಳೂರು ೨೫

ಕೇಂದ್ರ ಆಹಾರ ಉಪಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಈ ದಿನ ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡಿ, ತಾವು ಶ್ರೀ ಹೆಚ್. ಸಿ. ದಾಸಪ್ಪ, ಮುಂತಾದವರೊಡನೆ ಅಭಾವ ಪೀಡಿತ ಪ್ರದೇಶಗಳಲ್ಲಿ ಕೈಗೊಂಡ ಪ್ರವಾಸವನ್ನು ವಿವರಿಸಿದರು. ಆ ಪ್ರದೇಶದಲ್ಲಿ ಅಭಾವ ಪರಿಸ್ಥಿತಿಯು ಇರುವುದಿಲ್ಲವೆಂದೂ, ಸಕಾಲದಲ್ಲಿ ಮಳೆ ಬಾರದೆ ಜನರು ನಿರುದ್ಯೋಗಿಗಳಾಗಿರುವುದೇ ಅಲ್ಲಿನ ಸಮಸ್ಯೆಯೆಂದೂ ಅವರು ಹೇಳಿದರು.

ಸಂಸ್ಥಾನಗಳಲ್ಲಿ ಕೇಂದ್ರ ಸರ್ಕಾರದವರು ಸಾಮಾನ್ಯವಾಗಿ ಪ್ರವೇಶಿಸುತ್ತಿಲ್ಲವೆಂದೂ, ಆಹಾರದ ಬೆಲೆಯು ಏರಿಕೆಯಾದಾಗ ಮಾತ್ರ ಪ್ರವೇಶಿಸುವುದಾಗಿಯೂ ಅವರು ವಿವರಿಸಿದರು. ಬರುವ ನಾಲ್ಕು ತಿಂಗಳಲ್ಲಿ ೪೦ ಕೋಟಿ ರೂ.ಗಳ ಧಾನ್ಯವನ್ನು ದೇಶಾದ್ಯಂತ ಅಭಾವ ಪ್ರದೇಶಗಳಿಗೆ ಒದಗಿಸಲಾಗುವುದೆಂದೂ ಅವರು ತಿಳಿಸಿದರು.

ವಿಶ್ವವಿದ್ಯಾಲಯ ಸೆನೆಟ್ ಸಭೆ ಚುನಾವಣೆ ಫಲಿತಾಂಶ

ಮೈಸೂರು ೨೫

ಪದವೀಧರರುಗಳ ಕ್ಷೇತ್ರದಿಂದ ವಿಶ್ವವಿದ್ಯಾಲಯದ ಸೆನೆಟ್ ಸಭೆಗೆ ನಡೆದ ಚುನಾವಣೆಯಲ್ಲಿ ಶ್ರೀಗಳಾದ ಎಂ. ಪಿ. ಎಲ್. ಶಾಸ್ತ್ರಿ, ಗಾಂಜಿ ವೀರಪ್ಪ, ಎನ್. ಶ್ರೀನಿವಾಸಮೂರ್ತಿ, ಎಸ್. ವೆಂಕಟಲಿಂಗಪ್ಪ, ಎಚ್. ಶ್ರೀಕಂಠಯ್ಯ—ಈ ೫ ಮಂದಿ ಸ್ಪರ್ಧಿಗಳು ಚುನಾಯಿತರಾಗಿದ್ದಾರೆ. ಅವರಿಗೆ ಕ್ರಮವಾಗಿ ೫೬೪, ೫೩೦, ೫೨೫, ೫೨೧ ಮತ್ತು ೪೯೦ ಓಟುಗಳು ಬಂದುವು. ಶ್ರೀ ಎನ್. ಎ. ಚನ್ನೇಗೌಡ ಮತ್ತು ಕೆ. ಎಂ. ರುದ್ರಪ್ಪನವರಿಬ್ಬರಿಗೂ ತಲಾ ೩೩೩ ಓಟುಗಳು ಬಂದು, ಅವರಲ್ಲಿ ಒಬ್ಬರ ಆಯ್ಕೆಯಾಗಬೇಕಾಗಿದೆ. ಈ ಚುನಾವಣೆಗೆ ಒಟ್ಟು ೧೨ ಮಂದಿ ಸ್ಪರ್ಧಿಸಿದ್ದರು.

ಮದ್ರಾಸಿನಲ್ಲಿ ವಾಸುದೇವಾಚಾರ್ಯರ ವರ್ಧಂತಿ

ಮದ್ರಾಸಿನ ಕಲಾಕ್ಷೇತ್ರದ ಆಶ್ರಯದಲ್ಲಿ ಮೊನ್ನೆ ಸಂಗೀತ ಶಾಸ್ತ್ರ ವಿಶಾರದ ಶ್ರೀ ವಾಸುದೇವಾಚಾರ್ಯರ ವರ್ಧಂತಿಯನ್ನು ಆಚರಿಸಲಾಯಿತು. ಶ್ರೀ ಆಚಾರ್ಯರಿಂದ ರಚಿತವಾಗಿರುವ ನವರತ್ನ ರಾಗಮಾಲಿಕೆ ಗ್ರಂಥವನ್ನು ಆ ಸಮಯದಲ್ಲಿ ಪ್ರಕಟಗೊಳಿಸಲಾಯಿತು. ಕಲಾಕ್ಷೇತ್ರದ ಶ್ರೀಮತಿ ರುಕ್ಮಿಣಿದೇವಿಯವರು ಭಾಷಣ ಮಾಡಿ ಶಾಸ್ತ್ರೀಯ ಸಂಗೀತದ ಮಟ್ಟವನ್ನು ಉಳಿಸಲು ಶ್ರೀ ಆಚಾರ್ಯರು ಶ್ರಮಿಸುತ್ತಿರುವುದಾಗಿ ಹೇಳಿದರು.

ಶ್ರೀ ಕೆ. ಎಸ್. ರಾಮಸ್ವಾಮಿ ಶಾಸ್ತ್ರಿಯವರು ಶ್ರೀ ವಾಸುದೇವಾಚಾರ್ಯರಿಗೆ ಸಂಸ್ಕೃತ ಭಾಷೆಯಲ್ಲಿ ಮಾನಪತ್ರವನ್ನು ಒಪ್ಪಿಸಿದರು.

ಅಧ್ಯಕ್ಷತೆ ವಹಿಸಿದ್ದ ಸುಪ್ರೀಂ ಕೋರ್ಟ್ ನ್ಯಾಯಾಧೀಶರಾದ ಶ್ರೀ ಟಿ. ಎಲ್. ವೆಂಕಟರಾಮ ಅಯ್ಯರ್‌ರವರು ಭಾಷಣ ಮಾಡಿ, ಸಾಹಿತ್ಯ ಮತ್ತು ಸಂಗೀತ ಇವೆರಡರ ಮೇಲೆ ಏಕಕಾಲದಲ್ಲಿ ಪ್ರೌಢಿಮೆ ಹೊಂದುವುದು ವಿರಳವೆಂದೂ, ಆ ಹಿರಿಮೆಯು ಶ್ರೀ ಆಚಾರ್ಯರಲ್ಲಿರುವುದಾಗಿಯೂ, ಅಂತಹವರಿಗೆ ಎಲ್ಲರೂ ಕೃತಜ್ಞರಾಗಿರಬೇಕೆಂದೂ ತಿಳಿಸಿದರು.

ಶ್ರೀಗಳಾದ ಪಾಪನಾಶಂ ಶಿವ, ಮುಸಿರಿ ಸುಬ್ರಹ್ಮಣ್ಯ ಅಯ್ಯರ್ ಮತ್ತು ಕೆ. ಚಂದ್ರಶೇಖರರವರು ಶ್ರೀ ಆಚಾರ್ಯರ ಗುಣಗಾನ ಮಾಡಿದರು. ಶ್ರೀ ಆಚಾರ್ಯರು ಉತ್ತರವಿತ್ತು, ಕೃತಜ್ಞತೆಯನ್ನು ಸೂಚಿಸಿದುದಲ್ಲದೆ, ಸ್ವಲ್ಪ ಕಾಲ ಮಧುರವಾಗಿ ಗಾನ ಮಾಡಿದರು.

ಮೈಸೂರಿನ ರಾಜಪ್ರಮುಖರು, ಮದ್ರಾಸ್ ಗವರ್ನರ್, ಡಾ॥ ಸಿ. ಪಿ. ರಾಮಸ್ವಾಮಿ ಅಯ್ಯರ್ ಮುಂತಾದವರು ಶುಭ ಸಂದೇಶಗಳನ್ನು ಕಳುಹಿಸಿದ್ದರು.

ರಷ್ಯವು ಕಳೆದ ೧೯ನೇ ತಾರೀಖು ಮತ್ತೊಂದು ಅಣುಬಾಂಬನ್ನು ಸೈಬೀರಿಯದಲ್ಲಿ ಸಿಡಿಸಿತೆಂದು ವರದಿಯಾಗಿದೆ. ಅದರ ಧೂಳು ಜಪಾನಿನ ತೀರ ಪ್ರದೇಶದಲ್ಲಿ ಬೀಳುತ್ತಿರುವುದಾಗಿಯೂ ಹೇಳಲಾಗಿದೆ.

ರೇಷ್ಮೆ ಕಾರ್ಖಾನೆ ಬಿಕ್ಕಟ್ಟಿನ ಪರಿಹಾರದ ಒಪ್ಪಂದ

ಕಾರ್ಮಿಕ ಸಚಿವರ ಕಛೇರಿಯಲ್ಲಿ ಪ್ರತಿನಿಧಿಗಳವರ ಸಭೆ

ಸ್ವಂ ಸು ಪ್ರೋ॥] ಬೆಂಗಳೂರು ೨೫

ಈ ದಿನ ಕಾರ್ಮಿಕ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರ ಕಛೇರಿಯಲ್ಲಿ ರೇಷ್ಮೆ ಕಾರ್ಖಾನೆಗಳ ಮಾಲೀಕರು, ಕಾರ್ಮಿಕರು ಮತ್ತು ಅಧಿಕಾರಿಗಳ ಸಭೆಯಲ್ಲಿ ನೆನ್ನೆ ಆದ ಒಪ್ಪಂದಕ್ಕೆ ರುಜು ಹಾಕಲಾಯಿತು.

ಅದರ ಪ್ರಕಾರ ರೇಷ್ಮೆ ಕಾರ್ಖಾನೆಗಳನ್ನು ಇದೇ ಜುಲೈ ೨ನೇ ತಾರೀಖು ತೆರೆಯಬೇಕೆಂದು ಗೊತ್ತುಮಾಡಲಾಯಿತು. ಲಾಕ್‌ಔಟ್ ಅವಧಿಯ ಪೂರ್ತಿ ಮೇ ೧೫ರಿಂದ ಜುಲೈ ೨ರ ವರೆಗೆ ಕಾರ್ಮಿಕರಿಗೆ ವೇತನ ೩೩ ೧/೩ಯಂತೆ ಪರಿಹಾರವನ್ನು ಕೊಡಬೇಕೆಂದು ನಿರ್ಧರಿಸಲಾಯಿತು. ಮತ್ತು ಅವರವರಲ್ಲಿ ಕೆಲಸಕ್ಕೆ ತೆಗೆದುಕೊಳ್ಳುವ ಶೇಕಡ ೬೦ ಮಂದಿ ಕಾರ್ಮಿಕರಿಗೂ ಈ ಸೌಲಭ್ಯವು ದೊರೆಯುವುದು. ಉಳಿದ ವಿಚಾರವನ್ನು ಸಂಧಾನ ಸಮಿತಿಗೆ ಒಪ್ಪಿಸಲಾಗುವುದು.

ಕಾರ್ಮಿಕರು ತಮ್ಮ ವಿವಾದಗಳನ್ನೆಲ್ಲಾ ಕೈಗಾರಿಕಾ ನ್ಯಾಯಮಂಡಲದಿಂದ ವಾಪಸು ಪಡೆದನಂತರ ಇತರ ಎಲ್ಲಾ ವಿವಾದದ ವಿಷಯಗಳನ್ನು ವಿಶೇಷ ರಾಜಿ ಸಂಧಾನ ಸಮಿತಿಗೆ ಒಪ್ಪಿಸಲು ನಿರ್ಧಾರವಾಯಿತು.

ಮೈಸೂರಿಗೆ ವಿಶೇಷ ರೈಲಿನಲ್ಲಿ ೩,೦೦೦ ಪಲ್ಲ ಅಕ್ಕಿ

ಬೆಂಗಳೂರು ೨೫

ಕೇಂದ್ರ ಸರ್ಕಾರದವರು ಮೈಸೂರಿನ ಅಭಾವ ಪ್ರದೇಶಗಳಿಗೆ ಒದಗಿಸಲಿರುವ ೩೦,೦೦೦ ಪಲ್ಲಾಗಳ ರವಾ ಅಕ್ಕಿಯನ್ನು ವಿಶೇಷ ರೈಲುಗಳಲ್ಲಿ ರವಾನಿಸಲಾಗುವುದು. ಅದರಂತೆ ೩,೦೦೦ ಪಲ್ಲ ಅಕ್ಕಿಯನ್ನು ಹೊತ್ತ ವಿಶೇಷ ರೈಲು ನಾಳೆ ಇಲ್ಲಿಂದ ಹೊರಟು ಮೈಸೂರನ್ನು ತಲಪುವುದು. ಅಭಾವ ಪ್ರದೇಶಗಳಲ್ಲಿ ಸಹಕಾರ ಸಂಘಗಳ ಮೂಲಕ ಅಕ್ಕಿಯನ್ನು ರೂ ೧೯-೩ ಸೇರಿನಂತೆ ಒದಗಿಸಲಾಗುವುದು. ರೂ ೧೯-೩ ಸೇರಿನಂತೆ ಮಾರುವುದರಿಂದ ಉಂಟಾಗುವ ನಷ್ಟವನ್ನು ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ಸಮವಾಗಿ ವಹಿಸುವುವು.

ಅಕ್ಕಿಯ ಬೆಲೆಯು ಹೆಚ್ಚದಂತೆ ಮಾಡಲು ಇತರ ಕ್ರಮಗಳನ್ನು ಕೈಗೊಳ್ಳಲಾಗುವುದಲ್ಲದೆ ಸಂಸ್ಥಾನಕ್ಕೆ ೫೦,೦೦೦ ಪಲ್ಲಾಗಳ ರವಾ ಅಕ್ಕಿಯನ್ನು ಕೇಂದ್ರದವರು ಒದಗಿಸುವರು.

ವಿಮಾನ ಮುರಿದು ೨೩ ಜನರ ಮರಣ

ಆಫ್ರಿಕದ ನೈಜೀರಿಯಾ ದೇಶದ ಕಾನೊ ಎಂಬಲ್ಲಿ ನೆನ್ನೆ ಬ್ರಿಟಿಷ್ ವಿಮಾನವೊಂದು ಬಿದ್ದು ಮುರಿದು ಹೋಯಿತು. ಅದರಲ್ಲಿದ್ದ ೩೯ ಮಂದಿ ಪ್ರಯಾಣಿಕರಲ್ಲಿ ೨೩ ಜನರೂ ಮತ್ತು ಒಬ್ಬ ನೌಕರನೂ ಮೃತಪಟ್ಟಿರುತ್ತಾರೆ. ಗಾಯಗೊಂಡವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.

ಆಂಧ್ರದ ವಿದ್ಯಾರ್ಥಿಗಳಿಂದ ಪರೀಕ್ಷೆಗಳಲ್ಲಿ ಸಾಮೂಹಿಕ ಕಾಪಿ

ಕಳೆದ ಮಾರ್ಚಿ ತಿಂಗಳಲ್ಲಿ ನಡೆದ ಆಂಧ್ರದ ಸ್ಕೂಲ್‌ಫೈನಲ್ ಪರೀಕ್ಷೆಯಲ್ಲಿ ವಿದ್ಯಾರ್ಥಿಗಳು ಸಾಮೂಹಿಕವಾಗಿ ಕಾಪಿಮಾಡಿದರೆಂದು ಕೃಷ್ಣಾ, ಗುಂಟೂರು, ವಿಶಾಖಪಟ್ಟಣ ಮತ್ತು ಕಡಪಾ ಜಿಲ್ಲೆಗಳ ೧೦ ಪರೀಕ್ಷಾ ಕೇಂದ್ರಗಳ ಪರೀಕ್ಷಾ ಫಲಿತಾಂಶವನ್ನು ಪ್ರಕಟಿಸದೆ ತಡೆಗಟ್ಟಲಾಗಿದೆ ಕಾಪಿ ಮಾಡಿದವರೆಂದು ನಿರ್ದಿಷ್ಟವಾಗಿ ರುಜುವಾತಾದವರ ಮೇಲೆ ಕ್ರಮ ಕೈಗೊಂಡನಂತರ ಫಲಿತಾಂಶವನ್ನು ಪ್ರಕಟಿಸಲಾಗುವುದು ಕಾಪಿ ಮಾಡದೆ ಉತ್ತೀರ್ಣರಾಗಿರುವ ವಿದ್ಯಾರ್ಥಿಗಳಿಗೆ ವಿಶ್ವವಿದ್ಯಾಲಯಗಳಲ್ಲಿ ವ್ಯಾಸಂಗಕ್ಕೆ ಅವಕಾಶ ಕಲ್ಪಿಸಲಾಗುವುದೆಂದೂ ಗೊತ್ತಾಗಿದೆ ಕಾಲೇಜುಗಳಲ್ಲಿ ಪ್ರವೇಶದ ಅವಧಿಯು ಈಗಾಗಲೇ ಮುಗಿದಿದೆ

ಶ್ರೀಕಂಠೇಶ್ವರ ಸ್ವಾಮಿಯವರ ಕಲ್ಯಾಣ ಮಹೋತ್ಸವ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣ ಮಹೋತ್ಸವವು ನಾಳದ್ದು ನೆರವೇರುವುದು ಇದರ ಅಂಗವಾಗಿ ನಾಳೆಯಿಂದ ಬರುವ ತಿಂಗಳು ೪ನೇ ತಾರೀಕಿನ ವರೆಗೆ ವಿವಿಧ ಉತ್ಸವಗಳು ಜರಗುವುವು ಈ ಉತ್ಸವದ ಸಂಬಂಧದಲ್ಲಿ ನಿತ್ಯವೂ ರಾತ್ರಿ ಸಂಗೀತ ಕಚೇರಿಗಳನ್ನು ಏರ್ಪಡಿಸಲಾಗಿದೆ ನಾಳೆ ರಾತ್ರಿ ಕೈ ಬೆಂಗಳೂರಿನ ವಿ॥ ಎಚ್ ಎಸ್ ತ್ಯಾಗರಾಜ್ ಮತ್ತು ಪಾರ್ಟಿಯವರಿಂದಲೂ ರಾತ್ರಿ [illegible] ಗೌರಿ ಕುಪ್ಪಸ್ವಾಮಿಯವರ [illegible] ನವು ನಡೆಯುತ್ತದೆ

ವಿವಾಹ ಮಹೋತ್ಸವ

ಶ್ರೀ ಎಸ್ ವೆಂಕಟಸುಬ್ಬಯ್ಯನವರು ತಮ್ಮ ಕುಮಾರಿ ಸೌ ನ ಗರತ್ನಂರವರನ್ನು ಡಿ ನರಸೀಪುರ [illegible] ಯ್ಯನವರ ಮಕ್ಕಳು ಶ್ರೀ ಎಸ್ [illegible] ರಾಮಯ್ಯನವರಿಗೆ ಕೊಟ್ಟು ನೆನ್ನೆ ರಾಜಧಾನಿಯಲಿ ವಿವಾಹವನ್ನು ನೆರವೇರಿಸಿದರು

ಪಾ ಠ ಕ ಕೋ ತ್ಸ ವ

ಚಾಮುಂಡಿಪುರದಲ್ಲಿರುವ ಸಾಹಿತ್ಯಗೋಷ್ಠಿ ಮಿತ್ರ ವರ್ಗದ ೫ನೇ ವಾರ್ಷಿಕೋತ್ಸವವು ನಾಳೆ ಸಂಜೆ ೭-೩೦ ಘಂಟೆಗೆ ಸಂಘದ ಆವರಣದಲ್ಲಿ ನೆರವೇರುವುದು ಸುಪ್ರಸಿದ್ಧ ವಿದ್ವಾಂಸರಾದ ಶ್ರೀ ನಿರಂಜನರವರು ಅಧ್ಯಕ್ಷತೆ ವಹಿಸುವರು ಶ್ರೀಮತಿ ಜಯಶ್ರೀ ನಿರಂಜನರವರೂ [illegible] ದ ಶ್ರೀ ಅನಂತರವರೂ ಭಾಷಣ ಮಾಡುವರು

ರುಮೇನಿಯಾ-ಯುಗೊಸ್ಲಾವಿಯಗಳಿಗೆ ಪುನಃ ಸಖ್ಯ

ಮಾಸ್ಕೋ ಭೇಟಿಗಾಗಿ ತೆರಳಿದ್ದ ಯುಗೊಸ್ಲಾವಿಯದ ಅಧ್ಯಕ್ಷ ಮಾರ್ಷಲ್ ಟಿಟೋರವರು ನೆನ್ನೆ ರುಮೇನಿಯದ ರಾಜಧಾನಿ ಬುಕಾರೆಸ್ಟ್‌ಗೆ ಭೇಟಿಯಿತ್ತರು ಅವರನ್ನು ಅಲ್ಲಿನ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಗೆರೋಘ್ಯುಡೆಜ್ ರವರು ಸ್ವಾಗತಿಸಿದರು ಏಳು ವರ್ಷಗಳ ಹಿಂದೆ ಇವರೇ ಯುಗೊಸ್ಲಾವಿಯ ಕಮ್ಯೂನಿಸ್ಟರನ್ನು ಉಚ್ಚಾಟನೆ ಮಾಡಲು ಆಜ್ಞೆ ಮಾಡಿದ್ದರು ಏಳು ವರ್ಷಗಳ ವಿರಸವು ತಪ್ಪಿ ಈಗ ಉಭಯ ರಾಷ್ಟ್ರಗಳ ನಡುವೆ ಸಖ್ಯವು ಬೆಳೆಯಲಿದೆ

ನಂಜನಗೂಡಿಗೆ ಅಖಿಲ ಭಾರತ ಗ್ರಾಮ ಕೈಗಾರಿಕಾ ಪ್ರತಿನಿಧಿಯ ಭೇಟಿ

ಅಖಿಲ ಭಾರತ ಗ್ರಾಮ ಕೈಗಾರಿಕಾ ಪ್ರತಿನಿಧಿ ಶ್ರೀ ಹನುಮಂತಪ್ಪನವರು ಮೊನ್ನೆ ನಂಜನಗೂಡಿಗೆ ಭೇಟಿಯಿತ್ತರು ಶ್ರೀ ಪಟ್ಟಣಗೆ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದ್ದ ಎಣ್ಣೆ ತಯಾರಿಕೆದಾರರ ಸಭೆಯಲ್ಲಿ ಅವರು ಭಾಷಣ ಮಾಡಿ, ಗಿರಣಿ ಎಣ್ಣೆಯಿಂದ ಜನರ ಆರೋಗ್ಯಕ್ಕೆ ಕೆಡಕಿದ್ದೂ, ನಿರುದ್ಯೋಗವುಂಟಾಗಿರುವುದೆಂದು ತಿಳಿಸಿದರು ಗೃಹ ಕೈಗಾರಿಕೆಗಳಿಗೆ ಉತ್ತೇಜನವೀಯಲು ಸರ್ಕಾರದವರು ಸಹಾಯ ಮಾಡುವರೆಂದೂ, ಹೊಸ ಮಾದರಿಯ ಗಾಣಗಳನ್ನು ಅರ್ಧ ಬೆಲೆಯಾದ [illegible] ರೂ ಗೆ ಒದಗಿಸಲಾಗುವುದೆಂದೂ ಅವರು ತಿಳಿಸಿದರು ಸಹಕಾರ ಸಂಘಗಳ ಮೂಲಕ ೮,೦೦೦ ರೂ.ಗಳ ಗ್ರಾಂಟು ಕೊಡಲಾಗುವುದೆಂದೂ ಅವರು ಹೇಳಿದರು

ಕೋ ಆಪರೇಟಿವ್ ಸೊಸೈಟಿಯ ಸತ್ಕಾರ ಕೂಟ

ಮೈಸೂರು ಕೋ ಆಪರೇಟಿವ್ ಸೊಸೈಟಿಯ ಸುವರ್ಣ ಮಹೋತ್ಸವದ ಅಂಗವಾಗಿ ಮೊನ್ನೆ ರಾತ್ರಿ ಸಂಘದವರು ಒಂದು ಭೋಜನ ಕೂಟವನ್ನು ಇಂದ್ರಭವನದಲ್ಲಿ ಏರ್ಪಡಿಸಿದ್ದರು ಅನೇಕ ಪುರಪ್ರಮುಖರೂ, ಪತ್ರಿಕೋದ್ಯೋಗಿಗಳೂ, ಸಂಘದ ನೌಕರರೂ ಭಾಗವಹಿಸಿದ್ದರು ಸಂಘದ ಅಧ್ಯಕ್ಷ ಶ್ರೀ ಪಿ ಎಸ್ ಕೆಂಗೇಗೌಡರೂ, ಡೈರೆಕ್ಟರ್ ರವ ಶ್ರೀನಿವಾಸಮೂರ್ತಿಯವರೂ ಕಾರ್ಯದರ್ಶಿ ಶ್ರೀ ಎಸ್ ಸುಬ್ರಹ್ಮಣ್ಯರವರೂ ಉತ್ಸವದಲ್ಲಿ ಸಹಕರಿಸಿದವರೆಲ್ಲರಿಗೆ ವಂದನೆಯನ್ನು ಸಲ್ಲಿಸಿದರು

Printed and Published by A R [illegible] at Sadhvi Press D Subbiah Road Mysore

ಬೋರಯ್ಯ, ಬಸವಯ್ಯನವರ ಕಂಪೆನಿ ಕೆಲಸಗಾರರ ಕುಂದುಕೊರತೆಗಳು

ರಾಜಧಾನಿಯ ಕುದಿಗವಲ್ಲಿರುವ ಬೋರಯ್ಯ ಬಸವಯ್ಯ ಕಂಪೆನಿಯ ಮಾಲೀಕರು ತಮ್ಮ ಕೆಲಸಗಾರರಿಗೆ ತೊಂದರೆ ಕೊಡುತ್ತಿರುವರೆಂದೂ, ಕೆಲವು ದಿನಗಳ ಹಿಂದೆ ಅಸಿಸ್ಟೆಂಟ್ ಲೇಬರ್ ಕಮಿಷನರರ ಸಮ್ಮುಖದಲ್ಲಿ ಬರಗಿ ಕೆಲಸದ ಕಾರ್ಮಿಕರಿಗೂ, ಮಾಲೀಕರಿಗೂ ಆಗಿದ್ದ ಒಪ್ಪಂದದಂತೆ ಮಾಲೀಕರು ನಡೆದಿಲ್ಲವಾಗಿಯೂ ತಮಗೆ ವರದಿ ಬಂದಿರುವುದಾಗಿ ಮೈಸೂರು ಬೀಡಿ ಕಾರ್ಮಿಕರ ಸಂಘದ ಕಾರ್ಯದರ್ಶಿಗಳು ತಿಳಿಸುತ್ತಾರೆ ಹಲಕೆಲವು ಕೆಲಸಗಾರರಿಗೆ ಅಕಾರಣವಾಗಿ ಕೆಲಸದಿಂದ ವಿಶ್ರಾಂತಿ ಕೊಟ್ಟಿದ್ದು, ಕಾರ್ಮಿಕರ ಸಂಘವನ್ನು ಅವರು ಬಹುವಂತೆ ಪ್ರೇರೇಪಿಸಲಾಗಿದೆಯೆಂದೂ ಹೇಳುತ್ತಾರೆ ಕಾನೂನು ಪ್ರಕಾರ ಕಾರ್ಮಿಕರಿಗೆ ಪ್ರಾವಿಡೆಂಟ್ ನಿಧಿ, ಸಂಬಳ, ಭತ್ಯ, ಹಕ್ಕಿನ ರಜಾ, ಮುಂತಾದ ಸೌಲಭ್ಯವನ್ನು ಕೊಡಲು ಮಾಲೀಕರು ಸಿದ್ಧವಾಗಿಲ್ಲವೆಂದೂ, ಈ ಬೇಡಿಕೆಗಳನ್ನು ಇಟ್ಟುದಕ್ಕೆ ಕಾರ್ಮಿಕರಿಗೆ ಕಿರುಕುಳ ಕೊಡಲಾಗುತ್ತಿದೆಯೆಂದೂ, ಸರ್ಕಾರದವರು ಮಧ್ಯೆ ಪ್ರವೇಶಿಸಿ ಕೆಲಸಗಾರರಿಗೆ ನ್ಯಾಯವನ್ನು ದೊರಕಿಸಿಕೊಡಬೇಕೆಂದೂ ಅವರು ಕೋರಿರುತ್ತಾರೆ

ಚಾಮರಾಜನಗರದ ಮಹಿಳಾ ಸೇವಾ ಸಮಾಜ

ಭಾರತದ ರೆಡ್‌ಕ್ರಾಸ್ ಸಂಸ್ಥೆಯ ಪ್ರತಿನಿಧಿಗಳು ಚಾಮರಾಜನಗರದ ಮಹಿಳಾ ಸೇವಾ ಸಮಾಜಕ್ಕೆ ಭೇಟಿ ಕೊಟ್ಟು, ಅಲ್ಲಿನ ಕೆಲಸಕಾರ್ಯಗಳನ್ನು ಪರಿಶೀಲಿಸಿ ಮೆಚ್ಚಿಗೆಯನ್ನು ಸೂಚಿಸಿರುವುದಲ್ಲದೆ ಬಡವರ ಉಪಯೋಗಕ್ಕಾಗಿ ಹೊಲಿಗೆ ಯಂತ್ರವನ್ನು ಉಚಿತವಾಗಿ ಕೊಟ್ಟಿರುತ್ತಾರೆ ಸಾರ್ವಜನಿಕರು ಈ ಸೌಲಭ್ಯವನ್ನು ಉಪಯೋಗಿಸಿಕೊಳ್ಳುವಂತೆ ಸಮಾಜದ ಕಾರ್ಯದರ್ಶಿನಿಯವರು ಕೋರಿರುತ್ತಾರೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಮತ್ತು [illegible] ಎಸ್. ಸ್ವಮಂತ ಕುಳ ಗೀತಾವಳಿ [illegible] ಹಿಂದಿ ಶಿಕ್ಷಣ ಮಧ್ಯಾಹ್ನ [illegible] ಮತ್ತು [illegible] ಅನ್ನಮ್ಮ ಗಾಯನ [illegible] ಗಾನಮಂಜರಿ [illegible] ಗೋಟು ವಾದ್ಯ, [illegible] ವಿದ್ಯಾರ್ಥಿಗಳಿಗಾಗಿ ಸಂಜೆ [illegible] ಮತ್ತು [illegible] ಶಾಸ್ತ್ರಿ ಗಾಯನ [illegible] ಗ್ರಾಮಸ್ಥರಿಗಾಗಿ [illegible] ದೇವರ ನಾಮಗಳು [illegible] ವಿಚಾರಲಹರಿ [illegible] ಅಲಿ ಅಕ್ಬರ್ ಖಾನ್ ಸರೋದ್ [illegible] ಡೆಲ್ಲಿದಾರ್ ಕೆಲವು [illegible] ಆರ್ ಗೋವಿಂದಸ್ವಾಮಿ ಪಿಟೀಲು, ಎಂ ಎಸ್ ವೀರಭದ್ರಯ್ಯ ಮೃದಂಗ

ಮೈಸೂರು ಪೇಟೆ ಧಾರಣೆ

	ರೂ	ಮೊದಲ		ರೂ	ವರೆಗೆ	
ಕಡಲೆಕಾಯಿ	[illegible]	[illegible]	[illegible]	[illegible]	[illegible]	[illegible]
ಎಳ್ಳು	[illegible]	[illegible]	[illegible]	[illegible]	[illegible]	[illegible]
ಹುರುಳಿ	[illegible]	[illegible]	[illegible]	[illegible]	[illegible]	[illegible]
ಹೆಸರು	[illegible]	[illegible]	[illegible]	[illegible]	[illegible]	[illegible]
ಹಲಸಂದೆ	[illegible]	[illegible]	[illegible]	[illegible]	[illegible]	[illegible]
ರಾಗಿ	[illegible]	[illegible]	[illegible]	[illegible]	[illegible]	[illegible]
ಕೊಬ್ಬರಿ	[illegible]	[illegible]	[illegible]	[illegible]	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]	[illegible]	[illegible]	[illegible]	[illegible]

ಸೀತಾ ಪಡಸನ ಸಿಸುವಿಹಾರ

ಚಾಮುಂಡಿಪುರದ ಸೀತಾ ರೀಡಿಂಗ್ ರೂಮ್‌ನಲ್ಲಿರುವ ಸೀತಾ ಪಡಸನ ಶಿಶು ವಿಹಾರದಲ್ಲಿ ಮಕ್ಕಳನ್ನು ಕ್ರಮವಾಗಿ ನಡೆಸಲು ಮಾಡುತ್ತಿರುವರೆಂದೂ, ಮಕ್ಕಳಿಗೆ ಸರಿಯಾಗಿ ಪಾಠ ಪ್ರವಚನಗಳನ್ನು ನಡೆಸುತ್ತಿಲ್ಲವೆಂದೂ, ಬಡವರ ಮಕ್ಕಳೆಂಬ ತಾರತಮ್ಯವನ್ನು ತೋರಿಸಲಾಗುತ್ತಿರುವುದೆಂದೂ ಪೋಷಕರೊಬ್ಬರು ತಿಳಿಸಿ, ಸಂಬಂಧಪಟ್ಟವರು ಸೂಕ್ತ ವ್ಯವಸ್ಥೆ ಮಾಡುವಂತೆ ಕೋರಿರುತ್ತಾರೆ

Any one by investing Rs 1,000 to print and sell very attractive coloured ancient pictures 35 of Srimad Bhagavad Geetha, can easily earn Rs 500 P M For details please apply to :—

Sri RAJA,
348 K V Agrahar,
Mysore

ಶಕ್ತಿಯೂ ಕೋವಿಯೂ
ತಮ್ಮ ಗುರಿಯನ್ನು ತಪ್ಪಬಹುದು
ರವಿಯೂ ಪತ್ರಿಕೆಯಲ್ಲಿ ಉದಯಿಸಬಹುದು !!

ಆದರೆ ಡಾ॥ ರಾಜಾರವರ ನೂತನ ಮತ್ತು ಅತ್ಯಾಶ್ಚರ್ಯಕರವಾದ ಚಿಕಿತ್ಸೆಯು ಪೂರ್ತಿ ಒಂದೇ ವಾರದ ಅವಧಿಯಲ್ಲಿ ನಿರಾಶೆಯನ್ನು ಹೋಗಲಾಡಿಸಿ ಸಂತೋಷವನ್ನುಂಟುಮಾಡಲು ತಪ್ಪುವುದಿಲ್ಲ.

ಅಪೂರ್ವವಾದ ನವಯೌವನವನ್ನೂ, ಅದ್ಭುತ ಶಕ್ತಿಯನ್ನೂ, ಆರೋಗ್ಯವನ್ನೂ ಹೊಂದಲು ಶೃಂಗಾರ ಪ್ರಪಂಚದಲ್ಲಿ ಹೆಸರಾಂತ ಡಾ॥ ಎ ಎ ರಾಜಾರವರ ಸಲಹೆಯನ್ನು ಪಡೆಯಿರಿ

ಭಾರತದ ಹೆಸರು ಕೂಡ ಡಾ॥ ರಾಜಾರವರು ಇತರ ವಿಧಾನದ ಚಿಕಿತ್ಸೆಗಳಿಗಿಂತಲೂ ಅದ್ಭುತವಾಗಿ ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ಜನರಿಗೆ ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವವನ್ನೂ, ಹುರುಪನ್ನೂ ಉಂಟುಮಾಡಿರುವರು ದೊಡ್ಡ ಜಹಗೀರ್ದಾರರುಗಳೂ ನವಾಬರುಗಳೂ, ರಾಜರುಗಳೂ, ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ

ಇಷ್ಟರಿಂದ ಡಾ॥ ರಾಜಾರವರನ್ನು ಭೇಟಿ ಮಾಡಿ ನವಯೌವನ ದೇಹಶಕ್ತಿ ಮತ್ತು ಚೈತನ್ಯವನ್ನು ಸಂಪಾದಿಸಿರಿ

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ದುರದೃಷ್ಟದಿಂದ ಪಾರಾಗಲು ಇದು ಸುವರ್ಣ ಸುಸಮಯ

ಕಾಲ ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4ರಿಂದ ರಾತ್ರಿ 9 ಘಂಟೆ ವರೆಗೆ

ರಾಜಾ ಮೆಡಿಕಲ್ ಹಾಲ್,

ಎಲ್ ನಂ 1 745 ಅಶೋಕಾ ರಸ್ತೆ, ಮೈಸೂರು
(ಮೈಸೂರು ಬ್ಯಾಂಕ್ ಬಳಿ ಹಾಲಿ ಜಾಗದಿಂದ 3ನೇ ಕಟ್ಟಡ)

ಮೈಸೂರು ಸರ್ಕಾರದ ವಿಮಾ ಇಲಾಖೆ
(ಪ್ರಚಾರ ವಾರ)

★

ಆಸಕ್ತ ಅಂಶಗಳು ವ್ಯಕ್ತಪಡಿಸುವುವು ,

1955-56 ರಲ್ಲಿನ ನೂತನ ವ್ಯವಹಾರವು ರೂ. 2.5 ಕೋಟಿಗೆ ಮೀರಿದೆ

★

ನಿಧಿ—ರೂ 4 79 ಕೋಟಿಗಳಿಗಿಂತಲೂ ಹೆಚ್ಚಿದೆ

★

ವಿಮಾ ಮಾಡಿದ ಮೊತ್ತ-ರೂ. 13·87 ಕೋಟಿ

★

ಪಾವತಿ ಮಾಡಿರತಕ್ಕ ಕ್ಲೈಮುಗಳು 2·45 ಕೋಟಿ ರೂ.ಗಳಿಗಿಂತಲೂ ಮಿಗಿಲಾಗಿದೆ

★

ಹಂಚಿರುವ ಬೋನಸ್ಸು

ಹೋಲ್ ಲೈಫ್ ರೂ. 20 — ಎಂಡೋಮೆಂಟ್ : ರೂ 17.

★

— ಇಳಿಸಿದ ಪ್ರೀಮಿಯಂ ದರಗಳು —

ಸ್ಪರ್ಧೆಯ ದರದಲ್ಲಿ ಮೋಟಾರು ವಾಹನಗಳ ವಿಮೆ ಮಾಡಲಾಗುವುದು

ಮೈ ಸೂ ರು ಸ ರ್ಕಾ ರ

ಮೈಸೂರು ದಸರಾ ವಸ್ತು ಪ್ರದರ್ಶನ 1956

ಮೈ ಸೂ ರು

ತಾ॥ 5-10-56 ರಿಂದ 28-10-56 ರ ವರೆಗೆ
(ಎರಡು ದಿನಗಳೂ ಸೇರಿ) ನಡೆಯುವುದು

- ★ ಈ ವರ್ಷದ ಪ್ರದರ್ಶನ, ಹಿಂದಿನ ವರ್ಷಗಳ ಪ್ರದರ್ಶನಗಳಿಗಿಂತ ದೊಡ್ಡದಾಗಿರುವುದು
- ★ ಭಾರತ ಸರ್ಕಾರ, ಮೈಸೂರು ಸರ್ಕಾರ ಮತ್ತು ಅನೇಕ ಪ್ರಾಂತೀಯ ಸರ್ಕಾರಗಳೂ, ಭಾರತದ ನಾನಾ ಕಡೆಗಳಿಂದ ದೊಡ್ಡದೊಡ್ಡ ಕೈಗಾರಿಕಾ ಸಂಸ್ಥೆಗಳೂ ವಸ್ತು ಪ್ರದರ್ಶನದಲ್ಲಿ ಭಾಗವಹಿಸುವುವು
- ★ ವ್ಯವಸಾಯ, ಕೈಗಾರಿಕೆ ಮತ್ತು ವ್ಯಾಪಾರ ಅಭಿವೃದ್ಧಿಗೆ ದಸರಾ ವಸ್ತು ಪ್ರದರ್ಶನದಲ್ಲಿ ಭಾಗವಹಿಸಿರಿ
- ★ ಪ್ರತಿ ದಿನ ಮನರಂಜನೆ ಕಾರ್ಯಕ್ರಮ ಏರ್ಪಡಿಸಲಾಗಿದೆ ವಸ್ತು ಪ್ರದರ್ಶನದ ಪ್ರಾಸ್ಪೆಕ್ಟಸ್ " ಇಷ್ಟರಲ್ಲಿಯೇ ಹೊರಬೀಳಲಿದೆ.
- ★ ಜಾಹೀರಾತುಗಳನ್ನು ದಸರಾ ವಸ್ತು ಪ್ರದರ್ಶನ ಕೈಪಿಡಿಯಲ್ಲಿ ಮಾತ್ರ ಪ್ರಕಟಿಸಲಾಗುವುದು ಈ ವರ್ಷ " ಪ್ರಾಸ್ಪೆಕ್ಟಸ್ " ನಲ್ಲಿ ಜಾಹೀರಾತುಗಳನ್ನು ಪ್ರಕಟಿಸಲಾಗುವುದಿಲ್ಲ.

ಇತರ ವಿವರಗಳಿಗೆ —ಕಾರ್ಯದರ್ಶಿ, ದಸರಾ ವಸ್ತು ಪ್ರದರ್ಶನ ಸಮಿತಿ, ಮೈಸೂರು-ಇವರಿಗೆ ಬರೆಯಿರಿ

ರೆಜಿಸ್ಟ್ರೇಡ್ ನಂ. 792

ಚಂದಾದರ

ವಿಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಒಂದು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಏಳ್ಗೆಯನ್ನೂ,
ಪ್ರಜಾಭಿವೃದ್ಧಿಯನ್ನೂ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೯] SADHVI : THURSDAY 23—8—1956 ಮೈಸೂರು : ಗುರುವಾರ ೨೩—೮—೧೯೫೬ [ಸಂಚಿಕೆ : ೫೭೬

ಗ್ವಾಟೆಮಾಲಾದಲ್ಲಿ ಮುತ್ತಿಗೆ ಪರಿಸ್ಥಿತಿ; ಗುಂಡಿನ ಪ್ರಕರಣ

ಒಳ ಜಗಳದ ರಾಜಕೀಯದಿಂದ ಸಂಸ್ಥಾನಕ್ಕೆ ಹಾನಿ

ದಾವಣಗೆರೆ ಪೌರಸಭೆ ಮಾನಪತ್ರ ಸಮಾರಂಭದಲ್ಲಿ ಮುಖ್ಯ ಮಂತ್ರಿಗಳ ಭಾಷಣ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರಿಗೆ ನೆನ್ನೆ ದಾವಣಗೆರೆಯ ಪೌರಸಭೆಯವರು ಮಾನಪತ್ರವನ್ನು ಸಮರ್ಪಿಸಿದರು ಅವರು ಉತ್ತರವಿತ್ತು, ಇಂದು ಮೈಸೂರು ಸಂಸ್ಥಾನ ಮತ್ತು ಕರ್ನಾಟಕಗಳಲ್ಲಿ ರಾಜಕೀಯ ವಾತಾವರಣವು ಕಲುಷಿತವಾಗಿದೆಯೆಂದೂ, ರಾಜಕಾರಣಿಗಳು ತಮ್ಮ ತಮ್ಮ ಭವಿಷ್ಯದ ಕಡೆಗೆ ಹೆಚ್ಚು ಗಮನ ಕೊಡುತ್ತಿರುವರೆಂದೂ, ಅವರಿಂದ ಐಕಮತ್ಯಕ್ಕೆ ಧಕ್ಕೆಯೊದಗುವುದೆಂದೂ ತಿಳಿಸಿದರು ಗುಂಪಿನ ರಾಜಕೀಯದ ಪ್ರಾಬಲ್ಯದ ಪರಿಣಾಮವಾಗಿ ಪರಸ್ಪರ ದ್ವೇಷಾರೋಪಗಳಿಗೆ ಎಡೆ ಕೊಟ್ಟಂತಾಗಿರುವುದೆಂದೂ, ಇಂತಹ ರಾಜಕೀಯದಿಂದ ಸಂಸ್ಥಾನಕ್ಕೆ ಅಪಾಯವಿರುವುದೆಂದೂ ಅವರು ಹೇಳಿದರು ಹಲವರು ತಮ್ಮನ್ನು ಅಧಿಕಾರದಿಂದ ಇಳಿಸಲು ತಮ್ಮ ವಿಶಿಷ್ಟ ಶಕ್ತಿಯನ್ನು ಉಪಯೋಗಿಸುತ್ತಿರುವುದಾಗಿ ಅವರು ತಿಳಿಸಿ, ತಾವೇನೂ ಈ ಬಗ್ಗೆ ಚಿಂತಾಗ್ರಸ್ತರಾಗಿಲ್ಲವೆಂದೂ, ದೇಶದ ಹಿತದೃಷ್ಟಿಯಿಂದ ಅಧಿಕಾರ ತ್ಯಾಗಕ್ಕೆ ತಾವು ಸಿದ್ಧವಾಗಿರುವುದಾಗಿಯೂ ನುಡಿದರು

ಮಗುವನ್ನು ಉಳಿಸಲು ಹೋಗಿ ತಾಯಿಯ ಪ್ರಾಣಹಾನಿ

ನಾಗರದ ಬಳಿ ಹೊಸ ಬುಕ್ಕಾಪಟ್ಟಣದಲ್ಲಿ ಶ್ರೀ ಸೀನಪ್ಪ ಎಂಬುವರ ಪತ್ನಿಯು ಕಳೆದ ತಿಂಗಳು ತಮ್ಮ ಮಗುವಿನ ತೊಟ್ಟಿಲಿನ ಹತ್ತಿರ ಮಲಗಿದ್ದ ನಾಗರಹಾವನ್ನು ನೋಡಿ ಗಾಬರಿಗೊಂಡು ಹಾವನ್ನು ಹೊಡೆಯಲು ಹೋಗಿ ಅದರಿಂದ ಕಚ್ಚಿಸಿಕೊಂಡು ಮೃತಪಟ್ಟಳಾಗಿ ವರದಿಯಾಗಿದೆ.

ನವೆಂಬರ್ ೧ ರಿಂದ ನೂತನ ಸಂಸ್ಥಾನಗಳು

ಇದೇ ಅಕ್ಟೋಬರ್ ತಿಂಗಳಲ್ಲಿ ನೂತನ ಸಂಸ್ಥಾನಗಳು ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲವಾದರೆ, ನವೆಂಬರ್ ೧ ರಿಂದಲಾದರೂ ಅವು ಸ್ಥಾಪಿತವಾಗುವುವೆಂದು ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದವಲ್ಲಭ ಪಂತರು ತಿಳಿಸಿರುತ್ತಾರೆ

ಪೌರಸಭೆಯಲ್ಲಿ ಸಭಾತ್ಯಾಗ

ಶ್ರೀರಂಗಪಟ್ಟಣ ೨೨

ಇಲ್ಲಿನ ಪೌರಸಭೆಯು ಶ್ರೀ ಬಿ ಬೋರೇಗೌಡರ ಅಧ್ಯಕ್ಷತೆಯಲ್ಲಿ ಇಂದು ನಡೆಯಿತು ತಪ್ಪು ಮಾಡಿದ ಒಬ್ಬ ನೌಕರನನ್ನು ವಜಾ ಮಾಡಬೇಕಾದರೆ ಆ ಬಗ್ಗೆ ಪೌರಸಭೆಯಲ್ಲಿ ತೀರ್ಮಾನವಾಗಬೇಕೇ ಬೇಡವೇ ಎಂಬ ವಿಷಯವಾಗಿ ಅಧ್ಯಕ್ಷರಿಗೂ, ಹಲವು ಸದಸ್ಯರುಗಳಿಗೂ ವಾಗ್ವಾದ ನಡೆದು ಶ್ರೀಗಳಾದ ಎಸ್ ಮಾಯಣ್ಣ, ಎಸ್ ವಿ ಚಂದ್ರಶೇಖರಯ್ಯ, ಕಾಳಸಿದ್ದೇಗೌಡ, ವಿ ಆರ್ ಸೂರ್ಯನಾರಾಯಣರಾವ್, ಆರ್ ರಂಗಯ್ಯ, ಎಸ್ ಎಲ್ ಬೊಮ್ಮಶೆಟ್ಟಿ, ಗೌಡ ಮತ್ತು ಗಂಜಾಂ ಸೋಸೈಟಿಯವರು ಸಭಾತ್ಯಾಗ ಮಾಡಿದರು

ಲಂಡನ್ನಿನಲ್ಲಿ ಕಾಮನ್‌ವೆಲ್ತ್ ಪ್ರಧಾನಿಗಳ ಸಭೆ ಆರಂಭ

ಪೂರ್ವ ಪಶ್ಚಿಮ ರಾಷ್ಟ್ರ ಸಂಬಂಧ ಮತ್ತು ರಕ್ಷಾ ರೀತಿನೀತಿ ಬಗ್ಗೆ ಚರ್ಚೆ

ಕಾಮನ್‌ವೆಲ್ತಿನ ಪ್ರಧಾನಿಗಳ ಸಮ್ಮೇಳನವು ನೆನ್ನೆ ಲಂಡನ್ನಿನಲ್ಲಿ ಬ್ರಿಟಿಷ್ ಪ್ರಧಾನಿ ಆಂಥೊನಿ ಈಡನ್ನರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ಸಮ್ಮೇಳನವು ೧೦ ದಿನಗಳ ಕಾಲ ನಡೆಯುವುದು ಜಲಜನಕ ಬಾಂಬಿನ ಯುಗದಿಂದ ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಸಂಬಂಧ ಮತ್ತು ಕಮ್ಯೂನಿಸ್ಟೇತರ ರಾಷ್ಟ್ರಗಳ ಹೆಚ್ಚುತ್ತಿರುವ ಶಕ್ತಿ ಚೀನ ದೇಶದ ವಿದ್ಯಮಾನದ ಪ್ರಭಾವಗಳ ಬಗ್ಗೆ ಕಾಮನ್‌ವೆಲ್ತ್ ಸಭೆಗಳ ಸಿಬ್ಬಂದಿಯಲ್ಲಿ ಬದಲಾವಣೆಯಾಗಬೇಕೇ ಬೇಡವೇ ಎಂಬ ವಿಚಾರವಾಗಿ ಸಮ್ಮೇಳನವು ಸಮಾಲೋಚನೆ ಮಾಡಲಿದೆ

ಸಮ್ಮೇಳನಕ್ಕೆ ಪ್ರಧಾನಿಗಳೊಡನೆ ಬೇರೆ ರಾಷ್ಟ್ರಗಳ ಹೈಕಮಿಷನರರೂ ಹೋಗಿದ್ದಾರೆ ನೆಹರೂರವರೊಡನೆ ಭಾರತದ ಮಂತ್ರಿ ವಿ ಕೆ ಕೃಷ್ಣಮೆನನ್ನರೂ ಇದ್ದರು

ಶಾಸನ ಸಭಾಧ್ಯಕ್ಷತೆಗೆ ಕುಂಟೆಯವರ ರಾಜೀನಾಮೆ ನಿರ್ಧಾರ

ಬೊಂಬಾಯಿ ಶಾಸನ ಸಭಾಧ್ಯಕ್ಷ ಡಿ ಕೆ ಕುಂಟೆಯವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಕೊಡಲು ನಿರ್ಧರಿಸಿರುತ್ತಾರೆ. ಬೊಂಬಾಯಿ ನಗರದ ಭವಿಷ್ಯದ ಬಗ್ಗೆ ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿ ನಿಲುವನ್ನು ಸಾರ್ವಜನಿಕರಿಗೆ ವಿವರಿಸುವ ಸಂಬಂಧವಾಗಿ ಅವರು ಈ ಕ್ರಮ ಕೈಗೊಳ್ಳುತ್ತಿರುವರು ಶಾಸನ ಸಭಾಧ್ಯಕ್ಷರಾಗಿದ್ದುಕೊಂಡು ರಾಜಕೀಯ ಸಭೆಗಳಲ್ಲಿ ಭಾಗವಹಿಸುವ ಬಗ್ಗೆ ಇರುವ ಪ್ರತಿಬಂಧಕವೇ ಇದಕ್ಕೆ ಕಾರಣ ಮಹಾರಾಷ್ಟ್ರ ಕಾಂಗ್ರೆಸ್ ಸಮಿತಿಯು ಈ ಬಗೆಯ ನಿಲುವನ್ನು ಅವರು ಜನರಿಗೆ ತಿಳಿಸಲಿರುವರು ಅವರೂ ಬೊಂಬಾಯಿ ಮಂತ್ರಿ ಬಿ. ಎಸ್ ಹಿರೇಯವರೂ ದೆಹಲಿಗೆ ಹೋಗಿದ್ದಾಗ, ರಾಜೀನಾಮೆ ಕೊಡುವುದು ಇದೀ ದೇಶದ ಹಿತದೃಷ್ಟಿಯಿಂದ ಅಗತ್ಯವೆಂದು ಅಧ್ಯಕ್ಷ ಢೇಬರ್ ಮತ್ತು ಇತರ ನಾಯಕರು ಅವರಿಗೆ ಸೂಚಿಸಿದ್ದರು

ಗೋಕರ್ಣ ಸ್ವಾಮಿಗಳವರ ಉಪನ್ಯಾಸ

ನಗರಕ್ಕೆ ಆಗಮಿಸಿರುವ ಶ್ರೀ ಗೋಕರ್ಣ ಪೀಠಾಧಿಪತಿಗಳು ನೆನ್ನೆ ವಾಣಿವಿಲಾಸ ಮೊಹಲ್ಲೆಯ ತಮ್ಮ ಬಿಡಾರದಲ್ಲಿ ಭಕ್ತರನ್ನು ಉದ್ದೇಶಿಸಿ ಮಾತನಾಡಿ, ಹಿಂದೂ ಧರ್ಮದ ಸರ್ವ ಶ್ರೇಷ್ಠತೆಯನ್ನು ಒತ್ತಿ ಹೇಳಿದರು ಇತ್ತೀಚಿನ ಹುಟ್ಟಿರುವ ನಿರೀಶ್ವರ ವಾದವನ್ನು ಅವರು ಟೀಕಿಸಿದರು ಜನರು ಶಿಷ್ಟಾಚಾರಗಳನ್ನು ನಡೆಸಿ, ತಮ್ಮ ಇಹಪರ ಸಾಧನೆ ಮಾಡಿಕೊಳ್ಳಬೇಕೆಂದು ಸೂಚಿಸಿದರು ಶ್ರೀ ಸ್ವಾಮಿಗಳವರಿಗೆ ಗಣೇಶ ಬೀದಿ ಕಾರ್ಪೊರೇಷನ್ನಿಯ ಶ್ರೀ ಬಿ ಮಾಧವಶೆಟ್ಟರವರು ನೆನ್ನೆ ಪಾದಪೂಜೆ ಮತ್ತು ಭಿಕ್ಷೆಗಳನ್ನೂ ನಡೆಸಿದರು ಈ ಸಂಜೆ ಶ್ರೀ ಶ್ರೀಗಳವರು ಶ್ರೀರಾಮಪೇಟೆಯಲ್ಲಿ ಎವಿ ಶ್ರೀ ರಾಮಚಂದ್ರ ಮಂದಿರದಲ್ಲಿ " ಗೃಹಸ್ಥಾಶ್ರಮ ಧರ್ಮ " ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ಬೆಂಗಳೂರಿನ ಪೋಲೀಸನನ್ನು ಇರಿದವನ ಬಂಧನ

ಮೈಸೂರು ೨೨

ಕಳೆದ ಭಾನುವಾರ ರಾತ್ರಿ ಬೆಂಗಳೂರಿನ ಪೋಲೀಸ್ ಕ್ವಾರ್ಟರ್ಸ್‌ನಲ್ಲಿ ನಡೆದ ಜಗಳದಲ್ಲಿ ಷೇಕ್ ಅಹಮದ್ ಎಂಬುವನನ್ನು ಇರಿದು ಕೊಲೆ ಮಾಡಿದ್ದ ರಾಜಧಾನಿಯ ಶ್ರೀಕಂಠಯ್ಯ ಎಂಬುವನನ್ನು ಇಲ್ಲಿನ ದೇವರಾಜ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರು ಸಿಬ್ಬಂದಿಯೊಡನೆ ನೆನ್ನೆ ರಾತ್ರಿ ೮॥ ಘಂಟೆಯಲ್ಲಿ ನಾರಾಯಣಶಾಸ್ತ್ರಿ ರಸ್ತೆಯ ದೇವರಾಜ ಪೋಸ್ಟ್ ಆಫೀಸ್ ಹತ್ತಿರವಿರುವ ಅವನ ಮನೆಯಲ್ಲಿ ದಸ್ತಗಿರಿ ಮಾಡಿದರು ಸವರಿ ಶ್ರೀಕಂಠಯ್ಯನು ಪಳ್ಳಿಯ ನಂಜುಂಡಪ್ಪನವರ ಮಗನೆಂದೂ, ಆತನಿಗೆ ಸುಮಾರು ೨೮ ವರ್ಷ ವಯಸ್ಸೆಂದೂ ಗೊತ್ತಾಗಿದೆ ಆಪಾದಿತನು ಸೀತೆಪೇಟೆಯ ಅಂಗಡಿಯೊಂದರಲ್ಲಿ ಕೆಲಸದಲ್ಲಿದ್ದನೆಂದು ಹೇಳಲಾಗಿದೆ ಮುಂದಿನ ಕ್ರಮದ ಬಗ್ಗೆ ಅವನನ್ನು ಬೆಂಗಳೂರಿಗೆ ಕಳುಹಿಸಲಾಗುವುದು

ನೇರವಾಗಿ ೫ ಜನ ಮುನ್ಸೀಫರನ್ನು ನೇಮಿಸಲು ಸರ್ಕಾರಕ್ಕೆ ಅಧಿಕಾರ

ಇದೇ ಖಾಲಿ ಇರುವ ಮುನ್ಸೀಫರ ದರ್ಜೆಯಲ್ಲಿ ತೆರವಿರುವ ಸ್ಥಾನಗಳು ಮತ್ತು ಮುಂದೆ ಖಾಲಿ ಬೀಳಬಹುದಾದ ಅದೇ ಹುದ್ದೆಗಳಿಗೂ ಭರ್ತಿ ಮಾಡಲು ರಾಜಪ್ರಮುಖರು ಹೈಕೋರ್ಟು ಮತ್ತು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರೊಡನೆ ಸಮಾಲೋಚಿಸಿ ೫ ಮಂದಿಗೆ ಹೆಚ್ಚಿರದಂತೆ ನೇಮಿಸಿಕೊಳ್ಳಲು ಅಧಿಕಾರ ಹೊಂದಿರುವರು.

ರೈಲು ಸೇತುವೆಯಿಂದ ಕಾಲುವೆಗೆ ಹಾರಿ ಇಬ್ಬರ ಮರಣ

ವಿಜಯವಾಡಾ ಬಳಿ ಈಲೂರು ಕಾಲುವೆ ಮೇಲೆ ಹಾಕಿರುವ ರೈಲು ಸೇತುವೆ ಮೇಲೆ ೨೨ ವರ್ಷದ ಯುವಕನು ೬ ವರ್ಷದ ಬಾಲಕಿಯೊಡನೆ ಹೋಗುತ್ತಿದ್ದಾಗ ಹಿಂದಿನಿಂದ ರೈಲು ಬಂದುದನ್ನು ಕಂಡು ಆತುರದಿಂದ ಹಾರಿದಾಗ ಇಬ್ಬರೂ ಕಾಲುವೆಗೆ ಹಾರಿ, ನೀರಿನಲ್ಲಿ ಮುಳುಗಿ ಪ್ರಾಣಬಿಟ್ಟರೆಂದು ವರದಿಯಾಗಿದೆ.

ಸಿಮೆಂಟಿಗೆ ಒಂದೇ ಮಟ್ಟದ ಬೆಲೆ

ಜುಲೈ ೧ರಿಂದ ದೇಶದ ಎಲ್ಲಾ ರೈಲು ನಿಲ್ದಾಣಗಳ ಬಳಿಯೂ ಸ್ಥಳೀಯ ಮತ್ತು ಆಮದಾದ ಸಿಮೆಂಟನ್ನು ಒಂದೇ ಸಮನಾದ ಬೆಲೆಗೆ ಒದಗಿಸಲಾಗುವುದು ಸಿಮೆಂಟನ್ನು ಸರ್ಕಾರದವರೇ ಮಾರಾಟ ಮಾಡಲು ತೆಗೆದುಕೊಂಡಿರುವುದರಿಂದ ಈ ವ್ಯವಸ್ಥೆಯಾಗಲಿದೆ ೧ ಟನ್ನಿಗೆ ೧೧೨॥ ರೂ

ಸಂಗೀತ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ಗಿರಿಜಾಕಲ್ಯಾಣೋತ್ಸವದ ಅಂಗವಾಗಿ ನಾಳೆ ಸಂಜೆ ೭ ಗಂಟೆಗೆ ವಿ॥ ಪಿ ಶಿವಮೂರ್ತಪ್ಪನವರಿಂದ ಸಂಗೀತ, ರಾತ್ರಿ ಲಕ್ಷ್ಮೀ ಥಿಯೇಟರ್ ಶ್ರೀ ಶೇಷಗಿರಿರಾಯರಿಂದ ದೇವರನಾಮ ಮತ್ತು ಇಲ್ಲಿ ಪೌರಸಭಾ ಸದಸ್ಯ ಶ್ರೀ ಎಲ್ ನಾಗಪ್ಪನವರ ಗಾಯನಗಳನ್ನು ಏರ್ಪಡಿಸಲಾಗಿದೆ ಮೈಸೂರು ಮಧುರ ಗಾನಕಲಾ ಮಂಡಲಿಯವರ ವಾದ್ಯಗೋಷ್ಠಿಯೂ ನಡೆಯುವುದು.

ಗ್ವಾಟೆಮಾಲಾದಲ್ಲಿ ಮುತ್ತಿಗೆ ಪರಿಸ್ಥಿತಿ

ಕಮ್ಯೂನಿಸ್ಟರಿಂದ ಪ್ರದರ್ಶನ: ಗುಂಡಿನೇಟು

ಮಧ್ಯ ಅಮೆರಿಕದ ಗ್ವಾಟೆಮಾಲಾ ರಾಷ್ಟ್ರದಲ್ಲಿ ಮುತ್ತಿಗೆ ಪರಿಸ್ಥಿತಿಯುಂಟಾಗಿರುವುದೆಂದು ಇಲ್ಲಿನ ಅಧ್ಯಕ್ಷ ಕಾರ್ಲೋಸ್ ಆರ್ಮಾಸ್‌ರವರು ಘೋಷಿಸಿರುತ್ತಾರೆ ಸಂವಿಧಾನದ ಸೂತ್ರಗಳನ್ನು ಕಿತ್ತುಕೊಳ್ಳಲು ಅಲ್ಲಿನ ಕಮ್ಯೂನಿಸ್ಟರು, ಸರ್ಕಾರದ ಪ್ರಯತ್ನಗಳನ್ನು ತಡೆಗಟ್ಟಲು ಅಧ್ಯಕ್ಷರು ನಿರ್ಬಂಧ ಕ್ರಮವನ್ನು ಕೈಗೊಂಡಿರುವರು.

ರಾಜಧಾನಿಯಲ್ಲಿ ಮೊನ್ನೆ ಪ್ರದರ್ಶನಗಳು ನಡೆದು, ಪೋಲೀಸರ ಮೇಲೆ ಗುಂಡು ಹಾರಿಸಲಾಯಿತೆಂದೂ, ಒಬ್ಬ ಪೋಲೀಸನೂ ಸೇರಿ ಮೂವರು ಮಡಿದರೆಂದು ಹೇಳಲಾಗಿದೆ. ಕಮ್ಯೂನಿಸ್ಟರು ವಿದ್ಯಾರ್ಥಿಗಳನ್ನು ಮುಂದೆ ಬಿಟ್ಟುಕೊಂಡು ಬುಡಮೇಲು ಚಳುವಳಿಯಲ್ಲಿ ತೊಡಗಿರುವರೆಂದು ಗೊತ್ತಾಗಿದೆ

ಪರಿಸ್ಥಿತಿಯನ್ನು ಹತೋಟಿಗೆ ತರಲು ಸರ್ಕಾರದವರು ಸಭೆ ಮೆರವಣಿಗೆಗಳಿಗೆ ಪ್ರತಿಬಂಧಕ, ಬಂದೂಕದ್ರ ಕಣ್ಗಾವಲು ರದ್ದು, ಗೃಹಗಳ ಶೋಧನೆ, ಸಂಶಯಗ್ರಸ್ತರ ಬಂಧನ ಮತ್ತು ಮುದ್ರಣ ಕೂಟಗಳಲ್ಲಿ ಅವರ ವಿಚಾರಣೆ ಮುಂತಾದ ತೀವ್ರ ಕ್ರಮಗಳನ್ನು ಕೈಗೊಂಡಿದ್ದಾರೆ.

ನೌಕರನ " ಆಮರಣಾಂತ " ಉಪವಾಸ ಮುಕ್ತಾಯ

ಮದ್ರಾಸಿನ ಸ್ಟಾರ್ ಗೆಜೆಟ್ಟಿನ ನೌಕರರ ದೀಕ್ಷೆ ಸಂಬಂಧವಾಗಿ ಮೊನ್ನೆ ಅಲ್ಲಿನ ಸರ್ಕಾರಿ ಕಛೇರಿ ಮುಂದೆ ಆಮರಣಾಂತ ಉಪವಾಸವನ್ನಾರಂಭಿಸಿದ ಸವರಿಮುತ್ತು ಎಂಬ ಗುಮಾಸ್ತನು ನೆನ್ನೆ ಉಪವಾಸ ಮುಕ್ತಾಯ ಮಾಡಿದನು. ಇತರ ನೌಕರರಿಗೆ ಅತ್ಯ, ಮನೋ ವೇದನೆ ಮತ್ತು ಭಯೋತ್ಪಾದನೆ ಮಾಡಿದನೆಂದು ಅವನನ್ನು ಬಂಧಿಸಲಾಯಿತು ಅವನು ತನ್ನ ಆಯುಧ್ಯ ವಿಶ್ವಾಸ ಸೂಚಿಸಲಾಗಿ ಬಿಡುಗಡೆ ಮಾಡಲಾಯಿತು

ಸಂತಾಳರ ಗುಂಪಿನ ಮೇಲೆ ಗುಂಡಿನಿಂದ ೧೦ ಜನರ ಮರಣ

ಸಾಮಾಜಿಕ ಬಹಿಷ್ಕಾರದ ಸಂಬಂಧ ಘಟನೆ

ಬಿಹಾರಿನ ಸಂತಾಲ ಪರಗಣ ಜಿಲ್ಲೆಗೆ ಸೇರಿದ ಶೇತಾರ್ ಎಂಬ ಹಳ್ಳಿಯಲ್ಲಿ ಸಶಸ್ತ್ರ ಸಂತಾಲರ ಒಂದು ಗುಂಪಿನ ಮೇಲೆ ಮೊನ್ನೆ ರಾತ್ರಿ ಪೋಲೀಸರು ಗುಂಡು ಹಾರಿಸಲಾಗಿ ೧೦ ಜನರು ಮಡಿದು, ೧೯ ಮಂದಿಗೆ ಗಾಯವಾಯಿತು ತಮ್ಮ ಸಂಗಡಿಗನೊಬ್ಬನಿಗೆ ಸಾಮಾಜಿಕ ಬಹಿಷ್ಕಾರ ಹಾಕುವ ಸಮಾರಂಭಕ್ಕೆ ಅಡ್ಡಿಪಡಿಸಿ ಪ್ರತಿಬಂಧ ಆಜ್ಞೆ ವಿಧಿಸಿದ್ದುದನ್ನು ಉಲ್ಲಂಘಿಸಲು ಗುಂಪು ಸೇರಿತ್ತು ಅದು ಚದುರುವಂತೆ ಮಾಡಿದ ಪ್ರಯತ್ನಗಳು ವಿಫಲವಾಗಿ, ಸಂತಾಲರು ಬಹಿಷ್ಕರಿಸಬೇಕೆಂದಿದ್ದವನ ಮನೆಗೆ ಬೆಂಕಿ ಹಚ್ಚಿ, ಮ್ಯಾಜಿಸ್ಟ್ರೇಟರು ಮತ್ತು ಪೋಲೀಸರನ್ನು ಹೊಡೆದು ಗಾಯಗೊಳಿಸಲಾಗಿ ಪೋಲೀಸರು ಗುಂಡು ಹಾರಿಸಿದರು ೧೨ ಜನ ಗಾಯಗೊಂಡವರೂ ಸೇರಿ ೮೦ ಮಂದಿ ಸಂತಾಲರನ್ನು ಬಂಧಿಸಲಾಯಿತು.

ವಿಶ್ವ ಸಂಸ್ಥೆಯಲ್ಲಿ ಆಲ್ಜೀರಿಯದ ಬಗ್ಗೆ ಫ್ರಾನ್ಸಿನ ಮೇಲೆ ದೂರು

ಆಲ್ಜೀರಿಯದಲ್ಲಿ ಪೂರ್ಣ ಪ್ರಮಾಣದ ಸಮರ ವನ್ನು ಯುದ್ಧವನ್ನು ಫ್ರಾನ್ಸ್ ನಡೆಸುತ್ತಿರುವುದಾಗಿ ವಿಶ್ವ ಸಂಸ್ಥೆಯ ಭದ್ರತಾ ಸಮಿತಿಯಲ್ಲಿ ನೆನ್ನೆ ಇರಾನಿನ ಪ್ರತಿನಿಧಿ ಡಾ॥ ಜಲಾಲ್ ಅಭೂಹ್‌ರವರು ದೂರಿತ್ತು, ಈ ಬಗ್ಗೆ ಚರ್ಚೆಯಾಗಬೇಕೆಂದು ಒತ್ತಾಯಪಡಿಸಿದರು. ಈ ವಿಚಾರವನ್ನು ಅನಿರ್ದಿಷ್ಟಕಾಲದ ವರೆಗೆ ಮುಂದುವರಿಸಲು ರಷ್ಯಾ ಮಾಡಿದ ಸೂಚನೆಯನ್ನು ಸಮಿತಿ ತಿರಸ್ಕರಿಸಿತು. ಸಭಾ ನಡವಳಿಕೆಗೆ ಈ ವಿಷಯವನ್ನು ಸೇರಿಸಲು ಸಮಿತಿಯು ನಿರಾಕರಿಸಿತು.

ಪೀಳಿಗೆ ಕೊಟ್ಟು ಪ್ರಜ್ಞೆ ತಪ್ಪಿಸಿ ೫,೦೦೦ ರೂ. ಅಪಹಾರ

ಮದ್ರಾಸಿನ ಖಾಸಗೀ ಕಂಪೆನಿಯೊಂದರ ಗುಮಾಸ್ತೆ ಧರ್ಮಚಂದ್ ಎಂಬ ೨೫ ವರ್ಷದ ಯುವಕನ ಕೈಗೆ ಒಬ್ಬ ಅಪರಿಚಿತನು ಪೀಳಿಗೆ ಕೊಟ್ಟು ೫,೦೦೦ ರೂ. ನಗದು ಇದ್ದ ಕೈಚೀಲವನ್ನು ಅಪಹರಿಸಿದುದಾಗಿ ವರದಿಯಾಗಿದೆ. ಯುವಕನು ದಾರಿಯಲ್ಲಿ ಹೋಗುತ್ತಿದ್ದಾಗ ಸುಮಾರು ೪೫ ವರ್ಷದ ಉತ್ತರ ದೇಶದ ಪೋಷಾಕು ಧರಿಸಿದವನೊಬ್ಬನು ಸಂಧಿಸಿ ಮಾತನಾಡಿಸುತ್ತಾ ಆತನ ಕೈಗೆ ಬಲವಂತವಾಗಿ ಪೀಳಿಗೆಯನ್ನು ಕೊಟ್ಟುದಾಗಿಯೂ, ಇದರಿಂದ ಯುವಕನಿಗೆ ಪ್ರಜ್ಞೆ ತಪ್ಪಿದಂತಾಯಿತೆಂದೂ, ಸ್ವಲ್ಪ ಹೊತ್ತಿನ ಮೇಲೆ ಎಚ್ಚರಿಸಿಕೊಂಡು ನೋಡಲು, ಕೈ ಚೀಲವು ಅಪರಿಚಿತ ವ್ಯಕ್ತಿಯೂ ಅದೃಶ್ಯವಾಗಿದ್ದುದಾಗಿಯೂ ಹೇಳಲಾಗಿದೆ. ಪೀಳಿಗೆಯನ್ನು ರಾಸಾಯನಿಕ ಪರೀಕ್ಷೆಗೆ ಪೋಲೀಸರು ಕಳುಹಿಸಿ ತನಿಖೆ ನಡೆಸುತ್ತಿರುವರು.

ನೂತನ ಮೈಸೂರು ಸಮಸ್ಯೆ ಚರ್ಚೆಗಾಗಿ ಅಂತರ ಪ್ರಾಂತ ಅಧಿಕಾರಿಗಳ ಸಭೆ

ನೂತನ ಮೈಸೂರಿನ ಸಮಸ್ಯೆಗಳ ಚರ್ಚೆಗಾಗಿ ಬರುವ ತಿಂಗಳು ೧ನೇ ತಾರೀಖು ಬೆಂಗಳೂರಿನಲ್ಲಿ ಅಂತರ ಪ್ರಾಂತ ಅಧಿಕಾರಿಗಳ ಸಮ್ಮೇಳನವು ನಡೆಯುವುದು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

ನೀರು ಸರಬರಾಜು ಯೋಜನೆಗೆ ೪॥ ಲಕ್ಷ ರೂ.

ಪೌರಸಭೆಯಲ್ಲಿ ಒತ್ತಾಯ

ನಂಜನಗೂಡು ೨೭

ಇಲ್ಲಿನ ಪೌರಸಭಾಧಿವೇಶನವು ನೆನ್ನೆ ಶ್ರೀ ಕೆ. ವೆಂಕಟಸುಬ್ಬೇರವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ಚಾಮರಾಜನಗರ ಮತ್ತು ಸತ್ಯಮಂಗಲಗಳ ನಡುವೆ ರೈಲು ಸಂಪರ್ಕವನ್ನು ಎರಡನೇ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ ಏರ್ಪಡಿಸಬೇಕೆಂದು ಕೋರಿ ಸಭೆಯು ನಿರ್ಣಯ ಮಾಡಿತು

ಟವನ್ನಿನ ನೀರು ಸರಬರಾಜು ವ್ಯವಸ್ಥೆಗಾಗಿ ೪ ಲಕ್ಷ ೪೫ ಸಾವಿರ ರೂ. ಯೋಜನೆಯನ್ನು ಬೇಗನೆ ಮಂಜೂರು ಮಾಡುವುದಕ್ಕೆಯೂ, ಅದರ ಮೇಂಟೆನೆನ್ಸಿಗಾಗಿ ೩೫ ಸಾವಿರ ರೂ. ವೆಚ್ಚವನ್ನು ಆಯವ್ಯಯ ಪಟ್ಟಿಯಲ್ಲಿ ಸೇರಿಸಬೇಕೆಂದೂ ಒತ್ತಾಯಪಡಿಸಲಾಯಿತು. ಸರ್ಕಾರಿ ಬಾಲಿಕಿಯರ ಶಾಲೆಗಾಗಿ ೫,೦೦೦ ರೂ. ಸಹಾಯ ಮಾಡುವಂತೆ ಸರ್ಕಾರವನ್ನು ಪ್ರಾರ್ಥಿಸಲಾಯಿತು.

ನಂಜನಗೂಡು-ಮೈಸೂರು ನಡುವೆ ರೈಲು ಸಂಚಾರದ ವೇಳೆ ಅನಾನುಕೂಲವಾಗಿರುವುದೆಂದು ಶ್ರೀ ಬಿ.ವಿ ಬಾಲಸುಬ್ರಹ್ಮಣ್ಯಂರವರು ಸೂಚಿಸಿ, ತಾವು ಸಿದ್ಧಗೊಳಿಸಿದ್ದ ವೇಳಾ ಪಟ್ಟಿಯನ್ನು ರೈಲು ಅಧಿಕಾರಿಗಳಿಗೆ ಕಳುಹಿಸುವಂತೆ ಕೋರಿದರು. ನಲ್ಲಿಗಳಲ್ಲಿ ಸರಿಯಾಗಿ ನೀರು ಬರುತ್ತಿಲ್ಲವೆಂದೂ, ಆಸ್ಪತ್ರೆಯಲ್ಲಿ ಔಷಧಿ ಸರಬರಾಜು ಸರಿಯಾಗಿಲ್ಲವೆಂದೂ ಆಕ್ಷೇಪಿಸಲಾಯಿತು. ಇವುಗಳ ಬಗ್ಗೆ ಅಧ್ಯಕ್ಷರು ಸೂಕ್ತ ಸಮಾಧಾನವಿತ್ತರು

ಎಂ. ವಿ. ಕೃಷ್ಣಪ್ಪನವರ ಭೇಟಿ

ಕೇಂದ್ರ ಆಹಾರ ಖಾತೆ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಇಲ್ಲಿಗೆ ಅನಿರೀಕ್ಷಿತ ಭೇಟಿಯಿತ್ತು, ಅಂಗಡಿ ಬೀದಿಗಳಲ್ಲಿ ಅಕ್ಕಿ ಕೊಳ್ಳುವವರಂತೆ ಧಾರಣೆವಾಸಿಯನ್ನು ಕೇಳಿ ದಿನ ಗೆ ೧॥ ಸೇರು ಅಕ್ಕಿ ಮತ್ತು ೩ ಸೇರು ರಾಗಿಯಾಗಿರುವುದನ್ನು ತಿಳಿದುಕೊಂಡರು. ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನಕ್ಕೆ ಒದಗಿಸುತ್ತಿರುವ ಕೆಟ್ಟ ಅಕ್ಕಿಯನ್ನು ಅವರಿಗೆ ತೋರಿಸಲಾಯಿತು. ಈ ವಿಷಯವನ್ನು ಮೈಸೂರಿನ ಆಹಾರ ಮಂತ್ರಿಗಳಿಗೆ ತಾವು ತಿಳಿಸುವುದಾಗಿಯೂ, ನಂಜನಗೂಡಿಗೆ ಮತ್ತೊಮ್ಮೆ ಭೇಟಿ ಕೊಡುವುದಾಗಿಯೂ ಅವರು ಹೇಳಿದರು.

ಅಶೋಕಚಕ್ರವಿಲ್ಲದ ನೋಟುಗಳ ಚಲಾವಣೆ ಅವಧಿ

ಅಶೋಕ ಚಕ್ರದ ಗುರುತು ಇಲ್ಲದಿರುವ ಕರೆನ್ಸಿ ನೋಟುಗಳು ಬರುವ ಏಪ್ರಿಲ್ ೩೦ ರಿಂದ ೬ ತಿಂಗಳ ಅವಧಿಯನಂತರ ಚಲಾವಣೆಗೆ ಬರುವುದಿಲ್ಲವೆಂದು ಭಾರತಸರ್ಕಾರದವರು ತಿಳಿಸಿದ್ದಾರೆ

ವಿವಾಹ ಮಹೋತ್ಸವಗಳು

ರಾಜಧಾನಿಯ ರಮಾವಿಲಾಸ ಅಗ್ರಹಾರದಲ್ಲಿರುವ ಟೀಯರ್ ಪ್ಯಾಲೇಸಿನ ಮಾಲೀಕರಾದ ಶ್ರೀ ಎಸ್. ಆರ್. ಕೃಷ್ಣಮೂರ್ತಿಯವರು ತಮ್ಮ ಕುಮಾರಿ ಸೌ॥ ಶಾಂತಲಕ್ಷ್ಮಿಯನ್ನು ಶ್ರೀ ಶಂಕರರಾಮಯ್ಯನವರ ಪುತ್ರ ಶ್ರೀ ಡಿ. ಎಸ್. ಚಂದ್ರಶೇಖರ್‌ರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು.

ಮರಿಮಲ್ಲಪ್ಪನವರ ವಿದ್ಯಾ ಸಂಸ್ಥೆಯಲ್ಲಿರುವ ಶ್ರೀ ಎ. ಬಿ. ಚನ್ನಬಸಪ್ಪನವರು ತಮ್ಮ ಕುಮಾರಿ ಸೌ॥ ಸತ್ಯವತಿಯನ್ನು ಹಂಪಾಪುರದ ಶ್ರೀ ಗುರುಸಿದ್ಧಪ್ಪನವರ ಮಕ್ಕಳು ಶ್ರೀ ಜಿ. ಸಿದ್ಧಲಿಂಗಶೆಟ್ಟರಿಗೆ ಕೊಟ್ಟು ನೆನ್ನೆ ರಾಜಧಾನಿಯಲ್ಲಿ ವಿವಾಹವನ್ನು ಜರುಗಿಸಿದರು.

ಶ್ರೀ ಎಂ. ಎ. ಕೃಷ್ಣಸ್ವಾಮಿ ಅಯ್ಯಂಗಾರ್ಯರು ತಮ್ಮ ಕುಮಾರ ಶ್ರೀ ಎಂ. ಎ. ಶ್ರೀನಿವಾಸರವರಿಗೆ ಮದ್ರಾಸಿನ ಶ್ರೀ ಎಂ. ಸಿ. ನರಸಿಂಹಯ್ಯಂಗಾರ್ಯರ ಪುತ್ರಿ ಸೌ॥ ಜಯಲಕ್ಷ್ಮಿಯನ್ನು ತಂದುಕೊಂಡು ಮದರಾಸಿನಲ್ಲಿ ಕಳೆದ ಸೋಮವಾರ ವಿವಾಹವನ್ನು ನೆರವೇರಿಸಿದರು.

ಮಹಾರಾಜರು ಫ್ರೀ ಮೇಸನ್ ಸಂಸ್ಥೆಯ ಸದಸ್ಯರು

ಶ್ರೀಮನ್ಮಹಾರಾಜರು ಮತ್ತು ಭರತಪುರದ ಮಹಾರಾಜರು ರಾಜಧಾನಿಯ ಫ್ರೀ ಮೇಸನ್ ಲಾಡ್ಜಿನ ಸದಸ್ಯರಾಗಿ ಸೇರಿದ್ದಾರೆ. ಈ ಸಂಬಂಧವಾಗಿ ಇತ್ತೀಚೆಗೆ ಸಮಾರಂಭವೊಂದು ನಡೆಯಿತು.

ಸಂತಾಪ ಸೂಚಕ ಸಭೆ

ಮೈಸೂರು ಹುಡುಗ ಮಾಗಡಿ ಪಾಠಶಾಲಾ ಅಧ್ಯಾಪಕರಾಗಿದ್ದ ಶ್ರೀ ಕೆ. ರಂಗಸ್ವಾಮಿ ಅಯ್ಯಂಗಾರ್ಯರು ಕಳೆದ ೨೫ರಂದು ನಿಧನ ಹೊಂದಿದ್ದಕ್ಕಾಗಿ ಶಾಲಾ ಸಿಬ್ಬಂದಿವರು ಅಪಾರ ಶೋಕವನ್ನು ವ್ಯಕ್ತಪಡಿಸಿ, ಅವರ ಆತ್ಮಕ್ಕೆ ಶಾಂತಿಯನ್ನೂ ಮತ್ತು ಬಂಧು ವರ್ಗದವರಿಗೆ ಅವರ ವಿಯೋಗವನ್ನು ಸಹಿಸಲು ಶಕ್ತಿಯನ್ನೂ ಕೊಡಲೆಂದು ಭಗವಂತನನ್ನು ಪ್ರಾರ್ಥಿಸಿರುತ್ತಾರೆ.

ನಗರಾಭಿವೃದ್ಧಿ ಸಮಿತಿ, ಮೈಸೂರು

ಪ್ರಕಟಣೆ

ತಾ॥ 23—6—56

ಅಲ್ಪ ವರಮಾನದ ವರ್ಗದ ಗೃಹ ನಿರ್ಮಾಣ ಯೋಜನೆ.

ಮೇಲ್ಕಂಡ ಯೋಜನೆಯ ಪ್ರಕಾರ ಕಟ್ಟಲಾಗುವ ಮಾದರಿ ಮನೆಗಳ ಏಕಿ ಬಗ್ಗೆ ಅರ್ಜಿಗಳನ್ನು ಸ್ವೀಕರಿಸುವ ಕೊನೇ ತಾರೀಖನ್ನು 25–6–56 ರಿಂದ 20–7–56ರ ವರೆಗೆ ಮುಂದುವರಿಸಲಾಗಿದೆ. ಅರ್ಜಿಗಳನ್ನು ಕೊಡುವ ನಿಯಮಗಳನ್ನು ಹಿಂದಿನ ಪ್ರಕಟಣೆಯಲ್ಲಿ ತಿಳಿಸಲಾಗಿದೆ.

(ರುಜು) ಎಸ್. ಲಿಂಗಣ್ಣ,
ಅಧ್ಯಕ್ಷರು

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

28—6—56ನೇ : ಗುರುವಾರದಿಂದ : ಅಮೋಘ 2ನೇ ವಾರ

ಲಕ್ಷ್ಮಿ ಪ್ರೊಡಕ್ಷನ್ಸ್‌ರವರ ತೆಲುಗು ಚಿತ್ರ

★ ಮನೆಯ ದೇವರು ★

(ಇಲವೇಲುಪು)

ಪಾತ್ರ :– ನಾಗೇಶ್ವರರಾವ್, ಜಮುನ, ಅಂಜಲಿ, ಕೃಷ್ಣಕುಮಾರಿ, ರೇಲಂಗಿ ಮುಂತಾದವರು

ಚಾಮುಂಡೇಶ್ವರಿ ಟಾಕೀಸ್

29–6–56 ರಿಂದ : ಜನಾದರಣೀಯವಾದ 4ನೇ ವಾರ : ಪ್ರತಿ ದಿನ 3 ಆಟಗಳು

ವಿಠ್ಠಲ್ ಪ್ರೊಡಕ್ಷನ್ಸ್‌ರವರ ಕನ್ನಡ ಚಿತ್ರ

ಮೈನಾವತಿ, ಜಯಶ್ರೀ, ರೇವತಿ, ಕಲ್ಯಾಣ್‌ಕುಮಾರ್, ಮಣಿಸೂರು ಕೃಷ್ಣಮೂರ್ತಿ, ಬಾಲಕೃಷ್ಣ ನಟಿಸಿರುವ ★ ಮುತ್ತೈದೆ ಭಾಗ್ಯ

ನಿರ್ದೇಶಕ ನಿರ್ಮಾಪಕ : ಬಿ. ವಿ. ಆಚಾರ್ಯ : ಕವಿ : ಗೌತಮ ಸ್ಟುಡಿಯೊ . ವಾಹಿನಿ

[Vijaya Talkie Distributors' Release

ವಿದ್ಯುಚ್ಛಕ್ತಿ ಸರಬರಾಜು ನಿಲ್ಲುವ ಬಗ್ಗೆ

ಪ್ರಕಟಣೆ

1956ನೆಯ ಜುಲೈ ಒಂದನೇ ತಾರೀಖು ಭಾನುವಾರ ಮೈಸೂರಿನ ಪೋಬ್ಸ್ ಟ್ರಾನ್ಸ್‌ಫಾರ್ಮರ್ ಸ್ಟೇಷನ್ನಿನಲ್ಲಿ ಕೆಲವು ಅತಿ ಜರೂರಾದ ರಿಪೇರಿ ಕೆಲಸಗಳನ್ನು ನಡೆಸಬೇಕಾಗಿರುವುದರಿಂದ ೩೦ ಸೈಕಲ್ಲಿನ ವಿದ್ಯುಚ್ಛಕ್ತಿ ಸರಬರಾಜನ್ನು ಬೆಳಿಗ್ಗೆ 10 ಘಂಟೆಯಿಂದ ಸಂಜೆ 4 ಘಂಟೆಯವರೆವಿಗೆ ನಿಲ್ಲಿಸಲಾಗುವುದು. ಇದರಿಂದಾಗಿ ಮೈಸೂರು ೫೮, ಟಿ. ನರಸೀಪುರ, ಬನ್ನೂರು, ಶ್ರೀರಂಗಪಟ್ಟಣ ಮತ್ತು ಚಾಮರಾಜನಗರ–ಈ ಊರುಗಳಲ್ಲಿ ಆ ದಿನ ವಿದ್ಯುತ್ ಸರಬರಾಜು ಅನಿವಾರ್ಯವಾಗಿ ನಿಲ್ಲುವ ಅಂಶವನ್ನು ಈ ಮೂಲಕ ಸಮಸ್ತ ಬಳಕೆದಾರರಿಗೂ ತಿಳಿಸಲಾಗಿದೆ. ಆದುದರಿಂದ ಸಮಸ್ತ ಬಳಕೆದಾರರೂ ಇದಾದ ಅಡಚಣೆಗೆ ಸಹಕರಿಸಬೇಕಾಗಿ ಕೋರಿದೆ

ಡಿ. ಎಸ್. ಶ್ರೀಕಂಠಯ್ಯ,
ಸೂಪರಿಂಟೆಂಡೆಂಟ್, ವಿದ್ಯುಚ್ಛಕ್ತಿ ಇಲಾಖೆ, ಮೈಸೂರು

STAY AT

NEW CHAMUNDESWARI CAFE

YELWAL ROAD, MYSORE

A most modern and up-to-date, Boarding & Lodging House. Well-ventilated rooms with attached bathrooms

MODERATE CHARGES

Bombay and Madras Meals available

★

C. B. M. CHANDRIAH,
Proprietor

Edited, Printed and Published by A. R. Nagarajan at Sadhvi Press D. Subbiah Road, Mysore

ರಾಜಕಮಲ್ ಟಾಕೀಸ್ ★

29–6–56 ರಿಂದ : ಜನೋಪ ಪ್ರಾರಂಭ
ಪ್ರತಿ ದಿನ ಮೂರು ಪ್ರದರ್ಶನಗಳು

ಶಿವಾಜಿ ಮತ್ತು ಪದ್ಮಿನಿಯವರ, ಎಂ. ಜಿ. ರಂಗಸ್ವಾಮಿ, ರಾಜ ಸುಲೋಚನ, ಕುಚಲಕುಮಾರಿ, ವಿ. ಕೆ. ರಾಮಸ್ವಾಮಿ ನಟಿಸಿರುವ,

— ★ ಪವಿತ್ರ ಪ್ರೇಮ್ ★ (ತಮಿಳು)

ಬೆಳಗಿನ ಪ್ರದರ್ಶನ . 29-6-56ರಿಂದ
ಮೂರು ದಿನಗಳು ಮಾತ್ರ

★ ಷೇರ್ ದಿಲ್ ★ (ಹಿಂದಿ)

ಲಕ್ಷ್ಮಿ ಚಿತ್ರ ★

29—6—56 ರಿಂದ :: ಅಮೋಘ ಪ್ರಾರಂಭ :: ಪ್ರತಿ ದಿನ ಮೂರು ಪ್ರದರ್ಶನಗಳು

ಶಿವಾಜಿಗಣೇಶನ್, ವಿ. ನಾಗಯ್ಯ, ತಂಗವೇಲು, ಪದ್ಮಿನಿ, ಸಾವಿತ್ರಿ, ಇ. ವಿ. ಸರೋಜ ಮುಂತಾದವರು ಪಾತ್ರವಹಿಸಿರುವ ವೀನಸ್ ಪಿಕ್ಚರ್ಸ್‌ರವರ ತಮಿಳು ಚಿತ್ರ

★ ಅಮರದೀಪಂ ★

ನಾಲ್ಕು ವಾರಗಳು ಕಾಂಪ್ಲಿಮೆಂಟರಿ, ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ

ರಿಜಿಸ್ಟರ್ ನಂ. 792

ಕೋರ್ಟ್ ಮ್ಯಾರ್ಕೆಟ್
ಸ್ಥಾಪಿತ 1932 : ಫೋನ್ 811
ಶ್ರೀ ಕೃಷ್ಣಾ ಜ್ಯುಯಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು
ನಮ್ಮಲ್ಲಿ ಸರ್ಕಾರ ಚಿನ್ನದಿಂದ ತಯಾರಾದ ನೆಕ್ಲೇಸುಗಳು, ಬಳೆಗಳು, ಮತ್ತು ನವೀನ ರೀತಿಯ ಚಿನ್ನದ ಒಡವೆಗಳು ಸಹ ದೊರೆಯುತ್ತವೆ

ಇಂದಿನ ಪತ್ರಿಕೆ 3 ಕಾಸು

ಅಗ್ಗದ ಜವಳಿ
ಗೌ॥ ಸಿಲ್ಕ್ ಸೀರೆಗಳು
ಧರ್ಮಾವರಂ, ಪೂನಾ, ಆರ್ಣಿ, ದಿಂಡಿಗಲ್
ರೇಷ್ಮೆ ಮತ್ತು ನೂಲಿನ ಸೀರೆಗಳು
ಒಂದಿಸಲ ಬಂದು ಭೇಟಿ ಕೊಡಿ
M.V. ಭೋಜಯ್ಯ
ಬಿ.ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೦೪] SADHVI : FRIDAY 29—6—1956 ಮೈಸೂರು : ಶುಕ್ರವಾರ ೨೯—೬—೧೯೫೬ [ಸಂಚಿಕೆ : ೨೯೮

ಫಾರ್ಮೋಸಾದೊಡನೆ ಸಂಧಾನಕ್ಕಾಗಿ ಚೌ ಎನ್ ಲೈ ಕರೆ

ಟೌನ್‌ಹಾಲ್ ಬಳಿ ಗುಜರಿಯನ್ನು ಬೇರೆ ಕಡೆಗೆ ವರ್ಗಾಯಿಸಬೇಕು

ಪೌರಸಭೆಯ ನಿರ್ಣಯ

ಮೈಸೂರು ೨೮

ನಗರದ ಟೌನ್‌ಹಾಲ್ ಬಳಿಯಲ್ಲಿಯೂ ಮತ್ತು ಪಕ್ಕದಲ್ಲಿಯೂ ಇರುವ ಗುಜರಿ ಅಂಗಡಿಗಳಿಂದ ಆ ಸುತ್ತಮುತ್ತಲಿನ ಜಾಗಗಳು ಬಹಳ ಕೊಳಕು ಪ್ರದೇಶಗಳಾಗಿರುವ ಕಾರಣ, ಅಂಗಡಿಗಳನ್ನು ಬೇರೆ ಯಾವುದಾದರೂ ಸೂಕ್ತವಾದ ಸ್ಥಳಕ್ಕೆ ಬದಲಾಯಿಸಿ ನಗರದ ಮಧ್ಯ ಪ್ರದೇಶದ ಸೌಂದರ್ಯವನ್ನು ಕಾಪಾಡಬೇಕೆಂದು ನೆನ್ನೆ ನಡೆದ ಪುರಸಭೆಯ ಅಧಿವೇಶನದಲ್ಲಿ ೨೫–೨ ಮತಗಳಿಂದ ತೀರ್ಮಾನಿಸಲಾಯಿತು.

ಈ ಬಗ್ಗೆ ಶ್ರೀ ಸಿ. ಎನ್. ನಾರಾಯಣರಾಯರು ತಂದ ನಿರ್ಣಯದಲ್ಲಿ ದೇವರಾಜ ಬಜಾರಿಗೆ ಅವನ್ನು ಬದಲಾಯಿಸಬೇಕೆಂಬ ಅಂಶಕ್ಕೆ ಬದಲಾಗಿ "ಸೂಕ್ತವಾದ ಸ್ಥಳಕ್ಕೆ" ಎಂಬ ತಿದ್ದುಪಡಿಯನ್ನು ಶ್ರೀ ಬಿ. ಎನ್. ಕೆಂಗೇಗೌಡರು ಸೂಚಿಸಲಾಗಿ ಅದು ಅಂಗೀಕೃತವಾಯಿತು. ನಿರ್ಣಯವನ್ನು ಶ್ರೀಗಳಾದ ಮಿರ್ ನೂರ್ ಹುಸೇನ್ ಮತ್ತು ಮಹಮದ್ ಯಾಕೂಬ್‌ರವರು ವಿರೋಧಿಸಿದರು.

ನಗರದಲ್ಲಿ ಕ್ರೀಡಾಂಗಣ (ಸ್ಟೇಡಿಯಂ) ವೊಂದನ್ನು ನಿರ್ಮಿಸಲು ಪುರಸಭೆಯು ಒಪ್ಪಿ, ಹಲವು ವರ್ಷಗಳಾದರೂ ಇನ್ನೂ ಫಲಪ್ರದವಾಗದಿರುವ ಪ್ರಯುಕ್ತ, ಕೂಡಲೇ ಈ ಬಗ್ಗೆ ಸೂಕ್ತ ಕಾರ್ಯಕ್ರಮ ಕೈಗೊಳ್ಳಬೇಕೆಂದು ಕೋರುವ ಶ್ರೀ ಎಂ. ಎನ್. ತಿಮ್ಮಯ್ಯನವರ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ದೇವರಾಜ ಮಾರ್ಕೆಟ್ಟಿನಲ್ಲಿ ಮಾಂಸ, ಮೀನು ಮತ್ತು ಕೋಳಿಗಳನ್ನು ಒಟ್ಟಿಗೆ ಮಾರುವುದರಿಂದ ಉಂಟಾಗಿರುವ ಗಲೀಜು, ದುರ್ನಾತಗಳನ್ನು ನಿವಾರಿಸಲು ಅವುಗಳನ್ನು ಪ್ರತ್ಯೇಕವಾಗಿ ವಿಂಗಡಿಸಿ ಮಾರಾಟ ಮಾಡಿಸಬೇಕೆಂದು ಕೋರುವ ಶ್ರೀ ಚೌಡಯ್ಯನವರ ನಿರ್ಣಯವೂ ಅಂಗೀಕೃತವಾಯಿತು.

ಪುರಸಭೆಯ ಸ್ವರ್ಣ ಮಹೋತ್ಸವವನ್ನು ಆಚರಿಸಲು ವ್ಯವಸ್ಥೆ ಮಾಡಬೇಕೆಂದು ಕೋರುವ ಶ್ರೀ ಚೌಡಯ್ಯನವರ ಮತ್ತೊಂದು ನಿರ್ಣಯವನ್ನು ಆಡಳಿತ ಸಮಿತಿಯ ಪರಿಶೀಲನೆಗೆ ಬಿಡಲಾಯಿತು.

ರಾಧಾಕೃಷ್ಣನ್‌ರವರ ಕೊಲೆ ಬೆದರಿಕೆಗಾಗಿ ಬಂಧನ

ಭಾರತದ ಉಪಾಧ್ಯಕ್ಷ ಡಾ|| ರಾಧಾಕೃಷ್ಣನ್‌ರವರು ಬರುವ ತಿಂಗಳು ಆದಿಭಾಗದಲ್ಲಿ ಆಫ್ರಿಕದ ಕೆನ್ಯಾ ರಾಜ್ಯಕ್ಕೆ ಭೇಟಿ ಕೊಡಲಿರುವರಷ್ಟೆ? ಅವರು ಅಲ್ಲಿಗೆ ಹೋದಾಗ ಅವರನ್ನು ಕೊಲ್ಲುವುದಾಗಿ ತಿಳಿಸಿ, ಅಧಿಕಾರಿಗಳಿಗೆ ಪತ್ರ ಬರೆದಿದ್ದ ಅಲ್ಲಿರುವ ಗೋವಾ ಇಂಜನಿಯರ್ ರೋಮಿಯೊ ಫೆರಾವೊ ಎಂಬುವನನ್ನು ಕೆನ್ಯಾ ಪೋಲೀಸರು ಬಂಧಿಸಿರುವರು. ಫೆರಾವೊ ತನ್ನ ತಪ್ಪನ್ನು ಒಪ್ಪಿ, ವಿಷಾದವನ್ನು ವ್ಯಕ್ತಪಡಿಸಿರುತ್ತಾನೆ. ಅವನ ಮಾನಸಿಕ ಸ್ಥಿತಿಯನ್ನು ಪರಿಶೀಲಿಸಲು ಸೂಚಿಸಿ, ೧೪ ದಿನಗಳ ಕಾಲ ರಿಮ್ಯಾಂಡ್ ಮಾಡಲಾಗಿದೆ.

ಅಭಾವ ಪ್ರದೇಶಗಳಿಗೆ ೧೦ ಲಕ್ಷ ರೂ. ಹಂಚಿಕೆ

ಜಿಲ್ಲಾ ಪರಿಹಾರ ಸಮಿತಿ ಸಭೆಯ ತೀರ್ಮಾನ

ಮೈಸೂರು ೨೮

ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನೆನ್ನೆ ಜಿಲ್ಲಾ ಪರಿಹಾರ ಸಲಹಾ ಸಮಿತಿ ಸಭೆಯು ಇಲ್ಲಿನ ಅರಮನೆ ಕಛೇರಿಯಲ್ಲಿ ನಡೆಯಿತು. ಸರ್ಕಾರದವರು ಮಂಜೂರು ಮಾಡಿರುವ ೧೦ ಲಕ್ಷ ರೂ.ಗಳಲ್ಲಿ ಟಿ.ನರಸೀಪುರ, ಚಾಮರಾಜನಗರ, ಗುಂಡ್ಲುಪೇಟೆ, ನಂಜನಗೂಡು ಮತ್ತು ಮೈಸೂರು ತಾಲ್ಲೂಕುಗಳಲ್ಲಿ ತಲಾ ೧½ ಲಕ್ಷ ರೂ.ಗಳನ್ನೂ, ಉಳಿದವನ್ನು ತಾಲ್ಲೂಕುಗಳಲ್ಲಿ ೫೦ ಸಾವಿರ ರೂ.ಗಳನ್ನೂ ಪರಿಹಾರಕ್ಕಾಗಿ ವೆಚ್ಚ ಮಾಡಬೇಕೆಂದು ಸಮಿತಿಯು ನಿರ್ಧರಿಸಿತು. ಆ ಪೈಕಿ ನೀರಾವರಿಗೆ ೩೦,೦೦೦ ರೂ., ದನಗಳ ಮೇವಿಗೆ ೬೦ ಸಾವಿರ ರೂ., ಮತ್ತು ಇತರ ಕೆಲಸಗಳಿಗೆ ೧೦ ಸಾವಿರ ರೂ. ಒದಗಿಸಬೇಕೆಂದು ಗೊತ್ತುಪಡಿಸಲಾಯಿತು.

ಸರ್ಕಾರದ ರಿಸರ್ವಿನಿಂದ ಮೇವನ್ನು ಲಾರಿಗಳ ಮೂಲಕ ಅಭಾವ ಪ್ರದೇಶಗಳಿಗೆ ಕಳುಹಿಸಿ, ಪ್ರತಿ ಪೌಂಡಿಗೆ ೪ ಕಾಸಿನಂತೆ ಮಾರಬೇಕೆಂದೂ, ಪರಿಹಾರ ಕೆಲಸಗಳಲ್ಲಿ ನಿರತರಾಗಿರುವ ಕೂಲಿಯವರಿಗೆ ಮಾತ್ರ ಒಬ್ಬರಿಗೆ ಅಕ್ಕಿಯನ್ನು ೩ ಸೇರಿನಂತೆ ಒದಗಿಸಬೇಕೆಂದೂ ಗೊತ್ತುಪಡಿಸಲಾಯಿತು. ಗಂಡಸರಿಗೆ ೧೪ ಆಣೆ, ಹೆಂಗಸರಿಗೆ ೧೦ ಆಣೆ ಕೂಲಿ ದರವನ್ನು ಕೊಡಲು ತೀರ್ಮಾನಿಸಲಾಯಿತು.

೧೦ ಲಕ್ಷ ರೂ. ಗಳನ್ನು ಕೇವಲ ಕಾಲುವೆಗಳಿಗೇ ಒದಗಿಸುವಂತೆಯೂ, ಹೆಚ್ಚಿಗೆ ೧ ಲಕ್ಷ ರೂ. ಗಳನ್ನು ಕೊಡಬೇಕೆಂದೂ ಸರ್ಕಾರವನ್ನು ಪ್ರಾರ್ಥಿಸಲಾಯಿತು. ನಂಜನಗೂಡು, ಚಾಮರಾಜನಗರ ಮತ್ತು ಗುಂಡ್ಲುಪೇಟೆ ತಾಲ್ಲೂಕುಗಳಲ್ಲಿ ಖಾದಿ ಉತ್ಪತ್ತಿಯನ್ನು ಹೆಚ್ಚಿಸಲು ಗ್ರಾಮಾಂತರ ಕೈಗಾರಿಕಾ ಡೈರೆಕ್ಟರಿಗೆ ೩ ಲಕ್ಷ ರೂ. ಒದಗಿಸುವಂತೆಯೂ, ಅದರಿಂದ ಈ ತಾಲ್ಲೂಕುಗಳಲ್ಲಿರುವ ೯,೦೦೦ಕ್ಕೂ ಹೆಚ್ಚು ನೇಕಾರರು ಹತ್ತಿಯನ್ನು ಕೊಳ್ಳಲು ಅವಕಾಶವಾಗಬೇಕೆಂದೂ ಸಮಿತಿಯು ಸರ್ಕಾರವನ್ನು ಪ್ರಾರ್ಥಿಸಿತು.

ಪ್ರಧಾನಿಯವರು ಕೊಟ್ಟಿರುವ ೨೫,೦೦೦ ರೂ. ಗಳನ್ನು ಅನಾಥರಿಗೆ ಕೊಡಬೇಕೆಂದೂ ತೀರ್ಮಾನವಾಯಿತು.

ಸಚಿವರು ಮಾತನಾಡಿ ಸರ್ಕಾರದವರು ಅಭಾವ ಪರಿಹಾರಕ್ಕಾಗಿ ಎಷ್ಟು ಹಣ ಬೇಕಾದರೂ ಒದಗಿಸುವರೆಂಬ ಭರವಸೆ ನೀಡಿದರು.

ಗೃಹ ಪ್ರವೇಶ

ಅರುಣ ಪತ್ರಿಕೆಯ ಸಂಪಾದಕರಾದ ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಮೈಸೂರು ಚಾಮರಾಜ ರಸ್ತೆ ನಾಲಾ ಬೀದಿಯಲ್ಲಿ ನೂತನವಾಗಿ ಕಟ್ಟಿಸಿರುವ ಗೃಹದ ಪ್ರವೇಶೋತ್ಸವವನ್ನು ನೆನ್ನೆ ನೆರವೇರಿಸಿ, ಅನೇಕ ಇಷ್ಟ ಮಿತ್ರರನ್ನು ಆಹ್ವಾನಿಸಿ ಭೋಜನಕೂಟದಲ್ಲಿ ಸತ್ಕರಿಸಿದರು.

ಸಂಸ್ಥಾನದ ವಿದ್ಯಾಭಿವೃದ್ಧಿಯಲ್ಲಿ ಖಾಸಗಿಯವರ ಸಹಕಾರ

ಕೇಂದ್ರ ವಿದ್ಯಾ ಉಪ ಮಂತ್ರಿ ಡಾ|| ಶ್ರೀಮಾಲಿಯವರ ಪ್ರಶಂಸೆ

ಟಿ ನರಸೀಪುರ ೨೮

ಇಲ್ಲಿನ ವಿದ್ಯೋದಯ ಸಂಸ್ಥೆಗಳ ವಿದ್ಯಾರ್ಥಿನಿಲಯದ ಶಂಕುಸ್ಥಾಪನೆಯನ್ನು ಕೇಂದ್ರ ವಿದ್ಯಾ ಉಪ ಮಂತ್ರಿ ಡಾ|| ಶ್ರೀಮಾಲಿಯವರು ನೆನ್ನೆ ನೆರವೇರಿಸಿದರು. ಅವರು ಭಾಷಣ ಮಾಡಿ ರಾಜ್ಯಾಂಗದ ವಿಧಿ ನಿಯಮಗಳ ಪ್ರಕಾರ, ಉಚಿತ ಮತ್ತು ಕಡ್ಡಾಯದ ಪ್ರಾಥಮಿಕ ಶಿಕ್ಷಣವನ್ನು ಕೇಂದ್ರ ಮತ್ತು ಸಂಸ್ಥಾನ ಸರ್ಕಾರಗಳು ಏರ್ಪಡಿಸುವುದಾಗಿ ತಿಳಿಸಿದರು. ಪ್ರಜಾಸತ್ತೆಯಲ್ಲಿ ಜನರು ವಿದ್ಯಾಭ್ಯಾಸದ ಅಭಿವೃದ್ಧಿಗಾಗಿ ಹೆಚ್ಚು ಶ್ರಮವಹಿಸಬೇಕೆಂದು ಸೂಚಿಸಿದರು. ಮೈಸೂರು ಸಂಸ್ಥಾನದಲ್ಲಿ ವಿದ್ಯಾಭ್ಯಾಸದ ಬೆಳವಣಿಗೆಗೆ ಖಾಸಗಿಯವರು ಸರ್ಕಾರದೊಡನೆ ವಿಶೇಷವಾಗಿ ಸಹಕಾರ ಮಾಡುತ್ತಿರುವುದು ಶ್ಲಾಘನೀಯವೆಂದು ಅವರು ತಿಳಿಸಿದರು.

ದೇಶದಲ್ಲಿ ವಿವಿಧೋದ್ದೇಶ ಶಾಲೆಗಳನ್ನು ವಿಸ್ತರಿಸುವುದು ಅಗತ್ಯವೆಂದೂ, ಈಗ ಅಂತಹ ೫೦೦ ಶಾಲೆಗಳಿರುವುದಾಗಿಯೂ ಅವರು ನುಡಿದರು. ಕೇಂದ್ರ ಸರ್ಕಾರದವರು ಇಂತಹ ವಿದ್ಯಾಸಂಸ್ಥೆಗಳಿಗೆ ಸೂಕ್ತ ಸಹಾಯ ಮಾಡುವುದಾಗಿಯೂ ಅವರು ತಿಳಿಸಿದರು.

ಸಂಸ್ಥಾನದ ವಿದ್ಯಾ ಮಂತ್ರಿ ಶ್ರೀ ಎ.ಜಿ. ರಾಮಚಂದ್ರರಾಯರು ವಿದ್ಯಾರ್ಥಿಗಳ ವಿಹಾರ ಮತ್ತು ಸಭಾಭವನದ ಶಂಕುಸ್ಥಾಪನೆಯನ್ನು ನೆರವೇರಿಸಿದರು. ಅವರು ಭಾಷಣ ಮಾಡಿ, ಭಾರತದ ಸಮಾಜ ಜೀವನವು ವಿಶ್ವದ ಎಲ್ಲ ಕಡೆಗಳಿಗಿಂತಲೂ ಉತ್ತಮವಾಗಬೇಕೆಂದೂ, ಅದನ್ನು ಸಾಧಿಸಲು ವಿದ್ಯಾಭ್ಯಾಸವೇ ಸೂಕ್ತ ಸಾಧನವೆಂದೂ ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಎಲ್ಲರಿಗೂ ಮಾಧ್ಯಮಿಕ ವಿದ್ಯಾಭ್ಯಾಸವನ್ನು ಕಲಿಸುವುದು ಅಗತ್ಯವೆಂದೂ, ಹೆಚ್ಚಿನ ವಿದ್ಯಾಭ್ಯಾಸವನ್ನು ವಿಶೇಷ ಅರ್ಹತೆ ಪಡೆದ ಬುದ್ಧಿಶಾಲಿಗಳಿಗೆ ಮಾತ್ರ ಕೊಡಬೇಕೆಂದೂ ತಿಳಿಸಿದರು.

ಮೊದಲು ಶಾಲಾ ವಿದ್ಯಾರ್ಥಿನಿಯರಿಂದ ಪ್ರಾರ್ಥನೆಯಾದನಂತರ ಸಂಸ್ಥೆಗಳ ಕಾರ್ಯದರ್ಶಿ ಶ್ರೀ ಎಂ. ಸಿ. ಶಿವಾನಂದಶರ್ಮರು ಸ್ವಾಗತ ಭಾಷಣ ಮಾಡಿದರು.

ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಟಿ. ಜಿ. ಸತ್ಯನಾರಾಯಣರಾಯರು ವರದಿಯನ್ನು ಒಪ್ಪಿಸಿದರು.

ನಾಳಿದ್ದು ನಗರದಲ್ಲಿ ನೀರು ನಿಲ್ಲುವುದು

ಮೈಸೂರು ೨೮

ಇದೇ ಜುಲೈ ಮಾಹೆ ೧ನೇ ತಾರೀಖು ಭಾನುವಾರ ನಗರಕ್ಕೆ ವಿದ್ಯುಚ್ಛಕ್ತಿ ಸರಬರಾಜು ಇಲ್ಲವಾದ ಪ್ರಯುಕ್ತ, ಆ ದಿನ ಬೆಳಗ್ಗೆ ೧೦ ಗಂಟೆಯಿಂದ ಸಾಯಂಕಾಲ ೫ ಗಂಟೆ ವರಿವಿಗೆ ನಗರದ ಕನ್ನೇಗೌಡನ ಕೊಪ್ಪಲು, ಬಾಡಿಗಾರ್ಡ್ ಮತ್ತು ವಿ. ವಿ. ಮೊಹಲ್ಲಾಗಳಲ್ಲಿ ನೀರು ಸರಬರಾಜು ಇರುವುದಿಲ್ಲ.

ಫಾರ್ಮೋಸಾ ವಿಮೋಚನಾ ಸಂಧಾನಕ್ಕಾಗಿ ಆಹ್ವಾನ

ಫಾರ್ಮೋಸಾ ದ್ವೀಪವನ್ನು ಶಾಂತಿಯುತವಾಗಿ ವಿಮೋಚನೆಗೊಳಿಸಲು ತೆಗೆದುಕೊಳ್ಳಬೇಕಾಗುವ ಕ್ರಮ ಮತ್ತು ಹೆಜ್ಜೆಗಳನ್ನು ಕುರಿತು ಮಾತುಕತೆ ನಡೆಸಲು ಬರುವಂತೆ ಫಾರ್ಮೋಸಾ ಅಧಿಕಾರಿಗಳಿಗೆ ಚೀನದ ಪ್ರಧಾನಿ ಚೌ ಎನ್ ಲೈಯವರು ಸೂಚನೆನೀಡುತ್ತಿರುವರು. ಹಾಗೂ ಈ ಬಗ್ಗೆ ತಮ್ಮ ಸರ್ಕಾರದ ಪರವಾಗಿ ಅಧಿಕೃತವಾಗಿ ಮಾತನಾಡಲು ಸಿದ್ಧವಾಗಿರುವುದಾಗಿ ಅವರು ತಿಳಿಸಿರುವರು. ಫಾರ್ಮೋಸಾ ಅಧಿಕಾರಿಗಳು ತಮ್ಮ ಪ್ರತಿನಿಧಿಗಳನ್ನು ಪೀಕಿಂಗಿಗಾಗಲೀ ಅಥವಾ ಬೇರೊಂದು ಒಪ್ಪಿತ ಸ್ಥಳಕ್ಕಾಗಲೀ ಕಳುಹಿಸಬಹುದೆಂದೂ ಅವರು ಹೇಳಿರುವರು.

ವಿದ್ಯುಚ್ಛಕ್ತಿ ಬಳಸುವವರ ಕುಂದುಕೊರತೆಗಳು

ಸಚಿವರೊಡನೆ ಸಮಾಲೋಚನೆ

ಮೈಸೂರು ೨೮

ಮೊದಲೇ ಗೊತ್ತಾಗಿದ್ದಂತೆ, ಸಚಿವರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ನೆನ್ನೆ ಅರಮನೆ ಕಛೇರಿಯಲ್ಲಿ ವಿದ್ಯುಚ್ಛಕ್ತಿ ಬಳಸುವವರೊಡನೆ ಸಮಾಲೋಚಿಸಿ ಹೊಸ ಸರ್ಕಾರದ ಆಜ್ಞೆಯಿಂದ ಉಂಟಾಗಿರುವ ತೊಂದರೆಗಳನ್ನು ಅರಿತುಕೊಂಡು ಸೂಕ್ತ ಪರಿಹಾರ ನೀಡುವುದಾಗಿ ಭರವಸೆಯಿತ್ತರು. ಹೊಸ ಆಜ್ಞೆಯನ್ನು ಇನ್ನು ೬ ತಿಂಗಳ ಕಾಲ ಜಾರಿಗೆ ಕೊಡಲಾಗದು, ವಿದ್ಯುಚ್ಛಕ್ತಿ ಮೋಟಾರುಗಳನ್ನು ಸರ್ಕಾರದವರೇ ಒದಗಿಸಿ ಅವುಗಳ ಮೊಬಲಗನ್ನು ಕಂತಿನ ರೂಪದಲ್ಲಿ ವಸೂಲು ಮಾಡಬೇಕು, ಕನಿಷ್ಠ ಪ್ರಮಾಣದ ಯೂನಿಟ್ಟುಗಳನ್ನು ಬಹಳ ಮಟ್ಟಿಗೆ ಇಳಿಸಬೇಕು. ಇವೇ ಮುಂತಾದ ಕೋರಿಕೆಗಳನ್ನು ಸಚಿವರ ಮುಂದೆ ಇಡಲಾಯಿತು.

LATEST NEWS

ಮೈಸೂರು ಕಾಂಗ್ರೆಸ್ಸಿನಲ್ಲಿ ಬಿಕ್ಕಟ್ಟು

ಪ್ರದೇಶ ಮುಖಂಡರುಗಳಿಗೆ ಢೇಬರ್‌ರವರ ಕರೆ

ಸ್ವಂ. ವ. ಪ್ರೊ॥] ಬೆಂಗಳೂರು ೨೮

ಮೈಸೂರು ಸಂಸ್ಥಾನದ ಕಾಂಗ್ರೆಸ್ ರಾಜಕೀಯದಲ್ಲಿ ಬಿಕ್ಕಟ್ಟು ಪ್ರಾಪ್ತವಾಗಿರುವುದೆಂದು ಕಾಣಬರುತ್ತಿದೆ. ದಾವಣಗೆರೆಯಲ್ಲಿ ಮುಖ್ಯ ಮಂತ್ರಿಗಳು ಮೊನ್ನೆ ಭಾಷಣ ಮಾಡಿ, ಈ ಬಗ್ಗೆ ಮುನ್ಸೂಚನೆಯನ್ನು ಇತ್ತಿರುವರೆಂದೂ ಹೇಳಲಾಗಿದೆ.

ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕತ್ವದಲ್ಲಿ ವಿಶ್ವಾಸದ ವಿಷಯವಾಗಿ ಈಗಾಗಲೇ ಪಕ್ಷದ ೫೭ ಜನ ಸದಸ್ಯರ ಬೆಂಬಲವಿರುವುದೆಂದೂ, ಅದನ್ನು ಒಳಗೊಂಡ ಪತ್ರವನ್ನು ಕಾಂಗ್ರೆಸ್ ನಾಯಕರು ತೆಗೆದುಕೊಂಡು, ಬರುವ ೩ನೇ ತಾರೀಖು ದೆಹಲಿಗೆ ಹೋಗುವರೆಂದೂ ಗೊತ್ತಾಗಿದೆ. ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಮುಖ್ಯ ಮಂತ್ರಿಯವರನ್ನು, ಜತೆ ವಿಸ್ತೃತವಾಗಿ ಇತರ ಕಾಂಗ್ರೆಸ್ ಪ್ರಮುಖರನ್ನು ಮಾತುಕತೆಗಾಗಿ ಆಹ್ವಾನಿಸಿರುವರೆಂದು ತಿಳಿದುಬಂದಿದೆ.

ಮುಖ್ಯ ಮಂತ್ರಿಗಳನ್ನು ನುಂಗುವ ಪ್ರಯತ್ನ

ಸಂಸ್ಥಾನದ ರಾಜಕೀಯದ ಬಗ್ಗೆ ಹನುಮಂತಯ್ಯನವರು ಹೇಳಿಕೆ

[illegible]

ಮೈಸೂರು ರಾಜಕೀಯ ... ನನ್ನನ್ನು ನುಂಗುವ ... [illegible] ... ಎಂದು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಈ ... ದಾವಣಗೆರೆಯ ... [illegible]

[illegible]

ಹಾಸಿಗೆ - ದಿಂಬು

ಬಾಹುಸಾರಾ ಕಂಪನಿ

[illegible]

ಪೌರರ ಸಹಕಾರದಿಂದ ಆಸ್ಪತ್ರೆಯಲ್ಲಿ ರೋಗಿಗಳಿಗೆ ಪ್ರವೇಶವಿಲ್ಲ

[illegible] ... ಆಸ್ಪತ್ರೆಯಲ್ಲಿ ರೋಗಿಗಳನ್ನು ... [illegible]

ಸಾಧ್ವಿ ವಿದ್ಯಾರ್ಥಿ ನಿಲಯಕ್ಕೆ ಗೋಕರ್ಣ ಸ್ವಾಮಿಗಳ ಭೇಟಿ

[illegible] ... ವಿದ್ಯಾರ್ಥಿ ನಿಲಯಕ್ಕೆ ... ಘಂಟೆಗೆ ಭೇಟಿಯಿತ್ತು ವಿದ್ಯಾರ್ಥಿಗಳಿಗೆ ... [illegible]

ಸೋಕಳಿಯಿರುವ ಸರೋವರ

[illegible]

(ಕಾಯಿನ ...)

ನಗರಾಭಿವೃದ್ಧಿ ಸಮಿತಿ

ಪ್ರಕಟಣೆ

[illegible]

(ರುಜು) ಎಸ್. ಲಿಂಗಣ್ಣ,
ಅಧ್ಯಕ್ಷರು

ಭಾರತದಲ್ಲಿ ಸಂತಾನ ಹತೋಟಿಗೆ ಪ್ರಮೇಯವಿಲ್ಲ

ಆಚಾರ್ಯ ವಿನೋಬಾ ಭಾವೆಯವರ ಸ್ಪಷ್ಟೋಕ್ತಿ

ಆಚಾರ್ಯ ವಿನೋಬಾ ಭಾವೆಯವರು ... [illegible] ... ಸಂತಾನ ಹತೋಟಿ ... ಅವಶ್ಯಕತೆಯಿಲ್ಲವೆಂದು ... [illegible] ... ಎಂದು ಅವರು ಸೂಚಿಸಿದ್ದಾರೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

CENTRAL INSTITUTE OF COMMERCE,
Vani vilas Market Mysore

Admissions to diploma courses in Commerce Shorthand and Typewriting are being received on all working days

Pale BRONKOL
for ASTHMA
&
BRONCHITIS
Sole Distributors for Mysore State and Coorg
SATHYA & CO
Chemists & Druggists
71B A S Street
BANGALORE 2

ಜನಪದ ಗೀತೆ ಮತ್ತು ಸಂಗೀತ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣೋತ್ಸವದ ಅಂಗವಾಗಿ ನಾಳೆ ಸಂಜೆ ... ಘಂಟೆಗೆ ಮೈಸೂರಿನ ಶ್ರೀ ... ಕಾಂತರಾಜಮ್ಮಣ್ಣಿಯವರಿಂದ ಜನಪದ ಗೀತೆ ಮತ್ತು ರಾತ್ರಿ ... ಘಂಟೆಗೆ ... ಕನಕಮ್ಮನವರ ಹಾಡುಗಾರಿಕೆಯು ... ಮೃದಂಗದ ಸಹಯೋಗ ... ರಾತ್ರಿ ... ಘಂಟೆಗೆ ... ಗುರುರಾಜ ... ಪಿಟೀಲು ಮತ್ತು ... ಮೃದಂಗದೊಡನೆ ನಡೆಯಲಿದೆ

SREE GANESH TALKIES
From 30-6 56 For 3 Days
INSIDE DETROIT
Starring Dennis O Keefe and Pat O Brien
An organised crime movie in the auto capital of America!

ಗಡಿಯಾರಗಳು ಮತ್ತು ಕನ್ನಡಕಗಳು

[illegible]

ಗಡಿಯಾರಗಳು ಮತ್ತು ಕನ್ನಡಕಗಳು ... [illegible]

ಕೆ. ಎಸ್. ಲಕ್ಷ್ಮಣ ಐಯ್ಯರ್

ಗಡಿಯಾರ ಮತ್ತು ಕನ್ನಡಕಗಳ ವ್ಯಾಪಾರಸ್ಥರು ಅಶೋಕ ರಸ್ತೆ, ಮೈಸೂರು [Estd 1911]

ಒಲಂಪಿಯಾ ಟಾಕೀಸ್

29—6—56 ರಿಂದ 50ನೇ ...
ಅತ್ಯಮೋಘವಾದ ...
ಎ ವಿ ಎಂ ರವರ

ಭಾಯ್ ಭಾಯ್

ಪಾತ್ರ — ಅಶೋಕ್ ಕುಮಾರ್, ಕಿಶೋರ್ ಕುಮಾರ್, ನಿರೂಪ ... [illegible]

START

NEW CHAMUNDESWARI CAFE

YELWAL ROAD, MYSORE

A most modern and up to date, Boarding & Lodging House Well ventilated rooms with attached bathrooms

MODERATE CHARGES

★

Bombay and Madras Meals available

C B M CHANDRIAH
Proprietor

ಪ್ರಭಾ ★ ಇಂದಿನಿಂದ ಅಮೋಘ ಪ್ರಾರಂಭ
ದಿನವೂ ಮೂರು ಪ್ರದರ್ಶನಗಳು
[illegible]

★ ತೂಫಾನ್ ಔರ್ ದೀಯಾ ★

[ಬಿರುಗಾಳಿ ಮತ್ತು ಜ್ವಾಲೆ] (ಹಿಂದಿ)

[illegible]

ಸಂಗೀತ ವಸಂತ್ ದೇಸಾಯ್ ... ಪ್ರಭಾತ್ ಕುಮಾರ್

[illegible]

ವಿದ್ಯುಚ್ಛಕ್ತಿ ಸರಬರಾಜು ನಿಲ್ಲುವ ಬಗ್ಗೆ

ಪ್ರಕಟಣೆ

1956ನೆಯ ... ಭಾನುವಾರ ಮೈಸೂರಿನ ... [illegible] ... 10 ಘಂಟೆಯಿಂದ ... ಘಂಟೆಯವರೆಗೆ ... ಮೈಸೂರು ... ವಿದ್ಯುಚ್ಛಕ್ತಿ ... [illegible]

ವಿ. ಎಸ್. ಶ್ರೀಕಂಠಯ್ಯ,
ಸೂಪರಿಂಟೆಂಡೆಂಟ್ ವಿದ್ಯುಚ್ಛಕ್ತಿ ಇಲಾಖೆ ಮೈಸೂರು

Printed and Published by ... at the Sadhvi Press ...

ಲಕ್ಷ್ಮೀ ★ 29 6—56 ರಿಂದ ಅಮೋಘ ಪ್ರಾರಂಭ
ಪ್ರತಿ ದಿನ ಮೂರು ಪ್ರದರ್ಶನಗಳು
[illegible]

★ ಅಮರದೀಪಂ ★

[illegible]

ರಿಜಿಸ್ಟರ್ಡ್ ನಂ. 792

ಚಂದಾ ಹಣ [illegible]

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವುಳ್ಳ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ [illegible]

ಸಾಧ್ವಿ

ಸಂಪುಟ : ೮೮] SADHVI : SATURDAY 30-6-1956 ಮೈಸೂರು : ಶನಿವಾರ ೩೦-೬-೧೯೫೬ [ಸಂಚಿಕೆ : [illegible]

ಪೋಲೆಂಡ್ ನಗರದಲ್ಲಿ ದಂಗೆ; ಗುಂಡಿನಿಂದ ೩೮ ಮರಣ

ಧರ್ಮದ ರಕ್ಷಣೆಗಾಗಿ ಮಠಾಧಿಪತಿಗಳು ಒಂದುಗೂಡಬೇಕು

ಪತ್ರಿಕಾ ಗೋಷ್ಠಿಯಲ್ಲಿ ಗೋಕರ್ಣ ಸ್ವಾಮಿಗಳವರ ಕರೆ

ಮೈಸೂರು ೩೦

ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶರಾದ ಶ್ರೀ ದ್ವಾರಕಾನಾಥ ತೀರ್ಥ ಸ್ವಾಮಿಗಳವರು ನೆನ್ನೆ ಪತ್ರಿಕಾ ಗೋಷ್ಠಿಯೊಂದನ್ನು ಕರೆದು, ನಶಿಸುತ್ತಿರುವ ಸನಾತನ ಧರ್ಮದ ಸುಸಂಘಟನೆಗೆ ಎಲ್ಲಾ (ತ್ರಿಮತಸ್ಥ) ಮಠಾಧೀಶರೂ ಒಟ್ಟುಗೂಡುವುದು ಬಹಳ ಅವಶ್ಯಕವೆಂದು ತಿಳಿಸಿದರು

ಇಂದು ಧರ್ಮಕ್ಷೀಣತೆಗೆ ಪಾಶ್ಚಿಮಾತ್ಯ ಪದ್ಧತಿಯ ಅನುಸರಣ ಮತ್ತು ಯುವಕ ಯುವತಿಯರ ಸಹ ವಿದ್ಯಾಭ್ಯಾಸಗಳು ಸ್ವಲ್ಪ ಮಟ್ಟಿನ ಕಾರಣವೆಂದು ಅವರು ಅಭಿಪ್ರಾಯಪಟ್ಟರು

ತಮ್ಮ ಪೀಠವು ಗೋವಾದ ಗಡಿಯೊಳಗೆ ೧೦ ಮೈಲಿ ದೂರದ ಪರ್ತಗಾಳಿಯಲ್ಲಿರುವುದೆಂದೂ, ಅದನ್ನು ಮಧ್ವಾಚಾರ್ಯರು ಸ್ಥಾಪಿಸಿದಂದಿನಿಂದ ಇಂದಿನವರೆಗೆ ೫೦೦ ವರ್ಷಗಳಲ್ಲಿ ಸುಮಾರು ೨೨ ಗುರು ಪರಂಪರೆಗಳು ಕಳೆದವೆಯೆಂದೂ ತಿಳಿಸಿದರು

ಧರ್ಮ ಪ್ರಸರಣ ಕಾರ್ಯಕ್ಕಾಗಿ, ಕಾಶಿ ಒಂದು ಸಂಸ್ಕೃತಿ ಪ್ರಚಾರ ಮಂಡಲಿಯನ್ನು ಸ್ಥಾಪಿಸಿರುವುದಾಗಿಯೂ, ಪರ್ತಗಾಳಿ, ಬೊಂಬಾಯಿ ಮತ್ತು ಗೋವಾದ ಬಿಚೋಲಿಯಲ್ಲಿ ೩ ಪುಸ್ತಕ ಭಂಡಾರಗಳನ್ನು ತೆರೆದಿರುವುದಾಗಿಯೂ, ೩ ಸಂಸ್ಕೃತ ಪಾಠಶಾಲೆಗಳನ್ನು ನಡೆಸುತ್ತಿರುವುದಾಗಿಯೂ ತಿಳಿಸಿದರು

ಬೊಂಬಾಯಿ ಪಾಠಶಾಲೆಗಾಗಿ ಸುಮಾರು ೮ ಲಕ್ಷ ರೂ ವೆಚ್ಚದಲ್ಲಿ ಒಂದು ಕಟ್ಟಡವನ್ನು ನಿರ್ಮಿಸಲಾಗುತ್ತಿದೆಯೆಂದೂ, ಆ ಶಾಲೆಯಲ್ಲಿ [illegible] ಕಲಿಸಲಾಗುತ್ತಿದೆಯೆಂದೂ ಹೇಳಿದರು

ಹಿಂದುಗಳ ಧರ್ಮ ಸಂಘಟನೆಗೆ [illegible] ಸ್ವಾಮಿಗಳು [illegible] ತಮ್ಮ [illegible]

ಗೋವಾದಲ್ಲಿ ಸರ್ಕಾರದಿಂದ ತಮ್ಮ ಧರ್ಮ ಚಟುವಟಿಕೆಗಳಿಗೆ ಯಾವ [illegible] ಮತ್ತು [illegible]

ಮಠಾಧಿಪತಿಗಳು ಧಾರ್ಮಿಕ [illegible] ಮಾತ್ರವಲ್ಲದೆ [illegible] ಗಮನ ಕೊಡುವುದು ಅವಶ್ಯಕವೆಂದು ಅವರು ಹೇಳಿದರು

ವೀಣಾವಾದನ ಮತ್ತು ಸಂಗೀತ

ಬಂಗಾರಪೇಟೆಯ(?) ಶ್ರೀ ಶ್ರೀಕಂಠೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣೋತ್ಸವದ ಅಂಗವಾಗಿ ನಾಳೆ ಸಂಜೆ ೭ ಘಂಟೆಗೆ ವಿ ಜಿ. ಕೃಷ್ಣಮೂರ್ತಿಯವರಿಂದ ವೀಣಾವಾದನ ಎ. ಶಾಸ್ತ್ರಿ [illegible] ವಿ ಎಸ್ [illegible] ಮತ್ತು ಎ [illegible] ಕೃಷ್ಣಮೂರ್ತಿಯವರಿಂದ ಸಂಗೀತವೂ ನಡೆಯುವುವು

ಜಿಲ್ಲಾ ಅಭಾವ ಪ್ರದೇಶಗಳಿಗೆ ೮೦ ಟನ್ ಆಹಾರ

ಅದರ ೩ ರಷ್ಟು ಮೈಸೂರಿಗೆ — ವಿಶೇಷ ಕೃಷಿಕ ವ್ಯವಸ್ಥೆ

ಬೆಂಗಳೂರು ೩೦

ಮೈಸೂರು ಜಿಲ್ಲೆಯ ಆಹಾರ ಅಭಾವ ಪ್ರದೇಶಗಳಿಗೆ ೮೦ ಟನ್ನುಗಳಷ್ಟು ಅಕ್ಕಿ [illegible] ಮತ್ತು ವಿದೇಶದಿಂದ ಬಂದಿರುವ [illegible] ಮುಂತಾದ ಆಹಾರ ಪದಾರ್ಥಗಳನ್ನು [illegible] ಮೈಸೂರಿಗೆ [illegible] ಇಂದು ಸಂಜೆ [illegible] ಬರುವುವು ಕೇಂದ್ರ ಸರ್ಕಾರದವರು ಕಳುಹಿಸುವ ೧೦ ಲಕ್ಷ ರೂ. ಗಳ ಈ ಆಹಾರ ಪದಾರ್ಥಗಳನ್ನು ಮೈಸೂರು ಸರ್ಕಾರದ ಪರವಾಗಿ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಸ್ವೀಕರಿಸುವರು

○ [illegible] ಇದೇ ಆಗಸ್ಟ್ ೧ರಿಂದ ಬಳ್ಳಾರಿ ಜಿಲ್ಲೆಯಲ್ಲೂ ಜಾರಿಗೆ ಬರಲಿದೆ

ಮೈಸೂರು ಕಾಂಗ್ರೆಸ್ ಉಮೇದುವಾರರ ಆಯ್ಕೆಗೆ ಸಹಾಯಕರು

ಮುಂದಿನ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪರವಾಗಿ ಉಮೇದುವಾರರನ್ನು ಆರಿಸುವ ಬಗ್ಗೆ ಕೇಂದ್ರ ಕಾಂಗ್ರೆಸ್ ಚುನಾವಣಾ ಸಮಿತಿಯವರು ನಾನಾ ಪ್ರದೇಶಗಳಿಗೆ ಇಬ್ಬರು ಮೂವರಂತೆ ಪ್ರತಿನಿಧಿಗಳನ್ನು ಕಳುಹಿಸಲು ನಿರ್ಧರಿಸಿರುತ್ತಾರೆ ಕರ್ನಾಟಕ ಮತ್ತು ಮೈಸೂರುಗಳಿಗೆ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣ, ರಾಜಾಸ್ಥಾನ ಮತ್ತು ಪಂಜಾಬಿನ ಮಾಜಿ ಮುಖ್ಯ ಮಂತ್ರಿಗಳಾದ ಜೈನಾರಾಯಣ್ ವ್ಯಾಸ್ ಮತ್ತು ಲಾಲಾ ಭೀಮಸೇನ ಸಚರ್‌ರವರನ್ನು ನೇಮಿಸಲಾಗಿದೆ

ನಂಬಿಕೆದ್ರೋಹಕ್ಕಾಗಿ ಶಿವಮೊಗ್ಗ ವ್ಯವಸಾಯ ಆಫೀಸರರ ಬಂಧನ

೧೮ ಸಾವಿರ ರೂ ಬೆಲೆಯ ಬೀಜ, ಗೊಬ್ಬರ ಮತ್ತು ವ್ಯವಸಾಯ ಸಾಮಗ್ರಿಗಳ ಸಂಬಂಧವಾಗಿ ಸರ್ಕಾರಕ್ಕೆ ನಂಬಿಕೆ ದ್ರೋಹ ಮಾಡಿದರೆಂದು ಸೊರಬ ರೇಂಜಿನ ವ್ಯವಸಾಯ ಆಫೀಸರ್ ಪಿ ವಿ ವೀರಬಸಪ್ಪ ಎಂಬುವರ ಮೇಲೆ ವ್ಯವಸಾಯ ಇಲಾಖಾ ಡೆಪ್ಯುಟಿ ಡೈರೆಕ್ಟರರು [illegible] ಪರಿಣಾಮವಾಗಿ ಇನ್ಸ್‌ಪೆಕ್ಟರನ್ನು ಪೊಲೀಸರು ಬಂಧಿಸಿರುತ್ತಾರೆ ಅವರನ್ನು ಸಾಗರದ ನ್ಯಾಯಾಧೀಶರ ಮುಂದೆ ಹಾಜರು ಮಾಡಿ, [illegible] ಜಾಮೀನಿನ ಮೇಲೆ [illegible] ಬಿಡುಗಡೆಗೆ ಆಜ್ಞೆ ಮಾಡಲಾಯಿತು.

ವಿವಾಹ ಮಹೋತ್ಸವ

ರಾಜಧಾನಿಯ ಬಸವೇಶ್ವರ ಎಲೆಕ್ಟ್ರಿಕ್ ಪ್ರೆಸ್ಸಿನ ಮಾಲೀಕರಾದ ಶ್ರೀ ಜಿ ಬಸಪ್ಪನವರು ತಮ್ಮ ಕುಮಾರಿ ಸೌ|| ನಿರ್ಮಲರವರನ್ನು ಕೊಡ್ಲಿಪೇಟೆಯ ಶ್ರೀ ಹೆಚ್ ಎಂ ಮಲ್ಲಪ್ಪನವರ ಮಕ್ಕಳು ಶ್ರೀ ಹೆಚ್ ಎಂ ಶಾಂತಮಲ್ಲಪ್ಪನವರಿಗೆ ಕೊಟ್ಟು ನೆನ್ನೆ ನಗರದಲ್ಲಿ ವಿವಾಹವನ್ನು ನಡೆಸಿದರು

ಪೋಲೆಂಡ್ ನಗರದಲ್ಲಿ ಗುಂಡಿನಿಂದ ೩೮ ಜನರ ಮರಣ

ಆಹಾರದ ಪ್ರದರ್ಶನಕಾರರಲ್ಲಿ ೨೭೦ ಮಂದಿಗೆ ಗಾಯ

ಪೋಲೆಂಡಿನ ರಾಜಧಾನಿ ವಾರ್ಸಾ ನಗರದ ಪಶ್ಚಿಮದಲ್ಲಿರುವ ಪೋಜ್ನಾನಿನಲ್ಲಿ ನೆನ್ನೆ 'ನಮಗೆ ಆಹಾರ ಬೇಕು' ಎಂದು ಕೂಗುತ್ತಾ ಅಲ್ಲಿನ ಕಮ್ಯೂನಿಸ್ಟರ ಆಳ್ವಿಕೆಯ ವಿರುದ್ಧವಾಗಿ ದಂಗೆ ನಡೆಸಿದ ಜನರ ಗುಂಪುಗಳ ಮೇಲೆ ಪೊಲೀಸರು ಗುಂಡು ಹಾರಿಸಿದ ಪರಿಣಾಮವಾಗಿ ೩೮ ಜನರು ಮೃತಪಟ್ಟು ೨೭೦ ಮಂದಿಗೆ ಗಾಯವಾಯಿತೆಂದು ವರದಿಯಾಗಿದೆ ಜನರ ಗುಂಪುಗಳು ಕಮ್ಯೂನಿಸ್ಟ್ ಪಕ್ಷದ ಕಛೇರಿ ಮೇಲೆ ಧಾಳಿ ಮಾಡಿ, ಅಲ್ಲಿ ಹಾಕಲಾಗಿದ್ದ ರಷ್ಯದ ಧ್ವಜವನ್ನು ಹರಿದು ಹಾಕಿ ನಂತರ ಪ್ರದರ್ಶನ ನಡೆಸಿದುದಾಗಿ ಹೇಳಲಾಗಿದೆ

ನೆನ್ನೆ ಅಲ್ಲಿ ಪರಿಸ್ಥಿತಿಯು ಶಾಂತವಾಗಿತ್ತು. ಅಲ್ಲಿ, ೩೫ ರಾಷ್ಟ್ರಗಳು ಭಾಗವಹಿಸಿರುವ ಅಂತರರಾಷ್ಟ್ರೀಯ ವಸ್ತುಪ್ರದರ್ಶನವು ನೆನ್ನೆ ಆರಂಭವಾಯಿತು

ಜನರು [illegible] ಬೆಂಕಿ ಹಚ್ಚಿ, ರಷ್ಯಾ ಧ್ವಜವನ್ನು ಸುಟ್ಟು, ಟ್ಯಾಂಕುಗಳನ್ನು [illegible] ಪೊಲೀಸರ ಕಛೇರಿಗೆ [illegible] ಗುಂಡುಗಳನ್ನು ಹಾರಿಸಲಾಯಿತೆಂದೂ ಟ್ಯಾಂಕುಗಳನ್ನು ಕಳುಹಿಸಿದಮೇಲೆ ಗಲಭೆಯು ಅಡಗಿತೆಂದೂ ಗೊತ್ತಾಗಿದೆ

ಒಂದು ಕಾರ್ಖಾನೆಯಲ್ಲಿ ಕಾರ್ಮಿಕರ ಎರಡು ಗುಂಪುಗಳಿಗೆ ಘರ್ಷಣೆಯಾದುದಾಗಿಯೂ [illegible] ರೀತಿಯ ಪ್ರಚಾರ ಮಾಡಿ, ದೇಶದ ಶತ್ರುಗಳಿಂದ ಈ ಬಗ್ಗೆ ಪ್ರೇರೇಪಣೆಯಾಗಿತ್ತೆಂದು ತಿಳಿಸಿತು.

ಹೆಂಡತಿಯನ್ನು ಮತ್ತೊಬ್ಬನಿಗೆ ವಿವಾಹ ಮಾಡಿಸಿದ ಪ್ರಸಂಗ

ಸೊರಬ ತಾಲ್ಲೂಕಿನ ಹಳ್ಳಿಯೊಂದರ ಶಾಲಾ ಉಪಾಧ್ಯಾಯನೊಬ್ಬನು [illegible] ಕೈಗೆ [illegible] ತನ್ನ ಹೆಂಡತಿಯನ್ನು ತಂಗಿಯೆಂದು ಹೇಳಿ ಮತ್ತೊಬ್ಬನಿಗೆ ಅವಳನ್ನು ವಿವಾಹ ಮಾಡಿರುವ ವಿಷಯವು ವರದಿಯಾಗಿದೆ [illegible] ವಧುವಿನ ತಾಯಿತಂದೆಗಳು [illegible] ಪೊಲೀಸರಿಗೆ ದೂರು [illegible] ಈ ವಿಷಯವು ಗೊತ್ತಾಯಿತು ಉಪಾಧ್ಯಾಯನು ಪರಾರಿಯಾಗಿದ್ದಾನೆ

[illegible]

ಜೂನ್ ೨೮ನೇ ತಾರೀಕಿನ ಸಾಧ್ವಿ ಪತ್ರಿಕೆಯಲ್ಲಿ [illegible] ಮೇಲೆ ಅನ್ಯಾಯವಾಗಿ ಆಪಾದನೆ ಮಾಡಿ [illegible] ಬರೆದಿರುವುದನ್ನು ಕಂಡು ಖೇದವಾಯಿತು [illegible]

ಬೊಂಬಾಯಿ ಮುಖ್ಯಮಂತ್ರಿ [illegible] ಮೈಸೂರಿನವರೊಡನೆ [illegible]

ಸಂಸ್ಥಾನದ [illegible] ಮುಖ್ಯಮಂತ್ರಿಗಳ ಪ್ರತ್ಯುತ್ತರ [illegible]

(ಸ್ವಂ. ಮು. ನಂ.) ಬೆಂಗಳೂರು ೩೦

ಸಂಸ್ಥಾನದ [illegible] ಪ್ರತಿನಿಧಿಗಳಿಗೆ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು [illegible] ಭೇಟಿ ಕೊಟ್ಟರು [illegible] ಮನವಿಯ ವಿಷಯವನ್ನು ಅವರ ಗಮನಕ್ಕೆ ತಂದಾಗ ಅವರು ಉತ್ತರವಿತ್ತು, [illegible] ಸಂಸ್ಥಾನದ [illegible] ಬೊಂಬಾಯಿ ಸರ್ಕಾರದ [illegible] ಕೊಡಿಸಲು ತಾವು ತಮ್ಮ ಕೈಲಾದಮಟ್ಟಿಗೂ ಪ್ರಯತ್ನಿಸುವುದಾಗಿ ಭರವಸೆಯಿತ್ತರು

ರಾಮ ಪಟ್ಟಾಭಿಷೇಕ

ರಾಜಧಾನಿಯ [illegible] ಸೇವಾ ಸಮಾಜದ ಶ್ರೀ ವೆಂಕಟೇಶ ಭಜನಾ ಮಂದಿರದಲ್ಲಿ ನಾಳೆ ಮಧ್ಯಾಹ್ನ ೪ ಘಂಟೆಗೆ ಶ್ರೀರಾಮ ಪಟ್ಟಾಭಿಷೇಕ ಮಹೋತ್ಸವವನ್ನು ಆಚರಿಸಲಾಗುವುದು [illegible] ಮತ್ತು ಅವರ ಪಾರ್ಟಿಯಿಂದ ಸಂಗೀತ ಮತ್ತು ಮಧುರ ಗಾನಲೀಲಾ ಮಂಡಳಿಯವರಿಂದ ವಾದ್ಯಗೋಷ್ಠಿಗಳು ನಡೆಯುವುವು [illegible] ಪತ್ರಿಕೆಯ ಸಂಪಾದಕರಾದ ಶ್ರೀ ಎಂ ಎಸ್ ತಿಮ್ಮಯ್ಯನವರು ಅಧ್ಯಕ್ಷತೆ ವಹಿಸುವರು. [illegible] ಭಾಷಣ ಮಾಡುವರು.

○ ಕೃಷ್ಣರಾಜನಗರದ ಶ್ರೀ ಬಿ ಎಸ್ [illegible] ನವರು ತಮ್ಮ ಕುಮಾರಿ ಸೌ|| [illegible] ಯನ್ನು [illegible] ಕುಮಾರ ಶ್ರೀ ಹೆಚ್ ಎಸ್ [illegible] ರಾಜ್‌ರವರಿಗೆ ಕೊಟ್ಟು ನೆನ್ನೆ ಕೃಷ್ಣರಾಜನಗರದಲ್ಲಿ ವಿವಾಹವನ್ನು ನಡೆಸಿದರು

[illegible]

ಕೃಷ್ಣರಾಜ ಸಾಗರದ [illegible] ಅಡಿಗಳಷ್ಟಿರುವುದೆಂದು ಗೊತ್ತಾಗಿದೆ

ನವ [illegible] ಚಟುವಟಿಕೆಗಳನ್ನು ಪ್ರತಿಯೊಂದು [illegible] ಉತ್ತಮಗೊಳಿಸಿ [illegible] ಮಾಡಲು [illegible] ಪ್ರತಿಯೊಬ್ಬರೂ ಈ ಸಮಾಜದ ಏಳಿಗೆಗೆ ಪ್ರಯತ್ನಿಸಬೇಕೆಂದು [illegible] ಈ ರೀತಿ ಬರೆದು ಅಪಪ್ರಚಾರ ಮಾಡುವುದರಿಂದ ಬರುವ ಲಾಭವೇನೋ ತಿಳಿಯದು [illegible] ನಿಜ ವಿಷಯಗಳನ್ನು ತಿಳಿದುಕೊಂಡಲ್ಲಿ [illegible] ಪತ್ರ ಬರೆದಿರುವ [illegible] ನೇರವಾಗಿ ಪ್ರಕಟಣಾ [illegible] ಹೋಗುತ್ತದೆ [illegible] ಕಾರ್ಯದರ್ಶಿಯವರು ತಿಳಿಸುತ್ತಾರೆ

ಪೌರಸಭಾಸಮಿತಿಗಳ ಚುನಾವಣೆ

ಮೈಸೂರು ೨೦

ಮೊನ್ನೆ ಸಂಜೆ ನಡೆದ ಪುರಸಭೆಯ ಅಧಿವೇಶನದಲ್ಲಿ ಕೆಳಗೆ ಕಂಡ ಸಮಿತಿಗಳಿಗೆ ಚುನಾವಣೆಗಳು ನಡೆದುವು

ಆಡಳಿತ ಸಮಿತಿ - ಶ್ರೀಗಳಾದ ಟಿ ನರಸಿಂಹಯ್ಯಂಗಾರ್, ಜಿ ಆರ್ ರಂಗಸ್ವಾಮಯ್ಯ, ಎಸ್ ಸಂಜೀವಯ್ಯ, ಎನ್ ಶ್ರೀನಿವಾಸನ್ ಜೆ ಎಸ್ ರಾಮಕೃಷ್ಣಯ್ಯ, ಎಸ್ ಶ್ರೀಕಂಠಯ್ಯ ಎಸ್ ಗೋವಿಂದಯ್ಯ ಮತ್ತು ಒಬೇದುಲ್ಲಾಖಾನ್

ಕಾಮಗಾರಿ ಸಮಿತಿ ಶ್ರೀಗಳಾದ ಕೆಂಪೇಗೌಡ, ಚೌಡಯ್ಯ, ಬೋರೇಗೌಡ ಮತ್ತು ಎಂ ಸಿ ಮಹದೇವಸ್ವಾಮಿ

ಆರೋಗ್ಯ ಸಮಿತಿ - ಶ್ರೀಗಳಾದ ಎಂ ಪೆಟ್ಟಲಿಂಗಯ್ಯ, ಡಿ ಲಿಂಗಯ್ಯ ಕೆ ಸಿದ್ದಯ್ಯ ಮತ್ತು ಕರಿಯಣ್ಣ

ಟೌನ್‌ಪ್ಲಾನ್ ಸಮಿತಿ - ಶ್ರೀಗಳಾದ ಬಿ ಎನ್ ಕೆಂಗೇಗೌಡ, ಎಸ್. ವೆಂಕಟರಮಣಯ್ಯ ಎಂ ಕೆ ಲಿಂಗಯ್ಯ ಮತ್ತು ಎ ಕೆ ಪುಟ್ಟಯ್ಯ

ಲೆಕ್ಕ ತನಿಖೆ ಸಮಿತಿ - ಶ್ರೀ ಒಬ್ಬೇಗೌಡ (ಅಧ್ಯಕ್ಷರು) ಶ್ರೀಗಳಾದ ಎಂ ವೆಂಕಟಲಿಂಗಯ್ಯ ಮತ್ತು ಅಜೀಜ್ ಸೇಠ್

ಶಿಕ್ಷಣ ಸಮಿತಿ - ಶ್ರೀ ಟಿ ನರಸಿಂಹಯ್ಯಂಗಾರ್ (ಅಧ್ಯಕ್ಷರು) ಶ್ರೀಗಳಾದ ಎಸ್ ಸಂಜೀವಯ್ಯ ಮತ್ತು ಡಿ ಕೆ ಬೋರೇಗೌಡ

ಅನಂತರ ನಗರಾಭಿವೃದ್ಧಿ ಸಮಿತಿಗೆ ಪುರಸಭೆಯ ಪ್ರತಿನಿಧಿಗಳಾಗಿ ಶ್ರೀ ಜಿ ಡಿ ಪುಟ್ಟಸ್ವಾಮಿ ಮತ್ತು ಡಾ॥ ಆದಿಶೇಷಯ್ಯ ಚುನಾಯಿತರಾದರು

ಪತರ್ಗಾಳಿಯ ಸಂಸ್ಕೃತ ಶಾಲೆಗೆ ಉದಾರ ದಾನ

ಗೋಕರ್ಣ ಮಠ ಧೀಶರನ್ನು ಇಂದು ಬೆಳಗ್ಗೆ ನಗರದ ಕೆ ಟಿ ಸ್ಟ್ರೀಟ್ ಶ್ರೀ ಮಂಜುನಾಥಯ್ಯನವರು ಸಂದರ್ಶಿಸಿ ಶ್ರೀ ವ್ಯಾಸರಾಜ ಸಂಸ್ಕೃತ ಪಾಠಶಾಲೆಗೋಸ್ಕರ ೧೦೦ ರೂ ಕಾಣಿಕೆಯನ್ನು ಸಮರ್ಪಿಸಿದರು

ನಂಜನಗೂಡು ವಿದ್ಯಾ ಪೀಠಕ್ಕೆ ಕೇಂದ್ರ ಸಚಿವರ ಭೇಟಿ

ಕೇಂದ್ರ ಸರ್ಕಾರದ ವಿದ್ಯಾ ಉಪ ಸಚಿವರಾದ ಡಾ॥ ಶ್ರೀಮಾಲಿಯವರು ಮೊನ್ನೆ ನಂಜನಗೂಡಿನ ವಿದ್ಯಾ ಸೇವಕ್ ಸಂಸ್ಥೆಗೆ ವಿದ್ಯಾ ಸಚಿವರಾದ ಶ್ರೀ ಎ ಜಿ ರಾಮಚಂದ್ರರಾಯರೊಡನೆ ಭೇಟಿ ಕೊಟ್ಟರು. ಅವರನ್ನು ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷ ಶ್ರೀ ಎನ್ ಭದ್ರಯ್ಯನವರು, ಆಚಾರ್ಯರಾದ ಶ್ರೀ ವಿ ವಿ ಸತ್ಯನಾರಾಯಣರವರೂ ಸ್ವಾಗತಿಸಿ, ವಿದ್ಯಾಪೀಠದ ಕಾರ್ಯಕ್ರಮದ ಪರಿಚಯ ಮಾಡಿಕೊಟ್ಟರು ಗೃಹ ಕೈಗಾರಿಕೆ ಭಾಗ, ಹಾರ ಪ್ರವಚನಗಳ ವಿವರಗಳನ್ನು ತಿಳಿಸಲಾಯಿತು ವಿದ್ಯಾರ್ಥಿಗಳು ಗ್ರಾಮ ಕಲೆಗಳನ್ನು ಪ್ರದರ್ಶಿಸಿದನಂತರ ಕೇಂದ್ರದ ಉಪ ಸಚಿವರು ವಿದ್ಯಾಪೀಠದ ಕಾರ್ಯದ ಬಗ್ಗೆ ತಮ್ಮ ಮೆಚ್ಚುಗೆಯನ್ನು ಸೂಚಿಸಿದರು ಅಲ್ಲದೆ ವಿದ್ಯಾರ್ಥಿಗಳು ಒಳ್ಳೆಯ ಪ್ರಜೆಗಳಾಗಿ ಗ್ರಾಮಗಳ ಏಳಿಗೆಗೆ ಸಹಾಯಕರಾಗಿ ಬಾಳಬೇಕೆಂದು ತಿಳಿಸಿದರು ವಿದ್ಯಾಪೀಠಕ್ಕೆ ಇನ್ನೊಮ್ಮೆ ಬರುವುದಾಗಿಯೂ ನುಡಿದರು

ಜಾತ್ಯತೀತ ರಾಷ್ಟ್ರದಲ್ಲಿ ಮತಗಳ ಬಗ್ಗೆ ಪಕ್ಷಪಾತ ಸಲ್ಲದು

ಗೋಕರ್ಣ ಸ್ವಾಮಿಗಳವರ ಉಪನ್ಯಾಸ

ಮೈಸೂರು ೨೯

ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಸ್ವಾಮಿಗಳವರು ನಿನ್ನೆ ಶ್ರೀರಾಮಪೇಟೆ ರಾಮಚಂದ್ರ ಮಂದಿರದಲ್ಲಿ ಭಾಷಣ ಮಾಡಿ ಪತ್ರಪುಷ್ಪ, ಫಲಾದಿಗಳು ಇಲ್ಲದಿರುವ ಧರ್ಮವು ಧರ್ಮವಾಗುವುದಿಲ್ಲವೆಂದೂ, ಹಿಂದೂದೇಶದಲ್ಲಿ ಸನಾತನ ಧರ್ಮವೇ ಸಕಲ ವ್ಯಕ್ತಿಗಳ ಧರ್ಮವೆಂದೂ ತಿಳಿಸಿದರು ಪಾಶ್ಚಾತ್ಯರ ಧರ್ಮವು ಕೊಟ್ಟಿರುವಂತಹ ಸಮಾಧಿಯನ್ನು ಉಪ್ಪಿಯಿಸುವ ನಿಯಮಗಳಿಂದ ಮಾತ್ರ ಕೂಡಿರುವುದೆಂದೂ, ಭಾರತೀಯ ಧರ್ಮವಾದರೋ ಜಗತ್ತು, ಜೀವ ಮತ್ತು ಪರಮಾತ್ಮನ ಸ್ವರೂಪದ ಮತ್ತು ವಿಶಾಲವಾದ ತತ್ವಗಳನ್ನೊಳಗೊಂಡಿರುವುದೆಂದೂ ಅವರು ಹೇಳಿದರು ಧರ್ಮಾತೀತ ರಾಷ್ಟ್ರವನ್ನು ಘೋಷಿಸಿರುವ ಭಾರತ ಸರ್ಕಾರವು ಎಲ್ಲ ಧರ್ಮಗಳನ್ನೂ ಸಮನಾಗಿ ಕಾಣದೆ ಪಕ್ಷಪಾತ ಮಾಡುತ್ತಿರುವುದು ಸಲ್ಲದೆಂದೂ ಅವರು ನುಡಿದರು

ಪ್ರತಿಯೊಬ್ಬನಿಗೂ ಅವನವನ ಧರ್ಮವೇ ಶ್ರೇಷ್ಠವೆಂದು ಅವರು ಹೇಳಿ, ವಿವಾಹವನ್ನು ಜನ್ಮಾಂತರದ ಸಂಬಂಧವೆಂದು ಪರಿಗಣಿಸದ ಪಾಶ್ಚಾತ್ಯರೂ ಅದು ಬದಲಾಗದಿರುವ ನಿಯಮವೆಂದು ಒಪ್ಪಿದ್ದಾರೆ

ಭಾರತದಲ್ಲಿ ಸ್ತ್ರೀಯರಿಗೆ ಕೊಟ್ಟಿರುವ ಗೌರವವನ್ನು ಇತರ ದೇಶದವರೂ ಕೊಟ್ಟಿಲ್ಲವೆಂದೂ ಸ್ವಾತಂತ್ರ್ಯವೆಂದರೆ ಸ್ವೇಚ್ಛಾಚಾರವೆಂದು ಪರಿಗಣಿಸುವುದು ತಪ್ಪೆಂದೂ ಪತಿ ಪ್ರೇಮದೊಡನೆ ವಿಹರಿಸುವುದು ನಮ್ಮ ದೇಶದ ಸ್ತ್ರೀಯರ ಲಕ್ಷಣವಲ್ಲವೆಂದೂ ಅವರು ನುಡಿದರು

"ತೂಫಾನ್ ಔರ್ ದೀಯಾ" ಚಿತ್ರ

ನಗರದ ಪ್ರಭಾ ಚಿತ್ರಮಂದಿರದಲ್ಲಿ ನಿನ್ನೆಯಿಂದ ಪ್ರದರ್ಶಿತವಾಗುತ್ತಿರುವ ರಾಜ್‌ಕಮಲ್ ಚಿತ್ರವು ಸಾಮಾನ್ಯ ಬಾಲಕನು ತನ್ನ ಸ್ವಪ್ರಯತ್ನದಿಂದ ಕಷ್ಟಗಳನ್ನು ಎದುರಿಸಿದ ಹೋರಾಟದ ಒಂದಾನೊಂದು ಕಥೆಯೊಂದರ ನಿರೂಪಣೆ

ಚಿತ್ರದ ನಾಯಕನಾದ ಬಾಲಕನು ಕಷ್ಟಗಳು ಗತಿಸಿದರೂ ಧೈರ್ಯಗೆಡದೆ ಸ್ವಂತ ದುಡಿಮೆಯಿಂದ ತನ್ನ ತಂಗಿಯನ್ನು ಸಲಹಿ ಅವಳಿಗೆ ವಿವಾಹವನ್ನು ಮಾಡುವ ಪ್ರಸಂಗವುಳ್ಳ ಕಥಾ ಸಂದರ್ಭ ಕಥೆಯಲ್ಲಿ ಹಲವಾರು ಸನ್ನಿವೇಶಗಳನ್ನು ಬಹಳ ಪರಿಣಾಮಕಾರಿಯಾಗಿ ಚಿತ್ರಿಸಲಾಗಿದೆ

ನೃತ್ಯ ಮತ್ತು ಛಾಯಾಗ್ರಹಣಗಳು, ಸಂಗೀತ ಸಂಭಾಷಣೆಗಳು ಚೆನ್ನಾಗಿದ್ದು ಚಿತ್ರಕ್ಕೆ ಕಳೆ ಕೊಟ್ಟಿವೆ ಆದರೆ ಜನಪ್ರಿಯವಾಗುವಂತಹ ಉತ್ತಮ ಗೀತೆಗಳು ಹಾಲಿನ ಚಿತ್ರರಂಗಕ್ಕೆ ಹೊಸಬರಾದ ನರೇಶ್ ವ್ಯಾಸ್ ಮತ್ತು ಕುಮಾರಿ ನಂದಾರವರು ದಿಗ್ದರ್ಶಕರ ಪ್ರಭಾವದಿಂದ ಉತ್ತಮ ಅಭಿನಯ ನೀಡಿದ್ದಾರೆ ರಾಜಕಮಲ್ ಕಲಾಮಂದಿರದವರ ಎಲ್ಲ ತಯಾರಿಕೆಗಳಂತೆ ಇದೂ ಸಹ ಒಂದು ಕಲಾಪೂರ್ಣವಾದ ಮತ್ತು ಜನರು ನೋಡಿ ಆನಂದಿಸಬಹುದಾದ ಚಿತ್ರವೆನ್ನುವುದರಲ್ಲಿ ಸಂದೇಹವಿಲ್ಲ

ವಿವಾಹ ಮಹೋತ್ಸವಗಳು

ರಾಜಧಾನಿಯ ಮೆಟ್ರೊಪಾಲಿಟನ್ ಕಾಮರ್ಸ್ ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಪಿ ಸುಬ್ಬರಾಯ ಶಾಸ್ತ್ರಿಗಳವರು ತಮ್ಮ ಕುಮಾರ ಶ್ರೀ ಎಂ ಎಸ್ ಶ್ರೀಕಂಠಯ್ಯನವರಿಗೆ ಕೊಳ್ಳೆಗಾಲದ ಆ। ವಿ॥ ಕೆ ವೆಂಕಟಸುಬ್ಬಾಶಾಸ್ತ್ರಿಗಳವರ ಮಕ್ಕಳು ಶ್ರೀ ಕೆ ವಿ ಶ್ರೀನಿವಾಸಶಾಸ್ತ್ರಿಯವರ ಮಗಳು ಸೌ॥ ಸುಶೀಲಮ್ಮನನ್ನು ತಂದುಕೊಂಡು ಮೊನ್ನೆ ಕೊಳ್ಳೆಗಾಲದಲ್ಲಿ ವಿವಾಹವನ್ನು ನೆರವೇರಿಸಿದರು

ಶ್ರೀ ಬಿ ಎಸ್ ವಿಶ್ವೇಶ್ವರಯ್ಯನವರು ತಮ್ಮ ಸಹೋದರ ಶ್ರೀ ಬಿ ಎಸ್ ಸೂರ್ಯನಾರಾಯಣರವರ ಕುಮಾರ ಚಿ॥ ಕೃಷ್ಣಚಂದ್ರನಿಗೆ ಬ್ರಹ್ಮೋಪದೇಶವನ್ನೂ, ಮಗಳು ಶ್ರೀಮತಿ ಸರಸ್ವತಿಬಾಯಿಯನ್ನು ಉಪ್ಪಿನಂಗಡಿಯ ಜಟಾಪಾಠಿ ಶ್ರೀಕಂಠಯ್ಯನವರ ಕುಮಾರ ಶ್ರೀ ಆರ್ ಕೆ ರಾಮಸ್ವಾಮಿಯವರಿಗೆ ಕೊಟ್ಟು ವಿವಾಹವನ್ನೂ ಮೊನ್ನೆ ನಗರದಲ್ಲಿ ನೆರವೇರಿಸಿದರು

ದಕ್ಷಿಣ ರೈಲ್ವೆಯ ಪ್ರಾದೇಶಿಕ ಮೆಕಾನಿಕಲ್ ಇಂಜನಿಯರಾದ ಶ್ರೀ ಡಿ ವೆಂಕಟಸ್ವಾಮಿಯವರು ತಮ್ಮ ಕುಮಾರಿ ಸೌ॥ ರಾಧಾರವರನ್ನು ಶ್ರೀ ಚಲ್ಲಾಪಿಳ್ಳೆ ರಂಗಪ್ಪನವರ ಕುಮಾರ ಶ್ರೀ ಸಿ ಹೆಚ್ ಹನುಮಂತಪ್ಪನವರಿಗೆ ಕೊಟ್ಟು ಮೊನ್ನೆ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ಶಂಕರಮ್ಮನ ಗುಡಿ ಬೀದಿಯಲ್ಲಿರುವ ಶ್ರೀ ಎಂ ಮಲ್ಲೇಶಯ್ಯನವರು ತಮ್ಮ ಕುಮಾರ ಚಿ॥ ಎಂ ಗಂಗಾಧರನವರಿಗೆ ಶ್ರೀ ಎಲ್ ಎಸ್ ಸುಬ್ಬರಂಗಯ್ಯನವರ ಪುತ್ರಿ ಸೌ॥ ಮಹಾಲಕ್ಷ್ಮಮ್ಮನನ್ನು ತಂದುಕೊಂಡು ಮೊನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು

ಅದಿಗದ ನಾಗಗಕೇರಿಯಲ್ಲಿರುವ ಜ್ಯೋತಿಷ್ಯ ನಿವೃತ್ತ ಅಂಚೆ ನೌಕರರಾದ ಶ್ರೀ ಡಿ ವರದಯ್ಯನವರು ತಮ್ಮ ಮಗಳು ಸೌ॥ ಪುಟ್ಟತ್ತಮ್ಮನನ್ನು ಸುಣ್ಣದಕೇರಿಯಲ್ಲಿರುವ ಶ್ರೀ ವೆಂಕಟಪ್ಪನವರ ಕುಮಾರ ಶ್ರೀ ವೆಂಕಟರಮಣಯ್ಯನವರಿಗೆ ಕೊಟ್ಟು ಮೊನ್ನೆ ಪಕ್ಷಿರಾಜಪುರದಲ್ಲಿ ವಿವಾಹವನ್ನು ನಡೆಸಿದರು

ನಗರದ ಕಾಳಮ್ಮನ ಗುಡಿ ಬೀದಿಯಲ್ಲಿರುವ ದಿನಸಿ ವರ್ತಕರಾದ ಶ್ರೀ ಎಸ್ ಚಾಮುಂಡಿಶೆಟ್ಟರು ತಮ್ಮ ಕುಮಾರ ಶ್ರೀ ಸಿ ಜಯರಾಮಶೆಟ್ಟರಿಗೆ ಚಿತ್ರದುರ್ಗದ ಶ್ರೀ ಕೆ ಸಿ ಕೃಷ್ಣಶೆಟ್ಟರ ಕುಮಾರಿ ಸೌ॥ ನವನೀತಮ್ಮನನ್ನು ತಂದುಕೊಂಡು ಮೊನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು

ಶ್ರೀರಂಗಪಟ್ಟಣ ತಾಲ್ಲೂಕು ಚಂದಗಾಲು ಗ್ರಾಮದ ಸಾಹುಕಾರ್ ಬಿ ಮರಿಗೌಡರ ಪುತ್ರಿ ಸೌ॥ ಸರಸ್ವತಮ್ಮನನ್ನು ಗಾಣಿಗರ ಬೀದಿಯಲ್ಲಿರುವ ಯಜಮಾನ್ ಶ್ರೀ ರಂಗೇಗೌಡರ ಪುತ್ರ ಶ್ರೀ ಎಸ್ ರಾಮಸ್ವಾಮಿಯವರಿಗೆ ಕೊಟ್ಟು ಮೊನ್ನೆ ಅದಿಗದಲ್ಲಿ ವಿವಾಹವನ್ನು ನೆರವೇರಿಸಲಾಯಿತು ಈ ಸಂಬಂಧವಾಗಿ ಏರ್ಪಡಿಸಿದ ಸ್ವಾಗತ ಸಮಾರಂಭದಲ್ಲಿ ಸುಪ್ರಸಿದ್ಧ ಶ್ರೀಮತಿ ಎಂ ಎಲ್ ವಸಂತಕುಮಾರಿ ಮತ್ತು ವೃಂದದವರಿಂದ ಸಂಗೀತವು ಏರ್ಪಾಡಾಗಿತ್ತು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

ಮೈಸೂರು ಪೇಟೆ ಧಾರಣೆ

	ರೂ	ಖಂಡಿ	
ಕಡಲೆಕಾಯಿ	[illegible]	[illegible]	[illegible]
ಎಳ್ಳು	[illegible]	[illegible]	[illegible]
ಹುರುಳಿ	[illegible]	[illegible]	[illegible]
ಹೆಸರು	[illegible]	[illegible]	[illegible]
ಅಲಸಂದೆ	[illegible]	[illegible]	[illegible]
[illegible]	[illegible]	[illegible]	[illegible]
[illegible]	[illegible]	[illegible]	
[illegible]	[illegible]	[illegible]	[illegible]

ಆನಂದಕ್ಕೆ ಆರೋಗ್ಯವೇ ಕೀಲಿ ಕೈ

ಒಂಭತ್ತು ಅಮೂಲ್ಯ ಹರಳುಗಳಲ್ಲಿನ ಸ್ವಾಭಾವಿಕ ಗುಣವನ್ನು ಪ್ರಯೋಗ ಮಾಡುವುದರಿಂದ ಉದ್ಭವಿಸುವ ಮಹಾಶಕ್ತಿಯ ತತ್ವಗಳನ್ನು ಕಂಡು ವ್ಯಾಧಿ ನಿವಾರಿಸಬಲ್ಲ ಬಲಯುತ ಶಕ್ತಿ [illegible] ಇವು ಕೂಡಿವೆಯೆಂಬುವನ್ನು ಕಂಡುಹಿಡಿದುದೇ ಆಯುರ್ವೇದ ಶಾಸ್ತ್ರದಲ್ಲಿನ ಸಾಧನೆ

ಪಂಡಿತ ದುರ್ಗಾದತ್ತ ಶರ್ಮಾ ವೈದ್ಯ ವಾಚಸ್ಪತಿ ಇವರ [illegible] ಜಗದ್ವಿಖ್ಯಾತರಾಗಿರುವ ಇವರು ನಿರ್ಮಿಸಿರುವ

ನವರತ್ನಕಲ್ಪ

ಒಂಭತ್ತು ಅಮೂಲ್ಯ ಹರಳುಗಳ ಸಂಯೋಜನೆ [illegible] ಮತ್ತು ಸಕಲ, ಪಟ್ಟಿ, ಗೋ[illegible] ಇವುಗಳು, ನೀಲ ಮತ್ತು ಪ್ರತಿಶತ [illegible] ಪೂರ್ಣವಾಗಿ ನಿಷದಿಂದ ಮುಕ್ತವಾದ ಮತ್ತು [illegible] ದರಗಳ ಔಷಧ ಎಲ್ಲ ವಯಸ್ಸಿನವರಿಗೂ [illegible] ಯಾವ ಋತುವಿನಲ್ಲೂ ಉಪಯೋಗಿಸ ಯೋಗ್ಯ.

ಈ ವ್ಯಾಧಿಗಳ ನಿವೃತ್ತಿ ಗುಣಕಾರಿ —

- ★ ನರಗಳ ದೌರ್ಬಲ್ಯ ★ ನಿಃಶಕ್ತಿ
- ★ ಹೃದಯ ರೋಗಗಳು ★ ಭಗಂಧರ[illegible]
- ★ ಕೆಮ್ಮು ★ ಮಧುಮೇಹ[illegible]
- ★ ಎಲಿಫೆಂಟಿಯಾಸಿಸ್ ★ ಮತ್ತು ಇತರ[illegible]

ಹೆಚ್ಚಿನ ಸಾಹಿತ್ಯ ಬೇಕಾದರೆ ಇವರಿಗೆ ಬರೆಯಿರಿ

NAVRATNA KALPA PHARMACY,
JULLUNDUR CITY (India)
Grams NAVRATNA Phone [illegible]

ವಿದ್ಯುಚ್ಛಕ್ತಿ ಸರಬರಾಜು ನಿಲ್ಲುವ ಬಗ್ಗೆ

ಪ್ರಕಟಣೆ

1956ನೇಯ ಜುಲೈ ಒಂದನೇ ತಾರೀಖು ಭಾನುವಾರ ಮೈಸೂರಿನ ಪೋರ್ಟರ್ ಟ್ರಾನ್ಸ್‌ಫಾರ್ಮರ್ ಸ್ಟೇಷನ್ನಿನಲ್ಲಿ ಕೆಲವು ಅತಿ ಜರೂರಾದ ರಿಪೇರಿ ಕೆಲಸಗಳು ನಡೆಯಬೇಕಾಗಿರುವುದರಿಂದ 50 ಸೈಕಲ್ಲಿನ ವಿದ್ಯುಚ್ಛಕ್ತಿ ಸರಬರಾಜನ್ನು ಬೆಳಗ್ಗೆ 10 ಘಂಟೆಯಿಂದ ಸಂಜೆ 4 ಘಂಟೆಯವರೆವಿಗೆ ನಿಲ್ಲಿಸಲಾಗುವುದು ಇದರಿಂದಾಗಿ ಮೈಸೂರು ಸಿಟಿ, ಟಿ ನರಸೀಪುರ, ಬನ್ನೂರು, ಶ್ರೀರಂಗಪಟ್ಟಣ ಮತ್ತು [illegible] ನಗರಗಳಲ್ಲಿ ಆ ದಿನ ವಿದ್ಯುತ್ ಸರಬರಾಜು ಅನಿವಾರ್ಯವಾಗಿ ನಿಲ್ಲುವ ಅಂಶವನ್ನು ಈ ಮೂಲಕ ಸಮಸ್ತ ಬಳಕೆದಾರರಿಗೂ ತಿಳಿಸಲಾಗಿದೆ ಆದುದರಿಂದ ಸಮಸ್ತ ಬಳಕೆದಾರರೂ ಇದರೊಡನೆ ಸಹಕರಿಸಬೇಕಾಗಿ ಕೋರಿದೆ

ಡಿ ಎಸ್ ಶ್ರೀಕಂಠಯ್ಯ,
ಸೂಪರಿಂಟೆಂಡೆಂಟ್, ವಿದ್ಯುಚ್ಛಕ್ತಿ ಇಲಾಖೆ, ಮೈಸೂರು

Estd 1917

CHAMPION METROPOLITAN COLLEGE OF COMMERCE

(C -- Lepers Home 100 Road Mysore)

APPLICATIONS FOR ADMISSION to classes leading to DIPLOMAS in Commerce Shorthand and Typewriting are now being received in the mornings & evenings

Training for COSTS & WORKS ACCOUNTANTS also given

Situated in its building—Best and experienced staff including Holders of Master's Degree in Commerce and Arts Latest equipment including new Typewriters — a good Library Excellent results

(Sd) M S PUTTANNA, Vice-Principal — (Sd) P SUBBARAYA SASTRY, Principal

Edited Printed and Published by A R Nagarajan at Sadhvi Press D Subbaiah Road Mysore

SRI GAYATHRI TALKIES ★ LAST THREE DAYS

Daily 3 Shows

WALT DISNEY'S CINEMASCOPE IN TECHNICOLOR

★ **20,000 LEAGUES UNDER THE SEA** ★

STARRING — KIRK DOUGLAS AND JAMES MASON

[illegible]

ಸಾಧ್ವಿ

[illegible]

SADHVI : SUNDAY 1—7—1956 [illegible]

ಬಲ ಪ್ರಯೋಗದ ತ್ಯಾಗಕ್ಕೆ ವಿಶ್ವಶಾಂತಿವಾದಿಗಳ ಕರೆ

ಪುನಃ ಆಹಾರದ ಮೇಲೆ ಹತೋಟಿ ಇಲ್ಲ

ಕೇಂದ್ರ ಆಹಾರ ಮಂತ್ರಿ ಅಜಿತ ಪ್ರಸಾದ ಜೈನರ ಹೇಳಿಕೆ

ಮುಸ್ಸೂರಿಯಲ್ಲಿ ಸೇರಿರುವ ನಾನಾ ಸಂಸ್ಥಾನ ವ್ಯವಸಾಯ ಮಂತ್ರಿಗಳ ಸಮ್ಮೇಳನದ ಸಮಾರಂಭದಲ್ಲಿ ಕೇಂದ್ರ ಆಹಾರ ಮಂತ್ರಿ ಅಜಿತ ಪ್ರಸಾದ ಜೈನರವರು ಭಾಷಣ ಮಾಡಿ, ಈಗಿನ ಆಹಾರ ಅಭಾವದ ಸಮಸ್ಯೆಯನ್ನು ಪುನಃ ಹತೋಟಿ ವಿಧಿಸದೆಯೇ ಪರಿಹರಿಸಲು ಭಾರತ ಸರ್ಕಾರದವರು ನಿರ್ಧರಿಸಿರುವುದಾಗಿ ತಿಳಿಸಿರುತ್ತಾರೆ. ಹತೋಟಿಗಳು ಅನೇಕ ಕಷ್ಟಗಳನ್ನು ತಂದೊಡ್ಡುವುದಲ್ಲದೆ ರಾಷ್ಟ್ರವನ್ನು ಹಿಂದುಹಿಂದಕ್ಕೆ ಕರೆದೊಯ್ಯುವುವೆಂದೂ, ಆದ್ದರಿಂದ ಅಂತಹ ಪರಿಸ್ಥಿತಿಯು ಪುನಃ ಉಂಟಾಗಲು ಅವಕಾಶವೀಯುವುದಿಲ್ಲವೆಂದೂ ಜೈನರವರು ಸೂಚಿಸಿರುವರು.

ಸಿಂಹಳದಲ್ಲಿ ಬ್ರಿಟಿಷ್ ನೆಲೆಗಳ ರದ್ದು

ಬ್ರಿಟಿಷ್ ಸಿಂಹಳದ ನೌಕಾ ಮತ್ತು ವಿಮಾನ ನೆಲೆಗಳನ್ನು ಖಾಲಿ ಮಾಡಲು ಒಪ್ಪಿರುವುದೆಂದು ವರದಿಯಾಗಿದೆ. ಈ ಬಗ್ಗೆ ಬ್ರಿಟನ್ ಮತ್ತು ಸಿಂಹಳಗಳ ಪ್ರಧಾನಿಗಳು ಸಧ್ಯದಲ್ಲೇ ಜಂಟಿ ಹೇಳಿಕೆಯನ್ನು ಹೊರಡಿಸಲಿರುವರು. ಉಭಯರಿಗೂ [illegible] ಸಿಂಹಳದ ಟ್ರಿಂಕಾಮಲಿ ಮತ್ತು ಕಟುನಾಯಕೆಗಳಲ್ಲಿ ಬ್ರಿಟಿಷ್ ನೆಲೆಗಳವೆ.

ಶ್ರೀಮನ್ನಾರಾಯಣರವರ ಭೇಟಿ

ಸಧ್ಯದಲ್ಲಿಯೇ [illegible] ಪ್ರಕಟಿಸಲಿರುವ [illegible] ಬಗ್ಗೆ ನಗರದ [illegible] ಸಂಪಾದಕರಾದ ಶ್ರೀ ಎಸ್. [illegible] ಶ್ರೀಮನ್ನಾರಾಯಣರನ್ನು ಭೇಟಿ ಮಾಡಿದ್ದರು.

[illegible] ಕಾರ್ಮಿಕರ [illegible]

[illegible] ಮುದ್ರಣಾಲಯದ [illegible] ಕಾರ್ಮಿಕರ ಸಂಘಗಳ [illegible] ಶ್ರೀ [illegible] ಅಧ್ಯಕ್ಷತೆಯಲ್ಲಿ ನಡೆದು, [illegible] ಕಾರ್ಮಿಕರಿಗೆ [illegible] ಯೂನಿಯನ್ [illegible] ವಿಷಯದಲ್ಲಿ ಸರ್ಕಾರದವರು ಪ್ರವೇಶಿಸಿ ಸೂಕ್ತ ಕ್ರಮ ಕೈಗೊಳ್ಳುವಂತೆ [illegible] ವಿವಾದದ ಬಗ್ಗೆ ಪರಿಹಾರಕ್ಕಾಗಿ [illegible] ಪ್ರತಿನಿಧಿಗಳ [illegible] ಮಾಡಲಾಗಿ [illegible] ನಿರ್ಧರಿಸಲಾಯಿತು.

ಚೌ ಎನ್ ಲೈಯವರ ಆಹ್ವಾನಕ್ಕೆ ರಾಷ್ಟ್ರೀಯ ಚೀಣದ ತಿರಸ್ಕಾರ

ಫ ಮೋಸಾವನ್ನು ವಿಮೋಚನೆಗೊಳಿಸುವ ಎಲ್ಲ ಸಂಧಾನಕ್ಕಾಗಿ ಚೀಣದ ಪ್ರಧಾನಿ ಚೌ ಎನ್ ಲೈಯವರು ಕೊಟ್ಟ ಆಹ್ವಾನವನ್ನು ರಾಷ್ಟ್ರೀಯ ಚೀಣವು ತಿರಸ್ಕರಿಸುತ್ತದೆ. ಚೀಣದಲ್ಲಿ ಕಮ್ಯೂನಿಸ್ಟರ ದಬ್ಬಾಳಿಕೆಯಿಂದ ಜನರನ್ನು ಪಾರು ಮಾಡಿ ಇಡೀ ದೇಶವನ್ನು ವಿಮೋಚನೆಗೊಳಿಸಲು ತಮ್ಮ ಸರ್ಕಾರವು ಪ್ರತಿಜ್ಞೆ ಮಾಡಿರುವುದೆಂದು ರಾಷ್ಟ್ರೀಯ ಚೀಣದ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಚೀಣದಲ್ಲಿ ಆಡಳಿತದ ವಿಕೇಂದ್ರೀಕರಣ

ಚೀಣದ ಪ್ರಧಾನಿ ಚೌ ಎನ್ ಲೈಯವರು ಪ್ರಾಂತೀಯ ಸರ್ಕಾರದ ಅಧಿಕಾರ ಬದಲಾವಣೆಗಳನ್ನು ಮಾಡಿ, ಅಧಿಕಾರವನ್ನು ವಿಕೇಂದ್ರೀಕರಿಸುವುದಾಗಿ ತಿಳಿಸಿರುತ್ತಾರೆ. ಪ್ರಾಂತಗಳಿಗೂ, ಇನ್ನೂ ಕೆಳಗಿನ ಮಟ್ಟದ ಘಟಕಗಳಿಗೂ ಅಧಿಕಾರವೀಯಲಾಗುವುದೆಂದು ಹೇಳಲಾಗಿದೆ. ಚೀಣದಲ್ಲಿ ಯೋಜನಾಬದ್ಧ ಆರ್ಥಿಕ ವ್ಯವಸ್ಥೆಯಲ್ಲೂ ಸ್ವತಂತ್ರ ಮಾರುಕಟ್ಟೆಗೆ ಅವಕಾಶ ಕಲ್ಪಿಸಲಾಗುವುದು.

ಅಪಾಯದ ಮಟ್ಟ ಮೀರಿದ ನದಿಗಳು — ಗಂಟೆಗಂಟೆಗೂ ಹೆಚ್ಚುತ್ತಿದೆ

ಕೃಷ್ಣರಾಜಸಾಗರದಲ್ಲಿ ಈ ಮಧ್ಯಾಹ್ನ ೧೦೦ ಗಂಟೆಗೆ ೧೦೨ ಅಡಿ ನೀರು ಬಂದಿತ್ತು. ಬೆಳಗ್ಗೆ ೮ ಗಂಟೆಯಲ್ಲಿ ೧೦೧ ಅಡಿ ಇತ್ತು. ಗಂಟೆಗಂಟೆಗೂ ನೀರು ಹೆಚ್ಚುತ್ತಿದೆ. ಕಾವೇರಿ, ಹೇಮಾವತಿ ಮತ್ತು ಲಕ್ಷ್ಮಣತೀರ್ಥ ಮೊದಲಾದ ನದಿಗಳಲ್ಲೂ ಪ್ರವಾಹವು ಬಹಳವಾಗಿ ಬರುತ್ತಿದೆ. ಮಧ್ಯಾಹ್ನ ೩ ಗಂಟೆಯಲ್ಲಿ ೧೦೩ ಅಡಿ ಇತ್ತು.

ಕೃಷ್ಣರಾಜೇಂದ್ರ ಸಹಕಾರ ಸಂಘದ ಡೈರೆಕ್ಟರ್ ಚುನಾವಣೆ ವ್ಯವಹಾರ

ಕಳೆದ ಫೆಬ್ರವರಿಯಲ್ಲಿ ನಗರದ ಶ್ರೀ ಕೃಷ್ಣರಾಜೇಂದ್ರ ಸಹಕಾರ ಸಂಘದ ೧೯೫೫-೫೬ ನೇ ಸಾಲಿನ ಡೈರೆಕ್ಟರುಗಳ ಚುನಾವಣೆಯಲ್ಲಿ ಅಧ್ಯಕ್ಷ ಶ್ರೀ ಟಿ ಎನ್ ಸುಬ್ಬರಾಯರು ಘೋಷಿಸಿದ್ದ ಫಲಿತಾಂಶವನ್ನು ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಿಸ್ಟ್ರಾರರಾದ ಶ್ರೀ ಎಂ. ಶಿವಣ್ಣನವರು ನೆನ್ನೆ ರದ್ದುಗೊಳಿಸಿದರು. ಕೆಳಗೆ ಕಂಡವರು ಸಂಘದ ಡೈರೆಕ್ಟರಾಗಿ ಚುನಾಯಿತರಾಗಿರುವರೆಂದು ರಿಜಿಸ್ಟ್ರಾರು ಸೂಚಿಸಿದರು — ಶ್ರೀಗಳಾದ ಎಂ. ಎಸ್ ರಾಮಸ್ವಾಮಿ, ಎಂ ವಿ ವೆಂಕಟರಾಜು, ಹೆಚ್ ಎಸ್ ಗಂಗಾಧರಯ್ಯ, ವಿ ಆರ್ ಬಿ. ಲಕ್ಷ್ಮಣ್, ಜಿ ವಿ ಸ್ವಾಮಿ, ಕೆ ರಾಮಣ್ಣ, ಟಿ ಚನ್ನಯ್ಯ, ಎಂ ಎಸ್. ತಿಮ್ಮಾಚಾರ್, ಎಂ ಎಸ್ ರಾಮಲಿಂಗು, ಆರ್ ರಂಗಪ್ಪ, ಕೆ ಸೀತಾರಾಂ, ಶ್ರೀಕಂಠಯ್ಯ, ಬಿ. ಸಿದ್ದಲಿಂಗಯ್ಯ, ಡಾ॥ ಎನ್ ಎಸ್ ನಾರಾಯಣರಾವ್ ಮತ್ತು ಶ್ರೀಮತಿ ಲಕ್ಷ್ಮೀದೇವಮ್ಮ. ಶ್ರೀ ಟಿ ಎನ್ ಸುಬ್ಬರಾಯರ ಘೋಷಣೆಯು ಕ್ರಮಬದ್ಧವಲ್ಲವೆಂದು ಡಾ॥ ಎನ್ ಎಸ್ ನಾರಾಯಣರಾಯರು ತಕರಾರು ಹೂಡಿದ್ದರು.

ಬಲಪ್ರಯೋಗದ ತ್ಯಾಗಕ್ಕಾಗಿ ನೊಬೆಲ್ ಬಹುಮಾನಿತರ ಕರೆ

ಪಶ್ಚಿಮ ಜರ್ಮನಿಯ ಲಿಂಡಾವ್‌ನಲ್ಲಿ ಸಭೆ ಸೇರಿರುವ ವಿಶ್ವದ ನೊಬೆಲ್ ಪಾರಿತೋಷಕ ಪಡೆದ ೫೦ ಮಂದಿ ಗಣ್ಯರು ಮನವಿಯೊಂದನ್ನು ಹೊರಡಿಸಿ ಜಗತ್ತಿನ ಎಲ್ಲ ರಾಷ್ಟ್ರಗಳೂ ಬಲಪ್ರಯೋಗ ಮಾಡುವುದನ್ನು ಬಿಟ್ಟುಬಿಡುವಂತೆ ಕೋರಿರುತ್ತಾರೆ. ವಿಜ್ಞಾನವು ಕೊಟ್ಟಿರುವ ಮಾರಕಾಸ್ತ್ರಗಳ ಪ್ರಯೋಗದಿಂದ ಉಂಟಾಗುವ ದೀರ್ಘ ಯುದ್ಧದಲ್ಲಿ ಜಗತ್ತಿನ ಪ್ರಜೆಗಳು ಇಡೀ ಮಾನವ ಕುಲವೇ ವಿನಾಶ ಹೊಂದುವುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಅಣು ಅಸ್ತ್ರಗಳ ಪ್ರಯೋಗ ನಡೆದರೆ ಅನೇಕ ಪ್ರದೇಶಗಳು [illegible] ವಾಯುಮಂಡಲದ ಮೇಲೆ ಪರಿಣಾಮವಾಗುವುದೆಂದು ಶ್ರೀ ಸಿ ವಿ ರಾಮನ್‌ರವರು ಎಚ್ಚರಿಸಿರುವರು. ತನ್ನನ್ನು ತಾನೇ ನಾಶಪಡಿಸಿಕೊಳ್ಳುವ ಸಾಧನವನ್ನು ಮಾನವನಿಗೆ ವಿಜ್ಞಾನವು ಕೊಟ್ಟಿರುವುದೆಂದೂ, ಆದ್ದರಿಂದ ಎಲ್ಲ ರಾಷ್ಟ್ರಗಳೂ ಸ್ವಪ್ರೇರಣೆಯಿಂದಲೇ ಬಲಪ್ರಯೋಗವನ್ನು ಬಿಡಬೇಕೆಂದೂ ಬಹುಮಾನಿತರು ಕೋರಿದ್ದಾರೆ.

ಫಿಲೋಮಿನಾ ಕಾಲೇಜು ಸಾಮಾಜಿಕ ವಿಜ್ಞಾನ ಸಂಘ

ನಗರದ ಸೆಂಟ್ ಫಿಲೋಮಿನಾ ಕಾಲೇಜಿನ ಸಾಮಾಜಿಕ ವಿಜ್ಞಾನ ಸಂಘದ ಪ್ರಸಕ್ತ ಸಾಲಿನ ಅಧಿಕಾರ ವರ್ಗದ ಚುನಾವಣೆಯು ಕಳೆದ ೨೭ ರಂದು ನಡೆದು ಶ್ರೀ ಟಿ ಎಸ್ ನಾರಾಯಣ ಅಯ್ಯಂಗಾರ್ಯರು ಉಪಾಧ್ಯಕ್ಷರಾಗಿಯೂ, ಶ್ರೀ ಸಿ ಮಹದೇವಯ್ಯನವರು ಕಾರ್ಯದರ್ಶಿಯಾಗಿಯೂ, ಶ್ರೀಗಳಾದ ಹೆಚ್ ಆರ್ ಬಸಪ್ಪ, ಗಣಪತಿ, ಪಿ ಎಂ ಮಾಧವ್ನ ಮತ್ತು ಸಿ ಆರ್. ಶಂಜಪ್ಪನವರು ತರಗತಿಗಳ ಪ್ರತಿನಿಧಿಗಳಾಗಿಯೂ, ಶ್ರೀಮತಿಗಳಾದ ಲಕ್ಷ್ಮಿ ಮತ್ತು ಮೇರಿ ಹಾಸಿ ಮೋನ್ನಲಿಯವರು ಮಹಿಳಾ ಪ್ರತಿನಿಧಿಗಳಾಗಿಯೂ ಚುನಾಯಿತರಾಗಿರುವರು.

ಮುನ್ಸೀಫರ ವರ್ಗಾವರ್ಗಿ

ನಗರದ ಎರಡನೇ ಮುನ್ಸೀಫರಾದ ಶ್ರೀ ಆರ್ ಭಾಸ್ಕರರಾವ್‌ರವರನ್ನು ಚಿತ್ರದುರ್ಗದ ಎರಡನೇ ಮುನ್ಸೀಫ್ ಮತ್ತು ಪ್ರಥಮ ನ್ಯಾಯಾಧೀಶರಾಗಿ ವರ್ಗಾಯಿಸಲಾಗಿದೆ. ಮಂಡ್ಯದ ಎರಡನೇ ಮುನ್ಸೀಫರಾದ ಶ್ರೀ [illegible]ಯ್ಯನವರನ್ನು ಅವರ ಸ್ಥಾನಕ್ಕೆ ಕಳುಹಲಾಗಿದೆ. ಶ್ರೀರಂಗಪಟ್ಟಣದ ಪ್ರಥಮ ಮುನ್ಸೀಫರಾದ ಶ್ರೀ ಲಿಂಗೋಜಿರಾಯರನ್ನು ನಗರದ ೧ನೇ ಮುನ್ಸೀಫರಾಗಿ ಹೊಸದಾಗಿ ನೇಮಿಸಲಾಗಿದೆ.

ಮಹಿಳೆಯರ ವೃತ್ತಿ ಶಿಕ್ಷಣಾಲಯದ ಸಲಹಾ ಸಮಿತಿ ಸದಸ್ಯರು

ರಾಜಧಾನಿಯಲ್ಲಿರುವ ಮಹಿಳೆಯರ ಸರ್ಕಾರಿ ವೃತ್ತಿ ಶಿಕ್ಷಣಾಲಯದ ಸಲಹಾ ಸಮಿತಿಯ ಸದಸ್ಯರಾಗಿ ೩ ವರ್ಷದ ಅವಧಿಗೆ ಕೆಳಗೆ ಕಂಡವರನ್ನು ಸರ್ಕಾರದವರು ನೇಮಿಸಿರುತ್ತಾರೆ:— ಶ್ರೀ ಕೆ. ಬಸವರಾಜ — ಅಧ್ಯಕ್ಷರು, ಶ್ರೀಮತಿಗಳಾದ ಸುಂದರಮ್ಮ, ಲೀಲಾವತಿ ಅಂಜನಪ್ಪ, ಮಹಾರಾಣಿ ಹೈಸ್ಕೂಲಿನ ಮುಖ್ಯೋಪಾಧ್ಯಾಯಿನಿ ಮಹಾಲಕ್ಷ್ಮಮ್ಮ, ಫಜುಲ್ ಇಲಾಹಿ ಮತ್ತು ಪ್ರಮೀಳ ಕೃಷ್ಣ.

ನಿಜಾಮರ ಹಣಕ್ಕಾಗಿ ಪಾಕಿಸ್ತಾನದ ರಾಯಭಾರಿ ಮೇಲೆ ದಾವೆ

ಲಂಡನ್ನಿನ ಬ್ಯಾಂಕೊಂದರಲ್ಲಿ ತಮ್ಮ ಹೆಸರಿನಲ್ಲಿ ಠೇವಣಿಯಾಗಿರುವ ಹೈದರಾಬಾದು ನಿಜಾಮರ ೧೦ ಲಕ್ಷ ಪೌಂಡು ಹಣದ ಬಗ್ಗೆ ನಿಜಾಮರು ಹೂಡಿರುವ ದಾವೆ ಹಣವೇಳೆಯನ್ನು ನಿರಾಕರಿಸುವಂತೆ ಪಾಕಿಸ್ತಾನದ ರಾಯಭಾರಿ ಹಬೀಬ್ ರಹಿಮತುಲ್ಲಾರವರು ಅಲ್ಲಿನ ಹೈಕೋರ್ಟಿಗೆ ಅರ್ಜಿ ಸಲ್ಲಿಸಿರುತ್ತಾರೆ. ನಿಜಾಮರು ೧೯೪೮ರಲ್ಲಿ ಈ ಹಣವನ್ನು ತಮ್ಮ ಹಣಕಾಸಿನ ಮಂತ್ರಿ ಮತ್ತು ಲಂಡನ್ನಿನಲ್ಲಿ ತಮ್ಮ ಏಜೆಂಟ್ ಜನರಲ್ ಆಗಿದ್ದ ಮೊಯಿನ್ ನವಾಜ್ ಜಂಗರು ಬಳಸಲು ಅವರಿಗೆ ಅವಕಾಶವಿತ್ತಿದ್ದರು. ಅವರು ೧೯೪೮ರಲ್ಲಿ ನಿಜಾಮರಿಗೆ ತಿಳಿಯದಂತೆಯೇ ಈ ಹಣವನ್ನು ಅಲ್ಲಿದ್ದ ಪಾಕಿಸ್ತಾನದ ರಾಯಭಾರಿ ಹೆಸರಿಗೆ ವರ್ಗಾಯಿಸಿದ್ದರು. ಪಾಕಿಸ್ತಾನವು ಸ್ವತಂತ್ರ ರಾಷ್ಟ್ರವಾಗಿರುವುದರಿಂದ ಲಂಡನ್ ಕೋರ್ಟಿನ ವ್ಯಾಪ್ತಿಯು ತಮ್ಮ ಮೇಲೆ ಇರುವುದಿಲ್ಲವೆಂದು ರಾಯಭಾರಿಯು ತಿಳಿಸಿರುವರು. ದಾವೆ ಈ ದಿಂದ ಯು ವಿಚಾರಣೆಗಿದೆ.

ಬೆಂಗಳೂರಿನಲ್ಲಿ ಅರಣ್ಯ ಸಂಶೋಧನಾ ಕೇಂದ್ರ

ಕೊಯಮತ್ತೂರು ಮತ್ತು ಬೆಂಗಳೂರುಗಳಲ್ಲಿ ಒಂದೊಂದು ಅರಣ್ಯ ಸಂಶೋಧನಾ ಕೇಂದ್ರವನ್ನು ದ್ವಿತೀಯ ಯೋಜನೆ ಅವಧಿಯಲ್ಲಿ ಏರ್ಪಡಿಸಲಾಗುವುದೆಂದು ಗೊತ್ತಾಗಿದೆ.

ದೊಂಬಾಯಿಯಲ್ಲಿ ಮಳೆಯಿಂದ ಇಬ್ಬರ ಮರಣ

ದೊಂಬಾಯಿಯ ಹಲವು ಭಾಗಗಳಲ್ಲಿ ವಸತಿಗಾಗಿ ಕಟ್ಟಲಾಗಿರುವ ಸೀಮೆಂಟಿನ ಬ್ಯಾರಕ್ ೨೦ ಅಡಿ ಗೋಡೆಯು ಮಳೆಯಿಂದ ನೆನ್ನೆ ಉರುಳಿ ಅದರ ಕೆಳಗೆ ೭ ಜನ ಹೂತು ಹೋಗಿ ಇಬ್ಬರು ಸತ್ತಿದ್ದಾರೆ. ಆ ಸ್ಥಳ ಇಬ್ಬರು ಮಡಿದು ಗಾಯವಾದ ಉಳಿದವರನ್ನು ಆಸ್ಪತ್ರೆಗೆ ಸಾಗಿಸಲಾಯಿತೆಂದೂ ವರದಿಯಾಗಿದೆ. ನಗರದಲ್ಲಿ ಬಿದ್ದ ಮಳೆಯ ಪರಿಣಾಮವಾಗಿ ಸಂಚಾರ ಕ್ರಮಗಳೆಲ್ಲವೂ ಅಸ್ತವ್ಯಸ್ತಗೊಂಡಿತ್ತು.

ಕಾವ್ಯ ವಾಚನ ಮತ್ತು ಸಂಗೀತ

ನಂಜನಗೂಡು ಶ್ರೀ ಶ್ರೀಕಂಠೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣದ ಅಂಗವಾಗಿ ನಾಳೆ ರಾತ್ರಿ ೭ಕ್ಕೆ ನಡೆಯಲ್ಲಿ ಶ್ರೀ ಸುಬ್ರಹ್ಮಣ್ಯಯ್ಯನವರಿಂದ ವಿಶ್ವೇಶ್ವರ ಸಾಕ್ಷಾತ್ಕಾರ ಎಂಬ ಕಾವ್ಯ ವಾಚನವೂ, ದೇವಸ್ಥಾನದಲ್ಲಿ ಶ್ರೀ ಬಿ ಎಸ್. ರಾಮಸ್ವಾಮಿ ಮತ್ತು ಸಂಗಡಿಗರ ಸಂಗೀತವೂ ನಡೆಯುವುವು.

ಬೆಂಗಳೂರಿಗೆ ಭೂಪಾಲ ಹಾದಿ ಯಾತ್ರಿಕರ ಆಗಮನ

ದೆಹಲಿಯ ವಿಧಾನ ಸಭಾಧ್ಯಕ್ಷರಾದ ಡಾ॥ ಸುಶೀಲಾ ನಯ್ಯಾರ್‌ರವರ ನೇತೃತ್ವದಲ್ಲಿ ಸಂಸ್ಥಾನದಲ್ಲಿ ಪ್ರವಾಸ ಮಾಡುತ್ತಿರುವ ಭೂದಾನ ಪಾದ ಯಾತ್ರಿಕರು ನೆನ್ನೆ ಬೆಂಗಳೂರಿಗೆ ಆಗಮಿಸಿದರು. ಅವರನ್ನು ವಿಧಾನ ಸಭಾಧ್ಯಕ್ಷ ಶ್ರೀ ಹೆಚ್. ಎಸ್. ರುದ್ರಪ್ಪನವರೂ, ಇತರ ಪ್ರಮುಖರೂ ಸ್ವಾಗತಿಸಿದರು.

ವಾರ ಭವಿಷ್ಯ

ತಾ॥ ೧-೭-೫೬ ರಿಂದ ೮-೭-೫೬ರವರೆಗೆ

ಮೇಷ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಪ್ರವಾಸ ಸುಖಕರವಾಗಿರುವುದು

ವೃಷಭ —ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ಶುಭ ಕಾರ್ಯಗಳು ಜರುಗುವುವು ನೌಕರಿಯಲ್ಲಿ ಪ್ರೋತ್ಸಾಹ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ

ಮಿಥುನ.—ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಆಪ್ತರಿಂದ ವಂಚನೆ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಸಂಭವ ಉದ್ಯೋಗದಲ್ಲಿ ಸಮಸ್ಯೆ

ಕರ್ಕ —ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ ಸಾಮಾಜಿಕ ಕ್ಷೇತ್ರದಲ್ಲಿ ಏಳ್ಗೆ ಉದ್ಯೋಗದಲ್ಲಿ ಅನಿರೀಕ್ಷಿತ ಸಫಲಗಳು

ಸಿಂಹ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ನೌಕರಿಯಲ್ಲಿ ಪ್ರಶಂಸೆ ಮಂಗಳ ಕಾರ್ಯಗಳು ಜರುಗುವುವು

ಕನ್ಯಾ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವಿದ್ವಜ್ಜನರ ಭೇಟಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ

ತುಲಾ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಆಪ್ತರಿಂದ ವಂಚನೆ ನೌಕರಿಯಲ್ಲಿ ನಿರುತ್ಸಾಹ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ

ವೃಶ್ಚಿಕ — ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಉದ್ಯೋಗದಲ್ಲಿ ಸಮಸ್ಯೆ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಕುಟುಂಬದಲ್ಲಿ ಅಶಾಂತಿ ಪ್ರವಾಸದಲ್ಲಿ ತೃಪ್ತಿ

ಧನು — ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸಂಭವ

ಮಕರ —ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ

ಕುಂಭ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಕುಲತೆ ಸಂಭವ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ನೌಕರಿಯಲ್ಲಿ ನಿರುತ್ಸಾಹ

ಮೀನ — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಶುಭ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಸಾಮಾನ್ಯ ಫಲಗಳು ಪ್ರವಾಸ ಯೋಗ

ಇಂಗ್ಲೆಂಡಿನಲ್ಲಿ ಮರಣ ದಂಡನೆ ರದ್ದು

ಇಂಗ್ಲೆಂಡಿನಲ್ಲಿ ಮರಣದಂಡನೆಯನ್ನು ರದ್ದುಗೊಳಿಸುವ ಶಾಸನವನ್ನು ಅಲ್ಲಿನ ಕಾಮನ್ಸ್ ಸಭೆಯು ಅಷ್ಟರಾಗಿ ಅಂಗೀಕರಿಸಿರುತ್ತದೆ

Take
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
71/3 [illegible] Street,
BANGALORE-2

ಅಭಾವ ಪರಿಹಾರದ ಬಗ್ಗೆ ರಾಜಕೀಯ ಪಕ್ಷಗಳ ನೆರವು

ಪ್ರಜಾ ಸಮಾಜವಾದಿ ಪಕ್ಷದ ಪ್ರಮುಖರ ಕೋರಿಕೆ

ಜಿಲ್ಲೆಯಲ್ಲಿರುವ ಪ್ರಜಾ ಸಮಾಜವಾದಿ ಪಕ್ಷದ ಪ್ರಮುಖ ಸದಸ್ಯರುಗಳಾದ ಶ್ರೀಗಳು ಎ. ಎಸ್ ಗುರುಪಾದಸ್ವಾಮಿ ಯು ಎಂ ಮಾದಪ್ಪ, ವೇದಾಂತ ಹೆಮ್ಮಿಗೆ ಮತ್ತು ಕೆ ಪಿ ಶಾಂತಮೂರ್ತಿಯವರು ಹೇಳಿಕೆಯೊಂದನ್ನಿತ್ತು ಮೈಸೂರು ಜಿಲ್ಲೆಯ ಅಭಾವ ಪ್ರದೇಶಗಳಲ್ಲಿ ಪರಿಹಾರ ಕ್ರಮ ಜರುಗಿಸುವ ಬಗ್ಗೆ ಎಲ್ಲ ರಾಜಕೀಯ ಪಕ್ಷಗಳು ಮತ್ತು ಇತರ ಸಾರ್ವಜನಿಕ ಸಂಸ್ಥೆಗಳ ಕ್ರಿಯಾತ್ಮಕ ನೆರವನ್ನು ಪಡೆಯುವುದು ಅಗತ್ಯವೆಂದು ತಿಳಿಸಿರುತ್ತಾರೆ ಈ ವಿಷಯದಲ್ಲಿ ಎಲ್ಲ ಪಕ್ಷಗಳೂ ತಂತಮ್ಮ ಭಿನ್ನಾಭಿಪ್ರಾಯವನ್ನು ಮರೆತು, ಒಟ್ಟಿಗೆ ಕಲೆಯಬೇಕೆಂದೂ, ತಾಲ್ಲೂಕು ಮುಖ್ಯ ಕೇಂದ್ರಗಳಲ್ಲಿ ಸಾಮಾಜಿಕ ಸೇವಾ ಶಿಬಿರಗಳನ್ನು ತೆರೆದು ಸ್ವಯಂಸೇವಕರನ್ನು ಕೂಡಿಸಬೇಕೆಂದೂ, ಅಧಿಕಾರಿಗಳು ಪರಿಹಾರ ಕಾರ್ಯಗಳು ನಡೆಯುವುದಕ್ಕೆ ಅಡ್ಡಿ ಬರಬಾರದೆಂದೂ ತಿಳಿಸಿರುವರು ಅವಶ್ಯವಿರುವ ಗಂಜಿ ಕೇಂದ್ರಗಳನ್ನು ತೆರೆಯಲು ಅವರು ಕರೆಯಿತ್ತಿರುತ್ತಾರೆ

ಈಗಿನ ಕ್ಷಾಮವನ್ನು ನಿವಾರಣೆ ಮಾಡುವುದಲ್ಲದೆ, ಜನರಿಗೆ ಉದ್ಯೋಗ ಕಲ್ಪಿಸುವುದರ ಬಗ್ಗೆ ದೀರ್ಘಾವಧಿ ಪ್ರಯತ್ನಗಳನ್ನು ನಡೆಸಬೇಕೆಂದು ಅವರು ತಿಳಿಸಿ, ಸುವರ್ಣಾವತಿ ಯೋಜನೆಯನ್ನು, ಒಣಗಿದ ಕೆರೆ ಕಾಲುವೆಗಳನ್ನೂ ನಡೆಸು[illegible] ವಂತೆ ಸಲಹೆಯಿತ್ತಿರುವರು

ಇಂಜನಿಯರಿಂಗ್ ಕಾಲೇಜುಗಳಲ್ಲಿ ಸ್ಥಾನ ಹೆಚ್ಚಿಸಲು ಕೇಂದ್ರ ಮಂತ್ರಿಗಳಲ್ಲಿ ಮನವಿ

ಸಂಸ್ಥಾನದ ನಾನಾ ಇಂಜನಿಯರಿಂಗ್ ಕಾಲೇಜುಗಳಲ್ಲಿ ಪ್ರವೇಶ ಸ್ಥಾನಗಳನ್ನು ಹೆಚ್ಚಿಸುವಂತೆ ಕೋರಲು ಕಳೆದ ಬುಧವಾರ ಡಿವಿಷನಲ್ ಇಂಜನಿಯರ್ ಶ್ರೀ ಎ ಎಸ್ ಸುಬ್ಬರಾಯರು ಮತ್ತು ಶ್ರೀ ಕೆ ನಾರಾಯಣರಾಯರು, ಕೇಂದ್ರ ವಿದ್ಯಾ ಉಪ ಮಂತ್ರಿ ಡಾ॥ ಶ್ರೀಮಾಲಿ ಮತ್ತು ಸಂಸ್ಥಾನದ ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರ ಬಳಿ ನಿಯೋಗ ಹೋಗಿದ್ದರು ಕಾಲೇಜುಗಳಲ್ಲಿ ಈಗ ಸ್ಥಾನಗಳನ್ನು ಕಡಿಮೆ ಮಾಡಿರುವುದರಿಂದ ಆಗಿರುವ ತೊಂದರೆಗಳನ್ನು ಅವರು ವಿವರಿಸಿದರು ಶ್ರೀ ಎ ಜಿ ರಾಮಚಂದ್ರರಾಯರು ಉತ್ತರವಿತ್ತು, ಕಾಲೇಜುಗಳಲ್ಲಿ ಹೆಚ್ಚು ಸ್ಥಾನಗಳನ್ನು ಕಲ್ಪಿಸಿದರೆ ಶಿಕ್ಷಣ ಪದ್ಧತಿಯನ್ನು ಬಾರಿಗೆ ತರಲು ಆಲೋಚಿಸಲಾಗುತ್ತಿರುವುದೆಂದು ನುಡಿದರು ವೈಸ್ ಛಾನ್ಸೆಲರಿಗೂ ಈ ಬಗ್ಗೆ ನಿಯೋಗದವರು ಅರಿಕೆ ಮಾಡಿಕೊಂಡಿರುವರು

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಕಡಲೇಕಾಯಿ	೧೧ ೨ ೦	೧೭ ೧೨ ೦
ಹೊಂಗೆಬೀಜ	೨೦ ೦ ೦	೨೪ ೧೦ ೦
ಎಳ್ಳು	೮೮ ೦ ೦	೯೨ ೪ ೦
ಹುರುಳಿ	೪೪ ೬ ೦	
ಹೆಸರು	೫೪ ೧೨ ೦	
ಹುಲುಸಂದೆ	೪೪ ೦ ೦	೪೮ ೧೦ ೦
ಉದ್ದು	೬೪ ೧೨ ೦	
ಹುಣಸೇಹಣ್ಣು	೮ ೦ ೦	೬ ೪ ೬
ಒಣಮೆಣಸಿನಕಾಯಿ	೧೩ ೮ ೦	೧೬ ೧೨ ೦
ಬೆಲ್ಲ	೪ ೦ ೦	
ತೆಂಗಿನಕಾಯಿ ೧೦೦೦	೯೪೧ ೦ ೦	೨೦೬ ೦ ೦

ವಿವಾಹ ಮಹೋತ್ಸವಗಳು

ಮೈಸೂರು ಅಶೋಕಾ ರಸ್ತೆಯಲ್ಲಿರುವ ಶೀಲ್ಸಿ ಜೂಯಲರಿ ಮಾರ್ಟ್‌ನ ಶ್ರೀ ಪುಟ್ಟನಾಗರಾಜಶೆಟ್ಟರು ತಮ್ಮ ಕುಮಾರಿ ಸೌ॥ ಶಾಂತಕುಮಾರಿಯನ್ನು ಚಿಕ್ಕಮಗಳೂರಿನ ಕಾಫಿ ಪ್ಲಾಂಟರ್ ಶ್ರೀ ಕೆ ರಾಮಕೃಷ್ಣಪ್ಪನವರ ಪುತ್ರ ಶ್ರೀ ಕೆ ಆರ್ ಭರತ್‌ರವರಿಗೆ ಕೊಟ್ಟು, ಕಳೆದ ಗುರುವಾರ ನಗರದಲ್ಲಿ ವಿವಾಹವನ್ನು ನೆರವೇರಿಸಿದರು

ನವರಂಗ ಸಾ ಮಿಲ್ಲಿನ ಶ್ರೀ ಕೆ ಎಂ. ಸೀತಾರಾಂರವರು ತಮ್ಮ ಕುಮಾರಿ ಸೌ॥ ಶಾಂತಾರವರನ್ನು ಮೋಕ್ಷಗುಂಡಂ ಕೃಷ್ಣಮೂರ್ತಿಯವರ ಪುತ್ರರು ಶ್ರೀ ಎಂ ಕೆ ಸೂರ್ಯಪ್ರಕಾಶ್‌ರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ರಾಜಧಾನಿಯಲ್ಲಿ ಜರುಗಿಸಿದರು

ಕಸಬಾ ಶ್ಯಾನುಭೋಗ್ ಶ್ರೀ ಎಂ ಅನಂತರಾಮಯ್ಯನವರು ತಮ್ಮ ಕುಮಾರಿ ಸೌ॥ ಲಕ್ಷ್ಮಿನರಸುರನ್ನು ಶ್ರೀ ಸಿ ಎಸ್ ಸಂಜೀವಯ್ಯನವರ ಮಗ ಶ್ರೀ ಸಿ ಎಸ್ ಸುಬ್ರಹ್ಮಣ್ಯರವರಿಗೆ ಕೊಟ್ಟು ವಿವಾಹವನ್ನು ಮೊನ್ನೆಯೂ, ಮತ್ತೊಬ್ಬ ಕುಮಾರಿ ಸೌ॥ ವಿಶಾಲಾಕ್ಷಿಯನ್ನು ಶ್ರೀ ಕಡಲೂರು ಸುಬ್ಬರಾಯರ ಕುಮಾರ ಶ್ರೀ ಶ್ರೀಕಂಠಯ್ಯನವರಿಗೆ ಕೊಟ್ಟು ವಿವಾಹವನ್ನು ನೆನ್ನೆಯೂ ನಗರದಲ್ಲಿ ನೆರವೇರಿಸಿದರು

ಟಿ ನರಸೀಪುರದ ತಾಲ್ಲೂಕು ಉಕ್ಕಲಗೆರೆ ಜಮೀನ್ದಾರ್ ಶ್ರೀ ಟಿ ಟಿ ಆರ್ ರಾಮಗೋಪಾಲಾಚಾರಿಯರ್‌ರವರು ತಮ್ಮ ಕುಮಾರಿ ಸೌ॥ ನಮಣಿಯನ್ನು ಶ್ರೀ ಕೆ ಶ್ರೀನಿವಾಸರಾಘವಾಚಾರ್ಯರ ಕುಮಾರ ಶ್ರೀ ಕೆ ಶ್ರೀನಿವಾಸಾಚಾರ್ಯರಿಗೆ ಕೊಟ್ಟು ಮೊನ್ನೆ ಉಕ್ಕಲಗೆರೆಯಲ್ಲಿ ವಿವಾಹವನ್ನು ನಡೆಸಿದರು

ವಿದ್ಯಾರಣ್ಯಪುರದಲ್ಲಿರುವ ಶ್ರೀ ಕೆ ಆರ್ ವೆಂಕಟರಾಮಯ್ಯನವರು ತಮ್ಮ ಕುಮಾರ ಚಿ॥ ಕೆ ವಿ ಕೃಷ್ಣಮೂರ್ತಿ ಮತ್ತು ತಮ್ಮ ಕಿರಿಯ ಸಹೋದರ ಶ್ರೀ ಕೆ ಆರ್ ವಿಶ್ವೇಶ್ವರಯ್ಯನವರ ಮಗ ಚಿ॥ ಕೆ ವಿ ವಿಜಯಕುಮಾರ ಇವರಿಗೆ ಕಳೆದ ಗುರುವಾರ ಬ್ರಹ್ಮೋಪದೇಶವನ್ನೂ, ಶ್ರೀ ವಿಶ್ವೇಶ್ವರಯ್ಯನವರ ಮಗಳು ಸೌ॥ ಸಾವಿತ್ರಿಯನ್ನು ಬೆಂಗಳೂರಿನ ಶ್ರೀ ಹೆಚ್ ವೆಂಕಟರಾಮಯ್ಯನವರ ಪುತ್ರ ಶ್ರೀ ಹೆಚ್. ವಿ ಮಿತ್ರರವರಿಗೆ ಕೊಟ್ಟು ನೆನ್ನೆ ವಿವಾಹವನ್ನೂ ಕಲ್ಯಾಣ ಭವನದಲ್ಲಿ ನೆರವೇರಿಸಿದರು

ಷಷ್ಠ್ಯಬ್ದಪೂರ್ತಿ ಶಾಂತಿ

ಬೆಂಗಳೂರು ಚಾಮರಾಜ ಪೇಟೆಯಲ್ಲಿರುವ ಶ್ರೀ ರಾಘವೇಂದ್ರಸ್ವಾಮಿಗಳ ಮಠದ ಏಜೆಂಟರಾದ ವೇ॥ ಬ್ರ॥ ಶ್ರೀ ಶ್ರೀನಿವಾಸಾಚಾರ್ಯರ ಷಷ್ಠ್ಯಬ್ದಪೂರ್ತಿ ಶಾಂತಿಯು ಕಳೆದ ಶುಕ್ರವಾರ ಸುಬ್ಬರಾಯನ ಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಮಠದಲ್ಲಿ ಜರುಗಿತು

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ಸಾಧನಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ತ್ವರೆಯಿಂದ ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ಬಿ. ಕೃಷ್ಣಮೂರ್ತಿ,
ಡೈರೆಕ್ಟರ್

ನಗರಗಳಲ್ಲೂ ರೂಗೆ ೩ ಸೇರು ಅಕ್ಕಿ ದೊರೆಯಲಿ

ನಗರದ ಕಾಂಗ್ರೆಸ್ ಸದಸ್ಯರಾದ ಶ್ರೀ ಎಂ [illegible] ನರಸಿಂಹಯ್ಯನವರು ಹೇಳಿಕೆಯೊಂದನ್ನಿತ್ತು ಅಭಾವ ಪ್ರದೇಶಗಳಂತೆಯೇ ನಗರಗಳಲ್ಲೂ ರೂಪಾಯಿಗೆ ೩ ಸೇರು ಅಕ್ಕಿಯನ್ನು ಒದಗಿಸಬೇಕೆಂದೂ, ಹಳ್ಳಿಗಾಡಿನ ಜನ್ನ ಜೀವಿಗಳಿಗೆ ಅಕ್ಕಿಯಲ್ಲೂ ರಾಗಿಯನ್ನು ಒದಗಿಸಿದರೆ ಉತ್ತಮವೆಂದು ತಿಳಿಸಿರುತ್ತಾರೆ

ನಗರದಲ್ಲಿ ಜರ್ಮನಿಯ ಸೈಕಲ್ ಪ್ರವಾಸಿಗರು

ಇಡೀ ಏಷ್ಯವನ್ನು ನೋಡಲು ಹೊರಟಿರುವ ಪಶ್ಚಿಮ ಜರ್ಮನಿಯ ವಿದ್ಯಾರ್ಥಿ [illegible] ಯರ್ ಹೀಗೆ ರೋಹರ್ ಎಂಬುವರು ಪಶ್ಚಿಮರೀತಿಯಲ್ಲಿ ತಯಾರಿಸಲ್ಪಟ್ಟ ಸೈಕಲ್ಲಿನಲ್ಲಿ ಪ್ರವಾಸ ಮಾಡುತ್ತಾ ನಗರಕ್ಕೆ ಆಗಮಿಸಿದ್ದರು [illegible] ರು ಇಲ್ಲಿನ ಮಹಾರಾಜಾ ಕಾಲೇಜಿನ ಪ್ರೌಢ[illegible] ಧ್ಯಮ ವಿಭಾಗದ ವಿದ್ಯಾರ್ಥಿಗಳಿಗೆ ತಮ್ಮ ಪ್ರವಾಸದ ಅನುಭವವನ್ನು ವಿವರಿಸಿ, ಭಾರತದಿಂದ ಲೋಕ ಶಾಂತಿ ಸಾಧ್ಯವೆಂದು ತಾವು ಭಾವಿಸುವುದಾಗಿ ತಿಳಿಸಿದರು ಮೂರು ತಿಂಗಳ ಕಾಲ [illegible] ಷ್ಟು ಭಾರತದ ಪ್ರವಾಸ ಮಾಡಿದನಂತರ [illegible] ರು ಸಿಂಹಳ, ಬರ್ಮಾ, ಸಯಾಂ, ಉತ್ತರ [illegible] ರತ ಮತ್ತು ಪಾಕಿಸ್ತಾನಗಳ ಮೂಲಕ ಸ್ವದೇಶ[illegible] ಹಿಂದಿರುಗುವರು

ಬೆಂಗಳೂರು ರೇಡಿಯೋ ಭಾಷಾ ಕಾರ್ಯಕ್ರಮ

ಬೆಳಿಗ್ಗೆ ೬-೫ ಕಾರ್ಯಕ್ರಮ ವಿವರ. ೬.೧[illegible] ಆನಂದ ಮತ್ತು ಪ. ಯಶೋದ ಕೀರ್ತನ[illegible] ೬ ೪೦ ಗಾನ ವಿಹಾರ ೯ ೧೫ ಕೀರ್ತನ. [illegible] ಕ್ಕ ೧೨ ಎಸ್. ಕೃಷ್ಣಶಾಸ್ತ್ರಿ-ಹರಿಕಥೆ ೧೨-೩೦ [illegible] ಯನ ೧ ಗಾನ ಸುಂದರಿ. ೧-೩೦ [illegible] ೨ ೧೫ ಅಭ್ಯರ್ಥಿಗಳಿಗಾಗಿ ಸಂಜೆ ೬ ೪೦ [illegible] ಶ್ರೀನಿವಾಸಯ್ಯಂಗಾರ್-ಪಿಟೀಲು. ೭ ೧೫ [illegible] ಪದ ಗೀತೆ ೭ ೪೦ ಮತ್ತು ೯ ಆಲ್ಬರ್ಟ್ ಗ[illegible] ಮಕ್ಕಳ ಗೀತೆ ಮತ್ತು ಮೀರಾ ಭಜನ ೮ ೪೦ [illegible] ಗೀತ ೯ ೧೫ ಭಜನ ಅಧಿಕೃತ್ಯ ಮೋಹನ[illegible] ಷಯ ೯ ೪೦ ಶ್ರೀ ಆರ್ ವೆಂಕಟಸುಬ್ಬಾಶಾಸ್ತ್ರಿ [illegible] ರು ಕಥಾ ಕಾಲಕ್ಷೇಪ

ಟಾನಿಕ್ಕಿನ ಅವಶ್ಯಕತೆ ಯಾರಿಗಿದೆ ?

★ ಯಾರು ಅರೋಗ್ಯವಂತರಾಗಿದ್ದು ಅವರು [illegible] ದಾ ಕಾಲದಲ್ಲಿಯೂ ಹಾಗಿದ್ದು [illegible] ಬೇಕೆಂದು ಅಪೇಕ್ಷಿಸುವರೋ ಅವರಿಗೆ
★ ಯಾರು ರೋಗದಿಂದೆದ್ದ ನಂತರ ಅರೋಗ್ಯ, [illegible] ದಾರ್ಢ್ಯ ಮತ್ತು ವೀರ್ಯ ಬಲಗಳನ್ನು [illegible] ಪೂರ್ಣವಾಗಿ ಹೊಂದಲು ಬೇಕಾದ ಶಕ್ತಿ [illegible] ರೊರತೆಯನ್ನು ಹೊಂದಿರುವರೋ ಅವರಿಗೆ
ಋತುಗಳೆಲ್ಲಾ ಮಾನವ ಶರೀರವು ಕೇವಲ [illegible] ಚಳಿ, ಶಾಖ ಮತ್ತು ತಮ್ಮ ಅವು [illegible] ಯಾಗಿ ಕೆಲಸ ಮಾಡಲು ಅಗತ್ಯ [illegible] ಗಳು ಆಗಿಯೇ ಮಾನವ ಶರೀರ [illegible] ಯಾಗಿರಬೇಕಾದರೆ ಟಾನಿಕ್ಕು [illegible] ಅವಶ್ಯಕವಾದುವು
ಇವುಗಳೆಲ್ಲವರ ಸಮಕಾಲನವೇ ಟಾನಿಕ್ [illegible] ಕೊರತೆಯೋ ಅಶ್ರದ್ಧೆಯೋ
ಅಕ್ರಮ ಮತ್ತು ರೋಗಗಳಿಂದ ಉಂಟಾಗುವ [illegible] ಪಾಮುಗಳನ್ನು ಯಾವುದಾದ [illegible]

ನವರತ್ನ—ಕಲ್ಪ

ದಮ್ಮು, ಕೆಮ್ಮು, ಜ್ವರ, ನೆಗಡಿ, [illegible] ನೋವು, ಶರೀರ, [illegible] ಮೇಧಿಕ, ಅಂಡವಾಯು, [illegible] ಮತ್ತು [illegible] ಇದೇ ಮುಖ್ಯವಾದ [illegible] ಯೋಗ.
★ [illegible]
★ [illegible]
★ [illegible] ಮತ್ತು ಅದರ ಎಲ್ಲ [illegible]
ಇದು ಅದರ [illegible] ಟಾನಿಕ್ಕು
— ತಯಾರಿಸುವವರು —
ಕವಿರಾಜ ಪಂಡಿತ
[illegible] ಶರ್ಮ,
[illegible]
[illegible]
NAVRATNA KALPA PHARMACY,
JULLUNDUR CITY (India)
Grams : NAVRATNA

ಮೈಸೂರು ಸಿಟಿ ಮರದ ಗಾಣದ ಎಣ್ಣೆ ಕೈಗಾರಿಕಾಗಾರರ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್

ಪಾಣಿವಿಲಾಸ ರೋಡ್ (ನಾರ್ತ್ ಬ್ಯಾಂಕ್ ಸರ್ಕಲ್ ಬಳಿ), ಮೈಸೂರು

ಅಖಿಲ ಭಾರತ [illegible] ಗ್ರಾಮ ಕೈಗಾರಿಕಾ ಬೋರ್ಡಿನವರ [illegible] ಮೇಲ್ಕಂಡ ಸೊಸೈಟಿಯಲ್ಲಿ [illegible] ಎಣ್ಣೆಗಳು ರೂ 0-1-6 [illegible] ದೊರೆಯು[illegible] ಗಾಣದಿಂದ ತಯಾರಾದ [illegible] ಎಣ್ಣೆಗಳು [illegible]

			ಸಹಾಯ	ನೀವು ಕೊಡಬೇಕಾದ್ದು
ಹುಚ್ಚೆಳ್ಳೆಣ್ಣೆ	ಸೇರ್ 1 ಕ್ಕೆ ರೂ	2 4 6	0-1-6	2 3 0
ಅಚ್ಚೆಣ್ಣೆ		3 7 0	0 1 6	3 5 6

[illegible] — ಅರ್ಧ ಸೇರಿಗೆ ಕಡಿಮೆ ಕೊಡುವ [illegible] ದೊರೆಯುವುದಿಲ್ಲ

Edited, Printed and Published by A. R. Nagarajan at Sadhvi Press D. Subbiah Road, Mysore

ಟೆಲಿಫೋನ್ ನಂ. 792

ಕೂಡಲೇ ನೋಡಿರಿ

ಸ್ಥಾಪನೆ 1932 · ಫೋನ್ 811

ಶ್ರೀ ಕೃಷ್ಣಾ ಜ್ಯೂಯಲರಿ ಮಾರ್ಟ್,
ನ್ಯೂ ಸ್ಟ್ಯಾಚ್ಯು ಸರ್ಕಲ್,
ಮೈಸೂರು

ನಮ್ಮಲ್ಲಿ ಸವರನ್ ಚಿನ್ನದಿಂದ ತಯಾರಾದ ನೆಕ್‌ಲೇಸುಗಳು, ಬಳೆಗಳು, ಮತ್ತು ನವೀನ ರೀತಿಯ ಕಲ್ಲಿನ ಒಡವೆಗಳೂ ಸಹ ದೊರೆಯುತ್ತವೆ

ಇಂದಿನ ಪತ್ರಿಕೆ 3 ಕಾಸು

ಅಗ್ಗದ ಜವಳಿ
ಗೌ|| ಸಿಲ್ಕ್ ಸೀರೆಗಳು
ಧರ್ಮಾವರಂ, [illegible], ಆರ್ಣಿ, ದಿಂಡಿಗಲ್
ರೇಷ್ಮೆ ಮತ್ತು ನೂಲಿನ ಸೀರೆಗಳು
ಬಂದಿವೆ ಇಂದೇ ಭೇಟಿ ಕೊಡಿ
M.V. ಭೋಜಯ್ಯ
ಬಿ. ಎ., & ಬ್ರದರ್ಸ್,
ಇಂಡಿಯನ್ ಬ್ಯಾಂಕ್ ಎದುರು,
ಮೈಸೂರು : ಫೋನ್ 446

ಸಂಪುಟ : ೧೯] SADHVI : MONDAY 2—7—1956 ಮೈಸೂರು : ಸೋಮವಾರ ೨—೭—೧೯೫೬ [ಸಂಚಿಕೆ : ೬೦೦

ಅಮೆರಿಕದಲ್ಲಿ ವಿಮಾನಗಳ ಡಿಕ್ಕಿಯಾಗಿ ೧೨೮ ಮರಣ

ನಂಜನಗೂಡು ಶ್ರೀಕಂಠಶಾಸ್ತ್ರಿಗಳವರ ನಿಧನ

ಲೇಖನವನ್ನು ಬರೆಯುತ್ತಿದ್ದಾಗಲೇ ಅನಾಯಾಸವಾಗಿ ಅಂತ್ಯ

ಮೈಸೂರು ೩

ಬ|| ಮ|| ಶ್ರೀ|| ನಂಜನಗೂಡು ಶ್ರೀಕಂಠಶಾಸ್ತ್ರಿಗಳವರು ಈ ದಿನ ಬೆಳಗ್ಗೆ ತಮ್ಮ ನಿವಾಸದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಲೇಖನವೊಂದನ್ನು ಬರೆಯುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಹೃದಯಕ್ರಿಯೆ ನಿಂತು ಇವರು ಅನಾಯಾಸವಾದ ಮರಣವನ್ನು ಹೊಂದಿದರು. ಈ ಮಧ್ಯಾಹ್ನ ಇವರ ಅಂತ್ಯ ಸಂಸ್ಕಾರವು ಯಥಾವಿಧಿಯಾಗಿ ನೆರವೇರಿತು.

ಅವರಿಗೆ ೭೩ ವರ್ಷ ವಯಸ್ಸಾಗಿತ್ತು. ನಾಲ್ಕು ಜನ ಗಂಡು ಮಕ್ಕಳೂ, ೪ ಜನ ಹೆಣ್ಣು ಮಕ್ಕಳೂ ಇರುವರು.

ಶ್ರೀ ಶಾಸ್ತ್ರಿಗಳವರ ನಿಧನದಿಂದ ನಗರದ ಅತ್ಯುನ್ನತ ವರ್ಗದ ಕವಿಗಳೂ, ಧರ್ಮಾಭಿಮಾನಿಗಳೂ ಮತ್ತು ಸಮಾಜ ಸೇವಕರೂ ಕಣ್ಮರೆಯಾದಂತಾಗಿದೆ. ಅವರು ಅನೇಕ ವರ್ಷ ಕಾಲ ಅರಸು ಬೋರ್ಡಿಂಗ್ ಸ್ಕೂಲಿನ ಪಂಡಿತರಾಗಿದ್ದರು. ಕನ್ನಡದಲ್ಲಿ ಅಮೂಲ್ಯವಾದ ಕವಿತೆಗಳನ್ನೂ, ಕಥೆಗಳನ್ನೂ, ನಾಟಕಗಳನ್ನೂ ರಚಿಸಿದ್ದರು. ಷೇಕ್ಸ್‌ಪಿಯರನ ಹಲವು ನಾಟಕಗಳನ್ನೂ ಸಹಾ ಇವರು ಕನ್ನಡಕ್ಕೆ ಪರಿವರ್ತನೆಗೊಳಿಸಿದ್ದರು. ದಿವಂಗತ ನಾಟಕ ಶಿರೋಮಣಿ ವರದಾಚಾರ್ಯರು ಅಭಿನಯಿಸುತ್ತಿದ್ದ ಅನೇಕ ನಾಟಕಗಳನ್ನು ಶ್ರೀ ಶಾಸ್ತ್ರಿಗಳು ರಚಿಸಿದ್ದರು. ಇತ್ತೀಚೆಗೆ ಹಲವಾರು ಸಾಮಾಜಿಕ ನಾಟಕಗಳನ್ನೂ ಸಹಾ ಬರೆದಿದ್ದರು.

ದಿವಂಗತ ಶ್ರೀಮನ್ಮಹಾರಾಜ ಕೃಷ್ಣರಾಜ ಒಡೆಯರ್‌ರವರು ಇವರ ಪ್ರೌಢಿಮೆಯನ್ನು ಮೆಚ್ಚಿ ಇವರನ್ನು ಆಸ್ಥಾನ ಮಹಾವಿದ್ವಾಂಸರನ್ನಾಗಿ ಅಂಗೀಕರಿಸಿ ಸನ್ಮಾನಿಸಿದ್ದರು. ಎಲ್ಲ ಸಾರ್ವಜನಿಕ ಸಮಾರಂಭಗಳಲ್ಲಿಯೂ ಶಾಸ್ತ್ರಿಗಳವರ ಪದ್ಯಮಾಲಿಕೆಗಳು ಪಠಿಸಲ್ಪಡುತ್ತಿದ್ದುವು.

ಬ್ರಾಹ್ಮಣ ಧರ್ಮ ಸಹಾಯ ಸಭೆಯ ಸ್ಥಾಪನೆಯು ಶ್ರೀ ಶಾಸ್ತ್ರಿಗಳವರು ಈ ನಗರಕ್ಕೆ ಸಲ್ಲಿಸಿರುವ ಅತ್ಯಂತ ಅಮೋಘವಾದ ಸೇವೆಯಾಗಿರುತ್ತದೆ. ಪ್ರಾರಂಭದಲ್ಲಿ ಅನಾಥ ಸಂಸ್ಕಾರಕ್ಕಾಗಿ ಆರಂಭವಾದ ಈ ಸಭೆಯು ಶಾಸ್ತ್ರಿಗಳವರ ಪ್ರಯತ್ನದಿಂದ ಕ್ರಮಕ್ರಮವಾಗಿ ಬೆಳೆದು, ಈಗ ದೊಡ್ಡ ಆಸ್ತಿಗಳನ್ನು ಹೊಂದಿರುವುದಲ್ಲದೆ ವಿವಾಹ ಮತ್ತು ಉಪನಯನಗಳಿಗೆ ಬಹಳ ಸಹಾಯಕವಾಗಿರುತ್ತದೆ. ಇಂತಹ ಸಂಸ್ಥೆಯು ಇಡೀ ಭಾರತದಲ್ಲಿಯೇ ಎಲ್ಲಿಯೂ ಇರುವುದಿಲ್ಲ.

ಶಾಸ್ತ್ರಿಗಳು ನಗರದ ಸಿಟಿ ಕೋ-ಆಪರೇಟಿವ್ ಬ್ಯಾಂಕಿನ ಉಪಾಧ್ಯಕ್ಷರೂ ಮತ್ತು ಸಂಸ್ಥಾನದ ಸಂಗೀತ ನಾಟಕ ಅಕೇಡಮಿಯ ಜನರಲ್ ಕೌನ್ಸಿಲ್ ಸದಸ್ಯರೂ ಆಗಿದ್ದರು.

ತಮ್ಮ ಸರಳ ಜೀವನ, ರಸಿಕ ಮನೋಭಾವ, ಹಾಸ್ಯ ಪ್ರವೃತ್ತಿ ಮತ್ತು ಸ್ನೇಹಪರತೆಗಳಿಂದ ಶಾಸ್ತ್ರಿಗಳು ಸಕಲರ ಮೆಚ್ಚುಗೆಯನ್ನು ಪಡೆದಿದ್ದರು. ಅವರ ನಿಧನಕ್ಕಾಗಿ ಅಪಾರ ಸಂತಾಪವನ್ನು ಸೂಚಿಸಿ ಭಗವಂತನು ಅವರ ಆತ್ಮಕ್ಕೆ ಚಿರಶಾಂತಿಯನ್ನು ನೀಡಲೆಂದು ಬೇಡಿ, ಬಂಧುಮಿತ್ರರಿಗೆ ಹೃತ್ಪೂರ್ವಕವಾದ ಅನುತಾಪಗಳನ್ನು ಸಲ್ಲಿಸುತ್ತೇವೆ.

ಕಮ್ಯೂನಿಸ್ಟರೊಡನೆ ಸಂಧಾನಕ್ಕೆ ಚಿಯಾಂಗರ ೫ ಷರತ್ತು

ಕಮ್ಯೂನಿಸ್ಟ್ ಚೀನಾದೊಡನೆ ಸಂಧಾನ ನಡೆಸಲು ರಾಷ್ಟ್ರೀಯರು ೫ ಷರತ್ತುಗಳನ್ನು ಹಾಕುತ್ತಾರೆ. ಚೀನಾದ ಮುಖ್ಯ ಭೂಮಿಯಿಂದ ಎಲ್ಲಾ ರಷ್ಯನರನ್ನು ಓಡಿಸುವುದು, ಎಲ್ಲಾ ಸಾಮೂಹಿಕ ವ್ಯವಸಾಯ ಕೇಂದ್ರಗಳನ್ನು ರದ್ದುಪಡಿಸಿ ಭೂಮಿಯನ್ನು ಹಿಂದಿನ ಮಾಲೀಕರಿಗೆ ಕೊಡುವುದು, ಕೈಗಾರಿಕೆ ಮತ್ತು ವ್ಯಾಪಾರ ಸಂಸ್ಥೆಗಳ ಆಸ್ತಿಗಳನ್ನು ವಾಪಸು ಕೊಡುವುದು, ಸೈನ್ಯ ಶಿಬಿರಗಳನ್ನು ರದ್ದುಪಡಿಸುವುದು ಮತ್ತು ಚೀನಾದ ಮುಖ್ಯ ಭೂಭಾಗದಲ್ಲಿರುವ [illegible] ಗೊಂಬೆ ಸರ್ಕಾರವನ್ನು ವಿಸರ್ಜಿಸಿ ಚೀನಾ ರಿಪಬ್ಲಿಕ್ ಸರ್ಕಾರಕ್ಕೆ [illegible] ಈ ೫ ಷರತ್ತುಗಳು. ಚೀನಾದ [illegible] ಉತ್ತರವನ್ನು ಕೊಡಬೇಕಾಗಿದೆಯೆಂದು ಹೇಳಲಾಗಿದೆ. ಫಾರ್ಮೋಸಾ ಮೇಲೆ ಕಮ್ಯೂನಿಸ್ಟರು ಪ್ರಬಲ ಧಾಳಿಯನ್ನಾರಂಭಿಸುವ ಪ್ರಾರಂಭ ವಿಷಯಗಳ ಈ ಸಲಹೆ ಮಾಡಲಾಗಿದೆಯೆಂದು ರಾಷ್ಟ್ರೀಯರು ಭಾವಿಸಿರುವರು.

ಬಿಹಾರಿನಲ್ಲಿ ಪ್ರವಾಹದಿಂದ ೮ ಲಕ್ಷ ರೂ. ಬೆಳೆ ನಷ್ಟ

ಬಿಹಾರಿನ ೬ ನದಿಗಳಲ್ಲಿ ಪ್ರವಾಹ ಬಂದು ಮುಜಫರ್‌ಪುರದ ೩೦೦ ಎಕರೆ ಪ್ರದೇಶದಲ್ಲಿ ೫|| ಲಕ್ಷ ಪ್ರಜೆಗಳು ತೊಂದರೆಗೆ ಈಡಾಗಿದ್ದಾರೆ. ೮ ಲಕ್ಷ ರೂ ಬೆಳೆ ನಷ್ಟವಾಗಿದೆ. ೧,೭೦೦ ದೋಣಿಗಳಲ್ಲಿ ರಕ್ಷಣೆ ಮತ್ತು ಪರಿಹಾರವನ್ನು ಒದಗಿಸಲಾಗುತ್ತಿದೆ.

೪ ತೊಲದ ಪಾದರಕ್ಷೆಗಾಗಿ ರಾಷ್ಟ್ರಾಧ್ಯಕ್ಷರಿಂದ ೧೦೦ ರೂ. ಬೆಲೆ

ಹೈದರಾಬಾದಿನ ಬೀದರ್ ಜಿಲ್ಲೆಯಲ್ಲಿ ಪ್ರವಾಸ ಮಾಡುತ್ತಿರುವ ರಾಷ್ಟ್ರಾಧ್ಯಕ್ಷರಿಗೆ ಅಲ್ಲಿನ ೭೦ ವರ್ಷದ ವೃದ್ಧ ಚಮ್ಮಾರನೊಬ್ಬನು ೪ ತೊಲ ತೂಕವಿರುವ ಪಾದರಕ್ಷೆಗಳನ್ನು ಕೊಟ್ಟನು. ರಾಷ್ಟ್ರಾಧ್ಯಕ್ಷರು ಅವನಿಗೆ ೧೦೦ ರೂ. ಬಹುಮಾನ ಕೊಟ್ಟು ಅವನ್ನು ಕೊಂಡುಕೊಂಡರು. ಅತ್ಯುತ್ತಮ ಕೌಶಲದಿಂದ ಅದನ್ನು ಮಾಡಲಾಗಿದೆ.

ಅಮೆರಿಕದಲ್ಲಿ ೬|| ಲಕ್ಷ ಉಕ್ಕಿನ ಕಾರ್ಮಿಕರ ಮುಷ್ಕರ

ಅಮೆರಿಕದ ಉಕ್ಕಿನ ಕೈಗಾರಿಕೆಯಲ್ಲಿರುವ ಇಡೀ ದೇಶದ ಒಟ್ಟು ೬|| ಲಕ್ಷ ಕಾರ್ಮಿಕರು ನೆನ್ನೆ ಮಧ್ಯರಾತ್ರಿಯಿಂದ ಮುಷ್ಕರ ಹೂಡಿರುವರು. ನೆನ್ನೆ ಮುಕ್ತಾಯವಾದ ಒಪ್ಪಂದದ ಬದಲು ಹೊಸದನ್ನು ಮಾಡಿಕೊಳ್ಳುವ ಬಗ್ಗೆ ಮಾಲೀಕರಿಗೂ, ಕಾರ್ಮಿಕರ ಪ್ರತಿನಿಧಿಗಳಿಗೂ ನಡೆದ ಮಾತುಕತೆಗಳು ನಿಷ್ಫಲವಾಗಿ ಮುಷ್ಕರವು ಆರಂಭವಾಯಿತು. ಮುಷ್ಕರ ಹೂಡುವ ಮುಂಚೆಯೂ ಸಂಧಾನ ನಡೆದಿತ್ತು.

ಸೆಪ್ಟೆಂಬರಿನೊಳಗೆ ಪಿ. ಎಸ್. ಪಿ. ಉಮೇದುವಾರರ ಆಯ್ಕೆ

ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದವರ ನಿರ್ಧಾರ

ಮೈಸೂರು ೩

ಸಂಸ್ಥಾನದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಮತ್ತು ನೆನ್ನೆ ತುಮಕೂರಿನಲ್ಲಿ ಸೇರಿತ್ತು. ಶ್ರೀ ಬಿ. ಹುಚ್ಚೇಗೌಡರು ಅಧ್ಯಕ್ಷತೆ ವಹಿಸಿದ್ದರು. ಪಕ್ಷದ ಪರವಾಗಿ ಬರುವ ಸೆಪ್ಟೆಂಬರ್ ೩೦ರೊಳಗೆ ಮಹಾ ಚುನಾವಣಾ ಉಮೇದುವಾರರನ್ನು ಆರಿಸಬೇಕೆಂದು ಗೊತ್ತುಪಡಿಸಲಾಯಿತು. ಪಕ್ಷಕ್ಕೂ, ಜನಸಮುದಾಯಕ್ಕೂ ಉತ್ತಮವಾದ ಸೇವೆ ಸಲ್ಲಿಸಿದವರಿಗೆ ಮಾತ್ರ ಉಮೇದುವಾರಿಕೆಯನ್ನು ಕೊಡುವ ಮತ್ತು ಎಷ್ಟು ಸಾಧ್ಯವೋ ಅಷ್ಟು ಸ್ಥಾನಗಳಿಗೆ ಮಾತ್ರ ಸ್ಪರ್ಧೆ ನಡೆಸುವ ತತ್ವವನ್ನು ಅಂಗೀಕರಿಸಲಾಯಿತು.

ಪಕ್ಷದ ಪರವಾಗಿ ಪ್ರಣಾಳಿಕೆಯೊಂದನ್ನು ರಚಿಸಲು ಶ್ರೀಗಳಾದ ಜೆ. ಮಹಮದ್ ಇಮಾಮ್, ಎ. ಹುಚ್ಚೇಗೌಡ ಎಂ. ಎಸ್. ಗುರುಪಾದಸ್ವಾಮಿ ಮತ್ತು ವೇದಾಂತ ಹೆಮ್ಮಿಗೆಯವರನ್ನೊಳಗೊಂಡ ಸಮಿತಿಯೊಂದನ್ನು ರಚಿಸಲಾಯಿತು. ಆಯ್ಕೆಯಾದ ಉಮೇದುವಾರರ ಸಭೆಯು ಅಕ್ಟೋಬರ್ ೨ರಂದು ಸೇರಲಿದೆ.

ರೈಲ್ವೆ ಕೆಲಸಗಾರರ ಸಭೆ

ಮೊನ್ನೆ ಮೈಸೂರು ನಗರದಲ್ಲಿ ರೈಲ್ವೆ ವರ್ಕ್‌ಷಾಪಿನ ನೌಕರರ ಬಹಿರಂಗ ಸಭೆಯು ನಡೆಯಿತು. ರೈಲು ನೌಕರರುಗಳ ಸಂಘದ ಪ್ರಾದೇಶಿಕ ಕಾರ್ಯದರ್ಶಿ ಶ್ರೀ ಪಿ. ಶ್ರೀರಾಮಮೂರ್ತಿಯವರು ಭಾಷಣ ಮಾಡಿ, ರಾಷ್ಟ್ರೀಯ ಸಂಘದ ನಡವಳಿಕೆಗಳನ್ನೂ, ನೌಕರರ ಕುಂದುಕೊರತೆಗಳನ್ನೂ ವಿವರಿಸಿದರು. ವರ್ಕ್‌ಷಾಪಿನ ಅಸಿಸ್ಟೆಂಟ್ ಪರ್ಸನಲ್ ಆಫೀಸರು ಕಾರ್ಮಿಕರ ಬಗ್ಗೆ ತೋರುತ್ತಿರುವ ವರ್ತನೆಯನ್ನು ಖಂಡಿಸಲಾಯಿತು.

ಗೋಕರ್ಣ ಸ್ವಾಮಿಗಳವರ ಪ್ರಯಾಣ

ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಸ್ವಾಮಿಗಳವರು ನೆನ್ನೆ ನಗರದಿಂದ [illegible] ಪ್ರಯಾಣ ಮಾಡಿದರು. ಶ್ರೀಗಳವರ ಕೆ. ಪಿ. ಪುರಾಣಿಕರೂ, ಬಿ. ಅನ್ನಾಜಿರಾಯರೂ ಶ್ರೀ ಶ್ರೀಗಳವರ ಬಗ್ಗೆ ಪ್ರಶಂಸಾ ಭಾಷಣ ಮಾಡಿದರು. ಜನರು ಸದಾಚಾರ ಸಂಪನ್ನರಾಗುವಂತೆ ಶ್ರೀ ಶ್ರೀಗಳವರು ಉಪದೇಶ ಮಾಡಿದರು.

ಸಂಸ್ಥಾನದಲ್ಲಿ ೧೦ ಸಾವಿರ ಎಕರೆ ಭೂಮಿಯ ದಾನ

ಭೂದಾನ ಚಳುವಳಿಯಾಗಿ ೩ ವರ್ಷಗಳಿಂದ ಇದುವರೆಗೆ ಸಂಸ್ಥಾನದಲ್ಲಿ ೧೦ ಸಾವಿರ ಎಕರೆ ಭೂಮಿಯೂ, ಪ್ರತಿ ವರ್ಷವೂ ೩ ಸಾವಿರ ರೂ. ಸಂಪತ್ತಿ ದಾನವೂ ಬಂದಿರುವುದಾಗಿ ವರದಿಯಾಗಿದೆ. ಬೆಂಗಳೂರಿಗೆ ಬಂದಿರುವ ಭೂದಾನ ಪಾದಯಾತ್ರಿಕರು ೪೮ ಗಂಟೆಗಳಲ್ಲಿ ೭೫ ಎಕರೆ ದಾನವನ್ನು ಪಡೆದಿರುತ್ತಾರೆ. ೩೩ ಮಂದಿ ಸಂಪತ್ತಿ ದಾನ ನಿಯತವಾಗಿ ಕೊಡುವುದಾಗಿ ತಿಳಿಸಿರುತ್ತಾರೆ. ಪಾದಯಾತ್ರಿಕರು ಇದುವರೆಗೆ ೧,೩೧೧ ಎಕರೆ ದಾನವನ್ನು ಪಡೆದಿರುವರು. ೧೪೫ ಹಳ್ಳಿಗಳಲ್ಲಿ ಸಭೆ ನಡೆಸಿರುವರು.

ವಿಧಾನ ಸೌಧದ ಬಗ್ಗೆ ವೆಚ್ಚದ ತನಿಖೆ ಸಮಿತಿ

ಭಾರತ ಸರ್ಕಾರ ಮತ್ತು ಹೈಕಮಾಂಡಿನ ಸೂಚನೆ

ಬೆಂಗಳೂರು ೩

ವಿಧಾನ ಸೌಧ ಕಟ್ಟಡದ ನಿರ್ಮಾಣಕ್ಕಾಗಿ ತಗಲಿರುವ ವೆಚ್ಚದ ಬಗ್ಗೆ ತನಿಖೆ ನಡೆಸುವಂತೆ ಭಾರತ ಸರ್ಕಾರ ಮತ್ತು ಕಾಂಗ್ರೆಸ್ ಹೈಕಮಾಂಡಿನವರು ಮೈಸೂರು ಮಂತ್ರಿಮಂಡಲಕ್ಕೆ ಸೂಚಿಸಿರುವರೆಂದೂ, ಅದರಂತೆ ಸರ್ಕಾರದವರು ಸಧ್ಯದಲ್ಲೇ ಸಮಿತಿಯೊಂದನ್ನು ರಚಿಸಲಿರುವರೆಂದೂ ವರದಿಯಾಗಿದೆ.

ಅಮೆರಿಕದ ವಿಮಾನಗಳ ಡಿಕ್ಕಿಯಿಂದ ೧೨೮ ಜನರ ಮರಣ

ಅಮೆರಿಕದ ಅರಿಜೋನಾ ಸಂಸ್ಥಾನದ ಗ್ರಾಂಡ್ ಕಾನ್ಯಾನ್ ಎಂಬಲ್ಲಿ ಮೊನ್ನೆ ೨ ಸರ್ವೀಸ್ ವಿಮಾನಗಳಿಗೆ ಡಿಕ್ಕಿಯಾಗಿ, ೧೨೮ ಜನರು ಮೃತಪಟ್ಟರೆಂದು ವರದಿಯಾಗಿದೆ. ದಟ್ಟವಾದ ಮೋಡಗಳ ನಡುವೆ ಎರಡು ವಿಮಾನಗಳಿಗೂ ಡಿಕ್ಕಿಯಾಯಿತೆಂದು ಹೇಳಲಾಗಿದೆ. ಅಪಘಾತವಾದ ನಂತರ ಆ ವಿಮಾನಗಳು ಹೊತ್ತಿ ಉರಿದುವೆಂದೂ, ಯಾರೂ ಬದುಕಿ ಉಳಿದಿಲ್ಲವೆಂದೂ ಗೊತ್ತಾಗಿದೆ. ಸರ್ವೀಸ್ ಹಾರಾಟದ ವಿಮಾನ ಅಪಘಾತದಲ್ಲಿ ಇದು ಅತ್ಯಂತ ಪ್ರಮಾದವೆಂದು ಹೇಳಲಾಗಿದೆ.

ಕಸ್ತೂರಿಬಾ ಸಮಿತಿಯ ಪ್ರಥಮ ಅಧ್ಯಕ್ಷಿಣಿ

ದಿವಂಗತ ಜಿ. ವಿ. ಮಾವಳಂಕರರ ಸ್ಥಾನದಲ್ಲಿ ಕಸ್ತೂರಿಬಾ ಗಾಂಧಿಯವರ ಸ್ಮಾರಕ ನಿಧಿ ಸಮಿತಿಯ ಅಧ್ಯಕ್ಷರಾಗಿ ಶ್ರೀಮತಿ ಪ್ರೇಮಲೀಲಾ ವಿಠಲದಾಸ್ ಥ್ಯಾಕರ್ಸೆಯವರನ್ನು ಚುನಾಯಿಸಲಾಗಿದೆ. ಸಮಿತಿಯ ಅಧ್ಯಕ್ಷತೆಗೆ ಮಹಿಳೆಯನ್ನು ಆರಿಸಲ್ಪಟ್ಟಿರುವುದು ಇದೇ ಮೊದಲು. ಕಳೆದ ೭ ವರ್ಷಗಳಿಂದಲೂ ಅವರು ಉಪಾಧ್ಯಕ್ಷಿಣಿಯಾಗಿದ್ದರು. ಆ ಸ್ಥಾನಕ್ಕೆ ಶ್ರೀಮತಿ ರಾಮೇಶ್ವರಿ ನೆಹರೂರವರನ್ನು ಆರಿಸಲಾಗಿದೆ.

ಮಲ್ಲಾಡಿಹಳ್ಳಿ ಆಶ್ರಮಕ್ಕೆ ೧೦ ಸಾವಿರ ರೂ.

ಮಲ್ಲಾಡಿಹಳ್ಳಿಯ ಅನಂತ ಸೇವಾಶ್ರಮದ ವಿದ್ಯಾರ್ಥಿ ನಿಲಯದ ಶಂಕು ಸ್ಥಾಪನೆಯನ್ನು ನೆರವೇರಿಸುತ್ತಾ, ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಆಶ್ರಮಕ್ಕೆ ೧೦ ಸಾವಿರ ರೂ ಗ್ರಾಂಟು ಕೊಡುವುದಾಗಿ ತಿಳಿಸಿರುತ್ತಾರೆ.

ಕನ್ನಂಬಾಡಿ ನೀರಿನ ಮಟ್ಟ

ಕೃಷ್ಣರಾಜಸಾಗರದಲ್ಲಿ ಈ ದಿನ ನೀರಿನ ಮಟ್ಟವು ೧೦೫ ಅಡಿಗಳಿಗೆ ಏರಿದೆ.

ಕಳೆದ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ ಪಕ್ಷದ ವಿರುದ್ಧವಾಗಿ ಸ್ಪರ್ಧಿಸಿದ್ದವರಿಗೆ ಕಾಂಗ್ರೆಸ್ ಉಮೇದುವಾರಿಕೆಯನ್ನು ಕೊಡಲಾಗುವುದಿಲ್ಲವೆಂದು ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಸೂಚಿಸಿರುತ್ತಾರೆ. ಉಮೇದುವಾರರ ಆಯ್ಕೆ ಬಗ್ಗೆ ನಿಯಮಗಳ ಉಲ್ಲಂಘನೆ ಮಾಡಬಾರದೆಂದೂ ಅವರು ಹೇಳಿರುವರು.

ಇನ್ನೂ ೫ ವರ್ಷ ಆಡಳಿತ ನಡೆಸಲು ಒರಿಸ್ಸಾ ಮುಖ್ಯ ಮಂತ್ರಿಗೆ ಕರೆ

ಉತ್ಕಲ ಪ್ರದೇಶ ಕಾಂಗ್ರೆಸ್ ಕಾರ್ಯಕಾರೀ ಸಮಿತಿಯ ಒತ್ತಾಯ

ಉತ್ಕಲ ಪ್ರದೇಶದ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸಭೆ ಸೇರಿ, ಮುಂದಿನ ಚುನಾವಣೆ ಗಳನಂತರ ಬರುವ ೫ ವರ್ಷಗಳವರೆಗೂ ಆಡಳಿತವನ್ನು ನಡೆಸುವಂತೆ ಒರಿಸ್ಸಾ ಮುಖ್ಯ ಮಂತ್ರಿ ನವಕೃಷ್ಣ ಚೌಧುರಿಯವರನ್ನು ಪ್ರಾರ್ಥಿಸಿರುತ್ತದೆ. ಈಗಿನ ಪರಿಸ್ಥಿತಿಯಲ್ಲಿ ಅವರೇ ಚುನಾವಣೆಗಳನ್ನು ಯಶಸ್ವಿಯಾಗಿ ನಡೆಸಿ, ಆಡಳಿತವನ್ನು ನಿರ್ವಹಿಸಲು ತಕ್ಕವರಾಗಿರುವರೆಂದು ಸಮಿತಿಯು ಭಾವಿಸಿದೆ. ಹೊಸ ಚುನಾವಣೆಗಳಲ್ಲಿ ತಾವು ಸ್ಪರ್ಧಿಸುವುದಿಲ್ಲವೆಂದು ಅವರು ಹೇಳಿದ್ದರು.

ಲಾರಿಯು ಮನೆ ನುಗ್ಗಿ ೬ ಮಕ್ಕಳ ಮರಣ

ಉತ್ತರ ಪ್ರದೇಶದ ಬಹಾರ್ ಎಂಬಲ್ಲಿ ಕಳೆದ ೨೬ನೇ ತಾರೀಕು ಲಾರಿಯೊಂದು ಒಂದು ಮನೆಗೆ ನುಗ್ಗಿ ಹಿತ್ತಲಿಗೆ ಹೋಗಿ ನಿಂತಿತೆಂದೂ, ಅಲ್ಲಿ ಆಟವಾಡುತ್ತಿದ್ದ ೬ ಮಕ್ಕಳು ಮತ್ತು ಒಬ್ಬ ಮಹಿಳೆ ಮೇಲೆ ಅದು ಹರಿದುದರಿಂದ ಅವರುಗಳು ಮಡಿದರೆಂದೂ ಇತರ ಮೂವರಿಗೆ ಗಾಯಗಳಾದುವೆಂದೂ ವರದಿಯಾಗಿದೆ.

ಮದ್ರಾಸ್ ವಿಶ್ವವಿದ್ಯಾಲಯಕ್ಕೆ ಡಾ|| ಎಂ. ಹೆಚ್. ಗೋಪಾಲ್

ಇಲ್ಲಿನ ಮಹಾರಾಜಾ ಕಾಲೇಜಿನ ಅರ್ಥಶಾಸ್ತ್ರ ಪ್ರೊಫೆಸರ್ ಡಾ|| ಎಂ. ಹೆಚ್. ಗೋಪಾಲರವರು ಫೋರ್ಡ್ ಸಂಸ್ಥೆಯ ಯೋಜನೆ ಅಂಗವಾಗಿ ಮದ್ರಾಸಿನ ವಿಶ್ವವಿದ್ಯಾಲಯದ ಅರ್ಥಶಾಸ್ತ್ರ ಪ್ರೊಫೆಸರಾಗಿ ನೇಮಕವಾಗಿರುವರೆಂದೂ, ಅವರಿಗೆ ೧೨೦೦ ರೂ. ಸಂಬಳವನ್ನು ಗೊತ್ತು ಮಾಡಲಾಗಿದೆಯೆಂದೂ ವರದಿಯಾಗಿದೆ.

ಮೈಸೂರು ಮೃಗಾಲಯಕ್ಕೆ ಅಸ್ಸಾಮಿನ ಖಡ್ಗಮೃಗ

ಅಸ್ಸಾಮಿನ ಖಡ್ಗಮೃಗವೊಂದನ್ನು ನಗರದಲ್ಲಿರುವ ಮೃಗಾಲಯಕ್ಕೆ ಕರೆತಂದು ಇಡಲಾಗಿದೆ.

ಜಲಪುರಿ ಬಾಲಕರ ಪ್ರಾಥಮಿಕ ಶಾಲೆಯಲ್ಲಿ ಉಪಾಧ್ಯಾಯರಿಲ್ಲದ ಕೊರತೆ

ರಾಜಧಾನಿಯ ಜಲಪುರಿಯಲ್ಲಿರುವ ಬಾಲಕರ ಪ್ರಾಥಮಿಕ ಶಾಲೆಯಲ್ಲಿ ೧೭೦ ಮಂದಿ ಬಾಲಕರು ಇದ್ದರೂ, ಕಳೆದ ೧ ವರ್ಷದ ಅಂಗಾಯಿತು ಇಬ್ಬರು ಉಪಾಧ್ಯಾಯರುಗಳು ಮಾತ್ರ ಇರುವರು. ಅವರ ಪೈಕಿ ಯಾರಾದರೊಬ್ಬರು ರಜಾ ಪಡೆದರೆ ಬೇರೊಬ್ಬರನ್ನು ನೇಮಿಸುವುದಿಲ್ಲ. ಇದರಿಂದ ವಿದ್ಯಾರ್ಥಿಗಳು ಎಷ್ಟೋ ದಿನಗಳವರೆಗೆ ಪಾಠ ಪ್ರವಚನಗಳಿಲ್ಲದೆ ವ್ಯರ್ಥ ಕಾಲ ಕಳೆಯುವುದು. ಕೆಲವು ಸಂದರ್ಭಗಳಲ್ಲಿ ೩ ತರಗತಿಗಳಿಗೂ ಒಬ್ಬರೇ ಉಪಾಧ್ಯಾಯರಾಗಿರುತ್ತಾರೆ. ಇದನ್ನು ಇದುವರೆಗೆ ಸರಿಯಾಗಿ ಅಧಿಕಾರಿಗಳ ಗಮನಕ್ಕೆ ತಂದಿರುವುದಿಲ್ಲ. ಕೂಡಲೇ ಈ ವಿಷಯವನ್ನು ಪರಿಶೀಲಿಸಿ ಶಾಲೆಗೆ ಇನ್ನಿಬ್ಬರು ಉಪಾಧ್ಯಾಯರನ್ನು ಕಳುಹಿಸಿಕೊಡಬೇಕೆಂದು ಬಡಾವಣೆ ಜಲಪುರಿಯ ನಿವಾಸಿ ಶ್ರೀ ಎಂ. ಶಿವಣ್ಣನವರು ಕೋರಿರುತ್ತಾರೆ.

ಸಂಗೀತ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣದ ಅಂಗವಾಗಿ ೯ ನೇ ರಾತ್ರಿ ಶಿವಪುರದ ಶ್ರೀ ಎಸ್. ನಾಗೇಶ್ವರರವರಿಂದಲೂ, ದೇವಸ್ಥಾನದಲ್ಲಿ ಶ್ರೀಮತಿ ವಿ. ಮಂಜುಳ ಮತ್ತು ಶ್ರೀಮತಿ ಪದ್ಮರವರಿಂದಲೂ ಸಂಗೀತವು ನಡೆಯಲಿದೆ.

ಬೆಂಗಳೂರು ಆಕಾಶವಾಣಿಯ ನಾಳೆ ಕಾರ್ಯಕ್ರಮ

[illegible]

ಮೈಸೂರು ಸಾರ್ವಜನಿಕ ವಿದ್ಯಾರ್ಥಿ ನಿಲಯ

ಮಹಾಜನರಲ್ಲಿ ಮನವಿ

ಸಾರ್ವಜನಿಕ ವಿದ್ಯಾರ್ಥಿ ನಿಲಯದ ಕಾರ್ಯದರ್ಶಿ ಶ್ರೀ ಬಿ. ಸಿ. ಚಂದ್ರಶೇಖರಯ್ಯನವರು ಈ ರೀತಿ ಬಿನ್ನವಿಸಿರುತ್ತಾರೆ:—

ಐವತ್ತು ವರ್ಷಗಳ ಹಿಂದೆ ಮೈಸೂರು ನಗರದಲ್ಲಿ ಸಾರ್ವಜನಿಕ ವಿದ್ಯಾರ್ಥಿ ನಿಲಯವು ಕಾಯಮಾಗಿ, ಜಾತಿ ಮತ ಭೇದವಿಲ್ಲದೆ ಸರ್ವರಿಗೂ ಅನ್ನ ವಸತಿ ಜ್ಞಾನ ದಾನ ಮಾಡುವ ಪುಣ್ಯ ಕ್ಷೇತ್ರವಾಗಿದೆ. ಈ ನಿಲಯವು ೧೯೦೬ನೇ ಆಗಸ್ಟ್ ತಿಂಗಳಲ್ಲಿ ಹತ್ತು ವಿದ್ಯಾರ್ಥಿಗಳೊಡನೆ ಸ್ಥಾಪಿಸಲ್ಪಟ್ಟಿತು. ಅಂದಿನಿಂದ ಇದುವರೆಗೆ ಸಾವಿರಾರು ವಿದ್ಯಾರ್ಥಿಗಳು ಜ್ಞಾನ ಪಡೆದು ಹೋಗಿರುವರು. ಇದು ವಿದ್ಯಾರ್ಥಿಗಳ ಜ್ಞಾನಸಂಪಾದನೆಗೆ ನೆರವಾಗಿದೆ. ಅನೇಕ ದಾನಿಗಳ ಉದಾರ ಧನ ಸಹಾಯ, ಸರ್ಕಾರ ಮತ್ತು ಜಿಲ್ಲಾ ಬೋರ್ಡುಗಳ ನೆರವಿನಿಂದ ಈ ನಿಲಯವು ೫೦ ಸಾವಿರ ರೂ. ಬೆಲೆಯ ಸ್ವಂತ ಕಟ್ಟಡವನ್ನು ಪಡೆದಿದೆ. ಇದರ ಅಭಿವೃದ್ಧಿಗೆ ಶ್ರೀ ಜಿ. ಪಿ. ರಾಜರತ್ನಂ ಮುಂತಾದ ಹಿರಿಯರುಗಳು ಬಹಳವಾಗಿ ಸೇವೆ ಸಲ್ಲಿಸಿದರು.

ಪ್ರಸ್ತುತ ೧೯೫೦ನೇ ಇಸವಿಯಿಂದ ಈಚೆಗೆ ಸರ್ಕಾರದ ಶ್ರೀ ಕಾಶೀಕಂಠ ಕಲ್ಲೂರರವರು ಈ ನಿಲಯವನ್ನು ಬೇಟಿ ಕೊಟ್ಟು ನೋಡಿ ಈ ನಿಲಯವು ಒಂದು ಸ್ತುತ್ಯರ್ಹ ಕಾರ್ಯ ಮಾಡುತ್ತಿದೆ ಎಂದು ಬರೆದಿರುವರು. ನಿಲಯವು ಸರ್ಕಾರ, ರಾಜ್ಯ ಹಾಗೂ ಪರ ದೇಶದ ಗಣ್ಯರಿಂದ ಪ್ರಶಂಸಿಸಲ್ಪಟ್ಟಿದೆ.

ಇಂತಹ ಆದರ್ಶ ನಿಲಯವನ್ನು ಸ್ಥಾಪಿಸಿದವರು ಶ್ರೀ ಬಿ. ಎಸ್. ಸುಬ್ಬಣ್ಣನವರು. ಅವರು ಅತ್ಯಂತ ದಯಾಮಯರು. ಬಡತನದ ಬೇಗೆಯಲ್ಲಿ ಬೆಂದು, ನೊಂದವರು. ಅವರು ತಮ್ಮ ಸರ್ವಸ್ವವನ್ನು ತ್ಯಾಗ ಮಾಡಿ, ನಿಸ್ವಾರ್ಥ ಜೀವನದ ಗುರಿಯಾಗಿ ಒಳ್ಳೆ ಕಾರ್ಯ ಸಾಧಕರು. ಕಳೆದ ೫೦ ವರ್ಷಗಳಿಂದಲೂ ಹಳ್ಳಿ ಹಳ್ಳಿಗೆ ಹೋಗಿ ಹಣಗಳಿಸಿ, ಮನೆ ಮನೆಗೆ ಹೋಗಿ ಭಿಕ್ಷೆ ಮಾಡಿ, ಬಹು ಕಷ್ಟದಿಂದ ನಿಲಯವನ್ನು ನಡೆಸುತ್ತಿರುವರು.

ನಿಲಯದ ನಿಜವಾದ ಆಸ್ತಿಯೆಂದರೆ ಮಹಾಜನರೇ. ಇದಲ್ಲದೆ ನಿಲಯಕ್ಕೆ ಬೇರೆ ಯಾವ ಸ್ಥಿರ ಆಸ್ತಿಯೂ ಇಲ್ಲ. ಈ ನಿಲಯಕ್ಕೆ ನೇರವು ಏತತ್ಸರ್ವವೊಂದೇ ಮುಖ್ಯಾಧಾರ. ಬಡ ವಿದ್ಯಾರ್ಥಿಗಳಿಗೆ ಬಟ್ಟೆ, ಪುಸ್ತಕ, ಫೀಜನ್ನೂ ಸಹ ಕೊಡಲಾಗುತ್ತಿದೆ. ಈ ನಿಲಯಕ್ಕೆ ಐವತ್ತು ವಿದ್ಯಾರ್ಥಿಗಳಿಗೆ ಆಶ್ರಯವನ್ನಿತ್ತಿದೆ. ಎಲ್ಲಾ ಶಾಲಾ ಕಾಲೇಜುಗಳ, ಜಾತಿಮತಗಳ ಹಾಗೂ ವಿವಿಧ ಪ್ರಾಂತ್ಯಗಳ ವಿದ್ಯಾರ್ಥಿಗಳಿರುತ್ತಾರೆ. ವಿದ್ಯಾರ್ಥಿಗಳ ಮಾನಸಿಕ, ಬೌದ್ಧಿಕ ಹಾಗೂ ದೇಹ ಬೆಳವಣಿಗೆಯ ಶಿಕ್ಷಣವನ್ನು ಕೂಡ ಇಲ್ಲಿ ಕೊಡಲಾಗುತ್ತಿದೆ.

ಎಳೆಯ ಮನಸ್ಸಿನಲ್ಲಿ ಸಂಯುಕ್ತ ಭಾವನೆಗಳನ್ನು ಬೆಳಗಾಗುವಂತೆ ಮಾಡುವುದು ಸುಲಭ. ಇಂತಹ ನಿಲಯಗಳಲ್ಲಿ ವಿದ್ಯಾರ್ಥಿಗಳೆಲ್ಲರೂ ಒಟ್ಟಿಗೆ ಇದ್ದು ಊಟ ಉಪಚಾರ ಮಾಡುವುದರಿಂದ ಸಹೋದರ ಭಾವನೆ, ಸಹಕಾರ ಪ್ರವೃತ್ತಿ ಬೆಳೆಯಲು ಎಲ್ಲ ಸನ್ನಿವೇಶಗಳನ್ನು ಕಲ್ಪಿಸಿಕೊಟ್ಟಂತಾಗುವುದು.

ಆದರೆ ಹಣದ ಕೊರತೆ. ಈ ನಿಲಯದ ಕಟ್ಟಡ ಇನ್ನೂ ಪೂರ್ತಿಯಾಗಿಲ್ಲ. ಪೂರ್ತಿಯಾಗಲು ಇನ್ನೂ ೫೦ ಸಾವಿರ ರೂಪಾಯಿಗಳು ಬೇಕಾಗಿವೆ. ಈ ಹಣವನ್ನು ಸರ್ಕಾರ ಹಾಗೂ ಮಹಾಜನರು ಮುಂದೆ ಬಂದು ಉದಾರ ಸಹಾಯ ಮಾಡುವುದು ಪವಿತ್ರ ಕರ್ತವ್ಯವಾಗಿದೆ. ಅಲ್ಲದೆ ಈ ನಿಲಯಕ್ಕೆ ಸ್ಥಿರವಾದ ಭೂಮಿಯನ್ನು ಸರ್ಕಾರ ಕೊಡಲಿ. ಇತ್ತ ಇದು ಸಾರ್ವಜನಿಕ ಸಂಸ್ಥೆಯಾಗಿ ನಡೆಯುವುದರಿಂದ ಸರ್ವ ಸಹಾಯವನ್ನೂ ನೀಡುವುದು ಪರಮ ಪುಣ್ಯದ ಕಾರ್ಯವಾಗಿದೆ.

ಜಲಜನಕ ಬಾಂಬು ಧಾಳಿಯಿಂದ ಕೋಟ್ಯಾಂತರ ಜನರ ಮರಣ

ಅಮೆರಿಕದ ಪ್ರಧಾನ ಸೈನ್ಯಾಧಿಕಾರಿಯೊಬ್ಬರ ಹೇಳಿಕೆ

ಅಮೆರಿಕದ ಸೈನ್ಯದ ಸಂಶೋಧನೆ ಮತ್ತು ಅಭಿವೃದ್ಧಿ ಶಾಖೆಯ ಪ್ರಧಾನಾಧಿಕಾರಿಗಳಾದ ಲೆ|| ಜನರಲ್ ಜೇಮ್ಸ್ ಗೇವಿನ್‌ರವರು ಇಲ್ಲಿನ ಸೆನೆಟ್ ಸಮಿತಿ ಸಭೆಯಲ್ಲಿ ಮಾತನಾಡಿ, ರಷ್ಯದ ಮೇಲೆ ಅಮೆರಿಕ ಪೂರ್ಣ ಪ್ರಮಾಣದ ಜಲಜನಕ ಬಾಂಬು ಧಾಳಿಯನ್ನು ನಡೆಸಿದರೆ ಅನೇಕ ಕೋಟಿ ಜನರು ಸಾಯುವರೆಂದು ತಿಳಿಸಿರುತ್ತಾರೆ. ದಕ್ಷಿಣ ಪೂರ್ವ ಧಾಳಿ ಮಾಡಿದರೆ ಮಿತ್ರ ರಾಷ್ಟ್ರಗಳ ಪ್ರಜೆಗಳೂ ನಾಶವಾಗುವರೆಂದು ಅವರು ಹೇಳಿ, ಗಾಳಿಯು ಎತ್ತ ಕಡೆಗೆ ಬೀಸುತ್ತದೆ ಎನ್ನುವುದರ ಮೇಲೆ ಸಾವು ನೋವುಗಳ ಪ್ರಮಾಣವು ಹೆಚ್ಚುವುದು. ಗಾಳಿಯು ಆಗ್ನೇಯದ ಕಡೆ ಬೀಸಿದರೆ ಜಪಾನ್, ಫಿಲಿಪೈನ್ ಮುಂತಾದ ದೇಶಗಳ ಜನರು ಮತ್ತು ಪಶ್ಚಿಮದ ಕಡೆ ಬೀಸಿದರೆ ಪಶ್ಚಿಮ ಯೂರೋಪಿನ ಕಡೆಗಿನ ಜನರು ಸಾವಿಗೀಡಾಗುವರೆಂದು ಅವರು ಹೇಳಿರುವರು.

Edited Printed and Published by
R. Nagarajan at Sadhvi Press
Subbiah Road, Mysore

ಸಂಸ್ಥಾನದ ಎನ್.ಜಿ.ಓ. ಪ್ರತಿನಿಧಿಗಳ ಸಮ್ಮೇಳನ

ಬರುವ ತಿಂಗಳು ಬೆಂಗಳೂರು ಜಿಲ್ಲೆಯ ನೆಲಮಂಗಲದಲ್ಲಿ ಮೈಸೂರು ಸಂಸ್ಥಾನದ ನಾನ್ ಗೆಜೆಟೆಡ್ ನೌಕರರ ಪ್ರತಿನಿಧಿಗಳ ಸಮ್ಮೇಳನವು ನಡೆಯುವಂತೆ ಗೊತ್ತುಪಡಿಸಲಾಗಿದೆ. ನೌಕರರ ಸಂಬಳಗಳಿಗೆ ಮತ್ತು ಸೌಲಭ್ಯಗಳ ವಿಚಾರವಾಗಿ ಚರ್ಚೆಗಳು ನಡೆಯುವುವು. ನೂತನ ಮೈಸೂರಿನಲ್ಲಿ ಸಂಬಳದ ವ್ಯತ್ಯಾಸದ ವಿಷಯವನ್ನೂ ಪರಿಶೀಲಿಸಲಾಗುವುದು. ಪ್ರತಿ ತಾಲ್ಲೂಕಿನಿಂದಲೂ ಮೂವರು ಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಕಳುಹಿಸಬೇಕೆಂದೂ, ಅವರಿಗೆ ಉಚಿತ ಭೋಜನ ಮತ್ತು ವಸತಿ ಸೌಕರ್ಯ ಏರ್ಪಡಿಸಲಾಗುವುದೆಂದೂ ಸಮ್ಮೇಳನದ ಸ್ವಾಗತ ಸಮಿತಿಯ ಕಾರ್ಯದರ್ಶಿ ಶ್ರೀ ಸಿ. ಮುನಿಯಪ್ಪನವರು ತಿಳಿಸಿರುತ್ತಾರೆ. ಸಮ್ಮೇಳನಕ್ಕೆ ಆಗಮಿಸುವ ಪ್ರತಿನಿಧಿಗಳ ಹೆಸರುಗಳನ್ನು ತಿಳಿಸಬೇಕೆಂದು ನೌಕರರನ್ನು ಕೋರಲಾಗಿದೆ.

ಒಪ್ಪಲೆಂಡಿನ ಪೋಜ್ನಾನ್ ನಗರದಲ್ಲಿ ಆಹಾರದ ದಂಗೆ ನಡೆಸಿದ ಜನರ ಮೇಲೆ ಪೋಲೀಸರ ಗುಂಡಿನೇಟಿನಿಂದ ಮೃತಪಟ್ಟವರ ಸಂಖ್ಯೆ ೩೦ ಜನರೆಂದು ವರದಿಯಾಗಿದೆ. ೩೦ ಜನರು ಮಡಿದು, ೩೦೦ ಮಂದಿಗೆ ಗಾಯವಾಗಿದೆಯೆಂದು ವಾರ್ಸಾ ನಗರದ ವರದಿಯು ಮುಂದೆ ತಿಳಿಸುತ್ತದೆ.

ಪತ್ರಿಕೋದ್ಯಮಿಯ ಕೊಲೆಗಾಗಿ ಇಂಜನಿಯರನ ಬಂಧನ

ಹೋದ ವಾರ ಬೆಂಗಳೂರಿನ ಪತ್ರಿಕೋದ್ಯಮಿ ಮತ್ತು ಅಲ್ಲಿನ ಕಾರ್ಪೊರೇಷನ್ ಸದಸ್ಯ ಬಿ. ಎಸ್. ನಾರಾಯಣರವರ ಕೊಲೆ ಸಂಬಂಧವಾಗಿ ಆ ಕ್ಷೇತ್ರದ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿಯ ಇಂಜನಿಯರರ ಮತ್ತು ಇತರ ಮಂದಿಯನ್ನು ಬಂಧಿಸಲಾಗಿದೆ. ಪತ್ರಿಕೋದ್ಯಮಿಯು ಇಂಜನಿಯರರ ಕಛೇರಿ ಮುಂಭಾಗದಲ್ಲಿ ಕಪ್ಪು ಬಾವುಟ ಪ್ರದರ್ಶನದ ವ್ಯವಸ್ಥೆ ಮಾಡಿದಾಗ, ಅವರನ್ನು ಅವರ ಕಡೆಯವರು ಬಡಿ ಮತ್ತು ಭರ್ಜಿಗಳಿಂದ ಹೊಡೆದು ಕೊಂದುದಾಗಿ ಹೇಳಲಾಗಿದೆ.

ನಂಜನಗೂಡಿನ ದೇವಸ್ಥಾನದಲ್ಲಿ ಮುಗ್ಗಲು ಅಕ್ಕಿ ಸರಬರಾಜು

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರಸ್ವಾಮಿ ದೇವಸ್ಥಾನಕ್ಕೆ ವರ್ಷವೊಂದಕ್ಕೆ ೩,೦೦೦ ಪಲ್ಲ ಭತ್ತ ಬರುತ್ತದೆ. ದೇವಸ್ಥಾನದಲ್ಲಿ ನೈವೇದ್ಯಕ್ಕಾಗಿ ೨ ಹೊತ್ತಿಗೆ ಸುಮಾರು ೧ ಪಲ್ಲ ಅಕ್ಕಿಯ ಅನ್ನ ಮಾಡುತ್ತಾರೆ. ಅನ್ನವನ್ನು ದೇವಸ್ಥಾನದ ಅಂಗ ಜನಕ್ಕೆ ಮೇಲ್ಪಟ್ಟು ನೌಕರರು ಉಪಯೋಗಿಸುತ್ತಾರೆ. ಒಂದು ವರ್ಷದಿಂದಲೂ, ಪಾರುಗಾರ ಸಹ ಹಿಂದಿನಂತೆ ಮುಗ್ಗಲು ಅಕ್ಕಿಯನ್ನು ಕೊಡುತ್ತಿದ್ದಾರೆ. ಈ ವಿಚಾರವನ್ನು ಜಿಲ್ಲಾಧಿಕಾರಿಗಳು ಮತ್ತು ಸಂಬಂಧಪಟ್ಟ ಇತರ ಅಧಿಕಾರಿಗಳೂ ಪುರಜನರು ಅನೇಕ ಸಾರಿ ತಿಳಿಸಿದಾಗ್ಯೂ ಉಪಯೋಗವಾಗಿಲ್ಲ. ಈಗಲಾದರೂ ಅದನ್ನು ಸರಿಪಡಿಸುವ ವ್ಯವಸ್ಥೆ ಮಾಡುವುದು ಅಗತ್ಯ—ಎಂದು ಅಲ್ಲಿನ ನಿವಾಸಿಗಳೊಬ್ಬರು ತಿಳಿಸುತ್ತಾರೆ.

ಹಾಸಿಗೆ-ದಿಂಬು

ಬಿಸಿನೆಸ್ಸಿನಲ್ಲಿ ಪತ್ತೆ ಇರುವ ತಯಾರು ಮಾಡುತ್ತೇವೆ

ಬಾಪೂಸಾರ್ ಕಂಪೆನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

FOR SALE

Bungalow site about 1,500 sq yards—ideal for Bungalow Theatre or Hotel. Most centrally situated—facing "Pillar Light Circle in V V Mohalla" Mysore. Offers invited.

S GOPALAN,
Pandit's Buildings,
100 Feet Road,
MYSORE

SREE GAYATHRI TALKIES

TO DAY . LAST DAY

20,000 LEAGUES UNDER THE SEA

From 3-7-56 : For 3 Days

Superscope

BENGAZI

Starring:— Richard Conte, Mala Powers

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ಸಾಧನಗಳಿಂದ ಸಜ್ಜುಗೊಳಿಸಿ ಮಕ್ಕಳ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ. ತಾಯಿತಂದೆಗಳು ತಮ್ಮ ಮಕ್ಕಳನ್ನು ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ವಿಹಾರದ ವಸ್ತು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಡಿ. ಕೃಷ್ಣಮೂರ್ತಿ
ವ್ಯವಸ್ಥಾಪಕರು

ರಿಜಿಸ್ಟರ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೦೪] SADHVI : TUESDAY 3-7-1956 ಮೈಸೂರು : ಮಂಗಳವಾರ ೩-೭-೧೯೫೬ [ಸಂಚಿಕೆ : ೩೦೨

ನ್ಯೂಯಾರ್ಕ್ ಬಳಿ ಅಣು ಶಕ್ತಿ ಕೇಂದ್ರದಲ್ಲಿ ಆಸ್ಫೋಟನೆ

ವಿಧಾನ ಸೌಧದ ಬಗ್ಗೆ ತನಿಖೆಗೆ ಮೂವರ ಸಮಿತಿಯ ನೇಮಕ

ಬೆಂಗಳೂರು ೨

ವಿಧಾನ ಸೌಧದ ನಿರ್ಮಾಣವನ್ನು ಮಿತವ್ಯಯದಿಂದ ನಡೆಸಲಾಯಿತೇ ಇಲ್ಲವೇ—ಎಂಬ ಬಗ್ಗೆ ತನಿಖೆ ನಡೆಸಲು ಸಂಸ್ಥಾನ ಸರ್ಕಾರದವರು ನಾಗಪುರ ಹೈಕೋರ್ಟಿನ ನಿವೃತ್ತ ನ್ಯಾಯಾಧೀಶರಾದ ಶ್ರೀ ಬಿ. ಪಿ. ದೇವ್ ರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಿರುವರು. ಸರ್ಕಾರದ ನಿವೃತ್ತ ಹಣಕಾಸಿನ ಕಾರ್ಯದರ್ಶಿ ಶ್ರೀ ಬಿ. ಎಸ್. ರಾಘವೇಂದ್ರರಾಯರೂ, ನಿವೃತ್ತ ಚೀಫ್ ಇಂಜನಿಯರ್ ಶ್ರೀ ಎಂ. ನರಸಿಂಹಯ್ಯನವರೂ ಸಮಿತಿಯ ಸದಸ್ಯರಾಗಿರುವರು.

ಸೌಧದ ಆಕಾರ, ಉದ್ದೇಶ ಮತ್ತು ಕಟ್ಟಡ ವರಗಳನ್ನು ಗೊತ್ತುಪಡಿಸಿರುವ ವಿಧಾನ, ಮುಂದಾದುವನ್ನೂ, ಲೆಕ್ಕ ಮತ್ತು ಪರಿಸ್ಥಿತಿಯನ್ನೂ, ಮುಂದೆ ಮಿತವ್ಯಯ ನಡೆಸುವ ಅವಕಾಶವನ್ನೂ ಕುರಿತು ತನಿಖೆ ನಡೆಸಲಾಗುವುದು. ಅದನ್ನು ಜಾಗ್ರತೆ ಸಮಿತಿಯವರು ವರದಿಯನ್ನು ಒಪ್ಪಿಸುವಂತೆ ಕೋರಲಾಗಿದೆ.

ಸಂಸ್ಥಾನ ಶಾಸನಸಭೆಯ ಅಂದಾಜು ಸಮಿತಿ ಮತ್ತು ಸಾರ್ವಜನಿಕ ಸಮಿತಿಯವರು ಈ ಬಗ್ಗೆ ತನಿಖೆಯು ಅವಶ್ಯಕವೆಂದು ಸಲಹೆ ಮಾಡಿದ್ದರು.

ಹೈದರಾಬಾದಿನ ವಿಭಜನೆಗೆ ವಿರುದ್ಧವಾಗಿ ರಿಟ್ ಅರ್ಜಿ

ಹೈದರಾಬಾದಿನ ಹೈಕೋರ್ಟಿನಲ್ಲಿ ಬ್ಯಾರಿಸ್ಟರ್ ಶ್ರೀ ಶಿವರಾವ್ ಅವರು ಸಂಸ್ಥಾನದ ವಿಭಜನೆಯನ್ನು ಪ್ರತಿಭಟಿಸಿ ಹೂಡಿರುವ ರಿಟ್ ಅರ್ಜಿಯ ಪರಿಶೀಲನೆಯು ನೆನ್ನೆ ನಡೆಯಿತು. ಈ ವಿಷಯದ ಬ್ಯಾರಿಸ್ಟರು ತಮ್ಮ ಅರ್ಜಿ ಬಗ್ಗೆ ವಾದ ಮಾಡುತ್ತಾ, ಮೂರ್ಛೆ ಹೋದುದರಿಂದ ವಿಚಾರಣೆಯನ್ನು ನಾಳೆಗೆ ಮುಂದೂಡಲಾಯಿತು. ಹೈದರಾಬಾದು ರಾಜ್ಯಾಂಗಬದ್ಧವಾಗಿಯೂ, ಕಾನೂನು ದೃಷ್ಟಿಯಿಂದಲೂ ಭಾರತದಲ್ಲಿ ವಿಲೀನವಾಗಿಲ್ಲವೆಂದೂ ಅವರು ಹೇಳುವರು. ಈ ದಾವೆಯಲ್ಲಿ ಭಾರತದ ಪ್ರಧಾನಿ, ಉಪಾಧ್ಯಕ್ಷರು ಮತ್ತು ಸಂಬಂಧಪಟ್ಟ ಸಂಸ್ಥಾನಗಳ ಪ್ರತಿನಿಧಿಗಳು ಪ್ರತಿವಾದಿಗಳಾಗಿರುತ್ತಾರೆ.

ಮೆಕ್ಸಿಕೋವಿನಲ್ಲಿ ರೈಲು ಅಪಘಾತದಿಂದ ೧೫ ಮರಣ

ಮೆಕ್ಸಿಕೋ ರಾಜಧಾನಿಗೆ ೧೮೦ ಮೈಲಿ ದೂರದಲ್ಲಿ ಒಂದು ಕಡೆ ಭಾರಿ ಮಳೆಯಿಂದ ಮೊನ್ನೆ ಭೀಕರವಾಗಿ ರೈಲು ಅಪಘಾತ ಸಂಭವಿಸಿತೆಂದೂ, ೧೫ ಮಂದಿ ಮಡಿದು ೬೧ ಜನರಿಗೆ ಗಾಯವಾಯಿತೆಂದೂ ವರದಿಯಾಗಿದೆ.

ಪಾಕಿಸ್ತಾನದ ಉಪಪ್ರಧಾನಿಯಾಗಲು ಸುಹ್ರಾವರ್ದಿಯ ನಿರಾಕರಣೆ

ಪಾಕಿಸ್ತಾನದ ಉಪ ಪ್ರಧಾನಿಯಾಗಲು ಅವಾಮಿ ಲೀಗಿನ ಅಧ್ಯಕ್ಷ ಹೆಚ್. ಎಸ್. ಸುಹ್ರಾವರ್ದಿಯವರು ನಿರಾಕರಿಸಿರುತ್ತಾರೆ. ಪಾಕಿಸ್ತಾನದಲ್ಲಿ ರಾಷ್ಟ್ರೀಯ ಸರ್ಕಾರ ರಚಿಸಲೂ ಅವರು ವಿರೋಧವಾಗಿರುತ್ತಾರೆ.

ಆಹಾರದ ವಿಶೇಷ ರೈಲಿನ ಆಗಮನ

ಬೆಂಗಳೂರು ಮತ್ತು ಚಾಮರಾಜ ನಗರಗಳಿಗೆ ವ್ಯಾಗನ್ನುಗಳ ರವಾನೆ

ಮೈಸೂರು ೨

ಜಿಲ್ಲೆಯಲ್ಲಿ ಅಭಾವ ಪರಿಹಾರದ ಸಂಬಂಧವಾಗಿ ಕೇಂದ್ರ ಸರ್ಕಾರದವರು ಉಚಿತವಾಗಿ ಕೊಟ್ಟಿರುವ ೧೦ ಲಕ್ಷ ರೂ. ಬೆಲೆಯ ೮೦ ಟನ್ ಅಕ್ಕಿ, ಹಾಲಿನಪುಡಿ ಬೆಣ್ಣೆ, ಎಣ್ಣೆ ಮುಂತಾದ ಆಹಾರ ವಸ್ತುಗಳ ವಿಶೇಷ ರೈಲು ನೆನ್ನೆ ರಾತ್ರಿ ನಗರಕ್ಕೆ ಆಗಮಿಸಿತು. ಒಟ್ಟು ೩೫ ವ್ಯಾಗನ್ನುಗಳು ಇದ್ದುವು. ಇವುಗಳ ಪೈಕಿ ೧೦ ಅನ್ನು ನಗರದಲ್ಲಿಳಿಸಲಾಯಿತು. ೧೦ ವ್ಯಾಗನ್ನುಗಳನ್ನು ನಂಜನಗೂಡಿಗೂ, ೭ ವ್ಯಾಗನ್ನುಗಳನ್ನು ಚಾಮರಾಜನಗರಕ್ಕೂ ಕಳುಹಲಾಯಿತು.

ಈ ವ್ಯಾಗನ್ನುಗಳು ಮದ್ರಾಸಿನಿಂದ ನೆನ್ನೆ ಸಂಜೆ ಬೆಂಗಳೂರಿಗೆ ಬಂದಾಗ, ಮೈಸೂರಿನ ಪರವಾಗಿ ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಬೆಂಗಳೂರು ನಿಲ್ದಾಣದಲ್ಲಿ ಆಹಾರ ವಸ್ತುಗಳನ್ನು ಸ್ವೀಕರಿಸಿ, ಕೇಂದ್ರ ಆಹಾರ ಮಂತ್ರಿ ಅಜಿತ್ ಪ್ರಸಾದ್ ಜೈನರಿಗೆ ಕೃತಜ್ಞತೆಯನ್ನು ಸೂಚಿಸಿದರು. ಈ ವಸ್ತುಗಳನ್ನು ಸೂಕ್ತ ರೀತಿಯಲ್ಲಿ ವಿನಿಯೋಗಿಸಲಾಗುವುದೆಂದು ತಿಳಿಸಿದರು.

ಈ ಬಗ್ಗೆ ನಡೆದ ಸಮಾರಂಭದಲ್ಲಿ ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಹಾಜರಿದ್ದು, ಮೈಸೂರು ಜಿಲ್ಲೆಯಲ್ಲಿ ೬ ಲಕ್ಷ ಜನರು ಅಭಾವದಿಂದ ಪರಿತಪಿಸುತ್ತಿರುವುದಾಗಿ ನುಡಿದರು.

ಮೈಸೂರು, ಬೆಂಗಳೂರು, ಕೆ.ಜಿ.ಎಫ್.ಗಳಲ್ಲಿ ರೂ.೧ಕ್ಕೆ ೩ ಸೇರಿನಂತೆ ಅಕ್ಕಿ ಮಾರಲು ಶೀಘ್ರದಲ್ಲೇ ವ್ಯವಸ್ಥೆ ಮಾಡಲಾಗುವುದೆಂದು ಅವರು ತಿಳಿಸಿದರು. ಹೋಟೇಲುಗಳ ಮಾಲೀಕರನ್ನು ಕರೆಸಿ ಮಾತನಾಡಿ, ಅವರುಗಳಿಗೆ ೬ ತಿಂಗಳಿಗೆ ಬೇಕಾಗುವ ದವಸವನ್ನು ಒಟ್ಟಿಗೆ ಒದಗಿಸಲಾಗುವುದೆಂದು ಹೇಳಿದರು. ಮಾರುಕಟ್ಟೆಗಳಲ್ಲಿ ಧಾನ್ಯವನ್ನು ಕೊಂಡು ಅಭಾವವುಂಟಾಗಿ ಬೆಲೆ ಏರದಂತೆ ಮಾಡಲು ಹೋಟೇಲಿನವರಿಗೆ ಆಹಾರ ಧಾನ್ಯವನ್ನು ಒದಗಿಸಲಾಗುವುದು.

ಕೃಷ್ಣರಾಜಸಾಗರದ ನೀರಿನ ಮಟ್ಟ ೧೨೨ ಅಡಿಗಳಿಗೆ ಏರಿಕೆ

ಕೃಷ್ಣರಾಜಸಾಗರದಲ್ಲಿ ಈ ದಿನ ಬೆಳಗ್ಗೆ ೧೨೨ ಅಡಿ ನೀರು ಇದ್ದಿತು. ನದಿಗಳಲ್ಲಿ ಪ್ರವಾಹವು ಇನ್ನೂ ಏರುತ್ತಲೇ ಇದೆ. ನೀರಿನ ಮಟ್ಟವು ಸರಾಸರಿ ೩ ಗಂಟೆಗಳಿಗೆ ೧ ಅಡಿಯಂತೆ ಏರುತ್ತಿದೆ. ಈ ದಿನ ಮಧ್ಯಾಹ್ನ ೩ ಗಂಟೆಯಲ್ಲಿ ನೀರಿನ ಮಟ್ಟ ೧೨೩ ಅಡಿಗಳಷ್ಟಿತ್ತು.

ಮಣ್ಣಿನ ರಾಶಿ ಬಿದ್ದು ೧೭ ಜನರ ಮರಣ

ಅಲ್ಮೋರಾ ಜಿಲ್ಲೆಯ ಕುನರ್ಗಿ ಪಟ್ಟಿಯಲ್ಲಿ ಕಳೆದ ವಾರ ವಿಪರೀತ ಮಳೆಯಿಂದ ಅನೇಕ ಕಡೆ ಭೂಕುಸಿತಗಳಾಗಿ ೧೭ ಜನರು ಮಣ್ಣಿನ ರಾಶಿಯಲ್ಲಿ ಸಿಕ್ಕಿ ಮೃತಪಟ್ಟರೆಂದೂ, ೬ ಜನರನ್ನು ಹೊರಕ್ಕೆ ತೆಗೆದು ರಕ್ಷಿಸಲಾಯಿತೆಂದೂ ವರದಿಯಾಗಿದೆ.

ಪಾಲಾರ್ ನದಿ ನೀರಿನ ವ್ಯಾಜ್ಯದಲ್ಲಿ ಮೈಸೂರಿನ ಪರ ತೀರ್ಪು

ತ್ರಿಪಕ್ಷ ಸಮಿತಿಯ ನಿರ್ಧಾರ

ಬೆಂಗಳೂರು ೩

ಪಾಲಾರ್ ನದಿ ನೀರಿನ ಹಂಚಿಕೆ ಸಂಬಂಧವಾಗಿ ಮದ್ರಾಸ್ ಸರ್ಕಾರವು ಸಂಸ್ಥಾನ ಸರ್ಕಾರದೊಡನೆ ನಡೆಸುತ್ತಿದ್ದ ವಿವಾದವು ನೆನ್ನೆ ಮುಕ್ತಾಯವಾಯಿತು. ಈ ಬಗ್ಗೆ ಮದ್ರಾಸು ಮತ್ತು ಮೈಸೂರು ಚೀಫ್ ಇಂಜನಿಯರುಗಳು ಮತ್ತು ಇತರ ಪ್ರತಿನಿಧಿಗಳ ಸಮ್ಮೇಳನವು ಕೇಂದ್ರ ನೀರು ಸಮಿತಿ ಸದಸ್ಯರ ನೇತೃತ್ವದಲ್ಲಿ ನಡೆದು ಮೈಸೂರು ಪರ ನಿರ್ಧಾರವೊಂದು ವ್ಯಕ್ತಪಟ್ಟಿತು. ಕೋಲಾರ ಜಿಲ್ಲೆಯ ಬೇತಮಂಗಲ ಮತ್ತು ರಾಮಸಾಗರ ಕೆರೆಗಳಿಗೆ ಪಾಲಾರ್ ನದಿ ನೀರನ್ನು ಎತ್ತುವುದರಿಂದ ಚೆಂಗಲ್ಪಟ್ ಜಿಲ್ಲೆಯ ರೈತರಿಗೆ ನೀರಿನ ಅಭಾವವುಂಟಾಗುತ್ತದೆಂದು ಮದ್ರಾಸಿನವರು ದೂರು ಇತ್ತಿದ್ದರು. ಸಮ್ಮೇಳನದವರು ಸ್ಥಳ ಪರಿಶೀಲನೆ ಮಾಡಿ ಉಭಯ ಪ್ರಾಂತ ಸರ್ಕಾರಗಳಿಗೂ ೧೮೯೨ರಲ್ಲಿ ಆದ ಒಪ್ಪಂದದ ಉಲ್ಲಂಘನೆಯಾಗಿಲ್ಲವೆಂದು ತಿಳಿಸಿರುವರು. ಪಾಲಾರ್ ನದಿಯಲ್ಲಿ ನೀರೇ ಇಲ್ಲದಿರುವುದು ತನಿಖೆಯಿಂದ ವ್ಯಕ್ತಪಟ್ಟಿತು.

ಮುಂದೆ ವಿವಾದಗಳು ಉಂಟಾಗದಂತೆ ಮಾಡಲು ಹಲವು ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.

ಉತ್ತರ ಪ್ರದೇಶದಲ್ಲಿ ಮಾರಾಟ ತೆರಿಗೆ ವಿರುದ್ಧ ಹರತಾಳ

ಉತ್ತರ ಪ್ರದೇಶ ಸರ್ಕಾರದವರು ಕಳೆದ ಏಪ್ರಿಲ್ ೧ರಿಂದ ಮಾರಾಟ ತೆರಿಗೆಯನ್ನು ಹೆಚ್ಚಿಸಿರುವ ಬಗ್ಗೆ ಪ್ರತಿಭಟಿಸಲು ಮೊನ್ನೆ ಆ ಸಂಸ್ಥಾನದ ನಾನಾ ಪಟ್ಟಣಗಳಲ್ಲಿ ಹರತಾಳವನ್ನು ಆಚರಿಸಲಾಯಿತೆಂದು ವರದಿಯಾಗಿದೆ. ಬಹಿರಂಗ ಸಭೆಗಳನ್ನು ನಡೆಸಲಾಯಿತಲ್ಲದೆ ಕಪ್ಪು ಬಾವುಟ ಪ್ರದರ್ಶನಗಳೂ ವಿಶೇಷವಾಗಿದ್ದುವು. ಕಾಂಗ್ರೆಸ್ ಸಂಸ್ಥೆಯೊಂದು ಬಿಟ್ಟು ಮಿಕ್ಕೆಲ್ಲ ರಾಜಕೀಯ ಪಕ್ಷಗಳವರೂ ಇವರಲ್ಲಿ ಭಾಗವಹಿಸಿದ್ದರು.

೪,೦೦೦ ಆರ್. ಎಂ. ಎಸ್. ನೌಕರರಿಂದ ಸಂಬಳದ ನಿರಾಕರಣೆ

ಮದ್ರಾಸಿನ ಅಂಚೆ ಇಲಾಖೆಯ ಆರ್. ಎಂ. ಎಸ್. ವಿಭಾಗದ ೩ ಮತ್ತು ೪ನೇ ವರ್ಗದ ೪,೦೦೦ಕ್ಕೂ ಹೆಚ್ಚಿನ ನೌಕರರು ಕಳೆದ ತಿಂಗಳ ಸಂಬಳವನ್ನು ತೆಗೆದುಕೊಳ್ಳದೆ ನಿರಾಕರಿಸಿರುತ್ತಾರೆ. ಮದ್ರಾಸಿನ ಮೀನಂಬಾಕಂ ವಿಮಾನ ನಿಲ್ದಾಣದಲ್ಲಿ ಕೆಲಸಕ್ಕಾಗಿ ನೇಮಕವಾಗಿದ್ದ ನೌಕರರಿಗೆ ಪ್ರೈವೇಟ್ ಟಿಕೆಟ್ ಸಂಬಂಧವಾಗಿ ಕೊಡುತ್ತಿದ್ದ ಭತ್ಯವನ್ನು ರದ್ದುಪಡಿಸಿರುವುದೇ ಇದಕ್ಕೆ ಕಾರಣ. ಈ ಭತ್ಯವನ್ನು ಅವರುಗಳು ೧೯೪೫ರಿಂದ ಪಡೆಯುತ್ತಿದ್ದರು. ಸಂಬಳದ ನಿರಾಕರಣೆಯ ಬ್ಯಾಡ್ಜನ್ನು ತಮ್ಮವರು ಧರಿಸಿರುತ್ತಾರೆ.

○ ತಿರುಚಿರಾಪಳ್ಳಿ ಬಳಿ ಚಲಿಸುತ್ತಿದ್ದ ಎಂಬಸ್ಸಿ [illegible] ರೂ ಗಳಿಗೆ ಬೀದಿ ಜಾತಿಯ ಮ[illegible]ವೊಂದನ್ನು ಮಾರಲಾಯಿತೆಂದು ವರದಿಯಾಗಿದೆ.

ನ್ಯೂಯಾರ್ಕಿನ ಬಳಿ ಅಣು ಪ್ರಯೋಗ ಶಾಲೆಯಲ್ಲಿ ಸಿಡಿತ

ನ್ಯೂಯಾರ್ಕ್ ಬಳಿ ಪೀಕ್ಸ್‌ಕಿಲ್ ಎಂಬ ಸ್ಥಳದ ಪ್ರದೇಶದಲ್ಲಿರುವ ಅಣು ಶಕ್ತಿ ಪ್ರಯೋಗ ಶಾಲೆಯಲ್ಲಿ ನೆನ್ನೆ ಎರಡು ಬಾರಿ ಆಸ್ಫೋಟನೆಯಾಯಿತೆಂದೂ, ಕೀಲಿಯೋ ಕೊಂಡವುಳ್ಳ ಶಸ್ತ್ರಗಳಿಂದ ಅಥವಾ ದುಷ್ಟ ಎಂಬ ಬಗ್ಗೆ ತನಿಖೆ ನಡೆಸಲು ಅಣು ಶಕ್ತಿ ಸನ್ನಾಹಿಯವರು ಸಂಶೋಧಕರನ್ನು ಅಲ್ಲಿಗೆ ಕಳುಹಿಸಿರುವರೆಂದೂ ವರದಿಯಾಗಿದೆ. ಈ ಘಟನೆಯಿಂದ ಗಾಯವಾಗಿರಬಹುದೆಂದು ಭಾವಿಸಲಾಗಿದೆ. ಎರಡು ಸಿಡಿತಗಳು ಕ್ಷಣಾರ್ಧದಲ್ಲಿ ಆದುವು. ಈ ಅಣುಶಕ್ತಿ ಕಾರ್ಖಾನೆಯು ೫೬ ಎಕರೆ ಪ್ರದೇಶದಲ್ಲಿದೆ. ಯುದ್ಧ ಕಾರ್ಯಕ್ಕೆ ಅಣು ಶಕ್ತಿಯನ್ನು ಬಳಸಲು ಕಾರ್ಖಾನೆಯನ್ನು ನಿರ್ಮಿಸಲಾಗಿತ್ತು.

ಖಾನ್ ಅಬ್ದುಲ್ ಗಫಾರ್ ಖಾನರ ಮೇಲೆ ಮತ್ತೊಂದು ಮೊಕದ್ದಮೆ

ಗಡಿನಾಡಿನ ಬನ್ನು ನಗರದಲ್ಲಿ ಕಳೆದ ಫೆಬ್ರವರಿಯಲ್ಲಿ ಪಶ್ಚಿಮ ಪಾಕಿಸ್ತಾನದ ಒಕ್ಕೂಟದ ವಿರೋಧವಾಗಿ ಮಾಡಿದ ಭಾಷಣಕ್ಕಾಗಿ ಕೆಂಪು ಷರಟಿನವರ ನಾಯಕ ಖಾನ್ ಅಬ್ದುಲ್ ಗಫಾರ್ ಖಾನರ ಮೇಲೆ ಮತ್ತೊಂದು ಮೊಕದ್ದಮೆಯನ್ನು ಹೂಡಲಾಗಿದೆ. ಅವರ ಮೇಲೆ ಇನ್ನೂ ಅನೇಕ ಮೊಕದ್ದಮೆಗಳನ್ನು ಹಾಕುವ ಸಂಭವವಿದೆ.

ಗೋವಾ ಪೋಲೀಸರ ಬಂಧನ

ಗೋವಾದ ಪೋಲೀಸು ಇನ್ಸ್‌ಪೆಕ್ಟರ್ ಖಾನ್ ಎಂಬುವರೂ ಸೇರಿ, ೪ ಜನ ಪೋಲೀಸು ನೌಕರರನ್ನು ಪೋರ್ಚುಗೀಸ್ ಅಧಿಕಾರಿಗಳು ಬಂಧಿಸಿ ಅಗ್ವಾಡಾ ಕೋಟೆಯಲ್ಲಿಟ್ಟಿರುತ್ತಾರೆಂದು ವರದಿಯಾಗಿದೆ. ಸ್ವತಂತ್ರವಾದಿ ಚಳವಳಿಗಾರರಿಗೂ, ಗೋವಾ ಪೋಲೀಸರಿಗೂ ಸಂಪರ್ಕವನ್ನು ತಪ್ಪಿಸಲು ಅಧಿಕಾರಿಗಳು ಪ್ರಯತ್ನಿಸುತ್ತಿರುವರು. ಬಿಟ್ಟು ಮಿಕ್ಕ ಎಲ್ಲಾ ಪೋಲೀಸು ನೌಕರರನ್ನೂ ಪೋರ್ಚುಗೀಸ್ ಸರ್ಕಾರವು ನಂಬುತ್ತಿಲ್ಲವೆಂದು ಹೇಳಲಾಗಿದೆ. ಪೋರ್ಚುಗೀಸ್ ಸಿಬ್ಬಂದಿಯವರ ಕಾಟದಿಂದ ತಪ್ಪಿಸಿಕೊಳ್ಳಲು ಅನೇಕ ಪಕ್ಷಗಳು ಕಾಡುಗಳಿಗೆ ಓಡಿಹೋಗುತ್ತಿರುವರೆಂದೂ ತಿಳಿದುಬಂದಿದೆ.

ಕವಿ ಬೇಂದ್ರೆಯವರಿಗೆ ಸನ್ಮಾನ

ಕರ್ನಾಟಕದ ಕವಿ ದತ್ತಾತ್ರೇಯ ರಾಮಚಂದ್ರ ಬೇಂದ್ರೆಯವರ ಷಷ್ಟ್ಯಬ್ದಿ ಪೂರ್ತಿ ಸಂದರ್ಭದಲ್ಲಿ ಅವರನ್ನು ಗೌರವಿಸಲು ಧಾರವಾಡದಲ್ಲಿ ಕಳೆದ ೩೦ರಂದು ನಾಗರೀಕರ ಸಭೆಯಲ್ಲಿ ನಿರ್ಧರಿಸಲಾಯಿತು. ನಿವೃತ್ತ ಹೈಕೋರ್ಟ್ ನ್ಯಾಯಾಧೀಶರಾದ ಎ. ಪಿ. ಜಮಖಂಡಿಯವರ ಅಧ್ಯಕ್ಷತೆಯಲ್ಲಿ ಉತ್ಸವ ಸಮಿತಿಯನ್ನು ರಚಿಸಲಾಗಿದೆ. ಇದೇ ತಿಂಗಳು ೧೫ರಂದು ಸಮಾರಂಭವು ನಡೆಯುವುದು.

ಅಂತರ ಸಂಸ್ಥಾನ ಇಲಾಖಾಧಿಕಾರಿಗಳ ಸಭೆ

ನೂತನ ಮೈಸೂರು ಸಂಸ್ಥಾನದಲ್ಲಿ ಅಡಕವಾದ ಏಕೀಕರಣಕ್ಕೆ ಸಂಬಂಧಪಟ್ಟ ವಿಷಯವಾಗಿ ಚರ್ಚಿಸಲು ಬೆಂಗಳೂರು ಅಠಾರಾ ಕಛೇರಿಯಲ್ಲಿ ಇದೇ ೧೦ನೇ ತಾರೀಖು ಬೊಂಬಾಯಿ, ಮೈಸೂರು, ಮದ್ರಾಸ್ ಮತ್ತು ಹೈದರಾಬಾದು ಅಧಿಕಾರಿಗಳ ಸಭೆಯು ನಡೆಯುವುದು. ಹುದ್ದೆಗಳು, ಪುಸ್ತಕಾಲಯ, ವಸತಿ ಸೌಕರ್ಯ, ನೌಕರರ ಮಕ್ಕಳ ವಿದ್ಯಾಭ್ಯಾಸ, ಕಾನೂನುಗಳ ವ್ಯವಸ್ಥೆ ಮತ್ತು ಆಸ್ತಿ ಜವಾಬ್ದಾರಿಗಳ ವಿಂಗಡಣೆ ಮುಂತಾದ ವಿಷಯಗಳನ್ನು ಅಲ್ಲಿ ಚರ್ಚಿಸಲಾಗುವುದು.

ವಿವಾಹ ಮಹೋತ್ಸವಗಳು

ಸಂಸ್ಥಾನದ ವ್ಯವಸಾಯ ಸಚಿವರಾದ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ತಮ್ಮ ದ್ವಿತೀಯ ಪುತ್ರ ಶ್ರೀ ಹೆಚ್. ಸಿ. ಸಟೇಶ್‌ರವರಿಗೆ ಕೃಷ್ಣರಾಜನಗರದ ಶ್ರೀ ವೈ. ಆರ್. ಭದ್ರಪ್ಪನವರ ಪುತ್ರಿ ಸೌ|| ಸುಶೀಲರವರನ್ನು ತಂದುಕೊಂಡು ವಿವಾಹವನ್ನು ಬೆಂಗಳೂರಿನ ಜಯಮಹಲ್ ಬಡಾವಣೆಯಲ್ಲಿರುವ ತಮ್ಮ ಗೃಹದಲ್ಲಿ ನೆನ್ನೆ ನೆರವೇರಿಸಿದರು. ಮುಹೂರ್ತಕ್ಕೂ, ಸ್ವಾಗತ ಸಮಾರಂಭಕ್ಕೂ ಕೇಂದ್ರ ಮಂತ್ರಿ ಶ್ರೀ ಕೆ. ಸಿ. ರೆಡ್ಡಿ, ಮುಖ್ಯ ಮಂತ್ರಿ ~~ಶ್ರೀ ಕೆ~~ ಹನುಮಂತಯ್ಯ, ಶ್ರೇಷ್ಠ ನ್ಯಾಯಾಧೀಶ ಶ್ರೀ ಆರ್. ವೆಂಕಟರಾಮಯ್ಯ, ಕೇಂದ್ರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪ, ಸಂಸ್ಥಾನ ಸಚಿವರುಗಳು, ಕಾಂಗ್ರೆಸ್ ನಾಯಕರು, ಇತರ ಗಣ್ಯ ಪುರಪ್ರಮುಖರು ಆಗಮಿಸಿದ್ದರು

ರಾಜಧಾನಿಯ ಕೀರ್ತನ ವಿದ್ವಾಂಸರಾದ ಶ್ರೀ ಟಿ. ಕೆ. ವೇಣುಗೋಪಾಲದಾಸರು ತಮ್ಮ ಪುತ್ರಿ ಸೌ|| ರಾಜಮ್ಮನವರನ್ನು ಹೊಸಕೋಟೆ ಶ್ರೀ ನಾಗರಾಜರಾಯರ ಪುತ್ರ ಶ್ರೀ ಹೆಚ್. ಎನ್. ನಾರಾಯಣರಾಯರಿಗೆ ಕೊಟ್ಟು ವಿವಾಹವನ್ನು ನೆನ್ನೆ ನಗರದಲ್ಲಿ ನೆರವೇರಿಸಿದರು

ರಾಜಧಾನಿಯ ಸರಸ್ವತಿಪುರದಲ್ಲಿರುವ ಎಂ. ಎಲ್. ನಾರಾಯಣರಾಯರ ಪತ್ನಿ ಶ್ರೀಮತಿ ಜಯಮ್ಮನವರು ತಮ್ಮ ಪುತ್ರ ಶ್ರೀ ಎನ್. ನಂಜುಂಡಸ್ವಾಮಿಯವರಿಗೆ ಶ್ರೀರಂಗಪಟ್ಟಣದ ಲಾಯರ್ ಶ್ರೀ ಕೆ. ಅನಂತರಾಮಯ್ಯನವರ ಪುತ್ರಿ ಸೌ|| ಸುಶೀಲಾರವರನ್ನು ತಂದುಕೊಂಡು ವಿವಾಹವನ್ನು ನೆನ್ನೆ ಶ್ರೀರಂಗಪಟ್ಟಣದಲ್ಲಿ ನೆರವೇರಿಸಿದರು.

ಸೇಂಟ್ ಫಿಲೋಮಿನಾ ಕಾಲೇಜಿನ ಹಿಂದೀ ಪ್ರಾಧ್ಯಾಪಕರಾದ ಶ್ರೀ ಎಂ. ಕೆ. ರಾಜಗೋಪಾಲ್‌ರವರು ತಮ್ಮ ಸಹೋದರಿ ಸೌ|| ಹೇಮಲತಾರವರನ್ನು ಸಂಸ್ಥಾನದ ವೈದ್ಯ ಇಲಾಖೆಯಲ್ಲಿರುವ ಡಾ|| ಟಿ. ರಾಮಯ್ಯನವರ ಪುತ್ರ ಶ್ರೀ ಎಂ. ಆರ್. ಶ್ರೀನಿವಾಸಮೂರ್ತಿಯವರಿಗೆ ಕೊಟ್ಟು ವಿವಾಹವನ್ನು ನೆನ್ನೆ ನಗರದಲ್ಲಿ ನೆರವೇರಿಸಿದರು

ಪಾಂಡವಪುರದಲ್ಲಿರುವ ಕೃಷ್ಣಾಟೀಗೊಳದ ಶ್ರೀ ವಿಶ್ವನಾಥಯ್ಯನವರು ತಮ್ಮ ಪುತ್ರಿ ಸೌ|| ಪ್ರಭಾವತಿಯನ್ನು ಮೈಸೂರು ಶ್ರೀ ಪುಟ್ಟರಾಜಯ್ಯನವರ ಪುತ್ರ ಶ್ರೀ ರಾಜಣ್ಣನವರಿಗೆ ಕೊಟ್ಟು ವಿವಾಹವನ್ನು ನೆನ್ನೆ ಪಶ್ಚಿಮವಾಹಿನಿಯಲ್ಲಿ ನೆರವೇರಿಸಿದರು

ಬೆಂಗಳೂರಿನ ಜಿಲ್ಲಾ ನ್ಯಾಯಾಧೀಶರಾದ ಶ್ರೀ ವಿ. ನರಸಿಂಹಮೂರ್ತಿಯವರು ತಮ್ಮ ಪುತ್ರಿ ಸೌ|| ನಾಗವಲ್ಲಿಯನ್ನು ವೈದ್ಯ ಇಲಾಖೆಯಲ್ಲಿರುವ ಡಾ|| ವೈ. ರಾಮಸ್ವಾಮಿಯವರ ಪುತ್ರ ಶ್ರೀ ವೈ. ಆರ್. ನಾಗರಾಜ್‌ರವರಿಗೆ ಕೊಟ್ಟು ನೆನ್ನೆ ಬೆಂಗಳೂರಿನಲ್ಲಿ ವಿವಾಹವನ್ನು ನೆರವೇರಿಸಿದರು

ರಾಜಧಾನಿಯ ಸಂತೆಪೇಟೆಯ ಗುರುನಾಥ್ ಅಂಡ್ ಕಂಪೆನಿಯ ಮಾಲೀಕರಾದ ಶ್ರೀ ಎನ್. ಓ. ರಮಯ್ಯನವರು ನಂಜುಂಡಪ್ಪನವರ ಮೊಮ್ಮಗಳು ಸೌ|| ನೀಲಮಣಿಯನ್ನು ಶಿಡ್ಲಘಟ್ಟದ ಶ್ರೀ ನಂಜುಂಡಪ್ಪನವರ ಪುತ್ರ ಶ್ರೀ ಶಿವಣ್ಣನವರಿಗೆ ಕೊಟ್ಟು ವಿವಾಹವನ್ನು ನೆನ್ನೆ ರಾಜಧಾನಿಯಲ್ಲಿ ನೆರವೇರಿಸಿದರು

ವಿದ್ಯಾರ್ಥಿಗಳಿಗೆ ಗೋಕರ್ಣದ ಸ್ವಾಮಿಗಳ ಉಪದೇಶ

ವಿದ್ಯಾರ್ಥಿಗಳು ಇಹಪರ ಸಾಧನೆಗಾಗಿ ಧರ್ಮನಿಷ್ಠರೂ, ಆಚಾರಶೀಲರೂ ಆಗಬೇಕು ಶಾಸ್ತ್ರಾಭ್ಯಾಸ ಮಾಡಬೇಕು ಜಪತಪಾದಿಗಳನ್ನು ನಡೆಸಬೇಕು ಅನೀತಿಯುತವಾದ ಕಥೆಕಾದಂಬರಿಗಳನ್ನು ಓದಕೂಡದು, 'ಮನ್ಮಥನಿಗೆ ಶರಣಾಗಬಾರದು' ಎಂಬುದಾಗಿ ಶ್ರೀ ಗೋಕರ್ಣ ಪೀಠಾಧೀಶರು ಕಳೆದ ೩೦ನೇ ತಾರೀಕು ಸಂಜೆ ಅಖಿಲ ಭಾರತ ಮಾಧ್ವ ಮಹಾ ಮಂಡಲದ ವಿದ್ಯಾರ್ಥಿನಿಲಯದಲ್ಲಿ ಉಪದೇಶ ಮಾಡುತ್ತಾ ಅಲ್ಲಿ ಕೊಡಿಸಿದ ನಿಲಯದ ಕಾರ್ಯಕ್ರಮಗಳನ್ನು ನೋಡಿ ಪ್ರಶಂಸಿಸಿದರು ಶ್ರೀ ವಿಠಲ ಉಪಾಧ್ಯಾಯರು ಸ್ವಾಗತಿಸಿದರು ಶ್ರೀ ರಾಘವೇಂದ್ರರಾಯರು ವಂದನಾರ್ಪಣೆ ಮಾಡಿದರು

Edited Printed and Published by A R Nagarajan at Sadhvi Press ... Road, Mysore

ಬೊಂಬಾಯಿ-ಮದ್ರಾಸು ನೂತನ ಜನತಾ ರೈಲು ಆರಂಭ

ಬೊಂಬಾಯಿ ಮದ್ರಾಸು ನಡುವೆ ಹೊಸ ಮಾದರಿಯ ಜನತಾ ಎಕ್ಸ್‌ಪ್ರೆಸ್ ರೈಲಿನ ಪ್ರಯಾಣವನ್ನು ಮೊನ್ನೆ ಬೊಂಬಾಯಿಯಲ್ಲಿ ಆರಂಭಿಸಲಾಯಿತು ಕೇವಲ ಮೂರನೇ ತರಗತಿಯ ಗಾಡಿಗಳುಳ್ಳ ಈ ರೈಲಿನಲ್ಲಿ ಒಂದು ಗಾಡಿಯಿಂದ ಮತ್ತೊಂದಕ್ಕೆ ಒಳಗಡೆಯಿಂದ ರೈಲು ಓಡುತ್ತಿರುವಾಗ ಹೋಗಬಹುದು ವಾರಕ್ಕೆರಡು ಬಾರಿ ಈ ರೈಲಿನ ಸಂಚಾರವಿದೆ

ಚಾಮರಾಜನಗರ ತಾಲ್ಲೂಕಿನಲ್ಲಿ ಕಾಂಗ್ರೆಸ್ ಅಧ್ಯಕ್ಷರ ಪ್ರವಾಸ

ಅಭಾವ ಪ್ರದೇಶಗಳಲ್ಲಿರುವ ಪರಿಸ್ಥಿತಿಯನ್ನು ಪರಿಶೀಲಿಸಲು ಇದೇ ೩ ಮತ್ತು ೭ನೇ ತಾರೀಕು ಚಾಮರಾಜನಗರ ತಾಲ್ಲೂಕಿನಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಪ್ರವಾಸ ಮಾಡುವರು ಅವರು ಉಮ್ಮತ್ತೂರು, ಕುದೇರು, ಸಂತೆಮರಹಳ್ಳಿ, ದೊಡ್ಡರಾಯಪೇಟೆ, ಆಲೂರು, ಚಂದಕವಾಡಿ, ರಾಮಸಮುದ್ರಗಳ ಮೂಲಕ ಚಾಮರಾಜನಗರವನ್ನು ೭ನೇ ತಾರೀಕು ಸಂಜೆ ತಲಪುವರು ಕಾಂಗ್ರೆಸ್ ಕಾರ್ಯಕರ್ತರ ಸಭೆಯಲ್ಲಿ ಭಾಷಣ ಮಾಡುವರು ಪೌರ ಸನ್ಮಾನವೊಂದನ್ನು ಅವರ ಗೌರವಾರ್ಥವಾಗಿ ಏರ್ಪಡಿಸಲಾಗಿದೆ ಮಾರನೇ ದಿನ ಅರಕಲವಾಡಿ, ಅಮಚವಾಡಿ, ಹರದನಹಳ್ಳಿ, ಮಲಿಯೂರು, ಹರವೆ, ಉಡಿಗಾಲಗಳಿಗೆ ಭೇಟಿಯಿತ್ತು ಸಂಜೆ ನಗರಕ್ಕೆ ಹಿಂದಿರುಗುವರು

ವಚನ ಗಾನ ಮತ್ತು ಸಂಗೀತ

ನಂಜನಗೂಡಿನ ಶ್ರೀ ಶ್ರೀಕಂಠೇಶ್ವರ ದೇವಾಲಯದಲ್ಲಿ ಗಿರಿಜಾ ಕಲ್ಯಾಣದ ಅಂಗವಾಗಿ ನಾಳೆ ರಾತ್ರಿ ತೆಪ್ಪದಲ್ಲಿ ಮೈಸೂರಿನ ಶ್ರೀ ಬಿ. ಬಸವಣ್ಣನವರಿಂದ ವಚನ ಗಾನ ಮತ್ತು ದೇವಸ್ಥಾನದಲ್ಲಿ ಬೆಂಗಳೂರಿನ ವಿ|| ಎಸ್. ಚಂದ್ರಪ್ಪ ಮತ್ತು ಪಾರ್ಟಿಯವರಿಂದ ಸಂಗೀತವು ನಡೆಯುವುವು ಸಂಜೆ ೭|| ಗಂಟೆಗೆ ತೆಪ್ಪೋತ್ಸವವು ಜರಗುವುದು

ಸಿಕ್ಯಾಪಟ್ಟೆ ಲಾರಿ ಓಡಿಸಿ ಬಸ್ಸಿಗೆ ಜಖಂ ಮಾಡಿದ್ದಕ್ಕೆ ಶಿಕ್ಷೆ

ಸಿ ಜಿ ಎ ೩೩೩ನೇ ನಂಬರು ಲಾರಿಯ ಡ್ರೈವರ್ ಈರಯ್ಯ ಎಂಬುವನು ಲಾರಿಯನ್ನು ನಜರಬಾದು ರಸ್ತೆಯಲ್ಲಿ, ಸಿಕ್ಯಾಬಟ್ಟೆ ಓಡಿಸಿ ಎಂ ವೈ ಎಂ ೧೩೫೩ನೇ ನಂಬರು ಬಸ್ಸಿಗೆ ಕಳೆದ ತಿಂಗಳು ೫ನೇ ತಾರೀಕು ಜಖಂ ಮಾಡಿದನೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ನಗರದ ಪ್ರಥಮ ನ್ಯಾಯಾಧೀಶರು ನೆನ್ನೆ ಆಪಾದಿತನಿಗೆ ೧೦೦ ರೂ ಜುಲ್ಮಾನೆ, ತಪ್ಪಿದರೆ ೧೫ ದಿನ ಸಾದಾ ಸಜವನ್ನು ವಿಧಿಸಿದರು

ನ್ಯಾಯಾಧೀಶರುಗಳಿಂದ ಅಧಿಕಾರ ಸ್ವೀಕಾರ

ನಗರದ ಪ್ರಥಮ ಮುನ್ಸೀಫರಾಗಿ ವರ್ಗಾಯಿಸಲ್ಪಟ್ಟಿರುವ ಶ್ರೀ ಲಿಂಗೋಜಿರಾಯರೂ, ೨ನೇ ನಗರ ನ್ಯಾಯಾಧೀಶರಾಗಿ ನೇಮಕ ಮಾಡಲ್ಪಟ್ಟಿರುವ ಶ್ರೀ ಸಿದ್ದಪ್ಪನವರೂ ನೆನ್ನೆ ಅಧಿಕಾರ ವಹಿಸಿಕೊಂಡರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೦ರೊಳಲು ೭-೧೫ ಮತ್ತು ೮-೧೫ ಎಂ ಎ ರಾಘವೇಂದ್ರ-ಕನ್ನಡ ಗೀತೆಗಳು ೭-೩೦ ಹಿಂದಿ ಪಾಠ ಮಧ್ಯಾಹ್ನ ೧೨ ಮತ್ತು ೧ ರಾಜಮ್ಮ ಸಿ ಆರ್ ಗೌಡ-ಸಂಗೀತ. ೧೨-೩೦ ರಿಂದ ೧-೩೦ ರವರೆಗೆ ... ೩-೧೫ ಸ್ತ್ರೀಯರ ಕಾರ್ಯಕ್ರಮ ... ೬-೩೦ ಮತ್ತು ... ರಾಜಾರಾಂ-ನಾಗಸ್ವರ ೬-೧೫ ಕನ್ನಡ ಗೀತೆಗಳು. ೭-೪೦ ನಾಟ್ಯವ್ಯಂಜಕ ೮-೪೦ ರಾಷ್ಟ್ರೀಯ ಕಾರ್ಯಕ್ರಮ-ದೆಹಲಿ ಪ್ರಸಾರ ೯-೧೫ ಡಿ ಎಸ್. ಶಾಮಯ್ಯಂಗಾರ್-ಗಾಯನ

ಜಯಾ ರಿಕ್ರಿಯೇಷನ್ ಕ್ಲಬ್

ಮೈಸೂರು ೩

ನಗರದ ವಿದ್ಯಾಭ್ಯಾಸ ಪಾರ್ಕ್ ಬಳಿ ೫೫೫ನೇ ನಂಬರ್ ಗೃಹದಲ್ಲಿ ಶ್ರೀ ಜಯಾ ರಿಕ್ರಿಯೇಷನ್ ಕ್ಲಬ್ ಎಂಬ ಸಂಸ್ಥೆಯ ಆರಂಭೋತ್ಸವವನ್ನು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಶಂಕರರಾಯರು ನೆನ್ನೆ ಸಂಜೆ ನೆರವೇರಿಸಿದರು. ವ್ಯಾಪಾರ, ವ್ಯವಹಾರ ಮುಂತಾದ ಅನೇಕ ಚಟುವಟಿಕೆಗಳಲ್ಲಿ ನಿರತರಾಗಿರುವವರಿಗೆ ಇಂತಹ ಕ್ರೀಡಾ ಸಂಘಗಳಿಂದ ವಿಶೇಷ ಪ್ರಯೋಜನವುಂಟಾಗಿ ಅವರ ಆರೋಗ್ಯವು ಉತ್ತಮಗೊಳ್ಳುವುದೆಂದು ಅವರು ನುಡಿದರು

ಸಂಘದ ಅಧ್ಯಕ್ಷರಾದ ಶ್ರೀ ಎಂ. ಸಿ. ಮಹದೇವಸ್ವಾಮಿಯವರು ಭಾಷಣ ಮಾಡಿ ಸಂಸ್ಥೆಯಲ್ಲಿ ವಾಚನಾಲಯ ಮತ್ತು ಕ್ರೀಡಾರಂಗಗಳನ್ನು ಏರ್ಪಡಿಸಲಾಗುವುದೆಂದೂ, ಆಗಿಂದಾಗ್ಗೆ ಸಂಸ್ಕೃತಿ ಪ್ರಸಾರ ಕಾರ್ಯವನ್ನೂ, ಸಂಗೀತ, ಕಾವ್ಯವಾಚನ, ಕೀರ್ತನ ಕಾಲಕ್ಷೇಪ ಮುಂತಾದುವುಗಳನ್ನೂ ನಡೆಸಲಾಗುವುದೆಂದೂ ತಿಳಿಸಿದರು

ಶ್ರೀ ಸುಂದರಮೂರ್ತಿ ಮತ್ತು ಗೋಷ್ಠಿಯವರಿಂದ ಗಾಯನವಾಯಿತು ಕಾರ್ಯದರ್ಶಿಗಳಾದ ಶ್ರೀ ಆರ್. ಜಿ. ರಾಮಣ್ಣನವರಿಂದ ವಂದನಾರ್ಪಣೆಯಾದನಂತರ ಸಭೆಯು ಮುಗಿಯಿತು

ಬದರಿನಾಥಪುರಿಯ ವರ್ಗಾವಣೆ

ಹಿಮಾಲಯದ ಬದರಿನಾಥ ದೇವಾಲಯದ ಬಳಿ ಇರುವ ಬದರಿನಾಥ ಪಟ್ಟಣವನ್ನು ೧ ಫರ್ಲಾಂಗ್ ಆಚೆ ಹೊಸ ನಿವೇಶನಕ್ಕೆ ವರ್ಗಾಯಿಸಲಾಗುವುದೆಂದು ವರದಿಯಾಗಿದೆ ಪರ್ವತ ಶ್ರೇಣಿಯಿಂದ ಆಗಾಗ್ಗೆ ಬೀಳುವ ಹಿಮದ ಗೆಡ್ಡೆಗಳಿಂದ ಊರು ನಾಶವಾಗುವ ಭೀತಿಯನ್ನು ತಪ್ಪಿಸಲು ಮೇಲ್ಕಂಡ ಕ್ರಮ ಕೈಗೊಳ್ಳಲಾಗುವುದು

ಅಭಾವ ಪ್ರದೇಶಗಳಲ್ಲಿ ಎಲ್ಲರಿಗೂ ರೂ. ಗೆ ೩ ಸೇರು ಅಕ್ಕಿಗಾಗಿ ಒತ್ತಾಯ

ಗುಂಡ್ಲುಪೇಟೆ ತಾಲ್ಲೂಕು ಅಭಿವೃದ್ಧಿ ಸಮಿತಿ ಸದಸ್ಯರಾದ ಶ್ರೀ ಹೆಚ್. ಎಸ್. ರಾಮಣ್ಣನವರು ಪತ್ರವೊಂದನ್ನು ಬರೆದು, ಜಿಲ್ಲೆಯ ಅಭಾವ ಪ್ರದೇಶಗಳಲ್ಲಿ ಎಲ್ಲರಿಗೂ ರೂಪಾಯಿಗೆ ೩ ಸೇರು ಅಕ್ಕಿಯನ್ನು ಸರ್ಕಾರದವರು ಸರಬರಾಜು ಮಾಡಬೇಕೆಂದು ಸಲಹೆ ಮಾಡಿರುತ್ತಾರೆ ಪರಿಹಾರ ಕಾರ್ಯಗಳಲ್ಲಿ ನಿರತರಾಗಿರುವ ಕೆಲಸಗಾರರಿಗೆ ಮಾತ್ರ ೩ ಸೇರಿನಂತೆ ಮಾರಲು ಜಿಲ್ಲಾ ಪರಿಹಾರ ಸಮಿತಿಯವರು ತೀರ್ಮಾನ ಮಾಡಿರುವ ವಿಷಯವನ್ನು ಪ್ರಸ್ತಾಪಿಸಿ, ಅಕ್ಕಿ ಬಳಸುವ ಇತರ ಕೆಲಸಗಾರರು ಅನೇಕರಿರುವರೆಂದೂ, ಮಧ್ಯಮ ವರ್ಗದ ಜನರಿಗೆ ಹೆಚ್ಚಿನ ಹೊರೆ ಹೊರಿಸುವುದು ಸರಿಯಲ್ಲವೆಂದೂ ಅವರು ತಿಳಿಸಿರುತ್ತಾರೆ ೩ ಸೇರಿನಂತೆ ಅಕ್ಕಿ ಮಾರಿದರೆ ಅದು ವರ್ತಕರ ಕೈಸೇರಬಹುದೆಂಬ ಭೀತಿ ಇದ್ದಲ್ಲಿ, ನಿಗದಿಯಾದ ಪ್ರಮಾಣದಲ್ಲಿ ವಾರವಾರವೂ ಪ್ರತಿ ಕುಟುಂಬಕ್ಕೂ ಮಾರಲು ವ್ಯವಸ್ಥೆ ಮಾಡುವುದು ಉತ್ತಮವೆಂದು ಅವರು ಸೂಚಿಸಿರುವರು

Try
BRONKOL
for ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
71|1 A S Street,
BANGALORE 2

ಬ್ರಿಟಿಷ್ ಸುಂದರಿಯೊಡನೆ ಮೈಮೆರ್ಸಿಂಗ್ ರಾಜರ ವಿವಾಹ

ಬ್ರಿಟನ್ನಿನ ಸುಂದರಿಯೆಂದು ಪ್ರಖ್ಯಾತಳಾಗಿರುವ ೨೩ ವರ್ಷದ ಜೇನೆಟ್ ಹಿಲ್ಸ್ ಎಂಬಾಕೆಯನ್ನು ಮೈಮೆರ್ಸಿಂಗ್ ಮಹಾರಾಜರು ಶೀಘ್ರದಲ್ಲೇ ವಿವಾಹವಾಗಲಿರುವರು ಅವರ ಆಸ್ತಿಗಳನ್ನು ಪಾಕಿಸ್ತಾನ ಸರ್ಕಾರದವರು ವಶಪಡಿಸಿಕೊಂಡಿರುತ್ತಾರೆ ಆದರ ಬದಲು ೧ ಕೋಟಿ ರೂ. ಪರಿಹಾರ ಕೊಡಲಿರುವರು ವಿವಾಹವಾಗುವ ಕನ್ಯೆಯು ಲಂಡನ್ ಹೋಟೇಲಿನಲ್ಲಿ ಸ್ವಾಗತ ಬಯಸುವ ಕೆಲಸ ಮಾಡುತ್ತಿರುವಳು. ಅವರಿಬ್ಬರ ವಿವಾಹ ನಿಶ್ಚಿತಾರ್ಥವಾದ ಸಂದರ್ಭದಲ್ಲಿ ಆಕೆಯ ಗುರುತಿಗಾಗಿ ಪತ್ನಿಯ ಉಂಗುರವನ್ನು ಧರಿಸು ಮಹಾರಾಜರು ಇತ್ತಿದ್ದ ೫,೦೦೦ ಪೌಂಡ್ ಬೆಲೆಯ ಉಂಗುರವನ್ನು ಬ್ರಿಟಿಷ್ ಸುಂಕದ ಅಧಿಕಾರಿಗಳು ವಶಪಡಿಸಿಕೊಂಡಿದ್ದರು

ದಲಿತ ವಿದ್ಯಾರ್ಥಿ ನಿಲಯಕ್ಕೆ ಪುಸ್ತಕ, ಬಟ್ಟೆ ವಿನಿಯೋಗ

ನರಸಿಂಹರಾಜ ಮೊಹಲ್ಲೆಯಲ್ಲಿರುವ ದಲಿತ ವಿದ್ಯಾರ್ಥಿ ನಿಲಯದ ವಿದ್ಯಾರ್ಥಿಗಳಿಗೆ ಊಟದ ತಟ್ಟೆ, ಟ್ರಂಕು, ಬಟ್ಟೆ ಮತ್ತು ಪುಸ್ತಕಗಳ ವಿನಿಯೋಗದ ಸಮಾರಂಭವು ಕಳೆದ ೨೯ನೇ ತಾರೀಕು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶ್ರೀ ಆರ್. ರಂಗಸ್ವಾಮಿಯವರಿಂದ ದೇವತಾ ಪ್ರಾರ್ಥನೆಯಾದನಂತರ, ನಿಲಯದ ಅಧ್ಯಕ್ಷ ಶ್ರೀ ಎನ್. ರಾಚಯ್ಯನವರು ಸ್ವಾಗತ ಭಾಷಣ ಮಾಡಿದರು ಅಧ್ಯಕ್ಷರು ಮಾತನಾಡಿ, ನಿಲಯಕ್ಕೆ ಕೇಂದ್ರದ ಸಾಮಾಜಿಕ ಯೋಗಕ್ಷೇಮ ಮಿತಿಯವರು ೩,೦೦೦ ರೂ ಗಳನ್ನು ಸಹಾಯವಾಗಿ ಕೊಟ್ಟ ಬಗ್ಗೆ ಹರ್ಷವನ್ನು ಸೂಚಿಸಿದರು. ವಿದ್ಯಾರ್ಥಿಗಳು ಸುಸಂಸ್ಕೃತರಾಗಿ ಮುಂದೆ ತಾವು ದೊಡ್ಡವರಾದಮೇಲೆ ನಿಲಯಕ್ಕೆ ಸಹಾಯ ಮಾಡಬೇಕೆಂದೂ ಅವರು ಹೇಳಿದರು ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭ ಮುಕ್ತಾಯವಾಯಿತು

ಕೊಡಗು ಮತ್ತು ಮಂಗಳೂರಿನಲ್ಲಿ ಮುಖ್ಯ ಮಂತ್ರಿಗಳ ಪ್ರವಾಸ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನಾಳಿದ್ದಿನಿಂದ ೯ರ ವರೆಗೆ ಕೊಡಗು ಮತ್ತು ಮಂಗಳೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು. ನಾಳಿದ್ದು ಅವರು ಮೈಸೂರಿಗೆ ಆಗಮಿಸಿ, ಮಾರನೆ ದಿನ ಫ್ರೇಸರ್‌ಪೇಟೆಗೆ ಹೋಗಿ ಅಲ್ಲಿ ನೂತನ ಹೆರಿಗೆ ಆಸ್ಪತ್ರೆ ವಾರ್ಡಿನ ಆರಂಭೋತ್ಸವವನ್ನು ನೆರವೇರಿಸುವರು. ಸಂಜೆ ಮಡಕೇರಿಗೆ ಭೇಟಿಯಿತ್ತು, ಮಂಗಳೂರಿಗೆ ೭ನೇ ತಾರೀಕು ಹೋಗುವರು ಜೋಗಿನಿಂದ ಬರುವ ವಿದ್ಯುಚ್ಛಕ್ತಿಯ ಆರಂಭೋತ್ಸವವನ್ನು ಅಂದು ನೆರವೇರಿಸುವರು. ಮಾರನೇ ದಿನ ಮಣಿಪಾಲಕ್ಕೆ ತೆರಳುವರು. ಉಡುಪಿಯಲ್ಲಿ ಪುತ್ತಿಗೆ ಮಠ ಮತ್ತು ಶ್ರೀ ಕೃಷ್ಣ ದೇವಾಲಯವನ್ನು ಸಂದರ್ಶಿಸುವರು. ಅಲ್ಲಿ... ತ್ತು ಧರ್ಮಸ್ಥಳಕ್ಕೂ ಅವರು ಭೇಟಿಯಿತ್ತು, ಚಿಕ್ಕಮಗಳೂರು ಮಾರ್ಗವಾಗಿ ಬೆಂಗಳೂರಿಗೆ ೯ನೇ ತಾರೀಕು ಹಿಂದಿರುಗುವರು

ಕೃತಜ್ಞತೆ

ವಿಶ್ವವಿದ್ಯಾಲಯದ ಸೆನೆಟ್ ಚುನಾವಣೆಯಲ್ಲಿ ತಾವು ಆರಿಸಿಬರಲು ಸಹಕರಿಸಿದವರೆಲ್ಲರಿಗೂ ಶ್ರೀ ಎಲ್. ಶ್ರೀಕಂಠಯ್ಯನವರು ತಮ್ಮ ವಂದನೆಗಳನ್ನು ಸಲ್ಲಿಸುತ್ತಾರೆ.

ಶ್ರೀ ಜಗದಂಬಾ ಶಿಶುವಿಹಾರ
ದಿವಾನರ ರಸ್ತೆ, ಮೈಸೂರು
ಮೇಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ಸಾಧನಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.
ಡಿ. ಕೃಷ್ಣಮೂರ್ತಿ,
ಸೆಕ್ರೆಟರಿ

ಮೈಸೂರು ಸಿಟಿ ನುರಿದ ಗಾಣದ ಎಣ್ಣೆ ಕೈಗಾರಿಕಾಗಾರರ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್
ವಾಣಿವಿಲಾಸ ರೋಡ್ (ಮಾಧವರಾವ್ ಸರ್ಕಲ್ ಬಳಿ), ಮೈಸೂರು
ಅಖಿಲ ಭಾರತ ಖಾದಿ ಮತ್ತು ಗ್ರಾಮ ಕೈಗಾರಿಕಾ ಬೋರ್ಡಿನಲ್ಲಿ ರಿಜಿಸ್ಟರ್ ಆಗಿರುವ ಮೇಲ್ಕಂಡ ಸೊಸೈಟಿಯಲ್ಲಿ ಶೇರು ಕೊಳ್ಳುವ ಪ್ರತಿ ಪೀಸ್ ಎಣ್ಣೆಗೂ ರೂ 0-1-6 ಉಚಿತ ಸಹಾಯ ದೊರೆಯುತ್ತದೆ. ಮತ್ತು ಗಾಣದಿಂದ ಆಡಿದ ಅಪ್ಪಟ ಎಣ್ಣೆಗಳು ದೊರೆಯುತ್ತವೆ

		ಉಚಿತ ಸಹಾಯ	ನೀವು ಕೊಡಬೇಕಾದ್ದು
ಹುಚ್ಚೆಳ್ಳೆಣ್ಣೆ	ಪೀಸ್ 1 ಕ್ಕೆ ರೂ 2 4 6	0 1 6	2 3 0
ಎಳ್ಳೆಣ್ಣೆ	3 7 0	0 1 6	3 5 6

ಸೂಚನೆ – ಅರ್ಧ ಪೀಸಿಗೆ ಕಡಿಮೆ ಕೊಳ್ಳುವವರಿಗೆ ರಿಯಾಯಿತಿ ದೊರೆಯುವುದಿಲ್ಲ

ಟೆಲಿಫೋನ್ ನಂ. 792

ಚಂದಾದರ

ವಿಜಾಪುರಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ೧ರೂ

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : WEDNESDAY 4-7-1956 ಮೈಸೂರು : ಬುಧವಾರ ೪-೭-೧೯೫೬ [ಸಂಚಿಕೆ : ೬೦೬

- ನೆಹರೂರವರಿಗೆ ಲಂಡರ್ನ್ ನಗರದ ಅತ್ಯುನ್ನತ ಪ್ರಶಸ್ತಿ -

ಹೋಟೇಲುಗಳಿಗೆ ನೇರವಾಗಿ ಸರ್ಕಾರದ ಅಕ್ಕಿ ಸರಬರಾಜು

ಬೆಂಗಳೂರು ೪

ಇಲ್ಲಿನ ಹೋಟೇಲು ಮಾಲೀಕರ ಸಂಘದ ಪ್ರತಿನಿಧಿಗಳೊಡನೆ ನೆನ್ನೆ ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ ಕೃಷ್ಣಪ್ಪನವರು ಸಂಭಾಷಣೆ ನಡೆಸಿ, ಮೈಸೂರು ಸರ್ಕಾರಕ್ಕೆ ಒದಗಿಸುವ ದರದಲ್ಲಿಯೇ ಕೇಂದ್ರದವರು ಹೋಟೇಲುಗಳು, ವಿದ್ಯಾರ್ಥಿ ನಿಲಯಗಳು ಮತ್ತು ಅನಾಥಾಶ್ರಮಗಳಿಗೆ ಅಕ್ಕಿ, ಗೋಧಿ ಮತ್ತು ಸಕ್ಕರೆಯನ್ನು ಒದಗಿಸುವುದಾಗಿ ತಿಳಿಸಿದರು. ಹಾಗೆ ಪಡೆದವರ ಸ್ಥಳೀಯ ಮಾರುಕಟ್ಟೆಗಳಲ್ಲಿ ಬೆಲೆಯು ಇಳಿಯುವುದೆಂದೂ ಅವರು ಸೂಚಿಸಿದರು. ಹೋಟೇಲು ಕೈಗಾರಿಕೆಯು ಆಹಾರದ ವ್ಯವಸ್ಥೆಯಲ್ಲಿ ಮುಖ್ಯವಾದ ಭಾಗವೆಂದು ಸರ್ಕಾರದವರು ಪರಿಗಣಿಸಲಿರುವರೆಂದು ಅವರು ತಿಳಿಸಿ, ಹೋಟೇಲಿನವರ ಸಹಕಾರವನ್ನು ಕೋರಿದರು. ತಮ್ಮ ಮಾಹೆಯಾನ ಅವಶ್ಯಕತೆ ವಿವರಗಳನ್ನು ಒದಗಿಸುವಂತೆ ಅವರು ಹೋಟೇಲುಗಳಿಗೆ ಸೂಚಿಸಿದರು.

ರಾಮಸ್ವಾಮಿ ನಾಯಕರಿಂದ ದ್ರಾವಿಡ ಸ್ಥಾನದ ಬೇಡಿಕೆ ವಜಾ

ದ್ರಾವಿಡ ಸ್ಥಾನವೆಂಬ ಸ್ವತಂತ್ರ ಸಾರ್ವಭೌಮ ದಕ್ಷಿಣ ರಾಜ್ಯದ ಬೇಡಿಕೆಯನ್ನು ದ್ರಾವಿಡ ಸಂಘದ ಮುಖಂಡ ಇ. ವಿ. ರಾಮಸ್ವಾಮಿ ನಾಯಕರ್‌ರವರು ಬಿಟ್ಟುಬಿಟ್ಟಿರುವುದಾಗಿ ವರದಿಯಾಗಿದೆ. ದ್ರಾವಿಡನಾಡು ದಿನಾಚರಣೆಯಲ್ಲಿ ಅವರು ನೆನ್ನೆ ಭಾಷಣ ಮಾಡಿ, ದ್ರಾವಿಡ ಸಂಘಕ್ಕೆ ಅನೇಕರು ದ್ರೋಹ ಮಾಡಿದ್ದರಿಂದ ದ್ರಾವಿಡರ ಶಕ್ತಿಯು ಕುಂದಿತೆಂದು ತಿಳಿಸಿ, ಮದ್ರಾಸ್ ಸಂಸ್ಥಾನವು ತಮಿಳುನಾಡು ಆಗದಿದ್ದುದಕ್ಕೆ ವಿಷಾದಿಸಿದರು. ಸಧ್ಯದಲ್ಲಿ ದಕ್ಷಿಣ ಪ್ರದೇಶದ ವಿರುದ್ಧವಾಗಿ ಸಾರ್ವಜನಿಕ ಅಭಿಪ್ರಾಯವಿರುವುದೆಂದು ಅವರು ಹೇಳಿದರು. ದ್ರಾವಿಡ ಮುನ್ನೇತ್ರ ಸಂಘದವರು ದಕ್ಷಿಣ ಪ್ರದೇಶದ ರಚನೆಗಾಗಿ ಒತ್ತಾಯ ಮಾಡುತ್ತಿರುವರು

ಮಾಸ್ತಿ ವೆಂಕಟೇಶಯ್ಯಂಗಾರ್ಯರಿಗೆ ಡಾಕ್ಟರೇಟ್ ಪ್ರಶಸ್ತಿ

ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದವರು ಶ್ರೀ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರಿಗೆ ಗೌರವ ಡಾಕ್ಟರ್ ಆಫ್ ಲಿಟರೇಚರ್ ಪ್ರಶಸ್ತಿಯನ್ನು ಕೊಡಲು ನಿರ್ಧರಿಸಿರುತ್ತಾರೆ. ನೆನ್ನೆ ವಿಶ್ವವಿದ್ಯಾಲಯದ ಸೆನೆಟ್ ಸಭೆಯು ನಡೆದು, ಹಿಂದಿ ಅಧಿಕೃತ ಭಾಷಾ ಕಮೀಷನ್ನಿನ ಅಧ್ಯಕ್ಷ ಬಿ. ಜಿ. ಖೇರ್ ಮತ್ತು ಕರ್ನಾಟಕದ ಪಿ. ಜಿ. ಹಳಕಟ್ಟಿಯವರಿಗೆ ಅದೇ ರೀತಿ ಸನ್ಮಾನ ಮಾಡಲು ನಿರ್ಧರಿಸಲಾಯಿತು. ಬೊಂಬಾಯಿ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯ್, ವಿದ್ಯಾ ಮಂತ್ರಿ ದಿನಕರ್‌ರಾವ್ ದೇಸಾಯ್ ಮತ್ತು ನಿವೃತ್ತ ಹೈಕೋರ್ಟು ನ್ಯಾಯಾಧೀಶರಾದ ಎ. ಎಸ್. ಶೋರ್ಕೂರ್‌ರವರಿಗೆ ಗೌರವ ಡಾಕ್ಟರ್ ಆಫ್ ಲಾಸ್ ಪ್ರಶಸ್ತಿ ಕೊಡಲೂ ತೀರ್ಮಾನಿಸಲಾಯಿತು

ಅಭಾವ ಪ್ರದೇಶಗಳಲ್ಲಿ ಮಧ್ಯಮ ವರ್ಗದವರಿಗೂ ೪ ಸೇರು ಅಕ್ಕಿ

ಅಧಿಕಾರಿಗಳ ಸಭೆಯಲ್ಲಿ ತೀರ್ಮಾನ

ಬೆಂಗಳೂರು ೪

ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಅಭಾವ ಪರಿಹಾರದ ಸಂಬಂಧವಾಗಿ ಕಾರ್ಯಕ್ರಮ ನಡೆಸಲು ನೆನ್ನೆ ಇಲ್ಲಿ ಸಭೆಯೊಂದು ನಡೆಯಿತು. ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪ, ಸಂಸ್ಥಾನದ ರೆವಿನ್ಯೂ ಮತ್ತು ವ್ಯವಸಾಯ ಮಂತ್ರಿಗಳಾದ ಶ್ರೀಗಳು ಕಡಿದಾಳ್ ಮಂಜಪ್ಪ ಮತ್ತು ಹೆಚ್. ಎಂ. ಚನ್ನಬಸಪ್ಪ, ರೆವಿನ್ಯೂ ಕಮೀಷನರ್, ಆಹಾರ ಇಲಾಖಾ ಡೈರೆಕ್ಟರ್, ಮುಂತಾದವರು ಭಾಗವಹಿಸಿದ್ದರು.

ಬಡವರಿಗೂ, ಕೆಳವರ್ಗದವರಿಗೂ ಅಕ್ಕಿಯನ್ನು ಉಚಿತವಾಗಿ ಹಂಚಲು, ಕೇಂದ್ರ ಸರ್ಕಾರದವರು ಕೊಟ್ಟಿರುವ ಅಕ್ಕಿಯನ್ನು ಎಲ್ಲಾ ಜಾಮೀನ್ದಾರರಿಗೆ ಮೂರು ಸೇರಿನಂತೆ ಹಂಚಲೂ ನಿರ್ಧರಿಸಲಾಯಿತು. ಮಧ್ಯಮ ವರ್ಗ ಮತ್ತು ಕಡಿಮೆ ವರಮಾನದ ಜನರಿಗೆ ಒಂದು ಕುಟುಂಬಕ್ಕೆ ೧೦ ಸೇರಿನಂತೆ ವಾರಕ್ಕೊಂದಾವರ್ತಿ ಅದೇ ಬೆಲೆಗೆ ಒದಗಿಸಲು ಗೊತ್ತುಪಡಿಸಲಾಯಿತು

ಪ್ರಾಥಮಿಕ ಮತ್ತು ಮಾಧ್ಯಮಿಕ ಶಾಲೆಗಳಲ್ಲಿ ಮಕ್ಕಳಿಗೂ, ಆ ಪ್ರದೇಶಗಳಲ್ಲಿರುವ ಎಲ್ಲಾ ಬಡ ಮಕ್ಕಳಿಗೂ ಮಧ್ಯಾಹ್ನದ ಊಟವನ್ನು ಒದಗಿಸುವಂತೆಯೂ ತೀರ್ಮಾನಿಸಲಾಯಿತು.

ಸ್ಥಳೀಯ ಅಧಿಕಾರಿಗಳು ನಡೆಸುವ ಪರಿಹಾರ ಕಾರ್ಯಗಳಲ್ಲಿ ರೆಡ್‌ಕ್ರಾಸ್ ಸಂಸ್ಥೆಯವರು ಸಹಾಯ ನೀಡುವರು

ಅಣು ಶಸ್ತ್ರ ಪರೀಕ್ಷಾ ಪ್ರಯೋಗಕ್ಕೆ ನಿಷೇಧ

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿಗೆ ಭಾರತದ ಸೂಚನೆ

ವಿಶ್ವ ಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಡಾಗ್ ಹ್ಯಾಮರ್‌ಷೀಲ್ಡರಿಗೆ ಭಾರತವು ನೆನ್ನೆ ಪತ್ರವೊಂದನ್ನು ಒಪ್ಪಿಸಿ ಅಣು ಶಸ್ತ್ರಾಸ್ತ್ರಗಳ ಪರೀಕ್ಷಾ ಪ್ರಯೋಗಗಳ ಮೇಲೆ ನಿಷೇಧ ಹಾಕಲು ಭಾರತವು ಮಾಡಿರುವ ಸಲಹೆಯನ್ನು ಶಸ್ತ್ರಸನ್ಯಾಸ ಸಮಿತಿಯು ಪರಿಶೀಲಿಸುವಂತೆ ಸೂಚನೆಯಾಗಬೇಕೆಂದು ಕೋರಿರುತ್ತದೆ. ಬರುವ ವಾರ ಭಾರತದ ಮಂತ್ರಿ ವಿ. ಕೆ. ಕೃಷ್ಣಮೆನನ್ನರು ಸಮಿತಿಯ ಮುಂದೆ ಭಾರತ ಸರ್ಕಾರದ ಅಭಿಪ್ರಾಯವನ್ನು ವಿವರಿಸುವರೆಂದು ಗೊತ್ತಾಗಿದೆ

ಸಂಸ್ಥಾನಾದ್ಯಂತ ರೂ. ಗೆ ೨ ಸೇರು ಅಕ್ಕಿ ಮಾರಾಟ

ಬೆಂಗಳೂರು ೪

ಸಂಸ್ಥಾನದ ಎಲ್ಲಾ ಭಾಗಗಳಲ್ಲೂ ಸಧ್ಯದಲ್ಲೇ ರೂಪಾಯಿಗೆ ಎರಡು ಸೇರು ಉತ್ತಮ ದರ್ಜೆ ಅಕ್ಕಿಯನ್ನು ಮಾರಾಟ ಮಾಡಲಾಗುವುದೆಂದು ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ತಿಳಿಸಿರುತ್ತಾರೆ. ಇದಕ್ಕೆ ಬೇಕಾಗುವ ಅಕ್ಕಿಯನ್ನು ಕೇಂದ್ರದವರು ಸಂಸ್ಥಾನ ಸರ್ಕಾರಕ್ಕೆ ಒದಗಿಸುವರು

ಬೇಲೂರರ ಕೊಲೆ ಪ್ರಕರಣ

ಕೃಷ್ಣನ ಮೇಲೆ ಮತ್ತೊಂದು ಕೊಲೆಗುಮಾನಿ

ಬೆಂಗಳೂರು ೪

ಬೇಲೂರು ಶ್ರೀನಿವಾಸಯ್ಯಂಗಾರ್ ಮನೆ ಕೊಲೆ ಪ್ರಕರಣದಲ್ಲಿ ಪತ್ತೆಗಿರುವವರ ಪೈಕಿ ಒಬ್ಬನಾದ ಕೃಷ್ಣನು ಮತ್ತೊಂದು ಕೊಲೆ ಪ್ರಕರಣದಲ್ಲಿ ಸಿಕ್ಕಿಕೊಂಡಿರುವನೆಂದು ವರದಿಯಾಗಿದೆ. ಏಳು ವರ್ಷಗಳ ಹಿಂದೆ ಶಿಡ್ಲಘಟ್ಟದಲ್ಲಿ ೧೬ ವರ್ಷದ ಹುಡುಗನೊಬ್ಬನ ಕೊಲೆ ಸಂದರ್ಭದಲ್ಲಿ ಕೃಷ್ಣನು ಬೇಕಾದವನಾಗಿದ್ದನೆಂದು ಹೇಳಲಾಗಿದೆ. ಸತ್ತವನ ಹೆಸರು ಕಾಂತ ಎಂದು

ಮೈಸೂರು ವಿಶ್ವವಿದ್ಯಾಲಯದ ಪ್ರಥಮ ವೈಸ್ ಛಾನ್ಸೆಲರ್ ಶ್ರೀ ಹೆಚ್. ವಿ. ನಂಜುಂಡಯ್ಯನವರ ಮಗಳು ಶ್ರೀಮತಿ ಕಮಲಮ್ಮನವರು ಹಿಂದೆ ಶಿಡ್ಲಘಟ್ಟದಲ್ಲಿ ಡೆಪ್ಯುಟಿ ಇನ್ಸ್‌ಪೆಕ್ಟರ್ ಆಗಿ ನೇಮಿಸಲ್ಪಟ್ಟಿದ್ದರೆಂದೂ, ಅಲ್ಲಿ ತಮಗೆ ಒಬ್ಬ ಬಾಲಕ ಸೇವಕನು ಬೇಕೆಂದು ಅವರು ಮೈಸೂರಿನಲ್ಲಿ ತಮ್ಮ ಮನೆಯಲ್ಲಿದ್ದ ಆಟ ವೇಲು ಎಂಬುವನನ್ನು ಕೇಳಿದಾಗ ಕೃಷ್ಣನು ಸೇವಕನಾಗಲು ಬಂದನೆಂದೂ, ಇವನನ್ನು ಶ್ರೀಮತಿ ಕಮಲಮ್ಮನವರು ಮನೆಯಲ್ಲಿ ಬಿಟ್ಟು ಕೆಲಸದ ಮೇಲೆ ಹೋಗಿ ಹಿಂದಿರುಗಿದಾಗ ಮನೆಯಲ್ಲಿ ಯಾರೂ ಇರದೆ, ೧,೦೦೦ ರೂ ಬೆಲೆ ಬಾಳುವ ಗಡಿಯಾರ ಮುಂತಾದ ಸಾಮಾನುಗಳು ನಾಪತ್ತೆಯಾಗಿದ್ದುವೆಂದೂ ಹೇಳಲಾಗಿದೆ. ಕೃಷ್ಣನೊಡನೆ ಮನೆಯಲ್ಲಿ ವೇಲುವಿನ ಮಗ ಕಾಂತ ಎಂಬುವನು ಇದ್ದನೆಂದೂ, ಅವನ ಶರೀರವು ಬಾವಿಯೊಂದರಲ್ಲಿ ತೇಲುತ್ತಿತ್ತೆಂದೂ, ಮೈ ಮೇಲೆ ಹಿಂಸಾತ್ಮಕ ರೀತಿಯ ಮರಣದ ಗುರುತುಗಳು ಕಂಡುಬಂದಿದ್ದುವೆಂದೂ ಹೇಳಲಾಗಿದೆ

ಕೃಷ್ಣನ ಗುರುತು ಪತ್ತೆಹಚ್ಚಲು ಶ್ರೀಮತಿ ಕಮಲಮ್ಮ, ವೇಲು ಮತ್ತು ಮತ್ತೊಬ್ಬರನ್ನು ಪೊಲೀಸರು ಕೈದಿಗೆ ಕರೆಸಿದ್ದರು

ಕೃಷಿ ವಿದ್ಯಾಲಯದಲ್ಲಿ ೬,೦೦೦ ರೂ. ಇದ್ದ ಚೀಲದ ಅಪಹಾರ

ಬೆಂಗಳೂರು ಹೆಬ್ಬಾಳ ಕೃಷಿ ವಿದ್ಯಾಲಯದಲ್ಲಿ ನೆನ್ನೆ ಕೃಷಿ ನೌಕರ ಶ್ರೀ ಎಸ್. ರಂಗರಾಜನ್ ಎಂಬುವರು ಇಟ್ಟುಕೊಂಡಿದ್ದ ೬,೦೦೦ ರೂ. ಗಳ ಹಣದ ಚೀಲವೊಂದನ್ನು ಅಪಹರಿಸಲಾದ ವಿಷಯವು ವರದಿಯಾಗಿದೆ. ಅವರು ಅಸಿಸ್ಟೆಂಟ್ ಸ್ಟೇಷನ್ ಮಾಸ್ಟರ್ ಕಛೇರಿಯಿಂದ ಎರಡು ನಗದು ಚೀಲಗಳನ್ನು ತೆಗೆದುಕೊಂಡು ಅವುಗಳಿಗೆ ಚೀಟಿ ಬರೆಯಲು ಚೀಲಗಳನ್ನು ನೆಲದ ಮೇಲೆ ಇಟ್ಟಾಗ ಒಂದು ಪತ್ತೆಯಿಲ್ಲವಾಯಿತೆಂದು ಹೇಳಲಾಗಿದೆ. ಮತ್ತೊಂದು ಚೀಲದಲ್ಲಿ ೭,೦೦೦ ರೂ. ಗಳಿದ್ದುವು.

ಕೃಷ್ಣರಾಜಸಾಗರದಲ್ಲಿ ನೀರನ್ನು ಬಿಟ್ಟುಬಿಡಲಾಗುತ್ತಿದೆ

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವು ೧೧೪ ಅಡಿ ಗಿಟ್ಟ ಏರಿಗಳಷ್ಟಿದೆ. ನದಿಗಳಲ್ಲಿ ಪ್ರವಾಹವು ಬರುತ್ತಿದೆಯಾದರೂ ವಿಪರೀತ ಅಲೆಗಳಿದ್ದು ಕಟ್ಟೆಯ ಮೇಲೆ ನೀರು ನುಗ್ಗುವ ಸಂಭವವಿರುವುದರಿಂದ ನೀರನ್ನು ಬಿಟ್ಟುಬಿಡಲಾಗುತ್ತಿದೆ. ವಿಶ್ವೇಶ್ವರಯ್ಯ ನಾಲೆಯಲ್ಲಿ ಮಾತ್ರ ಎಷ್ಟಿಲ್ಲ.

ಶಾಸನಸಭೆಯ ಕಾಂಗ್ರೆಸ್ ಪಕ್ಷದ ನಾಯಕತ್ವ

ಪ್ರದೇಶ ಕಾಂಗ್ರೆಸ್ ಸಮಿತಿಯಲ್ಲಿ ಸಮಾಲೋಚನೆ

ಬೆಂಗಳೂರು ೪

ಈ ದಿನ ಮಧ್ಯಾಹ್ನ ಸಂಸ್ಥಾನದ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಸೇರಿ ರಾಜಕೀಯ ಪರಿಸ್ಥಿತಿಯನ್ನು ಪರಿಶೀಲಿಸಿತೆಂದು ಗೊತ್ತಾಗಿದೆ. ತಮ್ಮನ್ನು ಪಕ್ಷದ ನಾಯಕತ್ವದಿಂದ ಉರುಳಿಸಲು ಪ್ರಯತ್ನಗಳು ನಡೆಯುತ್ತಿರುವುವಾಗಿ ಮುಖ್ಯ ಮಂತ್ರಿಯವರು ದಾವಣಗೆರೆಯಲ್ಲಿ ಹೇಳಿದ ಅಭಿಪ್ರಾಯಗಳನ್ನೂ ಮತ್ತು ಶಾಸನಸಭೆಯ ಸುಮಾರು ೬೦ ಜನರು ಅವರಲ್ಲಿ ಅವಿಶ್ವಾಸವನ್ನು ಸೂಚಿಸಲು ಬರೆದಿರುವ ಪತ್ರವನ್ನೂ ಪರಿಶೀಲಿಸಲಾಗುತ್ತಿದೆಯೆಂದು ತಿಳಿದುಬಂದಿದೆ

ನೆಹರೂರವರಿಗೆ ಲಂಡರ್ನ್ ನಗರದ ಅತ್ಯುನ್ನತ ಗೌರವ

ವಿಶ್ವವಿಖ್ಯಾತ ಪುರುಷ ಶ್ರೇಣಿಯಲ್ಲಿ ಸ್ಥಾನ

ಬ್ರಿಟನ್ನಿನ ರಾಜಧಾನಿ ಲಂಡನ್ ನಗರದ ಇತಿಹಾಸ ಪ್ರಸಿದ್ಧವಾದ ಗಿಲ್ಡ್ ಹಾಲ್ ಮಂದಿರದಲ್ಲಿ ನೆನ್ನೆ ನಡೆದ ಸಮಾರಂಭದಲ್ಲಿ ಪ್ರಧಾನಿ ನೆಹರೂರವರಿಗೆ "ಫ್ರೀಡಂ ಆಫ್ ದಿ ಸಿಟಿ ಆಫ್ ಲಂಡನ್" ಎಂಬ ಅತ್ಯುನ್ನತ ಗೌರವ ಪ್ರಶಸ್ತಿಯನ್ನು ಕೊಡಲಾಯಿತು. ಪ್ರಪಂಚ, ಕಾಮನ್‌ವೆಲ್ತ್ ಅಥವಾ ಬ್ರಿಟಿಷ್ ರಾಷ್ಟ್ರಕ್ಕೆ ಅಸಮಾನವಾದ ಸೇವೆ ಸಲ್ಲಿಸಿದವರಿಗೆ ಈ ಗೌರವ ಪ್ರಶಸ್ತಿಯನ್ನು ಕೊಡುವುದು ವಾಡಿಕೆ. ನೆಹರೂರವರಲ್ಲದೆ, ಸ್ಕಾಟ್ಲೆಂಡಿನ ಪ್ರಧಾನಿ ಸಿಡ್ನಿ ಹಾಲೆಂಡರಿಗೂ ಈ ಪ್ರಶಸ್ತಿಯು ಅದೇ ಸಂದರ್ಭದಲ್ಲಿ ಕೊಡಲ್ಪಟ್ಟಿತು. ಬುಧವಾರ ಹೆಸರನ್ನು ಸುಪ್ರಸಿದ್ಧ ಪುರುಷ ಪಟ್ಟಿಯಲ್ಲಿ ಸೇರಿಸಲಾಯಿತು. ಪ್ರಶಸ್ತಿಯನ್ನು ಸ್ವೀಕರಿಸಿದ ನೆಹರೂರವರು ಬ್ರಿಟನ್ ಮತ್ತು ಭಾರತಗಳ ನಡುವೆ ಈಗ ಇರುವ ಸ್ವತಂತ್ರ ಸಂಬಂಧವನ್ನು ಈ ಸಮಾರಂಭವು ನೆನಪಿಗೆ ತರುವುದಾಗಿ ತಿಳಿಸಿದರು. ಇಡೀ ಜಗತ್ತು ಒಂದು ಮಾರ್ಗವನ್ನು ಅಗಿ ಕರೆಯುವ ಕಾಲವನ್ನು ನಾವು ಎದುರು ನೋಡುತ್ತಿರುವುದಾಗಿಯೂ ಅವರು ನುಡಿದರು.

ಅಂತರ ಸಂಸ್ಥಾನದ ಕಾರ್ಯದರ್ಶಿಗಳ ಸಮಿತಿ

(ಸ್ವಂ. ಸು. ತಂತಿ) ಬೆಂಗಳೂರು ೪

ನೂತನ ಕನ್ನಡ ಸಂಸ್ಥಾನದ ಸಮಸ್ಯೆಗಳನ್ನು ಕುರಿತು ಸಮಾಲೋಚನೆ ನಡೆಸಲು ಅಂತರ ಸಂಸ್ಥಾನ ಸರ್ಕಾರಗಳ ಕಾರ್ಯದರ್ಶಿಗಳ ಸಮಿತಿಯೊಂದನ್ನು ಮೈಸೂರು ಸರ್ಕಾರದವರು ರಚಿಸಿರುತ್ತಾರೆ. ಮೈಸೂರಿನ ಪರವಾಗಿ ಶ್ರೀಗಳಾದ ಎನ್. ಪುಟ್ಟರಂಗಸ್ವಾಮಿ ಮತ್ತು ಎಸ್. ಮುನಿನಂಜಪ್ಪನವರು ಅದರಲ್ಲಿ ಇರುವರು

ದೆಹಲಿಗೆ ಎಂ. ವಿ. ಕೃಷ್ಣಪ್ಪನವರ ಪ್ರಯಾಣ

ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಈ ದಿನ ದೆಹಲಿಗೆ ವಿಮಾನದಲ್ಲಿ ಹಿಂದಿರುಗಿದರು. ಪುನಃ ತಾರೀಖು ೨೩ ಕ್ಕೆ ಮತ್ತೆ ಬರುವರು

ಧರ್ಮ ರಕ್ಷಣೆಯಿಂದಲೇ ಸಕಲ ಪ್ರಜೆಗಳ ಹಿತಸಾಧನೆ

ಶ್ರೀ ಗೋಕರ್ಣ ಮಠಾಧೀಶರ ಸಂದೇಶ

ಮೈಸೂರು ೪

ಶ್ರೀ ಸಂಸ್ಥಾನ ಗೋಕರ್ಣ ಪರ್ತಗಾಳಿ ಜೀವೋತ್ತಮ ಮಠಾಧೀಶರಾದ ಶ್ರೀಮದ್ವಾರಕಾನಾಥ ತೀರ್ಥ ಶ್ರೀಪಾದ ವಡೇರಸ್ವಾಮಿ ಮಹಾರಾಜರವರು ನಗರದಿಂದ ತೆರಳುವ ಸಂದರ್ಭದಲ್ಲಿ ಈ ಕೆಳಗೆ ಕಂಡಂತೆ ಸಂದೇಶವನ್ನು ನೀಡಿದ್ದಾರೆ —

ಲೋಕವು ಧರ್ಮದಿಂದಲೇ ಸುಖವಾಗಿ ಬದುಕುವುದು ಧರ್ಮದಿಂದಲೇ ಮಾನವನ ಸಕಲ ವಿಧವಾದ ಸುಖಸಂಪತ್ತಿಗಳ ಸಾಧನೆಯಾಗುತ್ತದೆ

ಭಾರತವು ಮೊದಲಿನಿಂದಲೂ ಧರ್ಮ ಭೂಮಿಯಾಗಿದೆ ಭಾರತದಲ್ಲಿ ಈಗ ಸ್ವರಾಜ್ಯ ಪಡೆಯಿತ್ತಿದೆ ಸ್ವರಾಜ್ಯದಲ್ಲಿ ಧರ್ಮ ರಕ್ಷಣೆಯಿಂದಲೇ ಸಕಲ ಪ್ರಜೆಗಳ ಹಿತ ಸಾಧನೆಯಾಗಬೇಕು ಆಡಳಿತಗಾರರು ಧರ್ಮಾತೀತ ರಾಜ್ಯಾಂಗಕ್ಕೆ ಅನುಸಾರವಾಗಿ ನಡೆಯಬೇಕು ಧರ್ಮಗಳ ಬಗ್ಗೆ ಪಕ್ಷಪಾತ ನಡೆಸಕೂಡದು ಮತ್ತು ಧರ್ಮ ಸಂಬಂಧವಾದ ಯಾವುದೇ ವಿಷಯದಲ್ಲಿಯೂ ಕಾನೂನು ಮಾಡುವುದು ಸರಿಯಲ್ಲ ಮತ್ತು ಅದು ನಡೆಯುವುದೂ ಇಲ್ಲ.

ಧರ್ಮಾಚರಣೆಯಿಂದಲೇ ಜನತೆಗೆ ಸಕಲ ಸುಖ ಸೌಭಾಗ್ಯ ಸಾಧನೆಯಾಗುತ್ತದೆ ಆದ್ದರಿಂದ ಆ ಬಗ್ಗೆ ಜನತೆಯು ಸರಿಯಾದ ನಿರ್ಣಯದಿಂದ ವರ್ತಿಸಬೇಕು, ಮತ್ತು ಆಡಳಿತಗಾರರಿಗೂ ಆ ಬಗ್ಗೆ ಸರಿಯಾದ ತಿಳುವಳಿಕೆ ಕೊಟ್ಟು ಧರ್ಮ ರಕ್ಷಣೆ ಮಾಡಿಕೊಳ್ಳಬೇಕು

ಇಂದು ಪತ್ರಿಕೆಗಳ ಜವಾಬ್ದಾರಿಯು ಬಹಳ ಗುರುತರವಾದುದು ಅವರು ಪ್ರತಿಯೊಂದು ವಿಷಯವನ್ನೂ ಪೂರ್ವಾಪರ ಆಲೋಚನೆ ಮಾಡಿ ನಮ್ಮ ದೇಶದ ಹಿತವನ್ನು ಲಕ್ಷ್ಯದಲ್ಲಿ ಧರ್ಮದ ಆಧಾರದ ಮೇಲೆ ಯಾವಾಗಲೂ ಸುಬುದ್ಧಿ ನೀಡುವಂತೆ ಆಡಳಿತಗಾರರಿಗೂ, ಜನತೆಗೂ ತಿಳುವಳಿಕೆ ಕೊಡಬೇಕು.

ಹೀಗೆ ಮಾಡುವುದರಿಂದ ಮಾತ್ರವೇ ಲೋಕದಲ್ಲಿ ಸಕಲರೂ ಭಗವಂತನ ಪ್ರೀತಿಗೆ ಪಾತ್ರರಾಗಿ ಯಾವ ದುರಂತಗಳೂ ಇಲ್ಲದೆ ರಾಮರಾಜ್ಯದ ಸುಖವನ್ನು ಕಾಣಬಹುದು

ಜನತಾ ರಂಗದ ಚುನಾವಣಾ ಪ್ರಚಾರ

ರಾಜಧಾನಿಯಲ್ಲಿರುವ ಜನತಾ ರಂಗ ಸಂಸ್ಥೆಯವರು ಚುನಾವಣಾ ಪ್ರಚಾರದ ಅಂಗವಾಗಿ ತಮ್ಮ ಪ್ರಥಮ ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ ಅದರಲ್ಲಿ ಸಂಘದ ಧ್ಯೇಯಗಳನ್ನು ವಿವರಿಸಲಾಗಿದೆ ಭಾರತವನ್ನು ೪೦ ಸ್ವತಂತ್ರ ಸಮಯುಕ್ತ ಪ್ರಾಂತಗಳನ್ನಾಗಿ ಮಾಡಬೇಕೆಂದು ಸಂಯುಕ್ತ ಪ್ರಕಟನೆಯಲ್ಲಿ ತಿಳಿಸಿದೆ ಮುಂದಿನ ಚುನಾವಣೆಗಳಲ್ಲಿ ಸಂಸ್ಥೆಯ ಪರವಾಗಿ ಸ್ಪರ್ಧಿಗಳನ್ನು ನಿಲ್ಲಿಸಲಾಗುವುದು ಸ್ಪರ್ಧಿಗಳಾಗಬಯಸುವವರು ಇದೇ ಸೆಪ್ಟೆಂಬರ್ ಒಂದರೊಳಗೆ ಸಕ್ರಿಯ ಸದಸ್ಯರಾಗಬೇಕು

ಪುರಾಣ ಶ್ರವಣ

ರಾಜಧಾನಿಯ ಸೀತಾವಿಲಾಸ ಅಗ್ರಹಾರದ ಶಿವ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ಈ ರಾತ್ರಿ ೮ ಗಂಟೆಗೆ ಶ್ರೀ ಗರುಡ ಬಿ ಎಸ್. ಎಸ್. ಕೌಶಿಕ್‌ರವರಿಂದ ಪುರಾಣ ಶ್ರವಣವನ್ನು ಏರ್ಪಡಿಸಲಾಗಿದೆ ಸರ್ವರಿಗೂ ಆಹ್ವಾನವುಂಟು

ಜಿಲ್ಲಾ ಜನಸಂಘದ ಸಮ್ಮೇಳನ

ನಗರದ ಜನಸಂಘ ಶಾಖೆಯ ಸಭೆಯು ಡಾ॥ ಶಿವಯ್ಯನವರ ಅಧ್ಯಕ್ಷತೆಯಲ್ಲಿ ಕಳೆದ ಭಾನುವಾರ ಸೇರಿ ಈ ತಿಂಗಳು ೧೫ನೇ ತಾರೀಖು ಜಿಲ್ಲಾ ಸಮ್ಮೇಳನವನ್ನು ನಡೆಸಬೇಕೆಂದು ತೀರ್ಮಾನಿಸಿತು. ಅದರ ಆರಂಭೋತ್ಸವವನ್ನು ನೆರವೇರಿಸಲು ಆಂಧ್ರ ಪ್ರಾಂತ ಸಂಘದ ಸಂಘಟನಾ ಕಾರ್ಯದರ್ಶಿ ಶ್ರೀ ಗೋಪಾಲರಾವ್ ಅವರನ್ನು ಆಹ್ವಾನಿಸಲಾಗುವುದು.

ಕಾವ್ಯ ವಾಚನ

ರಾಜಧಾನಿಯ ಜಯನಗರದಲ್ಲಿರುವ ಶ್ರೀ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ಏಕಾದಶಿ ಪ್ರಯುಕ್ತ ನಾಳೆ ಸಂಜೆ ೬–೩೦ಕ್ಕೆ ಗಮಕಿ ಶ್ರೀ ಬಿ ಎಸ್ ಎಸ್ ಕೌಶಿಕ್‌ರವರಿಂದ ಶ್ರೀ ಶಂಕರ ವಿಜಯ ಕಾವ್ಯವಾಚನವನ್ನು ಏರ್ಪಡಿಸಲಾಗಿದೆ

ಆಯುರ್ವೇದ ಮತ್ತು ಯುನಾನಿ ಪದವೀಧರರ ಸಮ್ಮೇಳನ

ಸ್ವಾಗತ ಸಮಿತಿಯವರ ಮನವಿ

ಆಯುರ್ವೇದ ಮತ್ತು ಯುನಾನಿ ಕಾಲೇಜು ಪದವೀಧರರ ಸಂಘದ ೧೧ ನೇ ಸಮ್ಮೇಳನದ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಡಾ॥ ಬಿ ಜಿ ವೆಂಕಟೇಶರಾವ್ ಆಚಾರ್ಯರು ಈ ರೀತಿ ಬರೆದಿರುತ್ತಾರೆ —

ಮೇಲ್ಕಂಡ ಸಮ್ಮೇಳನವು ಸದ್ಯದಲ್ಲೇ ಹಾಸನದಲ್ಲಿ ನಡೆಯುತ್ತದೆ. ಸಕಲೇಶಪುರದ ಡಾ॥ ಎ ಕೆ ಎ ಖುದ್ದೂಸ್‌ರವರ ಅಧ್ಯಕ್ಷತೆಯಲ್ಲಿ ಸ್ವಾಗತ ಸಮಿತಿಯೊಂದನ್ನು ರಚಿಸಲಾಗಿದೆ ಸಮ್ಮೇಳನದಲ್ಲಿ ಮುಖ್ಯ ಮಂತ್ರಿಗಳೂ, ಆರೋಗ್ಯ ಸಚಿವರೂ, ಸ್ಥಳೀಯ ಸಂಸ್ಥೆ ಕಮಿಷನರರೂ, ಪ್ರಸಿದ್ಧ ಆಯುರ್ವೇದ ವೈದ್ಯರೂ, ಭಾಗವಹಿಸುವ ನಿರೀಕ್ಷೆಯಿದೆ

ಸಮ್ಮೇಳನದ ಅಂಗವಾಗಿ ಕಾಯ ಚಿಕಿತ್ಸೆ, ಶಲ್ಯ ಚಿಕಿತ್ಸೆ, ಸ್ತ್ರೀ ಮತ್ತು ಬಾಲ ರೋಗ ಚಿಕಿತ್ಸೆ ಮುಂತಾದ ಪರಿಷತ್ತುಗಳು, ಜಿಲ್ಲಾ ಬೋರ್ಡ್ ವೈದ್ಯರ ಪ್ರತ್ಯೇಕ ಸಭೆ ಮತ್ತು ವಸ್ತು ಪ್ರದರ್ಶನಗಳು ನಡೆಯುವುವು ಅದೇ ಸಮಯದಲ್ಲಿ ಸಂಘದ ಪತ್ರಿಕೆಯನ್ನೂ ಉದ್ಘಾಟಿಸಲಾಗುವುದು

೫ ರೂ ಕೊಟ್ಟು ಸ್ವಾಗತ ಸಮಿತಿಯ ಆದವರು ೩ ರೂ. ಕೊಟ್ಟು ಸಮ್ಮೇಳನದ ಪ್ರತಿನಿಧಿಯಾಗಲು ಅವಕಾಶವಿದೆ ಪರಿಷತ್ತಿಗಾಗಿ ಉಪಯುಕ್ತ ಲೇಖನಗಳನ್ನು ಕಳುಹಬಹುದು ಪ್ರದರ್ಶನಕ್ಕೆ ಹಳಗನ್ನಡ ಪುಸ್ತಕ, ಗಿಡ ಮೂಲಿಕೆ, ಖನಿಜ, ರಸಾಯನ ಮುಂತಾದುವನ್ನೂ ಕಳುಹಬಹುದು ಜಿಲ್ಲೆಯ ಚಿಕಿತ್ಸಾಲಯಕ್ಕೆ ಧನ ಸಹಾಯ ಮಾಡಬಹುದು

ಸಮ್ಮೇಳನದಲ್ಲಿ ಚರ್ಚಿಸುವ ವಿಷಯಗಳನ್ನು ಇದೇ ತಿಂಗಳು ೧೫ರೊಳಗೆ ಬಿ ಜಿ ವೆಂಕಟೇಶರಾವ್ ಆಚಾರ್ಯ, ಹಾರನಹಳ್ಳಿ ಪೋಸ್ಟ್, ಅರಸೀಕೆರೆ ತಾಲ್ಲೂಕು– ಈ ವಿಳಾಸಕ್ಕೆ ಕಳುಹಿಸಬೇಕು

ಹಿರೋಷಿಮಾ ಅಣು ಬಾಂಬಿಗೆ ಮತ್ತೊಬ್ಬನು ತುತ್ತು

೧೧ ವರ್ಷಗಳ ಕೆಳಗೆ ಜಪಾನಿನ ಹಿರೋಷಿಮಾ ನಗರದ ಮೇಲೆ ಹಾಕಲಾದ ಪ್ರಥಮ ಅಣುಬಾಂಬಿನ ಪ್ರಯೋಗದ ಪರಿಣಾಮವಾಗಿ ನೊನ್ನೆ ೫೬ ವರ್ಷದ ಕಾರ್ಮಿಕನೊಬ್ಬನು ಮೃತಪಟ್ಟನು ಅವನಿಗೆ ೧೯೫೦ರಿಂದಲೂ ಚರ್ಮ ಸಂಬಂಧವಾದ ರೋಗವು ಉಲ್ಬಣಿಸಿತ್ತು ಈ ವರ್ಷ ಆ ರೋಗದಿಂದ ಮೃತರಾದವರಲ್ಲಿ ಇವನು ೮ನೆಯವನು

ಇಸ್ರೇಲ್–ಅರಬ್ ಘರ್ಷಣೆಯಿಂದ ಮೂರನೇ ಮಹಾ ಯುದ್ಧ ಸಿದ್ಧ

ಇಸ್ರೇಲ್ ಮತ್ತು ಅರಬ್ ರಾಜ್ಯಗಳಿಗೆ ಯುದ್ಧವಾದರೆ ಅದರಿಂದ ತೃತೀಯ ಯುದ್ಧ ಸಿದ್ಧವೆಂದು ರಷ್ಯದ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ನಿಕಿಟಾ ಕ್ರುಶ್ಚೇವರು ತಿಳಿಸಿರುತ್ತಾರೆ

ವಿವಾಹ ಮಹೋತ್ಸವ

ರಾಜಧಾನಿಯ ಚಾವಡಿ ಬೀದಿಯಲ್ಲಿರುವ ಶ್ರೀ ಗೂಳಪ್ಪನವರು ತಮ್ಮ ಪುತ್ರ ಶ್ರೀ ಜಿ ನಾಗೇಂದ್ರಪ್ಪನವರಿಗೆ ಸಂತೆಪೇಟೆ ವರ್ತಕರಾದ ಶ್ರೀ ಟಿ ಚಂದ್ರಶೇಖರಪ್ಪನವರ ಮಗಳು ಸೌ॥ ಗಿರಿಜಾಂಬಳನ್ನೂ, ಮತ್ತೊಬ್ಬ ಪುತ್ರ ಶ್ರೀ ಜಿ ನಾಗರಾಜುರವರಿಗೆ ಸಂತೆಪೇಟೆಯ ವರ್ತಕರಾದ ಶ್ರೀ ಬಿ. ಎಸ್ ಚಂದ್ರಶೇಖರಯ್ಯನವರ ಪುತ್ರಿ ಸೌ॥ ಸರ್ವಮಂಗಳಾರವರನ್ನೂ ತಂದುಕೊಂಡು ವಿವಾಹ ನಡೆಸಿದ ಸಂಬಂಧದಲ್ಲಿ ನೆನ್ನೆ ನಗರದಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಕ್ಲಾರಿಯೊನೆಟ್, ೭ ೧೫ ಎಸ್ ರಾಮಚಂದ್ರರಾವ್–ವೀಣೆ ನಾಮ ೭ ೪೦ ಮತ್ತು ೮ ೧೫ ಆರ್ ಚಂದ್ರ ಕಾವ್ಯವಾಚನ ಮಧ್ಯಾಹ್ನ ೧೨ ೬ ಎಸ್ ವೆಂಕಟರಾಮರಾವ್–ಸಂಗೀತ ೧೨ ೪೦ ಟಿ ರುಕ್ಮಿಣಿ–ಪಿಟೀಲು. ೧ ೪೦ ಶಿವರಾಂ ಬುಳಯಕರ್–ಹಿಂದೂಸ್ಥಾನಿ ಸಂಗೀತ ೧.೫೦ ಕ್ಲಾರಿಯೊನೆಟ್ ೩–೧೫ ಪ್ರೌಢ ಶಾಲೆಗಳಿಗಾಗಿ ಸಂಜೆ ೫.೪೦ ಹಿಂದೂಸ್ಥಾನಿ ಸಂಗೀತ ೬ ೧೫ ಜಾನಪದ ಗೀತೆ ೬ ೪೦ ಭಕ್ತಿ ಗೀತೆ ೭ ಸಿಟಾರು ೮ ೪೦ ಸಂಗೀತ ೯–೧೫ ವಿನೋದ ಮತ್ತು ಆರೋಗ್ಯ ಅಭಿವೃದ್ಧಿ–ಭಾಷಣ ೯–೪೦ ಅನಂತ ನಾಧನ್–ನಾಟಕ ೧೦ ನಿಮ್ಮ ಮೆಚ್ಚಿನ ಗೀತೆಗಳು

ಶ್ರೀರಾಮ ಮತ್ತು ಸೀತೆಯರ ವಿಡಂಬನ ಮೆರವಣಿಗೆ

ತಿರುಚನಾಪಳ್ಳಿಯಲ್ಲಿ ದ್ರಾವಿಡ ಸಂಘದ ಪ್ರದರ್ಶನ

ತಿರುಚನಾಪಳ್ಳಿಯಲ್ಲಿ ಕಳೆದ ಭಾನುವಾರ ಸ್ಥಳೀಯ ದ್ರಾವಿಡ ಸಂಘದವರು ಒಂದು ವಿಶಿಷ್ಟವಾದ ಮೆರವಣಿಗೆಯನ್ನು ನಡೆಸಿದರು ಎತ್ತಿನ ಗಾಡಿಯೊಂದರಲ್ಲಿ ಶ್ರೀರಾಮ ಸೀತೆ ಮತ್ತು ಆಂಜನೇಯರ ವೇಷವನ್ನು ಧರಿಸಿದ್ದ ಮೂವರನ್ನು ನಿಲ್ಲಿಸಲಾಗಿತ್ತು. ರಾಮನು ಹೆಂಡದ ಗಡಿಗೆಯನ್ನು ಹಿಡಿದು ಕುಡುಕನಂತೆ ನಟಿಸುತ್ತಾ ಸೀತೆಯ ಮೇಲೆ ಬೀಳುತ್ತಿದ್ದುದೂ, ಅವನ ಮೇಲೆ 'ಸೀತೆ' ಯು ಅನುರಾಗ ವೃಷ್ಟಿಯನ್ನು ಬೀರುತ್ತಿದ್ದುದೂ ರಸ್ತೆ ಉದ್ದಕ್ಕೂ ನಡೆಯಿತು ಹಿಂದುಗಡೆ ಬೆಂಕಿ ಗಡಿಗೆಗಳನ್ನು ಹಿಡಿದವರು ಇದ್ದರು ದ್ರಾವಿಡ ಸಂಘದ ಮುಖಂಡರಾದ ಇ. ವಿ ರಾಮಸ್ವಾಮಿನಾಯಕರು ಕಾರಿನಲ್ಲಿ ಮೆರವಣಿಗೆಯ ಹಿಂದೆ ಬರುತ್ತಿದ್ದರು ಮೆರವಣಿಗೆಯವರು "ಬ್ರಾಹ್ಮಣರೇ ತೊಲಗಿ, ಆರ್ಯನರೇ ತೊಲಗಿ" ಎಂದು ಕೂಗುತ್ತಿದ್ದರು ಅದಾದನಂತರ ಬಹಿರಂಗ ಸಭೆ ನಡೆದು ನಾಯಕರ್‌ರವರು ಭಾಷಣ ಮಾಡಿದರು

ರಷ್ಯದಲ್ಲಿ ಸಮುದ್ರದಷ್ಟು ಭಾರಿ ಜಲಾಶಯ

ಮಧ್ಯ ರಷ್ಯದಲ್ಲಿ ಓಲ್ಗಾ ನದಿಗೆ ಅಣೆಕಟ್ಟನ್ನು ಕಟ್ಟಿ ಭಾರಿ ಜಲಾಶಯವೊಂದನ್ನು ನಿರ್ಮಿಸಲಾಗಿದೆ ಅದನ್ನು ಕುಯ್ಬಿಶೇವ್ ಸಮುದ್ರವೆಂದು ಕರೆಯಲಾಗಿದೆ ಅದು ೪,೯೦೦ ಚದರ ಮೈಲಿಯಷ್ಟು ವಿಸ್ತಾರವಾಗಿರುವುದು ಅಣೆಕಟ್ಟು ಬಳಿಗೂ ಆದಿ ನೀರು ನಿಲ್ಲುವಂತೆ ಮಾಡಲಾಗಿದೆ ಆ ಪ್ರದೇಶದಲ್ಲಿ ಯಾಂತ್ರಿಕ ದೋಣಿಗಳನ್ನು ನಿರ್ಮಿಸಲಾಗುತ್ತಿದೆ ಅಲ್ಲಿ ಮೀನುಗಳನ್ನು ಸಾಕಲಾಗುವುದು.

ಪೂರ್ವ ಜರ್ಮನಿಯಲ್ಲಿ ೩೦ ಸಾವಿರ ಸೈನಿಕರ ಖೋತಾ

ಪೂರ್ವ ಜರ್ಮನಿಯ ೧,೫೦,೦೦೦ ಸೈನಿಕರ ಪೈಕಿ ೩೦,೦೦೦ ಜನರನ್ನು ಖೋತಾ ಮಾಡಲಾಗುವುದೆಂದು ಗೊತ್ತಾಗಿದೆ ಇನ್ನುಮುಂದೆ ಅಲ್ಲಿ ಸ್ವಯಂಪ್ರೇರಿತವಾಗಿ ಬರುವವರನ್ನು ಸೈನ್ಯಕ್ಕೆ ತೆಗೆದುಕೊಳ್ಳಲಾಗುವುದು

ಕೈ ಚಾಕುವಿನಿಂದಲೇ ಶಸ್ತ್ರ ಚಿಕಿತ್ಸೆ

ಆಸ್ಟ್ರೇಲಿಯದ ನ್ಯೂ ಸೌತ್ ವೇಲ್ಸ್ ಪ್ರಾಂತದ ರಾಜಧಾನಿ ಸಿಡ್ನಿಯ ಆಸ್ಪತ್ರೆಯೊಂದರಲ್ಲಿ ಮರಣೋನ್ಮುಖಳಾಗಿದ್ದ ಒಬ್ಬ ಮಹಿಳೆಯ ಪ್ರಾಣವನ್ನು ಉಳಿಸಲು ವೈದ್ಯರು ಶಸ್ತ್ರ ಚಿಕಿತ್ಸಾ ಸಾಧನಗಳಿಗಾಗಿ ಕಾಯಲು ಸಾಧ್ಯವಿಲ್ಲದೆ ತಮ್ಮ ಕೈ ಚಾಕುವಿನಿಂದ ಚಿಕಿತ್ಸೆ ನಡೆಸಿದರೆಂದು ವರದಿಯಾಗಿದೆ ೧೨ ದಿನಗಳ ಹಿಂದೆ ಶ್ವಾಸಕೋಶದ ಒಂದು ಭಾಗವನ್ನು ತೆಗೆಯಲು ಶಸ್ತ್ರ ಚಿಕಿತ್ಸೆಯಾಗಿತ್ತು. ಅದರಿಂದ ಆಕೆಯ ಉಸಿರು ಕಟ್ಟಿಕೊಂಡು ಹೃದಯಕ್ರಿಯೆಯು ನಿಂತಿತ್ತೆಂದೂ, ವೈದ್ಯರು ತಮ್ಮ ಬಳಿಯಿದ್ದ ಚಾಕುವಿನಿಂದ ಶಸ್ತ್ರ ಚಿಕಿತ್ಸೆ ನಡೆಸಿ, ಹೃದಯವನ್ನು (ಮಸಾಜ್) ನೀವಿದನಂತರ ಸ್ವಲ್ಪ ಹೊತ್ತಿನ ಮೇಲೆ ಅದು ಬಡಿದುಕೊಳ್ಳತೊಡಗಿತೆಂದೂ ಹೇಳಲಾಗಿದೆ ಹೆಂಗಸು ಅಪಾಯ ಸ್ಥಿತಿಯಲ್ಲಿದ್ದರೂ ಉತ್ತಮಗೊಳ್ಳುತ್ತಿರುವಳು.

ಮೈಸೂರು ಪೇಟೆ ಧಾರಣೆ

	ರೂ. ಯಿಂದ	ರೂ ವರೆಗೆ
ಕಡಲೆಕಾಯಿ	೧೦ ೦ ೦	೨೨ ೧೦ ೦
ಮೆಣಸು	೪೮ ೦ ೦	
ಎಳ್ಳು	೪೪ ೦ ೦	೬೧ ೧೦ ೦
ಹೊಂಗೆಬೀಜ	೨೬ ೦ ೦	
ಹುರುಳಿ	೪೯ ೮ ೦	
ಹೆಸರು	೪೭ ೮ ೦	೫೩ ೪ ೦
ಅಲಸಂದೆ	೪೯ ೧೦ ೦	೫೪ ೬ ೦
ಉದ್ದು	೪೭ ೮ ೦	೬೪ ೨ ೦
ಹುಣಸೇಹಣ್ಣು	೬ ೧೪ ೦	೬ ೨ ೦
ಮೆಣಸಿನಕಾಯಿ	೧೪ ೧೨ ೦	೧೮ ೨ ೦
[illegible] ಕ್ಷಯರೋಗ ಆಸ್ಪತ್ರೆಯ ವೀಕ್ಷಣಾ ಸಮಿತಿ [illegible] ರಚಿಸಲಾಗಿದೆ [illegible] ವಿ ಬಿ ಎಸ್ [illegible] ಎಂ [illegible] ಪಿ ಎಲ್ ಕುಮಾರಸ್ವಾಮಿ, ಎಂ ವೆಂಕಟಯ್ಯ ಮತ್ತು [illegible] ಸುಬ್ಬಮ್ಮ ಮತ್ತು ಪಿ ಎನ್ ವೆಂಕಮ್ಮ

○ [illegible] ಕಂದಾಯವನ್ನು ಹಣದ ರೂಪದಲ್ಲಿ ಕೊಡುವುದರ ಬದಲು [illegible] ಕೊಡಲು [illegible] ಬಗ್ಗೆ ಅಲ್ಲಿನ ಸರ್ಕಾರದವರು [illegible] ಮಾಡಿ, [illegible] ಅವಕಾಶವನ್ನು ಕಲ್ಪಿಸಬಹುದೆಂದು ಸೂಚಿಸಿರುತ್ತಾರೆ

○ [illegible] ವಿಮಾನಗಳನ್ನು [illegible] ಸರ್ಕಾರದವರು [illegible]

ವಿದ್ಯುಚ್ಛಕ್ತಿ ದರದ ಏರಿಕೆ ವಿರುದ್ಧ ಅಕ್ಕಿ ಗಿರಣಿಗಳ ಬಂದ್

[illegible] ವಿದ್ಯುಚ್ಛಕ್ತಿ ದರವನ್ನು ಹೆಚ್ಚಿಸಿದ ಬಗ್ಗೆ ಪ್ರತಿಭಟಿಸಲು [illegible] ಕಾರ್ಯಕ್ರಮವನ್ನು ನಡೆಸಲಾಗಿದೆ ಸರ್ಕಾರದವರು ತಮ್ಮ ಆಜ್ಞೆಯನ್ನು ರದ್ದುಗೊಳಿಸುವಂತೆ ಮಾಲೀಕರು [illegible] ಮಾಡಿದ್ದಾಗಿ

ನಾಯಕರ ವಿರುದ್ಧವಾಗಿ ಸಿಂಧಿನಲ್ಲಿ ಖಾಕ್ಸಾರರ ದಂಗೆ

ಖಾಕ್ಸಾರರ ನಾಯಕ [illegible] ಯವರ ವಿರುದ್ಧವಾಗಿ ಸಿಂಧ್ ಹೈದರಾಬಾದಿನ ಖಾಕ್ಸಾರರು ದಂಗೆಯೆದ್ದಿರುವರೆಂದು ಕರಾಚಿಯ [illegible] ಪತ್ರಿಕೆಯು ತಿಳಿಸಿದೆ [illegible] ಖಾಕ್ಸಾರರು ಬಹಿರಂಗವಾಗಿ ಖಂಡಿಸುತ್ತಿರುವರು

೨೨ ವರ್ಷದ ಯುವತಿಯ ಲಿಂಗ ಪರಿವರ್ತನೆ

ಹೈದರಾಬಾದಿನ ಬಿದರೆ ಜಿಲ್ಲೆಯ [illegible] ತಾಲ್ಲೂಕಿನ ಶಾಲೆಯೊಂದರಲ್ಲಿ ಉಪಾಧ್ಯಾಯಿನಿಯಾಗಿರುವ [illegible] ಬೇಗಂ ಎಂಬ ೨೨ ವರ್ಷದ ತರುಣಿಯು ಈಗ ಲಿಂಗಪರಿವರ್ತನ ಹೊಂದಿರುತ್ತಾಳೆ [illegible] ವರ್ಷಗಳ ಹಿಂದೆ ಆಕೆಯ [illegible] ಬದಲಾವಣೆಯು [illegible] ಕೆಲವು ಕಾಲಾನಂತರ ಆಕೆಗೆ [illegible] ಆಸ್ಪತ್ರೆಯಲ್ಲಿ ಆಕೆಗೆ ಶಸ್ತ್ರ ಚಿಕಿತ್ಸೆ ನಡೆಯಿತೆಂದೂ, ಆಕೆಯು ಗಂಡಸಾಗಿ ಪರಿವರ್ತನ [illegible] ಚಿಂತೆಯಿಂದ [illegible]

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಮೈಸೂರು ಪೇಟೆ ಧಾರಣೆ

[illegible]

ವಿದ್ಯುಚ್ಛಕ್ತಿಯಿಂದ ಬಾರಿಸುವ ತಂಬೂರಿ

ಮದ್ರಾಸಿನ ಸಂಗೀತ ವಿದ್ಯಾಲಯದವರು ವಿದ್ಯುಚ್ಛಕ್ತಿಯಿಂದ ಶ್ರುತಿಯನ್ನು ಕೊಡುವ ತಂಬೂರಿಯೊಂದನ್ನು ತಯಾರಿಸಿರುತ್ತಾರೆ ಅದನ್ನು ಮನುಷ್ಯರು ಬಾರಿಸಬೇಕಾಗಿಲ್ಲ ಮೋಟರು ಮತ್ತು ಸಾಯಿಂಟರ್‌ಗಳನ್ನು ಅದಕ್ಕೆ ಜೋಡಿಸಿದೆ ತಂಬೂರಿಯಲ್ಲಿ ಯಾವ ಶ್ರುತಿಯನ್ನು ಬೇಕಾದರೂ ಇಡಬಹುದು

ಕೋವಿ ತಯಾರಿಕೆ ಸಂಬಂಧದಲ್ಲಿ ಒಬ್ಬನ ಬಂಧನ

ಗುಡಿಬಂಡೆ ತಾಲ್ಲೂಕಿನ ಬೋಗೇನಹಳ್ಳಿ ಗ್ರಾಮದ ಚಿಕ್ಕರ ಜಾತಿ ವೆಂಕಟಪ್ಪ ಎಂಬ [illegible] ವರ್ಷದ ವೃದ್ಧನನ್ನು ಬಂದೂಕದ ತಯಾರಿಕೆ ಸಂಬಂಧದಲ್ಲಿ ದಸ್ತಗಿರಿ ಮಾಡಲಾಗಿದೆ ಅವನು ಸಿಂಗಲ್ ಬ್ಯಾರಲ್ಲಿನ ಒಂದು ಕೋವಿಯನ್ನು ಮಾರಿಸುತ್ತಿದ್ದನೆಂದೂ, ಅದೇ ರೀತಿಯ ಮತ್ತೊಂದನ್ನು ಸಿದ್ಧಗೊಳಿಸಿ ಮಾರಿದ್ದನೆಂದೂ ಹೇಳಲಾಗಿದೆ ದಸ್ತಗಿರಿ ಕಾಲದಲ್ಲಿ ಬಂದೂಕು ತಯಾರಿಕೆಗೆ ಸಂಬಂಧಪಟ್ಟ ಹಲವು ಉಪಕರಣಗಳು ದೊರೆತುವು

ಸಂಸ್ಥಾನದ ಪಂಡಿತರ ಸಮ್ಮೇಳನ

ಸಂಸ್ಥಾನದ ಪಂಡಿತರುಗಳ [illegible] ಸಮ್ಮೇಳನವು ಇದೇ [illegible] ಮತ್ತು [illegible] ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಸಮಾವೇಶಗೊಳ್ಳುವುದು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಅದಕ್ಕೆ ಸಂಬಂಧಪಟ್ಟ ಪುಸ್ತಕಗಳ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುವರು

For the installation of
RECORDS, MIKE & LOUDSPEAKERS
at your door,
Please contact
H S RAMACHANDRAN's
EVERGREEN ACOUSTICS
"Treasure House of Records"
28 Sowar Street,
MYSORE

ಪ್ರಭಾ ★

[illegible] ರಿಂದ . ಅಮೋಘ [illegible] ವಾರ
ದಿನವಹಿ ೩ ಪ್ರದರ್ಶನಗಳು
[illegible]
[illegible] ಮಹೋನ್ನತ ಚಿತ್ರಗಳನ್ನು ನೀಡಿದ
[illegible]

★ ತೂಫಾನ್ ಔರ್ ದೀಯಾ ★

[illegible] (ಹಿಂದಿ)
[illegible]
ಸಂಗೀತ [illegible] ನಿರ್ದೇಶನ [illegible]

ನ್ಯೂ ಚಾಮುಂಡೇಶ್ವರಿ ಕೆಫೆ

ಊಟ ಮತ್ತು ವಸತಿ ಗೃಹ
[illegible]

—•◆•—

[illegible] ಅನುಕೂಲ ಮತ್ತು
ಆರೋಗ್ಯಕರವಾದ [illegible]
[illegible]
ಪ್ರೊಪ್ರೈಟರ್ [illegible] ಚಂದ್ರಯ್ಯ, [ಫೋನ್ 341

ನರಗಳು ನಾಶವಾದರೆ ಎಲ್ಲವೂ ನಾಶವೇ!

★ [illegible]
★ [illegible]
★ [illegible]
★ [illegible]
ಇವೆಲ್ಲ ನರ ದೌರ್ಬಲ್ಯಕ್ಕೆ
ಸಾಧಾರಣ ಕಾರಣಗಳು
★
★ ಮರವು
★ ಭ್ರಾಂತಿ ಕಲ್ಪನೆಗಳು
★ ಭೀತಿ ಮನೋಭಾವ
★ ಆತ್ಮಹತ್ಯಾ ಭಾವನೆಗಳು
★ ಮನೋವೈಚಿತ್ರ್ಯಗಳು
ಇವು ಅದರ ಭೀಕರ ಪರಿಣಾಮಗಳು
ನರ ದೌರ್ಬಲ್ಯವನ್ನು ಚಿಕಿತ್ಸಿಸಲು
ವಿಶ್ವವಿಖ್ಯಾತ ಔಷಧಿ

ನವರತ್ನ - ಕಲ್ಪ

ಸೇವಿಸಿ

ಇದು [illegible] ಅಮೂಲ್ಯ ಹರಳುಗಳ ಯೋಗ [illegible] ವಜ್ರ, [illegible], ಮುತ್ತು, [illegible] ಇವೆಲ್ಲ ಇವೆ

— ಇದನ್ನು ಕಂಡುಹಿಡಿದವರು —
ಕವಿರಾಜ ಪಂಡಿತ

ದುರ್ಗಾದತ್ತ ಶರ್ಮಾ,

ವೈದ್ಯ ವಾಚಸ್ಪತಿ.

[illegible]
NAVRATNA KALPA PHARMACY,
Jullunder City (India)
Grams NAVRATNA

Edited, Printed and Published by A. R. Nagarajan at Sadhvi Press D Subbiah Road, Mysore

ಟೆಲಿಫೋನ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಪತ್ರಿಕೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೪] SADHVI : MONDAY 9—7—1956 ಮೈಸೂರು : ಸೋಮವಾರ ೯—೭—೧೯೫೬ [ಸಂಚಿಕೆ : ೩೦೬

ಪ್ರಯಾಣಿಕರ ಮೇಲೆ ಪೌರಸಭಾ ತೆರಿಗೆಗಾಗಿ ಶಾಸನ

ಶಿಡ್ಲಘಟ್ಟದಲ್ಲಿ ೭ ವರ್ಷಗಳ ಹಿಂದಿನ ಕೊಲೆ ತನಿಖೆ

ಬೇಲೂರಿನ ಕೊಲೆ ಆಪಾದಿತ ಕೃಷ್ಣ ಬೇಕಾಗಿದ್ದಾನೆಂದು ಪೊಲೀಸರ ಅರ್ಜಿ

ಬೆಂಗಳೂರು ೮

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆಗಳ ಬಗ್ಗೆ ಆಪಾದಿತನಾಗಿರುವ ಕೃಷ್ಣನು ಏಳು ವರ್ಷಗಳ ಹಿಂದೆ ಶಿಡ್ಲಘಟ್ಟದಲ್ಲಿ ನಡೆದ ಕೊಲೆ ಪ್ರಕರಣವಲ್ಲಿ ತನಿಖೆಗಾಗಿ ಬೇಕಾಗಿರುವನೆಂದು ಶಿಡ್ಲಘಟ್ಟದ ಪೊಲೀಸರು ಇಲ್ಲಿನ ನಗರ ನ್ಯಾಯಾಧೀಶರ ಮುಂದೆ ಅರ್ಜಿ ಸಲ್ಲಿಸಿರುತ್ತಾರೆ ಈ ಅರ್ಜಿಯನ್ನು ಪರಿಶೀಲಿಸಿ ಕೃಷ್ಣನನ್ನು ಪೊಲೀಸರ ವಶಕ್ಕೆ ಒಪ್ಪಿಸುವ ವಿಷಯವನ್ನು ನಾಳೆ ವಿಲೆ ಇತ್ಯರ್ಥ ಮಾಡಲಾಗುವುದೆಂದು ಗೊತ್ತಾಗಿದೆ

ಅವಿಶ್ವಾಸಕ್ಕೆ ಅನುಮತಿ ಕೋರಿ ಎ.ಐ.ಸಿ.ಸಿಗೆ ಪತ್ರ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮತ್ತು ಮುಖ್ಯ ಮಂತ್ರಿಗಳೊಡನೆ ಚರ್ಚೆ ಸಂಭವ

ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರಲ್ಲಿ ಅವಿಶ್ವಾಸ ಸೂಚಿಸಲು ಬೇಡಿರುವ ಅನುಮತಿ ಪತ್ರವು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಛೇರಿಯನ್ನು ಮುಟ್ಟಿರುವುದೆಂದೂ, ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೊಡನೆ ಚರ್ಚೆ ನಡೆಸಿದನಂತರ ಮುಂದಿನ ವಾರ ಹೈ ಕಮಾಂಡಿನವರು ಈ ಬಗ್ಗೆ ಪರಿಶೀಲನೆ ನಡೆಸಲಿರುವರೆಂದೂ ವರದಿಯಾಗಿದೆ

ಈ ವಿಚಾರವನ್ನು ಕುರಿತು ಮುಖ್ಯ ಮಂತ್ರಿಗಳೊಡನೆ ಮಾತನಾಡಲು ದೆಹಲಿಗೆ ಅವರನ್ನು ಕರೆಸುವ ಸಂಭವವಿರುವುದೆಂದು ಹೇಳಲಾಗಿದೆ ಅವಿಶ್ವಾಸದ ಅನುಮತಿ ಪತ್ರಕ್ಕೆ ಹೆಚ್ಚು ಮಂದಿ ರುಜು ಮಾಡಿರ ಪುದರಿಂದ ಅವರುಗಳು ನಿರ್ಣಯವನ್ನು ತರಲೇಬೇಕೆಂದು ಒತ್ತಾಯ ಮಾಡಿದರೆ, ಅದಕ್ಕೆ ಅವಕಾಶವೀಯುವ ಸಂಭವವಿರುವುದೆಂದೂ ಹೇಳಲಾಗಿದೆ

ಮದ್ಯಪಾನ ಮಾಡಿದುದಕ್ಕಾಗಿ ಸಿನಿಮಾ ನಟಿಯರ ಬಂಧನ

ವಿಪರೀತವಾಗಿ ಕುಡಿದಿದ್ದರೆಂಬ ಕಾರಣಕ್ಕಾಗಿ ವಿಳ್ಳುಪುರದ ಪೊಲೀಸರು ಕುಚಲಕುಮಾರಿ ಮತ್ತು ಪಿ ವಿ ಸರೋಜಾ ಎಂಬ ಇಬ್ಬರು ಸಿನಿಮಾ ನಟಿಯರನ್ನೂ, ಘಂಟಸಾಲಾ ಎಂಬ ಸಿನಿಮಾ ಸಂಗೀತಗಾರನನ್ನೂ, ಫಿಲಂ ಡೈರೆಕ್ಟರ್ ಯೋಗನಾಥಂರವರನ್ನೂ ಬಂಧಿಸಿ ಅವರ ಬಳಿ ದೊರೆತ ೩೨ ಸೀಸೆ ವಿದೇಶೀ ಮದ್ಯವನ್ನು ವಶಪಡಿಸಿಕೊಂಡಿರುವುದಾಗಿ ವರದಿಯಾಗಿದೆ ನಟಿಯರು ಪ್ರದುಚೇರಿಯಿಂದ ಬೊಂಬಾಯಿಗೆ ಮೋಟಾರಿನಲ್ಲಿ ವಾಪಸು ಬರುತ್ತಿದ್ದಾಗ, ಜಿಂಜಿ ಬಳಿ ಅವರ ಕಾರು ಒಬ್ಬಾತನ ಮೇಲೆ ಹರಿದು ಪ್ರಾಣಿಂದಕ್ಕೆ ಡಿಕ್ಕಿ ಹೊಡೆಯಿತು ವಿಚಾರವನ್ನು ತಿಳಿದ ಪೊಲೀಸರು ಅಲ್ಲಿಗೆ ಹೋಗಿ ತನಿಖೆ ನಡೆಸಿದರು. ದಸ್ತಗಿರಿಯಾದವರನ್ನು ಜಾಮೀನಿನ ಮೇಲೆ ಬಿಡಲಾಗಿದೆ

ಮೈಸೂರಿನ ರಾಜಕೀಯ ಬಿಕ್ಕಟ್ಟಿನ ಮೂಲ ಕಾರಣ

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ವಿವರಣೆ

ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಕಾಂಗ್ರೆಸ್ ಸದಸ್ಯರನ್ನು ಉದ್ದೇಶಿಸಿ ಮೊನ್ನೆ ಮೈಸೂರು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಮಾತನಾಡಿ, ಮೈಸೂರು ಸಂಸ್ಥಾನದ ರಾಜಕೀಯ ಬಿಕ್ಕಟ್ಟಿನ ಹಿನ್ನೆಲೆಯನ್ನು ವಿವರಿಸಿದರು

ಮೈಸೂರಿನಲ್ಲಿ ಉಂಟಾಗಿರುವ ಅನಿಶ್ಚಿತ ವಾತಾವರಣವನ್ನು ಎಲ್ಲರೂ ಸರಿ ಹೋಗಿಸಬೇಕೆಂದೂ, ಇದರಿಂದ ದೂರವಿರುವವರು ಸರಿಯಲ್ಲವೆಂದೂ ಶ್ರೀ ಹನುಮಂತಯ್ಯನವರು ಸೂಚಿಸಿದರು ಮೈಸೂರಿನಲ್ಲಿ ಸರ್ಕಾರ ಮತ್ತು ಪ್ರದೇಶ ಕಾಂಗ್ರೆಸ್ಸುಗಳ ನಡುವೆ ನಿಕಟವಾದ ವಿಶ್ವಾಸ ಒಬ್ಬರನ್ನೊಬ್ಬರು ಅರಿತು ಕೆಲಸ ನಡೆಯುತ್ತಿರುವುದೆಂದೂ ಅವರು ವ್ಯಕ್ತಪಡಿಸಿದರು ನೂತನ ಪ್ರಾಂತವ ಉದಯವ ಕಾಲದಲ್ಲಿ ಹೊಸ ನಾಯಕರ ಚುನಾವಣೆಯು ಅಗತ್ಯವೆಂದು ತಾವು ಒತ್ತಾಯ ಪಡಿಸಿದ್ದುದಾಗಿಯೂ ಅವರು ನುಡಿದರು ಮೈಸೂರಿನ ರಾಜಕೀಯ ಬಿಕ್ಕಟ್ಟಿನಿಂದ ದಕ್ಷಿಣ ಕನ್ನಡದವರಿಗೇನೂ ತೊಂದರೆಯಿಲ್ಲವೆಂದೂ, ಅದರಿಂದ ವಿವಾದವೂ ಹಾನಿ ತಟ್ಟಿದರೆ, ತಮಗೆ ಮಾತ್ರ ಆಗುವುದೆಂದೂ ಅವರು ಸೂಚಿಸಿದರು

ಈ ರಾಜಕೀಯ ಬಿಕ್ಕಟ್ಟಿನ ಹಿನ್ನೆಲೆಯನ್ನು ಅವರು ತಿಳಿಸಿ, ಹಿಂದೆ ತಾವು ಮುಖ್ಯ ಮಂತ್ರಿಯಾಗಿ ಆರಿಸಿಬಂದ ರೀತಿಯನ್ನೂ, ನಂತರ ವಿಶ್ವಾಸದ ಓಟನ್ನು ಪಡೆದುದನ್ನೂ ವಿವರಿಸಿದರು ಆಗ ತಮ್ಮಲ್ಲಿ ೫೭ ಮಂದಿ ವಿಶ್ವಾಸ ಸೂಚಿಸಿದ್ದರೆಂದೂ, ೩೫ ಮಂದಿ ವಿರೋಧವಾಗಿ ಓಟು ಕೊಟ್ಟಿದ್ದರೆಂದೂ ಇದೇ ಪ್ರಥಮವಾಗಿ ಬಹಿರಂಗ ಪಡಿಸಿದರು

ಸಂಸ್ಥಾನ ಪುನರ್ವಿಂಗಡಣೆ ವಿಷಯವು ಜನರ ಮನಸ್ಸನ್ನು ಸೆಳೆದಮೇಲೆ ತಮ್ಮ ಬೆಂಬಲಿಗರಾಗಿ ಹತ್ತಾರು ವರ್ಷಗಳಿಂದ ಇದ್ದ ೧೫-೨೦ ಮಂದಿ ತಮ್ಮ ನಿಲುವಿನ ಬಗ್ಗೆ ವಿರೋಧ ವ್ಯಕ್ತಪಡಿಸಿದರೆಂದೂ, ತಾವು ಮೈಸೂರನ್ನು ಮಾರುವುದಾಗಿ ಅವರು ಭಾವಿಸಿರುವುದಾಗಿಯೂ ಹೇಳಿದರು ಈ ವಿಚಾರದಲ್ಲಿ ಯಾರ ಅಭಿಪ್ರಾಯವು ಸರಿಯೆಂಬುದು ಕ್ರಮೇಣ ವ್ಯಕ್ತವಾಗುವುದೆಂದು ಅವರು ನುಡಿದರು

ಆಗಲೇ ತಮ್ಮ ಮಂತ್ರಿಮಂಡಲವು ಹೋಗಬೇಕಾಗಿತ್ತೆಂದೂ, ಎ.ಐ.ಸಿ. ಕಾಂಗ್ರೆಸ್ ಅಧ್ಯಕ್ಷರಿಂದ ಬಂದ ನಿರೂಪವು ಯಾರೂ ರಾಜೀನಾಮೆ ಯಾಯಬಾರದೆಂದು ತಿಳಿಸಿದ್ದುದರಿಂದ ಅದು ಸಾಧ್ಯವಾಗಲಿಲ್ಲವೆಂದೂ ಶ್ರೀ ಹನುಮಂತಯ್ಯನವರು ಹೇಳಿ, ಈಗ ತಮ್ಮ ವಿರುದ್ಧವಾಗಿ ೫೦ ಅಥವಾ ೫೫ ಮಂದಿ ಶಾಸನ ಸಭಾ ಸದಸ್ಯರು ಇರುವರೆಂಬ ಅಂಶವನ್ನು ಹೊರಗೆಡಹಿದರು

ತಮ್ಮಲ್ಲಿ ಅವಿಶ್ವಾಸ ಸೂಚಿಸಿರುವ ವಿಷಯವನ್ನು ಅವರು ಪ್ರಸ್ತಾಪಿಸಿ, ಅವಿಶ್ವಾಸ ನಿರ್ಣಯಕ್ಕೆ ರುಜು ಮಾಡದಿರುವ ಶಾಸನಸಭಾ ಸದಸ್ಯರುಗಳಿಗೆ ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ಕೊಡುವುದಿಲ್ಲವೆಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ತಿಳಿಸಿದ್ದುದಾಗಿ ನಿರ್ಣಯಕ್ಕೆ ರುಜು ಮಾಡಿರುವ ಹಲವು ಸದಸ್ಯರು ತಮಗೆ ಹೇಳಿದರೆಂದು ಶ್ರೀ ಹನುಮಂತಯ್ಯನವರು ನುಡಿದರು

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ಯೋಜನೆ ಹಣವನ್ನು ವಿನಿಯೋಗಿಸುವ ಬಗ್ಗೆ ತಾನು, ನೆಹರೂರವರೊಡನೆ ಭಿನ್ನಾಭಿಪ್ರಾಯ ಹೊಂದಿದ್ದುದನ್ನು ತಮ್ಮ ವಿರುದ್ಧವಾಗಿ ಉಪಯೋಗಿಸಲಾಗಿದೆಯೆಂದು ಅವರು ಹೇಳಿದರು

ಪ್ರಯಾಣಿಕರ ತೆರಿಗೆ ವಿಧಿಸಲು ಪೌರಸಭೆಗಳಿಗೆ ಅಧಿಕಾರ

ಸದ್ಯದಲ್ಲೇ ಕೇಂದ್ರ ಸರ್ಕಾರದ ಶಾಸನ

ಭಾರತದ ಎಲ್ಲಾ ಊರು ಮತ್ತು ಪಟ್ಟಣಗಳಲ್ಲೂ ಇರುವ ಪೌರಸಭೆಗಳು ಆಯಾ ಸ್ಥಳಗಳಿಗೆ ಭೇಟಿ ಕೊಡುವ ಪ್ರೇಕ್ಷಕರ ಮೇಲೆ ಪ್ರಯಾಣ ತೆರಿಗೆಯನ್ನು ವಿಧಿಸಲು ಅವಕಾಶ ಕಲ್ಪಿಸುವ ಶಾಸನವನ್ನು ಸದ್ಯದಲ್ಲೇ ಮಾಡಲಾಗುವುದೆಂದು ಕೇಂದ್ರ ಕೈಗಾರಿಕಾ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ತಿಳಿಸುತ್ತಾರೆ ತೆರಿಗೆಯನ್ನು ವಿಧಿಸಲು ಪ್ರಾಂತ ಸರ್ಕಾರಗಳು ಪೌರಸಭೆಗಳಿಗೆ ಅಧಿಕಾರವೀಯುವುವು ಪೌರಸಭೆಗಳು ತಮ್ಮ ಪ್ರದೇಶಗಳಲ್ಲಿ ಹೆಚ್ಚು ಸೌಕರ್ಯಗಳನ್ನು ಕಲ್ಪಿಸಲು ಇದರಿಂದ ಸಹಾಯವಾಗುವುದೆಂದು ಅವರು ಹೇಳುವರು

ಲೋಕಸಭೆ ಮುಂದೆ ಮಹಾರಾಷ್ಟ್ರರ ಸತ್ಯಾಗ್ರಹ

ಈ ತಿಂಗಳು ೨೩ನೇ ತಾರೀಕು ಲೋಕಸಭೆಯಲ್ಲಿ ಸಂಸ್ಥಾನ ಪುನರ್ವಿಂಗಡಣೆ ಮಸೂದೆ ಬಗ್ಗೆ ನಡೆಯುವ ಚರ್ಚೆ ಕಾಲಕ್ಕೆ ಸರಿಯಾಗಿ ದೆಹಲಿಗೆ ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು ಸತ್ಯಾಗ್ರಹಿಗಳ ತಂಡವೊಂದನ್ನು ಕರೆದುಕೊಂಡು ಹೋಗುವರೆಂದು ಗೊತ್ತಾಗಿದೆ ಅದರಲ್ಲಿ ಬೊಂಬಾಯಿ ಶಾಸನಸಭಾ ಸದಸ್ಯರುಗಳೂ ಪಾರ್ಲಿಮೆಂಟಿನ ಸದಸ್ಯರೂ ಇರುವರು ಸಂಯುಕ್ತ ಮಹಾರಾಷ್ಟ್ರವನ್ನು ಸಾಧಿಸಲು ಜನತೆಯು ಹೋರಾಟ ನಡೆಸುವ ನಿಶ್ಚಯ ಮಾಡಿರುವುದನ್ನು ಲೋಕಸಭೆಯ ಮುಂದೆ ಪ್ರದರ್ಶನ ಮಾಡಿ ತೋರ್ಪಡಿಸಲಾಗುವುದೆಂದು ತಿಳಿದುಬಂದಿದೆ ಲೋಕಸಭೆಯ ಹಲವು ಸದಸ್ಯರನ್ನು ಭೇಟಿ ಮಾಡಿ ಅವರ ಮುಂದೆ ಸಂಯುಕ್ತ ಮಹಾರಾಷ್ಟ್ರದ ಬೇಡಿಕೆಯನ್ನು ಇಡಲು ನಿರ್ಧರಿಸಲಾಗಿದೆ

ಫೆಲೋಷಿಪ್ ಆಫ್ ದಿ ಫ್ರೆಂಡ್ಸ್ ಆಫ್ ಟ್ರುತ್ ಸಭೆ

ಫೆಲೋಷಿಪ್ ಆಫ್ ದಿ ಫ್ರೆಂಡ್ಸ್ ಆಫ್ ದಿ ಟ್ರುತ್ ಸಂಸ್ಥೆಯ ಸಭೆಯು ನಾಳೆ ಸಂಜೆ ೬॥ ಘಂಟೆಗೆ ವೈಸ್‌ರಾಯ್ ರಸ್ತೆಯಲ್ಲಿರುವ ಶ್ರೀ ಎಂ ಯಾಮುನಾಚಾರ್ಯರ ಮನೆಯಲ್ಲಿ ಸೇರಲಿದೆ ಗಾಂಧಿ ಗ್ರಾಮದ ಶ್ರೀ ಜಿ ರಾಮಚಂದ್ರನವರು ಭಾಗವಹಿಸುವರು ಸಂಸ್ಥೆಯಲ್ಲಿ ಆಸಕ್ತಿಯುಳ್ಳ ಮಹನೀಯರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ

ರಂಗಲಕ್ಷ್ಮಿ ಮನೆಗೆ ಹೋಗಿದ್ದಳು

ಸ್ವಂ. ವ. ಪೋ] ಬೆಂಗಳೂರು ೮

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮಗಳು ರಂಗಲಕ್ಷ್ಮಿಯನ್ನು ಕೆಲವು ದಿನಗಳ ಹಿಂದೆ ಅವರ ಮನೆಗೆ ಪೊಲೀಸು ಕಾವಲು ಸಮೇತ ಕರೆದುಕೊಂಡು ಹೋಗಿದ್ದುದಾಗಿ ತಿಳಿದುಬಂದಿದೆ ಅಲ್ಲಿಯೂ ಇಲ್ಲಿನ ಮಾನಸಿಕ ರೋಗದ ಆಸ್ಪತ್ರೆಯ ಸೂಪರಿಂಟೆಂಡೆಂಟರಾದ ಡಾ॥ ಗೋವಿಂದಸ್ವಾಮಿಯವರು ಇದ್ದರೆಂದು ಹೇಳಲಾಗಿದೆ ಆಕೆಯನ್ನು ಸುಮಾರು ೨ ಘಂಟೆ ಕಾಲ ಮನೆಯ ಆವರಣದಲ್ಲಿ ಸುತ್ತಿಸಲಾಯಿತೆಂದೂ, "ಮನೆ ಈಗ ಏಕೆ ಹೀಗಿದೆ ಮತ್ತು ನನ್ನವರುಗಳೆಲ್ಲಿ" ಎಂದು ಆಕೆಯು ಕೇಳಿದಳಾಗಿಯೂ ಗೊತ್ತಾಗಿದೆ ಆಕೆಯೊಡನೆ ಸಹೋದರಿಯರೂ ಇದ್ದುದಾಗಿ ಹೇಳಲಾಗಿದೆ

○ ಅಂತರ ಸಂಸ್ಥಾನ ಸರ್ಕಾರಗಳ ಕಾರ್ಯದರ್ಶಿಗಳ ಸಭೆಯು ಈ ದಿನ ಇಲ್ಲಿ ಸೇರಿತ್ತು

○ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಇಂದು ಅಥವಾ ನಾಳೆ ದೆಹಲಿಗೆ ಹೊರಡುವರು

ಈ ತಿಂಗಳ ಕೊನೆಯಲ್ಲಿ ಬೆಂಗಳೂರಿಗೆ ಕಾಂಗ್ರೆಸ್ ನಾಯಕರ ಭೇಟಿ

ಸಾರ್ವತ್ರಿಕ ಚುನಾವಣೆಗಳಲ್ಲಿ ಮೈಸೂರು ಮತ್ತು ಕರ್ನಾಟಕಗಳಲ್ಲಿ ಕಾಂಗ್ರೆಸ್ ಉಮೇದವಾರರನ್ನು ಆರಿಸುವ ಕಾರ್ಯದಲ್ಲಿ ಸಹಾಯಕರಾಗಿ ನೇಮಕವಾಗಿರುವ ಶ್ರೀಮನ್ ನಾರಾಯಣ್, ಫೀರೋಜ್ ಗಾಂಧಿ ಮತ್ತು ಜಯನಾರಾಯಣ ವ್ಯಾಸ್‌ರವರು ಈ ತಿಂಗಳ ಕಡೆಯಲ್ಲಿ ಬೆಂಗಳೂರಿಗೆ ಬರುವರು ಉಮೇದುವಾರರ ಆಯ್ಕೆ ಬಗ್ಗೆ ಪೂರ್ವ ಭಾವಿ ಕಾರ್ಯಕ್ರಮಗಳನ್ನು ಅವರು ನಿರ್ಧರಿಸಿ ಸೆಪ್ಟೆಂಬರ್ ತಿಂಗಳಲ್ಲಿ ಪುನಃ ಆಸ್ಥೆಯ ಭೇಟಿ ಕೊಡಲಿರುವರು

ಮಳೆ ಮತ್ತು ಪ್ರವಾಹದಿಂದ ೬॥ ಸಾವಿರ ಮನೆ ನಾಶ

ಉತ್ತರ ಪ್ರದೇಶದಲ್ಲಿ ಕಳೆದ ವಾರ ಪ್ರಚಂಡ ಮಳೆ ಬಂದು ಮುಜಫರ್ ನಗರ ಮತ್ತು ಅಲ್ಮೋರಾ ಜಿಲ್ಲೆಗಳಲ್ಲಿ ಪ್ರವಾಹದಿಂದ ಭೂಮಿ ಕುಸಿದು ೨೯ ಜನರು ಮೃತಪಟ್ಟಿರುತ್ತಾರೆ ೪೩ ಹಳ್ಳಿಗಳಲ್ಲಿ ೬,೦೦೦ ಮನೆಗಳೂ, ಪಟ್ಟಣಗಳಲ್ಲಿ ೫೦೦ ಮನೆಗಳೂ ನೀರಿನಿಂದ ನಾಶವಾಗಿವೆ ಮುಜಫರ್ ನಗರದ ಹೊಸ ಮಾರುಕಟ್ಟೆಯಲ್ಲಿ ೨೮೦ ಧಾನ್ಯದ ಮಳಿಗೆಗಳು ನೀರಿನಲ್ಲಿ ಮುಳುಗಿವೆ

ಮಗನ ಕಳ್ಳತನಕ್ಕಾಗಿ ತಂದೆಗೆ ಮರಣ ಪ್ರಾಪ್ತಿ

ಜಬ್ಬಲ್ಪುರದ ಗ್ರಂಥ ಪ್ರಕಟಣಾ ಮಂದಿರದ ನೌಕರ ಬಲಿರಾಂ ದುಬೆ ಎಂಬಾತನ ೧೬ ವರ್ಷದ ಮಗನು ಸಂಬಂಧಿಕರ ಮನೆಯಲ್ಲಿ ೩॥ ಸಾವಿರ ರೂ ಆಭರಣಗಳನ್ನು ಅಪಹರಿಸಿದ ಸಂಬಂಧವಾಗಿ ತಂದೆಗೆ ವಿಪರೀತ ವ್ಯಾಕುಲವಾಗಿ ಆತನು ಹಾಗೆಯೇ ಪ್ರಾಣಬಿಟ್ಟನೆಂಬ ಸಂಗತಿಯು ವರದಿಯಾಗಿದೆ ಮೂರು ದಿನಗಳ ಹಿಂದೆ ಕಳುವಿನ ಸಂಬಂಧದಲ್ಲಿ ಪೊಲೀಸರು ದುಬೆಯ ಮನೆಯಲ್ಲಿ ಒಡವೆಗಳನ್ನು ವಶಪಡಿಸಿಕೊಳ್ಳುವುದರಲ್ಲಿ ವ್ಯಸ್ತರಾಗದೆ ಶೋಧನೆ ನಡೆಸಿದರೆಂದೂ, ಇದರಿಂದ ತಂದೆಯ ಸಹನೆ ಮೀರಿತ್ತೆಂದೂ ಹೇಳಲಾಗಿದೆ ತಂದೆಯ ಕರ್ಮಾಂತರವನ್ನು ಮಾಡಲು ಮಗನಿಗೆ ಜಾಮೀನು ಕೊಡಲಾಗಿದೆ

ವಾರ ಭವಿಷ್ಯ

[illegible]

ಮೇಷ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವಿದ್ಯಾರ್ಥಿಗಳ ಪರೀಕ್ಷೆ [illegible] ವ್ಯಾಪಾರ [illegible] ಕಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರ[illegible]

ವೃಷಭ — ಆರೋಗ್ಯ ತೃಪ್ತಿಕರ [illegible] ಪರಿಸ್ಥಿತಿ ಸಮರ್ಪಕ ಶುಭ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ಉದ್ಯೋಗದಲ್ಲಿ ಪ್ರೋತ್ಸಾಹ ಪ್ರವಾಸ ಸಂಭವ

ಮಿಥುನ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಕೈಗೊಂಡ ಕಾರ್ಯಗಳಿಗೆ ಅಡ್ಡಿ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ನಿರುತ್ಸಾಹ

ಕರ್ಕ — ಆರೋಗ್ಯ ಚಿನ್ನಾಗಿರುವುದು ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಡಿಮೆ ಮಿತ್ರರಿಂದ ವಂಚನೆ ಸಾಮಾಜಿಕ ಕ್ಷೇತ್ರದಲ್ಲಿ ಅಡ್ಡಿ

ಸಿಂಹ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಅಭಿವೃದ್ಧಿ [illegible] ಉದ್ಯೋಗದಲ್ಲಿ ಪ್ರೋತ್ಸಾಹ

ಕನ್ಯಾ — ಆರೋಗ್ಯ ತೃಪ್ತಿಕರ ಆರ್ಥಿಕ ಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ಶುಭ ಕಾರ್ಯಗಳು ನಡೆಯುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ [illegible] ಪ್ರಶಂಸೆ

ತುಲಾ — ಆರೋಗ್ಯ ಸಾಧಾರಣ ಆರ್ಥಿಕ ಸ್ಥಿತಿ ಸಮರ್ಪಕ ಆಪ್ತರಿಂದ [illegible] ಉದ್ಯೋಗದಲ್ಲಿ ಸಮಸ್ಯೆ ವ್ಯಾಪಾರವ್ಯವಹಾರ [illegible] ಪ್ರವಾಸ ಸಂಭವ

ವೃಶ್ಚಿಕ — ಆರೋಗ್ಯ ಚೆನ್ನಾಗಿರುವುದು ಆರ್ಥಿಕ ಪರಿಸ್ಥಿತಿ ಅತೃಪ್ತಿಕರ [illegible] ತೊಂದರೆ ನೌಕರಿಯಲ್ಲಿ ನಿರುತ್ಸಾಹ [illegible] ಸಂಭವ [illegible]

ಧನು — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸುಖಕರವಾಗುವುದು

ಮಕರ — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಉತ್ಸಾಹ ಸಮಸ್ಯೆಗಳು [illegible]

ಕುಂಭ — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ ನೌಕರಿಯಲ್ಲಿ ಹಿರಿಯರ [illegible] ವೈಮನಸ್ಯ ಸಂಭವ

ಮೀನ — ಆರೋಗ್ಯ ಉತ್ತಮವಾಗಿರುವುದು ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಉದ್ಯೋಗದಲ್ಲಿ ಪ್ರಗತಿ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು

ಮಹಾರಾಜಾ ಕಾಲೇಜು ವಿದ್ಯಾರ್ಥಿ ನಿಲಯ ಸಂಘಕ್ಕೆ ಆಯ್ಕೆ

ಮಹಾರಾಜಾ ಕಾಲೇಜು ವಿದ್ಯಾರ್ಥಿ ನಿಲಯದ ಸಾಹಿತ್ಯ ಸಂಘದ ಸಂಚಾಲಕರಾಗಿ ಶ್ರೀ [illegible] ಎಸ್ ಸುಬ್ಬಾರೆಡ್ಡಿಯವರೂ, ವ್ಯಾಸಂಗ ಗೋಷ್ಠಿಯ ಸಂಚಾಲಕರಾಗಿ ಶ್ರೀ ಎಸ್ ಎಂ [illegible] ಅವರೂ ಅವಿರೋಧವಾಗಿ ಆರಿಸಲ್ಪಟ್ಟಿರುತ್ತಾರೆ

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ಸಾಧನೆಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ತ್ವರೆಯಿಂದ ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ಡಿ ಕೃಷ್ಣಮೂರ್ತಿ,
ಡೈರೆಕ್ಟರ್

ಜನತಾ ಎಕ್ಸ್‌ಪ್ರೆಸ್ ರೈಲು ಅಪಘಾತದಲ್ಲಿ ೭ ಜನರಿಗೆ ಗಾಯ

ವಿಜಯವಾಡದಲ್ಲಿ [illegible] ಒಂದು ಡಗ್ಗೇಜ್ ವ್ಯಾನಿಗೆ ಡಿಕ್ಕಿ ಜನತಾ ಎಕ್ಸ್‌ಪ್ರೆಸ್ ರೈಲು ಡಿಕ್ಕಿ ಹೊಡೆದ ಪರಿಣಾಮವಾಗಿ ೭ ಜನರಿಗೆ ಗಾಯವಾಯಿತು [illegible] ಎಂಜಿನ್ನಿನ ಎರಡು [illegible] ತಪ್ಪಿದುವು ಎಕ್ಸ್‌ಪ್ರೆಸ್ ರೈಲಿನ ಡ್ರೈವರು ಕೂಡಲೇ ಬ್ರೇಕ್ ಹಾಕಿ [illegible] ಅನಾಹುತವಾಗುವುದನ್ನು ತಪ್ಪಿಸಿದರು

ಗ್ರಾಮದ ಎಣ್ಣೆ ಕೈಗಾರಿಕೆಗೆ ೩೯ ಲಕ್ಷ ರೂ ಸಹಾಯ

ಗ್ರಾಮಾಂತರದಲ್ಲಿ ಗಾಣದ ಎಣ್ಣೆ ಕೈಗಾರಿಕೆಯ ಅಭಿವೃದ್ಧಿಗಾಗಿ ಭಾರತ ಸರ್ಕಾರದವರು [illegible] ರೂ [illegible] ಖಾದಿ ಮತ್ತು ಗ್ರಾಮ ಕೈಗಾರಿಕಾ ಬೋರ್ಡಿನವರಿಗೆ ಕೊಡಲಿರುವರು [illegible] ಕೇಂದ್ರಗಳ ಜೊತೆಗೆ [illegible] ಗಾಣದ ಎಣ್ಣೆ ಪ್ರದರ್ಶನ [illegible] ಕೇಂದ್ರಗಳನ್ನು ಸ್ಥಾಪಿಸಲು [illegible] ಮತ್ತು [illegible] ಕಂಪನಿಗಳ ಮೇಲ್ವಿಚಾರಣೆ [illegible]

ಕಾಮರಾಜ ನಾಡಾರರ ವಿರುದ್ಧವಾಗಿ ಪ್ರದರ್ಶನ

[illegible] ಶ್ರೀ ಕಾಮರಾಜ ನಾಡಾರರು [illegible] ಜನ ಕಾಂಗ್ರೆಸ್ಸಿನವರು ಅವರ ವಿರುದ್ಧವಾಗಿ ಪ್ರದರ್ಶನ ನಡೆಸಿದರು [illegible] ಪ್ರದರ್ಶಕರನ್ನು ಪೋಲೀಸರು [illegible]

ನಗರದ ಕ್ಷಯರೋಗ ಆಸ್ಪತ್ರೆಯ ಸಲಹಾ ಸಮಿತಿ

[illegible] ಕ್ಷಯರೋಗ ಆಸ್ಪತ್ರೆಯ [illegible] ಶ್ರೀ ಎಂ ಶಿವನಂಜೇಗೌಡ, ಬಿ ಎಸ್ [illegible] ಎಲ್ ಕುಮಾರಸ್ವಾಮಿ ಎಂ ರಂಗಯ್ಯ ಮತ್ತು ಶ್ರೀಮತಿ [illegible] ಮತ್ತು ಪಿ ಎಸ್ ವೆಂಕಮ್ಮ [illegible]

○ [illegible] ಪ್ರಮಾಣದ [illegible] ಬಗ್ಗೆ [illegible] ಅವಕಾಶವನ್ನು ಕಲ್ಪಿಸಬಹುದೆಂದು ಸೂಚಿಸಿರುತ್ತಾರೆ

○ ೨೦ ಜೆಟ್ ವಿಮಾನಗಳನ್ನು ಇಸ್ರೇಲಿಗೆ ಮಾರಲು ಅಮೆರಿಕ ಸರ್ಕಾರದವರು [illegible] ತ್ತಾರೆ

ವಿದ್ಯುಚ್ಛಕ್ತಿ ದರದ ಏರಿಕೆ ವಿರುದ್ಧ ಅಕ್ಕಿ ಗಿರಣಿಗಳ ಬಂದ್

[illegible] ಅಕ್ಕಿ ಗಿರಣಿಗಳು [illegible] ವಿದ್ಯುಚ್ಛಕ್ತಿ ದರವನ್ನು ಹೆಚ್ಚಿಸಿದ ಬಗ್ಗೆ ಪ್ರತಿಭಟಿಸಲು [illegible] ಕಾರ್ಯಕ್ರಮವನ್ನು ನಡೆಸಲಾಗಿದೆ [illegible] ತಮ್ಮ [illegible] ಯನ್ನು [illegible] ನಂತೆ [illegible] ತ್ತಾಯ ಮಾಡಿದ್ದಾರೆ

ನಾಯಕರ ವಿರುದ್ಧವಾಗಿ ಸಿಂಧಿನಲ್ಲಿ ಖಾಕ್ಸಾರರ ದಂಗೆ

ಖಾಕ್ಸಾರರ ನಾಯಕ [illegible] ಯವರ ವಿರುದ್ಧವಾಗಿ ಸಿಂಧ್ ಹೈದರಾಬಾದಿನ ಖಾಕ್ಸಾರರು ದಂಗೆಯೆದ್ದಿರುವರೆಂದು ಕರಾಚಿಯ ಡಾನ್ ಪತ್ರಿಕೆಯು ತಿಳಿಸಿದೆ ರಾಜಕೀಯ [illegible] ಬಲ್ಯವನ್ನು ಪಡೆಯಲು [illegible] ನಡೆಸುತ್ತಿರುವ ಕೆಲಸಗಳನ್ನು ಖಾಕ್ಸಾರರು ಬಹಿರಂಗವಾಗಿ ಖಂಡಿಸುತ್ತಿರುವರು

೨೨ ವರ್ಷದ ಯುವತಿಯ ಲಿಂಗ ಪರಿವರ್ತನೆ

ಹೈದರಾಬಾದಿನ ಬೀದರ್ ಜಿಲ್ಲೆಯ [illegible] ತಾಲ್ಲೂಕಿನ ಶಾಲೆಯೊಂದರಲ್ಲಿ ಉಪಾಧ್ಯಾಯಿನಿಯಾಗಿರುವ [illegible] ಬೇಗಂ ಎಂಬ ೨೨ ವರ್ಷದ ತರುಣಿಯು ಈಗ ಲಿಂಗಪರಿವರ್ತನೆ ಹೊಂದಿರುತ್ತಾಳೆ ೨ ವರ್ಷಗಳ ಹಿಂದೆ ಆಕೆಯ [illegible] ಬದಲಾವಣೆಯ ಚಿಹ್ನೆಗಳು [illegible] ಕೆಲವು ಕಾಲಾನಂತರ ಆಕೆಗೆ [illegible] ರಲ್ಲಿ ಮಿಂಟೋ [illegible] ಆಸ್ಪತ್ರೆಯಲ್ಲಿ ಆಕೆಗೆ ಶಸ್ತ್ರ ಚಿಕಿತ್ಸೆ ನಡೆಯಿತೆಂದೂ, ಆಕೆಯು ಗಂಡಸಾಗಿ ಪರಿವರ್ತನೆ [illegible] ಚಿಕಿತ್ಸೆಯಿಂದ ವ್ಯಕ್ತವಾಯಿತೆಂದೂ ಗೊತ್ತಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಮೈಸೂರು ಪೇಟೆ ಧಾರಣೆ

	ರೂ ಖಂಡ	ರೂ ವರೆಗೆ
ಕಡಲೆಕಾಯಿ	೮ ೦ ೦	೨೦ ೪ ೦
ಎಳ್ಳು	೮೪ ೦ ೦	೯೦ ೨ ೦
ಹುರುಳಿ	೩೪ ೮ ೦	
ಹೆಸರು	೪೬ ೧೨ ೦	೫೩ ೧೦ ೦
ಹಲಸಂದೆ	೪೩ ೧೪ ೦	೪೫ ೧೩ ೦
ಉದ್ದು	೩೨ ೧೫ ೦	೩೮ ೨ ೦
ಹುಣಸೇಹಣ್ಣು	೩ ೦ ೦	೩ ೩ ೦
ಮೆಣಸಿನಕಾಯಿ	೨೩ ೬ ೦	
ತೆಂಗಿನಕಾಯಿ ೧೦೦೦ಕ್ಕೆ	[illegible]	[illegible]

ವಿದ್ಯುಚ್ಛಕ್ತಿಯಿಂದ ಬಾರಿಸುವ ತಂಬೂರಿ

ಮದ್ರಾಸಿನ ಸಂಗೀತ ವಿದ್ಯಾಲಯದವರು ವಿದ್ಯುಚ್ಛಕ್ತಿಯಿಂದ ಶ್ರುತಿಯನ್ನು ಕೊಡುವ ತಂಬೂರಿಯೊಂದನ್ನು ತಯಾರಿಸುತ್ತಾರೆ ಇದನ್ನು ಮನುಷ್ಯರು ಬಾರಿಸಬೇಕಾಗಿಲ್ಲ ಮೋಟಾರು [illegible] ಪಾಯಿಂಟರ್‌ಗಳನ್ನು ಇದಕ್ಕೆ ಜೋಡಿಸಲಾಗಿದೆ ತಂಬೂರಿಯಲ್ಲಿ ಯಾವ ಶ್ರುತಿಯನ್ನು ಬೇಕಾದರೂ ಇಡಬಹುದು

ಕೋವಿ ತಯಾರಿಕೆ ಸಂಬಂಧದ ಒಬ್ಬನ ಬಂಧನ

ಗುಡಿಬಂಡೆ ತಾಲ್ಲೂಕಿನ ಬೋಗೇನ[illegible] ಗ್ರಾಮದ ಬೆಸ್ತರ ಜಾತಿ ವೆಂಕಟಪ್ಪ ಎಂಬ [illegible] ವರ್ಷದ ವೃದ್ಧನನ್ನು ಬಂದೂಕದ ತಯಾರಿ ಸಂಬಂಧದಲ್ಲಿ ದಸ್ತಗಿರಿ ಮಾಡಲಾಗಿದೆ ಇವ[illegible] ಸಿಂಗಲ್ ಬ್ಯಾರಲ್ಲಿನ ಒಂದು ಕೋವಿಯನ್ನು ತಯಾರಿಸುತ್ತಿದ್ದನೆಂದೂ, ಅದೇ ರೀತಿಯ ಮತ್ತೊಂದನ್ನು ಸಿದ್ಧಗೊಳಿಸಿ ಮಾರಿದ್ದನೆಂ[illegible] ಹೇಳಲಾಗಿದೆ ದಸ್ತಗಿರಿ ಕಾಲದಲ್ಲಿ ಬಂದೂ[illegible] ತಯಾರಿಕೆಗೆ ಸಂಬಂಧಪಟ್ಟ ಹಲವು ಉಪಕರಣಗಳು ದೊರಕಿತು

ಸಂಸ್ಥಾನದ ಪಂಡಿತರ ಸಮ್ಮೇಳನ

ಸಂಸ್ಥಾನದ ಪಂಡಿತರುಗಳ [illegible] ಸಮ್ಮೇಳನವು [illegible] ಮತ್ತು ೨೦ರಂದು ಬೆಂ[illegible] ಳೂರಿನ ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ಸಮಾವೇಶಗೊಳ್ಳುವುದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಅಧ್ಯಕ್ಷತೆ ವಹಿಸುವರು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾವ್‌ರು ಇದಕ್ಕೆ ಸಂಬಂಧಪಟ್ಟ ಪುಸ್ತಕಗಳ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುವರು

For the installation of
RECORDS, MIKE & LOUDSPEAKERS
at your doors
Please contact
H S RAMACHANDRAN
EVERGREEN ACOUSTICS
"Treasure House of Records"
28 S[illegible] Street,
MYSORE

ನರಗಳು ನಾಶವಾದರೆ ಎಲ್ಲವೂ ನಾಶವೇ!

★ [illegible]
★ [illegible]
★ [illegible]
★ [illegible]
ಇವೆಲ್ಲ ನರ ದೌರ್ಬಲ್ಯಕ್ಕೆ ಸಾಧಾರಣ ಕಾರಣಗಳು
★
★ ಮರವು
★ ಭ್ರಾಂತಿ ಕಲ್ಪನೆಗಳು
★ ಭೀತಿ ಮನೋಭಾವ
★ ಆತ್ಮಹತ್ಯೆ ಭಾವನೆಗಳು
★ ಮನೋವೈಚಿತ್ರ್ಯಗಳು
ಇವು ಅದರ ಭೀಕರ ಪರಿಣಾಮಗಳು
ನರ ದೌರ್ಬಲ್ಯವನ್ನು ಶೀಘ್ರ ನಿವಾರಿಸಲು
ವಿಶ್ವ ವಿಖ್ಯಾತ ಔಷಧಿ
ನವರತ್ನ ಕಲ್ಪ
[illegible]
ಇದು [illegible] ಅಮೂಲ್ಯ ಹರಳುಗಳ ಯೋಗ ವಸ್ತು ವಜ್ರ, ಕೆಂಪು, ಮುತ್ತು, ಹವಳ, [illegible], ಪಚ್ಚೆ, ನೀಲ ಗೋಮೇಧಿಕ, [illegible] ಇವೆಲ್ಲ ಇವೆ
— ಇವನ್ನು ಕಂಡುಹಿಡಿದವರು —
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ,
ವೈದ್ಯ ವಾಚಸ್ಪತಿ
ಇವರ ಪುಸ್ತಕ ಇವರ ಸಾಹಿತ್ಯಕ್ಕೆ ಬರೆಯಿರಿ
NAVRATNA KALPA PHARMACY,
Jullunder City (India)
Grams NAVRATNA

ಪ್ರಭಾ ★ [illegible] ರಿಂದ ಅಪೇಕ್ಷೆ [illegible] ವಾರ
ದಿನವಹಿ ೩ ಪ್ರದರ್ಶನಗಳು
[illegible]
ಮುಂತಾದ ಮನೋಜ್ಞ ಚಿತ್ರಗಳನ್ನು ನೀಡಿದ
[illegible]
★ **ತೂಫಾನ್ ಔರ್ ದೀಯಾ** ★
[ಬರ್ಮಾ ೯ ಮತ್ತು ಪ್ಯಾಲಿ] (ಹಿಂದಿ)
[illegible]
ಸಂಗೀತ [illegible] ನಿರ್ದೇಶಕ ಪ್ರಭಾತ್ ಕುಮಾರ್ [illegible]

ನ್ಯೂ ಚಾಮುಂಡೇಶ್ವರಿ ಕೆಫೆ
ಊಟ ಮತ್ತು ವಸತಿ ಗೃಹ
[illegible] ರಸ್ತೆ ಮೈಸೂರು
[illegible] ಮತ್ತು ಬೋಜನ [illegible] ಊಟ, ಅನುಕೂಲ ಮತ್ತು ಆರೋಗ್ಯಕರವಾದ ರೂಮುಗಳಿಗೆ ಇಲ್ಲಿಗೆ ಬನ್ನಿರಿ [illegible] ಬಂದರೆ ಮತ್ತೆ ಮತ್ತೆ ಬಾರಲು ಬಯಸುವಿರಿ
ಪ್ರೊಪ್ರೈಟರ್ ಬಿ ಬಿ ಎಂ ಚಂದ್ರಯ್ಯ, [ಫೋನ್ [illegible]]

Edited Printed and Published by A R Nagarajan at Sadhvi Press D Subbiah Road Mysore

ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೯] SADHVI : MONDAY 9—7—1956 ಮೈಸೂರು : ಸೋಮವಾರ ೯—೭—೧೯೫೬ [ಸಂಚಿಕೆ : ೩೦೪

ಪ್ರಯಾಣಿಕರ ಮೇಲೆ ಪೌರಸಭಾ ತೆರಿಗೆಗಾಗಿ ಶಾಸನ

ಶಿಡ್ಲಘಟ್ಟದಲ್ಲಿ ೭ ವರ್ಷಗಳ ಹಿಂದಿನ ಕೊಲೆ ತನಿಖೆ

ಬೇಲೂರಿನ ಕೊಲೆ ಆಪಾದಿತ ಕೃಷ್ಣ ಬೇಕಾಗಿದ್ದಾನೆಂದು ಪೊಲೀಸರ ಅರ್ಜಿ

ಬೆಂಗಳೂರು ೯

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆಗಳ ಬಗ್ಗೆ ಆಪಾದಿತನಾಗಿರುವ ಕೃಷ್ಣನು ಏಳು ವರ್ಷಗಳ ಹಿಂದೆ ಶಿಡ್ಲಘಟ್ಟದಲ್ಲಿ ನಡೆದ ಕೊಲೆ ಪ್ರಕರಣದಲ್ಲಿ ತನಿಖೆಗಾಗಿ ಬೇಕಾಗಿರುವನೆಂದು ಶಿಡ್ಲಘಟ್ಟದ ಪೊಲೀಸರು ಇಲ್ಲಿನ ನಗರ ನ್ಯಾಯಾಧೀಶರ ಮುಂದೆ ಅರ್ಜಿ ಸಲ್ಲಿಸಿರುತ್ತಾರೆ ಈ ಅರ್ಜಿಯನ್ನು ಪರಿಶೀಲಿಸಿ ಕೃಷ್ಣನನ್ನು ಪೊಲೀಸರ ವಶಕ್ಕೆ ಒಪ್ಪಿಸುವ ವಿಷಯವನ್ನು ನಾಳಿದ್ದು ಇತ್ಯರ್ಥ ಮಾಡಲಾಗುವುದೆಂದು ಗೊತ್ತಾಗಿದೆ

ಅವಿಶ್ವಾಸಕ್ಕೆ ಅನುಮತಿ ಕೋರಿ ಎ.ಐ.ಸಿ.ಸಿಗೆ ಪತ್ರ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಮತ್ತು ಮುಖ್ಯ ಮಂತ್ರಿಗಳೊಡನೆ ಚರ್ಚೆ ಸಂಭವ

ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾದ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರಲ್ಲಿ ಅವಿಶ್ವಾಸ ಸೂಚಿಸಲು ಬೇಕಿರುವ ಅನುಮತಿ ಪತ್ರವು ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಕಛೇರಿಯನ್ನು ಮುಟ್ಟಿರುವುದೆಂದೂ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೊಡನೆ ಚರ್ಚೆ ನಡೆಸಿದನಂತರ ಮುಂದಿನ ವಾರ ಹೈ ಕಮಾಂಡಿನವರು ಈ ಬಗ್ಗೆ ಪರಿಶೀಲನೆ ನಡೆಸಲಿರುವರೆಂದೂ ವರದಿಯಾಗಿದೆ

ಈ ವಿಚಾರವನ್ನು ಕುರಿತು ಮುಖ್ಯ ಮಂತ್ರಿಗಳೊಡನೆ ಮಾತನಾಡಲು ದೆಹಲಿಗೆ ಅವರನ್ನು ಕರೆಸುವ ಸಂಭವವಿರುವುದೆಂದು ಹೇಳಲಾಗಿದೆ ಅವಿಶ್ವಾಸದ ಅನುಮತಿ ಪತ್ರಕ್ಕೆ ಹೆಚ್ಚು ಮಂದಿ ರುಜು ಮಾಡಿರುವುದರಿಂದ ಅವರುಗಳು ನಿರ್ಣಯವನ್ನು ತರಲೇಬೇಕೆಂದು ಒತ್ತಾಯ ಮಾಡಿದರೆ, ಅದಕ್ಕೆ ಅವಕಾಶವೀಯುವ ಸಂಭವವಿರುವುದೆಂದೂ ಹೇಳಲಾಗಿದೆ

ಮದ್ಯಪಾನ ಮಾಡಿದುದಕ್ಕಾಗಿ ಸಿನಿಮಾ ನಟಿಯರ ಬಂಧನ

ವಿಪರೀತವಾಗಿ ಕುಡಿದಿದ್ದರೆಂಬ ಕಾರಣಕ್ಕಾಗಿ ವಿಳ್ಳುಪುರದ ಪೊಲೀಸರು ಕುಚಲಕುಮಾರಿ ಮತ್ತು ಇ ವಿ ಸರೋಜಾ ಎಂಬ ಇಬ್ಬರು ಸಿನಿಮಾ ನಟಿಯರನ್ನೂ, ಘಂಟಸಾಲಾ ಎಂಬ ಸಿನಿಮಾ ಸಂಗೀತಗಾರರನ್ನೂ, ಫಿಲಂ ಡೈರೆಕ್ಟರ್ ಯೋಗನಾಥಂರವರನ್ನೂ ಬಂಧಿಸಿ ಅವರ ಬಳಿ ದೊರೆತ ೩೨ ಸೀಸೆ ವಿದೇಶೀ ಮದ್ಯವನ್ನು ವಶಪಡಿಸಿಕೊಂಡಿರುವುದಾಗಿ ವರದಿಯಾಗಿದೆ ನಟಿಯರು ಪುದುಚೇರಿಯಿಂದ ದೊಡ್ಡ ಹೊಸ ಮೋಟಾರಿನಲ್ಲಿ ವಾಪಸು ಬರುತ್ತಿದ್ದಾಗ, ಬಂಡಿ ಎಳೆ ಆತನ ಕಾರು ಒಬ್ಬಾತನ ಮೇಲೆ ಹರಿದು ಅಪಘಾತಕ್ಕೆ ತುತ್ತಿ ಹೊಡೆಯಿತು ವಿಚಾರವನು ತಿಳಿದ ಪೊಲೀಸರು ಅಲ್ಲಿಗೆ ಹೋಗಿ ತನಿಖೆ ನಡೆಸಿದರು ದಸ್ತಗಿರಿಯಾದವರನ್ನು ಜಾಮೀನು ಮೇಲೆ ಬಿಡಲಾಗಿದೆ

ಮೈಸೂರಿನ ರಾಜಕೀಯ ಬಿಕ್ಕಟ್ಟಿನ ಮೂಲ ಕಾರಣ

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ವಿವರಣೆ

ಮಂಗಳೂರಿನಲ್ಲಿ ದಕ್ಷಿಣ ಕನ್ನಡ ಕಾಂಗ್ರೆಸ್ ಸದಸ್ಯರನ್ನು ಉದ್ದೇಶಿಸಿ ನೆನ್ನೆ ಮೈಸೂರು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಮಾತನಾಡಿ, ಮೈಸೂರು ಸಂಸ್ಥಾನದ ರಾಜಕೀಯ ಬಿಕ್ಕಟ್ಟಿನ ಹಿನ್ನಲೆಯನ್ನು ವಿವರಿಸಿದರು

ಮೈಸೂರಿನಲ್ಲಿ ಇಂದು ಇರುವ ಅನಿಶ್ಚಿತ ವಾತಾವರಣವನ್ನು ಎಲ್ಲರೂ ಸರಿ ಕಾಣದ ಬೇಕೆ ದೂ, ಅದರಿಂದ ತೊಂದರೆಯುಂಟಾಗುವುದು ಸರಿಯಲ್ಲವೆಂದೂ ಶ್ರೀ ಹನುಮಂತಯ್ಯನವರು ಸೂಚಿಸಿದರು ಮೈಸೂರಿನಲ್ಲಿ ಸರ್ಕಾರ ಮತ್ತು ಪ್ರದೇಶ ಕಾಂಗ್ರೆಸ್ಸುಗಳ ನಡುವೆ ಪರಸ್ಪರ ಸಹಕಾರ ಇಲ್ಲದೆ ಕೆಲಸ ನಡೆಯುತ್ತಿರುವುದೆಂದೂ ಅವರು ವ್ಯಕ್ತಪಡಿಸಿದರು ನೂತನ ಪ್ರಾಂತದ ಉದಯದ ಕಾಲದಲ್ಲಿ ಹೊಸ ನಾಯಕರ ಚುನಾವಣೆಯು ಅಗತ್ಯವೆಂದು ತಾವು ಒತ್ತಾಯ ಪಡಿಸಿದ್ದುದಾಗಿಯೂ ಅವರು ನುಡಿದರು ಮೈಸೂರಿನ ರಾಜಕೀಯ ಬೆಳವಣಿಗೆಯ ದಕ್ಷಿಣ ಕನ್ನಡದವರಿಗೇನೂ ತೊಂದರೆಯಿಲ್ಲವೆಂದೂ, ಅದರಿಂದ ಏನಾದರೂ ಹಾನಿ ತಟ್ಟುವರೆ ತಮಗೆ ಮಾತ್ರ ಆಗುವುದೆಂದೂ ಅವರು ಸೂಚಿಸಿದರು

ಈ ರಾಜಕೀಯ ಬಿಕ್ಕಟ್ಟಿನ ಹಿನ್ನಲೆಯನ್ನು ಅವರು ತಿಳಿಸಿ, ಹಿಂದೆ ತಾವು ಮುಖ್ಯ ಮಂತ್ರಿಯಾಗಿ ಆರಿಸಿಬಂದ ರೀತಿಯನ್ನೂ, ನಂತರ ವಿಶ್ವಾಸದ ಓಟನ್ನು ಪಡೆದುದನ್ನೂ ವಿವರಿಸಿದರು ಆಗ ತಮ್ಮಲ್ಲಿ ೫೭ ಮಂದಿ ವಿಶ್ವಾಸ ಸೂಚಿಸಿದ್ದರೆಂದೂ, ೨೫ ಮಂದಿ ವಿರೋಧವಾಗಿ ಓಟು ಕೊಟ್ಟಿದ್ದರೆಂದೂ ಇದೇ ಪ್ರಥಮವಾಗಿ ಬಹಿರಂಗ ಪಡಿಸಿದರು

ಸಂಸ್ಥಾನ ಪುನರ್ವಿಂಗಡಣೆ ವಿಷಯವು ಜನರ ಮನಸ್ಸನ್ನು ಸೆಳೆದಮೇಲೆ ತಮ್ಮ ಬೆಂಬಲಿಗರಾಗಿ ಹತ್ತಾರು ವರ್ಷಗಳಿಂದ ಇದ್ದ ೧೮-೨೦ ಮಂದಿ ತಮ್ಮ ನಿಲುವಿನ ಬಗ್ಗೆ ವಿರೋಧ ವ್ಯಕ್ತಪಡಿಸಿದರೆಂದೂ, ತಾವು ಮೈಸೂರನ್ನು ಮಾರಿದುದಾಗಿ ಅವರು ಭಾವಿಸಿರುವುದಾಗಿಯೂ ಹೇಳಿದರು ಈ ವಿಚಾರದಲ್ಲಿ ಯಾರ ಅಭಿಪ್ರಾಯವು ಸರಿಯೆಂಬುದು ಕ್ರಮೇಣ ವ್ಯಕ್ತವಾಗುವುದೆಂದು ಅವರು ನುಡಿದರು

ಆಗಲೇ ತಮ್ಮ ಮಂತ್ರಿಮಂಡಲವು ಹೋಗಬೇಕಾಗಿತ್ತೆಂದೂ, ಆದರೆ ಕಾಂಗ್ರೆಸ್ ಅಧ್ಯಕ್ಷರಿಂದ ಬಂದ ನಿರೂಪವು ಯಾರೂ ರಾಜೀನಾಮೆ ಕೊಡಬಾರದೆಂದು ತಿಳಿಸಿದ್ದುದರಿಂದ ಅದು ಸಾಧ್ಯವಾಗಲಿಲ್ಲವೆಂದೂ ಶ್ರೀ ಹನುಮಂತಯ್ಯನವರು ಹೇಳಿ, ಈಗ ತಮ್ಮ ವಿರುದ್ಧವಾಗಿ ೫೦ ಅಥವಾ ೫೫ ಮಂದಿ ಶಾಸನ ಸಭಾ ಸದಸ್ಯರು ಇರುವರೆಂಬ ಅಂಶವನ್ನು ಹೊರಗೆಡಹಿದರು

ತಮ್ಮಲ್ಲಿ ಅವಿಶ್ವಾಸ ಸೂಚಿಸಿರುವ ವಿಷಯವನ್ನು ಅವರು ಪ್ರಸ್ತಾಪಿಸಿ, ಅವಿಶ್ವಾಸ ನಿರ್ಣಯಕ್ಕೆ ರುಜು ಮಾಡದಿರುವ ಶಾಸನಸಭಾ ಸದಸ್ಯರುಗಳಿಗೆ ಮುಂದಿನ ಚುನಾವಣೆಗಳಲ್ಲಿ ಸ್ಪರ್ಧಿಸಲು ಅವಕಾಶ ಕೊಡುವುದಿಲ್ಲವೆಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ತಿಳಿಸಿದ್ದುದಾಗಿ ನಿರ್ಣಯಕ್ಕೆ ರುಜು ಮಾಡಿರುವ ಹಲವು ಸದಸ್ಯರು ತಮಗೆ ಹೇಳಿದರೆಂದು ಶ್ರೀ ಹನುಮಂತಯ್ಯನವರು ನುಡಿದರು

ರಾಷ್ಟ್ರೀಯ ಅಭಿವೃದ್ಧಿ ಮಂಡಲಿಯಲ್ಲಿ ಯೋಜನೆ ಹಣವನ್ನು ವಿನಿಯೋಗಿಸುವ ಬಗ್ಗೆ ತಾವು ನೆಹರೂರವರೊಡನೆ ಭಿನ್ನಾಭಿಪ್ರಾಯ ಹೊಂದಿದ್ದುದನ್ನು ತಮ್ಮ ವಿರುದ್ಧವಾಗಿ ಉಪಯೋಗಿಸಲಾಗಿದೆಯೆಂದು ಅವರು ಹೇಳಿದರು

ಪ್ರಯಾಣಿಕರ ತೆರಿಗೆ ವಿಧಿಸಲು ಪೌರಸಭೆಗಳಿಗೆ ಅಧಿಕಾರ

ಸದ್ಯದಲ್ಲೇ ಕೇಂದ್ರ ಸರ್ಕಾರದ ಶಾಸನ

ಭಾರತದ ಎಲ್ಲಾ ಊರು ಮತ್ತು ಪಟ್ಟಣಗಳಲ್ಲಿ ಇರುವ ಪೌರಸಭೆಗಳು ಆಯಾ ಸ್ಥಳಗಳಿಗೆ ಭೇಟಿ ಕೊಡುವ ಪ್ರೇಕ್ಷಕರ ಮೇಲೆ ಪ್ರಯಾಣ ತೆರಿಗೆಯನ್ನು ವಿಧಿಸಲು ಅವಕಾಶ ಕಲ್ಪಿಸುವ ಶಾಸನವನ್ನು ಸದ್ಯದಲ್ಲೇ ಮಾಡಲಾಗುವುದೆಂದು ಕೇಂದ್ರ ಸ್ವಾಯತ್ತ ಮಂತ್ರಿ ಟಿ ಟಿ ಕೃಷ್ಣಮಾಚಾರಿಯವರು ತಿಳಿಸಿರುತ್ತಾರೆ ತೆರಿಗೆಯನ್ನು ವಿಧಿಸಲು ಪ್ರಾಂತ ಸರ್ಕಾರಗಳು ಪೌರಸಭೆಗಳಿಗೆ ಅಧಿಕಾರವೀಯುವುದು ಪೌರಸಭೆಗಳು ತಮ್ಮ ಪ್ರದೇಶಗಳಲ್ಲಿ ಹೆಚ್ಚು ಸೌಕರ್ಯಗಳನ್ನು ಕಲ್ಪಿಸಲು ಇದರಿಂದ ಸಹಾಯವಾಗುವುದೆಂದು ಅವರು ಹೇಳಿರುವರು

ಲೋಕಸಭೆ ಮುಂದೆ ಮಹಾರಾಷ್ಟ್ರರ ಸತ್ಯಾಗ್ರಹ

ಈ ತಿಂಗಳು ೨೬ನೇ ತಾರೀಖು ಲೋಕಸಭೆಯಲ್ಲಿ ಸಂಸ್ಥಾನ ಪುನರ್ವಿಂಗಡಣೆ ಮಸೂದೆ ಬಗ್ಗೆ ನಡೆಯುವ ಚರ್ಚೆ ಮುಕ್ತಾಯವಾಗುವ ದಿನದಂದು ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು ಸತ್ಯಾಗ್ರಹಿಗಳ ತಂಡವೊಂದನ್ನು ಕಳುಹಿಸಿಕೊಡುವರೆಂದು ಗೊತ್ತಾಗಿದೆ ಅದರಲ್ಲಿ ಬೊಂಬಾಯಿ ಶಾಸನಸಭಾ ಸದಸ್ಯರುಗಳೂ ಪಾರ್ಲಿಮೆಂಟಿನ ಸದಸ್ಯರೂ ಇರುವರು ಸಂಯುಕ್ತ ಮಹಾರಾಷ್ಟ್ರವನ್ನು ಸಾಧಿಸಲು ಜನತೆಯು ಹೋರಾಟ ನಡೆಸುವ ನಿಶ್ಚಯ ಮಾಡಿರುವುದನ್ನು ಲೋಕಸಭೆಯ ಮುಂದೆ ಪ್ರದರ್ಶನ ಮಾಡಿ ತೋರ್ಪಡಿಸಲಾಗುವುದೆಂದು ತಿಳಿದುಬಂದಿದೆ ಲೋಕಸಭೆಯ ಹಲವು ಸದಸ್ಯರನ್ನು ಭೇಟಿ ಮಾಡಿ ಅವರ ಮುಂದೆ ಸಂಯುಕ್ತ ಮಹಾರಾಷ್ಟ್ರದ ಬೇಡಿಕೆಯನ್ನು ಇಡಲು ನಿರ್ಧರಿಸಲಾಗಿದೆ

ಫೆಲೋಷಿಪ್ ಆಫ್ ದಿ ಫ್ರೆಂಡ್ಸ್ ಆಫ್ ಟ್ರುತ್ ಸಭೆ

ಫೆಲೋಷಿಪ್ ಆಫ್ ದಿ ಫ್ರೆಂಡ್ಸ್ ಆಫ್ ದಿ ಟ್ರುತ್ ಸಂಸ್ಥೆಯ ಸಭೆಯು ನಾಳೆ ಸಂಜೆ ೬॥ ಘಂಟೆಗೆ ವೈಸ್‌ರಾಯ್ ರಸ್ತೆಯಲ್ಲಿರುವ ಶ್ರೀ ಎಂ ಯಾಮುನಾಚಾರ್ಯರ ಮನೆಯಲ್ಲಿ ಸೇರಲಿದೆ ...ಂಧಿ ಗ್ರಾಮದ ಶ್ರೀ ಜಿ ರಾಮಚಂದ್ರರವರು ಭಾಗವಹಿಸುವರು ಸಂಸ್ಥೆಯಲ್ಲಿ ಆಸಕ್ತಿಯುಳ್ಳ ಮಹನೀಯರೆಲ್ಲರೂ ದಯಮಾಡಿಸಬೇಕೆಂದು ಕೋರಲಾಗಿದೆ

ರಂಗಲಕ್ಷ್ಮಿ ಮನೆಗೆ ಹೋಗಿದ್ದಳು

ಸ್ವಂ ವ ವರದಿಗಾರ] ಬೆಂಗಳೂರು ೯

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮಗಳು ರಂಗಲಕ್ಷ್ಮಿಯನ್ನು ಕೆಲವು ದಿನಗಳ ಹಿಂದೆ ಆಕೆಯ ಮನೆಗೆ ಪೊಲೀಸು ಕಾವಲು ಸಮೇತ ಕರೆದುಕೊಂಡು ಹೋಗಿದ್ದುದಾಗಿ ತಿಳಿದುಬಂದಿದೆ ಆಕೆಯೊಡನೆ ಇಲ್ಲಿನ ಮಹಿಳಾ ರೋಗಿಗಳ ಶಾಲೆಯ ಸೂಪರಿಂಟೆಂಡೆಂಟರಾದ ಶ್ರೀ ಗೋಪಾಲರಾವ್ ಮುಂತಾದವರು ಇದ್ದರೆಂದು ಹೇಳಲಾಗಿದೆ ಆಕೆಯನ್ನು ಸುಮಾರು ೪ ಘಂಟೆ ಕಾಲ ಮನೆಯ ಆವರಣದಲ್ಲಿ ಸುತ್ತಿಸಲಾಯಿತೆಂದೂ, "ಮನೆ ಬೇಗ ಬರಿದಾಗಿದೆ ಮತ್ತು ತಂದೆತಾಯಿಗಳಿಲ್ಲ" ಎಂದು ಆಕೆಯು ಹೇಳಿದುದಾಗಿಯೂ ಗೊತ್ತಾಗಿದೆ ಆಕೆಯೊಡನೆ ಪೊಲೀಸರು ಇದ್ದುದಾಗಿ ಹೇಳಲಾಗಿದೆ

○ ಅಂತರ ಸಂಸ್ಥಾನ ಸರ್ಕಾರಗಳ ಕಾರ್ಯದರ್ಶಿಗಳ ಸಭೆಯು ಈ ದಿನ ಇಲ್ಲಿ ಸೇರಿತ್ತು

○ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಇಂದು ಅಥವಾ ನಾಳೆ ದೆಹಲಿಗೆ ಹೊರಡುವರು

ಈ ತಿಂಗಳ ಕೊನೆಯಲ್ಲಿ ಬೆಂಗಳೂರಿಗೆ ಕಾಂಗ್ರೆಸ್ ನಾಯಕರ ಭೇಟಿ

ಸಾರ್ವತ್ರಿಕ ಚುನಾವಣೆಗಳಲ್ಲಿ ಮೈಸೂರು ಮತ್ತು ಕರ್ನಾಟಕಗಳಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳನ್ನು ಆರಿಸುವ ಕಾರ್ಯದಲ್ಲಿ ಸಹಾಯಕರಾಗಿ ನೇಮಕವಾಗಿರುವ ಶ್ರೀಮತಿ ತಾರಾಚಂದ್, ಫೀರೋಜ್ ಗಾಂಧಿ ಮತ್ತು ಜಯನಾರಾಯಣ ವ್ಯಾಸರವರು ಈ ತಿಂಗಳ ಕಡೆಯಲ್ಲಿ ಬೆಂಗಳೂರಿಗೆ ಬರುವರು ಉಮೇದುವಾರರ ಆಯ್ಕೆ ಬಗ್ಗೆ ಪೂರ್ವಭಾವಿ ಕಾರ್ಯಕ್ರಮಗಳನ್ನು ಅವರು ನಿರ್ಧರಿಸಿ ಸೆಪ್ಟೆಂಬರ್ ತಿಂಗಳಲ್ಲಿ ಪುನಃ ಇಲ್ಲಿಗೆ ಭೇಟಿ ಕೊಡಲಿರುವರು

ಮಳೆ ಮತ್ತು ಪ್ರವಾಹದಿಂದ ೬॥ ಸಾವಿರ ಮನೆ ನಾಶ

ಉತ್ತರ ಪ್ರದೇಶದಲ್ಲಿ ಕಳೆದ ವಾರ ಪ್ರಬಲ ಮಳೆ ಬಂದು ಮುಜಫರ್‌ನಗರ ಮತ್ತು ಅಲ್ಮೋರಾ ಜಿಲ್ಲೆಗಳಲ್ಲಿ ಪ್ರವಾಹದಿಂದ ಭೂಮಿ ಕುಸಿದು ೨೧ ಜನರು ಮೃತಪಟ್ಟಿರುತ್ತಾರೆ ೬೩ ಹಳ್ಳಿಗಳಲ್ಲಿ ೬,೦೦೦ ಮನೆಗಳೂ, ಪಟ್ಟಣಗಳಲ್ಲಿ ೫೦೦ ಮನೆಗಳೂ ನೀರಿನಿಂದ ನಾಶವಾಗಿವೆ ಮುಜಫರ್ ನಗರದ ಹೊಸ ಮಾರುಕಟ್ಟೆಯಲ್ಲಿ ೨೫೦ ಧಾನ್ಯದ ಮಳಿಗೆಗಳು ನೀರಿನಲ್ಲಿ ಮುಳುಗಿವೆ

ಮಗನ ಕಳ್ಳತನಕ್ಕಾಗಿ ತಂದೆಗೆ ಮರಣ ಪ್ರಾಪ್ತಿ

ಜಬ್ಬಲ್ಪುರದ ಗ್ರಂಥ ಪ್ರಕಟನಾ ಮಂದಿರದ ನೌಕರ ಒಲಿರಾಂ ದುಬೆ ಎಂಬುವನ ೧೬ ವರ್ಷದ ಮಗನು ಸಂಬಂಧಿಕರ ಮನೆಯಲ್ಲಿ ೨॥ ಸಾವಿರ ರೂ ಆಭರಣಗಳನ್ನು ಅಪಹರಿಸಿದ ಸಂಬಂಧವಾಗಿ ತಂದೆಗೆ ವಿಪರೀತ ವ್ಯಾಕುಲವಾಗಿ ಆತನು ಹಾಗೆಯೇ ಪ್ರಾಣಬಿಟ್ಟನೆಂದು ಸಂಗತಿಯು ವರದಿಯಾಗಿದೆ ಮೂರು ದಿನಗಳ ಹಿಂದೆ ಕಳುವಿನ ಸಂಬಂಧದಲ್ಲಿ ಪೊಲೀಸರು ದುಬೆಯ ಮನೆಯಲ್ಲಿ ಒಡವೆಗಳನ್ನು ವಶಪಡಿಸಿಕೊಳ್ಳುತ್ತಿದ್ದರಲ್ಲಿ ಕೃತ್ಯದ ಶೋಧನೆ ನಡೆಸುತ್ತಿರುವಾಗ ಇದರಿಂದ ತಂದೆಯು ಸಹಸಿ ವಿನಾಶನೆಂದೂ ಹೇಳಲಾಗಿದೆ ತಂದೆಯ ಶವಸಂಸ್ಕಾರವನ್ನು ಮಾಡಲು ಮಗನಿಗೆ ಜಾಮೀನು ಕೊಡಲಾಗಿದೆ

ದ್ವಿತೀಯ ಯೋಜನೆಯಲ್ಲಿ ೨½ ಲಕ್ಷ ಟನ್ ಹೆಚ್ಚು ಆಹಾರ ಬೆಳೆ

ಬೆಂಗಳೂರು ೬

ದ್ವಿತೀಯ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ ೨½ ಲಕ್ಷ ಟನ್ ಹೆಚ್ಚು ಆಹಾರದ ಬೆಳೆಯನ್ನು ಸಂಸ್ಥಾನದಲ್ಲಿ ಉತ್ಪತ್ತಿಮಾಡಲು ಯೋಚಿಸಲಾಗಿರುವುದೆಂದು ಆಹಾರ ಇಲಾಖಾ ಡೈರೆಕ್ಟರ್ ಶ್ರೀ ಎಂ ಮಲ್ಲರಾಜೆ ಅರಸರು ತಿಳಿಸಿದರು ಮುಸ್ಸೂರಿಯಲ್ಲಿ ಸೇರಿದ್ದ ವ್ಯವಸಾಯ ಇಲಾಖಾ ಮಂತ್ರಿಗಳು ಮತ್ತು ಅಧಿಕಾರಿಗಳ ಸಮ್ಮೇಳನದಲ್ಲಿ ಕೈಗೊಂಡ ತೀರ್ಮಾನಗಳನ್ನು ಅವರು ವಿವರಿಸಿ, ಮೈಸೂರಿನಲ್ಲಿ ಹೆಚ್ಚು ಆಹಾರ ಉತ್ಪತ್ತಿ ಮಾಡಲು ಕೇಂದ್ರ ಸರ್ಕಾರದವರು ೩ ಕೋಟಿ ರೂ ಧನ ಸಹಾಯವನ್ನು ಸಂಸ್ಥಾನಕ್ಕೆ ಒದಗಿಸಬೇಕೆಂದು ಕೇಳುವುದಾಗಿ ಹೇಳಿದರು ಸಂಸ್ಥಾನದಲ್ಲಿ ವರ್ಷಕ್ಕೆ ಸರಾಸರಿ ೧೬ ಲಕ್ಷ ಟನ್ ಧಾನ್ಯದ ಉತ್ಪತ್ತಿಯಾಗುತ್ತಿರುವುದೆಂದು ಅವರು ಹೊರಗೆಡಹಿದರು

ಕೇಂದ್ರ ಆಯವ್ಯಯ ರಹಸ್ಯದ ಬಯಲಿನ ಬಗ್ಗೆ ಮೊಕದ್ದಮೆ

ಕೇಂದ್ರ ಸರ್ಕಾರದ ಆಯವ್ಯಯ ಪಟ್ಟಿಯ ರಹಸ್ಯವು ಬೊಂಬಾಯಿಯಲ್ಲಿ ಬಯಲಾದ ಬಗ್ಗೆ ಸರ್ಕಾರೀ ರಹಸ್ಯದ ಶಾಸನದ ಪ್ರಕಾರ ಎಫ್ ಎಸ್. ಜೇಕಬ್ಸ್, ದೇವೇಂದ್ರನಾಥ್ ಆಢ, ಮತ್ತು ಬೊಂಬಾಯಿನ ವ್ಯಾಪಾರಿಗಳ [illegible] ವೋರ ಮತ್ತು [illegible] ಕೋಠಾರಿಯವರ ಮೇಲೆ ದೆಹಲಿ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಲಾಗಿದೆ ಈ ಸಂಬಂಧವಾಗಿ ವಶ್ತಗಿರಿಯಾಗಿರುವ ಶ್ರೀ [illegible] ಪಟೇಲ್ ಮತ್ತು ಮೋಹನದಾಸ್ ಮೆಹತಾ ಎಂಬ ಇತರ ಇಬ್ಬರು ವರ್ತಕರನ್ನು ಪ್ರತ್ಯೇಕವಾಗಿ ವಿಚಾರಣೆಗೆ ಗುರಿಪಡಿಸಲಾಗುವುದು

ಶ್ರವಣ-ನೋಟ ಮೂಲಕ ಪ್ರಚಾರದ ಯೋಜನೆಗೆ ೩ ಕೋಟಿ ರೂ.

ಶ್ರವಣ ಮತ್ತು ನೋಟದ ಮೂಲಕ ಶಿಕ್ಷಣವನ್ನು ಕೊಡುವ ಯೋಜನೆಯನ್ನು ದ್ವಿತೀಯ ಯೋಜನೆ ಅಂಗವಾಗಿ ಕೇಂದ್ರ ಸರ್ಕಾರದವರು ಕೈಗೊಳ್ಳಲಿದ್ದಾರೆ ಅದಕ್ಕಾಗಿ ೩ ಕೋಟಿ ರೂ ಗಳ ವೆಚ್ಚವನ್ನು ಅಂದಾಜು ಮಾಡಲಾಗಿದೆ ದೆಹಲಿಯಲ್ಲಿ ಈ ಸಂಬಂಧವಾಗಿ ಅಖಿಲ ಭಾರತ ಉಪಾಧ್ಯಾಯರುಗಳ ಸಮ್ಮೇಳನವೂ ನಡೆದು ಮೊನ್ನೆ ಮುಕ್ತಾಯವಾಯಿತು

ಉತ್ತಮ ಚಲನಚಿತ್ರಗಳಿಗೆ ಬಹುಮಾನ

ಮದ್ರಾಸಿನ ಚಲನಚಿತ್ರ ಪ್ರೇಮಿಗಳ ಸಂಘದಿಂದ ನೇಮಿತವಾಗಿರುವ ಸಮಿತಿಯೊಂದು ೧೯೫೫ರಲ್ಲಿ ತಯಾರಾದ ಕನ್ನಡ, ತಮಿಳು, ತೆಲುಗು ಮತ್ತು ಮಲಯಾಳದ ಚಲನಚಿತ್ರಗಳಲ್ಲಿ ಉತ್ತಮವಾದುದನ್ನು ಆಯ್ಕೆ ಮಾಡಲಿದೆ ಕನ್ನಡದ ಚಿತ್ರಗಳಲ್ಲಿ ಆದರ್ಶ ಸತಿ, ಮುಡಿಕೆಪ ರಾಣಿ [illegible], ಮೊದಲ ತೇದಿ ಮತ್ತು ಸ್ತ್ರೀ ರತ್ನ ಚಿತ್ರಗಳು ಅವಗಾಹನೆಗಾಗಿ ಹೋಗಿವೆ

ಜನ ಸಂಘದ ಕಾರ್ಯಾಲಯದ ವರ್ಗಾವಣೆ

ಇದುವರೆವಿಗೂ ಚಾಮರಾಜಪೇಟೆಯಲ್ಲಿದ್ದ ಜನ ಸಂಘದ ಕಾರ್ಯಾಲಯವನ್ನು ಹಳೇ ಅಗ್ರಹಾರದ ಮಾಧವರಾವ್ ಸರ್ಕಲ್ಲಿನಲ್ಲಿರುವ ಕೈಲಾಸ ವಿಹಾರ್ ಕಟ್ಟಡಕ್ಕೆ ವರ್ಗಾಯಿಸಲಾಗಿದೆ

ಬೆಂಗಳೂರು ರೇಡಿಯೋ ವಾಣಿ ಕಾರ್ಯಕ್ರಮ

[illegible]

ಬ್ಯಾಸ್ಕೆಟ್‌ಬಾಲ್ ಆಟ್ಟೆರು ಪಂದ್ಯದಲ್ಲಿ ಬಹುಮಾನ ವಿನಿಯೋಗ

ಸಂಜೆಸರ್ಗಾಪುರ

ರಿಕ್ರಿಯೇಷನ್ ಕ್ಲಬ್ಬಿನ ಆಶ್ರಯದಲ್ಲಿ ಸಂಸ್ಥಾನದ ಬ್ಯಾಸ್ಕೆಟ್ ಬಾಲ್ ಟೂರ್ನಮೆಂಟಿನ ಆಟ್ಟೆರು ಪಂದ್ಯವು ನೆನ್ನೆ ಅಡ್ವೊಕೇಟ್ ಶ್ರೀ ಎಸ್ ನಾರಾಯಣಾಚಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು ಮೈಸೂರು ಮಹಾರಾಜಾ ಕಾಲೇಜಿನ ಅಸಿಸ್ಟೆಂಟ್ ಸ್ಪೋರ್ಟ್ಸ್ ಡೈರೆಕ್ಟರ್ ಶ್ರೀ ಪಿ ಎಸ್ [illegible] ಅವರು ಬಹುಮಾನ ವಿನಿಯೋಗ ಮಾಡಿ, ಕ್ರೀಡಾಭಿಮಾನಿಗಳ ಸಂಸ್ಥೆಗಳು ಹೆಚ್ಚುತ್ತಿರಬೇಕಾಗಿ ಇಂತಹ ಸಮಾರಂಭಗಳನ್ನು ಏರ್ಪಡಿಸಲು ಸಕಲ ಸೌಲಭ್ಯಗಳನ್ನೂ ಕಲ್ಪಿಸಬೇಕೆಂದು ತಿಳಿಸಿದರು ಅಧ್ಯಕ್ಷರು ಭಾಷಣ ಮಾಡಿ ಸಾರ್ವಜನಿಕರ ಸಹಕಾರವನ್ನು ಕೋರಿದರು

ಶ್ರೀ ಬಿ ವಿ ಬಾಲಸುಬ್ರಹ್ಮಣ್ಯಂರವರು ರೋಲಿಂಗ್ ಷೀಲ್ಡನ್ನೂ, ಅಧ್ಯಕ್ಷರು ವಿನ್ನರ್ಸ್ ಕಪ್ಪನ್ನೂ ಬೆಂಗಳೂರಿನ ಭಾರತ್ ಕ್ಲಬ್ಬಿನವರಿಗೂ, ರನ್ನರ್ ಕಪ್ಪನ್ನು ಶ್ರೀ ಕೆ ಮಹದೇವಯ್ಯನವರು ಮೈಸೂರು ಕಲ್ಚರಲ್ ರವರಿಗೂ ಹಾಗೂ ಬಹುಮಾನವನ್ನು ಬೆಂಗಳೂರು ನ್ಯಾಷನಲ್ ಕ್ಲಬ್ಬಿನವರಿಗೆ ಚಾಲೆಂಜ್ ಕ್ಲಬ್ಬಿನವರೂ ಕೊಟ್ಟರು ಪಂದ್ಯದಲ್ಲಿ ಸಹಕರಿಸಿದವರೆಲ್ಲರಿಗೂ ಶ್ರೀ ಹೆಚ್ ಪಿ ಶ್ರೀಧರ್ ರವರು ವಂದನಾರ್ಪಣೆ ಮಾಡಿದರು

ನಾಲಿಗೆ ಬಿದ್ದವರ ಸೈನ್ಯ ಇಬ್ಬರು ಮಕ್ಕಳ ಕಳವು

ಹುಬ್ಬಳ್ಳಿ ನಾಲಿಗೆ ಪಲ್ಲಿಯನ್ನು ಎಂಬ ಹೆಂಗಸು ತನ್ನ ಇಬ್ಬರು ಮಕ್ಕಳೊಡನೆ ಮೊನ್ನೆ ವಿಧಿವಶಳಾದ ಸಂಬಂಧದಲ್ಲಿ ಪೊಲೀಸರಿಗೆ ಇಬ್ಬರು ಮಕ್ಕಳ ದೇಹಗಳು ಸಿಕ್ಕಿವೆ ಇತರರ ದೇಹಗಳಿಗಾಗಿ ಶೋಧನೆ ನಡೆಯುತ್ತಿದೆ

ಕಪಿಲಾ ನದಿ ಪ್ರವಾಹಕ್ಕೆ ಸಿಕ್ಕಿ ವೃದ್ಧನ ಮರಣ

ಕಪಿಲಾ ನದಿಯಲ್ಲಿ ವಿಪರೀತ ಪ್ರವಾಹ ಬಂದು ರಸ್ತೆಗಳಿಗೂ, ಬಾಳೆ ಮತ್ತು ತರಕಾರಿ ತೋಟಗಳಿಗೂ ನೀರು ನುಗ್ಗಿದ್ದು ಪ್ರವಾಹಕ್ಕೆ ಸಿಕ್ಕಿ ಒಬ್ಬ ವೃದ್ಧನೂ ಮತ್ತು ಎರಡು ಹಸುಗಳೂ ಕೊಚ್ಚಿಹೋದುವೆಂದು ವರದಿಯಾಗಿದೆ

ನಾಲ್ಕು ಬಾರಿ ಹಾವು ಕಚ್ಚಿದರೂ ಎಚ್ಚರಿಕೆಯಿಲ್ಲದವಳ ಮರಣ

ನಾಗಪುರದಲ್ಲಿ ಕಳೆದ ಮಂಗಳವಾರ ಬ್ರಿಜಿಕೋರಿ ಎಂಬ ಹೆಂಗಸು ದನಗಳಿಗೆ ಹುಲ್ಲು ತರಲು ನಾಲ್ಕು ಬಾರಿ ಹೋಗಿ ನಾಲ್ಕು ಸಲವೂ ಹಾವಿನಿಂದ ಕಚ್ಚಿಸಿಕೊಂಡಳೆಂದೂ, ಅದರ ಪರಿವೆಯೇ ಆಕೆಗಿರಲಿಲ್ಲವೆಂದೂ ತನಗೆ ಕಚ್ಚಿದ್ದು ಏನೋ ಆಯಿತೆಂದು ಮಾತ್ರ ಆಕೆಯು ತಿಳಿಸಲು ಇತರರೂ ಅದನ್ನು ಗಮನಿಸಲಿಲ್ಲವೆಂದೂ, ರಾತ್ರಿ ಹಾಸಿಗೆಯಲ್ಲಿ ಮಲಗಿ ನಿದ್ರಿಸುತ್ತಿದ್ದಾಗ ಹಾಗೆಯೇ ಮೃತಪಟ್ಟಳೆಂದೂ ಗೊತ್ತಾಗಿದೆ ಬೆಳಗಾಗುತ್ತಲೇ ಈ ವಿಚಾರವನ್ನು ಅರಿತ ಮನೆಯವರು ಹುಲ್ಲಿನ ರಾಶಿಯಲ್ಲಿ ಶೋಧಿಸಲಾಗಿ ಅಲ್ಲಿ ನಾಗರಹಾವಿದ್ದುದು ಕಂಡುಬಂದು ಅದನ್ನು ಹೊಡೆದು ಕೊಂದರು ಹಾವನ್ನೂ, ಹೆಂಗಸನ್ನೂ ಮೆರವಣಿಗೆಯಲ್ಲಿ ಸ್ಮಶಾನಕ್ಕೆ ಕೊಂಡೊಯ್ಯಲಾಯಿತು

ಪಶ್ಚಿಮ ಪಾಕಿಸ್ತಾನದಲ್ಲಿ ರೆಡ್‌ಷರ್ಟ್ ಸಂಸ್ಥೆ ಮೇಲೆ ನಿಷೇಧ

ಪಶ್ಚಿಮ ಪಾಕಿಸ್ತಾನ ಸರ್ಕಾರದವರು ತಮ್ಮ ಪ್ರಾಂತದಲ್ಲೆಂತೆ ರೆಡ್ ಷರ್ಟ್ ಸಂಸ್ಥೆಯನ್ನು ನಿಷೇಧಿಸಿರುತ್ತಾರೆ ಗಡಿನಾಡು ಮುಖಂಡರಾದ ಖಾನ್ ಅಬ್ದುಲ್ ಗಫಾರ್ ಖಾನರು ಅದರ ನಾಯಕರು

ಕಾಂಬೋಡಿಯಕ್ಕೆ ಬುಲ್ಗಾನಿನ್ ಮತ್ತು ಕ್ರುಶ್ಚೇವ್ ಭೇಟಿ

ರಷ್ಯದ ಪ್ರಧಾನಿ ಬುಲ್ಗಾನಿನ್ ಮತ್ತು ಕಮ್ಯೂನಿಸ್ಟ್ ಪಕ್ಷದ ಕಾರ್ಯದರ್ಶಿ ಕ್ರುಶ್ಚೇವರು ಕಾಂಬೋಡಿಯಾ ರಾಜ್ಯಕ್ಕೆ ಭೇಟಿಯಾಡಲು ಸಮ್ಮತಿಸಿರುತ್ತಾರೆ ಅವರೊಡನೆ ರಷ್ಯದ ವಿದೇಶಾಂಗ ಮಂತ್ರಿ ಷೆಪಿಲೋವರೂ ಹೋಗುವರು

ಚಾಮರಾಜನಗರ ತಾಲ್ಲೂಕಿನಲ್ಲಿ ಪ್ರದೇಶ ಕಾಂ|| ಅಧ್ಯಕ್ಷರ ಪ್ರವಾಸ

ಸ್ವಂ ವ) ಚಾಮರಾಜನಗರ ೭

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುಟ್ಟಸ್ವಾಮಿಯವರೊಡನೆ ಈ ತಾಲ್ಲೂಕಿನ ೧೩ ಹಳ್ಳಿಗಳಲ್ಲಿ ಪ್ರವಾಸ ಮಾಡಿ, ಅಭಾವ ಪರಿಹಾರ ಸ್ಥಿತಿಯನ್ನು ಪರಿಶೀಲಿಸಿದರು ಇತ್ತೀಚೆಗೆ ಬಂದ ಮಳೆಯ ಪರಿಣಾಮವಾಗಿ ಜನರ ತೊಂದರೆಗಳು ಪರಿಹಾರವಾಗುವುವೆಂದು ಅವರು ತಿಳಿಸಿದರು

ಒಂದು ಕಡೆ ಅವರು ಮುದುಕಿಯೊಬ್ಬಳಿಗೆ ೫ ರೂ ನೋಟನ್ನು ಕೊಟ್ಟಾಗ, ಇತರರು ಅವರ ಮೋಟಾರನ್ನು ಸುತ್ತಿ ದುಡ್ಡನ್ನು ಕೇಳಿದರು ಜನರಿಗೆ ಮತ್ತು ಕೊಡುವ ಅಭ್ಯಾಸವು ಸರಿಯಲ್ಲವೆಂದು ತಿಳಿಸಿದರು

ಮತ್ತೊಂದು ಕಡೆ ಒಬ್ಬ ಕೃಶನಾದ ರೈತನು ಹಸಿವಿನಿಂದ ತನ್ನ ಸಂಸಾರದ ವ್ಯಕ್ತಿ ಮೂವರು ಮೃತಪಟ್ಟುದಾಗಿ ತಿಳಿಸಿದನೆಂದೂ ಹೆಚ್ಚು ಜನರು ಇದೇ ರೀತಿ ತೊಂದರೆಗೆ ಒಳಗಾಗುವ ಸನ್ನಿವೇಶವಿರುವುದೆಂದು ಹೇಳಿದುದಾಗಿಯೂ ವರದಿಯಾಗಿದೆ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಿಗೆ ಇಲ್ಲಿನ ಪೌರಸಭೆಯವರು ಮಾನಪತ್ರವನ್ನು ಅರ್ಪಿಸಿದರು ಅಧ್ಯಕ್ಷರು ಕೃತಜ್ಞತೆಯನ್ನು ಸೂಚಿಸಿ, ಪೌರಸಭೆಗೆ ತಮ್ಮ ಕೈಲಾದಷ್ಟು ಸಹಾಯ ಮಾಡುವುದಾಗಿ ಭರವಸೆಯಿತ್ತರು ಪೌರಸಭಾ ಸದಸ್ಯರು ಪಕ್ಷಭೇದವಿಲ್ಲದೆ ಇರಬೇಕೆಂದು ತಿಳಿಸಿದರು

ಸಂಜೆ ಬಹಿರಂಗ ಸಭೆಯಲ್ಲಿ ಮಾತನಾಡಿ, ರಚನಾತ್ಮಕ ಕಾರ್ಯಗಳ ಮಹತ್ವವನ್ನು ವಿವರಿಸಿದರು ಪಂಚವಾರ್ಷಿಕ ಯೋಜನೆಯಲ್ಲಿ ನಡೆಸುವ ಕಾರ್ಯಗಳಿಗೆ ಹೆಚ್ಚು ಹಣವು ಬೇಕಾಗುವುದೆಂದೂ, ಆದ್ದರಿಂದ ಕಂದಾಯವನ್ನು ಮಾಫಿ ಮಾಡುವಂತಿಲ್ಲವೆಂದೂ ನುಡಿದರು ಆಡಳಿತದ ವಿಷಯವನ್ನು ಪ್ರಸ್ತಾಪಿಸಿ ಯಾರು ಮಂತ್ರಿಗಳಾದರೇನು, ಕಾಂಗ್ರೆಸ್ಸು ಜನರ ಸೇವೆಯನ್ನು ಸಲ್ಲಿಸುವುದೆಂದೂ, ಮಂತ್ರಿಗಳ ಬಗ್ಗೆ ಜನರು ಆತಂಕಗೊಳ್ಳಬೇಕಾಗಿಲ್ಲವೆಂದೂ ತಿಳಿಸಿದರು

ರಾತ್ರಿ ಕಾಂಗ್ರೆಸ್ ಕಛೇರಿಯಲ್ಲಿ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು, ತಾಲ್ಲೂಕು ಕಾಂಗ್ರೆಸ್ ಅಧ್ಯಕ್ಷ ಶ್ರೀ ಪುಟ್ಟನಂಜಪ್ಪನವರಿಗೆ ಕೊಟ್ಟ ಜವಾಬು ಮತ್ತೊಂದು ಮಟ್ಟಿಗೆ ದೊಡ್ಡ ಪ್ರಕರಣವಾಗಬಹುದೆಂದು ಅಧ್ಯಕ್ಷರು ತಿಳಿಸಿದರು

ದ್ವಿತೀಯ ಯೋಜನೆಯಲ್ಲಿ ಹೆಚ್ಚು ಬಲ್ಬುಗಳ ತಯಾರಿಕೆ

ದ್ವಿತೀಯ ಯೋಜನೆ ಅಂಗವಾಗಿ ವರ್ಷಂಪ್ರತಿ ೧ ಕೋಟಿ ವಿದ್ಯುಚ್ಛಕ್ತಿ ಬಲ್ಬುಗಳನ್ನು ಹೆಚ್ಚಾಗಿ ತಯಾರಿಸುವ ಯೋಜನೆಗೆ ಭಾರತ ಸರ್ಕಾರದವರು ಮಂಜೂರಾತಿ ಕೊಟ್ಟಿರುತ್ತಾರೆ

ಮನೆ ಕ್ರಯಕ್ಕಿದೆ

ಮೈಸೂರು ಸಿಟಿ ಲಕ್ಷ್ಮೀಪುರಂ ಮೊಹಲ್ಲಾ ಹಳ್ಳದಕೇರಿ ಡೋರ್ ನಂ 2860 ಉಳ್ಳ ಮನೆ ಕ್ರಯಕ್ಕಿದೆ ಒಟ್ಟಾಗಿಯಾಗಲೀ ಬೇರೆಬೇರೆಯಾಗಿಯಾಗಲೀ ಮಾರಲಾಗುತ್ತೆ ವಿವರಗಳಿಗೆ

ಜಯ ಅಂಡ್ ಕಂಪೆನಿ,

ಮನೆ ಮತ್ತು ಜಮೀನು ಏಜೆಂಟರು,
ಸಯ್ಯಾಜಿರಾವ್ ರಸ್ತೆ, ಮೈಸೂರು
ಫೋನ್ 520

ಶ್ರೀ ಜಗದಂಬಾ ಶಿಶುವಿಹಾರ

ಶಿವ ಸರ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ವಿಧಾನಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ತ್ವರೆಯಿಂದ ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ವಿ ಕೃಷ್ಣಮೂರ್ತಿ,
ಡೈರೆಕ್ಟರ್

ಜಿಲ್ಲೆಯಲ್ಲಿ ಎಂ. ವಿ. ಕೃಷ್ಣಪ್ಪನವರ ಪ್ರವಾಸ

ಮೈಸೂರು

ಕೇಂದ್ರ ಆಹಾರ ಉಪಮಂತ್ರಿ ಶ್ರೀ ಎಂ ವಿ ಕೃಷ್ಣಪ್ಪನವರು ಇಂದು ಬೆಂಗಳೂರಿಗೆ ಬಂದು ನಾಳೆ ಮತ್ತು ನಾಳಿದ್ದು ಮಂಡ್ಯ ಮತ್ತು ಮೈಸೂರು ಜಿಲ್ಲೆಗಳಲ್ಲಿ ಪ್ರವಾಸ ಮಾಡುವರು ೧೧ನೇ ತಾರೀಖು ಅವರು ಕೋಲಾರ ಜಿಲ್ಲೆಗೆ ಭೇಟಿಯಿತ್ತು, ಮಾರನೇ ದಿನ ದೆಹಲಿಗೆ ಯಾನ ಮಾಡುವರು

ಕೃಷ್ಣರಾಜೇಂದ್ರ ಸಹಕಾರ ಸಂಘದ ಅಧಿಕಾರ ವರ್ಗ

ರಾಜಧಾನಿಯ ಕೃಷ್ಣರಾಜೇಂದ್ರ ಸಹಕಾರ ಸಂಘದ ಅಧಿಕಾರ ವರ್ಗದ ಚುನಾವಣೆಯು ಕಳೆದ ಶುಕ್ರವಾರ ನಡೆದು ಶ್ರೀ ಎಸ್. ಶ್ರೀಕಂಠಶರ್ಮರವರು ಅಧ್ಯಕ್ಷರಾಗಿಯೂ, ಶ್ರೀ ಎಂ ಎಸ್ ರಾಮಲಿಂಗಯ್ಯರವರು ಉಪಾಧ್ಯಕ್ಷರಾಗಿಯೂ, ಎಂ ವಿ ವೆಂಕಟರಾಮುರವರು ಗೌರವ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು

ಪೂರ್ಣವಾಗಿ ಸ್ತ್ರೀ ಸದಸ್ಯರುಳ್ಳ ಗ್ರಾಮ ಪಂಚಾಯಿತಿ

ಆಂಧ್ರ ಸಂಸ್ಥಾನದ ನೆಲ್ಲೂರು ಜಿಲ್ಲೆಯ ವೈರು ಗ್ರಾಮ ಪಂಚಾಯಿತಿಯ ೮ ಚುನಾವಣಾ ಸ್ಥಾನಗಳಿಗೂ ಮಹಿಳೆಯರೇ ಆರಿಸಲ್ಪಟ್ಟಿದ್ದು, ಪಂಚಾಯಿತಿಯು ಮಹಿಳಾ ಸದಸ್ಯರಿಂದ ಕೂಡಿರುವುದೆಂದು ಗೊತ್ತಾಗಿದೆ ಭಾರತದಲ್ಲಿ ಪೂರ್ಣವಾಗಿ ಮಹಿಳೆಯರೇ ಸದಸ್ಯರಾಗಿರುವ ಪಂಚಾಯಿತಿಯು ರಚನೆಯಾಗಿರುವುದು ಇದೇ ಮೊದಲೆಂದು ಹೇಳಲಾಗಿದೆ ಈ ಪಂಚಾಯಿತಿಯ ವ್ಯಾಪ್ತಿಗೆ ಆಂಧ್ರದ ಮುಖ್ಯ ಮಂತ್ರಿ ಬಿ ಗೋಪಾಲರೆಡ್ಡಿಯವರ ಸ್ವಂತ ಗ್ರಾಮದ ಬುಚಿರೆಡ್ಡಿಪಾಳ್ಯವೂ ಸೇರುತ್ತದೆ

ಹಾಸಿಗೆ-ದಿಂಬು

ಮಿತವ್ಯಯದಲ್ಲಿ ಚೊಕ್ಕ ಹಾಸಿಗೆ ತಯಾರು ಮಾಡುತ್ತೇವೆ

ಬಾದುಷಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ANNOUNCEMENT
THE INSTITUTE OF EDUCATION
D Banumiah's Educational Buildings, Mysore

The candidates who are seeking admission for B Ed course are hereby informed that they must join the class immediately or at the latest on Monday the 16th instant.

K S SURYANARAYANA,
Secretary

For the installation of
RECORDS, MIKE & LOUDSPEAKERS
at your doors
Please contact
H. S RAMACHANDRAN
EVERGREEN ACOUSTICS
"Treasure House of Records"
28 Sonar Street,
MYSORE

Fair
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists
71/1 A. S Street,
BANGALORE 2

Edited Printed and Published by A. R. Nagarajan at Sadhvi Press D Subbiah Road, Mysore

ರೆಜಿಸ್ಟರ್ ನಂ. 792

ಚಂದಾ ದರ
ವಿಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : TUESDAY 10—7—1956 ಮೈಸೂರು : ಮಂಗಳವಾರ ೧೦—೭—೧೯೫೬ [ಸಂಚಿಕೆ : ೩೦೪

ಅಧ್ಯಕ್ಷ ಢೇಬರ್‌ರೊಡನೆ ಚನ್ನಯ್ಯನವರ ಮಾತುಕತೆ

ದೆಹಲಿಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಪ್ರಯಾಣ

ಮುಖ್ಯಮಂತ್ರಿ ಹನುಮಂತಯ್ಯನವರಿಗೂ ಹೈಕಮಾಂಡಿನ ಕರೆ

ಬೆಂಗಳೂರು ೯

ಕಾಂಗ್ರೆಸ್ ಹೈಕಮಾಂಡಿನವರು ಕೊಟ್ಟ ಕರೆಯ ಅನುಸಾರವಾಗಿ, ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ನೆನ್ನೆ ದೆಹಲಿಗೆ ವಿಮಾನದಲ್ಲಿ ಪ್ರಯಾಣ ಮಾಡಿದರು. ಮುಖ್ಯಮಂತ್ರಿ ಶ್ರೀ ಹನುಮಂತಯ್ಯನವರಲ್ಲಿ ಅವಿಶ್ವಾಸ ಸೂಚಿಸುವ ಬಗ್ಗೆ ಅನುಮತಿ ಬೇಡಿ ಬರೆದಿರುವ ಪತ್ರದ ಸಂಬಂಧವಾಗಿ ಪರ್ಯಾಲೋಚನೆ ನಡೆಸಲು ಶ್ರೀ ಚನ್ನಯ್ಯನವರನ್ನು ದೆಹಲಿಗೆ ಕರೆಸಲಾಗಿದೆ.

ಶ್ರೀ ಹನುಮಂತಯ್ಯನವರೊಡನೆಯೂ ಹೈಕಮಾಂಡಿನವರು ಈ ಬಗ್ಗೆ ಸಮಾಲೋಚನೆ ನಡೆಸುವರು. ಈ ದಿನ ಇಲ್ಲಿಗೆ ಮುಖ್ಯ ಮಂತ್ರಿಯವರು ಆಗಮಿಸುವ ನಿರೀಕ್ಷೆಯಿದೆ. ನಾಳೆ ಬೆಳಿಗ್ಗೆ ಅವರು ಬೊಂಬಾಯಿಗೆ ತೆರಳಿ ಅಲ್ಲಿ ಅಧ್ಯಕ್ಷ ಢೇಬರ್‌ರವರನ್ನು ಭೇಟಿ ಮಾಡಬಹುದು. ಇಂದು ದೆಹಲಿಯಲ್ಲಾಗಲೀ, ಅಥವಾ ನಾಳೆ ಬೊಂಬಾಯಿಯಲ್ಲಾಗಲೀ ತಮ್ಮನ್ನು ನೋಡಬಹುದೆಂದು ಢೇಬರ್‌ರವರು ಶ್ರೀ ಹನುಮಂತಯ್ಯನವರಿಗೆ ತಿಳಿಸಿರುವರೆಂದು ಹೇಳಲಾಗಿದೆ.

ದೆಹಲಿ ವಸ್ತು ಸಂಗ್ರಹಾಲಯಕ್ಕೆ ಚಿನ್ನದ ಕತ್ತಿಗಳು

ದೆಹಲಿಯಲ್ಲಿರುವ ರಾಷ್ಟ್ರೀಯ ವಸ್ತು ಸಂಗ್ರಹಾಲಯಕ್ಕೆ ಇತ್ತೀಚಿಗೆ ಮೂರು ಚಿನ್ನದ ಖಡ್ಗಗಳನ್ನು ಒಪ್ಪಿಸಲಾಗಿದೆ. ಈ ವರ್ಷದ ಆದಿಯಲ್ಲಿ ಭಾರತಕ್ಕೆ ಭೇಟಿ ಕೊಟ್ಟಿದ್ದ ಸಾದಿ ಅರೇಬಿಯಾ ದೊರೆಗಳು ತಮ್ಮ ಭೇಟಿಯ ನೆನಪಿಗಾಗಿ ಅವನ್ನು ಕೊಟ್ಟಿದ್ದರು. ನೆಹರೂರವರಿಗೆ ಚಿನ್ನದ ಕತ್ತಿ ಮತ್ತು ಬಾಕು, ಉಪಾಧ್ಯಕ್ಷ ಡಾ॥ ರಾಧಾಕೃಷ್ಣನ್‌ರವರಿಗೂ, ಮೌಲಾನಾ ಅಜಾದರಿಗೂ ಒಂದೊಂದು ಖಡ್ಗವನ್ನು ಅವರು ಬಹುಮಾನವಾಗಿ ಇತ್ತಿದ್ದರು. ಅವನ್ನು ವಸ್ತು ಸಂಗ್ರಹಾಲಯದಲ್ಲಿಡಲಾಗಿದೆ.

ಹಾಲೆಂಡಿನ ರಾಜಕುಮಾರಿಗೆ ನೇತ್ರದಾನಕ್ಕಾಗಿ ಅನೇಕರು ಸಿದ್ಧ

ಹಾಲೆಂಡಿನ ರಾಣಿ ಜೂಲಿಯಾನಾರವರ ಕೊನೆಯ ಮಗಳಾದ ರಾಜಕುಮಾರಿ ಮಾರಿಕ್ಕೆ ಎಂಬಾಕೆಯ ಅಂಧತ್ವವನ್ನು ಹೋಗಲಾಡಿಸಲು ಆ ದೇಶದ ಅನೇಕ ಪ್ರಜೆಗಳು ತಮ್ಮ ಕಣ್ಣುಗಳನ್ನು ಕೊಡುವುದಾಗಿ ತಿಳಿಸಿರುತ್ತಾರೆ. ಆದರೆ ಆಕೆಯ ಕುರುಡನ್ನು ಹೋಗಲಾಡಿಸಲಸಾಧ್ಯವಾಗಿರುವುದೆಂದು ಹೇಳಲಾಗಿದೆ.

ಹ ರಿ ಕ ಥೆ

ಮಂಡಿ ಮೊಹಲ್ಲಾ ಸವಾಯ್ ಬೀದಿಯಲ್ಲಿರುವ ಮರಾಠರ ಶ್ರೀರಾಮ ಮಂದಿರದಲ್ಲಿ ನೆನ್ನೆಯಿಂದ ನಿತ್ಯವೂ ಸಂಜೆ ೭॥ ಗಂಟೆಗೆ ಶ್ರೀ ಎಂ. ಎಲ್. ನಾರಾಯಣದಾಸರು ಶ್ರೀ ರಾಮಾಯಣವನ್ನು ಹರಿಕಥೆಯ ರೂಪದಲ್ಲಿ ಕೀರ್ತನ ಮಾಡುವರು. ಸರ್ವರಿಗೂ ಆಹ್ವಾನವಿದೆ.

ಪೂರ್ವ ಪಾಕಿಸ್ತಾನದಲ್ಲಿ ಆಹಾರ ನಿಯಮೋಲ್ಲಂಘನೆಗೆ ಛಡಿ ಏಟು

ಗವರ್ನರರ ನಿರೀಕ್ಷಾಜ್ಞೆ ಜಾರಿ

ಪೂರ್ವ ಪಾಕಿಸ್ತಾನದ ಗವರ್ನರ್ ಫಜಲುಲ್ ಹಕ್‌ರವರು ಹೊರಡಿಸಿರುವ ವಿಶೇಷಾಜ್ಞೆಯ ಪ್ರಕಾರ, ಅಕ್ಕಿ ಆಹಾರದ ಸಾಗಣೆ ಮತ್ತು ಹಂಚಿಕೆ ಹತೋಟಿ ನಿಯಮವನ್ನು ಉಲ್ಲಂಘಿಸಿದವರಿಗೆ ೧೨ ಛಡಿ ಏಟು ಕೊಡಲಾಗುವುದೆಂದು ಗೊತ್ತಾಗಿದೆ. ನಾಳೆಯಿಂದ ಈ ಆಜ್ಞೆಯು ಜಾರಿಗೆ ಬರುವುದು. ಇನ್ನೊಂದು ವರ್ಷ ಕಾಲ ಈ ಆಜ್ಞೆ ಜಾರಿಯಲ್ಲಿರುವುದು. ಆಹಾರ ಧಾನ್ಯದ ಕಳ್ಳಸಾಗಾಣಿಕೆ ಮತ್ತು ಕಾಳಸಂತೆ ವ್ಯಾಪಾರವನ್ನು ತಡೆಗಟ್ಟಲು ಈ ಕ್ರಮ ಕೈಗೊಳ್ಳಲಾಗಿದೆ. ಈ ಸಂಬಂಧವಾಗಿ ವಿಚಾರಣೆ ನಡೆಸಲು ಪ್ರತ್ಯೇಕ ಕೋರ್ಟುಗಳನ್ನು ಏರ್ಪಡಿಸಲಾಗುವುದು. ಪೂರ್ವ ಪಾಕಿಸ್ತಾನದ ಸೈನ್ಯಾಧಿಪತಿ ಮೇಜರ್ ಜನರಲ್ ಜಿಲಾನಿಯವರನ್ನು ಮುಖ್ಯ ಆಹಾರ ಆಡಳಿತಗಾರರನ್ನಾಗಿ ನೇಮಿಸಲಾಗಿದೆ.

ಚೀಣಾ ಮುಖ್ಯ ಭೂಮಿ ಮೇಲೆ ರಾಷ್ಟ್ರೀಯ ವಿಮಾನಗಳ ಹಾರಾಟ

ಚೀಣದ ಮುಖ್ಯ ಭೂಮಿಗೆ ಸೇರಿದ ಪೂರ್ವ ಪ್ರಾಂತದ ತೀರ ಪ್ರದೇಶಗಳು ಮತ್ತು ಯಾಂಗ್ಟ್ಸೆ–ಹವಾಂಗ್ ನೈಲ ಪ್ರಾಂತದ ಪ್ರದೇಶಗಳ ಮೇಲೆ ಕಳೆದ ವಾರದಲ್ಲಿ ರಾಷ್ಟ್ರೀಯ ಚೀಣದ ವಿಮಾನಗಳ ೩೭ ತಂಡಗಳು ೧೧೪ ಸಾರಿ ಹಾರಾಟ ನಡೆಸಿದುದಾಗಿ ವರದಿಯಾಗಿದೆ. ವಿಮಾನ ವಿಧ್ವಂಸಕ ಫಿರಂಗಿಯಿಂದ ಒಂದು ವಿಮಾನಕ್ಕೆ ಜಖಂ ಮಾಡಲಾಯಿತೆಂದು ಹೇಳಲಾಗಿದೆ. ಪೂರ್ವ ಪ್ರಾಂತಕ್ಕೆ ಸೇರಿರುವ ಒಂದು ದ್ವೀಪದ ಮೇಲೆ ರಾಷ್ಟ್ರೀಯರು ಕ್ವಿಮಾಯ್ ದ್ವೀಪದ ಫಿರಂಗಿಗಳನ್ನು ಹಾರಿಸಿದ ಪರಿಣಾಮವಾಗಿ ಒಬ್ಬ ಮಹಿಳೆಯು ಮೃತಪಟ್ಟಳೆಂದು ವರದಿಯಾಗಿದೆ.

ತುಮಕೂರು ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ತುಮಕೂರಿನ ಪ್ರಥಮ ದರ್ಜೆ ಕಾಲೇಜಿನ ಪ್ರಕೃತಿ ವಿಜ್ಞಾನ ವಿಭಾಗದ ೩೦೦ ಮಂದಿ ವಿದ್ಯಾರ್ಥಿಗಳು ಕಾಲೇಜಿನಲ್ಲಿ ಪ್ರಾಣಿಶಾಸ್ತ್ರ ಇಲಾಖೆಯಲ್ಲಿ ಪಾಠಗಳನ್ನು ಅಧ್ಯಾಪಕರು ಇಲ್ಲವೆಂದು ಪ್ರತಿಭಟಿಸಲು ನೆನ್ನೆ ಮುಷ್ಕರ ಹೂಡಿದರು. ಕಳೆದ ಎರಡು ತಿಂಗಳಿಂದಲೂ ಒಬ್ಬರೇ ಅಧ್ಯಾಪಕರು ಇಂಟರ್‌ಮೀಡಿಯಟ್ ಮತ್ತು ಪದವೀ ತರಗತಿಗಳಲ್ಲಿ ಪಾಠ ಹೇಳುತ್ತಿರುವರೆಂದು ವರದಿಯಾಗಿದೆ.

ಮಹಿಳೆಯನ್ನು ನಿರ್ಬಂಧದಲ್ಲಿರಿಸಿದ್ದಕ್ಕಾಗಿ ಮೊಕದ್ದಮೆ

ಅಶೋಕಾ ರಸ್ತೆಯ ಕ್ರಾಸಿನಲ್ಲಿರುವ ಕಾರ್ಲ್‌ಟನ್ ಹೋಟೆಲಿನ ಮ್ಯಾನೇಜರ್ ಶ್ರೀ ಎಸ್. ಡಿ. ಮೈಸೂರ್‌ವಾಲಾ ಮತ್ತು ಇನ್ನಿಬ್ಬರು ಕಳೆದ ಭಾನುವಾರ, ಟೆಲಿಫೋನ್ ಇಲಾಖೆಯ ನೌಕರರಾದ ಶ್ರೀಮತಿ ಬಾರ್ನ್ಸ್ ಎಂಬುವರನ್ನು ಅಕ್ರಮವಾಗಿ ನಿರ್ಬಂಧದಲ್ಲಿರಿಸಿದರೆಂದು ಲಷ್ಕರ್ ಪೊಲೀಸರು ಅವರುಗಳ ಮೇಲೆ ಮೊಕದ್ದಮೆಯನ್ನು ದಾಖಲು ಮಾಡಿಕೊಂಡಿರುವರು.

ಢೇಬರ್ ಮತ್ತು ಮಾಧವ್ ನಾಯರರೊಡನೆ ಚನ್ನಯ್ಯನವರ ಸಂಭಾಷಣೆ

ಮೈಸೂರು ರಾಜಕೀಯ ಪರಿಸ್ಥಿತಿ ಬಗ್ಗೆ ಸಮಾಲೋಚನೆ

ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರಲ್ಲಿ ಅವಿಶ್ವಾಸ ಸೂಚಿಸುವ ಪತ್ರದ ವಿಷಯವಾಗಿ ನೆನ್ನೆ ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಕಾಂಗ್ರೆಸ್ ಅಧ್ಯಕ್ಷ ಢೇಬರ್ ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ಕೆ. ಪಿ. ಮಾಧವನ್ ನಾಯರ ರೊಡನೆ ದೆಹಲಿಯಲ್ಲಿ ಮಾತುಕತೆ ನಡೆಸಿದರು.

ಶ್ರೀ ಹನುಮಂತಯ್ಯನವರ ಸರ್ಕಾರದ ಮೇಲೆ ಮಾಡಿರುವ ಹಲವು ಆಪಾದನೆಗಳ ಆಧಾರದ ಮೇಲೆ ಅವಿಶ್ವಾಸ ನಿರ್ಣಯವನ್ನು ತರಲಾಗಿದೆಯೆಂದೂ, ಬಹುಮತದವರ ಅಭಿಪ್ರಾಯವನ್ನು ತೆಗೆದುಕೊಳ್ಳಬೇಕೆಂದೂ ಶ್ರೀ ಚನ್ನಯ್ಯನವರು ತಿಳಿಸಿದರೆಂದು ಹೇಳಲಾಗಿದೆ.

ನಾಳೆ ಶ್ರೀ ಹನುಮಂತಯ್ಯನವರೊಡನೆ ಬೊಂಬಾಯಿಯಲ್ಲಿ ಢೇಬರ್‌ರವರು ಮಾತುಕತೆ ನಡೆಸಿದನಂತರ ಹೈಕಮಾಂಡಿನವರು ಈ ವಿಷಯವನ್ನು ನಿರ್ಧರಿಸುವರು.

ಗ್ರೀಸಿನ ದ್ವೀಪದಲ್ಲಿ ಭೂಕಂಪ

ಕಲ್ಲು ಮಣ್ಣು ರಾಶಿಯಲ್ಲಿ ನೂರಾರು ಜನರ ಸಮಾಧಿ

ಭ್ಯಾಬಿಲೋನಿಯೊಂದರ ಪರಿಣಾಮವಾಗಿ ಈಜಿಯನ್ ಸಮುದ್ರದ ಪ್ರದೇಶದಲ್ಲೆಲ್ಲಾ ನೆನ್ನೆ ಭೂಕಂಪ ಸಂಭವಿಸಿ ವಿಪರೀತ ನಷ್ಟವಾದುದಾಗಿ ಗೊತ್ತಾಗಿದೆ. ಸಮುದ್ರದಲ್ಲಿ ಭಾರಿ ಅಲೆಗಳು ಎದ್ದಿವೆ. ಗ್ರೀಸಿಗೆ ಸೇರಿದ ಸ್ಯಾಂಟೋರಿನ್ ಎಂಬ ದ್ವೀಪದಲ್ಲಿ ೫೦ ಜನರು ಮಡಿದಿರುವರೆಂದೂ, ಮತ್ತೊಂದರಲ್ಲಿ ಅನೇಕ ಸಾವುನೋವುಗಳಾಗಿವೆಯೆಂದೂ ಹೇಳಲಾಗಿದೆ. ಆ ಪ್ರದೇಶಗಳಿಗೆ ಗ್ರೀಕ್ ನೌಕೆಗಳು ಸಹಾಯ ಮಾಡಲು ಹೊರಟಿವೆ. ಬ್ರಿಟಿಷ್ ನೌಕೆಗಳೂ ಸಹಾಯ ಒದಗಿಸುವುದಾಗಿ ಸೂಚಿಸಿವೆ. ಅನೇಕ ಮನೆಗಳು ಉರುಳಿ ಕಲ್ಲು ಮಣ್ಣಿನ ರಾಶಿಯಲ್ಲಿ ನೂರಾರು ಜನರು ಸಿಕ್ಕಿಕೊಂಡಿರುವರೆಂದೂ, ಬಹು ಮಂದಿಯ ಪ್ರಾಣಹಾನಿಯಾಗಿರಬೇಕೆಂದೂ ಹೇಳಲಾಗಿದೆ. ಅಮೆರಿಕದ ವಿಮಾನವೊಂದು ಸಹಾಯ ವಸ್ತುಗಳನ್ನು ತೆಗೆದುಕೊಂಡು ಆ ಪ್ರದೇಶಕ್ಕೆ ಹೋಗಿದೆ.

ಸಿನಿಮಾ ನಟಿಯರ ಬಂಧನದ ಸುದ್ದಿ ನಿಜವಲ್ಲ

ವಿಪರೀತವಾಗಿ ಕುಡಿದಿದ್ದರೆಂಬ ಕಾರಣಕ್ಕಾಗಿ ಕುಚಲ ಕುಮಾರಿ, ಇ. ವಿ. ಸರೋಜ ಎಂಬ ಸಿನಿಮಾ ನಟಿಯರು, ಡೈರೆಕ್ಟರ್ ಡಿ. ಯೋಗಾನಂದರವರು ಪಳ್ಳಿಪುರದ ಪೊಲೀಸರಿಂದ ದಸ್ತಗಿರಿ ಮಾಡಲ್ಪಟ್ಟು ಜಾಮೀನು ಮೇಲೆ ಬಿಡುಗಡೆಯಾದರೆಂಬ ಮತ್ತು ನೆಲ್ಲೂರು ಜಿಲ್ಲೆಯಲ್ಲಿ ಪಾನನಿರೋಧ ಶಾಸನವನ್ನು ಉಲ್ಲಂಘಿಸಿದರೆಂಬ ಸುದ್ದಿಗಳು ನಿಜವಲ್ಲವೆಂದು ತಿಳಿದುಬಂದಿದೆ. ಅವರುಗಳು ಯಾರೂ ಮದ್ರಾಸಿನಿಂದ ಹೊರಗೇ ಹೋಗಿರಲಿಲ್ಲವೆಂದು ಗೊತ್ತಾಗಿದೆ.

ಸುಂಕವನ್ನು ಕೊಡದೆ ಮೋಟಾರು ಟೈರುಗಳನ್ನು ಕಳಲು ಪ್ರಯತ್ನ

ಬಸ್ ಮಾಲೀಕರೊಬ್ಬರಿಂದ ೫೦ ರೂ. ದಂಡ ವಸೂಲಿ

ಮೈಸೂರು ೯

ನಗರದ ಅಶೋಕಾ ಬಸ್ ಸರ್ವಿಸಿನ ಮಾಲೀಕರಾದ ಶ್ರೀ ಜೆ. ಎಂ. ವೀರಪ್ಪ ಎಂಬುವರು ಕಳೆದ ಬುಧವಾರ ಆಮದು ಮಾಡಿದ ೨ ಮೋಟಾರು ಟೈರುಗಳು ಮತ್ತು ೧ ಟ್ಯೂಬನ್ನು ಸುಂಕ ಕೊಡದೆ ತೆಗೆದುಕೊಂಡು ಹೋಗುವುದಾಗಿ ತಿಳಿದು, ಆಕ್ಟ್ರಾಯ್ ಕಛೇರಿಯಲ್ಲಿ ಬಾರಾ ಮಾರ್ಗದ ಚೀಟಿ ಪಡೆದು ನಂಜನಗೂಡು ಟೋಲ್ಗೇಟನ್ನು ದಾಟಿ ಚಾಮುಂಡಿಬೆಟ್ಟದ ಮಾರ್ಗವಾಗಿ ನಗರಕ್ಕೆ ವಾಪಸು ತಂದು ಅವುಗಳನ್ನು ಮೋಟಾರಿಗೆ ಜೋಡಿಸುತ್ತಿದ್ದುದನ್ನು ಆಕ್ಟ್ರಾಯ್ ಸಿಬ್ಬಂದಿಯವರು ಪತ್ತೆ ಹಚ್ಚಿ, ಅವರಿಂದ ಸುಂಕದ ಹತ್ತರಷ್ಟಾಗುವ ಸುಮಾರು ೫೦ ರೂ ಗಳಷ್ಟು ದಂಡವಾಗಿ ವಸೂಲು ಮಾಡಿದರೆಂದು ಗೊತ್ತಾಗಿದೆ.

ಕಾಶ್ಮೀರದ ವಿವಾದದಲ್ಲಿ ಅಮೆರಿಕಾ ಪ್ರವೇಶಿಸುವುದಿಲ್ಲ

ಉಪಾಧ್ಯಕ್ಷ ನಿಕ್ಸನ್ನರ ಹೇಳಿಕೆ

ಕಾಶ್ಮೀರದ ವಿಷಯವಾಗಿ ಭಾರತ ಮತ್ತು ಪಾಕಿಸ್ತಾನಗಳ ನಡುವೆ ಇರುವ ವಿವಾದದಲ್ಲಿ ಪ್ರವೇಶಿಸಲು ಅಮೆರಿಕವು ಇಚ್ಛಿಸುವುದಿಲ್ಲವೆಂದು ಅಮೆರಿಕದ ಉಪಾಧ್ಯಕ್ಷ ರಿಚರ್ಡ್ ನಿಕ್ಸನ್ನರು ನೆನ್ನೆ ಕರಾಚಿಗೆ ಆಗಮಿಸಿದಾಗ ತಿಳಿಸಿದರು. ಈ ಪ್ರಶ್ನೆಯನ್ನು ನೇರ ಸಂಧಾನದ ಮೂಲಕ ಭಾರತ ಮತ್ತು ಪಾಕಿಸ್ತಾನಗಳು ಬಗೆಹರಿಸಿಕೊಳ್ಳಬೇಕೆಂದೂ, ಅದು ವಿಫಲವಾದರೆ ವಿಶ್ವ ಸಂಸ್ಥೆಯ ಮೂಲಕ ಅದನ್ನು ಇತ್ಯರ್ಥಪಡಿಸುವುದು ಉತ್ತಮವೆಂದೂ ಅವರು ಹೇಳಿದರು.

ಬೆಂಗಳೂರಿನಲ್ಲಿ ರೂ. ಗೆ ೩ ಸೇರು ಅಕ್ಕಿ ಮಾರಾಟದ ಆರಂಭ

ಬೆಂಗಳೂರಿನಲ್ಲಿ ಸರ್ಕಾರದವರು ರೂಪಾಯಿಗೆ ೩ ಸೇರಿನಂತೆ ಪ್ರಥಮ ದರ್ಜೆಯ ಪಾರಿಷ್ ಉಳ್ಳ ಅಕ್ಕಿಯನ್ನು ಸಹಕಾರ ಸಂಘಗಳ ಮೂಲಕ ಮಾರಾಟ ಮಾಡುವುದು ನೆನ್ನೆಯಿಂದ ಆರಂಭವಾಯಿತು. ೧ ಸಂಸಾರಕ್ಕೆ ವಾರಕ್ಕೊಂದಾವರ್ತಿ ೩ ಸೇರಿನಂತೆ ಮಾರಾಟ ಮಾಡಲಾಗುತ್ತದೆ. ಸಂಸ್ಥಾನದ್ಯಂತ ಹೋಟೆಲು, ಹಾಸ್ಟೆಲು, ಕಾಂಟೀನುಗಳು ಮತ್ತು ಇತರ ಸಂಸ್ಥೆಗಳಿಗೆ ಅಕ್ಕಿ, ಸಕ್ಕರೆ ಮತ್ತು ಗೋಧಿಯನ್ನು ಇದೇ ೧೬ ರಿಂದ ಒದಗಿಸಲಾಗುವುದು.

ಬೆಳ್ಳಿಕಟ್ಟೆಗವಿಮೀಸಲ್ ಮನೆ ಮಾಲೀಕರ ಸಂಘ

ರಾಜಧಾನಿಯ ಬೆಳ್ಳಿಕಟ್ಟೆಗವಿಪಾಳ್ಯದ ಮನೆ ಮಾಲೀಕರ ಸಂಘದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಶ್ರೀ ಲೋಕಾಭಿರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಸಂಘದ ಅಧ್ಯಕ್ಷರಾಗಿ ಎಸ್. ಚನ್ನಪ್ಪನವರನ್ನೂ, ಉಪಾಧ್ಯಕ್ಷರಾಗಿ ಶ್ರೀ ವಿ. ತಿಮ್ಮಯ್ಯನವರನ್ನೂ ಚುನಾಯಿಸಲಾಯಿತು. ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ವಳ್ಳಾಲ ಸುಬ್ಬಣ್ಣನವರ ನಿಧನಕ್ಕಾಗಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.

ಕ್ರೀಡಾ ಕೇಂದ್ರಗಳ ಸ್ಪರ್ಧಾ ಕೂಟ

ಮೈಸೂರು ೧೦

ಮುನಿಸಿಪಾಲಿಟಿಯು ಮಕ್ಕಳ ಪುಸ್ತಕ ಭಂಡಾರದವರು ನಗರದ ೬ ಮೊಹಲ್ಲಾಗಳಲ್ಲಿ ನಡೆಸುತ್ತಿರುವ ಕ್ರೀಡಾ ಕೇಂದ್ರಗಳ ಅಂಗವಾಗಿ ೭ ಮತ್ತು ೮ನೇ ತಾರೀಖು ಮಕ್ಕಳ ಸ್ಪರ್ಧೆಗಳು ನಡೆದುವು. ಸೀನಿಯರ್, ಜೂನಿಯರ್ ಎಂಬುದಾಗಿ ಭಾಗ ಮಾಡಿ, ಅವರವರ ವಯಸ್ಸಿಗೆ ತಕ್ಕ ಆಟಗಳಲ್ಲಿಯೂ ಪ್ರದರ್ಶನ ಅಭ್ಯಾಸಗಳಲ್ಲಿಯೂ ಸ್ಪರ್ಧೆಗಳು ನಡೆಸಲ್ಪಟ್ಟುವು. ಪೌರಸಭಾ ಸದಸ್ಯ ಡಾ|| ಎ ಜಿ ದಾಸ್‌ರವರು ೭ನೇ ತಾರೀಖು ಆಟದ ಆರಂಭವನ್ನು ಮಾಡಿದರು. ಮಾರನೇ ದಿನ ಮಹಾರಾಜಾ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಸಿ ಡಿ ನರಸಿಂಹಯ್ಯನವರು ಅಧ್ಯಕ್ಷರಾಗಿ ಕಡೆಯ ಹಂತದ ಆಟಗಳನ್ನು ನಡೆಸಿದರು.

ಎಲ್ಲಾ ಕೇಂದ್ರಗಳನ್ನು ಒಟ್ಟಿಗೆ ಸೇರಿಸುವುದಕ್ಕೂ, ಅವುಗಳ ಪ್ರಗತಿಯನ್ನು ಪರೀಕ್ಷಿಸುವುದಕ್ಕೂ ಈ ಆಟಗಳು ಸಹಾಯಕವಾದುವು. ಅಷ್ಟೇ ಅಲ್ಲದೆ ಸ್ಪರ್ಧೆಗಳನ್ನು ಶಿಸ್ತಿನಿಂದ ನಡೆಸುವುದಕ್ಕೂ, ಗೆದ್ದವರೂ, ಸೋತವರೂ ಸಂತೋಷದಿಂದಿರುವುದನ್ನು ಕಲಿಸುವುದಕ್ಕೂ ಪ್ರಯತ್ನ ಮಾಡಲಾಗಿತ್ತು. ಆಟಗಳಲ್ಲಿ ೧೫೦ ಮಕ್ಕಳು ಭಾಗವಹಿಸಿದ್ದರು. ೬ ಕೇಂದ್ರಗಳಿಂದ ಸುಮಾರು ೩೦೦ ಮಕ್ಕಳು ಬಂದಿದ್ದರು. ಸಾವಿರ ಮಂದಿ ಆಟಗಳನ್ನು ವೀಕ್ಷಿಸಿದರು.

ಶ್ರೀ ಫಾ|| ಆಡಿಯೋರವರು ರೆವರೆಂಡ್ ವಿಸ್ಟರನಿಂದ ಉಪಯೋಗವಾಗಿ [illegible] ಹಾಕಿನ ಪುಡಿಯನ್ನು ನೀಡಿಸಿರುವರು. ಪಟ್ಟಣದ ಮಾನ್ಯ ಮಹಿಳೆಯರು ಬಹುಮಾನವಾಗಿ ಕೊಡಲು ೬ ಶೀಲ್ಡುಗಳನ್ನು, ೧೬ ಬೆಳ್ಳಿ ಪದಕಗಳನ್ನೂ ಕೊಟ್ಟಿರುವರು.

ಚಲನಚಿತ್ರದ ಕತೆಗಾರರಿಗೆ ಸತ್ಕಾರಕೂಟ

"ಅಪೂರ ದೀಪಂ" ಚಿತ್ರದ ಕಥೆ ಮತ್ತು ಸಂಭಾಷಣೆಯನ್ನು ಬರೆದ ಶ್ರೀ ಶ್ರೀಧರ್‌ರವರ ಗೌರವಾರ್ಥವಾಗಿ ಒಂದು ಸತ್ಕಾರಕೂಟವನ್ನು ಮೊನ್ನೆ ಸಂಜೆ ನಗರದ ಲಕ್ಷ್ಮೀ ಚಿತ್ರಮಂದಿರದಲ್ಲಿ ಏರ್ಪಡಿಸಲಾಗಿತ್ತು. "ಸ್ತ್ರೀ ರತ್ನ" ಚಿತ್ರದ ನಿರ್ಮಾಪಕರಾದ ಶ್ರೀ ಎಂ ಎಸ್ ಬಸವರಾಜಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ವೆಂಕಟೇಶ ಹೆಬ್ಬಾರ್‌ರವರು ಸ್ವಾಗತ ಭಾಷಣ ಮಾಡಿ ಶ್ರೀ ಶ್ರೀಧರ್‌ರವರು ಮತ್ತೂ ಹೆಚ್ಚಿನ ಸಂಖ್ಯೆಯಲ್ಲಿ ಒಳ್ಳೆಯ ಕಥೆಗಳನ್ನು ಬರೆಯಬೇಕೆಂದು ಹಾರೈಸಿದರು. ಶ್ರೀ ಶ್ರೀಧರ್‌ರವರು ತಮಗೆ ಸತ್ಕಾರ ನೀಡಿದ್ದಕ್ಕಾಗಿ ವಂದನೆಗಳನ್ನು ಸಲ್ಲಿಸಿದರು.

೫ ಅಡಿ ಎತ್ತರದ ಬಾಲಕಿ ೩ ಅಡಿಯಾಗಿರುವಳು

ಸಿಸಿಲಿ ದ್ವೀಪದ ಕೈತ ಕನ್ಯೆ ೧೪ ವರ್ಷದ ಆನ ಟೋನಿಯಾ ಡಾಮಿಯೊ ಎಂಬುವಳು ಹತ್ತನೇ ವಯಸ್ಸಿನಲ್ಲಿ ಐದು ಅಡಿ ಎತ್ತರವಿದ್ದು ಈಗ ಮೂರು ಅಡಿ ಮೂರು ಅಂಗುಲದಷ್ಟು ಮಾತ್ರ ಇರುವಳೆಂದು ಹೇಳಲಾಗಿದೆ. ೧೦ ವರ್ಷದವಳು ಇದ್ದಾಗ ಆಕೆಯ ತಲೆ ಮೈ ಕೈ ಭಾಗಗಳು ಎಳೆಯದೆ, ಕಾಲುಗಳು ಸಣ್ಣಗಾಗಲು ಪ್ರಾರಂಭಿಸಿ ಕ್ರಮೇಣ ಗಿಡ್ಡಳಾದಳೆಂದು ಹೇಳಲಾಗಿದೆ.

ವಿವಾಹ ಮಹೋತ್ಸವ

ಮಂಡ್ಯ ಜಿಲ್ಲಾ ಖಜಾನೆಯ ಅಕೌಂಟೆಂಟರಾದ ಶ್ರೀ ಎ ಎಸ್ ಕೃಷ್ಣಪ್ಪನವರು ತಮ್ಮ ಸಹೋದರಿ ಸೌ|| ಸರೋಜಮ್ಮನನ್ನು ಹಾಸನದ ಶ್ರೀ ಹೆಚ್ ಎಲ್ ನರಸಿಂಹಯ್ಯನವರ ಸಹೋದರ ಶ್ರೀ ಹೆಚ್ ಎಸ್ ನಾಗೇಶರಾಯರಿಗೆ ಕೊಟ್ಟು ವಿವಾಹವನ್ನು ಕಳೆದ ೩೦ನೇ ತಾರೀಖು ನೆರವೇರಿಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಗಾಂಧೀ ವಿಚಾರ ಪರಿಷತ್ತಿನ ಮೈಸೂರು ಶಾಖೆ

ಗಾಂಧೀ ಸ್ಮಾರಕ ನಿಧಿಯ ಅಂಗವಾಗಿ ರಚಿತವಾಗಿರುವ ಅಖಿಲ ಭಾರತ ಗಾಂಧೀ ವಿಚಾರ ಪರಿಷತ್ತಿನ ಮೈಸೂರು ಶಾಖೆಯು ತನ್ನ ಕೆಲಸವನ್ನು ಪ್ರಾರಂಭಿಸಲಾಗಿದೆ. ಸರ್ವೋದಯ ವಿಚಾರ ಮಾರ್ಗದಲ್ಲಿ ವ್ಯವಸ್ಥಿತ ಶಿಕ್ಷಣವನ್ನೊದಗಿಸಲು ದೇಶದ ವ್ಯಂತ ವ್ಯಾಸಂಗ ಗೋಷ್ಠಿಗಳು, ಪುಸ್ತಕ ಭಂಡಾರಗಳು, ಶಿಕ್ಷಣ ಶಿಬಿರಗಳು, ರಚನಾತ್ಮಕ ಕೇಂದ್ರಗಳು ಮತ್ತು ಪ್ರಕಟಣಾ ಕಾರ್ಯಗಳನ್ನು ಸಂಸ್ಥೆಯ ಆಶ್ರಯದಲ್ಲಿ ಕೈಗೊಳ್ಳಲಾಗುವುದು. ವಿದ್ಯಾವಂತ ಯುವಕರು ಸಂಘಟಿತರಾಗಿ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡರೂ ಕೈಕೊಳ್ಳಲು ವಿಚಾರ ಪರಿಷತ್ತು ಎಲ್ಲಾ ವಿಧವಾದ ಸಹಾಯವನ್ನೂ ಮಾಡುತ್ತದೆ. ಪರಿಷತ್ತು ಸದಸ್ಯರಿಗೆ ಕಮ್ಮಿ ಇಲ್ಲದ ವ್ಯಾಸಂಗ ಗೋಷ್ಠಿಗಳನ್ನು ಏರ್ಪಡಿಸಿಕೊಂಡಲ್ಲಿ ಪರಿಷತ್ತಿನಿಂದ ಪುಸ್ತಕ ಭಂಡಾರ ಹಾಗೂ ಇತರ ವ್ಯವಸ್ಥೆಗಳಿಗೆ ಆಂಶಿಕ ಧನ ಸಹಾಯ ಮಾಡಲಾಗುವುದು. ಸರ್ವೋದಯ ವ್ಯಾಸಂಗ ಗೋಷ್ಠಿಗಳಿಗೆ ಉಪಯುಕ್ತವಾದ ಸಪ್ತಾಹ ಒಂದು ವಾರಪತ್ರಿಕೆ ಸರ್ವೋದಯ ಸಾಹಿತ್ಯದಿಂದ ಆರಿಸಿದ ಒಂದು ಪುಸ್ತಕ ಪಟ್ಟಿಯನ್ನೂ ಚಿತ್ರ ಸಂಗ್ರಹವನ್ನು ಕಳುಹಿಸಲಾಗುವುದು. ಈ ಕಾರ್ಯಕ್ರಮಗಳನ್ನು ಕೈಗೊಳ್ಳಲು ಇಚ್ಛಿಸುವ ಸಂಸ್ಥೆಗಳು ಸಂಚಾಲಕರು, ಗಾಂಧೀ ವಿಚಾರ ಪರಿಷತ್ತಿನ ಮೈಸೂರು ಶಾಖೆ, ಚೇತನ ಆಸ್ಪತ್ರೆ ಹತ್ತಿರ, ಮೈಸೂರು ಈ ವಿಳಾಸಕ್ಕೆ ಬರೆಯಬೇಕೆಂದು ಕೇಳಲಾಗಿದೆ.

ಬಸ್ಸಿಗೂ ಗೂಡ್ಸ್ ರೈಲಿಗೂ ಡಿಕ್ಕಿಯಾಗಿ ೨೨ ಮಂದಿಗೆ ಗಾಯ

ಕಲ್ಕತ್ತಾ ೭ – ಪಂಢರ್‌ಪುರ ಮತ್ತು ಮಿರ್ಜಿ ನಿಲ್ದಾಣಗಳ ನಡುವೆ ಮೊನ್ನೆ ಗೂಡ್ಸ್ ರೈಲಿನ ಡಬ್ಬಿಗೂ ಬಸ್ಸೊಂದಕ್ಕೂ ಡಿಕ್ಕಿಯಾಗಿ ಬಸ್ಸಿನಲ್ಲಿದ್ದ ೨೨ ಮಂದಿ ಪ್ರಯಾಣಿಕರಿಗೆ ಗಾಯವಾಯಿತು. ಅವರ ಪೈಕಿ ಐವರಿಗೆ ತೀವ್ರವಾದ ಪೆಟ್ಟು ಬಿದ್ದಿತು.

ಸ್ವಾಗತ ಸಮಾರಂಭ

ರಾಜಧಾನಿಯ ಲಕ್ಷ್ಮೀ ಮೊಹಲ್ಲಾ ಕಸಬಾ ಗೌಡ ಅಯ್ಯನವರ ಬೀದಿಯಲ್ಲಿರುವ ಶ್ರೀ ಎ ಸುಬ್ಬರಾಯರು ತಮ್ಮ ಪುತ್ರ ಶ್ರೀ ಎಸ್ ವಿಶ್ವನಾಥ್‌ರವರಿಗೆ ಮಳವಳ್ಳಿಯ ಶ್ರೀ ಎಸ್ ನರಸಿಂಹಯ್ಯನವರ ಸಹೋದರಿ ಸೌ|| ಜಯಲಕ್ಷ್ಮಮ್ಮನವರನ್ನು ತಂದುಕೊಂಡು ವಿವಾಹವನ್ನು ನೆರವೇರಿಸಿದ ಸಂದರ್ಭದಲ್ಲಿ ಕಳೆದ ಶುಕ್ರವಾರ ನಗರದಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿದರು.

ಮೈಸೂರು ಪೇಟೆ ಧಾರಣೆ

	ಹೆ	ರು	ಪ	ಕ	ಡಿ	ಮೆ
ಕಡಲೇಕಾಯಿ	[illegible]	[illegible]	[illegible]	[illegible]	[illegible]	[illegible]
ಎಳ್ಳು	[illegible]	[illegible]	[illegible]	[illegible]	[illegible]	[illegible]
ಹುರುಳಿ	[illegible]	[illegible]	[illegible]	[illegible]	[illegible]	[illegible]
ಹೆಸರು	[illegible]	[illegible]	[illegible]	[illegible]	[illegible]	[illegible]
ಹಲಸಂದೆ	[illegible]	[illegible]	[illegible]	[illegible]	[illegible]	[illegible]
[illegible]	[illegible]	[illegible]	[illegible]	[illegible]	[illegible]	[illegible]
ಸೀಗೆಕಾಯಿ	[illegible]	[illegible]	[illegible]			
ಹುಣಸೆಹಣ್ಣು	[illegible]	[illegible]	[illegible]	[illegible]	[illegible]	[illegible]
ಮೆಣಸಿನಕಾಯಿ	[illegible]	[illegible]	[illegible]	[illegible]	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]	[illegible]	[illegible]	[illegible]	[illegible]

VIDYA TUTORIAL COLLEGE

(D-Devoj High School Buildings)

MYSORE

Regular coaching classes will be conducted for

Junior Inter, B. A. and B. Sc.

(All Parts – All Subjects)

Enquiries : 7 30 to 8 30 P M

ಭಾರತಕ್ಕೆ ಬ್ರಿಟನ್ನಿನ ರಾಣಿ ಎಲಿಜಬೆತ್ತರ ಭೇಟಿ

ಬ್ರಿಟನ್ನಿನ ರಾಣಿ ಎಲಿಜಬೆತ್ತರು ಭಾರತಕ್ಕೆ ಭೇಟಿ ಕೊಡುವ ವಿಷಯವು ಪರ್ಯಾಲೋಚನೆಯಲ್ಲಿರುವುದೆಂದು ಗೊತ್ತಾಗಿದೆ. ಈ ವಿಚಾರದಲ್ಲಿ ಭಾರತದಿಂದ ವಿಧಿವತ್ತಾದ ಆಹ್ವಾನವನ್ನು ಇನ್ನೂ ಕೊಡಲಾಗಿಲ್ಲವೆಂದೂ ಹೇಳಲಾಗಿದೆ. ರಾಣಿ ಮತ್ತು ಡ್ಯೂಕ್ ಆಫ್ ಎಡಿನ್‌ಬರ್ಗ್‌ರವರು ಭಾರತಕ್ಕೆ ಭೇಟಿ ಕೊಡುವುದು ಅಗತ್ಯವೆಂಬುದು ನೆಹರೂರವರ ಚಿರಕಾಲದ ಅಪೇಕ್ಷೆಯೆಂದೂ, ರಷ್ಯಾ ನಾಯಕರ ಪ್ರವಾಸದನಂತರ ಭಾರತದ ತಾಟಸ್ಥ್ಯ ನೀತಿಯನ್ನು ತೋರುವುದಕ್ಕೆ ರಾಣಿಯವರ ಭೇಟಿಯು ಅವಶ್ಯಕವೆಂದೂ ಮನಗಾಣಲಾಗಿದೆ.

ಪರಕಾಲ ಸ್ವಾಮಿಗಳವರ ಚಾತುರ್ಮಾಸ್ಯ ಸಂಕಲ್ಪ

ಶ್ರೀ ಬ್ರಹ್ಮತಂತ್ರ ಪರಕಾಲ ಸ್ವಾಮಿಗಳವರು ಇದೇ ತಿಂಗಳು ೨೫ ರಂದು ೩೦ನೇ ಚಾತುರ್ಮಾಸ್ಯ ಸಂಕಲ್ಪವನ್ನು ಕೈಗೊಳ್ಳುವರು. ಅಂದು ಮಧ್ಯಾಹ್ನ ಮಂಗಳಾಶಾಸನವು ನೆರವೇರುವುದು.

ಕರಗ ಮಹೋತ್ಸವ

ರಾಜಧಾನಿಯ ನಜರ್‌ಬಾದಿನಲ್ಲಿರುವ ಶ್ರೀ ಗಂಗಾ ಪರಮೇಶ್ವರಿ [illegible]ನವರ ಜಾತ್ರೆಯು ಈ ದಿನದಿಂದ ಐದು ದಿವಸಗಳ ಕಾಲ ವಿಜೃಂಭಣೆಯಿಂದ ನಡೆಯುವುದು. ಈ ಸಾಯಂಕಾಲ ಕಾರಂಜಿಕೆರೆಯಿಂದ ಕರಗವು ನಜರ್‌ಬಾದ್ ಮಾರ್ಗವಾಗಿ ದೇವಸ್ಥಾನಕ್ಕೆ ಬಿಜಯ ಮಾಡುವುದು.

SREE GANESHA TALKIES

From 10—7—56

THE SPOILERS

(Technicolor)

With - Jeff Chandler and Barbara Britton

From 12-7-56 • For 2 days

Ain't Misbehaving

(Technicolor)

Starring - Piper Laurie

Gala Release on 14-7-56

Alfred Hitchcock's suspense Drama in Vistavision & Technicolor

To Catch a Thief

Starring - Cary Grant and Grace Kelly, the Academy Award winner

(For adults only)

SREE GAYATHRI TALKIES

To-day — Last day

VIRGIN QUEEN

— From Tomorrow —

SCARLET SPEAR

A Picture featuring the wild life of the African jungles

ಮೈಸೂರು ಸಿಟಿ ಮುರದ ಗಾಣದ ಎಣ್ಣೆ ಕೈಗಾರಿಕಾಗಾರರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್, ಮೈಸೂರು

ವಾಣಿವಿಲಾಸ ರೋಡು (ಮಾಧವರಾವ್ ಸರ್ಕಲ್ ಬಳಿ)

ಗಾಣದಿಂದ ತಯಾರಾದ ಎಣ್ಣೆಗಳನ್ನು ಉಪಯೋಗಿಸುವುದರಿಂದ ಅಧಿಕ ದುಡ್ಡುಳ್ಳದಾಗಿರುವುದಲ್ಲದೆ ನಮ್ಮ ಆರೋಗ್ಯವನ್ನು ಕಾಪಾಡುವುದು.

ಈಗ ನಮ್ಮ ಸೊಸೈಟಿಯಲ್ಲಿ ಕಡಲೇಕಾಯಿ ಎಣ್ಣೆಯು ಮಾರಾಟಕ್ಕೆ ಸಿದ್ಧವಾಗಿದೆ. ಹುಚ್ಚೆಳ್ಳಿನ ಧಾರಣೆಯು ಹೆಚ್ಚಾಗಿರುವುದರಿಂದ ಹುಚ್ಚೆಳ್ಳೆಣ್ಣೆ ದರವನ್ನು ಅನಿವಾರ್ಯವಾಗಿ ಹೆಚ್ಚಿಸಬೇಕಾಗಿದೆ. ಇತರ ಎಣ್ಣೆ ದರಗಳು ಮಾಮೂಲಿನಂತಿರುತ್ತವೆ. ಸಾರ್ವಜನಿಕರು ಸಹಕರಿಸಿ ಎಂದು ಪ್ರಾರ್ಥನಾಪೂರ್ವಕವಾಗಿ ಕೇಳುತ್ತೇವೆ.

	ದರ	ರಿಯಾಯಿತಿ	ಶುದ್ಧ ಕೊಡಬೇಕಾದದ್ದು
ಕಡಲೇಕಾಯಿ ಎಣ್ಣೆ ಪಾವು 1ಕ್ಕೆ	2 3 0	0 1 6	2 1 6
ಹುಚ್ಚೆಳ್ಳೆಣ್ಣೆ „	2 7 6	0 1 6	2 6 0
ಅಚ್ಚೆಳ್ಳೆಣ್ಣೆ „	3 7 0	0 1 6	3 5 6

ಸೂ ಅರ್ಧ ಪಾವಿಗೆ ಕಡಿಮೆ ಕೊಳ್ಳುವವರಿಗೆ ರಿಯಾಯಿತಿ ದೊರೆಯುವುದಿಲ್ಲ

Central Food Technological Research Institute, Mysore.

TENDER NOTIFICATION

Sealed tenders are invited from furniture makers for "Making and supplying laboratory furniture" to the Central Food Technological Research Institute, Mysore

The detailed specifications relating to the work could be obtained from the Director, Central Food Technological Research Institute, Mysore, during office hours on payment of a sum of Rs 3/- per set The approximate value of the work is Rs 9,000/- and a tender deposit of Rs 450/- has to be paid along with the tender

The tender in duplicate along with the tender deposit paid in cash at the office of the Institute, will have to be sent so as to reach the Director, Central Food Technological Research Institute, V V Mohalla P O, Mysore, before 3 0 P M on Monday the 6th August, 1956

The tenders received will be opened by the Director, Central Food Technological Research Institute, Mysore, at his office on the same day at 4-0 P.M in the presence of the tenderers or their representatives who may be present at the time

The final decision regarding the disposal of the tender rests with the Council of Scientific & Industrial Research, New Delhi The Director reserves the right not to accept the lowest or any of the tenders without assigning any reason therefor

V SUBRAHMANYAN

Director

Edited Printed and Published by A. R Nagarajan at Sadhvi Press D. Subbiah Road, Mysore

ಟೆಲಿಫೋನ್ ನಂ 792

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ೧-೦-೦ ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ಸಂಪುಟ : ೧೪] SADHVI : WEDNESDAY 11—7—1956 ಮೈಸೂರು : ಬುಧವಾರ ೧೧—೭—೧೯೫೬ [ಸಂಚಿಕೆ : ೩೦೦

ಮೈಸೂರು ಬಿಕ್ಕಟ್ಟಿನ ಪರಿಹಾರಕ್ಕೆ ಧೇಬರರಿಗೆ ಅಧಿಕಾರ

ನಗರದಲ್ಲೂ ಸುಲಭ ದರದಲ್ಲಿ ಅಕ್ಕಿ ಮತ್ತು ಸಕ್ಕರೆ ಮಾರಾಟ

ಕೇಂದ್ರ ಸರ್ಕಾರದಿಂದ ೫ ಸಾವಿರ ಚೀಲ ಅಕ್ಕಿ ಮಂಜೂರು

ಮೈಸೂರು ೧೦

ನಗರದಲ್ಲಿ ರೂ ೧೭ ಸೇರಿನಂತೆ ಮಾರಾಟ ಮಾಡುವ ಸಲುವಾಗಿ ಕೇಂದ್ರ ಸರ್ಕಾರದವರು ೫,೦೦೦ ಚೀಲ ಪಾಲಿಷ್ ಅಕ್ಕಿಯನ್ನು ಮಂಜೂರು ಮಾಡಿದ್ದಾರೆಂದೂ, ಇದನ್ನು ಸಹಕಾರ ಸಂಘಗಳ ಮೂಲಕ ಮಾರಾಟ ಮಾಡಿಸಲು ಪ್ರಯತ್ನಗಳಾಗುತ್ತಿವೆಯೆಂದೂ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಶಂಕರರಾಯರು ಪತ್ರಿಕಾ ಪ್ರತಿನಿಧಿಗಳಿಗೆ ನೆನ್ನೆ ತಿಳಿಸಿದರು. ಮಾರಾಟವು ಇನ್ನು ೧೦ ದಿನಗಳೊಳಗಾಗಿ ಆರಂಭವಾಗುವುದೆಂದೂ ಅವರು ಸೂಚಿಸಿದರು. ಸಕ್ಕರೆಯನ್ನೂ ಸಹ ಇದೇ ರೀತಿ ಮಾರಾಟ ಮಾಡಿಸಲು ವ್ಯವಸ್ಥೆಯಾಗುವುದೆಂದು ತಿಳಿಸಿದರು.

ನಗರದಲ್ಲಿಯೇ ಮಾಯಿಂ ಆಗಿ ಧಾನ್ಯ ಸಂಗ್ರಹಾಲಯವನ್ನು ಏರ್ಪಡಿಸುವ ಸಲುವಾಗಿ ಕೇಂದ್ರದ ಅಧಿಕಾರಿಯೊಬ್ಬರು ಸದ್ಯದಲ್ಲಿಯೇ ಇಲ್ಲಿಗೆ ಭೇಟಿ ಕೊಡಲಿದ್ದಾರೆಂದು ತಿಳಿದುಬಂದಿದೆ.

ಭಾವಿಗೆ ಬಿದ್ದ ಹೆಂಗಸಿನ ರಕ್ಷಣೆ

ರಾಜಧಾನಿಯ ಪ್ರಭಾದೇವಿ ಥಿಯೇಟರ್ ಬಳಿ ಗುರುಮಲ್ಲ ಪೇಟೆಯ ಗಲ್ಲಿಯಲ್ಲಿರುವ ಭಾವಿಯಲ್ಲಿ ನೆನ್ನೆ ಶ್ರೀ ರುದ್ರಪ್ಪ ಎಂಬುವರ ಹೆಂಡತಿ ನಾಗಮ್ಮ ಎಂಬಾಕೆಯು ಆಕಸ್ಮಾತ್ ಬಿದ್ದುಬಿಟ್ಟರೆಂದೂ, ಚಾಮುಂಡಿಪುರದ ನಿವಾಸಿ ಶ್ರೀ ಕೆ. ಎಂ ಜಯರಾಮ ಮುದಲಿಯಾರರು ಆಕೆಯನ್ನು ಮೇಲಕ್ಕೆತ್ತಿ ರಕ್ಷಿಸಿದರೆಂದೂ ತಿಳಿದುಬಂದಿದೆ. ಈ ಭಾವಿಯಲ್ಲಿ ಆಕಸ್ಮಾತ್ತು ಜನರು ಬೀಳುವ ಸಂಭವವಿರುವುದರಿಂದ ಅದಕ್ಕೆ ಬಾಗಿಲುಗಳನ್ನು ಮುಚ್ಚಿಸಲು ಪೌರಸಭೆಯವರು ಏರ್ಪಾಡು ಮಾಡಬೇಕೆಂದು ಕೋರಲಾಗಿದೆ.

ಮನೆಗಂದಾಯ ಹೆಚ್ಚಿಸಿರುವುದಕ್ಕೆ ರೇಟ್ ಪೇಯರುಗಳ ಖಂಡನೆ

ರಾಜಧಾನಿಯ ೬ನೇ ವಾರ್ಡ್ ರೇಟ್ ಪೇಯರುಗಳ ಸಂಘದ ಸಮಿತಿ ಸಭೆಯು ಕಳೆದ ಭಾನುವಾರ ಶ್ರೀ ಕೆ ಶೇಷಾದ್ರಿಯವರ ಅಧ್ಯಕ್ಷತೆಯಲ್ಲಿ ನಡೆದು, ಪುರಸಭೆಯವರು ಮನೆಗಂದಾಯವನ್ನು ವಿಪರೀತವಾಗಿ ಹೆಚ್ಚಿಸಿರುವುದು ನ್ಯಾಯವಾಗಿಲ್ಲವೆಂದು ಅಭಿಪ್ರಾಯಪಡಲಾಯಿತು. ಮತ್ತು ಈ ಬಗ್ಗೆ ನೊಹಲ್ಲೆಯ ನಿವಾಸಿಗಳ ಅಭಿಪ್ರಾಯವನ್ನು ಪಡೆದು ಮುಂದಿನ ಕಾರ್ಯಕ್ರಮ ಕೈಗೊಳ್ಳುವುದಕ್ಕಾಗಿ ಬರುವ ೨೨ನೇ ತಾರೀಕು ಸಾರ್ವಜನಿಕ ಸಭೆಯೊಂದನ್ನು ಏರ್ಪಡಿಸಬೇಕೆಂದು ನಿರ್ಧರಿಸಲಾಯಿತು.

ಸಂಸ್ಥಾನದಲ್ಲಿ ಪ್ರವಾಸಾನುಕೂಲಕ್ಕೆ ೯·೨ ಲಕ್ಷ ರೂ

ದ್ವಿತೀಯ ಪಂಚವಾರ್ಷಿಕ ಯೋಜನೆ ಅಂಗವಾಗಿ ಸಂಸ್ಥಾನಗಳಲ್ಲಿ ಪ್ರವಾಸಾನುಕೂಲವನ್ನು ಹೆಚ್ಚಿಸುವ ಸಂಬಂಧವಾಗಿ ಮೈಸೂರಿಗೆ ೯·೨ ಲಕ್ಷ ರೂ ಗಳನ್ನೂ ಮತ್ತು ಕೊಡಗಿಗೆ ೩·೫ ಲಕ್ಷ ರೂ ಗಳನ್ನೂ ಕೇಂದ್ರ ಯೋಜನಾ ಮಂಡಲಿಯವರು ಒದಗಿಸಿದ್ದಾರೆ.

ಇಂದು ಧೇಬರ್-ಹನುಮಂತಯ್ಯ ಸಂಭಾಷಣೆ

ಸೌರಾಷ್ಟ್ರಕ್ಕೆ ತೆರಳುವ ಸಲುವಾಗಿ ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ನೆನ್ನೆ ಬೊಂಬಾಯಿಗೆ ಆಗಮಿಸಿದರು. ಈ ದಿನ ಮೈಸೂರು ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕಾಂಗ್ರೆಸ್ ಅಧ್ಯಕ್ಷರೊಡನೆ ನಡೆಸುವ ಸಂಭಾಷಣೆಯಲ್ಲಿ ಪ್ರೈಕಮಾಂಡಿನ ನಿರ್ಧಾರದ ಬೊಂಬಾಯಿ ಮುಖ್ಯಮಂತ್ರಿ ಮೊರಾರ್ಜಿ ದೇಸಾಯಿಯವರು ಭಾಗವಹಿಸುವರೆಂದು ಗೊತ್ತಾಗಿದೆ.

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ದೆಹಲಿಯಲ್ಲಿ ನೆನ್ನೆ ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಬಿಕ್ಕಟ್ಟನ್ನು ಪರಿಶೀಲಿಸಿ ಅಧ್ಯಕ್ಷ ಧೇಬರ್‌ರವರೊಡನೆ ಭೇಟಿ ನಡೆಸಿದ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಈ ವಿಚಾರದಲ್ಲಿ ಕಾಂಗ್ರೆಸ್ ಹೈಕಮಾಂಡು ಕೂಡಲೇ ನಿರ್ಧಾರ ಮಾಡುವಂತೆ ಒತ್ತಾಯಪಡಿಸಿದುದಾಗಿ ವರದಿಯಾಗಿದೆ.

ಗಂಡನಿಗೆ ವಿಷ ಕೊಟ್ಟವಳಿಗೆ ೩ ವರ್ಷ ಸಜಾ

ಸೇಲಂ ಸೆಷನ್ಸ್ ನ್ಯಾಯಾಧೀಶರು ಲಕ್ಷ್ಮಿ ಎಂಬ ೧೮ ವರ್ಷದ ಯುವತಿಗೆ ಗಂಡನ ಕೊಲೆಗಾಗಿ ೩ ವರ್ಷ ಸಜಾ ವಿಧಿಸಿ, ಇಲ್ಲಿಯವರೆಗೆ ಆಕೆಯು ಪಕ್ಕದ ಜೈಲು ವಾಸದಲ್ಲಿರುವಂತೆ ಆಜ್ಞೆ ಮಾಡಿದ್ದಾರೆ. ಅವರಿಬ್ಬರೂ ಹತ್ತಿರ ಸಂಬಂಧಿಗಳೆಂದೂ, ಸ್ವಸ್ಥರಾದ ನಂತರದಿಂದ ಕಳೆದ ವರ್ಷ ಅವರ ವಿವಾಹವು ನಡೆಯಿತೆಂದೂ, ಲಕ್ಷ್ಮಿಯು ತನ್ನ ತಂದೆಯೊಡನೆ ಒಬ್ಬ ಸ್ವಾಮಿಜೀಯವರ ಮನೆಯಲ್ಲಿ ವಾಸವಾಗಿದ್ದಾಗ ಆಕೆಯು ಸ್ವಾಮಿಜಿಯೊಡನೆ ಅಕ್ರಮ ಸಂಪರ್ಕ ಬೆಳೆಸಿದ್ದನ್ನು ಕಂಡ ಗಂಡನಿಗೆ ಹುಚ್ಚಿದೆಂದೂ ಹೇಳಲಾಗಿದೆ. ಅದರ ಮೇಲೆ ಸ್ವಾಮಿಜಿಯವರ ಸೂಚನೆ ಪ್ರಕಾರ ಆಕೆಯು ಆಹಾರದಲ್ಲಿ ವಿಷ ಬೆರಸಿ ಕೊಟ್ಟುದಾಗಿ ಅವನು ಸತ್ತು ಹೋದನು. ಕೊಲೆಗೆ ಸಹಾಯಕನಾಗಿದ್ದನೆಂದು ಸ್ವಾಮಿಜಿಯ ಮೇಲೂ ಆರೋಪಣೆ ಮಾಡಲಾಗಿತ್ತು. ನ್ಯಾಯಾಧೀಶರು ಅವನನ್ನು ಖುಲಾಸೆ ಮಾಡಿರುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಹನುಮಂತಯ್ಯನವರು ರಾಜೀನಾಮೆಯಿತ್ತ ಮಾತ್ರಕ್ಕೆ ಸರ್ಕಾರವೇನೂ ಮುಳುಗುವುದಿಲ್ಲ ನಾವು ಹೋದರೆ ಕಾಂಗ್ರೆಸ್ ಸಂಸ್ಥೆಯೂ ಅಳಿಯುವುದಿಲ್ಲ. ದೇಶದಲ್ಲೇನೂ ಅಲ್ಲೋಲಕಲ್ಲೋಲವಾಗುವುದಿಲ್ಲ ಅಲ್ಲದೆ ನಾಳೆಯವರವರಿಗೆ ಹಾಗಾಗಲು ಬಿಡುವುದೂ ಇಲ್ಲ ಈ ವಿಷಯವನ್ನು ಸುಸೂತ್ರವಾಗಿ ನಾವು ಬಗೆಹರಿಸಿಕೊಂಡು ಹೋಗಬೇಕೆ. ಜನರು ವಿಷಯವನ್ನು ಅರಿಯಬೇಕು ಅವರ ಇದರ ಬಗ್ಗೆ ವ್ಯಥಾ ಚರ್ಚೆ ಮಾಡಿ, ತಲೆ ಕೆಡಿಸಿಕೊಳ್ಳಬಾರದು — ಎಂಬುದಾಗಿ ನುಡಿದರು

ಅನಾರೋಗ್ಯದಿಂದ ಶಯ್ಯದಲ್ಲಿ ಪವಡಿಸಿರುವ ಶ್ರೀ ಹನುಮಂತಯ್ಯನವರು ಬೇಗನೆ ಗುಣಮುಖರಾಗಿ " ನಮ್ಮೊಂದಿಗೆ ಓಡಾಡುವಂತೆ ಆಗಲೆಂದು " ಹಾರೈಸಿದರು

ಪ್ರಾರ್ಥನೆಯಾದನಂತರ ಶ್ರೀಮತಿ ಪ್ರಿಯಂವದರವರಿಂದ ನೋಹಿನಿ ನೃತ್ಯ, ಮಣೆಪುರಿ ನರ್ತನ, ಸರಸ ಕವಿ ಭ ರಣೀಯವರಿಂದ ಸ್ವಾಗತ ಪದ್ಯ ಮಾಲಿಕಾ ಪಠಣ, ಮಂಡಲಿಯ ಕಾರ್ಯದರ್ಶಿ ಶ್ರೀ ಜಿ ಕೇಶವಮೂರ್ತಿರವರಿಂದ ಭಾಷಣ ಮತ್ತು ಟಿ ವಿ ಗುಣವಿಸಾರದ ಬಿ ಜಿ ದೇವೇಂದ್ರಪ್ಪ ಮತ್ತು ಮಂಡಲಿಯವರ ಗಾಯನ ಇತ್ಯಾದಿಗಳಾದುವು

ಅನಂತರ ಶ್ರೀ ಸುಬ್ಬಯ್ಯ ಶೆಟ್ಟರಿಗೆ ಬಿನ್ನವತ್ತಳೆಯೊಂದನ್ನು ಪುರಸಭಾಧ್ಯಕ್ಷ ಶ್ರೀ ಎ ಕೃಷ್ಣ ಮೂರ್ತಿರಾಯರು ಓದಿ ಒಪ್ಪಿಸಿದರು

ವಿಧಾನ ಪರಿಷತ್ತಿನ ಮಾಜಿ ಉಪಾಧ್ಯಕ್ಷರಾದ ಶ್ರೀ ಪಿ ಗೋಪಾಲಕೃಷ್ಣ ಶೆಟ್ಟರು ಭಾಷಣ ಮಾಡಿ, ಬೆಳೆಯುತ್ತಿರುವ ಮೈಸೂರು ನಗರದ ಅವಶ್ಯಕತೆಯನ್ನು ಪೂರೈಸಲು ಈಗಿರುವ ಛತ್ರಗಳು ಸಾಲದಾಗಿವೆಯೆಂದೂ, ಶ್ರೀ ಶೆಟ್ಟರು ಈ ಕೊರತೆಯನ್ನು ಸ್ವಲ್ಪ ಮಟ್ಟಿಗೆ ನಿವಾರಿಸಿರುವರೆಂದೂ ತಿಳಿಸಿದರು.

ವೈಶ್ಯ ಜನಾಂಗದವರು ತಮ್ಮ ಧರ್ಮ ಕಾರ್ಯಗಳಿಗೆ ಎಲ್ಲೆಲ್ಲೂ ಪ್ರಸಿದ್ಧರಾಗಿದ್ದಾರೆಂದೂ ಅವರು ಹೇಳಿ, ಆ ಜನಾಂಗದ ಪ್ರಾಚೀನ ವೈಭವವನ್ನು ವಿವರಿಸಿದರು ' ಶ್ರೀಮಂತರು ಐಶ್ವರ್ಯದ ಒಡೆಯರಲ್ಲ, ಧರ್ಮದರ್ಶಿಗಳು " ಎಂಬ ಗಾಂಧೀಜಿ ಮತ್ತು ವಿನೋಬಾ ಭಾವೆಯವರ ತತ್ವಗಳನ್ನು ಇಂದು ವೈಶ್ಯರು ಅನುಷ್ಠಾನದಲ್ಲಿಟ್ಟುಕೊಂಡಿದ್ದಾರೆಂದು ನುಡಿದರು

ದೇಶವು ಈಗ ಅಭಿವೃದ್ಧಿಯ ಪಥದಲ್ಲಿ ಸಾಗುತ್ತಿರುವಾಗ ಅವರಿಗೆ ಕೇವಲ ಹಣವನ್ನು ಒದಗಿಸುವುದು ಮಾತ್ರ ಸಾಲದೆಂದೂ, ವೈಶ್ಯರು ತಮ್ಮ ವ್ಯಾಪಾರವೇ ಅಲ್ಲದೆ, ರಾಷ್ಟ್ರದ ನಾನಾ ಕಾರ್ಯರಂಗಗಳಲ್ಲಿ ಹೆಚ್ಚಾಗಿ ಭಾಗವಹಿಸಬೇಕೆಂದೂ ಕೋರಿದರು

ಬೆಂಗಳೂರಿನ ಶ್ರೀ ಗಂಗೋಜಿರಾಯರು ಭಾಷಣ ಮಾಡಿ, ಶ್ರೀ ಸುಬ್ಬಯ್ಯಶೆಟ್ಟರು ದಾನಶೂರ ಕರ್ಣನಂತೆ ಪ್ರಸಿದ್ಧಿಯಾಗಲೆಂದು ಹಾರೈಸಿದರು

ಶ್ರೀ ಸುಬ್ಬಯ್ಯಶೆಟ್ಟರು ಉತ್ತರವಿತ್ತು, ಛತ್ರವನ್ನು ಕಟ್ಟಲು ಪ್ರೇರೇಪಿಸಿದ ಭಗವಂತನನ್ನು ವಂದಿಸಿ, ಈ ಛತ್ರವು ಸದಾ ಕಾಲವೂ ಜನರಿಗೆ ಉಪಯುಕ್ತವಾಗಿರುವಂತೆ ಮಾಡಲು ತಕ್ಕ ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು

ಶ್ರೀ ಶೆಟ್ಟರ ಈಗಿನ ದಾನವು ಸಾರ್ವಜನಿಕವಾಗಿ ಹೇಗಾದರೆ ಛತ್ರದಲ್ಲಿ ವಿದ್ಯಾರ್ಥಿಗಳಿಗೂ ವಸತಿ ಸೌಕರ್ಯವನ್ನು ಏರ್ಪಡಿಸುವುದು ಒಳ್ಳೆಯದೆಂದು ಅಧ್ಯಕ್ಷ ಚನ್ನಯ್ಯನವರು ಸೂಚಿಸಿದರು. ವೈಶ್ಯರು ರಾಜಕೀಯದಲ್ಲಿ ಪ್ರವೇಶಿಸುವುದನ್ನು ಅವರು ಸ್ವಾಗತಿಸಿದರು

ಮುಖ್ಯ ಮಂತ್ರಿಯವರೊಡನೆ ಪ್ರ॥ ಕಾಂಗ್ರೆಸ್ ಅಧ್ಯಕ್ಷರ ಭೇಟಿ

ಬೆಂಗಳೂರು ೧೪

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಎಸ್ ಚನ್ನಯ್ಯನವರು ನೆನ್ನೆ ಶುಕ್ರವಾರ ಸಂಜೆ ಭೇಟಿಕೊಟ್ಟು ರೋಗಾಲಸ್ಯದಿಂದಿರುವ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಆರೋಗ್ಯವನ್ನು ವಿಚಾರಿಸಿದರು ಈ ದಿನವೂ ಅವರುಗಳ ಭೇಟಿಯಿದೆ. ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಅವಿಶ್ವಾಸ ನಿರ್ಣಯದ ಸಂಬಂಧದ ಪರಿಸ್ಥಿತಿ ಬಗ್ಗೆ ಈಗಾಗಲೇ ನಿರ್ಧಾರವೊಂದನ್ನು ತೆಗೆದುಕೊಂಡಿರುವುದಾಗಿಯೂ, ಅದರ ವಿವರವನ್ನು ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರಿಗೆ ತಿಳಿಸುವ ರೆಂದೂ ಹೇಳಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಪಶ್ಚಿಮ ಜರ್ಮನಿ ರಾಜಧಾನಿಯಲ್ಲಿ ನೆಹರೂ

ಪಶ್ಚಿಮ ಜರ್ಮನಿಯ ರಾಜಧಾನಿ ಬಾನ್ ನಗರಕ್ಕೆ ನೆನ್ನೆ ಪ್ರಧಾನಿ ನೆಹರೂರವರು ಭೇಟಿಯಿತ್ತರು ಅಲ್ಲಿನ ಪ್ರಧಾನಿ ಡಾ॥ ಅಡೆನೋರ್‌ರವರೊಡನೆ ಅವರು ೧॥ ಗಂಟೆ ಕಾಲ ಸಂಭಾಷಣೆ ನಡೆಸಿದರು ಮಾತುಕತೆಗಳು ಪ್ರಾರಂಭದಲ್ಲಿ ಸುಮುಖವಾಗಿ ನಡೆದುವೆಂದು ಹೇಳಲಾಗಿದೆ ಪರಸ್ಪರ ಸಹಾಯ ಮತ್ತು ವಿನಿಮಯದ ಬಗ್ಗೆ ಮಾತುಕತೆಗಳು ಆದುವೆಂದು ಗೊತ್ತಾಗಿದೆ

ಭಾರತದಲ್ಲಿ ಪಾರಿಭಾಷಿಕ ಕಾಲೇಜು ಸ್ಥಾಪಿಸಲು ಜರ್ಮನಿ ಸಹಾಯ

ಭಾರತದಲ್ಲಿ ಪಾರಿಭಾಷಿಕ ಕಾಲೇಜೊಂದನ್ನು ನಿರ್ಮಿಸಲು ಪಶ್ಚಿಮ ಜರ್ಮನಿಯು ಮುಂದೆ ಬಂದಿದೆ ಅಲ್ಲದೆ ಜರ್ಮನಿಯಲ್ಲಿ ಪಾರಿಭಾಷಿಕ ಜ್ಞಾನ ಪಡೆಯಬೇಕೆಂದಿರುವ ಭಾರತೀಯ ವಿದ್ಯಾರ್ಥಿಗಳಿಗೆ ೧೦೦ ವೇತನಗಳನ್ನೂ ಕೊಡಲು ಜರ್ಮನಿಯು ಆಲೋಚಿಸಿದೆ ಈ ವಿಷಯವನ್ನು ಜರ್ಮನಿಯ ಪ್ರಧಾನಿ ಅಡೆನೋರ್‌ರವರು ಪ್ರಧಾನಿ ನೆಹರೂರವರಿಗೆ ತಿಳಿಸಿರುತ್ತಾರೆ

ಮಂಡಲಿಯ ಕಾರ್ಯದರ್ಶಿ ಶ್ರೀ ಎಂ ಶ್ರೀನಿವಾಸಾಚಾರ್ಯರು ವಂದನಾರ್ಪಣೆ ಮಾಡಿದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

" ಸಾಹುಕಾರ್ " ಪತ್ರಿಕೆ ಚನ್ನಯ್ಯನವರ ಆಕ್ಷೇಪಣೆ

ಮೈಸೂರು ೧೪

ತಮ್ಮನ್ನು " ಸಾಹುಕಾರ್ " ಚನ್ನಯ್ಯನವರೆಂದು ಜನರು ಕರೆಯುವುದರ ಬಗ್ಗೆ ನೆನ್ನೆ ಕನ್ನಡ ಕಲಾ ಮಿತ್ರ ಮಂಡಲಿಯ ಸಮಾರಂಭದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಆಕ್ಷೇಪಿಸಿ,ತಾವು ಎಂದೂ ಅಧಿಕಾರಕ್ಕಾಗಲಿ ಹಣಕ್ಕಾಗಲಿ ಆ ಸಮಾಜ ತತ್ವದ ರೀತಿಗೆ ಅನುಸರಿಸಿಕೊಂಡುದಿಲ್ಲವೆಂದು ಹೇಳಿದರು. ಇನ್ನು ಮುಂದೆ ತಮ್ಮನ್ನು ಆ ರೀತಿ ಸಂಬೋಧಿಸಿದರಾಗಲೀ ಅಥವಾ ಅನ್ಯಾಯ ಪತ್ರಿಕೆಗಳಲ್ಲಿ ಹಾಗೆ ಅಚ್ಚುಹಾಕಿಸಿದರಾಗಲೀ ತಾವು ಆ ಸಮಾರಂಭಗಳಿಗೆ ಬರುವುದೇ ಇಲ್ಲವೆಂದೂ ಸಹ ಎಚ್ಚರಿಸಿದರು

ವಿವಾಹ ಮಹೋತ್ಸವ

ಶಿಂಷನೆಂಜಾಂಬಾ ಅಗ್ರಹಾರದಲ್ಲಿರುವ ಶ್ರೀ ಎ ಸುಬ್ಬರಾಮುರವರು ತಮ್ಮ ಸಹೋದರ ಶ್ರೀ ಎ ಎಸ್ ರೇವಗಿರಿಯವರಿಗೆ ಚಂಜಪಗೂಡಿನ ಜಮೀನುದಾರರಾದ ಶ್ರೀ ಎಸ್ ಎ. ಅನಂತನಾರಾಯಣರವರ ಮಗಳು ಸೌ॥ ಜಾನಕಮ್ಮನನ್ನು ತಂದುಕೊಂಡು ನೆನ್ನೆ ಚಂಜಪಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು

ಅಮೇರಿಕಾ ವಿಮಾನ ಮುರಿದು ೪೫ ಮಂದಿಯ ಮರಣ

ಅಮೇರಿಕದಿಂದ ನೆನ್ನೆ ಇಂಗ್ಲೆಂಡಿಗೆ ಹೊರಟ ಮಿಲಿಟರಿ ವಿಮಾನವೊಂದು ವಿಪರೀತ ಮಳೆಯ ಮಧ್ಯೆ ಸಿಕ್ಕಿಕೊಂಡು ನ್ಯೂಜರ್ಸಿಯ ಪೋರ್ಟ್ ಡಿಕ್ಸ್ ಎಂಬಲ್ಲಿ ಮುರಿದು ಬಿದ್ದು ೪೫ ಮಂದಿ ಮೃತಪಟ್ಟರು ೬೬ ಮಂದಿ ಸೈನಿಕರು ತಮ್ಮ ಸಂಸಾರಗಳ ಸಮೇತ ಪ್ರಯಾಣ ಮಾಡುತ್ತಿದ್ದರು ಇನ್ನು ಮಂದಿ ಬಾಲಕರೂ ಇದ್ದರು ಪಾರಾಗಿದ್ದಾರೆ, ಮರಗಳ ಮಧ್ಯೆ ವಿಮಾನವು ಮಗ್ಗಲಿಗೆ ಉರುಳಿತು ಗಾಯಗೊಂಡ ಇತರರ ಸ್ಥಿತಿ ಹಲವರು ಉಳಿಯುವ ಸ್ಥಿತಿಯಲ್ಲಿಲ್ಲ

ಉತ್ತರ ಬಿಹಾರಿನಲ್ಲಿ ಪ್ರವಾಹ, ದಕ್ಷಿಣದಲ್ಲಿ ಅನಾವೃಷ್ಟಿ

ಬಿಹಾರಿನ ಉತ್ತರ ಭಾಗದ ಪ್ರದೇಶಗಳಲ್ಲಿ ವಿಪರೀತ ಮಳೆಯಿಂದ ಪ್ರವಾಹವೂ, ದಕ್ಷಿಣ ಭಾಗದಲ್ಲಿ ಮಳೆಯೇ ಇಲ್ಲದೆ ಬೆಳೆಗಳ ನಷ್ಟವೂ ಉಂಟಾಗಿವೆ. ದಕ್ಷಿಣದ ಒಂದು ಜಿಲ್ಲೆಯಲ್ಲಿ ಮೇವು ಮತ್ತು ನೀರು ಇಲ್ಲದೆ ೫೦೦ ದನಕರುಗಳು ಸತ್ತಿರುವುದಾಗಿ ಹೇಳಲಾಗಿದೆ ಆ ಜಿಲ್ಲೆಯ ಹಲವು ಹಳ್ಳಿಗಳಲ್ಲಿ ನಾಲ್ಕು ವರ್ಷಗಳಿಂದಲೂ ಮಳೆಯಿಲ್ಲದೆ ಬೆಳೆಗಳು ನಷ್ಟವಾಗುತ್ತಲೇ ಬಂದು ಜನರು ಒಂದು ವಿಧವಾದ ಸೊಪ್ಪನ್ನು ತಿಂದು ಜೀವಿಸುತ್ತಿರುವರು

ಮಕ್ಕಳ ರಾಷ್ಟ್ರೀಯ ವಸ್ತು ಸಂಗ್ರಹಾಲಯ

ದ್ವಿತೀಯ ಪಂಚ ವಾರ್ಷಿಕ ಯೋಜನೆ ಅವಧಿಯಲ್ಲಿ ಮಕ್ಕಳಿಗಾಗಿ ಏರ್ಪಡಿಸಲಾಗುವ ರಾಷ್ಟ್ರೀಯ ವಸ್ತು ಸಂಗ್ರಹಾಲಯವನ್ನು ದೆಹಲಿಯಲ್ಲಿ ತೆರೆಯಲಾಗುವುದೆಂದು ಗೊತ್ತಾಗಿದೆ

ವಾರ ಭವಿಷ್ಯ

[illegible]

ಮೇಷ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ [illegible] ಶುಭ ಕಾರ್ಯಗಳು ಜರುಗುವುವು [illegible] ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ [illegible]

ವೃಷಭ — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು ಉದ್ಯೋಗದಲ್ಲಿ ಉತ್ಸಾಹ [illegible] ಸುಖಕರವಾಗಿರುವುದು

ಮಿಥುನ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಅನಿರೀಕ್ಷಿತ [illegible] ಕುಟುಂಬದಲ್ಲಿ ಚಿಂತಾದಾಯಕ ಪರಿಸ್ಥಿತಿ

ಕರ್ಕ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ತೃಪ್ತಿಯೋಗ್ಯವಾದ [illegible] ಉದ್ಯೋಗದಲ್ಲಿ ಪ್ರಶಂಸೆ [illegible] ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಪ್ರವಾಸ ಸಂಭವ

ಸಿಂಹ — ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಷ್ಟ ನೌಕರಿಯಲ್ಲಿ ನಿರುತ್ಸಾಹ [illegible]

ಕನ್ಯಾ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ [illegible] ವ್ಯಾಪಾರವ್ಯವಹಾರಗಳಲ್ಲಿ [illegible]

ತುಲಾ — [illegible]

ವೃಶ್ಚಿಕ — [illegible] ಪರಿಸ್ಥಿತಿ [illegible] ವ್ಯಾಪಾರವ್ಯವಹಾರಗಳಲ್ಲಿ [illegible] ಅನಿರೀಕ್ಷಿತ [illegible]

ಧನು — [illegible] ತೃಪ್ತಿಕರ [illegible] ವ್ಯಾಪಾರವ್ಯವಹಾರಗಳಲ್ಲಿ [illegible]

ನೇಣು ಹಾಕುವ ಕುಟುಂಬಕ್ಕೆ ನಿರುದ್ಯೋಗದ ಭೀತಿ

ಮೊಗಲಾಯರ ಕಾಲದಿಂದಲೂ ಮರಣದಂಡನೆ ವಿಧಿಸಲ್ಪಟ್ಟವರನ್ನು ನೇಣು ಹಾಕುತ್ತಿದ್ದ ಲಕ್ಷ್ಮಣನ [illegible] ಮನೆತನಕ್ಕೆ [illegible] ಕೆಲಸ ಸಿಗದೆ ಅವರು ನಿರುದ್ಯೋಗಿಗಳಾಗುವ ಭೀತಿ [illegible] ಅವರು ಉತ್ತರ ಪ್ರದೇಶ [illegible] ಜನರಲ್ಲಿಗೆ ಮನವಿ [illegible] ತಮಗೆ [illegible] ಆಗಬೇಕಾಗಿದೆ

ರೈಲಿನಿಂದ ಹಾರಿದ್ದಕ್ಕೆ ೨೦ ರೂ ದಂಡ

[illegible] ಮತ್ತು [illegible] ಜಂಕ್ಷನ್ [illegible] ರೈಲು [illegible] ಬೆಂಗಳೂರು [illegible] ದಂಡ, ತಪ್ಪಿದರೆ [illegible] ದಿನಗಳ [illegible] ವಿಧಿಸಲಾಗಿದೆ

ಮಕರ — ಆರೋಗ್ಯದ ಬಗ್ಗೆ ಎಚ್ಚರಿಕೆ ಆರ್ಥಿಕ ಪರಿಸ್ಥಿತಿ ತೃಪ್ತಿಕರ [illegible] ವ್ಯಾಪಾರವ್ಯವಹಾರಗಳಲ್ಲಿ [illegible] ಉದ್ಯೋಗದಲ್ಲಿ [illegible]

ಕುಂಭ — ಆರೋಗ್ಯದ ಬಗ್ಗೆ ಜಾಗರೂಕ [illegible] ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ [illegible] ನೌಕರಿಯಲ್ಲಿ [illegible]

ಮೀನ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ [illegible] ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ [illegible]

ಕುಚೇಷ್ಟೆ ಮಾಡುವ ವಿದ್ಯಾರ್ಥಿಗಳ ಮೇಲೆ ಶಿಸ್ತಿನ ಕ್ರಮ

ಮಿತ್ರಮೇಳದ ಪ್ರಕರಣದ ತನಿಖೆ ಸಮಿತಿ ಶಿಫಾರಸು

ಮೈಸೂರು [illegible]

ಕಳೆದ ವರ್ಷ ಇಲ್ಲಿನ ಮಹಾರಾಜಾ ಕಾಲೇಜಿನಲ್ಲಿ ನಡೆದ ಮಿತ್ರಮೇಳದ ಪ್ರಕರಣದ ಸಂಬಂಧವಾಗಿ ವೈಸ್ ಚಾನ್ಸಲರ್ ಶ್ರೀ [illegible] ಅವರ ಅಧ್ಯಕ್ಷತೆಯಲ್ಲಿ ನೇಮಕವಾಗಿದ್ದ ತನಿಖೆ ಸಮಿತಿಯು ಸಲ್ಲಿಸಿದ್ದ ವರದಿಯನ್ನು ವಿಶ್ವವಿದ್ಯಾಲಯ [illegible] ಪರಿಶೀಲಿಸಿ ಅನುಮೋದಿಸಿರುವರೆಂದು ವರದಿಯಾಗಿದೆ ಆ [illegible] ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ಗೊತ್ತಾಗಿದೆ

[illegible] ಸಿದ್ಧೋಕ್ತಿ [illegible] ಸಮಿತಿಯು ಅಭಿಪ್ರಾಯಪಟ್ಟಿದೆಯೆಂದು [illegible] ಕುಚೇಷ್ಟೆಯ ವಿದ್ಯಾರ್ಥಿಗಳು ಈ ಕೆಲಸ ಮಾಡಿರುವರೆಂದೂ ಮಿತ್ರಮೇಳದ ವಿದ್ಯಾರ್ಥಿನಿಯರೊಡನೆ ಸಲುಗೆ [illegible] ಉತ್ತಮ ಸಾಮಾಜಿಕ ಬಾಂಧವ್ಯವನ್ನು ಹೊಂದಿದ್ದುದೇ ಕುಚೇಷ್ಟೆಗೆ ಕಾರಣವೆಂದು ಸಮಿತಿಯು ಅಭಿಪ್ರಾಯಪಟ್ಟಿರುತ್ತದೆ

ತಮ್ಮ ಉದ್ದೇಶಗಳನ್ನು ಸಾಧಿಸಲು ಅವರುಗಳು ಪತ್ರಿಕೆಗೆ ಪತ್ರಗಳನ್ನು ಬರೆದು [illegible] ಅಭಿಪ್ರಾಯವನ್ನು ಅಲ್ಲಗಳೆದಿರುವುದಾಗಿಯೂ ಈ ಪತ್ರಗಳು [illegible] ಮತ್ತು [illegible] ಕರವೆಂದು ಸಮಿತಿಯು ಸೂಚಿಸಿದೆ

ಮುಂದೆ ಇಂತಹ ಅಶಿಸ್ತು ಮತ್ತು [illegible] ಚಟುವಟಿಕೆಗಳನ್ನು [illegible]

CLASSES WILL COMMENCE EARLY FOR

Junior . Inter, B A., B. Sc

JOIN AT ONCE

Vidya Tutorial College,

(Dalvoy High School Buildings)

MYSORE

[illegible] ವಿದ್ಯಾರ್ಥಿಗಳನ್ನು ಕಾಲೇಜುಗಳಿಂದ ಹೊರ ಹಾಕಬೇಕೆಂದು ಸಮಿತಿಯು ಶಿಫಾರಸು ಮಾಡಿದೆ

ಅಲ್ಲದೆ ಕಾಲೇಜಿನಲ್ಲಿ ಯಾವುದಾದರೂ ಸಮಾರಂಭ, ಸಭೆ ನಡೆಯುವ ಮುಂಚೆ ಕಾಲೇಜುಗಳ ಮುಖ್ಯಾಧಿಕಾರಿಗಳ ಅನುಮತಿಯು ಅವಶ್ಯಕವೆಂದು ಸಮಿತಿಯು ಸೂಚಿಸಿದೆ ತನಿಖೆ ವಿವರಗಳ ಬಗ್ಗೆ ವಿಧಾನ ಸಭೆಯಲ್ಲಿ ವಿದ್ಯಾ ಮಂತ್ರಿಗಳು ಹೇಳಿಕೆಯನ್ನು ಕೊಡಲಿರುವರು

ಮೈಸೂರು ಪೇಟೆ ಧಾರಣೆ

	ರೂ ಖಂಡ	ರೂ ಚೀಲ
ಕಡಲೇಕಾಯಿ	[illegible]	[illegible]
ಕಡಲೇಕಾಯಿ ಬೀಜ	[illegible]	
ಹಿಪ್ಪೆಬೀಜ	[illegible]	
ಹಿಪ್ಪೆ	[illegible]	
ಎಳ್ಳು	[illegible]	[illegible]
ಹುರುಳಿ	[illegible]	
ಹೆಸರು	[illegible]	
ಕಡಲೆಗಿಂದ	[illegible]	[illegible]
ಉದ್ದು	[illegible]	[illegible]
ಅವರೆ	[illegible]	[illegible]
ಸೀಗೆಕಾಯಿ	[illegible]	[illegible]
ಹುಣಿಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ [illegible]	[illegible]	[illegible]

ಕಂಪಾಸಿಟರು ಬೇಕು

ಅನುಭವವುಳ್ಳ ಕಂಪಾಸಿಟರು ಬೇಕು ವಿಚಾರಿಸಿ

ಸಾಧ್ವಿ ಆಫೀಸ್, ಮೈಸೂರು

ಎಲೆಕ್ಟ್ರಿಕ್ ಮೋಟಾರು ಬಿಕರಿಗಿದೆ

30 Cycles 3H P B I H ಎಲೆಕ್ಟ್ರಿಕ್ ಮೋಟಾರು ಖರೀದಿಸಿ [illegible] ದವರೊಡನೆ ಹೊಸ ಬೀದಿಯ 2669ನೇ ನಂಬರು ಮನೆಯಲ್ಲಿರುವ ಫ್ಲೋರ್ ಮಿಲ್ಲಿನಲ್ಲಿ ವಿಚಾರಿಸಿ

ಜಾತಕ-ಪ್ರಶ್ನೆ-ಹಸ್ತ ಸಾಮುದ್ರಿಕ

(ASTRO PALMISTRY)

H S ವೆಂಕಟೇಶರಾವ್, B A B I

1439 ಕೃಷ್ಣಮೂರ್ತಿಪುರ ಮೈಸೂರು

Puls

BRONKOL

For ASTHMA

&

BRONCHITIS

Sole Distributors for Mysore State and Coorg

SATHYA & CO.

Chemists & Druggists

[illegible]

BANGALORE

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವನ್ನು [illegible] ಶಿಕ್ಷಣ ಸಾಧನಗಳಿಂದ [illegible] ವ್ಯಕ್ತಿತ್ವ [illegible] ಮಾಡಲಾಗಿದೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ಸೇರಿಸಿ [illegible] ಪ್ರಯೋಜನ ಹೊಂದುವುದರ ಮೂಲಕ [illegible] ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ಬಿ ಕೃಷ್ಣಮೂರ್ತಿ,
ಡೈರೆಕ್ಟರ್

12-7 1956ನೇ ಗುರುವಾರದಿಂದ ಅಮೋಘ ಪ್ರಾರಂಭ

ಹೊಸ ಮ್ಯಾನೇಜ್‌ಮೆಂಟ್

ವೆಲ್ ಕಮ್ ಕಾಫಿ ಕ್ಲಬ್

(ಪ್ರಭಾ ಟಾಕೀಸ್ ಎದುರು) ಮೈಸೂರು

ಮೈಸೂರಿನಲ್ಲಿ ಪ್ರಖ್ಯಾತಿ ಹೊಂದಿರುವ ಹಳೇ ಅಗ್ರಹಾರದ ಶ್ರೀ ಸುಬ್ಬಣ್ಣನವರ ನೇತೃತ್ವದಲ್ಲಿ ಮಾಡಲ್ಪಡುವ [illegible], ಮಸಾಲೆ [illegible] ಕೇಸರಿಭಾತ್, [illegible] ಕಾಫಿ ಮತ್ತು ಇತರ [illegible] ತಿಂಡಿ ರುಚಿಗೆ [illegible] ದಯಮಾಡಿ ಭೇಟಿ ಕೊಡಿ

ಡಿ ರಾಮಪ್ರಸಾದ್ ಶರ್ಮ, ಪ್ರೊಪ್ರೈಟರ್

SAFEGUARD YOUR VALUABLES

A SAFE DEPOSIT LOCKER protects them at small cost

★

SAFE DEPOSIT LOCKERS are now installed in our new building in Mysore

★

Rent a LOCKER to day & be free from all worries

★

CANARA BANK LIMITED

CANARA BANK BUILDING

NEW STATUE CIRCLE

MYSORE

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

[illegible]

ನವರತ್ನ—ಕಲ್ಪ

[illegible] ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು [illegible]

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು ಫೋನ್ ನಂ 590

— ಭೇಟಿಯ ಕಾಲ —

ಬೆಳಿಗ್ಗೆ 7 30 ರಿಂದ 12 30 ವರೆಗು

ಮಧ್ಯಾಹ್ನ 4 ರಿಂದ 7-30

[illegible]

ನವರತ್ನ—ಕಲ್ಪ

[illegible]

[illegible] ಸಂಬಂಧದ ವ್ಯಾಧಿಗಳು, [illegible] ಶಕ್ತಿ [illegible] ವ್ಯಾಧಿ [illegible] ಆರೋಗ್ಯ [illegible]

NAVRATNA KALPA PHARMACY,

JULLUNDUR CITY (India)

Grams NAVRATNA

[illegible] ಹೋಟಲು [illegible] ಕೈಗೆಟುಕುವ ದರ [illegible] ರುಚಿಯಾದ ಊಟಕ್ಕೂ ಮತ್ತು ಆರೋಗ್ಯಕರವಾದ [illegible] ಅನುಕೂಲವಾದ ರೂಮುಗಳಿಗೂ ಒಮ್ಮೆ ಭೇಟಿ ಕೊಡಿ

★ **ನ್ಯೂ ಚಾಮುಂಡೇಶ್ವರಿ ಕೆಫೆ**

ಫೋನ್ 41 ಪ್ರೊಪ್ರೈಟರ್ [illegible] ಚಂದ್ರಯ್ಯ [illegible] ರಸ್ತೆ, ಮೈಸೂರು

Edited Printed and Published by A R Nagarajan at Sadhvi Press D Subbaiah Road Mysore

ರಿಜಿಸ್ಟರ್ ನಂ 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೪] SADHVI : MONDAY 16—7—1956 ಮೈಸೂರು : ಸೋಮವಾರ ೧೬—೭—೧೯೫೬ [ಸಂಚಿಕೆ : ೩೦೭

ಫ್ರೆಂಚ್ ಸರ್ಕಾರಕ್ಕೆ ಟ್ಯುನೀಷಿಯಾ ಪ್ರಧಾನಿಯ ಎಚ್ಚರಿಕೆ

ಮೈಸೂರು ರಾಜಕೀಯ ಬಿಕ್ಕಟ್ಟು ಪರಿಹಾರ ಸಧ್ಯಕ್ಕಿಲ್ಲ ?

ಮುಖ್ಯ ಮಂತ್ರಿಗಳು ಇನ್ನೂ ಆಲೋಚಿಸುತ್ತಿರುವರು

ಬೆಂಗಳೂರು ೧೫

ಮೈಸೂರು ರಾಜಕೀಯದ ಬಿಕ್ಕಟ್ಟು ಸಧ್ಯಕ್ಕೆ ಪರಿಸಮಾಪ್ತಿಯಾಗುವಂತೆ ಕಾಣಬರುತ್ತಿಲ್ಲವೆಂದೂ, ಮುಖ್ಯ ಮಂತ್ರಿಯವರು ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲವೆಂದೂ ಹೇಳಲಾಗುತ್ತಿದೆ.

ನೆನ್ನೆ ಶ್ರೀ ಹನುಮಂತಯ್ಯನವರೊಡನೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಚನ್ನಯ್ಯನವರು ಮತ್ತೊಮ್ಮೆ ಭೇಟಿ ನಡೆಸಿ, ೨ಟು ಗಂಟೆಕಾಲ ಚರ್ಚಿಸಿದರು. ಈಗಿನ ಪರಿಸ್ಥಿತಿಯಲ್ಲಿ ತಾವು ಮಾಡಬೇಕಾದುದೇನೆಂಬುದನ್ನು ಇನ್ನೂ ಯೋಚಿಸುತ್ತಿರುವುದಾಗಿ ಮುಖ್ಯ ಮಂತ್ರಿಯವರು ಪ್ರದೇಶ ಅಧ್ಯಕ್ಷರಿಗೆ ತಿಳಿಸಿದರೆಂದು ಗೊತ್ತಾಗಿದೆ. ಪ್ರದೇಶ ಅಧ್ಯಕ್ಷರು ಮತ್ತೊಮ್ಮೆ ಶ್ರೀ ಹನುಮಂತಯ್ಯನವರನ್ನು ಭೇಟಿ ಮಾಡುವ ಸಂಭವವಿಲ್ಲವೆಂದು ತಿಳಿದುಬಂದಿದೆ.

ಬಿಕ್ಕಟ್ಟಿನ ಪರಿಹಾರದ ಎಗ್ಗೆ ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ಈ ದಿನ ತಮ್ಮ ನಿರ್ಧಾರವನ್ನು ಪ್ರಕಟಿಸುವ ಸಂಭವವಿದೆಯೆಂದು ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯವರ ನಿಕಟ ವಲಯಗಳಿಂದ ತಿಳಿದುಬಂದಿರುವುದಾಗಿಯೂ ಮತ್ತೊಂದು ವರದಿಯು ತಿಳಿಸಿದೆ.

ಮೋಟಾರು ವಾಹನ ಕೊರಕಲಿಗೆ ಬಿದ್ದು ೧೪ ಜನರ ಮರಣ

ದಕ್ಷಿಣ ಅಮೆರಿಕದ ಕೊಲಂಬಿಯಾ ರಾಜ್ಯದಲ್ಲಿ ಕಳೆದ ಶುಕ್ರವಾರ ಟೊಲಿಮಾ ಎಂಬ ಊರಿನ ಹತ್ತಿರ ಕೊರಕಲಿನಲ್ಲಿ ಮೋಟಾರು ವಾಹನವೊಂದು ಉರುಳಿಬಿತ್ತೆಂದೂ ಅದರಲ್ಲಿದ್ದ ೪೦ ಮಂದಿ ಪ್ರಯಾಣಿಕರ ಪೈಕಿ ೧೪ ಜನರು ಮಡಿದರು. ಅದೇ ರಸ್ತೆಯಲ್ಲಿ ಒಂದು ವಾರದೊಳಗೆ ಇನ್ನೆರಡು ರಸ್ತೆ ಅಪಘಾತಗಳಾಗಿದ್ದು, ಒಂದರಲ್ಲಿ ೧೫ ಜನರ ಸಾವುನೋವು, ಮತ್ತೊಂದರಲ್ಲಿ ೩ ಮರಣಗಳಾಗಿದ್ದುವು.

ಪೋಲೀಸು ಕಾನ್ಸ್ಟೇಬಲನ ಖುಲಾಸೆ

ಶ್ರೀರಂಗಪಟ್ಟಣ ೧೫

ಕಾವಲಿದ್ದ ಸಮಯದಲ್ಲಿ ತನ್ನ ಕರ್ತವ್ಯ ಸರಿಯಾಗಿ ಮಾಡದೆ, ಒಬ್ಬ ಖೈದಿಯು ಪರಾರಿಯಾಗಲು ಅವಕಾಶವಾದ ಬಗ್ಗೆ ಇಲ್ಲಿನ ಪೋಲೀಸು ಕಾನ್ಸ್ಟೇಬಲ್ ಅಲೂಸಿಯಾ ಎಂಬುವನ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಸ್ಥಳೀಯ ನ್ಯಾಯಾಧೀಶ ಶ್ರೀ ಹೆಚ್ ನಾಗಪ್ಪನವರು ಪೋಲೀಸನನ್ನು ಖುಲಾಸೆ ಮಾಡಿರುತ್ತಾರೆ.

ಸಿಕ್ಕಾಪಟ್ಟೆ ಮೋಟಾರು ಬಿಟ್ಟುದಕ್ಕಾಗಿ ಡ್ರೈವರನಿಗೆ ೪ ತಿಂಗಳ ಸಜಾ

ಕಳೆದ ನವೆಂಬರ್ ೮ ರಂದು ಸಿಕ್ಕಾಪಟ್ಟೆ ಮೋಟಾರು ವಾಹನವನ್ನು ಬಿಟ್ಟು ಒಬ್ಬ ಹುಡುಗನಿಗೆ ಮರಣ ಉಂಟಾದ ಸಂಬಂಧದಲ್ಲಿ ಹೂಡಲಾಗಿದ್ದ ಮೊಕದ್ದಮೆಯಲ್ಲಿ ನ್ಯಾಯಾಧೀಶರು ಲಿಂಗಯ್ಯನಿಗೆ ೪ ತಿಂಗಳ ಸಾದಾ ಸಜಾ ಮತ್ತು ೨೦೦ ರೂ ದಂಡವನ್ನು ವಿಧಿಸಿರುತ್ತಾರೆ.

ಪೋಸ್ಟ್‌ಮನ್ನನಿಗೆ ೧ ವರ್ಷ ಸಜಾ

ನಂಜನಗೂಡು ೧೫

ಇಲ್ಲಿ ಕೆಲವು ದಿನಗಳ ಹಿಂದೆ ರಂಗಯ್ಯ ಎಂಬ ಪೋಸ್ಟ್‌ಮನ್ನನು ಕೆಲವು ಕಾಗದಗಳನ್ನೂ ಒಂದು ಮನಿಯಾರ್ಡರನ್ನೂ ಬಟವಡೆ ಮಾಡದಿದ್ದ ತಪ್ಪಿಗಾಗಿ ಅವನಿಗೆ ಮೈಸೂರಿನ ಸೆಷನ್ಸ್ ನ್ಯಾಯಾಧೀಶರು ೧ ವರ್ಷ ಸಜಾ ಮತ್ತು ೫೦ ರೂ ದಂಡವನ್ನು ವಿಧಿಸಿರುತ್ತಾರೆ.

ನಾಲೆಗೆ ಬಿದ್ದ ಹೆಂಗಸಿನ ರಕ್ಷಣೆ

ಮಕ್ಕಳ ಜತೆ ಜಗಳವಾಡಿ ನಾಲೆಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳಲು ಯತ್ನಿಸಿದಳೆನ್ನಲಾದ ಪುಟ್ಟಮ್ಮ ಎಂಬ ಹೆಂಗಸನ್ನು ಸ್ವಲ್ಪ ದೂರದ ಹತ್ತಿರದ ನಿವಾಸಿಗಳು ಮೇಲಕ್ಕೆತ್ತಿ ಉಪಚರಿಸಿ, ನೆನ್ನೆ ಇಲ್ಲಿನ ಪೋಲೀಸ್ ಠಾಣೆಗೆ ಒಪ್ಪಿಸಿದರೆಂದು ವರದಿಯಾಗಿದೆ. ಪೋಲೀಸರ ಪ್ರಶ್ನೆಗೆ ಆಕೆಯು ಉತ್ತರವನ್ನೇನೂ ಕೊಡಲಿಲ್ಲವೆಂದು ಹೇಳಲಾಗಿದೆ.

ಈ ವರ್ಷ ಉತ್ತಮ ಅಕ್ಕಿ ಬೆಳೆ

ಮುಂದೆ ಬರುವ ಸುಗ್ಗಿಯಲ್ಲಿ ಅಕ್ಕಿ ಬೆಳೆಯು ಉತ್ತಮವಾಗಿರುವುದೆಂದು ಕೇಂದ್ರ ಆಹಾರ ಉಪಮಂತ್ರಿ ಎಂ. ವಿ. ಕೃಷ್ಣಪ್ಪನವರು ತಿಳಿಸಿರುತ್ತಾರೆ. ಎಲ್ಲಾ ಕಡೆಗಳಲ್ಲೂ ಸಮಂಜಸವಾಗಿ ಮಳೆಯಾಗಿ, ಕಾವೇರಿ, ಕೃಷ್ಣ, ಗೋದಾವರಿ ಮತ್ತು ಮಹಾನದಿ ಪ್ರದೇಶಗಳಲ್ಲಿ ಭತ್ತ ಬೆಳೆಯಲು ಹೆಚ್ಚು ನೀರು ದೊರೆಯುತ್ತಿದೆ. ಮೈಸೂರಿನ ಕನ್ನಂಬಾಡಿಕಟ್ಟೆ, ತುಂಗಭದ್ರಾ ಅಣೆಕಟ್ಟು, ನಿಜಾಮ ಸಾಗರ ಮತ್ತು ಇತರ ಮುಖ್ಯ ಜಲಾಶಯಗಳಲ್ಲಿ ನೀರು ತುಂಬಿದುವಲ್ಲದೆ, ಉಕ್ಕಿ ಹರಿಯುತ್ತಿರುವುದೆಂದೂ ಅವರು ತಿಳಿಯಪಡಿಸಿದ್ದಾರೆ.

ಸೈನಿಕರ ಸಮಿತಿಗಳ ರಚನೆ

ಮೈಸೂರು ಮತ್ತು ಬೆಂಗಳೂರು ನಗರಗಳಲ್ಲಿ ಒಂದೊಂದು ಜಿಲ್ಲಾ ಸೈನಿಕರು, ನಾವಿಕರು ಮತ್ತು ವೈಮಾನಿಕರ ಸಮಿತಿಗಳನ್ನು ಆಯಾ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ರಚಿಸಲಾಗಿದೆ. ಮೈಸೂರು ಸಮಿತಿಯಲ್ಲಿ ಕರ್ನಲ್ ಪಿ ಬಸವರಾಜ ಅರಸ್‌ರವರು ಉಪಾಧ್ಯಕ್ಷರಾಗಿರುವರು. ಅಲ್ಲದೆ ಬೆಂಗಳೂರು ಪ್ರದೇಶದ ಸೈನ್ಯದ ರಿಕ್ರೂಟಿಂಗ್ ಅಧಿಕಾರಿಗಳು, ಮೈಸೂರು ಜಿಲ್ಲಾ ಪೋಲೀಸು ಸೂಪರಿಂಟೆಂಡೆಂಟರು, ನಗರದ ಪೌರಸಭೆ ಉಪಾಧ್ಯಕ್ಷರು, ಜಿಲ್ಲಾ ವಿದ್ಯಾಧಿಕಾರಿಗಳು, ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್ ಲಿಂಗಣ್ಣನವರು, ಕೆ ಎಸ್ ಸತ್ಯನಾರಾಯಣರಾವ್ ಕ್ಯಾಪ್ಟನ್ ಜಮಾಲುದ್ದೀನ್, ಸುಬೇದಾರ್ ಹೆಚ್ ದುರ್ಗಾಸಿಂಗ್, ಕೃಷ್ಣರಾಜೇಂದ್ರ ಆಸ್ಪತ್ರೆ ವೈದ್ಯಾಧಿಕಾರಿಗಳು ಮತ್ತು ಶ್ರೀ ಟಿ ಎ ಎಸ್ ರಾಜನ್‌ರವರು ಸದಸ್ಯರಾಗಿರುವರು.

ಮುಖ್ಯ ಮಂತ್ರಿಗಳಿಂದ ಭಾರತ ಯುವಕ ಸಮಾಜ ಶಿಬಿರದ ಆರಂಭೋತ್ಸವ

ಭಾರತ ಯುವಕ ಸಮಾಜದವರು ಇಲವಾಲದ "ರಾಜ್ಯ ನಿಲಯದಲ್ಲಿ" ಏರ್ಪಡಿಸಿರುವ ಯುವಕರ ಶಿಬಿರದ ಆರಂಭೋತ್ಸವವನ್ನು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನಾಳೆ ಸಂಜೆ ನೆರವೇರಿಸುವರು.

ಟ್ಯುನೀಷಿಯಾದಲ್ಲಿ ಫ್ರೆಂಚರ ಸೇನೆ ಇರಲಾಗದು

ಫ್ರಾನ್ಸಿಗೆ ಪ್ರಧಾನಿ ಹಬೀಬ್ ಬೋರ್ಗಿಬಾರವರ ಎಚ್ಚರಿಕೆ

ಫ್ರೆಂಚರ ಸೈನ್ಯಗಳು ಟ್ಯುನೀಷಿಯಾದಲ್ಲಿರುವವರೆಗೂ ಫ್ರಾನ್ಸಿನೊಡನೆ ಸಂಧಾನವನ್ನು ಮುಂದುವರಿಸುವುದಿಲ್ಲವೆಂದು ಟ್ಯುನೀಷಿಯಾ ಪ್ರಧಾನಿ ಹಬೀಬ್ ಬೋರ್ಗಿಬಾರವರು ತಿಳಿಸಿರುತ್ತಾರೆ. ದೇಶದ ಜನರ ತಾಳ್ಮೆಯನ್ನು ಪರೀಕ್ಷಿಸಲು, ಅವಕಾಶವಾದರೆ, ಪುನಃ ಹೋರಾಟವನ್ನು ನಡೆಸಲಾಗುವುದೆಂದೂ ಅವರು ಎಚ್ಚರಿಸಿರುತ್ತಾರೆ.

ಆಲ್ಜೀರಿಯದ ತಮ್ಮ ಸಹೋದರರು ತಮ್ಮ ಸ್ವಾತಂತ್ರ್ಯಕ್ಕಾಗಿ ನಡೆಸುತ್ತಿರುವ ಹೋರಾಟವನ್ನು ದಮನ ಮಾಡಲು ಬರುವ ಫ್ರೆಂಚ್ ಸೈನ್ಯಗಳಿಗೆ ಟ್ಯುನೀಷಿಯವು ನೆಲೆಯಾಗಲು ತಾವು ಒಪ್ಪುವುದಿಲ್ಲವೆಂದೂ ಪ್ರಧಾನಿಯವರು ಹೇಳುತ್ತಾರೆ.

ಸೈಪ್ರಸ್ ರಾಜ್ಯಾಂಗ ರಚನೆಕಾರರಿಗೆ ಬಹಿಷ್ಕಾರ

ಸೈಪ್ರಸ ದ್ವೀಪದ ರಾಜ್ಯಾಂಗವನ್ನು ರಚಿಸಲು ನೇಮಕವಾಗಿರುವ ಲಾರ್ಡ್ ರಾಡ್‌ಕ್ಲಿಫ್‌ರವರಿಗೆ ದ್ವೀಪದ ೩ ಮುಖ್ಯ ನಗರಗಳ ಮೇಯರುಗಳು ಬಹಿಷ್ಕಾರ ಹಾಕಲು ನಿರ್ಧರಿಸಿರುತ್ತಾರೆ. ದ್ವೀಪದ ಪ್ರಧಾನ ಕ್ರೈಸ್ತ ಗುರು ಆರ್ಚ್‌ಬಿಷಪ್ ಮಕಾರಿಯೋಸ್‌ರವರನ್ನು ದೇಶ ಭ್ರಷ್ಟರನ್ನಾಗಿ ಮಾಡಿರುವುದೇ ಇದಕ್ಕೆ ಕಾರಣ. ಮಕಾರಿಯೋಸ್‌ರವರು ಸಂಧಾನ ನಡೆಸುವುದೇ ಅವರ ಆಂತರಿಕ ಸ್ವಾತಂತ್ರ್ಯವನ್ನು ಒಪ್ಪುವುದಾಗಿ ದ್ವೀಪದ ಗ್ರೀಕ್ ಉಪಾಧ್ಯಾಯರುಗಳು ತಿಳಿಸಿದ್ದಾರೆ. ಅಲ್ಲಿರುವ ಅಲ್ಪ ಸಂಖ್ಯಾತ ತುರ್ಕಿ ಜನರ ನಾಯಕ ಡಾ|| ಫಾದಿಲ್ ಕುಚುಕ್‌ರವರು ಆಂತರಿಕ ಸ್ವಾತಂತ್ರ್ಯ ಕಲ್ಪನೆಯನ್ನು ಸ್ವಾಗತಿಸಿದ್ದಾರೆ.

ಮಹಿಳೆಯ ಮಾನಭಂಗ ಪ್ರಯತ್ನಕ್ಕಾಗಿ ಪಠೇಲನಿಗೆ ಸಜಾ

ಬೆಂಗಳೂರು ನಗರದ ದ್ವಿತೀಯ ನ್ಯಾಯಾಧೀಶ ಶ್ರೀ ಜಯದೇವಪ್ಪನವರು ಮಹಮದ್ ರಾವುತರ್ ಎಂಬ ಯುವಾನಿ ಪಠೇಲನಿಗೆ ಕಳೆದ ಗುರುವಾರ ೬ ತಿಂಗಳ ಕಠಿಣ ಸಜಾ ವಿಧಿಸಿದರು. ಆತನು ಕಳೆದ ಮೇ ತಿಂಗಳು ೧೬ನೇ ತಾರೀಖು ರಾತ್ರಿ ಶ್ರೀಮತಿ ಮಾರಿಸ್ ಎಂಬಾಕೆಯ ಮನೆಗೆ ಪ್ರವೇಶಿಸಿ, ಆಕೆಯ ಮಾನಭಂಗ ಮಾಡಲೆತ್ನಿಸಿದನೆಂದು ಆಪಾದಿಸಲಾಗಿತ್ತು.

ಮೇಲುಕೋಟೆ ಗುಡಿ ಧ್ವಜಸ್ತಂಭದ ಚಿನ್ನದ ಕಳುವು ಪ್ರಯತ್ನ

ಕಳೆದ ಶುಕ್ರವಾರ ರಾತ್ರಿ ೧ ಗಂಟೆ ಸಮಯದಲ್ಲಿ ಇಬ್ಬರು ಕಳ್ಳರು ಮೇಲುಕೋಟೆ ಶ್ರೀ ನಾರಾಯಣಸ್ವಾಮಿ ದೇವಾಲಯದ ಧ್ವಜಸ್ತಂಭದ ಚಿನ್ನದ ತಗಡನ್ನು ಕಿತ್ತುಕೊಳ್ಳುತ್ತಿದ್ದಾಗ ದೇವಸ್ಥಾನದ ಕಾವಲುಗಾರರಾದ ಶ್ರೀ ಕರಗ ಶೇಷಯ್ಯಂಗಾರ್ ಮತ್ತು ಸಿಪಾಯಿಗಳು ಪತ್ತೆ ಮಾಡಿ ಪೋಲೀಸರಿಗೆ ತಿಳಿಸಲಾಗಿ ಅವರನ್ನು ಸ್ಥಳದಲ್ಲೇ ? ದಸ್ತಗಿರಿ ಮಾಡಲಾಯಿತೆಂದು ವರದಿಯಾಗಿದೆ.

ಚಿನ್ನದ ಗಣಿ ಮಜೂರಿ ಏರಿಕೆಗೆ ಕೇಂದ್ರದ ಸೂಚನೆ

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಬಗ್ಗೆ ಮೈಸೂರು ಸರ್ಕಾರದವರು ತೆಗೆದುಕೊಂಡ ಕೇಂದ್ರದವರ ಅನುಮತಿಗಾಗಿ ಕಾಯುತ್ತಿರುವ ಸಮಯದಲ್ಲಿ ಪರಿಹಾರ ಪ್ರಶ್ನೆಯ ಬಗ್ಗೆ ತಿದ್ದುಪಡಿ ಮಾಡಿ ಕಳುಹಿಸುವಂತೆ ಸಂಸ್ಥಾನ ಸರ್ಕಾರಕ್ಕೆ ಕೇಂದ್ರ ಸರ್ಕಾರದವರು ಸೂಚಿಸಿರುವರೆಂದು ವರದಿಯಾಗಿದೆ. ಕೇಂದ್ರ ಪ್ರಕೃತಿ ಸಂಪತ್ತು, ವೈಜ್ಞಾನಿಕ ಸಂಶೋಧನ ಸಚಿವ ಶಾಖೆಯ ಪರಿಹಾರದ ಪ್ರಶ್ನೆಯ ಬಗ್ಗೆ ಮಾಡಿರುವ ಸಲಹೆಯನ್ನು ಮೈಸೂರು ಸರ್ಕಾರವು ಒಪ್ಪಿಕೊಳ್ಳಬೇಕಾಗುವುದೆಂದೂ, ಇದರ ಪ್ರಕಾರ ಕಂಪೆನಿಗಳಿಗೆ ೧.೬ ಕೋಟಿ ರೂ ಪರಿಹಾರವನ್ನು ಸರ್ಕಾರದವರು ಕೊಡಬೇಕಾಗುವುದೆಂದೂ ಗೊತ್ತಾಗಿದೆ. ಅದಾದನಂತರ ರಾಷ್ಟ್ರಾಧ್ಯಕ್ಷರು ಮಸೂದೆಗೆ ಅನುಮತಿಯೀಯುವ ಪ್ರಶ್ನೆ ಬರಲಿದೆ.

ಜರ್ಮನಿಯಲ್ಲಿ ೬೦೦ ಭಾರತೀಯ ವಿದ್ಯಾರ್ಥಿಗಳಿಗೆ ತಾಂತ್ರಿಕ ಶಿಕ್ಷಣ

ಪಶ್ಚಿಮ ಜರ್ಮನಿಗೆ ಸೇರಿರುವ ವೆಸ್ಟ್ ಫಾಲಿಯದ ಸರ್ಕಾರದವರು ತಮ್ಮ ತಾಂತ್ರಿಕ ಶಿಕ್ಷಣಾಲಯಗಳು ಮತ್ತು ಕೈಗಾರಿಕಾ ಕೇಂದ್ರಗಳಲ್ಲಿ ೬೦೦ ಮಂದಿ ಭಾರತೀಯ ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡಲು ಅವಕಾಶ ಕಲ್ಪಿಸುವುದಾಗಿ ತಿಳಿಸಿರುತ್ತಾರೆ. ಈ ಶಿಕ್ಷಣದ ವೆಚ್ಚವನ್ನು ಅಲ್ಲಿನ ಸರ್ಕಾರದವರೇ ವಹಿಸುವರು. ಈಗಾಗಲೇ ಪಶ್ಚಿಮ ಜರ್ಮನಿಯ ೧೧೦ ವಿದ್ಯಾರ್ಥಿ ವೇತನಗಳನ್ನು ಭಾರತೀಯರಿಗೆ ಕೊಡಲು ಮುಂದೆ ಬಂದಿದೆ.

ಶಂಕರಶಾಸ್ತ್ರಿಗಳವರ ನಿಧನಕ್ಕಾಗಿ ಸಂತಾಪ ಸೂಚನೆ

ನಗರದ ಮಹಿಳಾ ಅಸೋಸಿಯೇಷನ್ನಿನವರು ನೆನ್ನೆ ಶ್ರೀ ಎಸ್ ಎಂ ಬಸವರಾಜ್‌ರವರ ಅಧ್ಯಕ್ಷತೆಯಲ್ಲಿ ಸೇರಿ ಆಸ್ಥಾನ ಮಹಾ-ವಿದ್ವಾನ್ ಶ್ರೀ ಶಂಕರಶಾಸ್ತ್ರಿಯವರ ನಿಧನಕ್ಕಾಗಿ ಸಂತಾಪ ವ್ಯಕ್ತಪಡಿಸಿ ದಿವಂಗತರ ಆತ್ಮಕ್ಕೆ ಶಾಂತಿ ಕೋರುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಿದರು. ಮೃತರ ಗೌರವಾರ್ಥವಾಗಿ ಒಂದು ನಿಮಿಷ ಮೌನವನ್ನು ಆಚರಿಸಲಾಯಿತು.

ಬಸ್ಸಿನಲ್ಲಿ ಪ್ರಸವ

ಬೆಂಗಳೂರಿನ ನಗರ ಸರ್ವಿಸ್ಸಿನ ಬಸ್ಸೊಂದರಲ್ಲಿ ರಾಣಿ ಎಂಬ ಮಧ್ಯ ವಯಸ್ಸಿನ ಮಹಿಳೆಯು ಮೊನ್ನೆ ಗಂಡು ಶಿಶುವೊಂದನ್ನು ಪ್ರಸವಿಸಿದಳು. ಬಸ್ಸಿನ ಕಂಡಕ್ಟರಾಗಿದ್ದ ಶ್ರೀಮತಿ ಶಾರದಾಬಾಯಿಯವರು ಮತ್ತು ಒಬ್ಬ ಆಸ್ಪತ್ರೆ ದಾದಿಯು ಆಕೆಗೆ ಸಹಾಯ ಮಾಡಿದರು. ನಂತರ ಆಕೆಯನ್ನು ಆಸ್ಪತ್ರೆಗೆ ಸೇರಿಸಲಾಯಿತು.

ಸಂಸ್ಥಾನದಲ್ಲಿ ಮೂರು ಹೊಸ ಚಿನ್ನದ ಗಣಿಗಳು

ಮೈಸೂರು ಸಂಸ್ಥಾನದಲ್ಲಿ ದ್ವಿತೀಯ ಯೋಜನೆ ಅವಧಿಯಲ್ಲಿ ೩ ಹೊಸ ಚಿನ್ನದ ಗಣಿಗಳನ್ನು ಸ್ಥಾಪಿಸಲು ಭಾರತ ಸರ್ಕಾರದವರು ಅನುಮತಿಯನ್ನೀಯುವರು. ಮೂರನ್ನೂ ಎಲ್ಲಿ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸ್ಥಾಪಿಸಲಾಗುವುದೆಂದು ಹೇಳಲಾಗಿದೆ.

ಪೂರ್ವ ಮತ್ತು ಪಶ್ಚಿಮ ಜರ್ಮನಿ ಐಕ್ಯದ ಪ್ರಶ್ನೆ

ಭಾರತ ಮಧ್ಯಸ್ಥಿಕೆ ವಹಿಸುವುದಿಲ್ಲ

ಪಶ್ಚಿಮ ಜರ್ಮನಿ ಸರ್ಕಾರವು ಕಳಿವರೆ ಪೂರ್ವ ಮತ್ತು ಪಶ್ಚಿಮ ಜರ್ಮನಿಯ ಐಕ್ಯತೆಗಾಗಿ ಚತುರ್ಮಹಾರಾಷ್ಟ್ರಗಳ ಮೇಲೆ ಭಾರತವು ತನ್ನ ಪ್ರಭಾವ ಬೀರುವುದೇ ಎಂಬ ಪ್ರಶ್ನೆ ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಲಾಗಿ ನೆಹರೂರವರು ಈ ಬಗ್ಗೆ ಭಾರತಕ್ಕಾಗಲೀ ಅಥವಾ ತಮಗಾಗಲೀ ಆಸಕ್ತಿ ತೋರಬೇಕೆಂಬುದರಲ್ಲಿ ಕಾರಣವೇನೂ ಇಲ್ಲವೆಂದು ತಿಳಿಸಿದರು. ಪೂರ್ವ ಜರ್ಮನಿಗೆ ಭಾರತವು ಮನ್ನಣೆಯಿತ್ತು ರಾಜತಾಂತ್ರಿಕ ಸಂಬಂಧವನ್ನು ಹೊಂದಿಲ್ಲವೆಂದೂ, ಮುಂದೆ ಏನಾಗುವುದೆಂಬುದನ್ನು ತಿಳಿಸಲು ಸಾಧ್ಯವಿಲ್ಲವೆಂದೂ ನೆಹರೂರವರು ಹೇಳಿದರು. ರಾಜತಾಂತ್ರಿಕ ಸಂಬಂಧವನ್ನು ಇಟ್ಟುಕೊಳ್ಳಲು ಮತ್ತೊಂದು ರಾಷ್ಟ್ರ ಸರ್ಕಾರದ ಅಸ್ತಿತ್ವ, ಶಕ್ತಿ ಮತ್ತು ಚಿರಕಾಲ ಇರುವ ಸಂದರ್ಭಗಳನ್ನು ನೋಡಬೇಕಾಗುವುದೆಂದು ಅವರು ನುಡಿದರು.

ಹಾರುತ್ತಿದ್ದ ವಿಮಾನದಲ್ಲಿ ವಿದ್ಯಾರ್ಥಿಗಳ ಗಲಾಟೆ

ಹಂಗೆರಿಯ ವಿಮಾನವೊಂದು ರಾಜಧಾನಿ ಬುಡಾಪೆಸ್ಟಿನಿಂದ ಬೇರೆ ಊರಿಗೆ ಹೊರಟಿದ್ದಾಗ ಅದರಲ್ಲಿದ್ದ ವಿದ್ಯಾರ್ಥಿಗಳು ಮಧ್ಯ ಮಾರ್ಗದಲ್ಲಿ ಚಾಲಕರನ್ನು ಬೆದರಿಸಿ ಪಶ್ಚಿಮ ಜರ್ಮನಿಯ ಒಂದು ಊರಿನಲ್ಲಿ ವಿಮಾನವು ಬಲವಂತವಾಗಿ ಇಳಿಯುವಂತೆ ಮಾಡಿದರು. ಗಲಾಟೆಯಲ್ಲಿ ೧೩ ಮಂದಿ ಗಾಯಗೊಂಡರೆಂದು ಹೇಳಲಾಗಿದೆ. ಎಲ್ಲರನ್ನು ಜರ್ಮನಿಯ ಆಸ್ಪತ್ರೆಗೆ ಸೇರಿಸಲಾಗಿದೆ. ಏಳು ಜನ ವಿದ್ಯಾರ್ಥಿಗಳು ಈಗ ಜರ್ಮನಿಯಲ್ಲಿ ಆಶ್ರಯವನ್ನು ಕೋರಿದ್ದಾರೆ.

ಅಂಬರ್ ಚರಖಾ ಯೋಜನೆಗೆ ಈ ವರ್ಷ ೩। ಕೋಟಿ ರೂ.

ಪ್ರಸಕ್ತ ಸಾಲಿನಲ್ಲಿ ಅಂಬರ್ ಚರಖಾ ಯೋಜನೆಯನ್ನು ಕಾರ್ಯಗತಮಾಡುವುದಕ್ಕಾಗಿ ಭಾರತ ಸರ್ಕಾರದವರು ೩.೨೨ ಕೋಟಿ ರೂ ಗಳನ್ನು ಮಂಜೂರು ಮಾಡಿರುತ್ತಾರೆ. ಚರಖಾ ಮತ್ತು ಬಟ್ಟೆ ತಯಾರಿಗಾಗಿ ೧ ಕೋಟಿ ರೂ. ಸಾಲ ಮತ್ತು ಹತ್ತಿಯನ್ನು ಕೊಳ್ಳಲು ೪೦ ಲಕ್ಷ ರೂ ಸಾಲವೂ ಅದರಲ್ಲಿ ಸೇರಿದೆ. ೭೫ ಸಾವಿರ ಚರಖಗಳನ್ನು ತಯಾರಿಸಲಾಗುವುದು. ೧೫ ವಿದ್ಯಾಲಯಗಳನ್ನೂ, ೧೦೦ ಉತ್ಪತ್ತಿ ಮತ್ತು ಶಿಕ್ಷಣ ಕೇಂದ್ರಗಳನ್ನೂ ತೆರೆಯಲಾಗುವುದು. ೧೦೦ ಹೆಚ್ಚಿನ ಉತ್ಪತ್ತಿ ಮತ್ತು ಶಿಕ್ಷಣ ಕೇಂದ್ರಗಳನ್ನು ತೆರೆಯಲು ೧೬,೭೫,೦೦೦ ರೂ ಗ್ರಾಂಟು ಕೊಡಲಾಗುವುದು.

ಆಗಮಶಾಸ್ತ್ರಯ ಮಹಾ ಮಂಡಲದ ಸಮ್ಮೇಳನ

ಸಂಸ್ಥಾನದ ಆಗಮಶಾಸ್ತ್ರಯ ಮಹಾಮಂಡಲದ ಸಮ್ಮೇಳನವು ಬರುವ ತಿಂಗಳು ೬, ೭ ಮತ್ತು ೮ನೇ ತಾರೀಕುಗಳಲ್ಲಿ ಬೆಂಗಳೂರಿನಲ್ಲಿ ಸೇರುವುದು. ಶ್ರೀ ಅವನಿ ಶೃಂಗೇರಿ ಜಗದ್ಗುರು ಶ್ರೀ ಶಂಕರಾಚಾರ್ಯ ಶ್ರೀಮದಭಿನವ ವಿದ್ಯಾರಣ್ಯ ಭಾರತೀ ಸ್ವಾಮಿಗಳವರು ಭಾಗವಹಿಸುವರು. ಪ್ರತಿನಿಧಿಯಾಗಿ ಬರುವವರಿಗೆ ಉಚಿತ ಭೋಜನದ ವ್ಯವಸ್ಥೆ ಮಾಡಲಾಗುವುದು. ಚಂದಾ ಹಣ ೫ ರೂ ಮತ್ತು ಪ್ರಾತಿನಿಧ್ಯ ಶುಲ್ಕ ೧ ರೂ ಸೇರಿ ಮೂರು ರೂ ಗಳನ್ನು ಈ ತಿಂಗಳು ೩೦ ರೊಳಗೆ ಮಂಡಲದ ಕೋಶಾಧಿಕಾರಿಗಳಿಗೆ ನೇರವಾಗಿ ಕಳುಹಬೇಕು.

ತಿರುಚೆಂದೂರು ತೇರಿಗೆ ಬೆಂಕಿ

ತಿರುಚೆಂದೂರಿನ ಸುಬ್ರಹ್ಮಣ್ಯಸ್ವಾಮಿ ದೇವಾಲಯಕ್ಕೆ ಸೇರಿದ ೬೦ ಸಹಸ್ರ ರೂ ಬೆಲೆಯ ತೇರಿಗೆ ಕಳೆದ ಅನೇಕ ತಾರೀಕು ರಾತ್ರಿ ಬೆಂಕಿ ಹತ್ತಿಕೊಂಡು, ಒಬ್ಬ ವೃದ್ಧ ಮಹಿಳೆಯು ಅದನ್ನು ಕಂಡು ಕೂಗಿಕೊಳ್ಳಲಾಗಿ ನೆರೆಹೊರೆಯವರೂ, ಎರಡು ಫೈರ್ ಇಂಜನ್ನುಗಳೂ ಸೇರಿ ಬೆಂಕಿಯನ್ನು ಆರಿಸಿದುವೆಂದು ವರದಿಯಾಗಿದೆ. ಬೆಂಕಿ ಹೇಗೆ ಉಂಟಾಯಿತೆಂಬುದು ಗೊತ್ತಾಗಿಲ್ಲ. ಅದೇ ದಿನ ಬೆಳಗಿನ ಝಾವ ಮತ್ತೊಮ್ಮೆ ಬೇರೊಂದು ಕಡೆಯೂ ಬೆಂಕಿ ಕಾಣಿಸಿಕೊಂಡು ಅದನ್ನು ಆರಿಸಲಾಯಿತು. ತೇರಿನ ಕೆಳಭಾಗದ ಅಲಂಕಾರಗಳೂ, ಹೊರಭಾಗಗಳೂ, ಪೂರ್ತಿ ಸುಟ್ಟುಹೋದುವು.

ಬಿಕಿನಿಯಲ್ಲಿ ಸೂಪರ್ ಬಾಂಬಿನ ಆಸ್ಫೋಟನೆ

ಕಳೆದ ಬುಧವಾರ ಬಿಕಿನಿ ಪ್ರದೇಶದಲ್ಲಿ ಅಣು ಆಸ್ಫೋಟನೆಯು ಆಯಿತೆಂದೂ, ಅದು ಸೂಪರ್ ಬಾಂಬೆಂದೂ ಜಪಾನಿನ ಹವಾಮಾನ ತಜ್ಞರು ತಿಳಿಸಿರುತ್ತಾರೆ. ಕಳೆದ ಮೇ ೨೧ ರಲ್ಲಿ ಆದ ಜಲಜನಕ ಬಾಂಬಿನ ಶಕ್ತಿಗಿಂತ ಇದರ ಶಕ್ತಿಯು ದ್ವಿಗುಣವೆಂದು ಅಭಿಪ್ರಾಯಪಡಲಾಗಿದೆ.

ಪ್ಲಾಸ್ಟಿಕ್ಕಿನಲ್ಲಿ ನಲ್ಲಿ ನೀರಿನ ಕೊಳಾಯಿ

ಬಿತ್ತನ ಕೊಳಾಯಿಗಳ ಬದಲು ನಲ್ಲಿ ನೀರು ಮತ್ತು ಒಳಚರಂಡಿ ವ್ಯವಸ್ಥೆಗೆ ಪ್ಲಾಸ್ಟಿಕ್ ಕೊಳಾಯಿಗಳನ್ನು ಉಪಯೋಗಿಸುವ ವಿಷಯವನ್ನು ಆಲೋಚಿಸಲಾಗುವುದೆಂದು ಕೇಂದ್ರ ಆರೋಗ್ಯ ಮಂತ್ರಿ ಅಮೃತಕೌರ್‌ರವರು ಹೇಳಿರುತ್ತಾರೆ. ಬಿತ್ತಗಿಂತಲೂ ಹೆಚ್ಚು ಬಾಳಿಕೆ ಬರದಿದ್ದರೂ ಪ್ಲಾಸ್ಟಿಕ್ ಕೊಳಾಯಿಗಳು ಅಗ್ಗವೆಂದೂ ಬಿತ್ತಗೆ ಹಿಡಿಯುವ ತುಕ್ಕು ಪ್ಲಾಸ್ಟಿಕ್ಕಿಗೆ ಹಿಡಿಯುವುದಿಲ್ಲವೆಂದೂ ಅವರು ತಿಳಿಸಿರುವರು.

ಭಾವಸಾರ ಕ್ಷತ್ರಿಯ ಸಮ್ಮೇಳನದ ಸ್ವಾಗತ ಸಮಿತಿ

ಅಖಿಲ ಭಾರತ ಭಾವಸಾರ ಕ್ಷತ್ರಿಯ ಮಹಾಸಭೆಯ ೧೫ನೇ ಅಧಿವೇಶನದ ಸ್ವಾಗತ ಸಮಿತಿಗೆ ಕೆಳಗೆ ಕಂಡವರನ್ನು ಚುನಾಯಿಸಲಾಗಿದೆ. ಶ್ರೀಯುತ ಎಸ್. ರಾಮಚಂದ್ರರಾವ್-ಅಧ್ಯಕ್ಷರು, ಶ್ರೀ ಎಸ್. ಎಸ್. ರಾಮರಾವ್, ಯು. ವೆಂಕಟರಾವ್, ... ಲಕ್ಷ್ಮಣರಾವ್ ತೇಲ್ಕರ್‌ರವರುಗಳು ಉಪಾಧ್ಯಕ್ಷರುಗಳು, ಶ್ರೀಗಳಾದ ಆರ್. ಎಸ್. ರಾಮರಾವ್, ಎಂ. ಪರಮಗಿರಿರಾವ್ ಮತ್ತು ಟಿ. ಕೇಶೋಜಿರಾವ್ ದಾಮೋದರ್‌ರವರು ಕಾರ್ಯದರ್ಶಿಗಳು, ಶ್ರೀಗಳಾದ ಎ. ಎಸ್. ಅಂಬರೀಷ್ ಮತ್ತು ಎಸ್. ರಾಜಾರಾಮರಾಯರು ಖಜಾಂಚಿಗಳಾಗಿರುವರು.

ಕೃಷ್ಣರಾಜಸಾಗರದಲ್ಲಿ ಮೀನು ಸಾಕುವ ಕೇಂದ್ರ

ದ್ವಿತೀಯ ಪಂಚ ವಾರ್ಷಿಕ ಯೋಜನೆಯ ಅವಧಿಯಲ್ಲಿ ಕೃಷ್ಣರಾಜಸಾಗರದಲ್ಲಿ ಮೀನು ಸಾಕುವ ಕೇಂದ್ರವೊಂದನ್ನು ಏರ್ಪಡಿಸಲಾಗುವುದೆಂದು ವರದಿಯಾಗಿದೆ.

ಹಾಸಿಗೆ - ದಿಂಬು

ಮಿತದರದಲ್ಲಿ ಹತ್ತಿ ಬಿಡಿಸಿ ತಯಾರು ಮಾಡುತ್ತೇವೆ

. ಬಾಪುಸಾಬ್ ಕಂಪೆನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

Edited, Printed and Published by
N. R. Natarajan at Sadhvi Press
D. Subbiah Road, Mysore

ಪರೀಕ್ಷೆಯಲ್ಲಿ ಕಾಪಿ ಮಾಡಿದ ೨೩೮ ವಿದ್ಯಾರ್ಥಿಗಳಿಗೆ ಶಿಕ್ಷೆ

ಆಂಧ್ರದಲ್ಲಿ ಈ ವರ್ಷ ನಡೆದ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ ವಿಶಾಖಪಟ್ಟಣ, ಕೃಷ್ಣಾ, ಗುಂಟೂರು ಮತ್ತು ಕಡಪಾ ಜಿಲ್ಲೆಗಳ ಒಟ್ಟು ೬೧ ಪ್ರೌಢ ಶಾಲೆಗಳ ೧೬೮೯ ಮಂದಿ ವಿದ್ಯಾರ್ಥಿಗಳ ಪೈಕಿ ೨೩೮ ಜನರು ಸಾಮೂಹಿಕ ಕಾಪಿ ಮಾಡಿದುದು ರುಜುವಾತಾಗಿ ಅವರುಗಳ ಗೆ ಶಿಕ್ಷೆ ವಿಧಿಸಲಾಗಿದೆ. ೧೨೫೧ ವಿದ್ಯಾರ್ಥಿಗಳು ನಿರ್ದೋಷಿಗಳೆಂದು ತೀರ್ಮಾನಿಸಲಾಗಿದೆ. ಆ ಪೈಕಿ ೮೭೭ ಮಂದಿ ಕಾಲೇಜು ಶಿಕ್ಷಣಕ್ಕೆ ಅರ್ಹರಾಗಿರುವರು. ಉಳಿದವರು ಫೇಲ್ ಆಗಿದ್ದಾರೆ. ಕಾಲೇಜುಗಳಿಗೆ ಸೇರಲಿರುವವರಿಗೆ ಈಗ ಪ್ರವೇಶಾವಕಾಶ ದೊರಕಿಸುವುದೊಂದು ಸಮಸ್ಯೆಯಾಗಿ, ವಿದ್ಯಾ ಇಲಾಖಾ ಡೈರೆಕ್ಟರಿಗೆ ಸೂಕ್ತ ಏರ್ಪಾಡು ಮಾಡುವಂತೆ ಸೂಚಿಸಲಾಗಿದೆ.

ಅಮೆರಿಕದಲ್ಲಿ ಸಧ್ಯಕ್ಕೆ ಸೈನ್ಯದ ಖೋತಾ ಇಲ್ಲ

ಸಧ್ಯದಲ್ಲೇ ಅಮೆರಿಕದ ಸೈನ್ಯದಲ್ಲಿ ಒಬ್ಬನನ್ನಾದರೂ ಖೋತಾ ಮಾಡುವ ಆಲೋಚನೆಯಿಲ್ಲವೆಂದು ಅಮೆರಿಕದ ಸೈನ್ಯ ಮಂತ್ರಿ ವಿಲ್ಬರ್ ಬ್ರೂಕರ್‌ರವರು ತಿಳಿಸಿರುತ್ತಾರೆ. ಹೊಸ ಶಸ್ತ್ರಗಳನ್ನು ಬಳಕೆಗೆ ತಂದನಂತರ ಸೈನ್ಯಕ್ಕೆ ಬೇಕಾಗುವ ಜನ ಶಕ್ತಿಯು ಇಳಿಯಬೇಕಾಗುವುದೆಂದು ಅಲ್ಲಿನ ಭೂ, ವಿಮಾನ ಮತ್ತು ನೌಕಾಬಲಗಳ ಪ್ರಧಾನಾಧಿಕಾರಿ ಅಡ್ಮಿರಲ್ ರಾಡ್‌ಫರ್ಡರು ತಿಳಿಸಿದ್ದರು. ೮೫ ಸಾವಿರ ಜನರ ಖೋತಾಕ್ಕೆ ತಮ್ಮ ಆಕ್ಷೇಪಣೆಯೇನೂ ಇಲ್ಲವೆಂದು ಬ್ರೂಕರ್‌ರವರು ಹೇಳಿರುತ್ತಾರೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಕ್ಲಾರಿಯೊನೆಟ್. ೭-೧೫ ಕೆ. ಎಸ್. ವಿಶಾಲಾಕ್ಷಿ ಮತ್ತು ಕೆ. ಎಸ್. ವಿಜಯಲಕ್ಷ್ಮಿ-ಸಂಗೀತ. ೭-೪೦ ಗಾನವಿಹಾರ. ೮-೧೫ ರಿಕಾರ್ಡು. ಮಧ್ಯಾಹ್ನ ೧೨ ಎಂ. ಎಸ್. ಫಟ್ಟೆಣ್ಣ-ಪಿಟೀಲು. ೧೨-೩೦ ರಿಕಾರ್ಡ್ ಸಂಗೀತ. ೧೨-೪೫ ವ್ಯವಸಾಯಗಾರರ-ಮಹಿಳೆಯರ ಕಾರ್ಯಕ್ರಮ. ೧-೩೦ ಕ್ಲಾರಿಯೊನೆಟ್. ೨-೧೫ ಪ್ರೌಢ ಶಾಲೆಗಳಿಗಾಗಿ. ಸಂಜೆ ೫-೪೦ ಮತ್ತು ೬-೧೫ ಬಿ. ವರದರಾಜಯ್ಯಂಗಾರ್-ಸಂಗೀತ. ೬-೧೫ ಎಂ. ಹರಿನಾರಾಯಣ್-ಕಾವ್ಯವಾಚನ. ೭-೪೦ ವಿಶ್ವವಾರ್ತಾವಲೋಕನ. ೮ ದಕ್ಷಿಣ ಭಾರತದ ಸಾಹಿತ್ಯ ಕವಿತೆಗಳು. ೮-೩೦ ಸಂಸಾರ ಸವಿನಾಕ್ಷಿ. ೧೦ ಚಿತ್ರ ಸಂಗೀತ. ೧೦-೧೫ ಜನಪದ ಗೀತೆ.

ನಿಯೋ ಗ್ಯಾರೇಜ್

ಇರ್‌ವಿನ್ ರೋಡ್, ಮೈಸೂರು

ಪ್ರಕಟಣೆ

1-7-56 ರಿಂದ ನಮ್ಮ ಗ್ಯಾರೇಜಿನ ಫೋರ್‌ಮನ್ ಆಗಿ, ಬೊಂಬಾಯಿಯಲ್ಲಿ ಖ್ಯಾತಿ ಪಡೆದಿರುವ ಮತ್ತು ಡೀಸಲ್ ರಿಪೇರಿಯಲ್ಲಿ ತುಂಬಾ ಅನುಭವವುಳ್ಳ

ಶ್ರೀ|| ಸಿ. ಎ. ವಾಟ್ಕಿನ್‌ರವರನ್ನು

ನಿಯಮಿಸಿದ್ದೇವೆ

ಎಲ್ಲಾ ತರಹ ಡೀಸಲ್ ಇಂಜನ್ ಮತ್ತು ಫ್ಯೂಯಲ್ ಪಂಪ್‌ಗಳ ಸಕಲ ರಿಪೇರಿಗಳನ್ನೂ ಖಾತ್ರಿಯಾಗಿ ನಿಮಗೆ ಸಮರ್ಪಕವಾಗುವ ರೀತಿಯಲ್ಲಿ ಮಾಡುತ್ತೇವೆ

ಇಂದೇ ಪರೀಕ್ಷಿಸಿ ನೋಡಿ

ಬಾನ್ ನಗರದ ಬೀದಿಗೆ ಗಾಂಧಿಜಿ ಹೆಸರು

ಭಾರತ ಮತ್ತು ಜರ್ಮನಿಯ ಸ್ನೇಹವನ್ನು ತೋರ್ಪಡಿಸಲು ಪಶ್ಚಿಮ ಜರ್ಮನಿಯ ರಾಜಧಾನಿ ಬಾನ್ ನಗರದಲ್ಲಿರುವ ಒಂದು ಬೀದಿಗೆ ಗಾಂಧಿಜಿಯವರ ಹೆಸರನ್ನು ಇಡಲು ಅಲ್ಲಿನ ಮೇಯರರು ತಮ್ಮ ಕೌನ್ಸಿಲಿನಲ್ಲಿ ಸೂಚನೆಯೊಂದನ್ನು ತಂದಿರುತ್ತಾರೆ. ಅದನ್ನು ಸರ್ವಾನುಮತದಿಂದ ಅಂಗೀಕರಿಸುವ ಸಂಭವವಿದೆ.

ಮೈಸೂರು ಮುನ್ಸಿಪಲ್ ಕ್ಲಬ್ಬಿನ ನೂತನ ಕಛೇರಿ

ನಗರದ ಮುನ್ಸಿಪಲ್ ಕ್ಲಬ್ಬಿನವರು ಸಂತೆಪೇಟೆಯಲ್ಲಿರುವ ಮೋತಿಖಾನೆ ಕಟ್ಟಡದಲ್ಲಿ ತಮ್ಮ ನೂತನ ಕಛೇರಿಯನ್ನು ತೆರೆದಿರುವರು. ಅದರ ಆರಂಭೋತ್ಸವವನ್ನು ಕ್ಲಬ್ಬಿನ ಅಧ್ಯಕ್ಷರಾದ ಸರ್ದಾರ್ ಕೆ. ಬಸವರಾಜ ಅರಸಿನವರು ಕಳೆದ ಶುಕ್ರವಾರ ನೆರವೇರಿಸಿದರು.

For the installation of

RECORDS, MIKE & LOUDSPEAKERS

at your doors

Please contact

H. S. RAMACHANDRAN'S

EVERGREEN ACOUSTICS

"Treasure House of Records"

28 Sonar Street,

MYSORE

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತರಾಗಿರುವ

ನವರತ್ನ—ಕಲ್ಪ

ರಿಸ್ಕ್ ವನ್ನು ಕಂಡುಹಿಡಿದಿರುವ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು . ಫೋನ್ ನಂ. 590

—: ಭೇಟಿಯ ಕಾಲ :—

ಬೆಳಗ್ಗೆ 7-30 ರಿಂದ 12 30 ಮತ್ತು

ಮಧ್ಯಾಹ್ನ 4 ರಿಂದ 7-30

ಇವರು ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು

ವಿಮಾನದಲ್ಲಿ ಸಂಚರಿಸುವರು

ನವರತ್ನ—ಕಲ್ಪ

ಉಪಯೋಗಿಸಿ

ಇದು ಪಿತ್ತ, ಕೆಮ್ಮು, ಮೂಲವ್ಯಾಧಿ, ಉಬ್ಬಸ, ಕಫ, ಗೊನೋರಿಯ, ಸೀಳು, ಪಕ್ಷವಾತ ಮತ್ತು ಪ್ರತಿಯೊಂದು ಮುಂತಾದ 9 ಅಮೂಲ್ಯ ಪರಮಾಣು ಸಂಯೋಗ. ಇದರಿಂದ ಪುರುಷರ ದೌರ್ಬಲ್ಯ, ಮೂತ್ರ ಸಂಬಂಧವಾದ ವ್ಯಾಧಿಗಳು, ಬಿಳಿ ಸೆರಗು, ಮೂರ್ಛೆ ವ್ಯಾಧಿ, ಪಾಂಡು, ಬಹುಮೂತ್ರ, ಎಲ್ಲಾ ತರಹ ನೋವುಗಳು, ನರ ದೌರ್ಬಲ್ಯ ಮುಂತಾದ ರೋಗಗಳು ಸಂಪೂರ್ಣವಾಗಿ ಗುಣಹೊಂದುವುವು. ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಇದೊಂದೇ

NAVRATNA KALPA PHARMACY,

JULLUNDUR CITY (India)

Grams : NAVRATNA

12-7-1956ನೇ · ಗುರುವಾರದಿಂದ · ಆಮೋಘ ಪ್ರಾರಂಭ

ಹೊಸ ಮ್ಯಾನೇಜ್‌ಮೆಂಟ್

ವೆಲ್ ಕಮ್ ಕಾಫಿ ಕ್ಲಬ್

(ಪ್ರಭಾ ಟಾಕೀಸ್ ಎದುರು) ಮೈಸೂರು

ಮೈಸೂರಿನಲ್ಲಿ ಪ್ರಖ್ಯಾತಿ ಪಡೆದಿರುವ ಹಳೇ ಅಗ್ರಹಾರದ ಶ್ರೀ ಸುಬ್ಬುರವರ ನೇತೃತ್ವದಲ್ಲಿ ಮಾಡಲ್ಪಟ್ಟ ಶುಚಿರುಚಿಕರವಾದ, ತುಪ್ಪದಿಂದಲೇ ತಯಾರಾದ ಕೇಸರಿಬಾತ್, ಸಬ್ ದೋಸೆ, 'ಎ' ಒನ್ ಕಾಫಿ ಮತ್ತು ಇತರ ಸಿಹಿ ಮತ್ತು ಖಾರ ತಿಂಡಿ ರುಚಿಗೆ ವೆಲ್‌ಕಮ್ ಕಾಫಿ ಕ್ಲಬ್ಬಿಗೆ ದಯಮಾಡಿ ಭೇಟಿ ಕೊಡಿ.

ಡಿ. ರಾಮಪ್ರಸಾದ್ ಶರ್ಮ, ಪ್ರೊಪ್ರೈಟರ್

ಮೈಸೂರು ಸಿಟಿ ಮರದ ಗಾಣದ ಎಣ್ಣೆ ಕೈಗಾರಿಕಾಗಾರರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ನಾರಾಯಣವಿಲಾಸ ರೋಡು (ಮಾಧವರಾವ್ ಸರ್ಕಲ್ ಬಳಿ)

ರುಚಿಕರವೂ, ಆರೋಗ್ಯಕರವೂ, ಸುವಾಸನೆಯಿಂದ ಕೂಡಿದುದಾಗಿಯೂ ಇರುವ ಗಾಣದ ಎಣ್ಣೆಗಳು ನಮ್ಮಲ್ಲಿ ದೊರೆಯುತ್ತವೆ. ಇಂದಿನಿಂದ ಕಡಲೆಕಾಯಿ ಎಣ್ಣೆಯ ದರವನ್ನು ಕಡಿಮೆ ಮಾಡಿರುವುದನ್ನು ಸಂತೋಷದಿಂದ ತಿಳಿಸುತ್ತೇವೆ. ಮತ್ತು ಕರೆಯುವ ಹಸುಗಳಿಗೂ, ದುಡಿಯುವ ಎತ್ತುಗಳಿಗೂ ಪುಷ್ಟಿದಾಯಕವಾದ ಗಾಣದಿಂದ ತಯಾರಾದ ಕಡಲೆಕಾಯಿ ಹಿಂಡಿಯು ಈ ದಿನದಿಂದ ಕಡಿಮೆ ದರಗಳಿಗೆ ಮಾರಾಟಕ್ಕೆ ಸಿದ್ಧವಾಗಿದೆ.

	ದರ	ರಿಯಾಯಿತಿ	ಈಗ ಕೊಡಬೇಕಾದುದು
ಕಡಲೇಕಾಯಿ ಎಣ್ಣೆ ಏಸೆ 1ಕ್ಕೆ	2 2 6	0 1 6	2 1 0
ಹುಚ್ಚೆಳ್ಳೆಣ್ಣೆ ,,	2 7 6	0 1 6	2 6 0
ಒಳ್ಳೆಣ್ಣೆ ,,	3 7 0	0 1 6	3 5 6

ಕಡಲೆಕಾಯಿ ಹಿಂಡಿ ಮಣ 1ಕ್ಕೆ 3 0 0

ಸಿ. ಸೂ. ಅರ್ಧ ವೀಸೆ ಎಣ್ಣೆಗೆ ಕಡಿಮೆ ತೆಗೆದುಕೊಳ್ಳುವವರಿಗೆ ರಿಯಾಯಿತಿ ದೊರೆಯುವುದಿಲ್ಲ

ರಿಜಿಸ್ಟರ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : TUESDAY 17—7—1956 ಮೈಸೂರು : ಮಂಗಳವಾರ ೧೭—೭—೧೯೫೬ [ಸಂಚಿಕೆ : ೩೦೬

ಹೈಕಮಾಂಡ್ ತೀರ್ಪಿನಂತೆ ಮುಖ್ಯಮಂತ್ರಿ ನಡೆಯುವರು

ಬೊಂಬಾಯಿಯಲ್ಲಿ ಐದು ವರ್ಷ ಕೇಂದ್ರದ ಆಡಳಿತ

ಸಂಸ್ಥಾನ ಪುನರ್ವಿಂಗಡಣೆ ಮಸೂದೆ ಬಗ್ಗೆ ಜಂಟಿ ಸಮಿತಿಯ ಶಿಫಾರಸು

ಸಂಸ್ಥಾನ ಪುನರ್ವಿಂಗಡಣೆ ಮಸೂದೆಯನ್ನು ಪರಿಶೀಲಿಸಿ ಪಾರ್ಲಿಮೆಂಟಿನ ಜಂಟಿ ಸಮಿತಿಯು ಒಪ್ಪಿಸಿದ ವರದಿಯನ್ನು ಕೇಂದ್ರ ಗೃಹ ಮಂತ್ರಿ ಪಂಡಿತ ಗೋವಿಂದವಲ್ಲಭ ಪಂತರು ನೆನ್ನೆ ಲೋಕ ಸಭೆಯಲ್ಲಿ ಮಂಡಿಸಿದರು. ಮಸೂದೆಯಲ್ಲಿ ಅಡಕವಾಗಿರುವ ಮುಖ್ಯ ಶಿಫಾರಸುಗಳು ಮತ್ತು ರಾಜ್ಯಾಂಗದ ತಿದ್ದುಪಡಿ ಮಸೂದೆ ಶಿಫಾರಸುಗಳನ್ನು ವರದಿಯಲ್ಲಿ ಬದಲಾಯಿಸದೆ ಹಾಗೆಯೇ ಉಳಿಸಲಾಗಿದೆ.

ಬೊಂಬಾಯಿ ನಗರದ ಆಡಳಿತ ವಿಷಯವಾಗಿ ಸಮಿತಿಯು ವಿವರಣಾ ಪತ್ರವನ್ನು ಬರೆದು, ಐದು ವರ್ಷಗಳನಂತರ ಈ ವಿಚಾರವನ್ನು ಪುನರ್ ಪರಿಶೀಲನೆ ಮಾಡಬಹುದೆಂದು ನೆಹರೂರವರು ಹೇಳಿರುವುದನ್ನು ಉಲ್ಲೇಖಿಸಲಾಗಿದೆ. ಇದಕ್ಕೆ ಇಪ್ಪತ್ತು ಸದಸ್ಯರು ವಿರೋಧದ ಟಿಪ್ಪಣಿ ಬರೆದಿರುವರು.

ನಾನಾ ಹೈಕೋರ್ಟು ನ್ಯಾಯಾಧೀಶರುಗಳಿಗೆ ಒಂದೇ ಮಟ್ಟದ ಸಂಬಳವಿರಬೇಕೆಂದು ಸಮಿತಿಯು ತಿಳಿಸಿದೆ. ಮಸೂದೆಯಲ್ಲಿ ಕೇರಳ, ಮೈಸೂರು ಮತ್ತು ರಾಜಾಸ್ಥಾನ ಹೈಕೋರ್ಟಿನ ನ್ಯಾಯಾಧೀಶರುಗಳಿಗೆ ಕಡಿಮೆ ಸಂಬಳ ಕೊಡಲು ಸೂಚಿಸಲಾಗಿತ್ತು.

ಗುಮಾಸ್ತಳನ್ನು ಕೊಂದ ಗುಮಾಸ್ತನಿಗೆ ಮರಣದಂಡನೆ

ಬೊಂಬಾಯಿಯಲ್ಲಿರುವ ಪಶ್ಚಿಮ ರೈಲ್ವೆ ಕಛೇರಿ ಗುಮಾಸ್ತ ಪರಮಾನಂದ ಗುರುಬಕ್ಷಾನಿಗೆ ವಿಧಿಸಿರುವ ಮರಣದಂಡನೆಯನ್ನು ಬೊಂಬಾಯಿ ಹೈಕೋರ್ಟಿನವರು ಖಾಯಂ ಮಾಡಿರುತ್ತಾರೆ. ಕಳೆದ ಸೆಪ್ಟೆಂಬರ್ ೨೩ ರಲ್ಲಿ ಆಪಾದಿತನು ತನ್ನ ಸಹೋದ್ಯೋಗಿ ರತ್ನ ದಲಪತಿರಾಯ್ ವಿಲಾಸಿ ಎಂಬ ಯುವತಿಯನ್ನು ಚೂರಿಯಿಂದ ಅನೇಕ ಬಾರಿ ತಿವಿದು ಕೊಲೆ ಮಾಡಿದ್ದನೆಂದು ಹೇಳಲಾಗಿದೆ. ಆಕೆಯ ಮೇಲೆ ಅವನು ಹೊಂದಿದ್ದ ಅನುರಾಗವನ್ನು ಆಕೆಯು ಪುರಸ್ಕರಿಸಲಿಲ್ಲವಾಗಿ ಅವನು ಇರಿದನೆಂದೂ, ಸೆಷನ್ಸ್ ಕೋರ್ಟಿನಲ್ಲಿ ಅವನಿಗೆ ಮರಣದಂಡನೆ ವಿಧಿಸಲಾಯಿತೆಂದೂ ಗೊತ್ತಾಗಿದೆ.

ಪಬ್ಲಿಕ್ ಸರ್ವೀಸ್ ಕಮಿಷನ್ ಫಾರಂಗಳ ಅಭಾವ

ಮೈಸೂರು ಪಬ್ಲಿಕ್ ಸರ್ವೀಸ್ ಕಮಿಷನ್ನಿನವರು ೧೨ ನೇ ತಾರೀಖಿನೊಳಗೆ ಮತ್ತು ಎರಡನೇ ದರ್ಜೆ ಗುಮಾಸ್ತಗಿರಿಗೆ ಅರ್ಜಿ ಸ್ವೀಕರಿಸುವುದಾಗಿ ಪ್ರಕಟಿಸಿದುದರಷ್ಟೆ? ಅರ್ಜಿಗಳನ್ನು ಕಳುಹಿಸಲು ಕ್ರಮವಾಗಿ ನಾಳೆ ಮತ್ತು ೨೦ ನೇ ತಾರೀಖು ಕೊನೆಯ ದಿನಗಳಾಗಿರುತ್ತವೆ. ಇದಕ್ಕೆ ನಿರ್ಧಾರಿತವಾದ ಫಾರಂಗಳನ್ನು ಖಜಾನೆಗಳ ಮೂಲಕವೇ ಕೊಂಡುಕೊಂಡು ಕಳುಹಿಸಬೇಕು. ಆದರೆ ಈ ಫಾರಂಗಳು ಮೈಸೂರಿನ ಜಿಲ್ಲಾ ಮತ್ತು ತಾಲ್ಲೂಕು ಖಜಾನೆಗಳಲ್ಲೂ, ಶ್ರೀರಂಗಪಟ್ಟಣದಲ್ಲೂ ಸಹಾ ಸುಮಾರು ೧೫ ದಿನಗಳಿಂದಲೂ ಇಲ್ಲವಾಗಿದ್ದುದರಿಂದ ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಗಮನಿಸಿ ಫಾರಂಗಳನ್ನು ದೊರಕಿಸಿ ಕೊಟ್ಟು ಅರ್ಜಿ ಕಳುಹಿಸುವ ಅವಧಿಯ ತಾರೀಖನ್ನು ಮುಂದುವರಿಸಬೇಕೆಂದು ಬೇಡಿಕೊಳ್ಳುತ್ತೇನೆ.

ನಿರುದ್ಯೋಗಿಗಳ ತಂಡ

ಅಣು ಯುದ್ಧದ ಪ್ರತಿಭಟನೆಗೆ ಅಮೇರಿಕದ ಯೋಜನೆ

ಅಣು ಯುದ್ಧವು ಸಂಭವಿಸಿದರೆ ಅದರಲ್ಲಿ ಯಾವ ರೀತಿ ಹೋರಾಡಬೇಕೆಂಬ ಬಗ್ಗೆ ಯೋಜನೆಯನ್ನು ಅಮೇರಿಕವು ಸಿದ್ಧಗೊಳಿಸಿದೆ. ದಕ್ಷಿಣ ಯೂರೋಪಿನಲ್ಲಿರುವ ಎಲ್ಲಾ ಕಮ್ಯೂನಿಸ್ಟ ವಿಮಾನ ನೆಲೆಗಳನ್ನೂ ಅಮೇರಿಕದ ಆರನೇ ನೌಕಾ ತಂಡವು ನಾಶಪಡಿಸಬೇಕೆಂದು ಹೇಳಲಾಗಿದೆ. ಅದಕ್ಕೆ ಹೊಸ ಮಾದರಿ ಅಸ್ತ್ರವನ್ನು ಉಪಯೋಗಿಸಲಾಗಿದೆ. ಇದು ೧,೫೦೦ ಮೈಲಿ ದೂರದ [illegible] ಹೊಡೆಯಬಲ್ಲದೆಂದು ಹೇಳಲಾಗಿದೆ. ಇದರ ಮುಂಭಾಗಕ್ಕೆ ಅಣು ಸ್ಫೋಟನೆಯ ವಸ್ತುವನ್ನು ಜೋಡಿಸಲಾಗಿದೆ. ಯುದ್ಧದಲ್ಲಿ ನೌಕೆಗಳ ಪ್ರತ್ಯಾಕ್ರಮಣ ಮಾತ್ರ ಅಸ್ತ್ರಗಳ ಪ್ರಯೋಗ ಮುಂತಾದ ಎಲ್ಲ ವಿಷಯಗಳ ವಿವರಗಳನ್ನೂ ನೌಕಾಬಲಗಳಿಗೆ ಈಗಾಗಲೇ ಸೂಚಿಸಲಾಗಿದೆ.

ಮುಮ್ಮಡಿ ಕೃಷ್ಣರಾಜ ಒಡೆಯರರ ಜಯಂತಿ

ಮುಮ್ಮಡಿ ಕೃಷ್ಣರಾಜ ಒಡೆಯರರ ೧೬೨ನೇ ಜಯಂತಿಯು ಇದೇ ತಿಂಗಳು ೩೦ನೇ ತಾರೀಖು ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ನೆರವೇರುವುದು. ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರ ರಾಯರು ಅಧ್ಯಕ್ಷತೆ ವಹಿಸುವರು. ಹೈದರಾಬಾದಿನ ಮಂತ್ರಿ ಡಾ|| ಜಿ. ಎಸ್. ಮೇಲ್ಕೋಟೆಯವರು ಆರಂಭೋತ್ಸವವನ್ನು ನೆರವೇರಿಸುವರು.

ಮುನ್ಸೀಫರುಗಳ ನೇಮಕ

ಕೆಳಗೆ ಕಂಡ ವಕೀಲರುಗಳನ್ನು ಮುನ್ಸೀಫರುಗಳಾಗಿ ಸಂಸ್ಥಾನ ಸರ್ಕಾರದವರು ನೇಮಿಸಿರುತ್ತಾರೆ:- ಶ್ರೀಗಳಾದ ಕೋಲಾರದ ಬಿ. ಆರ್. ಅಶ್ವತ್ಥರಾವ್, ತುಮಕೂರಿನ ಬಿ. ಹನುಮಂತಯ್ಯ, ಶ್ರೀರಂಗಪಟ್ಟಣದ ಹೆಚ್. ಎಲ್. ನಾರಾಯಣಗೌಡ, ತುಮಕೂರಿನ ಎ. ಬೈರಪ್ಪ ಮತ್ತು ಮೈಸೂರಿನ ಪಿ. ಎಲ್. ಕುಮಾರಸ್ವಾಮಿ.

ಹರಿಕಥೆ ಮತ್ತು ದೇವರಿಗೆ ಅಲಂಕಾರ

ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರಸ್ವಾಮಿ ದೇವಸ್ಥಾನದಲ್ಲಿ ಪ್ರಥಮೈಕಾದಶಿ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಭದ್ರಾವತಿಯ ಶ್ರೀ ವೆಂಕಟೇಶದಾಸರಿಂದ 'ಸಖೂಬಾಯಿ' ಎಂಬ ಹರಿಕಥೆಯೂ ಮತ್ತು ಅಮ್ಮನವರಿಗೆ ಪಾಂಡುರಂಗಸ್ವಾಮಿ ಅಲಂಕಾರವೂ ಏರ್ಪಾಡಾಗಿದೆ.

ರಾಜಧಾನಿಯ ಸಿವಿಲ್ ಪೊಲೀಸ್ ಲೈನಿನಲ್ಲಿ ಪ್ರಥಮೈಕಾದಶಿ ಪ್ರಯುಕ್ತ ನಾಳೆ ರಾತ್ರಿ ೯ ಗಂಟೆಗೆ ವೇ|| ಬ್ರ|| ಶ್ರೀ ಅನಂತಭಾಗವತರಿಂದ 'ಸುಧನ್ವ' ಎಂಬ ಹರಿಕಥೆಯನ್ನು ಏರ್ಪಡಿಸಲಾಗಿದೆ.

ಮೈಸೂರಿನಲ್ಲಿ ಹೊಸನಾಯಕತ್ವದ ಆವಶ್ಯಕತೆ

ಕರ್ನಾಟಕ ವಾಣಿಜ್ಯ ಸಂಸ್ಥೆಯ ಅಧ್ಯಕ್ಷ ಯಳಮಲಿಯವರ ಕರೆ

ಕರ್ನಾಟಕ ವಾಣಿಜ್ಯ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಶಾಂತಪ್ಪ ಯಳಮಲಿಯವರು ಹುಬ್ಬಳ್ಳಿಯಲ್ಲಿ ನಡೆದ ಸಮಾರಂಭವೊಂದರಲ್ಲಿ ಮೈಸೂರಿನ ರಾಜಕೀಯ ಬಿಕ್ಕಟ್ಟನ್ನು ಪ್ರಸ್ತಾಪಿಸಿದರು. ಶ್ರೀ ಹನುಮಂತಯ್ಯ ಮತ್ತು ಶ್ರೀ ಎಸ್. ಚನ್ನಯ್ಯನವರ ಭಿನ್ನಾಭಿಪ್ರಾಯದ ಪರಿಣಾಮವಾಗಿ ಮೈಸೂರು ಕಾಂಗ್ರೆಸ್ಸಿನಲ್ಲಿ ಉಂಟಾಗಿರುವ ಒಡಕಿಗಾಗಿ ವಿಷಾದಿಸಿದರು. ಉಭಯರೂ ವಿವೇಕಶಾಲಿ ಮತ್ತು ದಕ್ಷ ನಾಯಕರೆಂದೂ, ಕರ್ನಾಟಕ ಪ್ರದೇಶದ ಸ್ಥಾಪನೆಯಾಗುವ ಈ ಸಂದರ್ಭದಲ್ಲಿ ಅವರಿಬ್ಬರಲ್ಲುಂಟಾಗಿರುವ ಭಿನ್ನಾಭಿಪ್ರಾಯವು ರಾಜಕೀಯ ವಾತಾವರಣವನ್ನು ಹಾಳುಮಾಡಿದ್ದುದೆಂದೂ ಅವರು ಹೇಳಿದರು.

ಈ ಬಿಕ್ಕಟ್ಟುಗಳು ಕೊನೆಗಾಣಬೇಕೆಂದೂ, ಹೊಸ ಸಂಸ್ಥಾನವನ್ನು ಸರಿಯಾದ ಮಾರ್ಗದಲ್ಲಿ ಕೊಂಡೊಯ್ಯಲೂ ಮತ್ತು ಜನರ ಹಿತವನ್ನು ರಕ್ಷಿಸುವುದಕ್ಕಾಗಿಯೂ ಹೊಸ ನಾಯಕರನ್ನು ಆರಿಸುವುದು ಉತ್ತಮವೆಂದೂ ಅವರು ಹೇಳಿದರು.

ನೂತನ ಸಂಸ್ಥಾನದ ಉದಯಕ್ಕೆ ಮೊದಲು ಮೈಸೂರಿನಲ್ಲಿ ನಾಯಕತ್ವಕ್ಕಾಗಿ ಈಗ ನಡೆಯುತ್ತಿರುವ ಹೋರಾಟ [illegible] ಉತ್ತರ ಕರ್ನಾಟಕ ಮತ್ತು ಮೈಸೂರೇತರ ಇತರ ಕನ್ನಡ ಪ್ರದೇಶಗಳು ಹೊಸ ನಾಯಕರ ಆಯ್ಕೆಗೆ ಆಲೋಚಿಸಬೇಕಾಗುವುದೆಂದೂ ಅವರು ನುಡಿದರು.

ನೂತನ ಮೈಸೂರನ್ನು ಕರ್ನಾಟಕವೆಂದು ಕರೆಯಬೇಕೆಂದೂ, ಮೈಸೂರಿನ ನಾಯಕರು ಈ ಬಗ್ಗೆ ಅಂಧಶ್ರದ್ಧಾವಂತರಾಗಬಾರದೆಂದೂ ಹೇಳಿದರು.

ಮೈಸೂರು ಬಿಕ್ಕಟ್ಟಿನ ಪ್ರಶ್ನೆ ಪಾರ್ಲಿಮೆಂಟರಿ ಸಮಿತಿ ನಿರ್ಧಾರಕ್ಕೆ

ಕಾಂಗ್ರೆಸ್ ಅಧ್ಯಕ್ಷ ಢೇಬರರ ಸೂಚನೆ

ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷದ ನಾಯಕತ್ವದ ಸಂಬಂಧವಾಗಿ ಉಂಟಾಗಿರುವ ಬಿಕ್ಕಟ್ಟಿನ ವಿಷಯವಾಗಿ ಕಾಂಗ್ರೆಸ್ಸಿನ ಕೇಂದ್ರ ಪಾರ್ಲಿಮೆಂಟರಿ ಸಮಿತಿಯು ನಿರ್ಧಾರ ಕೈಗೊಳ್ಳಬೇಕಾಗಿರುವುದೆಂದೂ, ಅದಾದಕೂಡಲೇ ಪ್ರಕಟನೆ ಹೊರಡಿಸಲಾಗುವುದೆಂದೂ ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ತಿಳಿಸಿರುತ್ತಾರೆ.

ಜನ ಸಂಘದ ಜಿಲ್ಲಾ ಸಮ್ಮೇಳನ

ರಾಜಧಾನಿಯ ಸಹಕಾರ ಭವನದಲ್ಲಿ ನಾಳೆ ಬೆಳಿಗ್ಗೆ ೧೦ ಗಂಟೆಗೆ ಭಾರತೀಯ ಜನಸಂಘದ ಮೈಸೂರು ಜಿಲ್ಲಾ ಸಮ್ಮೇಳನವು ಸೇರುವುದು. ದಕ್ಷಿಣ ಪ್ರಾಂತದ ಜನ ಸಂಘದ ಸಂಘಟನಾ ಕಾರ್ಯದರ್ಶಿ ಶ್ರೀ ಗೋಪಾಲರಾವ್ ಠಾಕೂರರು ಬಹಿರಂಗ ಸಭೆಯಲ್ಲಿ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ. ಸಮ್ಮೇಳನದಲ್ಲಿ ಕರ್ನಾಟಕ ಪ್ರಾಂತೀಯ ಸಂಘದ ಕಾರ್ಯದರ್ಶಿ ಹೆಚ್. ಎಸ್. ಭಾಸ್ಕರರಾವ್ ಮತ್ತು ಕೆ. ಎಸ್. ವರದಾಚಾರ್‌ರವರು ಭಾಗವಹಿಸುವರು.

ಹೈಕಮಾಂಡಿನ ತೀರ್ಪಿಗೆ ತಲೆ ಬಾಗುವೆನು

ಮುಖ್ಯ ಮಂತ್ರಿ ಹನುಮಂತಯ್ಯನವರ ಹೇಳಿಕೆ

ಸ್ವಂ. ಸು. ತಂತಿ] ಬೆಂಗಳೂರು ೧೬.

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಹೇಳಿಕೆಯೊಂದನ್ನಿತ್ತು, ತಾವು ಈಗಾಗಲೇ ರಾಜೀನಾಮೆ ಕೊಟ್ಟಿರುವುದಾಗಿ ನಡೆಯುತ್ತಿರುವ ಅಪಪ್ರಚಾರವನ್ನು ಅಲ್ಲಗಳೆದಿರುತ್ತಾರೆ. ಕಾಂಗ್ರೆಸ್ ಹೈಕಮಾಂಡಿನವರ ನಿರ್ಧಾರಕ್ಕೆ ತಾವು ತಲೆ ಬಾಗುವುದಾಗಿ ತಿಳಿಸಿರುತ್ತಾರೆ. ಮೈಸೂರು ಕಾಂಗ್ರೆಸ್ಸಿನ ರಾಜಕೀಯ ಭವಿಷ್ಯದ ಪ್ರಶ್ನೆಯ ತೀರ್ಮಾನವು ಕಾಂಗ್ರೆಸ್ ಹೈಕಮಾಂಡಿನವರ ಪರಿಶೀಲನೆಯಲ್ಲಿರುವುದೆಂದೂ, ಅವರ ತೀರ್ಮಾನಕ್ಕೇ ಎಲ್ಲವನ್ನೂ ತಾವು ಬಿಟ್ಟಿರುವುದಾಗಿಯೂ ಅವರು ತಿಳಿಸಿ, ಅವರ ನಿರ್ಧಾರದಂತೆ ನಡೆದುಕೊಳ್ಳುವುದಾಗಿ ನುಡಿದಿದ್ದಾರೆ.

ಮುಖ್ಯಮಂತ್ರಿ ಮತ್ತು ಚನ್ನಯ್ಯನವರೊಡನೆ ಢೇಬರರ ಟೆಲಿಫೋನ್ ಸಂಭಾಷಣೆ

ಸ್ವಂ. ಸು. ತಂತಿ] ಬೆಂಗಳೂರು ೧೬.

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ನೆನ್ನೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯ ಮತ್ತು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರೊಡನೆ ಟೆಲಿಫೋನ್ ಮೂಲಕ ಸಂಭಾಷಣೆ ನಡೆಸಿದರೆಂದು ತಿಳಿದುಬಂದಿದೆ. ಮುಖ್ಯ ಮಂತ್ರಿಯವರು ರಾಜೀನಾಮೆ ಕೊಡುವ ಸೂಚನೆಗಳು ಹೆಚ್ಚಾಗಿ ಕಂಡುಬರುತ್ತಿವೆ.

ನೆನ್ನೆ ಮಂತ್ರಿಮಂಡಲದ ಸಭೆ ನಡೆದು ಹಲವು ತೀರ್ಮಾನವಾದುವೆಂದು ಗೊತ್ತಾಗಿದೆ. ಈ ವೇಳೆಯಲ್ಲಿಯೂ ಸಭೆ ಸೇರಿದ್ದಾಗ ಮುಖ್ಯ ಮಂತ್ರಿಯವರು ಭೋಜನಕ್ಕಾಗಿ ಮಧ್ಯದಲ್ಲಿ ಹೊರಕ್ಕೆ ಬಂದರು. ಸಭೆಯು ನಾಳೆಯೂ ಸೇರುವುದು.

ಪತ್ರಿಕಾ ಪ್ರತಿನಿಧಿಗಳಿಗೆ ಒಬ್ಬ ಸಚಿವರು ಉತ್ತರವಿತ್ತು, "ಪತ್ರಿಕೆಗಳು ಮುಂದೆ ರುಜು ಮಾಡಿರುವಾಗ ನಾಯಕರು ಪ್ರಜಾಸತ್ತಾತ್ಮಕ ರೀತಿಯಲ್ಲಿ ನಡೆಯುವುದು ಅಗತ್ಯ"—ಎಂಬುದಾಗಿ ಹೇಳಿದರು.

೪೬೩ ರೂ. ಒಡವೆಗಳ ಕಳ್ಳತನ

ಮೈಸೂರು ೧೬.

ಬಂಡಿಕೊಪ್ಪಲಿನ ದೇವಸ್ಥಾನದ ಬೀದಿಯಲ್ಲಿರುವ ಸೌದೆ ಡಿಪೋ ಮಾಲೀಕರಾದ ಶ್ರೀ ಕುನ್ನೇಗೌಡರ ಮನೆಗೆ ನೆನ್ನೆ ರಾತ್ರಿ ಕಳ್ಳರು ನುಗ್ಗಿ ಸುಮಾರು ೪೬೩ ರೂ ಬೆಲೆಯ ಚಿನ್ನ ಬೆಳ್ಳಿ ಒಡವೆಗಳನ್ನು ಅಪಹರಿಸಿರುವರೆಂದು ವರದಿಯಾಗಿದೆ.

ನಗರಕ್ಕೆ ಈ ದಿನ ಮುಖ್ಯಮಂತ್ರಿಗಳ ಭೇಟಿಯಿಲ್ಲ

ಇಲವಾಲದಲ್ಲಿ ಈ ಸಂಜೆ ನಡೆಯಲಿರುವ ಭಾರತ ಯುವಕ ಸಮಾಜದ ಕಾರ್ಯಕ್ರಮದಲ್ಲಿ ಭಾಗವಹಿಸಲು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಈ ದಿನ ನಗರಕ್ಕೆ ಬರುವುದಿಲ್ಲ. ಅವರ ಬದಲು ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಅದರಲ್ಲಿ ಭಾಗವಹಿಸುವರು.

ತೆಂಗಿನಕಾಯಿ ವರ್ತಕರ ಸಂಘದ ವಾರ್ಷಿಕೋತ್ಸವ

ಮೈಸೂರು ೧೬

ನಗರದ ತೆಂಗಿನಕಾಯಿ ವರ್ತಕರ ಸಂಘದ ತೃತೀಯ ವಾರ್ಷಿಕೋತ್ಸವವು ಮೊನ್ನೆ ಶ್ರೀರಂಗಪಟ್ಟಣದಲ್ಲಿ ನೆರವೇರಿತು ಮೈಸೂರು ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಸ್ವಾಮಿ ... ಅಧ್ಯಕ್ಷತೆ ವಹಿಸಿದ್ದರು

ಬೆಳಗ್ಗೆ ಧ್ವಜಾರೋಹಣ ನಂತರ ಸಭೆಯು ನಡೆಯಿತು ಪ್ರಾರ್ಥನೆಯಾದ ಮೇಲೆ ಸಂಘದ ಉಪಾಧ್ಯಕ್ಷ ಶ್ರೀ ಎ. ಶಿವನಂಜಪ್ಪನವರು ಸ್ವಾಗತ ಭಾಷಣ ಮಾಡಿದರು

ಸಂಘದ ಸಲಹೆಗಾರರಾದ ಶ್ರೀ ಗುರುಮೂರ್ತಿಯವರಿಗೆ ಅಶೋಕಸ್ತಂಭವಿರುವ ದಂತದ ಹಿಡಿ ಕೋಲನ್ನೂ, ಸಂತೆಪೇಟೆ ವರ್ತಕರಾದ ಶ್ರೀಗಳು ತಿಮ್ಮಣ್ಣ ಹುಲಿಯಪ್ಪ ಮತ್ತು ಸಗಸ್, ರಾಮಣ್ಣ ಮತ್ತು ವೆಂಕಟಪ್ಪನವರಿಗೆ ಬೆಳ್ಳಿ ಗುರಾಣಿಗಳನ್ನೂ ಕೊಡಲಾಯಿತು

ಸಂಘದ ಪರವಾಗಿ ೮ ಮಂದಿ ಮಹಿಳಾ ಕಾರ್ಮಿಕರಿಗೆ ವಸ್ತ್ರ ದಾನ ಮಾಡಲಾಯಿತು ಶ್ರೀ ಗುರುಮೂರ್ತಿಯವರು ಭಾಷಣ ಮಾಡಿ. ದೇಶವನ್ನು ಸರಿಯಾದ ಮಾರ್ಗದಲ್ಲಿ ಕರೆದೊಯ್ಯಲು ನಾಯಕರಿಗೆ ಸಮೃದ್ಧಿಯುಂಟಾಗಲೆಂದು ಹಾರೈಸಿದರು

ವಿ|| ಗುರುಮೂರ್ತಿ ಮತ್ತು ಪಾರ್ಟಿಯವರಿಂದ ಸಂಗೀತವೂ ... ಗಾಯನವಾಯಿತು ... ವರ್ತಕರು ... ಸರ್ಕಾರ ... ಕೋರಿದರು

... ವರ್ತಕರ ... ಸಹಾನುಭೂತಿಯಿಂದ ... ವರ್ತಕರು ಧರ್ಮದಿಂದ ನಡೆಯಬೇಕೆಂದೂ ಸೂಚಿಸಿದರು.

ವಂದನ ಸಮರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ವರುಣ ಹೋಬಳಿ ಕೇಂದ್ರದ ಉಪಾಧ್ಯಾಯರ ಸಭೆ

ಮೇಲ್ಕಂಡ ಸಂಘದ ಸಭೆಯು ಕಳೆದ ೭ನೇ ತಾರೀಖು ಇನ್ಸ್‌ಪೆಕ್ಟರ್ ಶ್ರೀ ಪ್ರಹ್ಲಾದರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಶ್ರೀನಿವಾಸಯ್ಯನವರಿಂದ ದೇವತಾ ಪ್ರಾರ್ಥನ ಮತ್ತು ಶ್ರೀ ರಾಘವೇಂದ್ರರಾಯರಿಂದ ಸ್ವಾಗತ ಭಾಷಣಗಳಾದನಂತರ, ಶ್ರೀ ಚನ್ನಬಸಪ್ಪನವರು ವರದಿಯನ್ನು ಒಪ್ಪಿಸಿದರು ... ಮತ್ತು ಸಂಗೀತವಾದನಂತರ, ಶ್ರೀ ಶ್ರೀನಿವಾಸರಾಯರು "... ತತ್ವಗಳು ಮತ್ತು ಉಪಾಧ್ಯಾಯರು" ಎಂಬ ವಿಷಯವಾಗಿಯೂ, ಶ್ರೀ ನಾರಾಯಣರಾಯರು ಸಾಹಿತ್ಯ ಮತ್ತು ಕಲೆ ವಿಷಯವಾಗಿಯೂ ಮಾತನಾಡಿದರು ಅಧ್ಯಕ್ಷರು ಭಾಷಣ ಮಾಡಿದನಂತರ ವಂದನಾ ಸಮರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಸಿ. ವಿ. ರಾಯರು ನೂತನ ಮೈಸೂರಿನ ಶ್ರೇಷ್ಠ ಕಾರ್ಯದರ್ಶಿ

ಹೈದರಾಬಾದು ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯಾಗಿರುವ ಸಿ ವಿ ರಾಯರು ನೂತನ ಮೈಸೂರು ಸಂಸ್ಥಾನ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿಯಾಗಿ ನೇಮಿಸಲ್ಪಡುವ ಸಂಭವವುಂಟೆಂದು ಗೊತ್ತಾಗಿದೆ

ಮನೆ ಕ್ರಯಕ್ಕಿದೆ

ಮೈಸೂರು ಸಿಟಿ ಮುನಿಸಿಪಾಲಿಟಿ ಕಛೇರಿ ... ನಂ 3518—... ಹೊಸ ... ವಿಸ್ತಾರವಾದ ... ಮನೆಯು ಕ್ರಯಕ್ಕಿದೆ ... ಹೆಚ್ಚಿನ ವಿವರಗಳಿಗೆ ... ಶ್ರೀ ಗೌರಿಶಂಕರ ... ಶ್ರೀ ಎಂ ... ಅವರ ... ವಿಚಾರಿಸಬಹುದು ... 1533 ನೇ ನಂಬರು ... ಮನೆ ... ಶ್ರೀ ... ಲಿಂಗಯ್ಯನವರಲ್ಲಾಗಲೀ ವಿಚಾರಿಸಬಹುದು

ಅಕ್ಕಿ ಮಾರಾಟದ ವ್ಯವಸ್ಥೆಯಲ್ಲಿ ಸಾವಕಾಶ

ಹೋಟೇಲು ಕೆಲಸಗಾರರ ಸಭೆಯ ನಿರ್ಣಯ

ಮೈಸೂರು ೧೬

ಕಳೆದ ಶನಿವಾರ ನಗರದ ಹೋಟೇಲು ಕೆಲಸಗಾರರ ಸಂಘದ ಸರ್ವ ಸದಸ್ಯರ ಸಭೆಯು ಶ್ರೀ ಬಿ ಎ ಬೆಳ್ಳಿಯಪ್ಪನವರ ಅಧ್ಯಕ್ಷತೆಯಲ್ಲಿ ನಡೆದು ಅಕ್ಕಿ, ರಾಗಿ ಮುಂತಾದ ದವಸಧಾನ್ಯಗಳ ಬೆಲೆಯು ಬಹಳವಾಗಿ ಹೆಚ್ಚಿ ಕಾರ್ಮಿಕರಿಗೂ ಬಡ ಜನರಿಗೂ ತುಂಬಾ ತೊಂದರೆಯಾಗಿರುವುದೆಂದೂ ಸುಲಭ ದರದಲ್ಲಿ ಅಕ್ಕಿಯನ್ನು ಮಾರುವ ಸರ್ಕಾರದ ವ್ಯವಸ್ಥೆಯು ಇನ್ನೂ ತಡವಾಗುತ್ತಿರುವುದೆಂದೂ ಸೂಚಿಸಲಾಯಿತು ರಾಗಿ, ಜೋಳ ಮತ್ತು ಸಕ್ಕರೆಯನ್ನು ಅಕ್ಕಿಯ ಜೊತೆಗೆ ಮಾರಬೇಕೆಂಬ ಸರ್ಕಾರವನ್ನು ಪ್ರಾರ್ಥಿಸಲಾಯಿತು. ಹಿಡಿತದ ಕಾಲದ ವ್ಯವಸ್ಥೆಯಂತೆ ದವಸಧಾನ್ಯವು ಜನರಿಗೆ ದೊರೆಯುವಂತಾಗಬೇಕೆಂದು ಕೋರಲಾಯಿತು. ಮೈಸೂರು ನಗರದ ಹೋಟೇಲುಗಳಿಗೂ ನೇರವಾಗಿ ಅಕ್ಕಿಯನ್ನು ಒದಗಿಸುವ ವ್ಯವಸ್ಥೆಯು ಕೂಡಲೇ ಆಗಬೇಕೆಂದೂ ಪ್ರಾರ್ಥಿಸಲಾಯಿತು

ಈಗಾಗಲೇ ಪ್ರಕಟವಾಗಿರುವ ಹೋಟೆಲುಗಳ ಪಟ್ಟಿಯಲ್ಲಿ ಬಿಟ್ಟುಹೋಗಿರುವ ಕೆಲಸಗಾರರ ಹೆಸರುಗಳನ್ನು ಸೇರಿಸುವಂತೆ ... ಪ್ರಯತ್ನಿಸಬೇಕೆಂದು ಸೂಚಿಸಲಾಯಿತು ... ಸಹಾಯಧನವಾಗಿ ... ಕೊಡುವಂತೆ ತೀರ್ಮಾನಿಸಲಾಯಿತು.

ಹರಿಕಥೆಗಳು

ರಾಮಸ್ವಾಮಿಯ ... ರಸ್ತೆಯಲ್ಲಿರುವ ಶ್ರೀ ಪ್ರಸನ್ನ ರಾಮ ಮಂದಿರದಲ್ಲಿ ನಾಳೆ ರಾತ್ರಿ ೯ ಗಂಟೆಗೆ ಪ್ರಥಮ್ಯೆಕಾದಶಿ ಪ್ರಯುಕ್ತ ಶ್ರೀ ಎಂ ಎಲ್ ನಾರಾಯಣದಾಸರು ಭದ್ರಾಚಲ ರಾಮದಾಸ್ ಎಂಬ ಹರಿಕಥೆಯನ್ನು ಮಾಡುವರು. ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು

ನಗರದ ... ರಸ್ತೆಯಲ್ಲಿರುವ ಶ್ರೀ ಕನ್ನೇಶ್ವರಸ್ವಾಮಿ ದೇವಸ್ಥಾನದಲ್ಲಿ ಗಿರಿಜಾ ಕಲ್ಯಾಣೋತ್ಸವದ ಅಂಗವಾಗಿ ಈ ರಾತ್ರಿ ... ನಾಳೆ ರಾತ್ರಿ ಪ್ರಥಮೈಕಾದಶಿ ಪ್ರಯುಕ್ತ ಶ್ರೀ ... ಶ್ರೀನಿವಾಸರಂಗಾಚಾರ್ಯರಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆಯೂ ನಡೆಯುವುವು ಸರ್ವರಿಗೂ ಸ್ವಾಗತವಿದೆ

ತಿಲಕರ ಶತಮಾನೋತ್ಸವಕ್ಕಾಗಿ ಸಾರ್ವತ್ರಿಕ ರಜಾ

ಲೋಕಮಾನ್ಯ ತಿಲಕರ ಶತಮಾನ ಜಯಂತ್ಯುತ್ಸವಕ್ಕಾಗಿ ಇದೇ ತಿಂಗಳು ೨೩ನೇ ತಾರೀಖು ಸಂಸ್ಥಾನ ಸರ್ಕಾರದವರು ಬ್ಯಾಂಕ ಗಳಿಗೂ ಸಾರ್ವತ್ರಿಕ ರಜವನ್ನು ಕೊಟ್ಟಿರುತ್ತಾರೆ

ನೈಕ್ ಮತ್ತು ಲೌಡ್ ಸ್ಪೀಕರುಗಳು

ಬಾಡಿಗೆಗೆ ದೊರೆಯುತ್ತವೆ

- ವಿವರಗಳಿಗೆ ವಿಚಾರಿಸಿ

ಶ್ರೀ ಹೆಚ್. ಎಸ್. ರಾಮಚಂದ್ರ,
28. ಸೀತಾವಿಲಾಸ್ ರಸ್ತೆ, ಮೈಸೂರು

ಮದ್ರಾಸಿನಲ್ಲಿ ಕುಡುಕರ ಹಾವಳಿಯಿಂದ ವಿಪರೀತ ಗಲಭೆ

ಮದ್ರಾಸ್ ನಗರದ ತಿರುವಲ್ಲಿಕ್ಕೇಣಿ ರಸ್ತೆಯಲ್ಲಿ ಮೊನ್ನೆ ಸಂಜೆ ಅರ್ಧ ಗಂಟೆಕಾಲ ... ಜನ ಕುಡುಕರು ವಿಪರೀತ ಗಲಾಟೆ ಮಾಡಿ ಜನರಿಗೆ ಭೀತಿಯುಂಟು ಮಾಡಿದುದಾಗಿ ವರದಿಯಾಗಿದೆ ಮೊದಲು ಅವರಲ್ಲೇ ಜಗಳವಾಗಿ ಇತರರು ಸೇರಲಾಗಿ ಕಲ್ಲೆಸೆಟು. ಸೋಡಾ ಸೀಸಗಳ ಪ್ರಯೋಗಗಳಾದುವೆಂದೂ, ಹಲವರು ದೊಣ್ಣೆಗಳನ್ನೂ, ಒಬ್ಬನು ಚಾಕುವನ್ನೂ ಎತ್ತಿದರೆಂದೂ, ರಸ್ತೆಯಲ್ಲಿ ಓಡಾಡುತ್ತಿದ್ದ ಜನರ ಮೇಲೂ ಕಲ್ಲೆಸೆಟುಗಳು ಬೀಳಲಾಗಿ ಜನರುಗಳು ಓಡಿದರೆಂದೂ ವರದಿಯಾಗಿದೆ ಅಂಗಡಿಗಳು ಮತ್ತು ಹೋಟೇಲುಗಳು ಬಂದಾದುವು ವಾಹನ ಸಂಚಾರವು ನಿಂತು ಹೋಗಿತ್ತು ಹಲವು ಹೆಂಗಸರು ಚೀರುತ್ತಾ ಅಂಗಡಿಗಳೊಳಗೆ ಸೇರಿಕೊಂಡರು ಪೋಲೀಸರು ಸ್ಥಳಕ್ಕೆ ಬರುವ ಹೊತ್ತಿಗೆ ಜನರುಗಳು ಚದುರಿದರು ಈ ಸಂಬಂಧವಾಗಿ ೮ ಜನರನ್ನು ಬಂಧಿಸಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ... ಮತ್ತು ... ಎನ್ ... ಮತ್ತು ಎಸ್. ವಿ ಅನಸೂಯ—ದೇವರ ನಾಮ ಮತ್ತು ಕನ್ನಡ ಗೀತೆ ... ಹಿಂದಿ ... ಮತ್ತು ... ಎಂ ಎ ... ಸಂಗೀತ ... ಪ್ರೌಢ ಶಾಲೆಗಳಿಗಾಗಿ ಸಂಜೆ ... ಎಂ ಎ ಹನುಮಂತಪ್ಪ—ನಾಗಸ್ವರ ... ಕನ್ನಡ ಗೀತೆಗಳು ... ವಾದ್ಯವೃಂದ ... ಸಂಗೀತ ... ವಾರ್ತೆ ... ಈ ದಿನ ... ವಿ—ಪಿಟೀಲು

ಮೈಸೂರು ಪೇಟೆ ಧಾರಣೆ

	ರೂ ಇಂದ	ರೂ ವರೆಗೆ
ಕಡಲೆಕಾಯಿ	[illegible]	[illegible]
ಹಿಪ್ಪೆ	[illegible]	
ಹುಚ್ಚೆಳ್ಳು	[illegible]	
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಕಡಲೆ	[illegible]	
ಹಲಸಂದೆ	[illegible]	[illegible]
ಅವರೆ	[illegible]	
ಉದ್ದು	[illegible]	[illegible]
ಸೀಗೆಕಾಯಿ	[illegible]	
ಹುಣಿಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	[illegible]
ತೆಂಗಿನಕಾಯಿ ೧೦೦೦ಕ್ಕೆ	[illegible]	[illegible]

ರಿಸ್ಟ್ ವಾಚ್ ಕಳೆದುಹೋಗಿದೆ

ತಾ|| 1... —56ನೇ ಭಾನುವಾರ ಸಂಜೆ ... ಸುಬ್ಬರಾಯ ರಸ್ತೆಯಿಂದ ಮಾರ್ಕೆಟ್ಟಿಗೆ ಹೋಗುವ ದಾರಿಯಲ್ಲಿ ಒಂದು ವೆಸ್ಟ್ ಎಂಡ್ ಸೆಕೆಂಡ್ಸ್ ರೆಕ್ಟಾಂಗುಲರ್ ಲೇಡಿಸ್ ವಾಚ್ ಕಳೆದುಹೋಗಿದೆ ಯಾರಿಗಾದರೂ ಸಿಕ್ಕಿದ್ದಲ್ಲಿ ಕೆಳಗೆ ಕಂಡ ವಿಳಾಸಕ್ಕೆ ತಲುಪಿಸಿದರೆ ಸೂಕ್ತ ಬಹುಮಾನ ಕೊಡಲಾಗುವುದು.

ಶ್ರೀ ಗಿರಿನಾಥ್ ,
ಟೀಚರ್ಸ್ ಕಾಲೇಜು, ಮೈಸೂರು

SAFEGUARD YOUR VALUABLES

A SAFE DEPOSIT LOCKER protects them at small cost

★

SAFE DEPOSIT LOCKERS are now installed in our new building in Mysore

★

Rent a LOCKER to-day & be free from all worries

★

CANARA BANK LIMITED
CANARA BANK BUILDING
NEW STATUE CIRCLE
MYSORE.

ಭಾರತದ ಮೃಗಾಲಯಗಳ ಪ್ರಾಣಿಗಳಿಗೆ ವಿಚಿತ್ರ ರೋಗ

ಭಾರತದ ಹಲವಾರು ಮೃಗಾಲಯಗಳಲ್ಲಿನ ಕಾಡು ಪ್ರಾಣಿಗಳಿಗೆ ವಿಚಿತ್ರ ವಿಧವಾದ ... ಯಿರೆಗಳು ಬಂದು ಈ ಬಗ್ಗೆ ಸಂಶೋಧನೆಗಾಗಿ ಲಂಡನ್ನಿನ ಪ್ರವೀಣರ ನೆರವನ್ನು ಕೋರಲು ಆಲೋಚಿಸಲಾಗಿದೆ ತಿರುಚಿ ಮೃಗಾಲಯದಲ್ಲಿರುವ ೨ ಸಿಂಹದ ಮರಿಗಳಿಗೆ ಮೈಮೇಲೆ ಕೂದಲೇ ಇಲ್ಲ ಹುಟ್ಟಿದಾಗ ಇದ್ದ ಕೂದಲು ಈಗ ಉದುರಿಹೋಗುತ್ತಿದೆ. ಅಲ್ಲಿರುವ ಚಿರತೆ ಮರಿಗಳೂ ಇತ್ತು ಬಾತುಕೊಂಡು ಆಹಾರ ಸೇವಿಸುತ್ತಿಲ್ಲ ಮೈಸೂರು ಮೃಗಾಲಯದಲ್ಲಿರುವ ಒಂದು ಚಿಂಪಾಂಜಿಗೆ ಮೈ ಕೂದಲು ಉದುರಿಹೋಗುತ್ತಿದೆ

SRI GAYATHRI
TALKIES

To day ・ Last day

Vanishing Praiarie

Tomorrow only

QUEEN FOR A DAY

A lifetime of entertainment in one wonderful motion picture

From 19-7-56
SEVEN YEAR ITCH
(Cinemascope)
Starring Marilyn Monroe and Tom Ewel

Poly
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO,
Chemists & Druggists
71 D A. S Street,
BANGALORE-2

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ—ಕಲ್ಪ
ದಿವ್ಯೌಷಧವನ್ನು ಕಂಡುಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು · ಫೋನ್ ನಂ. 590
— ಭೇಟಿಯ ಕಾಲ —
ಬೆಳಗ್ಗೆ 7-30 ರಿಂದ 12 30 ಮತ್ತು
ಮಧ್ಯಾಹ್ನ 4 ರಿಂದ 7-30
ಅವರು ಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು ವಿಮಾನದಲ್ಲಿ ಸಂಚರಿಸುವರು
ನವರತ್ನ—ಕಲ್ಪ
ಉಪಯೋಗಿಸಿರಿ

ಇದು ವಜ್ರ, ಕೆಂಪು, ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ, ಪುಷ್ಯರಾಗ ಮತ್ತು ವೈಡೂರ್ಯ ಮುಂತಾದ 9 ಅಮೂಲ್ಯ ಹರಳುಗಳ ಯೋಗ. ಇದರಿಂದ ನರಗಳ ದೌರ್ಬಲ್ಯ, ಹೃದಯ ಸಂಬಂಧದ ವ್ಯಾಧಿಗಳು, ದೀರ್ಘ ಕೆಮ್ಮು, ಮೂತ್ರ ವ್ಯಾಧಿ, ನಾಳಿವ್ರಣ, ಬಹುಮೂತ್ರ, ಅಸ್ತಮಾ ... ಮತ್ತು ಇತರ ಎಲ್ಲಾ ಸಾಮಾನ್ಯ ಹಾಗೂ ... ಪ್ರಮಾದ ಖಾಯಿಲೆಗಳೂ ಸಂಪೂರ್ಣವಾಗಿ ಗುಣಹೊಂದುವುವು. ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಇದೊಂದೇ

NAVRATNA KALPA PHARMACY,
JULLUNDUR CITY (India)
Grams NAVRATNA

Edited Printed and Published by A. R. Nagarajan at Sadhvi Press D. Subbiah Road, Mysore

ರಿಜಿಸ್ಟರ್ಡ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೦೯] SADHVI : WEDNESDAY 15-7-1956 ಮೈಸೂರು : ಬುಧವಾರ ೧೮-೭-೧೯೫೬ [ಸಂಚಿಕೆ : ೩೦೬

ಮೈಸೂರು ಬಿಕ್ಕಟ್ಟು ಬಗ್ಗೆ ಈ ವಾರ ಹೈಕಮಾಂಡ್ ನಿರ್ಧಾರ

ಮೈಸೂರಿನ ಬಿಕ್ಕಟ್ಟಿನ ಬಗ್ಗೆ ವಾರಾಂತ್ಯದಲ್ಲಿ ನಿರ್ಧಾರ

ಮೈಸೂರಿನ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಈ ವಾರಾಂತ್ಯದಲ್ಲಿ ಕಾಂಗ್ರೆಸ್ ಹೈಕಮಾಂಡಿನವರು ನಿರ್ಧಾರವನ್ನು ಕೈಗೊಳ್ಳಲಿರುವರೆಂದು ವರದಿಯಾಗಿದೆ ಪಂಡಿತ ನೆಹರೂರವರು ಪಾಶ್ಚಾತ್ಯ ಪ್ರವಾಸವನ್ನು ಮುಗಿಸಿಕೊಂಡು ಅಷ್ಟರಲ್ಲಿ ಭಾರತಕ್ಕೆ ಹಿಂದಿರುಗುವರು

ಮಹಾರಾಷ್ಟ್ರ ಸತ್ಯಾಗ್ರಹದಲ್ಲಿ ೩೦ ಸಾವಿರ ಜನರ ಪಾತ್ರ

ಸಂಯುಕ್ತ ಮಹಾರಾಷ್ಟ್ರ ಸಮಿತಿಯವರು ನಡೆಸುತ್ತಿರುವ ಸತ್ಯಾಗ್ರಹದಲ್ಲಿ ಇದುವರೆಗೆ ೩೦ ಸಾವಿರ ಮಂದಿ ಭಾಗವಹಿಸಿರುವರು. ನೆನ್ನೆ ಬೊಂಬಾಯಿ ನಗರದಲ್ಲಿ ೮ ಜನ ಮಹಿಳೆಯರು ಸತ್ಯಾಗ್ರಹ ನಡೆಸಿದರು ಅವರನ್ನು ಬಂಧಿಸಲಿಲ್ಲ

ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣ

ಹುಬ್ಬಳ್ಳಿಯಲ್ಲಿ ವಿಮಾನ ನಿಲ್ದಾಣವೊಂದನ್ನು ಏರ್ಪಡಿಸಲು ಭಾರತ ಸರ್ಕಾರದವರು ನಿರ್ಧರಿಸಿರುತ್ತಾರೆ ಅದಕ್ಕಾಗಿ ೧೮ ಲಕ್ಷ ರೂ ವೆಚ್ಚವಾಗುವುದು ಈಗಾಗಲೇ ಸ್ಥಳವನ್ನು ಗೊತ್ತು ಮಾಡಲಾಗಿದೆ. ೧೮ ತಿಂಗಳಲ್ಲಿ ಈ ಕೆಲಸವು ಪೂರೈಸುವುದು

ಉತ್ತರ ಪ್ರದೇಶ ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚನೆ

ಉತ್ತರ ಪ್ರದೇಶದ ಮಂತ್ರಿಮಂಡಲದಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯವನ್ನು ಅಲ್ಲಿನ ಶಾಸನಸಭೆಯಲ್ಲಿ ಶ್ರೀ ನಾರಾಯಣಸಿಂಗ್ ಎಂಬ ಸೋಷಲಿಸ್ಟ್ ಸದಸ್ಯರು ತಂದಿರುತ್ತಾರೆ ತೆರಿಗೆಗಳನ್ನು ವಿಧಿಸಿರುವ ವಿಧಾನದ ಬಗ್ಗೆ ಅವರು ಅತೃಪ್ತಿ ಸೂಚಿಸಿರುತ್ತಾರೆ

ಬರ್ಮಾದಲ್ಲಿ ಭೂಕಂಪ

ಬರ್ಮಾದ ಮಾಂಡಲೆ, ಸಗ್ಯಾಂಗ್, ಭಾವೆಣ ಮತ್ತು ಮ್ಯಾಂಗ್ಯಾನ್ ನಗರಗಳಲ್ಲಿ ಮೊನ್ನೆ ರಾತ್ರಿ ಭಾರಿ ಭೂಕಂಪವಾಯಿತೆಂದೂ, ೨೯ ಮಂದಿ ಮಡಿದಿರುವರೆಂದೂ ವರದಿಯಾಗಿದೆ ಹೆಚ್ಚಿನ ವಿವರಗಳು ತಿಳಿದುಬಂದಿಲ್ಲ

ಕಾಂಗ್ರೆಸ್ ಉಮೇದುವಾರರ ಆಯ್ಕೆ ಬಗ್ಗೆ ಜಿಲ್ಲಾ ಸಮಿತಿಗಳಿಗೆ ಸೂಚನೆ

ಮುಂದೆ ಬರುವ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಪರವಾಗಿ ಉಮೇದುವಾರರನ್ನು ಆರಿಸುವ ಸಂಬಂಧವಾಗಿ ಜಿಲ್ಲಾ ಕಾಂಗ್ರೆಸ್ ಸಮಿತಿಗಳ ಸಲಹೆಯನ್ನು ಸ್ವಾಗತಿಸಿ ಪ್ರದೇಶ ಕಾಂಗ್ರೆಸ್ ಕಾರ್ಯದರ್ಶಿಯವರು ಸೂಚನೆಯಿತ್ತಿದ್ದಾರೆ. ಪ್ರತಿ ವಿಧಾನಸಭಾ ಚುನಾವಣಾ ಕ್ಷೇತ್ರಕ್ಕೆ ಜಿಲ್ಲಾ ಕಾಂಗ್ರೆಸ್ ಸಮಿತಿಯ ಪ್ರತಿ ಸದಸ್ಯನೂ ಒಬ್ಬೊಬ್ಬರ ಹೆಸರನ್ನು ಸೂಚಿಸಬಹುದೆಂದು ತಿಳಿಸಲಾಗಿದೆ. ಪಾರ್ಲಿಮೆಂಟಿನ ಸದಸ್ಯ ಸ್ಥಾನಕ್ಕೆ ಹತ್ತು ಜನರು ಸೇರಿ ಒಬ್ಬರ ಹೆಸರನ್ನು ಸೂಚಿಸಬಹುದು. ಈ ಹೆಸರುಗಳನ್ನು ಈ ತಿಂಗಳು ೩೧ ರೊಳಗೆ ಜಿಲ್ಲಾ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿ ಆಫೀಸುಗಳಿಗೆ ಕಳುಹಬೇಕು.

ಬಂಜರು ಜಮೀನನ್ನು ಉಳುಮೆ ಮಾಡಿ ಹಂಚಲು ವ್ಯವಸ್ಥೆ

ಬೆಂಗಳೂರು ೧೮

ಸಂಸ್ಥಾನದಲ್ಲಿ ಬಂಜರಿರುವ ಭಾರಿ ಪ್ರದೇಶಗಳನ್ನು ವ್ಯವಸಾಯ ಯೋಗ್ಯವಾಗಿ ಮಾಡಿ, ಅದನ್ನು ದೀರ್ಘಾವಧಿ ಸಾಲದ ಆಧಾರದ ಮೇಲೆ ನಿಜವಾದ ರೈತರಿಗೂ, ಜಮೀನಿಲ್ಲದವರಿಗೂ, ಹಂಚುವ ವಿಷಯವು ಸರ್ಕಾರದ ಪರ್ಯಾಲೋಚನೆಯಲ್ಲಿರುವುದೆಂದು ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ತಿಳಿಸಿರುತ್ತಾರೆ ಈ ಬಗ್ಗೆ ಒಂದು ಯೋಜನೆಯು ಸಿದ್ಧವಾಗಿದೆ ಬಂಜರು ಜಮೀನನ್ನು ಉತ್ತಮಪಡಿಸಲು ಇವರಿಗಿದ್ದ ಅವಕಾಶವನ್ನು ಗುರುತಿಸಿದ್ದು, ಜನರಲ್ಲಿ ನಿರುದ್ಯೋಗ ಸಮಸ್ಯೆಯನ್ನು ಬಹುಮಟ್ಟಿಗೆ ಪರಿಹರಿಸುವುದು ಹೆಚ್ಚು ಆಹಾರ ಧಾನ್ಯವನ್ನು ಉತ್ಪತ್ತಿ ಮಾಡಬಹುದೆಂದು ಸಚಿವರು ಹೇಳಿರುವರು

ಅದರ ಪ್ರಕಾರ ೧,೦೦೦ದಿಂದ ೨,೦೦೦ ಎಕರೆ ಬಂಜರು ಭೂಮಿಯನ್ನು ಪ್ರತಿ ಜಿಲ್ಲೆಯಲ್ಲೂ ಒಂದೊಂದು ಕಡೆ ಆರಿಸಿ ಅವನ್ನು ಹಲವು ಸಂಸಾರಗಳಿಗೆ ವಹಿಸಿ, ವ್ಯವಸಾಯದ ಬಂಡವಾಳ ಮತ್ತು ಇತರ ಸೌಲಭ್ಯಗಳನ್ನು ಒದಗಿಸಲಾಗುವುದು ಪ್ರಾರಂಭದಲ್ಲಿ ಪ್ರತಿ ಕುಟುಂಬಕ್ಕೂ ೧,೫೦೦ರೂ ಅನ್ನು ಒದಗಿಸಿ, ಅದನ್ನು ೧೫-೨೦ ವರ್ಷಗಳಲ್ಲಿ ವಾರ್ಷಿಕ ಕಂತಿನಂತೆ ವಾಪಸು ಪಡೆಯಲಾಗುವುದು

೧೨ ಕೋಟಿ ರೂ. ವೆಚ್ಚದಲ್ಲಿ ಕೃತಕ ರಬ್ಬರ್ ಕಾರ್ಖಾನೆ

೧೨ ಕೋಟಿ ರೂ ವೆಚ್ಚದಿಂದ ಕೃತಕ ರಬ್ಬರ್ ತಯಾರಿಕಾ ಕಾರ್ಖಾನೆಯೊಂದನ್ನು ಬರುವ ವರ್ಷ ಉತ್ತರ ಪ್ರದೇಶದಲ್ಲಿ ಜಂಟಿಯಾಗಿ ಏರ್ಪಡಿಸಲು ಅಲ್ಲಿನ ಮತ್ತು ಕೇಂದ್ರ ಸರ್ಕಾರಗಳು ಆಲೋಚಿಸಿವೆ ಈ ಬಗ್ಗೆ ವಿವರಗಳ ಪರಿಶೀಲನೆಯಾಗುತ್ತಿದೆ.

ಉಚಿತ ಹಿಂದೀ ಶಿಕ್ಷಣ

ಹಿಂದೀ ಪ್ರಚಾರಕ ವಿದ್ಯಾಲಯದ ಆಶ್ರಯದಲ್ಲಿ ನಾಳೆಯಿಂದ ಪ್ರತಿ ದಿನ ಸಂಜೆ ೬ ರಿಂದ ೭ರವರೆಗೆ ದಳವಾಯಿ ಹೈಸ್ಕೂಲಿನಲ್ಲಿ ಉಚಿತ ಹಿಂದಿ ವರ್ಗಗಳು ನಡೆಯುವುವು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ತರಪೇತು ಮಾಡಲಾಗುವುದು ಮಹಿಳೆಯರಿಗೆ ಪ್ರತ್ಯೇಕವಾಗಿ ತರಗತಿಗಳನ್ನು ನಡೆಸಲು ಏರ್ಪಾಡಾಗಿದೆ ವಿದ್ಯಾರ್ಥಿವಿದ್ಯಾರ್ಥಿನಿಯರು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕೆಂದು ಕೋರಲಾಗಿದೆ.

ಜಿಲ್ಲಾ ಅಬ್ಕಾರಿ ಅಧಿಕಾರಿಗಳ ವರ್ಗ

ಮೈಸೂರು ಜಿಲ್ಲಾ ಅಬ್ಕಾರಿ ಅಧಿಕಾರಿಗಳಾದ ಶ್ರೀ ಜಿ ಬಿ. ಕುಮಾರಾರಾಧ್ಯರನ್ನು ಬೆಂಗಳೂರು ಜಿಲ್ಲಾ ಅಬ್ಕಾರಿ ಅಧಿಕಾರಿಗಳಾಗಿ ವರ್ಗಾಯಿಸಲಾಗಿದೆ. ಎಕ್ಸೈಜ್ ಇನ್ಸ್‌ಪೆಕ್ಟರ್ ಶ್ರೀ ಕೆ ಬಿ. ಕಲ್ಲಯ್ಯನವರಿಗೆ ಬಡ್ತಿಯಿತ್ತು, ಮೈಸೂರು ಜಿಲ್ಲಾ ಅಬ್ಕಾರಿ ಅಧಿಕಾರಿಗಳಾಗಿ ವರ್ಗಾಯಿಸಲಾಗಿದೆ.

ಅಣು ಶಸ್ತ್ರ ಪ್ರಯೋಗ ಪರೀಕ್ಷೆ ನಿಲ್ಲಲು ಜಂಟಿ ಒಪ್ಪಂದಕ್ಕೆ ಕರೆ

ಅಣು ಮತ್ತು ಜಲಜನಕ ಶಸ್ತ್ರಾಸ್ತ್ರಗಳ ಪ್ರಯೋಗ ಪರೀಕ್ಷೆಯನ್ನು ಅಮೆರಿಕಾ, ಬ್ರಿಟನ್ ಮತ್ತು ರಷ್ಯಗಳು ಜಂಟಿಯಾಗಿ ನಿಲ್ಲಿಸಬೇಕೆಂದು ರಷ್ಯದ ವಿದೇಶಾಂಗ ಮಂತ್ರಿ ಡಿಮಿಟ್ರಿ ಶೆಪಿಲಾವರು ತಿಳಿಸಿರುತ್ತಾರೆ ಈ ಬಗ್ಗೆ ಇತರ ರಾಷ್ಟ್ರಗಳೊಡನೆ ಕೂಡಲೇ ಮಾತುಕತೆ ನಡೆಸಲು ರಷ್ಯವು ಸಿದ್ಧವಾಗಿರುವುದಾಗಿಯೂ ಅವರು ತಿಳಿಸಿರುತ್ತಾರೆ

ಕೆಂಪು ಷರಟು ನಾಯಕ ಮತ್ತು ಕವಿಯ ಬಂಧನ

ಗಡಿನಾಡಿನ ಕೆಂಪು ಷರಟಿನವರ ನಾಯಕ ಮತ್ತು ಪುಷ್ತು ಭಾಷಾ ಕವಿಯಾದ ಕಹಾ ಮಹಮದ್ ಖಾನ್ ಎಂಬುವರನ್ನು ಪಶ್ಚಿಮ ಪಾಕಿಸ್ತಾನ ಸರ್ಕಾರದವರು ಸಾರ್ವಜನಿಕ ರಕ್ಷಣಾ ಕಾನೂನು ಪ್ರಕಾರ ವಸ್ತಗಿರಿ ಮಾಡಿರುತ್ತಾರೆ. ಖಾನ್ ಅಬ್ದುಲ್ ಗಫಾರ್ ಖಾನರನ್ನು ಬಂಧಿಸಿರುವುದನ್ನು ಖಂಡಿಸಿ ಅವರು ಭಾಷಣಗಳನ್ನು ಮಾಡುತ್ತಿದ್ದರು

ಕನ್ನಡ ಸಂಸ್ಥಾನಕ್ಕೆ ಮೈಸೂರೆಂಬ ಹೆಸರು

ಮೈಸೂರು ಸಂಸ್ಥಾನಕ್ಕೆ ಇತರ ಕನ್ನಡ ಭಾಗಗಳು ಸೇರಿ ಆಗುವ ಒಟ್ಟು ಪ್ರದೇಶಕ್ಕೆ ಮೈಸೂರು ಸಂಸ್ಥಾನವೆಂದು ಕರೆಯಲು ಸೂಚಿಸಲಾಗಿರುವುದನ್ನು ಜಂಟಿ ಪಾರ್ಲಿಮೆಂಟರಿ ಸಮಿತಿಯು ಅನುಮೋದಿಸಿದೆ

ವೀರಶೈವ ಅನಾಥಾಲಯದ ವಿದ್ಯಾರ್ಥಿ ಸಂಘ

ಹುಮ್ಮೇರಳೆ ಸಾಹುಕಾರ್ ಟಿ ಎಂ ಸಿದ್ದವೀರಪ್ಪನವರ ವೀರಶೈವ ಅನಾಥಾಲಯ ವಿದ್ಯಾರ್ಥಿ ಸಂಘದ ಕಾರ್ಯಕಾರೀ ಮಂಡಲಿಯ ಪ್ರಸಕ್ತ ಸಾಲಿನ ಚುನಾವಣೆಯು ಮೊನ್ನೆ ನಡೆದು, ಶ್ರೀ ಎಂ ಎಸ್. ರಾಮಲಿಂಗುರವರು ಅಧ್ಯಕ್ಷರಾಗಿಯೂ, ಶ್ರೀ ಎ ಎಸ್ ಪುಟ್ಟಬುದ್ಧಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಹೆಚ್. ಕೆ ಮಲ್ಲಿಕಾರ್ಜುನಪ್ಪನವರು ಕಾರ್ಯದರ್ಶಿಯಾಗಿಯೂ ಮತ್ತು ಶ್ರೀ ಎ. ಆರ್ ಮಲ್ಲಾರಾಧ್ಯರು ಸಹಕಾರ್ಯದರ್ಶಿಯಾಗಿಯೂ ಆಯ್ಕೆಯಾಗಿರುವರು ಶ್ರೀಗಳಾದ ಕೆ ಎಲ್ ರಾಜಪ್ಪ, ಎಂ ನಾಗರಾಜು, ಎಸ್. ಬಿ ಮಹಾದೇವಪ್ಪ, ಹೆಚ್ ಶಿವಬಸವಯ್ಯ, ಭೋಗನಂಜಪ್ಪ ಮತ್ತು ಎಂ. ಶಿವಣ್ಣನವರು ಸದಸ್ಯರಾಗಿ ಚುನಾಯಿತರಾಗಿರುವರು.

ಒಂಟಿಕೊಪ್ಪಲಿನಲ್ಲಿ ವಿಜಿಲೆನ್ಸ್ ತಂಡ

ವಾಣಿವಿಲಾಸ ಮೊಹಲ್ಲಾದಲ್ಲಿ ಪದೇಪದೇ ಕಳ್ಳತನಗಳಾಗುತ್ತಿರುವುದನ್ನು ತಡೆಯಲು ಆ ಮೊಹಲ್ಲಿಯ ೮, ೯, ೧೦ ಮತ್ತು ೧೧ನೇ ಕ್ರಾಸಿನ ನಿವಾಸಿಗಳ ಸಭೆಯು ಮಹಾರಾಜಾ ಕಾಲೇಜು ಅಸಿಸ್ಟೆಂಟ್ ಲೈಬ್ರೇರಿಯನ್ ಶ್ರೀ ಕೃಷ್ಣಯ್ಯಂಗಾರ್‌ರ ಅಧ್ಯಕ್ಷತೆಯಲ್ಲಿ ಸೇರಿ ಆರು ಜನರುಳ್ಳ ಎರಡು ತಂಡಗಳು ದಿನವೂ ರಾತ್ರಿ ೧೧॥ ಮುಂದ ಮುಂಜಾನೆ ೪ ಗಂಟೆವರೆಗೂ, ರಸ್ತೆಯಲ್ಲಿ ಗಸ್ತು ತಿರುಗಬೇಕೆಂದು ಗೊತ್ತುಪಡಿಸಲಾಯಿತು

ಗೆಡ್ಡೆ ತಿಂದ ನಾಲ್ವರ ಮರಣ

ಸ್ವಂ. ವ.] ಚಾಮರಾಜನಗರ ೧೬

ಈ ತಾಲ್ಲೂಕಿನ ಪುಟ್ಟನಪುರದಲ್ಲಿ ಯಾವುದೋ ಒಂದು ವಿಧವಾದ ಗೆಡ್ಡೆಗಳನ್ನು ತಿಂದ ಕೆಲವರ ಪೈಕಿ ೩ ಜನರು ಮಡಿದರು ಆಸ್ಪತ್ರೆಗೆ ಸೇರಿಸಲಾಗಿದ್ದ ಮತ್ತೊಬ್ಬನು ನೆನ್ನೆ ಮೃತಪಟ್ಟನು. ಸೋಲಿಗರು ಸಾಮಾನ್ಯವಾಗಿ ತಿನ್ನುವ ಒಂದು ಜಾತಿಯ ಗೆಡ್ಡೆಗಳನ್ನೆಂದು ತಪ್ಪು ತಿಳುವಳಿಕೆಯಿಂದ ಇವರುಗಳು ತಿಂದಿರಬಹುದೆಂದು ಹೇಳಲಾಗಿದೆ. ಆ ಗೆಡ್ಡೆಯನ್ನು ಪರೀಕ್ಷೆಗಾಗಿ ಕಳುಹಲಾಗಿರುವುದೆಂದೂ ಗೊತ್ತಾಗಿದೆ.

ವಿಮಾನ ಉರುಳಿ ೧೪ ಮಂದಿಯ ಮರಣ

ಅರ್ಜೆಂಟೈನಾ ರಾಜಧಾನಿ ಬ್ಯೂನೋ ಏರ್ಸಿಗೆ ಸ್ವಲ್ಪ ದೂರವಿರುವ ರಯೋಕುಟೋ ಎಂಬಲ್ಲಿ ಮೊನ್ನೆ ವಿಮಾನವೊಂದು ಮುರಿದು ಬಿದ್ದು ಅದರಲ್ಲಿದ್ದ ೧೮ ಜನರ ಪೈಕಿ ೧೪ ಮಂದಿ ಮೃತಪಟ್ಟರು

ಮದ್ರಾಸಿನಲ್ಲಿ ಸೈಕಲ್ ತೆರಿಗೆ ರದ್ದು

ಈ ವರ್ಷ ಏಪ್ರಿಲ್ ತಿಂಗಳಿಂದ ಮದ್ರಾಸು ನಗರದಲ್ಲಿ ಬಡವರ ವಾಹನವೆಂದು ಪರಿಗಣಿಸಲಾಗಿರುವ ಬೈಸಿಕಲ್ಲುಗಳ ಮೇಲೆ ತೆರಿಗೆಯನ್ನು ರದ್ದು ಮಾಡಲಾಗಿದೆ

ಮತಾಂತರಾಸಕ್ತ ಪಾದ್ರಿಗಳ ವಾಪಸಾತಿಗಾಗಿ ಶಿಫಾರಸು

ಮತಾಂತರಗೊಳಿಸುವುದೇ ಮುಖ್ಯ ಉದ್ದೇಶವಾಗುಳ್ಳ ಕ್ರಿಸ್ತ ಪಾದ್ರಿಗಳನ್ನು ವಿದೇಶಗಳವರು ವಾಪಸು ಕರೆಸಿಕೊಳ್ಳಬೇಕೆಂದು ಕ್ರಿಸ್ತ ಪಾದ್ರಿಗಳ ಚಟುವಟಿಕೆ ತನಿಖೆ ಸಮಿತಿಯವರು ಶಿಫಾರಸು ಮಾಡಿರುತ್ತಾರೆ ಹೆಚ್ಚುಹೆಚ್ಚಾಗಿ ಬರುತ್ತಿರುವ ವಿದೇಶೀ ಪಾದ್ರಿಗಳ ಸಂಖ್ಯೆಯನ್ನು ತಡೆಗಟ್ಟಲೂ ಶಿಫಾರಸು ಮಾಡಲಾಗಿದೆ ನಾಗಪುರ ಹೈಕೋರ್ಟಿನ ಮಾಜಿ ಶ್ರೇಷ್ಠ ನ್ಯಾಯಾಧೀಶ ನಿಯೋಗಿಯವರ ಅಧ್ಯಕ್ಷತೆಯಲ್ಲಿ ಎರಡು ವರ್ಷಗಳ ಹಿಂದೆ ೬ ಜನರ ತನಿಖೆ ಸಮಿತಿಯನ್ನು ರಚಿಸಲಾಗಿತ್ತು

ತೆಪ್ಪೋತ್ಸವ

ಸಂತೆಪೇಟೆ ಶ್ರೀ ಪ್ರಸನ್ನ ನಂಜುಂಡೇಶ್ವರಸ್ವಾಮಿ ದೇವಾಲಯದಲ್ಲಿರುವ ಶ್ರೀ ಸತ್ಯನಾರಾಯಣಸ್ವಾಮಿಯವರ ತೆಪ್ಪೋತ್ಸವವು ಇಂದಿನಿಂದ ೩೦ ದಿನಗಳವರೆಗೆ ನಿತ್ಯವೂ ಸಂಜೆ ೭॥ ಗಂಟೆಯಿಂದ ೯॥ ವರೆಗೆ ನಡೆಯುವುದು

○ ಅಲಹಾಬಾದು ಬಳಿ ಪ್ರತಾಪಗಡದಲ್ಲಿ ೨೫ ಮೂಗಳ ಸಂಘ ಕಚ್ಚಿ ಆರು ಪೌಂಡು ಸಕ್ಕರೆ ತಿಂದ ಯುವಕನೊಬ್ಬನು ಆಸ್ಪತ್ರೆಗೆ ಸೇರಿಸಲ್ಪಟ್ಟು ಮೃತಪಟ್ಟನೆಂದು ವರದಿಯಾಗಿದೆ.

ಸೂಚನೆ

ಪ್ರಥಮೈಕಾದಶಿ ಪಾರಣೆ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ

— ವ್ಯವಸ್ಥಾಪಕ

ಭಾರತ ಯುವಕ ಸಮಾಜ ಶಿಬಿರದ ಆರಂಭೋತ್ಸವ

ಇಲವಾಲದ ಸಮಾರಂಭದಲ್ಲಿ ವಿದ್ಯಾ ಮಂತ್ರಿಗಳ ಭಾಷಣ

ಮೈಸೂರು ೧೭

ರಾಷ್ಟ್ರಾಭಿವೃದ್ಧಿಯಲ್ಲಿ ಯುವಕರೂ ಸಹ ಪ್ರಮುಖ ಪಾತ್ರ ವಹಿಸಲು ಅನುವಾಗುವಂತೆ ಅವರಿಗೆ ಶ್ರಮದಾನ, ರಾಷ್ಟ್ರದ ಸಂಸ್ಕೃತಿ ಮತ್ತು ಇತಿಹಾಸಗಳ ಹಿರಿಮೆಯ ಪಾರಂಪರ್ಯದ ಶಿಕ್ಷಣ ಕೊಟ್ಟು ಅವರಲ್ಲಿ ಶಿಸ್ತನ್ನುಂಟುಮಾಡುವ ಸಲುವಾಗಿ ಭಾರತ ಯುವಕ ಸಮಾಜ ಮತ್ತು ಸಂಸ್ಥಾನದ ಸೇವಾದಳದವರಿಂದ ಏರ್ಪಡಿಸಲಾಗಿರುವ ಯುವಕ ಶಿಬಿರದ ಆರಂಭೋತ್ಸವವನ್ನು ನೆನ್ನೆ ಸಂಜೆ ಇಲವಾಲದ ರಾಷ್ಟ್ರ ನಿಲಯದಲ್ಲಿ ಯುವಕ ಸಮಾಜದ ಕೇಂದ್ರ ಸಲಹೆಗಾರರಾದ ಶ್ರೀ ಗೋವಿಂದ ಸಹಾಯರು ನೆರವೇರಿಸಿದರು ವಿದ್ಯಾ ಸಚಿವ ಶ್ರೀ ಎ ಜಿ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು

ಪ್ರಾರಂಭದಲ್ಲಿ ಶಿಬಿರದ ಯುವಕರಿಂದ ಪ್ರಾರ್ಥನೆಯಾದನಂತರ ಶ್ರೀ ದುಮಾಲೆ ಚೆನ್ನಬಸವಯ್ಯನವರು ಸ್ವಾಗತ ಭಾಷಣ ಮಾಡಿದರು ಶಿಬಿರದ ವ್ಯವಸ್ಥಾಪಕ ಶ್ರೀ ಎಂ ಎ ಶ್ರೀನಿವಾಸಯ್ಯಂಗಾರ್ಯರು ವರದಿಯೊಂದನ್ನೊಪ್ಪಿಸಿದರು ಈ ವರ್ಷ ಏರ್ಪಡಿಸಲಾಗುವ ಯುವಕ ಶಿಬಿರಗಳಲ್ಲೊಂದಾದ ಇದು ದಕ್ಷಿಣ ಭಾರತದ ನಾನಾ ಪ್ರಾಂತಗಳ [illegible] ಮಂದಿ ಯುವಕರು [illegible] ಎಂದು ಅವರು ತಿಳಿಸಿದರು

ಶ್ರೀ ಗೋವಿಂದ ಸಹಾಯರು ಭಾಷಣ ಮಾಡಿ ಯುವಕರ ಕ್ರಿಯಾಶಕ್ತಿಗೆ [illegible] ದೇಶದ [illegible] ಹಿತಚಿಂತನೆಯ ಮಾರ್ಗದಲ್ಲಿ ಕೊಂಡೊಯ್ಯಲು ಇಂತಹ ಶಿಬಿರಗಳು ಅವಶ್ಯಕವೆಂದೂ ನುಡಿದರು ಭಾರತ ಯುವಕ ಸಮಾಜದ ಸ್ವರೂಪ ಮತ್ತು ಧ್ಯೇಯಧೋರಣೆಗಳನ್ನು ವಿವರಿಸಿದರು

ಸಚಿವ ಶ್ರೀ ರಾಮಚಂದ್ರರಾಯರು ಭಾಷಣ ಮಾಡಿ, ಕಳೆದ ಸಹಸ್ರ ವರ್ಷಗಳಿಂದಲೂ [illegible] ಪರಕೀಯರ ದಾಸ್ಯದಲ್ಲಿ ಬಿದ್ದುದಕ್ಕೆ ಕಾರಣವಾದ ಲೋಪದೋಷಗಳನ್ನು ಇಂದಿನ ಯುವಕರು ಹೋಗಲಾಡಿಸಲು ಪ್ರಯತ್ನಿಸಬೇಕೆಂದೂ, ಅಲಕ್ಷ್ಯ ಅಶಿಸ್ತು ಮುಂತಾದ ದುರ್ಗುಣಗಳನ್ನು ತೊಡೆದುಹಾಕಬೇಕೆಂದೂ ಹೊಸ ಹೊಸ ರಾಷ್ಟ್ರ ನಿರ್ಮಾಣಕ್ಕಾಗಿ ನವಚೈತನ್ಯದಿಂದ ಪ್ರಯತ್ನಿಸಲು ಕರೆಯಿತ್ತರು.

ಶಿಬಿರದ ಯುವಕರಿಂದ ಹಲವು ಮನರಂಜನೆ ಕಾರ್ಯಕ್ರಮಗಳಾದನಂತರ ಶ್ರೀ ಎ ಎಸ್ ನಾರಾಯಣರು ಯವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ವಿಮಾನಗಳ ವಿನಾಶ ಕೃತ್ಯಕ್ಕೆ ಭಾರಿ ಶಿಕ್ಷೆ

ಅಮೆರಿಕದಲ್ಲಿ ವಿಮಾನ ಹಡಗು ಮೋಟಾರು ಬಸ್ಸುಗಳ ವಿನಾಶ ಕೃತ್ಯ ನಡೆಸಿದವರಿಗೆ ಮರಣ ದಂಡನೆಯೂ ಸೇರಿ, ಅತ್ಯುಗ್ರ ಶಿಕ್ಷೆ ವಿಧಿಸುವ ಮಸೂದೆಗೆ ಅಲ್ಲಿನ ಅಧ್ಯಕ್ಷ ಐಸೆನ್‌ಹೋವರರು ಅಂಗೀಕಾರ ನೀಡಿರುವರು ಕಳೆದ ವರ್ಷ ವಿಮಾನ ವೊಂದರಲ್ಲಿ ಬಾಂಬನ್ನು ಇಟ್ಟು ಅದು ಹಾರಿದಾಗ ಸಿಡಿದು ಬಿದ್ದು [illegible] ಮಂದಿ ಮೃತರಾದ ಮೇಲೆ ಈ ಬಗ್ಗೆ ಶಾಸನ ತರಲು ಆಲೋಚಿಸಲಾಯಿತು [illegible] ವರ್ಷದವರೆಗೂ ಸಜ ಮತ್ತು ೧೦ ಸಾವಿರ ಡಾಲರ್‌ವರೆಗೂ ದಂಡ ವಿಧಿಸಲೂ ಶಾಸನದಲ್ಲಿ ಅವಕಾಶವಿದೆ

ನಂಜನಗೂಡು ತಾಲ್ಲೂಕಿನಲ್ಲಿ ಪರಿಹಾರ ಕ್ರಮ

ಕ್ಷಾಮದ ಪರಿಹಾರ ಕಾರ್ಯದ ಅಂಗವಾಗಿ [illegible] ಕೆಲಸವನ್ನು ಮಾಡಲಾಗುತ್ತಿದೆ [illegible] ಯಲ್ಲಿ ಒಂದು ಕೆರೆ ರಿಪೇರಿಯನ್ನು [illegible] ಜನ ಕೆಲಸಗಾರರು ಸುಮಾರು [illegible] ರೂ ಗಳ [illegible] ಮಾಡುತ್ತಿರುವರು [illegible] ಒಂದು ಕೆರೆ ರಿಪೇರಿ ಮತ್ತು [illegible] ರಸ್ತೆಯ ಕೆಲಸಗಳು [illegible] ರೂ ಅಂದಾಜಿನಲ್ಲಿ ನಡೆಯುತ್ತಿವೆ [illegible] ಕೆಲಸ ಆಗುತ್ತಿದೆ [illegible] ಈ ತಾಲ್ಲೂಕಿನಲ್ಲಿ [illegible] ರೂ ಗಳ ಕೆಲಸ [illegible] ಮತ್ತು [illegible],೦೦೦ [illegible] ಪ್ರತಿಯನ್ನೂ [illegible],೦೦೦ [illegible] ಸರಬರಾಜು ಮಾಡಲಾಗಿದೆ [illegible] ಕೆಲಸ ನಡೆಯುತ್ತಿದೆ ಇನ್ನು ಕೆಲವು [illegible] ರೈತರ ಸಹಕಾರ [illegible] ಪಡೆದ ಹಣಗಳನ್ನು ಕೂಡ ವಾಪಸು [illegible] ನಂಜನಗೂಡು [illegible] ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು

ನಿಯೋ ಗ್ಯಾರೇಜ್

ಇರ್ವಿನ್ ರೋಡ್, ಮೈಸೂರು

ಪ್ರಕಟಣೆ

1-7-56 ರಿಂದ ನಮ್ಮ ಗ್ಯಾರೇಜಿನ ಫೋರ್‍ಮನ್ ಆಗಿ, ಬೊಂಬಾಯಿಯಲ್ಲಿ ಖ್ಯಾತಿ ಪಡೆದಿರುವ ಮತ್ತು ಡೀಸಲ್ ರಿಪೇರಿಯಲ್ಲಿ ತುಂಬಾ ಅನುಭವವುಳ್ಳ

ಶ್ರೀ ಸಿ ಎ ವಾಟರ್ಸ್‌ರವರನ್ನು ನಿಯಮಿಸಿದ್ದೇವೆ

ಎಲ್ಲಾ ತರಹ ಡೀಸಲ್ ಇಂಜನ್ ಮತ್ತು ಪೆಟ್ರೋಲ್ ವಾಹನಗಳ ಸಕಲ ರಿಪೇರಿಗಳನ್ನೂ ತೃಪ್ತಿಯಾಗಿ ಶೀಘ್ರ ಸಮರ್ಪಕವಾಗುವ ರೀತಿಯಲ್ಲಿ ಮಾಡುತ್ತೇವೆ

ಇಂದೇ ಪರೀಕ್ಷಿಸಿ ನೋಡಿ

Edited, Printed and Published by A. R. Navarajan at Sadhvi Press D. Subbiah Road, Mysore

ಬಿದರೆ ಜಿಲ್ಲೆಯ ಪ್ರಾದೇಶಿಕ ಹೊಂದಾಣಿಕೆಗೆ ಅವಕಾಶ

ಆಂಧ್ರ ಮತ್ತು ಮೈಸೂರು ಸಂಸ್ಥಾನಗಳ ನಡುವೆ ಬಿದರೆ ಜಿಲ್ಲೆಯ ಗಡಿ ಪ್ರದೇಶಗಳನ್ನು ಹೊಂದಾಣಿಕೆ ಮಾಡಿಕೊಳ್ಳಲು ಸಂಸ್ಥಾನ ಪುನರ್ವಿಂಗಡಣಾ ಮಸೂದೆಗೆ ಜಂಟಿ ಪಾರ್ಲಿಮೆಂಟರಿ ಸಮಿತಿಯು ತಿದ್ದುಪಡಿ ಮಾಡಿದೆ

ಕರೇಲೊ ಫಿನ್ನಿಷ್ ರಿಪಬ್ಲಿಕ್ ರಾಜ್ಯದ ರದ್ದು

ರಷ್ಯದಲ್ಲಿರುವ ೧೬ ರಿಪಬ್ಲಿಕ್ ರಾಜ್ಯಗಳ ಪೈಕಿ ಒಂದಾದ ಕರೇಲೊ ಫಿನ್ನಿಷ್ ರಿಪಬ್ಲಿಕ್ಕನ್ನು ರಷ್ಯವು ರದ್ದುಗೊಳಿಸಿರುತ್ತದೆ

ಪಿಟೀಲು ಕಛೇರಿ ಮತ್ತು ಶಂಕರ ವಿಜಯ ವಾಚನ

ಜಯನಗರದ ಶ್ರೀ ಪೌರಾಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ, ದ್ವಾದಶಿ ಪ್ರಯುಕ್ತ ನಾಳೆ ಸಂಜೆ ೬॥ ಘಂಟೆಗೆ ಆಸ್ಥಾನ ವಿದ್ವಾನ್ ಶಿವರುದ್ರಪ್ಪನವರಿಂದ ಪಿಟೀಲು ವಾದನವೂ, ಅನಂತರ ಶ್ರೀ ಕೃಷ್ಣಗಿರಿ ಕೃಷ್ಣರಾಯರ ವ್ಯಾಖ್ಯಾನದೊಡನೆ ಶ್ರೀ ಬಿ ಎಸ್ ಎಸ್ ಕೌಶಿಕ್‌ರವರಿಂದ ಶಂಕರ ವಿಜಯ ವಾಚನವೂ ನಡೆಯುವುವು ಸಕಲರಿಗೂ ಆಹ್ವಾನವುಂಟು

ಪತ್ರಿಕೋದ್ಯಮ ವಿದ್ಯಾರ್ಥಿಗಳ ಸಂಘ

ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ವಿದ್ಯಾರ್ಥಿಗಳ ಸಂಘದ ಅಧಿಕಾರ ವರ್ಗದ ಚುನಾವಣೆಯು ನೆನ್ನೆ ನಡೆದು ಪ್ರಸಕ್ತ ಸಾಲಿಗೆ ಶ್ರೀ ನಾಡಿಗ ಕೃಷ್ಣಮೂರ್ತಿಯವರು ಅಧ್ಯಕ್ಷರು ಶ್ರೀ ಎನ್ ಎಸ್ ಚನ್ನಕೇಶವಯ್ಯನವರು ಉಪಾಧ್ಯಕ್ಷರು, ಶ್ರೀಗಳಾದ ಡಿ ಎಂ ಗುರುಸಿದ್ದಯ್ಯ ಮತ್ತು ಸುಂದರರಾಜ್ ಕಾರ್ಯದರ್ಶಿಗಳು ಮತ್ತು ಬಿ ಎಸ್ ರಾಮಚಂದ್ರರಾಯರು ಖಜಾಂಚಿಯಾಗಿ ಆರಿಸಲ್ಪಟ್ಟರು ಶ್ರೀಗಳಾದ ಎಂ ಭೀಮಸೇನರೆಡ್ಡಿ, ಎಂ ಪಿ ಶಿವಾರೆಡ್ಡಿ, ಎಸ್ ಪಟ್ಟಾಭಿರಾಮ್, ಆರ್ ಗುಂಡಪ್ಪ ಮತ್ತು ಶ್ರೀಮತಿಯರಾದ ಎಸ್ ಆರ್ ಸೀತಾಲಕ್ಷ್ಮಿ ಆರ್ ನಾಗಮಣಿ ಮತ್ತು ಜಯಶ್ರೀಯವರು ಸದಸ್ಯರಾಗಿಯೂ ಚುನಾಯಿತರಾಗಿರುವರು

ಹರಿಕಥೆ

ಕೃಷ್ಣಮೂರ್ತಿಪುರದ ಶ್ರೀ ರಾಮ ಮಂದಿರದಲ್ಲಿ ಪ್ರಥಮ ಏಕಾದಶಿ ಪ್ರಯುಕ್ತ ಈ ಸಂಜೆ ೬॥ ಘಂಟೆಗೆ ವೇ॥ ಬ್ರ॥ ಶ್ರೀ ಲಕ್ಷ್ಮೀಪತಿ ಶಾಸ್ತ್ರಿಗಳವರಿಂದ ಚಂದ್ರಹಾಸ ಎಂಬ ಹರಿಕಥೆಯು ನಡೆಯುವುದು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಮೈಸೂರು ಪೇಟೆ ಧಾರಣೆ

	ರೂ	ಮುಂದ	ರೂ	ಪಕೆ
ಕಡಲೆಕಾಯಿ	[illegible]	೦ ೦	[illegible]	೦ ೦
ಹೊಂಗೆಬೀಜ	[illegible]	[illegible]		
ಎಳ್ಳು	[illegible]	೦ ೦	[illegible]	[illegible]
ಹುರುಳಿ	[illegible]	[illegible]	[illegible]	[illegible]
ಹೆಸರು	[illegible]	೦ ೦	[illegible]	[illegible]
ಅಲಸಂದೆ	[illegible]	[illegible]	[illegible]	೦ ೦
ಉದ್ದು	[illegible]	೦ ೦	[illegible]	[illegible]
ಶೇಂಗೆಕಾಯಿ	[illegible]	[illegible]		
ಹುಣಸೇಹಣ್ಣು	[illegible]	೦ ೦	[illegible]	[illegible]
ಮೆಣಸಿನಕಾಯಿ	[illegible]	[illegible]	[illegible]	[illegible]
ತೆಂಗಿನಕಾಯಿ ೧೦೦ಕ್ಕೆ	[illegible]	[illegible]	[illegible]	[illegible]

SREE GANESH TALKIES

TO CATCH A THIEF

Extended for 19th & 20th Also
If you have not already seen it, it is your turn to see it now.

Gala release on 21—7—56

DOCTOR AT SEA

VistaVision Technicolor picture
Featuring —Dirk Bogarde
[This time the medicoes are at sea to entertain you.]

ಉತ್ತಮವಾದ ಕಟ್ಟಡದ ಪ್ಲಾನುಗಳು

ಮನೆಗಳ ಕಟ್ಟಡದ ಪ್ಲಾನುಗಳನ್ನು ಮಾಡಿ ಬ್ಲೂ ಪ್ರಿಂಟ್ ಮಾಡಿಕೊಡುವುದಕ್ಕೆ ನೂರಡಿ ರಸ್ತೆ ಗಾಯತ್ರಿ ಟಾಕೀಸ್ ಎದುರಿನಲ್ಲಿರುವ ಪ್ಲಾಟ್ ಆಫೀಸಿನಲ್ಲಿ ಕೆಳಗೆ ಸಂಪರ್ಕಿಸಿ [illegible]

ವಿ [illegible]
ಪ್ರಾಕ್ಟಿಕಲ್ ಆರ್ಕಿಟೆಕ್ಟ್ ಮತ್ತು ಡಿಸೈನರ್
ಲೈಸೆನ್ಸ್ ಹೋಲ್ಡರ್

Please note there is a CHANGE OF PROGRAMME AT SRI GAYATHRI TALKIES

From 18 7 56 For 2 Days
Daily 3 Shows

GOLDEN MISTRESS

(Technicolor)
Starring - John Agar

FOR THE INSTALLATION OF RECORDS MIKE & LOUDSPEAKERS AT YOUR DOORS PLEASE CONTACT H S RAMACHANDRAN'S EVERGREEN ACOUSTICS TREASURE HOUSE OF RECORDS 28 SONAR STREET MYSORE

ಹಾಸಿಗೆ - ದಿಂಬು

ಮಿತವ್ಯಯದಲ್ಲಿ ಪತ್ತಿನಿಂದ ತಯಾರು ಮಾಡುತ್ತೇವೆ

ಬಾಬುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

12-7-1956ನೇ ಗುರುವಾರದಿಂದ ಅನೋಘ ಪ್ರಾರಂಭ

ಹೊಸ ಮ್ಯಾನೇಜ್‌ಮೆಂಟ್

ವೆಲ್‌ಕಮ್ ಕಾಫಿ ಕ್ಲಬ್

(ಪ್ರಭಾ ಟಾಕೀಸ್ ಎದುರು) ಮೈಸೂರು

ಮೈಸೂರಿನಲ್ಲಿ ಪ್ರಖ್ಯಾತಿ ಪಡೆದಿರುವ ಹಳೆ ಅನ್ನಪೂರ್ಣದ ಶ್ರೀ ಸುಬ್ಬರಾವ ನೇತೃತ್ವದಲ್ಲಿ ಮಾಡಲ್ಪಟ್ಟ ರುಚಿರುಚಿಕರವಾದ ಶುದ್ಧ ತುಪ್ಪದಿಂದಲೇ ತಯಾರಾದ ಕೇಸರಿಬಾತ್, ಸ್ಪೆಷಲ್ ದೋಸೆ, ಸ್ಪೆಷಲ್ ಟೀ ಕಾಫಿ ಮತ್ತು ಇತರ ಸಿಹಿ ಮತ್ತು ಖಾರ ತಿಂಡಿ ರುಚಿಗೆ ವೆಲ್‌ಕಮ್ ಕಾಫಿ ಕ್ಲಬ್ಬಿಗೆ ದಯಮಾಡಿ ಭೇಟಿ ಕೊಡಿ

ವಿ ರಾಘವೇಂದ್ರಪ್ರಸಾದ್ ಶೆಟ್ಟಿ, ಪ್ರೊಪ್ರೈಟರ್

ಪ್ರಥಮೈಕಾದಶಿ ಪ್ರಯುಕ್ತ ಈ ರಾತ್ರಿ ಒಂದು ಗಂಟೆಗೆ ವಿಶೇಷ ಪ್ರದರ್ಶನವಿದೆ!

ಚಾಮುಂಡೇಶ್ವರಿ ಟಾಕೀಸ್

20-7-56 ರಿಂದ ಸರ್ವರ ಮನವ ಸ್ಫಟಿಗೆ ಪಾತ್ರವಾಗಿ [illegible]ನೇ ವಾರದಲ್ಲಿ ನಡೆಯುತ್ತಿರುವ, 60 ಸಾವಿರಕ್ಕೂ ಮಿಗಿಲಾದ ಜನ ನೋಡಿ ಮೆಚ್ಚಿರುವ

★ ಮುತ್ತೈದೆ ಭಾಗ್ಯ

ಮೈನಾವತಿ, ಜಯಶ್ರೀ ರೇವತಿ, ಕಲ್ಯಾಣ್‌ಕುಮಾರ್, ಹುಣಸೂರು ಕೃಷ್ಣಮೂರ್ತಿ, ಬಾಲಕೃಷ್ಣ ನಟಿಸಿರುವ

ನಿರ್ದೇಶಕ ನಿರ್ಮಾಪಕ ಬಿ ವಿ ಆಚಾರ್ಯ ಕವಿ ಗೌತಮ ಸ್ಟುಡಿಯೋ ವಾಹಿನಿ

[Vijaya Talkie Distributors' Release

ಬಕ್ರೀದ್ ಹಬ್ಬದ ಪ್ರಯುಕ್ತ ಸ್ಪೆಷಲ್ ಪ್ರೋಗ್ರಾಂ

ಒಲಂಪಿಯಾ ★

19-7-56 ರಿಂದ ಅನೋಘ ಪ್ರಾರಂಭ
ದಿನವೂ ಮೂರು ಪ್ರದರ್ಶನಗಳು

ಫಿಲ್ಮಿಸ್ತಾನ್ ಲಿಮಿಟೆಡ್‌ರವರ ಅತ್ಯುತ್ತಮ ಸಾಮಾಜಿಕ ಚಿತ್ರ

✱ ಮೇಮ್ ಸಾಹೆಬ್

ಪಾತ್ರ - ಮೀನಾ ಕುಮಾರಿ, ಕಿಶೋರ್ ಕುಮಾರ್, ಸಮ್ಮಿಕಪೂರ್ ಮತ್ತು ಓಂ ಪ್ರಕಾಶ್

ನಿರ್ದೇಶನ [illegible] - ಸಂಗೀತ ಮದನಮೋಹನ (ಭಾರತ್ ಭೂಷಣ್ ಪ್ರಖ್ಯಾತಿ)

ಪ್ರಥಮೈಕಾದಶಿ ಪ್ರಯುಕ್ತ ಇಂದು ಆಟಗಳು

ಪ್ರಭುದೇವಾ ಥಿಯೇಟರ್

(ಪ್ರಭಾ ಟಾಕೀಸ್)

13—7—56 ನೇ ಶುಕ್ರವಾರದಿಂದ : ಅನೋಘ ಪ್ರಾರಂಭ

★ ಜಯಸಿಂಹ ★ (ತಮಿಳು)

ಪಾತ್ರ - ಅಂಜಲಿದೇವಿ, ಎನ್ ಟಿ ರಾಮರಾವ್, ಎಸ್ ವಿ ರಂಗರಾವ್, ರೇಲಂಗಿ, ವಹೀದಾ ರೆಹಮಾನ್, ಚಲಂ ಕುಮಾರಿ ಮುಂತಾದವರು

ಟೆಲಿಫೋನ್ ನಂ. 792

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI ; FRIDAY 20—7—1956 ಮೈಸೂರು ; ಶುಕ್ರವಾರ ೨೦—೭—೧೯೫೬ [ಸಂಚಿಕೆ : ೩೦೬

ಬೇಲೂರರ ಕೊಲೆ ಮೊಕದ್ದಮೆ ೨೬ ನೇ ತಾ॥ಗೆ ಅಡ್ಜರ್ನ್

ಸಂಸ್ಥಾನದಲ್ಲಿ ರಾಷ್ಟ್ರಾಧ್ಯಕ್ಷರ ಆಡಳಿತ ಜಾರಿಗೆ ಬರಬೇಕು

ಜಿಲ್ಲಾ ಜನ ಸಂಘ ಸಮ್ಮೇಳನದಲ್ಲಿ ನಿರ್ಣಯ

ಮೈಸೂರು ೨೦

ನೆನ್ನೆ ನಗರದ ಸಹಕಾರ ಭವನದಲ್ಲಿ ಸೇರಿದ್ದ ಮೈಸೂರು ಜಿಲ್ಲಾ ಜನಸಂಘ ಕಾರ್ಯಕರ್ತರ ಸಮ್ಮೇಳನದಲ್ಲಿ ಸಂಸ್ಥಾನದ ರಾಜಕೀಯ ಪರಿಸ್ಥಿತಿಯು ವಿಮರ್ಶಿಸಲ್ಪಟ್ಟು, ಕಾಂಗ್ರೆಸ್ ಪಕ್ಷವವರು ತಮ್ಮತಮ್ಮ ಬಣಾಸಕ್ತಿಗಳಲ್ಲಿ ನಿರತರಾಗಿ ದೇಶದ ಕಾರ್ಯವನ್ನು ಮರೆತಿರುವರಾದ್ದರಿಂದ ಸಂಸ್ಥಾನದಲ್ಲಿ ಮಹಾ ಚುನಾವಣೆಗಳಾಗುವವರೆಗೂ ರಾಷ್ಟ್ರಾಧ್ಯಕ್ಷರ ಆಡಳಿತವೇರ್ಪಡಬೇಕೆಂದು ನಿರ್ಣಯ ಮಾಡಲಾಯಿತು

ಬಹು ಜನರ ಜೀವನಕ್ಕೆ ಧಕ್ಕೆ ತಂದಿರುವ ನೂತನ ವಿದ್ಯುತ್ ದರಗಳನ್ನು ತೆಗೆದು ಹಿಂದಿನ ದರಗಳನ್ನೇ ಮುಂದುವರಿಸಬೇಕೆಂದು ಸಹ ನಿರ್ಣಯ ಮಾಡಲಾಯಿತು

ಇದಲ್ಲದೆ ಕೆಳಕಂಡ ನಿರ್ಣಯಗಳೂ ಅಂಗೀಕೃತವಾದುವು —

ಮೈಸೂರು ನಗರ ಮತ್ತು ಜಿಲ್ಲೆಯ ಅಭಿವೃದ್ಧಿಗಾಗಿ ಕೈಗಾರಿಕೆಗಳನ್ನು ಸ್ಥಾಪಿಸುವುದು, ಚಾಮರಾಜನಗರ-ಸತ್ಯಮಂಗಲ ರೈಲ್ವೆ ಕಾರ್ಯವನ್ನು ಆರಂಭಿಸುವುದು, ಗೋಹತ್ಯೆ ನಿರೋಧ ಶಾಸನವನ್ನು ಪರಿಣಾಮಕಾರಿಯಾಗಿ ಮಾಡಲು ಸಂಸ್ಥಾನಾದ್ಯಂತ ಗೋಮಾಂಸ ಮಾರಾಟವನ್ನು ನಿರೋಧಿಸುವುದು, ಕೇವಲ ಆಡಳಿತ ಪಕ್ಷದ ಕೈಗೊಂಬೆಯಾಗಿರುವ ಭಾರತಸೇವಾದಳಕ್ಕೆ ದ್ರವ್ಯಸಹಾಯವನ್ನು ನಿಲ್ಲಿಸುವುದು, ಸಂಸ್ಥಾನಾದ್ಯಂತ ಕ್ರೈಸ್ತ ಪಾದ್ರಿಗಳ ಹಾವಳಿಯನ್ನು ತಪ್ಪಿಸಲು ಕ್ರಮ ಕೈಗೊಳ್ಳುವುದು, ದ್ವಿತೀಯ ಪಂಚವಾರ್ಷಿಕ ಯೋಜನೆಯಲ್ಲಿ ಆಯುರ್ವೇದಕ್ಕೆ ಹೆಚ್ಚಿನ ಧನ ಸಹಾಯ ನೀಡಿ ಆರೋಗ್ಯ ಇಲಾಖೆಯಲ್ಲಿ ಪ್ರತ್ಯೇಕ ಆಯುರ್ವೇದ ವಿಭಾಗವನ್ನು ಏರ್ಪಡಿಸುವುದು, ವಿಶ್ವೇಶ್ವರಯ್ಯನವರ ಗ್ರಾಮ ಕೈಗಾರಿಕಾ ಯೋಜನೆಯನ್ನು ಯಶಸ್ವಿಯಾಗಿ ಕಾರ್ಯಗತ ಮಾಡಲು ಸೂಕ್ತ ಶಿಕ್ಷಣಕೇಂದ್ರಗಳನ್ನು ತೆರೆಯುವುದು, ರೈತರಿಗೆ ಕೊಡುವ ಸಾಲಗಳನ್ನು ೫೦೦ ರಿಂದ ಸಾವಿರ ಮತ್ತು ೫ ಸಾವಿರದವರೆಗೂ ಹೆಚ್ಚಿಸುವುದು

ಸಮ್ಮೇಳನದಲ್ಲಿ ಜಿಲ್ಲೆಯ ನಾನಾ ಭಾಗಗಳ ಸುಮಾರು ೧೫೦ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು ಸಮ್ಮೇಳನದ ಆರಂಭೋತ್ಸವವನ್ನು ಬೆಳಿಗ್ಗೆ ಆಂಧ್ರ ಪ್ರಾಂತ ಜನಸಂಘದ ಸಂಘಟನಾ ಕಾರ್ಯದರ್ಶಿ ಗೋಪಾಲರಾವ್ ಠಾಕೂರರು ನೆರವೇರಿಸಿದರು

ಶ್ರೀಯುತರಿಂದ ಪಕ್ಷದ ಧ್ವಜಾರೋಹಣವಾದನಂತರ ಶ್ರೀ ಎ ಎಲ್ ಸುಂದರನಾರಾಯಣಶೆಟ್ಟರು ಸ್ವಾಗತ ಭಾಷಣ ಮಾಡಿದರು ಶ್ರೀ ಠಾಕೂರರು ತಮ್ಮ ಭಾಷಣದಲ್ಲಿ ಜನಸಂಘವೊಂದೇ ದೇಶದಲ್ಲಿ ಪರಿಣಾಮಕಾರಿಯಾದ ಮತ್ತು ಸರಿಯಾದ ಮಾರ್ಗದರ್ಶನ ನೀಡಬಲ್ಲ ಶಕ್ತಿಶಾಲಿ ವಿರೋಧ ಪಕ್ಷವೆಂದು ಹೇಳಿ ರಾಷ್ಟ್ರದ ನಾನಾ ಸಮಸ್ಯೆಗಳ ಬಗ್ಗೆ ತಮ್ಮ ಪಕ್ಷದ ಧೋರಣೆಯನ್ನು ವಿವರಿಸಿದರು.

ಸಂಸ್ಥಾನದಲ್ಲಿ ವಿದ್ಯಾಭ್ಯಾಸ ಸಮಿತಿಯ ರಚನೆ

ಬೆಂಗಳೂರು ೨೦

ಸಂಸ್ಥಾನದಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಮುಖ್ಯ ಸಮಸ್ಯೆಗಳು ಮತ್ತು ವಿದ್ಯಾಭ್ಯಾಸದ ನಾನಾ ಮಟ್ಟಗಳಲ್ಲಿ ರೀತಿನೀತಿಯ ಸಂಯೋಜನೆ ಮತ್ತು ಅಭಿವೃದ್ಧಿಗೆ ಸಲಹೆ ಮಾಡಲು ಸರ್ಕಾರದವರು ೧೭ ಜನ ಸದಸ್ಯರುಳ್ಳ ಕೇಂದ್ರ ವಿದ್ಯಾಭ್ಯಾಸ ಸಮಿತಿಯೊಂದನ್ನು ರಚಿಸಿರುತ್ತಾರೆ ವಿದ್ಯಾ ಮಂತ್ರಿಯವರು ಅದರ ಅಧ್ಯಕ್ಷರಾಗಿರುವರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರ್ ಮತ್ತು ವಿದ್ಯಾ ಇಲಾಖೆಯ ಡೈರೆಕ್ಟರ್ ಉಪಾಧ್ಯಕ್ಷರಾಗಿರುತ್ತಾರೆ ವಿದ್ಯಾ ಇಲಾಖೆಯ ಕಾರ್ಯದರ್ಶಿಯವರು ಸಮಿತಿಯ ಕಾರ್ಯದರ್ಶಿಯಾಗಿಯೂ, ಡಿ ಡಿ ಪಿ ಐ ಒಬ್ಬರು ಸಹಕಾರ್ಯದರ್ಶಿಯಾಗಿಯೂ ಇರುವರು

ಜೂಜಾಡುತ್ತಿದ್ದವರಿಗೆ ಶಿಕ್ಷೆ

ನಜರ್‌ಬಾದಿನ ಸಿದ್ಧಪ್ಪಾಜಿ ೧೪ ನೆ ಬೀದಿಯಲ್ಲಿರುವ ಕರಿಯಪ್ಪ ಎಂಬುವರ ಮನೆಯಲ್ಲಿ ನೆನ್ನೆ ಮಧ್ಯಾಹ್ನ ರಾಜೀಸಾಲು ಜೂಜು ಹೂಡುತ್ತಿದ್ದ ಕರಿಯಪ್ಪ ಮತ್ತು ಇತರ ಏಳು ಮಂದಿಯ ಮೇಲೆ ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ದ್ವಿತೀಯ ನಗರ ನ್ಯಾಯಾಧೀಶರು ಕರಿಯಪ್ಪನಿಗೆ ೧೦ ದಿನ ಸಾದಾ ಸಜಾ ಮತ್ತು ೫೦ ರೂ ದಂಡ ಮತ್ತು ಇತರರಿಗೆ ತಲಾ ೧೦ ರೂ ದಂಡ ಮತ್ತು ಕೋರ್ಟು ಏಳುವವರೆಗೆ ಸಜಾ ವಿಧಿಸಿದರು ದಂಡ ಕೊಡಲು ತಪ್ಪಿದರೆ ಕರಿಯಪ್ಪನಿಗೆ ೭ ದಿನ ಮತ್ತು ಇತರರಿಗೆ ೫ ದಿನ ಸಜಾ ಹಾಕಲಾಗಿದೆ. ಜೂಜಾಟಕ್ಕೆ ಮನೆ ಕೊಟ್ಟಿದ್ದಕ್ಕಾಗಿ ಕರಿಯಪ್ಪನಿಗೆ ೨೦೦ ರೂ. ದಂಡವನ್ನು ತಪ್ಪಿದರೆ ೧೫ ದಿನ ಸಾದಾ ಸಜಾವನ್ನೂ ವಿಧಿಸಲಾಗಿದೆ.

ಪುರಸಭಾ ಉಪಾಧ್ಯಕ್ಷ ಚುನಾವಣೆ

ಶ್ರೀರಂಗಪಟ್ಟಣ ೧—

ಇಲ್ಲಿನ ಪುರಸಭೆಯ ಉಪಾಧ್ಯಕ್ಷರ ಚುನಾವಣೆಯು ನೆನ್ನೆ ಶ್ರೀ ಬೋರೇಗೌಡರ ಅಧ್ಯಕ್ಷತೆಯಲ್ಲಿ ನಡೆದು, ಶ್ರೀ ಕೆ ಪುಟ್ಟಸ್ವಾಮಯ್ಯನವರು ಚುನಾಯಿತರಾದರು ಅವರಿಗೆ ೧೧ ಮತ್ತು ಪ್ರತಿಸ್ಪರ್ಧಿ ಶ್ರೀ ಟಿ ಸೋಮೋಜಿರಾಯರಿಗೆ ೯ ಓಟುಗಳು ಬಂದುವು ಶ್ರೀ ಪುಟ್ಟಸ್ವಾಮಯ್ಯನವರು ಇದೇ ಮೊದಲಬಾರಿ ಪೌರಸಭಾ ಸದಸ್ಯರಾಗಿ ಆರಿಸಲ್ಪಟ್ಟಿರುವರು ನೆನ್ನೆಯೇ ಅವರು ಅಧಿಕಾರವನ್ನು ಸ್ವೀಕರಿಸಿದರು

ಸೈಕಲ್ ಮೇಲೆ ಡಬ್ಬಲ್ ರೈಡಿಂಗಿಗೆ ಅವಕಾಶ

ಸೈಕಲ್ಲುಗಳ ಮೇಲೆ ಸವಾರಿ ಮಾಡುವವರು ಒಬ್ಬರನ್ನು ಹೆಚ್ಚಾಗಿ ಕೂರಿಸಿಕೊಂಡು ಹೋಗಲು ಸರ್ಕಾರದವರು ಅವಕಾಶ ಕಲ್ಪಿಸಿರುತ್ತಾರೆ

ಅಗ್ರಾಸನ ವಹಿಸಿದ್ದ ನಗರ ಶಾಖೆಯ ಅಧ್ಯಕ್ಷ ಡಾ॥ ಎಸ್ ಆರ್, ವೆಂಕಟಾಚಾರ್ಯರು ಭಾಷಣ ಮಾಡಿ ಜನಸಂಘಕ್ಕೆ ಸಾರ್ವಜನಿಕರು ಹೆಚ್ಚಿನ ಬೆಂಬಲ ನೀಡಲು ಮನವಿಮಾಡಿಕೊಂಡರು ನಗರ ಶಾಖಾ ಕಾರ್ಯದರ್ಶಿ ಶ್ರೀ ಎಂ ಕೃಷ್ಣಪ್ಪನವರು ವಂದನಾರ್ಪಣೆ ಮಾಡಿದರು

ಬೇಲೂರರ ಕೊಲೆ ಮೊಕದ್ದಮೆ ೨೬ ನೇ ತಾ॥ ಗೆ ಅಡ್ಜರ್ನ್

ಅಪಾದಿತರ ವಿಚಾರಣೆ ಅಗತ್ಯದ ಬಗ್ಗೆ ನ್ಯಾಯಾಧೀಶರ ತೀರ್ಪು ಕಾದಿಡಲಾಗಿದೆ

ಸ್ವಂ ಸು ಪ್ರೋ] ಬೆಂಗಳೂರು ೨೦

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಪ್ರಕರಣದ ಮೊಕದ್ದಮೆಯು ಈ ದಿನ ನಡೆದು, ೨೬ನೇ ತಾರೀಕಿಗೆ ಮುಂದುವರಿಸಲ್ಪಟ್ಟಿತು ಅಂದು ಅಪಾದಿತರ ವಿಚಾರಣೆ ಮತ್ತು ಅವರ ಹೇಳಿಕೆ ಪಡೆಯುವುದರ ಅಗತ್ಯದ ಬಗ್ಗೆ ನ್ಯಾಯಾಧೀಶರು ರೂಲಿಂಗ್ ಕೊಡುವರು

ಮೊನ್ನೆ ಅಪಾದಿತರ ಪರವಾಗಿ ಮದ್ರಾಸಿನ ವಕೀಲರಾದ ಶ್ರೀ ಕೆ ಭಾಷ್ಯಂರವರು ವಕಾಲತ್ತು ವಹಿಸಿದ್ದರು ಅವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ,ತಮ್ಮ ವಕೀಲ ವೃತ್ತಿಯ ೫೦ನೇ ವರ್ಷೋತ್ಸವದ ದಿನ ಈ ಮೊಕದ್ದಮೆಯು ಬಂದುದರಿಂದ ಇದನ್ನು ವಹಿಸಿ ತೆಗೆದುಕೊಂಡುದಾಗಿ ತಿಳಿಸಿದರು

ಶ್ರೀ ಎಂ ಸಿ ಗುರುರವರು ವಾದ ಮಾಡಿ ೧೬೦ ಮಂದಿ ಸಾಕ್ಷಿಗಳ ಪೈಕಿ ೬೭ ಜನ ಸಾಕ್ಷಿಗಳ ಹೇಳಿಕೆ ಪ್ರತಿಗಳನ್ನು ಮಾತ್ರ ಒದಗಿಸಲಾಗಿದೆಯೆಂದು ತಿಳಿಸಿದರು ಇತರವೂ ಬೇಕೆಂದು ಕೇಳಿದರು

ಶ್ರೀ ಭಾಷ್ಯಂರವರು ವಾದಿಸಿ, ಕ್ರಿಮಿನಲ್ ಪ್ರೊಸೀಜರ್ ಕೋಡಿನ ತಿದ್ದುಪಡಿ ಶಾಸನದಲ್ಲಿ ಕೋರ್ಟಿನಲ್ಲಿ ವಿಚಾರಣೆ ಮಾಡಬೇಕಾಗಿಲ್ಲವೆಂದು ತಿಳಿಸಿರುವುದಾದರೂ ಮಾಮೂಲಿನಂತೆ, ನಡೆಯುವ ಸಾಕ್ಷಿ ವಿಚಾರಣೆ ಆಗಬೇಕೆಂದು ವಾದಿಸಿದರು

ಅಡಿಷನಲ್ ಅಡ್ವೊಕೇಟ್ ಜನರಲ್ಲರು ಒತ್ತಾಯಿಸುತ್ತ, ಕೋರ್ಟಿನಲ್ಲಿ ಸಾಕ್ಷಿಗಳನ್ನು ವಿಚಾರಣೆ ಮಾಡಬೇಕಾಗಿಲ್ಲವೆಂದು ಮತ್ತೆ ತಿಳಿಸಿ, ಅಪಾದಿತರ ಹೇಳಿಕೆ ಮತ್ತು ವಿಚಾರಣೆಯಾಗಬೇಕೆಂದು ಕೋರಿದರು

ಸಾಕ್ಷಿಗಳ ವಿಚಾರಣೆಯಿಲ್ಲದೆ ಅಪಾದಿತರ ವಿಚಾರಣೆಯನ್ನು ಮೊದಲು ಮಾಡುವುದಕ್ಕೆ ಅವರ ಪರ ವಕೀಲರು ಆಕ್ಷೇಪಿಸಿದರು

ಐಸೆನ್‌ಹೋವರರಿಗೆ ಸೈಕಲ್ ಬಹುಮಾನ

ಅಮೇರಿಕದ ಅಧ್ಯಕ್ಷ ಚುನಾವಣೆಯಲ್ಲಿ ಸ್ಪರ್ಧಿಸಲಿರುವ ಐಸೆನ್‌ಹೋವರರು ಚುನಾವಣಾ ಪ್ರಚಾರ ನಡೆಸಲು ಸಾಧ್ಯವಾಗುವಂತೆ ಫ್ರಾನ್ಸಿನ ಸೈಕಲ್ ಕಂಪನಿಯೊಂದು ಅವರಿಗಾಗಿ ಒಂದು ಸೈಕಲ್ಲನ್ನು ಪ್ಯಾರಿಸ್ಸಿನಲ್ಲಿಯ ಅಮೇರಿಕಾ ರಾಯಭಾರಿ ಮೂಲಕ ಕಳುಹಿಸಿಕೊಟ್ಟಿದೆ

ಯುವರಾಜಾ ಕಾಲೇಜಿನಲ್ಲಿ ಬರೋಡಾ ವಿದ್ಯಾರ್ಥಿನಿಯರ ಪ್ರದರ್ಶನ

ಬರೋಡದ ಆರ್ಯ ಕನ್ಯಾ ಮಹಾ ವಿದ್ಯಾಲಯದ ವಿದ್ಯಾರ್ಥಿನಿಯರ ತಂಡವು ನಾಳೆ ಸಂಜೆ ೫ ಗಂಟೆಗೆ ಯುವರಾಜಾ ಕಾಲೇಜಿನ ಒಳಾವರಣದಲ್ಲಿ ನೃತ್ಯ, ಬರ್ಚಿ ಮತ್ತು ಕತ್ತಿಗಳ ಸಮೇತ ಡ್ರಿಲ್, ಲಾಠಿ ಕವಾಯತು, ಸಂಗೀತ ಯೋಗಾಸನ, ಧನುರ್ಬಾಣ ಪ್ರಯೋಗ ಮುಂತಾದುವುಗಳ ಪ್ರದರ್ಶನ ನಡೆಸಲಿದೆ

ಅಧಿಕಾರಿಗಳಿಗೆ ಪುನಃ ಭತ್ಯ

ಬೆಂಗಳೂರು ೨೦

೫೦೦ ರೂ. ಮತ್ತು ಹೆಚ್ಚು ಸಂಬಳ ಪಡೆಯುತ್ತಿರುವ ಅಧಿಕಾರಿಗಳ ಪ್ರಯಾಣ ಮತ್ತು ವಾಹನ ಭತ್ಯವನ್ನು ಬಿಟ್ಟು ರದ್ದಾಗಿದ್ದ ಮಿಕ್ಕೆಲ್ಲಾ ಭತ್ಯಗಳನ್ನೂ ರದ್ದಾದ ದಿನದಿಂದಲೂ ಕೊಡುವಂತೆ ಸರ್ಕಾರದವರು ಆಜ್ಞೆ ಮಾಡಿರುತ್ತಾರೆ ಭತ್ಯದ ಬಗ್ಗೆ ಕೇಂದ್ರ ಸರ್ಕಾರದವರು ಒಪ್ಪಿದ್ದುದರಿಂದ ಕಳೆದ ವರ್ಷ ಏಪ್ರಿಲ್ಲಿನಿಂದ ರದ್ದಾದ ಭತ್ಯವನ್ನು ಬಟವಾಡೆ ಮಾಡಲಾಗುವುದು

ಬರೋಡಾ ವಿದ್ಯಾರ್ಥಿನಿಯರ ಕವಾಯತು

ಮೈಸೂರು ವಿದ್ಯಾವರ್ಧಕ ಪ್ರೌಢ ಶಾಲಾ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ಕಳೆದ ಸೋಮವಾರ ಶಾಲೆಯಲ್ಲಿ ಬರೋಡೆಯ ಆರ್ಯ ಕನ್ಯಾ ಮಹಾ ವಿದ್ಯಾಲಯದ ವಿದ್ಯಾರ್ಥಿನಿಯರು ಕಸರತ್ತು, ಕತ್ತಿ, ಬಾಕು ಕವಾಯತು, ಸೌರಾಷ್ಟ್ರ ನೃತ್ಯ, ಯೋಗಾಸನಗಳು ಮುಂತಾದುವನ್ನು ಪ್ರದರ್ಶಿಸಿದರು ಯುವರಾಜ ಕಾಲೇಜಿನ ಪ್ರಿನ್ಸಿಪಾಲ್ ಡಾ॥ ಎಲ್ ಸೀಬಯ್ಯನವರು ಅಧ್ಯಕ್ಷತೆ ವಹಿಸಿದ್ದರು ವಿದ್ಯಾರ್ಥಿನಿಯ ದೇಹದಾರ್ಢ್ಯತೆ, ಶಿಸ್ತು ಮತ್ತು ಶಿಕ್ಷಣ ಕ್ರಮವು ಎಲ್ಲರೂ ಮೆಚ್ಚುವಂತಿದ್ದಿತ್ತು

ಐ. ಎ. ಎಸ್. ಅಧಿಕಾರಿಗಳ ವರ್ಗಾವರ್ಗೀ

ಸ್ವಂ ಸು ಪ್ರೋ] ಬೆಂಗಳೂರು ೨೦

ಕೆಳಕಂಡ ಐ ಎ ಎಸ್ ಅಧಿಕಾರಿಗಳ ವರ್ಗಾವಣೆಯನ್ನು ಮಾಡಿ ಸರ್ಕಾರದವರು ಆಜ್ಞೆಯನ್ನು ಹೊರಡಿಸಿರುವರು.-

ಶ್ರೀ ಎನ್ ಮಾಧವರಾಯರು ರೆವಿನ್ಯೂ ಕಮೀಷನರ್, ಶ್ರೀ ಜಿ ಎನ್ ನಾಗರಾಜರಾಯರು-ಎಕ್ಸೈಜ್ ಕಮೀಷನರ್, ಶ್ರೀ ಕೆ ಮಹಮದ್ ಅಹಮದ್ ತುಮಕೂರು ಜಿಲ್ಲಾಧಿಕಾರಿಗಳು, ಶ್ರೀ ಎಂ ಎಸ್ ಸ್ವಾಮಿನಾಥನ್ ಶಿವಮೊಗ್ಗಾ ಜಿಲ್ಲಾಧಿಕಾರಿಗಳು, ಶ್ರೀ ಟಿ ವೆಂಕಟಶಿವರೆಡ್ಡಿ ಗೃಹ ಮತ್ತು ಅರಣ್ಯ ಇಲಾಖಾ ಕಾರ್ಯದರ್ಶಿಗಳು ಜಿ ವೆಂಕಟಕೃಷ್ಣರಾವ್ ವಿದ್ಯಾಭ್ಯಾಸ ಮತ್ತು ಸ್ಥಳೀಯ ಸಂಸ್ಥೆಗಳ ಇಲಾಖಾ ಕಾರ್ಯದರ್ಶಿ, ಶ್ರೀ ಬಿ ಎಂ ಕೃಷ್ಣನ್, ಆರ್ಥಿಕ ಇಲಾಖಾ ಕಾರ್ಯದರ್ಶಿ, ಶ್ರೀ ಡಿ ಜೆ ಬಾಲರಾಜ್, ಚಿತ್ರದುರ್ಗದ ಜಿಲ್ಲಾಧಿಕಾರಿಗಳು, ಶ್ರೀ ರಜಮುತುಲ್ಲಾ ಮಂಡ್ಯದ ಜಿಲ್ಲಾಧಿಕಾರಿಗಳು, ಶ್ರೀ ಸಿ ಬಿ ಕಂಠಯ್ಯ ಲೋಕಲ್ ಡೆವಲಪ್‌ಮೆಂಟ್ ಇಲಾಖಾ ಕಾರ್ಯದರ್ಶಿ, ಮೈಸೂರು ಸೇಲ್ಸ್ ಟ್ಯಾಕ್ಸ್ ಜಿಲ್ಲಾಧಿಕಾರಿ ಶ್ರೀ ಹೆಚ್. ಎಸ್ ಮಲ್ಲರಾಜಅರಸ್ ಸೇಲ್ಸ್ ಟ್ಯಾಕ್ಸ್ ಟ್ರಿಬ್ಯೂನಲ್ಲಿಗೆ

ತುಮಕೂರಿನ ಸಬ್ ಡಿವಿಜನ್ ಅಧಿಕಾರಿ ಶ್ರೀ ಎಸ್ ಪಿ ಗುಂಡಶೆಟ್ಟರಿಗೆ ಬಡ್ತಿ ಕೊಟ್ಟು ಮೈಸೂರಿನ ಸೇಲ್ಸ್ ಟ್ಯಾಕ್ಸ್ ಜಿಲ್ಲಾಧಿಕಾರಿಗ ...

ಭಾರತ-ಪಾಕಿಸ್ತಾನಗಳು ಕ್ರಮೇಣ ಒಂದುಗೂಡಬೇಕು

ಪತ್ರಿಕಾ ಗೋಷ್ಠಿಯಲ್ಲಿ ಜನಸಂಘದ ನಾಯಕರ ಹೇಳಿಕೆ

ಮೈಸೂರು ೨೦

ಆಂಧ್ರ ಪ್ರಾಂತ ಜನಸಂಘದ ಸಂಘಟನಾ ಕಾರ್ಯದರ್ಶಿ ಶ್ರೀ ಗೋಪಾಲ... ಅವರು ನೆನ್ನೆ ಪತ್ರಿಕಾ ಗೋಷ್ಠಿಯೊಂದನ್ನು ಕರೆದು ಸರ್ಕಾರದ ರೀತಿನೀತಿಗಳನ್ನು ಮತ್ತು ತಮ್ಮ ಸಂಘದ ಧ್ಯೇಯಧೋರಣೆಗಳನ್ನು ವಿವರಿಸಿದರು

ಪ್ರಾಂತ ಪುನರ್ವಿಂಗಡಣಾ ಸಮಿತಿಯ ಸಲಹೆಗಳನ್ನು ಕಾಂಗ್ರೆಸ್ ಹೈಕಮಾಂಡ್ ಮತ್ತು ಪ್ರಧಾನಿಯವರು ತಮಗೆ ತೋರಿದಂತೆ ಬದಲಾಯಿಸಿದುದು, ಜೀವವಿಮೆ ಮತ್ತು ಸಿಮೆಂಟ್ ಮಾರಾಟದ ರಾಷ್ಟ್ರೀಕರಣ ಮಾಡಿದುದು ಸರ್ಕಾರದ ಸರ್ವಾಧಿಕಾರ ಧೋರಣೆಯನ್ನು ವ್ಯಕ್ತಪಡಿಸುವುದೆಂದು ಅವರು ನುಡಿದು ಕಾಶ್ಮೀರ ಮತ್ತು ಗೋವಾಗಳನ್ನು ಶೀಘ್ರವಾಗಿ ಪಡೆಯದಿರುವುದು, ಗೋಹತ್ಯೆಯ ನಿರೋಧ ಮಾಡದಿರುವುದು ಮತ್ತು ನಿರಾಶ್ರಿತರ ಸಮಸ್ಯೆಯನ್ನು ಬಗೆಹರಿಸದಿರುವುದು ಜನರಲ್ಲಿ ನಿರಾಶೆ ಮೂಡಿಸಿದೆಯೆಂದೂ ಹೇಳಿಸಿದರು

ಮಹಾರಾಷ್ಟ್ರೀಯರ ಮತ್ತು ಮಹಾಗುಜರಾತಿನವರ ಬೇಡಿಕೆಗಳನ್ನು ಕಡೆಗಣಿಸಬೇಕೆಂದೂ, ದೇಶದಲ್ಲಿ ಕೇಂದ್ರೀಕೃತ ಸರ್ಕಾರವನ್ನು ರಚಿಸಬೇಕೆಂದೂ ಮತ್ತು ದೇಶದ ವಿಭಜನೆಗೆ ಕಾರಣವಾದ ಕೋಮುವಾದಿಗಳಿಗೆ ಪ್ರತಿನಿಧಿತ್ವವನ್ನು ಕೊಡಬಾರದೆಂದೂ ಅವರು ಒತ್ತಾಯ ಮಾಡಿದರು

ಪ್ರಶ್ನೆಗಳಿಗೆ ಉತ್ತರಕೊಡುತ್ತ ಈ ರೀತಿ ನುಡಿದರು — ಇಂದಿನ ಸ್ಥಿತಿಯಲ್ಲಿ ಕಾಂಗ್ರೆಸ್ಸಿಗೆ ತಕ್ಕ ರಾಷ್ಟ್ರೀಯ ವಿರೋಧ ಪಕ್ಷವೆಂದರೆ ಜನಸಂಘವೊಂದೇ. ಎಡಬಲದ ಪಕ್ಷಗಳು ಒಲಿಸಬಹುದು... ನಮ್ಮ ಸಂಸ್ಥೆಯಲ್ಲಿ ಮುಸ್ಲಿಮರಿಗೂ ಸಹ ಪ್ರವೇಶವುಂಟು

ದೇಶದ ವಿಭಜನೆಯು ಕೇವಲ ರಾಜಕೀಯ ದೃಷ್ಟಿಯ ಕಾರಣ ಉಂಟಾದುದು. ಕೊರಿಯ ಜರ್ಮನಿಗಳು ರಾಜಕೀಯವಾಗಿ ಒಡೆದುಹೋಗಿದ್ದರೂ ಮುಂದೆ ಒಂದುಗೂಡಬೇಕೆಂತೆ ಭಾರತ ಪಾಕಿಸ್ತಾನಗಳೂ ಸಹ ಸೇರಬೇಕು

ಇಂದು ಸರ್ಕಾರವು ಅಮೆರಿಕ ಅಥವಾ ರಷ್ಯಾ ದೇಶಗಳ ಸ್ಥಿತಿಗತಿಗಳನ್ನು ವಿವೇಚನೆಯಿಲ್ಲದೆ ಅನುಕರಿಸಲು ಯತ್ನಿಸುತ್ತಿದೆ. ಕೈಗಾರಿಕಾ ಕ್ಷೇತ್ರದಲ್ಲಿ ಅದು ಸಾಧ್ಯವಾದರೂ ಸಾಮಾಜಿಕ ಕ್ಷೇತ್ರಕ್ಕೆ ಒಪ್ಪದ... ನಾವು ತಂತಮ್ಮ ... ಸಂಸ್ಥೆಗಳಲ್ಲಿ ... ಬದಲು ... ದೇಶದ ... ಗಮನವೀಯುವುದು ಒಳ್ಳೆಯದು

ಲೋಹಿಯಾ ಪಕ್ಷಕ್ಕೆ ಚುನಾವಣೆ ಚಿಹ್ನೆ ಇಲ್ಲ

ಡಾ|| ಲೋಹಿಯಾರವರ ಸಮಾಜವಾದಿ ಪಕ್ಷ ಮತ್ತು ಸಂಯುಕ್ತ ಮಹಾರಾಷ್ಟ್ರ ಸಮಿತಿ ಇವೇ ಮುಂತಾದ ನೂತನ ರಾಜಕೀಯ ಪಕ್ಷಗಳಿಗೆ ಚುನಾವಣೆಗಳ ಕಾಲದಲ್ಲಿ ಪಕ್ಷದ ಚಿಹ್ನೆಗಳನ್ನು ಕೊಡಲಾಗುವುದಿಲ್ಲವೆಂದು ಭಾರತದ ಶ್ರೇಷ್ಠ ಚುನಾವಣಾಧಿಕಾರಿಗಳಾದ ಸುಕುಮಾರಸೇನರವರು ತಿಳಿಸಿರುತ್ತಾರೆ. ಪಕ್ಷಗಳಿಗೆ ಹೊಸ ಚಿಹ್ನೆಗಳನ್ನು ಇಟ್ಟುಕೊಳ್ಳಲೂ ಅವಕಾಶ ಕೊಡಲಾಗುವುದಿಲ್ಲವೆಂದು ಅವರು ಹೇಳುವರು

ರಿಪೋನಿನ ಬಿತ್ತನೆ ರಾಗಿ ಮತ್ತು ಭತ್ತ ಸೇವನೆಗೆ ಅರ್ಹವಲ್ಲ

ಸಂಸ್ಥಾನದ ವ್ಯವಸಾಯ ಇಲಾಖಾ ಡೈರೆಕ್ಟರು ಸೂಚನೆಯೊಂದನ್ನು ಹೊರಡಿಸಿ, ಮೈಸೂರು ಜಿಲ್ಲೆಯಲ್ಲಿ ನಾಗೇನಹಳ್ಳಿಯ ವ್ಯವಸಾಯ ಡಿಪೋಗಳವರು ಸರಬರಾಜು ಮಾಡುವ ಬಿತ್ತನೆ ಕಾಳನ್ನು ಹಲವು ರಾಸಾಯನಿಕ ವಸ್ತುಗಳಿಂದ ಶುದ್ಧಿ ಮಾಡಿದೆಯೆಂದೂ, ಹೆಚ್ಚು ಧಾನ್ಯ ಉತ್ಪತ್ತಿಯಾಗಲೂ ಮತ್ತು ಕೀಟ ಮತ್ತು ರೋಗಗಳ ಬಾಧೆ ಇಲ್ಲದಿರಲೂ ಇದರಿಂದ ಸಹಾಯವಾಗುವುದೆಂದೂ ತಿಳಿಸಿರುತ್ತಾರೆ. ಈ ರಾಸಾಯನಿಕ ವಸ್ತುಗಳು ಮನುಷ್ಯನ ಶರೀರಕ್ಕೆ ಕೆಡಕನ್ನುಂಟುಮಾಡುವುದರಿಂದ ಅಂತಹ ಕಾಳನ್ನು ಆಹಾರವಾಗಿ ಉಪಯೋಗಿಸಬಾರದೆಂದೂ ಅವರು ಸೂಚಿಸಿರುತ್ತಾರೆ

ನಮ್ಮ ಸರ್ಕಾರದ ಧರ್ಮಾತೀತ ತತ್ವವು ಕೇವಲ ಆಡಳಿತದ ಸಡಿಲತೆಯಲ್ಲಿ ಪರ್ಯವಸಾನವಾಗಿದೆ. ಇದರಿಂದ ಕ್ರೈಸ್ತ ಪಾದ್ರಿಗಳು ಮತ್ತು ಮುಸ್ಲಿಮರು ದೇಶದ್ರೋಹ ಚಟುವಟಿಕೆಗಳಲ್ಲಿ ತೊಡಗಲು ಕಾರಣವಾಗಿದೆ. ಸರ್ಕಾರವು ಎಚ್ಚೆತ್ತು ಸೂಕ್ತ ಕ್ರಮ ಕೈಗೊಳ್ಳಬೇಕು

ನಿಯೋ ಗ್ಯಾರೇಜ್

ಇರ್ವಿನ್ ರೋಡ್, ಮೈಸೂರು

ಪ್ರ ಕ ಟ ಣೆ

1-7-56 ರಿಂದ ನಮ್ಮ ಗ್ಯಾರೇಜಿನ ಫೋರ್ಮನ್ ಆಗಿ, ಬೊಂಬಾಯಿಯಲ್ಲಿ ಖ್ಯಾತಿ ಪಡೆದಿರುವ ಮತ್ತು ಡೀಸಲ್ ರಿಪೇರಿಯಲ್ಲಿ ತುಂಬಾ ಅನುಭವವುಳ್ಳ

ಶ್ರೀ|| ಸಿ ಎ. ವಾಟರ್ಸ್‌ರವರನ್ನು

ನಿಯಮಿಸಿದ್ದೇವೆ

ಎಲ್ಲಾ ತರಹ ಡೀಸಲ್ ಇಂಜನ್ ಮತ್ತು ಫ್ಯೂಯಲ್ ಪಂಪ್‌ಗಳ ಸಕಲ ರಿಪೇರಿಗಳನ್ನೂ ಖಾತ್ರಿಯಾಗಿ ನಿಮಗೆ ಸಮರ್ಪಕವಾಗುವ ರೀತಿಯಲ್ಲಿ ಮಾಡುತ್ತೇವೆ

ಬಂದೇ ಪರೀಕ್ಷಿಸಿ ನೋಡಿ

ಮಲಯಾ ಭಯೋತ್ಪಾದಕರು ವಾಪಸಾಗಲು ಭತ್ಯ

ಶರಣಾಗತರಾಗಿ ಬಂದು ಚೀನಾಕ್ಕೆ ಹೋಗಬಯಸುವ ಮಲಯದ ಪ್ರತಿಯೊಬ್ಬ ಕಮ್ಯುನಿಸ್ಟ್ ಭಯೋತ್ಪಾದಕನಿಗೂ ಪ್ರಯಾಣವೆಚ್ಚ ಮತ್ತು ೧ ವರ್ಷದ ಜೀವನ ಭತ್ಯವನ್ನು ಕೊಡುವುದಾಗಿ ಅಲ್ಲಿನ ಮುಖ್ಯಮಂತ್ರಿಗಳು ಸೂಚಿಸಿದ್ದಾರೆ. ಜೀವನದ ಭತ್ಯವು ತಿಂಗಳಿಗೆ ಸುಮಾರು ೧೫೦ ರೂ ಆಗುವುದು. ಅಲ್ಲಿನ ಭಯೋತ್ಪಾದಕರು ಹೋರಾಟ ಮುಂದುವರಿಸಲಾಗಲೀ, ಅಥವಾ ಅಲ್ಲಿಂದ ಕಾಲ್ತೆಗೆಯಲಾಗಲೀ, ಸಾಧ್ಯವಿಲ್ಲದೆ ಇದ್ದಾರೆಂದೂ, ಅವರಮೇಲೆ ನಡೆಸಿದ ಹೋರಾಟದಲ್ಲಿ ಸರ್ಕಾರಕ್ಕೆ ೧ ವರ್ಷದಲ್ಲಿ ೩೦ ಕೋಟಿ ರೂ ವೆಚ್ಚವಾದುದಾಗಿಯೂ ಗೊತ್ತಾಗಿದೆ. ಕಾಡುಗಳಲ್ಲಿ ಅವಿತುಕೊಂಡಿರುವ ೨೦೦೦ ಭಯೋತ್ಪಾದಕರು ವಾಪಸಾಗಲು ಸಮ್ಮತಿಸಿದರೆ ಅವರಿಂದ ಸರ್ಕಾರಕ್ಕೆ ೩೬ ಲಕ್ಷ ರೂ ವೆಚ್ಚವಾಗುವುದು

೬ನೇ ವಾರ್ಡ್ ರೇಟ್‌ಪೇಯರುಗಳ ಸಭೆ

ರಾಜಧಾನಿಯ ಚಾಮರಾಜ ಮೊಹಲ್ಲಾಗೆ ಸೇರಿದ ೬ ನೇ ವಾರ್ಡಿನ ರೇಟ್‌ಪೇಯರುಗಳ ಸಂಘದವರು ನಾಳೆ ಸಂಜೆ ೬ ಗಂಟೆಗೆ ಗಣೇಶಾ ಟಾಕೀಸ್ ಬಳಿ ಇರುವ ಉದ್ಯಾನವನದಲ್ಲಿ ವಾರ್ಡಿನ ಕಂದಾಯದಾರರು ಮತ್ತು ನಿವಾಸಿಗಳ ಬಹಿರಂಗ ಸಭೆಯನ್ನು ಕರೆದಿರುತ್ತಾರೆ. ನಗರದಲ್ಲಿ ಪೌರಸಭೆಯವರು ಮನೆಗಳಿಗೆ ಕಂದಾಯವನ್ನು ಹೆಚ್ಚಿಸಿರುವ ವಿಷಯವನ್ನೂ, ವಾರ್ಡಿನಲ್ಲಿ ದೀಪ, ನೀರು ವಾಕೀಜು ಸೌಕರ್ಯ ಮುಂತಾದುವು ಸರಿಯಾಗಿ ಇಲ್ಲದಿರುವುದನ್ನೂ ಸಭೆಯಲ್ಲಿ ಪರಿಶೀಲಿಸಲಾಗುವುದು. ಸರ್ವರೂ ದಯಮಾಡಿಸುವಂತೆ ಕೋರಲಾಗಿದೆ

ಹಾಸಿಗೆ-ದಿಂಬು

ಮಾಡಿಸಲು ... ಬಾಬುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಮೈಕ ಮತ್ತು ರೇಡಿಯೋ ... ಬಾಡಿಗೆಗೆ ದೊರೆಯುತ್ತವೆ ...

ಎವರ್‌ಗ್ರೀನ್ ಎಲೆಕ್ಟ್ರಿಕಲ್ಸ್,

24, ಸೊನಾರ್ ಬೀದಿ, ಮೈಸೂರು.

SRI GAYATHRI
TALKIES
To day only
QUEEN FOR A DAY

From 21 7-56 For 3 days
THE SEVEN YEAR ITCH
(Cinemascope & Technicolor)
Starring Marilyn Monroe and Tom Ewell

Morning Shows on Sat & Sun.
Hans Christian Anderson
Danny Kaye

Edited, Printed and Published by A. R. Nagarajan at Sadhvi Press D. Subbiah Road Mysore

ಔರಂಗಾಬಾದಿನಲ್ಲೊಂದು ರೇಡಿಯೋ ಕೇಂದ್ರ

ಮಹಾರಾಷ್ಟ್ರ ಸಂಸ್ಥಾನದ ಸ್ಥಾಪನೆಯಾದ ನಂತರ ಅದರಲ್ಲಿ ಸೇರುವ ಹೈದರಾಬಾದಿನ ಮರಾಠವಾಡ ಪ್ರದೇಶಗಳ ಮಧ್ಯಭಾಗದ ಔರಂಗಾಬಾದಿನಲ್ಲಿ ಒಂದು ರೇಡಿಯೋ ಪ್ರಸಾರ ಕೇಂದ್ರವನ್ನು ತೆರೆಯಲಾಗುವುದೆಂದು ಗೊತ್ತಾಗಿದೆ. ಇದೂ ಸೇರಿದರೆ ಮಹಾರಾಷ್ಟ್ರದಲ್ಲಿ ಒಟ್ಟು ಮೂರು ಕೇಂದ್ರಗಳಾಗುವುವು.

ಕಾಲೇಜಿನ ಸ್ಟಾಟಿಸ್ಟಿಕ್ಸ್ ಸಂಘ

ಮಹಾರಾಜಾ ಕಾಲೇಜಿನ ಸ್ಟಾಟಿಸ್ಟಿಕ್ಸ್ ಸಂಘದ ಅಧಿಕಾರ ವರ್ಗದ ಚುನಾವಣೆಯು ಕಳೆದ ಸೋಮವಾರ ನಡೆದು ಪ್ರಕೃತ ಸಾಲಿಗೆ ಪ್ರೊ|| ಎಸ್ ಕೆ ಏಕಾಂಬರಂರವರು ಅಧ್ಯಕ್ಷರಾಗಿಯೂ ಶ್ರೀ ಕೆ ಎ ಕೃಷ್ಣಶಾಸ್ತ್ರಿಯವರು ಖಜಾಂಚಿಯಾಗಿಯೂ, ಶ್ರೀಗಳಾದ ಕೆ ಸಿ ಶಿವಪ್ಪ ಮತ್ತು ಎಸ್ ಪುಷ್ಪಬುದ್ಧಿಯವರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಸುರೇಂದ್ರನಾಥಬಾಳಿಗ, ನಂಗರಾಜ್, ಹೆಚ್ ಬಿ ಗುರುಸಿದ್ದಪ್ಪ, ಕಡಮೋಕ್ಷರಗೌಡ, ಶ್ರೀಮತಿ ಎನ್. ಎಸ್. ಶಾಂತಮ್ಮ ಮತ್ತು ಶ್ರೀಮತಿ ಶೀಲಾಬಾಯಿಯವರು ಸದಸ್ಯರಾಗಿಯೂ ಆರಿಸಲ್ಪಟ್ಟಿರುವರು

ಭೂಗೋಳ ಶಾಸ್ತ್ರ ಸಂಘ

ಮಹಾರಾಜಾ ಕಾಲೇಜಿನ ಭೂಗೋಳ ಶಾಸ್ತ್ರ ಸಂಘದ ಚುನಾವಣೆಯು ಕಳೆದ ಸೋಮವಾರ ನಡೆದು ಪ್ರೊಫೆಸರ್ ಜಿ ಕೆ ಶೌರಿಯವರು ಅಧ್ಯಕ್ಷರಾಗಿಯೂ, ಶ್ರೀ ಕರೀಗೌಡರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಸಿದ್ದಪ್ಪ ಮತ್ತು ಜಯರಾಮಯ್ಯನವರು ಕಾರ್ಯದರ್ಶಿಗಳಾಗಿಯೂ, ರಂಗಪ್ಪ ಮತ್ತು ಗೋಪಾಲರಾಜೇ ಅರಸಿನವರು ಸದಸ್ಯರುಗಳಾಗಿಯೂ ಚುನಾಯಿತರಾಗಿದ್ದಾರೆ.

WANTED

WANTED a Young Salesman knowing English and capable of depositing Rs 500/- as security Pay Rs 40

Apply to -

Dr A J RAJAGOPAL,
Registered Medical Practitioner,
Sayaji Rao Road,
MYSORE

SREE GANESH
TALKIES
To day last day
TO CATCH A THIEF

Gala release on 21—7—56
DOCTOR AT SEA
Vistavision Technicolor
Comedy hit
Featuring —Dirk Bogarde

AWAIT
From Saturday 28 7—56
Paramount's Vistavision picture
THE ROSE TATTOO
Featuring Anna Magnani and Burt Lancaster

12 7-1956ನೇ ಗುರುವಾರದಿಂದ ಅಮೋಘ ಪ್ರಾರಂಭ

ಹೊಸ ಮ್ಯಾನೇಜ್‌ಮೆಂಟ್

ವೆಲ್ ಕಮ್ ಕಾಫಿ ಕ್ಲಬ್

(ಪ್ರಭಾ ಟಾಕೀಸ್ ಎದುರು) ಮೈಸೂರು

ಪ್ರಖ್ಯಾತ ... ಶ್ರೀ ಸುಬ್ಬುರವರ ನೇತೃತ್ವದಲ್ಲಿ ... ತಯಾರಾದ ಕೇಸರಿಭಾತ್, ... ಮತ್ತು ಇತರ ಸಿಹಿ ಮತ್ತು ಖಾರ ತಿಂಡಿಗಳಿಗೆ ವೆಲ್‌ಕಮ್ ಕಾಫಿ ಕ್ಲಬ್ಬಿಗೆ ದಯಮಾಡಿ ಭೇಟಿ ಕೊಡಿ

ಡಿ. ರಾಂಪ್ರಸಾದ್ ಶರ್ಮ, ಪ್ರೊಪ್ರೈಟರ್

... ರಿಯಾಯಿತಿ ದರ ... ಶುಚಿರುಚಿಯಾದ ಊಟಕ್ಕೂ ಮತ್ತು ಆರೋಗ್ಯಕರವಾದ ... ಒಮ್ಮೆ ಭೇಟಿ ಕೊಡಿ.

★ # ನ್ಯೂ ಚಾಮುಂಡೇಶ್ವರಿ ಕೆಫೆ

ಫೋನ್ . 341 ಪ್ರೊಪ್ರೈಟರ್ ಸಿ ಬಿ ಎಂ ಚಂದ್ರಯ್ಯ ಇರ್ವಿನ್ ರಸ್ತೆ, ಮೈಸೂರು

ಪ್ರಭು ದೇವಾ ಥಿಯೇಟರ್

(ಪದ್ಮಾ ಟಾಕೀಸ್)

20—7—56 ನೇ : ಶುಕ್ರವಾರದಿಂದ : ಅಮೋಘ ಪ್ರಾರಂಭ

★ ಪ್ರತಿ ದಿನ ಮೂರು ಪ್ರದರ್ಶನಗಳು

... ತೆಲುಗು ಚಿತ್ರ ★ # ಉಮಾಸುಂದರಿ ★

ಪಾತ್ರ.- ನಾಗಯ್ಯ, ಶ್ರೀರಂಜನಿ, ರೇಲಂಗಿ, ಬಾಲಸರಸ್ವತಿ ಮುಂತಾದವರು

ಟೆಲಿಫೋನ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೯] SADHVI : SATURDAY 21—7—1956 ಮೈಸೂರು : ಶನಿವಾರ ೨೧—೭—೧೯೫೬ [ಸಂಚಿಕೆ : ೪೧೯

ಅಂತರ್ರಾಷ್ಟ್ರ ಬಿಕ್ಕಟ್ಟು ನಿವಾರಣೆಗೆ ೩ ತಟಸ್ಥ ರಾಜ್ಯಗಳ ಕರೆ

ಧೈಬರನ್ನಂದಿಗೆ ಮುಖ್ಯ ಮಂತ್ರಿಯವರ ರಹಸ್ಯ ಪತ್ರ

ಡಾ|| ನಾಗನಗೌಡರು ಸಲ್ಲಿಸಿದರು

ಬೆಂಗಳೂರು ೨೦

ಮೈಸೂರು ರಾಜಕೀಯ ಬಿಕ್ಕಟ್ಟಿನ ಸಂಬಂಧದಲ್ಲಿ ಕಾಂಗ್ರೆಸ್ ಅಧ್ಯಕ್ಷ ಧೇಬರ್ ಮತ್ತು ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಸಂಭಾಷಣೆಯ ಪರಿಣಾಮವಾಗಿ ಮುಖ್ಯ ಮಂತ್ರಿಯವರು ಧೈಬರನ್ನಂದಿಗೆ ಒಂದು ರಹಸ್ಯ ಪತ್ರವನ್ನು ಕೊಟ್ಟು ಕಳುಹಿಸಿರುವರು ಅದನ್ನು ಕೈಗಾರಿಕಾ ಮಂತ್ರಿ ಡಾ|| ಆರ್ ನಾಗನಗೌಡರು ಧೈಬರನ್ನಂದಿಗೆ ಸಲ್ಲಿಸಿ ವಾಪಸು ಬಂದಿರುತ್ತಾರೆ ಅವರು ಅಧ್ಯಕ್ಷ ಧೇಬರ್ ಮತ್ತು ಕಾರ್ಯದರ್ಶಿ ಕೆ ಪಿ ಮಾಧವನ್‌ನಾಯರರೊಡನೆ ಬಿಕ್ಕಟ್ಟಿನ ಸಂಬಂಧವಾಗಿ ಸಂಭಾಷಣೆ ನಡೆಸಿರುತ್ತಾರೆ

ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರು ಪಶ್ಚಿಮದ ಪ್ರವಾಸ ಮುಗಿಸಿ ದೆಹಲಿಗೆ ಹಿಂದಿರುಗಿದ ಮೇಲೆ ಧೈಬರನ್ನಂದಿನವರು ಈ ಬಗ್ಗೆ ತಮ್ಮ ನಿರ್ಧಾರವನ್ನು ಹೊರಗೆಡಹಲಿರುವುದಾಗಿ ಗೊತ್ತಾಗಿದೆ

ಈ ವರ್ಷ ೪೦ ಹೊಸ ರೈಲುಗಳು

ಬ್ರಾಡ್‌ಗೇಜಿನಲ್ಲಿ ೨೦ ಮತ್ತು ಮೀಟರ್ ಗೇಜಿನಲ್ಲಿ ೨೦ ರಂತೆ ಒಟ್ಟು ನಲವತ್ತು ಹೊಸ ರೈಲುಗಳನ್ನು ಈ ವರ್ಷ ಬಿಡಲಾಗುವುದೆಂದು ರೈಲ್ವೆ ಮಂತ್ರಿ ಲಾಲ್ ಬಹದ್ದೂರ್ ಶಾಸ್ತ್ರಿಯವರು ತಿಳಿಸಿರುತ್ತಾರೆ ಇದಲ್ಲದೆ ಇನ್ನೂ ೨೦೦ ಗಾಡಿಗಳಿಗೆ ಹೆಚ್ಚು ಬೋಗಿಗಳನ್ನು ಜೋಡಿಸಲಾಗುವುದು ರೈಲು ಪ್ರಯಾಣಿಕರ ಸಂಖ್ಯೆ ಹೆಚ್ಚಿರುವ ಸಮಸ್ಯೆಯನ್ನು ಪರಿಹರಿಸಲು ದ್ವಿತೀಯ ಯೋಜನೆ ಅವಧಿಯಲ್ಲಿ ಮೀಟರ್ ಗೇಜಿನಲ್ಲಿ ಶೇಕಡ ೩೩ ಮತ್ತು ಬ್ರಾಡ್ ಗೇಜಿನಲ್ಲಿ ಶೇಕಡ ೧೨ ರಷ್ಟು ಹೆಚ್ಚು ಪ್ರಯಾಣ ಸೌಲಭ್ಯವನ್ನೂ, ಹಾಗೆಯೇ ಸರಕು ಸಾಗಾಣಿಕೆ ಸೌಕರ್ಯವನ್ನೂ ಏರ್ಪಡಿಸಲಾಗುವುದು

ಉಚಿತ ಹಾಲು ಮತ್ತು ಉಪಾಹಾರ

ಟಿ ನರಸೀಪುರ ತಾಲ್ಲೂಕು ಮೂಗೂರು ಹೋಬಳಿ ಕರುಹಟ್ಟಿ ಶಾಲೆಯಲ್ಲಿ ಸರ್ಕಾರದವರು ಒದಗಿಸಿರುವ ಆಹಾರ ಪದಾರ್ಥಗಳಿಂದ ಹಾಲನ್ನೂ ಮಧ್ಯಾಹ್ನದ ಹೊತ್ತಿನ ಉಪಾಹಾರವನ್ನೂ ಮಕ್ಕಳಿಗೆ ಹಂಚಲಾಗುತ್ತಿದೆ. ಗ್ರಾಮದ ಛೇರ್ಮನ್ ಶ್ರೀ ಗುರುಮಲ್ಲಪ್ಪನವರು ಅದರ ಮೇಲ್ವಿಚಾರಣೆಯಲ್ಲಿರುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ಕ್ಕೆ ನಾಗಸ್ವರ ೭ ೧೫ ಕನ್ನಡ ಗೀತೆಗಳು ೭ ೩೦ ಬುಲೆಟಿನ್ ೮ ೧೫ ಅನುವಾದ-ಕನ್ನಡ ನಾಟಕ ೮-೩೦ ಟಿ ಆರ್ ಮಹಾಲಿಂಗಂ ಸಂಗೀತ ೯-೩೦ ಬಾಲಜಗತ್ ಮಕ್ಕಳ ಕಾರ್ಯಕ್ರಮ ಮಧ್ಯಾಹ್ನ ೧೨ ಮತ್ತು ೫ ೧೫ ಎ ನಾರಾಯಣರಾವ್-ಗಾಯನ, ೧೨-೪೦ ವಾದ್ಯವೃಂದ ೧ ರಿಂದ ೧-೩೦ ನಾಗಸ್ವರ ಸಂಜೆ ೫ ವಾದ್ಯ ಸಂಗೀತ ೫ ೪೦ ಮತ್ತು ೬ ಕ್ಕೆ ಹಸುಮಕ್ಕಳ ಕಾರ್ಯಕ್ರಮ-ಸಂಗೀತ ೬-೦೫ ನಾಟ್ಯ ಮತ್ತು ನಮ್ಮ ನಾಡು ೬.೩೦ ರೇಡಿಯೊ ಬುಲೆಟಿನ್ ೮ ಕ್ಕೆ ಸಿತಾರ್, ಪಿಟೀಲು ಮತ್ತು ಕೊಳಲು ೯ ೩೦ ಹಳ್ಳಿಕ್ಕೆ ಸೇವೆ ಪ್ರಬಂಧ ನಾಟಕ

ಸಂಸ್ಥಾನದಲ್ಲೂ ನರ ಬಲಿ ಪ್ರಯತ್ನ ?

ಬೀರೂರಿಗೆ ಸಮೀಪದ ದೇವನೂರು ಗ್ರಾಮದಲ್ಲಿ ಕಳೆದ ವಾರ ನರ ಬಲಿ ಪ್ರಯತ್ನವೊಂದು ನಡೆಯಿತೆಂದೂ, ಬಲಿಯಾಗಬೇಕಾಗಿದ್ದ ಬೀರೂರಿನವನು ಉಪಾಯದಿಂದ ಪಾರಾದುದಾಗಿ ವರದಿಯಾಗಿದೆ. ಶಿವಮೊಗ್ಗದವನೊಬ್ಬನು ಅವನನ್ನು ಪುಸಲಾಯಿಸಿ, ಮಧ್ಯ ರಾತ್ರಿ ಶಿವಪುರದ ಒಳಿ ಕರೆತಂದು ಒಬ್ಬನನ್ನೂ, ಭವಾನಿಪತಿ ಇಬ್ಬರು ಪುರೋಹಿತರನ್ನೂ ಸಮೀಪದ ದೇವಸ್ಥಾನಕ್ಕೆ ಕರೆದುಕೊಂಡು ಹೋಗಿ, ಅವನ ಮೈ ಮೇಲೆ ಅರಿಶಿನ ಕುಂಕುಮ ಬಳಿದು ಕತ್ತಿಗೆ ಹೂವಿನ ಹಾರ ಹಾಕಿದನೆಂದೂ, ಅನಂತರ ಮಧ್ಯರಾತ್ರಿ ಪೂಜೆ ನಡೆಸುತ್ತಿರುವಾಗ ಅವನಿಗೆ ಅರಿವು ಬಂದು ಅವನು ಬೇಡಿಕೊಂಡ ಮೇಲೆ ತಪ್ಪಿಸಿಕೊಂಡು ಬಿಟ್ಟನೆಂದು ಹೇಳಲಾಗಿದೆ

ಬಹಳ ಹೊತ್ತಾದರೂ ಅವನು ಬರದಿದ್ದುದಕ್ಕಾಗಿ ಇತರರು ಆ ಮನೆಗೆ ಬಂದ ಮಹಾಶಯರು ನರಬಲಿ ವಿಚಾರವನ್ನು ಇವನಿಗೆ ಹೇಳಬಂದಿದ್ದೆಂದು ಹೇಳಲಾಗಿದೆ ಮಾರನೇ ದಿನ ಅವನು ಹಾಸಿದ್ದ ರೀತಿಯಲ್ಲೇ ಬೀರೂರು ಪೊಲೀಸು ಠಾಣೆಗೆ ಹೋಗಿ ಫಿರ್ಯಾದು ಕೊಟ್ಟನು ಶಿವಮೊಗ್ಗದ ವ್ಯಕ್ತಿಯನ್ನು ಅವನು ಈಚೆಗೆ ಗುರುತಿಸಿದುದಾಗಿ ಗೊತ್ತಾಗಿದೆ

ವಿಶ್ವಸಂಸ್ಥೆಯಲ್ಲಿ ಮೊರಾಕೊವಿಗೆ ಸ್ಥಾನ ನಿಶ್ಚಯ

ಮೊರಾಕೊ ದೇಶವನ್ನು ವಿಶ್ವಸಂಸ್ಥೆಯ ಸದಸ್ಯ ರಾಷ್ಟ್ರವಾಗಿ ತೆಗೆದುಕೊಳ್ಳಬಹುದೆಂದು ಭದ್ರತಾ ಸಮಿತಿಯು ಅನುಮತಿ ಇತ್ತಿದೆ. ಮಾಜಿ ಫ್ರೆಂಚ್ ರಕ್ಷಿತ ರಾಜ್ಯವಾಗಿದ್ದ ಈ ದೇಶವು ವಿಶ್ವಸಂಸ್ಥೆಯ ೭೭ ನೇ ಸದಸ್ಯರಾಷ್ಟ್ರವಾಗಲಿದೆ

ಸಂಗೀತ ಕಛೇರಿ

ಮೈಸೂರು ಶಿವರಾಂಪೇಟೆಯಲ್ಲಿರುವ ಶ್ರೀ ಎಸ್ ಕೆ ಸುಬ್ಬಯ್ಯಶೆಟ್ಟರ ಶ್ರೀ ವಾಸವೀನಿಲಯದಲ್ಲಿ ಗುರುಪೂರ್ಣಿಮೆಯ ಪ್ರಯುಕ್ತ ನಾಳೆ ಸಂಜೆ ೬ಘಂಟೆಗೆ ಗಾಯಕಪ್ರವೀಣ ಎಂ ಎಚ್ ಅಂಜನಪ್ಪನವರ ಸಂಗೀತ ಕಛೇರಿಯೂ, ರಾತ್ರಿ ೮ ಗಂಟೆಗೆ ವಿದ್ವಾನ್ ಎಂ ಎ ನಾಗಪ್ಪನವರ ಮಧುರ ಗಾನ ಕಲಾಮಂಡಲಿಯವರಿಂದ ವಾದ್ಯಗೋಷ್ಠಿಯೂ ನಡೆಯುತ್ತವೆ ಶ್ರೀ ಪಿ ಗೋಪಾಲಕೃಷ್ಣಶೆಟ್ಟರು ಅಧ್ಯಕ್ಷತೆ ವಹಿಸುವರು ಪೌರಸಭಾ ಸದಸ್ಯರಾದ ಶ್ರೀ ಎಂ ಎಸ್ ತಿಮ್ಮಯ್ಯನವರು ಭಾಷಣ ಮಾಡುವರು

ನೃತ್ಯದ ತರಗತಿ

ರಾಜಧಾನಿಯ ವಾಣಿವಿಲಾಸ ಮೊಹಲ್ಲಾದಲ್ಲಿರುವ ಭಾರತೀ ಸ್ತ್ರೀ ಸಮಾಜದಲ್ಲಿ ಈ ತಿಂಗಳು ೨೦ ನೇ ತಾರೀಖಿನಿಂದ ನೃತ್ಯದ ತರಗತಿಯೊಂದನ್ನು ಏರ್ಪಡಿಸಲಾಗಿದೆ ಸೇರಲಿಚ್ಛಿಸುವ ಹೆಣ್ಣುಮಕ್ಕಳು ಸಮಾಜದ ಕಾರ್ಯದರ್ಶಿಯವರಲ್ಲಿ ವಿಚಾರಿಸಬಹುದು

ಅಂತರ ರಾಷ್ಟ್ರೀಯ ಬಿಕ್ಕಟ್ಟಿನಿಂದ ಶಾಂತಿ ಸಾಧನೆಗೆ ಅಡ್ಡಿ

ಅಣು ಶಸ್ತ್ರ ಪ್ರಯೋಗಗಳಿಂದ ಜಗತ್ತಿಗೆ ವಿಪತ್ತು

ನೆಹರೂ ಟಿಟೊ—ನಾಸಿರ್‌ರವರ ಜಂಟಿ ಘೋಷಣೆ

ಏಡ್ರಿಯಾಟಿಕ್ ಸಮುದ್ರದಲ್ಲಿರುವ ಬ್ರಿಯೋನಿ ದ್ವೀಪದಲ್ಲಿ ಪ್ರಧಾನಿ ನೆಹರೂ, ಯುಗೋಸ್ಲಾವಿಯಾ ಅಧ್ಯಕ್ಷ ಟಿಟೊ ಮತ್ತು ಈಜಿಪ್ಟಿನ ಅಧ್ಯಕ್ಷ ಕರ್ನಲ್ ನಾಸಿರ್‌ರವರಿಗೆ ನಡೆದ ಸಂಭಾಷಣೆಯ ಪರಿಣಾಮವಾಗಿ ಮೂವರು ನಾಯಕರೂ ಜಂಟಿ ಘೋಷಣೆಯನ್ನು ಹೊರಡಿಸಿ ತಟಸ್ಥ ರಾಷ್ಟ್ರಗಳ ರೀತಿ ನೀತಿ ಅಂತರ್ರಾಷ್ಟ್ರೀಯ ಬಿಕ್ಕಟ್ಟನ್ನು ನಿವಾರಿಸಲು ಶಕ್ತವಾಗಿವೆ ಯೆಂದೂ, ಸಮಾನವಾಗಿ ಗೌರವಿಸಬೇಕಾದ ವಿವಿಧ ರಾಷ್ಟ್ರಗಳ ನಡುವಣ ಪರಸ್ಪರ ಸಂಪರ್ಕ ಹೊಂದಿ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುವುದು ಅಗತ್ಯವೆಂದು ಅವರು ಹೇಳುತ್ತಾರೆ

ಅಂತರ್ರಾಷ್ಟ್ರೀಯ ವ್ಯವಹಾರದಲ್ಲಿ ಕೆಲವು ತತ್ವಗಳನ್ನು ಅನುಸರಿಸಬೇಕೆಂದು ಬಾಂಡುಂಗ್ ಸಮ್ಮೇಳನದಲ್ಲಿ ಮಾಡಿರುವ ಸೂಚನೆಗಳನ್ನು ಅವರು ಎತ್ತಿಹಿಡಿದು, ವಿದೇಶಗಳಲ್ಲಿ ಈಗ ಇರುವ ಘರ್ಷಣೆ ಮತ್ತು ಬಿಕ್ಕಟ್ಟುಗಳು ವರ್ತಮಾನ ಮತ್ತು ಭವಿಷ್ಯದ ಬಗ್ಗೆ ಭಯವನ್ನು ಮೂಡಿಸಿರುವುದಾಗಿ ಅಭಿಪ್ರಾಯಪಟ್ಟಿರುವರು

ಸಾಮೂಹಿಕ ಕೊಲೆಗೆ ಸಾಧನವಾಗುವ ಅಣು ಅಸ್ತ್ರಗಳ ಪ್ರಯೋಗ ನಿಲ್ಲಬೇಕೆಂದೂ, ಅಂತಹ ಪರೀಕ್ಷಾ ಪ್ರಯೋಗದಿಂದ ವಾಯುಗುಣವು ಕೆಟ್ಟು ಮಾನವಕೋಟಿಗೆ ಹಾನಿ ತಪ್ಪುವುದೆಂದೂ ಅವರು ತಿಳಿಸಿರುತ್ತಾರೆ

ಮಧ್ಯ ಯೂರೋಪು, ದೂರ ಪೂರ್ವ (ಪೂರ್ವ ಏಷ್ಯಾ) ಮತ್ತು ಮಧ್ಯ ಪೂರ್ವ (ಪಶ್ಚಿಮ ಏಷ್ಯಾ) ಗಳಲ್ಲಿ ಮುಖ್ಯವಾಗಿ ಬಿಕ್ಕಟ್ಟುಂಟಾಗಿರುವುದೆಂದು ಅವರು ತಿಳಿಸಿ, ಪ್ಯಾಲೆಸ್ಟೈನ್ ಪ್ರಶ್ನೆ, ಜರ್ಮನಿ ರಾಷ್ಟ್ರದ ಸಮಸ್ಯೆ, ಅಲ್ಜೀರಿಯ ಜನರ ಸ್ವಾತಂತ್ರ್ಯಾಕಾಂಕ್ಷೆ ಈ ಬೇಡಿಕೆಗಳು ಇತ್ಯರ್ಥವಾಗಬೇಕೆಂದು ತಿಳಿಸಿರುತ್ತಾರೆ ಅಲ್ಜೀರಿಯದಲ್ಲಿ ಯುದ್ಧ ನಿಲುಗಡೆಯಾಗಿ ಸಂಧಾನವಾಗಬೇಕೆಂದು ಅಭಿಪ್ರಾಯಪಡಲಾಗಿದೆ ರಾಷ್ಟ್ರಗಳು ಕೂಟ ಕಟ್ಟುವುದು ಸರಿಯಲ್ಲವೆಂದೂ ತಿಳಿಸಲಾಗಿದೆ

ಸಲ್ಲಿ ಕೊಳ್ಳಾಯ ಕಳುವಿಗಾಗಿ ಸಜಾ

ನಗರದ ರೈಲ್ವೆ ಕಛೇರಿಯ ಬಚ್ಚಲುಮನೆ ಮತ್ತು ಕಕ್ಕಸುಗಳಲ್ಲಿ ಸಲ್ಲಿ ಕೊಳಾಯಿಗಳನ್ನು ಅಪಹರಿಸುತ್ತಿದ್ದಾಗ ಸಿಕ್ಕಿಬಿದ್ದ ಬೆಂಗಳೂರಿನ ಅಂತೋಣಿ ಉರುಫ್ ಜೋಸೆಫ್ ಎಂಬುವನ ಮೇಲೆ ಮಂಡಿ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರ ನ್ಯಾಯಾಧೀಶರು ಅವನಿಗಾಗಲೇ ಮತ್ತೊಂದು ಕಳುವಿನ ಮೊಕದ್ದಮೆಯಾಗಿ ತನಗೆ ೬ ತಿಂಗಳ ಸಜಾ ವಿಧಿಸಿ ಎರಡನ್ನೂ ಒಟ್ಟಿಗೆ ಅನುಭವಿಸುವಂತೆ ಆಜ್ಞೆ ಮಾಡಿರುವರು ಅವನ ಮೇಲೆ ಇನ್ನೂ ಒಂದು ಮೊಕದ್ದಮೆಯು ನಡೆಯುತ್ತಿದೆ ಅವನಿಗೆ ಹಿಂದೆ ೬ ತಿಂಗಳ ಸಜಾ ಆಗಿದ್ದಿತು

ಬಿಹಾರಿನ ಪ್ರವಾಹದಲ್ಲಿ ೧೦ ಲಕ್ಷ ಜನರಿಗೆ ತೊಂದರೆ

ಬಿಹಾರಿನ ೨೦ ನದಿಗಳಲ್ಲಿ ಇತ್ತೀಚೆಗೆ ಬಂದ ಪ್ರವಾಹದಿಂದ ೧೩,೦೦೦ ಚದರ ಮೈಲಿ ಪ್ರದೇಶಕ್ಕೆ ನೀರು ನುಗ್ಗಿ ೧೦ ಲಕ್ಷ ಪ್ರಜೆಗಳು ತೊಂದರೆಗೀಡಾದರೆಂದೂ ೧೬ ಕೋಟಿ ರೂ. ನಷ್ಟ ಸಂಭವಿಸಿದೆ ಎಂದೂ ಹೇಳಲಾಗಿದೆ ಒಬ್ಬ ಹುಡುಗ ಮಾತ್ರ ಮೃತಪಟ್ಟಿರುತ್ತಾನೆ ೩೦ ಸಾವಿರ ದೋಣಿಗಳು ದರ್ಭಾಂಗ ಮತ್ತು ಸಹರ್ಸಾ ಜಿಲ್ಲೆಗಳಲ್ಲಿ ಪರಿಹಾರ ಕಾರ್ಯ ನಡೆಸುತ್ತಿವೆ.

ಮಂಗಳೂರಿನಲ್ಲಿ ಪ್ರವಾಹದಿಂದ ೧,೦೦೦ ಮನೆಗಳ ನಾಶ

ಮಂಗಳೂರು ಜಿಲ್ಲೆಯ ನೀಲೇಶ್ವರ ಫಿರ್ಕಾದಲ್ಲಿ ಇತ್ತೀಚೆಗೆ ಬಂದ ಪ್ರವಾಹದ ಪರಿಣಾಮವಾಗಿ ೧,೦೦೦ ಮನೆಗಳು ನಾಶವಾಗಿ, ಅನೇಕ ದನಕರುಗಳು ಸತ್ತು ಹೋದುವೆಂದೂ, ಭತ್ತದ ಬೆಳೆಗೆ ತುಂಬಾ ನಷ್ಟವಾಯಿತೆಂದೂ ವರದಿಯಾಗಿದೆ ೫ ಲಕ್ಷ ರೂ ನಷ್ಟದ ಅಂದಾಜಾಗಿದೆ ಮದ್ರಾಸ್ ಸರ್ಕಾರದವರು ೫ ೦೦೦ ರೂ ಪರಿಹಾರದ ಮೊಬಲಗನ್ನು ಮಂಜೂರು ಮಾಡಿರುವರು

ಗುರು ಪೂರ್ಣಿಮಾ ಮಹೋತ್ಸವ

ಶ್ರೀ ಸದ್ಗುರು ಸಾಯಿಬಾಬಾರವರ ಗುರು ಪೂರ್ಣಿಮಾ ಮಹೋತ್ಸವವು ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ನಾಳೆಯಿಂದ ೨೬ನೇ ತಾರೀಖು ವರೆಗೆ ನಡೆಯುವುದು ನಾಳೆ ಬೆಳಿಗ್ಗೆ ಮಹಾಭಿಷೇಕ ಮತ್ತು ಲಕ್ಷಾರ್ಚನೆಗಳು ನಡೆಯುತ್ತವೆ ನಿತ್ಯವೂ ಸಂಜೆ ಸಾಮೂಹಿಕ ಪ್ರಾರ್ಥನೆ,ಮಹಾಭಾರತ ವಾಚನ, ಸಂಗೀತ, ಕಾವ್ಯವಾಚನ ಅಥವಾ ಹರಿಕಥೆ ಮುಂತಾದುವೂ, ೨೬ ನೇ ತಾರೀಖು ಸಂಜೆ ಉತ್ಸವವೂ ಇವೆ ಇವರಲ್ಲಿ ಗೃಹ ಮಂತ್ರಿ ಶ್ರೀ ಹೆಚ್ ಸಿದ್ದವೀರಪ್ಪ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯ, ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾವ್, ಮತ್ತು ಕೊಚಿನ ಮುಖ್ಯ ಮಂತ್ರಿ ಶ್ರೀ ಸಿ ಎಂ ಪೂಣಚ್ಚರವರು ಕ್ರಮವಾಗಿ ಒಂದೊಂದು ದಿನ ಭಾಗವಹಿಸುವರು

ಬೆಂಗಳೂರು ರೇಡಿಯೊವಿನಲ್ಲಿ ಹಳ್ಳಿಕ್ಕೆ ಸೇವೆ ಪ್ರಬಂಧದ ಪ್ರಸಾರ

ಬೆಂಗಳೂರಿನ ರೇಡಿಯೊವಿನವರು ನಾಳೆ ರಾತ್ರಿ ೯॥ ಗಂಟೆಗೆ ಹಳ್ಳಿಕ್ಕೆ ಸೇವೆ ಪ್ರಬಂಧ ಎಂಬ ನಾಟಕವನ್ನು ಪ್ರಸಾರ ಮಾಡಲಿರುವರು ತಂಜಾವೂರಿನಲ್ಲಿ ೧೮೪೫-೧೯೧೦ ರಲ್ಲಿ ಆಳಿದ ಶಹಾಜಿ ಮಹಾರಾಜರು ಇದನ್ನು ರಚಿಸಿರುವರು ಸಂಗೀತ ಭೂಷಣ ಎಂ ಎ ನರಸಿಂಹಾಚಾರ್ಯರು ಇದರ ನಿರ್ದೇಶನ ಮಾಡುವರು ಶ್ರೋತೃಗಳು ಅವಶ್ಯಕವಾಗಿ ಕೇಳಬೇಕಾದ ಪ್ರಸಾರ ಇದಾಗಿದೆ

ಸಹಾಯಾರ್ಥ ನಾಟಕ

ಕೃಷ್ಣಮೂರ್ತಿಪುರದ ಶ್ರೀ ರಾಮಮಂದಿರದ ಕಟ್ಟಡದ ನಿಧಿಯ ಸಹಾಯಾರ್ಥವಾಗಿ ನಗರದ ಶ್ರೀ ಕಲಾವಿದರಿಂದ ನಾಳೆ ನಡೆಯಬೇಕಾಗಿದ್ದ "ಜ್ವಾಲಾಮುಖಿ" ಎಂಬ ನಾಟಕವನ್ನು ಬರುವ ತಿಂಗಳು ೨ ನೇ ತಾರೀಖಿಗೆ ಮುಂದೂಡಲಾಗಿದೆ

ಸಂಸ್ಕೃತದ ಪಂಡಿತ ಸಮ್ಮೇಳನ

ಶ್ರೀಮನ್ಮಹಾರಾಜರ ಸಂದೇಶ

ಬೆಂಗಳೂರು ೨೦

ಸಂಸ್ಕೃತದ ವಿದ್ಯಾಶಾಲಾ ಪಂಡಿತ ಸಂಘಟಿತದ ಸಮ್ಮೇಳನವು ನೆನ್ನೆ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮನ್ಮಹಾರಾಜರು ಸಂದೇಶವೊಂದನ್ನು ಕಳುಹಿಸಿ, ಪ್ರಾಚೀನ ಭಾರತದ ಉನ್ನತ ಆಧ್ಯಾತ್ಮಿಕ ಧ್ಯೇಯಗಳೊಡನೆ ಆಧುನಿಕ ವಿದ್ಯಾಭ್ಯಾಸ ಪದ್ಧತಿಯ ದಕ್ಷತೆಯನ್ನು ಅಳವಡಿಸಿಕೊಳ್ಳುವ ವಿಧಾನವನ್ನು ಸಂಸ್ಕೃತ ಮತ್ತು ಕನ್ನಡ ಪಂಡಿತರುಗಳು ಹುಡುಕಬೇಕೆಂದು ತಿಳಿಸಿದ್ದರು. ಆತ್ಮವಿದ್ಯೆಯೆಂಬ ಅತ್ಯುನ್ನತ ಜ್ಞಾನವನ್ನು ಸಂಸ್ಕೃತ ಭಾಷೆಯು ತಂದುಕೊಡಬಲ್ಲದೇ ಹೊರತು, ಇತರ ಯಾವ ಭಾಷೆಯಿಂದಲೂ ನಮ್ಮ ನೈಜ ಸಂಸ್ಕೃತಿಯು ಪ್ರತಿಬಿಂಬಿಸಲ್ಪಡುವುದಿಲ್ಲವೆಂದೂ ಅವರು ಸೂಚಿಸಿದ್ದರು. ಈಗಿನ ವಿಶ್ವದ ವಿಮೋಚನೆ ಮತ್ತು ಪುನರುತ್ಥಾನಕ್ಕೆ ಸಂಸ್ಕೃತಾಭ್ಯಾಸವು ಅಮೌಲ್ಯ ಸಾಧನವೆಂದು ಅವರು ತಿಳಿಸಿದ್ದರು.

ಪಾಶ್ಚಿಮಾತ್ಯ ನಾಗರಿಕತೆಯ ಪ್ರಭಾವವು ಪಂಡಿತರ ಧ್ಯೇಯ ಮತ್ತು ಆದರ್ಶಗಳ ಮೇಲೆ ಯಾವ ರೀತಿಯಾಗಿರುವುದೆಂಬುದನ್ನು ಹೇಳಲು ಅಶಕ್ಯವಾದರೂ, ನಮ್ಮ ದೇಶದ ಸಂಸ್ಕೃತ ಮೂಲ ತತ್ವಗಳು ಸುರಕ್ಷಿತವಾಗಿರಲು ಪಂಡಿತರು ಶ್ರಮಿಸಬೇಕೆಂದು ಅವರು ಸೂಚಿಸಿದ್ದರು.

ಸಮ್ಮೇಳನಕ್ಕೆ ಶೃಂಗೇರಿ ಸ್ವಾಮಿಗಳು, ಪರಕಾಲ ಸ್ವಾಮಿಗಳು, ಪುತ್ತಿಗೆ ಸ್ವಾಮಿಗಳು, ಶಿವಗಂಗಾ, ರಂಭಾಪುರಿ ಮತ್ತು ಸಿದ್ಧಗಂಗಾ ಸ್ವಾಮಿಗಳವರು, ಗವರ್ನರ್ ದಿವಾಕರ್, ತ್ರಿವೇದಿ, ಶ್ರೀಪ್ರಕಾಶ, ಮೊರಾರ್ಜಿ ಮುಂತಾದವರು ಸಂದೇಶಗಳನ್ನು ಕಳುಹಿಸಿದ್ದರು.

ಮುಖ್ಯ ಮಂತ್ರಿಗಳವರು ಮಾತನಾಡಿ, ಪಂಡಿತರ ಅಭ್ಯುದಯದಲ್ಲಿ ತಮ್ಮ ಸಂಪೂರ್ಣ ಆಸಕ್ತಿ ವಹಿಸುವುದಾಗಿ ಭರವಸೆ ನೀಡಿದರು.

ಪ್ರಾರ್ಥನೆ ಮತ್ತು ಸಂಗೀತಗಳ ನಂತರ ಸ್ವಾಗತ ಸಮಿತಿ ಅಧ್ಯಕ್ಷ ಶ್ರೀ ಎಂ ಪಿ ಎಲ್ ಶಾಸ್ತ್ರಿಯವರು ಸ್ವಾಗತ ಭಾಷಣ ಮಾಡಿ, ಪಂಡಿತರು ಬಹಳ ಸರ್ಕಾರದ ಪೋಷಣೆ ಪಡೆಯಬೇಕಾಗಿದೆಯೆಂದೂ, ಅವರಿಗೆ ಕೊಡಲಾಗುತ್ತಿರುವ ಸಂಭಾವನೆಯು ಬಹಳ ಕಡಿಮೆಯೆಂದೂ ತಿಳಿಸಿದರು. ಕಾರ್ಯದರ್ಶಿ ಶ್ರೀ ಜಿ ಆರ್ ಶ್ರೀನಿವಾಸಯ್ಯಂಗಾರ್ಯರು ವರದಿಯನ್ನೊಪ್ಪಿಸಿದರು. ಶ್ರೀ ಪಿ ದೇಶಿಕಾಚಾರ್ಯರು ವಂದನಾರ್ಪಣೆ ಮಾಡಿದರು.

ಲಕ್ಷ್ಮಿ ★ ಚಿತ್ರ

20-7-56 ರಿಂದ 4ನೇ ವಾರ

ದಿನವೂ 3 ಆಟಗಳು

ವೀನಸ್ ಪಿಕ್ಚರ್ಸ್‌ರವರ ತಮಿಳು ಚಿತ್ರ

ಅಮರದೀಪಂ

ಭವಿಷ್ಯ

ರಮಲ, ಸಾಮುದ್ರಿಕದಿಂದ

ತ್ರಿಕಾಲ ಭವಿಷ್ಯ

ಹೇಳಲ್ಪಡುತ್ತದೆ.

ಜ್ಯೋತಿಷಿ ಬಿ. ಕೃಷ್ಣರಾವ್,

ರೂಂ ನಂ. 27, ಇಂದ್ರಭವನ,

ಧನ್ವಂತರಿ ರೋಡ್,

ಮೈಸೂರು.

ಸಿರಿ ಭೂವಲಯ ಗ್ರಂಥದ ಮೈಕ್ರೊಫಿಲಂ

ಸುಪ್ರಸಿದ್ಧ ಸರ್ವಭಾಷಾಮಯೀ ಕನ್ನಡ ಸಿರಿ ಭೂವಲಯ ಗ್ರಂಥವನ್ನು ಭಾರತ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ಬಹಳ ಆಸಕ್ತಿಯಿಂದ ಅನೇಕ ಸಲ ಪರಿಶೀಲಿಸಿ, ಭಾರತ ಸರ್ಕಾರದ ರಾಷ್ಟ್ರೀಯ ಸಾಹಿತ್ಯ ಭಂಡಾರದಲ್ಲಿ (National Archives) ಗ್ರಂಥದ ಪ್ರಥಮ ಖಂಡವನ್ನು ಮೈಕ್ರೊಫಿಲಂ ಮಾಡಿಸುತ್ತಾರೆಂದು ತಿಳಿದುಬಂದಿದೆ.

ಈ ಗ್ರಂಥವು ಕ್ರಿಸ್ತಶಕ ೭೮೦ ರಲ್ಲಿ ಮೈಸೂರು ಸಂಸ್ಥಾನದ ನಂದೀದುರ್ಗದ ಬಳಿಯ ಯಲವಳ್ಳಿಯಲ್ಲಿದ್ದ ಕುಮುದೇಂದುಮುನಿಯಿಂದ ೧೬,೦೦೦ ಗಣಿತ ಚಕ್ರಬಂಧದಲ್ಲಿ ರಚಿಸಲ್ಪಟ್ಟ ೭೧೮ ಭಾಷೆ, ೬೪ ಕಲೆ ಮತ್ತು ೩೬೩ ಮತಗಳಿಂದ ಕೂಡಿದ ಮಹಾ ಗ್ರಂಥವೆಂದು ತಿಳಿಯಲಾಗಿದೆ. ಈಗ ಮಂಗಳಪ್ರಾಭೃತವೆಂಬ ಭಾಗ ಮಾತ್ರ ಬಿಡಿಸಿ ಬರೆಯಲ್ಪಟ್ಟು ಅಚ್ಚಾಗಿದೆ. ಇನ್ನೂ ೬ ಲಕ್ಷ ಶ್ಲೋಕಗಳಿವೆ.

ಕಳೆದ ಬುಧವಾರ ಮೈಸೂರು ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರೂ, ಕನ್ನಡ ಕವಿಶ್ರೇಷ್ಠರೂ ಆದ ಡಾ|| ಕೆ ವಿ ಪುಟ್ಟಪ್ಪನವರು ಈ ಗ್ರಂಥವನ್ನು ಇಂದಿನ ಗ್ರಂಥಕರ್ತರಾದ ಶ್ರೀ ಪಂಡಿತ ಎಲ್ಲಪ್ಪ ಶಾಸ್ತ್ರಿಗಳು ಮತ್ತು ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯನವರಿಂದ ತಿಳಿದು ಇದು ವಿಶ್ವದಲ್ಲೇ ಪ್ರಥಮ ಆಶ್ಚರ್ಯ ಪಡೆಯುತ್ತದೆಂದು ಪ್ರಶಂಸಿಸಿದರು.

ಶಕ್ತಿಯೂ ಕೋಪಿಯೂ

ತಮ್ಮ ಗುರಿಯನ್ನು ತಪ್ಪಬಹುದು!

ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು!!

ಆದರೆ ಡಾ|| ರಾಜಾರಾವರ ನೂತನ ಮತ್ತು ಆಶ್ಚರ್ಯಕರವಾದ ಚಿಕಿತ್ಸೆಯು ನಿಮ್ಮ ಒಂದೇ ವಾರದ ಅವಧಿಯಲ್ಲಿ ನಿಮ್ಮ ರೋಗಗಳಿಂದ ಮುಕ್ತರನ್ನಾಗಿ ಮಾಡಲು ತಪ್ಪುವುದಿಲ್ಲ.

ಅವರಿಂದ ನವಯೌವನವನ್ನೂ, ಆರೋಗ್ಯವನ್ನೂ ಪಡೆಯಲು ಬೈಂಗಳೂರಿನ ಲೈಂಗಿಕ ಶಾಸ್ತ್ರದಲ್ಲಿ ಪರಿಣತರಾದ ಡಾ|| ಎ ವಿ ರಾಜಾರಾವರ ಸಲಹೆಯನ್ನು ಪಡೆಯಿರಿ.

ಭಾರತದ ಪ್ರಸಿದ್ಧರಾದ ಡಾ|| ರಾಜಾರಾವರು ಇತರ ವಿಧಾನದ ಚಿಕಿತ್ಸೆಗಳಿಂತಲೂ ಅನ್ಯತವಾದ ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ಜನರಿಗೆ ಚಿಕಿತ್ಸೆ ನೀಡಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವನವನ್ನು, ಹುರುಪನ್ನು ಉಂಟುಮಾಡುವರು. ವಿದ್ಯಾರ್ಥಿಗಳೂ, ಸ್ತ್ರೀಯರೂ, ಯುವಕರೂ, ಹಳ್ಳಿಗಳಲ್ಲಿರುವ ವ್ಯಕ್ತಿಗಳೂ ಇವರ ಚಿಕಿತ್ಸೆಯನ್ನು ಪಡೆಯಬಹುದು.

ಅವರಿಂದ ಡಾ|| ರಾಜಾರಾವರನ್ನು ಭೇಟಿ ಮಾಡಿ ನವ ಯೌವನ, ದೇಹಶಕ್ತಿ ಮತ್ತು ಚೈತನ್ಯವನ್ನು ಸಂಪಾದಿಸಿರಿ.

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ದಾಂಪತ್ಯ ಜೀವನದ ಮಾರ್ಗಗಳು ಸುವರ್ಣ ಸುಖಮಯ.

ಕಾಲ: ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4ರಿಂದ ರಾತ್ರಿ 9 ಘಂಟೆ ವರೆಗೆ

ರಾಜಾ ಮೆಡಿಕಲ್ ಹಾಲ್,

ನಂ 1-745 ಅಶೋಕಾ ರಸ್ತೆ, ಮೈಸೂರು

(ಮೈಸೂರು ಬ್ಯಾಂಕಿನ ಎದುರು ಭಾಗದಿಂದ 3ನೇ ಕಟ್ಟಡ)

Edited Printed and Published by A. R. Nagarajan at Sadhvi Press D. Subbaiah Road, Mysore

ಪೋರ್ಚುಗೀಸರಿಂದ ಭಾರತೀಯನ ಅಪಹರಣ

ಸಾವಂತವಾಡಿ-ಗೋವಾ ಗಡಿ ೨೮ ೪ ಜನ ವಿರೋಧ ಪೋರ್ಚುಗೀಸ್ ಸಿಪಾಯಿಗಳು ಭಾರತದ ಗಡಿಯನ್ನು ಅತಿಕ್ರಮಿಸಿ ಅರ್ಜುನ್ ಸಿಂಗ್ ಎಂಬುವನನ್ನು ಕಳೆದ ಬುಧವಾರ ಅಪಹರಿಸಿಕೊಂಡು ಹೋದರೆಂದು ವರದಿಯಾಗಿದೆ. ಭಾರತೀಯ ಪೋಲೀಸರು ಬರುವಷ್ಟರಲ್ಲಿ ತಮ್ಮ ಗಡಿಯೊಳಗೆ ಅವನನ್ನು ದರದರನೆ ಎಳೆದುಕೊಂಡು ಹೋಗಲಾಯಿತೆಂದು ಹೇಳಲಾಗಿದೆ. ಕಳೆದ ೧೬ನೇ ತಾರೀಖು ರಾತ್ರಿ ಗೋವಾದ ಹಳ್ಳಿಯೊಂದರಲ್ಲಿ ಪೋರ್ಚುಗೀಸ್ ಸೈನಿಕರು ೪ ಗಂಟೆ ಕಾಲ ೪೦೦-೫೦೦ ರೌಂಡು ಗುಂಡು ಹಾರಿಸಿದರೆಂದೂ ವರದಿಯಾಗಿದೆ. ಇದಕ್ಕೆ ಕಾರಣ ತಿಳಿದುಬಂದಿಲ್ಲ.

ರೈಲು ಗಾಡಿಯ ಕಕ್ಕಸಿನಲ್ಲಿ ಶಿಶುವಿನ ಶವ

ನೆನ್ನೆ ದಿನ ಬೆಳಿಗ್ಗೆ ಮದ್ರಾಸಿನಿಂದ ಇಲ್ಲಿಗೆ ಬಂದ ಪ್ಯಾಸೆಂಜರ್ ರೈಲನ್ನು ಜಾಡಮಾಲಿಯು ಶುದ್ಧಿಗೊಳಿಸುತ್ತಿದ್ದಾಗ ಗಾಡಿಯೊಂದರ ಕಕ್ಕಸಿನ ಕೊಳವಿಯೊಳಗೆ ಗೋಣಿಚೀಲದಲ್ಲಿ ಸುತ್ತಲಾಗಿದ್ದ ಆಗತಾನೆ ಜನಿಸಿದ ಗಂಡು ಶಿಶುವಿನ ಶವವು ಪತ್ತೆಯಾಯಿತು. ರೈಲ್ವೆ ಪೋಲೀಸರು ಮಹಜರು ನಡೆಸಿ ಮೊಕದ್ದಮೆ ದಾಖಲು ಮಾಡಿಕೊಂಡಿರುವರು.

Pale

BRONKOL

For ASTHMA

&

BRONCHITIS

Sole Distributors for Mysore State and Coorg

SATHYA & CO

Chemists & Druggists

7th A. S Street

BANGALORE-2

ಮೈಸೂರು ಪೇಟೆ ಧಾರಣೆ

	ರೂ	ಯಿಂದ	ರೂ	ವರೆಗೆ
ಕಡಲೆಕಾಯಿ	೯೦	೪ ೦	೩೦	೦ ೦
ಹಿಪ್ಪೆ	೧೭	೦ ೦		
ಎಳ್ಳು	೫೦	೬ ೦	೫೫	೪ ೦
ಹುರುಳಿ	೪೨	೧೪ ೦		
ಹೆಸರು	೫೬	೮ ೦		
ಹಲಸಂದೆ	೪೫	೮ ೦	೫೦	೦ ೦
ಮೆಣಸಿನಕಾಯಿ	೧೩	೬ ೦	೨೩	೧೦ ೦
ತೆಂಗಿನಕಾಯಿ ೧೧೦೦	೧೧೨	೦ ೦	೨೨೫	೦ ೦

ಗೌರ್ನಮೆಂಟ್ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್, ಮೈಸೂರು

ಟೆಂಡರು ಪ್ರಕಟಣೆ

ಮೈಸೂರಿನಲ್ಲಿರುವ ಗೌರ್ನಮೆಂಟ್ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್ ಕಟ್ಟಡದಲ್ಲಿ ಎರಡು ವರ್ಷಗಳ ಕಾಲ ಸೈಕಲ್ ಸ್ಟ್ಯಾಂಡನ್ನು ನಡೆಸಲು ಮೊಹರಾದ ಟೆಂಡರುಗಳನ್ನು ಕರೆಯಲಾಗಿದೆ. ಕಾಲೇಜಿನ ನೋಟೀಸು ಬೋರ್ಡಿನ ಮೇಲೆ ಪ್ರಕಟಿಸಿರುವ ಷರತ್ತುಗಳ ಪ್ರಕಾರ ಅರ್ಜಿಗಳನ್ನು 3-8-1956ನೇ ತಾರೀಖಿಗೆ ಮಧ್ಯಾಹ್ನದೊಳಗೆ ಪ್ರಿನ್ಸಿಪಾಲರಿಗೆ ಕಳುಹಿಸಬೇಕು.

(ರುಜು) ವಿ. ನಂಜಯ್ಯ, ಕಾರ್ಯದರ್ಶಿ

ಮೋಸ ಹೋಗಬೇಡಿ

ಮೈಸೂರು ಕೃಷ್ಣಮೂರ್ತಿಪುರಂನಲ್ಲಿ ನ್ಯೂ ಕೃಷ್ಣ ಬೇಕರಿ ಎಂಬ ಬೇಕರಿ ಹಾವು ಹೊಸದಾಗಿ ಏರ್ಪಟ್ಟಿರುತ್ತೆ. ಈ ಹಾಸಿಗೂ, ನಮಗೂ ಯಾವ ಸಂಬಂಧವೂ ಇಲ್ಲವೆಂಬ ಸಂಗತಿಯನ್ನು ಸಾರ್ವಜನಿಕರ ಅವಗಾಹನೆಗೆ ಈ ಮೂಲಕ ತಿಳಿಸುತ್ತೆ.

ಕೆ. ಆರ್ ಕೃಷ್ಣಅಯ್ಯಂಗಾರ್,

ಶ್ರೀ ಕೃಷ್ಣಾ ಬೇಕರಿ,

ದಿ ಸುಬ್ಬಯ್ಯ ರೋಡ್, ಮೈಸೂರು

FOR THE INSTALLATION OF RECORDS ... AT YOUR DOORS PLEASE CONTACT
H S RAMACHANDRA
EVERGREEN ACOUSTICS
TREASURE HOUSE OF RECORDS
26 SONAR STREET MYSORE

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

20—7—56ನೇ :: ಶುಕ್ರವಾರದಿಂದ . ಅಮೋಘ ಪ್ರಾರಂಭ

ಪ್ರತಿದಿನ ಮೂರು ಪ್ರದರ್ಶನಗಳು

ಜೂಪಿಟರ್‌ರವರ ತೆಲುಗು ಚಿತ್ರ ★ ಉಮಾಸುಂದರಿ ★

ಪಾತ್ರ:- ನಾಗಯ್ಯ, ಕನ್ನಾಂಬ, ಎನ್ ಟಿ ರಾಮರಾವ್, ಶ್ರೀರಂಜನಿ, ರೇಲಂಗಿ, ಬಾಲಸರಸ್ವತಿ ಮುಂತಾದವರು

Central Food Technological Research Institute, Mysore

TENDER NOTIFICATION

Sealed tenders are invited from experienced Civil Engineering contractors for constructing an "Inflamable Store Shed" in the premises of the Institute. The schedule of quantities and detailed specifications relating to the work may be obtained from the Director, Central Food Technological Research Institute, Mysore, and should reach him duly filled up and complete in all respects along with an earnest deposit of Rs 300/- in cash, on or before 31-7 1956 (4 P M) Tenders received will be opened at 4-30 P M on 31-7-1956. Such of the tenderers desirous of being present at the time, may please do so. The Director reserves the right not to accept the lowest or any of the tenders without assigning reasons thereof.

V. SUBRAHMANYAN

Director

12-7-1956ನೇ . ಗುರುವಾರದಿಂದ . ಅಮೋಘ ಪ್ರಾರಂಭ

ಹೊಸ ಮ್ಯಾನೇಜ್‌ಮೆಂಟ್

ವೆಲ್‌ಕಮ್ ಕಾಫಿ ಕ್ಲಬ್

(ಪ್ರಭಾ ಟಾಕೀಸ್ ಎದುರು) ಮೈಸೂರು

ಮೈಸೂರಿನಲ್ಲಿ ಪ್ರಖ್ಯಾತಿ ಪಡೆದಿರುವ ಹಳೇ ಅಗ್ರಹಾರದ ಶ್ರೀ ಸುಬ್ಬುರವರ ನೇತೃತ್ವದಲ್ಲಿ ಮಾಡಲ್ಪಟ್ಟ ರುಚಿರುಚಿಕರವಾದ, ಶುದ್ಧದಿಂದಲೇ ತಯಾರಾದ ಕೇಸರಿಭಾತ್, ಸೆಟ್ ದೋಸೆ, 'ಎ' ಒನ್ ಕಾಫಿ ಮತ್ತು ಇತರ ಸಿಹಿ ಮತ್ತು ಖಾರ ತಿಂಡಿ ರುಚಿಗೆ ವೆಲ್‌ಕಮ್ ಕಾಫಿ ಕ್ಲಬ್ಬಿಗೆ ದಯಮಾಡಿ ಭೇಟಿ ಕೊಡಿ

ಬಿ. ರಾಮಪ್ರಕಾಶ್ ಶರ್ಮ, ಪ್ರೊಪ್ರೈಟರ್

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 6 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : SUNDAY 22—7—1956 ಮೈಸೂರು : ಭಾನುವಾರ ೨೨—೭—೧೯೫೬ [ಸಂಚಿಕೆ : ೪೨೦

- ಕೆಂಗಲ್ಲರ ನಾಯಕತ್ವಕ್ಕೆ ಎಂ. ಪಿ. ಗಳ ವಿರೋಧ -

ಮೈಸೂರು ಸರ್ಕಾರಕ್ಕೆ ಹೊಸ ನಾಯಕರನ್ನು ಆರಿಸಬೇಕು

ಪಾರ್ಲಿಮೆಂಟಿನ ಮೈಸೂರು ಸದಸ್ಯರ ಒತ್ತಾಯ

ದೆಹಲಿಯಲ್ಲಿ ಮೊನ್ನೆ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿಯವರಾದ ಕೆ.ಪಿ. ಮಾಧವನ್ ನಾಯರ್‌ರವರನ್ನು ಪಾರ್ಲಿಮೆಂಟಿನಲ್ಲಿರುವ ಮೈಸೂರು ಸದಸ್ಯರ ಪೈಕಿ ೧೩ ಮಂದಿ ಭೇಟಿ ಮಾಡಿ, ಮೈಸೂರಿನ ರಾಜಕೀಯ ಪರಿಸ್ಥಿತಿ ಬಗ್ಗೆ ತಮ್ಮ ಅಭಿಪ್ರಾಯವನ್ನು ಸೂಚಿಸಿ, ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕತ್ವದಲ್ಲಿ ಕೂಡಲೇ ಬದಲಾವಣೆಯಾಗಬೇಕೆಂದು ಒತ್ತಾಯ ಮಾಡಿದುದಾಗಿ ವರದಿಯಾಗಿದೆ

ಶ್ರೀ ಕೆ. ಪಿ. ಮಾಧವನ್ ನಾಯರ್‌ರವರು ಕಾಂಗ್ರೆಸ್ ಪಾರ್ಲಿಮೆಂಟರಿ ಸಮಿತಿ ಮತ್ತು ಚುನಾವಣಾ ಸಮಿತಿಯ ಪರವಾಗಿ ಮೈಸೂರು ವ್ಯವಹಾರಗಳನ್ನು ಪರಿಶೀಲಿಸಲು ಅಧಿಕಾರ ಹೊಂದಿರುವರು

ಈ ವಿಚಾರದಲ್ಲಿ ತಡ ಮಾಡುವುದರಿಂದ ಅಪಾಯವುಂಟಾಗುವುದಲ್ಲದೆ ಅನಾವಶ್ಯಕವಾದ ಗೊಂದಲವಾಗಿ, ಪಕ್ಷದ ಭವಿಷ್ಯಕ್ಕೆ ತೊಂದರೆಯಾಗುವುದೆಂದು ಪಾರ್ಲಿಮೆಂಟಿನ ಸದಸ್ಯರು ಅಭಿಪ್ರಾಯಪಟ್ಟಿರುವುದಾಗಿಯೂ ಹೇಳಲಾಗಿದೆ. ಅಲ್ಲದೆ ಪ್ರಜಾಸತ್ತಾತ್ಮಕ ರೀತಿಯಲ್ಲಿ ಈ ಬಗ್ಗೆ ನಿರ್ಧಾರವಾಗಬೇಕೆಂದೂ ಅವರು ಒತ್ತಾಯ ಮಾಡಿರುವುದಾಗಿ ಗೊತ್ತಾಗಿದೆ.

ಶ್ರೀ ಹನುಮಂತಯ್ಯನವರ ಸ್ಥಾನದಲ್ಲಿ ಶ್ರೀಗಳಾದ ಎಸ್. ಚನ್ನಯ್ಯ, ಎಸ್. ನಿಜಲಿಂಗಪ್ಪ ಮತ್ತು ಟಿ. ಸುಬ್ರಹ್ಮಣ್ಯರವರ ಹೆಸರುಗಳನ್ನು ಸೂಚಿಸಲಾಗುತ್ತಿದೆ.

ಕೆ. ಪಿ. ಮಾಧವನ್ ನಾಯರ್‌ರವರನ್ನು ಶ್ರೀಗಳಾದ ನಿಜಲಿಂಗಪ್ಪ, ಎಸ್. ವಿ. ಕೃಷ್ಣಮೂರ್ತಿರಾವ್, ಎಂ. ವಿ. ಕೃಷ್ಣಪ್ಪ, ಹೆಚ್. ಸಿ. ದಾಸಪ್ಪ, ಎನ್. ರಾಚಯ್ಯ, ಟಿ. ಮಾದೇಗೌಡ, ಸಿ. ಆರ್. ಬಸಪ್ಪ, ದೊಡ್ಡತಿಮ್ಮಯ್ಯ, ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಬಳ್ಳಾರಿಯ ಟೇಕೂರು ಸುಬ್ರಹ್ಮಣ್ಯಂ, ಕೆ. ಜಿ. ಒಡೆಯರ್, ವಲಿಯುಲ್ಲಾ ಮತ್ತು ಸಿದ್ದನಂಜಪ್ಪ ಈ ೧೩ ಮಂದಿ ಸದಸ್ಯರು ಭೇಟಿ ಮಾಡಿದ್ದರು

ಶ್ರೀ ಹನುಮಂತಯ್ಯನವರ ರಾಜೀನಾಮೆ ಮತ್ತು ಹೊಸ ನಾಯಕರ ಆಯ್ಕೆಗಾಗಿ ಬಂದಿರುವ ಬೇಡಿಕೆ ಬಗ್ಗೆ ಕೂಡಲೇ ಕ್ರಮ ಕೈಗೊಳ್ಳುವಂತೆ ಹೈಕಮಾಂಡಿನವರನ್ನು ಅವರುಗಳು ಒತ್ತಾಯಪಡಿಸಿದರೆಂದು ಹೇಳಲಾಗಿದೆ.

ತಿಲಕರ ಜೀವನದ ಫಿಲಂ

ಲೋಕಮಾನ್ಯ ಬಾಲಗಂಗಾಧರ ತಿಲಕರ ಜೀವನವನ್ನು ನಿರೂಪಿಸುವ ಚಲನಚಿತ್ರವನ್ನು ಭಾರತ ಸರ್ಕಾರದವರು ತಯಾರಿಸಿ ಪ್ರದರ್ಶನಕ್ಕೆ ಕೊಟ್ಟಿರುತ್ತಾರೆ. ನಾಳೆ ಅವರ ಶತಮಾನೋತ್ಸವದ ದಿನ ಅದನ್ನು ಪ್ರದರ್ಶಿಸಲಾಗುವುದು. ರತ್ನಗಿರಿಯಲ್ಲಿ ಅವರ ಜನನ, ದಕ್ಷಿಣ ವಿದ್ಯಾ ಸೊಸೈಟಿಯ ಸ್ಥಾಪನೆ, ಮಾಂಡಲೆ ಜೈಲಿನಲ್ಲಿ ಗೀತಾ ರಹಸ್ಯದ ಗ್ರಂಥ ರಚನೆ, ಮುಂತಾದುವನ್ನು ಅದರಲ್ಲಿ ತೋರಿಸಲಾಗುವುದು

ಮೈಸೂರಿಗಿಂತಲೂ ತಿರುನಲ್ವೇಲಿಯಲ್ಲಿ ಕಡಿಮೆ ವಿದ್ಯುಚ್ಛಕ್ತಿ ದರ

ಮೈಸೂರು ಸಂಸ್ಥಾನದಲ್ಲಿ ಇತರ ಎಲ್ಲ ಕಡೆಗಳಿಗಿಂತಲೂ ವಿದ್ಯುಚ್ಛಕ್ತಿ ದರಗಳು ಕಡಿಮೆಯಾಗಿವೆಯೆಂದು ಅಧಿಕಾರಿಗಳು ಹೇಳುತ್ತಿರುವರಷ್ಟೆ? ಇದು ಸರಿಯಲ್ಲ. ಭಾರತದ ಅನೇಕ ಕಡೆಗಳಲ್ಲಿ ಇಲ್ಲಿಗಿಂತಲೂ ಕಡಿಮೆ ದರಗಳಿವೆ. ಈ ಕೆಳಗೆ ಒಂದು ನಿದರ್ಶನವನ್ನು ಕೊಡಲಾಗಿದೆ

ತಿರುನಲ್ವೇಲಿ ಮತ್ತು ತೂತ್ತುಕುಡಿಗಳಿಗೆ ವಿದ್ಯುಚ್ಛಕ್ತಿಯನ್ನು ಖಾಸಗೀ ಕಂಪೆನಿಯವರು ಸರಬರಾಜು ಮಾಡುತ್ತಿದ್ದಾರೆ. ಇದು ಸ್ವಲ್ಪ ವಿಶೇಷವಾದ ವಿದ್ಯುಚ್ಛಕ್ತಿಯಲ್ಲ; ಕೆಲವು ಯಂತ್ರ ಸಾಧನಗಳಿಂದಲೇ ಉತ್ಪತ್ತಿಯಾಗತಕ್ಕದ್ದು

ಮನೆಗಳ ದೀಪಕ್ಕೆ ಇರುವವರಿಗೆ ಯೂನಿಟ್ಟಿಗೆ ೩|| ಆಣೆಯಂತೆ ತೆಗೆದುಕೊಳ್ಳುತ್ತಿದ್ದರು. ಈ ತಿಂಗಳಿನಿಂದ ಅದನ್ನು ೪ ಆಣೆಗೆ ಇಳಿಸಿದ್ದಾರೆ. ನಮ್ಮಲ್ಲಿಯಾದರೋ ಅನೇಕ ವರ್ಷಗಳಿಂದಲೂ ೬ ಆಣೆಯಂತೆಯೇ ತೆಗೆದುಕೊಳ್ಳಲಾಗುತ್ತಿದೆ. ಇದುವರೆಗೆ ಮನೆಗಳಲ್ಲಿ ಅಲ್ಲಿ ಕನಿಷ್ಠಾಂಕದ ದರ ೧ ರೂ. ಮಾತ್ರ ಇತ್ತು. ಈಗ ೧|| ರೂ ಮಾಡಿದ್ದಾರೆ. ನಮ್ಮಲ್ಲಿ ಅನೇಕ ವರ್ಷಗಳಿಂದಲೂ ಕನಿಷ್ಠ ಪ್ರಮಾಣವು ೧ ರೂ ೧೧ ಆಣೆ ಇರುತ್ತದೆ. ಇದಲ್ಲದೆ ೧೨೦ ಕ್ಕಿಂತಲೂ ಹೆಚ್ಚು ಯೂನಿಟ್ಟನ್ನು ದೀಪಕ್ಕಾಗಿ ಉಪಯೋಗಿಸುವವರಿಗೆ ೩|| ಆಣೆ, ೩೦೦ಕ್ಕಿಂತ ಹೆಚ್ಚಾದರೆ ೩ ಆಣೆಯಂತೆ ಕಡಿಮೆ ವಿಧಾಯಕವಾಗಿದೆ.

ರೇಡಿಯೊ, ಫ್ಯಾನು, ಹೊಲಿಗೆ ಯಂತ್ರ, ಕುಕ್ಕರ್, ರಫ್ರಿಜರೇಟರ್ ಮತ್ತು ೩ ಅಶ್ವ ಶಕ್ತಿಗಿಂತ ಕಡಿಮೆ ಇರುವ ನೀರಾವರಿ ಪಂಪು ಮುಂತಾದುವಕ್ಕೆ ಯೂನಿಟ್ಟಿಗೆ ೧|ಆಣೆ ದರ ಹಾಕಿದ್ದರೂ, ಕನಿಷ್ಠ ಪ್ರಮಾಣವನ್ನು ಅಶ್ವ ಶಕ್ತಿಗೆ ೨| ರೂ.ನಂತೆ ಗೊತ್ತುಮಾಡಿದ್ದಾರೆ

ಇತರ ಯಂತ್ರಗಳಿಗೂ ಸಹ ಬೇರೆಬೇರೆ ದರಗಳನ್ನು ನಿಗದಿ ಮಾಡಿದ್ದಾರೆ.

ರಿಜಿಸ್ಟರ್ ಆದ ಸಂಘಗಳ ಮೂಲಕ ಅಕ್ಕಿ ಸರಬರಾಜು

ಸಂಸ್ಥಾನದಲ್ಲಿರುವ ಎಲ್ಲಾ ರಿಜಿಸ್ಟರ್ ಆದ ಸಂಘಗಳು ಕೇಂದ್ರ ಸರ್ಕಾರದಿಂದ ಒದಗಿಸಲಾಗುವ ಅಕ್ಕಿಯನ್ನು ಹಂಚುವ ಕೆಲಸವನ್ನು ವಹಿಸಿಕೊಳ್ಳಬಹುದೆಂದು ಸರ್ಕಾರದವರು ತಿಳಿಸಿರುತ್ತಾರೆ. ಈ ಬಗ್ಗೆ ಹಲವು ಷರತ್ತುಗಳನ್ನು ಹಾಕಲಾಗಿದೆ. ಮೊದಲನೇ ಕಂತಿನ ಹಂಚಿಕೆ ಅಕ್ಕಿ ಪಡೆಯಲು ಆಯಾ ಜಿಲ್ಲಾಧಿಕಾರಿಗಳ ಮೂಲಕವೂ, ನಂತರ ಮುಂದಿನ ಹಂಚಿಕೆಗಾಗಿ ಕೇಂದ್ರ ಮಾರಾಟ ಡಿಪೋವಿನ ಅಸಿಸ್ಟೆಂಟ್ ಡೈರೆಕ್ಟರಿಗೆ ನೇರವಾಗಿಯೂ ಅರ್ಜಿ ಹಾಕುವಂತೆ ಸೂಚಿಸಲಾಗಿದೆ. ಅವರೆಲ್ಲರಿಗೂ ಆಯಾ ಪ್ರದೇಶದ ಅತ್ಯಂತ ಸಮೀಪದ ಕೇಂದ್ರ ಗೋದಾಮುಗಳಿಂದ ನಗದು ಹಣ ತೆಗೆದುಕೊಂಡು ಕೊಡಲಾಗುವುದು. ಚೀಲವೂ ಸೇರಿ, ಅಕ್ಕಿಯನ್ನು ಮಣಕ್ಕೆ ೧೬ ರೂ [illegible] ಒದಗಿಸಲಾಗುವುದು. ಪ್ರತಿ ಸಂಸಾರಕ್ಕೆ ವಾರಕ್ಕೆ ೩೧ ಸೇರಿನಂತೆ ಸಂಘಗಳು ಹಂಚಬೇಕು ಮತ್ತು ರೂ ೧ಕ್ಕೆ ೩ ಸೇರಿನಂತೆ ಕೊಡಬೇಕು

ಬೇಲೂರು ಶ್ರೀನಿವಾಸಯ್ಯಂಗಾರ್ ಕೊಲೆ ಪ್ರಕರಣ

ಅಪಾದಿತ ಕೃಷ್ಣ ಮತ್ತು ಮುನಿಸ್ವಾಮಿ ರೆಡ್ಡಿಯವರ ಅರ್ಜಿ

ಬೆಂಗಳೂರು ೨೨

ಬೇಲೂರು ಶ್ರೀನಿವಾಸಯ್ಯಂಗಾರ್‌ರ ಮನೆ ಕೊಲೆ ಪ್ರಕರಣದಲ್ಲಿ ಅಪಾದಿತರಾಗಿರುವ ಕೃಷ್ಣ ಮತ್ತು ಮುನಿಸ್ವಾಮಿ ರೆಡ್ಡಿಯವರು ತಮ್ಮ ವಕೀಲರ ಮೂಲಕ ನಗರದ ನ್ಯಾಯಾಧೀಶರ ಕೋರ್ಟಿಗೆ ಅರ್ಜಿ ಸಲ್ಲಿಸಿ, ತಮ್ಮನ್ನು ಜೈಲಿನಲ್ಲಿ ಬಿಸಿಲು ಗಾಳಿಯಿಲ್ಲದ ಸಣ್ಣ ಕೋಣೆಯಲ್ಲಿಟ್ಟು ಕೈಕಾಲುಗಳಿಗೆ ಬೇಡಿಗಳನ್ನು ಹಾಕಿರುವುದಾಗಿಯೂ, ಅದು ರಾಜ್ಯಾಂಗ ದತ್ತವಾದ ಸ್ವಾತಂತ್ರ್ಯಕ್ಕೆ ವಿರೋಧವಾದುದೆಂದೂ ತಿಳಿಸಿ ಮಾನವನಿಗೆ ಸ್ವಭಾವತಃ ಕೊಡಬೇಕಾದ ಹಕ್ಕನ್ನು ತಮಗೆ ಕೊಡಿಸುವಂತೆ ಕೋರಿರುತ್ತಾರೆ. ಈ ಅರ್ಜಿಗೆ ಜವಾಬು ನ್ಯಾಯಾಧೀಶರ ಎದುರಿನಲ್ಲೇ ರುಜು ಮಾಡಿರುತ್ತಾರೆ

ಬೆಂಗಳೂರಿನಲ್ಲಿ ರೇಡಿಯೊ ತಯಾರಿಕೆ—

ಬೆಂಗಳೂರಿನಲ್ಲಿರುವ ಭಾರತ ಎಲೆಕ್ಟ್ರಾನಿಕ್ಸ್ ಕಾರ್ಖಾನೆಯಲ್ಲಿ ಇದೇ ಮೊದಲಾಗಿ ೧೨ ರೇಡಿಯೋಗಳನ್ನು ತಯಾರಿಸಲಾಗಿದೆ. ಇವುಗಳನ್ನು ತಜ್ಞರ ಮೂಲಕ ಪರೀಕ್ಷೆ ಮಾಡಿಸಿ ಎಲ್ಲ ವಿಧದಲ್ಲೂ ಸಮರ್ಪಕವಾಗಿರುವುದೆಂದು ಗೊತ್ತುಪಡಿಸಲಾಗಿದೆ

ರಂಗೂನ್ ಬಳಿ ರೈಲು ಅಪಘಾತದಲ್ಲಿ ೧೮೦ ಜನರ ಮರಣ

ಕಮ್ಯೂನಿಸ್ಟ್ ದಂಗೆಕೋರರ ವಿನಾಶ ಕೃತ್ಯದ ಪರಿಣಾಮ

ರಂಗೂನಿನ ಬಳಿ ಪಲ್ಲಾ ಮತ್ತು ತಮಟ್ ಚೆಂಗ್ ಎಂಬ ಊರುಗಳ ನಡುವೆ ಮೊನ್ನೆ ರೈಲು ಅಪಘಾತವೊಂದು ನಡೆದು, ೧೮೦ ಜನರು ಮೃತಪಟ್ಟಿರುವುದಾಗಿ ವರದಿಯಾಗಿದೆ. ದಂಗೆಕೋರ ಕಮ್ಯೂನಿಸ್ಟರ ವಿನಾಶಕೃತ್ಯದಿಂದ ರೈಲು ಕಂಬಿ ತಪ್ಪಿದುದಾಗಿಯೂ, ಅನೇಕ ಪ್ರಯಾಣಿಕರನ್ನು ಕಮ್ಯೂನಿಸ್ಟರು ಅಪಹರಿಸಿ ಕಾಡಿಗೆ ಎಳೆದುಕೊಂಡು ಹೋದುದಾಗಿಯೂ ಹೇಳಲಾಗಿದೆ.

ಗುರು ಪೂರ್ಣಿಮಾ ಉತ್ಸವ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ಗುರು ಪೂರ್ಣಿಮಾ ಉತ್ಸವದ ಅಂಗವಾಗಿ ಈ ಸಂಜೆ ೬|| ಗೆ ಸಾಮೂಹಿಕ ಪ್ರಾರ್ಥನೆ ಮತ್ತು ೭ಕ್ಕೆ ಶ್ರೀಮತಿ ಗೌರಮ್ಮ ನಾಗರಾಜುರವರಿಂದ ಮಹಾಭಾರತ ಕಾವ್ಯವಾಚನವು ನಡೆಯುವುವು. ಶ್ರೀ ಸೂರ್ಯನಾರಾಯಣರಾಯರು ವ್ಯಾಖ್ಯಾನ ಮಾಡುವರು. ನಾಳೆ ಬೆಳಿಗ್ಗೆ ಗಣಪತಿ, ನವಗ್ರಹ ಹೋಮ ಮತ್ತು ಪ್ರಾರ್ಥನಾದಿಯೂ, ಸಂಜೆ ೬|| ಗೆ ಸಾಮೂಹಿಕ ಪ್ರಾರ್ಥನೆ ಮತ್ತು ೭|| ಚೌಕ್ಯವು ಮತ್ತು ವ್ಯಾಸರವರ ಸಂಗೀತವೂ ಇವೆ

ಬಿಡಾರಂ ಕೃಷ್ಣಪ್ಪನವರ ಆರಾಧನೆ

ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ನಾಳೆ ನಡೆಯಲಿರುವ ಬಿಡಾರಂ ಕೃಷ್ಣಪ್ಪನವರ ಆರಾಧನೆಯ ಪ್ರಯುಕ್ತ ಈ ಸಂಜೆ ಆಲ್ಯಾನಾರ್ ಕಲಾಶಾಲೆಯವರ ಸಂಗೀತವು ನಡೆಯುವುದು. ಸರ್ವರಿಗೂ ಆಹ್ವಾನವುಂಟು

ಬೇಲೂರರ ಕೊಲೆ ಆಪಾದಿತ ಕೃಷ್ಣನಿಂದ ಇನ್ನೆರಡು ಕೊಲೆ ?

ಧಾರವಾಡದಲ್ಲಿ ಎರಡು ವರ್ಷಗಳ ಹಿಂದೆ ನಡೆದ ೨ ಕೊಲೆಗಳ ಪ್ರಕರಣದಲ್ಲಿ ಬೇಲೂರು ಶ್ರೀನಿವಾಸಯ್ಯಂಗಾರ್‌ರ ಮನೆ ಕೊಲೆ ಆಪಾದಿತ ಕೃಷ್ಣನು ಬೇಕಾಗಿದ್ದಾನೆಂದು ಬೊಂಬಾಯಿ ಕರ್ನಾಟಕದ ಪೋಲೀಸರು ಮೈಸೂರು ಪೋಲೀಸರನ್ನು ಕೇಳಿದ್ದಾರೆಂದು ವರದಿಯಾಗಿದೆ

ಕಚ್ ಮತ್ತು ಪಲನ್‌ಪುರ ಸಂಸ್ಥಾನದ ಮಾಜಿ ದಿವಾನರಾದ ದಿವಾನ್ ಬಹದ್ದೂರ್ ರಂಗರಾವ್ ನಾಯಂಪಳ್ಳಿ ಮತ್ತು ಅವರ ಪತ್ನಿಯು ೧೯೫೪ ನೇ ಜುಲೈ ೧೦ನೇ ತಾರೀಖು ನಡು ಹಗಲಿನಲ್ಲಿ ಕೊಲೆಯಾಗಿ ೧೦ ಸಾವಿರ ರೂ. ನಗದು ಮತ್ತು ಆಭರಣಗಳ ಅಪಹಾರವಾಗಿತ್ತು

ಗತಿಸಿದ ನಾಯಂಪಳ್ಳಿಯವರ ಮಗಳು ಶ್ರೀಮತಿ ಇಂದುಮತಿರಾಯರು ಬೆಂಗಳೂರಿಗೆ ಬಂದು ತಮ್ಮ ತಂದೆಯ ಮನೆಯಲ್ಲಿ ಆಗ ಅಡಿಗೆಯವನಾಗಿ ಕೆಲಸ ಮಾಡುತ್ತಿದ್ದು ಅಂದಿನಿಂದಲೂ ಪತ್ತೆಯಿಲ್ಲದವನಾಗಿದ್ದನೆಂದು ಹೇಳಲಾದ ಕೃಷ್ಣನನ್ನು ಗುರುತಿಸಿದುದಾಗಿ ಗೊತ್ತಾಗಿದೆ

ಬರ್ಮಾ ಭೂಕಂಪದಿಂದ ಜ್ವಾಲಾಮುಖಿಯ ಉದ್ಭವ

ಕಳೆದ ಸೋಮವಾರ ರಾತ್ರಿ ಮಧ್ಯ ಬರ್ಮಾದಲ್ಲಿ ಆದ ಭೂಕಂಪದ ಪರಿಣಾಮವಾಗಿ, ಮಾಂಡಲೆ ನಗರಕ್ಕೆ ೧೫ ಮೈಲಿ ದೂರವಿರುವ ಸಗ್ಯಾಂಗ್ ಎಂಬ ಊರಿನ ಬಳಿ ಗದ್ದೆಯಲ್ಲಿ ಜ್ವಾಲಾಮುಖಿಯೊಂದು ಉದ್ಭವಿಸಿ, ಅದರ ಮುಖದಿಂದ ಬೂದಿಯು ಹೊಗೆಯು ಹೊರಡುತ್ತಿರುವುದೆಂದು ವರದಿಯಾಗಿದೆ

ಮಾಧ್ವ ವಿದ್ಯಾರ್ಥಿನಿಲಯದಲ್ಲಿ ತಿಲಕರ ಶತಮಾನೋತ್ಸವ

ಅಖಿಲ ಭಾರತ ಮಾಧ್ವ ಮಹಾಮಂಡಲಿ ವಿದ್ಯಾರ್ಥಿ ನಿಲಯದಲ್ಲಿ ನಾಳೆ ಬೆಳಿಗ್ಗೆ ೮|| ಗಂಟೆಗೆ ಬಾಲಗಂಗಾಧರ ತಿಲಕರ ಶತಮಾನೋತ್ಸವವನ್ನು ನೆರವೇರಿಸಲಾಗುವುದು. ಮಹಾರಾಜಾ ಕಾಲೇಜಿನ ಅಸಿಸ್ಟೆಂಟ್ ಪ್ರೊಫೆಸರ್ ಶ್ರೀ ಬಾಮುನಾಚಾರ್ಯರು ಉಪನ್ಯಾಸ ಮಾಡುವರು. ಸರ್ವರಿಗೂ ಸ್ವಾಗತವಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ಕ್ಕೆ ವಾರ್ತೆ ೭-೧೫ ಕೆ. ಎಸ್. [illegible] ೭-೩೦ ಗಾನವಿಹಾರ [illegible] ಮಧ್ಯಾಹ್ನ ೧೨ ಸುಂದರರಾಜ [illegible] ೪೦ [illegible] ಗ್ರಾಮಾಂತರ [illegible] ಆರ್ [illegible] ೭-೪೦ ಮತ್ತು [illegible] ಹಿಂದೀ ಗೀತೆ ಮತ್ತು [illegible] ತಿಲಕರ [illegible] ೭-೪೦ ತಿಲಕರ ಶತಮಾನೋತ್ಸವ [illegible] ರಾತ್ರಿ [illegible] ತಿಲಕರ ಬಗ್ಗೆ [illegible] ಮತ್ತು [illegible] ಭಾಷಣ [illegible]

ವಾರ ಭವಿಷ್ಯ

ತಾII ೨೨ ೭ ೫೬ರಿಂದ ೨೮ ೭ ೫೬ರ ವರೆಗೆ

ಮೇಷ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಕುಟುಂಬದಲ್ಲಿ ಅಶಾಂತಿ

ವೃಷಭ —ಆರೋಗ್ಯ ಉತ್ತಮ ಗೊಳ್ಳುವುದು ಆರ್ಥಿಕ ಪರಿಸ್ಥಿತಿ ಸಮರ್ಪಕ ಪ್ರವಾಸ ಸುಖಕರವಾಗಿರುವುದು ವ್ಯಾಪಾರವ್ಯವಹಾರಗಳಲ್ಲಿ ತೃಪ್ತಿದಾಯಕ ಪರಿಸ್ಥಿತಿ ವಿದ್ಯಾರ್ಥಿಗಳ ಪರೀಕ್ಷೆ

ಮಿಥುನ —ಆರೋಗ್ಯ ಸಮರ್ಪಕ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಶುಭ ಕಾರ್ಯಗಳು ನಡೆಗುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಆಪ್ತರಿಂದ ನೆರವು

ಕರ್ಕ —ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಸಂಭವ ಉದ್ಯೋಗದಲ್ಲಿ ತಿರುಗುವ ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ

ಸಿಂಹ —ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ ಉದ್ಯೋಗದಲ್ಲಿ ಸಮಸ್ಯೆ ಆಪ್ತರಿಂದ ದ್ರೋಹ

ಕನ್ಯಾ —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸಮರ್ಪಕ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ನೂತನ ಪರಿಚಯ

ತುಲಾ —ಆರೋಗ್ಯ ಉತ್ತಮಗೊಳ್ಳುವುದು ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಹಣ ಲಾಭವಾಗುವ ಸಂಭವ

ವೃಶ್ಚಿಕ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ಸಾಧಾರಣ ಆಪ್ತರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ಒಟ್ಟಿನ ಉದ್ಯೋಗದಲ್ಲಿ ತಿರುಗುವ ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ಧನು —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಪ್ರವಾಸ ಸುಖಕರವಾಗಿರುವುದು ಕುಟುಂಬದಲ್ಲಿ ಶಾಂತಿದಾಯಕ ವಾತಾವರಣ

ಮಕರ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ಕಾರ್ಯಸಾಧನೆಯಲ್ಲಿ ಅಡಚಣೆ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ನೌಕರಿಯಲ್ಲಿ ನಿರುತ್ಸಾಹ

ಕುಂಭ —ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಶುಭಕಾರ್ಯಗಳು ನಡೆಯುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ಮೀನ —ಆರೋಗ್ಯ ತೃಪ್ತಿಕರ ಆರ್ಥಿಕ ಬಿಕ್ಕಟ್ಟು ಹೆಚ್ಚುವುದು ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ನಿರುತ್ಸಾಹ ಕೈಗೊಂಡ ಕಾರ್ಯಗಳಿಗೆ ಅಡ್ಡಿ ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ಮೋಸ ಹೋಗಬೇಡಿ

ಮೈಸೂರು ಕೃಷ್ಣಮೂರ್ತಿಪುರಂನಲ್ಲಿ ನ್ಯೂ ಕೃಷ್ಣ ಬೇಕರಿ ಎಂಬ ಬೇಕರಿ ಹೊಸದಾಗಿ ಏರ್ಪಟ್ಟಿರುತ್ತೆ ಈ ಬೇಕರಿಗೂ ನಮಗೂ ಯಾವ ಸಂಬಂಧವೂ ಇಲ್ಲವೆಂಬ ಸಂಗತಿಯನ್ನು ಸಾರ್ವಜನಿಕರ ಅವಗಾಹನೆಗೆ ಈ ಮೂಲಕ ತಿಳಿಸಲಾಗುತ್ತೆ

ಕೆ ಆರ್ ಕೃಷ್ಣಸ್ವಾಮಿಅಯ್ಯಂಗಾರ್,

ಶ್ರೀ ಕೃಷ್ಣಾ ಬೇಕರಿ,

ಡಿ ಸುಬ್ಬಯ್ಯಾ ರೋಡ್ ಮೈಸೂರು

ನಿಯೋ ಗ್ಯಾರೇಜ್

ಇರ್ವಿನ್ ರೋಡ್ ಮೈಸೂರು

ಪ್ರಕಟಣೆ

1-7-56 ರಿಂದ ನಮ್ಮ ಗ್ಯಾರೇಜಿನ ಫೋರ್ಮನ್ ಆಗಿ, ಬೊಂಬಾಯಿಯಲ್ಲಿ ಖ್ಯಾತಿ ಪಡೆದಿರುವ ಮತ್ತು ಡೀಸಲ್ ರಿಪೇರಿಯಲ್ಲಿ ತುಂಬಾ ಅನುಭವವುಳ್ಳ

ಶ್ರೀ ಸಿ. ಎ. ವಾಟರ್ಸ್‌ರವರನ್ನು

ನಿಯಮಿಸಿದ್ದೇವೆ

ಎಲ್ಲಾ ತರಹ ಡೀಸಲ್ ಇಂಜಿನ್ ಮತ್ತು ಪ್ಯೂಯಲ್ ಪಂಪ್‌ಗಳ ಸಕಲ ರಿಪೇರಿಗಳನ್ನೂ ಖಾತ್ರಿಯಾಗಿ ನಿಮಗೆ ಸಮರ್ಪಕವಾಗುವ ರೀತಿಯಲ್ಲಿ ಮಾಡುತ್ತೇವೆ

ಒಂದೇ ಸರ್ತಿ ಬಂದು ನೋಡಿ

ಇವನನ್ನು ನೋಡಿರಿ

ಇವನ ಮೂಗು ... ಮೆಣಸಿನ್ನರ ಅಥವಾ ಇವನ ... ಶೀತವಾಗಿದೆ

- ★ ಇವನು ಈ ಕಡೆಯಿಂದ ಎಷ್ಟು ಕೆಮ್ಮುವನು ಅಥವಾ ಶಿಶಿರಯ ... ಹಿಡಿಯುವನು
- ★ ಇವನು ದಿಗ್ಭ್ರಮೆಗೊಳ್ಳುವನು ಮತ್ತು ಉಸಿರಾಡಲು ... ಪಡುವನು
- ★ ಇವನು ಉತ್ಸಾಹವಿಲ್ಲದ ಕಡಿಮೆಯುಳ್ಳ ಮತ್ತು ... ನಿತ್ರಾಣನು
- ★ ಇವನ ಶಿರಸ್ಸಿನ ... ಕಡಿಮೆ ... ವಾದನು
- ★ ಇವನು ಕೆಮ್ಮುವ ಹಾಗೆ ತಲ್ಲಣಿಸುವನು
- ★ ಇವನ ತುಟಿಗಳು ಬಿಳಿಚಿಕೊಂಡಿವೆ
- ★ ಇವನ ಮೂಗಿನಿಂದ ಒಂದು ಕಥೆಯನ್ನು ಹೇಳುವನು

ಇದೇ ಆಸ್ತಮ

ದಾರಿ ಮತ್ತು ಈ ತರಹೆಯ ಒಂದು ಚಿತ್ರ ... ಆಸೆ ಮತ್ತು ದರ್ಪಣತೆಗೆ ಬದಲಿಸುವುದು

ಕರ್ತೃ ಜ ಪಂಡಿತ

ದುರ್ಗಾ ದತ್ತ ಶರ್ಮ

ಕೃಷ್ಣ ವಾಚಸ್ಪತಿ ಆಯುರ್ವೇದ

ನವರತ್ನ ಕಲ್ಪ

ಕಂಡುಹಿಡಿದವರು

ವಶ್ಯ ವೈಶ್ವರ್ಯ ಮತ್ತು ದಮ್ಮ ಇತ್ಯಾದಿ ಅಮೂಲ್ಯ ಸಲಹೆಗಳಿಗಾಗಿ ಬರೆಯಿರಿ

ಉಚಿತ ಸಲಹೆಗೆ ಬರೆಯಿರಿ

NAVRATNA KALPA PHARMACY,

Jullundur City (India)

Grams NAVRATNA

Edited Printed and Published by A R Natarajan Sadhvi Press D Subbiah Road Mysore

ಜಿಲ್ಲಾ ಬೋರ್ಡ್ ಪ್ರೌಢ ಶಾಲೆಗೆ ಬಲವಂತವಾಗಿ ಬೀಗ ?

ದೇವನೂರಿನ ಜಿಲ್ಲಾ ಬೋರ್ಡ್ ಪ್ರೌಢ ಶಾಲೆಗೆ ಕಳೆದ ಗುರುವಾರ ತಾಲ್ಲೂಕು ಕ್ರಿಮಿನಲ್ ಫಿಲಾಸಫರ್ ಶ್ರೀ ಮಾದಪ್ಪ ಮತ್ತು ಶ್ರೀ ಗುರುಸಿದ್ದಪ್ಪ ಎಂಬುವರು ಬಲವಂತವಾಗಿ ಬಾಗಿಲಿಗೆ ಬೀಗವನ್ನು ಹಾಕಿದ್ದರೆಂದೂ ಡಿಸ್ಟ್ರಿಕ್ಟ್ ಚೀಫ್ ಎಕ್ಸಿಕ್ಯೂಟಿವ್ ಅಧಿಕಾರಿಗಳಾದ ಶ್ರೀ ಬಿ ಎಸ್ ನಂಜುಂಡೇಗೌಡರು ಮತ್ತು ಪೊಲೀಸರು ಸ್ಥಳಕ್ಕೆ ಹೋಗಿ ಬೀಗವನ್ನು ತೆಗೆಸಿ ಮುಂದಿನ ಕ್ರಮ ಜರುಗಿಸಿದರೆಂದೂ ವರದಿಯಾಗಿದೆ ಮುಖ್ಯೋಪಾಧ್ಯಾಯರೊಡನೆ ಜಗಳವಾಡಿ ಶಾಲೆಯ ಬಾಗಿಲಿಗೆ ಬೀಗ ಹಾಕಿದ್ದುದಾಗಿ ಗೊತ್ತಾಗಿದೆ

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಕಡಲೆಕಾಯಿ	೯೦ ೨ ೦	೨೦ ೮ ೦
ಎಳ್ಳು	೮೪ ೧೨ ೦	೮೮ ೧೨ ೦
ಹುರುಳಿ	೪೨ ೦ ೦	೪೯ ೦ ೦
ಹೆಸರು	೫೭ ೧೨ ೦	
ಹರಳೆಣ್ಣೆ	೫೩ ೧೪ ೦	೫೦ ೬ ೦
ಹುಣಸೇಹಣ್ಣು	೪ ೮ ೦	೬ ೦ ೦
ಮೆಣಸಿನಕಾಯಿ	೧೯ ೦ ೦	೨೫ ೨ ೦
ತೆಂಗಿನಕಾಯಿ ೧೦೦೦	೧೨೩ ೦ ೦	೨೭೫ ೦ ೦

ಜಪಾನಿನ ಕೈಗಾರಿಕಾ ಕಲೆಯ ಬಗ್ಗೆ ಭಾಷಣ

ಜಪಾನಿನಲ್ಲಿ ೬ ತಿಂಗಳ ಕಾಲ ಪ್ರವಾಸ ಮಾಡಿ ಹಿಂದಿರುಗಿರುವ ನಗರದ ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್ಟಿಟ್ಯೂಟಿನ ನಿವೃತ್ತ ಅಧ್ಯಾಪಕರಾದ ಶ್ರೀ ಎಂ ವೀರಪ್ಪನವರು ಕಳೆದ ಗುರುವಾರ ಸಂಜೆ ಮಹಾರಾಜಾ ಕಾಲೇಜು ವಿದ್ಯಾರ್ಥಿನಿಲಯದಲ್ಲಿ ಭಾಷಣ ಮಾಡಿ, ತಮ್ಮ ಅನುಭವವನ್ನು ವಿವರಿಸಿದರು ಮಾರುಕಟ್ಟೆಗೆ ಒದಗಿಸುವ ಸಾಮಾನುಗಳನ್ನು ಪ್ಯಾಕ್ ಮಾಡುವುದರಲ್ಲಿ ಅಲ್ಲಿನವರು ವಹಿಸುತ್ತಿರುವ ಎಚ್ಚರಿಕೆಯನ್ನು ವಿವರಿಸಿ ಅದೇ ಒಂದು ಕಲೆಯಾಗಿರುವುದೆಂದು ತಿಳಿಸಿದರು ಅದರಲ್ಲಿ ಪ್ರಾಯೋಗಿಕ ಶಿಕ್ಷಣಕ್ಕೆ ಪ್ರಾಶಸ್ತ್ಯ ಕೊಡಲಾಗಿದೆ ಅಲ್ಲಿನವರು ಯಾವ ಪದಾರ್ಥವನ್ನೂ ಕೆಲಸಕ್ಕೆ ಬಾರದ್ದೆಂದು ಬಿಸಾಡುವುದಿಲ್ಲವೆಂದೂ ಅವರು ತಿಳಿಸಿದರು



ಒಲಂಪಿಯಾ ★

19 7-56 ರಿಂದ ಅನೋಘ ಪ್ರಾರಂಭ

ದಿನವೂ ಮೂರು ಪ್ರದರ್ಶನಗಳು

ಕಲ್ಪನಾ ಫಿಲಂಸ್‌ರವರ ಅತ್ಯುತ್ತಮ ಸಾಮಾಜಿಕ ಚಿತ್ರ

✱ ಮೇಮ್ ಸಾಹೆಬ್

ಪಾತ್ರ - ಮೀನಾ ಕುಮಾರಿ ಕಿಶೋರ್ ಕುಮಾರ್, ಪಟ್ಟಕಪೂರ್ ಮತ್ತು ಓಂ ಪ್ರಕಾಶ್

ನಿರ್ದೇಶನ ಆರ್ ಸಿ ತಲ್ವಾರ್ - ಸಂಗೀತ ಮದನ್‌ಮೋಹನ್ (ಧಾಯ್‌ಭಾಯ್ ಪ್ರಖ್ಯಾತಿ)

ಮರ್ಫಿ ರೇಡಿಯೊ

ಅತ್ಯಾಧುನಿಕವಾದ ಎಲ್ಲಾ ಮಾದರಿಗಳಲ್ಲೂ ಈಗ ಪ್ರದರ್ಶಿಸಲ್ಪಡುತ್ತಿದೆ

ಅಬೀಡ್ಸ್,

ಸಯ್ಯಾಜಿ ಚೌಕ — — ಮೈಸೂರು

Central Food Technological Research Institute, Mysore

TENDER NOTIFICATION

Sealed tenders are invited from Electrical Contractors Licenced for work in Mysore State for the work of supplying and wiring power mains in the newly constructed Technology Block of this Institute.

The tender papers relating to the work could be obtained from the Director, Central Food Technological Research Institute, Mysore during office hours on payment of a sum of Rs 5/-per set The approximate value of the work is Rs 21,000/- and an earnest money of Rs 1,200/ has to be paid

The tender in duplicate along with the earnest money paid in cash at the office of the Institute, will have to be *sent to the Director Central Food Technological Research* Institute, V V Mohalla P O, Mysore, so as to reach him on or before 3 0 P M on 16-8-1956

The tenders received will be opened by the Director, Central Food Technological Research Institute, at his office on the same day at 4 0 P M in the presence of the tenderers or their representatives who may be present at the time

The final decision regarding the disposal of the tender rests with the Council of Scientific & Industrial Research, New Delhi The Director reserves the right not to accept the lowest or any of the tenders without assigning any reason therefor

V SUBRAHMANYAN,
Director

12-7-1956ನೇ ಗುರುವಾರದಿಂದ ಅನೋಘ ಪ್ರಾರಂಭ

ಹೊಸ ಮ್ಯಾನೇಜ್‌ಮೆಂಟ್

ವೆಲ್‌ಕಮ್ ಕಾಫಿ ಕ್ಲಬ್

(ಪ್ರಭಾ ಟಾಕೀಸ್ ಎದುರು) ಮೈಸೂರು

ಮೈಸೂರಿನಲ್ಲಿ ಪ್ರಖ್ಯಾತಿ ಪಡೆದಿರುವ ಹಳೇ ಜಗನ್ನಾಥದ ಶ್ರೀ ಸುಬ್ಬುರವರ ನೇತೃತ್ವದಲ್ಲಿ ಮಾಡಲ್ಪಟ್ಟ ರುಚಿರುಚಿಕರವಾದ, ಶುದ್ಧ ತುಪ್ಪದಿಂದಲೇ ತಯಾರಾದ ಟಿ ಸಫ್ಲಾಕ್, ಸೆಟ್ ದೋಸೆ, 'ಎ' ಒನ್ ಕಾಫಿ ಮತ್ತು ಇತರ ಸಿಹಿ ಮತ್ತು ಖಾರ ತಿಂಡಿ ಟಿಫನ್ ವೆಲ್‌ಕಮ್ ಕಾಫಿ ಕ್ಲಬ್ಬಿಗೆ ದಯಮಾಡಿ ಭೇಟಿ ಕೊಡಿ

ಡಿ ರಾಂಪ್ರಸಾದ್ ಶರ್ಮ, ಪ್ರೊಪ್ರೈಟರ್

ಬಾಯಿಗೆ ರುಚಿ ಊಟ ಮಾಡುವವರಿಗೆ ರಿಯಾಯಿತಿ ದರ ನಿರ್ಣಯಿಸಿದ್ದೇವೆ ಶುಚಿರುಚಿಯಾದ ಊಟಗಳು ಮತ್ತು ಆರೋಗ್ಯಕರವಾದ ಹಾಗೂ ಅನುಕೂಲವಾದ ರೂಮುಗಳಿಗೆ ಒಮ್ಮೆ ಭೇಟಿ ಕೊಡಿ

★ ನ್ಯೂ ಚಾಮುಂಡೇಶ್ವರಿ ಕೆಫೆ

ಫೋನ್ 5 1 ಪ್ರೊಪ್ರೈಟರ್ ಸಿ ಬಿ ಎಂ ಚಂದ್ರಯ್ಯ ಇರ್ವಿನ್ ರಸ್ತೆ, ಮೈಸೂರು

ರಿಜಿಸ್ಟರ್ ನಂ. 792

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು
ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೦೪] SADHVI : MONDAY 23—7—1956 ಮೈಸೂರು : ಸೋಮವಾರ ೨೩—೭—೧೯೫೬ [ಸಂಚಿಕೆ : ೬೨೧

ದೇಶದಲ್ಲೆಲ್ಲಾ ಇಂದು ಲೋಕಮಾನ್ಯ ತಿಲಕರ ಪುಣ್ಯಸ್ಮರಣೆ

ಬಿತ್ತನೆ ಧಾನ್ಯವನ್ನು ಜನರು ಸೇವಿಸಬಾರದು

ವ್ಯವಸಾಯ ಇಲಾಖಾ ಡೈರೆಕ್ಟರರ ಮನವಿ

ಮೈಸೂರು ೨೨

ಬಿತ್ತನೆಗಾಗಿ ಹಂಚಲಾಗುತ್ತಿರುವ ಧಾನ್ಯಗಳಿಗೆ ರೋಗ ಮತ್ತು ಹುಳುಗಳ ಕಾಟವನ್ನು ತಪ್ಪಿಸಲು ಔಷಧಿಯನ್ನು ಸೇರ್ಪಡೆಯಿಂದ ಬೆರೆಸಲಾಗುತ್ತಿರುವುದರಿಂದ ಜನರು ಅವನ್ನು ಆಹಾರವನ್ನಾಗಿ ಉಪಯೋಗಿಸಬಾರದೆಂದೂ, ಹಾಗೆ ಮಾಡಿದಲ್ಲಿ ಅಪಾಯವಾಗುವುದೆಂದೂ ಸಂಸ್ಥಾನದ ವ್ಯವಸಾಯ ಇಲಾಖಾ ಡೈರೆಕ್ಟರ್ ಶ್ರೀ ಟಿ. ಮಲ್ಲಾಜೆ ಅರಸರು ನೆನ್ನೆ ಪತ್ರಿಕಾ ಪ್ರತಿನಿಧಿಗೆ ತಿಳಿಸಿದರು.

ಜಿಲ್ಲೆಯಲ್ಲಿ ಸಾಧಾರಣವಾಗಿ ಆಹಾರದ ಅಭಾವವಿದ್ದರೂ ಬಿತ್ತನೆ ಧಾನ್ಯದ ಅಭಾವವಿಲ್ಲ. ಬಿತ್ತನೆಗಾಗಿ ಇಲಾಖೆಯವರು ಎಷ್ಟು ಬೇಕಾದರೂ ಧಾನ್ಯವನ್ನು ಒದಗಿಸಬಲ್ಲರು. ಎಷ್ಟೇ ಹೆಚ್ಚೆಂದರೂ ಜಿಲ್ಲೆಯಲ್ಲಿ ಬಿತ್ತನೆಗೆ ೩೦೦ ಪಲ್ಲ ರಾಗಿ ಸಾಕು. ಆದರೆ ನಾವು ಇದುವರೆಗೂ ೧,೨೫೦ ಪಲ್ಲ ಹಂಚಿದ್ದೇವೆ. ಇಲಾಖೆಯವರ ಈ ಹಂಚಿಕೆಯನ್ನು ಕ್ಷಾಮ ಪರಿಹಾರ ಕ್ರಮವೆಂದು ಜನರು ತಪ್ಪಾಗಿ ಭಾವಿಸಿರುವುದು ಈ ಹೆಚ್ಚಿನ ಬೇಡಿಕೆಗಳಿಗೆ ಕಾರಣ. ಹೆಚ್ಚಿನ ಖರ್ಚಿನಲ್ಲಿ ಪಡೆದ ರಾಗಿಯನ್ನು ಈ ರೀತಿ ಹಂಚುವುದು ಸಾಧ್ಯವಿಲ್ಲ. ಅದಕ್ಕಾಗಿ ಧಾನ್ಯಕ್ಕೆ ರೋಗ ನಿರೋಧಕವನ್ನು ಬೆರೆಸಲಾಗುತ್ತದೆ. ಇದನ್ನು ತಿಂದವರಿಗೆ ವಾಂತಿ ಮತ್ತು ಭೇದಿಗಳು ಉಂಟಾಗುತ್ತವೆ. ಧಾನ್ಯವನ್ನು ನೀರಿನಲ್ಲಿ ತೊಳೆದರೂ ವಿಷವು ಹೋಗುವುದಿಲ್ಲ. ಅದರ ಬದಲು ಕಾಳಿನಲ್ಲಿ ಸ್ಥಿರವಾಗಿ ನಿಲ್ಲುತ್ತದೆ. ಆದ್ದರಿಂದ ಜನರು ಅದನ್ನು ತಿನ್ನಬಾರದು ಎಂಬುದಾಗಿ ಅವರು ಸೂಚಿಸಿದರು.

ಜಿಲ್ಲೆಯಲ್ಲಿ ಇದುವರೆಗೂ ಬಿತ್ತನೆಗಾಗಿ ೫೦೦ ಪಲ್ಲ ಭತ್ತವನ್ನು ಹಂಚಲಾಗಿದೆಯೆಂದೂ, ಶೇಕಡ ೫೦ ರಷ್ಟು ಪ್ರದೇಶದಲ್ಲಿ ಹೋಳದ ಬೆಳೆ ಹಾಕಾಗಿ ಉಳಿದುದರಲ್ಲಿ ಶೇಕಡ ೩೦ ರಷ್ಟರಲ್ಲಿ ಅರ್ಧ ಬೆಳೆಯೂ ಮತ್ತು ಬಾಕಿ ಭಾಗಗಳಲ್ಲಿ ಉತ್ತಮವಾದ ಬೆಳೆಯೂ ಬರುವುದೆಂದು ಅವರು ತಿಳಿಸಿದರು. ಇತ್ತೀಚಿನ ಮಳೆಯ ಅಭಾವದಿಂದಾಗಿ ಹಸಲು ಗೊಬ್ಬರ ಬೆಳೆಯುವ ಕಷ್ಟಕ್ಕೀಡಾಗಿರುವ ರೈತರಿಗೆ ತಲಾ ೨೦೦ ರೂ. ಬೆಲೆಯ ಗೊಬ್ಬರವನ್ನು ಸಾಲವಾಗಿ ಹಂಚಲು ಸರ್ಕಾರದವರು ೫೦ ಸಾವಿರ ರೂ. ಬೆಲೆಯ ಗೊಬ್ಬರವನ್ನು ಮಂಜೂರು ಮಾಡಿದ್ದಾರೆಂದೂ ಅವರು ತಿಳಿಸಿದರು.

ಜೆಕ್ಕೋಸ್ಲೋವಾಕಿಗೆ ಶಿಕ್ಷಣಕ್ಕಾಗಿ ಪ್ರಯಾಣ

ಇಲ್ಲಿನ ಚಾಮರಾಜೇಂದ್ರ ಟೆಕ್ನಿಕಲ್ ಇನ್‌ಸ್ಟಿಟ್ಯೂಟಿನ ಲೆಕ್ಚರರ್ ಶಿಕ್ಷಕರಾದ ಶ್ರೀ ಆರುಮುಗಂ ಮುದಲಿಯಾರರನ್ನು ಜೆಕ್ಕೋಸ್ಲೋವಾಕಿಗೆ ಮರ ಕೆಲಸ ಮಾಡುವ ಶಿಕ್ಷಣ ಪಡೆಯುವುದಕ್ಕಾಗಿ ಸರ್ಕಾರದವರು ನಿಯೋಜಿಸಿ ಕಳುಹಿಸಿರುತ್ತಾರೆ. ಅವರನ್ನು ಇನ್‌ಸ್ಟಿಟ್ಯೂಟಿನ ಸೂಪರಿಂಟೆಂಡೆಂಟರಾದ ಶ್ರೀ ಚನ್ನರಾಜ ಅರಸ್ ಮತ್ತು ಇತರರು ನೆನ್ನೆ ಬೀಳ್ಕೊಟ್ಟರು.

ಲೋಕಮಾನ್ಯ ಬಾಲಗಂಗಾಧರ ತಿಲಕ್

ಇಂದು ದಿವಂಗತ ಇವರ ಶತಮಾನೋತ್ಸವ ವರ್ಷ ಆಚರಿಸಲಾಗುತ್ತಿದೆ

ನೆಹರೂರವರ ಆಗಮನ

ಜಾಂ ನಗರದ ಮುಖ್ಯರಿಂದ ಸಂಭ್ರಮದ ಸ್ವಾಗತ

ಪ್ರಧಾನಿ ನೆಹರೂರವರು ಯೂರೋಪು ಮತ್ತು ಬ್ರಿಟನ್ನುಗಳ ೪ ವಾರದ ಪ್ರವಾಸವನ್ನು ಮುಗಿಸಿಕೊಂಡು ನೆನ್ನೆ ಸಂಜೆ ಜಾಂನಗರಕ್ಕೆ ಆಗಮಿಸಿದರು. ಅವರೊಡನೆ ಅವರ ಪುತ್ರಿ ಶ್ರೀಮತಿ ಇಂದಿರಾ ಗಾಂಧಿ ಮತ್ತು ಅವರ ಇಬ್ಬರು ಮಕ್ಕಳೂ, ಕೇಂದ್ರದ ಸಚಿವ ವಿ. ಕೆ. ಕೃಷ್ಣಮೆನನ್ ಮತ್ತು ವಿದೇಶಾಂಗ ಶಾಖಾ ಕಾರ್ಯದರ್ಶಿ ಎನ್. ಆರ್. ಪಿಳ್ಳೆಯವರೂ ಬಂದರು.

ವಿಮಾನ ನಿಲ್ದಾಣದಲ್ಲಿ ಸೌರಾಷ್ಟ್ರದ ರಾಜಪ್ರಮುಖರಾದ ಜಾಂ ಸಾಹೇಬರು ಅವರನ್ನು ಸ್ವಾಗತಿಸಿದರು. ಜಾಂ ನಗರದ ಶಾಲಾ ಬಾಲಕ ಬಾಲಕಿಯರು ವಿಮಾನ ನಿಲ್ದಾಣದಲ್ಲಿ ನೆರೆದಿದ್ದು ಸಂಭ್ರಮದ ಸ್ವಾಗತವನ್ನು ನೀಡಿದರು.

ಈ ಮಧ್ಯಾಹ್ನ ನೆಹರೂರವರು ತಮ್ಮ ಪರಿವಾರದೊಡನೆ ದೆಹಲಿಯನ್ನು ತಲುಪುವರು.

ಡಕಾಯಿತರೊಡನೆ ಹೋರಾಟದಲ್ಲಿ ಅಧಿಕಾರಿಯ ಮರಣ

ರಾಜಾಸ್ಥಾನದ ಜೈಸಲ್ಮೇರ್ ನಗರಕ್ಕೆ ೧೮ ಮೈಲಿ ದೂರದ ದೇವಸ್ಥಾನವೊಂದರ ಬಳಿ ನೆನ್ನೆ ಸಂಜೆ ವಿಜಯಸಿಂಗ್ ಎಂಬ ಡಕಾಯಿತ ಮತ್ತು ಅವನ ಗುಂಪಿನ ಇಬ್ಬರಿಗೂ ಪೋಲೀಸರಿಗೂ ನಡೆದ ೪ ಗಂಟೆಗಳ ಗುಂಡಿನ ಕಾಳಗದಲ್ಲಿ ಜಗನ್ನಾಥ ಶರ್ಮ ಎಂಬ ಡೆಪ್ಯುಟಿ ಪೋಲೀಸ್ ಸೂಪರಿಂಟೆಂಡೆಂಟರಿಗೆ ಹೊಟ್ಟೆಗೆ ಗುಂಡೇಟು ತಾಕಿ ಅವರು ಮೃತಪಟ್ಟರು. ಅವರೊಡನೆ ಚೇತಾರಾಂ ಎಂಬ ಪೋಲೀಸನ ಕಾಲಿಗೆ ಪೆಟ್ಟು ತಾಕಿ ಅವನು ಆಸ್ಪತ್ರೆಗೆ ಸೇರಿಸಲ್ಪಟ್ಟನು. ವಿಜಯಸಿಂಗನೂ ಮತ್ತು ಅವನ ಅನುಚರರೂ ಈಗ ಪಾಕಿಸ್ಥಾನಕ್ಕೆ ಓಡಿಹೋಗಿದ್ದಾರೆಂದು ವರದಿಯಾಗಿದೆ.

೦ ರಾಷ್ಟ್ರಾದ್ಯಂತ ಈ ವರ್ಷ ಆರಂಭಿಸಲಾಗುವ ೩೩೬ ರಾಷ್ಟ್ರೀಯ ವಿಸ್ತರಣಾ ಕೇಂದ್ರಗಳ ಪೈಕಿ ಮೈಸೂರು ಸಂಸ್ಥಾನದಲ್ಲಿ ೭ ಕೇಂದ್ರಗಳನ್ನು ತೆರೆಯಲಾಗುವುದು.

ಲೋಕಮಾನ್ಯ ಬಾಲಗಂಗಾಧರ ತಿಲಕ್

ಭಾರತ ಸ್ವಾತಂತ್ರ್ಯ ಸಮರದ ಮೂಲಪುರುಷರು

"ಸ್ವರಾಜ್ಯ ನನ್ನ ಜನ್ಮಸಿದ್ಧ ಹಕ್ಕು. ಅದನ್ನು ನಾನು ಪಡೆಯುತ್ತೇನೆ" ಎಂಬ ಮೂಲ ಮಂತ್ರವನ್ನು ಉಪದೇಶಿಸಿ, ಭಾರತೀಯರಲ್ಲಿ ದೇಶಪ್ರೇಮ ಮತ್ತು ಸ್ವಾತಂತ್ರ್ಯಕಾಂಕ್ಷೆಯನ್ನು ಉಂಟುಮಾಡಿದ ಮೊಟ್ಟಮೊದಲ ನಾಯಕರಲ್ಲಿ ಲೋಕಮಾನ್ಯ ಬಾಲಗಂಗಾಧರ ತಿಲಕರು ಪ್ರಮುಖರು. ತಿಲಕರು ಹಾಕಿದ ಅಸ್ತಿಭಾರದ ಮೇಲೆ ಗಾಂಧಿಯವರು ತಮ್ಮ ಚಳುವಳಿಯನ್ನು ನಡೆಸಿ ಭಾರತಕ್ಕೆ ಸ್ವಾತಂತ್ರ್ಯವನ್ನು ಗಳಿಸಿಕೊಟ್ಟರು. ಇಂದು ಬಾಲಗಂಗಾಧರ ತಿಲಕರ ಜನ್ಮದ ಶತಮಾನೋತ್ಸವವನ್ನು ರಾಷ್ಟ್ರಾದ್ಯಂತ ವೈಭವದಿಂದ ಆಚರಿಸಲಾಗುತ್ತಿದೆ.

ತಿಲಕರು ೧೮೫೬ ನೇ ಜುಲೈ ೨೩ ರಂದು ರತ್ನಗಿರಿಯಲ್ಲಿ ಜನಿಸಿದರು. ಇವರ ತಂದೆ ಗಂಗಾಧರರಾಯರು ಶಾಲಾ ಇನ್‌ಸ್ಪೆಕ್ಟರಾಗಿದ್ದರು. ರತ್ನಗಿರಿಯಲ್ಲಿ ಪ್ರಾಥಮಿಕ ವಿದ್ಯಾಭ್ಯಾಸಾನಂತರ ಮಾಧ್ಯಮಿಕ ವ್ಯಾಸಂಗಕ್ಕಾಗಿ ಪೂನಗೆ ಬಂದರು. ೧೮೭೨ ರಲ್ಲಿ ಮೆಟ್ರಿಕ್ಯುಲೇಷನ್ನಿನಲ್ಲಿ ತೇರ್ಗಡೆ ಹೊಂದಿದರು. ಆದರೆ ಇವರ ಪರೀಕ್ಷೆಗೆ ಮುಂಚೆಯೇ ತಂದೆಯವರು ಇಹಲೋಕವನ್ನು ತ್ಯಜಿಸಿದರು. ಇದರಿಂದ ಅವರ ವಿದ್ಯಾಭ್ಯಾಸ ಇಲ್ಲಿಗೇ ಮುಕ್ತಾಯವಾಗಬೇಕಾಯಿತು.

ಇದಾದನಂತರ ಅವರು ಜೀವನೋಪಾಯದ ಸಮಸ್ಯೆಯನ್ನು ಎದುರಿಸಬೇಕಾಗಿಬಂದಿತು. ಏನೇ ಆದರೂ ವಕೀಲಿ ವೃತ್ತಿ ಅಥವಾ ಸರ್ಕಾರಿ ಉದ್ಯೋಗವನ್ನು ಅವಲಂಬಿಸುವುದಿಲ್ಲವೆಂದು ಶಪಥ ತೊಟ್ಟರು. ೧೮೮೦ ರಲ್ಲಿ ತಿಲಕರು "ನ್ಯೂ ಇಂಗ್ಲಿಷ್ ಸ್ಕೂಲ್" ಎಂಬ ವಿದ್ಯಾ ಸಂಸ್ಥೆಯನ್ನು ಆರಂಭಿಸಿದರು. ಕೇವಲ ೧೯ ಜನ ವಿದ್ಯಾರ್ಥಿಗಳಿಂದ ಆರಂಭವಾದ ಈ ಶಾಲೆ ನಾಲ್ಕು ವರ್ಷಗಳಲ್ಲಿ ೫೦೦ ವಿದ್ಯಾರ್ಥಿಗಳನ್ನು ಪಡೆಯಿತು. ಈ ಸಂಸ್ಥೆಯು ೧೮೮೫ ರಲ್ಲಿ ಫರ್ಗೂಸನ್ ಕಾಲೇಜಾಗಿ ಪರಿವರ್ತಿತವಾಯಿತು.

ತಿಲಕರು ಮರಾಠಿಯಲ್ಲಿ "ಕೇಸರಿ" ಮತ್ತು ಇಂಗ್ಲೀಷಿನಲ್ಲಿ "ಮರಾಠಾ" ಎಂಬ ಪತ್ರಿಕೆಗಳನ್ನು ಆರಂಭಿಸಿದರು. ಅಂದಿನಿಂದ ಬ್ರಿಟಿಷರ ಆಡಳಿತವನ್ನು ಕಟುವಾಗಿ ಟೀಕಿಸಿದ ಪರಿಣಾಮವಾಗಿ ತಿಲಕರು ದ್ವೀಪಾಂತರ ವಾಸವನ್ನು ಅನುಭವಿಸಬೇಕಾಯಿತು.

ಕಾರಾಗೃಹದಲ್ಲಿ ಅವರು "ಗೀತಾ ರಹಸ್ಯ" ಎಂಬ ಉಜ್ವಲವಾದ ಗ್ರಂಥವನ್ನು ರಚಿಸಿದರು. ಇದಕ್ಕೆ ಮುಂಚೆ ಅವರು 'ಓರಿಯಾನ್ ಅಥವ ವೇದಗಳ ಮೂಲಸ್ಥಾನ' ಎಂಬ ಮತ್ತೊಂದು ಸಂಶೋಧನಾತ್ಮಕ ಗ್ರಂಥವನ್ನು ರಚಿಸಿದ್ದರು. ೧೮೮೫ ರಲ್ಲಿ ತಿಲಕರು ಭಾರತ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸೇರಿದರು.

ತಿಲಕರ ರಾಜಕೀಯ ಚಟುವಟಿಕೆಯು ೧೯೦೫ ರಲ್ಲಿ ಆರಂಭವಾಯಿತೆನ್ನಬಹುದು. ಆಗ ಇವರೊಂದಿಗೆ ಪಂಜಾಬಿನ ಲಾಲಾ ಲಜಪತರಾ-

ಕಚ್ ಪ್ರಾಂತದಲ್ಲಿ ಭೂಕಂಪದಿಂದ ೧೧೫ ಮಂದಿಯ ಮರಣ

೨೫೦ ಮಂದಿಗೆ ಗಾಯ
೬೦೦ ಮನೆಗಳ ನಾಶ

ಕಚ್ ಪ್ರಾಂತದ ರಾಜಧಾನಿ ಭುಜ್ ನಗರಕ್ಕೆ ೨೫ ಮೈಲಿ ದೂರದಲ್ಲಿರುವ ಅಂಜಾರ್ ಎಂಬ ಪಟ್ಟಣದಲ್ಲಿ ನೆನ್ನೆ ಬಲವಾದ ಭೂಕಂಪವುಂಟಾಗಿ ೧೧೫ ಮಂದಿ ಮಡಿದು, ೨೫೦ ಮಂದಿಗೆ ಗಾಯವಾಗಿರುವುದಲ್ಲದೆ, ಸುಮಾರು ೬೦೦ ಮನೆಗಳು ನೆಲಸಮವಾಗಿ ಸಾವಿರಾರು ಮಂದಿಗೆ ಆಶ್ರಯವಿಲ್ಲದಂತಾಗಿದೆ. ನೆನ್ನೆ ರಾತ್ರಿ ೯ ಘಂಟೆಯಲ್ಲಿ ಜನರೆಲ್ಲಾ ಮಲಗಿದ್ದಾಗ ೩ ಸೆಕೆಂಡುಗಳ ಕಾಲ ಸಂಭವಿಸಿದ ಭೂಕಂಪವು ಅಂಜಾರ್‌ನಲ್ಲಿ ಸುಮಾರು ೧೨ ಸೆಕೆಂಡುಗಳ ಕಾಲ ಉಂಟಾಗಿ ಸಾವಿರಾರು ಮಂದಿಯನ್ನು ನಿರ್ಗತಿಕರನ್ನಾಗಿ ಮಾಡಿತು. ಭೂಕಂಪನದಿಂದ ಕುಸಿದ ಮನೆಗಳ ಕೆಳಗೆ ಸಿಕ್ಕಿಕೊಂಡವರನ್ನು ಹೊರಕ್ಕೆ ತೆಗೆಯುವ ಕೆಲಸ ಇನ್ನೂ ನಡೆಯುತ್ತಿದೆ. ನೆನ್ನೆ ರಾತ್ರಿಯವರೆಗೆ ೧೬೦ ಜನರನ್ನು ತೆಗೆಯಲಾಯಿತು. ಅಂಜಾರಿನ ತಂತಿ ಕಛೇರಿಯು ಕುಸಿದುದರಿಂದ ತಂತಿ ಸಂಪರ್ಕವೂ ಕಡಿದು ಹೋಗಿತ್ತು.

ಪಲನ್‌ಪುರ ಮತ್ತು ಗಾಂಧಿಧಾಮಗಳ ರಸ್ತೆಯಲ್ಲಿ ಹೋಗುತ್ತಿದ್ದ ಗೂಡ್ಸ್ ಟ್ರೈನಿನ ೧೭ ಗಾಡಿಗಳೂ ಸಹಾ ಭೂಕಂಪದ ಪರಿಣಾಮವಾಗಿ ಕಂಬಿಯಿಂದ ಕೆಳಕ್ಕೆ ಎಸೆಯಲ್ಪಟ್ಟವೆಂದು ವರದಿಯಾಗಿದೆ. ಬೊಂಬಾಯಿ ನಗರದ ಹಲವು ಮನೆಗಳ ಕಿಟಕಿ ಬಾಗಿಲುಗಳು ಅಲುಗಾಡಿದ ಅನುಭವವಾಯಿತು.

ದೊಡ್ಡಬಳ್ಳಾಪುರದಲ್ಲಿ ಕಾಮಾಲೆ ರೋಗದಿಂದ ಒಬ್ಬಳ ಸಾವು

ದೊಡ್ಡಬಳ್ಳಾಪುರ ಮತ್ತು ಸುತ್ತಮುತ್ತಲ ಪ್ರದೇಶಗಳಲ್ಲಿ ಇತ್ತೀಚೆಗೆ ಕಾಮಾಲೆ ರೋಗವು ಹರಡಿ ಅದರಿಂದ ೧೫೦ ಮಂದಿ ನರಳುತ್ತಿದ್ದಾರೆಂದೂ ಮತ್ತು ಒಬ್ಬಾಕೆಯು ಮೃತಪಟ್ಟಳೆಂದೂ ಗೊತ್ತಾಗಿದೆ.

ಯ್ ಮತ್ತು ಬಂಗಾಳದ ಬಿಪಿನ ಚಂದ್ರಪಾಲರೂ ಸೇರಿದರು. ಈ ತ್ರಿಮೂರ್ತಿಗಳ ಹೆಸರನ್ನು ಕೇಳದವರೇ ವಿರಳ.

ಸ್ವಾತಂತ್ರ್ಯ ಸಾಧನೆಗೆ ಸ್ವದೇಶೀ ಚಳುವಳಿ, ರಾಷ್ಟ್ರೀಯ ವಿದ್ಯಾ ಪ್ರಸಾರ ಮತ್ತು ಬ್ರಿಟಿಷ್ ವಸ್ತುಗಳ ಬಹಿಷ್ಕಾರ—ಈ ಮೂರು ಮಂತ್ರಗಳನ್ನು ಅವರು ನಾಡಿನಲ್ಲೆಲ್ಲಾ ಬೋಧಿಸುತ್ತಿದ್ದರು. ಇದರ ಸಾಧನೆಗಾಗಿ ಗಣಪತಿ ಉತ್ಸವ, ಶಿವಾಜಿ ಜಯಂತಿ ಮತ್ತು ರಾಷ್ಟ್ರೀಯ ನಿಧಿ ಸಂಗ್ರಹದ ಕಾರ್ಯಗಳನ್ನು ಜಾರಿಗೆ ತಂದರು.

ತಿಲಕರು ೧೯೨೦ ರ ಆಗಸ್ಟ್ ೧ನೇ ತಾರೀಖು ಇಹಲೋಕ ವ್ಯಾಪಾರವನ್ನು ತ್ಯಜಿಸಿದರು. ಅಂದಿಗೆ ಭಾರತದ ಸ್ವಾತಂತ್ರ್ಯ ಸಮರದ ಮಹಾಪುರುಷರೊಬ್ಬರು ಶಾಶ್ವತವಾಗಿ ಕಣ್ಮರೆಯಾದರೂ, ಅವರ ಧ್ಯೇಯ ಭಾರತೀಯರನ್ನು ಸ್ವಾತಂತ್ರ್ಯ ಪಥದ ಮುಂದೆ ನಡೆಸಿತು.

ನಗರದಲ್ಲಿ ಅಂತರ್ರಾಷ್ಟ್ರೀಯ ಯುವಜನ ಸಮ್ಮೇಳನ

ಮೈಸೂರು ಜು.

ವಿಶ್ವ ಯುವಜನ ಸೇವಾ ಸಂಸ್ಥೆಯ ಆಶ್ರಯ'ನವ ರಾಜಧಾನಿಯಲ್ಲಿ ನಾಳೆಯಿಂದ ಆಗಸ್ಟ್ ೩ನೇ ತಾರೀಖಿನವರೆಗೆ ನಡೆಯುವ ಈ ಸಮ್ಮೇಳನದಲ್ಲಿ ವಿಶ್ವದ ೩೦ ರಾಷ್ಟ್ರಗಳ ಪ್ರತಿನಿಧಿಗಳು ಭಾಗವಹಿಸುವರು. ಇಂಗ್ಲೆಂಡ್ ಮತ್ತು ಯೂರೋಪು ರಾಷ್ಟ್ರಗಳ ಪ್ರಾಧ್ಯಾಪಕರುಗಳು ಮತ್ತು ವಿದ್ಯಾರ್ಥಿಗಳನ್ನೊಳಗೊಂಡ ೧೯ ಜನರ ನಿಯೋಗವೊಂದು ನಿನ್ನೆ ಬೊಂಬಾಯಿಗೆ ಆಗಮಿಸಿತು. ನಿಯೋಗವು ನಾಳೆ ರಾಜಧಾನಿಯನ್ನು ತಲಪುವುದು. ಅಂತರ್ರಾಷ್ಟ್ರೀಯ ವಿಶ್ವವಿದ್ಯಾನಿಲಯ ಸೇವಾ ಸಂಸ್ಥೆಯ ಕಾರ್ಯದರ್ಶಿ ಬರ್ನಾರ್ಡ್ ದೂಶ್ರಿಟ್ಲರವರೂ ಇವರಲ್ಲಿ ಇರುವರು

ಗುರು ಪೂರ್ಣಿಮಾ ಉತ್ಸವ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ಗುರುಪೂರ್ಣಿಮಾ ಉತ್ಸವದ ಅಂಗವಾಗಿ ನಾಳೆ ಬೆಳಗ್ಗೆ ಅಭಿಷೇಕ, ಮಧ್ಯಾಹ್ನ ೧ ಗಂಟೆಗೆ ಅನ್ನದಾನ, ಸಂಜೆ ೬-೩೦ ಗಂಟೆಗೆ ಸಾಮೂಹಿಕ ಪ್ರಾರ್ಥನೆ ಮತ್ತು ೭ ಗಂಟೆಗೆ ಶ್ರೀ ಎಂ. ಸಿ. ಮಹದೇವಸ್ವಾಮಿ ಮತ್ತು ಶ್ರೀ ವಿ. ನಂಜುಂಡಾರಾಧ್ಯರಿಂದ [illegible] ವಿಲಾಸ ಕಾವ್ಯವಾಚನವು ನಡೆಯುವುವು

ಸತ್ಯನಾರಾಯಣಸ್ವಾಮಿ ಪೂಜೆ

ರಾಜಧಾನಿಯ ವಿದ್ಯಾರ್ಥಿ ನಿಲಯದ [illegible] ಶ್ರೀ ಕೆ. ರಾಮಕೃಷ್ಣರವರು ನಿನ್ನೆ ತಮ್ಮ ಗೃಹದಲ್ಲಿ ಸತ್ಯನಾರಾಯಣಸ್ವಾಮಿ ಪೂಜೆಯನ್ನು ನೆರವೇರಿಸಿ, ತಮ್ಮ ಮಿತ್ರರನ್ನು ಆಹ್ವಾನಿಸಿ ಭೋಜನ ಕೂಟವನ್ನು ಏರ್ಪಡಿಸಿದ್ದರು

ರೈಲ್ವೆ ಕಾರ್ಮಿಕರ ಕುಂದುಕೊರತೆ ಬಗ್ಗೆ ಭರವಸೆ

ನಗರದ ರೈಲ್ವೆ ವರ್ಕ್‌ಷಾಪಿನಲ್ಲಿರುವ ಹಲವು [illegible] ಕಾರ್ಮಿಕರ ಮುಖಂಡರೊಡನೆ [illegible] ಮ್ಯಾನೇಜರ್‌ರವರು ಮಾತುಕತೆ ನಡೆಸಿ ಅವರ ಕುಂದುಕೊರತೆಗಳನ್ನು ನಿವಾರಿಸುವುದಾಗಿ ತಿಳಿಸಿದ್ದಾರೆಂದೂ, ಅಸಿಸ್ಟೆಂಟ್ ಪರ್ಸನಲ್ ಆಫೀಸರರಿಂದ ತಮಗೆ ಹಲವು ಅನ್ಯಾಯಗಳಾಗುತ್ತವೆಂದು ಕಾರ್ಮಿಕರು ತಿಳಿಸಿದರೆಂದು ಹೇಳಲಾಗಿದೆ. ಸಿಬ್ಬಂದಿಯ [illegible] ಕಲಹ [illegible] ಮುಂತಾದ ವಿಷಯಗಳನ್ನು ಮ್ಯಾನೇಜರ ಗಮನಕ್ಕೆ ತರಲಾಗಿತ್ತು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

ಬಿಹಾರ್ ಖಾದಿ ಸಂಸ್ಥೆಯಲ್ಲಿ ಎಲ್ಲರಿಗೂ ಒಂದೇ ಸಂಬಳ

ಅಖಿಲ ಭಾರತ ಖಾದಿ ಮತ್ತು ಗ್ರಾಮೋದ್ಯೋಗ ಸಂಘದ ಬಿಹಾರ್ ಪ್ರಾಂತೀಯ ಶಾಖೆಯವರು ತಮ್ಮಲ್ಲಿ ಕೆಲಸ ಮಾಡುವ ಪ್ರತಿಯೊಬ್ಬರಿಗೂ ಬೇಧವಿಲ್ಲದೆ ಸಮಾನವಾದ ಸಂಬಳವನ್ನು ಕೊಡಲು ನಿರ್ಧರಿಸಿರುತ್ತಾರೆ. ವಿನೋಬಾ ಭಾವೆಯವರ ಸರ್ವೋದಯ ತತ್ವದ ಆಧಾರದ ಮೇಲೆ ಎಲ್ಲರಿಗೂ ಸಮಾನವಾದ ವೇತನ ಕೊಡುವುದೇ ಇದರ ಉದ್ದೇಶ. ಅದರ ಪ್ರಕಾರ ಪ್ರತಿಯೊಬ್ಬನಿಗೂ ೬೦ ರೂ. ಸಂಬಳ ದೊರೆಯುವುದು. ೩ ವರ್ಷಗಳನಂತರ ೭೫ ರೂ, ಮುಂದೆ ನೂರು ಹೀಗೆ ಸಿಗುವುದು. ಇದಕ್ಕಿಂತ ಹೆಚ್ಚಾಗಿ ಯಾರಿಗೂ ಕೊಡುವುದಿಲ್ಲ

ಬಿಕಿನಿಯಲ್ಲಿ ಮೊನ್ನೆ ಮತ್ತೊಂದು ಜಲಜನಕ ಬಾಂಬ್ ಪ್ರಯೋಗ

ಪೆಸಿಫಿಕ್ ಸಾಗರದ ಬಿಕಿನಿ ಪ್ರದೇಶದಲ್ಲಿ ಮೊನ್ನೆ ಮುಂಜಾನೆ ಮತ್ತೊಂದು ಜಲಜನಕ ಬಾಂಬಿನ ಪ್ರಯೋಗ ಪರೀಕ್ಷೆ ನಡೆಯಿತೆಂದು ಜಪಾನಿನ ವಿಜ್ಞಾನಿಗಳು ವಾಯು ಗುಣದ ವ್ಯತ್ಯಾಸದಿಂದ [illegible] ತಿಳಿಸಿದ್ದಾರೆ. [illegible] ಪರೀಕ್ಷೆಗಳು [illegible] ಆಗಿದೆ

ಕನ್ನಡಕಗಳ ಬ್ಯಾಂಕು

[illegible] ಕನ್ನಡಕಗಳ ಬ್ಯಾಂಕನ್ನು ತೆರೆಯಲಾಗಿದೆ. ಜನರು ಬಳಸದೆ ಇಟ್ಟಿರುವ ಕನ್ನಡಕಗಳನ್ನು ಅಲ್ಲಿ [illegible], ಪರೀಕ್ಷಿಸಿ ಬಡವರಿಗೆ ಹಂಚಲಾಗುತ್ತದೆ

ಬಳ್ಳಾರಿ ವಿದ್ಯಾರ್ಥಿ ಸಂಘ

ರಾಜಧಾನಿಯಲ್ಲಿ ವ್ಯಾಸಂಗ ಮಾಡುತ್ತಿರುವ ಬಳ್ಳಾರಿಯ ವಿದ್ಯಾರ್ಥಿಗಳು ಮೊನ್ನೆ ಸಭೆ ಸೇರಿ ಈ ಕೆಳಗೆ ಕಂಡ ಹೊಸ ಕಾರ್ಯಕಾರಿ ಸಮಿತಿಯನ್ನು ಆರಿಸಿದರು. ಶ್ರೀ ಎಂ. ಶಿವಮೂರ್ತಿ ಅಧ್ಯಕ್ಷ, ಶ್ರೀ ಹೆಚ್. ವಿಷ್ಣುರೆಡ್ಡಿ, ಉಪಾಧ್ಯಕ್ಷರು, ಶ್ರೀ ಹೆಚ್. ಬಿ. ಕರಣಂಗೌಡ ಕಾರ್ಯದರ್ಶಿ, ಶ್ರೀ [illegible] ಜಂಟಿ ಕಾರ್ಯದರ್ಶಿ, ಶ್ರೀ [illegible] ಕೋಶಾಧ್ಯಕ್ಷ, ಶ್ರೀ [illegible] ಸಾಹಿತ್ಯ ಸಂಘದ ಕಾರ್ಯದರ್ಶಿ, ಶ್ರೀ [illegible] ಕ್ರೀಡಾ ವಿಭಾಗದ ಕಾರ್ಯದರ್ಶಿ

ಕಾಶಿ ವಿಶ್ವವಿದ್ಯಾನಿಲಯದಲ್ಲಿ ಉನ್ನತ ವ್ಯಾಸಂಗಕ್ಕಾಗಿ ಪ್ರಯಾಣ

ಕಾಶಿ ವಿಶ್ವವಿದ್ಯಾನಿಲಯದಲ್ಲಿ ದಾರ್ಶನಿಕ ಶಾಸ್ತ್ರದ ಎಂ. ಎ. ತರಗತಿಯಲ್ಲಿ ವ್ಯಾಸಂಗ ಮಾಡಲು ಶ್ರೀ ಟಿ. ಪಿ. ರಾಮರಾಜುರವರು ಕಳೆದ ಬುಧವಾರ ಪ್ರಯಾಣ ಮಾಡಿದರು. ಇವರು ವಿದ್ಯಾರ್ಥಿ [illegible] ಇಂಡಿಯಾ ಮತ್ತು ಮೈಸೂರು [illegible] ಬೆಳವಣಿಗೆಯಲ್ಲಿ ಭಾಗವಹಿಸಿದ್ದರು. ವಿದ್ಯಾರ್ಥಿ ಕಾಂಗ್ರೆಸ್ಸಿನ ಮತ್ತು ಇತರ ಅನೇಕ ಸಾರ್ವಜನಿಕ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿರುವರು

ನಾಯಿ ಮತ್ತು ಹಾವಿನ ಕಾಳಗ

ಇಲ್ಲಿಗೆ [illegible] ಬಳಿ [illegible] ಎಂಬಲ್ಲಿ ಒಂದು ನಾಯಿ ಮತ್ತು ಒಂದು ನಾಗರಹಾವಿಗೆ ಕಾಳಗವಾಗಿ ಎರಡು ಪ್ರಾಣಿಗಳೂ ಸತ್ತುವು. [illegible] ಒಬ್ಬ ಹೆಂಗಸು [illegible] ನಾಗರಹಾವು ಬಂದಿತೆಂದೂ, ಆಕೆಯೊಡನೆ ಇದ್ದ ನಾಯಿಯು ಅದರ ಮೇಲೆ [illegible] ಎರಡಕ್ಕೂ ಬಲವಾದ ಹೋರಾಟವಾಯಿತೆಂದೂ ಹೇಳಲಾಗಿದೆ. ಅನೇಕರು ಈ ಕಾಳಗವನ್ನು ನೋಡುತ್ತಿದ್ದರು. ಕಡೆಗೆ ಎರಡೂ ಮಡಿದುವು

ಮೆಕ್ಕಾನೊ ಕ್ಲಬ್ ಪ್ರದರ್ಶನ

ರಾಜಧಾನಿಯ ಮೆಕ್ಕಾನೊ ಕ್ಲಬ್ಬಿನ ಆಶ್ರಯದಲ್ಲಿ ಈ ತಿಂಗಳು ಕಡೆಯ ವಾರದಲ್ಲಿ ಪ್ರದರ್ಶನವೊಂದನ್ನು ಏರ್ಪಡಿಸಲಾಗಿದೆ. ಅದಕ್ಕೆ ಮಾದರಿಗಳನ್ನು [illegible] ಕಳುಹಬಹುದು. ಎಲ್ಲಾ ಪ್ರವೇಶಗಳಿಗೂ ಬಹುಮಾನಗಳನ್ನು ಕೊಡಲಾಗುವುದು. ಪ್ರದರ್ಶನ ಮುಕ್ತಾಯವಾದ ನಂತರ ವಸ್ತುಗಳನ್ನು ಹಿಂದಿರುಗಿಸಲಾಗುವುದು. ಮೋತಿಖಾನೆ ಹಿಂಭಾಗದ ಕಟ್ಟಡದಲ್ಲಿರುವ ಕ್ಲಬ್ಬಿನ ಕಛೇರಿಗೆ ಪದಾರ್ಥಗಳನ್ನು ಕಳಿಸಬಹುದು

ಕಲಾನಿಕೇತನಕ್ಕೆ ಬರೋಡಾ ವಿದ್ಯಾರ್ಥಿನಿಯರ ಭೇಟಿ

ರಾಜಧಾನಿಯಲ್ಲಿರುವ ಭಾರತ ಕಲಾ ನಿಕೇತನಕ್ಕೆ ಮೊನ್ನೆ ಬರೋಡದ ಆರ್ಯ ಕನ್ಯಾ ಮಹಾವಿದ್ಯಾಲಯದ ೫೦ ಮಂದಿ ವಿದ್ಯಾರ್ಥಿನಿಯರು ಭೇಟಿ ಕೊಟ್ಟರು. ಅವರ ಗೌರವಾರ್ಥವಾಗಿ ಶ್ರೀ ವಿ. ಕೆ. ವೆಂಕಟಲಕ್ಷ್ಮಮ್ಮನವರ ಶಿಷ್ಯೆಯರಾದ ಕುಮಾರಿಯರು ಎಂ. ಶಕುಂತಲ, ಕೃಷ್ಣವೇಣಿ ಮತ್ತು ನಾಗಲಕ್ಷ್ಮಿಯರು ೩ ಗಂಟೆ ಕಾಲ ಭರತ ನಾಟ್ಯ ಪ್ರದರ್ಶನ ಮಾಡಿದರು. ಕನ್ಯಾ ವಿದ್ಯಾಲಯದ ಕಾರ್ಯದರ್ಶಿ ಶ್ರೀ ಆನಂದಪ್ರಿಯಾ ಪಂಡಿತರು ನರ್ತನವನ್ನು ಶ್ಲಾಘಿಸಿ, ಕಲಾವಿದರನ್ನು ಬರೋಡಕ್ಕೆ ಆಹ್ವಾನಿಸಿದರು

ತಕಾವಿ ಸಾಲದ ಹಂಚಿಕೆಯಲ್ಲಿ ಲೋಪ?

ಅಭಾವ ಪೀಡಿತ ಪ್ರದೇಶಗಳಲ್ಲಿ ರೈತರಿಗೆ ತಕಾವಿ ಸಾಲವನ್ನು ಹಂಚುತ್ತಿರುವ ಕ್ರಮದಲ್ಲಿ ಲೋಪವಿರುವುದೆಂದೂ, ಕೊಡಲಾಗುವ ಸಾಲದಲ್ಲಿ ಅರ್ಧ ಭಾಗವನ್ನು ಮಾತ್ರ ರೈತರ ಕೈಸೇರುವುದೆಂದೂ, ಈ ಲೋಪವನ್ನು ತನಿಖೆ ಮಾಡಿ ಸರಿಯಾದ ಹಂಚಿಕೆ ವ್ಯವಸ್ಥೆ ಮಾಡಬೇಕೆಂದೂ ಶ್ರೀ ಎಂ. ಸಿ. ನರಸಿಂಹಯ್ಯನವರು ತಿಳಿಸಿರುತ್ತಾರೆ. ನಗದು ಸಾಲ ಕೊಡುವುದರ ಬದಲು ರಾಗಿ ಅಥವಾ ಜೋಳವನ್ನು ಒದಗಿಸುವಂತೆಯೂ ಅವರು ಸಲಹೆ ಮಾಡಿರುತ್ತಾರೆ

ಹಾಸಿಗೆ - ದಿಂಬು

[illegible] ತಯಾರು ಮಾಡುತ್ತೇವೆ

ಬಾಷುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

SRI GAYATHRI TALKIES

To day — Last day

SEVEN YEAR ITCH

Featuring – Marilyn Monroe

From 24-7-56 — For 2 Days

Gorilla at Large

Take
BRONKOL
For ASTHMA
&
BRONCHITIS

Sole Distributors for Mysore State and Coorg

SATHYA & CO,

Chemists & Druggists

71/1 A. S Street,

BANGALORE-2

Edit.), Printed and Published by A. N. Nagarajan at Sadhvi Press Subbiah Road Mysore

ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ವಿದ್ಯಾರ್ಥಿ ಸಂಘ

ರಾಜಧಾನಿಯಲ್ಲಿರುವ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ವಿದ್ಯಾರ್ಥಿ ಸಂಘದ ಅಧಿಕಾರ ವರ್ಗದ ಚುನಾವಣೆ ಮೊನ್ನೆ ನಡೆದು, ಶ್ರೀ ಎ. ಎಸ್. ಭೋಜರಾಜ್‌ರವರು ಅಧ್ಯಕ್ಷರಾಗಿಯೂ, ಶ್ರೀ ಎಂ. ಆರ್. ಬಾಲಸುಬ್ರಹ್ಮಣ್ಯಂರವರು ಉಪಾಧ್ಯಕ್ಷರಾಗಿಯೂ, ಶ್ರೀ ಕೆ. ಎಲ್. ಸೂರ್ಯನಾರಾಯಣ ಶರ್ಮರವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಡಿ. ಶ್ರೀಗಿರಿಯ [illegible] ಸೋಮಶೇಖರ, ಸುರೇಶಚಂದ್ರ, ಶ್ರೀನಿವಾಸರಾವ್ ಕಪೂರ್ ಮತ್ತು ಬಿ. ಎಸ್. ಕೇಶವರಾಯರು ಸದಸ್ಯರಾಗಿ ಚುನಾಯಿತರಾಗಿದ್ದಾರೆ.

○ ಅಮೆರಿಕದ ಒಂದು ನ್ಯಾಯಾಲಯದಲ್ಲಿರುವ ನೌಕರ ಕ್ಲಿಗ್‌ಮನ್ ಎಂಬುವನು ೧ ನಿಮಿಷಕ್ಕೆ ೩೦೦ ಪದಗಳನ್ನು ಷಾರ್ಟ್‌ಹ್ಯಾಂಡಿನಲ್ಲಿ ಬರೆದುಕೊಳ್ಳಬಲ್ಲನು. ಈತನು ದಿಲ್ಲಿಯಲ್ಲಿ ತನ್ನ ಸಾಮರ್ಥ್ಯವನ್ನು ಪ್ರದರ್ಶಿಸಿದನು. ಅವನು ಈಗ ವಿಶ್ವ ಪರ್ಯಟನ ಮಾಡುತ್ತಿರುವನು.

ಮೋಸ ಹೋಗಬೇಡಿ

ಮೈಸೂರು ಕೃಷ್ಣಮೂರ್ತಿಪುರಂನಲ್ಲಿ ನ್ಯೂ ಕೃಷ್ಣ ಬೇಕರಿ ಎಂಬ ಬೇಕರಿ ಹೊಸದಾಗಿ ಏರ್ಪಟ್ಟಿದ್ದು ಈ ಹೆಸರಿಗೂ, ನಮಗೂ ಯಾವ ಸಂಬಂಧವೂ ಇಲ್ಲವೆಂಬ ಸಂಗತಿಯನ್ನು ಸಾರ್ವಜನಿಕರ ಅವಗಾಹನೆಗೆ ಈ ಮೂಲಕ ತಿಳಿಸಿದೆ.

ಕೆ. ಆರ್. ಕೃಷ್ಣಯ್ಯಂಗಾರ್,

ಶ್ರೀ ಕೃಷ್ಣಾ ಬೇಕರಿ,

೩ ಸುಬ್ಬಯ್ಯಾ ರೋಡ್, ಮೈಸೂರು.

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ಸಾಧನಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗಿದೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ತ್ವರೆಯಿಂದ ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಡಿ. ಕೃಷ್ಣಮೂರ್ತಿ,
[illegible]

ಗೃಹಕೃತ್ಯದ ನೋಟೀಸ್

ಚಾಮರಾಜನಗರದ ತಾಲ್ಲೂಕು ಉಮ್ಮತ್ತೂರು ಹೋಬಳಿ ಜೋಡಿ ಮೂಡ್ಲು ಅಗ್ರಹಾರ ಗ್ರಾಮದಲ್ಲಿರುವ [illegible] ಸಿದ್ದಪ್ಪನ ಮಗ ಕೆಂಪಯ್ಯನ ಹೆಂಡತಿ ಶಿವಮ್ಮನು ಈ ಮೂಲಕ ಸರ್ವ ಜನರಿಗೂ ತಿಳಿಯಪಡಿಸುವುದೇನೆಂದರೆ.—

ನನ್ನ ಪೋಷಣೆಯಲ್ಲಿರುವ ನನ್ನ ಯಜಮಾನರು ಮೇಲ್ಕಂಡ ಕೆಂಪಯ್ಯ ಎಂಬುವರಿಗೆ ಸುಮಾರು ೫-೬ ವರ್ಷಗಳಿಂದ ಬುದ್ಧಿ ಭ್ರಮಣೆಯಾಗಿರುತ್ತೆ. ನನಗೆ ಆಗದ ಜನಗಳು ನನ್ನ ಯಜಮಾನರಿಂದ ನಮ್ಮಗಳ ಬಾಬ್ತು ಪಿತ್ರಾರ್ಜಿತವಾದ ಈ ಕೆಳಗೆ ಕಂಡ ಆಸ್ತಿಗಳನ್ನು ಸುಲಭ ಬೆಲೆಯಲ್ಲಿ ಖರೀದಿ ಮಾಡಲು ಉದ್ದೇಶಪಟ್ಟಿರುವುದಾಗಿ ತಿಳಿಯಬರುತ್ತೆ. ನನಗೆ ೭ ವರ್ಷ ವಯಸ್ಸಿನ ಸಿದ್ದಲಿಂಗಸ್ವಾಮಿ ಎಂಬ ಮಗನೂ ಮತ್ತು ಒಂದು ಹೆಣ್ಣು ಮಗುವೂ ಸಹ ಇರುತ್ತಾರೆ. ಸದರಿ ಸ್ವತ್ತುಗಳನ್ನು ಯಾರಾದರೂ ಕ್ರಯ, ಭೋಗ್ಯ, ಆಧಾರ ವಗೈರೆ ಮಾಡಿಸಿಕೊಂಡಲ್ಲಿ ಅವುಗಳು ಒಂದೂ ಊರ್ಜಿತವಾಗತಕ್ಕದ್ದಲ್ಲ. [illegible]ಗಳಿಗೆಲ್ಲಾ ಜವಾಬ್ದಾರರಾಗಬೇಕಾಗುತ್ತೆ.

ಸರ್ವೆ ನಂಬರು 127/3 ರ ಪೈಕಿ 0-23½ ಗುಂಟೆ, 123/4 C– ಇವುಗಳು ಉಮ್ಮತ್ತೂರು ಗ್ರಾಮಕ್ಕೆ ಸೇರಿದುವು

ಸರ್ವೆ ನಂಬರು 9/1ರ ಪೈಕಿ 0-48 ಗುಂಟೆ. ಖಾನೇಷುಮಾರಿ ನಂಬರು 170/1 ಮನೆ-ಇವುಗಳು ಜೋಡಿ ಮೂಡಲು ಅಗ್ರಹಾರಕ್ಕೆ ಸೇರಿದುವು.

● ಶಿವಮ್ಮನ ಎಡಗೈ ಹೆಬ್ಬೆಟ್ಟಿನ ಗುರುತು.

THE KAPILA TEXTILE MILLS Ltd., NANJANGUD

(Mysore State)

WANTED

Young and energetic persons studied up to S S L. C, to work as WEAVERS, training being given to persons desirous of taking up weaving as profession Apply in person with application to the Manager at the Mills

12-7-1956ನೇ ಗುರುವಾರದಿಂದ [illegible] ಪ್ರಾರಂಭ

ಹೊಸ ಮ್ಯಾನೇಜ್‌ಮೆಂಟ್

ವೆಲ್‌ಕಮ್ ಕಾಫಿ ಕ್ಲಬ್

(ಪ್ರಭಾ ಟಾಕೀಸ್ ಎದುರು) ಮೈಸೂರು

ಮೈಸೂರಿನಲ್ಲಿ ಪ್ರಖ್ಯಾತಿ ಪಡೆದಿರುವ ಹಳೇ ಅಗ್ರಹಾರದ ಶ್ರೀ ಸುಬ್ಬರಾಯರ ನೇತೃತ್ವದಲ್ಲಿ ಮಾಡಲ್ಪಟ್ಟ ರುಚಿಯುಳ್ಳ, ಶುದ್ಧ [illegible]ದಿಂದಲೇ ತಯಾರಾದ ಕೇಸರಿಭಾತ್, ಸೆಟ್ ದೋಸೆ, 'ಎ' ಒನ್ ಕಾಫಿ ಮತ್ತು ಇತರ ಸಿಹಿ ಮತ್ತು ಖಾರ ತಿಂಡಿ ಬಗೆಗೆ ವೆಲ್‌ಕಮ್ ಕಾಫಿ ಕ್ಲಬ್ಬಿಗೆ ದಯಮಾಡಿ ಭೇಟಿ ಕೊಡಿ

ಬಿ. ರಾಂಪ್ರಸಾದ್ ಶರ್ಮ, ಪ್ರೊಪ್ರೈಟರ್

ರಿಜಿಸ್ಟರ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೪] SADHVI : TUESDAY 24—7—1956 ಮೈಸೂರು : ಮಂಗಳವಾರ ೨೪—೭—೧೯೫೬ [ಸಂಚಿಕೆ : [illegible]

ಧೇಬರರಿಗೆ ಹನುಮಂತಯ್ಯನವರ ರಾಜೀನಾಮೆ ಪತ್ರ?

ಧೇಬರರಿಗೆ ಹನುಮಂತಯ್ಯನವರ ರಾಜೀನಾಮೆ ಪತ್ರ!

ಬೆಂಗಳೂರು ೨೪

ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರಿಗೆ ತಮ್ಮ ರಾಜೀನಾಮೆ ಪತ್ರವನ್ನು ಕಳ್ಳಿಸಿರುವರೆಂದೂ, ಇದನ್ನು ಸಹವರ್ತಿಯೊಬ್ಬರ ಮೂಲಕ ಕಳುಹಿಸಲಾಯಿತೆಂದೂ ವರದಿಯಾಗಿದೆ ಈ ಬಗ್ಗೆ ಕಾಂಗ್ರೆಸ್ ಹೈಕಮ್ಯಾಂಡು ಇನ್ನು ಒಂದೆರಡು ದಿನಗಳಲ್ಲೇ ನಿರ್ಧಾರ ಕೈಗೊಳ್ಳುವುದೆಂದೂ ಹೇಳಲಾಗಿದೆ

ಸೌರಾಷ್ಟ್ರದ ಭೂಕಂಪದಲ್ಲಿ ೧೫೦ಕ್ಕೂ ಹೆಚ್ಚು ಜನರ ಮರಣ

ಕೇಂದ್ರದಿಂದ ೨೫,೦೦೦ ರೂ. ಪರಿಹಾರ

ಮೊನ್ನೆ ಸೌರಾಷ್ಟ್ರದ ಅಂಜಾರ್ ನಗರದ ಬಳಿ ಉಂಟಾದ ಭೂಕಂಪದ ಪರಿಣಾಮವಾಗಿ ಸುಮಾರು ೧೫೦ಕ್ಕೂ ಹೆಚ್ಚು ಮಂದಿ ಮೃತರಾಗಿರಬಹುದೆಂದು ಹೇಳಲಾಗಿದೆ. ಒಂದು ಹಳ್ಳಿಯು ನಿರ್ನಾಮವಾಗಿ ಮತ್ತೊಂದು ಸಂಪೂರ್ಣವಾಗಿ ನೆಲಸಮವಾಯಿತು ಇದುವರೆಗೆ ನಷ್ಟವು ಸುಮಾರು ೧ ಕೋಟಿ ರೂ ಗಳಾಗಬಹುದೆಂದು ಅಂದಾಜು ಮಾಡಲಾಗಿದೆ.

ಈ ರೀತಿ ೧೫೦ಕ್ಕಿಂತ ಭೂಕಂಪವು ಸೌರಾಷ್ಟ್ರದಲ್ಲಿ ಆಗಿತ್ತು ಈಗಿನ ಭೂಕಂಪದ ಪರಿಣಾಮವು ಪಾಕಿಸ್ಥಾನದ ಸಿಂಧ್‌ನಿಂದ ಹಿಡಿದು ಬೊಂಬಾಯಿಯವರೆಗೂ ವ್ಯಾಪಿಸಿತ್ತು ಅಂಜಾರ್ ತಾಲ್ಲೂಕು ಒಂದರಲ್ಲೇ ೩೦ ಗ್ರಾಮಗಳ ಸುಮಾರು ೬ ಸಾವಿರ ಮನೆಗಳು ಸಂಪೂರ್ಣವಾಗಿ ನಾಶವಾದುವು ಅಂಜಾರ್ ನಗರದಲ್ಲೇ ೫೦೦ ಮನೆಗಳು ನೆಲಸಮವಾಗಿ ಇನ್ನು ೫೦೦ ಶಿಥಿಲವಾದುವು.

ಬಿದ್ದ ಮನೆಗಳಲ್ಲಿ ಹೂತುಹೋದವರಲ್ಲಿ ಸುಮಾರು ೧೧೯ ಮಂದಿಯನ್ನು ಹೊರಕ್ಕೆ ತೆಗೆಯಲಾಯಿತು. ಉಳಿದವರಿಗಾಗಿ ಶೋಧನೆಯು ಇನ್ನೂ ನಡೆಯುತ್ತಿದೆ. ಅಂಜಾರ್ ಮತ್ತು ಭುಜ್ ನಗರಗಳ ನಡುವೆ ರೈಲ್ವೆ ಸಂಚಾರದ ಆರಂಭವನ್ನು ಇನ್ನೂ ೩ ದಿನ ಮುಂದೆ ಹಾಕಲಾಗಿದೆ

ನೊಂದವರಿಗೆ ಕೇಂದ್ರ ಸರ್ಕಾರದವರು ೨೫ ಸಹಸ್ರ ರೂ ಪರಿಹಾರ ದ್ರವ್ಯವನ್ನು ನೀಡಿದ್ದಾರೆ ಗುಜರಾತ್ ವ್ಯಾಪಾರಿ ಮಂಡಲದವರು ೧೦ ಸಾವಿರ ರೂ. ನಿಧಿಯನ್ನು ಕೊಡಿರಿದ್ದಾರೆ.

ನೂತನ ಮೈಸೂರಿಗೆ ಹೈದರಾಬಾದಿನ ಕೇಳದ ೧೫ ರಷ್ಟು ನೌಕರರು

ನೂತನ ಪ್ರಾಂತಗಳ ರಚನೆ ಕಾಲದಲ್ಲಿ ಹೈದರಾಬಾದಿನ ಈಗಿನ ನೌಕರ ವರ್ಗದವರನ್ನು ಆಂಧ್ರ, ಮಹಾರಾಷ್ಟ್ರ ಮತ್ತು ಮೈಸೂರು ಪ್ರಾಂತಗಳಿಗೆ ಹಂಚಲಾಗುವುದೆಂದೂ ಅದರಂತೆ ಮೈಸೂರಿಗೆ ಶೇಕಡ ೧೫ ರಷ್ಟು ನೌಕರರನ್ನು ನಿಗದಿಯಾಗಲಾಗುವುದೆಂದೂ ಮುಖ್ಯ ಮಂತ್ರಿ ಶ್ರೀ ಬಿ ರಾಮಕೃಷ್ಣರಾಯರು ತಿಳಿಸುತ್ತಾರೆ. ಆದರೆ ಪಾರಿಭಾಷಾ ತಜ್ಞರನ್ನು ಆ ರೀತಿ ಹಂಚಲಾಗುವುದಿಲ್ಲವೆಂದು ಸಹ ಅವರು ತಿಳಿಸುತ್ತಾರೆ

ಲೋಕಮಾನ್ಯ ಬಾಲಗಂಗಾಧರ ತಿಲಕ್

ಇವರ ಶತಮಾನೋತ್ಸವವನ್ನು ದೇಶವೆಲ್ಲಾ ನೆನ್ನೆ ವೈಭವದಿಂದ ಆಚರಿಸಲ್ಪಟ್ಟಿತು

ದೆಹಲಿಯಲ್ಲಿ ೫ ಸಹಸ್ರ ಅಗಸರ ಹರತಾಳ

ದೆಹಲಿ ಪೌರಸಭೆಯವರು ಅಲ್ಲಿನ ಅಗಸರ ಮೇಲೆ ನೀರು ಮತ್ತು ಘಟ್ಟಗಳ ತೆರಿಗೆಯನ್ನು ವಿಧಿಸಿರುವುದನ್ನು ಪ್ರತಿಭಟಿಸಿ ನೆನ್ನೆ ಸುಮಾರು ೫,೦೦೦ ಮಂದಿ ಅಗಸರು ಹರತಾಳವನ್ನಾಚರಿಸಿ ಮೆರವಣಿಗೆ ನಡೆಸಿದರು ಅಗಸವೃತ್ತಿ ನಡೆಸಲು ಲೈಸನ್ಸ್ ಪಡೆಯಬೇಕೆಂಬ ನಿಯಮವನ್ನು ರದ್ದುಮಾಡಬೇಕೆಂದೂ ಮತ್ತು ಬಟ್ಟೆಗಳನ್ನೊಗೆಯಲು ನವ ದೆಹಲಿಯಲ್ಲಿ ಧೋಬಿ ಘಟ್ಟಗಳನ್ನು ನಿರ್ಮಿಸಬೇಕೆಂದೂ ಮುಂತಾಗಿ ಅವರು ಬೇಡಿಕೆಗಳನ್ನು ಸಲ್ಲಿಸಿದ್ದರು ಪ್ರದರ್ಶನಕಾರರು ಕೇಂದ್ರ ಆರೋಗ್ಯ ಸಚಿವೆ ಶ್ರೀಮತಿ ಅಮೃತಕೌರರನ್ನು ಭೇಟಿ ಮಾಡಿ ತಮ್ಮ ಕುಂದುಕೊರತೆಗಳನ್ನು ನಿವೇದಿಸಿಕೊಂಡರು ಸಚಿವರು ಅವುಗಳ ನಿವಾರಣೆ ಬಗ್ಗೆ ಸೂಕ್ತ ಭರವಸೆ ನೀಡಿದರು

ಪೋಲೆಂಡಿನ ಸೈನ್ಯದಲ್ಲಿ ಮತ್ತಷ್ಟು ಖೋತಾ

ಪೋಲೆಂಡು ತನ್ನ ಸೈನ್ಯ ಬಲದಲ್ಲಿ ಈಗಾಗಲೇ ಖೋತಾ ಮಾಡಿರುವುದನ್ನು ಮತ್ತಷ್ಟು ಇಳಿಸಲು ನಿರ್ಧರಿಸಿರುವುದೆಂದು ವರದಿಯಾಗಿದೆ

ಹುಚ್ಚುನಾಯಿ ಕಡಿದುದಕ್ಕಾಗಿ ಮಾಲೀಕರಿಗೆ ದಂಡ

ಹೈದರಾಬಾದಿನ ನರಸಿಂಹ ಎಂಬುವನು ಸಾಕಿದ ಹುಚ್ಚುನಾಯಿಯು ಅಲ್ಲಿನ ತಹಸೀಲ್ದಾರ್ ಮಾದಯ್ಯ ಮತ್ತು ಕ್ರೈಂ ಬ್ರಾಂಚ್ ದಫೇದಾರ್ ರಾಮರಾವ್ ಎಂಬುವರನ್ನು ಕಡಿಯಿತೆಂದು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ನರಸಿಂಹನಿಗೆ ೫ ರೂ ಜುಲ್ಮಾನೆಯನ್ನು ವಿಧಿಸಿರುವರು

ದೇಶಮುಖರ ರಾಜೀನಾಮೆ ಅಂಗೀಕಾರ

ಕೇಂದ್ರ ಅರ್ಥಸಚಿವ ಸ್ಥಾನಕ್ಕೆ ಶ್ರೀ ಚಿಂತಾಮಣಿ ದೇಶಮುಖರು ಇತ್ತ ರಾಜೀನಾಮೆಯನ್ನು ರಾಷ್ಟ್ರಾಧ್ಯಕ್ಷರು ಅಂಗೀಕರಿಸಿದ್ದಾರೆಂದು ತಿಳಿದುಬಂದಿದೆ.

ಲೋಕಮಾನ್ಯ ತಿಲಕರ ಸ್ಮರಣೆಗೆ ರಾಷ್ಟ್ರ ನಾಯಕರ ಶ್ರದ್ಧಾಂಜಲಿ

ನಾಡಿನಾದ್ಯಂತ ವೈಭವದ ಶತಮಾನೋತ್ಸವ ಸಮಾರಂಭ

ಲೋಕಮಾನ್ಯ ಬಾಲಗಂಗಾಧರ ತಿಲಕ್‌ರವರ ಶತಮಾನೋತ್ಸವವು ನೆನ್ನೆ ರಾಷ್ಟ್ರಾದ್ಯಂತ ಬಹಳ ವೈಭವದಿಂದ ನೆರವೇರಿತು ಈ ದಿನದ ಸ್ಮಾರಕವಾಗಿ ಭಾರತ ಸರ್ಕಾರದವರು ತಿಲಕರ ಚಿತ್ರದಿಂದ ಕೂಡಿದ ಅಂಚೆ ಚೀಟಿಗಳನ್ನು ಮುದ್ರಿಸಿ ಮಾರಾಟಕ್ಕೆ ಕೊಟ್ಟಿರುವರು ಈ ಚೀಟಿಗಳ ಮಾರಾಟವು ನೆನ್ನೆ ತಿಲಕರ ಜನ್ಮಸ್ಥಳವಾದ ರತ್ನಗಿರಿಯಲ್ಲಿ ಅವರ ಮನೆಯಲ್ಲಿ ಆರಂಭವಾಯಿತು

ದೆಹಲಿ ಪ್ರದೇಶ ಕಾಂಗ್ರೆಸ್ಸಿನವರು ಭಾರಿ ಬಹಿರಂಗ ಸಭೆಯೊಂದನ್ನು ಪಾರ್ಲಿಮೆಂಟ್ ಸದಸ್ಯ ಸುಭದ್ರ ಜೋಷಿಯವರ ಅಧ್ಯಕ್ಷತೆಯಲ್ಲಿ ಏರ್ಪಡಿಸಿದ್ದರು ಪ್ರಧಾನಿ ನೆಹರೂ, ಕಾಂಗ್ರೆಸ್ ಅಧ್ಯಕ್ಷ ಧೇಬರ್, ಎನ್ ವಿ. ಗಾಡ್ಗೀಳ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣ್, ಕೇಂದ್ರ ವ್ಯವಸಾಯ ಮಂತ್ರಿ ಪಂಜಾಬರಾವ್ ದೇಶಮುಖ್ ಭಾಷಣ ಮಾಡಿದರು ನೆಹರೂರವರು ತಮ್ಮ ಭಾಷಣದಲ್ಲಿ ತಿಲಕರ ಜೀವನದ ಧ್ಯೇಯಗಳನ್ನು ವಿವರಿಸಿ ಅವರು ಭಾರತದಲ್ಲಿ ಕ್ರಾಂತಿಯ ಬೀಜವನ್ನು ಬಿತ್ತಿದರೆಂದೂ, ಭಾರತ ಸ್ವಾತಂತ್ರ್ಯಕ್ಕೆ ಭದ್ರವಾದ ತಳಪಾಯವನ್ನು ಹಾಕಿದರೆಂದೂ ತಿಳಿಸಿದರು

ರಾಷ್ಟ್ರಕ್ಕೆ ತಿಲಕರು ನೀಡಿದ ಸ್ವದೇಶಿ ಮಂತ್ರವು ಸ್ವಾತಂತ್ರ್ಯ ಸಮರದಲ್ಲಿ ಬಹಳ ಪರಿಣಾಮಕಾರಿಯಾದ ಆಯುಧವಾಯಿತೆಂದು ಶ್ರೀ ಧೇಬರ್‌ರವರು ತಿಳಿಸಿದರು

ದೆಹಲಿಯ ಮಹಾರಾಷ್ಟ್ರ ಸಮಾಜದವರು ಏರ್ಪಡಿಸಿದ್ದ ಸಮಾರಂಭದಲ್ಲಿ ಉಪ ರಾಷ್ಟ್ರಾಧ್ಯಕ್ಷ ಡಾ॥ ರಾಧಾಕೃಷ್ಣನ್‌ರವರು ಭಾಷಣ ಮಾಡಿ ತಿಲಕರ ಜೀವನವು ಕರ್ಮಯೋಗದ ಒಂದು ನಿದರ್ಶನವೆಂದು ಹೇಳಿದರಲ್ಲದೆ ತಿಲಕರು ಪ್ರಾಚೀನ ಭಾರತದ ಬಗ್ಗೆ ಹೆಮ್ಮೆ ಪಡುತ್ತಿದ್ದರೆಂದೂ, ಭವಿಷ್ಯ ಭಾರತದಲ್ಲಿ ಭರವಸೆಯನ್ನು ಹೊಂದಿದ್ದರೆಂದೂ ನುಡಿದರು

ಬೊಂಬಾಯಿನ ಚೌಪಾತಿಯಲ್ಲಿ ನಡೆದ ಸಭೆಯಲ್ಲಿ ಬಿ ಜಿ ಖೇರ್‌ರವರು ಭಾಷಣ ಮಾಡಿದರು ಶತಮಾನೋತ್ಸವದ ಜ್ಞಾಪಕಾರ್ಥವಾಗಿ ನಿರ್ಮಿಸಲಾಗಿರುವ ಕಂಚಿನ ಪ್ರತಿಮೆಯ ಅನಾವರಣವನ್ನು ಅವರು ಮಾಡಿದರು

ಮದ್ರಾಸಿನಲ್ಲಿ ನಡೆದ ಸಮಾರಂಭದಲ್ಲಿ ರಾಜಾಜಿಯವರು ಭಾಷಣ ಮಾಡಿ, ತಿಲಕರು ಇಂದು ಜೀವಿಸಿದ್ದರೆ ಬೊಂಬಾಯಿ ಪ್ರಾಂತದ ವಿಭಜನೆಯನ್ನು ವಿರೋಧಿಸುತ್ತಿದ್ದರೆಂದು ತಿಳಿಸಿದರು

ಕೊಯಮತ್ತೂರು, ಎರ್ನಾಕುಲಂ, ಮಂಗಳೂರು ಮುಂತಾದ ಕಡೆಗಳಲ್ಲೂ ಸಭೆಗಳು ಜರುಗಿ ಲೋಕಮಾನ್ಯರ ಪುಣ್ಯ ಸ್ಮರಣೆ ಮಾಡಲಾಯಿತು.

ಕಲ್ಕತ್ತದಲ್ಲಿ ಅನೇಕ ಕಡೆ ಸಭೆಗಳು ನಡೆದುವು. ಅಲ್ಲಿನ ಮಹಾರಾಷ್ಟ್ರ ನಿವಾಸದಲ್ಲಿ ತಿಲಕರ ಭಾರಿ ಭಾವಚಿತ್ರವನ್ನು ಅನಾವರಣ ಮಾಡಲಾಯಿತು ಕಲ್ಕತ್ತದಲ್ಲಿ ಹಿಂದೂ ಮಹಾ ಸಭೆಯವರೂ ಸಮಾರಂಭವನ್ನು ಏರ್ಪಡಿಸಿದ್ದರು ಲಂಡನ್ನಿನ ಹೌಸ್ ಆಫ್ ಕಾಮನ್ಸ್ ಸಭಾ ಭವನದಲ್ಲಿ ತಿಲಕರ ಶತಮಾನೋತ್ಸವವನ್ನು ಆಚರಿಸಲಾಯಿತು. ಲೇಬರ್ ಪಕ್ಷದ ಸದಸ್ಯ ಫೆನ್ನರ್ ಬ್ರಾಕ್‌ವೇರವರು ಅಧ್ಯಕ್ಷತೆ ವಹಿಸಿದ್ದರು.

ಫೆಬ್ರವರಿ ಮಧ್ಯದೊಳಗೆ ಮಹಾ ಚುನಾವಣೆ ಮುಕ್ತಾಯ

ಚುನಾವಣಾಧಿಕಾರಿ ಸೇನರ ಹೇಳಿಕೆ

ಸ್ವಂ ಸು ತಂತಿ] ಬೆಂಗಳೂರು ೨೪

ದಕ್ಷಿಣ ಪ್ರದೇಶ ಪ್ರಾಂತಗಳ ಚುನಾವಣಾಧಿಕಾರಿಗಳ ಎರಡು ದಿನಗಳ ಸಮ್ಮೇಳನವು ಈ ದಿನ ಮುಗಿಯಿತು. ಯಾವ ಮುಖ್ಯ ನಿರ್ಧಾರವನ್ನೂ ಕೈಗೊಳ್ಳಲಿಲ್ಲ ಚುನಾವಣಾ ಕಾರ್ಯಕ್ರಮಗಳ ವಿಸ್ತಾರವನ್ನು ಪರಿಶೀಲಿಸಲಾಯಿತು

ಚುನಾವಣಾಧಿಕಾರಿ ಸುಕುಮಾರ ಸೇನರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡುತ್ತಾ ಈಗಿನ ಕಾರ್ಯಕ್ರಮದ ಪ್ರಕಾರ ಫೆಬ್ರವರಿ ಮಧ್ಯಭಾಗದೊಳಗೆ ಮಹಾ ಚುನಾವಣೆಗಳು ಮುಗಿಯುವುವೆಂದು ಹೇಳಿದರು

ಚುನಾವಣೆಗಳನ್ನು ಹದಿನೈದು ದಿನಗಳೊಳಗೆ ಮುಗಿಸುವಂತೆ ಸಂಸ್ಥಾನಗಳಿಗೆ ತಿಳಿಸಲಾಗಿ ಅವರು ಹೇಳಿ ಕ್ಷೇತ್ರ ವಿಂಗಡಣಾ ಕಾರ್ಯವು ಬರುವ ನವಂಬರ್ ಅಂತ್ಯದೊಳಗೆ ಮುಗಿಯುವುದೆಂದು ತಿಳಿಸಿದರು, ಎಲ್ಲಾ ಪಕ್ಷಗಳೂ ಒಪ್ಪಿದರೆ ಮತದಾನದ ಚೀಟಿಯ ಮೇಲೆ ಗುರುತು ಹಾಕುವ ಪದ್ಧತಿಯನ್ನು ಅನುಸರಿಸುವುದಾಗಿಯೂ ಅವರು ನುಡಿದರು

ಅಧಿಕಾರದಲ್ಲಿರುವವರನ್ನು ಪದಚ್ಯುತಿಗೊಳಿಸುವ ಪ್ರಯತ್ನ

ತಿಲಕ್ ಜಯಂತಿಯಲ್ಲಿ ಮುಖ್ಯ ಮಂತ್ರಿಗಳ ಹೇಳಿಕೆ

ಬೆಂಗಳೂರು ೨೪

ವಿಶ್ವೇಶ್ವರಪುರದ ಲೋಕಮಾನ್ಯ ಸಂಘದವರು ನೆನ್ನೆ ಏರ್ಪಡಿಸಿದ್ದ ತಿಲಕ್‌ರವರ ಭಾವಚಿತ್ರ ಅನಾವರಣ ಸಮಾರಂಭದಲ್ಲಿ ಮುಖ್ಯ ಮಂತ್ರಿ ಹನುಮಂತಯ್ಯನವರು ಭಾಷಣ ಮಾಡಿ ಪಕ್ಷದಲ್ಲಿನ ಸಣ್ಣದ ಒಳ ಜಗಳಗಳು ನಿಲ್ಲದಿದ್ದಲ್ಲಿ ದೇಶದ ಸ್ವಾತಂತ್ರ್ಯಕ್ಕೆ ಹಾನಿಯಾಗಬಹುದೆಂದು ಸೂಚಿಸಿದರು

ದೇಶದ ಇತಿಹಾಸದಲ್ಲಿನ ಅಂಶವನ್ನು ಅವರು ವಿವರಿಸಿ ಅದರಿಂದ ಭಾರತದ ಸ್ವಾತಂತ್ರ್ಯವು ನಾಶವಾದ ವಿಷಯವನ್ನು ತಿಳಿಸಿದರು

ಮೈಸೂರು, ಮದ್ರಾಸ್, ಉತ್ತರ ಪ್ರದೇಶ ಮುಂತಾದ ಕಡೆ ಹಲವಾರು ನಾಯಕರುಗಳು ದ್ವೇಷಾಸೂಯೆಗಳಿಂದ ಪ್ರೇರಿತರಾಗಿ ಅಧಿಕಾರ ಸ್ಥಾನದಲ್ಲಿರುವವರನ್ನು ಉರುಳಿಸುವುದನ್ನೇ ತಮ್ಮ ಒಂದು ಉದ್ಯೋಗವನ್ನಾಗಿ ಕೈಗೊಂಡಿದ್ದಾರೆಂದು ಮುಖ್ಯ ಮಂತ್ರಿಗಳು ಆಕ್ಷೇಪಿಸಿ, ಅವರ ಆ ಮನೋಭಾವವು ಸರಿಯಾದುದಲ್ಲವೆಂದು ಹೇಳಿದರು ದೇಶದ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳುವ ಸಲುವಾಗಿ ಈ ಘರ್ಷಣೆ ಮತ್ತು ಜಗಳಗಳನ್ನು ನಿಲ್ಲಿಸಲು ಯತ್ನಿಸುವುದು ಎಲ್ಲರ ಕರ್ತವ್ಯವಾಗಿದೆಯೆಂದು ಅವರು ಸೂಚಿಸಿದರು

ಸಾಹಿತ್ಯ ಪರಿಷತ್ತಿಗೆ ನೂತನ ಭವನ

ಬೆಂಗಳೂರು ೨೪

ನೂತನ ಕರ್ನಾಟಕ ಪ್ರಾಂತ ರಚನೆಯಿಂದ ಕನ್ನಡ ಸಾಹಿತ್ಯ ಪರಿಷತ್ತಿನ ಚಟುವಟಿಕೆಗಳು ಹೆಚ್ಚಾಗುವುದರಿಂದ ಈಗಿರುವ ಕಟ್ಟಡವು ಸ್ವಲ್ಪವೂ ಸಾಲದೆಂದೂ, ಈ ಕೊರತೆಯನ್ನು ನಿವಾರಿಸುವುದಕ್ಕಾಗಿ ಪುಟ್ಟಣ್ಣಚೆಟ್ಟಿ ಪುರಭವನದ ಪಕ್ಕದಲ್ಲಿ ವಿಶಾಲವಾದ ಕಟ್ಟಡವೊಂದನ್ನು ೫ ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲು ಸಂಸ್ಥಾನ ಸರ್ಕಾರದವರು ಸಹಾಯ ಮಾಡುವುದಾಗಿ ಮುಖ್ಯಮಂತ್ರಿಯವರು ಭರವಸೆ ನೀಡಿರುವರೆಂದೂ ಪರಿಷತ್ತಿನ ಅಧ್ಯಕ್ಷರಾದ ಶ್ರೀ ಶಿವಮೂರ್ತಿ ಶಾಸ್ತ್ರಿಗಳವರು ಮೊನ್ನೆ ತಿಳಿಸಿದರು. ನೂತನ ಭವನದಲ್ಲಿ ವಿಶಾಲವಾದ ಮತ್ತು ಸುಸಜ್ಜಿತವಾದ ರಂಗಭೂಮಿಯೊಂದನ್ನು ನಿರ್ಮಿಸಲಾಗುವುದೆಂದೂ ಅವರು ನುಡಿದರು.

ತಿಲಕರ ಜನ್ಮಗೃಹ ಸರ್ಕಾರಕ್ಕೆ

ಲೋಕಮಾನ್ಯ ತಿಲಕರು ಜನ್ಮತಾಳಿದ ರತ್ನಗಿರಿ ಪಟ್ಟಣದ ಅವರ ಮನೆಯನ್ನು ಸರಕಾರ ಕೊಂಡು ಅದನ್ನು ರಾಷ್ಟ್ರೀಯ ಸ್ಮಾರಕ ಮಾಡುವ ವಿಷಯವನ್ನು ಆಲೋಚಿಸುವುದಾಗಿ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರು ತಿಳಿಸಿರುತ್ತಾರೆ.

ಸನಾತನ ಧರ್ಮೋದ್ಧಾರಿಣೀ ಸಭೆ

ವಿದ್ಯಾರಣ್ಯಪುರದಲ್ಲಿರುವ ಶ್ರೀ ಕೃಷ್ಣ ಯೋಗಾನಂದೇಶ್ವರ ಸಂಸ್ಥಾನದ ಸನಾತನ ಧರ್ಮೋದ್ಧಾರಿಣೀ ಸಭೆಯವರು ಮೊನ್ನೆ ವ್ಯಾಸ ಪೂರ್ಣಿಮೆ ಪ್ರಯುಕ್ತ ಗುರು ಪೂಜೆಯನ್ನು ನೆರವೇರಿಸಿದರು. ಗೀತಾ ಗ್ರಂಥಗಳ ಕನ್ನಡ ತತ್ವ ಪುಸ್ತಕವನ್ನು ಸದಸ್ಯರಿಗೆ ಉಚಿತವಾಗಿ ಹಂಚಿದರು ಮತ್ತು ಗೀತಾ ಪುಸ್ತಕವನ್ನು ಸಂಸ್ಕೃತ ಶ್ಲೋಕ, ಅರ್ಥ ಮತ್ತು ತಾತ್ಪರ್ಯಗಳ ಸಮೇತ ಪಾರಾಯಣಕ್ಕೆ ಯೋಗ್ಯವಾದ ರೀತಿಯಲ್ಲಿ ಮುದ್ರಿಸಿ ಪ್ರಚಾರಕ್ಕೆ ಕೊಡಲು ತೀರ್ಮಾನಿಸಲಾಯಿತು. ಈ ಕಾರ್ಯಕ್ಕೆ ಮಹಾಜನರ ಪ್ರೋತ್ಸಾಹವನ್ನು ಕೋರಲಾಯಿತು. ಶ್ರೀ ಶಾರದಾ ಶಿಶುವಿಹಾರ ಮತ್ತು ಹಿಂದಿ ವಿದ್ಯಾಲಯದ ವಿದ್ಯಾರ್ಥಿಗಳಿಗೂ, ಇತರರಿಗೂ ಪ್ರಸಾದ ವಿನಿಯೋಗ ಮಾಡಲಾಯಿತು.

ಚಾಮರಾಜಅಗ್ರಹಾರದಲ್ಲಿ ಕಳ್ಳರ ಕಾಟ

ರಾಜಧಾನಿಯ ಚಾಮರಾಜ ಅಗ್ರಹಾರದ ಹಿಂಭಾಗದ ಬೀದಿಯಲ್ಲಿ ೩-೪ ದಿನಗಳಿಂದಲೂ ಕಳ್ಳರ ಹಾವಳಿಯು ವಿಪರೀತವಾಗಿದೆ. ಸಣ್ಣ ಮಕ್ಕಳು ಬೀದಿಯಲ್ಲಿ ತಿರುಗುವುದೇ ಕಷ್ಟವಾಗಿದೆ. ಕಳ್ಳರು ಮನೆಗಳಿಗೂ ನುಗ್ಗಿ ಅದಿಗೆ ಸಾಮಾನುಗಳನ್ನು ದೋಚುತ್ತಿರುವುದರಿಂದ ಪೋಲೀಸರು ಅವುಗಳ ಕಾಟವನ್ನು ತಪ್ಪಿಸಲು ಸೂಕ್ತ ಕ್ರಮವನ್ನು ಬೇಗನೆ ಕೈಗೊಳ್ಳಬೇಕಾದುದು ಅಗತ್ಯ— ಎಂಬುದಾಗಿ ಅಲ್ಲಿನ ನಿವಾಸಿಯೊಬ್ಬರು ತಿಳಿಸಿರುತ್ತಾರೆ.

ಪುಸ್ತಕ ಭಂಡಾರಗಳಿಗೆ ವೈದ್ಯ ಪತ್ರಿಕೆಯ ಉಚಿತ ಹಂಚಿಕೆ

ವೈದ್ಯ ಸಂಸ್ಥಾನದ ಬನಾರಸ್ ನಗರದಲ್ಲಿ ಪ್ರಕಟವಾಗುತ್ತಿರುವ 'ಇಂಡಿಯನ್ ಡಾಕ್ಟರ್' ಎಂಬ ಮಾಸಿಕ ಇಂಗ್ಲಿಷ್ ವೈದ್ಯ ಪತ್ರಿಕೆಯನ್ನು ಭಾರತದಲ್ಲಿರುವ ಮತ್ತು ಹೊರಗಿನ ಎಲ್ಲಾ ಸಾರ್ವಜನಿಕ ಪುಸ್ತಕ ಭಂಡಾರಗಳಿಗೂ ೧ ವರ್ಷ ಉಚಿತವಾಗಿ ಹಂಚುವುದಾಗಿ ಪತ್ರಿಕೆಯ ಸಂಪಾದಕ ಡಾ|| ಮಾನ್ ಸಿಂಗರು ತಿಳಿಸಿರುತ್ತಾರೆ. ಪತ್ರಿಕೆಯ ವ್ಯವಸ್ಥಾಪಕರಿಗೆ ಬರೆದುಕೊಳ್ಳಬೇಕೆಂದು ಕೋರಲಾಗಿದೆ.

ಮೋಸ ಹೋಗಬೇಡಿ

ಮೈಸೂರು ಕೃಷ್ಣಮೂರ್ತಿಪುರಂನಲ್ಲಿ ಶ್ರೀ ಕೃಷ್ಣ ಬೇಕರಿ ಎಂಬ ಬೇಕರಿ ಹಾಲ್ಟು ಹೆಸರಾಗಿ ನಡೆಸುತ್ತಿರುತ್ತಾರೆ. ಈ ಪಾನಿಗೂ, ನಮಗೂ ಯಾವ ಸಂಬಂಧವೂ ಇಲ್ಲವೆಂಬ ಸಂಗತಿಯನ್ನು ಸಾರ್ವಜನಿಕರ ಅವಗಾಹನೆಗೆ ಈ ಮೂಲಕ ತಿಳಿಸಿದೆ.

ಕೆ. ಆರ್. ಕೃಷ್ಣಅಯ್ಯಂಗಾರ್,

ಶ್ರೀ ಕೃಷ್ಣಾ ಬೇಕರಿ,

೩ ಸುಬ್ಬಯ್ಯ ರೋಡ್, ಮೈಸೂರು

ಕನ್ನಡ ನಿಘಂಟಿನ ಪ್ರಕಟಣೆ

ಸದ್ಯದಲ್ಲೇ ಆರಂಭವಾಗುವುದಾಗಿ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರ ಹೇಳಿಕೆ

ಬೆಂಗಳೂರು ೨೪

ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಪಂಡಿತ ಬಿ. ಶಿವಮೂರ್ತಿಶಾಸ್ತ್ರಿಗಳು ಮೊನ್ನೆ ಪತ್ರಿಕಾಗೋಷ್ಠಿಯೊಂದನ್ನು ನಡೆಸಿ ಕನ್ನಡ ನಿಘಂಟನ್ನು ಶೀಘ್ರವಾಗಿ ಪ್ರಕಟಿಸಲು ಮುದ್ರಣ ಕಾರ್ಯವನ್ನು ಇನ್ನೆರಡು ತಿಂಗಳಲ್ಲಿ ಆರಂಭಿಸಿ ಐದು ವರ್ಷಗಳಲ್ಲಿ ಮುಗಿಸಲಾಗುವುದೆಂದೂ ಈ ಬಗ್ಗೆ ಸುಮಾರು ೨ ಲಕ್ಷ ಪದಗಳನ್ನು ಸಂಗ್ರಹಿಸಲಾಗಿದೆಯೆಂದೂ ತಿಳಿಸಿದರು. ಸರ್ಕಾರದವರು ಇದಕ್ಕಾಗುವ ೨|| ಲಕ್ಷ ರೂ ವೆಚ್ಚವನ್ನು ಕೊಡುವುದಾಗಿ ಭರವಸೆ ಇತ್ತಿದ್ದಾರೆಂದೂ ಸಹ ಅವರು ಹೊರಗೆಡಹಿದರು.

ಪರಿಷತ್ತಿನ ಚಟುವಟಿಕೆಗಳ ಬಗ್ಗೆ ಅವರು ಪ್ರಸ್ತಾಪಿಸಿ ದಾಸರ ಪದ, ಶರಣರ ವಚನಗಳು ಮತ್ತು ದೇಶಭಕ್ತಿಗೀತೆಗಳನ್ನು ಹಾಡುವ ಶಿಕ್ಷಣ ತರಗತಿಗಳನ್ನು ತೆರೆಯಲು ಯೋಚಿಸಲಾಗಿದೆಯೆಂದೂ, ಪರಿಷತ್ತಿನ ಸಾಂಸ್ಕೃತಿಕ ಚಟುವಟಿಕೆಗಳಿಗೆ ಸರ್ಕಾರವು ಈ ವರ್ಷ ೩೫ ಸಾವಿರ ರೂ ಮಂಜೂರು ಮಾಡಿದೆಯೆಂದೂ ನುಡಿದರು.

ನೂತನ ಕನ್ನಡ ಪ್ರಾಂತವು ಉದಯವಾಗುವ ಸಮಯದಲ್ಲಿ ಜರಗುವ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರೆಲ್ಲರಿಗೂ ಪರಿಷತ್ತು ಶ್ರೀಸಾನ್ನಿಧ್ಯದ ಸಮ್ಮುಖದಲ್ಲಿ ಸನ್ಮಾನ ಸಮಾರಂಭವನ್ನು ಏರ್ಪಡಿಸುವುದೆಂದೂ ತಿಳಿಸಿದರು.

ಇರಾನಿನಲ್ಲಿ ಪ್ರವಾಹದಿಂದ ೪೦ ಜನರ ಮರಣ

ಮಧ್ಯ ಮತ್ತು ದಕ್ಷಿಣ ಇರಾನಿನಲ್ಲಿ ಭಾರಿ ಮಳೆಯ ಪರಿಣಾಮವಾಗಿ ನದಿಗಳು ಉಕ್ಕಿ ಹರಿದು ಸುಮಾರು ೪೦ ಮಂದಿ ಪ್ರವಾಹದಲ್ಲಿ ಮೃತರಾದರೆಂದು ವರದಿಯಾಗಿದೆ. ಇಸ್ಫಹಾನ್ ಪ್ರದೇಶದಲ್ಲಿ ೨೫ ಮಂದಿ ಪ್ರವಾಹದಲ್ಲಿ ಕೊಚ್ಚಿಹೋಗಿರುತ್ತಾರೆ. ೧,೦೦೦ಕ್ಕೂ ಹೆಚ್ಚು ಜನರು ನಿರ್ಗತಿಕರಾಗಿರುತ್ತಾರೆ.

ಗುರು ಪೂರ್ಣಿಮಾ ಉತ್ಸವ

ಗುರು ಪೂರ್ಣಿಮೋತ್ಸವದ ಅಂಗವಾಗಿ, ಶ್ಯಾಮರಾಜಾ ರಸ್ತೆಯಲ್ಲಿರುವ ಸಾಯಿಬಾಬಾ ಮಂದಿರದಲ್ಲಿ ನಾಳೆ ಬೆಳಿಗ್ಗೆ ಮಹಾಭಿಷೇಕ ಮತ್ತು ಮಂಗಳಾರತಿ, ೧೧-೩೦ಕ್ಕೆ ಮಂದಿರದ ಸರ್ವ ಸದಸ್ಯರ ಸಭೆ, ಸಂಜೆ ೬-೩೦ಕ್ಕೆ ಸಾಮೂಹಿಕ ಪ್ರಾರ್ಥನೆ ಮತ್ತು ೭ ಗಂಟೆಗೆ ಬಿ. ಕೋದಂಡರಾಮಶಾಸ್ತ್ರಿಗಳಿಂದ ಹರಿಕಥಾ ಕಾಲಕ್ಷೇಪಗಳು ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚರವರ ಸಮ್ಮುಖದಲ್ಲಿ ಜರುಗುವುವು. ನಾಳಿದ್ದು ಬೆಳಿಗ್ಗೆ ಅಭಿಷೇಕ, ಅರ್ಚನೆ ಮತ್ತು ಮಂಗಳಾರತಿಗಳೂ, ಸಂಜೆ ಸಾಯಿಬಾಬಾರವರ ಉತ್ಸವವೂ ನಡೆಯುವುವು.

ವ್ಯಾಸ ಪೂರ್ಣಿಮಾ ಪೂಜೆ

ರಾಜಧಾನಿಯ ದೊಡ್ಡಕೆರೆ ಏರಿಯ ದೇವಾಲಯದ ಬಳಿ ಬಿಡಾರ ಮಾಡಿರುವ ಶ್ರೀಮದ್ವಿದ್ಯಾ ಶಂಕರ ಪೀಠದ ಶ್ರೀ ಶ್ರೀ ಬ್ರಹ್ಮವಿದ್ಯಾನಂದ ಭಾರತೀ ಸ್ವಾಮಿಗಳವರು ಕಳೆದ ಭಾನುವಾರ ವ್ಯಾಸ ಪೂರ್ಣಿಮಾ ಪೂಜೆಯನ್ನು ನೆರವೇರಿಸಿ, ನೂರಾರು ಮಂದಿ ಚಾತುರ್ವರ್ಣದವರಿಗೂ ತೀರ್ಥ ಪ್ರಸಾದಾದಿಗಳನ್ನು ಅನುಗ್ರಹಿಸಿದರು. ಅನ್ನ ಸಂತರ್ಪಣೆಯೂ ಏರ್ಪಾಡಾಗಿತ್ತು.

ಕ್ಯಾತಸಹಳ್ಳಿ ಪಾಠಶಾಲೆಯ ವಿದ್ಯಾರ್ಥಿ ಸಂಘ

ರಾಜಧಾನಿಯ ಕ್ಯಾತಸಹಳ್ಳಿ ಸಿದ್ದಲಿಂಗಯ್ಯನವರ ಪಾಠಶಾಲಾ ವಿದ್ಯಾರ್ಥಿ ಸಂಘದ ಚುನಾವಣೆಯು ನೆನ್ನೆ ನಡೆದು, ಸಂಘದ ಉಪಾಧ್ಯಕ್ಷ ಸ್ಥಾನಕ್ಕೆ ಶ್ರೀ ಜಿ. ಆರ್. ಶಿವಾನಂದಯ್ಯನವರೂ, ಕಾರ್ಯದರ್ಶಿಗಳ ಸ್ಥಾನಕ್ಕೆ ಶ್ರೀಗಳಾದ ಬಿ. ಎಸ್. ಕೃಷ್ಣರಾಜೇ ಅರಸ್ ಮತ್ತು ಶಾಂತಪ್ಪನವರೂ ಆರಿಸಿಬಂದರು. ೯ ಮಂದಿಯನ್ನು ಸಮಿತಿ ಸದಸ್ಯರಾಗಿ ತೆಗೆದುಕೊಳ್ಳಲಾಯಿತು.

Edited, Printed and Published by A. R. Nagarajan at Sadhvi Press D. Subbiah Road Mysore

ವಿದ್ಯುತ್ ಅಲೆಯ ಸಾಧನದಿಂದ ಭೂಗರ್ಭದಲ್ಲಿ ಜಲ ಶೋಧನೆ

ವಿದ್ಯುತ್ ಅಲೆಗಳನ್ನು ಭೂಭಾಗದೊಳಕ್ಕೆ ನುಗ್ಗಿಸಿ ಅದರಿಂದ ಬರುವ ಪ್ರತಿಫಲದಿಂದ ನೀರು ಸಿಕ್ಕುವುದೋ ಅಥವಾ ಇಲ್ಲವೋ ಎಂಬುದನ್ನು ನಿಷ್ಕರ್ಷಿಸುವ ನೂತನ ವಿಧಾನವನ್ನು ಈಜಿಪ್ಟಿನ ಕೈರೋ ವಿಶ್ವವಿದ್ಯಾಲಯದ ವಿಜ್ಞಾನಿ ಡಾ|| ಹೆಚ್. ಎಲ್. ಸ್ಕಿರ್ ಎಂಬುವರು ಕಂಡುಹಿಡಿದ್ದಾರೆ. ಈ ವಿಧಾನದಿಂದ ಭೂಮಿಯೊಳಗೆ ೧,೫೦೦ ಅಡಿಗಳ ಆಳದವರೆಗೂ ನೀರಿರುವುದನ್ನು ಕಂಡುಹಿಡಿಯಬಹುದೆಂದು ಹೇಳಲಾಗಿದೆ.

ಸ್ಟ್ಯಾಟಿಸ್ಟಿಕ್ಸ್ ಸಂಘದ ಆರಂಭ ಭಾಷಣ

ಮಹಾರಾಜಾ ಕಾಲೇಜು ಸ್ಟ್ಯಾಟಿಸ್ಟಿಕ್ಸ್ ಸಂಘದ ಆರಂಭ ಭಾಷಣವನ್ನು ಮದ್ರಾಸ್ ವಿಶ್ವವಿದ್ಯಾನಿಲಯದ ಅಧ್ಯಾಪಕರಾದ ಶ್ರೀ ಜಿ. ಎಸ್. ಲಿಂಗಪ್ಪಯ್ಯನವರು ಕಳೆದ ಶುಕ್ರವಾರ ಮಾಡಿ, ಸಂಖ್ಯಾ ಶಾಸ್ತ್ರದ ಅವಶ್ಯಕತೆಯನ್ನು ವಿವರಿಸಿ, ದೇಶದಭ್ಯುನ್ನತಿಯಲ್ಲಿ ಈ ಶಾಸ್ತ್ರದ ಪಾತ್ರವು ಅತಿ ಮುಖ್ಯವಾದುದೆಂದು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಪ್ರೊ|| ಎಸ್. ಕೆ. ಏಕಾಂಬರಂರವರು ವಿದ್ಯಾರ್ಥಿಗಳು ಸ್ವಸಹಾಯ ಶಕ್ತಿಯನ್ನು ಬೆಳೆಸಿಕೊಳ್ಳಬೇಕೆಂದು ಹೇಳಿದರು. ಪ್ರಾರಂಭದಲ್ಲಿ ಪ್ರಾರ್ಥನೆಯಾದನಂತರ ಶ್ರೀ ಕೆ. ವಿ. ಕೃಷ್ಣನ್ ಶ್ರೀಗಳು ಅತಿಥಿಗಳನ್ನು ಸ್ವಾಗತಿಸಿದರು. ಕಾರ್ಯದರ್ಶಿ ಶ್ರೀ ಕೆ. ಸಿ. ತಿಪ್ಪಣ್ಣನವರು ವಂದನಾರ್ಪಣೆ ಮಾಡಿದರು. ಎ. ಜಿ. ಬಂಚ್ ಮತ್ತು ವೃಂದದವರ ವಾದ್ಯಗೋಷ್ಠಿ ಮತ್ತು ಪಿ. ರಾಮಸ್ವಾಮಿಯವರ ವೀಣಾ ವಾದನವು ಏರ್ಪಾಡಾಗಿದ್ದವು.

ಚಾಮುಂಡೇಶ್ವರಿ ವಿದ್ಯಾರ್ಥಿನಿಲಯದ ವಿದ್ಯಾರ್ಥಿ ಸಂಘ

ರಾಜಧಾನಿಯ ಚಾಮುಂಡೇಶ್ವರಿ ಕಾಲೇಜು ವಿದ್ಯಾರ್ಥಿನಿಲಯ ಸಂಘದ ವಾರ್ಷಿಕ ಚುನಾವಣೆಯು ನೆನ್ನೆ ಶ್ರೀ ಜಿ. ಬಿಲ್ಲಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಪ್ರಸಕ್ತ ಸಾಲಿನ ಕಾರ್ಯಕಾರಿ ಸಮಿತಿಯ ಉಪಾಧ್ಯಕ್ಷರಾಗಿ ಶ್ರೀ ಹೆಚ್. ಎಂ. ಪುಟ್ಟನಾಗಯ್ಯನವರೂ, ಕಾರ್ಯದರ್ಶಿಯಾಗಿ ಶ್ರೀ ಸಿ. ರುದ್ರಪ್ಪನವರೂ ಆರಿಸಲ್ಪಟ್ಟರು. ಶ್ರೀಗಳಾದ ಹೆಚ್. ಬಸವಯ್ಯ, ಎಂ. ಬಿ. ಪರಮಶಿವಯ್ಯ, ಎಸ್. ಪದ್ಮನಾಭಯ್ಯ, ಕೆ. ಸಿದ್ದಯ್ಯ ಮತ್ತು ರಂಗಸ್ವಾಮಿಯವರು ಸದಸ್ಯರುಗಳಾಗಿ ಚುನಾಯಿತರಾದರು.

ಸಾಮಾಜಿಕ ವಿಜ್ಞಾನ ಸಂಘ

ಯುವರಾಜಾ ಕಾಲೇಜಿನ ಸಾಮಾಜಿಕ ವಿಜ್ಞಾನ ಸಂಘದ ಪದಾಧಿಕಾರ ವರ್ಗದ ಚುನಾವಣೆಯು ಕಳೆದ ಶುಕ್ರವಾರ ನಡೆದು ಪ್ರಸಕ್ತ ಸಾಲಿಗೆ ಶ್ರೀ ಕುಮಾರಸ್ವಾಮಿಯವರು ಅಧ್ಯಕ್ಷರಾಗಿಯೂ, ಶ್ರೀ ಜಿ. ಎ. ಚನ್ನರಾಜೇ ಅರಸರು ಕಾರ್ಯದರ್ಶಿಯಾಗಿಯೂ ಮತ್ತು ಶ್ರೀಗಳಾದ ಬೋಪಣ್ಣ, ಬಿ. ಎಸ್. ಸುರೇಶ್, ಚಿಕ್ಕವೀರಯ್ಯ ಮತ್ತು ರಾಜಶೇಖರ್‌ರವರು ಸದಸ್ಯರಾಗಿಯೂ ಚುನಾಯಿತರಾದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಪಿಟೀಲು. ೭-೧೫ ಮತ್ತು ೮-೧೫ ಎಸ್. ಕೃಷ್ಣಮೂರ್ತಿ-ಕನ್ನಡ ಗೀತೆ ಮತ್ತು ಸಂಗೀತ. ೭-೪೦ ಹಿಂದಿ ಪಾಠ. ಮಧ್ಯಾಹ್ನ ೧೨ ಮತ್ತು ೧೫ ರ ಸುದ್ದಿ. ಸಂಗೀತ ೧೨-೪೦ ರವರೆಗೆ. ೧ ಚಿತ್ರಗೀತೆಗಳು. ೩ ಗಂಟೆ ಪಿಟೀಲು. ೩ ರಿಂದ ಪ್ರೌಢಶಾಲೆಗಳಿಗಾಗಿ. ಸಂಜೆ ೬-೪೦ ಎ. ಅಪ್ಪಾಜಯ್ಯ-ನಾಗಸ್ವರ. ೭ ಗಂಟೆ ಕಥೆ. ೭-೪೦ ದೇವರನಾಮ. ೮ ಪಿಟೀಲು. ೯-೪೦ ಚರ್ಚೆ. ೯ ರಿಂದ ೯-೩೦ ರವರೆಗೆ. ೯-೧೫ ಕೆ. ಎಸ್. ನಾರಾಯಣ ಅಯ್ಯಂಗಾರ್ ಗೋಟು ವಾದ್ಯ.

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ನೋಟ್ರಿಂದ ಶಿಶುವಿಹಾರವನ್ನು ಆಧ್ಯಾತ್ಮಿಕ ಶಿಕ್ಷಣ ಸಾಧನದಿಂದ ಹಬ್ಬಗೊಳಿಸಿ ಮಕ್ಕಳಿಗೆ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಬಿ. ಕೃಷ್ಣಮೂರ್ತಿ,

ವ್ಯವಸ್ಥಾಪಕರು

ಅಣು ಅಸ್ತ್ರ ಪ್ರಯೋಗಗಳನ್ನು ಮಿತಿಗೊಳಿಸಲು ಈಡನ್ನರ ಕರೆ

ಬ್ರಿಟನ್ನಿನ ಪ್ರಧಾನಿ ಸರ್ ಆಂತೊನಿ ಈಡನ್ನರು ಅಣು ಅಸ್ತ್ರಗಳ ಪ್ರಯೋಗಗಳನ್ನು ಮಿತಿಗೊಳಿಸಲು ಮತ್ತು ಹತೋಟಿಯಲ್ಲಿಡಲು, ಸಂಬಂಧಪಟ್ಟ ಮಹಾರಾಷ್ಟ್ರಗಳು ಯತ್ನಿಸಬೇಕೆಂದೂ, ಇದರಿಂದ ವಿಶ್ವದ ಜನಾಂಗಗಳ ಆರೋಗ್ಯಕ್ಕೆ ಅಗತ್ಯವಾದ ರಕ್ಷಣೆಯನ್ನು ಪಡೆಯಬಹುದೆಂದೂ ಕಾಮನ್ಸ್ ಸಭೆಯಲ್ಲಿ ಮಾತನಾಡುತ್ತಾ ಮನವಿ ಮಾಡಿಕೊಂಡರು.

ಮೈಸೂರು ಪೇಟೆ ಧಾರಣೆ

	ರೂ.	ಆಣೆ	ಪೈ	ರೂ.	ಆಣೆ
ಕಡಲೆಕಾಯಿ	೫೦	೦	೦	[illegible]	[illegible]
ಹಿಪ್ಪೆ	೫೫	೦೪	೦	[illegible]	[illegible]
ಎಳ್ಳು	೫೪	೦೩	೦	[illegible]	[illegible]
ಹುರುಳಿ	೩೩	೮	೦	[illegible]	[illegible]
ಧನಿಯ	೩೬	೮	೦		
ಹಲಸಂದೆ	೪೪	೦	೦	[illegible]	[illegible]
ಉದ್ದು	೩೪	೦	೦	[illegible]	[illegible]
ಸಣ್ಣ ಭತ್ತ	೪೦	೦	೦	[illegible]	[illegible]
ದಪ್ಪಭತ್ತ	೨೭	೧೨	೦	[illegible]	[illegible]
ರಾಗಿ	೨೮	೮	೦	೩೧	[illegible]
ಸೀಗೆಕಾಯಿ	೭	೧೪	೦	[illegible]	[illegible]
ಹುಣಸೇಹಣ್ಣು	೫	೧೨	೦	[illegible]	[illegible]
ಸುಣ್ಣಬಸಕಾಯಿ	೧೧	೨	೦	[illegible]	[illegible]
ತೆಂಗಿನಕಾಯಿ ೧೦೦೦	೧೧೫	೮	೦	[illegible]	[illegible]

SREE GANESH TALKIES

Tomorrow : Last day

DOCTOR AT SEA

From 25-7-56 For 2 days

Toughest Man in Arizona

An action thriller in True Color

Starring - Victor Jory and Leslie Joans

Gol Release on 28-7-56

Paramount's Vistavision Picture

THE ROSE TATTOO

With Anna Magnani - the Italian Actress of International Fame and Burt Lancaster

FOR ADULTS ONLY

ಕತ್ತಿಯಿಂದ ಕೋಲಿನಿಂದ ನಿಮ್ಮ ಗುರಿಯನ್ನು ತಪ್ಪಬಹುದು! ರವಿಯಿಂದ ಪಶ್ಚಿಮದಲ್ಲಿ ಉದಯಿಸಬಹುದು!!

ಆದರೆ ಈ ರಾಜಾ ಮೆಡಿಕಲ್ ಹಾಲಿನ ನೂತನ ಮತ್ತು ಅತ್ಯಾಧುನಿಕವಾದ ಚಿಕಿತ್ಸೆಯು ಪೂರ್ಣ, ಒಂದೇ ದಾರಿಯಲ್ಲಿ ನಡೆಯುವ ಫಲಿತಾಂಶವನ್ನು ತೋರಿಸುವುದರಲ್ಲಿ ತಪ್ಪುವುದಿಲ್ಲ.

ಆಯುರ್ವೇದ ನವಯೌವನವನ್ನು, ಅತ್ಯುತ್ತಮ ಶಕ್ತಿಯನ್ನು, ಆರೋಗ್ಯವನ್ನು ಹೊಂದಲು ಶ್ರೀ ವೈದ್ಯದಲ್ಲಿ ಹೆಸರಾಂತ ಡಾ. ಎ. ಎ. ರಾಜಾರವರ ಸಲಹೆಯನ್ನು ಪಡೆಯಿರಿ.

ಭಾರತದ ಹೆಮ್ಮೆಯಾದ ಡಾ|| ರಾಜಾರವರು ಈ ವಿಧಾನದ ಚಿಕಿತ್ಸೆಗಳಿಂದಲೂ ಅದ್ಭುತವಾದ ಭಾರತದಲ್ಲಿ ಪ್ರಖ್ಯಾತರಾಗಿ ಸಹಸ್ರಾರು ಜನರಿಗೆ ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವನವನ್ನು, ಪುರುಷತ್ವವನ್ನು ಉಂಟುಮಾಡಿರುವರು. ವೃದ್ಧ ಅಶಕ್ತರುಗಳಿಗೆ, ನರದೌರ್ಬಲ್ಯದವರುಗಳಿಗೆ, ರೋಗಿಗಳಿಗೆ, ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳ ವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ.

ಅದ್ದರಿಂದ ಡಾ|| ರಾಜಾರವರನ್ನು ಖುದ್ದು ಕಂಡು ಸಲಹೆ ಪಡೆದು, ದೇಹಶಕ್ತಿ ಮತ್ತು ಪೌರುಷವನ್ನು ಸಂಪಾದಿಸಿ.

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ರಾಷ್ಟ್ರದಿಂದ ಪಾರಾಗಲು ಇದು ಸುವರ್ಣ ಸುಸಮಯ.

ಕಾಲ: ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4ರಿಂದ ರಾತ್ರಿ 9 ಘಂಟೆ ವರೆಗೆ

ರಾಜಾ ಮೆಡಿಕಲ್ ಹಾಲ್,

ಡೋರ್ ನಂ.1-745 ಅಶೋಕಾ ರಸ್ತೆ, ಮೈಸೂರು

(ಮೈಸೂರು ಬ್ಯಾಂಕಿನ ಹಾಲ ಹತ್ತಿರ 3ನೇ ಕಟ್ಟಡ)

ರಿಜಿಸ್ಟರ್ ನಂ. 792

ಚಂದಾದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಸಂಪುಟ : ೦೪] SADHVI : WEDNESDAY 25—7—1956 ಮೈಸೂರು : ಬುಧವಾರ ೨೫—೭—೧೯೫೬ [ಸಂಚಿಕೆ : ೩೨೨

ಮೈಸೂರಿನ ಬಗ್ಗೆ ನಾಳೆ ಪಾರ್ಲಿಮೆಂಟರಿ ಸಮಿತಿ ನಿರ್ಧಾರ

ಕೇಂದ್ರ ಸರ್ಕಾರದ ಆರ್ಥಿಕ ಖಾತೆ ಪ್ರಧಾನಿ ನೆಹರೂರವರಿಗೆ

ರಾಜೀನಾಮೆಯಿಂದ ದೇಶಮುಖ್‌ರವರ ನಿವೃತ್ತಿ

ಕೇಂದ್ರ ಸರ್ಕಾರದ ಆರ್ಥಿಕ ಸಚಿವರಾದ ಶ್ರೀ ಸಿ. ಡಿ. ದೇಶಮುಖ್‌ರವರ ರಾಜೀನಾಮೆಯನ್ನು ರಾಷ್ಟ್ರಾಧ್ಯಕ್ಷರು ಅಂಗೀಕರಿಸಿರುವ ಬಗ್ಗೆ ನೆನ್ನೆ ಹೊರಬಿದ್ದ ಪ್ರಕಟಣೆಯಲ್ಲಿ ಆರ್ಥಿಕ ಖಾತೆಯನ್ನು ಪ್ರಧಾನಿ ನೆಹರೂರವರೇ ವಹಿಸಿಕೊಂಡಿರುವುದಾಗಿ ತಿಳಿಸಲಾಗಿದೆ. ಪ್ರಾಂತ್ಯ ಪುನರ್ವಿಂಗಡಣೆಯ ಪರಿಣಾಮವಾಗಿ ಬೊಂಬಾಯಿ ನಗರವನ್ನು ಕೇಂದ್ರ ಸರ್ಕಾರದ ಆಡಳಿತಕ್ಕೆ ಒಳಪಡಿಸಿದ ಬಗ್ಗೆ ಉಂಟಾದ ಭಿನ್ನಾಭಿಪ್ರಾಯದಲ್ಲಿ ತಮ್ಮ ನಿಲುವನ್ನು ಕುರಿತು ದೇಶಮುಖ್‌ರವರು ಈ ವಾರಾಂತ್ಯದಲ್ಲಿ ಲೋಕ ಸಭೆಯಲ್ಲಿ ಹೇಳಿಕೆ ಕೊಡುವರೆಂದು ನಿರೀಕ್ಷಿಸಲಾಗಿದೆ. ಅವರು ಇನ್ನು ಮುಂದೆ ರಾಜಕೀಯದಿಂದ ನಿವೃತ್ತರಾಗುವರೆಂದೂ ಹೇಳಲಾಗುತ್ತಿದೆ

ಮೈಸೂರು ಬಿಕ್ಕಟ್ಟಿನ ಬಗ್ಗೆ ನಾಳೆ ಹೈಕಮಾಂಡಿನ ಪರಿಶೀಲನೆ

ಕೇಂದ್ರ ಕಾಂಗ್ರೆಸ್ ಪಾರ್ಲಿಮೆಂಟರಿ ಬೋರ್ಡಿನ ಸಭೆಯು ನಾಳೆ ನಡೆಯಲಿದೆಯೆಂದೂ, ಹೊಸ ಮೈಸೂರಿನ ಗಲಭೆ, ಮೈಸೂರಿನ ಮುಖ್ಯ ಮಂತ್ರಿಗಳ ಮೇಲೆ ಶಾಸನಸಭಾ ಸದಸ್ಯರುಗಳು ತಂದಿರುವ ಅವಿಶ್ವಾಸ ನಿರ್ಣಯ ಮತ್ತು ತಮ್ಮನ್ನು ಕಾಯಕಲ್ಪದಿಂದ ಬಿಡುಗಡೆ ಮಾಡಬೇಕೆಂದು ಒರಿಸ್ಸಾ ಮುಖ್ಯ ಮಂತ್ರಿ ನವಕೃಷ್ಣ ಚೌಧುರಿಯವರು ಕೋರಿರುವ ವಿಷಯಗಳನ್ನು ಪರಿಶೀಲಿಸಲಾಗುವುದೆಂದೂ ತಿಳಿದು ಬಂದಿದೆ. ಮೈಸೂರು ಮುಖ್ಯ ಮಂತ್ರಿಗಳ ಮೇಲಿನ ಅವಿಶ್ವಾಸ ನಿರ್ಣಯದ ವಿಷಯವನ್ನು ನಾಳೆ ತೀರ್ಮಾನಿಸಲಾಗುವುದೆಂದು ವರದಿಯಾಗಿದೆ.

ವ್ಯಾಗನ್ನಿನಿಂದ ಅಕ್ಕಿ ಕದಿಯುತ್ತಿದ್ದವರ ಮೇಲೆ ಗುಂಡು

ಹೋಲಾಪುರದ ರೈಲು ನಿಲ್ದಾಣದಲ್ಲಿದ್ದ ವ್ಯಾಗನ್ನುಗಳಿಂದ ಮೊನ್ನೆ ರಾತ್ರಿ ೨೦ ಜನರು ಅಕ್ಕಿ ಮೂಟೆಗಳನ್ನು ಲೂಟಿ ಮಾಡುತ್ತಿದ್ದಾಗ ಪೋಲೀಸರು ಅವರ ಮೇಲೆ ಗುಂಡು ಹಾರಿಸಿದರೆಂದೂ, ಅದರ ಪರಿಣಾಮವಾಗಿ ಒಬ್ಬನು ಮಡಿದನೆಂದೂ ವರದಿಯಾಗಿದೆ. ದರೋಡೆಕಾರರು ಕಾವಲಿದ್ದ ಪೋಲೀಸನನ್ನು ಇರಿಯಲು ಪ್ರಯತ್ನಿಸಿದರೆಂದು ಹೇಳಲಾಗಿದೆ

ಸಿ. ಪಿ. ಸಿ. ವೃತ್ತಿ ಶಿಕ್ಷಣ ಶಾಲೆ ವಿದ್ಯಾರ್ಥಿ ಸಂಘ

ನಗರದ ಸಿ. ಪಿ. ಸಿ. ವೃತ್ತಿ ಶಿಕ್ಷಣ ಶಾಲೆಯ ವಿದ್ಯಾರ್ಥಿ ಸಂಘದ ಚುನಾವಣೆ ಮೊನ್ನೆ ನಡೆದು, ಶ್ರೀ ಕೆ. ಗುಜ್ಜಯ್ಯನವರು ಉಪಾಧ್ಯಕ್ಷರಾಗಿಯೂ, ಶ್ರೀ ಪಿ. ವಿಶಲಾನಂದರವರು ಕಾರ್ಯದರ್ಶಿಯಾಗಿಯೂ, ಶ್ರೀ ಕೆ ಬೋರಯ್ಯನವರು ಸ್ಟೋರ್ ಕೀಪರ್ ಆಗಿಯೂ ಆರಿಸಲ್ಪಟ್ಟಿದ್ದಾರೆ ನಾಲ್ಕು ಮಂದಿ ಸದಸ್ಯರನ್ನೂ ಆರಿಸಲಾಗಿದೆ

ಪಾರ್ಲಿಮೆಂಟ್ ಮುಂದೆ ೬೦೦ ಮಹಾರಾಷ್ಟ್ರರ ಸತ್ಯಾಗ್ರಹ

ಪ್ರಾಂತ ಪುನರ್ವಿಂಗಡಣಾ ಮಸೂದೆ ಯು ಪಾರ್ಲಿಮೆಂಟಿನಲ್ಲಿ ಚರ್ಚೆಯಾಗುತ್ತಿರುವ ಸಮಯದಲ್ಲಿ, ಬೊಂಬಾಯಿ ನಗರವನ್ನು ಮಹಾರಾಷ್ಟ್ರಕ್ಕೆ ಸೇರಿಸಬೇಕೆಂದು ಒತ್ತಾಯಪಡಿಸಲು ಪಾರ್ಲಿಮೆಂಟ್ ಭವನದ ಮುಂದೆ ಸತ್ಯಾಗ್ರಹ ನಡೆಸುತ್ತಿದ್ದವರ ಪೈಕಿ ೬೦೦ ಜನ ಸತ್ಯಾಗ್ರಹಿಗಳು ನೆನ್ನೆ ಬೊಂಬಾಯಿ ನಿಂದ ದೆಹಲಿಗೆ ಪ್ರಯಾಣ ಮಾಡಿ ಸಂಯುಕ್ತ ಮಹಾರಾಷ್ಟ್ರವಾದಿ ಕಾಂಗ್ರೆಸ್ಸಿನವರ ಸಮ್ಮೇಳನದ ಅಧ್ಯಕ್ಷ ... ಮತ್ತು ... ನಾಯಕತ್ವದಲ್ಲಿ ಪಾರ್ಲಿಮೆಂಟ್ ಮುಂದೆ ಪ್ರದರ್ಶನ ನಡೆಸುತ್ತಿದ್ದಾರೆಂದು ವರದಿಯಾಗಿದೆ

ಹಂಗೇರಿಯ ಮಾಜಿ ರಕ್ಷಣಾ ಮಂತ್ರಿಯ ಮೇಲೆ ಶಿಸ್ತಿನ ಕ್ರಮ

ಅನೇಕ ಹಳೆಯ ಕಮ್ಯೂನಿಷ್ಟರನ್ನು ವಿನಾಕಾರಣ ಚಿತ್ರಹಿಂಸೆಗೊಳಪಡಿಸಿದರೆಂದೂ, ದೇಶದಲ್ಲೆಲ್ಲಾ ಭಯಪೂರಿತ ಆಡಳಿತ ನಡೆಸಿದರೆಂದೂ ಆಪಾದಿಸಿ, ಹಂಗೇರಿಯ ಮಾಜಿ ರಕ್ಷಣಾ ಸಚಿವ ಜನರಲ್ ಫೆರೆನ್ಸ್‌ರವರನ್ನು ಅಲ್ಲಿನ ಕಮ್ಯೂನಿಸ್ಟ್ ಪಕ್ಷವು ಪಕ್ಷದಿಂದ ಹೊರದೂಡಿದೆ

ಪರ್ಷಿಯದಲ್ಲಿ ಪ್ರವಾಹದಿಂದ ೩೦೦ ಜನರ ಮರಣ

ಪರ್ಷಿಯದ ಮಧ್ಯ ಮತ್ತು ಉತ್ತರ ಭಾಗಗಳಲ್ಲಿ ವಿಪರೀತ ಪ್ರವಾಹಗಳುಂಟಾಗಿ ೩೦೦ ಜನರು ಮೃತಪಟ್ಟು, ಸಾವಿರಾರು ಮಂದಿ ಮನೆಮಠಗಳನ್ನು ಕಳೆದುಕೊಂಡು ನಿರ್ಗತಿಕರಾಗಿರುವರೆಂದು ವರದಿಯಾಗಿದೆ

ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸ

ವಿಶ್ವವಿದ್ಯಾನಿಲಯ ಪ್ರಚಾರೋಪನ್ಯಾಸಗಳ ಅಂಗವಾಗಿ ಇದೇ ೩೦, ೩೧ ಮತ್ತು ೩೦ನೇ ತಾರೀಖುಗಳಲ್ಲಿ ಪ್ರತಿ ದಿನ ಸಂಜೆ ೫|| ಘಂಟೆಗೆ ಮಹಾರಾಜಾ ಕಾಲೇಜಿನ ಜೂನಿಯರ್ ಬಿ ಎ ಮಂದಿರದಲ್ಲಿ ಡಾ|| ಆರ್ ಎಸ್ ಮುಗಳಿಯವರು "ಕನ್ನಡ ಸಾಹಿತ್ಯದಲ್ಲಿ ಸರಸ್ವತಿಯ ಕಲ್ಪನೆ" ಎಂಬ ವಿಷಯವಾಗಿ ಭಾಷಣ ಮಾಡುವರು. ಪ್ರೊ|| ತಿ ಎಸ್ ನರಸಿಂಹಾಚಾರ್ಯರು ಅಧ್ಯಕ್ಷತೆ ವಹಿಸುವರು

ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಪ್ರಾಥಮಿಕ ಶಾಲಾ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ನಾಳೆ ಸಂಜೆ ೬ ಘಂಟೆಗೆ ಬಿ ಬಸುಮಯ್ಯನವರ ಪತ್ರಿ ಶಾಲಾ ಸಭಾಂಗಣದಲ್ಲಿ ಸಂಸ್ಥಾನದ ವಿದ್ಯಾ ಇಲಾಖಾಧಿಕಾರಿ ಶ್ರೀ ಎಸ್ ಎಸ್ ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು

ಡೆಹರಾಡೂನಿನಲ್ಲಿ ಒಂದು ಸಂಸಾರದ ನಾಲ್ವರ ಕೊಲೆ

ಡೆಹರಾಡೂನಿನಲ್ಲಿ ೩೫ ವರ್ಷದ ಒಬ್ಬ ಮಹಿಳೆಯನ್ನೂ ಮತ್ತು ಆಕೆಯ ಇಬ್ಬರು ಹೆಣ್ಣುಮಕ್ಕಳು ಮತ್ತು ಒಬ್ಬ ಮಗನನ್ನೂ ನೆನ್ನೆ ಯಾರೋ ಇರಿದು ಕೊಲೆ ಮಾಡಿರುವರು.

ಮುಮ್ಮಡಿ ಕೃಷ್ಣರಾಜಒಡೆಯರರ ಜಯಂತ್ಯುತ್ಸವ

ಮೈಸೂರು ೨೫

ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ೧೬೨ನೇ ಜಯಂತ್ಯುತ್ಸವವು ನೆನ್ನೆ ಸಂಜೆ ಪುರಭವನದಲ್ಲಿ ಬಹಳ ವೈಭವದಿಂದ ಜರುಗಿತು. ವಿದ್ಯಾಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು

ಪ್ರಾರ್ಥನೆಯಾದನಂತರ ಮೇಲ್ಕೋಟೆಯ ಅಳ್ವಾರ್ ತಿರುಮಲೆ ಅಯ್ಯಂಗಾರ್ಯರು ಸಂಸ್ಕೃತದಲ್ಲಿ ಸ್ವಾಗತ ಪದ್ಯಾವಳಿಯನ್ನು ಹಾಡಿದರು. ರಾಷ್ಟ್ರೀಯ ಕನ್ಯಾ ಮಹಾ ವಿದ್ಯಾಲಯದ ವಿದ್ಯಾರ್ಥಿನಿಯರಿಂದ ವನಮಾಲಾ, ರುಕ್ಮಿಣಿ, ಇಂದಿರಮ್ಮ, ಸಂಪತ್ತು, ಸರಸ್ವತಿ, ಶ್ರೀದೇವಿ ಮತ್ತು ವತ್ಸಲರವರಿಂದ ಸಂಗೀತವಾದನ ... ಸಂಗೀತಗಳನ್ನು ಏರ್ಪಡಿಸಿತ್ತು. ಡಾ|| ಎಂ ವಿಶ್ವೇಶ್ವರಯ್ಯ, ಶ್ರೀಗಳಾದ ಕೆ ಸಿ ರೆಡ್ಡಿ, ಅರ್ಕಪ್ಪ ಚೆಟ್ಟಿಯಾರ್, ಮೆತ್ ಸಿದ್ದವೀರಪ್ಪ, ... ಮಂಜಪ್ಪ ಮುಂತಾದವರು ಶುಭ ಸಂದೇಶಗಳನ್ನು ಕಳುಹಿಸಿದ್ದರು

ಉತ್ಸವ ಸಮಿತಿಯ ಸಂಚಾಲಕರಾದ ಶ್ರೀ ಹೆಚ್ ಆರ್ ಜೋಯಿಸ್ರವರು ಸ್ವಾಗತ ಭಾಷಣ ಮಾಡಿ ದಿವಂಗತರು ಗಾಂಧಿಜಿಯವರಿಗೂ ಮುನ್ನ ಬ್ರಿಟಿಷರೊಡನೆ ನಿರ್ಭಯರಾಗಿ ಹೋರಾಡಿ ಹಿಮ್ಮೆಟ್ಟಿಸಿದವರೆಂದೂ, ಅವರ ಸಾಹಸದಿಂದಲೇ ಮೈಸೂರಿಗೆ ಒಂದು ವ್ಯಕ್ತಿತ್ವವುಂಟಾಯಿತೆಂದೂ ಹೇಳಿದರು.

ಅನಂತರ ಹೈದರಾಬಾದಿನ ಮಂತ್ರಿ ಡಾ|| ಜಿ. ಎಸ್. ಮೇಲ್ಕೋಟೆಯವರು ಆರಂಭ ಭಾಷಣ ಮಾಡಿ ಜನನಾಯಕರಾಗಿದ್ದುದರಿಂದ ... ಕೊಡಿಸಿದ ಯದುವಂಶದ ಸಂತತಿಯ ಆಳ್ವಿಕೆಯಿಂದ ಮೈಸೂರು ಉನ್ನತ ಸ್ಥಾನವನ್ನು ಗಳಿಸಲು ಸಾಧ್ಯವಾಯಿತೆಂದು ಹೇಳಿ ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರು ಅವರ ರಾಜ್ಯವನ್ನೇ ಕಿತ್ತುಕೊಳ್ಳಬೇಕೆಂದಿದ್ದ ಬ್ರಿಟಿಷರೊಡನೆ ಹೇಗೆ ಹೋರಾಡಿದರೆಂಬುದನ್ನೂ ಮತ್ತು ಆ ಕಷ್ಟಗಳ ಮಧ್ಯೆಯೂ ಜನೋಪಕಾರ ಕಾರ್ಯಗಳನ್ನು ನಡೆಸಿದುದನ್ನೂ ಮುಕ್ತಕಂಠದಿಂದ ಹೊಗಳಿದರು

ಬಾಲಕಿಯರಿಂದ ಸಂಗೀತವಾದನಂತರ ಅಧ್ಯಕ್ಷರು ಭಾಷಣ ಮಾಡಿ ಶ್ರೀ ಕೃಷ್ಣದೇವರಾಜ ಒಡೆಯರು ರಾಜಕೀಯದಲ್ಲೂ ಧಾರ್ಮಿಕ ತತ್ವಗಳನ್ನಳವಡಿಸಿದ ಅಂಶವನ್ನು ಪ್ರಸ್ತಾಪಿಸಿ ಅದನ್ನು ಇಂದಿನ ರಾಜಕಾರಣಿಗಳು ಅನುಸರಿಸಬೇಕೆಂದು ಸೂಚಿಸಿದರು

ನಂಜನಗೂಡಿನ ಶ್ರೀ ಶ್ರೀಕಂಠಯ್ಯನವರು ಮುಮ್ಮಡಿ ಕೃಷ್ಣರಾಜ ಒಡೆಯರ್‌ರವರು ವಿರಚಿಸಿದ್ದ ಕವನಗಳನ್ನು ಓದಿದರು. ರಾಷ್ಟ್ರೀಯ ಕನ್ಯಾ ಮಹಾ ವಿದ್ಯಾಲಯದ ವಿದ್ಯಾರ್ಥಿನಿಯರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಹನುಮಂತಯ್ಯನವರು ಮತ್ತೆ ದೆಹಲಿಗೆ ಹೋಗುವುದಿಲ್ಲ

ಬೆಂಗಳೂರು ೨೫

ಅವಿಶ್ವಾಸ ನಿರ್ಣಯದ ವಿಷಯವನ್ನು ಹೈಕಮಾಂಡಿನವರ ನಿರ್ಧಾರಕ್ಕೆ ಬಿಟ್ಟಿರುವುದರಿಂದ ತಾವು ಪುನಃ ದೆಹಲಿಗೆ ಹೋಗುವುದಿಲ್ಲವೆಂದೂ, ಅವರಿಂದ ಕರೆ ಬಂದರೆ ಮಾತ್ರ ಹೋಗಬೇಕಾದೀತೆಂದೂ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ನೆನ್ನೆ ಸಂಜೆ ಮುಖ್ಯ ಮಂತ್ರಿಗಳು ವಿಧಾನಸೌಧ ಕಟ್ಟಡದ ಪರಿಶೀಲನೆಗೆ ಹೋಗಿದ್ದಾಗ ಪತ್ರಿಕೋದ್ಯೋಗಿಗಳು ಪ್ರಶ್ನಿಸಲು ಅವರು ಮೇಲ್ಕಂಡಂತೆ ತಿಳಿಸಿದರು

ಉದ್ಯೋಗ ವಿನಿಮಯ ಸಂಸ್ಥೆಯ ೮೦೦೦ ನೌಕರರಿಗೆ ನಿರುದ್ಯೋಗ

ಸಂಸ್ಥಾನಗಳಲ್ಲಿರುವ ಉದ್ಯೋಗ ವಿನಿಮಯ ಸಂಸ್ಥೆಗಳನ್ನು ಕೇಂದ್ರ ಸರ್ಕಾರದವರು ತಂತಮ್ಮ ಸಂಸ್ಥಾನ ಸರ್ಕಾರಗಳಿಗೆ ವಹಿಸಲು ನಿರ್ಧರಿಸಿರುವುದರಿಂದ ದಕ್ಷಿಣ ಭಾರತದ ಸಂಸ್ಥೆಗಳಲ್ಲಿರುವ ಸುಮಾರು ಸಾವಿರ ಮಂದಿ ನೌಕರರು ನಿರುದ್ಯೋಗಿಗಳಾಗುವರೆಂದು ಹೇಳಲಾಗಿದೆ. ಕೇಂದ್ರ ಸರ್ಕಾರದವರು ಸರ್ವ ನೌಕರರಿಗೆ ನೋಟೀಸು ಕೊಟ್ಟು, ಅವರುಗಳು ಸಂಸ್ಥಾನ ಸರ್ಕಾರಗಳ ನಿಯಮಗಳಿಗೆ ಒಳಪಟ್ಟು, ಅವುಗಳಲ್ಲಿನ ಉದ್ಯೋಗ ವಿನಿಮಯ ಸಂಸ್ಥೆಗಳಲ್ಲಿ ಕೆಲಸ ಮಾಡಲು ಒಪ್ಪುವರೇ ಎಂಬ ಬಗ್ಗೆ ಅಭಿಪ್ರಾಯವನ್ನು ಕೇಳಿರುವುದಾಗಿಯೂ ವರದಿಯಾಗಿದೆ

ಎಕ್ಸಿಕ್ಯುಟಿವ್ ಇಂಜನಿಯರುಗಳ ವರ್ಗಾವರ್ಗಿ

(ಸ್ವಂ ಪ್ರ ತಂತಿ) ಬೆಂಗಳೂರು ೨೫

ಈ ಕೆಳಗೆ ಕಂಡಂತೆ ಎಕ್ಸಿಕ್ಯುಟಿವ್ ಇಂಜನಿಯರುಗಳ ವರ್ಗಾವಣೆ ಮಾಡಿ ಸರ್ಕಾರದವರು ಆಜ್ಞೆ ಹೊರಡಿಸಿರುವರು.—

ಶ್ರೀ ಜಿ ಧ್ಯಜನ್‌ರವರು ಹಾಸನಕ್ಕೆ, ಶ್ರೀ ಶ್ರೀ ನರ್ಸನ್ ತುಮಕೂರಿಗೆ, ಶ್ರೀ ಲಕ್ಷ್ಮೀರಾಜಯ್ಯನವರು ಶಿವಮೊಗ್ಗಕ್ಕೆ, ಶ್ರೀ ಕೃಷ್ಣಯ್ಯಂಗಾರ್ಯರು ಮಂಡ್ಯಕ್ಕೆ, ಶ್ರೀ ಶ್ರೀನಿವಾಸರವರು ಭದ್ರಾ ರಿಸರ್ವಾಯರ್ ಲೆಫ್ಟ್ ಬ್ಯಾಂಕ್ ಡಿವಿಜನ್ನಿಗೆ ಮತ್ತು ಶಿವರುದ್ರಯ್ಯನವರು ಒಳ್ಳಾರಿ ಸ್ಪೆಷಲ್ ಇರಿಗೇಷನ್ ಡಿವಿಜನ್ನಿಗೆ

ಅಸಿಸ್ಟೆಂಟ್ ಸರ್ಜನ್ನರಿಗೆ ಬಡ್ತಿ

ಅಸಿಸ್ಟೆಂಟ್ ಸರ್ಜನ್ನರಾದ ಶ್ರೀಗಳು ವೈರಾಮ್, ಕೃಷ್ಣಸ್ವಾಮಿ ಮತ್ತು ಪುಟ್ಟಣ್ಣನವರಿಗೆ ಸರ್ಜನ್ನಾಗಿ ಬಡ್ತಿ ಕೊಟ್ಟು ಕ್ರಮವಾಗಿ ಬೌರಿಂಗ್ ವಿಕ್ಟೋರಿಯಾ ಮತ್ತು ಕೃಷ್ಣರಾಜೇಂದ್ರ ಆಸ್ಪತ್ರೆಗಳಿಗೆ ವರ್ಗಾಯಿಸಲಾಗಿದೆ. ಅಸಿಸ್ಟೆಂಟ್ ಸರ್ಜನ್ನರಾದ ಡಾ|| ಜಾರ್ಜ್‌ರವರನ್ನು ಬೆಂಗಳೂರು ಜಿಲ್ಲಾ ಆರೋಗ್ಯಾಧಿಕಾರಿಗಳಾಗಿ ನೇಮಿಸಲಾಗಿದೆ

ಸಾಯಿಬಾಬಾರವರ ಸಮಾಧಿ ಉತ್ಸವ

ಮೈಸೂರು ಜು

[illegible]

ಮೈಸೂರು ಪೋಟ ದಲ್ಲಿ ಗಣೇಶ ಉತ್ಸವ

[illegible]

ಮಹಾಭಾರತ ಕಾಲಕ್ಷೇಪ

[illegible]

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಶ್ರೀ ಜಗದಂಬಾ ವಿಮುವಿಹಾರ

ವಿವೇಕ ನಗರ ಮೈಸೂರು

[illegible]

ಬಿ ಕೃಷ್ಣಮೂರ್ತಿ,
ವ್ಯವಸ್ಥಾಪಕ

Edited Printed and Published by A. R. Nagarajan at Sadhvi Press D. Subbiah Road, Mysore

ರಾಜಧಾನಿಯಲ್ಲಿ ತಿಲಕರ ಶತಮಾನೋತ್ಸವ

[illegible]

ಉಪಾಧ್ಯಾಯರ ಸಭೆ

[illegible]

ಸಟ್ಟಾ ಜೂಜಾಟಕ್ಕಾಗಿ ದಂಡ

[illegible]

ಗೃಹ ಕಲಹದಲ್ಲಿ ಹೆಂಡತಿ ಮತ್ತು ಮಗಳಿಗೆ ಕೊಡಲಿಯ ಪೆಟ್ಟು

[illegible]

Pulv
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO,
Chemists & Druggists
71/1 A S Street,
BANGALORE 2

ಸಿಂಹಳದಲ್ಲಿ ಭಿಕ್ಷುಗಳಿಂದ ಸಹಕಾರ ಸಂಘಗಳ ಸ್ಥಾಪನೆ

[illegible]

ಮತಾಂತರವನ್ನು ತಪ್ಪಿಸಲು ರಾಜ್ಯಾಂಗ ತಿದ್ದುಪಡಿ ಸೂಚನೆ

[illegible]

ಲಂಡನ್ನಿಗೆ ಕಾರಿನಲ್ಲಿ ಹೊರಡ ರಾಜಕುಮಾರರ ಪ್ರಯಾಣ

[illegible]

ಬಾಲಕಿಯರ ಶಾಲೆಯಲ್ಲಿ ಉಪಾಹಾರದ ವ್ಯವಸ್ಥೆ

[illegible] ನಾಗರತ್ನಮ್ಮನವರು ವಂದನಾರ್ಪಣೆ ಮಾಡಿದರು

ವಿದ್ಯಾರ್ಥಿಗಳ ಯೋಗಕ್ಷೇಮ ಸಂಸ್ಥೆ

[illegible]

ಉತ್ತರ ಪ್ರದೇಶ ಸರ್ಕಾರದ ಮೇಲೆ ಅವಿಶ್ವಾಸ ನಿರ್ಣಯದ ತಿರಸ್ಕಾರ

[illegible]

ಮೈಸೂರು ಪೇಟೆ ಧಾರಣೆ

	ರೂ ಮುಂದ	ರೂ ವರೆಗೆ
[illegible]	[illegible]	[illegible]

ಹಾಸಿಗೆ-ದಿಂಬು
[illegible]
ಬಾಬುಸಾಬ್ ಕಂಪನಿ,
[illegible] ಎದುರು, ಮೈಸೂರು

THE KAPILA TEXTILE MILLS Ltd., NANJANGUD
(Mysore State)
W A N T E D
Young and energetic persons studied up to S S L C, to work as WEAVERS, training being given to persons desirous of taking up weaving as profession. Apply in person with application to the Manager at the Mills

12-7-1956ನೇ ಗುರುವಾರದಿಂದ ಆರಂಭ
ಹೊಸ ಮ್ಯಾನೇಜ್ ಮೆಂಟ್
ವೆಲ್ ಕಮ್ ಕಾಫಿ ಕ್ಲಬ್
(ಪ್ರಭಾ ಟಾಕೀಸ್ ಎದುರು) ಮೈಸೂರು
ಮೈಸೂರಿನಲ್ಲಿ ಪ್ರಖ್ಯಾತಿ ಪಡೆದಿರುವ ಹಳೇ ಅಗ್ರಹಾರದ ಶ್ರೀ ಸುಬ್ಬರಾಯರ ನೇತೃತ್ವದಲ್ಲಿ ಮಾಡಲ್ಪಟ್ಟ [illegible] ಶುದ್ಧ ದಿಂದಲೇ ತಯಾರಾದ [illegible],
ಸೆಟ್ ದೋಸೆ, 'ಎ' ಒನ್ ಕಾಫಿ ಮತ್ತು ಇತರ ಸಿಹಿ ಮತ್ತು ಖಾರ ತಿಂಡಿ ಗಳಿಗೆ ವೆಲ್ ಕಮ್ ಕಾಫಿ ಕ್ಲಬ್ಬಿಗೆ ದಯಮಾಡಿ ಭೇಟಿ ಕೊಡಿ
ಡಿ ರಾಂಪ್ರಸಾದ್ ಶರ್ಮ, ಪ್ರೊಪ್ರೈಟರ್

ರಿಜಿಸ್ಟರ್ ನಂ. 792

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೦೪] SADHVI : THURSDAY 26—7—1956 ಮೈಸೂರು : ಗುರುವಾರ ೨೬—೭—೧೯೫೬ [ಸಂಚಿಕೆ : [illegible]

ಬೇಲೂರರ ಕೊಲೆ ಮೊಕದ್ದಮೆಯಲ್ಲಿ ಆರ್ಡರ್ ೩೦ನೇ ತಾ||

ಒಳವೃತ್ತದಿಂದ ಕೇಂದ್ರ ಮಂತ್ರಿ ಮಂಡಲದ ಅಧಿಕಾರಕ್ಕೆ ಲೋಪ

ಸಚಿವ ಸಂಪುಟದಿಂದ ಬೊಂಬಾಯಿ ಭವಿಷ್ಯದ ನಿರ್ಧಾರವಾಗಿಲ್ಲ

ಲೋಕ ಸಭೆಯಲ್ಲಿ ದೇಶಮುಖ್‌ರವರಿಂದ ರಾಜೀನಾಮೆ ಕುರಿತ ಸಮರ್ಥನೆ

ನೆನ್ನೆ ಲೋಕಸಭೆಯಲ್ಲಿ ಮಾಜಿ ಕೇಂದ್ರ ಹಣಕಾಸಿನ ಮಂತ್ರಿ ಸಿ. ಡಿ. ದೇಶಮುಖ್‌ರವರು ತಮ್ಮ ರಾಜೀನಾಮೆಗೆ ಕಾರಣವನ್ನು ಸೂಚಿಸಿ ಹೇಳಿಕೆಯೊಂದನ್ನಿತ್ತು, ಬೊಂಬಾಯಿ ನಗರವನ್ನು ಮಹಾರಾಷ್ಟ್ರದಿಂದ ಪ್ರತ್ಯೇಕಿಸಿದುದಕ್ಕಾಗಿಯೂ, ಕಳೆದ ಡಿಸೆಂಬರ್ ಮತ್ತು ಜನವರಿಯಲ್ಲಿ ಆ ನಗರದಲ್ಲಿ ಪೋಲೀಸರು ಗುಂಡು ಹಾರಿಸಿದ ಪ್ರಕರಣದ ಬಗ್ಗೆ ನ್ಯಾಯಾಧೀಶರ ತನಿಖೆ ನಡೆಸದಿದ್ದುದಕ್ಕಾಗಿಯೂ ಪ್ರತಿಭಟಿಸಲು ತಾವು ಹಾಗೆ ಮಾಡಿದುದಾಗಿ ತಿಳಿಸಿದರು

ಸಂಸ್ಥಾನ ಪುನರ್ವಿಂಗಡಣೆ ಬಗ್ಗೆ ನಿರ್ಧಾರಗಳು, ಅದರಲ್ಲೂ ಮುಖ್ಯವಾಗಿ ಬೊಂಬಾಯಿ ನಗರದ ಭವಿಷ್ಯದ ವಿಚಾರವು ಮಂತ್ರಿಮಂಡಲದ ನಿರ್ಧಾರಗಳಲ್ಲವೆಂದು ಅವರು ಹೇಳಿದರು. ಅವರು ವಿರೋಧ ಪಕ್ಷಗಳ ಸ್ಥಾನದಲ್ಲಿ ನಿಂತು ಮಾತನಾಡಿದರು ಅವರ ಭಾಷಣಕ್ಕೆ ವಿರೋಧ ಪಕ್ಷದವರು ಪದೇ ಪದೇ ಕರತಾಡನ ಮಾಡುತ್ತಿದ್ದರು

ಪ್ರಧಾನಿ ನೆಹರೂರವರು ಮತ್ತು ಮಂತ್ರಿಮಂಡಲದ ಒಳ ವೃತ್ತವು ಮಂತ್ರಿಮಂಡಲದ ಅಧಿಕಾರವನ್ನು ಕಸಿದುಕೊಂಡಿರುವುದರಿಂದಲೂ ಸರ್ಕಾರದ ನಿರ್ಧಾರಗಳು ರಾಜ್ಯಾಂಗ ವ್ಯತಿರಿಕ್ತವಾದುವೆಂದೂ, ಮಂತ್ರಿಮಂಡಲದಿಂದ ಅಧಿಕೃತವಾಗದಿರುವವರಿಂದ ನಿರ್ಧಾರಗಳಾಗಿರುವುದಾಗಿಯೂ ದೇಶಮುಖ್‌ರವರು ಸೂಚಿಸಿದರು ಬೊಂಬಾಯಿ ನಗರದ ಭವಿಷ್ಯದ ನಿರ್ಧಾರಕ್ಕೆ ತಾವು ಭಾಗಿಯಾಗಲಿಚ್ಛಿಸಲಿಲ್ಲವೆಂದು ಅವರು ತಿಳಿಸಿದರು

ಬೊಂಬಾಯಿ ನಗರವು ಕೇಂದ್ರದ ಆಡಳಿತದಲ್ಲಿ ೫ ವರ್ಷಕಾಲ ಇರುವುದೆಂದು ನೆಹರೂರವರು ಕಳೆದ ತಿಂಗಳಲ್ಲಿ ಹೇಳಿದ ವಿಷಯವು ಅಸಾಧಾರಣ ವಿಚಾರವೆಂದು ಅವರು ಟೀಕಿಸಿದರು ಗಡಿ ನಿರ್ಧಾರದ ವಿಷಯವಾಗಿ ಮಂತ್ರಿಮಂಡಲದ ಉಪ ಸಮಿತಿಯೊಂದು ಮಾತ್ರವಿದೆಯೆಂದೂ, ಅದು ಪ್ರಾಮುಖ್ಯ ವಿಷಯಗಳನ್ನು ನಿರ್ಧರಿಸಬೇಕೆಂಬುದು ಗೊತ್ತಾಗಿರಲಿಲ್ಲವೆಂದೂ ದೇಶಮುಖ್‌ರವರು ಹೇಳಿದರು

ನಿರ್ಧಾರಗಳನ್ನು ಕೈಗೊಂಡು ಅವನ್ನು ಘೋಷಿಸುವ ಕಾನೂನುರಹಿತವಾದ ಮತ್ತು ನಿರ್ಲಕ್ಷ್ಯ ಮನೋಭಾವಕ್ಕೆ ಇದು ಗುರುತೆಂದು ಅವರು ಆಕ್ಷೇಪಿಸಿದರು

ಬೊಂಬಾಯಿ ನಗರದಲ್ಲಿ ಗುಂಡು ಹಾರಿಸಿದ ವಿಷಯವನ್ನು ಅವರು ಪ್ರಸ್ತಾಪಿಸಿ, ಬೊಂಬಾಯಿ ಮುಖ್ಯ ಮಂತ್ರಿಗಳು ಪೋಲೀಸರಿಗೆ ಜನನ್ನು ಕಂಡಲ್ಲಿ ಗುಂಡಿಟ್ಟು ಕೊಲ್ಲಲು ಸೂಚಿಸಿದರೆಂಬ ಬಗ್ಗೆ ಸಾಕ್ಷ್ಯಗಳಿವೆಯೆಂದು ಹೇಳಿದರು ಪೋಲೀಸರು ತಮ್ಮ ಅಧಿಕಾರವನ್ನು ಮೀರಿ ವರ್ತಿಸಿರುವುದಾಗಿಯೂ ಹೇಳಿದರು ಪಂಜಾಬಿನ

ದೇಶಮುಖ್‌ರವರ ಆಪಾದನೆಗಳು ಪೂರ್ಣವಾಗಿ ಸರಿಯಲ್ಲ

ಟೀಕೆಗಳಿಗೆ ನೆಹರೂರವರ ಉತ್ತರ

ಸಿ. ಡಿ. ದೇಶಮುಖ್‌ರವರು ತಮ್ಮ ರಾಜೀನಾಮೆ ಸಂಬಂಧವಾಗಿ ಇತ್ತ ಹೇಳಿಕೆಗೆ ಪ್ರಧಾನಿ ನೆಹರೂರವರು ಲೋಕಸಭೆಯಲ್ಲಿ ಉತ್ತರವಿತ್ತು ಅವರ ಹೇಳಿಕೆಯು ಎಲ್ಲಾ ಉತ್ತರಗಳಿಗೂ ಅತೀತವಾದುದೆಂದೂ ಅಪೂರ್ಣವೆಂದೂ ತಪ್ಪು ತಿಳುವಳಿಕೆಗೆ ಅವಕಾಶವೀಯುವುದೆಂದೂ ಹೇಳಿದರು

ಮಂತ್ರಿಮಂಡಲವು ಹಲವು ಸಂದರ್ಭಗಳು ಸಾಮಾನ್ಯವಾಗಿ ಲೋಕಸಭೆಯಂತೆ ಚರ್ಚಿಸಲ್ಪಡುವುದಿಲ್ಲವೆಂದೂ ಮಂತ್ರಿಮಂಡಲವು ಅಗತ್ಯ ಬಿದ್ದಾಗ ಚರ್ಚೆ ನಡೆಸಿ ವಿವರಗಳನ್ನು ಇಟ್ಟುಕೊಳ್ಳುವ ದೇಶಮುಖ್‌ರವರ ಆಲೋಚನೆಗಳನ್ನು ಪರಿಶೀಲಿಸಲು ಸಾಧ್ಯವಿಲ್ಲವೆಂದೂ ಅವರು ಹಾಗೆ ಮಾಡುತ್ತಿದ್ದುದು ಸರಿಯಲ್ಲವೆಂದೂ ನೆಹರೂರವರು ತಿಳಿಸಿದರು

ಬೊಂಬಾಯಿ ನಗರದ ಭವಿಷ್ಯವನ್ನು ಅನೇಕ ತಿಂಗಳಿಂದ ಪರಿಶೀಲಿಸಲಾಗುತ್ತಿರುವುದೆಂದೂ ಈ ಬಗ್ಗೆ ಸರ್ಕಾರದಲ್ಲೂ ಮತ್ತು ಪಾರ್ಲಿಮೆಂಟಿನಲ್ಲೂ ಅತ್ಯಂತ ಹೆಚ್ಚಿನ ಸಮ್ಮತಿಯಿರಬೇಕೆಂಬುದೇ ತಮ್ಮ ಅಭಿಲಾಷೆಯೆಂದೂ ತಿಳಿಸಿದರು ಮಂತ್ರಿಮಂಡಲದಲ್ಲಿ ಅನೇಕ ಬಾರಿ ಈ ವಿಚಾರವನ್ನು ಪರಿಶೀಲಿಸಲಾಗಿದೆಯೆಂದೂ, ಮಂತ್ರಿಮಂಡಲದ ಉಪ ಸಮಿತಿಯನ್ನು ನೇಮಿಸಿದನಂತರ ಮಂತ್ರಿಮಂಡಲಕ್ಕೆ ಆಗಾಗ್ಗೆ ನಡೆದ ಕೆಲಸವನ್ನು ತಿಳಿಸಲಾಗುತ್ತಿತ್ತೆಂದೂ ನೆಹರೂರವರು ಹೇಳಿದರು

ಬೊಂಬಾಯಿ ನಗರದ ಬಗ್ಗೆ ಅಲ್ಲಿ ತಾವು ಮಾಡಿದ ಘೋಷಣೆಯನ್ನು ಅವರು ಪುನಃ ಪರಿಶೀಲಿಸಿ, ೫ ವರ್ಷ ಕಾಲ ಮಾತ್ರ ಆ ನಗರದಲ್ಲಿ ಕೇಂದ್ರದ ಆಡಳಿತವಿರಬೇಕೆಂಬುದಾಗಿ ತಾವು ಹೇಳಿದುದಾಗಿಯೂ, ಕಾಲ ನಿಗದಿ ವಿಚಾರವು ಮಾತ್ರ ಹೊಸದೆಂದೂ ಸೂಚಿಸಿದರು

ಉಪನ್ಯಾಸ

ರಾಜಧಾನಿಯ ಶಾರದಾವಿಲಾಸ ಟ್ರೈನಿಂಗ್ ಕಾಲೇಜಿನಲ್ಲಿ ನಾಳೆ ಬೆಳಗ್ಗೆ ೧೧ ಘಂಟೆಗೆ ಡಾ|| ಕಾರಲ್ ಬ್ರೈಡೆನ್‌ಬಾಗ್‌ರವರು "ಪ್ರಖ್ಯಾತ ಆಧ್ಯಾತ್ಮ ಬೋಧನೆಗಳು—ಅಮೆರಿಕದ ಚರಿತ್ರೆಯಲ್ಲಿ ಹಲವು ಮುಖ್ಯ ವಿಚಾರಗಳು" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಕಾಲೇಜು ಪ್ರಿನ್ಸಿಪಾಲರಾದ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷತೆ ವಹಿಸುವರು

ನಾಳೆ ಸಂಜೆ ೫ ಗಂಟೆಗೆ ಡಾ|| ಬ್ರೈಡೆನ್‌ಬಾಗ್‌ರವರು ಇಲ್ಲಿನ ಉಪಾಧ್ಯಾಯರುಗಳ ಕಾಲೇಜು ಸಂಘದ ಆರಂಭ ಭಾಷಣ ಮಾಡುವರು. ಪ್ರಿನ್ಸಿಪಾಲ್ ಶ್ರೀ ಎ ಸಿ ದೇವೇಗೌಡರು ಅಧ್ಯಕ್ಷತೆ ವಹಿಸುವರು

ಹೋಳಿಬಾರಾಂ ಪುರದ ಘಟನೆ ಬಗ್ಗೆ ಕಾಂಗ್ರೆಸ್ಸು ಕಮಿಟಿ ನಡೆಸಲು ನಿರ್ಧಾರವಾಗಿರುವುದನ್ನು ವೆಂಬಯ ಘಟನೆಗೆ ಹೋಲಿಸಿ, ಇದು ಮಹಾರಾಷ್ಟ್ರದ ವಿರುದ್ಧವಾಗಿ ತೋರಿಸುತ್ತಿರುವ ಹಗೆತನವೆಂದೂ, ತಾವು ಅದಕ್ಕೆ ಒಪ್ಪುವುದಿಲ್ಲವೆಂದೂ ಅವರು ಹೇಳಿದರು

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಕೊರತೆ

ಪರಿಹಾರಕ್ಕೆ ಸರ್ಕಾರದ ಹೊಸ ಕ್ರಮಗಳು

ಬೆಂಗಳೂರು ೨೫

ವಿದ್ಯುಚ್ಛಕ್ತಿ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಕೊರತೆಯನ್ನು ತಪ್ಪಿಸುವ ಸಲುವಾಗಿ ಹಲವಾರು ಯೋಜನೆಗಳನ್ನು ಕೈಗೊಳ್ಳಲಾಗುವುದೆಂದು ತಿಳಿಸಿದರು ಶಿವಸಮುದ್ರ ಮತ್ತು ಶಿಂಷಾ ಕೇಂದ್ರಗಳಲ್ಲಿ ೬,೦೦೦ ಕಿಲೋವಾಟಿನ ಹೆಚ್ಚು ಶಕ್ತಿಯನ್ನು ಉತ್ಪಾದನೆ ಮಾಡಲು ಮಗು ಜಲಾಶಯದಿಂದ ೨೦೦ ಕ್ಯೂಸೆಕ್ಸ್‌ಗಳಷ್ಟು ಹೆಚ್ಚು ನೀರನ್ನು ಒದಗಿಸಲಾಗುವುದೆಂದು ತಿಳಿಸಿದರು

ಜೋಗಿನ ವಿದ್ಯುತ್ ಕೇಂದ್ರದಲ್ಲಿ ಹೊಸ ಉತ್ಪತ್ತಿ ಯಂತ್ರದಿಂದ ಕಾರ್ಯಾರಂಭ ಮಾಡಲು ಸರ್ಕಾರದವರು ಅನುಮತಿ ಕೊಡಲು ಆಲೋಚಿಸಿರುವರೆಂದೂ, ಅದರಿಂದ ೧೮ ಸಾವಿರ ಕಿಲೋವಾಟ್ ಶಕ್ತಿಯು ಹೆಚ್ಚು ಉತ್ಪನ್ನವಾಗುವುದೆಂದೂ ಅವರು ಹೇಳಿದರು ತುಂಗಭದ್ರಾ ಯೋಜನೆಯಿಂದ ಮೈಸೂರಿನ ಭಾಗಕ್ಕೆ ೭,೦೦೦ ಕಿಲೋವಾಟ್ ಶಕ್ತಿಯು ಬರುವ ವರ್ಷದ ಆದಿಭಾಗದಲ್ಲಿ ಸಿಗುವುದೆಂದೂ ತಿಳಿಸಿದರು

ಕಛ್ ಪ್ರದೇಶದಲ್ಲಿ ಮತ್ತೆ ಭೂಕಂಪ

ಕಛ್ ಪ್ರದೇಶದ ಅಂಜಾರ್ ಪಟ್ಟಣದಲ್ಲಿ ನೆನ್ನೆ ಬೆಳಗ್ಗೆ ೧೧ ಘಂಟೆ ಹೊತ್ತಿನಲ್ಲಿ ಅಲ್ಪ ಪ್ರಮಾಣದ ಮತ್ತೊಂದು ಭೂಕಂಪವು ಆಯಿತೆಂದು ವರದಿಯಾಗಿದೆ ಭುಜ್ ಎಂಬಲ್ಲೂ ಅದೇ ಕಾಲದಲ್ಲಿ ಆಯಿತು ರಾಜಕೋಟೆಯಲ್ಲಿ ಬೆಳಗ್ಗೆ [illegible] ಗಂಟೆ ಹೊತ್ತಿನಲ್ಲಿ ಭೂಮಿಯು ಸ್ವಲ್ಪ ಅದುರಿದಂತಾಗಿ ಜನರು ಮನೆಗಳಿಂದ ಹೊರಕ್ಕೆ ಬಂದರು ಜಾಮ್ನಗರದ ಎಲ್ ಕಲ್ಯಾಣ್ ಎಂಬಲ್ಲೂ ೧೧ ಗಂಟೆ ಸಮಯದಲ್ಲಿ ಭೂಮಿ ಅದುರಿತು

ಶನಿವಾರ ಆದ ಭೂಕಂಪದಲ್ಲಿ ಗಾಯಗೊಂಡ ಇನ್ನಿಬ್ಬರು ಮಡಿದು ಮರಣದ ಸಂಖ್ಯೆಯು ೧೧೧ ಕ್ಕೇರಿತು ಅಂಜಾರ್ ಪಟ್ಟಣವನ್ನು ಬಿಟ್ಟು ಹೋಗಿದ್ದ ಜನರು ವಾಪಸು ಬಂದು ತಮ್ಮ ಸಾಮಾನುಗಳನ್ನು ಸಾಗಿಸಲು ಒಂಟೆ, ಕುದುರೆ, ಕತ್ತೆ ಮುಂತಾದುವನ್ನು ತಂದಿದ್ದಾರೆ ಕೆಲವಾರು ದಿನಗಳಿಂದಲೂ ನಿದ್ರೆಯಿಲ್ಲದೆ ಅನೇಕರ ಕಣ್ಣುಗಳು ಬಾತುಕೊಂಡಿವೆ

ಭುಜ್ ಬಳಿ ರತ್ನಾಲ್ ಮತ್ತು ಕುಕ್ಮಾಗಳ ನಡುವೆ ಚಿಕ್ಕ ರೈಲ್ವೆ ಸೇತುವೆಯು ಕುಸಿದು ಅಲ್ಲಿ ಪ್ರಯಾಣವು ನಿಂತಿದೆ ಭೂಕಂಪದಿಂದ ಇದು ಆಯಿತೇ ಎಂಬುದು ವ್ಯಕ್ತವಾಗಿಲ್ಲ

○ ತುಮಕೂರಿನ ಮುಖ್ಯಸ್ಥ ವರ್ತಕರಾದ ಶ್ರೀ ಟಿ ಜ ಗುಬ್ಬಿ ಮುಚ್ಚಪ್ಪನವರಿಗೆ ೧೨,೦೦೦ ರೂ ಬಗ್ಗೆ ಮೋಸ ಮಾಡಿದರೆಂಬ ದೂರಿನ ಮೇಲೆ ಚಿತ್ರದುರ್ಗದ ದೇವಸಿದ್ಧನಹಳ್ಳಿಯ ಶ್ರೀ ಎಸ್ ಕೃಷ್ಣಮೂರ್ತಿರಾವ್ ಎಂಬುವರನ್ನು ಪೋಲೀಸರು ಅನಂತಪುರದಲ್ಲಿ ಬಂಧಿಸಿರುವುದಾಗಿ ವರದಿಯಾಗಿದೆ

ಬೇಲೂರರ ಕೊಲೆ ಮೊಕದ್ದಮೆಯಲ್ಲಿ ೩೦ನೇ ತಾ|| ಆರ್ಡರ್ಸ್

ಸಶನ್ ನ್ಯಾಯಾಧೀಶರ ಕೋರ್ಟಿನಲ್ಲಿ ವಾದವಿವಾದಗಳು

ಸ್ವಂ ಪ್ರ ಪ್ರೋ] ಬೆಂಗಳೂರು ೨೫

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯು ಇಂದು ಪುನಃ ನಡೆದು ಇದೇ ೩೦ನೇ ತಾರೀಖಿಗೆ ಆರ್ಡರ್ಸ್ಸಿಗಾಗಿ ಮುಂದೆ ಹಾಕಲಾಗಿದೆ

ಅಪಾದಿತರ ಹೇಳಿಕೆ ತೆಗೆದುಕೊಳ್ಳುವ ಮುಂಚೆ ಸಾಕ್ಷಿಗಳ ವಿಚಾರಣೆಯನ್ನು ಮಾಡಬೇಕೆಂದು ಹಿಂದಿನ ವಿಚಾರಣೆಗಳಲ್ಲಿ ಅಪಾದಿತರ ಪರ ಲಾಯರು ಎತ್ತಿದ ಆಕ್ಷೇಪಣೆಯನ್ನು ನ್ಯಾಯಾಧೀಶರು ತಳ್ಳಿಹಾಕಿ, ಸಾಕ್ಷಿಗಳ ವಿಚಾರಣೆ ನಡೆಯಬೇಕಾಗಿಲ್ಲವೆಂದು ತಿಳಿಸಿದರು

ಶ್ರೀ ಶಂಕರಶೆಟ್ಟರು ವಾದ ಮಾಡಿ ಈಗ ದೊರೆತಿರುವ ಸಾಕ್ಷ್ಯದಲ್ಲಿ ಒಂದಕ್ಕೊಂದಕ್ಕೆ ತಾಳೆಯಾಗುವುದೆಂದೂ, ಕೃತ್ಯ ನಡೆದ ದಿನ ಮೂವರು ಅಪಾದಿತರೂ ಆ ಸ್ಥಳದಲ್ಲಿದ್ದರೆಂಬುದು ವ್ಯಕ್ತಪಟ್ಟಿದೆಯೆಂದೂ ಹೇಳಿದರು

ಎಂ ಸಿ ಗುರುರಾಯರೂ, ಶ್ರೀ ರಾಮಚಂದ್ರ ರಾಯರೂ ಅಪಾದಿತರ ಪರ ವಾದ ಮಾಡಿ, ಕೋರ್ಟಿನಲ್ಲಿ ಸಾಕ್ಷಿ ವಿಚಾರಣೆಯಾಗಿಲ್ಲವಾದುದರಿಂದ ಅಪಾದಿತರನ್ನು ಡಿಸ್ಚಾರ್ಜ್ ಮಾಡುವಂತೆ ಕೋರಿ ೩ನೇ ಅಪಾದಿತನ ಬಗ್ಗೆ ಸರಿಯಾದ ರುಜುವಾತೇ ಇಲ್ಲವೆಂದು ಹೇಳಿದರು

ಕಾಲೇಜು ವಿದ್ಯಾರ್ಥಿಯ ಆತ್ಮಹತ್ಯೆ

ಮೈಸೂರು ೨೫

ರಾಜಧಾನಿಯ ನೂರಡಿ ರಸ್ತೆಯಲ್ಲಿ ವಾಸವಿದ್ದ ಬಿ. ಎಸ್‌ಸಿ ವಿದ್ಯಾರ್ಥಿ ರಾಮಚಂದ್ರ ಎಂಬ ೨೧ ವರ್ಷ ವಯಸ್ಸಿನವನು ನೆನ್ನೆ ರಾತ್ರಿ ತನ್ನ ಮನೆಯಲ್ಲಿ ಕತ್ತಿಗೆ ನೇಣು ಹಾಕಿಕೊಂಡು ಆತ್ಮಹತ್ಯೆ ಮಾಡಿಕೊಂಡನೆಂದು ತಿಳಿದುಬಂದಿದೆ ಆತನ ತಂದೆ ಶ್ರೀ ಬಿ ಎಸ್ ಕೆ ಮೂರ್ತಿಯವರು ಚೆಂಡ್ರ್‌ಪುರದಲ್ಲಿರುವರು ಮೃತನ ತಮ್ಮನು ಇಚ್ಛಿಸಿದಂತೆ ಮೆಡಿಕಲ್ ಕಾಲೇಜಿನಲ್ಲಿ ವ್ಯಾಸಂಗಕ್ಕೆ ಪ್ರವೇಶಾವಕಾಶ ಸಿಗಲಿಲ್ಲವೆಂಬುದೇ ಆತ್ಮಹತ್ಯೆಗೆ ಕಾರಣವೆಂದು ಹೇಳಲಾಗಿದೆ ಪೋಲೀಸರು ಮಹಜರು ಕ್ರಮ ಜರುಗಿಸಿದರು

ಶಸ್ತ್ರಾಸ್ತ್ರ ಸ್ಪರ್ಧೆ ತಪ್ಪಿಸಲು ರಷ್ಯಾ ಪಾರ್ಲಿಮೆಂಟಿನ ಮನವಿ

ರಷ್ಯದ ಪಾರ್ಲಿಮೆಂಟು ಅಮೇರಿಕದ ಕಾಂಗ್ರೆಸ್ ಸಭೆಗೆ ಮನವಿ ಮಾಡಿಕೊಂಡು ಜಗದ್ವ್ಯಾಪ್ತಿಯಾಗಿರುವ ಶಸ್ತ್ರಾಸ್ತ್ರ ಸ್ಪರ್ಧೆಗಳನ್ನು ಅಂತ್ಯಗೊಳಿಸುವಂತೆ ಸೂಚಿಸಿರುವ ಪತ್ರವನ್ನು ಅಮೇರಿಕದ ರಷ್ಯದ ರಾಯಭಾರಿಯಾಗಿರುವ ಜಾರುಬಿನ್‌ರವರು ನೆನ್ನೆ ಅಲ್ಲಿನ ವಿದೇಶಾಂಗ ಕಚೇರಿಗೆ ಒಪ್ಪಿಸಿದರು ಅಗ್ರ ರಾಷ್ಟ್ರಗಳು ಇತರರಿಗೆ ಈ ಬಗ್ಗೆ ಮೇಲ್ಪಂಕ್ತಿ ಹಾಕಬೇಕೆಂದು ಅವರು ಕೋರಿದರು ರಷ್ಯದ ಪಾರ್ಲಿಮೆಂಟು ಬ್ರಿಟಿಷ್ ಪಾರ್ಲಿಮೆಂಟಿಗೂ ಇದೇ ಬಗೆಯ ಕ್ರಮಕ್ಕಾಗಿ ಮನವಿ ಮಾಡಿದೆ

ನಂಜನಗೂಡು ಮತ್ತು ಕವಲಂದೆ ಗಳಲ್ಲಿ ಕ್ಷಾಮ ನಿವಾರಣಾ ಕಾರ್ಯ

ಕ್ರಮ ಸು) ನಂಜನಗೂಡು ೨೫

ನಂಜನಗೂಡು ತಾಲ್ಲೂಕು ಕಸಬಾ ಮತ್ತು ಕವಲಂದೆ ಹೋಬಳಿಗಳ ಕ್ಷಾಮ ನಿವಾರಣಾ ಕೆಲಸಗಳ ಬಗ್ಗೆ ಅಮಲ್ದಾರರು ಒಂದು ಹೇಳಿಕೆಯನ್ನಿತ್ತು ಕಸಬಾ ಹೋಬಳಿಯಲ್ಲಿ ೨೨ ಮೈಲಿ ರಸ್ತೆಗಾಗಿ ೧೪,೦೦೦ ರೂ., ಕೆರೆ ರಿಪೇರಿಗೆ ೨,೦೦೦ ರೂ., ಕವಲಂದೆ ಹೋಬಳಿಯಲ್ಲಿ ೨೮ ಮೈಲಿ ರಸ್ತೆಗೆ ೧೧,೯೦೦ ರೂ. ಕೆರೆ ರಿಪೇರಿಗೆ ೩,೦೦೦ ರೂ., ಎರಡು ಹೋಬಳಿಗಳಿಂದ ಇಸ್ಸೂಡು ಮೂಟೆಂಕ್ಕೆ, ೩,೦೦೦ ಪೌಂಡು ಹಾಲಿನಪುಡಿ ಕವಲಂದೆ ಹೋಬಳಿಗೆ ೧೪,೦೦೦ ರೂ. ತಕಾವಿ ಸಾಲ ಕೊಡಲಾಗಿದೆಯೆಂದೂ, ಈಗ ಪರಿಸ್ಥಿತಿ ಸ್ವಲ್ಪ ಹತೋಟಿಗೆ ಬಂದಿದೆಯೆಂದೂ ಟೌನಿನಲ್ಲಿ ಸಾಕಾದಷ್ಟು ಒಳ್ಳೆಯ ಅಕ್ಕಿ ದಾಸ್ತಾನು ಇದೆಯೆಂದೂ, ಸರ್ಕಾರದ ಸೂಚನೆ ಎಂದ ತಕ್ಷಣ ಮಾರಾಟ ಮಾಡುವುದಾಗಿಯೂ ತಿಳಿಸಿದರು

ಶ್ರೀಕಂಠಪುರಿ ಬಡಾವಣೆಯಲ್ಲಿರುವ ಸ್ವ್ಯೈಮಂ ಗರ್ಲ್ಸ್ ಸ್ಕೂಲಿನಲ್ಲಿ ಶ್ರೀ ಪಿ ಮಹದೇವಯ್ಯನವರ ಅಧ್ಯಕ್ಷತೆಯಲ್ಲಿ ಕ್ಯಾಂಟೀನ್ ಪ್ರಾರಂಭೋತ್ಸವವನ್ನು ನಿನ್ನೆ ನೆರವೇರಿಸಲಾಯಿತು ರೇಂಜ್ ಇನ್ಸ್‌ಪೆಕ್ಟರ್ ಶ್ರೀ ನಾರಾಯಣರಾಯರು ಕೇಂದ್ರ ಸರ್ಕಾರದವರಿಗೆ ಈ ಸಹಾಯವನ್ನು ಕೊಟ್ಟಿದ್ದಕ್ಕಾಗಿ ವಂದನೆಗಳನ್ನರ್ಪಿಸಿದರು ಸುಮಾರು ೩೦೦ ಹುಡುಗರಿಗೆ ಹಾಲು ಮತ್ತು ಸುಳಿ ಅನ್ನ, ಮೊಸರು ಅನ್ನವನ್ನು ವಿನಿಯೋಗಿಸಲಾಯಿತು ಮುಖ್ಯೋಪಾಧ್ಯಾಯರಾದ ಕ.ಸಾ.ರ ಅವರಿಂದ ವಂದನಾರ್ಪಣೆಯಾಯಿತು

ನಂಜನಗೂಡಿನಿಂದ ಬರುವ ವಿದ್ಯಾರ್ಥಿಗಳಿಗೆ ರೈಲಿನಲ್ಲಿ ತೊಂದರೆ

ನಂಜನಗೂಡಿನಿಂದ ಮೈಸೂರಿನ ಕಾಲೇಜುಗಳಿಗೆ ಬರುವ ವಿದ್ಯಾರ್ಥಿಗಳ ಸಂಖ್ಯೆ ೮೦ ಕ್ಕೂ ಮೀರಿದೆ ಈ ವಿದ್ಯಾರ್ಥಿಗಳು ಪ್ರತಿನಿತ್ಯವೂ ರೈಲಿನಲ್ಲಿ ಕುಳಿತುಕೊಳ್ಳಲು ಸ್ಥಳವಿಲ್ಲದೆ ನಿಂತುಕೊಂಡೇ ಪ್ರಯಾಣ ಮಾಡಬೇಕಾಗಿದೆ ಪಟ್ಟೂರು ಮತ್ತು ಶ್ರೀರಂಗಪಟ್ಟಣ ಮುಂತಾದ ಕಡೆಗಳಿಂದ ಬರುವ ವಿದ್ಯಾರ್ಥಿಗಳು ಬಹಳ ಕಡಿಮೆಯಾಗಿದ್ದಾಗ್ಯೂ ಅವರಿಗೆ ಒಂದು ಪ್ರತ್ಯೇಕ ಗಾಡಿಯನ್ನು ರಿಸರ್ವ್ ಮಾಡಲಾಗುತ್ತಿದೆ ನಂಜನಗೂಡು ರೈಲಿನಲ್ಲಿ ವಿದ್ಯಾರ್ಥಿನಿಯರಿಗೆ ಮಾತ್ರ ೧೦ ಜನ ಕೂಡುವಂತಹ ಗಾಡಿಯೊಂದನ್ನು ರಿಸರ್ವ್ ಮಾಡಿರುತ್ತಾರೆ ವಿದ್ಯಾರ್ಥಿಗಳು ಯಾವಾಗಲೂ ನಿಂತುಕೊಂಡೇ ಹೋಗಬೇಕಾಗಿದೆ ಆದ್ದರಿಂದ ವಿದ್ಯಾರ್ಥಿಗಳಿಗೂ ಒಂದು ಗಾಡಿಯನ್ನು ರಿಸರ್ವ್ ಮಾಡಿಕೊಡಬೇಕಾಗಿ ಪ್ರಾರ್ಥಿಸುತ್ತೇವೆ- ಎಂದು ನಂಜನಗೂಡಿನಿಂದ ರೈಲಿನಲ್ಲಿ ಬರುವ ವಿದ್ಯಾರ್ಥಿಗಳು ಕೋರಿರುತ್ತಾರೆ

ದಾನ ಧರ್ಮಗಳ ಬೇಡಿಕೆಗೆ ನಿಜಾಮರ ನಕಾರ

ವಿಶ್ವದ ಅತ್ಯಂತ ಶ್ರೀಮಂತರೆಂದು ಪ್ರಖ್ಯಾತರಾದ ನಿಜಾಮರು ಇತ್ತೀಚೆಗೆ ಸಾರ್ವಜನಿಕ ಸಂಸ್ಥೆಗಳಿಂದ ಉದಾರ ಧನ ಸಹಾಯಕ್ಕಾಗಿ ಬಂದ ಬೇಡಿಕೆಗಳನ್ನು ತಾವು ಮನ್ನಿಸಲು ಸಾಧ್ಯವಿಲ್ಲವೆಂದು ತಿಳಿಸಿದ್ದಾರೆ ಕೇವಲ ನಮ್ಮ ಮಾತ್ರದ ಆದಾಯದಿಂದ ನಡೆಯುವ ತಮ್ಮ ಆಗಿನ ಸ್ಥಿತಿಯು ಕಳೆದುಹೋಗಿರುವುದೆಂದೂ, ಅಲ್ಲದೆ ತಮ್ಮ ಸ್ವಂತ ಆಸ್ತಿಪಾಸ್ತಿಗಳ ಸ್ಥಿತಿಗತಿಗಳು ಚೆನ್ನಾಗಿಲ್ಲವಾದ ಕಾರಣ ಈ ರೀತಿಯ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಿಲ್ಲವೆಂದೂ ಅವರು ಹೇಳಿದ್ದಾರೆ

Vidya Tutorial College
(Dalvoy High School Buildings)
MYSORE
CLASSES COMMENCED FOR
Junior Inter, B. A., B.Sc.
JOIN IMMEDIATLLY
Enquiries — 5 30 to 8 30 P M

Edited Printed and Published by A. K. Nagarajan at Sadhvi Press U Subbiah Road, Mysore

ನಗರದಲ್ಲಿ ತಿಲಕರ ದಿನಾಚರಣೆ

ನಗರದ ಭಾರತ ಸೇವಾದಳದ ಎಲ್ಲಾ ಶಾಖೆಗಳವರೂ ಮೊನ್ನೆ ತಿಲಕರ ಶತಮಾನೋತ್ಸವವನ್ನು ನೆರವೇರಿಸಿದರು ವೀರ ಸೇವಾ ದಳ ಶಾಖೆಯಲ್ಲಿ ನಡೆದ ಸಮಾರಂಭದ ಅಧ್ಯಕ್ಷತೆಯನ್ನು ಶ್ರೀ ಎ ಕೆ ಸ್ವಾಮಣ್ಣನವರು ವಹಿಸಿದ್ದರು ಶ್ರೀ ಉಪೇಂದ್ರಸ್ವಾಮಿಗಳವರು ತಿಲಕರ ಜೀವನದ ಪ್ರಮುಖ ಅಂಶಗಳನ್ನು ವಿವರಿಸಿದರು

ಸಾರ್ವಜನಿಕ ವಿದ್ಯಾರ್ಥಿ ನಿಲಯದಲ್ಲಿ ಕಳೆದ ಸೋಮವಾರ ಶ್ರೀ ಕೆ ಎಸ್ ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಉತ್ಸವವನ್ನು ಆಚರಿಸಲಾಯಿತು ಕೆಲವು ವಿದ್ಯಾರ್ಥಿಗಳು ತಿಲಕರ ಜೀವನದ ಬಗ್ಗೆ ಭಾಷಣ ಮಾಡಿದರು ಈ ಸಂದರ್ಭದಲ್ಲಿ, ನಿಲಯದ "ಗಾಂಧಿ ಸಾಹಿತ್ಯ ವಿಚಾರ ಗೋಷ್ಠಿ"ಯ ಉದ್ಘಾಟನೆಯನ್ನು ಅಧ್ಯಕ್ಷರು ನೆರವೇರಿಸಿದರು

ವಿಹಾರಕ್ಕಾಗಿ ಹೋದವರಿಗೆ ಅಪಮೃತ್ಯು

ಒಂದೇ ಶಾಲೆಯೊಂದರ ೧೩ ಮಂದಿ ಬಾಲಕರು ಮೊನ್ನೆ ರಾತ್ರಿ ವಿಹಾರಾರ್ಥವಾಗಿ ಲಾರಿಯೊಂದರಲ್ಲಿ ಹೊರಟಾಗ ವಾಹನವು ೩ ಮೈಲಿ ಹೋಗಿ ವಿದ್ಯುತ್ ಕಂಬಕ್ಕೆ ಡಿಕ್ಕಿ ಹೊಡೆದು ತಲೆಕೆಳಗಾಯಿತೆಂದೂ, ಮೂರು ಮಂದಿ ಮಡಿದು, ಎಂಟು ಜನರಿಗೆ ಗಾಯವಾಯಿತೆಂದೂ ವರದಿ ಬಂದಿದೆ ಗಾಯವಾದವರನ್ನು ಆಸ್ಪತ್ರೆಗೆ ಕಳುಹಲಾಗಿದೆ ಅಪಘಾತದ ಸಮಯದಲ್ಲಿ ೧೬ ವರ್ಷದ ಯುವಕನು ವಾಹನವನ್ನು ನಡೆಸುತ್ತಿದ್ದು ... ಹೋಗುತ್ತಿದ್ದಾಗ ... ಹತೋಟಿ ತಪ್ಪಿತು

ಮಳೆಯಿಂದ ಮನೆಗಳು ಕುಸಿದು ೧೧ ಜನರ ಮರಣ

ಇಂದೋರಿನ ಸುತ್ತಮುತ್ತ ಕಳೆದ ಮೂರು ದಿನಗಳಿಂದಲೂ ಭಾರಿ ಮಳೆ ಬಿದ್ದುದರಿಂದ ಬೊಂಬಾಯಿ-ಆಗ್ರಾ ರಾಜ ಮಾರ್ಗವು ನೀರಿನಲ್ಲಿ ಮುಳುಗಿದೆ ಅನೇಕ ಕಡೆ ರಸ್ತೆಯು ಕಿತ್ತುಹೋಗಿರುತ್ತದೆ ಸೌರಾಷ್ಟ್ರದಲ್ಲಿ ವಿಪರೀತ ಮಳೆಯಿಂದ ಮನೆಗಳು ಕುಸಿದು ೧೧ ಜನರು ಸತ್ತಿರುವರೆಂದು ವರದಿಯಾಗಿದೆ ಆ ಪ್ರಾಂತದಲ್ಲಿ ಲಕ್ಷಾಂತರ ರೂ. ಗಳಷ್ಟು ಆಸ್ತಿಗೆ ನಷ್ಟವಾಗಿದೆ ಅನೇಕ ರಸ್ತೆಗಳು ಕಚ್ಚಿಹೋಗಿವೆ

ಸಪತ್ನೀಕರೊಡನೆ ವಿವಾಹಕ್ಕೆ ಮಹಿಳಾ ನೌಕರರಿಗೆ ನಿರ್ಬಂಧ

ಮೊದಲನೇ ಪತ್ನಿಯು ಜೀವಿಸಿರುವಾಗ ಅಂತಹವರ ಪತಿಯನ್ನು ಸ್ತ್ರೀ ಮಹಿಳಾ ನೌಕರರು ಮದುವೆಯಾಗಲು ಇನ್ನು ಮುಂದೆ ತಮ್ಮ ಅಪ್ಪಣೆ ಪಡೆಯಬೇಕೆಂದು ಭಾರತ ಸರ್ಕಾರದವರು ವಿಧಾಯಕ ಮಾಡಿದ್ದಾರೆ

ಭೋಜನ ಕೂಟ

ಕಳೆದ ಭಾನುವಾರದಿಂದ ಸಾಯಿಬಾಬಾ ಮಂದಿರದಲ್ಲಿ ನಡೆಯುತ್ತಿದ್ದ ಗುರು ಪೂರ್ಣಿಮಾ ಉತ್ಸವದ ಕೊನೆಯ ದಿನವಾದ ನಿನ್ನೆ ಮಧ್ಯಾಹ್ನ ಮಂದಿರದ ವ್ಯವಸ್ಥಾಪಕ ವರ್ಗದವರು ಭೋಜನ ಕೂಟವೊಂದನ್ನೇರ್ಪಡಿಸಿ ನಗರದ ಪ್ರಮುಖರನೇಕರನ್ನು ಆಹ್ವಾನಿಸಿದ್ದರು

SRI GAYATHRI
TALKIES
From 26.7.56 for 2 days
GREEN FIRE
(Technicolor)
Starring - Stewart Granger and Grace Kelly

ಮಹಿಳೆಯ ನಿರ್ಬಂಧದ ಸುದ್ದಿ ನಿರಾಧಾರ

ನಮ್ಮ ಪತ್ರಿಕೆಯ ಕಳೆದ ೧೦ನೇ ತಾರೀಖಿನ ಸಂಚಿಕೆಯಲ್ಲಿ ಮಹಿಳೆಯನ್ನು ಅಕ್ರಮವಾಗಿ ನಿರ್ಬಂಧಪಡಿಸಿದುದಕ್ಕಾಗಿ ಶ್ರೀ ಎಸ್ ಜೆ ಮೈಸೂರ್‌ವಾಲಾ ಮತ್ತು ಇನ್ನಿಬ್ಬರ ಮೇಲೆ ಮೊಕದ್ದಮೆ ... ಹೂಡಲಾಗಿದೆಯೆಂದು ಪ್ರಕಟಿಸಿದ್ದ ಬಗ್ಗೆ ಶ್ರೀ ಎಸ್ ಜೆ ಮೈಸೂರ್‌ವಾಲಾರವರು ಪತ್ರವೊಂದನ್ನು ಬರೆದು ಶ್ರೀಮತಿ ಬಾರ್ನ್ಸ್ ಎಂಬುವರು ಯಾರೆಂಬುದು ತಮಗೆ ಗೊತ್ತಿಲ್ಲವೆಂದೂ, ಅವರನ್ನು ತಾವು ಅಕ್ರಮವಾಗಿ ನಿರ್ಬಂಧಪಡಿಸಿದರೆಂಬ ಸುದ್ದಿಯು ನಿಜವಲ್ಲವೆಂದೂ ತಿಳಿಸಿರುವರಲ್ಲದೆ ತಮ್ಮ ಹೋಟೇಲಿನಲ್ಲಿ ಬಿಡಾರ ಮಾಡಿದ್ದ ಶ್ರೀಮತಿ ಬ್ಯಾರ್ನ್ಸ್ ಎಂಬುವರು ಊಟ ವಸತಿಗಳ ಬಾಬ್ತು ಬಾಕಿಯನ್ನು ಕೊಡದೆ ಲಕ್ಷ್ಯರ್ ಪೋಲೀಸರ ಸಹಾಯದಿಂದ ಸಾಮಾನುಗಳನ್ನು ಸಾಗಿಸಲು ಯತ್ನಿಸಿದಾಗ ತಾವೊಂದು ಬಾಗಿಲು ಬಳಿ ಅವರುಗಳನ್ನು ತಡೆದುದಾಗಿ ಸೂಚಿಸಿ ಈ ವಿಚಾರವನ್ನು ಪೋಲೀಸ್ ಅಧಿಕಾರಿಗಳ ಗಮನಕ್ಕೆ ತರಲಾಗಿದೆಯೆಂದು ತಿಳಿಸಿರುತ್ತಾರೆ

ಭೂಕಂಪದಿಂದ ಮನೆ ಉರುಳಿದರೂ ಶಿಶುವು ಪಾರು

ಸೌರಾಷ್ಟ್ರದ ಅಂಜಾರ್ ಎಂಬಲ್ಲಿ ಇತ್ತೀಚೆಗೆ ಆದ ಭೂಕಂಪದ ಪರಿಣಾಮವಾಗಿ ಮುರಿದು ಬಿದ್ದ ಮನೆಯೊಂದನ್ನು ಶೋಧಿಸಲು ರಕ್ಷಣಾ ಸ್ವಯಂಸೇವಕರು ಹೋದಾಗ ತೊಟ್ಟಿಲಿನಲ್ಲಿ ಮಲಗಿದ್ದ ಸುಮಾರು ೭ ತಿಂಗಳ ಮಗುವು ಅವರ ಕಣ್ಣಿಗೆ ಬಿದ್ದು ಅವರನ್ನು ಕಂಡೊಡನೆ ನಕ್ಕಿತೆಂದೂ, ಇಡೀ ಮನೆಯೇ ನಾಶವಾಗಿ ಮಗುವು ಉಳಿದ ಬಗ್ಗೆ ಎಲ್ಲರಿಗೂ ಆಶ್ಚರ್ಯವಾಯಿತೆಂದೂ ವರದಿಯಾಗಿದೆ

ಕಂದಾಯದ ಹಣದ ದಸ್ತಿಗಾಗಿ ಪಟೇಲರ ಸಸ್ಪೆಂಡ್

ಶಿರಾ ತಾಲ್ಲೂಕಿನ ಗ್ರಾಮವೊಂದರ ಪಟೇಲರಾದ ಶ್ರೀ ಹೀರಾಸಿಂಗ್ ಎಂಬುವರು ಕಂದಾಯದ ಹಣವನ್ನು ದುರುಪಯೋಗಪಡಿಸಿಕೊಂಡರು ಎಂಬ ಕಾರಣದ ಮೇಲೆ ಅಲ್ಲಿನ ಅಮಲ್ದಾರರು ಅವರನ್ನು ಸಸ್ಪೆಂಡ್ ಮಾಡಿ ಮುಂದಿನ ತನಿಖೆ ನಡೆಸುತ್ತಿರುವರೆಂದು ವರದಿಯಾಗಿದೆ ಅಮಲ್ದಾರರ ಕೋರ್ಟಿನ ಆವರಣದಲ್ಲಿ ಪಟೇಲರು ಚಾಕುವೊಂದನ್ನು ಹಿಡಿದರೆಂದೂ ಆಪಾದಿಸಲಾಗಿದೆ

ಚೀನಾಕ್ಕೆ ಮೈಸೂರಿನ ಮಲ್ಲಿಗೆ

ಈ ತಿಂಗಳು ಕಡೆಯಲ್ಲಿ ಚೀನಾಕ್ಕೆ ತೆರಳಲಿರುವ ಕೇಂದ್ರ ಆಹಾರ ಉಪ ಮಂತ್ರಿ ಎಂ ವಿ ಕೃಷ್ಣಪ್ಪನವರು ತಮ್ಮೊಡನೆ ಸುಪ್ರಸಿದ್ಧವಾದ ಮೈಸೂರು ಮಲ್ಲಿಗೆ ಸಸಿಗಳನ್ನೂ, ಬೆಂಗಳೂರು ಮತ್ತು ಬಾದಾಮಿ ಜಾತಿಯ ಮಾವಿನಹಣ್ಣುಗಳ ಸಸಿಗಳನ್ನೂ ಅಲ್ಲಿಗೆ ತೆಗೆದುಕೊಂಡು ಹೋಗಲಿರುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೧೫ ಭಜನೆ ಮತ್ತು ಶಾರದಾ-ದೇವರನಾಮಗಳು ೬ ೪೦ ಹಿಂದಿ ಶಿಕ್ಷಣ [illegible] ಮಧ್ಯಾಹ್ನ [illegible] ಸಂಜೆ [illegible] ವಾದ್ಯವೃಂದ [illegible] ಮಹಿಳೆಯರ ಕಾರ್ಯಕ್ರಮ [illegible] ದೇವರ ನಾಮಗಳು [illegible] ಕನ್ನಡ ಭಾಷಣ [illegible] ತಂಜಾವೂರು ಲಕ್ಷ್ಮೀನಾರಾಯಣ ಭಾಗವತರು-[illegible] ಕನ್ನಡ ಗೀತೆಗಳು [illegible] ಚಿತ್ರ [illegible] ಗೀತೆಗಳು

ನಿಧಿಯ ಆಸೆಗಾಗಿ ನರಬಲಿ ಪ್ರಯತ್ನವೇ?

ಶಾಸ್ತ್ರಿ ಮತ್ತು ಇತರರ ಮೇಲೆ ಮೊಕದ್ದಮೆ

ಬೇಲೂರು ಬಳಿ ದೇವಂಗಳ ಎಂಬ ಗ್ರಾಮದ ಸಮೀಪದ ಕಾಡಿನ ಬಳಿಯಲ್ಲಿ ದೇವಾಲಯದಲ್ಲಿ ಕಳೆದ ೧೦ನೇ ತಾರೀಖು ನರಬಲಿ ಪ್ರಯತ್ನವನ್ನು ನಡೆಸಿದರೆಂದು ಲಕ್ಷ್ಮರ ಶಾಸ್ತ್ರಿ ದೇವಿಶೆಟ್ಟಿ ದೊರೆಸ್ವಾಮಿ ಮತ್ತು ಕೃಷ್ಣಭಟ್ಟ, ಗೋವಿಂದ ಭಟ್ಟ ಮುಂತಾದ ಇತರ ಐವರ ಮೇಲೆ ಆಪಾದನೆಗಳನ್ನು ನ್ಯಾಯಾಲಯದಲ್ಲಿ ಹೊರಿಸಲಾಗಿದೆ ಶಾಸ್ತ್ರಿಯವರು ಬಂಧಿಸಿ ನಾಮಿನಿ ಮೇಲೆ ಬಿಡಲಾಗಿದೆ ಕೃಷ್ಣಭಟ್ಟ ಮತ್ತು ಗೋವಿಂದಭಟ್ಟ ಮತ್ತು ಇತರರು ಶಕ್ತಿಯುಳ್ಳ ಪೂಜೆಯ ವಿಧಿ ಪ್ರಕಾರ, ಶಾಸ್ತ್ರಿ ದೊರೆಸ್ವಾಮಿಯು ಸದರಿ ದೇವಾಲಯದಲ್ಲಿ ನರಬಲಿಯುಕ್ತ ಅಲ್ಲಿ ಹೂತಿರುವ ಅಪಾರ ನಿಧಿ ಸಿಕ್ಕುವುದೆಂದು ಪ್ರೇರಿಸಿದ್ದಾಗಿ ತಮ್ಮ ಮನೆಯಲ್ಲಿ ಕೆಲಸಕ್ಕಿದ್ದ ಗೋವಿಂದನೆಂಬುವವನನ್ನು ದೇವರ ಪೂಜೆ ನೆಪದಲ್ಲಿ ಅಂದು ರಾತ್ರಿ ದೇವಾಲಯಕ್ಕೆ ಕರೆತಂದರೆಂದೂ, ಅಲ್ಲಿ ಪೂಜೆ ಆರಂಭವಾಯಿತೆಂದೂ, ದೇವರ ಮುಂದೆ ಇದ್ದ ಕತ್ತಿ ಕಠಾರಿಗಳನ್ನು ನೋಡಿ ಭಯಗೊಂಡ ಗೋವಿಂದನು ದೇಹ ಬಾಧೆ ತೀರಿಸಿಕೊಂಡು ಬರುವುದಾಗಿ ಅಲ್ಲಿಂದ ಹೊರಬಿದ್ದು ದೂರದ ಮರದಲ್ಲಿ ಅಡಗಿದನೆಂದೂ, ಉಳಿದವರು ಅವನನ್ನು ಹುಡುಕಿ ಕಾಣದೆ ಹೋದರೆಂದೂ ಹೇಳಲಾಗಿದೆ ಅಂದು ರಾತ್ರಿಯೇ ಗೋವಿಂದನು ಬೇಲೂರಿಗೆ ನಡೆದು ಬಂದು ಪೋಲೀಸರಿಗೆ ತಿಳಿಸಿದನು ಮಾರನೆ ಬೆಳಿಗ್ಗೆ ಪೋಲೀಸರು ಸ್ಥಳಕ್ಕೆ ಹೋಗಿ ಆರತಿ, ಪಿಕಾಸಿ, ಕತ್ತಿ ಮತ್ತು ಪೂಜಾ ದ್ರವ್ಯಗಳನ್ನು ವಶಪಡಿಸಿಕೊಂಡರು

ಅಣು ಫಿರಂಗಿ ಹೊಡೆದರೆ ೧ ಮೈಲಿ ಪ್ರದೇಶಕ್ಕೆ ಅಪಾಯ

ಅಮೇರಿಕದಲ್ಲಿ ತಯಾರಿಸಲಾಗಿರುವ ಅಣು ಫಿರಂಗಿಗಳನ್ನು ಹಾರಿಸಿದಾಗ ಅವು ಒಡೆದು ಸ್ಥಳದ ಸುತ್ತಮುತ್ತಲೂ ಒಂದು ಮೈಲಿಯವರೆಗೆ ಅಪಾಯವು ವ್ಯಾಪಿಸುವುದೆಂದೂ ಮತ್ತು ಸಿಡಿತದ ಫಲವಾಗಿ ಉಂಟಾಗುವ ಧೂಳಿನಿಂದ ಆ ಪ್ರದೇಶದಲ್ಲಿ ಇರಬಹುದಾದ ಜನರ ಮೈಕೈ ಕೊನೆಯ ಪಕ್ಷ ಅರ್ಧ ಗಂಟೆಯಾದರೂ ಮೈಲಿಗೆಯಾಗಬಹುದೆಂದೂ ಹೇಳಲಾಗಿದೆ

ಕೇಂದ್ರ ಸರ್ಕಾರದ ಮಾಜಿ ಹಣಕಾಸಿನ ಮಂತ್ರಿ ಸಿ ಡಿ ದೇಶಮುಖ್‌ರವರು ಲೋಕ ಸಭೆಯ ಕಾಂಗ್ರೆಸ್ ಪಕ್ಷದ ಸಹ ಸದಸ್ಯತನಕ್ಕೂ ರಾಜೀನಾಮೆಯಿತ್ತಿದ್ದಾರೆ

ಮೈಸೂರು ಪೇಟೆ ಧಾರಣೆ

	ರೂ ಖಂಡ			ರೂ ಪಲ್ಲ		
ಸಣ್ಣಭತ್ತ	೩೧	೨	೦	೩೮	[illegible]	[illegible]
ದಪ್ಪಭತ್ತ	೨೯	[illegible]	೦	೩೦	[illegible]	೦
ರಾಗಿ	೨೮	೧೪	೦	೩೧	[illegible]	೦
ಕಡಲೆಕಾಯಿ	೧೧	೪	೦	೨೧	[illegible]	೦
ಹಿಪ್ಪೆ	೧೫	[illegible]	೦	೧೬	[illegible]	೦
ಹಿಪ್ಪೆಬೀಜ	೩೭	೧೪	೦			
ಎಳ್ಳು	[illegible]	[illegible]	೦	[illegible]	[illegible]	[illegible]
ಹುರುಳಿ	೩೧	[illegible]	೦			
ಹೆಸರು	೩೯	೧೦	೦	[illegible]	[illegible]	[illegible]
ಹುಲಸಂದೆ	[illegible]	೨	೦	[illegible]	[illegible]	[illegible]
ಉದ್ದು	[illegible]	೨	೦	[illegible]	[illegible]	[illegible]
[illegible]	೨	[illegible]	೦	[illegible]	[illegible]	[illegible]
ಮೆಣಸಿನಕಾಯಿ	[illegible]	೦	೦			
ತೆಂಗಿನಕಾಯಿ ೧೧೦೦	೧೧೭	೦	೦	೨೨೦	[illegible]	[illegible]

Saradavilas Law College, Mysore
WANTED
An Accountant on Rs 50 plus 15 with Accounts and Typewriting Qualifications, preferably a Graduate.
A Librarian on Rs 30 plus 15, with Intermediate qualification
Applicants to meet the undersigned in person on or before 30th July 1956
(Sd) T S Rajagopalienger,
Principal

ಚಾಮುಂಡೇಶ್ವರಿ ಟಾಕೀಸ್
27—7—56 ರಿಂದ ಜಯಪ್ರದ 8ನೇ ವಾರದ ಆರಂಭ ಮತ್ತು 50ನೇ ದಿನೋತ್ಸವ
ಮೈನಾವತಿ, ಜಯಶ್ರೀ, ರೇವತಿ, ಕಲ್ಯಾಣ್‌ಕುಮಾರ್, ಕುಣಸೂರು ★ **ಮುತ್ತೈದೆ ಭಾಗ್ಯ**
ಕೃಷ್ಣಮೂರ್ತಿ, ಬಾಲಕೃಷ್ಣ ನಟಿಸಿರುವ
ನಿರ್ದೇಶಕ ನಿರ್ಮಾಪಕ ಬಿ ವಿ ಆಚಾರ್ಯ ಕವಿ ಗೌತಮ ಸ್ಟುಡಿಯೋ · ಮದರಾಸು
[Vijaya Talkie Distributors Release

ರಿಜಿಸ್ಟರ್ No. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವುಳ್ಳ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೯] SADHVI : FRIDAY 27—7—1956 ಮೈಸೂರು : ಶುಕ್ರವಾರ ೨೭—೭—೧೯೫೬ [ಸಂಚಿಕೆ : [illegible]

ನಾಯಕರ ರಾಜೀನಾಮೆ ಬಗ್ಗೆ ಪಕ್ಷದಿಂದಲೇ ನಿರ್ಧಾರ

ಬರುವ ವರ್ಷದಿಂದ ಪ್ರಾಥಮಿಕ ಶಾಲೆಗಳಲ್ಲಿ ಹೊಸ ಪಠ್ಯ ಕ್ರಮ

ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವದಲ್ಲಿ ವಿದ್ಯಾಧಿಕಾರಿಗಳ ಭಾಷಣ

ಮೈಸೂರು ೨೬

ನಗರದ ಪ್ರಾಥಮಿಕ ಶಾಲೆಗಳ ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ನಿನ್ನೆ ಸಂಜೆ ಬನುಮಯ್ಯನವರ ಪ್ರೌಢಶಾಲಾ ಭವನದಲ್ಲಿ ಸಂಸ್ಥಾನದ ವಿದ್ಯಾಧಿಕಾರಿಗಳಾದ ಶ್ರೀ ಎಚ್. ಎಚ್. ಹಿರಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು.

ಪ್ರಾರ್ಥನೆ ಮತ್ತು ಶ್ರೀಮತಿ ಇಂದಿರಾಬಾಯಿಯವರಿಂದ ಸ್ವಾಗತ ಪದ್ಯಪಠಣವಾದನಂತರ ಜಿಲ್ಲಾ ವಿದ್ಯಾಧಿಕಾರಿ ಶ್ರೀ ಹೆಚ್. ವಿ. ಶ್ರೀರಂಗರಾಜುರವರು ಮಾತನಾಡಿ ಇಂದಿನ ಸಮಾರಂಭದಲ್ಲಿ ವಿನೋದಕ್ಕಿಂತ ನೂತನ ವಿದ್ಯಾ ಸುಧಾರಣೆಗಳ ಬಗ್ಗೆ ಶಿಕ್ಷಕರ ಪ್ರತಿಕ್ರಿಯೆಯನ್ನು ಅರಿಯಲು ತಾವು ಅಪೇಕ್ಷಿಸುವುದಾಗಿ ಹೇಳಿದರು.

ಸಂಘದ ಕಾರ್ಯದರ್ಶಿ ಶ್ರೀ ಎ. ಎಸ್. ಸೋಮಸುಂದರಂರವರು ವಾರ್ಷಿಕ ವರದಿಯನ್ನು ಮತ್ತು ಸಂಘದ ಪರವಾಗಿ ವಿದ್ಯಾಧಿಕಾರಿಗಳಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು.

ಶ್ರೀ ಹಿರಣ್ಣಯ್ಯನವರು ಭಾಷಣ ಮಾಡಿ ಮುಂದೆ ಉಪಾಧ್ಯಾಯರಿಗೆ ಹೆಚ್ಚು ಸಂಬಳ ದೊರೆಯುವುದೆಂದೂ, ಸಂಸ್ಥಾನದಲ್ಲಿ ವಿದ್ಯಾಭ್ಯಾಸವು ಪ್ರಮಾಣದಲ್ಲಿ ಪ್ರಗತಿ ಹೊಂದಿದ್ದರೂ ಗುಣದಲ್ಲಿ ಅಷ್ಟು ಹಿಂದುಳಿದಿದೆಯೆಂದೂ ಹೇಳಿ, ಇದಕ್ಕೆ ಸಲಕರಣೆ, ಶಿಕ್ಷಣ ಕ್ರಮ ಮತ್ತು ಉಪಾಧ್ಯಾಯರ ಸ್ಥಿತಿಗತಿಗಳ ಅಸಮರ್ಪಕತೆಯೇ ಕಾರಣವೆಂದು ತಿಳಿಸಿದರು.

ಬೇರಾವ ಕಡೆಗಳಲ್ಲೂ ಉದ್ಯೋಗ ಸಿಕ್ಕದೆ ನಿರಾಶರಾದವರು ಉಪಾಧ್ಯಾಯ ವೃತ್ತಿಯನ್ನು ಕೈಗೊಂಡು ಅರೆ ಮನಸ್ಸಿನಿಂದ ದುಡಿಯುವುದರಿಂದಲೂ ಸಹ ಈ ದೋಷವಾಗಿದೆಯೆಂದೂ, ಆದ್ದರಿಂದ ಉತ್ತಮರನ್ನು ಕೆಲಸಕ್ಕೆ ತೆಗೆದುಕೊಳ್ಳಬೇಕಾಗಿದೆಯೆಂದೂ ಹೇಳಿದರು.

ವಿದ್ಯಾ ಸುಧಾರಣೆಗಳ ಬಗ್ಗೆ ವಿವರಗಳನ್ನಿತ್ತು, ಬರುವ ಜನವರಿ ಅಂತ್ಯದಿಂದ ಪ್ರಾಥಮಿಕ ವಿದ್ಯಾಭ್ಯಾಸಕ್ಕೆ ಹೊಸ ಪಠ್ಯ ಕ್ರಮಗಳನ್ನು ಜಾರಿಗೆ ಕೊಡಲಾಗುವುದೆಂದು ತಿಳಿಸಿದರು.

ಕನ್ನಡ ಮತ್ತು ಸಂಸ್ಕೃತಗಳಿಗೆ ಸಮಾನಸ್ಥಾನ ಕೊಟ್ಟು, ಕಡ್ಡಾಯವಾಗಿ ಕಲಿಸಲಾಗುವುದೆಂದೂ, ಉರ್ದು ಶಾಲೆಗಳಲ್ಲಿ ಮೂರನೇ ವರ್ಷದಿಂದ ಕನ್ನಡ ಮಾಧ್ಯಮವನ್ನು ಜಾರಿಗೆ ತರಲಾಗುವುದೆಂದೂ, ೬ನೇ ವರ್ಷದಿಂದ ರಾಷ್ಟ್ರ ಭಾಷೆಯಲ್ಲಿ ಶಿಕ್ಷಣವನ್ನು ಆರಂಭಿಸಲಾಗುವುದೆಂದೂ ಇದೇ ಮೊಟ್ಟಮೊದಲಾಗಿ ಪ್ರಾಥಮಿಕ ಮತ್ತು ಮಾಧ್ಯಮಿಕ ತರಗತಿಗಳಲ್ಲಿ ವಿಜ್ಞಾನವನ್ನು ಕಲಿಸಲಾಗುವುದೆಂದೂ ತಿಳಿಸಿದರು.

ಸುಧಾರಣೆಗಳ ಸ್ವರೂಪವನ್ನು ಅರಿಯಲು ಶಿಕ್ಷಣ ಶಿಬಿರಗಳನ್ನು ಪ್ರತಿ ತಾಲ್ಲೂಕಿನಲ್ಲೂ ಏರ್ಪಡಿಸಲಾಗುವುದು. ಎಸ್. ಎಸ್. ಎಲ್. ಸಿ. ಯ ಅರ್ಹತೆಯುಳ್ಳದಿರುವವರನ್ನು ಇನ್ನುಮುಂದೆ ಈ ಕೆಲಸಕ್ಕೆ ತೆಗೆದುಕೊಳ್ಳುವುದಿಲ್ಲ. ಸರ್ಕಾರದವರು ಈ ವರ್ಷ ಸಂಸ್ಕೃತ ಪ್ರಚಾರಕ್ಕಾಗಿ ಮಂ-

ರಂಗಲಕ್ಷ್ಮಿ ಗುಣಹೊಂದಲು ೧ ವರ್ಷ ಬೇಕು

ವೈದ್ಯರುಗಳ ಅಭಿಪ್ರಾಯ

ಸ್ವಂ ಸು ಸಂತೆ] ಬೆಂಗಳೂರು ೨೬

ಬೇಲೂರಿನ ಮಗಳು ರಂಗಲಕ್ಷ್ಮಿಯು ಆರೋಗ್ಯವು ಮಾಮೂಲು ಸ್ಥಿತಿಗೆ ಬರಲು ಕನಿಷ್ಠ ಪಕ್ಷ ಇನ್ನೂ ಒಂದು ವರ್ಷವಾದರೂ ಆಗುವುದೆಂದು ವೈದ್ಯಾಧಿಕಾರಿಗಳು ಅಭಿಪ್ರಾಯಪಟ್ಟಿರುವರು. ಆಕೆಗೆ ಕೇಳಲಾಗುವ ಪ್ರಶ್ನೆಗಳಿಗೆ ಅವಳು ಕೆಲವು ಸಲ ಉತ್ತರ ಕೊಡುವ ಶಕ್ತಿ ಪಡೆದಿರುವಳೆಂದು ಹೇಳಲಾಗಿದೆ. ಈ [illegible] ದಿನದಿಂದ ಕೊಲೆ ಮೊಕದ್ದಮೆ ಬಗ್ಗೆ ಸೆಷನ್ಸ್ ನ್ಯಾಯಾಲಯದಲ್ಲಿ ಆಕೆಯ ಸಾಕ್ಷ್ಯ ತೆಗೆದುಕೊಳ್ಳುವ ಸಂಭವವಿಲ್ಲವೆಂದೂ ಹೇಳಲಾಗುತ್ತಿದೆ.

ಅಟ್ಲಾಂಟಿಕ್ ಸಾಗರದಲ್ಲಿ ಹಡಗುಗಳಿಗೆ ಢಿಕ್ಕಿ

ಇಟಲಿಯ ಹಡಗು ಮುಳುಗಿತು

ನ್ಯೂ ಇಂಗ್ಲೆಂಡ್ ದ್ವೀಪದ ತೀರದಾಚೆ ಆಂಡ್ರಿಯಾ ಡೋರಿಯಾ ಎಂಬ ಇಟಲಿ ಹಡಗೂ, ಸ್ವೀಡನ್ನಿನ ಹಡಗೊಂದಕ್ಕೂ ನಿನ್ನೆ ದಟ್ಟವಾದ ಮಂಜಿನಲ್ಲಿ ಢಿಕ್ಕಿಯಾಗಿ ಇಟಲಿ ಹಡಗು ಮುಳುಗಿತೆಂದು ವರದಿಯಾಗಿದೆ. ೩ ಜನರು ಸತ್ತಿದ್ದು, ೮ ಜನರಿಗೆ ಗಾಯವಾಗಿರುವುದಾಗಿ ಹೇಳಲಾಗಿದೆ. ತತ್ತರಿಸಿದ್ದ ಇತರ ನೌಕೆಗಳು ಸಹಾಯಕ್ಕೆ ಬಂದು ಹಡಗಿನಲ್ಲಿದ್ದ [illegible] ಮಂದಿ ಪ್ರಯಾಣಿಕರನ್ನೂ, [illegible] ಮಂದಿ ನಾವಿಕರನ್ನೂ ರಕ್ಷಿಸಿದುವು.

ಹರಿಕಥೆ ಮತ್ತು ಅಲಂಕಾರ

ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಆಷಾಢ ಶುಕ್ರವಾರದ ಪ್ರಯುಕ್ತ ಈ ಸಂಜೆ ೭ ಗಂಟೆಗೆ ಭದ್ರಾವತಿ ವೆಂಕಟೇಶದಾಸರಿಂದ [illegible] ಸತ್ಯ ಪರೀಕ್ಷೆ ಎಂಬ ಹರಿಕಥೆ ಮತ್ತು ಅಮ್ಮನವರಿಗೆ ಚಾಮುಂಡೇಶ್ವರಿ ಅಲಂಕಾರಗಳು ಏರ್ಪಾಡಾಗಿವೆ.

ಫಿಲೋಮಿನಾ ಕಾಲೇಜು ಕರ್ನಾಟಕ ಸಂಘದ ಆರಂಭ ಭಾಷಣ

ಸೇಂಟ್ ಫಿಲೋಮಿನಾ ಕಾಲೇಜು ಕರ್ನಾಟಕ ಸಂಘದ ಆರಂಭ ಭಾಷಣವನ್ನು ನಾಳೆ ಬೆಳಗ್ಗೆ ೯-೩೦ ಘಂಟೆಗೆ ಕಾಲೇಜಿನಲ್ಲಿ ಸಾಂಗಲಿ ವಿಲಿಂಗ್ಡನ್ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ರಂ. ಶ್ರೀ. ಮುಗಳಿಯವರು ಮಾಡಲಿರುವರು.

ಜೂರು ಮಾಡಿರುವ ೩ ಲಕ್ಷ ರೂ ಗಳಲ್ಲಿ ಸುಲಭ ಶೈಲಿಯಲ್ಲಿ ಪುರಾಣ ಇತಿಹಾಸಗಳನ್ನು ಉಪಾಧ್ಯಾಯರಿಂದ ಬರೆಸಿ ಪ್ರಕಟಿಸಲು ಆಲೋಚಿಸಲಾಗಿದೆ-ಎಂದು ಅವರು ನುಡಿದರು.

ಅನಂತರ ಹಲವು ಉಪಾಧ್ಯಾಯ ಉಪಾಧ್ಯಾಯಿನಿಯರು ಕುಂದುಕೊರತೆಗಳನ್ನೂ ಮತ್ತು ವಿದ್ಯಾ ಸುಧಾರಣೆಯ ಮೇಲಿನ ಅಭಿಪ್ರಾಯಗಳನ್ನೂ ವ್ಯಕ್ತಪಡಿಸಿದರು. ನಗರದ ವಿದ್ಯಾಧಿಕಾರಿ ಶ್ರೀ ಗುರುರಾಜಾಚಾರ್ಯರು ವಂದನಾರ್ಪಣೆ ಮಾಡಿದರು. ಅನೇಕ ಮನರಂಜನಾ ಕಾರ್ಯಗಳು ಏರ್ಪಟ್ಟಿದ್ದುವು.

ವಿಶ್ವ ಕುಟುಂಬದ ಧ್ಯೇಯ ಸಾಧನೆಗಾಗಿ ಶ್ರಮಿಸಬೇಕು

ವಿಶ್ವವಿದ್ಯಾನಿಲಯಗಳ ಸೇವಾಗೋಷ್ಠಿಯಲ್ಲಿ ಶ್ರೀಮನ್ಮಹಾರಾಜರ ಭಾಷಣ

ಮೈಸೂರು ೨೬

"ವಿಶ್ವಶಾಂತಿ, ವಿಶ್ವ ಸಂಸಾರ" ಎಂಬ ಗುರಿಯ ಸಾಧನೆಗಾಗಿ ಶ್ರಮಿಸುವುದು ಅಗತ್ಯವೆಂದು ಶ್ರೀಮನ್ಮಹಾರಾಜರು ನಿನ್ನೆ ಸಂಜೆ ಕ್ರಾಫರ್ಡ್ ಭವನದಲ್ಲಿ ಅಂತರ ರಾಷ್ಟ್ರೀಯ ವಿಶ್ವವಿದ್ಯಾಲಯಗಳ ಸೇವಾ ಗೋಷ್ಠಿಯನ್ನು ಆರಂಭಿಸುತ್ತಾ ನುಡಿದರು. ಅಲಿಘರ್ ವಿಶ್ವವಿದ್ಯಾಲಯದ ಡಾ॥ ಜಕೀರ್ ಹುಸೇನರು ಅಧ್ಯಕ್ಷತೆ ವಹಿಸಿದ್ದರು.

ದೇವತಾ ಪ್ರಾರ್ಥನೆಯಾದನಂತರ ಮೈಸೂರು ವಿಶ್ವವಿದ್ಯಾಲಯದ ಉಪಕುಲಪತಿ ಶ್ರೀ ಕೆ. ವಿ. ಪುಟ್ಟಪ್ಪನವರು ಕನ್ನಡದಲ್ಲಿ ಸ್ವಾಗತ ಭಾಷಣ ಮಾಡಿದರು.

ವಿದ್ಯಾ ಮಂತ್ರಿ ಎ. ಜಿ. ರಾಮಚಂದ್ರರಾಯರು ಭಾಷಣ ಮಾಡಿ ವಿಶ್ವದ ಜನಾಂಗಗಳೆಲ್ಲಾ ಒಂದೇ ಸಂಸಾರದವರೆಂಬ ಭಾವನೆಯನ್ನು ಭಾರತವು ವೇದಗಳ ಕಾಲದಿಂದಲೂ ಹೊಂದಿದೆಯೆಂದೂ, ಆದ್ದರಿಂದಲೇ ಇಂದಿನ ವಿಶ್ವದಲ್ಲಿ ಪರಸ್ಪರ ಅಶಾಂತಿ ಮತ್ತು ವೈಮನಸ್ಯಗಳನ್ನು ತಪ್ಪಿಸಲು ಅದು ಶ್ರಮಿಸಿ ಕೀರ್ತಿ ಪಡೆದಿದೆಯೆಂದೂ ನುಡಿದರು.

ಡಾ॥ ಜಕೀರ್ ಹುಸೇನರು ಭಾಷಣ ಮಾಡಿ ವಿಶ್ವವಿದ್ಯಾಲಯಗಳ ಪ್ರಗತಿಯ ಬಗ್ಗೆ ಬರುವ ಸಮಸ್ಯೆಗಳನ್ನು ಗೋಷ್ಠಿಯು ಬಗೆಹರಿಸಬೇಕೆಂದೂ, ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಕಲ್ಯಾಣ ಸಾಧನೆಗೆ ಮಾರ್ಗಗಳನ್ನು ನಿಯೋಜಿಸುವುದು, ವಿಶ್ವವಿದ್ಯಾಲಯಗಳ ಸ್ವಾತಂತ್ರ್ಯವನ್ನು ಕಾಪಾಡುವ ವಿಧಾನಗಳನ್ನು ಗೊತ್ತುಮಾಡುವುದು ಮತ್ತು ಅಜ್ಞಾನ, ಮಾನಸಿಕ ಬಿಕ್ಕಟ್ಟು ಮುಂತಾದ ಪ್ರಗತಿ ನಿರೋಧಕಶಕ್ತಿಗಳ ಮೂಲೋತ್ಪಾಟನಾ ಕ್ರಮಗಳನ್ನು ರೂಪಿಸುವುದು ಗೋಷ್ಠಿಯ ಮುಖ್ಯ ಕರ್ತವ್ಯಗಳೆಂದೂ ನುಡಿದರು.

ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ವಿಶ್ವವಿದ್ಯಾಲಯ ಸೇವಾ ಸಂಸ್ಥೆಯು ರಾಜಕೀಯ ಮತ್ತು ಪ್ರಾದೇಶಿಕ ಮನೋಭಾವಗಳಿಂದ ದೂರವಾಗಿ ಪರಸ್ಪರ ಭಿನ್ನಾಭಿಪ್ರಾಯಗಳಿಗೆ ಗೌರವ ಮತ್ತು ಆತ್ಮಾವಲಂಬನೆಗಳ ಮೂಲಕ ವಿಶ್ವ ಸೌಹಾರ್ದವನ್ನು ಉಂಟುಮಾಡಲು ಶ್ರಮಿಸುತ್ತಿರುವುದನ್ನು ಪ್ರಶಂಸಿಸಿದರು.

"ವಿಶ್ವ ಪ್ರಪಂಚದ" ಗುರಿಯು ಮಹತ್ತರವಾದುದರಿಂದ, ಅದರ ಸಾಧನೆಗೆ ಬಹಳ ತಾಳ್ಮೆ ಮತ್ತು ದೀರ್ಘ ಕಾಲಗಳು ಅವಶ್ಯಕವೆಂದೂ, ಇದಕ್ಕಾಗಿ ಶ್ರಮಿಸುತ್ತಿರುವ ಅಂತರ ರಾಷ್ಟ್ರೀಯ ವಿಶ್ವವಿದ್ಯಾಲಯ ಸೇವಾ ಸಂಸ್ಥೆಯು ಪರಸ್ಪರ ಅಪನಂಬಿಕೆ ಮತ್ತು ಜಗಳಗಳಿಂದ ಕೆಟ್ಟ ಪರಿಣಾಮ [illegible] ಬದನ್ನು ಅರಿಯಬೇಕೆಂದೂ ಸೂಚಿಸಿದರು.

ಅನಾದಿ ಕಾಲದಿಂದಲೂ ವಿಶ್ವದ ಪ್ರಗತಿಯಲ್ಲಿ ಎಷ್ಟೋ ಆಂದೋಲನಗಳು ಉಂಟಾದರೂ ನಂಬಿಕೆ, ಪ್ರಾಮಾಣಿಕತೆ ಮತ್ತು ಪರಸ್ಪರ ಸಹಕಾರ ಇ-

ಸಹೋದ್ಯೋಗಿಗಳೊಡನೆ ಮುಖ್ಯ ಮಂತ್ರಿಯವರ ಸಮಾಲೋಚನೆ

ಸ್ವಂ. ಸು. ಸಂತೆ] ಬೆಂಗಳೂರು ೨೬

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಈ ದಿನ ಬೆಳಗ್ಗೆ, ತಮ್ಮ ಸಹೋದ್ಯೋಗಿಗಳಾದ ಶ್ರೀಗಳು ನಾಗನಗೌಡ, ಚನ್ನಬಸಪ್ಪ ಮತ್ತು ಇತರ ಜೊತೆಗಾರರೊಡನೆ ಮಾತುಕತೆ ನಡೆಸಿದರು.

ಮೈಸೂರು ರಾಜಕೀಯ ಬಿಕ್ಕಟ್ಟಿನ ಪರಿಹಾರಕ್ಕೆ ಹೈಕಮಾಂಡಿನ ಸೂತ್ರ

ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ತೀರ್ಮಾನಿಸಲು ಸೂಚನೆ

ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಸಮಿತಿ ಸಭೆಯು ನಿನ್ನೆ ದೆಹಲಿಯಲ್ಲಿ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರ ಮನೆಯಲ್ಲಿ ಸೇರಿ, ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ [illegible] ಮಂದಿ ಸದಸ್ಯರು ತಮ್ಮ ನಾಯಕರಲ್ಲಿ ಸೂಚಿಸಿದ್ದ ಅವಿಶ್ವಾಸ ನಿರ್ಣಯವನ್ನೂ, ಶ್ರೀ ಹನುಮಂತಯ್ಯನವರು ಪಕ್ಷದ ಮುಖಂಡತ್ವಕ್ಕೆ ರಾಜೀನಾಮೆ ಕೊಡಲು ಅನುಮತಿ ಕೋರಿ ಬರೆದಿದ್ದ ಪತ್ರವನ್ನೂ ಪರಿಶೀಲಿಸಿತು.

ಮೈಸೂರು ಶಾಸನ ಸಭಾ ಕಾಂಗ್ರೆಸ್ ಪಕ್ಷವು ಬೇಗನೆ ಸೇರಿ ಮುಖ್ಯ ಮಂತ್ರಿಯವರ ರಾಜೀನಾಮೆ ಪತ್ರವನ್ನು ಪರಿಶೀಲಿಸಿ ಪಕ್ಷದ ನಾಯಕತ್ವದ ವಿಚಾರವಾಗಿ ನಿರ್ಧಾರ ಕೈಗೊಳ್ಳಬಹುದೆಂದು ಸಮಿತಿಯು ಅಭಿಪ್ರಾಯಪಟ್ಟಿತು.

ಮುಖ್ಯ ಮಂತ್ರಿ, ಶ್ರೀ ಹನುಮಂತಯ್ಯನವರಿಗೆ ಪಾರ್ಲಿಮೆಂಟರಿ ಸಮಿತಿಯು ಸೂಚನೆಯೊಂದನ್ನಿತ್ತು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆಯನ್ನು ಬೇಗನೆ ಕರೆಯುವಂತೆ ತಿಳಿಸಿರುತ್ತದೆ. ಅವರ ರಾಜೀನಾಮೆ ಪತ್ರವು ಅಲ್ಲಿ ಚರ್ಚಿಸಲ್ಪಡುವುದು. ಪಕ್ಷವೇ ಇಚ್ಛಿಸಿದಲ್ಲಿ ರಾಜೀನಾಮೆಯನ್ನು ಅಂಗೀಕರಿಸಿ ಹೊಸ ನಾಯಕರನ್ನು ಆರಿಸಬಹುದೆಂದು ತಿಳಿಸಲಾಗಿದೆ.

ರಾಜೀನಾಮೆಯು ಅಂಗೀಕಾರವಾದನಂತರ ಬರುವ ಹೊಸ ಮಂತ್ರಿಮಂಡಲವು ಸಂಸ್ಥಾನ ಪುನರ್ವಿಂಗಡಣೆಯಾಗುವವರೆಗೆ ಇರುವುದೆಂದೂ, ಕರ್ನಾಟಕ ಸಂಸ್ಥಾನವಾದಮೇಲೆ ಹೊಸದಾಗಿ ನಾಯಕರ ಚುನಾವಣೆಯು ಅವಶ್ಯಕವಾಗುವುದೆಂದೂ ಹೇಳಲಾಗಿದೆ.

ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯು ಮುಂದಿನ ವಾರದಲ್ಲಿ ಸೇರಬಹುದು. ಅದರಲ್ಲಿ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀಮನ್ನಾರಾಯಣರವರು ಭಾಗವಹಿಸುವಂತೆ ನಿಯೋಜಿಸಲಾಗುವುದು.

ದೇ ಮುಂತಾದ ಮಾನವ ಗುಣಗಳ ಅಂತರ್ಗತ ಪಾವಿತ್ರತೆಯು ಹಾಗೆಯೇ ಉಳಿದುಬಂದಿರುವ ಕಾರಣವು ಈ ತತ್ವಗಳ ಆಚರಣೆಯಲ್ಲಿ ಪುರಾತನ ಕಾಲದಿಂದಲೂ ಬಹಳ ಮಹತ್ವವಿರುವುದೆ-ಎಂದು ಅವರು ನುಡಿದರು.

ನ್ಯೂಯಾರ್ಕ್ ಸಿಟಿ ಕಾಲೇಜಿನ ಅಧ್ಯಕ್ಷರಾದ ಡಾ॥ ಗ್ಯಾಲಘರ್‌ರವರು ವಂದನಾರ್ಪಣೆ ಮಾಡಿದರು.

ಆಯುರ್ವೇದ ಮತ್ತು ಯುನಾನಿಗಳಲ್ಲಿ ಪದವೀ ಶಿಕ್ಷಣ

ಮೈಸೂರು ಕಾಲೇಜಿನಲ್ಲಿ ಹೊಸ ಕ್ರಮ

ಬೆಂಗಳೂರು ೨೬

ಆಯುರ್ವೇದ ಮತ್ತು ಯುನಾನಿ ವೈದ್ಯ ಪದ್ಧತಿಯನ್ನು ದ್ವಿತೀಯ ಯೋಜನೆ ಅವಧಿಯಲ್ಲಿ ಹೆಚ್ಚು ಜನಪ್ರಿಯ ಮಾಡಲು ಮೈಸೂರು ಸರ್ಕಾರದವರು ಹಲವಾರು ಯೋಜನೆಗಳನ್ನು ಹಾಕಿದ್ದಾರೆಂದು ವರದಿಯಾಗಿದೆ

ಮೈಸೂರಿನ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಅಂತಸ್ತನ್ನೂ, ಅದಕ್ಕೆ ಸೇರಿದ ಆಸ್ಪತ್ರೆಯ ದರ್ಜೆಯನ್ನೂ ಹೆಚ್ಚಿಸಲಾಗುವುದು

ಆಯುರ್ವೇದ ಮತ್ತು ಯುನಾನಿ ಶಿಕ್ಷಣದಲ್ಲಿ ಈಗಿರುವ ೪ ವರ್ಷದ ಡಿಪ್ಲೊಮಾ ತರಗತಿಗಳನ್ನು ಐದು ವರ್ಷಗಳ ಪದವೀ ತರಗತಿಗಳಾಗಿ ಮಾರ್ಪಡಿಸಲಾಗುವುದೆಂದು ಹೇಳಲಾಗಿದೆ ಉಪಾಧ್ಯಾಯರುಗಳ ಸಂಖ್ಯೆಯನ್ನು ಹೆಚ್ಚಿಸಿ, ಕಾಲೇಜಿಗೆ ಸೇರಿದ ಆಸ್ಪತ್ರೆಯ ಹಾಸಿಗೆಗಳನ್ನು ಹೆಚ್ಚಿಸಲು ಆಲೋಚಿಸಲಾಗಿದೆ

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಉತ್ತಮವಾದ ಕಟ್ಟಡದ ಪ್ಲಾನುಗಳು ಮತ್ತು ಬ್ಲೂ ಪ್ರಿಂಟ್

ಮಾಡಿಕೊಡುವುದಕ್ಕೆ, ಗಾಯತ್ರಿ ಟಾಕೀಸ್ ಎದುರು ಫ್ಲಾಟ್ ಅಂಗಡಿಯಲ್ಲಿ

ಬಿ. ಮುನಿಸ್ವಾಮಪ್ಪ,

ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್

ಇವರನ್ನು ಕಾಣಬಹುದು

Edited, Printed and Published by A R Nagarajan at Sadhvi Press D. Subbaiah Road, Mysore

ಜೋರ್ಡಾನ್ ಸೈನಿಕರ ಮೇಲೆ ಇಸ್ರೇಲಿನವರ ಧಾಳಿ

ವಿಶ್ವಸಂಸ್ಥೆ ವೀಕ್ಷಕರಿಗೆ ಪೆಟ್ಟು

ಇಸ್ರೇಲ್ ಮತ್ತು ಜೋರ್ಡಾನ್ ದೇಶಗಳ ಗಡಿ ಪ್ರದೇಶದಲ್ಲಿರುವ ಷೇಕ್ ಅಬ್ದುಲ್ ಅಜೀಜ್ ಎಂಬಲ್ಲಿ ಮೊನ್ನೆ ಇಸ್ರೇಲಿ ಸೈನಿಕರು ಜೋರ್ಡಾನ್ ಪಡೆಗಳ ಮೇಲೆ ಧಾಳಿ ಮಾಡಿದಾಗ, ವಿಶ್ವಸಂಸ್ಥೆಯ ಯುದ್ಧ ನಿಲುಗಡೆ ವೀಕ್ಷಕರೊಬ್ಬರಿಗೂ, ೧೦ ಮಂದಿ ಜೋರ್ಡಾನ್ ಸೈನಿಕರಿಗೂ ಪೆಟ್ಟು ಬಿದ್ದಿತೆಂದು ಗೊತ್ತಾಗಿದೆ ಈ ಬಗ್ಗೆ ಜೋರ್ಡಾನು ಇಸ್ರೇಲಿನ ಮೇಲೆ ದೂರನ್ನು ಕೊಟ್ಟಿದೆ ಯುದ್ಧ ನಿಲುಗಡೆ ರೇಖೆಯನ್ನು ದಾಟಿ ಇಸ್ರೇಲಿಗಳು ಗುಂಡನ್ನು ಹಾರಿಸಿದರೆಂದು ಹೇಳಲಾಗಿದೆ ಜೋರ್ಡಾನಿನ ವಿಮಾನ ವಿಧ್ವಂಸಕ ಫಿರಂಗಿಗಳು ಮೊನ್ನೆ ಜೋರ್ಡಾನ್ ವಾಯುಮಂಡಲದ ಗಡಿ ಉಲ್ಲಂಘಿಸಿ ಬಂದ ಇಸ್ರೇಲೀ ವಿಮಾನವನ್ನು ನಾಶ ಮಾಡಿದುವು

ಲಕ್ಷ್ಮಿ ★ ಟಾಕೀಸ್

27-7-56 ರಿಂದ 5ನೇ ವಾರ

ವೀನಸ್ ಪಿಕ್ಚರ್ಸ್‌ರವರ

ಅಮರದೀಪಂ

ಪಾತ್ರ – ಶಿವಾಜಿಗಣೇಶ, ಪದ್ಮಿನಿ, ಸಾವಿತ್ರಿ, ತಂಗವೇಲು ಮುಂತಾದವರು

ಬೃಂದಾವನ – ಭಾರತದ ವರ್ಸೇಲ್ಸ್

★

ಉದ್ಯಾನಗಳಲ್ಲಿ ದೀಪೋತ್ಸವ

ಜುಲೈ 29 ರಿಂದ ಆಗಸ್ಟ್ 1 ನೇ ತಾರೀಖಿನವರೆಗೆ

(ಎರಡು ದಿನಗಳೂ ಸೇರಿ)

★

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ

ವಿಶೇಷ ವ್ಯವಸ್ಥೆ ಮಾಡಲಾಗಿದೆ

ಭೇಟಿ ಕೊಟ್ಟು ಆನಂದಪಡಿರಿ

ಮದುವೆಯಾಗದಿರಲು ರೇಷ್ಮೆ ಪ್ರವೀಣನ ವಿಚಿತ್ರ ಪ್ರತಿಜ್ಞೆ

ರೇಷ್ಮೆ ಕೈಗಾರಿಕೆಯಲ್ಲಿ ಕ್ರಾಂತಿಕಾರಕ ಬದಲಾವಣೆಗಳನ್ನು ತಾವು ತರುವವರೆಗೆ ವಿವಾಹವನ್ನು ಮಾಡಿಕೊಳ್ಳುವುದಿಲ್ಲವಾಗಿ ರಾಷ್ಟ್ರೀಯ ರೇಷ್ಮೆ ಸಂಶೋಧನಾ ಶಾಲೆಯ ಡೈರೆಕ್ಟರ್ ಶ್ರೀ ವಿ. ಕೆ ನರಸಿಂಹರವರು ಪ್ರತಿಜ್ಞೆ ಕೈಗೊಂಡಿದ್ದಾರೆ ಇವರು ಬೆಂಗಳೂರಿನಲ್ಲಿರುವ ಸುಪ್ರಸಿದ್ಧ ರೇಷ್ಮೆ ಕೈಗಾರಿಕೋದ್ಯಮಿ ಶ್ರೀ ಎಸ್ ವಿ ಶ್ರೀನಿವಾಸಶೆಟ್ಟರ ಬಂಧುಗಳು

ಹಾಸಿಗೆ – ದಿಂಬು

ಮನಸ್ಸಿನಲ್ಲಿ ಹತ್ತಿ ತುಂಬಿ ತಯಾರು ಮಾಡುತ್ತೇವೆ

ಬಾಯಿಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಶ್ರೀ ಕನ್ಯಕಾಪರಮೇಶ್ವರಿ ಕೋ-ಆಪರೇಟಿವ್ ಸೊಸೈಟಿ ಲಿ.

ಹನುಮಂತರಾವ್ ರಸ್ತೆ ಮೈಸೂರು

ಪ್ರಕಟಣೆ

ತಾ|| 1-8-1956 ರಿಂದ ಈ ಸೊಸೈಟಿಯ ವ್ಯಾಪಾರ ಕಾಲದ ಬ್ಯಾಂಕಿಂಗ್ ಶಾಖೆಯ ಲೇವಾದೇವಿ ಕಾಲವನ್ನು ಈ ಕೆಳಗೆ ಕಂಡಂತೆ ಬದಲಾಯಿಸಿರುತ್ತೆ

ಈಗ ಇರುವುದು —

9-30 ರಿಂದ 12ರವರೆವಿಗೆ

ಬದಲಾಯಿಸಿರುವುದು :—

8-30 ರಿಂದ 11ರವರೆವಿಗೆ

ಸಾಯಂಕಾಲದ ವೇಳೆಯಲ್ಲಿ ಏನೂ ಬದಲಾವಣೆ ಇಲ್ಲ ಎಂದಿನಂತೆ 5ರಿಂದ 7ರವರೆಗೂ ನಡೆಸುತ್ತೆ

ಎಸ್. ರಾಮಸ್ವಾಮಿ,
ಕಾರ್ಯದರ್ಶಿ,

ತಾ 25-7-1956

ತಿಲಕರ ದಿನಾಚರಣೆ

ರಾಜಧಾನಿಯ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಕಳೆದ ಸೋಮವಾರ ತಿಲಕರ ಸಾಂವತ್ಸರಿಕ ತಾ|| ೧೧ರವರೆಗೆ ಅಧ್ಯಕ್ಷತೆಯಲ್ಲಿ ನೆರವೇರಿತು ನಗರದಲ್ಲಿರುವ ಗಾಯತ್ರಿ ಲಲಿತಕಲಾ ಸಂಘದವರು ನೃತ್ಯ ಪ್ರದರ್ಶನವನ್ನು ಏರ್ಪಡಿಸಿದ್ದರು ಶ್ರೀಮತಿ ಇಂದ್ರಾಣಿ ಮತ್ತು ಶ್ರೀ ಎಲ್ ಕೇಶವಮೂರ್ತಿಯವರ ನೃತ್ಯಗಳು ಉತ್ತಮವಾಗಿದ್ದುವು ಶ್ರೀ ಬಾಲಚಂದ್ರರವರು ಪಿಯಾನೊ ಅಕಾರ್ಡಿಯನ್ ವಾದ್ಯವನ್ನು ನುಡಿಸಿದರು ಮಿಮಿಕ್ರಿ ಮುಂತಾದುವೂ ಇದ್ದುವು

ಮೈಸೂರು ಪೇಟೆ ಧಾರಣೆ

	ರೂ ಮುದ	ಕೂ ಪಲ್ಲ
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಕಪ್ಪುಭತ್ತ	[illegible]	
ಬಿಳಿಭತ್ತ	[illegible]	[illegible]
ಹೆಸರು	[illegible]	[illegible]
ಹುರುಳಿ	[illegible]	[illegible]
ಉದ್ದು	[illegible]	
ಕುಸುಬೆ	[illegible]	[illegible]
ಹುಣಿಸೆಹಣ್ಣು	[illegible]	[illegible]
ತೆಂಗಿನಕಾಯಿ ೧೦೦೦	[illegible]	[illegible]

SREE GANESH TALKIES

From 28-7-56 For 3 Days

Paramount s Vistavision Film

THE ROSE TATTOO

Starring – ANNA MAGNANI–the Italian actress of International fame & the academy award winner BURT LANCASTER

The boldest story of love you have ever been permitted to see !!

[FOR ADULTS ONLY]

★ ಮುತ್ತೈದೆ ಭಾಗ್ಯ ★

ಚಿತ್ರದ 50 ನೇ ದಿನೋತ್ಸವದ ಸವಿ ನೆನಪಿಗಾಗಿ

ಮೈಸೂರು ಚಾಮುಂಡೇಶ್ವರಿ ಚಿತ್ರ ಮಂದಿರದಲ್ಲಿ ಜುಲೈ ಇಪ್ಪತ್ತೆಂಟರ ಶನಿವಾರ ನೂರು ಪ್ರದರ್ಶನದ ಪ್ರೇಕ್ಷಕರಿಗೂ ಸಿಹಿ ತಿಂಡಿ ವಿತರಣೆ ಮಾಡಲಾಗುವುದು.

ಇದುವರೆಗೂ ಚಿತ್ರಕ್ಕೆ ಪ್ರೋತ್ಸಾಹ ನೀಡಿದ ಮೈಸೂರಿನ ಮಹಾಜನರಿಗೆ ನಮ್ಮ ಅನಂತ ವಂದನೆಗಳು

ತಮ್ಮ ಶುಭಾಗಮನವನ್ನು ಬಯಸುವ —

VIJAYA TALKIE DISTRIBUTORS

THE NATIONAL LEAGUE

Anathalaya Buildings, Mysore

Offers excellent Coaching for S. S. L. C. Students

★ Special Coaching for Primary School Teachers,

★ Classes are in full swing

JOIN AT ONCE

Timings – 5-30 P M to 8-30 P M.

V Rajagopal Iyengar,
Organiser

THE KAPILA TEXTILE MILLS Ltd, NANJANGUD

(Mysore State)

W A N T E D

Young and energetic persons studied up to S S L C, to work as WEAVERS, training being given to persons desirous of taking up weaving as profession Apply in person with application to the Manager at the Mills

ಮೈಸೂರು ಸರ್ಕಾರದ ವಿಮಾ ಇಲಾಖೆ

(ಪ್ರಜೆಗಳ ಶಾಖೆ)

★

ಅಂಕಿ ಅಂಶಗಳು ವ್ಯಕ್ತಪಡಿಸುವುವು :

1955-56 ರಲ್ಲಿನ ನೂತನ ವ್ಯವಹಾರವು ರೂ. 2.5 ಕೋಟಿಗೆ ಮೀರಿದೆ

★

ನಿಧಿ—ರೂ. 4·79 ಕೋಟಿಗಳಿಗಿಂತಲೂ ಹೆಚ್ಚಿದೆ

★

ವಿಮಾ ಮಾಡಿದ ಮೊತ್ತ-ರೂ. 13·87 ಕೋಟಿ

★

ಪಾವತಿ ಮಾಡಿರತಕ್ಕ ಕ್ಲೈಮುಗಳು 2·45 ಕೋಟಿ ರೂ.ಗಳಿಗಿಂತಲೂ ಮಿಗಿಲಾಗಿದೆ

★

ಹಂಚಿರುವ ಬೋನಸ್ಸು

ಹೋಲ್ ಲೈಫ್ : ರೂ. 20. — ಎಂಡೋಮೆಂಟ್ : ರೂ. 17.

★

— ಅತಿಕಡಿಮೆ ಪ್ರೀಮಿಯಂ ದರಗಳು :—

ಸ್ಪರ್ಧೆಯ ದರದಲ್ಲಿ ಮೋಟಾರು ವಾಹನಗಳ ವಿಮೆ ಮಾಡಲಾಗುವುದು

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

27–7–56ನೇ : ಶುಕ್ರವಾರದಿಂದ : ಯಶಸ್ವಿ 2ನೇ ವಾರ

ಪ್ರತಿದಿನ ಮೂರು ಪ್ರದರ್ಶನಗಳು

ಜುಪಿಟರ್‌ರವರ ತೆಲುಗು ಚಿತ್ರ ★ ಉಮಾಸುಂದರಿ ★

ಶೀಘ್ರದಲ್ಲೇ ಬರಲಿದೆ — ಚಿರಂಜೀವಲು — ವಿನೋದಾರವರ ತೆಲುಗು ಚಿತ್ರ

ರಿಜಿಸ್ಟರ್ ನಂ. 792

ಚಂದಾದರ

ವಿಚಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೯] SADHVI : SATURDAY 28—7—1956 ಮೈಸೂರು : ಶನಿವಾರ ೨೮—೭—೧೯೫೬ [ಸಂಚಿಕೆ : ೬೨೫

ಸೂಯೆಜ್ ಕಂಪೆನಿ ರಾಷ್ಟ್ರೀಕರಣಕ್ಕೆ ಬ್ರಿಟನ್ನಿನ ಪ್ರತಿಭಟನೆ

ಸೂಯೆಜ್ ಕಾಲುವೆ ಕಂಪೆನಿ ಈಜಿಪ್ಟ್ ಸರ್ಕಾರದ ವಶಕ್ಕೆ

ಈಜಿಪ್ಟ್ ಸರ್ಕಾರಕ್ಕೆ ಬ್ರಿಟನ್ನಿನ ಪ್ರತಿಭಟನೆ

ಈಜಿಪ್ಟಿನ ಅಧ್ಯಕ್ಷ ಗಾಮೆಲ್ ಅಬ್ದೆಲ್ ನಾಸಿರ್‌ರವರು ಮೊನ್ನೆ ರಾತ್ರಿ ಅಲೆಕ್ಸಾಂಡ್ರಿಯದಲ್ಲಿ ೧॥ ಲಕ್ಷ ಪ್ರಜೆಗಳನ್ನು ಉದ್ದೇಶಿಸಿ ಭಾಷಣ ಮಾಡಿ, ಸೂಯೆಜ್ ಕಾಲುವೆ ಕಂಪೆನಿಯನ್ನು ರಾಷ್ಟ್ರೀಕರಿಸಲು ತಮ್ಮ ಸರ್ಕಾರದವರು ನಿರ್ಧರಿಸಿರುವರೆಂದು ಘೋಷಿಸಿದರು. ಕಂಪೆನಿಯವರು ಹಣವನ್ನು ಚಳುವಳಿಗೆ ತೆಗೆದುಕೊಳ್ಳದಂತೆ ಮಾಡಿ, ಕಾಲುವೆಯಿಂದ ವರ್ಷಕ್ಕೆ ಬರುವ ೧೦ ಕೋಟಿ ಡಾಲರ್ ಹಣವನ್ನು ನೈಲ್ ನದಿಗೆ ಆಸ್ವಾನ್ ಎಂಬಲ್ಲಿ ಕಟ್ಟಬೇಕೆಂದಿರುವ ಅಣೆಕಟ್ಟಿಗಾಗಿ ಉಪಯೋಗಿಸಲಾಗುವುದೆಂದೂ ಅವರು ಹೇಳಿದರು.

ಸೂಯೆಜ್ ಕಾಲುವೆ ಕಂಪೆನಿಯನ್ನು ಈಜಿಪ್ಟು ರಾಷ್ಟ್ರೀಕರಿಸಲು ನಿರ್ಧರಿಸಿರುವುದಕ್ಕೆ ಬ್ರಿಟನ್ನು ಈಜಿಪ್ಟಿಗೆ ಪ್ರತಿಭಟನೆ ಸೂಚಿಸಿರುತ್ತದೆ. ರಾಷ್ಟ್ರೀಕರಣಕ್ಕೆ ಪ್ರತೀಕಾರವಾಗಿ ಲಂಡನ್ನಿನಲ್ಲಿರುವ ಈಜಿಪ್ಟಿನ ಬಾಕಿ ಸ್ಟರ್ಲಿಂಗ್ ಹಣದ ಪಾವತಿಯನ್ನು ತಡೆಗಟ್ಟುವ ವಿಚಾರವನ್ನು ಪರಿಶೀಲಿಸಲಾಗುವುದೆಂದು ಬ್ರಿಟನ್ನಿನ ಪ್ರಧಾನಿ ಈಡನ್ನರು ತಿಳಿಸಿರುತ್ತಾರೆ. ಫ್ರೆಂಚ್ ಸರ್ಕಾರವೂ ಸಹಾ ಪ್ರತಿಭಟನೆಯನ್ನು ಸೂಚಿಸಿ ಸಂಬಂಧಪಟ್ಟ ಇತರ ಸರ್ಕಾರಗಳೊಡನೆ ಈ ಬಗ್ಗೆ ಸಂಪರ್ಕ ಹೊಂದಿದೆ.

ಸೂಯೆಜ್ ಕಾಲುವೆ ಕಂಪೆನಿಯು ಈಜಿಪ್ಟಿನಲ್ಲಿ ರಿಜಿಸ್ಟರಾಗಿರುತ್ತದೆ. ಅದರ ಕೇಂದ್ರ ಕಛೇರಿಯು ಫ್ರಾನ್ಸಿನ ರಾಜಧಾನಿ ಪ್ಯಾರಿಸ್ ನಗರದಲ್ಲಿದೆ. ಕಂಪೆನಿಯ ಬಹುಮಟ್ಟಿನ ಷೇರುಗಳು ಬ್ರಿಟಿಷ್ ಸರ್ಕಾರದ್ದು. ಇತರ ರಾಷ್ಟ್ರಗಳ ಷೇರುಗಳೂ ಅವರಲ್ಲಿ ಹೆಚ್ಚಾಗಿವೆ.

ದೆಹಲಿಯಲ್ಲಿ ೧,೫೦೦ ಮಹಾರಾಷ್ಟ್ರರ ಬಂಧನ ಮತ್ತು ಬಿಡುಗಡೆ

ದೆಹಲಿಯಲ್ಲಿ ಪಾರ್ಲಿಮೆಂಟ್ ಭವನದ ಬಳಿ ನೆನ್ನೆ ೧,೫೦೦ ಮಂದಿ ಸಂಯುಕ್ತ ಮಹಾರಾಷ್ಟ್ರ ಪ್ರದರ್ಶನಕಾರರನ್ನು ಬಂಧಿಸಿ ಮೂರು ಗಂಟೆಗಳನಂತರ ಬಿಡುಗಡೆ ಮಾಡಲಾಯಿತು. ಪ್ರದರ್ಶನಕಾರರು ಪಾರ್ಲಿಮೆಂಟ್ ಭವನಕ್ಕೆ ಮೆರವಣಿಗೆಯಲ್ಲಿ ಹೋದರು. ಬೊಂಬಾಯಿ, ಬೆಳಗಾಂ ಮತ್ತು ಕಾರವಾರಗಳನ್ನು ಮಹಾರಾಷ್ಟ್ರದಲ್ಲಿ ಸೇರಿಸಬೇಕೆಂದು ಒತ್ತಾಯಪಡಿಸುವ ಘೋಷಣೆಯುಳ್ಳ ಫಲಕಗಳನ್ನು ಹಿಡಿದಿದ್ದರು. ಅವರ ಪೈಕಿ ೨೦೦ ಮಹಿಳೆಯರೂ ಇದ್ದರು.

ನಗರದ ಪೌರಸಭಾ ರೆವಿನ್ಯೂ ಅಧಿಕಾರಿಗಳ ವರ್ಗ

ಮೈಸೂರು ಪೌರಸಭೆಯ ರೆವಿನ್ಯೂ ಅಧಿಕಾರಿಗಳಾದ ಶ್ರೀ ಬಿ ತಿಮ್ಮಯ್ಯನವರನ್ನು ಶಿವಮೊಗ್ಗ ಜಿಲ್ಲಾ ಸರ್ವೆ ಅಧಿಕಾರಿಗಳಾಗಿ ವರ್ಗಾಯಿಸಲಾಗಿದೆ. ಮುಳಬಾಗಿಲಿನ ಅಮಲ್ದಾರ್ ಶ್ರೀ ಕೆ ಹೆಚ್ ಖಂಡೇರಾಯರನ್ನು ಶ್ರೀ ಬಿ ತಿಮ್ಮಯ್ಯನವರ ಸ್ಥಾನಕ್ಕೆ ವರ್ಗ ಮಾಡಲಾಗುವುದು.

ಬೈಸಿಕಲ್ ಮೇಲೆ ಇಬ್ಬರು ಸವಾರಿ ಮಾಡಲು ಅವಕಾಶ

ಸರ್ಕಾರದ ಆಜ್ಞೆಯ ವಿವರ

ಬೆಂಗಳೂರು ೨೭

ಸಾರ್ವಜನಿಕ ಸ್ಥಳ ಅಥವಾ ರಸ್ತೆಯಲ್ಲಿ ಬೈಸಿಕಲ್ ಮೇಲೆ ಸವಾರಿ ಮಾಡುವವನು ಇನ್ನೊಬ್ಬ ವ್ಯಕ್ತಿಯನ್ನು ಕೂರಿಸಿಕೊಂಡು ಹೋಗಬಹುದೆಂದು ಸರ್ಕಾರದವರು ನೆನ್ನೆ ಪ್ರಕಟ ಮಾಡಿರುವ ಆಜ್ಞೆಯು ಇದೇ ೨೬ನೇ ತಾರೀಖು ಮೈಸೂರು ಗೆಜೆಟ್ಟಿನ ೭೬ನೇ ನಂಬರಿನ ಸಂಚಿಕೆಯಲ್ಲಿ ಪ್ರಕಟವಾಗಿದೆ. ಆದರೆ ಬ್ಯಾರಿಯರ್ ಹಿಡಿದುಕೊಂಡು ಸ್ಕೂಟರ್ ಮೇಲೆ ಸವಾರಿ ಮಾಡಲು ಅವಕಾಶ ನೀಡಿಲ್ಲ. ಯಾವುದೇ ಪೌರಸಭೆಗಳಲ್ಲಿ ಡಬ್ಬಲ್ ರೈಡಿಂಗನ್ನು ನಿಷೇಧಿಸಿ ಬೈಲಾ ನಿಯಮಗಳನ್ನು ಮಾಡಿದ್ದರೆ ಆಯಾ ಪ್ರದೇಶಗಳಿಗೆ ಈ ವಿನಾಯಿತಿಯು ಅನ್ವಯಿಸುವುದಿಲ್ಲ.

[ಮೈಸೂರು ನಗರದಲ್ಲಿ ಈ ಬಗ್ಗೆ ಪೌರಸಭೆಯವರು ಯಾವ ನಿಯಮಾವಳಿಯನ್ನೂ ಮಾಡಿಲ್ಲವೆಂದು ತಿಳಿದುಬಂದಿದೆ. ಆದಾಗ್ಯೂ ಸಹಾ ಬೈಸಿಕಲ್‌ಗಳ ಮೇಲೆ ಇಬ್ಬರು ಸವಾರಿ ಮಾಡಿದರೆಂಬ ಕಾರಣಕ್ಕಾಗಿ ಇತ್ತೀಚೆಗೆ ಪೋಲೀಸಿನವರು ಕೆಲವರನ್ನು ಹಿಡಿದು ಕೋರ್ಟ್ ಕಛೇರಿಗಳಿಗೆ ಅಲೆಯುವಂತೆ ಮಾಡಿರುತ್ತಾರಾಗಿ ತಿಳಿದುಬಂದಿದೆ.

ಈ ವಿಷಯದಲ್ಲಿ ವಿವರಣೆಯನ್ನು ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಕೊಟ್ಟು, ಸಾರ್ವಜನಿಕರಿಗೆ ಸರಿಯಾದ ತಿಳುವಳಿಕೆಯನ್ನುಂಟುಮಾಡಬೇಕೆಂದು ಕೋರಲಾಗಿದೆ. —ಸಂ]

ನಗರದಲ್ಲಿ ಭಾರತದ ಪ್ರಖ್ಯಾತ ವ್ಯಾಯಾಮ ಪ್ರವೀಣರ ಪ್ರದರ್ಶನ

ಮೈಸೂರು ಜಿಲ್ಲಾ ವ್ಯಾಯಾಮ ಸಂಘದ ಆಶ್ರಯದಲ್ಲಿ ನಾಳೆ ಬೆಳಗ್ಗೆ ೮ ರಿಂದ ೯॥ ವರೆಗೆ ಮಹಾರಾಜಾ ಕಾಲೇಜು ಮೈದಾನದಲ್ಲಿ ಬೊಂಬಾಯಿನ ಪೈಲ್ವಾನರಾದ ಬಲದೇವಸಿಂಗ್‌ರವರೂ, ೬ ಅಡಿ ೫ ಅಂಗುಲ ಎತ್ತರದವರೆಗೆ ಹಾರಿ ಭಾರತದ ಹೈಜಂಪ್ ರಿಕಾರ್ಡ್ ಸ್ಥಾಪಿಸಿರುವ ಪಂಜಾಬಿನ ಅಜಿತ್ ಸಿಂಗರೂ ಸಾಹಸದ ಪ್ರದರ್ಶನವನ್ನು ಮಾಡುವರು. ಮೆಲ್ಬೋರ್ನ್ ನಗರದಲ್ಲಿ ನಡೆಯುವ ವಿಶ್ವ ಒಲಂಪಿಕ್ಸ್ ಪಂದ್ಯಗಳಲ್ಲಿ ಬಲದೇವಸಿಂಗರು ಭಾರತದ ಪರವಾಗಿ ಭಾಗವಹಿಸುವರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಶಾಂಗಸ್ವರ ೭—೯ ಕನ್ನಡ ಪದಗಳು. ೭—೪೦ ರಿಕಾರ್ಡ್. ೮—೫ ಪದವ ಮಹೇಶ್ವರ—ನಾಟಕ ೯—೧೫ ತಿಂಗ ವಾದ್ಯ ಕಛೇರಿ ೯ ೪೦ ಬಾಲ ಜಗತ್ ಮಕ್ಕಳ ಕಾರ್ಯಕ್ರಮ ಮಧ್ಯಾಹ್ನ ೧೨ ಮತ್ತು ೩ ೧೫ ಎಂ. ಎಸ್ ಗೋವಿಂದಸ್ವಾಮಿ—ಸಂಗೀತ ೧೨—೪೦ ವಾದ್ಯವೃಂದ ೧ ೮ ರಿಕಾರ್ಡ್. ೧ ೩೦ ಶಾಂಗಸ್ವರ. ಸಂಜೆ ೫ ಇಂಗ್ಲಿಷ್ ಸಂಗೀತ ೫ ೪೦ ಮತ್ತು ೭ ಶ್ರೀಮತಿ ಪ್ರಕಾಶ್—ಸಂಗೀತ ೬ ೧೫ ನಾವು ಮತ್ತು ನಮ್ಮವರು. ೭ ೪೦ ವಿಜ್ಞಾನಿಗಳು ನೋಟ ೮ ೩೦ ಸಂಗೀತ. ೯.೧೦ ನಾಟಕದ ಮೇಲೆ ಕನ್ನಡದಲ್ಲಿ ಚರ್ಚೆ ೯—೪೦ ಸಂಗೀತೋತ್ಸವ

ಭಾರತದಲ್ಲಿ ಹೆಚ್ಚು ಹಣ್ಣುಗಳನ್ನು ಬೆಳೆಯಬೇಕು

ಹಣ್ಣು-ಸಂರಕ್ಷಣೆಗಾರರ ಸಂಘದ ವಾರ್ಷಿಕೋತ್ಸವದಲ್ಲಿ ವಿದ್ಯಾ ಸಚಿವರ ಭಾಷಣ

ಮೈಸೂರು ೨೭

ಅಖಿಲ ಭಾರತ ಹಣ್ಣುಗಳ ಸಂರಕ್ಷಣೆಗಾರರ ಸಂಘದ ವಾರ್ಷಿಕೋತ್ಸವವು ನೆನ್ನೆ ಸಂಜೆ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ನಡೆಯಿತು. ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ನಾಗರತ್ನಮ್ಮನವರಿಂದ ಪ್ರಾರ್ಥನೆಯಾದನಂತರ ಸಂಘದ ಅಧ್ಯಕ್ಷರೂ ಮತ್ತು ಸಂಶೋಧನಾಲಯದ ಡೈರೆಕ್ಟರೂ ಆದ ಡಾ॥ ವಿ ಸುಬ್ರಹ್ಮಣ್ಯಂರವರು ಸ್ವಾಗತ ಭಾಷಣ ಮಾಡಿ ದೇಶದಲ್ಲಿ ಫಲಸಂರಕ್ಷಣಾ ಕೈಗಾರಿಕೆಯ ಅಗತ್ಯವನ್ನು ವಿವರಿಸಿದರು. ನಾನಾ ಕಾರಣಗಳಿಗಾಗಿ ಹಣ್ಣುಗಳು ಕೊಳೆಯುತ್ತಿರುವುದರಿಂದಲೂ ಅವುಗಳಿಂದ ವಸ್ತುಗಳನ್ನು ಸಮರ್ಪಕವಾಗಿ ಉಪಯೋಗಿಸಲು ಸಂರಕ್ಷಣಾ ಕೈಗಾರಿಕೆಗೆ ಪ್ರೋತ್ಸಾಹ ನೀಡಬೇಕೆಂದೂ ಹೇಳಿದರು.

ನಾನಾ ವಿಧದ ಹಣ್ಣು ಮತ್ತು ತರಕಾರಿಗಳನ್ನು ಬೆಳೆಯಲು ಸಂಸ್ಥಾನದಲ್ಲಿ ಮಲೆನಾಡು ಅತ್ಯುತ್ತಮವಾದುದೆಂದೂ, ಸರ್ಕಾರವು ಈ ಬಗ್ಗೆ ಕ್ರಮ ಕೈಗೊಳ್ಳಬೇಕೆಂದೂ ಕೋರಿದರು.

ಸಂಘದ ಕಾರ್ಯದರ್ಶಿ, ಶ್ರೀ ಎನ್ ಎಲ್ ಜೈನ್‌ರವರು ವಾರ್ಷಿಕ ವರದಿಯನ್ನು ಒಪ್ಪಿಸಿದರು. ಸಮಾರಂಭದ ಅಂಗವಾಗಿ ಹಣ್ಣುಗಳಿಂದ ತಯಾರಿಸಿದ ವಸ್ತುಗಳ ಪ್ರದರ್ಶನದಲ್ಲಿ ಭಾಗವಹಿಸಿದ್ದ ಹಲವರಿಗೆ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದರು.

ಅನಂತರ ಸಚಿವರು ತಮ್ಮ ಭಾಷಣದಲ್ಲಿ ನಮ್ಮ ದೇಶದ ಹಣ್ಣು ಮತ್ತು ತರಕಾರಿಗಳ ಬೆಳೆ ಮತ್ತು ಸೇವನೆಯ ಅತೃಪ್ತಿಕರ ಸ್ಥಿತಿಯನ್ನು ವಿವರಿಸಲು ಪ್ರತಿಯೊಬ್ಬರೂ ದಿನಚರಿ ಬಳಕೆಗಾಗಿ ತೆಂಗಿನಕಾಯಿ, ಬಾಳೆ, ಮಾವು, ಕಿತ್ತಳೆ ಮುಂತಾದ ಹಣ್ಣುಗಳನ್ನು ಬೆಳೆಯಬೇಕೆಂಬುದಾಗಿ ಸೂಚಿಸಿದರು.

ಅಮೇರಿಕದಲ್ಲಿ ಒಂದು ಎಕರೆಯಲ್ಲಿ ಬೆಳೆದ ಹಣ್ಣನ್ನು ಮೂವರು ತಿನ್ನುತ್ತಾರೆ. ಅದರೆ ಭಾರತದಲ್ಲಿ ೭೫ ಮಂದಿಯಾಗಿದ್ದಾರೆ. ಅಲ್ಲಿ ತಲಾ ೪೪೫ ಪೌಂಡ್ ಹಣ್ಣುಗಳನ್ನು ಸೇವಿಸಿದರೆ, ಭಾರತದಲ್ಲಿ ಕೇವಲ ೨೨ ಪೌಂಡು ಮಾತ್ರ ಸೇವಿಸುತ್ತಾರೆ. ಸಾಧಾರಣವಾಗಿ ಇತರ ಆಹಾರದೊಡನೆ ೮ ಔನ್ಸಿನಷ್ಟು ಹಣ್ಣುಗಳ ಸೇವನೆಯು ಅವಶ್ಯಕವಾದರೂ ಭಾರತದಲ್ಲಿ ಕೇವಲ ೧॥ ಔನ್ಸ್ ಮಾತ್ರ ಸೇವನೆಯಾಗುತ್ತಿದೆ. ಆದ್ದರಿಂದ ಈ ಕೊರತೆಯನ್ನು ಹೋಗಲಾಡಿಸಲು ಎಲ್ಲರೂ ಯತ್ನಿಸಬೇಕು. ಹೆಚ್ಚು ಪ್ರದೇಶದಲ್ಲಿ ಹೆಚ್ಚು ಹಣ್ಣುಗಳನ್ನು ಬೆಳೆಯಬೇಕು ಮತ್ತು ಸರ್ಕಾರವು ಇದಕ್ಕೆ ಸರ್ವ ಸಹಾಯವನ್ನು ನೀಡುವುದು—ಎಂಬುದಾಗಿ ಅವರು ನುಡಿದರು.

ಸಂಘದ ಉಪಾಧ್ಯಕ್ಷ ಶ್ರೀ ಗಿರಿಧರಲಾಲರು ವಂದನಾರ್ಪಣೆ ಮಾಡಿದರು.

ಮುಖ್ಯ ಮಂತ್ರಿಗಳಿಂದ ಕಾಂ॥ ಹೈಕಮಾಂಡಿನ ಆಜ್ಞೆಯ ಪಾಲನೆ

ಪತ್ರಿಕಾ ಪ್ರತಿನಿಧಿಗಳಿಗೆ ಹನುಮಂತಯ್ಯನವರ ಹೇಳಿಕೆ

ಬೆಂಗಳೂರು ೨೭

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ಹೇಳಿಕೆಯೊಂದನ್ನಿತ್ತು, ತಮಗೆ ಕೇಂದ್ರ ಪಾರ್ಲಿಮೆಂಟರಿ ಬೋರ್ಡಿನ ನಿರ್ಧಾರವು ಅಧಿಕೃತವಾಗಿ ಬಂದಿಲ್ಲವೆಂದೂ, ಈ ದಿನ ಅದು ತಲಪಬಹುದೆಂದೂ, ಬೋರ್ಡಿನ ತೀರ್ಮಾನವನ್ನು ತಾವು ಪಾಲಿಸುವುದಾಗಿಯೂ ಹೇಳಿದರು. ಮುಂದಿನ ಕ್ರಮ ಜರುಗಿಸುವ ಬಗ್ಗೆ ತಾವು ಬೋರ್ಡಿನ ಪತ್ರವನ್ನು ನಿರೀಕ್ಷಿಸುತ್ತಿರುವುದಾಗಿಯೂ ತಿಳಿಸಿದರು.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸಿ, ತಮಗೂ ಬೋರ್ಡಿನ ತೀರ್ಮಾನದ ಪತ್ರವು ಬಂದಿಲ್ಲವೆಂದು ನುಡಿದರು.

ಕ್ರೀಡಾ ಕೇಂದ್ರ ಶಿಬಿರದ ಬಹುಮಾನ ವಿನಿಯೋಗ

ಶಿಶು ಸಾಹಿತ್ಯ ಸಂಘದ ಕ್ರೀಡಾ ಕೇಂದ್ರದ ನಾಯಕರಿಗೆ ಪ್ರಶಸ್ತಿ ಪತ್ರಗಳನ್ನೂ ಮತ್ತು ಮಕ್ಕಳ ಆಟದಲ್ಲಿ ಭಾಗವಹಿಸಿದ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನಾಳೆ ಸಂಜೆ ೪ ಗಂಟೆಗೆ ಡಿ ಬನುಮಯ್ಯನವರ ಪ್ರೌಢಶಾಲೆಯಲ್ಲಿ ಹಂಚಲಾಗುವುದು. ಮಕ್ಕಳಿಂದ ಆಟಗಳನ್ನೂ ಏರ್ಪಡಿಸಿದೆ.

ಸಮಾಜವಾದಿಗಳ ವಾರಾಚರಣೆ

ರಾಜಧಾನಿಯಲ್ಲಿರುವ ಸಮಾಜವಾದಿ ಪಕ್ಷದ ಶಾಖಾ ಸಭೆಯು ಕಳೆದ ಗುರುವಾರ ಶ್ರೀ ವಿಶ್ವನಾಥ್‌ರವರ ಅಧ್ಯಕ್ಷತೆಯಲ್ಲಿ ನಡೆದು, ಬರುವ ತಿಂಗಳು ೮ ರಿಂದ ೧೫ ರವರೆಗೆ ಸೋಷಲಿಸ್ಟ್ ವಾರವನ್ನು ಆಚರಿಸಲು ನಿರ್ಧಾರವಾಯಿತು. ಅದಕ್ಕಾಗಿ ಸಮಿತಿಯನ್ನು ರಚಿಸಲು ತೀರ್ಮಾನಿಸಲಾಯಿತು. ಹೋಬಳಿಗಳಲ್ಲಿ ಪ್ರಚಾರವನ್ನು ಮಾಡಲಾಗುವುದು. ಮೈಸೂರು ನಗರದಲ್ಲಿ ಕೇಂದ್ರ ಸರ್ಕಾರದ ವಸತಿ ಮಾರಾಟವು ಕೂಡಲೇ ಏರ್ಪಾಡಾಗಬೇಕೆಂದು ಸಭೆಯು ಸೂಚಿಸಿತು. ನಗರದ ಪೌರ ಸಭೆಯವರು ಮನೆಗಂದಾಯದ ಪುನರ್ವಿಮರ್ಶೆಯ ಹೆಸರಿನಲ್ಲಿ ಕಂದಾಯವನ್ನು ಮನಸ್ಸಿಗೆ ಹೆಚ್ಚಿಸಿರುವುದಕ್ಕಾಗಿ ಸಭೆಯು ಪ್ರತಿಭಟಿಸಿತು. ಕೂಡಲೇ ಹಿಂದಿನಂತೆ ಕಂದಾಯ ವಿಧಾಯಕವಾಗಬೇಕೆಂದು ಒತ್ತಾಯಪಡಿಸಲಾಯಿತು. ಬಾಲಗಂಗಾಧರ ತಿಲಕರು ದೇಶಕ್ಕೆ ಮಾಡಿದ ಸೇವೆಯನ್ನು ಪ್ರಶಂಸಿಸಿ, ಅವರ ಆದರ್ಶ ಪಾಲನೆಯಾಗಬೇಕಾದರೆ ದೇಶದಲ್ಲಿ ಸುವ್ಯವಸ್ಥಿತ ಸಮಾಜವಾದಿ ಸಮಾಜದ ರಚನೆಯಾಗಬೇಕೆಂದು ತಿಳಿಸಲಾಯಿತು.

ನಂಜನಗೂಡಿನಲ್ಲಿ ಭಾರತ ವಾಚನ

ನಂಜನಗೂಡು ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಚಾಮುಂಡೇಶ್ವರಿ ಜಯಂತಿ ಪ್ರಯುಕ್ತ ನಾಳೆ ಸಂಜೆ ಹೂವಿನ ಸೀರೆ ಸೇವೆಯೂ ಮತ್ತು ಶ್ರೀ ಕೆ ಎಸ್ ಸುಬ್ರಹ್ಮಣ್ಯಂರವರಿಂದ ಭಾರತದ ವಾಚನವೂ ಏರ್ಪಾಡಾಗಿವೆ.

ಬಸ್ಸಾಂ ಪ್ರವಾಹದಿಂದ ೨೦೦ ಸಂಸಾರಗಳಿಗೆ ಕಷ್ಟ

ಅಸ್ಸಾಮಿನ ಮಾರ್ಗರಿಟ್ ಎಂಬಲ್ಲಿಗೆ ಸಮೀಪದಲ್ಲಿರುವ ಸುಮಾರು ೭ ಹಳ್ಳಿಗಳಲ್ಲಿ ಬುರಿದೇಹಿಂಗ್ ನದಿಯಲ್ಲಿ ಪ್ರವಾಹ ಬಂದು ೨೦೦ ಸಂಸಾರಗಳಿಗೆ ತೊಂದರೆಯಾಗಿದೆ. ಮಾರ್ಗರಿಟ್ ನಗರದ ಪೇಟೆ ಬೀದಿಯಲ್ಲಿ ಸೊಂಟದುದ್ದ ನೀರು ನಿಂತಿದೆ. ೭ ಹಳ್ಳಿಗಳವರೊಡನೆ ಸಂಪರ್ಕವಿಟ್ಟುಕೊಳ್ಳಲು ಅಸಾಧ್ಯವಾಗಿದೆ. ಪತ್ರಿಬಿಲಾ ರೇಡೊ ವಿಮಾನ ನಿಲ್ದಾಣದಲ್ಲೂ ನೀರು ನಿಂತಿದೆ.

ಕೊಲೆ ಆಪಾದನೆಯಿಂದ "ವಧು" ಮತ್ತಿಬ್ಬರ ಖುಲಾಸೆ

ಕೋಲಾರ ತಾಲ್ಲೂಕು ಬೆಟ್ಟಜೇನಹಳ್ಳಿಯಲ್ಲಿ ರಾಮಯ್ಯ ಎಂಬ ತನ್ನ ಸೋದರಮಾವನನ್ನು ತಾಳಿಯಿಂದ ಇರಿದು ಕೊಲೆ ಮಾಡಿದಳೆಂದು ವೆಂಕಟಮ್ಮ ಎಂಬ ೧೮ ವರ್ಷದ ವಧು, ಆಕೆಯ ತಾಯಿ ಕೊಂದಮ್ಮ ಮತ್ತು ಅಣ್ಣಪ್ಪ ಎಂಬ ಸಹೋದರ ಇವರುಗಳ ಮೇಲೆ ಹೂಡಲಾಗಿದ್ದ ಮೊಕದ್ದಮೆಯಲ್ಲಿ ಆಪಾದಿತರೆಲ್ಲರನ್ನೂ ಖುಲಾಸೆ ಮಾಡಲಾಗಿದೆ. ಗಣೇ ಆಪಾದಿತಳ ಮದುವೆಯ ದಿನ ಆಕೆಯನ್ನು ವಿವಾಹವಾಗುವ ಉತ್ಸಾಹದಿಂದ, ಗತಿಸಿದ ರಾಮಯ್ಯನು ಆಕೆಯನ್ನು ಕಲ್ಯಾಣ ಮಂಟಪದಿಂದ ಎಳೆಯುತ್ತಿದ್ದಾಗ ದುರ್ಘಟನೆಯು ನಡೆಯಿತೆಂದು ಹೇಳಲಾಗಿದೆ.

ಚಾಮರಾಜನಗರದಲ್ಲಿ ವಿಲಿಯಂ ರತನ್‌ದಾನ ಜಯಂತ್ಯುತ್ಸವ

ಚಾಮರಾಜನಗರದ ಎರವಿಂದ ಹಿಂದಿ ಸುಂದರದ ವಿದ್ಯಾರ್ಥಿಗಳು ಕಳೆದ ಸೋಮವಾರ ಶ್ರೀ ಬಾಲಗಂಗಾಧರ ತಿಲಕ್‌ರವರ ಜನ್ಮದಿನ ಜಯಂತ್ಯುತ್ಸವವನ್ನು ಶ್ರೀ ವೈ ಎಂ ಎಸ್ ಅಯ್ಯಂಗಾರ್‌ರವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು. ಶ್ರೀ ಸಿ ಎ ಗೋವಿಂದರಾಜ ಶೆಟ್ಟಿಯವರಿಂದ ಸ್ವಾಗತ ಭಾಷಣವಾದನಂತರ ಸಮಿತಿಯ ಗೌರವ ಕಾರ್ಯದರ್ಶಿ ಶ್ರೀ ಕೆ ಸಿ ನಾಗಪ್ಪನವರು ತಿಲಕರ ದೇಶಸೇವೆಯ ವಿಷಯವಾಗಿ ಮಾತನಾಡಿದರು. ಅಧ್ಯಕ್ಷರ ಭಾಷಣಾನಂತರ ವಂದನಾರ್ಪಣ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ನಂಜನಗೂಡು ಪ್ರೌಢ ಶಾಲೆಯಲ್ಲಿ ಉಪಾಹಾರದ ವ್ಯವಸ್ಥೆ

ನಂಜನಗೂಡಿನ ಪ್ರೌಢಶಾಲೆಯಲ್ಲಿ ಕಳೆದ ಸೋಮವಾರದಿಂದ ಕಡಿಮೆ ದರದ ಉಪಾಹಾರದ ವ್ಯವಸ್ಥೆಯನ್ನು ಮಾಡಲಾಗಿದೆ. ವಿದ್ಯಾರ್ಥಿಗಳು ಇದನ್ನು ಸದುಪಯೋಗಪಡಿಸಿಕೊಂಡು ಶಿಸ್ತಿನಿಂದ ನಡೆದುಕೊಳ್ಳುವಂತೆ ಮುಖ್ಯೋಪಾಧ್ಯಾಯರು ವಿದ್ಯಾರ್ಥಿಗಳಿಗೆ ತಿಳಿಸಿರುತ್ತಾರೆ.

ಬೇರ ಹುದ್ದೆಗಳಿಗೆ ಹೋಗಲು ರೈಲ್ವೆ ನೌಕರರಿಗೆ ನಿರ್ಬಂಧ

ತಮ್ಮ ಇಲಾಖೆಗೆ ಸೇರದ ಇತರ ಹೊರಗಿನ ಹುದ್ದೆಗಳಿಗೆ ರೈಲ್ವೆ ನೌಕರರು ಅರ್ಜಿ ಹಾಕಿಕೊಳ್ಳಬಾರದೆಂದು ರೈಲ್ವೆ ಬೋರ್ಡಿನವರು ನಿಷೇಧಿಸಿರುತ್ತಾರೆ. ಬೇರೆಬೇರೆ ಹುದ್ದೆಗಳಿಗೆ ನೌಕರರು ಹೋದರೆ ಅದರಿಂದ ದ್ವಿತೀಯ ಯೋಜನೆ ಕಾರ್ಯಕ್ಕೆ ಅಡಚಣೆಯಾಗುವುದೆಂದು ಭಾವಿಸಲಾಗಿದೆ.

ಭಾರತದ ಪ್ರಥಮ ಪ್ರಯಾಣಿಕರ ಹಡಗು

ವಿಶಾಖಪಟ್ಟಣದಲ್ಲಿ ಹಿಂದೂಸ್ತಾನ್ ಹಡಗು ನಿರ್ಮಾಣ ಕೇಂದ್ರದಲ್ಲಿ ಇದೇ ಪ್ರಥಮವಾಗಿ ತಯಾರಾದ ಪ್ರಯಾಣಿಕರು ಮತ್ತು ಸಾಮಗ್ರಿ ಸಾಗಿಸುವ ಹಡಗನ್ನು ಸಮುದ್ರದಲ್ಲಿ ಯಾನ ಮಾಡಿಸಲಾಯಿತು. ಅದು ೯,೦೦೦ ಟನ್ ತೂಕವಿದೆ. ಅದಕ್ಕೆ ಅಂಡಮಾನ್ ರಾಜ್ಯ ಎಂಬ ಹೆಸರನ್ನಿಡಲಾಗಿದೆ. ಅದು ಅಂಡಮಾನ್ ದ್ವೀಪ ಮತ್ತು ಭಾರತಗಳ ನಡುವೆ ಓಡಾಡುವುದು.

ಬಿ. ಟಿ. ಅಕ್ಕಿ ಮತ್ತು ಎಣ್ಣೆ ಗಿರಣಿ ಕಾರ್ಮಿಕರ ಸಂಘ

ರಾಜಧಾನಿಯಲ್ಲಿರುವ ಬಿ ಟಿ ಅಕ್ಕಿ ಮತ್ತು ಎಣ್ಣೆ ಗಿರಣಿಯ ಕಾರ್ಮಿಕಸಂಘದವರು ಕಳೆದ ಭಾನುವಾರ ಪೌರಸಭಾ ಸದಸ್ಯ ಶ್ರೀ ಅಜೀಜ್ ಸೇಟರ ಅಧ್ಯಕ್ಷತೆಯಲ್ಲಿ ಸಭೆ ಸೇರಿದ್ದರು. ಕಾರ್ಯದರ್ಶಿಗಳಾದ ಶ್ರೀ ಎಸ್ ಎ ಆರ್ ಖಲೀಲ್ ಮತ್ತು ... ಭಾಷಣ ಮಾಡಿದರು. ಬರುವ ತಿಂಗಳು ಪ್ರಥಮ ವಾರದಲ್ಲಿ ಸಂಘದ ವಾರ್ಷಿಕ ದಿನಾಚರಣೆ ಮಾಡಬೇಕೆಂದು ನಿರ್ಧರಿಸಲಾಯಿತು. ಅಧ್ಯಕ್ಷರು ಭಾಷಣ ಮಾಡಿ, ಕಾರ್ಮಿಕರು ತಮ್ಮ ಗುರಿಯನ್ನು ಅಹಿಂಸೆಯ ಮೂಲಕ ಸಾಧಿಸಬೇಕೆಂದು ತಿಳಿಸಿದರು. ಶ್ರೀ ಲಕ್ಷ್ಮಯ್ಯನವರಿಂದ ವಂದನಾರ್ಪಣೆಯಾಯಿತು.

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಸಣ್ಣಕ್ಕಿ	೩೨ ೧೨ ೦	೩೫ ೨ ೦
ದಪ್ಪಕ್ಕಿ	೨೯ ೦ ೦	೩೨ ೧೨ ೦
ರಾಗಿ	೨೮ ೧೪ ೦	೨೯ ೧೪ ೦
ಕಡಲೆಕಾಯಿ	೮ ೨ ೦	೨೦ ೧೨ ೦
ಹುಚ್ಚೆಳ್ಳು	೫೧ ೨ ೦	
ಉಪ್ಪು	೮೪ ೧೦ ೦	೯೪ ೧೪ ೦
ಎಳ್ಳು	೫೯ ೦ ೦	೬೦ ೨ ೦
ಹುರುಳಿ	೩೭ ೨ ೨	೩೨ ೧೪ ೦
ಕಲ್ಲುಪ್ಪು	೪೭ ೧೪ ೦	೪೯ ೦ ೦
ಎಣ್ಣೆ	೩೧ ೧೦ ೦	೩೭ ೩ ೦
ಧನಿಯ	೩೭ ೪ ೦	
ನಾಗರೀಕ	೬ ೧೨ ೦	
ಹುಣಸೇಹಣ್ಣು	೫ ೧೨ ೦	
ಮೆಣಸಿನಕಾಯಿ	೧೨ ೩ ೦	೧೭ ೨ ೦
ಕೆಂಪು ಸಕ್ಕರೆ ೧೦೦	೯ ೮ ೦ ೦	೨೩೨ ೮ ೮
ಹೆಸರು	೫೨ ೧೪ ೦	

ನದಿಗೆ ಟ್ರ್ಯಾಕ್ಟರ್ ಉರುಳಿ ೯ ಜನರ ಮರಣ

ಮಧ್ಯ ಭಾರತದ ಶಿವಪುರಿ ಎಂಬ ಊರಿನ ಬಳಿ ಕಳೆದ ಮಂಗಳವಾರ ಸೀಪ್ ನದಿಯಲ್ಲಿ ಟ್ರ್ಯಾಕ್ಟರ್ ಒಂದು ಮಗುಚಿಕೊಂಡು ಅದಕ್ಕೆ ಲಗತ್ತಾಗಿದ್ದ ಟ್ರಾಲಿಯಲ್ಲಿದ್ದ ೧೮ ಜನರ ಪೈಕಿ ೯ ಮಂದಿ ನೀರು ಪಾಲಾದರೆಂದು ವರದಿಯಾಗಿದೆ. ಉಳಿದವರು ಈಜಿ ದಡ ಸೇರಿದರು.

ಕೇಂದ್ರ ನೌಕರರಿಗೆ ಹೆಚ್ಚು ಸಂಬಳ

ಬರುವ ೧ನೇ ತಾರೀಖಿನಿಂದ ಕೇಂದ್ರ ಸರ್ಕಾರದ ಗುಮಾಸ್ತರು ಮತ್ತು ಇತರ ಗುಮಾಸ್ತರಲ್ಲದ ನೌಕರರುಗಳಿಗೆ ಹೆಚ್ಚಿನ ಸಂಬಳದ ದರ್ಜೆಯನ್ನು ಸರ್ಕಾರದವರು ಗೊತ್ತುಪಡಿಸಿರುತ್ತಾರೆ. ಪ್ರಾರಂಭಿಕ ಸಂಬಳವನ್ನು ಈಗಿರುವ ೫೫ರ ಬದಲು ೬೦ ರೂ ಗಳಿಗೆ ನಿಗದಿ ಮಾಡಲಾಗಿದೆ.

ಮಂಡ್ಯ ಕಾಲೇಜಿಗೆ ವರ್ಗ

ಇಲ್ಲಿನ ಮಹಾರಾಜಾ ಕಾಲೇಜಿನ ಪರ್ಷಿಯನ್ ಭಾಷಾ ಪ್ರೊಫೆಸರ್ ಶ್ರೀ ಅಬ್ದುಲ್ ಮಜೀದ್‌ರವರನ್ನು ಮಂಡ್ಯದ ಇಂಟರ್‌ಮೀಡಿಯೆಟ್ ಕಾಲೇಜಿನ ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲಾಗಿದೆ.

ವಂದನಾರ್ಪಣೆ

ನಮ್ಮ ಪೂಜ್ಯ ಪಿತೃವರ್ಯರಾದ ಆಸ್ಥಾನ ಮಹಾ ವಿದ್ವಾನ್ ನಂಜನಗೂಡು ಶ್ರೀಕಂಠಶಾಸ್ತ್ರಿಗಳವರು ದಿವಂಗತರಾದಾಗ ಸಂತಾಪವನ್ನು ಸೂಚಿಸಿ ನಮಗೆ ಧೈರ್ಯ ನೀಡಿದ ಎಲ್ಲ ಮಹನೀಯರಿಗೂ, ಸಂಸ್ಥೆಗಳಿಗೂ ನಾವು ಈ ಮೂಲಕ ಕೃತಜ್ಞತಾಪೂರ್ವಕ ಧನ್ಯವಾದಗಳನ್ನರ್ಪಿಸುತ್ತೇವೆ.

ಎನ್. ಎಸ್. ಸುಬ್ರಹ್ಮಣ್ಯಂ ಮತ್ತು ಸಹೋದರರು

ಸಾರ್ವಜನಿಕ ವಿದ್ಯಾರ್ಥಿನಿಲಯ
ವಿದ್ಯಾರಣ್ಯಪುರ, ಮೈಸೂರು

ಟೆಂಡರ್ ನೋಟೀಸ್

ಮೇಲ್ಕಂಡ ನಿಲಯದ ಪ್ರಧಾನ ಕಟ್ಟಡಕ್ಕೆ ಸೇರಿದಂತೆ ರೂಮುಗಳು ಮತ್ತು ನಿಲಯದ ಹಿಂಭಾಗದ ತೆಂಪೊ ಪಡ್ಡ ಕಟ್ಟಲು ಅಪ್ರೂವ್ಡ್ ಕಂಟ್ರಾಕ್ಟರುಗಳಿಂದ ಸೀಲುಮಾಡಿದ ಟೆಂಡರುಗಳನ್ನು ತಾ|| 1-8-1956 ರ ಸಂಜೆ 4 ಘಂಟೆವರೆಗೆ ಸ್ವೀಕರಿಸಲಾಗುವುದು. ಕೆಲಸದ ಒಟ್ಟು ಅಂದಾಜು ಮೊಬಲಗು 32,400 ರೂಪಾಯಿಗಳು. ಟೆಂಡರ್ ಫಾರಂಗಳನ್ನು ಕೆಳಗೆ ಸಹಿ ಮಾಡಿರುವವರಿಂದ ಫಾರಂ ಒಂದಕ್ಕೆ 1 ರೂ ಕೊಟ್ಟು ಪಡೆಯಬಹುದು. ವಿವರಗಳಿಗೆ ಕೆಲಸದ ವೇಳೆಯಲ್ಲಿ ನಿಲಯದ ಆಫೀಸಿನಲ್ಲಿ ವಿಚಾರಿಸಿರಿ.

(ಸಹಿ) ಟಿ ಎಸ್ ಸುಬ್ಬಣ್ಣ,
ಕಾರ್ಯದರ್ಶಿ

ಮೈಸೂರು ಜೈನ ಅಸೋಸಿಯೇಷನ್
ಮೈಸೂರು

ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದುವ ಜೈನ ಬಡ ವಿದ್ಯಾರ್ಥಿಗಳಿಗೆ 56-57ನೇ ಸಾಲಿಗೆ ಕೆಲವು ವಿದ್ಯಾರ್ಥಿ ವೇತನ ಕೊಡಲ್ಪಡುತ್ತೆ. ಪಡೆಯಲಿಚ್ಛಿಸುವವರು ಆಯಾಯ ಹೈಸ್ಕೂಲಿನ ಯಾ ಕಾಲೇಜಿನ ಮುಖ್ಯೋಪಾಧ್ಯಾಯರ ಸರ್ಟಿಫಿಕೇಟಿನೊಂದಿಗೆ ನಿಯಮಿತ ಫಾರಂನಲ್ಲಿ 10-8-1956 ರ ಒಳಗಾಗಿ ಅರ್ಜಿ ಹಾಕಿಕೊಳ್ಳತಕ್ಕದ್ದು. ಸ್ಕಾಲರ್‌ಷಿಪ್ ಫಾರಂಗಳು ಮೇಲ್ಕಂಡ ಅಸೋಸಿಯೇಷನ್ ಆಫೀಸಿನಲ್ಲಿ ಸಿಗುತ್ತವೆ.

(ಸಹಿ) ಟಿ. ಶಾಂತರಾಜಯ್ಯ,
ಮೈಸೂರು ಪ್ರೆಸಿಡೆಂಟ್
26-7-1956

ಅರಸು ಬೋರ್ಡಿಂಗ್ ಶಾಲೆಯಲ್ಲಿ ಮಹಾರಾಜರ ವರ್ಧಂತ್ಯುತ್ಸವ

ರಾಜಧಾನಿಯ ಅರಸು ವಿದ್ಯಾವರ್ಧಕ ಮಂಡಲಿಯ ಆಶ್ರಯದಲ್ಲಿ ನಾಳೆ ಇಲ್ಲಿನ ಚಾಮರಾಜೇಂದ್ರ ಅರಸು ಬೋರ್ಡಿಂಗ್ ಶಾಲೆಯಲ್ಲಿ ಶ್ರೀ ಮನ್ಮಹಾರಾಜರ ವರ್ಧಂತಿಯನ್ನು ನೆರವೇರಿಸಲಾಗುವುದು. ಅದರ ಅಂಗವಾಗಿ ಬೆಳಗ್ಗೆ ಶ್ರೀ ದೇವಿ ಪೂಜೆ, ಮಹಾರಾಜರಿಗೆ ಶ್ರೇಯಃ ಪ್ರಾರ್ಥನೆಯೂ, ಸಂಜೆ ಸಮಾರಂಭವೂ ಜರುಗುವುವು.

ಸಾಯಿಬಾಬಾ ಉತ್ಸವ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದಲ್ಲಿ ನಡೆಯುತ್ತಿದ್ದ ಗುರು ಪೂರ್ಣಿಮಾ ಉತ್ಸವದ ಅಂಗವಾಗಿ ಮೊನ್ನೆ ರಾತ್ರಿ ಸಾಯಿಬಾಬಾರವರ ಉತ್ಸವವು ನಗರದ ನಾನಾ ಬೀದಿಗಳಲ್ಲಿ ವೈಭವದಿಂದ ಜರುಗಿತು. ಅನೇಕ ಮಹನೀಯರು ಮತ್ತು ಮಹಿಳೆಯರು ಭಾಗವಹಿಸಿದ್ದರು. ಭಜನೆಗಳು ಏರ್ಪಾಡಾಗಿದ್ದವು.

Pals
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
71/1 A. S Street,
BANGALORE 2

Office of the Huzur Secretary to His Highness the Maharaja of Mysore, the Palace, Mysore

NOTIFICATION

Applications are invited for the post of a Shroff in the Palace Treasury from experienced persons in the form prescribed by the Public Service Commission.

The applicants must be of 28 years of age. They must have passed at least the S. S. L. C Examination and have a sound knowledge of the preparation of Gold and Silver articles and precious stones and maintenance of accounts thereof.

The pay of the appointment is Rs 35 in the first instance. The candidates will be on probation for one year and if found satisfactory, he will be confirmed in grade 35-2-45.

The Service in Palace is governed by the Palace Service Rules. The selected candidate will have to furnish a cash security deposit of Rs 500.

The applications should reach this office on or before 31st July 1956.

G. Gurumurthy Sastry,
For Huzur Secretary to H H the Maharaja of Mysore

Edited, Printed and Published by A R Nagarajan at Sadhvi Press D. Subbaiah Road, Mysore

12-7-1956ನೇ ಗುರುವಾರದಿಂದ ಆರಂಭ ಪ್ರಾರಂಭ
ಹೊಸ ಮ್ಯಾನೇಜ್‌ಮೆಂಟ್
ವೆಲ್‌ಕಮ್ ಕಾಫಿ ಕ್ಲಬ್
(ಪ್ರಭಾ ಟಾಕೀಸ್ ಎದುರು) ಮೈಸೂರು
ಹೈಗ್ರೌಂಡಿನಲ್ಲಿ ಪ್ರಖ್ಯಾತಿ ಪಡೆದಿರುವ ಹರೀ ಅಗ್ರಹಾರದ ಶ್ರೀ ಸುಬ್ಬರವರ ನೇತೃತ್ವದಲ್ಲಿ ಮಾಡಲ್ಪಟ್ಟ ರುಚಿಕರವಾದ, ಶುದ್ಧ ತುಪ್ಪದಿಂದ ತಯಾರಾದ ಕೇಸರಿಭಾತ್, ಸ್ಪೆಷಲ್ ದೋಸೆ, 'ಎ' ಒನ್ ಕಾಫಿ ಮತ್ತು ಇತರ ಸಿಹಿ ಮತ್ತು ಖಾರ ತಿಂಡಿ ದುಗಳಿಗೆ ವೆಲ್‌ಕಮ್ ಕಾಫಿ ಕ್ಲಬ್ಬಿಗೆ ದಯಮಾಡಿ ಭೇಟಿ ಕೊಡಿ
ಡಿ ರಾಂಪ್ರಸಾದ್ ಶರ್ಮ, ಪ್ರೊಪ್ರೈಟರ್

ಸಾಯಂ ಆಗಿ ಊಟ ಮಾಡುವವರಿಗೆ ರಿಯಾಯಿತಿ ದರ ಏರ್ಪಡಿಸಿದ್ದೇವೆ. ಶುಚಿರುಚಿಯಾದ ಊಟಕ್ಕೂ ಮತ್ತು ಆರೋಗ್ಯಕರವಾದ ಹಾಗೂ ಅನುಕೂಲವಾದ ರೂಮುಗಳಿಗೆ ಒಮ್ಮೆ ಭೇಟಿ ಕೊಡಿ
★ ನ್ಯೂ ಚಾಮುಂಡೇಶ್ವರಿ ಕೆಫೆ
ಫೋನ್ 541 ಪ್ರೊಪ್ರೈಟರ್ ಸಿ ಬಿ ಎಂ ಚೆಂಪ್ರಯ್ಯ ಇರ್ವಿನ್ ರಸ್ತೆ, ಮೈಸೂರು

ರಿಜಿಸ್ಟರ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಅತಿದಿನ ಪತ್ರಿಕೆ ೬ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೮೪] SADHVI : SUNDAY 29—7—1956 ಮೈಸೂರು : ಭಾನುವಾರ ೨೯—೭—೧೯೫೬ [ಸಂಚಿಕೆ : ೬೨೨

ಬಲ್ಗೇರಿಯದಲ್ಲಿ ಸೈನಿಕರ ದಂಗೆ; ೨೦೦ ಜನರ ಮರಣ

ಶ್ರೀಮನ್ಮಹಾರಾಜರ ವರ್ಧಂತಿ

ಮೈಸೂರು ೨೮

ರಾಜಪ್ರಮುಖರಾದ ಶ್ರೀಮಜ್ಜಯಚಾಮರಾಜಒಡೆಯರವರ ೩೮ನೇ ವರ್ಷ ವರ್ಧಂತಿಯು ಇಂದು ಅರಮನೆಯಲ್ಲಿ ಖಾಸಗಿಯಾಗಿಯೂ, ಸರಳವಾಗಿಯೂ ನೆರವೇರಿತು ಬೆಳಿಗ್ಗೆ ೩೭ ಕುಶಾಲತೋಪುಗಳನ್ನು ಹಾರಿಸಲಾಯಿತು

ಬೆಳಿಗ್ಗೆ ಶ್ರೀ ಪರಕಾಲಸ್ವಾಮಿಗಳವರು ರಾಜಮಾರ್ಯಾದೆಯೊಡನೆ ಅರಮನೆಗೆ ತೆರಳಿ ರಾಜಪ್ರಮುಖರಿಂದ ಪಾದಪೂಜೆ ಮಾಡಿಸಿಕೊಂಡು ಅವರನ್ನು ಆಶೀರ್ವದಿಸಿದರು

ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಸಭೆಯ ಪರವಾಗಿ ಹೂವಿನ ಹಾರವನ್ನು ಮಹಾರಾಜರಿಗೆ ಸಮರ್ಪಿಸಿದರು ಪೌರಸಭಾ ಕಮೀಷನರರೂ ಮತ್ತು ಜಿಲ್ಲಾಧಿಕಾರಿಗಳೂ ಹಾಜರಿದ್ದರು ಸರ್ದಾರರುಗಳೂ ಬಂದಿದ್ದರು ಅರಮನೆ ಕೋಟೆಯಲ್ಲಿರುವ ದೇವಾಲಯಗಳಲ್ಲಿ ಈ ಸಂಬಂಧ ಉತ್ಸವಗಳು ಏರ್ಪಾಡಾಗಿವೆ ಈ ರಾತ್ರಿ ಅರಮನೆಯಲ್ಲಿ ದೀಪೋತ್ಸವವು ಇದೆ

ಭೂಕಂಪದ ಪರಿಣಾಮವಾಗಿ ಬಿಸಿ ನೀರು ಬುಗ್ಗೆಗಳ ಉದ್ಭವ

ಕಚ್ ಪ್ರದೇಶದ ಅಂಜಾರ್ ತಾಲ್ಲೂಕಿನಲ್ಲಿ ಇತ್ತೀಚೆಗೆ ಆದ ಭೂಕಂಪದ ಪರಿಣಾಮವಾಗಿ ಒಂದು ಹಳ್ಳಿ ಬಳಿ ಭೂಮಟ್ಟಕ್ಕೆ ೩ ಅಡಿ ಎತ್ತರದವರೆಗೆ ಹಾರುವ ಬಿಸಿ ನೀರಿನ ೧೦ ಬುಗ್ಗೆಗಳು ಉದ್ಭವವಾಗಿವೆಯೆಂದು ವರದಿಯಾಗಿದೆ ಮತ್ತೊಂದು ಕಡೆ ತಣ್ಣೀರಿನ ಬುಗ್ಗೆಯೊಂದು ಕಾಣಿಸಿಕೊಂಡಿದೆ. ಒಂದು ಪ್ರದೇಶದಲ್ಲಿ ೧೫ ಅಡಿ ಉದ್ದದ ಜಾಗದಲ್ಲಿ ಭೂಮಿ ಬಿರುಕು ಬಿಟ್ಟು, ನೀರು ಉಕ್ಕುತ್ತಿದೆ. ಕಚ್ ನಲ್ಲಿ ಮೊನ್ನೆ ಪುನಃ ಭೂಕಂಪವಾಯಿತು

ಸೂಯೆಜ್ ಪ್ರದೇಶದಲ್ಲಿ ಮಾರ್ಷಲ್ ಲಾ

ಸೂಯೆಜ್ ಪ್ರದೇಶದಲ್ಲಿ ಮಾರ್ಷಲ್ ಆಜ್ಞೆಯನ್ನು ಜಾರಿ ಮಾಡಲಾಗಿದೆ ಇಸ್ಮೇಲಿಯಾ, ಸೂಯೆಜ್ ಮತ್ತು ಪೋರ್ಟ್ ಸೈಯದ್‌ಗಳಲ್ಲಿರುವ ಕಾಲುವೆ ಕಂಪೆನಿಗಳಿಗೆ ಬೀಗ ಮುದ್ರೆ ಹಾಕಲಾಗಿದೆ

ಅಮಲ್ದಾರರುಗಳ ವರ್ಗಾವರ್ಗಿ

ಶ್ರೀರಂಗಪಟ್ಟಣ ತಾಲ್ಲೂಕು ಅಮಲ್ದಾರ್ ಶ್ರೀ ಎಸ್ ವಿ ಶೇಷಣ್ಣನವರನ್ನು ಅರಸೀಕೆರೆ ಪೌರಸಭೆಯ ಎಕ್ಸಿಕ್ಯೂಟಿವ್ ಅಧಿಕಾರಿಗಳಾಗಿಯೂ, ದಾವಣಗೆರೆ ಅಮಲ್ದಾರ್ ಶ್ರೀ ವಿ ಪಿ ವೆಂಕಟರಾಮಯ್ಯನವರನ್ನು ಟಿ ನರಸೀಪುರದ ವಿಶೇಷ ಅಮಲ್ದಾರರಾಗಿಯೂ, ಟಿ. ನರಸೀಪುರದ ಅಮಲ್ದಾರ್ ಶ್ರೀ ಎ ಗೋವಿಂದರಾಜುಲುರವರನ್ನು ಶ್ರೀರಂಗಪಟ್ಟಣಕ್ಕೂ, ನಂಜನಗೂಡು ಪೌರಸಭೆಯ ಎಕ್ಸಿಕ್ಯೂಟಿವ್ ಅಧಿಕಾರಿಗಳಾದ ಶ್ರೀ ಎ ಎಲ್ ಲಿಂಗಯ್ಯನವರನ್ನು ರಾಮನಗರ ತಾಲ್ಲೂಕು ಅಮಲ್ದಾರರಾಗಿಯೂ, ಶಿವಮೊಗ್ಗ ಜಿಲ್ಲಾ ಸರ್ವೆ ಅಧಿಕಾರಿಗಳಾದ ಶ್ರೀ ಎಂ ಅಬ್ದುಲ್ ಅಜೀಜ್‌ರವರನ್ನು ನಂಜನಗೂಡು ಪೌರಸಭಾ ಎಕ್ಸಿಕ್ಯೂಟಿವ್ ಅಧಿಕಾರಿಗಳಾಗಿಯೂ ವರ್ಗಾಯಿಸಲಾಗಿದೆ

ಈಜಿಪ್ಟಿನ ಸರ್ವ ಆಸ್ತಿಗಳ ಮೇಲೂ ತಡೆ

ಬ್ರಿಟಿಷ್ ಸರ್ಕಾರದ ಅಧಿಕಾರ ಕ್ರಮ

ಸೂಯೆಜ್ ಕಾಲುವೆ ಕಂಪೆನಿ ರಾಷ್ಟ್ರೀಕರಣದ ಪರಿಣಾಮವಾಗಿ ಬ್ರಿಟನ್ನಿನಲ್ಲಿರುವ ಸ್ಟರ್ಲಿಂಗ್ ಒಳಗೊಂಡು ಸೇರಿ ಈಜಿಪ್ಟಿನ ಎಲ್ಲಾ ಆಸ್ತಿಗಳ ಮೇಲೂ ತಡೆಯಾಜ್ಞೆ ಹಾಕಲಾಗಿದೆ ಕಂಪೆನಿಯ ವಿದೇಶಿ ಆಸ್ತಿಗಳ ಬಗ್ಗೆ ಈಜಿಪ್ಟ್ ಸರ್ಕಾರದ ಆಜ್ಞೆಯನ್ನು ಪಾಲಿಸಕೂಡದೆಂದು ಬ್ರಿಟಿಷ್ ರಾಷ್ಟ್ರೀಯರಿಗೆ ಸೂಚನೆ ಕೊಡಲಾಗಿದೆ ಬ್ರಿಟನ್ನಿನಲ್ಲಿರುವ ಕಂಪನಿ ಆಸ್ತಿಗಳನ್ನು ಉಪಯೋಗಿಸದಂತೆ ಕೂಡಲೆ ಆಜ್ಞೆ ಕೊಡಲಾಗಿದೆ,

ಮೊನ್ನೆ ದಿನ ಕಾಮನ್ಸ್ ಸಭೆಯಲ್ಲಿ ಬ್ರಿಟಿಷ್ ಪ್ರಧಾನಿ ಈಡನ್ನರು ಮಾತನಾಡಿ, ಫ್ರಾನ್ಸ್ ಹಾಗು ಅಮೆರಿಕಗಳ ಸಹಯೋಗದೊಂದಿಗೆ ಈಜಿಪ್ಟಿನ ಕ್ರಮವನ್ನು ಎದುರಿಸುವುದು, ಸೈನಿಕ ಸಾರ್ವಭೌಮತ್ವ ಕಸಿದುಕೊಳ್ಳುವುದರ ಬಗ್ಗೆ ತಪ್ಪಿಸುವುದು ಬ್ರಿಟಿಷ್ ಸರ್ಕಾರದ ಮೊದಲನೆ ಕರ್ತವ್ಯವೆಂದೂ ಮತ್ತು ಸೂಯೆಜ್ ಪ್ರಶ್ನೆ ಎತ್ತುತ್ತಿರುವ ಮತ್ತು ಸೂಯೆಜ್ ಕಾಲುವೆಯ ಎರಡು ಕೊನೆಗಳಿಗೂ ಎರಡು ಬ್ರಿಟಿಷ್ ಯುದ್ಧ ನೌಕೆಗಳನ್ನು ರವಾನಿಸುವ ವಿಷಯವೂ ಪರಿಶೀಲಿಸಲಾಗುವುದೆಂದು ತಿಳಿಸಿದರು ಈಡನ್ನರು ಇರಾಕಿನ ಪ್ರಧಾನಿ ನೂರಿ ಎಲ್ ಸೈಯದರೊಡನೆ ಈ ಬಗ್ಗೆ ಸಂಭಾಷಣೆ ನಡೆಸುವರು

ಬ್ರಿಟಿಷ್ ಸರ್ಕಾರದ ನಿರ್ಧಾರದ ನ್ಯಾಯಾನ್ಯಾಯವನ್ನು ಪ್ರಶ್ನಿಸಿ ಅಂತರ ರಾಷ್ಟ್ರೀಯ ಕೋರ್ಟಿಗೆ ಈಜಿಪ್ಟ್ ದೂರು ಕೊಡಲಿದೆ

ಮದ್ರಾಸಿನಲ್ಲಿ ಪ್ರತಿಬಂಧಕಾಜ್ಞೆ

ಆಗಸ್ಟ್ ೧ ರಿಂದ ಮದ್ರಾಸ್ ಸಂಸ್ಥಾನದಲ್ಲಿ ಸಾರ್ವಜನಿಕ ಸ್ಥಳಗಳಲ್ಲಿ ಶ್ರೀರಾಮ ಮತ್ತು ರಾಮಾಯಣದ ಇತರ ವ್ಯಕ್ತಿಗಳ ಪ್ರತಿಮೆಗಳನ್ನು ಸುಡುವುದಾಗಿ ಅಥವಾ ನಾಶಪಡಿಸುವುದಾಗಿ ದ್ರಾವಿಡ ಸಂಘದವರು ಸೂಚಿಸಿದ್ದ ಬಗ್ಗೆ ಮದ್ರಾಸ್ ಪೋಲೀಸು ಕಮೀಷನರರು ನಾಳೆಯಿಂದ ೧೫ ದಿನಗಳ ಕಾಲ, ಪೂರ್ವಭಾವಿ ಅನುಮತಿ ಪಡೆಯದೆ ಮೆರವಣಿಗೆ ಮತ್ತು ಸಭೆಗಳನ್ನು ನಡೆಸಕೂಡದೆಂದು ಪ್ರತಿಬಂಧಕಾಜ್ಞೆ ಹೊರಡಿಸಿದ್ದಾರೆ ಸಂಘದ ಈ ಚಟುವಟಿಕೆಯಿಂದ ಜನರ ಮನಸ್ಸಿಗೆ ನೋವಾಗುವುದೆಂದು ತಿಳಿಸಲಾಗಿದೆ ಸಾರ್ವಜನಿಕರ ನೆಮ್ಮದಿ ಪಾಲನೆಗಾಗಿ ಈ ಆಜ್ಞೆಯನ್ನು ಜಾರಿ ಮಾಡಲಾಗಿದೆ

ಹೈಕಮಾಂಡಿನ ಪತ್ರ ಇನ್ನೂ ಬಂದಿಲ್ಲ

ಮೈಸೂರಿನ ರಾಜಕೀಯ ಬಿಕ್ಕಟ್ಟಿನ ಪರಿಹಾರದ ಬಗ್ಗೆ ಹೈಕಮಾಂಡಿನ ಸೂತ್ರವನ್ನು ತಿಳಿಸುವ ಪತ್ರವಿನ್ನೂ ದೆಹಲಿಯಿಂದ ಬಂದಿಲ್ಲ ನಾಳೆಯೊಳಗೆ ಅದು ಬರುವ ನಿರೀಕ್ಷೆಯಿದೆ ಮುಖ್ಯಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ಶಾಸನಸಭಾ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶ್ರೀ ಅನಂತರಾಮರವರನ್ನು ಬರಮಾಡಿಕೊಂಡು ಪಕ್ಷದ ಸಭೆ ಕರೆಯುವ ನಿಯಮಾವಳಿಯನ್ನು ಅರಿತುಕೊಂಡರು ಆಗಸ್ಟ್ ೧೦ ರೊಳಗೆ ಸಭೆಯನ್ನು ಕರೆಯುವ ನಿರೀಕ್ಷೆಯಿದೆ ಕೇಂದ್ರ ಹೈಕಮಾಂಡಿನವರೇ ದಿನವನ್ನು ಗೊತ್ತುಪಡಿಸಬಹುದೆಂದು ಮುಖ್ಯ ಮಂತ್ರಿಯವರು ಹೇಳುತ್ತಾರೆ

ಬಲ ಪ್ರಯೋಗಕ್ಕೆ ಪ್ರತಿಯಾಗಿ ಬಲ ಪ್ರಯೋಗ

ಬ್ರಿಟನ್ ಮತ್ತು ಫ್ರಾನ್ಸುಗಳಿಗೆ ನಾಸಿರ್‌ರವರ ಎಚ್ಚರಿಕೆ

ಈಜಿಪ್ಟಿನ ಅಧ್ಯಕ್ಷ ಕರ್ನಲ್ ನಾಸಿರ್‌ರವರು ನೆನ್ನೆ ಕೈರೋವಿನಲ್ಲಿ ಭಾರಿ ಜನಸಂದಣಿಯ ಮಧ್ಯೆ ಮಾತನಾಡಿ, ಬಲಪ್ರಯೋಗವನ್ನು ಬಲಪ್ರಯೋಗದಿಂದ ಎದುರಿಸಲಾಗುವುದೆಂದೂ, ಇಡೀ ರಾಷ್ಟ್ರದ ಜನತೆಯು ಸಾರ್ವತ್ರಿಕ ಸೇನಾ ಜಮಾವಣೆಗೆ ಘೋಷಣೆ ಮಾಡಿರುವುದನ್ನು ತಾವು ಮನಗಂಡಿರುವುದಾಗಿಯೂ ತಿಳಿಸಿದರು ಸೂಯೆಜ್ ಕಾಲುವೆ ಮೂಲಕ ಹೋಗುವ ನೌಕೆಗಳ ಸ್ವಾತಂತ್ರ್ಯಕ್ಕೆ ಧಕ್ಕೆಯಾಗಲೀ, ಅವುಗಳಿಗೆ ನಷ್ಟವಾಗಲೀ ಆದರೆ ತಾವು ಬ್ರಿಟನ್ ಮತ್ತು ಫ್ರಾನ್ಸುಗಳನ್ನು ಉತ್ತರವಾದಿಗಳಾಗಿ ಮಾಡುವುದಾಗಿ ಅವರು ಸ್ಪಷ್ಟಪಡಿಸಿದರು

ಸೂಯೆಜ್ ಕಾಲುವೆ ಕಂಪೆನಿಯ ರಾಷ್ಟ್ರೀಕರಣದ ಸಂಬಂಧದಲ್ಲಿ ಬ್ರಿಟನ್ ಮತ್ತು ಫ್ರಾನ್ಸುಗಳು ಸಲ್ಲಿಸಿದ ಪ್ರತಿಭಟನೆಗಳನ್ನು ಈಜಿಪ್ಟ್ ತಿರಸ್ಕರಿಸುತ್ತದೆ

೨ ತಿಂಗಳ ಮಗುವಿನ ಹೊಟ್ಟೆಯಲ್ಲಿ ಮಗು !

ಬೆಂಗಳೂರಿನ ಪ್ರಖ್ಯಾತ ವೈದ್ಯರಾದ ಡಾ॥ ಸಿ ಡಬ್ಲ್ಯೂ ಬಾಂಫರ್ಡ್‌ರವರು ಶಸ್ತ್ರಚಿಕಿತ್ಸೆಯೊಂದನ್ನು ನಡೆಸಿ ೩ ತಿಂಗಳ ಹೆಣ್ಣು ಶಿಶುವಿನ ಹೊಟ್ಟೆಯಲ್ಲಿದ್ದ ಮತ್ತೊಂದು ಮಗುವನ್ನು ಹೊರಗೆ ತೆಗೆದಿದ್ದಾರೆ. ಇಂತಹ ಪ್ರಸಂಗವು ಭಾರತದಲ್ಲಿನ್ನೂ ಇದುವರೆಗೆ ನಡೆದಿಲ್ಲವೆಂದು ಹೇಳಲಾಗಿದೆ ಹೆಂಗಸೊಬ್ಬಳು ಎರಡು ತಿಂಗಳ ಹಿಂದೆ ಪ್ರಸವಿಸಿದಳೆಂದೂ, ಆಕೆಯ ಮಗುವು ೫ ಪೌಂಡು ತೂಕವಿದ್ದು ಆರೋಗ್ಯವಾಗಿತ್ತೆಂದೂ, ಸ್ವಲ್ಪ ದಿನಗಳಾದನಂತರ ಅದರ ಹೊಟ್ಟೆಯು ಅಸಾಧಾರಣವಾಗಿ ಬೆಳೆಯ ಮಾತಾಪಿತೃಗಳು ಅದನ್ನು ವೈದ್ಯರಲ್ಲಿಗೆ ಕರೆದುಕೊಂಡುಹೋಗಿ ಎಕ್ಸ್‌ರೇ ತೆಗೆದರೂ ಗೊತ್ತಾಗಲಿಲ್ಲವೆಂದೂ, ನಂತರ ಶಸ್ತ್ರಚಿಕಿತ್ಸೆ ನಡೆಸಲಾಗಿ ಹೊಟ್ಟೆಯಲ್ಲಿ ಗರ್ಭ ಚೀಲವಿದ್ದು, ಕಾಲು, ಕೂದಲು, ರುಂಡ, ಮಿದುಳು, ಉಗುರು, ಮುಂತಾದುವು ಬೆಳೆದಿದ್ದ ಮಗುವು ಇದ್ದಿತೆಂದೂ ಹೇಳಲಾಗಿದೆ

ಗೋವಾದಲ್ಲಿ ಚಳುವಳಿ ಬಲಗೊಳ್ಳುತ್ತಿದೆಯೆಂದು ನೆಹರು

ಪ್ರಧಾನಿ ನೆಹರೂರವರು ಮೊನ್ನೆ ಲೋಕಸಭೆಯಲ್ಲಿ ಮಾತನಾಡಿ ಗೋವಾದಲ್ಲಿ ರಾಷ್ಟ್ರೀಯ ವಿಮೋಚನಾ ಚಳವಳಿಯು ಬಲಗೊಳ್ಳುತ್ತಿರುವುದೆಂದು ತಿಳಿಸಿದರು ಅಂತರ ರಾಷ್ಟ್ರೀಯ ಮಟ್ಟದಲ್ಲಿ ಗೋವಾ ಬಗ್ಗೆ ಭಾರತ ಸರ್ಕಾರದ ನಿಲುವಿಗೆ ಹೆಚ್ಚು ಬೆಂಬಲ ದೊರಕುತ್ತಿರುವುದಾಗಿಯೂ ಅವರು ಹೇಳಿದರು

○ ಬೆಂಗಳೂರು - ೧೩ ನಾನಾ ಪಂಚಾಯಿತಿಗಳಲ್ಲಿ ಇತ್ತೀಚೆಗೆ ಆದ ಚುನಾವಣೆ ಸಂಬಂಧವಾಗಿ ಚುನಾವಣಾಧಿಕಾರಿಗಳ ಮೇಲೆ ತರಲಾಗಿದ್ದ ೧೩ ಮಾರು ೩೦ ರಿಟ್ ಅರ್ಜಿಗಳನ್ನು ಅಲ್ಲಿನ ಹೈಕೋರ್ಟಿನವರು ವಜಾ ಮಾಡಿರುತ್ತಾರೆ

ಬಲ್ಗೇರಿಯದಲ್ಲಿ ಸೈನಿಕರ ದಂಗೆ

೨೦೦ ಜನರ ಮರಣ

ಬಲ್ಗೇರಿಯದಲ್ಲಿ ಕಳೆದ ಹದಿನಾರು ದಿನಗಳಿಂದ ಸೈನಿಕರು ದಂಗೆ ಹೂಡಿದ ಸಂಬಂಧವಾಗಿ ೨೦೦ ಜನರು ಮಡಿದಿರುವರೆಂದು ವರದಿಯಾಗಿದೆ ಫಿಲಿಪ್ಪೊಪೊಲಿ, ಡಿಮಿಟ್ರೊವ್‌ಗ್ರಾಡ್ ಮತ್ತು ವಾರ್ನಾ ಎಂಬ ಊರುಗಳಲ್ಲಿ ಏಕಕಾಲದಲ್ಲಿ ದಂಗೆಯಾಯಿತೆಂದೂ, ಜನರಲ್ ಚಾಕಾವ್ ಮತ್ತು ನೂರಾರು ಮಂದಿ ಸೈನ್ಯಾಧಿಕಾರಿಗಳನ್ನು ವಜಾ ಮಾಡಿದುದೇ ಇದಕ್ಕೆ ಕಾರಣವೆಂದೂ ಹೇಳಲಾಗಿದೆ

ಬಲ್ಗೇರಿಯಾ ಮತ್ತು ಯುಗೋಸ್ಲಾವಿಯಾಗಳ ನಡುವೆ ರಾಜಿಯಾಗುವುದನ್ನು ಅಧಿಕಾರಿಗಳು ವಿರೋಧಿಸಿದ್ದರೆಂದು ಹೇಳಲಾಗಿದೆ ಪರಿಸ್ಥಿತಿಯು ಸರ್ಕಾರದ ಹತೋಟಿಯಲ್ಲಿದೆ ಬಲ್ಗೇರಿಯದಲ್ಲಿ ಸ್ಟಾಲಿನ್ ಪರ ಮತ್ತು ವಿರೋಧದ ಕಮ್ಯೂನಿಸ್ಟರಲ್ಲಿ ಒಡಕುಂಟಾಗಿದೆ.

ಭೂಕಂಪದಿಂದ ಐದು ಹಳ್ಳಿಗಳ ನಾಶ

ಕಚ್ ಪ್ರದೇಶದ ಅಂಜಾರ್ ತಾಲ್ಲೂಕಿನ ಐದು ಹಳ್ಳಿಗಳು ಭೂಕಂಪದ ಪರಿಣಾಮವಾಗಿ ನಿರ್ನಾಮವಾಗಿವೆ ಒಂದು ಊರಿನಲ್ಲಂತೂ ಎಲ್ಲ ಮನೆಗಳೂ ನೆಲ ಸಮವಾದುವು ತಾಲ್ಲೂಕಿನ ಭೂಗರ್ಭ ಸ್ಥಿತಿ ಬಗ್ಗೆ ಸರ್ವೆ ಕೆಲಸವು ಆರಂಭವಾಗಿದೆ. ಅದೇ ಊರಿನ ಜಯಾಬಿನ್ ಎಂಬ ಶ್ರೀಮಂತನೊಬ್ಬನು ತನ್ನ ಎಲ್ಲಾ ಆಸ್ತಿಯನ್ನೂ, ೩ ಅಂತಸ್ತಿನ ಮನೆಯನ್ನೂ ಕಳೆದುಕೊಂಡು ನಿರ್ಗತಿಕನಾಗಿ ನಿರಾಶ್ರಿತರ ಶಿಬಿರಕ್ಕೆ ಸೇರಿದ್ದಾನೆ ಒಬ್ಬ ಬಡಗಿಯ ಅವಸ್ಥೆಯೂ ಹಾಗೆಯೇ ಆಗಿದೆ ಆದಿಪುರ ಮತ್ತು ಗಾಂಧಿಧಾಮ ಎಂಬ ನೂತನ ನಿರ್ಮಿತ ನಿರಾಶ್ರಿತ ಶಿಬಿರಗಳಲ್ಲೂ ಜನರು ಭಯಗ್ರಸ್ತರಾಗಿದ್ದಾರೆ ಅಲ್ಲಿರುವ ೩೬ ಸಾವಿರ ಜನರು ಹೊರಗಡೆ ಮಲಗುತ್ತಿದ್ದಾರೆ

ನೆಹರೂ-ನಾಸಿರ್ ಭೇಟಿಯಲ್ಲಿ ಸೂಯೆಜ್ ವಿಚಾರ ಬರಲಿಲ್ಲ

ಇತ್ತೀಚೆಗೆ ಬ್ರಿಯೊನಿಯಲ್ಲಿ ನಡೆದ ನೆಹರೂ-ಟಿಟೊ-ನಾಸಿರ್ ಸಂಭಾಷಣೆಯಲ್ಲಿ ಸೂಯೆಜ್ ಕಾಲುವೆ ಕಂಪೆನಿ ರಾಷ್ಟ್ರೀಕರಣದ ವಿಚಾರವೇನೂ ಬರಲಿಲ್ಲವೆಂದು ಭಾರತ ಸರ್ಕಾರದ ಪರೋಕ್ಷವಾಗಿ ಅಧಿಕಾರಿಗಳು ತಿಳಿಸಿದ್ದಾರೆ ಈಜಿಪ್ಟ್ ಮತ್ತು ಬ್ರಿಟನ್ನುಗಳಿಗೆ ಸಂಬಂಧಿಸಿದ ಯಾವ ವಿಚಾರವೂ ಅಲ್ಲಿ ಪ್ರಸ್ತಾಪಿಸಲ್ಪಡಲಿಲ್ಲವೆಂದು ಹೇಳಲಾಗಿದೆ

ಟೀಕಾಚಾರ್ಯರ ಪುಣ್ಯ ದಿನ

ರಾಜಧಾನಿಯಲ್ಲಿರುವ ಮಾಧ್ವ ಮಹಾ ಮಂಡಲದ ವಿದ್ಯಾರ್ಥಿನಿಲಯದ ಮಿತ್ರವೃಂದದ ಆಶ್ರಯದಲ್ಲಿ ನೆನ್ನೆ ಶ್ರೀ ಟೀಕಾಚಾರ್ಯರ ಪುಣ್ಯದಿನಾಚರಣೆಯು ನೆರವೇರಿತು. ಅದರ ಅಂಗವಾಗಿ ಪಾರಾಯಣ, ಸಂಚಾಲಕ ಶ್ರೀ ಪಿ ಆರ್ ಲೋಕೋಪಾಧ್ಯಾಯರಿಂದ ಟೀಕಾಚಾರ್ಯರ ಬಗ್ಗೆ ಭಾಷಣ ಮುಂತಾದುವು ಜರುಗಿದುವು

ವಾರ ಭವಿಷ್ಯ

ತಾ|| ೨೯-೭-೫೬ರಿಂದ ೪-೮-೫೬ರ ವರೆಗೆ

ಮೇಷ — ಆರೋಗ್ಯ ಉತ್ತಮ, ಆರ್ಥಿಕ ಸ್ಥಿತಿ ತೃಪ್ತಿಕರ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ, ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ, ನೌಕರಿಯಲ್ಲಿ ಯಶಸ್ಸು, ಶುಭ ಕಾರ್ಯಗಳು ಜರುಗುವವು

ವೃಷಭ — ಆರೋಗ್ಯ ತೃಪ್ತಿಕರ, ಆರ್ಥಿಕ ಸ್ಥಿತಿ ಸಮರ್ಪಕ, ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು, ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ, ಉದ್ಯೋಗದಲ್ಲಿ ಪ್ರೋತ್ಸಾಹ, ಕೈಗೊಂಡ ಕಾರ್ಯಗಳಲ್ಲಿ ಜಯ

ಮಿಥುನ — ಆರೋಗ್ಯ ಉತ್ತಮಗೊಳ್ಳುವುದು, ಆರ್ಥಿಕ ಸ್ಥಿತಿ ತೃಪ್ತಿಕರ, ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ, ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು, ಆಪ್ತರಿಂದ ನೆರವು, ಪ್ರವಾಸ ಸುಖಕರವಾಗಿರುವುದು

ಕರ್ಕ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ, ಆರ್ಥಿಕ ಪರಿಸ್ಥಿತಿ ಅಸಮರ್ಪಕ, ವ್ಯಾಪಾರವ್ಯವಹಾರಗಳಲ್ಲಿ ಅಡಚಣೆ, ನೌಕರಿಯಲ್ಲಿ ಕಿರುಕುಳ, ಕೈಗೊಂಡ ಕಾರ್ಯಗಳಿಗೆ ಧಕ್ಕೆ

ಸಿಂಹ — ಆರೋಗ್ಯ ಚೆನ್ನಾಗಿರುವುದಿಲ್ಲ, ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು, ವ್ಯಾಪಾರವ್ಯವಹಾರಗಳಲ್ಲಿ ನಷ್ಟ, ನೌಕರಿಯಲ್ಲಿ ಸಿಡುಕು, ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ಕನ್ಯ — ಆರೋಗ್ಯ ಉತ್ತಮ, ಆರ್ಥಿಕ ಸ್ಥಿತಿ ತೃಪ್ತಿಕರ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ, ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ, ಉದ್ಯೋಗದಲ್ಲಿ ಪ್ರಶಂಸೆ, ಪ್ರವಾಸ ಯೋಗ

ತುಲಾ — ಆರೋಗ್ಯ ತೃಪ್ತಿಕರ, ಆರ್ಥಿಕ ಪರಿಸ್ಥಿತಿ ಸಮರ್ಪಕ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ, ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ, ನೌಕರಿಯಲ್ಲಿ ಪ್ರೋತ್ಸಾಹ, ಶುಭ ಕಾರ್ಯಗಳು ಜರುಗುವವು

ವೃಶ್ಚಿಕ — ಆರೋಗ್ಯ ಚೆನ್ನಾಗಿರುವುದಿಲ್ಲ, ಆರ್ಥಿಕ ಪರಿಸ್ಥಿತಿ ಅತೃಪ್ತಿಕರ, ಸಾಮಾಜಿಕ ಕ್ಷೇತ್ರದಲ್ಲಿ ಅಡ್ಡಿ, ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ, ನೌಕರಿಯಲ್ಲಿ ಅತೃಪ್ತಿ, ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ಧನು — ಆರೋಗ್ಯ ಉತ್ತಮ, ಆರ್ಥಿಕ ಪರಿಸ್ಥಿತಿ ತೃಪ್ತಿಕರ, ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ, ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ, ನೌಕರಿಯಲ್ಲಿ ಪ್ರಶಂಸೆ, ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ

ಮಕರ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ, ಆರ್ಥಿಕ ಪರಿಸ್ಥಿತಿ ಅತೃಪ್ತಿಕರ, ಸ್ನೇಹಿತರಿಂದ ವಿಚಿತ್ರ ವರ್ತನೆ, ವ್ಯಾಪಾರವ್ಯವಹಾರಗಳಲ್ಲಿ ಅಡ್ಡಿ, ನೌಕರಿಯಲ್ಲಿ ನಿರುತ್ಸಾಹ, ಕುಟುಂಬದಲ್ಲಿ ಅಶಾಂತಿ

ಕುಂಭ — ಆರೋಗ್ಯ ಚೆನ್ನಾಗಿರುವುದಿಲ್ಲ, ಆರ್ಥಿಕ ಸ್ಥಿತಿ ಅಸಮರ್ಪಕ, ಶುಭ ಕಾರ್ಯಗಳು ಜರುಗುವವು, ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ, ಉದ್ಯೋಗದಲ್ಲಿ ಪ್ರಶಂಸೆ, ಕಾರ್ಯಸಾಧನೆಗೆ ಅಡ್ಡಿ

ಮೀನ — ಆರೋಗ್ಯದ ಕಡೆ ಗಮನ ಕೊಡಿ, ಆರ್ಥಿಕ ಸಮಸ್ಯೆ ಹೆಚ್ಚುವವು, ಸಾಮಾಜಿಕ ಕ್ಷೇತ್ರದಲ್ಲಿ ಅಡ್ಡಿ, ವ್ಯಾಪಾರವ್ಯವಹಾರಗಳಲ್ಲಿ ತೊಂದರೆ, ನೌಕರಿಯಲ್ಲಿ ನಿರುತ್ಸಾಹ

ತಿಲಕರ ದಿನಾಚರಣೆ

ಮೈಸೂರು ೨೯

ರಾಜಧಾನಿಯ ಮಹಿಳಾ ಸದನದಲ್ಲಿ ಲೋಕಮಾನ್ಯ ತಿಲಕರ ಶತಮಾನೋತ್ಸವವು ನೆನ್ನೆ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು. ಸಾಮೂಹಿಕ ಪ್ರಾರ್ಥನೆ, ಮತ್ತು ಸ್ವಾಗತ ಭಾಷಣಗಳಾದನಂತರ, ಅಧ್ಯಕ್ಷರು ಭಾಷಣ ಮಾಡಿ, ತಿಲಕರ ಜೀವನದ ಹಲವು ಘಟನೆಗಳನ್ನೂ, ಅವರ ಸ್ವಾತಂತ್ರ್ಯ ಪ್ರಿಯತೆಯನ್ನೂ, ಅವರು ದೇಶಕ್ಕೆ ಸಲ್ಲಿಸಿರುವ ಅಪಾರವಾದ ಸೇವೆಯನ್ನೂ, ಅವರ ಪ್ರತಿಭೆ, ಪಾಂಡಿತ್ಯ ಮತ್ತು ಅವರ ಉದಾತ್ತವಾದ ಧ್ಯೇಯಗಳನ್ನೂ ವಿವರಿಸಿದರು. ಮುಂದಿನ ಪೀಳಿಗೆಯವರು ಅವರ ತ್ಯಾಗ ಮತ್ತು ಸೇವಾಕಾಂಕ್ಷೆಯನ್ನು ತಮ್ಮ ಮೂಲ ಮಂತ್ರವಾಗಿಟ್ಟುಕೊಂಡು, ದೇಶದ ಕಲ್ಯಾಣವನ್ನು ಸಾಧಿಸಬೇಕೆಂದು ತಿಳಿಸಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಕೊನೆಗೊಂಡಿತು.

ರಾಜಧಾನಿಯ ಶ್ರೀ ಶಾರದಾ ಯೂನಿಯನ್ ಸಂಸ್ಥೆ ಆಶ್ರಯದಲ್ಲಿ ಕಳೆದ ಸೋಮವಾರ ಲೋಕಮಾನ್ಯ ತಿಲಕರ ಜನ್ಮ ದಿನದ ಶತಮಾನೋತ್ಸವವು ವಿಜೃಂಭಣೆಯಿಂದ ಆಚರಿಸಲ್ಪಟ್ಟಿತು. ನಿಲಯದ ವ್ಯವಸ್ಥಾಪಕರಾದ ಶ್ರೀ ಕೆ. ದೊರೆಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಶ್ರೀ ಕೆ. ಎಸ್. ಸೋಮಸುಂದರಂರವರು ತಿಲಕರ ಬಗ್ಗೆ ವಿಚಾರಪೂರಿತ ಭಾಷಣ ಮಾಡಿದರು. ವಂದನಾರ್ಪಣೆಯನಂತರ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಹೋಟೇಲು ಕಾರ್ಮಿಕರಿಗೆ ಪರಿಹಾರ ದ್ರವ್ಯ

ರಾಜಧಾನಿಯ ಜಗನ್ಮೋಹನ ಭವನ ರಸ್ತೆಯಲ್ಲಿ ಇದುವರೆಗೆ ಇದ್ದ ಶ್ರೀ ರಾಮಚಂದ್ರ ಭವನ ಹೋಟೇಲನ್ನು ಮುಚ್ಚಿದ ಸಂಬಂಧವಾಗಿ ಅಲ್ಲಿ ಕೆಲಸ ಮಾಡುತ್ತಿದ್ದ ೨೨ ಮಂದಿ ಕೆಲಸಗಾರರಿಗೆ ಒಟ್ಟು ೧೯೫೦ ರೂ-೯ ಆಣೆಯನ್ನು ಸಂಬಳದ ಬಾಕಿ ಮತ್ತು ಪರಿಹಾರ ದ್ರವ್ಯವನ್ನು ಹಂಚಲಾಯಿತೆಂದು ಹೋಟೇಲು ಕಾರ್ಮಿಕ ಸಂಘದವರು ತಿಳಿಸಿರುತ್ತಾರೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ [illegible] ಕ್ಲಾರಿಯೊನೆಟ್ [illegible] ರಾಮಾಯಣ-ಪಠನ [illegible] ಗಾನವಿಹಾರ [illegible] ಮಧ್ಯಾಹ್ನ [illegible] ಸಂಗೀತ [illegible] ಕ್ಲಾರಿಯೊನೆಟ್ [illegible] ಸಂಜೆ [illegible] ಗೀತೆ [illegible] ಸಂಗೀತ [illegible]

ಹೆಚ್ಚು ರಜಾ ದಿನಗಳಿಗಾಗಿ ೩,೦೦೦ ವಿದ್ಯಾರ್ಥಿಗಳ ಮುಷ್ಕರ

ಅಹಮದಾಬಾದು ಬಳಿ ಆನಂದ್ ಎಂಬ ಹಳ್ಳಿಯಲ್ಲಿ ನಿರ್ಮಿಸಲಾಗಿರುವ ವಲ್ಲಭ ವಿದ್ಯಾನಗರದ ಕಾಲೇಜಿನ ೩,೦೦೦ ವಿದ್ಯಾರ್ಥಿಗಳು ಕಳೆದ ೪ ದಿನಗಳಿಂದ ಅನಿರ್ದಿಷ್ಟಕಾಲದ ಮುಷ್ಕರ ಹೂಡಿರುತ್ತಾರೆ. ಇತ್ತೀಚೆಗೆ ರಜಾ ದಿನಗಳ ಸಂಖ್ಯೆಯನ್ನು ಮೊಟಕು ಮಾಡಿರುವುದನ್ನು ರದ್ದುಗೊಳಿಸಬೇಕೆಂಬುದೇ ಈ ಮುಷ್ಕರಕ್ಕೆ ಕಾರಣ. ವಿದ್ಯಾರ್ಥಿಗಳು ಪಾಠಕ್ಕೆ ಹೆಚ್ಚು ಗಮನವೀಯಬೇಕೆಂಬ ಉದ್ದೇಶದಿಂದ ರಜಾ ದಿನಗಳ ಸಂಖ್ಯೆಯನ್ನು ಕಡಿಮೆ ಮಾಡಲಾಗಿರುವುದೆಂದು ವೈಸ್ ಚಾನ್ಸಲರರು ತಿಳಿಸಿರುತ್ತಾರೆ. ಅಲ್ಲಿ ಈಗ ವರ್ಷಕ್ಕೆ ೨೧೦ ದಿನಗಳು ವ್ಯಾಸಂಗದ ದಿನಗಳಿವೆ. ವಿದ್ಯಾರ್ಥಿಗಳು ಈದ್ ಹಬ್ಬ ಮತ್ತು ತಿಲಕರ ಜಯಂತಿ ದಿನಗಳಲ್ಲಿ ಸಾರ್ವಜನಿಕ ರಜಾ ಘೋಷಿಸುವಂತೆ ಒತ್ತಾಯ ಮಾಡಿ, ಕಾಲೇಜಿಗೆ ಹೋಗದೆ ಕ್ಲಾಸುಗಳನ್ನು ಬಿಟ್ಟು ಪುಂಡುತನ ನಡೆಸಿದುದಾಗಿ ಹೇಳಲಾಗಿದೆ. ಕಲ್ಲು ಬೀರಿದ ಮತ್ತು ಪಿಕೆಟಿಂಗ್ ನಡೆಸಿದ ಇಬ್ಬರು ವಿದ್ಯಾರ್ಥಿನಿಯರನ್ನು ಡಿಬಾರ್ ಮಾಡಲಾಗಿದೆ. ಒಬ್ಬ ವಿದ್ಯಾರ್ಥಿಯನ್ನು ವಜಾ ಮಾಡಿದೆ.

ಪಿರಿಯಾಪಟ್ಟಣದ ಅಭಿವೃದ್ಧಿಗಾಗಿ ೧೦ ಸಾವಿರ ರೂ. ಬೇಕು

ಪಿರಿಯಾಪಟ್ಟಣ ತಾಲ್ಲೂಕು ಕೋಡಿಹಳ್ಳಿ ಇನಾಂದಾರರಾದ ಶ್ರೀ ಪಿ. ವೆಂಕಟಸುಬ್ಬಯ್ಯನವರು ಪತ್ರವೊಂದನ್ನು ಬರೆದು, ಪಿರಿಯಾಪಟ್ಟಣದ ಅಭಿವೃದ್ಧಿಗಾಗಿ ಸರ್ಕಾರದವರು ೧೦ ಸಾವಿರ ರೂ ಗ್ರಾಂಟನ್ನಾದರೂ ಮಂಜೂರು ಮಾಡಬೇಕೆಂದು ಕೋರಿರುತ್ತಾರೆ. ಚಿಕ್ಕಮಗಳೂರಿಗೆ ಮುಖ್ಯಮಂತ್ರಿಯವರು ಭೇಟಿಯಿತ್ತಾಗ ಆ ನಗರದ ಅಭಿವೃದ್ಧಿಗಾಗಿ ೩೦ ಸಾವಿರ ರೂ ಗಳನ್ನು ಮಂಜೂರು ಮಾಡಿರುವುದನ್ನು ಪ್ರಸ್ತಾಪಿಸಿ, ಮಲೆನಾಡು ಪ್ರದೇಶಗಳಲ್ಲೆಲ್ಲಾ ಅತ್ಯಂತ ಹೀನಸ್ಥಿತಿಯಲ್ಲಿರುವ ಪಿರಿಯಾಪಟ್ಟಣಕ್ಕೆ ಈಗ ಕೊಡಲಾಗಿರುವ ೩,೦೦೦ ರೂ ಗ್ರಾಂಟು ಸ್ವಲ್ಪವೂ ಸಾಲದೆಂದು ಅವರು ತಿಳಿಸಿರುತ್ತಾರೆ.

ಸಾರ್ವಜನಿಕ ವಿದ್ಯಾರ್ಥಿನಿಲಯ

ವಿದ್ಯಾರಣ್ಯಪುರ, ಮೈಸೂರು

ಟೆಂಡರ್ ನೋಟೀಸ್

ಮೇಲ್ಕಂಡ ನಿಲಯದ ಪ್ರಧಾನ ಕಟ್ಟಡಕ್ಕೆ ಸೇರಿದಂತೆ ರೂಮುಗಳು ಮತ್ತು ನಿಲಯದ ಹಿಂಭಾಗದ ಕಾಂಪೌಂಡನ್ನು ಕಟ್ಟಲು ಅಪ್ರೂವ್ಡ್ ಕಂಟ್ರಾಕ್ಟರುಗಳಿಂದ ಸೀಲಾದ ಟೆಂಡರುಗಳನ್ನು ತಾ|| 14-8-56 ರ ಸಂಜೆ 4 ಘಂಟೆವರೆಗೆ ಸ್ವೀಕರಿಸಲಾಗುವುದು. ಕೆಲಸದ ಒಟ್ಟು ಅಂದಾಜು ಮೊಬಲಗು 32,460 ರೂಪಾಯಿಗಳು. ಟೆಂಡರ್ ಫಾರಂಗಳನ್ನು ಕೆಳಗೆ ಸಹಿ ಹಾಕಿರುವವರಿಂದ ಫಾರಂ ಒಂದಕ್ಕೆ 3 ರೂ ಕೊಟ್ಟು ಪಡೆಯಬಹುದು. ವಿವರಗಳಿಗೆ ಕೆಲಸದ ವೇಳೆಯಲ್ಲಿ ನಿಲಯದ ಆಫೀಸಿನಲ್ಲಿ ವಿಚಾರಿಸಿ.

(ಸಹಿ) ಟಿ ಎಸ್ ಸುಬ್ಬಣ್ಣ,
ಕಾರ್ಯದರ್ಶಿ

ಪೌರಸಭೆ ಹಣದ ನಷ್ಟಕ್ಕಾಗಿ ಮಾಜಿ ಅಧ್ಯಕ್ಷರ ಮೇಲೆ ದಾವಾ

ಅಹಮದಾಬಾದು ಬಳಿ ಇರುವ ವಿರಾಂಗಾಮ್ ಎಂಬ ಊರಿನ ಪೌರಸಭೆಯವರು ಮಾಜಿ ಅಧ್ಯಕ್ಷರೊಬ್ಬರ ಮೇಲೆ ೩,೪೭೫ ರೂ ಗಳ ನಷ್ಟಕ್ಕಾಗಿ ದಾವಾ ಹೂಡಲಿರುತ್ತಾರೆ. ಅಧಿಕಾರದಲ್ಲಿದ್ದಾಗ ಅವರು ಹೈಸ್ಕೂಲೊಂದರ ಹಲವು ವಿದ್ಯಾರ್ಥಿಗಳಿಗೆ ಮೇಲಿನ ತರಗತಿಗೆ ಪ್ರಮೋಷನ್ ಕೊಟ್ಟಿರೆಂದೂ, ಅದಕ್ಕೆ ಬೊಂಬಾಯಿ ಸರ್ಕಾರದವರು ಆಕ್ಷೇಪಿಸಿ, ಪೌರಸಭೆಗೆ ಕೊಡುತ್ತಿದ್ದ ಗ್ರಾಂಟನ್ನು ೩,೪೭೫ ರೂ ಮೋಟು ಮಾಡಿರುವರಲ್ಲದೆ ಈ ನಷ್ಟವನ್ನು ಮಾಜಿ ಅಧ್ಯಕ್ಷರಿಂದ ಪಡೆಯಬೇಕೆಂದು ಸೂಚಿಸಿದ್ದಾಗಿಯೂ ಗೊತ್ತಾಗಿದೆ. ಅದರಂತೆ ಪೌರಸಭೆಯವರು ಕ್ರಮ ಜರುಗಿಸಲು ನಿರ್ಧರಿಸಿರುವರು.

ಹೂವಿನ ಪಲ್ಲಕ್ಕಿ ಉತ್ಸವ

ರಾಜಧಾನಿಯ ಶ್ರೀರಾಮಪೇಟೆಯ ಶ್ರೀಮತ್ಕನ್ಯಕಾಪರಮೇಶ್ವರಿ ಗುಡಿಯಲ್ಲಿ ಗರ್ಭ ನವಮಿ ಉತ್ಸವದ ಅಂಗವಾಗಿ ಈ ರಾತ್ರಿ ೮ ಗಂಟೆಗೆ ಶ್ರೀ ರಾಮಚಂದ್ರ ಸ್ವಾಮಿಯವರ ಹೂವಿನ ಪಲ್ಲಕ್ಕಿ ಉತ್ಸವವು ನಗರದ ನಾನಾ ಬೀದಿಗಳಲ್ಲಿ ನೆರವೇರುವುದು

ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ ವ್ಯಾಪಾರಸ್ಥ ಓಟರುಗಳಲ್ಲಿ ವಿನಂತಿ

ತಾ|| 30-7-56ನೇ ಸೋಮವಾರ
ಬೆಳಗ್ಗೆ 8 ರಿಂದ ಮಧ್ಯಾಹ್ನ 12ರವರೆಗೂ,
2 ರಿಂದ 5 ಘಂಟೆವರೆವಿಗೂ ನಡೆಯುವ
ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗೆ
ವ್ಯಾಪಾರಸ್ಥರ ಪರ ಸಲಹೆಗಾರರಾಗಿ ಚುನಾವಣೆಗೆ ನಿಂತಿರುವ ತಮ್ಮ ಸೇವಕನಾದ
ಜೋಡೆತ್ತಿನ ಗುರುತಿನ

ನಂ. 7 ಆರ್. ನಂಜಯ್ಯ

ನನಗೆ ತಮ್ಮ ಘನವಾದ ಓಟು ಕೊಡಬೇಕಾಗಿ
ಪ್ರಾರ್ಥಿಸುತ್ತೇನೆ

ತಮ್ಮ ವಿಶ್ವಾಸಿ,
ಆರ್. ನಂಜಯ್ಯ

ಮೈಸೂರುಜೈನಅಸೋಸಿಯೇಷನ್

ಮೈಸೂರು

ಹೈಸ್ಕೂಲು ಮತ್ತು ಕಾಲೇಜುಗಳಲ್ಲಿ ಓದುವ ಜೈನ ಬಡ ವಿದ್ಯಾರ್ಥಿಗಳಿಗೆ 56-57ನೇ ಸಾಲಿಗೆ ಕೆಲವು ವಿದ್ಯಾರ್ಥಿ ವೇತನ ಕೊಡಲ್ಪಡುತ್ತದೆ. ಪಡೆಯಲಿಚ್ಛಿಸುವವರು ಆಯಾಯ ಹೈಸ್ಕೂಲಿನ ಯಾ ಕಾಲೇಜಿನ ಮುಖ್ಯೋಪಾಧ್ಯಾಯರ ಸರ್ಟಿಫಿಕೇಟಿನೊಂದಿಗೆ ನಿಯಮಿತ ಫಾರಂನಲ್ಲಿ 10-8-1956 ರ ಒಳಗಾಗಿ ಅರ್ಜಿ ಹಾಕಿಕೊಳ್ಳಬಹುದು. ಸ್ಕಾಲರ್‌ಶಿಪ್ ಫಾರಂಗಳು ಮೇಲ್ಕಂಡ ಅಸೋಸಿಯೇಷನ್ ಆಫೀಸಿನಲ್ಲಿ ಸಿಗುತ್ತವೆ.

(ಸಹಿ) ಬಿ ಶಾಂತರಾಜಯ್ಯ,
ಮೈಸೂರು ಪ್ರೆಸಿಡೆಂಟ್
26-7-1956

Edited, Printed and Published by A R Nagaraja at Sadhvi Press D Subaiah Road, Mysore

Pale
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
T. (?) A S Street,
BANGALORE-2

Contact Immediately

VIJAYA TELEGRAPH INSTITUTE

604 Annthalaya Buildings, Mysore

Second five-year plan requires more Technical hands. Fresh admissions received and classes held both morning and evening. Candidates are trained in Telegraphy and for Assistant Station Masters course. Few months training by experienced instructors at minimum expenses will prepare you for a high salaried job.

Apply to — PRINCIPAL

THE NATIONAL LEAGUE
Annthalaya Buildings, Mysore
Offers excellent Coaching for S. S. L. C. Students
★ Special Coaching for Primary School Teachers,
★ Classes are in full swing
JOIN AT ONCE
Timings — 5-30 P M to 8-30 P M.
V. Rajagopal Iyengar,
Organiser

ಖಾಯಂ ಆಗಿ ಊಟ ಮಾಡುವವರಿಗೆ ರಿಯಾಯಿತಿ ದರ ಏರ್ಪಡಿಸಿದ್ದೇವೆ ಶುಚಿರುಚಿಯಾದ ಊಟಕ್ಕೂ ಮತ್ತು ಆರೋಗ್ಯಕರವಾದ ಹಾಗೂ ಅನುಕೂಲವಾದ ರೂಮುಗಳಿಗೆ ಒಮ್ಮೆ ಭೇಟಿ ಕೊಡಿ.

★ **ನ್ಯೂ ಚಾಮುಂಡೇಶ್ವರಿ ಕೆಫೆ**

ಫೋನ್ 541. · ಪ್ರೊಪ್ರೈಟರ್ ಸಿ. ಬಿ. ಎಂ. ಚಂದ್ರಯ್ಯ ಇಲವಾಲ ರಸ್ತೆ, ಮೈಸೂರು

ರಿಜಿಸ್ಟರ್ಡ್ ನಂ. 792

ಚಂದಾದರ

ವಿದ್ಯಾರ್ಥಿಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪ್ರತಿಗೆ ಮೂರು ಕಾಸು

ಸಾಧ್ವಿ

ಅಂಚಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ವರದಿಗಳಿಗೆ ಬರೆಯಿರಿ

ಸಂಪುಟ : ೦೯] SADHVI | MONDAY 30-7-1956 ಮೈಸೂರು | ಸೋಮವಾರ ೩೦-೭-೧೯೫೬ [ಸಂಚಿಕೆ : ೩೨೨

ಬೇಲೂರರ ಕೊಲೆ ಮೊಕದ್ದಮೆ ಸೆಷನ್ಸ್ ವಿಚಾರಣೆಗೆ

ರಾಜಪ್ರಮುಖತ್ವವನ್ನು ಬಿಡುವುದು ಮಹಾತ್ಯಾಗವಲ್ಲ

ಭಾರತದ ಐಕ್ಯತೆ ಮತ್ತು ಪ್ರಗತಿಗಾಗಿ ದುಡಿಯುವ ಭರವಸೆ

ವರ್ಧಂತಿ ಸತ್ಕಾರ ಸಮಾರಂಭದಲ್ಲಿ ಶ್ರೀಮನ್ಮಹಾರಾಜರ ಭಾಷಣ

ಮೈಸೂರು ೩೦

ರಾಜಪ್ರಮುಖರ ಪದವಿಯನ್ನು ಬಿಡುವುದು ಎಲ್ಲರೂ ಹೇಳುವಂತೆ "ಮಹಾತ್ಯಾಗ"ವೆಂದು ನಾವು ಭಾವಿಸುವುದಿಲ್ಲವಾಗಿಯೂ, ಒಡೆಯರ ಮನೆತನದ ಆಳ್ವಿಕೆಗೆ ಸಂಸ್ಥಾನವನ್ನು ಒಳಪಡಿಸಿದ ವಿಧಿಯೇ ಇಂದು ಸಂಸ್ಥಾನವನ್ನು ಜನತೆಯ ರಾಜ್ಯಭಾರಕ್ಕೊಳಪಡಿಸಲು ಸಂಕಲ್ಪಿಸಿರುವುದೆಂದು ನಾವು ತಿಳಿಯುವುದಾಗಿಯೂ ಶ್ರೀಮನ್ಮಹಾರಾಜ ಶ್ರೀ ಜಯಚಾಮರಾಜ ಒಡೆಯರು ನೆನ್ನೆ ಸಂಜೆ ತಮ್ಮ ೩೮ನೇ ವರ್ಧಂತ್ಯುತ್ಸವ ಸಂದರ್ಭದಲ್ಲಿ, ಸಂಸ್ಥಾನದ ಪ್ರಜೆಗಳ ಪರವಾಗಿ ಮುಖ್ಯ ಮಂತ್ರಿಗಳು ಅರ್ಪಿಸಿದ ಬಿನ್ನವತ್ತಳೆಗೆ ಉತ್ತರ ಕೊಡುತ್ತಾ ತಿಳಿಸಿದರು

ಮುಖ್ಯ ಮಂತ್ರಿಗಳ ಬಿನ್ನವತ್ತಳೆಯಲ್ಲಿ ರಾಜಪ್ರಮುಖರನ್ನು ಪ್ರಶಂಸಿಸಿ "ಇತಿಹಾಸದ ಚಲನವಲನಗಳು ತಾವು ರಾಜಪ್ರಮುಖ ಸ್ಥಾನವನ್ನು ಬಿಟ್ಟುಕೊಡಬೇಕೆಂದು ಕೋರಿ ತಮ್ಮಿಂದ ಮತ್ತೊಂದು ಮಹಾ ತ್ಯಾಗವನ್ನು ಮಾಡಿಸುತ್ತಿವೆ" ಎಂಬುದಾಗಿ ತಿಳಿಸಲಾಗಿತ್ತು

ಶ್ರೀಮನ್ಮಹಾರಾಜರು "ಭಾರತ ಮಾತೆಯ ಪುತ್ರನಾದ" ನಾನು ದೇಶದ ಐಕ್ಯತೆ ಪ್ರಗತಿಗಳಿಗಾಗಿ ಮುಂದೆಯೂ ಶ್ರಮಿಸುವುದಾಗಿ ಭರವಸೆಯಿತ್ತರು.

ಶ್ರೀಮನ್ಮಹಾರಾಜರು ಮುಂದುವರಿದು ತಮ್ಮ ೩೮ ವರ್ಷ ಬಗ್ಗೆ ಹೇಳಿದ ಒಳ್ಳೆಯ ಮಾತುಗಳನ್ನು ಸದಾ ನೆನೆಸುವುದಾಗಿ ಹೇಳಿ, ಜನತೆಯ ಪ್ರೀತಿಯೆಂಬ ಮಹದೈಶ್ವರ್ಯವನ್ನು ಪಡೆದ ಭಾಗ್ಯಶಾಲಿಯು ತಾನೆಂದೂ, ತನಗೆ ಇದನ್ನು ಬಿಟ್ಟು ಬೇರಾವುದರಿಂದಲೂ ಇಷ್ಟು ಸುಖವಾಗುವುದಿಲ್ಲವೆಂದೂ ಹೇಳಿದರು

ದೇಶದಲ್ಲಿ ಪ್ರತಿಯೊಂದು ವರ್ಷವೂ ಸಹ ಮಹತ್ತರ ಬದಲಾವಣೆಗಳಿಂದ ಕೂಡಿರುತ್ತದೆಂದೂ ಹಾಗೆಯೇ ಮುಂದಿನ ವರ್ಷದಲ್ಲಿ ಬಹಳ ಕಾಲದಿಂದಲೂ ಜನರ ಕನಸಾಗಿದ್ದ ಕರ್ನಾಟಕ ಏಕೀಕರಣವು ಸಫಲವಾಗುವುದೆಂದೂ ಹೇಳಿ, ಇದರಿಂದ ತಮಗೆ ವಿಶೇಷ ರೀತಿಯ ತೃಪ್ತಿಯುಂಟಾಗಿದೆಯೆಂದು ನುಡಿದರು

ನಮ್ಮ ಹಿರಿಯರು ನಿಜವಾಗಿಯೂ ದೇಶಕ್ಕೆ ಮಹತ್ತರವಾದ ಸೇವೆ ಸಲ್ಲಿಸಿದ್ದಾರೆ. ನನಗೆ ದೊರೆತಂತೆ ನಾನು ಅವರ ಭವ್ಯ ಸಂಪ್ರದಾಯಗಳನ್ನು ಪಾಲಿಸಿದ್ದೇನೆ. ಅವರು ತಮ್ಮ ಆಡಳಿತವನ್ನು ಜನರ ಹಿತಕ್ಕಾಗಿ ನಡೆಸಿದರು. ನಮ್ಮ ಹಿರಿಯರ ಧ್ಯೇಯಗಳು ಕಾರ್ಯರೂಪಕ್ಕೆ ಬಂದುದನ್ನು ಕಾಣುವ ಸುಯೋಗ ನನಗೆ ದೊರಕಿದೆ.

ಸಂಸ್ಥಾನದ ಈಗಿನ ಉತ್ತಮ ಸ್ಥಿತಿಗೆ ನಮ್ಮ ಹಿರಿಯರಷ್ಟೇ ಜನತೆಯ ಆಶೋತ್ತರಗಳೂ ಮತ್ತು ಬುದ್ಧಿವಂತರಾದ ಆಡಳಿತಗಾರರೂ ಕಾರಣರಾಗಿದ್ದಾರೆ. ಜನತೆಯ ಆಶೋತ್ತರಗಳು ಮತ್ತು ಸೌಖ್ಯಗಳ ಇಂದಿನ ಸಾಧನೆಯು ಪಡೆಗೆ ಮಹ

ಮಕ್ಕಳ ಶಿಕ್ಷಣ ಕೇಂದ್ರದ ಬಹುಮಾನ ವಿನಿಯೋಗ

ಮೈಸೂರು ೩೦

ದೇಶದ ಸ್ವಾತಂತ್ರ್ಯದ ಮಕ್ಕಳು ಮುಂದೆ ವೀರ ಯೋಧರಾಗುವಂತೆ ಅವರನ್ನು ಎಚ್ಚರಿಕೆಯಿಂದ ಸಾಕಬೇಕು—ಎಂಬುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ನೆನ್ನೆ ಸಂಜೆ ಮಕ್ಕಳ ವಿವಿಧ ಶಿಕ್ಷಣ ಕೇಂದ್ರಗಳ ಸಾಧಕರುಗಳಿಗೆ ಬಹುಮಾನ ವಿನಿಯೋಗ ಮಾಡುತ್ತಾ ತಿಳಿಸಿದರು

ಪ್ರಾರ್ಥನೆಯಾದನಂತರ ಮಕ್ಕಳ ಪುಸ್ತಕ ಸಮಿತಿಯ ಅಧ್ಯಕ್ಷ ಶ್ರೀ ಎಂ. ರಾಮಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು. ಸಮಿತಿಯ ಕಾರ್ಯದರ್ಶಿ ಶ್ರೀ ನಾಗೇಶರಾಯರು ವರದಿ ಸಲ್ಲಿಸಿದರು

ಶ್ರೀ ಚನ್ನಯ್ಯನವರು ತಮ್ಮ ಭಾಷಣದಲ್ಲಿ ಇಂದು ಮಕ್ಕಳ ಸಂಖ್ಯೆಯು ಹೆಚ್ಚಾಗಿರುವುದೆಂದೂ, ಇರುವ ಮಕ್ಕಳನ್ನು ಚೆನ್ನಾಗಿ ಪೋಷಿಸಬೇಕೆಂದೂ ತಿಳಿಸಿದರು. ಇಂದಿನ ಮಕ್ಕಳು ಮುಂದಿನ ಗಣ್ಯ ಪ್ರಜೆಗಳಾಗುವರೆಂದು ಅವರು ಹೇಳಿದರು

ಅನಂತರ ಮಕ್ಕಳಿಂದ ವಿವಿಧ ವಿನೋದಾವಳಿಯಾದನಂತರ ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯಗೊಂಡಿತು

ಬ್ರಿಟನ್ನಿಗೆ ಸರಕುಗಳ ರಫ್ತಿನ ಮೇಲೆ ಈಜಿಪ್ಟಿನ ನಿರ್ಬಂಧ

ಈಜಿಪ್ಟ್ ವ್ಯಾಪಾರ ಮಾಡುವ ದೇಶಗಳು ಅಂಗೀಕರಿಸುವಂತಹ ನಾಣ್ಯಗಳನ್ನು ಈಜಿಪ್ಟಿನಿಂದ ಕೊಳ್ಳುವ ಸರಕುಗಳಿಗೆ ಬ್ರಿಟನ್ನು ಕೊಡದಿದ್ದರೆ ಅಲ್ಲಿಗೆ ರಫ್ತುಗಳನ್ನು ಮಾಡದಂತೆ ಈಜಿಪ್ಟ್ ಸರ್ಕಾರದವರು ನಿಷೇಧ ಹಾಕುತ್ತಾರೆ. ನೆನ್ನೆಯಿಂದ ಈ ಆಜ್ಞೆಯು ಜಾರಿಗೆ ಬಂದಿತು. ಈ ಕಾರಣ ಹತ್ತಿ ಮತ್ತು ಅಕ್ಕಿಯನ್ನು ಬ್ರಿಟನ್ನಿಗೆ ಸಾಗಿಸಲು ಅಲೆಕ್ಸಾಂಡ್ರಾದಿಂದ ಹೊರಟಿದ್ದ ಹಡಗುಗಳು ಸರಕುಗಳನ್ನು ಅಲ್ಲೇ ಇಳಿಸಿದುವು

ದಾನಂದವನ್ನುಂಟುಮಾಡಿದೆ. ನನ್ನ ಮನೆತನದ ಮೇಲೆ ಕೃಪೆಯಿಟ್ಟ ಆ ಮಹಾಶಕ್ತಿಯು ಇನ್ನು ಮುಂದೆಯೂ ನನ್ನ ಮೇಲೆ ಕೃಪೆಯಿಡಲೆಂದು ಪ್ರಾರ್ಥಿಸುತ್ತೇನೆ—ಎಂಬುದಾಗಿ ನುಡಿದರು

ಸಮಾರಂಭಕ್ಕೆ ಸಂಸ್ಥಾನದಾದ್ಯಂತ ಸುಮಾರು ೩,೦೦೦ ಮಂದಿ ಪ್ರಮುಖರು ಆಗಮಿಸಿದ್ದರು. ಶ್ರೀ ಕಡಿದಾಳ್ ಮಂಜಪ್ಪನವರನ್ನು ಬಿಟ್ಟು ಉಳಿದ ಸಚಿವರೆಲ್ಲರೂ ಆಗಮಿಸಿದ್ದರು. ಸಮಾರಂಭಕ್ಕಾಗಿ ಸಭಾಮಂಟಪವನ್ನು ಬಹಳ ಆಕರ್ಷಣೀಯವಾಗಿ ಅಲಂಕರಿಸಲಾಗಿದ್ದಿತು

ಶ್ರೀಮನ್ಮಹಾರಾಜರು ಸಮಾರಂಭಕ್ಕಾಗಿ ಅರಮನೆಯಿಂದ ವಸ್ತು ಪ್ರದರ್ಶನ ಭವನಕ್ಕೆ ತೆರಳುವಾಗ ಮಾರ್ಗದ ಎರಡು ಪಕ್ಕಗಳಲ್ಲೂ ಜನರು ಕಿಕ್ಕಿರಿದು ನಿಂತಿದ್ದರು. ವಸ್ತು ಪ್ರದರ್ಶನ ಭವನದ ಬಳಿ ಅವರು ಮುಖ್ಯ ಮಂತ್ರಿಗಳಿಂದ ಸ್ವಾಗತಿಸಲ್ಪಟ್ಟಾಗ ಅಲ್ಲಿ ಸೇರಿದ್ದ ಜನರು ಚಪ್ಪಾಳೆ ತಟ್ಟಿ ತಮ್ಮ ಸಂತೋಷವನ್ನು ಸೂಚಿಸಿದರು. ಸಮಾರಂಭವು ಮುಗಿದ ಮೇಲೂ ಸಹ ಜನರು ಹಾಗೆಯೇ ನಿಂತಿದ್ದರು

ನೆಹರೂ ಮತ್ತು ಢೇಬರರು ರಾಜೀ ನಡೆಸಬಹುದಾಗಿತ್ತು

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಬಗ್ಗೆ ಮುಖ್ಯ ಮಂತ್ರಿಗಳ ಅಭಿಪ್ರಾಯ

ಮೈಸೂರು ೩೦

ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಣೆ ನಡೆಸಿ, ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ಎರಡು ಗುಂಪುಗಳ ನಡುವೆ ರಾಜೀ ಮಾಡಿಸುವ ಕೆಲಸವನ್ನು ಉನ್ನತ ವ್ಯಕ್ತಿಗಳು ಇದುವರೆಗೆ ಮಾಡಲಿಲ್ಲವೆಂದು ತಿಳಿಸಿದರು. ಉಭಯ ಬಣಗಳ ಮೇಲೂ ಪ್ರಭಾವ ಹೊಂದಿರುವ, ನೆಹರೂ ಮತ್ತು ಢೇಬರ್ ಅಂತಹವರಿಂದ ರಾಜಿ ನಡೆಸಲ್ಪಡಬಹುದಾಗಿತ್ತೆಂದೂ ಅವರು ಅಭಿಪ್ರಾಯಪಟ್ಟರು. ಸಾರ್ವತ್ರಿಕ ಚುನಾವಣೆಯು ಸಮೀಪಿಸಿ, ನೂತನ ಕರ್ನಾಟಕದ ರಚನೆಯು ಸನ್ನಿಹಿತವಾಗಿರುವ ಈ ಸಮಯದಲ್ಲಿ ರಾಜಿ ಪ್ರಯತ್ನವು ದೇಶದ ಹಿತಸಾಧನೆಗೆ ಅವಶ್ಯಕವಾಗಿತ್ತೆಂದು ಹೇಳಿ ಹನುಮಂತಯ್ಯನವರು ಸಂಸ್ಥಾನದ ವಿಶಾಲ ಹಿತವನ್ನು ಲಕ್ಷಿಸಬೇಕೆಂದು ತಿಳಿಸಿದರು

ಅವಿಶ್ವಾಸ ನಿರ್ಣಯದ ಬಗ್ಗೆ ಪ್ರಸ್ತಾಪಿಸಿ ತಾವು ಹೆಚ್ಚು ಓಟುಗಳನ್ನು ಗಳಿಸುವ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡಿಲ್ಲವೆಂದೂ, ನಿರ್ಣಯಕ್ಕೆ ರುಜು ಮಾಡಿದ್ದವರಲ್ಲಿ ಹಲವರು ತಮ್ಮ ಬೆಂಬಲಕ್ಕಾಗಿ ಈಗಾಗಲೇ ಬಂದಿರುವುದಾಗಿಯೂ, ಇನ್ನೂ ಹೆಚ್ಚಿನ ಓಟು ಗಳಿಸಲು ತಮಗೆ ಕಷ್ಟವೇನೂ ಅಲ್ಲವೆಂದೂ ಅವರು ಅಭಿಪ್ರಾಯಪಟ್ಟರು. ಮುಂದಿನ ಮಾರ್ಗವೇನೆಂಬುದನ್ನು ತಾವು ಈಗ ಆಲೋಚಿಸುತ್ತಿರುವುದಾಗಿಯೂ, ತಮ್ಮ ರಾಜೀನಾಮೆ ಬಗ್ಗೆ ಹೈ ಕಮಾಂಡಿನವರೇ ನಿರ್ಧರಿಸಿದ್ದರೆ ಚೆನ್ನಾಗಿತ್ತೆಂದೂ ನುಡಿದರು.

ಮೈಸೂರು ಕಾಂಗ್ರೆಸ್ ಗುಂಪುಗಳ ನಡುವೆ ಸಮಾಧಾನವಾಗುವುದು ಅಪೇಕ್ಷಣೀಯವೆಂದೂ, ತಾವು ಮತ್ತು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಲ್ಲದೆ ಇತರ ಪಕ್ಷವೇ ಅದಕ್ಕೆ ಶ್ರಮಿಸಬೇಕೆಂದೂ ಅವರು ತಿಳಿಸಿ, ಕೇಂದ್ರದವರಿಂದ ಉತ್ತರ ಬಂದ ನಂತರ ತಮ್ಮ ರಾಜೀನಾಮೆ ಪತ್ರವನ್ನು ಪ್ರಕಟಣೆಗೆ ಕೊಡುವುದಾಗಿ ನುಡಿದರು

ದೊಡ್ಡಕೆರೆಯಲ್ಲಿ ಕ್ರೀಡಾಂಗಣ ಕಟ್ಟಲು ಮಹಾರಾಜರ ಸಮ್ಮತಿ

ಮೈಸೂರು ೩೦

ನಗರಕ್ಕೆ ಅಗತ್ಯವಾದ ಕ್ರೀಡಾಂಗಣವೊಂದನ್ನು ದೊಡ್ಡಕೆರೆ ಮೈದಾನದಲ್ಲಿ ಕಟ್ಟಲು ಶ್ರೀಮನ್ಮಹಾರಾಜರು ಅನುಮತಿಯನ್ನು ನೀಡಿದ್ದಾರೆಂದು ತಿಳಿದುಬಂದಿದೆ. ಕ್ರೀಡಾಂಗಣವನ್ನು ಕಟ್ಟಲು ಹಿಂದೆಯೇ ಉದ್ದೇಶಿಸಲಾಗಿದ್ದ ಗನ್ ಹೌಸ್ ಬಳಿ ಸ್ಥಳದ ಮಾಲೀಕತ್ವದ ಬಗ್ಗೆ ಅರಮನೆಗೂ ಮತ್ತು ಇಲ್ಲಿನ ಟ್ರಸ್ಟ್ ಬೋರ್ಡಿಗೂ ವಿವಾದವಿದ್ದು ಕೊನೆಗೆ ಮುಕ್ತಾಯವಾಗಿರುತ್ತದೆ. ಇದುವರೆಗೆ ಸುಮಾರು ೬೦ ಸಾವಿರ ರೂ. ಖರ್ಚಿನಲ್ಲಿ ನಗರಾಭಿವೃದ್ಧಿ ಸಮಿತಿಯವರು ಹಣವನ್ನು ಕೊಟ್ಟಿದ್ದರೂ ಸಹ ಅಲ್ಲಿ ಕ್ರೀಡಾಂಗಣವನ್ನು ಭವ್ಯವಾಗಿ ಕಟ್ಟಲು ೭ ಲಕ್ಷ ರೂ. ಅವಶ್ಯಕವಾಗುವುದೆಂದು ಹೇಳಲಾಗಿದೆ.

ಬೇಲೂರರ ಕೊಲೆ ಮೊಕದ್ದಮೆ ಸೆಷನ್ಸಿಗೆ

ಅಪಾದಿತರ ಮೇಲೆ ೧೪ ಅಪರಾಧಗಳ ಆರೋಪಣೆ

(ಸ್ವಂ. ವಾ. ಪ್ರೋ.) ಬೆಂಗಳೂರು ೩೦

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಕೊಲೆ ಮೊಕದ್ದಮೆಯಲ್ಲಿ ೩ ಜನ ಅಪಾದಿತರನ್ನು ಇಂದು ಇಲ್ಲಿನ ನಗರ ನ್ಯಾಯಾಧೀಶರು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿ, ಅವರುಗಳು ತಪ್ಪಿತಸ್ಥರೆಂದು ತೋರುವ ಅನೇಕ ರುಜುವಾತುಗಳಿವೆಯೆಂದು ತಿಳಿಸಿದರು. ಮೂವರು ಅಪಾದಿತರ ಮೇಲೆ ಕೊಲೆ, ಕೊಲೆ ಪ್ರಯತ್ನ, ದರೋಡೆ ಮುಂತಾದ ೧೪ ಅಪಾದನೆಗಳನ್ನು ಹೊರಿಸಲಾಗಿದೆ. ಅದರ ಪ್ರತಿಗಳನ್ನು ಅಪಾದಿತರಿಗೆ ಕೊಡಲಾಯಿತು. ಮೂವರನ್ನೂ ಇಂಟೀರಿಂ ಕಸ್ಟಡಿಯಲ್ಲಿರುವಂತೆ ಆಜ್ಞೆಯಾಗಿದೆ

ನೇರವಾದ ಸಾಕ್ಷ್ಯವಿಲ್ಲವೆಂದು ಪ್ರಾಸಿಕ್ಯೂಟರ್ ಅವರು ತಿಳಿಸಿದ್ದರೂ, ಅವರು ಒದಗಿಸಿರುವ ಸಾಹಿತ್ಯದಲ್ಲಿ ಅಪಾದಿತರು ತಪ್ಪಿತಸ್ಥರೆಂದು ಸೂಚಿಸಲು ಬೇಕಾದಷ್ಟು ಪ್ರಮಾಣಗಳಿವೆಯೆಂದು ನ್ಯಾಯಾಧೀಶರು ತಿಳಿಸಿದ್ದಾರೆ

ಯಾರು ಅಪರಾಧ ಮಾಡಿರುವರೆಂದು ಪ್ರಶ್ನಿಸ ಕೇಳಲು, ಮೂವರೂ ಮಾಡಿರುವುದಾಗಿ ನ್ಯಾಯಾಧೀಶರು ತಿಳಿಸಿದರು. ಜೈಲಿನಲ್ಲಿ ಅಪಾದಿತರ ಬಗ್ಗೆ ವರ್ತನೆ ಬಗ್ಗೆ ಬಂದಿರುವ ದೂರಿನ ಅಂಶವನ್ನು ನ್ಯಾಯಾಧೀಶರು ಜೈಲು ಅಧಿಕಾರಿಗಳಿಗೆ ಕಳುಹಿಸಿರುತ್ತಾರೆ

ನಗರದ ನೀರು ಸರಬರಾಜಿನ ಅಭಿವೃದ್ಧಿ ಕಾರ್ಯ ೧ ವರ್ಷ ತಡ

ಮೈಸೂರು ೩೦

ಕೃಷ್ಣರಾಜಸಾಗರದಲ್ಲಿ ಕಟ್ಟಬೇಕಾಗಿದ್ದ ಪಂಪ್ ಹೌಸ್ ಕಟ್ಟಡಕ್ಕೆ ಭದ್ರವಾದ ಅಡಿಪಾಯ ಸಿಕ್ಕದೆ ಇರುವುದರಿಂದಲೂ ಮತ್ತು ಅಗತ್ಯವಾದ ಪಂಪಿಂಗ್ ಯಂತ್ರಗಳು ಸಕಾಲದಲ್ಲಿ ಬಾರದಿರುವುದರಿಂದಲೂ ನಗರದ ನೀರು ಸರಬರಾಜು ಅಭಿವೃದ್ಧಿ ಯೋಜನೆಯು ಪೂರೈಸಲು ಕನಿಷ್ಠ ಪಕ್ಷ ಒಂದು ವರ್ಷವಾದರೂ ತಡವಾಗುವುದೆಂದು ಹೇಳಲಾಗಿದೆ. ನಗರದಲ್ಲಿ ಪೈಪುಗಳನ್ನು ಹಾಕುವ ಕಾರ್ಯವು ಹಲವಾರು ಕಡೆಗಳಲ್ಲಿ ಈಗಾಗಲೇ ಆರಂಭವಾಗಿದೆಯೆಂದೂ ತಿಳಿದುಬಂದಿದೆ.

ಓಟರು ಪಟ್ಟಿ ವಿಚಾರಣೆಗೆ ಹೆಚ್ಚಿನ ಕಾಲಾವಕಾಶ ಅಗತ್ಯ

ನಗರದ ಪ್ರಜೆಗಳಿಗೆ ಅನ್ವಯಿಸುವಂತೆ ಈ ವರ್ಷ ಸಿದ್ಧಗೊಳಿಸಲಾಗಿರುವ ಓಟರು ಪಟ್ಟಿಯ ಭಾಗಗಳನ್ನು ೪೦ ವಾರ್ಡುಗಳಲ್ಲಿ ಸಾರ್ವಜನಿಕ ವಗಾಹನೆಗಾಗಿ ಪ್ರದರ್ಶಿಸಲಾಗಿರುವುದೆಂದು ಕೌನ್ಸಿಲ್ ಕಮಿಷನರರು ತಿಳಿಸಿರುವರಷ್ಟೆ? ಈ ಪಟ್ಟಿಗಳು ಯಾವ ಸ್ಥಳದಲ್ಲಿ ಪ್ರಕಟವಾಗಿವೆ ಮುಂಬುದು ಸ್ಪಷ್ಟಪಟ್ಟಿಲ್ಲವೆಂದೂ, ಓಟರುಗಳು ತಮ್ಮ ಹೆಸರುಗಳವೆಯೋ ಎಂಬ ದನ್ನು ಪರಿಶೀಲಿಸಲು ಬರುವ ತಿಂಗಳು ೨೦ ವರೆಗೆ ಕೊಡಲಾಗಿರುವ ಅವಧಿಯು ಬಹಳ ಕಡಿಮೆಯೆಂದೂ, ಈ ಅವಧಿಯನ್ನು ಇನ್ನೂ ೧೫ ದಿನಗಳ ಕಾಲ ಹೆಚ್ಚಿಸಬೇಕೆಂದೂ ಸೂಚಿಸಿ ದೇವರಾಜ ಮಾರ್ಕೆಟ್ಟಿನ ವರ್ತಕರಾದ ಶ್ರೀ ಎ. ಶಿವಣ್ಣನವರು ತಿಳಿಸಿದ್ದಾರೆ

ರಾಜಪ್ರಮುಖ ಸ್ಥಾನದ ತ್ಯಾಗದಿಂದ ಮಹಾರಾಜರ ವ್ಯಕ್ತಿತ್ವಕ್ಕೆ ಹೆಚ್ಚಿನ ಮಹತ್ವ

ಸನ್ಮಾನ ಸಮಾರಂಭದಲ್ಲಿ ಮುಖ್ಯ ಮಂತ್ರಿ ಹನುಮಂತಯ್ಯನವರ ಪ್ರಶಂಸೆ

ಮೈಸೂರು ೩೦

ಶ್ರೀಮನ್ಮಹಾರಾಜರ [illegible] ವರ್ಧಂತ್ಯುತ್ಸವದ ದಿನ ದಂದು ಮುಖ್ಯ ಮಂತ್ರಿಗಳು ಇಲ್ಲಿ ಮೊದಲಿಗೆ ವೈಭವಪೂರಿತವಾದ ಸನ್ಮಾನ ಸಮಾರಂಭವನ್ನು ಮಹಾರಾಜರ ಗೌರವಾರ್ಥವಾಗಿ ನಂಜೆ ವಸ್ತು ಪ್ರದರ್ಶನಾಲಯದ ಆವರಣದಲ್ಲಿ ಏರ್ಪಡಿಸಿ ಸಂಸ್ಥಾನದ ಮಹಾಜನರ ಪರವಾಗಿ ಒಂದು ಬಿನ್ನವತ್ತಳೆಯನ್ನರ್ಪಿಸಿದರು.

ಉಪಾಹಾರವಾದನಂತರ ನಡೆದ ಸಮಾರಂಭವು ದೇವತಾ ಪ್ರಾರ್ಥನೆಯೊಡನೆ ಆರಂಭವಾಯಿತು. ಶುಭಾಶಯ ಪದ್ಯಮಾಲಿಕೆಯನ್ನು ವಿದುಷಿ ಚೊಕ್ಕಮ್ಮನವರು ಹಾಡಿದರು.

ಮುಖ್ಯ ಮಂತ್ರಿಗಳು ಬಿನ್ನವತ್ತಳೆಯನ್ನು ಶ್ರೀಮನ್ಮಹಾರಾಜರಿಗೆ ಸಂಸ್ಥಾನ ಸರ್ಕಾರಿ ಚಿಹ್ನೆಯುಳ್ಳ ರಜತ ಕರಂಡದಲ್ಲಿ ಅರ್ಪಿಸಿದರು. ಮುಖ್ಯ ಮಂತ್ರಿಗಳು ಬಿನ್ನವತ್ತಳೆಯಲ್ಲಿ ಶ್ರೀಮನ್ಮಹಾರಾಜರ ಮನೆತನವನ್ನೂ ಮತ್ತು ಅವರ ಆಳ್ವಿಕೆಯ ಆರಂಭದಿಂದ ಇಂದಿನವರೆಗೆ ನಡೆಸಿಕೊಂಡು ಬಂದ ಉದಾರ ನೀತಿಯನ್ನೂ ಕೊಂಡಾಡಿದರು.

ಮುಖ್ಯ ಮಂತ್ರಿಗಳು ಮುಂದುವರಿದು, ಮಹಾರಾಜರು ರಾಜಪ್ರಮುಖರಾಗಿ ನಡೆಸಿದ ೫॥ ವರ್ಷಗಳ ಕಾರ್ಯಗಳಿಂದ ಪ್ರಜೆಗಳು ಅಚ್ಚರಿಗೊಂಡಿರುವುದಾಗಿ ಹೇಳಿ "ಸರ್ವಾಧಿಕಾರ ಸೂತ್ರಗಳನ್ನು ಕೈಯಲ್ಲಿ ಹಿಡಿದಿದ್ದವರು ಶಾಸನ ಬದ್ಧ ದೊರೆಗಳಾಗಿ ಪರಿವರ್ತನೆ ಹೊಂದಲು ಬೇಕಾದ ಅಸಾಮಾನ್ಯ ಮನೋದಾರ್ಢ್ಯ, ಹೊಸ ಸನ್ನಿವೇಶಕ್ಕೆ ಹೊಂದುವ ಸೌಜನ್ಯ, ಹೊಂದಾಣಿಕೆಗಳನ್ನು ಪಡೆದಿರುವುದು ಅವರ ಉನ್ನತ ಮಟ್ಟದ ಮನೋವೈಶಾಲ್ಯ ಮತ್ತು [illegible] ನಿದರ್ಶನಗಳು" ಎಂದು ಪ್ರಶಂಸಿಸಿದರು.

ರಾಜಪ್ರಮುಖರ ಸ್ಥಾನದ ತ್ಯಾಗದಿಂದ ಮಹಾರಾಜರ ವ್ಯಕ್ತಿತ್ವವು ಸುಪ್ರಸಿದ್ಧಿಯಿಂದ ಮತ್ತಷ್ಟು ಕಂಗೊಳಿಸುತ್ತಿರುವುದಾಗಿ ಮುಖ್ಯ ಮಂತ್ರಿಗಳು ಹೇಳಿ "ಈ ಸಂದರ್ಭದಲ್ಲಿ ಅವರ ತ್ಯಾಗ, ಸದ್ಗುಣಗಳನ್ನು ಮೆಚ್ಚಿಗೆಯಿಂದ ನೋಡುತ್ತಿರುವ ನಮಗೆ ಕಣ್ಣಲ್ಲಿ ಹನಿಗೂಡುತ್ತಿದೆ" ಎಂಬುದಾಗಿ ಹೇಳಿದರು.

"ಹದಿನಾರು ವರ್ಷ ಸಂಸ್ಥಾನದ ಸಿಂಹಾಸನವನ್ನಲಂಕರಿಸಿದ ಮಹಾರಾಜರು ಸಂಸ್ಥಾನದ ಒಳಗಿನ ಮತ್ತು ಹೊರಗಿನ ಕೋಟ್ಯಂತರ ಜನರ ಹೃದಯ ಸಿಂಹಾಸನಾರೂಢರಾಗಿ ಸತತವಾಗಿ ಉಳಿಯುವರು"–ಎಂಬುದಾಗಿ ಮುಖ್ಯ ಮಂತ್ರಿಗಳು ನುಡಿದರು.

"ಮುತ್ತೈದೆ ಭಾಗ್ಯ" ಚಿತ್ರದ ೫೦ನೇ ದಿನೋತ್ಸವ

ನಗರದ ಚಾಮುಂಡೇಶ್ವರಿ ಟಾಕೀಸ್‌ನಲ್ಲಿ 'ಮುತ್ತೈದೆ ಭಾಗ್ಯ' ಚಿತ್ರದ ೫೦ನೇ ದಿನೋತ್ಸವವನ್ನು ಆಚರಿಸಿದಾಗ ನಿರ್ಮಾಪಕ ಶ್ರೀ ಪಿ ಎಲ್ ಎ ಶೆಟ್ಟರು ಮತ್ತು ಚಿತ್ರಮಂದಿರದ ಮಾಲಿಕ ಶ್ರೀ ಚೆಲುವಾಚಾರ್ಯರು ಪತ್ರಿಕೋದ್ಯೋಗಿಗಳನ್ನೂ ಮತ್ತು ಹಲವು ಅತಿಥಿಗಳನ್ನೂ ಸತ್ಕರಿಸಿದರು. ನೆನ್ನೆಯ ಮೂರು ಪ್ರದರ್ಶನಗಳಲ್ಲೂ ಮಹಿಳಾ ಪ್ರೇಕ್ಷಕರಿಗೆ ಬಳೆ ಮತ್ತು ಸಿಹಿ ತಿಂಡಿಗಳನ್ನೂ, ಇತರ ಪ್ರೇಕ್ಷಕರಿಗೆ ಸಿಹಿ ತಿಂಡಿಗಳನ್ನೂ ಹಂಚಲಾಯಿತು.

ಭಾರತದ ನೌಕಾ ಬಲಕ್ಕೆ ವಿಮಾನ ವಾಹಕ ನೌಕೆ

ಭಾರತದ ನೌಕಾ ಸೇನೆಗೆ ವಿಮಾನವಾಹಕ ಹಡಗೊಂದನ್ನು ಕೊಳ್ಳಲು ಆಲೋಚಿಸಿದೆಯೆಂದು ಕೇಂದ್ರ ರಕ್ಷಣಾ ಮಂತ್ರಿ ಡಾ॥ ಕಟ್ಜೂರವರು ತಿಳಿಸಿದ್ದಾರೆ. ಭಾರತದ ನೌಕಾ ಬಲದ ಅಂಗವಾಗಿ ಸಬ್‌ಮೆರೀನುಗಳನ್ನು ಹೊಂದುವ ಆಲೋಚನೆಯು ಸದ್ಯಕ್ಕಿಲ್ಲವೆಂದು ನೆಹರೂರವರು ತಿಳಿಸಿದ್ದಾರೆ.

Edited, Printed and Published by [illegible] K. Nagarajan at Sadhvi Press, D. S[illegible] Road, Mysore

ಅನೀತಿ ವ್ಯಾಪಾರಕ್ಕಾಗಿ ಮಹಿಳೆಯರಿಗೂ ಶಿಕ್ಷೆ ಅವಶ್ಯಕ

ವ್ಯಭಿಚಾರದ ಅಪರಾಧ ಮಾಡಿದರೂ ಮಹಿಳೆಯನ್ನು ಬಿಟ್ಟುಬಿಡುವ ಪಕ್ಷಪಾತವನ್ನು ತಪ್ಪಿಸುವಂತೆ ಭಾರತದ ಪೀನಲ್ ಕೋಡಿಗೆ ತಿದ್ದುಪಡಿ ಮಾಡುವ ಮಸೂದೆಯೊಂದನ್ನು ಬೊಂಬಾಯಿಯ ಸದಸ್ಯ ಪ್ರೊ॰ ಸಿಂಹಜ ದಾರ್ಥರವರು ಲೋಕಸಭೆಯಲ್ಲಿ ಮಂಡಿಸುತ್ತಾರೆ. ಈಗಿನ ಕಾನೂನು ಪ್ರಕಾರ ಗಂಡಸಿಗೆ ೫ ವರ್ಷದ ವರೆಗೂ ಸಜಾ ವಿಧಿಸಿ ಹೆಂಗಸನ್ನು ಬಿಟ್ಟುಬಿಡಬಹುದು. ರಾಜ್ಯಾಂಗವು ಪುರುಷರು ಮತ್ತು ಸ್ತ್ರೀಯರಿಗೆ ಸಮಾನತೆಯನ್ನು ಕೊಟ್ಟಿರುವುದರಿಂದ ಈ ವಿಚಾರದಲ್ಲಿ ಭೇದವಿರಕೂಡದೆಂದು ಸದಸ್ಯರು ತಿಳಿಸಿರುತ್ತಾರೆ.

ಸಾಧುಗಳ ರಿಜಿಸ್ಟರ್

ಭಾರತದಲ್ಲಿರುವ ಸಾಧು ಮತ್ತು ಸನ್ಯಾಸಿಗಳ ರಿಜಿಸ್ಟರ್ ಒಂದನ್ನು ಇಡಬೇಕೆಂದು ಸೂಚಿಸುವ ಮಸೂದೆಯೊಂದನ್ನು ಲೋಕಸಭೆಯಲ್ಲಿ ರಾಧಾರಮಣ ಎಂಬ ಸದಸ್ಯರೊಬ್ಬರು ತಂದಿದ್ದಾರೆ. ದಿನದಿನವೂ ಸಾಧುಗಳ ಸಂಖ್ಯೆಯು ಹೆಚ್ಚುತ್ತಿರುವುದೆಂದೂ ಸಾಧುವಿನಂತೆ ವೇಷಧಾರಿಗಳಾಗಿ ಅನೇಕರು ಕಳ್ಳ ಮಾರ್ಗ, ಭಿಕ್ಷಾಟನೆ ಮತ್ತು ಇತರ ಸಮಾಜ ವಿರೋಧ ಕೆಲಸಗಳನ್ನು ಮಾಡುತ್ತಿರುವರೆಂದೂ ಅದನ್ನು ತಪ್ಪಿಸಬೇಕೆಂದೂ, ಇಲ್ಲದಿದ್ದರೆ ಸನ್ಯಾಸ ವರ್ಗಕ್ಕೆ ಅಪಕೀರ್ತಿ ಬರುತ್ತದೆಂದೂ ಅವರು ತಿಳಿಸಿರುತ್ತಾರೆ. ರಿಜಿಸ್ಟರನ್ನು ಇಟ್ಟುಕೊಂಡರೆ ವೇಷಧಾರಿ ಸನ್ಯಾಸಿಗಳಿಂದ ನಡೆಯುವ ಅಪರಾಧಗಳನ್ನು ಕಂಡುಹಿಡಿಯಬಹುದೆಂದು ಅವರು ಅಭಿಪ್ರಾಯಪಟ್ಟಿದ್ದಾರೆ.

ವಯಸ್ಕರ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿನಿಯೋಗ

ಶ್ರೀ ಕೃಷ್ಣರಾಜೇಂದ್ರ ಗಿರಣಿಯಲ್ಲಿ ನಡೆದ ವಯಸ್ಕರ ಶಿಕ್ಷಣ ತರಗತಿಯಲ್ಲಿ ತೇರ್ಗಡೆಯಾದ ೩೦ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿನಿಯೋಗ ಮಾಡಲು ಒಂದು ಸಮಾರಂಭವನ್ನು ಮಿಲ್ಲಿನ ಕೆಲಸಗಾರರ ಕಾಲೋನಿಯ [illegible] ಆವರಣದಲ್ಲಿ ಕಳೆದ ಸೋಮವಾರ ನಡೆಸಲಾಯಿತು. ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿಯ ಅಧ್ಯಕ್ಷ ಶ್ರೀ [illegible] ಭದ್ರಯ್ಯನವರು ಪ್ರಶಸ್ತಿ ಪತ್ರಗಳ ವಿನಿಯೋಗ ಮಾಡಿದರು. ಮಿಲ್ಲಿನ ಜನರಲ್ ಮ್ಯಾನೇಜರ್ ಶ್ರೀ ಎಲ್ ಕಂದಸ್ವಾಮಿಯವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆಯಾದನಂತರ ಶ್ರೀ ದ್ವಾರಕಾನಾಥರವರು ಅತಿಥಿಗಳನ್ನು ಸ್ವಾಗತಿಸಿದರು. ಶ್ರೀ [illegible] ಅವರು ವಿದ್ಯಾರ್ಥಿಗಳಿಗೆ ಹಿತನುಡಿಗಳನ್ನಾಡಿದರು. ಶ್ರೀ ಕಂದಸ್ವಾಮಿಯವರು ಮಿಲ್ಲಿನಲ್ಲಿ ೧೧ ವರ್ಷಗಳಿಂದಲೂ ನಡೆಯುತ್ತಿರುವ ವಯಸ್ಕರ ಶಿಕ್ಷಣ ಚಟುವಟಿಕೆಗಳಲ್ಲಿ [illegible] ಆಸಕ್ತಿ [illegible] ವಯಸ್ಕರ ಶಿಕ್ಷಣ [illegible] ಶ್ರೀ ಬಿ. ಕೆ [illegible] ವಂದನಾರ್ಪಣೆ ಮಾಡಿದನಂತರ ಸಭೆಯು ಮುಕ್ತಾಯವಾಯಿತು. ಈ ಸಮಾರಂಭದ ಅಂಗವಾಗಿ ಚಲನಚಿತ್ರ ಪ್ರದರ್ಶನವೂ ನಡೆಯಿತು.

SREE GANESH TALKIES

Today Last day
THE ROSE TATTOO

From 31-7-56 For 2 Days
ROMAN HOLIDAY

From 2-8-56 For 2 days
Military Policemen
With – Bob Hope, Mickey Rooney

From 4—8—56
Tropical Heat Wave
Featuring – L[illegible] of "Fabulous Senorita" Fame

ಕಾಲಟಿಯಲ್ಲಿ ಶೃಂಗೇರಿ ಜಗದ್ಗುರುಗಳು

ಶೃಂಗೇರಿಯ ಶ್ರೀ ಶಂಕರಾಚಾರ್ಯರು ಮೊನ್ನೆ ಕಾಲಟಿಯನ್ನು ತಲುಪಿದರು. ಅವರನ್ನು ತಿರುವಾಂಕೂರಿನ ರಾಜಪ್ರಮುಖರು ಭೇಟಿ ಮಾಡಿ ಶ್ರೀಮದಾದಿ ಶಂಕರರ ನೆನಪಿಗಾಗಿ ಒಂದು ಮಂಟಪವನ್ನು ನಿರ್ಮಿಸಲು ೩೦ ಸಾವಿರ ರೂ ಗಳನ್ನು ಒಪ್ಪಿಸಿದರು. ತಿರುಪ್ಪನಿತ್ತುರಕ್ಕೆ ಅವರು ದಯಮಾಡಿಸಿದಾಗ ಕೊಚ್ಚಿ ಮಹಾರಾಜರು ಅವರನ್ನು ಭೇಟಿ ಮಾಡಿದರು.

ದಕ್ಷಿಣ ಕೊರಿಯಾ ಶಾಸನ ಸಭೆಯಲ್ಲಿ ಘರ್ಷಣೆ

ದಕ್ಷಿಣ ಕೊರಿಯದ ಶಾಸನ ಸಭೆಯಲ್ಲಿ ಸರ್ಕಾರಿ ಮತ್ತು ವಿರೋಧ ಪಕ್ಷದವರಿಗೆ ಮೊನ್ನೆ ಘರ್ಷಣೆಯಾಗಿ ಅನೇಕ ಸದಸ್ಯರಿಗೆ ಪೆಟ್ಟು ಬಿದ್ದಿತೆಂದು ವರದಿಯಾಗಿದೆ. ಸ್ಥಳೀಯ ಚುನಾವಣೆಗಳಲ್ಲಿ ಸರ್ಕಾರವು ಪ್ರವೇಶಿಸಿದ ಬಗ್ಗೆ ವಿರೋಧ ಪಕ್ಷದವರು ಆಕ್ಷೇಪಿಸಿದಾಗ ಅರ್ಧ ಗಂಟೆ ಕಾಲ ಎರಡು ಪಕ್ಷಗಳವರಿಗೂ ಹೊಡೆದಾಟವಾಯಿತು.

ಸಾಯಿ ಮಂದಿರದ ಆಡಳಿತ ವರ್ಗ

ತ್ಯಾಗರಾಜ ರಸ್ತೆಯಲ್ಲಿರುವ ಶ್ರೀ ಪ್ರಸನ್ನ ಸಾಯಿ ಮಂದಿರದ ಸರ್ವ ಸದಸ್ಯರ ಸಭೆಯು ಕಳೆದ ಭಾನುವಾರ ನಡೆದು, ಪ್ರಸಕ್ತ ಸಾಲಿಗೆ ಡಾ॥ ಎಂ ಎಲ್ ಮರಿಸ್ವಾಮಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಎ ಎಲ್ ಚನ್ನರಾಜ ಅರಸರವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಡಿ ಲಿಂಗಯ್ಯ ಮತ್ತು ಎಂ ಪಿ ಸುಬ್ಬಯ್ಯನವರುಗಳು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಕೆ ಎಸ್ ಸತ್ಯನಾರಾಯಣರಾವ್, ಬಿ. ವಿ ಸತ್ಯನಾರಾಯಣಶೆಟ್ಟಿ, ಎಂ ಕೆ ರಾಮಪ್ಪ, ಎಂ ಸಿ ಸಿದ್ದಲಿಂಗಪ್ಪ, ಕ್ಯಾಪ್ಟನ್ ಟಿ ಎಸ್. ಸುಬ್ಬರಾಜ ಅರಸ್, ಡಿ ಪಿ ನಂಜಪ್ಪ, ಎಂ ಸಿ ವಗ್ಗಪ್ಪ ಮತ್ತು ಕೆ ಕೆಂಚಣ್ಣನವರು ಸದಸ್ಯರುಗಳಾಗಿ ಚುನಾಯಿತರಾದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಕೊಳಲು [illegible] ಗಾನವಿಹಾರ [illegible] ಮಧ್ಯಾಹ್ನ [illegible] ಸಂಗೀತ [illegible] ಮಹಿಳೆಯರ ಕಾರ್ಯಕ್ರಮ [illegible] ಮಕ್ಕಳಿಗಾಗಿ [illegible] ಮತ್ತು [illegible] ಕೃಷ್ಣಯ್ಯಂಗಾರ್ ಸಂಗೀತ [illegible] ಭಾಷಣ [illegible] ಜೀವನದ ಸಂತೋಷ ಸಂಗೀತದ ಕಾರ್ಯಕ್ರಮ

ಹಾಸಿಗೆ-ದಿಂಬು

ಮಿತಬೆಲೆಯಲ್ಲಿ ಹತ್ತಿ ಬಳಸಿ ತಯಾರು ಮಾಡುತ್ತೇವೆ
ಬಾಹುಸಾರ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

ಬ್ರಾಹ್ಮಣ ಧರ್ಮ ಸಹಾಯ ಸಭೆ

ಮೈಸೂರು

ಈ ಸಭೆಯ ಕಛೇರಿಯ ಕೆಳಗೆ ವಾಣೀವಿಲಾಸ ರಸ್ತೆಯಲ್ಲಿರುವ 1535/1ನೇ ನಂಬರು ಮಳಿಗೆಯು ಬಾಡಿಗೆಗಿರುತ್ತೆ. ಅದನ್ನು ಬಯಸುವವರು 4-8-56 ರೊಳಗಾಗಿ ಅರ್ಜಿ ಹಾಕಿಕೊಳ್ಳಬಹುದು. ಹೆಚ್ಚು ವಿಷಯಗಳನ್ನು ಕಛೇರಿಯಲ್ಲಿ ತಿಳಿಯಬಹುದು.

ಕೆ ಶೇಷಾದ್ರಿ,
ಗೌರವ ಕಾರ್ಯದರ್ಶಿ

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ಮೇಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ಸಾಧನಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ. ಮಾತಾಪಿತೃಗಳು ತಮ್ಮ ಮಕ್ಕಳನ್ನು ತ್ವರೆಯಿಂದ ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಡಿ. ಕೃಷ್ಣಮೂರ್ತಿ,
ಡೈರೆಕ್ಟರ್

ದತ್ತು ಸ್ವೀಕಾರದ ಮಸೂದೆ

ಪಾರ್ಲಿಮೆಂಟಿನ ಈಗಿನ ಅಧಿವೇಶನದಲ್ಲಿ ಹಿಂದುಗಳಲ್ಲಿರುವ ದತ್ತು ಸ್ವೀಕಾರದ ಪದ್ಧತಿಯ ಸಂಬಂಧವಾಗಿ ಈಗಿರುವ ಶಾಸನವನ್ನು ಉತ್ತಮಗೊಳಿಸುವ ಮಸೂದೆಯೊಂದನ್ನು ತರಲಾಗುವುದೆಂದು ಗೊತ್ತಾಗಿದೆ.

ಗೋವಾ ತರುಣಿಯೊಬ್ಬಳಿಗೆ ಸತ್ಯಾಗ್ರಹಕ್ಕಾಗಿ ೧೨ ವರ್ಷ ಸಜಾ

ಸತ್ಯಾಗ್ರಹ ನಡೆಸಿದ ಗೋವೆಯ ತರುಣಿಯೊಬ್ಬರಿಗೆ ಅಲ್ಲಿನ ಮಿಲಿಟರಿ ನ್ಯಾಯಮಂಡಲವು ೧೨ ವರ್ಷ ಕಠಿಣ ಸಜಾ ವಿಧಿಸಿದೆ.

ಗುಜರಾತಿನಲ್ಲಿ ೧,೨೦೦ ವಿಧವಾ ವಿವಾಹ

ವಿಧವಾ ವಿವಾಹ ಶಾಸನವಾಗಿ ೧೦೦ ವರ್ಷಗಳಿಂದ ಇದುವರೆಗೆ ಗುಜರಾತಿನಲ್ಲಿ ೧,೨೦೦ಕ್ಕೆ ಹೆಚ್ಚು ವಿಧವೆಯರು ವಿವಾಹವಾಗಿರುವರೆಂದು ಆ ಪ್ರಾಂತದ ಸಂಸಾರ ಸುಧಾರಣಾ ಮಂಡಲದ ನಾಯಕ ಗಟುಭಾಯಿ ಧ್ರುವರವರು ತಿಳಿಸುತ್ತಾರೆ. ಶಾಸನದ ಶತಮಾನೋತ್ಸವವನ್ನು ನಡೆಸಲು ಏರ್ಪಡಿಸಿದ್ದ ಸಮಾರಂಭದಲ್ಲಿ ಅವರು ಭಾಷಣ ಮಾಡಿ ೯೦೦ ವಿವಾಹಗಳು ರಿಜಿಸ್ಟರಾಗಿರುವುವೆಂದು ಹೇಳಿದರು.

ಶಾರದಾ ಯೂನಿಯನ್ನಿನ ಅಧಿಕಾರ ವರ್ಗ

ರಾಜಧಾನಿಯ ಶ್ರೀ ಶಾರದಾ ಯೂನಿಯನ್ನಿನ ಸರ್ವ ಸದಸ್ಯರ ಸಭೆಯು ಕಳೆದ ವಾರ ನಡೆದು ಪ್ರಸಕ್ತ ಸಾಲಿಗೆ ಶ್ರೀ ಎ ಎನ್ ಕೃಷ್ಣಮೂರ್ತಿಯವರು ಅಧ್ಯಕ್ಷರಾಗಿಯೂ, ಶ್ರೀ ಎಂ ಪಿ ಅನಂತಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಎಸ್ ಪಟ್ಟಾಭಿರಾಮರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಶ್ರೀಗಳಾದ ಹೆಚ್ ಆರ್ ಶೇಷಾದ್ರಿ, ಹೆಚ್. ಜಿ. ಅಚ್ಯುತರಾವ್, ಬಿ ರಘುನಾಥ್ ಮತ್ತು ಎಸ್ ಕೇಶವರವರನ್ನು ಕಾರ್ಯ ಸಮಿತಿ ಸದಸ್ಯರುಗಳಾಗಿ ಚುನಾಯಿಸಲಾಯಿತು.

ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗೆ ಆಯ್ಕೆ

ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗೆ ವ್ಯವಸಾಯಗಾರರ ಪ್ರತಿನಿಧಿಗಳಾಗಿ ಇಲವಾಲ ಹೋಬಳಿಯಿಂದ ಶ್ರೀಗಳಾದ ಎಂ. ಸುಂದರರಾವ್ ಮತ್ತು ಎಂ ಎನ್ ಈಶ್ವರರವರು ಚುನಾಯಿತರಾಗಿದ್ದಾರೆಂದು ತಿಳಿದುಬಂದಿದೆ.

ಕತ್ತಿಯೂ ಕೋವಿಯೂ ತಮ್ಮ ಗುರಿಯನ್ನು ತಪ್ಪಬಹುದು ! ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು !!

ಆದರೆ ಡಾ॥ ರಾಣಾರವರ ನೂತನ ಮತ್ತು ಅತ್ಯದ್ಭುತವಾದ ಚಿಕಿತ್ಸೆಯು ಮಾತ್ರ ಒಂದೇ ವಾರದ ಅವಧಿಯಲ್ಲಿ ನಿರಾಶೆಯನ್ನು ಹೋಗಲಾಡಿಸಿ ಸಂತೋಷವನ್ನುಂಟುಮಾಡಲು ತಪ್ಪುವುದಿಲ್ಲ.

ಅಮೃತದಂತ ನವಯೌವನವನ್ನೂ, ಅದ್ಭುತ ಶಕ್ತಿಯನ್ನೂ, ಆರೋಗ್ಯವನ್ನೂ ಹೊಂದಲು ಲೈಂಗಿಕ ವ್ಯಾಧಿಯಲ್ಲಿ [illegible] ಡಾ॥ ಎ ವಿ ರಾಣಾರವರ ಸಲಹೆಯನ್ನು ಪಡೆಯಿರಿ.

ಭಾರತದ ಪ್ರಸಿದ್ಧರಾದ ಡಾ॥ ರಾಣಾರವರು ಇತರ ವಿಧಾನದ ಚಿಕಿತ್ಸೆಗಳಿಗಿಂತಲೂ ಅದ್ಭುತವಾದ ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ಜನಗಳಿಗೆ ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವನವನ್ನೂ ಹುರುಪನ್ನೂ ಉಂಟುಮಾಡುತ್ತಿರುವರು. ದೊಡ್ಡ ಜಹಗೀರ್ದಾರರುಗಳೂ ನವಾಬರುಗಳೂ ರಾಜರುಗಳೂ ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ.

ಆದ್ದರಿಂದ ಡಾ॥ ರಾಣಾರವರನ್ನು ಭೇಟಿ ಮಾಡಿ ನವ ಯೌವನ ದೇಹಶಕ್ತಿ ಮತ್ತು ಚೈತನ್ಯವನ್ನು ಸಂಪಾದಿಸಿರಿ.

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ [illegible] ಇದು ಸುವರ್ಣ ಸುಸಮಯ.

ಕಾಲ: ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ [illegible] ಘಂಟೆವರೆಗೆ ಮತ್ತು ಮಧ್ಯಾಹ್ನ [illegible] ರಾತ್ರಿ 9 ಘಂಟೆ ವರೆಗೆ

ರಾಣಾ ಮೆಡಿಕಲ್ ಹಾಲ್,
ಎಲ್. ನಂ 1-745 ಅಶೋಕಾ ರಸ್ತೆ, ಮೈಸೂರು
(ಮೈಸೂರು ಬ್ಯಾಂಕ್ ಬಳಿ [illegible] ಬಾಗಿಲಿಂದ 3ನೇ ಅಂಗಡಿ)

ರಿಜಿಸ್ಟರ್ಡ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ: ೧೯] SADHVI : TUESDAY 31-7-1956 ಮೈಸೂರು : ಮಂಗಳವಾರ ೩೧-೭-೧೯೫೬ [ಸಂಚಿಕೆ: [illegible]

ಸೂಯೆಜ್ ಕಾಲುವೆ ಬಗ್ಗೆ ಅಂತರ್ರಾಷ್ಟ್ರ ಆಡಳಿತಕ್ಕೆ ಕರೆ

ಸೈಕಲ್ ಡಬ್ಬಲ್ ರೈಡಿಂಗ್ ನಿಷೇಧಿಸಿಲ್ಲ

ಪುರಸಭಾಧಿವೇಶನದಲ್ಲಿ ಅಧಿಕಾರಿಗಳ ಹೇಳಿಕೆ

ಮೈಸೂರು ೩೦

ನಗರದ ಪುರಸಭಾಧಿವೇಶನವು ನೆನ್ನೆ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಡಾ|| ಬಿ. ಜಿ. ದಾಸರು ಲೋಕಮಾನ್ಯ ತಿಲಕರ ದಿನಾಚರಣೆಯನ್ನು ಪುರಸಭೆಯವರು ನಡೆಸದಿದ್ದುದಕ್ಕಾಗಿ ವಿಷಾದಿಸಿದರು. ನಗರದಲ್ಲಿ ಹಾಲಿನ ಅಭಾವವನ್ನು ಹೋಗಲಾಡಿಸಬೇಕೆಂದು ಕೋರಿದರು.

ಶ್ರೀಮನ್ಮಹಾರಾಜರು ದೊಡ್ಡಕೆರೆ ಮೈದಾನದಲ್ಲಿ ಕ್ರೀಡಾಂಗಣಕ್ಕೆ ಸ್ಥಳವನ್ನು ಕೊಟ್ಟಿದ್ದಾರೆಂದೂ, ಇನ್ನು ಮುಂದಾದರೂ ಅದರ ನಿರ್ಮಾಣಕ್ಕೆ ತ್ವರಿತ ಕಾರ್ಯಕ್ರಮ ಕೈಗೊಳ್ಳಬೇಕೆಂದೂ ಶ್ರೀ ಎಂ. ಎಸ್. ತಿಮ್ಮಯ್ಯನವರು ಒತ್ತಾಯ ಮಾಡಿದರು.

ನಗರದಲ್ಲಿ ಆಹಾರ ಧಾನ್ಯಗಳ ಬೆಲೆ ದುಬಾರಿಯಾಗಿರುವಾಗ ಸರ್ಕಾರದವರು ಸೂಚಿಸಿದ್ದಂತೆ ನ್ಯಾಯಬೆಲೆಯಲ್ಲಿ ಅಕ್ಕಿಯನ್ನು ಒದಗಿಸಿಲ್ಲವೆಂದೂ, ತ್ವರಿತವಾಗಿ ಅದರ ಸರಬರಾಜಿಗೆ ಸರ್ಕಾರವನ್ನು ಒತ್ತಾಯಪಡಿಸಬೇಕೆಂದೂ ಶ್ರೀ ಜಿ. ಆರ್. ರಂಗಸ್ವಾಮಯ್ಯನವರು ಕೋರಿದರು.

ಅಧ್ಯಕ್ಷರು ಉತ್ತರಕೊಡುತ್ತ, ಮಹಾರಾಜರು ದೊಡ್ಡಕೆರೆ ಮೈದಾನವನ್ನು ಪುರಸಭೆಗೆ ಕೊಟ್ಟಿರುವ ವಿಷಯಕ್ಕೆ ತಮಗೆ ಸಮರ್ಥನೆ ದೊರಕಿಲ್ಲವೆಂದೂ ಅದು ನಿಶ್ಚಯವಾದಲ್ಲಿ ಮುಂದಿನ ಕ್ರಮಗಳನ್ನು ಕೈಗೊಳ್ಳುವುದಾಗಿಯೂ ಭರವಸೆಯಿತ್ತರು. ಆಹಾರ ಧಾನ್ಯಗಳ ಹಂಚಿಕೆ ಬಗ್ಗೆ ಅಧಿಕಾರಿಗಳು ಕ್ರಮ ಕೈಗೊಳ್ಳುವರೆಂದು ತಿಳಿಸಿದರು.

ಸೈಕಲ್ ಡಬ್ಬಲ್ ರೈಡಿಂಗ್ ಬಗ್ಗೆ ಜನರಲ್ಲಿ ಗಲಿಬಿಲಿಯಾಗಿದೆಯೆಂದೂ, ಪುರಸಭೆಯು ಈ ಸಂಬಂಧದಲ್ಲಿ ಏನಾದರೂ ಉಪನಿಯಮಗಳನ್ನು ಮಾಡಿದ್ದಲ್ಲಿ ತಿಳಿಸಿ ಜನರ ಕಷ್ಟ ನಿವಾರಣೆ ಮಾಡಬೇಕೆಂದೂ ಹಲವಾರು ಸದಸ್ಯರು ಕೋರಿದಾಗ ಅಧಿಕಾರಿಗಳು ಉತ್ತರಕೊಡುತ್ತ, ಪುರಸಭೆಯು ಈ ಬಗ್ಗೆ ಯಾವ ನಿಯಮಗಳನ್ನೂ ಮಾಡಿಲ್ಲವೆಂದೂ, ಅದನ್ನು ಸಾರ್ವಜನಿಕರಿಗೆ ತಿಳಿಸಲಾಗುವುದೆಂದೂ ಹೇಳಿದರು.

ಅರಮನೆಗೆ ಸೇರಿದ ವಸಂತಮಹಲ್, ಲೋಕರಂಜನ ಮಹಲ್ [illegible] ಭವನಗಳಿಗೆ ತೆರಿಗೆಯನ್ನು ಮಾಫಿ ಮಾಡಬೇಕೆಂಬ ಮನವಿಯನ್ನು ಸರ್ಕಾರವು ಒಪ್ಪದೆ ಕಳುಹಿಸಿದ ಪತ್ರವನ್ನು [illegible] ಮಾಡಲಾಯಿತು.

ಪ್ರಶ್ನೋತ್ತರ ಕಾಲದಲ್ಲಿ ಶ್ರೀ. ಎ. [illegible] ಯವರಿಗೆ ಉತ್ತರಕೊಡುತ್ತ, ನಗರದಲ್ಲಿ ಮುನಿಸಿಪಲ್ ಲಕ್ಷ್ಮೀ [illegible] ಗೃಹಗಳನ್ನು [illegible] ಪುರಸಭೆಯಲ್ಲಿ ಹಿಂದೆ ನಿರ್ಧ[illegible] ಲಾಗಿತ್ತೆಂದೂ, ಸದ್ಯಕ್ಕೆ ಆ ಯೋಜನೆಯನ್ನು ಕೈಬಿಡಲಾಗಿದೆಯೆಂದೂ ಅಧ್ಯಕ್ಷರು ತಿಳಿಸಿದರು.

ನಗರದಲ್ಲಿ ಕಳೆದ ವರ್ಷ ೧೯೨೫ ಸೈಕಲ್‌ಗಳಿದ್ದು ಅದರ ಲೈಸೆನ್ಸ್ ಫೀಸು ೬೦,೦೦೦ ರೂ. ವಸೂಲಾಯಿತೆಂದೂ ಶ್ರೀ [illegible] ಸಂಜೀವ

ಸೂಯೆಜ್ ಕಾಲುವೆ ಬಗ್ಗೆ ಅಂತರರಾಷ್ಟ್ರೀಯ ಆಡಳಿತಕ್ಕೆ ಕರೆ

ಈಜಿಪ್ಟಿನ ಅಧ್ಯಕ್ಷರಿಗೆ ಪಶ್ಚಿಮ ರಾಷ್ಟ್ರಗಳ ಸೂಚನೆ

ಸೂಯೆಜ್ ಕಾಲುವೆ ಕಂಪೆನಿಯನ್ನು ರಾಷ್ಟ್ರೀಕರಿಸಿ ಈಜಿಪ್ಟಿನ ಕಂಪೆನಿಯಾಗಿ ಮಾಡುವುದರ ಬದಲು ಕಾಲುವೆ ಮೇಲೆ ಹೊಸ ಅಂತರರಾಷ್ಟ್ರೀಯ ಆಡಳಿತವನ್ನು ಏರ್ಪಡಿಸುವುದಕ್ಕೆ ಈಜಿಪ್ಟ್ ಒಪ್ಪಬೇಕೆಂದು ಪಶ್ಚಿಮದ ಮೂರು ರಾಷ್ಟ್ರಗಳು ಸೂಚಿಸಿವೆ. ರಾಷ್ಟ್ರೀಕರಣದಿಂದ ಉಂಟಾಗಿರುವ ಪರಿಸ್ಥಿತಿಯ ಪರಿಶೀಲನೆಗಾಗಿ ಅಂತರರಾಷ್ಟ್ರೀಯ ಸಮ್ಮೇಳನವನ್ನು ಕರೆಯಬೇಕೆಂದೂ, ಸೂಯೆಜ್ ಕಾಲುವೆಯು ಒಂದೇ ರಾಷ್ಟ್ರದ ಹತೋಟಿಗೆ ಸಿಕ್ಕಲು ಬ್ರಿಟನ್ನು ಒಪ್ಪುವುದಿಲ್ಲವೆಂದೂ ಈಡನ್ನರು ಕಾಮನ್ಸ್ ಸಭೆಯಲ್ಲಿ ತಿಳಿಸಿರುತ್ತಾರೆ.

ಸಣ್ಣ ಸಣ್ಣ ಹುದ್ದೆಗಳಿಗೆ ಪದವೀಧರರ ನೇಮಕ ಅಗತ್ಯವಿಲ್ಲ

ಕಿರಿಯ ಅಧಿಕಾರಿಗಳು ಮತ್ತು ಗುಮಾಸ್ತರ ಹುದ್ದೆಗಳಿಗೆ ಜನರನ್ನು ತೆಗೆದುಕೊಳ್ಳಬೇಕಾದರೆ ಅವರುಗಳಿಗೆ ವಿಶ್ವವಿದ್ಯಾಲಯದ ಪದವಿಯು ಇರಬೇಕೆಂಬುದು ಅಗತ್ಯವಿಲ್ಲವೆಂದು ಭಾರತ ಸರ್ಕಾರಕ್ಕೆ ಪಬ್ಲಿಕ್ ಸರ್ವಿಸ್ ಸಂಬಂಧನಾ ಸಲಹಾ ಸಮಿತಿಯು ಬಹುಮುಖದಿಂದ ಶಿಫಾರಸು ಮಾಡಿದೆ. ಆದರೆ ಸೀನಿಯರ್ ಮತ್ತು ಆಡಳಿತದ ಹುದ್ದೆಗಳಿಗೆ ಬರುವವರಿಗೆ ಪದವಿಗಳು ಇರಬೇಕೆಂದು ಸೂಚಿಸಲಾಗಿದೆ. ಸೀನಿಯರ್ ಹುದ್ದೆಗಳು ಅಖಿಲ ಭಾರತ ಸರ್ವಿಸ್ಸಿಗೆ ಮತ್ತು ಕೇಂದ್ರ ಮತ್ತು ಸಂಸ್ಥಾನದ ೧ನೇ ವರ್ಗದ ಸರ್ವಿಸ್ಸಿಗೆ ಸೇರಿರುವ ರೀತಿಗೆ ಸಂಬಂಧಪಟ್ಟ ಮುಖ್ಯವಾದ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾಗುವುದರಿಂದ ಸೀನಿಯರ್ ಹುದ್ದೆಗಳಲ್ಲಿರುವವರು ಪದವೀಧರರಾಗಿರಬೇಕೆಂದು ಸೂಚಿಸಲಾಗಿದೆ. ಜೂನಿಯರ್ ಹುದ್ದೆಗಳಿಗೂ ಪದವೀಧರರು ಸೇರಬಹುದು. ಸೀನಿಯರ್ ಹುದ್ದೆಗಳಿಗೆ ೨೧ರಿಂದ ೨೪ ಮತ್ತು ಜೂನಿಯರ್ ಹುದ್ದೆಗಳಿಗೆ ೧೮ರಿಂದ ೨೧ ವರ್ಷದವರಿಂದ ಅರ್ಜಿ ಸ್ವೀಕರಿಸಬಹುದೆಂದು ತಿಳಿಸಲಾಗಿದೆ.

ಆರಂಭ ಭಾಷಣ

ರಾಜಧಾನಿಯ ಸೇಂಟ್ ಫಿಲೊಮಿನಾ ಕಾಲೇಜಿನ ಸಾಮಾಜಿಕ ಸೇವಾ ಸಮಾಜದ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೪ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಶಂಕರರಾಯರು ಸಮಾಜದ ಆರಂಭ ಭಾಷಣ ಮಾಡುವರು. ಪ್ರಿನ್ಸಿಪಾಲ್ ಫಾದರ್ ಆಡಿಯೋರವರು ಅಧ್ಯಕ್ಷತೆ ವಹಿಸುವರು.

ಯ್ಯನವರಿಗೆ ತಿಳಿಸಲಾಯಿತು. ನಗರದಲ್ಲಿ ಕೆಲಸ ಮಾಡುವ ಒಟ್ಟು ೮೫೭ ಮಂದಿ ಗುಡಿಸುವವರಲ್ಲಿ ೫೨೩ ಜನರಿಗೆ ಪುರಸಭೆಯವರು ಮನೆ ಕಟ್ಟಿಸಿಕೊಟ್ಟಿದ್ದಾರೆಂದೂ, ಇನ್ನೂ ೧೬೦ ಮಂದಿಗೆ ಕೊಡಬೇಕಾಗಿದೆಯೆಂದೂ ಶ್ರೀ ಕೆ. ಸಿದ್ದಯ್ಯನವರ ಪ್ರಶ್ನೆಗೆ ಉತ್ತರವೀಯಲಾಯಿತು.

ಬೊಂಬಾಯಿ ಬಗ್ಗೆ ಜನಮತ ಗಣನೆ ಅವಶ್ಯಕವಿಲ್ಲ

ನೆಹರೂರವರ ಹೇಳಿಕೆ

ಬೊಂಬಾಯಿ ನಗರದಲ್ಲಿ ಶಾಂತಿ ಪರಿಸ್ಥಿತಿ ನೆಲೆಸಿದನಂತರ, ನಗರದ ಭವಿಷ್ಯವನ್ನು ನಿರ್ಧರಿಸಲು ಜನಮತಗಣನೆ ಮುಂತಾದ ಕ್ರಮಗಳಿಲ್ಲದೆ ಬಗೆಹರಿಸಬಹುದೆಂದು ನೆನ್ನೆ ಲೋಕಸಭೆಯಲ್ಲಿ ನೆಹರೂರವರು ತಿಳಿಸಿದರು. ಬೊಂಬಾಯಿ ನಗರದ ಬಗ್ಗೆ ಮಂತ್ರಿಮಂಡಲವು ನಿರ್ಧಾರ ಕೈಗೊಂಡಿಲ್ಲವೆಂದು ದೇಶಮುಖ್‌ರವರು ಹೇಳಿದ್ದುದನ್ನು ನೆಹರೂರವರು ಸಮರ್ಥಿಸಿದರು. ಉತ್ತಮ ವಾತಾವರಣವುಂಟಾದ ಮೇಲೆ ಮಹಾರಾಷ್ಟ್ರದ ಬೇಡಿಕೆಗೆ ತಾವು ಒತ್ತಾಸೆಯಾಗಿ ನಿಲ್ಲುವುದಾಗಿ ಭಾವ [illegible] ಸೂಚಿಸಿದರು.

ದೇಶಮುಖ್‌ರವರು ಮಾತನಾಡಿ ಬೊಂಬಾಯಿ ನಿರ್ಧಾರವು ಸರ್ಕಾರದ ನಿರ್ಧಾರವಲ್ಲವೆಂದು ಮತ್ತೆ ಹೇಳಿದರು. ಮಹಾರಾಷ್ಟ್ರದ ಬಗ್ಗೆ ನೆಹರೂರವರಿಗೆ ವೈಯಕ್ತಿಕ ಪಕ್ಷಪಾತವಿರುವುದಾಗಿ ತಾವು ಹೇಳಲಿಲ್ಲವೆಂದು ಅವರು ತಿಳಿಸಿದರು.

ಸೂಯೆಜ್ ಕಂಪೆನಿ ರಾಷ್ಟ್ರೀಕರಣದ ಬಗ್ಗೆ ನೆಹರೂ ಎಚ್ಚರಿಕೆ

ಅಸ್ವಾನ್ ಅಣೆಕಟ್ಟಿನ ಯೋಜನೆಗೆ ಬ್ರಿಟನ್ ಮತ್ತು ಅಮೆರಿಕಗಳು ಧನವನ್ನು ಒದಗಿಸದಿದ್ದರೆ ಈಜಿಪ್ಟಿನ ಅಧ್ಯಕ್ಷ ನಾಸ್ಸೇರರು ಸೂಯೆಜ್ ಕಾಲುವೆ ಕಂಪೆನಿಯನ್ನು ರಾಷ್ಟ್ರೀಕರಿಸುವರೆಂದು ನೆಹರೂರವರು ಬ್ರಿಟನ್ ಪ್ರಧಾನಿ ಈಡನ್ನರಿಗೆ ಹಿಂದೆಯೇ ಸೂಚಿಸಿದ್ದರಾಗಿ ಲಂಡನ್ನಿನ ವರದಿಯೊಂದು ತಿಳಿಸಿದೆ. ಕರ್ನಲ್ ನಾಸ್ಸೇರರಿಗೆ ಇತ್ತೀಚಿನ ಸಲಹೆಗಾರರಾಗಿರುವ ಭಾರತದ ಮಾಜಿ ಆಡಿಟರ್ ಜನರಲ್ ವಿ. ನರಹರಿರಾಯರು ಈಜಿಪ್ಟಿನ ಸ್ಟರ್ಲಿಂಗ್ ಬಾಕಿಯನ್ನು ಬ್ರಿಟನ್ನು ತಡೆಹಿಡಿಯುವುದರಿಂದ ಉಂಟಾಗಿರುವ ಪರಿಸ್ಥಿತಿಯನ್ನು ಎದುರಿಸುವ ಬಗ್ಗೆ ಯೋಜನೆಯೊಂದನ್ನು ತಯಾರಿಸಿರುವರೆಂದು ಹೇಳಲಾಗಿದೆ.

ಬ್ರಿಟನ್ನಿಗೆ ಈಜಿಪ್ಟಿನ ವಸ್ತುಗಳ ರಫ್ತಿಗೆ ನಿರ್ಬಂಧ ರದ್ದು

ಬ್ರಿಟನ್ನಿಗೆ ಈಜಿಪ್ಟಿನಿಂದ ಸರಕುಗಳನ್ನು ಸಾಗಿಸದಂತೆ ನಿರ್ಬಂಧ ಹಾಕಿದ್ದುದನ್ನು ಈಜಿಪ್ಟ್ ಸರ್ಕಾರದವರು ನೆನ್ನೆ ರದ್ದುಗೊಳಿಸಿದರು. ಪೌಂಡು ಚಲಾವಣೆಯ ಪ್ರದೇಶಗಳಿಗೆ ಸರಕುಗಳು ಹೋಗಲು ಅವಕಾಶವನ್ನು ಕಲ್ಪಿಸಲಾಗಿದೆ.

ಈಜಿಪ್ಟಿಗೆ ಬ್ರಿಟನ್ನಿನಿಂದ ಶಸ್ತ್ರಾಸ್ತ್ರ ರಫ್ತಿಗೆ ನಿಷೇಧ

ಈಜಿಪ್ಟಿಗೆ ಯುದ್ಧ ಸಾಮಗ್ರಿಗಳ ರವಾನೆಯನ್ನು ನಿಲ್ಲಿಸಲಾಗಿದೆಯೆಂದು ನೆನ್ನೆ ಬ್ರಿಟಿಷ್ ಪ್ರಧಾನಿ ಈಡನ್ನರು ಕಾಮನ್ಸ್ ಸಭೆಯಲ್ಲಿ ತಿಳಿಸಿದರು. ಈಜಿಪ್ಟಿಗೆ ಈಗಾಗಲೇ ಮಾರಾಟವಾಗಿ ಇನ್ನೂ ಇಂಗ್ಲೆಂಡಿನಲ್ಲೇ ಇರುವ ಎರಡು ಡಿಸ್ಟ್ರಾಯರ್ ನೌಕೆಗಳ ಒಪ್ಪಿಗೆಯೂ ಈ ನಿಷೇಧವು ಅನ್ವಯಿಸುವುದೆಂದೂ ಸೂಚಿಸಿದರು.

ಬೇಲೂರರ ಕೊಲೆ ಮೊಕದ್ದಮೆ

೩ನೇ ಆಪಾದಿತನ ಪರ ೧೩ ಸಾಕ್ಷಿಗಳು ವಿಚಾರಣೆ

ಬೆಂಗಳೂರು ೩೦

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಕೊಲೆ ಪ್ರಕರಣದಲ್ಲಿ ಆಪಾದಿತರಾದ ಕೃಷ್ಣ, ಮುನಿಸ್ವಾಮಿ ಮತ್ತು ಗೋವಿಂದರೆಡ್ಡಿಯವರನ್ನು ನಗರ ನ್ಯಾಯಾಧೀಶರು ನೆನ್ನೆ ಸೆಷನ್ಸಿಗೆ ಗುರಿಪಡಿಸಿದರಷ್ಟೆ.

ಆಪಾದಿತರ ಪರವಾಗಿ ಸಾಕ್ಷಿಗಳ ಪಟ್ಟಿಯನ್ನು ಒಪ್ಪಿಸಲು ೧ ಮತ್ತು ೨ನೇ ಆಪಾದಿತರ ಪರ ಲಾಯರ್ ಶ್ರೀ ಎಂ. ಸಿ. ಗುರುರಾವರು ಕಾಲಾವಕಾಶ ಬೇಡಿದರು. ಗೋವಿಂದರೆಡ್ಡಿ ಪರವಾಗಿ ೧೩ ಮಂದಿ ಡಿಫೆನ್ಸ್ ಸಾಕ್ಷಿಗಳ ಪಟ್ಟಿಯನ್ನು ಸಲ್ಲಿಸಲಾಯಿತು.

ನ್ಯಾಯಾಧೀಶರು ಕೊನೆಯ ಆಜ್ಞೆಯಲ್ಲಿ ಜನವರಿ ೩ರಂದು ಬೆಳಿಗ್ಗೆ ೩ ಜನ ಆಪಾದಿತರೂ ಕೃಷ್ಣನ ಮನೆಯಲ್ಲಿ ಸೇರಿ ದರೋಡೆ ಮತ್ತು ಕಳುವಿಗೆ ಪಿತೂರಿ ನಡೆಸಿದರೆಂದೂ ಅವಶ್ಯ ಕೋರಿದರೆ ಕೊಲೆ ಮಾಡಲೂ ನಿರ್ಧರಿಸಲಾಯಿತೆಂದೂ, ಆ ಬೆಳಿಗ್ಗೆ ೧೧ ಗಂಟೆ ಸಮಯದಲ್ಲಿ ೩ನೇ ಆಪಾದಿತನು ಕೃಷ್ಣನನ್ನು ಭೇಟಿ ಮಾಡುವ ಬಗ್ಗೆ ಹೊಂದಿದ್ದ ಬಗ್ಗೆ ಸಾಕ್ಷಿಯಿದೆಯೆಂದೂ, ೧ ಮತ್ತು ೨ನೇ ಆಪಾದಿತರು ಧನಲಕ್ಷ್ಮಿ ಮತ್ತು ಇತರ ವಿವರ ಕಾರಿಗಳನ್ನು ಕೊಂಡರೆಂದೂ, ಕೊಲೆ ದಿನ ಧರಿಸಿದ್ದ ಬಟ್ಟೆಗಳು ೧ ಮತ್ತು ೨ನೇ ಆಪಾದಿತರ ಮನೆಯಲ್ಲಿ ಸಿಕ್ಕಿದುವೆಂದೂ ತಿಳಿಸಿರುವರು. ಬೇಲೂರರ ಮನೆಯಲ್ಲಿದ್ದ [illegible] ಗಳ ಮೇಲೆ ಕೈ ಬೆರಳಿನ ಗುರುತು [illegible] ಕ್ಕೆ ಸರಿಹೊಂದುವುದಾಗಿ [illegible] ದೆಂದೂ, ಮನೆ ಕಿಟಕಿ ಸರಳುಗಳ [illegible] ಗದಲ್ಲಿ ಕೃಷ್ಣನು ತೂರುವಷ್ಟು [illegible] ಗಿಯೂ ಎಫ್. ಐ. ಆರ್. ನಲ್ಲಿ [illegible] ದೆಂದೂ ನ್ಯಾಯಾಧೀಶರು ಹೇಳಿದ್ದಾರೆ.

[illegible] ಎಂದೆ ಕೊಟ್ಟಿರದಿದ್ದ ಕೆಲವು ಹೇಳಿಕೆಗಳನ್ನು ಆಪಾದಿತರಿಗೆ ಕೊಡಲಾಯಿತು.

ಹೈಕಮಾಂಡ್ ಪತ್ರ [illegible] ಕಾಂಗ್ರೆಸ್ ಅಧ್ಯಕ್ಷರ

ಕೇಂದ್ರ ಪಾರ್ಲಿಮೆಂಟ್ ಶ್ರೀಮಾನ್ ನವನ್ನೊಳಗೊಂಡ ಪ್ರದೇಶ ಕಾಂಗ್ರೆಸ್ ಅ[illegible] ಗೊತ್ತಾಗಿದೆ. ಶ್ರೀ ನಿಜಲಿಂಗಪ್ಪ ಬೇಗನೆ ಶಾಸನಸಭಾ ಕಾಂ[illegible] ಧೆಯನ್ನು ಕರೆದು ಅದರ ಮುಂದೆ ತೆ[illegible] ನಾವು ಪತ್ರವನ್ನಿಟ್ಟು ಅಭಿಪ್ರಾಯ ಪಡೆ[illegible] ಕೆಂದು ಅದರಲ್ಲಿ ಸೂಚಿಸಲಾಗಿದೆಯೆಂದು [illegible] ದುಬಂದಿದೆ.

ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ನಾಳೆ ಬೆಂಗಳೂರಿಗೆ ಹೋಗಲಿರುವರು.

೦ ನವೆಂಬರ್ ಒಳಗೆ ಸಾಹುಕಾರ್ ಎಂಬುವನು [illegible] ಕಟ್ಟು ಜೂಜಾಡುತ್ತಿದ್ದನೆಂದು ಮುಂಚೆ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಇಂದು ನಗರ ನ್ಯಾಯಾಧೀಶರು ಅವನಿಗೆ [illegible] ಜುಲ್ಮಾನೆಯನ್ನು ವಿಧಿಸಿದರು.

ರಾಜಪ್ರಮುಖರ ವರ್ಧಂತ್ಯುತ್ಸವ

ಮೈಸೂರು ೨೯

ಮಹಾರಾಜರವರ ನ್ಯೂ ಟೈಪ್ ಮಿಡಲ್ ಸ್ಕೂಲಿನಲ್ಲಿ ಮೊನ್ನೆ ಶ್ರೀ ಡಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ರಾಜಪ್ರಮುಖರ ೩೭ನೇ ವರ್ಷ ವರ್ಧಂತಿ ಮಹೋತ್ಸವವು ನಡೆಯಿತು ಮಕ್ಕಳಿಂದ ದೇವರ ಪ್ರಾರ್ಥನೆಯಾದನಂತರ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಬಿ ನರಸಮ್ಮನವರು ಗೀತೆಯ ರೂಪದಲ್ಲಿ ರಾಜಪ್ರಮುಖರ ಗುಣಗಾನ ಮಾಡಿದರು ಶ್ರೀಮತಿ ಟಿ ಕೆ ಸುಶೀಲಮ್ಮನವರು ಕನ್ನಡನಾಡಿನ ಹಿರಿಮೆಯನ್ನು ಕೊಂಡಾಡಿದರು. ಕುಮಾರಿ ಸಿ ಚಂಚಲರಿಂದ ನೃತ್ಯವು ನಡೆಯಿತು ಕೊನೆಯಲ್ಲಿ ಅಧ್ಯಕ್ಷರು ರಾಜಪ್ರಮುಖರ ವಿಚಾರವಾಗಿ ಭಾಷಣ ಮಾಡಿ, ಯದುವಂಶಕ್ಕೆ ಮಂಗಳವನ್ನು ಕೋರಿದರು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಮಹಾರಾಜಾ ಹೈಸ್ಕೂಲು ಸಂಘದ ಆಶ್ರಯದಲ್ಲಿ ವರ್ಧಂತಿ ಉತ್ಸವವನ್ನು ಮುಖ್ಯೋಪಾಧ್ಯಾಯರಾದ ಶ್ರೀ ರಾಜಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಯಿತು ಜಯರಾಮ್ ಮತ್ತು ಕೃಷ್ಣಮೂರ್ತಿಯವರಿಂದ ಪ್ರಾರ್ಥನೆಯಾದನಂತರ ಸ್ಕೌಟ್ ಲೀಡರರಿಂದ ಧ್ವಜಾರೋಹಣ ನಡೆಯಿತು ಶಾಲೆಯ ಎನ್ ಸಿ ಸಿ ಮತ್ತು ಸ್ಕೌಟ್ ದಳದಿಂದ ಧ್ವಜವಂದನೆ ಮತ್ತು ಮಾರ್ಚ್ ಪಾಸ್ಟ್ ಆದನಂತರ, ಅಧ್ಯಾಪಕರಾದ ಶ್ರೀ ಶ್ರೀನಿವಾಸರವರು ಭಾಷಣ ಮಾಡಿದರು ಬಹುಮಾನ ಎನ್ ಸಿ ಸಿ ಬಾಲಕರಿಗೆ ಸರ್ಟಿಫಿಕೇಟುಗಳನ್ನು ಹಂಚಿ, ಭಾಷಣ ಮಾಡಿದವರು ಉಪಾಧ್ಯಕ್ಷರಾದ ಶ್ರೀ ಎಂ ಆರ್ ಸೀತಾರಾಮರವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಉತ್ಸವವು ಮುಕ್ತಾಯವಾಯಿತು

ಮರಿಮಲ್ಲಪ್ಪನವರ ಪಾಠಶಾಲೆಯಲ್ಲಿ ಮಹಾರಾಜರ ವರ್ಧಂತಿಯನ್ನು ಮೊನ್ನೆ ನೆರವೇರಿಸಲಾಯಿತು ಅನಂತರಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು ಸಂಸ್ಕೃತ ಅಧ್ಯಾಪಕರಾದ ಶ್ರೀ ಬಿ ಎಸ್ ಕೃಷ್ಣಪ್ಪನವರು ಮತ್ತು ಶ್ರೀ ಸುಬ್ಬರಾಯರು ಶ್ರೀಮನ್ಮಹಾರಾಜರ ಬಗ್ಗೆ ಭಾಷಣ ಮಾಡಿ ಅವರಿಗೆ ಶ್ರೇಯಸ್ಸನ್ನು ಕೋರಿದರು ಹಿಂದೆ ಮೈಸೂರು ದೇಶಕ್ಕೆ ಒದಗಿದ್ದ ಕ್ಷಾಮದಲ್ಲಿ ಅವರು ತಮ್ಮ ಸ್ವಂತ ಭಂಡಾರದ ಆಹಾರವನ್ನು ಜನಗಳಿಗೆ ಹಂಚಿ ಮಹೋಪಕಾರ ಮಾಡಿದುದಾಗಿ ಅವರು ಹೇಳಿದರು ಶ್ರೀ ನಾಗೇಶರಾಯರು ಮಹಾರಾಜರ ಬಗ್ಗೆ ಪ್ರಜೆಗಳ ಮತ್ತು ವಿದ್ಯಾರ್ಥಿಗಳ ಪ್ರೀತ್ಯಾದರಗಳನ್ನು ಹೊರಗೆಡಹಿದರು ಸಂತೋಷ ಪ್ರಾರ್ಥನೆ ರಾಷ್ಟ್ರಗೀತೆಗಳಾದುವು

ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ... ಶ್ವರ ದೇವಸ್ಥಾನದಲ್ಲಿ ಮಹಾರಾಜರಿಗೆ ಉಳಿಯುವರು ... ಯುಕ್ತ ಮೊನ್ನೆ ಬೆಳಗ್ಗೆ ದೇವರಿಗೆ ... ಕ್ರಿಗಳು ನುಡಿದರು ಮಧ್ಯಾಹ್ನ ೩ ಘಂಟೆಗೆ ಶ್ರೀ ಬಿಂ "ಮುತ್ತೈದೆ ಭಾಗ್ಯಗಳವರಿಂದ ಉಪನ್ಯಾಸವೂ, ಬಿ ಸೋ|| ಮಾಯಿನಾಥರು ಹಿರಣ್ಣಯ್ಯ ನಗರದ ಚಾಮುಂಡ ಶಂಕರವಿಜಯ ಎಂ೩ ಫ್ರಂ ಇ ... ಮುತ್ತೈದೆ ಘಂಟೆಗೆ ಭದ್ರಾವತಿ ಶ್ರೀ ವೆಂಕಟೇಶ ... ವನ್ನು ಅಶ್ವಥ ಕೇಮರೆಡ್ಡಿ ಸುಬ್ಬಮ್ಮ ಎಂಬ ಶಿವಕ ... ಎಲ್ ಎಡಿದು, ಮಹಾರಾಜರು ಮತ್ತು ಅವರ ಕು ... ಮಾಲಿಕ ಶ್ರೀ ಚಲುವನವರಿಗೆ ಆಯುರಾರೋಗ್ಯಗಳ ... ದ್ಯೋಗಿಗಳನ್ನು ಮುಕ್ತಾಯಿತು

ತ್ಯಂಸಿದರು. ನೆನ್ನೆಯ ...

... ಮೊಳಕೆ ಪ್ರೇಕ್ಷಕರ ... ಅಸೋಸಿಯೇಷನ್

ತಂಡಗಳನ್ನೂ, ಇತರ ಪ್ರೇ ...ಸೂ ಟ

ಯನ್ನು ಹಂಚಲಾಯಿತು , ಕಾಲೇಜುಗಳಲ್ಲಿ ಓದುವ

ಭಾರತದ ನೌಕರಿಗಳಿಗೆ 56-57ನೇ ಸಾಲಿ ವಿಮಾನ ವ್ಯಾಥಿ ವೇತನ ಕೊಡಲ್ಪಡುತ್ತೆ

ಭಾರತದ ನಾಗರಿಕರವರು ಆಯಾಯ ಹೈಸ್ಕೂಲಿನ ಹತ ... ಕಾಲೇಜಿನ ಮುಖ್ಯೋಪಾಧ್ಯಾಯರ ... ಸರ್ಟಿಫಿಕೇಟಿನೊಂದಿಗೆ ನಿಯಮಿತ ಫಾರಂನಲ್ಲಿ 10-8-1956 ರ ಒಳಗಾಗಿ ಅರ್ಜಿ ಹಾಕಿಕೊಳ್ಳಬಹುದು ಸ್ಕಾಲರ್‌ಷಿಪ್ ಫಾರಂಗಳು ಮೇಲ್ಕಂಡ ಅಸೋಸಿಯೇಷನ್ ಆಫೀಸಿನಲ್ಲಿ ಸಿಗುತ್ತವೆ

(ಸಹಿ) ಟಿ. ಶಾಂತರಾಜಪ್ಪ,

ಮೈಸೂರು ಪ್ರೆಸಿಡೆಂಟ್

26-7 1956

ಮರಕ್ಕೆ ಲಾರಿ ಡಿಕ್ಕಿ ಹೊಡೆದು ಡ್ರೈವರನಿಗೆ ಪೆಟ್ಟು

ಸ್ವಂ ವ] ನಂಜನಗೂಡು ೨೦

ಗುಂಡ್ಲುಪೇಟೆಗೆ ಹೋಗುವ ರಸ್ತೆ ಇ ೧೧೭ನೇ ಮೈಲಿ ಕಲ್ಲು ಬಳಿ ಮರವೊಂದಕ್ಕೆ ತಾ ದಿನ ಎಂ ಡಿ.ಸಿ ೪೯೩ನೇ ನಂಬರಿನ ಲಾರಿಯು ಡಿಕ್ಕಿ ಹೊಡೆದು, ಡ್ರೈವರ್ ... ಎಂಬುವನಿಗೆ ಗಾಯವಾಗಿದೆ ಅವನನ್ನು ಇಲ್ಲಿನ ಆಸ್ಪತ್ರೆಗೆ ಸೇರಿಸಲಾಗಿದೆ ಅವನ ... ಚಿಂತಾಜನಕವಾಗಿದೆ ಲಾರಿಗೆ ತುಂಬಾ ಜಖಂ ಆಗಿದೆ

ರೆವಿನ್ಯೂ ಕಮೀಷನರರ ಭೇಟಿ

ಸಂಸ್ಥಾನದ ರೆವಿನ್ಯೂ ಕಮೀಷನರರಾದ ಶ್ರೀ ಎ. ಮಾಧವರಾಯರು ಮೊನ್ನೆ ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಬಿ ಸಿ ಚನ್ನಂಜೆ ಅರಸ ರೊಡನೆ ಪ್ರವಾಸ ಮಾಡಿ ತಾಲ್ಲೂಕಿನಲ್ಲಿ ನಡೆದಿರುವ ಪರಿಹಾರ ಕಾರ್ಯಗಳನ್ನು ಖುದ್ದಾಗಿ ಪರೀಕ್ಷಿಸಿದರು ಅಕ್ಟೋಬರ್ ತಿಂಗಳವರೆಗೂ ಪರಿಹಾರದ ಕ್ರಮಗಳು ಜರುಗುವಂತಾಗಬೇಕೆಂದು ಸ್ಥಳೀಯ ಪ್ರಮುಖರು ಅವರನ್ನು ಕೋರಿದರು

ರಾಮನ ವಿಗ್ರಹ ಸುಡಲು ರಾಮಸ್ವಾಮಿನಾಯಕರ ನಿರ್ಧಾರ

ಶ್ರೀ ರಾಮ ಮತ್ತು ರಾಮಾಯಣದ ಇತರ ವ್ಯಕ್ತಿಗಳ ಪ್ರತಿಮೆಗಳನ್ನು ಸುಡುವ ಬಗ್ಗೆ ದ್ರಾವಿಡ ಸಂಘವು ಮಾಡಿರುವ ನಿರ್ಧಾರವನ್ನು ತಾವು ನಡೆಸುವುದಾಗಿ ಸಂಘದ ನಾಯಕ ಇ ವಿ ರಾಮಸ್ವಾಮಿ ನಾಯಕರ್‌ರವರು ತಿಳಿಸಿರುತ್ತಾರೆ

ನಗರದ ಆಕಾಶವಾಣಿ ಕಟ್ಟಡ ಮೈಸೂರು ಸರ್ಕಾರಕ್ಕೆ

ರಾಜಧಾನಿಯಲ್ಲಿರುವ ಆಕಾಶವಾಣಿ ಕಟ್ಟಡವನ್ನು ಮೈಸೂರು ಸರ್ಕಾರಕ್ಕೆ ಕೇಂದ್ರದವರು ವಹಿಸಿಕೊಟ್ಟಿರುತ್ತಾರೆಂದು ಗೊತ್ತಾಗಿದೆ

ನಂಜನಗೂಡು ತಾಲ್ಲೂಕು ಹೆಮ್ಮರಗಾಲದ ವಿ ಪಿ ಛೇರ್ಮನ್ ಶ್ರೀ ಹೆಚ್ ವಿ ವೀರಭದ್ರಯ್ಯನವರ ಅಧ್ಯಕ್ಷತೆಯಲ್ಲಿ ಅದೇ ಗ್ರಾಮದ ಶಿರುವಿ ಹಾರದ ಕಲು ಮೊನ್ನೆ ಮಹಾರಾಜರ ವರ್ಧಂತ್ಯುತ್ಸವವನ್ನು ಆಚರಿಸಿದರು ಶಿರುವಿಹಾರದ ಆರ್ಗನೈಜರ್ ಶ್ರೀಮತಿ ಎಂ ವಿಮಲಮ್ಮನವರು ಮಹಾಪ್ರಭುಗಳ ಗುಣಗಾನ ಮಾಡಿದರು. ಶಿರುವಿಹಾರದ ಹಾಗೂ ನ್ಯೂ ಟೈಪ್ ಮಿಡ್ಲ್ ಸ್ಕೂಲಿನ ಮಕ್ಕಳಿಗೆ ಗ್ರಾಮ ಪಂಚಾಯಿತಿಯವರು ಸಿಹಿ ತಿಂಡಿಯನ್ನು ಹಂಚಿದರು

ಗುಂಡ್ಲುಪೇಟೆಯಲ್ಲಿ ಮೊನ್ನೆ ಬೆಳಗ್ಗೆ ಸಮಾರಂಭವು ನಡೆದು ಪೌರಸಭಾಧ್ಯಕ್ಷರಾದ ಶ್ರೀ ಜಿ. ಎ ರಹಮಾನ್ ಖಾನರವರು ಧ್ವಜಾರೋಹಣ ಮಾಡಿದರು ತರುವಾಯ ಶ್ರೀನಿವಾಸ ಸಿನಿಮಾ ಮಂದಿರದಲ್ಲಿ ಅವರ ಅಧ್ಯಕ್ಷತೆಯಲ್ಲಿ ಸಭೆಯು ನಡೆದು ಭಾಷಣಗಳಾದುವು ಅಧ್ಯಕ್ಷರು ಸುಮಾರು ೨೦೦ ರೂ ಸ್ವಂತ ವೆಚ್ಚದಿಂದ ಮಕ್ಕಳಿಗೆ ಸಿಹಿತಿಂಡಿಯನ್ನೂ ಮತ್ತು ಬಹುಮಾನಗಳನ್ನೂ ವಿನಿಯೋಗಿಸಿದರು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಈಜಿಪ್ಟಿಗೆ ಸರ್ವ ಸಹಾಯ ನೀಡಲು ರಷ್ಯ ಸಿದ್ಧ

ಸೂಯೆಜ್ ಕಾಲುವೆ ಕಂಪೆನಿ ರಾಷ್ಟ್ರೀಕರಣದಿಂದ ಉಂಟಾಗಿರುವ ಬಿಕ್ಕಟ್ಟಿನ ಸಂಬಂಧವಾಗಿ ರಷ್ಯದ ಪ್ರಾವ್ದಾ ಪತ್ರಿಕೆಯು ಲೇಖನವೊಂದರಲ್ಲಿ ಈಜಿಪ್ಟ್ ವಾಸ್ತವಿಕವಾದ ಆರ್ಥಿಕ ಸಹಾಯವನ್ನು ಬೇಡಿದರೆ ರಷ್ಯವು ಒದಗಿಸಲು ಸಿದ್ಧವಾಗಿರುವುದೆಂದು ಸೂಚಿಸಿದೆ ವಸಾಹತು ಬೃಂಕಲೆಗಳನ್ನು ಕಿತ್ತೊಗೆದು ತಮ್ಮ ದೇಶದ ವ್ಯವಸಾಯ ಮತ್ತು ಕೈಗಾರಿಕೆಗಳನ್ನು ಅಭಿವೃದ್ಧಿಗೊಳಿಸಲು ಆರ್ಥಿಕ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸುವ ರಾಷ್ಟ್ರಗಳ ಬಗ್ಗೆ ರಷ್ಯವು ಸಹಾನುಭೂತಿ ಹೊಂದಿರುವುದೆಂದು ಪತ್ರಿಕೆಯು ತಿಳಿಸಿದೆ

೫೦ ಸಾವಿರ ಬೊಂಬಾಯಿ ಕಾರ್ಮಿಕರಿಂದ ಬೋನಸ್ಸಿನ ನಿರಾಕರಣೆ

ಬೊಂಬಾಯಿ ಹತ್ತಿ ಗಿರಣಿ ಮಾಲೀಕರ ಸಂಘದವರು ಅಲ್ಲಿನ ಕಾಂಗ್ರೆಸ್ ಪ್ರೇರಿತ ಕಾರ್ಮಿಕರ ಸಂಘದವರೊಡನೆ ಮಾಡಿಕೊಂಡ ಒಪ್ಪಂದದ ಫಲವಾಗಿ ಕೊಡುವ ೧೯೫೫ನೇ ವರ್ಷದ ಬೋನಸ್ಸನ್ನು ತೆಗೆದುಕೊಳ್ಳಲು ೫೦ ಸಾವಿರ ಗಿರಣಿ ಕಾರ್ಮಿಕರು ನಿರಾಕರಿಸಿರುತ್ತಾರೆ.

ನೀರಿನಲ್ಲಿ ಬಸ್ಸು ಮುಳುಗಿ ೩೦ ಜನರ ಮರಣ

ಮಧ್ಯ ಫಿನ್ಲೆಂಡಿನಲ್ಲಿ ಒಂದು ಕಡೆ ಆಳವಾದ ನದಿಯೊಂದರಲ್ಲಿ ಬಸ್ಸು ಮಗುಚಿಕೊಂಡು ಮುಳುಗಿತೆಂದೂ, ಅದರಲ್ಲಿದ್ದ ೩೦ ಜನರು ಮೃತಪಟ್ಟರೆಂದೂ ವರದಿಯಾಗಿದೆ

ಮಹಾರಾಜಾ ಕಾಲೇಜು ವಿದ್ಯಾರ್ಥಿ ನಿಲಯ ಸಂಘದ ಆರಂಭ ಭಾಷಣ

ಮಹಾರಾಜಾ ಕಾಲೇಜು ವಿದ್ಯಾರ್ಥಿ ನಿಲಯ ಸಂಘದ ಆರಂಭ ಭಾಷಣವನ್ನು ವಿಶ್ವವಿದ್ಯಾನಿಲಯದ ರಿಜಿಸ್ಟ್ರಾರ್ ಶ್ರೀ ಎಫ್ ಜೆ ಸಲ್ಡಾನಾರವರು ಕಳೆದ ಶನಿವಾರ ಮಾಡಿದರು ಪ್ರೊ|| ಸಿ, ಡಿ ನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು ವಾರ್ಡನ್ ಶ್ರೀ ಸುಬ್ಬರಾಯಾಚಾರ್ಯರು ಸ್ವಾಗತ ಭಾಷಣ ಮಾಡಿದನಂತರ ವಿದ್ಯಾರ್ಥಿಗಳಾದ ಶ್ರೀಗಳು ಎ ಸಿ ಶ್ರೀಕಂಠಯ್ಯ ಮತ್ತು ಶಿವಮೂರ್ತಿಗಳು ಭಾಷಣ ಮಾಡಿದರು ಶ್ರೀ ಸಲ್ಡಾನಾರವರು ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಹಿತೋಕ್ತಿಗಳನ್ನಿತ್ತನಂತರ, ಅಧ್ಯಕ್ಷ ಭಾಷಣ ಮತ್ತು ಶ್ರೀ ಕೆ ಎನ್ ಸುಬ್ಬಾರೆಡ್ಡಿಯವರಿಂದ ವಂದನಾರ್ಪಣೆಗಳಾದುವು.

ಜೂಜಾಡುತ್ತಿದ್ದವರಿಗೆ ಜುಲ್ಮಾನೆ

ಸನಾವುಲ್ಲ, ಬಾಬ್ಜ ಎಂಬಿಬ್ಬರು ಮೊನ್ನೆ ಮಂಡಿ ಮೊಹಲ್ಲೆಯಲ್ಲಿ ಕಲ್ಯಾಣ ಕುದುರೆ ಜೂಜಿನ ಮೇಲೆ ಪಂದ್ಯ ಕಟ್ಟುತ್ತಿದ್ದಾಗ ಮಂಡಿ ಪೊಲೀಸರು ಅವರನ್ನು ಬಂಧಿಸಿ ೧|| ರೂ ವಶಪಡಿಸಿಕೊಂಡು ಅವರಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ನಗರದ ದ್ವಿತೀಯ ನ್ಯಾಯಾಧೀಶರು ನೆನ್ನೆ ಆಪಾದಿತರಿಗೆ ತಲ ೧೦ ರೂ ಜುಲ್ಮಾನೆ ವಿಧಿಸಿದರು

ಸೂಯೆಜ್ ಕಾಲುವೆ ಬಿಕ್ಕಟ್ಟಿನ ಬಗ್ಗೆ ತ್ರಿರಾಷ್ಟ್ರಗಳ ಜಂಟಿ ಕ್ರಮ

ಸೂಯೆಜ್ ಕಾಲುವೆ ಕಂಪೆನಿಯ ರಾಷ್ಟ್ರೀಕರಣದಿಂದ ಅಂತರ ರಾಷ್ಟ್ರೀಯ ನೌಕಾಯಾನಕ್ಕೆ ಒದಗಿರುವ ಭೀತಿಯನ್ನು ತಪ್ಪಿಸುವ ಬಗ್ಗೆ ಬ್ರಿಟನ್, ಫ್ರಾನ್ಸ್ ಮತ್ತು ಅಮೆರಿಕಗಳು ಜಂಟಿ ಕಾರ್ಯಾಚರಣೆ ನಡೆಸಲಿರುವುದಾಗಿ ಗೊತ್ತಾಗಿದೆ ಈ ಬಗ್ಗೆ ಲಂಡನ್ನಿನಲ್ಲಿ ಮೂರು ರಾಷ್ಟ್ರಗಳ ಮಾತುಕತೆ ನಡೆಯುತ್ತಿದೆ.

ನಾಯಿಯಿಂದ ಆಗತಾನೆ ಜನಿಸಿದ ಶಿಶುವಿನ ಅಪಹರಣ ಪ್ರಯತ್ನ

ನೆಥರ್ಲ್ಯಾಂಡ್ಸಿನ ಆಸ್ಪತ್ರೆಯೊಂದರಲ್ಲಿ ... ವಾರ ಆಗತಾನೆ ಜನಿಸಿದ ಒಂದು ಶಿಶುವನ್ನು ನಾಯಿಯೊಂದು ಕಚ್ಚಿಕೊಂಡುಹೋಗಿದ್ದ ಪ್ರಸಂಗವು ವರದಿಯಾಗಿದೆ ಪ್ರಸವ ವೇದನೆಯಿಂದ ತಾಯಿಗೆ ಪ್ರಜ್ಞೆ ತಪ್ಪಿತ್ತೆಂದೂ ಆಗ ನಾಯಿಯು ಮಗುವನ್ನು ಎಳೆದುಕೊಂಡು ದೂರ ಹೋಗಿ, ಅದನ್ನು ಕಚ್ಚುತ್ತಿದ್ದಾಗ ಮಗುವು ಕಿರುಚಿಕೊಳ್ಳಲಾಗಿ ಅದರಿಂದ ಪ್ರಜ್ಞೆ ತಿಳಿದ ತಾಯಿಯು ಓಡಿಬಂದು ಮಗುವನ್ನು ರಕ್ಷಿಸಿದಳೆಂದೂ ಹೇಳಲಾಗಿದೆ. ಮಗುವಿನ ತಲೆಗೆ ತುಂಬಾ ಪೆಟ್ಟಾಗಿದೆ, ಆದರೆ ಗುಣ ಹೊಂದುತ್ತಿದೆ

ಪೋರ್ಟ್ ಸೈಯದ್ದಿನ ವಶ

ಈಜಿಪ್ಟ್ ನೌಕೆಗಳು ಪೋರ್ಟ್ ಸೈಯದ್ ಅನ್ನು ವಶಪಡಿಸಿಕೊಳ್ಳಲು ಅಲೆಕ್ಸಾಂಡ್ರಿಯಾದ ಅಲ್ಲಿಗೆ ತೆರಳಿವೆ

ಮಹಾರಾಜರಿಗೆ ಪತ್ರಿಕೋದ್ಯೋಗಿ ಸಂಘದ ಅಭಿನಂದನೆ

ಮೈಸೂರು ನಗರ ಪತ್ರಿಕೋದ್ಯೋಗಿಗಳ ಸಂಘದ ಕಾರ್ಯಕಾರಿ ಸಮಿತಿಯು ನೆನ್ನೆ ಸಭೆ ಸೇರಿ ಶ್ರೀಮನ್ಮಹಾರಾಜರಿಗೆ ಅವರ ೩೭ನೇ ವರ್ಷದ ವರ್ಧಂತಿ ಕಾಲದಲ್ಲಿ ಶುಭಾಶಯಗಳನ್ನು ಕೋರುವ ನಿರ್ಣಯ ಮಾಡಿತು

ಸ್ವೀಕಾರ

ಶ್ರೀ ಗಾಯತ್ರಿ ರೇಡಿಯೊ ಕಾರ್ಪೊರೇಷನ್ನಿನವರು ಶ್ರೀಮನ್ಮಹಾರಾಜರ ವರ್ಧಂತಿಯನ್ನು ಮೊನ್ನೆ ಆಚರಿಸಿ, ಕಳುಹಿಸಿರುವ ಸಿಹಿ ತಿಂಡಿಯನ್ನು ಆದರದಿಂದ ಸ್ವೀಕರಿಸಿದ್ದೇವೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ... ಮತ್ತು ... ಎಸ್ ... ಸುಬ್ಬಯ್ಯ ... ಹಾಡುಗಳು ...

SRI GAYATHRI TALKIES
From 31-7 56 For 2 Days
M G M's
THE TENDER TRAP
(Cinemascope & Technicolor)
With – Frank Sinatra and
Debbie Reynolds

Paby
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
71|1 A. S Street,
BANGALORE-2

Edited, Printed and Published by A. R. Nagarajan at Sadhvi Press D Subbaiah Road, Mysore

THE NATIONAL EAGUE
Ananthalaya Buildings, Mysore
Offers excellent Coaching for S.S. L. C. Students
* Special Coaching for Primary School Teachers,
* Classes are in full swing
JOIN AT ONCE
Timings – 5-30 P M to 8-30 P.M.
V Rajagopal Iyengar,
Organiser

ಚಾಮುಂಡೇಶ್ವರಿ ಟಾಕೀಸ್
3—8—56 ರಿಂದ :: ಅಮೋಘ ಪ್ರಾರಂಭ
★ ಮರ್ಮ ವೀರನ್ ★
ನಿರ್ದೇಶಕ :— ಟಿ. ಆರ್. ರಘುನಾಥ್
ಮತ್ತು ಪ್ರೇಕ್ಷಕರನ್ನು ಮುಕ್ತ ಮಾಡಿದೆ

ಟೆಲಿಫೋನ್ ನಂ. 792

ಚಂದಾದರ
——
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರಗಳಿಗೆ ಬರೆಯಿರಿ

ಸಂಪುಟ · ೦೫] SADHVI : WEDNESDAY 1–8–1956 ಮೈಸೂರು : ಬುಧವಾರ ೧–೮–೧೯೫೬ [ಸಂಚಿಕೆ : ೧

೩ನೇ ೧೦ನೇ ತಾ॥ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆ

ಕೃಷ್ಣ ಮತ್ತು ಗೋವಿಂದರೆಡ್ಡಿ ಮೇಲೆ ಇನ್ನೆರಡು ಅಪಾದನೆ

ಬೆಂಗಳೂರು ೧

ಬೇಲೂರು ಶ್ರೀನಿವಾಸಯ್ಯಂಗಾರ್‌ರವರ ಕೊಲೆ ಅಪಾದಿತರ ಪೈಕಿ ಕೃಷ್ಣ ಮತ್ತು ಗೋವಿಂದರೆಡ್ಡಿಯವರುಗಳ ಮೇಲೆ ಸಿಟಿ ಕ್ರಿಮಿನಲ್ ನ್ಯಾಯಾಧೀಶರ ಮುಂದೆ ಪೋಲೀಸರು [illegible] ಅಪಾದನೆಗಳ [illegible] ಕೋರ್ಟಿನಲ್ಲಿ ಹಾಜರುಪಡಿಸಲಾಯಿತು [illegible] ಕೃಷ್ಣ [illegible] ಬೇಲೂರರ ಕೊಲೆ [illegible] ಗೃಹ ಮಂತ್ರಿ [illegible] ತಿಳಿಸಿರುತ್ತಾರೆ

ಸೈಕಲ್ ಬಿದ್ದು ಗಾಯಗೊಂಡದ್ದಕ್ಕೆ ಶಿಕ್ಷೆ

ಕೃಷ್ಣಪ್ಪ ಎಂಬಾತನು [illegible] ನ್ಯಾಯಾಧೀಶರು [illegible]

ಬೇಲೂರರ ಕೊಲೆ ಮೊಕದ್ದಮೆ ಬಗ್ಗೆ ಹೈಕೋರ್ಟಿಗೆ ರಿವಿಜನ್ ಅರ್ಜಿ

ನಗರ ನ್ಯಾಯಾಧೀಶರ ಆಜ್ಞೆಯ ರದ್ದಿಗೆ ಪ್ರಾರ್ಥನೆ

ಸ್ವಂ ಸು ಪ್ರೋ] ಬೆಂಗಳೂರು ೧

ಬೇಲೂರು ಶ್ರೀನಿವಾಸಯ್ಯಂಗಾರ್‌ರವರ ಕೊಲೆ ಮೊಕದ್ದಮೆಯ [illegible] ಹೈಕೋರ್ಟಿನಲ್ಲಿ ಒಂದು ರಿವಿಜನ್ ಅರ್ಜಿಯನ್ನು [illegible] ನಗರ ನ್ಯಾಯಾಧೀಶರ ಆಜ್ಞೆಯನ್ನು [illegible]

ಮೊಕದ್ದಮೆಯನ್ನು [illegible] ಮಾಡಿಲ್ಲವೆಂದೂ, ಕೇವಲ [illegible] ಸಾಕ್ಷಿ ವಿಚಾರಣೆ [illegible] ನ್ಯಾಯವಾದ ವಿಚಾರಣೆ ನಡೆಯುವುದಿಲ್ಲವೆಂಬ ಭಯ [illegible] ಮಾಡಿರುವುದಾಗಿಯೂ, [illegible]

ಮತ್ತೊಂದು ರಿವಿಜನ್ ಅರ್ಜಿಯನ್ನು [illegible] ಕೋರಿರುತ್ತಾರೆ

ಚಿನ್ನದ ಗಣಿ ರಾಷ್ಟ್ರೀಕರಣಕ್ಕಾಗಿ ೧.೯೯ ಕೋಟಿ ರೂ. ಪರಿಹಾರ

ನಗದು ಮತ್ತು ಬಾಂಡುಗಳ ರೂಪದಲ್ಲಿ

ಗೃಹ ಮಂತ್ರಿ [illegible] ೧

[illegible] ರಾಷ್ಟ್ರೀಕರಣದ ವಿಚಾರದಲ್ಲಿ ಮೈಸೂರಿನ [illegible]

ರಾಜ್ಯಾಂಗದ ಪ್ರಶ್ನೆಗಳ ಬಗ್ಗೆ ದಾನೆಗಳ [illegible]

ರಾಜ್ಯಾಂಗದ ಪ್ರಶ್ನೆಗಳ ವಿಷಯ [illegible] ಹೈಕೋರ್ಟಿನಲ್ಲಿ [illegible] ರಾಜ್ಯಾಂಗದ [illegible] ಹೈಕೋರ್ಟಿಗೆ [illegible]

ನಗರ ಶಾಲೆಯಲ್ಲಿ ಮಕ್ಕಳಿಗೆ ಉಪಾಹಾರ

ಶಾಲೆಗಳ [illegible] ಮಧ್ಯಾನ್ಹದ ಉಪಾಹಾರದ [illegible] ಅಧ್ಯಕ್ಷ ಶ್ರೀ [illegible]

ಕೋಲಾರದ ಗಣಿ ಬಳಿ ಹೊಸ ಚಿನ್ನದ ಅದಿರು ಪತ್ತೆ

ಕೋಲಾರದ ಚಿನ್ನದ ಗಣಿ ಪ್ರದೇಶದಲ್ಲಿ [illegible] ಚಿನ್ನದ ಅದಿರು ಪತ್ತೆಯಾಗಿದ [illegible] ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರು ತಿಳಿಸಿದರು [illegible] ಪ್ರದೇಶದಲ್ಲಿ ಭೂಗರ್ಭ [illegible] ಹೊಸ ಪ್ರದೇಶದಲ್ಲಿ [illegible]

ನೀರಿನ ಮೇಲೆ ಕಾರು ಮಗುಚಿ ಒಂದು ಹುಡುಗಿಯ ಮರಣ

[illegible]

ಬರುವ ನಾಲ್ಕು ವಿಧಾನ ಸೌಧದ ವೆಚ್ಚದ ಬಗ್ಗೆ ತನಿಖೆ

ವಿಧಾನ ಸೌಧದ ಬಗ್ಗೆ [illegible] ಸಮಿತಿಯನ್ನು [illegible]

ಹಿಂದಿ ಅವೇದನ ಪತ್ರಗಳು

ಬೆಂಗಳೂರಿನಲ್ಲಿರುವ ಮೈಸೂರು ಹಿಂದಿ [illegible] ರಾಜಧಾನಿಯ [illegible]

ಮುಖ್ಯ ಮಂತ್ರಿಗಳ ರಾಜೀನಾಮೆ ಪರಿಶೀಲನೆಗೆ ೧೦ ನೇ ತಾ॥ ಸಭೆ

ಸ್ವಂ ಸು ಪ್ರೋ] ಬೆಂಗಳೂರು ೧

ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯನ್ನು ಇದೇ ತಿಂಗಳು ೧೦ನೇ ತಾ॥ [illegible] ಭವನದಲ್ಲಿ ನಡೆಸಲಾಗುವುದೆಂದೂ, ಶ್ರೀ ಹನುಮಂತಯ್ಯನವರ ರಾಜೀನಾಮೆ ಪತ್ರವನ್ನು ಅವರಲ್ಲಿ ಪರಿಶೀಲಿಸಲಾಗುವುದೆಂದೂ ತಿಳಿದು ಬಂದಿದೆ

ಪಕ್ಷದ ಸದಸ್ಯತನದ [illegible] ವಾಪಸು ಮಾಡುವಂತೆ [illegible] ಗೊತ್ತಾಗಿದೆ

ಈಜಿಪ್ಟಿನ ಆಸ್ತಿ ಮೇಲೆ ಅಮೆರಿಕದ ಅರ್ಥಿಕ ಕ್ರಮ

[illegible] ಸೂಯೆಜ್ [illegible] ಕಂಪೆನಿಯ ಆಸ್ತಿ [illegible] ಅಮೆರಿಕಾ [illegible]

ಮದ್ರಾಸಿನಲ್ಲಿ ಪ್ರತಿಬಂಧಕಾಜ್ಞೆ

ಶ್ರೀರಾಮನ ವಿಗ್ರಹ ಮತ್ತು ಪ್ರತಿಮೆಗಳನ್ನು [illegible] ಪ್ರತಿಬಂಧಿಸಲಾಗಿದೆ

ಸೈಕಲ್ ತೆರಿಗೆ ವಜಾ ಮಾಡಲು [illegible]

[illegible] ಸೈಕಲ್ [illegible]

[illegible]

ಸಾಧ್ವಿ

1-8-1956ನೇ ಬುಧವಾರ

ವಿಜ್ಞಾಪನೆ

"ಸಾಧ್ವಿ" ಪತ್ರಿಕೆಯು ಕಳೆದ ೧೪ ವರ್ಷಗಳಿಂದಲೂ ಯಥಾಶಕ್ತಿ ನಾಡ-ನುಡಿಯ ಸೇವೆಯನ್ನು ಸಲ್ಲಿಸಿ ಈಗ ತನ್ನ ೧೫ನೇ ವರ್ಷದಲ್ಲಿ ಪ್ರವೇಶಿಸಿರುತ್ತದೆ ... ಸ್ಥಾಪಿತವಾಗಿ, ಈವರೆಗೆ ... ನಡೆಯುತ್ತಿರುವ ಈ ಪತ್ರಿಕೆಗೆ ಸಕಲ ವಿಧಗಳಲ್ಲಿಯೂ ನೆರವು ನೀಡುತ್ತಿರುವ ಎಲ್ಲ ಹಿತೈಷಿಗಳಿಗೂ ನಾವು ನಮ್ಮ ಹೃತ್ಪೂರ್ವಕವಾದ ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ ... ಇದರಂತೆ ಪತ್ರಿಕೋದ್ಯಮದ ಉನ್ನತ ಧ್ಯೇಯಗಳನ್ನು ಪಾಲಿಸಲು ಭಗವಂತನು ನಮಗೆ ಶಕ್ತಿಯನ್ನು ಅನುಗ್ರಹಿಸಲೆಂದೂ, ಸಕಲರಿಗೂ ಸನ್ಮಂಗಳವನ್ನು ಕರುಣಿಸಲೆಂದೂ ಪ್ರಾರ್ಥಿಸುತ್ತೇವೆ

ನಿಜಾಮರ ಹಣದ ಮೇಲೆ ಪಾಕಿಸ್ತಾನ ಸರ್ಕಾರದ ಹಕ್ಕು

ಲಂಡನ್ ಹೈಕೋರ್ಟಿನ ತೀರ್ಪು

೧೯೪೮ರಲ್ಲಿ ಹೈದರಾಬಾದಿನ ಮೇಲೆ ಭಾರತ ಸರ್ಕಾರದವರು ಪೊಲೀಸು ಕಾರ್ಯಾಚರಣೆ ನಡೆಸಿದಾಗ ನಿಜಾಮರ ... ಪೌಂಡು ಹಣವನ್ನು ಪಾಕಿಸ್ತಾನದ ... ಹೆಸರಿನಲ್ಲಿ ಲಂಡನ್ನಿನ ಬ್ಯಾಂಕಿನಲ್ಲಿಟ್ಟ ಸಂಬಂಧವಾಗಿ ನಿಜಾಮರು ಹೂಡಿದ್ದ ಮೊಕದ್ದಮೆಯಲ್ಲಿ ಅಲ್ಲಿನ ಹೈಕೋರ್ಟು ತೀರ್ಪಿತ್ತು, ಹಣದ ಮೇಲೆ ಪಾಕಿಸ್ತಾನ ಸರ್ಕಾರದ ಹಕ್ಕಿದೆಯೆಂದೂ, ಈ ವ್ಯವಹಾರವನ್ನು ಅಂತರ ರಾಷ್ಟ್ರಗಳ ಸಂಧಾನದ ಮೂಲಕ ಬಗೆಹರಿಸಿಕೊಳ್ಳಬೇಕೆಂದೂ ಸೂಚಿಸಿದೆ

ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ಬಿರುಗಾಳಿ

ಇಂಗ್ಲಿಷ್ ಕಡಲ್ಗಾಲುವೆಯಲ್ಲಿ ... ಮೈಲಿ ವೇಗದ ಬಿರುಗಾಳಿಯು ಬೀಸಿ ಸಮುದ್ರಯಾನಕ್ಕೆ ... ವಿದೇಶ ಹಡಗುಗಳ ... ನಾವಿಕರು ತಮ್ಮ ಜೀವ ಉಳಿಸಿಕೊಳ್ಳಲು ಹೋರಾಡಿದರೆಂದು ... ವರದಿಯಾಗಿದೆ ... ಬ್ರಿಟನ್ ಕರಾವಳಿ ... ವ್ಯಾಪಾರ ಹಡಗುಗಳು ... ಮುಳುಗಿತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ... ರಿಂದ ... ವಾರ್ತೆ ... ಸಂಗೀತ ... ವಿಶೇಷ ... ಸಂಗೀತ ... ಕಾರ್ಯಕ್ರಮ ... ರಾತ್ರಿ ... ವಾರ್ತೆ

ಮಹಾರಾಜರ ವರ್ಧಂತಿ

ನಂಜನಗೂಡು ೩೦

ಶ್ರೀಮನ್ಮಹಾರಾಜರ ೩೭ನೇ ವರ್ಷ ವರ್ಧಂತಿಯನ್ನು ಈ ದಿನ, ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಎಸ್ ಚನ್ನರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಇಲ್ಲಿನ ಪೌರಸಭೆಯವರು ಏರ್ಪಡಿಸಿದ್ದರು ಶ್ರೀ ಕೆ ವೆಂಕಟಸುಬ್ಬಯ್ಯ ಮತ್ತು ಕೆ ನಿಜಲಿಂಗೇಗೌಡರು ಭಾಷಣ ಮಾಡಿ ಮಹಾರಾಜರ ಗುಣ ಪ್ರಶಂಸೆ ಮಾಡಿದರು. ಮಕ್ಕಳಿಗೆ ಸಿಹಿ ತಿಂಡಿ ವಿನಿಯೋಗವಾಯಿತು ಶ್ರೀ ವೈ ಕೆ ಎಸ್. ಲಕ್ಷ್ಮಣಶೆಟ್ಟರು ವಂದನಾರ್ಪಣೆ ಮಾಡಿದರು

ನುಗು ಜಲಾಶಯಕ್ಕೆ ಭೇಟಿ

ಶಾಸನಸಭಾ ಸದಸ್ಯರು ಮತ್ತು ಸಾರ್ವಜನಿಕ ಲೆಕ್ಕ ಸಮಿತಿ ಸದಸ್ಯರಾದ ಶ್ರೀಗಳು ಜಿ ಎಂ ಇಮಾಂ, ತಿಪ್ಪಣ್ಣ, ತಿಂಗಳಗೌಡ, ಎಂ ಲಿಂಗಣ್ಣ, ಸೂಪರಿಂಟೆಂಡಿಂಗ್ ಇಂಜನಿಯರ್ ಶ್ರೀ ಹೆಚ್ ಎಸ್ ನರಸಿಂಹಯ್ಯಂಗಾರ್ ಮತ್ತು ಡೆಪ್ಯುಟಿ ಡೈರೆಕ್ಟರ್ ಶ್ರೀ ಕೃಷ್ಣಮೂರ್ತಿಯವರು ನುಗು ಜಲಾಶಯಕ್ಕೆ ಭೇಟಿಯಿತ್ತು, ಲೆಕ್ಕಪತ್ರಗಳ ತನಿಖೆ ನಡೆಸಿದರು ೧೯೪೬ರಲ್ಲಿ ಜಲಾಶಯ ನಿರ್ಮಾಣದ ಕಾರ್ಯವು ೪೫ ಲಕ್ಷ ರೂ ನಿಂದ ಆರಂಭವಾಗಿ ಈಗ ೩ ಕೋಟಿ ರೂ ವೆಚ್ಚವಾಗಿದೆ ಇದು ೩೩ ಮೈಲಿ ನಾಲೆ ಹೊಂದಿದ್ದು ... ಸಾವಿರ ಎಕರೆ ಜಮೀನಿಗೆ ನೀರನ್ನು ಒದಗಿಸಲಿದೆ

ಪರೂರು ಪ್ರಯಾಣಕ್ಕೆ ಬ್ರಿಟಿಷ್ ಯುದ್ಧ ನೌಕೆಗಳಿಗೆ ಆಜ್ಞೆ

ಪೂರ್ವಮಧ್ಯ ಸಮುದ್ರಕ್ಕೆ ಜರೂರಾಗಿ ಹೋಗಲು ಸಿದ್ಧವಾಗುವಂತೆ ಬ್ರಿಟನ್ನಿನ ಬುಲ್ವರ್ಕ್ ಮತ್ತು ಓಷನ್ ಎಂಬ ಎರಡು ವಿಮಾನವಾಹಕ ನೌಕೆಗಳಿಗೆ ಆಜ್ಞೆ ಮಾಡಲಾಗಿರುವುದೆಂದು ವರದಿಯಾಗಿದೆ

ಯುವಕರ ಕ್ರೀಡಾ ಕ್ಲಬ್

ರಾಜಧಾನಿಯ ಮೋಲ್ಕಂಡ ಕ್ಲಬ್ಬಿನ ಅಧಿಕಾರಿ ವರ್ಗದ ಚುನಾವಣೆಯು ಮೊನ್ನೆ ಹಾರ್ಡ್ವಿಕ್ ಹೈಸ್ಕೂಲಿನಲ್ಲಿ ನಡೆದು, ಶ್ರೀ ಬಿ ಎಲ್ ರಾಮಸ್ವಾಮಿ ಐಯರು ಅಧ್ಯಕ್ಷರಾಗಿಯೂ, ಶ್ರೀ ಕೆ ಸೀತಾರಾಮರಾವು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಬಿ ಎಸ್ ಶ್ರೀಕಂಠ ಮತ್ತು ಜಿ ಆರ್ ನಾರಾಯಣರವರು ಜಂಟಿ ಕಾರ್ಯದರ್ಶಿಗಳಾಗಿಯೂ, ಶ್ರೀ ಟಿ ಗೋವಿಂದಪ್ಪನವರು ಖಜಾಂಚಿಯಾಗಿಯೂ ಆರಿಸಲ್ಪಟ್ಟರು ಶ್ರೀ ಎಸ್ ರಾಮಾಚಾರ್ಯ ಶಾಸ್ತ್ರಿ ಅವರು ಶ್ರೀಗಳಾದ ಕೆ ನಂಜುಂಡಸ್ವಾಮಿ, ಎಂ ನಾಗಣ್ಣ ಮತ್ತು ಎಸ್ ಜಿ ಪಾರ್ಥಸಾರಥಿಯವರು ಸದಸ್ಯರಾದರು

ಆಯುರ್ವೇದೀಯ ಕುಷ್ಠ ರೋಗ ಆಸ್ಪತ್ರೆ

ಮದ್ರಾಸ್ ಯುನಿವರ್ಸಿಟಿಯ ತತ್ವಗಳ ಪ್ರಕಾರ ನಡೆಯುವ ಕುಷ್ಠರೋಗಿಗಳ ಆಸ್ಪತ್ರೆಯೊಂದನ್ನು ಬೆಂಗಳೂರು ಬಳಿ ಗಾಂಧಿ ಸ್ಮಾರಕ ಕುಷ್ಠರೋಗದ ಫೌಂಡೇಷನ್ ಟ್ರಸ್ಟಿನವರು ಆರಂಭಿಸಲಿದ್ದಾರೆ ಬರುವ ಅಕ್ಟೋಬರ್ ತಿಂಗಳಲ್ಲಿ ಅದು ಪ್ರಾರಂಭವಾಗುವುದೆಂದೂ, ೩೦ ರೋಗಿಗಳಿಗೆ ಅಲ್ಲಿ ಅವಕಾಶ ಕಲ್ಪಿಸಲಾಗುವುದೆಂದೂ ತಿಳಿದು ಬಂದಿದೆ ಡಾ|| ವೈ ಪಾರ್ಥಸಾರಥಿಯವರು ... ಇದರ ಮೇಲ್ವಿಚಾರಕರಾಗಿರುವರು

ಬ್ರಿಟಿಷ್ ಹಡಗುಗಳು ಸೂಯೆಜ್ ಮೂಲಕ ಹೋಗಕೂಡದು

ಇಂಗ್ಲೆಂಡಿನಿಂದ ದೂರ ಪ್ರಾಚ್ಯಕ್ಕೂ ಮತ್ತು ದೂರ ಪೂರ್ವದಿಂದಲೂ ಹೊರಟಿರುವ ೮ ಸೇನಾ ಹಡಗುಗಳು ಸೂಯೆಜ್ ಕಾಲುವೆ ಮೂಲಕ ಹೋಗದೆ ದಕ್ಷಿಣ ಆಫ್ರಿಕವನ್ನು ಬಳಸಿಕೊಂಡು ಹೋಗುವಂತೆ ಆಜ್ಞೆ ಮಾಡಲ್ಪಟ್ಟಿವೆ ಇದರಿಂದ ಅವು ೪,೦೦೦ ಮೈಲಿ ಹೆಚ್ಚು ಪ್ರಯಾಣ ಮಾಡಬೇಕಾಗುವುದು

ಆಗಮತ್ರಯ ಸಮ್ಮೇಳನ

ಆಗಮತ್ರಯ ಮಹಾ ಮಂಡಲದ ಸಮ್ಮೇಳನವು ಇದೇ ತಿಂಗಳು ೫, ೬, ೭ ಮತ್ತು ೮ರಂದು ಬೆಂಗಳೂರಿನ ವಿಶ್ವೇಶ್ವರಪುರದಲ್ಲಿರುವ ಕೋಟೆ ಶ್ರೀ ... ಧರ್ಮ ಕಲ್ಯಾಣ ಮಂಟಪದಲ್ಲಿ ಸೇರುವುದು. ಅವನಿ ಶೃಂಗೇರಿ ಜಗದ್ಗುರುಗಳು ಅಧ್ಯಕ್ಷತೆ ವಹಿಸುವರು ... ವಿದ್ಯಾ ಮಂತ್ರಿಗಳು ಇದರ ಆರಂಭೋತ್ಸವವನ್ನು ನೆರವೇರಿಸುವರು ಈ ಸಮ್ಮೇಳನದಲ್ಲಿ ... ಅವಕಾಶವಾಗುವಂತೆ ಸಂಸ್ಥಾನದ ಎಲ್ಲಾ ವಿದ್ವಾಂಸರು, ಆಗಮಿಕಾರ್ಚಕರುಗಳಿಗೆ ಸರ್ಕಾರದವರು ಅವಕಾಶ ಕಲ್ಪಿಸಿದ್ದಾರೆ ಆಹ್ವಾನ ತಲುಪದವರು ಪತ್ರಿಕಾ ಪ್ರಕಟಣೆಯನ್ನೇ ಆಹ್ವಾನವೆಂದು ಮನ್ನಿಸಿ ಸಮ್ಮೇಳನಕ್ಕೆ ಬರುವಂತೆ ಶ್ರೀ ಆರ್ ಮಲ್ಲಿಕಾರ್ಜುನ ಶಾಸ್ತ್ರಿಗಳವರು ಕೋರಿರುತ್ತಾರೆ

ಮಹಾರಾಜಾ ಕಾಲೇಜು ಡಿಬೇಟಿಂಗ್ ಸೊಸೈಟಿ ಅಧಿಕಾರ ವರ್ಗ

ಮಹಾರಾಜಾ ಕಾಲೇಜಿನ ಡಿಬೇಟಿಂಗ್ ಸೊಸೈಟಿಯ ವಾರ್ಷಿಕ ಚುನಾವಣೆಯು ಕಳೆದ ಶುಕ್ರವಾರ ನಡೆದು ಪ್ರಸಕ್ತ ಸಾಲಿನ ಅಧಿಕಾರ ವರ್ಗಕ್ಕೆ ಉಪಾಧ್ಯಕ್ಷರಾಗಿ ಶ್ರೀ ಕ್ರಿಸ್ಟೋಫರ್ ರಾಂ ತಪ್ಪ, ಕಾರ್ಯದರ್ಶಿಗಳಾಗಿ ಶ್ರೀಗಳಾದ ಬಿ ಎಲ್ ನಾಗರಾಜಪ್ಪ ಮತ್ತು ಬಿ ಕೆ ಪಟೇಲ್ ಮತ್ತು ಕಾರ್ಯನಿರ್ವಾಹಕ ಸಮಿತಿಯ ಸದಸ್ಯರಾಗಿ ಶ್ರೀಗಳಾದ ಕೆ ಜಿ ಶೆಟ್ಟಿ, ಕೃಷ್ಣಪ್ರಸಾದ್, ಎಸ್ ಆರ್ ಶಿವಲಿಂಗಯ್ಯ, ವಿ ವಿಶ್ವನಾಥಯ್ಯ ಮತ್ತು ಡಿ ಬಿ ಬಸವೇಗೌಡರು ಆಯ್ಕೆಯಾದರು

ಮೈಸೂರು ಪೇಟೆ ಧಾರಣೆ

	ರೂ	ಆ	ದ	ರೂ	ವರೆಗೆ	
ಕಣ್ಣಛತ್ರ	೩೧	೩	೦	೩೨	೦	೦
ಪಟ್ಟನತ್ರ	೨೭	೩	೦	೩೨	೦	೦
ರಾಗಿ	೨೯	೪	೦	೩೧	೦	೦
ಕಡಲೆಕಾಯಿ	೧೦	೦	೦	೨೦	೬	೦
ಒಣ್ಣಮೆಣಸಿನ	೩೩	೦	೦			
ಒಸ್ಸ	೧೩	೮	೦	೧೫	೧೦	೦
ಎಳ್ಳು	೩೩	೩	೦	೮೦	೬	೦
ಮಸುಕೆ	೨೩	೦	೦	೩೮	೪	೦
ಸಾಸಿವೆ	೪೭	೮	೦	೪೮	೨	೦
ಹುರುಳಿಕಂಡೆ	೪೩	೧೪	೦	೩೯	೩	೦
ಉಪ್ಪು	೩೪	೮	೦			
ಮೆಣಸಿನಹಣ್ಣು	೬	೨	೦			
ಮೆಣಸಿನಕಾಯಿ	೧೪	೦	೦	೧೬	೦	೦
ತೆಂಗಿನಕಾಯಿ ೧೦೦೦	೧೪	೧	೦	೨೩೪	೦	೦

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ಮೋಲ್ಕಂಡ ಶಿಶುವಿಹಾರವನ್ನು ಅತ್ಯಾಧುನಿಕ ಶಿಕ್ಷಣ ಸಾಧನಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣವೀಯುವ ವ್ಯವಸ್ಥೆ ಮಾಡಲಾಗಿದೆ ಮಾತಾಪಿತೃಗಳು ತಮ್ಮ ಮಕ್ಕಳನ್ನು ತ್ವರೆಯಿಂದ ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ಡಿ. ಕೃಷ್ಣಮೂರ್ತಿ, ಡೈರೆಕ್ಟರ್

ಶಾಲೆಯಲ್ಲಿ ಸಿಮೆಂಟ್ ಇಟ್ಟಿಗೆ ತಯಾರಿಕೆ ಶಿಕ್ಷಣ

ಬೆಂಗಳೂರು ೧

ವಿದ್ಯಾಭ್ಯಾಸವು ಪ್ರಾಸ್ತಾವಿಕವಾಗಲು ಸರ್ಕಾರದವರು ಇಲ್ಲಿನ ಮಲ್ಲೇಶ್ವರಂ ಪ್ರೌಢಶಾಲೆಯಲ್ಲಿ ಸಿಮೆಂಟ್ ಇಟ್ಟಿಗೆ, ಸೀಮೆಸುಣ್ಣ ಮುಂತಾದುವನ್ನು ತಯಾರಿಸುವ ಕೆಲಸವನ್ನು ವಿದ್ಯಾರ್ಥಿಗಳಿಗೆ ಕಲಿಸುವ ಬಗ್ಗೆ ೩ ತಿಂಗಳ ಪ್ರಾಯೋಗಿಕ ವ್ಯವಸ್ಥೆಯನ್ನು ಏರ್ಪಾಡು ಮಾಡಿದ್ದಾರೆ ಇದರಿಂದ ಒದಗುವ ಲಾಭವನ್ನು ವಿದ್ಯಾರ್ಥಿಗಳ ಹಂಚುವ ಬಗ್ಗೆ ಯೋಚಿಸಲಾಗುವುದು ೩೦ ವಿದ್ಯಾರ್ಥಿಗಳುಳ್ಳ ೫ ತಂಡಗಳು ದಿನವಹಿ ೧½ ಗಂಟೆ ಕಾಲ ವಾರದಲ್ಲಿ ಆರು ದಿನಗಳು ಸಿಮೆಂಟ್ ಇಟ್ಟಿಗೆ ತಯಾರಿಕೆ ಕೆಲಸವನ್ನು ಮಾಡುವುವು ಸೀಮೆಸುಣ್ಣ ತಯಾರಿಕೆ ಕೆಲಸಕ್ಕೆ ಮೂವರು ವಿದ್ಯಾರ್ಥಿಗಳುಳ್ಳ ಎರಡು ತಂಡಗಳನ್ನು ನೇಮಿಸಲಾಗಿದೆ ಇವರು ದಿವಸಕ್ಕೆ ೪೫ ನಿಮಿಷ ಕೆಲಸ ಮಾಡುವರು

ಚೂರಿ ಇರಿತದಿಂದ ಮರಣ

ಬೆಂಗಳೂರು ದೊಡ್ಡಪೇಟೆ ಹಿಂಭಾಗದಲ್ಲಿರುವ ಕುಂಬಾರಪೇಟೆಯಲ್ಲಿ ಪೊನ್ನಸ್ವಾಮಿ ಎಂಬ ೨೨ ವರ್ಷದ ಯುವಕನಿಗೆ ಮೊನ್ನೆ ಚೂರಿ ಇರಿತವಾಗಿ ಮೃತಪಟ್ಟನು ಟೀ ಕೆಲಸದ ಸಂಬಂಧ ... ಎಂಬುವನಿಗೂ, ಪೊನ್ನಸ್ವಾಮಿಗೂ ಜಗಳವಾಗಿ ಸಂಭವಿಸಿತೆಂದು ಹೇಳಲಾಗಿದೆ ಸಂಬಂಧಿಸಿ ಬಂಧಿಸಲ್ಪಟ್ಟಿರುವನು

೦ರಾಜಧಾನಿಯ ... ಯಲ್ಲಿರುವ ಶ್ರೀ ಪ್ರಸನ್ನ ... ಮಂದಿರದಲ್ಲಿ ಏ ... ಪ್ರಯುಕ್ತ ನಾಳೆ ರಾತ್ರಿ ೮½ ಗಂಟೆಗೆ ಕುಮಾರಿ ಕೌಸಲ್ಯ ಮತ್ತು ಸಹೋದರಿಯವರಿಂದ ಬೇಡರ ಕಣ್ಣಪ್ಪ ಎಂಬ ಹರಿಕಥೆಯು ನಡೆಯುವುದು.

ನಿವೇದನಾ ಪತ್ರಿಕೆ

ಮೈಸೂರು ... ಮಾರ್ಕೆಟ್ ... ನಡೆದ ... ಮತ್ತು ... ಗುರ ಕೃತಜ್ಞತೆಗಳು

ಆರ್ ನಂಜಯ್ಯ

The Cauvery Valley Paper Mills Ltd,

(In Liquidation)

Statue Square,
Mysore, 31-7-56

SALE NOTICE

Offers are invited to purchase the undermentioned articles upto 5 P M on 10th August 1956

'building materials, (such as bricks, jelly, size stones, wooden trusses, Mangalore tiles etc), Magnesia Lagging compound, M S & Steel scrap, Assorted bolts and nuts, Rubber and Leather belts, teak wood pieces.'

For particulars, rules and conditions of sale, please contact the undersigned

S SANJEEVIAH B A, B Com, B L,
Y S LINGAIAH, B A, B L,
Official Liquidators,
The Cauvery Valley Paper Mills Ltd, (In Liquidation)
Clock Tower Square,
MYSORE

ಹಾಸಿಗೆ - ದಿಂಬು

ಬಾಯಸ್ಕಾಪ್ ಕಂಪೆನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಚಾಮುಂಡೇಶ್ವರಿ ಟಾಕೀಸ್

೩—8—56 ರಿಂದ ... ಅನೋಖ ಪ್ರಾರಂಭ

ಚಲನಚಿತ್ರ ಪ್ರಪಂಚದಲ್ಲಿ ನೂತನ ... ಚಿತ್ರ

★ ಮುಮ್ತಾಜ್ ಮಹಲ್ ★

ಪಾತ್ರ ವರ್ಗದಲ್ಲಿ ... ನಾಗಯ್ಯ, ... ಮುಂತಾದವರು

ನಿರ್ದೇಶಕ — ಟಿ ಆರ್. ರಘುನಾಥ್

ಹೊದಲನೆಯ ... ಎಲ್ಲಾ ವಿಧವಾದ ... ಪ್ರೇಕ್ಷಕರನ್ನು ಮನ್ನಿಸಲು ಕೋರಲಾಗಿದೆ [An Emerald Release

Edited, Printed and Published by A R N ... at Sadhvi Press D Subbaiah Road, Mysore

ರಿಜಿಸ್ಟರ್ಡ್ ನಂ. 798

ಚಂದಾ ದರ
—
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಅಂಚಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : THURSDAY 2—8—1956 ಮೈಸೂರು : ಗುರುವಾರ ೨—೮—೧೯೫೬ [ಸಂಚಿಕೆ : ೨

ರಾಮನ ವಿಗ್ರಹ ಸುಡುವ ಪ್ರಯತ್ನದಲ್ಲಿ ಸಾವಿರ ಬಂಧನ

ಮದ್ರಾಸಿನಲ್ಲಿ ಶ್ರೀರಾಮನ ಚಿತ್ರ ಸುಡುವ ಪ್ರಯತ್ನ ವಿಫಲ

ಇ. ವಿ. ರಾಮಸ್ವಾಮಿನಾಯಕರ ಬಂಧನ ಮತ್ತು ಬಿಡುಗಡೆ

೧೦೦೦ ಮಂದಿಯ ದಸ್ತಗಿರಿ

ದೇವರ ವಿರುದ್ಧವಾದ ಚಳುವಳಿಯ ಅಂಗವಾಗಿ ಶ್ರೀರಾಮನ ಚಿತ್ರ ಮತ್ತು ವಿಗ್ರಹಗಳನ್ನು ಸುಡುವ ವಿಫಲ ಪ್ರಯತ್ನವು ನೆನ್ನೆ ಮದ್ರಾಸಿನ ಜಿಲ್ಲಾ ನಡೆಯಿತು ದ್ರಾವಿಡ ಸಂಘದವರು ಎಲ್ಲಾ ಕಡೆಗಳಲ್ಲೂ 'ರಾಮನು ಕೆಳಗೆ ಬೀಳಲಿ' ಎಂದು ಬೀದಿಗಳಲ್ಲಿ ಕೂಗಿಕೊಂಡು ಚಿತ್ರಗಳನ್ನು ಸುಡಲು ನಡೆಸಿದ ಪ್ರಯತ್ನವನ್ನು ಸರ್ಕಾರದವರು ತಡೆದರು ಹಿಂದಿನ ರಾತ್ರಿ ಸುಮಾರು ೬೦೦ ಮಂದಿಯನ್ನು ಮುಂಜಾಗ್ರತೆ ಕ್ರಮವಾಗಿ ಬಂಧಿಸಲಾಯಿತು

ದ್ರಾವಿಡ ಸಂಘದ ಮುಖಂಡರಾದ ಇ ವಿ ರಾಮಸ್ವಾಮಿ ನಾಯಕರ್‌ರವರೂ, ಅವರ ಪ್ರಮುಖ ಸಹೋದ್ಯೋಗಿ ಎಸ್. ಗುರುಸ್ವಾಮಿಯವರೂ ರಾಮನ ವಿಗ್ರಹವನ್ನು ಸುಡುವುದನ್ನು ತಪ್ಪಿಸಲು ನೆನ್ನೆ ಸಂಜೆ ಅವರನ್ನು ಬಂಧಿಸಲಾಯಿತೆಂದೂ, ಸ್ವಲ್ಪ ಹೊತ್ತಿನನಂತರ ಬಿಡುಗಡೆ ಮಾಡಲಾಯಿತೆಂದೂ ಹೇಳಲಾಗಿದೆ ನಗರ ಮತ್ತು ಜಿಲ್ಲೆಗಳಲ್ಲಿ ವಿಗ್ರಹ ಸುಡುವ ಪ್ರಯತ್ನದಲ್ಲಿದ್ದ ನೂರು ಜನರನ್ನು ಬಂಧಿಸಲಾಯಿತು ನಗರದಲ್ಲೇ ೭೫ ಮಂದಿ ಬಂಧಿಸಲ್ಪಟ್ಟರು ಜಿಲ್ಲೆಗಳಾದ್ಯಂತ ೧೦೦೦ ಮಂದಿಯನ್ನು ಬಂಧಿಸಲಾಯಿತೆಂದೂ ವರದಿಗಳು ತಿಳಿಸಿವೆ

ಮದ್ರಾಸು ನಗರದಲ್ಲಿ ರಾಮನ ವಿಗ್ರಹಕ್ಕೆ ಬೆಂಕಿ ಹಾಕುವುದನ್ನು ನೋಡುತ್ತಿದ್ದ ಜನರನ್ನು ಚದುರಿಸಲು ಪೋಲೀಸರು ಲಘುವಾದ ಲಾಠಿ ಪ್ರಹಾರ ಮಾಡಿದರು ಜನರನ್ನು ಅಟ್ಟಿಸಿಕೊಂಡು ಹೋಗಿ ಚದುರಿಸಲಾಯಿತು ಯಾರಿಗೂ ಗಾಯವಾಗಲಿಲ್ಲ ತಮ್ಮ ಚಳುವಳಿಯ ಬಗ್ಗೆ ರಾಮಸ್ವಾಮಿನಾಯಕರು ತೃಪ್ತಿ ಪಟ್ಟುಕೊಂಡರೆಂದು ಹೇಳಲಾಗಿದೆ

ಅವರು ನೆನ್ನೆ ಸಂಜೆ ೫ ಗಂಟೆಗೆ ಸುಡುವುದಕ್ಕಾಗಿ ಸಿದ್ಧಗೊಳಿಸಿದ್ದ ಭಾರಿಯಾದ ಶ್ರೀರಾಮನ ಚಿತ್ರವು ಎಲ್ಲೋ ಕೈ ತಪ್ಪಿ ಸಿಕ್ಕದೆ, ಕಡೆಗೆ ಪತ್ರಿಕಾ ಪ್ರತಿನಿಧಿಯೊಬ್ಬರಿಗೆ ನಾಯಕರು ಕೊಟ್ಟಿದ್ದ ರಾಮನ ಸಣ್ಣ ಚಿತ್ರವೊಂದನ್ನು ತೆಗೆದುಕೊಂಡು ಸುಡಲು ಹೊರಟಾಗ ಬಂಧಿಸಲ್ಪಟ್ಟರು ಅವರೊಡನೆ ಅವರ ನಾಯಿಯೂ ಪೋಲೀಸು ವ್ಯಾನಿಗೆ ಹತ್ತಿ ಏನು ಮಾಡಿದರೂ ಹೋಗದೆ, ಕಡೆಗೆ ನಾಯಕರ ಸೂಚನೆ ಪ್ರಕಾರ ಕೆಳಗಿಳಿಯಿತೆಂದು ಹೇಳಲಾಗಿದೆ ನಾಯಕರ್‌ರವರು ಚಳುವಳಿಯನ್ನು ವಾಪಸು ತೆಗೆದುಕೊಂಡಿರುತ್ತಾರೆ

ಕಾಫಿ ಬೆಳೆ ಹೆಚ್ಚಿಸಲು ನಿರ್ಧಾರ

ದೇಶದಲ್ಲಿ ಕಾಫಿ ಬೆಳೆಯನ್ನು ಹೆಚ್ಚಿಸುವುದಕ್ಕಾಗಿ ಭಾರತ ಸರ್ಕಾರದವರು ಪಂಚ ವಾರ್ಷಿಕ ಯೋಜನೆಯೊಂದನ್ನು ಮಂಜೂರು ಮಾಡಿರುತ್ತಾರೆ ಅದರ ಪ್ರಕಾರ ವರ್ಷಕ್ಕೆ ೯,೦೦೦ ಟನ್ ಹೆಚ್ಚು ಕಾಫಿಯನ್ನು ಬೆಳೆಯಲಾಗುವುದೆಂದು ವರದಿಯಾಗಿದೆ. ಇದಕ್ಕಾಗಿ ೩ ೧೫ ಕೋಟಿ ರೂ ವೆಚ್ಚವಾಗುವುದು

ತೆರಿಗೆ ಹೆಚ್ಚಿಸದಂತೆ ಕೋರಲು ಪೌರಸಭಾಧ್ಯಕ್ಷರಲ್ಲಿ ನಿಯೋಗ

ಮೈಸೂರು ೨

ಮನೆಗಂದಾಯದ ಪುನರ್ವಿಮರ್ಶೆ ಮತ್ತು ಶೇಕಡ ನಲ್ಲಿ ಕಂದಾಯ ಹೆಚ್ಚಿಸುತ್ತಿರುವುದನ್ನು ವಿರೋಧಿಸಿ ನಗರದ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿಯು ಮಾಡಿರುವ ನಿರ್ಣಯವನ್ನು ನೆನ್ನೆ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಮತ್ತು ಕಮಿಷನರ್ ಶ್ರೀ ಎ ವಿಶ್ವನಾಥ್‌ರವರಿಗೆ ಪಕ್ಷದ ಕಾರ್ಯದರ್ಶಿಗಳಾದ ಶ್ರೀ ವಿಶ್ವನಾಥ ಮತ್ತು ಬಿ ಎಸ್ ನಾಗರಾಜ್‌ರವರು ತಲುಪಿಸಿ ಮಾತುಕತೆ ನಡೆಸಿದರು ಈ ನಗರದ ಮನೆಗಂದಾಯ ಜನರಿಗೆ ಅನ್ಯಾಯವಾಗದಂತೆ ಸೂಕ್ತವಾಗಿ ಪೌರಸಭಾಧ್ಯಕ್ಷರು ಭರವಸೆ ಇತ್ತರೆಂದು ಹೇಳಲಾಗಿದೆ

ಕಂದಾಯದ ನೋಟೀಸು ಬಂದ ೩೦ ದಿನದೊಳಗೆ ತೆರಿಗೆದಾರರು ಕಮಿಷನರಿಗೆ ತಮ್ಮ ತಕರಾರು ಮತ್ತು ಮನೆ ನಂಬರು ಮುಂತಾದುವನ್ನು ಸೂಚಿಸಿ ಅರ್ಜಿ ಸಲ್ಲಿಸಬೇಕೆಂದೂ, ಇಲ್ಲವಾದರೆ ಅರ್ಜಿಗಳನ್ನು ಸಮಾಜವಾದಿ ಪಕ್ಷದವರಿಗೆ ತಲುಪಿಸಿದರೆ ಅವರು ಸೂಕ್ತ ಕ್ರಮ ಜರುಗಿಸುವರೆಂದೂ ತಿಳಿಸಲಾಗಿದೆ ಇದಕ್ಕಾಗಿ ವಿದ್ಯಾರಣ್ಯಪುರದ ಸ್ಟೋರ್ ಮಾಲಿಕ ನಾಗರಾಜ್, ಚಾಮರಾಜಪುರದ ಶ್ರೀ ವಿ ವೆಂಕಟರಾಮ್, ಕೃಷ್ಣಮೂರ್ತಿಪುರದ ವಕೀಲರಾದ ಶ್ರೀ ಕೆ ಎಸ್ ಸೋಮಸುಂದರಂ, ಹಳ್ಳದಕೇರಿ ಬೀದಿ ಅಂಗಡಿಯ ಶ್ರೀ ಅಶ್ವತ್ಥರಾವ್, ಗಾಂಧಿ ಚೌಕದ ಸೆಂಟ್ರಲ್ ಹೋಟೇಲು ಮತ್ತು ಚಾಮುಂಡೇಶ್ವರಿ ರಸ್ತೆಯಲ್ಲಿರುವ ಲಾಯರ್ ಶ್ರೀ ಟಿ. ಎಸ್ ನಾಗರಾಜ್‌ರವರಿಗೆ ಅರ್ಜಿಗಳನ್ನು ತಲುಪಿಸುವಂತೆ ಕೋರಲಾಗಿದೆ

ಸ್ಪೋರ್ಟ್ಸ್ ಕ್ಲಬ್ಬಿನ ಪೋಷಕರ ವಿ ಶ್ರಾ ಮ ರ ಣ

ರಾಜಧಾನಿಯ ನರಸಿಂಹರಾಜ ಬುಲೆವಾರ್ಡ್‌ನಲ್ಲಿರುವ ಸ್ಪೋರ್ಟ್ಸ್ ಕ್ಲಬ್ಬಿನ ಪೋಷಕರ ದಿನಾಚರಣೆಯು ಕಳೆದ ಸೋಮವಾರ ನೆರವೇರಿತು ಶ್ರೀಮನ್ನಾರಾಜರು ಭಾಷಣ ಮಾಡಿ, ಕ್ರೀಡೆಗಳಿಂದ ಮನುಷ್ಯನಿಗೆ ಆಗುವ ಉಲ್ಲಾಸವನ್ನು ವಿವರಿಸಿದರು ಸಂಘವು ಎಲ್ಲಾ ವರ್ಗಗಳ ಜನರನ್ನು ಒಂದುಗೂಡಿಸಲು ಸಹಾಯಕವಾಗಿದೆಯೆಂದು ಅವರು ತಿಳಿಸಿದರು

ಭೂದಾನ ಆಸಕ್ತರ ಸಭೆ

ಭೂದಾನ ಚಳುವಳಿಯಲ್ಲಿ ಆಸಕ್ತರಾದ ಮಹನೀಯರ ಸಭೆಯನ್ನು ನಾಳಿದ್ದು ಸಂಜೆ ೫ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಕರೆಯಲಾಗಿದೆ ನಗರದಲ್ಲಿ ಭೂದಾನ ಕೆಲಸವನ್ನು ಯಶಸ್ವಿಯಾಗಿ ನಡೆಸುವ ಬಗ್ಗೆ ಸಮಾಲೋಚನೆ ನಡೆಸಲಾಗುವುದು

ಉಪಾಧ್ಯಾಯರುಗಳ ಮುಷ್ಕರ

ಅಜ್ಮೀರ್ ಸಂಸ್ಥಾನದ ಸರ್ಕಾರಿ ಸಹಾಯ ಪಡೆದ ೬೦ ಶಾಲೆಗಳ ಸುಮಾರು ೬೦೦ ಮಂದಿ ಉಪಾಧ್ಯಾಯರು, ತಮಗೆ ಆರು ತಿಂಗಳಿಂದಲೂ ಸಂಬಳ ಪಾವತಿ ಮಾಡದಿರುವುದಕ್ಕಾಗಿ ಪ್ರತಿಭಟಿಸಲು ನೆನ್ನೆಯಿಂದ ಅನಿರ್ದಿಷ್ಟ ಕಾಲದ ಮುಷ್ಕರವನ್ನು ಆರಂಭಿಸಿದರು.

ಸೂಯೆಜ್ ಕಾಲುವೆ ಬಿಕ್ಕಟ್ಟಿನ ಬಗ್ಗೆ ಬ್ರಿಟನ್ನಿನ ದೃಢ ಕ್ರಮ

ಸೂಯೆಜ್ ಕಾಲುವೆ ಕಂಪೆನಿ ರಾಷ್ಟ್ರೀಕರಣದ ಬಿಕ್ಕಟ್ಟಿನ ಸಂಬಂಧದಲ್ಲಿ ಬ್ರಿಟನ್ನು ದೃಢವಾದ ಕ್ರಮವನ್ನು ಕೈಗೊಳ್ಳುತ್ತದೆಂದು ಬ್ರಿಟನ್ ಪ್ರಧಾನಿ ಈಡನ್ನರು ಅಮೆರಿಕಕ್ಕೆ ತಿಳಿಸಿದ್ದಾರೆ ಈ ಬಗ್ಗೆ ಬ್ರಿಟನ್, ಫ್ರಾನ್ಸ್‌ಗಳ ವಿದೇಶಾಂಗ ಸಚಿವರೊಡನೆ ಸಂಭಾಷಿಸಲು ಅಮೆರಿಕದ ಡಲೆಸ್‌ರವರೂ ಬಂದಿದ್ದಾರೆ. ಅವಶ್ಯವಿದ್ದರೆ ಬಲಪ್ರಯೋಗ ಮಾಡಲು ಬ್ರಿಟನ್ನು ಯೋಚಿಸಿರುವುದೆಂದು ಅಲ್ಲಿನ ಪತ್ರಿಕೆಗಳು ತಿಳಿಸಿವೆ

ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರ್‌ರು ಈ ಬಗ್ಗೆ ಮಾತನಾಡಿ, ಸೂಯೆಜ್ ಕಾಲುವೆಯು ಅಮೆರಿಕದ ಆರ್ಥಿಕ ವ್ಯವಸ್ಥೆಗೆ ಅತ್ಯಂತ ಪ್ರಾಮುಖ್ಯವಾದುದೆಂದು ಹೇಳುತ್ತಾ ಕಾಲುವೆಯು ಅಂತರ ರಾಷ್ಟ್ರೀಯ ನೀರು ದಾರಿಯೆಂದು ೧೮೮೮ರ ರಾಷ್ಟ್ರಗಳ ಕರಾರಿನಲ್ಲಿ ಘೋಷಿಸಲಾಗಿತ್ತೆಂದು ಐಸೆನ್‌ಹೋವರರು ತಿಳಿಸಿರುವರು

ಈಜಿಪ್ಟಿನ ಅಧ್ಯಕ್ಷ ಕರ್ನಲ್ ನಾಸಿರ್‌ರವರು ನೆನ್ನೆ ರಾತ್ರಿ ಮಾತನಾಡಿ, ಸೂಯೆಜ್ ಕಾಲುವೆಯನ್ನು ಈಜಿಪ್ಟು ತನ್ನ ರಕ್ತ ಚೆಲ್ಲಿಯಾದರೂ ರಕ್ಷಿಸಿಕೊಳ್ಳುವುದೆಂದು ತಿಳಿಸಿದರು ಅಂತರ ರಾಷ್ಟ್ರೀಯ ಜವಾಬ್ದಾರಿಗಳನ್ನೂ ತಮ್ಮ ಸರ್ಕಾರವು ಪಾಲಿಸುವುದಾಗಿ ಅವರು ಹೇಳಿದರು ೧೮೮೮ರ ಕಾಲುವೆ ಒಪ್ಪಂದ ಮತ್ತು ೧೯೫೪ರ ಬ್ರಿಟನ್-ಈಜಿಪ್ಟ್ ಕೌಲಿನಂತೆ ನಡೆಯುವುದಾಗಿ ಅಧ್ಯಕ್ಷರು ಹೇಳಿದರು ಪಶ್ಚಿಮ ರಾಷ್ಟ್ರದವರು ಒಂದಾಗಿ ಆರ್ಥಿಕ ನಿರ್ಬಂಧ ನಡೆಸಿದರೆ ಈಜಿಪ್ಟು ಹೋರಾಡುವುದೆಂದು ಹೇಳಲಾಗಿದೆ

ಗಡಿ ಸಮಿತಿಯ ನೇಮಕವಿಲ್ಲ

ಸಂಸ್ಥಾನ ಪುನರ್ವಿಂಗಡಣೆ ಮಸೂದೆಯ ಬಗ್ಗೆ ನೆನ್ನೆ ಲೋಕಸಭೆಯಲ್ಲಿ ಕೇಂದ್ರ ಗೃಹ ಮಂತ್ರಿ ಪಂಡಿತ ಪಂತರು ಮಾತನಾಡಿ, ಸಂಸ್ಥಾನಗಳ ಗಡಿ ಪ್ರಶ್ನೆಗಳನ್ನು ಇತ್ಯರ್ಥಪಡಿಸಲು ಸಮಿತಿಯೊಂದನ್ನು ನೇಮಿಸುವುದಿಲ್ಲವೆಂದು ತಿಳಿಸಿದರು ಅದರಿಂದ ಮುಂದೆಯೂ ತಕರಾರುಗಳು ಜಗಳಗಳೇ ಆಗುವುವೆಂದೂ, ಅವರು ಅಭಿಪ್ರಾಯಪಟ್ಟರು. ಗಡಿ ಸಮಿತಿಯ ರಚನೆಗೆ ಸದಸ್ಯರು ಒತ್ತಾಯಪಡಿಸಿದ್ದರು

ಶಾರದಾವಿಲಾಸ ಲಾ ಕಾಲೇಜಿಗೆ ಅಮೆರಿಕಾ ವಿದ್ಯಾರ್ಥಿಗಳ ಭೇಟಿ

ಭಾರತ-ಅಮೆರಿಕಾ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮದ ಪ್ರಕಾರ ಭಾರತದಲ್ಲಿ ಪ್ರವಾಸ ಕೈಗೊಂಡಿರುವ ಅಮೆರಿಕದ ವಿದ್ಯಾರ್ಥಿಗಳ ಪೈಕಿ ಮೋರಿಸ್ ಮಿಲ್ಲರ್, ಎಲಿಜಬೆತ್ ಬೆಟ್ಸಿ ಮೆಂಲ್, ಹೊವಾರ್ಡ್ ನೆಬುಲ್, ಕ್ಯಾರೋಲಿನ್ ಮಿಯಶಾವಾ ಎಂ... ೪ ವಿದ್ಯಾರ್ಥಿಗಳು ಇಲ್ಲಿನ ಶಾರದಾವಿಲಾಸ ಲಾ ಕಾಲೇಜಿಗೆ ನಾಳೆ ಮಧ್ಯಾಹ್ನ ೩ ಗಂಟೆಗೆ ಭೇಟಿಯಿತ್ತು, ಪರಸ್ಪರ ಅಭಿಪ್ರಾಯ ವಿನಿಮಯ ಮಾಡುವರಲ್ಲದೆ, ಭಾಷಣ ಮಾಡುವರು [illegible] ಲೇಜಿನಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನೂ ಏರ್ಪಡಿಸಲಾಗುವುದು. [illegible] ಲೊಮಿನಾ ಕಾಲೇಜಿನ ಪ್ರಿನ್ಸಿಪಾಲರಾದ ಫಾದರ್ ಅಚಿಯೊರವರು ಅಧ್ಯಕ್ಷತೆ ವಹಿಸುವರು ಸಾರ್ವಜನಿಕರಿಗೆ ಪ್ರವೇಶಾವಕಾಶವಿದೆ

ಸೂಯೆಜ್ ಪ್ರದೇಶದ ಮೇಲೆ ಈಜಿಪ್ಟ್ ವಿಮಾನಗಳ ಹಾರಾಟ

ಸೂಯೆಜ್ ಕಾಲುವೆ ಪ್ರದೇಶದಲ್ಲಿ ಈಜಿಪ್ಟಿನ ಜೆಟ್ ವಿಮಾನಗಳು ಸಂಕೇತದಂತೆ ಬೆಳಗಿನವರೆಗೂ ಗಸ್ತು ಹಾರಾಟ ನಡೆಸುತ್ತಿರುವುವೆಂದೂ, ಎರಡು ಚಿಕ್ಕ ನೌಕೆಗಳು ಕಾಲುವೆ ಮುಖಭಾಗದಲ್ಲಿರುವ ಪೋರ್ಟ್‌ಸೈಯದ್ ಕಡೆಯಲ್ಲಿ ಲಂಗರು ಹಾಕಿ ನಿಂತಿವೆಯೆಂದೂ ವರದಿಯಾಗಿದೆ ಈಜಿಪ್ಟಿನ ಸೈನ್ಯಗಳು ಕಾಲುವೆ ಪ್ರದೇಶಕ್ಕೆ ಹೋಗುತ್ತಿರುವುದಾಗಿ ಹೇಳಲಾಗಿದೆ

ಅಸ್ಸಾಮಿನೊಳಗೆ ೩೦೦ ಜನ ಸಶಸ್ತ್ರ ಪಾಕಿಸ್ತಾನಿಗಳ ಪ್ರವೇಶ

ಅಸ್ಸಾಮಿನ ಖಾಸಿ-ಜಯಂತಿಯಾ ಗುಡ್ಡಗಳ ಮಧ್ಯೆ ಘೋಲಾಗಂಜ್ ಪ್ರದೇಶದಲ್ಲಿ ೩೦೦ ಮಂದಿ ಸಶಸ್ತ್ರ ಪಾಕಿಸ್ತಾನಿಗಳು ಕಳೆದ ಶನಿವಾರ ಪ್ರವೇಶ ಮಾಡಿದರೆಂದೂ, ಘಾರಿಯಾ ನದಿಯಲ್ಲಿದ್ದ ಕಲ್ಲುಗಳನ್ನು ಸಾಗಿಸಲು ಗಡಿಯನ್ನು ದಾಟಿ ಅವರು ಬಂದಿದ್ದರೆಂದೂ, ಅವರನ್ನು ಭಾರತದ ಗಡಿ ಪೋಲೀಸರು ಆಚೆಗೆ ಅಟ್ಟಿ ಅವರ ಬಳಿ ಇದ್ದ ಹಲವು ದೋಣಿಗಳನ್ನು ವಶಪಡಿಸಿಕೊಂಡರೆಂದೂ ವರದಿಯಾಗಿದೆ

ಪೂನಾದಲ್ಲಿ ೮೦೦ ಜನ ಸತ್ಯಾಗ್ರಹಿಗಳ ಬಂಧನ

ಸಂಯುಕ್ತ ಮಹಾರಾಷ್ಟ್ರ ಸಮಿತಿಯ ೫೦೦ ಮಹಿಳೆಯರೂ ಸೇರಿ ೮೦೦ ಜನ ಸ್ವಯಂಸೇವಕರು ಪೂನಾ ನಗರದಲ್ಲಿ ದಸ್ತಗಿರಿಯಾದರು ನೆನ್ನೆ ಲೋಕಮಾನ್ಯ ತಿಲಕರ ಶತಮಾನೋತ್ಸವ ವಾರದ ಸಂಬಂಧದಲ್ಲಿ ಸತ್ಯಾಗ್ರಹ ಚಳುವಳಿಯ ಪ್ರಮಾಣವನ್ನು ಹೆಚ್ಚಿಸುವಂತೆ ಕರೆ ಕೊಡಲಾಗಿತ್ತು

ವೈದ್ಯ ವಿದ್ಯಾರ್ಥಿನಿಯರಿಗೆ ಬಣ್ಣದ ಸೀರೆ ಮತ್ತು ಹೂವಿನ ನಿಷೇಧ

ಮದ್ರಾಸಿನ ಮೆಡಿಕಲ್ ಕಾಲೇಜು ಆಸ್ಪತ್ರೆಯ ವಿದ್ಯಾರ್ಥಿನಿಯರು ಬಣ್ಣಬಣ್ಣದ ಸೀರೆಗಳನ್ನು ಧರಿಸುವುದು ಅಥವಾ ಹೂ ಮುಡಿಯುವುದು ಕೂಡದೆಂದು ಆಸ್ಪತ್ರೆಯ ಮುಖ್ಯಾಧಿಕಾರಿಗಳು ಸೂಚಿಸಿರುತ್ತಾರೆ ಬಿಳಿಯ ವರ್ಣ ಅಥವಾ ತಿಳಿ ವರ್ಣದ ಸೀರೆ ಮತ್ತು ಕುಪ್ಪಸವನ್ನಾಗಲೀ, ಸಲ್ವಾರ್ ಮತ್ತು ಕಮೀಜ್‌ಗಳನ್ನಾಗಲೀ, ಇಲ್ಲವೇ ಲಂಗಗಳನ್ನಾಗಲೀ ಧರಿಸಬೇಕೆಂದೂ, ಕೂದಲನ್ನು ಪೂರ್ತಿಯಾಗಿ ಮುಚ್ಚುವ ಟೋಪಿ ಧರಿಸಬೇಕೆಂದೂ ತಿಳಿಸಲಾಗಿದೆ

ಮುಸ್ಸಾದಿಕ್ಕರ ಬಿಡುಗಡೆ ಸನ್ನಿಹಿತ

ಇರಾನಿನ ಮಾಜಿ ಪ್ರಧಾನಿ ಡಾ|| ಮುಸ್ಸಾದಿಕ್‌ರವರನ್ನು ಬರುವ ಭಾನುವಾರ ಜೈಲಿನಿಂದ ಬಿಡುಗಡೆ ಮಾಡಲಾಗುವುದೆಂದು ಗೊತ್ತಾಗಿದೆ ಅವರು ಇರಾನಿನ ಎಣ್ಣೆ ಕಂಪೆನಿಯನ್ನು ರಾಷ್ಟ್ರೀಕರಣ ಮಾಡಿದ್ದರು

○ ಕಾಲೇಜು ಮತ್ತು ಸೈನ್ಸ್ ಇನ್‌ಸ್ಟಿಟ್ಯೂಟ್ ಸಂಘಟಿಸುವ ಕೆಲವು ವಿಷಯಗಳ ಚರ್ಚೆ [illegible] ಯಲ್ಲಿ ಮಗುವಿನ ದವಿಷ್ಠರಿಂದು ಇಂದು ನಿಶ್ಚಯ [illegible] ಪ್ರಾರಂಭ [illegible] ಈ ಬಗ್ಗೆ ಮುಂದಿನ ಕ್ರಮ ಜರುಗಿಸುವರು

ಬರ್ಮಾಕ್ಕೆ ಚೀಣಾ ಸೈನಿಕರ ಪ್ರವೇಶ

ಪೂರ್ಣ ಶಸ್ತ್ರಸಜ್ಜಿತರಾದ ಚೀಣೀ ಸೈನಿಕರು ಬರ್ಮಾದ ಈಶಾನ್ಯ ಭಾಗದ ಗಡಿಯಲ್ಲಿ ೫೦೦ ಮೈಲಿ ವಿಸ್ತಾರದ ಪ್ರದೇಶದಲ್ಲಿ ಬರ್ಮಾ ರಾಜ್ಯದೊಳಗೆ ಪ್ರವೇಶಿಸಿರುವರೆಂದು ರಂಗೂನಿನ ಪತ್ರಿಕೆಯೊಂದು ತಿಳಿಸಿದೆ. ಸೈನಿಕರು ೬೦ ಮೈಲಿ ಒಳಭಾಗದವರೆಗೂ ಬಂದಿರುವುದಾಗಿಯೂ ಹೇಳಲಾಗಿದೆ. ಈ ವಿಚಾರವಾಗಿ ಬರ್ಮಾ ಸರ್ಕಾರದವರು ಚೀಣದೊಡನೆ ಪತ್ರ ವ್ಯವಹಾರ ನಡೆಸಲಿರುವರೆಂದು ಹೇಳಲಾಗಿದೆ. ಚೀಣೀ ಸೈನಿಕರು ನಾಲ್ಕು ಹಳ್ಳಿಗಳನ್ನು ಹಿಡಿದಿರುವುದಾಗಿಯೂ ಗೊತ್ತಾಗಿದೆ.

ಕರಾಚಿ ರೇಡಿಯೋ ಕೇಂದ್ರಕ್ಕೆ ಗೂಳಿ ನುಗ್ಗಿ ಹಾವಳಿ

ಕರಾಚಿಯ ರೇಡಿಯೋ ಕೇಂದ್ರಕ್ಕೆ ಹುಚ್ಚು ಹತ್ತಿದ ಗೂಳಿಯೊಂದು ನೆನ್ನೆ ನುಗ್ಗಿ ಮೇಜು ಕುರ್ಚಿಗಳನ್ನು ಉರುಳಿಸಿ, ಕೆಲಸ ಮಾಡುತ್ತಿದ್ದವರಿಗೆ ಗಾಬರಿಯನ್ನುಂಟುಮಾಡಿತೆಂದು ವರದಿಯಾಗಿದೆ. ಅದಕ್ಕೆ ಮುಂಚೆ ಅದು ರಸ್ತೆಯಲ್ಲಿ ಮಗುವೊಂದನ್ನು ಕೊಂದು, ಐದು ಜನರನ್ನು ತಿವಿಯಿತೆಂದು ಹೇಳಲಾಗಿದೆ.

ಫ್ರೆಂಚ್ ಡಿಪ್ಲೊಮಾ ವಿದ್ಯಾರ್ಥಿಗಳ ಸಂಘ

ರಾಜಧಾನಿಯ ಫ್ರೆಂಚ್ ಡಿಪ್ಲೊಮಾ ವಿದ್ಯಾರ್ಥಿ ಸಂಘದ ಉದ್ಘಾಟನಾ ಸಮಾರಂಭವು ಕಳೆದ ಭಾನುವಾರ ಕೃಷ್ಣರಾಜಸಾಗರದ ಬೃಂದಾವನದಲ್ಲಿ ನೆರವೇರಿತು. ಫಿಲೋಮಿನಾ ಕಾಲೇಜಿನ ರೆ॥ ಫ್ಲೂರಿ ಯವರು, ವಿದ್ಯಾರ್ಥಿಗಳು ಪ್ರವಾಸದಿಂದ ಪ್ರಕೃತಿ ಸೌಂದರ್ಯವನ್ನು ಸವಿಯಬಹುದೆಂದೂ, ಫ್ರೆಂಚ್ ಭಾಷಾ ಜ್ಞಾನದಿಂದ ಫ್ರಾನ್ಸ್ ಮತ್ತು ಇತರ ರಾಷ್ಟ್ರಗಳ ಜೀವನ ಕ್ರಮ ಪರಿಚಯವಾಗುತ್ತದೆಯೆಂದೂ ಹೇಳಿದರು. ಪ್ರಾರ್ಥನೆಯಾದನಂತರ ಉಪಾಧ್ಯಕ್ಷ ಶ್ರೀ ಕೆ. ಸಿ. ಶಿವಪ್ಪನವರು ಸ್ವಾಗತಿಸಿದರು. ಫಾದರ್ ಆಡಿಬೋರವರು ಅಧ್ಯಕ್ಷತೆ ವಹಿಸಿದ್ದರು. ವಿಶೇಷ ಅತಿಥಿಗಳಾಗಿ ಆಗಮಿಸಿದ್ದ ಅಂತರ್ರಾಷ್ಟ್ರೀಯ ವಿಶ್ವವಿದ್ಯಾನಿಲಯಗಳ ಸಮ್ಮೇಳನದ ಸ್ವಿಟ್ಜರ್‌ಲೆಂಡಿನ ಪ್ರತಿನಿಧಿ ಬರ್ನಾರ್ಡ್ ಡುಕ್ರೆಟ್‌ರವರು ಫ್ರೆಂಚ್ ಭಾಷೆಯ ಮಹತ್ವವನ್ನು ವಿವರಿಸಿದರು. ಶ್ರೀ ಆರ್. ಎಸ್. ಚಂದ್ರಶೇಖರಮೂರ್ತಿ ಯವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು.

ಪರಕಾಲಸ್ವಾಮಿಗಳವರ ತಿರುನಕ್ಷತ್ರ

ಬ್ರಹ್ಮತಂತ್ರ ಪರಕಾಲಸ್ವಾಮಿಗಳಾದ ಶ್ರೀಮದಭಿನವ ರಂಗನಾಥ ಬ್ರಹ್ಮತಂತ್ರ ಪರಕಾಲಸ್ವಾಮಿಗಳವರ ೩೬ನೇ ತಿರುನಕ್ಷತ್ರವು ಇದೇ ೫ನೇ ತಾರೀಖು ಭಾನುವಾರ ನೆರವೇರುವುದು.

ನೀರು ಸರಬರಾಜಿನ ವ್ಯವಸ್ಥೆ

ಪೌರಸಭಾಧಿವೇಶನದಲ್ಲಿ ನಿರ್ಣಯ

ನಂಜನಗೂಡು ೧

ಇಲ್ಲಿನ ಪೌರಸಭೆಯ ಸಾಮಾನ್ಯ ಅಧಿವೇಶನವು ನೆನ್ನೆ ಶ್ರೀ ಕೆ. ವೆಂಕಟಸುಬ್ಬಯ್ಯರವರ ಅಧ್ಯಕ್ಷತೆಯಲ್ಲಿ ಸೇರಿತ್ತು.

ಶ್ರೀಕಂಠಪುರಿ ಬಡಾವಣೆಯಲ್ಲಿ ವಿದ್ಯುಚ್ಛಕ್ತಿ ಕಛೇರಿ ಮತ್ತು ಕೆಲವು ಮನೆಗಳಲ್ಲಿ ಬೇಲಿ ಹಾಕಿರುವುದನ್ನು ತೆಗೆಸಬೇಕೆಂದೂ, ಇಲ್ಲದಿದ್ದರೆ ಹಾವುಗಳ ಕಾಟವು ಹೆಚ್ಚುವುದೆಂದೂ ಕೆಲವು ಸದಸ್ಯರು ತಿಳಿಸಿದರು.

ದಿನಕ್ಕೆ ೩ ಸಾರಿ ಕಲಾ ೩ ಗಂಟೆ ಕಾಲ ನೀರಿನ ಸರಬರಾಜಿಗೆ ವ್ಯವಸ್ಥೆಯಾಗಬೇಕೆಂದು ಶ್ರೀ ಬಿ. ವಿ. ಬಾಲಸುಬ್ರಹ್ಮಣ್ಯಂರವರು ಕೋರಿ ತಂದಿದ್ದ ನಿರ್ಣಯವನ್ನು ಅಂಗೀಕರಿಸಲಾಯಿತು. ಒಳ ಚರಂಡಿ ವ್ಯವಸ್ಥೆ ಬಗ್ಗೆ ಅಂದಾಜು ಪಟ್ಟಿಯನ್ನು ಸಧ್ಯಕ್ಕೆ ತಯಾರಿಸಬೇಕಾಗಿಲ್ಲವೆಂದು ನಿರ್ಧರಿಸಲಾಯಿತು.

ಆಗಸ್ಟ್ ೧೫ ರಂದು ಸ್ವಾತಂತ್ರ್ಯ ದಿನಾಚರಣೆಗೆ ೧೫೦ ರೂ. ಖರ್ಚನ್ನು ಮಂಜೂರು ಮಾಡಲಾಯಿತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಗಾಂಧಿ ಚರ್ಚೆ. ೭–೧೫ ತಾಜಾ ಮತ್ತು ಹಸ್ತ ತರಕಾರಿ ತಾವು. ೭ ೪೫ ಒಂದಿ ದಾ ಕಿ. ೮ ೧೫ ಭಕ್ತಿಗೀತೆ. ಮಧ್ಯಾಹ್ನ ೧೨ ಸಂಗೀತ. ೧೨–೪೦ ವಾದ್ಯವೃಂದ ೧೨ ೪೫ ಮಹಿಳಾ ವಿಭಾಗ. ಮಹಿಳೆಯರ ಕಾರ್ಯಕ್ರಮ. ೧–೩೦ ಗೋಷ್ಠಿ ಗಾನ. ೩.೧೫ ಪ್ರತ್ರಿಕಾ ರೂಪಕಗಳು. ಸಂಜೆ ೫.೪೦ ಎ. ನಾರಾಯಣ ಸಂಗೀತ. ೬-೦೫ ಸ್ಪೃಶ್ಯ ಗೀತೆ ೬ ೪೦ ಪೋಷಣೆಯ ಸಾಧನೆ ಕನ್ನಡ ಭಾಷಣ ೮ ವ್ರ ಪ್ರಸಾರ. ಎಂ. ಎಸ್. ಬಾಲಸುಬ್ರಹ್ಮಣ್ಯ ಶರ್ಮ ಸಂಗೀತ. ೮.೫೫ ಈ ದಿನ ಪಾರ್ಲಿಮೆಂಟಿನಲ್ಲಿ. ೯–೧೫ ಇಂದಿನ ಕನ್ನಡ ಕಾವ್ಯ–ಚರ್ಚೆ ೧೦ ರಿಂದ ಹುರ. ೧೦–೧೫ ಉರ್ದು ಗೀತೆ.

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಕಣ್ಣುಭತ್ತ	[illegible]	
ದಪ್ಪಭತ್ತ	[illegible]	[illegible]
ರಾಗಿ	[illegible]	[illegible]
ಕಡಲೆಕಾಯಿ	[illegible]	[illegible]
ಹುರುಳಿ	[illegible]	[illegible]
ಹೆಸರುಕಾಳು	[illegible]	[illegible]
ಉದ್ದು	[illegible]	
ಹುಣಸೇಹಣ್ಣು	[illegible]	[illegible]
ಮೆಣಸಿನಕಾಯಿ	[illegible]	
ತೆಂಗಿನಕಾಯಿ ೧೦೦೦	[illegible]	[illegible]
ಎಳ್ಳು	[illegible]	[illegible]

Pale
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists
71/1 A. S Street,
BANGALORE-2

Edited, Printed and Published by A. R. Nagarajan at Sadhvi Press D Subaiah Road, Mysore

ಸೂಯೆಜ್ ಕಾಲುವೆ ರಾಷ್ಟ್ರೀಕರಣದ ಪ್ರಸ್ತಾಪ ಮಾಡಿಲ್ಲ

ನೆಹರೂರವರ ಸ್ಪಷ್ಟ ಹೇಳಿಕೆ

ಸೂಯೆಜ್ ಕಾಲುವೆ ಕಂಪೆನಿಯ ರಾಷ್ಟ್ರೀಕರಣದ ಬಗ್ಗೆ ಈಜಿಪ್ಟ್ ಸರ್ಕಾರದ ನಿರ್ಧಾರವು ತಾವು ದೆಹಲಿಗೆ ಹಿಂದಿರುಗಿದನಂತರ ತಮಗೆ ಗೊತ್ತಾಯಿತೆಂದೂ, ಕೈರೋವಿನಲ್ಲಿದ್ದಾಗಲಾಗಲೀ, ಬ್ರಿಯೋನಿಯಲ್ಲಾಗಲೀ ಈಜಿಪ್ಟ್ ಅಧ್ಯಕ್ಷರೊಡನೆ ತಮ್ಮ ಮಾತುಕತೆಗಳಲ್ಲಿ ಈ ಬಗ್ಗೆ ಚರ್ಚೆಯಾಗಲಿಲ್ಲವೆಂದೂ ಪ್ರಧಾನಿ ನೆಹರೂರವರು ನೆನ್ನೆ ಲೋಕಸಭೆಯಲ್ಲಿ ತಿಳಿಸಿದರು. ಬ್ರಿಟನ್ ಮತ್ತು ಈಜಿಪ್ಟಿಗೆ ಸಂಬಂಧಿಸಿದ ಬೇರಾವ ವಿಷಯವೂ ಸಹ ಮಾತುಕತೆಗಳಲ್ಲಿ ಬರಲಿಲ್ಲವೆಂದೂ ಅವರು ಹೇಳಿದರು.

ದೇವಿ ಭಾಗವತ ಪುರಾಣ ಮತ್ತು ಕಾವ್ಯ ವಾಚನ

ಜಯನಗರದ ಶ್ರೀ ಪೌರಾಣಿಕ ಸಾಲಿಗ್ರಾಮದ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ನಾಳೆ ದಿನ ಸಾಯಂಕಾಲ ೬-೩೦ ಗಂಟೆಗೆ ದ್ವಾದಶಿ ಪ್ರಯುಕ್ತ ಶ್ರೀ ಕೃಷ್ಣಗಿರಿ ಕೃಷ್ಣರಾಯರ ವ್ಯಾಖ್ಯಾನದೊಡನೆ ದೇವೀ ಭಾಗವತ ಮಹಾ ಪುರಾಣವನ್ನೂ, ಶ್ರೀಮತಿಯರಾದ ಟಿ. ವಸುಂಧರಾದೇವಿ ಮತ್ತು ಜಿ. ವಸುಧಾದೇವಿಯವರಿಂದ ಕಾವ್ಯ ವಾಚನವನ್ನೂ ಏರ್ಪಡಿಸಿರುತ್ತೆ. ಸರ್ವರಿಗೂ ಆಹ್ವಾನವುಂಟು.

ಚಾಮರಾಜನಗರದಲ್ಲಿ ವಿದ್ಯಾದಾನ ಭೂದಾನ ಸಭೆ

ಹಾಸನ ಡಿವಿಜನ್ ಡಿ. ಡಿ. ಪಿ. ಐರವರಾದ ಶ್ರೀ ಟಿ. ವಾಸುದೇವಯ್ಯನವರು ವಿದ್ಯಾ ಇಲಾಖೆಯ ಭೂದಾನದ ವ್ಯವಸಾಯ ಸಲಹೆಗಾರರಾದ ಅಗ್ರಿಕಲ್ಚರ್ ಡೆ॥ ಡೈ॥ ಶ್ರೀ ಎಂ. ಎಲ್. ಸುಬ್ಬಣ್ಣನವರೊಡನೆ ಚಾಮರಾಜನಗರಕ್ಕೆ ಕಳೆದ ೨೬ ರಂದು ದಯಮಾಡಿಸಿ ಅದೇ ಸಾಯಂಕಾಲ ಸ್ಥಳೀಯ ಮಾಧ್ಯಮಿಕ ಶಾಲೆಯಲ್ಲಿ ನಡೆದ ಭೂದಾನ ಸಂಬಂಧವಾದ ಸಭೆಯ ಅಧ್ಯಕ್ಷತೆ ವಹಿಸಿದ್ದರು. ಗಮಕಿ ರಾಜಗೋಪಾಲರವರಿಂದ ಪ್ರಾರ್ಥನೆಯಾಯಿತು. ಮುಖ್ಯೋಪಾಧ್ಯಾಯರಾದ ಶ್ರೀ ಆರ್ ಸಿಂಗ್ರಾಚಾರ್ಯರು ಸ್ವಾಗತ ಭಾಷಣ ಮಾಡಿದರು. ನಂತರ ಶ್ರೀ ಎಂ. ಎಲ್ ಸುಬ್ಬಣ್ಣನವರು ಶಾಲೆಗಳಿಗೆ ಬಂದಿರುವ ಭೂದಾನದ ಜಮೀನಿನಲ್ಲಿ ಬೆಳೆ ಮಾಡುವ ರೀತಿ ಮತ್ತು ಉಪಾಧ್ಯಾಯರ ಕರ್ತವ್ಯದ ವಿಚಾರವಾಗಿ ಭಾಷಣ ಮಾಡಿದರು.

ಅಧ್ಯಕ್ಷರು, ಮಾರ್ಪಾಡಾಗುತ್ತಿರುವ ವಿದ್ಯಾಭ್ಯಾಸ ಕ್ರಮದಲ್ಲಿ ಕ್ರಿಯಾತ್ಮಕ ಮತ್ತು ದೈಹಿಕ ಶಿಕ್ಷಣದ ಪ್ರಾಮುಖ್ಯತೆಯನ್ನು ವಿವರಿಸಿದರು. ರೇಂಜ್ ವಿದ್ಯಾಧಿಕಾರಿಗಳಾದ ಶ್ರೀ ಎಸ್. ಎನ್. ಧನ್ವಂತರಯ್ಯನವರು ವಂದನಾರ್ಪಣೆ ಮಾಡಿದನಂತರ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಶಾಂತಾ ಆಪ್ಟೆಯ ಖುಲಾಸೆ

ಪಾನ ನಿರೋಧ ಶಾಸನದ ರೀತ್ಯಾ, ಸರ್ಕಾರಿ ಕರ್ತವ್ಯದಲ್ಲಿ ತೊಡಗಿದ್ದ ಅಧಿಕಾರಿಯೊಬ್ಬನ ಕೆಲಸಕ್ಕೆ ಅಡ್ಡಿಪಡಿಸಿದಳೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಸಿನಿಮಾ ನಟಿ ಶಾಂತಾ ಆಪ್ಟೆ ಮತ್ತು ಆಕೆಯ ಸಹೋದರ ಬಾಬುರಾವ್‌ರವರನ್ನು ನಾಗಪುರ ಹೈಕೋರ್ಟಿನವರು ನೆನ್ನೆ ಖುಲಾಸೆ ಮಾಡಿದರು. ಆಪ್ಟೆ ತಹಸಾರಿ ಪಡೆಯದೆ ಮಾದಕದ್ರವ್ಯವನ್ನು ಇಟ್ಟುಕೊಂಡಿದ್ದರೆಂದೂ, ಅದನ್ನು ವಶಪಡಿಸಿಕೊಳ್ಳಲು ಬಂದಿದ್ದ ಸರ್ಕಾರಿ ನೌಕರನನ್ನು ಹೊಡೆದರೆಂದೂ ಆಪಾದಿಸಲಾಗಿತ್ತು.

ವಿದ್ಯುಚ್ಛಕ್ತಿ ದರ ಇಳಿಸುವ ಬಗ್ಗೆ ಪರಿಶೀಲನೆ

ಸಂಸ್ಥಾನದಲ್ಲಿ ಇತ್ತೀಚೆಗೆ ಹೆಚ್ಚಿಸಿರುವ ವಿದ್ಯುಚ್ಛಕ್ತಿ ದರವನ್ನು ಕಡಿಮೆ ಮಾಡುವ ವಿಷಯವು ಪರ್ಯಾಲೋಚನೆಯಲ್ಲಿರುವುದಾಗಿ ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ತಿಳಿಸಿರುತ್ತಾರೆ.

ವಿದ್ವತ್ಸಭೆ

ಬ್ರಹ್ಮತಂತ್ರ ಶ್ರೀ ಪರಕಾಲ ಮಠದಲ್ಲಿ ತಿರುನಕ್ಷತ್ರ ಜಯಂತಿ ಅಂಗವಾಗಿ ಜರುಗುವ ವೇದ ಶಾಸ್ತ್ರಗಳ ೩೦ನೇ ವಿದ್ವತ್ಸಭೆಯು ಇದೇ ತಿಂಗಳು ೬ನೇ ತಾರೀಖಿನಿಂದ ೧೫ ರ ವರೆಗೆ ನಿತ್ಯವೂ ಸಂಜೆ ೪ ಗಂಟೆಗೆ ನಡೆಯುವುದು, ಮಾಮೂಲಾಗಿ ಬರುವ ವಿದ್ವಾಂಸರೆಲ್ಲರೂ ಸಭಾ ನಿಯಮವನ್ನನುಸರಿಸಿ ದಯಮಾಡಿಸಬೇಕೆಂದು ಕೋರಲಾಗಿದೆ

ರಾಷ್ಟ್ರ ಧ್ವಜದ ಬಗ್ಗೆ ಅಗೌರವವೇ?

ಶ್ರೀಮನ್ಮಹಾರಾಜರ ವರ್ಧಂತಿ ಉತ್ಸವದ ಸಂದರ್ಭದಲ್ಲಿ ಕಳೆದ ಭಾನುವಾರ ಕೆಲವು ಸರ್ಕಾರಿ ಭವನಗಳ ಮೇಲೆ ಹಾರಿಸಲಾದ ರಾಷ್ಟ್ರ ಧ್ವಜಗಳು ಹರಿದು, ಬಣ್ಣಗೆಟ್ಟಿದ್ದುವೆಂದೂ, ಪುರಸಭೆ, ಬನುಮಯ್ಯನವರ ಶಾಲೆ, ಟ್ರೈನಿಂಗ್ ಕಾಲೇಜು ಮುಂತಾದ ಕಡೆಗಳಲ್ಲಿ ಅಂತಹವನ್ನು ನೋಡಬಹುದಾಗಿತ್ತೆಂದೂ ವಾಚಕರೊಬ್ಬರು ಪತ್ರ ಬರೆದು ಸೂಚಿಸಿದ್ದಾರೆ. ಬೆಂಗಳೂರು-ನೀಲಗಿರಿ ರಸ್ತೆಯಲ್ಲಿರುವ ಒಂದು ಸಾರ್ವಜನಿಕ ಕಟ್ಟಡದ ಮೇಲೆ ಬಾವುಟವನ್ನು ತಲೆ ಕೆಳಗಾಗಿ ಹಾರಿಸಲಾಗಿತ್ತೆಂದು ಅವರು ತಿಳಿಸುತ್ತಾರೆ.

ಮಹಿಳೆಯ ಅಸಭ್ಯವರ್ತನೆ?

ಮಂಡಿ ಮೊಹಲ್ಲಾದ ಒಂದು ಹೋಟೇಲಿನ ಮಾಲೀಕರ ಪತ್ನಿಯೊಬ್ಬಳು ಸುತ್ತಮುತ್ತಲಿರುವ ನಿವಾಸಿಗಳನ್ನು ನಿಷ್ಕಾರಣವಾಗಿ, ಅಸಭ್ಯ ರೀತಿಯಲ್ಲಿ ಬೈಯುತ್ತಿರುವಳೆಂದು ಮೊಹಲ್ಲಾ ಪೋಲೀಸು ಠಾಣೆಗೆ ನಿವಾಸಿಗಳು ದೂರು ಕೊಟ್ಟಿರುವುದಾಗಿ ವರದಿಯಾಗಿದೆ. ಅಧಿಕಾರಿಗಳು ಸ್ಥಳಕ್ಕೆ ಬಂದು ಆಕೆಯಿಂದ ಜನರಿಗೆ ಆಗುತ್ತಿರುವ ಕಿರುಕುಳವನ್ನು ತಪ್ಪಿಸುವಂತೆ ವಾಚಕರೊಬ್ಬರು ಪತ್ರ ಬರೆದಿರುತ್ತಾರೆ.

ಒಲಂಪಿಯಾ ಟಾಕೀಸ್
೨-೮-೫೬ ರಿಂದ : ಅಪೂರ್ವ ಪ್ರಾರಂಭ
ಪ್ರತಿ ದಿನ ಮೂರು ಪ್ರದರ್ಶನಗಳು
ಆರ್. ಕೆ ಫಿಲಂಸ್‌ರವರ ಶ್ರೀ 420
ಪಾತ್ರ:— ರಾಜ್ ಕಪೂರ್, ನರ್ಗಿಸ್ ಮತ್ತು ನಾದಿರ

ಲಕ್ಷ್ಮಿ ಚಿತ್ರ ★
೩-೮-೫೬ ರಿಂದ : ಅಪೂರ್ವ ಪ್ರಾರಂಭ : ದಿನವಹಿ 3 ಆಟಗಳು
ವಿಧಿಯ ಆಟದ ಮುಂದೆ ಮಾನವನ ಆಟ ಮಕ್ಕಳ ಆಟ ಎಂಬ ತತ್ವವನ್ನು ಸಾರುವ ಅತ್ಯುತ್ತಮ ತಮಿಳು ಚಿತ್ರ
★ ಕುಟುಂಬ ವಿಳಕ್ಕು ★
ಪಾತ್ರ:- ಎಂ. ವಿ. ರಾಜಮ್ಮ, ಜಮುನ, ನರಸಿಂಹಭಾರತಿ, ತಂಗವೇಲು, ದೊರೆರಾಜ್, ಎಂ. ಜಿ. ಚಕ್ರಪಾಣಿ, ಎನ್ ಎಸ್. ಕೃಷ್ಣನ್, ಟಿ. ಎ ಮಧುರಂ ಮುಂತಾದವರು
ನೃತ್ಯ : ಕುಚಲಕುಮಾರಿ, ಇ. ವಿ. ಸರೋಜ, ರಾಜಸುಲೋಚನಾ ಮುಂತಾದವರು

ರಂಜಿತ್ ★
2-8-56 ರಿಂದ :: ಅಪೂರ್ವ ಪ್ರಾರಂಭ :: ದಿನವಹಿ ಮೂರು ಆಟಗಳು
ಈಗ ಹೊಸದಾಗಿ ಸಜ್ಜುಗೊಳಿಸಿರುವ ಆರ್.ಸಿ.ಎ ಧ್ವನಿಗ್ರಹಣ ಮತ್ತು ಸಿನಿಮಾಸ್ಕೋಪ್ ತೆರೆಯಿಂದ ಕೂಡಿದ ಈ ಚಿತ್ರಮಂದಿರದಲ್ಲಿ ಇಂದೇ ನೋಡಿರಿ
ನಿಮ್ಮನ್ನು ನಕ್ಕುನಲಿಸುವ ಜಾನಿವಾಕರ್ ಮತ್ತು ತಾರೀಫು ಮಾಡುವ ಓ. ಪಿ. ನಯ್ಯರ್‌ರವರ ಸಂಗೀತವನ್ನು ಕೇಳಲು ಇಂದೇ ನಿಮ್ಮ ಜಾಗವನ್ನು ಕಾದಿರಿಸಿ. ಪರಿಮಳ ರವರ
– ಛೂ ಮಂತರ್ – (ಹಿಂದಿ)
—: ತಾರೆಯರು:— ಶ್ಯಾಮಾ, ಅನಿತಾ ಗುಹ ಮತ್ತು ಜಾನಿವಾಕರ್

ಚಾಮುಂಡೇಶ್ವರಿ ಟಾಕೀಸ್ ★
3-8-56 ರಿಂದ : ಅಪೂರ್ವ ಪ್ರಾರಂಭ : ದಿನವಹಿ 3 ಪ್ರದರ್ಶನಗಳು
ಚಲನಚಿತ್ರ ಪ್ರಪಂಚದಲ್ಲಿ ನೂತನ ಕ್ರಾಂತಿಯುಂಟುಮಾಡಲಿರುವ, ಜ್ಯುಪಿಟರ್ ಫಿಲಂಸ್‌ರವರ ತಮಿಳು ಚಿತ್ರ
ಪ್ರಜಮುಂತಿ ಮಾಲಾ, ಶ್ರೀರಾಂ, ರಾಜಸುಲೋಚನಾ, ಎಂ. ಎನ್. ರಾಜಂ, ವಿ ನಾಗಯ್ಯ, ಟಿ. ಎಸ್. ಬಾಲಯ್ಯ, ವೀರಪ್ಪ, ತಂಗವೇಲು ಪಾತ್ರವಹಿಸಿರುವ,
ನಿರ್ದೇಶನ ಟಿ. ಆರ್. ರಘುನಾಥ್
★ ಮರ್ಮವೀರನ್ ★
[An Emerald Release
ಮೊದಲನೇ ನಾಲ್ಕು ವಾರಗಳು ಎಲ್ಲಾ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ.

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : FRIDAY 3—8—1956 ಮೈಸೂರು : ಶುಕ್ರವಾರ ೩—೮—೧೯೫೬ [ಸಂಚಿಕೆ : 4

೧೬ನೇ ತಾ|| ಬೆಳಿಗ್ಗೆ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆ

ಬ್ರಿಟನ್ನಿನಲ್ಲಿ ರಿಸರ್ವ್ ಸೈನಿಕರು ಸಜ್ಜಾಗಲು ರಾಣಿಯ ಆಜ್ಞೆ

ಪೂರ್ವ ಮಧ್ಯ ಸಮುದ್ರ ಪ್ರದೇಶದಲ್ಲಿ ಜರುಗು ಪರಿಸ್ಥಿತಿ ಕರ್ತವ್ಯದ ನಿರ್ವಹಣೆಗೆ ಸಿದ್ಧವಾಗುವಂತೆ ಬ್ರಿಟನ್ನಿನ ರಿಸರ್ವ್ ಸೇನೆಯ ವಿಶೇಷ ಸೈನಿಕರಿಗೆ ಸೂಚನೆಯಿರುವ ಆಜ್ಞೆಗೆ ರಾಣಿ ಎಲಿಜಬೆತ್ತರು ನೆನ್ನೆ ರುಜು ಮಾಡಿದರು. ಇದು ಸಾರ್ವತ್ರಿಕ ಜಮಾವಣೆಗೆ ಹೋಲುವಂತಹ ಆಜ್ಞೆಯೆಂದು ಅಲ್ಲಿನ ಪ್ರಧಾನಿ ಈಡನ್ನರು ಕಾಮನ್ಸಿನಲ್ಲಿ ತಿಳಿಸಿ, ಅತ್ಯವಶ್ಯಕವಾದ ಅಲ್ಪ ಬಲ ಕ್ರಮಗಳಿಗಾಗಿ ಬ್ರಿಟಿಷ್ ಸರ್ಕಾರದವರು ಭಾರಿ ಕ್ರಮವನ್ನು ಕೈಗೊಂಡಿರುವುದಾಗಿ ಹೇಳಿದರು.

ಬ್ರಿಟನ್ನಿನ ಜೆಟ್ ವಿಮಾನಗಳು ಮಾಲ್ಟಾ ದ್ವೀಪಕ್ಕೆ ಹೋಗಲು ಆಜ್ಞೆಯಾಗಿದೆ. ಬಾಂಬರ್ ವಿಮಾನ ಚಾಲಕರುಗಳಿಗೆ ವಾರಾಂತ್ಯದ ರಜಾಗಳನ್ನು ರದ್ದು ಮಾಡಲಾಗಿದೆ.

ಅಂತರ್ರಾಷ್ಟ್ರೀಯ ಜರೂರು ಪರಿಸ್ಥಿತಿಯಲ್ಲಿ ಸ್ವಯಂಪ್ರೇರಿತವಾಗಿ ಬರುವ ಯೋಧರೂ, ದ್ದಲು ಮತ್ತು ರೇವು ಕೆಲಸಗಾರರೇ ಮುಂತಾದವರೂ ಬರುವಂತೆ ಸೂಚಿಸಲಾಗಿದೆ. ೨೦೦ ನಂದ ಸೇನಾ ಕಾಪಳಿಯ ಹೊರಡಲು ಆಜ್ಞೆಯಾಗಿದೆ. ಭೂ ಸೈನ್ಯದ ಒಂದು ತಂಡವನ್ನೂ ಕಳುಹಿಸಲಾಗುವುದು. ಕಾಲಾಳುಗಳನ್ನು ಸೈಪ್ರಸ್, ಜಿಬ್ರಾಲ್ಟರ್ ಅಥವಾ ಲಿಬ್ಯಾಗಳಿಗೆ ಕಳುಹಲಾಗುವುದು.

ಫ್ರಾನ್ಸಿನ ದಕ್ಷಿಣ ಭಾಗದ ರೇವಾದ ಟೂಲಾನಿನಲ್ಲಿರುವ ಯುದ್ಧ ನೌಕೆಗಳ ಬಹು ಭಾಗವು ಗೊತ್ತಿಲ್ಲದ ಸ್ಥಳಕ್ಕೆ ಹೋಗಲು ಸನ್ನದ್ಧವಾಗಿರುವುದೆಂದು ತಿಳಿದುಬಂದಿದೆ.

ಈಜಿಪ್ಟನ್ನು ತ್ಯಜಿಸಲು ಬ್ರಿಟಿಷ್ ಪ್ರಜೆಗಳಿಗೆ ಸೂಚನೆ

ಈಜಿಪ್ಟಿನಲ್ಲಿರುವ ಬ್ರಿಟಿಷ್ ಪ್ರಜೆಗಳು ಆ ದೇಶವನ್ನು ಬಿಟ್ಟು ಹೊರಟು ಬರುವಂತೆ ಬ್ರಿಟನ್ನು ಎಚ್ಚರಿಸುತ್ತಿರುವುದರಿಂದ, ಕಾಮನ್ವೆಲ್ತ್ ರಾಷ್ಟ್ರ ನಿವಾಸಿಗಳಿಗೂ ಈ ಬಗ್ಗೆ ಸೂಚನೆ ಕೊಡಲು ತೀರ್ಮಾನಿಸಲಾಗಿರುವುದೆಂದೂ ವರದಿಯಾಗಿದೆ. ಶಾಂತಿಯುತವಾಗಿಯೇ ಖಾಲಿ ಮಾಡುವುದು ಉತ್ತಮವೆಂದೂ ತಿಳಿಸಲಾಗಿದೆ. ಫ್ರಾನ್ಸಿನ ಹೆಂಗಸರು ಮಕ್ಕಳೆಲ್ಲರೂ ಹಿಂದಿರುಗಬೇಕೆಂದು ಸೂಚನೆ ಕೊಡಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದಿಲ್ಲಿ ಬಾ. ೭-೧೫ ಮತ್ತು ೮-೧೫ ಚಿಂತನದಲ್ಲಿ ಕೃಷ್ಣಮೂರ್ತಿ-ದೇವರನಾಮ. ೭-೩೦ ಎಲ್. ಶೇಷಗಿರಿ-ಕೊಳಲು. ಮಧ್ಯಾಹ್ನ ೧೨ ಬಿ. ಕೃಷ್ಣಮೂರ್ತಿ-ಸಂಗೀತ ೧೨-೩೦ ರೇಡಿಯೋ. ೧೨-೪೫ ಮಕ್ಕಳ ಕಾರ್ಯಕ್ರಮ ೧-೫೦ ದಿಲ್ಲಿ ಬಾ. ಸಂಜೆ ೫-೩೦ ಮತ್ತು ೮ ಸೀತಾಲಕ್ಷ್ಮಿ ವೆಂಕಟೇಶ-ಸಂಗೀತ. ೬-೧೫ ಮಲ್ಲಿಕಾರ್ಜುನಪ್ಪ-ವಚನಗಾನ ೬-೩೦ ಸೀಮೆಗೆ ಹೋಗಿ ಬಂದಿದ್ದರೆ : ಕನ್ನಡದಲ್ಲಿ ಭಾಷಣ. ೮-೩೦ ರೇಡಿಯೋ ಸುದ್ದಿ ವಿವರ-ದೆಹಲಿ. ೮-೪೦ ಪ್ರಸಾರ ಗೀತೆ. ೯-೧೫ ಈ ದಿ ಪಾರ್ಲಿಮೆಂಟಿನಲ್ಲಿ. ೯-೧೫ ಗುರುವಿನ ಪಾದ ಮಾರ್ಗದಲ್ಲಿ : ಕನ್ನಡದ ಪ್ರಸಂಗ. ೯-೩೦ ರಾಷ್ಟ್ರೀಯ ಕಾರ್ಯಕ್ರಮ

ಮುಖ್ಯ ಮಂತ್ರಿಗಳಿಗೆ ಹೈಕಮಾಂಡ್ ನಿರ್ದೇಶನ ಪತ್ರ

ನೆನ್ನೆ ಮಧ್ಯಾಹ್ನ ತಲುಪಿತು

ಬೆಂಗಳೂರು ೩.

ಮೈಸೂರು ರಾಜಕೀಯ ಬಿಕ್ಕಟ್ಟಿನ ಸಂಬಂಧವಾಗಿ ಹೈಕಮಾಂಡಿನ ಸೂಚನೆಯ ಪತ್ರವು ನೆನ್ನೆ ಮಧ್ಯಾಹ್ನ ೧೨ ಗಂಟೆಗೆ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ಕೈಗೆ ಬಂದಿತೆಂದು ವರದಿಯಾಗಿದೆ. ಅದಕ್ಕೆ ಮುಂಚೆ ಶ್ರೀ ಹನುಮಂತಯ್ಯನವರು ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರಿಗೆ ತಂತಿ ಕಳುಹಿಸಿ ಬೇಗನೆ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯನ್ನು ತಾವು ಕರೆಯುವುದಾಗಿ ತಿಳಿಸಿದ್ದರೆಂದು ಹೇಳಲಾಗಿದೆ. ಆಗಸ್ಟ್ ೧೦ ಅಥವಾ ೧೧ಕ್ಕೆ ಶಾಸನಸಭೆಯನ್ನು ಕರೆಯಬೇಕೆಂದು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಅಭಿಪ್ರಾಯಪಟ್ಟಿರುವರು.

ಮುಖ್ಯ ಮಂತ್ರಿಗಳಿಗೆ ಹೈಕಮಾಂಡ್ ಪತ್ರವು ಬರುವುದು ತಡವಾದುದಕ್ಕೆ ಪತ್ರ ರವಾನೆಯಲ್ಲಿ ವ್ಯತ್ಯಾಸವೇ ಕಾರಣವೆಂದು ಹೇಳಲಾಗಿದೆ. ಮೈಸೂರು ಮುಖ್ಯ ಮಂತ್ರಿಗಳಿಗೆ ಬರೆದ ಪತ್ರವು ಒರಿಸ್ಸಾ ಮುಖ್ಯ ಮಂತ್ರಿ ನವಕೃಷ್ಣ ಚೌಧುರಿಯವರಿಗೂ, ಅವರಿಗೆ ಸಲ್ಲಬೇಕಾದ ಪತ್ರವು ಶ್ರೀ ಹನುಮಂತಯ್ಯನವರಿಗೂ ಹೋಗಿದ್ದುವೆಂದು ಗೊತ್ತಾಗಿದೆ.

ಬೇಲೂರು ಕೊಲೆ ಅಪಾದಿತರಿಬ್ಬರ ಮೇಲೆ ಕಳುವು ಮೊಕದ್ದಮೆ

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯ ೧ ಮತ್ತು ೨ನೇ ಆಪಾದಿತರಾದ ಕೃಷ್ಣ ಮತ್ತು ಗೋವಿಂದರೆಡ್ಡಿಯವರು ಬಿಲಸೂರಿನಲ್ಲಿ ಲೇವಾದೇವಿಗಾರರೊಬ್ಬರ ಮನೆಯಲ್ಲಿ ೬೦೦೦ ರೂ. ಬೆಲೆ ಪದಾರ್ಥಗಳನ್ನು ಕಳುವು ಮಾಡಿದ್ದರೆಂದು ಹೂಡಲಾಗಿದ್ದ ಮೊಕದ್ದಮೆಯು ನೆನ್ನೆ ಸಿವಿಲ್ ಪ್ರದೇಶದ ನ್ಯಾಯಾಧೀಶರ ಮುಂದೆ ಬಂದು, ಅವರಿಬ್ಬರ ಪರ ವಕಾಲತ್ತು ವಹಿಸಿರುವ ಶ್ರೀ ಎಂ. ಸಿ. ಗುರುರಾವ್ ಬಗ್ಗೆ ಹೇಳಿಕೆ ಕೊಟ್ಟು, ಮಹಜರ್ ಮತ್ತು ಎಫ್. ಐ. ಆರ್. ನಕಲುಗಳನ್ನು ಆಪಾದಿತರಿಗೆ ಒದಗಿಸಬೇಕೆಂದು ಅರಿಕೆ ಮಾಡಿಕೊಂಡ ಮೇಲೆ ೮ನೇ ತಾರೀಕಿಗೆ ಮುಂದುವರಿಸಲ್ಪಟ್ಟಿತು.

ಸೂಯೆಜ್ ಬಿಕ್ಕಟ್ಟಿನ ಬಗ್ಗೆ ಅಮೆರಿಕಾ ಅಧ್ಯಕ್ಷರಿಗೆ ನೆಹರೂ ಪತ್ರ

ಸೂಯೆಜ್ ಕಾಲುವೆ ಕಂಪೆನಿ ಬಗ್ಗೆ ಈಜಿಪ್ಟಿಗೂ, ಬ್ರಿಟನ್ ಮತ್ತು ಫ್ರಾನ್ಸುಗಳಿಗೂ ಉಂಟಾಗಿರುವ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ಪ್ರಧಾನಿ ನೆಹರೂರವರು ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರಿಗೆ ವೈಯಕ್ತಿಕ ಪತ್ರ ಬರೆದು ಕಾಲುವೆ ಕಂಪೆನಿ ರಾಷ್ಟ್ರೀಕರಣದ ಬಗ್ಗೆ ಭಾರತದ ಅಭಿಪ್ರಾಯವನ್ನು ತಿಳಿಸಿರುವರೆಂದು ಹೇಳಲಾಗಿದೆ.

ಪ್ರಧಾನಿ ನೆಹರೂರವರು ಪೂನಾ ನಗರಕ್ಕೆ ನೆನ್ನೆ ಬಂದ ಸಮಯದಲ್ಲಿ ಅವರ ಮುಂದೆ ಪ್ರದರ್ಶನ ಮಾಡುವುದನ್ನು ತಪ್ಪಿಸಲು ಅಖಿಲ ಭಾರತ ಹಿಂದೂ ಮಹಾಸಭಾ ಪರಿಷತ್ತಿನ ಪ್ರಧಾನ ಕಾರ್ಯದರ್ಶಿ ಎಲ್. ಜಿ. ತಟ್ಟೆಯವರನ್ನು ಪೊಲೀಸರು ಬಂಧಿಸಿದರು.

ರಷ್ಯ ಮತ್ತು ಚೀಣರಿಂದ ಪಾಮಿರ್ ಶಿಖರದ ಆರೋಹಣ

ರಷ್ಯಾ-ಚೀಣಾ ಗಡಿಯಲ್ಲಿ ಪಾಮಿರ್ ಪರ್ವತ ಶ್ರೇಣಿಯಲ್ಲಿರುವ ೨೪,೫೦೦ ಅಡಿಯ ಮುಜ್ತಾಗ್ ಅಟ ಎಂಬ, ಇದುವರೆಗೂ ಅಜೇಯವಾಗಿದ್ದ ಶಿಖರವನ್ನು ಚೀಣಾ ಮತ್ತು ರಷ್ಯಾ ಪರ್ವತಾರೋಹಿಗಳು ಹತ್ತಿ ಅದರ ಮೇಲೆ ಎರಡು ರಾಷ್ಟ್ರಗಳ ಬಾವುಟಗಳನ್ನು ಸ್ಥಾಪಿಸಿರುತ್ತಾರೆ. ೧೯ ಜನ ರಷ್ಯನರೂ, ೧೨ ಮಂದಿ ಚೀಣೀಯರೂ ಈ ಸಾಹಸ ಕಾರ್ಯದಲ್ಲಿ ಭಾಗವಹಿಸಿದ್ದರು. ೧೬ ಸಾವಿರ ಅಡಿ ಎತ್ತರದಲ್ಲಿ ಸ್ಥಾಪಿಸಿದ ಶಿಬಿರದಿಂದ ಶಿಖರವನ್ನು ಹತ್ತಲು ತಂಡದವರಿಗೆ ೬ ದಿನ ಹಿಡಿಯಿತು.

ಎವರೆಸ್ಟ್ ಶಿಖರಾರೋಹಿ ತಂಡದವನ ಮರಣ

೧೯೫೩ರಲ್ಲಿ ಎವರೆಸ್ಟ್ ಶಿಖರವನ್ನೇರಿದ ಬ್ರಿಟಿಷ್ ತಂಡದ ವ್ಯಕ್ತಿ ಒಬ್ಬರಾದ ಥಾಮಸ್ ಬೌರ್ಡಿಲಿಯನ್ ಮತ್ತು ಇನ್ನೊಬ್ಬ ಬ್ರಿಟಿಷ್ ಪರ್ವತಾರೋಹಿಯು ಸ್ವಿಟ್ಜರ್ಲೆಂಡಿನ ಜಗಿಹಾರ್ನ ಶಿಖರವನ್ನೇರುತ್ತಿದ್ದಾಗ ಕೆಳಗೆ ಬಿದ್ದು ಮೃತಪಟ್ಟರು.

ತತ್ವಶಾಸ್ತ್ರ ಸಂಘದ ಅಧಿಕಾರ ವರ್ಗ

ಮಹಾರಾಜಾ ಕಾಲೇಜಿನ ತತ್ವಶಾಸ್ತ್ರ ಮತ್ತು ಸಮಾಜಶಾಸ್ತ್ರ ಸಂಘದ ಚುನಾವಣೆಯು ನೆನ್ನೆ ನಡೆದು ಶ್ರೀ ಹೆಚ್. ವಿ. ರಾಮರಾವ್‌ರವರು ಉಪಾಧ್ಯಕ್ಷರಾಗಿಯೂ; ಶ್ರೀಗಳಾದ ಕೃಷ್ಣಪ್ಪ ಮತ್ತು ಹೆಚ್. ಎಂ. ಚೆಲ್ವಯ್ಯನವರು ಕಾರ್ಯದರ್ಶಿಗಳಾಗಿಯೂ; ಶ್ರೀಗಳಾದ ರಂಗಸ್ವಾಮಿ, ಮಹಾಲಿಂಗಯ್ಯ, ಕೆ. ಟಿ. ವೀರಪ್ಪ, ಶಶಿಧರ ಮತ್ತು ಪದ್ಮರಾಜರವರು ಸದಸ್ಯರಾಗಿಯೂ ಆಯ್ಕೆಯಾಗಿರುವರು.

ಆಯುರ್ವೇದ ಕಾಲೇಜ್ ವಿದ್ಯಾರ್ಥಿಗಳ ಸಂಘ

ರಾಜಧಾನಿಯಲ್ಲಿರುವ ಸರ್ಕಾರಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿ ಸಂಘದ ಚುನಾವಣೆಯು ನೆನ್ನೆ ನಡೆದು ಶ್ರೀ ವಿಶ್ವನಾಥರಾಯರು ಅಧ್ಯಕ್ಷರಾಗಿಯೂ, ಶ್ರೀ ಕುಂದಾಪುರ್‌ರವರು ಉಪಾಧ್ಯಕ್ಷರಾಗಿಯೂ, ಕೆ. ಎಂ. ಕುಲಕರ್ಣಿಯವರು ಖಜಾಂಚಿ ಮತ್ತು ಶ್ರೀ ಜಿ. ವಿ. ನಾರಾಯಣಸ್ವಾಮಿಯವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು. ಶ್ರೀಮತಿಗಳಾದ ನಳಿನಾಕ್ಷಿ ಶೆಟ್ಟಿ ಮತ್ತು ರಾಧಮ್ಮ ಮತ್ತು ಶ್ರೀಯುತರಾದ ದೊಡ್ಡಮಾದಯ್ಯ, ಜೆ. ಟಿ. ಮಠದ್, ರಾಜಬಲಿ, ಸೈಯದ್‌ಮಹಮೂದ್ ಮತ್ತು ಎಂ. ವೀರಪ್ಪನವರು ಸದಸ್ಯರಾಗಿ ಚುನಾಯಿತರಾದರು.

ಸೂಯೆಜ್ ಬಿಕ್ಕಟ್ಟು ಪರಿಶೀಲನೆಗೆ ೨೪ ರಾಷ್ಟ್ರಗಳ ಸಭೆ

ಸೂಯೆಜ್ ಕಾಲುವೆ ಮೇಲಿನ ಅಂತರರಾಷ್ಟ್ರೀಯ ಹತೋಟಿಯನ್ನು ಏರ್ಪಡಿಸಲು ಈ ತಿಂಗಳು ೧೬ ರಂದು ೨೪ ರಾಷ್ಟ್ರಗಳ ಸಭೆಯು ಲಂಡನ್ನಿನಲ್ಲಿ ಸೇರುವಂತೆ ಬ್ರಿಟನ್, ಅಮೆರಿಕ ಮತ್ತು ಫ್ರಾನ್ಸುಗಳು ಕರೆದಿವೆ. ಅವರಲ್ಲಿ ಭಾಗವಹಿಸಲು ರಷ್ಯ, ಈಜಿಪ್ಟ್, ಭಾರತ, ಇಟಲಿ, ಟರ್ಕಿ, ಸ್ಪೇನ್, ಹಾಲೆಂಡ್, ಗ್ರೀಸ್, ಇಂಡೊನೇಷಿಯಾ, ನಾರ್ವೆ, ಇರಾನ್ ಮತ್ತು ಪಶ್ಚಿಮ ಜರ್ಮನಿಗಳನ್ನು ಕರೆಯಲಾಗುವುದು.

ಇದೇ ೧೬ ರಂದು ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸಭೆ

ಬಿಕ್ಕಟ್ಟಿನ ಪರಿಹಾರದ ಬಗ್ಗೆ ಹೈಕಮಾಂಡಿನ ಸೂತ್ರದ ಪರಿಶೀಲನೆಗಾಗಿ

ಸ್ವಂ. ವ. ತಂತಿ] ಬೆಂಗಳೂರು ೩.

ಸಂಸ್ಥಾನದ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ ಶ್ರೀ ಆರ್. ಅನಂತರಾಮರವರು ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರನ್ನು ಈ ದಿನ ಭೇಟಿ ಮಾಡಿದ್ದರು. ಇದೇ ೧೬ರಂದು ಬೆಳಿಗ್ಗೆ ೯-೩೦ ಗಂಟೆಗೆ ಪಕ್ಷದ ಸಭೆಯನ್ನು ರೆಸಿಡೆನ್ಸಿ ಭವನದಲ್ಲಿ ಕರೆಯುವಂತೆ ಮುಖ್ಯ ಮಂತ್ರಿಗಳು ಅವರಿಗೆ ತಿಳಿಸಿರುತ್ತಾರೆ. ಸಭೆಯಲ್ಲಿ " ಪಕ್ಷದಲ್ಲುಂಟಾಗಿರುವ ರಾಜಕೀಯ ಬಿಕ್ಕಟ್ಟಿನ ಬಗ್ಗೆ ಹೈಕಮಾಂಡಿನ ಸೂಚನೆಯನ್ನು " ಪರಿಶೀಲಿಸಲಾಗುವುದು-ಈ ಬಗ್ಗೆ ನಾಳೆ ದಿನ ಸದಸ್ಯರುಗಳಿಗೆ ತಿಳಿವಳಿಕೆ ನೋಟೀಸನ್ನು ಕಳುಹಲಾಗುವುದು.

ವಿಧಾನ ಸೌಧದ ಶಾಸನಸಭಾ ಭಾಗದ ಆರಂಭೋತ್ಸವ

ವಿಧಾನ ಸೌಧದ ಶಾಸನಸಭಾ ಭವನದ ವಿಧ್ಯುಕ್ತವಾದ ಆರಂಭೋತ್ಸವವು ಇದೇ ೧೫ರಂದು ನೆರವೇರಿಸಲ್ಪಡಲಾಗುತ್ತಿದೆ. ಮುಖ್ಯ ಮಂತ್ರಿಗಳೇ ಸ್ವತಃ ಇದನ್ನು ನೆರವೇರಿಸುವರು.

ಪ್ರವಾಹದ ಮಧ್ಯೆ ಬಸ್ಸು ಸಿಕ್ಕಿಕೊಂಡಿತು

ಕಳೆದ ವಾರ ಪ್ರೊದ್ದಟೂರಿಗೆ ಯರ್ರಗುಂಟ್ಲದಿಂದ ರಾತ್ರಿ ಹೊತ್ತು ಬರುತ್ತಿದ್ದ ಬಸ್ಸೊಂದು ಪೊಟ್ಲದುರ್ತಿವಂಕ ಎಂಬ ನದಿಯ ಮರಳಿನಲ್ಲಿ ಹೂತುಕೊಂಡಿತು. ನದಿಯಲ್ಲಿ ಪ್ರವಾಹ ಬರುತ್ತಿತ್ತು. ಪ್ರಯಾಣಿಕರು ದಿಕ್ಕು ಕಾಣದೆ ರಾತ್ರಿಯೆಲ್ಲಾ ಬಸ್ಸಿನ ಮೇಲೆ ಕುಳಿತು ಜಾಗರಣೆ ಮಾಡುತ್ತಿದ್ದರು. ಮಾರನೇ ದಿನ ಹತ್ತಿರದ ಗ್ರಾಮದವರು ದೋಣಿಗಳ ಮೂಲಕ ಅವರನ್ನು ದಡಕ್ಕೆ ಕರೆತಂದರು.

ಮೆಕ್ಯಾನೊ ವೀಲ್ ವಸ್ತು ಪ್ರದರ್ಶನ

ಮೈಸೂರು ಮೆಕ್ಯಾನೊ ಕ್ಲಬ್ಬಿನ ಆಶ್ರಯದಲ್ಲಿ ನಾಳೆಯಿಂದ ೭ ರವರೆಗೆ ಇಲ್ಲಿನ ಸಹಕಾರ ಭವನದಲ್ಲಿ ಮೆಕ್ಯಾನೊ ವೀಲ್ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಇದರ ಆರಂಭೋತ್ಸವವನ್ನು ಕ್ಲಬ್ಬಿನ ಅಧ್ಯಕ್ಷರಾದ ಶ್ರೀ ಕೆ. ಬಸವರಾಜ ಅರಸ್‌ರವರು ನಾಳೆ ಸಂಜೆ ೫.೩೦ಕ್ಕೆ ನೆರವೇರಿಸುವರು. ಪ್ರದರ್ಶನದಲ್ಲಿ ಅನೇಕ ಕೈಕೆಲಸದ ಮಾದರಿಗಳು, ಪೋಸ್ಟರುಗಳು, ಚಿತ್ರಗಳು ಮುಂತಾದುವನ್ನು ಇಡಲಾಗುತ್ತದೆ. ನಿತ್ಯವೂ ಸಂಜೆ ಹೊತ್ತು ಅದನ್ನು ತೆರೆಯಲಾಗುವುದು. ಪ್ರವೇಶ ಉಚಿತ.

ನಗರದಲ್ಲಿ ಆಹಾರ ಡಿಪೋ ತೆರೆಯಲು ಮನವಿ

ಸರ್ಕಾರದವರು ನಗರದಲ್ಲಿ ಆಹಾರದ ಡಿಪೋಗಳನ್ನು ತೆರೆದು, ಹೆಚ್ಚುತ್ತಿರುವ ಆಹಾರ ಧಾನ್ಯಗಳ ಬೆಲೆಯನ್ನು ತಗ್ಗಿಸಲು ವ್ಯವಸ್ಥೆ ಮಾಡುವಂತೆ ನಗರದ ಸಮಾಜವಾದಿ ಪಕ್ಷದವರು ಜಿಲ್ಲಾಧಿಕಾರಿಗಳನ್ನು ಕೋರಿರುತ್ತಾರೆ. ಸದ್ಯದಲ್ಲೇ ಈ ಬಗ್ಗೆ ವ್ಯವಸ್ಥೆ ಮಾಡುವುದಾಗಿ ಜಿಲ್ಲಾಧಿಕಾರಿಗಳು ಭರವಸೆಯಿತ್ತಿರುವುದಾಗಿ ತಿಳಿಸಲಾಗಿದೆ.

ಕರ್ನಾಟಕ ಕಾಂಗ್ರೆಸ್ಸಿಗೆ ಅನೇಕ ಪಿ ಎಸ್ ಪಿ ಸದಸ್ಯರು

[illegible] ಪ್ರಜಾ ಸಮಾಜವಾದಿ ಪಕ್ಷದ ಸದಸ್ಯರು ಕಾಂಗ್ರೆಸ್ಸಿಗೆ ಸೇರಲು ನಿರ್ಧರಿಸಿರುತ್ತಾರೆ. ಕರ್ನಾಟಕದ [illegible] ಅಧ್ಯಕ್ಷ [illegible] ಪಾಟೀಲ್ [illegible] ಅಂಗಡಿ [illegible] ರವರು [illegible]

ಕಾಶ್ಮೀರಕ್ಕೆ ಚುನಾಯಿತ ಅಧಿಪತಿ

ಜಮ್ಮು ಮತ್ತು ಕಾಶ್ಮೀರ ಸಂಸ್ಥಾನದ ರಾಜ್ಯಾಂಗ ರಚನೆಯು ಅಂತಿಮ ಹಂತಕ್ಕೆ ಬಂದಿರುವುದೆಂದೂ, ಅಲ್ಲಿನ ಅಧಿಪತಿಯನ್ನು ಜನರು ಚುನಾಯಿಸಲ್ಪಡುವರೆಂದೂ ಗೊತ್ತಾಗಿದೆ

ಪೋಷಕ ಬೋಧಕ ಸಂಘದ ವಾರ್ಷಿಕೋತ್ಸವ

[illegible]

ಅನಾಥಾಲಯದ ವಿದ್ಯಾರ್ಥಿಗಳಿಗೆ ಸಹಾಯಕ್ಕಾಗಿ ಮನವಿ

ಅನಾಥ ನಿಲಯದ ಕಾರ್ಯದರ್ಶಿ [illegible] ಎಂ ವೆಂಕಟಕೃಷ್ಣಯ್ಯನವರ ಮೊಮ್ಮಕ್ಕಳೂ ಆದ ಶ್ರೀ ಎಂ ಎಸ್ ಶ್ರೀನಿವಾಸರಾಯರು ಪತ್ರವೊಂದನ್ನು ಹೊರಡಿಸಿ ಸಾರ್ವಜನಿಕರು ಅನಾಥ ನಿಲಯದ ವಿದ್ಯಾರ್ಥಿಗಳಿಗೆ ಸಹಾಯ ಮಾಡುವಂತೆ ಕೋರಿರುತ್ತಾರೆ. ಅನಾಥಾಲಯವು ವೆಂಕಟಕೃಷ್ಣಯ್ಯನವರಿಂದ ಸ್ಥಾಪಿಸಲ್ಪಟ್ಟು [illegible] ವರ್ಷಗಳಾದುವೆಂದೂ ಅಗಿನಿಂದಲೂ ಅನೇಕ ಅನಾಥ ವಿದ್ಯಾರ್ಥಿಗಳಿಗೆ ಅನ್ನ ವಸತಿಯನ್ನೇರ್ಪಡಿಸಿ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಲಾಗುತ್ತಿದೆಯೆಂದೂ ಅವರು ಸರ್ಕಾರದಿಂದ ಯಾವ ರೀತಿಯ ನೆರವೂ ಬರುತ್ತಿಲ್ಲವೆಂದು ತಿಳಿಸಿರುವರು. ಈ ವರ್ಷ [illegible] ಪರೀಕ್ಷೆಗೆ [illegible] ಮಂದಿ ವಿದ್ಯಾರ್ಥಿಗಳು ಕುಳಿತುಕೊಳ್ಳುವರೆಂದೂ ಅವರ ಅಪ್ಲಿಕೇಷನ್ ಫೀಸು ಮತ್ತು ಅವರ ಖರ್ಚು ಸೇರಿ [illegible] ರೂ ಬೇಕಾಗುತ್ತದೆಂದೂ ಈ ಬಗ್ಗೆ ಮಹಾಜನರು ಉದಾರ ಸಹಾಯ ನೀಡಬೇಕೆಂದು ಕೋರಲಾಗಿದೆ

ಪರಿಕಥೆ ಮತ್ತು ದೇವರಿಗೆ ಅಲಂಕಾರ

[illegible] ಕಾಳಮ್ಮನ ಗುಡಿ ಬೀದಿ ಶ್ರೀ [illegible] ರಾಮಲಿಂಗೇಶ್ವರ ದೇವಸ್ಥಾನದ [illegible] ಶ್ರೀ [illegible] ಹಳ್ಳಿ ಗುಂಡೂರಾಯರಿಂದ ದ್ರೌಪದಿ [illegible] ಹರಿಕಥೆ [illegible] ಅಲಂಕಾರವೂ ಏರ್ಪಾಡಾಗಿದೆ

SREE GANESH TALKIES

From 4 8 56 For 3 days

TROPICAL HEAT WAVE

Featuring - Estelita [illegible] Fabulous Senor [illegible] Fame

A hilarious comedy film for entire family

From 7-8 56 For 2 Days

Ealing Studio's product on in Eastman color

LEASE OF LIFE

With Kay Walsh and Robert Donat

From 9 8-56 For 2 Days

OUT OF THE CLOUDS

Produced in Eastman color

Starring - David Knight Antony Steel

ಹಾಸಿಗೆ - ದಿಂಬು

ಮಿತವ್ಯಯದಲ್ಲಿ [illegible] ತಯಾರು ಮಾಡುತ್ತೇವೆ

ಬಾಹುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು ಮೈಸೂರು

ಉತ್ತಮವಾದ ಕಟ್ಟಡದ ಪ್ಲಾನುಗಳು ಮತ್ತು ಬ್ಲೂ ಪ್ರಿಂಟ್ ಮಾಡಿಕೊಡುವುದಕ್ಕೆ ಗಾಯತ್ರಿ ಟಾಕೀಸ್ ಎದುರು ಹ್ಯಾಟ್ ಅಂಗಡಿಯಲ್ಲಿ

ಬಿ ಮುನಿಸ್ವಾಮಪ್ಪ,

ಡಿಪ್ಲೊಮಾ ಮತ್ತು ಲೈಸೆನ್ಸ್ ಹೋಲ್ಡರ್ ಇವರಲ್ಲಿ ವಿಚಾರಿಸಿ

[illegible] A K [illegible] Road, Mysore

[illegible] ರಾಜಧಾನಿಯ ಗಣೇಶ [illegible] ಟಾಕೀಸಿನಲ್ಲಿ ಸಿಕ್ಕ ಮತ್ತು ಮೊನ್ನೆ ಒಂದೊಂದು ಬೀಗದ ಕೈ ಗೊಂಚಲುಗಳ ಸಿಕ್ಕಿವೆ ವಾರಸುದಾರರು ಟಾಕೀಸಿನವರಿಂದ ಪಡೆಯಬಹುದು

ಶಕ್ತಿಯೂ ಕಾಂತಿಯೂ

ನಿಮ್ಮ ಗುರಿಯನ್ನು ತಪ್ಪಬಹುದು!

ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು!!

ಆದರೆ ಡಾ॥ [illegible] ನೂತನ ಮತ್ತು ಅಪ್ರತಿಮ [illegible] ಚಿಕಿತ್ಸೆಯು [illegible] ಅವಧಿಯಲ್ಲಿ [illegible] ತಪ್ಪುವುದಿಲ್ಲ.

[illegible] ಯೌವನವನ್ನು [illegible] ಆರೋಗ್ಯವನ್ನು ಹೊಂದಲು [illegible]

ಭಾರತದ [illegible] ಡಾ॥ [illegible] ಭಾರತದಲ್ಲಿ [illegible] ಚಿಕಿತ್ಸೆ [illegible] ಸಂಶೋಧನೆಯಿಂದ ರೋಗಿಗಳಿಗೆ [illegible] ಚಿಕಿತ್ಸೆಯನ್ನು ಮೆಚ್ಚಿದ್ದಾರೆ

[illegible] ಯೌವನ [illegible] ಮತ್ತು [illegible]

[illegible] ಸಂಜೆ 8 ಘಂಟೆಯಿಂದ ಮಧ್ಯಾಹ್ನ 9 ಘಂಟೆವರೆಗೆ ಮತ್ತು ಮಧ್ಯಾಹ್ನ 4ರಿಂದ ರಾತ್ರಿ 9 ಘಂಟೆ ವರೆಗೆ

ರಾಜಾ ಮೆಡಿಕಲ್ ಹಾಲ್,

[illegible] ಮೈಸೂರು

(ಮೈಸೂರು ಬ್ಯಾಂಕ್ [illegible] 3ನೇ ಕಟ್ಟಡ)

ಅಬೇಡ್ಕರವರ ಹರಾಜು ಮಾರಾಟವನ್ನು

ನೆನಪಿನಲ್ಲಿಡಿ

ತಾ॥ 5 8 56ನೇ ಭಾನುವಾರ ಬೆಳಿಗ್ಗೆ 10 ಘಂಟೆಗೆ [illegible]

[illegible]

ಫೋನ್ ನಂ 4 [illegible] ಮೈಸೂರು

[illegible] ಕನ್ನಡ [illegible]

[illegible] ಆನಂದಕರವಾಗಿದೆ!

[illegible] ಕನ್ನಡ ಚಿತ್ರ

ಮುತ್ತೈದೆ ಭಾಗ್ಯ

[illegible] ಕಲ್ಯಾಣಕುಮಾರ್ [illegible] ಮತ್ತು [illegible]

ಮೈಸೂರು ಉಮಾ ಟಾಕೀಸ್‌ನಲ್ಲಿ

ಆಗಸ್ಟ್ 3ರಿಂದ ಮುಂದುವರಿದ ಮಹೋನ್ನತ 9ನೇ ವಾರದಲ್ಲಿ

ಜನತೆಯನ್ನು ತನ್ಮಯಗೊಳಿಸುತ್ತಿದೆ

Vijaya Talkie Distributors Bangalore-9

ಲಕ್ಷ್ಮಿ ಚಿತ್ರ ★

3-8-56 ರಿಂದ ಅನೇಕ ಪ್ರಾರಂಭ ದಿನವಹಿ 3 ಆಟಗಳು

ವಿಧಿಯ ಆಟದ ಮುಂದೆ ಮಾನವನ ಆಟ ಮಕ್ಕಳ ಆಟ ಎಂಬ ತತ್ವವನ್ನು ಸಾರುವ [illegible] ತಮಿಳು ಚಿತ್ರ

★ ಕುಟುಂಬ ವಿಳಕ್ಕು ★

ಪಾತ್ರ: ಎಂ ವಿ ರಾಜಮ್ಮ, ಜಮುನ, [illegible] ತಂಗವೇಲು, ದೊರೈರಾಜ್, ಎಂ ಜಿ ಚಕ್ರಪಾಣಿ ಎ ಎಸ್ ಕೃಷ್ಣ ಟಿ ಎ ಮಧುರಂ ಮುಂತಾದವರು

ನೃತ್ಯ ಕುಚಲಕುಮಾರಿ, [illegible] ಮುಂತಾದವರು

ಪ್ರಭುದೇವಾ ಥಿಯೇಟರ್

(ಸದ್ಯಾ ಟಾಕೀಸ್)

3—8 56ನೇ ಶುಕ್ರವಾರದಿಂದ ಅನೇಕ 3ನೇ ವಾರ

ಪ್ರತಿದಿನ ಮೂರು ಪ್ರದರ್ಶನಗಳು

ಜೂಪಿಟರ್‌ರವರ ತೆಲುಗು ಚಿತ್ರ

★ ಉಮಾಸುಂದರಿ ★

ಪ್ರಭಾ ★

ಇಂದಿನಿಂದ [illegible] ಪ್ರಾರಂಭ ದಿನವಹಿ 3 ಆಟಗಳು

2 ವಾರಗಳು [illegible] ಜಯಭೇರಿಯನ್ನು ಹೊಡೆದು ಪುನಃ ಮಹಾಜನರ ಕೋರಿಕೆ ಮೇರೆ ಪ್ರದರ್ಶಿಸಲ್ಪಡುವ,

ಫಿಲ್ಮಿಸ್ತಾನರವರ ಗೇವಾ ಕಲರ್ ನೃತ್ಯಗಳಿಂದ ಕೂಡಿದ ಹಿಂದಿ ಚಿತ್ರ

ವೈಜಯಂತಿಮಾಲಾ ಪ್ರದೀಪ್ ಕುಮಾರ್ ಮುಬಾರಕ್, ಜೀವನ್ [illegible] ಪಾತ್ರ ವಹಿಸಿರುವ

(ಪ್ಲಾಸ್ಟಿಕ್ ರಜತ ಪರದೆ ಮೇಲೆ ನೋಡಿ ಆನಂದಿಸಿ)

★ ನಾಗಿನ್

(ಹೊಸ ಕಾಪಿ)

ಸಂಗೀತ ಹೇಮಂತಕುಮಾರ್ ದಿಗ್ದರ್ಶನ ನಂದಲಾಲ್ ಜಸವಂತಲಾಲ್

[illegible] ಪ್ರದರ್ಶನ 3-8-56 ರಿಂದ 3 ದಿನಗಳು

[illegible]

ಚಾಮುಂಡೇಶ್ವರಿ ಟಾಕೀಸ್ ★

3 8—56 ರಿಂದ ಅನೇಕ ಪ್ರಾರಂಭ ದಿನವಹಿ 3 ಪ್ರದರ್ಶನಗಳು

ಚಲನಚಿತ್ರ ಪ್ರಪಂಚದಲ್ಲಿ ನೂತನ ಕ್ರಾಂತಿಯನ್ನುಂಟುಮಾಡುವ ಜ್ಯುಬಿಲಿ ಫಿಲಂಸ್‌ರವರ ತಮಿಳು ಚಿತ್ರ

ವೈಜಯಂತಿಮಾಲಾ [illegible] ಎಂ ಎ ರಾಜಮ್ಮ [illegible] ತಂಗವೇಲು [illegible]

ನಿರ್ದೇಶನ ಟಿ ಆರ್ ರಘುನಾಥ್

★ ಮರ್ಮವೀರನ್ ★

(An Emerald Release)

ಮೊದಲನೇ ಮೂರು ವಾರಗಳು ಎಲ್ಲಾ ಪಾಸುಗಳು [illegible] ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ

ರಿಜಿಸ್ಟರ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪ್ರತಿಗೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರವಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : SATURDAY 4-9-1956 ಮೈಸೂರು : ಶನಿವಾರ ೪-೯-೧೯೫೬ [ಸಂಚಿಕೆ : ೪

ಮೈಸೂರು ರಾಜಕೀಯ ಬಿಕ್ಕಟ್ಟಿನ ಬಗ್ಗೆ ನೆಹ್ರೂ ರವರ ಪತ್ರ

ಸೂಯೆಜ್ ಬಿಕ್ಕಟ್ಟಿನ ಬಗ್ಗೆ ಫ್ರೆಂಚರ ಮಿಲಿಟರಿ ಕ್ರಮ

ಸೂಯೆಜ್ ಕಾಲುವೆ ಬಗ್ಗೆ ೨೨ ರಾಷ್ಟ್ರಗಳ ಸಮ್ಮೇಳನವು ವಿಫಲಗೊಂಡರೆ ಈಜಿಪ್ಟಿನಲ್ಲಿ ಮಿಲಿಟರಿ, ನೌಕಾ ಮತ್ತು ವಿಮಾನ ಬಲಗಳ ಸಹಾಯದಿಂದ ಕ್ರಮ ಕೈಗೊಳ್ಳುವುದರ ಬಗ್ಗೆ ನೆನ್ನೆ ಫ್ರಾನ್ಸಿನ ಮಂತ್ರಿಮಂಡಲವು ಪರಿಶೀಲನೆ ನಡೆಸಿತೆಂದು ವರದಿಯಾಗಿದೆ. ಟೂಲಾನಿನಲ್ಲಿರುವ ಫ್ರೆಂಚ್ ನೌಕಾ ಪಡೆಗಳ ರಜಾವನ್ನು ರದ್ದು ಪಡಿಸಲಾಗಿದೆ. ನೌಕಾ ಪಡೆಯು ತುರ್ತು ಪ್ರಯಾಣಕ್ಕೆ ಸಿದ್ಧವಾಗುತ್ತಿದೆ. ಯುದ್ಧ ನೌಕೆಗಳಲ್ಲಿ ಮದ್ದು ಗುಂಡುಗಳನ್ನೂ, ವಿಶೇಷ ರೀತಿಯ ಆಹಾರ ವಸ್ತುಗಳನ್ನೂ ಶೇಖರಿಸಲಾಗುತ್ತಿದೆ. ವಿಮಾನ ವಾಹಕ ನೌಕೆಯೊಂದು ಯುದ್ಧ ಕ್ರಮದ ಪ್ರದರ್ಶನ ನಡೆಸಿ ರೇವಿಗೆ ಹಿಂದಿರುಗಿತು.

ಬ್ರಿಟನ್ನಿನ ವ್ಯಾಪಾರಿ ಹಡಗುಗಳಲ್ಲಿ ಭೂ ಸೈನ್ಯ, ವಿಮಾನ ಮತ್ತು ನೌಕಾ ಪಡೆಗಳನ್ನು ತುಂಬಿ ಕಳುಹಲು ಅವನ್ನು ವಶಪಡಿಸಿಕೊಳ್ಳಲಾಗಿದೆ. ಭೂ ಮಧ್ಯ ಸಮುದ್ರಕ್ಕೆ ಬ್ರಿಟಿಷ್ ನೌಕೆಗಳನ್ನು ಕಳುಹಲು ಬೇಕಾದ ಕ್ರಮವನ್ನು ಕೈಗೊಳ್ಳಲಾಗಿದೆ. ಹಲವು ದಿನಗಳಲ್ಲಿ ೩ ಬ್ರಿಟಿಷ್ ವಿಮಾನ ವಾಹಕ ನೌಕೆಗಳು ಜೊತೆಗೂಡಿ ಜೆಟ್ ವಿಮಾನಗಳು ಹೊರಟಿವೆ.

ಸೆಪ್ಟೆಂಬರ್ ೩ ರಿಂದ ಸೆಷನ್ಸಿನಲ್ಲಿ ವೇಲೂರರ ಕೊಲೆ ಮೊಕದ್ದಮೆ

ಬೆಂಗಳೂರು ೪

ವೇಲೂರು ಶ್ರೀನಿವಾಸಯ್ಯಂಗಾರ್ಯರು ಮತ್ತು ಕುಟುಂಬ ವರ್ಗದವರ ಕೊಲೆ ಮೊಕದ್ದಮೆಯು ಸೆಷನ್ಸಿನಲ್ಲಿ ಬರುವ ತಿಂಗಳು ೩ ರಿಂದ ಇಲ್ಲಿನ ಮುಖ್ಯ ಸೆಷನ್ಸ್ ನ್ಯಾಯಾಧೀಶರ ಕೋರ್ಟಿನಲ್ಲಿ ನಡೆಯುವುದು. ಸೆಷನ್ಸ್ ನ್ಯಾಯಾಧೀಶರು ಹೈಕೋರ್ಟಿಗೆ ಈ ಸಂಬಂಧವಾಗಿ ಒಂದು ಅರ್ಜಿ ಪತ್ರ ಬರೆದು ಮೊಕದ್ದಮೆಯು ಮುಗಿಯಲು ನಿರಂತರವಾಗಿ ೧ ತಿಂಗಳ ಕಾಲ ಹಿಡಿಯುವುದೆಂದು ತಿಳಿಸಿ, ಏಕರೀತಿಯಾಗಿ ಸಾಕ್ಷ್ಯಗಳಿರುವುದು, ಜೂರಿಗಳಲ್ಲದೆ ವಿಚಾರಿಸಬೇಕಾದ ಹಲವು ಚಾರ್ಜುಗಳಿರುವುದು ಮತ್ತು ಆಪಾದಿತರು ತಮ್ಮ ಪರ ಸಾಕ್ಷಿ ಪಟ್ಟಿಯನ್ನು ಒದಗಿಸಲು ಕಾಲಾವಕಾಶ ಬೇಕಿರುವುದು ಈ ಕಾರಣಗಳಿಂದ ಜೂರರುಗಳಿಲ್ಲದೆ ವಿಚಾರಣೆ ನಡೆಸಲು ಅನುಮತಿ ಕೋರಿರುತ್ತಾರೆ.

ವಿಮಾನ ಕಾರ್ಖಾನೆಯಲ್ಲಿ ರೈಲು ಗಾಡಿಗಳ ತಯಾರಿಕೆ

ಬೆಂಗಳೂರು ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಸಮಗ್ರ ರೈಲು ಗಾಡಿಯ ತಯಾರಿಕೆ ಬಗ್ಗೆ ಪಶ್ಚಿಮ ಜರ್ಮನಿಯ ಸಂಸ್ಥೆಯೊಂದಿಗೆ ಒಡನೆ ಸಂಧಾನ ನಡೆಯುತ್ತಿರುವುದೆಂದೂ, ಕಾರ್ಖಾನೆಯಲ್ಲಿ ಹೊಸ ಯಂತ್ರದ ಕೆಲಸವು ಪ್ರಾರಂಭವಾದರೆ ತಿಂಗಳಿಗೆ ೨೫ ಗಾಡಿಗಳನ್ನು ತಯಾರಿಸಬಹುದೆಂದೂ, ಈಗ ೧೫ ಗಾಡಿಗಳು ತಯಾರಾಗುತ್ತಿರುವುವೆಂದೂ ಗೊತ್ತಾಗಿದೆ. ಹೆಲಿಕಾಪ್ಟರ್ ವಿಮಾನಗಳ ಓವರ್‌ಹಾಲಿಂಗ್ ಕೆಲಸವೂ ಅಲ್ಲಿ ಆರಂಭವಾಗುವುದು.

ಶಾಸನಸಭಾ ಕಾಂಗ್ರೆಸ್ ಪಕ್ಷದ ಪರಿಶೀಲನೆಗೆ ನೆಹರೂ ಪತ್ರ

ಬೆಂಗಳೂರು ೫

ಇದೇ ತಿಂಗಳು ೧೩ನೇ ತಾರೀಖು ಸೇರುವ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ, ಪ್ರಧಾನಿ ನೆಹರೂರವರು ಬರೆದಿರುವ ಪತ್ರವೊಂದನ್ನು ಮೊಟ್ಟಮೊದಲು ಪರಿಶೀಲಿಸಲಾಗುವುದೆಂದು ಗೊತ್ತಾಗಿದೆ. ಪಕ್ಷದ ನಾಯಕರ ಚುನಾವಣೆಯ ಬೈಠಕಿನಲ್ಲಿ ಸದಸ್ಯರಿಗೆ ಸಭಾ ಕಾರ್ಯದರ್ಶಿಯು ನೋಟೀಸನ್ನು ಕೊಡಲಾಗಿದೆ. ಅದರಲ್ಲಿ ನೆಹರು ಮತ್ತು ಕಾಂಗ್ರೆಸ್ ಅಧ್ಯಕ್ಷ ಧೇಬರ್‌ರವರ ಪತ್ರಗಳನ್ನು ಪರಿಶೀಲಿಸಲಾಗುವುದು. ಕಾಂಗ್ರೆಸ್ ಅಧ್ಯಕ್ಷರ ಪತ್ರದ ಜತೆ ಅವಿಶ್ವಾಸ ನಿರ್ಣಯ ಬಗ್ಗೆ ನಂಬ ಪಟ್ಟ ಪ್ರಾಂತ್ಯ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ನಿರ್ಣಯ ಮತ್ತು ಮುಖ್ಯ ಮಂತ್ರಿಯವರ ರಾಜೀನಾಮೆಯ ಪತ್ರಗಳ ಪರಿಶೀಲನೆಯೂ ಆಗಲಿದೆ.

ಈ ಸಮಯದಲ್ಲಿ ನಾಯಕರ ಬದಲಾವಣೆಯು ಬೇಡವೆಂಬುದು ತಮ್ಮ ವೈಯಕ್ತಿಕ ಭಾವನೆಯೆಂದು ನೆಹರೂರವರು ತಮ್ಮ ಪತ್ರದಲ್ಲಿ ಸೂಚಿಸಿ, ಶಾಸನಸಭಾ ಕಾಂಗ್ರೆಸ್ ಪಕ್ಷದ ಬಹುಮಂದಿಯು ಬದಲಾವಣೆಯನ್ನು ಅಪೇಕ್ಷಿಸುವ ಕಾರಣ, ಪ್ರಜಾಪ್ರಭುತ್ವ ತತ್ವಗಳಿಗೆ ಅನುಸಾರವಾಗಿ ನಡೆಯಬಹುದೆಂದು ತಿಳಿಸಿರುವುದಾಗಿ ವರದಿಯಾಗಿದೆ.

೭ನೇ ತಾ|| ಸ್ಕೂಲ್ ಫೈನಲ್, ಎಂ. ಎ. ಪರೀಕ್ಷಾ ಫಲಿತಾಂಶದ ಪ್ರಕಟಣೆ

ಎಸ್. ಎಸ್. ಎಲ್. ಸಿ., ಎಂ. ಎ., ಎಂ. ಎಸ್‌ಸಿ., ಬಿ. ಇಡಿ., ಇಂಜಿನಿಯರಿಂಗ್‌ನಲ್ಲಿ ಪೋಸ್ಟ್ ಗ್ರಾಜುಯೇಟ್ ಡಿಪ್ಲೊಮಾ ಪರೀಕ್ಷೆಗಳ ಫಲಿತಾಂಶಗಳು ಬರುವ ೭ನೇ ತಾರೀಖು ಮಂಗಳವಾರ ಬೆಳಗ್ಗೆ ೮ ಗಂಟೆಗೆ ಪ್ರಕಟವಾಗಲಿವೆ.

ಬೊಂಬಾಯಿ ಬಳಿ ಮಳೆಯ ಹಾವಳಿ

ಬೊಂಬಾಯಿ ಸುತ್ತಮುತ್ತಲೂ ವಿಶೇಷ ಮಳೆಯಾಗಿ ೩೦ ಮೈಲಿ ದೂರವಿರುವ ಕಲ್ಯಾಣ್ ನಗರದ ಜನರನ್ನು ಸುರಕ್ಷಿತ ಪ್ರದೇಶಕ್ಕೆ ದೋಣಿಗಳಲ್ಲಿ ಸಾಗಿಸಲಾಗುತ್ತಿದೆ. ೧೫ ವರ್ಷಗಳಿಂದಲೂ ಇಲ್ಲದಿದ್ದ ಪ್ರವಾಹ ಬಂದು, ಲಕ್ಷ ಪ್ರಜೆಗಳಿರುವ ಆ ಊರಿನಲ್ಲಿ ೬ ಅಡಿ ನೀರು ನಿಂತಿದೆ. ಜನರು ಮನೆಗಳ ಮೇಲ್ಛಾವಣಿಯನ್ನು ಹತ್ತಿ ಕುಳಿತಿರುತ್ತಾರೆ. ಮತ್ತೊಂದು ಕಡೆ ನದಿ ದಡದಲ್ಲಿರುವ ಒಂದು ಮನೆಯ ಮೇಲೆ ೨೨ ಮಂದಿ ಕುಳಿತಿದ್ದರು. ಅವರನ್ನು ಮಿಲಿಟರಿ ಅಧಿಕಾರಿಗಳು ರಕ್ಷಿಸಿದರು.

ವಿದ್ಯಾರ್ಥಿ ಸಂಘದ ಆರಂಭ ಭಾಷಣ

ತ್ಯಾಗರಾಜ ರಸ್ತೆಯಲ್ಲಿರುವ ಮುನಿಸಿಪಲ್ ಹೈಸ್ಕೂಲ್ ನರಸಿಂಹಸ್ವಾಮಿ ಸಿದ್ಧಪ್ಪನವರ ವೀರಶೈವ ವಿದ್ಯಾರ್ಥಿ ನಿಲಯದ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ ೬ ಗಂಟೆಗೆ ಶ್ರೀ ಎಸ್. ವಿ. ಪರಮೇಶ್ವರ ಭಟ್ಟರು ಮಾಡುವರು. ಉಪಾಧ್ಯಾಯರ ಕಾಲೇಜಿನ ಶ್ರೀ ಎಸ್. ಎಸ್. ವೀರಪ್ಪನವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಬೃಹದ್ ಬೊಂಬಾಯಿಗಾಗಿ ನೆಹ್ರೂರಿಗೆ ಎಂ.ಪಿ.ಗಳ ಮನವಿ

ದ್ವಿಭಾಷಾ ಸಂಸ್ಥಾನದ ರಚನೆಗಾಗಿ ನೆಹರೂರವರ ಬೆಂಬಲವನ್ನು ಕೋರಿ ೧೮೦ ಲೋಕಸಭೆಯ ೧೮೦ ಜನರು ಪ್ರಾರ್ಥನಾ ಪತ್ರಕ್ಕೆ ರುಜು ಮಾಡಿದ್ದಾರೆ. ಅದರಲ್ಲಿ ಕಮ್ಯೂನಿಸ್ಟರ ಹೊರತು ಮಿಕ್ಕ ಎಲ್ಲ ಪಕ್ಷದವರೂ ಇರುವರು. ರಾಷ್ಟ್ರೀಯ ಐಕ್ಯತೆ ಮತ್ತು ಆರ್ಥಿಕ ಪ್ರಗತಿ ಕಡೆಗೆ ದೇಶವು ಮುಂದುವರಿಯಲು ದ್ವಿಭಾಷಾ ಬೊಂಬಾಯಿ ಸಂಸ್ಥಾನದ ರಚನೆಯು ಅಗತ್ಯವೆಂದು ತಿಳಿಸಲಾಗಿದೆ. ಮೊನ್ನೆ ಲೋಕಸಭೆಯಲ್ಲಿ ಅನೇಕ ಸದಸ್ಯರು ಭಾಷಣ ಮಾಡಿ, ಮಹಾರಾಷ್ಟ್ರ ಮತ್ತು ಗುಜರಾತ್ ಗಳ ಜೊತೆ ಸಂಸ್ಥಾನದ ರಚನೆಗೆ ಒತ್ತಾಯ ಪಡಿಸಿದರು.

ದಾವಣಗೆರೆಯಲ್ಲಿ ಬೆಂಕಿಯಿಂದ ಇಬ್ಬರ ಮರಣ

ದಾವಣಗೆರೆಯಲ್ಲಿ ಬಾಣಬಿರುಸುಗಳನ್ನು ತಯಾರಿಸುತ್ತಿದ್ದ ಮನೆಯೊಂದರಲ್ಲಿ ಬೆಂಕಿ ಆಕಸ್ಮಿಕವು ನಡೆದು ೭ ಜನರ ಕುಟುಂಬದ ಪೈಕಿ ಇಬ್ಬರು ಮೃತಪಟ್ಟಿರುತ್ತಾರೆ.

ತಾಲ್ಲೂಕು ಎನ್. ಜಿ. ಓ. ಗಳ ಸಭೆ

ಮೈಸೂರು ತಾಲ್ಲೂಕು ನಾನ್ ಗೆಜೆಟೆಡ್ ನೌಕರರುಗಳು ಕಳೆದ ವಾರದಂದು ಶಿರಸ್ತೇದಾರ್ ಶ್ರೀ ಎಂ. ವಿ. ಭಟ್ಟಾಚಾರ್‌ರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ತಮ್ಮದೇ ಆದ ಸಂಘವನ್ನು ಸ್ಥಾಪಿಸಿದರು. ಅಧಿಕಾರ ವರ್ಗಕ್ಕೆ ಚುನಾವಣೆ ನಡೆದು, ಶ್ರೀಗಳಾದ ಎಂ. ವಿ. ಭಟ್ಟಾಚಾರ್‌ರವರನ್ನು ಅಧ್ಯಕ್ಷರನ್ನಾಗಿಯೂ, ಡಿ. ಎನ್. ನರಸಿಂಹಮೂರ್ತಿಯವರನ್ನು ಉಪಾಧ್ಯಕ್ಷರನ್ನಾಗಿಯೂ, ಎಂ. ಆರ್. ಅಟ್ಟಿರಂಗಯ್ಯನವರನ್ನು ಕಾರ್ಯದರ್ಶಿಯಾಗಿಯೂ, ಡಿ. ಗಿರಿತಿಮ್ಮಯ್ಯನವರನ್ನು ಜಂಟಿ ಕಾರ್ಯದರ್ಶಿಯಾಗಿಯೂ ಮತ್ತು ಟಿ. ಕೆ. ನರಸಿಂಹ ಅಯ್ಯಂಗಾರ್‌ರವರನ್ನು ಖಜಾಂಚಿಯಾಗಿಯೂ ಸರ್ವಾನುಮತದಿಂದ ಆರಿಸಲಾಯಿತು. ನಾಳೆ ಬೆಂಗಳೂರಿನಲ್ಲಿ ನಡೆಯುವ ಅಖಿಲ ಮೈಸೂರು ಎನ್. ಜಿ. ಓ. ಗಳ ಸಮ್ಮೇಳನಕ್ಕೆ ಸಂಘದ ಪರವಾಗಿ ಶ್ರೀಗಳಾದ ಡಿ. ಎನ್. ನರಸಿಂಹಮೂರ್ತಿ ಮತ್ತು ಎಂ. ಆರ್. ಅಟ್ಟಿರಂಗಯ್ಯನವರನ್ನು ಪ್ರತಿನಿಧಿಗಳನ್ನಾಗಿ ಕಳುಹಿಸಬೇಕೆಂದು ತೀರ್ಮಾನಿಸಲಾಯಿತು.

ವಿದ್ಯಾರಣ್ಯಪುರಂ ನಿವಾಸಿಗಳ ಕುಂದುಕೊರತೆ

ವಿದ್ಯಾರಣ್ಯಪುರಂ ನಿವಾಸಿಗಳ ಕುಂದುಕೊರತೆಗಳನ್ನು ಚರ್ಚಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳುವುದಕ್ಕಾಗಿ "ಅಪೋಲೊ ಜಿಮ್ನಾಷಿಯಂ" ಆವರಣದಲ್ಲಿ ಸಭೆಯೊಂದನ್ನು ನಾಳೆ ಬೆಳಗ್ಗೆ ಕರೆಯಲಾಗಿದೆ. ಪುರಸಭಾ ಸದಸ್ಯರಾದ ಶ್ರೀ ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸುವರು. ಮೊಹಲ್ಲಾ ನಿವಾಸಿಗಳು ದಯಮಾಡಿಸಬೇಕಾಗಿ ಕೋರಲಾಗಿದೆ.

○ ಭಾರತದಲ್ಲಿ ಜರ್ಮನ್ ಬಂಡವಾಳವನ್ನು ರಾಷ್ಟ್ರೀಕರಿಸುವುದರಿಂದ ಜರ್ಮನ್ ಸರ್ಕಾರಕ್ಕೆ ಕೊಡಬೇಕಾಗುವ ಪರಿಹಾರ ದ್ರವ್ಯವು ೨೫ ಲಕ್ಷ ರೂ. ಆಗುವುದೆಂದು ಗೊತ್ತಾಗಿದೆ.

ವೇಲೂರರ ಕೊಲೆ ಆಪಾದಿತರ ರಿವಿಜನ್ ಅರ್ಜಿಗೆ ಅವಕಾಶ

ಬೆಂಗಳೂರು ೪

ಹೈಕೋರ್ಟಿನಲ್ಲಿ ಶ್ರೀಗಳಾದ ಪದ್ಮನಾಭಯ್ಯ ಮತ್ತು ಕೆ. ತಿಮ್ಮೇಗೌಡರ ಸಮ್ಮುಖದಲ್ಲಿ ವೇಲೂರು ಶ್ರೀನಿವಾಸಯ್ಯಂಗಾರ್ಯರ ಕೊಲೆ ಪ್ರಕರಣದ ಮೊಕದ್ದಮೆ ಆಪಾದಿತರಾದ ಕೃಷ್ಣ ಮತ್ತು ಮುನಿಸ್ವಾಮಿಯವರ ಪರವಾಗಿ ಸಲ್ಲಿಸಲಾದ ರಿವಿಜನ್ ಅರ್ಜಿಯ ಪರಿಶೀಲನೆಯು ನೆನ್ನೆ ನಡೆಯಿತು. ಅದನ್ನು ನ್ಯಾಯಾಧೀಶರು ಅಡ್ಮಿಟ್ ಮಾಡಿಕೊಂಡರು.

ಆಪಾದಿತರ ಪರ ವಕೀಲರಾದ ಶ್ರೀ ಎಂ. ಸಿ. ಗುರುರಾಜರವರು ವಾದಿಸಿ, ಕೆಳಗಿನ ಕೋರ್ಟಿನವರು ರೆಕಾರ್ಡುಗಳನ್ನು ಮಾತ್ರ ನೋಡಿ ಸೆಷನ್ಸ್ ವಿಚಾರಣೆಗೆ ಒಪ್ಪಿಸಿರುವುದು ಸರಿಯಲ್ಲವೆಂದು ತಿಳಿಸಿದರು. ನೇರ ಸಾಕ್ಷ್ಯವಿಲ್ಲದೆ ನ್ಯಾಯಾಧೀಶರು ಯಾವ ಸಾಕ್ಷಿಯನ್ನೂ ವಿಚಾರಿಸಲಿಲ್ಲವೆಂದೂ ಅವರು ನುಡಿದರು.

ಅಡ್ವೊಕೇಟ್ ಜನರಲ್ಲರು ಮಾತನಾಡಿ, ಸಾಕ್ಷ್ಯಗಳಿಲ್ಲದೆ, ಆಪಾದಿತರನ್ನೂ ನ್ಯಾಯಾಧೀಶರು ವಿಚಾರಿಸಿಲ್ಲವೆಂಬುದನ್ನು ಕೋರ್ಟಿನ ಗಮನಕ್ಕೆ ತಂದರು. ಅರ್ಜಿಯಲ್ಲಿ ಕೆಳ ಕೋರ್ಟಿನ ನಡವಳಿಕೆ ಕ್ರಮವನ್ನು ರದ್ದುಗೊಳಿಸುವಂತೆ ಕೋರಲಾಗಿತ್ತು.

ಮುಂದಿನ ನಡವಳಿಕೆಯನ್ನು ನಿಲ್ಲಿಸುವಂತೆ ಕೋರಿದ್ದ ಮತ್ತೊಂದು ಅರ್ಜಿಯನ್ನು ಎಂ. ಸಿ. ಗುರುರಾಜರವರು ಒತ್ತಾಯಪಡಿಸಲಿಲ್ಲ.

೧೦ನೇ ತಾ|| ವಿಧಾನ ಸೌಧದ ಆರಂಭವಿಲ್ಲ

ವಿಧಾನ ಸೌಧದ ಶಾಸನಸಭಾ ಸದನದ ಆರಂಭೋತ್ಸವವು ಇದೇ ೧೦ನೇ ತಾರೀಖು ನಡೆಯುವುದೆಂದು ಬಂದಿದ್ದ ಸುದ್ದಿಯು ಸರಿಯಲ್ಲವೆಂದು ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ತಿಳಿಸಿರುತ್ತಾರೆ.

ಸೂಯೆಜ್ ಮೇಲೆ ಅಂತರರಾಷ್ಟ್ರ ಹತೋಟಿಗೆ ಈಜಿಪ್ಟ್ ತಿರಸ್ಕಾರ

ಸೂಯೆಜ್ ಕಾಲುವೆ ಮೇಲೆ ಅಂತರರಾಷ್ಟ್ರೀಯ ಹತೋಟಿ ಹೊಂದುವ ಸೂಚನೆಯನ್ನು ಈಜಿಪ್ಟಿನ ಅಧಿಕಾರಿಗಳು ತಿರಸ್ಕರಿಸಿರುವುದಾಗಿ ಗೊತ್ತಾಗಿದೆ.

ಹೋಟೆಲು ಮಾಲೀಕರಿಗೆ ದಂಡ

ರಾಜಧಾನಿಯ ಜಗನ್ಮೋಹನ ಭವನದ ರಸ್ತೆಯಲ್ಲಿರುವ ವೆಂಕಟೇಶ ಲಾಡ್ಜ್ ಹೋಟೆಲಿನ ಮಾಲೀಕರಾದ ಶ್ರೀ ಪಿ. ಕೆ. ಸೀತಾರಾಮಯ್ಯರವರು ಅಂಗಡಿ ಸಿಬ್ಬಂದಿ ಕಾನೂನು ಪ್ರಕಾರ ನೌಕರರ ವೇಳಾ ಪಟ್ಟಿ ಇಡದೆ ಮತ್ತು ವಾರದ ರಜಾ ಕೊಡದೆ ಇರುವುದಕ್ಕಾಗಿಯೂ ದಿನಕ್ಕೆ ೮ ಗಂಟೆಗಳಿಗಿಂತ ಹೆಚ್ಚಾಗಿ ಕೆಲಸ ತೆಗೆದುಕೊಂಡದ್ದಕ್ಕಾಗಿಯೂ ಹೂಡಲಾಗಿದ್ದ ಮೊಕದ್ದಮೆಯಲ್ಲಿ ದ್ವಿತೀಯ ನಗರ ನ್ಯಾಯಾಧೀಶರು ಹೋಟೆಲು ಮಾಲೀಕರಿಗೆ ಎರಡು ಆಪಾದನೆಗಳಿಗಾಗಿ ಒಟ್ಟು ೩೦ ರೂ. ದಂಡವನ್ನು ವಿಧಿಸಿದ್ದಾರೆ.

○ ಗೋವಾದ ಪಾತೆ ... ಲ್ಲಿ ... ದಿನ ... ದವರಲ್ಲಿ ಪಾಚಳಿ ... ಸಿಕ್ಕ ... ಶರು ಗುಂಡಿನಿಂದ ಹೊಡೆದು ಕೊಲ್ಲಲಾಗಿದೆ ...

ವಯಸ್ಕರ ಶಿಕ್ಷಣ ತರಗತಿಗಳು ಮತ್ತು ಜನತಾ ಶಿಕ್ಷಣ ಕೇಂದ್ರದ ಆ ರಂ ಭೋ ತ್ಸ ವ

ಮೈಸೂರು ೪

ಮೈಸೂರು ಶೈಲ್ಪೆ ವರ್ಕ್ ಶಾಪಿನ ಅನಕ್ಷರಸ್ಥ ಕಾರ್ಮಿಕರಿಗಾಗಿ ಎರಡು ತರಗತಿಗಳನ್ನು ಕಳೆದ ಮಂಗಳವಾರ ಆರಂಭಿಸಲಾಯಿತು. ವರ್ಕ್ ಷಾಪಿನ ಜನರಲ್ ಮ್ಯಾನೇಜರ್‌ರವರು ಅಧ್ಯಕ್ಷತೆ ವಹಿಸಿದ್ದರು. ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿಯ ಪ್ರಧಾನಾಧಿಕಾರಿಗಳಾದ ಶ್ರೀ ಎಲ್. ತಿಮ್ಮಯ್ಯನವರು ಆರಂಭ ಭಾಷಣ ಮಾಡಿ ವಯಸ್ಕರಿಗೆ ಕೆಲವು ಹಿತ ವಚನಗಳನ್ನು ನುಡಿದರು.

ಅದೇ ಸಂಜೆ ಮೈಸೂರು ಅಕ್ಕನ ಬಳಗದಲ್ಲಿ ಜನತಾ ಶಿಕ್ಷಣ ಕೇಂದ್ರವನ್ನು ಶ್ರೀಮತಿ ವೆಂಕಮ್ಮ ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಆರಂಭಿಸಲಾಯಿತು. ಶ್ರೀಮತಿ ನಾಗೂಬಾಯಿಯವರು ಅತಿಥಿಗಳನ್ನು ಸ್ವಾಗತಿಸಿದರು. ಪ್ರಾಂತಾಧಿಕಾರಿಗಳಾದ ಶ್ರೀ ಟಿ ಆರ್. ನಾಗಪ್ಪನವರು ಜನತಾ ಶಿಕ್ಷಣ ಕೇಂದ್ರದ ಉದ್ದೇಶ್ಯಗಳನ್ನು ಸಭಿಕರಿಗೆ ತಿಳಿಸಿದರು. ಶ್ರೀಮತಿ ಸುಂದರಮ್ಮ ಸುಬ್ಬರಾವ್‌ರವರು ಸೂಕ್ತ ತಿಳುವಳಿಕೆಯನ್ನು ಕೊಟ್ಟರು. ಶ್ರೀಮತಿ ರಾಜಮ್ಮನವರು ಗುರುಸ್ವಾಮಿಯವರು ಶಿಕ್ಷಣ ಕೇಂದ್ರದ ಆರಂಭ ಮಾಡಿ, ಮಹಿಳೆಯರ ಏಳಿಗೆಗಾಗಿ ಪಂಚವಾರ್ಷಿಕ ಯೋಜನೆಯಲ್ಲಿ ಕೈಗೊಂಡಿರುವ ಕೆಲಸಗಳನ್ನು ತಿಳಿಸಿ, ಶಿಕ್ಷಣ ಸಮಿತಿಯ ಕೆಲಸಕಾರ್ಯಗಳನ್ನು ಪ್ರಶಂಸಿಸಿದರು.

ಅಕ್ಕನಬಳಗದ ವಿದ್ಯಾರ್ಥಿನಿಯರಿಂದ ಗೀತೆಗಳು, ವಚನಗಳು ನಡೆದುವು. ಶ್ರೀ ಮತಿ ಆರ್ ಎಸ್ ಶಾಂತಮ್ಮನವರಿಂದ ವೀಣಾವಾದನ ಮತ್ತು ಶ್ರೀಮತಿ ಪಾರ್ವತಿಯವರಿಂದ ಭಾರತನಾಟ್ಯವೂ ಏರ್ಪಟ್ಟಿದ್ದುವು. ಸಂಸ್ಥಾನ ವಯಸ್ಕರ ಶಿಕ್ಷಣ ಸಮಿತಿಯವರಿಂದ ಚಲನಚಿತ್ರ ಪ್ರದರ್ಶನವೂ ನಡೆಯಿತು

ಲಲಿತಾದ್ರಿಪುರದಲ್ಲಿ ಶಾಲಾ ಕ್ಯಾಂಟೀನಿನ ಆರಂಭ

ಮೈಸೂರು ತಾಲ್ಲೂಕು ಲಲಿತಾದ್ರಿಪುರದ ಶಾಲೆಯಲ್ಲಿ ಅಭಾವ ಪರಿಹಾರ ಸಂಬಂಧವಾದ ಕ್ಯಾಂಟೀನು ಕಳೆದ ಬುಧವಾರದಿಂದ ಆರಂಭವಾಗಿದೆ. ಶಾಲಾ ಉಪಾಧ್ಯಾಯರೂ, ಪತ್ರಮಪಟೇಲರೂ ಶ್ರದ್ಧೆ ವಹಿಸಿ ಇದನ್ನು ನಡೆಸುತ್ತಿರುವರು. ಬಾಲಕಬಾಲಿಕೆಯರು ತಂಡೋಪತಂಡವಾಗಿ ಬಂದು ಆಹಾರವನ್ನು ಸ್ವೀಕರಿಸುತ್ತಿರುವರು. ಗ್ರಾಮಗಳಲ್ಲಿ ಸ್ಥಿರ ಕ್ಯಾಂಟೀನನ್ನು ನಡೆಸಲು ವ್ಯವಸ್ಥೆಯಾಗಬೇಕೆಂದು ಅಲ್ಲಿನ ನಿವಾಸಿ ಶ್ರೀ ಕೆ. ಪುಟ್ಟಯ್ಯನವರು ಕೋರಿರುತ್ತಾರೆ

ಸಿರಿಭೂವಲಯದ ಬಗ್ಗೆ ಭಾಷಣ

ಮೈಸೂರು ಮಹಾರಾಜಾ ಕಾಲೇಜಿನ ತತ್ವಶಾಸ್ತ್ರ ಗೋಷ್ಠಿಯ ಆಶ್ರಯದಲ್ಲಿ ಕಳೆದ ಮಂಗಳವಾರ ಪಂಡಿತ ಎಲ್ಲಪ್ಪ ಶಾಸ್ತ್ರಿಗಳೂ, ಶ್ರೀ ಕರ್ಲಮಂಗಲಂ ಶ್ರೀಕಂಠಯ್ಯನವರೂ ಸರ್ವಭಾಷಾಮಯಿ ಸಿರಿಭೂವಲಯದ ವಿಚಾರವಾಗಿ ಭಾಷಣ ಮಾಡಿದರು. ಪ್ರೊ॥ ನಿಕ್ಕಂರವರು ಅಧ್ಯಕ್ಷತೆ ವಹಿಸಿದ್ದರು. ವಿಶ್ವವಿದ್ಯಾನಿಲಯದ ಸರ್ವರ್ ಗೋಷ್ಠಿಯ ಪ್ರತಿನಿಧಿಗಳೂ ಆಗಮಿಸಿದ್ದರು

ಮೋಟಾರು ವಾಹನಗಳ ಮೇಲಿನ ನಿಬಂಧನೆ ಪಾಲನೆಗೆ ಸೂಚನೆ

ಸರ್ಕಾರ ಮತ್ತು ಖಾಸಗಿ ಮೋಟಾರು ವಾಹನಗಳ ದೀಪಗಳಿಗೆ ಸಂಬಂಧಪಟ್ಟ ನಿಯಮಗಳನ್ನು ಸರಿಯಾಗಿ ಪಾಲಿಸಬೇಕೆಂದೂ, ವಾಹನಚಾರಿಗಳಿಗೆ ದೀಪ, ಕಂದ ತೆಗೆಯಲು ಮತ್ತು ಆಕಸ್ಮಿಕಗಳುಂಟಾದಂತೆ ಎಚ್ಚರಿಕೆ ವಹಿಸುವಂತೆಯೂ ಸಂಸ್ಥಾನದ ರಸ್ತೆ ಸಾರಿಗೆ ಕಮಿಷನರವರು ಸೂಚನೆಯೊಂದನ್ನು ಹೊರಡಿಸಿರುತ್ತಾರೆ. ಈ ಬಗ್ಗೆ ಮೋಟಾರು ವಾಹನಗಳ ಮತ್ತು ರಸ್ತೆ ಸಂಚಾರ ಶಾಸನದ ನಿಯಮ ಮತ್ತು ಇತರೇ ನಿಬಂಧನೆಗಳನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಸೂಚಿಸಲಾಗಿದೆ

Printed and Published by ... at Sadhvi Press ...

ಸಂಸ್ಕೃತವು ಭಾರತ ಜೀವನದ ಆಧಾರದ ಭಾಷೆ

ನೆಹರೂರವರ ಅಭಿಪ್ರಾಯ

ನೆಹರೂರವರು ಬುಧವಾರ ಪೂನಾ ನಗರದ ಭಂಡಾರ್‌ಕರ್ ಪ್ರಾಚ್ಯ ಸಂಶೋಧನಾ ಸಂಸ್ಥೆಗೆ ಭೇಟಿ ಕೊಟ್ಟು, ಮಹಾ ಭಾರತದ ಶಾಂತಿ ಮತ್ತು ಶಲ್ಯ ಪರ್ವಗಳ ಪ್ರಕಟಣೆ ಸಂಬಂಧದಲ್ಲಿ ಭಾಷಣ ಮಾಡಿ, ಸಂಸ್ಕೃತವು ಭಾರತದ ಜನತೆಯ ಸಂಸ್ಕೃತಿಯ ವ್ಯಕ್ತ ಸ್ವರೂಪವೆಂದೂ, ಭಾರತದ ಐಕ್ಯತೆಯನ್ನು ರೂಪುಗೊಳಿಸುವ ಆಧಾರಭೂತ ಭಾಷೆಯೆಂದೂ ತಿಳಿಸಿದರು. ಮಹಾಭಾರತವು ಪ್ರಾಚೀನ ವಿವೇಕದ ಚಿಹ್ನೆಯಾಗಿರುವುದೆಂದು ಹೇಳಿದರು. ವಿಶ್ವದಲ್ಲಿ ಎಲ್ಲಕ್ಕಿಂತಲೂ ಬಲವಾದುದು ಭಾವನೆಯೆಂದೂ, ಭಾವನಾ ಪ್ರಚೋದಕ ಯೋಚನೆಯು ಬಲಿಷ್ಠವೆಂದೂ ಅವರು ಹೇಳಿ ಬುದ್ಧನ ಕಾಲದಿಂದ ಈಚೆಗೆ ಸಂಸ್ಕೃತವು ಪ್ರಬಲ ಭಾಷೆಯಾಗಿರುವುದೆಂದು ನುಡಿದರು.

ಕೆ ದ್ವೀಪಗಳನ್ನು ಹಿಂದಿರುಗಿಸಲು ರಷ್ಯಕ್ಕೆ ಜಪಾನಿನ ಒತ್ತಾಯ

ಜಪಾನಿನ ಬಳಿ ಇರುವ ಕುನಾಶಿರ್ ಮತ್ತು ಇಟರುಪ್ ದ್ವೀಪಗಳನ್ನು ವಾಪಸು ಕೊಡುವಂತೆಯೂ, ಜಪಾನಿ ಯುದ್ಧಕೈದಿಗಳನ್ನು ಹಿಂದಕ್ಕೆ ಕಳುಹಿಸುವಂತೆಯೂ ಜಪಾನು ರಷ್ಯವನ್ನು ಕೇಳುತ್ತಿದೆ

ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿ ಸದಸ್ಯರುಗಳು

ಮೈಸೂರು ರೆಗ್ಯುಲೇಟೆಡ್ ಮಾರ್ಕೆಟ್ ಸಮಿತಿಗೆ ವರ್ತಕರುಗಳ ಪರವಾಗಿ ಶ್ರೀಗಳಾದ ಕೆ ನಾಗಪ್ಪ, ಆರ್ ನಂಜಯ್ಯ, ಚಿನ್ನಸ್ವಾಮಿ ಮೊದಲಿಯಾರ್, ಸಿ. ರಾಮು ಮತ್ತು ಆರ್. ಚಿಕ್ಕಣ್ಣನವರೂ. ವ್ಯವಸಾಯಗಾರರ ಪರವಾಗಿ ಕಸಬಾ ಹೋಬಳಿಯಿಂದ ಶ್ರೀಗಳಾದ ಶಿವನಂಜೇಗೌಡ ಮತ್ತು ಜಯದೇವರಾಜೇ ಅರಸು, ವರುಣ ಹೋಬಳಿಯಿಂದ ಶ್ರೀಗಳಾದ ಹೆಚ್ ಕೆ ಕುಮಾರಸ್ವಾಮಿ ಮತ್ತು ಕೆ ಕೆಂಪೇಗೌಡ ಮತ್ತು ಜಯಪುರ ಹೋಬಳಿಯಿಂದ ಶ್ರೀಗಳಾದ ಎಸ್ ಸುಬ್ರಹ್ಮಣ್ಯಂ ಮತ್ತು ಪಿ ಜವರಪ್ಪನವರೂ ಆಯ್ಕೆಯಾಗಿರುವರು

ತಿಲಕರ ದಿನಾಚರಣೆ

ಮಹಾರಾಜಾ ಹೈಸ್ಕೂಲು ಯೂನಿಯನ್ನಿನ ಆಶ್ರಯದಲ್ಲಿ ಮೊನ್ನೆ ತಿಲಕರ ಜನ್ಮ ದಿನಾಚರಣೆಯು ಹೆಡ್‌ಮಾಸ್ಟರ್ ಮುಖ್ಯೋಪಾಧ್ಯಾಯರಾದ ಶ್ರೀ ಎಂ. ಜಿ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಗಳಾದ ಕೆ. ಎಸ್ ಸುಬ್ಬರಾಮಯ್ಯ ಮತ್ತು ಕೆ. ಸತ್ಯನಾರಾಯಣರವರಿಂದ ಪ್ರಾರ್ಥನೆ ಮತ್ತು ಅಧ್ಯಾಪಕರಾದ ಶ್ರೀಗಳು ಎಸ್. ಕೆ. ಕಸ್ತೂರಿರಾವ್ ಮತ್ತು ಚಿಕ್ಕ ನರಸಿಂಹಯ್ಯನವರಿಂದಲೂ ವಿದ್ಯಾರ್ಥಿ ಶ್ರೀ ಚಿನ್ನಪ್ಪನವರಿಂದಲೂ ಭಾಷಣಗಳಾದುವು. ಶ್ರೀ ಎಂ. ಆರ್. ಸೀತಾರಾಮರವರಿಂದ ವಂದನಾರ್ಪಣೆಯಾಯಿತು

ನೇತಾಜಿ ಫುಟ್‌ಬಾಲ್ ಕ್ಲಬ್ಬಿನ ಅಧಿಕಾರ ವರ್ಗ

ರಾಜಧಾನಿಯ ನೇತಾಜಿ ಫುಟ್‌ಬಾಲ್ ಕ್ಲಬ್ಬಿನ ಸರ್ವ ಸದಸ್ಯರ ಸಭೆಯು ಕಳೆದ ಬುಧವಾರ ನಡೆದು, ಎಂ ಪಿ ಸಿ ಸಿ. ಅಧ್ಯಕ್ಷರಾದ ಶ್ರೀ ಎಚ್ ಚನ್ನಯ್ಯನವರು ಅಧ್ಯಕ್ಷರು, ಶ್ರೀ ಹೆಚ್. ಪುಟ್ಟಸ್ವಾಮಿಯವರು ಉಪಾಧ್ಯಕ್ಷರು, ಶ್ರೀ ಎಂ. ವಿ. ಗೋಪಾಲ್ ಕಾರ್ಯದರ್ಶಿ, ಶ್ರೀ ಜಿ ಗೋಪಾಲಕೃಷ್ಣ, ಜತೆ ಕಾರ್ಯದರ್ಶಿ ಮತ್ತು ಶ್ರೀಗಳಾದ ಕನಕಸಭಾಪತಿ ಮತ್ತು ಚಿಕ್ಕಪುಟ್ಟಯ್ಯನವರು ಕ್ಯಾಪ್ಟನ್ ಮತ್ತು ವೈಸ್ ಕ್ಯಾಪ್ಟನ್ನರಾಗಿ ಆರಿಸಲ್ಪಟ್ಟರು.

ದ್ರಾವಿಡ ಸಂಘದವರ ಬಿಡುಗಡೆ

ಶ್ರೀರಾಮನ ಚಿತ್ರವನ್ನು ಸುಡುವ ಚಳುವಳಿ ನಡೆಸುವ ಪೂರ್ವಭಾವಿಯಾಗಿ ದಸ್ತಗಿರಿಯಾದ ದ್ರಾವಿಡ ಸಂಘದವರೆಲ್ಲರನ್ನೂ ಬಿಡುಗಡೆ ಮಾಡಲಾಗುವುದೆಂದು ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜನಾಡಾರರು ತಿಳಿಸಿರುತ್ತಾರೆ. ಆದರೆ ಹಿಂಸಾತ್ಮಕ ಕೃತ್ಯವನ್ನೆಸಗಿದವರ ಮೇಲೆ ಕಾನೂನು ಪ್ರಕಾರ ಕ್ರಮ ಜರುಗಿಸಲಾಗುವುದೆಂದು ಅವರು ಹೇಳಿರುವರು. ಮೊನ್ನೆ ಮದ್ರಾಸ್ ನಗರದಲ್ಲಿ ೪-೫ ಕಡೆ ಪಟಗಳನ್ನು ಸುಡಲಾಯಿತೆಂದು ಹೇಳಲಾಗಿದೆ.

ಮುಕ್ತಿಯಿದೆ ಭಾಗ್ಯ ಚಲನಚಿತ್ರ ಗೀತೆಗಳ ಸ್ಪರ್ಧೆ

ನಗರದ ಫಿಲಂ ಪ್ರಿಮಿಯರ್ಸ್ ಅಸೋಸಿಯೇಷನ್ನಿನ ಆಶ್ರಯದಲ್ಲಿ ನಾಳೆ ಸಂಜೆ ೬ ಗಂಟೆಗೆ ಸದ್ವಿದ್ಯಾ ಪಾಠಶಾಲೆಯಲ್ಲಿ ಮುಕ್ತಿಯಿದೆ ಭಾಗ್ಯ ಚಲನಚಿತ್ರದ ಗೀತೆಗಳ ಸ್ಪರ್ಧೆಯು ನಡೆಯುವುದು. ಪ್ರಖ್ಯಾತ ಚಲನಚಿತ್ರ ಹಾಸ್ಯ ನಟರಾದ ಬಾಲಕೃಷ್ಣರವರು ಅಧ್ಯಕ್ಷತೆ ವಹಿಸುವರು. ಕನ್ನಡ ಚಲನಚಿತ್ರ ನಟಿ ಶ್ರೀಮತಿ ಜಯಶ್ರೀಯವರು ಬಹುಮಾನ ವಿನಿಯೋಗ ಮಾಡುವರು.

ಮಹಾರಾಜರ ವರ್ಧಂತ್ಯುತ್ಸವ

ರಾಜಧಾನಿಯ ವಾಣಿವಿಲಾಸ ಮೊಹಲ್ಲಾ ೯ನೇ ಕ್ರಾಸ್ ರಸ್ತೆಯಲ್ಲಿರುವ ಶ್ರೀ ಕೃಷ್ಣಾ ನರ್ಸರಿ ಶಾಲೆಯಲ್ಲಿ ಕಳೆದ ಬುಧವಾರ ಮಹಾರಾಜರ ವರ್ಧಂತಿ ಉತ್ಸವವನ್ನು ನೆರವೇರಿಸಿ, ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು.

ಕಣೆಯರ ಸೇವಾ ಸಮಾಜ

ಚಾಮರಾಜನಗರದ ತಾಲ್ಲೂಕು ತಾಳವಾಡಿ ಹೊಸೂರಿನಲ್ಲಿ ಕಳೆದ ೩೦ ನೇ ತಾರೀಕು ಕಣೆಯರ ಸೇವಾ ಸಮಾಜದ ಸಭೆ ನಡೆಯಿತು. ಸಮಾಜಕ್ಕೆ ಸಲ್ಲಿಸಬೇಕಾದ ಸೇವೆಯನ್ನು ಮುಂದೆ ಸರಿಯಾಗಿ ಮಾಡಿಕೊಡಲು ಶ್ರೀ ಪಿ ಚನ್ನಸ್ವಾಮಪ್ಪನವರು ಭರವಸೆಯಿತ್ತರು. ಪ್ರತಿ ತಿಂಗಳು ಕಣೆಯರ ಜನಾಂಗದವರಿರುವ ಸ್ಥಳಗಳಲ್ಲಿ ಸಭೆ ಕರೆದು ಸಮಾಜದ ಧ್ಯೇಯವನ್ನು ತಿಳಿಸಬೇಕೆಂದು ತೀರ್ಮಾನಿಸಲಾಯಿತು. ಶ್ರೀ ವೆಂಕಟಪ್ಪನವರು, ಚಲುವರಂಗಪ್ಪನವರು, ಕೃಷ್ಣಪ್ಪ ಮುಂತಾದವರು ಸಮಾಜದ ಕರ್ತವ್ಯದ ಬಗ್ಗೆ ಸಲಹೆಗಳನ್ನಿತ್ತರು. ರಾಮಚಂದ್ರರವರಿಂದ ರಾಷ್ಟ್ರಗೀತೆಯೊಡನೆ ಕಾರ್ಯಕ್ರಮವು ಮುಕ್ತಾಯವಾಯಿತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಪಿಟೀಲು ೭ ೧೫ ದೇವರನಾಮ. ೮-೧೫ . ಅರಗಿನ ಬೊಂಬೆ, ಕನ್ನಡದ ನಾಟಕ. ೮ ೩೦ ಪೀಟಿಲು ಕರ್ನಾಟಕ-ಸಂಗೀತ. ೯.೩೦ ಮಕ್ಕಳ ಕಾರ್ಯಕ್ರಮ. ಮಧ್ಯಾಹ್ನ ೧೨ ಮತ್ತು ೨-೧೫ ಟಿ. ಆರ್. ಗೋಪಾಲ್-ಸಂಗೀತ. ೧೨ ೩೦ ವಾದ್ಯ ವೃಂದ, ೧ ಹಿಂದುಸ್ಥಾನಿ ಗೀತೆಗಳು. ೧ ೩೦ ಪಿಟೀಲು, ಸಂಜೆ ೫ ಶಾಸ್ತ್ರೀಯ ಸಂಗೀತ. ೫.೩೦ ಮತ್ತು ೯-೩೦ ಎಂ. ವಿ. ಲಕ್ಷ್ಮೀನರಸಿಂಹಯ್ಯ-ಸ್ಯಾಕ್ಸೊಫೋನ್. ೬.೧೫ ನಾವು ಮತ್ತು ನಮ್ಮವರು. ೭ ೩೦ ಕನ್ನಡ ಗೀತೆಗಳು. ೮ ಮತ್ತು ೧೦ ಎಸ್. ಕೆ ಪಕ್ಕವಾದ್ಯ ಸಂಗೀತ. ೮ ೩೦ ವೀಣೆ ಐಯಂಗಾರ್. ೮-೪೫ ರೇಡಿಯೋ.

ಮೋಸ ಹೋಗಬೇಡಿ

ಮೈಸೂರು ಕೃಷ್ಣಮೂರ್ತಿಪುರಂನಲ್ಲಿ ನ್ಯೂ ಕೃಷ್ಣ ಬೇಕರಿ ಎಂಬ ಬೇಕರಿ ಹಾವು ಹೊಸದಾಗಿ ಏರ್ಪಟ್ಟಿರುತ್ತೆ. ಈ ಹೆಸರಿಗೂ, ನಮಗೂ ಯಾವ ಸಂಬಂಧವೂ ಇಲ್ಲವೆಂಬ ಸಂಗತಿಯನ್ನು ಸಾರ್ವಜನಿಕರ ಅವಗಾಹನೆಗೆ ಈ ಮೂಲಕ ತಿಳಿಸಿರುತ್ತೆ.

ಕೆ. ಆರ್. ಕೃಷ್ಣ ಅಯ್ಯಂಗಾರ್,
ಶ್ರೀ ಕೃಷ್ಣಾ ಬೇಕರಿ,
ಡಿ. ಸುಬ್ಬಯ್ಯಾ ರೋಡ್, ಮೈಸೂರು

ಕಾಲೇಜು ವಿದ್ಯಾರ್ಥಿಗಳಿಗಾಗಿ ೫೦೦ ವಿಚಾರ ವೇದಿಕೆಗಳು

ಮೈಸೂರು ೪

ಇಲವಾಲದಲ್ಲಿ ನಡೆಯುತ್ತಿರುವ ಯುವಕರ ಶಿಕ್ಷಣ ಶಿಬಿರಕ್ಕೆ ಕೇಂದ್ರ ಯೋಜನಾ ಉಪ ಮಂತ್ರಿ ಎಸ್ ಎನ್. ಮಿಶ್ರಾರವರು ಮೊನ್ನೆ ಭೇಟಿಯಿತ್ತು, ದ್ವಿತೀಯ ಪಂಚವಾರ್ಷಿಕ ಯೋಜನೆಯ ಪ್ರಾಮುಖ್ಯತೆಯನ್ನು ವಿವರಿಸಿದರು. ಯೋಜನೆ ಬಗ್ಗೆ ಚರ್ಚೆ ಮಾಡಿ ಸಲಹೆ ಕೊಡುವುದಕ್ಕಾಗಿ ಇದುವರೆಗೆ ನಾನಾ ಕಾಲೇಜುಗಳಲ್ಲಿ ೧೦೦ ವಿಚಾರ ವೇದಿಕೆಗಳನ್ನು ಏರ್ಪಡಿಸಲಾಗಿರುವುದೆಂದೂ, ಈ ವರ್ಷದ ಅಂತ್ಯದೊಳಗೆ ಅಂತಹ ೫೦೦ ವೇದಿಕೆಗಳನ್ನು ಸ್ಥಾಪಿಸಲಾಗುವುದೆಂದೂ ತಿಳಿಸಿದರು.

ಸುಭಿಕ್ಷಕ್ಕಾಗಿ ವಿಶೇಷ ಪೂಜೆ

ಮೈಸೂರು ವಿದ್ಯಾರಣ್ಯಪುರದ ಜಾಮ್ಯೂಜಿಕ್ ಸ್ಕೂಲ್ ಪೇಟೆ ರಸ್ತೆಯಲ್ಲಿರುವ ಶ್ರೀ ಕೃಪಿ ಕಾರ್ಯಾಲಯದಲ್ಲಿ ನಾಳೆಯಿಂದ ದೇಶದ ಸುಭಿಕ್ಷಕ್ಕಾಗಿ ಶ್ರೀ ಶ್ರೀ ಸ್ವಾಮಿ ಶ್ರೀಕೃಷ್ಣ ಚೈತನ್ಯರವರಿಂದ ವಿಶೇಷವಾದ ಪೂಜೆ ನಡೆಯುತ್ತದೆ.

ಚಾಮರಾಜ ಮೊಹಲ್ಲಾ ಯುವಕ ಸಂಘದ ಸಭೆ

ಚಾಮರಾಜ ಮೊಹಲ್ಲಾ ಯುವಕ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಬುಧವಾರ ಶ್ರೀ ವಿ. ಎಸ್. ನಾರಾಯಣಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇರಿದ್ದಿತು. ದಿವಂಗತ ಪಗೋಲಂಕರ್ ಮತ್ತು ಆಚಾರ್ಯ ನರೇಂದ್ರದೇವರವರ ನಿಧನಕ್ಕಾಗಿ ಸಂತಾಪ ಸೂಚಿಸಲಾಯಿತು. ಕರ್ನಾಟಕ ಪ್ರಾಂತ ರಚನೆಯಾಗುವ ಬಗ್ಗೆ ಸಭೆಯು ಹರ್ಷವನ್ನು ವ್ಯಕ್ತಪಡಿಸಿತು. ಅಖಂಡ ಕರ್ನಾಟಕದ ರಚನೆಗಾಗಿ ಎರಡು ವರ್ಷಗಳ ಹಿಂದೆ ಹುಬ್ಬಳ್ಳಿಯಲ್ಲಿ ಉಪವಾಸ ಸತ್ಯಾಗ್ರಹ ನಡೆಸಿದ ಶಂಕರಗೌಡ ಪಾಟೀಲರನ್ನು ಸನ್ಮಾನಿಸಲು ಬರುವ ನವೆಂಬರ್ ತಿಂಗಳಲ್ಲಿ ಸಮಾರಂಭ ನಡೆಸಬೇಕೆಂದೂ, ಅವರಿಗೆ ಮಂಗಳೂರಿನ ಕನ್ನಡ ಸಾಹಿತಿ ಕೋಟಾ ಶಿವರಾಮಕಾರಂತರನ್ನು ಆಹ್ವಾನಿಸಬೇಕೆಂದೂ ನಿರ್ಧರಿಸಲಾಯಿತು

ಮೈಸೂರು ಪೇಟೆ ಧಾರಣೆ

	ಸಾ	ಮಾನ್ಯ	ದ	ಪ್ಪ	ಕ	ಳಗೆ
ಸಣ್ಣ ಭತ್ತ	[illegible]	೦	೦	[illegible]	[illegible]	[illegible]
ದಪ್ಪ ಭತ್ತ	[illegible]	[illegible]	೦	[illegible]	[illegible]	[illegible]
ರಾಗಿ	[illegible]	೦	[illegible]	[illegible]	[illegible]	೦
ಕಡಲೆಕಾಯಿ	[illegible]	೦	೦	[illegible]	[illegible]	[illegible]
ಹಿಪ್ಪೆ	[illegible]	೦	೦	[illegible]	೦	೦
ಎಳ್ಳು	[illegible]	೦	೦	[illegible]	[illegible]	[illegible]
ಹುರುಳಿ	[illegible]	[illegible]	೦	[illegible]	[illegible]	೦
ಹೆಸರು	[illegible]	[illegible]	೦	[illegible]	[illegible]	೦
ತೊಗರಿ	[illegible]	[illegible]	೦	[illegible]	[illegible]	೦
ಉಪ್ಪು	[illegible]	[illegible]	೦			
ಕೆಂಪುಮೆಣಸು	[illegible]	೦	೦			
ಹುಣಸೇಹಣ್ಣು	[illegible]	೦	೦	[illegible]	[illegible]	೦
ಮೆಣಸಿನಕಾಯಿ	[illegible]	[illegible]	೦	[illegible]	[illegible]	೦
ತೆಂಗಿನಕಾಯಿ ೧೦೦೦	[illegible]	೦	೦	[illegible]	[illegible]	[illegible]

SRI GAYATHRI
TALKIES
From 4.8.56 : For 3-days
Warner's Cinemascope and Technicolor
EAST OF EDEN
Starring:– July Harris & James Dean

Morning Shows on Sat. & Sun.
Gentlemen Prefer Blondes



Take
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists
71II.A. S. Street,
BANGALORE-2

ರಿಜಿಸ್ಟರ್ ನಂ. 792

ಚಂದಾದರ

ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ ೬ ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : SUNDAY 5—8—1956 ಮೈಸೂರು : ಭಾನುವಾರ ೫—೮—೧೯೫೬ [ಸಂಚಿಕೆ : ೫

ಬ್ರಿಟನ್ನು ೨೪ ರಾಷ್ಟ್ರ ಸಮ್ಮೇಳನ ಕರೆಯಲು ಈಜಿಪ್ಟಿನ ಆಕ್ಷೇಪ

ವೈ. ಕೆ. ರಾಮಚಂದ್ರರಾಯರ ನಿಧನ

ಮೈಸೂರು ೫

ರಾಜಧಾನಿಯ ಕೃಷ್ಣವಿಲಾಸ ರಸ್ತೆಯಲ್ಲಿ ವಾಸವಾಗಿದ್ದ ಶ್ರೀ ವೈ. ಕೆ. ರಾಮಚಂದ್ರರಾಯರು ನೆನ್ನೆ ರಾತ್ರಿ ೮॥ ಗಂಟೆ ಸಮಯದಲ್ಲಿ ನಿಧನ ಹೊಂದಿದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಅವರಿಗೆ ೭೩ ವರ್ಷ ವಯಸ್ಸಾಗಿತ್ತು. ಅವರು ಯಳಂದೂರಿನವರು.

ಶ್ರೀಯುತರು ಮೈಸೂರು ರೈಲ್ವೆಯಲ್ಲಿ ಇಂಜನಿಯರಾಗಿ ಕೆಲಸ ಮಾಡಿ ನಿವೃತ್ತರಾದಾಗ ರೈಲ್ವೆ ಏಜೆಂಟರಾಗಿದ್ದರು. ಅವರು ಜಯಪುರ ಸಂಸ್ಥಾನದಲ್ಲೂ ಸ್ವಲ್ಪ ಕಾಲ ಸೇವೆ ಸಲ್ಲಿಸಿದ್ದರು.

ನಿವೃತ್ತರಾದಮೇಲೆ ಸಾಮಾಜಿಕ ಸೇವಾ ಮತ್ತು ಧಾರ್ಮಿಕ ಜೀವನದಲ್ಲಿ ನಿರತರಾಗಿ ನಿರಾಡಂಬರ ಜೀವನವನ್ನು ನಡೆಸುತ್ತಿದ್ದರು. ನಗರದಲ್ಲಿ ಸ್ಥಾಪಿಸಲ್ಪಟ್ಟಿರುವ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ಸಂಸ್ಥೆಯ ಪ್ರಥಮ ಅಧ್ಯಕ್ಷರಾಗಿದ್ದರು. ಯಳಂದೂರು ವಿದ್ಯಾ ನಿಧಿಯ ಆಧಾರ ಸ್ತಂಭರಾಗಿದ್ದರು. ಅವರು ಹಲವು ಗ್ರಂಥಗಳನ್ನೂ ಬರೆದಿದ್ದರು.

ಅವರಿಗೆ ಇಬ್ಬರು ಗಂಡು ಮತ್ತು ಆರು ಹೆಣ್ಣು ಮಕ್ಕಳು ಇರುವರು. ಮೃತರ ಆತ್ಮಕ್ಕೆ ಶಾಂತಿ ಕೋರಿ ಬಂಧು ಮಿತ್ರರಿಗೆ ಹೃತ್ಪೂರ್ವಕ ಸಂತಾಪವನ್ನು ಸೂಚಿಸುತ್ತೇವೆ.

ಹರಿಕಥೆ ಮತ್ತು ದೇವರಿಗೆ ಅಲಂಕಾರ

ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿ ರಾಜೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ, ನಾಳೆ ಸಂಜೆ ೭ ಗಂಟೆಗೆ ಶ್ರೀ ಭದ್ರಾವತಿ ವೆಂಕಟೇಶದಾಸರಿಂದ ಇಂದ್ರಶೀಲ ಎಂಬ ಹರಿಕಥೆ ಮತ್ತು ಅಮ್ಮನವರಿಗೆ ಅಲಂಕಾರವೂ, ವರ್ತಮಾನ ಪತ್ರಿಕೆ ಸಂಪಾದಕ ಶ್ರೀ ಎಂ. ಎಸ್. ತಿಮ್ಮಯ್ಯನವರ ಸಮ್ಮುಖದಲ್ಲಿ ನಡೆಯುವುದು.

೨೪ ರಾಷ್ಟ್ರಗಳ ಸಭೆ ಬಗ್ಗೆ ಭಾರತ ಸರ್ಕಾರದ ಪರಿಶೀಲನೆ

ಸೂಯೆಜ್ ಕಾಲುವೆ ಬಿಕ್ಕಟ್ಟಿನ ಬಗ್ಗೆ ಭಾರತ ಸರ್ಕಾರದವರು ನೆನ್ನೆಯೂ ಪರಿಶೀಲನೆ ನಡೆಸಿ, ಕೊಲಂಬೊ ರಾಷ್ಟ್ರಗಳೊಡನೆ ಅಭಿಪ್ರಾಯ ವಿನಿಮಯ ಮಾಡಿಕೊಳ್ಳುತ್ತಿರುವರು. ಬ್ರಿಟನ್, ಅಮೇರಿಕಾ ಮತ್ತು ಫ್ರಾನ್ಸುಗಳ ಜಂಟಿ ಹೇಳಿಕೆ ಬಗ್ಗೆ ಭಾರತ ಸರ್ಕಾರದವರು ಬ್ರಿಟನ್ನಿನ ವಿವರಣೆಯನ್ನು ಕೇಳುವರೆಂದು ಹೇಳಲಾಗಿದೆ. ೨೪ ರಾಷ್ಟ್ರ ಸಮ್ಮೇಳನದಲ್ಲಿ ಭಾಗವಹಿಸುವ ಬಗ್ಗೆ ಹತ್ತು ದಿನಗಳಲ್ಲೇ ಭಾರತ ಸರ್ಕಾರದವರು ನಿರ್ಧರಿಸಿಕೊಳ್ಳಲಿರುವರು.

ಷೇಕ್ ಅಬ್ದುಲ್ಲಾರ ಬಂಧನದ ಅವಧಿ ಹೆಚ್ಚಳ

ಕಾಶ್ಮೀರದ ಮಾಜಿ ಮುಖ್ಯ ಮಂತ್ರಿ ಷೇಕ್ ಅಬ್ದುಲ್ಲಾರವರ ಬಂಧನದ ಅವಧಿಯನ್ನು ಇನ್ನೂ ಆರು ತಿಂಗಳ ಕಾಲ ಹೆಚ್ಚಿಸಲಾಗಿದೆ. ಅವರು ಈಗ ಕುಡ್ ಸಬ್ ಜೈಲಿನಲ್ಲಿರುವರು. ಇದೇ ...ನೇ ತಾರೀಖಿಗೆ ಅವರ ಬಂಧನವಾಗಿ ೩ ವರ್ಷವಾಗುವುದು.

ಬ್ರಿಟನ್ನು ೨೪ ರಾಷ್ಟ್ರಗಳ ಸಭೆ ಕರೆಯಲು ಈಜಿಪ್ಟಿನ ಆಕ್ಷೇಪಣೆ

ಬರುವ ೧೬ರಂದು ಲಂಡನ್ನಿನಲ್ಲಿ ೨೪ ರಾಷ್ಟ್ರಗಳ ಸಮ್ಮೇಳನವನ್ನು ಕರೆಯುವುದಕ್ಕೆ ಬ್ರಿಟನ್ನಿಗೆ ಇರುವ ಹಕ್ಕನ್ನು ಈಜಿಪ್ಟು ಆಕ್ಷೇಪಿಸಿ ಸಂಬಂಧಪಟ್ಟ ಎಲ್ಲಾ ಸರ್ಕಾರಗಳಿಗೂ ತಿಳಿಸಿದೆ. ಈಜಿಪ್ಟಿನ ಅಧ್ಯಕ್ಷರು ಸಮ್ಮೇಳನದ ಸಂಬಂಧವಾಗಿ ಪ್ರತಿಸಲಹೆ ಮಾಡಲು ಆಲೋಚಿಸಿರುವರೆಂದೂ, ಲಂಡನ್ನಿನ ಬದಲು ಕೈರೊ ಅಥವಾ ಸ್ವಿಟ್ಸರ್ಲೆಂಡಿನಲ್ಲಿ ಸಭೆ ಸೇರುವುದಕ್ಕೆ ಅವರು ಸೂಚಿಸುವರೆಂದೂ ತಿಳಿದುಬಂದಿದೆ. ಲಂಡನ್ ಸಮ್ಮೇಳನಕ್ಕೆ ಬರಲು ಈಜಿಪ್ಟು ಒಪ್ಪುವುದಿಲ್ಲವೆಂದು ಹೇಳಲಾಗಿದೆ.

ಭಾರತದ ಅಣು ಪ್ರತಿಕ್ರಿಯಾ ಯಂತ್ರದ ಕಾರ್ಯಾರಂಭ

ಬೊಂಬಾಯಿ ನಗರದ ಬಳಿ ಟ್ರಾಂಬೆಯಲ್ಲಿ ಭಾರತದ ಪ್ರಥಮ ಅಣು ಪ್ರತಿಕ್ರಿಯಾ ಯಂತ್ರದ ಕೆಲಸವು ನೆನ್ನೆ ಮಧ್ಯಾಹ್ನದಿಂದ ಆರಂಭವಾಯಿತು. ಇದೇ ಏಷ್ಯದಲ್ಲಿ ಇದೇ ಮೊದಲಿನ ಕೇಂದ್ರ. ಒಂದರ ಮೇಲೊಂದು ಪ್ರತಿಕ್ರಿಯೆ ಪರಿಣಾಮವಾಗಿ ಅಣು ಶಕ್ತಿಯು ಅಲ್ಲಿ ಉತ್ಪನ್ನವಾಗುವುದು. ಇದು ಆರಂಭವಾದ ಸುದ್ದಿಯನ್ನು ಅಣು ಶಕ್ತಿ ಸಮಿತಿಯ ಅಧ್ಯಕ್ಷ ಡಾ॥ ಹೋಮಿ ಜೆ. ಭಾಭಾರವರು ನೆಹರೂರವರಿಗೆ ತಿಳಿಸಿದರು. ಅವರು ಭಾರತೀಯರಿಗೆ ಇದೊಂದು ಮಹತ್ವವಾದ ವಿಷಯವೆಂದು ಹೇಳಿದರು.

ಯಂತ್ರವನ್ನು ಭಾರತೀಯ ವೈಜ್ಞಾನಿಕರು ಮತ್ತು ಇಂಜನಿಯರುಗಳು ಒಂದು ವರ್ಷದಲ್ಲಿ ನಿರ್ಮಿಸಿರುವರು. ೧೦ ವರ್ಷದೊಳಗೆ ಭಾರತವು ಅಣು ಶಕ್ತಿ ಜನರೇಟರುಗಳನ್ನು ಹೊಂದಲಿದೆ.

ವಿದ್ಯಾರ್ಥಿಗಳಲ್ಲಿ ಅಶಾಂತಿ ತಪ್ಪಿಸಲು ಐದು ಅಂಶಗಳ ಕ್ರಮ

ವಿದ್ಯಾರ್ಥಿಗಳಲ್ಲಿ ಅಶಾಂತಿಯುಂಟಾಗುವುದನ್ನು ತಪ್ಪಿಸಲು ಭಾರತ ಸರ್ಕಾರದವರು ೫ ಅಂಶಗಳ ಕ್ರಮವನ್ನು ಕೈಗೊಂಡಿರುತ್ತಾರೆ. ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ಹೆಚ್ಚು ಸಂಬಳ ಕೊಡುವುದು, ಪುಸ್ತಕ ಭಂಡಾರ, ಪ್ರಯೋಗ ಶಾಲೆ ಮತ್ತು ವಿದ್ಯಾರ್ಥಿ ನಿಲಯಗಳ ಸೌಲಭ್ಯವನ್ನು ಅಭಿವೃದ್ಧಿಗೊಳಿಸುವುದು, ಶ್ರಮದಾನ ಶಿಬಿರ ಮತ್ತು ಯೋಜನೆಗಳನ್ನು ಏರ್ಪಡಿಸುವುದು ಮತ್ತು ಶಿಸ್ತು ಪಾಲನೆಗಾಗಿ ವಿದ್ಯಾಭ್ಯಾಸದಲ್ಲಿ ಮತ ಮತ್ತು ನೀತಿಬೋಧೆಯ ಪ್ರಾಮುಖ್ಯತೆ—ಈ ವಿಚಾರಗಳ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಲೋಕಸಭಾ ಸದಸ್ಯರ ಉಪವಾಸ

ಸಂಸ್ಥಾನ ಪುನರ್ವಿಂಗಡಣೆ ಸಂಬಂಧವಾಗಿ ಬೊಂಬಾಯಿ ನಗರದ ಭವಿಷ್ಯಕ್ಕಾಗಿಯೂ, ಬಿ ಸಿ ರ್ ಜನತೆಯ ಅಪೇಕ್ಷಾಭಂಗಕ್ಕಾಗಿಯೂ ಮನನೊಂದ ಲೋಕಸಭೆಯ ಸದಸ್ಯರಾದ ಎಸ್. ಸಿ. ಮಿಶ್ರಾರವರು ೧೫ ದಿನಗಳ ಉಪವಾಸ ನಡೆಸಲಿರುವರು. ಉಪವಾಸದ ಸಮಯದಲ್ಲಿ ತಮಗೆ ಚೈತನ್ಯವಿರುವವರೆಗೂ ಅವರು ಲೋಕಸಭೆಯ ಅಧಿವೇಶನದಲ್ಲಿ ಭಾಗವಹಿಸುವರು.

ಚಿನ್ನದ ಗಣಿ ರಾಷ್ಟ್ರೀಕರಣದ ಪರಿಹಾರ ದ್ರವ್ಯ ಬಹಳ ಕಡಿಮೆ

ಕಂಪೆನಿ ಅಧ್ಯಕ್ಷ ಎಂ. ಎ. ಶ್ರೀನಿವಾಸನ್ನರ ಹೇಳಿಕೆ

ಬೆಂಗಳೂರು ೫

ಕೋಲಾರದ ಚಿನ್ನದ ಗಣಿಗಳ ಸಾಮಾನ್ಯ ಸಭೆಯಲ್ಲಿ ಅಧ್ಯಕ್ಷ ಶ್ರೀ ಎಂ. ಎ. ಶ್ರೀನಿವಾಸನ್ ರವರು ನೆನ್ನೆ ಮಾತನಾಡಿ, ಗಣಿಗಳ ರಾಷ್ಟ್ರೀಕರಣದ ಸಂಬಂಧದಲ್ಲಿ ಕೊಡುವ ೧೨೫ ಲಕ್ಷ ರೂ. ಪರಿಹಾರ ದ್ರವ್ಯವು ಬಹಳ ಕಡಿಮೆಯೆಂದೂ, ಅದನ್ನು ಒಪ್ಪತಕ್ಕದ್ದೇ ಅಲ್ಲವೆಂದೂ ತಿಳಿಸಿದರು. ಪರಿಹಾರದ ಬಗ್ಗೆ ಮೈಸೂರು ಅಥವಾ ಕೇಂದ್ರ ಸರ್ಕಾರದಿಂದ ಇನ್ನೂ ಯಾವ ಪತ್ರವೂ ಬಂದಿಲ್ಲವೆಂದು ಅವರು ಹೇಳಿದರು.

ಪರಿಹಾರ ದ್ರವ್ಯದ ಸಂಬಂಧವಾಗಿ ಕಂಪೆನಿಯವರೊಡನೆ ಮಾತುಕತೆ ನಡೆಸಿದ ಅಧಿಕಾರಿಗಳ ಶಿಫಾರಸು ಮತ್ತು ಮೈಸೂರು ಸರ್ಕಾರಕ್ಕೆ ಭಾರತ ಸರ್ಕಾರದವರು ಕೊಟ್ಟ ಸಲಹೆಗಳ ವಿಚಾರವನ್ನು ಕಂಪೆನಿಗೆ ತಿಳಿಸಿಲ್ಲವೆಂದು ಅವರು ಹೇಳಿದರು. ಸುಪ್ರೀಂ ಕೋರ್ಟಿನ ನಿವೃತ್ತ ಶ್ರೇಷ್ಠ ನ್ಯಾಯಾಧೀಶರ ಮೂಲಕ ಎಲ್ಲ ವಿಚಾರಗಳ ಬಗ್ಗೆ ತನಿಖೆ ನಡೆಸುವುದಕ್ಕೆ ಮೈಸೂರು ಸರ್ಕಾರದವರು ಒಪ್ಪಲಿಲ್ಲವೆಂದೂ ಅವರು ತಿಳಿಸಿದರು.

ಸೂಯೆಜ್ ಕಾಲುವೆ ರಾಷ್ಟ್ರೀಕರಣಕ್ಕೆ ಚೌ ಎನ್ ಲೈ ಬೆಂಬಲ

ಚೀಣದ ಪ್ರಧಾನಿ ಚೌ ಎನ್ ಲೈಯವರು ನೆನ್ನೆ ಪೀಕಿಂಗಿನಲ್ಲಿ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸಿ, ಸೂಯೆಜ್ ಕಾಲುವೆಯ ರಾಷ್ಟ್ರೀಕರಣವು ಈಜಿಪ್ಟಿನ ಸಾರ್ವಭೌಮಾಧಿಕಾರದ ವಿಷಯವೆಂದೂ, ಈ ಬಗ್ಗೆ ಈಜಿಪ್ಟಿಗೆ ಚೀಣಾ ಪ್ರಜೆಗಳು ಬೆಂಬಲವೀಯುವರೆಂದೂ ತಿಳಿಸಿದರು. ಕಾಲುವೆ ಮೂಲಕ ಸಂಚಾರದ ಸ್ವಾತಂತ್ರ್ಯವು ಇರಬೇಕೆಂದು ಪ್ರತಿಯೊಬ್ಬರೂ ಹೇಳುವರೆಂದೂ, ಅದನ್ನು ಚರ್ಚೆ ಮೂಲಕ ಇತ್ಯರ್ಥಪಡಿಸಬಹುದೆಂದೂ, ಬ್ರಿಟನ್ನು ರಾಜೀ ಮಾಡಿಕೊಳ್ಳಬಹುದೆಂದೂ ಅವರು ಹೇಳಿದರು. ಪಶ್ಚಿಮ ರಾಷ್ಟ್ರಗಳು ಈ ಬಗ್ಗೆ ಕರೆದಿರುವ ಸಮ್ಮೇಳನವು ಪರಿಶೀಲಿಸುವ ವಿಷಯವು ಈಜಿಪ್ಟಿನ ಸಾರ್ವಭೌಮಾಧಿಕಾರಕ್ಕೆ ಚ್ಯುತಿ ತಂದೊಡ್ಡುವ ವಿಚಾರವೆಂದು ಅವರು ಅಭಿಪ್ರಾಯಪಟ್ಟರು.

ಹಾಲೆಂಡಿಗೆ ಸಾಲದ ಬಾಕಿ ಕೊಡಲು ಇಂಡೋನೇಷ್ಯದ ನಕಾರ

ಹಾಲೆಂಡಿಗೆ ಕೊಡಬೇಕಾದ ಅನೇಕ ದಶ ಲಕ್ಷ ಪೌಂಡು ಸಾಲವನ್ನು ಇಂಡೋನೇಷ್ಯವು ವಜಾ ಮಾಡಿದೆ. ಇಂಡೋನೇಷ್ಯಕ್ಕೆ ಹಾಲೆಂಡು ರಾಜ್ಯವೇ ಹಣವನ್ನು ಕೊಡಬೇಕೆಂದು ಇಂಡೊನೇಷ್ಯಾ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ.

○ ತಿರುವಾಂಕೂರು ಕೊಚ್ಚಿ ಸರ್ಕಾರದ ಆಜ್ಞೆಯ ಪ್ರಕಾರ ಪದ್ಮನಾಭನ್ ನಂಬೂದಿರಿ ಎಂಬ ೨೧ ವರ್ಷದ ಅನಾಥ ಯುವಕನಿಗೆ ೧೦ ಲಕ್ಷ ರೂ. ಆಸ್ತಿಯು ಬಂದಿದೆ. ಈ ಸಂಬಂಧವಾದ ಆಸ್ತಿ ವಿಲೇವಾರಿ ಕ್ರಮವನ್ನು ಸರ್ಕಾರದವರು ರದ್ದುಗೊಳಿಸಿರುತ್ತಾರೆ.

ವಿಧಾನ ಸೌಧ ವೆಚ್ಚದ ತನಿಖೆ ಸಮಿತಿ ಅಧ್ಯಕ್ಷರ ಆಗಮನ

ಬೆಂಗಳೂರು ೫

ವಿಧಾನ ಸೌಧದ ವೆಚ್ಚದ ತನಿಖೆ ಸಮಿತಿ ಅಧ್ಯಕ್ಷರಾದ ನಾಗಪುರ ಹೈಕೋರ್ಟಿನ ಮಾಜಿ ನ್ಯಾಯಾಧೀಶ ಶ್ರೀ ಪಿ. ಪಿ. ದೇಶ್‌ರವರು ನೆನ್ನೆ ಬೆಂಗಳೂರಿಗೆ ಆಗಮಿಸಿದರು. ಅವರನ್ನು ಸಮಿತಿಯ ಕಾರ್ಯದರ್ಶಿ ಶ್ರೀ ಕೆ. ಎಸ್. ಮಲ್ಲೇಗೌಡರು ಸ್ವಾಗತಿಸಿದರು.

ತನಿಖೆ ಸಮಿತಿಯು ಬರುವ ಮಂಗಳವಾರದಿಂದ ಕೆಲಸವನ್ನು ಏಕ್ಸ್‌ರಿ ಹಾಲಿನಲ್ಲಿ ಆರಂಭಿಸುವುದು. ತನಿಖೆಯು ರಹಸ್ಯವಾಗಿ ನಡೆಯುವುದು.

ಸೌಧದೊಳಗೆ ಶಾಸನಸಭಾ ಭವನಗಳಿಗಾಗಿ ಮಾಡಿರುವ ವೆಚ್ಚದ ಪರಿಶೀಲನೆಗಾಗಿ, ಚೀಫ್ ಇಂಜನಿಯರರ ಕಛೇರಿಯ ನಿವೃತ್ತ ಎಕ್ಸಿಕ್ಯುಟಿವ್ ಇಂಜನಿಯರ್ ಶ್ರೀ ಕೆ. ಪದ್ಮನಾಭ ಮತ್ತು ಬೆಂಗಳೂರು ಸ್ಥಳೀಯ ಆಡಿಟ್ ಕಚೇರಿಯ ಅಸಿಸ್ಟೆಂಟ್ ಕಮಿಷನರ್ ಶ್ರೀ ಎಸ್. ಪಿ. ನಂಜುಂಡಪ್ಪನವರನ್ನು ನೇಮಿಸಲಾಗಿದೆ.

ಸೂಯೆಜ್ ಕಾಲುವೆ ರಾಷ್ಟ್ರೀಕರಣವು ಸ್ವಾರ್ಥಪರ ಪ್ರಯತ್ನ

ಅಮೆರಿಕದ ವಿದೇಶಾಂಗ ಮಂತ್ರಿಯ ಟೀಕೆ

ಈಜಿಪ್ಟು ಸ್ವಾರ್ಥಕ್ಕಾಗಿಯೇ ಸೂಯೆಜ್ ಕಾಲುವೆಯನ್ನು ಉಪಯೋಗಿಸಿಕೊಳ್ಳುವುದನ್ನು ಒಪ್ಪುವುದಕ್ಕಾಗುವುದಿಲ್ಲವೆಂದು ಅಮೇರಿಕದ ವಿದೇಶಾಂಗ ಮಂತ್ರಿ ಜಾನ್ ಫಾಸ್ಟರ್ ಡಲೆಸ್‌ರವರು ತಿಳಿಸಿರುತ್ತಾರೆ. ಈಜಿಪ್ಟು ಅಧ್ಯಕ್ಷರ ನಿರ್ಧಾರಕ್ಕೆ ಪ್ರತಿ ಸವಾಲು ಮಾಡಬೇಕೆಂದೂ ವಿಶ್ವದ ನಾನಾ ಪ್ರಜೆಗಳ ಭದ್ರತೆ ಮತ್ತು ಯೋಗಕ್ಷೇಮಕ್ಕೆ ಧಕ್ಕೆ ಬರುವುದೆಂದು ಅವರು ಅಭಿಪ್ರಾಯಪಟ್ಟಿರುತ್ತಾರೆ. ಬಹುಕಾಲೋತ್ತರದ ಒಪ್ಪಂದಗಳ ಪ್ರತೀಕಾರಕ್ಕಾಗಿ ನಾಸಿರ್‌ರವರು ರಾಷ್ಟ್ರೀಕರಣ ಮಾಡಿರುತ್ತಾರೆಂದೂ ಅವರು ಹೇಳಿದರು. ಹಣವನ್ನು ಹಿಂದೆಯುಂದಲೇ ಎತ್ತಲು ತಮಗೆ ಇಷ್ಟವಿಲ್ಲವೆಂದೂ ಅವರು ತಿಳಿಸಿದರು.

ಬಳ್ಳಾರಿ ಪ್ರಶ್ನೆ ಬಗ್ಗೆ ಮತ್ತೆ ಆಂಧ್ರರ ಚಳುವಳಿ

ಬಳ್ಳಾರಿ ಭವಿಷ್ಯದ ಪ್ರಶ್ನೆಯು ಇತ್ಯರ್ಥವಾಗಿಲ್ಲವೆಂದೂ, ಬಳ್ಳಾರಿಯನ್ನು ಆಂಧ್ರಕ್ಕೆ ಸೇರಿಸಬೇಕೆಂದು ಚಳುವಳಿ ಮಾಡಲಾಗುವುದೆಂದೂ, ವಿಶಾಲಾಂಧ್ರ ಮಹಾ ಸಭೆಯ ಅಧ್ಯಕ್ಷ ಎ. ಕಾಳೇಶ್ವರರಾಯರು ತಿಳಿಸಿರುತ್ತಾರೆ. ಬುಧವಾರದಿಂದ ಆರಂಭವಾಗುವ ಆಂಧ್ರ ಶಾಸನಸಭೆಗೆ ಅವರು ಈ ಬಗ್ಗೆ ನಿರ್ಣಯವೊಂದನ್ನು ಕಳುಹಿಸಿರುತ್ತಾರೆ.

○ ಮಹಾರಾಷ್ಟ್ರ ಮತ್ತು ಕರ್ನಾಟಕಗಳ ನಡುವೆ ಗಡಿ ವಿಚಾರದ ಭಿನ್ನಾಭಿಪ್ರಾಯಗಳ ಇತ್ಯರ್ಥಕ್ಕಾಗಿ ಗಡಿ ಸಮಿತಿಯನ್ನು ನೇಮಿಸುವುದಾಗಲೀ, ಅಥವಾ ಪಂಚಾಯಿತಿ ಮಾಡುವುದಾಗಲೀ, ಬೇಡವೆಂದು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಸಿ. ಜೆ. ಅಂಬಲಿಯವರು ಕಾಂಗ್ರೆಸ್ ಹೈಕಮಾಂಡಿನ ಉಪಾಧ್ಯಕ್ಷರಿಗೆ ... ತಿಳಿಸಿರುತ್ತಾರೆ.

ವಾರ ಭವಿಷ್ಯ

ತಾ|| ೫-೮-೫೬ರಿಂದ ೧೧-೮-೫೬ರವರೆಗೆ

ಮೇಷ. —ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಪರಿಸ್ಥಿತಿ ಸಾಧಾರಣ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ನೌಕರಿಯಲ್ಲಿ ತಿರುಗಾಟ. ಕಾರ್ಯಸಾಧನೆಯಲ್ಲಿ ಸಂಶಯ ಅಗತ್ಯ. ಆಪ್ತರಿಂದ ವಂಚನೆ.

ವೃಷಭ — ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಶುಭ ಕಾರ್ಯಗಳು ಜರುಗುವವು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಪ್ರವಾಸ ಸುಖಕರವಾಗಿರುವುದು.

ಮಿಥುನ —ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು. ಉದ್ಯೋಗದಲ್ಲಿ ಅಭಿವೃದ್ಧಿ. ಕಾರ್ಯಸಾಧನೆಯಲ್ಲಿ ಎಚ್ಚರಿಕೆಯಿರಲಿ.

ಕರ್ಕ.—ಆರೋಗ್ಯ ಚೆನ್ನಾಗಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು. ಸಾಮಾಜಿಕ ಕ್ಷೇತ್ರದಲ್ಲಿ ಅಡ್ಡಿ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ನೌಕರಿಯಲ್ಲಿ ಮೇಲಧಿಕಾರಿಗಳ ಕೈಗೆಳಗಿನ ಕಾರ್ಯಗಳಿಗೆ ವಿಘ್ನ.

ಸಿಂಹ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಏಳ್ಗೆಯು ಹೆಚ್ಚುವುದು. ಪ್ರಥಮಾರ್ಧದ ವ್ಯಾಪಾರವ್ಯವಹಾರಗಳಲ್ಲಿ ತೊಂದರೆ. ನೌಕರಿಯಲ್ಲಿ ಕಿರುಕುಳ. ಮಿತ್ರರಿಂದ ದ್ರೋಹ. ಅಪಘಾತ ಸಂಭವ.

ಕನ್ಯಾ —ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಷ್ಟ. ನೌಕರಿಯಲ್ಲಿ ಸಿರುತ್ಸಾಹ. ಅಪ್ತರಿಂದ ಅಸಹಕಾರ.

ತುಲಾ.—ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಶುಭಕಾರ್ಯಗಳು ಜರುಗುವವು. ವರ್ಗಾವರ್ಗಿ ಸಂಭವ.

ವೃಶ್ಚಿಕ —ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಅಡ್ಡಿ. ವ್ಯಾಪಾರವ್ಯವಹಾರಗಳಲ್ಲಿ ನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ಅಸಮಾಧಾನ.

ಧನು —ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಮಿತ್ರರ ಬಗ್ಗೆ ಎಚ್ಚರಿಕೆಯಿರಲಿ. ನೌಕರಿಯಲ್ಲಿ ಪ್ರಗತಿ ಕಷ್ಟ. ಸಾಮಾಜಿಕ ಕ್ಷೇತ್ರದಲ್ಲಿ ಅಡ್ಡಿ.

ಮಕರ —ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ ಕಷ್ಟ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ನೌಕರಿಯಲ್ಲಿ ನಿರುತ್ಸಾಹ.

ಕುಂಭ —ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಶುಭಕಾರ್ಯಗಳು ಜರುಗುವವು. ಉದ್ಯೋಗದಲ್ಲಿ ಪ್ರೋತ್ಸಾಹ.

ಮೀನ.—ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರಶಂಸೆ. ಮಂಗಳ ಕಾರ್ಯಗಳು ಜರುಗುವುವು.

ಮೋಸ ಹೋಗಬೇಡಿ

ಮೈಸೂರು ಕೃಷ್ಣಮೂರ್ತಿಪುರಂನಲ್ಲಿ ಶ್ರೀ ಕೃಷ್ಣ ಬೇಕರಿ ಎಂಬ ಬೇಕರಿ ಇದ್ದು ಕೆಲಸ ಮಾಡುತ್ತಿರುತ್ತ. ಈ ಸಂಸ್ಥೆಗೂ, ನನಗೂ ಯಾವ ಸಂಬಂಧವೂ ಇಲ್ಲವೆಂಬ ಸಂಗತಿಯನ್ನು ಸಾರ್ವಜನಿಕರ ಅವಗಾಹನೆಗೆ ಈ ಮೂಲಕ ತಿಳಿಸಿರುತ್ತೇನೆ.

ಕೆ. ಆರ್. ಕೃಷ್ಣ ಅಯ್ಯಂಗಾರ್,

ಶ್ರೀ ಕೃಷ್ಣಾ ಬೇಕರಿ,

ಡಿ ಸುಬ್ಬಯ್ಯಾ ರೋಡ್, ಮೈಸೂರು

Edited Printed and Published by ... K. Nagarajan at Sadhvi Press D. Subbaiah Road, Mysore

ಹಿಂದೂ ದೇವಾಲಯಗಳಲ್ಲಿ ಮುಸ್ಲಿಮರ ಪೂಜೆಗಾಗಿ ಮನವಿ

ಮಸೀದಿಯಲ್ಲಿ ಪ್ರಾರ್ಥನೆ ನಡೆಸುವಾಗ ಹಿಂದುಗಳಿಗೆ ಅನುಮತಿ ಕೊಟ್ಟಿರುವಂತೆ ಹಿಂದೂ ದೇವಾಲಯಗಳಿಗೆ ಪ್ರವೇಶ ಮಾಡಲು ಮುಸ್ಲಿಮರಿಗೆ ಅವಕಾಶವೇಕಿಲ್ಲವೆಂದು ಉತ್ತರ ಪ್ರದೇಶದ ವಿಧಾನಸಭೆಯಲ್ಲಿ ಕಾಂಗ್ರೆಸ್ ಮುಸ್ಲಿಮ್ ಸದಸ್ಯರೊಬ್ಬರು ಪ್ರಶ್ನಿಸಿದ್ದಾರೆ. ಎಲ್ಲ ವರ್ಗದ ಹಿಂದುಗಳೂ ಸಹ ಹಿಂದೂ ದೇವಾಲಯಗಳಿಗೆ ಪ್ರವೇಶ ಮಾಡಲು ಹಕ್ಕಿರುವುದೆಂದು ಸೂಚಿಸುವ ಮಸೂದೆಯೊಂದನ್ನು ಸಭೆಯು ಪರಿಶೀಲಿಸುತ್ತಿದೆ. ಮುಸ್ಲಿಂ ಸದಸ್ಯರು ಮಸೂದೆಯ ಮೂಲ ಉದ್ದೇಶಗಳಲ್ಲಿ ಬದಲಾವಣೆಯಾಗಬೇಕೆಂದೂ, ಹಿಂದೂ ದೇವಾಲಯ ಎಂಬುದರ ಬದಲು ಭಾರತೀಯ ದೇವಾಲಯವೆಂದು ಕರೆಯಬೇಕೆಂದೂ ತಿಳಿಸಿದರು. ಮತ್ತೊಬ್ಬ ಮುಸ್ಲಿಂ ಸದಸ್ಯರು ಸನಾತನಿ ಹಿಂದೂ ದೇವಾಲಯಗಳಿಗೆ ಹೋಗಲು ಇಸ್ಲಾಂ ಧರ್ಮವು ನಿಷೇಧಿಸಿಲ್ಲವೆಂದು ತಿಳಿಸಿದರು. ಹಿಂದೂ ದೇವರುಗಳಲ್ಲಿ ನಂಬಿಕೆ ಮತ್ತು ಭಕ್ತಿಯುಳ್ಳ ಮುಸ್ಲಿಮರು ದೇವಾಲಯಗಳಿಗೆ ಹೋಗಲು ಆಕ್ಷೇಪಣೆಯೇನೂ ಇಲ್ಲವೆಂದು ಕಾಂಗ್ರೆಸ್ ಪಕ್ಷದ ಮತ್ತು ಸಂಯುಕ್ತ ಪಕ್ಷದ ಸದಸ್ಯರು ಸೂಚಿಸಿದರು.

ಬಿರುಗಾಳಿಯಿಂದ ೧೦ ಸಾವಿರ ಹಾಂಗ್ಕಾಂಗ್ ನಿವಾಸಿಗಳಿಗೆ ತೊಂದರೆ

ಕಳೆದ ೨೦ ವರ್ಷಗಳಿಂದ ಇಲ್ಲದ ಬಿರುಗಾಳಿಯು ಚೀನಾ ಮೇಲೆ ಬೀಸಿ ಹಾಂಗ್ಕಾಂಗ್ ನಗರದ ೧೦ ಸಾವಿರ ಜನರು ನಿರ್ಗತಿಕರಾಗಿರುತ್ತಾರೆ. ೨೦ ಜನ ಗಾಯಗೊಂಡಿದ್ದಾರೆ ... ವರದಿ ... ನಷ್ಟ ಸಂಭವಿಸಿದೆ.

ಅಂಗಡಿ ಸಿಬ್ಬಂದಿ ಶಾಸನದ ಉಲ್ಲಂಘನೆಗೆ ದಂಡ

ಅಂಗಡಿ ಸಿಬ್ಬಂದಿ ಶಾಸನದ ಪ್ರಕಾರ ... ಅಂಗಡಿ ಮಾಲೀಕರು ... ರಸ್ತೆಯಲ್ಲಿರುವ ಪೈಲಿಂಗ್ ಹಾಲಿನ ಮಾಲೀಕರು ಶ್ರೀ ಎಸ್ ಪಿ ರಾಜು, ದೇವರಾಜ ಮಾರ್ಕೆಟ್ ಹೋಟೆಲಿನ ಅಂಗಡಿಯ ಶ್ರೀ ಸಿ ಕೆ ಶ್ರೀನಿವಾಸಶೆಟ್ಟಿ ಮತ್ತು ವಾಣಿವಿಲಾಸ ಮಾರ್ಕೆಟ್ ಚೌಕದಲ್ಲಿರುವ ಕಂಗ್ರೀಸ್ ಕ್ಲಾತ್ ಎಂಪೋರಿಯಮ್ಮಿನ ಶ್ರೀ ಜಗದೀಶ ಬ್ರದರ್ಸ್ ತಲಾ ೧೦ ರೂ. ... ಮಾಲೀಕರಾದ ಶ್ರೀ ಮಾಣಿಕ್ಯಂರವರಿಗೆ ೫ ರೂ. ದಂಡವನ್ನು ವಿಧಿಸಲಾಗಿದೆ. ... ಅಂಗಡಿಗಳ ಶ್ರೀ ... ಮತ್ತು ಶ್ರೀ ಕೊಡಗಪ್ಪ ... ಅಂಗಡಿಯ ಶ್ರೀ ಸುಬ್ರಹ್ಮಣ್ಯಪ್ಪನವರಿಗೆ ತಲಾ ೫ ರೂ. ... ಅಂಗಡಿ ... ಸ್ವಾಮಿ ಮತ್ತು ... ತಲಾ ೨ ರೂ. ದಂಡ ವಿಧಿಸಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ಗಂಟೆ ... ೭-೧೫ ದೇವರನಾಮ ... ೭-೪೫ ... ಸಂಗೀತ ... ಸಂಜೆ ೫-೩೦ ... ಸಂಗೀತ ... ೬-೪೫ ... ೭ ಗಂಟೆ ... ಸಂಗೀತ ... ೮-೪೫ ಹಿಂದಿ ಗೀತೆ ... ೯ ಗಂಟೆ ... ಸಂಗೀತ ... ಕಾರ್ಯಕ್ರಮದ ಅಭಿವೃದ್ಧಿ ... ಭಾಷಣ. ೯-೪೫ ... ಕಾರ್ಯಕ್ರಮ.

ರಷ್ಯದಿಂದ ಜಪಾನಿನ ಬೇಡಿಕೆಯ ತಿರಸ್ಕಾರ

ರಷ್ಯವು ಆಕ್ರಮಿಸಿರುವ ಎರಡು ದ್ವೀಪಗಳನ್ನು ವಾಪಸು ಕೊಡುವಂತೆ ಜಪಾನು ಮಾಡಿರುವ ಬೇಡಿಕೆಯನ್ನು ಸೋವಿಯಟ್ ಸರ್ಕಾರವು ತಿರಸ್ಕರಿಸಿರುತ್ತದೆ. ಉಭಯ ರಾಷ್ಟ್ರಗಳ ನಡುವೆ ಆಗುತ್ತಿರುವ ಮಾತುಕತೆಗಳಲ್ಲಿ ಇದು ಮೊದಲನೇ ತೊಡಕಾಗಿ ಪರಿಣಮಿಸಿದೆ.

ಮನೆ ಕುಸಿದು ಆರು ಜನರ ಮರಣ

ಅಹಮದಾಬಾದಿನಲ್ಲಿ ಮೊನ್ನೆ ಮಧ್ಯಾಹ್ನ ಮೂರು ಮನೆಗಳು ಕುಸಿದು, ಮೂವರು ಮಹಿಳೆಯರು, ಇಬ್ಬರು ಗಂಡಸರು ಮತ್ತು ಒಬ್ಬ ಬಾಲಕಿಯು ಮೃತರಾದರು. ಆರು ಮಂದಿಗೆ ಗಾಯವಾಗಿದೆ. ಇಬ್ಬರು ಮಣ್ಣಿನಲ್ಲಿ ಹೂತುಹೋದರು.

ಜೈಲಿನಲ್ಲಿದ್ದ ಮುಖಂಡರ ಸ್ಮಾರಕ ಪಟ್ಟಿ

ಸ್ವಾತಂತ್ರ್ಯ ಸಂಗ್ರಾಮದಲ್ಲಿ ನಾನಾ ಜೈಲುಗಳಲ್ಲಿದ್ದ ಮುಖಂಡರ ಸ್ಮಾರಕಗಳನ್ನು ಇಡಲು ಒಂದು ಯೋಜನೆಯನ್ನು ತಯಾರಿಸಲಾಗಿದೆ. ಅಂತಹ ಪಟ್ಟಿಗಳನ್ನು ಜೈಲುಗಳಲ್ಲಿ ಮುಖ್ಯವಾದ ಕಡೆ ಇಟ್ಟು, ಅವುಗಳಲ್ಲಿ ಮುಖಂಡರ ಹೆಸರುಗಳನ್ನು ಬರೆಯುವಂತೆ ಕ್ರಮ ಕೈಗೊಳ್ಳಲು ಸಂಸ್ಥಾನ ಸರ್ಕಾರಗಳಿಗೆ ಕೇಂದ್ರದವರು ಸಲಹೆ ಮಾಡಿರುತ್ತಾರೆ.

ಮಹಿಳಾ ನೌಕರರು ವಿವಾಹಿತನನ್ನು ಮದುವೆಯಾಗಕೂಡದು

ಸರ್ಕಾರದ ಅನುಮತಿ ಪಡೆಯದೆ, ಒಬ್ಬ ಪತ್ನಿಯನ್ನು ಹೊಂದಿರುವ ನೌಕರನನ್ನು ಸರ್ಕಾರೀ ನೌಕರಳು ವಿವಾಹವಾಗಕೂಡದೆಂಬ ನಿಬಂಧನೆಯನ್ನು ತಿರುವಾಂಕೂರು ಸರ್ಕಾರದವರು ಮಾಡಿರುತ್ತಾರೆ.

ಹಿಂದಿ ಅಧ್ಯಾಪಕರಿಗೆ ಸೂಚನೆ

ಮೈಸೂರಿನಲ್ಲಿ ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಥಮಿಕ, ಮಧ್ಯಮ, ರಾಷ್ಟ್ರಭಾಷಾ, ಪ್ರವೇಶಿಕಾ ಮತ್ತು ರಾಷ್ಟ್ರಭಾಷಾ ವಿಶಾರದ ತರಗತಿಗಳನ್ನು ಕ್ರಮವಾಗಿ ನಡೆಸುತ್ತಿರುವ ಅಧ್ಯಾಪಕರು ಸಭಾ ಕಾರ್ಯಾಲಯದ ... ದೊರೆಯುವ ... ಅರ್ಜಿಗಳನ್ನು ... ಹಿಂದಿ ಪ್ರಚಾರ ಸಭೆಯ ಕಾರ್ಯಾಲಯಕ್ಕೆ ಕಳುಹಿಸುವಂತೆ ಕೋರಲಾಗಿದೆ.

ಮೋಟಾರು ಢಿಕ್ಕಿ

ಕಾರ್ಮಿಕ ಕಮಿಷನರರಿಗೆ ಗಾಯ

ಸಂಸ್ಥಾನದ ಕಾರ್ಮಿಕ ಕಮಿಷನರರಾದ ಶ್ರೀ ... ಅವರಿಗೆ ಕಳೆದ ಗುರುವಾರ ... ಅಧಿಕಾರಿಯೊಬ್ಬರ ಮೋಟಾರು ಡಿಕ್ಕಿ ಹೊಡೆದು ಪೆಟ್ಟು ಬಿದ್ದಿತೆಂದೂ, ಅವರನ್ನು ಬೌರಿಂಗ್ ಆಸ್ಪತ್ರೆಗೆ ಸೇರಿಸಲಾಯಿತೆಂದೂ ವರದಿಯಾಗಿದೆ.

“ರಕ್ತದ ಮಡುವಿನಲ್ಲಿ”

ಶ್ರೀ ... ಮಧುಕರ ರವರಿಂದ ವಿರಚಿಸಲ್ಪಟ್ಟು ಬೆಂಗಳೂರಿನ ಜಾತಕ ಪ್ರಕಾಶನದವರಿಂದ ಪ್ರಕಟಿಸಲ್ಪಟ್ಟಿರುವ “ರಕ್ತದ ಮಡುವಿನಲ್ಲಿ” ಎಂಬ ಪತ್ತೇದಾರಿ ಕಾದಂಬರಿಯ ಪ್ರತಿಯೊಂದನ್ನು ಅವರಿಂದ ಸ್ವೀಕರಿಸಿದ್ದೇವೆ. ಸಿನಿಮಾ ನಟಿಯೊಬ್ಬಳನ್ನು ತನ್ನ ವಶದಲ್ಲಿಟ್ಟುಕೊಂಡು ಅವಳ ಸಂಪಾದನೆಯಲ್ಲೇ ಜೀವನ ನಡೆಸುತ್ತಿದ್ದು, ಅವಳು ಬೇಸರಗೊಂಡು ಸಹಾಯಮಾಡಲು ನಿರಾಕರಿಸಿದಾಗ ಅವಳನ್ನೇ ಕೊಲೆ ಮಾಡಿ ಕಣ್ಮರೆಯಾಗಿದ್ದವನನ್ನು ... ಪತ್ತೆದಾರನೂ ಆತನ ಪತ್ನಿಯೂ ಕಂಡುಹಿಡಿದ ರೀತಿಯನ್ನು ಲೇಖಕರು ಬಹಳ ಸ್ವಾರಸ್ಯವಾಗಿ ನಿರೂಪಿಸಿದ್ದಾರೆ. ... ಅಂದದ ... ಮುದ್ರಣವೂ ... ಆಕರ್ಷಕ ... ಇದರ ಬೆಲೆ ಆರು ಆಣೆ.

ಪೂರ್ವ ಪಾಕಿಸ್ತಾನದ ಮಂತ್ರಿಗಳ ಮೇಲೆ ಲಂಚದ ಆಪಾದನೆ

ಪೂರ್ವ ಪಾಕಿಸ್ತಾನದ ಮಂತ್ರಿಗಳು, ಮಾಜಿ ಸಚಿವರು ಮತ್ತು ಇತರ ಉನ್ನತಾಧಿಕಾರಿಗಳ ಮೇಲೆ ಬಂದಿರುವ ಲಂಚದ ಆಪಾದನೆಗಳ ತನಿಖೆಗಾಗಿ ಢಾಕಾ ಹೈಕೋರ್ಟಿನ ಮಾಜಿ ನ್ಯಾಯಾಧೀಶರಾದ ... ಇಬ್ರಾಹಿಂರವರ ಅಧ್ಯಕ್ಷತೆಯಲ್ಲಿ ಸಮಿತಿಯೊಂದನ್ನು ರಚಿಸಲಾಗಿದೆ. ಉನ್ನತ ಸ್ಥಾನಗಳಲ್ಲಿರುವ ಜನರನ್ನು ಪ್ರಶ್ನಿಸಿ, ಅವರ ಆಸ್ತಿ ಮತ್ತು ಐಶ್ವರ್ಯದ ಮೂಲಗಳ ಬಗ್ಗೆ ಕೇಳಲು ಸಮಿತಿಗೆ ಅಧಿಕಾರವೀಯಲಾಗಿದೆ.

ಪೂರ್ವ ಪಾಕಿಸ್ತಾನದ ಅಧಿಕಾರಿಗೆ ಛಡಿ ಏಟು

ಪೂರ್ವ ಪಾಕಿಸ್ತಾನದ ವ್ಯವಸಾಯಾಧಿಕಾರಿಯೊಬ್ಬರು, ಜನರಿಗೆ ಹಂಚಲು ಕೊಡಲಾಗಿದ್ದ ಅಕ್ಕಿಯನ್ನು ಕೊಡದೆ ಇಟ್ಟಿದ್ದಕ್ಕಾಗಿ ಛಡಿ ಏಟಿನ ಶಿಕ್ಷೆಗೆ ಗುರಿಯಾಗಿರುತ್ತಾರೆಂದು ವರದಿಯಾಗಿದೆ. ಅಲ್ಲಿ ಆಹಾರದ ಪರಿಸ್ಥಿತಿಯು ಬಹಳ ತೀವ್ರವಾಗಿರುವುದೆಂದೂ ಈ ಬಗ್ಗೆ ಲಂಚಗುಳಿತನವನ್ನು ತಪ್ಪಿಸಲು ಕ್ರಮ ಅಗತ್ಯವಾಗಿದೆಯೆಂದೂ ಅಧಿಕಾರಿಗಳು ಭಾವಿಸಿರುತ್ತಾರೆ.

ವಿದ್ಯಾರ್ಥಿಗಳಿಂದ ವನಮಹೋತ್ಸವ

ರಾಜಧಾನಿಯ ಮಹಾರಾಜಾ ಹೈಸ್ಕೂಲಿನ ಸಂಘದ ಆಶ್ರಯದಲ್ಲಿ ನೆನ್ನೆ ವನಮಹೋತ್ಸವವು ನೆರವೇರಿತು. ಹಾಸನದ ಡಿ ಡಿ ಪಿ ಐ ಯವರಾದ ಶ್ರೀ ಡಿ. ವಾಸುದೇವಯ್ಯನವರು ಅಧ್ಯಕ್ಷತೆ ವಹಿಸಿದ್ದರು. ಶ್ರೀ ಜಯರಾಂರವರಿಂದ ಪ್ರಾರ್ಥನೆ ಮತ್ತು ಕಾರ್ಯದರ್ಶಿ ಶ್ರೀ ಎಂ ಆರ್ ಸೀತಾರಾಮರಾಯರಿಂದ ಸ್ವಾಗತ ಭಾಷಣವಾದನಂತರ ಅಧ್ಯಕ್ಷರು ಮಾತನಾಡಿ ವನಮಹೋತ್ಸವದಿಂದ ಆಗುವ ಫಲವನ್ನು ವಿವರಿಸಿದರು. ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಎಸ್. ರಾಜಯ್ಯಂಗಾರ್ಯರು ವಂದನಾರ್ಪಣೆ ಮಾಡಿದರು.

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಸಣ್ಣಭತ್ತ	೪೧ ೦ ೦	೪೩ ೧೪ ೦
ದಪ್ಪಭತ್ತ	೩೮ ೮ ೦	೩೯ ೬ ೦
ರಾಗಿ	೩೦ ೧೪ ೦	೪೦ ೦ ೦
ಕಡಲೇಕಾಯಿ	೧೪ ೦ ೦	೨೦ ೧೨ ೦
ಎಳ್ಳು	೮೦ ೦ ೦	೮೬ ೦ ೦
ಹೊಂಗೆಬೀಜ	೨೪ ೦ ೦	
ಹುಣಸೆ	೧೪ ೨ ೦	೧೪ ೧೪ ೦
ಹುರುಳಿ	೪೨ ೦ ೦	೪೨ ೨ ೦
ಹಲಸಂದೆ	೫೯ ೨ ೦	೫೨ ೮ ೦
ಉಪ್ಪು	೬೬ ೦ ೦	
ಸೀಗೆಕಾಯಿ	೮ ೧೪ ೦	
ದುಂಡುಮೆಣಸು	೨ ೮ ೦	೬ ೧೦ ೦
ಮೆಣಸಿನಕಾಯಿ	೧೮ ೬ ೦	
ತೆಂಗಿನಕಾಯಿ ಸಾವಿರಕ್ಕೆ	೧೧೯ ೦ ೦	೨೦೮ ೮ ೦

ನವರತ್ನ ರೀತಿಯಲ್ಲಿ

ಪರಿಪೂರ್ಣ ಆರೋಗ್ಯವನ್ನು ಪಡೆಯಿರಿ

ನವರತ್ನಗಳಲ್ಲಿರುವ ಗುಣಪಡಿಸುವ ಶಕ್ತಿಯು ತತ್ವ ಮತ್ತು ಸಹಜವಾಗಿ ಜೀರ್ಣಮಾಡುವ ವಿಧಾನದ ಮೂಲಕ ರಕ್ತ ಬರುವ ತತ್ವವನ್ನು ರಂಗು ಹಿಡಿದ ಆಯುರ್ವೇದ ವಿಜ್ಞಾನಕ್ಕೆ ಹೊಸದ ಕೊಡುಗೆಯು ಬರವಣಿಗೆಯಾಗಿರುತ್ತದೆ

ಇವೆರಡು ತತ್ವಗಳು

ನವರತ್ನ ಕಲ್ಪವಲ್ಲಿ

ಪಂಡಿತ ದುರ್ಗಾದತ್ತ ಶರ್ಮ

ಕವಿರಾಜ್ ವೈದ್ಯ ವಾಚಸ್ಪತಿ

ಯವರಿಂದ ಸಂಯೋಜಿಸಲ್ಪಟ್ಟಿವೆ

ಪಿತ್ತ, ಶೀತ, ಕೆಂಪು, ಮೂತ್ರ, ಪಿತ್ತ ಕಫದ ರೋಗ, ಪ್ರದರ, ಶೀತ, ವೈಧವ್ಯ ಮತ್ತು ಹಳೆ ಇವೇ ಬಂಧಕತ್ವ ರೋಗಗಳು ಎಲ್ಲರಿಗೂ ಉಪಯುಕ್ತವಾಗಿ ಪರಿಶೋಧಿತವಾದ ಮತ್ತು ಕೆಡಕಿಲ್ಲದ ಗುಣಕಾರಿ

ಅಜೀರ್ಣ ರೋಗ, ರಕ್ತದಲ್ಲಿ ವಿಷ, ನರಗಳ ದೌರ್ಬಲ್ಯ, ಫಿಸ್ಟುಲಾ (ಮೂಲ ರೋಗ), ಚರ್ಮರೋಗ, ಸಿಫಿಲಿಸ್, ಆನೆ ಕಾಲು, ಮೂಲವ್ಯಾಧಿ ಮತ್ತು ಉಬ್ಬಸ ರೋಗಗಳು ಇದರಿಂದ ಪರಿಹಾರವಾಗುವುವು. ಹೆಚ್ಚಿನ ವಿವರಗಳಿಗೆ ಬರೆಯಿರಿ.

NAVRATNA KALPA PHARMACY,

Jullunder City (India)

GLOBE TUTORIAL COLLEGE,

Sadvidya Patasala Buildings Mysore.

Provides excellent coaching by experienced teachers

for S. S. L. C. 1956

Join at once — Time 7-30 to 10-30 A.M.

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ ೧೮] SADHVI : MONDAY 6—8—1956 ಮೈಸೂರು : ಸೋಮವಾರ ೬—೮—೧೯೫೬ [ಸಂಚಿಕೆ : ೬

ನಗರದ ಬಳಿ ಬೆಂಕಿಕಡ್ಡಿ ಕಾರ್ಖಾನೆ ಸಿಡಿತ; ಇಬ್ಬರ ಮರಣ

ರೆವಿನ್ಯೂ ಅಧಿಕಾರಿಗಳಿಗೆ ಮಾಹೆಯಾನಾ ೧೦೦ ರೂ. ಭತ್ಯ

ಪ್ರತಿಭಟನೆಗಾಗಿ ಸದಸ್ಯರೊಬ್ಬರ ಸಭಾತ್ಯಾಗ

ಮೈಸೂರು ೬

ಮೊನ್ನೆ ನಡೆದ ಪುರಸಭಾಧಿವೇಶನದಲ್ಲಿ, ರೆವಿನ್ಯೂ ಅಧಿಕಾರಿ ಶ್ರೀ ತಿಮ್ಮಯ್ಯನವರಿಗೆ ಅವರು ಕೆಲಸಕ್ಕೆ ಸೇರಿದಂದಿನಿಂದ ಇಲ್ಲಿಯವರೆಗೆ ಮಾಹೆಯಾನಾ ೧೦೦ ರೂ. ಭತ್ಯವನ್ನು ಕೊಡಬೇಕೆಂಬ ವಿಷಯವು ಪರಿಶೀಲನೆಗೆ ಬಂದಾಗ ಅಧಿಕಾರಿಯು ಸ್ವಂತ ವಾಹನವನ್ನು ಇಟ್ಟುಕೊಳ್ಳದಿರುವುದರಿಂದ ವಾಹನ ಭತ್ಯವನ್ನು ಕೊಡುತ್ತಿರುವುದು ಅಕ್ರಮವಾಗುವುದೆಂದೂ ಅದನ್ನು ಕೊಡಬಾರದೆಂದೂ ಶ್ರೀ ಮಿರ್ ನೂರ್ ಹುಸೇನರು ತಿಳಿಸಿ, ಆ ಬಗ್ಗೆ ಪ್ರತಿಭಟನೆಗಾಗಿ ಸಭಾತ್ಯಾಗ ಮಾಡುವುದಾಗಿ ಹೇಳಿ ಹೊರಗೆಹೋದರು

ಶ್ರೀ ತಿಮ್ಮಯ್ಯನವರು ಪುರಸಭೆಯ ರೆವಿನ್ಯೂ ಮತ್ತು ಸುಂಕದ ಇಲಾಖೆಗಳಲ್ಲಿ ಒಟ್ಟಿಗೆ ೧೭ ವರ್ಷ ಕಾಲ ದುಡಿದಿರುವುದಕ್ಕಾಗಿ ಅವರಿಗೆ ವಿಶೇಷ ಸಂಭಾವನೆ ಕೊಡಿಸಲು ಕಾನೂನಿನಲ್ಲಿ ಅವಕಾಶವಿಲ್ಲದಿದ್ದುದರಿಂದ ಕೊನೆಗೆ ಈ ರೀತಿ ಶಿಫಾರಸು ಮಾಡಿದ್ದನ್ನು ಸರ್ಕಾರದವರು ಒಪ್ಪಿದ್ದಾರೆಂದೂ, ಸಭೆಯು ಇದನ್ನು ಅಂಗೀಕರಿಸಬೇಕೆಂದೂ ಅಧ್ಯಕ್ಷರು ತಿಳಿಸಿದರು ಶ್ರೀ ತಿಮ್ಮಯ್ಯನವರಿಗೆ ೧೯೫೦ನೇ ಇಸವಿಯಿಂದ ಭತ್ಯವನ್ನು ಕೊಡಬೇಕೆಂದೂ ಮತ್ತು ಭತ್ಯವನ್ನು ಪಡೆದೂ ವಾಹನವನ್ನಿಟ್ಟುಕೊಳ್ಳದಿರಲು ವಿನಾಯಿತಿ ಕೊಡಬೇಕೆಂದೂ ಸರ್ಕಾರಕ್ಕೆ ಶಿಫಾರಸ್ ಮಾಡಲು ತೀರ್ಮಾನಿಸಲಾಯಿತು

ನಗರದ ಚಾಮರಾಜಪುರಂ ಮತ್ತು ಜಯನಗರಗಳ ನಡುವೆ ಇರುವ ಸರ್ಕಾರಿ ಟಿಂಬರ್ ಡಿಪೋವನ್ನು ಬೇರೆ ಕಡೆಗೆ ವರ್ಗಾಯಿಸಬೇಕೆಂದು ತೀರ್ಮಾನಿಸಲಾಯಿತು ಡಿಪೋ ಬದಲಾವಣೆಯನಂತರ ಆ ಸ್ಥಳವನ್ನು ಹಾಗೆಯೇ ಖಾಲಿ ಬಿಡಬೇಕೆಂದು ವಿರೋಧ ಪಕ್ಷದವರು ಒತ್ತಾಯ ಮಾಡಿದರು

ಪೂರ್ವಕ್ಕೆ ಆನೆಗೊಂದಿ ಅರಸ್ ರಸ್ತೆ, ದಕ್ಷಿಣದಲ್ಲಿ ಆಯುರ್ವೇದ ಕಾಲೇಜ್ ಬಳಿಯಿರುವ ಬಸವನ ವಿಗ್ರಹ, ಪಶ್ಚಿಮಕ್ಕೆ ಬನ್ನಿಮಂಟಪ ರಸ್ತೆಗಳನ್ನೊಳಗೊಂಡ ನಗರದ ಪ್ರದೇಶಕ್ಕೆ "ತಿಲಕ್ ನಗರ" ವೆಂದು ಹೆಸರಿಡಲು ನಿರ್ಧರಿಸಲಾಯಿತು

ಬರ್ಮಾ ಮತ್ತು ಚೀಣಾ ಸೈನಿಕರ ಹೋರಾಟಕ್ಕೆ ಸಿದ್ಧತೆ?

ಬರ್ಮಾದ ಈಶಾನ್ಯ ಗಡಿಯ ೧೦೦ ಮೈಲಿ ವಿಸ್ತಾರ ಪ್ರದೇಶದಲ್ಲಿ ಬರ್ಮಾ ಮತ್ತು ಚೀಣಾ ಸೈನ್ಯಗಳು ಪರಸ್ಪರ ವಿರೋಧವಾಗಿ ನಿಂತಿವೆಯೆಂದೂ, ಮೊದಲು ಧಾಳಿ ಮಾಡದಂತೆ ಬರ್ಮಾ ಸೈನಿಕರಿಗೆ ಸೂಚನೆ ಕೊಡಲಾಗಿದೆಯೆಂದೂ ತಿಳಿದುಬಂದಿದೆ ೧,೫೦೦ ಚೀಣಾ ಸೈನಿಕರು ೧೦ ಠಾಣಗಳಲ್ಲಿರುವರು. ಲಾಶಿಯೊ ಎಂಬಲ್ಲಿ ೬ ಗಂ. ಕಾಲ ಉಭಯರಿಗೂ ಘರ್ಷಣೆಯಾಗಿ ಚೀಣಾ ಸೈನ್ಯದ ಕಡೆ ಒಬ್ಬ ಅಧಿಕಾರಿಯೂ, ೧೯ ಸೈನಿಕರೂ ಕೊಲ್ಲಲ್ಪಟ್ಟು ಅನೇಕರು ಸೆರೆಸಿಕ್ಕಿದರು

ಬೊಂಬಾಯಿ ಸಂಬಳದ ದರ್ಜೆ. ಕೇಂದ್ರ ಮಟ್ಟದ ಭತ್ಯ ಬೇಕು

ಸಂಸ್ಥಾನದ ನಾನ್‌ಗೆಜೆಟೆಡ್ ನೌಕರರ ಬೇಡಿಕೆ

ಬೆಂಗಳೂರು ೬

ಸಂಸ್ಥಾನದ ನಾನ್‌ಗೆಜೆಟೆಡ್ ನೌಕರರ ಸಮ್ಮೇಳನವು ನೆನ್ನೆ ಇಲ್ಲಿ ಸಂಘದ ಅಧ್ಯಕ್ಷ ಶ್ರೀ ಬಿ ಚನ್ನಬಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು ಅವರು ಭಾಷಣ ಮಾಡಿ, ಎಲ್ಲಾ ಕಡೆಗಳಲ್ಲೂ ನಾನ್ ಗೆಜೆಟೆಡ್ ನೌಕರರ ಸಂಬಳಗಳು ಹೆಚ್ಚುತ್ತಿರುವಾಗ, ಮೈಸೂರು ಸಂಸ್ಥಾನದ ನೌಕರರ ವೇತನಗಳು ಹಚ್ಚದಿರುವುದು ಅವರ ದೌರ್ಭಾಗ್ಯವೆಂದು ತಿಳಿಸಿದರು ದೇಶದಲ್ಲಿ ಆರ್ಥಿಕ ಸ್ಥಿತಿ ಮಟ್ಟ, ರಾಷ್ಟ್ರೀಯ ವರಮಾನ ಮುಂತಾದುವು ಹೆಚ್ಚುತ್ತಿದ್ದರೂ ಎನ್. ಜಿ. ಓ ಗಳ ವರಮಾನವು ಹಾಗೆಯೇ ಉಳಿದಿರುವುದೆಂದು ಸೂಚಿಸಿದರು

ಸಂಸ್ಥಾನದ ಎನ್. ಜಿ. ಓ ಗಳ ಸಂಬಳದ ಮಟ್ಟವು ಭಾರತದಲ್ಲೇ ಅತ್ಯಂತ ಕಡಿಮೆಯೆಂದೂ, ಅದನ್ನು ಉತ್ತಮಪಡಿಸಲು ಕ್ರಮ ಕೈಗೊಂಡಿಲ್ಲವೆಂದೂ, ಹೊಸ ಸಂಸ್ಥಾನದ ರಚನೆಯು ೨ ತಿಂಗಳಲ್ಲಿ ಆಗುವುದರಿಂದ ಮುಂದೆ ಗೊಂದಲ ಮತ್ತು ನಿರಾಶೆಯುಂಟಾಗದಿರಲು ಸರ್ಕಾರದವರು ಬೊಂಬಾಯಿ ದರ್ಜೆ ಸಂಬಳವನ್ನು ಹೊಸ ಸಂಸ್ಥಾನಾರಂಭ ದಿನದಿಂದಲೇ ಕೊಡಬೇಕೆಂದೂ ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು.

ಕೇಂದ್ರದ ನೌಕರರು ಪಡೆಯುತ್ತಿರುವ ತುಟ್ಟಿ ಭತ್ಯವನ್ನು ಕೊಡುವಂತೆಯೂ ಪ್ರಾರ್ಥಿಸಲಾಯಿತು ಈ ಬಗ್ಗೆ ಭತ್ಯದ ಅಂತರವನ್ನು ಹೋಗಲಾಡಿಸಬೇಕೆಂದೂ ಸಲಹೆ ಮಾಡಲಾಯಿತು

ಅಲ್ಲದೆ ತಾತ್ಕಾಲಿಕ ಪರಿಹಾರವನ್ನು ಕನಿಷ್ಠ ಪಕ್ಷ ೫ ರೂ ನಷ್ಟಾದರೂ ಕಳೆದ ಜನವರಿ ೧ ರಿಂದ ಕೊಡುವಂತೆಯೂ, ಮನೆ ಬಾಡಿಗೆ, ಪರಿಹಾರ ಭತ್ಯ ಮತ್ತು ತುಟ್ಟಿ ಭತ್ಯದಲ್ಲಿ ಅರ್ಧ ಭಾಗವನ್ನು ಸಂಬಳಕ್ಕೆ ಸೇರಿಸುವುದು ಮುಂತಾದ ಬೇಡಿಕೆಗಳನ್ನೂ ಮಾಡಲಾಯಿತು

ತನೇ ಪಂಚ ವಾರ್ಷಿಕ ಯೋಜನೆಯನ್ನು ಯಶಸ್ವಿಯಾಗಿ ನಡೆಸುವಂತೆ ನೌಕರರನ್ನು ಪ್ರಾರ್ಥಿಸಲಾಯಿತು

ಹುಚ್ಚು ಹಿಡಿದ ಚೀಣದವನಿಂದ ೧೦ ಜನರ ಕೊಲೆ

ಹಾಂಕಾಂಗಿನಲ್ಲಿ ಹುಚ್ಚುಹತ್ತಿದ ಪ್ರತಿಕ್ರಾಂತಿಕಾರಿ ಚೀಣೀಯನೊಬ್ಬನು ನೆನ್ನೆ ೧೦ ಜನರನ್ನು ಚೂರಿಯಿಂದ ಇರಿದು ಕೊಂದನು. ವಸ್ತಗಿರಿಯನ್ನು ತಪ್ಪಿಸಿಕೊಳ್ಳಲು ಯತ್ನಿಸಿದಾಗ ಅವನನ್ನು ಗುಂಡು ಹೊಡೆದು ಕೊಲ್ಲಲಾಯಿತು ಅವನ ಹೆಸರು ವಾ ಯುನ್ ಚೊಂಗ್. ಸತ್ತವರಲ್ಲಿ ಒಂದು ಸಂಸಾರದ ೬ ಜನರಿರುವರು

○ ಭಾರತ ಸೈನ್ಯದಲ್ಲಿ ಅವ್ಯವಸ್ಥೆ ವೆ ತ್ತು ಗೊಂದಲವನ್ನುಂಟು ಮಾಡುವ ಉದ್ದೇಶದಿಂದ ನಾಗಾ ದಂಗೆಕೋರರು ದೂರ ಪ್ರದೇಶದಿಂದ ಮರೆಯಲ್ಲಿ ನಿಂತು ಬೆಂಕಿಯ ಬಾಣವನ್ನು ಪ್ರಯೋಗಿಸುತ್ತಿರುವರೆಂದು ವರದಿಯಾಗಿದೆ

ನಗರದ ಬಳಿ ಬೆಂಕಿ ಕಡ್ಡಿ ಕಾರ್ಖಾನೆಯಲ್ಲಿ ಸಿಡಿತ

ಇಬ್ಬರ ಮರಣ

ಮೈಸೂರು ೬

ನಗರದ ಚಾಮುಂಡಿಪುರ ಬಡಾವಣೆ ಬಳಿ ಉತ್ತನಹಳ್ಳಿ ಕಡೆಗೆ ಹೋಗುವ ಮಾರ್ಗದಲ್ಲಿರುವ ಬಿ.ಕೆ ಕಡ್ಡಿ ಕಾರ್ಖಾನೆಯಲ್ಲಿ ಈ ದಿನ ಬೆಳಗ್ಗೆ ೧೧ ಗಂಟೆ ಸಮಯದಲ್ಲಿ ಭಾರಿ ಸಿಡಿತವುಂಟಾಗಿ ಒಬ್ಬ ಕಾರ್ಮಿಕನೂ, ಶ್ರೀ ವೆಂಕಟರಾಜ ಅರಸು ಎಂಬುವರ ಮಗನೊಬ್ಬನೂ ಮೃತಪಟ್ಟಿರುವುದಾಗಿ ಗೊತ್ತಾಗಿದೆ ಸಿಡಿತದ ಕಾರಣವೇನೆಂಬುದು ಇನ್ನೂ ತಿಳಿದುಬಂದಿಲ್ಲ ತಾಲ್ಲೂಕು ಪೊಲೀಸಿನವರು ತನಿಖೆ ನಡೆಸುತ್ತಿರುವರು

ಸಂತಾಪ ಸೂಚನೆ

ನಗರದಲ್ಲಿರುವ ಮಾಧ್ವ ಮಹಾ ಮಂಡಲಿಯ ವಿದ್ಯಾರ್ಥಿ ನಿಲಯದವರು ಆ॥ ಛಾ॥ ಮಾಧ್ವ ಮಹಾ ಮಂಡಲಿಯ ಮೈಸೂರು ಶಾಖಾ ಮಾಜಿ ಅಧ್ಯಕ್ಷ ರಾಜಸೇವಾಸಕ್ತ ವೈ. ಕೆ ರಾಮಚಂದ್ರರಾಯರ ನಿಧನಕ್ಕಾಗಿ ಸಂತಾಪ ಸೂಚಕ ಸಭೆಯನ್ನೇರ್ಪಡಿಸಿದ್ದರು ನಿಲಯದ ಸಂಚಾಲಕ ಶ್ರೀ ಕೆ ವಿಠಲೋಪಾಧ್ಯಾಯರು ನಿಲಯ ಮತ್ತು ಮಾಧ್ವ ಮಹಾ ಮಂಡಲಿಗೆ ಮೃತರು ಸಲ್ಲಿಸಿದ ಸೇವೆಯನ್ನು ಪ್ರಶಂಸಿಸಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿದರು ಸಭೆಯು ಎರಡು ನಿಮಿಷ ಕಾಲ ಮೌನವನ್ನಾಚರಿಸಿತು

ಭೂ ಮಧ್ಯ ಸಮುದ್ರ ಪ್ರದೇಶಕ್ಕೆ ಬ್ರಿಟಿಷ್ ಮತ್ತು ಫ್ರೆಂಚ್ ನೌಕೆ

ಬ್ರಿಟನ್ನಿನ ವಿಮಾನ ವಾಹಕ ನೌಕೆಯೊಂದು ನೆನ್ನೆ ರಾತ್ರಿ ಭೂಮಧ್ಯ ಸಮುದ್ರಕ್ಕೆ ತೆರಳಿತು. ಅದರಲ್ಲಿ ಪ್ಯಾರಾಚ್ಯೂಟ್ ಸೈನಿಕರೂ ಇರುವರು. ಅಲ್ಲದೆ ಕಮಾಂಡೊ ಪಡೆಗಳೂ ಇವೆ ಗಂಟೆಗಂಟೆಗೂ ಸೈನಿಕರನ್ನು ತರುತ್ತಿರುವ ರೈಲುಗಳು ಪೋರ್ಟ್ಸ್‌ಮತ್ ರೇವಿಗೆ ಬರುತ್ತಿವೆ ಬ್ರಿಟನ್ನು ಸೂಯಜ್ ಬಿಕ್ಕಟ್ಟಿನ ಬಗ್ಗೆ ವಿಶೇಷವಾಗಿ ಸೈನಿಕರ ಚಲನವಲನಗಳನ್ನು ನಡೆಸುತ್ತಿದೆ.

ಫ್ರೆಂಚ್ ನೌಕೆಗಳು ಪೂರ್ವ ಭೂಮಧ್ಯ ಸಮುದ್ರ ಪ್ರದೇಶಕ್ಕೆ ಹೋಗಲು ಸಿದ್ಧವಾಗಿ ನಿಂತಿವೆ ಈ ಪಡೆಗಳಲ್ಲಿ ೧ ಯುದ್ಧ ನೌಕೆಯೂ ಇವೆ

ದಕ್ಷಿಣ ಆಫ್ರಿಕದಿಂದ ಸಹಸ್ರಾರು ಭಾರತೀಯರ ಉಚ್ಚಾಟನೆ

ದಕ್ಷಿಣ ಆಫ್ರಿಕದ ಗುಂಪು ವಿಂಗಡಣೆ ಶಾಸನದ ಪ್ರಕಾರ ಅಲ್ಲಿನ ಸರ್ಕಾರದ ಗೆಜೆಟ್ಟಿನಲ್ಲಿ ನೋಟೀಸನ್ನು ಪ್ರಕಟಿಸಿ, ೨ ವರ್ಷದ ಅವಧಿಯಲ್ಲಿ ಜೋಹಾನ್ಸ್‌ಬರ್ಗ್ ನಗರದಲ್ಲಿರುವ ಸಹಸ್ರಗಟ್ಟಲೆ ಭಾರತೀಯರು ತಮ್ಮ ಮನೆಗಳು ಮತ್ತು ಅಂಗಡಿಗಳನ್ನು ಬಿಟ್ಟುಹೋಗುವಂತೆ ತಿಳಿಸಲಾಗಿದೆ ಹಲವರಿಗೆ ೧ ವರ್ಷದ ಅವಧಿಯನ್ನು ಕೊಡಲಾಗಿದೆ ಭಾರತೀಯರು ಈಗ ವಾಸವಿರುವ ಸ್ಥಳಗಳು ಖಾಲಿಯಾದನಂತರ ಅಲ್ಲಿಗೆ ಬಿಳಿಯರು ಬರುವರು ಖಾಲಿ ಮಾಡದಿದ್ದವರ ಮೇಲೆ ಮೊಕದ್ದಮೆ ಹೂಡಲಾಗುವುದು. ನೂರಾರು ಭಾರತೀಯರು ದಿವಾಳಿ ಹಿಡಿದು, ವ್ಯಾಪಾರೋದ್ಯಮದಲ್ಲಿ ಲಕ್ಷಾಂತರ ಪೌಂಡು ಬಂಡವಾಳ ಹಾಕಿರುವರು

ಆಗಮಶ್ರೀಯ ಮಹಾ ಮಂಡಲದ ಸಮ್ಮೇಳನ

ಅವನಿ ಜಗದ್ಗುರುಗಳು ಮತ್ತು ವಿದ್ಯಾ ಮಂತ್ರಿಗಳ ಭಾಷಣ

ಸ್ವಂ ವ ಪ್ರೋ] ಬೆಂಗಳೂರು ೬

ಈ ದಿನ ವಿಶ್ವೇಶ್ವರಪುರದಲ್ಲಿ ಸಂಸ್ಥಾನದ ಆಗಮಶ್ರೀಯ ಸಮ್ಮೇಳನವು ಅವನಿ ಜಗದ್ಗುರುಗಳಾದ ಶ್ರೀಮದಭಿನವೋದ್ದಂಡ ವಿದ್ಯಾರಣ್ಯ ಭಾರತೀ ಸ್ವಾಮಿಗಳವರ ಅಧ್ಯಕ್ಷತೆಯಲ್ಲಿ ಜರುಗಿತು

ಶ್ರೀ ಸ್ವಾಮಿಗಳವರು ಭಾಷಣ ಮಾಡಿ ಧಾರ್ಮಿಕ ಪ್ರಚಾರದ ಅವಶ್ಯಕತೆಗಿಂತಲೂ ಹೆಚ್ಚಾಗಿ ಧರ್ಮದ ಅನುಷ್ಠಾನವು ಮುಖ್ಯವೆಂದು ತಿಳಿಸಿದರು ಈಗ ಧರ್ಮಕ್ಕೆ ಕುಂದು ಬರುತ್ತಿರುವುದೆಂದೂ, ಅದನ್ನು ಹೋಗಲಾಡಿಸಲು ನಾನಾ ಕೋಮುಗಳವರು ಸಂಘಗಳನ್ನು ಸ್ಥಾಪಿಸಿಕೊಂಡು ಧರ್ಮ ಮಾರ್ಗದಲ್ಲಿ ನಡೆಯುವಂತಾಗಬೇಕೆಂದೂ ತಿಳಿಸಿದರು ದೇವಸ್ಥಾನಗಳ ಧರ್ಮದ ಉತ್ಪತ್ತಿ ಕೇಂದ್ರಗಳೆಂದು ಅವರು ತಿಳಿಸಿದರು

ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಪ್ರಾರಂಭ ಭಾಷಣ ಮಾಡಿ, ಸಮಾಜದಲ್ಲಿ ಆಗಮಿಕರ ಸ್ಥಾನ, ಸಮಾಜಕ್ಕೆ ಅವರಿಂದ ಆಗುವ ಸಹಾಯ ಮುಂತಾದುವನ್ನು ವಿವರಿಸಿದರು. ಆಗಮಶ್ರೀಯ ಮಹಾ ಮಂಡಲಕ್ಕೆ ಜಯಚಾಮರಾಜೇಂದ್ರ ಪುಸ್ತಕ ಭಂಡಾರದಲ್ಲಿರುವ ೧,೫೦೦ ಗ್ರಂಥಗಳನ್ನು ಒಪ್ಪಿಸುವಂತೆ ತಾವು ವಿಶ್ವವಿದ್ಯಾಲಯಕ್ಕೆ ಸಲಹೆ ಮಾಡುವೆವಾಗಿ ಅವರು ನುಡಿದರು.

ಪರಿಷತ್ ಶಾಸಕಸಭಾ ಸದಸ್ಯರಾದ ಶ್ರೀ ಎ ಎಸ್ ರಾಮಾನುಜರು ಸ್ವಾಗತ ಭಾಷಣ ಮಾಡಿದರು

ಮಹಾ ಮಂಡಲಕ್ಕೆ ಅವನಿ ಗುರುಗಳು ಮತ್ತು ಉತ್ತರಾದಿ ಪೀಠಾಧಿಪತಿ ಸ್ವಾಮಿಗಳವರು ೧,೦೦೦ ರೂ ಕೊಟ್ಟಿರುತ್ತಾರೆ.

ಸೂಯೆಜ್ ಬಿಕ್ಕಟ್ಟಿನಿಂದ ಯುದ್ಧಕ್ಕೆಡೆಯಾಗಬಾರದು

ಪ್ರಧಾನಿ ನೆಹರೂರವರ ಹೇಳಿಕೆ

ನೆಹರೂರವರು ನೆನ್ನೆ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮಾತನಾಡಿ, ಸೂಯೆಜ್ ಕಾಲುವೆ ರಾಷ್ಟ್ರೀಕರಣವು ಸರಿಯೇ ಎಂಬ ಬಗ್ಗೆ ಚರ್ಚಿಸಿ ಮಾಡುವುದಕ್ಕಿಂತಲೂ, ಈ ವಿಚಾರವಾಗಿ ಶಸ್ತ್ರಾಸ್ತ್ರ ಧಾರಣೆಯಾಗುವುದನ್ನು ತಪ್ಪಿಸುವ ಕಡೆಗೆ ಭಾರತವು ಹೆಚ್ಚು ಗಮನವೀಯುವುದೆಂದು ನುಡಿದರು. ಮುಖ್ಯವಾದ ಪಕ್ಷಗಳಿಗೆ ಈ ಬಗ್ಗೆ ಘರ್ಷಣೆಯಾಗದಂತೆ ೨೪ ರಾಷ್ಟ್ರಗಳ ಸಮ್ಮೇಳನವು ನೋಡಿಕೊಳ್ಳಬೇಕೆಂದು ಅವರು ಸಲಹೆ ಮಾಡಿದರು ಬಿಕ್ಕಟ್ಟಿಗೆ ಸಂಬಂಧಪಟ್ಟ ಯಾವುದೇ ರಾಷ್ಟ್ರವಾದರೂ ಈಗಾಗಲೇ ನಿರ್ದಿಷ್ಟ ಕ್ರಮ ಜರುಗಿಸಲು ನಿರ್ಧಾರ ಮಾಡಿಕೊಂಡು, ಸಮ್ಮೇಳನವು ಅದನ್ನು ಒಪ್ಪಿಕೊಳ್ಳಬೇಕೆಂದು ಭಾವಿಸಿದ್ದರೆ ಸಮ್ಮೇಳನವು ಅಪ್ರಯೋಜಕವೆಂಬ ಸಂದೇಹಕ್ಕೆಡೆ ಕೊಡುವುದೆಂದು ನೆಹರೂರವರು ಅಭಿಪ್ರಾಯಪಟ್ಟರು.

೨೦ನೇ ತಾರೀಖಿನಿಂದ ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ

ಸಂಘದ ಬೇಡಿಕೆಗಳ ಬಗ್ಗೆ ಸರ್ಕಾರದ ತಾತ್ಸಾರಕ್ಕಾಗಿ ಖಂಡನೆ

ಮೈಸೂರು ೬

ಇಲ್ಲಿನ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳ ಸಂಘದ ಸಕಲ ಸದಸ್ಯರ ಸಭೆಯು ಮೊನ್ನೆ ನಡೆದು ವಿದ್ಯಾರ್ಥಿಗಳು ೨ ವರ್ಷಗಳ ಹಿಂದಿನಿಂದ ಸಲ್ಲಿಸುತ್ತಿರುವ ಬೇಡಿಕೆಗಳ ಬಗ್ಗೆ ಸರ್ಕಾರದ ತಾತ್ಸಾರ ಭಾವನೆಗಾಗಿ ಇದೇ ತಿಂಗಳು ೨೦ರಿಂದ ಅನಿರ್ದಿಷ್ಟ ಕಾಲದವರೆಗೆ ಮುಷ್ಕರವನ್ನು ಹೂಡಲು ನಿರ್ಧರಿಸಲಾಯಿತು. ತಮ್ಮ ಕನಿಷ್ಠಾಂಶ ಬೇಡಿಕೆಗಳನ್ನು ಈಡೇರಿಸುವವರೆಗೂ ತರಗತಿಗಳಿಗೆ ಹೋಗಲಾರೆವೆಂದು ವಿದ್ಯಾರ್ಥಿಗಳು ಪಣ ತೊಟ್ಟಿರುವರು.

೧॥ ವರ್ಷಗಳ ಹಿಂದೆ ವಿದ್ಯಾರ್ಥಿಗಳು ಮುಷ್ಕರ ನಡೆಸಿದಾಗ ಅವರ ಬೇಡಿಕೆಗಳನ್ನು ಕೂಡಲೇ ಈಡೇರಿಸುವುದಾಗಿ ಸರ್ಕಾರದವರು ತಿಳಿಸಿದ್ದರೆಂದೂ, ಆದರೆ ಇದುವರೆಗೂ ಏನನ್ನೂ ಮಾಡಿಲ್ಲವೆಂದೂ ಸಂಘದವರು ಸೂಚಿಸಿ, ಇದರಿಂದ ವಿದ್ಯಾರ್ಥಿಗಳ ಮನಸ್ಸಿಗೆ ತುಂಬಾ ವ್ಯಾಕುಲವಾಗಿರುವುದೆಂದೂ, ಇತರ ಸಂಸ್ಥಾನಗಳಲ್ಲಿ ಸ್ವದೇಶೀಯ ವೈದ್ಯ ವಿದ್ಯಾರ್ಥಿಗಳಿಗೆ ವಿಶೇಷವಾದ ಪ್ರೋತ್ಸಾಹ ಕೊಡಲಾಗುತ್ತಿರುವುದೆಂದೂ ತಿಳಿಸಿರುತ್ತಾರೆ.

ಪ್ರಯೋಗ ಶಿಕ್ಷಣ ಸೌಲಭ್ಯ, ಹೆಚ್ಚು ಸ್ಥಳವಿರುವ ಮತ್ತು ಶಿಕ್ಷಣ ಸೌಕರ್ಯಗಳಿರುವ ಹಾಸ್ಟೆಲುಗಳು, ೩೦೦ ವಿದ್ಯಾರ್ಥಿಗಳಿಗೆ ಶಸ್ತ್ರ ಚಿಕಿತ್ಸಾ ಶಿಕ್ಷಣ ಸೌಲಭ್ಯ; ಫಾರ್ಮಕಾಲಜಿ ಪ್ರಯೋಗ ಶಾಲೆ, ಶಾರೀರಶಾಸ್ತ್ರ ಶಿಕ್ಷಣಕ್ಕಾಗಿ ಪಂಚಕರ್ಮ ವಿಭಾಗ, ಭಾರತೀಯ ವೈದ್ಯ ಚಿಕಿತ್ಸೆಯ ೩೦೦ ಹಾಸಿಗೆ, ೩೦ ಹಾಸಿಗೆಗಳುಳ್ಳ ಶಸ್ತ್ರ ಚಿಕಿತ್ಸಾ ವಾರ್ಡು, ಉತ್ತಮ ಮತ್ತು ಅನುಭವ ಪಡೆದ ಹೆಚ್ಚು ಶಿಕ್ಷಣ ಹೊಂದಿರುವ ಉಪಾಧ್ಯಾಯರು. (ಒಬ್ಬ ಸ್ಪೆಷಲಿಸ್ಟರಾದ ಪ್ರೊಫೆಸರ್, ಐದು ವರ್ಷದ ಅನುಭವವುಳ್ಳ ಒಬ್ಬ ಅಸಿಸ್ಟೆಂಟ್ ಪ್ರೊಫೆಸರ್, ಒಬ್ಬ ಅಧ್ಯಾಪಕ, ಒಬ್ಬ ಡೆಮಾನ್‌ಸ್ಟ್ರೇಟರ್) ಅಖಿಲ ಭಾರತ ಕಾಲೇಜು ಮನ್ನಣೆ- ಇವೇ ಮುಂತಾದ ಬೇಡಿಕೆಗಳನ್ನು ಇಡಲಾಗಿದೆ.

ಮಹಿಳಾ ಸದನದಲ್ಲಿ ಮಹಾರಾಜರ ವರ್ಧಂತಿ

ಕಳೆದ ಶುಕ್ರವಾರ ಮಹಿಳಾ ಸದನದಲ್ಲಿ ಮಹಾರಾಜರ ವರ್ಧಂತಿ ಉತ್ಸವವು ಶ್ರೀಮತಿ ಚಂದ್ರಮ್ಮನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಾಮೂಹಿಕ ಪ್ರಾರ್ಥನೆ ಮತ್ತು ಭಜನೆಗಳಾದ ನಂತರ ಸದನದ ಅಧ್ಯಕ್ಷಿಣಿಯಾದ ಶ್ರೀಮತಿ ಹೆಚ್. ಟಿ. ಶಾಂತಾರವರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ಸರೋಜ ಮತ್ತು ಜಯರವರಿಂದ ಸುಶ್ರಾವ್ಯವಾದ ಸಂಗೀತ ನಡೆಯಿತು. ಅಧ್ಯಕ್ಷರು ಮಹಾರಾಜರವರ ಉದಾತ್ತ ಗುಣಗಳನ್ನು ವಿವರಿಸಿದರು. ಕಾರ್ಯದರ್ಶಿ ಶ್ರೀಮತಿ ವಿಶಾಲಾಕ್ಷಮ್ಮನವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯಗೊಂಡಿತು.

ಡಾ॥ ಟಿ. ಎಸ್. ಸಿದ್ದಪ್ಪನವರ ವಿದ್ಯಾರ್ಥಿನಿಲಯ ಸಂಘ

ಡಾ॥ ಟಿ. ಎಸ್. ಸಿದ್ದಪ್ಪನವರ ವಿದ್ಯಾರ್ಥಿನಿಲಯದ ಸಂಘಕ್ಕೆ ಶ್ರೀ ಸಿ ಬಸಪ್ಪನವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಕೆ. ಎಸ್. ರಾಮಣ್ಣ ಮತ್ತು ಬಿ. ಮಹದೇವಯ್ಯನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿರುತ್ತಾರೆ.

ಹಿರಿಸಾವೆಯಲ್ಲಿ ಮಹಾರಾಜರ ವರ್ಧಂತಿ

ಹಿರಿಸಾವೆಯ ಬಾಲಿಕಾ ಪಾಠಶಾಲೆಯಲ್ಲಿ ಕಳೆದ ೨೯ರಂದು ಶ್ರೀಮನ್ಮಹಾರಾಜರ ವರ್ಧಂತಿಯು ಊರಿನ ಆಸ್ಪತ್ರೆ ವೈದ್ಯರಾದ ಶ್ರೀ ಎ. ಎಚ್. ಅಣ್ಣೇಗೌಡರ ಅಧ್ಯಕ್ಷತೆಯಲ್ಲಿ ನೆರವೇರಿತು. ಗ್ರಾಮದ ಮುಖ್ಯಸ್ಥರು ಭಾಗವಹಿಸಿದ್ದರು. ಮುಖ್ಯೋಪಾಧ್ಯಾಯರಾದ ಶ್ರೀ ಹೆಚ್. ಎಲ್ ನರಸಿಂಹಮೂರ್ತಿಯವರು ಮಹಾರಾಜರ ಗುಣಗಾನ ಮಾಡಿದರು. ಸ್ಥಳೀಯ ಸೊಸೈಟಿಯ ಕಾರ್ಯದರ್ಶಿ ಶ್ರೀ ಬೋರಪ್ಪಗೌಡರು ಬಾಲಕಿಯರಿಗೆ ಬಹುಮಾನ ವಿನಿಯೋಗ ಮಾಡಿದರು. ಮಕ್ಕಳಿಗೆ ಲಾಡುಗಳನ್ನು ಹಂಚಲಾಯಿತು.

ಬರುವ ತಿಂಗಳು ಶಾಸನ ಸಭಾಧಿವೇಶನ

ಬೆಂಗಳೂರು ೬

ಬರುವ ತಿಂಗಳ ಆದಿಭಾಗದಲ್ಲಿ ಸಂಸ್ಥಾನದ ಶಾಸನ ಸಭೆಗಳ ೧ ವಾರದ ಅಧಿವೇಶನವನ್ನು ಕರೆಯಲಾಗುವುದೆಂದು ವರದಿಯಾಗಿದೆ. ಅಂತರ ಸಂಸ್ಥಾನ ಮಾಂಟಿ ತಿಂಗೆ ಬಗ್ಗೆ ರಾಮಯ್ಯಂಗರ ತೀರ್ಪಾಧರಿ ಮಸೂದೆ, ಪಾ. ಎ. ವೆಂಕಟನಿಂದ ಅಂಗೀಕರಿಸಲ್ಪಡುವ ಸಂಸ್ಥಾನ ಪುನರ್ವಿಂಗಡಣೆ ಮಸೂದೆಗಳನ್ನು ಅಧಿವೇಶನಗಳು ಪುರಸ್ಕರಿಸಬೇಕಾಗಿದೆ. ಇವಲ್ಲದೆ ಚಿನ್ನದ ಗಣಿ ಮತ್ತು ಬಿ. ಟಿ. ಸಿ. ರಾಷ್ಟ್ರೀಕರಣ ಮಸೂದೆಗಳನ್ನೂ ಪರಿಶೀಲಿಸಲಾಗುವುದು.

ಸ್ಪೀಕರುಗಳ ಸಮ್ಮೇಳನ

ಭಾರತದ ನಾನಾ ಶಾಸನ ಸಭೆಗಳ ಸ್ಪೀಕರುಗಳ ಸಮ್ಮೇಳನವು ಬರುವ ತಿಂಗಳು ೧೬, ೧೮ ಮತ್ತು ೧೯ ರಲ್ಲಿ ರಾಜಸ್ಥಾನದಲ್ಲಿ ಸೇರುವುದು. ಸಂಸ್ಥಾನ ವಿಧಾನ ಸಭಾಧ್ಯಕ್ಷ ಶ್ರೀ ಹೆಚ್. ಎಸ್ ರುದ್ರಪ್ಪನವರು ಅದರಲ್ಲಿ ಭಾಗವಹಿಸುವರು.

ಭೂತದ ಮನೆಯಲ್ಲಿ ಇಬ್ಬರ ಮರಣ

ಮಡಿಕೇರಿಗೆ ಸಮೀಪವಿರುವ ಪೊನ್ನಂಪೇಟೆ ಗ್ರಾಮದಲ್ಲಿ ಕಂಟ್ರಾಕ್ಟರ್ ಮತ್ತು ಪ್ಲಾಂಟರ್ ಕೈಸಿ ಅಂಟೋಣಿಯವರು ಮತ್ತು ಮಲಬಾರಿನ ಒಬ್ಬ ಮಂತ್ರವಾದಿ. ಇವರಿಬ್ಬರೂ ಒಂದು ಮನೆಯಲ್ಲಿ ಆಶ್ಚರ್ಯಕರ ರೀತಿಯಲ್ಲಿ ಮೃತಪಟ್ಟ ರಹಸ್ಯವು ಹೊರಗೆ ಬಂದಿದೆ. ಕಂಟ್ರಾಕ್ಟರನು ಹಳ್ಳಿಯಲ್ಲಿ ಒಂದು ಆಸ್ತಿಯನ್ನು ಕೊಂಡು ಮನೆಯನ್ನು ಕಟ್ಟಿಸಿದನೆಂದೂ, ಆತನೂ, ಅವನ ಹೆಂಡತಿ ಮತ್ತು ಮಕ್ಕಳೂ ವಾಸಕ್ಕಾಗಿ ಹೋದಾಗ ವಿಸ್ಮಯಕಾರಕ ಧ್ವನಿಯು ಕೇಳಬರುತ್ತಿದ್ದುದಲ್ಲದೆ, ಕಾಣದ ಕೈಯೊಂದು ಅವನನ್ನು ಅಚಿಗೆ ದಬ್ಬುತ್ತಿತ್ತೆಂದೂ ಹೇಳಲಾಗಿದೆ. ಭೂತ ಚೇಷ್ಟೆಯದೆಂದು ಭಾವಿಸಿ ಕಂಟ್ರಾಕ್ಟರನು ಮನೆ ಖಾಲಿ ಮಾಡಿ ಮಲಬಾರಿನ ಒಬ್ಬ ಮಂತ್ರವಾದಿಯನ್ನು ಕರೆಸಿ ಅವನಿಂದ ಹೋಮಾದಿಗಳನ್ನು ಮಾಡಿಸಿದನೆಂದು ಹೇಳಲಾಗಿದೆ. ಅವರೂ ಸಂಗಡಿದ್ದ ಆತನು ಮಂತ್ರವಾದಿಯೊಡನೆ ಅಲ್ಲಿ ಮಲಗಿದ್ದನೆಂದೂ, ಮಾರನೇ ಬೆಳಿಗ್ಗೆ ನೋಡುವಾಗ ಅವರಿಬ್ಬರೂ ಮೃತಪಟ್ಟಿದ್ದರೆಂದೂ ವರದಿಯಾಗಿದೆ. ಪೋಲೀಸರು ತನಿಖೆ ನಡೆಸುತ್ತಿರುವರು.

ಸಾಹಿತ್ಯ ಕಲಾ ಸ್ಪರ್ಧೆ

ಶ್ರೀರಂಗಪಟ್ಟಣದ ಸಾಹಿತ್ಯಕಲಾ ಸ್ಪರ್ಧೆಯವರು ಹಾಡುಗಳ ಸ್ಪರ್ಧೆಯೊಂದನ್ನು ಏರ್ಪಡಿಸಿರುತ್ತಾರೆ. ಶ್ರೀ ಪಿ ಕಾಳಿಂಗರಾಯರು ಹಾಡುವ 'ಉದಯವಾಗಲಿ ನಮ್ಮ ಚಲುವ ಕನ್ನಡ ನಾಡು' ಮತ್ತು ನಾಗೇಂದ್ರರವರ 'ನಮ್ಮೂರೆ ಚಂದ, ನಮ್ಮೂರೆ ಅಂದ, ಕನ್ನಡ ಭಾಷೆ ಕಣಾ ನಂದ' ಎಂಬ ಹಾಡುಗಳ ಬಗ್ಗೆ ಸ್ಪರ್ಧೆಯಿದೆ. ಅವೆರಡರಲ್ಲಿ ಉತ್ತಮವಾದುದೆಂಬುದನ್ನು ಯಾರು ಬೇಕಾದರೂ ಸರ್ಟಿಫಿಕೇಟ್ ಅಥವಾ ಪೋಸ್ಟಿಂಗನಲ್ಲಿ ಬರೆದು ಟ್ರಿಪ್ಲಿಕೇಟ್, ಪ್ರಚಾರಕ, ಸಾಹಿತ್ಯ ಸ್ಪರ್ಧೆ, ೨೯೦, ಸಂದಲಕೋಟೆ ಬೀದಿ ಶ್ರೀರಂಗಪಟ್ಟಣ-ಈ ವಿಳಾಸಕ್ಕೆ ಇದೇ ೧೧ನೇ ತಾರೀಖಿನೊಳಗೆ ಕಳುಹಬೇಕೆಂದೂ, ಎರಡು ಬಹುಮಾನಗಳನ್ನು ಸ್ಪರ್ಧೆಗಾಗಿ ಇಡಲಾಗಿದೆಯೆಂದೂ ತಿಳಿಸಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೩೦ ಪ್ಲಾಟೋ ವೆರೈಟಿ, ೬-೧೫ ಶ್ರೀರಾಮ ನವಮಿ-ಭಕ್ತಿ ಪ್ರಧಾನಗೀತೆಗಳು ೬ ೪೫ ಗಾನವಿಹಾರಿ, ೮ ೧೦ ರೇಡಿಯೋ. ಮಧ್ಯಾಹ್ನ ೧೨ ಮತ್ತು ೧-೪೦ ಸಿ. ಕೃಷ್ಣಮೂರ್ತಿ ವೀಣೆ. ೧೨ ೪೫ ರೇಡಿಯೋ. ೧೨.೧೫ ಮಹಿಳೆಯರ ಕಾರ್ಯಕ್ರಮ. ೩.೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೫ ೪೦ ಮತ್ತು ೯-೦೫ ಎ. ದೇಶೀಕಾಚಾರ್ ಕೊಳಲು ಮತ್ತು ರಾಗ, ತಾನ ಮತ್ತು ಪಲ್ಲವಿ. ೬ ೧೫ ಎಂ. ಎಸ್. ಅನಂತರಾಮಯ್ಯ ರೇಡಿಯೋ ನಾಟಕ. ೬.೪೦ ಎಂಟು ಚಲುವ ನಾಡು-ಕನ್ನಡ ಭಾಷಣ ೮ ಕಟ ಶಾಸ್ತ್ರ ಪರಿಚಯ. ೮ ೪೦ ರಿ. ಆರ್. ಶಾಮರಾವ್-ಸಿತಾರ್. ೧೦ ರೇಡಿಯೋ ೧೦-೧೫ ಉರ್ದು ಗೀತೆ.

ಮೊಹಲ್ಲಾ ದಿನಾಚರಣೆ

ಮೈಸೂರು ೬

ನಗರದ ಪೌರಸಭೆಯವರು ನಾಳೆದ್ದು ದೇವರಾಜ ಮೊಹಲ್ಲಾ ದಿನಾಚರಣೆಯನ್ನು ನೆರವೇರಿಸುವರು. ಅದರ ಅಂಗವಾಗಿ ಬೆಳ್ಳಿಕಟ್ಟೆಗೆ ಹೊಸ ಕೇರಿನಲ್ಲಿ ಆರೋಗ್ಯ ಪ್ರಚಾರವನ್ನೂ ನಡೆಸಲಾಗುವುದು. ಅಂದಿಗೆ ಮೂರು ದಿನಗಳವರೆಗೆ ಬೆಳಿಗ್ಗೆ ೭॥ ಯಿಂದ ೯॥ ಗಂಟೆವರೆಗೆ ಆ ಪ್ರದೇಶದ ಪಾಕೀಖು ಮತ್ತು ಇತರ ಕ್ರಮಗಳನ್ನೂ, ಸೈನೊಗ್ಯಾಸ್ ಪ್ರಯೋಗವನ್ನು ನಡೆಸಲಾಗುವುದು. ಅಂದು ೯ ರಿಂದ ೧೨ರವರೆಗೆ ಮಕ್ಕಳಿಗೆ ಸಿಡುಬು ಹಾಕುವುದು, ಬಾಣಂತಿಯರ ಪರೀಕ್ಷೆ, ಮಕ್ಕಳಿಗೆ ಪ್ಲೇಗು ಚುಚ್ಚುಮದ್ದು ಮತ್ತು ಗರ್ಭಿಣಿಯರಿಗೆ ಹಾಲು ಹಂಚುವುದು ಮುಂತಾದ ಕ್ರಮಗಳನ್ನು ಜರುಗಿಸಲಾಗುವುದು.

ಮಧ್ಯಾಹ್ನ ೪ ಗಂಟೆಗೆ ಪೌರಸಭಾಧ್ಯಕ್ಷರ ಅಧ್ಯಕ್ಷತೆಯಲ್ಲಿ ಲೋಕಾಭಿರಾಮ ಮಂದಿರದಲ್ಲಿ ಸಭೆ ನಡೆಯುವುದು. ಬಹುಮಾನ ವಿನಿಯೋಗವೂ ಇದೆ.

ಸಾಮಾಜಿಕ ಸೇವಾ ಸಮಾಜ

ರಾಜಧಾನಿಯ ಸೇಂಟ್ ಫಿಲೋಮಿನಾ ಕಾಲೇಜಿನ ಸಾಮಾಜಿಕ ಸೇವಾ ಸಮಾಜದ ಆರಂಭ ಭಾಷಣವನ್ನು ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್. ಶಂಕರರಾಯರು ಕಳೆದ ಬುಧವಾರ ಮಾಡಿದರು. ಕಾಲೇಜಿನ ಪ್ರಿನ್ಸಿಪಾಲರಾದ ಫಾದರ್ ಆಡಿಯೊರವರು ಅಧ್ಯಕ್ಷತೆ ವಹಿಸಿದ್ದರು. ಪ್ರೊ॥ ಎಂ. ರಾಯಲಸಿಂಗ್‌ರವರಿಂದ ಸ್ವಾಗತ ಭಾಷಣ ಮತ್ತು ಸಂಘದ ಉಪಾಧ್ಯಕ್ಷ ಶ್ರೀ ಮಹದೇವಪ್ಪನವರಿಂದ ವರದಿಗಳಾದನಂತರ ಜಿಲ್ಲಾಧಿಕಾರಿಗಳು ಮಾತನಾಡಿ ಸರ್ಕಾರದವರು ಕೈಗೊಂಡಿರುವ ಸಾಮಾಜಿಕ ಸೇವಾ ಕಾರ್ಯದಲ್ಲಿ ವಿದ್ಯಾರ್ಥಿಗಳ ಪಾತ್ರವನ್ನು ವಿವರಿಸಿದರು. ವಿದ್ಯಾರ್ಥಿಗಳು ಉತ್ಸಾಹ ಮತ್ತು ಆಸಕ್ತಿಯಿಂದ ಸೇವಾ ಕಾರ್ಯವನ್ನು ನಡೆಸುವುದು ಅಗತ್ಯವೆಂದು ಅಧ್ಯಕ್ಷರು ನುಡಿದರು. ಸಾಮಾಜಿಕ ಸೇವೆ ಮೇಲೆ ಚಲನಚಿತ್ರವನ್ನು ಪ್ರದರ್ಶಿಸಲಾಯಿತು. ಶ್ರೀ ಗಫೂರ್ ಪಾಟೀಯವರ ಸಂಗೀತವೂ ಇತ್ತು. ಶ್ರೀ ಎಂ ಡಿ ಅಂತೋನಿಯವರು ವಂದನಾರ್ಪಣೆ ಮಾಡಿದರು.

ನಿಧನ ಹೊಂದಿದವರ ಬಗ್ಗೆ ಮೌನ ಧಾರಣೆ ಇಸ್ಲಾಂ ತತ್ವಕ್ಕೆ ವಿರುದ್ಧ

ಪಶ್ಚಿಮ ಪಾಕಿಸ್ತಾನದ ಶಾಸನಸಭೆಯ ಮುಸ್ಲಿಂ ಲೀಗ್ ಸದಸ್ಯ ಖಾಜಿ ಮುರೀದ್ ಹುಸೇನರವರು ಮೃತನಾದ ಸಸ್ತ್ರವರ ಬಗ್ಗೆ ಗೌರವ ಸೂಚಿಸಲು ಮೌನದಿಂದ ಎದ್ದು ನಿಲ್ಲುವುದು ಇಸ್ಲಾಂ ಧರ್ಮ ಮತ್ತು ಪಾಕಿಸ್ತಾನದ ರಾಜ್ಯಾಂಗ ತತ್ವಕ್ಕೆ ವಿರೋಧವಾಗಿರುವುದೆಂದು ಸಭೆಯಲ್ಲಿ ಕ್ರಿಯಾಲೋಚನವನ್ನು ಸೂಚಿಸಿದರು. ಸಭಾಸದಸ್ಯ ಹಮಿದುಲ್ಲಾ ಬೇಗ್‌ರವರು ಆತ್ಮಹತ್ಯ ಮಾಡಿಕೊಂಡು ಅವರ ಬಗ್ಗೆ ಸಂತಾಪ ಸೂಚನೆಗಾಗಿ ಎರಡು ನಿಮಿಷ ಎದ್ದುನಿಂತಾಗ ಕ್ರಿಯಾಲೋಚನೆತ್ತಲಾಯಿತು. ನಂತರ ಮುರೀದ್ ಹುಸೇನ್ ಮತ್ತು ಇತರ ಸದಸ್ಯರು ಫಾತಿಹಾ ಖ್ವಾನಿ ಎಂಬ ಇಸ್ಲಾಂ ಪದ್ಧತಿಯಂತೆ ಗೌರವವನ್ನು ಸೂಚಿಸಿದರು. ರಿಪಬ್ಲಿಕನ್ ಪಕ್ಷದವರು ತಮ್ಮ ಸ್ಥಾನದಲ್ಲಿ ಕುಳಿತಿದ್ದರು. ಇದು ಖಬರ್ ಸ್ಥಾನವಲ್ಲವೆಂದು ಆ ಪಕ್ಷದ ಸದಸ್ಯರೊಬ್ಬರು ತಿಳಿಸಿದರು.

ಆತ್ಮಹತ್ಯೆಗಳ ಬಗ್ಗೆ ಪ್ರಪಂಚದ ಸರ್ವೆ

ವಿಶ್ವದ ಆರೋಗ್ಯ ಸಂಸ್ಥೆಯು ಕೈಗೊಂಡಿರುವ ಸರ್ವೆ ಪ್ರಕಾರ ಆತ್ಮಹತ್ಯ ಮಾಡಿಕೊಳ್ಳುವುದರಲ್ಲಿ ಗಂಡಸರೇ ಮುಂದಾಗುವರೆಂದು ಹೇಳಲಾಗಿದೆ. ಗಂಡು ಹೆಣ್ಣುಗಳ ಆತ್ಮಹತ್ಯೆಗಳ ಪ್ರಮಾಣವು ಸರಾಸರಿ ೩ಕ್ಕೆ ೧ ರಂತೆ ಇದೆ. ಜಪಾನ್, ಡೆನ್ಮಾರ್ಕ್, ಆಸ್ಟ್ರಿಯಾ ಮತ್ತು ಸ್ವಿಟ್ಜರ್ಲೆಂಡಿನಲ್ಲಿ ಹೆಚ್ಚಿನ ಆತ್ಮಹತ್ಯೆಗಳಾಗುತ್ತಿವೆಯೆಂದೂ ಐರ್ಲೆಂಡ್, ಉತ್ತರ ಐರ್ಲೆಂಡ್, ಚಿಲಿ, ಸ್ಕಾಟ್ಲೆಂಡ್, ಸ್ಪೇನುಗಳಲ್ಲಿ ಬಹಳ ಕಡಿಮೆಯೆಂದೂ ಹೇಳಲಾಗಿದೆ. ಅಮೇರಿಕದಲ್ಲಿ ಬೇರೆಯವರ ಆತ್ಮಹತ್ಯೆಗಳೇ ಹೆಚ್ಚಾಗಿವೆ. ೫೦ ಕೋಟಿ ಜನಗಳಿರುವ ೩೩ ರಾಷ್ಟ್ರಗಳಲ್ಲಿ ನಡೆಸಿರುವ ಸರ್ವೆ ಪ್ರಕಾರ, ಲಕ್ಷಕ್ಕೆ ೧೦ರ ಜನರು ವರ್ಷವರ್ಷವೂ ಆತ್ಮಹತ್ಯೆಯಿಂದ ಸಾಯುತ್ತಿರುವರು.

ಈಜುವ ಕೊಳದಲ್ಲಿ ಬಿದ್ದು ಬಾಲಕನ ಮರಣ

ಮೈಸೂರು ೬

ರಾಜಧಾನಿಯ, ಹಳೇ ಅಗ್ರಹಾರದ, ಚೀಟಿ ಅಂಗಡಿ ವೆಂಕಟಸ್ವಾಮಿಶೆಟ್ಟರ ಮಗ ಆನಂದ ಎಂಬ ೧೩ ವರ್ಷದ ಬಾಲಕನು ನೆನ್ನೆ ಮಧ್ಯಾಹ್ನ ಪುರಸಭೆಯ ಕೊಳದಲ್ಲಿ ಈಜುತ್ತಿದ್ದಾಗ ನೀರು ಕುಡಿದು ಮೃತಪಟ್ಟನೆಂದು ಗೊತ್ತಾಗಿದೆ. ಕೆಲವು ಮಂದಿ ಸ್ನೇಹಿತರೊಡನೆ ಈಜುವುದಕ್ಕಾಗಿ ಹೋಗಿ ನೀರು ಹೆಚ್ಚಾಗಿದ್ದ ಕಡೆ ಸ್ವಲ್ಪ ನೀರು ಕುಡಿಯಲಾರಂಭಿಸಿದನೆಂದೂ, ಜತೆಯಲ್ಲಿದ್ದ ಸ್ನೇಹಿತರು ಸಹಾಯಕ್ಕಾಗಿ ಕೂಗಿಕೊಳ್ಳಲು, ಕೊಳದ ಕಾವಲುಗಾರರು ಹೋಗುವಷ್ಟರಲ್ಲಿ ಬಾಲಕನು ಮುಳುಗಿದ್ದನೆಂದೂ ವರದಿಯಾಗಿದೆ. ಫೈರ್ ಬ್ರಿಗೇಡಿನವರು ಶವವನ್ನು ಮೇಲಕ್ಕೆತ್ತಿದರು

ವೃದ್ಧರು ಮತ್ತು ರೋಗಿಗಳಿಗಾಗಿ ನಿಧಿ

ವೃದ್ಧಾಪ್ಯ, ಅಶಕ್ತ, ಬಡತನ, ಅಪಘಾತ ಮತ್ತು ರೋಗರುಜಿನ ಪೀಡಿತರಾದವರಿಗೆ ಸಹಾಯ ಮಾಡುವುದಕ್ಕಾಗಿ ಬಿಹಾರ್ ಸರ್ಕಾರದವರು ನಿಧಿಯೊಂದನ್ನು ಸ್ಥಾಪಿಸಿದ್ದಾರೆ.. ಈ ನಿಧಿಗೆ ಸರ್ಕಾರದವರು ೧ ಲಕ್ಷ ರೂ ಗಳನ್ನು ಕೊಡುವರು ಗ್ರಾಂಟು, ಚಂದಾ, ಮುಂತಾದ ರೂಪದಲ್ಲಿ ದ್ರವ್ಯವನ್ನಾಗಲೀ, ಅಥವಾ ಸಾಮಗ್ರಿಗಳನ್ನಾಗಲೀ ಕೊಡಬಹುದು. ಬಿಹಾರಿನ ಗೌರ್ನರು ನಿಧಿಯ ಅಧ್ಯಕ್ಷರು ಮತ್ತು ಮುಖ್ಯಮಂತ್ರಿಯವರು ಉಪಾಧ್ಯಕ್ಷರು.

ಮುಸ್ಸಾದಿಕ್‌ರವರ ಬಿಡುಗಡೆ

ಇರಾನಿನ ಮಾಜಿ ಪ್ರಧಾನಿ ಡಾಕ್ಟರ್ ಮುಸ್ಸಾದಿಕ್‌ರವರು ಮೊನ್ನೆ ಸಂಜೆ ಟೆಹರಾನ್ ಜೈಲಿನಿಂದ ಬಂಧ ವಿಮೋಚನೆಗೊಳಿಸಲ್ಪಟ್ಟರು ಅವರಿಗೆ ೩ ವರ್ಷಗಳ ಹಿಂದೆ, ಇರಾನ್ ದೊರೆಗಳನ್ನು ಉರುಳಿಸುವ ಪಿತೂರಿಗಾಗಿ ೩ ವರ್ಷ ಏಕಾಂತ ಕಾರಾಗೃಹವಾಸ ಶಿಕ್ಷೆಯನ್ನು ವಿಧಿಸಲಾಗಿತ್ತು. ಅವರು ಆಂಗ್ಲೋ-ಇರಾನಿಯನ್ ಎಣ್ಣೆ ಕಂಪೆನಿಯನ್ನು ರಾಷ್ಟ್ರೀಕರಣ ಮಾಡಿದ್ದರು.

ಮಹಾರಾಜರಿಂದ ಕೃಷ್ಣರಾಜನಗರದ ವಾಟರ್ ವರ್ಕ್ಸ್ ಆರಂಭೋತ್ಸವ

ಕೃಷ್ಣರಾಜನಗರದ ವಾಟರ್ ವರ್ಕ್ಸ್‌ನ ಆರಂಭೋತ್ಸವವನ್ನು ಬರುವ ಗುರುವಾರ ಬೆಳಿಗ್ಗೆ ೧೧-೩೦ಕ್ಕೆ ಶ್ರೀಮನ್ಮಹಾರಾಜರು ನೆರವೇರಿಸುವರು. ಮಹಾರಾಜರಿಗೆ ಪೌರಸಭೆಯವರು ಬಿನ್ನವತ್ತಳೆಯನ್ನು ಅರ್ಪಿಸುವರು

ಹಾಸಿಗೆ - ದಿಂಬು

ಮಿತವ್ಯಯದಲ್ಲಿ ಪತ್ತೆಹಚ್ಚಿ ತಯಾರು ಮಾಡುತ್ತೇವೆ

ಬಾಹುಸಾರ್ ಕಂಪನಿ.

ಗಾಯತ್ರಿ ಟಾಕೀಸ್ ಎದುರು, ಮೈಸೂರು.

Poly
B·R O/N'K O'L
For ASTHMA
&
BRONCHITIS
Sole Distributors for Mysore State and Coorg
SATHYA & CO.,
Chemists & Druggists,
71/1 A. S Street,
BANGALORE-2

ಶ್ರೀ ಜಗದಂಬಾ ಶಿಶುವಿಹಾರ

ದಿವಾನರ ರಸ್ತೆ, ಮೈಸೂರು

ಮೇಲ್ಮಂಡ ಶಿಶುವಿಹಾರವನ್ನು ಆಧುನಿಕ ಶಿಕ್ಷಣ ಸಾಧನಗಳಿಂದ ಸಜ್ಜುಗೊಳಿಸಿ ಮಕ್ಕಳಿಗೆ ಶಿಕ್ಷಣ ನೀಡುವ ವ್ಯವಸ್ಥೆ ಮಾಡಲಾಗಿದೆ. ಪಾಲಿಕರು ತಮ್ಮ ಮಕ್ಕಳನ್ನು ತ್ವರೆಯಾಗಿ ಸೇರಿಸಿ ಪ್ರಯೋಜನ ಹೊಂದುವುದರ ಮೂಲಕ ಶಿಶುವಿಹಾರವನ್ನು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

Edited, Printed and Published by A. R. Nagarajan at Sadhvi Press, D. Subbaiah Road, Mysore

ಟೆಲಿಫೋನ್ ನಂ. 792

ಚಂದಾದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : TUESDAY 7—8—1956 ಮೈಸೂರು : ಮಂಗಳವಾರ ೭—೮—೧೯೫೬ [ಸಂಚಿಕೆ : ೭

-ದ್ವಿಭಾಷಾ ಬೊಂಬಾಯಿ ಪ್ರಾಂತದ ರಚನೆಗೆ ನಿರ್ಧಾರ-

ವಿದ್ಯುಚ್ಛಕ್ತಿ ಬಳಕೆಗಾರರಿಗೆ ಸ್ವಲ್ಪ ಮಟ್ಟಿನ ಪರಿಹಾರ

ಮೋಟಾರು ಬದಲಾಯಿಸಲು ಅವಧಿಗಾಗಿ ಮಂತ್ರಿಮಂಡಲದ ನಿರ್ಧಾರ

ಬೆಂಗಳೂರು ೭

ಇತ್ತೀಚೆಗೆ ಹೆಚ್ಚಿಸಲಾದ ವಿದ್ಯುಚ್ಛಕ್ತಿ ದರದಿಂದ ನೊಂದವರಿಗೆ ನ್ಯಾಯವಾಗಿ ಸಲ್ಲತಕ್ಕ ಪರಿಹಾರವನ್ನು ಕೊಡಲು ಸಂಸ್ಥಾನದ ಮಂತ್ರಿಮಂಡಲವು ನಿರ್ಧರಿಸಿರುವುದೆಂದು ವರದಿಯಾಗಿದೆ ಸಂಸ್ಥಾನದಲ್ಲೆಲ್ಲಾ ಈ ಬಗ್ಗೆ ಬಳಕೆಗಾರರಿಂದ ಮನವಿಗಳೂ, ಪ್ರತಿಭಟನೆಗಳೂ ಬಂದಿದ್ದುವು.

ಮಂತ್ರಿಮಂಡಲದ ನಿರ್ಧಾರದ ಪ್ರಕಾರ, ೩ ತಿಂಗಳ ಹಿಂದೆ ಜಾರಿಗೆ ತಂದ ದರವನ್ನು ವಿಧಿಸದೆ ಬಿಟ್ಟುಬಿಡಲು ಸರ್ಕಾರದವರು ನಿರ್ಧರಿಸಿರುವುದಾಗಿ ಗೊತ್ತಾಗಿದೆ ಫ್ಲ್ಯಾಕರ್ ಸಮಿತಿಯವರ ಸಲಹೆಯಿಂದ ಕೈಗಾರಿಕಾ ಬಳಕೆಗಾರರಿಗೆ ತೊಂದರೆಯಾಗಿರುವುದನ್ನು ಮನಗಾಣಲಾಗಿದೆ

ಕೈಗಾರಿಕಾ ಮೋಟಾರುಗಳ ರೇಟೆಡ್ ದರಕ್ಕೆ ಬದಲಾಗಿ ನಾರ್ಮಲ್ ಅಶ್ವಶಕ್ತಿಯ ದರಕ್ಕೆ ಬದಲಾಯಿಸಲು ಸರ್ಕಾರದವರು ಸೂಕ್ತವಾದ ಅವಧಿಯನ್ನು ಕೊಡಲಿರುವರೆಂದೂ, ನಂತರ ಗೊತ್ತುಪಡಿಸಿರುವ ದರವು ಜಾರಿಗೆ ಬರುವುದೆಂದೂ ತಿಳಿದುಬಂದಿದೆ. ಈ ರಿಯಾಯಿತಿಯಿಂದ ಫೋಟೋಗ್ರಾಫರುಗಳೂ ಸೇರಿ, ವಿದ್ಯುಚ್ಛಕ್ತಿ ಬಳಕೆ ಮಾಡುವ ಅನೇಕ ಕೈಗಾರಿಕೆಗಳವರಿಗೆ ಪರಿಹಾರ ದೊರೆಯುವುದೆಂದು ನಿರೀಕ್ಷಿಸಲಾಗಿದೆ.

ಅಶ್ವಶಕ್ತಿ ಮೇಲೆ ಗೊತ್ತುಪಡಿಸಿದ್ದ ದರದಿಂದ ಹಲವು ವಿದ್ಯಾಮಾನಗಳಲ್ಲಿ ೧ ಕ್ಕೆ ೧೬ರಷ್ಟು ಹೆಚ್ಚು ದರ ಕೊಡಬೇಕಾಗಿತ್ತು

ಲಂಡನ್ ಸಮ್ಮೇಳನಕ್ಕೆ ಹೋಗಲು ಈಜಿಪ್ಟಿನ ನಿರಾಕರಣೆ

ಸೂಯೆಜ್ ಕಾಲುವೆ ಸಮಸ್ಯೆ ಬಗ್ಗೆ ಲಂಡನ್ನಿನಲ್ಲಿ ಇದೇ ೧೬ ರಂದು ಸೇರಲಿರುವ ೨೪ ರಾಷ್ಟ್ರಗಳ ಸಮ್ಮೇಳನಕ್ಕೆ ಆಹ್ವಾನಿತವಾಗಿರುವ ಈಜಿಪ್ಟ್ ರಾಷ್ಟ್ರವು ತನ್ನ ಪ್ರತಿನಿಧಿಯನ್ನು ಕಳುಹಿಸಲು ನಿರಾಕರಿಸಿರುತ್ತದೆ. ಸಮ್ಮೇಳನದ ಫಲಿತಾಂಶವು ಈಜಿಪ್ಟಿನ ವಿರೋಧವಾಗುವುದೆಂಬುದು ಗೊತ್ತಿರುವ ವಿಷಯವೆಂದೂ, ಶಾಂತಿ ಮಾರ್ಗದಿಂದ ಬಗೆಹರಿಸಲು ಸಾಧ್ಯವಿಲ್ಲದಿದ್ದರೆ ಬಲಪ್ರಯೋಗ ಮಾಡಲು ಲಂಡನ್ನಿನಲ್ಲಿ ಈಗಾಗಲೇ ನಿರ್ಧರಿಸಲಾಗಿದೆಯೆಂದೂ ಅರಬ್ ಲೀಗಿನ ಅಧ್ಯಕ್ಷ ಅಬ್ದೆಲ್ ಖಾಲಕ್ ಹಸೌನರವರು ತಿಳಿಸಿದ್ದಾರೆ

ಈಜಿಪ್ಟಿನಿಂದ ಬ್ರಿಟಿಷ್ ಪ್ರಜೆಗಳ ನಿರ್ಗಮನ

ಸೂಯೆಜ್ ಕಾಲುವೆ ಪ್ರದೇಶದಲ್ಲಿರುವ ಕಂಪನಿಗಳ ಇಂಗ್ಲಿಷ್ ನೌಕರರ ಪತ್ನಿಯರು ಮತ್ತು ಮಕ್ಕಳು ಸುಮಾರು ೧೦೦ ಜನರು ಬರುವ ವಾರದಲ್ಲಿ ಈಜಿಪ್ಟನ್ನು ಬಿಡುವರೆಂದು ವರದಿಯಾಗಿದೆ. ಬಿಕ್ಕಟ್ಟು ಇನ್ನೂ ಕಠಿಣವಾದರೆ ಸಾವಿರಾರು ಬ್ರಿಟಿಷ್ ಪ್ರಜೆಗಳು ಅಲ್ಲಿಂದ ತೆರಳಲು ಸಿದ್ಧವಾಗುತ್ತಿರುವರು

ಭಾರತ ಯುವಕ ಸಮಾಜ ಶಿಕ್ಷಾರ್ಥಿಗಳ ಶಿಬಿರದ ಮುಕ್ತಾಯ

ಮೈಸೂರು ೭

ಇಲವಾಲದ ರಾಷ್ಟ್ರ ನಿಲಯದಲ್ಲಿ ನಡೆಯುತ್ತಿದ್ದ ಭಾರತ ಯುವಕ ಸಮಾಜದ ಶಿಕ್ಷಾರ್ಥಿಗಳ ಶಿಬಿರವು ನೆನ್ನೆ ಮುಕ್ತಾಯವಾಯಿತು ವಿಧಾನ ಪರಿಷತ್ತಿನ ಸದಸ್ಯ ಶ್ರೀ ಎಂ. ಸಿ. ಎಲ್ ಶಾಸ್ತ್ರಿಯವರು ಭಾಷಣ ಮಾಡಿದರು

ಶ್ರೀ ವಿ. ಎಸ್. ನಾರಾಯಣರಾವ್‌ರವರು ಸ್ವಾಗತ ಭಾಷಣ ಮಾಡಿದನಂತರ ಶಿಬಿರದ ಮುಖ್ಯಾಧಿಕಾರಿ ಶ್ರೀ ಎಂ. ಶ್ರೀನಿವಾಸಯ್ಯಂಗಾರ್ ರವರು ನಡೆದಿರುವ ವಿವಿಧ ಕಾರ್ಯಕ್ರಮಗಳ, ವಿವಿಧ ಪ್ರಾಂತಗಳ ೨೫ ಜನರು ಇದರಲ್ಲಿ ಭಾಗವಹಿಸಿದ್ದರೆಂದೂ, ಆ ಪೈಕಿ ೧೪ ಮಂದಿ ಮಹಿಳೆಯರೆಂದೂ ತಿಳಿಸಿದರು

ಭಾರತ ಯುವಕ ಸಮಾಜದ ಸಂಘಟನಾ ಕಾರ್ಯದರ್ಶಿ ಶ್ರೀ ಗೋಪಾಲಶಾಸ್ತ್ರಿಯವರು ಮಾತನಾಡಿ, ಯುವಕರು ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕೆಂದು ತಿಳಿಸಿದರು

ಶ್ರೀ ಎಂ. ಸಿ. ಎಲ್. ಶಾಸ್ತ್ರಿಯವರು ಮಾತನಾಡಿ, ದೇಶವು ಗಳಿಸಿರುವ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಲು ಯುವಕರು ಪ್ರಯತ್ನಪಡಬೇಕೆಂದೂ, ಅವರಲ್ಲಿ ಶೀಲ ಮತ್ತು ಶಿಸ್ತು ಅಗತ್ಯವೆಂದೂ ತಿಳಿಸಿದರು ಶ್ರೀ ಬಿ. ಮಾಲಿ ಚನ್ನಬಸವಯ್ಯನವರು ವಂದನಾರ್ಪಣೆ ಮಾಡಿದರು

ರಾಜಕುಮಾರರ ವರ್ಧಂತಿ ಫುಟ್‌ಬಾಲ್ ಆಖೈರು ಪಂದ್ಯ

ರಾಜಕುಮಾರರ ವರ್ಧಂತಿ ಫುಟ್‌ಬಾಲ್ ಆಖೈರು ಪಂದ್ಯವು ನೆನ್ನೆ ನಡೆದು, ಬೆಂಗಳೂರು ಸ್ಪೋರ್ಟಿಂಗ್ ಟೀಮಿನವರು ಅಲ್ಲಿನ ಎಲೆಕ್ಟ್ರಾನಿಕ್ಸ್ ಟಿ. ಡಿ. ೩ ನವರನ್ನು ೨-೦ ಗೋಲಿನಿಂದ ಸೋಲಿಸಿದರು ಸೆಂಟರ್ ಫಾರ್‌ವರ್ಡ್ ಬಾಸಿತ್‌ರವರು ಎರಡು ಗೋಲುಗಳನ್ನೂ ಹೊಡೆದರು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಶಂಕರರಾಯರು ಶ್ರೀಮನ್ಮಹಾರಾಜರ ಬಹುಮಾನದ ಕಪ್ಪುಗಳನ್ನು ಹಂಚಿದರು

ಕ್ರಿಕೆಟ್ ಪಂದ್ಯ

ಮೈಸೂರಿನ ನ್ಯಾಷನಲ್ ಕ್ರಿಕೆಟ್ ಕ್ಲಬ್ಬಿಗೂ ನಂಜನಗೂಡಿನ ಹೈಸ್ಕೂಲು ಕಂಬೈಂಡ್ ಟೀಮಿಗೂ ಶನಿವಾರ ನಂಜನಗೂಡಿನಲ್ಲಿ ಪಂದ್ಯವು ನಡೆದು, ಹೈಸ್ಕೂಲು ಕಂಬೈಂಡ್ ಟೀಮಿನವರು ಜಯಗಳಿಸಿದರು

ಈಜಿಪ್ಟ್ ರೇವುಗಳಿಗೆ ರಷ್ಯದ ಯುದ್ಧ ನೌಕೆಗಳು

ಈ ತಿಂಗಳು ಮಧ್ಯ ಭಾಗದಲ್ಲಿ ಈಜಿಪ್ಟಿನ ರೇವುಗಳಿಗೆ ರಷ್ಯದ ಯುದ್ಧದ ಹಡಗುಗಳು ಔಪಚಾರಿಕ ಭೇಟಿ ಕೊಡಲಿರುವುದಾಗಿ ವರದಿಯಾಗಿದೆ. ಅವುಗಳಲ್ಲಿ ಎರಡು ಕ್ರೂಸರ್‌ಗಳು, ಒಂದು ವಿಮಾನ ವಾಹಕ ನೌಕೆ, ೧೧ ಡಿಸ್ಟ್ರಾಯರ್, ಆರು ಸಬ್ ಮೇರಿನುಗಳು ಮತ್ತು ಇತರ ಸಣ್ಣ ಹಡಗುಗಳು ಇರುವುವೆಂದು ಹೇಳಲಾಗಿದೆ ಆಗಸ್ಟ್ ೧೫ಕ್ಕೆ ಮುಂಚೆ ಅವು ಬಂದು ರೇವುಗಳಲ್ಲಿ ಎರಡು ವಾರಗಳವರೆಗೆ ಇರುವುವೆಂದು ಗೊತ್ತಾಗಿದೆ.

ಗುಜರಾತ್ ಮತ್ತು ಮಹಾರಾಷ್ಟ್ರ ದ್ವಿಭಾಷಾ ಸಂಸ್ಥಾನದ ರಚನೆ

ಕಾಂಗ್ರೆಸ್ ಪಕ್ಷ ಮತ್ತು ಮಂತ್ರಿಮಂಡಲದ ನಿರ್ಧಾರ

ಕಚ್, ಸೌರಾಷ್ಟ್ರ, ಗುಜರಾತ್, ಮಹಾರಾಷ್ಟ್ರ, ವಿದರ್ಭ ಮತ್ತು ಮರಾಠವಾಡಾ ಈ ಐದು ಪ್ರದೇಶಗಳನ್ನು ಒಂದುಗೂಡಿಸಿ, ವಿಸ್ತಾರವಾದ ಬೊಂಬಾಯಿ ಸಂಸ್ಥಾನದ ರಚನೆಯಾಗಬೇಕೆಂದು ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಸಭೆಯು ನಿರ್ಧರಿಸಿರುತ್ತದೆ. ಇದನ್ನು ಮಹಾರಾಷ್ಟ್ರ ಮುಖಂಡ ಎನ್. ವಿ. ಗಾಡ್ಗೀಲ್‌ರವರು ಮಾತ್ರ ವಿರೋಧಿಸಿ ಟೀಕೆ ಮಾಡಿರುತ್ತಾರೆ. ಈ ನಿರ್ಧಾರವು ಚಾರಿತ್ರಿಕವೆಂದು ನೆಹರೂರವರು ತಿಳಿಸಿರುತ್ತಾರೆ. ಮಾಜಿ ಹಣಕಾಸಿನ ಮಂತ್ರಿ ಸಿ. ಡಿ. ದೇಶಮುಖ್‌ರವರು ತೃಪ್ತಿಯನ್ನು ಸೂಚಿಸಿರುತ್ತಾರೆ ಕೇಂದ್ರ ಮಂತ್ರಿಮಂಡಲವು ಈ ಸೂಚನೆಗೆ ಸಮ್ಮತಿಸಿರುವುದೆಂದು ಗೊತ್ತಾಗಿದೆ. ಈ ಹೊಸ ಪ್ರಾಂತವು ೧,೮೭,೩೪೦ ಚ. ಮೈಲಿ ವಿಸ್ತೀರ್ಣ ಮತ್ತು ೪ ಕೋಟಿ ಜನಸಂಖ್ಯೆಯುಳ್ಳದ್ದಾಗುವುದು

ದೆಹಲಿಯಲ್ಲಿ ೧,೫೦೦ ಮಂದಿ ಪಂಜಾಬು ಪ್ರದರ್ಶಕರ ಬಂಧನ

ಪಾರ್ಲಿಮೆಂಟ್ ಭವನದ ಮುಂದೆ ನೆನ್ನೆ ಶಾಂತಿಯುತ ಪ್ರದರ್ಶನ ನಡೆಸಿ ೧,೫೦೦ ಮಂದಿ ಮಹಾ ಪಂಜಾಬುವಾದಿಗಳು ದಸ್ತಗಿರಿಯಾದರು. ಅವರಲ್ಲಿ ಹಲವರು ಮುಖಂಡರೂ, ೧೦೦ ಮಂದಿ ಮಹಿಳೆಯರೂ ಇರುವರು ಸಂಸ್ಥಾನ ಪುನರ್ವಿಂಗಡಣೆ ಮಸೂದೆ ಸಂಬಂಧವಾಗಿ ಪಾರ್ಲಿಮೆಂಟ್ ಭವನದ ಬಳಿ ನಡೆದ ಭಾರಿ ಪ್ರದರ್ಶನಗಳಲ್ಲಿ ಇದು ಎರಡನೆಯದು ೪,೦೦೦ ಜನ ಸಂಘದವರು ಕೇಸರಿ ಬಣ್ಣದ ಟೋಪಿ ಧರಿಸಿ, ಸಂಘದ ಧ್ವಜಗಳನ್ನು ಹಿಡಿದು ದೆಹಲಿ ರಸ್ತೆಗಳಲ್ಲಿ ಮೆರವಣಿಗೆ ನಡೆಸಿ ಸಂಜೆ ೫ ಗಂಟೆಗೆ ಪಾರ್ಲಿಮೆಂಟ್ ಭವನಕ್ಕೆ ಬಂದರು ಅವರುಗಳು ಪೋಲೀಸರ ಸಾಲನ್ನು ಭೇದಿಸಿ ಭವನಕ್ಕೆ ಹೋಗಲೆತ್ನಿಸಿದಾಗ ಬಂಧಿತರಾದರು

ಈಜಿಪ್ಟಿನಲ್ಲೂ ಜನ ಶೇಖರಣೆ

ಸೈನ್ಯಕ್ಕೆ ಬೇಕಾಗುವ ರಿಸರ್ವ್ ಜನರನ್ನು ಶೇಖರಿಸಲು ಈಜಿಪ್ಟಿನಲ್ಲಿ ಆಜ್ಞೆಯಾಗಿರುವುದೆಂದು ವರದಿಯಾಗಿದೆ. ಇದೇ ರಾಷ್ಟ್ರದ ರಾಷ್ಟ್ರೀಯ ರಕ್ಷಕರ ಶಿಬಿರಗಳಲ್ಲಿ ಸೂಯೆಜ್ ಕಾಲುವೆ ರಕ್ಷಣೆಗಾಗಿ ಬರಲು ಸಿದ್ಧವಾಗಿರುವವರಿಗೆ ಮಿಲಿಟರಿ ತರಬೇತು ಕೊಡಲು ಸ್ವಯಂಸೇವಕರನ್ನು ಸೇರಿಸಿಕೊಳ್ಳಲಾಗುತ್ತಿದೆ. ೬೫ರಿಂದ ೩೫ ವರ್ಷದೊಳಗಿರುವ, ೧೦ ಲಕ್ಷಕ್ಕೂ ಹೆಚ್ಚು ಮಂದಿ ಈಗಾಗಲೇ ಬಂದಿರುತ್ತಾರೆ.

○ಪವಿತ್ರ ಕ್ಷೇತ್ರವಾದ ಪಂಢರಾಪುರಕ್ಕೆ ನೆನ್ನೆ ಭೀಮಾನದಿಯ ಪ್ರವಾಹದ ನೀರು ನುಗ್ಗಿ ೩,೦೦೦ ಮನೆಗಳು ಕುಸಿದು ಬಿದ್ದು ಹೋಗಿವೆ, ಅಪಾರ ನಷ್ಟವಾಗಿವೆಯೆಂದೂ, ೩೦,೦೦೦ ಮಂದಿ ಮನೆಮಠವನ್ನು ಕಳೆದುಕೊಂಡಿರುವರೆಂದೂ ವರದಿಯಾಗಿದೆ. ಊರಿನ ಅರ್ಧ ಭಾಗ ನೀರಿನಲ್ಲಿ ಮುಳುಗಿದೆ.

ಕೇಪ್ ತಯಾರಿಕೆ ಕಾರ್ಖಾನೆಯಲ್ಲಿ ಸಿಡಿತದಿಂದ ೨ ಮರಣ

ಮೈಸೂರು ೭

ಚಾಮುಂಡಿಬೆಟ್ಟದ ದಕ್ಷಿಣ ಭಾಗದಲ್ಲಿರುವ ಶ್ರೀ ಚಾಮುಂಡಿ ಫೈರ್ ವರ್ಕ್ಸ್ ಕಾರ್ಖಾನೆಯಲ್ಲಿ ನೆನ್ನೆ ಬೆಳಗ್ಗೆ ವೆಂಕಟರಾಜ ಅರಸ್ ಮತ್ತು ಮರಿ ಎಂಬ ಇಬ್ಬರು ಕೆಲಸಗಾರರು ಪೆಟ್ಟಿಗೆಗಳಿಗೆ ಕೇಪುಗಳನ್ನು ತುಂಬುತ್ತಿದ್ದಾಗ ಸಿಡಿತದ ಪರಿಣಾಮವಾಗಿ ಮೃತಪಟ್ಟರು. ವೆಂಕಟರಾಜ ಅರಸು ಎಂಬುವನ ಶರೀರವು ಛಿದ್ರವಾಗಿ ಆತನ ಒಂದು ಕಾಲು ಕತ್ತರಿಸಿ ಹೋಗಿ, ಹತ್ತಿರದ ಕೊಳದ ಬಳಿ ಬಿದ್ದಿತು ಮುಖವು ಪೂರ್ಣವಾಗಿ ಸುಟ್ಟು ಕಪ್ಪಾಗಿತ್ತು ಮತ್ತೊಬ್ಬನ ದೇಹವೂ ದೂರಕ್ಕೆ ಬಿಸಾಡಲ್ಪಟ್ಟಿತ್ತು. ಹತ್ತಿರದಲ್ಲೇ ಮೇಯುತ್ತಿದ್ದ ಒಂದು ಹಸುವೂ ಸಹ ಆ ರಭಸಕ್ಕೆ ದೂರದಲ್ಲಿ ಬಿಸಾಡಲ್ಪಟ್ಟಿತ್ತು. ಹಸುವಿನ ಎರಡು ಗೊರಸುಗಳು ಕತ್ತರಿಸಿಹೋದುವು. ಅದರ ಪರಿಸ್ಥಿತಿ ಚಿಂತಾಜನಕವಾಗಿದೆ.

ಮತ್ತೊಬ್ಬ ಕೆಲಸಗಾರನಿಗೆ ಗಾಯವಾಗಿ, ಆತನನ್ನು ಆಸ್ಪತ್ರೆಗೆ ಸೇರಿಸಲಾಗಿದೆ ಸಿಡಿತದಿಂದ ಕಾರ್ಖಾನೆ ಗೋಡೆಗಳೂ ಬಿರುಕು ಬಿಟ್ಟಿವೆ. ಕಾರ್ಖಾನೆಯಲ್ಲಿ ಪಿಸ್ತೂಲು ಮತ್ತು ಸ್ಟಾರ್ ಬ್ರಾಂಡ್ ಕೇಪನ್ನು ತಯಾರಿಸಲಾಗುತ್ತಿದೆ. ನೆನ್ನೆ ನಮ್ಮ ಪತ್ರಿಕೆಯಲ್ಲಿ ಪ್ರಕಟವಾಗಿದ್ದಂತೆ ಸಿಡಿತ ಉಂಟಾದ ಕಾರ್ಖಾನೆಯು ಬೇರೆ ಕಡ್ಡಿ ಕಾರ್ಖಾನೆಯಲ್ಲ.

○ಉತ್ತರ ಪ್ರದೇಶ ಪ್ರಾಂತದ ಬುಲಂದ್‌ಷಹಾರ್ ಜಿಲ್ಲೆಯ ರಿವಾಲು ಎಂಬ ಹಳ್ಳಿಯ ಯುವತಿಯೊಬ್ಬಳು ೫೦ ದಿನಗಳ ಹಿಂದೆ ತನ್ನ ಗಂಡನ ಚಿತೆಯೇರಿ ಸಹಗಮನ ಮಾಡಲು ಹೊರಟು ಇತರರು ಅಡ್ಡಿಪಡಿಸಿದ ಕಾರಣ, ಆಕೆಯು ಅಂದಿನಿಂದಲೂ ಉಪವಾಸ ಮಾಡುತ್ತಿರುವುದಾಗಿ ವರದಿಯಾಗಿದೆ.

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರ ಆಗಮನ

ಹನುಮಂತಯ್ಯನವರೊಡನೆ ಧರ್ಮಪುರಿಗೆ ಪ್ರಯಾಣ

ಸ್ವಂ. ವ. ಪ್ರೋ॥] ಬೆಂಗಳೂರು ೭

ಸೇಲಂ ಜಿಲ್ಲೆಯ ಧರ್ಮಪುರಿಯಲ್ಲಿ ಸೇರುವ ಅಖಿಲ ಭಾರತ ಸರ್ವ ಸೇವಾ ಸಂಘದ ಸಭೆಯಲ್ಲಿ ಭಾಗವಹಿಸಲು ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಈ ದಿನ ವಿಮಾನದಲ್ಲಿ ಇಲ್ಲಿಗೆ ಆಗಮಿಸಿ, ಮೈಸೂರು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೊಡನೆ ಪ್ರಯಾಣ ಮಾಡಿದರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಅವರಿಗೆ ಹೂವಿನ ಹಾರವನ್ನು ಅರ್ಪಿಸಿದರು

ಪತ್ರಿಕಾ ಪ್ರತಿನಿಧಿಗಳು ಕಾಂಗ್ರೆಸ್ ಅಧ್ಯಕ್ಷರನ್ನು ಕುರಿತು, ೧೬ನೇ ತಾ॥ ನಡೆಯುವ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಗೆ ಯಾರನ್ನಾದರೂ ಕಳುಹಿಸುವಿರಾ ಎಂದು ಪ್ರಶ್ನಿಸಲಾಗಿ, ಢೇಬರ್‌ರವರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರನ್ನು ಕೇಳುವಂತೆ ಸೂಚಿಸಿದರು.

ಢೇಬರ್‌ರವರು ನಾಳೆಮ್ಮೆ ವಾಪಸು ಇಲ್ಲಿಗೆ ಬಂದು, ಸ್ವಲ್ಪ ಹೊತ್ತು ತಂಗಿದ್ದು ಸಂಜೆ ವಿಮಾನದಲ್ಲಿ ದೆಹಲಿಗೆ ಹಿಂದಿರುಗುವರು.

ಸಿರಿಯದಲ್ಲಿ ಯುದ್ಧಕ್ಕಾಗಿ ಜನರ ಶೇಖರಣೆ

ಸೂಯೆಜ್ ಕಾಲುವೆ ಬಿಕ್ಕಟ್ಟಿನ ಸಂಬಂಧವಾಗಿ ಸಿರಿಯವು ಹೋರಾಟ ನಡೆಸಲು ಸಿದ್ಧವಾಗಿರುವುದೆಂದೂ, ಯುದ್ಧಕ್ಕಾಗಿ ಸನ್ನಾಹಗಳನ್ನು ಮಾಡಿಕೊಳ್ಳಲು ೩ ದಿನಗಳ ಹಿಂದಿನಿಂದಲೇ ಜನ ಶೇಖರಣೆಯಾಗುತ್ತಿರುವುದೆಂದೂ, ಸೈನ್ಯಗಳು ಸಾಕಷ್ಟು ಬಲ... ...ದಿಂದ ಸಿರಿಯಾ ಯುದ್ಧಕ್ಕೆ ... ಸಿದ್ಧತೆ ಮಾಡಿಕೊಳ್ಳುತ್ತಿರುವುದೆಂದೂ ಅಮೆರಿಕದಲ್ಲಿರುವ ಸಿರಿಯದ ರಾಯಭಾರಿ ಡಾ॥ ಫೈಸಲ್ದ್ದೀನರವರು ತಿಳಿಸಿರುತ್ತಾರೆ.

ಜನವರಿ ೬ ಮತ್ತು ೭ ನೇ ತಾರೀಕು ಕಾಂಗ್ರೆಸ್ ಅಧಿವೇಶನ

ಇಂದೂರಿನಲ್ಲಿ ಬರುವ ಜನವರಿ ತಿಂಗಳು ೬ ಮತ್ತು ೭ನೇ ತಾರೀಖು ಕಾಂಗ್ರೆಸ್ಸಿನ ೬೨ನೇ ಅಧಿವೇಶನವು ನಡೆಯುವುದು. ಜನವರಿ ೩ ರಂದು ಕಾರ್ಯಕಾರಿ ಸಮಿತಿ ಸಭೆ ಸೇರುವುದು. ೩, ೪ ಮತ್ತು ೫ ರಂದು ವಿಷಯ ನಿರ್ಧಾರಕ ಸಭೆ ಜರುಗುವುದು. ಇದೇ ಅಕ್ಟೋಬರ್ ೨೭ ರಲ್ಲಿ ಕಲ್ಕತ್ತದಲ್ಲಿ ಎ. ಐ. ಸಿ. ಸಿ ಸಭೆಯು ಸೇರಲಿದೆ.

ಜಾತಿ ಸೂಚಕ ಹೆಸರುಗಳಿಗೆ ಪ್ರೋತ್ಸಾಹವಿಲ್ಲ

ಸರ್ಕಾರಿ ಕಡತ ಮತ್ತು ಶಾಲೆಗಳಲ್ಲಿ ಜಾತಿ ಸೂಚಕ ಹೆಸರುಗಳ ಉಪಯೋಗಕ್ಕೆ ಪ್ರೋತ್ಸಾಹವೀಯದಿರುವ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು ಅಭಿಪ್ರಾಯಪಟ್ಟಿದೆ.

ನಾಯಕರ ವಿದ್ಯಾರ್ಥಿ ಸಂಘ

ರಾಜಧಾನಿಯ ನಾಯಕರ ವಿದ್ಯಾರ್ಥಿ ಸಂಘದ ಸರ್ವ ಸದಸ್ಯರ ಸಭೆಯು ಮೊನ್ನೆ ದಾಸಪ್ರಕಾಶದಲ್ಲಿ ಶ್ರೀ ಸಂಜೀವಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ೧೯೫೬-೫೭ರ ಸಾಲಿಗೆ ಕೆಳಗೆ ಕಂಡ ಕಾರ್ಯಕಾರಿ ಸಮಿತಿಯನ್ನು ರಚಿಸುವುದರ ಜೊತೆಗೆ ಪ್ರತಿ ತಾಲ್ಲೂಕಿನಲ್ಲಿಯೂ ಇರುವ ಸದಸ್ಯರ ಒಂದು ಸಮಿತಿಯನ್ನು ರಚಿಸಲಾಯಿತು. ಶ್ರೀ ಸಂಜೀವಯ್ಯನವರು ಅಧ್ಯಕ್ಷರು, ಶ್ರೀ ಸಿ ವಿ ರಂಗಸ್ವಾಮಿ ನಾಯ್ಕರು ಉಪಾಧ್ಯಕ್ಷರು, ಶ್ರೀ ಗೋಪಾಲಸ್ವಾಮಿ ನಾಯ್ಕರು ಸಲಹೆಗಾರರು, ಮತ್ತು ಮಂಚನಾಯ್ಕ ಮತ್ತು ಜಿ. ನಾರಾಯಣ ಕಾರ್ಯದರ್ಶಿಗಳು ... ಗಳಾದ ಸಣ್ಣನಾಯ್ಕ, ದೊಡ್ಡದಾಸನಾಯ್ಕ, ನಾಗರಾಜನಾಯ್ಕ, ತಮ್ಮಯ್ಯ, ಬಿ ಕರಿಯಪ್ಪ, ಸುಬ್ಬನಾಯ್ಕ, ಎಸ್. ಬಸಲಯ್ಯ ಬಸವಯ್ಯ, ಸಿ ಮಹ. ಸಿ ದ್ದಯ್ಯ ಮತ್ತು ಮಾದನಾಯ್ಕರವರು ಸದಸ್ಯರಾಗಿ ಆರಿಸಲ್ಪಟ್ಟರು.

ನಾನ್ ಗಜೆಟೆಡ್ ನೌಕರರಿಗೆ ಶಾಸನಸಭೆಯಲ್ಲಿ ಪ್ರಾತಿನಿಧ್ಯಬೇಕು

ವಿಧಾನ ಪರಿಷತ್ತಿನಲ್ಲಿ ವಿವಿಧ ಹಿತಗಳಿಗೆ ಇರುವಂತೆ ಎನ್. ಜಿ ಓ.ಗಳಿಗೂ ಪ್ರಾತಿನಿಧ್ಯವಿರಬೇಕೆಂದೂ, ಪ್ರತಿ ೧೦ ಸಾವಿರ ನೌಕರರಿಗೆ ಒಬ್ಬರಂತೆ ಪ್ರತಿನಿಧಿಯನ್ನು ಚುನಾಯಿಸಲು ವ್ಯವಸ್ಥೆಯಾಗಬೇಕೆಂದೂ ಸೂಚಿಸುವ ನಿರ್ಣಯವನ್ನು ಸಂಸ್ಥಾನದ ನಾನ್ ಗೆಜೆಟೆಡ್ ನೌಕರರ ಸಮ್ಮೇಳನದಲ್ಲಿ ಸರ್ವಾನುಮತದಿಂದ ಅಂಗೀಕರಿಸಲಾಯಿತು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ಸಿತಾರ್ ೭.೧೫ ಮತ್ತು ೮-೫ ಎಂ. ಆರ್. ರವರಿಂದ ಪ್ರದರ್ಶನ ... ನಾ ಮ. ೬.೩೦ ಹಿಂದಿನಾ... ಮಧ್ಯಾಹ್ನ ... ಎನ್. ... ಲಾವಣಿ-ಸಂಗೀತ ... ರಾತ್ರಿ ... ೧ ಸಂಗೀತ ೧.೫೦ ಸಿತಾರ್ ಮತ್ತು ತಬ್ಲಾ. ... ಶಾಸ್ತ್ರೀಯ ... ಲಿಗೆಗಾಗಿ ಸಂಜೆ ೫-೩೦ ಮತ್ತು ... ಕೃಷ್ಣಸ್ವಾಮಿ ... ೬ ೦೫ ಕನ್ನಡ ಗೀತಗಳು ೭ ೩೦ ಪ್ರವಚನ, ೮ ೩೦ ದಿಲ್ಲಿಯ ಕಾರ್ಯಕ್ರಮ, ೮-೪೫ ... ೯-೧೫ ಅರ್, ಕೆ ಶ್ರೀಕಂಠನ್-ಸಂಗೀತ

ಆಗಸ್ಟ್ ೧೫ರಿಂದು ಸರ್ಕಾರಿ ಯಾಂತ್ರಿಕ ವ್ಯವಸಾಯಾರಂಭ

ಸೂರತ್ ನಗರದಲ್ಲಿ ಸರ್ಕಾರದಿಂದ ಯಂತ್ರದ ಮೂಲಕ ನಡೆಸಲ್ಪಡುವ ವ್ಯವಸಾಯದ ಏರ್ಪಾಟನ್ನು ಮಾಡಲಾಗುವುದು. ರಷ್ಯದಿಂದ ಬಂದಿರುವ ಯಂತ್ರಗಳಿಂದ ಈ ತಿಂಗಳು ೧೫ರಿಂದ ಉಳುಮೆ ಮಾಡಲಾಗುವುದು. ಯಂತ್ರಗಳ ಬೆಲೆ ೩೦ ಲಕ್ಷ ರೂ. ಬುಲ್ಗಾನಿನ್ರವರು ಅವನ್ನು ಕೊಟ್ಟಿರುತ್ತಾರೆ. ವ್ಯವಸಾಯವು ೩೦ ಸಾವಿರ ಎಕರೆ ಜಮೀನಿನಲ್ಲಿ ಆರಂಭವಾಗುತ್ತದೆ.

ಗುಜರಾತಿನಲ್ಲಿ ವಿಪರೀತ ಮಳೆ

ಗುಜರಾತಿನಲ್ಲಿ ವಿಪರೀತ ಮಳೆಯ ಪರಿಣಾಮವಾಗಿ ವೀರಮಗ-ರಾಧನಪುರ ಮತ್ತು ಗಾಂಧಿಧಾಮ್-ಪಲನಪುರಗಳ ನಡುವೆ ರೈಲು ಸಂಚಾರವು ನಿಂತಿದೆ. ರಸ್ತೆಯು ಕುಸಿದುಹೋಗಿದೆ. ೪೦೦ ಮನೆಗಳು ಕುಸಿದಿವೆ. ಅಹಮದಾಬಾದಿನಲ್ಲಿ ೪೦ ಮನೆಗಳೂ, ರಾಧನಪುರದಲ್ಲಿ ೨೫೦ ಮನೆಗಳೂ ಉರುಳಿದುವು. ೧೫೦೦ ಜನರು ನಿರಾಶ್ರಿತರಾಗಿರುವರು.

ವಿದ್ಯಾರಣ್ಯಪುರ ನಿವಾಸಿಗಳ ಸಭೆ

ವಿದ್ಯಾರಣ್ಯಪುರದ ನಿವಾಸಿಗಳ ಸಭೆಯು ಮೊನ್ನೆ ಅಸ್ಪಾಜಿ ಜಮಾನಿಯಮ್ಮನ ಆವರಣದಲ್ಲಿ ಪೌರಸಭಾ ಸದಸ್ಯ ಶ್ರೀ ಶ್ರೀಕಂಠಶರ್ಮರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸಮಾಜವಾದಿ ಪಕ್ಷದ ಕಾರ್ಯದರ್ಶಿ ಶ್ರೀ ಕೆ ವಿಶ್ವನಾಥರವರು ಮನೆ ಕಂದಾಯದ ಏರಿಕೆ ಮತ್ತು ನಗರದಲ್ಲಿ ಸರ್ಕಾರಿ ಆಹಾರ ಡಿಪ್ಪೋ ಏರ್ಪಡಿಸುವ ವಿಚಾರವಾಗಿ ಮಾತನಾಡಿದರು. ಶ್ರೀ ಗ ... ಆರ್. ಗೋಪಾಲಕೃಷ್ಣರಾವ್, ನ ರಾಮಸ್ವಾಮಿ, ... ಮುಂತಾದವರು ಬಡಾವಣೆ ನಿವಾಸಿಗಳ ಕುಂದುಕೊರತೆಗಳನ್ನು ವಿವರಿಸಿದರು. ಪುನರ್ವಿಮರ್ಶೆಯ ಹೆಸರಲ್ಲಿ ಮನೆ ತೆರಿಗೆಯನ್ನು ಹೆಚ್ಚಿಸಿ, ಬಡಜನರಿಗೆ ತೊಂದರೆ ಮಾಡಕೂಡದೆಂದೂ, ಆಹಾರದ ಬೆಲೆ ಏರುತ್ತಿರುವುದನ್ನು ತಪ್ಪಿಸಲು ಕೂಡಲೇ ಸರ್ಕಾರದವರು ... ನಂತೆ ಧಾನ್ಯ ಮಾರಾಟ ಮಾಡಬೇಕೆಂದೂ ವಿದ್ಯಾರಣ್ಯಪುರದಲ್ಲಿ ನೀರಿನ ತೊಂದರೆ ಮತ್ತು ಡ್ರೈನೇಜ್ ಅಭಾವ ಹೋಗಲಾಡಿಸಬೇಕೆಂದೂ ಸೂಚಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು. ಅಧ್ಯಕ್ಷರು ಭಾಷಣ ಮಾಡಿ ನಿವಾಸಿಗಳ ಕುಂದುಕೊರತೆಗಳನ್ನು ನಿವಾರಿಸಲು ಪ್ರಯತ್ನಪಡುವುದಾಗಿ ಸೂಚಿಸಿದರು.

ಉತ್ತರಕರ್ ವಿದ್ಯಾರ್ಥಿ ನಿಲಯ ಸಂಘ

ನಗರದ ಬಸ್ಟ್ಯಾಂಡಿನಲ್ಲಿರುವ ಲಿಂಗೋಜಿರಾವ್ ರಾಮರಾವ್ ಉತ್ತರಕರ್ ವಿದ್ಯಾರ್ಥಿ ನಿಲಯದ ಸಂಘದ ಚುನಾವಣೆಗಳು ನಡೆದು ಶ್ರೀ ಯು. ಎಲ್. ರಾಮಚಂದ್ರರಾಯರು ಅಧ್ಯಕ್ಷರಾಗಿಯೂ, ಶ್ರೀ ಎ ಉಪಾಧ್ಯಕ್ಷರಾಗಿಯೂ, ಸತ್ಯೇಂದ್ರ ... ಕಾರ್ಯದರ್ಶಿ ಮತ್ತು ಜಿ. ಎಂ ನಾರಾಯಣರಾಯರು ಖಜಾಂಚಿಯಾಗಿಯೂ, ಶ್ರೀಗಳಾದ ಜಯರಾಮರಾವ್, ವಿಠಲರಾವ್, ಶಂಕರರಾವ್ ಮತ್ತು ನರಸಿಂಹಮೂರ್ತಿಯವರು ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಆರಿಸಲ್ಪಟ್ಟಿರುವರು.

ಚಿತ್ರದ ಹಂಚಿಕೆಗಾರರ ಮೇಲೆ ಮೊಕದ್ದಮೆ

ಮೈಸೂರು ೭

ಬೆಂಗಳೂರಿನ ಎಮರಾಲ್ಡ್ ಪಿಕ್ಚರ್ಸ ಸರ್ಕ್ಯೂಟಿನ ಮಾಲೀಕರಾದ ಶ್ರೀ ಎ. ದ್ವಾರಕನಾಥ್ರವರು ರಾಜಧಾನಿಯ ಲಕ್ಷ್ಮಿ ಚಿತ್ರ ಮಂದಿರದವರಿಗೆ ೫,೦೦೦ ರೂ. ಗಳಷ್ಟು ಮೊಬಲಗಿಗೆ ಮೋಸ ಮಾಡಲೆತ್ನಿಸಿದರೆಂದು ಚಿತ್ರಮಂದಿರದ ವ್ಯವಸ್ಥಾಪಕರು ನಗರದ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆಯೊಂದನ್ನು ನೆನ್ನೆ ಹೂಡಿದರು. ನ್ಯಾಯಾಧೀಶರು ಫಿರ್ಯಾದನ್ನು ದಾಖಲು ಮಾಡಿಕೊಂಡು ಆಪಾದಿತರನ್ನು ಜಾಮೀನುಳ್ಳ ವಾರಂಟ್ ಮೇಲೆ ಹಸ್ತಗಿರಿ ಮಾಡುವಂತೆ ಆಜ್ಞೆ ಮಾಡಿ ೨೭ನೇ ತಾರೀಖಿಗೆ ವಿಚಾರಣೆ ಮುಂದಿಟ್ಟಿರುವರು.

ಫುಟ್ಬಾಲ್ ಪಂದ್ಯ

ಚಾಮರಾಜನಗರದಲ್ಲಿ ಮೊನ್ನೆ ಹೈಸ್ಕೂಲು, ಕಾಲೇಜು ಮತ್ತು ಟೌನಿನ ಕಂಬೈಂಡ್ ಟೀಮಿಗೂ, ಫ್ರೆಂಡ್ಸ್ ಯೂನಿಯನ್ನಿನವರಿಗೂ ಫುಟ್ಬಾಲ್ ಪಂದ್ಯವು ನಡೆದು ಫ್ರೆಂಡ್ಸ್ ಟೀಮಿನವರು ೩-೧ ಗೋಲುಗಳಿಂದ ಜಯಗಳಿಸಿದರು. ಗೆದ್ದವರ ಆಟಕ್ಕಿಂತಲೂ ಸೋತವರದು ಉತ್ತಮವಾಗಿತ್ತು.

ಸಂಗೀತ ಸ್ಪರ್ಧೆಯಲ್ಲಿ ಗೊಂದಲ

ನಗರದ ಪ್ರೀಮಿಯರ್ ಅಸೋಸಿಯೇಷನ್ನಿನ ಆಶ್ರಯದಲ್ಲಿ ಮೊನ್ನೆ ಸದ್ವಿದ್ಯಾ ಪಾಠಶಾಲೆಯಲ್ಲಿ ಮುತ್ತೈದೆಭಾಗ್ಯದ ಸಂಗೀತ ಸ್ಪರ್ಧೆ ಏರ್ಪಾಡಾಗಿತ್ತು. ಸಿನಿಮಾ ನಟ ಶ್ರೀ ಬಾಲಕೃಷ್ಣ, ನಟಿ ಶ್ರೀಮತಿ ಜಯಶ್ರೀ, ಹಿನ್ನೆಲೆ ಗಾಯಕ ಶ್ರೀ ನಾಗೇಂದ್ರ ಇವರುಗಳು ಬರಬೇಕಾಗಿದ್ದು ಅವರಾರೂ ಬರಲಿಲ್ಲ. ಸಮಾರಂಭದ ಏರ್ಪಾಡು ಮಾಡಿದ್ದವರು ಅಭ್ಯಾಸಿತರಿಗೆ ಮಾತ್ರವೇ ಪ್ರವೇಶವೆಂದು ಒಂದು ಕಡೆಯೂ, ಸರ್ವರಿಗೂ ಪ್ರವೇಶವೆಂದು ಮತ್ತೊಂದು ಕಡೆಯೂ ಪ್ರಚಾರ ಮಾಡಿದ್ದರಿಂದಲೂ ಸಿನಿಮಾ ನಟನಟಿಯರನ್ನು ನೋಡಬೇಕೆಂಬ ಆಸೆಯಿಂದಲೂ ಜನರು ಬಹುವಾಗಿ ಸೇರಿದ್ದರು. ಪರಿಸ್ಥಿತಿಯನ್ನು ತಹಬಂದಿಗೆ ತರಲು ಕಕ್ಕಾಬಿಕ್ಕಿ ವ್ಯವಸ್ಥಾಪಕರುಗಳು ಸ್ಪರ್ಧೆಯನ್ನೇ ರದ್ದುಗೊಳಿಸಿದರು. ಇದರಿಂದ ಉದ್ರೇಕಗೊಂಡವರು ಕಲ್ಲು ಪ್ರಯೋಗ ಮಾಡಿ ಕಿಟಕಿ-ಬಾಗಿಲುಗಳಿಗೆ ಜಖಂ ಮಾಡಿದರು. ಸ್ಪರ್ಧೆಯಲ್ಲಿ ಭಾಗವಹಿಸಲು ಸಂಸ್ಥಾನದ ನಾನಾ ಕಡೆಗಳಿಂದ ಸ್ಪರ್ಧಿಗಳು ಸ್ವಂತ ಹಣ ವೆಚ್ಚ ಮಾಡಿಕೊಂಡು ಬಂದು ನಿರಾಶರಾದರು.

ಇಂತಹ ಸ್ಪರ್ಧೆ ಏರ್ಪಾಡು ಮಾಡುವವರು ಈ ಬಗ್ಗೆ ಮುನ್ನೆಚ್ಚರಿಕೆ ಕೈಗೊಳ್ಳದಿದ್ದುದು ಶೋಚನೀಯ ವಿಷಾದಕರ - ಎಸ್ ಎಂ ಬಸವರಾಜು

ಬಿಜಾಪುರದಲ್ಲಿ ಮಳೆಯಿಂದ ಮನೆಗಳುರುಳಿ ೧೩ ಜನರ ಮರಣ

ಬಿಜಾಪುರ ಜಿಲ್ಲೆಯಲ್ಲಿ ಕಳೆದ ಒಂದು ವಾರದಿಂದ ಎಡೆಬಿಡದೆ ಮಳೆಯಾಗಿ ಅನೇಕ ಮನೆಗಳು ಕುಸಿದು, ೧೩ ಜನರು ಮೃತಪಟ್ಟಿರುತ್ತಾರೆ. ೫ ತಾಲ್ಲೂಕುಗಳಲ್ಲಿ ವಿಪರೀತ ನಷ್ಟವಾಗಿದೆ. ದನಕರುಗಳು ಸತ್ತಿರುತ್ತವೆ. ಪೈರು ಪಚ್ಚೆಗಳು ಹಾಳಾಗಿವೆ. ಜನರಿಗೆ ದೇವಾಲಯಗಳಲ್ಲಿ ಆಶ್ರಯ ನೀಡಲಾಗುತ್ತಿದೆ. ಕೃಷ್ಣಾ ನದಿಯ ಪ್ರವಾಹದ ನೀರು ಸಾಂಗ್ಲಿ ನಗರಕ್ಕೆ ನುಗ್ಗಿದೆ.

ಒಕ್ಕಲಿಗರ ಯುವಜನ ಸಂಘದ ಅಧಿಕಾರ ವರ್ಗ

ಮೈಸೂರು ಒಕ್ಕಲಿಗರ ಯುವಜನ ಸಂಘದ ಕಾರ್ಯಕಾರಿ ಸಮಿತಿಯ ಚುನಾವಣೆಯು ಮೊನ್ನೆ ನಡೆದು, ಶ್ರೀ ಎಸ್. ಎಸ್. ಗುಂಡಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಪಿ. ಗರೀಗೌಡರು ಕಾರ್ಯದರ್ಶಿಯಾಗಿಯೂ ಮತ್ತು ಶ್ರೀ ಜಿ. ರಾಮೇಗೌಡರು ಖಜಾಂಚಿಯಾಗಿಯೂ ಆಯ್ಕೆಯಾಗಿರುವರು.

ಮೈಸೂರು ಪೇಟೆ ಧಾರಣೆ

	ರೂ. ಯಿಂದ			ರೂ ವರೆಗೆ		
ಸಣ್ಣ ಭತ್ತ	೪೮	೦	೦	೪೯	೬	೦
ದಪ್ಪ ಭತ್ತ	೨೮	೨	೦	೨೮	೧೨	೦
ರಾಗಿ	೨೭	೧೦	೦	೩೧	೨	೦
ಕಡಲೇಕಾಯಿ	೧೦	೦	೦	೨೧	೨	೦
ಹುಣಸೆ	೧೪	೧೦	೦	೧೫	೦	೦
ಹರಳು ಬೀಜ	೪೬	೧೦	೦			
ಎಳ್ಳು	೭೮	೦	೦	೮೨	೪	೦
ಹುರುಳಿ	೩೩	೪	೦	೩೬	೨	೦
ಹೆಸರು	೫೦	೦	೦	೫೭	೬	೦
ಹಲಸಂದೆ	೪೦	೬	೦			
ಉದ್ದು	೫೫	೪	೦			
ಹುಣಸೇಹಣ್ಣು	೩	೧೦	೦	೫	೧೨	೦
ಮೆಣಸಿನಕಾಯಿ	೧೬	೪	೦	೨೧	೨	೦
ತೆಂಗಿನಕಾಯಿ ೧೦೦೦	೧೩೪	೮	೦	೨೧೫	೦	೦

SRI GAYATHRI TALKIES
To-day only
LUCKY ME
(Cinemascope & Technicolor)
Starring :—Dorris Day & Phil Silvers
From 8-8-56 : For 2 days
HOUSE OF WAX
Mysore Khedda operations will be shown in the Indian News Reel in Technicolor

Estd 1948 — — 16th BATCH
CITY TUTORIAL COLLEGE, MYSORE
(The oldest & the best of its kind)
Receives admission for the S. S. L. C. coaching class for Dec. 56 Examn.
Classes— 7-15 to 11 15 a.m - Fees Rs. 6 P.M.

ಚಾಮುಂಡೇಶ್ವರಿ ಟಾಕೀಸ್
3—8 56 ರಿಂದ : ಅನೋಖಾ ಪ್ರಾರಂಭ : ದಿನವಹಿ 3 ಪ್ರದರ್ಶನಗಳು
ಜ್ಯೂಬಿಲಿ ಫಿಲಂಸ್ ರವರ ತಮಿಳು ಚಿತ್ರ ★ ಮರ್ಮವೀರನ್
ಪಾತ್ರ:— ವೈಜಯಂತಿಮಾಲಾ, ಶ್ರೀರಾಂ, ರಾಜಾಸುಲೋಚನಾ, ಎಂ. ಎನ್. ರಾಜಂ, ವಿ ನಾಗಯ್ಯ, ಟಿ. ಎಸ್ ಬಾಲಯ್ಯ, ವೀರಪ್ಪ, ತಂಗವೇಲು
ಇಂದಿನಿಂದ ಮಾಮೂಲಿನಂತೆ ಮಹಿಳೆಯರಿಗೆ ಪ್ರವೇಶ ಏರ್ಪಡಿಸಿರುತ್ತೆ.
[An Emerald Release

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
8—8—56ನೇ :: ಬುಧವಾರದಿಂದ :: ಪ್ರತಿದಿನ 3 ಆಟಗಳು
ಭರಣಿಯವರ ತೆಲುಗು ಚಿತ್ರ ★ ವಿಪ್ರನಾರಾಯಣ
ಪಾತ್ರ: ಭಾನುಮತಿ, ನಾಗೇಶ್ವರರಾವ್, ರೇಲಂಗಿ ಮುಂತಾದವರು
—ಮುಂದಿನ ಬದಲಾವಣೆ:—
ವಿಜಯಾವಾರವರ ತೆಲುಗು ಚಿತ್ರ : ಚಿರಂಜೀವಿಲು

COACHING SECTION
Dalvoy High School, Mysore
Excellent coaching for S. S. L. C. Students of Dec. 1956
By Experienced Experts ; between 7 & 10 A.M.
Charges Very Moderate
Join Immediately
H S. Ananthachar, Secretary

ಜಾತಕ-ಪ್ರಶ್ನೆ-ಹಸ್ತ ಸಾಮುದ್ರಿಕ
(ASTRO PALMISTRY)
H. S ವೆಂಕಟರಾವ್,
B.A., B.L., B.Ed.,
1329, ಕೃಷ್ಣಮೂರ್ತಿಪುರಂ, ಮೈಸೂರು

Edited, Printed and Published by A. R. Nagarajan at Sadhvi Press D. Subaiah Road, Mysore

ಟೆಲಿಫೋನ್ ನಂ. 792

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

[illegible] ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ

ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : WEDNESDAY 8-8-1956 ಮೈಸೂರು : ಬುಧವಾರ ೮-೮-೧೯೫೬ [ಸಂಚಿಕೆ : ೮

ಸೂಯೆಜ್ ಸಮ್ಮೇಳನಕ್ಕೆ ಬರಲು ೧೭ ರಾಷ್ಟ್ರಗಳ ಒಪ್ಪಿಗೆ

ಸ್ಕೂಲ್ ಫೈನಲ್ ಪರೀಕ್ಷೆಯ ಪ್ರಥಮ ೧೦ ರ್‍ಯಾಂಕುಗಳು

ಬೆಂಗಳೂರು ೮

ಈ ಸಾರಿಯ ಎಸ್. ಎಸ್. ಎಲ್. ಸಿ. ಸಪ್ಲಿಮೆಂಟರಿ ಪರೀಕ್ಷೆಯಲ್ಲಿ ಪ್ರಥಮ ಹತ್ತು ರ್‍ಯಾಂಕುಗಳನ್ನು ಕ್ರಮವಾಗಿ ಕೆಳಕಂಡವರು ಪಡೆದಿದ್ದಾರೆ.

ಶಿವಮೊಗ್ಗ ಸರ್ಕಾರಿ ಹೈಸ್ಕೂಲಿನ ಶ್ರೀ ಎಂ. ಸಿ. ಮಹದೇವಯ್ಯ, ಚಿತ್ರದುರ್ಗ ಸರ್ಕಾರಿ ಹೈಸ್ಕೂಲಿನ ಶ್ರೀ ಎಲ್. ಸತ್ಯನಾರಾಯಣರಾವ್, ತುಮಕೂರು ಸರ್ಕಾರಿ ಹೈಸ್ಕೂಲಿನ ಶ್ರೀ ಟಿ. ವಿ. ಸತ್ಯನಾರಾಯಣರಾವ್, ಬೆಂಗಳೂರು ಕೋಟೆ ಹೈಸ್ಕೂಲಿನ ಶ್ರೀ ಎಂ. ಆರ್. ಶ್ರೀಧರ್, ಗುಲ್ಲೇಪ್ವರಂ ಸರ್ಕಾರಿ ಹೈಸ್ಕೂಲಿನ ಶ್ರೀ ಬಿ. ಎಂ. ಬ್ರಜೇಂದ್ರಸಿಂಗ್, ಬೆಂಗಳೂರು ಕೋಟೆ ಸರ್ಕಾರಿ ಹೈಸ್ಕೂಲಿನ ಶ್ರೀ ಡಿ. ಎಲ್. ಗುರುದತ್, ಸೇಂಟ್ ಜೋಸೆಫ್ ಹೈಸ್ಕೂಲಿನ ಶ್ರೀ ಫ್ರೆಡರಿಕ್. ಎಫ್. ಪೈಸ್, ಮೈಸೂರು ಶಾರದಾವಿಲಾಸ ಹೈಸ್ಕೂಲಿನ ಶ್ರೀ ಎಸ್. ಮುರಳೀಧರ ಮತ್ತು ಟಿ. ಆರ್. ಸತ್ಯನಾರಾಯಣರಾವ್ ಮತ್ತು ಶಿವಮೊಗ್ಗ ಸರ್ಕಾರಿ ಹೈಸ್ಕೂಲಿನ ಶ್ರೀ ಎಸ್. ಕೃಷ್ಣಯ್ಯಶೆಟ್ಟಿ.

ಪರೀಕ್ಷೆಗೆ ಒಟ್ಟು ೬,೭೪೯ ಮಂದಿ ಕುಳಿತಿದ್ದು ೨,೪೭೭ ಮಂದಿ ಇ. ಸಿ. ಸಿ. ಎಸ್. ಪಡೆದಿದ್ದಾರೆ. ಅವರ ಸಂಖ್ಯೆಯು ಶೇಕಡ ೩೬.೫ ರಷ್ಟಿದೆ. ೨,೩೭೨ ಮಂದಿ ಇ. ಪಿ. ಎಸ್. ಪಡೆದಿದ್ದಾರೆ.

ಬಿ. ಇಡಿ. ಪರೀಕ್ಷೆಯಲ್ಲಿ ಉಪಾಧ್ಯಾಯರ ತೇರ್ಗಡೆ

ಮೈಸೂರು ೮

ಬಿ. ಇಡಿ. ಪರೀಕ್ಷೆಗೆ ಕುಳಿತಿದ್ದ ಹಾರ್ಡ್ವಿಕ್ ಪ್ರೌಢಶಾಲೆಯ ಐವರು ಉಪಾಧ್ಯಾಯರೂ ತೇರ್ಗಡೆಯಾಗಿರುತ್ತಾರೆ. ಶ್ರೀಯುತರಾದ ವಿ. ಕೆ. ರಾಧಾಕೃಷ್ಣ ಮತ್ತು ಹೆಚ್. ಎಸ್. ವೆಂಕಟರಾಯರು ಪ್ರಥಮ ದರ್ಜೆಯಲ್ಲೂ, ಜೆ. ಪಿ. ಕೃಷ್ಣಸ್ವಾಮಿ, ಜೆ. ಜಯಕರ್ ಮತ್ತು ಎಲ್. ಸುಬ್ರಹ್ಮಣ್ಯರವರು ದ್ವಿತೀಯ ದರ್ಜೆಯಲ್ಲೂ ಉತ್ತೀರ್ಣರಾಗಿರುವರು.

ಈ ಬನುಮಯ್ಯ ಶಾಲೆಯಲ್ಲಿರುವ ಇನ್ಸ್ಟಿಟ್ಯೂಟ್ ಆಫ್ ಎಜುಕೇಷನ್ ಸಂಸ್ಥೆಯಿಂದ ಪರೀಕ್ಷೆಗೆ ಕುಳಿತಿದ್ದ ೫೯ ಮಂದಿ ವಿದ್ಯಾರ್ಥಿಗಳಲ್ಲಿ ಇಬ್ಬರು ಪ್ರಥಮ ದರ್ಜೆಯಲ್ಲೂ, ೨೯ ಮಂದಿ ದ್ವಿತೀಯ ದರ್ಜೆಯಲ್ಲೂ ಮತ್ತು ೧೫ ಮಂದಿ ತೃತೀಯ ದರ್ಜೆಯಲ್ಲೂ ಉತ್ತೀರ್ಣರಾಗಿ ಶೇಕಡ ೮೦ರಷ್ಟು ತೇರ್ಗಡೆಯ ಫಲಿತಾಂಶ ಬಂದಿದೆ.

೩೬ ಜನರು ಗೋದಾವರಿ ನೀರಿನ ಪಾಲು

ಪ್ರವಾಹಪೂರಿತವಾಗಿರುವ ಗೋದಾವರಿ ನದಿಯಲ್ಲಿ ಕಳೆದ ಭಾನುವಾರ ಹೋಗುತ್ತಿದ್ದ ನಾಡ ದೋಣಿಯೊಂದು ನೀರಿನಲ್ಲಿ ಮುಳುಗಿದ್ದ ಮರಕ್ಕೆ ಡಿಕ್ಕಿ ಹೊಡೆದು ಚೂರುಚೂರಾಯಿತೆಂದೂ, ಅದರಲ್ಲಿದ್ದ ೩೯ ಜನರ ಪೈಕಿ ೧೪ ಮಂದಿ ಸ್ತ್ರೀಯರೂ, ೧೯ ಮಕ್ಕಳೂ ಸೇರಿ ೩೬ ಜನರು ನೀರಿನ ಪಾಲಾದರೆಂದೂ ವರದಿಯಾಗಿದೆ. ಪ್ರವಾಹದಿಂದ ಸಿಕ್ಕಿಬಿದ್ದವರನ್ನು ಸುರಕ್ಷಿತ ಪ್ರದೇಶಕ್ಕೆ ದೋಣಿಯಲ್ಲಿ ಒಯ್ಯಲಾಗುತ್ತಿತ್ತು.

ಬಂಗಾಳಾ ಗವರ್ನರ್ ಮುಖರ್ಜಿಯವರ ನಿಧನ

ಪಶ್ಚಿಮ ಬಂಗಾಳದ ಗವರ್ನರ್ ಡಾ|| ಹರೇಂದ್ರಕುಮಾರ ಮುಖರ್ಜಿಯವರು ನಿನ್ನೆ ಸಂಜೆ ಕಲ್ಕತ್ತೆಯ ರಾಜಭವನದಲ್ಲಿ ನಿಧನ ಹೊಂದಿದರು. ಅವರು ಕಳೆದ ಒಂದು ವಾರದಿಂದಲೂ ಅಸ್ವಸ್ಥರಾಗಿದ್ದರು. ಅವರಿಗೆ ೮೧ ವರ್ಷ ವಯಸ್ಸಾಗಿತ್ತು. ನಿನ್ನೆ ಸಂಜೆ ಅವರಿಗೆ ಹೃದಯ ವೇದನೆಯು ಕಾಣಿಸಿಕೊಂಡು [illegible] ಮೃತಪಟ್ಟರು. [illegible] ಪಂಡಿತರೂ ಮತ್ತು ಕ್ರೈಸ್ತರೂ ಆಗಿದ್ದ ಅವರು ಭಾರತದ [illegible] ಆಗಿದ್ದರು. [illegible] ಗವರ್ನರ್ ಆಗಿ ನೇಮಿಸಲಾಗಿತ್ತು. [illegible] ೫,೦೦೦ ರೂ.ಗಳನ್ನು ಕಲ್ಕತ್ತಾ ವಿಶ್ವವಿದ್ಯಾನಿಲಯದ [illegible] ಉನ್ನತ ಶಿಕ್ಷಣಕ್ಕಾಗಿ ತಮ್ಮ ಪತ್ನಿ ಹೆಸರಿನಲ್ಲಿ ಕೊಡುತ್ತಿದ್ದರು. ಮೃತರ ಗೌರವಾರ್ಥವಾಗಿ ಕೇಂದ್ರ ಮತ್ತು ಪ್ರಾಂತ ಸರ್ಕಾರಗಳ ಕಟ್ಟಡಗಳ ಮೇಲೆ ಧ್ವಜವನ್ನು ಅರ್ಧ ಮಟ್ಟದಲ್ಲಿ ಹಾರಿಸಲಾಗಿದೆ.

ಕಲ್ಕತ್ತಾ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಪಿ. ಬಿ. ಚಕ್ರವರ್ತಿಯವರನ್ನು ಹಂಗಾಮಿ ಗವರ್ನರರಾಗಿ ನೇಮಿಸಲಾಗಿದೆ.

೭ ತಿಂಗಳ ಹಿಂದೆ ಮೃತಪಟ್ಟವರ ವರ್ಗದ ಆಜ್ಞೆ

೭ ತಿಂಗಳ ಹಿಂದೆ ಮೃತಪಟ್ಟವರೊಬ್ಬರನ್ನು ಸಂಸ್ಥಾನದ ವಿದ್ಯಾ ಇಲಾಖೆಯವರು ಬಾಗೇಪಲ್ಲಿ ರೇಂಜಿನ ಶಾಲಾ ಇನ್ಸ್ಪೆಕ್ಟರಾಗಿ ಈಗ ವರ್ಗಾಯಿಸಿರುವರೆಂದು ವರದಿಯಾಗಿದೆ. ಮೃತಪಟ್ಟವರ ಹೆಸರು ಶ್ರೀ ಹೆಚ್. ಎಸ್. ಸುಬ್ಬರಾವ್. ಅವರು ಶ್ರೀನಿವಾಸಪುರದ ಪ್ರಾಥಮಿಕ ಶಾಲಾ ಮುಖ್ಯೋಪಾಧ್ಯಾಯರಾಗಿದ್ದು ಕಳೆದ ಜನವರಿ ೯ರಂದು ಕ್ಷಯರೋಗದ ಕಾರಣ ನಿಧನ ಹೊಂದಿದ್ದರು. ಬಾಗೇಪಲ್ಲಿಯಲ್ಲಿದ್ದ ಇನ್ಸ್ಪೆಕ್ಟರ್ ಶ್ರೀ ದಾಮೋದರರವರು ಚಿನ್ನದ ಗಣಿಗೆ ವರ್ಗವಾಗಿ ತೆರಳಿರುತ್ತಾರೆ.

ಬೆಂಗಳೂರಿಗೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿಗಳ ಭೇಟಿ

ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಮನ್ನಾರಾಯಣರವರು ನಾಳೆ ಬೆಂಗಳೂರಿಗೆ ಭೇಟಿಯಿತ್ತು ಸಂಜೆ ೫ ಗಂಟೆಗೆ ಯುವಕರ ಕಾಂಗ್ರೆಸ್ ದಿನಾಚರಣೆ ಸಂಬಂಧವಾಗಿ ಏರ್ಪಾಡಾಗಿರುವ ಯುವಕರ ಕೂಟದಲ್ಲಿ ಭಾಷಣ ಮಾಡುವರು.

ಪ್ರೊಬೇಷನರುಗಳ ನೇಮಕದ ಆಯ್ಕೆ ಸಧ್ಯಕ್ಕಿಲ್ಲ

ನಾನಾ ಇಲಾಖೆಗೆ ತೆಗೆದುಕೊಳ್ಳಲಾಗುವುದೆಂದು ಪ್ರಕಟಿಸಲಾಗಿದ್ದ ಪ್ರೊಬೇಷನರುಗಳ ನೇಮಕವನ್ನು ಅಮಾನತ್ತಿನಲ್ಲಿಡಲಾಗಿದೆ. ಆ ಕಾರಣ ಇದೇ ೧೯ನೇ ತಾರೀಖು ನಡೆಯಬೇಕಾಗಿದ್ದ ಲಿಖಿತ ಪ್ರಿಲಿಮಿನರಿ ಟೆಸ್ಟ್ ಅನ್ನು ರದ್ದುಪಡಿಸಲಾಗಿದೆ. ಸಂಸ್ಥಾನಕ್ಕೆ ಹೊಸ ಪ್ರದೇಶಗಳು ಸೇರುವ ಕಾಲವು ಹತ್ತಿರವಾಗುತ್ತಿರುವುದರಿಂದ ನೇಮಕಗಳನ್ನು ಅಮಾನತ್ತಿನಲ್ಲಿಡುವಂತೆ ಕೇಂದ್ರದವರು ಸಂಸ್ಥಾನ ಸರ್ಕಾರಕ್ಕೆ ಸಲಹೆ ಮಾಡಿದ್ದರು.

ವಿದ್ಯುಚ್ಛಕ್ತಿ ದರದಲ್ಲಿ ಮಾರ್ಪಾಡಿನ ಬಗ್ಗೆ ಸರ್ಕಾರದ ಆಜ್ಞೆ

ಫೋಟೋ ಸ್ಟುಡಿಯೋ, ಹಿಟ್ಟಿನ ಗಿರಣಿ ಮುಂತಾದುವಕ್ಕೆ ರಿಯಾಯಿತಿ

ಬೆಂಗಳೂರು ೮

ವಿದ್ಯುಚ್ಛಕ್ತಿ ದರಗಳ ಬಗ್ಗೆ ಹೊಸ ಆಜ್ಞೆಯೊಂದರಲ್ಲಿ ಸರ್ಕಾರದವರು ಕೆಲವು ಮಾರ್ಪಾಡುಗಳನ್ನು ಮಾಡಿದ್ದಾರೆ.

ಅದರ ಪ್ರಕಾರ, ಫೋಟೋಗ್ರಾಫಿಕ್ ಸ್ಟುಡಿಯೋಗಳನ್ನು ಬಿಟ್ಟು ಮಿಕ್ಕೆಲ್ಲ ಲೋ ಟೆನ್ಷನ್ ವಿದ್ಯುಚ್ಛಕ್ತಿ ಬಳಸುವ ಕೈಗಾರಿಕೆಗಳಿಗೆ ವಾರ್ಷಿಕ ಕನಿಷ್ಠ ದರವನ್ನು ನಾಮಿನಲ್ ಅಶ್ವಶಕ್ತಿ ಬದಲು ರೇಟೆಡ್ ಅಶ್ವಶಕ್ತಿ ಮೇಲೆ ಕಳೆದ ಏಪ್ರಿಲ್ ೧ರಿಂದ ಬರುವ ಅಕ್ಟೋಬರ್ ೩೧ರವರೆಗೆ ವಿಧಿಸಲಾಗುವುದು. ಅದರಂತೆ ಆ ಕ್ವಾರ್ಟರ್ ಬಿಲ್ಲು ಒಳಗೆ ಬಳಕೆದಾರರು ತಮ್ಮ ಮೋಟಾರುಗಳನ್ನು ಕಡಿಮೆ ದರ್ಜೆಗೆ ಬದಲಾಯಿಸಿಕೊಳ್ಳಲು ಅವಕಾಶವಾಗುವುದು. ಇಲಾಖೆಯವರು ಈ ಬಗ್ಗೆ ಅವಶ್ಯಕವಾದ ಸಲಹೆ ಕೊಡುವರು. ನವೆಂಬರ್ ೧ರಿಂದ ನಾಮಿನಲ್ ಅಥವಾ ರೇಟೆಡ್ ಅಶ್ವಶಕ್ತಿಯಲ್ಲಿ ಯಾವುದು ಹೆಚ್ಚೋ ಅದರ ಮೇಲೆ ಮಾಸಿಕ ಕನಿಷ್ಠ ದರವನ್ನು ವಿಧಿಸಲಾಗುತ್ತದೆ.

ಮೈಸೂರು ಮತ್ತು ಬೆಂಗಳೂರುಗಳಲ್ಲಿರುವ ಹಿಟ್ಟಿನ ಗಿರಣಿಗಳು ಮತ್ತು ಇತರ ಸಣ್ಣ ಕೈಗಾರಿಕೆಗಳಿಗೆ ಮಾಸಿಕ ಕನಿಷ್ಠ ದರವನ್ನು ೧೦೦ ಯೂನಿಟ್ಟುಗಳ ಬದಲು ೮೦ರ ಮೇಲೆ ಹಾಕಲಾಗುವುದು.

ಫೋಟೋಗ್ರಾಫಿಕ್ ಸ್ಟುಡಿಯೋಗಳನ್ನು ದೀಪದ ಇನ್ಸ್ಟಲೇಷನ್ನುಗಳಂತೆ ಪರಿಗಣಿಸಿ, ಅವುಗಳ ಯೂನಿಟ್ಟಿಗೆ ೩ ಆಣೆಗಳಂತೆ ಕನಿಷ್ಠ ದರವನ್ನು ಗೊತ್ತುಪಡಿಸಲಾಗುವುದಲ್ಲದೆ, ಉಪಯೋಗಿಸಲ್ಪಟ್ಟ ಶಕ್ತಿಗೆ ಮನೆಗೆ ಒದಗಿಸುವ ವಿದ್ಯುಚ್ಛಕ್ತಿ ದರದಂತೆ ೪ ಆಣೆ ದರವನ್ನು ಹಾಕಲಾಗುವುದು.

ಕಬ್ಬಿನ ಗಾಣ, ಹತ್ತಿ ಗಿರಣಿ ಮುಂತಾದುವಕ್ಕೆ ಕಳೆದ ಏಪ್ರಿಲ್ ೧ರವರೆಗೆ ಕೊಟ್ಟಿದ್ದ ರಿಯಾಯಿತಿಯನ್ನು ಮುಂದುವರಿಸಲಾಗುವುದು.

ಸೂಯೆಜ್ ಸಮ್ಮೇಳನದಲ್ಲಿ ಭಾಗವಹಿಸಲು ಭಾರತದ ಒಪ್ಪಿಗೆ

ಇತರ ೧೭ ರಾಷ್ಟ್ರಗಳೂ ಭಾಗವಹಿಸಲಿವೆ

ಬರುವ ೧೬ರಂದು ಲಂಡನ್ನಿನಲ್ಲಿ ಸೇರುವ ಸೂಯೆಜ್ ಸಮ್ಮೇಳನದಲ್ಲಿ ಭಾಗವಹಿಸಲು ಭಾರತವು ನಿರ್ಧರಿಸಿರುವುದೆಂದು ಗೊತ್ತಾಗಿದೆ. ಬ್ರಿಟನ್, ಫ್ರಾನ್ಸ್ ಮತ್ತು ಅಮೆರಿಕಗಳಲ್ಲದೆ, ಆಸ್ಟ್ರೇಲಿಯಾ, ನ್ಯೂಜಿಲೆಂಡ್, ಪಾಕಿಸ್ತಾನ, ಟರ್ಕಿ, ಪೋರ್ಚುಗಲ್, ಇಟಲಿ, ಹಾಲೆಂಡ್, ಡೆನ್ಮಾರ್ಕ್, ಇರಾನ್, ಸ್ವೀಡನ್, ನಾರ್ವೆ, ಪಶ್ಚಿಮ ಜರ್ಮನಿ ಮತ್ತು ಇಥಿಯೋಪಿಯಗಳೂ ಭಾಗವಹಿಸಲು ಒಪ್ಪಿವೆ. ಸಮ್ಮೇಳನಕ್ಕೆ ಬರುವವರು ಸೂಯೆಜ್ ಕಾಲುವೆಯ ಅಂತರರಾಷ್ಟ್ರೀಕರಣದ ತತ್ವವನ್ನು ಪೂರ್ವಭಾವಿಯಾಗಿಯೇ ಒಪ್ಪಿಕೊಳ್ಳಬೇಕೆಂಬ ನಿಯಮವೇನಿಲ್ಲವೆಂದು ಬ್ರಿಟಿಷ್ ವಿದೇಶಾಂಗ ಅಧಿಕಾರಿಯೊಬ್ಬರು ತಿಳಿಸಿರುತ್ತಾರೆ.

ಹೆಚ್. ಸಿ. ಮುಖರ್ಜಿಯವರ ನಿಧನಕ್ಕಾಗಿ ರಜಾ

ಸ್ವಂ. ವ. ತಂತಿ] ಬೆಂಗಳೂರು ೮

ಪಶ್ಚಿಮ ಬಂಗಾಳಾ ಗವರ್ನರ್ ಹೆಚ್. ಸಿ. ಮುಖರ್ಜಿಯವರ ನಿಧನದ ಬಗ್ಗೆ ಗೌರವ ಸೂಚನೆಗಾಗಿ ಈ ದಿನ ಇಲ್ಲಿನ ಸರ್ಕಾರಿ ಕಛೇರಿಗಳಿಗೆ ರಜಾ ಕೊಡಲಾಗಿತ್ತು. ಸರ್ಕಾರಿ ಕಟ್ಟಡಗಳ ಮೇಲೆ ಧ್ವಜವನ್ನು ಅರ್ಧ ಮಟ್ಟಕ್ಕೆ ಹಾರಿಸಲಾಗಿದೆ.

ಕೃಷ್ಣ ಮತ್ತು ಗೋವಿಂದರೆಡ್ಡಿ ಮೇಲೆ ಕಳುವು ಮೊಕದ್ದಮೆ

ಕೃಷ್ಣ ಮತ್ತು ಗೋವಿಂದರೆಡ್ಡಿ ಎಂಬ ಇಬ್ಬರು ಬೇಲೂರು ಕೊಲೆ ಅಪಾದಿತರ ಮೇಲೆ, ಲೇವಾದೇವಿಗಾರರೊಬ್ಬರ ಮನೆಯಲ್ಲಿ ೮,೦೦೦ ರೂ. ಅಪಹಾರದ ಬಗ್ಗೆ ಹೂಡಲಾಗಿರುವ ಮೊಕದ್ದಮೆಯು ಈ ದಿನ ಸಿವಿಲ್ ಪ್ರದೇಶ ನ್ಯಾಯಾಧೀಶರ ಮುಂದೆ ಬಂದು, ಮುಂದೆಹೋಯಿತು. ಆಪಾದಿತರ ಪರ ವಕೀಲರು ಕೇಳಿದ್ದ ದಾಖಲಾತಿಗಳ ನಕಲನ್ನು ಕೊಡುವಂತೆ ಆಜ್ಞೆ ಮಾಡಲಾಯಿತು.

ಬೃಹದ್ಬೊಂಬಾಯಿ ನಿರ್ಮಾಣಕ್ಕೆ ಕೇಂದ್ರ ಸರ್ಕಾರದ ಸಮ್ಮತಿ

ಮಹಾರಾಷ್ಟ್ರ, ಮರಾಠವಾಡ, ವಿದರ್ಭ, ಬೊಂಬಾಯಿ ನಗರ, ಗುಜರಾತ್, ಸೌರಾಷ್ಟ್ರ ಮತ್ತು ಕಚ್ ಪ್ರದೇಶಗಳನ್ನು ಕೂಡಿಸಿ ದ್ವಿಭಾಷಾ ಸಂಸ್ಥಾನವನ್ನು ರಚಿಸುವುದಕ್ಕೆ ಭಾರತ ಸರ್ಕಾರದವರು ಬೆಂಬಲ ನೀಡುವುದಾಗಿ ಪಂಡಿತ ಗೋವಿಂದವಲ್ಲಭ ಪಂತರು ನಿನ್ನೆ ಲೋಕಸಭೆಯಲ್ಲಿ ತಿಳಿಸಿದರು. ಈ ಕ್ಲಿಷ್ಟ ಸಮಸ್ಯೆಯನ್ನು ಖಾಯಂ ಆಗಿ ಪರಿಹರಿಸಿದ ಬಗ್ಗೆ ಪಾರ್ಲಿಮೆಂಟ್ ಸದಸ್ಯರನ್ನು ಅವರು ಅಭಿನಂದಿಸಿದರು.

ಸಂಸ್ಥಾನದಲ್ಲಿ ಭೂದಾನ ಪಾದಯಾತ್ರೆ ಮುಂದಕ್ಕೆ

ಇದೇ ೧೫ನೇ ತಾರೀಖಿನಿಂದ ಸಂಸ್ಥಾನದಲ್ಲಿ ಪ್ರಾರಂಭವಾಗಬೇಕಾಗಿದ್ದ ಭೂದಾನ ಪಾದಯಾತ್ರೆಯನ್ನು ಸೆಪ್ಟೆಂಬರ್ ೧೧ಕ್ಕೆ ಮುಂದೆ ಹಾಕಲಾಗಿದೆ. ಅಂದು ಆಚಾರ್ಯ ವಿನೋಬಾ ಭಾವೆಯವರ ಜನ್ಮ ದಿನೋತ್ಸವವಾಗುವುದರಿಂದ ಆ ದಿನ ಯಾತ್ರೆಯು ಪ್ರಾರಂಭವಾಗುವುದು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಅದರ ಆರಂಭೋತ್ಸವವನ್ನು ನೆರವೇರಿಸುವರು. ಪಾದಯಾತ್ರೆಯವರು ಬೆಂಗಳೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಸಂಚರಿಸಿ, ಮೈಸೂರು ನಗರಕ್ಕೆ ಅಕ್ಟೋಬರ್ ೨ರಂದು ಬರುವರು. ಎಲ್ಲಾ ಪಕ್ಷಗಳ ಮುಖಂಡರು, ಶಾಸನಸಭಾ ಸದಸ್ಯರು ಮತ್ತು ಭೂದಾನ ಪಾದಯಾತ್ರಿಕರು ಭಾಗವಹಿಸುವರು. ಅದಕ್ಕೆ ಸೇರಲಿಚ್ಛಿಸುವವರು ಸಂಚಾಲಕರಾದ ಶ್ರೀ ಕೆ. ಆರ್. ಮಾಧವರಾಯರೊಡನೆ ವ್ಯವಹರಿಸಬಹುದು.

○ [illegible] ಬುಕಿಂಗ್ ಕ್ಲರ್ಕ್ ಶ್ರೀ ರಾಮಚಂದ್ರರಾವ್ ಎಂಬುವರು ನಿನ್ನೆ ತಮ್ಮ ಕೆಲಸದಲ್ಲಿ ನಿರತರಾಗಿದ್ದಾಗ ಹಠಾತ್ತನೆ [illegible] ಮೃತಪಟ್ಟರು. [illegible]

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಬೋರ್ಡಿನ ಸ್ಥಾಪನೆ

ಬೆಂಗಳೂರು ೮

ಸಂಸ್ಥಾನದಲ್ಲಿ ವಿದ್ಯುಚ್ಛಕ್ತಿ ಬೋರ್ಡನ್ನು ಸ್ಥಾಪಿಸುವುದು ಅನಿವಾರ್ಯವಾಗಿರುವುದೆಂದು ವಿದ್ಯುಚ್ಛಕ್ತಿ ಮಂತ್ರಿ ಶ್ರೀ ಹೆಚ್. ಎಂ. ಚೆನ್ನಬಸಪ್ಪನವರು ತಿಳಿಸಿರುತ್ತಾರೆ. ಈ ವಿಷಯವು [illegible] ಇತ್ಯರ್ಥವಾಗದೇ ಇದ್ದಿತೆಂದೂ, ಕೇಂದ್ರ ವಿದ್ಯುಚ್ಛಕ್ತಿ ಶಾಸನದ ಪ್ರಕಾರ ಬೋರ್ಡಿನ ರಚನೆಗೆ ಕೊಟ್ಟಿದ್ದ ಮೂರು ವರ್ಷದ ಅವಧಿಯು ಮುಗಿಯಿತೆಂದೂ ಅವರು ಹೇಳಿರುವರು. ಮೊದಲು ಬೋರ್ಡಿನ ಸ್ಥಾಪನೆಗೆ ಸರ್ಕಾರದವರು ಬಹಳವಾಗಿ ವಿರೋಧವಾಗಿದ್ದರೆಂದೂ, ಕೇಂದ್ರ ಶಾಸನಕ್ಕೆ ಪ್ರತಿಯಾಗಿ ಸಂಸ್ಥಾನದಲ್ಲಿ ಯಾವ ಶಾಸನವನ್ನೂ ಈ ಅವಧಿಯಲ್ಲಿ ಮಾಡದೆ ಸರ್ಕಾರದವರು ತಟಸ್ಥರಾಗಿದ್ದರೆಂದೂ ಅವರು ತಿಳಿಸಿರುವರು.

ಬೊಂಬಾಯಿ ಕನ್ನಡ ಶಾಲೆಯ ನೂತನ ಕಟ್ಟಡ

ಬೊಂಬಾಯಿನ ರಾಷ್ಟ್ರೀಯ ಕನ್ನಡ ಶಿಕ್ಷಣ ಸಮಿತಿಯ ಪ್ರೌಢ ಶಾಲೆಯನ್ನು ಸ್ವಂತ ಕಟ್ಟಡಕ್ಕೆ ಹಾಕಲು ನಿರ್ಧರಿಸಲಾಗುವುದು. ಸೆವ್ರಿ ಪಡಾಲ್ ಎಸ್ಟೇಟಿನಲ್ಲಿ ಕಟ್ಟಡವು ಭವ್ಯವಾಗಿ ಕಟ್ಟಲ್ಪಟ್ಟಿದೆ. ಅಲ್ಲಿರುವ ಕನ್ನಡಿಗರ ಮನದಾಸೆಯೊಂದು ಇದರಿಂದ ಪೂರೈಸಿದಂತಾಗಿದೆ.

ಬೊಂಬಾಯಿಯಲ್ಲಿ ರಾಜಪ್ರಮುಖರ ವರ್ಧಂತಿ

ಬೊಂಬಾಯಿಯ ಸೆವ್ರಿ ಕನ್ನಡ ಶಾಲೆಯಲ್ಲಿ ಕಳೆದ ವಾರ ಮೈಸೂರು ರಾಜಪ್ರಮುಖರ ವರ್ಧಂತಿಯು ಶ್ರೀ ಎಸ್. ಎಸ್. ಗುಪ್ತೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಿನ್ಸಿಪಾಲ್ ಶ್ರೀ ಎನ್. ನರಸಿಂಹಯ್ಯನವರು ಸ್ವಾಗತ ಭಾಷಣ ಮಾಡಿದರು. ಶ್ರೀ ಗುಪ್ತೆಯವರು ಮಹಾರಾಜರ ಜೀವನದ ಮುಖ್ಯ ವಿಷಯಗಳನ್ನು ನಿರೂಪಿಸಿದರು. ಶ್ರೀ ಎನ್. ಗೋವಿಂದರಾಯರು ವಂದನಾರ್ಪಣೆ ಮಾಡಿದರು. ಶ್ರೀ ಶಿವಲಿಂಗಪ್ಪ ಮತ್ತು ಶ್ರೀ ರಾಜು ಕೆ. ಶೆಟ್ಟಿ ಎಂಬ ಶ್ರೀಮಂತರು ಶಾಲೆಯ ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಿದರು.

ಸುಪ್ರೀಂ ಕೋರ್ಟಿಗೆ ಇನ್ನೂ ಮೂವರು ಜಡ್ಜರು

ಸುಪ್ರೀಂ ಕೋರ್ಟಿನ ನ್ಯಾಯಾಧೀಶರ ಸಂಖ್ಯೆಯನ್ನು ಏಳರಿಂದ ಹತ್ತಕ್ಕೆ ಹೆಚ್ಚಿಸಲು ಅವಕಾಶವಾಗುವ ಮಸೂದೆಯೊಂದನ್ನು ಲೋಕಸಭೆಯಲ್ಲಿ ಮೊನ್ನೆ ಮಂಡಿಸಲಾಯಿತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಕೊಳಲು. ೭-೧೫ ಎಲ್. ಎಸ್. [illegible] ೭-೪೦ ಮತ್ತು ೮-೧೫ ಕೆ. ಎಸ್. ನಾರಾಯಣಾಚಾರ್ [illegible] ಮಧ್ಯಾಹ್ನ ೧೨ ಎಲ್. ಎಸ್. [illegible] ೧೨-೪೦ ಹೆಚ್. ವಿ. ಕೃಷ್ಣಮೂರ್ತಿ [illegible] ಸಂಗೀತ. ೧-೫೦ ಕೊಳಲು. ೩ ಗಂಟೆ [illegible] ಸಂಜೆ ೫ ೪೦ [illegible] ಗೀತೆ. ೬ ೪೦ ಭಕ್ತಿಗೀತೆ. [illegible] ಹೆಚ್. ವಿ. ಕೃಷ್ಣಮೂರ್ತಿ [illegible] ೮-೪೦ [illegible] ಗೀತೆ. ೯-೧೫ [illegible]

ಪೋಷಕ ಬೋಧಕ ಸಂಘದ ವಾರ್ಷಿಕೋತ್ಸವ

ನಂಜನಗೂಡು ೮

ಮೊನ್ನೆ ಸಂಜೆ ರೆಸಿಡೆನ್ಸಿ ಭವನದಲ್ಲಿ ಇಲ್ಲಿನ ಶ್ರೀಕಂಠೇಶ್ವರ ಬಡಾವಣೆ ಪ್ರಾಥಮಿಕ ಶಾಲೆಯ ಪೋಷಕ ಬೋಧಕ ಸಂಘದ ವಾರ್ಷಿಕೋತ್ಸವವು ಜಿಲ್ಲಾ ವಿದ್ಯಾಧಿಕಾರಿಗಳಾದ ಶ್ರೀ ಹೆಚ್. ವಿ. ಶ್ರೀರಂಗರಾಜುರವರ ಅಧ್ಯಕ್ಷತೆಯಲ್ಲಿ ಜರುಗಿತು.

ಶ್ರೀ ಆರ್. ಶೇಷಗಿರಿರಾಯರಿಂದ ಪ್ರಾರ್ಥನೆ, ಶ್ರೀ ನಾಗಪ್ಪಾಚಾರ್ಯರಿಂದ ಸ್ವಾಗತ ಪದ್ಯ ಪಠಣ ಮತ್ತು ಶ್ರೀ ಎ. ವಿ. ಕೃಷ್ಣರವರಿಂದ ಸ್ವಾಗತ ಭಾಷಣವಾದನಂತರ ಸಂಘದ ಕಾರ್ಯದರ್ಶಿ ಶ್ರೀ ಬಿ. ಗೋಪಾಲಯ್ಯನವರು ವಾರ್ಷಿಕ ವರದಿಯನ್ನು ಒಪ್ಪಿಸಿದರು.

ಪೋಷಕರ ಪರವಾಗಿ ಶ್ರೀಗಳಾದ ಸಿ. ಕೆ. ನಾಗಪ್ಪ, ಚಂದ್ರಶೇಖರಯ್ಯ, ಬಿ. ಎಂ. ಶಿವರಾಮಯ್ಯ ಮತ್ತು ಕೃಷ್ಣಮೂರ್ತಿಯವರೂ; ಉಪಾಧ್ಯಾಯರ ಪರವಾಗಿ ರೇಂಜ್ ಇನ್ಸ್‌ಪೆಕ್ಟರ್ ಶ್ರೀ ನಾಗರಾಜರಾವ್‌ರವರೂ ಭಾಷಣ ಮಾಡಿದರು. ಶ್ರೀಮತಿ ಲೀಲಾವತಿ ಅಂಜನಯ್ಯನವರು ಬಾಲಿಕೆಯರಿಗೂ ಅಧ್ಯಕ್ಷರು ಬಾಲಕರಿಗೂ ಉಚಿತ ವಸ್ತ್ರಗಳನ್ನು ಹಂಚಿದರು.

ವಿದ್ಯಾಭೂಷಣ ಶ್ರೀ ಎಂ. ಎಲ್. ಶಾಸ್ತ್ರಿಗಳು ಭಾಷಣ ಮಾಡಿ ಯಾವ ರೀತಿಯ ವಿದ್ಯಾಸುಧಾರಣೆಗಳಾದರೂ ನಮ್ಮ ಪುರಾತನ ಸಂಸ್ಕೃತಿಯ ಅಭಿವೃದ್ಧಿಯನ್ನು ಗಮನದಲ್ಲಿಟ್ಟಿರಬೇಕೆಂದು ಹೇಳಿ ಆಧುನಿಕ ವಿದ್ಯಾಭ್ಯಾಸ ಪದ್ಧತಿಗೆ ತಕ್ಕಂತೆ ಶಿಕ್ಷಕರು ತಮ್ಮ ಮನೋಧರ್ಮವನ್ನು ಬದಲಾಯಿಸಿಕೊಳ್ಳಬೇಕೆಂದೂ ಮತ್ತು ವಿದ್ಯಾರ್ಥಿಗಳಲ್ಲಿ ಶಿಸ್ತನ್ನುಂಟುಮಾಡುವುದು ಶಿಕ್ಷಕರು ಮತ್ತು ಪೋಷಕರ ಜಂಟಿ ಜವಾಬ್ದಾರಿಯೆಂದೂ ಹೇಳಿದರು.

ಅಧ್ಯಕ್ಷರು ಭಾಷಣ ಮಾಡಿ [illegible] ಉಪಾಧ್ಯಾಯರೂ, ಪೋಷಕರೂ ಒಟ್ಟಾಗಿ ಸೇರಿ [illegible]. ರೇಂಜ್ ಇನ್ಸ್‌ಪೆಕ್ಟರ್ ಶ್ರೀ ನಾರಾಯಣರಾಯರು ವಂದನಾರ್ಪಣೆ ಮಾಡಿದರು.

ಪಾಕಿಸ್ಥಾನಿಗೆ ನಿಧಿಯ ಲಾಭ

ಪಾಕಿಸ್ಥಾನಕ್ಕೆ ವಲಸೆ ಹೋಗುವ ಮುಂಚೆ ಬಚ್ಚಿಟ್ಟಿದ್ದ ನಿಧಿಯನ್ನು ಮಹಮದ್ ಹುಸೇನ್ ಎಂಬುವನು ಪಟಿಯಾಲದಲ್ಲಿರುವ ತನ್ನ ಮನೆಯಲ್ಲಿ ಪಡೆದಿದ್ದಾನೆ. ಅವನ ಮನೆಯು ನಿರಾಶ್ರಿತರ ಆಸ್ತಿಯೆಂದು ಪರಿಗಣಿತವಾಗಿದೆ. [illegible] ಚಿನ್ನದ ಆಭರಣ, ಬೆಳ್ಳಿ ವಸ್ತುಗಳು ಮತ್ತು ೧೪ ರೂ. ಗಳು ದೊರೆತುವೆಂದು ಹೇಳಲಾಗಿದೆ.

ಹಾಸಿಗೆ - ದಿಂಬು

[illegible]

ಬಾಬುಸಾಬ್ ಕಂಪನಿ,

[illegible], ಮೈಸೂರು

Edited, Printed and Published by A. R. Nagaraja at Sadhvi Press D. Subaiah Road, Mysore

ಒರಿಸ್ಸಾ ಮುಖ್ಯ ಮಂತ್ರಿಗೆ ಕಂಟೆಂಪ್ಟ್ ನೋಟೀಸು

ಒರಿಸ್ಸಾ ಸಂಸ್ಥಾನದ ಮುಖ್ಯ ಮಂತ್ರಿ ನಭಕೃಷ್ಣ ಚೌಧುರಿಯವರಿಗೆ ಅಲ್ಲಿನ ಹೈಕೋರ್ಟಿನ ಶ್ರೇಷ್ಠ ನ್ಯಾಯಾಧೀಶರಾದ ಆರ್. ಎಲ್. ನರಸಿಂಹಂ ಮತ್ತು ಜಸ್ಟಿಸ್ ಬಾಲಕೃಷ್ಣರಾಯರು ನೋಟೀಸು ಕೊಡುವಂತೆ ಆಜ್ಞೆ ಮಾಡಿ, ಅವರ ಮೇಲೆ ಕಂಟೆಂಪ್ಟ್ ಅಪಾದನೆ ಕ್ರಮ ನಡವಳಿಕೆ ನಡೆಸಬಾರದೇಕೆಂದು ಕೇಳಿರುತ್ತಾರೆ. ಒಂದು ದಿನಪತ್ರಿಕೆಯಾದ ಮಾತೃಭೂಮಿಯ ಸಂಪಾದಕರೂ ಮತ್ತು ಪ್ರಕಾಶಕರೂ ಆದ ರಾಮಚಂದ್ರಕಾರರಿಗೂ ಅದೇ ರೀತಿ ನೋಟೀಸು ಕೊಡಲಾಗುವುದು. ಕಳೆದ ಮಾರ್ಚಿ ತಿಂಗಳಲ್ಲಿ ಅಲ್ಲಿನ ಶಾಸನಸಭೆಯಲ್ಲಿ ಮುಖ್ಯ ಮಂತ್ರಿಯವರು ಮಾಡಿದ ಭಾಷಣವು ಕಂಟೆಂಪ್ಟ್ ಆಫ್ ಕೋರ್ಟ್ ಆಗುವುದೆಂದೂ, ಅದನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತೆಂದೂ, ಲೋಕಸಭಾ ಸದಸ್ಯ ಸುರೇಂದ್ರನಾಥ ಮಹಂತಿಯವರು ಅರ್ಜಿ ಸಲ್ಲಿಸಿದರು. ಹೈಕೋರ್ಟಿಗೆ ಕೊಟ್ಟಿರುವ ಅಧಿಕಾರವನ್ನು ಅನೇಕ ಸಲ ದುರುಪಯೋಗಪಡಿಸಲಾಗುತ್ತದೆಂದು ಮುಖ್ಯ ಮಂತ್ರಿಗಳು ತಿಳಿಸಿದುದಾಗಿ ಪತ್ರಿಕೆಯಲ್ಲಿ ಪ್ರಕಟವಾಗಿತ್ತೆಂದು ಹೇಳಲಾಗಿದೆ.

ಬೀಗದಕ್ಕೆ ಗೊಂಚಲು ಮತ್ತು ಚಾರ್ಜ್ ಸಿಕ್ಕಿದೆ

ರಾಜಧಾನಿಯ ಮಧ್ಯಾಹ್ನ [illegible] ರಸ್ತೆಯಲ್ಲಿ ಬಿದ್ದಿದ್ದ ಬೀಗದಕ್ಕೆ ಗೊಂಚಲೊಂದು ಮತ್ತು ಸೋಲಿನ ಯಂತ್ರದ ಚಾರ್ಜ್ ಸಿಕ್ಕಿದೆ. ವಾರಸುದಾರರು ಗುರುತು ಕೊಟ್ಟು ಸಾಧ್ವಿ ಪತ್ರಿಕೆ ಕಛೇರಿಯಲ್ಲಿ ಪಡೆಯಬಹುದು.

Paly
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO.
Chemists & Druggists
711 A. S. Street,
BANGALORE-2

ಇ. ವಿ. ಗಣಪತಿಅಯ್ಯರ್‌ರವರಿಗೆ ಅಸ್ಸಾಮಿನಲ್ಲಿ ಹುದ್ದೆ

ಸಂಸ್ಥಾನದ ನಿವೃತ್ತ ಕೈಗಾರಿಕೆ ಮತ್ತು ವಾಣಿಜ್ಯ ಡೈರೆಕ್ಟರಾದ ಶ್ರೀ ಇ. ವಿ. ಗಣಪತಿ ಅಯ್ಯರ್‌ರವರನ್ನು ಅಸ್ಸಾಂ ಸರ್ಕಾರದವರು ಗೃಹ ಮತ್ತು ಸಣ್ಣ ಕೈಗಾರಿಕೆಗಳ ಸಲಹೆಗಾರರನ್ನಾಗಿ ನೇಮಿಸಿಕೊಂಡಿರುತ್ತಾರೆ. ಶ್ರೀಯುತರು ಬರುವ ವಾರ [illegible] ತೆರಳುವರು. ಕಳೆದ ವರ್ಷ ಅವರು ಅಫ್ಘಾನಿಸ್ಥಾನ ಸರ್ಕಾರದ ಆಹ್ವಾನದ ಮೇಲೆ ಅಲ್ಲಿ ಸಣ್ಣ ಮತ್ತು ಗೃಹ ಕೈಗಾರಿಕೆಗಳ ಅಭಿವೃದ್ಧಿ ಬಗ್ಗೆ ವರದಿಯನ್ನು ಒಪ್ಪಿಸಿ ಹಿಂದಿರುಗಿದ್ದರು.

ವೈವಿಶಾಸ್ತ್ರಮುದಲ್ಲಿ ಉಚಿತ ನೇತ್ರ ಪರೀಕ್ಷೆ

ಮೈಸೂರು ವಿದ್ಯಾರಣ್ಯಪುರದ ಶ್ರೀ ಚಾಮುಂಡೇಶ್ವರೀ ದೇವಸ್ಥಾನದ ರಸ್ತೆಯಲ್ಲಿರುವ ಶ್ರೀ ವೈವಿಶಾಸ್ತ್ರಮುದಲ್ಲಿ ಪ್ರಸಂಚಿದ ಸುಭಕ್ಷೆಗಾಗಿ ಮೊನ್ನೆ ವಿಶೇಷ ಪೂಜೆ ನೆರವೇರಿತು. ಈ ಸಂದರ್ಭದಲ್ಲಿ, ಬೆಂಗಳೂರಿನಲ್ಲಿ ಕೆಲವು ವರ್ಷಗಳಿಂದಲೂ ಇದ್ದ ಕಣ್ಣು ನೋಟದ ಶಾಲೆಯ ಡೈರೆಕ್ಟರಾದ ಡಾ|| ವಿ. ಕೆ. ಎಸ್. ನಾಥಾಚಾರ್ಯರವರು ವೈವಿಶಾಸ್ತ್ರಮಕ್ಕೆ ಬರುವ ನೇತ್ರ ದೃಷ್ಟಿ ಸಂಬಂಧದ ವ್ಯಾಧಿಗ್ರಸ್ತರನ್ನೂ ಮತ್ತು ಕನ್ನಡಕ ಉಪಯೋಗಿಸುವವರನ್ನೂ ಪ್ರತಿ ದಿನ ಬೆಳಿಗ್ಗೆ ೮-೩೦ರಿಂದ ೧೦ ಘಂಟೆಯವರಿಗೆ ಉಚಿತವಾಗಿ ಪರೀಕ್ಷಿಸಿ ಸಲಹೆಗಳನ್ನು ಕೊಡುವುದಾಗಿ ಸಂಕಲ್ಪ ಮಾಡಿದ್ದಾರೆ.

COACHING SECTION
Dalvoy High School, Mysore

Excellent coaching for S. S. L. C. Students of Dec. 1956

By Experienced Experts;
between 7 & 10 A.M.
Charges Very Moderate
Join Immediately

R. S. Ananthachar,
Secretary

GLOBE TUTORIAL COLLEGE,
Sadvidya Patashala Buildings, Mysore,
Provides excellent coaching by experienced teachers
For S. S. L. C. 1956
Join at once *Time: 7 30 to 10-30 A.M.*

Estd 1948 — — 16th BATCH
CITY TUTORIAL COLLEGE, MYSORE
(*The oldest & the best of its kind*)
Receives admission for the S. S. L. C. coaching class for Dec. 56 Exam
Classes — 7.15 to 11.15 a.m. Fees Rs 6 P.M.

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

★

ಮೈಸೂರು ಸ್ಯಾಂಡಲ್ ಸಾಬೂನು

★

ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು ಒಂದು ನಿಶ್ಚಿತ ಸಾಧನ

★

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

★

ಉಪಯೋಗಿಸಿ ನೋಡಿ

★

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ

— ದೊರೆಯುತ್ತದೆ —

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
ಮೆಂಬರು : ಐ. ಎಸ್. ಟಿ. ಎಂ. ಎ.

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
೮-೮-56ನೇ :: ಬುಧವಾರದಿಂದ :: ಪ್ರತಿದಿನ 3 ಆಟಗಳು
ಭರಣಿಯವರ ತೆಲುಗು ಚಿತ್ರ ★ ವಿಪ್ರನಾರಾಯಣ
ಪಾತ್ರ: ಭಾನುಮತಿ, ನಾಗೇಶ್ವರರಾವ್, ರೇಲಂಗಿ ಮುಂತಾದವರು
— : ಮುಂದಿನ ಆಕರ್ಷಣೆ :—
ನೋಟಾರಾವದ ತೆಲುಗು ಚಿತ್ರ : ಚಿರಂಜೀವಿಲು

ಟೆಲಿಫೋನ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಅಂಚಿಕ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : THURSDAY 9—8—1956 ಮೈಸೂರು : ಗುರುವಾರ ೯—೮—೧೯೫೬ [ಸಂಚಿಕೆ : ೯

ಅಹ್ಮದಾಬಾದಿನಲ್ಲಿ ಗುಂಡಿನೇಟಿನಿಂದ ೭ ಜನರ ಮರಣ

ಅಹಮದಾಬಾದಿನಲ್ಲಿ ಗುಂಡಿನೇಟಿನಿಂದ ೭ ವಿದ್ಯಾರ್ಥಿಗಳ ಮರಣ

ದ್ವಿಭಾಷಾ ಸಂಸ್ಥಾನದ ರಚನೆಗೆ ವಿರೋಧ ಪ್ರದರ್ಶನ ಮತ್ತು ಗಲಭೆ

ದ್ವಿಭಾಷಾ ಬೊಂಬಾಯಿ ಸಂಸ್ಥಾನದ ರಚನೆಯನ್ನು ಪ್ರತಿಭಟಿಸಿ ನೆನ್ನೆ ಅಹಮದಾಬಾದಿನಲ್ಲಿ ೫,೦೦೦ ವಿದ್ಯಾರ್ಥಿಗಳು ನಿಷೇಧಾಜ್ಞೆಯನ್ನು ಭೇದಿಸುವಂತೆ ಕೂಗುತ್ತಾ, ಅಲ್ಲಿನ ಕಾಂಗ್ರೆಸ್ ಕಛೇರಿಗೆ ನುಗ್ಗಿ ಅಗ್ನಿಗೆ ನಷ್ಟಪಡಿಸಿ, ಪ್ರಮುಖ ಕಾಂಗ್ರೆಸ್ ಮುಖಂಡರ ಚಿತ್ರಗಳನ್ನು ಸುಟ್ಟು ಗಲಭೆ ಮಾಡಿದಾಗ ಪೋಲೀಸರು ಗುಂಡು ಹಾರಿಸಿದ ಪರಿಣಾಮವಾಗಿ ಸ್ಥಳದಲ್ಲಿ ಐವರೂ ಮತ್ತು ಆಸ್ಪತ್ರೆಯಲ್ಲಿ ಇಬ್ಬರೂ ಮೃತಪಟ್ಟು, ೧೨೦ ಮಂದಿಗೆ ಗಾಯವಾದುದಾಗಿ ವರದಿಯಾಗಿದೆ. ನಗರದಲ್ಲಿ ರಾತ್ರಿ ೯ ರಿಂದ ಬೆಳಗ್ಗೆ ೭ ಗಂಟೆವರೆಗೆ ಕರ್ಫ್ಯೂವನ್ನು ವಿಧಿಸಿ, ೭ ದಿನಗಳ ಪ್ರತಿಬಂಧ ಆಜ್ಞೆಯನ್ನು ಜಾರಿ ಮಾಡಲಾಗಿದೆ. ಗಾಯವಾದವರಲ್ಲಿ ೧೩ ಜನರ ಸ್ಥಿತಿ ತೀವ್ರವಾಗಿದೆ.

ವಿದ್ಯಾರ್ಥಿಗಳು ಪೋಲೀಸರ ಮೇಲೆ ಕಲ್ಲು ಬೀರಿ, ವ್ಯಾನುಗಳನ್ನೂ, ಜಿಲ್ಲಾ ಮ್ಯಾಜಿಸ್ಟ್ರೇಟರ ಜೀಪನ್ನೂ ಜಖಂಗೊಳಿಸಿದರು. ಪೋಲೀಸರು ಜನರ ಮೇಲೆ ಅಶ್ರು ವಾಯು ಶೆಲ್ಲುಗಳನ್ನು ಹಾಕಿ, ಲಾಠಿ ಪ್ರಹಾರ ಮಾಡಿ ಚದುರಿಸಿದರು. ಸತ್ತವರ ಶರೀರಗಳನ್ನು ಬಿಟ್ಟುಕೊಡಲು ವಿದ್ಯಾರ್ಥಿಗಳು ಮೊದಲು ಒಪ್ಪಲಿಲ್ಲ.

ಬಾರಿಬಾರಿಗೂ ಅಶ್ರುವಾಯು ಪ್ರಯೋಗ ಮುಂತಾದುವು ಆಗಿ ಜನರು ಚದುರಿದರು. ರಸ್ತೆ ದೀಪಗಳನ್ನು ಒಡೆದು, ಕಂಭಗಳಿಗೆ ಬೆಂಕಿ ಹಚ್ಚಿ, ಪೌರಸಭಾ ಆಸ್ತಿಗಳನ್ನೂ ನಾಶಪಡಿಸಲಾಯಿತು. ರಾತ್ರಿ ಪ್ರಜಾ ಸಮಾಜವಾದಿಗಳು ದ್ವಿಭಾಷಾ ಪ್ರಾಂತದ ರಚನೆ ಬಗ್ಗೆ ಪ್ರತಿಭಟನೆಗಾಗಿ ಕರೆದಿದ್ದ ಬಹಿರಂಗ ಸಭೆಗೆ ಗುಂಪಿನವರು ಹೋದರು.

ರಾತ್ರಿ ೮ ಗಂಟೆ ಸಮಯದಲ್ಲಿ ಕಾಂಗ್ರೆಸ್ ಭವನದ ಬಳಿ ಗಲಭೆಯಾದಾಗ ಪುನಃ ಗುಂಡು ಹಾರಿಸಲಾಯಿತು. ವಿದ್ಯುಚ್ಛಕ್ತಿ ಕಛೇರಿ ಬಾಗಿಲು ಮುರಿದು ಸಾಮಗ್ರಿಗಳಿಗೆ ಬೆಂಕಿ ಹಚ್ಚಿದಾಗ ಮತ್ತೊಮ್ಮೆ ಗುಂಡು ಹಾರಿಸಲಾಯಿತು. ಈ ದಿನವೂ ಹರತಾಳ ಮಾಡುವಂತೆ ವಿದ್ಯಾರ್ಥಿಗಳಿಗೆ ಕರೆ ಕೊಡಲಾಗಿದೆ. ಆದರೆ ಮೆರವಣಿಗೆ ಮಾತ್ರ ನಡೆಸುವುದಿಲ್ಲ.

ಕಮ್ಯೂನಿಸ್ಟರ ಪರ ಇರುವ ಕಾರ್ಮಿಕರು ಹರತಾಳಕ್ಕೆ ಸೇರುವಂತೆ ಸೂಚಿಸಲಾಗಿದೆ. ನಗರದ ಮಾರ್ಕೆಟ್ಟಿನಲ್ಲಿ ನೆನ್ನೆ ೨,೦೦೦ ಭಾರಿ ಬಟ್ಟೆ ವರ್ತಕರ ಅಂಗಡಿಗಳೂ, ಸಹಸ್ರಾರು ಚಿಲ್ಲರೆ ಬಟ್ಟೆ ವರ್ತಕರ ಅಂಗಡಿಗಳೂ ಮುಚ್ಚಿದ್ದವು. ರಾತ್ರಿ ಕರ್ಫ್ಯೂ ಉಲ್ಲಂಘಿಸಿ, ಬೆಂಕಿ ಹಚ್ಚುವ ಪ್ರಕರಣವೂ ಸಬ್ ಪೋಸ್ಟಾಫೀಸ್ ಒಡೆಯುವ ಪ್ರಯತ್ನಗಳೂ ನಡೆದುವು.

○ ಬರ್ಮಾ—ಚೀಣಾ ಗಡಿಯಲ್ಲಿರುವ ಚೀಣೀ ಸೈನ್ಯಗಳನ್ನು ವಾಪಸು ಕರೆಸುವಂತೆ ಚೀಣಕ್ಕೆ ಬರ್ಮಾ ಸರ್ಕಾರದವರು ಸೂಚಿಸಿರುವುದಾಗಿ ಬರ್ಮಾ ಪ್ರಧಾನಿ ಬಾ ಸ್ವೆಯವರು ಹೇಳಿರುತ್ತಾರೆ.

ಸೂಯೆಜ್ ಸಮಸ್ಯೆಯು ಶಾಂತಿಯುತವಾಗಿ ಇತ್ಯರ್ಥವಾಗಬೇಕು

ಪ್ರಧಾನಿ ನೆಹರೂರವರ ಹೇಳಿಕೆ

ಶಾಂತಿಯುತ ಪರಿಹಾರವನ್ನು ಪಡೆಯುವ ಉದ್ದೇಶದಿಂದ ಭಾರತವು ಸೂಯೆಜ್ ಬಗ್ಗೆ ನಡೆಯುವ ಸಮ್ಮೇಳನದಲ್ಲಿ ಭಾಗವಹಿಸುವುದೆಂದು ಪ್ರಧಾನಿ ನೆಹರೂರವರು ನೆನ್ನೆ ಲೋಕಸಭೆಯಲ್ಲಿ ತಿಳಿಸಿ, ಕೇವಲ ಅಪ್ರಾಸಂಗಿಕವಾಗಿರುವ ಮತ್ತು ಪೂರ್ವಭಾವಿ ಸಮಾಲೋಚನೆಗೆ ಕರೆಯಲ್ಪಡದಿರುವ ಈಜಿಪ್ಟ್ ಸಮ್ಮೇಳನದಲ್ಲಿ ಭಾಗವಹಿಸಲು ಸಾಧ್ಯವಿಲ್ಲವೆಂದೂ ಮಾತ್ರ ಭಾಗವಹಿಸುವುದಿಲ್ಲವೆಂದೂ ಹೇಳಿದರು. ಈಜಿಪ್ಟಿನ ಒಪ್ಪಿಗೆಯಿಲ್ಲದೆ ಯಾವುದೇ ಸಮ್ಮೇಳನವು ಅಂತಿಮ ನಿರ್ಧಾರಕ್ಕೆ ಬರುವುದು ಸಾಧ್ಯವಿಲ್ಲವೆಂದೂ ಅವರು ಅಭಿಪ್ರಾಯಪಟ್ಟರು.

ಅಸ್ವಾನ್ ಅಣೆಕಟ್ಟಿನ ನಿರ್ಮಾಣದ ಬಗ್ಗೆ ಮೊದಲು ಅಮೆರಿಕವೂ, ನಂತರ ಬ್ರಿಟನ್ನೂ ಮಾಡಿದ ನಿರ್ಧಾರದ ಪರಿಣಾಮವಾಗಿ ಸೂಯೆಜ್ ರಾಷ್ಟ್ರೀಕರಣವನ್ನು ಈಜಿಪ್ಟ್ ಮಾಡಿದುದಾಗಿ ನೆಹರೂರವರು ತಿಳಿಸಿದರು. ಉಭಯರೂ ಪರಸ್ಪರ ಸಮಾಲೋಚನೆ ನಡೆಸದೆ ನಿರ್ಧಾರಗಳನ್ನು ತೆಗೆದುಕೊಂಡುದಕ್ಕಾಗಿ ವಿಷಾದಿಸಿದರು.

ಈ ಸಮಸ್ಯೆಯ ಪರಿಹಾರವು ಈಜಿಪ್ಟಿನ ಸಾರ್ವಭೌಮಾಧಿಕಾರ ಮತ್ತು ಕೀರ್ತಿ ಪ್ರತಿಷ್ಠೆಗಳು ಮತ್ತು ಸಂಬಂಧಪಟ್ಟ ಎಲ್ಲರ ಒಪ್ಪಿಗೆಗಳ ಆಧಾರದ ಮೇಲೆ ಆಗಬೇಕೆಂದು ಸೂಚಿಸಿದರು. ಹಿಂಸೆಯ ಬೆದರಿಕೆ ಮತ್ತು ಏಕಮುಖದ ಕಾರ್ಯಾಚರಣೆ ಕ್ರಮಗಳು ನಿಲ್ಲಬೇಕೆಂದೂ ಅವರು ಸ್ಪಷ್ಟಪಡಿಸಿದರು. ಬರ್ಮಾ ಮತ್ತು ಯುಗೋಸ್ಲಾವಿಯಾಗಳನ್ನು ಸಮ್ಮೇಳನಕ್ಕೆ ಆಹ್ವಾನಿಸದಿರುವುದಕ್ಕಾಗಿ ಅವರು ಖೇದವನ್ನು ವ್ಯಕ್ತಪಡಿಸಿದರು

ಚೀಣದಲ್ಲಿ ಪ್ರವಾಹದಿಂದ ೨,೦೦೦ ಜನರ ಮರಣ

ಚೀಣದ ಚೇಕಿಯಾಂಗ್ ಪ್ರಾಂತದಲ್ಲಿ ಕಳೆದ ವಾರ ಬಿರುಗಾಳಿಯು ಬೀಸಿದ ಪರಿಣಾಮವಾಗಿ ೧,೯೬೦ ಜನರು ಮಡಿದು, ೧,೩೦೦ ಮಂದಿಗೆ ಗಾಯವಾದುದಾಗಿಯೂ, ೬೮,೫೦೦ ಮನೆಗಳು ನಾಶವಾಗಿ, ರೇಶಿಮೆ-ಅಂಬರ್, ಹತ್ತಿ ಮತ್ತು ಮೂರನೇ ಒಂದು ಭಾಗದ ಭತ್ತದ ಬೆಳೆಗಳು ಹಾಳಾಗಿರುವುವೆಂದೂ ವರದಿಯಾಗಿದೆ. ಹೂಪೆ ಮತ್ತು ಹೂನ್ಯಾನ್ ಪ್ರಾಂತಗಳ ಹೈ ಹೋ ನದಿ ಮತ್ತು ಕಾಲುವೆಗಳಲ್ಲಿ ಪ್ರವಾಹವನ್ನು ತಡೆಗಟ್ಟಲು ೧೦ ಲಕ್ಷ ಚೀಣೀಯರು ಉದ್ಯುಕ್ತರಾಗಿರುವರೆಂದು ಹೇಳಲಾಗಿದೆ.

ನವಗ್ರಹ ದೇವಸ್ಥಾನದಲ್ಲಿ ಅಲಂಕಾರ

ರಾಜಧಾನಿಯ ಕೋಟೆ ಶ್ರೀ ಕೋಡಿ ಸೋಮೇಶ್ವರಸ್ವಾಮಿ (ನವಗ್ರಹ) ದೇವಸ್ಥಾನದಲ್ಲಿ ಅಧಿಕ ಶ್ರಾವಣದ ಪ್ರಯುಕ್ತ ನಾಳೆ ಈಶ್ವರ ದೇವರಿಗೆ-ಭಸ್ಮಾಸುರನಿಗೆ ಅಗ್ನಿ ಹಸ್ತ ವರಪ್ರದಾನ, ನಾರಾಯಣಸ್ವಾಮಿಗೆ ಮಹಾ ವಿಷ್ಣುವಿನಲ್ಲಿ ಮೋಹಿನಿಯ ವೇಷ ತೊಡಿಸಿ ಮತ್ತು ಅಮ್ಮನವರಿಗೆ ಮೋಹಿನಿ ಜೊತೆಯಲ್ಲಿ ಭಸ್ಮಾಸುರ ನಾಟ್ಯ ಈ ಅಲಂಕಾರಗಳನ್ನು ಹಾಕಲಾಗುವುದು.

ಆಸ್ಫೋಟನೆಯಲ್ಲಿ ೧,೨೦೦ ಜನರ ಮರಣ

೪,೦೦೦ ಮಂದಿಗೆ ಗಾಯ

ದಕ್ಷಿಣ ಅಮೇರಿಕದ ಕೊಲಂಬಿಯಾ ರಾಜ್ಯದ ಕಾಲಿ ಎಂಬ ನಗರದಲ್ಲಿರುವ ಸೈನಿಕರ ಠಾಣೆ ಕಟ್ಟಡದಲ್ಲಿ ನೆನ್ನೆ ಆಸ್ಫೋಟನೆಯಾಗಿ ೧,೨೦೦ ಕ್ಕೂ ಹೆಚ್ಚು ಮಂದಿ ಮೃತಪಟ್ಟರೆಂದು ವರದಿಯಾಗಿದೆ. ಸಾವಿರ ಜನರಿಗಿಂತಲೂ ಹೆಚ್ಚಾಗಿ ಗಾಯ ಹೊಂದಿರುತ್ತಾರೆ.

೮ ಲಾರಿಗಳಲ್ಲಿ ತುಂಬಿದ್ದ ಡೈನಾಮೈಟು ಸಿಡಿದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ. ಸರ್ಕಾರದವರು ಇಡೀ ದೇಶದಲ್ಲಿ ಮೂರು ದಿನಗಳ ದುಃಖ ದಿನಾಚರಣೆಗೆ ಸೂಚನೆಯಿತ್ತಿರುವರು. ಎಲ್ಲಾ ಸಾರ್ವಜನಿಕ ಮನರಂಜನಾ ಸಮಾರಂಭಗಳನ್ನೂ ನಿಲ್ಲಿಸಲಾಗಿದೆ. ನಿರಶನವನ್ನು ಬೇಕೆಂದೇ ನಡೆಸಲಾಯಿತೆಂದೂ, ಇದಕ್ಕೆ ರಾಜದ್ರೋಹಿಗಳು ಕಾರಣರಾಗಿರಬೇಕೆಂದೂ ಊಹಿಸಲಾಗಿದೆ

ಸಮಾಜವಾದಿ ಪಕ್ಷದ ವಾರಾಚರಣೆ

ರಾಜಧಾನಿಯಲ್ಲಿರುವ ಸಮಾಜವಾದಿ ಪಕ್ಷದವರು ಚಾಮುಂಡಿಪುರ, ಲಷ್ಕರ್ ಮೊಹಲ್ಲಾ ಮತ್ತು ಇತರ ಬಡಾವಣೆಗಳಲ್ಲಿ ತಮ್ಮ ಪಕ್ಷಕ್ಕೆ ಸದಸ್ಯರನ್ನು ಕೂಡಿಸುವ ಸಂಬಂಧವಾಗಿ ವಾರಾಚರಣೆಯನ್ನು ನೆನ್ನೆಯಿಂದ ಆರಂಭಿಸಿದರು. ನಾಳೆಯಿಂದ ಸೈಕಲ್ ಮೆರವಣಿಗೆಯನ್ನೂ, ೧೪ ನೇ ತಾರೀಖು ಬಹಿರಂಗ ಸಭೆಯನ್ನೂ ನಡೆಸುವರು. ನಾಳೆ ಹರಿಜನ ಕಾಲೋನಿಯಲ್ಲಿ ರಚನಾತ್ಮಕ ಕಾರ್ಯಕ್ರಮವನ್ನು ಇಟ್ಟುಕೊಂಡಿರುವರು. ಸಾರ್ವಜನಿಕರು ಸಹಕರಿಸುವಂತೆ ಕೋರಲಾಗಿದೆ.

LATEST NEWS

ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆ

ಯಾವ ಬದಲಾವಣೆಯೂ ಇಲ್ಲವೆಂದು ಢೇಬರ್ ಹೇಳಿಕೆ

ಸ್ವಂ. ಸು. ಫೋ] ಬೆಂಗಳೂರು ೯

ಕಾಂಗ್ರೆಸ್ ಅಧ್ಯಕ್ಷ ಢೇಬರ್‌ರವರು ಇಂದು ಮದ್ರಾಸಿಗೆ ಪ್ರಯಾಣ ಮಾಡುವ ಮುಂಚೆ ಅವರನ್ನು ಪತ್ರಿಕಾ ಪ್ರತಿನಿಧಿಗಳು ಪ್ರಶ್ನಿಸಲಾಗಿ, ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯು ಮುಂದೆ ಹೋಗುವುದಿಲ್ಲವೆಂದೂ, ಅದರ ಕಾರ್ಯಕ್ರಮದ ಪಟ್ಟಿಯಲ್ಲಿ ಯಾವ ವ್ಯತ್ಯಾಸವೂ ಆಗಿಲ್ಲವೆಂದೂ ತಿಳಿಸಿದರು. ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಬೋರ್ಡಿನ ತೀರ್ಮಾನದಂತೆ ಎಲ್ಲವೂ ನಡೆಯುತ್ತಿರುವುದಾಗಿಯೂ ಸಭೆಯ ಕಾರ್ಯಕ್ರಮದ ಪಟ್ಟಿಯು ಅಕ್ರಮವಾಗಿಲ್ಲವೆಂದೂ ನುಡಿದರು. ಸಭೆಗೆ ಕೆ. ಸಿ. ಮಾಧವ ನಾಯರ್‌ರನ್ನಾಗಲಿ ಇಲ್ಲವೆ ಇನ್ನಾರನ್ನಾಗಲಿ ಕಳುಹಬಹುದೆಂದೂ ಅವರು ನುಡಿದರು. ಅವರು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೊಡನೆಯೂ ಸ್ವಲ್ಪ ಹೊತ್ತು ಮಾತುಕತೆ ನಡೆಸಿದರು

○ ರಾಜಧಾನಿಯ ಹೋಟೆಲು ಕೆಲಸಗಾರರ ಸಂಘದ ೯ನೇ ವಾರ್ಷಿಕೋತ್ಸವವು ನಾಳೆ ೫.೩೦ಕ್ಕೆ ಡಿ. ಬನುಮಯ್ಯನವರ ಶಾಲೆಯಲ್ಲಿ ನೆರವೇರುವುದು.

ಢೇಬರ್‌ರವರ ಆಗಮನ ಮತ್ತು ಪ್ರಯಾಣ

ಸ್ವಂ.ಸು ತಂತಿ] ಬೆಂಗಳೂರು ೯

. ಕೃಷ್ಣಗಿರಿಗೆ ತೆರಳಿದ್ದ ಕಾಂಗ್ರೆಸ್ ಅಧ್ಯಕ್ಷ ಢೇಬರು ಈ ಮಧ್ಯಾಹ್ನ ಇಲ್ಲಿಗೆ ಹಿಂದಿರುಗಿ, ರೆಸಿಡೆನ್ಸಿ ಭವನದಲ್ಲಿ ಶ್ರೀ ಎಸ್. ಚನ್ನಯ್ಯ ಮುಂತಾದವರೊಡನೆ ಮಾತುಕತೆ ನಡೆಸಿ, ಸಂಜೆ ಮದರಾಸಿಗೆ ತೆರಳಿದರು. ಅವರೊಡನೆ ಕಾಂಗ್ರೆಸ್ ಕಾರ್ಯದರ್ಶಿ ಶ್ರೀಮನ್ನಾರಾಯಣರವರೂ ಬಂದರು

○ ವಿಧಾನಸೌಧ ವಿಚಾರಣಾ ಸಮಿತಿಯು ಪಬ್ಲಿಕ್ ಭವನದಲ್ಲಿ ರಹಸ್ಯವಾಗಿ ಸಾಕ್ಷ್ಯಗಳನ್ನು ತೆಗೆದುಕೊಳ್ಳಲು ಇಂದು ಆರಂಭಿಸಿತು. ೧೫ ನೇ ತಾರೀಖಿನವರೆಗೆ ಇದು ನಡೆಯುತ್ತದೆ.

○ ಬೇಲೂರು ನೋಟದ್ವಮೆಯ ಸಂಬಂಧದಲ್ಲಿ ಶ್ರೀ ಎಂ. ಸಿ. ಸುಬುರವರ ವಾದವು ಈ ದಿನ ಹೈಕೋರ್ಟಿನಲ್ಲಿ ಮುಗಿಯಿತು ನಾಳೆ ಆರ್ಡರ್ಸ್ ಇದೆ.

ವಿಚಾರಣೆಯಲ್ಲಿ ದೂರುಗಳನ್ನು ತೆಗೆದುಕೊಳ್ಳದೆ ಇರಲು ಸೆಷನ್ಸ್ ನ್ಯಾಯಾಧೀಶರು ಮಾಡಿದ್ದ ಆಕ್ಷೇಪಣೆಯೂ ಈ ದಿನ ವಿಚಾರಣೆಗೆ ಬಂತು. ಅಡ್ವೊಕೇಟ್ ಜನರಲ್ಲರು ಇದಕ್ಕೆ ಒಪ್ಪಿದರು ಶ್ರೀ ಎಂ. ಸಿ. ಸುಬುರವರು ವಿರೋಧಿಸಿದ್ದು ನಾಳೆ ಆರ್ಡರ್ಸ್ಸಿಗಿದೆ.

ದಕ್ಷಿಣ ಅಮೆರಿಕದಲ್ಲಿ ದಂಗೆ

ದಕ್ಷಿಣ ಅಮೆರಿಕಾ ಖಂಡದ ಈಕ್ವಡಾರಿನಲ್ಲಿ ಜೆ॥ ಜೆ॥ ಐಟೂರಿಯ ರಾವಿಲ್ಲ ಎಂಬ ಮಿಲಿಟರಿ ಅಧಿಕಾರಿಯೊಬ್ಬನು ತಾನು ಆ ರಾಜ್ಯದ ಸರ್ವಾಧಿಕಾರಿಯೆಂದು ಸಾರಿದುದಾಗಿಯೂ, ಅವನು ನಡೆಸಿದ ದಂಗೆಯನ್ನು ಅಡಗಿಸಲು ಈಕ್ವಡಾರ್ ಅಧ್ಯಕ್ಷ ವೆಲಾಸ್ಕೋಇಬಾರಾರವರು ಸೈನ್ಯಗಳ ಜಮಾವಣೆ ಮಾಡಿರುವರೆಂದೂ ವರದಿಯಾಗಿದೆ. ದಂಗೆಕೋರರ ಕಡೆ ಎಷ್ಟು ಮಂದಿ ಇರುವರೆಂದು ಗೊತ್ತಿಲ್ಲವಾದರೂ ಅವರು ಕಾಳಗಕ್ಕೆ ಸಿದ್ಧರಾಗಿರುವರು. ಇಬಾರ್ರಾರವರು ಕೆಲವು ದಿನಗಳಲ್ಲಿ ಹೊಸ ಅಧ್ಯಕ್ಷ ಕಾಮಿಲೊ ಪಾನ್ಸಿಎನ್ರಿಕ್‌ರವರಿಗೆ ಅಧಿಕಾರ ವಹಿಸಿಕೊಡಲಿರುವರು.

ಹೃದಯಕ್ರಿಯೆ ನಿಂತು ನಿಧನ

ರಾಜಧಾನಿಯ ನೂರಡಿ ರಸ್ತೆಯಲ್ಲಿದ್ದ ಶ್ರೀ ಬಿ. ಎಸ್. ಕೆ. ಮೂರ್ತಿ ಎಂಬುವರು ನೆನ್ನೆ ಮಧ್ಯಾಹ್ನ ಹೃದಯಕ್ರಿಯೆ ನಿಂತು ನಿಧನರಾದರೆಂದು ವರದಿಯಾಗಿದೆ. ಮೃತರು ಜೆಂಷೆಡ್‌ಪುರದಲ್ಲಿ ಕೆಲಸದಲ್ಲಿದ್ದರು. ಕಳೆದ ತಿಂಗಳು ೨೫ನೇ ತಾರೀಖು ಅವರ ಪುತ್ರ ರಾಮಚಂದ್ರ ಎಂಬುವನು ಆತ್ಮಹತ್ಯೆ ಮಾಡಿಕೊಂಡುದರಿಂದ ಅವರು ಇಲ್ಲಿಗೆ ಬಂದಿದ್ದರು.

ಮೈಸೂರು ಮತ್ತು ಕೇರಳಗಳ ಐಕ್ಯಕ್ಕೆ ಸೂಚನೆ

ಮೈಸೂರು ಮತ್ತು ಕೇರಳಗಳನ್ನು ಒಟ್ಟುಗೂಡಿಸಿ ದಕ್ಷಿಣ ಪ್ರದೇಶವನ್ನು ರಚಿಸುವುದಕ್ಕೆ ಅವಕಾಶವಿರುವ ತಿದ್ದುಪಡಿಯೊಂದನ್ನು ಸಂಸ್ಥಾನ ಪುನರ್ವಿಂಗಡಣೆ ಮಸೂದೆಗೆ ಲೋಕಸಭಾ ಸದಸ್ಯರಾದ ಎ. ಕೆ. ಗೋಪಾಲನ್ ಮತ್ತು ಸಿ. ಪಿ. ಮ್ಯಾಥ್ಯೂರವರು ಮಂಡಿಸಿರುತ್ತಾರೆ

ಚಿನ್ನದ ಗಣಿ ಪರಿಹಾರದ ಬಗ್ಗೆ ನ್ಯಾಯಮಂಡಲ ಅಗತ್ಯ

ಕಂಪೆನಿಯವರ ಹೇಳಿಕೆ

ಬೆಂಗಳೂರು ೮

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಪರಿಣಾಮವಾಗಿ ಕೊಡಬೇಕೆಂದಿರುವ ೧೫೧ ಲಕ್ಷ ರೂ ಪರಿಹಾರ ವ್ಯವಸ್ಥೆಯನ್ನು ಒಪ್ಪತಕ್ಕದ್ದಾಗುವುದಿಲ್ಲವೆಂದೂ, [illegible] ನಿಷ್ಪಕ್ಷಪಾತವಾದ ನ್ಯಾಯಮಂಡಲವು ಇತ್ಯರ್ಥಪಡಿಸಬೇಕೆಂದೂ ಕಂಪೆನಿಯ ಅಧಿಕಾರ ವರ್ಗದವರು ತಿಳಿಸುತ್ತಾರೆ ೮ ಕೋಟಿ ರೂ.ಗಳನ್ನು ಕೊಟ್ಟರೆ ಕಂಪೆನಿಯವರು ಒಪ್ಪುವರೆಂದು ಹೇಳಲಾಗಿದೆ

ಭಾರತ ಸ್ವಾತಂತ್ರ್ಯ ದಿನದ ಬಗ್ಗೆ ಪೋರ್ಚುಗೀಸರ ದಿಗಿಲು

ಇದೇ ಆಗಸ್ಟ್ ೧೫ರಂದು ಭಾರತದ ಸ್ವಾತಂತ್ರ್ಯ ದಿನೋತ್ಸವದ ಸಮಯದಲ್ಲಿ ತಮ್ಮ ಶತ್ರುವಾದ ಭಾರತವು ಗೋವಾವನ್ನು ಹಿಡಿಯಲು ಪ್ರಯತ್ನಿಸುವುದೆಂದು ಪೋರ್ಚುಗಲ್ಲಿನ ರಕ್ಷಣಾ ಮಂತ್ರಿ ಫರ್ನಾಂಡೊ ಡಾಸ್ ಸಾಂಟಾಸ್ ಕಾಸ್ಟರವರು ತಿಳಿಸುತ್ತಾರೆ ಭಾರತೀಯರು ಈ ಬಗ್ಗೆ ಗೋವಾ, ಡಾಮನ್ ಮತ್ತು ಡಯೂ ಬಳಿ ಸಾಕಷ್ಟು ಸಿದ್ಧತೆ ಮಾಡಿಕೊಳ್ಳುತ್ತಿರುವರೆಂದು ಅವರು ತಿಳಿಸಿರುವರು.

ವಿನೋಬಾರವರೊಡನೆ ಗೋವುಗಳ ಯಾತ್ರೆ

ಭೂದಾನ ಪಾದಯಾತ್ರೆ ನಡೆಸುತ್ತಿರುವ ವಿನೋಬಾ ಭಾವೆಯವರು ಕೊಯಮತ್ತೂರು ಜಿಲ್ಲೆಯಲ್ಲಿ ಈ ತಿಂಗಳು ೨೩ರಿಂದ ಪ್ರವಾಸ ಮಾಡುವಾಗ ಅವರ ಜೊತೆಯಲ್ಲಿ ಎರಡು ಹಸುಗಳೂ ಯಾತ್ರೆ ಮಾಡಲಿವೆ

ಉಪಾಧ್ಯಾಯರ ಸಭೆ

ಮೈಸೂರು ತಾಲ್ಲೂಕು ರೇಂಜ್ ಕಸಬ ಹೋಬಳಿ ಉಪಾಧ್ಯಾಯರ ಸಂಘದ ಸಭೆಯು ಕಳೆದ ಸೋಮವಾರ ನಜರ್‌ಬಾದ್ ಗರ್ಲ್ಸ್ ಸ್ಕೂಲಿನಲ್ಲಿ ನಡೆಯಿತು ಕಾರ್ಯದರ್ಶಿ ಶ್ರೀ ಎಸ್. ಕೃಷ್ಣಪ್ಪನವರು ಸ್ವಾಗತ ಭಾಷಣ ಮಾಡಿದರು ತಾಲ್ಲೂಕು ರೇಂಜ್ ವಿದ್ಯಾಧಿಕಾರಿಗಳಾದ ಶ್ರೀ ಬಿ ಪ್ರಹ್ಲಾದರಾಯರು ಅಧ್ಯಕ್ಷತೆ ವಹಿಸಿದ್ದರು ಎಂ ಎಸ್ ವೆಂಕಟರಾಮಯ್ಯನವರು ದೇವತಾ ಪ್ರಾರ್ಥನೆ ಮಾಡಿದರು ಗಿ॥ ವಿ॥ ವಿ. ಸುಬ್ರಹ್ಮಣ್ಯಶಾಸ್ತ್ರಿಗಳಿಂದ ಭಾರತ ಪಠಣವಾಯಿತು ಅಧ್ಯಕ್ಷರು ಭಾಷಣ ಮಾಡಿದನಂತರ ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು.

ಉಪನ್ಯಾಸ

ಮೈಸೂರಿನ ಡಿ ಬನುಮಯ್ಯ ಕಾಮರ್ಸ್ ಕಾಲೇಜು ಸಂಘದ ಆಶ್ರಯದಲ್ಲಿ ಮೊನ್ನೆ ಶಾರದಾವಿಲಾಸ ಲಾ ಕಾಲೇಜಿನ ಪ್ರೊಫೆಸರ್ ಶ್ರೀ ಆರ್. ಗುರುರಾಜರವರು "ಇಂಡಿಯನ್ ಪಾರ್ಟ್‌ನರ್‌ಷಿಪ್ ಆಕ್ಟ್" ನ ಮೇಲೆ ಉಪನ್ಯಾಸ ಮಾಡಿದರು ಶಾಸನದ ಎಪ್ಪತ್ತುಮೂರು ಕಲಮುಗಳನ್ನೂ ಅವರು ಪುಸ್ತಕದ ಸಹಾಯವಿಲ್ಲದೇ ವಿವರಿಸಿದರು ಪ್ರೊ॥ ಶೇಷ ಸುಬ್ಬರಾಯರು ಅಧ್ಯಕ್ಷತೆ ವಹಿಸಿದ್ದರು.

Sri Rama Sahaya Sangha
D Subbiah Road, Mysore
Excell nt Coaching classes f r
S. S. L. C. Students
By expert teachers daily between
8 & 10 A M and 6 & 8 P M.
Join immediately

ಕುರುಡ ಮೂಕರ ಶಾಲೆಯ ಸುವರ್ಣೋತ್ಸವ

ಮೈಸೂರು ೯

ರಾಜಧಾನಿಯಲ್ಲಿರುವ ಕುರುಡ ಮೂಕರ ಶಾಲೆಯ ಸುವರ್ಣೋತ್ಸವವು ಇದೇ ೧೨ನೇ ತಾರೀಕು ಭಾನುವಾರ ಬೆಳಿಗ್ಗೆ ೧೦॥ ಗಂಟೆಗೆ ನಡೆಯುವುದು ಶ್ರೀಮನ್ಮಹಾರಾಜರು ಆರಂಭೋತ್ಸವವನ್ನು ನೆರವೇರಿಸುವರು ಈ ಸಂಬಂಧವಾಗಿ ವಸ್ತುಪ್ರದರ್ಶನವೂ ಇರುತ್ತದೆ ಅಂದು ಮಧ್ಯಾಹ್ನ ೪ ಗಂಟೆಗೆ ಕಿವುಡರು ಮತ್ತು ಕುರುಡರ ಸವೆ ಕೌಶಲ್ಯ ವಿದ್ಯಾ ಇಲಾಖಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಜರುಗುವುದು

ಶಿವನಸಮುದ್ರಕ್ಕೆ ವಿದ್ಯಾರ್ಥಿಗಳು ಮತ್ತು ಅಧ್ಯಾಪಕರ ಭೇಟಿ

ರಾಜಧಾನಿಯ ವಿದ್ಯಾವರ್ಧಕ ಪ್ರೌಢ ಶಾಲೆಯ ಅಧ್ಯಾಪಕ ವರ್ಗದವರು ಮತ್ತು ವಿದ್ಯಾರ್ಥಿಗಳು ಕಳೆದ ಭಾನುವಾರ ಶಿವನಸಮುದ್ರಕ್ಕೆ ಪ್ರವಾಸ ಹೋಗಿದ್ದರು ದಾರಿಯಲ್ಲಿ ತಿರುಮಕೂಡಲು ಮತ್ತು ಸೋಮನಾಥಪುರಕ್ಕೆ ಭೇಟಿಯಿತ್ತು, ಶಿವನಸಮುದ್ರದಲ್ಲಿ ಗಗನಚುಕ್ಕಿ ಮತ್ತು ವಿದ್ಯುದುತ್ಪಾದನಾ ಕೇಂದ್ರವನ್ನು ಸಂದರ್ಶಿಸಿದರು ಸಂಜೆ ಅಲ್ಲಿಯ ಸ್ಪೋರ್ಟ್ಸ್ ಕ್ಲಬ್ಬಿನ ವಾಲಿಬಾಲ್ ಮತ್ತು ಬ್ಯಾಡ್‌ಮಿಂಟನ್ ಟೀಮುಗಳ ಮೇಲೆ ಪಂದ್ಯವಾಡಿ ರಾತ್ರಿ ನಗರಕ್ಕೆ ಹಿಂದಿರುಗಿದರು ಅಲ್ಲಿಯ ಅಧಿಕಾರಿವರ್ಗದವರು ಎಲ್ಲಾ ಸೌಕರ್ಯಗಳನ್ನೂ ಮಾಡಿಕೊಟ್ಟಿದ್ದರು

ಶಾರದಾವಿಲಾಸ ಲಾ ಕಾಲೇಜು ಆರ್ಟ್ಸ್ ಸಂಘ

ಶಾರದಾವಿಲಾಸ ಲಾ ಕಾಲೇಜಿನ ಆರ್ಟ್ಸ್ ಸಂಘದ ಚುನಾವಣೆಗಳು ನಡೆದು, ಪ್ರಿನ್ಸಿಪಾಲ್ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್‌ರವರು ಮುಖ್ಯ ಪೋಷಕರಾಗಿಯೂ, ಪ್ರೊ॥ ಆರ್ ಸುಬ್ಬರಾವ್ ಮತ್ತು ಶ್ರೀ ಇ ಆರ್ ಕೊಟ್ರೇಶ್ವರನವರು ಉಪಾಧ್ಯಕ್ಷರುಗಳಾಗಿಯೂ ಶ್ರೀಗಳಾದ ಕಾಂತರಾಜ ಅರಸ್, ಬಾಲಗೋಪಾಲ್, ಬಿ ಎಸ್ ನಾಗರಾಜರಾವ್, ವಿ ನಾಗರಾಜ್ ಮತ್ತು ಆರ್. ಜಿ ವೈದ್ಯನಾಥ್‌ರವರು ಸದಸ್ಯರಾಗಿಯೂ ಚುನಾಯಿತರಾದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೩೦ ಗಾಂಧಿ ಚರ್ಚೆ–ಕನ್ನಡ ಕಾರ್ಯಕ್ರಮ. ೭ ೧೫ ಕೆ ಎಸ್ ಇಂದಿರೆ ದೇವರನಾಮ. ೭–೪೦ ಹಿಂದೂಸ್ತಾನಿ [illegible] ೧೨ ಮತ್ತು ೫ ೪೦ ಪಿ [illegible] –ಸಂಗೀತ ೧೨–೪೦ ವಾದ್ಯವೃಂದ ೧ ೧೫ ಮಹಿಳೆಯರ ಕಾರ್ಯಕ್ರಮ ೧ ೫೦ ಗೋಟುವಾದ್ಯ ೬ ೧೫ ಕನ್ನಡ ಗೀತೆಗಳು ೭ ೪೦ ನಮ್ಮ ಪುಸ್ತಕ ಭಂಡಾರ, ೮ ಮುದ್ರಾಸಿನಿಂದ ಸಂಗೀತ ೯–೧೫ ಚರ್ಚೆಯೊಂದು ೧೦ ಎತ್ತರ ಸಂಗೀತ. ೧೦ ೪೫ [illegible]

SRI GAYATHRI TALKIES
Last-day To-day
HOUSE OF WAX
From 10.8.56 Daily 3 Shows
20th Century's Powerful Drama
RAINS OF RANCHIPUR
(Cinemascope & Technicolor)
Starring Lana Turner and Richard Burton
Morning Shows on Sat & Sun.
I WANT YOU
With - Farley Granger

ಸಾಯಿರ್ ಕನರ್ ಜಿ ಮತ್ತು ಶಿಷ್ಯೆಯರ ಚಾತುರ್ಮಾಸ್ಯ ಸಂಕಲ್ಪ

ಮೈಸೂರು ೯

ನಗರಕ್ಕೆ ಸುಮಾರು ೨೦ ದಿನಗಳ ಹಿಂದೆ ಆಗಮಿಸಿ ಚಾತುರ್ಮಾಸ್ಯ ವ್ರತವನ್ನು ಕೈಗೊಂಡಿರುವ ಜೈನ ಸನ್ಯಾಸಿನಿ ಸಾಯಿರ್ ಕನರ್‌ಜಿಯವರು, ನೆನ್ನೆ ಪತ್ರಿಕಾ ಕರ್ತರಿಗೆ ಇತ್ತ ಭೇಟಿಯೊಂದರಲ್ಲಿ ತಮ್ಮ ಮತದ ಬಗ್ಗೆ ವಿವರಣೆಗಳನ್ನು ನೀಡಿದರು

ಮುಕ್ತಿ ಸಾಧನೆಗೆ ಧರ್ಮ ಮಾರ್ಗದಲ್ಲಿ ನಡೆಯುವುದು ಅವಶ್ಯಕವೆಂದೂ, ಇದರಲ್ಲಿ ಅಡ್ಡಬರುವ ಕಾಮ ಕ್ರೋಧ ಲೋಭಾದಿಗಳನ್ನು ಜಯಿಸಲು ಉಪವಾಸವೂ ಒಂದು ವ್ರತವೆಂದೂ ಹೇಳಿ, ಮಹಾತ್ಮಾ ಗಾಂಧಿಯವರು ಮಾಡುತ್ತಿದ್ದ ಉಪವಾಸವೂ ಸಹ ಒಂದು ತಪಸ್ಸೆಂದು ತಿಳಿಸಿದರು ಅಲ್ಲದೆ ತಮ್ಮ ನೇತೃತ್ವದಲ್ಲಿ ಹಲವಾರು ಮಹಿಳೆಯರು ಉಪವಾಸ ವ್ರತವನ್ನು ಕೈಗೊಂಡಿರುವುದನ್ನು ಪತ್ರಿಕಾ ಕರ್ತರ ಗಮನಕ್ಕೆ ತಂದರು

ಮತಗಳೆಲ್ಲವೂ ಭಿನ್ನವಾಗಿ ಕಂಡರೂ ಒಂದೇ ಸಂಸಾರದ ಮಕ್ಕಳಂತೆ ಮೂಲಭೂತವಾದ ತತ್ವವನ್ನೇ ಅವು ಒಳಗೊಂಡಿರುವುವೆಂದೂ ಹೇಳಿದರು ತಮಗೂ, ಅಣುವ್ರತಿಗಳಿಗೂ ಇರುವ ವ್ಯತ್ಯಾಸವನ್ನು ವಿವರಿಸುತ್ತಾ, ತಾವು ದಾನದ ಬಗ್ಗೆ ಪ್ರತಿಪಾದಿಸುತ್ತಿದ್ದರೆ ಅಣುವ್ರತಿಗಳು ದಾನ ತತ್ವವನ್ನು ಒಪ್ಪುವುದಿಲ್ಲವೆಂದೂ, ಹಣವನ್ನು ಕೊಡುವುದೇ ಮಾತ್ರವಲ್ಲದೆ, ಅಗತ್ಯವಾಗಿರುವಾಗ ಸಹಾಯ ನೀಡುವುದೇ ದಾನವೆಂದೂ ಅವರು ತಿಳಿಸಿದರು

ಮಲಯದ ಭಾರತೀಯ ಭಯೋತ್ಪಾದಕರ ತಲೆಗೆ ಹಣ

ಮಲಯದಲ್ಲಿರುವ ಕಮ್ಯೂನಿಸ್ಟ್ ಭಯೋತ್ಪಾದಕರ ಮುಖಂಡರಾದ ೩೦ ವರ್ಷದ ಪೆರುಮಾಳ್ ಮತ್ತು ಅವನ ಪ್ರೇಯಸಿ ರುಕ್ಮಿಣಿಯನ್ನು ಜೀವಂತವಾಗಿ ಹಿಡಿದಾಗಲೀ ಅಥವಾ ಅವರ ಮೃತ ಶರೀರಗಳನ್ನಾಗಲೀ ತಂದು ಒಪ್ಪಿಸಿದವರಿಗೆ ಬಹುಮಾನವನ್ನು ಕೊಡುವುದಾಗಿ ಅಲ್ಲಿನ ಸರ್ಕಾರದವರು ಪ್ರಕಟಿಸಿರುತ್ತಾರೆ ಪೆರುಮಾಳ್ ಮತ್ತು ರುಕ್ಮಿಣಿಯನ್ನು ಜೀವಂತವಾಗಿ ತಂದುಕೊಟ್ಟರೆ ೧೨,೦೦೦ ಮತ್ತು ೨,೦೦೦ ಮತ್ತು ಸತ್ತ ಮೇಲೆ ತಂದು ಕೊಟ್ಟರೆ ೧೦,೦೦೦ ಮತ್ತು ೧,೫೦೦ ಮಲಯಾ ಡಾಲರ್ ಕೊಡಲಾಗುವುದೆಂದು ಹೇಳಲಾಗಿದೆ.

ಮೈಸೂರು ಪೇಟೆ ಧಾರಣೆ

	ರೂ	ಯಿಂದ		ರೂ	ವರೆಗೆ	
ಸಣ್ಣಭತ್ತ	೪೩	೮	೦	೪೪	೧೨	೦
ದಪ್ಪಭತ್ತ	೪೦	೪	೦	೪೨	೧೨	೦
ರಾಗಿ	೩೯	೨	೦	೪೦	೧೨	೦
ಕಡಲೆಕಾಯಿ	೯೬	೦	೦	೨೭	೦	೦
ಎಳ್ಳು	೬೯	೮	೦	೬೨	೦	೦
ತೊಗರಿ	೪೧	೪	೦	೪೨	೧೪	೦
ಧನಿಯ	೪೮	೦	೦			
ಹಲಸಂದೆ	೪೮	೨	೦	೫೧	೧೨	೦
ಉದ್ದು	೬೬	೨	೦	೬೬	೪	೦
ಹುಣಿಸೇಹಣ್ಣು	೪	೮	೦	೬	೪	೦
ಮೆಣಸಿನಕಾಯಿ	೧೪	೧೦	೦	೯೬	೨	೦
ತೆಂಗಿನಕಾಯಿ ೧೦೦೦	೯೪೪	೮	೦	೨೨೮	೦	೦

Edited, Printed and Published by A. R Nagarajan at Sadhvi Press D. Subbiah Road, Mysore

ಚಾಮರಾಜನಗರ ತಾಲ್ಲೂಕಿನಲ್ಲಿ ಅಭಾವ ಪರಿಹಾರ ಕ್ರಮ

ಚಾಮರಾಜನಗರ ತಾಲ್ಲೂಕು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಎಸ್ ನಂಜುಂಡಶೆಟ್ಟಿಯವರು ಪತ್ರವೊಂದನ್ನು ಬರೆದು, ಚಾಮರಾಜನಗರ ತಾಲ್ಲೂಕಿನಲ್ಲಿ ಅಭಾವ ಪರಿಹಾರಕ್ಕಾಗಿ ಸರ್ಕಾರದವರು ಒದಗಿಸಿದ [illegible] ಲಕ್ಷ ರೂ ಪೈಕಿ ೬೦ ಸಾವಿರ ರೂ ಗಳಿಂದ ಕಾಮಗಾರಿಗಳನ್ನು ನಡೆಸಲಾಗಿದೆಯೆಂದೂ, ನೂರಾರು ರಸ್ತೆಗಳು, ಅನೇಕ ಕೆರೆಗಳು ಮತ್ತು ಕುಡಿಯುವ ನೀರಿನ ಕಟ್ಟೆಗಳನ್ನು ರಿಪೇರಿ ಮಾಡಲಾಗಿದೆಯೆಂದೂ, ಹಿಂದೆ ಯಾವಾಗಲೂ ಇರದಿದ್ದ ಹಳ್ಳಿ ರಸ್ತೆಗಳನ್ನು ನಿರ್ಮಾಣ ಮಾಡಲಾಗಿದೆಯೆಂದೂ ತಿಳಿಸುತ್ತಾರೆ ವ್ಯವಸಾಯ ಇಲಾಖೆಯವರು ಸಾಲವಾಗಿ ಭತ್ತದ ಬೀಜಗಳನ್ನು ಹಂಚುತ್ತಿರುವರೆಂದೂ ಅವರಿಗೆ ೫೦೦ ಪಲ್ಲ ರಾಗಿಯನ್ನು ರೈತರಿಗೆ ಒದಗಿಸಲಾಗಿರುವುದೆಂದೂ, ಈ ಎಲ್ಲಾ ಕೆಲಸಗಳಲ್ಲೂ ಕಾಂಗ್ರೆಸ್ಸಿನವರೂ, ಇತರ ಸಂಘ ಸಂಸ್ಥೆಗಳವರೂ ಸಹಕರಿಸಿ ಕೆಲಸ ಮಾಡುತ್ತಿರುವರೆಂದೂ ತಿಳಿಸಿರುತ್ತಾರೆ ಪರಿಹಾರದ ಕಾಮಗಾರಿಗಳನ್ನು ಜನವರಿ ತಿಂಗಳವರೆಗೂ ನಡೆಸಬೇಕೆಂದು ಅವರು ಸಲಹೆ ಮಾಡಿರುತ್ತಾರೆ

COACHING SECTION
Dalvoy High School Mysore
Excellent coaching for S S L C Students of Dec. 1956
By Experienced Experts,
between 7 & 10 A M
Charges Very Moderate
Join immediately
B S Ananthachar,
Secretary

ಕಳೆದುಕೊಂಡ
ಮನುಷ್ಯತ್ವವನ್ನು
ಮತ್ತೆ ಪಡೆಯಬೇಕಾದರೆ
ಲೈಂಗಿಕ ಚಿಕಿತ್ಸಾ ಪ್ರವೀಣ
ಡಾ॥ ರಾನಾರವರನ್ನು
ಭೇಟಿ ಮಾಡಿ
ಯಾವ ಕಾರಣಗಳಿಗಾದರೂ, ನೀವು ಕಳೆದುಕೊಂಡಿರುವ ಯೌವನ ಮತ್ತು ಶಕ್ತಿಗಳು ಮತ್ತೆ ನಿಮಗೆ ಸಂಪೂರ್ಣವಾಗಿ ಪ್ರಾಪ್ತವಾಗುವಂತೆ ಮಾಡುತ್ತಾರೆ ಆದ್ದರಿಂದ, ಆರೋಗ್ಯ, ಹಣ ಮತ್ತು ಕಾಲಗಳನ್ನು ಕಾಪಾಡಿಕೊಳ್ಳುವ ಸಲುವಾಗಿ ಇದನ್ನು ಜಾಗ್ರತೆ ಡಾ॥ ರಾನಾರವರನ್ನು ಭೇಟಿ ಮಾಡಿರಿ.
ಭೇಟಿಯ ಕಾಲ:
ಬೆಳಿಗ್ಗೆ : ೮ ರಿಂದ 12 ಗಂಟೆ
ಮಧ್ಯಾಹ್ನ 4 ರಿಂದ ರಾತ್ರಿ ೮ ಗಂಟೆ
ವಿಳಾಸ:
ರಾನಾ ಮೆಡಿಕಲ್ ಹಾಲ್,
ನಂ 745, ಅಶೋಕಾ ರೋಡ್,
(ಮೈಸೂರು ಬ್ಯಾಂಕ್ ಮುಂಭಾಗದ ಪಾಲಿ ನಿವೇಶನದಿಂದ ಮೂರನೇ ಕಟ್ಟಡ)
ಮೈಸೂರು.

GLOBE TUTORIAL COLLEGE,
Sadvidya Patashala Buildings, Mysore.
Provides excellent coaching by experienced teachers for S S. L C 1956
Join at once – Time 7-30 to 10-30 A M

THE NATIONAL LEAGUE
Anathalaya Buildings, Mysore
Offers excellent Coaching for S. S. L. C. Students
★ Special Coaching for Primary School Teachers,
★ Classes are in full swing
JOIN AT ONCE
Timings – 5-30 P M to 8-30 P M
V Rajagopal Iyengar,
Organiser

ಚಾಮುಂಡೇಶ್ವರಿ ಟಾಕೀಸ್
10-8-56 ರಿಂದ ಕಿಕ್ಕಿರಿದ ಜನಸ್ತೋಮಕ್ಕೆ ಪ್ರದರ್ಶಿಸಲಾಗುತ್ತಿರುವ 2ನೇ ವಾರ
ಜ್ಯೂಪಿಟರ್ ಪಿಲಂಸ್ ರವರ ತಮಿಳು ಚಿತ್ರ
★ **ಮರ್ಮವೀರನ್**
ಪಾತ್ರ – ವೈಜಯಂತಿಮಾಲಾ, ಶ್ರೀರಾಂ, ಸಾಹುಕಾರ್ ಜಾನಕಿ, ಎಂ. ಎನ್. ರಾಜಂ, ವಿ ನಾಗಯ್ಯ, ಟಿ. ಎಸ್. ಬಾಲಯ್ಯ, ವೀರಪ್ಪ, ತಂಗವೇಲು
[An Emerald Release

ಟೆಲಿಫೋನ್ ನಂ. 792

ಚಂದಾದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : FRIDAY 10-8-1956 ಮೈಸೂರು : ಶುಕ್ರವಾರ [ಸಂಚಿಕೆ :

ಹೈಕೋರ್ಟಿನಲ್ಲಿ ಬೇಲೂರು ಕೊಲೆ ಮೊಕದ್ದಮೆ ಅರ್ಜಿ ವಜಾ

ಅಹಮದಾಬಾದಿನಲ್ಲಿ ಪರಿಸ್ಥಿತಿ ಎದುರಿಸಲು ಸೈನಿಕರಿಗೆ ಕರೆ

೧೪ ಬಾರಿ ಪೋಲೀಸರ ಗುಂಡೇಟಿನಿಂದ ನೆನ್ನೆ ೫ ಜನರ ಮರಣ

ಗುಜರಾತು ಮತ್ತು ಸೌರಾಷ್ಟ್ರಗಳಲ್ಲೆಲ್ಲಾ ಗಲಭೆ

ಅಹಮದಾಬಾದಿನಲ್ಲಿ ಕರ್ಫ್ಯೂ ತೆಗೆದನಂತರ ದ್ವಿಭಾಷಾ ಬೊಂಬಾಯಿ ವಿರುದ್ಧವಾದ ಗಲಭೆಗಳು ನೆನ್ನೆ ಪುನಃ ಆರಂಭವಾಗಿ ಅವನ್ನು ಅಡಗಿಸಲು ಮಿಲಿಟರಿಯವರನ್ನು ಕರೆಸಬೇಕಾಯಿತು. ಪೋಲೀಸರ ಸೂಚನೆಗಳನ್ನು ವಿರೋಧಿಸಿ ಗಿರಿಲ್ಲಾ ಕದನದ ರೀತಿಯಲ್ಲಿ ಹೋರಾಟ ಮಾಡಿದ ಜನರನ್ನು ಚದುರಿಸಲು ನಗರದಲ್ಲಿ ೧೪ ಕಡೆ ಒಟ್ಟು ೭೯ ರೌಂಡು ಗುಂಡು ಹಾರಿಸಲಾಯಿತು. ೫ ಮಂದಿ ಮೃತಪಟ್ಟರು. ನೆನ್ನೆ ಮತ್ತು ಮೊನ್ನೆ ಗಲಭೆಗಳಲ್ಲಿ ಒಟ್ಟು ೧೩ ಜನರು ಸತ್ತು, ೧೫೦ ಮಂದಿಗೆ ಗಾಯವಾಯಿತು. ನೆನ್ನೆ ಮಧ್ಯರಾತ್ರಿ ಹೊತ್ತಿಗೆ ಶಾಂತಿಯು ನೆಲಸಿತು. ಮಧ್ಯಾಹ್ನದ ಮೇಲೆ ೨೪ ಗಂಟೆಗಳ ಕರ್ಫ್ಯೂವನ್ನು ಪುನಃ ವಿಧಿಸಲಾಯಿತು.

ಗಲಭೆಯು ಗುಜರಾತು ಮತ್ತು ಸೌರಾಷ್ಟ್ರದ ನಾನಾ ಪಟ್ಟಣಗಳಿಗೆ ಹಬ್ಬಿತು. ಬೊಂಬಾಯಿ ನಗರದಲ್ಲೂ ೩,೦೦೦ ವಿದ್ಯಾರ್ಥಿಗಳು ಮುಷ್ಕರ ಹೂಡಿದರು.

ಬರೋಡದಲ್ಲಿ ಅಹಮದಾಬಾದು ಪೋಲೀಸರ ಗುಂಡಿನೇಟು ಪ್ರಕರಣವನ್ನು ಪ್ರತಿಭಟಿಸಿ ವಿದ್ಯಾರ್ಥಿಗಳು ಮೆರವಣಿಗೆ ನಡೆಸಿ, ಅಂಗಡಿ ಮತ್ತು ಕೈಗಾರಿಕೆಗಳನ್ನು ಮುಚ್ಚುವಂತೆ ಒತ್ತಾಯಪಡಿಸಿ, ಅವರ ಮಾತನ್ನು ಕೇಳದವರ ಮೇಲೆ ಕಲ್ಲುಗಳನ್ನು ಬೀರಲಾಗಿ, ಪೋಲೀಸರು ಲಾಠಿ ಪ್ರಹಾರ ಮಾಡಿದರೂ ಪ್ರಯೋಜನವಾಗದೆ ಗುಂಡನ್ನು ಹಾರಿಸಿದರು. ಇಬ್ಬರಿಗೆ ಗಾಯವಾಯಿತು. ಅಲ್ಲೂ ಕರ್ಫ್ಯೂವನ್ನು ವಿಧಿಸಲಾಯಿತು.

ಸೌರಾಷ್ಟ್ರ ರಾಜಧಾನಿ ರಾಜಕೋಟೆಯಲ್ಲೂ ಕಲ್ಲಿನೇಟು ಮತ್ತು ಬೆಂಕಿ ಹಚ್ಚುವ ಪ್ರಕರಣಗಳು ನಡೆದುವು. ಅಲ್ಲಿನ ಸರ್ಕಾರಿ ಕಛೇರಿಗೆ ಜನರು ನುಗ್ಗದಂತೆ ತಡೆಯಲು ಬಲವಾದ ಪೋಲೀಸು ಕಾವಲನ್ನು ಹಾಕಲಾಯಿತು. ಲೌಲಾ ಎಂಬ ಊರಿನಲ್ಲಿ ವಿದ್ಯಾರ್ಥಿಗಳು ಮೇಲ್ ರೈಲೊಂದನ್ನು ತಡೆದಿದ್ದರು. ಆರು ಗಂಟೆ ನಂತರ ಅದು ಹೊರಟಿತು.

ಅಹಮದಾಬಾದಿನಲ್ಲಿ ೧೬ ಪೋಲೀಸು ಠಾಣೆಗಳನ್ನು ಜನರು ಮುತ್ತಿ ಧಾಳಿ ಮಾಡಿದರು. ಳಕ್ಕೆ ಬೆಂಕಿ ಹಚ್ಚಿಸಲಾಯಿತು.

ಪ್ರಜಾ ಸಮಾಜವಾದಿ ಮತ್ತು ಕಮ್ಯೂನಿಸ್ಟ್ ಪಕ್ಷಗಳು ದ್ವಿಭಾಷಾ ಸಂಸ್ಥಾನ ರಚನೆಯನ್ನು ವಿರೋಧಿಸಿ ಸತ್ಯಾಗ್ರಹ ನಡೆಸಲು ನಿರ್ಧರಿಸಿವೆ.

ಊರಿನ ೧ ಲಕ್ಷ ಕಾರ್ಮಿಕರೂ, ೬,೦೦೦ ವಿದ್ಯಾರ್ಥಿಗಳೂ ನೆನ್ನೆ ಹರತಾಳಕ್ಕೆ ಸೇರಿದ್ದರು. ನೆನ್ನೆಯಿಂದ ೭೦ ಜನರನ್ನು ಬಂಧಿಸಲಾಗಿದೆ. ಗುಜರಾತ್ ಪ್ರದೇಶ ಕಾಂಗ್ರೆಸ್ ಉಪಾಧ್ಯಕ್ಷ ಭೋಗಿಲಾಲ್ ಲಾಲಾರವರ ಮನೆಗೆ ನೆನ್ನೆ ಬೆಳಿಗ್ಗೆ ಬೆಂಕಿ ಹಚ್ಚಿಸಲಾಯಿತು. ಪೋಲೀಸರು ಜನರನ್ನು ಚದುರಿಸಿದರು.

ಪತ್ರಿಕೋದ್ಯಮ ಸಂಘದ ಆರಂಭ ಭಾಷಣ

ಮೈಸೂರು ೧೦

ಬೆಂಗಳೂರಿನಲ್ಲಿ ಹಿಂದೂ ಪತ್ರಿಕೆಯ ಸುದ್ದಿಗಾರರಾದ ಶ್ರೀ ಕೆ ಎಸ್ ರಾಮಸ್ವಾಮಿಯವರು ನೆನ್ನೆ ಮಹಾರಾಜಾ ಕಾಲೇಜಿನ ಪತ್ರಿಕೋದ್ಯಮ ಸಂಘದ ಆರಂಭ ಭಾಷಣ ಮಾಡಿ, ಭರತಖಂಡದಲ್ಲಿ ಪತ್ರಿಕೋದ್ಯಮದ ಬೆಳವಣಿಗೆಯನ್ನು ವಿವರಿಸಿದರು. ಸ್ವಾತಂತ್ರ್ಯ ಸಾಧನೆಯಲ್ಲಿ ಪತ್ರಿಕೆಗಳು ವಿಶೇಷ ಪಾತ್ರವನ್ನು ವಹಿಸಿದುವೆಂದೂ, ರಾಷ್ಟ್ರ ನಿರ್ಮಾಣ ಕಾರ್ಯದಲ್ಲೂ ಸಹ ಅವುಗಳ ಪಾತ್ರ ಹಿರಿದಾಗಿ ಬೆಳೆಯುತ್ತಿರುವುದೆಂದೂ ನುಡಿದರು. ಪತ್ರಿಕೋದ್ಯಮ ವಿದ್ಯಾರ್ಥಿಗಳು ಉನ್ನತವಾದ ಆದರ್ಶಗಳನ್ನಿಟ್ಟುಕೊಂಡು ಮುಂದೆ ಸಮಾಜ ಸೇವೆ ಸಲ್ಲಿಸುವಂತೆ ಹಾರೈಸಿದರು.

ಶ್ರೀ ನಾಡಿಗ ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಪ್ರಾರ್ಥನೆ ಮತ್ತು ಕನ್ನಡ ಪದ್ಯ ಪಠಣವಾದನಂತರ ಸಂಘದ ಉಪಾಧ್ಯಕ್ಷ ಶ್ರೀ ಎಂ. ಎಲ್ ಚನ್ನಕೇಶವಯ್ಯನವರು ಸ್ವಾಗತ ಭಾಷಣ ಮಾಡಿದರು. ಶ್ರೀಮತಿ ಆರ್ ನಾಗಮಣಿ ಮತ್ತು ಶ್ರೀ ಎಸ್ ಪಟ್ಟಾಭಿರಾಮರವರು ಪತ್ರಿಕೋದ್ಯಮದ ಒಸ್ಗೆ ತಮ್ಮ ಅನುಭವವನ್ನು ವಿವರಿಸಿದರು. ಶ್ರೀ ರಾಘವೇಂದ್ರರಾವ್ ಮತ್ತು ಪಾರ್ಟಿಯವರಿಂದಲೂ ಮತ್ತು ಶ್ರೀ ವಿಜಯಲಕ್ಷ್ಮಿ ಘರ್ಪಡೆಯವರಿಂದಲೂ ಸುಶ್ರಾವ್ಯವಾದ ಗಾಯನವಾಯಿತು. ಕಾರ್ಯದರ್ಶಿ ಶ್ರೀ ಹೆಚ್ ಆರ್ ಸುಂದರರಾಜ್‌ರವರಿಂದ ವಂದನಾರ್ಪಣೆಯನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಸೂಚನೆ

ಗೌರಿ ಪಂಚಮಿ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ

ಸರ್ಕಾರಿ ನೌಕರರನ್ನು ಹೊಡೆದ ಅಪಾದನೆಯಿಂದ ಖುಲಾಸೆ

ನಗರದ ಔಷಧಾಲಯದ ನೌಕರ ಬಸವರಾಜ ಎಂಬಾತನು ಸರ್ ಕೋರ್ಟಿನ ಶಿರಸ್ತೇದಾರ್ ಚನ್ನಸ್ವಾಮಿ ಎಂಬುವರನ್ನು ಕಳೆದ ನವೆಂಬರ್ ೩೦ ನೇ ತಾರೀಖು ಹೊಡೆದನೆಂದು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಅಪಾದಿತನಿಗೆ ವಿಧಿಸಿದ್ದ ೩ ತಿಂಗಳ ಕಠಿಣ ಶಿಕ್ಷೆ ಮತ್ತು ೩೦೦ ರೂ ಜುಲ್ಮಾನೆಯ ವಿರುದ್ಧ ಅವನು ಹೂಡಿದ್ದ ಅಪೀಲಿನಲ್ಲಿ ಜಿಲ್ಲಾ ನ್ಯಾಯಾಧೀಶರು ಈ ದಿನ ತೀರ್ಪಿತ್ತು ಅಪಾದಿತನನ್ನು ಖುಲಾಸೆ ಮಾಡಿರುತ್ತಾರೆ. ಅಪಾದಿತನ ಪರ ಶ್ರೀ ಎಂ ಎಸ್ ರಂಗನಾಥರಾಯರವರು ವಕಾಲತ್ತು ವಹಿಸಿದ್ದರು.

ಸಹಾಯಾರ್ಥ ನಾಟಕ

ಕೃಷ್ಣಮೂರ್ತಿಪುರದ ಶ್ರೀರಾಮ ಮಂದಿರದ ಕಟ್ಟಡದ ಸಹಾಯಾರ್ಥವಾಗಿ ಏರ್ಪಾಡಾಗಿದ್ದ ನಾಟಕದ ಸಂಬಂಧವಾಗಿ ಗೋಕುಲದ ಶ್ರೀ ಶಾರದಾ ಸಂಗೀತ ನಾಟಕ ಮಂಡಲಿಯವರು ನಾಳೆ ಸಂಜೆ ೬-೩೦ ಗಂಟೆಗೆ ಟೌನ್‌ಹಾಲಿನಲ್ಲಿ "ರಕ್ತರಾತ್ರಿ ಅಥವಾ ವೀರ ಅಶ್ವತ್ಥಾಮ" ಎಂಬ ಪೌರಾಣಿಕ ನಾಟಕವನ್ನು ಅಭಿನಯಿಸುವರು.

ನವೆಂಬರ್ ೧ಕ್ಕೆ ನೂತನ ಸಂಸ್ಥಾನಗಳ ರಚನೆ

ದ್ವಿಭಾಷಾ ಬೊಂಬಾಯಿಗೆ ಒಪ್ಪಿಗೆ

ನೂತನ ಸಂಸ್ಥಾನಗಳು ಬರುವ ನವೆಂಬರ್ ೧ ರಂದು ರಚಿತವಾಗಬೇಕೆಂದು ಲೋಕ ಸಭೆಯು ನೆನ್ನೆ ನಿರ್ಧರಿಸಿತು. ಸಂಸ್ಥಾನ ಪುನರ್ವಿಂಗಡಣೆ ಮಸೂದೆಯ ಎಲ್ಲಾ ನಿಬಂಧನೆ ಮತ್ತು ಪಟ್ಟಿಗಳನ್ನು ಸಭೆಯು ಅಂಗೀಕರಿಸಿತು. ಪ್ರತ್ಯೇಕ ಮಹಾರಾಷ್ಟ್ರ ಮತ್ತು ಗುಜರಾತುಗಳ ಬದಲು ದ್ವಿಭಾಷಾ ಬೊಂಬಾಯಿ ರಚನೆಗಾಗಿ ಗೃಹ ಮಂತ್ರಿಯವರು ಸೂಚಿಸಿದ್ದ ತಿದ್ದುಪಡಿಯು ೨೪೧-೪೦ ಓಟುಗಳಿಂದ ಅಂಗೀಕೃತವಾಯಿತು. ಕಮ್ಯೂನಿಸ್ಟರೂ ಮತ್ತು ಮಹಾರಾಷ್ಟ್ರ ಕಾಂಗ್ರೆಸ್ ಮುಖಂಡ ಎನ್ ವಿ ಗ ಡ್ಗಿಳ್‌ರವರೂ ವಿರೋಧವಾಗಿ ಮತವಿತ್ತರು. ಪಿ ಎಸ್ ಪಿ ಪಕ್ಷದವರು ಇಬ್ಭಾಗವಾಗಿ ಓಟು ಮಾಡಿದರು. ಸಿ ಡಿ ದೇಶಮುಖ್‌ರವರೂ ಮತ್ತು ಹೈದರಾಬಾದಿನ ಮಂತ್ರಿಗಳೂ ಸಹ ಗೈರುಹಾಜರಾಗಿದ್ದರು.

ನೂತನ ಮೈಸೂರು ವಿಧಾನ ಸಭೆಯಲ್ಲಿ ೨೦೮ ಸದಸ್ಯರು

ಬೃಹನ್ ಮೈಸೂರು ವಿಧಾನ ಸಭೆಯಲ್ಲಿ ೧೯೩ ಮಂದಿ ಸದಸ್ಯರ ಬದಲು ೨೦೮ ಜನರು ಇರಬೇಕೆಂದು ಶಾಸನದ ಶ್ರೀ ಶಿವನಂಜಪ್ಪನವರೂ, ವಿಧಾನ ಪರಿಷತ್ತಿನಲ್ಲಿ ೪೦ ಸದಸ್ಯರ ಬದಲು ೬೩ ಮಂದಿ ಇರಬೇಕೆಂದು ಬೆಂಗಳೂರಿನ ಶ್ರೀ ಎಂ. ಕೇಶವಯ್ಯಂಗಾರ್ಯರೂ ಸಂಸ್ಥಾನ ಪುನರ್ವಿಂಗಡಣೆ ಮಸೂದೆಗೆ ತಂದಿದ್ದ ತಿದ್ದುಪಡಿಗಳನ್ನು ನೆನ್ನೆ ಲೋಕಸಭೆಯು ಅಂಗೀಕರಿಸಿತು.

ವಿಜ್ಞಾನ ಗೋಷ್ಠಿಯ ಆರಂಭ ಭಾಷಣ

ರಾಜಧಾನಿಯ ಶಾರದಾ ವಿಲಾಸ ಕಾಲೇಜಿನ ವಿಜ್ಞಾನ ಗೋಷ್ಠಿಯ ಆರಂಭ ಭಾಷಣವು ನಾಳೆ ಸಂಜೆ ೫॥ ಗಂಟೆಗೆ ಇದೆ. ಕೇಂದ್ರ ಆಹಾರ ಸಂಶೋಧನಾಲಯದ ಅಸಿಸ್ಟೆಂಟ್ ಡೈರೆಕ್ಟರ್ ಡಾ॥ ಹೆಚ್ ಎ.ಬಿ ಪಾರ್ಪಿಯ್ಯರವರು "ಭಾರತದಲ್ಲಿ ವಿಜ್ಞಾನದ ಕಾರ್ಯಗಳ ವಿಧಾನ" ಎಂಬ ವಿಷಯವಾಗಿ ಭಾಷಣ ಮಾಡುವರು. ಪ್ರೊ॥ ಎಸ್. ವೆಂಕಟರಾಯರು ಅಧ್ಯಕ್ಷತೆ ವಹಿಸುವರು.

ಶಿವ ಸಪ್ತಾಹ

ಮಂಡಿ ಮೊಹಲ್ಲಾ ಪೋಲೀಸು ಠಾಣೆ ಪಕ್ಕದಲ್ಲಿರುವ ಗಂಟೆ ಮುಚ್ಚಯ್ಯನ ಗಲ್ಲಿಯಲ್ಲಿ ನಾಳೆ ಸಂಜೆ ೭ ಗಂಟೆಗೆ ಶ್ರೀ ಮಾಯಿಗೌಡರು ಮತ್ತು ಶ್ರೀ ಹಿರಣ್ಣಯ್ಯನವರಿಂದ ಶಿವ ಮಹಾತ್ಮೆ ಕಥೆ ಮತ್ತು ವ್ಯಾಖ್ಯಾನವು ನಡೆಯುವುದು.

ಹರಿಕಥೆ ಮತ್ತು ದೇವರಿಗೆ ಅಲಂಕಾರ

ಮಂಡಿ ಮೊಹಲ್ಲಾ ಕಾಳಮ್ಮನಗುಡಿ ಬೀದಿ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಶ್ರಾವಣ ಶನಿವಾರದ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಭಾಗವತ ಶ್ರೀ ವೆಂಕಟೇಶದಾಸರಿಂದ ಶ್ರೀರಾಮ ಪಾದುಕಾ ಪಟ್ಟಾಭಿಷೇಕ ಎಂಬ ಹರಿಕಥೆಯೂ, ಅಮ್ಮನವರಿಗೆ ಕ್ಷೀರಸಾಗರ ಶಯನ ಅಲಂಕಾರವೂ ಪೌರಸಭಾ ಸದಸ್ಯರಾದ ಶ್ರೀ ಬಿ ಚಿ ದಾಸಂ ಸಮ್ಮುಖದಲ್ಲಿ ನಡೆಯುವುವು.

ಬೇಲೂರರ ಕೊಲೆ ಮೊಕದ್ದಮೆ ರಿವಿಜನ್ ಅರ್ಜಿ ವಜಾ

ಜ್ಯೂರಿಯಿಲ್ಲದೆ ಸೆಷನ್ಸ್ ವಿಚಾರಣೆಗೆ ಹೈಕೋರ್ಟಿನ ಸಮ್ಮತಿ

ಸ್ವಂ ಸು ಸಂತಿ] ಬೆಂಗಳೂರು ೧೦

ಬೇಲೂರರ ಕುರಿತ ಕೊಲೆ ಅಪಾದಿತರನ್ನು ಸೆಷನ್ಸ್ ವಿಚಾರಣೆಗೆ ಗುರಿಪಡಿಸಿ ಜಿಲ್ಲಾ ನಗರ ನ್ಯಾಯಾಧೀಶರು ಮಾಡಿರುವ ಆಜ್ಞೆಯು ನ್ಯಾಯಬದ್ಧವಾಗಿ ರುವುದೆಂದು ಈ ದಿನ ಹೈಕೋರ್ಟಿನಲ್ಲಿ ನ್ಯಾಯಾಧೀಶರುಗಳಾದ ಶ್ರೀ ಕೆ ಎಸ್ ಪದ್ಮನಾಭಯ್ಯ ಮತ್ತು ಡಿ. ಬಾಲಕೃಷ್ಣಯ್ಯ ರವರು ತೀರ್ಪಿತ್ತು, ಅಪಾದಿತರ ಪರವಾಗಿ ವಕೀಲರಾದ ಶ್ರೀ ಎಂ. ಕೆ. ಗುರುರಾಜರು ಸಲ್ಲಿಸಿದ್ದ ರಿವಿಜನ್ ಅರ್ಜಿಯನ್ನು ವಜಾ ಮಾಡಿದರು. ಕೆಳ ಕೋರ್ಟಿನ ವಿಚಾರಣೆಯನ್ನು ರದ್ದುಪಡಿಸುವಂತೆ ಅರ್ಜಿಯಲ್ಲಿ ಕೋರಲಾಗಿತ್ತು. ಕ್ರಿಮಿನಲ್ ಪ್ರೊಸೀಜರ್ ಕೋಡಿನ ೩೦೭ ನೇ ನಿಬಂಧನೆಯ ಪ್ರಕಾರ ವಿಚಾರಣೆಗಳನ್ನು ನಡೆಸಿದ್ದು, ಅಪರಾಧವನ್ನು ಸಾಬೀತು ಪಡಿಸಲು ಬೇಕಾದ ಸಾಕ್ಷಿಗಳಿಲ್ಲದಿರುವಾಗ ಅಪಾದಿತರನ್ನು ವಿಚಾರಣೆಗೆ ಗುರಿಪಡಿಸಲು ಅವಕಾಶವಿರುವುದಾಗಿ ಅವರು ಸೂಚಿಸಿದರು.

ಜ್ಯೂರಿಗಳನ್ನು ನೇಮಿಸದೆ ಸೆಷನ್ಸ್ ವಿಚಾರಣೆ ನಡೆಸಲು ಸೆಷನ್ಸ್ ನ್ಯಾಯಾಧೀಶರಿಗೆ ಹೈಕೋರ್ಟು ಅನುಮತಿಯನ್ನಿತ್ತಿತು.

೧೫ ಸಂಸ್ಥಾನ ಸರ್ಕಾರಗಳ ಸಾಲ

ಭಾರತದ ೧೫ ಸಂಸ್ಥಾನ ಸರ್ಕಾರಗಳು ಬರುವ ತಿಂಗಳು ೩ರಿಂದ ೧೦ರವರೆಗೆ ಶೇಕಡ ೪ರ ಬಡ್ಡಿಯಂತೆ ಒಟ್ಟು ೬೪ ಕೋಟಿ ರೂ ಸಾಲವನ್ನು ಎತ್ತಲಿವೆ. ಮೈಸೂರು ಸರ್ಕಾರದವರು ೧೦೦ಕ್ಕೆ ೯೯॥ ಯಂತೆ ಹಣವನ್ನು ಸ್ವೀಕರಿಸಿ, ೧೦೦ ರೂ ಅನ್ನು ಕೊಡುವರು. ಬಡ್ಡಿ ಮೇಲೆ ವರಮಾನ ತೆರಿಗೆ ಇದೆ. ಬೊಂಬಾಯಿ ಸರ್ಕಾರದ ಸಾಲ ಬಿಟ್ಟು ಉಳಿದ ಸಾಲಗಳೆಲ್ಲವೂ ೧೯೭೦ ರ ಸೆಪ್ಟೆಂಬರ್ ಒಂದು ತೀರ್ಮಾನವಾಗುತ್ತವೆ.

ಶಾರದಾಂಬಾ ಹಿಂದಿ ನಿಕೇತನದ ವಾರ್ಷಿಕೋತ್ಸವ

ವಿದ್ಯಾರಣ್ಯಪುರದಲ್ಲಿರುವ ಶ್ರೀ ಶಾರದಾಂಬಾ ಹಿಂದಿ ನಿಕೇತನದ ಹತ್ತನೇ ವಾರ್ಷಿಕೋತ್ಸವವು ನಾಳಿದ್ದು ಸಂಜೆ ೫॥ ಗಂಟೆಗೆ ನಗರದ ಸಹಕಾರ ಭವನದಲ್ಲಿ ಪೌರ ಸಭಾ ಉಪಾಧ್ಯಕ್ಷ ಶ್ರೀ ಜಿ. ಆರ್. ರಂಗಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು. ಪೌರಸಭಾ ಸದಸ್ಯರಾದ ಶ್ರೀ ಶ್ರೀಕಂಠಮೂರ್ತಿಯವರು ಭಾಷಣ ಮಾಡುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ನಾಗಸ್ವರ. ೭-೧೫ ಮತ್ತು ೮-೧೫ ವೈ. ಎಸ್. ಶ್ರೀನಿವಾಸಮೂರ್ತಿ—ಪುರಂದರದಾಸರ ದೇವರನಾಮ. ೭-೩೦ ರಿಕಾರ್ಡ್. ಮಧ್ಯಾಹ್ನ ೧೨ ಸಂಗೀತ. ೧೨-೩೦ ರಿಕಾರ್ಡ್. ೨-೪೫ ಮಕ್ಕಳ ಕಾರ್ಯಕ್ರಮ. ೧-೫೦ ವಿಲ್ಲುಪಾ. ಸಂಜೆ ೫-೩೦ ಮತ್ತು ೮ ಎಂ. ಎಸ್. ರತ್ನ—ಸಂಗೀತ. ೬-೧೫ ವಚನಗಾನ. ೬-೩೦ ಎರಡನೆಯ ಯೋಜನೆಗೆ ಧನದ ಸಂಗ್ರಹ—ಕನ್ನಡ ಭಾಷಣ. ೭-೩೦ ರೇಡಿಯೋ ನ್ಯೂಸ್ ರೀಲ್. ೮-೪೦ ಪ್ರಸಾರಗೀತೆ. ೯-೧೫ ಪ್ರಾದೇಶಿಕ—ಕನ್ನಡದಲ್ಲಿ ಕಲಿಗತಿ. ೯-೪ ಮುಕ್ತಾಯ ಕಾರ್ಯಕ್ರಮ

ದವಸದ ಬೆಲೆ ಇಳಿಸಲು ಬ್ಯಾಂಕುಗಳಿಂದ ಕ್ರಮ ಅಗತ್ಯ

ಗಿರಣಿಗಳವರು, ವರ್ತಕರು ಮತ್ತು ಜಮೀನುದಾರರಿಂದ ಧಾನ್ಯದ ಶೇಖರಣೆ ತಪ್ಪಬೇಕು

ರಾಜಧಾನಿಯ ಪ್ರಮುಖ ಕಾಂಗ್ರೆಸ್ಸಿನವರಾದ ಶ್ರೀ ಎಂ ಆರ್ ಸಿ ಒಸಪ್ಪನವರು ಈ ರೀತಿ ಹೇಳಿಕೆಯಿತ್ತಿದ್ದಾರೆ.—

ಆಹಾರ ಅಭಾವವೆಂಬುದು ಅಂಟುಜಾಡ್ಯವಾಗಿ ಬೆನ್ನು ಹತ್ತಿಬರುತ್ತಿದೆ ಹತ್ತೊಂಟೆ ಹೋದ ಮೇಲೆ ಆಹಾರ ಪದಾರ್ಥಗಳ ಬೆಲೆ ತಕ್ಕಮಟ್ಟಿಗೆ ಸುಧಾರಿಸಿತ್ತು ಮುಂಗಾರು ಮಳೆ ಸರಿಯಾಗಿ ಆಗದೆ ರಾಗಿ ಮತ್ತು ಜೋಳದ ಫಸಲು ಹಾಳಾಗಿರುವುದು, ದವಸಧಾನ್ಯಗಳನ್ನು ಕೊಳ್ಳಲು ರೈತರಲ್ಲಿ ಹಣವಿಲ್ಲದಿರುವುದು ಹಿಂಗಾರು ಮಳೆಯೂ ಆಗದ ಸೂಚನೆಯಿರುವುದು ಇವುಗಳು ಅಭಾವಕ್ಕೆ ಕಾರಣ ಕೆಲವು ಜಮೀನುದಾರರು, ವರ್ತಕರು ಮತ್ತು ಮಿಲ್ ಮಾಲೀಕರು ಸಹ ಸ್ವಲ್ಪ ಹಳ್ಳ ಭತ್ತವನ್ನು ದಾಸ್ತಾನು ಮಾಡಿರುತ್ತಾರೆ ಇದರಿಂದಲೂ ಅಭಾವವಾಗಿದೆ ಈ ರೀತಿ ದಾಸ್ತಾನು ಮಾಡಿರುವವರಿಗೆ ಬ್ಯಾಂಕಿನವರು ಕೊಟ್ಟಿರುವ ಸಾಲವನ್ನು ಕೂಡಲೇ ವಸೂಲು ಮಾಡುವ ಏರ್ಪಾಡು ಮಾಡಿದರೆ ದವಸಗಳ ಬೆಲೆ ಇಳಿಯಲು ಸಾಧ್ಯ ಭತ್ತದ ಬೆಲೆಯು ಈಗ ಪಲ್ಲಕ್ಕೆ ೩೫ ರೂ, ಅಕ್ಕಿ ಬೆಲೆ ೬೫ ರೂ ಮತ್ತು ರಾಗಿಯದು ೩೫ ರೂ ಆಗಿದೆ

ಹೊರಗಡೆಯಿಂದ ಬರುವ ಕಡಲೆ, ತೊಗರಿ, ಉಪ್ಪು, ತೊಗರಿಬೇಳೆ, ಹೆಸರು ಮುಂತಾದುವು ವ್ಯಾಗನ್ ಸೌಕರ್ಯವಿಲ್ಲದೆ ಬರುವುದು ಕಡಿಮೆಯಾಗಿದೆ ಆದರಿಂದ ದ್ವಿದಳ ಧಾನ್ಯಗಳ ಬೆಲೆಯೂ ಹೆಚ್ಚಲು ಕಾರಣವಾಗಿದೆ ರೈಲ್ವೆ ಇಲಾಖೆಯವರು ಹೆಚ್ಚಿನ ವ್ಯಾಗನ್‌ಗಳನ್ನು ಕೊಡಬೇಕಾದುದು ಅಗತ್ಯ

ಕೇಂದ್ರ ಸರ್ಕಾರದವರು ಹಳ್ಳಿಗಳಲ್ಲಿ ರೂಗಿ ಸೇರಿನಂತೆಯೂ, ಪಟ್ಟಣದಲ್ಲಿ ೫ ಸೇರಿನಂತೆಯೂ ಮಾರಲು ಅಕ್ಕಿ ಕೊಟ್ಟಿರುತ್ತಾರೆ ಆದರೆ ಅದೂ ಸಹ ಹಂಚಿಕೆಯಾಗುತ್ತಿಲ್ಲ ಇದರಿಂದ ರೈತರು, ಕೂಲಿಗಾರರು, ಮತ್ತು ಮಧ್ಯಮವರ್ಗದವರಿಗೆ ಸ್ವಲ್ಪವೂ ಪ್ರಯೋಜನವಾಗಿಲ್ಲ ಇಂತಹ ಏರ್ಪಾಡಿನಿಂದ ಯಾರಿಗೂ ಸುಖವಿಲ್ಲ

ಸಂಸ್ಥಾನದ ಜನರ ಕಷ್ಟ ನಿವಾರಣೆಗೆ ಪ್ರತಿಯೊಂದಕ್ಕೂ ಕೇಂದ್ರದವರನ್ನೇ ಆಶ್ರಯಿಸುವುದು ದೌರ್ಭಾಗ್ಯದ ಸಂಗತಿ ಈ ಕಡೆಗೆ ಮಂತ್ರಿಗಳು ತೀವ್ರ ಗಮನವಿತ್ತು, ಕೇವಲ ರಾಜಕೀಯವನ್ನಲ್ಲದೆ ಜನರ ಯೋಗಕ್ಷೇಮವನ್ನೂ ನೋಡುವುದು ಅಗತ್ಯ

ವಿಶ್ವದಲ್ಲಿ ೫೦ ಸಾವಿರ ಅಣು ಬಾಂಬುಗಳು

ವಿಶ್ವದಲ್ಲಿ ಈಗ ೫೦,೦೦೦ ಅಣು ಬಾಂಬುಗಳು ಶೇಖರಿಸಲ್ಪಟ್ಟಿರುವವೆಂದು ಪೂರ್ವ ಜರ್ಮನಿಯ ಪ್ರಖ್ಯಾತ ವಿಜ್ಞಾನಿ ಪ್ರೊ॥ ಮಾರ್ಕ್ವರ್ಡ್ ಅಡೀನ್‌ರವರು ತಿಳಿಸಿರುತ್ತಾರೆ

ಹಾಸಿಗೆ - ದಿಂಬು

ಮಾಸಲ್ಲದಲ್ಲಿ ಹತ್ತಿಬಿಡಿಸಿ ತಯಾರು ಮಾಡುತ್ತೇವೆ

ಬಾಯುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

Edited, Printed and Published by A. K. Narayan at Sadhvi Press D. Subbaiah Road, Mysore

ನಟಿ ಪತ್ನಿಯು ಮೇಲೆ ಶಾಂತಾರಾಮರವರ ಕಂಟೆಂಪ್ಟ್ ಅರ್ಜಿ

ಬೊಂಬಾಯಿ ಹೈಕೋರ್ಟಿನಲ್ಲಿ ಬದ್ರಿ ಕಚ್ ವಾಲಾ, ಕೇಶವ ದೇಸಾಯಿ ಮತ್ತು ತನ್ನ ಪತ್ನಿಯೂ, ನಟಿಯೂ ಆದ ಜಯಶ್ರೀಯವರ ಮೇಲೆ ಚಲನಚಿತ್ರ ಡೈರೆಕ್ಟರ್ ಶಾಂತಾರಾಮ್ ಕಂಟೆಂಪ್ಟ್ ಅರ್ಜಿಯನ್ನು ಹಾಕಿ

ದ ಪ್ರಕಾರ, "ಇವರುಗಳಿಗೆ ಕೋರ್ಟಿನವರು ನೋಟೀಸು ಕೊಟ್ಟಿರುತ್ತಾರೆ ಕಚ್ ವಾಲಾರವರು 'ಪರಾಸ್' ಎಂಬ ಸಿನಿಮಾ ವಾರಪತ್ರಿಕೆಯ ಪ್ರಕಟಣಕಾರರು, ದೇಸಾಯಿಯವರು ಅದರ ವ್ಯವಸ್ಥಾಪಕರು ಕಳೆದ ತಿಂಗಳು ೧೩ ಮತ್ತು ೧೯ರ ಪತ್ರಿಕೆಗಳಲ್ಲಿ ಜಯಶ್ರೀಯವರ ಭೇಟಿಯ ವಿವರವೆಂದು ಪ್ರಕಟವಾದ ಎರಡು ಲೇಖನಗಳು ತನ್ನ ಬಗ್ಗೆ ಅವಹೇಳನಕರವಾಗಿದ್ದು ಬೇರೆ ಕೋರ್ಟಿನಲ್ಲಿ ತಾವು ಪತ್ನಿಯ ಮೇಲೆ ಹೂಡಿರುವ ಮೊಕದ್ದಮೆ ನ್ಯಾಯ ನಿರ್ವಹಣೆಗೆ ಅಡ್ಡಿಪಡಿಸುವುದಾಗಿ ಅರ್ಜಿ ಹಾಕಿದ್ದರು ಶಾಂತಾರಾಂ ಮತ್ತು ಜಯಶ್ರೀಯವರು ೧೯೪೧ರಲ್ಲಿ ವಿವಾಹವಾಗಿದ್ದರು ತಮಗೆ ಸೇರಿದ ಹಲವು ಒಡವೆಗಳನ್ನು ಕಳೆದ ಜೂನಿನಲ್ಲಿ ಅಕ್ರಮವಾಗಿ ಸಾಗಿಸಿದ್ದರೆಂಬ ಬಗ್ಗೆ ಜಯಶ್ರೀ ಮೇಲೆ ಶಾಂತಾರಾಂ ದಾವೆ ಹೂಡಿರುವರು ಅದಕ್ಕೆ ಪ್ರತಿಯಾಗಿ ಆಕೆಯು ಗಂಡನ ಮೇಲೆ ದಾಂಪತ್ಯ ವಿಚ್ಛೇದನ ಮತ್ತು ಜೀವನಾಂಶಕ್ಕಾಗಿ ಬೊಂಬಾಯಿ ಸಿಟಿ ಸಿವಿಲ್ ಕೋರ್ಟಿನಲ್ಲಿ ಬೇರೆಂದು ಮೊಕದ್ದಮೆ ಹೂಡಿರುವ ರು

ಮನುಷ್ಯನ ಹೊಟ್ಟೆಯಲ್ಲಿ ಚಿಕ್ಕ "ಸ್ಟೇಷನರಿ ಅಂಗಡಿ"

ಹಲ್ಲುಜ್ಜುವ ೨೬ ಬ್ರಷ್ಷುಗಳು, ೨೧ ಪೆನ್ಸಿಲ್‌ಗಳು, ಬಹಳ ಚಾಕುಗಳು, ಚಾಕುಗಳು, ಜಪಾನಿಯರು ಊಟಕ್ಕೆ ಬಳಸುವ ೨೦ ಚಾಪ್ ಕಡ್ಡಿಗಳು ಮತ್ತಿತರ ಅನೇಕ ಸಾಮಾನುಗಳನ್ನು ದಕ್ಷಿಣ ಜಪಾನಿನ ಟೋಬಾಟಾ ಎಂಬ ನಗರದ ನಿವಾಸಿಯೊಬ್ಬನ ಹೊಟ್ಟೆಯಿಂದ ಶಸ್ತ್ರ ಚಿಕಿತ್ಸೆಯ ಮೂಲಕ ತೆಗೆದ ಆಶ್ಚರ್ಯಕರವಾದ ಸುದ್ದಿಯು ವರದಿಯಾಗಿದೆ ಅವನು ಶಂಥ ಕಟ್ಟಿಕೊಂಡು, ಮೇಲ್ಕಂಡ ಸಾಮಾನುಗಳನ್ನು ನುಂಗಿದ್ದನೆಂದೂ, ಆದರಿಂದ ಹೊಟ್ಟೆಯು ಹಿಂದಿನಂತಾಗಿ ನೋವಿನಿಂದ ನರಳಿ ಹೋಗಿದ್ದನೆಂದೂ ಸಹ ತಿಳಿದುಬಂದಿದೆ

ಎಸ್. ಎಸ್. ಎಲ್. ಸಿ. ವಿದ್ಯಾರ್ಥಿಗಳಿಗೆ ಉಚಿತ ತರಗತಿಗಳು

ರಾಜಧಾನಿಯ ಗ್ಲೋಬ್ ಟ್ಯುಟೋರಿಯಲ್ ಕಾಲೇಜಿನ ಆಶ್ರಯದಲ್ಲಿ ಪ್ರತಿ ಭಾನುವಾರ ಬೆಳಿಗ್ಗೆ ೧೦-೩೦ ರಿಂದ ೧೨-೩೦ರ ವರೆಗೆ ಅನುಭವಸ್ಥರಾದ ಉಪಾಧ್ಯಾಯರುಗಳಿಂದ ಸದ್ವಿದ್ಯಾ ಪಾಠಶಾಲೆಯಲ್ಲಿ ಎಸ್ ಎಸ್ ಎಲ್ ಸಿ ವಿದ್ಯಾರ್ಥಿಗಳಿಗಾಗಿ ಉಚಿತ ಲೆಕ್ಚರ್ ಕ್ಲಾಸುಗಳು ನಡೆಯುತ್ತವೆ

ಕನ್ನಡ ಸಾಹಿತ್ಯ ಮಂಡಲಿ,

ಮೈಸೂರು

ಶೀಘ್ರದಲ್ಲೇ ಹೊರಬೀಳುತ್ತದೆ

ಕಮಲ ಪ್ರಕಾಶನದ ತೀರ್ಥರೂಪಂಗಳವರ ಸಾಮಾಜಿಕ ಕಾದಂಬರಿ

"ವ್ಯಾಮೋಹ"

ಎಲ್ಲಾ ಕಡೆಗಳಲ್ಲೂ ಏಜೆಂಟರುಗಳು ಬೇಕಾಗಿದ್ದಾರೆ ವಿವರಗಳಿಗೆ ಬರೆಯಿರಿ

ಎಂ. ಎಲ್. ಎಸ್. ಶಾಸ್ತ್ರಿ

ನಂ 2225 ಕೃಷ್ಣರಾಜಮೊಹಲ್ಲಾ

ಮೈಸೂರು

ಮಹಾರಾಜರ ವರ್ಧಂತಿ ಉತ್ಸವ

ಮೈಸೂರು ಸಿಟಿ ಲಕ್ಷ್ಮೀಪುರಂ ಎಂ ಓ ಎಂ ಸ್ಕೂಲಿನಲ್ಲಿ ಮಹಾರಾಜಾ ಶ್ರೀ ಜಯಚಾಮರಾಜ ಒಡೆಯರ ವರ್ಧಂತಿ ಉತ್ಸವವು ಜಿಲ್ಲಾ ವಿದ್ಯಾಧಿಕಾರಿ ಶ್ರೀ ಹೆಚ್ ವಿ ಶ್ರೀರಂಗರಾಜುರವರ ಅಧ್ಯಕ್ಷತೆಯಲ್ಲಿ ನಡೆಯಿತು ನಾಟಕ ಮತ್ತು ವಿವಿಧ ವಿನೋದಾವಳಿಯು ಜರುಗಿ ಪಾತ್ರ ವಹಿಸಿದವರಿಗೆ ಅಧ್ಯಕ್ಷರು ಬಹುಮಾನ ವಿನಿಯೋಗ ಮಾಡಿದರು ಸಿಟಿ ರೇಂಜ್ ಇನ್ಸ್‌ಪೆಕ್ಟರ್ ಶ್ರೀ ಗುರುರಾಜಾಚಾರ್ಯರು ವಂದನೆಯನ್ನು ಅರ್ಪಿಸಿದರು ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಎಲ್ ರಾಚಯ್ಯನವರು ಶಾಲೆಯ ಸ್ಥಿತಿಯನ್ನು ಅಧಿಕಾರಿಗಳಿಗೆ ತಿಳಿಸಿ ಸೂಕ್ತ ಕ್ರಮವನ್ನು ತೆಗೆದುಕೊಳ್ಳುವಂತೆ ಪ್ರಾರ್ಥಿಸಿದರು ಮಕ್ಕಳಿಗೆ ಕೇರಿಯ ಮುಖಂಡರುಗಳು ಕಳುಹಿಸಿದ್ದ ಸಿಹಿತಿಂಡಿಯನ್ನು ಹಂಚಲಾಯಿತು ರಾಷ್ಟ್ರಗೀತೆಯೊಡನೆ ಸಭೆಯು ಮುಕ್ತಾಯವಾಯಿತು

ಮೈಸೂರು ಪೇಟೆ ಧಾರಣೆ

	ರೂ ಮುಂದ	ರೂ ವರೆಗೆ
ಭತ್ತ ಬಂಗಾರ ಮತ್ತು		
ಕೊಯಮತ್ತೂರು ಸಣ್ಣ	೪೪ ೧೦ ೦	
ರತ್ನಚೂಡಿ	೪೨ ೧೨ ೦	೪೪ ೧೪ ೦
ಕಬ್ಬಿ	೪೦ ೪ ೦	೪೨ ೧೨ ೮
ಕೆಂಪು ಮತ್ತು ಬಿಳಿ	೩೮ ೦ ೦	೪೨ ೮ ೦
ರಾಗಿ	೩೯ ೦ ೦	೪೦ ೪ ೦
ಕಡಲೆಕಾಯಿ	೧೧ ೦ ೦	೨೨ ೧೨ ೦
ಹಿಪ್ಪೆ	೧೫ ೦ ೦	
ಎಳ್ಳು	೭೩ ೧೦ ೦	೭೫ ೮ ೦
ಹರಳುಬೀಜ	೪೩ ೧೦ ೦	
ಹುರುಳಿ	೪೧ ೧೪ ೦	೪೩ ೪ ೦
ಹೆಸರು	೪೯ ೦ ೦	೫೦ ೪ ೦
ಹಲಸಂದೆ	೬೦ ೦ ೦	೫೦ ೧೨ ೦
[illegible]	೯ ೧ ೦	೯ ೩ ೦
ಹುಣಸೇಹಣ್ಣು	೪ ೧ ೦	೫ ೦
ಮೆಣಸಿನಕಾಯಿ	೧೧ ೨ ೦	೧೮ ೧೦ ೦
ತೆಂಗಿನಕಾಯಿ ೧೦೦೦	೧೪೯ ೮ ೦	೨೦೯ ೮ ೦

ಲಕ್ಷ್ಮಿ ಚಿತ್ರ ★ 10-8-56 ರಿಂದ ಅಮೋಘ 2ನೇವಾರ ಪ್ರತಿ ದಿನ 3 ಆಟಗಳು

ಕುಟುಂಬ ವಿಳಕ್ಕು

ಪಾತ್ರ ಎಂ ವಿ ರಾಜಮ್ಮ, ತಂಗವೇಲು ಜಮುನ, ನರಸಿಂಹಭಾರತಿ, ಡೋರೆರಾಜ್ ಎಂ ಜಿ ಚಕ್ರಪಾಣಿ, ಎ ಎಸ್ ಕೃಷ್ಣ ಟಿ ಎ ಮಧುರಂ ಮುಂತಾದವರು

ಫುಟ್‌ಬಾಲ್ ಕ್ಲಬ್ಬಿನ ಅಧಿಕಾರವರ್ಗ

ನಂಜನಗೂಡಿನಲ್ಲಿರುವ ಟಾರ್ಪೆಡೊಸ್ ಫುಟ್‌ಬಾಲ್ ಕ್ಲಬ್ಬಿನ ಸರ್ವ ಸದಸ್ಯರ ಸಭೆಯು ಕಳೆದ ಭಾನುವಾರ ನಡೆದು, ಪ್ರಸಕ್ತ ಸಾಲಿನ ಅಧಿಕಾರ ವರ್ಗದ ಚುನಾವಣೆಗಳು ಜರುಗಿದವು ಶ್ರೀ ಸಿ ರಾಜಣ್ಣನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಎಂ ಸಿ ರುದ್ರಸ್ವಾಮಿಯವರು ಮತ್ತು ಎಲ್ ಮಹದೇವಪ್ಪನವರು ಕಾರ್ಯದರ್ಶಿಗಳಾಗಿಯೂ, ಕೆ ಮಾಯಣ್ಣನವರು ಕ್ಯಾಪ್ಟನ್ ಆಗಿಯೂ, ಪಿ ಗುರುದತ್ ಕ್ಯಾಪ್ಟನ್ ಮತ್ತು ಮನ್ನಾರಯ್ಯನವರು ವೈಸ್ ಕ್ಯಾಪ್ಟನ್ ಆಗಿಯೂ ಆರಿಸಲ್ಪಟ್ಟರು ಶ್ರೀಗಳಾದ ಡಿ ರಾಮಸ್ವಾಮಿ, ಮಹಮದ್ ಗೌಸ್, ಪುರಗಂಡಯ್ಯ ಮತ್ತು ಅಬ್ದುಲ್ ಮಜೀದ್‌ರವರು ಸದಸ್ಯರಾಗಿ ಚುನಾಯಿತರಾದರು

SREE GANESH
TALKIES

From 11-8-56 For 3 Days

Universal International's Technicolor masterpiece entertainment

ALL THAT HEAVEN ALLOWS

Featuring Rock Hudson and Jane Wyman the magnificent stars of THE MAGNIFICENT OBSESSION

Independence Day Special Attraction

From 14-8-56

Cecil B Demille's Unforgettable epic Technicolor spectacle

UNCONQUERED

Starring - Gary Cooper and Paulette Goddard

Poly
BRONKOL
For ASTHMA & BRONCHITIS

Sole Distributors for Mysore State and Coorg

SATHYA & CO,

Chemists & Druggists

7111 A. S Street,
BANGALORE.2

GLOBE TUTORIAL COLLEGE,

Sadvidya Patasala Buildings Mysore

Provides excellent coaching by experienced teachers for S S L C 1956

Join at once Time 7-30 to 10-30 A M.

★ ★

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)

15-8-56 ನೇ ಬುಧವಾರದಿಂದ : ಅಮೋಘ ಪ್ರಾರಂಭ

ಪ್ರತಿದಿನ 3 ಪ್ರದರ್ಶನಗಳು

ವಿನೋದಾರಮರ ತೆಲುಗು ಚಿತ್ರ ★ ಚಿರಂಜೀವಿಲು ★

ಪಾತ್ರ - ಎನ್ ಟಿ ರಾಮರಾವ್, ಜಮುನ, ಗುಮ್ಮಡಿ, ಪಕೇಟಿ ಮುಂತಾದವರು

ಡೈರೆಕ್ಟರ್ ವೇದಾಂತಂ ರಾಘವಯ್ಯ

Estd 1948 — 16th BATCH

CITY TUTORIAL COLLEGE, MYSORE

(The oldest & the best of its kind)

Receives admission for the S S L C coaching class for Dec 56 Examn

Classes—7-15 to 11 15 a m – Fees Rs 6 P M

ಶಾಖಾಹಾರಿ ಊಟ ಮಾಡುವವರಿಗೆ ರಿಯಾಯಿತಿ ದರ ನಿರ್ಣಯಿಸಿ ದಿನೇ ರುಚಿರುಚಿಯಾದ ಊಟಕ್ಕೂ ಮತ್ತು ಆರೋಗ್ಯಕರವಾದ ಹಾಗೂ ಅನುಕೂಲವಾದ ರೂಮುಗಳಿಗೆ ಒಮ್ಮೆ ಭೇಟಿ ಕೊಡಿ ಭಾನುವಾರ ಸ್ಪೆಷಲ್ ಊಟವನ್ನು ಸಹ ನಿರ್ವಹಿಸಿರುತ್ತೆ.

★ ನ್ಯೂ ಚಾಮುಂಡೇಶ್ವರಿ ಕೆಫೆ

ಫೋನ್ 541 ಪ್ರೊಪ್ರೈಟರ್ ಸಿ ಬಿ ಎಂ ಚಂದ್ರಯ್ಯ ಇರ್ವಿನ್ ರಸ್ತೆ, ಮೈಸೂರು

ಟೆಲಿಫೋನ್ ನಂ. 792

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ ೬ ಪುಟ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ವರ್ತಕರಿಗೆ ಅತಿಮುಖ್ಯ

ಸಂಪುಟ : ೧೫] SADHVI : SUNDAY 12—8—1956 ಮೈಸೂರು : ಭಾನುವಾರ ೧೨—೮—೧೯೫೬ [ಸಂಚಿಕೆ : ೧೮

ಸೂಯೆಜ್ ಸಭೆ ಮುಂದೆ ಹಾಕಲು ಬ್ರಿಟನ್ನಿನ ತಿರಸ್ಕಾರ

ಕೃಷ್ಣರಾಜನಗರದಲ್ಲಿ ವಾಟರ್ ವರ್ಕ್ಸ್ ಆರಂಭೋತ್ಸವ

ಶ್ರೀಮನ್ಮಹಾರಾಜರ ಭಾಷಣ

ಮೈಸೂರು ೧೧

ಶ್ರೀಮನ್ಮಹಾರಾಜರು ನೆನ್ನೆ ಕೃಷ್ಣರಾಜನಗರದಲ್ಲಿ ಶ್ರೀ ಜಯಚಾಮರಾಜೇಂದ್ರ ವಾಟರ್ ವರ್ಕ್ಸ್‌ನ ಆರಂಭೋತ್ಸವವನ್ನು ನೆರವೇರಿಸಿದರು. ಸಮಾರಂಭದಲ್ಲಿ ಸಚಿವ ಶ್ರೀ ಹೆಚ್ ಎಂ ಚನ್ನಬಸಪ್ಪನವರೂ, ಜಿಲ್ಲಾಧಿಕಾರಿಗಳೂ, ಮಹಾರಾಜರ ಆಪ್ತ ಮತ್ತು ಹುಜೂರು ಕಾರ್ಯದರ್ಶಿಗಳೂ, ಎ ಡಿ ಸಿ ಶ್ರೀ ಮಹದೇವಯ್ಯನವರೂ ಭಾಗವಹಿಸಿದ್ದರು

ಪ್ರಾರ್ಥನೆ ಮತ್ತು ವಿ|| ಬಿ ದೇವೇಂದ್ರಪ್ಪನವರಿಂದ ಸಂಗೀತವಾದನಂತರ, ಪೌರಸಭಾಧ್ಯಕ್ಷ ಶ್ರೀ ಎಗ್ ಪುಟ್ಟಣ್ಣಯ್ಯನವರು ಮಹಾರಾಜರಿಗೆ ಬಿನ್ನವತ್ತಳೆಯನ್ನು ಅಂದವಾದ ಗಂಧದ ಕರಂಡದಲ್ಲಿಟ್ಟು ಒಪ್ಪಿಸಿದರು ೨೨ ವರ್ಷಗಳಿಂದ ಟವನ್ನಿನಲ್ಲಿ ಆದ ಪ್ರಗತಿಯನ್ನು ಬಿನ್ನವತ್ತಳೆಯಲ್ಲಿ ಸೂಚಿಸಿ, ನಗರಕ್ಕೆ ಸಕ್ಕರೆ ಕಾರ್ಖಾನೆ ಮತ್ತು ಮುನ್ಸೀಫ್-ಮ್ಯಾಜಿಸ್ಟ್ರೇಟರ ಕೋರ್ಟು ಬೇಕೆಂದು ಪ್ರಾರ್ಥಿಸಲಾಗಿತ್ತು

ರಾಜಪ್ರಮುಖರು ಉತ್ತರವಿತ್ತು, ಪೌರಸಭಾ ವರಮಾನವು ಹೆಚ್ಚಿರುವಂತೆ ಅದರ ಜವಾಬ್ದಾರಿಯೂ ಹೆಚ್ಚಿರುವುದೆಂದೂ, ನಿವಾಸಿಗಳಿಗೆ ನೀರು ಸರಬರಾಜಿನ ಏರ್ಪಾಡು ಮಾಡಿರುವುದು ಒಳ್ಳೆಯದೆಂದೂ, ಟವನ್ನಿನ ಅಭಿವೃದ್ಧಿಗಾಗಿ ಮಾಡಲಾಗಿರುವ ಕೋರಿಕೆಗಳನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲಿಸುವರೆಂದೂ ತಿಳಿಸಿದರು ಸಮಾರಂಭಕ್ಕೆ ಮುಂಚೆ ಮಹಾರಾಜರು ಅರ್ಕೇಶ್ವರ ದೇವಾಲಯದಲ್ಲಿ ಪೂಜೆ ಪುರಸ್ಕಾರಗಳನ್ನು ನೆರವೇರಿಸಿದರು

ವಿದ್ಯಾ ಪೀಠದ ಶಂಕುಸ್ಥಾಪನೆ

ಮಂಡ್ಯದ ಬಳಿ ಇರುವ ಶಿವಾರ ಗುಡ್ಡದ ಹತ್ತಿರ ಅಮೆರಿಕದ ಫೋರ್ಡ್ ಫೌಂಡೇಷನ್ನಿನ ಸಹಾಯದಿಂದ ಕಟ್ಟಿಸಲಾಗುವ ಮೊದಲನೇ ವಿದ್ಯಾ ಪೀಠದ ಶಂಕುಸ್ಥಾಪನೆಯನ್ನು ನಾಳೆ ಬೆಳಿಗ್ಗೆ ೧೦ ಗಂಟೆಗೆ ವಿದ್ಯಾ ಮಂತ್ರಿ ಶ್ರೀ ಎ ಜಿ. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಫೋರ್ಡ್ ಫೌಂಡೇಷನ್ ಸಂಸ್ಥೆಯ ಭಾರತದ ವಿದ್ಯಾಧಿಕಾರಿಗಳಾದ ಡಾ|| ಎಫ್. ಸಿ ವಾರ್ಡ್‌ರವರು ನೆರವೇರಿಸುವರು

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ೫ ಮುಖವೀಣೆ ೭-೧೫ ಮತ್ತು ೮-೧೫ ಎಂ ವಿ. ಲಲಿತ ದಾಸರ ಪದಗಳು ೭-೩೦ ಹಿಂದಿ ವಾರ ಮಧ್ಯಾಹ್ನ ೧೨ ಸಂಗೀತ ೧೨-೩೦ ವೀಣೆ ೧ ರಿಕಾರ್ಡು ೧-೫೦ ಮುಖವೀಣೆ ೬-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೫-೩೦ ಆರ್ ಕೆ. ಮಂಜುಳಾ-ವೀಣೆ ೬-೧೫ ಜನಪದ ಗೀತೆ ೭-೩೦ ಮತ್ತು ೮ ಅಜಿತ್ ಕುಮಾರ್ ಚಟರ್ಜಿ-ಹಿಂದಿ ಗೀತೆ ಮತ್ತು ೭ ಆನೆ ೮-೧೫ ಕ್ರೀಡಾ ವಿಮರ್ಶೆ. ೮-೩೦ ಸಂಗೀತ. ೯-೧೫ ನಮ್ಮ ಯೋಜನೆ-ಭಾಷಣ ೯-೩೦ ಹೆಚ್ ಎಗ್ ಶಿವಲಿಂಗಸ್ವಾಮಿ ಪಿಟೀಲು ನಕ ಕದಾ ಕಾಲಕ್ಷೇಪ

ನಗರದಲ್ಲಿ ಸ್ವಾತಂತ್ರ್ಯದಿನೋತ್ಸವ

ಮೈಸೂರು ೧೨

ನಗರದ ಪೌರಸಭೆಯ ಆಶ್ರಯದಲ್ಲಿ ಇದೇ ೧೫ನೇ ತಾರೀಕು ಬುಧವಾರ ಭಾರತದ ಸ್ವಾತಂತ್ರ್ಯ ದಿನೋತ್ಸವವು ನೆರವೇರುವುದು ಅದರ ಅಂಗವಾಗಿ ಟೌನ್‌ಹಾಲ್ ಮೈದಾನದಲ್ಲಿ ಅಂದು ಬೆಳಿಗ್ಗೆ ೯ ಗಂಟೆಗೆ ಧ್ವಜಾರೋಹಣ, ಪೋಲೀಸು, ಎನ್‌ಸಿಸಿ ಮತ್ತು ಗರ್ಲ್‌ಗೈಡು ಮುಂತಾದವರ ಮಾರ್ಚ್‌ಪಾಸ್ಟ್ ಆಗುವುದು ಸಂಜೆ ೬ ಗಂಟೆಗೆ ಟೌನ್‌ಹಾಲಿನಲ್ಲಿ ಬಹಿರಂಗ ಸಭೆಯು ನೆರವೇರುವುದು ವೈಸ್‌ಚಾನ್ಸೆಲರ್ ಶ್ರೀ ಕೆ ವಿ ಪುಟ್ಟಪ್ಪನವರು ಅಧ್ಯಕ್ಷತೆ ವಹಿಸುವರು

ಹೋಟೇಲು ಕೆಲಸಗಾರರ ಸಂಘದ ವಾರ್ಷಿಕೋತ್ಸವ

ರಾಜಧಾನಿಯ ಹೋಟೇಲು ಕೆಲಸಗಾರರ ಸಂಘದ ೯ನೇ ವಾರ್ಷಿಕೋತ್ಸವವು ನೆನ್ನೆ ಡಿ ಬನುಮಯ್ಯನವರ ಶಾಲೆಯಲ್ಲಿ ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನೆರವೇರಿತು ಬೆಳಿಗ್ಗೆ ಸಂಘದ ಆವರಣದಲ್ಲಿ ಧ್ವಜಾರೋಹಣ ಮತ್ತು ಸಂಜೆ ಸಮಾರಂಭವು ಜರುಗಿತು ಸಂಘದ ಅಧ್ಯಕ್ಷ ಶ್ರೀ ಕೆ ಸುಬ್ಬರಾಯರು ಸ್ವಾಗತ ಭಾಷಣ ಮಾಡಿದ ನಂತರ, ಪ್ರಜಾವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ ಎಂ ಎಗ್ ತಿಮ್ಮಯ್ಯನವರು ಆರಂಭ ಭಾಷಣ ಮಾಡಿ ಕಾರ್ಮಿಕರು ರಾಜಕೀಯದಿಂದ ದೂರವಿರಬೇಕೆಂದೂ, ಕಾರ್ಮಿಕರು ಮತ್ತು ಮಾಲೀಕರ ನಡುವೆ ಸೌಹಾರ್ದವಿರಬೇಕೆಂದೂ ತಿಳಿಸಿದರು. ಸಂಘದ ವರದಿಯನ್ನು ಒಪ್ಪಿಸಿದನಂತರ, ಸಂಘದ ಉಪಾಧ್ಯಕ್ಷ ಶ್ರೀ ಡಿ ಎಲ್ ಸೀತಾರಾಮರಾಯರು ಮಾತನಾಡಿ, ಹೋಟೇಲುಗಳನ್ನು ರಾಷ್ಟ್ರೀಕರಣ ಮಾಡಬೇಕೆಂದು ತಿಳಿಸಿದರು ಅಧ್ಯಕ್ಷರು ಮಾತನಾಡಿ ಹೋಟೇಲುಗಳ ರಾಷ್ಟ್ರೀಕರಣದ ಬದಲು ಸಹಕಾರ ತತ್ವದ ಮೇಲೆ ಅವುಗಳನ್ನು ನಡೆಸುವಂತಾಗಬೇಕೆಂದು ಅಭಿಪ್ರಾಯಪಟ್ಟರು ದಿವಂಗತ ಕೆ ಟಿ ಭಾಷ್ಯಂರವರ ನಿಧನಕ್ಕಾಗಿ ಸಂತಾಪ ಸೂಚಿಸುವ ಮತ್ತು ಸಂಘದ ಹೆಸರನ್ನು ಜಿಲ್ಲಾ ಹೋಟೇಲು ಕಾರ್ಮಿಕರ ಸಂಘವೆಂದು ಬದಲಾಯಿಸುವ ನಿರ್ಣಯಗಳನ್ನು ಅಂಗೀಕರಿಸಲಾಯಿತು ಕಾರ್ಯದರ್ಶಿ ಶ್ರೀ ಎಸ್ ಆರ್ ಶಾಸ್ತ್ರಿಯವರು ವಂದನಾರ್ಪಣೆ ಮಾಡಿದರು

ಕೃಷ್ಣ ಮತ್ತು ಗೋವಿಂದರೆಡ್ಡಿ ಮೇಲೆ ಕಳುವಿನ ಚಾರ್ಜು

ಬೆಂಗಳೂರು ಬಳಿ ಜೋಗಿಪಾಳ್ಯದ ಶ್ರೀ ವಿ ಚಂದ್ ಎಂಬ ವ್ಯಾಪಾರಿಗಳವರ ಮನೆಗೆ ನುಗ್ಗಿ ಕಳ್ಳತನ ನಡೆಸಿದರೆಂದು ಸಿವಿಲ್ ಪ್ರದೇಶದ ನ್ಯಾಯಾಧೀಶರು ಬೇಲೂರರ ಕೊಲೆ ಆಪಾದಿತರಾದ ಕೃಷ್ಣ ಮತ್ತು ಗೋವಿಂದರೆಡ್ಡಿಯವರ ಮೇಲೆ ಚಾರ್ಜು ಹೊರಿಸಿ ವಿಚಾರಣೆಯನ್ನು ಇದೇ ೨೫ನೇ ತಾರೀಖಿಗೆ ಮುಂದುವರಿಸಿರುವರು ಕೃಷ್ಣನು ಕೃತ್ಯ ನಡೆಸಿದುದಕ್ಕಾಗಿಯೂ, ಗೋವಿಂದರೆಡ್ಡಿಯು ಕೃಷ್ಣನಿಂದ ಪಡೆದ ಚಿನ್ನದ ಗಟ್ಟಿಗಳನ್ನು ವಿಲೇವಾರಿ ಮಾಡಲು ಸ್ವಯಂಪ್ರೇರಿತನಾಗಿ ಸಹಾಯ ಮಾಡಿದುದಕ್ಕಾಗಿಯೂ ಚಾರ್ಜು ಹೊರಿಸಲಾಗಿದೆ ಇಬ್ಬರು ಆಪಾದಿತರೂ ತಾವು ತಪ್ಪಿತಸ್ಥರಲ್ಲವೆಂದು ನುಡಿದಿದ್ದಾರೆ

ಅಹಮದಾಬಾದಿನಲ್ಲಿ ಪರಿಸ್ಥಿತಿ ಉತ್ತಮ

ಉತ್ತರ ಗುಜರಾತಿನ ಪಟ್ಟಣಗಳಿಗೆ ಗಲಭೆ ವ್ಯಾಪನೆ

ದ್ವಿಭಾಷಾ ಬೊಂಬಾಯಿ ಸಂಸ್ಥಾನಕ್ಕೆ ವಿರೋಧ ಸೂಚಿಸಿ ಅಹಮದಾಬಾದಿನಲ್ಲಿ ನೆನ್ನೆಯೂ ಸ್ವಲ್ಪ ಮಟ್ಟಿನ ಗಲಭೆಯಾಯಿತು ನೆನ್ನೆ ಗಲಭೆಯ ೭ನೇ ದಿನ ಪೊನ್ನೆ ಪೋಲೀಸರು ಆರು ಬಾರಿ ಗುಂಡು ಹಾರಿಸಿದರು ಇಬ್ಬರು ಬಾಲಕರು ಮೃತಪಟ್ಟರು ಪ್ರದರ್ಶನಕಾರರು ಕಾಂಗ್ರೆಸ್ ಮುಖಂಡರ ನಿವಾಸಗಳ ಮೇಲೆ ಧಾಳಿ ಮಾಡಿದರಲ್ಲದೆ ಮಹಾತ್ಮಾ ಗಾಂಧಿಯವರು ದಕ್ಷಿಣ ಆಫ್ರಿಕದಿಂದ ಹಿಂದಿರುಗಿದನಂತರ ಮೊಟ್ಟಮೊದಲು ಸ್ಥಾಪಿಸಿದ ಆಶ್ರಮಕ್ಕೆ ಕಲ್ಲು ಬೀರಿದರು ನೆನ್ನೆ ಪೌರಸಭಾ ಶಾಲೆಗೆ ನುಗ್ಗಿ ಅಲ್ಲಿನ ಮೇಜುಗಳನ್ನು ಹೊರಗೆ ಹಾಕಿ ಬೆಂಕಿ ಹಚ್ಚಲಾಯಿತು ಪೋಲೀಸರು ಅಶ್ರುವಾಯು ಮತ್ತು ಗುಂಡಿನ ಪ್ರಯೋಗ ಮಾಡಿದರು ಅದೇ ಪ್ರದೇಶದಲ್ಲಿ ಮತ್ತೊಂದು ಕಡೆಯೂ ಗುಂಡನ್ನು ಹಾರಿಸಲಾಯಿತು ಕರ್ಫ್ಯೂ ಉಲ್ಲಂಘನೆಗಾಗಿ ನಗರದಲ್ಲಿ ಇದುವರೆಗೆ ೫೫೦ ಮಂದಿಯನ್ನು ಬಂಧಿಸಲಾಗಿದೆ

ಗಲಭೆಯು ಉತ್ತರ ಗುಜರಾತಿನ ಊರುಗಳಿಗೆ ಹರಡಿ ರೈಲು ಕಂಬಿಗಳನ್ನು ನಾಶಪಡಿಸಿ, ರೈಲುಗಳ ಮೇಲೆ ಕಲ್ಲು ಬೀರಿದ ಪ್ರಸಂಗಗಳು ವರದಿಯಾಗಿವೆ ಅಹಮದಾಬಾದಿನ ಮೂಲಕ ಹೋಗುವ ರೈಲುಗಳಿಗೆಲ್ಲಾ ಕಾವಲು ಹಾಕಲಾಗಿದೆ.

ನಾದಿಯಾಡ್ ಎಂಬಲ್ಲಿ ೨,೦೦೦ ಜನರ ಗುಂಪಿನ ಮೇಲೆ ನೆನ್ನೆ ಗುಂಡು ಹಾರಿಸಲಾಗಿ, ಒಬ್ಬನು ಸತ್ತು, ೬ ಮಂದಿಗೆ ಗಾಯವಾಯಿತು ಅಲ್ಲಿ ಕರ್ಫ್ಯೂವನ್ನು ವಿಧಿಸಲಾಯಿತು.

ಬರೋಡಾ ನಗರದಲ್ಲಿ ಪೋಲೀಸು ಗೇಟ್ ಮುತ್ತುವರಿದ ೫,೦೦೦ ಜನರನ್ನು ಚದುರಿಸಲು ಲಾಠಿ ಪ್ರಹಾರ ಮಾಡಿ ಆಕಾಶಕ್ಕೆ ಗುಂಡು ಹಾರಿಸಲಾಯಿತು ಮೆಹಸಾನಾ ಎಂಬ ಊರಿನಲ್ಲಿ ೧,೦೦೦ ಜನರ ಗುಂಪಿನ ಮೇಲೆ ಲಾಠಿ ಪ್ರಹಾರವಾಯಿತು ಜನರು ಪೋಲೀಸು ಠಾಣೆಗಳು ಮತ್ತು ಕಾಂಗ್ರೆಸ್ ಮುಖಂಡರ ಮನೆಗಳ ಮೇಲೆ ಧಾಳಿ ಮಾಡಿದರು

ಅಹಮದಾಬಾದಿನಲ್ಲಿ ಪರಿಸ್ಥಿತಿ ಉತ್ತಮವಾಗುತ್ತಿರುವುದಾಗಿ ಅಧಿಕೃತ ಪ್ರಕಟಣೆ ತಿಳಿಸಿದೆ. ನೆನ್ನೆ ಇದೇ ಮೊಟ್ಟಮೊದಲಾಗಿ ಪೋಲೀಸರ ಮೇಲೆ ದ್ರಾವಕ ತುಂಬಿದ ಬಲ್ಬುಗಳನ್ನು ಎಸೆದು ಇಬ್ಬರಿಗೆ ಗಾಯವಾಯಿತು

ಮಹಿಳೆಯನ್ನು ನಿರ್ಬಂಧಪಡಿಸಿದ್ದಕ್ಕಾಗಿ ಮೊಕದ್ದಮೆ

ರಾಜಧಾನಿಯ ಕಾರ್ಲ್‌ಟನ್ ಹೋಟೇಲು ಮಾಲೀಕರಾದ ಶ್ರೀ ಎಸ್ ಜೆ ಮೈಸೂರ್‌ವಾಲ, ಅವರ ಪತ್ನಿ ಮತ್ತು ಇನ್ನೊಬ್ಬರು ಕಳೆದ ತಿಂಗಳು ೮ನೇ ತಾರೀಖು ಶ್ರೀಮತಿ ಬ್ಯಾಂಕ್ಸ್ ಎಂಬುವರನ್ನು ತಮ್ಮ ಹೋಟೇಲಿನಲ್ಲಿ ಅಕ್ರಮವಾಗಿ ನಿರ್ಬಂಧಪಡಿಸಿದ್ದರೆಂದು ಲಷ್ಕರ್ ಪೋಲೀಸರು ಅವರುಗಳ ಮೇಲೆ ನೆನ್ನೆ ನಗರದ ದ್ವಿತೀಯ ನ್ಯಾಯಾಧೀಶರ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿರುತ್ತಾರೆ

ಲಂಡನ್ ಸಮ್ಮೇಳನ ಮುಂದು ವರಿಸಲು ಬ್ರಿಟನ್ನಿನ ತಿರಸ್ಕಾರ

ಸೂಯೆಜ್ ಬಗ್ಗೆ ಲಂಡನ್ನಿನ ಸಮ್ಮೇಳನದ ಸಂಬಂಧವಾಗಿ ಭಾರತವು ಮಾಡಿರುವ ಸಲಹೆಗಳನ್ನು ಒಪ್ಪಲು ಸಾಧ್ಯವಿಲ್ಲವೆಂದು ಬ್ರಿಟನ್ನು ಭಾರತಕ್ಕೆ ತಿಳಿಸಿದೆ ಸಮ್ಮೇಳನವನ್ನು ಕೆಲ ತಿಂಗಳು ಅನಂತರಕ್ಕೆ ಮುಂದುವರಿಸುವಂತೆಯೂ, ಇನ್ನೂ ೨೨ ರಾಷ್ಟ್ರಗಳನ್ನು ಆಹ್ವಾನಿಸುವಂತೆಯೂ ಭಾರತವು ಸಲಹೆ ಮಾಡಿದ್ದಿತು. ಸಮ್ಮೇಳನಕ್ಕೆ ಆಹ್ವಾನವನ್ನು ಗ್ರೀಸು ತಿರಸ್ಕರಿಸಿದೆ ಈಜಿಪ್ಟು ಈ ದಿನ ಈ ಬಗ್ಗೆ ತನ್ನ ನಿಲುವನ್ನು ತಿಳಿಸುವುದು ಮತ್ತು ಆಹ್ವಾನಿತ ರಾಷ್ಟ್ರಗಳಲ್ಲೂ ಅವರಲ್ಲಿ ಭಾಗವಹಿಸುವವು ಸೂಯೆಜ್ ಕಾಲುವೆ ಮೇಲೆ ಅಂತರರಾಷ್ಟ್ರೀಯ ಅಧಿಕಾರ ಮಂಡಲಿ ಸ್ಥಾಪನೆ ಸಲಹೆಗೆ ಭಾರತವು ಒಪ್ಪುವುದಿಲ್ಲವೆಂದು ಅಮೆರಿಕದಲ್ಲಿರುವ ಭಾರತದ ರಾಯಭಾರಿ ಜಿ ಎಲ್. ಮೆಹತಾರವರು ಅಮೆರಿಕಾ ವಿದೇಶಾಂಗ ಮಂತ್ರಿ ಡಲೆಸರಿಗೆ ತಿಳಿಸಿರುತ್ತಾರೆ

ಫೆಬ್ರವರಿ ೧ ರಿಂದ ೧೫ ದಿನ ಸಾರ್ವತ್ರಿಕ ಚುನಾವಣೆ

ಬರುವ ಫೆಬ್ರವರಿ ೧ರಿಂದ ೧೫ನೇ ತಾರೀಖಿನವರೆಗೆ ರಾಷ್ಟ್ರವ್ಯಾಪಕ ಮಹಾ ಚುನಾವಣೆಗಳನ್ನು ನಡೆಸಲು ತಾತ್ಕಾಲಿಕ ಕಾರ್ಯಕ್ರಮ ಪಟ್ಟಿಯನ್ನು ಹಾಕಲಾಗಿದೆ

ಅಮೆರಿಕನ್ ಅಧಿಕಾರಿಗಳಿಗೆ ನಗರದ ಕಾರ್ಮಿಕ ನಾಯಕರ ಸ್ವಾಗತ

ಮದ್ರಾಸಿನ ಅಮೆರಿಕನ್ ರಾಯಭಾರ ಕಛೇರಿಯ ಡೇವಿಡ್ ಬರ್ಗೆಸ್‌ರವರು ಭಾರತ ಅಮೆರಿಕಾ ತಾಂತ್ರಿಕ ಸಹಕಾರ ಸಂಸ್ಥೆಯ ಮತ್ತು ದೆಹಲಿ ರಾಯಭಾರಿ ಕಛೇರಿಯ ಕಾರ್ಮಿಕ ಶಾಖಾಧಿಕಾರಿಗಳೊಡನೆ ಬೆಂಗಳೂರಿನಿಂದ ಕೊಡೈಕನಾಲಿಗೆ ತೆರಳುತ್ತಾ ಮಾರ್ಗದಲ್ಲಿ ಮೊನ್ನೆ ನಗರಕ್ಕೆ ಆಗಮಿಸಿದಾಗ ಅವರನ್ನು ಮೆಟ್ರೋಪೋಲ್ ಹೋಟೇಲಿನಲ್ಲಿ ನಗರದ ಐ ಎನ್ ಟಿ ಯು ಸಿ. ಮತ್ತಿತರ ಕಾರ್ಮಿಕ ಸಂಸ್ಥೆಗಳ ಪ್ರತಿನಿಧಿಗಳು ಸ್ವಾಗತಿಸಿದರು

ಭಂಡಾರಕೇರಿ ಸ್ವಾಮಿಗಳವರ ಚಾತುರ್ಮಾಸ್ಯ ಸಂಕಲ್ಪ

ಉಡುಪಿ ಭಂಡಾರಕೇರಿ ಮಠಾಧೀಶರಾದ ಶ್ರೀ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರು ಮದ್ರಾಸಿನ ದಾಸಪ್ರಕಾಶ ಸೌಧದಲ್ಲಿ ಶ್ರೀ ಸೀತಾರಾಮರಾಯರ ಕೋರಿಕೆ ಮೇರೆ ತಮ್ಮ ಚಾತುರ್ಮಾಸ್ಯ ಸಂಕಲ್ಪವನ್ನು ಆರಂಭಿಸಿರುವರು ವಿದ್ವಾಂಸರಿಂದ ವೇದ ಶಾಸ್ತ್ರ ಪಾರಾಯಣಗಳೂ, ಮಂತ್ರ ಜಪಾದಿಗಳೂ, ಪೂಜಾದಿಗಳೂ, ಶ್ರೀ ಸೀತಾರಾಮರಾಯರು ಮತ್ತು ಅವರ ಮಕ್ಕಳ ನೃತ್ಯಗೀತೆ, ಭಜನೆ ಸೇವೆಗಳೂ ನಡೆಯುತ್ತಿವೆ

ವೃತ್ತಿ ಶಿಕ್ಷಣಾಲಯದ ವಿದ್ಯಾರ್ಥಿ ಸಂಘ

ರಾಜಧಾನಿಯಲ್ಲಿರುವ ವೃತ್ತಿ ಶಿಕ್ಷಣಾಲಯ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ ೬-೧೫ ಗಂಟೆಗೆ ಕೇಂದ್ರ ಆಹಾರ ಸಂಶೋಧನಾಲಯದ ಡಾ|| ಹೆಚ್ ಎ ಬಿ ಪಾರ್ಪಿಯಾರವರು ಮಾಡುವರು. ಪ್ರಿನ್ಸಿಪಾಲ್ ಸೂಪರಿಂಟೆಂಡೆಂಟರಾದ ಶ್ರೀ ಸಿ ಮುನಿಯಪ್ಪನವರು ಅಧ್ಯಕ್ಷತೆ ವಹಿಸುವರು

ವಾರ ಭವಿಷ್ಯ

ತಾ॥ ೧೨-೮-೫೬ ರಿಂದ ೧೮-೮-೫೬ ರವರೆಗೆ

ಮೇಷ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಅಡ್ಡಿ ಉದ್ಯೋಗದಲ್ಲಿ [illegible] ಕೂಡ ಉದ್ದೇಶಗಳಿಗೆ ಕೈಹಾಕಬೇಡಿ

ವೃಷಭ - ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸಮಾಧಾನ [illegible] ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸಂಭವ

ಮಿಥುನ — ಆರೋಗ್ಯ ತೃಪ್ತಿಕರ ಆರ್ಥಿಕ ಸ್ಥಿತಿ ಸಾಧಾರಣ ಶತ್ರುಗಳಿಂದ ತೊಂದರೆ ಸ್ನೇಹಿತರಿಂದ ವಂಚನೆ. ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ಉತ್ತಮ ಪರಿಸ್ಥಿತಿ

ಕರ್ಕ — ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ಘಟನೆಗಳು ಉದ್ಯೋಗದಲ್ಲಿ ನಿರುತ್ಸಾಹ ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ

ಸಿಂಹ. ಆರೋಗ್ಯ ಚೆನ್ನಾಗಿರಲಾರದು [illegible] ಪ್ರಗತಿ [illegible] ನೌಕರಿಯಲ್ಲಿ [illegible]

[illegible] ಪರಿಸ್ಥಿತಿ [illegible] ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಉದ್ಯೋಗದಲ್ಲಿ ಪ್ರಗತಿ ಆದೀತು [illegible] ಎಚ್ಚರಿಕೆಯಿಂದಿರಿ

ತುಲಾ — ಆರೋಗ್ಯ ತೃಪ್ತಿಕರ ಆರ್ಥಿಕ ಸ್ಥಿತಿ ಕ್ರಮವಾಗಿ [illegible] ಸಾಮಾಜಿಕ ಕ್ಷೇತ್ರದಲ್ಲಿ [illegible] ವ್ಯಾಪಾರ ವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ

ವೃಶ್ಚಿಕ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರ ವ್ಯವಹಾರಗಳಲ್ಲಿ [illegible] ಉದ್ಯೋಗದಲ್ಲಿ ಉನ್ನತಿ ಕುಟುಂಬದಲ್ಲಿ ತೃಪ್ತಿಕರ ಪರಿಸ್ಥಿತಿ ಪ್ರವಾಸ ಸಂಭವ

ಧನು ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಪ್ರವಾಸ ಸುಖಕರವಾಗಿರುವುದು

ಮಕರ ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಶತ್ರುಗಳಿಂದ ತೊಂದರೆ ವ್ಯಾಪಾರ ವ್ಯವಹಾರಗಳಲ್ಲಿ ಅಡ್ಡಿ ನೌಕರಿಯಲ್ಲಿ ನಿರುತ್ಸಾಹ ಕುಟುಂಬದಲ್ಲಿ ಅಶಾಂತಿ

ಕುಂಭ — ಆರೋಗ್ಯ ಅತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಆಪ್ತರಿಂದ ವಂಚನೆ ಉದ್ಯೋಗದಲ್ಲಿ ಪ್ರಗತಿ ಕಮ್ಮಿ ಪ್ರವಾಸ ಯೋಗ

ಮೀನ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಮಂಗಳ ಕಾರ್ಯಗಳು ಜರುಗುವುವು

ಈಜಿಪ್ಟಿನ ಮೇಲೆ ಕಾರ್ಯಾಚರಣೆ ನಡೆದರೆ ಸಿರಿಯದ ಪ್ರತೀಕಾರ

ಈಜಿಪ್ಟಿನ ಮೇಲೆ ಸಾಮ್ರಾಜ್ಯಶಾಹಿ ರಾಷ್ಟ್ರಗಳು ಕ್ರಮ ಜರುಗಿಸಿದರೆ ಸಿರಿಯಾ ಮೂಲಕ ಹೋಗುವ ಎಣ್ಣೆಯನ್ನು ತಡೆಗಟ್ಟುವುದಾಗಿ ಸಿರಿಯದ ಎಣ್ಣೆ ಕೆಲಸಗಾರರು ತಿಳಿಸಿರುತ್ತಾರೆ ಅಲ್ಲಿ ಇಂಗ್ಲೆಂಡ್ ಮತ್ತು ಅಮೆರಿಕಾ ಎಣ್ಣೆ ಪೈಪುಗಳಿವೆ.

ಸೂಯೆಜ್ ಕಾಲುವೆ ಬಗ್ಗೆ ಚರ್ಚಾಕೂಟ

ಮಹಾರಾಜಾ ಕಾಲೇಜಿನ ಡಿಬೇಟಿಂಗ್ ಸೊಸೈಟಿ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಜೂನಿಯರ್ ಬಿ ಎ. ಸಭಾಂಗಣದಲ್ಲಿ 'ಸೂಯೆಜ್ ಕಾಲುವೆ ರಾಷ್ಟ್ರೀಕರಣದ ವಿಷಯದಲ್ಲಿ ಭಾರತವು ಸಂಪೂರ್ಣವಾಗಿ ತಾಟಸ್ಥ್ಯದಿಂದಿರುವುದು ಉತ್ತಮ' ಎಂಬ ವಿಷಯವಾಗಿ ಅಧ್ಯಾಪಕರು ಮತ್ತು ವಿದ್ಯಾರ್ಥಿಗಳ ನಡುವೆ ಚರ್ಚಾ ಕೂಟವು ಏರ್ಪಾಡಾಗಿದೆ ಪ್ರೊ॥ ಸಿ ಡಿ ನರಸಿಂಹಯ್ಯನವರು ಅಧ್ಯಕ್ಷತೆ ವಹಿಸುವರು

ದೆಹಲಿಯಲ್ಲಿ ಏಕಪಾತ್ರ ಕನ್ನಡ ನಾಟಕಾಭಿನಯ

ಕಳೆದ ಭಾನುವಾರ ದೆಹಲಿ ಕರ್ನಾಟಕ ಸಂಘದ ಆಶ್ರಯದಲ್ಲಿ ಸಂಘದ ಸದಸ್ಯರು ಮಲ್ಲಿಗೆ ಚಪ್ಪರ ಮತ್ತು ತಗಡೂರು ತಗಡೇದಪ್ಪ ಎಂಬ ಏಕ ಪಾತ್ರ ನಾಟಕಗಳನ್ನೂ ಮತ್ತು ಶ್ರೀ ಶ್ರೀಕಂಠದವರ 'ಕಾಶ್ಮೀರ ಯಾತ್ರೆ' ಎಂಬ ಸಾಮಾಜಿಕ ನಾಟಕವನ್ನೂ ಅಭಿನಯಿಸಿದರು ಶ್ರೀ ಸುಬ್ಬಣ್ಣಯ್ಯನವರು ಆಧುನಿಕ ಕನ್ನಡ ಕಾವ್ಯವಾಚನ ಮಾಡಿದರು ಕಾರ್ಯದರ್ಶಿಗಳ ವಂದನಾರ್ಪಣೆಯೊಡನೆ ಕಾರ್ಯಕ್ರಮ ಮುಕ್ತಾಯಗೊಂಡಿತು

ವ್ಯಾಯಾಮದ ಕಾಲೇಜನ್ನು ತೆರೆಯಲು ನಿರ್ಧಾರ

ವ್ಯಾಯಾಮ ಶಿಕ್ಷಣ ಸಲಹಾ ಸಮಿತಿಯ ಸೂಚನೆ ಮೇರೆ ಭಾರತ ಸರ್ಕಾರದವರು ಪದವೀ ತರಗತಿಗಳುಳ್ಳ ವ್ಯಾಯಾಮ ಶಿಕ್ಷಣದ ರಾಷ್ಟ್ರೀಯ ಕಾಲೇಜನ್ನು ಸ್ಥಾಪಿಸಲು ನಿರ್ಧರಿಸಿರುತ್ತಾರೆ ಅಲ್ಲಿ ವ್ಯಾಯಾಮ ಶಿಕ್ಷಣದ ತರಗತಿಗಳು ಏರ್ಪಡುವುವು ಸಂಶೋಧನೆ ಸೌಕರ್ಯಗಳನ್ನೂ ನಿರ್ಮಿಸಲಾಗುವುದು

ಸ್ವಾಗತ ಸಮಾರಂಭ

ಮೈಸೂರು ಮೆಡಿಕಲ್ ಕಾಲೇಜಿನ ಡಾ॥ ಸಿ ಸುಬ್ರಹ್ಮಣ್ಯನವರು ತಮ್ಮ ಕುಮಾರಿ ಸೌ॥ ಶಾರದಾರವರನ್ನು ಪೂನಾ ಸಂಪೇಟೆಯ ಮುರಾಮತ್ತು ಸಬ್ ಡಿವಿಜನ ಅಧಿಕಾರಿಗಳಾದ ಶ್ರೀ ಬಿ ಲಕ್ಷ್ಮೀನಾರಾಯಣರಿಗೆ ಕೊಟ್ಟು ಕಳೆದ ಗುರುವಾರ ವಿವಾಹ ನಡೆಸಿದ ಸಂಬಂಧದಲ್ಲಿ ಸಂಜೆ ಶ್ರೀರಾಮಪೇಟೆಯ ವಾಸದ ನಿಲಯದಲ್ಲಿ ಸ್ವಾಗತ ಸಮಾರಂಭವನ್ನು ಏರ್ಪಡಿಸಿ ಅನೇಕ ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಮೈಸೂರು ಪೇಟೆ ಧಾರಣೆ

	ರೂ ಯಿಂದ	ರೂ ವರೆಗೆ
ಭತ್ತ ಬಂಗಾರ ಮುತ್ತು		
ಕೊಯಮತ್ತೂರು ಸಣ್ಣ	೩೫ ೦ ೦	೩೫ ೧೪ ೦
ರತ್ನಚೂಡಿ	೩೨ ೦ ೦	೩೪ ೦ ೦
ಕಾರು ಭತ್ತ	೨೮ ೦ ೦	೨೯ ೦ ೦
ರಾಗಿ	೨೬ ೪ ೦	೨೯ ೧೪ ೦
ಕಡಲೆಕಾಯಿ	೯೩ ೨ ೦	೨೦ ೧೦ ೦
ಎಳ್ಳು	೬೬ ೮ ೦	೮೨ ೮ ೦
ಹಿಪ್ಪೆ	೧೮ ೬ ೦	
ಹಿಪ್ಪೆ ಬೀಜ	೩೮ ೧೪ ೦	
ಹುರುಳಿ	೩೨ ೦ ೦	೩೨ ೬ ೦
ಹೆಸರು	೩೮ ೦ ೦	೪೧ ೦ ೦
ಹಲಸಂದೆ	೪೯ ೧೨ ೦	೫೧ ೨ ೦
ಉದ್ದು	೬೫ ೧೨ ೦	
ಬೀಗಕಾಯಿ	೯ ೦ ೦	೯ ೩ ೦
ಹುಣಸೇಹಣ್ಣು	೩ ೬ ೦	೫ ೧೨ ೦
ಮೆಣಸಿನಕಾಯಿ	೯ ೦ ೦	೯೩ ೧೦ ೦
ತೆಂಗಿನಕಾಯಿ ೧೦೦೦	೧೩೯ ೦ ೦	೨೧೨ ೮ ೦

ಸೂಯೆಜ್ ಸಮ್ಮೇಳನದ ಆಹ್ವಾನಕ್ಕೆ ರಷ್ಯದ ಒಪ್ಪಿಗೆ

ಸೂಯೆಜ್ ಕಾಲುವೆ ಸಂಬಂಧವಾಗಿ ನಡೆಯುವ ಲಂಡನ್ ಸಮ್ಮೇಳನಕ್ಕೆ ಹೋಗಲು ರಷ್ಯ ಒಪ್ಪಿದೆ ಆದರೆ ಈ ತಿಂಗಳು ಅಷ್ಟರೊಳಗೆ ಸಭೆಯನ್ನು ಮುಂದೆ ಹಾಕುವಂತೆ ಅದು ಕೋರಿದೆ ಚೀಣವೂ ಸೇರಿ [illegible] ರಾಷ್ಟ್ರಗಳನ್ನು ಆಹ್ವಾನಿಸುವಂತೆಯೂ ಅದು ಸೂಚಿಸಿದೆ

Sri Rama Sahaya Sangha
D Subbiah Road, Mysore
Excellent Coaching classes for
S. S. L. C. Students
By expert teachers daily between
8 & 10 A M and 6 & 8 P M.
Join immediately

ಬಿಸಿ ಮತ್ತು ರುಚಿ !
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್,
ಭಾನುವಾರ
ಸ್ಪೆಷಲ್ ಪೊಟೆಟೊ ಬ್ರೆಡ್
ಮನೆಗಳಿಗೆ ಸಪ್ಲೈ ಮಾಡಲಾಗುತ್ತೆ
ಶ್ರೀ ಕೃಷ್ಣಾ ಬೇಕರಿ
ಡಿ ಸುಬ್ಬಯ್ಯಾ ರೋಡ್, ಮೈಸೂರು

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು
ವಿಶ್ವ ವಿಖ್ಯಾತರಾಗಿರುವ
ನವರತ್ನ—ಕಲ್ಪ
ದಿವ್ಯ ಔಷಧವನ್ನು ಕಂಡುಹಿಡಿದಿರುವ
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 590
— ಭೇಟಿಯ ಕಾಲ —
ಬೆಳಗ್ಗೆ 7 30 ರಿಂದ 12 30 ಮತ್ತು
ಮಧ್ಯಾಹ್ನ 4 ರಿಂದ 7 30
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನ—ಕಲ್ಪ
ಉಪಯೋಗಗಳು
ಇದು ವಜ್ರ, ಕೆಂಪು, ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ, ಪದ್ಮರಾಗ ಮತ್ತು ಪ್ರಶಸ್ತ ಬೆಲೆ ಬಾಳುವ 9 ಅಮೂಲ್ಯ ಹರಳುಗಳ ಸಂಯೋಗ ಇದರಿಂದ ನರಗಳ ದೌರ್ಬಲ್ಯ, ಅಜೀರ್ಣ ಸಂಬಂಧದ ವ್ಯಾಧಿಗಳು ಬಿಳೀ ತೊನ್ನು, ಮೂಲವ್ಯಾಧಿ, ಆಸ್ತಮಾ, ಬಹುಮೂತ್ರ, ಅಸ್ತಮಾ ಮತ್ತು ನಿಮ್ಮ ಇತರ ಎಲ್ಲಾ ರೋಗಗಳ ಹಾಗೂ ಸ್ತ್ರೀಯರ ಖಾಯಿಲೆಗಳು ಸಂಪೂರ್ಣವಾಗಿ ಗುಣಹೊಂದುವುವು ಅತ್ಯುತ್ತಮ ಆರೋಗ್ಯದಾಯಕ ಔಷಧಿ ಇದೊಂದೇ
ವಿಶಾಖಪಟ್ಟಣ, ರಾಜಮಹೇಂದ್ರಿ. ಗುಂಟೂರು ಬೆಜವಾಡ, ಮದ್ರಾಸು, ಬೆಂಗಳೂರು, ಕೊಯಮತ್ತೂರು ಮಧುರೆ, ತಿರುಚಿನಾಪಳ್ಳಿ, ತಂಜಾವೂರು, ಸೇಲಂ ಕಲ್ಲಿಕೋಟೆ, ಎರ್ನಾಕುಲಂ ಕೊಟ್ಟಾಯಂ ತ್ರಿವೇಂಡ್ರಂ, ತಿರುನೆಲ್ವೇಲಿ ಪಾಂಡಿಚೆರಿ, ಕಡಲೂರು, ಕುಂಭಕೋಣಂ, ವೆಲ್ಲೂರ್ ಮತ್ತು ಹೈದರಾಬಾದುಗಳ ವಿಳಾಸ ಮತ್ತು ಇತರ ಉಚಿತ ಸಾಹಿತ್ಯಗಳಿಗೆ ಬರೆಯಿರಿ :—
NAVRATNA KALPA PHARMACY,
JULLUNDUR CITY (India)

Only
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO,
Chemists & Druggists
71/1 A. S Street,
BANGALORE 2

ಸ್ವಾತಂತ್ರ್ಯೋತ್ಸವ ರಿಯಾಯಿತಿ
ಗಾಂಧೀಜಿ
ಮತ್ತು
ಆಚಾರ್ಯ ವಿನೋಬ
ಇವರ ಅಮೂಲ್ಯ ಕೃತಿಗಳು
(ಇಂಗ್ಲಿಷ್ ಮತ್ತು ಕನ್ನಡದಲ್ಲಿ)
ಮತ್ತು ಇತರ ಸರ್ವೋದಯ ಸಾಹಿತ್ಯ
ಗ್ರಂಥಗಳಿಗೆ
ತಾ॥ 15-8-56 ರಿಂದ 27-8-56ರವರೆಗೆ
ಶೇಕಡ 12½ ರಿಯಾಯಿತಿಯುಂಟು
ಚೇತನ ಪುಸ್ತಕಾಲಯ,
ಮೈಸೂರು

GLOBE TUTORIAL COLLEGE,
Sadvidya Patashala Buildings, Mysore.
Provides excellent coaching by experienced teachers
For S S L C 1956
Join at once *Time 7 30 to 10-30 A M*

Estd 1948 16th BATCH
CITY TUTORIAL COLLEGE, MYSORE
(The oldest & the best of its kind)
Fresh admission to the S S L C coaching class
for Dec '56 Exam
Classes 7 15 to 11 15 a m —Fees Rs 6 P M

THE NATIONAL LEAGUE
Sanskrit Buildings Mysore
Offers excellent Coaching for S. S. L. C. Students
★ Special Coaching for Primary School Teachers,
★ Classes etc in full swing
JOIN AT ONCE
Timings 5-30 P M to 8-30 P M
R Rajagopal Iyengar,
Organiser

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
15-8-56 ನೇ : ಬುಧವಾರದಿಂದ : ಅಮೋಘ ಪ್ರಾರಂಭ
ದಿನವಹಿ 3 ಪ್ರದರ್ಶನಗಳು
[illegible] ಜೆಮಿನಿ ಗಣೇಶ್, ಜಮುನ, ಸಾವಿತ್ರಿ, ಬಾಲಸರಸ್ವತಿ, ಪಕ್ಕೀಟ [illegible] ಪಾತ್ರವಹಿಸಿರುವ, ವಿನೋದಾರವರ ತೆಲುಗು ಚಿತ್ರ
★ **ಚಿರಂಜೀವಿಲು** ★
— ಡೈರೆಕ್ಟರ್ —
ವೇದಾಂತ ರಾಘವಯ್ಯ

Edited, Printed and Published by A R Nagarajan at Sadhvi Press D Subbaiah Road, Mysore

ಟೆಲಿಫೋನ್ ನಂ. 792

ಚಂದಾದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಸಂಪುಟ : ೧೫] SADHVI : MONDAY 13—8—1956 ಸೋಮವಾರ : ಸೆಪ್ಟೆಂಬರ [illegible] [ಸಂಚಿಕೆ : [illegible]

ಲಂಡನ್ ಸಮ್ಮೇಳನಕ್ಕೆ ಹೋಗಲು ಈಜಿಪ್ಟಿನ ನಿರಾಕರಣೆ

ಏಳು ಮಂದಿ ಆಯುರ್ವೇದ ಹಿರಿಯ ಪಂಡಿತರಿಗೆ ಸನ್ಮಾನ

ಬೆಂಗಳೂರು ೧೧

ಸುಪ್ರಸಿದ್ಧ ಹಿರಿಯ ಆಯುರ್ವೇದ ವೈದ್ಯರುಗಳಾದ ಶ್ರೀಗಳು ಪಾಳ್ಯದ ವೆಂಕಟಾಚಲ ಪಂಡಿತರು, ಪಟ್ಟಣಗೆರೆ ಸೂರ್ಯನಾರಾಯಣಶಾಸ್ತ್ರಿಗಳು, ಪಂಡಿತ ಚಂದ್ರಭಾಗಸಿಂಗ್‌ರವರು, ಬಿ ಪಿ ಪಂಡಿತರು, ಅಗರಂ ವೆಂಕಟರಾಮ ಪಂಡಿತರು, ಎಲ್. ಎಲ್ ಭಟ್ಟಾಚಾರ್ಯರು ಮತ್ತು ನಂದಿ ಸುಬ್ಬಣ್ಣಾಚಾರ್ಯರು ಈ ಏಳು ಮಹನೀಯರುಗಳನ್ನು ಸನ್ಮಾನಿಸಲು ಸಂಸ್ಥಾನದ ಆಯುರ್ವೇದ ಕಾಂಗ್ರೆಸ್ಸಿನವರು ಮೊನ್ನೆ ಇಲ್ಲಿನ ಕೃಷ್ಣರಾಜೇಂದ್ರ ಪರಿಷನ್ಮಂದಿರದಲ್ಲಿ ಸಮಾರಂಭವೊಂದನ್ನು ಏರ್ಪಡಿಸಿದ್ದರು. ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಅಧ್ಯಕ್ಷತೆ ವಹಿಸಿದ್ದರು

ವೇದಘೋಷಪೂರ್ವಕ ಸ್ವಾಗತದಿಂದ ಕಾರ್ಯಕಲಾಪಗಳು ಆರಂಭವಾದುವು

ಮೈಸೂರಿನ ಆಯುರ್ವೇದ ವೈದ್ಯರಾದ ಶ್ರೀ ಕೆ ಪಿ ಪುರಾಣಿಕರು ಅತಿಥಿಗಳ ಪರಿಚಯ ಮಾಡಿಕೊಟ್ಟು, ಅವರುಗಳು ಆಯುರ್ವೇದದ ಸಪ್ತರತ್ನಗಳೆಂದೂ, ಸಪ್ತ ಋಷಿಗಳೆಂದೂ ಹೇಳಿದರು

ಮುಖ್ಯ ಮಂತ್ರಿಗಳಿಗೆ ಮಾನ ಪತ್ರವನ್ನೂ, ಅತಿಥಿಗಳಿಗೆ ಸನ್ಮಾನ ಪತ್ರಗಳನ್ನೂ ಅರ್ಪಿಸಲಾಯಿತು ಅವರುಗಳಿಗೆ ಪೂರ್ವ ಸಂಪ್ರದಾಯದಂತೆ ಫಲಪುಷ್ಪಗಳನ್ನೂ, ಖಾದಿ ಶಾಲುಗಳನ್ನೂ ಮುಖ್ಯ ಮಂತ್ರಿಯವರು ಒಪ್ಪಿಸಿದರು

ಶ್ರೀಗಳಾದ ಬಿ ಪಿ ಪಂಡಿತರು, ಚಂದ್ರಭಾಗಸಿಂಗ್, ಎಲ್ ಎಲ್ ಭಟ್ಟಾಚಾರ್ಯ ಮತ್ತು ನಂದಿ ಸುಬ್ಬಣ್ಣಾಚಾರ್ಯರು ಉತ್ತರವಿತ್ತು ಕೃತಜ್ಞತೆಯನ್ನು ಸೂಚಿಸಿ, ಆಯುರ್ವೇದದ ಅಭಿವೃದ್ಧಿಗೆ ಮಹಾಜನರು ನೆರವಾಗಬೇಕೆಂದು ಪ್ರಾರ್ಥಿಸಿದರು

ಆಯುರ್ವೇದದ ಅಭಿವೃದ್ಧಿಗಾಗಿ ಪ್ರತ್ಯೇಕ ಇಲಾಖೆ

ಬೆಂಗಳೂರು ೧೧

ಆಯುರ್ವೇದದ ಅಭಿವೃದ್ಧಿಗಾಗಿ ಸರ್ಕಾರದವರು ಪ್ರತ್ಯೇಕ ಇಲಾಖೆಯ ವ್ಯವಸ್ಥೆ ಮಾಡಿ ಅದನ್ನು ನುರಿತ ಆಯುರ್ವೇದ ಪಂಡಿತರ ಆಡಳಿತಕ್ಕೆ ಒಳಪಡಿಸಲು ಮಂತ್ರಿಮಂಡಲವು ನಿರ್ಧರಿಸಿರುತ್ತದೆ ಇಲಾಖೆಯ ಅಧಿಕಾರಿಗೆ ೬೦೦ — ೮೦೦ ರೂ ವೇತನವನ್ನು ಕೊಡಲಾಗುವುದು

ಮುಖ್ಯ ಮಂತ್ರಿಯವರಿಂದ ವಿದ್ಯಾ ದಾನ ಜಮೀನಿನ ಉಳುಮೆ

ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ಕಳೆದ ಗುರುವಾರ ಬೆಂಗಳೂರು ಉತ್ತರ ಜಕ್ಕೂರಹಳ್ಳಿ ಪ್ರಾಥಮಿಕ ಶಾಲೆಗಾಗಿ ಬಂದಿರುವ ವಿದ್ಯಾದಾನ ಭೂದಾನ ಜಮೀನಿನ ಸಾಗುವಳಿ ಕಾರ್ಯವನ್ನು ಆರಂಭಗೊಳಿಸಿದರು ಅವರು ಉಳುಮೆ ಮಾಡಿ ಗ್ರಾಮಗಳಲ್ಲಿರುವ ಸರ್ಕಾರಿ ಶಾಲೆಗಳನ್ನು ತಮ್ಮದೆಂದೇ ಭಾವಿಸಿ ಜನರು ಅವನ್ನು ಊರ್ಜಿತ ಸ್ಥಿತಿಗೆ ತರಬೇಕೆಂದು ಸೂಚಿಸಿದರು

ಅಹಮದಾಬಾದಿನಲ್ಲಿ ಅಲ್ಲಲ್ಲೇ ಘಟನೆಗಳು

ಪೊಲೀಸು ಠಾಣೆ ಮುಂದೆ ಮಹಿಳೆಯರ ಧರಣಿ

ಮಂತ್ರಿಯ ಮಗನ ಮೇಲೆ ದೌರ್ಜನ್ಯ

ಅಹಮದಾಬಾದಿನಲ್ಲಿ ನೆನ್ನೆ ಗಲಭೆಕಾರರನ್ನು ತಹಬಂದಿಗೆ ತರುವ ಸಲುವಾಗಿ ಗಸ್ತು ಪಡೆಗಳನ್ನು ಕರೆಸಲಾಗಿ ಎರಡು ಪ್ರದೇಶಗಳಲ್ಲಿ ಕಲ್ಲು ಬೀರುವ ಘಟನೆಗಳು ನಡೆದುವು ನಗರದಲ್ಲಿ ಶಾಂತಿಯು ಮೂಡುತ್ತಿದೆ ಬೊಂಬಾಯಿಯ ಉಪ ಮಂತ್ರಿ ಶ್ರೀ [illegible] ಇಂದುಮತಿ ಸೇಠರ ಗೃಹದ ಮುಂದೆ ಜನರ ಗುಂಪು ಸೇರಿ ದ್ವಿಭಾಷಾ ವಿರುದ್ಧದ ಕೂಗುಗಳನ್ನು ಹಾಕಿ, ಆಕೆಯು ರಾಜೀನಾಮೆ ಕೊಡಬೇಕೆಂದು ಕೂಗಿದರು ಅವರ ಮನೆಗೆ ನುಗ್ಗುವ ಪ್ರಯತ್ನ ನಡೆಸಿ ಪೊಲೀಸರು ತಡೆದರು

ನಾಳೆದ್ದಿನವರಿಗೂ ಮುಷ್ಕರ ನಡೆಸಲಿರುವ ವಿದ್ಯಾರ್ಥಿಗಳು ತೋಳಿನ ಮೇಲೆ ಕಪ್ಪು ಬ್ಯಾಡ್ಜುಗಳನ್ನು ಧರಿಸಿದವರು ಕಲ್ಲು ಬೀರಿದ ಪ್ರದರ್ಶನಕಾರರನ್ನೂ ಮತ್ತು ಅಶ್ರುವಾಯು ಪ್ರಯೋಗಿಸಿದ ಪೊಲೀಸರನ್ನೂ ನೋಡುತ್ತಿದ್ದರು ನೆನ್ನೆ ೫೦ ಮಂದಿ ಮಹಿಳೆಯರು ೨ ಒಂದು ಪೊಲೀಸು ಠಾಣೆ ಬಳಿ ಕಂಬನಿಗರೆಯುತ್ತಾ ಪ್ರದರ್ಶನ ನಡೆಸಿದರು ಪೊಲೀಸರು ಅಶ್ರುವಾಯುವನ್ನು ಬಿಡಲಾಗಿ ಅವರು ಚದುರಿದರು ಮತ್ತೊಂದು ಕಡೆ ೫೦೦ ಮಂದಿ ಮಹಿಳೆಯರ ಮೇಲೆ ಅಶ್ರುವಾಯು ಪ್ರಯೋಗವಾಯಿತು

ಬೊಂಬಾಯಿಯ ಉಪ ಮಂತ್ರಿ ಬಾಬುಭಾಯಿ ಜಶಭಾಯಿ ಪಟೇಲರ ಮಗ ಸತೀಶಭಾಯ ಎಂಬ ೧೯ ವರ್ಷದ ಬಾಲಕನನ್ನು ಜನರು ಮನೆಯ ಮೇಲ್ಭಾಗದಿಂದ ಎತ್ತಿ ಹಾಕಿ ಗಾಯಪಡಿಸಿದರು

ಆಯುರ್ವೇದ ಆಸ್ಪತ್ರೆಗೆ ೧೧,೦೦೦ ರೂ. ದಾನ

ಬಿ. ಪಿ. ಪಂಡಿತರ ಔದಾರ್ಯ

ಬೆಂಗಳೂರು ೧೩

ಇಲ್ಲಿರುವ ಆಯುರ್ವೇದ ಆಸ್ಪತ್ರೆಗೆ ಸೇರಿದಂತೆ ಕ್ಷಯ ರೋಗ ಮತ್ತು ಬಾಲ ರೋಗ ಚಿಕಿತ್ಸೆಗಾಗಿ ವಾರ್ಡನ್ನು ಕಟ್ಟಿಸಲು ನಂಜನಗೂಡಿನ ಆಯುರ್ವೇದ ವೈದ್ಯರಾದ ಭಿಷಗ್ರತ್ನ ಬಿ ಪಿ ಪಂಡಿತರು ೧೧ ಸಾವಿರ ರೂ ಗಳನ್ನು ಕೊಡುವುದಾಗಿ ತಿಳಿಸಿರುವರೆಂದು ಗೊತ್ತಾಗಿದೆ.

○ ಗೃಹ ಮಂತ್ರಿ ಶ್ರೀ ಹೆಚ್ ಸಿದ್ಧವೀರಪ್ಪನವರು ಮೊನ್ನೆ ಪತ್ರಿಕಾ ಭೇಟಿಯಲ್ಲಿ ಮಾತನಾಡಿ ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಬಗ್ಗೆ ಕೊಡುವ ಪರಿಹಾರದ ಮೊತ್ತವನ್ನು ನಿರ್ಧರಿಸಲು ಸ್ವತಂತ್ರ ನ್ಯಾಯಮಂಡಲಿಯನ್ನು ಏರ್ಪಡಿಸುವ ಪ್ರಶ್ನೆ ಏಳುವುದಿಲ್ಲವೆಂದೂ, ರಾಜ್ಯದ ಶಾಸನ ಸಭೆಯೇ ನ್ಯಾಯಮಂಡಲಿ ಮತ್ತು ಅದೇ ಅದರ ನಿರ್ಧಾರಕ ಸಂಸ್ಥೆಯೆಂದೂ ತಿಳಿಸಿದರು

ಹರಿಕಥೆ

ನೆಹರ್ ಬಾದಿನ, ಶ್ರೀ ಕೋದಂಡರಾಮ ದೇವಸ್ಥಾನದಲ್ಲಿ ಕಳೆದ ಬುಧವಾರದಿಂದ ಪ್ರತಿ ದಿನ ಸಂಜೆ ೭ ಗಂಟೆಗೆ ಶ್ರೀ ಬಿ ಎಂ. ಬಸವಣ್ಣನವರಿಂದ ಹರಿಕಥೆ ನಡೆಯಲು ಏರ್ಪಾಡಾಗಿದೆ

ಲಂಡನ್ ಸಮ್ಮೇಳನಕ್ಕೆ ಹೋಗಲು ಈಜಿಪ್ಟಿನ ನಿರಾಕರಣೆ

ಹೇಗೋ ಸಮ್ಮೇಳನ ಕರೆಯಲು ಸಿದ್ಧವೆಂದು ನಾಸಿರ್‌ರವರ ಹೇಳಿಕೆ

ಸೂಯೆಜ್ ಕಾಲುವೆ ಸಂಬಂಧವಾಗಿ ಲಂಡನ್ನಿನಲ್ಲಿ ಸೇರುವ ಸಮ್ಮೇಳನದಲ್ಲಿ ಈಜಿಪ್ಟ್ ಭಾಗವಹಿಸುವುದಿಲ್ಲವೆಂದು ಈಜಿಪ್ಟಿನ ಅಧ್ಯಕ್ಷ ನಾಸಿರ್‌ರವರು ನೆನ್ನೆ ಘೋಷಿಸಿದರು ಕಾಲುವೆಯಲ್ಲಿ ಸಂಚರಿಸುವ ಹಡಗುಗಳಿಗೆ ಸಂಬಂಧಪಟ್ಟ ರಾಷ್ಟ್ರಗಳ ಅಂತರರಾಷ್ಟ್ರೀಯ ಸಮ್ಮೇಳನವನ್ನು ೧೮೮೮ರ ಕಾನ್‌ಸ್ಟಾಂಟಿನೋಪಲ್ ಕರಾರಿನ ಒಪ್ಪಂದಕ್ಕೆ ರುಜು ಮಾಡಿರುವ ಸರ್ಕಾರಗಳ ಜೊತೆಗೆ ಸೇರಿ ಕರೆಯಲು ಈಜಿಪ್ಟ್ ಸಿದ್ಧವಾಗಿರುವುದೆಂದೂ ಅವರು ತಿಳಿಸಿದರು ಲಂಡನ್ ಸಮ್ಮೇಳನವು ಸೂಕ್ತ ನಿರ್ಧಾರ ಕೈಗೊಳ್ಳುವ ಅಂತರ್ರಾಷ್ಟ್ರೀಯ ಸಮ್ಮೇಳನವಲ್ಲವೆಂದು ಅವರು ಅಭಿಪ್ರಾಯಪಟ್ಟಿರುವರು

ನಾಸಿರ್‌ರವರ ಸಲಹೆಯನ್ನು ಬ್ರಿಟನ್, ಫ್ರಾನ್ಸ್ ಮತ್ತು ಅಮೆರಿಕಗಳು ಒಪ್ಪುವುದಿಲ್ಲವೆಂದು ವರದಿಯಾಗಿದೆ

ಹುಬ್ಬಳ್ಳಿ ಹಾಸ್ಟೆಲ್ ಸಂಘದ ಅಧಿಕಾರ ವರ್ಗ

ನಗರದಲ್ಲಿರುವ ಮೇಲ್ಕಂಡ ಹಾಸ್ಟೆಲಿನ ಸಂಘದ ಚುನಾವಣೆಯು ಕಳೆದ ಗುರುವಾರ ನಡೆದು, ಶ್ರೀ ಗ ಸ. ಹಾಲಪ್ಪನವರು ಅಧ್ಯಕ್ಷರಾಗಿಯೂ, ಶ್ರೀ ಪಿ ಎಂ ಪಾಟೀಲ್‌ರವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಬಿ ಎಸ್ ಒಕ್ಕರಾಜ್ ಮತ್ತು ಎಂ ಎಸ್ ಶಿವಾನಂದರವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟಿರುವರು ಶ್ರೀಗಳಾದ ಎಸ್ ಎಸ್ ಪಟ್ಟಣಶೆಟ್ಟಿ, ಸಿ. ಬಸವರಾಜು, ಬಿ ಎಸ್ ವಿಶ್ವನಾಥ್, ಕೆ ಕೆ. ನೀಲಕಂಠಪ್ಪ ಮತ್ತು ಪ್ರಸನ್ನಕುಮಾರ್‌ರವರು ಸದಸ್ಯರಾಗಿ ಚುನಾಯಿತರಾಗಿರುವರು

ಸ್ವಾಗತ ಸಮಾರಂಭ

ರಾಜಧಾನಿಯಲ್ಲಿರುವ ಕೆನರಾ ಬ್ಯಾಂಕ್ ಶಾಖಾ ನೂತನ ಕಟ್ಟಡದಲ್ಲಿ ನೆನ್ನೆ ಬ್ಯಾಂಕಿನ ಸುವರ್ಣ ಮಹೋತ್ಸವದ ನೆನಪಿಗಾಗಿ ಸ್ವಾಗತ ಸಮಾರಂಭವೊಂದು ನಡೆಯಿತು ಸಹಸ್ರಾರು ಅತಿಥಿಗಳು ಭಾಗವಹಿಸಿದ್ದರು ಉಪಾಹಾರವನ್ನು ಏರ್ಪಡಿಸಲಾಗಿತ್ತು

ಬೆಂಗಳೂರು ರೇಡಿಯೋ ಶಾಲೆ ಕಾರ್ಯಕ್ರಮ

ಬೆಳಗ್ಗೆ ೭ ೫ ಕ್ಲಾರಿಯೊನೆಟ್ ೭-೫೫ ಎಸ್. ರಾಮಚಂದ್ರರಾವ್-ದೇವರನಾಮ ೭ ೩೦ ಗಾನವಿಹಾರ ೮-೧೫ ರೆಕಾರ್ಡು. ೧೨ ಪಿ ಅಪ್ಪ ಸ್. ಎಂ ೧೨ ೩೦ ರೆಕಾರ್ಡು ೧೨-೪೫ ಮಹಿಳೆಯರ ಕಾರ್ಯಕ್ರಮ, ೧ ೫೦ ಕ್ಲಾರಿಯೊನೆಟ್ ೨-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೫-೩೦ ಮತ್ತು ೬-೧೫ ಚರ್ ಕೆ ರಾಮನಾದರ್-ಸಂಗೀತ. ೬-೧೫ ಎ. ರಾಮಯ್ಯ ಕಾವ್ಯ ವಾಚನ ೭ ೩೦ ಲೋಕ ಜೀವನ-ಭಾಷಣ ೮ ಸಂಗೀತ ಕಾರ್ಯಕ್ರಮ ೮-೩೦ ಶ್ರೀಧರ ಪರೀಕ್ಷೆ ಸಿಟೀಲು ೯ ೩೦ ರಾಷ್ಟ್ರೀಯ ಕಾರ್ಯಕ್ರಮ ಎಂ ಎಲ್ ವಸಂತಕುಮಾರಿ-ಸಂಗೀತ ಮತ್ತು ಗಿರಿಜಾಶಂಕರ್ ಜೋಷಿ ಸಿಟೀಲು

ಮುಖ್ಯ ಮಂತ್ರಿಗಳ ರಾಜೀನಾಮೆ ಒಪ್ಪುವುದು ಖಚಿತ

ಅವಿಶ್ವಾಸ ನಿರ್ಣಯಕ್ಕೆ ರುಜು ಮಾಡಿರುವವರ ಖಾಸಗಿ ಸಭೆ

ಬೆಂಗಳೂರು ೧೩

ಮುಖ್ಯ ಮಂತ್ರಿಯವರಲ್ಲಿ ಅವಿಶ್ವಾಸ ಸೂಚಿಸುವ ನಿರ್ಣಯಕ್ಕೆ ರುಜು ಮಾಡಿರುವ ಶಾಸನ ಸಭಾ ಕಾಂಗ್ರೆಸ್ ಪಕ್ಷದ ಸದಸ್ಯರ ಪೈಕಿ ೩೩ ಮಂದಿ ನೆನ್ನೆ ಕುಮಾರಾ ಪಾರ್ಕಿನ ಆವರಣದಲ್ಲಿರುವ ಕಟ್ಟಡವೊಂದರಲ್ಲಿ ಖಾಸಗಿಯಾಗಿ ಸಭೆ ಸೇರಿ ೪ ಗಂಟೆಗಳ ಕಾಲ ಚರ್ಚೆ ನಡೆಸಿ, ಮುಖ್ಯ ಮಂತ್ರಿಯವರ ರಾಜೀನಾಮೆಯನ್ನು ಪಕ್ಷದ ಅಧಿಕೃತ ಸಭೆಯಲ್ಲಿ ಅಂಗೀಕರಿಸಬೇಕೆಂದು ಗೊತ್ತು ಮಾಡಿಕೊಂಡರೆಂದು ವರದಿಯಾಗಿದೆ

ರೆವಿನ್ಯೂ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ಸಮಾರಂಭವೊಂದರಲ್ಲಿ ರಾಜಕೀಯ ಪರಿಸ್ಥಿತಿಯನ್ನು ವಿಮರ್ಶಿಸಿ, ಕಾಮೋದಗಳು ಅಂತರಿಕ್ಷದಲ್ಲಿ ಕಾಣುತ್ತಿವೆಯೆಂದೂ, ತಾವೂ ಮತ್ತು ತಮ್ಮ ಸಹೋದ್ಯೋಗಿಗಳೂ ಯಾವ ಘಳಿಗೆಯಲ್ಲಾದರೂ ಅಧಿಕಾರವನ್ನು ಬಿಡಲು ಸಿದ್ಧವಾಗಿರುವುದಾಗಿಯೂ ತಿಳಿಸಿದರು

ರೇಷ್ಮೆ ನೆಯ್ಗೆ ಕಾರ್ಖಾನೆಯ ಜನರಲ್ ಮ್ಯಾನೇಜರರ ವರ್ಗ

ರಾಜಧಾನಿಯ ಸರ್ಕಾರಿ ರೇಷ್ಮೆ ನೆಯ್ಗೆ ಕಾರ್ಖಾನೆಯ ಜನರಲ್ ಮ್ಯಾನೇಜರ್ ಶ್ರೀ ಎ ಪಿ ರಾಯರನ್ನು ಬೆಂಗಳೂರಿಗೆ ಬಟ್ಟೆ ಕೈಗಾರಿಕೆ ಪ್ರವೀಣರಾಗಿ ವರ್ಗಾಯಿಸಿ ಅವರ ಸ್ಥಾನದಲ್ಲಿ ವೀವಿಂಗ್ ಮಾಸ್ಟರ್ ಶ್ರೀ ಎಸ್ ಎಸ್ ಸುಬ್ಬರಾಯರನ್ನು ಹಂಗಾಮಿ ಜನರಲ್ ಮ್ಯಾನೇಜರಾಗಿ ನೇಮಿಸಲಾಗಿದೆ

ಸಿಂಧ್ ಪಟ್ಟಣದಲ್ಲಿ ಹಿಂದುಗಳ ಹರತಾಳ

ಪಶ್ಚಿಮ ಪಾಕಿಸ್ತಾನದ ಜಾಕೋಬಾಬಾದ್ ನಗರದ ಪಂಚಾಯಿತಿ ಮುಸ್ಲಿಮರೂ ಮತ್ತು ಅಧಿಕಾರಿಗಳೂ ಹಿಂದುಗಳಿಗೆ ತೊಂದರೆ ಕೊಡುತ್ತಿರುವ ರೀತಿಯನ್ನು ಪರಿಶೀಲಿಸಲು ಅಲ್ಲಿಗೆ ಹೋದ ಪಾರ್ಲಿಮೆಂಟ್ ಸದಸ್ಯ ಧನಜ ಧೆಮ್‌ದಾಸ ಎಂಬ ಶಾಸನಸಭಾ ಸದಸ್ಯರನ್ನೂ, ಮೂವರು ಹಿಂದೂ ಪಂಚಾಯತ ಸದಸ್ಯರನ್ನೂ ಬಂಧಿಸಲಾಗಿದೆ ಅವರ ಮೇಲೆ ಹಿಂದುಗಳೂ, ಹಲವು ಸಿಂಧಿ ಮುಸಲ್ಮಾನರೂ ಹರತಾಳವನ್ನು ಆಚರಿಸಿ, ಕೆಲವರು ಜೈಲು ಬಳಿ ಉಪವಾಸ ನಡೆಸಲಾಗಿ ಬಂಧಿತರಾದವರನ್ನು ೧,೦೦೦ ರೂ. ಜಾಮೀನಿನ ಮೇಲೆ ಬಿಡುಗಡೆ ಮಾಡಲಾಯಿತು ಕಳೆದ ೨೭ ರಂದು ಮುಸ್ಲಿಂ ನಿರಾಶ್ರಿತರು ಹಿಂದೂ ದೇವಾಲಯವನ್ನು ಬಲಾತ್ಕಾರದಿಂದ ಆಕ್ರಮಿಸಿ, ಸಿಕ್ಕರ ಪವಿತ್ರ ಗ್ರಂಥವನ್ನು ಬಿಸಾಡಿ ಒಳಗಿದ್ದವರನ್ನು ಓಡಿಸಿದರೆಂದೂ ಹಿಂದೂ ಮಹಿಳೆಯೊಬ್ಬಳನ್ನು ಬಹಿರಂಗ ಪ್ರದೇಶದಲ್ಲಿ ಅತ್ಯಾಚಾರಕ್ಕೆ ಗುರಿಪಡಿಸಿದರೆಂದೂ ಅನಧಿಕೃತ ವರದಿಗಳು ತಿಳಿಸಿವೆ

○ ಈಜಿಪ್ಟಿನ ಮಂತ್ರಿಮಂಡಲದ ಸದಸ್ಯರಿಗೂ ಮಿಲಿಟರಿ ಶಿಕ್ಷಣವನ್ನು ಕೊಡಬೇಕೆಂದು [illegible]

ಕುರುಡ ಮೂಕರ ಶಾಲೆಯ ಸುವರ್ಣ ಮಹೋತ್ಸವ

ಶ್ರೀಮನ್ಮಹಾರಾಜರ ಭಾಷಣ

ಮೈಸೂರು ೧೩

ರಾಜಧಾನಿಯ ಕುರುಡ ಮೂಕರ ಶಾಲೆಯ ಸುವರ್ಣ ಮಹೋತ್ಸವವು ನೆನ್ನೆ ಬೆಳಗ್ಗೆ ಶಾಲೆಯಲ್ಲಿ ವೈಭವದಿಂದ ನೆರವೇರಿತು. ಶ್ರೀಮನ್ಮಹಾರಾಜರು ಇದ... ...ತ್ಸವವನ್ನು ನೆರವೇರಿಸಿದರು

ಮಹಾರಾಜರಿಗೆ ಶಾಲಾ ಕಿವುಡ ಬಾಲಕರು ಗೌರವರಕ್ಷೆಯನ್ನಿತ್ತರು ಕುರುಡ ಬಾಲಕ ವಿದ್ಯಾರ್ಥಿಗಳಿಂದ ಗಾಯನ ನೃತ್ಯವು ಆಯಿತು ಕಿವುಡ ಬಾಲಕರು ಡ್ರಿಲ್ ಪ್ರದರ್ಶನವನ್ನು ನಡೆಸಿದರು. ಸುವರ್ಣೋತ್ಸವದ ಅಂಗವಾಗಿ ಪ್ರದರ್ಶನವೊಂದು ಏರ್ಪಾಡಾಗಿತ್ತು.

ಶ್ರೀಮತಿ ಗಿರಿಜಮ್ಮನವರಿಂದ ಪ್ರಾರ್ಥನೆಯಾದನಂತರ, ಟಿ ಬಿ ಎಂ ಶಿವಪ್ಪನವರು ಸ್ವಾಗತ ಪದ್ಯಗಳನ್ನು ಸುಶ್ರಾವ್ಯವಾಗಿ ಹಾಡಿದರು. ಶಾಲಾ ಸೂಪರಿಂಟೆಂಡೆಂಟರಾದ ಶ್ರೀ ಟಿ ನಾರಂಗಪಾಣಿಯವರು ವರದಿಯನ್ನು ಒಪ್ಪಿಸಿದ ನಂತರ ಬಹುಮಾನ ವಿತರಣೆ ... ಸಮಾರಂಭಕ್ಕೆ ... ದಿವಾನರಾದ ಎಂ ವಿಶ್ವೇಶ್ವರಯ್ಯ, ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ ಎಂ ಪೂಣಚ್ಚ, ... ಮಂಜಪ್ಪ, ... ವೀರಪ್ಪ ಮತ್ತು ಇತರರು ಸಂದೇಶಗಳನ್ನು ಕಳುಹಿಸಿದ್ದರು.

ಶಾಲಾ ವಿದ್ಯಾರ್ಥಿಗಳ ವಸತಿ ... ಗೆ ಸರ್ಕಾರದವರು ೭ ಸಾವಿರ ರೂ ಧನಸಹಾಯವನ್ನು ಮಾಡಿರುವರು

ಕುರುಡ ವಿದ್ಯಾರ್ಥಿಗಳ ಆರ್ಕೆಸ್ಟ್ರಾ ವಾದನ ಮತ್ತು ಕಿವುಡ ಬಾಲಕ ನೋಟದಿಂದ ನೃತ್ಯವು ನಡೆದಮೇಲೆ, ಅಧ್ಯಕ್ಷರಾದ ಶ್ರೀ ಕೆ ಬಸವರಾಜ ಅರಸರು ಮಹಾರಾಜರಿಗೆ ಬೆಳ್ಳಿಯ ... ವನ್ನು ಗಂಧದ ಕರಂಡದಲ್ಲಿ ಒಪ್ಪಿಸಿದರು

ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ, ... ಬಾಲಕರಿಂದ ಆರಂಭವಾದ ವಿಷಯವನ್ನು ಪ್ರಸ್ತಾಪಿಸಿ, ಭಾರತದಲ್ಲಿ ನೇತ್ರಹೀನರಿಗಾಗಿ ಬ್ರೈಲ್ ಪದ್ಧತಿಯ ಮುದ್ರಣ ಯಂತ್ರವನ್ನು ತಮ್ಮ ತಂದೆಯವರು ಈ ಶಾಲೆಗೆ ಬಹುಮಾನವಿತ್ತುದನ್ನು ನಿರೂಪಿಸಿದರು. ಕಣ್ಣು ಕಾಣಿಸದಿರುವಿಕೆ ಮತ್ತು ಮಾತು ಬಾರದಿರುವಿಕೆಗಳು ಅತ್ಯಂತ ಕ್ರೂರವಾದ ಇಂದ್ರಿಯ ವೈಕಲ್ಯಗಳಾಗಿರುವುವೂ, ಕುರುಡ ಮೂಗರ ಜೀವನದ ಸ್ಥಿತಿಯು ಶೋಚನೀಯವಾಗಿರುವುದೂ ಸಹಜವಾದರೂ, ಅಂತಹವುಗಳಿಗೆ ಹೆದರದೆ ಇಂದ್ರಿಯ ವಿಕಲರು ತಮ್ಮ ಉಳಿದ ಇಂದ್ರಿಯಗಳ ಶಕ್ತಿಯನ್ನು ಹರಿತ ಮಾಡಿಕೊಂಡು ಜೀವನವನ್ನು ಉತ್ತಮ ಪಡಿಸಿಕೊಳ್ಳಲು ಶ್ರಮಿಸುವುದು ವಿವೇಕವೆಂದೂ, ಇಂದ್ರಿಯ ವಿಕಲತೆಯಿಂದ ಮಾನವ ಸಂಪೂರ್ಣ ಪ್ರಗತಿಗೆ ಅಡ್ಡಿಯಾಗಲಾರದೆಂದೂ ಅವರು ತಿಳಿಸಿದರು ಕಳೆದ ವರ್ಷ ಶಾಲೆಗೆ ಭೇಟಿಯಿತ್ತ ಅಮೆರಿಕದ ಶ್ರೀಮತಿ ಹೆಲ್ಲನ್ ಕೆಲ್ಲರ್‌ರವರು ಸಾಧಿಸಿರುವ ಆಶ್ಚರ್ಯಕರ ಪ್ರಗತಿ ಮತ್ತು ಪ್ರಪಂಚಕ್ಕೆ ಅವರು ತೋರಿಸಿರುವ ಆದರ್ಶ ಜೀವನವನ್ನು ಮಹಾರಾಜರು ಪ್ರಸ್ತಾಪಿಸಿ, ರಾಷ್ಟ್ರೀಯ ಮತ್ತು ಅಂತರ್ರಾಷ್ಟ್ರೀಯ ಸಂಸ್ಥೆಗೆ ಅವರು ನೀಡಿರುವ ಮತ್ತು ನೀಡುತ್ತಿರುವ ಸೇವೆಯು ಅತ್ಯಮೋಘವಾದುದೆಂದು ತಿಳಿಸಿದರು. ಈ ಶಾಲೆಯಲ್ಲಿ ವ್ಯಾಸಂಗ ಮಾಡಿ ಆಸ್ಥಾನ ವಿದ್ವಾಂಸರಾಗಿರುವ ಶ್ರೀ ಎಸ್ ಶಿವರುದ್ರಪ್ಪ ಮತ್ತು ಶ್ರೀ ಬಿ. ಎಂ. ಶಿವಪ್ಪನವರ ಕಲಾಸೇವೆಯು ಇತರರಿಗೆ ಉತ್ತೇಜನಕಾರಿಯಾಗಿರುವುದೆಂದೂ ತಿಳಿಸಿ, ಶಾಲಾ ವಿದ್ಯಾರ್ಥಿಗಳಿಗೆ ಶುಭವನ್ನು ಹಾರೈಸಿದರು.

ಶ್ರೀ ಎಂ ಎಸ್ ... ರವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

೭ ಲಕ್ಷ ರೂ. ಖೋಟಾ ನೋಟುಗಳ ವಶ

ಜಲಂಧರ್‌ದ ... ಬಳಿಯ ಗುರುದ್ವಾರ ಪೊಲೀಸರು ... ೭ ಲಕ್ಷ ರೂ. ನಿವ ಖೋಟಾ ನೋಟುಗಳನ್ನು ವಶಪಡಿಸಿಕೊಂಡರು ಒಂದು ಮುದ್ರಣಾಲಯದಲ್ಲಿ ಅವರು ದಾಳಿ ನಡೆಸಿದರು, ೧೬ ಮಂದಿಯನ್ನು ಬಂಧಿಸಿ ಅಕ್ರಮ ನೋಟುಗಳ ತಯಾರಿಕೆಗೆ ಉಪಯುಕ್ತವಾದ ಬ್ಲಾಕುಗಳನ್ನೂ, ಬಣ್ಣದ ವಸ್ತುಗಳನ್ನೂ ವಶಕ್ಕೆ ತೆಗೆದುಕೊಂಡರು

ಅಂತರ ರಾಷ್ಟ್ರೀಯ ಥಿಯಸಾಫಿಕಲ್ ಸಮ್ಮೇಳನ

ಕಾಶಿ ೧೦

ಈ ವರ್ಷದ ಡಿಸೆಂಬರ್ ತಿಂಗಳಿನ ಕಡೆಯ ವಾರದಲ್ಲಿ ಅಂತರ ರಾಷ್ಟ್ರೀಯ ಥಿಯಸಾಫಿಕಲ್ ಸಂಸ್ಥೆಯ ಸಮ್ಮೇಳನವು ಇಲ್ಲಿ ನಡೆಯುವುದು. ಸಂಸ್ಥೆಯ ಭಾರತದ ಕಾರ್ಯದರ್ಶಿಗಳಾದ ಡೋ ... ಡುಗಳಲ್ಲಿ ಭಾಷಣ ಮಾಡಲು ೮ ತಿಂಗಳ ಪ್ರವಾಸಕ್ಕಾಗಿ ಹೋಗಿರುವರು. ಅವರು ವಾಪಸು ಬಂದನಂತರ ಸಮ್ಮೇಳನಕ್ಕೆ ಏರ್ಪಾಟು ಮಾಡುವರು.

ಬಿ. ಇಡಿ. ರ್‍ಯಾಂಕುಗಳು

ಈಚೆಗೆ ನಡೆದ ಬಿ. ಇಡಿ. ಪರೀಕ್ಷೆಯಲ್ಲಿ ಶ್ರೀ ಹೆಚ್. ಎಸ್. ವೆಂಕಟರಾಯರಿಗೆ ಪ್ರಥಮ ಸ್ಥಾನವೂ, ಶ್ರೀ ಎ. ಕೆ ರಾಧಾಕೃಷ್ಣರವರಿಗೆ ದ್ವಿತೀಯ ಸ್ಥಾನವೂ ದೊರೆತಿವೆ.

ಫುಟ್‌ಬಾಲ್ ಪಂದ್ಯ

ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ... ಫುಟ್‌ಬಾಲ್ ಸಂಸ್ಥೆಯ ಆಶ್ರಯದಲ್ಲಿ ಮೊನ್ನೆ ದೊಡ್ಡಕೆರೆ ಮೈದಾನದಲ್ಲಿ ಅಖೈರು ಫುಟ್‌ಬಾಲ್ ಪಂದ್ಯವು ನಡೆದು ದಳವಾಯಿ ಪ್ರೌಢಶಾಲೆಯವರು ವಿದ್ಯಾವರ್ಧಕ ಶಾಲೆಯವರ ಮೇಲೆ ... ಪಾರಿತೋಷಕವನ್ನು ಪಡೆದರು.

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ನಿತ್ಯ ವಿಖ್ಯಾತವಾಗಿರುವ

ನವರತ್ನ—ಕಲ್ಪ

ರಾಷ್ಟ್ರಪತಿಯನ್ನು ಕಂಡುಹಿಡಿದಿರುವ,

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮಾ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಫೋನ್ ನಂ. 590

ಬೆಳಗ್ಗೆ 7-30 ರಿಂದ 12-30 ಮತ್ತು ಮಧ್ಯಾಹ್ನ 4 ರಿಂದ 7-30

...

ನವರತ್ನ—ಕಲ್ಪ

...

NAVRATNA KALPA PHARMACY,

JULLUNDUR CITY (India)

ಅಗ್ಗದ ದರದಲ್ಲಿ ಒಣ ಸೌದೆ ಮಾರಾಟ

ರೂ. 1-1-0 ಗೆ 2 3/4 ಮಣ

ಒಣ ಸೌದೆಯನ್ನು

ನಮ್ಮ ಅಂಗಡಿಯಲ್ಲಿ ಬಿಕರಿ ಮಾಡಲಾಗುತ್ತಿದೆ

ಸ್ಥಳ: ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ

ಒಂಭತ್ತನೇ ಸ್ವಾತಂತ್ರ್ಯ ದಿನಾಚರಣೆ

ಪ್ರಯುಕ್ತ ನಮ್ಮ ಅಂಗಡಿಯನ್ನು

ಇದೇ 15ನೇ ತಾರೀಖು ಮುಚ್ಚಲಾಗುತ್ತದೆ

ಸೌಭಾಗ್ಯ ಸ್ಟೋರ್ಸ್

ದೇವರಾಜ ಮಾರ್ಕೆಟ್, ಮೈಸೂರು.

ಹಾಸಿಗೆ-ದಿಂಬು

ಮಿತವಾದ ಬೆಲೆಗಳಲ್ಲಿ ತಯಾರು ಮಾಡುತ್ತೇವೆ

ಬಾಬುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

Edited, Printed and Published by A. R. Nagarajan at Sadhvi Press D. Subbiah Road, Mysore

Vijaya Tutorial College,

VI Cross, V. V. Mohalla, Mysore

Re-opens on 16 8 56

Offers excellent coaching for the following classes :—

Sr. Intermediate Mathematics

Fees 5 Rs.

S. S. L. C : Physics, Chemistry and Mathematics

Fees—5 Rs.

Time 7 P.M. to 8 P.M.

For further particulars contact

G. Swaminathan M Sc

Shankara Vilas,

VI Cross, V. V. Mohalla,

MYSORE

SREE GANESH TALKIES

From 14-8-56 : For 3 Days

INDEPENDENCE DAY SPECIAL PROGRAMME

Daily Matinee at 3 P.M.

Cecil B. DeMiell's unparallell d, unforgett-ble and unequalled Technicolor production

UNCONQUERED

With—Gary Cooper, Paulette Goddard Boris Karloff Ward Bard etc.

Gala Release on 17-8-56 Daily 3 Shows

Paramount's Vistavision Movie Marvel in Technicolor

ARTISTS AND MODELS

With :- MARTIN & LEWIS in their latest super comedy hit

ಮೈಸೂರು ಸಿಟಿ ನೂರದ ಗಾಣದ ಎಣ್ಣೆ ಕೈಗಾರಿಕೆಗಾರರ ಕೋ-ಆಪರೇಟಿವ್ ಸೊಸೈಟಿ, ಲಿಮಿಟೆಡ್

ವಾಣಿವಿಲಾಸ ರೋಡ್ (ನಾಥನರಾವ್ ಸರ್ಕಲ್ ಬಳಿ)

ಹಬ್ಬದ ದಿವಸಗಳಲ್ಲಿ, ಗಾಣದಿಂದ ತಯಾರಾದ ಎಣ್ಣೆಯನ್ನು ಉಪಯೋಗಿಸಿರಿ. ಇದು ಆರೋಗ್ಯಕರ, ರುಚಿಕರ ಮತ್ತು ಲಾಭಕರವಾಗಿರುವುದಲ್ಲದೆ ಆಹಾರ ದೃಷ್ಟಿಯಿಂದಲೂ ಶ್ರೇಷ್ಠವಾದದ್ದು

		ದರ	ರಿಬೇಟ ಕಳೆದು	ನಿಗದಿ ಬೆಲೆ
ಅಪ್ಪಟ ಕಡಲೆಕಾಯಿಎಣ್ಣೆ	ಸೇರಿ 1ಕ್ಕೆ	2-2-6	0-1-6	2-1-0
ಅಪ್ಪಟ ಹುಚ್ಚೆಳ್ಳೆಣ್ಣೆ	„	3-7-6	0-1-6	2-6-0
ಅಪ್ಪಟ ಎಳ್ಳೆಣ್ಣೆ	„	3-7-0	0-1-6	3-5-6

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

15—8—56 ನೇ ಬುಧವಾರದಿಂದ

ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ವಿನೋದಕರವಾದ ತೆಲುಗು ಚಿತ್ರ

★ ಚಿರಂಜೀವುಲು ★

ಪಾತ್ರ:— ಎನ್. ಟಿ. ರಾಮರಾವ್, ಜಮುನ, ಗುಮ್ಮಡಿ, ಬಾಲಸರಸ್ವತಿ, ಸಿ.ಎಸ್.ಆರ್ ಮುಂತಾದವರು

ಡೈರೆಕ್ಟರ್: ವೇದಾಂತಂ ರಾಘವಯ್ಯ



ಎರಡು ವಾರಗಳ ತನಕ ಎಲ್ಲ ವಿಧವಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನೂ ಮುಚ್ಚಲಾಗಿದೆ

ಟೆಲಿಫೋನ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ನಿಮಗೆ ಪೂರ್ಣವಾಗಿ
ತೃಪ್ತಿಯುಂಟಾಗಬೇಕಾದರೆ
ಮರ್ಫಿ ರೇಡಿಯೋವನ್ನು ಇಂದೇ ಕೊಳ್ಳಿ
ಆಬಿದ್ ಅಂಡ್ ಕೋ.,
[illegible], ಮೈಸೂರು
ಗ್ಯಾರಂಟಿ ಕಾರ್ಡನ್ನು ಪಡೆಯಲು
ಮರೆಯದಿರಿ

ಸಂಪುಟ : ೧೫] SADHVI : TUESDAY 14-8-1956 ಮೈಸೂರು : ಮಂಗಳವಾರ ೧೪—೮—೧೯೫೬ [ಸಂಚಿಕೆ : ೦೩

ಕಾಂ|| ಹೈಕಮಾಂಡಿಗೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರ ಪತ್ರ

ಅಹಮದಾಬಾದಿನಲ್ಲಿ ಪುನಃ ಗುಂಡಿನ ಪ್ರಕರಣ

ಕಪ್ಪು ಸೀರೆಯುಟ್ಟ ಮಹಿಳೆಯರ ಪ್ರದರ್ಶನ

ದ್ವಿಭಾಷಾ ಬೊಂಬಾಯಿ ಸಂಸ್ಥಾನದ ರಚನೆಯ ವಿರುದ್ಧವಾಗಿ ಅಹಮದಾಬಾದಿನಲ್ಲಿ ನಡೆಯುತ್ತಿರುವ ಚಳುವಳಿಯ ಆರನೇ ದಿನವಾದ ನೆನ್ನೆ ಪುನಃ ಹಿಂಸಾಕೃತ್ಯಗಳು ಆಗಿ ಅವನ್ನು ದಮನ ಮಾಡಲು ಪೋಲೀಸರು ಎರಡು ಬಾರಿ ಗುಂಡನ್ನು ಹಾರಿಸಿ, ಹಲವಾರು ಸಲ ಅಶ್ರುವಾಯು ಪ್ರಯೋಗ ಮಾಡಿದರು. ಸಂಜೆಯಿಂದ ಬೆಳಗ್ಗೆ ೬ ಗಂಟೆವರೆಗೆ ಪುನಃ ಕರ್ಫ್ಯೂವನ್ನು ವಿಧಿಸಲಾಯಿತು

ಗುಜರಾತಿನಲ್ಲಿ ಗುಂಡಿನ ಪ್ರಕರಣದಿಂದ ೧೫ ಜನರು ಮೃತಪಟ್ಟ ಬಗ್ಗೆ ಅಹಮದಾಬಾದಿನಲ್ಲಿ ನೆನ್ನೆ ಹುತಾತ್ಮರ ದಿನಾಚರಣೆಯನ್ನು ನಡೆಸಲಾಯಿತು. ಮಹಾ ಗುಜರಾತಿನ ವಿದ್ಯಾರ್ಥಿ ಸಮಿತಿಯವರು ಮತ್ತು ವಾಮ ಪಕ್ಷಗಳವರು ಸಾರ್ವತ್ರಿಕ ಹರತಾಳಕ್ಕೆ ಕರೆ ಕೊಟ್ಟಿದ್ದರು. ಅದರಲ್ಲಿ ಸುಮಾರು ೩ ಲಕ್ಷ ಕಾರ್ಮಿಕರೂ, ವಿದ್ಯಾರ್ಥಿಗಳೂ ಸೇರಿದ್ದರು ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಲಾಯಿತು ಸಹಸ್ರಾರು ಕಪ್ಪು ಧ್ವಜಗಳನ್ನು ಮನೆಗಳ ಮೇಲೆ ಹಾರಿಸಲಾಗಿತ್ತು. ೬೬ರ ಪೈಕಿ ೩೦ ಗಿರಣಿಗಳು ಮುಚ್ಚಲ್ಪಟ್ಟಿದ್ದುವು ಸಂಜೆ ಹೊತ್ತಿಗೆ ಇನ್ನೂ ಆರು ಗಿರಣಿಗಳು ಮುಚ್ಚಿದುವು.

ಬಸ್ಸುಗಳ ಮೇಲೆ ಜನರು ಕಲ್ಲು ಬೀರಿದರು. ಮೆರವಣಿಗೆ ನಡೆಸಿದಾಗ, ಅದರಲ್ಲಿ ಮಹಿಳೆಯರನೇಕರು ಭಾಗವಹಿಸಿ, ದ್ವಿಭಾಷಾ ಸಂಸ್ಥಾನದ ವಿರುದ್ಧ ಕೂಗುಗಳನ್ನು ಹಾಕಿದರು. ಒಂದು ಕಡೆ ಪೌರಸಭಾ ಬಸ್ಸನ್ನು ಸುಡುವ ಪ್ರಯತ್ನವು ನಡೆಯಿತು.

೩,೦೦೦ ಮಹಿಳೆಯರು ಕಪ್ಪು ಸೀರೆಗಳನ್ನು ಧರಿಸಿ ಮೆರವಣಿಗೆ ನಡೆಸಿದರು. ಒಬ್ಬ ಮಹಿಳೆಯು ಭಾರಿ ಕಪ್ಪು ಧ್ವಜವನ್ನು ಹಿಡಿದಿದ್ದಳು. ೧೦ ಸಾವಿರ ವಿದ್ಯಾರ್ಥಿಗಳು ಕಾಂಗ್ರೆಸ್ ಭವನದ ಮುಂದೆ ಪ್ರದರ್ಶನ ನಡೆಸಿ, ಪೋಲೀಸರ ಗುಂಡಿನೇಟಿನಿಂದ ಮೃತಪಟ್ಟವರಿಗೆ ಗೌರವ ಸಲ್ಲಿಸಿದರು. ೧೮ ವಯಸ್ಸಿನ ಯುವಕನೊಬ್ಬನು ಮಡಿದು, ಅವನ ಅಂತ್ಯಯಾತ್ರೆಯಲ್ಲಿ ೧೦ ಸಹಸ್ರ ಜನರು ಸೇರಿದ್ದರು. ಸಂಜೆ ಹೊತ್ತಿಗೆ ಪೋಲೀಸರು ಕಾನೂನು ಕಟ್ಟಳೆಗಳನ್ನು ಜಾರಿ ಮಾಡಲು ಕಠಿಣ ಕ್ರಮವನ್ನು ಜರುಗಿಸಿದರು. ಅನೇಕ ಬಾರಿ ಲಾಠಿ ಪ್ರಹಾರಗಳಾದುವು.

ಬೊಂಬಾಯಿಯಲ್ಲಿ ಹರತಾಳ

ಅಹಮದಾಬಾದಿನಲ್ಲಿ ಪೋಲೀಸರ ಗುಂಡಿನೇಟಿನ ಪರಿಣಾಮವಾಗಿ ಮೃತಪಟ್ಟವರ ಬಗ್ಗೆ ಸಹಾನುಭೂತಿ ತೋರಿಸಲು ಬೊಂಬಾಯಿ ನಗರದಲ್ಲಿ ನೆನ್ನೆ ಕೆಲವೆಡೆ ಹರತಾಳವು ನಡೆಯಿತು. ಸಹಸ್ರಾರು ಶಾಲಾ ಕಾಲೇಜು ವಿದ್ಯಾರ್ಥಿಗಳು ಅದರಲ್ಲಿ ಸೇರಿದ್ದರು ಶಾಲಾ ಕಾಲೇಜುಗಳನ್ನು ಮುಚ್ಚಿಸಲು ಪ್ರಯತ್ನ ನಡೆಯಿತು ಗುಂಡಿನೇಟಿನ ಬಗ್ಗೆ ಪ್ರತಿಭಟನೆಗಾಗಿ ಎಲ್ಲ ಮಾರ್ಕೆಟ್ಟುಗಳೂ ಮುಚ್ಚಲ್ಪಟ್ಟಿದ್ದುವು

ಕೀರ್ತಿಶೇಷರಾದ, ರಾಜಸೇವಾ ಪ್ರಸಕ್ತ

ವೈ. ಕೆ. ರಾಮಚಂದ್ರರಾಯರು

ಗಂಗಾ ನದಿಯಲ್ಲಿ ಭಾರಿ ಪ್ರವಾಹ

ಸ್ವಂ ಸು ಸೇವೆ] ಕಾಶಿ ೧೩

ಗಂಗಾ ನದಿಯಲ್ಲಿ ಪ್ರವಾಹವು ಬಹಳವಾಗಿ ಬಂದಿದೆ ನೆನ್ನೆ ನೀರಿನ ಮಟ್ಟವು ೨೫ ಅಡಿ ಏರಿ ಇದ್ದಿತು ೧೯೪೮ರಲ್ಲಿ ೨೪೪ ಅಡಿ ಬಂದಿತ್ತು. ಅಪಾಯದ ಮಟ್ಟಕ್ಕಿಂತ ೬ ಅಡಿ ಹೆಚ್ಚಿದೆ. ದಶಾಶ್ವಮೇಧ, ಮಣಿಕರ್ಣಿಕ, ಹರಿಶ್ಚಂದ್ರ, ರಾಜಘಟ್ಟ ಮುಂತಾದ ಮುಖ್ಯ ಘಟ್ಟಗಳಿಗೆ ನೀರು ನುಗ್ಗಿದೆ. ವಿಶ್ವವಿದ್ಯಾಲಯ ಮತ್ತು ಧರ್ಮಛತ್ರಗಳಿಗೂ ನೀರು ನುಗ್ಗಿದೆ

ಸೂಯೆಜ್ ಬಗ್ಗೆ ನಾಳಿದ್ದು ಪಾಕಿಸ್ತಾನದಲ್ಲಿ ಹರತಾಳ

ಸೂಯೆಜ್ ಬಗ್ಗೆ ಲಂಡನ್ನಿನಲ್ಲಿ ಆರಂಭವಾಗುವ ಸಮ್ಮೇಳನ ಸೇರುವ ದಿನವಂದು ಪಾಕಿಸ್ತಾನವಾದ್ಯಂತ ಹರತಾಳ ನಡೆಸಲಾಗುವುದು. ಈ ಬಗ್ಗೆ ಅಲ್ಲಿನ ಅನೇಕ ರಾಜಕೀಯ ಮತ್ತು ಕಾರ್ಮಿಕ ಸಂಸ್ಥೆಗಳು ನಿರ್ಧರಿಸಿ, ಸೂಯೆಜ್ ಕಾಲುವೆ ರಾಷ್ಟ್ರೀಕರಣಕ್ಕೆ ಬೆಂಬಲವಿತ್ತಿವೆ.

ಕೈಗಡಿಯಾರಗಳ ಬಗ್ಗೆ ನಂಬಿಕೆ ದ್ರೋಹಕ್ಕಾಗಿ ಬಂಧನ

ರಾಜಧಾನಿಯ ಪ್ರಭಾ ಚಿತ್ರ ಮಂದಿರದ ಕಟ್ಟಡದಲ್ಲಿರುವ ಶ್ರೀ ರಾಮಪತಂಗೆ ಮತ್ತು ಸನ್ಸ್ ರವರ ಅಂಗಡಿಯಲ್ಲಿ ನಾಲ್ಕು ತಿಂಗಳ ಹಿಂದೆ ಸುಮಾರು ೧೩೦೦ ರೂ. ಬೆಲೆಯ ಎರಡು ಕೈ ಗಡಿಯಾರಗಳನ್ನು ಒಪ್ಪಿಗೆಗಾಗಿ ತೆಗೆದುಕೊಂಡು ಹೋಗಿ ನಂಬಿಕೆದ್ರೋಹ ಮಾಡಿದನೆಂಬ ಆರೋಪದ ಮೇಲೆ ದೇವರಾಜ ಪೋಲೀಸರು ಎ ಎಸ್ ರಾವ್ ಎಂಬ [illegible] ಅಗ್ರಹಾರದ ಯುವಕನನ್ನು ಬಂಧಿಸಿರುತ್ತಾರೆ

ಸಂಗೀತ

ಸುಬ್ಬರಾಯನಕೆರೆ ಬಳಿ ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ನಾಳೆ ಸಂಜೆ ೭ ಗಂಟೆಗೆ ಪಿ. ಶ್ರೀಮತಿ ಪ್ರಕಾಶ್ ಮತ್ತು ಕುಮಾರಿ [illegible] ಅವರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಾಡಾಗಿದೆ ಸರ್ವರಿಗೂ ಆಹ್ವಾನವಿದೆ.

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೩

ನೂರಡಿ ರಸ್ತೆಯ [illegible] ಅಸೋಸಿಯೇಷನ್ನಿನವರು ನಾಳೆ ಬೆಳಗ್ಗೆ ೧೦|| ಗೆ ಉತ್ಸವವನ್ನು ಪೌರಸಭಾ ಉಪಾಧ್ಯಕ್ಷ ಶ್ರೀ ಜಿ ಆರ್. ರಂಗಸ್ವಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಸುವರು ಲೋಕಸಭಾ ಸದಸ್ಯ ಶ್ರೀ ಎಂ ಎಸ್. ಗುರುಪಾದಸ್ವಾಮಿಯವರ ಭಾಷಣವಿದೆ

ನಗರದ ವಯಸ್ಕರ ಶಿಕ್ಷಣ ಸಮಿತಿಯವರು ಮೈಸೂರು ಮೈಲಿನಲ್ಲಿ ಸ್ವಾತಂತ್ರ್ಯೋತ್ಸವದ ಅಂಗವಾಗಿ ನಾಳೆ ಬೆಳಗ್ಗೆ ೯-೩೦ಕ್ಕೆ ಪುಸ್ತಕ ಭಂಡಾರದ ಆರಂಭೋತ್ಸವವನ್ನು ಏರ್ಪಡಿಸಿರುವರು. ಶ್ರೀ ಎಚ್. ಶ್ರೀಕಂಠಯ್ಯನವರು ಅಧ್ಯಕ್ಷತೆ ವಹಿಸುವರು ಶ್ರೀ ಕೆ. ಎನ್. ಶಿವಲಿಂಗಯ್ಯನವರು ಧ್ವಜಾರೋಹಣವನ್ನು, ಶ್ರೀ ಬಿ ಕೃಷ್ಣನ್‌ರವರು ಪುಸ್ತಕ ಭಂಡಾರದ ಆರಂಭೋತ್ಸವವನ್ನೂ ನೆರವೇರಿಸುವರು.

ಕೆ. ಆರ್. ಆಸ್ಪತ್ರೆ ರಸ್ತೆಯಲ್ಲಿರುವ ಶ್ರೀ ಎಸ್. ಶ್ರೀಕಂಠಯ್ಯನವರ ಸೌದೆ ಡಿಪ್ಪೋವಿನಲ್ಲಿ ನಾಳೆ ಸಂಜೆ ೫-೩೦ಕ್ಕೆ ಶ್ರೀ ಎಸ್ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಉತ್ಸವವನ್ನು ನೆರವೇರಿಸಲಾಗುವುದು ಕತ್ತಿವರಸೆ, ವಾದ್ಯಗೋಷ್ಠಿ, ಭರತನಾಟ್ಯ, ಯಕ್ಷಗಾನ ಮುಂತಾದುವು ನಡೆಯುವುವು.

ಮೈಸೂರು ಶ್ರೀವೈಷ್ಣವ ವಿದ್ಯಾರ್ಥಿ ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಶ್ರೀ ಅಹೋಬಿಲ ಮಠದಲ್ಲಿ ದಿನಾಚರಣೆಯನ್ನು ಏರ್ಪಡಿಸಲಾಗಿದೆ. ಶ್ರೀ ಎಂ. ಯಾಮುನಾಚಾರ್ಯರು "ಸ್ವಾತಂತ್ರ್ಯದ ಅರ್ಥ" ಎಂಬ ವಿಷಯವಾಗಿ ಭಾಷಣ ಮಾಡುವರು. ಸಂಗೀತವೂ ಏರ್ಪಾಡಾಗಿದೆ.

ಸರ್ಕಾರಿ ಉಪಾಧ್ಯಾಯರ ಶಿಕ್ಷಣ ಸಮಿತಿಯಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ನಾಳೆ ಬೆಳಗ್ಗೆ ೭-೩೦ಕ್ಕೆ ಶಾಲಾ ಪ್ರಿನ್ಸಿಪಾಲ್ ಶ್ರೀ ಕೆ. ಕೃಷ್ಣರಾಯರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಗುವುದು

ನಗರದ ಹತ್ತಿನ ಗಿರಣಿ ಸಂಘದಲ್ಲಿ ನಾಳೆ ಬೆಳಗ್ಗೆ ೯-೩೦ ಘಂಟೆಗೆ ಸ್ವಾತಂತ್ರ್ಯ ದಿನಾಚರಣೆಯನ್ನು ನೆರವೇರಿಸಲಾಗುವುದು. ಮಾಲೀಕರೆಲ್ಲರೂ ಇದನ್ನೇ ಆಹ್ವಾನವೆಂದು ತಿಳಿದು ದಯಮಾಡಿಸಬೇಕಾಗಿ ಗೌ|| ಕಾರ್ಯದರ್ಶಿಯವರು ತಿಳಿಸಿರುತ್ತಾರೆ

ಗಾಂಧಿ ಚೌಕದಲ್ಲಿರುವ ಶ್ರೀ ಕಾವೇರಿ ಶೆಟ್ಟಿ ಸುಬ್ಬಯ್ಯ ಶೆಟ್ಟರ ವಿದ್ಯಾರ್ಥಿನಿಲಯದಲ್ಲಿ ನಾಳೆ ಸಂಜೆ ೫ ಘಂಟೆಗೆ ಶ್ರೀ ಟಿ ಎಸ್. ರಾಜಗೋಪಾಲಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ಉತ್ಸವವನ್ನು ಏರ್ಪಡಿಸಲಾಗಿದೆ. ಶ್ರೀ ಎನ್. ಶಿವರಾಮಶಾಸ್ತ್ರಿಗಳು ಸಂಘದ ಆರಂಭ ಭಾಷಣ ಮಾಡುವರು.

ಪತ್ನಿಯ ಕೊಲೆಗಾಗಿ ೬ ವರ್ಷ ಸಜಾ

ನಂಜನಗೂಡು ತಾಲ್ಲೂಕು ಚಾಮಲಾಪುರದ [illegible] ಎಂಬಾತನು ತನ್ನ ಪತ್ನಿಯ [illegible] ಬಗ್ಗೆ ಅನುಮಾನಿಸಿ ಆಕೆಯನ್ನು ಕೊಂದ ಮೊಕದ್ದಮೆಯಲ್ಲಿ [illegible] ಈ ದಿನ ಡಿ. ಸೆಷನ್ಸ್ ನ್ಯಾಯಾಧೀಶರು ಆತನಿಗೆ ಆರು ವರ್ಷ ಕಠಿಣ ಸಜಾ ವಿಧಿಸಿದರು

ಕಾಂಗ್ರೆಸ್ ಹೈಕಮಾಂಡಿಗೆ ಪ್ರದೇಶ ಅಧ್ಯಕ್ಷರ ಪತ್ರ

ನಾಳೆ ಸಂಜೆ ಕೆ. ಸಿ. ಮಾಧವನ್ ನಾಯರ್ ರವರ ಆಗಮನ

ಸ್ವಂ. ವಿ. ಪ್ರೋ.] ಬೆಂಗಳೂರು ೧೩

ನಾಳಿದ್ದು ಇಲ್ಲಿ ಸೇರುವ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಭಾಗವಹಿಸಲು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ ಸಿ ಮಾಧವನ್ ನಾಯರ್‌ರವರು ನಾಳೆ ಸಂಜೆ ಇಲ್ಲಿಗೆ ಆಗಮಿಸುವರು

ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ಈ ಮಧ್ಯಾಹ್ನ ಸೇರಿತ್ತು ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೂ, ಇತರ ಸದಸ್ಯರೂ ಭಾಗವಹಿಸಿದ್ದರು ನಾಳಿದ್ದಿನ ಸಭೆಯ ಕಾರ್ಯಕ್ರಮದ ಪಟ್ಟಿ ಬಗ್ಗೆ ಸಮಿತಿಯು ಚರ್ಚಿಸಿತು. ಮೊದಲು ನೆಹರೂರವರ ಪತ್ರವನ್ನು ಪರಿಶೀಲಿಸಬೇಕೆಂದು ಸೂಚಿಸಲಾಗಿದ್ದು, ಈಗ ಢೇಬರ್‌ರವರ ಪತ್ರವನ್ನು ಪರಿಶೀಲಿಸುವಂತೆ ಪಕ್ಷದ ಕಾರ್ಯದರ್ಶಿಯವರು ಬದಲಾಯಿಸಿದ್ದಾರೆ

ಏತನ್ಮಧ್ಯೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಪಕ್ಷದ ಬಹುಮಂದಿ ಸದಸ್ಯರ ಪರವಾಗಿ ಹೈಕಮಾಂಡಿಗೆ ಪತ್ರ ಬರೆದು, ನೆಹರೂರವರು ಪಕ್ಷದ ನಾಯಕರಿಗೆ ಬರೆದಿರುವ ಪತ್ರವು ವೈಯಕ್ತಿಕವೆಂದೂ, ಅದನ್ನು ಪರಿಶೀಲಿಸುವುದರ ಅಗತ್ಯವೇನೆಂದೂ ಕೇಳಿ, ಈ ಬಗ್ಗೆ ಹೈಕಮಾಂಡಿನ ಸ್ಪಷ್ಟೀಕರಣಕ್ಕಾಗಿ ಕೋರಿದ್ದಾರೆಂದು ವರದಿಯಾಗಿದೆ

ಈ ರಾತ್ರಿ ಪಕ್ಷದ ಬಹುಮಂದಿ ಸದಸ್ಯರು ಪುನಃ ಸೇರಿ ಮುಂದಿನ ನಾಯಕರನ್ನು ಆರಿಸುವ ಬಗ್ಗೆ ಅಂತಿಮ ನಿರ್ಧಾರ ಮಾಡಲಿರುವರೆಂದು ಹೇಳಲಾಗಿದೆ. ಶ್ರೀ ಎಸ್. ಚೆನ್ನಯ್ಯನವರೇ ನಾಯಕರಾಗಿ ಆರಿಸಲ್ಪಡುವ ಸಂಭವವಿರುವುದೆಂದು ಈಗ ಕಾಣಬರುತ್ತಿದೆ.

ರೈಲಿಗೆ ಸಿಕ್ಕಿ ಆತ್ಮಹತ್ಯೆ

ಈ ದಿನ ಬೆಳಗ್ಗೆ ನಂಜನಗೂಡಿನಿಂದ ಬಂದ ರೈಲಿಗೆ ಇಲವಾಲ ರಸ್ತೆಯ ಅಂತರ್ ಬ್ರಿಡ್ಜ್ ಬಳಿ ಮಧ್ಯವಯಸ್ಕನೊಬ್ಬನು ಸಿಕ್ಕಿ ಮೃತಪಟ್ಟದ್ದಾಗಿ ಗೊತ್ತಾಗಿದೆ ರೈಲು ಹತ್ತಿರಕ್ಕೆ ಬರುವವರೆಗೂ ಆತನು ಮೇಲೆ ನಿಂತಿದ್ದು ಅದು ಬಂದೊಡನೆ ಮೇಲಿನಿಂದ ಕೆಳಕ್ಕೆ ಹಾರಿ ಕಂಬಿಗೆ ಅಡ್ಡಲಾಗಿ ಮಲಗಿದುದಾಗಿ ವರದಿಯಾಗಿದೆ.

ಮುಖ್ಯ ಮಂತ್ರಿಗಳಿಂದ ಸೆಲ್ಯೂಟ್ ಸ್ವೀಕಾರ

ನಾಳೆ ಸ್ವಾತಂತ್ರ್ಯ ದಿನೋತ್ಸವದ ಅಂಗವಾಗಿ ಬೆಳಗ್ಗೆ ಸಂಪಂಗಿ ಸ್ಟೇಡಿಯಮ್ಮಿನಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ರಾಷ್ಟ್ರಧ್ವಜವನ್ನು ಹಾರಿಸಿ ಸೆಲ್ಯೂಟ್ ಸ್ವೀಕರಿಸುವರು. ಸೈನ್ಯ ದಳದವರು, ಸಶಸ್ತ್ರ ರಿಸರ್ವ್ ಪೋಲೀಸರು, ಎನ್ ಸಿ ಸಿ ಭಾರತ ಸ್ಕೌಟುಗಳು ಮುಂತಾದವರು ಪೆರೇಡಿನಲ್ಲಿ ಭಾಗವಹಿಸುವರು

ಸೂಚನೆ

ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ

ಸ್ವಾತಂತ್ರ್ಯ ದಿನಾಚರಣ

ಮೈಸೂರು ೧೪

ಮೈಸೂರು ಯುವಜನ ಒಕ್ಕೂಟದವರು ಕೆಂಪು ನಂಜಾಂಬಾ ಅಗ್ರಹಾರದಲ್ಲಿ ನಾಳೆ ಬೆಳಿಗ್ಗೆ ೮ ಗಂಟೆಗೆ ಉತ್ಸವವನ್ನು ಆಚರಿಸುವರು. ಶ್ರೀ ಎಂ ಎಸ್ ಗುರುಪಾದಸ್ವಾಮಿಯವರು ಧ್ವಜಾರೋಹಣ ಮಾಡುವರು ಡಾ|| ಆರ್ ಗುರುರಾಜರವರ ಅಧ್ಯಕ್ಷತೆಯಲ್ಲಿ ಸಭೆ ಸಹ ನಡೆಯುವುದು

ರಾಜಧಾನಿಯ ಪೌರಸಭಾ ಮಾರ್ಕೆಟ್ ವರ್ತಕರ ಸಂಘದ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೭ ಗಂಟೆಗೆ ಭಾರತದ ೯ನೇ ಸ್ವಾತಂತ್ರ್ಯ ದಿನೋತ್ಸವವು ಆಚರಿಸಲ್ಪಡುವುದು ಸಂಘದ ಅಧ್ಯಕ್ಷರಾದ ಶ್ರೀ ಎ ಗೋಪಾಲರಾಯರು ಧ್ವಜಾರೋಹಣ ಮಾಡುವರು ಸದಸ್ಯರು ಮತ್ತು ಸಾರ್ವಜನಿಕರು ಭಾಗವಹಿಸಬೇಕೆಂದು ಕೋರಲಾಗಿದೆ

ಮೈಸೂರು ಮಂಡಿ ಮೊಹಲ್ಲಾ ಕಾಳಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ನಾಳೆ ಸಂಜೆ ೭ ಘಂಟೆಗೆ ಭದ್ರಾವತಿ ಶ್ರೀ ವೆಂಕಟೇಶದಾಸರಿಂದ ಗಾಯೊರಪ್ಪನ ಎಂಬ ಕಥೆಯನ್ನೂ, ಅಮ್ಮನವರಿಗೆ ಭ ರತಮಾತಾ ಅಲಂಕಾರವನ್ನೂ ಮೈಸೂರು ದೇವಾಂಗ ಸಂಘದವರು ಏರ್ಪಡಿಸಿರುತ್ತಾರೆ

ನಾಳೆ ಸ್ವಾತಂತ್ರ್ಯ ದಿನೋತ್ಸವದ ಸಂಬಂಧವಾಗಿ ಸರ್ಕಾರದವರು ರಾಜ್ಯಾದ್ಯಂತ ನಡೆಸಬೇಕಾದ ಕಾರ್ಯಕ್ರಮವನ್ನು ಗೊತ್ತುಪಡಿಸಿರುತ್ತಾರೆ ಅದರ ಪ್ರಕಾರ ಪೆರೇಡುಗಳು, ಸಾರ್ವಜನಿಕ ಸಭೆಗಳು ಮೆರವಣಿಗೆಗಳು ಮತ್ತು ಮಕ್ಕಳ ಕೂಟಗಳು ಮುಖ್ಯ ಪಟ್ಟಣಗಳಲ್ಲಿ ನಡೆಯುವವು ದೇವಸ್ಥಾನ ಮಸೀದಿ ಮತ್ತು ಚರ್ಚುಗಳಲ್ಲಿ ವಿಶೇಷ ಪೂಜೆ ಪ್ರಾರ್ಥನೆ ದಿನಗಳನ್ನು ನಡೆಸುವಂತೆ ಮುಜರಾಯಿ ಕಮೀಷನರರು ಸೂಚಿಸಿದ್ದಾರೆ

C T C PUBLICATIONS

ಸಿ ಟಿ ಸಿ ಪಬ್ಲಿಕೇಷನ್ಸ್ ಪ್ರಕಟಣೆಗಳು

ಗದಾಯುದ್ಧ ಸಂಗ್ರಹ

ನಾಗಾನಂದ ನಾಟಕ

ಇವುಗಳ ನೋಟ್ಸು ಮತ್ತು ಪ್ರಶ್ನೋತ್ತರಗಳು

ಬೆಲೆ 1 ‍೦ 0

Agents M/s J NANUMAL & SONS

— PUBLISHERS —

CITY TUTORIAL COLLEGE

Old Agrahar, Mysore

For Best Guidance to S S L C Exams Join C T C

ಕಾಸರಗೋಡು ಕೇರಳಕ್ಕೆ ಸೇರಿದ್ದಕ್ಕಾಗಿ ರಾಜೀನಾಮೆ

ಕಾಸರಗೋಡು ತಾಲ್ಲೂಕನ್ನು ಪೂರ್ತಿಯಾಗಿ ಕೇರಳಕ್ಕೆ ಒಪ್ಪಿಸುವುದನ್ನು ಪ್ರತಿಭಟಿಸಿ, ಲೋಕಸಭಾ ಸದಸ್ಯರಾಗಿರುವ ಬೆನಗಲ್ ಶಿವರಾಯರು ಕಾಂಗ್ರೆಸ್ ಪಕ್ಷದ ಸದಸ್ಯತ್ವಕ್ಕೆ ರಾಜೀನಾಮೆಯಿತ್ತಿರುವರು

ಬೆಂಗಳೂರು ರೇಡಿಯೋವಿನ ಸ್ವಾತಂತ್ರ್ಯ ದಿನೋತ್ಸವದ ಕಾರ್ಯಕ್ರಮ

ಬೆಳಿಗ್ಗೆ ೬-೩೦ ವಂದೇಮಾತರಂ ಮತ್ತು ಮಂಗಳವಾದ್ಯ ೭-೫ ದೆಹಲಿ ಧ್ವಜಾರೋಹಣ ಕಾರ್ಯಕ್ರಮದ ಪ್ರಸಾರ ೮ ೩೦ ಎಂ ವಿ ಮಾಲತಿ-ಕನ್ನಡ ಗೀತೆ ೮ ೩೦ ಎನ್ ಶ್ರೀನಿವಾಸ-ನಾಗಸ್ವರ ೯ ಗಂಗೂಬಾಯಿ ಹಾನಗಲ್ ಹಿಂದೂಸ್ತಾನಿ ಸಂಗೀತ ೧೨ ಎಂ ಆರ್ ಸರೋಜಿನಿದೇವಿ ಸಂಗೀತ ೧೨-೩೦ ಮಹಿಳೆಯರ ವಿಶೇಷ ಕಾರ್ಯಕ್ರಮ ೩-೧೫ ಬಾಲಜಗತ್ ಸಂಜೆ ೬ ಸಂಗೀತ ಮತ್ತು ಕಾವ್ಯದ ವಿಶೇಷ ಕಾರ್ಯಕ್ರಮ-(ಕನ್ನಡ ಸಾಹಿತ್ಯ ಪರಿಷನ್ಮಂದಿರದಲ್ಲಿ ನಡೆಯುವುದು) ಕವಿ ಸಮ್ಮೇಳನ-ಗೋಪಾಲಕೃಷ್ಣ ಅಡಿಗ ಬಸವರಾಜ ಕೃಷ್ಣಶರ್ಮ, ಕಯ್ಯಾರ ಕಿಞ್ಞಣ್ಣ ರೈ, ಸಿಂಪಿ ಲಿಂಗಣ್ಣ ಎಂ ವಿ ಸೀತಾರಾಮಯ್ಯನವರು ಭಾಗವಹಿಸುವರು ಪಿ ಕಾಳಿಂಗರಾವ್ ಎಂ ವಿ ಮಾಲತಿ ಮತ್ತು ಎಲ್ ಕೆ ಪದ್ಮಾವತಿಯವರಿಂದ ಕನ್ನಡಗೀತೆ

೭-೦ ಪಾರ್ಲಿಮೆಂಟ್ ಸ್ವಾತಂತ್ರ್ಯ ದಿನೋತ್ಸವದ ಬಗ್ಗೆ ವರದಿ ೭-೩೦ ಮುಖ್ಯ ಮಂತ್ರಿಗಳಿಂದ ಭಾಷಣ ೭-೪೦ ವೇದಘೋಷ ಮತ್ತು ಭಾರತವಂದನೆ-ದೆಹಲಿ ಪ್ರಸಾರ ೯ ೧೫ ಬೆಂಗಳೂರು ನಗರದಲ್ಲಿ ದಿನೋತ್ಸವದ ವರದಿ ಕೋಟಿ ನದಿ ರೈ ಕನ್ನಡ ಭಾಷಣ ೧೦ ಪಂಚ ವೀಣಾ- ಬಿ ದೊಡ್ಡಯ್ಯ, ಬಿ ಗುರುರಾಜಪ್ಪ ಪಿ ಭುವನೇಶ್ವರಯ್ಯ, ಕೆ ಎಸ್ ಅಳಗಿರಿಸ್ವಾಮಿ ಮತ್ತು ತಿರುಪತಿ ರಾಮಕೃಷ್ಣ, ಮೃದಂಗ ಎಂ ಎಲ್ ವೀರಭದ್ರಯ್ಯ, ಘಟಂ ಕೆ ಎಸ್ ಮಂಜುನಾಥ ೧೧ ಜನಗಣಮನ

Poly

BRONKOL

For ASTHMA & BRONCHITIS

Sole Distributors for Mysore State and Coorg

SATHYA & CO,

Chemists & Druggists

7III N S Street

BANGALORE 2

Edited Printed and Published by N R Nagaraja at Sadhvi Press D Subbiah Road, Mysore

THE NATIONAL LEAGUE

Ananthalaya Buildings Mysore

Offers excellent Coaching for S. S. L. C. Students

★ Special Coaching for Primary School Teachers,

★ Classes are in full swing

JOIN AT ONCE

Timings 5-30 P M to 8 30 P M

T Rajagopal Iyengar,

Organiser

ಯಜುರ್ವೇದ ಉಪಾಕರ್ಮಕ್ಕೆ ರಜಾ ಕೊಡಬೇಕು

ಈ ತಿಂಗಳು ೨೧ನೇ ತಾರೀಕು ನಡೆಯಲಿರುವ ಯಜುರ್ವೇದ ಉಪಾಕರ್ಮಕ್ಕೆ ಸಾರ್ವಜನಿಕ ರಜಾ ಕೊಡಲು ಸರ್ಕಾರದವರು ಏರ್ಪಾಡು ಮಾಡಬೇಕು ೨೦ನೇ ತಾರೀಖಿನಂದು ಋಗ್ವೇದ ಉಪಾಕರ್ಮಕ್ಕೆ ಮಾತ್ರ ಈಗ ರಜಾ ಪ್ರಕಟಿಸಲಾಗಿದೆ ಋಗ್ವೇದದವರಿಗಿಂತ ಯಜುರ್ವೇದಿಗಳ ಸಂಖ್ಯೆಯು ಅತ್ಯಂತ ಅಧಿಕವಾಗಿರುತ್ತದೆ ಕಳೆದ ವರ್ಷವೂ ಸಹಾ ಯಜುರ್ವೇದ ಉಪಾಕರ್ಮಕ್ಕೆ ಮೊದಲು ರಜಾವನ್ನು ಪ್ರಕಟಿಸಿರಲಿಲ್ಲ ಅನಂತರ ಅದನ್ನು ಮಂಜೂರು ಮಾಡಲಾಯಿತು ಸರ್ಕಾರದವರು ಈ ವಿಷಯಕ್ಕೆ ಕೂಡಲೇ ಗಮನ ಕೊಟ್ಟು ಯಜುರ್ವೇದ ಉಪಾಕರ್ಮಕ್ಕಾಗಿ ಇದೇ ೨೧ನೇ ತಾರೀಕು ಬ್ಯಾಂಕುಗಳೂ ಸೇರಿ ಸಾರ್ವಜನಿಕ ರಜಾವನ್ನು ಘೋಷಿಸಬೇಕು-ಎಂಬುದಾಗಿ ವಾಚಕರೊಬ್ಬರು ಮನವಿ ಮಾಡಿರುತ್ತಾರೆ

Sri Rama Sahaya Sangha

D Subbiah Road, Mysore

Excellent Coaching classes for

S. S. L. C. Students

By expert teachers daily between 8 & 10 A M and 6 & 8 P M

Join immediately

ಅಗ್ಗದ ದರದಲ್ಲಿ ಒಣ ಸೌದೆ

ಮಾರಾಟ

ರೂ 1-1-0 ಗೆ 2 3/4 ಮಣ ಒಣ ಸೌದೆಯನ್ನು ನಮ್ಮ ಅಂಗಡಿಯಲ್ಲಿ ಬಿಕರಿ ಮಾಡಲಾಗುತ್ತೆ

ಸ್ಥಳ ಅಂಬಳೆ ಅಣ್ಣಯ್ಯ ಪಂಡಿತರ ಛತ್ರದ ಹಿಂಭಾಗ

ಕಳೆದುಕೊಂಡ

ಮನುಷ್ಯತ್ವವನ್ನು

ಮತ್ತೆ ಪಡೆಯಬೇಕಾದರೆ

ಲೈಂಗಿಕ ಚಿಕಿತ್ಸಾ ಪ್ರವೀಣ

ಡಾ|| ರಾನಾರವರನ್ನು

ಭೇಟಿ ಮಾಡಿ

ಯಾವ ಕಾರಣಗಳಿಂದಾದರೂ ನೀವು ಕಳೆದುಕೊಂಡಿರುವ ಯೌವನ ಮತ್ತು ಶಕ್ತಿಗಳು ಮತ್ತೆ ನಿಮಗೆ ಸಂಪೂರ್ಣವಾಗಿ ಪ್ರಾಪ್ತವಾಗುವಂತೆ ಮಾಡುತ್ತಾರೆ ಆದ್ದರಿಂದ, ಆರೋಗ್ಯ, ಹಣ ಮತ್ತು ಕಾಲಗಳನ್ನು ಕಾಪಾಡಿಕೊಳ್ಳುವ ಸಲುವಾಗಿ ಅದಷ್ಟು ಜಾಗ್ರತೆ ಡಾ|| ರಾನಾರವರನ್ನು ಭೇಟಿ ಮಾಡಿರಿ

ಭೇಟಿಯ ಕಾಲ

ಬೆಳಿಗ್ಗೆ ೬ ರಿಂದ ೧೧ ಗಂಟೆ

ಮಧ್ಯಾಹ್ನ ೩ರಿಂದ ರಾತ್ರಿ ೯ ರವರೆಗೆ

ವಿಳಾಸ

ರಾನಾ ಮೆಡಿಕಲ್ ಹಾಲ್,

ನಂ 747 ಅಶೋಕಾ ರೋಡ್,

(ಮೈಸೂರು ಬ್ಯಾಂಕ್ ಮುಂಭಾಗದ ಖಾಲಿ ನಿವೇಶನದಿಂದ ಮೂರನೇ ಕಟ್ಟಡ)

ಮೈಸೂರು

ರಕ್ಷಾ ಸಲಹೆಗೆ ಜಪಾನ್ ತಿರಸ್ಕಾರ

ಪ್ರದೇಶಗಳಿಗೆ ಸಂಬಂಧಿಸಿದ ಪ್ರಶ್ನೆಗಳ ಬಗ್ಗೆ ರಷ್ಯವು ಮಾಡಿರುವ ಶಾಂತಿ ಒಪ್ಪಂದದ ಸಲಹೆಗಳನ್ನು ಜಪಾನಿನ ಮಂತ್ರಿಮಂಡಲವು ತಿರಸ್ಕರಿಸಿದೆ

ಒಲಿಂಪಿಯಾ ಟಾಕೀಸ್

ಅಮೋಘ ಪ್ರಾರಂಭ 15 8-56 ರಿಂದ

ಪ್ರತಿ ದಿನ ಮೂರು ಪ್ರದರ್ಶನ

ಸುಮಧುರವಾದ ಸಂಗೀತದಿಂದಲೂ ... ಪ್ರೇಮದಿಂದಲೂ ಕೂಡಿದ ಕಥಾ ಚಿತ್ರ

- ತಾಜ್ -

ಚಲನಚಿತ್ರ ಪ್ರಪಂಚದಲ್ಲಿ ಖ್ಯಾತಿಪಡೆದ ಕಲಾವಿದರಾದ ವೈಜಯಂತಿಮಾಲಾ ಪ್ರದೀಪ್ ಕುಮಾರ್ ನಟಿಸಿರುವ ಫಿಲಿಸ್ತಾನ್‌ರವರ ಹಿಂದಿ ಚಿತ್ರ

ನಿರ್ದೇಶನ ನಂದಲಾಲ್ ಜಸವಂತಲಾಲ್

ಸಂಗೀತ ಹೇಮಂತಕುಮಾರ್

SRI GAYATHRI TALKIES

Today Last Day

RAINS OF RANCHIPUR

From 15 8 56 For 2 Days

20th Century Fox's most powerful detective story ever seen

DOWN 3 DARK STREETS

(For Adults only)

Starring Broderick Crawford and Ruth Roman

ಮೈಸೂರಿನಲ್ಲಿ ಪ್ರತಿ ತಿಂಗಳು

17ನೇ ತಾರೀಖು

ಅತ್ಯ ವಿಖ್ಯಾತವಾಗಿರುವ

ನವರತ್ನ—ಕಲ್ಪ

ವಿಷ್ಯೌಷಧವನ್ನು ಕಂಡುಹಿಡಿದಿರುವ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂಪ್ರ ಭವನದಲ್ಲಿ

ಭೇಟಿ ಮಾಡಬಹುದು ಫೋನ್ ನಂ 590

— ಭೇಟಿಯ ಕಾಲ —

ಬೆಳಗ್ಗೆ 7 30 ರಿಂದ 12 30 ಮತ್ತು

ಮಧ್ಯಾಹ್ನ 4 ರಿಂದ 7 30

ಮೇಲಿನ ಕಾರ್ಯಕ್ರಮದ ಪಟ್ಟಿಯನ್ನು ಗಮನಿಸಿ ಅವರ ಉಚಿತ ಸ್ವದೇಶೀಯ ಸಲಹೆಯನ್ನು ಪಡೆಯಿರಿ

ಇವರು ಸಕಾಲಕ್ಕೆ ಸಂಯೋಗ ಸ್ಥಳದಲ್ಲಿರಲು ವಿಳಾಸದಲ್ಲಿ ಸಂಚರಿಸುವರು

ನವರತ್ನ ಕಲ್ಪ

ಉಪಯೋಗಿಸಿರಿ

ಇದು ವಜ್ರ, ಕೆಂಪು ಮುತ್ತು, ಹವಳ ಪಚ್ಚೆ ಗೋಮೇಧಿಕ ನೀಲ ವೈಡೂರ್ಯ ಮುತ್ತು ಪ್ರಶಸ್ತ ವಾದ ಮೊದಲಾದ 9 ಅಮೂಲ್ಯ ಸರಕುಗಳ ಸಂಯೋಗ ಇದರಿಂದ ನರಗಳ ದೌರ್ಬಲ್ಯ ಅಜೀರ್ಣ ಸಂಬಂಧದ ವ್ಯಾಧಿಗಳು, ಬೀಳ ಕೆಮ್ಮು, ಮೂಲವ್ಯಾಧಿ ನಾಶವಾಗಿ, ಬಹುಮೂತ್ರ ಅಶಕ್ತಿ ಮತ್ತು ನಷ್ಟ ಇತರ ಎಲ್ಲಾ ಹಳೆಯ ಹಾಗೂ ಹಟ ವಾದ ಬಾಯಿಲೆಗಳಿಗೆ ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಇದೊಂದೇ

NAVRATNA KALPA PHARMACY,

JULLUNDUR CITY (India)

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

15—8—56 ನೇ ಬುಧವಾರದಿಂದ

ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ಪದ್ಮಿನೀ ಪಿಕ್ಚರ್ಸ್‌ರವರ ತೆಲುಗು ಚಿತ್ರ

★ ಚಿರಂಜೀವಲು ★

ತಾರಾಗಣ - ಎನ್ ಟಿ ರಾಮಾರಾವ್ ಜಮುನ ಗುಮ್ಮಡಿ , ಶಿವರಾಮ ಸಾವಿತ್ರಿ ಮುಂತಾದವರು

ಡೈರೆಕ್ಟರ್ ವೇದಾಂತಂ ರಾಘವಯ್ಯ

ಎರಡು ವಾರಗಳ ಕಾಲ ಎಲ್ಲ ಬಗೆಯಾದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನೂ ಮನ್ನಾ ಮಾಡಲಾಗಿದೆ

ರಿಜಿಸ್ಟರ್ಡ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಅಂದಿನ ಪತ್ರಿಕೆ 3 ಕಾಸು

Eyes Tested Free
AND
Glasses Prescribed
Visit —
T. C. NATARAJ & Co.
Chemists & Opthalmic Opticians
MYSORE
Phone — 388

ಸಂಪುಟ : ೧೫] SADHVI : THURSDAY 16—8—1956 ಮೈಸೂರು : ಗುರುವಾರ ೧೬—೮—೧೯೫೬ [ಸಂಚಿಕೆ : ೧೪

ಕಡಿದಾಳ್ ಮಂಜಪ್ಪನವರು ಕಾಂ|| ಪಕ್ಷದ ನಾಯಕರು

ಹನುಮಂತಯ್ಯನವರ ರಾಜೀನಾಮೆ ಅಂಗೀಕಾರ

ನೂತನ ನಾಯಕರಾಗಿ ಕಡಿದಾಳ್ ಮಂಜಪ್ಪನವರ ಆಯ್ಕೆ

ಕಡಿದಾಳ್‌ರವರಿಗೆ ೬೩,
ಹನುಮಂತಯ್ಯನವರಿಗೆ ೩೩ ಓಟುಗಳು

ಸ್ವಂ ಸು ಫೋ] ಬೆಂಗಳೂರು ೧೬

ಗೊತ್ತಾಗಿದ್ದ ಕಾರ್ಯಕ್ರಮದ ಪ್ರಕಾರ ಈ ದಿನ ಬೆಳಗ್ಗೆ ರೆಸಿಡೆನ್ಸಿ ಭವನದಲ್ಲಿ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆ ಸೇರಿ, ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ರಾಜೀನಾಮೆಯನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು

ನೂತನ ನಾಯಕ ಸ್ಥಾನಕ್ಕೆ ಶ್ರೀ ಕಡಿದಾಳ್ ಮಂಜಪ್ಪನವರ ಹೆಸರನ್ನು ಶ್ರೀ ಟಿ ಮರಿಯಪ್ಪನವರು ಸೂಚಿಸಿದರು ಶ್ರೀ ಭೀಮಪ್ಪನಾಯಕರು ಅನುಮೋದಿಸಿದರು ಶ್ರೀ ಕೆ ಹನುಮಂತಯ್ಯನವರ ಹೆಸರನ್ನು ಶ್ರೀ ಸೋಲೂರು ಸಿದ್ದಪ್ಪನವರು ಸೂಚಿಸಿದರು ಶ್ರೀ ಪ್ರಭಾಕರ್‌ರವರು ಅನುಮೋದಿಸಿದರು ಶ್ರೀ ಕಡಿದಾಳ್‌ರವರಿಗೆ ೬೩ ಮತ್ತು ಶ್ರೀ ಹನುಮಂತಯ್ಯನವರಿಗೆ ೩೩ ಓಟುಗಳು ಬಂದು, ಶ್ರೀ ಕಡಿದಾಳ್‌ರವರು ನಾಯಕರಾಗಿ ಆರಿಸಲ್ಪಟ್ಟರು ಉಮೇದುವಾರರಿಬ್ಬರೂ ಓಟು ಮಾಡಲಿಲ್ಲ

ಶಿವಮೊಗ್ಗೆಯ ಶ್ರೀ ಎಸ್ ಆರ್ ನಾಗಪ್ಪಶೆಟ್ಟರು ಮಾತ್ರ ಗೃಹಕೃತ್ಯದ ಅನಿವಾರ್ಯದಿಂದ ಬಂದಿರಲಿಲ್ಲ

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಶ್ರೀ ಕೆ ಪಿ ಮಾಧವನ್‌ನಾಯರ್‌ರವರು ಸಭೆಯ ಕಾರ್ಯಕಲಾಪಗಳನ್ನು ನಡೆಸಿದರು ಓಟುಗಳ ಎಣಿಕೆಯು ರಹಸ್ಯವಾಗಿರುವುದೆಂದು ಅವರು ತಿಳಿಸಿದರು. ವಿಶೇಷ ಬಹುಮತವು ಶ್ರೀ ಕಡಿದಾಳ್ ಮಂಜಪ್ಪನವರಿಗೆ ಬಂದಿರುವುದರಿಂದ ಅದನ್ನೇ ಸರ್ವಾನುಮತವೆಂದು ಪರಿಗಣಿಸಬಹುದೆಂದೂ ಅವರು ತಿಳಿಸಿದರು

ರಾಜೀನಾಮೆಯು ಅಂಗೀಕಾರವಾದನಂತರ ಪುನಃ ತಾವು ಚುನಾವಣೆಗೆ ನಿಲ್ಲಲು ಸ್ವತಂತ್ರರಾಗಿರುವುದಾಗಿ ಶ್ರೀ ಹನುಮಂತಯ್ಯನವರು ನುಡಿದರು

ರೆಸಿಡೆನ್ಸಿ ಭವನದ ಹೊರಗಡೆ ವಿಶೇಷ ಜನಸಂದಣಿಯು ಸೇರಿದ್ದಿತು

ಮೆಡಿಕಲ್ ಕಾಲೇಜಿನ ಫಿಸಿಯಾಲಜಿ ಪ್ರೊಫೆಸರ್

ಬೆಂಗಳೂರು ವಿಕ್ಟೋರಿಯಾ ಆಸ್ಪತ್ರೆ ಅಫಿಷಿಯೇಟಿಂಗ್ ಸರ್ಜನ್ನರಾದ ಶ್ರೀ ಕೆ ಜಿ ಪಟ್ಲಕರ್‌ರವರನ್ನು ರಾಜಧಾನಿಯಲ್ಲಿರುವ ಮೆಡಿಕಲ್ ಕಾಲೇಜಿನ ಫಿಸಿಯಾಲಜಿ ಪ್ರೊಫೆಸರಾಗಿ ನೇಮಿಸಲಾಗಿದೆ

ಮುಖ್ಯ ಮಂತ್ರಿಯವರ ನೂತನ ಪರ್ಸನಲ್ ಅಸಿಸ್ಟೆಂಟ್

ಸರ್ಕಾರದ ವಾರ್ತಾ ಅಧಿಕಾರಿಗಳಾದ ಶ್ರೀ ಸಿ ಚೌಡಪ್ಪರೆಡ್ಡಿಯವರನ್ನು ಮುಖ್ಯ ಮಂತ್ರಿಯವರ ಪರ್ಸನಲ್ ಅಸಿಸ್ಟೆಂಟಾಗಿ ನೇಮಿಸಲಾಗಿದೆ

ಶ್ರೀ ಕಡಿದಾಳ್ ಮಂಜಪ್ಪನವರು

ಅಹಮದಾಬಾದಿನಲ್ಲಿ ಪುನಃ ಗುಂಡಿನೇಟಿನಿಂದ ಒಬ್ಬನ ಮರಣ

ಅಹಮದಾಬಾದಿನಲ್ಲಿ ಬುಧವಾರ ಸೊನ್ನೆ ಪೋಲೀಸರು ಗುಂಡು ಹಾರಿಸಿದಾಗ ... ಒಬ್ಬನು ಮೃತಪಟ್ಟನು ಊರಿನ ದಕ್ಷಿಣ ಭಾಗದಲ್ಲಿ ೧೪ ಗಂಟೆಗಳ ಕರ್ಫ್ಯೂವನ್ನು ವಿಧಿಸಲಾಯಿತು ಪೋಲೀಸರ ವಿರುದ್ಧದ ಕೂಗಾಟವನ್ನು ಹಾಕಿದ ಸಹಸ್ರಾರು ಜನರ ಮೇಲೆ ಅಶ್ರುವಾಯುವನ್ನು ಪ್ರಯೋಗಿಸಲಾಯಿತು ಮುಂದುವರಿಗೆ ಹೊರಟ ನೂರಾರು ಮಂದಿಯನ್ನು ಅಶ್ರುವಾಯು ಪ್ರಯೋಗದಿಂದ ಚದುರಿಸಲ್ಪಟ್ಟರು ಕಳೆದ ಭಾನುವಾರ ಗೋಲೀಬಾರಿನಲ್ಲಿ ಹುತಾತ್ಮರ ದಿನಾಚರಣೆಯು ನಡೆಯಿತು

ಬೆಂಗಳೂರಿನಲ್ಲಿ ಮುಖ್ಯ ಮಂತ್ರಿಯವರಿಂದ ರಾಷ್ಟ್ರಧ್ವಜಾರೋಹಣ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ಬೆಳಗ್ಗೆ ೯ನೇ ಸ್ವಾತಂತ್ರ್ಯೋತ್ಸವದ ಸಂಬಂಧವಾಗಿ ಸಂಪಂಗಿ ಸ್ಟೇಡಿಯಮ್ಮಿನಲ್ಲಿ ರಾಷ್ಟ್ರ ಧ್ವಜಾರೋಹಣ ಮಾಡಿದರು

ರೈಲಿಗೆ ಸಿಕ್ಕಿ ವಿದ್ಯಾರ್ಥಿಯ ಆತ್ಮಹತ್ಯೆ

ಮೊನ್ನೆ ಬೆಳಗ್ಗೆ ಜಲವಾಲದ ರಸ್ತೆ ಅಂಡರ್ ಬ್ರಿಡ್ಜ್ ಬಳಿ ರೈಲಿಗೆ ಸಿಕ್ಕಿ ಆತ್ಮಹತ್ಯೆ ಮಾಡಿಕೊಂಡವನು ಮರಿಮಲ್ಲಪ್ಪನವರ ಹಾಯ್ಸ್ಕೂಲಿನ ಉಪಾಧ್ಯಾಯರಾದ ಶ್ರೀ ಸಿ ಬಿ ಚೆನ್ನಬಸಪ್ಪ ಎಂಬುವರ ಮಗ ಎ ಸಿ ಶಂಕರ ಯೆಂದೂ, ಆವನು ಯುವರಾಜಾ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿದ್ದನೆಂದೂ ವರದಿಯಾಗಿದೆ ಮೃತನು ಕೆಲವು ದಿನಗಳ ಹಿಂದೆ ಮನೆ ಬಿಟ್ಟು ಹೋಗಿದ್ದು, ೨ ದಿನಗಳನಂತರ ವಾಪಸು ಬಂದಿದ್ದನು ಜೀವನದಲ್ಲಿ ಜಿಗುಪ್ಸೆಯೇ ಆತ್ಮಹತ್ಯೆಗೆ ಕಾರಣವೆಂದು ಹೇಳಲಾಗಿದೆ

ದೇವಸ್ಥಾನಕ್ಕೆ ಸಹಾಯಕ್ಕಾಗಿ ಮನವಿ

ತ್ಯಾಗರಾಜಾ ರಸ್ತೆಯಲ್ಲಿರುವ ಚಿಕ್ಕ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಮಾಸದ ಪ್ರಯುಕ್ತ, ಎಂದಿನಂತೆ ನಡೆಸುವ ವಿಶೇಷಪೂಜೆ ಉತ್ಸವಗಳಿಗಾಗಿ ಭಕ್ತ ಮಹಾಶಯರು ಧನ ಸಹಾಯ ಮಾಡುವಂತೆಯೂ, ದೇವಸ್ಥಾನದ ಮುಂಭಾಗದಲ್ಲಿ ಅದಕ್ಕಾಗಿ ಗೋಲಕವನ್ನು ಇಡಲಾಗಿರುತ್ತದೆಂದೂ ಭಕ್ತ ಮಂಡಲಿಯವರು ಕೋರಿರುತ್ತಾರೆ

ನಗರದಲ್ಲಿ ವೈಭವಪೂರಿತವಾದ ಸ್ವಾತಂತ್ರ್ಯ ದಿನಾಚರಣೆ

ಟೌನ್‌ಹಾಲಿನಲ್ಲಿ ಧ್ವಜಾರೋಹಣ, ಸೈನಿಕರ ಕವಾಯಿತು ಮತ್ತು ಬಹಿರಂಗ ಸಭೆ

ಮೈಸೂರು ೧೬

ಸ್ವಾತಂತ್ರ್ಯ ದಿನೋತ್ಸವವು ನೆನ್ನೆ ನಗರದಲ್ಲಿ ಅತಿ ವಿಶೇಷ ವೈಭವದಿಂದ ಆಚರಿಸಲ್ಪಟ್ಟಿತು ಅನೇಕ ಸಂಘ ಸಂಸ್ಥೆಗಳವರು ಉತ್ಸಾಹಭರಿತವಾದ ಕಾರ್ಯಕ್ರಮಗಳನ್ನು ಏರ್ಪಡಿಸಿದ್ದರು

ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಬೆಳಗ್ಗೆ ೯ ಗಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಧ್ವಜಾರೋಹಣವನ್ನು ಮಾಡಿದರು ಜಿಲ್ಲಾಧಿಕಾರಿಗಳಾದ ಶ್ರೀ ಎ ಎಸ್ ಶಂಕರರಾಯರು ಸೆಲ್ಯೂಟನ್ನು ಸ್ವೀಕರಿಸಿದರು ಸಂಸ್ಥಾನದ ಅಶ್ವ ದಳದವರೂ, ಕಾಲ್ಬಲದವರೂ, ಪೋಲೀಸ್ ತಂಡದವರೂ, ಭಾರತ ಸೇವಾದಳ, ಸ್ಕೌಟು, ರಾಮಕೃಷ್ಣಾಶ್ರಮದ ವಿದ್ಯಾರ್ಥಿಗಳು ಮುಂತಾದವರಿಂದ ಕವಾಯಿತು ನಡೆಯಿತು

ಶ್ರೀ ಎ ಕೃಷ್ಣಮೂರ್ತಿ ರಾಯರು ಭಾಷಣ ಮಾಡಿ ರಾಷ್ಟ್ರಧ್ವಜದ ಮಹತ್ವವನ್ನು ವಿವರಿಸಿ ೯ ವರ್ಷದ ಹಿಂದೆ ರಾಷ್ಟ್ರ ವೀರರುಗಳ ತ್ಯಾಗದಿಂದ ಸ್ಥಾಪಿತವಾದ ಸ್ವತಂತ್ರ ಭಾರತದ ಗಣರಾಜ್ಯವು ದಿನೇದಿನೇ ಹೇಗೆ ಪ್ರಗತಿಪಥದಲ್ಲಿ ಸಾಗುತ್ತಿರುವುದೆಂಬುದನ್ನು ವಿವರಿಸಿದರು ರಾಷ್ಟ್ರ ಪುನರ್ರಚನೆಯ ಕಾರ್ಯದಲ್ಲಿ ನಾಯಕರು ಹಾಕಿಕೊಟ್ಟಿರುವ ಮೇಲ್ಪಂಕ್ತಿಯನ್ನು ಎಲ್ಲರೂ ಅನುಸರಿಸಲು ದೃಢ ಸಂಕಲ್ಪ ಮಾಡಬೇಕೆಂದು ಕೋರಿದರು ನಗರದ ಶಾಲಾ ಬಾಲಕಬಾಲಕಿಯರೇ ಆದಿಯಾಗಿ ಆಬಾಲವೃದ್ಧರೂ ಸೇರಿ ಸುಮಾರು ೩೦ ಸಾವಿರ ಜನರು ನೆರೆದಿದ್ದರು

ಸಂಜೆ ಟೌನ್‌ಹಾಲ್ ಮೈದಾನದಲ್ಲಿ ಭಾರಿ ಬಹಿರಂಗ ಸಭೆ ಏರ್ಪಾಡಾಗಿದ್ದಿತು ೨೦ ಸಾವಿರಕ್ಕೂ ಮಿಗಿಲಾಗಿ ಬಾಲಕಬಾಲಕಿಯರೂ, ಮಹಿಳೆಯರೂ, ಮಹನೀಯರೂ ಸೇರಿದ್ದರು ಪೌರಸಭಾಧ್ಯಕ್ಷರಾದ ಶ್ರೀ ಎ ಕೃಷ್ಣಮೂರ್ತಿರಾಯರು ಅಗ್ರಾಸನವನ್ನು ವಹಿಸಿದ್ದರು

ಶ್ರೀಮತಿ ಗಿರಿಜಮ್ಮನವರಿಂದ ಮಂಗಳಾಚರಣೆಯಾದನಂತರ ವಿಶ್ವವಿದ್ಯಾಲಯದ ಉಪಾಧ್ಯಕ್ಷರಾದ ಶ್ರೀ ಕೆ ವಿ ಪುಟ್ಟಪ್ಪನವರು ಉಜ್ವಲವಾದ ಭಾಷಣ ಮಾಡಿದರು ರಾಷ್ಟ್ರಪಿತನಾದ ಮಹಾತ್ಮ ಗಾಂಧಿಯವರ ನೇತೃತ್ವದಲ್ಲಿ ಆದರ್ಶವಾದ ಮಾರ್ಗಾನುಸರಣೆಯಿಂದ ಭರತಖಂಡದಲ್ಲಿ ಸ್ವಾತಂತ್ರ್ಯ ಸಾಧನೆಯಾಗಿ, ಅನಂತರ ಪ್ರಜೆಗಳ ಆರ್ಥಿಕ ಮತ್ತು ಸಾಮಾಜಿಕ ಉನ್ನತಿಗಾಗಿ ನಡೆಸಲಾಗುತ್ತಿರುವ ಕಾರ್ಯಕ್ರಮಗಳನ್ನು ವಿವರಿಸಿ ಪ್ರಸ್ತಾಪಿಸಿದರು ಭಾರತದ ಸ್ವಾತಂತ್ರ್ಯವು ಜನರ ಅನ್ನವಸ್ತ್ರ ಸಮಸ್ಯೆಯನ್ನು ಬಗೆಹರಿಸುವುದರಲ್ಲಿ ಮಾತ್ರವೇ ಪರ್ಯವಸಾನವಾಗದೆ, ಇಡೀ ಜಗತ್ತಿನ ಕಲ್ಯಾಣಸಾಧನೆಗೆ ಸಹಾಯಕವಾಗಲೆಂದು ಅವರು ಹೈಸಿದರು

ಅನೇಕ ಮನರಂಜನೆಯ ಕಾರ್ಯಕ್ರಮಗಳು ಏರ್ಪಾಡಾಗಿದ್ದುವು ಎಂ ಎ ಆರ್ ಪಿ ಅಶ್ವದಳದವರಿಂದ ಸಾಹಸಮಯವಾದ ಕೌಶಲ್ಯಗಳು ಪ್ರದರ್ಶಿಸಲ್ಪಟ್ಟುವು ಶ್ರೀ ಹೆಚ್ ಎಸ್ ವೆಂ ...

ನೂತನ ಸರ್ಕಾರಿ ಪ್ಲೀಡರುಗಳು

ಮೈಸೂರು ೧೬

ಕೆಳಗೆ ಕಂಡ ವಕೀಲರನ್ನು ಸರ್ಕಾರಿ ಪ್ಲೀಡರುಗಳಾಗಿ ನೇಮಿಸಲಾಗಿದೆ – ಶ್ರೀಗಳಾದ ವಿ. ಕೆ ಗೋವಿಂದರಾಜುಲು-ಬೆಂಗಳೂರು ಜಿಲ್ಲೆ, ಪಿ ಎಂ ಚಿಕ್ಕಬೋರಯ್ಯ-ಮೈಸೂರು ಜಿಲ್ಲೆ, ಟಿ ಆರ್ ಚಂದ್ರಯ್ಯ ಹೆಗ್ಗಡೆ-ಚಿಕ್ಕಮಗಳೂರು ಜಿಲ್ಲೆ ಮತ್ತು ಶ್ರೀ ಎಸ್ ಬಿ ಸಾಡಿಗ್ ಚಿತ್ರದುರ್ಗ ಜಿಲ್ಲೆ

ಚಾಮರಾಜಪುರಂ ಅಂಚೆ ಕಛೇರಿಯಲ್ಲಿ ಸಾರ್ವಜನಿಕ ಟೆಲಿಫೋನ್

ರಾಜಧಾನಿಯ ಚಾಮರಾಜಪುರಂ ಅಂಚೆ ಕಛೇರಿಯಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಟೆಲಿಫೋನ್ ಒಂದನ್ನು ಕಳೆದ ೯ನೇ ತಾರೀಖಿನಿಂದ ಏರ್ಪಡಿಸಲಾಗಿದೆ

ರೈಲ್ವೆ ಕೆಲಸಗಾರರ ಸಭೆ

ದಕ್ಷಿಣ ರೈಲ್ವೆ ಕೆಲಸಗಾರರ ಸಂಘದ ಆಶ್ರಯದಲ್ಲಿ ಬಹಿರಂಗ ಸಭೆಯೊಂದನ್ನು ನಾಳೆ ಸಂಜೆ ೫-೩೦ಕ್ಕೆ ರೈಲ್ವೆ ಇನ್ಸ್ಟಿಟ್ಯೂಟಿನ ಮುಂಭಾಗದಲ್ಲಿ ಏರ್ಪಡಿಸಲಾಗಿದೆ

ನಗರದ ಪೌರಸಭಾ ಉಪ ಚುನಾವಣೆ

ಮುನಿಸಿಪಲ್ ಕೌನ್ಸಿಲರ್ ಸ್ಥಾನಕ್ಕೆ ನೇಮಕವಾದ ಶ್ರೀ ಪಿ ಎಲ್ ಕುಮಾರಸ್ವಾಮಿಯವರ ಸ್ಥಾನದಲ್ಲಿ ರಾಜಧಾನಿಯ ಪೌರಸಭೆಯ ಸದಸ್ಯ ಸ್ಥಾನಕ್ಕೆ ನಡೆಯುವ ಉಪ ಚುನಾವಣೆಯಲ್ಲಿ ಕಾಂಗ್ರೆಸ್ ಉಮೇದುವಾರರನ್ನು ಆಯ್ಕೆಮಾಡಲು ಪ್ರದೇಶ ಕಾಂಗ್ರೆಸ್ಸಿನ ಪಾರ್ಲಿಮೆಂಟರಿ ಸಮಿತಿಯು ನಿರ್ಧರಿಸಿ, ಉಮೇದುವಾರರನ್ನು ಆರಿಸಲು ಶ್ರೀ ಎಸ್ ಚನ್ನಯ್ಯನವರಿಗೆ ಅಧಿಕಾರವಿತ್ತಿದೆ

ಕಟ್ಟು ಅನೇಕ ವಿನೋದಪೂರಿತವಾದ ಹಲವು ಅಭಿನಯಗಳನ್ನು ಬಹಳ ಸ್ವಾರಸ್ಯವಾಗಿ ತೋರಿಸಿದರು ಅರಮನೆ ಪಲ್ಲವಿ ದಳದವರು ಗಾರುಡಿ ನೃತ್ಯಗಳನ್ನು ನಡೆಸಿದರು ರಾಜರಾಜೇಶ್ವರಿ ಗಾನ ಗೋಷ್ಠಿಯವರು ಸುಶ್ರಾವ್ಯವಾದ ಸಂಗೀತದಿಂದ ಸಭಿಕರನ್ನು ಆನಂದಗೊಳಿಸಿದರು ಶಿವಾಜಿ ದಳ, ಭಾರತ ಸ್ಕೌಟುಗಳು, ಭಾರತಸೇವಾದಳ ಮುಂತಾದವರು ತಮ್ಮ ಕೌಶಲ್ಯಗಳನ್ನು ಪ್ರದರ್ಶಿಸಿದರು

ಸಮಾರಂಭದಲ್ಲಿ ಭಾಗವಹಿಸಿದವರೆಲ್ಲರಿಗೂ ಅಧ್ಯಕ್ಷರು ಧನ್ಯವಾದಗಳನ್ನರ್ಪಿಸಿದನಂತರ ರಾಷ್ಟ್ರಗೀತೆಯೊಡನೆ ಸಭೆ ಮುಕ್ತಾಯವಾಯಿತು

ಅನಂತರ ನಡೆದ ಬಾಣಬಿರುಸುಗಳ ಪ್ರದರ್ಶನ ನಯನಮನೋಹರವಾಗಿದ್ದಿತು ಟೌನ್‌ಹಾಲ್ ಮೈದಾನವು ವರ್ಣರಂಜಿತವಾದ ವಿದ್ಯುದ್ದೀಪ ಮಾಲೆಗಳಿಂದ ಶೋಭಿಸುತ್ತಿತ್ತು

ಅರಮನೆ ಮತ್ತು ಕೋಟೆ ಎಲ್ಲವೂ ಸಹ ವಿದ್ಯುದ್ದೀಪಗಳಿಂದ ಬೆಳಗಿಸಲ್ಪಟ್ಟಿತ್ತು ಎಲ್ಲಾ ಸಾರ್ವಜನಿಕ ಮತ್ತು ಅನೇಕ ಖಾಸಗೀ ಕಟ್ಟಡಗಳ ಮೇಲೆ ರಾಷ್ಟ್ರಧ್ವಜವನ್ನು ಹಾರಿಸಲಾಗಿತ್ತು

ಬೆಳಗ್ಗೆ ಬಿಸಿಲಿನಿಂದ ಕೂಡಿ, ಸ್ವಲ್ಪ ಮಳೆಯಿಂದ ... ಸಂಜೆ ಸಮಾರಂಭವು ಅತ್ಯಂತ ಪ್ರಶಾಂತ ವಾತಾವರಣದಲ್ಲಿ ನೆರವೇರಿತು. ಈ ಸಾರಿಯ ಉತ್ಸವವು ಹಿಂದಿನ ವರ್ಷಗಳಿಗಿಂತಲೂ ಮಿಗಿಲು ... ವ್ಯವಸ್ಥಿತವಾಗಿದ್ದನ್ನು ಎಲ್ಲರೂ ಅಭಿನಂದಿಸಿದರು.

ಕೊಳ್ಳೇಗಾಲದ ಜನತೆಗೆ ಸ್ವಾಗತ

ಮೈಸೂರು ೧೬

ಪ್ರಜಾ ಸೋಷಲಿಸ್ಟ್ ಪಕ್ಷದ ನಗರ ಶಾಖೆಯ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಭಾನುವಾರ ಲೋಕಸಭಾ ಸದಸ್ಯ ಶ್ರೀ ಎಂ ಎಸ್ ಗುರುಪಾದಸ್ವಾಮಿಯವರ ಅಧ್ಯಕ್ಷತೆಯಲ್ಲಿ ಸೇರಿ ಕೇಂದ್ರ ಪಕ್ಷದ ಸದಸ್ಯರು, ಕೊಳ್ಳೇಗಾಲ ತಾಲ್ಲೂಕನ್ನು ಮೈಸೂರು ಜಿಲ್ಲೆಗೆ ಸೇರಿಸುವಂತೆ ಪ್ರಯತ್ನಿಸಿ ಫಲಪ್ರದವಾದುದಕ್ಕೆ ಅಭಿನಂದಿಸಿ, ಕೊಳ್ಳೇಗಾಲದ ಜನತೆಗೆ ಸುಸ್ವಾಗತವನ್ನು ಬಯಸಿತು. ಲೋಕಸಭೆಯಲ್ಲಿರುವ ಜಿಲ್ಲೆಯ ಪಕ್ಷದ ಸದಸ್ಯರ ಪ್ರಯತ್ನದ ಫಲವಾಗಿ, ಮೈಸೂರು ನಗರದಲ್ಲಿ ರೈಲ್ವೆ ಡಿವಿಜನ್ ಒಂದನ್ನು ಸ್ಥಾಪಿಸುವಂತೆ ಮಾಡಿ, ನಗರದ ಪ್ರಾಮುಖ್ಯತೆಯನ್ನು ಉಳಿಸಿಕೊಟ್ಟ ಬಗ್ಗೆ ಸಂತೋಷ ಸೂಚಿಸಲಾಯಿತು. ಜಿಲ್ಲೆಯಲ್ಲಿ, ಬರುವ ಚುನಾವಣೆಗೆ ಪಿ ಎಸ್ ಪಿ ಕಾರ್ಯಕರ್ತರು ಪೂರ್ಣ ಸಹಕಾರ ನೀಡಬೇಕೆಂದು ಕೋರಲಾಯಿತು. ನಗರದ ಪಿ ಎಸ್ ಪಿ ಪಕ್ಷದಲ್ಲಿ ಸಾಮೂಹಿಕವಾದ ಸದಸ್ಯ ಸಂಗ್ರಹಣಾ ವಾರವನ್ನು ೨೦-೮-೫೬ ರಿಂದ ಆಚರಿಸಬೇಕೆಂದು ತೀರ್ಮಾನಿಸಲಾಯಿತು.

ಚಿತ್ರ ಗೀತಾ ಸ್ಪರ್ಧೆ

ನಗರದ ಛಾಯಾ ... ಕಳೆದ ಭಾನುವಾರ ... ಅವರ ಅಧ್ಯಕ್ಷತೆಯಲ್ಲಿ ಮುಕ್ತವಾದ ಚಿತ್ರಗೀತಾ ಸ್ಪರ್ಧೆ ... ಪ್ರಿಯರ ಸಂಘದವರು ... ಏರ್ಪಡಿಸಿದ್ದ ಈ ಸ್ಪರ್ಧೆಯಲ್ಲಿ ಭಾಗವಹಿಸಿದ್ದರು. ಮೊದಲನೆಯ ಬಹುಮಾನವು ನಂಜನಗೂಡಿನ ಶ್ರೀ ಕೆ ವೆಂಕಟೇಶರವರಿಗೂ, ಎರಡನೇ ಬಹುಮಾನವು ಮೈಸೂರಿನ ಪ್ರಿಯಂವದಾ ... ಮತ್ತು ನಾರಾಯಣರವರಿಗೂ ತೃತೀಯ ಬಹುಮಾನವು ಶ್ರೀ ... ರವರಿಗೂ ... ಬಹುಮಾನವು ಎಸ್ ಲಕ್ಷ್ಮೀನರಸಿಂಹಸ್ವಾಮಿಯವರಿಗೂ ಬಂದಿವೆ.

ನಗರದಲ್ಲಿ ಭೂದಾನ ಪ್ರಚಾರ

ವ್ಯಾಪಕ ... ಭೂದಾನ ಯಜ್ಞ ಸಮಿತಿಯವರು ಕಳೆದ ಭಾನುವಾರ ನಗರದ ... ಭೂದಾನ ಪ್ರಚಾರ ಕಾರ್ಯವನ್ನು ನಡೆಸಿದರು. ಶ್ರೀ ... ತಗಡೂರು ರಾಮಚಂದ್ರರಾವ್, ಎಂ ಶ್ರೀ ... ಮೂರ್ತಿ, ಎಸ್ ಎಸ್ ... ಎಸ್ ... ಸ್ವಾಮಿ, ಎಸ್ ವಿ ... ಮುಂತಾದವರು ಭಾಗವಹಿಸಿದ್ದರು.

ರಾಘವೇಂದ್ರ ಸ್ವಾಮಿಗಳವರ ಆರಾಧನೆ

ಮೈಸೂರು ೧೬

ರಾಜಧಾನಿಯ ಸುಬ್ಬರಾಯನಕೆರೆ ಬಳಿ ಇರುವ ಶ್ರೀ ರಾಘವೇಂದ್ರ ಮಠ ಮತ್ತು ಕೃಷ್ಣಮೂರ್ತಿಪುರದಲ್ಲಿರುವ ಅಭಿನವ ಮಂತ್ರಾಲಯದಲ್ಲಿ ಇದೇ ತಿಂಗಳು ೨೨, ೨೩ ಮತ್ತು ೨೪ನೇ ತಾರೀಕು ಶ್ರೀಮದ್ರಾಘವೇಂದ್ರ ಸ್ವಾಮಿಗಳವರ ಆರಾಧನಾ ಮಹೋತ್ಸವವು ಜರುಗುವುದು. ಉತ್ಸವಕ್ಕೆ ಮಹಾ ಜನರು ಧನಧಾನ್ಯ ಸಹಾಯ ಮಾಡುವಂತೆ ಉಭಯ ಸಂಸ್ಥೆಗಳವರೂ ಕೋರಿರುತ್ತಾರೆ.

ಜ್ಯೋತಿಷ್ಯ–ಸಾಮುದ್ರಿಕಾ ಸಂಶೋಧನಾ ಕೇಂದ್ರ

ಜ್ಯೋತಿಷ್ಯ ಮತ್ತು ಸಾಮುದ್ರಿಕಾ ಶಾಸ್ತ್ರಗಳಲ್ಲಿ ಸಂಶೋಧನೆಯನ್ನು ನಡೆಸುವ ಉದ್ದೇಶದಿಂದ ನಗರದ ಕೃಷ್ಣಮೂರ್ತಿಪುರದ ೧೩೬ನೇ ನಂಬರು ಮನೆಯಲ್ಲಿ ಜ್ಯೋತಿಷ್ಯ-ಸಾಮುದ್ರಿಕಾ ಸಂಶೋಧನಾ ಕೇಂದ್ರವೊಂದನ್ನು ಆರಂಭಿಸಲಾಗಿದೆ. ನಮ್ಮ ಸಂಸ್ಕೃತಿಯ ಹೆಮ್ಮೆಗೆ ಕಾರಣವಾಗಿರುವ ಈ ಎರಡು ಶಾಸ್ತ್ರಗಳ ಮಹತ್ವವನ್ನು ಅರಿತು, ಅವುಗಳಲ್ಲಿ ವಿವಾದಾಸ್ಪದವಾದ ವಿಷಯಗಳನ್ನು ಸ್ಪಷ್ಟಗೊಳಿಸಲು ಸಂಶೋಧನೆಯು ಅಗತ್ಯವಾಗಿರುವುದರಿಂದ ವಿದ್ವಾಂಸರು ಈ ವಿಚಾರದಲ್ಲಿ ಆಸಕ್ತಿ ವಹಿಸುವುದು ಅಗತ್ಯವೆಂದೂ, ಆಸಕ್ತರಾದವರು ತಮ್ಮ ಹಸ್ತದ ಮುದ್ರೆ, ಜಾತಕಗಳ ನಕಲುಗಳನ್ನು ಮೇಲ್ಕಂಡ ವಿಳಾಸಕ್ಕೆ ಬೆಳಗ್ಗೆ ೭ರಿಂದ ೧೦ ಘಂಟೆಯೊಳಗೆ ತಲುಪಿಸಬೇಕೆಂದೂ ಕೋರಲಾಗಿದೆ. ವಿವಾಹ ಪ್ರಯತ್ನ ನಡೆಸುತ್ತಿರುವ ತಂದೆತಾಯಿಗಳು ಗಂಡುಹೆಣ್ಣುಗಳ ಜಾತಕಗಳನ್ನು ತರಬಹುದೆಂದೂ ಸೂಚಿಸಲಾಗಿದೆ.

ಗಾಯತ್ರಿ ಚಿತ್ರ ಮಂದಿರಕ್ಕೆ ಮಹಾರಾಜರ ಭೇಟಿ

ಶ್ರೀಮನ್ಮಹಾರಾಜರು ರಾಜಮನೆತನದವರೊಡನೆ ನೆನ್ನೆ ಬೆಳಗ್ಗೆ ಇಲ್ಲಿನ ಗಾಯತ್ರಿ ಚಿತ್ರ ಮಂದಿರಕ್ಕೆ ಭೇಟಿಯಿತ್ತಿದರು. ಅವರಿಗಾಗಿ 'ರೋಸ್ ಆಫ್ ಕಾಂಟರ್ಬರಿ' ಎಂಬ ಚಿತ್ರದ ವಿಶೇಷ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ಸೂಯೆಜ್ ಸಮ್ಮೇಳನದಲ್ಲಿ ಭಾಗವಹಿಸಲು ಲಂಡನ್ನಿಗೆ ನೆಹರೂ

ಸೂಯೆಜ್ ಬಗ್ಗೆ ಈ ದಿನದಿಂದ ಲಂಡನ್ನಿನಲ್ಲಿ ಸೇರುವ ೨೨ ರಾಷ್ಟ್ರಗಳ ಸಮ್ಮೇಳನದಲ್ಲಿ ನೆಹರೂರವರು ಭಾಗವಹಿಸಬೇಕಾಗಿಬರಬಹುದೆಂದು ದೆಹಲಿಯ ವಾರ್ತೆಯು ತಿಳಿಸಿದೆ. ಸೂಯೆಜ್ ಕಾಲುವೆ ಸಮೀಪಕ್ಕೆ ಸೈನ್ಯಗಳ ರವಾನೆಯು ಆಗುತ್ತಲೇ ಇರುವುದರಿಂದ ಅಂತರ ರಾಷ್ಟ್ರೀಯ ಪರಿಸ್ಥಿತಿಯು ವಿಪರೀತಕ್ಕಿಟ್ಟುಕೊಂಡು ಬಿಕ್ಕಟ್ಟನ್ನು ಪರಿಹರಿಸಲು ನೆಹರೂರವರೇ ಖುದ್ದಾಗಿ ಭಾಗವಹಿಸಬೇಕಾಗಿಬರಬಹುದೆಂದೂ, ೨-೩ ದಿನಗಳಿಗಾದರೂ ಸಹ ನೆಹರೂರವರು ಲಂಡನ್ನಿಗೆ ತೆರಳಬಹುದೆಂದೂ ಹೇಳಲಾಗಿದೆ.

ಸ್ವಾತಂತ್ರ್ಯ ದಿನೋತ್ಸವ

ರಾಜಧಾನಿಯ ಸರಸ್ವತಿ ವಿದ್ಯಾರ್ಥಿ ಸಂಘದವರು ಶ್ರೀರಾಮಪೇಟೆಯ ಗುರುರಾಜವಿಲಾಸದಲ್ಲಿ ನಾಳೆ ಸಂಜೆ ೩½ ಗಂಟೆಗೆ ಸ್ವಾತಂತ್ರ್ಯ ದಿನೋತ್ಸವವನ್ನು ನೆರವೇರಿಸುವರು. ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು. ಸಾಹಿತಿ ಕೆ ಎಸ್ ಮೂರ್ತಿಯವರು ಭಾಷಣ ಮಾಡುವರು.

ಬ್ಯಾಸ್ಕೆಟ್ ಬಾಲ್ ಪಂದ್ಯ

ಸ್ವಾತಂತ್ರ್ಯ ದಿನಾಚರಣೆಯ ಅಂಗವಾಗಿ ಕಳೆದ ಸೋಮವಾರ ನಡೆದ ಬ್ಯಾಸ್ಕೆಟ್ ಬಾಲ್ ಪಂದ್ಯದಲ್ಲಿ ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗಿನ 'ಎ' ಟೀಮಿನವರು ಯುವರಾಜಾ ಕಾಲೇಜಿನವರನ್ನು ೩೭-೨೮ ಪಾಯಿಂಟುಗಳಿಂದಲೂ, ಅದೇ ಇನ್ಸ್ಟಿಟ್ಯೂಟಿನ 'ಬಿ' ಟೀಮಿನವರು ಸಿ ಪಿ ಸಿ ವೃತ್ತಿ ಶಿಕ್ಷಣಾಲಯದವರನ್ನು ... ಪಾಯಿಂಟುಗಳಿಂದಲೂ ಸೋಲಿಸಿದರು.

ವಿಜಯಾ ಶಿಶುವಿಹಾರ

2368/3 ಕಾಂತರಾಜ ಅರಸ್ ರಸ್ತೆ,
ಕೆ ಜಿ ಕೊಪ್ಪಲ್, ಚಾಮರಾಜಪುರಂ,
ಮೈಸೂರು

ಮೇಲ್ಕಂಡ ಶಿಶುವಿಹಾರವು ಈ ತಿಂಗಳ 17ನೇ ತಾರೀಖು ಶುಕ್ರವಾರ ಪ್ರಾರಂಭವಾಗುತ್ತದೆ. ಸದರಿ ಪ್ರದೇಶದ ನಿವಾಸಿಗಳು ಈ ಸದವಕಾಶವನ್ನು ಉಪಯೋಗಿಸಿಕೊಂಡು, ಸಂಸ್ಥೆಯ ಪ್ರಯೋಜನ ಪಡೆದು ಪ್ರೋತ್ಸಾಹಿಸಬೇಕಾಗಿ ಕೋರಲಾಗಿದೆ.

ಎಲಿಸಿಯಮ್ಮ,
ಶಾರದಮ್ಮ,
ಜಂಟಿ ಕಾರ್ಯದರ್ಶಿಗಳು

Poly
BRONKOL
For ASTHMA
&
BRONCHITIS
Sole Distributors for Mysore State and Coorg
SATHYA & CO,
Chemists & Druggists
71/1 A. S Street,
BANGALORE 2

The Cauvery Valley Paper Mills Ltd.,
(IN LIQUIDATION)

S ... Square, Mysore
14th Aug 56

SALE NOTICE

Offers are invited for the purchase of the undermentioned articles, till Wednesday the 22nd August 1956 up to 6 P M

Jelly, Wooden trusses assorted bolts & nuts, teakwood pieces, C I Pulley, canteen vessels, Shell Verena grease angle irons, GM gland, brass pipes, pipe bends and collars'

For particulars, rules and conditions of sale please contact the undersigned

S. Sanjeeviah, *B A., B Com. B L*
Y S Lingaiah, *B A, B L,*
Official Liquidators,

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತವಾಗಿರುವ

ನವರತ್ನ—ಕಲ್ಪ

ವಿದ್ಯೆಯನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 590
ಭೇಟಿಯ ಕಾಲ —
ಬೆಳಗ್ಗೆ 7 30 ರಿಂದ 12 30 ರವರೆಗೆ
ಮಧ್ಯಾಹ್ನ 4 ರಿಂದ 7 30
ಸೋರಿಕೆ ಕಾಯಿಲೆಗಳು ... ಅವರ ... ಸ್ವತಃ ಕಾಣಬಹುದು
ನವರತ್ನ ಕಲ್ಪ
... ಇದು ... 9 ಅಮೂಲ್ಯ ಪದಾರ್ಥಗಳ ಯೋಗ ... ಪ್ರಯೋಜನಕಾರಿ ... ದಾಯಕವಾದ ಔಷಧ ಇದೊಂದೇ

NAVRATNA KALPA PHARMACY,
JULLUNDUR CITY (India)

S S L C COACHING CLASSES

* ★ 70 per cent passes in June Exams
* ★ Morning Session 7 to 11 A M
* ★ Evening Session 5 to 9 P M
* ★ Expert tuition by experienced teachers

Classes in full swing
All subjects Rs 6 P.M
CITY TUTORIAL COLLEGE,
Old Agrahar, Mysore

C T C PUBLICATIONS
ಇಂಟರ್ ಮೀಡಿಯೆಟ್ ಪಠ್ಯ ಪುಸ್ತಕಗಳು
ಗದಾಯುದ್ಧ ಸಂಗ್ರಹ
ನಾಗಾನಂದ ನಾಟಕ
ಪ್ರತಿಯೊಂದಕ್ಕೆ ... ಬೆಲೆ 1-2-0
Agents M/s J NANUMAL & SONS
— *PUBLISHERS* —
CITY TUTORIAL COLLEGE
Old Agrahar, Mysore
For Best Guidance to S S L C Exams Join C T C

ರಾಜಕಮಲ್, ಮೈಸೂರು
15-8-56 ರಿಂದ ಪ್ರತಿದಿನ 3 ಆಟಗಳು
ಎ ವಿ ಎಂ ರವರ ತೆಲುಗು ಚಿತ್ರ
★ **ಸಂಘಂ** ★
ವೈಜಯಂತಿಮಾಲಾ
ಎನ್ ಟಿ ರಾಮರಾವ್ ಅಭಿನಯಿಸಿದ
17-8-56 ರಿಂದ 3 ದಿನ ಬೆಳಗಿನ ಪ್ರದರ್ಶನಗಳು
THE VEILS OF BAGDAD
(Technicolor)

ಸ್ವಾತಂತ್ರ್ಯೋತ್ಸವ ರಿಯಾಯಿತಿ
ಗಾಂಧೀಜಿ
ಮತ್ತು
ಆಚಾರ್ಯ ವಿನೋಬ
ಇವರ ಅಮೂಲ್ಯ ಕೃತಿಗಳು
(ಇಂಗ್ಲಿಷ್ ಮತ್ತು ಕನ್ನಡದಲ್ಲಿ)
ಮತ್ತು ಇತರ ಸರ್ವೋದಯ ಸಾಹಿತ್ಯ ಗ್ರಂಥಗಳಿಗೆ
ತಾ|| 15-8-56 ರಿಂದ 27-8-56ರವರೆಗೆ
ರೂ ಗೆ 2 ಆಣೆ ರಿಯಾಯಿತಿಯುಂಟು
ಚೇತನ ಪುಸ್ತಕಾಲಯ,
ಮೈಸೂರು

ಮೈಸೂರು ಸಿಟಿ ನುರದ ಗಾಣದ ಎಣ್ಣೆ ಕೈಗಾರಿಕಾಗಾರರ ಕೋ-ಆಪರೇಟಿವ್ ಸೊಸೈಟಿ ಲಿಮಿಟೆಡ್

ವಾಣಿವಿಲಾಸ ರೋಡು, (ಮಾಧವರಾವ್ ಸರ್ಕಲ್ ಬಳಿ)

ಗಾಣದ ಎಣ್ಣೆಯಿಂದ ತಯಾರಿಸಿದ ತಿಂಡಿ ಪದಾರ್ಥಗಳು ರುಚಿಕರವಾಗಿರುವುದಲ್ಲದೆ ಆರೋಗ್ಯಕರವಾಗಿಯೂ ಇರುವುದು. ತಾ|| 17-8-56 ರಿಂದ ಎಣ್ಣೆಯ ದರಗಳು ಕೆಳಕಂಡಂತಿರುತ್ತವೆ

	ದರ	ಬೆಳೆ ಸಹಾಯ	ನಿಗದಿ ಬೆಲೆ
ಕಡಲೆಕಾಯಿ ಎಣ್ಣೆ ವೀಸೆ 1ಕ್ಕೆ	2 1 6	0 1 6	2 3 1
ಹುಚ್ಚೆಳ್ಳೆಣ್ಣೆ	2 1 6	0 1 6	2 6 0
ಅಚ್ಚೆಳ್ಳೆಣ್ಣೆ	3 7 0	0 1 6	1 5 6

ಯಾವಾಗ ಬಂದರೂ ಊಟ ಮಾಡುವವರಿಗೆ ರಿಯಾಯಿತಿ ದರ ಏರ್ಪಡಿಸಿ
ಪ್ರತ್ಯೇಕ ರುಚಿಯಾದ ಊಟಕ್ಕೂ ಮತ್ತು ಆರೋಗ್ಯಕರವಾದ
ಹಾಗೂ ಅನುಕೂಲವಾದ ರೂಮುಗಳಿಗೆ ಒಮ್ಮೆ ಭೇಟಿ ಕೊಡಿ.
ಭಾನುವಾರ ಸ್ಪೆಷಲ್ ಊಟವನ್ನು ಸಹ ಏರ್ಪಡಿಸಿರುತ್ತೇ

★ ನ್ಯೂ ಚಾಮುಂಡೇಶ್ವರಿ ಕೆಫೆ

ಫೋನ್ . 511 ಪ್ರೊಪ್ರೈಟರ್ : ಸಿ. ಜಿ ಎಂ ಚಂದ್ರಯ್ಯ ಇರ್ವಿನ್ ರಸ್ತೆ, ಮೈಸೂರು

Printed, Printed and Published by R. N... at Sadhvi Press, D... Road, Mysore

ರಿಜಿಸ್ಟರ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಫೋ — 388
[illegible] ಪತ್ರಿಕೆಗಳನ್ನು
ಒದಗಿಸಲಾಗುತ್ತದೆ

ಟಿ. ಸಿ. ನಟರಾಜ್ ಅಂಡ್ ಕೋ.,
ದಿಪತ್ರಿ ಮತ್ತು ಪತ್ರಿಕೆಗಳ
ವ್ಯಾಪಾರಿಗಳು
ಮೈಸೂರು

ಸಂಪುಟ : ೦೫] SADHVI : FRIDAY 17-8-1956 ಮೈಸೂರು : ಶುಕ್ರವಾರ ೧೭-೮-೧೯೫೬ [ಸಂಚಿಕೆ : ೫೫

ಹನುಮಂತಯ್ಯನವರ ಮಂತ್ರಿಮಂಡಲದ ರಾಜೀನಾಮೆ

ರಾಷ್ಟ್ರದ ಸ್ವಾತಂತ್ರ್ಯ ದಿನೋತ್ಸವ
ದೆಹಲಿ ಮತ್ತು ಮದ್ರಾಸಿನಲ್ಲಿ ಸಮಾರಂಭಗಳು

ರಾಷ್ಟ್ರದ ೯ನೇ ಸ್ವಾತಂತ್ರ್ಯ ದಿನೋತ್ಸವವು ನೆನ್ನೆ ರಾಷ್ಟ್ರಾದ್ಯಂತ ವೈಭವದಿಂದ ಆಚರಿಸಲ್ಪಟ್ಟಿತು. ಮದ್ರಾಸಿನಲ್ಲಿ ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ಸಮಾರಂಭದ ಅಂಗವಾಗಿ ನಡೆದ ಪೆರೇಡಿನಲ್ಲಿ ಸಲ್ಯೂಟನ್ನು ಸ್ವೀಕರಿಸಿದರು. ರಕ್ಷಣಾ ದಳಗಳು, ವಿಶೇಷ ಸಶಸ್ತ್ರ ಪೋಲೀಸರು [illegible] ಎನ್. ಸಿ. ಸಿ. [illegible] ಸಮಾರಂಭದಲ್ಲಿ ಭಾಗವಹಿಸಿದ್ದರು. ರಾಷ್ಟ್ರಾಧ್ಯಕ್ಷರು ತಮ್ಮ ಕುದುರೆ ಗಾಡಿಯಲ್ಲಿ ಮೆರವಣಿಗೆಯಲ್ಲಿ ಬಂದರು. ದೆಹಲಿಯನ್ನು ಬಿಟ್ಟರೆ [illegible] ಮೆರವಣಿಗೆಯಲ್ಲಿ ರಾಷ್ಟ್ರಾಧ್ಯಕ್ಷರು ಕೂಡಿದ್ದು ಇದೇ ಮೊದಲು.

ದೆಹಲಿಯಲ್ಲಿ ಪ್ರಧಾನಿ ನೆಹರೂರವರು ನೆನ್ನೆ ಬೆಳಿಗ್ಗೆ ಕೆಂಪುಕೋಟೆ ಮೇಲೆ ರಾಷ್ಟ್ರಧ್ವಜಾರೋಹಣ ಮಾಡಿ, ಜನತೆಯು ಗಾಂಧೀಜಿಯವರ ಶಾಂತಿ ಮಾರ್ಗವನ್ನು ಅನುಸರಿಸಬೇಕೆಂದು ತಿಳಿಸಿದರು. ಮುಖ್ಯ ಮುಖ್ಯ ವಿಚಾರಗಳನ್ನು ನಿರ್ಧಾರ ಮಾಡಲು ಪುಂಡತನಕ್ಕೆ ಯುವಕರು ಕೈಹಾಕಬಾರದೆಂದು ಅವರು ಸೂಚಿಸಿದರು. ಸ್ಥೈನ್ಯ, ನೌಕಾ ಮತ್ತು ವಿಮಾನ ಬಲಗಳ ದಳಗಳವರು ನೆಹರೂರವರಿಗೆ ಗೌರವವನ್ನು ತೋರಿಸಿದರು. [illegible] ತೋಪುಗಳನ್ನು ಹಾರಿಸಲಾಯಿತು. ಅದಕ್ಕೆ ಮುಂಚೆ ನೆಹರೂರವರ ಮಹಾತ್ಮಾ ಗಾಂಧಿಯವರ ಸಮಾಧಿಗೆ ಹೋಗಿ ರಾಷ್ಟ್ರಪಿತನಿಗೆ ಗೌರವವನ್ನು ಸೂಚಿಸಿದರು.

ಸಮಾರಂಭದಲ್ಲಿ ಭಾಗವಹಿಸಿದ್ದವರಲ್ಲಿ ಉದಯಪುರದ ಮಹಾರಾಣಾ ಭಾಗವತ ಸಿಂಹಜಿಯವರೂ ಒಬ್ಬರು. ಅವರ ಪೂರ್ವಿಕರಾದ ರಾಣಾ ಪ್ರತಾಪ ಸಿಂಹರು ೩೫೦ ವರ್ಷಗಳ ಹಿಂದೆ ದೆಹಲಿಯ ಕೆಂಪುಕೋಟೆಯು ವಿದೇಶೀಯರ ಅಧಿಕಾರದಲ್ಲಿರುವವರೆಗೆ ಉದಯಪುರದ ರಾಜರುಗಳು ಬರುವುದಿಲ್ಲವೆಂದು ಪ್ರತಿಜ್ಞೆ ತೊಟ್ಟಿದ್ದ ಮೇಲೆ ಇದೇ ಮೊದಲಾಗಿ ಆ ವಂಶದವರು ಕೆಂಪುಕೋಟೆಗೆ ಬಂದಿದ್ದರು.

ಹೆಚ್. ವಿ. ಕಾಮತ್‌ರವರ ಬಂಧನ

ಭಾರತದ ಪ್ರಜಾ ಸಮಾಜವಾದಿ ಪಕ್ಷದ ನಾಯಕರೂ, ಲೋಕಸಭಾ ಸದಸ್ಯರೂ ಆದ ಹೆಚ್. ವಿ. ಕಾಮತ್‌ರವರನ್ನೂ, ಬೊಂಬಾಯಿ ಶಾಸನಸಭಾ ಸದಸ್ಯ [illegible] ಅವರನ್ನೂ ನೆನ್ನೆ ಅಹಮದಾಬಾದು ಪೋಲೀಸರು ಕರ್ಪ್ಯೂ ಆಜ್ಞೆಯ ಉಲ್ಲಂಘನೆಗಾಗಿ ಬಂಧಿಸಿದರು.

ಹರಿಕಥೆ

ಸೀತಾವಿಲಾಸ ಛತ್ರದಲ್ಲಿರುವ ಶ್ರೀ ಪ್ರಸನ್ನ ರಾಮಸೇವಕರ ದೇವಸ್ಥಾನದಲ್ಲಿ ಈ ದಿವಸ ಶುಕ್ರವಾರ ರಾತ್ರಿ ೮ ಗಂಟೆಗೆ ವಿ. ಎಸ್. ಕೃಷ್ಣಯ್ಯಂಗಾರ್ಯರಿಂದ ಪ್ರಹ್ಲಾದ ಚರಿತ್ರೆ ಎಂಬ ಹರಿಕಥೆಯು ನಡೆಯುವುದು.

ಮುಖ್ಯ ಮಂತ್ರಿಪಟ್ಟಕ್ಕೆ ರಾಜೀನಾಮೆಯಿತ್ತಿರುವ

ಶ್ರೀ ಕೆ. ಹನುಮಂತಯ್ಯನವರು

ನೂತನ ಮೈಸೂರು ಪ್ರಾಂತಕ್ಕೆ ಒಂದೇ ಪ್ರದೇಶ ಕಾಂ|| ಸಮಿತಿ
ಕೆ. ಪಿ. ನಾಥರ್ ನಾಯರ್‌ರವರ ಸೂಚನೆ

ಬೆಂಗಳೂರು ೧೭

ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಭಾಗವಹಿಸಲು ನೆನ್ನೆ ಆಗಮಿಸಿದ ಪ್ರಧಾನ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ ಕೆ. ಪಿ. ಮಾಧವನ್ ನಾಯರ್‌ರವರು ನೆನ್ನೆ ಇಲ್ಲಿನ ಪ್ರದೇಶ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರನ್ನು ಉದ್ದೇಶಿಸಿ ಮಾತನಾಡಿ, ನೂತನ ಕನ್ನಡ ಪ್ರಾಂತ್ಯಕ್ಕೆ ಒಂದೇ ಪ್ರದೇಶ ಕಾಂಗ್ರೆಸ್ ಸಮಿತಿಯು ಇರಬೇಕೆಂದು ಹೈಕಮಾಂಡು ನಿರ್ಧರಿಸಿರುವುದೆಂದು ತಿಳಿಸಿದರು. ಮೈಸೂರು, ಕರ್ನಾಟಕ ಮತ್ತು ಹೈದರಾಬಾದು ಪ್ರದೇಶಗಳಲ್ಲಿ [illegible] ಪ್ರಾದೇಶಿಕ ಸಮಿತಿಗಳಿರುವುವೆಂದೂ, ಈ ಸಮಿತಿಗಳವರು ಸೇರಿ ನೂತನ ಪ್ರದೇಶ ಸಮಿತಿ ಅಧ್ಯಕ್ಷರನ್ನು ಆರಿಸಬೇಕೆಂದೂ ತಿಳಿಸಿದರು. [illegible] ನಾಟಕದವರು ಅಧ್ಯಕ್ಷರಾದರೆ, ಮೈಸೂರಿನವರು ಉಪಾಧ್ಯಕ್ಷರಾಗುವರೆಂದೂ ಅಥವಾ ಮೈಸೂರಿನವರು ಅಧ್ಯಕ್ಷರಾದರೆ ಕರ್ನಾಟಕದವರು ಉಪಾಧ್ಯಕ್ಷರಾಗುವರೆಂದೂ ಅವರು ಹೇಳಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ನಾಗಸ್ವರ [illegible] ಮಧ್ಯಾಹ್ನ [illegible] ಚಿತ್ರ ಚಿಕ್ಕವರ— ಸಂಗೀತ [illegible] ರಿಕಾರ್ಡು [illegible] ಮಕ್ಕಳ ಕಾರ್ಯಕ್ರಮ [illegible] ಮತ್ತು [illegible] ಹೆಚ್ [illegible] ಸಂಗೀತ [illegible] ಮಕ್ಕಳ ಯೋಗಕ್ಷೇಮ [illegible] ಭಾಷಣ [illegible] ರೇಡಿಯೋ ನ್ಯೂಸ್ ರೀಲ್ [illegible] ಪ್ರಸಾರ [illegible] ಕಾರ್ಯಕ್ರಮ [illegible]

ನವೆಂಬರ್‌ವರೆಗೆ ನೂತನ ನಾಯಕರ ಅಧಿಕಾರಾವಧಿ
ಪಕ್ಷದ ಸಭೆಯಲ್ಲಿ ಮಾಧವನ್ ನಾಯರ್‌ರವರ ವಿವರಣೆ

ಬೆಂಗಳೂರು ೧೭

ನೆನ್ನೆ ನಡೆದ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ನೂತನ ನಾಯಕರ ಆಯ್ಕೆ ಸಂಬಂಧವಾಗಿ ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಕೆ. ಪಿ. ಮಾಧವನ್ ನಾಯರ್‌ರವರು ವಿವರಣೆ ನೀಡುತ್ತ ನೂತನ ನಾಯಕರ ಅಧಿಕಾರಾವಧಿಯು ನವೆಂಬರ್ ೧ರ ವರೆಗೆ ಮಾತ್ರ ಇರುವುದೆಂದು ತಿಳಿಸಿದರು. [illegible] ಕನ್ನಡ ಪ್ರಾಂತ್ಯ [illegible] ಪ್ರದೇಶಗಳ ಶಾಸನ ಸಭೆಯ ಕನ್ನಡ ಪ್ರತಿನಿಧಿಗಳ [illegible] ಕಾಂಗ್ರೆಸ್ ಸದಸ್ಯರ ಸಭೆಯು ನವೀನ ಮುಖಂಡರನ್ನು ನಾಯಕರನ್ನಾಗಿ ಆರಿಸಲಾಗುವುದೆಂದು ಅವರು ತಿಳಿಸಿದರು.

ಶ್ರೀ ಹನುಮಂತಯ್ಯನವರು ಮಾತನಾಡಿ, ತಮ್ಮ ರಾಜೀನಾಮೆಯನ್ನು ಒಪ್ಪಬೇಕೆಂದೂ, ತಮ್ಮ ಹೆಸರನ್ನು ಯಾರಾದರೂ ಸೂಚಿಸಿದರೆ ತಾವು ನಾಯಕತ್ವಕ್ಕೆ ಸ್ಪರ್ಧಿಸುವುದಿಲ್ಲವೆಂದೂ ಹೇಳಿದರು.

ಶ್ರೀ ಮಂಜಪ್ಪನವರು ಮಾತನಾಡಿ, ತಾವು ನಾಯಕರಾಗುವ ಭಾವನೆಯೇ ಇರಲಿಲ್ಲವೆಂದೂ, ಅವರಲ್ಲೂ ಶ್ರೀ ಹನುಮಂತಯ್ಯನವರೊಡನೆ ಸ್ಪರ್ಧಿಸುವ ವಿಷಯವು ಗೊತ್ತಿರಲಿಲ್ಲವೆಂದೂ ತಿಳಿಸಿ ಸಕಲರ ಸಹಕಾರವನ್ನು ಕೋರಿದರು. ಕಾಂಗ್ರೆಸ್ಸಿನಲ್ಲಿರುವ ಎರಡು ಪಕ್ಷಗಳವರಿಗೂ ತಾವು ಬೇಕಾದವರೆಂದು ಹೇಳಿದರು.

ನಾಳೆ ರಾಜಪ್ರಮುಖರೊಡನೆ ನೂತನ ನಾಯಕರ ಭೇಟಿ

ಮೈಸೂರು ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಚುನಾಯಿತರಾಗಿರುವ ಶ್ರೀ ಕಡಿದಾಳ್ ಮಂಜಪ್ಪನವರು ನಾಳೆ ರಾಜಪ್ರಮುಖರನ್ನು ಮೈಸೂರಿನಲ್ಲಿ ಭೇಟಿ ಮಾಡಲಿರುವರೆಂದು ಗೊತ್ತಾಗಿದೆ. ಸರ್ಕಾರದ ಪ್ರಧಾನ ಕಾರ್ಯದರ್ಶಿ ಶ್ರೀ ಎನ್. ಪುಟ್ಟರಂಗಸ್ವಾಮಿಯವರು ನೂತನ ನಾಯಕರನ್ನು ನಿನ್ನೆ ಸಂದರ್ಶಿಸಿ ಮಂತ್ರಿಮಂಡಲ ರಚನಾ ವಿಧಾನವನ್ನು ಅವರಿಗೆ ವಿವರಿಸಿದರು.

ಶ್ರೀ ಕಡಿದಾಳ್ ಮಂಜಪ್ಪನವರು ಪತ್ರಿಕಾ ಪ್ರತಿನಿಧಿಗಳೊಡನೆ ಮಾತನಾಡಿ, ತಾವು ನಾಯಕರಾಗುವರೆಂಬುದನ್ನು ನೆನ್ನೆ ಬೆಳಿಗ್ಗಿನವರೆಗೆ ಅರಿತೇ ಇರಲಿಲ್ಲವೆಂದೂ, ತಮ್ಮನ್ನು ಜನಪ್ರಿಯ [illegible] ಹೇಳಿದರು.

ಮುಖ್ಯ ಮಂತ್ರಿಯವರಿಂದ ಅಧಿಕೃತ ನಿವಾಸದ ತ್ಯಾಗ

ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ನೆನ್ನೆ ತಮ್ಮ ಅಧಿಕೃತ ನಿವಾಸ [illegible] ನಿವಾಸವನ್ನು ತ್ಯಜಿಸಿ, ಕುಟುಂಬ ಸಮೇತ [illegible] ಕಬ್ಬನ್‌ಪೇಟೆಯಲ್ಲಿರುವ ತಮ್ಮ ಸ್ವಂತ ಮನೆಗೆ ತೆರಳಿದರು.

ಮಂತ್ರಿ ಮಂಡಲದ ರಾಜೀನಾಮೆ
ನೂತನ ನಾಯಕರ ಚುನಾವಣೆ ಪರಿಣಾಮ

ಸ್ವಂ ವ ಪ್ರೋ॥] ಬೆಂಗಳೂರು ೧೭

ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರ ರಾಜೀನಾಮೆಯು ಅಂಗೀಕಾರವಾದುದರ ಪರಿಣಾಮವಾಗಿ ಮಂತ್ರಿ ಮಂಡಲದ ಎಲ್ಲಾ ಸದಸ್ಯರೂ ತಮ್ಮ ರಾಜೀನಾಮೆಗಳನ್ನು ಸಲ್ಲಿಸಿರುವರು. ಇದನ್ನು ರಾಜಪ್ರಮುಖರಿಗೆ ಒಪ್ಪಿಸಿದನಂತರ ಹೊಸ ನಾಯಕರಾದ ಶ್ರೀ ಕಡಿದಾಳ್ ಮಂಜಪ್ಪನವರು ತಮ್ಮ ಮಂತ್ರಿ ಮಂಡಲದ ಸದಸ್ಯರ ಪಟ್ಟಿಯನ್ನು ರಾಜಪ್ರಮುಖರಿಗೆ ಒಪ್ಪಿಸುವರು.

ಪ್ರಪ್ರಥಮ ಭಾರತೀಯ ರೈಲು ಗಾಡಿ

ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರಪ್ರಸಾದರು ೧೪ರ ಮಂಗಳವಾರ ಮದ್ರಾಸಿನಲ್ಲಿ ಇಂಟೆಗ್ರಲ್ ಕೋಚ್ ಕಾರ್ಖಾನೆಯಲ್ಲಿ ತಯಾರಾದ ಪ್ರಪ್ರಥಮ ಭಾರತೀಯ ರೈಲು ಗಾಡಿಯನ್ನು ಉಪಯೋಗಕ್ಕೆ ಬಿಡುವ ಸಮಾರಂಭವನ್ನು ನೆರವೇರಿಸಿದರು. ಒಂದು ಗುಂಡಿಯನ್ನು ಒತ್ತಿದಾಗ ಗಾಡಿಯು ಹೊರಕ್ಕೆ ಬಂದಿತು.

ಲಂಡನ್ ಸಮ್ಮೇಳನಕ್ಕೆ ಪ್ರತಿಭಟನೆ: ಅರಬ್ ರಾಷ್ಟ್ರಗಳಲ್ಲಿ ಮುಷ್ಕರ

ಸೂಯೆಜ್ ಬಗ್ಗೆ ನಡೆಯುತ್ತಿರುವ ಲಂಡನ್ ಸಮ್ಮೇಳನದ ಪ್ರತಿಭಟನೆಗಾಗಿ ನೆನ್ನೆ ಈಜಿಪ್ಟಿನ ಸಾರಿಯಿಂದ ಹಿಡಿದು ಅಟ್ಲಾಂಟಿಕ್ ಸಾಗರದವರೆಗೆ ಇರುವ ಎಲ್ಲಾ ಅರಬ್ ರಾಷ್ಟ್ರಗಳಲ್ಲಿಯೂ ಒಂದು ದಿನದ ಸಾರ್ವತ್ರಿಕ ಮುಷ್ಕರವನ್ನು ಹೂಡಲಾಯಿತು. [illegible] ಈಜಿಪ್ಟಿನಲ್ಲಿ ಮುಷ್ಕರವು ಅತ್ಯಂತ ಯಶಸ್ವಿಯಾಯಿತು. ಅಲ್ಲದೆ ಸೂಯೆಜ್ ಕಾಲುವೆ ಮೂಲಕ ಸಂಚಾರಕ್ಕೆ ಅಡ್ಡಿ ಮಾಡಲಿಲ್ಲ. [illegible] ಲಕ್ಷ ನೌಕರರು ಕೆಲಸಕ್ಕೆ ಹಾಜರಾಗಲಿಲ್ಲ.

ಲಂಡನ್ನಿನಲ್ಲಿ ಸೂಯೆಜ್ ಸಮ್ಮೇಳನದ ಆರಂಭ

ಸೂಯೆಜ್ ಕಾಲುವೆ ಸಮಸ್ಯೆ ಬಗ್ಗೆ ಚರ್ಚಿಸಲು ಲಂಡನ್ನಿನಲ್ಲಿ ೨೨ ರಾಷ್ಟ್ರಗಳ ಸಮ್ಮೇಳನವು ಆರಂಭವಾಯಿತು. ಬ್ರಿಟನ್ನಿನ ಪ್ರಧಾನಿ ಈಡನ್ನರು ಆರಂಭ ಮಾಡಿ, ದ್ವಿತೀಯ ಮಹಾ ಯುದ್ಧದಿಂದೀಚೆಗೆ ಅತ್ಯಂತ ಕಠಿಣವಾದ ಬಿಕ್ಕಟ್ಟನ್ನು ವಿಶ್ವವು ಎದುರಿಸಬೇಕಾಗಿರುವುದೆಂದು ತಿಳಿಸಿದರು. ಅಮೇರಿಕದ ವಿದೇಶಾಂಗ ಮಂತ್ರಿ ಡಲ್ಲೆಸ್‌ರವರು [illegible] ಸೂಯೆಜ್ ಕಾಲುವೆ [illegible] ಅಂತರ್ ರಾಷ್ಟ್ರೀಕರಣಕ್ಕಾಗಿ ೮ ಅಂಶಗಳ ಸೂತ್ರವನ್ನು ಮಂಡಿಸಿದರು.

○ ಬೆಂಗಳೂರಿನಲ್ಲಿರುವ ಡೆಪ್ಯುಟಿ ಪೋಸ್ಟ್ ಮಾಸ್ಟರ್ ಶ್ರೀ ಸಿ. ಅಪ್ಪಾಜಿಯವರಿಗೆ ರಾಷ್ಟ್ರಾಧ್ಯಕ್ಷರ ಪದಕವನ್ನು ಪ್ರಶಸ್ತಿಯಾಗಿ ಕೊಡಲಾಗಿದೆ. ಬೆಂಗಳೂರು ಸ್ಪೆಷಲ್ ಬ್ರಾಂಚ್ ಎ. ಎಸ್. ಪಿ. ಯವರಾದ ಶ್ರೀ ಪಿ. ಎಸ್. ಲಿಂಗಪ್ಪನವರಿಗೆ ಪೋಲೀಸು ಪದಕವನ್ನು ಕೊಡಲಾಗಿದೆ.

ನಗರದಲ್ಲಿ ಸ್ವಾತಂತ್ರ್ಯ ದಿನಾಚರಣೆ ಸಮಾರಂಭಗಳು

ಮೈಸೂರು ೧೬

ಮೊನ್ನೆ ನಗರದ ನಾನಾ ಸಂಸ್ಥೆಗಳಲ್ಲಿ ಸ್ವಾತಂತ್ರ್ಯ ದಿನವನ್ನು ವೈಭವದಿಂದ ಆಚರಿಸಲಾಯಿತು

ವರ್ತಕರ ಅಸೋಸಿಯೇಷನ್ನಿನವರ ಸಮಾರಂಭದಲ್ಲಿ ... ಸದಸ್ಯ ಶ್ರೀ ಎಂ ಎಸ್ ... ಸ್ವಾಮಿಯವರು ಭಾಷಣ ಮಾಡಿದರು ಪುರಸಭಾ ಉಪಾಧ್ಯಕ್ಷ ಶ್ರೀ ಜಿ ಆರ್ ರಂಗಸ್ವಾಮಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀಮತಿ ನಾಗರತ್ನ ಮತ್ತು ಉಷಾದೇವಿಯವರಿಂದ ಗಾಯನವೂ, ಶ್ರೀಗಳಾದ ಕೆ ಸುಬ್ಬಣ್ಣ ಮತ್ತು ರಾಮಣ್ಣನವರಿಂದ ಭಾಷಣಗಳೂ ನಡೆದುವು

ಹನುಮಾನ್ ಸಂಘದ ಆಶ್ರಯದಲ್ಲಿ ದಿನಾಚರಣೆಯು ಸಿವಿಲ್ ಅಂಡ್ ಮಿಲಿಟರಿಯಲ್ ಪ್ರೋಗ್ರೆಸ್ ಸಂಘದಲ್ಲಿ ಶ್ರೀ ಪಿ ವಿ ಗೋಪಾಲರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಟಿ ಎಸ್ ನಾಗರಾಜರಾಯರಿಂದ ಸ್ವಾಗತ ಮತ್ತು ಸಂಘದ ಸ್ಥಾಪಕರಾದ ಶ್ರೀ ಪುರುಷೋತ್ತಮರವರಿಂದ ವಂದನಾರ್ಪಣೆ ಮತ್ತು ಸಿಹಿತಿಂಡಿ ವಿನಿಯೋಗಗಳು ನಡೆದುವು

ಸಾರ್ವಜನಿಕ ವಿದ್ಯಾನಿಲಯದಲ್ಲಿ ... ಮೊನ್ನೆ ಧ್ವಜ ... ಧ್ವಜಾರೋಹಣ ಮತ್ತು ಶ್ರೀ ... ವಾಸುದೇವಮೂರ್ತಿಯವರ ಅಧ್ಯಕ್ಷತೆಯ ... ಮತ್ತು ... ಭಾಷಣ ... ಧರ್ಮ, ಮುಂತಾದ ... ಗೌರವ ಮತ್ತು ... ದಿವ್ಯ ... ನಡೆಯಿತು ... ಮಹಾತ್ಮರೆಲ್ಲರನ್ನೂ ... ಅವರು ... ಇಂದ್ರಜನನವರು ... ಏರ್ಪಡಿಸಿದ್ದರು

ಸುಬ್ಬರಾಯನಕೆರೆಯಲ್ಲಿರುವ ... ಶ್ರೀ ... ರಂಗಯ್ಯನವರ ಅಧ್ಯಕ್ಷತೆಯಲ್ಲಿ ಸೇರಿದ್ದ ಮಕ್ಕಳು ... ಸೆಕೆಯೂ ಮತ್ತು ವಿಜಯಲಕ್ಷ್ಮಿ ... ಅವರನ್ನು ಅನುಸರಿಸಬೇಕೆಂದು ಅವರು ತಿಳಿಸಿದರು ಸಂಜೆ ಶ್ರೀ ಎಸ್ ರಾಮಗೋಪಾಲರ ಅಧ್ಯಕ್ಷತೆಯಲ್ಲಿ ಮನರಂಜನೆ ಕಾರ್ಯಕ್ರಮಗಳು ನಡೆದು, ಬಾಲಕ ಕೃಷ್ಣಮೂರ್ತಿ ಮತ್ತು ಬಾಲಕಿ ಪದ್ಮಿನಿಯವರಿಗೆ ಮೊದಲನೇ ಸ್ಥಾನಗಳು ಬಂದುವು

ಮಹಿಳಾಸದನದಲ್ಲಿ ನಡೆದ ಸಮಾರಂಭಕ್ಕೆ ಪತ್ರಿಕಾ ... ಶ್ರೀ ... ನಾಥರವರು ಅಧ್ಯಕ್ಷರಾಗಿದ್ದರು ಪ್ರಾರ್ಥನೆ ಮತ್ತು ಸ್ವಾಗತ ಭಾಷಣಾನಂತರ ಶ್ರೀಮತಿ ಸುಭದ್ರರವರಿಂದ ಸುಶ್ರಾವ್ಯವಾದ ವೀಣಾವಾದನವು ನಡೆಯಿತು ಸ್ವರಾಜ್ಯದಲ್ಲಿ ಸ್ತ್ರೀಯರ ಕರ್ತವ್ಯವನ್ನು ಕುರಿತು ಅಧ್ಯಕ್ಷರು ವಿವರಿಸಿದರು.

ಶ್ರೀ ... ನಿಕೇತನದಲ್ಲಿರುವ ... ಯುನಿಯನ್ನಿನ ಆಶ್ರಯದಲ್ಲಿ ದಿನಾಚರಣೆಯು ಶ್ರೀ ಎಸ್ ಕೆ ... ರಾಯರ ಅಧ್ಯಕ್ಷತೆಯಲ್ಲಿ

ವಿಜಯಾ ಶಿಶುವಿಹಾರ

2366/ಎ ಕಾಂತರಾಜ ಅರಸ್ ರಸ್ತೆ,
ಕೆ ಜಿ ಕೊಪ್ಪಲ್ ಚಾಮುಂಡಿಪುರಂ,
ಮೈಸೂರು

ಮೇಲ್ಕಂಡ ಶಿಶುವಿಹಾರವು ಈ ತಿಂಗಳು 17ನೇ ತಾರೀಖು ಶುಕ್ರವಾರ ಪ್ರಾರಂಭವಾಗುತ್ತದೆ ಸದರಿ ಪ್ರದೇಶದ ನಿವಾಸಿಗಳು ಈ ಸದವಕಾಶವನ್ನು ಉಪಯೋಗಿಸಿಕೊಂಡು, ಸಂಸ್ಥೆಯ ಪ್ರಯೋಜನ ಪಡೆದು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ

ವಿಶಾಲಮ್ಮ,
ಶಾರದಮ್ಮ,
ಜಂಟಿ ಕಾರ್ಯದರ್ಶಿಗಳು

Edited, Printed and Published by A. N. ... rajan at Sadhvi Press ... 3rd Road, Mysore.

ಮಹಾ ಚುನಾವಣೆ ಬುಲೆಟಿನ್

ಬೆಂಗಳೂರಿನ ಸುಪ್ರಸಿದ್ಧ ಕಾಂಗ್ರೆಸ್ ಕಾರ್ಯಕರ್ತರಾದ ಶ್ರೀ ಜಿ ಆರ್ ಸ್ವಾಮಿಯವರು ಮಹಾ ಚುನಾವಣಾ ಬುಲೆಟಿನ್ ಎಂಬ ಕನ್ನಡ ಪೈಕ್ಷಿಕ ಪತ್ರಿಕೆಯೊಂದನ್ನು ಹೊರಡಿಸಿರುತ್ತಾರೆ ಅದರ ಪ್ರಥಮ ಸಂಚಿಕೆಯು ನಮ್ಮ ಕೈಸೇರಿದೆ ಮತದಾರರು ಮತ್ತು ಉಮೇದುವಾರರಿಗೆ ಚುನಾವಣಾ ಕಾನೂನುಕಟ್ಟಳೆಗಳನ್ನು ವಿವರಿಸುವುದೇ ಇವರ ಮುಖ್ಯೋದ್ದೇಶ ಈ ಉದ್ದೇಶ ಸಫಲವಾಗಲೆಂದು ಹಾರೈಸುತ್ತೇವೆ ಬೆಲೆ ೦ ೨ ೦

ದೇವಿ ಭಾಗವತ ಪುರಾಣ ವಾಚನ

ಒಯನಗುವಳ್ಳಿಯುವ ಶ್ರೀ ಕೌಂಡಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ದಸ್ರಾ ವತಿ ಪ್ರಯುಕ್ತ ನಾಳೆ ಸಂಜೆ ೬ ೩೦ ಘಂಟೆಗೆ ಗಾ॥ ವಿ॥ ಬಿ ಎಸ್ ಎಸ್ ಕೌಶಿಕ್‌ರವರಿಂದ ದೇವಿ ಭಾಗವತ ಪುರಾಣ ವಾಚನವನ್ನು ವಿ॥ ಭಾರತ ಕೆ ಕೃಷ್ಣರಾಯರ ವ್ಯಾಖ್ಯಾನದೊಡನೆ ಏರ್ಪಡಿಸಿದ್ದಾರೆ

ಆರಂಭ ಭಾಷಣ

ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ವಿದ್ಯಾರ್ಥಿ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ ೬ ಘಂಟೆಗೆ ಡಾ॥ ಎಂ ವಿ ಕೃಷ್ಣರಾಯರು ಮಾಡಲಿರುವರು ಜಿಲ್ಲಾಧಿಕಾರಿ ಶ್ರೀ ಎಂ ಎಸ್ ಶಂಕರರಾಯರು ಅಧ್ಯಕ್ಷತೆ ವಹಿಸುವರು

ಸಮಾಜವಾದಿಗಳ ಸಭೆ

ನಗರದ ಸಮಾಜವಾದಿ ಪಕ್ಷದ ಕಾರ್ಯಕರ್ತರ ಸಭೆಯು ನಾಳೆ ಸಂಜೆ ೪ ಗಂಟೆಗೆ ಇಲ್ಲಿನ ಸೆಂಟ್ರಲ್ ಹೋಟೇಲಿನಲ್ಲಿ ಸೇರುವುದು ಪಕ್ಷದ ಎಲ್ಲ ಕೆಲಸಗಾರರೂ ಬರಬೇಕೆಂದು ಕೋರಲಾಗಿದೆ

ಬೀಗದ ಕೈ ಗೊಂಚಲು ಸಿಕ್ಕಿದೆ

ಮೂರು ದಿನಗಳ ಹಿಂದೆ ವಿ ಜೆ ... ಮಾರ್ಕೆಟ್ ಚೌಕದ ಬಳಿ ಬೀಗದ ಕೈ ಗೊಂಚಲೊಂದು ಸಿಕ್ಕಿದೆ ಮಾಲೀಕರು ಗುರುತು ಕೊಟ್ಟು ಸಾಧ್ವಿ ಪತ್ರಿಕಾಲಯದಿಂದ ಪಡೆಯಬಹುದು

ನೆರವೇರಿತು ಶ್ರೀ ಎಂ ಯಾಮುನಾಚಾರ್ಯರು ಮಾತನಾಡಿ, ಭಾರತೀಯ ಸಂಸ್ಕೃತಿಯ ಸಿಂಹಾವಲೋಕನ ಮಾಡಿದರು ಕಾರ್ಯದರ್ಶಿ ಶ್ರೀ ಎಸ್ ಪದ್ಮನಾಭಾಚಾರ್ಯರವರು ಅಧ್ಯಕ್ಷತೆ ವಹಿಸಿದ್ದರು ರಾಷ್ಟ್ರಗೀತೆ ಮತ್ತು ಸಿಹಿ ತಿಂಡಿ ವಿನಿಯೋಗಗಳಾದುವು

ರಾಮಾನುಜಾ ರಸ್ತೆಯಲ್ಲಿರುವ ತರುಣರ ಸಂಘದಲ್ಲಿ ಬೆಳಗ್ಗೆ ಶ್ರೀ ಎ ಕೃಷ್ಣಮೂರ್ತಿರಾಯರು ಧ್ವಜಾರೋಹಣ ಮಾಡಿದರು ಶ್ರೀ ವಾಸುದೇವರಾಜುರವರು ಅಧ್ಯಕ್ಷತೆ ವಹಿಸಿದರು ಮಕ್ಕಳಿಗೆ ಸಿಹಿ ತಿಂಡಿ ವಿನಿಯೋಗವಾಯಿತು ಸಂಜೆ ವಿವಿಧ ಸ್ಪರ್ಧೆಗಳು ನಡೆದು ಬಹುಮಾನಗಳನ್ನು ಹಂಚಲಾಯಿತು

ಹಾಸಿಗೆ - ದಿಂಬು

ಮಿತವ್ಯಯದಲ್ಲಿ ಹತ್ತಿಯಿಂದ ತಯಾರು ಮಾಡುತ್ತೇವೆ

ಬಾಹುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಗೃಹಕೃತ್ಯದ ನೋಟೀಸು

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ:—

ನಮ್ಮ ತಂದೆಯವರಾದ ಅಟರ್ನಿ ಶ್ರೀ ವರದರಾಜು ಶ್ರೀನಿವಾಸಯ್ಯಂಗಾರ್ರು (ವಿ. ಎಸ್. ಸ್ವಾಮಿಯವರು) ವೃದ್ಧಾಪ್ಯದ ದೆಸೆಯಿಂದ ಬುದ್ಧಿ ವಿಕಲ್ಪರಾಗಿ ನಮ್ಮಗಳಿಗೆ ತಿಳಿಯದಂತೆ ವಿನಾಕಾರಣ ಸಾಲ ಮಾಡುತ್ತಿರುವುದಾಗಿ ತಿಳಿದು ಬರುತ್ತೆ ಹಾಗೇನಾದರೂ ಇವರಿಗೆ ಯಾರಾದರೂ ಸಾಲ ವಗೈರೆ ಕೊಟ್ಟು ಇವರಿಂದ ಕಾಗದ ಪತ್ರಗಳನ್ನೇನಾದರೂ ಬರೆಸಿಕೊಂಡ ಪಕ್ಷದಲ್ಲಿ ಅವು ಯಾವುದೂ ಊರ್ಜಿತವಾಗತಕ್ಕದ್ದಲ್ಲ ಮತ್ತು ನಮ್ಮ ಕುಟುಂಬದವ್ಯಾರನ್ನೂ ಬದ್ಧಪಡಿಸುವುದಿಲ್ಲವೆಂದು ತಿಳಿಯುವುದು

ವಿ. ಎಸ್ ವರದನ್,
ನಂ. 346, ಶ್ರೀನಿವಾಸ ರಾಮ ಮಂದಿರಂ,
ಕಾಳಿಂಗರಟ್ಟರ ಗಲ್ಲಿ, ಹಳೇ ಅಗ್ರಹಾರ,
ಮೈಸೂರು

ಒರಿಸ್ಸಾಕ್ಕೆ ಹೊಸ ಗೌರ್ನರ್

ಒರಿಸ್ಸಾ ಪ್ರಾಂತಕ್ಕೆ ಪಂಜಾಬಿನ ಮಾಜಿ ಮುಖ್ಯ ಮಂತ್ರಿ ಲಾಲಾ ಭೀಮಸೇನ ಸಚಾರ್‌ರವರನ್ನು ಶ್ರೀ ಪಿ ಎಸ್ ಕುಮಾರಸ್ವಾಮಿರಾಜಾರವರ ಬದಲು ಗೌರ್ನರರಾಗಿ ನೇಮಿಸಲಾಗಿದೆ

ಹರಿಕಥೆ ಮತ್ತು ಅಲಂಕಾರ

ಕಾಳಮ್ಮನಗುಡಿ ಬೀದಿ ಶ್ರೀ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ, ಈ ಸಂಜೆ ೭ ಘಂಟೆಗೆ ಭದ್ರಾವತಿಯ ಶ್ರೀ ವೆಂಕಟೇಶದಾಸರಿಂದ ರುಕ್ಮಿಣಿ ಕಲ್ಯಾಣ ಎಂಬ ಹರಿಕಥೆಯೂ, ಅಮ್ಮನವರಿಗೆ ಲಕ್ಷ್ಮಿ ಅಲಂಕಾರವೂ, ನಾಳೆ ಶ್ರಾವಣ ಶನಿವಾರದ ಪ್ರಯುಕ್ತ, ಸಂಜೆ ೭ ಘಂಟೆಗೆ ಚೂಡಾಮಣಿ ಸಮರ್ಪಣ ಎಂಬ ಹರಿಕಥೆಯೂ, ಅಮ್ಮನವರಿಗೆ ಪಾರ್ಥಸಾರಥಿ ಅಲಂಕಾರವೂ ಏರ್ಪಾಡಾಗಿರುತ್ತದೆ

ಮೈಸೂರು ಪೇಟೆ ಧಾರಣೆ

	ರೂ ಯಿಂದ			ರೂ ವರೆಗೆ		
ಭತ್ತ ಬಂಗಾರ ಮತ್ತು						
ಕೆಂಪುಮತ್ತುರುಸಣ್ಣ ೩೪	೩	೦		೪೭	೦	೦
ರತ್ನಚೂಡಿ	೪೨	೪	೦	೪೬	೦	೦
ಕಾರು ಭತ್ತ						
ಸೀರಾಳ್ ಸಣ್ಣ	೪೦	೩	೦	೪೪	೦	೦
ಕಡ್ಲಿ	೪೪	೦	೦	೪೪	೩	೦
ರಾಗಿ	೪೧	೮	೦	೪೨	೧೨	೦
ಕಡಲೆಕಾಯಿ	೯	೮	೦	೨೪	೧೦	೦
ಹಿಪ್ಪೆ	೯೬	೧೨	೦			
ಎಳ್ಳು	೭೪	೬	೦	೮೨	೧೨	೦
ಹುರುಳಿ	೪೭	೧೨	೦	೪೨	೪	೦
ಹೆಸರು	೬೧	೯೪	೦			
ಕಲಸಂದೆ	೫೧	೮	೦			
ಉದ್ದು	೬೬	೮	೦	೬೬	೧೨	೦
ಸೀಗೆಕಾಯಿ	೯	೪	೦	೯	೪	೦
ಹುಣಸೇಹಣ್ಣು	೪	೬	೦	೫	೧೪	೦
ಮೆಣಸಿನಕಾಯಿ	೧೦	೦	೦	೨೨	೦	೦
ತೆಂಗಿನಕಾಯಿ ೧೦೦೦	೧೫೯	೮	೦	೨೨೬	೦	೦

Central Food Technological Research Institute, Mysore

ADVERTISEMENT

The following articles will be sold by Public Auction on Monday the 27th August 1956 at 3 P M at the Institute Premises

(1) Empty Deal Wood boxes
(2) Empty assorted glass bottles
(3) Unserviceable gunnies
(4) Empty Tin containers
(5) Iron Scraps
(6) Miscellaneous articles

SRI GAYATHRI

TALKIES

From 17-8-56 For 3 Days

The Biggest Battle that ever shook the West

SITTING BULL

(Cinemascope & Eastman Color)
Starring – Dale Robertson & Mary Murphy

Morning Shows on Sat. & Sun.

THE BLUE VEIL

With Johny Wayman

ಅಗಮಿಕ ಸಮ್ಮೇಳನದಲ್ಲಿ ಪ್ರಶಸ್ತಿಗಳ ದಾನ

ಇತ್ತೀಚೆಗೆ ಬೆಂಗಳೂರಿನಲ್ಲಿ ಸೇರಿದ್ದ ಅಗಮಿಕರ ಮಹಾ ಸಮ್ಮೇಳನದಲ್ಲಿ ಕೆಳಗೆ ಕಂಡ ಮೈಸೂರಿನ ಮಹನೀಯರುಗಳಿಗೆ ಪ್ರಶಸ್ತಿಗಳನ್ನು ಕೊಡಲಾಗಿದೆ ಆ॥ ವಿ॥ ಎ ಚನ್ನಕೇಶವಯ್ಯಂಗಾರ್- ಪಂಡಿತ ತಿಲಕ, ಶ್ರೀ ಪಾಟಿವಾಳರ ಚಂದ್ರಶೇಖರ ಭಟ್ಟರು- ಸಿಗ್ದನ್ಯಕ, ಶ್ರೀ ಚಾಮಶೇಖರ ರಾಮಚಂದ್ರ ... -ಮೀಮಾಂಸಾ ರತ್ನ. ಶ್ರೀ ಎ ಎಸ್ ಪಂಡಾಚಾರ್ಯರು-ಮೀಮಾಂಸಾ ಭೂಷಣ. ಮತ್ತು ಶ್ರೀ ರಾಮಚಂದ್ರ ಸೋಮಯಾಜಿಗಳು-ವಿದ್ಯಾ ವಾರಿಧಿ ಶ್ರೀ ಅವನಿ ಜಗದ್ಗುರುಗಳವರು ಮೇಲ್ಕಂಡ ಪ್ರಶಸ್ತಿಗಳನ್ನು ಪಿಳ್ಳತ್ತುಗಳೊಡನೆ ಅನುಗ್ರಹಿಸಿದರು.

COACHING SECTION

Dalvoy High School, Mysore

Offers excellent Coaching by experienced teachers for the S S L C exam. of Dec. 1956. Classes in full swing. Join immediately

SREE GANESH

TALKIES

Grand Festival Attraction

Gala Release on 17-8-56

Daily 3 Shows

ARTISTS AND MODELS

Martin & Lewis in their latest Super Comedy

A Paramount's Vistavision Technicolor Picture

All Complimentaries suspended for the first week

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತರಾಗಿರುವ

ನವರತ್ನ—ಕಲ್ಪ

ಔಷಧವನ್ನು ಕಂಡುಹಿಡಿದಿರುವ,

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಫೋನ್ ಮಾಡಬಹುದು ನಂ 590

— ಭೇಟಿಯ ಕಾಲ :—

ಬೆಳಗ್ಗೆ 7 30 ರಿಂದ 12 30 ವರೆಗೂ

ಮಧ್ಯಾಹ್ನ 4 ರಿಂದ 7-30

ಮೇಲಿನ ಕಾರ್ಯಕ್ರಮದ ಪಟ್ಟಿಯನ್ನು ಗಮನಿಸಿ ಅವರ ದರ್ಶನ ದ್ವಿತೀಯ ಸಲಹೆಯನ್ನು ಪಡೆಯಿರಿ

ಇವರು ಸಕಾಲಕ್ಕೆ ಸರಿಯಾಗಿ ಸ್ವಂತವಾಗಿ ... ವಿಧಾನದಲ್ಲಿ ಸಂಯೋಜಿಸುವರು

ನವರತ್ನ — ಕಲ್ಪ

ಉಪಯೋಗಿಸಿರಿ

ಇದು ವಜ್ರ, ಚಿಂತು, ಮುತ್ತು, ಪವಳ, ಪಚ್ಚೆ, ಗೋಮೇಧಿಕ, ನೀಲ, ಪದ್ಮರಾಗದ ಮುತ್ತು ಪ್ರಶಸ್ತಿಯ ಮುಂತಾದ 9 ಅಮೂಲ್ಯ ವಸ್ತುಗಳ ಸಂಯೋಗ ನಿಮ್ಮ ಎಲ್ಲಾ ಹಳೆಯ ಹಾಗೂ ಹೊಸ ತರದ ರೋಗಗಳಿಗೂ ಅಮೃತದ ಹಾಗೆ, ಅಪಾರ ರಾಯರ ದಿವ್ಯ ಇದೊಂದೇ ... ಕಾರ್ಯಕ್ಕಾಗಿ ಬರೆಯಿರಿ.

NAVRATNA KALPA PHARMACY,

JULLUNDUR CITY (India)

ಲಕ್ಷ್ಮಿ ★

17-8-56 ರಿಂದ ಅಮೋಘ ಪ್ರಾರಂಭ

ಪ್ರತಿ ದಿನ ಮೂರು ಪ್ರದರ್ಶನಗಳು

ವೈದ್ಯ ಫಿಲಂಸ್‌ರವರ ತಮಿಳು ಚಿತ್ರ

✱ ಮಂಗೈಯರ್ ತಿಲಕಂ

ಪಾತ್ರ — ಪದ್ಮಿನಿ, ರಾಗಿಣಿ, ಎಂ ಎನ್ ರಾಜಂ, ಶಿವಾಜಿಗಣೇಶನ್, ತಿವಾರಿ ಗಣೇಶ್,

ಎಸ್ ವಿ ಸುಬ್ಬಯ್ಯ, ತಂಗವೇಲು ಮತ್ತಿತರರು

ಟೆಲಿಫೋನ್ ನಂ. 792

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI ; SATURDAY 18-8-1956 ಮೈಸೂರು ; ಶನಿವಾರ ೧೮-೮-೧೯೫೬ [ಸಂಚಿಕೆ : ೧೬

– ಮಂತ್ರಿಗಳ ರಾಜೀನಾಮೆಗೆ ರಾಜಪ್ರಮುಖರ ಒಪ್ಪಿಗೆ –

ರಾಜಪ್ರಮುಖರಿಂದ ಮಂತ್ರಿಮಂಡಲದ ರಾಜೀನಾಮೆ ಅಂಗೀಕಾರ

ಹೊಸ ಮಂತ್ರಿಮಂಡಲ ರಚನೆಯಾಗುವವರೆಗೆ ಮುಂದುವರಿಯಲು ಸೂಚನೆ

ಮೈಸೂರು ೧೮

ಶ್ರೀ ಹನುಮಂತಯ್ಯನವರು ಇಂದು ಬೆಳಿಗ್ಗೆ ೧೦ ಗಂಟೆಗೆ ಅರಮನೆಗೆ ತೆರಳಿ ತಮ್ಮ ಮಂತ್ರಿಮಂಡಲದ ರಾಜೀನಾಮೆಯನ್ನು ರಾಜಪ್ರಮುಖರಿಗೆ ಸಲ್ಲಿಸಿದರು. ನೂತನ ನಾಯಕರು ಅಧಿಕಾರ ಸ್ವೀಕರಿಸುವವರೆಗೂ ಮುಂದುವರಿಯುವಂತೆ ರಾಜಪ್ರಮುಖರು ಅವರಿಗೆ ಸೂಚಿಸಿದರು.

ಹಿಂದಿ ಕೇಂದ್ರದ ವಾರ್ಷಿಕೋತ್ಸವ

ರಾಜಧಾನಿಯ ವಿ ವಿ ಮೊಹಲ್ಲಾದಲ್ಲಿರುವ ಹಿಂದಿ ಪ್ರಚಾರ ಸಭಾ ಕೇಂದ್ರದ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಮಹಾಜನ ಹೈಸ್ಕೂಲಿನಲ್ಲಿ ನೆರವೇರುವುದು. ಉಪಾಧ್ಯಾಯರ ಕಾಲೇಜು ಪ್ರೊ|| ಶ್ರೀ ಸಿ ರಂಗಾಚಾರ್ಯರು ಅಧ್ಯಕ್ಷತೆ ವಹಿಸುವರು. ಪ್ರಚಾರ ಸಭೆಯ ಕಾರ್ಯದರ್ಶಿ ಶ್ರೀ ಎಂ. ಕೆ. ರಾಜಗೋಪಾಲ್‌ರವರು ಅಭಿಭಾಷಣ ಮಾಡುವರು.

೨೮ ದಿನಗಳಿಂದ ಉಪವಾಸವಿರುವ ಜೈನ ಮಹಿಳೆಯ ಮೆರವಣಿಗೆ

ರಾಜಧಾನಿಯಲ್ಲಿ ಹಲವಾರು ದಿನಗಳಿಂದಲೂ ತಂಗಿರುವ ಜೈನ ಸನ್ಯಾಸಿ ಸಾಯುರ್ ಕವರ್‌ಜಿಯವರು ಪ್ರತಿ ದಿನವೂ ನಡೆಸುತ್ತಿರುವ ಉಪದೇಶಾಮೃತಗಳಿಂದ ಅನೇಕರಲ್ಲಿ ಧಾರ್ಮಿಕ ಪ್ರವೃತ್ತಿಯುಂಟಾಗಿ, ಹಲವರು ಆತ್ಮಶುದ್ಧಿಗಾಗಿ ಉಪವಾಸ ವ್ರತವನ್ನು ಕೈಗೊಂಡಿದ್ದರು. ೩, ೫, ೮, ೧೧ ದಿನಗಳಂತೆ ತಮ್ಮ ಶಕ್ತ್ಯಾನುಸಾರ ದಿನಗಳವರೆಗೆ ಉಪವಾಸ ವ್ರತವನ್ನು ಕೆಲವರು ನಡೆಸಿದ್ದಾರೆ. ಜೈನ ಧರ್ಮ ರೀತ್ಯಾ ಉಪವಾಸ ಕಾಲದಲ್ಲಿ ಅವರು ಕೇವಲ ಬಿಸಿ ನೀರನ್ನು ಮಾತ್ರ ತೆಗೆದುಕೊಳ್ಳುವರು. ಅವರ ಪೈಕಿ ಒಬ್ಬ ಮಹಿಳೆಯು ೨೮ ದಿನಗಳಿಂದ ಉಪವಾಸ ನಡೆಸುತ್ತಿದ್ದಾರೆ. ೩೧ ದಿನಗಳವರೆಗೂ ಮಾಡಲಿರುವರು. ಅವರ ದರ್ಶನವು ಲಭ್ಯವಾಗಲು ನಾಳೆ ಬೆಳಿಗ್ಗೆ ೯ ಗಂಟೆಗೆ ಜೈನ ಸಂಘದವರು ಅವರನ್ನು ಸಯ್ಯಾಜಿರಾವ್ ರಸ್ತೆ ಮತ್ತು ಅಶೋಕಾ ರಸ್ತೆಗಳಲ್ಲಿ ಮೆರವಣಿಗೆಯಲ್ಲಿ ಕರೆತರುವರು. ೧೦ ಗಂಟೆಗೆ ಟೌನ್‌ಹಾಲಿನಲ್ಲಿ ಸಾರ್ವಜನಿಕ ಸಭೆಯನ್ನೂ ಏರ್ಪಡಿಸಲಾಗಿದೆ.

ಹರಿಕಥೆ ಮತ್ತು ಪಲ್ಲಕ್ಕಿ ಉತ್ಸವ

ಮಂಡಿ ಮೊಹಲ್ಲಾ ನವಾಬ್ ರಸ್ತೆಯಲ್ಲಿರುವ ಮಹಾರಾಷ್ಟ್ರ ಶ್ರೀ ರಾಮ ಮಂದಿರದ ಹಿಂಭಾಗದಲ್ಲಿರುವ ಶ್ರೀ ಚಾಮುಂಡೇಶ್ವರಿ ದೇವಾಲಯದಲ್ಲಿ ಅಮ್ಮನವರ ಸ್ಥಾಪನೆಯ ಆರನೇ ವಾರ್ಷಿಕೋತ್ಸವವು ನೆನ್ನೆ ನಡೆಯಿತು. ಈ ರಾತ್ರಿ ೯ ಗಂಟೆಗೆ ವಿ|| ಮುಳಬಾಗಿಲು ನಾರಾಯಣದಾಸರಿಂದ "ಕೃಷ್ಣ ಗಾರುಡಿ" ಹರಿಕಥೆಯು ನಡೆಯುವುದು. ನಾಳೆ ಸಂಜೆ ೭ ಗಂಟೆಗೆ ಅಮ್ಮನವರ ಪಲ್ಲಕ್ಕಿ ಉತ್ಸವವು ರಾಗಿ ಮಂಡಿ, ಚಮಾರ್ ಮಠದ ಬೀದಿ, ಕಾಳಮ್ಮನಗುಡಿ ಬೀದಿ ಮತ್ತು ಬೆಂಕಿ ನವಾಬರ ಬೀದಿ, ಕೊಗರಿ ಬೀದಿಗಳಲ್ಲಿ ಬಿಜಯ ಮಾಡುವುದು.

ನಾಳೆ ನೂತನ ಮುಖ್ಯ ಮಂತ್ರಿಯವರ ಪ್ರಮಾಣವಚನಸ್ವೀಕಾರ

ನೆಹರೂರವರಿಂದ ಕಡಿದಾಳ್ ಮಂಜಪ್ಪನವರಿಗೆ ಶುಭಾಶಯ

ಬೆಂಗಳೂರು ೧೮

ಶಾಸನಸಭಾ ಕಾಂಗ್ರೆಸ್ ಪಕ್ಷದ ನಾಯಕರಾಗಿ ಆರಿಸಲ್ಪಟ್ಟಿರುವ ಶ್ರೀ ಕಡಿದಾಳ್ ಮಂಜಪ್ಪನವರು ನಾಳೆ ಬೆಳಿಗ್ಗೆ ೧೧|| ಗಂಟೆಗೆ ಮೈಸೂರಿನ ಅರಮನೆಯಲ್ಲಿ ರಾಜಪ್ರಮುಖರ ಮುಂದೆ ಪ್ರಮಾಣ ವಚನ ಸ್ವೀಕರಿಸುವರೆಂದು ಗೊತ್ತಾಗಿದೆ. ನಾಳೆ ಎಷ್ಟು [illegible] ಪ್ರಮಾಣ ವಚನ ಸ್ವೀಕರಿಸುವರೆಂಬುದು [illegible]. ನೆನ್ನೆ ರಾತ್ರಿ ಬಹಳ ಹೊತ್ತಿನವರೆಗೂ ನೂತನ ನಾಯಕರು ತಮ್ಮ ಸಚಿವ ಸಂಪುಟದ ಸದಸ್ಯರ ಬಗ್ಗೆ ನಾಯಕರೊಡನೆ ಸಮಾಲೋಚನೆ ನಡೆಸುತ್ತಿದ್ದರು. ಶ್ರೀ ಹನುಮಂತಯ್ಯನವರು ವಿನಹ ಆದಷ್ಟು ಮಟ್ಟಿಗೆ ಹಳಬರನ್ನೇ [illegible] ಮಾಡಲಾರರೆಂದು ಪ್ರಕರಣಾಂತರವಾಗಿ ತಿಳಿಸಿರುವುದಾಗಿಯೂ ಗೊತ್ತಾಗಿದೆ.

ಏತನ್ಮಧ್ಯೆ ಶ್ರೀ ಮಂಜಪ್ಪನವರೊಡನೆ ನೆಹರೂರವರು ಫೋನ್ ಮೂಲಕ ಮಾತನಾಡಿ ಅವರಿಗೆ ಶುಭಾಶಯವನ್ನು ಸೂಚಿಸಿದರು. ತಮ್ಮನ್ನು ಆರಿಸಿದ ಗುಂಪಿನವರ ಬೆಂಬಲವನ್ನು ಮಾತ್ರವಲ್ಲದೆ, ಇಡೀ ಕಾಂಗ್ರೆಸ್ ಪಕ್ಷದ ಸಹಕಾರವನ್ನು ಗಳಿಸಬೇಕೆಂದು ಅವರು ತಿಳಿಸಿದರು.

ಪೂರ್ವ ಪಾಕಿಸ್ತಾನದ ಇಬ್ಬರು ಸಚಿವರ ರಾಜೀನಾಮೆ

ಪೂರ್ವ ಪಾಕಿಸ್ತಾನದ ಶಾಸನ ಸಭೆಯನ್ನು ಹಠಾತ್ತನೆ ಮುಂದೆ ಹಾಕಿರುವುದನ್ನು ಪ್ರತಿಭಟಿಸಿ ಅಲ್ಲಿನ ವಿದ್ಯಾ ಮಂತ್ರಿ ಅಷ್ರಫುದ್ದೀನ್ ಅಹಮದ್ ಚೌಧುರಿ ಮತ್ತು ನ್ಯಾಯಾಂಗ ಮಂತ್ರಿ ನಸಿರುದ್ದೀನ್ ಚೌಧುರಿಯವರು ತಮ್ಮ ಪಕ್ಷದ ನಾಯಕರಿಗೆ ರಾಜೀನಾಮೆಯನ್ನು ಸಲ್ಲಿಸಿದ್ದಾರೆ. ಹಾಗೆ ಮಾಡುವಂತೆ ಅವರ ಪಕ್ಷವು ಸೂಚಿಸಿತ್ತು.

ಶನಿ ಮಹಾತ್ಮೆ

ರಾಜಧಾನಿಯ ಶ್ರೀ ಗಜಾನನ ಭಕ್ತ ಮಂಡಲಿಯವರು ಸದಾನ್ ಟಾಕೀಸ್ ಚೌಕದಲ್ಲಿ ಈ ರಾತ್ರಿ ೯ ಗಂಟೆಗೆ ವಿ|| ಕೊಣನೂರು ಸೀತಾರಾಮ ಶಾಸ್ತ್ರಿಗಳವರಿಂದ ಶನಿ ಮಹಾತ್ಮೆ ಕಥೆಯನ್ನು ಏರ್ಪಡಿಸಿದ್ದಾರೆ. ಪೌರಸಭಾಧ್ಯಕ್ಷ ಶ್ರೀ ಪಿ ಕೃಷ್ಣಮೂರ್ತಿಯವರು ಅಧ್ಯಕ್ಷತೆ ವಹಿಸುವರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬ ೫ ವಿಜಿತ್, ೬ ೧೫ ಬೌದ್ಧ ಸಾಹಿತ್ಯ ೬-೪೦ ಆರ್ ಲೀಲಾ ಕನ್ನಡ ಗೀತೆ ೮-೧೫ ಆಲ್ ಇಂಡಿಯಾ ಸಂಗೀತ ೮ ೪೦ ಟಿ ನಾಗಮ್ಮ-ಸಂಗೀತ ೯-೪೦ ಬಾಲಜಗತ್. ಮಧ್ಯಾಹ್ನ ೧೨ ಮತ್ತು ೬ ೧೫ ಎಂ ಎಸ್ ಚಂದ್ರಶೇಖರಯ್ಯ ಸಂಗೀತ ೧೨-೪೦ ವಾದ್ಯವೃಂದ ೧ ಚಿತ್ರ ಮಟ್ಟಿನ ಗೀತೆಗಳು ೧-೩೦ ಮತ್ತು ರಾತ್ರಿ ೧೦ ಪಲ್ಲವಿ ಕಲ್ಯಾಣ ಸುಂದರಂ-ಸಂಗೀತ ಸಂಜೆ ೫ ಪಾಶ್ಚಾತ್ಯ ಸಂಗೀತ. ೬-೪೦ ಮತ್ತು ೯ ೪೦ ರಂಗಪ್ಪ-ಕೊಳಲು ೬-೧೫ ನಾವು ಮತ್ತು ನಮ್ಮ [illegible] ೭ ೪೦ ಗೀತಾ[illegible] ೮ [illegible] ೮ ೪೦ [illegible] ೯ ೧೫ ರೂಪಕ

ಹೊಸ ಮಂತ್ರಿಮಂಡಲದಲ್ಲಿ ಹಳೆಯ ಸಚಿವರುಗಳು

ದೇಹಾಲಸ್ಯದ ನಿಮಿತ್ತ ನಾಗನಗೌಡರ ನಿವೃತ್ತಿ

ಸ್ವಂ ಸು ತಂತಿ] ಬೆಂಗಳೂರು ೧೮

ಶ್ರೀ ಕಡಿದಾಳ್ ಮಂಜಪ್ಪನವರ ಮಂತ್ರಿಮಂಡಲದಲ್ಲಿ ಈಗಿನ ಸಚಿವರುಗಳಾದ ಶ್ರೀಗಳ ಎ ಜಿ ರಾಮಚಂದ್ರರಾವ್, ಹೆಚ್ ಸಿದ್ದವೀರಪ್ಪ ಮತ್ತು ಹೆಚ್ ಎಂ ಚನ್ನಬಸಪ್ಪನವರು ಇರುವುದು ಖಚಿತವಾಗಿದೆ. ಡಾ|| ನಾಗನಗೌಡರು ದೇಹಾಲಸ್ಯದ ನಿಮಿತ್ತ ಮಂತ್ರಿಮಂಡಲಕ್ಕೆ ಸೇರುವುದಿಲ್ಲವೆಂದು ಹೇಳಲಾಗಿದೆ. ಈ ರಾತ್ರಿಯೊಳಗೆ ಹೊಸ ಸಚಿವ ಸಂಪುಟವು ಅಂತಿಮವಾಗಿ ಸಿದ್ಧವಾಗಲಿದೆ.

ನಾಳೆಯಿಂದ ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಮೈಸೂರು ೧೮

ರಾಜಧಾನಿಯಲ್ಲಿರುವ ಆಯುರ್ವೇದ ಮತ್ತು ಯುನಾನಿ (ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್) ಕಾಲೇಜಿನ ವಿದ್ಯಾರ್ಥಿಗಳ ಸಭೆಯು ಈ ಬೆಳಿಗ್ಗೆ ಶ್ರೀ ಎಂ ಆರ್ ಶೆಟ್ಟಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಲವು ವಿದ್ಯಾರ್ಥಿಗಳು ಭಾಷಣ ಮಾಡಿ, ನಾಳೆಯ ಬೆಳಿಗ್ಗೆ ೯ ಗಂಟೆಯಿಂದ ಆರಂಭವಾಗುವ ವಿದ್ಯಾರ್ಥಿಗಳ ಮುಷ್ಕರವು ಯಾವ ರೀತಿಯಲ್ಲಿರಬೇಕೆಂಬುದನ್ನು ವಿವರಿಸಿದರು. ವಿದ್ಯಾರ್ಥಿಗಳು ಬೋರ್ಡುಗಳನ್ನು ಹಿಡಿದು ಮೆರವಣಿಗೆಯಲ್ಲಿ ಹೊರಡುವರು. ಅವರ ಬೇಡಿಕೆಗಳು ಈಡೇರುವವರೆಗೂ ಮುಷ್ಕರವನ್ನು ನಡೆಸಲಾಗುವುದು.

ಸಂಗೀತ

ತ್ಯಾಗರಾಜಾ ರಸ್ತೆಯಲ್ಲಿರುವ ಶ್ರೀ ಚಿಕ್ಕ ಜಂಗಮಸ್ವಾಮಿ ದೇವಸ್ಥಾನದಲ್ಲಿ ಶ್ರಾವಣ ಶನಿವಾರದ ಪ್ರಯುಕ್ತ ಈ ಸಂಜೆ ೬|| ಗಂಟೆಗೆ ವಿ|| ಪಿ ಕೆ ರಂಗರಾವ್‌ರವರ ಸಂಗೀತವು ವಿ|| ಹೆಚ್ ಎ ಕೃಷ್ಣರಾಯರ ಪಿಟೀಲು ಮತ್ತು ವಿ|| ರಾಜಗೋಪಾಲ್‌ರವರ ಮೃದಂಗದೊಡನೆ ಶ್ರೀ ಹೆಚ್ ಕೆ ಶಿವಕುಮಾರಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಸಹಾಯಾರ್ಥ ಪ್ರದರ್ಶನ

ಮಹಾರಾಜಾ ಹೈಸ್ಕೂಲಿನ ಬಡ ವಿದ್ಯಾರ್ಥಿ ನಿಧಿಯ ಸಹಾಯಾರ್ಥವಾಗಿ ಕಳೆದ ಭಾನುವಾರ ಗಣೇಶಾ ಟಾಕೀಸಿನಲ್ಲಿ ಏರ್ಪಾಡಾಗಿದ್ದ ಚಿತ್ರ ಪ್ರದರ್ಶನವು ನಾಳೆ ಬೆಳಿಗ್ಗೆ ೧೦|| ಗಂಟೆಗೆ ನಡೆಯುತ್ತದೆ.

ಶ್ರೀ ಕೃಷ್ಣ ಜಯಂತಿ

ವಿದ್ಯಾರಣ್ಯಪುರದಲ್ಲಿರುವ ದ್ವೈತಶಾಸ್ತ್ರಮಠದಲ್ಲಿ ನಾಳಿದ್ದಿನಿಂದ ೩೦ ನೇ ತಾರೀಖಿನವರೆಗೆ ೧೨ ದಿನಗಳ ಪರ್ಯಂತ ಶ್ರೀ ಕೃಷ್ಣ ಜಯಂತಿ ಉತ್ಸವವನ್ನು ಸ್ವಾಮಿ ಶ್ರೀ ಕೃಷ್ಣ ಚೈತನ್ಯರವರು ನೆರವೇರಿಸುವರು. ೩೦ ಮತ್ತು ೩೧ ನೇ ತಾರೀಖುಗಳಲ್ಲಿ ಮಂತ್ರೋಪದೇಶ ತೆಗೆದುಕೊಳ್ಳಲಿಚ್ಛಿಸುವವರಿಗೆ ಸ್ವಾಮಿಗಳವರು ಮಂತ್ರ ದೀಕ್ಷೆಯನ್ನು ಕೊಡಲಿರುವರು.

"ಸಬಕೊ ಸನ್ಮತಿ ದೇ ಭಗವಾನ್"

ಹನುಮಂತಯ್ಯನವರ ಹಿತೈಷಿಗಳಿಗೆ ಸಂದೇಶ

ಮೈಸೂರು ೧೮

ಅಧಿಕಾರ ತ್ಯಾಗ ಮಾಡಿರುವ ಶ್ರೀ ಹನುಮಂತಯ್ಯನವರು ಇಂದು ಬೆಳಿಗ್ಗೆ 'ಬಲದರ್ಶನ'ದಲ್ಲಿ ಪತ್ರಿಕಾ ಪ್ರತಿನಿಧಿಗಳನ್ನು ಕರೆದು ತಮಗೆ ಇದುವರೆಗೂ ಸಹಕಾರ ನೀಡಿದ್ದಕ್ಕಾಗಿ ಅವರುಗಳಿಗೆ ವಂದನೆಯನ್ನರ್ಪಿಸಿದರು.

ಪತ್ರಿಕಾ ಕರ್ತರೊಡನೆ ಬಹಳ ಸೌಜನ್ಯದಿಂದ ಸಂಭಾಷಿಸಿದ ಮಾಜಿ ಮುಖ್ಯ ಮಂತ್ರಿಗಳು ತಮ್ಮ ಮುಂದಿನ ಕಾರ್ಯಕ್ರಮಗಳು ಮತ್ತು ಈಗಿನ ರಾಜಕೀಯ ಪರಿಸ್ಥಿತಿಯ ಬಗ್ಗೆ ಬಂದ ಪ್ರಶ್ನೆಗಳಿಗೆ ನೇರವಾದ ಉತ್ತರವನ್ನು ನೀಡಲಿಲ್ಲ.

ಇಂದಿನ ರಾಜಕೀಯ ವಾತಾವರಣದಲ್ಲಿ ಬಾಯಿ ತೆರೆದಿದ್ದಾಗ ಕೇವಲ ವ್ಯಕ್ತಿ ಮಾತ್ಸರ್ಯಗಳಿಗೆ ಎಡೆಯೀಯುವ ಹೇಳಿಕೆಗಳನ್ನು ಕೊಡದೆ ಶಾಂತವಾಗಿ ಆಲೋಚನೆ ಮಾಡಬೇಕೆಂದೂ ಇನ್ನು ೭-೮ ದಿನಗಳನಂತರ ಒಂದು ಹೇಳಿಕೆಯನ್ನು ಕೊಡುವುದಾಗಿಯೂ ಮುಖ್ಯ ಮಂತ್ರಿಗಳು ತಿಳಿಸಿದರು.

ಈಗಿನ ಸ್ಥಿತಿಯಲ್ಲಿ 'ಸಬಕೊ ಸನ್ಮತಿ ದೇ ಭಗವಾನ್' ಎಂಬ ಮಹಾತ್ಮಾ ಗಾಂಧಿಯವರ ಸಂದೇಶವೇ ತಮ್ಮ ಹೇಳಿಕೆಯೆಂದು ನುಡಿದರು. ಈಗಿನ ಮಂತ್ರಿಮಂಡಲದ ರಾಜೀನಾಮೆಗೆ ನಿಜವಾದ ಕಾರಣವನ್ನು ತಿಳಿಸಿ, ಜನತೆಯಲ್ಲಿ ಉಂಟಾಗಿರುವ ಸಂದೇಹ ನಿವಾರಣೆ ಮಾಡಬೇಕೆಂದು ಒತ್ತಾಯ ಮಾಡಿದಾಗ ತಾವು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಮಾಡಿದ ಭಾಷಣಗಳೇ ಅದಕ್ಕೆ ಉತ್ತರಗಳಾಗಿವೆಯೆಂದು ನುಡಿದರು. ತಾವು [illegible]ಯಲ್ಲಿ ಈ ಬಿಕ್ಕಟ್ಟಿನ ಬಗ್ಗೆ ಒಳ್ಳೆಯದು ಮತ್ತು ಕೆಟ್ಟದರ ಮಥನ ಮಾಡುವುದಾಗಿಯೂ, ಅನಂತರ ತಮ್ಮ ಮುಂದಿನ ರಾಜಕೀಯ ಜೀವನದ ಬಗ್ಗೆ ನಿರ್ಧಾರವನ್ನು ಪ್ರಕಟಪಡಿಸುವುದಾಗಿಯೂ ತಿಳಿಸಿದರು.

ಪುನರ್ರಚಿತವಾಗುವ ನೂತನ ಮೈಸೂರಿನಲ್ಲಿ ತಾವು ಮುಖ್ಯಮಂತ್ರಿಯಾಗುವ ಸಂಭವವಿದೆಯೇ ? ಎಂಬ ಪ್ರಶ್ನೆಗೆ ಉತ್ತರವೀಯಲಿಲ್ಲ. ಕೇಂದ್ರ ಮಂತ್ರಿಮಂಡಲಕ್ಕೆ ಸೇರುವ ಸಂಭವವಿದೆಯೇ ಎಂಬ ಪ್ರಶ್ನೆಯನ್ನು ನಗುವಿನಲ್ಲಿಯೇ ತೇಲಿಸಿದರು. ಉಳಿದ ಪ್ರಶ್ನೆಗಳಿಗೆ "ಈಗ ಏನೂ ಕೇಳಬೇಡಿ" ಎಂದು ನುಡಿದರು.

ಅಂಚೆ ನೌಕರರ ಸಭೆ

ಅಖಿಲ ಭಾರತ ಅಂಚೆ ತಂತಿ ಯೂನಿಯನ್ ಮೂರನೇ ವರ್ಗ ನೌಕರರ ಸಂಘದ ಮೈಸೂರು ಶಾಖೆಯ ಸಭೆಯು ಕಳೆದ ಶನಿವಾರ ಶ್ರೀ ಬಿ ಎಸ್ ಕೆಂಗೇಗೌಡರ ಅಧ್ಯಕ್ಷತೆಯಲ್ಲಿ ನಡೆದು, ಕೆಳಕಂಡವರು ಈ ಸಾಲಿನ ಅಧಿಕಾರವರ್ಗಕ್ಕೆ ಚುನಾಯಿತರಾದರು - ಶ್ರೀ ಬಿ ಎಸ್. ಕೆಂಗೇಗೌಡ-ಅಧ್ಯಕ್ಷರು, ಶ್ರೀ ಜಿ. ಬಿ ಹರದಯ್ಯ-ಉಪಾಧ್ಯಕ್ಷರು, ಶ್ರೀಗಳಾದ ಆರ್ ಎ ಕೃಷ್ಣಮೂರ್ತಿ ಮತ್ತು ಎಂ ಮಂಚಯ್ಯ-ಕಾರ್ಯದರ್ಶಿಗಳು ಮತ್ತು ಎಂ ಎಸ್ [illegible]-ಖಜಾಂಚಿ.

ಮನಶ್ಶಾಸ್ತ್ರದ ಅಧ್ಯಯನಕ್ಕೆ ಸಂಸ್ಕೃತ ಭಾಷೆಯ ಆವಶ್ಯಕತೆ

ಉಪನ್ಯಾಸಕರ ಕುವೆಂಪುರವರ ಭಾಷಣ

ಮೈಸೂರು ೧೮

ಮಹಾರಾಜಾ ಕಾಲೇಜು ಮನಶ್ಶಾಸ್ತ್ರ ಸಂಘದ ಆರಂಭ ಭಾಷಣವನ್ನೂ ಸೈಕಲಾಜಿಕಲ್ ಸ್ಟಡೀಸ್ ಎಂಬ ಪತ್ರಿಕೆಯ ಪ್ರಕಾಶನವನ್ನೂ ವಿಶ್ವವಿದ್ಯಾನಿಲಯದ ಉಪನ್ಯಾಸಕ ಡಾ॥ ಕೆ ವಿ ಪುಟ್ಟಪ್ಪನವರು ನೆರವೇರಿಸಿ, ಮನಶ್ಶಾಸ್ತ್ರದ ಸಿದ್ಧವಾದ ಅಧ್ಯಯನಕ್ಕೆ ಸಂಸ್ಕೃತ ಭಾಷೆಯ ಗಾಢವಾದ ಪರಿಚಯವು ಅಗತ್ಯವೆಂದು ಒತ್ತಿ ಹೇಳಿದರು ಕೇವಲ ಇಲಿ ಬೆಕ್ಕು ಮುಂತಾದ ಪ್ರಾಣಿಗಳ ಮೇಲೆ ಪ್ರಯೋಗ ನಡೆಸಿ ಸಿದ್ಧಾಂತಗಳನ್ನು ಕಂಡುಹಿಡಿಯಲು ತೊಡಗಿರುವ ಆಧುನಿಕ ಮನಶ್ಶಾಸ್ತ್ರ ಶಿಕ್ಷಣದ ಬದಲು ಮಾನವನನ್ನು ಮೃಗಗಳ ದೃಷ್ಟಿಯಿಂದ ಪ್ರತ್ಯೇಕಿಸಿಕೊಂಡೊಯ್ಯುವ ಅಪೂರ್ವವಾದ ಪೌರ್ವಾತ್ಯ ಮನಶ್ಶಾಸ್ತ್ರ ಪದ್ಧತಿಯನ್ನು ಅಭ್ಯಾಸ ಮಾಡುವುದರಿಂದ ಹೆಚ್ಚು ಪ್ರಯೋಜನವುಂಟೆಂದು ಅವರು ನುಡಿದರು ಮನಶ್ಶಾಸ್ತ್ರಕ್ಕೂ ಸಾಹಿತ್ಯಕ್ಕೂ ಇರುವ ನಿಕಟವಾದ ಸಂಬಂಧವನ್ನು ಉದಾಹರಣೆಗಳ ಮೂಲಕ ಅವರು ಹೃದಯಂಗಮವಾಗಿ ವಿವರಿಸಿ, ಒಂದು ವಿಶ್ವಕೋಶ [illegible] ನಿರ್ಮಾಣವಾಗಬೇಕೆಂದು ಸೂಚಿಸಿದರು

ಪ್ರಾರ್ಥನೆಯನಂತರ ಶ್ರೀಮತಿ ತಂಗಮ್ಮನವರಿಂದ ಶ್ರೀ ರಾಮಾಯಣ ದರ್ಶನ ಕಾವ್ಯ ವಾಚನವು ನಡೆಯಿತು ಪ್ರಾಧ್ಯಾಪಕರಾದ ಶ್ರೀ ಬಿ ಕೃಷ್ಣನವರು ಸ್ವಾಗತ ಭಾಷಣ ಮಾಡಿ ಮನಶ್ಶಾಸ್ತ್ರದಲ್ಲಿ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆ ಪ್ರಸಿದ್ಧ ವಿದ್ವಾಂಸರ ಲೇಖನಗಳನ್ನೊಳಗೊಂಡ ಸೈಕಲಾಜಿಕಲ್ ಸ್ಟಡೀಸ್ ಪತ್ರಿಕೆಯನ್ನು ಸಂಘವು ಪ್ರಕಟಿಸಲು ತೊಡಗಿರುವ ವಿಷಯವನ್ನು ವಿವರಿಸಿದರು

ಅಧ್ಯಕ್ಷತೆ ವಹಿಸಿದ್ದ ಶ್ರೀ ಸಿ ಡಿ ನರಸಿಂಹಯ್ಯನವರು ಮನಶ್ಶಾಸ್ತ್ರವು ವಿಜ್ಞಾನ ಪ್ರಪಂಚದಲ್ಲಿ ಹೊಂದಿರುವ ಪ್ರಮುಖ ಸ್ಥಾನವನ್ನು ನಿರೂಪಿಸಿದರು ಕಾರ್ಯದರ್ಶಿಗಳಾದ ಶ್ರೀ ಟಿ ಎಲ್ ಚಂದ್ರಶೇಖರ ರೆಡ್ಡಿಯವರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ನಾರಾಯಣ ಜೋಯಿಸರ ಶತಕಲಶಾಭಿಷೇಕ

ಮೈಸೂರು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ಎಂ ವಿ ಜೋಯಿಸ್ ಮತ್ತು ಅವರ ಸಹೋದರರುಗಳಾದ ಶ್ರೀಗಳು ಎಂ ವಿ ರಾಮಚಂದ್ರ ಜೋಯಿಸ್ ಮತ್ತು ಎಂ ವಿ ಕೃಷ್ಣಮೂರ್ತಿಯವರು ಎಂಡಿಕೇರಿಯಲ್ಲಿರುವ ತಮ್ಮ ಗೃಹದಲ್ಲಿ ತಮ್ಮ ಪಿತೃವರ್ಯರಾದ ಶ್ರೀ ನಾರಾಯಣ ಜೋಯಿಸರ ೮೦ನೇ ವರ್ಷ ವರ್ಧಂತಿ ಪ್ರಯುಕ್ತ ನೆನ್ನೆ ಶತಕಲಶ ಅಭಿಷೇಕೋತ್ಸವವನ್ನು ನೆರವೇರಿಸಿ ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ದಳವಾಯಿ ಪ್ರೌಢಶಾಲಾ ಹಳೇ ವಿದ್ಯಾರ್ಥಿಗಳ ಸಂಘ

ರಾಜಧಾನಿಯ ದಳವಾಯಿ ಪ್ರೌಢ ಶಾಲೆಯ ಹಳೇ ವಿದ್ಯಾರ್ಥಿಗಳ ಸಂಘದ [illegible] ವಾರ್ಷಿಕೋತ್ಸವವು ನಾಳೆ ಸಂಜೆ [illegible] ಘಂಟೆಗೆ ಶಾಲಾ ಆವರಣದಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರುವುದು ಬೆಳಗ್ಗೆ [illegible] ಘಂಟೆಗೆ ವಿದ್ಯಾರ್ಥಿಗಳ ವಿವಿಧ ವೇಷ ಸ್ಪರ್ಧೆ, ನಾಟಕ ಮುಂತಾದ ಕಾರ್ಯಕ್ರಮಗಳು ಏರ್ಪಾಡಾಗಿವೆ

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೧೮

ರಾಜಧಾನಿಯ ರಾಮಕೃಷ್ಣ ವಿದ್ಯಾಶಾಲೆಯಲ್ಲಿ ಉತ್ಸವವು ವಿಜೃಂಭಣೆಯಿಂದ ಜರುಗಿತು ಬೆಳಗ್ಗೆ ಸ್ವಾಮಿ ಶೇಶವಾನಂದಜಿಯವರು ಧ್ವಜಾರೋಹಣ ಮಾಡಿದರು ವಿದ್ಯಾರ್ಥಿಗಳು ಧ್ವಜವಂದನೆ ಮತ್ತು ಪೆರೇಡನ್ನು ನಡೆಸಿದರು ಮಧ್ಯಾಹ್ನ, ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ಶಂಕರರಾಯರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಶ್ರೀ ಎಸ್ ಪಾರ್ಥಸಾರಥಿಯವರಿಂದ ರಾಷ್ಟ್ರಗೀತೆ, ಶ್ರೀ ಜಿ ಎಸ್ ಸುಬ್ರಹ್ಮಣ್ಯರಿಂದ ಸ್ವಾಗತ ಭಾಷಣ, ವಿದ್ಯಾರ್ಥಿಗಳಾದ ಜಿ ಎಸ್ ಪಾಟೀಲ್, ಅಜಿತ ಕುಮಾರ್, ಎಂ ಶ್ರೀನಿವಾಸ್ ಮತ್ತು ಉಪಾಧ್ಯಾಯರಾದ ಶ್ರೀ ಟಿ ಆರ್ ವರಾಹಮೂರ್ತಿಯವರುಗಳು ಭಾಷಣ ಮಾಡಿದರು ಅಧ್ಯಕ್ಷರು ಮಾತನಾಡಿ, ವಿದ್ಯಾರ್ಥಿಗಳಿಗೆ ಸೂಕ್ತ ಹಿತೋಕ್ತಿಗಳನ್ನು ಹೇಳಿದರು ಸಭೆಯ ಮುಂಚೆ ಅಧ್ಯಕ್ಷರಿಗೆ ಗೌರವ ರಕ್ಷೆಯನ್ನು ನೀಡಲಾಯಿತು ಸಂಜೆ ಕೋಲಾಟ, ಭರತನಾಟ್ಯ ಮತ್ತು ನಾಟಕಗಳಾದುವು

ರಾಜಧಾನಿಯ ಅಖಿಲ ಭಾರತ ಮಾಧ್ವ ಮಹಾ ಮಂಡಲಿಯ ವಿದ್ಯಾರ್ಥಿ ನಿಲಯದಲ್ಲಿ ಕಳೆದ ಬುಧವಾರ ಸ್ವಾತಂತ್ರ್ಯ ದಿನೋತ್ಸವವನ್ನು ನೆರವೇರಿಸಲಾಯಿತು ಶ್ರೀ ಡಿ ಆರ್ ಭೀಮಸೇನರಾಯರು ಧ್ವಜಾರೋಹಣ ಮಾಡಿದರು ಶ್ರೀ ವಿ ಎಂ ಭೀಮೇಂದ್ರರಾಯರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಬಿ ಪಿ ರಾಮಚಂದ್ರರವರಿಂದ ಪ್ರಾರ್ಥನೆ ಮತ್ತು ಶ್ರೀ ಎಂ ಕೆ ವಾಸುದೇವಮೂರ್ತಿಯವರಿಂದ ಸ್ವಾಗತವಾದ ನಂತರ ಶ್ರೀ ಎಂ ಸಿ ಸುಬ್ಬರಾವ್ ಮತ್ತು ಎಂ ವಿ ಗೋವಿಂದರಾವ್ ಭಾಷಣ ಮಾಡಿದರು ಶ್ರೀ ಕೆ ಮಾಧವರಾಯರು ವಂದನಾರ್ಪಣೆ ಮಾಡಿದರು

ಸಿಟಿ ಕೋ-ಆಪರೇಟಿವ್ ಬ್ಯಾಂಕಿನಲ್ಲಿ ನಡೆದ ಸಮಾರಂಭದಲ್ಲಿ ಉಪಾಧ್ಯಕ್ಷ ಶ್ರೀ ಕೆ ಪುಟ್ಟೂರಾಯರು ಅಧ್ಯಕ್ಷತೆ ವಹಿಸಿದ್ದರು ಧ್ವಜಾರೋಹಣವಾದ ನಂತರ ಅಧ್ಯಕ್ಷರೂ, ಶ್ರೀಗಳಾದ ಬಿ ಜಿ ದಾಸ್ ಮತ್ತು ಚೌಡಯ್ಯನವರೂ ಭಾಷಣ ಮಾಡಿದರು

ಚಾಮರಾಜಪುರದ ಪ್ರಾಥಮಿಕ ಶಾಲೆಯಲ್ಲಿ ಗಮಕ ವಿ॥ ಎ ಸುಬ್ರಹ್ಮಣ್ಯ ಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ಉತ್ಸವವು ನಡೆಯಿತು

ಮಹಾರಾಜಾ ಪ್ರೌಢಶಾಲೆಯ ಸಂಘದಲ್ಲಿ ನಡೆದ ಸಮಾರಂಭದಲ್ಲಿ ಪ್ರೊ॥ ಶ್ರೀ ಎ ವೆಂಕಟಯ್ಯಂಗಾರ್ಯರು ಅಧ್ಯಕ್ಷತೆ ವಹಿಸಿದ್ದರು ಎ ವಿ ಡಿ ನರಸಿಂಹ ಶಾಸ್ತ್ರಿಗಳಿಂದ ಪ್ರಾರ್ಥನೆ, ಅಧ್ಯಕ್ಷರಿಂದ ಧ್ವಜಾರೋಹಣ ಮುಖ್ಯೋಪಾಧ್ಯಾಯರಾದ ಶ್ರೀ ಕೆ ಎಸ್ ರಂಗಸ್ವಾಮಯ್ಯಂಗಾರ್ಯರಿಂದ ಸ್ವಾಗತಗಳಾದುವು ಶ್ರೀ ಎಂ ಆರ್ ಸೀತಾರಾಮರಾಯರು ವಂದನಾರ್ಪಣೆ ಮಾಡಿದರು

ಮಂಡ್ಯಂ ವಿದ್ಯಾರ್ಥಿನಿಲಯದಲ್ಲಿ, ಕಾಲೇಜು ಅಧ್ಯಾಪಕರಾದ ಶ್ರೀ ಎಂ ವಿ ನರಸಿಂಹರವರ ಅಧ್ಯಕ್ಷತೆಯಲ್ಲಿ ಉತ್ಸವವು ನಡೆಯಿತು ಶ್ರೀ ರಾಮಸ್ವಾಮಿ ಅಯ್ಯಂಗಾರ್ಯರಿಂದ ಪ್ರಾರ್ಥನೆ ಮತ್ತು ಶ್ರೀ ತಿರುಮಯ್ಯಂಗಾರ್ಯರಿಂದ ಸ್ವಾಗತಗಳಾದುವು ವಿವಿಧ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳನ್ನು ಹಂಚಲಾಯಿತು ನಿಲಯದ ವ್ಯವಸ್ಥಾಪಕ ಶ್ರೀ ಎಂ ಡಿ ರಂಗಾಚಾರ್ಯರು ವಂದನಾರ್ಪಣೆ ಮಾಡಿದರು

COACHING SECTION

Dalvoy High School Mysore

Offers excellent Coaching by experienced teachers for the S S L C exams of Dec 1956 Classes in full swing Join immediately

ಸಮಾಜವಾದಿಗಳ ವಾರಾಚರಣೆ

ಮೈಸೂರು ೧೮

ರಾಜಧಾನಿಯಲ್ಲಿರುವ ಸಮಾಜವಾದಿ ಪಕ್ಷದ ಶಾಖೆಯವರು ಕಳೆದ ೮ನೇ ತಾರೀಖಿನಿಂದ ತಮ್ಮ ಪಕ್ಷದ ಸಪ್ತಾಹವನ್ನು ನಡೆಸಿದರು ಚಾಮರಾಜಪುರದ ಭಂಗಿ ಕಾಲೋನಿಯಲ್ಲಿ ಕಳೆದ ೧೦ನೇ ತಾರೀಖು ಕೊಳಚೆ ಪ್ರದೇಶದಲ್ಲಿ ಶ್ರಮದಾನ ಮತ್ತು ಮಕ್ಕಳಿಗೆ ಸ್ನಾನಾದಿಗಳನ್ನು ನಡೆಸಲಾಯಿತು ಅಲ್ಲಿ ರಾತ್ರಿ ಶಾಲೆಯನ್ನು ತೆರೆಯಲಾಗುವುದು

೧೧ನೇ ತಾರೀಖು ಸೈಕಲ್ ಮೆರವಣಿಗೆಯನ್ನು ನಡೆಸಲಾಯಿತು ಜಿಲ್ಲಾಧಿಕಾರಿಗಳನ್ನು ಭೇಟಿ ಮಾಡಿ ಪಕ್ಷದವರ ಜನತಾ ಬೇಡಿಕೆಗಳನ್ನು ಅವರಿಗೆ ಒಪ್ಪಿಸಲಾಯಿತು

ಕಳೆದ ಸೋಮವಾರ ಪಕ್ಷದ ಕಾರ್ಯದರ್ಶಿ ಶ್ರೀ ಟಿ ವಿ ಶ್ರೀನಿವಾಸರಾಯರು ವ್ಯವಸಾಯ ಮಂತ್ರಿಗಳನ್ನು ಭೇಟಿ ಮಾಡಿ ಅವರಿಗೂ ಪಕ್ಷದ ಬೇಡಿಕೆಯ ಪತ್ರವನ್ನು ಒಪ್ಪಿಸಿದರು ನಗರ ಮತ್ತು ಜಿಲ್ಲೆಯಲ್ಲಿ ಆಹಾರ ಡಿಪೋಗಳನ್ನು ತೆರೆದು ಸುಲಭ ಬೆಲೆಗೆ ಅಕ್ಕಿಯನ್ನು ಮಾರುವ ವ್ಯವಸ್ಥೆಯಾಗಬೇಕೆಂದು ಅವರು ಕೋರಿದರು ಅಭಾವ ಪರಿಸ್ಥಿತಿಯನ್ನು ನೀಗಲು ಎಷ್ಟಾದರೂ ಹಣವನ್ನು ಖರ್ಚು ಮಾಡಲಾಗುವುದೆಂದೂ, ಜಿಲ್ಲಾಧಿಕಾರಿಗಳೊಡನೆ ಸಹಕರಿಸಬೇಕೆಂದೂ ಸಚಿವರು ಸೂಚಿಸಿದರು

ಮೆಟ್ರೊಪಾಲಿಟನ್ ಕಾಲೇಜು ವಿದ್ಯಾರ್ಥಿಗಳ ಸಂಘದ ಚುನಾವಣೆ

ರಾಜಧಾನಿಯ ಚಾಂಪಿಯನ್ ಮೆಟ್ರೊಪಾಲಿಟನ್ ಕಾಮರ್ಸ್ ಕಾಲೇಜಿನ ಕಾಮರ್ಸ್ ಅಂಡ್ ಅಕೌಂಟನ್ಸಿ ವಿದ್ಯಾರ್ಥಿಗಳ ಸಂಘದ ಅಧಿಕಾರವರ್ಗಕ್ಕೆ ಶ್ರೀ ಪಿ ಸುಬ್ಬರಾಯ ಶಾಸ್ತ್ರಿಯವರು ಅಧ್ಯಕ್ಷರಾಗಿಯೂ, ಶ್ರೀ ಎಸ್ ವಿ ಪ್ರಸನ್ನ ಸಿಂಹರವರು ಸಂಚಾಲಕರಾಗಿಯೂ ಆರಿಸಲ್ಪಟ್ಟಿರುವರು ಶ್ರೀಗಳಾದ ಬಿ ಕೆ ಆತ್ಮಾರಾಂ ಎಂ ಆರ್ ಶೇಷಾದ್ರಿ ಶರ್ಮ ಮತ್ತು ವೇಣುಗೋಪಾಲ್‌ರಾವ್ ಮತ್ತು ಸರ್ವಶ್ರೀಯವರು ಸದಸ್ಯರಾಗಿ ಚುನಾಯಿತರಾಗಿರುವರು

ಸುತ್ತೂರು ವಿದ್ಯಾರ್ಥಿನಿಲಯ ಸಂಘ

ರಾಜಧಾನಿಯಲ್ಲಿರುವ ಮೇಲ್ಕಂಡ ಸಂಘದ ಚುನಾವಣೆಯು ಕಳೆದ ಭಾನುವಾರ ನಡೆದು ಶ್ರೀ ಡಿ ಎಂ ಗುರುಸಿದ್ಧಯ್ಯನವರು ಉಪಾಧ್ಯಕ್ಷರು, ಶ್ರೀ ಹೆಚ್ ಸಿ ಶಾಂತವೀರಯ್ಯನವರು ಮತ್ತು ಎಂ ಮರಿಸ್ವಾಮಿಯವರು ಕಾರ್ಯದರ್ಶಿಗಳು, ಶ್ರೀಗಳಾದ ಎಸ್ ನಂಜಯ್ಯ, ಹೆಚ್. ಎಸ್ ರಾಜಶೇಖರ, ಜೆ ಬಸವಣ್ಣ, ಬಿ ಎಲ್ ಮಹಾಲಿಂಗಪ್ಪ, ಕೆ ಸಿ ಶಿವಪ್ಪ, ಜಿ ಚಂದ್ರಶೇಖರ್ ಹೆಚ್ ಎಸ್ ಭೋಗಾನಂಜಯ್ಯ, ಎಂ ಬಸವಣ್ಣ, ಬಿ ಎಸ್ ಜಯದೇವಮೂರ್ತಿ, ಶಿವಲಿಂಗಯ್ಯ ಎ ನಾಗರಾಜಪ್ಪ, ಗಣಪತಿ ನಾಯಕ್ ಟಿ ಡಿ ಸುಬ್ಬಣ್ಣ, ಟಿ ಕೆ ಪುಟ್ಟಬುದ್ಧಿ, ವಿ ಪುಟ್ಟಸ್ವಾಮಿ ಮತ್ತು ಡಿ ಗುರುಸಿದ್ಧಪ್ಪನವರು ಸದಸ್ಯರುಗಳಾಗಿ ಆರಿಸಲ್ಪಟ್ಟರು

ಸ್ವಾತಂತ್ರ್ಯ ದಿನಾಚರಣೆ

ಕೃಷ್ಣರಾಜನಗರದ ಯುವಕ ಸಂಘದ ಆಶ್ರಯದಲ್ಲಿ ಕಳೆದ ೧೫ನೇ ತಾರೀಖು ಸ್ವಾತಂತ್ರ್ಯ ದಿನೋತ್ಸವವು ಶ್ರೀ ನವರತ್ನ ರಾಜುರವರ ಅಧ್ಯಕ್ಷತೆಯಲ್ಲಿ ನಡೆಯಿತು ವಿವಿಧ ವೇಷ ಪ್ರದರ್ಶನಗಳು ಏರ್ಪಾಡಾಗಿದ್ದುವು ವಿದ್ಯಾರ್ಥಿ ವಿದ್ಯಾರ್ಥಿನಿಯರು ಭಾಗವಹಿಸಿದ್ದರು ಶ್ರೀ ಎಂ ಸಿ ವೀರ್ ಪಾರ್ಟಿಯವರಿಂದ ನೃತ್ಯ ಪ್ರದರ್ಶನವು ಏರ್ಪಾಡಾಗಿತ್ತು ಕನ್ನಡ ಗದಾಯುದ್ಧ ನಾಟಕವನ್ನು ಅಭಿನಯಿಸಲಾಯಿತು

Pulv

BRONKOL

For ASTHMA & BRONCHITIS

Sole Distributors for Mysore State and Coorg

SATHYA & CO,

Chemists & Druggists

71/1 A S Street,

BANGALORE 2

ವಿದ್ಯಾಪೀಠಗಳ ವಿದ್ಯಾರ್ಥಿಗಳಿಗೆ ಪ್ರಶಸ್ತಿ ಪತ್ರ ವಿನಿಯೋಗ

ನಂಜನಗೂಡು ೧೫

ಇಲ್ಲಿನ ಮತ್ತು ಹಾಸನದ ವಿದ್ಯಾಪೀಠಗಳಲ್ಲಿ ಶಿಕ್ಷಣ ಪಡೆದ ವಿದ್ಯಾರ್ಥಿಗಳಿಗೆ ಭಾರತದಲ್ಲಿರುವ ಫೋರ್ಡ್ ಫೌಂಡೇಷನ್ನಿನ ಶ್ರೀ ಎಫ್ ಸಿ ವರ್ಡ್‌ರವರು ಪ್ರಶಸ್ತಿ ಪತ್ರಗಳನ್ನು ಕಳೆದ ಸೋಮವಾರ [illegible] ಫೌಂಡೇಷನ್ನಿನ ಮುಖ್ಯಾಧಿಕಾರಿಗಳಾದ ಎ ಸ್ಪೆಂಡರ್‌ರವರು ಅಧ್ಯಕ್ಷತೆ ವಹಿಸಿದ್ದರು ಅವರು ಭಾಷಣ ಮಾಡಿ ಭಾರತದ ಪ್ರಗತಿ ಬಗ್ಗೆ ಪ್ರಶಂಸಿಸಿದರು ವಿದ್ಯಾಪೀಠದ ಶ್ರೀ ಬಿ ವಿ ಸತ್ಯನಾರಾಯಣರವರು ಸ್ವಾಗತಿಸಿದರು

ವಿವಾಹ ಮಹೋತ್ಸವಗಳು

ನಗರದ ಸರ್ಕಾರಿ ಹೈಸ್ಕೂಲಿನ ನಿವೃತ್ತ ಮುಖ್ಯೋಪಾಧ್ಯಾಯರಾದ ಶ್ರೀ ಟಿ ಸುಬ್ಬಣ್ಣಾಚಾರ್ಯರು ತಮ್ಮ ಕುಮಾರಿ ಸೌ॥ ವೇದವತಿಯನ್ನು ಕೃಷ್ಣಗಿರಿಯ ಶ್ರೀ ಕೆ ವಿ ಆರ್ ಕೃಷ್ಣಮೂರ್ತಿಯವರ ಪುತ್ರರಾದ ಶ್ರೀ ಕೆ ಗುಂಡೂರಾಯರಿಗೆ ಕೊಟ್ಟು ಕಳೆದ ಭಾನುವಾರ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು

ರಾಜಧಾನಿಯ ಶ್ರೀ ಗೋವಿಂದಶೆಟ್ಟರು ತಮ್ಮ ಸಹೋದರ ಶ್ರೀ ಎಂ ಆರ್ ಶ್ರೀನಿವಾಸಶೆಟ್ಟಿಯವರಿಗೆ ಮದ್ರಾಸಿನ ಶ್ರೀ ನಾಮಾ ಸುಬ್ಬಯ್ಯಶೆಟ್ಟರ ಕುಮಾರಿ ಸೌ॥ ಸುಶೀಲಾರವರನ್ನು ತಂದುಕೊಂಡು ಕಳೆದ ಸೋಮವಾರ ಮದ್ರಾಸಿನಲ್ಲಿ ವಿವಾಹವನ್ನು ಜರುಗಿಸಿದರು

ಲಕ್ಷ್ಮಿ ಚಿತ್ರ ★ 17-8-56 ರಿಂದ ಅಮೋಘ ಪ್ರಾರಂಭ ಪ್ರತಿ ದಿನ ೩ ಆಟಗಳು

ವೈದ್ಯ ಫಿಲಂಸ್‌ರವರ ತಮಿಳು ಚಿತ್ರ

ಮಂಗೈಯರ್ ತಿಲಕಂ

ಪಾತ್ರ ಪದ್ಮಿನಿ, ರಾಗಿಣಿ, ಎಂ ಎನ್ ರಾಜಂ, ಶಿವಾಜಿ ಗಣೇಶನ್, ಎಸ್ ವಿ ಸುಬ್ಬಯ್ಯ, ತಂಗವೇಲು ಮುಂತಾದವರು

ಶುಚಿ ಮತ್ತು ರುಚಿ !

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್,

ಪ್ರತಿ ಭಾನುವಾರ

ಸ್ಪೆಷಲ್ ಪೊಟಿಟೊ ಬ್ರೆಡ್

ಮನೆಗಳಿಗೆ ಸಪ್ಲೈ ಮಾಡಲಾಗುತ್ತೆ

ಶ್ರೀ ಕೃಷ್ಣಾ ಬೇಕರಿ

ಡಿ ಸುಬ್ಬಯ್ಯಾ ರೋಡ್, ಮೈಸೂರು

ಕಳೆದುಕೊಂಡ

ಮನುಷ್ಯತ್ವವನ್ನು

ಮತ್ತೆ ಪಡೆಯಬೇಕಾದರೆ

ಲೈಂಗಿಕ ಚಿಕಿತ್ಸಾ ಪ್ರವೀಣ

ಡಾ॥ ರಾವ್‌ರವರನ್ನು

ಭೇಟಿ ಮಾಡಿ

ಯಾವ ಕಾರಣಗಳಿಗಾದರೂ, ನೀವು ಕಳೆದುಕೊಂಡಿರುವ ಯೌವನ ಮತ್ತು ಶಕ್ತಿಗಳು ಮತ್ತೆ ನಿಮಗೆ ಸಂಪೂರ್ಣವಾಗಿ ಪ್ರಾಪ್ತವಾಗುವಂತೆ ಮಾಡುತ್ತಾರೆ ಆದ್ದರಿಂದ, ಆರೋಗ್ಯ, ಹಣ ಮತ್ತು ಕಾಲಗಳನ್ನು ಕಾಪಾಡಿಕೊಳ್ಳುವ ಸಲುವಾಗಿ ಆದಷ್ಟು ಜಾಗ್ರತೆ ಡಾ॥ ರಾವ್‌ರವರನ್ನು ಭೇಟಿ ಮಾಡಿರಿ

ಭೇಟಿಯ ಕಾಲ

ಬೆಳಗ್ಗೆ 8 ರಿಂದ 12 ಗಂಟೆ

ಮಧ್ಯಾಹ್ನ 4 ರಿಂದ ರಾತ್ರಿ 8 ಗಂಟೆ

ವಿಳಾಸ

ರಾವ್ ಮೆಡಿಕಲ್ ಹಾಲ್,

ನಂ 745 ಅಶೋಕಾ ರೋಡ್,

(ಮೈಸೂರು ಬ್ಯಾಂಕ್ ಮುಂಭಾಗದ ಪಾರಿ ನಿವೇಶನದಿಂದ ಮೂರನೇ ಕಟ್ಟಡ)

ಮೈಸೂರು

Edited, Printed and Published by A R Nagarajan at Sadhvi Press D Subbaiah Road, Mysore

ಟೆಲಿಫೋನ್ ನಂ 792

ಇಂದಿನ ಪತ್ರಿಕೆ 6 ಕಾಸು

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಫೋನ್ — 338
ನೇತ್ರ ಪರೀಕ್ಷೆ ಮಾಡಿ
ಸೂಕ್ತ ಬೆಲೆಯಲ್ಲಿ ಕನ್ನಡಕಗಳನ್ನು
ಒದಗಿಸಲಾಗುತ್ತದೆ
ಟಿ. ಸಿ. ನಟರಾಜ್
ಅಂಡ್ ಕೋ.,
ಉಪಧಿ ಮತ್ತು ಕನ್ನಡಕದ
ವ್ಯಾಪಾರಿಗಳು
ಮೈಸೂರು

ಸಂಪುಟ ೧೫] SADHVI : SUNDAY 19-8-1956 ಮೈಸೂರು : ಭಾನುವಾರ ೧೯—೮—೧೯೫೬ [ಸಂಚಿಕೆ : ೧೬

ಕಡಿದಾಳ್ ಮಂಜಪ್ಪನವರಿಂದ ಪ್ರಮಾಣ ವಚನ ಸ್ವೀಕಾರ

ಶ್ರೀ ಕಡಿದಾಳ್ ಮಂಜಪ್ಪನವರಿಂದ ಪ್ರಮಾಣ ವಚನ ಸ್ವೀಕಾರ

ಮೈಸೂರು ೧೯

ಇಂದು ಬೆಳಗ್ಗೆ ನಗರಕ್ಕೆ ಆಗಮಿಸಿದ ಶ್ರೀ ಕಡಿದಾಳ್ ಮಂಜಪ್ಪನವರು ೧೧-೩೦ಕ್ಕೆ ಜಲ ದರ್ಶಿನಿಯಿಂದ ಅರಮನೆಗೆ ತೆರಳಿ ರಾಜಪ್ರಮುಖರ ಸಮ್ಮುಖದಲ್ಲಿ ಮುಖ್ಯಮಂತ್ರಿಯಾಗಿ ಪ್ರಮಾಣ ವಚನವನ್ನು ತೆಗೆದುಕೊಂಡರು. ಅನಂತರ ಅವರು ಚಾಮುಂಡಿಬೆಟ್ಟಕ್ಕೆ ಹೋಗಿ ಮತ್ತು ಪರಕಾಲಸ್ವಾಮಿಗಳ ಮಠಕ್ಕೆ ತೆರಳಿ ಆಶೀರ್ವಾದವನ್ನು ಪಡೆದರು. ಶ್ರೀ ಪ ಸ್ವಾಮಿ ... ಕೂಡಲೆ ಅವರು ಮುಖ್ಯ ... ಸಂಸ್ಥಾನದ ... ವಿಷಯಗಳ ಬಗ್ಗೆ ಸಮಾಲೋಚನೆ ನಡೆಸಿದರು.

ಅತಿಥಿ ಗೃಹವಾಗಿ ಕುಮಾರ ಕೃಪದ ಪರಿವರ್ತನೆ

ಮುಖ್ಯ ಮಂತ್ರಿಯವರ ಅಧಿಕೃತ ನಿವಾಸವಾದ ಕುಮಾರ ಕೃಪ ಭವನವನ್ನು ದೊಡ್ಡ ಮನುಷ್ಯರುಗಳು ಬಂದು ಇಳಿದುಕೊಳ್ಳುವ ಅತಿಥಿ ಗೃಹವಾಗಿ ಪರಿವರ್ತಿಸಲಾಗುವುದು.

... ಮಹಾರಾಜಾ ಕಾಲೇಜಿನ ... ಶ್ರೀ ... ರಾಮಣ್ಣ ಶೆಟ್ಟಿಯವರು ಕಳೆದ ೧೦ನೆ ... ದ ಬೆಳಗಿನ ಜಾವ ... ಸಿಕ್ಕಿ ಮೃತರಾದರೆಂದು ವರದಿಯಾಗಿದೆ.

ಜೀಪ್ ಅಪಘಾತದಲ್ಲಿ ನೆಹರೂರವರಿಗೆ ಗಾಯ

ಸೌರಾಷ್ಟ್ರದಲ್ಲಿ ಇತ್ತೀಚೆಗೆ ಜಲಕ್ಷಾಮವಾಗಿ ವಿಪತ್ತಿಗೆ ಗುರಿಯಾದ ಅಂಜಾರ್ ಎಂಬ ಪ್ರದೇಶವನ್ನು ಪರಿಶೀಲನೆಗಾಗಿ ಹೊರಟಿದ್ದ ಶ್ರೀ ನೆಹರೂರವರು ನಿನ್ನೆ ಕುಳಿತಿದ್ದ ಜೀಪು ... ಅಪಘಾತಕ್ಕೆ ಗುರಿಯಾಗಿ ಅವರ ಬಲ ಮುಂಡಿ ... ಕೆಳು ಮತ್ತು ಭುಜಕ್ಕೆ ಸ್ವಲ್ಪ ... ಯವಾಯಿತು. ರಸ್ತೆ ಸುಗಮವಾಗಿಲ್ಲದಿದ್ದುದರಿಂದ ಜೀಪು ... ಬಲ ಭಾಗಕ್ಕೆ ತಿರುಗಿ ಉರುಳಿದ್ದವರ ಕೆಳಗೆ ... ದ್ದರು. ಬಿದ್ದ ಕೂಡಲೆ ನೆಹರೂರವರು ಎದ್ದು ... ಅಪಘಾತಕ್ಕಾಗಿ ... ಗುರಿಯಾದ ... ಹಾಸ್ಯದಿಂದ ನುಡಿದರು ... ಯಲ್ಲಿ ಚಿಕಿತ್ಸೆ ಪಡೆದ ಬಳಿಕ ... ಮೇಲಕ್ಕೆತ್ತಿ ಪ್ರಯಾಣ ಮಾಡಿದರು.

ವೇಷ ಧರಿಸಿದ ಪೊಲೀಸರಿಂದ ಜೂಜುಗಾರರ ಪತ್ತೆ

ನಂಜನಗೂಡು ೧೯

ದೇವನೂರು ಗ್ರಾಮದಲ್ಲಿ ಜೂಜಾಟದ ಮುಖ್ಯ ಮುಲಿಗಳಾ ಪಟೇಲ್ ಪುಟ್ಟಸ್ವಾಮಪ್ಪ, ರಾ... ನಾಯಕ, ಮಲ್ಲಪ್ಪ, ಚಿಕ್ಕಬಸಪ್ಪನ ಕೆಂಚ... ಮಹದೇವಪ್ಪ, ಸಣ್ಣಪ್ಪ ಮತ್ತು ಲಿಂಗಪ್ಪ ... ಎಂಬುವರನ್ನು ಮೊನ್ನೆ ... ಪೊಲೀಸು ಇನ್ಸ್‌ಪೆಕ್ಟರ್ ಶ್ರೀ ಕೃಷ್ಣಪ್ಪ ... ಸಬ್‌ಇನ್ಸ್‌ಪೆಕ್ಟರ್ ಶ್ರೀ ... ವೇದಾಂತ ಅಯ್ಯಂಗಾರ್ ನರಸಿಂಹಯ್ಯ ... ಇತರ ಪೊಲೀಸು ಸಿಬ್ಬಂದಿಯವರು ವೇಷ ಧರಿಸಿಕೊಂಡು ಹೋಗಿ ದಸ್ತಗಿರಿ ಮಾಡಿದ ... ದಲ್ಲಿ ದೊರೆತ ರೂ ... ಗಳನ್ನೂ ... ಜೂಜಿನ ಸಾಮಾನುಗಳನ್ನೂ ವಶಪಡಿಸಿಕೊಳ್ಳಲಾಯಿತು.

ಮುಖ್ಯ ಮಂತ್ರಿ

ಶ್ರೀ ಕಡಿದಾಳ್ ಮಂಜಪ್ಪನವರು

ಸುಲಭ ಬೆಲೆಯಲ್ಲಿ ಆಹಾರ ಧಾನ್ಯ ಒದಗಿಸಲು ಒತ್ತಾಯ

ಚಳುವಳಿ ನಡೆಸಲು ನಗರದ ಪ್ರಜಾ ಸಮಾಜವಾದಿಗಳ ಸಂಚಿಕೆ

ಮೈಸೂರು ೧೯

ಪ್ರಜಾ ಸಮಾಜವಾದಿ ಪಕ್ಷದ ... ಕಾರ್ಯಕಾರಿ ಸಮಿತಿಯು ... ಮೊನ್ನೆ ಪೌರಸಭಾ ಸದಸ್ಯರಾದ ಶ್ರೀ ... ರಾಮಕೃಷ್ಣಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ನಗರದಲ್ಲಿ ಅಕ್ಕಿ ... ಆಹಾರ ಧಾನ್ಯಗಳ ಬೆಲೆಯು ವಿಪರೀತವಾಗಿ ... ಪ್ರದೇಶಗಳು ಮತ್ತು ಇತರ ... ವಿಪರೀತ ಕಷ್ಟ ... ಬರದವರು ... ಸುಲಭ ಬೆಲೆಯಲ್ಲಿ ... ಆಹಾರವನ್ನು ಒದಗಿಸಲು ... ನಗರ ... ಪ್ರತಿಭಟಿಸಲು ... ನಿರ್ಣಯ ಮಾಡಲಾಯಿತು.

... ಭಾನುವಾರ ಸಂಜೆ ... ಮೈದಾನದಲ್ಲಿ ಶ್ರೀ ಬಿ ಕೆ ... ನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆಯೊಂದನ್ನು ಕರೆಯಲೂ ತೀರ್ಮಾನಿಸಲಾಯಿತು.

ಕಮ್ಯೂನಿಸ್ಟ್ ಪಕ್ಷದಿಂದ ಎ. ಕೆ. ಗೋಪಾಲನ್‌ರವರ ಬಂಧನ

ಪಾರ್ಲಿಮೆಂಟಿನಲ್ಲಿರುವ ಕಮ್ಯೂನಿಸ್ಟ್ ಪಕ್ಷದ ಸದಸ್ಯರಾದ ಎ ಕೆ ಗೋಪಾಲನ್‌ರವರು ಅ... ಮಹಾಬಲ ದಿನದಲ್ಲಿ ಪ್ರತಿಭಟನೆ ... ನಿನ್ನೆ ಉಲ್ಲಂಘನೆ ಮಾಡಿದರೆಂದು ಅವರನ್ನು ... ಪೊಲೀಸರು ದಸ್ತಗಿರಿ ಮಾಡಿದ್ದಾರೆ ... ಬಂಧಿಸಿದ ... ಅವರನ್ನು ... ರೈಲಿನಲ್ಲಿ ... ಕಳುಹಿಸುತ್ತಿರುವರು.

ನಾಯಕತ್ವದ ಪರಾಭವಕ್ಕೆ ಕಾರಣ

ಪತ್ರಿಕಾ ಪ್ರತಿನಿಧಿಗಳಿಗೆ ಹನುಮಂತಯ್ಯನವರ ವಿವರಣೆ

ಬೆಂಗಳೂರು ೧೯

ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ಈ ದಿನ ಪತ್ರಿಕಾ ಪ್ರತಿನಿಧಿಗಳನ್ನು ... ಪತ್ರಿಕಾ ಪ್ರತಿನಿಧಿಗಳ ... ಪ್ರಶ್ನೆಗಳಿಗೆ ಉತ್ತರವಿತ್ತು ... ಪರಿಸ್ಥಿತಿಯನ್ನು ವಿವರಿಸಿ ... ತಮ್ಮ ... ಪಕ್ಷದಲ್ಲಿ ... ವಿರೋಧಿಗಳು ... ಎಂದು ಅವರು ನುಡಿದರು.

... ತಾವು ... ಮುಂದೆ ... ಬಗ್ಗೆ ... ಎಂದೂ ಅವರು ನುಡಿದರು.

ಈ ವರ್ಷವೂ ದಸರಾ ಉತ್ಸವ ಮತ್ತು ಜಂಬೂಸವಾರಿ

ಮೈಸೂರು ೧೯

ಈ ವರ್ಷ ದಸರಾ ಉತ್ಸವವೂ ಜಂಬೂ ಸವಾರಿಯೂ ... ನಡೆಯುವುದೆಂದೂ ... ಪ್ರಾಂತ ಪ್ರಚಾರ ... ಕಾರ್ಯ ಕ್ರಮಕ್ಕೆ ... ತಿಳಿದುಬಂದಿದೆ.

ನಿಧನ ಕಥೆ

ಚಾಮಯ್ಯನ ಗುಡಿ ... ಶ್ರೀ ... ಮಲ್ಲಿಕಾರ್ಜುನ ದೇವಸ್ಥಾನದಲ್ಲಿ ... ಸಂಜೆ ... ಪ್ರಯುಕ್ತ ... ನಡೆದ ... ಶ್ರೀ ವೆಂಕಟ ... ದೇವ ... ಮಯ್ಯನವರ ... ಅಧ್ಯಕ್ಷತೆ ... ನಡೆಯಿತು.

ಪಾಕಿಸ್ತಾನದಲ್ಲಿ ಜರೂರು ಪರಿಸ್ಥಿತಿಯ ಘೋಷಣೆಯೇ ?

ಕರಾಚಿ ... ಪೂರ್ವ ಪಾಕಿಸ್ತಾನದ ... ನಗಳಿಗೆ ... ಪಾಕಿಸ್ತಾನದಲ್ಲಿ ಜರೂರು ಪರಿಸ್ಥಿತಿಯ ಘೋಷಣೆಯಾಗಲಿರುವುದೆಂದು ವರದಿಯಾಗಿದೆ ... ಸರ್ಕಾರ ... ಅಮೀರ್ ... ಇತರ ಮುಖಂಡರನ್ನು ಬಂಧಿಸಲು ... ಜನರನ್ನು ... ದಸ್ತಗಿರಿಯಾಗಿರುವುದೆಂದು ಹೇಳಲಾಗಿದೆ.

ಪ್ರಾಮಾಣಿಕ ಮತ್ತು ನಿಷ್ಪಕ್ಷಪಾತ ಸೇವೆ ಮಾಡುವೆನು

ನೂತನ ಮುಖ್ಯ ಮಂತ್ರಿಗಳ ಭರವಸೆ

ಮೈಸೂರು ೧೯

ಮುಖ್ಯ ಮಂತ್ರಿಗಳ ಪ್ರಮಾಣ ವಚನವನ್ನು ಸ್ವೀಕರಿಸಿದ ಶ್ರೀ ಕಡಿದಾಳ್ ಮಂಜಪ್ಪನವರು ಇಂದು ಮಧ್ಯಾಹ್ನ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸುತ್ತಾ, ತಾವು ಪ್ರಾಮಾಣಿಕವಾದ ಮತ್ತು ನಿಷ್ಪಕ್ಷಪಾತವಾದ ರೀತಿಯಲ್ಲಿ ಜನಸೇವೆ ಮಾಡುವುದಾಗಿ ಭರವಸೆಯಿತ್ತರು. ಸಂಸ್ಥಾನದ ಚರಿತ್ರೆಯಲ್ಲೇ ಸಂಕಟಕಾಲವಾದ ಈ ಸಮಯದಲ್ಲಿ ತನ್ನನ್ನು ಒಮ್ಮತದಿಂದ ಆರಿಸಿದ ಜನರು ತಮ್ಮ ಅಮಿತವಾದ ಬೆಂಬಲವನ್ನು ನನಗೆ ನೀಡಬೇಕು ಎಂಬುದಾಗಿ ಮನವಿ ಮಾಡಿಕೊಂಡರು.

ನನ್ನನ್ನು ವಿಧಿಯು ಈ ಸ್ಥಾನಕ್ಕೆ ಎಳೆತಂದಿದೆ. ಸಂಸ್ಥಾನದ ಮತ್ತು ನಮ್ಮ ಸಂಸ್ಥೆಯ ಹಿತದೃಷ್ಟಿಯಿಂದ ಬಹು ಸಂಖ್ಯಾತ ಸದಸ್ಯರ ಇಚ್ಛೆಯಂತೆ ಇದನ್ನು ಒಪ್ಪಿಕೊಳ್ಳಬೇಕಾಯಿತು ಎಂದು ಅವರು ನುಡಿದರು.

ಅನಂತರ ಹಲವು ಪ್ರಶ್ನೆಗಳಿಗೆ ಉತ್ತರವಿತ್ತು, ತಮ್ಮ ... ಒಳ ಗುಂಪುಗಳಿಗೂ ಸೇರಿದವರಲ್ಲವೆಂದೂ, ಯಾರು ತಮಗೆ ಒಳ್ಳೆಯವರೆಂದು ... ಅವರ ಕಡೆ ಇರುತ್ತೇನಾಗಿಯೂ ಈ ಸಂಸ್ಥೆಯಲ್ಲಿ ಒಗ್ಗಟ್ಟುಂಟುಮಾಡಲು ತಾವು ಶ್ರಮಿಸುವುದಾಗಿಯೂ ನುಡಿದರು. ನಗರದಲ್ಲಿ ಅಕ್ಕಿ ... ಸುಲಭ ದರದಲ್ಲಿ ಕೊಡಲು ... ಅಧಿಕಾರಿಗಳಿಗೆ ಸೂಚನೆ ... ನೀಡಿರುವರು.

ತಿರುಪತಿ ಬೆಟ್ಟ ಹತ್ತಲು ಹಿಂದುಗಳಲ್ಲದವರಿಗೂ ಅವಕಾಶ

ತಿರುಪತಿ ಬೆಟ್ಟಕ್ಕೆ ಹತ್ತಿಹೋಗಲು ಹಿಂದುಗಳಲ್ಲದವರಿಗೆ ಒಹಳ ಕಾಲದಿಂದ ಇದ್ದ ... ನಿರ್ಬಂಧವನ್ನು ಅಲ್ಲಿನ ದೇವಸ್ಥಾನದ ಧರ್ಮದರ್ಶಿಗಳು ಈಗ ತೆಗೆದುಹಾಕಿದ್ದಾರೆ.

LATEST NEWS

ಈ ಸಂಜೆ ಇತರ ಮಂತ್ರಿಗಳಿಂದ ಪ್ರಮಾಣ ವಚನ

ಹನುಮಂತಯ್ಯನವರು ವಿನಹ ಇತರ ಹಳೇ ಮಂತ್ರಿಗಳೆಲ್ಲರೂ ಇರುವರು

ಮೈಸೂರು ೧೯

ಹೊಸ ಮಂತ್ರಿಮಂಡಲದ ಸಚಿವರುಗಳು ಈ ಸಂಜೆ ... ಘಂಟೆಗೆ ರಾಜಪ್ರಮುಖರ ಸಮ್ಮುಖದಲ್ಲಿ ಪ್ರಮಾಣವಚನ ಸ್ವೀಕರಿಸುವರು.

ನೂತನ ಮಂತ್ರಿಮಂಡಲದಲ್ಲಿ ಕೆಳಗೆ ಕಂಡವರು ಸದಸ್ಯರಾಗಿರುವರೆಂದು ಖಚಿತವಾಗಿ ಗೊತ್ತಾಗಿದೆ. ಶ್ರೀಗಳಾದ ಎ ಜಿ ರಾಮಚಂದ್ರರಾವ್, ಕೆ. ... ವೆಂ ... ಪ್ಪ, ... ರ್ ಸಿ ... ಪ್ಪ ... ನಾಗನಗೌಡ ಮತ್ತು ಟಿ ಚನ್ನಯ್ಯ. ಇವರೆಲ್ಲರೂ ಹಿಂದಿನ ಮಂತ್ರಿಮಂಡಲದಲ್ಲಿದ್ದವರು ... ತೆಗೆದು ... ಎಂದು ...

ವಾರ ಭವಿಷ್ಯ

ತಾ|| ೧೯-೮-೫೬ರಿಂದ ೨೫-೮-೫೬ರವರೆಗೆ

ಮೇಷ :— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಾಧಾರಣ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಸಾಮಾನ್ಯ ಪರಿಸ್ಥಿತಿ. ಉದ್ಯೋಗದಲ್ಲಿ ...

ವೃಷಭ :— ಆರೋಗ್ಯ ತೃಪ್ತಿಕರ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಶುಭ ಕಾರ್ಯಗಳು ಜರುಗುವುವು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಮಿತ್ರರಿಂದ ನೆರವು.

ಮಿಥುನ :— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಉದ್ಯೋಗದಲ್ಲಿ ಪ್ರೋತ್ಸಾಹ. ಪ್ರವಾಸ ಸುಖಕರವಾಗಿರುವುದು.

ಕರ್ಕ :— ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ನಿರುತ್ಸಾಹ. ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ.

ಸಿಂಹ :— ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಖರ್ಚುವೆಚ್ಚ ಹೆಚ್ಚುವುದು. ವೃಥಾ ವಿವಾದ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ. ನೌಕರಿಯಲ್ಲಿ ತಿರುಗಾಟ. ಕುಟುಂಬದಲ್ಲಿ ಅಶಾಂತಿ.

ಕನ್ಯಾ :— ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ಸಮಸ್ಯೆ. ಕಾರ್ಯ ಸಾಧನೆಯಲ್ಲಿ ಸಂಯಮ ಅಗತ್ಯ.

ತುಲಾ :— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಶುಭ ಕಾರ್ಯಗಳು ಜರುಗುವುವು.

ವೃಶ್ಚಿಕ :— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು. ಉದ್ಯೋಗದಲ್ಲಿ ಪ್ರೋತ್ಸಾಹ. ಸಾಮಾಜಿಕ ಕ್ಷೇತ್ರದಲ್ಲಿ ಪ್ರಗತಿ.

ಧನು :— ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ಆಪ್ತರಿಂದ ವಂಚನೆ. ಉದ್ಯೋಗದಲ್ಲಿ ಅತೃಪ್ತಿ. ವ್ಯಾಪಾರ ವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು.

ಮಕರ :— ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಖರ್ಚುವೆಚ್ಚ ಹೆಚ್ಚುವುವು. ವೃಥಾ ವ್ಯಯ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ಕಿರುಕುಳ. ಶತ್ರುಗಳಿಂದ ತೊಂದರೆ.

ಕುಂಭ :— ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ಕಾರ್ಯ ಸಾಧನೆಯಲ್ಲಿ ಎಚ್ಚರಿಕೆಯಿರಲಿ. ಉದ್ಯೋಗದಲ್ಲಿ ನಿರುತ್ಸಾಹ. ವ್ಯಾಪಾರವ್ಯವಹಾರಗಳಲ್ಲಿ ಮಿತ್ರರಿಂದ ದ್ರೋಹ

ಮೀನ :— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಪ್ರವಾಸ ಸಂಭವ

ಕೃತಜ್ಞತಾ ಸರಣಿ

ರಾಜಸೇವಾಸಕ್ತ ವೈ. ಕೆ. ರಾಮಚಂದ್ರರಾಯರ ನಿಧನದ ಪ್ರಯುಕ್ತ ಸಂತಾಪವನ್ನು ಸೂಚಿಸಿ ಅವರ ಅಸಂಖ್ಯಾತರಾದ ಬಂಧು ಮಿತ್ರರು ಕಳುಹಿಸಿರುವ ಸಂದೇಶಗಳಿಗಾಗಿ ಶ್ರೀಯುತರ ಪುತ್ರರಾದ ಶ್ರೀ ವೈ. ಆರ್. ಅಚ್ಯುತರಾವ್ ಮತ್ತು ಕುಟುಂಬದವರು ಈ ಮೂಲಕ ಕೃತಜ್ಞತಾ ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತಾರೆ.

COACHING SECTION

Dalvoy High School, Mysore

Offers excellent Coaching by experienced teachers for the S. S. L. C. examn. of Dec. 1956. Classes in full swing. Join immediately.

Edited Printed and Published by A. R. Nagarajan at Sadhvi Press L... Road, Mysore

ಉಪಾಕರ್ಮ

ಮೈಸೂರು ೧೯

ಶ್ರೀಮನ್ಮಹಾರಾಜರ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಪ್ರತಿ ವರ್ಷದಂತೆ ಈ ಸಾರಿಯೂ ಮತತ್ರಯ ಬ್ರಾಹ್ಮಣರಿಗೆ ಪ್ರತ್ಯೇಕವಾಗಿ ಋಗ್ಯಜುಸ್ಸಾಮೋಪಾಕರ್ಮಗಳು ನಾಳೆ, ನಾಳಿದ್ದು ಮತ್ತು ಸೆಪ್ಟೆಂಬರ್ ೭ರಂದು ನಡೆಯುವುವು. ನಾಳೆ ಸಂಜೆ ೬|| ಗಂಟೆಗೆ ಬ್ರ|| ಶ್ರೀ ಸಿ. ರಾಮಚಂದ್ರಾಚಾರ್ಯರಿಂದ ಉಪಾಕರ್ಮದ ವಿಚಾರವಾಗಿ ಉಪನ್ಯಾಸವಿದೆ.

ನಾಳೆ ಬೆಳಿಗ್ಗೆ ೮ ಗಂಟೆಗೆ ಋಗುಪಾಕರ್ಮವು ಸ್ಮಾರ್ತರಿಗೆ ವಿ|| ಸಿ. ವಿ. ಚಂದ್ರಶೇಖರ ಭಟ್ಟರು ಮತ್ತು ವೈಷ್ಣವರಿಗೆ ಶ್ರೀ ಕೆ. ನಾಗರಾಜಾಚಾರ್ಯರ ನೇತೃತ್ವದಲ್ಲಿ ನಡೆಯುವುವು. ನಾಳಿದ್ದು ಬೆಳಿಗ್ಗೆ ೮|| ಗಂಟೆಗೆ ಶುಕ್ಲ ಯಜುರ್ವೇದಿಗಳಿಗೆ ಬ್ರ|| ಶ್ರೀ ಶ್ಯಾಮಾವಧಾನಿಗಳು, ಸ್ಮಾರ್ತರಿಗೆ ಬ್ರ|| ಶ್ರೀ ಕೃಷ್ಣಘನಪಾಠಿಗಳು, ಬೋಧಾಯನರಿಗೆ ಬ್ರ|| ಶ್ರೀ ದತ್ತಾತ್ರೇಯಭಟ್ಟರು ಮತ್ತು ವೈಷ್ಣವರಿಗೆ ಬ್ರ|| ಶ್ರೀ ಸಿ. ರಾಮಚಂದ್ರಾಚಾರ್ಯರು, ೧೧ ಗಂಟೆಗೆ ಶ್ರೀವೈಷ್ಣವರಿಗಾಗಿ ಬ್ರ|| ಶ್ರೀ ಎನ್. ವೆಂಕಟನರಸಿಂಹಾಚಾರ್ಯರು— ಇವರುಗಳಿಂದ ಯಜುರುಪಾಕರ್ಮವು ನಡೆಯುವುದು.

ಸೆಪ್ಟೆಂಬರ್ ೭ರಂದು ಬೆಳಿಗ್ಗೆ ೯ಕ್ಕೆ ಶ್ರೀ ಆರ್. ನಾರಾಯಣಸ್ವಾಮಿ ದೀಕ್ಷಿತರು ಸಾಮಗೋಪಾಕರ್ಮವನ್ನು ನಡೆಸುವರು.

ಬಂಡೀಕೇರಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ನಾಳಿದ್ದು ಬೆಳಿಗ್ಗೆ ೯ ರಿಂದ ಶ್ರೀವೈಷ್ಣವರಿಗೂ, ಮಧ್ವ ... ಶ್ರೀವೈಷ್ಣವರಿಗೂ ಯಜುರುಪಾಕರ್ಮವನ್ನು ನಡೆಸಲಾಗುವುದು.

ರಾಜಧಾನಿಯ ಸಿರಿನಾಡು ಸಂಘದ ಆಶ್ರಯದಲ್ಲಿ ಸೀನೀರುಕಟ್ಟೆ ರಸ್ತೆಯಲ್ಲಿರುವ ಆಂಬಾ ಸದನದಲ್ಲಿ ನಾಳೆ ಬೆಳಿಗ್ಗೆ ೭-೩೦ಕ್ಕೆ ಋಗ್ವೇದ ಉಪಾಕರ್ಮವು ವೇ|| ಬ್ರ|| ಶ್ರೀ ಗಿರಿಶಾಸ್ತ್ರಿಗಳ ಆಚಾರ್ಯತ್ವದಲ್ಲಿ ನಡೆಯಲು ಏರ್ಪಾಡಾಗಿದೆ.

ಚಾಮುಂಡಿಪುರಂ ಶಂಕರನಾರಾಯಣಸ್ವಾಮಿ ದೇವಸ್ಥಾನದಲ್ಲಿ ಯಜುರ್ವೇದ ಉಪಾಕರ್ಮವು ನಾಳಿದ್ದು ಬೆಳಿಗ್ಗೆ ೮ ಗಂಟೆಗೆ ನಡೆಯುತ್ತದೆ ಎಂಬುದಾಗಿ ವೇ|| ಆರ್. ವೈ. ಸುಬ್ರಹ್ಮಣ್ಯದೀಕ್ಷಿತರು ತಿಳಿಸುತ್ತಾರೆ.

ಸುಬ್ಬರಾಯನಕೆರೆ ಬಳಿ ಇರುವ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದಲ್ಲಿ ನಾಳೆ ಬೆಳಿಗ್ಗೆ ೮ ಗಂಟೆಗೆ ಋಗ್ವೇದ ಉಪಾಕರ್ಮವೂ, ನಾಳಿದ್ದು ಅದೇ ಹೊತ್ತಿಗೆ ಯಜುರುಪಾಕರ್ಮವೂ ಪ್ರತಿ ವರ್ಷದಂತೆ ನಡೆಯುವುವು. ಬರತಕ್ಕವರು ಸಕಾಲದಲ್ಲಿ ಸೇರಬೇಕೆಂದು ಮಠದ ವ್ಯವಸ್ಥಾಪಕರು ತಿಳಿಸುತ್ತಾರೆ.

ಋಗ್ವೇದ ಉಪಾಕರ್ಮ

ಚಾಮುಂಡಿಪುರದ ಶ್ರೀ ಶಂಕರನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ನಾಳೆ ಬೆಳಿಗ್ಗೆ ೮ ಗಂಟೆಗೆ ಋಗ್ವೇದ ಉಪಾಕರ್ಮವನ್ನು ವೇ|| ಬ್ರ|| ಶ್ರೀ ನಾರಾಯಣ ಜೋಯಿಸರು ನಡೆಸುವರು.

SAMEERA TUTORIAL COLLEGE,

2891, Sri Harivilas,

Chamundipuram, Mysore

Offers excellent coaching for S. S. L. C. Students by experienced teachers of High Schools and Colleges. Join immediately.

Morn 8 to 10 A.M.

Evg 5 30 to 7-30 P M.

SRI GAYATHRI

TALKIES

To-day & Tomorrow

SITTING BULL

From 21—8—56

Twentieth Century Fox's

SHARK RIVER

Starring— Steve Cochran & Warren Stevens

ಹೋಟೇಲಿನ ಮೇಲೆ ವಿದ್ಯಾರ್ಥಿಗಳ ಧಾಳಿ

೪೦೦ ಮಂದಿಯ ಬಂಧನ

ಅಸ್ಸಾಮಿನ ಪಾಂಡು ಎಂಬ ಊರಿನಲ್ಲಿ ಕಳೆದ ಬುಧವಾರ ಸ್ವಾತಂತ್ರ್ಯದಿನೋತ್ಸವದಲ್ಲಿ ಭಾಗವಹಿಸಿ ಹಿಂದಿರುಗುತ್ತಿದ್ದ ವಿದ್ಯಾರ್ಥಿಗಳ ಧಾಳಿ ಗುಂಪೊಂದು ಹೋಟೇಲೊಂದಕ್ಕೆ ನುಗ್ಗಿ ಚಹಾ ಬೆಲೆಯ ಬಗ್ಗೆ ಮಾಲೀಕರೊಡನೆ ಜಗಳವಾಡಿ ಅವರನ್ನು ಹೊಡೆದು ಅಂಗಡಿಯನ್ನು ಲೂಟಿ ಮಾಡಿತೆಂದೂ, ಅವರಲ್ಲಿ ೪೦೦ ಮಂದಿಯನ್ನು ಬಂಧಿಸಿ ಜೈಲಿಗೆ ರಿಮಾಂಡ್ ಮಾಡಲಾಯಿತೆಂದೂ ವರದಿಯಾಗಿದೆ. ಇನ್ನೂ ಹಲವು ಚಹಾ ಅಂಗಡಿಗಳ ಮೇಲೆ ಧಾಳಿ ನಡೆಸಲಾಯಿತು. ಅವರನ್ನು ತಡೆಯಲು ಬಂದ ಪೋಲೀಸು ಸಬ್ ಇನ್ಸ್‌ಪೆಕ್ಟರು ಮತ್ತು ಕಾನ್ಸ್‌ಟೇಬಲ್ಲುಗಳಿಗೆ ಏಟು ಬಿತ್ತು. ಮಿಲಿಟರಿಯವರ ಮೇಲೆ ಕಲ್ಲೆಸೆದು, ಒಂದು ಕಛೇರಿ ಮೇಲೆ ಧಾಳಿ ಮಾಡಲಾಯಿತು. ದಸ್ತಗಿರಿಯಾದವರ ಮೇಲೆ ಗಲಭೆ, ದೊಂಬಿ ಪ್ರಕರಣ, ಕಳುವು ಮತ್ತು ಸರ್ಕಾರಿ ನೌಕರರ ಮೇಲೆ ಕೈಮಾಡಿ ಜೀವಕ್ಕೆ ಅಪಾಯ ತಂದರೆಂದು ಮೊಕದ್ದಮೆಯನ್ನು ಹೂಡಲಾಗಿದೆ.

"ತರಂಗ" ಮಾಸ ಪತ್ರಿಕೆ

ಮೇಲ್ಕಂಡ ಶಿರೋನಾಮೆಯಲ್ಲಿ ಸ್ವಾತಂತ್ರ್ಯ ದಿನೋತ್ಸವದಂದು ಕನ್ನಡ ಮಾಸ ಪತ್ರಿಕೆಯೊಂದು ರಾಜಧಾನಿಯಲ್ಲಿ ಪ್ರಕಟವಾಗಲುಪಕ್ರಮವಾಗಿದೆ. ಶ್ರೀ ಬಿ. ಎಸ್. ನಾಗರಾಜರಾಯರು ಅದರ ಸಂಪಾದಕರು ಮತ್ತು ಪ್ರಕಾಶಕರು. ಅಕ್ಷರಸ್ಥರ ಸಂಖ್ಯೆಯು ಹೆಚ್ಚುತ್ತಿರುವಾಗ ಕನ್ನಡಿಗರ ಸೇವೆಯನ್ನು ಕೈಗೊಳ್ಳಲು ಸಂಪಾದಕರು ಉದ್ದೇಶಿಸಿದ್ದಾರೆ. ವಿಚಾರ ಸ್ವಾತಂತ್ರ್ಯದ ತರಂಗಗಳನ್ನು ಎಬ್ಬಿಸುವುದೇ ಪತ್ರಿಕೆಯ ಉದ್ದೇಶ. ಕನ್ನಡ ನಾಡಿನಲ್ಲಿ ಹೊಸ ಬಾಳು ಸುಗಮವಾಗಿ ಸಾಗಲು ಸಂಪಾದಕರು ಪ್ರಯತ್ನಪಡುವರು. ಅವರ ಆಶಯ ಈಡೇರಿ ಪತ್ರಿಕೆಯು ಕನ್ನಡಿಗರ ಮೆಚ್ಚುಗೆ ಪಡೆಯಲಿ. ಬೆಲೆ ೦-೨-೦.

ಸಹಾಯಾರ್ಥ ವಿವಿಧ ವಿನೋದಾವಳಿ

ರಾಜಧಾನಿಯ ವನಿತಾ ಸದನದ ಕಟ್ಟಡದ ಸಹಾಯಾರ್ಥವಾಗಿ ನಾಳೆ ಸಂಜೆ ೬ ಗಂಟೆಗೆ ಡಿ. ಬನುಮಯ್ಯನವರ ಪ್ರೌಢಶಾಲೆಯಲ್ಲಿ ವಿವಿಧ ವಿನೋದಾವಳಿಯನ್ನು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಶಂಕರರಾಯರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ. ಮಹಾಜನರು ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ರಾಮಕೃಷ್ಣ ಸ್ಟೋರ್ಸಿನ ವಾರ್ಷಿಕೋತ್ಸವ

ಹೊಸ ಸ್ವಾಚ್ಚ್ ಚೌಕದಲ್ಲಿರುವ ರಾಮಕೃಷ್ಣ ಸ್ಟೋರ್ಸಿನ ಮೊದಲನೇ ವಾರ್ಷಿಕೋತ್ಸವವು ಮೊನ್ನೆ ಜರುಗಿತು.

S. S. L. C. COACHING CLASSES

★ 70 per cent passes in June Exams

★ Morning Session 7 to 11 A. M.

★ Evening Session 6 to 9 P. M.

★ Expert tuition by experienced teachers

Classes in full swing

All subjects Rs 6 P.M.

CITY TUTORIAL COLLEGE,

Old Agrahar, Mysore

ರುಚಿ ಮತ್ತು ರುಚಿ !

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್,

ಪ್ರತಿ ಭಾನುವಾರ

ಸ್ಪೆಷಲ್ ಪೊಟಟೊ ಬ್ರೆಡ್

ಮನೆಗಳಿಗೆ ಸಪ್ಲೈ ಮಾಡಲಾಗುತ್ತೆ.

ಶ್ರೀ ಕೃಷ್ಣಾ ಬೇಕರಿ

ಡಿ. ಸುಬ್ಬಯ್ಯ ರೋಡ್, ಮೈಸೂರು.

ಕಾಶಿ ವಿಶ್ವನಾಥ ದೇವಾಲಯದ ವಿಸ್ತರಣಾ ಯೋಜನೆ

ಸ್ವಂ.ಸು.] ಕಾಶಿ ೧೯

ಹಿಂದುಗಳ ಪವಿತ್ರ ಕ್ಷೇತ್ರವಾದ ಈ ಊರಿನ ವಿಶ್ವನಾಥ ದೇವಾಲಯವನ್ನು ವಿಸ್ತಾರಗೊಳಿಸಿ ಭಕ್ತರಿಗೆ ಹೆಚ್ಚು ಅನುಕೂಲ ಕಲ್ಪಿಸುವ ಯೋಜನೆಯನ್ನು ಉತ್ತರ ಪ್ರದೇಶ ಸರ್ಕಾರದವರು ಇಟ್ಟುಕೊಂಡಿರುತ್ತಾರೆ. ಈ ಬಗ್ಗೆ ಆರ್ಥಿಕ ಮಂತ್ರಿ ಕಮಲಾಪತಿ ತ್ರಿಪಾಠಿಯವರು ಸ್ಥಳೀಯ ಅಧಿಕಾರಿಗಳೊಡನೆ ಚರ್ಚೆ ನಡೆಸಿದರು.

ಕರ್ನಾಟಕ ಸಂಘದ ಚುನಾವಣೆ

ಕಾಶಿಯ ಕರ್ನಾಟಕ ಸಂಘದ ಚುನಾವಣೆಯು ನಡೆದು, ಶ್ರೀ ವೆಂಕಟಾಚಲಂರವರು ಅಧ್ಯಕ್ಷರಾಗಿಯೂ, ಶ್ರೀ ರಾಮಚಂದ್ರ ಗಲಗಲಿಯವರು ಉಪಾಧ್ಯಕ್ಷರಾಗಿಯೂ, ಶ್ರೀಗಳಾದ ಎಂ. ಕೆ. ಭಟ್ ಮತ್ತು ಗೋಪಾಲಕೃಷ್ಣ ಬಾಗಿಲರವರು ಕಾರ್ಯದರ್ಶಿಗಳಾಗಿಯೂ ಮತ್ತು ಶ್ರೀ ಎಂ. ಎಸ್. ನಾರಾಯಣಸ್ವಾಮಿಯವರು ಕೋಶಾಧ್ಯಕ್ಷರಾಗಿಯೂ ಆರಿಸಲ್ಪಟ್ಟರು. ಮೈಸೂರಿನ ವಿದ್ಯಾರ್ಥಿ ಶ್ರೀ ಟಿ. ಸಿ. ಶಾಂತರಾಜ್ ಮತ್ತು ಪ್ರೊ|| ಬಿಲಕಣ್‌ರಯವರೂ ಸೇರಿ ೧೭ ಜನರು ಸಮಿತಿ ಸದಸ್ಯರಾಗಿ ಆರಿಸಲ್ಪಟ್ಟರು.

ಹಯಗ್ರೀವ ಜಯಂತಿ

ಶ್ರೀ ಬ್ರಹ್ಮತಂತ್ರ ಸ್ವತಂತ್ರ ಪರಕಾಲ ಸ್ವಾಮಿಗಳವರ ಮಠದಲ್ಲಿ ನಾಳೆ ಶ್ರೀ ಲಕ್ಷ್ಮೀಹಯಗ್ರೀವ ದೇವರ ಜಯಂತಿ ಉತ್ಸವವು ನೆರವೇರುವುದು. ಶ್ರೀ ಶ್ರೀಗಳವರು ೮ ದಿನ ಮಧ್ಯಾಹ್ನ ೩|| ಘಂಟೆಗೆ ಹಯಗ್ರೀವ ಅವತಾರ ಎಂಬ ವಿಷಯವಾಗಿ ಶ್ರೀ ಸೂಕ್ತಿಯನ್ನು ಅನುಗ್ರಹಿಸುವರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ಆ ವಂದೇಮಾತರಂ ೭-೧೫ ದಾಸರ ಗೀತೆಗಳು ೭-೩೦ ಗಾನ ವಿಹಾರ ... ಮಧ್ಯಾಹ್ನ ೧೨ ... ಹಾಡು ಮತ್ತು ... ಸಂಗೀತ ... ವೀಣಾ ವಾದನ ... ೧-೩೦ ... ಕೃಷ್ಣ ... ಸಂಗೀತ ಸಂಜೆ ೫-೪೦ ಆರ್. ಎನ್. ಸುಬ್ರಹ್ಮಣ್ಯ—ವೀಣೆ ೬-೧೫ ಜನಪದ ಗೀತೆಗಳು. ೬-೩೦ ... ಸಂಗೀತ. ... ವಿಮರ್ಶೆ. ... ಸಂಗೀತ. ... ವಿಜ್ಞಾನ ವಿಮರ್ಶೆ. ೯-೪೦ ಪಿ. ನಾರಾಯಣಶಾಸ್ತ್ರಿ—ಕಥಾ ಕಾಲಕ್ಷೇಪ.

ಟಾನಿಕ್ ಯಾತಕ್ಕೆ ?

ತನ್ನ ಆರೋಗ್ಯ ಸಂಪತ್ತನ್ನು ಕಾಪಾಡಲು

★ ಕಾಯಿಲೆಯಿಂದ ಎದ್ದವನು ಬೇಗ ಗುಣಮುಖನಾಗಲು

★ ಒಟ್ಟಿನಂತೆ ಮನುಷ್ಯನು ಚೇತನಗೊಳ್ಳಲು

ಮನುಷ್ಯನ ಶರೀರವು ಕೇವಲ ಒಂದು ಯಂತ್ರ ಗಾಳಿ, ಬೆಂಕಿ ಮತ್ತು ಇದ್ದಿಲುಗಳು ಯಂತ್ರಕ್ಕೆ ಅಗತ್ಯ ....

ಮನುಷ್ಯನ ಶರೀರಕ್ಕೆ ವಾತ, ಪಿತ್ತ ಮತ್ತು ಕಫಗಳಂತೆಯೇ

ಅವುಗಳ ಸುವ್ಯವಸ್ಥೆಯೇ ಆರೋಗ್ಯ . ಜೀವ

ಅವುಗಳ ಅವ್ಯವಸ್ಥೆಯೇ ರೋಗ.... ಮರಣ

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರಿಂದ ಕಂಡುಹಿಡಿಯಲ್ಪಟ್ಟಿರುವ

ನವರತ್ನ ಕಲ್ಪವನ್ನು

ಉಪಯೋಗಿಸಿರಿ

ಚಿನ್ನ, ಬೆಳ್ಳಿ, ಮುತ್ತು ಇತ್ಯಾದಿ ಒಂಭತ್ತು ರತ್ನಗಳ ಸಂಯೋಗ

ಅಪರೂಪವಾದ ಸಾಮಾನ್ಯ ಟಾನಿಕ್ ಇದು-

★ ವಾತ, ಪಿತ್ತ ಮತ್ತು ಕಫವನ್ನು ಕ್ರಮವಾಗಿಸಲು

★ ಕಳೆದುಹೋದ ಆರೋಗ್ಯವನ್ನು ಪುನಃ ಪಡೆಯಲು

★ ಯೌವನ ಮತ್ತು ಅದರ ಪ್ರಯೋಜನಗಳನ್ನು ... ಪಡೆಯಲು.

ಕೋರಿಕೆ ಮೇಲೆ ಉಚಿತ ಸಾಹಿತ್ಯವನ್ನು ಕಳುಹಿಸಲಾಗುವುದು.

NAVRATNA KALPA PHARMACY,

Jullundur City (India)

ರಿಜಿಸ್ಟರ್ ನಂ. 792

ಚಂದಾದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

[ಪುಟ : ೧೮] SADHVI : MONDAY 20-8-1936 ಮೈಸೂರು : ಸೋಮವಾರ ೨೦-೮-೧೯೩೬ [ಸಂಚಿಕೆ : ೧೮]

ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಮುಷ್ಕರ ಆರಂಭ

ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳ ಮುಷ್ಕರದ ಆರಂಭ

ಶಾಂತ ರೀತಿಯ ಮೌನದ ಮೆರವಣಿಗೆ

ಮೈಸೂರು ೨೦

ಮೊದಲೇ ನಿರ್ಧರಿಸಿದ್ದಂತೆ, ರಾಜಧಾನಿಯ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳು ಇಂದು ಅನಿರ್ದಿಷ್ಟ ಕಾಲದ ಮುಷ್ಕರವನ್ನು ಆರಂಭಿಸಿದರು. ಬೆಳಗ್ಗೆ - ಗಂಟೆಗೆ ವಿದ್ಯಾರ್ಥಿ ವಿದ್ಯಾರ್ಥಿನಿಯರೆಲ್ಲರೂ ಕಾಲೇಜು ಅಂಗಳದಲ್ಲಿ ಸೇರಿ ಸಾಮೂಹಿಕ ಪ್ರಾರ್ಥನೆಯನ್ನು ನಡೆಸಿದನಂತರ, ತಮ್ಮ ಬೇಡಿಕೆಗಳನ್ನೊಳಗೊಂಡ ಪ್ಲಕಾರ್ಡುಗಳನ್ನು ಹಿಡಿದು, ಸಯ್ಯಾಜಿರಾವ್ ರಸ್ತೆಯ ಮೂಲಕ ಪುರಸಭಾ ಕಛೇರಿವರೆಗೆ ಮೌನವಾಗಿ ಮೆರವಣಿಗೆಯಲ್ಲಿ ಹೋಗಿ, ಕಾಲೇಜಿಗೆ ಹಿಂದಿರುಗಿದರು. ಅವರ ಬೇಡಿಕೆಗಳು ಈಡೇರುವವರೆಗೂ ಮುಷ್ಕರವನ್ನು ಮುಂದುವರಿಸಬೇಕೆಂದು ನಿರ್ಧರಿಸಲಾಗಿದೆ. ಮೆರವಣಿಗೆಯಲ್ಲಿ ೩೦ ಮಂದಿ ಮಹಿಳೆಯರೂ ಸೇರಿ ಸುಮಾರು ೩೦೦ ಮಂದಿ ವಿದ್ಯಾರ್ಥಿಗಳು ಭಾಗವಹಿಸಿದ್ದರು.

ವಿದ್ಯಾರ್ಥಿ ಸಂಘದ ಕಾರ್ಯದರ್ಶಿಗಳಾದ ಶ್ರೀ ಜಿ ವಿ ನಾರಾಯಣಸ್ವಾಮಿಯವರು ಹೇಳಿಕೆಯೊಂದನ್ನಿತ್ತು, ತಾವುಗಳು ಶಾಂತಿಯುತವಾಗಿಯೂ ಶಿಸ್ತುಬದ್ಧವಾಗಿಯೂ, ಯಾರಿಗೂ ಯಾವ ವಿಧವಾದ ಹಿಂಸೆ ಮತ್ತು ಆತಂಕ ಉಂಟಾಗದ ರೀತಿಯಲ್ಲಿ ಮುಷ್ಕರವನ್ನು ನಡೆಸುವುದಾಗಿ ತಿಳಿಸಿರುತ್ತಾರೆ.

ಸಂಗೀತ ಕಛೇರಿಗಳು

ರಾಜಧಾನಿಯ ಸುಬ್ಬರಾಯನಕೆರೆ ಬಳಿ ಇರುವ ಶ್ರೀ ರಾಘವೇಂದ್ರಸ್ವಾಮಿಗಳವರ ಮಠದಲ್ಲಿ ನಾಳಿದ್ದಿನಿಂದ ೩ ದಿನಗಳವರೆಗೆ ನಡೆಯುವ ಆರಾಧನಾ ಮಹೋತ್ಸವದ ಅಂಗವಾಗಿ ನಾಳಿದ್ದು ರಾತ್ರಿ ೮॥ ಗಂಟೆಗೆ ಸಂಗೀತ ರತ್ನ ಟಿ ಚೌಡಯ್ಯನವರಿಂದ ಗಾಯನ ಕಛೇರಿಯು ಸೂಕ್ತ ಪಕ್ಕ ವಾದ್ಯಗಳೊಡನೆ ನಡೆಯುವುದು. ೨೪ ನೇ ತಾರೀಕು ರಾತ್ರಿ ೮॥ ಗೆ ವಿ॥ ಎ. ಸುಬ್ಬರಾಯರ ಸಂಗೀತವು ವಿ॥ ಅರುಣಾಚಲಪ್ಪನವರ ಹಾರ್ಮೋನಿಯಮ್ಮಿನೊಡನೆ ಏರ್ಪಾಡಾಗಿದೆ.

ನೂತನ ಮುಖ್ಯ ಮಂತ್ರಿಗಳಿಗೆ ಪೌರಸಭಾಧ್ಯಕ್ಷರ ಪುಷ್ಪ ಹಾರ

ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ಮುಖ್ಯಮಂತ್ರಿಗಳಾಗಿ ಪ್ರಮಾಣ ವಚನ ಸ್ವೀಕರಿಸಿ, ಜಲದರ್ಶಿನಿಗೆ ತೆರಳಿದೊಡನೆಯೇ ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಪುರ ನಿವಾಸಿಗಳ ಪರವಾಗಿ ಪುಷ್ಪಹಾರವನ್ನು ಸಮರ್ಪಿಸಿ ಶುಭಾಶಯಗಳನ್ನು ಕೋರಿದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೮ ಕ್ಲಾರಿಯೊನೆಟ್. ೮-೧೫ ಎಂ. ಬಿ. ಸರೋಜ-ಸಂಗೀತ. ೩-೩೦ ನಾನಾವಿಚಾರ ೩-೧೫ ರೇಡಿಯೋ ಮುಖ್ಯಾಂಶ ೧೨ ಆರ್. ಅಂಬುಜಮ್ಮ- ವೀಣೆ. ೧೨-೩೦ ರೇಡಿಯೋ. ೧೨-೪೫ ಮಹಿಳೆಯರ ಕಾರ್ಯಕ್ರಮ. ೧-೩೦ ಕ್ಲಾರಿಯೊನೆಟ್. ೨-೧೫ ಸಂಗೀತ. ಸಂಜೆ ೫-೩೦ ಮತ್ತು ೯-೧೫ ಎಂ ಎಸ್ ಕಲ್ಯಾಣಕೃಷ್ಣಯ್ಯಂಗಾರ್-ಸಂಗೀತ. ೬-೧೫ ಗಿ. ಶಿಶು ಕಲ್ಯಾಣ ವಾಚನ ೭-೩೦ ಕರ್ನಾಟಕದ ಬಗ್ಗೆ ಭಾಷಣ. ೮ ಹೊಸ ಕನ್ನಡದ ಬಗ್ಗೆ ಭಾಷಣ. ೮-೩೦ ಟಿ ಆರ್. ಪಾಪನಾಶಂ-ಪಕ್ಕ ಮುಂಡಲ. ೧೦ ರ ವಾರ್ತೆ. ೧೦-೧೫ ಮುಕ್ತಾಯಗೀತೆ.

ಮಂತ್ರಿಮಂಡಲದ ಬದಲಾವಣೆಯಲ್ಲಿ ಯಾವ ಸ್ವಾರ್ಥವೂ ಇಲ್ಲ

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಚನ್ನಯ್ಯನವರ ವಿವರಣೆ

ಮೈಸೂರು ೨೦

"ಕೇವಲ ಹಲವರಿಂದಲೇ ಕೂಡಿರುವ ಮಂತ್ರಿಮಂಡಲಕ್ಕೆ ಸಂಸ್ಥಾನದಲ್ಲಿ ಈಗ ಉಚಿತವಾದುದು ನಮ್ಮ ರಾಜಕೀಯದ ಸ್ವಾರ್ಥದಿಂದ ಕೂಡಿಲ್ಲದಿರುವುದನ್ನು ಸ್ಪಷ್ಟವಾಗಿ ತೋರಿಸುತ್ತದೆ"-ಎಂಬುದಾಗಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ನೆನ್ನೆ ಇಲ್ಲಿ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು

ಕಳೆದ ೩ ತಿಂಗಳಿಂದ ಲೀಗ್ ವಿದ್ಯಾರ್ಥಿಗಳ ಸಂಘದ ಅನೇಕ ಸಮಾರೋತ್ಸವದ ಅಧ್ಯಕ್ಷ ಭಾಷಣ ಮಾಡಿದ ಶ್ರೀ ಚನ್ನಯ್ಯನವರು ಸಂಸ್ಥಾನದ ರಾಜಕೀಯವನ್ನು ಪ್ರಸ್ತಾಪಿಸಿದರು

ಕಳೆದ ೬ ವಾರಗಳಿಂದ ಸಂಸ್ಥಾನದ ರಾಜಕೀಯದಲ್ಲಿ ಮುಸುಕಿದ್ದ ಅಪಾರ್ಥಗಳು ಇಂದು ಪರಿಹಾರವಾಗಿವೆಯೆಂದೂ, ಆ ರಾಜಕೀಯ ಬಿಕ್ಕಟ್ಟಿನ ಕಾಲದಲ್ಲಿ ತಮ್ಮನ್ನು ಹಲವಾರು ರೀತಿ ಟೀಕಿಸಲಾಯಿತೆಂದೂ ಅವರು ನುಡಿದರು. ತಾವಾಗಲೀ ಅಥವಾ ತಮ್ಮ ಕಡೆಯವರಾಗಲೀ ಇಟ್ಟುಕೊಂಡಿರುವ ಮಂತ್ರಿ ಪದವಿಯನ್ನು ಪಡೆಯಬಹುದಾಗಿತ್ತೆಂದೂ, ಆದರೂ ತಾವು ಹಾಗೆ ಮಾಡಲಿಲ್ಲವೆಂದೂ, ತಮ್ಮ ನಿಸ್ವಾರ್ಥತೆಯನ್ನು ದೇಶಕ್ಕೆ ತೋರಿಸಿರುವುದಾಗಿಯೂ ಹೇಳಿದರು

ಜಡಶಕ್ತಿ ಸರಿಯಾಗಿದ್ದರೆ ಮುನ್ನಡೆಯುವ ಶಾಖೆ ಏನಾದರೂ ಲೋಪ ಕಂಡಲ್ಲಿ ಅದನ್ನು ತಿದ್ದಿಕೊಳ್ಳಲು ಒತ್ತಾಯಪಡಿಸಿ, ಅದು ಆಗದಿದ್ದರೆ ಕ್ರಮಗಳನ್ನು ಕೈಗೊಳ್ಳುವುದಾಗಿಯೂ, ಇಂದಿಗೂ ವೈಯಕ್ತಿಕವಾಗಿ ಶ್ರೀ ಹನುಮಂತಯ್ಯನವರ ಮೇಲೆ ತಮಗೆ ಯಾವ ದ್ವೇಷವೂ ಇಲ್ಲವೆಂದೂ ಅವರು ಸ್ಪಷ್ಟಪಡಿಸಿದರು.

ಅಧಿಕಾರ ಸ್ಥಾನವು ಜವಾಬ್ದಾರಿಯುತವಾದ ಸೇವಾ ಕ್ಷೇತ್ರ. ಹಾಗೆಯೇ ನಮ್ಮ ಸಂಸ್ಥೆಯೂ ಸೇವೆಗೆ ಒಂದು ಸಾಧನ. ತಾವು ಎಂದೆಂದಿಗೂ ಸೇವೆಗಾಗಿ ದುಡಿಯುತ್ತೇವೆ. ಅದೇ ನಮ್ಮ ಗುರಿ-ಎಂದು ಶ್ರೀ ಚನ್ನಯ್ಯನವರು ಹೇಳಿ, ಇಂದಿನ ಮಂತ್ರಿಮಂಡಲಕ್ಕೆ ತಾವು ಸಂಪೂರ್ಣ ಸಹಕಾರ ನೀಡುವುದಾಗಿಯೂ, ಮಹಾಜನರೂ ಅದರೊಡನೆ ಸಹಕರಿಸಬೇಕೆಂದೂ ನುಡಿದರು.

ಅತಿಥಿ ಸತ್ಕಾರಕ್ಕೆ ಪ್ರಸಿದ್ಧಿಯಾದ ಮೈಸೂರಿನವರು ಕರ್ನಾಟಕದಲ್ಲಿಯೇ ಶೀಘ್ರದಲ್ಲೇ ಸೇರಲಿರುವ ಇತರ ಕನ್ನಡ ಭಾಗಗಳವರನ್ನು ಸರಿಯಾಗಿ ಅರಿತು, ಬರಮಾಡಿಕೊಳ್ಳಬೇಕೆಂದು ಅವರು ಹೇಳಿದರು

ರಾಜಕೀಯದಲ್ಲಿ ಪತ್ರಿಕೆಗಳವರ ಪಾತ್ರವನ್ನು ಪ್ರಸ್ತಾಪಿಸಿದ ಶ್ರೀ ಚನ್ನಯ್ಯನವರು ಅವರಲ್ಲಿ ಹಲವರು ವೈಯಕ್ತಿಕವಾಗಿ ಮಾಡುವ ಟೀಕೆಗಳನ್ನು ಖಂಡಿಸಿ ಅವರಿಂದ ತಮ್ಮ ಮನ ನೊಂದಿದೆಯೆಂದರು. ತಮ್ಮನ್ನು ಟೀಕಿಸಿದರೂ ತಾವು ವ್ಯಥೆಪಡುವುದಿಲ್ಲವೆಂದು ಅವರು ಹೇಳಿದರು ಪತ್ರಿಕೆಗಳಲ್ಲಿನ ವ್ಯಂಗ್ಯ ಚಿತ್ರಗಳ ಬಗ್ಗೆ ಆಕ್ಷೇಪಿಸಿ ಅವುಗಳಿಂದ ದೇಶದ ಹಿತ ಸಾಧನೆಯಾಗುವುದಿಲ್ಲವೆಂದೂ, ಪ್ರಜಾಪ್ರಭುತ್ವದ ಇಂದಿನ ಕಾಲದಲ್ಲಿ ಅವುಗಳನ್ನು ನಿವಾರಿಸಲಾಗದ ಕಾರಣ "ದೇವರೇ, ಬರಹಗಾರರಿಗೆ ಮುಂದಿನ ಜನ್ಮದಲ್ಲಾದರೂ ಸದ್ಬುದ್ಧಿಯನ್ನು ಕೊಡು" ಎಂಬುದಾಗಿ ಮಾತ್ರ ಪ್ರಾರ್ಥಿಸುವುದಾಗಿಯೂ ಹೇಳಿದರು

ಪತ್ರಿಕೆಗಳು ಹೆಚ್ಚು ಜವಾಬ್ದಾರಿಯುತವಾಗಿ ಸತ್ಯವಾದ ಸುದ್ದಿಗಳನ್ನು ತುಂಬುವುವೆಂದು ತಾವು ಹಿಂದೆ ಮಾಡಿದ್ದ ಟೀಕೆಯನ್ನು ವಾಪಸ್ ಪಡೆಯುವುದಾಗಿಯೂ ಹೇಳಿದರು. ರಾಜಕೀಯವು ಬಿಸಿಯಾಗಿರಲಿ, ಅಥವಾ ತಣ್ಣಗಿರಲಿ, ದೇಶದ ಹಿತವು ಮುಖ್ಯವಾದುದೆಂದು ನುಡಿದರು.

ಕಾಲಾನುಗುಣವಾಗಿ ಹೊಂದಿಕೊಳ್ಳುವ ಶ್ರೀ ಮನ್ಮಹಾರಾಜರ ಗುಣವನ್ನು ಶ್ರೀ ಚನ್ನಯ್ಯನವರು ಪ್ರಶಂಸಿಸಿ, ತಾವೂ ಅವರೂ ಅನ್ಯೋನ್ಯವಾಗಿ ಪರಸ್ಪರ ವಿಶ್ವಾಸಗೌರವಗಳಿಂದ ಮತ್ತು ಮುಚ್ಚುಮರೆಯಿಲ್ಲದೆ ವರ್ತಿಸುತ್ತಿರುವುದಾಗಿ ಹೇಳಿದರು.

ತಾವು ಎಷ್ಟೋ ಬಾರಿ ಶ್ರೀಮನ್ಮಹಾರಾಜರೊಡನೆ ಮಾತನಾಡುವಾಗ ಅವರನ್ನೇ ಟೀಕಿಸಿರುವುದಾಗಿಯೂ, ಅವರೂ ಸಹಾ ತಮ್ಮೊಡನೆ ಅದೇ ರೀತಿಯಲ್ಲಿರುವರೆಂದೂ ಶ್ರೀ ಚನ್ನಯ್ಯನವರು ತಿಳಿಸಿ, ಅವರು ಗವರ್ನರಾದರೂ ನಮ್ಮನ್ನು ಬಿಟ್ಟು ಹೋಗುವುದಿಲ್ಲವೆಂದು ನುಡಿದರು. ಅಂತಹ ಒಳ್ಳೆಯವರಾದ ಮತ್ತು ಕಾಲಕಾಲಕ್ಕೆ ಅನುಗುಣವಾಗಿ ಹೊಂದಿಕೊಳ್ಳುವ ಮಹಾರಾಜರೂ ಸಹ "ಹನುಮಂತಯ್ಯನವರನ್ನು ತಪ್ಪಿಸಿದರೆ ಸಾಕು." ಎಂದು ತಮ್ಮೊಡನೆ ಎಷ್ಟೋ ಬಾರಿ ಹೇಳಿರುವುದಾಗಿಯೂ ಸಹ ಹೊರಗೆಡಹಿದರು.

ಸೂಚನೆ

ಅನಿವಾರ್ಯ ಉಪಾಕರ್ಮದ ಪ್ರಯುಕ್ತ ನಾಳೆ ಸಾಧ್ವಿ ಪತ್ರಿಕೆಗೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ

ಪ್ರಾರಂಭದಲ್ಲಿ ಶ್ರೀ ಪಟ್ಟಾಭಿರಾಮ ಅಯ್ಯಂಗಾರ್ಯರಿಂದ ಪ್ರಾರ್ಥನೆ, ರಾಘವೇಂದ್ರರಾವ್ ಮತ್ತು ವೃಂದದವರ ಗಾಯನ ಮತ್ತು ವಿವಿಧ ವೇಷ ಸ್ಪರ್ಧೆಗಳಾದನಂತರ ಸಂಘದ ಕಾರ್ಯದರ್ಶಿ ಶ್ರೀ ಕೆ. ರಾಮಣ್ಣನವರು ಸ್ವಾಗತ ಭಾಷಣ ಮಾಡಿದರು ಸಂಘದ ಉಪಾಧ್ಯಕ್ಷ ಶ್ರೀ ಎಸ್. ಕೆ. ಎ. ಭಾಗವತರು ವಾರ್ಷಿಕ ವರದಿಯನ್ನು ಒಪ್ಪಿಸಿದರು.

ಕಾಲೇಜು ಸಮಿತಿ ಅಧ್ಯಕ್ಷ ಶ್ರೀ ಎಂ. ರಾಮಸ್ವಾಮಿಯವರು ಭಾಷಣ ಮಾಡಿ, ಚನ್ನಯ್ಯನವರಿಂದ ದೇಶಕ್ಕೆ ಮತ್ತೂ ಹೆಚ್ಚಿನ ಸೇವೆಯಾಗಲೆಂದು ಹಾರೈಸಿದರು ಸಂಘದ ಸದಸ್ಯರಾದ ಶ್ರೀಗಳ್. ವಿ ಎಲ್. ಸತ್ಯನಾರಾಯಣ ಮತ್ತು ಎಸ್. ಕೃಷ್ಣಮಾಚಾರ್ಯರು ತಮ್ಮ ಸವಿನೆನಪುಗಳನ್ನು ವಿವರಿಸಿದರು. ಉಪಸಂಹಾರ ವಿಯೋಗ ಮಾಡಿ, ಅಧ್ಯಕ್ಷರು ತಮ್ಮ ಭಾಷಣದಲ್ಲಿ ರಾಜಕೀಯವನ್ನು ಹಿರಿಯರಿಗೆ ಬಿಟ್ಟು, ದೇಶದ ಉನ್ನತಿಗಾಗಿ ಯುವಕರು ಶ್ರಮಿಸಬೇಕೆಂದು ನುಡಿದರು. "ಸೌಭಾಗ್ಯ" ಎಂಬ ನಾಟಕಾಭಿನಯವಾಯಿತು.

ನೂತನ ಮಂತ್ರಿಗಳಿಂದ ಪ್ರಮಾಣ ವಚನ

ಮೈಸೂರು ೨೦

ನೂತನ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಶ್ರೀಗಳಾದ ಎ. ಜಿ. ರಾಮಚಂದ್ರರಾವ್, ಟಿ ಚನ್ನಯ್ಯ, ಹೆಚ್. ಸಿದ್ದವೀರಪ್ಪ, ಆರ್. ನಾಗನಗೌಡ ಮತ್ತು ಹೆಚ್. ಎಂ. ಚನ್ನಬಸಪ್ಪನವರನ್ನು ತಮ್ಮ ಮಂತ್ರಿ ಮಂಡಲಕ್ಕೆ ತೆಗೆದುಕೊಂಡಿದ್ದಾರೆ. ಅವರೆಲ್ಲರೂ ಹಿಂದಿನ ಮಂತ್ರಿ ಮಂಡಲದಲ್ಲಿದ್ದವರು ನೆನ್ನೆ ಸಂಜೆ ೬॥ ಗಂಟೆಗೆ ಅವರುಗಳು ಅರಮನೆಯಲ್ಲಿ ರಾಜಪ್ರಮುಖರ ಸಮ್ಮುಖದಲ್ಲಿ ಪ್ರಮಾಣ ವಚನವನ್ನು ಸ್ವೀಕರಿಸಿದರು.

ಬೊಂಬಾಯಿ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯರ ಉಪವಾಸ

ಅಹಮದಾಬಾದು ಜನರನ್ನು ಒಲಿಸಿಕೊಳ್ಳಲು ಪ್ರಯತ್ನ

ಬೊಂಬಾಯಿಯ ಮುಖ್ಯ ಮಂತ್ರಿ ಮುರಾರ್ಜಿ ದೇಸಾಯರು ನೆನ್ನೆ ಅಹಮದಾಬಾದಿನಲ್ಲಿ ಅನಿರ್ದಿಷ್ಟಕಾಲದ ಉಪವಾಸವನ್ನು ತಮ್ಮ ಸೋದರ ಅಂಬಾಲಾಲ್ ದೇಸಾಯರ ಗೃಹದಲ್ಲಿ ಆರಂಭಿಸಿದರು.

ನೆನ್ನೆ ಅವರು ಭಾಷಣ ಮಾಡಬೇಕಾಗಿದ್ದ ಸಾರ್ವಜನಿಕ ಸಭೆಗೆ ಯಾರೂ ಬರಲಿಲ್ಲವೆಂಬ ವರ್ತಮಾನವನ್ನು ಕೇಳಿದಾಗ, ಅವರು ಉಪವಾಸದ ನಿರ್ಧಾರವನ್ನು ಕೈಗೊಂಡರು. ದ್ವಿಭಾಷಾ ಬೊಂಬಾಯಿ ಸಂಸ್ಥಾನದ ರಚನೆ ಬಗ್ಗೆ ತಮ್ಮ ಅಭಿಪ್ರಾಯವನ್ನು ಅಹಮದಾಬಾದು ಪ್ರಜೆಗಳು ಕೇಳುವವರೆಗೂ ತಾವು ಆಹಾರವನ್ನು ಬಯಸುವುದಿಲ್ಲವೆಂದೂ ಅವರು ತಿಳಿಸಿದರು

ಸಭೆಗೆ ಯಾರೂ ಬರದಂತೆ ಮಾಡಲಾಯಿತೆಂದು ಅವರು ಹೇಳಿದರು ಕಾಂಗ್ರೆಸ್ ಪಕ್ಷ ಮಾಡಿದ ದ್ವಿಭಾಷಾ ಬೊಂಬಾಯಿ ಬಗ್ಗೆ ಮಾಡಿರುವ ನಿರ್ಣಯವನ್ನು ನೆನ್ನೆ ಗುಜರಾತು ಪ್ರದೇಶ ಕಾಂಗ್ರೆಸ್ ಸಮಿತಿಯು ಬಹುಮತದಿಂದ ಅಂಗೀಕರಿಸಿತು.

ಢೇಬರ್ ಮತ್ತು ಮುರಾರ್ಜಿಯವರು ನೆನ್ನೆ ಭಾಷಣ ಮಾಡಬೇಕಾಗಿದ್ದ ಸಭೆಗೆ ಯಾರೂ ಹೋಗದಂತೆ ವಿದ್ಯಾರ್ಥಿಗಳು ತಡೆದರು. ಸಭಾ ಸ್ಥಳದಲ್ಲಿ ವಿದ್ಯಾರ್ಥಿ ಸ್ವಯಂಸೇವಕರು ಮತ್ತು ಪೊಲೀಸರು ಮಾತ್ರ ಇದ್ದರು ನೆನ್ನೆ ಅಲ್ಲಿನ ೨೮ ನಿರಣೆಗಳಲ್ಲಿ ಅರ್ಧದಷ್ಟು ಬೆಳಗ್ಗೆ ತೆರೆದು ನಂತರ ಮುಚ್ಚಿದವು

ಯಜುರ್ವೇದ ಉಪಾಕರ್ಮ

ಮೈಸೂರು ೨೦

ವೇದರತ್ನಂ ಕಟ್ಟಿಮಳಲವಾಡಿ ವೆಂಕಟರಾಮಾವಧಾನಿಗಳು ೨೪ ಬೆಳಗ್ಗೆ ೭ ಗಂಟೆಗೆ ಸಾಧ್ವಿ ಪತ್ರಿಕಾಲಯದಲ್ಲಿ ಯಜುರ್ವೇದ ಉಪಾಕರ್ಮವನ್ನು ನೆರವೇರಿಸುವರು. ಆಸ್ತಿಕರೆಲ್ಲರಿಗೂ ಸ್ವಾಗತವಿದೆ.

ಇಲ್ಲಿ ಬೊಂಬಲ್ಕಾ ಅಭಿನವ ಸಂಗೀತಾಲಯದಲ್ಲಿ ನಾಳೆ ಬೆಳಗ್ಗೆ ೭॥ ಗಂಟೆಗೆ ವೇ॥ ಬ್ರ॥ ಶ್ರೀ ಪಕ್ಷೀಶ್ವರದೀಕ್ಷಿತರು ಯಜುರ್ವೇದೋಪಾಕರ್ಮವನ್ನು ನಡೆಸುವರು.

ಸಂಸ್ಥಾನ ಪುನರ್ವಿಂಗಡಣೆ ಪ್ರಶ್ನೆಗೆ ತಾವೇ ಮೊದಲನೇ ಆಹುತಿ

ಬೀಳ್ಕೊಡುಗೆ ಸಮಾರಂಭದಲ್ಲಿ ಹನುಮಂತಯ್ಯನವರ ಭಾಷಣ

ಬೆಂಗಳೂರು ೨೦

ಶ್ರೀ ಕೆ. ಹನುಮಂತಯ್ಯನವರು ಮೊನ್ನೆ ಸಂಜೆ ಅಠಾರಾ ಕಛೇರಿಯಲ್ಲಿ ಇಲಾಖೆಗಳು, ಸರ್ಕಾರದ ಕಾರ್ಯದರ್ಶಿಗಳೇ ಮೊದಲಾದವರಿಗೆ ತಮ್ಮ ಅಧಿಕಾರ ನಿವೃತ್ತಿ ಪೂರ್ವದ ಬೀಳ್ಕೊಡುಗೆಯನ್ನಿತ್ತರು ಅದು ತಾತ್ಕಾಲಿಕವಾದ ಬೀಳ್ಕೊಡುಗೆಯೆಂದು ಅವರು ಹೇಳಿದರು ತಮ್ಮ ನೀತಿಯೇನೇ ಇದ್ದರೂ ಅದನ್ನು ವಿಶೇಷ ಪ್ರಾಮಾಣಿಕತೆಯಿಂದ ನಡೆಸಿದುದಕ್ಕಾಗಿ ಅಧಿಕಾರಿಗಳನ್ನು ಅವರು ಅಭಿನಂದಿಸಿ, ಸಂಸ್ಥಾನವು ಮಾದರಿ ರಾಜ್ಯವಾಗಿ ಉಳಿಯಲು ಕಳೆದ ೫೦ ವರ್ಷಗಳಿಂದ ಅಧಿಕಾರಿಗಳು ನಡೆಸಿದ ನಿಸ್ವಾರ್ಥ ಸೇವೆಯೇ ಕಾರಣವೆಂದೂ, ಕಳೆದ ೪॥ ವರ್ಷಗಳು ಮೈಸೂರಿನ ಚರಿತ್ರೆಯಲ್ಲಿ ಒಂದು ಅಧ್ಯಾಯವೆಂದೂ ಅವರು ಹೇಳಿದರು.

ರಾಜಕೀಯ ಬದಲಾವಣೆಯಿಂದ ಉಂಟಾದ ತಮ್ಮ ರಾಜೀನಾಮೆಯನ್ನು ಅವರು ಪ್ರಸ್ತಾಪಿಸಿ, ಸರ್ಕಾರಗಳು ಅಭದ್ರವಾದರೆ ಅಧಿಕಾರಿಗಳ ಜವಾಬ್ದಾರಿಯು ಇಮ್ಮಡಿಯಾಗುವುದೆಂದೂ, ಅವರು ನಿಷ್ಪಕ್ಷಪಾತರೂ, ನ್ಯಾಯಪರರೂ ಆಗಿ ರಾಜಕೀಯ ಮತ್ತು ಕೋಮುವಾರು ಪ್ರಭಾವಗಳ ಕಾಲದಲ್ಲಿ ದುಸ್ಸಾಧ್ಯವೆಂದೂ ಈ ೪॥ ವರ್ಷಗಳಿಂದಲೂ ಇವೆಲ್ಲವನ್ನೂ ತಾವೆಲ್ಲರೂ ತಡೆದು ನಿಂತುದಾಗಿಯೂ ಶ್ರೀ ಹನುಮಂತಯ್ಯನವರು ಹೇಳಿದರು ತಾವು ಅಪ್ರಿಯರಾಗಲು ಇದೂ ಸ್ವಲ್ಪ ಮಟ್ಟಿಗೆ ಕಾರಣವೆಂದೂ ಅವರು ನುಡಿದರು

ರಾಜ್ಯ ಪುನರ್ವಿಂಗಡಣೆಯ ಪರಿಣಾಮವಾಗಿ ತಾವೇ ಮೊದಲನೇ ಆಹುತಿಯಾಗಿರುವುದಾಗಿ ಅವರು ತಿಳಿಸಿದರು ಈ ಪ್ರಶ್ನೆಯು ಉದ್ಭವವಾಗದಿದ್ದರೆ ತಮ್ಮ ನಾಯಕತ್ವಕ್ಕೆ ಸಂಚಕಾರ ಬರುತ್ತಿರಲಿಲ್ಲವೆಂಬುದಾಗಿ ನಾಡಿನ ರಾಜಕೀಯವರಿತಿರುವ ಅನೇಕರು ಹೇಳುವರೆಂದೂ, ಅದು ತಮಗೂ ಗೊತ್ತಿಲ್ಲವೆಂದೂ ಅವರು ನುಡಿದರು

ಶ್ರೀ ಹನುಮಂತಯ್ಯನವರು ವಿಧಾನ ಸೌಧ ಕಟ್ಟಡದ ಬಳಿಗೆ ತೆರಳಿ, ಅಲ್ಲಿ ಕೆಲಸಗಾರರನ್ನು ಮತ್ತು ಅಧಿಕಾರಿಗಳನ್ನು ಉದ್ದೇಶಿಸಿ ಮಾತನಾಡಿ, ಸೌಧವು ಇಡೀ ಭಾರತಕ್ಕೆ ಒಂದು ಮಾದರಿಯೆಂದು ಹೇಳಿದರು ಈ ದಿನದಿಂದ ತಾವು ಸೌಧವನ್ನು ನೋಡಲಾಗುವುದಿಲ್ಲವೆಂದು ಅವರು ಹೇಳುತ್ತಿದ್ದಾಗ ಭಾವೋದ್ರೇಕವುಂಟಾಗಿ ಮಾತನ್ನು ನಿಲ್ಲಿಸಿದರು

ರ‍್ಣಾಟಕದ ಉತ್ತಮ ಚಿತ್ರಗಳು

ಮದ್ರಾಸಿನ ಚಲನ ಚಿತ್ರ ಪ್ರೇಮಿಗಳ ಸಂಘದ ಆಶ್ರಯದಲ್ಲಿ ಏರ್ಪಡಿಸಿದ್ದ ನ್ಯಾಯ ಮಂಡಲಿಯೊಂದು ತಮಿಳಿನ ಮಂಗಯರ್ ತಿಲಕಂ, ತೆಲುಗಿನ ಬಂಗಾರು ಪಾಪ, ಕನ್ನಡದ ಮೊದಲ ತೇದಿ ಮತ್ತು ಮಲಯಾಳದ ಅನಿಯಾತಿ—ಈ ಚಿತ್ರಗಳು ಅತ್ಯುತ್ತಮವಾದುವೆಂದು ತಿಳಿಸಿದೆ ಮುನಿಸಿಪಲ್ ಪಾಯಲಟ್ ಎಂಬ ಪಕ್ಷಿ ಭಾರತೀತರ ಮತ್ತು ನಪ್ರೀನಾ ಎಂಬ ವಿದೇಶ ಚಿತ್ರಗಳು ಉತ್ತಮವೆಂದು ಪರಿಗಣಿಸಲ್ಪಟ್ಟಿವೆ.

ನೂತನ ಮುಖ್ಯ ಮಂತ್ರಿಗಳಿಗೆ ಶುಭಾಶಯಗಳು

ನೂತನ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಪ್ರಮಾಣ ವಚನವನ್ನು ಸ್ವೀಕರಿಸಲು ನೆನ್ನೆ ಬೆಂಗಳೂರಿನಿಂದ ಆಗಮಿಸಿದಾಗ ಇಲ್ಲಿನ ಒಕ್ಕಲಿಗರ ಯುವಕ ಸಂಘದ ಅಧ್ಯಕ್ಷ ಶ್ರೀ ಎಸ್ ಎಸ್ ಗುಂಡಯ್ಯನವರು ಅವರನ್ನು ಭೇಟಿ ಮಾಡಿ ಹಾರವನ್ನರ್ಪಿಸಿ ಶುಭಾಶಯಗಳನ್ನು ಕೋರಿದರು ಮುಖ್ಯ ಮಂತ್ರಿಗಳು ಶ್ರೀ ಪರಕಾಲಸ್ವಾಮಿಗಳ ಮಠಕ್ಕೆ ತೆರಳುತ್ತಿದ್ದಾಗ ಓರಿಯಂಟಲ್ ಇಂಡಸ್ಟ್ರೀಸ್ ಮಾಲೀಕರಾದ ಶ್ರೀ ಬಿ ಎಸ್ ಸುಬ್ಬರಾಯರು ತಮ್ಮ ಅಂಗಡಿ ಬಳಿ ಅವರನ್ನು ಸ್ವಾಗತಿಸಿ ಹಾರ ತುರಾಯಿಗಳನ್ನರ್ಪಿಸಿದರು

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೨೦

ನಗರದ ಭಾರತ ಸೇವಾ ದಳದ ಆಶ್ರಯದಲ್ಲಿ ಒಂಭತ್ತನೇ ಸ್ವಾತಂತ್ರ್ಯೋತ್ಸವವು ಕಳೆದ ಗುರುವಾರ ನಗರ ಸೇವಾದಳದ ಅಧ್ಯಕ್ಷ ಶ್ರೀ ಹೆಚ್ ಸುಬ್ಬರಾಯರ ಅಧ್ಯಕ್ಷತೆಯಲ್ಲಿ ನಡೆಯಿತು ಅಧ್ಯಕ್ಷರು ೬೦೦ ಮಂದಿ ಭಾರತ ಸೇವಾದಳ ಸ್ವಯಂ ಸೇವಕ ಸೇವಕಿಯರಿಂದ ಸೆಲ್ಯೂಟ್ ಸ್ವೀಕರಿಸಿದರು ನಂತರ ಸದ್ವಿದ್ಯಾ ಪಾಠಶಾಲೆಯ ಸಭಾಂಗಣದಲ್ಲಿ ಸಭೆ ಸೇರಿದ್ದಿತು 'ತಾಯಿನಾಡು' ಪತ್ರಿಕಾ ಪ್ರತಿನಿಧಿ ಶ್ರೀ ಎಂ. ಶ್ರೀನಿವಾಸಮೂರ್ತಿಯವರು ಭಾಷಣ ಮಾಡಿದರು ಸಾಮೂಹಿಕ ರಾಷ್ಟ್ರಗೀತೆಯೊಂದಿಗೆ ಸಭೆಯು ಮುಕ್ತಾಯವಾಯಿತು

ನಗರದ ಹೋಟೇಲು ಕೆಲಸಗಾರರ ಸಂಘದ ಆಶ್ರಯದಲ್ಲಿ ದಿನೋತ್ಸವದ ಅಂಗವಾಗಿ ಬೆಳಗ್ಗೆ ಧ್ವಜಾರೋಹಣ, ರಾತ್ರಿ ೯॥ ಗಂಟೆಗೆ ಕಮ್ಯೂನಿಸ್ಟ್ ನಾಯಕ ಶ್ರೀ ಎಂ ಎಲ್ ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ಸಭೆಗಳು ಜರುಗಿದುವು ಶ್ರೀಗಳಾದ ಎಸ್ ಸೋಮಸುಂದರ ಶರ್ಮ, ಬಿ ಎ ಬೆಳ್ಳಿಯಪ್ಪ, ರಂಗನಾಥ ಮುಂತಾದವರು ಭಾಷಣ ಮಾಡಿದರು

ವಾಣೀವಿಲಾಸ ಮೊಹಲ್ಲೆಯ ವಸಂತ ಇನ್ಸ್ಟಿಟ್ಯೂಟನಲ್ಲಿ ಸ್ವಾತಂತ್ರ್ಯೋತ್ಸವ ಮತ್ತು ಸರ್ಕ್ಯುಲೇಟಿಂಗ್ ಲೈಬ್ರರಿಯ ಪ್ರಾರಂಭೋತ್ಸವಗಳು ನಡೆದುವು ಮಹಾರಾಜಾ ಕಾಲೇಜಿನ ಶ್ರೀ ಎಂ. ಮು ಶಾಸ್ತ್ರಿಗಳವರು ಅಧ್ಯಕ್ಷತೆ ವಹಿಸಿದ್ದರು ಶ್ರೀ ಎಂ ಎಸ್ ಚಂದ್ರಶೇಖರ ಅಯ್ಯಂಗಾರ್‌ರವರು ಕನ್ನಡ ಗೀತೆಗಳನ್ನೂ ಶ್ರೀ ಮಹದೇವಪ್ಪ ಮತ್ತು ಸಂಗಡಿಗರು ಲಘು ಗೀತೆಗಳನ್ನೂ ಹಾಡಿದರು ಅಧ್ಯಕ್ಷರು ಮಾತನಾಡಿ ಪುಸ್ತಕ ಭಂಡಾರದ ಮಹತ್ವವನ್ನು ವಿವರಿಸಿದರು

ಚಾಮರಾಜ ಮೊಹಲ್ಲಾ ಯುವಕ ಸಂಘದ ಆಶ್ರಯದಲ್ಲಿ ದಿನಾಚರಣೆಯು ಶ್ರೀ ಎಸ್ ಕೆ ಅನಂತಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀಗಳಾದ ಎಂ ಎಸ್ ನಾರಾಯಣಸ್ವಾಮಿ ಮತ್ತು ಶ್ರೀಮತಿ ಬಿ. ಶಾರದಮ್ಮನವರು ಭಾಷಣ ಮಾಡಿದರು ಕಳೆದ ವರ್ಷದ ಗೋವಾ ಸತ್ಯಾಗ್ರಹದಲ್ಲಿ ಹುತಾತ್ಮರಾದವರಿಗೆ ಶ್ರದ್ಧಾಂಜಲಿಯನ್ನು ಅರ್ಪಿಸಲಾಯಿತು ಸಹ ಕಾರ್ಯದರ್ಶಿ ಶ್ರೀ ಎಂ ಎಸ್ ರಾಮರಾಯರು ವಂದನಾರ್ಪಣೆ ಮಾಡಿದರು

ಅಶೋಕಪುರದ ಮಹಾತ್ಮಾ ಗಾಂಧಿ ಉಚಿತ ವಾಚನಾಲಯದಲ್ಲಿ ಉತ್ಸವವು ಶ್ರೀ ಆರ್. ಸಿದ್ದಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು ಶ್ರೀ ಜಿ ಲಿಂಗಯ್ಯನವರಿಂದ ಧ್ವಜಾರೋಹಣ, ಶ್ರೀ ಜಿ. ಎಸ್ ರಾಮಕೃಷ್ಣಯ್ಯನವರಿಂದ ಭಾಷಣ ಮತ್ತು ವಾಚನಾಲಯದ ಉಪಾಧ್ಯಕ್ಷರಾದ ಶ್ರೀ ಎಂ ರುದ್ರಪ್ಪನವರಿಂದ ವಂದನ ಸಮರ್ಪಣೆಗಳಾದುವು

ರಾಜೇಂದ್ರನಗರ ಒಡ್ಡಾವಣೆಯಲ್ಲಿ ಉತ್ಸವದ ಅಂಗವಾಗಿ ಬೆಳಗ್ಗೆ ಶ್ರೀ ಬೈರಪ್ಪನವರಿಂದ ಧ್ವಜಾರೋಹಣ, ಮತ್ತು ಶ್ರೀ ದ್ವಾರಕಾನಾಥ್ ಮತ್ತು ಮುದ್ದೇಗೌಡರಿಂದ ಭಾಷಣಗಳಾದುವು. ಸಂಜೆ ಒಡ್ಡಾವಣೆ ನಿವಾಸಿಗಳ ಸಂಘದ ವರಂಭೋತ್ಸವವು ಶ್ರೀ ಕ ಮುದ್ದೇಗೌಡರ ಅಧ್ಯಕ್ಷತೆಯಲ್ಲಿ ಜರುಗಿತು. ಪೌರಸಭಾ ಸದಸ್ಯರಾದ ಘಾಪರ್ ಆಲಿಮೊಹಿದರು ಸ್ಪರ್ಧೆಗಳಲ್ಲಿ ಗೆದ್ದ ಮಕ್ಕಳಿಗೆ ಬಹುಮಾನಗಳನ್ನು ಹಂಚಿದರು. ಶ್ರೀ ಟಿ ಎಸ್ ರಾಮರಾಯರು ವಂದನಾರ್ಪಣೆ ಮಾಡಿದರು

ವಾಣೀವಿಲಾಸ ಮೊಹಲ್ಲಾ ಕೃಷ್ಣಾ ನರ್ಸರಿ ಶಾಲೆಯಲ್ಲಿ ಕಳೆದ ಬುಧವಾರ ದಿನೋತ್ಸವವು ನಡೆದು ಮಕ್ಕಳಿಗೆ ಸಿಹಿ ತಿಂಡಿಯನ್ನು ಹಂಚಲಾಯಿತು

ನಂಜನಗೂಡು ತಾಲ್ಲೂಕು ವೀರೇಗೌಡನ ಹುಂಡಿಯಲ್ಲಿ ಶ್ರೀ ಸಿ ಎಸ್ ಗುರುಸಿದ್ದಪ್ಪನವರ ಅಧ್ಯಕ್ಷತೆಯಲ್ಲಿ ಉತ್ಸವವು ನೆರವೇರಿತು ಧ್ವಜಾರೋಹಣ, ಶಿವಪಥಂಜದ ಮಕ್ಕಳಿಗೆ ಸಿಹಿ ತಿಂಡಿ ವಿನಿಯೋಗಗಳಾದುವು ಸಂಜೆ ಸೇರಿದ್ದ ಸಭೆಯಲ್ಲಿ ಮೈಸೂರು ಮಹಾರಾಣಿ ಕಾಲೇಜಿನ ಅಧ್ಯಾಪಕಿ ಶ್ರೀಮತಿ ರತ್ನಮ್ಮನವರು ಸ್ವಾತಂತ್ರ್ಯ ದಿನಾಚರಣೆ ಮಹತ್ವವನ್ನು ವಿವರಿಸಿದರು

ವಿವಾಹ ಮಹೋತ್ಸವಗಳು

ನಗರದಲ್ಲಿರುವ ಕಾಫಿ ಪ್ಲಾಂಟರ್ ಶ್ರೀ ಟಿ ಮಂಜುನಾಥ ಅಯ್ಯಂಗಾರ್‌ರವರು ತಮ್ಮ ಕುಮಾರಿ ಸೌ॥ ಮೀನಾಕ್ಷಿಯನ್ನು ಬರ್ಮಾ ರೈಲ್ವೆಯ ಮಾಜಿ ಅಧಿಕಾರಿಗಳಾದ ಶ್ರೀ ಟಿ ಕೆ ಎಸ್ ಮಣಿಅಯ್ಯರವರ ಪುತ್ರ ಶ್ರೀ ಟಿ ಎಸ್ ರಾಮಮೂರ್ತಿಯವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ಅಡ್ವೋಕೇಟರಾದ ಶ್ರೀ ವಿ. ಲಿಂಗಪ್ಪಯ್ಯನವರು ತಮ್ಮ ಕುಮಾರರೂ, ಕೃಷ್ಣರಾಜ ಆಸ್ಪತ್ರೆಯ ವೈದ್ಯರೂ ಆದ ಡಾ॥ ವಿ ಎಲ್ ರಾಜಗೋಪಾಲರಾಯರಿಗೆ ಕೇಂದ್ರ ಸರ್ಕಾರದ ಆಹಾರ ಮತ್ತು ವ್ಯವಸಾಯ ಇಲಾಖಾ ನೌಕರರಾದ ಶ್ರೀ ಸಿ ಆನಂದರಾಮರಾಯರ ಮಗಳು ಸೌ॥ ಶಾಂತಾರವರನ್ನು ತಂದುಕೊಂಡು ನೆನ್ನೆ ನಗರದಲ್ಲಿ ವಿವಾಹವನ್ನು ಜರುಗಿಸಿದರು.

ಬಂಡಿಕೇರಿಯಲ್ಲಿರುವ ಶ್ರೀ ಎಂ ನಾರಾಯಣ ಜೋಯಿಸರು ತಮ್ಮ ಮೊಮ್ಮಗಳೂ, ಶ್ರೀ ಪಿ ಸುಬ್ರಹ್ಮಣ್ಯಯ್ಯರ್‌ರವರ ಪುತ್ರಿಯೂ ಆದ ಸೌ॥ ಪ್ರೇಮಲತಾರವರನ್ನು ಇಂಟರ್ ಕಾಲೇಜಿನ ನಿವೃತ್ತ ಅಕೌಂಟೆಂಟರಾದ ಶ್ರೀ ಬಿ. ವೆಂಕಟೇಶಯ್ಯನವರ ಪುತ್ರ ಶ್ರೀ ಬಿ ವಿ ಸುಂದರೇಶ್ವರರವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನಡೆಸಿದರು

ಮಂಡ್ಯದ ಜಿಲ್ಲಾ ಸರ್ವೆ ಅಧಿಕಾರಿಗಳಾದ ಶ್ರೀ ಕೆ ಜ ಪುಟ್ಟಣ್ಣಯ್ಯನವರು ತಮ್ಮ ಕುಮಾರಿ ಸೌ॥ ಗಿರಿಜಮ್ಮನವರನ್ನು ಸಿಲವಾಗಿಲಿನ ಶ್ರೀ ಸಿ ದ್ವಾರಮಪ್ಪನವರ ಪುತ್ರ ಶ್ರೀ ಎಸ್ ರಾಜಶೇಖರಯ್ಯನವರಿಗೆ ಕೊಟ್ಟು ನೆನ್ನೆ ವಿವಾಹವನ್ನು ನೆರವೇರಿಸಿದರು

ಮರುಮುತ್ತು ಇಲಾಖೆಯ ನಿವೃತ್ತ ಓವರ್ ಸೀಯರ್ ಶ್ರೀ ಕೆ ಪಿ ಗುಂಡಪ್ಪನವರ ಸಹೋದರರಾದ, ಅರಮನೆ ವಿದ್ಯುಚ್ಛಕ್ತಿ ಆಪರೇಟರ್ ಶ್ರೀ ಕೆ ರಾಮಸ್ವಾಮಿಯವರು ತಮ್ಮ ಮಕ್ಕಳು ಶ್ರೀ ಕೆ ನರಸಿಂಹಮೂರ್ತಿಯವರಿಗೆ ಹೊಳೇನರಸೀಪುರದ ದೊಡ್ಡಮನೆ ಶ್ರೀ ಎಂ ಕೆ ವೆಂಕಟರಾಮಯ್ಯನವರ ಮಗಳು ಸೌ॥ ವೆಂಕಟಲಕ್ಷ್ಮಮ್ಮನನ್ನು ತಂದುಕೊಂಡು ನೆನ್ನೆ ಹೊಳೇನರಸೀಪುರದಲ್ಲಿ ವಿವಾಹವನ್ನು ಜರುಗಿಸಿದರು

ಜವಾಹಿರಿ ಅಂಗಡಿಯ ಆರಂಭ

ಚೌಡ್ರಿ ಅಪ್ಪಾಜಯ್ಯಶೆಟ್ಟರ ಮಕ್ಕಳಾದ ಶ್ರೀ ಸಿ ಎ ರಾಮಚಂದ್ರಶೆಟ್ಟರು ಅಶೋಕಾ ರಸ್ತೆಯಲ್ಲಿರುವ ತಮ್ಮ ಸ್ವಂತ ಕಟ್ಟಡದಲ್ಲಿ ಲಲಿತಾ ಜ್ಯೂಯಲರಿ ಮಾರ್ಟ್ ಎಂಬ ಜವಾಹಿರಿ ಅಂಗಡಿಯನ್ನು ಕಳೆದ ಬುಧವಾರ ಆರಂಭಿಸಿದರು.

ಉಪನ್ಯಾಸ

ರಾಜಧಾನಿಯ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ನಾಳೆ ಸಂಜೆ ೬॥ ಗಂಟೆಗೆ ವೇ॥ ಬ್ರಹ್ಮ ಶ್ರೀ ಸಿ. ರಾಮಚಂದ್ರಾಚಾರ್ಯರಿಂದ ಉಪಾಕರ್ಮ ಎಂಬ ವಿಚಾರವಾಗಿ ಉಪನ್ಯಾಸವಿದೆ ಈ ದಿನ ಇರುವುದೆಂದು ನೆನ್ನೆ ತಪ್ಪಾಗಿ ಪ್ರಕಟವಾಗಿದ್ದಿತು.

SAMEERA TUTORIAL COLLEGE,
2891 Sri Harivilas,
Chamundipuram, Mysore
Offers excellent coaching for S. S. L. C Students by experienced teachers of High Schools and Colleges. Join immediately.
Morn 8 to 10 A.M
Evg 5-30 to 7-30 P M.

SRI GAYATHRI TALKIES
From 20-8-56 For 2 Days
Twentieth Century Fox's
SHARK RIVER
(In Vivid Color)
Starring - Steve Cochran & Warren Stevens

From 22-8 56 For 2 Days
The White Orchid

ಮೂಗೂರಿನಲ್ಲಿ ರಾಘವೇಂದ್ರ ಸ್ವಾಮಿಗಳವರ ಆರಾಧನೆ

ಮೂಗೂರು ೨೦

ಟಿ ನರಸೀಪುರ ತಾಲ್ಲೂಕು ಮೂಗೂರಿನಲ್ಲಿರುವ ಕಲ್ಯಾಣ ಮಂಟಪದಲ್ಲಿ ಇದೇ ೨೨, ೨೩ ಮತ್ತು ೨೪ನೇ ತಾರೀಖುಗಳಲ್ಲಿ ಶ್ರೀ ರಾಘವೇಂದ್ರಸ್ವಾಮಿಗಳವರ ಆರಾಧನಾ ಮಹೋತ್ಸವ ನೆರವೇರುವುದು ೨೮ನೇ ತಾರೀಖು ಶ್ರೀ ಕೃಷ್ಣ ಜನ್ಮಾಷ್ಟಮಿ ಉತ್ಸವವನ್ನು ಏರ್ಪಡಿಸಲಾಗಿದೆ. ಆರಾಧನೆಯ ಅಂಗವಾಗಿ ನಾಳಿದ್ದಿನಿಂದ ೩ ದಿನಗಳು ವೇದಾಂತ ವಿದ್ವಾನ್ ಬ್ರಹ್ಮಶ್ರೀ ಎಲಿಮಲೆ ವಾಸುದೇವಾಚಾರ್ಯರಿಂದ ಪುರಾಣ ಅನುವಾದ ಮತ್ತು ಪಾರಾಯಣ ಸ್ತೋತ್ರ ಪ್ರೋತ್ರ, ಮಹಾ ಪೂಜಾದಿಗಳು ಇವೆ ನಾಳಿದ್ದು ಸಂಜೆ ಶ್ರೀ ಬಿ ಕೆ. ಪದ್ಮನಾಭರಾಯರ ಗಾಯನವೂ ೨೩ನೇ ತಾರೀಖು ವಿ॥ ಟಿ. ಪುಟ್ಟಸ್ವಾಮಯ್ಯನವರು ಮತ್ತು ೨೪ರಂದು ವಿ॥ ಟಿ ಆರ್. ಶ್ರೀನಿವಾಸರವರ ಸಂಗೀತವೂ ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಾಡಾಗಿವೆ

ರಾಘವೇಂದ್ರ ಗುರುಗಳ ಆರಾಧನೆ

ರಾಜಧಾನಿಯ ಸೊಪ್ಪಿನಕೊಳದ ಬೀದಿಯಲ್ಲಿರುವ ಶ್ರೀ ಪ್ರಸನ್ನ ಪ್ರಾಣದೇವರ ಗುಡಿಯಲ್ಲಿ ನಾಳೆ ಪೂರ್ಣಿಮೆ ಪ್ರಯುಕ್ತ ಸತ್ಯನಾರಾಯಣ ಪೂಜೆಯೂ, ನಾಳಿದ್ದು, ಗುರುವಾರ ಶುಕ್ರವಾರಗಳಲ್ಲಿ ಶ್ರೀ ರಾಘವೇಂದ್ರ ಗುರುಗಳ ಆರಾಧನೆಯೂ ನಡೆಯುವುವು ಭಕ್ತರು ಉದಾರ ಸಹಾಯ ನೀಡಬೇಕೆಂದು ಅರ್ಚಕ ಶ್ರೀ ಕೆಳ್ಳೂರು ಸುಬ್ಬಣ್ಣಾಚಾರ್ಯರು ಕೋರಿರುತ್ತಾರೆ.

ಕಾವ್ಯ ಸಮರ್ಪಣೆಯ ಪ್ರಕಟಣೆ

ಮಹಾರಾಜಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಸಿ ಮಹಾದೇವಪ್ಪನವರು ವಿರಚಿಸಿರುವ "ಕಾವ್ಯ ಸಮರ್ಪಣೆ" ಯ ಪ್ರಕಟಣ ಸಮಾರಂಭವನ್ನು ಕಾಲೇಜಿನಲ್ಲಿ ನಾಳೆ ಸಂಜೆ ೫ ಗಂಟೆಗೆ ಪ್ರೊ॥ ಡಿ ಎಲ್. ನರಸಿಂಹಾಚಾರ್ಯರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಗುವುದು. ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಸಿ ಡಿ ನರಸಿಂಹಯ್ಯನವರು ಕಾವ್ಯ ಸಮರ್ಪಣೆ ಬಗ್ಗೆ ಭಾಷಣ ಮಾಡುವರು. ಸರ್ವರಿಗೂ ಸ್ವಾಗತವಿದೆ

ನಂಜನಗೂಡಿನ ಹರಿಜನ ವಿದ್ಯಾರ್ಥಿ ನಿಲಯದ ಕುಂದುಕೊರತೆಗಳು

ಶಾಲೆಗಳು ಆರಂಭವಾಗಿ ಎರಡು ತಿಂಗಳಾದರೂ ನಂಜನಗೂಡಿನ ಹರಿಜನ ವಿದ್ಯಾರ್ಥಿನಿಲಯದ ಬಾಗಿಲು ತೆರೆದಿಲ್ಲದಿರುವುದರಿಂದ ಹರಿಜನ ವಿದ್ಯಾರ್ಥಿಗಳು ವಿದ್ಯಾಭ್ಯಾಸವನ್ನು ಬಿಟ್ಟು ಊರಿನಲ್ಲಿರುವುದಾಗಿಯೂ, ವಿದ್ಯಾರ್ಥಿಗಳಿಗೆ ಕಳೆದ ಆರು ತಿಂಗಳಿಂದಲೂ ಗ್ರಾಂಟು ತಲುಪಿಲ್ಲವೆಂದೂ, ನಿಲಯದ ಆಡಳಿತ ಸಮಿತಿಯು ಕ್ರಮವರಿತು ವರ್ತಿಸುತ್ತಿಲ್ಲದಿರುವುದರಿಂದ ಸಂಬಂಧಪಟ್ಟ ಅಧಿಕಾರಿಗಳು ಈ ಬಗ್ಗೆ ತನಿಖೆ ನಡೆಸಬೇಕೆಂದೂ ಸೂಚಿಸಿ ಅಲ್ಲಿನ ವಿದ್ಯಾರ್ಥಿಯೊಬ್ಬರು ಪತ್ರ ಬರೆದಿರುತ್ತಾರೆ

ಹಾಸಿಗೆ - ದಿಂಬು
ಮಿತವ್ಯಯದಲ್ಲಿ ಸಿದ್ಧವಾಗಿ ತಯಾರು ಮಾಡುತ್ತೇವೆ
ಬಾಡುಸಾಬ್ ಕಂಪನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

S S L C COACHING CLASSES
★ 78 per cent passes in June Exams
★ Morning Session 7 to 11 A M.
★ Evening Session 6 to 9 P M.
★ Expert tuition by experienced teachers
Classes in full swing
All subjects Rs 6 P.M
CITY TUTORIAL COLLEGE,
Old Agrahar, Mysore

Edited, Printed and Published by A. R. Nagaraj at Sadhvi Press D. Subbaiah Road, Mysore

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೫] SADHVI : WEDNESDAY 22—8—1956 ಮೈಸೂರು : ಬುಧವಾರ ೨೨—೮—೧೯೫೬ [ಸಂಚಿಕೆ : ೧೯

ಆಯುರ್ವೇದ ಕಾಲೇಜಿನಲ್ಲಿ ವಿದ್ಯಾರ್ಥಿಗಳ ಪಿಕೆಟಿಂಗ್

ಮೈಸೂರಿಗೆ ಸೇರಲಿರುವ ಕನ್ನಡಿಗರನ್ನು ಸ್ವಾಗತಿಸಬೇಕು

ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪನವರ ಹೇಳಿಕೆ

ಬೆಂಗಳೂರು ೨೭

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳ ಪ್ರಶ್ನೆಗಳಿಗೆ ಉತ್ತರವೀಯುತ್ತಾ, ಸಂಸ್ಥಾನ ಪುನರ್ವಿಂಗಡಣೆ ಬಗ್ಗೆ ವಿವಾದದ ಕಾಲವು ಮುಗಿದಿರುವುದೆಂದೂ, ಈಗ ಅದೆಲ್ಲ ತೀರ್ಮಾನವಾಗುವ ಕಾಲವೆಂದೂ ಹೇಳಿ ಹೊಸ ಸಂಸ್ಥಾನದ ಆರಂಭವು ಸಂತೋಷ ವಾತಾವರಣದಲ್ಲಿ ಆಗಬೇಕೆಂದೂ, ಎಲ್ಲರೂ ತಮ್ಮತಮ್ಮ ಭಿನ್ನಾಭಿಪ್ರಾಯಗಳನ್ನು ಮರೆಯಬೇಕೆಂದೂ ಸೂಚಿಸಿದರು ಏಕೀಕರಣ ವಾದಿಗಳು ಹಿಂದಿನ ವಿಚಾರವನ್ನು ಮರೆತು ಕರ್ನಾಟಕದ ಇತರ ಪ್ರದೇಶಗಳ ಸ್ನೇಹಿತರನ್ನು ಹೃತ್ಪೂರ್ವಕವಾಗಿ ಸ್ವಾಗತಿಸಬೇಕೆಂದು ಕೋರಿದರು.

ಕರ್ನಾಟಕದ ವಿಚಾರದಲ್ಲಿ ಮಂತ್ರಿಮಂಡಲದ ವರ್ತನೆಯು ಸ್ಪಷ್ಟವಾಗಿರುವುದೆಂದೂ, ಮೈಸೂರು ಶಾಸನಸಭೆ ಮತ್ತು ಪಾರ್ಲಿಮೆಂಟಿನ ನಿರ್ಧಾರಗಳನ್ನು ತಾವುಗಳು ಹೃತ್ಪೂರ್ವಕವಾಗಿ ಕಾರ್ಯಗತ ಮಾಡುವುದಾಗಿಯೂ ಅವರು ನುಡಿದರು

ತಮ್ಮ ೨೦ ತಿಂಗಳ ಅಧಿಕಾರಾವಧಿಯ ವಿಚಾರವನ್ನು ಅವರು ಪ್ರಸ್ತಾಪಿಸಿ, ಈ ಅವಧಿಯು ಅತ್ಯಂತ ಕ್ಲಿಷ್ಟವಾದುದೆಂದೂ, ಪುನರ್ವಿಂಗಡಣೆಗೆ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಈಗ ಬಗೆಹರಿಸಬೇಕಾಗಿರುವುದೆಂದೂ, ತಮ್ಮ ಕೈಲಾದಷ್ಟು ಉತ್ತಮ ರೀತಿಯಲ್ಲಿ ಆ ಕೆಲಸವನ್ನು ನಿರ್ವಹಿಸುವುದಾಗಿಯೂ ಸೂಚಿಸಿದರು

ಶ್ರೀ ಹನುಮಂತಯ್ಯನವರ ನೀತಿಗೂ ತಮ್ಮದಕ್ಕೂ ವ್ಯತ್ಯಾಸವೇನು ಎಂದು ಕೇಳಲಾಗಿ, ಸಂಸ್ಥಾನದಲ್ಲಿ ಕಾಂಗ್ರೆಸ್ ಸರ್ಕಾರವಿರುವುದೆಂದೂ, ಕಾಂಗ್ರೆಸ್ಸಿನ ನೀತಿಗಳನ್ನು ಎಲ್ಲಾ ಕಾಂಗ್ರೆಸ್ ಸರ್ಕಾರಗಳೂ ಅನುಸರಿಸಬೇಕೆಂದೂ ತಿಳಿಸಿದರು

ಹಿಂದಿನ ಮಂತ್ರಿಮಂಡಲದಲ್ಲಿದ್ದವರನ್ನೇ ತಮ್ಮ ಸಂಪುಟದ ಸದಸ್ಯರಾಗಿ ತೆಗೆದುಕೊಂಡ ವಿಚಾರವನ್ನು ಅವರು ಪ್ರಸ್ತಾಪಿಸಿ, ಕಾಂಗ್ರೆಸ್ ಹೈಕಮಾಂಡು ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿ ಅಧ್ಯಕ್ಷರೊಡನೆ ಸಮಾಲೋಚಿಸಿ ತಾವು ಅವರನ್ನು ಮಂತ್ರಿಮಂಡಲಕ್ಕೆ ತೆಗೆದುಕೊಂಡಿರುವುದಾಗಿ ತಿಳಿಸಿದರು. ಬೃಹದ್ ಮೈಸೂರು ಸಂಸ್ಥಾನದ ರಚನೆ ವೇಳೆ ನಡೆಯುವ ನಾಯಕತ್ವ ಚುನಾವಣೆಯಲ್ಲಿ ಭಾಗವಹಿಸುವಿರಾ ಎಂದು ಅವರನ್ನು ಕೇಳಿದಾಗ, ಅದು ಊಹಾತ್ಮಕ ಪ್ರಶ್ನೆಯೆಂದೂ, ಇಂತಹ ವಿಚಾರಗಳಲ್ಲಿ ಮನುಷ್ಯ ಪ್ರಯತ್ನಕ್ಕಿಂತಲೂ ದೇವರ ಇಚ್ಛೆಯೇ ಪ್ರಾಮುಖ್ಯವೆಂದೂ ನುಡಿದರು

ಶಾರ್ಕ್ಸುಡಿಗೆ ರಾಜಪ್ರಮುಖರು

ಶ್ರೀಮನ್ಮಹಾರಾಜರು ಈ ತಿಂಗಳು ೨೭ನೇ ತಾರೀಕು ಶರ್ಕ್ಸುಡಿಗೆ ತೆರಳಿ ಅಲ್ಲಿ ಆಲಗಪ್ಪ ಚೆಟ್ಟಿಯಾರರ ವ್ಯಾಯಾಮ ಶಿಕ್ಷಣ ಶಾಲೆಯ ಆರಂಭೋತ್ಸವವನ್ನು ನೆರವೇರಿಸುವರು.

ವಿಧಾನ ಸೌಧದ ಮಾದರಿಗೆ ಮುಖ್ಯ ಮಂತ್ರಿಯವರ ಒಪ್ಪಿಗೆ

ಬೆಂಗಳೂರು ೨೭

ಪ್ರಾರಂಭ[illegible] ವಿಧಾನ ಸೌಧ ಕಟ್ಟಡದ ಒಬ್ಬ ಶ್ರೀ ಹನುಮಂತಯ್ಯನವರ [illegible]ಯನ್ನೇ [illegible] ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು [illegible] ಹನುಮಂತಯ್ಯನವರ [illegible] ಸೌಧ [illegible] ವಿಶೇಷ [illegible] ಶ್ರೀ ಹನುಮಂತಯ್ಯನವರ [illegible] ತಿಳಿಸಿದರು

ಫೋಟ್‌ಫೋಲಿಯೋಗಳ ಹಂಚಿಕೆ

ಸಂಸ್ಥಾನದ ನೂತನ ಮಂತ್ರಿಮಂಡಲದ ಸಚಿವರ ಪೋರ್ಟ್‌ಫೋಲಿಯೋಗಳನ್ನು ಹಂಚಿರುವ ಪ್ರಕಾರ, ಹಿಂದೆ ಇದ್ದುದಕ್ಕಿಂತಲೂ ಹೆಚ್ಚು ವ್ಯತ್ಯಾಸವಾಗಿಲ್ಲ. ಮುಖ್ಯವಾದ ಇಲಾಖೆಗಳ ಪೈಕಿ ಸಾರಿಗೆ ಶಾಖೆಯನ್ನು ಶ್ರೀ ಎ ಜಿ ರಾಮಚಂದ್ರರಾಯರಿಗೂ ರೆವಿನ್ಯೂ ಇಲಾಖೆಯನ್ನು ಶ್ರೀ ಹೆಚ್ ಎಂ ಚನ್ನಬಸಪ್ಪನವರಿಗೂ, ಪಂಚಾಯಿತಿ ಇಲಾಖೆಯನ್ನು ಶ್ರೀ ಹೆಚ್ ಸಿದ್ದವೀರಪ್ಪನವರಿಗೂ ಕೊಡಲಾಗಿದೆ ಮುಖ್ಯಮಂತ್ರಿಯವರು ಹಿಂದೆ ರೆವಿನ್ಯೂ ಮಂತ್ರಿಗಳಾಗಿದ್ದಾಗ ಹೊಂದಿದ್ದ ಲಂಚನಿರೋಧ ಇಲಾಖೆಯನ್ನು, ಹಿಂದಿನ ಮುಖ್ಯಮಂತ್ರಿಯವರ ಇಲಾಖೆಗಳೊಡನೆ ತಾವೇ ಇಟ್ಟುಕೊಂಡಿರುವರು ಶ್ರೀ ಕಡಿದಾಳ್ ಮಂಜಪ್ಪನವರು ಸಂಸ್ಥಾನ ಪುನರ್ವಿಂಗಡಣೆ ಇಲಾಖೆಯನ್ನೂ ಇಟ್ಟುಕೊಂಡಿರುವರು

ಕೇಂದ್ರ ಕಾರ್ಪೊರೇಷನ್ನಿಗೆ ಸಾರ್ವಜನಿಕ ವಿಮಾ ಶಾಖೆ ವರ್ಗ

ಸ್ವಂ ವರದಿ] ಬೆಂಗಳೂರು ೨೭

ಸಂಸ್ಥಾನದ ನೂತನ ಮಂತ್ರಿಮಂಡಲವು ಈ ಮಧ್ಯಾಹ್ನ ಅರಮನೆ ಕಛೇರಿಯಲ್ಲಿ ಪ್ರಥಮ ಅಧಿಕೃತ ಸಭೆಯನ್ನು ನಡೆಸಿತು.

ಸರ್ಕಾರದ ಸಾರ್ವಜನಿಕ ವಿಮಾ ಶಾಖೆಯನ್ನು ಕೇಂದ್ರ ಕಾರ್ಪೊರೇಷನ್ ಅಧಿಕಾರಿಯ ವಶಕ್ಕೆ ಒಪ್ಪಿಸಲು ಆಜ್ಞೆ ಮಾಡಲಾಗಿದೆ

ಅದರ ಪರಿಣಾಮವಾಗಿ ಸರ್ಕಾರಿ ನೌಕರರ ವಿಮಾ ಶಾಖೆಯಲ್ಲಿ ೧೫೦ ಮಂದಿ ನೌಕರರು ಉಳಿಯುವರು

○ಮುಖ್ಯ ಮಂತ್ರಿಯವರ ವೈಯಕ್ತಿಕ ಕಾರ್ಯದರ್ಶಿ ಹುದ್ದೆಯನ್ನು ರದ್ದುಮಾಡಲಾಗಿದೆ

ಉಪನ್ಯಾಸ

ಶಾರದಾವಿಲಾಸ ಲಾ ಕಾಲೇಜಿನ ಮ್ಯೂಟ್ ಕ್ಲಬ್ಬಿನ ಆಶ್ರಯದಲ್ಲಿ ನಾಳೆ ಮಧ್ಯಾಹ್ನ ೧೨ ಗಂಟೆಗೆ ಶ್ರೀ ಎಂ. ಎ ಸೂರಿಸ್ವಾಮಿ ಅಯ್ಯಂಗಾರ್‌ರವರು [illegible] ಹಿಂದೂ ವಿವಾಹ ಶಾಸನ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಶ್ರೀ ಎ ಲಿಂಗಪ್ಪಯ್ಯನವರು ಅಧ್ಯಕ್ಷತೆ ವಹಿಸುವರು

ಥೇಬರ್‌ರವರ ಬಗ್ಗೆ ವಿದ್ಯಾರ್ಥಿಗಳಿಂದ ಕ್ಷಮಾಪಣೆ

ಅಹಮದಾಬಾದಿನಲ್ಲಿ ಕಳೆದ ಭಾನುವಾರ ಕಾಂಗ್ರೆಸ್ ಭವನಕ್ಕೆ ವಿದ್ಯಾರ್ಥಿಗಳು ನುಗ್ಗಿ ಅಧ್ಯಕ್ಷ ಧೇಬರ್‌ರವರನ್ನು ಮುತ್ತಿ ಅವರ ಟೋಪಿಯನ್ನು ಕಿತ್ತು ಎಸೆದರೆಂದು ವರದಿಯಾಗಿದೆ ದ್ವಿಭಾಷಾ ಮುಂಬಯಿ ಚಳುವಳಿ ನಡೆಸುತ್ತಿರುವ ವಿದ್ಯಾರ್ಥಿ ನಾಯಕ ಹರಿಹರಖಾಂಬೋಳ್ಕರ್ ಮತ್ತು ಇತರ ಮೂವರು ನೆನ್ನೆ ಧೇಬರ್ ಮತ್ತು ಮುರಾರ್ಜಿ ದೇಸಾಯಿಯವರನ್ನು ಭೇಟಿ ಮಾಡಿ, ಹಿಂದಿನ ದಿನ ವಿದ್ಯಾರ್ಥಿಗಳು ಧೇಬರ್ ಬಗ್ಗೆ ನಡೆಸಿದ ವರ್ತನೆಗಾಗಿ ವಿಷಾದವನ್ನು ಸೂಚಿಸಿದರು ಧೇಬರ್‌ರವರು ಉತ್ತರವಿತ್ತು ಕೇವಲ ವಿಷಾದವನ್ನು ಸೂಚಿಸುವುದು ಸಾಲದೆಂದೂ, ಗಾಂಧಿ ಟೋಪಿಯ ಕೀರ್ತಿ ಪ್ರತಿಷ್ಠೆಗಳನ್ನು ಎತ್ತಿ ಹಿಡಿಯಬೇಕೆಂದೂ ಸೂಚಿಸಲಾಗಿ, ಅದಕ್ಕೆ ಖಾಂಬೋಳ್ಕರರು ಧೇಬರ್‌ರವರ ಟೋಪಿಯನ್ನು ಅವರಿಂದ ಪಡೆದು ತಮ್ಮ ತಲೆಯ ಮೇಲೆ ಧರಿಸಿದರು ಇತರ ವಿದ್ಯಾರ್ಥಿಗಳೂ ಖಾದಿ ಟೋಪಿಗಳನ್ನು ಧರಿಸಿದ್ದಾರೆ, ಪುಗಳ ಸಹಿತ [illegible] ತಿರುಗಾಡುವುದಾಗಿಯೂ ಸೂಚಿಸಿದರು

ವಿವಾಹ ಮಹೋತ್ಸವಗಳು

ಹೆಗ್ಗಡದೇವನಕೋಟೆ ತಾಲ್ಲೂಕು ಕಿತ್ತೂರಿನ ಶ್ರೀ ಕೆ. ರಂಗಣ್ಣನವರು ತಮ್ಮ ಕುಮಾರ ಶ್ರೀ ಕೆ ಆರ್ ಅನಂತನಾರಾಯಣರವರಿಗೆ ನಂಜನಗೂಡಿನ ಶ್ರೀ ಎ ವಿ ನಟರಾಜರವರ ಪುತ್ರಿ ಸೌ॥ ಸರಸ್ವತಮ್ಮನವನ್ನು ತಂದುಕೊಂಡು ಕಳೆದ ಭಾನುವಾರ ನಂಜನಗೂಡಿನಲ್ಲಿ ವಿವಾಹವನ್ನು ನೆರವೇರಿಸಿದರು

ಮೈಸೂರು ಸಹೋದರರ ಮಾತೃಶ್ರೀಯವರಾದ ಶ್ರೀಮತಿ ವರಲಕ್ಷ್ಮಿ ರಾಮಯ್ಯನವರು ತಮ್ಮ ಕುಮಾರ ಶ್ರೀ ಆರ್ ಸತ್ಯನಾರಾಯಣರವರಿಗೆ ಭದ್ರಾವತಿಯ ನಿವೃತ್ತ ವರ್ಕ್ಸ್ ಮ್ಯಾನೇಜರ್ ಶ್ರೀ ಬಿ ರಾಮರಾಜಯ್ಯನವರ ಮಗಳು ಸೌ॥ ಬಿ. ಆರ್. ವರಲಕ್ಷ್ಮಿಯನ್ನು ತಂದುಕೊಂಡು ಬೆಂಗಳೂರಿನಲ್ಲಿ ಕಳೆದ ಭಾನುವಾರ ವಿವಾಹ ನಡೆಸಿದರು

ಬೆಂಗಾಲ್ ಎಲೆಕ್ಟ್ರಿಕಲ್ಸ್ ಮಾಲೀಕರಾದ ಶ್ರೀ ಜಿ ಎ ಆಚಾರ್ಯರು ತಮ್ಮ ಪುತ್ರ ಶ್ರೀ ಜಿ ಎ ಪರಕುಂಠಂರವರಿಗೆ ಕಾಶಿ ವಿಜ್ಞಾನ ಶಾಲೆಯ ಪ್ರೊ॥ ಎ. ಎಸ್. ಗೋವಿಂದರಾಯರ ಮಗಳು ಸೌ॥ ಹೇಮಲತಾರವರನ್ನು ತಂದುಕೊಂಡು ಕಳೆದ ೧೯ ರಂದು ಬೆಂಗಳೂರಿನಲ್ಲಿ ವಿವಾಹವನ್ನು ಜರುಗಿಸಿದರು

ತಿದ್ದು ಪಡಿ

ನೆನ್ನೆ ದಿನದ ನಮ್ಮ ಪತ್ರಿಕೆಯಲ್ಲಿ ಬಲವಾಯ ಶಾಲಾ ಸಂಘದ ವಾರ್ಷಿಕೋತ್ಸವದ ವರದಿಯ ಕೊನೆಯಲ್ಲಿ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರೊಡನೆ ಶ್ರೀಮನ್ಮಹಾರಾಜರು ಶ್ರೀ ಹನುಮಂತಯ್ಯನವರ ಬಗ್ಗೆ ಕೆಲವು ಮಾತುಗಳನ್ನು ಹೇಳಿದರೆಂದು ಪ್ರಕಟವಾಗಿದೆಯಷ್ಟೆ ಈ ಮಾತುಗಳನ್ನು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಹೇಳಿದ್ದೆಂದು ತಿಳಿಸಲಾಗಿದೆ ಈ ರೀತಿ ಪ್ರಕಟವಾದುದಕ್ಕಾಗಿ ನಾವು ವಿಷಾದಿಸುತ್ತೇವೆ

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ

ಕಾಲೇಜು ಬಳಿ ವಿದ್ಯಾರ್ಥಿ ವಿದ್ಯಾರ್ಥಿನಿಯರಿಂದ ಪಿಕೆಟಿಂಗ್

ಮೈಸೂರು ೨೭

ನಗರದ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳು ಇಂದೂ ಸಹಾ ತಮ್ಮ ಮುಷ್ಕರವನ್ನು ಮುಂದುವರಿಸಿದರು. ಇಂದು ಬೆಳಗ್ಗೆ ೭॥ ರಿಂದ ವಿದ್ಯಾರ್ಥಿಗಳು ತಂಡಗಳಾಗಿ ನಿಂತು ಶಾಂತಿಯುತ ಪಿಕೆಟಿಂಗ್ ಅನ್ನು ನಡೆಸಿದರು ೪೦ ವಿದ್ಯಾರ್ಥಿವಿದ್ಯಾರ್ಥಿನಿಯರು ಕಾಲೇಜಿನ ಮಹಡಿ ಮೆಟ್ಟಿಲುಗಳ ಮೇಲೆ ಕಾಲುಚಾಚಿ ಕುಳಿತುತ್ತಾರೆ ಯಾರಾದರೂ ಒಳಗೆ ಹೋಗಬೇಕಾದರೆ ಅವರನ್ನು ತುಳಿದುಕೊಂಡು ಹೋಗಬೇಕಾಗುವ ಸ್ಥಿತಿ ಇದೆ.

ಸುಮಾರು ೧೫೦ ವಿದ್ಯಾರ್ಥಿಗಳೂ ೧೮ ವಿದ್ಯಾರ್ಥಿನಿಯರೂ ಈ ಬೆಳಗ್ಗೆ ಕಾಲೇಜಿನ ಆವರಣದಲ್ಲಿ ಸಭೆ ಪ್ರಾರ್ಥನೆಗಳನ್ನು ನಡೆಸಿ, ಮೆರವಣಿಗೆಯಲ್ಲಿ ಹೋಗಿದ್ದರು

ಶಾಸನಸಭೆಯ ಸಮಾಜವಾದಿ ಸದಸ್ಯರಾದ ಶ್ರೀ ಎಸ್ ಗೋಪಾಲಗೌಡರು ಈ ದಿನ ಆಗಮಿಸಿ, ಮುಷ್ಕರ ಮತ್ತು ವಿದ್ಯಾರ್ಥಿಗಳ ಬೇಡಿಕೆ ವಿಚಾರವಾಗಿ ಕಾಲೇಜಿನ ಪ್ರಿನ್ಸಿಪಾಲರೊಡನೆ ಸಂಭಾಷಣೆ ನಡೆಸಿದರು ಕಾಲೇಜು ಬಳಿ ಪೋಲೀಸರೂ ಸಹ ಇದ್ದರು

ಶಿಶುವಿಹಾರದ ಪ್ರಾರಂಭೋತ್ಸವ

ಕನ್ನೇಗೌಡನ ಕೊಪ್ಪಲಿನಲ್ಲಿ ಹೊಸದಾಗಿ ಸ್ಥಾಪಿಸಲ್ಪಟ್ಟಿರುವ ವಿಜಯಾ ಶಿಶುವಿಹಾರದ ಪ್ರಾರಂಭೋತ್ಸವವು ಕಳೆದ ಶುಕ್ರವಾರ ಶ್ರೀ ಸಂಪತ್ ಎಂ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಬಿ ಕೃಷ್ಣಮೂರ್ತಿಯವರಿಂದ ಸ್ವಾಗತ ಮತ್ತು ಶ್ರೀಮತಿಯವರಾದ ಶಾಂತಮ್ಮ ಮತ್ತು ಪರಿವಾರದವರಿಂದ ನರ್ತನಗಳಾದುವು.

ಮೂಗೂರಿನಲ್ಲಿ ಸಂಗೀತ ಕಛೇರಿಗಳು

ಶ್ರೀ ರಾಘವೇಂದ್ರ ಸ್ವಾಮಿಗಳ ಆರಾಧನೆ ಪ್ರಯುಕ್ತ ಮೂಗೂರಿನ ಕಲ್ಯಾಣಮಂಟಪದಲ್ಲಿ ಈ ದಿನ ಸಂಜೆ ವಿ॥ ಬಿ ಕೆ ಪದ್ಮನಾಭರಾಯರ ಮತ್ತು ನಾಳೆ ವಿ॥ ಟಿ ಪುಟ್ಟಸ್ವಾಮಯ್ಯನವರ ಸಂಗೀತ ಕಛೇರಿಗಳು ವಿ॥ ಟಿ. ಗುರುರಾಜಪ್ಪನವರ ಪಿಟೀಲು ಮತ್ತು ಸಂಗೀತರತ್ನ ಟಿ ಎಂ ಪುಟ್ಟಸ್ವಾಮಯ್ಯನವರ ಮೃದಂಗದೊಡನೆಯೂ, ೨೪ನೇ ತಾರೀಕು ಶುಕ್ರವಾರ ವಿ॥ ಟಿ ಆರ್. ಶ್ರೀನಿವಾಸರಾವರ ಗಾಯನವು ವಿ॥ ಎಸ್ ಮಹದೇವಪ್ಪನವರ ಪಿಟೀಲು ಮತ್ತು ವಿ॥ ಹರಿಶ್ಚಂದ್ರರವರ ಮೃದಂಗದೊಡನೆಯೂ ನಡೆಯುವುವು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಸಿತಾರ್ ೭ ೧೫ ಕೃಷ್ಣಪ್ಪ-ದೇವರನಾಮ ೭ ೪೦ ಮತ್ತು ೮ ೧ ಎಂ ಸುಬ್ರಹ್ಮಣ್ಯಶಾಸ್ತ್ರಿ-ಕಾವ್ಯವಾಚನ ಮಧ್ಯಾಹ್ನ ೧೨ ಸಂಗೀತ [illegible] ಗಾಯನ [illegible] ಸಂಜೆ [illegible] ಸಂಗೀತ ೬—೫ ವಾರ್ತಾವಳಿ ೬—೪೦ ಭಕ್ತಿಗೀತೆ. ೭ ನಾಟಕ ೭ ೪೦ ಪಿಟೀಲು ೮ ಕನ್ನಡ [illegible] ೯—೫ ಶ್ರೀ [illegible] ೯—೪೦ ಪತ್ರಿಕಾ [illegible] ನಾಟಕ

ಸ್ವಾತಂತ್ರ್ಯ ದಿನಾಚರಣೆ

ಮೈಸೂರು ೨

ನಿನ್ನೆ ಮಂಗಳವಾರ ನಗರದ ಶ್ರೀ ಹರ್ಡಿಂಜ್ ಮುನಿಸಿಪಲ್ ಸ್ಕೂಲಿನಲ್ಲಿ ಸ್ವಾತಂತ್ರ್ಯ ದಿನ ... ವೈಭವದಿಂದ ಜರುಗಿತು ... ಮುಖ್ಯೋಪಾಧ್ಯಾಯ ... ಮುಕ್ತಾಯವಾಯಿತು

ನರಸಿಂಹರಾಜ ಮೊಹಲ್ಲಾ ... ದ ಟ್ಯುಟೋರಿಯಲ್ ಕ್ಲಬ್ಬಿನವರು ಕಳೆದ ... ದಂದು ಸ್ವಾತಂತ್ರ್ಯ ದಿನೋತ್ಸವವನ್ನು ಶ್ರೀ ಹೆಚ್. ... ಅಧ್ಯಕ್ಷತೆಯಲ್ಲಿ ನಡೆಸಿದರು ... ಶ್ರೀ ಎ ಎಸ್ ... ಮತ್ತು ... ಭಾಷಣಗಳಾದುವು ... ಶ್ರೀ ಎ ... ಕ್ಲಬ್ಬಿನ ಪ್ರಗತಿಯನ್ನು ಕುರಿತು ಮಾತನಾಡಿದರು ... ಕೃತಜ್ಞತೆ ...

... ಮತ್ತು ... ಉಪಹಾರ ... ಮುಕ್ತಾಯ ...

ಬನ್ನೂರಿನಲ್ಲಿ ... ನರಸಿಂಹಸ್ವಾಮಿ ... ನಡೆಯಿತು ... ಮಾಡಿದರು ... ಶ್ರೀ ಎಂ ... ಮೈಸೂರಿನ ... ಉತ್ತರ ... ಸಿಹಿ ಹಂಚಲಾಯಿತು

... ರಾಮಕೃಷ್ಣ ... ಸ್ವಾತಂತ್ರ್ಯ ದಿನಾಚರಣೆ ... ಶ್ರೀ ಲಕ್ಷ್ಮೀನಾರಾಯಣ ... ಸಿಹಿ ಹಂಚಲಾಯಿತು

ಶ್ರೀ ಹಯಗ್ರೀವ ಅವತಾರ

ಶ್ರೀ ಪರಕಾಲಸ್ವಾಮಿಗಳವರ ಉಪದೇಶ

ಮೈಸೂರು ೨೨

ಕಳೆದ ಸೋಮವಾರ ಶ್ರೀ ಪರಕಾಲ ಮಠದಲ್ಲಿ ನಡೆದ ಹಯಗ್ರೀವ ಜಯಂತ್ಯುತ್ಸವದ ಅಂಗವಾಗಿ ಶ್ರೀ ಸ್ವಾಮಿಗಳವರು ಅಪ್ಪಣೆ ಕೊಡಿಸಿದ ಭಾಷಣದ ಸಾರಾಂಶ —

ಲಕ್ಷ್ಮೀ ಹಯಗ್ರೀವರು ಅವತಾರ ಮಾಡಿದ ದಿವಸ ಇದು. ಅವರ ಅವತಾರಕ್ಕೆ ಕಾರಣ ಹೀಗೆ ತಿಳಿದು ಬರುತ್ತದೆ—ಚತುರ್ಮುಖ ಬ್ರಹ್ಮನಿಗೆ ಸೃಷ್ಟಿ ಮಾಡಲು ಅನುಕೂಲವಾಗುವಂತೆ ವೇದಾದಿಗಳನ್ನು ದೇವರು ಕೊಟ್ಟನು. ಒಂದು ಸಲ ಅವರಿಗೆ ಸ್ವಲ್ಪ ಅಭಿಮಾನ ಬಂದಿತು. ಅದನ್ನು ಹೋಗಿಸಬೇಕೆಂದು ಸಮುದ್ರ ಶಾಯಿಯಾದ, ಅನಿರುದ್ಧ ರೂಪನಾದ ನಾರಾಯಣನು ಮಧುಕೈಟಭರೆಂಬ ರಾಕ್ಷಸರನ್ನು ಸೃಷ್ಟಿಸಿ ವೇದಗಳನ್ನು ಅಪಹರಿಸುವಂತೆ ಮಾಡಿದನು. ಬ್ರಹ್ಮನಿಗೆ ಏನೂ ತೋರದಂತಾಯಿತು. ನನ್ನ ಕಣ್ಣಾದ ವೇದವನ್ನು ಕಳೆದುಕೊಂಡೆನಲ್ಲಾ ಎಂದು ಮರುಗುತ್ತಾನೆ. ಆಗ ಮರುಕಗೊಂಡು ಅನಿರುದ್ಧನು ಹಯಗ್ರೀವ ಅವತಾರ ಮಾಡಿ ಬ್ರಹ್ಮನಿಗೆ ವೇದಗಳನ್ನು ಉಪದೇಶಿಸಿದನು. ಜೀವಾತ್ಮನಿಗೆ ಜ್ಞಾನದ ಸಂಕೋಚ ಹೋಗಬೇಕಾದರೆ ಭಗವಂತನ ಅನುಗ್ರಹ ಮುಖ್ಯ. ... ಬುದ್ಧಿ ವಿಕಾಸ ... ಅನಂತರದ ವಿಷಯ

ಇದಕ್ಕೆ ... ಉಪನಿಷತ್ತು ... ಪ್ರಮಾಣವಾಗಿದೆ ... ಅವತಾರ ... ವೇದ ... ಉಪದೇಶಿಸಿದರು ... ಕೃಷ್ಣನು ಗೀತೆಯನ್ನು ಉಪದೇಶ ಮಾಡಿದನು ... ಹಯಗ್ರೀವಾವತಾರ ಮತ್ತು ಶ್ರೀ ಕೃಷ್ಣನ ಅವತಾರ ಒಂದೇ ವಿಧವಾಗಿ ಪ್ರಯೋಜನವನ್ನು ಉಂಟುಮಾಡುವುದಕ್ಕಾಗಿ ಆಯಿತು ... ಆಯಿತು

ಅಕ್ಕಿ, ರಾಗಿ ಡಿಪೋಗಳನ್ನು ತೆರೆಯ ಬೇಕು

ಮೈಸೂರು ನಗರದಲ್ಲಿ ಅಕ್ಕಿ ಮತ್ತು ರಾಗಿ ಬೆಲೆ ತುಂಬಾ ಜಾಸ್ತಿಯಾಗಿ, ರೂ ಗೆ ... ಸೇರಿನಂತೆ ಅಕ್ಕಿ ಮತ್ತು ೩ ಸೇರಿನಂತೆ ರಾಗಿ ಮಾರಾಟವಾಗುತ್ತಿದೆ. ಈ ಬೆಲೆ ಕೊಟ್ಟು ಬಡಬಗ್ಗರು ಕೊಂಡು ತಿನ್ನುವುದು ತುಂಬಾ ಕಷ್ಟಕರವಾಗಿರುತ್ತೆ. ಸರ್ಕಾರದವರು ಅಕ್ಕಿಯನ್ನು ಡಿಪೋಗಳ ಮೂಲಕ ಬಡಬಗ್ಗರಿಗೆ ಕೊಡುವುದಾಗಿ ಭರವಸೆ ಇತ್ತಿದ್ದರೂ, ಇವರೆವಿಗೂ ಯಾವ ವ್ಯವಸ್ಥೆಯನ್ನೂ ಮಾಡದೆ ಸುಮ್ಮನಿರುವುದಕ್ಕೆ ವಿಷಾದಪಡಬೇಕಾಗಿರುತ್ತೆ. ಈಗಲಾದರೂ ಅಧಿಕೃತ ಜಾಗ್ರತೆ ಎಲ್ಲಾ ಮೊಹಲ್ಲಾಗಳಲ್ಲೂ ಸರ್ಕಾರಿ ಡಿಪೋಗಳನ್ನು ತೆರೆದು ಸರಿಯಾದ ರೀತಿಯಲ್ಲಿ ಅಕ್ಕಿ ರಾಗಿಯನ್ನು ಒದಗಿಸಿಕೊಟ್ಟು ಬಡಜನರ ಕಷ್ಟವನ್ನು ನಿವಾರಿಸಿಕೊಡಬೇಕೆಂದು ಕೋರುತ್ತೇನೆ. — ಚೌಡಯ್ಯ

ಕ್ರಿಕೆಟ್ ಪಂದ್ಯ

ಕಳೆದ ಭಾನುವಾರ ನಂಜನಗೂಡಿನ ಎಕ್ಸ್‌ಟೆನ್‌ಷನ್ ಕ್ರಿಕೆಟ್ ಕ್ಲಬ್ಬಿನವರಿಗೂ, ಟೌನ್ ಸ್ಪೋರ್ಟ್ಸ್ ಕ್ಲಬ್ಬಿನವರಿಗೂ ಪಂದ್ಯವು ನಡೆದು, ಎಕ್ಸ್‌ಟೆನ್‌ಷನ್ ಕ್ಲಬ್ಬಿನವರು ಇನ್ನಿಂಗ್ಸ್ ಮತ್ತು ೩೩ ರನ್ನುಗಳಿಂದ ಜಯಗಳಿಸಿದರು

ಎಂ ಎ ಪರೀಕ್ಷೆಯಲ್ಲಿ ಪ್ರಥಮ ಸ್ಥಾನ

ಕಳೆದ ಜುಲೈನಲ್ಲಿ ನಡೆದ ಎಂ ಎ ಪರೀಕ್ಷೆಯಲ್ಲಿ ಶ್ರೀ ಹೆಚ್ ಎಸ್ ನಾರಾಯಣರಾವರು ... ಹೆಚ್ಚು ಅಂಕಗಳನ್ನು ಗಳಿಸಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ. ಶ್ರೀಯುತರು ತರ್ಕ ಶಾಸ್ತ್ರ ವಿಭಾಗದಲ್ಲಿ ಪದವಿಯನ್ನು ಪಡೆದಿರುತ್ತಾರೆ

WANTED

An experienced High School Teacher B A or B A , B Ed to serve in the S N High School at Coorg Contact —

M A BOPAIAH, ...

Room No 106 Maharaja's College Hostel

Mysore

Edited Printed and Published by ... at Sadhvi Press D Subbaiah Road, Mysore

ರಾಘವೇಂದ್ರ ಗುರುಗಳ ಆರಾಧನೆ

ಶ್ರೀರಾಮಪೇಟೆ ಶ್ರೀರಾಮಚಂದ್ರ ಮಂದಿರದಲ್ಲಿ ಈ ದಿನ, ನಾಳೆ ಮತ್ತು ನಾಳಿದ್ದು ಶ್ರೀ ರಾಘವೇಂದ್ರ ಸ್ವಾಮಿಗಳವರ ಆರಾಧನೋತ್ಸವವು ಜರುಗುವುದು. ನಿತ್ಯವೂ ಬೆಳಗ್ಗೆ ಅಭಿಷೇಕ ಅರ್ಚನಾದಿಗಳು ನಡೆಯುತ್ತವೆ. ಈ ರಾತ್ರಿ ... ಗೆ ಶ್ರೀ ಡಿ ... ರಾಯರು ಗುರುಗಳ ಚರಿತ್ರೆಯನ್ನು ಕಥಾ ರೂಪವಾಗಿ ಹೇಳ... ಸಂಜೆ ... ಗೆ ... ನವರ ... ನಿಲಯದಲ್ಲಿ ವಿದ್ವಾಂಸರುಗಳಿಂದ ಉಪನ್ಯಾಸವೂ, ನಾಳಿದ್ದು ಸಂಜೆ ... ದೇವಸ್ಥಾನದಲ್ಲಿ ಭಾಷಣಗಳೂ ಇವೆ

ಶಕ್ತಿಯೂ ಕೋವಿಯೂ ತಮ್ಮ ಗುರಿಯನ್ನು ತಪ್ಪಬಹುದು! ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು!!

ಆದರೆ ಡಾ॥ ರಾಜಾರವರ ನೂತನ ಮತ್ತು ಅದ್ಭುತ ... ಚಿಕಿತ್ಸೆಯು ಮಾತ್ರ ಒಂದೇ ವಾರದ ಅವಧಿಯಲ್ಲಿ ... ಕೊಡುವುದರಲ್ಲಿ ತಪ್ಪುವುದಿಲ್ಲ

ಆದುದರಿಂದ ನವಯೌವನವನ್ನೂ, ಅದ್ಭುತ ಶಕ್ತಿಯನ್ನೂ, ಆರೋಗ್ಯವನ್ನೂ ಪೊಂದಲು ... ವೈದ್ಯದಲ್ಲಿ ... ಡಾ॥ ರಾಜಾರವರ ... ಪಡೆಯಿರಿ

ಭಾರತದ ... ಡಾ॥ ರಾಜಾರವರು ... ಚಿಕಿತ್ಸೆ ... ಅನುಭವ ... ಚಿಕಿತ್ಸೆಯನ್ನು ... ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ

ಆದರಿಂದ ಡಾ॥ ರಾಜಾರವರನ್ನು ಭೇಟಿ ಮಾಡಿ ನವ ಯೌವನ ... ಸಂಪಾದಿಸಿ

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ದುರದೃಷ್ಟದಿಂದ ... ಸುಖ ಮಯ

ಬೆ ... ಘಂಟೆಯಿಂದ ಮಧ್ಯಾಹ್ನ ... ಘಂಟೆವರೆಗೆ ಮತ್ತು ಮಧ್ಯಾಹ್ನ ... ದಿಂದ ರಾತ್ರಿ 9 ಘಂಟೆ ವರೆಗೆ

ರಾಜಾ ಮೆಡಿಕಲ್ ಹಾಲ್,

... ನಂ 1745 ಅಶೋಕಾ ರಸ್ತೆ, ಮೈಸೂರು ... (3ನೇ ಕಟ್ಟಡ)

SREE GANESH TALKIES

ARTISTS & MODELS

(...)

From 23—8—56

CULT OF THE COBRA

WORLD OF BEAUTY, ... will also be shown

ಹಾಸಿಗೆ - ದಿಂಬು

ಮಿತವ್ಯಯದಲ್ಲಿ ಸಿದ್ಧಪಡಿಸಿ ತಯಾರು ಮಾಡುತ್ತೇವೆ

ಬಾಬುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

SRI GAYATHRI TALKIES

From 23-8-56 For 2 Days

THE WHITE ORCHID

Starring - William Lundigan and Peggy Castle

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

★

ಮೈಸೂರು ಸ್ಯಾಂಡಲ್ ಸಾಬೂನು

★

ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು ಒಂದು ನಿಶ್ಚಿತ ಸಾಧನ

★

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

★

ಒಮ್ಮೆ ಉಪಯೋಗಿಸಿ ನೋಡಿ

★

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ

— ದೊರೆಯುತ್ತದೆ —

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

ಮೆಂಬರು ಐ ಎಸ್. ಟಿ. ಎಂ ಎ

ಪ್ರಭುದೇವಾ ಥಿಯೇಟರ್

(ನ್ಯೂ ಟಾಕೀಸ್)

... ನೇ ಬುಧವಾರದಿಂದ ಅನೇಕ ... ಮಾರ ...

ಚಿರಂಜೀವುಲು

... ಬಾಲಸರಸ್ವತಿ ಮುಂತಾದವರು

ಡೈರೆಕ್ಟರ್ — ವೇದಾಂತಂ ರಾಘವಯ್ಯ

ಟೆಲಿಫೋನ್ ನಂ. 792

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : ೧೮] SADHVI : THURSDAY 23 8—1956 ಮೈಸೂರು : ಗುರುವಾರ ೨೩—೮—೧೯೫೬ [ಸಂಚಿಕೆ : ೨೦

ಸೂಯೆಜ್ ಸಮ್ಮೇಳನಕ್ಕೆ ಭಾರತ ಪ್ರತಿನಿಧಿಯ ಎಚ್ಚರಿಕೆ

ಜಿಲ್ಲೆಯಲ್ಲಿ ಕ್ಷಾಮ ನಿವಾರಣಾ ಕಾರ್ಯಕ್ರಮ

ಜಿಲ್ಲಾಧಿಕಾರಿಗಳಿಂದ ವಿವರಣೆ

ಮೈಸೂರು ೨೩

ಈ ದಿನ ಜಿಲ್ಲಾಧಿಕಾರಿಗಳು ಪತ್ರಿಕಾಗೋಷ್ಠಿಯೊಂದನ್ನು ಕರೆದು ಜಿಲ್ಲೆಯಲ್ಲಿ ಕೈಗೊಂಡಿರುವ ಕ್ಷಾಮ ನಿವಾರಣಾ ಕ್ರಮಗಳನ್ನು ವಿವರಿಸಿದರು.

ಇದುವರೆಗೆ ಕೈಗೊಂಡ ೬೭೪ ಕಾಂಗಾರಿ ಕೆಲಸಗಳಿಗಾಗಿ ೫,೪೩,೦೦೦ ರೂ., ಧನ ಸಹಾಯಕ್ಕಾಗಿ ೩,೧೯,೦೦೦ ರೂ. ಮತ್ತು ೩,೬೦೦ ಜನರಿಗೆ ತಕಾವಿ ಸಾಲಗಳಿಗಾಗಿ ೮೫,೦೦೦ ರೂ. ವೆಚ್ಚ ಮಾಡಲಾಗಿದೆ.

ಇದುವರೆಗೂ ೫೦೦ ಟನ್ನುಗಳಷ್ಟು ಮೇವು ಒದಗಿಸಲಾಯಿತು. ಈಗ ಮೇವಿನ ಪರಿಸ್ಥಿತಿ ತೃಪ್ತಿಕರವಾಗಿದೆ. ಈಗ [illegible] ಹಾಲು, [illegible] ಮತ್ತು [illegible] ಮಧ್ಯಾಹ್ನ ಉಪಾಹಾರ ಒದಗಿಸುವ ಕೇಂದ್ರಗಳನ್ನು ನಡೆಸಲಾಗುತ್ತಿದೆ. [illegible] ಉಚಿತವಾಗಿ ಕೊಡಲಾಗಿದ್ದ ಅಕ್ಕಿ [illegible] ಮುಗಿದುಹೋಗಿ, ಈಗ ಉಪಾಹಾರ ಕೇಂದ್ರಗಳಲ್ಲಿ ಹಾಲು ಅಥವಾ ಟೀಯನ್ನು [illegible] ಜೊತೆಗೆ ಕೊಡಲಾಗುತ್ತಿದೆ. ಸುಮಾರು [illegible] ಸಾವಿರ ಪಲ್ಲ ಅಕ್ಕಿಯನ್ನು ಕೂಲಿಗೆ [illegible] ಸೇರಿನ ದರದಲ್ಲಿ ಹಂಚಲಾಗಿದೆ.

ಈಗ ಜಿಲ್ಲೆಯಲ್ಲಿ ರಾಗಿ ಬೆಳೆಗೆ ಇನ್ನೂ [illegible] ಮಳೆ ಬೇಕಾಗಿದೆ. ಜಿಲ್ಲೆಯಲ್ಲಿ [illegible] ಬೆಳೆಯ ಪರಿಸ್ಥಿತಿ ಸಮರ್ಪಕವಾಗಿದೆ. [illegible] ಪ್ರದೇಶಗಳಲ್ಲಿ ಈಗಿನ ಪರಿಹಾರ ಕಾರ್ಯಗಳು ಮುಗಿದನಂತರ ಮುಂದುವರಿಸುವುದಿಲ್ಲ. [illegible] ಕಡೆಗಳಲ್ಲಿ ಕಾರ್ಯವನ್ನು ತೀವ್ರಗೊಳಿಸುತ್ತೇವೆ. ಚಾಮರಾಜನಗರದ ಹರದನಹಳ್ಳಿ, ಚಂದಕವಾಡಿ ಮತ್ತು ನಂಜನಗೂಡಿನ [illegible] ಹೋಬಳಿಗಳಲ್ಲಿ ಪರಿಸ್ಥಿತಿ ತಕ್ಕಮಟ್ಟಿಗೆ [illegible].

ಇದುವರೆಗೆ ಜಿಲ್ಲೆಯಲ್ಲಿ [illegible] ಸಾವಿರ [illegible] ಬಿತ್ತನೆ ರಾಗಿಯನ್ನು ಹಂಚಲಾಯಿತು. [illegible] ವ್ಯವಸಾಯದ ಗೊಬ್ಬರ ಕೊಳ್ಳಲು [illegible] ರೂ. ಗಳಷ್ಟು ಸಾಲವನ್ನೂ, ತಕಾವಿ ಸಾಲಕ್ಕಾಗಿ ಮತ್ತೆ [illegible] ಸಾವಿರ ರೂ. ಗಳನ್ನೂ ಮಂಜೂರು ಮಾಡಲಾಗಿದೆ—ಎಂಬುದಾಗಿ ತಿಳಿಸಿದರು.

ಹೆಚ್ಚು ಕಡೆ ಜನವನ್ನು ಕೊಡಿಸಲು ಲಂಚ [illegible] ಪುಕಾರಿದೆಯೆಂಬುದಾಗಿ ತಿಳಿಸಿದಾಗ, ಜನ ಪಡೆಯಲು ಅರ್ಜಿ ಬರೆಯಲು ಕ್ಷಾಮ [illegible] ಆಣೆ ಸುಲ್ಲವನ್ನು ವಸೂಲ್ಮಾಡಿದ [illegible] ಪ್ರಸಂಗಗಳು ವಾತ್ರ ತಮಗೆ ತಿಳಿದಿವೆ ಎಂದು ಅವರು ಉತ್ತರವಿತ್ತರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

[illegible]

ಸೂಯೆಜ್ ಸಮ್ಮೇಳನದಲ್ಲಿ ಕೃಷ್ಣ ಮೆನನ್ನರ ಎಚ್ಚರಿಕೆ

ಈಜಿಪ್ಟಿಗೆ ಸೂಯೆಜ್ ಸಮ್ಮೇಳನದ ನಿರ್ಧಾರಗಳನ್ನು ತಿಳಿಸುವ ನಿಯೋಗದ [illegible] ಭಾಗವಹಿಸಲು [illegible] ಕೃಷ್ಣಮೆನನ್ [illegible] [illegible]

[illegible] ಕೃಷ್ಣ ಮೆನನ್ನರು [illegible] ತಿಳಿಸಿರುತ್ತಾರೆ. [illegible] ಈಜಿಪ್ಟಿಗೆ ಸಮ್ಮೇಳನದ ನಿರ್ಧಾರವನ್ನು ತಿಳಿಸಲು ಬ್ರಿಟನ್, ಅಮೆರಿಕಾ ಮತ್ತು ಫ್ರಾನ್ಸ್‌ಗಳು ಒಪ್ಪಿವೆ.

ಗೋಪಾಲನ್‌ರವರ ಉಪವಾಸ ಮುಕ್ತಾಯ

ಹೈದರಾಬಾದು ಜೈಲಿನಲ್ಲಿದ್ದ [illegible] ಕಮ್ಯೂನಿಸ್ಟ್ ನಾಯಕ ಎ. ಕೆ. ಗೋಪಾಲನ್‌ರವರು ತಮ್ಮ ಉಪವಾಸವನ್ನು ಮುಕ್ತಾಯ ಮಾಡಿದ್ದಾರೆ.

ಶಾರದಾ ವಿಲಾಸ ಲಾ ಕಾಲೇಜಿನ "ಮೂಟ್ ಕ್ಲಬ್"

ಶಾರದಾವಿಲಾಸ ಲಾ ಕಾಲೇಜಿನಲ್ಲಿ "ಮೂಟ್ ಕ್ಲಬ್" ಎಂಬ ಸಂಘವು ಸ್ಥಾಪಿತವಾಗಿ, ಕಾಲೇಜಿನ ಪ್ರಿನ್ಸಿಪಾಲರಾದ ಶ್ರೀ ಟಿ. ಎಸ್. ರಾಜಗೋಪಾಲಯ್ಯಂಗಾರ್ಯರು ಅಧ್ಯಕ್ಷರಾಗಿಯೂ, ಪ್ರೊ|| ಎಸ್. ಚಿನ್ನಸ್ವಾಮಿಶೆಟ್ಟಿ ಮತ್ತು ಶ್ರೀ ಪಿ. ಆರ್. ಶ್ರೀನಿವಾಸಮೂರ್ತಿಯವರು ಉಪಾಧ್ಯಕ್ಷರುಗಳಾಗಿಯೂ, ಶ್ರೀಗಳಾದ ಎಸ್. ಎಸ್. ನಾರಾಯಣಸ್ವಾಮಿ, ಕೆ. ಜಿ. ಪುಟ್ಟಮಲ್ಲಪ್ಪ, ಆರ್. ರಾಮಕೃಷ್ಣರಾವ್ ಮತ್ತು ಸ್ವಾಮಿಯ್ಯಂಗಾರ್ಯರು ಕಾರ್ಯಕಾರಿ ಸಮಿತಿ ಸದಸ್ಯರಾಗಿಯೂ ಮತ್ತು ಎಸ್. ಎಸ್. ಗುಂಡಪ್ಪನವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾಗಿದ್ದಾರೆ.

ಜನತಾ ರಂಗದ ಕಾರ್ಯಕಾರಿ ಸಮಿತಿ ಸಭೆ

ರಾಜಧಾನಿಯ ಜನತಾ ರಂಗದ ಕಾರ್ಯಕಾರಿ ಸಮಿತಿ ಸಭೆಯು ಕಳೆದ ಗುರುವಾರ ತಾರೀಖು ಶ್ರೀ ಎಸ್. ಕೆ. ಅನಂತಶೆಟ್ಟರ ಅಧ್ಯಕ್ಷತೆಯಲ್ಲಿ ನಡೆಯಿತು. ಕಾರ್ಯದರ್ಶಿ ಶ್ರೀ ಜೆ. ಸ್ವಾಮಿದಾಸರು ಸಂಸ್ಥೆಯು ಪ್ರಾರಂಭವಾದಂದಿನಿಂದಲೂ ನಡೆದಿರುವ ಕಾರ್ಯಚಟುವಟಿಕೆಗಳನ್ನು ವಿವರಿಸಿದರು. ಬರುವ ಮಹಾ ಚುನಾವಣೆಗಳಲ್ಲಿ ರಂಗದ ಪರವಾಗಿ ಉಮೇದುವಾರರನ್ನು ನಿಲ್ಲಿಸುವ ವಿಷಯವನ್ನು ಪರಿಶೀಲಿಸಿ ನಾನಾ ಕಡೆಗಳಲ್ಲಿ ಶಾಖೆಗಳನ್ನು ಏರ್ಪಡಿಸಬೇಕೆಂದು ಗೊತ್ತುಮಾಡಲಾಯಿತು. ಉಮೇದುವಾರರಾಗಲು ಇಚ್ಛಿಸುವವರೂ ಇತರರೂ ರಂಗದ ಸಕ್ರಿಯಾ ಸದಸ್ಯರಾಗಿ ಬರುವ ತಿಂಗಳು [illegible] ರೊಳಗೆ ಸೇರಬೇಕೆಂದು ಪ್ರಾರ್ಥಿಸಲಾಗಿದೆ.

ರೂ. ಗೆ ೩ ಸೇರಿನಂತೆ ಮಾರಲು ನಗರಕ್ಕೆ ಸಾವಿರ ಪಲ್ಲ ಅಕ್ಕಿ

ಪ್ರತಿ ಕುಟುಂಬಕ್ಕೂ ವಾರಕ್ಕೆ [illegible] ಸೇರಿನಂತೆ ಹಂಚಿಕೆ

ಮೈಸೂರು ೨೩

ನಗರದಲ್ಲಿ ಸಹಕಾರ ಸಂಘಗಳ ಮುಖಾಂತರ ರೂಪಾಯಿಗೆ ೩ ಸೇರಿನಂತೆ ಮಾರಾಟ ಮಾಡುವುದಕ್ಕಾಗಿ ಇಂದು ಬೆಂಗಳೂರಿನಿಂದ ಇಲ್ಲಿಗೆ [illegible] ಅಕ್ಕಿಯನ್ನು ರವಾನಿಸಲಾಗಿದೆಯೆಂದೂ [illegible] ವಿತರಣೆ ವ್ಯವಸ್ಥೆ [illegible] ಮುಖಾಂತರ [illegible] ಜಿಲ್ಲಾಧಿಕಾರಿ ಶ್ರೀ ಎಂ. ಎಸ್. [illegible] ಪತ್ರಿಕಾ ಗೋಷ್ಠಿಯೊಂದರಲ್ಲಿ ತಿಳಿಸಿದರು. ಈ ಅಕ್ಕಿಯನ್ನು ಪ್ರತಿ ಕುಟುಂಬಕ್ಕೂ ವಾರಕ್ಕೊಂದು [illegible] ಸೇರಿನಂತೆ ಮಾರಲಾಗುವುದು. ಇನ್ನು ಕೆಲವು ದಿವಸಗಳಲ್ಲಿಯೇ ವ್ಯವಹಾರವಾದಿಸಿಂದ [illegible] ಅಕ್ಕಿಯು ಬರುವುದೆಂದೂ ಸಹ ಅವರು ತಿಳಿಸಿದರು.

ದಳವಾಯಿ ಪ್ರೌಢಶಾಲಾ ಹಳೆಯ ವಿದ್ಯಾರ್ಥಿ ಸಂಘ

ದಳವಾಯಿ ಪ್ರೌಢಶಾಲಾ ಹಳೇ ವಿದ್ಯಾರ್ಥಿಗಳ ಸಂಘದ [illegible] ಸಭೆ [illegible] ನಡೆದು, ನೂತನ ಸಾಲಿನ ಕಾರ್ಯಕಾರಿ ಸಮಿತಿಗೆ ಈ ಕೆಳಕಂಡವರುಗಳು ಚುನಾಯಿತರಾದರು:- ಶ್ರೀ ನರಸಿಂಗರಾವ್-ಅಧ್ಯಕ್ಷರು, ಶ್ರೀ ಕೆ. ರಾಮಣ್ಣ-ಕಾರ್ಯದರ್ಶಿ, ಶ್ರೀಗಳಾದ ಎಂ. ಎ. ನಾಗರಾಜ್, ಬಿ. ವಿ. ನಾರಾಯಣ್, ಎಸ್. ಎನ್. ಸ್ವಾಮಿ, ಕೆ. ಎ. ರಾಮು, ಬಿ. ನರಸಿಂಹನ್ ಮತ್ತು ಸದಸ್ಯರುಗಳು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ವೆಂಕಟಸುಬ್ಬಶಾಸ್ತ್ರಿಯವರು ಅಧ್ಯಕ್ಷರಾಗಿಯೂ, ಶ್ರೀ ಎಸ್. ಕೆ. ಭಾಗವತರ್‌ರವರು ಅಧ್ಯಾಪಕ ಕಾರ್ಯದರ್ಶಿಗಳಾಗಿಯೂ ಮುಂದುವರಿಯುವರು.

ಚಾಮರಾಜನಗರ ಮತ್ತು ಕ್ಷೇತ್ರದೇವರಗುಡಿ ಸೋಲಿಗರ ಹಾಲುಗಳ ವಿಚಾರ

ಚಾಮರಾಜನಗರ ತಾಲ್ಲೂಕು ಕ್ಷೇತ್ರದೇವರಗುಡಿಯಲ್ಲಿ ಸೋಲಿಗರಿಗಾಗಿ ಕಳೆದ ವರ್ಷ ಸರ್ಕಾರದವರು ಶಾಲೆ ಮತ್ತು ವಿದ್ಯಾರ್ಥಿನಿಲಯವನ್ನು ಏರ್ಪಡಿಸಿದ್ದರಷ್ಟೆ. ಇದುವರೆಗೂ ನಡೆಯುತ್ತಿದ್ದ ವಿದ್ಯಾರ್ಥಿನಿಲಯವು ಈಗ ನಿಂತು ಹೋಗಿದೆ. ನಿಲಯದ ವ್ಯವಸ್ಥೆಗೆ ಸರ್ಕಾರದ ಮಂಜೂರಾತಿಯಿಲ್ಲವೆಂದು ಅಕೌಂಟೆಂಟ್ ಜನರಲ್ಲರು ಆಕ್ಷೇಪಿಸಿರುವುದೇ ಇದಕ್ಕೆ ಕಾರಣ. ಶಾಲೆಗೆ ಬಾಲಕರೂ ಬರುತ್ತಿಲ್ಲ. ಹಾಗೆ [illegible] ಬಿಡಿಸುವುದಕ್ಕೆ ಸಹಸ್ರಾರು ರೂಪಾಯಿ ವೆಚ್ಚಮಾಡಿ ನಡೆಸಲಾದ ವಿದ್ಯಾರ್ಥಿ ನಿಲಯಕ್ಕೆ ಸೋಲಿಗರು ಬರದೆ ವೆಚ್ಚ ಮಾಡಿದ ಹಣವು ವ್ಯರ್ಥವಾದಂತಾಗಿದೆ. ಸೋಲಿಗರ ಸ್ವಭಾವವನ್ನು ಅರಿತ [illegible] ಈ ಯೋಜನೆಗೆ ಸಹಕಾರಿಯಾಗುತ್ತಿಲ್ಲ. ಈ ವಿಷಯವನ್ನು ಸಂಬಂಧಪಟ್ಟವರು ಗಮನಿಸಿ ಸೋಲಿಗರ [illegible] ವ್ಯವಸ್ಥೆ ಮಾಡಬೇಕೆಂದು [illegible] ತಿಳಿಸಿದ್ದಾರೆ.

ಪ್ರಧಾನಿ ನೆಹರೂರವರು ಬರುವ ತಿಂಗಳ [illegible] ಸ್ವದೇಶಕ್ಕೆ [illegible] ಭೇಟಿಯಾಗುವರು.

ಆಯುರ್ವೇದ ಕಾಲೇಜಿನ ವರ್ಗಾವಣೆಗೆ ಒತ್ತಾಯವಿಲ್ಲ

ಮುಷ್ಕರ ಹೂಡಿರುವ ವಿದ್ಯಾರ್ಥಿಗಳ ಹೇಳಿಕೆ

ಮೈಸೂರು ೨೩

ರಾಜಧಾನಿಯ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರವು ಇಂದೂ ಮುಂದುವರಿಯಿತು. ಸುಮಾರು [illegible] ಮಂದಿ ವಿದ್ಯಾರ್ಥಿಗಳು ಕಾಲೇಜು ಬಳಿ ಪಿಕೆಟಿಂಗ್ ನಡೆಸುತ್ತಿರುವರು. [illegible] ವಿದ್ಯಾರ್ಥಿಗಳು ಈ ದಿನ ಮಂದಿ ಪ್ರದೇಶದಲ್ಲಿ ಮೆರವಣಿಗೆ ನಡೆಸಿದರು. ನೆನ್ನೆ ಮಧ್ಯಾಹ್ನ ಪಿಕೆಟಿಂಗ್ ಮಾಡುತ್ತಿದ್ದ ವಿದ್ಯಾರ್ಥಿಗಳ ಮೇಲೆ [illegible] ಕೆಲವು ತುಂಟರು [illegible] ನಡೆದು ಹೋದರೆಂದೂ, [illegible] ಒಬ್ಬನು [illegible] ಕೆಟ್ಟಕಿಯಿಂದ ಹಾರಿಹೋದನೆಂದೂ, ಮತ್ತೊಬ್ಬನು ಮೊದಲು ಹೋದ ರೀತಿಯಲ್ಲಿ [illegible] ಇದರಿಂದ ಒಬ್ಬ ವಿದ್ಯಾರ್ಥಿಯು [illegible] ಗಿದೆ [illegible] ಪೋಲೀಸರು [illegible] ರಿದ್ದಾರೆ.

"ಕಾಲೇಜು ವಿದ್ಯಾರ್ಥಿಗಳು ಹೇಳಿಕೆಯೊಂದನ್ನಿತ್ತು, ಕಾಲೇಜು ಹಾಸನ ಸ್ಥಳಕ್ಕೆ ವರ್ಗಾಯಿಸಬೇಕೆಂಬುದನ್ನು ನಿಷೇಧಿಸುವ ವಿಷಯವು ಸರ್ಕಾರಕ್ಕೆ ಸೇರಿದುದೆಂದೂ, ಅದನ್ನು ಪ್ರಶ್ನಿಸಲು ವಿದ್ಯಾರ್ಥಿಗಳಿಗೆ ಹಕ್ಕಿಲ್ಲವೆಂದೂ, ವಿದ್ಯಾರ್ಥಿಗಳು ಕೇಳುವ ಸೌಲಭ್ಯಗಳನ್ನು ಎಲ್ಲಿ ಒದಗಿಸುವರೋ ಅಲ್ಲಿ ತಾವುಗಳು ಇರಲೊಪ್ಪುವುದಾಗಿಯೂ ತಿಳಿಸಿರುತ್ತಾರೆ. ಕಳೆದ ವರ್ಷ ಬೆಂಗಳೂರಿಗೆ ಕಾಲೇಜನ್ನು ವರ್ಗಾಯಿಸಲು ಸರ್ಕಾರದವರು ಇಚ್ಛಿಸಿದ್ದು ಅದಕ್ಕೆ ವಿದ್ಯಾರ್ಥಿಗಳು ಬೆಂಬಲವಿತ್ತಿದ್ದರೆಂದೂ, ಮೈಸೂರಿನಲ್ಲೇ ಎಲ್ಲಾ ಸೌಲಭ್ಯ ಕಲ್ಪಿಸಿದರೆ ಸಂತೋಷವೆಂದೂ ಹೇಳಿ, ಮಹಾಜನಗಳ ಬೆಂಬಲವನ್ನು ಕೋರಿರುತ್ತಾರೆ.

ಬಳ್ಳಾರಿ ವಿದ್ಯಾರ್ಥಿ ಸಂಘದ ಆರಂಭ ಭಾಷಣ

ರಾಜಧಾನಿಯಲ್ಲಿರುವ ಬಳ್ಳಾರಿ ವಿದ್ಯಾರ್ಥಿಗಳ ಸಂಘದ ಆರಂಭ ಭಾಷಣವು ಕಳೆದ ಭಾನುವಾರ ಪ್ರೊ|| ಸಿ. ನಿರಂಜನರವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ನಿರಂಜನರವರು ಸಂಘದ ಆರಂಭೋತ್ಸವವನ್ನು ನೆರವೇರಿಸಿ, ಬಳ್ಳಾರಿ ಕೋಟೆ [illegible] ವಿವರವನ್ನು ಮತ್ತು ಸಂಘ ಸಂಸ್ಥೆಗಳ ಅಗತ್ಯವನ್ನು ವಿವರಿಸಿದರು. ಅಧ್ಯಕ್ಷರ ಭಾಷಣ ಮತ್ತು ಕಾರ್ಯದರ್ಶಿಗಳಿಂದ ವಂದನಾ ಸಮರ್ಪಣೆಯಾದ ನಂತರ ಸಭೆಯು ಮುಕ್ತಾಯವಾಯಿತು.

ಮಹಾ ಗುಜರಾತಿಗಾಗಿ ೫೦೦ ವಿದ್ಯಾರ್ಥಿಗಳ ಉಪವಾಸ

ಮಹಾ ಗುಜರಾತು ಪ್ರಾಂತ ರಚನೆಗಾಗಿಯೂ, ದ್ವಿಭಾಷಾ ಬೊಂಬಾಯಿ ರಚನೆಗೆ ವಿರೋಧವಾಗಿಯೂ ನೆನ್ನೆ ಬೆಳಿಗ್ಗೆ ಅಹಮದಾಬಾದಿನಲ್ಲಿ ೫೦೦ ವಿದ್ಯಾರ್ಥಿಗಳು ಉಪವಾಸ ಮಾಡಿದರು.

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರಕ್ಕೆ ಸಹಾನುಭೂತಿ

ಬೆಂಗಳೂರು ೨೨

ಮೈಸೂರಿನ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರಕ್ಕೆ ಬೆಂಬಲ ಸೂಚಿಸಲು ಮೊನ್ನೆ ಬೆಂಗಳೂರಿನ ವಿವಿಧ ಆಸ್ಪತ್ರೆ ಗಳಲ್ಲಿರುವ ಆಯುರ್ವೇದ ಆಪ್ರೆಂಟಿಸ್ ವೈದ್ಯರುಗಳು ಸಾಂಕೇತಿಕ ಮುಷ್ಕರ ನಡೆಸಿದರು ಅವರ ಪ್ರತಿನಿಧಿಗಳು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರನ್ನು ಭೇಟಿ ಮಾಡಿದ್ದರು ಆದಕ್ಕೆ ಮುಂಚೆ ಅವರುಗಳು ಸಭೆ ನಡೆಸಿ ಮೈಸೂರು ವಿದ್ಯಾರ್ಥಿಗಳ ಬೇಡಿಕೆಗಳಿಗೆ ಬೆಂಬಲವಿತ್ತರು. ಅಖಿಲ ಭಾರತ ಆಯುರ್ವೇದ ಕಾಂಗ್ರೆಸ್ ಅಧ್ಯಕ್ಷ ಶ್ರೀ ವೈ. ಪಾರ್ಥನಾರಾಯಣ ಪಂಡಿತ್ ಮತ್ತು ಚಾಮರಾಜೇಂದ್ರ ಆಸ್ಪತ್ರೆಯ ಯುನಾನಿ ವಿಭಾಗದ ಸೂಪರಿಂಟೆಂಡೆಂಟ್ ಹಕೀಂ ಮುಲ್ಲಾ ಜುಲ್ಲಾ ಖಾನರವರು ವಿದ್ಯಾರ್ಥಿಗಳ ಬೇಡಿಕೆಗಳಿಗೆ ಸರ್ಕಾರದವರು ಒಪ್ಪಬೇಕೆಂದು ಸೂಚಿಸಿದರು

ಫುಟ್‌ಬಾಲ್ ಮತ್ತು ವಾಲಿಬಾಲ್ ಪಂದ್ಯ

ಚಾಮರಾಜನಗರದ ಸುತ್ತ್ರೂರು ವಿದ್ಯಾರ್ಥಿ ನಿಲಯದವರಿಗೂ ಮತ್ತು ನಂಜನಗೂಡು ಸುತ್ತ್ರೂರು ವಿದ್ಯಾರ್ಥಿನಿಲಯದವರಿಗೂ ಕಳೆದ ೧೮ ಮತ್ತು ೧೯ನೇ ತಾರೀಕು ನಡೆದ ಫುಟ್ ಬಾಲ್ ಮತ್ತು ವಾಲಿಬಾಲ್ ಪಂದ್ಯಗಳಲ್ಲಿ ಚಾಮರಾಜನಗರದ ವಿದ್ಯಾರ್ಥಿಗಳು ಜಯಗಳಿಸಿದ್ದಾರೆ. ಫುಟ್ ಬಾಲಿನಲ್ಲಿ ೩ ಗೋಲುಗಳನ್ನು ಹೊಡೆಯಲಾಯಿತು

ಉತ್ತಮವಾದ ಕಟ್ಟಡದ ಪ್ಲಾನುಗಳು ಮತ್ತು ಬ್ಲೂ ಪ್ರಿಂಟ್

ಮಾಡಿಕೊಡುವುದಕ್ಕೆ, ಗಾಯತ್ರಿ ಟಾಕೀಸ್ ಎದುರು ಹ್ಯಾಟ್ ಅಂಗಡಿಯಲ್ಲಿ

ಟಿ. ಮುನಿಸ್ವಾಮಪ್ಪ,

ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್

ಇವರಲ್ಲಿ ವಿಚಾರಿಸಿ

ಗೋಮಟಗಿರಿ ಕ್ಷೇತ್ರದಲ್ಲಿ ಮಸ್ತಕಾಭಿಷೇಕ

ಇಲವಾಲದ ಬಳಿ ಇರುವ ಶ್ರೀ ಗೋಮಟಗಿರಿ ಕ್ಷೇತ್ರದಲ್ಲಿ ಬರುವ ತಿಂಗಳು ೨ನೇ ತಾರೀಕು ನಾಥಿನ್ಸ್ ಶ್ರೀ ಗೋಮಟೇಶ್ವರ ಸ್ವಾಮಿಯವರ ೭ನೇ ಮಸ್ತಕಾಭಿಷೇಕವು ನೆರವೇರುವುದು ಸರ್ವರೂ ದಯಮಾಡಿಸುವಂತೆ ಜೈನ ಮಂಡಲಿಯವರು ಪ್ರಾರ್ಥಿಸಿದ್ದಾರೆ

ಸಟ್ಟಾ ಜೂಜಿಗಾಗಿ ದಂಡ

ಸಟ್ಟಾ ಜೂಜಾಟವಾಡಿದರೆಂದು ನಿಜಾಂ ಮತ್ತು ಛೋಟಿ ಎಂಬ ಇಬ್ಬರಿಗೆ ನೆನ್ನೆ ನಗರದ ದ್ವಿತೀಯ ನ್ಯಾಯಾಧೀಶರು ತಲಾ ೫ ರೂ. ದಂಡ ವಿಧಿಸಿದರು ಅವರ ಬಳಿ ಇದ್ದ ರೂ ೫-೧೫-೦ ಅನ್ನು ವಶಪಡಿಸಿಕೊಳ್ಳಲಾಗಿದೆ.

೧ ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯು ಬರುವ ತಿಂಗಳು ೨೮ ಬದಲು ೧೦ನೇ ತಾರೀಕಿನಿಂದ ಸೆಷನ್ಸಿನಲ್ಲಿ ಆರಂಭವಾಗಲಿದೆ.

ಗೌರ್ನಮೆಂಟ್ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್, ಮೈಸೂರು

೭೦- ಟೆಂಡರು ನೋಟಿಫಿಕೇಷನ್

ಮೈಸೂರಿನಲ್ಲಿರುವ ಗೌರ್ನಮೆಂಟ್ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್ ಅವರಣದಲ್ಲಿ 2 ವರ್ಷಗಳ ಕಾಲ ಸೈಕಲ್ ಸ್ಟಾಂಡನ್ನು ನಡೆಸಲಿಚ್ಛಿಸುವವರಿಂದ, ಈ ಬಗ್ಗೆ ನಿಬಂಧನೆಗಳ ಮೇಲೆ ಪ್ರಕಟಿಸಲಾಗಿರುವ ಅವಶ್ಯಕತೆಗನುಸಾರವಾಗಿ ಮೊಹರಾದ ಟೆಂಡರುಗಳನ್ನು ಈ ಕೆಳಗೆ ರುಜು ಮಾಡಿರುವವರಿಗೆ ತಾ|| 27-8 1956 ಅಥವಾ ಅದಕ್ಕೆ ಮುಂಚೆ ತಲುಪುವಂತೆ ಕಳುಹಿಸಬೇಕೆಂದು ತಿಳಿಸಲಾಗಿದೆ.

ಪಿ ನಂಜಯ್ಯ,
ಪ್ರಿನ್ಸಿಪಾಲ್

ಗೌರ್ನಮೆಂಟ್ ಕಾಲೇಜ್ ಆಫ್ ಇಂಡಿಯನ್, ಮೆಡಿಸಿನ್ ಮತ್ತು ಆಸ್ಪತ್ರೆ, ಮೈಸೂರು

Edited Printed and Published by A R Nagarajan at Sadhvi Press 3 Subbiah Road, Mysore

ಕೃಷ್ಣರಾಜೇಂದ್ರ ಆಸ್ಪತ್ರೆ ವೀಕ್ಷಕರ ಸಮಿತಿ

ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯ ವೀಕ್ಷಕರ ಸಮಿತಿಯನ್ನು ೨ ವರ್ಷದ ಅವಧಿಗೆ ಪುನರ್ರಚಿಸಿ ಕೆಳಗೆ ಕಂಡವರನ್ನು ಸದಸ್ಯರಾಗಿ ನೇಮಿಸಲಾಗಿದೆ- -ಶ್ರೀಗಳಾದ ಎಸ್. ಲಿಂಗಣ್ಣ, ಎಸ್ ಎಂ ಸಿದ್ದಯ್ಯ, ಬಿ ಬಾಲಯ್ಯ, ಸುಬ್ಬಣ್ಣ ಮತ್ತು ಶ್ರೀಮತಿಯರಾದ ಸೀತಾರಾಮಯ್ಯ, ಲೀಲಾವತಿ ಅಂಜನಪ್ಪ ಮತ್ತು ಸುನಂದಮ್ಮ.

SREE GANESH
TALKIES
On 24—8—56 For one day only
ABOUT Mrs. LESLIE
Starring'– Shirley Booth and Robert Ryan

From 25—8—56
Cult of the Cobra
Starring– Faith Domergue

From 1—9—56
Frank Capra's Greatest Production
Lost Horizon
Featuring'– Ronald Colman
(At the request of many intermediate Students)

ಸ್ವೀಡನ್ನಿನಲ್ಲಿ ರಷ್ಯ ಅಧಿಕಾರಿಯ ಗೂಢಚರ್ಯೆ

ಸ್ವೀಡನ್ನಿನ ಕಾರ್ಖಾನೆಯೊಂದರಲ್ಲಿ ರಾಡಾರ್ ಸಾಧನಗಳ ತಯಾರಿಕೆ ಕೆಲಸದಲ್ಲಿರುವ ಒಬ್ಬ ಕೆಲಸಗಾರನಿಂದ ರಹಸ್ಯ ಮಿಲಿಟರಿ ಪತ್ರಗಳನ್ನು ಪಡೆದನೆಂಬ ಕಾರಣಕ್ಕಾಗಿ ರಷ್ಯದ ವ್ಯಾಪಾರ ... ದ ಸದಸ್ಯರಾದ 'ಪೀಟರ್ ಮಿರಾಸನ್ಟ್ರವ್'ರವರು ಸ್ವೀಡನ್ನಿನ ಸರ್ಕಾರದ ಕೋರಿಕೆ ಮೇರೆ ಸ್ವದೇಶಕ್ಕೆ ಹಿಂದಿರುಗಿದ್ದಾರೆ. ಕಾರ್ಮಿಕನ ಮೇಲೆ ಗೂಢಚರ್ಯೆಗಾಗಿ ಮೊಕದ್ದಮೆ ಹೂಡಲಾಗಿದೆ.

ರಣಜಿತ್ 23-8-56 ರಿಂದ ಪ್ರತಿದಿನ 3 ಪ್ರದರ್ಶನ

ಆಲ್ ಇಂಡಿಯಾ ಪಿಕ್ಚರ್ಸ್‌ರವರ ಹಿಂದಿ ಚಿತ್ರ

- ಹಲಾಕು -

ಅಂದಿನ ಸುಪ್ರಸಿದ್ಧ ಚರಿತ್ರಾರ್ಹನಾದ ಚೆಂಗೀಜ್ ಖಾನನ ಮೊಮ್ಮಗನಾದ ಹಲಾಕುವಿನ ಕಥೆ

ಪಾತ್ರ - ಮೀನಾಕುಮಾರಿ, ಅಜಿತ್ ಹೆಲೆನ್, ಸುಂದರ್ ಮತ್ತು ಪ್ರಾಣ್

ಸಂಗೀತ — ಶಂಕರ್ ಜೈಕಿಶನ್

" ಮನುಷ್ಯನು ತನ್ನ ಭವಿಷ್ಯವನ್ನು ತಿಳಿಯುವ ಸಲುವಾಗಿ ದೇವರು ಮಾನವರ ಕೈಗಳ ಮೇಲೆ ರೇಖೆಗಳನ್ನು ನಿರ್ಮಿಸಿದ್ದಾನೆ " ಬೈಬಲ್

ನಿಮ್ಮ ಕೈಯೇ ನಿಮ್ಮ ಭವಿಷ್ಯ ಮತ್ತು ನಿಮ್ಮ ಅದೃಷ್ಟ

ಪ್ರೊಫೆಸರ್ ಮಾರ್ವೆಲ್
ಎಫ್. ಆರ್. ಎ. ಎಸ್.

ವಿಶ್ವವಿಖ್ಯಾತ ಅಸ್ಟ್ರೋ-ಸ್ಪಿರಿಚುಯಲಿಸ್ಟ್ ಮತ್ತು ಹಸ್ತ ಸಾಮುದ್ರಿಕಾ ಪ್ರವೀಣರು ಅವರು ಭವಿಷ್ಯತ್ತಿನ ಘಟನೆಗಳನ್ನು ನಿರೂಪಿಸಿ ಕೌತುಕವನ್ನುಂಟುಮಾಡುತ್ತಾರೆ ಮೈಸೂರಿನಲ್ಲಿರುವವರೆಗೆ ಅವರನ್ನು ಬೆಳಿಗ್ಗೆ 9 ಘಂಟೆಯಿಂದ ಮಧ್ಯಾಹ್ನ ೧ ಮತ್ತು 3 ರಿಂದ ಸಂಜೆ 7 ರ ವರೆಗೆ ಭೇಟಿ ಮಾಡಬಹುದು.

ನಿಮ್ಮ ಸಮಸ್ಯೆಯೇನು?

ನೀವು ಹಣಕಾಸಿನ ತೊಂದರೆಗೆ ಸಿಕ್ಕಿರುವಿರಾ, ನಿಮ್ಮ ಮೇಲೆ ಕೋರ್ಟು ವ್ಯವಹಾರವಿದೆಯೇ? ನಿಮಗೆ ಬಡ್ತಿ ದೊರೆಯಲಿಲ್ಲವೇ? ನೀವು ವಿವಾಹವಾಗಲು ಇಚ್ಛಿಸುತ್ತೀರಾ? ನಿಮಗೆ ಸಂತಾನವಾಗಬೇಕೆಂಬ ಆಸೆಯಿದೆಯೇ? ಸಟ್ಟಾ ವ್ಯಾಪಾರದಲ್ಲಿ ವಿಪರೀತ ಹಣ ಕಳೆದುಕೊಂಡಿರುವಿರಾ? ನೀವು ಜೀವನ ಅಥವಾ ಪ್ರೇಮದಲ್ಲಿ ವಿಫಲರಾಗಿದ್ದೀರಾ? ದೇಹಾರೋಗ್ಯದಲ್ಲಿ ನೀವು ತೊಂದರೆಗೀಡಾಗಿದ್ದೀರಾ? ಶೀಘ್ರವೇ ಬರುತ್ತಿರುವ ಪರೀಕ್ಷೆಗಳ ಬಗ್ಗೆ ನಿಮಗೆ ಭೀತಿಯುಂಟಾಗಿದೆಯೇ? ಅದು ನಿಸರ್ಗಿಕವಾಗಿದೆಯೇ? ಅದು ರಹಸ್ಯವಾದ ವಿಷಯವೇ?

ನಿಮಗೆ ಈಗ ಒದಗಿರುವ ಅವಕಾಶವ ಸದುಪಯೋಗಪಡಿಸಿಕೊಳ್ಳಿ ಮತ್ತು ಮುದ್ದಾಗಿ ವಿಚಾರಿಸಿ ನಡೆ.

ಸಾವಕಾಶ ಮಾಡಬೇಡಿ

ಈ ಕೂಡಲೇ ನೀವು ಕಾರ್ಯಪ್ರವರ್ತರಾಗಿ ಈ ದಿನವೇ ಮನೋನಿಶ್ಚಯ ಮಾಡಿರಿ. ನಿಮಗೆ ದೊರೆಯುವ ಸಲಹೆಯು ಮುಂದೆ ಬರುವ ವರ್ಷಗಳಲ್ಲಿ ವಿಶೇಷ ಉಪಯೋಗವಾಗುವುದು.

'ಈ ತೊಂದರೆಗಳ ಬೇಸರಿಕೆಗಳನ್ನು ಕಂಡ. ಹಿಡಿಯುವುದರಲ್ಲಿ ನಿಮ್ಮ ಹಸ್ತ ರೇಖೆಗಳು ಆಶ್ಚರ್ಯಕರ ಸಾಧನಗಳಾಗಿವೆ

" ಅಸಾಧಾರಣ ಶಕ್ತಿಯುಳ್ಳ ಪವಾಡ ಪುರುಷ "

ಪ್ರೊ॥ ಮಾರ್ವೆಲ್‌ರವರನ್ನು ಭೇಟಿ ಮಾಡಿರಿ

ರೂಂ ನಂ. 2. ರಿಟ್ಜ್ ಹೋಟೇಲು, (ರಣಜಿತ್ ಟಾಕೀಸ್ ಹತ್ತಿರ)

ಸಲಹೆ ಪಡೆಯಲು ರುಸುಂ 11 ರೂ. ಮಾತ್ರ

— ವಿಶೇಷ ಸೂಚನೆ —

1. ಜಾತಿ, ಮತ, ಧರ್ಮ, ಐಶ್ವರ್ಯವಂತ ಅಥವ ಬಡವರೆಂಬ ಬೇಧವಿಲ್ಲ.
2. ವಿದ್ಯಾರ್ಥಿಗಳಿಗೂ, ಮಹಿಳೆಯರಿಗೂ ವಿಶೇಷ ರಿಯಾಯಿತಿ .ಉಚಿತ ಸಲಹೆಗಳಿಗೆ ಅವಕಾಶವಿಲ್ಲ.

The Mysore Chemicals & Fertilisers Ltd, Mysore

NOTICE

Notice is hereby given that the Twentieth Ordinary General Meeting of the Shareholders of the Mysore Chemicals and Fertilisers Ltd, Mysore, will be held at 2-30 P. M. on Saturday the 29th September 1956 at the Company's Registered Office at 1129. Vanivilas Road, Mysore, to transact the following business:

1. To receive and adopt the Directors' Report and Audited Balance Sheet and Profit and Loss Account for the year ended 31st March 1956 with the Auditors' Report.
2. To declare a dividend.
3. To elect three Directors in place of
   Dr Rajah Sir M A. Muthiah Chettiar of Chettinad,
   Sri Mooljee Ramjee and
   Sri K. Subbarao Ramaswamy, M.Sc.
   who retire and are eligible for re-election.
4. To appoint Auditors for the year 1956-57 and to fix their remuneration
5. SPECIAL BUSINESS SPECIAL NOTICE. To consider and if thought fit, to pass the special resolution to authorise the Directors of the Company, to borrow moneys with or without security and without limit.
6. SPECIAL BUSINESS—SPECIAL NOTICE: To consider and if thought fit, to pass the Special Resolutions amending the Articles of Association of the Company.

(Full details about special resolutions noted above and explanatory statement under Section 173 of the Indian Companies Act 1956, have been furnished in the Notice sent to all the Shareholders of the Company.)

Under Article 29 of the Articles of Association of the Company the Share Transfer Books of the Company will be closed from 14th September 1956 to 29th September 1956 (both days inclusive)

Note:- Every member entitled to attend & vote is entitled to appoint a proxy or proxies to attend & vote instead of himself and a proxy need not be a member.

1129. Vanivilasa Road, Mysore.
11th August 1956

By Order of the Board
A. MUNISWAMY GOWDA,
Secretary

1) The Directors have recommended the payment of 5 per cent Dividend.
2) The Dividend when sanctioned will be made payable at the Indian Bank Ltd., Bangalore City, on and after 8th October 1956. The dividend warrants will be posted to those Shareholders whose names appear on the Register of the Company as on 14th September 1956. The Shareholders are requested to intimate the change of address, if any, immediately.

ಟೆಲಿಫೋನ್ ನಂ. 792

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಇಂದಿನ ಪತ್ರಿಕೆ 3 ಕಾಸು

ಸಾಧ್ವಿ

ಸಂಪುಟ : ೧೫] SADHVI : FRIDAY 24—8—1956 ಮೈಸೂರು : ಶುಕ್ರವಾರ ೨೪—೮—೧೯೫೬ [ಸಂಚಿಕೆ : ೨೧

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಚೀಣಾ ಬಳಿ ಗುಂಡಿನಿಂದ ಅಮೆರಿಕಾ ವಿಮಾನದ ನಾಶ

ಧಾನ್ಯದ ಬೆಲೆ ಏರಿಕೆ ವಿರುದ್ಧವಾಗಿ ಸಮಾಜವಾದಿಗಳ ಪ್ರತಿಭಟನೆ

ಮೈಸೂರು ೨೪

ನಗರದಲ್ಲಿರುವ ಸಮಾಜವಾದಿ ಪಕ್ಷದವರು ಆಹಾರ ಧಾನ್ಯದ ಬೆಲೆ ಏರಿಕೆ ವಿರುದ್ಧವಾಗಿ ಪ್ರತಿಭಟನೆ ಸೂಚಿಸಲು ಮೊನ್ನೆ ಸಂಜೆ ಸೈಕಲ್ ಮೆರವಣಿಗೆ ನಡೆಸಿ, ಸರ್ಕಾರಕ್ಕೆ ಧಿಕ್ಕಾರವನ್ನು ಕೂಗಿದರು. ಸಂಜೆ ಟೌನ್‌ಹಾಲಿನಲ್ಲಿ ಶಾಸನಸಭಾ ಸದಸ್ಯರಾದ ಶ್ರೀ ಎಸ್. ಗೋಪಾಲಗೌಡರ ಅಧ್ಯಕ್ಷತೆಯಲ್ಲಿ ಸಭೆ ನಡೆದು, ಆಹಾರ ಧಾನ್ಯ ಮತ್ತು ಧಾನ್ಯದ ಬೆಲೆ ಏರಿಕೆ ಬಗ್ಗೆ ಸರ್ಕಾರದ ಔದಾಸೀನ್ಯವನ್ನು ಖಂಡಿಸುವ ಮತ್ತು ಕೂಡಲೇ ಧಾನ್ಯದ ಬೆಲೆ ಕಡಿಮೆ ಮಾಡಲು ಕ್ರಮ ಕೈಗೊಳ್ಳದಿದ್ದರೆ ಪ್ರತ್ಯಕ್ಷ ಹೋರಾಟವು ಅನಿವಾರ್ಯವೆಂದು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರಕ್ಕೆ ಬೆಂಬಲ ಸೂಚಿಸಲಾಯಿತು. ಕಾಲೇಜು ನಗರದಲ್ಲಿಯೇ ಇರಬೇಕೆಂದೂ, ಅಲ್ಲೇ ವಿದ್ಯಾರ್ಥಿಗಳಿಗೆ ಎಲ್ಲ ರೀತಿಯ ಸೌಲಭ್ಯಗಳನ್ನೂ ಕಲ್ಪಿಸಬೇಕೆಂದೂ ಸಭೆಯು ಸೂಚಿಸಿತು.

ಶ್ರೀಗಳಾದ ಟಿ. ಎ. ಶ್ರೀನಿವಾಸ, ಎಸ್. ಎಲ್. ವೆಂಕಟನಾರಾಣಪ್ಪ, ಶ್ರೀಕಂಠಯ್ಯ ಮತ್ತು ಕೆ. ವಿ. ವಿಶ್ವನಾಥ್‌ರವರು ಭಾಷಣ ಮಾಡಿದರು.

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ

ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರವು ಇಂದೂ ಮುಂದುವರಿಯಿತು. ತರಗತಿಗಳಿಗೆ ಯಾರೂ ಹೋಗಿಲ್ಲ. ಪಿಕೆಟಿಂಗ್ ನಡೆಸುತ್ತಿರುವ ವಿದ್ಯಾರ್ಥಿಗಳು ಇಲ್ಲಿ ಕುಳಿತಿರುವ ... ಬೆಳಿಗ್ಗೆ ಪ್ರಾರ್ಥನೆ ಮತ್ತು ಮೌನಾಚರಣೆಗಳು ನಡೆದುವು.

ಹರಿಕಥೆ ಮತ್ತು ದೇವರಿಗೆ ಅಲಂಕಾರ

... ಅಮ್ಮನ ಗುಡಿ ಬೀದಿ ಶ್ರೀ ಚೌಡೇಶ್ವರಿ ... ಲಿಂಗೇಶ್ವರ ದೇವಸ್ಥಾನದಲ್ಲಿ ಶ್ರಾವಣ ಶನಿವಾರದ ಪ್ರಯುಕ್ತ ನಾಳೆ ಸಂಜೆ ೭ ಘಂಟೆಗೆ ... ಪತಿಯ ಶ್ರೀ ವೆಂಕಟೇಶದಾಸರಿಂದ ರಾಜಸೂಯಯಾಗ ಎಂಬ ಹರಿಕಥೆಯೂ, ಅಮ್ಮನವರಿಗೆ ಅನಂತಶಯನಸ್ವಾಮಿ ಅಲಂಕಾರವೂ ಏರ್ಪಾಡಾಗಿವೆ. ನಗರಾಭಿವೃದ್ಧಿ ಸಮಿತಿ ಅಧ್ಯಕ್ಷ ಶ್ರೀ ಎಸ್. ಲಿಂಗಣ್ಣನವರು ಅಧ್ಯಕ್ಷತೆ ವಹಿಸುವರು.

ಸೂಯೆಜ್ ಬಗ್ಗೆ ಅಮೆರಿಕಕ್ಕೆ ಸೌದಿ ಅರೇಬಿಯಾ ದೊರೆಯ ಎಚ್ಚರಿಕೆ

ಸೂಯೆಜ್ ಪ್ರಶ್ನೆ ಬಗ್ಗೆ ಈಜಿಪ್ಟ್ ಸರ್ಕಾರದ ಪರವಾಗಿ ಅಮೆರಿಕಕ್ಕೆ ಎಚ್ಚರಿಕೆ ಕೊಡಲು ಸೌದಿ ಅರೇಬಿಯಾ ದೊರೆ ಇಬನ್‌ಸಾದರು ನಿರ್ಧರಿಸಿದ್ದಾರೆ. ಈಜಿಪ್ಟ್ ಮತ್ತು ಇತರ ಅರಬ್ ದೇಶಗಳು ಮತ್ತು ಪಶ್ಚಿಮ ರಾಷ್ಟ್ರಗಳ ನಡುವೆ ಉಂಟಾಗಿರುವ ಪರಿಸ್ಥಿತಿಯು ಕೆಡುತ್ತಿರುವ ಸಮಯದಲ್ಲಿ ಸೌದಿ ಅರೇಬಿಯಾ ದೊರೆಯಿಂದ ಎಸ್. ... ಜಿನ ಸ್ಥಿತಿ ಬಗ್ಗೆ ಅವರು ಸೂಚನೆ ಕೊಟ್ಟಿರುವರು. ಈಜಿಪ್ಟಿನ ಪರ ಸೌದಿ ಅರೇಬಿಯಾ ದೊರೆ ಯಾವ ರೀತಿ ಪಕ್ಷ ವಹಿಸುವರೆಂಬುದು ಸ್ಪಷ್ಟವಾಗಿಲ್ಲ.

ಆಹಾರ ಧಾನ್ಯದ ಬೆಲೆ ತಗ್ಗಿಸಲು ಸರ್ಕಾರದ ಸರ್ವ ಪ್ರಯತ್ನ

ಬೆಂಗಳೂರು ೨೩

[illegible]

ಬೆಲೆಯ ಏರಿಕೆಯನ್ನು ತಡೆಗಟ್ಟಲು ಇಲ್ಲಿನ ಕೇಂದ್ರ ಸರ್ಕಾರದ ರಿಸರ್ವ್ ಧಾನ್ಯದ ೨೦ ಸಾವಿರ ಟನ್ನು ... ಅಕ್ಕಿಯನ್ನು ... ಮಾಡುವಂತೆ ಸಂಸ್ಥಾನ ಸರ್ಕಾರದವರು ಕೇಂದ್ರವನ್ನು ... ಪತ್ರ ವ್ಯವಹಾರ ನಡೆಸುತ್ತಿದ್ದಾರೆ ... ಮೈಸೂರಿಗೆ ಈ ದಿನ ... ೧,೦೦೦ ಟನ್ನು ಅಕ್ಕಿಯು ಅಮೆರಿಕದ ಅಕ್ಕಿಯೆಂದು ಸೂಚಿಸಲಾಗಿದೆ.

ನಾಡಿಗೆ ಉತ್ತೇಜನಕ್ಕಾಗಿ ಅಧಿಕೃತ ಸಮಿತಿ

ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ನೀಡಲು ಸರ್ಕಾರದವರು ಅಧಿಕೃತ ಬೋರ್ಡನ್ನು ರಚಿಸಲು ನಿರ್ಧರಿಸಿದ್ದಾರೆ. ಈ ಬಗ್ಗೆ ... ಸಭೆಯಲ್ಲಿ ... ತರಲಾಗುವುದು.

ಸಂಸ್ಥಾನದಲ್ಲಿ ನೀರಾ ಕೇಂದ್ರಗಳು

... ಜಾರಿಯಲ್ಲಿರುವ ೯–೧೦ ಮುಖ್ಯ ಸ್ಥಳಗಳಲ್ಲೂ, ಚಿನ್ನದ ಗಣಿ ಪ್ರದೇಶದಲ್ಲೂ ಒಂದೊಂದು ನೀರಾ ಕೇಂದ್ರವನ್ನು ತಾತ್ಕಾಲಿಕವಾಗಿ ತೆರೆಯಲು ಸರ್ಕಾರದವರು ನಿರ್ಧರಿಸಿದ್ದಾರೆ. ಈ ಬಗ್ಗೆ ಯೋಜನೆಯ ವಿವರಗಳನ್ನು ಸಿದ್ಧಗೊಳಿಸಲಾಗುತ್ತಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ನಾಗಸ್ವರ ೭-೧೫ ಮತ್ತು ೮-೧೫ ಕೆ. ಆರ್. ಲೀಲಾವತಿ–ದೇವರ ನಾಮ. ೭-೩೦ ರಿಕಾರ್ಡು. ಮಧ್ಯಾಹ್ನ ೧೨ ಸಂಗೀತ. ೧೨-೩೦ ರಿಕಾರ್ಡು. ೧-೧೫ ಮಕ್ಕಳಿಗಾಗಿ. ೧–೪೦ ವಾರ್ತೆ. ಸಂಜೆ ೫-೩೦ ಮತ್ತು ೮ ... ರಾಮಲಿಂಗರಾವ್–ದೇವರ ನಾಮ ಮತ್ತು ಸಂಗೀತ. ೭-೧೫ ವಚನ ಗಾನ ೭-೩೦ ... ೮-೩೦ ರೇಡಿಯೋ ನ್ಯೂಸ್ ರೀಲ್. ೯—೩ ಹಾಸ್ಯ ನಾಟಕ. ೯-೩೦ ರಾಷ್ಟ್ರೀಯ ಕಾರ್ಯಕ್ರಮ.

ಕೃಷ್ಣ ಜಯಂತಿ ದಿನ ಮಾಂಸದ ಮಾರಾಟವಿಲ್ಲ

ಇದೇ ೩೦ನೇ ತಾರೀಖು ಶ್ರೀ ಕೃಷ್ಣ ಜಯಂತಿ ದಿನ ಬೆಂಗಳೂರಿನಲ್ಲಿ ಕಸಾಯಿಖಾನೆಗಳು ಬಂದಾಗಿ, ಮಾಂಸದ ಮಾರಾಟವಿರುವುದಿಲ್ಲವೆಂದು ಸೂಚಿಸಲಾಗಿದೆ.

ಸೆಪ್ಟೆಂಬರ್ ೨೭ನೇ ತಾರೀಖು ಪೌರಸಭಾ ಉಪ ಚುನಾವಣೆ

ಮೈಸೂರು ೨೪

ಶ್ರೀ ಸಿ. ಎಲ್. ಕುಮಾರಸ್ವಾಮಿಯವರ ರಾಜೀನಾಮೆ ಪ್ರಯುಕ್ತ ತೆರವಾದ, ಪೌರಸಭೆಯ ೩ನೇ ವಾರ್ಡಿನ ಹರಿಜನರ ಸ್ಥಾನಕ್ಕೆ ಬರುವ ತಿಂಗಳು ೨೭ನೇ ತಾರೀಖು ಉಪಚುನಾವಣೆಯು ನಡೆಯುವುದು. ೬ನೇ ತಾರೀಖು ಉಮೇದುವಾರಿಕೆ ಪತ್ರಗಳು ... ಪರಿಶೀಲನೆ ಮತ್ತು ೧೦ನೇ ತಾರೀಖು ವಾಪಸ್ಸು ಪಡೆಯುವ ದಿನಗಳಾಗಿವೆ.

ಹಗಲಿನಲ್ಲಿ ಮನೆಗೆ ನುಗ್ಗಿ ಶಾಲು ಮತ್ತು ಪಂಚೆಯ ಅಪಹಾರ

... ರಸ್ತೆಯ ಶ್ರೀ ಪಿ. ಕೃಷ್ಣಮಾ... ೨೭ನೇ ನಂಬರು ಮನೆಯಲ್ಲಿ ನೆನ್ನೆ ಬೆಳಿಗ್ಗೆ ಮುಂಬಾಗಿಲ ... ದಲ್ಲಿ ಮನೆಯವರ ... ಅಪರಿಚಿತ ವ್ಯಕ್ತಿಯೊಬ್ಬನು ಬಂದು ಮಂಚದ ಮೇಲೆ ಇಟ್ಟಿದ್ದ ಒಂದು ಶಾಲು ಮತ್ತು ಒಂದು ಜೊತೆ ಹೊಸ ಪಂಚೆಗಳನ್ನು ಅಪಹರಿಸಿಕೊಂಡು ಹೋಗಿರುವನೆಂದು ಪೊಲೀಸಿಗೆ ದೂರು ಕೊಡಲಾಗಿದೆ.

ಸಂಸ್ಥಾನದ ಶಾಸನಸಭಾಧಿವೇಶನ

ಸಂಸ್ಥಾನದ ಶಾಸನ ಸಭೆಯ ಅಧಿವೇಶನವು ಬರುವ ತಿಂಗಳು ೨೦ ರಿಂದ ೧೦ ದಿನಗಳ ಕಾಲ ಬೆಂಗಳೂರಿನಲ್ಲಿ ಸೇರಲಿದೆ.

ಆಯುರ್ವೇದ ಮತ್ತು ಯುನಾನಿ ಕಾಲೇಜು ಸದನೀಧರರ ಸಂಘ

ಆಯುರ್ವೇದ ಕಾಲೇಜಿನ ವಿದ್ಯಾರ್ಥಿಗಳು ೨೦ನೇ ತಾರೀಖಿನಿಂದ ತಮ್ಮ ಬೇಡಿಕೆಗಳ ಸಿದ್ಧಿಗಾಗಿ ಮುಷ್ಕರ ಹೂಡಿರುವ ಪರಿಸ್ಥಿತಿ ಬಗ್ಗೆ ವಿಚಾರ ಮಾಡುವುದಕ್ಕಾಗಿ ನಿನ್ನೆ ... ಆಯುರ್ವೇದ ಮತ್ತು ಯುನಾನಿ ಸದನೀಧರರ ಸಂಘದ ಕಾರ್ಯದರ್ಶಿ ಶ್ರೀ ಬಿ. ಎಲ್. ರಾಮಾಚಾರ್ಯರು ಈ ರೀತಿ ಹೇಳಿಕೆ ಕೊಟ್ಟಿರುತ್ತಾರೆ:– ಈ ಕಾಲೇಜಿನ ಅಭಿವೃದ್ಧಿಗಾಗಿ ಸಂಘವು ಮಾಡಿರುವ ಸೂಕ್ತ ಸಲಹೆಗಳನ್ನು ಸರ್ಕಾರದವರು ಅನೇಕ ವರ್ಷಗಳಿಂದ ಕಾರ್ಯರೂಪಕ್ಕೆ ತಂದೆ, ಭರವಸೆಯಲ್ಲಿಯೇ ಕಾಲಕ್ಷೇಪ ಮಾಡುತ್ತಿದ್ದಾರೆ. ವಿದ್ಯಾರ್ಥಿ ಸಂಘದವರು ಈ ನಾಲ್ಕೈದು ವರ್ಷಗಳಿಂದ ಮಾಡಿದ ಪ್ರಯತ್ನಗಳೂ, ಬೇಡಿರುವ ಸೌಕರ್ಯಗಳೂ ಈಡೇರದೆ, ಬೇಸತ್ತು ನಿರುಪಾಯರಾಗಿ ವಿಧಿ ಇಲ್ಲದೇ ಮುಷ್ಕರ ಹೂಡಿರುತ್ತಾರೆ. ಮೈಸೂರಿನಲ್ಲಿ ಈ ಕಾಲೇಜು ಉಳಿಯುವಂತೆ ಆಸಕ್ತಿ ವಹಿಸಿದ ಮಹನೀಯರುಗಳು ಈ ಸಮಯದಲ್ಲಿ ಸರ್ಕಾರವನ್ನು ಒತ್ತಾಯಪಡಿಸಿ ಇದು ಇಲ್ಲಿಯೇ ಅಭಿವೃದ್ಧಿಯಾಗುವಂತೆ ಮಾಡಿ ಇವರನ್ನು ... ಗಬೇಕಾಗಿ ಪ್ರಾರ್ಥನೆ. ಬೇಗ ಆಗಲಿರುವ ವಿಶಾಲ ಮೈಸೂರು ಪ್ರಾಂತ್ಯದಲ್ಲಿ ಸರ್ಕಾರದ ಈ ಪತ್ರಿಕೆ ಕಾಲೇಜು ಸಂಸ್ಥಾನದ ಕೀರ್ತಿಗೆ ... ನೇರಕ್ಕೆ ... ಆಗಲಿ. ನೂತನ ಮಂತ್ರಿಮಂಡಲವು ಈ ಕಾಲೇಜಿನ ಅಭಿವೃದ್ಧಿಯ ಕೆಲವು ಮುಖ್ಯ ಸಲಹೆಗಳನ್ನಾದರೂ ಈಡೇರಿಸಿ, ಮುಷ್ಕರವು ಬೇಗ ಕೊನೆಗೊಳ್ಳುವಂತೆ ಮಾಡಲಿ.

ಚೀಣಾ ಬಳಿ ಗುಂಡಿನೇಟಿನಿಂದ ಅಮೆರಿಕಾ ವಿಮಾನ ನಾಶ

ಫಾರ್ಮೋಸಾದಿಂದ ೧೫೦ ಮೈಲಿ ದೂರದಲ್ಲಿ ಅಪರಿಚಿತ ವಿಮಾನವೊಂದು ಅಮೆರಿಕದ ನೌಕಾ ವಿಮಾನದ ಮೇಲೆ ಗುಂಡು ಹಾರಿಸಿ ನಾಶಪಡಿಸಿತೆಂದು ವರದಿಯಾಗಿದೆ. ಅಮೆರಿಕದ ವಿಮಾನವು ಚೀಣಾ ಮುಖ್ಯ ಭೂಮಿಯ ತೀರಕ್ಕೆ ೩೨ ಮೈಲಿ ದೂರದಲ್ಲಿ ದಿನಚರಿ ಹಾರಾಟ ನಡೆಸುತ್ತಿತ್ತೆಂದು ಹೇಳಲಾಗಿದೆ.

ಸೂಯೆಜ್ ಸಮ್ಮೇಳನದ ಮುಕ್ತಾಯ

ನಿರ್ಧಾರವೇನೂ ಆಗಲಿಲ್ಲ

ಲಂಡನ್ನಿನಲ್ಲಿ ಕಳೆದ ಒಂದು ವಾರದಿಂದಲೂ ಸೇರಿದ್ದ ೨೨ ರಾಷ್ಟ್ರಗಳ ಸಮ್ಮೇಳನವು ನೆನ್ನೆ ಸೂಯೆಜ್ ಕಾಲುವೆ ಪ್ರಶ್ನೆಬಗ್ಗೆ ಯಾವ ನಿರ್ಧಾರವನ್ನೂ ಮಾಡದೆ ಮುಕ್ತಾಯವಾಯಿತು. ಸಮ್ಮೇಳನದ ಅಧ್ಯಕ್ಷರಾದ ಸೆಲ್ವಿನ್ ಲಾಯ್ಡ್‌ರವರು ಈಜಿಪ್ಟಿನ ಅಧ್ಯಕ್ಷ ಕರ್ನಲ್ ನಾಸಿರ್‌ರವರಿಗೆ ಸಮ್ಮೇಳನದ ನಡವಳಿಕೆಗಳ ಪೂರ್ಣ ವರದಿಯನ್ನು ಕಳುಹಿಸತಕ್ಕದ್ದೆಂದು ಒಪ್ಪಲಾಯಿತು.

ಸೂಯೆಜ್ ಕಾಲುವೆಯನ್ನು ಅಂತರರಾಷ್ಟ್ರೀಯ ವ್ಯವಸ್ಥೆಗೆ ಒಪ್ಪಿಸಬೇಕೆಂದು ಬಹುಮತದವರು ಮಾಡಿರುವ ಸಲಹೆಯನ್ನು ಈಜಿಪ್ಟ್ ಒಪ್ಪಲಾರದೆಂದೂ, ಕಾಲುವೆಯು ಈಜಿಪ್ಟಿನ ಹತೋಟಿಯಲ್ಲಿ ಇರಬೇಕೆಂದು ಭಾರತವು ಮಾಡಿರುವ ಸಲಹೆಯನ್ನು ಅದು ಒಪ್ಪಬಹುದೆಂದೂ ನಾಸಿರ್‌ರವರ ವಿಶೇಷ ರಾಯಭಾರಿ ಅಲಿ ಸಾಬ್ರಿಯವರು ತಿಳಿಸಿದ್ದಾರೆ.

ಭಾರತದ ಸಲಹೆಯನ್ನು ಮಾನ್ಯ ಮಾಡದಿದ್ದರೆ ಯುದ್ಧ ಸಂಭವಿಸಬಹುದೆಂದು ಕೃಷ್ಣಮೆನನ್ನರು ಎಚ್ಚರಿಕೆಯಿತ್ತಿದ್ದಾರೆ.

ಅಂಗಡಿ ಮಾಲೀಕರಿಗೆ ದಂಡ

ಅಂಗಡಿ ಸಿಬ್ಬಂದಿ ಕಾನೂನಿನ ಉಲ್ಲಂಘನೆಗಾಗಿ ... ಮಾರ್ಕೆಟ್ ಬಳಿ ಇರುವ ಪಿ. ಆರ್. ವಿ. ಕಾಫೀ ಅಂಗಡಿ ಮಾಲೀಕರಾದ ಶ್ರೀ ಪಿ. ಆರ್. ವರದರಾಜ ಶೆಟ್ಟಿಯವರಿಗೆ ೩೦ ರೂ. ಮತ್ತು ಅದೇ ರಸ್ತೆಯಲ್ಲಿರುವ ಟಾಕೀಸ್ ... ಕ್ಲಾತ್ ಶಾಪಿನ ಮಾಲೀಕರಾದ ಶ್ರೀ ಬಿ. ಎಂ. ವೆಂಕಟರಾಮಯ್ಯನವರಿಗೆ ೫ ರೂ. ದಂಡವನ್ನು ವಿಧಿಸಲಾಗಿದೆ.

ಕಾರಿಗೂ, ಗಾಡಿಗೂ ಡಿಕ್ಕಿ

ಸುಬ್ಬರಾಯನಕೆರೆ ಪತ್ರಿಕೆಯವರ ಶ್ರೀ ರಾಜ ... ವೆಂಕಟಸ್ವಾಮಿಗಳ ಮಠದ ಬಳಿ ಇಂದು ಮಧ್ಯಾಹ್ನ ರಮಾವಿಲಾಸ ಅಗ್ರಹಾರದ ಕಡೆಯಿಂದ ಬಂದ ಕಾರೊಂದು ಅದರ ಮುಂದೆ ಹೋಗುತ್ತಿದ್ದ ಸೀಮೆಯೆಣ್ಣೆಯನ್ನು ತುಂಬಿದ್ದ ಎತ್ತಿನ ಗಾಡಿಗೆ ಪಕ್ಕದಲ್ಲಿ ... ಹಾಗಾಗಿ ಒಂದೆರಡು ಟಿನ್ ಸೀಮೆಯೆಣ್ಣೆ ಸುರಿದು ಹೋಗುವುದಲ್ಲದೆ, ಎತ್ತಿನ ಕಾಲುಗಳಿಗೆ ಕೊಂಚ ಪೆಟ್ಟು ಬಿದ್ದಿತು. ಎಡಗಡೆಯಾಗಿ ಒಂದು ಲಾರಿಯು ಬಂದಾಗ ಎತ್ತಿನ ಗಾಡಿಯನ್ನು ಒಂದು ಕಡೆಗೆ ಎಳೆಯುತ್ತಿದ್ದಾಗ, ಆಗ ಪಕ್ಕದಲ್ಲಿ ಬರುತ್ತಿದ್ದ ಕಾರು ಗಾಡಿಗೆ ಡಿಕ್ಕಿ ಹೊಡೆಯಿತೆಂದು ಹೇಳಲಾಗಿದೆ.

ಸಕಲಾತ ಎಗ್ಗೆ [illegible] ರೀತಿಯು ಪರಿಗಣಿಸಿ ಇರಬೇಕು

ಅಧಿಕಾರಿಗಳ ಸಭೆಯಲ್ಲಿ ಮುಖ್ಯಮಂತ್ರಿಯವರ ಸೂಚನೆ

ಬೆಂಗಳೂರು ೨೦

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಮೊನ್ನೆ ಅಧಿಕಾರಿಗಳ ಸಭೆಯಲ್ಲಿ ಮಾತನಾಡಿ [illegible] ಎಲ್ಲರ ಬಗ್ಗೆ [illegible] ಆಡಳಿತ ನಡೆಯುತ್ತಿರುವುದೆಂದು ತಿಳಿಸಿದರು. ಅಧಿಕಾರಿಗಳು ರೆಡ್ ಟೇಪಿಸಂ ಹೋಗಲಾಡಿಸಬೇಕೆಂದೂ, ಶ್ರೀ ಹನುಮಂತಯ್ಯನವರು ತಿಳಿಸಿರುವಂತೆ ಉತ್ತಮ ಆಡಳಿತದ ಮುಖ್ಯಲಕ್ಷಣವು ಸಮಾನತೆ ಸೇವೆಯೆಂದೂ ಸೇವಕರು ಪ್ರತಿಯೊಬ್ಬರನ್ನೂ ಸಮಾನರಾಗಿ ಕಾಣಬೇಕೆಂದೂ [illegible] ಅಧಿಕಾರಿಗಳು ವಿನಯದಿಂದ ನಡೆದುಕೊಳ್ಳಬೇಕೆಂದೂ ಎಂತಹ ಉನ್ನತ ಸ್ಥಾನದಲ್ಲಿ ಇರುವವರೇ ಆಗಲಿ ಯಾವ ಮನುಷ್ಯನ ಸ್ವಾಭಿಮಾನಕ್ಕೂ ಕುಂದು ಬಾರದಂತೆ ನಡೆಯಬೇಕೆಂದೂ ಅವರು ಸೂಚಿಸಿದರು.

ಭಂಡಾರಕೇರಿ ಸ್ವಾಮಿಗಳವರ ಚಾತುರ್ಮಾಸ್ಯ ಸಂಕಲ್ಪ

[illegible] ಶ್ರೀ ಭಂಡಾರಕೇರಿ ಮಠದ ಶ್ರೀ ವಿದ್ಯಾಮಾನ್ಯ ತೀರ್ಥ ಶ್ರೀಪಾದಂಗಳವರು [illegible] [illegible] ಚಾತುರ್ಮಾಸ್ಯ ಸಂಕಲ್ಪ [illegible] [illegible]

ಫೋಟೋಗ್ರಾಫರುಗಳ ಸಂಘದ ಸಭೆ

[illegible] ಫೋಟೋಗ್ರಾಫರ್ ಗಳ ಸಂಘದ [illegible] ಸದಸ್ಯರ ಸಭೆಯು [illegible] ಅಧಿಕಾರ ವರ್ಗವನ್ನು ಚುನಾಯಿಸಲಾಯಿತು. [illegible] ಶ್ರೀ ಎಸ್. ಬಿ. ಗೋಪಾಲಕೃಷ್ಣ [illegible] ಶ್ರೀ ಎ. ವಿ. [illegible] ಶ್ರೀ ಎಸ್. ಎನ್. [illegible] ಆರಿಸಲ್ಪಟ್ಟಿದ್ದಾರೆ.

ಜನಸಂಘದ ಅಧಿಕಾರ ವರ್ಗ

ಜನಸಂಘದ [illegible] ಅಧಿಕಾರ ವರ್ಗಕ್ಕೆ ಆರಿಸಲಾಯಿತು. ಶ್ರೀ ಸಿ. ವಿ. ಗೋಪಾಲರಾವ್ ಅಧ್ಯಕ್ಷರು, ಡಾ|| ವಿ. ಜಿ. [illegible] ಉಪಾಧ್ಯಕ್ಷರು, ಶ್ರೀ ಎನ್. [illegible] ಕಾರ್ಯದರ್ಶಿ, ಶ್ರೀ [illegible] ಮತ್ತು ಶ್ರೀ [illegible] ಎಸ್. [illegible], ಬಿ. ಎಸ್. ನಾಗರಾಜರಾವ್, ಎಸ್. ಕೆ. ರಾಜ [illegible] ಮತ್ತು ಎ. ವಿ. ಎಲ್. [illegible] ಸದಸ್ಯರು.

ಸತ್ಕಾರ ಕೂಟ

ಮೈಸೂರು [illegible] ಕಾಲೇಜಿನಲ್ಲಿ [illegible] ಶ್ರೀ ಆರ್. [illegible] ಕೇಂದ್ರ ಸರ್ಕಾರದ [illegible] ಅವರ ಗೌರವಾರ್ಥ [illegible] ಬಿ. ಎಸ್. ಸಿ. ವಿದ್ಯಾರ್ಥಿಗಳು [illegible] ಪ್ರೊಫೆಸರ್ ಎಸ್. ವೆಂಕಟರಾಯರ ಅಧ್ಯಕ್ಷತೆಯಲ್ಲಿ [illegible] ವಿದ್ಯಾರ್ಥಿಗಳು [illegible] ಶ್ರೀ [illegible] ಹಿತನುಡಿ [illegible].

ಆಕಾಶವಾಣಿಯಲ್ಲಿ ಮಕ್ಕಳ ನಾಟಕ

[illegible] ಆಕಾಶವಾಣಿಯಲ್ಲಿ [illegible] ಮಕ್ಕಳ [illegible] ಕಾರ್ಯಕ್ರಮದಲ್ಲಿ [illegible] ಶ್ರೀ [illegible] ಬರೆದ [illegible] ಪ್ರಸಾರವಾಗಲಿದೆ.

ಸ್ವಾತಂತ್ರ್ಯ ದಿನೋತ್ಸವ ಸಮಾರಂಭಗಳು

ಮೈಸೂರು ೨೦

[illegible] ಪ್ರಯುಕ್ತ ಕಳೆದ [illegible] ಸ್ವಾತಂತ್ರ್ಯ ದಿನೋತ್ಸವವು ವಿವಿಧ ಕಡೆಗಳಲ್ಲಿ ಆಚರಿಸಲ್ಪಟ್ಟಿತು. ಮೈಸೂರು ಸಬ್ ಜೈಲಿನಲ್ಲಿ [illegible] ಶ್ರೀ ಕೆ. ಎಸ್. ಏಕಲಿಂಗಯ್ಯನವರು [illegible] ಧ್ವಜಾರೋಹಣ ಮಾಡಿದರು. [illegible] ಶ್ರೀ ಎಲ್. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಸಭೆ ಜರುಗಿತು. [illegible] ಪ್ರಾರ್ಥನೆ ಮತ್ತು ಜೈಲು ಸೂಪರಿಂಟೆಂಡೆಂಟರಾದ ಶ್ರೀ ಸಿ. ಎಸ್. ಮಲ್ಲಯ್ಯನವರಿಂದ ಸ್ವಾಗತ ಭಾಷಣಗಳ ನಂತರ [illegible] ಶ್ರೀ [illegible] ಉತ್ಸವವು ನಡೆಯಿತು.

[illegible] ಶ್ರೀ [illegible] ಅಧ್ಯಕ್ಷತೆಯಲ್ಲೂ, [illegible] ಮಂದಿರದಲ್ಲಿ ಶ್ರೀ [illegible] ಅಧ್ಯಕ್ಷತೆಯಲ್ಲೂ, [illegible] ಸಮಾಜ ಶಿಕ್ಷಣ ಕೇಂದ್ರದಲ್ಲಿ ಪೌರಸಭಾ ಸದಸ್ಯ ಶ್ರೀ [illegible] ಅಧ್ಯಕ್ಷತೆಯಲ್ಲೂ, [illegible] ಶ್ರೀ [illegible] ಅಧ್ಯಕ್ಷತೆಯಲ್ಲೂ, [illegible] ಶ್ರೀ [illegible] ಅಧ್ಯಕ್ಷತೆಯಲ್ಲೂ ಉತ್ಸವಗಳು ನಡೆದುವು.

[illegible] ಅಗ್ರಹಾರದಲ್ಲಿ [illegible] ಸದಸ್ಯ ಶ್ರೀ [illegible] ಧ್ವಜಾರೋಹಣ ಮಾಡಿದರು. ಶ್ರೀ ಆರ್. [illegible] ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಶ್ರೀ [illegible] ಭಾಷಣ ಮಾಡಿದರು. ಶ್ರೀ ಎಸ್. ಎಸ್. [illegible] [illegible] ನಡೆಯಿತು.

[illegible] ಪೌರಸಭಾ [illegible] ಶ್ರೀ ಜಿ. ಸಿ. [illegible] ಅಧ್ಯಕ್ಷತೆ ವಹಿಸಿದ್ದರು. [illegible] ಶ್ರೀ [illegible] ಅಧ್ಯಕ್ಷರು ಭಾಷಣ ಮಾಡಿದರು. [illegible] ಮತ್ತು ಭಾರತ ಗೀತೆಗಳು ನಡೆದುವು.

[illegible] ಭಾರತ ಸೇವಾ ದಳದ [illegible] ಪೌರಸಭಾ [illegible] ಶ್ರೀ ವಿ. [illegible] ಧ್ವಜಾರೋಹಣ ಮಾಡಿದರು. ಸಮಾರಂಭದ [illegible] ಶ್ರೀ ಆರ್. [illegible] ಪೌರಸಭಾ ಸದಸ್ಯ ಶ್ರೀ ಬಿ. ಎಂ. [illegible] ಮತ್ತು ಆರ್. ಎಸ್. [illegible] ಭಾಷಣ ಮಾಡಿದರು. ಶ್ರೀ [illegible] ವಂದನಾರ್ಪಣೆ ಮಾಡಿದರು.

ಮೈಸೂರು ಪೇಟೆ ಧಾರಣೆ

	ರೂ ಯಿಂದ			ರೂ ವರೆಗೆ		
ಭತ್ತ ಬಂಗಾರ ಮತ್ತು						
ಶ್ರೀಯಂಮಡಶಟ್ಕಾರುಸಣ್ಣ	೪೬	೧೪	೦	೪೭	೦	೦
ದಪ್ಪಹಾರಿ	೪೫	೨	೦	೪೫	೮	೦
ಕಡ್ಲೆ	೪೨	೦	೦	೪೨	೧೨	೦
ಕಾಯಿ	೨೮	೬	೦			
ರಾಗಿ	೪೦	೧೪	೦	೪೧	೪	೦
ಕಡಲೆಕಾಯಿ	೧೪	೮	೦	೨೪	೦	೦
ಎಳ್ಳು	೬೦	೮	೦	೬೬	೨	೦
ಹುರುಳಿ	೪೨	೧೪	೦	೪೩	೦	೦
ಹೆಸರು	೫೫	೪	೦	೫೮	೦	೦
ಹಲಸಂದೆ	೪೨	೨	೦	೧೯	೧೮	೨
ಉದ್ದು	೬೫	೧೪	೦	೬೬	೦	೦
ಹುಣಸೆಹಣ್ಣು	೫	೦	೦			
ಮೆಣಸಿನಕಾಯಿ	೧೬	೦	೦	೨೬	೧೪	೦
ಬೆಲ್ಲ	೪	೬	೦			
[illegible] ೧೦೦೦	೧೩೪	೬	೦	೩೩೦	೦	೦

Edited Printed and Published by A. R. Nagarajan at Sadhvi Press D. S. [illegible] Road, Mysore

ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಎಸ್. ಚನ್ನಯ್ಯನವರ ಹೇಳಿಕೆ

[illegible] ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. [illegible] ಶ್ರೀ [illegible] ಹನುಮಂತಯ್ಯನವರ [illegible] [illegible] ಕಲವು ಪತ್ರಿಕೆಗಳು [illegible] ನನ್ನ ಗಮನಕ್ಕೆ ಬಂದಿರುತ್ತೆ. [illegible] ಸರಿಯಲ್ಲವೆಂದು [illegible] ಪತ್ರಿಕೆಯು ಪ್ರಕಟಿಸಿದೆ.

[illegible] ನನಗಿರುವ ಗೌರವ ಮತ್ತು ಅವರ ಪ್ರತಿಭೆ [illegible] ಅವರು [illegible] ತಪ್ಪುಗಳಿಗೆ ಬೇಗ [illegible] ಹೊಂದಿಕೊಳ್ಳುತ್ತಾರೆಂದು ಹೇಳಿದೆನೇ [illegible] ಅವರು [illegible] ವಿಚಾರವಾಗಿ [illegible] ಯಾವ ವಿಷಯವೂ ನನ್ನ ಭಾಷಣದಲ್ಲಿ ಬರಲಿಲ್ಲ.

[illegible] ಭಾಷಣ ಮಾಡಲು ಕಾರಣ [illegible] ಆಗಬೇಕಾದ [illegible] ತಪ್ಪು [illegible] ಸರಿಪಡಿಸಬೇಕೆಂಬ [illegible] [illegible]

ಮನೆ ಭೋಗ್ಯಕ್ಕೆ ಬೇಕಾಗಿದೆ

[illegible] ಸ್ವಂತ ಮನೆ [illegible] [illegible] ಬೇಕಾಗಿದೆ [illegible] [illegible]

[illegible] ನೆ ಬಿಲ್ಡಿಂಗ್ಸ್. (ಮೇಲೆ ಮಹಡಿ) [illegible] ಮೈಸೂರು

ಸುದ್ದಿ ಸರಿಯಲ್ಲ

ಪಕ್ಷದ [illegible] ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿ ಶ್ರೀ ಕೆ. ರಾಮಣ್ಣನವರು ಈ ರೀತಿ ಹೇಳಿಕೆಯನ್ನಿತ್ತಿರುತ್ತಾರೆ:

ಕಳೆದ [illegible] ಆಗಸ್ಟ್ [illegible] ನಮ್ಮ ಸಂಘದ ಸ್ವಾತಂತ್ರ್ಯ ದಿನೋತ್ಸವ ಸಮಾರಂಭವು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರ [illegible] ಯಲ್ಲಿ ನಡೆದಿತ್ತು. ಆ ಸಂದರ್ಭದಲ್ಲಿ ಶ್ರೀ ಎಸ್. ಚನ್ನಯ್ಯನವರು ಮಾಡಿದ [illegible] ಈಗಾಗಲೇ [illegible] ಗಳಲ್ಲಿ ಹೊರಬಿದ್ದಿದೆ. ಈ ಭಾಷಣದ ಬಗ್ಗೆ ಈಗಾಗಲೇ ವಿವಿಧ ರೀತಿಯ ಟೀಕೆಟಿಪ್ಪಣಿಗಳು ಹೊರಬಿದ್ದಿವೆ. ಅವರ ಶ್ರೀ ಚನ್ನಯ್ಯನವರು ಶ್ರೀ ಹನುಮಂತಯ್ಯನವರ ವಿಷಯವಾಗಿ ಸಭೆಯಲ್ಲಿ ಮಾತನಾಡಿದರೂ, ಕೆಲವು ಪತ್ರಿಕೆಗಳಲ್ಲಿ ವರದಿಯಾಗಿರುವಂತೆ ಶ್ರೀ ಕೆಂಗಲ್ಲರ ಬಗ್ಗೆ ಶ್ರೀಮನ್ನಾರಾಯಣರು ಹೇಳಿದರೆಂದು ಪ್ರಕಟವಾಗಿರುವ ಸುದ್ದಿ ಸರಿಯಲ್ಲ. ಕಳೆದ [illegible] ದಿನಗಳಿಂದ ಈ ವಿಷಯವಾಗಿ ಉದ್ಭವಿಸಿರುವ ಪರಿಸ್ಥಿತಿಯನ್ನು ಮನಗಂಡು ನಾನು ಜನತೆಗೆ ಸತ್ಯಸಂಗತಿಯನ್ನು ತಿಳಿಸಲು ಈ ಹೇಳಿಕೆಯನ್ನೀಯುವುದು ಅನಿವಾರ್ಯವಾಗಿದೆ.

ಶನಿ ಮಹಾತ್ಮೆ

[illegible] ಮುಂದೆ [illegible] ರಸ್ತೆಯಲ್ಲಿರುವ ಮಹಾರಾಷ್ಟ್ರ ಶ್ರೀ ರಾಮಮಂದಿರದಲ್ಲಿ ನಾಳೆ ಶ್ರಾವಣ ಶನಿವಾರದ ಪ್ರಯುಕ್ತ [illegible] ಗಂಟೆಗೆ ಶ್ರೀ ತಲಕಾಡು ನಾರಾಯಣರಿಂದ ಶನಿ ಮಹಾತ್ಮೆಯ ವಾಚನ ಮತ್ತು ಶ್ರೀ ಹಿರಣ್ಣಯ್ಯನವರಿಂದ ವ್ಯಾಖ್ಯಾನವೂ, [illegible] ಅರ್ಚನೆಯೂ ಏರ್ಪಾಡಾಗಿದೆ.

ಮಾಸಿಗೆ ದಿಂಬು

[illegible] ತಯಾರು ಮಾಡುತ್ತೇವೆ
ಬಾಪೂಸಾಲ್ ಕಂಪನಿ,
[illegible] ಮೈಸೂರು

"ಮನುಷ್ಯನು ತನ್ನ ಭವಿಷ್ಯವನ್ನು ತಿಳಿಯುವ ಸಲುವಾಗಿ ದೇವರು ಮಾನವರ ಕೈಗಳ ಮೇಲೆ ರೇಖೆಗಳನ್ನು ನಿರ್ಮಿಸಿದ್ದಾನೆ" — ಬೈಬಲ್

ನಿಮ್ಮ ಕೈಯೇ ನಿಮ್ಮ ಭವಿಷ್ಯ ಮತ್ತು ನಿಮ್ಮ ಅದೃಷ್ಟ

ಪ್ರೊಫೆಸರ್ ಮಾರ್ವೆಲ್

ಎಫ್. ಆರ್. ಎ. ಎಸ್.

ಇಂದು ದೇಶದಲ್ಲೆಲ್ಲಾ ಕಾಂಗ್ರೆಸ್ ಸಂಸ್ಥೆಯೊಳಗೆ ಇರುವ ಸ್ವಾರ್ಥ ಮತ್ತು ಅಂತಃ ಕಲಹದಿಂದ ನಾಡಿಗೆ ಅಪಾಯವುಂಟಾಗುವ ಕಾರಣವುಗಳನ್ನು ನಿವಾರಿಸಲು ತಾವು ಶ್ರಮಿಸುವುದಾಗಿ ಸಂಸ್ಥಾನದ ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರು ನೆನ್ನೆ ತಿಳಿಸಿ ಅದಕ್ಕಾಗಿ ಜನರ ಆಶೀರ್ವಾದವನ್ನು ಕೋರಿದರು ದಕ್ಷಿಣ ಕನ್ನಡ ಜಿಲ್ಲಾ ವಿದ್ಯಾರ್ಥಿಗಳ ಸಂಘದ ಆರಂಭ ಭಾಷಣವನ್ನು ಟೌನ್‌ಹಾಲಿನಲ್ಲಿ ಮಾಡುತ್ತಾ ಅವರು ಸಂಸ್ಥಾನದ ರಾಜಕೀಯದ ಬಗ್ಗೆ ದೀರ್ಘವಾಗಿ ಮಾತನಾಡಿದರು ಭವನವು ಕಿಕ್ಕಿರಿದು ತುಂಬಿದ್ದಿತು ತಮ್ಮ ಅಧಿಕಾರದ ಕಾಲಕ್ಕಿಂತಲೂ ಹೆಚ್ಚಿನ ಸಂಖ್ಯೆ ಹೃದಯದ ಈ ಸ್ವಾಗತಕ್ಕೆ ಶ್ರೀ ಹನುಮಂತಯ್ಯನವರು ಮೆಚ್ಚಿಗೆಯನ್ನು ಸೂಚಿಸಿ ತಾವು ಅಧಿಕಾರ ಕಳೆದುಕೊಂಡರೂ ತಮಗೆ ಯಾವ ದುಃಖ, ಕಿನ್ನಿಕೆ ಮತ್ತು ಪಶ್ಚಾತ್ತಾಪಗಳಿಲ್ಲವೆಂದು ಹೇಳಿದರು

"ಹದಗೆಡುತ್ತಿರುವ ರಾಜಕೀಯದ ವಾಯುವನ್ನು ಕೆರೆದು ತಾತ್ಕಾಲಿಕ ತೃಪ್ತಿ ದೊರಕಬಹುದಾದರೂ ಅದನ್ನು ಶಿಕ್ಷೆ ಮತ್ತಷ್ಟು ಗಾಢ ಮಾಡಬಾರದೆಂದು " ತಾವು ನಿರ್ಧರಿಸಿರುವುದಾಗಿ ಅವರು ನುಡಿದರು

ಕಾಲೇಜು ವಿದ್ಯಾರ್ಥಿಗಳ ವಿಶ್ವಾಸ ಸೂಚನೆ ಮುಂದುವರಿದು ಶ್ರೀ ಹನುಮಂತಯ್ಯನವರು, ರಾಜಕೀಯದ ಬಗ್ಗೆ ತಮಗೆ ಕಳುಹಿಸಲಾಗಿದ್ದ ಹಲವು ಪ್ರಶ್ನೆಗಳನ್ನು ಓದಿ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳು ತಮ್ಮಲ್ಲಿ ಪೂರ್ಣ ವಿಶ್ವಾಸವನ್ನು ಸೂಚಿಸಿರುವುದಾಗಿಯೂ, ಮುಂದೆ ತಾವೇ ಮೈಸೂರಿನ ನಾಯಕರಾಗುವ ಕಾಲವನ್ನು ನಿರೀಕ್ಷಿಸುತ್ತಿರುವುದಾಗಿಯೂ ಒರೆದಿರುವ ಅಂಶವನ್ನು ಹೊರಗೆಡಹಿದರು.

ತಮಗೆ ನೆಹರೂರವರು ಬರೆದಿರುವ ಪತ್ರದಲ್ಲಿ ಹೊರಗಡೆ ಪ್ರಪಂಚದಲ್ಲಿ ಭಾರತದ ಪ್ರತಿಷ್ಠೆ ಹೆಚ್ಚಿದೆಯಾದರೂ ದೇಶದಲ್ಲಿ ಆಗುತ್ತಿರುವ ಒಳಜಗಳಗಳಿಂದ ನಾನು ನೊಂದಿದ್ದೇನೆ" ಎಂದು ಅವರು ತಿಳಿಸಿದ್ದುದಾಗಿ ಹೇಳಿ, ತಿರುವಾಂಕೂರು-ಕೊಚ್ಚಿ, ಆಂಧ್ರ, ಮದ್ರಾಸ್, ಉತ್ತರ ಪ್ರದೇಶ, ಒರಿಸ್ಸಾ, ಪಂಜಾಬುಗಳಲ್ಲಿ ಒಳಜಗಳಗಳು ಹರಡಿವೆಯೆಂದೂ, ಬೊಂಬಾಯಿ ಗುಜರಾತುಗಳಲ್ಲಿಂತೂ ಇದರಿಂದ ರಕ್ತಪಾತವೇ ಆಯಿತೆಂದೂ ನುಡಿದರು ಈ ಜಗಳಗಳು ಕೇಂದ್ರಕ್ಕೂ ಹಬ್ಬಬಹುದು ಇಂದು ನೆಹರೂರವರಿದ್ದಾರೆ, ಅವರೇನು ಸಾವಿರಾರು ವರ್ಷ ಇರಲಾರರು ಕ್ರಮೇಣ ಇಂದು ಪಾಕಿಸ್ತಾನದ ರಾಜಕೀಯಕ್ಕಿಂತಲೂ ಕೀಳಾಗಬಹುದು ಇದೇ ನೆಹರೂರವರ ಭಯವೆಂದು ನುಡಿದರು ಈ ರೀತಿ ಮುಂದುವರಿದರೆ ಇನ್ನು ೧೦-೧೫ ವರ್ಷಗಳಲ್ಲಿ ಭಾರತವು ಅಮೆರಿಕಾ ಅಥವಾ ರಷ್ಯದ ಗುಲಾಮಗಿರಿಗೆ ಸಿಲುಕಬೇಕಾಗುವುದೆಂದು ಅವರು ಹೇಳಿದರು

ಭಾರತದ ವಿವಿಧ ಪ್ರಾಂತಗಳಲ್ಲಿ ನಡೆಯುತ್ತಿರುವ ಒಳಜಗಳಗಳು ದೊಡ್ಡ ಬಚ್ಚಲ ರೊಚ್ಚಿನ ಕಾಲುವೆಗಳಂತೆ ದಿಹಲಿಗೆ ಪ್ರವಹಿಸಿ ಅಲ್ಲಿನ ಸ್ಥಿತಿಗತಿಗಳನ್ನೂ ಕೆಡಿಸಬಹುದೆಂದೂ ಅಭಿಪ್ರಾಯಪಟ್ಟರು

ಕಾಂಗ್ರೆಸ್ಸಿನಲ್ಲಿ ಸ್ವಾರ್ಥ

ಅನಂತರ ಅವರು ಸಂಸ್ಥೆಯ ಸ್ಥಿತಿಗತಿಗಳನ್ನು ಬಹಳ ಕಟುವಾಗಿ ಟೀಕಿಸಿದರು ಗಾಂಧೀಜಿಯವರ ನಾಯಕತ್ವದಿಂದ ಬೆಳೆದು ತ್ಯಾಗದಿಂದ ಬಲಗೊಂಡಿದ್ದ ಕಾಂಗ್ರೆಸ್ ಸಂಸ್ಥೆಯಲ್ಲಿ ಇಂದು ಸತ್ವವು ಕಡಿಮೆಯಾಗಿ ಸ್ವಾರ್ಥ ಬೆಳೆಯುತ್ತಿದೆ ಗಾಂಧಿ ... ಕಾಂಗ್ರೆಸ್ಸಿನಿಂದ ... ಸಭೆ ... ನಡೆಯುತ್ತಿದ್ದ ... ಮತ್ತು ಪೋಲೀಸ ... ಭಾಗ ... ತ್ಯಾಗ ... ಬದಲು ... ನಡೆಯುವ ... ಇರುವ ... ಇಲ್ಲ ... ಮಹೋತ್ಸವವನ್ನೂ ಕಾಂಗ್ರೆಸ್ ಸಂಸ್ಥೆಯು ಆಚರಿಸದಿದ್ದುದೂ ಇದಕ್ಕೆ ಒಂದು ಉದಾಹರಣೆ

ಅವರೆ ಯಾರು ಡಿರೆಕ್ಟರು ಆಗಬೇಕು? ಯಾರಿಗೆ ಚುನಾವಣೆಯ ಟಿಕೆಟ್ ದೊರಕಬೇಕು? ಸಂಸ್ಥೆಯನ್ನು ಹೇಗೆ ವಶಪಡಿಸಿಕೊಳ್ಳಬೇಕು? ಇದೇ ಇಂದು ಕಾಂಗ್ರೆಸ್ಸಿಗರ ಚಿಂತೆಯಾಗಿದೆ ಟಿಕೆಟ್ ಪಡೆಯುವ ಚಟ ಮದ್ಯಪಾನಕ್ಕಿಂತಲೂ ಮಿಗಿಲು (ಇದಕ್ಕೆ ನನ್ನದೂ ತಪ್ಪಿರಬಹುದು)-ಎಂದು ನುಡಿದರು

ಓಟೆಂಬ ನೋಣವನ್ನು ಕಾಂಗ್ರೆಸ್ಸಿನ ಕಪ್ಪೆಯು ಪಡೆಯಲು ಹೊಂಚಿದರೆ ಜನತೆಯು ಹಾವಿನ ಹಾಗೆ ನುಂಗುತ್ತಾರೆ ಆದರೆ ಇವರೆಲ್ಲರಿಗೂ ಮೀರಿದ ದೈವಸಂಕಲ್ಪವೆಂಬ ಗರುಡ ಪಕ್ಷಿಯು ಮೇಲಿನಿಂದ ಇವರನ್ನು ಗಮನಿಸುತ್ತಿದೆಯೆಂಬುದಾಗಿ ಅವರು ಹೇಳಿ, ನಮ್ಮಲ್ಲಿ ಧರ್ಮಕಮ್ಮಿಯಾಗಿ ಸಾವಿರ ವರ್ಷ ಗುಲಾಮರಾದ ನಾವು ಗಾಂಧಿಯವರಿಂದ ಮುಕ್ತರಾದುದಾಗಿಯೂ, ದೇಶದ ಇಂದಿನ ಪರಿಸ್ಥಿತಿಯು ಪುನಃ ಅವನತಿಗೆಡೆಯಾಗುವಂತಿದೆಯೆಂದೂ ಹೇಳಿದರು

ಇಂದಿನವರೆಲ್ಲರೂ ಸಣ್ಣ ಮಂತ್ರಿಗಳೇ

ಈಗಿನ ಮಂತ್ರಿಮಂಡಲದ ಒಕ್ಕೆ ತಮ್ಮ ನಿಲುವನ್ನು ವಿವರಿಸಿ ತಾವು ಪುನಃ ಮುಖ್ಯ ಮಂತ್ರಿಯಾಗುವುದು ತಮಗೆ ಮುಖ್ಯವಲ್ಲವೆಂದು ಹೇಳಿದರು ಈಗಿನವರೆಲ್ಲರೂ 'ಸಣ್ಣ ಮಂತ್ರಿಗಳು' ಅಲ್ಲದೆ ಮಂತ್ರಿಮಂಡಲವು!! ತಿಂಗಳ ಹಸುಗೂಸು ಅದರ ಮೇಲೆ ಕೈ ಎತ್ತುವುದು ಸರಿಯಲ್ಲ ನನ್ನ ಕಾರ್ಯಗಳಿಗೆ ಒಪ್ಪಿತವ ಬೆಂಬಲವನ್ನು ಈ ಪಟಿವರೆಲ್ಲರೂ ಇತ್ತಿದ್ದರು ಅಂತಹವರೂ ಸಹ ಕೊನೆಯಲ್ಲಿ ವಿರುದ್ಧವಾದರು ಅವರ ನಡೆದ ರೀತಿಯ ಬಗ್ಗೆ ನಾನು ಟೀಕಿಸುವುದಿಲ್ಲ ತಪ್ಪು ಅವರದೋ ನನ್ನದೋ ಮುಂದೆ ಗೊತ್ತಾಗುತ್ತದೆ ಎಂಬುದಾಗಿ ತಿಳಿಸಿದರು

ರಾಜಕೀಯದಲ್ಲಿ ಯಾರು ಯಾರನ್ನಾದರೂ ಮೋಸ ಮಾಡಬಹುದು, ಕೈ ಬಿಡಬಹುದು-ಎಂದರೆ ಯಾವ ಕೆಲಸಕ್ಕಾನೆ ಸಾಧ್ಯ? ಎಲ್ಲಕ್ಕೂ ಆಧಾರವಾದ ನಂಬಿಕೆಯೇ ಶೂನ್ಯವಾದರೆ ಯಾವ ಸಂಸ್ಥೆ, ಯಾವ ದೇಶ ಉಳಿಯುತ್ತದೆ? ಎಂದು ಪ್ರಶ್ನಿಸಿದರು

ಶುದ್ಧೀಕರಣ ಅಥವಾ ನಿವೃತ್ತಿ

ತಾವು ಯೋಗಮಾತ್ರಕ್ಕೆ ರಾಜಕೀಯದಿಂದ ನಿವೃತ್ತರಾಗಲಿಲ್ಲವೆಂದೂ ದ್ವೇಷ, ಮೋಸ ಮತ್ತು ಸ್ವಾರ್ಥಗಳ ಬಲೆಯಿಂದ ದೇಶವನ್ನು ಬಿಡಿಸಲು ಯತ್ನಿಸಬೇಕೆಂದೂ, ಇದಕ್ಕಾಗಿ ಪ್ರತಿಪಕ್ಷ ಕಟ್ಟಿ ಹೋರಾಡದೆ ಶತ್ರುವನ್ನು ಒಲಿಸಿ ಅವನ ದುರ್ಗುಣಗಳನ್ನು ಹೋಗಲಾಡಿಸುವ ಗಾಂಧಿಯವರ ಮಾರ್ಗದಲ್ಲಿ ಶ್ರಮಿಸುವುದಾಗಿಯೂ, ತಮ್ಮ ಯತ್ನವು ಸಂಧಿತವಾಗದಿದ್ದರೆ ತಮಗೆ ಯಾವ ಸ್ಥಾನವೂ ಬೇಡವೆಂದೂ ನುಡಿದರು ... ಶುದ್ಧ ಮನಸ್ಸಿನಿಂದ ಮಾಡಿದ್ದಲ್ಲಿ ಸ್ವಾರ್ಥಕ ವಿದ್ಯಾದಾನಗಳು ಫಲಿಸಲೆಂದೂ, ಇಲ್ಲದಿದ್ದರೆ ತಾವೂ ವಿಶ್ವೇಶ್ವರಯ್ಯ ಮತ್ತು ... ರಾಜಕೀಯದಿಂದ ನಿವೃತ್ತರಾಗುವುದಾಗಿ ಹೇಳಿದರು ಸಂಸ್ಕೃತಿ ಪ್ರಸಾರವು ಸರಿಯಾಗಿ ನಡೆಯದಿದ್ದರೆ ಅದನ್ನು ರದ್ದು ಮಾಡದೆ ಸರಿಯಾಗಿ ನಡೆಸಬೇಕಾಗಿತ್ತು-ಎಂದರು

ಯಾರ ಕೈ ಗೊಂಬೆಯೂ ಆಗಲಿಚ್ಛಿಸಿಲ್ಲ

ತಾವು ಮುಂದೆ ಯಾವ ಗುಂಪಿನ ಕೈಯಲ್ಲೂ ಸ್ವಜನ ಪಕ್ಷಪಾತದ ಗೊಂಬೆಯಾಗಲೀ ಆಗಲು ಇಚ್ಛಿಸುವುದಿಲ್ಲವೆಂದೂ ತತ್ವ ಸಾಧನೆಗೆ ಅನುಗುಣವಾಗಿ ಪರಿಶುದ್ಧ ಮನಸ್ಸಿನಿಂದ ನಡೆಯುವ ಶಕ್ತಿಯನ್ನು ದೇವರು ತಮಗೆ ಅನುಗ್ರಹಿಸಲೆಂದೂ ಪ್ರಾರ್ಥಿಸಿದರು

ಉಪಕಾರ ಮಾಡುವವರಿಗೆ ಅಪಕಾರ ಮಾಡಿದರೂ ಸರಿ, ನನಗೊಂದು ಟಿಕೆಟ್ ಸಿಕ್ಕಿದರೆ ಸಾಕು" ಎನ್ನುವ ಆಲೋಚನೆ ಬಿಟ್ಟು, ಕಾಂಗ್ರೆಸ್ಸಿಗರೂ ಮತ್ತು ಇತರರೂ ವರ್ತಿಸುವುದು ರಾಜಕೀಯ ಶುದ್ಧಿಗೆ ಅಗತ್ಯ ಗಾಂಧೀಜಿಯವರು ನಮಗೆ ಉಪದೇಶಿಸಿರುವ 'ಕರ್ಮಣ್ಯೇ ವಾಧಿಕಾರಸ್ತೇ'-ತತ್ವವನ್ನು ಸದಾ ಜಪಿಸುತ್ತಿದ್ದರೆ ನಮ್ಮ ಗೃಹಕೃತ್ಯ ಮತ್ತು ರಾಜಕೀಯವಲ್ಲ ಒಳ್ಳೆಯದಾಗುತ್ತದೆ-ಎಂದು ಹೇಳಿದರು

ಸಮಾರಂಭದ ಅಧ್ಯಕ್ಷತೆಯನ್ನು ಪ್ರೊ|| ಕೆ ನಾರಾಯಣರಾಯರು ವಹಿಸಿದ್ದರು ಪ್ರಾರಂಭದಲ್ಲಿ ಶ್ರೀಮತಿ ನಾಗರತ್ನರವರ ಪ್ರಾರ್ಥನೆ, ಮತ್ತು ಶ್ರೀ ಭಟ್‌ರವರಿಂದ ಸ್ವಾಗತವ ನಂತರ ಶ್ರೀಮತಿ ವಿಜಯಲಕ್ಷ್ಮಿ ಮತ್ತು ವೃಂದದವರಿಂದಲೂ, ರಂಜ್ ಮತ್ತು ಮಂಡಲಿಯವರಿಂದಲೂ ಗಾಯನಗಳಾದುವು

ಶ್ರೀ ರಂಜನ್‌ರವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ಸಭೆ ನಡೆಯುತ್ತಿದ್ದಾಗ ಹೊರಗಡೆ ಆರ್. ವಿ. ಕಾಲೇಜು ವಿದ್ಯಾರ್ಥಿಗಳು ಘೋಷಣೆಗಳನ್ನು ಕೂಗುತ್ತಾ ಪ್ರದರ್ಶನ ನಡೆಸಿದರು

ನಾಳೆ ಕಾಲೇಜಿನಲ್ಲಿ ಹನುಮಂತಯ್ಯನವರ ಭಾಷಣ

ವಿಶ್ವವಿದ್ಯಾಲಯದ ತತ್ವ ಶಾಸ್ತ್ರ ಮತ್ತು ಅರ್ಥಶಾಸ್ತ್ರ ಸಂಘಗಳ ಆಶ್ರಯದಲ್ಲಿ ಶ್ರೀ ಕೆ. ಹನುಮಂತಯ್ಯನವರು ನಾಳೆ ಸಂಜೆ ೫|| ಗಂಟೆಗೆ ಮಹಾರಾಜಾ ಕಾಲೇಜಿನ ವಿದ್ಯಾರ್ಥಿಗಳನ್ನುದ್ದೇಶಿಸಿ "ಪಂಚ ವಾರ್ಷಿಕ ಯೋಜನೆಗಳ ತತ್ವ" ಎಂಬ ವಿಷಯವಾಗಿ ಭಾಷಣ ಮಾಡುವರು

ಹೈದರಾಬಾದು ಬಳಿ ಭಾರಿ ರೈಲು ಅಪಘಾತ

೧೧೨ ಜನರ ಮರಣ, ೨ ಗಾಡಿಗಳ ನಾಶ

ಸೇತುವೆ ಕುಸಿದು ಗಾಡಿಗಳು ಪ್ರವಾಹದಲ್ಲಿ ಮುಳುಗಿದುವು

ಹೈದರಾಬಾದಿಗೆ ೬೦ ಮೈಲಿ ದೂರವಿರುವ ಮಹಬೂಬ್‌ನಗರ ಮತ್ತು ಜಡಚೆರ್ಲ ಎಂಬ ನಿಲ್ದಾಣಗಳ ನಡುವೆ ಮೊನ್ನೆ ಮಧ್ಯ ರಾತ್ರಿಯ ನಂತರ ಯೆನಗನಿಕುಂಟ ಎಂಬ ಸಣ್ಣ ನದಿಯ ಸೇತುವೆಯನ್ನು ದಾಟುತ್ತಿದ್ದ ಪ್ರಯಾಣಿಕರ ರೈಲಿಗೆ ಭಾರಿ ಅಪಘಾತವಾಗಿ ೧೧೨ ಜನರು ಮಡಿದು ೧೪ ಮಂದಿಗೆ ಗಾಯವಾಗಿರುವುದಾಗಿ ವರದಿಯಾಗಿದೆ ೪೦ ಅಡಿ ಉದ್ದದ ಸೇತುವೆಯು ಕುಸಿದು, ೧೫ ಅಡಿಯಷ್ಟು ಪ್ರವಾಹದ ನೀರು ಹರಿಯುತ್ತಿದ್ದ ನದಿಯಲ್ಲಿ ಜನರು ೪ ಮೈಲಿ ವರೆಗೂ ತೇಲಿಹೋದರೆಂದು ಹೇಳಲಾಗಿದೆ ರೈಲು ಇಂಜನ್ನು ಸೇತುವೆಯನ್ನು ದಾಟಿದಾಗ ಸೇತುವೆ ಕುಸಿಯಲಾಗಿ ಮೂರನೇ ತರಗತಿಯ ಎರಡು ಗಾಡಿಗಳು ಇತರ ಗಾಡಿಗಳಿಂದ ಕಿತ್ತು ಕೆಳಗೆ ಬಿದ್ದುವು ಮತ್ತೊಂದರ ಮುಂಭಾಗವು ಪುಡಿಯಾಗಿ, ಒಂದು ಭಾಗದ ದಡದ ಮೇಲೆ ಅಪಾಯಕರ ಸನ್ನಿವೇಶದಲ್ಲಿ ನಿಂತಿತ್ತು ಉಳಿದ ಆರು ಗಾಡಿಗಳು (ಪ್ರತ್ಯೇಕ ಬೋಗಿಗಳಾಗಿ ಬಿಟ್ಟಿದ್ದ ಎರಡು ಇದ್ದುವು) ಸುರಕ್ಷಿತವಾಗಿ ನಿಂತಿದ್ದುವು

೨೮ ಹೆಣಗಳನ್ನು ಗುರ್ತಿಸಲಾಯಿತು ೭೫ ಜನಗಳನ್ನು ಹೈದರಾಬಾದಿಗೆ ರವಾನಿಸಲಾಯಿತು ಕೆಳಗೆ ಉರುಳಿದ ಮೊದಲನೆ ಗಾಡಿಯಂತೂ ಪುಡಿಪುಡಿಯಾಯಿತು ಅನೇಕ ಶರೀರಗಳು ಒಂದಕ್ಕೊಂದು ಅಂಟಿಕೊಂಡು ಗುರ್ತಿಸಲಸಾಧ್ಯವಾಗಿತ್ತು

ಚಾಮರಾಜನಗರದ ಮುಸ್ಲಿಂ ವಿದ್ಯಾರ್ಥಿಗಳ ಹರತಾಳದ ವಿಚಾರ

ಚಾಮರಾಜನಗರದ ಹೈಸ್ಕೂಲು ಮುಸ್ಲಿಂ ವಿದ್ಯಾರ್ಥಿಗಳು ವ್ಯಾಯಾಮದ ವಿಚಾರವಾಗಿ ಹರತಾಳ ನಡೆಸುತ್ತಿರುವುದು ಸರಿಯಷ್ಟೆ? ವ್ಯಾಯಾಮದ ಅಂಗವಾಗಿ ಸೂರ್ಯ ನಮಸ್ಕಾರವನ್ನು ವ್ಯವಸ್ಥೆ ಮಾಡಲಾಗಿದೆ ಈ ವಿಚಾರವಾಗಿ ವಿದ್ಯಾರ್ಥಿಗಳಿಗೂ, ವ್ಯಾಯಾಮ ಶಿಕ್ಷಕರು ಮತ್ತು ಹೆಡ್ಮಾಸ್ತರರಿಗೂ ಬಿಸಿಬಿಸಿ ಮಾತುಕತೆಗಳಾಗಿ, ಅವರನ್ನು ವಿದ್ಯಾರ್ಥಿಗಳು ಮನಸ್ವೀ ಬೈದಿರುತ್ತಾರೆ ಈ ವಿದ್ಯಾರ್ಥಿಗಳ ವರ್ತನೆಯಿಂದ ಇಲ್ಲಿನ ಜನರಿಗೂ, ಅವರ ಸಹೋದ್ಯೋಗಿಗಳಾದ ಇತರ ವಿದ್ಯಾರ್ಥಿಗಳಿಗೂ ಆಶ್ಚರ್ಯವಾಗಿದೆ ಸೂರ್ಯ ನಮಸ್ಕಾರದ ವ್ಯಾಯಾಮವು ಸರ್ಕಾರಿ ಆಜ್ಞೆ ಪ್ರಕಾರ ನಡೆಯಲ್ಪಡುತ್ತಾಗಿದೆ ಕಳೆದ ಹಲವಾರು ವರ್ಷಗಳಿಂದ ಎಲ್ಲಾ ಕಡೆಗಳಲ್ಲೂ ಇದು ನಡೆಯುತ್ತಿದೆ ಈಗ ವಿದ್ಯಾರ್ಥಿಗಳು ಆ ಬಗ್ಗೆ ಜಾತಿ ನೆಪದ ವಿಚಾರವೆತ್ತಿ ಹರತಾಳವನ್ನು ನಡೆಸುವುದು ಚಿಂತನೀಯ ಅವರುಗಳ ಪೋಷಕರೂ ಮತ್ತು ಮುಖಂಡರೂ ಸೂಕ್ತ ಕ್ರಮ ಕೈಗೊಂಡು ಸದರಿ ವಿದ್ಯಾರ್ಥಿಗಳಿಗೆ ಸರಿಯಾದ ತಿಳುವಳಿಕೆ ಕೊಡಬೇಕೆಂದು ಕೋರಲಾಗಿದೆ

— ನಗರ ನಿವಾಸಿ

ರಾಜಕೀಯದಲ್ಲಿ ವಿದ್ಯಾರ್ಥಿಗಳ ಪಾತ್ರ

ಕಾಲೇಜು ವಿದ್ಯಾರ್ಥಿ ನಿಲಯದಲ್ಲಿ ಹನುಮಂತಯ್ಯನವರ ಭಾಷಣ

ಮೈಸೂರು ೩

ಸಂಸ್ಥಾನದ ಮಾಜಿ ಮುಖ್ಯ ಮಂತ್ರಿ ಶ್ರೀ ಕೆ ಹನುಮಂತಯ್ಯನವರು ನೆನ್ನೆ ಸಂಜೆ ಮಹಾರಾಜ ಕಾಲೇಜು ವಿದ್ಯಾರ್ಥಿ ನಿಲಯದಲ್ಲಿ ಭಾಷಣ ಮಾಡಿ ವಿದ್ಯಾರ್ಥಿಗಳು ರಾಜಕೀಯದಲ್ಲಿ ತೀವ್ರವಾದ ಆಸಕ್ತಿಯನ್ನು ಹೊಂದಿರಬೇಕೆಂದೂ, ಆದರೆ ಅವರಲ್ಲಿ ಕಾರ್ಯತಃ ತೊಡಗಬ ರದೆಂದೂ ಸೂಚಿಸಿದರು ಸಂಸ್ಥಾನದ ಇತ್ತೀಚಿನ ರಾಜಕೀಯ ಬಿಕ್ಕಟ್ಟು ಕಳೆದನಂತರ ಈಗ ಎಷ್ಟೋ ಮಂದಿ ತಮ್ಮ ಪ್ರತಿಕ್ರಿಯೆಯ ಬಗ್ಗೆ ಕುತೂಹಲಿಗಳಾಗಿದ್ದಾರೆಂದೂ, ಅದರೆ ಹಲವರು ಭಾವಿಸಿದಂತೆ ಅಧಿಕಾರ ತ್ಯಾಗದನಂತರ ತಾವು ದುಃಖ ಪಡುತ್ತಿಲ್ಲವೆಂದೂ ತಮ್ಮ ಆಡಳಿತವು ಸರಿಯೋ ತಪ್ಪೋ ಎಂಬುದನ್ನು ಮುಂದೆ ನಿರ್ಧರಿಸಲು ವಿಧಾನ ಸೌಧ, ವಿದ್ಯಾ ಸುಧಾರಣೆಗಳೇ ಮೊದಲಾದ ಕಾರ್ಯಗಳು ಸಾಧಕವಾಗುವುವೆಂದೂ ತಿಳಿಸಿದರು

ಯಾವ ಕಲಸಕ್ಕೂ ಅಂತ್ಯ ಫಲವು ಎಷ್ಟೇ ಒಳ್ಳೆಯದಾದರೂ ಅದರ ಸಾಧನೆಗೆ ಕೆಟ್ಟ ಮಾರ್ಗಗಳನ್ನವಲಂಬಿಸಬಾರದೆಂದು ಅವರು ಹೇಳಿದರು ಇಂದಿನ ರಾಜಕೀಯದ ಬಗ್ಗೆ ತರ್ಮ ಎಂದ ಸೂರಾರು ಪತ್ರಗಳಲ್ಲಿ ತನ್ನನ್ನು ಋಷಿ ಸಿದುದು ಸರಿಯಲ್ಲವೆಂದು ಅಂತರ್ಗತವಾಗಿ ಲಭ್ಯವಾಗಿವೆಯೆಂಬ ಅಂಶವನ್ನು ತಿಳಿಸಿದರು ಹಾಗೆಯೇ ಹಲವರು ತಾವು ಬಹಳ ಗರ್ವ ಪ್ರಿಯಾಗಿದ್ದುದಾಗಿ ಯೂ ಸಹ ಬರೆದಿರುವರೆಂದು ಹೇಳಿದರು

ತಮ್ಮ ಸುತ್ತಲೂ ಜರುಗುತ್ತಿರುವ ವಿಷಯಗಳನ್ನು ತಿಳಿಯದೇ ಕೇವಲ ಪುಸ್ತಕ ಜ್ಞಾನವನ್ನು ಅಭ್ಯಾಸ ಮಾಡುವುದರಿಂದ ಏನುಪಯೋಗ ? ಎಂದು ಅವರು ಪ್ರಶ್ನಿಸಿ ವಿದ್ಯಾರ್ಥಿಗಳು ಭಾಷಣಗಳನ್ನು ಕೇಳಿ,ಪತ್ರಿಕೆಗಳನ್ನು ಓದಿ, ವಿಚಾರಗಳನ್ನು ತಿಳಿದು ಚೆನ್ನಾಗಿ ಮಥನ ಮಾಡಬೇಕೆಂದು ಸೂಚಿಸಿದರು

ಆದರೆ ರಾಜಕೀಯದಲ್ಲಿ ನೇರವಾಗಿ ವಿದ್ಯಾರ್ಥಿಗಳು ಪ್ರವೇಶಿಸಬಾರದೆಂದೂ, ಇದರಿಂದ ದೇಶಕ್ಕೂ ಮತ್ತು ಸಮಾಜಕ್ಕೂ ಅವರು ಸಲ್ಲಿಸಬೇಕಾದ ಸೇವೆಯನ್ನು ಕೈಗೊಳ್ಳಲು ಆಗುವುದಿಲ್ಲವೆಂದೂ ಹೇಳಿ, ತಾವು ಇದೇ ಹಾಸ್ಟಲಿನಲ್ಲಿ ವಿದ್ಯಾರ್ಥಿಯಾಗಿದ್ದಾಗ ರಾಜಕೀಯದಲ್ಲಿದ್ದು, ಅನಂತರ ಅದನ್ನು ತ್ಯಜಿಸಿದ ಅಂಶವನ್ನು ಉದಹರಿಸಿದರು

ಹಾಸ್ಟಲಿನ ವಾರ್ಡನ್ ಶ್ರೀ ಬಿ. ಕಾ. ಸುಬ್ಬರಾಮಾಚಾರ್ಯರು ಸ್ವಾಗತ ಭಾಷಣ ಮಾಡಿದರು ಕಾರ್ಯದರ್ಶಿ ಶ್ರೀ ಎ ಸಿ ಶ್ರೀಕಂಠಯ್ಯನವರು ವಂದನಾರ್ಪಣೆ ಮಾಡಿದರು

ಅಣು ಶಕ್ತಿಯ ಮೇಲೆ ಉಪನ್ಯಾಸ

ಶಾರದಾವಿಲಾಸ ಕಾಲೇಜು ವಿಜ್ಞಾನ ಸಂಘದ ಆಶ್ರಯದಲ್ಲಿ ನಾಳೆ ಮತ್ತು ಒಡೀ ತಾರೀಕು ಸಂಜೆ ೫ ಗಂಟೆಗೆ ಯುವರಾಜಾ ಕಾಲೇಜಿನ ಪ್ರಿನ್ಸಿಪಾಲ್ ಡಾ. ಡಬ್ಲ್ಯು ಎಲ್. ಸಿದ್ದಪ್ಪನವರು "ಅಣು ಶಕ್ತಿ" "ಅಣುಯುಗ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ಹರಿಗೋವಿಂದ ಭವನ

ಇಂದ್ರಭವನದ ಮಾಲೀಕರಾದ ಶ್ರೀ ಬಿ.ವಿ.ಪ್ರಸಾದ್ ಮತ್ತು ಅವರ ಮಕ್ಕಳು ಸಯ್ಯಾಜಿರಾವ್ ರಸ್ತೆಯಲ್ಲಿ ಹೊಸದಾಗಿ ತೆರೆಯಲಿರುವ ತಮ್ಮ "ಹರಿಗೋವಿಂದ ಭವನ" ಎಂಬ ನೂತನ ಉಪಹಾರ ಮಂದಿರದ ಪ್ರವೇಶೋತ್ಸವದ ಸಂಬಂಧವಾಗಿ ನಿನ್ನೆ ನಗರದ ಅನೇಕ ಪ್ರಮುಖರನ್ನು ಬರಮಾಡಿಕೊಂಡು ಒಳ್ಳೆಯ ಭೋಜನದಿಂದ ಸತ್ಕರಿಸಿದರು

ಕೃಷ್ಣ ಜಯಂತಿ ಸಂಗೀತ

ರಾಜಪ್ರಾಸಾದ ಸೀತಾವಿಲಾಸ ಅಗ್ರಹಾರದ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ಕೃಷ್ಣ ಜಯಂತಿ ಪ್ರಯುಕ್ತ ನಾಳೆ ಸಂಜೆ ೭ ಗಂಟೆಗೆ ಬೆಂಗಳೂರಿನ ಶ್ರೀ ಬಿ ಶ್ರೀನಿವಾಸಯ್ಯಂಗಾರ್ ಮತ್ತು ಬಿ ಎಸ್ ರಂಗಸ್ವಾಮಿ ಅಯ್ಯಂಗಾರ್ಯರ ಸಂಗೀತವು ವಿದ್ವಾನ್ ಎಸ್. ವೆಂಕಟಸುಬ್ಬಯ್ಯನವರ ಪಿಟೀಲು ಮತ್ತು ವಿದ್ವಾನ್ ಹೆಚ್ ಪಿ ಸುಬ್ಬಣ್ಣನವರ ಮೃದಂಗದೊಡನೆ ನಡೆಯುವುದು

ವಿಮಾನ ಕಾರ್ಖಾನೆಯಲ್ಲಿ ರೈಲುಗಾಡಿ ತಯಾರಿ

ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಇನ್ನು ಮುಂದೆ ಪೂರ್ಣವಾಗಿ ಲೋಹದಿಂದಲೇ ಕೂಡಿರುವ ಸಮಗ್ರ ರೈಲು ಗಾಡಿಗಳನ್ನು ತಯಾರಿಸಲಾಗುವುದೆಂದು ಗೊತ್ತಾಗಿದೆ. ಈ ಕೆಲಸವನ್ನು ಪಶ್ಚಿಮ ಜರ್ಮನಿಯ ಹೂಸ್‌ಮನ್ ಕಂಪೆನಿಯೊಂದು ನಡೆಸಲಿದೆ ಈಗಾಗಲೇ ಅದರ ಮುಖ್ಯ ಇಂಜನಿಯರು ಬೆಂಗಳೂರಿಗೆ ಬಂದು ಸರ್ವೆ ನಡೆಸುತ್ತಿರುವರೆಂದು ಹೇಳಲಾಗಿದೆ. ಮುಂದಿನ ೫ ವರ್ಷಗಳಲ್ಲಿ ೩೦೦ ಬ್ರಾಡ್‌ಗೇಜ್ ಗಾಡಿಗಳನ್ನು ನಿರ್ಮಿಸಲಾಗುವುದು. ಈಗ ತಯಾರಾಗುತ್ತಿರುವ ಅಂಚನೇ ಮಾದರಿ ಗಾಡಿಗಳ ಸಂಖ್ಯೆಯನ್ನು ಕ್ರಮಕ್ರಮವಾಗಿ ಇಳಿಸಲಾಗುವುದು

ರೈಲಿಗೆ ಸಿಕ್ಕಿ ಹೆಂಗಸು ಮತ್ತು ಮಗುವಿನ ಮರಣ

ಮೊನ್ನೆ ಬೆಂಗಳೂರಿನಿಂದ ರಾಜಧಾನಿಗೆ ಬಂದ ರೈಲೊಂದಕ್ಕೆ ಬಾದಾಮಿಯಣಗುಡ್ಡದ ಬಳಿ ಒಬ್ಬ ಹೆಂಗಸು ಮತ್ತು ಆಕೆಯ ೩ ವರ್ಷದ ಮಗಳು ಸಿಕ್ಕಿ ಮೃತಪಟ್ಟರೆಂದು ಗೊತ್ತಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ಸುಪ್ರಭಾತ ೭.೧೫ ಎಲ್ ಜಿ ವಿಮಲ ಕನ್ನಡ ಗೀತೆ ೭.೪೦ ಗಾನವಿಹಾರ ೮.೧೫ ಚಿತ್ರಾಹಾರ್ ಮಧ್ಯಾಹ್ನ ೧೨ ಪಿಟೀಲು ವಿ ಕೃಷ್ಣನ್, ನ್ಯಾಪಿಟೀಲು, ೧೨.೪೦ ಸಂಭಾಷಣೆ ರವೋ ಮಡು ಸಂಗೀತ. ೧೨.೫೫ ಹನುಮಂತರಾವ್ ೧.೫ ಗಾಯನ ೨.೩೦ ಪ್ರೌಢ ಶಾಲೆಗಳಿಗಾಗಿ ಸಂಜೆ ೫.೪೦ ಎಸ್ ಬಿ ಶೇಷವಮಾಚಾರ್ ಸಂಗೀತ ೬.೧೫ ಪಿಟೀಲು ಸಂಗೀತ ಕಾರ್ಯಕ್ರಮ ೬.೪೫ ಡಾ. ದಾಸಪ್ಪ ನವರಿಂದ ಬಗ್ಗೆ ಕನ್ನಡ ಭಾಷಣ ೮ ಜಿ ಮುರಿಸ್ವಾಮಿಅಯ್ಯಂಗಾರ್ ವೀಣೆ ೯.೧೫ ಕವಿ ಕಾವ್ಯ ಪರಿಚಯ ೧೦ ಚಿತ್ರ ಸಂಗೀತ ೧೦.೧೫ ಉರ್ದು ಗೀತೆ

ಸೂಯೆಜ್ ಬಗ್ಗೆ ಮತ್ತೊಂದು ಸಮ್ಮೇಳನ ?

ಸೂಯಜ್ ಕಾಲುವೆ ವಿವಾದದ ಬಗ್ಗೆ ನಾಸರ್ ಮತ್ತು ಮೆಂಜೀಸ್ ಮಂಡಲದ ಭೇಟಿಯು ಫಲಕಾರಿಯಾಗದಿದ್ದರೆ ಲಂಡನ್ನಿನಲ್ಲಿ ನೇರಿದ್ದಂತಹ ಮತ್ತೊಂದು ೨೨ ರಾಷ್ಟ್ರಗಳ ಸಮ್ಮೇಳನವು ನಡೆಯಬಹುದೆಂದು ಭಾರತದ ಮಂತ್ರಿ ವಿ ಕೆ ಕೃಷ್ಣಮೆನನ್ನರು ತಿಳಿಸಿರುವರು

೧೧ನೇ ತಾರೀಖಿನಿಂದ ಸಂಸ್ಥಾನದಲ್ಲಿ ಭೂದಾನ ಪಾದಯಾತ್ರೆ

ಇದೇ ತಿಂಗಳು ೧೧ನೇ ತಾರೀಕಿನಿಂದ ಸಂಸ್ಥಾನದಲ್ಲಿ ಭೂದಾನ ಪಾದಯಾತ್ರೆಯು ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರ ನೇತೃತ್ವದಲ್ಲಿ ಆರಂಭವಾಗುವುದು ವಿನೋಬಾ ಭಾವೆಯವರ ಜಯಂತಿಯಾದ ಅಂದು ಬೆಂಗಳೂರಿನಿಂದ ಪಾದ ಯಾತ್ರಿಕರು ಕೆಂಗೇರಿಗೆ ಹೊರಟು ಅಕ್ಟೋಬರ್ ೨ನೇ ತಾರೀಖು ಮೈಸೂರಿಗೆ ಬರುವರು ದಾರಿಯಲ್ಲಿ ನಾನಾ ಊರು ಮತ್ತು ಹಳ್ಳಿಗಳಿಗೆ ಭೇಟಿ ಕೊಡುವರು ಸ್ವೀಕಿಲಿಚ್ಚಿಸುವವರು ೧೧ನೇ ತಾರೀಕಿನೊಳಗೆ ಬೆಂಗಳೂರಿನ ಕಾಂಗ್ರೆಸ್ ಭವನಕ್ಕೆ ಬರುವಂತೆ ಸೂಚಿಸಲಾಗಿದೆ

ಲಾಡಿ ಆಟದವರ ಹಾವಳಿ

ನಗರದ ನಾನಾ ಬೀದಿಗಳಲ್ಲಿ ಲಾಡಿ ಆಟದವರ ಹಾವಳಿಯು ಅತ್ಯಾಶ್ಚರ್ಯವಾಗಿದೆ ತೀವ್ರವಳಿಕೆಯ ಪ್ರದ ಹಳ್ಳಿಗರು ಸಂತೆಯವರ ಕೈಗೆ ಸಿಕ್ಕಿ ಹಣವನ್ನು ಕಳೆದುಕೊಂಡು ಕಣ್ಣೀರು ಹಾಕಿಕೊಂಡು ಹೋಗುತ್ತಿರುವರು ಇಂತಹ ದೃಶ್ಯವು ಹೃದಯ ವಿದ್ರಾವಕವಾಗಿರುತ್ತದೆ ಲಕ್ಷ್ಮೀಪುರದಲ್ಲಿ ಈ ತರದ ಆಟವು ಕಳೆದ ೩೦ ದಿನಗಳಿಂದ ನಡೆದು ದುಡ್ಡನ್ನು ಕಳೆದುಕೊಂಡ ರೈತನಿಗೆ ಎಚ್ಚರದಿಂದ ಇರಬೇಕೆಂದು ತಿಳಿಸಿದರೆ ಕೊಟ್ಟ ಸನ್ನೆ ಮೇಲೆ ಬಾಡಿ ಆಟದವರು ಬೆದರು ಸ್ವಲ್ಪ ಹೊತ್ತಿನಮೇಲೆ ಪೊಲೀಸರು ಬಂದು ಅವರನ್ನು ಕರೆದುಕೊಂಡು ಹೋದರು ಇಂತಹ ಜನರ ಮೇಲೆ ಕ್ರಮ ಜರುಗಿಸದಿದ್ದರೆ ಹಳ್ಳಿಯವರಿಗೂ, ತಿಳಿವಳಿಕೆಯಿಲ್ಲದವರಿಗೂ ಬಹಳ ತೊಂದರೆಯಾಗುತ್ತದೆ ಜಿಲ್ಲಾ ಪೊಲೀಸು ಅಧಿಕಾರಿಗಳು ಈ ವಿಚಾರವನ್ನು ಗಮನಿಸಬೇಕು-ಎಂಬುದಾಗಿ ನಗರ ನಿವಾಸಿ ಮಾದಯ್ಯ ಎಂಬುವರು ಪತ್ರ ಬರೆದು ತಿಳಿಸಿರುತ್ತಾರೆ

ಸುಲಭ ಬೆಲೆಯಲ್ಲಿ ಅಕ್ಕಿ ಸರಬರಾಜಿನ ಪ್ರಯತ್ನ

ನಂಜನಗೂಡು ೩೧

ಇಲ್ಲಿನ ಪೌರಸಭಾಧಿವೇಶನವು ಶ್ರೀ ಕೆ ವೆಂಕಟಸುಬ್ಬಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ನಗರದಲ್ಲಿ ಅಕ್ಕಿ ಬೆಲೆಯು ಹೆಚ್ಚುತ್ತಿರುವುದರಿಂದ ಜನರ ಸೌಕರ್ಯಕ್ಕಾಗಿ ೫,೦೦೦ ರೂ ಗಳ ಅಕ್ಕಿಯನ್ನು ಕೇಂದ್ರ ಸರ್ಕಾರದ ದಾಸ್ತಾನಿನಿಂದ ಕೊಂಡು ಡಿಪೋ ತೆರೆಯುವುದರ ಆವಶ್ಯಕತೆಯನ್ನು ಅಧ್ಯಕ್ಷರು ತಿಳಿಸಿದರು ಇದೇ ೧೨ ರಂದು ನಡೆಯುವ ಮೈಸೂರು ಜಿಲ್ಲೆಯ ಪೌರಸಭಾ ಅಧ್ಯಕ್ಷ ಉಪಾಧ್ಯಕ್ಷರುಗಳ ಗೋಷ್ಠಿಗಾಗಿ ೧೫೦ ರೂ ವೆಚ್ಚ ಮಾಡಲು ನಿರ್ಧರಿಸಲಾಯಿತು ಟವುನ್ನಿನ ನೀರು ಸರಬರಾಜಿನ ಪ್ರಾರಂಭೋತ್ಸವವನ್ನು ಸೆಪ್ಟೆಂಬರ್ ೩ ನೇ ವಾರದಲ್ಲಿ ನೆರವೇರಿಸಲು ತೀರ್ಮಾನಿಸಲಾಯಿತು

ಸ್ಕೂಲ್ ಫೈನಲ್ ಪರೀಕ್ಷೆಯಲ್ಲಿ ತಂದೆ ಮತ್ತು ಮಗನ ತೇರ್ಗಡೆ

ಉತ್ತರ ಪ್ರದೇಶ ಪ್ರಾಂತದ ಪ್ರೌಢಶಾಲೆ ಪರೀಕ್ಷೆಗೆ ಕುಳಿತ ಐದು ಮಕ್ಕಳ ತಂದೆಯೊಬ್ಬನು ತನ್ನ ಮಗನೊಡನೆ ಉತ್ತೀರ್ಣನಾಗಿರುತ್ತಾನೆ ಆತನ ಹೆಸರು ರಾಮನಾಥಶರ್ಮ ಅವನಿಗೆ ಪ್ರಥಮ ತರಗತಿಯಲ್ಲಿ ತೇರ್ಗಡೆಯಾಗಿದೆ ಮಗ ರಂಕೇರನ ಎರಡನೇ ಕ್ಲಾಸಿನಲ್ಲಿ ಉತ್ತೀರ್ಣನಾಗಿರುವನು ರಾಮನಾಥಶರ್ಮನ ಹೆಂಡತಿ ಮತ್ತು ಮಗಳು ಇಂಟರ್ ಪರೀಕ್ಷೆಗೆ ವ್ಯಾಸಂಗ ಮಾಡುತ್ತಿರುವರು

ರಷ್ಯಾ-ಸಿಂಹಳ ಸಂಬಂಧ

ರಷ್ಯ ಮತ್ತು ಸಿಂಹಳಗಳ ನಡುವೆ ರಾಜತಾಂತ್ರಿಕ ಸಂಬಂಧವನ್ನು ಏರ್ಪಡಿಸುವ ಬಗ್ಗೆ ಉಭಯ ರಾಷ್ಟ್ರಗಳಿಗೂ ನಡೆಯುತ್ತಿದ್ದ ಮಾತುಕತೆಗಳು ಯಶಸ್ವಿಯಾಗಿರುವುದಾಗಿ ತಿಳಿದುಬಂದಿದೆ

ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಬೇಡಿಕೆಗೆ ಬೆಂಬಲ

ನಗರದಲ್ಲಿರುವ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಶಾಖೆಯವರು ಇಲ್ಲಿನ ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಮುಷ್ಕರಕ್ಕೆ ಬೆಂಬಲವಿತ್ತು, ಸರ್ಕಾರದವರು ವಿದ್ಯಾರ್ಥಿಗಳ ಬೇಡಿಕೆಗಳನ್ನು ಈಡೇರಿಸಬೇಕೆಂದು ಒತ್ತಾಯಪಡಿಸಿರುತ್ತಾರೆ

ಮಾಂಬಳ್ಳಿಯಿಂದ ಮೈಸೂರಿಗೆ ಸರ್ಕಾರೀ ಬಸ್ಸು ಅವಶ್ಯಕ

ಮೈಸೂರಿನಿಂದ ನಂಜನಗೂಡು ಮಾರ್ಗವಾಗಿ ಮಾಂಬಳ್ಳಿಗೆ ಹೋಗಿಬರುತ್ತಿದ್ದ ಸರ್ಕಾರೀ ಬಸ್ಸುಗಳನ್ನು ಮೊನ್ನೆಯಿಂದ ವಜಾ ಮಾಡಿರುವುದರಿಂದ ನಂಜನಗೂಡು ಕೋರ್ಟಿಗೆ ಹೋಗಿ ಬರುವವರಿಗೆ ಬಹಳ ತೊಂದರೆಯಾಗಿರುತ್ತದೆ. ಬೆಳಗ್ಗೆ ಮಾಂಬಳ್ಳಿಯಿಂದ ಹೊರಡುತ್ತಿದ್ದ ಬಸ್ಸು ಕೋರ್ಟಿಗೆ ಬರುವವರಿಗೆ ಬಹಳ ಅನುಕೂಲವಾಗಿದ್ದುದರಿಂದ ಬೆಳಗಿನ ಹೊತ್ತು ಒಂದು ಬಸ್ಸಾದರೂ ಓಡಾಡುವ ವ್ಯವಸ್ಥೆ ಮಾಡಬೇಕೆಂಬುದಾಗಿ ಕೋರಿ ಬಸ್ ಪ್ರಯಾಣಿಕರು ಪತ್ರ ಬರೆದಿರುತ್ತಾರೆ

ವೆಬ್ಬಕ್ಕೆ ಹೊಸ ಬಟ್ಟೆ

- ಬಿನ್ನೀ ಬಟ್ಟೆ -

ಮೂರ್ತಿ ಸ್ಟೋರ್

ನೂರಡಿ ರಸ್ತೆ, ಮೈಸೂರು

ಭಾರತದ ಪ್ರಥಮ ಮಹಿಳಾ ಜಿಲ್ಲಾಧಿಕಾರಿ

ಕುಮಾರಿ ಸರಳಾ ಖನ್ನಾರವರು ಸಿಂಲಾ ಜಿಲ್ಲೆಯ ಕಲೆಕ್ಟರ್ ಆಗಿ ಮೊನ್ನೆ ಅಧಿಕಾರ ವಹಿಸಿಕೊಂಡರು ಅವರಿಗೆ ೩೬ ವರ್ಷ ವಯಸ್ಸು ಅವರು ಐ ಎ ಎಸ್ ಅಧಿಕಾರಿಗಳು ಭಾರತದಲ್ಲಿ ಮೊದಲನೇ ಪ್ರಥಮ ಮಹಿಳಾ ಜಿಲ್ಲಾಧಿಕಾರಿಗಳು

ಈಜಿಪ್ಟಿನಲ್ಲಿ ಸೇವೆಗೆ ಬ್ರಿಟಿಷ್ ನಾವಿಕರ ಸಂಘದ ನಿಷೇಧ

ಸೂಯೆಜ್ ಕಾಲುವೆ ವ್ಯಾಜ್ಯವು ಇತ್ಯರ್ಥವಾಗುವವರೆಗೂ ಬ್ರಿಟಿಷ್ ನಾವಿಕರು ಮತ್ತು ವೈನಾಸಿಕರು ಈಜಿಪ್ಟ್ ಸರ್ಕಾರದ ಸೇವೆಗೆ ಹೋಗಬಾರದೆಂದು ಅವರ ಸಂಘವು ನಿಷೇಧ ಹಾಕಿದೆ

ಅರಸೀಕೆರೆ ಬಳಿ ಗೂಡ್ಸ್ ರೈಲು ಅಪಘಾತ

ಬೆಂಗಳೂರಿನಿಂದ ಹರಿಹರಕ್ಕೆ ಹೊರಟ ಗೂಡ್ಸ್ ರೈಲೊಂದು ಮೊನ್ನೆ ಅರಸೀಕೆರೆ ಮತ್ತು ಅದಿಹಳ್ಳಿ ಗೇಟು ನಡುವೆ ಅಪಘಾತಕ್ಕೆ ಒಳಗಾಗಿ ಅದರ ೧೧ ವ್ಯಾಗನ್ನುಗಳು ಉರುಳಿದುವು ಇಂಜನ್ ಮತ್ತು ಮುಂದಿನ ೧೨ ವ್ಯಾಗನ್ನುಗಳಿಗೆ ಏನೂ ಆಗಲಿಲ್ಲ ಉರುಳಿರುವ ಗಾಡಿಗಳನ್ನು ಎತ್ತುವ ಪ್ರಯತ್ನ ಸಾಗುತ್ತಿದೆ

ಕುಂಬಾರಕೊಪ್ಪಲಿಗೆ ಹನುಮಂತಯ್ಯನವರ ಭೇಟಿ

ಶ್ರೀ ಹನುಮಂತಯ್ಯನವರು ನೆನ್ನೆ ಸಂಜೆ ಕುಂಬಾರಕೊಪ್ಪಲಿಗೆ ಭೇಟಿಯಿತ್ತು ಅಲ್ಲಿ ನಡೆದಿರುವ ಗ್ರಾಮೋದ್ಧಾರ ಕಾರ್ಯಗಳನ್ನು ಪರಿಶೀಲಿಸಿ, ಕೆಚ್ಚಿಗೆ ವ್ಯಕ್ತಪಡಿಸಿದರು ರಾತ್ರಿ ನಡೆದ ಬಹಿರಂಗ ಸಭೆಯಲ್ಲಿ ಅವರೂ, ಶ್ರೀ ಶಿವನಂಜೇಗೌಡರೂ ಭಾಷಣ ಮಾಡಿದರು. ಹನುಮಂತಯ್ಯನವರು ತಮ್ಮ ಭಾಷಣದಲ್ಲಿ ಜನರು ಮುಂದೆ ಚುನಾವಣೆಯಲ್ಲಿ ಅಧಿಕಾರ ವ್ಯಾಮೋಹವಿರುವವರಿಗೆ ಮತ ಕೊಡದೆ ಪರಿಶುದ್ಧ ಮನಸ್ಸಿನವರಿಗೆ ಮಾತ್ರ ಕೊಡಬೇಕೆಂದು ಕೋರಿ, ಶಾಸನಸಭಾ ಸದಸ್ಯ ಸ್ಥಾನಕ್ಕೆ ಸೇವಕನಾಗಿದ್ದ ನನ್ನನ್ನು ಅವರು ಬೇಡವೆಂದು ನನಗೆ ಕಳುಹಿಸಿದುದಕ್ಕಾಗಿ ವ್ಯಸನ ಪಡುತ್ತಿದೆವೆಂದು ಹೇಳಿದರು

ಭೋಜನ ಕೂಟ

ನಗರದ ಚಲನಚಿತ್ರ ಪತ್ರಿಕೋದ್ಯಮಿಗಳು ಶ್ರೀ ಹೆಚ್ ಆರ್ ಎಂ ಸ್ವಾಮಿ ಮತ್ತು ಅವರ ತಂದೆ ಶ್ರೀ ಹೆಚ್ ರಾಮಸ್ವಾಮಿ ಅಯ್ಯಂಗಾರ್‌ರು ಒಡೆಯರ ರಸ್ತೆ, ಹರಿದ್ವಾರ ಮುಂತಾದ ಕ್ಷೇತ್ರಗಳ ಯಾತ್ರೆ ಮಾಡಿಕೊಂಡುಬಂದ ಸಂದರ್ಭದಲ್ಲಿ ನೆನ್ನೆ ಭೋಜನ ಕೂಟವೊಂದನ್ನು ಏರ್ಪಡಿಸಿ, ಇಷ್ಟ ಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಹಾಸಿಗೆ - ದಿಂಬು

ಮಿಷನಿನಲ್ಲಿ ಹತ್ತಿ ಬಿಡಿಸಿ ತಯಾರು ಮಾಡುತ್ತೇವೆ

ಬಾಂಬೆ ಬಜಾರ್ ಕಂಪೆನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

Edited, Printed and Published by A. R. Nagarajan at Sadhvi Press, D. Subbaiah Road, Mysore

ಅಸಮಾನ ಶಕ್ತಿಯುಳ್ಳ ಪವಾಡ ಪುರುಷ !

ಪ್ರೊಫೆಸರ್ ಮಾರ್ವೆಲ್ ಎಫ್ ಆರ್ ಎ ಎಸ್

(ಮಾನವರ ತೊಂದರೆಗಳ ಆಸ್ಟ್ರೋ-ಸ್ಪಿರಿಚುಯಲ್ ಚಿಕಿತ್ಸಕರು)

ಇವರು ಮೈಸೂರಿನ ತಮ್ಮ ಆಫೀಸಿನಲ್ಲಿ ಮೊಕ್ಕಾಮಿನಲ್ಲಿ ಬೆಳಗ್ಗೆ 9 ರಿಂದ ಮಧ್ಯಾಹ್ನ 1, ಮತ್ತು ಮಧ್ಯಾಹ್ನ 3 ರಿಂದ ಸಂಜೆ 7 ರ ವರೆಗೆ

ರೂಂ. ನಂ. 2. ರಿಟ್ಸ್ ಹೋಟೇಲ್, ಇರ್ವಿನ್ ರೋಡು, ಮೈಸೂರು

ಈ ನಿಳಾಸದಲ್ಲಿ ಸಲಹೆ ಪಡೆಯುವವರಿಗೆ ಅವಕಾಶ ನೀಡುವರು

ನೀವು ಇವರ ಉಪಯೋಗ ಪಡೆದುಕೊಂಡಿರುವಿರಾ ?

ಇದುವರೆಗೂ ಇಲ್ಲದಿದ್ದಲ್ಲಿ ಖಾತರಿಯಾದ ಯಶಸ್ಸುಂಟಾಗಲು ಇಂದೇ ಸಲಹೆ ಪಡೆಯಿರಿ

ಹಣಕಾಸು, ಪ್ರೇಮ, ವ್ಯವಹಾರ ಪಟ್ಟ, ವ್ಯಾಪಾರ, ಬದ್ಧಿ, ಸೌಕರ, ಸಂತಾನ, ದೇಶಾಂತರ, ವಿವಾಹ, ಶತ್ರು, ಗೃಹಕೃತ್ಯದ ತೊಂದರೆಗಳು, ಸ್ತ್ರೀ ಮತ್ತು ಎಲ್ಲಾ ರೋಗದ ವಿಷಯಗಳಿಗೂ (ಶೀಘ್ರವಾದ ಫಲದಾಂತರ ಖಾತರಿ ಕೊಡಲಾಗುತ್ತದೆ ಮತ್ತು ರಹಸ್ಯವನ್ನು ಕಾಪಾಡಲಾಗುತ್ತದೆ) "ಆಸ್ಟ್ರೋ-ಸ್ಪಿರಿಚುಯಲಿಸಂ ಜೀವನದ ಪರಿಶ್ರಮರವಾದ ಗಾಡಿಶ ಶಕ್ತಿ" ಎಂಬುದನ್ನು ಪ್ರಚುರಿಸಿದೆ

ಸಲಹೆ ಪಡೆಯಲು ರುಸುಮು 11 ರೂ.

ರಿಜಿಸ್ಟರ್ ನಂ. 792

ಚಂದಾದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ...ಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಾಧ್ವಿ

ಅಂಚಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಪುಟ : ೧೫] SADHVI : TUESDAY 4—9—1956 ಮೈಸೂರು : ಮಂಗಳವಾರ ೪—೯—೧೯೫೬ [ಸಂಚಿಕೆ : ...

ಈಜಿಪ್ಟ್ ಅಧ್ಯಕ್ಷರೊಡನೆ ಮೆಂಜಿಸ್ ಮಾತುಕತೆ ಆರಂಭ

ವಿಶ್ವವಿದ್ಯಾಲಯದಲ್ಲಿ ಕನ್ನಡ ಶಿಕ್ಷಣ ಮಾಧ್ಯಮ ಅಗತ್ಯ

...ಸ್ಥಾನದ ಅಫಿಲಿಯೇಟೆಡ್ ಕಾಲೇಜು ...ಅಧ್ಯಾಪಕರ ಸಮ್ಮೇಳನದ ನಿರ್ಣಯ

ಬೆಂಗಳೂರು ೪

ಕನ್ನಡವು ಮೈಸೂರು ವಿಶ್ವವಿದ್ಯಾಲಯದ ...ಣ ಮಾಧ್ಯಮವಾಗಬೇಕೆಂದು ನಾನಾ ಅಫಿಲಿ...ಯೇಟೆಡ್ ಕಾಲೇಜುಗಳ ಉಪಾಧ್ಯಾಯರ ಸ...ಮ್ಮೇಳನವು ಮೊನ್ನೆ ನಿರ್ಣಯವೊಂದನ್ನು ಅಂಗೀಕರಿಸಿತು. ಮೈಸೂರು ವಿಶ್ವವಿದ್ಯಾಲಯದ ...ಸಂಗದ ಅವಧಿಯು ಇತರ ವಿಶ್ವವಿದ್ಯಾಲಯಗಳಲ್ಲಿರುವುದಕ್ಕೆ ಸರಿಸಮವಾಗಿರಬೇಕೆಂದು ...ಚಿಸಲಾಯಿತು. ಇತರ ಕಾಲೇಜುಗಳ ಉ...ಪಾಧ್ಯಾಯರಿಗೆ ದೊರೆಯುವ ಕನಿಷ್ಠ ಸಂಬಳ ಭತ್ಯ, ಮುಂತಾದುವು ಅಫಿಲಿಯೇಟೆಡ್ ಕಾ...ಲೇಜುಗಳವರಿಗೂ ದೊರೆಯಬೇಕೆಂದು ಕೋರ...ಲಾಯಿತು.

...ವೈಸ್ ಚಾನ್ಸಲರ್ ಡಾ|| ಕೆ. ವಿ. ಪುಟ್ಟಪ್ಪ...ನವರು ಭಾಷಣ ಮಾಡಿ, ಕನ್ನಡವು ವಿಶ್ವವಿದ್ಯಾ...ಲಯದ ಶಿಕ್ಷಣ ಮಾಧ್ಯಮವಾಗಬೇಕೆಂದು ಅಭಿ...ಪ್ರಾಯಪಟ್ಟರು

...ಸ್ಥೆಯದ ಇಂಗ್ಲಿಷ್ ಶಿಕ್ಷಣಕ್ಕೆ ...ಚಿವರ ಸಮ್ಮೇಳನದ ನಿರ್ಧಾರ

...ಸಿಕೆಂಡರಿ ವಿದ್ಯಾಭ್ಯಾಸದ ಮಟ್ಟದಲ್ಲಿ ಇಂಗ್ಲಿ... ಸೇರಿ ೩ ಭಾಷೆಗಳಲ್ಲೂ, ವಿಶ್ವವಿದ್ಯಾಲಯದ... ಕಡ್ಡಾಯವಾಗಿ ಇಂಗ್ಲಿಷಿನಲ್ಲೂ ಶಿಕ್ಷಣವ... ಕೊಡಬೇಕೆಂದು ದೆಹಲಿಯಲ್ಲಿ ಸೇರಿದ್ದ ಶಿಂ...ನ ವಿದ್ಯಾ ಸಚಿವರುಗಳ ಸಮ್ಮೇಳನವು ಶಿ...ಫಾರಸು ಮಾಡಿದೆ. ಮುಂದಿನ ಪಂಚವಾರ್ಷಿಕ ...ಯೋಜನೆಗಳಿಗಾಗಿ ಹೆಚ್ಚುಹೆಚ್ಚಾಗಿ ತರಬೇತು... ಹೊಂದಿದ ಜನರು ಬೇಕಾಗುವುದರಿಂದ ವೈಜ್ಞಾ...ನಿಕ ವಿದ್ಯೆಯನ್ನು ಕಲಿಸಬಲ್ಲ ಇಂಗ್ಲಿಷಿನ ಅವ...ಶ್ಯಕೆಯಿರುವುದೆಂದು ಅಭಿಪ್ರಾಯಪಡಲಾಗಿದೆ. ...ರೂ ಮತ್ತು ಕೇಂದ್ರ ಮಂತ್ರಿ ಆಜಾದರು ...ಷಣ ಮಾಡಿ ಇಂಗ್ಲಿಷ್ ಪಾಠದ ಅವಶ್ಯಕತೆ...ಯನ್ನು ಒತ್ತಿ ಹೇಳಿದರು

ಕೇದಿಗೆ ಶಿಕ್ಷೆ

...ದೇವನಹಳ್ಳಿಯ ಅಂತೋನಿ ಉರುಫ್ ಪುಟ್ಟ...ಯುವನು ಕೆಸರಿ ಬ್ಲಾಕಿನ ದಸ್ತಗೀರ್ ಎಂಬು...ವನ ಮನೆಯಲ್ಲಿ ೩ ಬೆಡ್ ಷೀಟುಗಳನ್ನು ಕಳೆದ ...ವಾರ ಕದ್ದನೆಂದು ಲಶ್ಕರ್ ಪೋಲೀಸರು ಹೂ...ಡಿದ ಮೊಕದ್ದಮೆಯಲ್ಲಿ ಪ್ರಥಮ ನಗರ ನ್ಯಾಯಾ...ಧೀಶರು ನೆನ್ನೆ ಆಪಾದಿತನಿಗೆ ೨|| ತಿಂಗಳು ಕಠಿ...ಣ ಸಜಾ ವಿಧಿಸಿದರು

...ಗಳೂರು ರೇಡಿಯೋ ನಾಳೆ ಕಾರ್ಯಕ್ರಮ

[illegible]

ಬಟ್ಟೆಗಳ ಮೇಲೆ ಅಧಿಕ ಸುಂಕ ವಿಧಾಯಕಕ್ಕೆ ಲೋಕಸಭೆ ಸಮ್ಮತಿ

ಬಳಕೆಗಾರರ ಹಿತ ರಕ್ಷಣೆ ಬಗ್ಗೆ ಭರವಸೆ

ಕಳೆದ ಶನಿವಾರದಿಂದ ಬಟ್ಟೆಗಳ ಮೇಲೆ ವಿಧಿಸಲಾಗಿರುವ ಅಧಿಕ ಅಬ್ಕಾರಿ ಸುಂಕದ ಬಗ್ಗೆ ಲೋಕಸಭೆಯು ನೆನ್ನೆ ವಿಧೇಯಕವನ್ನು ಅಂಗೀಕರಿಸಿತು. ಮಿಲ್ಲುಗಳವರು ಹಾಗೂ ಹೋಲ್ ಸೇಲ್ ಗಳು ಲಾಭವನ್ನು ಕಿತ್ತುಕೊಳ್ಳಲು ಈ ಕ್ರಮವು ನಡೆಯಿತ್ತಿದೆಯೆಂದು ಅನೇಕ ಸದಸ್ಯರು ಟೀಕಿಸಿದರು. ಕೇಂದ್ರ ಹಣಕಾಸಿನ ಮಂತ್ರಿ ಟಿ. ಟಿ. ಕೃಷ್ಣಮಾಚಾರಿ ಮತ್ತು ಗೃಹಮಂತ್ರಿ ಪಂಡಿತ ಪಂತರವರು ಉತ್ತರವಿತ್ತು, ಬಟ್ಟೆಗಳ ಬೆಲೆಯು ತಪ್ಪಿತಸ್ಥರಾದರೆ ಕೆಲಗೆಯನ್ನು ಕಾನೂನು ಕ್ರಮಗಳನ್ನು ಜರುಗಿಸಲಾಗುವುದೆಂದು ತಿಳಿಸಿದರು

ಈ ಕ್ರಮದಿಂದ ಸರ್ಕಾರದ ವರಮಾನವನ್ನು ಹೆಚ್ಚಿಸಿಕೊಳ್ಳುವುದೇ ಉದ್ದೇಶವಲ್ಲವೆಂದೂ, ಉತ್ಪತ್ತಿಗಿಂತಲೂ ಹೆಚ್ಚು ಸರಬರಾಜಿನ ಬೇಡಿಕೆಯ ಉಂಟಾಗಿ ಬೆಲೆ ಏರುವುದರ ಮೇಲೆ ಸುಂಕವನ್ನು ವಿಧಿಸಲಾಯಿತೆಂದೂ ತಿಳಿಸಲಾಯಿತು ಕೈಗಾರಿಕೆಗಳಿಗೆ ಬರುವ ಹೆಚ್ಚು ಉತ್ಪತ್ತಿಯಿಂದ ವಸೂಲು ಮಾಡಲಾಗುವುದೆಂದೂ ಹಣಕಾಸಿನ ಸಚಿವರು ಭರವಸೆಯಿತ್ತರು.

ಬಿಹಾರಿನಲ್ಲಿ ಸತ್ಯಾಗ್ರಹಾರಂಭ

ಬಿಹಾರಿನ ಪ್ರಾಂತೀಯ ಸಮಾಜವಾದಿಗಳು ಕಳೆದ ಶನಿವಾರದಿಂದ ಕಾನೂನು ಭಂಗ ಚಳುವಳಿಯನ್ನು ಆರಂಭಿಸಿದ್ದಾರೆ. ೧೪ ಜಿಲ್ಲೆ ಮತ್ತು ಸಬ್ ಡಿವಿಜನ್ ಕೇಂದ್ರಗಳಲ್ಲಿ ಈಗಾಗಲೇ ೧೦೦ ಕ್ಕೂ ಹೆಚ್ಚು ಜನರು ಸತ್ಯಾಗ್ರಹ ನಡೆಸಿದರೆಂದು ಹೇಳಲಾಗಿದೆ. ಉಳುವವನಿಗೆ ಭೂಮಿ, ನ್ಯಾಯವಾದ ತೆರಿಗೆ, ನಿರುದ್ಯೋಗಿಗಳಿಗೆ ಉದ್ಯೋಗ ಕಲ್ಪನೆ, ಧಾನ್ಯದ ಬೆಲೆ ಏರುವುದನ್ನು ತಡೆಗಟ್ಟುವುದು-ಇವೇ ಮುಂತಾದ ೧೨ ಅಂಶಗಳುಳ್ಳ ಬೇಡಿಕೆ ಸಂಬಂಧವಾಗಿ ಅವರು ಚಳುವಳಿಯನ್ನು ನಡೆಸುತ್ತಿರುವರು. ಪ್ರಾಂತೀಯ ಪಕ್ಷದ ಅಧ್ಯಕ್ಷರು ಚಳುವಳಿಯ ನೇತೃತ್ವವನ್ನು ವಹಿಸಿರುವರು

ಭಾರತಕ್ಕೆ ಚೀನಾ ಪ್ರಧಾನಿಯ ಭೇಟಿ

ಬರ್ಮಾಕ್ಕೆ ಭೇಟಿ ಕೊಡಲಿರುವ ಚೀಣದ ಪ್ರಧಾನಿ ಚೌ ಎನ್ ಲೈಯವರು ಇದೇ ಡಿಸೆಂಬರ್ ತಿಂಗಳಿನಲ್ಲಿ ಭಾರತಕ್ಕೆ ಆಗಮಿಸಿ, ೧೫ ದಿನಗಳವರೆಗೆ ಇಲ್ಲಿರುವರು. ಅದಕ್ಕೆ ಮೊದಲು ಅವರು ಬರ್ಮಾಕ್ಕೆ ಹೋಗುವರು ಬರ್ಮಾ ಸರ್ಕಾರದವರೊಡನೆ ಅವರು ಗಡಿ ವಿಚಾರಗಳನ್ನು ಚರ್ಚಿಸಲಿರುವರು.

ಸಹೋದರಿಯನ್ನು ಇರಿದ ಪ್ರಸಂಗ

ಹೊಸಕೋಟೆಯ ನಿವಾಸಿ ೩೫ ವರ್ಷದ ಮಹಮ್ಮದ್ ಎಂಬಾತನು ನೆನ್ನೆ ಆತನ ಸಹೋದರ ದ್ಯರಪ್ಪ ಎಂಬುವನು ಗೃಹಕೃತ್ಯದ ಜಗಳದ ಪರಿಣಾಮವಾಗಿ ಇರಿದನೆಂದೂ, ಆಕೆಯನ್ನು ಕೃಷ್ಣರಾಜೇಂದ್ರ ಆಸ್ಪತ್ರೆಗೆ ಸೇರಿಸಲಾಗಿದೆಯೆಂದೂ ವರದಿಯಾಗಿದೆ

ವಿದ್ಯುಚ್ಛಕ್ತಿಗಾಗಿ ಕೊಟ್ಟ ಹೆಚ್ಚಿನ ರುಸುಮಿನ ವಾಪಸಿಗೆ ಆಜ್ಞೆ

ಮೈಸೂರು ೪

ವಿದ್ಯುಚ್ಛಕ್ತಿ ದರಗಳನ್ನು ಬದಲಾಯಿಸಿ ಸರ್ಕಾರದವರು ಇತ್ತೀಚೆಗೆ ಆಜ್ಞೆಯೊಂದನ್ನು ಮಾಡಿರುವರಷ್ಟೆ. ಅದರ ಪ್ರಕಾರ, ಹೊಸ ದರಗಳು ನವೆಂಬರ್ ತಿಂಗಳಿಂದ ಜಾರಿಗೆ ಬರುವುವು. ಆದುದರಿಂದ ಕಳೆದ ಏಪ್ರಿಲ್ ತಿಂಗಳು ಮೊದಲುಗೊಂಡು ಇದುವರೆಗೆ ಹಳೆಯ ಆಜ್ಞೆಯ ಪ್ರಕಾರ ವಿದ್ಯುಚ್ಛಕ್ತಿಗಾಗಿ ಸಾರ್ವಜನಿಕರು ಪಾವತಿ ಮಾಡಿರುವ ಹೆಚ್ಚಿನ ಮೊಬಲಗುಗಳನ್ನು ಅವರಿಗೆ ವಾಪಸು ಕೊಡುವಂತೆ ಸರ್ಕಾರದ ಆಜ್ಞೆಯಾಗಿದೆ. ಅಥವಾ ಅವರು ಅಪೇಕ್ಷಿಸಿದ್ದರೆ ಅವನ್ನು ಮುಂದಿನ ಬಿಲ್ಲುಗಳಿಗೆ ಜಮಾ ತೆಗೆದುಕೊಳ್ಳಬಹುದೆಂದೂ ಸಹ ಸೂಚಿಸಲಾಗಿದೆ

ಬಟ್ಟೆ ಮೇಲಿನ ಸುಂಕವನ್ನು ಮಿಲ್ಲುಗಳವರೇ ವಹಿಸುವರು

ಕಳೆದ ಶನಿವಾರದಿಂದ ೪ ವಿಧದ ಬಟ್ಟೆಗಳ ಮೇಲೆ ಹಾಕಲಾಗಿರುವ ಹೆಚ್ಚಿನ ಅಬ್ಕಾರಿ ಸುಂಕವನ್ನು ತಾವೇ ವಹಿಸುವುದಾಗಿಯೂ, ಆಗಸ್ಟ್ ೩೧ ಕ್ಕೆ ಮುಂಚೆ ಯಾವ ದರದಲ್ಲಿ ಬಟ್ಟೆಗಳನ್ನು ವ್ಯಾಪಾರಿಗಳಿಗೆ ಸರಬರಾಜು ಮಾಡಲಾಗುತ್ತಿದ್ದಿತೋ, ಅದರಂತೆಯೇ ಇನ್ನು ಮುಂದೆಯೂ ಸರಬರಾಜು ಮಾಡುವುದಾಗಿಯೂ ಅಹಮದಾಬಾದಿನ ಅನೇಕ ಹತ್ತಿ ಗಿರಣಿ ಮಾಲೀಕರು ತಿಳಿಸಿದ್ದಾರೆ

ಚಾಮರಾಜನಗರದ ಮುಸ್ಲಿಂ ವಿದ್ಯಾರ್ಥಿಗಳ ಹರತಾಳದ ಮುಕ್ತಾಯ

ಚಾಮರಾಜನಗರದ ಪ್ರೌಢಶಾಲಾ ಮುಸ್ಲಿಂ ವಿದ್ಯಾರ್ಥಿಗಳು ವ್ಯಾಯಾಮದ ಅಂಗವಾಗಿ ಸೂರ್ಯ ನಮಸ್ಕಾರ ನಡೆಸುವುದಕ್ಕೆ ಅಸಮಾಧಾನ ಸೂಚಿಸಿ ನಡೆಸುತ್ತಿದ್ದ ಹರತಾಳವನ್ನು ಅಲ್ಲಿನ ಪೌರಸಭಾಧ್ಯಕ್ಷ ಶ್ರೀ ಅನ್ವರ್ ಪಾಷಾರವರ ಪ್ರಯತ್ನದ ಪರಿಣಾಮವಾಗಿ ನಿಲ್ಲಿಸಲಾಯಿತು. ಶ್ರೀ ಪಾಷಾರವರು ಮುಖ್ಯೋಪಾಧ್ಯಾಯರನ್ನೂ, ಸ್ಥಳೀಯ ಮುಸ್ಲಿಂ ವಿದ್ಯಾ ಸಂಘದವರು ಮತ್ತು ಆಜಾದ್ ಹಾಸ್ಟೆಲ್ ವಿದ್ಯಾರ್ಥಿಗಳ ಕಾರ್ಯದರ್ಶಿಯವರನ್ನೂ ಕರೆಸಿ ಮಾತುಕತೆ ನಡೆಸಿದ ನಂತರ ಕಳೆದ ಶುಕ್ರವಾರ ಹರತಾಳವು ಕೊನೆಗೊಂಡಿತು.

ವಿಧಾನ ಪರಿಷತ್ತಿಗೆ ಉಪ ಚುನಾವಣೆ

ಶ್ರೀ ಕೆ ಟಿ ಭಾಷ್ಯಂರವರು ನಿಧನ ಹೊಂದಿದ ಪ್ರಯುಕ್ತ ತೆರವಾದ ವಿಧಾನ ಪರಿಷತ್ತಿನ ಸದಸ್ಯ ಸ್ಥಾನಕ್ಕೆ ಏರ್ಪಾಡಾಗಿರುವ ಉಪ ಚುನಾವಣೆ ಸಂಬಂಧದಲ್ಲಿ ಈ ತಿಂಗಳು ೧೦ನೇ ತಾರೀಖು ನಾಮ ಪತ್ರ ಸ್ವೀಕಾರವೂ, ೧೨ರಂದು ಪರಿಶೀಲನೆಯೂ, ೧೫ ಕ್ಕೆ ವಾಪಸಾತಿಯೂ ಮತ್ತು ೨೬ಕ್ಕೆ ಅವಶ್ಯವಿದ್ದರೆ ಚುನಾವಣೆಯೂ ಇವೆ.

ಕೃಷ್ಣ ಜಯಂತಿ ಸಂಗೀತ

ಬಂಡೀಕೇರಿ ...ದಲ್ಲಿರುವ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ಕೃಷ್ಣೋತ್ಸವದ ಅಂಗವಾಗಿ ಈ ರಾತ್ರಿ ೨|| ಗಂಟೆ ಕುಪ್ಪುಸ್ವಾಮಿ ಮತ್ತು ಪಾರ್ಟಿಯವರ ಸಂಗೀತವು ಏರ್ಪಾಡಾಗಿದೆ

ಈಜಿಪ್ಟಿನ ಅಧ್ಯಕ್ಷರೊಡನೆ ಮೆಂಜಿಸರ ಸಂಭಾಷಣೆ ಆರಂಭ

ಆಸ್ಟ್ರೇಲಿಯದ ಪ್ರಧಾನಿ ರಾಬರ್ಟ್ ಮೆಂಜಿಸ್‌ರವರ ನೇತೃತ್ವದಲ್ಲಿ ಕೈರೋದಿಗೆ ಆಗಮಿಸಿರುವ ಸೂಯೆಜ್ ಸಮಿತಿಯ ಸದಸ್ಯರು ನಿನ್ನೆ ಎರಡು ಬಾರಿ ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರೊಡನೆ ಮಾತುಕತೆ ನಡೆಸಿದರು ಮೆಂಜಿಸ್‌ರವರೊಡನೆ ೨೫ ಮಂದಿ ಸಲಹೆಗಾರರು ಬಂದಿರುತ್ತಾರೆ ಈ ಮಾತುಕತೆಗಳಲ್ಲಿ ಈಜಿಪ್ಟಿನ ವಿದೇಶಾಂಗ ಮಂತ್ರಿ ಫೌಜಿ ಮತ್ತು ನಾಸೆರ್‌ರವರ ಮುಖ್ಯ ರಾಜಕೀಯ ಅಧಿಕಾರಿ ಅಲಿ ಸಾಬ್ರಿಯವರು ಭಾಗವಹಿಸಿದ್ದರು

ಸೂಯೆಜ್ ಕಾಲುವೆ ಬಗ್ಗೆ ೧೮ ರಾಷ್ಟ್ರಗಳ ಸೂಚನೆಗಳನ್ನು ವಿವರಿಸಲು ಮೆಂಜಿಸ್ ಸಮಿತಿಯವರಿಗೆ ತಿಳಿಸಲಾಗಿದ್ದಿತೆಂದು ಹೇಳಲಾಗಿದೆ.

ಭಾರತದಲ್ಲಿ ೨,೩೯೯ ಹಿಂದುಳಿದ ಪಂಗಡಗಳು

ಹಿಮ್ಮ ವರ್ಗದವರನ್ನು ಬಿಟ್ಟು ಮಿಕ್ಕವರಿಗೆ ವಿಶೇಷ ರಾಜಕೀಯ ಪ್ರಾತಿನಿಧ್ಯವಿಲ್ಲ

ಮತ, ಜಾತಿ ಅಥವಾ ಬೇರಾವ ಪಂಥದ ವಿಚಾರಗಳನ್ನೂ ಗಮನಿಸದೆ ಎಲ್ಲಾ ಹಿಂದುಳಿದ ಪಂಗಡಗಳವರಿಗೂ ಸಹಾಯ ನೀಡಬೇಕೆಂದು ಹಿಂದುಳಿದ ಪಂಗಡದ ಸಮಿತಿಯವರು ಮಾಡಿರುವ ಶಿಫಾರಸನ್ನು ಭಾರತ ಸರ್ಕಾರದವರು ಅಂಗೀಕರಿಸಿರುತ್ತಾರೆ. ಸಮಿತಿಯವರು ಕೊಟ್ಟಿರುವ ವರದಿ ಪ್ರಕಾರ ದೇಶದಲ್ಲಿ ೨,೩೯೯ ಹಿಂದುಳಿದ ಪಂಗಡಗಳಿವೆಯೆಂದು ಗೊತ್ತಾಗಿದೆ. ಸರ್ಕಾರದವರು ಅದನ್ನು ಇವೆಯೆಂಬುದನ್ನು ಒಪ್ಪಿದ್ದಾರೆ. ಸಮಿತಿಯವರ ಶಿಫಾರಸಿನಂತೆ ಹಿಮ್ಮ ವರ್ಗದವರು ಮತ್ತು ಗುಡ್ಡಗಾಡಿನವರನ್ನು ಬಿಟ್ಟು ಮಿಕ್ಕವರಿಗೆ ಹೆಚ್ಚಿನ ಅಥವಾ ವಿಶೇಷ ರಾಜಕೀಯ ಪ್ರಾತಿನಿಧ್ಯವನ್ನು ಕೊಡಬೇಕಾಗಿಲ್ಲವೆಂಬ ತತ್ವವನ್ನು ಸರ್ಕಾರದವರು ಅಂಗೀಕರಿಸಿರುವರು ಸಮಿತಿಯವರು ಮಹಿಳೆಯರನ್ನೂ ಹಿಂದುಳಿದ ವರ್ಗಕ್ಕೆ ಸೇರಿಸಿದ್ದಾರೆ.

ಇಂತಹ ವಿಶೇಷ ಸಮಿತಿಗಳು ನಡೆಸುವ ಪರಿಶೀಲನೆಯಿಂದ ಯಾವ ಪ್ರಯೋಜನವೂ ಆಗುವುದಿಲ್ಲವಾದುದರಿಂದ ಸಂಸ್ಥಾನಗಳ ಸರ್ಕಾರಗಳು ಹಿಂದುಳಿದ ವರ್ಗಗಳ ಅಧಿಕೃತ ಪಟ್ಟಿಯನ್ನು ತಯಾರಿಸಬೇಕೆಂದು ಭಾರತ ಸರ್ಕಾರದವರು ಸೂಚಿಸಿದ್ದಾರೆ.

ಈಜಿಪ್ಟಿಗೆ ರಷ್ಯಾ ವಿಮಾನಗಳು

ಈಜಿಪ್ಟಿಗೆ ರಷ್ಯದ ಮತ್ತು ಇತರ ಕಮ್ಯೂನಿಸ್ಟ್ ನಾಡುಗಳಿಂದ ೮೦ ಜೆಟ್ ವಿಮಾನಗಳೂ, ೩೦ ಬಾಂಬರ್ ವಿಮಾನಗಳೂ ಬಂದಿವೆ ಈಗಾಗಲೇ ಈಜಿಪ್ಟಿನ ವಿಮಾನಗಳ ಸಂಖ್ಯೆಯು ೪೦೦ಕ್ಕೆ ಏರಿದೆ ಅಲ್ಲದೆ ಕಮ್ಯೂನಿಸ್ಟ್ ರಾಷ್ಟ್ರಗಳಿಂದ ಭಾರಿ ಪ್ರಮಾಣದಲ್ಲಿ ೨೫ ಕೋಟಿ ಡಾಲರುಗಳಿಗಿಂತಲೂ ಹೆಚ್ಚು ಬೆಲೆಯ ಶಸ್ತ್ರಾಸ್ತ್ರಗಳು ಸರಬರಾಜಾಗಿವೆ ಈಜಿಪ್ಟಿನಲ್ಲಿ ಸೇವೆಗೆ ಸೇರಿಗಲು ಕಾಲಿನಿಗ್ರಾಡಿನ ಕೆಲವು ವೈಮಾನಿಕರು ತಮ್ಮ ಇಂಗಿತವನ್ನು ಸೂಚಿಸಿದ್ದಾರೆ.

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರ ಸ್ವಲ್ಪಕಾಲ ನಿಲ್ಲಲಿ

ನಗರದ ಆಯುರ್ವೇದ ವೈದ್ಯ ಸಂಘದ ನಿರ್ಣಯ

ಮೈಸೂರು ೪

ನಗರದಲ್ಲಿರುವ ಮೈಸೂರು ಆಯುರ್ವೇದ ವೈದ್ಯರ ಸಂಘದ ವಿಶೇಷ ಸಭೆಯು ಶ್ರೀ ಅಗರಂ ವೆಂಕಟರಾಮಪಂಡಿತರ ಅಧ್ಯಕ್ಷತೆಯಲ್ಲಿ ನಡೆದು, ಇಲ್ಲಿನ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ನಡೆಸುತ್ತಿರುವ ಮುಷ್ಕರವನ್ನು ಪರಿಶೀಲಿಸಿತು. ಹೊಸ ಸರ್ಕಾರದವರು ಅಧಿಕಾರ ವಹಿಸಿಕೊಂಡ ಆರಂಭದಲ್ಲೇ ಮುಷ್ಕರವನ್ನು ಹೂಡಲಾಗಿರುವುದೆಂದೂ, ಸರ್ಕಾರದವರು ವಿಷಯಗಳನ್ನೆಲ್ಲಾ ಕೂಲಂಕಷವಾಗಿ ಪರ್ಯಾಲೋಚಿಸಿ ಸೂಕ್ತ ಪರಿಹಾರ ಕಲ್ಪಿಸಲು ಅನುಕೂಲವಾಗುವಂತೆ ವಿದ್ಯಾರ್ಥಿಗಳು ಕಾಲಾವಕಾಶವನ್ನು ಕೊಡಬೇಕಾಗಿತ್ತೆಂದೂ ಸಭೆಯು ಅಭಿಪ್ರಾಯಪಟ್ಟು, ಅವರುಗಳು ಮುಷ್ಕರವನ್ನು ಸ್ವಲ್ಪ ಕಾಲ ವಾಪಸು ತೆಗೆದುಕೊಳ್ಳಬೇಕೆಂದೂ, ಹೊಸ ಸರ್ಕಾರಕ್ಕೆ ಒಳ್ಳೆಯ ವಾತಾವರಣವನ್ನು ಕಲ್ಪಿಸಿಕೊಡಬೇಕೆಂದೂ, ವಿದ್ಯಾರ್ಥಿಗಳ ಬೇಡಿಕೆಗಳನ್ನು ಸರ್ಕಾರದವರು ಈಡೇರಿಸಬೇಕೆಂದೂ ಸೂಚಿಸುವ ನಿರ್ಣಯವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು. ನಿರ್ಣಯವನ್ನು ಡಾ|| ಸುಬ್ರಹ್ಮಣ್ಯ ಶಾಸ್ತ್ರಿಗಳು ಮಂಡಿಸಿದರು.

ವಿದ್ಯಾರ್ಥಿಗಳ ಸಾಂಕೇತಿಕ ಮುಷ್ಕರ

ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರಕ್ಕೆ ಸಹಾನುಭೂತಿ ತೋರಿಸಲು ನಗರದ ಕಾಲೇಜುಗಳ ವಿದ್ಯಾರ್ಥಿಗಳು ನಾಳೆ ಒಂದು ದಿನದ ಸಾಂಕೇತಿಕ ಮುಷ್ಕರ ಹೂಡಲು ನಿರ್ಧರಿಸಿರುತ್ತಾರೆ ಅದಕ್ಕೆ ವಿದ್ಯಾರ್ಥಿಗಳ ಸಹಕಾರವನ್ನು ಕೋರಲಾಗಿದೆ.

ಮೂಡ್ ಕ್ಲಬ್

ರಾಜಧಾನಿಯಲ್ಲಿ ಮೂಡ್ ಕ್ಲಬ್ ಎಂಬ ಸಂಸ್ಥೆಯೊಂದನ್ನು ಏರ್ಪಡಿಸಲಾಗಿದೆ ಕಳೆದ ೩೦ನೇ ತಾರೀಕು ಅದರ ಚುನಾವಣೆಯು ನಡೆದು, ಶ್ರೀ ಟಿ ಆರ್ ಸುಬ್ಬಣ್ಣನವರು ಅಧ್ಯಕ್ಷರಾಗಿಯೂ, ಶ್ರೀ ಆರ್ ಎಸ್. ನಂಗಬಸಪ್ಪನವರು ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು ಶ್ರೀಗಳಾದ ಸುಬ್ರಹ್ಮಣ್ಯ, ಪಾಟೀಲ್, ಶಿವಿಧರ್ ಜಯಶಂಕರಪ್ಪ ಮತ್ತು ಶ್ರೀಮತಿಗಳಾದ ಜಯಶ್ರೀ ಇಂದಿರೆ, ಸರೋಜ ಮತ್ತು ಶಾರದಮ್ಮನವರು ಸದಸ್ಯರುಗಳಾಗಿ ಚುನಾಯಿತರಾದರು ಮೊನ್ನೆ ಸಂಘದ ಆರಂಭೋತ್ಸವವು ಶ್ರೀ ಟಿ ಆರ್ ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನೆರವೇರಿಸಲ್ಪಟ್ಟಿತು ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯ ಮತ್ತು ಸಚಿವ ಶ್ರೀ ಹೆಚ್. ಎಂ ಚನ್ನಬಸಪ್ಪನವರಿಂದ ಶುಭಾಶಯಗಳು ಬಂದಿದ್ದುವು ಸಂಘಕ್ಕೆ ಎಲ್ಲಾ ಕಾಲೇಜುಗಳ ವಿದ್ಯಾರ್ಥಿಗಳನ್ನೂ ಸದಸ್ಯರಾಗಿ ತೆಗೆದುಕೊಳ್ಳಲಾಗಿದೆ

ಕೋಳಿ ಮರಿ ಕಣ್ಣು ಗುಡ್ಡೆಯಿಂದ ಮನುಷ್ಯನಿಗೆ ಕಣ್ಣು ಬಂದಿತು

ಹೊಸಪೇಟೆಯಲ್ಲಿ ಉಚಿತ ನೇತ್ರ ಶಸ್ತ್ರ ಚಿಕಿತ್ಸಾ ಶಿಬಿರವನ್ನು ನಡೆಸುತ್ತಿರುವ ಡಾ|| ಎಂ ಸಿ ಮೋದಿಯವರು ಕುರುಡನೊಬ್ಬನಿಗೆ ಕೋಳಿ ಮರಿ ಕಣ್ಣು ಗುಡ್ಡೆಯನ್ನು ಇಟ್ಟು ಕಣ್ಣು ಕಾಣುವಂತೆ ಮಾಡಿರುತ್ತಾರೆ

BUY BINNY'S
WHITE DRILL - Khaki Barjee
MOORTY MART,
100 Feet Road, Mysore

SRI GAYATHRI
TALKIES
From 4-9-56 For 2 days only
THE MAN BEHIND THE GUN
(in Technicolor)
Starring Randolph Scott

ಪಖ್ತೂನಿಸ್ತಾನಕ್ಕಾಗಿ ಪಠಾಣರು ದಂಗೆಗೂ ಸಿದ್ಧ

ಪ್ರತ್ಯೇಕ ಪಖ್ತೂನಿಸ್ತಾನದ ನಿರ್ಮಾಣದ ಬಗ್ಗೆ ಪಠಾಣರ ಕಾಳಜಿಯು ವಿಪರೀತವಾಗಿದೆಯೆಂದೂ, ಅದಕ್ಕಾಗಿ ನಡೆಯುತ್ತಿರುವ ಪ್ರಜಾಸತ್ತಾತ್ಮಕ ವಿಧಾನಗಳು ವಿಫಲವಾದಲ್ಲಿ ಅವರು ದಂಗೆಯೇಳಬಹುದೆಂದೂ ಕೇವಲ ೮೦ ಲಕ್ಷ ಪಠಾಣರ ಬೇಡಿಕೆಯನು ಈಡೇರಿಸದೆ ಪಾಕಿಸ್ತಾನವು ಅವರನ್ನು ದಮನ ಮಾಡುತ್ತಿದೆಯೆಂದೂ, ಕಾಶ್ಮೀರದಲ್ಲಿ ಜನಮತಗಣನೆ ಬೇಕೆನ್ನುವ ಪಾಕಿಸ್ತಾನವು ಗಡಿನಾಡಿನ ಜನಮತವನ್ನು ಗೌರವಿಸಬೇಕೆಂದೂ, ಭಾರತದ ಜಗ್ ಎ ಹಿಂದ್ ಸಂಸ್ಥೆಯ ಅಧ್ಯಕ್ಷ ಮೌಲಾನಾ ಮಹಮದ್ ಅಕ್ಬರ್ ಶಾ ಎಂಬುವರು ತಿಳಿಸಿದ್ದಾರೆ

೫ ಸೆಕೆಂಡಿನಲ್ಲಿ ಹೃದಯದ ಶಸ್ತ್ರ ಚಿಕಿತ್ಸೆ

ಹೈದರಾಬಾದಿನ ಉಸ್ಮಾನಿಯಾ ಆಸ್ಪತ್ರೆಯ ಡಾ|| ವಾಸುದೇವರಾವ್ ಎಂಬ ವೈದ್ಯರೊಬ್ಬರು ೧೩ ವರ್ಷದ ಬಾಲಕಿಯ ಹೃದಯದ ಶಸ್ತ್ರ ಚಿಕಿತ್ಸೆಯನ್ನು ಐದು ಸೆಕೆಂಡಿನಲ್ಲಿ ನಡೆಸಿ ಹೃತ್ಕರಣದಿಂದ ಹೃತ್ಕುಕ್ಷಿಗೆ ಹೋಗುವ ರಕ್ತದ ಚಲನೆಯು ನಿಂತುದನ್ನು ಸರಿಪಡಿಸಿರುತ್ತಾರೆ

ಕೃಷ್ಣರಾಜನಗರ ತಾಲ್ಲೂಕು ವಿದ್ಯಾರ್ಥಿಗಳ ಸಂಘ

ರಾಜಧಾನಿಯಲ್ಲಿರುವ ಕೃಷ್ಣರಾಜನಗರ ತಾಲ್ಲೂಕು ವಿದ್ಯಾರ್ಥಿಗಳ ಸಂಘದ ಸಭೆಯು ಶ್ರೀ ಎಸ್ ಕೆ ಶಿವಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿ, ಅಧಿಕಾರ ವರ್ಗಕ್ಕೆ ಚುನಾವಣೆ ನಡೆಸಲಾಯಿತು ಶ್ರೀ ಎಸ್ ಎ ಶಿವಸ್ವಾಮಿಯವರು ಉಪಾಧ್ಯಕ್ಷರಾಗಿಯೂ, ಶ್ರೀ ಕಾಳೇಗೌಡರು ಕಾರ್ಯದರ್ಶಿ ಮತ್ತು ಶ್ರೀ ಆನಂದರವರು ಸಹಾಯಕ ಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟರು ಶ್ರೀಗಳಾದ ಎಸ್. ಎಸ್ ಮಾದೇಗೌಡ ಹೆಚ್ ಜಿ ಬಸವೇಗೌಡ ಎಂ ಪಿ ಗೋಪಾಲರಾವ್, ಹೆಚ್ ಟಿ ಯಡೂರಪ್ಪ, ಹೆಚ್ ಎಸ್ ನಾಗಭೂಷಣ ಮತ್ತು ಚಂದ್ರಗುಪ್ತರವರನ್ನು ಸಮಿತಿ ಸದಸ್ಯರನ್ನಾಗಿಯೂ ಮತ್ತು ಶ್ರೀ ಹೆಚ್. ಎ. ಬಸವರಾಜಪ್ಪನವರನ್ನು ಸಂಚಾಲಕರನ್ನಾಗಿಯೂ ನೇಮಿಸಲಾಯಿತು

ಶಕ್ತಿಯೂ ಕೋವಿಯೂ ತಮ್ಮ ಗುರಿಯನ್ನು ತಪ್ಪಬಹುದು ! ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು !!

ಆದರೆ ಡಾ|| ರಾಜಾರವರ ನೂತನ ಮತ್ತು ಆಶ್ಚರ್ಯಕರವಾದ ಚಿಕಿತ್ಸೆಯು ಮಾತ್ರ ಒಂದೇ ವಾರದ ಅವಧಿಯಲ್ಲಿ ನಿರಾಶೆಯನ್ನು ಹೋಗಲಾಡಿಸಿ ಸಂತೋಷವನ್ನುಂಟುಮಾಡಲು ತಪ್ಪುವುದಿಲ್ಲ

ಆದುದರಿಂದ ನವಯೌವನವನ್ನು, ಅದ್ಭುತ ಶಕ್ತಿಯನ್ನು, ಆರೋಗ್ಯವನ್ನು ಹೊಂದಲು ಲೈಂಗಿಕ ವೈದ್ಯದಲ್ಲಿ ಹೆಸರಾಂತ ಡಾ|| ಎ. [illegible] ರಾಜಾರವರ ಸಲಹೆಯನ್ನು ಪಡೆಯಿರಿ

ಭಾರತದ ಹೆಮ್ಮೆಯಾದ ಡಾ|| ರಾಜಾರವರು ಇತರ ವಿಧಾನದ ಚಿಕಿತ್ಸೆಗಳಿಗಿಂತಲೂ ಅದ್ಭುತವಾದ ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ಜನಗಳಿಗೆ ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವನವನ್ನು ಹುರುಪನ್ನು ಉಂಟುಮಾಡುವುದು [illegible]ಗಳೂ, ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ

ಇಲ್ಲಿಂದಲೇ ಡಾ|| ರಾಜಾರವರನ್ನು ಭೇಟಿ ಮಾಡಿ ನವ ಯೌವನ ನೇತ್ರಶಕ್ತಿ ಮತ್ತು ಚೈತನ್ಯವನ್ನು ಸಂಪಾದಿಸಿ

ಪೌರುಷವನ್ನು ಕಳೆದುಕೊಂಡವರು ತಮ್ಮ ದುರದೃಷ್ಟದಿಂದ ಪಾರಾಗಲು ಇದು ಸುವರ್ಣ ಸುಸಮಯ

ಕಾಲ: ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4ರಿಂದ ರಾತ್ರಿ 9 ಘಂಟೆ ವರೆಗೆ

ರಾಜಾ ಮೆಡಿಕಲ್ ಹಾಲ್,

ಎಲ್ ನಂ. 1-745 ಅಶೋಕಾ ರಸ್ತೆ ಮೈಸೂರು
(ಮೈಸೂರು ಬ್ಯಾಂಕ್ [illegible] ಜಾಗದಿಂದ ೩ನೇ ಕಟ್ಟಡ)

Edited, Printed and Published by A. R. Nagarajan at Sadhvi Press D. Subbaiah Road, Mysore

ಬ್ರಿಟನ್ನಿನ ರೇವಿನಲ್ಲಿ ಅತ್ಯಂತ ಭಾರಿ ಸೈನ್ಯ ಜಮಾವಣೆ

ಬ್ರಿಟನ್ನಿನ ದಕ್ಷಿಣ ರೇವು ನಗರವಾದ ಸೌತ್ ಹ್ಯಾಂಪ್ಟನ್ನಿನಲ್ಲಿ ಏಳು ಸೇನಾ ರವಾನೆ ಹಡಗುಗಳನ್ನು ಕಾಯ್ದಿರಿಸಲಾಗಿದೆ ಹಿಂದೆ ದ್ವಿತೀಯ ಮಹಾ ಯುದ್ಧ ಕಾಲದಲ್ಲಿ ಹಿಟ್ಲರನು ಫ್ರಾನ್ಸನ್ನು ಆಕ್ರಮಿಸಿದ್ದಾಗ ಬ್ರಿಟಿಷ್ ಸೈನ್ಯಗಳು ನಡೆಸಿದ ದಂಡೆಯಾತ್ರೆ ಕಾಲದಿಂದಲೂ ಇಷ್ಟೊಂದು ಭಾರಿ ಪ್ರಮಾಣದಲ್ಲಿ ಸೈನ್ಯ ಜಮಾವಣೆಗೆ ಹಡಗುಗಳನ್ನು ಇದುವರೆಗೆ ಕಾಯ್ದಿರಿಸಿರಲಿಲ್ಲ ಅವುಗಳಲ್ಲಿ ಅತ್ಯಂತ ವೇಗವಾಗಿ ಹೋಗಬಲ್ಲ ೩೦ ಸಾವಿರ ಟನ್ ತೂಕದ ನೇವಾಡಾವೂ ಇದೆ ಇದು ಈಗಾಗಲೇ ಒಂದು ಬಾರಿ ಭೂಮಧ್ಯ ಸಮುದ್ರದಲ್ಲಿರುವ ಸೈಪ್ರಸ್ ದ್ವೀಪಕ್ಕೆ ಹೋಗಿಬಂದಿದೆ ಹಡಗುಗಳ ಪ್ರಯಾಣದ ದಿನವನ್ನು ಗೊತ್ತುಪಡಿಸಿಲ್ಲ ಅವುಗಳಿಗೆ ಮಿಲಿಟರಿ ವಾಹನ ಸಾಮಗ್ರಿಗಳನ್ನು ತುಂಬಲಾಗುತ್ತಿದೆ

ಶಾಂತಾರಾಂ-ಜಯಶ್ರೀಯವರ ವ್ಯಾಜ್ಯದಲ್ಲಿ ರಾಜಿ

ಸುಪ್ರಸಿದ್ಧ ಚಲನಚಿತ್ರ ಡೈರೆಕ್ಟರಾದ ಶ್ರೀ ವಿ ಶಾಂತಾರಾಂರವರು ತಮ್ಮ ದ್ವಿತೀಯ ಪತ್ನಿ ಜಯಶ್ರೀಯವರ ಮೇಲೆ ಸುಮಾರು ೩ ಲಕ್ಷ ರೂಗಳ ಒಡವೆ ಸಂಬಂಧವಾಗಿ ಹೂಡಿದ್ದ ದಾವೆಯಲ್ಲಿ ಉಭಯ ಪಕ್ಷಗಳಿಗೂ ಒಪ್ಪಿತವಾದ ಆಜ್ಞೆಯನ್ನು ಬೊಂಬಾಯಿ ಹೈಕೋರ್ಟಿನವರು ಕೊಟ್ಟಿರುತ್ತಾರೆ ಜಯಶ್ರೀಯವರಿಗೆ ಶಾಂತಾರಾಂರವರು ೫೦,೦೦೦ ರೂ ಕೊಡಬೇಕೆಂದೂ, ಅವರ ವಶದಲ್ಲಿರುವ ನಗಗಳನ್ನು ಇಬ್ಬರ ಹೆಸರಿನಲ್ಲಿ ಡಿಪಾಸಿಟ್ ಇಡಬೇಕೆಂದೂ ನ್ಯಾಯಾಧೀಶರು ಆಜ್ಞೆ ಮಾಡಿರುವರು ಶಾಕುಂತಲ ಚಿತ್ರದ ಉತ್ಸವವು ನಡೆದಾಗ ಆಕೆಗೆ ಬಹುಮಾನವಾಗಿ ಕೊಡಲಾಗಿದ್ದ ಹಲವು ಆಭರಣಗಳು ಆಕೆಯವೆಂದು ನ್ಯಾಯಾಧೀಶರು ತಿಳಿಸಿರುವರು

ರಹದಾರಿ ಇಲ್ಲದೆ ಕಟ್ಟಡ ಕಟ್ಟಿದ ಆಪಾದನೆಯಿಂದ ಖುಲಾಸೆ

ರಾಜಧಾನಿಯ ಸಯ್ಯಾಜಿರಾವ್ ರಸ್ತೆಯ ಜವಳಿ ವ್ಯಾಪಾರಿಗಳಾದ ಶ್ರೀ ಆದಿನಾರಾಯಣ ಶೆಟ್ಟರ ಮಕ್ಕಳು ಶ್ರೀ ಟಿ ಎ ಎಸ್ ರಾಜರವರು ವಿಕ್ಟೋರಿಯಾ ಗರ್ಲ್ಸ್ ಸ್ಕೂಲ್ ಹಿಂಭಾಗದಲ್ಲಿ ರಹದಾರಿ ಪಡೆಯದೆ ಕಟ್ಟಡವೊಂದನ್ನು ಕಟ್ಟಿಸುತ್ತಿದ್ದರೆಂದು ಪುರಸಭೆಯವರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ಅವರಿಗೆ ವಿಧಿಸಿದ್ದ ೭೫ ರೂ ಜುಲ್ಮಾನೆಯ ವಿರುದ್ಧ ಅವರು ಹೂಡಿದ್ದ ಅಪೀಲಿನಲ್ಲಿ ಅಡಿಷನಲ್ ಜಿಲ್ಲಾ ನ್ಯಾಯಾಧೀಶರಾದ ಶ್ರೀ ಎ ಎ ಮಜೀದ್‌ರವರು ನೆನ್ನೆ ತೀರ್ಪಿತ್ತು ಆಪಾದಿತರು ತಪ್ಪಿತಸ್ಥರಲ್ಲವೆಂದು ಹೇಳಿ ಖುಲಾಸೆ ಮಾಡಿರುತ್ತಾರೆ

ಎಸ್. ರಾಮರತ್ನಂರವರ ಅಮೋಘ ಸಂಗೀತ ಕಛೇರಿ

ಜಯನಗರದಲ್ಲಿರುವ ಸಾಲಿಗ್ರಾಮದ ಶ್ರೀಕಂಠ ಶಾಸ್ತ್ರಿಗಳ ಮನೆಯಲ್ಲಿ ದ್ವಾದಶಿ ಪ್ರಯುಕ್ತ ವಿ|| ವಿ|| ಗೋಟುವಾದ್ಯಂ ನಾರಾಯಣ ಅಯ್ಯಂಗಾರ್ಯರ ಮಕ್ಕಳು ವಿ|| ಎಸ್ ರಾಮರತ್ನಂರವರ ಸಂಗೀತ ಕಛೇರಿಯು ವಿ|| ತಾಂಡವಮೂರ್ತಿಯವರ ಪಿಟೀಲು ಮತ್ತು ವಿ|| ಕೆ ರಾಮರಾವ್‌ರ ಮೃದಂಗದೊಡನೆ ಅಮೋಘವಾಗಿ ನಡೆಯಿತು ನೆರೆದಿದ್ದ ನೂರಾರು ಮಂದಿ ಕರ್ಣಾನಂದ ಹೊಂದಿದರು

೫೫ ಮೊಮ್ಮಕ್ಕಳುಳ್ಳ ೧೧೦ ವರ್ಷದ ಮುದುಕ

ಹೈದರಾಬಾದಿನ ಮುಶಿರಾಂಬಾಗ್ ಎಂಬಲ್ಲಿ ಶ್ರೀ ಎಂ. ರಂಗಯ್ಯ ಎಂಬ ೧೧೦ ವರ್ಷಕ್ಕೂ ಹೆಚ್ಚು ವಯಸ್ಸಿನ ವೃದ್ಧನು ವಾಸಿಸುತ್ತಿರುವುದಾಗಿಯೂ, ಈತನಿಗೆ ೫೫ ಜನ ಮೊಮ್ಮಕ್ಕಳು ಇರುವುದಾಗಿಯೂ ತಿಳಿದುಬಂದಿದೆ ಆತನು ಕಳೆದ ೫೫ ವರ್ಷಗಳಿಂದಲೂ ಮಾಲಿ ಪಟೇಲ್ ಕೆಲಸದಲ್ಲಿದ್ದಾನೆ ಆತನಿಗೆ ೧೦೦ ಎಕರೆ ಭೂಮಿಯಿದೆ. ಅವನು ದಿನವೂ ೩-೪ ಮೈಲಿ ಓಡಾಡಿಕೊಂಡು, ಯಾವ ಖಾಯಿಲೆಯೂ ಇಲ್ಲದೆ ದೃಢವಾಗಿರುವನು ಆತನಿಗೆ ಇಬ್ಬರು ಹೆಂಡಿರಿಂದ ೨೫ ಮಕ್ಕಳು ಹುಟ್ಟಿ, ಈಗ ಆರು ಗಂಡು ಮತ್ತು ಆರು ಹೆಣ್ಣು ಮಕ್ಕಳು ಉಳಿದಿದ್ದಾರೆ ಇವರು ಮತ್ತು ಇವರ ಮಕ್ಕಳು ಆತನೊಂದಿಗೆ ಒಟ್ಟಿಗೆ ಇದ್ದಾರೆ. ಇವರಿಗೆ ತಿಂಗಳಿಗೆ ೮ ಪಲ್ಲ ಅಕ್ಕಿಯು ಬೇಕಾಗುವುದೆಂದು ಹೇಳಲಾಗಿದೆ

ಗಣಪತಿ ಉತ್ಸವ

ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ನಗರ ಶಾಖೆಯ ಆಶ್ರಯದಲ್ಲಿ ಗಣಪತಿ ಮಹೋತ್ಸವವು ನೂರಡಿ ರಸ್ತೆಯಲ್ಲಿರುವ ಭಾರತೀಯ ಕನ್ಯಾ ವಿದ್ಯಾಲಯದಲ್ಲಿ ಇದೇ ೮ ಮತ್ತು ೯ನೇ ತಾರೀಕು ನಡೆಯುತ್ತದೆ. ಸಾರ್ವಜನಿಕರು ಉದಾರ ಸಹಾಯ ಮಾಡಿ ಸಹಕರಿಸಬೇಕೆಂದು ಕಾರ್ಯದರ್ಶಿಗಳಾದ ಶ್ರೀ ಕೆ ಆರ್ ತಮ್ಮಯ್ಯನವರು ಪ್ರಾರ್ಥಿಸಿರುತ್ತಾರೆ.

ಹರಿಕಥೆ ಮತ್ತು ಅಲಂಕಾರ

ಕಾಳಮ್ಮನಗುಡಿ ಬೀದಿ ಚೌಡೇಶ್ವರಿ ರಾಮಲಿಂಗೇಶ್ವರ ದೇವಸ್ಥಾನದಲ್ಲಿ ಅಮಾವಾಸ್ಯೆ ಪ್ರಯುಕ್ತ ಈ ಸಂಜೆ ೭ ಘಂಟೆಗೆ ಭದ್ರಾವತಿಯ ಶ್ರೀ ವೆಂಕಟೇಶದಾಸರಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆ ಮತ್ತು ಅಮ್ಮನವರಿಗೆ ಶ್ರೀನಿವಾಸ ದೇವರ ಅಲಂಕಾರವು, ವಿಧಾನ ಪರಿಷತ್ತಿನ ಸದಸ್ಯ ಶ್ರೀ ಟಿ ವೆಂಕಟರಮಣಯ್ಯನವರ ಸಮ್ಮುಖದಲ್ಲೂ, ನಾಳೆ ಸಂಜೆ ೭ ಘಂಟೆಗೆ ಮೇಲ್ಕಂಠದಾಸರಿಂದ ಗಿರಿಜಾ ಕಲ್ಯಾಣ ಎಂಬ ಕಥೆ ಮತ್ತು ಅಮ್ಮನವರಿಗೆ ಈಶ್ವರ ಪಾರ್ವತಿ ಅಲಂಕಾರವು ವಿದ್ಯುಚ್ಛಕ್ತಿ ಸೂಪರಿಂಟೆಂಡೆಂಟ್ ಶ್ರೀ ಡಿ ಎಸ್ ಶ್ರೀಕಂಠಯ್ಯನವರ ಸಮ್ಮುಖದಲ್ಲೂ ನಡೆಯುತ್ತವೆ

ಆಯುರ್ವೇದ ವಿದ್ಯಾರ್ಥಿಗಳ ಉಪವಾಸ ಮುಷ್ಕರ

ಮುಷ್ಕರ ಹೂಡಿರುವ ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳ ಬಗ್ಗೆ ಸರ್ಕಾರದ ಆಸಕ್ತಿಗಾಗಿ ಬರುವ ಸೋಮವಾರದಿಂದ ನಿತ್ಯವೂ ೧೦ ವಿದ್ಯಾರ್ಥಿಗಳಂತೆ ಒಂದೊಂದು ದಿನದ ಉಪವಾಸವನ್ನು ಕಾಲೇಜಿನ ಮುಂಭಾಗದಲ್ಲಿ ನಡೆಸುವರು

ನಗರಕ್ಕೆ ಭಾರತದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಕಾರ್ಯದರ್ಶಿ ಭೇಟಿ

ಕರ್ನಾಟಕದ ಕಮ್ಯೂನಿಸ್ಟ್ ಪಕ್ಷದ ಸಭೆಯು ಇದೇ ತಿಂಗಳು ೧೮ ರಿಂದ ೨೦ರ ವರೆಗೆ ರಾಜಧಾನಿಯಲ್ಲಿ ಸೇರುವುದು. ಅದರಲ್ಲಿ ಅಖಿಲ ಭಾರತ ಪಕ್ಷದ ಪ್ರಧಾನ ಕಾರ್ಯದರ್ಶಿ ಅಜಯಘೋಷರವರೂ ಕರ್ನಾಟಕದ ನಾನಾ ಭಾಗಗಳ ೬೦ ಮಂದಿ ಪ್ರತಿನಿಧಿಗಳೂ ಭಾಗವಹಿಸುವರು ನೂತನ ಮೈಸೂರು ಸಂಸ್ಥಾನಕ್ಕೆ ಸಂಬಂಧಪಟ್ಟ ವಿಷಯಗಳನ್ನು ಅಲ್ಲಿ ಪರಿಶೀಲಿಸಲಾಗುವುದು

MIRACLE MAN WITH UNRIVALLED POWER!
Prof. MARVEL F.R.A.S
(ASTRO SPIRITUAL HEALER OF HUMAN SUFFERINGS)
Will allow consultation from 9 A.M. to 1 P.M. and 3 P.M. to 7 P.M. during his short Camp
at Room No 2 Ritz Hotel, Church Road, MYSORE
HAVE YOU BEEN BENEFITTED?
— If not so far, consult to-day for sure success in :—
Finance, Love, Litigation Speculation, Promotion, Service, Son, Disease, Marriage, Property, Domestic Trouble Evil Spell & ALL CONFIDENTIAL PROBLEMS
(Quick Results Guaranteed-Strict Secrecy Observed)
REMEMBER, "ASTRO-SPIRITUALISM is the Greatest Driving Power of Living"
Consultation Fee Rs 11/-

ಟೆಲಿಫೋನ್ ನಂ. 792

ಗೌರಿಹಬ್ಬಕ್ಕಾಗಿ

ಮೈಸೂರು ಸಿಲ್ಕು, ಧರ್ಮಾವರಂ, ಪೂನಾ, ಬೆಳಗಾಂ ಸೀರೆಗಳು

ನವೀನ ಮಾದರಿಯಲ್ಲಿ ಬಂದಿವೆ

M. V. ಭೋಜಯ್ಯ

[illegible]

ಇಂಡಿಯನ್ ಬ್ಯಾಂಕ್ ಎದುರು.

ಮೈಸೂರು ಫೋ - 446

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್

ಉಬ್ಬಸ ಮತ್ತು ಗೂರಲು ವ್ಯಾಧಿಗಳಿಗೆ ಸಿದ್ಧೌಷಧ

ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶಗಳಿಗೆ ಏಜೆಂಟರು

ಸತ್ಯ ಅಂಡ್ ಕೋ.,

ಔಷಧಿ ವ್ಯಾಪಾರಿಗಳು

71/1 [illegible]

ಶ್ರೀರಾಮಾಚಾರ್ಲು ರೋಡ್, ಬೆಂಗಳೂರು-2

ಸಂಪುಟ : ೧೫] SADHVI : WEDNESDAY 5—9—1956 ಮೈಸೂರು : ಬುಧವಾರ ೫—೯—೧೯೫೬ [ಸಂಚಿಕೆ : ೪೬

ನಗರದಲ್ಲಿ ಇಂದು ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಪುರಸಭಾಧಿವೇಶನದಲ್ಲಿ 'ವಿರೋಧ ಪಕ್ಷದವರ ಸಭಾ ತ್ಯಾಗ

ಆಹಾರ ಧಾನ್ಯಗಳ ಬೆಲೆ ಏರಿಕೆ ಬಗ್ಗೆ ಪ್ರತಿಭಟನೆ

ಮೈಸೂರು ೪

ತಮ್ಮ ಪಕ್ಷದ ಸದಸ್ಯರೊಬ್ಬರ ನಿರ್ಣಯಕ್ಕೆ ಕಾಂಗ್ರೆಸ್ ಪಕ್ಷದವರು ಸೂಚಿಸಿದ ತಿದ್ದುಪಡಿಯು ತಮ್ಮ ವಿರೋಧವಿದ್ದರೂ ಸಹ ಅಂಗೀಕೃತವಾದುದಕ್ಕೂ ಮತ್ತು ತಿದ್ದುಪಡಿಗೆ ತತ್ಸಂಬಂಧ ಪ್ರತಿಭಟನೆಯನ್ನು ವ್ಯಕ್ತಪಡಿಸಲೂ ಪುರಸಭೆಯ ಸಂಯುಕ್ತ ಪ್ರಜಾ ಪಕ್ಷದ ಐದು ಸದಸ್ಯರು ಶ್ರೀ ಬಿ. ಕೆ. ರಾಮಕೃಷ್ಣಯ್ಯನವರ ನೇತೃತ್ವದಲ್ಲಿ ನೆನ್ನೆ ಪುರಸಭಾಧಿವೇಶನದಲ್ಲಿ ಸಭಾತ್ಯಾಗ ಮಾಡಿದರು.

ನಗರದಲ್ಲಿ ಆಹಾರ ಪದಾರ್ಥಗಳು ಮತ್ತು ಇತರ ನಿತ್ಯೋಪಯುಕ್ತ ವಸ್ತುಗಳ ಬೆಲೆಯು ವಿಪರೀತ ಏರುವುದಕ್ಕೆ ಪುರಸಭೆಯು ತೀವ್ರ ಆತಂಕವನ್ನು ವ್ಯಕ್ತಪಡಿಸುತ್ತಾ ಸಮೀಪದಲ್ಲಿಯೇ ಒದಗಿರುವ ದಸರಾದಲ್ಲಿ ಪರಿಸ್ಥಿತಿಯು ಮತ್ತಷ್ಟು ಕೆಡಬಹುದೆಂದು ಸೂಚಿಸಿ, ಆಹಾರ ಧಾನ್ಯಗಳ ಬೆಲೆಯನ್ನು ಸಾಧಾರಣ ಮಟ್ಟಕ್ಕಿಳಿಸಲು ಕ್ರಮ ಕೈಗೊಳ್ಳಬೇಕೆಂದೂ ಮತ್ತು ದಸರಾ ಪರಿಸ್ಥಿತಿಯನ್ನೆದುರಿಸಲು ಕೇಂದ್ರವೂ ಮತ್ತು ಮೈಸೂರು ಸರ್ಕಾರಗಳೂ ಈ ಕೂಡಲೇ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕೆಂದೂ ಪ್ರಾರ್ಥಿಸುವ ನಿರ್ಣಯವೊಂದನ್ನು ಶ್ರೀ ಎಚ್. ಆರ್. ಸೂರ್ ಹುಸೇನರು ಮಂಡಿಸಿದ್ದರು.

ಶ್ರೀ ಬಿ. ಎಂ. ಲಿಂಗೇಗೌಡರು 'ಈ ಕೂಡಲೇ ಅಗತ್ಯ ಕ್ರಮಗಳನ್ನು' ಎಂಬುವುದಕ್ಕೆ ಬದಲಾಗಿ "ಈಗಿನ ಕ್ರಮಗಳನ್ನು ಮುಂದುವರಿಸಬೇಕೆಂದು" ಎಂಬುದಾಗಿ ತಿದ್ದುಪಡಿ ಸೂಚಿಸಿದರು. ಅದನ್ನು ಸಮರ್ಥಿಸಿ ಕಾಂಗ್ರೆಸ್ ಪಕ್ಷದ ಸದಸ್ಯರು ಸರ್ಕಾರವು ಇದುವರೆಗೆ ಕೈಗೊಂಡ ಕ್ರಮಗಳನ್ನು ವಿವರಿಸಿದರು.

ಆದರೆ ವಿರೋಧ ಪಕ್ಷದ ಸದಸ್ಯರು ತಿದ್ದುಪಡಿಯನ್ನು ಟೀಕಿಸಿ, ಸರ್ಕಾರವು ಧಾನ್ಯಗಳ ಬೆಲೆ ನಿಗದಿಪಡಿಸಿ ಧಾನ್ಯ ಸಂಗ್ರಹವನ್ನು ತಡೆಗಟ್ಟಲು ಶಾಸನ ರಚಿಸಬೇಕೆಂದೂ, ಆದ್ದರಿಂದ ತಿದ್ದುಪಡಿಯು ಅನಾವಶ್ಯಕವೆಂದೂ ವಾದಿಸಿದರು.

ಆದರೆ ತಿದ್ದುಪಡಿಯು ಬಹುಮತದಿಂದ ಅಂಗೀಕೃತವಾಯಿತು. ಅನಂತರ ತಿದ್ದುಪಡಿಗೆ ತಮ್ಮ ಪ್ರತಿಭಟನೆಯನ್ನು ಸೂಚಿಸಲು ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು.

ಢಾಕಾದಲ್ಲಿ ಹಸಿದ ಜನರ ಗುಂಪಿನ ಮೇಲೆ ಗುಂಡಿನೇಟು

ಮೂವರ ಮರಣ ಮತ್ತು ೨೪ ಮಂದಿಗೆ ಗಾಯ

ಪೂರ್ವ ಪಾಕಿಸ್ತಾನದ ರಾಜಧಾನಿ ಢಾಕಾದಲ್ಲಿ ನೆನ್ನೆ ಹಳ್ಳಿಯವರ ಗುಂಪೊಂದರ ಮೇಲೆ ಪೊಲೀಸರು ಗುಂಡು ಹಾರಿಸಿದ ಪರಿಣಾಮವಾಗಿ ಮೂವರು ಕೊಲ್ಲಲ್ಪಟ್ಟು ೨೪ ಮಂದಿಗೆ ಗಾಯಗಳಾದುವು. ಹಸಿದವರ ಮೆರವಣಿಗೆಯನ್ನು ನಡೆಸಿದಾಗ ಈ ಘಟನೆಯು ನಡೆಯಿತು. ಘಟನೆಯ ಕೂಡಲೇ ನಾನಾ ಕಾಲೇಜು ವಿದ್ಯಾರ್ಥಿಗಳು ತರಗತಿಗಳಿಂದ ಹೊರ ಬಂದರು.

ಸೈಕಲ್ ಡಬ್ಬಲ್ ರೈಡಿಂಗ್ ರದ್ದಿನ ಪ್ರಶ್ನೆ

ಬೇರೆ ರೂಪದಲ್ಲಿ ಮಂಡಿಸಲು ಪುರಸಭೆಯಲ್ಲಿ ನಿರ್ಣಯ ವಾಪಸು

ಮೈಸೂರು ೪

ಪುರಸಭೆಯ ಮುಂದುವರಿದ ಅಧಿವೇಶನವು ನೆನ್ನೆ ಸಂಜೆ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ನಡೆಯಿತು.

ಪುರಸಭೆ [illegible] ಕಮಿಷನರ್ [illegible] ಮತ್ತು [illegible] ಇದ್ದರು. [illegible] ಈ ಬಗ್ಗೆ [illegible] ವಿವರಗಳನ್ನು ತಿಳಿಸಲು ನಿರಾಕರಿಸಿದರು.

[illegible] ಶ್ರೀ ಪಿ. ಪಿ. ರಾಮಸ್ವಾಮಿ [illegible] ಮತ್ತು ಸದಸ್ಯರು [illegible] ಪಡಿಸಿದ ಗಳಿಗೆ ಅಧ್ಯಕ್ಷರು ವಿವರವನ್ನೂ ತಿಳಿಸಲು ನಿರಾಕರಿಸಿದರು.

ಪುರಸಭೆಯ ಒಂದು ಕ್ಯಾಂಟೀನಿನ ಬಾಡಿಗೆ [illegible] ಸಂಬಂಧವನ್ನು ಮತ್ತೊಬ್ಬನು ಪಡೆದಿದ್ದಾನೆಂಬ [illegible] ವೇಳೆ ಅವನ ಕೈ ಬೇರೆ ಮತ್ತೆಯನ್ನು ಬೆಂಗಳೂರಿಗೆ ಪರಿಣತರ ಪರೀಕ್ಷೆಗಾಗಿ ಕಳುಹಿಸಲಾಗಿದೆಯೆಂದೂ, ಅದರಿಂದ ಈಗ ಒಂದು ಪತ್ರ ಬಂದಿದೆಯೆಂದೂ, ಈ ವಿಷಯಗಳನ್ನು ಸಧ್ಯಕ್ಕೆ ರಹಸ್ಯವಾಗಿಡಬೇಕಾದುದರಿಂದ ಹೆಚ್ಚಿಗೆ ವಿವರವನ್ನೂ ತಿಳಿಸಲಾಗುವುದಿಲ್ಲವೆಂದೂ ಅಧ್ಯಕ್ಷರು ಶ್ರೀ ಎಂ. ವೆಂಕಟಲಿಂಗಯ್ಯನವರ ಪ್ರಶ್ನೆಗೆ ಉತ್ತರವಿತ್ತರು.

ಜಲಪ್ರವಾಹ ಪೀಡಿತರಿಗೋಸ್ಕರ ಕಲ್ಲಿನ ಆಟದ ಮೈದಾನದಲ್ಲಿ [illegible] ಇಡಬೇಕೆಂಬ ಶ್ರೀ ಜೋಗಿಸಿದ್ದಯ್ಯನವರ ಮತ್ತು ರಸ್ತೆಗಳಿಗೆ ಟಾರ್ ಮತ್ತು ಕಾಂಕ್ರೀಟ್ ಹಾಕಿ ವಾಹನ ಸಂಚಾರಕ್ಕೆ ಸೌಲಭ್ಯವನ್ನು ಒದಗಿಸುವಂತೆ ಪಾದಚಾರಿಗಳಿಗೂ ಒಳ್ಳೆಯ ಫುಟ್ ಪಾತ್‌ಗಳನ್ನೇ ಮಾಡಿಸಬೇಕೆಂಬ ಶ್ರೀ [illegible]ಯವರ ನಿರ್ಣಯಗಳು ಅಂಗೀಕೃತವಾದುವು.

ಸೈಕಲ್ ಡಬ್ಬಲ್ ರೈಡಿಂಗ್ ನಿಷೇಧಕ್ಕಾಗಿ ಕೋರಿ ಬಂದಿದ್ದ [illegible]ಯ್ಯನವರ ನಿರ್ಣಯವು ಪುರಸಭೆಯ ಉಪನಿಯಮಗಳಿಗೆ ಸಂಬಂಧಿಸಿರುವುದರಿಂದ ಅದನ್ನು ಬೇರೆ ರೂಪದಲ್ಲಿ ತರಬೇಕೆಂದು ಸದಸ್ಯರು ಅಭಿಪ್ರಾಯಪಡಲಾಗಿ ಸೂಚಕರು ಅದನ್ನು ವಾಪಸು ಪಡೆದರು.

ರೈಲು ಅಪಘಾತದಲ್ಲಿ ಮೃತಪಟ್ಟವರ ಬಗ್ಗೆ ಪುರಸಭೆಯ ಸಂತಾಪ

ಕಳೆದ ಗುರುವಾರ ರಾತ್ರಿ ಹೈದರಾಬಾದಿನ ಬಳಿ ಆದ ರೈಲು ಅಪಘಾತದಲ್ಲಿ ಮೃತಪಟ್ಟವರ ಬಗ್ಗೆ ವಿಷಾದ ಸೂಚಿಸಿ, ಅವರ ಬಂಧುಗಳಿಗೆ ಸಂತಾಪವನ್ನು ಕೋರಿ ಎಂಥವರಿಗೆ ಅನುತಾಪವನ್ನು ಸೂಚಿಸುವ ನಿರ್ಣಯವನ್ನು ನೆನ್ನೆ ನಗರದ ಪೌರಸಭೆಯ ಅಧಿವೇಶನದಲ್ಲಿ ಅಂಗೀಕರಿಸಲಾಯಿತು. ಸದಸ್ಯರು ಎರಡು ನಿಮಿಷ ಕಾಲ ಎದ್ದು ನಿಂತು, ಮೌನವನ್ನು ತಾಳಿದ್ದರು.

ಮೈಸೂರು ಸರ್ಕಾರದ ಸಾಲ ಭರ್ತಿ

ಸ್ವಂ ಸು ತಂತಿ] ಬೆಂಗಳೂರು ೪

ಮೈಸೂರು ಸರ್ಕಾರದ ೪ ಕೋಟಿ ರೂ. ಸಾಲ ನೆನ್ನೆಯೇ ಭರ್ತಿಯಾಗಿ ಹೆಚ್ಚು ಹಣವೂ ಬಂದಿದೆ. ನೆನ್ನೆ ಸಂಜೆ ಕಾಲದ ಅವಧಿಯನ್ನು ಮುಕ್ತಾಯಗೊಳಿಸಲಾಯಿತು. ಸರ್ಕಾರಕ್ಕೆ ಸಾಲ ಕೊಟ್ಟಿರುವವರೆಲ್ಲರಿಗೂ ವಂದನೆಗಳನ್ನು ಅರ್ಪಿಸಿದ್ದಾರೆ.

○ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪ, ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾವ್ ಮತ್ತು ಇತರ ಅಧಿಕಾರಿಗಳು ಈ ಮಧ್ಯಾಹ್ನ ವಿಮಾನದಲ್ಲಿ ದೆಹಲಿಯಿಂದ ಹಿಂದಿರುಗಿದರು.

ಕೃಷ್ಣ ಜಯಂತಿ ಸಂಗೀತ

ರಾಜಧಾನಿಯ ಒಂಟಿಕೊಪ್ಪಲು ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಾಲಯದಲ್ಲಿ ಶ್ರೀ ಕೃಷ್ಣೋತ್ಸವದ ಅಂಗವಾಗಿ ಈ ರಾತ್ರಿ ವಿ|| ಶ್ರೀನಿವಾಸಯ್ಯಂಗಾರ್ ಮತ್ತು ಪಾರ್ಟಿಯವರಿಂದ ಓಲಗವಾದ್ಯವೂ, ನಾಳೆ ರಾತ್ರಿ ಆ|| ವಿ|| ಬಿ. ಎಸ್. ವಿಜಯರಾಘವರವರ ಸಂಗೀತವು ಆ|| ವಿ|| ಮೆಚ್, ವಿ. ರಾಮರಾಯರ ಪಿಟೀಲು ಮತ್ತು ವಿ|| ವಿ. ರಾಜಗೋಪಾಲ್‌ರವರ ಮೃದಂಗ ಸಹಿತ ನಡೆಯುವುದು.

ಸೀತಾವಿಲಾಸ ಅಗ್ರಹಾರದ ಸೀತಾರಾಮ ದೇವಸ್ಥಾನದಲ್ಲಿ ನಾಳೆ ಸಂಜೆ ೭ ಘಂಟೆಗೆ ವಿ|| ಬಿ. ಕೆ. ಪದ್ಮನಾಭರಾಯರ ಸಂಗೀತವು, ಬೆಂಗಳೂರು ವಿ|| ಬಿ. ಆರ್. ಗೋವಿಂದಸ್ವಾಮಿಯವರ ಪಿಟೀಲು ಮತ್ತು ಸಂ|| ವಿ|| ಟಿ. ಎಂ. ಪುಟ್ಟಸ್ವಾಮಯ್ಯನವರ ಮೃದಂಗದೊಡನೆ ನಡೆಯುವುದು.

ಗಣಪತಿ ಉತ್ಸವ

ರಾಜಧಾನಿಯ ರಾಮವಿಲಾಸ ಅಗ್ರಹಾರದ ಯುವಕರ ಸಾಂಸ್ಕೃತಿಕ ಸಂಘದ ಆಶ್ರಯದಲ್ಲಿ ಪ್ರತಿ ವರ್ಷದಂತೆ ಈ ಸಾರಿಯೂ ವಿದ್ಯಾ ಗಣಪತಿ ಉತ್ಸವವನ್ನು ನೆರವೇರಿಸಲಾಗುತ್ತದೆ. ಉತ್ಸವದಲ್ಲಿ ಸಕಲರೂ ಭಾಗವಹಿಸುವಂತೆ ಕೋರಲಾಗಿದೆ.

ಸೀತಾ ಸದನದ ಅಧಿಕಾರ ವರ್ಗ

ರಾಜಧಾನಿಯ ಚಾಮುಂಡಿಪುರದಲ್ಲಿರುವ ಸೀತಾ ಸದನಕ್ಕೆ ಶ್ರೀಮತಿ ಪಿ. ವೆಂಕಮ್ಮ, ಸೀತಾರಾಮಯ್ಯನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಶ್ರೀಮತಿ ಪಾರ್ವತಮ್ಮ ಟಿ. ಎಲ್. ಸುಬ್ಬರಾಯರು ಉಪಾಧ್ಯಕ್ಷರಾಗಿಯೂ, ಶ್ರೀಮತಿ ಪದ್ಮ ನರಸಿಂಹಮೂರ್ತಿಯವರು ಕಾರ್ಯದರ್ಶಿಯಾಗಿಯೂ, ಎಸ್. ಪದ್ಮಮ್ಮನವರು ಸಹಕಾರ್ಯದರ್ಶಿಯಾಗಿಯೂ ಆರಿಸಲ್ಪಟ್ಟಿರುವರು. ಶ್ರೀಮತಿ ವಿದ್ಯಾವತಮ್ಮ ವಾಸುದೇವರಾಜುರವರು ಖಜಾಂಚಿಯಾಗಿದ್ದಾರೆ. ಶ್ರೀಮತಿಗಳಾದ ಲಕ್ಷಮ್ಮ ವೇದಾದ್ರಿ, ಲೀಲಮ್ಮ ಸಂಜೀವರಾವ್, ವೆಂಕಮ್ಮ ಶ್ರೀನಿವಾಸರಾವ್, ಸರೋಜಮ್ಮ ಸಿ. [illegible], ಸಿ. ಎಂ. ಸಾವಿತ್ರಮ್ಮ, ಕೆ. ಸುಂದರಮ್ಮ, ವಿ. ಸರೋಜಿನಿಬಾಯಿ ಖನೋಳ್ಕರ್, ಸುಬ್ಬಮ್ಮ ಶ್ರೀನಿವಾಸಮೂರ್ತಿ, ವಿ. ಎಸ್. ಸುಂದರಮ್ಮನವರುಗಳು ಕಾರ್ಯಕಾರಿ ಸಮಿತಿ ಸದಸ್ಯೆಯರಾಗಿರುವರು.

ಕಾಲೇಜು ವಿದ್ಯಾರ್ಥಿಗಳ ಮುಷ್ಕರ

ಆಯುರ್ವೇದ ವಿದ್ಯಾರ್ಥಿಗಳ ಬೇಡಿಕೆಗೆ ಬೆಂಬಲ

ಮೈಸೂರು ೪

ಮೊದಲೇ ನಿರ್ಧರಿಸಿದ್ದಂತೆ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳ ಮುಷ್ಕರಕ್ಕೆ ಸಹಾನುಭೂತಿಯನ್ನು ಸೂಚಿಸಲು ನಗರದ ಅನೇಕ ಕಾಲೇಜುಗಳ ವಿದ್ಯಾರ್ಥಿಗಳು ಈ ದಿನ ಸಾಂಕೇತಿಕ ಮುಷ್ಕರವನ್ನು ಘೋಷಿಸಿದರು. ಈ ದಿನ ಬೆಳಗಿನಿಂದಲೂ ಆಯುರ್ವೇದ ಮತ್ತು ಯುನಾನಿ ಕಾಲೇಜು ವಿದ್ಯಾರ್ಥಿಗಳು ತಂಡತಂಡಗಳಾಗಿ ವಿವಿಧ ಕಾಲೇಜುಗಳ ಬಳಿ ಹೋಗಿ ಮುಷ್ಕರದ ವ್ಯವಸ್ಥೆ ಮಾಡಿದರು. ಸಿ. ಪಿ. ಸಿ. ವೃತ್ತಿ ಶಿಕ್ಷಣ ಶಾಲೆ ಮತ್ತು ಸ್ಕೂಲ್ ಆಫ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್ ವಿದ್ಯಾರ್ಥಿಗಳು ಅವರೊಡನೆ ಸೇರಿ ಸ್ಕೂಟರ್ ಮೇಲೆ ಮೆರವಣಿಗೆ ನಡೆಸಿದರು. ನಂತರ ೧೧ ಗಂಟೆ ವೇಳೆಗೆ ಮುಷ್ಕರಕಾರರು ಮಹಾರಾಜಾ ಕಾಲೇಜು ಮತ್ತು ಯುವರಾಜಾ ಕಾಲೇಜು ಬಳಿ ಬಂದರು. ಎರಡು ಕಾಲೇಜುಗಳ ವಿದ್ಯಾರ್ಥಿಗಳೂ ಸಂಪೂರ್ಣವಾಗಿ ಹರತಾಳವನ್ನು ಆಚರಿಸಿದರು. ನಂತರ ಸಾವಿರಾರು ವಿದ್ಯಾರ್ಥಿಗಳು ಮೆರವಣಿಗೆಯಲ್ಲಿ ಟೌನ್‌ಹಾಲ್ ಬಳಿಗೆ ತೆರಳಿ ಅಲ್ಲಿ ಸಭೆ ನಡೆಸಿದರು. ಮಹಾರಾಣಿ ಕಾಲೇಜು, ವೆ ಡಿಕಲ್ ಮತ್ತು ಉಪಾಧ್ಯಾಯರ ಕಾಲೇಜುಗಳಲ್ಲಿ ಮುಷ್ಕರವು ನಡೆಯಲಿಲ್ಲ. ಶಾರದಾವಿಲಾಸ ಕಾಲೇಜಿನಲ್ಲೂ ತರಗತಿಗಳು ಎಂದಿನಂತೆ ನಡೆದುವು. ಆ ಕಾಲೇಜುಗಳ ಕೆಲವು ವಿದ್ಯಾರ್ಥಿಗಳು ಮಾತ್ರ ಮುಷ್ಕರದಲ್ಲಿ ಭಾಗವಹಿಸಿದ್ದರು. ಬನುಮಯ್ಯ ಕಾಲೇಜಿನ ಒಂದು ಮಂದಿ ಮುಷ್ಕರದಲ್ಲಿ ಸೇರಿದ್ದರು.

ಶ್ರೀ ಎಚ್. ಆರ್. ಶಿಲ್ಪಯರ ಅಧ್ಯಕ್ಷತೆಯಲ್ಲಿ ನಡೆದ ಟೌನ್‌ಹಾಲ್ ಸಭೆಯಲ್ಲಿ ಅನೇಕ ವಿದ್ಯಾರ್ಥಿಗಳು ಭಾಷಣ ಮಾಡಿ ಸರ್ಕಾರದ ಉದಾಸೀನತೆಯನ್ನು ಟೀಕಿಸಿ ನಗರ ನಾಗರಿಕರು ವಿದ್ಯಾರ್ಥಿಗಳಿಗೆ ಸಹಾಯ ಮಾಡಬೇಕೆಂದು ಕೋರಿದರು. ಆಯುರ್ವೇದ ವಿದ್ಯಾರ್ಥಿಗಳಿಗೆ ಬೆಂಬಲ ನೀಡಬೇಕೆಂದೂ ಅವರ ಬೇಡಿಕೆಗಳನ್ನು ಸರ್ಕಾರವು ಬೇಗನೆ ಈಡೇರಿಸದಿದ್ದರೆ, ಇಡೀ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳೆಲ್ಲರೂ ಮುಷ್ಕರ ಹೂಡಬೇಕೆಂದೂ, ಕಾಲೇಜಿಗೆ ವಿಶ್ವವಿದ್ಯಾಲಯವು ಮನ್ನಣೆ ನೀಡಬೇಕೆಂದೂ ನಿರ್ಣಯ ಮಾಡಲಾಯಿತು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಗಿಟಾರ್ ೭-೧೫ ದೇವರನಾಮಗಳು ೭-೩೦ ಎಚ್. ರಾಘವೇಂದ್ರರಾವ್—ಕಾವ್ಯವಾಚನ ೮ ಗೌರಮ್ಮ ಎಚ್. ಅಯ್ಯ—ಕಾವ್ಯವಾಚನ ಮಧ್ಯಾಹ್ನ ೧೨ [illegible] ದೇವಪ್ಪ—ಪಿಟೀಲು ೧೨-೩೦ ಸಂಗೀತ ೧ ಸಿತಾರ್ ೧-೫೦ ಗಿಟಾರ್. [illegible] ಪ್ರೌಢ ಶಾಲೆಗಳಿಗಾಗಿ ಸಂಜೆ [illegible] ಸಿತಾರ್ ೬-[illegible] ಜಾನಪದ ಗೀತೆ ೭-೩೦ ತಾಳವಾದ್ಯ ಕಚೇರಿ. ೭ ಪುರಂದರದಾಸರ ಕೃತಿಗಳು ೯-೧೫ ಪರಿವರ್ತನೆಯ ನಿರ್ಮಾಣ—(ದಿ ನಿರ್ಮಾಣ ಆಫ್ ದಿ ಮಾಂಡರ್) ೯-[illegible] ಭಾಷಣ ೯-೩೦ [illegible] ನಾಟಕ ೧೦ ಮುಕ್ತಾಯ

ಪಂಚ ವಾರ್ಷಿಕ ಯೋಜನೆಗಳ ತತ್ವ

ಕಾಲೇಜು ಸಂಘದಲ್ಲಿ ಹನುಮಂತಯ್ಯನವರ ಭಾಷಣ

ಮೈಸೂರು ೫

ವಿಶ್ವವಿದ್ಯಾನಿಲಯ ಅರ್ಥ ಶಾಸ್ತ್ರ ಮತ್ತು ಸಮಾಜ ಶಾಸ್ತ್ರ ಸಂಘಗಳ ಆರಂಭೋತ್ಸವವು ನಿನ್ನೆ ಸಂಜೆ ಮಹಾರಾಜಾ ಕಾಲೇಜಿನಲ್ಲಿ ಪ್ರೊ॥ ವಿ ಎ ವಿಶ್ವ... ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಕೆ ಹನುಮಂತಯ್ಯನವರು "ಪಂಚ ವಾರ್ಷಿಕ ಯೋಜನೆಗಳ ತತ್ವ" ಎಂಬ ವಿಷಯದ ಮೇಲೆ ವಿದ್ಯಾರ್ಥಿಗಳನ್ನುದ್ದೇಶಿಸಿ ಭಾಷಣ ಮಾಡಿದರು

ಶ್ರೀ ಹನುಮಂತಯ್ಯನವರು ಸಭಿಕರಿಂದ ತಮಗೆ ಬಂದಿದ್ದ ರಾಜಕೀಯದ ಪ್ರಶ್ನೆಗಳಿಗೆ ಉತ್ತರ ನೀಡಲು ನಿರಾಕರಿಸಿ ತಾವು ಯಾರಿಗೂ ಮನಃ ಬಳಲಿಕೆ ಉಂಟು ಮಾಡುವುದಿಲ್ಲವೆಂದೂ, ವಿದ್ಯಾರ್ಥಿಗಳೂ ಸಹ ರಾಜಕೀಯ ಪ್ರಶ್ನೆಗಳನ್ನು ಹಾಕುವ ಸಮಯವನ್ನು ತ್ಯಜಿಸಬೇಕೆಂದೂ ಹೇಳಿದರು ಅವರು ಮುಂದುವರಿದು ಈ ರೀತಿ ನುಡಿದರು:

ಪಂಚ ವಾರ್ಷಿಕ ಯೋಜನೆಗಳು ಹೊಸ ಪ್ರಪಂಚದ ಭ್ರಮೆ ಆಗಿವೆ ತತ್ವ ಶಾಸ್ತ್ರವೆಂತೆ ... ಅನೇಕ ಅನುಭವಗಳ ನೆರವಿನಿಂದ ... ಕ್ರಿಯಾ ವಿಧಿ ... ಅಧಿಕಾರ ... ಹೊಸ ... ನಮಗೆ ...

ಯೋಜನೆ ... ಪ್ರಕೃತಿ ... ವೇದಗಳಲ್ಲಿ ... ವಾಗಿರುವ ... ಯೋಜನೆಯು ಪ್ರಭಾವಕ್ಕೊಳಗಾಗಿದೆ ... ಪ್ರಗತಿ ... ಮಾರ್ಗವೇ ಯೋಜನೆ

ಅಮೇರಿಕದ ಸಂಯುಕ್ತ ಸಂಸ್ಥಾನವು ತನ್ನ ಪ್ರಗತಿಯಲ್ಲಿ ಇತಿಹಾಸ ಪ್ರಸಿದ್ಧವಾಗಿದೆ ... ಬರುವ ... ಇದುವರೆಗೆ ... ಪ್ರಗತಿಯು ಅಲ್ಲಿ ಆಗಿದೆ ... ಯಾವ ಪ್ರಮುಖವಾದ ಯೋಜನೆಯನ್ನೂ ... ಜನರು ತಮ್ಮ ಬುದ್ಧಿ ಶಕ್ತಿ ದೇಶ ಪ್ರೇಮದಿಂದ ಇಷ್ಟನ್ನು ಸಾಧಿಸಿದರು

ಆದರೆ ವಿಶ್ವದ ಇತರ ರಾಷ್ಟ್ರಗಳಲ್ಲೂ ಪ್ರಗತಿಯಾಗಿದೆ. ಅಲ್ಲಿ ಕ್ರಮಬದ್ಧವಾದ ಯೋಜನೆಗಳು ಅದಕ್ಕೆ ಸಹಾಯಕವಾದುವು ರಷ್ಯವು ಅಮೇರಿಕಕ್ಕಿಂತ ಹಳೆಯ ದೇಶ ಮತ್ತು ಒಳ್ಳೆಯ ಯೋಜನೆಗಳನ್ನು ಹಾಕಿದ್ದರೂ ಸಹ ಅದು ಅಮೇರಿಕಕ್ಕಿಂತ ಹಿಂದೆ ಬಿದ್ದಿರುವುದು ಆಶ್ಚರ್ಯವಾದ ಸತ್ಯವು

ಇಂದು ರಷ್ಯವು ಸೇನಾ ಬಲದಲ್ಲಿ ಅಮೇರಿಕವನ್ನು ಸರಿಗಟ್ಟಿದರೂ, ಜೀವನ ಮಟ್ಟದಲ್ಲಿ ಮಾತ್ರ ಕೆಳ ದರ್ಜೆಯಲ್ಲೇ ಇದೆ ಯೂರೋಪಿನ ರಾಷ್ಟ್ರಗಳ ಜೀವನ ಮಟ್ಟವನ್ನು ... ... ಪ್ರಗತಿ ... ಉತ್ಸಾಹ ... ... ಯೋಜನೆ ... ...

RU ... S

WHITE DRILL - Khaki Border

MOORTY MART,

100 Feet Road, Mysore

ಬಾಬಾ ಜನರಲ್ ಸ್ಟೋರ್ಸ್

ನ್ಯೂ ... ರೋಡ್, ಮೈಸೂರು

... ಅದೇ ದಿನ ... ಬದಲಾಯಿಸಲಾಗಿದೆ ... ಅಂದವಾದ ... ಸರಬರಾಜು ಮಾಡಲಾಗುತ್ತದೆ

ಎಸ್ ಶೇಷಾದ್ರಿ ಪ್ರೊಪ್ರೈಟರ್

Edited Printed and Published by ... at Sadhvi Press ... Road, Mysore

ವಿನ್ನಿಮಂಗಲಂ ಉಣ್ಣೆ ಕೇಂದ್ರಕ್ಕೆ ೮ ಲಕ್ಷ ರೂ

ಮೈಸೂರು ಮತ್ತು ಮದ್ರಾಸು ಸರ್ಕಾರದವರು ಜಂಟಿಯಾಗಿ ಮದ್ರಾಸಿನ ವಿನ್ನಿಮಂಗಲದಲ್ಲಿ ನಡೆಸಲಿರುವ ಉಣ್ಣೆ ಪ್ರೋಸೆಸಿಂಗ್ ಕೇಂದ್ರಕ್ಕೆ ಭಾರತ ಸರ್ಕಾರದವರು ೮,೩೬,೦೦೦ ರೂ ಗ್ರಾಂಟನ್ನು ಮಂಜೂರು ಮಾಡಿರುತ್ತಾರೆ.

'ಕೃಷ್ಣ ಜನ್ಮ' ನಾಟಕಾಭಿನಯ

ಶ್ರೀ ಕೃಷ್ಣ ಜಯಂತಿ ಪ್ರಯುಕ್ತ ಇಲ್ಲಿನ ... ಕ್ಷತ್ರಿಯ ಮಂಡಲಿಯ ಆಶ್ರಯದಲ್ಲಿ ಕಳೆದ ...ನೇ ತಾರೀಖು ಮರಾಠಿ ... ಬಾಲಕಬಾಲಕಿಯರು ಪಾಂಡುರಂಗ ದೇವಸ್ಥಾನದಲ್ಲಿ ಶ್ರೀ ಕೃಷ್ಣ ಜನ್ಮ ಎಂಬ ನಾಟಕವನ್ನು ಅಭಿನಯಿಸಿದರು

ರಷ್ಯದ ಅಗಾಧವಾದ ಪ್ರಗತಿಯು ಇಂದು ಭಾರತವನ್ನು ಬೆರಗುಗೊಳಿಸಿದೆ ನಮ್ಮಿಬ್ಬರದೂ ವ್ಯವಸಾಯ ಪ್ರಧಾನವಾದ ದೇಶಗಳಾಗಿದ್ದುವು ... ರಾಜತ್ವದಿಂದಲೂ, ನಮ್ಮ ದೇಶವು ಸಾಮ್ರಾಜ್ಯಶಾಹಿಯಿಂದಲೂ ನೊಂದವುಗಳು ಈಗ ರಷ್ಯವು ಪ್ರಗತಿ ಪಡೆದಂತೆ ನಾವೂ ಪಂಚ ವಾರ್ಷಿಕ ಯೋಜನೆಗಳ ಮೂಲಕ ಹೊಂದಲು ತವಕಿಸುತ್ತಿದ್ದೇವೆ

ಭಾರತದಲ್ಲಿ ಇದಕ್ಕಾಗಿ ಬಹಳ ಹಿಂದಿನಿಂದಲೇ ಕಾಂಗ್ರೆಸ್ಸು ಯೋಜನೆ ... ನಮ್ಮ ಯೋಜನೆಯು ... ಜೀವನ ಮಟ್ಟ ... ಆದ ... ರಾಜ್ಯ ... ಸಮಾಜ ... ಸಮಾಜವಾದ ತತ್ವದ ... ಬರಬೇಕಾಯಿತು

ಈ ಬದಲಾವಣೆಗೆ ಯಾವ ಕಾಂಗ್ರೆಸ್ ಸಮಿತಿಯಾಗಲೀ, ಪ್ರಾಂತ ಶಾಸನಸಭೆಯಾಗಲೀ ನಿರ್ಣಯಗಳನ್ನು ಮಾಡಲಿಲ್ಲ ಅದು ಕೇವಲ ಪ್ರಧಾನಿ ನೆಹರೂರವರೊಬ್ಬರ ಮಾರ್ಗದರ್ಶನದಿಂದ ಮಾತ್ರ ಆಗಿದೆ ಇಂದು ಪ್ರಪಂಚದಲ್ಲಿ ಸಮಾಜವಾದವು ಬಹಳ ಒಳ್ಳೆಯದೆಂಬ ಭಾವನೆ ಬಲಿಷ್ಠವಾಗಿದೆ ... ಎಲ್ಲರೂ ಅದರ ಯಶಸ್ಸಿಗಾಗಿ ಶ್ರಮಿಸೋಣ

ಹಾಸಿಗೆ - ದಿಂಬು

ಬಹಳ ... ತಯಾರು ಮಾಡುತ್ತೇವೆ

ಬಾಹುಸಾಹೆಬ್ ಕಂಪೆನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

SRI GAYATHRI TALKIES

Grand Gala Opening on 6 9 56

Daily 3 Shows

Complimentary & Free Passes suspended for this Picture

Morning shows on Sat. & Sun.

CARNIVAL STORY

ರೈಲ್ವೆ ಟಿಕೆಟ್ ಪ್ರಿಂಟಿಂಗ್ ಕಛೇರಿ ವರ್ಗಾವಣೆಗೆ ವಿರೋಧ

ಮೈಸೂರು ೫

ದಕ್ಷಿಣ ರೈಲ್ವೆಯ ನಗರ ಶಾಖೆ ಸಾರ್ವಜನಿಕ ಸಭೆಯು ಕಳೆದ ...ರಂದು ನಡೆದು, ನಗರದಲ್ಲಿರುವ ಟಿಕೆಟ್ ಪ್ರಿಂಟಿಂಗ್ ವಿಭಾಗವನ್ನು ತಿರುಚಿರಾಪಳ್ಳಿಗೆ ವರ್ಗಾಯಿಸುವುದನ್ನು ವಿರೋಧಿಸಿ ನಿರ್ಣಯ ಮಾಡಲಾಯಿತು ಮೈಸೂರ್ ಗ್ರೇಡಿನಲ್ಲಿರುವ ಎಲ್ಲಾ ಖಾಲಿ ಸ್ಥಾನಗಳಿಗೂ ಮೈಸೂರು ಪ್ರದೇಶದಲ್ಲಿರುವ ನೌಕರರನ್ನು ನೇಮಿಸಬೇಕೆಂದು ಒತ್ತಾಯಪಡಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು ರೈಲ್ವೆ ನೌಕರರಿಗಾಗಿ ಆಹಾರ ಧಾನ್ಯದ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯುವಂತೆ ಒತ್ತಾಯಪಡಿಸಲಾಯಿತು ಶ್ರೀಗಳಾದ ಟಿ ಎ ಆನಂದ, ಹೆಚ್ ಡಿ ರಾಘವರಾಜ್, ಗೋವಿಂದಾಚಾರ್, ಎಸ್ ರಾಘವ ಮುದಲಿಯಾರ್ ಮತ್ತು ಎ ಪಾರ್ಥಸಾರಥಿಯವರು ಭಾಷಣ ಮಾಡಿದರು

ವಿದ್ಯಾರ್ಥಿನಿಯರ ಬ್ಯಾಸ್ಕೆಟ್ ಬಾಲ್ ಪಂದ್ಯ

ಇಲ್ಲಿನ ಮಹಾರಾಜಾ ಕಾಲೇಜಿನ ವಿದ್ಯಾರ್ಥಿನಿಯರಿಗೂ, ಮಹಾರಾಣಿ ಕಾಲೇಜಿನ ವಿದ್ಯಾರ್ಥಿನಿಯರಿಗೂ ನೆನ್ನೆ ನಡೆದ ಬ್ಯಾಸ್ಕೆಟ್ ಬಾಲ್ ಪಂದ್ಯದಲ್ಲಿ ಮಹಾರಾಣಿ ಕಾಲೇಜಿನವರು ೩೪-೦ ಪಾಯಿಂಟುಗಳಿಂದ ಜಯ ಗಳಿಸಿದರು

... ಸರ್ಕಾರದವರು ಭಾರತ ಸೇವಾ ... ಸಂಸ್ಥಾನಕ್ಕೆ ... ೧೦,೦೦೦ ರೂ ಗ್ರಾಂಟನ್ನು ಕೊಡಲು ಒಪ್ಪಿರುತ್ತಾರೆಂದು ವರದಿಯಾಗಿದೆ

ಸೆಪ್ಟೆಂಬರ್ ತಿಂಗಳು ಹೈದರಾಬಾದಿಗೆ ದುರದೃಷ್ಟಕರ

ಮಹಬೂಬ್ ನಗರ-ಜಡಚರ್ಲಾಗಳ ನಡುವೆ ಕಳೆದ ಶನಿವಾರ ಮಧ್ಯ ರಾತ್ರಿ ಹೊತ್ತಿನಲ್ಲಿ ಆದ ರೈಲು ಅಪಘಾತದಲ್ಲಿ ಇನ್ನೂ ೫ ಮಂದಿ ಮೃತಪಟ್ಟು ಸಾವಿನ ಸಂಖ್ಯೆಯು ೧೨೭ಕ್ಕೆ ಹೆಚ್ಚಿದೆ. ೨ ವರ್ಷಗಳ ಹಿಂದೆ ಇದೇ ತಿಂಗಳಿನಲ್ಲಿ ಹೈದರಾಬಾದಿನ ... ರೈಲು ಅನಾಹುತವು ನಡೆದು ... ನೂರಾರು ಮಂದಿ ಮೃತರಾಗಿದ್ದರು ಸೆಪ್ಟೆಂಬರ್ ಮಾಸವು ಹೈದರಾಬಾದಿಗೆ ದುರದೃಷ್ಟಕರವಾದ ತಿಂಗಳೆಂದು ಹೇಳಲಾಗಿದೆ. ಹಿಂದೆ ಪೋಲೀಸು ಕಾರ್ಯಾಚರಣೆಯೂ ಇದೇ ತಿಂಗಳಲ್ಲಿ ನಡೆದಿತ್ತು

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ ಮತ್ತು

ಕೊಯಮುತ್ತೂರು ಸಣ್ಣ	[illegible]	೧೦	೦	[illegible]	೧೦	೦
ಕಡ್ಡಿ	೪೦	[illegible]	೦	[illegible]	[illegible]	೦
ರಕ್ತಶಾಲಿ	[illegible]	[illegible]	೦	[illegible]	[illegible]	೦
ಜೋಳ	[illegible]	[illegible]	೦	[illegible]	[illegible]	೦
ರಾಗಿ	[illegible]	೦	೦	[illegible]	[illegible]	೦
ಹೊಳೆ	೩೭	[illegible]	೦	೪೧	೦	೦
ಕಡಲೆಕಾಯಿ	[illegible]	[illegible]	೦	[illegible]	[illegible]	೦
ಹುರುಳಿ	[illegible]	೦	೦			
ಹೊಂಗೆಬೀಜ	[illegible]	[illegible]	೦			
ಎಳ್ಳು	[illegible]	[illegible]	೦	[illegible]	[illegible]	೦
ತೊಗರಿ	೪೧	೧೦	೦	[illegible]	೧೦	೦
ಧನಿಯ	೪೧	[illegible]	೦			
ಹುಣಸೇಹಣ್ಣು	[illegible]	[illegible]	೦	[illegible]	[illegible]	೦
ಮೆಣಸಿನಕಾಯಿ	[illegible]	[illegible]	೦	[illegible]	[illegible]	೦
ತೆಂಗಿನಕಾಯಿ ೧೦೦೦	[illegible]	[illegible]	೦	[illegible]	[illegible]	೦

ಅಸಮಾನ ಶಕ್ತಿಯುಳ್ಳ ಪವಾಡ ಪುರುಷ !

ಪ್ರೊಫೆಸರ್ ಮಾರ್ವೆಲ್ ಎಫ್ ಆರ್ ಎ ಎಸ್

(ಮಾನವರ ತೊಂದರೆಗಳ ಅಸಿಸ್ಟ ಸ್ಪಿರಿಚುಯಲ್ ಚಿಕಿತ್ಸಕರು)

ಇವರು ಮೈಸೂರಿನ ತಮ್ಮ ಅಲ್ಪಕಾಲದ ಮೊಕ್ಕಾಮಿನಲ್ಲಿ ಬೆಳಿಗ್ಗೆ 9 ರಿಂದ ಮಧ್ಯಾಹ್ನ 1 ಮತ್ತು ಮಧ್ಯಾಹ್ನ 3 ರಿಂದ ಸಂಜೆ 7 ರ ವರೆಗೆ

ರೂಂ. ನಂ. 2. ರಿಟ್ಜ್ ಹೋಟೇಲ್, ಚರ್ಚ್ ರೋಡು, ಮೈಸೂರು

ಈ ವಿಳಾಸದಲ್ಲಿ ಸಲಹೆ ಪಡೆಯುವವರಿಗೆ ಅವಕಾಶ ನೀಡುವರು

ನೀವು ಇವರ ಉಪಯೋಗ ಪಡೆದುಕೊಂಡಿರುವಿರಾ ?

ಇದುವರೆಗೂ ಇಲ್ಲದಿದ್ದಲ್ಲಿ ಖಾತರಿಯಾದ ಯಶಸ್ಸುಂಟಾಗಲು ಇಂದೇ ಸಲಹೆ ಪಡೆಯಿರಿ

ಪರೀಕ್ಷೆ, ಪ್ರೇಮ ವ್ಯವಹಾರ ಪಟ್ಟಾ ವ್ಯಾಪಾರ, ಬಡ್ತಿ, ನೌಕರಿ, ಸಂತಾನ, ದೇಹಾಲಸ್ಯ, ವಿವಾಹ, ಅಸ್ತಿ, ಗೃಹಕೃತ್ಯದ ತೊಂದರೆಗಳು, ಪೀಡೆ ಮತ್ತು ಎಲ್ಲಾ ರೋಗ ವಿಷಯಗಳಿಗೂ (ಕೀರ್ತಿವಂತ ಫಲಿತಾಂಶದ ಖಾತರಿ ಕೊಡಲಾಗುತ್ತದೆ ಮತ್ತು ರಹಸ್ಯವನ್ನು ಸಂಪೂರ್ಣವಾಗಿ ರಕ್ಷಿಸಲಾಗುತ್ತದೆ) "ಅಸ್ಟ್ರೋ-ಸ್ಪಿರಿಚುಯಲಿಸಂ ಜೀವನದ ಮಹತ್ತರವಾದ ಚಾಲಕ ಶಕ್ತಿ" ಎಂಬುದನ್ನು ಜ್ಞಾಪಕದಲ್ಲಿಡಿ ಸಲಹೆ ಪಡೆಯಲು ರುಸುಂ 11 ರೂ

ಮೈಸೂರಿನಲ್ಲಿರುವ ತಮಿಳುನಾಡು ಕೈ ಮಗ್ಗದ ನೇಕಾರ ವರ್ತಕರು ರಾಜಧಾನಿಯಲ್ಲಿ ಕಟ್ಟಿಸಲಿರುವ ಧರ್ಮಶಾಲಾ ಕಟ್ಟಡದ ಸಹಾಯಾರ್ಥವಾಗಿ

ತಾರೀಖು 9-9 1956ನೇ ಭಾನುವಾರ ಸಂಜೆ 6 ಘಂಟೆಗೆ

ಮೈಸೂರು ಟೌನ್ ಹಾಲಿನಲ್ಲಿ

"ಅವ್ವೈಯ್ಯಾರ್" ಚಿತ್ರದಲ್ಲಿ ಪ್ರಸಿದ್ಧಿ ಪಡೆದ ಸಂಗೀತ ವಿದುಷಿ ಶ್ರೀಮತಿ

ಕೆ. ಬಿ. ಸುಂದರಾಂಬಾಳ್ ರವರ

ಅಮೋಘ ಸಂಗೀತ ಕಛೇರಿಯು ನಡೆಯುವುದು

ಮಹಾಜನಗಳು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ

ಟಿಕೆಟು ದರಗಳು 100 50, 25, 10, 5, 3, 2, 1 ರೂ ಗಳು

ಇಂದ್ರ ಕೆಫೆ

ಸಯ್ಯಾಜಿರಾವ್ ರಸ್ತೆ, ಮೈಸೂರು.

ಸುಸಜ್ಜಿತವಾದ ಭವ್ಯ ನೂತನ ಫಲಹಾರ ಮಂದಿರ

6—9—1956ನೇ ಗುರುವಾರ ತೆರೆಯಲಾಗುವುದು

ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಒಲಂಪಿಯಾ ★

7 9-56ನೇ ಶುಕ್ರವಾರದಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಆಟಗಳು

3-15, 6 30 ಮತ್ತು 9 ...

ರಾಜ್ ಕಪೂರ್ ರವರ ಅದ್ವಿತೀಯ ಚಲನಚಿತ್ರ ಕಲಾ ಕೌಶಲ್ಯ ★ **ಜಾಗ್ತೆ ರಹೋ**

ಮುಖ್ಯ ಭೂಮಿಕೆ . ರಾಜಕಪೂರ್, ಪ್ರದೀಪ್ ಕುಮಾರ್. ಸ್ಮೃತಿಬಿಸ್ವಾಸ್. ಸುಮಿತ್ರ, ಸುಲೋಚನ ಚಟರ್ಜಿ, ನರ್ಗಿಸ್ ಮತ್ತು ನೇಮೋ

ಮೊದಲನೇ ವಾರದಲ್ಲಿ ಫ್ರೀಯಾಗಿ ಪ್ರವೇಶ ಇರುವುದಿಲ್ಲ. ಕೆಳಕಂಡ ಮೊದಲನೆ 3 ದರಗಳಿಗೆ ಮುಂಚಿತವಾಗಿ ಪ್ರತಿ ದಿನ ಬೆಳಿಗ್ಗೆ 10ರಿಂದ 12 ಗಂಟೆವರೆಗೆ ಟಿಕೆಟು ಕೊಡಲಾಗುವುದು—

ರೂ 2 6 0, 1 10 0 ಮತ್ತು 1 . 0

ರಿಜಿಸ್ಟರ್ ನಂ. 792

ಬಿಡಿಯ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಸ್ತಕ : ೧೮] SADHVI : THURSDAY 6—9—1956 ಮೈಸೂರು : ಗುರುವಾರ ೬—೯—೧೯೫೬ [ಸಂಚಿಕೆ : ೪೮

ಸಂಸ್ಥಾನಕ್ಕೆ ೨ ತಿಂಗಳಲ್ಲಿ ೧೨,೦೦೦ ಟನ್ ಅಕ್ಕಿ ಸರಬರಾಜು

ಆಹಾರ ಧಾನ್ಯದ ಬೆಲೆ ಇಳಿತಾಯಕ್ಕೆ ದೃಢ ನಿರ್ಧಾರ

ಸಂಸ್ಥಾನಕ್ಕೆ ೧೨ ಸಾವಿರ ಟನ್ ಅಕ್ಕಿ ಬರಲಿದೆಯೆಂದು ಮುಖ್ಯ ಮಂತ್ರಿ ಹೇಳಿಕೆ

ಬೆಂಗಳೂರು ೬

ಆಹಾರದ ಬೆಲೆಯನ್ನು ಇಳಿಸಲು ಕೇಂದ್ರ ಮತ್ತು ಸಂಸ್ಥಾನ ಸರ್ಕಾರದವರು ದೃಢ ನಿಶ್ಚಯ ಮಾಡಿರುವುದಾಗಿ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನೆನ್ನೆ ಪತ್ರಿಕಾ ಪ್ರತಿನಿಧಿಗಳಿಗೆ ತಿಳಿಸಿದರು. ಬಹಿರಂಗ ಮಾರುಕಟ್ಟೆಯಲ್ಲಿ ಹೆಚ್ಚುತ್ತಿರುವ ಬೆಲೆಯನ್ನು ತಡೆಗಟ್ಟಲು ಈ ಎರಡು ತಿಂಗಳ ಅವಧಿಯಲ್ಲಿ ಉತ್ತಮ ರಕಮಿನ ೧೨,೦೦೦ ಟನ್ ಅಕ್ಕಿಯನ್ನು ಕೇಂದ್ರದವರು ಸರಬರಾಜು ಮಾಡುವರೆಂದೂ ಹೆಚ್ಚು ಫೇರ್ ಪ್ರೈಸ್ ಡಿಪೋಗಳನ್ನು ತೆರೆಯಲಾಗುವುದೆಂದು ಅವರು ಹೇಳಿದರು. ಅವಶ್ಯಕವಿದ್ದರೆ ಇನ್ನೂ ಹೆಚ್ಚಿನ ಸರಬರಾಜು ಕೇಂದ್ರದಿಂದ ಆಗುವುದೆಂದು ಅವರು ನುಡಿದರು. ಈ ಅಕ್ಕಿಯನ್ನು ದಿನವಹಿ ೧೫೦-೧೭೦ ಟನ್ನಿನಂತೆ ಸಂಸ್ಥಾನ ಸರ್ಕಾರದವರಿಗೆ ಒದಗಿಸಲಾಗುವುದಾಗಿಯೂ, ಸರ್ಕಾರದ ನಿಯಮಗಳನ್ನು ಪಾಲಿಸುವ ಯಾರಿಗಾದರೂ ಸರ್ಕಾರದ ಪರವಾಗಿ ಅಕ್ಕಿಯನ್ನು ಮಾರಲು ರಹದಾರಿ ಕೊಡಲಾಗುವುದೆಂದೂ ಅವರು ಸೂಚಿಸಿದರು.

ಲಂಚದ ಆಪಾದನೆ ಮೇಲೆ ಬಿಹಾರದ ಉನ್ನತಾಧಿಕಾರಿಯ ಬಂಧನ

ಬಿಹಾರ್ ಸಿವಿಲ್ ಸರ್ವೀಸ್ಸಿನ ಹಿರಿಯ ಅಧಿಕಾರಿಯೊಬ್ಬರನ್ನು ಲಂಚ ನಿರೋಧ ಇಲಾಖೆಯವರು ಮೊನ್ನೆ ಪಾಟ್ನಾ ಕ್ವೆಲ್ವೆ ನಿಲ್ದಾಣದಲ್ಲಿ ಬಂಧಿಸಿದರು. ಅಧಿಕಾರಿಯು ಆಗ ತಾನೆ ಡೈಲಿನಿಂದ ಇಳಿದಿದ್ದರು. ಅವರ ಬಳಿಯಲ್ಲಿದ್ದ ೫೦೨೦ ರೂ.ಗಳ ನೋಟುಗಳನ್ನು ವಶಪಡಿಸಿಕೊಳ್ಳಲಾಯಿತು. ಹಿಂದಿನ ದಿನ ಅಧಿಕಾರಿಯು ಈ ಹಣವನ್ನು ಗಯೆಯಲ್ಲಿ ಲಂಚವಾಗಿ ಪಡೆದಿದ್ದರೆಂದೂ, ನೋಟುಗಳ ಮೇಲೆ ವಿಶೇಷ ನ್ಯಾಯಾಧೀಶರ ರುಜುವಿದ್ದುದಾಗಿಯೂ ವರದಿಯಾಗಿದೆ.

ಹಿಂದಿಯ ಬಗ್ಗೆ ಮದ್ರಾಸಿಗೆ ವಿಶೇಷ ಅಧಿಕಾರ

ಹಿಂದಿಯನ್ನು ಕಡ್ಡಾಯವಾಗಿ ಕಲಿಸುವುದು ಹಾಗೂ ರಾಷ್ಟ್ರ ಭಾಷೆಯಾಗಿ ಇಟ್ಟುಕೊಳ್ಳುವ ವಿಷಯದ ಬಗ್ಗೆ ಇಚ್ಛಾನುಸಾರ ನಡೆಯಲು ಮದ್ರಾಸಿಗೆ ಅವಕಾಶವೀಯಲಾಗಿದೆ.

ಗಣಪತಿ ಉತ್ಸವ

ಹಳ್ಳದಕೇರಿ ಶ್ರೀ ಪ್ರಸನ್ನ ಸೀತಾರಾಮ ಮಂದಿರದಲ್ಲಿ ಹಾಳೆಯಿಂದ ಬರುವ ೧೬ ನೇ ತಾರೀಖಿನವರೆಗೆ ಶ್ರೀ ಮಹಾ ಗಣಪತಿ ಉತ್ಸವವು ನಡೆಯುವುದು. ಅದರ ಅಂಗವಾಗಿ ನಾಳೆ ೭ ರಿಂದ ಶ್ರೀ ಮುಳಬಾಗಿಲು ನಾರಾಯಣದಾಸರಿಂದ ಸ್ಯಮಂತಕೋಪಾಖ್ಯಾನ ಎಂಬ ಹರಿಕಥೆ, ಭಾನುವಾರ ರಾತ್ರಿ ೭ ಗಂಟೆಗೆ ಮಧುರ ಮಂಡಲಿಯವರ ನೃತ್ಯ ಮತ್ತು ೮ ಗಂಟೆಗೆ ವಿ|| ಬಿ ಎಸ್ ರಾಮಯ್ಯಂಗಾರ್‌ರವರ ಸಂಗೀತವೂ ಇವೆ.

ಉಮಾ ಟಾಕೀಸಿನ ರಹದಾರಿ ಪ್ರಶ್ನೆ

ಪೌರಸಭೆಯಲ್ಲಿ ಸದಸ್ಯರೊಬ್ಬರ ಸಭಾತ್ಯಾಗ

ಮೈಸೂರು ೬

ನೆನ್ನೆ ಪುರಸಭೆಯ ಮುಂದುವರಿದ ಅಧಿವೇಶನದಲ್ಲಿ ಸದಸ್ಯರೊಬ್ಬರು ಮಂಡಿಸಿದ ನಿರ್ಣಯವೊಂದರ ಬಗ್ಗೆ ಎತ್ತಲಾದ ಕ್ರಿಯಾಲೋಪವನ್ನು ಚರ್ಚಿಸುವಾಗ ಸ್ವಲ್ಪ ಬಿಸಿಯಾದ ವಾತಾವರಣವು ಏರ್ಪಟ್ಟಿತ್ತು. ಅದರ ಸೂಚಕರಾದ ಶ್ರೀ ಮಾರ್‌ನೂರ್ ಹುಸೇನರು ಸಭಾತ್ಯಾಗ ಮಾಡಿದರು.

ಉಮಾ ಟಾಕಿ ಸಿಗೆ ಜಿಲ್ಲಾಧಿಕಾರಿಗಳು ಲೈಸೆನ್ಸಿನ ವಿಧಿಗಳನ್ನೊಳಗಿಸಿಕಡೆ, ಪುರಸಭೆಯ ಪರಿಶೀಲನೆಯೂ ಸಮಾಲೋಚನೆ ರಹದಾರಿಯನ್ನು ಕೊಟ್ಟುದನ್ನು ಸರ್ಕಾರಕ್ಕೆ ವಿಷಾದದಿಂದ ತಿಳಿಸುತ್ತಾ, ಆ ರಹದಾರಿಯನ್ನು ವಾಪಸು ಪಡೆಯಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಶ್ರೀ ಹುಸೇನರು ಮಂಡಿಸಿದರು.

ಈ ಬಗ್ಗೆ ಕಳೆದ ಸಭೆಯಲ್ಲೇ ಜಿಲ್ಲಾಧಿಕಾರಿಗಳಿಗೆ ಉತ್ತರವತ್ತಾಗ ತೀರ್ಮಾನ ಮಾಡಿರುವುದರಿಂದ ಕಾನೂನು ಪ್ರಕಾರ ೩ ತಿಂಗಳೊಳಗೆ ಅದೇ ವಿಷಾಯದ ಮೇಲಿನ ಈ ನಿರ್ಣಯವನ್ನು ಚರ್ಚಿಸಲಾಗದೆಂಬ ಕ್ರಿಯಾಲೋಪವೊಂದನ್ನು ಶ್ರೀ ಎಸ್ ಲಿಂಗಣ್ಣನವರು ಸೂಚಿಸಿದರು. ಅದನ್ನು ಶ್ರೀ ಹುಸೇನರು ಖಂಡಿಸಿದರು. ಶ್ರೀ ತ್ರ್ಯಂಬಕಶರ್ಮರವರು ಮಾತನಾಡಿ ನಿರ್ಣಯವನ್ನು ಕ್ರಮಬದ್ಧವಾದ ರೀತಿಯಲ್ಲಿ ತಂದಿರುವುದರಿಂದ ಕ್ರಿಯಾಲೋಪವು ಸರಿಯಲ್ಲವೆಂದು ವಾದಿಸಿದರು.

ಅಧ್ಯಕ್ಷರು ಈ ಬಗ್ಗೆ ಶ್ರೀ ಬಿ ಕೆ ರಾಮಕೃಷ್ಣಯ್ಯನವರ ಅಭಿಪ್ರಾಯವನ್ನು ಕೇಳಲಾಗಿ ಅವರು ಕಾನೂನಿಗನುಗುಣವಾಗಿ ನಿರ್ಣಯವನ್ನು ಚರ್ಚಿಸಲಾಗದೆಂದು ತಿಳಿಸಿದಾಗ, ಶ್ರೀ ಹುಸೇನರು "ಬಹಳ ಪ್ರಾಮಾಣಿಕವಾದ ಅಭಿಪ್ರಾಯ!" ಎಂದು ಟೀಕಿಸಿದರು. "ಬೇಕಾದರೆ ನನ್ನನ್ನು ನಾಯಕತ್ವದಿಂದ ತೆಗೆಯಬಹುದು ಹೀಗೆ ಅವಮಾನ ಮಾಡಬಾರದು" ಎಂದು ಶ್ರೀ ರಾಮಕೃಷ್ಣಯ್ಯನವರು ಮರುತ್ತರವಿತ್ತರು.

ಅನಂತರ ಶ್ರೀ ಹುಸೇನರು, ಕಳೆದ ಸಭೆಯಲ್ಲಿ ಆದುದು ಜಿಲ್ಲಾಧಿಕಾರಿಗಳ ಸೂಚನೆ ಮಾತ್ರವೇ ಹೊರತು ಈ ವಿಷಯದ ತೀರ್ಮಾನವಲ್ಲವೆಂಬುದಾಗಿ ವಾದಿಸಿದರು. ಅವರು ಹೀಗೆ ಹೇಳುತ್ತಿದ್ದಾಗ ಅಧ್ಯಕ್ಷರು ಕೌನ್ಸಿಲರಿಗೆ ಹಲವು ಸೂಚನೆಗಳನ್ನು ಕೊಡುತ್ತಿದ್ದರು. ಆಗ ಹುಸೇನರು "ಪೂರ್ತಿಗೆ ಹೇಳಿಕಳಿಸ್ತೀರಾ?" ಎಂದು ಪ್ರಶ್ನಿಸಿದರು. ಅನೇಕ ಸದಸ್ಯರು ಈ ಬಗ್ಗೆ ಪ್ರತಿಭಟಿಸಿದರು. ಆಗ ಮಹಮುದ್‌ಯಾಕೂಬರು ಮಾತನಾಡಲು ಎದ್ದರು. "ನೀವು ತಿಳಿಯದೆ ಮಾತನಾಡಬೇಡಿ" ಎಂದು ಹೇಳಿ ಕುಳಿತುಕೊಳ್ಳಲು ಅಧ್ಯಕ್ಷರು ಆಜ್ಞಾಪಿಸಿದರು. ಆದಕ್ಕೆ ಶ್ರೀ ಮಹಮುದ್‌ಸೇಟರು "ನನಗೆ ತಿಳಿಯದು" ಅಂತ ಸದಸ್ಯರಿಗೆ ಹೇಳಿ ಅಧ್ಯಕ್ಷರು ಅವಮಾನ ಮಾಡುತ್ತಿದ್ದಾರೆಂದು ಆಕ್ಷೇಪಿಸಿ, ತಾವು ತಮ್ಮ ೨೦ ವರ್ಷಗಳ ಪು

ವಿಧಾನಸೌಧದ ಬಗ್ಗೆ ಸರ್ಕಾರಕ್ಕೆ ತಾತ್ಕಾಲಿಕ ವರದಿ

ಬೆಂಗಳೂರು ೭

ವಿಧಾನಸೌಧದ ಬಗ್ಗೆ ರಚಿಸಲಾಗಿರುವ ತನಿಖೆ ಸಮಿತಿಯವರು ತಮ್ಮ ತಾತ್ಕಾಲಿಕ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿರುವರೆಂದು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿದ್ದಾರೆ. ಸೌಧದ ನಿರ್ಮಾಣ ಕಾರ್ಯವು ಮುಗಿಯುತ್ತಾಬಂದಿದೆಯೆಂದೂ, ಆದರೆ ಅಲ್ಲಿ ಬರುವ ಶಾಸನಸಭಾಧಿವೇಶನವನ್ನು ನಡೆಸಲು ಸಾಧ್ಯವಾಗದಿರಬಹುದೆಂದೂ ಅವರು ಹೇಳಿರುವರು.

ಮುನ್ಷಿಯವರ ವಿರುದ್ಧವಾಗಿ ಪ್ರದರ್ಶನ

ಬೊಂಬಾಯಿಯಿಂದ ಲಕ್ನೋವಿಗೆ ಹಿಂದಿರುಗುತ್ತಿದ್ದಾಗ ಉತ್ತರ ಪ್ರದೇಶದ ಗವರ್ನರ್ ಮುನ್ಷಿಯವರ ವಿರುದ್ಧವಾಗಿ ಭೂಪಾಲ್ ರೈಲು ನಿಲ್ದಾಣದಲ್ಲಿ ನೆನ್ನೆ ೫೦೦೦ ಜನರು ಕಪ್ಪು ಕೋಲು ಪಟ್ಟಿಯನ್ನು ಧರಿಸಿ ಕಪ್ಪು ಬಾವುಟಗಳ ಪ್ರದರ್ಶನಕ್ಕೆ ಸಿದ್ಧವಾಗಿ ನಿಂತಿದ್ದರು. ಮುನ್ಷಿಯವರು ಮುಖ್ಯಸ್ಥರಾಗಿರುವ ಬೊಂಬಾಯಿಯ ಒಂದು ಪುಸ್ತಕ ಸಂಸ್ಥೆಯವರು ಪ್ರಕಟಿಸಿರುವ "ಮತೀಯ ಗುರುಗಳು" ಎಂಬ ಗ್ರಂಥದಲ್ಲಿ ಮಹಮದ್ ಪೈಗಂಬರ್‌ರವರ ಬಗ್ಗೆ ಹಲವು ಆಕ್ಷೇಪಣೀಯ ವಿಚಾರಗಳನ್ನು ಬರೆದಿದ್ದುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಆದರೆ ಗವರ್ನರ್ ಮುನ್ಷಿಯವರು ಭೂಪಾಲಿಗೆ ಭೇಟಿ ಕೊಡುವ ಕಾರ್ಯಕ್ರಮವನ್ನು ರದ್ದುಗೊಳಿಸಿ ಲಕ್ನೋವಿಗೆ ತೆರಳಿದರು.

ರಸಭೆಯ ಅನುಭವದಲ್ಲಿ ಇಂತಹ ಪ್ರಸಂಗವನ್ನೇ ಕಂಡಿಲ್ಲವೆಂದು ನುಡಿದರು. ತನಗೆ ಅವಮಾನ ಮಾಡುವ ಉದ್ದೇಶವಿಲ್ಲವೆಂದು ಹೇಳಿ ಅಧ್ಯಕ್ಷರು ಅವರನ್ನು ಸಮಾಧಾನಗೊಳಿಸಿದರು.

ಆಗ ಪುನಃ ಹುಸೇನರು ಮಾತನಾಡುತ್ತಾ ತಾವು ಮಾತನಾಡುವಾಗ ಅಡಚಣೆಯಾಗುತ್ತಿದೆಯೆಂದು ಟೀಕಿಸಲಾಗಿ ಆ ರೀತಿ ಪುನಃ ಮಾತನಾಡಬಾರದೆಂದು ಅಧ್ಯಕ್ಷರು ಸೂಚಿಸಿದರು. "ನಾನು ಅನೇಕ ಅಧ್ಯಕ್ಷರುಗಳನ್ನು ಕಂಡಿದ್ದೇನೆ" ಎಂದು ಶ್ರೀ ಹುಸೇನರು ಉತ್ತರವಿತ್ತರು. ಆದಕ್ಕೆ ಸದಸ್ಯರಿಂದ ಪ್ರತಿಭಟನೆಯಾಯಿತು. ಈ ನಿರ್ಣಯವನ್ನು ವಾಪಸು ಪಡೆಯಲು ತಾವು ನನ್ನ ಮೇಲೆ ಒತ್ತಾಯ ಬೀರುತ್ತಿದ್ದೀರಿ ಅದನ್ನು ಪ್ರತಿಭಟಿಸುತ್ತೇನೆ—ಎಂದು ಹೇಳಿ ಹುಸೇನರು ಸಭಾತ್ಯಾಗ ಮಾಡಿದರು.

ಅನಂತರ ಅಧ್ಯಕ್ಷರು ನಿರ್ಣಯವು ವಾಪಸಾಯಿತೆಂದು ಹೇಳಿದಾಗ ಮತ್ತೆ ಪ್ರತಿಭಟನೆ ಬಂದು ಶ್ರೀ ರಾಮಕೃಷ್ಣಯ್ಯನವರು ಮಾತನಾಡಿ, ಕ್ರಿಯಾಲೋಪವನ್ನು ಇನ್ನೂ ಚರ್ಚಿಸಲಾಗುತ್ತಿದೆಯೆಂದು ತಿಳಿಸಿದರು. ಚರ್ಚೆಯನಂತರ ಅಧ್ಯಕ್ಷರ ರೂಲಿಂಗನ್ನು ಶ್ರೀ ಅಬ್ದುಲ್‌ಸೇಟರು ಕೇಳಿದಾಗ ಅವರು ಶ್ರೀ ಲಿಂಗಣ್ಣನವರ ಕ್ರಿಯಾಲೋಪವನ್ನು ಎತ್ತಿ ಹಿಡಿದರು. ಆದ್ದರಿಂದ ಶ್ರೀ ಮಾರ್‌ನೂರ್ ಹುಸೇನರ ನಿರ್ಣಯದ ಚರ್ಚೆಗೆ ಅವಕಾಶವಾಗಲಿಲ್ಲ.

ಪುರಸಭಾ ಉಪ ಚುನಾವಣೆಗೆ ೪ ಜನ ಸ್ಪರ್ಧಿಗಳು

ಮೈಸೂರು ೬

ರಾಜಧಾನಿಯ ೩೦ ನೇ ಡಿವಿಜನ್ನಿನಿಂದ ಪುರಸಭೆಗೆ ಇದೇ ೨೭ ನೇ ತಾರೀಖು ನಡೆಯಲಿರುವ ಉಪ ಚುನಾವಣೆಗೆ ಶ್ರೀಗಳಾದ ಚಿಕ್ಕಯಲ್ಲಯ್ಯ, ಬಸವಯ್ಯ ಮತ್ತು ಹುರಿಯಪ್ಪನವರು ಕಾಂಗ್ರೆಸ್ ಪಕ್ಷದ ಪರವಾಗಿಯೂ, ಮತ್ತು ಶ್ರೀ ಗಿರಿಯಪ್ಪನವರು ಪಿ. ಎಸ್. ಪಿ. ಪಕ್ಷದ ಪರವಾಗಿಯೂ ಉಮೇದುವಾರಿಕೆಗಳನ್ನು ಸಲ್ಲಿಸಿದ್ದಾರೆ.

ಸೋಮವಾರದಿಂದ ಆಯುರ್ವೇದ ಕಾಲೇಜಿನ ಪರೀಕ್ಷೆ ಆರಂಭ

ಮೈಸೂರು ೬

ಸಂಸ್ಥಾನದ ಸ್ಥಳೀಯ ಸಂಸ್ಥೆ ಸಮಾಜಕರ ಸೂಚನೆಯಂತೆ ಇದೇ ೧೦ನೇ ತಾರೀಖು ಸೋಮವಾರದಿಂದ ಇಲ್ಲಿನ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಸೆಪ್ಟೆಂಬರ್ ಪರೀಕ್ಷೆಗಳು ಆರಂಭವಾಗುವುವು. ಕುಳಿತುಕೊಳ್ಳಬೇಕಾದ ೧೫೮ ಮಂದಿ ವಿದ್ಯಾರ್ಥಿಗಳ ಪೈಕಿ ೪೪ ಜನರು ಪರೀಕ್ಷಾ ರುಸುಂ ಅನ್ನು ಕೊಟ್ಟಿರುತ್ತಾರೆ. ಕಡಮಾವಧಿ ದಂಡದ ೫ ರೂ. ಮೊಬಲಗಿನೊಡನೆ ಪರೀಕ್ಷಾ ಶುಲ್ಕವನ್ನು ಕೊಡಲು ಕಳೆದ ೨ನೇ ತಾರೀಖು ಕಡೆಯ ದಿನವಾಗಿತ್ತು.

ವಿದ್ಯಾರ್ಥಿಗಳ ಮುಷ್ಕರವು ಆರಂಭವಾಗಿ ಇಂದಿಗೆ ೧೭ ದಿನಗಳಾದುವು. ಇಂದೂ ಆಸ್ಪತ್ರೆ ಮುಂದೆ ಪಿಕೆಟಿಂಗ್ ನಡೆಸಿದರು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೇಲೂರು ಶ್ರೀನಿವಾಸಯ್ಯಂಗಾರರ ಮನೆ ಕೊಲೆ ಮೊಕದ್ದಮೆಯ ಈ ದಿನ ಮುಂದುವರಿದು, ಇಬ್ಬರ ಸಾಕ್ಷ್ಯಗಳನ್ನು ತೆಗೆದುಕೊಳ್ಳಲಾಯಿತು ಬೇಲೂರಿನ ಮನೆಯಲ್ಲಿ ಸರ್ಚ್ ನಡೆಸಿದ ಸಬ್ ಓವರ್‌ಸಿಯರ್ ಶ್ರೀ ವಿಶ್ವನಾಥ ಮತ್ತು ಗನೇ ಅಪಾದಿತನ ಮನೆಯಲ್ಲಿ ಸರ್ಚ್ ನಡೆಸಿದ ಶ್ರೀ ರಾಮಣ್ಣನವರು ಸಾಕ್ಷ್ಯವಿತ್ತರು

ಒನೇ ಅಪಾದಿತರ ಪರವಾಗಿ ಶ್ರೀ ಎಂ ಸಿ ಗುರುರವರೇ ವಕಾಲತ್ತು ವಹಿಸಿದ್ದಾರೆ ಅಪಾದಿತರ ಪರವಾಗಿ ಅವರು ಮಾಜಿ ಮುಖ್ಯಮಂತ್ರಿ ಶ್ರೀ ಕೆ ಹನುಮಂತಯ್ಯ, ಗೃಹ ಮಂತ್ರಿ ಶ್ರೀ ಟಿ ಸಿದ್ಧವೀರಪ್ಪ, ವಿ ಜಿ ಪಿ ಶ್ರೀ ತಿಮ್ಮರಾಜ ಅರಸ್, ಶ್ರೀ ಮುಸ್ತ್ರೀಜಿ [illegible] ಸಿಂಧ್ಯ, ತಾಯಿನಾಡು, ಜನವಾಣಿ, ಪ್ರಜಾವಾಣಿ ಪತ್ರಿಕಾ ಸಂಪಾದಕರು ಮುಂತಾದವರನ್ನು ಡಿಫೆನ್ಸ್ ಸಾಕ್ಷಿಗಳಾಗಿ ಕರೆದಿದ್ದಾರೆ.

ಈ ಬಗ್ಗೆ ಪ್ರಾಸಿಕ್ಯೂಷನ್ನಿನವರು ಆಕ್ಷೇಪಿಸಿದರು ಕೋರ್ಟಿನವರು ಶ್ರೀ ಗುರುರವರನ್ನು ಕೇಳಲಾಗಿ, ಉತ್ತರೋತ್ತರ ಇಂತಹ ಸಾಕ್ಷಿಗಳಿಂದ ಉಪಯೋಗವಿದೆಯೆಂಬುದು ವ್ಯಕ್ತವಾಗುವುದೆಂದು ಅವರು ಹೇಳಿದರು

ಅಲ್ಲದೆ ಕೋರ್ಟಿನ ಮುಂದೆ ತಂದಿರುವ ಸಾಕ್ಷ್ಯಮಂಟುಗಳ ಬಗ್ಗೆ ಈ ದಿನವೂ ಶ್ರೀ ಗುರುರವರು ಆಕ್ಷೇಪಿಸಿ, ಇದರಿಂದ ಕಾಗದಗಳೇ ಅಪಾದಿತರು ತಪ್ಪಿತಸ್ಥರೆಂಬ ಭಾವನೆ ಬರುವಂತಾಗಿದೆಯೆಂದು ತಿಳಿಸಿದರು

ಆಯುರ್ವೇದ ಕಾಲೇಜಿಗೆ ಜ॥ ಕಾರಿಯಪ್ಪನವರ ಭೇಟಿ

ಮೈಸೂರು ೧೧

ಭಾರತದ ಮಾಜಿ ಪ್ರಧಾನ ಸೇನಾನಿ ಕೆ ಎಂ ಕಾರಿಯಪ್ಪನವರು ನೆನ್ನೆ ಇಲ್ಲಿನ ಆಯುರ್ವೇದ ಕಾಲೇಜಿಗೆ ಭೇಟಿಯಿತ್ತು, ಪ್ರಿನ್ಸಿಪಾಲರೊಡನೆಯೂ, ವಿದ್ಯಾರ್ಥಿ ಸಂಘದ ಪ್ರಮುಖರೊಡನೆಯೂ ಮುಷ್ಕರದ ವಿಷಯವಾಗಿ ಮಾತುಕತೆ ನಡೆಸಿದರು ವಿದ್ಯಾರ್ಥಿಗಳಿಗೆ ಕಲ್ಪಿಸಬೇಕಾದ ಸೌಲಭ್ಯಗಳು ಸಾಲದೆಂಬುದನ್ನು ಅವರಿಗೆ ಮನದಟ್ಟು ಮಾಡಲಾಯಿತು ಆಸ್ಪತ್ರೆಯಲ್ಲಿ ಸ್ತ್ರೀ [illegible]ರ್ಯವನ್ನು ಉತ್ತಮಗೊಳಿಸಬೇಕೆಂದು ಅವರು ಸಲಹೆ ಮಾಡಿದರು ವಿದ್ಯಾರ್ಥಿಗಳು ಗುರುಭಕ್ತಿಯನ್ನು ಇಟ್ಟುಕೊಂಡು, ಶಿಸ್ತಿನ ಕಡೆಗೆ ಹೆಚ್ಚು ಗಮನವೀಯಬೇಕೆಂದು ಸೂಚಿಸಿದರು

ತಮ್ಮ ಮನಸ್ಸಿಗೆ ಸರಿಯೆಂದು ಕಾಣುವ ಯಾವ ಬೇಡಿಕೆಗಾದರೂ ಒತ್ತಾಯವನ್ನು ಶಾಂತಿಯುತವಾಗಿ ತೋರಿಸಬೇಕೆಂದೂ, ಅವರು ಈ ವಿದ್ಯಾರ್ಥಿ ವೃಂದಕ್ಕೆ ಸಲಹೆ ಮಾಡಿದರು. ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಮುಷ್ಕರವು ಆದಷ್ಟು ಬೇಗನೆ ಮುಕ್ತಾಯವಾಗಬೇಕೆಂದು ಅವರು ಆಶಿಸಿದರು

ನೇಪಾಳದಲ್ಲಿ ಪಾಕಿಸ್ತಾನಿಗಳ ಪಿತೂರಿ

ನೇಪಾಳದಲ್ಲಿ ಸಣ್ಣ ಪಾಕಿಸ್ತಾನವೊಂದನ್ನು ಸ್ಥಾಪಿಸುವ ಬಗ್ಗೆ ಪಿತೂರಿ ನಡೆಯುತ್ತಿರುವುದೆಂದು ಅಲ್ಲಿನ ಇಂಗ್ಲಿಷ್ ಪತ್ರಿಕೆಯೊಂದು ಎಚ್ಚರಿಸಿದೆ. ನೇಪಾಳದಲ್ಲಿ ಮುಸ್ಲಿಂ ಸಹೋದರತ್ವ ಎಂಬ ಸಂಸ್ಥೆಯನ್ನು ಸ್ಥಾಪಿಸಲು ಪೂರ್ವ ಪಾಕಿಸ್ತಾನದಿಂದ ಮುಸ್ಲಿಮನೊಬ್ಬನು ಅಲ್ಲಿಗೆ ಹೋಗಿ, ಅಲ್ಲಿ ಮುಸ್ಲಿಂ ಸಮ್ಮೇಳನ ನಡೆಲು ರಹಸ್ಯವಾಗಿ ಸಿದ್ಧತೆಯಲ್ಲಿ ತೊಡಗಿದ್ದುದಾಗಿಯೂ ಗೊತ್ತಾಗಿದೆ. ಪಾಕಿಸ್ತಾನದ ಪರವಿರುವ ಮುಸ್ಲಿಮರು ಇರುವ ಜಾನಾವಣೆಗಳಲ್ಲಿ ತಮ್ಮ ಸ್ವಂತ ಸಂಸ್ಥೆಯನ್ನಾಗಿ ನಿಲ್ಲಲು ಯೋಚಿಸುತ್ತಿರುವರೆಂದೂ, ಪಾಕಿಸ್ತಾನದ ಪರ ಚಳುವಳಿಗಾಗಿ ವಿಶೇಷ ಧನವನ್ನು ಸಂಚಯಿಸಲಾಗಿದೆಯೆಂದೂ ಹೇಳಲಾಗಿದೆ.

ಉತ್ಸವ ಕಾಲದಲ್ಲಿ ರೈಲ್ವೆ ಪ್ರಯಾಣದ ರಿಯಾಯಿತಿ

ದಸರಾ, ದೀಪಾವಳಿ, ಕ್ರಿಸ್ಮಸ್ ಹಬ್ಬದ ದಿನಗಳಲ್ಲಿ ರೈಲ್ವೆಯು ಮೂರು ತರಗತಿಗಳಲ್ಲೂ ೧॥ ದರದಂತೆ ರಿಟರ್ನ್ ಟಿಕೆಟ್ಟಿನ ರಿಯಾಯಿತಿಯನ್ನು ಕೊಡಲಾಗುವುದು. ಅದರ ಅವಧಿಯು ಕೊಟ್ಟ ದಿನದಿಂದ ೧೮ ದಿನಗಳವರೆಗೆ ಇರುವುದು. ದಸರಾ ಉತ್ಸವದ ಟಿಕೆಟ್ಟುಗಳು ಅಕ್ಟೋಬರ್ ೧ ರಿಂದ ೧೮ ರವರೆಗೆ ಸಿಗುವುವು.

ಬೆಂಗಳೂರಿನಲ್ಲಿ ಖಾದಿ ಮತ್ತು ಗ್ರಾಮಕೈಗಾರಿಕೆ ಶಿಕ್ಷಣ ಕೇಂದ್ರ

ಖಾದಿ ಮತ್ತು ಗ್ರಾಮ ಕೈಗಾರಿಕೆಗಳಿಗೆ ಉತ್ತೇಜನ ಕೊಡುವುದಕ್ಕಾಗಿ ಸಾಗರದಲ್ಲಿರುವ ಶಿಕ್ಷಣ ಕೇಂದ್ರವಲ್ಲದೆ ಬೆಂಗಳೂರು, ಛತ್ರಪುರ ಮತ್ತು ಬೊಂಬಾಯಿ ಬಳಿ ಕೋರೆಗಾಂವ್‌ಗಳಲ್ಲೂ ಒಂದೊಂದು ಕೇಂದ್ರಗಳನ್ನು ಸ್ಥಾಪಿಸಲಾಗುವುದು

ರಷ್ಯದಲ್ಲಿ ಹೆಚ್ಚು ಸಂಬಳ

ರಷ್ಯದಲ್ಲಿ ಅತ್ಯಂತ ಕಡಿಮೆ ಸಂಬಳ ಬರುವ ಕಾರ್ಮಿಕರಿಗೆ ಅವರ ವೇತನದ ಒಂದೇ ೧ ಭಾಗದಷ್ಟು ಹೆಚ್ಚು ಸಂಬಳವನ್ನು ಬರುವ ವರ್ಷದಿಂದ ಕೊಡಲು ಆ ದೇಶದ ಆಯವ್ಯಯದಲ್ಲಿ ೮೦೦ ಕೋಟಿ ರೂಬಲ್ಲುಗಳನ್ನು ತೆಗೆದಿಡಲಾಗುವುದು. ಪ್ರತಿಯೊಬ್ಬ ಕಾರ್ಮಿಕನಿಗೂ ೩೦೦ ರಿಂದ ೩೫೦ ರೂಬಲ್ಲುಗಳು ದೊರೆಯುವು. ೩೫೦ ರೂಬಲ್ಲುಗಳಿಗಿಂತ ಕಡಿಮೆ ವರಮಾನ ಬರುವವರಿಗೆ ವರಮಾನ ತೆರಿಗೆ ಮತ್ತು ಇತರ ವಿಶೇಷ ತೆರಿಗೆಗಳು ಇರುವುದಿಲ್ಲ. ಕೈಗಾರಿಕಾ ಕಾರ್ಮಿಕರಿಗೆ ಸಾಧಾರಣವಾಗಿ ೬೦೦ ರಿಂದ ೧,೦೦೦ ರೂಬಲ್ಲುಗಳು ದೊರೆಯುತ್ತವೆ. ಕೆಲವರಿಗೆ ಇದಕ್ಕಿಂತ ಕಡಿಮೆ ಸಂಬಳ ಬರುತ್ತದೆ. ಅಂತಹವರಿಗೆ ಮೇಲ್ಕಂಡ ಸೌಲಭ್ಯಗಳು ದೊರೆಯುವುವು.

ಮಹಿಳಾ ಸದನದಲ್ಲಿ ಕೃಷ್ಣ ಜಯಂತಿ

ರಾಜಧಾನಿಯ ಮಹಿಳಾ ಸದನದಲ್ಲಿ ಕಳೆದ ಬುಧವಾರ ಶ್ರೀ ಕೃಷ್ಣ ಜಯಂತಿ ಉತ್ಸವವನ್ನು ಶ್ರೀ ಕೆ ವಿ. ಶ್ರೀಕಂಠಯ್ಯನವರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು. ಪ್ರಾರ್ಥನೆ, ಶ್ರೀಮತಿ ವಿ. ಸರೋಜ ಮತ್ತು ವಿ. ಪದ್ಮನವರುಗಳಿಂದ ಸುಶ್ರಾವ್ಯವಾದ ಸಂಗೀತವು ನಡೆದನಂತರ ಅಧ್ಯಕ್ಷರು ತಮ್ಮ ಭಾಷಣದಲ್ಲಿ ಶ್ರೀ ಕೃಷ್ಣನ ಮಹಿಮೆ, ಆತನ ಗೀತೋಪದೇಶ-ಮುಂತಾದ ವಿಷಯಗಳನ್ನು ವಿವರಿಸಿದರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಗಳಾದನಂತರ ಸಭೆ ಮುಕ್ತಾಯವಾಯಿತು.

ಚಾಮರಾಜನಗರ ರಾಷ್ಟ್ರೀಯ ವಿಸ್ತರಣಾ ಸಮಿತಿ ಸದಸ್ಯರು

ಚಾಮರಾಜನಗರ ತಾಲ್ಲೂಕಿನ ರಾಷ್ಟ್ರೀಯ ವಿಸ್ತರಣಾ ಸೇವಾ ಸಲಹಾ ಸಮಿತಿಯನ್ನು ಸರ್ಕಾರದವರು ರಚಿಸಿರುತ್ತಾರೆ ಜಿಲ್ಲಾಧಿಕಾರಿಗಳು ಅದರ ಅಧ್ಯಕ್ಷರಾಗಿರುತ್ತಾರೆ ನಂಜನಗೂಡು ಸಬ್ ಡಿವಿಜನ್ ಅಧಿಕಾರಿಗಳು ಉಪಾಧ್ಯಕ್ಷರಾಗಿರುತ್ತಾರೆ. ಅಧಿಕಾರಿ ಸದಸ್ಯರುಗಳಲ್ಲದೆ ಶ್ರೀಗಳಾದ ಯು ಬಿ ಮಾದಪ್ಪ, ಜಿ. ರಾಜಯ್ಯ, ಎಸ್ ಪುಟ್ಟನಂಜಪ್ಪ, ಎಂ ಸಿ ಬಸಪ್ಪ, ಪಟೇಲ್ ಚನ್ನಬಸಪ್ಪ, ಎಂ. ಎ. ಪುಟ್ಟಸ್ವಾಮಿ, ಆರ್ ಎಂ. ಸಿದ್ದಪ್ಪ, ಸಿದ್ದಲಿಂಗಯ್ಯ ಮತ್ತು ಛೇರ್ಮನ್ ಮಲ್ಲಪ್ಪನವರನ್ನು ಸದಸ್ಯರಾಗಿ ನೇಮಿಸಲಾಗಿದೆ.

ಆಯುರ್ವೇದ ಕಾಲೇಜಿನ ಅಭಿವೃದ್ಧಿಗೆ ಮಹಾರಾಜರಿಗೆ ಮನವಿ

ಮೈಸೂರು ೧೧

ಭಾರತೀಯ ಜನ ಸಂಘದ ನಗರ ಶಾಖೆಯ ಅಧ್ಯಕ್ಷರಾದ ಶ್ರೀ ಎಸ್ ಆರ್. ವೆಂಕಟಾಚಾರ್ಯರು ಶ್ರೀಮನ್ಮಹಾರಾಜರಿಗೆ ಮನವಿ ಪತ್ರವೊಂದನ್ನು ಕಳ್ಳಿಸಿ, ಹಿಂದಿನ ಮಹಾರಾಜರು ಈ ನಗರದಲ್ಲಿ ಸ್ಥಾಪಿಸಿದಂತಹ ಆಯುರ್ವೇದ ಕಾಲೇಜನ್ನು ಸರ್ಕಾರದವರು ಬೆಂಗಳೂರಿಗೆ ವರ್ಗಾಯಿಸುವ ವಿಚಾರವನ್ನು ಪ್ರಸ್ತಾಪಿಸಿರುತ್ತಾರೆ. ಆಯುರ್ವೇದದ ಸಂಶೋಧನೆಗಾಗಿಯೂ, ಹೆಚ್ಚು ಶಾಖೆಗಳನ್ನು ಮತ್ತು ಪುಸ್ತಕ ಭಂಡಾರವನ್ನು ಏರ್ಪಡಿಸಲೂ ಉತ್ತಮವಾದ ಮತ್ತು ಸಾಕಷ್ಟು ಸ್ಥಳವು ಬೇಕಾಗಿರುವುದೆಂದೂ, ಅದಕ್ಕಾಗಿ ಮಹಾರಾಜರು ತಮ್ಮ ಅರಮನೆ ಕಛೇರಿ ಭವನವನ್ನು ಉದಾರವಾಗಿ ಕೊಡಬೇಕೆಂದೂ ಅವರು ಕೋರಿರುತ್ತಾರೆ.

ಮದ್ರಾಸ್ ಸಚಿವರಿಂದ ನೇತ್ರ ದಾನ

ಹುಟ್ಟು ಕುರುಡರಿಗೆ ಕಣ್ಣು ಬರಿಸಲು ಜನರು ನೇತ್ರ ಬ್ಯಾಂಕಿಗೆ ಕಣ್ಣುಗಳನ್ನು ದಾನ ಮಾಡಬೇಕೆಂದು ಮದ್ರಾಸಿನ ಮಂತ್ರಿ ಸಿ. ಸುಬ್ರಹ್ಮಣ್ಯಂರವರು ಹೇಳಿ, ತಮ್ಮ ಕಣ್ಣುಗಳನ್ನೂ ಕೊಡಲು ತಾವು ಸಿದ್ಧವೆಂದು ತಿಳಿಸಿರುತ್ತಾರೆ.

ಭೂಮಧ್ಯ ಸಮುದ್ರಕ್ಕೆ ಬ್ರಿಟಿಷ್ ಫಿರಂಗಿ ಪಡೆ

ಎಂಪೈರ್ ಕೆನ್ ಎಂಬ ಹಡಗಿನಲ್ಲಿ ಮೊನ್ನೆ ಸೌತಾಂಪ್ಟನ್ನಿನಿಂದ ಬ್ರಿಟಿಷ್ ಪರಟರಾಜು, ಫಿರಂಗಿ ಮುಂತಾದುವುಗಳಿಂದ ಸಜ್ಜಾದ ಮಿಲಿಟರಿ ದಳಗಳು ಮೆಡಿಟರೇನಿಯನ್ನಿಗೆ ಪ್ರಯಾಣ ಮಾಡಿದುವು.

ನಾಯಿಗಳ ಹಾವಳಿ

ಈಗ್ಗೆ ಕೆಲವು ದಿವಸಗಳಿಂದ ಡಿ. ಸುಬ್ಬಯ್ಯಾಸ್ತೆ ಮತ್ತು ಸುತ್ತಮುತ್ತಲ ಪ್ರದೇಶದಲ್ಲಿ ನಾಯಿಗಳ ಕಾಟ ಹೆಚ್ಚಾಗಿ ಪರೀಕ್ಷೆಗಳಿಗೆ ಕಟ್ಟಿರುವ ವಿದ್ಯಾರ್ಥಿಗಳು ಓದುವುದಕ್ಕೂ, ರೋಗಿಗಳು ಮಲಗುವುದಕ್ಕೂ ತಿರುಗಾಡುವುದಕ್ಕೂ ಬಹಳ ತೊಂದರೆಯಾಗಿದೆಯಲ್ಲದೆ ರಾತ್ರಿ ಕಾಲದಲ್ಲಿ ನಿದ್ರೆ ಮಾಡಲು ಸಾಧ್ಯವಾಗುತ್ತಿಲ್ಲ. ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಸೂಕ್ತಕ್ರಮ ಕೈಗೊಳ್ಳುವರೆಂದು ನಂಬಲಾಗಿದೆ. ಎಂದು ಅಲ್ಲಿನ ನಿವಾಸಿಯೊಬ್ಬರು ಪತ್ರ ಬರೆದಿರುತ್ತಾರೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭ ೫ ಗೋಟುವಾದ್ಯ.೭-೧೫ ಮತ್ತು ೮-೧೫ ರಾಜಮ್ಮ ಕೇಶವಮೂರ್ತಿ-ದೇವರ ನಾಮ ೭ ೩೦ ಹಿಂದಿ ಪಾಠ ಮಧ್ಯಾಹ್ನ ೧೨ ಮತ್ತು ೧ ೫೦ ಕೆ. ಎಸ್ ದೇಶಿಕಾಚಾರ್ ಸಂಗೀತ, ವಿ. ತ್ಯಾಗರಾಜ ಪಿಟೀಲು ಮತ್ತು ಪಾಲಘಾಟ್ ಮಣಿಅಯ್ಯರ್-ಮೃದಂಗ ೧ ಸಂಗೀತ ೨ ಗೋಟುವಾದ್ಯ ೩-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೫-೩೦ ಮತ್ತು ೮ ಹೆಚ್. ಎಸ್. ಸಣ್ಣಪ್ಪ-ನಾಗಸ್ವರ ೬-೧೫ ಭಕ್ತಿಗೀತೆ. ೭-೩೦ ಶಾಂತಿ ಮತ್ತು ನಮ್ಮವರು ೮-೩೦ ರಾಷ್ಟ್ರೀಯ ಕಾರ್ಯಕ್ರಮ ೮-೫೦ ಪಾಲಘಾಟ್ ಸುಬ್ರಹ್ಮಣ್ಯ ಅಯ್ಯರ್-ಸಂಗೀತ. ೯-೧೫ ಸಂಗೀತ ಸಭೆ.ರ ಕೋರ್ಲ ಛಾಯ್ಸ್-ಹಾಡುಗಾರಿಕೆ.

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ ಮತ್ತು

ಕೊಯಮತ್ತೂರು ಸಣ್ಣ	[illegible]	[illegible]	೦	[illegible]	[illegible]	೦
ರಕ್ತಚೂಡಿ	[illegible]	೦	೦	[illegible]	[illegible]	೦
ರಾಗಿ	[illegible]	[illegible]	೦	[illegible]	೦	೦
ಕಡ್ಲೆ	[illegible]	೦	೦	[illegible]	[illegible]	[illegible]
ರಾಗಿ	[illegible]	[illegible]	[illegible]	[illegible]	[illegible]	[illegible]
ಜೋಳ	[illegible]	[illegible]	೦	[illegible]	[illegible]	೦
ಕಡಲೆಕಾಯಿ	[illegible]	೧೦	೦	[illegible]	೦	೦
ಎಳ್ಳು	[illegible]	೦	೦	[illegible]	[illegible]	[illegible]
ಹುರುಳಿ	[illegible]	[illegible]	೦	[illegible]	[illegible]	[illegible]
ಹೆಸರು	[illegible]	೦	೦			
ಕಲಸಂದೆ	[illegible]	೦	೦	[illegible]	[illegible]	[illegible]
ಉದ್ದು	[illegible]	[illegible]	೦	[illegible]	೦	೦
ತೊಗರಿ	[illegible]	[illegible]	[illegible]	[illegible]	[illegible]	೦
ಹುಣಸೇಹಣ್ಣು	[illegible]	[illegible]	೦	[illegible]	೧೦	೦
ಕೆಂಗಿಬಣ್ಣ ೧೧೦೦೦	[illegible]	೦	೦	[illegible]	[illegible]	೦

ಅಧಿಕಾರಿಗಳಿಗೂ ಬೊಂಬಾಯಿ ಮಟ್ಟದ ಸಂಬಳಕ್ಕಾಗಿ ಒತ್ತಾಯ

ಬೆಂಗಳೂರು ೧೧

ಸರ್ಕಾರದ ಅರಾಂಪ ಕಚೇರಿ ಸಂಘದ ವಿಶೇಷ ಸಭೆಯು ಕಳೆದ ಗುರುವಾರ ನಡೆದು, ಈಗಿನ ಮೈಸೂರಿನ ಗೆಜೆಟೆಡ್ ಅಧಿಕಾರಿಗಳ ನಿಷ್ಠೆ ಮತ್ತು ಭಕ್ತಿಯುತ ಸೇವೆಗಾಗಿ ಅವರಿಗೆ ಎರಡು ತಿಂಗಳ ಸಂಬಳವನ್ನು, ೧,೦೦೦ ರೂ ಗೆ ಹೆಚ್ಚಿಲ್ಲದಂತೆ ಕೊಡುವಂತೆಯೂ ಮತ್ತು ಎಲ್ಲಾ ಅಧಿಕಾರಿಗಳಿಗೂ, ನೌಕರರಿಗೂ ನವೆಂಬರ್ ೧ ರಿಂದ ಬೊಂಬಾಯಿ ಮಟ್ಟದ ಸಂಬಳವನ್ನು ಕೊಡಬೇಕೆಂದೂ ಒತ್ತಾಯಪಡಿಸಲಾಗಿದೆ

ರೂ. ಗೆ ೨ ಸೇರಿನಂತೆ ಬರ್ಮಾ ಅಕ್ಕಿ

ರೂಪಾಯಿಗೆ ಎರಡು ಸೇರಿನಂತೆ ಉತ್ತಮವಾದ ಬರ್ಮಾ ಅಕ್ಕಿಯನ್ನು ಜನರಿಗೆ ಒದಗಿಸಲಾಗುವುದೆಂದು ಕೇಂದ್ರ ಆಹಾರ ಉಪ ಮಂತ್ರಿ ಎಂ. ವಿ ಕೃಷ್ಣಪ್ಪನವರು ತಿಳಿಸಿರುತ್ತಾರೆ ಅಮೆರಿಕದ ಅಕ್ಕಿಯ ದಾಸ್ತಾನು ಮುಗಿದುಹೋಗಿರುವುದೆಂದೂ, ಮುಂದೆ ಒಳ್ಳೆಯ ಅಕ್ಕಿಯನ್ನೇ ಸರಬರಾಜು ಮಾಡಲಾಗುವುದೆಂದೂ ಅವರು ತಿಳಿಸಿರುವರು

ಕಾಮರಾಜರ ಮುಂದೆ ಕಪ್ಪು ಬಾವುಟ ಪ್ರದರ್ಶನ

ಮದರಾಸಿನ ಮುಖ್ಯ ಮಂತ್ರಿ ಕಾಮರಾಜ್ ಮತ್ತು ಇತರ ಸಚಿವರಾದ ಪರಮೇಶ್ವರ್ ಮತ್ತು ಎಂ ಎ ಮಾಣಿಕ್ಯವೇಲುರವರ ಮುಂದೆ ಸೇಲಮ್ಮಿನಲ್ಲಿ ಸಮಾಜವಾದಿಗಳು ಕಪ್ಪು ಬಾವುಟ ಪ್ರದರ್ಶನ ನಡೆಸಿ, ಆಹಾರದ ಬೆಲೆ ಹೆಚ್ಚಿರುವುದನ್ನೂ ವಿವಿಧ ಘಟ್ಟದ ಮೂರಾಟ ತೆರಿಗೆಯನ್ನೂ ಪ್ರತಿಭಟಿಸಿದರು.

ರೈಲ್ವೆ ಗುಮಾಸ್ತರ ಸತ್ಯಾಗ್ರಹ

ಅಖಿಲ ಭಾರತ ರೈಲ್ವೆ ಗುಮಾಸ್ತರ ಸಂಘದವರ ಮುಖ್ಯ ಬೇಡಿಕೆಗಳನ್ನು ಈಡೇರಿಸದಿರುವುದಕ್ಕಾಗಿ ತಮ್ಮ ಪ್ರತಿಭಟನೆ ಸೂಚಿಸಲು ಗುಮಾಸ್ತರು ಲೇಖನಿ ಸತ್ಯಾಗ್ರಹವನ್ನು ನಡೆಸುವಂತೆ ಸೂಚಿಸಲಾಗಿದೆ ಕೇಂದ್ರ ಸಂಬಳ ಸಮಿತಿಯವರ ಸಲಹೆಯಂತೆ ತಮಗೆ ಸಂಬಳವನ್ನು ೮೨-೨೨೦ ರೂ. ಮಟ್ಟದಲ್ಲಿ ಗೊತ್ತುಪಡಿಸಬೇಕೆಂದು ಸೂಚಿಸಲಾಗಿದ್ದಿತು ಈ ಸತ್ಯಾಗ್ರಹದ ಬಗ್ಗೆ ಬ್ಯಾಲಟ್ ತೆಗೆದುಕೊಳ್ಳಲಾಗುವುದು.

ಎಂ. ಸಿ. ಸುಬ್ಬಪ್ಪನವರ ವರ್ಗ

ರಾಜಧಾನಿಯ ಮಹಾರಾಜಾ ಹೈಸ್ಕೂಲಿನ ಉಪಾಧ್ಯಾಯರಾದ ಶ್ರೀ ಎಂ. ಸಿ. ಸುಬ್ಬಪ್ಪನವರಿಗೆ ಬಡ್ತಿ ಕೊಟ್ಟು ರಾಮನಗರದ ಸರ್ಕಾರದ ಪ್ರೌಢಶಾಲೆಯ ಮುಖ್ಯೋಪಾಧ್ಯಾಯರಾಗಿ ವರ್ಗಾಯಿಸಲಾಗಿದೆ.

ಉಪನ್ಯಾಸ

ಜೈನ ಧರ್ಮದ ದಶಲಾಕ್ಷಣಿಕ ದಿನಾಚರಣೆ ಸಂಬಂಧವಾಗಿ ಈ ಸಂಜೆ ೭ ಗಂಟೆಗೆ ನಗರದ ಎಂ ಎಲ್. ವರ್ಧಮಾನಯ್ಯನವರ ಜೈನ ದೇವಾಲಯದಲ್ಲಿ ಬೆಂಗಳೂರಿನ ಶ್ರೀ ಪದ್ಮನಾಭಯ್ಯನವರಿಂದ ಉಪನ್ಯಾಸವು ನಡೆಯುವುದು

ಪಾಲಹಳ್ಳಿ ಸೀತಾರಾಮಯ್ಯನವರು ಮದ್ರಾಸಿಗೆ

ಮದರಾಸಿನಲ್ಲಿ ಇದೇ ತಿಂಗಳು ೧೬ರಿಂದ ನಡೆಯುವ ನಾನಾ ಶಾಸನ ಸಭೆಗಳ ಅಧ್ಯಕ್ಷರ ಸಮ್ಮೇಳನದಲ್ಲಿ ಭಾಗವಹಿಸಲು ಸಂಸ್ಥಾನದ ವಿಧಾನ ಪರಿಷತ್ತಿನ ಹಂಗಾಮಿ ಅಧ್ಯಕ್ಷ ಶ್ರೀ ಪಿ. ಸೀತಾರಾಮಯ್ಯ, ವಿಧಾನ ಸಭೆಯ ಅಧ್ಯಕ್ಷ ಶ್ರೀ ಹೆಚ್. ಎಸ್. ರುದ್ರಪ್ಪ ಮತ್ತು ಉಪಾಧ್ಯಕ್ಷ ಶ್ರೀ ಆರ್ ಚನ್ನಿಗರಾಮಯ್ಯನವರು ಇದೇ ೧೫ನೇ ತಾರೀಖು ಮದ್ರಾಸಿಗೆ ತೆರಳುವರು.

ಚುನಾವಣಾ ಅಪೀಲ್‌ಗಳ ವಜಾ

ಪಿರಿಯಾಪಟ್ಟಣ ಕ್ಷೇತ್ರದಿಂದ ಇತ್ತೀಚೆಗೆ ನಡೆದ ಶಾಸನಸಭಾ ಉಪ ಚುನಾವಣೆ ಸಂಬಂಧದಲ್ಲಿ ಠೇವಣಿಗಾಗಿ ಸಲ್ಲಿಸಬೇಕಾದ ಖರ್ಚು ಪಟ್ಟಿಯನ್ನು ಒದಗಿಸದಿದ್ದ ಕಾರಣ ಉಮೇದುವಾರರಾಗಿ ನಿಂತಿದ್ದ ಶ್ರೀಗಳು ಪಟೇಲ್ ಲಿಂಗೇಗೌಡ, ಅಣ್ಣಯ್ಯ, ರಂಗಯ್ಯ ಮತ್ತು ಬಿ. ಎ. ಬೆಳ್ಳಿಯಪ್ಪನವರನ್ನು ಪ್ರಜಾ ಪ್ರಾತಿನಿಧ್ಯ ಶಾಸನದ ಪ್ರಕಾರ ಅನರ್ಹಗೊಳಿಸಲಾಗಿದೆ.

ಗಣಪತಿ ಉತ್ಸವದ ಕಾರ್ಯಕ್ರಮ

ಮೈಸೂರು ೧೧

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಶ್ರೀ ಆರ್ ಎಸ್ ಕೇಶವಮೂರ್ತಿಯವರ ವೀಣ ವಾದನವು ಏರ್ಪಾಡಾಗಿದೆ.

ಕೃಷ್ಣವಿಲಾಸ ರಸ್ತೆಯಲ್ಲಿರುವ ಮಾದರಿ ಶಾಲೆಯಲ್ಲಿ ಈ ಸಂಜೆ ವಿ॥ ಹೆಚ್. ಟಿ ರಾಮಸ್ವಾಮಿ ಮತ್ತು ಗೆಳೆಯರಿಂದ ಸಂಗೀತವು ಏರ್ಪಾಡಾಗಿದೆ. ನಾಳೆ ಸಂಜೆ ೬ ಗಂಟೆಗೆ ವಿ॥ ಆರ್ ವಿಶ್ವೇಶ್ವರ್‌ರವರಿಂದ ವೀಣಾ ವಾದನವು ನಡೆಯುವುದು

ಹಳ್ಳದಕೇರಿ ಪ್ರಸನ್ನ ರಾಮಮಂದಿರದಲ್ಲಿ ಈ ರಾತ್ರಿ ಟಿ. ಚೌಡಯ್ಯನವರ ಪಿಟೀಲು ಕಛೇರಿಯು ಶ್ರೀ ಜೆ. ಬಿ ಮಲ್ಲಾರಾಧ್ಯರ ಅಧ್ಯಕ್ಷತೆಯಲ್ಲಿ ಜರುಗುವುದು

ಹಳೇ ಬಂಡಿಕೇರಿಯಲ್ಲಿರುವ ಬಾಲಕರ ವಿನಾಯಕ ಭಕ್ತ ಮಂಡಲಿಯವರು ಈ ದಿನ ಸಂಜೆ ೭-೩೦ ಗಂಟೆಗೆ ಮೈಸೂರು ನಗರಾಭಿವೃದ್ಧಿ ಸಮಿತಿಯ ಅಧ್ಯಕ್ಷ ಶ್ರೀ ಲಿಂಗಣ್ಣನವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಎ ಎಸ್. ಪದ್ಮಾರವರ ಹರಿಕಥೆಯನ್ನು ಸೂಕ್ತ ಪಕ್ಕ ವಾದ್ಯಗಳೊಡನೆ ಏರ್ಪಡಿಸಿರುತ್ತಾರೆ

ಶುಕ್ರವಾರ ಎನ್. ಜಿ. ಓ. ಗಳ ದಿನಾಚರಣೆ

ಮೈಸೂರು ೧೧

ಇದೇ ತಿಂಗಳು ೧೪ನೇ ತಾರೀಖು ಸಂಸ್ಥಾನದ ನಾನ್ ಗೆಜೆಟೆಡ್ ನೌಕರರು ಎನ್. ಜಿ. ಓ ದಿನಾಚರಣೆ ನಡೆಸುವಂತೆ ಸಂಸ್ಥಾನ ಸಂಘದ ಕಾರ್ಯದರ್ಶಿಯವರು ಸೂಚಿಸಿ, ಬೊಂಬಾಯಿ ಸಮಾನವಾದ ಸಂಬಳ, ಕೇಂದ್ರ ಸರ್ಕಾರದ ಭತ್ಯ ಮತ್ತು ೫ ರೂ ಗೆ ಕಡಿಮೆಯಿಲ್ಲದಂತೆ ಮುಂಗಡ ಭತ್ಯದ ತಾತ್ಕಾಲಿಕ ಪರಿಹಾರ ಕೊಡುವಂತೆ ಒತ್ತಾಯಪಡಿಸಲು ಸೂಚಿಸಲಾಗಿದೆ

ದಕ್ಷಿಣ ಜಪಾನಿನಲ್ಲಿ ಬಿರುಗಾಳಿಯಿಂದ ೧೯ ಮರಣ

ಓಕಿನಾವಾ ದ್ವೀಪದ ಮೂಲಕ ಪೆಸಿಫಿಕ್ ಸಾಗರದ ಕಡೆಯಿಂದ ಗಂಟೆಗೆ ೧೪೦ ಮೈಲಿ ವೇಗದ "ಎಮ್ಮ" ಎಂಬ ಬಿರುಗಾಳಿಯು ಬೀಸಿದ ಪರಿಣಾಮವಾಗಿ ದಕ್ಷಿಣ ಜಪಾನಿನಲ್ಲಿ ಜನರು ಮನೆಮಠಗಳನ್ನು ಬಿಟ್ಟು ಶಾಲೆ ಮತ್ತು ಆಸ್ಪತ್ರೆ ದೇಗುಲಗಳಲ್ಲಿ ಆಶ್ರಯ ಪಡೆಯಲು ಓಡಿಹೋಗಿದ್ದಾರೆ ಸಮುದ್ರದಲ್ಲಿ ವಿಪರೀತ ಅಲೆಗಳು ಎದ್ದು ತೀರ ಪಟ್ಟಣಗಳ ಮೇಲೆ ನೀರು ನುಗ್ಗಿದೆ ಅಮೆರಿಕದ ಮಿಲಿಟರಿ ಆಸ್ತಿಗಳಿಗೆ ವಿಪರೀತ ನಷ್ಟವಾಗಿದೆ. ೧೯ ಮಂದಿ ಮೃತಪಟ್ಟು, ೪೯ ಮಂದಿ ಗಾಯವಾಗಿದೆ

WANTED

One sparingly used Motor cycle, immediately Contact:

M JAGANNATH,
Sri Krishnarajendra Mills,
Mysore

ಲಕ್ಷ್ಮಿ ಚಿತ್ರ ★ 12-9-56ನೇ ಬುಧವಾರದಿ. ಅಪೂರ್ವ ಪ್ರಾರಂಭ ಪ್ರತಿ ದಿನ 3 ಆಟಗಳು

ಜ್ಯುಪಿಟರ್‌ರವರ ಅತ್ಯುತ್ತಮ ತಮಿಳು ಚಿತ್ರ

ರಾಜ ಕುಮಾರಿ

(ಹೊಸ ಕಾಪಿ)

ಪಾತ್ರ:- ಎಂ. ಜಿ. ರಾಮಚಂದ್ರನ್, ಬಾಲಯ್ಯ, ಪುಳಿಮೂಟೈ ರಾಮಸ್ವಾಮಿ, ಎಸ್. ವಿ ಸುಬ್ಬಯ್ಯ, ನಂಬಿಯಾರ್, ಸ್ವಾಮಿನಾಥನ್, ಕೆ. ಮಾಲತಿ, ಭಾಗ್ಯಂ ಮುಂತಾದವರು

ಕೊನೆ ದಿನ ಮಂಗಳಗೌರಿ

Edited, Printed and Published by A. R. Nagarajan at Sadhvi Press, D. Subbiah Road, Mysore

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : WEDNESDAY 12—9—1956 ಮೈಸೂರು : ಬುಧವಾರ ೧೨—೯—೧೯೫೬ [ಸಂಚಿಕೆ : ೩೯

ಈಜಿಪ್ಟಿನ ಮೇಲೆ ಧಾಳಿ ಬಗ್ಗೆ ನಾಸೆರರ ಪ್ರಬಲ ಎಚ್ಚರಿಕೆ

ಆಯುರ್ವೇದ ಕಾಲೇಜಿನಲ್ಲಿ ಹೆಚ್ಚು ಸೌಕರ್ಯದ ಭರವಸೆ

ಸ್ಥಳೀಯ ಸಂಸ್ಥೆ ಕಮಿಷನರರೊಡನೆ ಪದವೀಧರ ಸಂಘದವರ ನಿಯೋಗ

ಮೈಸೂರು ೧೧

ಇಲ್ಲಿನ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳ ಮುಷ್ಕರದ ಸಂಬಂಧವಾಗಿ ಕಾಲೇಜು ಪದವೀಧರರ ಸಂಘದ ಪರವಾಗಿ ಶ್ರೀಗಳಾದ ಟಿ. ಕೆ. ರಾಮಶಾಸ್ತ್ರಿ, ಹೆಚ್. ಸಿ. ಚಲುವಯ್ಯ, ಬಿ. ಆರ್ ಶಾಮಾಚಾರ್ ಮತ್ತು ಟಿ. ವಿ. ಕಸ್ತೂರಿಯವರುಳ್ಳ ನಿಯೋಗವೊಂದು ನೆನ್ನೆ ಸ್ಥಳೀಯ ಸಂಸ್ಥೆಗಳ ಕಮಿಷನರ್ ಶ್ರೀ ಎಂ. ಕೆ ಅಪ್ಪಾಜಪ್ಪನವರನ್ನು ಭೇಟಿ ಮಾಡಿ ಮುಷ್ಕರದ ಮುಕ್ತಾಯಕ್ಕೆ ಅನುಕೂಲವಾಗುವ ಬಗ್ಗೆ ಹಲವು ಸಲಹೆಗಳನ್ನಿತ್ತರು

ಕಾಲೇಜಿಗಾಗಿ ಕಟ್ಟಡ, ಹೆಚ್ಚಿನ ಉಪಾಧ್ಯಾಯರ ನೇಮಕ ಈ ಬಗ್ಗೆ ತುರ್ತು ವ್ಯವಸ್ಥೆಯಾಗಿರುವುದಾಗಿಯೂ, ಇತರ ವಿಚಾರಗಳು ಸರ್ಕಾರದ ಪರಿಶೀಲನೆಯಲ್ಲಿದ್ದು ಶೀಘ್ರದಲ್ಲೇ ತೀರ್ಮಾನವಾಗಲಿರುವುದಾಗಿಯೂ, ಮುಂದಿನ ಆ ವರ್ಷಗಳಲ್ಲಿ ಅಖಿಲ ಭಾರತದ ಮಟ್ಟದಲ್ಲಿ ಅನೇಕ ಅಭಿವೃದ್ಧಿ ಕೆಲಸಗಳು ಆಗಲಿವೆಯೆಂದೂ ಶ್ರೀ ಅಪ್ಪಾಜಪ್ಪನವರು ತಿಳಿಸಿ, ವಿದ್ಯಾರ್ಥಿಗಳ ಮುಷ್ಕರವು ಕೂಡಲೇ ನಿಲ್ಲಬೇಕೆಂದು ಸೂಚಿಸಿದರು.

ಶಿಕ್ಷಣ ಸೌಕರ್ಯಕ್ಕಾಗಿ ವಸ್ತು ಪ್ರದರ್ಶನಾಲಯವನ್ನು ಉಪಯೋಗಿಸಿ, ಈಗ ಕಾಲೇಜು ಇರುವ ಕಟ್ಟಡದಲ್ಲಿ ಆಸ್ಪತ್ರೆಯನ್ನು ವಿಸ್ತರಿಸಲು ಅವಕಾಶ ಕಲ್ಪಿಸಲಾಗುವುದೆಂದೂ, ವಿದ್ಯಾರ್ಥಿಗಳು ಮುಷ್ಕರವನ್ನು ನಿಲ್ಲಿಸಬೇಕೆಂದೂ ಪದವೀಧರರ ಸಂಘದ ಕಾರ್ಯದರ್ಶಿ ಶ್ರೀ ಬಿ ಆರ್. ಶಾಮಾಚಾರ್ಯರು ಪ್ರಾರ್ಥಿಸಿದ್ದಾರೆ.

ಬಡಬಗ್ಗರಿಗೆ ಅನ್ನದಾನ

ಹಳ್ಳದಕೇರಿಯಲ್ಲಿರುವ ಶ್ರೀ ಶಂಭುಲಿಂಗಪ್ಪನವರು ಗಣಪತಿ ಮಂಗಳಾರತಿ ಪ್ರಯುಕ್ತ ನಾಳೆ ಮಧ್ಯಾಹ್ನ ತಮ್ಮ ಮನೆ ಬಳಿ ಬಡಬಗ್ಗರಿಗೆ ಅನ್ನದಾನವನ್ನು ಏರ್ಪಡಿಸಿರುತ್ತಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಮುಖವೀಣೆ ೭-೧೫ ದೇವರನಾಮ. ೭-೩೦ ಮತ್ತು ೮-೧೫ ಆರ್. ಶಂಕರ—ಕಾವ್ಯವಾಚನ. ಮಧ್ಯಾಹ್ನ ೧೨ ಗಾಯಕ ಸುಬ್ಬರಾವ್—ಸಂಗೀತ. ೧೨-೩೦ ಪಿಟೀಲುವಾದನ ೧ ಹಿಂದೂಸ್ತಾನಿ ಸಂಗೀತ ೧-೫೦ ಪಿಟೀಲು ಮತ್ತು ಸಿತಾರ್. ೩-೧೫ ಪ್ರೌಢ ಶಾಲೆಗಾಗಿ. ಸಂಜೆ ೫-೩೦ ಟಿ. ಬಿ ಹರೀಂದ್ರ—ಹಿಂದೂಸ್ತಾನಿ ಸಂಗೀತ. ೭-೧೫ ಜಾನಪದ ಗೀತೆ ೭-೩೦ ವಿನೋಬಾಜಿ ಜನ್ಮ ದಿನೋತ್ಸವ. ೮ ಆರ್. ಸುಬ್ಬಾಶಾಸ್ತ್ರಿ—ಪಿಟೀಲು ಸಂಗೀತ. ೯-೧೫ ಭೂದಾನ ಮತ್ತು ಇಂಗ್ಲಿಷ್ ಭಾಷಣ ೯-೩೦ ಯಾತ್ರಿಕರ—ಕನ್ನಡ ಕಾರ್ಯಕ್ರಮ. ೯-೫೦ ವರಗಿ ಸೋಲಿಲ್ಲ—ಕನ್ನಡ ನಾಟಕ. ೧೦-೧೫ ಮೆಚ್ಚಿನ ಗೀತೆಗಳು

ಸಂಸ್ಥಾನದಲ್ಲಿ ಭೂದಾನ ಪಾದಯಾತ್ರೆಯ ಆರಂಭ

ಆಚಾರ್ಯ ವಿನೋಬಾ ಭಾವೆಯವರ ಸಂದೇಶ

ಬೆಂಗಳೂರು ೧೧

ಗಾಳಿ, ನೀರು, ಬೆಳಕು ಇವು ಭಗವಂತನಿಂದ ಹೇಗೆ ಉಂಟಾಯಿತೋ ಹಾಗೆಯೇ ಭೂಮಿ ಕೂಡ ಅವನಿಂದ ಸೃಷ್ಟಿಸಲ್ಪಟ್ಟಿದೆ ಆತನಲ್ಲಿನ ಭೂಮಿಗೆ ಬೇರೊಬ್ಬ ಒಡೆಯನಿಲ್ಲ ಹಲವೇ ಮಂದಿ ತಾವು ಭೂಮಿಯ ಒಡೆಯರೆಂದು ಭಾವಿಸುವುದು ಭಗವ ತನಿಗೆ ಅಪಚಾರವೆಸಗಿದಂತೆ. ಎಂಬುದಾಗಿ ನೆನ್ನೆ ಇಲ್ಲಿ ಆರಂಭವಾದ ೧೨ ದಿನಗಳ ಸಂಸ್ಥಾನದ ಭೂದಾನ ಪಾದಯಾತ್ರೆ ಸಂಬಂಧದಲ್ಲಿ ಆಚಾರ್ಯ ವಿನೋಬಾ ಭಾವೆಯವರು ಸಂದೇಶ ಕಳುಹಿಸಿದ್ದಾರೆ ಅನೇಕ ವಿಷಯಗಳಲ್ಲಿ ಮುಂದುವರಿದಿರುವ ಮೈಸೂರು ಈ ಕಾರ್ಯದಲ್ಲಿ ಹಿಂದೆಬೀಳಲು ಕಾರಣವಿಲ್ಲವೆಂದೂ ಅವರು ತಿಳಿಸಿದ್ದಾರೆ.

ಸಮಾರಂಭದ ಅಧ್ಯಕ್ಷತೆಯನ್ನು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ವಹಿಸಿದ್ದರು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಯಾತ್ರೆಯ ಆರಂಭೋತ್ಸವವನ್ನು ನೆರವೇರಿಸಿದರು.

ಪಾದ ಯಾತ್ರೆ ಸಂಚಾಲಕ ಸಮಿತಿ ಅಧ್ಯಕ್ಷರಾದ ವಿಧಾನ ಸಭಾಧ್ಯಕ್ಷ ಶ್ರೀ ಹೆಚ್. ಎಸ್. ರುದ್ರಪ್ಪನವರು ಸ್ವಾಗತ ಭಾಷಣ ಮಾಡಿದರು.

ಪ್ರಥಮ ಯಾತ್ರಿಕ ತಂಡದಲ್ಲಿ ಶ್ರೀಗಳಾದ ಎಸ್. ಚನ್ನಯ್ಯ, ಹೆಚ್. ಎಸ್. ರುದ್ರಪ್ಪ ಮತ್ತು ಇತರರು ಸ್ವಯಂಸೇವಕರೊಡನೆ ಸೇರಿದ್ದರು. ಮೆರವಣಿಗೆಯು ಶ್ರೀ ಅರಿಯಾರರೊಬ್ಬರು ಮಾತ್ರ ಇಲ್ಲಿಂದ ಕೆಂಗೇರಿಗೆ ಕಾಲು ನಡಿಗೆಯಲ್ಲೇ ಹೋದರು ಇತರರು ವಾಹನಗಳಲ್ಲಿ ಹೋದರು.

ನೇತಾಜಿ ಬೋಸರ ನಿಧನ ಖಚಿತ

ನೇತಾಜಿ ಸುಭಾಷ್ ಚಂದ್ರಬೋಸರು ೧೯೪೫ ನೇ ಆಗಸ್ಟ್ ೧೮ರಲ್ಲಿ ಫಾರ್ಮೋಸಾ ವಿಮಾನದಲ್ಲಿ ಬಿದ್ದ ವಿಮಾನ ಅಪಘಾತದಲ್ಲಿ ಮೃತಪಟ್ಟರೆಂದು ತನಿಖಾ ಸಮಿತಿಯವರು ಅಭಿಪ್ರಾಯ ಸೂಚಿಸಿರುವರು.

ಎಸ್. ಎಸ್. ಎಲ್ ಸಿ. ಪರೀಕ್ಷಾ ಕಾರ್ಡು ಕಳೆದುಹೋಗಿದೆ

ಹೆಚ್. ಎಸ್. ನಾಗರಾಜ ಎಂಬ ವಿದ್ಯಾರ್ಥಿಯ ೩೬೮೦ನೇ ರಿಜಿಸ್ಟರು ನಂಬರಿನ ಎಸ್ ಎಸ್ ಎಲ್. ಸಿ ಮಾರ್ಕ್ಸ್ ಕಾರ್ಡು ಕಳೆದು ಹೋಗಿರುತ್ತೆ. ಯಾರಿಗಾದರೂ ಸಿಕ್ಕಿದ್ದಲ್ಲಿ ದಯವಿಟ್ಟು ನಗರದ ಪೋಸ್ಟ್ ಕೇರಿಯ ೭ನೇ ಕ್ರಾಸಿನ ೧೬೬೯ನೇ ಡೋರ್ ನಂಬರು ಮನೆಗೆ ತಲುಪಿಸಬೇಕೆಂದು ಕೋರಲಾಗಿದೆ.

○ ಭಾರತ ಸಾಹಿತ್ಯ ಸಮಿತಿಯವರು ೧೨ ಭಾಷೆಗಳಲ್ಲಿ ಬರೆಯಲಾಗಿರುವ ಅತ್ಯುತ್ತಮ ಪುಸ್ತಕಗಳಿಗೆ ಕೊಟ್ಟಿರುವ ತಲಾ ೫ ಸಾವಿರ ರೂ. ಬಹುಮಾನಗಳ ಪೈಕಿ ಒಂದು ಬಹುಮಾನವು ಶಾಂಗ್ಲಿ ಪ್ಪಾ॥ ರಂ ಶ್ರೀ. ಮುಗಳಿಯವರ " ಕನ್ನಡ ಸಾಹಿತ್ಯದ ಚರಿತ್ರೆಗೂ " ದೊರಕಿದೆ

ಈಜಿಪ್ಟಿನ ಮೇಲಿನ ಧಾಳಿ ವಿರುದ್ಧ ಅರಬ್ ರಾಜ್ಯಗಳ ನೆರವು

ಅಧ್ಯಕ್ಷ ನಾಸೆರ್‌ರವರ ಹೇಳಿಕೆ

ಈಜಿಪ್ಟಿನ ಮೇಲೆ ಸೂಯೆಜ್ ಕಾಲುವೆ ವಿಷಯವಾಗಿ ಧಾಳಿಯೇನಾದರೆ ನಡೆದರೆ ಅಟ್ಲಾಂಟಿಕ್‌ನಿಂದ ಹಿಂದೂ ಸಾಗರದ ವರೆಗೆ ಇರುವ ಎಲ್ಲ ರಾಷ್ಟ್ರಗಳಿಗೂ ಅದು ವ್ಯಾಪಿಸಿ, ಎಲ್ಲ ಅರಬ್ ರಾಜ್ಯಗಳೂ ತಮಗೆ ಬೆಂಬಲ ನೀಡುತ್ತವೆಂದು ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರು ಹೇಳಿರುತ್ತಾರೆ. ಬ್ರಿಟಿಷ್ ಮತ್ತು ಫ್ರೆಂಚ್ ಮಿಲಿಟರಿ ಸಿದ್ಧತೆಯನ್ನು ಕಡೆಗಿತ್ತು ತಾವು ಎಲ್ಲ ಕಷ್ಟ ಪರಿಸ್ಥಿತಿಗಳನ್ನೂ ಎದುರಿಸಲು ಸಿದ್ಧವಾಗುತ್ತಿರುವುದಾಗಿ ಅವರು ತಿಳಿಸಿರುತ್ತಾರೆ.

ಮಕ್ಕಳ ಪ್ರದರ್ಶನ

ಮೈಸೂರು ೧೧

ರಾಜಧಾನಿಯ ಗುಡ್ಡಾಂಬಾ ಗರ್ಭಿಣಿ ಮತ್ತು ಶಿಶು ಸಂರಕ್ಷಣಾ ಸಂಸ್ಥೆ ಮತ್ತು ಇಂಡಿಯನ್ ರೆಡ್ ಕ್ರಾಸ್ ಸೊಸೈಟಿಯ ಆಶ್ರಯದಲ್ಲಿ ಇದೇ ತಿಂಗಳು ೧೭ರಿಂದ ೨೨ರವರೆಗೆ ನಗರದ ನಾನಾ ಭಾಗಗಳಲ್ಲಿ ಮಕ್ಕಳ ಪ್ರದರ್ಶನಗಳನ್ನು ಏರ್ಪಡಿಸಲಾಗಿದೆ ೧೭ ನೇ ತಾರೀಕು ಗೌರ್ನಮೆಂಟ್ ಹೌಸ್ ಬಳಿ ಇರುವ ಸುಬ್ರಹ್ಮಣ್ಯಂ ಗರ್ಭಿಣಿ ಶಿಶು ಸಂರಕ್ಷಣಾಲಯ, ೧೮ರಂದು ಅಗ್ರಹಾರ ಬೀದಿಯ ಬಳಿ ಇರುವ ಮಲ್ಲಮ್ಮ ಗರ್ಭಿಣಿ ಶಿಶು ಸಂರಕ್ಷಣಾಲಯ, ೧೯ನೇ ತಾರೀಕು ಕೃಷ್ಣರಾಜೇಂದ್ರ ಗಿರಣಿ ಹಾಲಿನ ಕೇಂದ್ರ, ೨೦ರಂದು ವಾಣಿವಿಲಾಸ ರಸ್ತೆಯಲ್ಲಿರುವ ಗರ್ಭಿಣಿ ಶಿಶು ಸಂರಕ್ಷಣಾಲಯಗಳಲ್ಲಿ ಪ್ರದರ್ಶನಗಳು ಮಧ್ಯಾಹ್ನ ೩ ಗಂಟೆಗೆ ಇವೆ

೨೧ ನೇ ತಾರೀಕು ಮಧ್ಯಾಹ್ನ ೩ ಗೆ ವಾಣಿ ವಿಲಾಸ ಗರ್ಭಿಣಿ ಶಿಶು ಸಂರಕ್ಷಣಾಲಯದಲ್ಲಿ ಮೇಲ್ಕಂಡ ಪ್ರದರ್ಶನಗಳಲ್ಲಿ ಬಹುಮಾನ ಪಡೆದ ಮಕ್ಕಳ ಪ್ರದರ್ಶನ, ಸ್ಪರ್ಧೆ ಮತ್ತು ಪ್ರಥಮ ಸ್ಥಾನಗಳ ಆಯ್ಕೆಯಾಗಲಿವೆ ೨೨ ನೇ ತಾರೀಕು ಸಂಜೆ ೫ಗೆ ಬಹುಮಾನ ವಿನಿಯೋಗವಿದೆ.

ಪ್ರದರ್ಶನಕ್ಕೆ ಮಹಾಜನರು ಉದಾರವಾಗಿ ಸಹಾಯ ಮಾಡುವಂತೆ ವ್ಯವಸ್ಥಾಪಕರು ಕೋರಿರುತ್ತಾರೆ

ಭಾಗವಹಿಸುವ ಮಕ್ಕಳು ೧೮ ತಿಂಗಳಿಗೆ ಮೀರಿರಬಾರದು. ವೈದ್ಯರು ಮಕ್ಕಳನ್ನು ಪರೀಕ್ಷೆ ಮಾಡಿ ಸೂಕ್ತ ಸಲಹೆಯನ್ನು ಕೊಡುವರು ಬಡತನದ ಮಕ್ಕಳಿಗೆ ಒಂದು ಉಚಿತವಾಗಿ ಹಾಲನ್ನು ಕೊಡಲಾಗುವುದು ಮಕ್ಕಳಿಗೆ ಕಾಯಿಲೆ ಹಾಕದೆ ಕರೆತಂದರೆ ಅನುಕೂಲವೆಂದು ತಿಳಿಸಲಾಗಿದೆ

ಹುಡುಗ ತಪ್ಪಿಸಿಕೊಂಡಿದ್ದಾನೆ

10 ವರ್ಷದ ಎಣ್ಣೆಗೆಂಪು ಬಣ್ಣದ ಹುಡುಗ 10ನೇ ತಾರೀಖಿನಿಂದ ತಪ್ಪಿಸಿಕೊಂಡಿದ್ದಾನೆ. ನಿಕ್ಕರ್ ಮತ್ತು ಕೆಂಪು ಗೀರಿನ ಬುಷ್ ಷರಟು ಹಾಕಿಕೊಂಡಿದ್ದಾನೆ ಮಾತು ಬರುವುದಿಲ್ಲ. 'ಸೂರ್ಯ' ಎಂದು ಕರೆದರೆ ಗುರುತಿಸುತ್ತಾನೆ. ಯಾರಿಗಾದರೂ ಸಿಕ್ಕಿದಲ್ಲಿ ಕೆಳಗಿನ ಅಡ್ರೆಸ್ಸಿಗಾಗಲೀ, ಪೋಲೀಸು ಸ್ಟೇಷನ್ನಿಗಾಗಲೀ ತಲುಪಿಸಬೇಕೆಂದು ಪ್ರಾರ್ಥನೆ—ಕೆ ನಾರಾಯಣಶಾಸ್ತ್ರಿ. ಶ್ರೀಕಂಠಮಂದಿರಂ, ನಂಜನಗೂಡು.

ಆಯುರ್ವೇದ ವಿದ್ಯಾರ್ಥಿಗಳ ಮುಷ್ಕರದ ಪ್ರಶ್ನೆ

ವಿದ್ಯಾ ಸಚಿವರ ಅಭಿಪ್ರಾಯದ ಬಗ್ಗೆ ವಿದ್ಯಾರ್ಥಿ ಸಂಘದವರ ಸವಾಲು

ಮೈಸೂರು ೧೧

ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿ ಸಂಘದವರು ಈ ದಿನ ಪತ್ರಿಕಾ ಗೋಷ್ಠಿಯನ್ನು ನಡೆಸಿ, ವಿದ್ಯಾರ್ಥಿಗಳು ಮುಷ್ಕರ ನಡೆಸುತ್ತಿರುವುದರ ಬಗ್ಗೆ ವಿವರಣೆಯನ್ನಿತ್ತರಲ್ಲದೆ, ಪತ್ರಿಕಾ ಪ್ರತಿನಿಧಿಗಳಿಗೆ ಕಾಲೇಜಿನ ವಿವಿಧ ಭಾಗಗಳನ್ನು ತೋರಿಸಿ ತಮಗಿರುವ ಅನಾನುಕೂಲತೆಗಳನ್ನು ತಿಳಿಯಪಡಿಸಿದರು

ವಿದ್ಯಾರ್ಥಿಗಳ ಬೇಡಿಕೆಗಳು ತಮಗೆ ಗೊತ್ತಿಲ್ಲವೆಂದು ವಿದ್ಯಾ ಸಚಿವರು ಹೇಳಿರುವ ಬಗ್ಗೆ ಆಶ್ಚರ್ಯವನ್ನು ವ್ಯಕ್ತಪಡಿಸಿ ಈ ಹಿಂದೆ ಅವರನ್ನು ೫ ಸಲ ಭೇಟಿ ಮಾಡಿ ಬೇಡಿಕೆಗಳನ್ನು ತಿಳಿಸಲಾಗಿತ್ತೆಂದೂ, ಆ ವಿಷಯವು ತಮ್ಮ ಇಲಾಖೆಗೆ ಸೇರದಿರುವುದರಿಂದ ಅದರಲ್ಲಿ 'ಆಸಕ್ತಿ' ಯಿಲ್ಲವೆಂದು ಅವರು ತಿಳಿಸಿದರೆಂದೂ, ವಿದ್ಯಾರ್ಥಿಗಳು ತಿಳಿಸಿದರು

ತಮ್ಮ ಮುಷ್ಕರವು ಅಶಿಸ್ತಿನ ಚಿಹ್ನೆಯೆಂಬ ಟೀಕೆಯನ್ನು ನಿರಾಕರಿಸುತ್ತಾ, ಮುಷ್ಕರವು ಶಿಸ್ತಿದ್ದಾದರೆ ಬೇರೆ ಒಳ್ಳೆಯ ಮಾರ್ಗವನ್ನಾದರೂ ಸಚಿವರು ಸೂಚಿಸಲೆಂದು ಸವಾಲು ಹಾಕಿದರು ಮುಷ್ಕರದಲ್ಲಿ ಹೊರಗಿನವರ ಕೈವಾಡವಿಲ್ಲವೆಂದೂ ತಿಳಿಸಲಾಯಿತು.

ದ್ವಿತೀಯ ಯೋಜನೆಯಲ್ಲಿ ಕಾಲೇಜು ಅಭಿವೃದ್ಧಿಗೆ ನಿಗದಿಯಾಗಿರುವುದು ೯ ಲಕ್ಷ ರೂ. ಅಲ್ಲವೆಂದೂ, ಅದು ೭-೫೮ ಲಕ್ಷವೆಂದೂ, ಅದೂ ಸಹ ದೊರಕುವುದೋ ಇಲ್ಲವೋ ಎಂಬ ಭಯವಿರುವುದರಿಂದ ಮುಷ್ಕರವನ್ನು ಮುಂದುವರಿಸುತ್ತಿರುವುದಾಗಿಯೂ, ಈಗಲೂ ಸಹ ಬೇಡಿಕೆಗಳನ್ನು ಸರ್ಕಾರವು ಕಾರ್ಯತಃ ಮನ್ನಿಸುವುದಾದರೆ ಮುಷ್ಕರವನ್ನು ನಿಲ್ಲಿಸಲು ಸಿದ್ಧವೆಂದೂ, ತಮ್ಮ ಬೇಡಿಕೆಗಳು ತಕ್ಷಣವೇ ಈಡೇರಬೇಕೆಂಬ ಹಟವೇನೂ ಇಲ್ಲವೆಂದೂ ಅವರು ಹೇಳಿದರು.

ಈಗಿನ ಶಸ್ತ್ರ ಚಿಕಿತ್ಸಾ ಮಂದಿರವನ್ನು ಸಯೋಗಿಸದೆ ದೊಡ್ಡ ಮಂದಿರವನ್ನು ಅಪೇಕ್ಷಿಸುತ್ತಿರುವರೆಂಬ ಸಚಿವರ ಟೀಕೆಗೆ ಉತ್ತರವಾಗಿ, ಈಗಿನ ಮಂದಿರವನ್ನು ಶುಚಿಯಾಗಿಡಲು ಸಹ ಸಿಬ್ಬಂದಿ ಸಾಲದೆಂದೂ ಸಣ್ಣಪುಟ್ಟ ಶಸ್ತ್ರಕ್ರಿಯೆಗಳಿಗೂ ಈಗಿನ ಶಸ್ತ್ರಗಳು ಸಾಲದೆಂದೂ ಹೇಳಿದರು

ಬರುವ ವರ್ಷದಿಂದ ಹೈಸ್ಕೂಲಿನಲ್ಲಿ ೪ ವರ್ಷ ವ್ಯಾಸಂಗ

ಬೆಂಗಳೂರು ೧೧

ಸಂಸ್ಥಾನದ ಹೈಯರ್ ಸೆಕೆಂಡರಿ ವಿದ್ಯಾಭ್ಯಾಸದ ಅಂಗವಾಗಿ ಹೈಸ್ಕೂಲುಗಳಲ್ಲಿ ೩ ವರ್ಷದ ಬದಲು ೪ ವರ್ಷದ ತರಗತಿಗಳನ್ನು ಬರುವ ವರ್ಷದಿಂದ ಜಾರಿಗೆ ತರುವ ಬಗ್ಗೆ ಕರಡು ಯೋಜನೆಯನ್ನು ಸರ್ಕಾರದವರು ಪರಿಶೀಲಿಸುವಂತೆ ಶಿಕ್ಷಣ ವಿಷಯಗಳ ಸಮಿತಿಯು ಸೂಚಿಸಿದೆ. ವಿದ್ಯಾ ಇಲಾಖಾಧಿಕಾರಿಗಳಾದ ಶ್ರೀ ಎಸ್ ಎಸ್. ಪಿಂಜಯ್ಯನವರು ಅಧ್ಯಕ್ಷತೆ ವಹಿಸಿದ್ದರು ಡಾ॥ ಕೆ ವಿ. ಪುಟ್ಟಪ್ಪನವರು ಸಭೆಯಲ್ಲಿ ಹಾಜರಿದ್ದರು.

ಶಿಕ್ಷಣ ಪ್ರದರ್ಶನಾರಂಭ

ವಿದ್ಯಾ ಇಲಾಖಾಧಿಕಾರಿಗಳ ಭಾಷಣ

ಮೈಸೂರು ೧೧

ವಿದ್ಯಾಭ್ಯಾಸ ವಾರದ ಅಂಗವಾಗಿ ಏರ್ಪಡಿಸಲಾದ ಶಿಕ್ಷಣ ಪ್ರದರ್ಶನದ ಆರಂಭೋತ್ಸವವನ್ನು ಸಂಸ್ಥಾನದ ವಿದ್ಯಾಧಿಕಾರಿ ಶ್ರೀ ಎಚ್ ಎಸ್ ಹಿರಣ್ಣಯ್ಯನವರು ನೆನ್ನೆ ಸಂಜೆ ವಸ್ತು ಪ್ರದರ್ಶನಾಲಯದಲ್ಲಿ ನೆರವೇರಿಸಿದರು.

ಪ್ರಾರ್ಥನೆಯಾದನಂತರ ಉಪಾಧ್ಯಾಯರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಕೆ ವಿ ದೊರೆಸ್ವಾಮಿಯವರು ಸ್ವಾಗತ ಭಾಷಣ ಮಾಡಿ ಮೈಸೂರಿನಲ್ಲಿ ಅಕ್ಟೋಬರ್ ವೇಳೆಗೆ ೩ ಶಿಕ್ಷಣ ಕಾರ್ಯಾಲಯಗಳನ್ನು ತೆರೆಯಲಾಗುವುದೆಂದು ತಿಳಿಸಿದರು

ಶ್ರೀ ಹಿರಣ್ಣಯ್ಯನವರು ಮಾತನಾಡಿ ಇಂದು ಕೇವಲ ವಿದ್ಯಾರ್ಥಿಗಳಿಗೆ ಅಲ್ಲದೆ ಉಪಾಧ್ಯಾಯರು ಮತ್ತು ಪೋಷಕರಿಗೂ ವಿದ್ಯಾಭ್ಯಾಸದ ಬಗ್ಗೆ ಶಿಕ್ಷಣವು ಅಗತ್ಯವೆಂದು ಹೇಳಿದರು ನಮ್ಮ ಈ ಸುಭದವರಲ್ಲಿ ಶಿಕ್ಷಣ ಪಡೆದ ಉಪಾಧ್ಯಾಯರೂ ಮತ್ತು ಶಿಕ್ಷಣವಿಲ್ಲದವರೂ ಒಂದೇ ಮಟ್ಟದಲ್ಲಿರುವುದಾಗಿ ಕಂಡುಬಂದಿದೆಯೆಂದೂ, ಈ ಕುಂದನ್ನು ಪರಿಹರಿಸಲು ಈ ರೀತಿಯ ಪ್ರದರ್ಶನಗಳು ಯೋಗ್ಯವೆಂದೂ ಹೇಳಿದರು

ಇಂತಹ ಪ್ರದರ್ಶನಗಳಿಗಿಂತ ಒಂದು ಹೆಜ್ಜೆ ಮುಂದೆಹೋಗಿ ಪ್ರತಿಯೊಂದು ಶಾಲೆಯೂ ತನ್ನದೇ ಆದ ಸಂಗ್ರಹಾಲಯವನ್ನು ಏರ್ಪಡಿಸಿಕೊಂಡು ಆಯಾ ಸ್ಥಳದ ಸುತ್ತಲಿನ ನಾನಾ ಬಗೆಯ ವಸ್ತುಗಳನ್ನು ವಿದ್ಯಾರ್ಥಿಗಳು ಸ್ವತಹ ಸಂಗ್ರಹಿಸಿ ಮಾಡಬೇಕೆಂದೂ, ಈ ಕಾರ್ಯಕ್ರಮವನ್ನು ನೂತನ ವಿದ್ಯಾಭ್ಯಾಸ ಯೋಜನೆಯಲ್ಲಿ ಸೇರಿಸಲಾಗಿದೆಯೆಂದೂ ಹೇಳಿ, ೩ ವರ್ಷಗಳನಂತರ ಸಂಸ್ಥಾನದಲ್ಲಿ ನಡೆಯುವ ಈ ಕಾರ್ಯಕ್ರಮಗಳಿಗೆ ಧನ ಸಹಾಯವನ್ನು ಕೇಂದ್ರ ಸರ್ಕಾರವು ನೀಡುವುದರಿಂದ ಅತಿ ಕಮ್ಮಿ ಖರ್ಚಿನಲ್ಲಿ ಹೆಚ್ಚಿನ ಫಲ ಬರುವ ಯೋಜನೆಗಳನ್ನು ಶಿಕ್ಷಣ ಪರಿಣತರು ನೀಡಬೇಕೆಂದು ಕೋರಿದರು

ಸರ್ಕಾರಿ ಪ್ರಾಕ್ಟಿಸಿಂಗ್ ಶಾಲೆಯ ಶ್ರೀ ಕೆ ಬಸವಯ್ಯನವರು ವಂದನಾರ್ಪಣೆ ಮಾಡಿದರು

ಸಮಾರಂಭವು ಮುಗಿದು ವಸ್ತು ಪ್ರದರ್ಶನವನ್ನು ವೀಕ್ಷಿಸುತ್ತಿದ್ದಾಗ ವ್ಯವಸ್ಥಾಪಕ ವರ್ಗದ ಹಲವರು ಪತ್ರಿಕಾ ವರದಿಗಾರರೊಡನೆ ಅನುಚಿತವಾಗಿ ವರ್ತಿಸಿದ ಪ್ರಸಂಗವೊಂದು ನಡೆಯಿತು

ಉಪ ಚುನಾವಣೆಯಲ್ಲಿ ಪಿ. ಎಸ್ ಪಿ ಅನುಮೋದಿತರಿಗೆ ಬೆಂಬಲ

ನಗರದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ಶ್ರೀ ಎಸ್ ಗೋವಿಂದಯ್ಯನವರ ಅಧ್ಯಕ್ಷತೆಯಲ್ಲಿ ನಡೆದು, ಒಂಬತ್ತನೆ ಡಿವಿಜನ್ನಿಗೆ ನಡೆಯಲಿರುವ ಪೌರಸಭಾ ಉಪ ಚುನಾವಣೆಯಲ್ಲಿ ಶ್ರೀ ವಿ ಗಿರಿಯಪ್ಪನವರಿಗೆ ಬೆಂಬಲ ನೀಡಲು ಪಕ್ಷದ ಎಲ್ಲಾ ಸದಸ್ಯರ ಸಹಕಾರವನ್ನು ಕೋರಲಾಯಿತಲ್ಲದೆ, ಇತರ ಎಲ್ಲಾ ಪಕ್ಷಗಳ ಸಹಕಾರ ಪಡೆಯಲೂ ಅವರೊಡನೆ ಮಾತುಕತೆ ನಡೆಸಲು ಕಾರ್ಯದರ್ಶಿಯವರಿಗೆ ಅಧಿಕಾರ ನೀಡಲಾಯಿತು

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ	೪೪ ೮ ೦	೪೬ ೧೪ ೦
ರಕ್ತಶಾಲಿ	೪೦ ೧೨ ೦	೪೪ ೪ ೦
ಅಕ್ಕಿ	೩೩ ೦ ೦	೪೪ ೧೪ ೦
ರಾಗಿ	೨೯ ೦ ೦	೩೦ ೦ ೦
ರಾಗಿ	೪೦ ೧೦ ೦	೪೪ ೮ ೦
ಹೆಸರು	೩೯ ೮ ೦	೪೦ ೧೪ ೦
ಕಡಲೆಕಾಯಿ	೬ ೪ ೦	೨೦ ೧೨ ೦
ಎಳ್ಳು	೨೮ ೦ ೦	೪೯ ೪ ೦
ಹುರುಳಿ	೪೦ ೧೨ ೦	೪೨ ೧೨ ೦
ಧನಿಯಾ	೩೨ ೦ ೦	೪೦ ೦ ೦
ಹುಣಿಸೇಹಣ್ಣು	೪ ೦ ೦	
[illegible]		೨೮೪ ೦ ೦

Edited, Printed and Published by A. R. [illegible] at Sadhvi Press D. Subbiah Road Mysore

ಗಣಪತಿ ಉತ್ಸವದ ಕಾರ್ಯಕ್ರಮ

ಮೈಸೂರು ೧೧

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯ ಧರ್ಮಶಾಸ್ತ್ರ ಪ್ರಾಧ್ಯಾಪಕರಾದ ಶ್ರೀ ಎನ್ ನರಸಿಂಹಾಚಾರ್ಯರು ಸದಾಚಾರ ಫಲ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು

ಪಳವಾಯಿ [illegible] ಈ ಸಂಜೆ ಪಂಡಿತ ಶ್ರೀ ಎಸ್ ವೆಂಕಟೇಶಶಾಸ್ತ್ರಿಯವರು 'ಮೋಕ್ಷ ಸಾಧನೆ' ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ನಾಳೆ ಮಧ್ಯಾಹ್ನ ೪ ಗಂಟೆಗೆ [illegible] ವೃಂದದವರಿಂದ ಸಂಗೀತವು ನಡೆಯುವುದು

ಹುಣಸೂರು ತಾಲ್ಲೂಕು ಮುಳ್ಳೂರು ಪ್ರಾಥಮಿಕ ಶಾಲೆಯಲ್ಲಿ ನಾಳೆ ಸಂಜೆ ೭ ಗಂಟೆಗೆ ತಾಲ್ಲೂಕು ರಸ್ತೆಯ ವಿಸ್ತರಣಾ ಯೋಜನೆ ಅಭಿವೃದ್ಧಿ ಅಧಿಕಾರಿಗಳಾದ ಶ್ರೀ ಎಂ ಜಿ ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ಗಣಪತಿ ಮಂಗಳಾರತಿಯು ನಡೆಯುವುದು ತಾಲ್ಲೂಕು ರೇಂಜ್ ವಿದ್ಯಾಧಿಕಾರಿ ಶ್ರೀ ಎಸ್ ಸುಗಂಧರಾಜರವರು ವಯಸ್ಕರ ಶಿಕ್ಷಣ ಸಮಿತಿಯ ಗ್ರಾಮ ಪುಸ್ತಕ ಭಂಡಾರದ ಆರಂಭೋತ್ಸವವನ್ನು ನೆರವೇರಿಸುವರು.

ಬಾಲಕರ ವಿನಾಯಕ ಭಕ್ತ ಮಂಡಲಿಯವರು ಪಳೇ ಬಂಡೀಕೇರಿಯಲ್ಲಿ ಈ ಸಂಜೆ ೬-೩೦ ಗಂಟೆಗೆ ಜಿಲ್ಲಾಧಿಕಾರಿಗಳಾದ ಶ್ರೀ ಎಂ ಎಸ್ ರಂಗರಾಜುರವರ ಅಧ್ಯಕ್ಷತೆಯಲ್ಲಿ ವಾಣಿ ಆರ್ಕೆಸ್ಟ್ರಾದವರಿಂದ ವಾದ್ಯ ಗೋಷ್ಠಿಯನ್ನೂ ಮತ್ತು ಶ್ರೀ ಎಸ್ ಕೆ ಅನಂತಪದ್ಮನಾಭರಾವ್ ಪಾರ್ಟಿಯವರಿಂದ ಸಂಗೀತವನ್ನೂ ಏರ್ಪಡಿಸಿರುವರು

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತವಾಗಿರುವ

ನವರತ್ನ — ಕಲ್ಪ

ವಿನ್ಯಾಸವನ್ನು ಕಂಡುಹಿಡಿದಿರುವ, ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು ಫೋನ್ ನಂ 590

ಭೇಟಿಯ ಕಾಲ –

ಬೆಳಿಗ್ಗೆ 7 30 ರಿಂದ 12 30 ಮತ್ತು ಮಧ್ಯಾಹ್ನ 4 ರಿಂದ 7 30

ಇವರು ಹಲವಾರು ಕಡೆಯಾಗಿ ಸ್ಥಳದಲ್ಲಿರಲು ವಿಚಾರದಲ್ಲಿ ಸಂಚರಿಸುವರು

ನವರತ್ನ — ಕಲ್ಪ

ಉಪಯೋಗಿಸಿರಿ

ಇದು ವಜ್ರ, ಕೆಂಪು, ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ, ಪದ್ಮರಾಗ ಮತ್ತು ಪುಷ್ಯರಾಗ ಮುಂತಾದ 9 ಅಮೂಲ್ಯ ರತ್ನಗಳ ಸಂಯೋಗ. ಇದರಿಂದ ನರಗಳ ದೌರ್ಬಲ್ಯ, ಅಜೀರ್ಣ ಸಂಬಂಧದ ವ್ಯಾಧಿಗಳು, ಬಿಳೀ ಸೆರಗು, ಮೂಲವ್ಯಾಧಿ, ಕ್ಷಯರೋಗ, ಬಹುಮೂತ್ರ, ಅಸ್ತಮಾ ಮತ್ತು ಸ್ತ್ರೀಯರ ಎಲ್ಲಾ ಸಾಮಾನ್ಯ ಜಾಡ್ಯಗಳು ಪ್ರಸಾದದ ಮಾದರಿಗಳೂ ಸಂಪೂರ್ಣವಾಗಿ ಗುಣವಾಗುವವು ಅತ್ಯುತ್ತಮ ಆರೋಗ್ಯದಾಯಕ ನಾದ ಔಷಧಿ ಇದೊಂದೇ

ವಿಶಾಖಪಟ್ಟಣ, ರಾಜಮಹೇಂದ್ರಿ, ಗುಂಟೂರು, ಬೆಜವಾಡ, ಮದ್ರಾಸು, ಬೆಂಗಳೂರು ಕೊಯಮತ್ತೂರು, ಮಧುರೆ, ತಿರುಚನಾಪಳ್ಳಿ, ತಂಜಾವೂರು, ಸೇಲಂ, ಕಲ್ಲಿಕೋಟೆ, ಎರ್ನಾಕುಲಂ, ಕೊಟ್ಟಾಯಂ ತ್ರಿವೇಂಡ್ರಂ, ತಿರುನಲ್ವೇಲಿ, ಪಾಂಡಿಚೆರಿ, ಕಡಲೂರು ಕುಂಭಕೋಣಂ, ಕೈಲಾರ ಮತ್ತು ಹೈದರಾಬಾದುಗಳ ವಿಳಾಸ ಮತ್ತು ಇತರ ಉಚಿತ ಸಾಹಿತ್ಯಕ್ಕಾಗಿ ಬರೆಯಿರಿ —

NAVRATNA KALPA PHARMACY,
JULLUNDUR CITY (India)

ಆಹಾರ ಧಾನ್ಯದ ಸಾಗಾಣಿಕೆ ಬಗ್ಗೆ ಪ್ರಾದೇಶಿಕ ವ್ಯವಸ್ಥೆ?

ಪಾರ್ಲಿಮೆಂಟಿನ ಕಾಂಗ್ರೆಸ್ ಪಕ್ಷದ ಪಾರ್ಟಿಯ ಸಲಹಾ ಸಮಿತಿಯಲ್ಲಿ ಕೇಂದ್ರ ಮಂತ್ರಿ ಟಿ. ಟಿ ಕೃಷ್ಣಮಾಚಾರಿಯವರು ಮಾತನಾಡಿ ಆಹಾರದ ಬೆಲೆ ಏರಿಳಿತದ ಬಗ್ಗೆ ಸರ್ಕಾರದ ವಿಶಾಲ ತತ್ವಗಳನ್ನು ವಿವರಿಸಿರುತ್ತಾರೆ ಆದಕ್ಕಾಗಿ ಧಾನ್ಯದ ಪ್ರಾದೇಶಿಕ ಸಾಗಾಣಿಕೆ ಬಗ್ಗೆ ನಿರ್ಬಂಧ ಹಾಕಲು ಯೋಚಿಸಲಾಗಿದೆ

ಜನನಿಬಿಡ ಸ್ಥಳಗಳಲ್ಲಿ ಮಾಂಸದ ಮತ್ತು ಸಾರಾಯಿ ಅಂಗಡಿ ಬಗ್ಗೆ ಆಕ್ಷೇಪಣೆ

ಸಿಟಿ ಕೋ-ಆಪರೇಟಿವ್ ಸೊಸೈಟಿ ಪಕ್ಕದ ಕುಂಬಾರಗೇರಿ ರಸ್ತೆಯಲ್ಲಿ ಈಚೆಗೆ ಮಾಂಸದ ತಿಂಡಿ (ಚಾಕಣ) ಮುಂತಾದ ಪದಾರ್ಥಗಳ ಮಾರಾಟದ ಅಂಗಡಿಯು ಆರಂಭವಾಗಿರುವುದಲ್ಲದೆ, ಒಂದು ಸಾರಾಯಿ ಅಂಗಡಿಯೂ ಈಚೆಗೆ ಆರಂಭವಾಗಿ ಅಕ್ಕಪಕ್ಕದ ಜನರಿಗೆ ತುಂಬಾ ತೊಂದರೆಯಾಗುವುದೆಂದೂ, ಪೌರಸಭೆಯವರು ಇಂತಹ ಅಂಗಡಿಗಳಿಗೆ ರಹದಾರಿ ಕೊಡುವುದನ್ನು ತಪ್ಪಿಸಿ, ತೊಂದರೆಯಿಲ್ಲದಂತೆ ಮಾಡಬೇಕೆಂದೂ ಅಲ್ಲಿನ ನಿವಾಸಿಗಳೊಬ್ಬರು ಕೋರಿರುತ್ತಾರೆ

ಹಾಸಿಗೆ - ದಿಂಬು

ಮಿತವ್ಯಯದಲ್ಲಿ ಪತ್ತಿಯಿಂದ ತಯಾರು ಮಾಡುತ್ತೇವೆ

ಬಾಪುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಫಲ ಪುಷ್ಪಗಳ

ಪ್ರದರ್ಶನ

ಕರ್ಜನ್ ಪಾರ್ಕ್, ಮೈಸೂರು

22-9-56 ಪ್ರವೇಶ ಧನ 0-8-0

23, 24 ಮತ್ತು 25-9-56

ಪ್ರವೇಶ ಧನ 0-4-0

ಕೆ ದೇವರಶೆಟ್ಟಿ,
ಗೌ॥ ಕಾರ್ಯದರ್ಶಿ

ರಾಜುಲುಬಂಡಾ ಪ್ರದೇಶದ ೧೯ ಗ್ರಾಮಗಳು ಆಂಧ್ರಕ್ಕೆ

ರಾಜುಲುಬಂಡ ಅಣೆಕಟ್ಟು ಪ್ರದೇಶದಲ್ಲಿರುವ ೧೯ ಹಳ್ಳಿಗಳನ್ನು ಆಂಧ್ರಕ್ಕೆ ಒಪ್ಪಿಸುವುದಕ್ಕೆ ಮೈಸೂರಿನ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅನುಕೂಲವಾಗಿರುವರೆಂದು ಹೈದರಾಬಾದಿನ ಮುಖ್ಯ ಮಂತ್ರಿ ಡಾ॥ ಬಿ ರಾಮಕೃಷ್ಣರಾಯರು ತಿಳಿಸಿರುತ್ತಾರೆ ಈ ಹಳ್ಳಿಗಳ ಪೈಕಿ ೫ ಕನ್ನಡ ಜನರಿರುವ ಹಳ್ಳಿಗಳು ಉಳಿದವುಗಳಲ್ಲಿ ತೆಲುಗು ಮಾತನಾಡುವವರಿರುವರು ಕನ್ನಡದ ಹಳ್ಳಿಗಳು ಮೈಸೂರಿನ ಎಲ್ಲೆಕಟ್ಟಿನಲ್ಲಿ ಅಣೆಕಟ್ಟಿನ ಹೆಡ್ ವರ್ಕ್ಸ್ ಬಳಿ ಇವೆ

ಗಣಪತಿ ಮಂಗಳಾರತಿ

ಗಾಂಧಿ ಚೌಕದಲ್ಲಿರುವ ಕಾವೇರಿಶೆಟ್ಟಿ ಸುಬ್ಬರಾಯ ಶ್ರೇಷ್ಠಿ ಅಣ್ಣಯ್ಯ ಶ್ರೇಷ್ಠಿಯವರ ವಿದ್ಯಾರ್ಥಿನಿಲಯ ಸಂಘದವರು ನಾಳೆ ಸಂಜೆ ೫॥ ಗಂಟೆಗೆ ಗಣಪತಿ ಮಂಗಳಾರತಿಯನ್ನೂ ಏರ್ಪಡಿಸಿರುತ್ತಾರೆ ಇಲ್ಲಿನ ಕಾಲೇಜ್ ಆಫ್ ಇಂಡಿಯನ್ ಮೆಡಿಸಿನ್ನಿನ ಪ್ರಾಧ್ಯಾಪಕರಾದ ಶ್ರೀ ಎಲ್ ಲಕ್ಷ್ಮೀನಾರಾಯಣರಾಯರು ಅಧ್ಯಕ್ಷತೆ ವಹಿಸುವರು ಮಹಾರಾಜಾ ಕಾಲೇಜಿನ ಅಧ್ಯಾಪಕ ಶ್ರೀ ಎಸ್ ನಾರಾಯಣಶೆಟ್ಟಿಯವರು ಭಾಷಣ ಮಾಡುವರು ಶ್ರೀಮತಿಗಳಾದ ಕೃಷ್ಣಕುಮಾರಿ ಮತ್ತು ಪರಿಮಳರವರಿಂದ ಹರಿಕಥೆಯೂ, ಶ್ರೀಮತಿ ಶಾಂತಕುಮಾರಿಯವರ ವೀಣೆಯೂ ಇವೆ

LATEST C. T. C PUBLICATION

ಇಂಟರ್ ಮೀಡಿಯೆಟ್ ವಿದ್ಯಾರ್ಥಿಗಳಿಗಾಗಿ

★ ಗದಾಯುದ್ಧ ಸಂಗ್ರಹ

ನಾಗಾನಂದ ನಾಟಕ

ಇವುಗಳ ಪ್ರಶ್ನೋತ್ತರಗಳು—ಬೆಲೆ 1-2-0

★ "ನಿವೇದನ-ಕೆನಿಲ್ ವರ್ತ್"

ಇವುಗಳ ಪ್ರಶ್ನೋತ್ತರಗಳುಬೆಲೆ 0-12-0

Publishers

CITY TUTORIAL COLLEGE,
MYSORE

S S L C Coaching Classes

All subjects—Rs 6/- P M.

70 per cent passes in the last Exam

ರಾಜ ಭವನ್

ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

ನೂತನ ಭವ್ಯವಾದ ಫಲಾಹಾರ ಮಂದಿರ

11-9-56 ನೇ ಮಂಗಳವಾರದಿಂದ ಪ್ರಾರಂಭಿಸಲ್ಪಟ್ಟಿದೆ

ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಮೈಸೂರು ದಸರಾ ವಸ್ತು ಪ್ರದರ್ಶನ 1956

(ತಾ॥ 5-10 56ರಿಂದ ತಾ॥ 28-10-56 ರ ವರೆಗೆ)

ಕಲಾವಿದರಲ್ಲಿ ವಿನಂತಿ

ಈ ವರ್ಷವೂ ದಸರಾ ವಸ್ತು ಪ್ರದರ್ಶನದ ಅಂಗವಾಗಿ ಎಂದಿನಂತೆ ವಸ್ತು ಪ್ರದರ್ಶನ ಆವರಣದಲ್ಲಿ ನೂತನವಾಗಿ ರಚಿಸಿರುವ ರಂಗಮಂಟಪದಲ್ಲಿ (1) ಸಂಗೀತ (2) ನೃತ್ಯ (3) ನಾಟಕ (4) ವಿವಿಧ ವಿನೋದಾವಳಿಗಳೂ ಮತ್ತು ಯಕ್ಷಗಾನ, ಬಯಲಾಟ, ಕೋಲಾಟ ಮುಂತಾದ ಗ್ರಾಮ ಕಲೆಗಳನ್ನು ಏರ್ಪಡಿಸಲಾಗುವುದು – 1 ಸಂಗೀತ (i) ಬಾಯಿ ಹಾಡುಗಾರಿಕೆ (ಸೀನಿಯರ್ ಮತ್ತು ಜೂನಿಯರ್) (ii) ವಾದ್ಯ ಸಂಗೀತ 2 ದೇವರ ನಾಮ 3 ಆಧುನಿಕ ಗೀತೆಗಳು 4 ಸಿನಿಮಾ ಹಾಡುಗಳು 5 ಭಾರತ ವಾಚನ, ಕಾವ್ಯ ವಾಚನ 6 ಲಾವಣಿ 7 ನರ್ತನ.

ಈ ಮೋಬಲ್ಯಂಡವುಗಳಲ್ಲಿ ಭಾಗವಹಿಸಲಿಚ್ಛಿಸುವವರು ತಾ॥ 18-9-56ರ ಒಳಗೆ ದಸರಾ ವಸ್ತು ಪ್ರದರ್ಶನದ ಕಾರ್ಯದರ್ಶಿಗಳ ಕಛೇರಿಗೆ ಬರಹದ ಮೂಲಕ ತಿಳಿಸಬೇಕೆಂದು ಕೋರಿಕೆ

ಮೈಸೂರು,
10-9-56

ವಿ. ಎಸ್. ಕೃಷ್ಣಯ್ಯರ್,
ಪ್ರಧಾನ ಕಾರ್ಯದರ್ಶಿ,
ದಸರಾ ವಸ್ತು ಪ್ರದರ್ಶನ ಸಮಿತಿ, ಮೈಸೂರು

ಲಕ್ಷ್ಮಿ ಥಿಯೇಟರ್ ✈

ಎಂ ಜಿ ಆರ್ ಸಾವಿತ್ರಿ, ಪಾಲಯ್ಯ, ಪ್ರೇಮಾವತಿ ರಾಮಸ್ವಾಮಿ, ಎಸ್ ಎ ಸುಬ್ಬಯ್ಯ, ನಂಬಿಯಾರ್, ಸ್ವಾಮಿನಾಥ, ಕೆ ಮಾಲತಿ, ಫಣ್ಯಂ ಮುಂತಾದವರು ಪಾತ್ರವಹಿಸಿರುವ

ಇಂದಿನಿಂದ ಅಮೋಘ ಪ್ರಾರಂಭ — ಪ್ರತಿದಿನ ಮೂರು ಪ್ರದರ್ಶನಗಳು

ಜ್ಯೂಪಿಟರ್ಸ್ ರವರ ಅತ್ಯುತ್ತಮ ತಮಿಳು ಚಿತ್ರ

★ ರಾಜಕುಮಾರಿ ★ (ತಮಿಳು)

ರಿಜಿಸ್ಟರ್ ನಂ. 793

ಸಾಧ್ವಿ

ಅಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
[illegible]

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1. [illegible]
ಶ್ರೀ [illegible] ರಸ್ತೆ,
ಬೆಂಗಳೂರು - 2

[ಸಂಪುಟ : ೩೩] SADHVI : THURSDAY 13—9—1956 ಮೈಸೂರು : ಗುರುವಾರ ೧೩—೯—೧೯೫೬ [ಸಂಚಿಕೆ : ೫೦]

ಸೂಯೆಜ್ ಕಾಲುವೆ ಮೇಲ್ವಿಚಾರಣೆಗೆ ತ್ರಿರಾಷ್ಟ್ರ ಸಂಸ್ಥೆ

ಆಯುರ್ವೇದ ಮತ್ತು ಯುನಾನಿ ಕಾಲೇಜಿನ ಅಭಿವೃದ್ಧಿ

ಸರ್ಕಾರದವರ ನಿರ್ದಿಷ್ಟ ಕ್ರಮಗಳು ಮುಷ್ಕರ ನಿಲ್ಲಿಸುವಂತೆ ಮನವಿ

ಬೆಂಗಳೂರು ೧೨.

ಮೈಸೂರಿನಲ್ಲಿ ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳ ಈಡೇರಿಕೆಗಾಗಿ ಮುಷ್ಕರ ಹೂಡುತ್ತಿರುವುದು ತಪ್ಪು ಕ್ರಮವೆಂದು ಸೂಚಿಸಿ, ಅದನ್ನು ನಿಲ್ಲಿಸಬೇಕೆಂದು ಪ್ರಾರ್ಥಿಸಿ ಸರ್ಕಾರದವರು ಪ್ರಕಟಣೆಯೊಂದನ್ನು ಹೊರಡಿಸಿದ್ದಾರೆ.

ಅವರ ಪ್ರಶ್ನೆಯನ್ನು ಸರಿಯಾದ ದೃಷ್ಟಿಕೋನದಿಂದ ಪರಿಶೀಲಿಸಬೇಕೆಂದೂ, ಸಂಸ್ಥಾನದ ಇತರ ವಿದ್ಯಾ ಸಂಸ್ಥೆಗಳಲ್ಲಿ ಹೆಚ್ಚಿನ ಸೌಕರ್ಯಗಳನ್ನು ಕಲ್ಪಿಸಬೇಕಾಗಿರುವುದೆಂದೂ, ಅವನ್ನು ಒಂದು ದಿನದಲ್ಲಿ ಮಾಡಲು ಸಾಧ್ಯವಿಲ್ಲವೆಂದೂ ತಿಳಿಸಲಾಗಿದೆ.

ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲರು ರಾಜೀನಾಮೆಯಿತ್ತು, ಬೇರೊಂದು ಕೆಲಸಕ್ಕೆ ಸೇರಿರುವರೆಂದೂ, ಈಗ ಹಂಗಾಮಿ ಪ್ರಿನ್ಸಿಪಾಲರನ್ನು ನೇಮಿಸಿ, ಖಾಯಂ ಉಪಾಧ್ಯಾಯರ ಹುದ್ದೆಯನ್ನು ನಿರ್ವಹಿಸುವಂತೆ ಅವರಿಗೆ ಸೂಚಿಸಲಾಗಿದೆಯೆಂದೂ, ಭಾರತೀಯ ವೈದ್ಯ ಇಲಾಖೆಯ ಅರ್ಹರಾದವರನ್ನು ಮುಖ್ಯಸ್ಥರನ್ನಾಗಿ ನೇಮಿಸಲು ಅಖಿಲ ಭಾರತದ ಮಟ್ಟದಲ್ಲಿ ಈ ಹುದ್ದೆಗೆ ಅರ್ಜಿ ಕರೆಯಲಾಗುತ್ತಿದೆಯೆಂದೂ, ಪ್ರಿನ್ಸಿಪಾಲ್ ಹುದ್ದೆಗೆ ಅರ್ಹರಾದವರನ್ನು ಶೀಘ್ರದಲ್ಲೇ ನೇಮಿಸಲಾಗುವುದೆಂದೂ ಸರ್ಕಾರದವರು ತಿಳಿಸಿರುತ್ತಾರೆ.

ಕಾಲೇಜನ್ನು ಮೈಸೂರಿನಿಂದ ಇಲ್ಲಿಗೆ ವರ್ಗಾಯಿಸುವ ವಿಷಯವು ತೀವ್ರ ಪರಿಶೀಲನೆಯಲ್ಲಿರುವುದೆಂದೂ, ಮೈಸೂರು ನಗರಸಭೆಯವರು ಮತ್ತು ಇತರರು ಮೈಸೂರಿನಲ್ಲಿಯೇ ಉಳಿಸುವಂತೆ ಮನವಿ ಮಾಡಿದ್ದರೂ ಈ ಬಗ್ಗೆ ಕಾಲೇಜು, ಸ್ಥಳ, [illegible], ಚಿಕಿತ್ಸಾ ಉಪಕರಣ ಮುಂತಾದ ವಿಷಯಗಳನ್ನು ಪರಿಶೀಲಿಸಬೇಕಾಗಿದೆಯೆಂದೂ, ನಿರ್ಣಯ ಹೇಗೇ ಇರಲಿ, ಆಯುರ್ವೇದದ ಅಭಿವೃದ್ಧಿಗಾಗಿ ಕ್ರಮ ಕೈಗೊಳ್ಳಲಾಗುವುದೆಂದೂ ಹೇಳಿದ್ದಾರೆ.

ದ್ವಿತೀಯ ಯೋಜನೆಯಲ್ಲಿ ಇದಕ್ಕಾಗಿ [illegible] ಲಕ್ಷ ರೂ. ಒದಗಿಸಿ, ಕಾಲೇಜಿಗಾಗಿ ೭-೧೧ ಲಕ್ಷ ರೂ. ತೆಗೆದಿಡಲಾಗಿದೆಯೆಂದೂ, ಈಗಿನ ೪ ವರ್ಷಗಳ ಡಿಪ್ಲೊಮಾ ಬದಲು [illegible]ಗಳ ಪದವಿ ತರಗತಿಯನ್ನು ಏರ್ಪಡಿಸಿ, [illegible] ಮಟ್ಟವನ್ನು ಹೆಚ್ಚಿಸಲಾಗುವುದೆಂದೂ ಸರ್ಕಾರದವರು ಸೂಚಿಸಿರುತ್ತಾರೆ.

[illegible]ದೆ, ಪ್ರಯೋಗ ಶಾಲಾ ಸೌಕರ್ಯ, ಶಸ್ತ್ರ ಚಿಕಿತ್ಸಾ ವಿಭಾಗ, ಔಷಧಿ ವನದ ವಿಸ್ತರಣೆ, ಪುಸ್ತಕ ಭಂಡಾರದ ವ್ಯವಸ್ಥೆ, [illegible] ವಿಧಾನದ ಸೌಲಭ್ಯ ಮತ್ತು ವಿಶೇಷ ವ್ಯಾಸಂಗಕ್ಕೆ ಅವಕಾಶ, ಕಾಲೇಜು ಕಟ್ಟಡದ ವಿಸ್ತರಣೆ, ಈ ಸೌಲಭ್ಯಗಳನ್ನು [illegible] ಮಾಡಲಾಗುವುದೆಂದೂ, ಒಂದು [illegible] ವೆಚ್ಚದಿಂದ ಸಂಶೋಧನಾ ಕೇಂದ್ರವನ್ನು ಏರ್ಪಡಿಸಲಾಗುತ್ತಿದೆಯೆಂದೂ, ಕಾಲೇಜಿನಲ್ಲಿ ಹೆಚ್ಚು ಸೌಕರ್ಯಗಳಿಗಾಗಿ ಈ ವರ್ಷ ೩ ಸಾವಿರ ರೂ. ಅನ್ನು ತೆಗೆದಿಡಲಾಗಿದೆಯೆಂದೂ ಸರ್ಕಾರದವರು ತಿಳಿಸಿರುತ್ತಾರೆ.

ಸೂಯೆಜ್ ಕಾಲುವೆ ಸಂಚಾರದ ಮೇಲ್ವಿಚಾರಣೆಗೆ ಸಂಸ್ಥೆಯ ಸ್ಥಾಪನೆ

ತ್ರಿರಾಷ್ಟ್ರಗಳ ಕ್ರಮದ ಬಗ್ಗೆ ಈಜಿಪ್ಟಿನ ಟೀಕೆ

ಸೂಯೆಜ್ ಕಾಲುವೆ ಮೂಲಕ ಹಡಗು ಸಂಚಾರದ ಜವಾಬ್ದಾರಿಯನ್ನು ನಿರ್ವಹಿಸಲು ಹಂಗಾಮಿಯಾಗಿ ಬಳಕೆಗಾರರ ಸಂಘವೊಂದನ್ನು ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಗಳು ಸ್ಥಾಪಿಸಲಿರುತ್ತವೆಂದು ಬ್ರಿಟನ್ನಿನ ಕಾಮನ್ಸ್ ಸಭೆಯಲ್ಲಿ ನೆನ್ನೆ ಪ್ರಧಾನಿ ಈಡನ್ನರು ಘೋಷಿಸಿದರು. ಈ ಸಂಘದ ಕೆಲಸದಲ್ಲಿ ಈಜಿಪ್ಟು ಪ್ರವೇಶ ಮಾಡದಂಗಲೀ ಅಥವಾ ಸಹಕರಿಸದಂಗಲೀ ಈಜಿಪ್ಟು [illegible] ಒಪ್ಪಂದದ ಹಕ್ಕುಗಳನ್ನು ಉಲ್ಲಂಘಿಸಿದಂತಾಗುವುದೆಂದು ಅವರು ಎಚ್ಚರಿಸಿದರು. ಸೂಯೆಜ್ ಪ್ರಶ್ನೆಯನ್ನು ಭದ್ರತಾ ಸಮಿತಿಗೆ ಕೊಂಡೊಯ್ಯುವ ಆಲೋಚನೆಯಿಲ್ಲವೆಂದೂ ಅವರು ತಿಳಿಸಿದರು. ಸಂಘವು ಹಂಗಾಮಿಯಾಗಿದ್ದು ಮುಂದೆ ಸಮಸ್ತರ ಸ್ವೀಕಾರ ಒಪ್ಪಿಗೆಯುಳ್ಳ ಖಾಯಂ ವ್ಯವಸ್ಥೆ ಮಾಡುವುದಾಗಿ ಹೇಳಿದರು. ಕಾಲುವೆ ಸೌಲಭ್ಯಗಳ ಉಪಯೋಗಕ್ಕಾಗಿ ಈಜಿಪ್ಟಿಗೆ ಹಣವನ್ನು ಕೊಡಲಾಗುವುದೆಂದೂ ಅವರು ತಿಳಿಸಿ, ದ್ವಿತೀಯ ಮಹಾ ಯುದ್ಧಕ್ಕೆ ಕಾರಣವಾದಂತಹ ಸನ್ನಿವೇಶವು ಈಗ ಇರುವುದೆಂದು ಅಭಿಪ್ರಾಯಪಟ್ಟರು.

ಅವರ ಘೋಷಣೆಯನ್ನು ಲೇಬರ್ ಪಕ್ಷದ ನಾಯಕ ಗೇಟ್ಸ್‌ಕೆಲ್‌ರವರೂ ಮತ್ತು ಲಿಬರಲ್ ಪಕ್ಷದವರೂ ಖಂಡಿಸಿ, ಈ ರೀತಿ ಆಡಳಿತದ ಪ್ರಭಾವಿಯವರು ಬ್ರಿಟನ್ನನ್ನು ಮಹಾ ವಿಪತ್ತಿಗೆ ಒಡ್ಡುತ್ತಿದ್ದಾರೆಂದು ನುಡಿದರು.

ಸಹಾಯಾರ್ಥ ನಾಟಕ

ಕೆರೆಹಳ್ಳಿ ಶ್ರೀ ಕೊಮ್ಮಗೇರಮ್ಮನವರ ಗುಡಿಯ ಕಟ್ಟಡದ ಸಹಾಯಾರ್ಥವಾಗಿ ನಗರದ ಎ. ಸಿ. ರಾಜಪ್ಪ ಮಿತ್ರ ಮಂಡಲಿಯವರು ಈ ಸಂಜೆ ೬॥ ಗಂಟೆಗೆ ಟೌನ್‌ಹಾಲಿನಲ್ಲಿ ಬೇಡರ ಕಣ್ಣಪ್ಪ ಎಂಬ ನಾಟಕವನ್ನು ಅಭಿನಯಿಸುವರು. ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಶಂಕರರಾಯರು ಅಧ್ಯಕ್ಷತೆ ವಹಿಸುವರು.

ಆಯುರ್ವೇದ ಪದವೀಧರರ ಸಂಘದ ಕಾರ್ಯದರ್ಶಿಯವರ ಹೇಳಿಕೆ

ಆಯುರ್ವೇದ ಪದವೀಧರರ ಸಂಘದ ಕಾರ್ಯದರ್ಶಿ ಶ್ರೀ ಬಿ. ಆರ್. ರಾಮಾಚಾರ್ಯರು ಪತ್ರ ಬರೆದು, ಆಯುರ್ವೇದ ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ವಸ್ತು ಪ್ರದರ್ಶನ ಆಲಯವನ್ನು ಉಪಯೋಗಿಸಿ, ಈಗಿನ ಕಾಲೇಜು ಕಟ್ಟಡದಲ್ಲಿ ಆಸ್ಪತ್ರೆಯನ್ನು ವಿಸ್ತರಿಸಲಾಗುವುದೆಂದೂ, ವಿದ್ಯಾರ್ಥಿಗಳು ಮುಷ್ಕರ ನಿಲ್ಲಿಸಬೇಕೆಂದೂ ಅಧಿಕಾರಿಗಳು ಕೋರಿರುವುದಾಗಿ ತಿಳಿಸಿರುತ್ತಾರೆ.

ಡಿಫೆನ್ಸ್ ಸಾಕ್ಷಿಗಳಾಗಿ ಅಧಿಕಾರಿಗಳನ್ನು ಕರೆಯಲು ಅವಕಾಶವಿಲ್ಲ

ಬೇಲೂರಿನ ಕೊಲೆ ವಿಚಾರಣೆಯಲ್ಲಿ ಸೆಷನ್ಸ್ ನ್ಯಾಯಾಧೀಶರ ಆಜ್ಞೆ

ಬೆಂಗಳೂರು ೧೨.

ಬೇಲೂರಿನ ಕೊಲೆ ಮೊಕದ್ದಮೆಯಲ್ಲಿ ಡಿಫೆನ್ಸ್ ಸಾಕ್ಷಿಗಳಾಗಿ ಶ್ರೀಗಳಾದ ಕೆ. ಹನುಮಂತಯ್ಯ, ಮಂತ್ರಿ ಹೆಚ್. ಸಿದ್ದವೀರಪ್ಪ, ಐ. ಜಿ. ಪಿ. ತಿಮ್ಮರಾಜ ಅರಸ್, ಡಿ. ಐ. ಜಿ. ಸಿಂಧ್ಯ ಮತ್ತು ಪತ್ರಿಕಾ ಪ್ರತಿನಿಧಿಗಳನ್ನು ಕರೆಯುವ ಬಗ್ಗೆ ಆಪಾದಿತರ ಪರವಾಗಿ ಸಲ್ಲಿಸಲಾದ ಬೇಡಿಕೆಯನ್ನು ಸೆಷನ್ಸ್ ನ್ಯಾಯಾಧೀಶರು ತಳ್ಳಿಹಾಕಿರುತ್ತಾರೆ. ಅವರುಗಳು ಯಾವ ವಿಚಾರವಾಗಿ ಸಾಕ್ಷ್ಯವೀಯಬೇಕೆಂಬುದನ್ನು ತಿಳಿಸಲಾಗಿಲ್ಲವೆಂದು ನ್ಯಾಯಾಧೀಶರು ಸೂಚಿಸಿ, ಅವರು ಸಾಕ್ಷಿಗಳಾಗಿ ಬರಬೇಕಾದ ಅಗತ್ಯವು ಕಂಡುಬಂದರೆ ಕೋರ್ಟಿನವರೇ ಕರೆಸುವರೆಂದು ಸೂಚಿಸಿರುತ್ತಾರೆ.

ಕೃಷ್ಣರಾಜೇಂದ್ರ ಆಸ್ಪತ್ರೆ ಮಹಿಳಾ ವೈದ್ಯರಿಗೆ ನಿವೃತ್ತಿ ಪೂರ್ವ ರಜಾ

ಮೈಸೂರು ಕೃಷ್ಣರಾಜೇಂದ್ರ ಲೇಡಿ ಸರ್ಜನ್ನರಾದ ಶ್ರೀಮತಿ ಎಲ್. ಎಂ. ಸುಂದರಂರವರಿಗೆ ಬರುವ ಡಿಸೆಂಬರ್ ೯ ರಿಂದ ನಿವೃತ್ತಿಗೆ ಪೂರ್ವವಾಗಿ ರಜಾ ಕೊಡಲಾಗಿದೆ. ರಜಾದಿಂದ ಹಿಂದಿರುಗಿದನಂತರ ಮಿಸೆಸ್ ಡಿ. ಕಾರ್ಟನರ್‌ರವರನ್ನು ಕೃಷ್ಣರಾಜೇಂದ್ರ ಆಸ್ಪತ್ರೆಯ ಮಹಿಳಾ ಸರ್ಜನ್ನರಾಗಿ ನೇಮಕ ಮಾಡಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಗಾಂಧಿ ಚರ್ಚೆ. ೭ ೧೫ ದೇವರನಾಮ. ಶ್ರೀ ಕೆ. ರಾವ್-ದೇವರ ನಾಮ. ೭-೩೦ ಹಿಂದಿ [illegible] ೮-೧೫ ಉದಯ ಸಂಗೀತ. ಮಧ್ಯಾಹ್ನ ೧೨ ಸಂಗೀತ. ೧೨ ೩೦ ವಾದ್ಯವೃಂದ. ೧೨ ೪೫ ವನಿತಾ ವಿಹಾರ. ೧-೩೦ ಕೇಳಲು [illegible] ಪ್ರೌಢರಿಗಾಗಿ. ಸಂಜೆ ೫ ೩೦ ಎಂ. ಆರ್. ಶ್ರೀನಿವಾಸರಾಘವಾಚಾರ್-ಗಾಯನ. ೬-೧೫ ಸ್ವಸ್ಥ ಗೀತೆ. ೭-೩೦ ಸಂಸ್ಥಾನದ ಅಭಿವೃದ್ಧಿ ಯೋಜನೆ-ಭಾಷಣ. ೮ ಅರಿಯಾಕುಡಿ ರಾಮಾನುಜಯ್ಯಂಗಾರ್-ಸಂಗೀತ: ಮದ್ರಾಸ್ ರಿಲೇ. ೯-೧೫ ರಸಮಂಜರಿ ಸಂಸ್ಕೃತ ಕಾರ್ಯಕ್ರಮ. ೧೦-೧೫ ಉರ್ದು ಪದ್ಯ ಪಠಣ.

ಗಣಪತಿ ಉತ್ಸವದ ಕಾರ್ಯಕ್ರಮ

ಮೈಸೂರು ೧೨.

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ಯಾರ್ಥಿಗಳಿಂದ ಅದ್ವೈತ ವೇದಾಂತ ಮತ್ತು ಪೂರ್ವ ಮೀಮಾಂಸ ಎಂಬ ವಿಷಯವಾಗಿ ವಾಕ್ಯಾರ್ಥವಿದೆ.

ಜಲವಾಲಾ ರಸ್ತೆ ಕುಂಟೆಬಿಗರ ಸಂಘದ ವಿದ್ಯಾರ್ಥಿನಿಲಯದಲ್ಲಿ ಈ ಸಂಜೆ ಮಹಾ ಮಂಗಳಾರತಿ ೨ ಮಹಾರಾಜಾ ಕಾಲೇಜಿನ ಶ್ರೀ ಸಿ. ವಿ. ಶ್ರೀನಿವಾಸಮೂರ್ತಿಯವರ ನೇತೃತ್ವದಲ್ಲಿ ಜರುಗುವುದು. ವಿ॥ ಎಸ್. ರಾಮಚಂದ್ರ ಮತ್ತು ವೃಂದದವರಿಂದ ಸಂಗೀತವಿದೆ.

ಡಿಫೆನ್ಸ್ ಸಾಕ್ಷಿಗಳಾಗಿ ಮಂತ್ರಿಗಳನ್ನು ಕರೆಸಲು ಮುಕ್ತ ಮನಸ್ಸು

ಕೋರ್ಟಿಗೆ ಗುರುಸಿದ್ದರ ಅರ್ಜಿ

ಸ್ವಂ. ವ. ಸಂ.] ಬೆಂಗಳೂರು ೧೨.

ಈ ದಿನ ಬೇಲೂರು ಕೊಲೆ ಮೊಕದ್ದಮೆಯಲ್ಲಿ ಆಪಾದಿತರ ಪರ ವಕೀಲರು ಶ್ರೀ ಎಂ. ಸಿ. ಗುರುಸಿದ್ದರವರು ಅರ್ಜಿಯೊಂದನ್ನು ಸಲ್ಲಿಸಿ ಡಿಫೆನ್ಸ್ ಸಾಕ್ಷಿಗಳಾಗಿ ಕರೆಯಲು ತಾವು ಕೊಟ್ಟಿದ್ದ ಹೆಸರುಗಳ ಪಟ್ಟಿಯನ್ನು ವಜಾ ಮಾಡಿದ್ದುದನ್ನು ಕೋರ್ಟು ಪುನರ್‌ಪರಿಶೀಲನೆ ಮಾಡಬೇಕೆಂದು ಕೋರಿದರು. ಅದಕ್ಕೆ ಕಾರಣವನ್ನಿತ್ತು ಘಟನೆಯ ದಿನ ಶ್ರೀಗಳಾದ ಹನುಮಂತಯ್ಯ ಮತ್ತು ಸಿದ್ದವೀರಪ್ಪನವರು ಖುದ್ದಾಗಿ ಸ್ಥಳಕ್ಕೆ ಹೋಗಿ ಪರಿಶೀಲನೆ ಮಾಡಿದರೆಂದೂ, ಅದು ಪ್ರಾಸಿಕ್ಯೂಷನ್ನಿನ ಕಥೆಯ ಮೇಲೆ ಬೆಳಕು ಬೀರುವುದೆಂದೂ ತಿಳಿಸಿದರು.

ಹಿಮ್ಸ್‌ರಿಯಾ ಆಸ್ಪತ್ರೆ ವೈದ್ಯರಾದ ದೇವಣ್ಣ ಮತ್ತು ಶ್ರೀನಿವಾಸ್‌ರವರು ಸಾಕ್ಷ್ಯವಿತ್ತರು. ದೇವಣ್ಣನವರು ಬೇಲೂರಿನ ಮತ್ತು ರಂಗಮ್ಮನವರ ಶವ ಪರೀಕ್ಷೆ ನಡೆಸಿದ ಬಗ್ಗೆ ಸಾಕ್ಷ್ಯವಿತ್ತರು. ಅವರುಗಳು ಹಿಂಸೆಯಿಂದ ಆದ ಪೆಟ್ಟಿನಿಂದ ಮೃತರಾದರೆಂದು ತಿಳಿಸಿದರು. ಮತ್ತೊಬ್ಬರು ಬೇಲೂರು ಮತ್ತು ರಂಗಲಕ್ಷ್ಮಿಗೆ ಕೋರ್ಟಿಗೆ ಇಂಜಕ್ಷನ್ ಕೊಟ್ಟುದಾಗಿ ಹೇಳಿದರು.

ಎಮ್ಮೆ ಕಳವು ಮಾಡಿದವರಿಗೆ ಸಜಾ

ಮೈಸೂರು ೧೨.

ಹುಣಸೂರು ತಾಲ್ಲೂಕು ಪಟ್ಟೇನಹಳ್ಳಿ ಮತ್ತು ಕಲ್ಲಹಳ್ಳಿ ಗ್ರಾಮಗಳ ೨೪ ಎಮ್ಮೆಗಳನ್ನು ಕದ್ದು ಕೃಷ್ಣರಾಜಪೇಟೆ ತಾಲ್ಲೂಕು ಚಿಕ್ಕೋನಹಳ್ಳಿ ಮತ್ತು ತೇಗನಹಳ್ಳಿಗಳಲ್ಲಿ ಮಾರಿದ್ದರೆಂದು ದೋರೆಗೌಡ ಮತ್ತು ವೆಂಕಟಪ್ಪ ಉರುಫ್ ಸಂಜೀವಯ್ಯ ಎಂಬುವರ ಮೇಲೆ ಹುಣಸೂರು ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಅಲ್ಲಿನ ನ್ಯಾಯಾಧೀಶರು ನೆನ್ನೆ ಮೊದಲನೇ ಆಪಾದಿತನಿಗೆ ೯ ತಿಂಗಳು ಮತ್ತು ೨ ನೇ ಆಪಾದಿತನಿಗೆ ೪ ತಿಂಗಳು ಕಠಿಣ ಸಜಾವನ್ನು ವಿಧಿಸಿದರು.

ಶೈಕ್ಷಣಿಕ ವಾರದ ಮುಕ್ತಾಯ ಸಮಾರಂಭ

ಶೈಕ್ಷಣಿಕ ವಾರದ ಮುಕ್ತಾಯ ಸಮಾರಂಭದ ಅಂಗವಾಗಿ ಇದೇ ತಿಂಗಳು ೧೫ನೇ ತಾರೀಕು ಶನಿವಾರ ಸಂಜೆ ೪ ಗಂಟೆಗೆ ಮರಿಮಲ್ಲಪ್ಪನವರ ಪ್ರೌಢಶಾಲೆಯಲ್ಲಿ ಧ್ವಜಾರೋಹಣ ಮತ್ತು ಧ್ವಜ ವಂದನೆಗಳು ನಡೆಯುವುವು. ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮೆಂಬರಾದ ಪ್ರೊಫೆಸರ್ ಎ. ಸಿ. ದೇವೇಗೌಡರು ನಗರದ ೧೨ ಪ್ರೌಢಶಾಲಾ ಸಮವಸ್ತ್ರಧಾರಿ ವಿದ್ಯಾರ್ಥಿಗಳಿಂದ ವಂದನೆಯನ್ನು ಸ್ವೀಕರಿಸುವರು. ಅನಂತರ ಮುಖ್ಯ ಬೀದಿಗಳಲ್ಲಿ ವಿದ್ಯಾರ್ಥಿಗಳು ಶೈಕ್ಷಣಿಕ ಘೋಷಣೆಗಳನ್ನು ಮಾಡುತ್ತಾ ಮೆರವಣಿಗೆ ಹೊರಟು ಸೀತಾವಿಲಾಸ ಅಗ್ರಹಾರ, ಮಹಾರಾಜಾ ಕಾಲೇಜು, ವೈಸರಾಯ್ ರಸ್ತೆ, ರಾಮಸ್ವಾಮಿ ಸರ್ಕಲ್, ನಾರಾಯಣ ರಸ್ತೆ, ಸಯ್ಯಾಜಿರಾವ್ ರಸ್ತೆ, ದೇವರಾಜ ಮಾರ್ಕೆಟ್, ಧನ್ವಂತರಿ ರಸ್ತೆ ಮೂಲಕ ಸಂಜೆ ೬॥ ಗಂಟೆಗೆ ವಸ್ತುಪ್ರದರ್ಶನದ ಕಟ್ಟಡವನ್ನು ತಲುಪುವರು.

ಸಾಮೂಹಿಕ ಸಂಗೀತಕ್ಕಾಗಿ ರಾಷ್ಟ್ರೀಯ ಮಂಡಲಿ ಸ್ಥಾಪನೆ

ಸಂಗೀತ ಗೋಷ್ಠಿಯ ಕರೆ

ಮೈಸೂರು ೧೩

ರಾಜಧಾನಿಯಲ್ಲಿ ಸೇರಿದ್ದ ಸಾಮೂಹಿಕ ಸಂಗೀತ ಗೋಷ್ಠಿಯಲ್ಲಿ ನಿನ್ನೆ ಒಮ್ಮತದಿಂದ ಅಂಗೀಕೃತವಾಗಿ ಸಾಮೂಹಿಕ ಸಂಗೀತದ ಬಗ್ಗೆ ಸಾಧನಗಳನ್ನು ತಿಳಿಸಿ ವಿಂಗಡಿಸಲು ರಾಷ್ಟ್ರೀಯ ಮಂಡಲಿಯನ್ನು ಸ್ಥಾಪಿಸುವಂತೆ ಭಾರತ ಸರ್ಕಾರದ ವಿದ್ಯಾ ಶಾಖೆ ಮತ್ತು ಸಂಗೀತ ನಾಟಕ ಅಕಾಡೆಮಿಯನ್ನು ಪ್ರಾರ್ಥಿಸಿತು. ಮೈಸೂರು ಸರ್ಕಾರದವರು ಸಾಮೂಹಿಕ ಸಂಗೀತದ ಪ್ರಚಾರವನ್ನು ಕೈಗೊಳ್ಳಬೇಕೆಂದು ಕೋರಲಾಯಿತು. ರಾಷ್ಟ್ರೀಯ ವಿಸ್ತರಣಾ ಯೋಜನೆ ಪ್ರದೇಶದಲ್ಲಿ ಸಾಮೂಹಿಕ ಸಂಗೀತವನ್ನು ಜಾರಿಗೆ ತರಬೇಕೆಂದೂ ಕೋರಲಾಯಿತು.

ಗೋಷ್ಠಿಯು ೪ ವಿಭಾಗಗಳಾಗಿ ವಿಂಗಡಿಸಲ್ಪಟ್ಟು ಸಂಗೀತದ ವಿಭಾಗಕ್ಕೆ ಪ್ರೊ॥ ಸಾಂಬಮೂರ್ತಿಯವರು ಅಧ್ಯಕ್ಷತೆ ವಹಿಸಿದ್ದರು. ಅವರು ಭಾಷಣ ಮಾಡಿ ಶಾಸ್ತ್ರೀಯ ಸಂಗೀತವು ಅತ್ಯಗತ್ಯವಾದ ನಿಲ್ಲಬೇಕಾದರೆ ಸಾಮಾನ್ಯ ಜನತೆಗೆ ಅದರಲ್ಲಿ ಶ್ರದ್ಧಾಸಕ್ತಿ ಉಂಟಾಗುವಂತೆ ಮಾಡುವುದು ಅಗತ್ಯವೆಂದು ತಿಳಿಸಿದರು. ತ್ಯಾಗರಾಜರು ತಿರುವಯ್ಯಾರಿನಲ್ಲಿ ಬೀದಿಬೀದಿಗಳಲ್ಲಿ ಭಗವನ್ನಾಮ ಕೀರ್ತನೆ ಮಾಡುತ್ತಿದ್ದುದು ಮತ್ತು ಅವನ್ನು ಕೇಳಿ ಜನರು ಆನಂದಭರಿತರಾಗುತ್ತಿದ್ದುದನ್ನು ಅವರು ಜ್ಞಾಪಿಸಿದರು. ಸಾಮೂಹಿಕ ಸಂಗೀತವು ಬೆಳೆಯಬೇಕಾದರೆ ಪ್ರತಿ ಊರಿನಲ್ಲೂ ಭಜನಾ ಮಂದಿರಗಳಾಗಬೇಕೆಂದು ತಿಳಿಸಿದರು.

ಶಿಕ್ಷಣ ವಿಭಾಗದ ಅಧ್ಯಕ್ಷ ಡಾ॥ ಎಂ. ಸಿದ್ಧಲಿಂಗಯ್ಯನವರು ಮಾತನಾಡಿ, ಮಕ್ಕಳಲ್ಲಿ ಆಟಪಾಟಗಳ ಜೊತೆಗೆ ಸಂಗೀತದ ಮನೋಭಾವ ಬೆಳೆಯುವಂತೆ ಮಾಡಬೇಕೆಂದು ತಿಳಿಸಿದರು.

ಮನಶ್ಶಾಸ್ತ್ರ ವಿಭಾಗದ ಡಾ॥ ಬಿ. ಕೃಷ್ಣರವರು ಸಂಗೀತದ ಪ್ರವೃತ್ತಿಯು ಪ್ರತಿಯೊಬ್ಬರಲ್ಲಿಯೂ ಬೆಳೆಯಬೇಕೆಂದರು.

೩,೦೦೦ ಮದ್ದುಗುಂಡು ಕಾರ್ಮಿಕರ ಖೋತಾ

ಮದ್ದುಗುಂಡು ತಯಾರಿಕೆ ಮತ್ತು ಇತರ ರಕ್ಷಣಾ ಕಾರ್ಖಾನೆಗಳಲ್ಲಿರುವ ಕಾರ್ಮಿಕರ ಪೈಕಿ ಒಟ್ಟು ೩,೦೦೦ ಮಂದಿಯನ್ನು ಖೋತಾ ಮಾಡಲಾಗುವುದೆಂದು ಕೇಂದ್ರ ರಕ್ಷಣಾ ಮಂತ್ರಿ ಡಾ॥ ಕೆ. ಎನ್. ಕಟ್ಜೂರವರು ತಿಳಿಸಿದರು.

ಸಾಯಲಿ ಗುಣಪಡಿಸುವುದಾಗಿ ಹೇಳಿ ಒಡವೆ ಅಪಹರಿಸಿದ್ದಕ್ಕೆ ಸಜಾ

ರಾಜಧಾನಿಯ ಲಷ್ಕರ್ ಮೊಹಲ್ಲಾ ನಿವಾಸಿ ಚಿಕ್ಕಶೆಟ್ಟಿ ಎಂಬುವನು ಕಳೆದ ೨೯ ನೇ ತಾರೀಖು ಹೊಸುಂಡಿ ಗ್ರಾಮದ ಸ್ತ್ರೀಯೊಬ್ಬಳಿಗೆ ಉದರ ವ್ಯಾಧಿ ತಪ್ಪಿಸುವುದಾಗಿ ಹೇಳಿ ಅವಳಲ್ಲಿದ್ದ ೫೦ ರೂ ಬೆಲೆ ಬಾಳುವ ಕರಿಮಣಿ ಸರ, ಲಕ್ಷ್ಮೀ ಕಾಸು ಮುಂತಾದುವನ್ನು ಅಪಹರಿಸಿಕೊಂಡು ಹೋಗುತ್ತಿದ್ದಾಗ ಗ್ರಾಮಸ್ಥರು ಹಿಡಿದುಕೊಟ್ಟ ಮೇಲೆ ತಾಲ್ಲೂಕು ಪೊಲೀಸರು ಅವನ ಮೇಲೆ ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ನೆನ್ನೆ ತೀರ್ಪಿತ್ತು ಆಪಾದಿತನಿಗೆ ೩ ತಿಂಗಳು ಕಠಿಣ ಶಿಕ್ಷೆಯನ್ನು ವಿಧಿಸಿದರು.

ಶಾಲೆಗೆ ನುಗ್ಗಿ ಉಪಾಧ್ಯಾಯರನ್ನು ಹೊಡೆದುದಕ್ಕೆ ಶಿಕ್ಷೆ

ಮೈಸೂರು ತಾಲ್ಲೂಕು ದುದ್ದಗೆರೆಯ ಮರಿಗೌಡ್ಯ ಎಂಬುವನು ಕಳೆದ ವರ್ಷ ಏಪ್ರಿಲ್ ೭ ನೇ ತಾರೀಖು ಅಲ್ಲಿನ ಪ್ರಾಥಮಿಕ ಶಾಲೆಗೆ ನುಗ್ಗಿ ಮುಖ್ಯೋಪಾಧ್ಯಾಯಿನಿ ಶ್ರೀಮತಿ ಸಿದ್ಧಲಿಂಗಮ್ಮ ಮತ್ತು ಉಪಾಧ್ಯಾಯ ಶ್ರೀ ಬಸವಣ್ಣ ಎಂಬುವರನ್ನು ಹೊಡೆದನೆಂದು ತಾಲ್ಲೂಕು ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನಗರ ನ್ಯಾಯಾಧೀಶರು ನೆನ್ನೆ ತೀರ್ಪಿತ್ತು, ಆಪಾದಿತನಿಗೆ ಎರಡು ಅಪರಾಧಗಳಿಗೂ ತಲಾ ೨೫ ರೂ ಜುಲ್ಮಾನೆ ತಪ್ಪಿದರೆ ೧೦ ದಿನ ಸಜಾವನ್ನು ವಿಧಿಸಿದರು.

ಸಾಹಿತ್ಯ ವಿಭಾಗದ ಅಧ್ಯಕ್ಷರಾದ ಶ್ರೀ ಸಿ. ಕೆ. ವೆಂಕಟರಾಮಯ್ಯನವರು ಮಾತನಾಡಿ ಭಕ್ತಿಮಾರ್ಗಕ್ಕೆ ಸಂಗೀತವು ಸಹಕಾರಿಯೆಂದು ಹೇಳಿದರು.

ರಾಜಪ್ರಮುಖರ ಭಾವಚಿತ್ರದ ಅನಾವರಣ

ನಜರ್‌ಬಾದಿನ ಸರ್ಕಾರಿ ಬಾಲಕಿಯರ ಪಾಠಶಾಲೆಯಲ್ಲಿ ಕಳೆದ ಸೋಮವಾರ ಹುಜೂರು ಕಾರ್ಯದರ್ಶಿ ಶ್ರೀ ಜೆ. ಬಿ. ಮಲ್ಲಾರಾಧ್ಯರು ಮಹಾರಾಜರ ಭಾವಚಿತ್ರದ ಅನಾವರಣ ಮಾಡಿದರು. ಅವರು ಮಾತನಾಡಿ ಮಹಾರಾಜರ ತ್ಯಾಗಶೀಲತೆಯನ್ನು ಪ್ರಶಂಸಿಸಿ, ರಾಷ್ಟ್ರದಲ್ಲಿ ಅವರ ಬಗ್ಗೆ ವಿಶೇಷ ಗೌರವವಿರುವುದೆಂದು ತಿಳಿಸಿದರು. ನಗರದ ವಿದ್ಯಾಧಿಕಾರಿ ಶ್ರೀ ಗುರುರಾಜಾಚಾರ್ಯರು ಸ್ವಾಗತ ಭಾಷಣ ಮಾಡಿದನಂತರ ಶಾಲಾ ಮುಖ್ಯೋಪಾಧ್ಯಾಯಿನಿಯಾದ ಶ್ರೀ ಡಿ. ಸುಬ್ಬರಾಯರು ವರದಿಯನ್ನು ಒಪ್ಪಿಸಿದರು. ಶ್ರೀಗಳಾದ ಕೆ. ಬಸವರಾಜೆ ಅರಸ್, ಎಂ. ಎನ್. ತಿಮ್ಮಯ್ಯ ಮತ್ತು ಎಂ. ಆರ್. ಸಿ. ಬಸಪ್ಪನವರು ಮಾತನಾಡಿ ರಾಜಪ್ರಮುಖರ ಗುಣಾತಿಶಯಗಳನ್ನು ಪ್ರಶಂಸಿಸಿದರು.

ಸಂತಾಪ ಸೂಚಕ ಸಭೆ

ಡಾ॥ ಟಿ. ಎಸ್. ಸಿದ್ದಪ್ಪನವರ ವಿದ್ಯಾರ್ಥಿ ನಿಲಯದ ಸಂಘದ ಆಶ್ರಯದಲ್ಲಿ ದಿವಂಗತ ಬಿ. ಎಸ್. ಪುಟ್ಟಸ್ವಾಮಿಯವರ ನಿಧನದ ಬಗ್ಗೆ ಕಳೆದ ೭ನೇ ತಾರೀಖು ಸಂತಾಪ ಸೂಚಕ ಸಭೆ ನಡೆಯಿತು. ಶ್ರೀ ಎಂ. ಎಸ್. ರಾಮಲಿಂಗಯ್ಯನವರು ಅಧ್ಯಕ್ಷತೆ ವಹಿಸಿದ್ದರು.

ಮೈಸೂರು ಪೇಟೆ ಧಾರಣೆ

ರಾಗಿ	೩೨	೦	೦	೩೯	೨	೦
ಜೋಳ	೩೦	೮	೦	೩೩	೧೨	೦
ಕಡಲೆಕಾಯಿ	೯	೪	೦	೨೧	೧೨	೦
ಎಳ್ಳು	೬೮	೦	೦	೮೦	೨	೦
ಹುರುಳಿ	೩೧	೪	೦	೩೧	೧೨	೦
ಹೆಸರು	೫೨	೦	೦			
ಉದ್ದು	೪೭	೦	೦	೫೨	೮	೮
ಧನಿಯ	೨೫	೮	೦	೨೮	೨	೦
ಮೆಣಸಿನಕಾಯಿ	೩	೬	೦			
ಮೆಣಸಿನಕಾಯಿ	೧೯	೬	೦			
ಬೆಲ್ಲ	[illegible]	೦	೦			
ತೆಂಗಿನಕಾಯಿ ೧೦೦೦	೧೩೪	೦	೦	೨೧೧	೮	೦

ಕತ್ತಿಯೂ ಕೋವಿಯೂ ತಮ್ಮ ಗುರಿಯನ್ನು ತಪ್ಪಬಹುದು! ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು!!

ಆದರೆ ಡಾ॥ ರಾಜಾರಾಮರವರ ನೂತನ ಮತ್ತು ಅತ್ಯಾಶ್ಚರ್ಯಕರವಾದ ಚಿಕಿತ್ಸೆಯು ಮಾತ್ರ ಒಂದೇ ವಾರದ ಅವಧಿಯಲ್ಲಿ ರೋಗಿಯನ್ನು ಗುಣಗೊಳಿಸಿ ಸಂತೋಷವನ್ನುಂಟುಮಾಡಲು ತಪ್ಪುವದಿಲ್ಲ.

ಆದುದರಿಂದ ನಿಮ್ಮ ಯೌವನವನ್ನು, ಆನಂದವನ್ನು, ಆರೋಗ್ಯವನ್ನು ಹೊಂದಲು ಕೂಡಲೇ ವೈದ್ಯರಾದ ಡಾ॥ ಎ. ವಿ. ರಾಜಾರಾಮರವರ ಸಲಹೆಯನ್ನು ಪಡೆಯಿರಿ.

ಭಾರತದ ಪ್ರಸಿದ್ಧ ವೈದ್ಯರಾದ ಡಾ॥ ರಾಜಾರಾಮರವರು ತಮ್ಮ ವಿಧಾನದ ಚಿಕಿತ್ಸೆಗಳಿಂದ ಅದ್ಭುತವಾದ ಭಾರತದಲ್ಲಿ ಪ್ರಖ್ಯಾತರಾಗಿ ಸಹಸ್ರಾರು ಜನರಿಗೆ ಚಿಕಿತ್ಸೆ ನೀಡಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವವನ್ನು, ಪುರುಷತ್ವವನ್ನು ಉಂಟುಮಾಡಿರುವರು. ರಾಜರುಗಳೂ, ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳೂ ಇವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ.

ಅಪ್ರತಿಮ ಡಾ॥ ರಾಜಾರಾಮರವರನ್ನು ಭೇಟಿ ಮಾಡಿ ನವ ಯೌವನ, ದೇಹಶಕ್ತಿ ಮತ್ತು ಚೈತನ್ಯವನ್ನು ಸಂಪಾದಿಸಿರಿ.

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ದಾಂಪತ್ಯದಿಂದ ಸಾಧ್ಯವಾಗದ ಸುಖವನ್ನು ಪಡೆಯುವರು.

ಕಾಲ: ಬೆಳಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4 ರಿಂದ ರಾತ್ರಿ 9 ಘಂಟೆ ವರೆಗೆ

ವಿಶ್ವಾಸ ಮೆಡಿಕಲ್ ಹಾಲ್,

ಎಸ್ ನಂ 1 74 ... ರಸ್ತೆ ಮೈಸೂರು (ಮೈಸೂರು ಬ್ಯಾಂಕ್ ಬಳಿ ... ಜಾಗದಿಂದ 3ನೇ ಕಟ್ಟಡ)

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವವಿಖ್ಯಾತರಾಗಿರುವ

ನವರತ್ನ — ಕಲ್ಪ

ನಿರ್ಮಿಸಿರುವ,

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ನಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು ಫೋನ್ ನಂ 590

— ಭೇಟಿಯ ಕಾಲ —

ಬೆಳಗ್ಗೆ 7-30 ರಿಂದ 12 30 ಮತ್ತು ಮಧ್ಯಾಹ್ನ 4 ರಿಂದ 7 30

ರೋಗದ ಕಾರ್ಯಕ್ರಮವನ್ನು ಗಮನಿಸಿ ಮತ್ತು ಅವರ ಉಚಿತ ವೈದ್ಯಕೀಯ ಸಲಹೆಯನ್ನು ಪಡೆಯಿರಿ

ಅವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು ನಿರ್ಧರಿಸಿದ್ದಾರೆ

ನವರತ್ನ — ಕಲ್ಪ

ಉಪಯೋಗಗಳು

ಇದು ಶಕ್ತಿ, ಕೆಮ್ಮು ಮುಕ್ತಿ, ಹಸಿವು, ಜೀರ್ಣಶಕ್ತಿ, ಗೊನೋರಿಯ, ಸೀಲ, ಶಕ್ತಿ ರೋಗಗಳ ಮತ್ತು ಪ್ರಮೇಹ ಮುಂತಾದ 9 ಅಮೂಲ್ಯ ರತ್ನಗಳ ಸಂಯೋಗ. ನಿಮ್ಮ ಎಲ್ಲಾ ಸಾಮಾನ್ಯ ಹಾಗೂ ತೀವ್ರ ವ್ಯಾಧಿಗಳಿಗೂ ಅತ್ಯುತ್ತಮ ಆರೋಗ್ಯದಾಯಕವಾದ ಔಷಧಿ ಇದೊಂದೇ

NAVRATNA KALPA PHARMACY, JULLUNDUR CITY (India)

ಚಾಮುಂಡೇಶ್ವರಿ

ಟಾಕೀಸ್

14-9-56ರಿಂದ : 2ನೇ ವಾರ

ಪ್ರತಿ ದಿನ 3 ಪ್ರದರ್ಶನಗಳು

ಅನುಪಮರವರ ತೆಲುಗು ಚಿತ್ರ

ಮುದ್ದು ಬಿಡ್ಡ

ಪಾತ್ರ:- ಜಮುನ, ಲಕ್ಷ್ಮೀರಾಜ್ಯಂ, ಸೂರ್ಯಕಾಂತಂ, ಜಗ್ಗಯ್ಯ

ರಣಜಿತ್ ಟಾಕೀಸ್

14-9-56 ರಿಂದ : ಅನೋಖಾ ಪ್ರಾರಂಭ

ಪ್ರತಿ ದಿನ 3 ಪ್ರದರ್ಶನಗಳು

... ಜನರ ಅತ್ಯುತ್ತಮ ಹಾಸ್ಯಮಯ ಹಿಂದಿ ಚಿತ್ರ

ತೀನ್ ಸೌ ಸಾರ್ ಖಾನ್?

ತಾರಾಗಣ :- ..., ಸುಂದರ್, ..., ... ಮುಂತಾದವರು

ಒಲಿಂಪಿಯಾ ಟಾಕೀಸ್

14-9-56 ರಿಂದ . ಜನಭರಿತ 2ನೇ ವಾರ

ಆರ್ ಕೆ ಫಿಲಂಸ್‌ರವರ

ಜಾಗ್ತೆ ರಹೊ

ಪಾತ್ರ:- ರಾಜಕಪೂರ್, ಪ್ರದೀಪ್ ಕುಮಾರ್, ನೀಮೊ, ಮೋತಿಲಾಲ್, ..., ಸುಲೋಚನಾ ಚಟರ್ಜಿ, ಸುಮಿತ್ರ ಮುಂತಾದವರು

Edited Printed and Published by A. R Nagaraja at Sadhvi Press D. Subbiah Road, Mysore

ರಾ ಜ ಭ ವ ನ್

ಜಗನ್ಮೋಹನ ಬಂಗ್ಲಾ ರಸ್ತೆ, ಮೈಸೂರು

ನೂತನ ಭವ್ಯವಾದ ಫಲಾಹಾರ ಮಂದಿರ

11-9-56 ನೇ ಮಂಗಳವಾರದಿಂದ ಪ್ರಾರಂಭಿಸಲ್ಪಟ್ಟಿದೆ

ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಆಲಿಸಿ ಮತ್ತು ಆನಂದಿಸಿ!

ಮರ್ಫಿ ರೇಡಿಯೋ

ಇತ್ತೀಚಿನ ಮಾದರಿ '254' ಅನ್ನು ಪರಿಶೀಲಿಸಿ

★ 6 ವಾಲ್ವ್, 4 ಬ್ಯಾಂಡು ಮತ್ತು ಪ್ಲಾಸ್ಟಿಕ್ ...

★ ಆಕರ್ಷಣೀಯವಾದ ... ಕ್ಯಾಬಿನೆಟ್

ರೂ. 395

ನಿಮ್ಮ ಅಧಿಕೃತ ಮಾರಾಟಗಾರರಲ್ಲಿ ವಿಚಾರಿಸಿ

— ಆ ಬಿ ೀ ಡ್ಸ್ —

ಫೋನ್ ನಂ. 473 ಸ್ವಸ್ತಿ ... ಚೌಕ : ಮೈಸೂರು

ಗ್ಯಾರಂಟಿ ಕಾರ್ಡನ್ನು ಪಡೆಯಲು ಮರೆಯಬೇಡಿ

ಪ್ರಭಾ ★

14-9-56 ರಿಂದ :: ಅನೋಖಾ ಪ್ರಾರಂಭ

ದಿನವೂ ಮೂರು ಪ್ರದರ್ಶನಗಳು

ವಿ. ಸೂ. 14-9-56ನೇ ಶುಕ್ರವಾರ 2 ಪ್ರದರ್ಶನಗಳು ಮಾತ್ರ

ಸಾಯಂಕಾಲ 6-30 ಮತ್ತು ರಾತ್ರಿ 9-45ಕ್ಕೆ

ಗ್ಯಾನ್ ಮುಖರ್ಜಿಯವರ, ಇಂಪಾದ ಸಂಗೀತದಿಂದ ಕೂಡಿದ ಪ್ರಸಿದ್ಧ ಹಿಂದಿ ಚಿತ್ರ

★ ಶತ್‌ರಂಜ

ಪಾತ್ರ: ಮಾನಿ ... , ಅಶೋಕ್ ಕುಮಾರ್, ಜಗದೀಶ್ ... ಮತ್ತು ವಿಜಯಲಕ್ಷ್ಮಿ, — — ಸಂಗೀತ: ಸಿ. ರಾಮಚಂದ್ರ

ಬೆಳಗಿನ ಪ್ರದರ್ಶನ : 14-9-56 ರಿಂದ ಮೂರು ದಿನ

ತಿಲೋತ್ತಮೆ, ..., ಗೀತಾ ಬಾಲ್ ಹಿಂದಿ ಚಿತ್ರ . ★ ಮೆಯೂರ್ ...

SRI GAYATHRI ★ TALKIES

From 13—9—56 : Successful 2nd Week

THE CONQUEROR R.K.O.'s CINEMASCOPE & TECHNICOLOR PICTURE

Morning Shows on 15th & 16th ★ SOMBRERO ★

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಪತ್ರಿಕೆಗಳಲ್ಲಿ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಪುಸ್ತಕ : ೧೮] SADHVI : FRIDAY 14—9—1956 ಮೈಸೂರು : ಶುಕ್ರವಾರ ೧೪—೯—೧೯೫೬ [ಸಂಚಿಕೆ : ೮೮

ಈಜಿಪ್ಟಿನಲ್ಲಿ ಸೈನ್ಯಕ್ಕೆ ಜಮಾವಣೆಗಾಗಿ ಸರ್ಕಾರದ ಆಜ್ಞೆ

ಆಯುರ್ವೇದ ಕಾಲೇಜು ಅಭಿವೃದ್ಧಿ ಕ್ರಮಗಳು

ವಿದ್ಯಾರ್ಥಿಗಳ ಮುಷ್ಕರ ಮುಕ್ತಾಯಕ್ಕೆ ಕರೆ

ಮೈಸೂರು ೧೩

ಆಯುರ್ವೇದ ಕಾಲೇಜಿನ ಪ್ರಿನ್ಸಿಪಾಲರ ಅಧಿಕಾರ ನಿರ್ವಹಿಸುತ್ತಿರುವ ಶ್ರೀ ವೀರಪ್ಪನವರು [illegible] ಸಂಜೆ ಪತ್ರಿಕಾ ಗೋಷ್ಠಿಯನ್ನು ಕರೆದು, [illegible]ರವು ಕಾಲೇಜಿನ ಅಭಿವೃದ್ಧಿಗಾಗಿ ಕೈಗೊಳ್ಳುವ ಕ್ರಮಗಳನ್ನು ವಿವರಿಸಿ ವಿದ್ಯಾರ್ಥಿಗಳು [illegible]ಷ್ಕರವನ್ನು ಮುಕ್ತಾಯಗೊಳಿಸುವಂತೆ ಮನವಿ ಮಾಡಿಕೊಂಡರು

ಈಗ ಕಾಲೇಜಿನಲ್ಲಿರುವ ೨೮ ಉಪಾಧ್ಯಾಯರುಗಳೊಡನೆ ೩ ಮಂದಿ ಪಾರ್ಟ್ ಟೈಂ ಶಿಕ್ಷಕರು ನೇಮಿಸಲಾಗಿದೆಯೆಂದು ಹೇಳಿದರು.

[illegible] ವರ್ಷ ಕಾಲೇಜಿನಲ್ಲಿ ಹೆಚ್ಚಿನ ಶಿಕ್ಷಕರ [illegible] ಮುಂತಾದುವಕ್ಕೆ ೩೦,೦೦೦ ರೂ [illegible] ಕಟ್ಟಡಗಳ ನಿರ್ಮಾಣಕ್ಕೆ ೫೦ ಸಾವಿರ [illegible] ಮತ್ತು ಔಷಧಿ ಮುಂತಾದ ಸಲಕರಣೆಗಳಿಗೆ ೧೦ ಸಾವಿರ ರೂ ಮಂಜೂರು ಮಾಡಲಾಗಿದೆಯೆಂದು ತಿಳಿಸಿದರು

[illegible]ಲೋಪತಿಯಷ್ಟೇ ಸಮನಾದ ಶಿಕ್ಷಣವನ್ನು ನಿರೂಪಿಸಲು ನೇಮಿಸಲಾದ ಪ್ರೊ॥ [illegible]ಯವರ ಸಮಿತಿ ವರದಿಯು ಬರುವುದಕ್ಕೆ [illegible] ಯಾವ ರೀತಿಯ ಅಭಿವೃದ್ಧಿ ಕ್ರಮಗಳನ್ನು ಕೈಗೊಳ್ಳುವುದು ಸಾಧ್ಯವಿಲ್ಲವೆಂದು ಅಭಿಪ್ರಾಯಪಟ್ಟರು. ಕಾಲೇಜಿನ ಅಭಿವೃದ್ಧಿಯು [illegible]ಸವಾಗಿರುವುದಕ್ಕೆ ನಿರ್ಗಾವಣೆ ಪ್ರಶ್ನೆಯೂ [illegible] ಕಾರಣವೆಂದು ತಿಳಿಸಿದರು

[illegible]ದ್ರಿ, ರೀಡಿಂಗ್ ರೂಂ ಮತ್ತು ತರಗತಿಗಳನ್ನು ನಡೆಸಲು ವಸ್ತು ಪ್ರದರ್ಶನಾಲಯದಲ್ಲಿ [illegible] ಒದಗಿಸಲಾಗುತ್ತಿದೆಯೆಂದೂ, [illegible]ರ್ಥಿಗಳಿಗೆ ವಸತಿ ಗೃಹಕ್ಕಾಗಿ ಯೋಜನೆಗಳು [illegible] ಸರ್ಕಾರಕ್ಕೆ ಇನ್ನು ಮುಂದೆ ಸಲ್ಲಿಸಲಾಗುವುದೂ, ಆಸ್ಪತ್ರೆಯಲ್ಲಿ ಹಾಸಿಗೆಗಳ ಸಂಖ್ಯೆ [illegible]ವವರೆಗೂ ಸದ್ಯಕ್ಕೆ ವಿದ್ಯಾರ್ಥಿಗಳನ್ನು [illegible] ಆಸ್ಪತ್ರೆಗಳಿಗೆ ಕಳುಹಿಸಿಕೊಡಲಾಗುವುದೂ ತಿಳಿಸಿದರು

[illegible] ವಿದ್ಯಾರ್ಥಿಗಳ ಇಚ್ಛೆಗೆ ವಿರುದ್ಧವಾಗಿ [illegible] ಮುಷ್ಕರದಲ್ಲಿ ಸೇರಿಸಿಕೊಳ್ಳಲಾಗಿದೆ [illegible] ಶ್ರೀ ವೀರಪ್ಪನವರು ಹೇಳಿದರು.

[illegible] ಮಂಗಳಾರತಿ ಉತ್ಸವ

[illegible]ಂಪೇಟೆ ಬಸ್ತಿ ಸರಸಪ್ಪನವರ ಅಗ್ರಹಾರ [illegible] ಸಾಮ್ರಾಜ್ಯಮ್ ಮುದ್ರಣಾಲಯದಲ್ಲಿ [illegible] ಮಹಾ ಮಂಗಳಾರತಿಯೂ, ಪ್ರಸಾದ [illegible] ಪುಷ್ಪ ಮಾಲಿಕಾ ಪುಸ್ತಕ ಪ್ರಕಾಶನ [illegible]ರಂಭೋತ್ಸವವೂ ಈ ಸಂಜೆ ನೆರವೇರು[illegible]

ಉಪನ್ಯಾಸ ಮಾಲೆ

[illegible]ಧಾನಿಯ ಸಮಾಜ ವಿಜ್ಞಾನ ಸಂಘದ [illegible]ಲ್ಲಿ ಶ್ರೀ ಎಂ ಯಾಮುನಾಚಾರ್ಯ [illegible] ಉಪನ್ಯಾಸ ಮಾಲೆಯ ಆರಂಭೋತ್ಸವವು [illegible]ಡೆ ೫-೩೦ಕ್ಕೆ ಡಿ. ಬನುಮಯ್ಯನವರ [illegible] ಕಾಲೇಜು ಕಟ್ಟಡದಲ್ಲಿ ನೆರವೇರು[illegible]

ಈಜಿಪ್ಟಿನಲ್ಲಿ ಮಿಲಿಟರಿ ಸೇವೆಗೆ ಕಾನೂನು

ಈಜಿಪ್ಟಿನ ಸೈನ್ಯ, ಶಸ್ತ್ರಾಸ್ತ್ರ ಮತ್ತು ವಿಮಾನ ಕಾರ್ಖಾನೆಗಳ ಸೇವೆಗಾಗಿ, ೨೦ರಿಂದ ೩೫ ವಯಸ್ಸಿನೊಳಗಿನ ಯಾವ ಅಧಿಕಾರಿ ಅಥವಾ ನಾಗರಿಕ ಮನುಷ್ಯನನ್ನು ಬೇಕಾದರೂ ಸೇರಿಸಿಕೊಳ್ಳಲು ಸಾಧ್ಯವಾಗುವ ಕಾನೂನನ್ನು ಅಧ್ಯಕ್ಷ ನಾಸರ್‌ರವರು ಜಾರಿ ಮಾಡಿದ್ದಾರೆ

ಜಬ್ಬಲ್ಪುರದಲ್ಲಿ ಕೋಮುವಾರು ಗಲಭೆ

ಜಬ್ಬಲ್ಪುರದಲ್ಲಿ ನೆನ್ನೆ ಕೋಮುವಾರು ಗಲಭೆ ನಡೆದು, ೨೦ ಮಂದಿಗೆ ಗಾಯಗಳಾದುವೆಂದೂ ಇದರ ಪರಿಣಾಮವಾಗಿ ರಾತ್ರಿವೇಳೆ ಕರ್ಫ್ಯೂವನ್ನು ವಿಧಿಸಲಾಯಿತೆಂದೂ ವರದಿಯಾಗಿದೆ. ೫ ಮತ್ತು ಹೆಚ್ಚು ಜನರ ಕೂಟ ಸೇರುವುದು, ಆಯುಧ ಧರಿಸುವುದು ಮುಂತಾದುವನ್ನು ೧೫ ದಿನ ನಿಷೇಧಿಸಲಾಗಿದೆ. ನೂರಾರು ಮನೆಗಳಿಗೆ ಬೆಂಕಿ ಹತ್ತಿಸಲಾಯಿತು

ಸುಹ್ರಾವರ್ದಿ ಮಂತ್ರಿಮಂಡಲದಿಂದ ಪ್ರಮಾಣ ವಚನ

ಪಾಕಿಸ್ತಾನದ ಅವಾಮಿ ಲೀಗಿನ ಮುಖಂಡರಾದ ಸುಹ್ರಾವರ್ದಿಯವರು ನೆನ್ನೆ ಮಿತ್ರಮಂತ್ರಿಮಂಡಲದ ಪ್ರಧಾನಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು ಅವರ ಜೊತೆಯೊಡನೆ ರಿಪಬ್ಲಿಕನ್ ಪಕ್ಷದವರೂ ಮಂತ್ರಿಗಳಾಗಿ ಸೇರಿದ್ದಾರೆ ಅವರ ಮಂತ್ರಿಮಂಡಲದಲ್ಲಿರುವ ೯ ಸಚಿವರ ಪೈಕಿ ೫ ಜನರು ಅವಾಮಿ ಲೀಗಿನವರು ಉಳಿದವರು ರಿಪಬ್ಲಿಕನ್ ಪಕ್ಷದವರು ಆ ಪೈಕಿ ಮಾಜಿ ಗವರ್ನರ್ ಫಿರೋಜ್ ಖಾನ್ ನೂನ್‌ರವರೂ ಇರುವರು ಹಿಂದಿನ ಮಂತ್ರಿಮಂಡಲದಲ್ಲಿದ್ದ ಅಮೀರ್ ಅಜಾಂ ಮತ್ತು ಅಮ್ಜದ್ ಅಲಿಯವರೂ ಸಚಿವರಾಗಿರುವರು. ಪಾಕಿಸ್ತಾನವು ಜನ್ಮ ತಾಳಿದಾಗಿನಿಂದ ಅಲ್ಲಿ ಸ್ಥಾಪಿಸಲ್ಪಟ್ಟಿರುವುದರಲ್ಲಿ ಇದು ಐದನೇ ಮಂತ್ರಿಮಂಡಲ

ಈಜಿಪ್ಟಿನ ಕ್ರಮಕ್ಕೆ ಸಕಲ ವಿಧದ ಪ್ರತಿಭಟನೆ

ಬ್ರಿಟನ್ನು ಮತ್ತು ಫ್ರಾನ್ಸಿನ ನಿರ್ಧಾರವು

ಅಂತರ ರಾಷ್ಟ್ರೀಯ ಒಪ್ಪಂದಗಳ ಅಂಗವಾಗಿ ಸ್ಥಾಪಿಸಲ್ಪಟ್ಟಿರುವ ಹಕ್ಕುಗಳ ಬಗ್ಗೆ ಸರ್ವಾಧಿಕಾರದ ರೀತಿಯಲ್ಲಿ ಅತಿಕ್ರಮ ಪ್ರವೇಶ ಮಾಡುವುದನ್ನು ಸೂಕ್ತವಾದ ಎಲ್ಲಾ ವಿಧಾನಗಳಿಂದಲೂ ಬ್ರಿಟನ್ ಮತ್ತು ಫ್ರಾನ್ಸುಗಳು ಎದುರಿಸುವುದಾಗಿ ಆ ರಾಷ್ಟ್ರಗಳು ತಿಳಿಸಿವೆ. ಸೂಯೆಜ್ ಕಾಲುವೆಯ ಅಂತರ ರಾಷ್ಟ್ರೀಯವಹಕ್ಕು ಈಜಿಪ್ಟು ಒಪ್ಪದಿರುವುದರಿಂದ ಅತ್ಯಂತ ಕಳವಳಕರ ಸ್ಥಿತಿಯುಂಟಾಗಿರುವುದೆಂದು ಈಡನ್ ಮತ್ತು ಮೋಲೆಯವರು ತಿಳಿಸಿದ್ದಾರೆ

ಅಮೆರಿಕದ ಅಧ್ಯಕ್ಷ ಐಸೆನ್‌ಹೋವರರು ಹೇಳಿಕೆಯಿತ್ತು, ಸೂಯೆಜ್ ವ್ಯಾಜ್ಯವನ್ನು ಪರಿಹರಿಸಲು ಎಲ್ಲಾ ಮಾರ್ಗಗಳೂ ಮುಗಿದು, ಈಜಿಪ್ಟು ಯಾವುದಾದರೂ ರೀತಿಯ ಆಕ್ರಮಣ ಮಾಡಿದರೆ ಅದರ ವಿರುದ್ಧವಾಗಿ ಬಲಪ್ರಯೋಗ ಮಾಡುವುದಕ್ಕೆ ಬ್ರಿಟನ್ನು ಮತ್ತು ಫ್ರಾನ್ಸು ಹಕ್ಕು ಹೊಂದಿರುವುದಾಗಿ ತಿಳಿಸಿದ್ದಾರೆ.

ನೂತನ ಸಂಸ್ಥಾನದ ಕಾಂಗ್ರೆಸ್ ನಾಯಕರ ಆಯ್ಕೆ

ಬರುವ ತಿಂಗಳು ಮಧ್ಯ ಭಾಗದಲ್ಲಿ

ಬೆಂಗಳೂರು ೧೩

ಕಾಂಗ್ರೆಸ್ ಹೈಕಮಾಂಡಿನ ಸೂಚನೆಯಂತೆ ನಾನಾ ಕನ್ನಡ ಪ್ರದೇಶಗಳ ಶಾಸನ ಸಭಾ ಕಾಂಗ್ರೆಸ್ ಸದಸ್ಯರ ಸಭೆಯು ಬರುವ ತಿಂಗಳು ೧೫ರಿಂದ ೨೦ರೊಳಗೆ ಸೇರಿ ಹೊಸ ನಾಯಕರ ಆಯ್ಕೆಯಾಗುವುದೆಂದು ಗೊತ್ತಾಗಿದೆ ಶ್ರೀಗಳಾದ ಕಡಿದಾಳ್ ಮಂಜಪ್ಪ, ಎಸ್ ನಿಜಲಿಂಗಪ್ಪ ಮತ್ತು ಎಚ್ ಸಿದ್ದಯ್ಯನವರ ಹೆಸರುಗಳನ್ನು ಪ್ರಸ್ತಾಪಿಸಲಾಗುತ್ತಿದೆ

ವಿಶ್ವೇಶ್ವರಯ್ಯನವರ ಜನ್ಮ ದಿನೋತ್ಸವ

ಡಾ॥ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ಜನ್ಮ ದಿನೋತ್ಸವವು ನಾಳೆ ನೆರವೇರುವುದು ಅದರ ಸಂಬಂಧವಾಗಿ ಸಂಸ್ಥಾನದ ೪೦೦ ಗ್ರಾಮ ಕೈಗಾರಿಕಾ ಸಂಘಗಳ ಪ್ರತಿನಿಧಿಗಳು ಬೆಂಗಳೂರಿನಲ್ಲಿ ಸಮಾರಂಭವೊಂದರಲ್ಲಿ ಭಾಗವಹಿಸುವರು. ಗೃಹ ಕೈಗಾರಿಕಾ ಪ್ರದರ್ಶನ ಮತ್ತು ಅಂಬರ್ ಚರಕಾ ಪ್ರಯೋಗ ಪ್ರದರ್ಶನವೂ ಏರ್ಪಾಡಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಂಗೀತ. ೭-೧೫ ಮತ್ತು ೮ ೧೫ ಡಿ ಕೆ. ಲಕ್ಷ್ಮಮ್ಮ—ಸಂಗೀತ ೭-೩೦ ರಿಕಾರ್ಡು ಮಧ್ಯಾಹ್ನ ೧೨ ಗಾಯನ. ೧೨ ೩೦ ರಿಕಾರ್ಡು. ೧೨ ೪೫ ಬಾಲಜಗತ್. ೧-೫೦ ದಿಲ್ಲಿಬಾ ಸಂಜೆ ೫ ೩೦ ಮತ್ತು ೮ ವಿ ಆರ್ ಕೃಷ್ಣ—ಸಂಗೀತ. ೬-೧೫ ವಚನಗಾನ. ೭ ೩೦ ವಿಶ್ವವಾರ್ತಾವಲೋಕನ. ೮-೩೦ ರೇಡಿಯೊ ಸುದ್ದಿ ೮-೪೦ ಪ್ರಸಾರ ಗೀತೆ. ೯ ೧೫ ಕನ್ನಡದಲ್ಲಿ ತಿರುಗಿತೆ ೯ ೩೦ ರಾಷ್ಟ್ರೀಯ ಕಾರ್ಯಕ್ರಮ

ಸಂಸ್ಥಾನದಲ್ಲಿ ರೂ. ಗೆ ೨॥ ಸೇರು ಅಕ್ಕಿ ಮಾರಾಟ

ಕೇಂದ್ರ ಉಪ ಮಂತ್ರಿ ಎಂ. ವಿ. ಕೃಷ್ಣಪ್ಪನವರ ಹೇಳಿಕೆ

ರೂಪಾಯಿಗೆ ೨ ಸೇರಿನಂತೆ ಮಾರಲು ಮೈಸೂರಿಗೆ ಒದಗಿಸಲಾಗಿರುವ ಪ್ರಥಮ ದರ್ಜೆ ಕೈಯ್ಯಾಲೆ ಮಧ್ಯಮ ವರ್ಗದ ೨೦ ಸಾವಿರ ಟನ್ ಅಕ್ಕಿಯನ್ನು ಸಂಸ್ಥಾನಕ್ಕೆ ಕೊಡಲಾಗುವುದೆಂದೂ, ಅದನ್ನು ರೂ ಗೆ ೨॥ ಸೇರಿನಂತೆ ಮಾರಲಾಗುವುದೆಂದೂ ಕೇಂದ್ರ ಆಹಾರ ಉಪ ಮಂತ್ರಿ ಎಂ. ವಿ. ಕೃಷ್ಣಪ್ಪನವರು ತಿಳಿಸಿದ್ದಾರೆ. ಕೊಡಗಿಗೆ ೩,೦೦೦ ಟನ್ ಬರ್ಮಾ ಅಕ್ಕಿಯನ್ನು ಒದಗಿಸಲಾಗುವುದು

ಕೈಲಾಸಂ ಸ್ಮಾರಕ ಕನ್ನಡ ನಾಟಕ ಸ್ಪರ್ಧೆ

ರಾಜಧಾನಿಯ ಚಿತ್ರಕಲಾ ಮಂದಿರದವರು ಇದೇ ತಿಂಗಳು ೨೩ರಿಂದ ಕೈಲಾಸಂ ಸ್ಮಾರಕ ಅಖಿಲ ಕರ್ನಾಟಕ ಕನ್ನಡ ನಾಟಕ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಆದಕ್ಕೆ ಸೇರಬಯಸುವವರು ೫ ರೂ ಪ್ರವೇಶಧನದೊಡನೆ ನಾಳೆಯೊಳಗೆ ಚಾಮುಂಡಿಪುರದ ೯ನೇ ನಂಬರ್ ಮನೆಯಲ್ಲಿರುವ ಗೌರವ ಸಂಚಾಲಕ ಶ್ರೀ ಎಂ ಎಸ್. ನಾಗರಾಜ್‌ರವರಿಗೆ ತಿಳಿಸಬೇಕು. ಹೆಚ್ಚಿನ ವಿವರಗಳನ್ನು ಅವರಿಂದ ತಿಳಿಯಬಹುದು.

ಪಶ್ಚಿಮ ರಾಷ್ಟ್ರಗಳ ನೂತನ ಕ್ರಮದಿಂದ ಅಪಾಯ ಸನ್ನಿವೇಶ

ಸಂಧಾನ ಮುಂದುವರಿಸುವ ಬಗ್ಗೆ ಈಡನ್ನರಿಗೆ ನೆಹರೂ ಕರೆ

ಪ್ರಧಾನಿ ನೆಹರೂರವರು ನೆನ್ನೆ ಲೋಕ ಸಭೆಯಲ್ಲಿ ಸೂಯೆಜ್ ಕಾಲುವೆ ಮೇಲ್ವಿಚಾರಣೆ ಬಗ್ಗೆ ಪ್ರರಾಷ್ಟ್ರಗಳ ಬಳಕೆಗಾರರ ಸಂಸ್ಥೆಯ ಸ್ಥಾಪನೆ ವಿಚಾರವನ್ನೆತ್ತಿ, ಇಂತಹ ಬಲೋತ್ಪಾದಕ ಕ್ರಮಗಳಿಂದ ಹೋರಾಟದ ಅಪಾಯಕರ ಸನ್ನಿವೇಶವೊದಗುವುದೆಂದು ತಿಳಿಸಿದರು. ಈಗಲೂ ಕಾಲವು ಮಿಂಚಿಲ್ಲವೆಂದೂ, ಸಂಧಾನವನ್ನು ಮುಂದುವರಿಯುವ ಬಗ್ಗೆ ಅಮೆರಿಕಾ ಮತ್ತು ಬ್ರಿಟನ್ನುಗಳು ದಾರಿ ಮಾಡಬೇಕೆಂದೂ ಕೋರಿದರು ಈಜಿಪ್ಟು ಕೊಟ್ಟಿರುವ ಹೊಸ ಸಲಹೆಯು ಸಮಸ್ಯೆಯ ಇತ್ಯರ್ಥಕ್ಕೆ ಅವಕಾಶ ಕಲ್ಪಿಸುವುದಾಗಿ ತಿಳಿಸಿ, ಅವರು ಈಡನ್ ಮತ್ತು ಐಸೆನ್‌ಹೋವರರಿಗೆ ಪತ್ರ ಬರೆದಿದ್ದಾರೆ

ಭಗವದ್ಗೀತಾ ಕಾಲಕ್ಷೇಪದ ಮಂಗಳ

ವಾಣಿವಿಲಾಸ ಮೊಹಲ್ಲಾ ಶ್ರೀ ಆಂಡಾಳ್ ಮಂದಿರದಲ್ಲಿ ವಿದ್ವಾನ್ ಅನ್ನಾದೂರು ನರದಾಚಾರ್ಯ ಸ್ವಾಮಿಗಳಿಂದ ನಡೆಯುತ್ತಿರುವ ಶ್ರೀಮದ್ಭಗವದ್ಗೀತಾ ಕಾಲಕ್ಷೇಪದ ಮಂಗಳವು ಈ ಸಂಜೆ ೬ ಗಂಟೆಗೆ ನಡೆಯುವುದು.

ಮಹಾರಾಣಿಯವರ ಅಧ್ಯಕ್ಷತೆಯಲ್ಲಿ ಮಹಿಳಾ ಸದನದ ವಾರ್ಷಿಕೋತ್ಸವ

ದೇವರಾಜ ಮೊಹಲ್ಲಾದಲ್ಲಿರುವ ಮಹಿಳಾ ಸದನದ ೧೫ನೇ ವಾರ್ಷಿಕೋತ್ಸವವು ಮಹಾರಾಣಿ ಕಾಲೇಜಿನಲ್ಲಿ ನಾಳೆ ಸಂಜೆ ೫ ಗಂಟೆಗೆ ನೆರವೇರುವುದು. ಶ್ರೀಮನ್ಮಹಾರಾಣಿಯವರಾದ ಶ್ರೀ ತ್ರಿಪುರಸುಂದರಮ್ಮಣ್ಣಿಯವರು ಅಧ್ಯಕ್ಷತೆ ವಹಿಸುವರು.

ಎ ಆರ್. ಕೃಷ್ಣಶಾಸ್ತ್ರಿಯವರಿಗೆ ಪ್ರಬಂಧಗಳ ಸಂಪುಟ ಅರ್ಪಣೆ

ಮೈಸೂರು ವಿಶ್ವವಿದ್ಯಾಲಯದ ವಿಶ್ರಾಂತ ಕನ್ನಡ ಪ್ರಾಧ್ಯಾಪಕರಾದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರಿಗೆ ಅಭಿನಂದನೆ ಸಲ್ಲಿಸಲು ಪ್ರಬಂಧಗಳ ಸಂಪುಟವನ್ನು ಒಪ್ಪಿಸುವ ಸಮಾರಂಭವು ನಾಳಿದ್ದು ಬೆಳಗ್ಗೆ ೯ ಗಂಟೆಗೆ ಕ್ರಾಫರ್ಡ್ ಭವನದಲ್ಲಿ ನೆರವೇರುವುದು ವೈಸ್‌ಛಾನ್ಸಲರ್ ಡಾ॥ ಕೆ.ವಿ. ಪುಟ್ಟಪ್ಪನವರು ಅಧ್ಯಕ್ಷತೆ ವಹಿಸುವರು

ತಾಲ್ಲೂಕು ಅಭಾವ ಪ್ರದೇಶದಲ್ಲಿ ಪ್ರವಾಸ

ಮೈಸೂರು ತಾಲ್ಲೂಕು ಅಮಲ್ದಾರ್ ಶ್ರೀ ಪಿ. ರಾಮಪ್ಪ, ಶಾಸನಸಭಾ ಸದಸ್ಯ ಶ್ರೀ ಶಿವನಂಜೇಗೌಡ ಮತ್ತು ಶ್ರೀ ಎ ರಾಮಣ್ಣನವರು ಆಲನಹಳ್ಳಿ, ನಾಗನಹಳ್ಳಿ, ಬುಗತನಹಳ್ಳಿ ಮತ್ತು ವರಕೋಡುಗಳಿಗೆ ಭೇಟಿಯಿತ್ತು ಅಲ್ಲಿ ನಡೆಯುತ್ತಿರುವ ಅಭಾವ ಪರಿಹಾರ ಕಾರ್ಯಗಳನ್ನು ಪರಿಶೀಲಿಸಿದ್ದಾರೆ ಆ ಪ್ರದೇಶಗಳಲ್ಲಿ ಮಳೆಯಿಲ್ಲದೆ ಪರಿಸ್ಥಿತಿ ತುಂಬಾ ಕೆಟ್ಟಿದೆಯೆಂದೂ, ಇನ್ನು ಒಂದು ವಾರದೊಳಗೆ ಮಳೆ ಬರದಿದ್ದರೆ ಪೈರುಗಳು ಫಸಲು ಸಹಾ ಬರುವುದಿಲ್ಲವಾದ್ದರಿಂದ ಜನರು ಗಾಬರಿಗೊಂಡಿರುವರೆಂದೂ ಅವರುಗಳು ಹೇಳಿರುವರು ಅಲ್ಲಿ ನಡೆಯುತ್ತಿರುವ ಕಾಮಗಾರಿಗಳಲ್ಲಿ ಸಾವಿರಕ್ಕೂ ಹೆಚ್ಚು ಜನರು ಕೆಲಸ ಮಾಡುತ್ತಿರುವರು

ಗಣಪತಿ ಸುಬ್ರಹ್ಮಣ್ಯ ಮಂಗಳಾರತಿ

ನಗರದ [illegible] ಪೌರಸಭಾ ವಿದ್ಯಾರ್ಥಿ ನಿಲಯದಲ್ಲಿ ವಿದ್ಯಾ ಗಣಪತಿ ಪೂಜೆಯು ಪುರಸಭಾ ಸದಸ್ಯರಾದ ಶ್ರೀ ಚೌಡಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು. [illegible] ಶ್ರೀ [illegible] ಸ್ವಾಗತ ಭಾಷಣ [illegible] ವಂದನಾರ್ಪಣೆ ಮಾಡಿದರು. [illegible] ನಿಲಯದ ವಿದ್ಯಾರ್ಥಿಗಳಿಂದ [illegible] ಅಧ್ಯಕ್ಷರು [illegible] ವಂದನಾ [illegible] ಸಭೆ ಮುಕ್ತಾಯವಾಯಿತು.

[illegible] ರಸ್ತೆಯಲ್ಲಿರುವ ಡಾ॥ ಟಿ. ಎಸ್. [illegible] ವಿದ್ಯಾರ್ಥಿ ನಿಲಯದ ಸಂಘದ [illegible] ಶ್ರೀ ಎಂ. [illegible] ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ಎಸ್. [illegible] ಭಾಷಣ ಮಾಡಿದರು.

ನಗರದ [illegible] ಅನೂರಾಧಾ [illegible] ಸಂಸ್ಥೆಯ [illegible] ಪತ್ರಿಕಾ [illegible] ಶ್ರೀ ಎ. ಆರ್. [illegible] ಅಧ್ಯಕ್ಷತೆಯಲ್ಲಿ ಗಣಪತಿ ಮಹಾ ಮಂಗಳಾರತಿ [illegible] ನೆರವೇರಿತು. [illegible] ಭಜನೆ [illegible] ನಂತರ, ಮಂಗಳಾರತಿ ಮತ್ತು ಪ್ರಸಾದ ವಿನಿಯೋಗಗಳಾದುವು. [illegible] ಗಣಪತಿ ಮಹಿಮೆಯ ಬಗ್ಗೆ [illegible] ಮತ್ತು ಗಣಪತಿ [illegible] ಸಮಾರಂಭವು ಮುಕ್ತಾಯವಾಯಿತು

ಮೈಸೂರು ನಾನ್ ಗೆಜೆಟೆಡ್ ನೌಕರರ ಸಂಬಳ

ಹೆಚ್ಚಿಸುವುದಕ್ಕೆ ಮುಖ್ಯ ಮಂತ್ರಿಯವರ ಅಭಿಲಾಷೆ

ಬೆಂಗಳೂರು [illegible]

ಸಂಸ್ಥಾನದ [illegible] ಸಂಘದ [illegible] ನೇ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿ [illegible] ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಮಾತನಾಡಿ, ಮೈಸೂರು ಸಂಸ್ಥಾನ [illegible] ಮತ್ತು ಬೊಂಬಾಯಿ ಮತ್ತು ಇತರ ಕನ್ನಡ ಪ್ರದೇಶಗಳಲ್ಲಿರುವ ಸರ್ಕಾರಿ ನೌಕರರ ಸಂಬಳದ [illegible] ಹೋಗಬೇಕೆಂದೂ, ಒಂದೇ ಮಟ್ಟದ ಸಂಬಳದ ವ್ಯವಸ್ಥೆಯಾಗಬೇಕೆಂದೂ ತಿಳಿಸಿದರು. ಮೈಸೂರು ನಾನ್ ಗೆಜೆಟೆಡ್ ನೌಕರರ [illegible] ಸಂಬಳದ ಬೇಡಿಕೆ ಬಗ್ಗೆ ಅವರು ಸಹಾನುಭೂತಿ ತೋರಿಸಿ, [illegible] ಕೇಂದ್ರದ ಸಹಾಯವನ್ನು ನಿರೀಕ್ಷಿಸುತ್ತಿರುವುದಾಗಿಯೂ ನುಡಿದರು

[illegible] ಸಂಚಾರದ [illegible] ತಿಂಗಳ ಸಂಬಳವನ್ನು ಬೋನಸ್ಸಾಗಿ ಕೊಡಲಾಗುವುದೆಂದು ತಿಳಿಸಿದರು. ಎಲ್ಲಾ ಸಂಸ್ಥಾನಗಳಲ್ಲೂ ಒಂದೇ ಸಮನಾದ ಸಂಬಳವಿರಬೇಕೆಂದೂ, ೧,೫೦೦ ರೂ ಪರಮಾವಧಿ ವೇತನವಿರಬೇಕೆಂದೂ ಅವರು ನುಡಿದರು

ಗೃಹ ಮಂತ್ರಿ ಶ್ರೀ ಸಿದ್ದವೀರಪ್ಪನವರು ಆರಂಭೋತ್ಸವವನ್ನು ನೆರವೇರಿಸಿದರು. ಕಮೀಷನರ್ ಶ್ರೀ ಎಲ್. ಲಕ್ಷ್ಮಣರಾಯರು ಸ್ವಾಗತ ಭಾಷಣ ಮಾಡಿದರು.

ಗಣಪತಿ ಉತ್ಸವದ ಕಾರ್ಯಕ್ರಮ

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದ ಭಾರತವಾಚನವಿದೆ

ಒಂದಿ [illegible] ವಿದ್ಯಾಲಯದ ವಿದ್ಯಾರ್ಥಿ ವಿದ್ಯಾರ್ಥಿನಿಯರು [illegible] ಯಲ್ಲಿ ಈ ಸಂಜೆ ೬ ಗಂಟೆಗೆ ಮಂಗಳಾರತಿಯನ್ನು ಏರ್ಪಡಿಸಿರುವರು. ಶ್ರೀ ಮೋ. ರಾಜೇಶ್ವರಯ್ಯನವರು ಭಾಷಣ ಮಾಡುವರು ಶ್ರೀ ಪಿ ವೆಂಕಟಾಚಲಶರ್ಮರವರು ಅಧ್ಯಕ್ಷತೆ ವಹಿಸುವರು.

ಸಿ. ನರಸಿಂಹಯ್ಯ ಸ್ಮಾರಕ ಷೀಲ್ಡಿನ ಚರ್ಚೆ

ಶಾರದಾವಿಲಾಸ ಲಾ ಕಾಲೇಜಿನಲ್ಲಿ ಸಿ. ನರಸಿಂಹಯ್ಯ ಸ್ಮಾರಕ ಷೀಲ್ಡಿನ ಅಂತರ ಕಾಲೇಜು ಇಂಗ್ಲಿಷು ಚರ್ಚೆಯು ಈ ತಿಂಗಳು [illegible] ನಡೆಯುವುದು. ಸಂಸ್ಥಾನದ ಎಲ್ಲಾ ಕಾಲೇಜುಗಳೂ ಇದರಲ್ಲಿ ಭಾಗವಹಿಸಬಹುದು. ಇಬ್ಬಿಬ್ಬರು ಪ್ರತಿನಿಧಿಗಳಂತೆ ಪರ ಮತ್ತು ವಿರೋಧವಾಗಿ ವಾದಿಸಬಹುದು ಉತ್ತಮ ಕಾಲೇಜಿಗೆ ಪರ್ಯಾಯ ಗುರಾಣಿಯನ್ನು ಕೊಡಲಾಗುವುದು. ಚರ್ಚೆಗಾರರಿಗೆ ಅರ್ಹತೆ ಮೇಲೆ ೩ ಬಹುಮಾನಗಳನ್ನು ಕೊಡಲಾಗುವುದು. ಮಹಿಳೆಯರಲ್ಲಿ ಉತ್ತಮ ಭಾಷಣಕಾರರಿಗೆ ಒಂದು ವಿಶೇಷ ಬಹುಮಾನವನ್ನು ಇಡಲಾಗುವುದು. ಸೇರುವವರು [illegible] ರೂ. ಶುಲ್ಕವನ್ನು ಇದೇ ೧೭ರೊಳಗೆ ಕೊಡಬೇಕು.

ಹಾಸಿಗೆ - ದಿಂಬು

ಮಿತವ್ಯಯದಲ್ಲಿ ಹತ್ತಿಯಿಂದ ತಯಾರು ಮಾಡುತ್ತೇವೆ

ಬಾಹುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಇಂದ್ರ ಕೆಫೆ

ಸಯ್ಯಾಜಿರಾವ್ ರಸ್ತೆ, ಮೈಸೂರು.

ಸುಸಜ್ಜಿತವಾದ ಭವ್ಯ ನೂತನ ಫಲಾಹಾರ ಮಂದಿರ

6—9—56ನೇ ಗುರುವಾರ ತೆರೆಯಲಾಗಿದೆ

ಸ್ತ್ರೀಯರಿಗೂ, ಸಂಸಾರಗಳಿಗೂ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ

ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಆಲಿಸಿ ಮತ್ತು ಆನಂದಿಸಿ!

ಮರ್ಫಿ ರೇಡಿಯೋ

ಇತ್ತೀಚಿನ ಮಾದರಿ '254' ಅನ್ನು ಪರಿಶೀಲಿಸಿ

★ 6 ವಾಲ್ವ್, 4 ಬ್ಯಾಂಡು ಮತ್ತು ಮ್ಯಾಜಿಕ್ ಐ

★ ಆಕರ್ಷಣೀಯವಾದ ಮರದ ಕ್ಯಾಬಿನೆಟ್

ರೂ. 390

ನಿಮ್ಮ ಅಧಿಕೃತ ವ್ಯಾಪಾರಿಗಳಲ್ಲಿ ವಿಚಾರಿಸಿ

— ಆ ಬಿ ಬ್ರದರ್ಸ್ —

ಫೋನ್ ನಂ. 473 . ಸಯ್ಯಾಜಿರಾವ್ ಚೌಕ : ಮೈಸೂರು

ಗ್ಯಾರಂಟಿ ಕಾರ್ಡನ್ನು ಪಡೆಯಲು ಮರೆಯಬೇಡಿ

SREE GANESH

TALKIES

From 15-9-56 for 3 days only

FAIR WIND

(In True Color)

Featuring Fred MacMurray and Vera Ralston

[Actually filmed in Java islands with Bali [illegible] dancers]

ಮೈಸೂರಿನಲ್ಲಿ ಪ್ರತಿ ತಿಂಗಳು

17ನೇ ತಾರೀಖು

ವಿಶ್ವ ವಿಖ್ಯಾತರಾಗಿರುವ

ನವರತ್ನ — ಕಲ್ಪ

ಔಷಧಿಯನ್ನು ಕಂಡುಹಿಡಿದಿರುವ,

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು - ಫೋನ್ ನಂ 590

— ಭೇಟಿಯ ಕಾಲ —

ಬೆಳಗ್ಗೆ 7-30 ರಿಂದ 12 30 ಮತ್ತು

ಮಧ್ಯಾಹ್ನ 4 ರಿಂದ 7 30

[illegible] ಕಾರ್ಯಕ್ರಮವನ್ನು ಗಮನಿಸಿ

ಮತ್ತು ಅವರ [illegible]

[illegible]

[illegible]

[illegible]

ನ ವ ರ ತ್ನ — ಕ ಲ್ಪ

[illegible]

[illegible]

NAVRATNA KALPA PHARMACY,

JULLUNDUR CITY (India)

Central Food Technological Research Institute, Mysore

TENDER NOTIFICATION

Sealed tenders are invited from Established Contractors with experience of over ten years, for the construction of the building for housing the Packaging Division at an approximate cost of Rs 30,000 in the premises of the Institute

Tender papers consisting of 3 sets of bill of quantities and one set of drawings can be had at the office of the Govt. Architect and Town Planning Officer of the Govt. of Mysore, New Public Offices, Bangalore-2, on payment of Rs. 10 per set.

Completed tenders in duplicate together with an Earnest money of Rs. 1,250 **strictly in cash or by Bank Draft** should be delivered to the Director, Central Food Technological Research Institute, V. V Mohalla Post, Mysore so as to reach him on or before the 26th September 1956 - 4 P.M.

Tenders received will be opened at 4-10 p m the same day in the presence of contractors or their representatives who may be present at that time.

The Director, Central Food Technological Research Institute, reserves the right to accept or reject the lowest or any other tender without assigning any reason therefor. The work will have to be completed in all respects within 5 months from the date of award failing which a penalty of Rs. 25 per day would be levied for any extra time taken.

Before the Assistant Registrar of Co-Operative Societies,

Mysore Division,

MYSORE

Case No. 17 of 1956-57

Plaintiff :- Graduates' Co-Operative Society, Ltd.,

Chamaraja Road, Mysore

Vs.

Defendant :— S SRINIVASACHAR

317. D. Subbaiah Road,

Mysore

Notice to the defendent

Please take notice that the above suit is filed against you for recovery of Rs 36 15-1 with court costs and current interest etc. due by you to the plaintiff Society The case is posted for hearing you at 11 A M. on 25-9-1956 by the Assistant Registrar. If you fail to appear before him the case will be heard ex-parte.

By order of the Assistant Registrar of Co-operative Societies,

M. KRISHNAPPA

Secretary,

Graduates' Co Operative Society, Ltd.,

Before the Assistant Registrar of Co-Operative Societies,

Mysore Division,

MYSORE

Case No 18 of 1956-57.

Plaintiff :- Graduates' Co-Operative Society, Ltd ,

Chamaraja Road, Mysore

-Vs-

Defendant:— P. S. RANGACHAR

2891, Saraswatipuram,

MYSORE.

Notice to the defendent

Please take notice that the above suit is filed against you for recovery of Rs 32-12-2. with court costs and current interest etc, due by you to the Plaintiff Society. The case is posted for hearing you at 11 A. M. on 25-9-1956 by the Assistant Registrar. If you fail to appear before him the case will be heard ex-parte.

By order of the Assistant Registrar of Co-operative Societies.

M. KRISHNAPPA,

Secretary.

Graduates' Co-operative Society, Ltd.

Edited, Printed and Published by A. R. Nagarajan at Sadhvi Press, D. Subbiah Road, Mysore

ಟೆಲಿಫೋನ್ ನಂ. 792

ಕರ್ನಾಟಕದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬ್ರಾಂಕಾಲ್
ಅದ್ಭುತ ಮತ್ತು ಗುಳಿಗಳು
ವ್ಯಾಪಾರಿಗಳಿಗೆ ಏಜೆನ್ಸಿಗಳ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಬೇಕಾಗಿದ್ದಾರೆ
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1, ...
ಶ್ರೀ ...ಬಜಾರ್ ರಸ್ತೆ,
ಬೆಂಗಳೂರು - 2

ಪುಸ್ತಕ : ೧೮] SADHVI : SATURDAY 15—9—1956 ಮೈಸೂರು : ಶನಿವಾರ ೧೫—೯—೧೯೫೬ [ಸಂಚಿಕೆ : ..

ಪಶ್ಚಿಮ ರಾಷ್ಟ್ರಗಳ ಬಗ್ಗೆ ವಿಶ್ವಸಂಸ್ಥೆಗೆ ಈಜಿಪ್ಟಿನ ದೂರು

ಕಪಿಲಾ ಗಿರಣಿ ಕಾರ್ಮಿಕರ ಮುಷ್ಕರ

ಅನಿರೀಕ್ಷಿತ ವರ್ಗ ಮತ್ತು ಕಾರ್ಮಿಕರ ಸಂಘಟನೆಯವರ ಹೇಳಿಕೆಗಳು

ನಂಜನಗೂಡು ೧೪

ಇಲ್ಲಿನ ಕಪಿಲಾ ಹತ್ತಿ ಗಿರಣಿ ಕಾರ್ಮಿಕರ ಮುಷ್ಕರದ ಸಂಬಂಧವಾಗಿ ಅನಿರೀಕ್ಷಿತ ವರ್ಗದವರು ಹೇಳಿದಂತೆ, ೧೩ ಮತ್ತು ೧೪ನೇ ತಾರೀಕು ಹೊರಡಿಸಿರುವ ಪ್ರಕಟಣೆಗಳಲ್ಲಿ ತಮ್ಮ ನಿಲುವನ್ನು ಪ್ರಕಟಿಸಿ, ಕೈಗಾರಿಕಾ ನ್ಯಾಯಮಂಡಲಿಯ ತೀರ್ಪನ್ನು ಜಾರಿಗೆ ತರಲು ಅಸಿಸ್ಟೆಂಟ್ ಲೇಬರ್ ಕಮೀಷನರ ಮುಂದೆ ಉಭಯರೂ ಭರವಸೆ ಕೊಟ್ಟಿದ್ದುದಾಗಿಯೂ, ಆದರೂ ಕಾರ್ಮಿಕರು ಮುಷ್ಕರವನ್ನು ಹೂಡಿರುವರೆಂದೂ ತಿಳಿಸಿದ್ದಾರೆ. ಆಗಸ್ಟ್ ತಿಂಗಳ ಕಡೆಯ ಅರ್ಧ ಭಾಗ ಮತ್ತು ಜುಲೈ ೬ ರಿಂದ ಆಗಸ್ಟ್ ಮಧ್ಯ ಭಾಗದವರೆಗಿನ ಅವಧಿಯ ಪ್ರಕಾರ, ಉಳಿದ ಸಂಬಳ ಮತ್ತು ಭತ್ಯಗಳನ್ನು ಕಾರ್ಮಿಕರಿಗೆ ಕೊಡಲು ಆಡಳಿತದವರು ಸಿದ್ಧವಿದ್ದಾಗ್ಯೂ ಕಾರ್ಮಿಕರು ಅದನ್ನು ಪಡೆಯದೆ ಮುಷ್ಕರ ಹೂಡಿರುವುದಾಗಿ ತಿಳಿಸಿ, ಅದನ್ನು ಮುಕ್ತಾಯ ಮಾಡದಿದ್ದಲ್ಲಿ ಈ ...ದಿಂದ ಲಾಕ್ ಔಟ್ ಮಾಡುವುದಾಗಿ ಹೇಳಿದ್ದಾರೆ.

ಮುಷ್ಕರದಲ್ಲಿ ಭಾಗಿಗಳಾಗಿರುವವರ ವಜಾ, ... ವಜಾ ಆದವರ ಹಕ್ಕಿನ ರಜಾ ಮತ್ತು ... ಮೆಂಟ್ ನಿಧಿ ಕೊಡದಿರುವುದು, ಕಾರ್ಮಿಕರ ಮೇಲೆ ವ್ಯವಹಾರ ಹೂಡುವುದು, ಮುಂತಾದ ಕ್ರಮಗಳನ್ನು ಜರುಗಿಸಲಾಗುವುದೆಂದು ತಿಳಿಸಲಾಗಿದೆ.

ಕಾರ್ಮಿಕ ಸಂಘದ ಅಧ್ಯಕ್ಷರೂ, ಸರ್ವಾಧಿಕಾರಿಯೂ ಆದ ಶ್ರೀ ಎಸ್. ರೇವಣ್ಣನವರು ಪ್ರಕಟಣೆ ಹೊರಡಿಸಿ ಸತ್ಯಾಗ್ರಹದಲ್ಲಿ ಭಾಗವಹಿಸಿದ ಕೆಲಸಗಾರರಿಗೆ ಭತ್ಯ ಮತ್ತು ಬತ್ತಿಗಳನ್ನು ... ಕೊಡಿಸುವುದಿಲ್ಲವೆಂದು ತಿಳಿಸಿದ್ದಾರೆ ... ಆರ್ಡ್ ಮತ್ತು ಇತರ ಶಾಸನಗಳನ್ನು ... ಆಡಳಿತದವರು ಮುರಿದಿರುವುದಾಗಿ ಆ ... ರ. ಎ. ಎಸ್. ಪಿ. ಮತ್ತು ವಕೀಲರಾದ ... ಬಿ. ಎ. ಎಸ್. ಅರಸ್ಯರು ಕೊಟ್ಟ ನಿಶ್ಚಿತ ಸಲಹೆಯನ್ನು ಆಡಳಿತದವರು ಒಪ್ಪದ ... ದ್ದಾಗಿ ಮುಷ್ಕರವು ಮುಂದುವರಿಯುತ್ತಿರುವುದಾಗಿ ತಿಳಿಸಿ, ಸ್ನೇಹಸೌಹಾರ್ದಗಳ ಮೂಲಕ ... ವು ಸಹಕಾರ ನೀಡಲು ಸಿದ್ಧವಿರುವುದಾಗಿ ... ಅವರು ಹೇಳಿರುತ್ತಾರೆ.

ಕಾರ್ಮಿಕರ ಮೈಸೂರು ಚಲೋ ಜಾಥ

ಕಪಿಲಾ ಹತ್ತಿ ಗಿರಣಿ ಕೆಲಸಗಾರರೆಲ್ಲರೂ ಮೈಸೂರು ಚಲೋ ಜಾಥಾ ಹೊರಡುವರೆಂದು ಗೊತ್ತಾಗಿದೆ. ಅವರ ಮುಷ್ಕರಕ್ಕೆ ಮೈಸೂರಿನ ಕಾರ್ಮಿಕ ಸಂಸ್ಥೆಗಳ ಬೆಂಬಲವನ್ನು ಅಪೇಕ್ಷಿಸಿರುತ್ತಾರೆ.

ಹ. ರಿ ಕ ಥೆ

... ಅಗ್ರಹಾರದಲ್ಲಿರುವ ಸಿ ತ ... ದೇವಸ್ಥಾನದಲ್ಲಿ ಈ ಸಂಜೆ ೬ ಗಂಟೆಗೆ ... ಟಿ. ಕೆ. ವೇಣುಗೋಪಾಲದಾಸರಿಂದ ... ಖ್ಯಾನ ಎಂಬ ಕಥೆಯು ನಡೆಯು...

ನಾಳೆ ಆಯುರ್ವೇದ ವಿದ್ಯಾರ್ಥಿಗಳ ನಿರಶನ ವ್ರತದ ಮುಕ್ತಾಯ

ಮೈಸೂರು ೧೪

ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಮುಷ್ಕರವು ನಿಲ್ಲಬೇಕೆಂದು ಸರ್ಕಾರದವರು ಮಾಡಿರುವ ಮನವಿಯನ್ನು ವಿದ್ಯಾರ್ಥಿ ಸಂಘದವರು ಪರಿಶೀಲಿಸುತ್ತಿರುವರು. ವಿದ್ಯಾರ್ಥಿಗಳ ಬೇಡಿಕೆಗಳಿಗೆಂತಲೂ ಎಷ್ಟೋ ಹಿಂದಿನ ಯೋಜನೆಯನ್ನು ಮಂಜೂರು ಮಾಡಲು ಸರ್ಕಾರದವರು ಹೊಂದಿರುವ ಅಭಿಲಾಷೆಯನ್ನು ಕಂಡು ವಿದ್ಯಾರ್ಥಿಗಳು ನಾಳೆಯಿಂದ ನಿರಶನ ವ್ರತವನ್ನು ಮುಕ್ತಾಯ ಮಾಡಲಿರುವರು. ಬೇಡಿಕೆಗಳ ನಿಜತತ್ವವನ್ನು ಶೀಘ್ರ ರೀತಿಯಲ್ಲಿ ಸರ್ಕಾರದವರು ಪರಿಶೀಲಿಸಲಿರುವ ಬಗ್ಗೆ ವಿದ್ಯಾರ್ಥಿಗಳು ಸಂತೋಷವನ್ನು ವ್ಯಕ್ತಪಡಿಸಿದ್ದಾರೆ.

ನಗರದಲ್ಲಿ ಎನ್. ಜಿ. ಓ. ಗಳ ದಿನಾಚರಣೆ

ನಗರದಲ್ಲಿರುವ ನಾನ್‌ಗೆಜೆಟೆಡ್ ನೌಕರರ ಸಂಘದ ದಿನಾಚರಣೆಯು ನೆನ್ನೆ ನಡೆದು ಮೈಸೂರು ನೌಕರರಿಗೆ ಬೊಂಬಾಯಿ ಪಟ್ಟದ ಸಂಬಳವನ್ನು ಕೊಡಬೇಕೆಂದೂ, ವೈಟೇಜ್ ಮುಂತಾದ ಸೌಕರ್ಯಗಳನ್ನು ಕಲ್ಪಿಸಬೇಕೆಂದೂ ಕೋರುವ ನಿರ್ಣಯವನ್ನು ಅಂಗೀಕರಿಸಲಾಯಿತು. ಕೇಂದ್ರ ನೌಕರರ ಭತ್ಯದ ಮಟ್ಟದಲ್ಲಿ ಇಲ್ಲಿನ ನೌಕರರಿಗೂ ಕೊಡಬೇಕೆಂದೂ ಒತ್ತಾಯಪಡಿಸಲಾಯಿತು. ತಾತ್ಕಾಲಿಕವಾಗಿ ಕಳೆದ ಜನವರಿಯಿಂದ ೫ ರೂ. ನ ಪರಿಹಾರವನ್ನು ಪ್ರತಿ ನೌಕರರಿಗೂ ಕೊಡಬೇಕೆಂದು ಸೂಚಿಸಲಾಯಿತು.

ಜೋರ್ಡಾನ್ ಠಾಣೆ ಮೇಲೆ ಇಸ್ರೇಲಿಗಳ ಧಾಳಿ

ಸಶಸ್ತ್ರ ಜನ ಇಸ್ರೇಲಿಗಳ ಪಡೆಯೊಂದು ವಿಮಾನ, ಫಿರಂಗಿ, ಮತ್ತು ಟ್ಯಾಂಕುಗಳ ಸಹಾಯದೊಡನೆ ಯುದ್ಧ ನಿಲುಗಡೆ ರೇಖೆ ದಾಟಿ ನಾಡಾರ್‌ನ ಪೊಲೀಸು ಠಾಣೆ ಮೇಲೆ ಧಾಳಿ ಮಾಡಿರುವುದಾಗಿಯೂ ಅದಕ್ಕೆ ಪ್ರತಿಯಾಗಿ ಜೋರ್ಡಾನಿನವರು ಗುಂಡು ಹಾರಿಸಿದರೆಂದೂ ವರದಿಯಾಗಿದೆ. ೨೧ ಮಂದಿ ಜೋರ್ಡಾನ್ ಕಾವಲುಗಾರರು ಮೃತಪಟ್ಟಿರುವರು, ಅಥವಾ ಕಾಣೆಯಾಗಿದ್ದಾರೆ. ಯುದ್ಧ ನಿಲುಗಡೆ ರೇಖೆ ಬಳಿ ಪರಿಸ್ಥಿತಿ ಪ್ರಕ್ಷುಬ್ಧವಾಗಿದೆ. ಜೋರ್ಡಾನ್ ರಾಜರು ಕೂಡಲೇ ತುರ್ತಾಗಿ ಮಾತುಕತೆಗಾಗಿ ಕರೆದಿದ್ದಾರೆ.

ಕರ್ನಾಟಕಕ್ಕೆಲ್ಲಾ ಒಂದೇ ಪ್ರದೇಶ ಕಾಂಗ್ರೆಸ್ ಸಮಿತಿ

ದೆಹಲಿಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಧೇಬರರು ಮೈಸೂರು ಮತ್ತು ಕರ್ನಾಟಕ ಪ್ರದೇಶ ಕಾಂಗ್ರೆಸ್ ಅಧ್ಯಕ್ಷರು ಮತ್ತು ಮಂಗಳೂರು ಜಿಲ್ಲಾ ಪ್ರತಿನಿಧಿ ಶ್ರೀ ಶ್ರೀನಿವಾಸಮಲ್ಯರೊಡನೆ ನಡೆಸಿದ ಮಾತುಕತೆ ಪರಿಣಾಮವಾಗಿ ಇಡೀ ಕರ್ನಾಟಕ ಪ್ರಾಂತಕ್ಕೆಲ್ಲಾ ಒಂದೇ ಪ್ರದೇಶ ಕಾಂಗ್ರೆಸ್ ಸಮಿತಿಯು ನವೆಂಬರ್ ೧ ರಿಂದ ಸ್ಥಾಪಿಸಲ್ಪಡುತ್ತದೆ. ಐಕ್ಯಗೊಳ್ಳುವ ಸಮಿತಿಗಳು ಪ್ರಾದೇಶಿಕ ಸಮಿತಿಗಳಾಗಿ ಕೆಲಸ ಮಾಡಲಿವೆ. ಈ ಬಗ್ಗೆ ವಿಧಿವತ್ತಾದ ನಿರ್ಧಾರ ಕೈಗೊಳ್ಳಲು ಬರುವ ತಿಂಗಳು ಮೈಸೂರು, ಬೊಂಬಾಯಿ, ಮದ್ರಾಸು, ಕೊಡಗು ಪ್ರತಿನಿಧಿಗಳ ಸಭೆಯು ನಡೆಯುವುದು.

ಜಬ್ಬಲ್ಪುರ ಗಲಭೆಯಲ್ಲಿ ಇಬ್ಬರ ಮರಣ

೩೦೦ ಜನರ ಬಂಧನ

ಜಬ್ಬಲ್ಪುರದಲ್ಲಿ ಕೋಮುವಾರು ಗಲಭೆಯು ನೆನ್ನೆಯೂ ಆಗಿ ಇಬ್ಬರು ಮಡಿದು ೧೭ ಜನರಿಗೆ ಗಾಯಗಳಾಗಿವೆ. ಪುನಃ ನೆನ್ನೆ ಮಧ್ಯಾಹ್ನ ೨ ರಿಂದ ಇಂದು ಸಂಜೆ ವರೆಗೆ ಕರ್ಫ್ಯೂವನ್ನು ಜಾರಿ ಮಾಡಲಾಯಿತು. ೩೦೦ ಜನರನ್ನು ಬಂಧಿಸಲಾಗಿದೆ. ಪುಂಡರಿಗೂ, ಪೋಲೀಸರಿಗೂ ಚಕಮಕಿ ನಡೆದು ಅದರಿಂದ ಹೊಡೆದಾಟ, ಲೂಟಿ ಮತ್ತು ಬೆಂಕಿ ಪ್ರಕರಣಗಳು ಆದುವು.

ಗಣಪತಿ ಉತ್ಸವ

ಮೈಸೂರು ೧೪

ಸಿ. ಟಿ. ಸಿ. ಮೋಟಾರು ಸರ್ವೀಸಿನವರು ತಮ್ಮ ಆಫೀಸಿನಲ್ಲಿ ಈ ರಾತ್ರಿ ೮ ಗಂಟೆಗೆ ಏರ್ಪಡಿಸಿರುವ ಗಣಪತಿ ಮಂಗಳಾರತಿ ಸಮಾರಂಭದ ಅಧ್ಯಕ್ಷತೆಯನ್ನು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ರಂಗರಾಜುರವರು ವಹಿಸುವರು. ಶ್ರೀ ಕೆ. ಪುಟ್ಟಸ್ವಾಮಿಯವರು ಭಾಷಣ ಮಾಡುವರು.

ಕಬೀರ್ ರಸ್ತೆ ಮಸ್ಜಿದ ವೀರಶೈವ ಸಜ್ಜನ ಸಂಘದವರು ನಾಳೆ ಸಂಜೆ ೬ ಗಂಟೆಗೆ ಗಣೇಶ ಮಹಿಮೆ ವಿಷಯವಾಗಿ ೩ ಕೊಣನೂರು ಸೀತಾರಾಮಶಾಸ್ತ್ರಿಗಳಿಂದ ಕಥಾಕಾಲಕ್ಷೇಪವನ್ನು ಏರ್ಪಡಿಸಿರುವರು.

ಸಂತೆಪೇಟೆ ಕೊಂಟೆಗೆ ಶ್ರೀ ರಾಮ ಮಂದಿರದಲ್ಲಿ ಈ ಸಂಜೆ ೩ ಆರ್. ಜಯಲಕ್ಷ್ಮಮ್ಮನವರ ಸಂಗೀತವನ್ನು ಏರ್ಪಡಿಸಲಾಗಿದೆ. ನಾಳೆ ಸಂಜೆ ಗಣಪತಿ ಉತ್ಸವವು ಬೆಳೆಯುವುದು.

ವಾಣಿವಿಲಾಸ ಮೊಹಲ್ಲಾದ ವಸಂತ ಇನ್‌ಸ್ಟಿಟ್ಯೂಟ್ ಆಫ್ ಕಾಮರ್ಸ್‌ನಲ್ಲಿ ನಾಳೆ ಸಂಜೆ ೫ ಘಂಟೆಗೆ ಶ್ರೀ ಬಿ. ಎಸ್. ಸುಬ್ರಹ್ಮಣ್ಯಂರವರ ಅಧ್ಯಕ್ಷತೆಯಲ್ಲಿ ಉತ್ಸವವನ್ನು ಏರ್ಪಡಿಸಲಾಗಿದೆ.

ಸಂಸ್ಥಾನಕ್ಕೆ ಇನ್ನೆರಡು ಮಲೇರಿಯಾ ನಿರೋಧ ಕೇಂದ್ರ

ದ್ವಿತೀಯ ಯೋಜನೆ ಅಂಗವಾಗಿ ಸಂಸ್ಥಾನದಲ್ಲಿ ೧೦ ಲಕ್ಷ ಜನರಿಗೆ ಒಂದರಂತೆ ಇನ್ನೆರಡು ಮಲೇರಿಯಾ ನಿರೋಧ ಕೇಂದ್ರಗಳನ್ನು ಸ್ಥಾಪಿಸಲಾಗುವುದೆಂದು ಕೇಂದ್ರ ಆರೋಗ್ಯ ಮಂತ್ರಿ ಅಮೃತ ಕೌರ್‌ರವರು ತಿಳಿಸಿದ್ದಾರೆ. ಅವರು ಮೈಸೂರು ಮಾರ್ಗವಾಗಿ ನೀಲಗಿರಿಗೆ ತೆರಳಿದ್ದಾರೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭–೫ ಸಂಗೀತ. ೭–೧೫ ಮತ್ತು ೮–೧೫ ಎಂ. ಶ್ರೀನಿವಾಸಮೂರ್ತಿ—ಸಂಗೀತ. ೭–೩೦ ರಿಕಾರ್ಡ್. ೮–೩೦ ಟಿ. ಎಸ್. ತಾರಾಚಾರ್—ಪಿಟೀಲು. ೯–೩೦ ಬಾಲಜಗತ್ ಮಕ್ಕಳ ೧೨ ಮತ್ತು ೩–೧೫ ಎಸ್. ಬಿ. ಶ್ರೀರಂಗಮ್ಮ—ಸಂಗೀತ. ೧೨–೩೦ ವಾದ್ಯ ವೃಂದ. ೧ ರಿಕಾರ್ಡ್. ೧–೫೦ ಬಿ. ಎಸ್. ರಾಜಯ್ಯಂಗಾರ್ ಮತ್ತು ಬಿ. ಎಸ್. ಚಂದ್ರಶೇಖರ್—ಪಿಟೀಲು ಮತ್ತು ವೀಣೆ. ... ಪಾಶ್ಚಾತ್ಯ ಸಂಗೀತ. ೫–೩೦ ಮತ್ತು ೧೦ ಆರ್. ಕೆ. ನಾರಾಯಣಸ್ವಾಮಿ—ಸಂಗೀತ. ೬–೧೫ ರಿಕಾರ್ಡ್. ೬–೩೦ ಹಕ್ಕಿ ನೋಟ ಆ ಕ ನ್ನ ಡ ನಾ ಟ ಕ ೮–೩೦ ಸಂಗೀತ. ೯–೩೦ ವೀಣೆ ಮತ್ತು ಪಿಟೀಲು.

ಪಶ್ಚಿಮರಾಷ್ಟ್ರಗಳಮೇಲೆ ಭದ್ರತಾ ಸಮಿತಿಗೆ ಈಜಿಪ್ಟ್ ದೂರು

ಸೂಯೆಜ್ ಕಾಲುವೆ ಬಳಕೆಗಾರರ ಸಂಸ್ಥೆ ಬಗ್ಗೆ ಪಶ್ಚಿಮ ರಾಷ್ಟ್ರಗಳ ಕ್ರಮದಿಂದ ಉತ್ಪನ್ನಗೊಂಡಿರುವ ಶಾಂತಿ ಮತ್ತು ಭದ್ರತೆಗೆ ಧಕ್ಕೆ ಬರುವುದೆಂದು ಭದ್ರತಾ ಸಮಿತಿಗೆ ದೂರು ಕೊಡಲು ಈಜಿಪ್ಟ್ ನಿರ್ಧರಿಸಿರುವುದಾಗಿ ಗೊತ್ತಾಗಿದೆ. ಈ ಸಂಸ್ಥೆಯ ಯೋಜನೆಯನ್ನು ಜಾರಿ ಮಾಡುವುದರಿಂದ ಯುದ್ಧಕ್ಕೆ ದಾರಿಯಾಗುವುದೆಂದು ಈಗಾಗಲೇ ಈಜಿಪ್ಟ್ ತಿಳಿಸಿದೆ.

ಈ ಪ್ರಕ್ರಿಯೆಯನ್ನು ಭದ್ರತಾ ಸಮಿತಿಗೆ ಒಯ್ಯುವುದಕ್ಕೆ ಭಾರತ, ರಷ್ಯಾ, ಇಂಡೊನೇಷ್ಯ ಮತ್ತು ಸಿಂಹಳಗಳು ಒಪ್ಪಿರುವುವೆಂದೂ ಹೇಳಲಾಗುತ್ತಿದೆ. ನೆಹರೂ ಮತ್ತು ಸಿಂಹಳದ ಪ್ರಧಾನಿ ಬಂಡಾರ ನಾಯಕೆಯವರು ಸೂಯೆಜ್ ಬಿಕ್ಕಟ್ಟಿನ ಸಂಬಂಧವಾಗಿ ತೀವ್ರದಲ್ಲೇ ಈಜಿಪ್ಟಿಗೆ ಭೇಟಿ ಕೊಡಲಿರುವರೆಂದೂ ಹೇಳಲಾಗಿದೆ.

ಈಜಿಪ್ಟ್ ಮೇಲೆ ಬಲ ಪ್ರಯೋಗಕ್ಕೆ ಮುನ್ನ ವಿಶ್ವಸಂಸ್ಥೆಗೆ ಸೂಚನೆ

ಕಾಮನ್ಸ್ ಸಭೆಯಲ್ಲಿ ಈಡನ್ನರ ಭರವಸೆ

ಸೂಯೆಜ್ ಕಾಲುವೆ ವಿವಾದದಲ್ಲಿ ಬ್ರಿಟನ್ನಿನ ನಿಲುವಿನ ಬಗ್ಗೆ ನೆನ್ನೆ ಪ್ರಧಾನಿ ಈಡನ್ನರಿಗೆ ಲೇಬರ್ ಪಕ್ಷದ ವಿರೋಧ ಪಕ್ಷದ ಸದಸ್ಯರ ಟೀಕೆಗಳ ವಿಶ್ವಾಸ ಸೂಚನೆ ದೊರೆಯಿತು. ಅವರ ನೀತಿಯನ್ನು ಖಂಡಿಸುವ ತಿದ್ದುಪಡಿಯು ೩೨೧–೨೫೧ ಓಟುಗಳಿಂದ ತಿರಸ್ಕೃತವಾಯಿತು. ಈಡನ್ನರು ಮಾತನಾಡಿ ಈಜಿಪ್ಟಿನ ವಿರುದ್ಧವಾಗಿ ಬಲ ಪ್ರಯೋಗ ಮಾಡಬೇಕಾಗಿ ಬಂದಾಗ ವಿಶ್ವಸಂಸ್ಥೆಯೊಡನೆ ಸಮಾಲೋಚಿಸುವುದಾಗಿ ಭರವಸೆಯಿತ್ತರು.

ಡಲ್ಲೆಸ್‌ರವರು ಸೂಯೆಜ್ ಕಾಲುವೆ ಬಳಕೆಗಾರರ ಸಂಸ್ಥೆ ವಿಚಾರವಾಗಿ ಹೇಳಿಕೆಯಿತ್ತು, ಈಜಿಪ್ಟ್ ಅಮೆರಿಕಾ ನೌಕೆಗಳನ್ನು ತಡೆದರೆ ಅಮೆರಿಕ ಬಲ ಪ್ರಯೋಗ ಮಾಡುವುದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.

ಜೂಜಾಟಕ್ಕಾಗಿ ದಂಡ

ಮಂಡಿ ಮೊಹಲ್ಲಾ ಆಜಾದ್ ಕ್ಲಬ್ಬಿನ ವಲ್ಲಿ ಪೀರ್ ಮತ್ತು ಇತರ ಮೂವರು ಜೂಜಾಟ ನಡೆಸಿದರೆಂದು ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ಈ ದಿನ ಆಪಾದಿತರಿಗೆ ಕೋರ್ಟ್ ಏಳುವವರೆಗೆ ಸಜಾ ಮತ್ತು ತಲಾ ೨೫ ರೂ. ದಂಡವನ್ನು ವಿಧಿಸಲಾಗಿದೆ.

ಕೃಷ್ಣರಾಜಮ್ಮಣ್ಣಿ ಕ್ಷಯ ರೋಗದ ಆಸ್ಪತ್ರೆ ವೈದ್ಯರ ವರ್ಗ

ರಾಜಧಾನಿಯಲ್ಲಿರುವ ಕೃಷ್ಣರಾಜಮ್ಮಣ್ಣಿ ಕ್ಷಯ ರೋಗದ ಆಸ್ಪತ್ರೆಯ ಆರ್. ಎಂ. ಓ. ರವರಾದ ಶ್ರೀ ಎ. ಬಿ. ನಾಯ್ಡುರವರನ್ನು ಬೆಂಗಳೂರಿನ ಕ್ಷಯ ರೋಗ ಆಸ್ಪತ್ರೆಗೆ ವರ್ಗಾಯಿಸಲಾಗಿದೆ.

ದೇವೀ ಭಾಗವತ ಪುರಾಣ

ಜಯನಗರದಲ್ಲಿರುವ ಶ್ರೀ ಪೌರಾಣಿಕ ... ಸ್ವಾಮಿಯ ಶ್ರೀಕಂಠಶಾಸ್ತ್ರಿಗಳವರ ಮನೆಯಲ್ಲಿ ... ದಿನ ಪ್ರಯುಕ್ತ ನಾಳೆ ಸಾಯಂಕಾಲ ೬-೩೦ ಘಂಟೆಗೆ ಗಮಕ ಕಲಾ ಅಧ್ಯಾಪಕರುಗಳಾದ ಶ್ರೀ ಟಿ. ಎಸ್. ಎಸ್. ...ರವರಿಂದಲೂ ಮತ್ತು ಶ್ರೀ ಕೃಷ್ಣಗಿರಿ ಕೃಷ್ಣರಾಯರಿಂದಲೂ ಕಾವ್ಯ ವಾಚನವೂ, ವ್ಯಾಖ್ಯಾನವೂ ನಡೆಯಲಿವೆ.

ಗಣಪತಿ ಉತ್ಸವ ಕಾರ್ಯಕ್ರಮ

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ 6 ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆ ವಿದ್ಯಾರ್ಥಿಗಳ ಸಂಘದ ಆಶ್ರಯದಲ್ಲಿ ಎಂ. ಎಸ್. ವೆಂಕಟೇಶ ಶಾಸ್ತ್ರಿಗಳವರಿಂದ ವೇದಾಂತ ಮತ್ತು ಜಗತ್ತಿನ [illegible] ಎಂಬ ವಿಷಯವಾಗಿ ಉಪನ್ಯಾಸವು ಏರ್ಪಾಡಾಗಿದೆ

ಪ್ರಸನ್ನ ಸೀತಾರಾಮ ಮಂದಿರದಲ್ಲಿ ಅಯ್ಯನಾರ್ [illegible] ಬೀದಿಯವರು ನಾಳೆ ಸಂಜೆ 2 ಗಂಟೆಗೆ ಮಂಗಳ [illegible]ವನ್ನು ಏರ್ಪಡಿಸಿರುತ್ತಾರೆ ಸಂಗೀತ [illegible] ಸೌಂದರ್ಯ ಮತ್ತು ಸ್ಪಂದನ ದಿಂದ ಸಂಗೀತವಿದೆ

ಕೊತ್ತಪೇಟೆ ಶ್ರೀ [illegible] ದೇವಾಲಯದಲ್ಲಿ ಈ ರಾತ್ರಿ 7 ಗಂಟೆಗೆ ವಿ॥ ಎಂ. ಕೆ. [illegible]ನವರ ಸಂಗೀತವು [illegible] ವಾದ್ಯಗಳೊಡನೆ ನಡೆಯುವುದು

ನೂರಡಿ ರಸ್ತೆಯ ಬಾಲಕರ ವಿನಾಯಕ ಭಕ್ತ ಮಂಡಲಿಯವರು ಶ್ರೀ [illegible] ರಾಮ [illegible]ಯಲ್ಲಿ ನಾಳೆ ಸಂಜೆ 6 ಗಂಟೆಗೆ ಗಣಪತಿ ಮಹಾ ಮಂಗಳಾರತಿ ಪ್ರಯುಕ್ತ ಶ್ರೀ ರಾಜರಾಜೇಶ್ವರಿ [illegible]ವರಿಂದ ವಾದ್ಯ ಗೋಷ್ಠಿಯನ್ನು ಏರ್ಪಡಿಸಿರುತ್ತಾರೆ.

ಶ್ರೀ ಹನುಮಾನ್ ಸಂಘದಲ್ಲಿ ವಿದ್ಯಾ ಗಣಪತಿಯ ಮಹಾ ಮಂಗಳಾರತಿಯು ನಾಳೆ ಸಂಜೆ [illegible] ಘಂಟೆಗೆ ಶ್ರೀ [illegible] ಗೋಪಾಲಾಚಾರ್ಯರ ಸಮ್ಮುಖದಲ್ಲಿ ನೆರವೇರುವುದು

[illegible] ರಸ್ತೆಯಲ್ಲಿರುವ [illegible] ಸಿದ್ಧಪ್ಪನವರ ವೀರಶೈವ ವಿದ್ಯಾರ್ಥಿನಿಲಯದಲ್ಲಿ ನಾಳೆ ಸಂಜೆ [illegible] ಘಂಟೆಗೆ ಉತ್ಸವವು ರಾ॥ ಎಂ. ಸಿದ್ಧಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆಯುವುದು ಶ್ರೀ ಜೆ. ಎಸ್. [illegible]ನವರು ಭಾಷಣ ಮಾಡುವರು ವಿ॥

ಪ್ರಯಾಣಿಕರ ಮೇಲೆ ಯಾತ್ರಿಕ ತೆರಿಗೆ

ಸಂತೆ, ಜಾತ್ರೆ, ಕ್ಷೇತ್ರ ಪ್ರದೇಶಗಳಿಗೆ ಹೋಗುವ [illegible] ಪ್ರಯಾಣಿಕರ ಮೇಲೆ ತೆರಿಗೆ ವಿಧಿಸುವ ಬಗ್ಗೆ ಮಸೂದೆಯನ್ನು ಲೋಕ ಸಭೆಯಲ್ಲಿ ಮಂಡಿಸಲಾಗಿದೆ. ಇದರ ಪ್ರಕಾರ ಪ್ರಥಮ ದರ್ಜೆ [illegible] ಕಂಡಿಷನ್ಡ್ ಪ್ರಯಾಣಕ್ಕೆ [illegible], ಎರಡನೇ ತರಗತಿಗೆ [illegible] ಮತ್ತು ಮೂರನೇ ತರಗತಿಗೆ [illegible] ತೆರಿಗೆ ಹಾಕಲಾಗುವುದು [illegible] ಮೈಲಿಗಿಂತ ಹೆಚ್ಚಿನ ದೂರದ ಪ್ರಯಾಣಿಕರಿಗೆ ಇದು ಅನ್ವಯಿಸುವುದು

[illegible] ಸ್ವಾಮಯ್ಯನವರ ಸಂಗೀತವು ಏರ್ಪಾಡಾಗಿದೆ

[illegible] ರಸ್ತೆಯ ಶ್ರೀ ಗಣಪತಿ ಸೇವಾ ಸಂಘದವರು ನಾಳೆ [illegible] ಗಂಟೆಗೆ ಗಣಪತಿ ಮಂಗಳಾರತಿ ಅಂಗವಾಗಿ ಶ್ರೀ [illegible] ದೇವಸ್ಥಾನದಲ್ಲಿ ವಿ॥ [illegible] ರಂಗಸ್ವಾಮಿನವರ ಸಂಗೀತವನ್ನು ಏರ್ಪಡಿಸಿರುತ್ತಾರೆ ಗಣಪತಿಗೆ [illegible] ದೀಪಾಲಂಕಾರವನ್ನು ಮಾಡಲಾಗುವುದು

ಶುಚಿ ಮತ್ತು ರುಚಿ!

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್

ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ

ಪ್ರತಿ ಭಾನುವಾರದ

ಸ್ಪೆಷಲ್ ಪ್ರೊಟೀನೊ ಬ್ರೆಡ್

ಶ್ರೀ ಕೃಷ್ಣಾ ಬೇಕರಿ,

[illegible] ರೋಡ್, ಮೈಸೂರು

Edited Printed and Published by A R. Nagaraju at Sadhvi Press [illegible] Road, Mysore

ಮಹಿಳೆಯೊಬ್ಬಳ ಸಹಗಮನ

ರಾಜಸ್ಥಾನದ ಒಂದು ಹಳ್ಳಿಯಲ್ಲಿ [illegible] ವರ್ಷದ ಮಹಿಳೆಯೊಬ್ಬಳು ಕಳೆದ ಬುಧವಾರ ತನ್ನ ಗಂಡನ ಚಿತೆಯೇರಿ ಸಹಗಮನ ಮಾಡಿದಳೆಂದು ವರದಿಯಾಗಿದೆ ಪೋಲೀಸರು ಈ ಸಂಬಂಧದಲ್ಲಿ [illegible] ಜನರನ್ನ ಬಂಧಿಸಿರುತ್ತಾರೆ.

ಉಪನ್ಯಾಸ

ಶಾರದಾವಿಲಾಸ ಲಾ ಕಾಲೇಜಿನ ಪ್ರೊಫೆಸರ್ ಶ್ರೀ ಆರ್. ಗುರುರಾಜರಾವು ನಾಳೆ ಬೆಳಿಗ್ಗೆ [illegible] ಗಂಟೆಗೆ [illegible]ದಲ್ಲಿ 'ನಮ್ಮ ರಾಷ್ಟ್ರೀಯ ಜೀವನದಲ್ಲಿ [illegible]ಗಳ ಪಾತ್ರ' ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಶ್ರೀ ಆರ್. ಸಿ. ಪಾಟೀಲರು ಅಧ್ಯಕ್ಷತೆ ವಹಿಸುವರು.

ಮೈಸೂರು ಪೇಟೆ ಧಾರಣೆ

ಕಡಲೆಕಾಯಿ	[illegible]	[illegible]
ಭತ್ತ ಬಂಗಾರ ಸಣ್ಣ		
[illegible]	[illegible]	[illegible]
ರತ್ನಚೂಡಿ ಮತ್ತು		
ಸೇಲಂ ಸಣ್ಣ	[illegible]	[illegible]
ಅಕ್ಕಿ	[illegible]	[illegible]
ಜೋಳ	[illegible]	[illegible]
ರಾಗಿ	[illegible]	[illegible]
ತೊಗರಿ	[illegible]	[illegible]
ನವಣೆ	[illegible]	
ಹುಚ್ಚೆಳ್ಳು ಬೀಜ	[illegible]	
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹೆಸರು	[illegible]	[illegible]
ಕಡಲೆಬೇಳೆ	[illegible]	[illegible]
ಉದ್ದು	[illegible]	
ಧನಿಯಾ	[illegible]	[illegible]
ಮೆಣಸಿನಕಾಯಿ	[illegible]	
ಬೆಲ್ಲ	[illegible]	
ತೆಂಗಿನಕಾಯಿ 1000	[illegible]	[illegible]

ಉತ್ತಮವಾದ ಕಟ್ಟಡದ ಪ್ಲಾನುಗಳು ಮತ್ತು ಬ್ಲೂಪ್ರಿಂಟ್ ಮಾಡಿಕೊಡುವುದಕ್ಕೆ ಗಾಯತ್ರಿ ಟಾಕೀಸ್ ಎದುರು ಹ್ಯಾಟ್ ಅಂಗಡಿಯಲ್ಲಿ

ಪಿ. ಮುನಿಸ್ವಾಮಪ್ಪ,

ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್,

ಇವರಲ್ಲಿ ವಿಚಾರಿಸಿ

ಮಹಾರಾಜಾ ಕಾಲೇಜು ಕನ್ನಡ ಸಂಘದ ಆರಂಭ ಭಾಷಣ

ಮಹಾರಾಜಾ ಕಾಲೇಜು ಕನ್ನಡ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ [illegible] ಗಂಟೆಗೆ [illegible] ವಿಶ್ವವಿದ್ಯಾನಿಲಯದ ಕನ್ನಡ ಪ್ರಾಧ್ಯಾಪಕರಾದ ಶ್ರೀ ತೀ. ನಂ. ಶ್ರೀಕಂಠಯ್ಯನವರು ಮಾಡಲಿರುವರು ನಿವೃತ್ತ ಕನ್ನಡ ಪ್ರಾಧ್ಯಾಪಕರಾದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಗಳವರು ಅಧ್ಯಕ್ಷತೆ ವಹಿಸುವರು.

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತರಾಗಿರುವ

ನವರತ್ನ—ಕಲ್ಪ

ದಿವ್ಯೌಷಧವನ್ನು ಕಂಡುಹಿಡಿದಿರುವ,

ಕವಿರಾಜ ಪಂಡಿತ

ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು

ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು ಫೋನ್ ನಂ 590

—ಭೇಟಿಯ ಕಾಲ—

ಬೆಳಿಗ್ಗೆ 7 30 ರಿಂದ 12 30 ಮತ್ತು

ಮಧ್ಯಾಹ್ನ 4 ರಿಂದ 7 30

ಮೇಲಿನ ಕಾರ್ಯಕ್ರಮವನ್ನು ಗಮನಿಸಿ ಮತ್ತು ಅವರ ಪರಿಣತ ವೈದ್ಯಕೀಯ ಸಲಹೆಯನ್ನು ಪಡೆಯಿರಿ

ಅವರು [illegible] ಸರಿಯಾಗಿ [illegible] ವಿಮಾನದಲ್ಲಿ ಸಂಚರಿಸುವರು

ನವರತ್ನ—ಕಲ್ಪ

ಉಪಯೋಗಗಳು

[illegible], [illegible] ಮತ್ತು, [illegible], [illegible] ಗೋಮೇಧಿಕ, ನೀಲ, ಪದ್ಮರಾಗಿನ ಮತ್ತು [illegible] ಕೂಡಿ ಮಾಡಿದ 9 ಅಮೂಲ್ಯ ರತ್ನಗಳ [illegible] ಯೋಗ ನಿಮ್ಮ ಎಲ್ಲಾ ಸಾಮಾನ್ಯ ಹಾಗೂ [illegible] ವಾದ ವ್ಯಾಧಿಗಳಿಗೂ ಅತ್ಯುತ್ತಮ [illegible] ದಾಯಕವಾದ ಔಷಧಿ ಇದೊಂದೇ.

NAVARATNA KALPA PHARMACY,

JULLUNDUR CITY (India)

ಇಂದ್ರ ಕೆಫೆ

ಸಯ್ಯಾಜಿರಾವ್ ರಸ್ತೆ, ಮೈಸೂರು.

ಸುಸಜ್ಜಿತವಾದ ಭವ್ಯ ನೂತನ ಫಲಾಹಾರ ಮಂದಿರ

6—9—56ನೇ ಗುರುವಾರ ತೆರೆಯಲಾಗಿದೆ

ಸ್ತ್ರೀಯರಿಗೂ, ಸಂಸಾರಗಳಿಗೂ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ

ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

GOVERNMENT OF MYSORE

Office of the Secretary, Dasara Exhibition Committee.
Mysore, Dated 13 9-1956

TENDER NOTICE

Sealed tenders will be received by the Secretary, Dasara Exhibition Committee, Mysore at the office of the Exhibition on or before **24th September, 1956 at 4 p m** in respect of the following. Each tender should be accompanied by a tender deposit in cash, noted against each item

Sl No.	Particulars	Earnest Deposit in cash
1.	Running Merry-go-round	Rs. 100
2.	,, Cycle stand	100
3.	,, Restaurant and Hotel in the extended area	100
4.	Supplying on hire washington or petromax lights with stands	50
5	Neon sign publicity within the Exhibition grounds	100
	STALLS	
6	Stall No B-17 for Textiles	100
7	Stall No. C-37 for Textiles	100
8	Stall No D-1, D 2, D-33-Jewellery (Real or artificial or metalware)	100 for each stall
9.	Stall No. E-29 for Biscuits or Confectionery	100
10	Stall No. L1-for Biscuits or Confectionery	100
11	Stall No M-1 for food products	100

Further particulars can be had from the undersigned Separate agreements on stamp paper will have to be given for each item by the successful tenderer.

V. S. KRISHNA IYER,
General Secretary, Exhibition Committee

ನ್ಯೂ ಶ್ರೀ ಚಾಮುಂಡೇಶ್ವರಿ ಕೆಫೆ

ಫೋನ್ ನಂ. 541 :: [illegible] ರಸ್ತೆ :: ಮೈಸೂರು

16—9—1956ನೇ ಭಾನುವಾರದಿಂದ

ನಮ್ಮ ಫಲಾಹಾರ ಮಂದಿರವು

ಪ್ರಾರಂಭಿಸಲ್ಪಡುವುದು

— ಫಲಾಹಾರದ ವ್ಯವಸ್ಥೆಯ ಕಾಲ —

ಬೆಳಿಗ್ಗೆ 6 ರಿಂದ 10ರ ವರೆಗೆ ಮತ್ತು ಮಧ್ಯಾಹ್ನ 3 30 ರಿಂದ 7 30ರ ವರೆಗೆ ಮಾತ್ರ

— ಊಟದ ವ್ಯವಸ್ಥೆ ಕಾಲ —

ಬೆಳಿಗ್ಗೆ 10 ರಿಂದ ಮಧ್ಯಾಹ್ನ 3 ಮತ್ತು ರಾತ್ರಿ 7 ರಿಂದ 10 30ರ ವರೆಗೆ

ಶುಚಿರುಚಿಯಾದ ತಯಾರಿಕೆ! ಒಮ್ಮೆ ಭೇಟಿ ಕೊಟ್ಟು ಸಂತೃಪ್ತಿ ಹೊಂದಿರಿ!!

[illegible] ಚಂದ್ರಯ್ಯ, ಪ್ರೊಪ್ರೈಟರ್

ಹರಾಜು ನೋಟೀಸು

ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಅವುಗಳ ಮುಂದೆ ನಮೂದಿಸಿರುವ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾರಾಟ ಮಾಡಲಾಗುತ್ತದೆ.

1 ಸುಮಾರು 50 ಟನ್ ಮಿಶ್ರವಾದ ತೇಗದ ಮರ ಮತ್ತು [illegible] ಮರದ [illegible]ಗಳನ್ನೂ 2 ಸುಮಾರು 30 ಟನ್ ಮಿಶ್ರವಾದ [illegible] ಮತ್ತು [illegible]ಗಳನ್ನೂ	20—9—56 ನೇ ಗುರುವಾರ [illegible] 10 ಘಂಟೆಗೆ ಮೈಸೂರು [illegible] ವರ್ಕ್‌ಶಾಪ್ ಆವರಣ[illegible]
3. ಸುಮಾರು 23 ಟನ್ [illegible] ಮರದ [illegible] ಮತ್ತು ಹಲಗೆಗಳನ್ನೂ	20.9.56ನೇ ಗುರುವಾರ ಬೆಳಗ್ಗೆ [illegible]ಟೆಗೆ ಮೈಸೂರು [illegible] ಸೆಂಟ್ರಲ್ ಸ್ಟೋರ್ಸ್ ಆವರಣ[illegible]

ಈ ಮಾರಾಟಕ್ಕೆ ಅನ್ವಯಿಸುವ ನಿಬಂಧನೆಗಳ ನಮೂನೆಯನ್ನು ಕೆಳಗೆ ನಮೂದಿ[illegible] ಆಫೀಸಿನಲ್ಲಿ ಪಡೆಯಬಹುದು

ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಸ್ಟೋ[illegible]

[illegible] ರೈಲ್ವೆ, ಮೈಸೂರು [illegible]

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ ೬ ಕಾಸು

ಚಂದಾ ದರ
ಏಜೆಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : SUNDAY 16—9—1956 ಮೈಸೂರು : ಭಾನುವಾರ ೧೬—೯—೧೯೫೬ [ಸಂಚಿಕೆ : ೭೩

ದಾತಾರರಿಗೆ ಹೊಸ ಮೈಸೂರು ಮುಖ್ಯಮಂತ್ರಿತ್ವವೇ

ಮೋಕ್ಷಗುಂಡಂ ವಿಶ್ವೇಶ್ವರಯ್ಯನವರಿಗೆ ೯೬ ವರ್ಷ ತುಂಬಿತು

ಅಖಿಲ ಭಾರತ ತಯಾರಕರ ಸಂಘದವರ ಅಭಿನಂದನೆ

ಬೆಂಗಳೂರು ೧೫

ನಿನ್ನೆ ೯೬ ವರ್ಷ ವಯಸ್ಸು ತುಂಬಿದ ಡಾ|| ಮೋಕ್ಷಗುಂಡಂ ವಿಶ್ವೇಶ್ವರಯ್ಯನವರನ್ನು ಇಲ್ಲಿ ಆರಂಭವಾದ ಅಖಿಲ ಭಾರತ ತಯಾರಕರ ಸಂಘದ ಕೇಂದ್ರ ಸಮಿತಿಯ ಸಭೆಯಲ್ಲಿ ಅಭಿನಂದಿಸಲಾಯಿತು. ಸಭೆಯ ಆರಂಭೋತ್ಸವವನ್ನು ನೆರವೇರಿಸಿದ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ವಿಶ್ವೇಶ್ವರಯ್ಯನವರನ್ನು ಅಭಿನಂದಿಸುತ್ತಾ, ಅವರು ವೀರ ಇಂಜನಿಯರ್ ಮತ್ತು ರಾಜಕಾರಣಿಯೆಂದು ನುಡಿದರು.

ಡಾ|| ವಿಶ್ವೇಶ್ವರಯ್ಯನವರು ತಮ್ಮ ಭಾಷಣದಲ್ಲಿ ವಿದ್ಯಾಭ್ಯಾಸದ ಬಗ್ಗೆ ಅಲಕ್ಷ್ಯ ಮತ್ತು ಸರ್ಕಾರಿಗಳ ನಿಯಂತ್ರಣ ಹತ್ತುಗಳು ಇದಬಾರದು. ತಾವು ೪೦ ವರ್ಷಗಳ ಹಿಂದೆ ಹೇಳಿದ್ದನ್ನು ಈಗಲೂ ಹೇಳಬೇಕಾಗಿದೆಯೆಂದು ತಿಳಿಸಿ, ಸದ್ಯದ ಉತ್ಪನ್ನ ಕೈಗಾರಿಕೆಗಳನ್ನು ಭಾರತೀಯರೇ ಹೆಚ್ಚು ಹೆಚ್ಚಾಗಿ ನಡೆಸಲು ಅವಕಾಶವಿರಬೇಕೆಂದು ಅವರು ಸೂಚಿಸಿದರು.

[illegible]ಲವು ಅಭಿವೃದ್ಧಿ ಹೊಂದಿದ ಜಿಲ್ಲೆಗಳನ್ನು ಮೈಸೂರಿಗೆ ಸೇರಿಸಲಾಗಿರುವುದೆಂದೂ, ಸಂಸ್ಥಾನದ ಆರ್ಥಿಕದ ಮಟ್ಟವು ಉತ್ತಮವಾಗಿವೆಂ[illegible] ಮುಂದುಳಿದ ಜಿಲ್ಲೆಗಳ ಮುಖಂಡರು ಮಂತ್ರಿ[illegible]ವರಿ ಅವಕಾಶವು ದೊರಬೇಕೆಂದೂ ನುಡಿ[illegible]

[illegible]ಯಮತ್ತೂರಿನ ಪ್ರಖ್ಯಾತ ಕೈಗಾರಿಕೋ[illegible] ಜಿ. ಡಿ. ನಾಯ್ಡುರವರು ನೆನ್ನೆ ವಿಶ್ವೇಶ್ವರಯ್ಯನವರಿಗೆ ಒಂದು ರೇಡಿಯೊ ಸೆಟ್ಟನ್ನು ಕೊ[illegible] ಅವರ ವರ್ಧಂತಿಗಾಗಿ ಅಭಿನಂದಿಸಿದರು. ವಿಶ್ವೇಶ್ವರಯ್ಯನವರು ಇಲ್ಲಿನ ಅಭಯಾ[illegible] ಒಪ್ಪಿಸಿದರು.

[illegible]ಯೆಜ್ ಬಗ್ಗೆ ಲಂಡನ್ನಿನಲ್ಲಿ ರಾಷ್ಟ್ರಗಳ ಸಮ್ಮೇಳನ

[illegible]ರತಕ್ಕೆ ಆಹ್ವಾನವಿಲ್ಲ; ಅಮೇರಿಕಾ ಭಾಗವಹಿಸುವುದು

[illegible]ಯೆಜ್ ಕಾಲುವೆ ವಿವಾದದ ಬಗ್ಗೆ ಪರಿ[illegible]ಶೀಲಿಸಲು ಲಂಡನ್ನಿನಲ್ಲಿ ಬರುವ ಬುಧ[illegible] ರಾಷ್ಟ್ರಗಳ ಸಮ್ಮೇಳನವು ಸೇರುವುದು[illegible]ದ ವಿದೇಶಾಂಗ ಮಂತ್ರಿ ಡಲೆಸ್‌ರವರು [illegible]ಸುವರು. ಭಾರತ, ರಷ್ಯಾ, ಇಂಡೊನೇಷ್ಯ ಸಿಂಹಳಗಳಿಗೆ ಆಹ್ವಾನವನ್ನಿತ್ತಿಲ್ಲ [illegible]ಷ್ಟ್ರಗಳ ಸಮ್ಮೇಳನದಿಂದ ಈಚೆಗೆ ಅದ[illegible]ಗಳನ್ನು ಈ ಸಮ್ಮೇಳನದಲ್ಲಿ ಪರಿಶೀಲಿಸ[illegible]ದು.

[illegible]ಯೆಜ್ ಪ್ರಶ್ನೆಯು ಕಳವಳಕರ ಘಟ್ಟದ[illegible]ರಿಂದ ಕೊಲಂಬೊ ರಾಷ್ಟ್ರಗಳು ಪರಸ್ಪರ [illegible]ಂಪರ್ಕ ಹೊಂದಿರಬೇಕೆಂದು ನೆಹರೂ[illegible] [illegible]ರ್, ಇಂಡೊನೇಷ್ಯ, ಸಿಂಹಳ ಮತ್ತು [illegible]ವರ ಪ್ರತಿನಿಧಿಗಳಿಗೆ ತಿಳಿಸಿರುವುದಾಗಿ [illegible]ದೆ.

ಸೂಯೆಜ್ ಕಾಲುವೆಯ ವಿದೇಶೀ ಚಾಲಕರ ನಿರ್ಗಮನ

ಬ್ರಿಟಿಷ್ ವಿದೇಶಾಂಗ ಮಂತ್ರಿಯ ಪ್ರೇರೇಪಣೆಗಾಗಿ ನಾಸೆರರ ಖಂಡನೆ

ಸೂಯೆಜ್ ಕಾಲುವೆಯ ವಿದೇಶೀ ಚಾಲಕರು ಕಾರ್ಯಾನೂಹಿಕವಾಗಿ ಕೆಲಸ ಬಿಟ್ಟುಬಿಡಲು ಬ್ರಿಟನ್ನಿನ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡ್‌ರು ಪ್ರೇರೇಪಿಸುತ್ತಿರುವರೆಂದು ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರು ಆಪಾದಿಸುತ್ತಾರೆ. ಇದಕ್ಕೆ ವಿಪರೀತ ಕಾಲುವೆ ಕಂಪೆನಿಯ ಅಧಿಕಾರಿ ವರ್ಗ ಸಿಕ್ಕೊಡನೆ ಪಿತೂರಿ ನಡೆಸಿ ವ್ಯವಸ್ಥೆಯಾಗಿರುವುದೆಂದು ಅವರು ತಿಳಿಸಿ, ಈಜಿಪ್ಟ್ ಜನರು ಬಹಿರಂಗ ಮಾರ್ಗವನ್ನು ಒಟ್ಟಿಗೆ ಗದಿಂದ ವಿರೋಧಿಸುವರೆಂದೂ, ಅವರ ಇಚ್ಛೆಗೆ ವಿರುದ್ಧವಾಗಿ ಬರುವ ವಿದೇಶೀ ಸೈನ್ಯವನ್ನು ಜೀವ ಸಹಿತ ಹಿಂದಿರುಗಲು ಬಿಡಲಾರೆವೆಂದೂ ಹೇಳಿದರು. 'ನಾವು ಸ್ವತಂತ್ರ ಯುದ್ಧ ಮತ್ತು ಗೆರಿಲ್ಲಾ ಕದನಗಳನ್ನು ಮಾಡುವೆವು'—ಎಂದು ಅವರು ಹೇಳಿ, ಬ್ರಿಟನ್ ಮತ್ತು ಫ್ರಾನ್ಸುಗಳು ಶಕ್ತಿಗಳನ್ನು ಪ್ರದರ್ಶಿಸುತ್ತಿರುವವರೆಗೂ, ಈಜಿಪ್ಟಿನವರು ತಮ್ಮ ಸ್ವಾತಂತ್ರ್ಯಾಧಿಕಾರವನ್ನು ಎಂದೇ ಆದರೂ ರಕ್ಷಿಸಿಕೊಳ್ಳಲಿಚ್ಛಿಸುವರೆಂದೂ ನುಡಿದರು.

ಕಾಲುವೆಯ ವಿದೇಶೀ ಚಾಲಕರಿಗೆ ವಿಶಿಷ್ಟ ಸಂಪನಿಯವರು ಭಾರವೊತ್ತದ ಹಣ ಕೊಟ್ಟು ಅವರನ್ನು ಕೆಲಸದಿಂದ ಬಿಡಿಸುತ್ತಿರುವರೆಂದು ಹೇಳಲಾಗಿದೆ.

ಬರುವ ತಿಂಗಳು ರಷ್ಯಕ್ಕೆ ಕೆ. ಸಿ. ರೆಡ್ಡಿ ಭೇಟಿ

ಕೇಂದ್ರ ಉತ್ಪಾದನಾ ಮಂತ್ರಿ ಕೆ. ಸಿ. ರೆಡ್ಡಿಯವರು ಬರುವ ತಿಂಗಳು ರಷ್ಯಕ್ಕೆ, ಅಲ್ಲಿನ ಸರ್ಕಾರದ ಆಹ್ವಾನದ ಮೇರೆ ಹೋಗುವರು. ಭಾರತದಲ್ಲಿ ಕಬ್ಬಿಣ ಉತ್ಪಾದನೆ ವಿಷಯವಾಗಿ ಅವರು ಅಧಿಕಾರಿಗಳೊಡನೆ ಸಂಭಾಷಣೆ ನಡೆಸುವರು.

ದೊಣ್ಣೆಯಿಂದ ಹೊಡೆದು ಗಾಯ ಪಡಿಸಿದ್ದಕ್ಕಾಗಿ ಶಿಕ್ಷೆ

ಮೈಸೂರು ತಾಲ್ಲೂಕು ಹಂಚ್ಯ ಗ್ರಾಮದ ದೊಡ್ಡಸಿದ್ದ ಎಂಬುವನನ್ನು ಅದೇ ಊರಿನ ಅಲನಹಳ್ಳಿ ಸಿದ್ದನ ಮಗ ಸಿದ್ದ್ಯಾರಿ ಎಂಬುವನು ಕಳೆದ ಡಿಸೆಂಬರ್ ೧೪ ರಂದು ದೊಣ್ಣೆಯಿಂದ ಹೊಡೆದು ಗಾಯಗೊಳಿಸಿದನೆಂದು ತಾಲ್ಲೂಕು ಪೋಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರ ನ್ಯಾಯಾಧೀಶರು ಅಪಾದಿತನಿಗೆ ೧೪ ದಿನ ಸಜಾ ಮತ್ತು ೧೦ ರೂ ಜುಲ್ಮಾನೆ, ತಪ್ಪಿದರೆ ೫ ದಿನ ಸಜಾವನ್ನು ವಿಧಿಸಿದರು.

ರಸ್ತೆ ಸಂಚಾರಕ್ಕಾಗಿ ಸಂಸ್ಥೆಯ ವ್ಯವಸ್ಥೆ

ಸರ್ಕಾರದ ರಸ್ತೆ ಸಂಚಾರ ಇಲಾಖೆಯನ್ನು ವಹಿಸಿಕೊಂಡು ಕೆಲಸ ಮಾಡುವ ಬಗ್ಗೆ ಸಂಸ್ಥೆಯೊಂದನ್ನು ನೇಮಿಸುವ ವಿಷಯವನ್ನು ಸರ್ಕಾರದವರು ಪರ್ಯಾಲೋಚಿಸುತ್ತಿರುವುದಾಗಿ ಗೃಹ ಮಂತ್ರಿ ಶ್ರೀ ಹೆಚ್. ಸಿದ್ದವೀರಪ್ಪನವರು ತಿಳಿಸಿರುತ್ತಾರೆ.

ನೂತನ ಮೈಸೂರಿಗೆ ದಾತಾರ್ ಮುಖ್ಯ ಮಂತ್ರಿಗಳು ?

ಸದ್ಯದಲ್ಲೇ ಸ್ಥಾಪಿತವಾಗಲಿರುವ ನೂತನ ಮೈಸೂರು ಸಂಸ್ಥಾನಕ್ಕೆ ಕೇಂದ್ರ ಗೃಹ ಇಲಾಖಾ ಮಂತ್ರಿ ಬಿ. ಎನ್. ದಾತಾರ್‌ರವರು ಮುಖ್ಯ ಮಂತ್ರಿಗಳಾಗಬಹುದೆಂದೂ, ಮುಖ್ಯ ಮಂತ್ರಿತ್ವದ ವಿಷಯವಾಗಿ ಮೈಸೂರು ಮತ್ತು ಕರ್ನಾಟಕ ಮುಖಂಡರುಗಳು ಕಾಂಗ್ರೆಸ್ ಹೈಕಮಾಂಡಿನೊಡನೆ ಚರ್ಚೆ ನಡೆಸಿರುವುದಾಗಿಯೂ ವರದಿಯಾಗಿದೆ.

ಈಜಿಪ್ಟಿಗೆ ರಷ್ಯ ಮತ್ತು ಜರ್ಮನಿಗಳಿಂದ ಚಾಲಕರು

ಸೂಯೆಜ್ ಕಾಲುವೆಯ ಕೆಲಸವನ್ನು ನಿರ್ವಹಿಸಲು ರಷ್ಯದ ೧೫ ಜನ ಚಾಲಕರ ಪ್ರಥಮ ತಂಡವು ನೆನ್ನೆ ಕೈರೋವಿಗೆ ಆಗಮಿಸಿತು. ಇನ್ನೂ ೨೦ ಮಂದಿ ಚಾಲಕರು ಬರಲು ಒಪ್ಪಿರುವುದಾಗಿ ತಿಳಿದು ಬಂದಿದೆ. ಜರ್ಮನಿಯಿಂದಲೂ ಇಲ್ಲಿಗೆ ಚಾಲಕರು ಬಂದಿರುವರೆಂದು ಗೊತ್ತಾಗಿದೆ.

ವಿಮಾ ಏಜೆಂಟರ ಸಂಘದ ಸ್ಥಾಪನೆ

ಜೀವ ವಿಮಾ ಸಂಸ್ಥೆ ಏಜೆಂಟರು ಹಿಂದೂಸ್ಥಾನ್ ಬ್ಯಾಂಕ್ ಆವರಣದಲ್ಲಿ ಶ್ರೀ ಎಸ್. ಶೇಷನಾರಾಯಣರ ಅಧ್ಯಕ್ಷತೆಯಲ್ಲಿ ನೆನ್ನೆ ಸಭೆ ಸೇರಿ, ತಮ್ಮ ಸಂಘದ ಶಾಖೆಯನ್ನು ಸ್ಥಾಪಿಸಿದರು. ಶ್ರೀಗಳಾದ ಡಿ. ವಿ. ಆರ್. ಆಚಾರ್ಯರು, ಎಂ. ಹೆಚ್. ಕೃಷ್ಣಮೂರ್ತಿ, ಎಂ. ಸಿ. ಕುಮಾರ್, ಕೆ. ಎಸ್. ರಂಜಣ್ಣ ಮುಂತಾದವರು ಮಾತನಾಡಿ ಸದ್ಯದ ಪರಿಸ್ಥಿತಿಯಲ್ಲಿ ಏಜೆಂಟರ ಸಂಘಟನೆ ಅತ್ಯಗತ್ಯವೆಂದೂ, ರಾಷ್ಟ್ರೀಕೃತ ಉದ್ಯಮದಲ್ಲಿ ಏಜೆಂಟರ ಸ್ಥಾನಮಾನವನ್ನು ಅಧಿಕಾರಿಗಳು ಕಡೆಗಣಿಸಲಾಗದೆಂದೂ ತಿಳಿಸಿದರು. ಜೀವ ವಿಮಾ ಕಾರ್ಪೊರೇಷನ್ ಏಜೆಂಟರ ಮೈಸೂರು ಶಾಖೆಯನ್ನು ಆರಂಭಿಸುತ್ತಾ, ಈ ಸಂಘದ ಸದಸ್ಯರ ಸಂಖ್ಯೆ ಹೆಚ್ಚಬೇಕೆಂದು ಅಧ್ಯಕ್ಷರು ತಿಳಿಸಿದರು.

ಮೈಸೂರು ಬ್ಯಾಂಕ್ ಮ್ಯಾನೇಜರುಗಳಿಗೆ ಸತ್ಕಾರ

ನಗರದಲ್ಲಿರುವ ಮೈಸೂರು ಬ್ಯಾಂಕಿನ ನಿವೃತ್ತ ಮ್ಯಾನೇಜರ್ ಶ್ರೀ ಎಸ್. ಪಿ. ವೀರಭದ್ರಶೆಟ್ಟಿ ಮತ್ತು ಈಗಿನ ಮ್ಯಾನೇಜರ್ ಶ್ರೀ ಶಂಕರ ಜಾವಳಿಯವರ ಗೌರವಾರ್ಥವಾಗಿ ಇಲ್ಲಿನ ಸ್ಟೀಲ್ಸ್ ಇಂಜನಿಯರಿಂಗ್ ಕಂಪೆನಿಯ ಶ್ರೀ ಎಸ್. ರಾಮಯ್ಯರು ಕಳೆದ ಗುರುವಾರವೂ ಮತ್ತು ಸುಪ್ರಸಿದ್ಧ ವರ್ತಕರಾದ ಧರ್ಮರತ್ನಾಕರ ಕೆ. ನಂದಿಬಸಪ್ಪನವರು ನೆನ್ನೆಯೂ ಸತ್ಕಾರಕೂಟಗಳನ್ನು ಏರ್ಪಡಿಸಿದ್ದರು.

ಅಧಿಕಾರಿಗಳೊಡನೆ ಆಯುರ್ವೇದ ವಿದ್ಯಾರ್ಥಿಗಳ ನೇರ ಸಂಧಾನ

ಇಲ್ಲಿನ ಆಯುರ್ವೇದ ವಿದ್ಯಾರ್ಥಿಗಳು ಹಂಗಾಮಿಯಾಗಿ ನಿರಶನ ವ್ರತವನ್ನು ನಿಲ್ಲಿಸಿರುತ್ತಾರೆ. ಅವರು ಸರ್ಕಾರದೊಡನೆಯೂ, ಅಧಿಕಾರಿಗಳೊಡನೆಯೂ ಹಲವು ವಿಚಾರಗಳ ಬಗ್ಗೆ ಅನುಮಾನ ಪರಿಹಾರಕ್ಕಾಗಿ ನೇರ ಸಂಧಾನ ನಡೆಸಲಿರುವರು. ಅಲ್ಲಿಯವರೆಗೆ ತರಗತಿಗಳಿಗೆ ಹಿಂದಿರುಗುವ ಅಂಶವನ್ನು ಮುಂದೂಡಲಾಗಿದೆ.

ವಿಶ್ವವಿದ್ಯಾಲಯವು ಅನ್ನ ಸತ್ರವಾಗದೆ ಜ್ಞಾನ ಕ್ಷೇತ್ರವಾಗಬೇಕು

ಅಭಿನಂದನ ಗ್ರಂಥ ಸಮರ್ಪಣ ಸಮಾರಂಭದಲ್ಲಿ ಕೃಷ್ಣಶಾಸ್ತ್ರಿಯವರ ಭಾಷಣ

ಮೈಸೂರು ೧೫

ಕನ್ನಡ ಸಾಹಿತಿಗಳೂ, ಹಾಸ್ಯ ಕರ್ತೃಗಳೂ ಆದ ಶ್ರೀ ಎ. ಆರ್. ಕೃಷ್ಣಶಾಸ್ತ್ರಿಯವರಿಗೆ ಈ ದಿನ 'ಅಭಿನಂದನೆ' ಎಂಬ ಪ್ರಬಂಧ ಗ್ರಂಥವನ್ನು ಕ್ರಾಫರ್ಡ್ ಭವನದಲ್ಲಿ ಅರ್ಪಿಸಲಾಯಿತು. ಈ ಸಮಾರಂಭದ ಅಧ್ಯಕ್ಷತೆಯನ್ನು ವಿಶ್ವವಿದ್ಯಾಲಯದ ಉಪ ಸ್ವಾನಪತಿ ಡಾ|| ಕೆ. ವಿ. ಪುಟ್ಟಪ್ಪನವರು ವಹಿಸಿದ್ದರು.

ಶ್ರೀ ಟಿ. ಎಸ್. ಗೋಪಾಲರವರಿಂದ ದೇವತಾ ಪ್ರಾರ್ಥನೆ ಮತ್ತು ಶ್ರೀ ಜಿ. ಹನುಮಂತರಾಯರಿಂದ ಸ್ವಾಗತ ಭಾಷಣವಾದನಂತರ ಅಧ್ಯಕ್ಷರು ಕೃಷ್ಣಶಾಸ್ತ್ರಿಗಳಿಗೆ ಗ್ರಂಥವನ್ನು ಸಮರ್ಪಿಸಿದರು.

ಶ್ರೀ ಶಾಸ್ತ್ರಿಗಳು ಭಾಷಣ ಮಾಡಿ, ತಮಗಿತ್ತ ಗೌರವಕ್ಕೆ ವಂದಿಸಿದರು. ಈ ಗೌರವವು ದಿವಂಗತ ಶ್ರೀ ಬಿ. ಎಂ. ಶ್ರೀಕಂಠಯ್ಯನವರ ಆಶೀರ್ವಾದ ಫಲವೆಂದು ಹೇಳಿದರು. ಕನ್ನಡದ ಏಳಿಗೆಗಾಗಿ ಹಿಂದೆ ಸರ್ಕಾರದಿಂದ ಯಾವ ಸಹಾಯವೂ ದೊರೆಯಲಿಲ್ಲವೆಂದು ವಿಷಾದಿಸಿ ಕನ್ನಡ ವಿಭಾಗದ ಖರ್ಚಿಗಾಗಿ ೫೦ ಅಥವಾ ೧೦೦ ರೂ. ಗಳು ದೊರೆಯುತ್ತಿದ್ದ ಅಂಶವನ್ನು ಉದಹರಿಸಿದರು. ಲೋಕದಲ್ಲಿ ಇಂದೂ ವಿಶ್ವವಿದ್ಯಾಲಯ ಸಂಸ್ಥೆಗಳಲ್ಲಿ ಸೌಲಭ್ಯಗಳು ಸಾಲವೆಂದೂ, ವಿಶ್ವವಿದ್ಯಾಲಯವು ಅನ್ನ ಸತ್ರವಾಗದೆ ಜ್ಞಾನ ಕ್ಷೇತ್ರವಾಗಬೇಕೆಂದೂ ಆಶಿಸಿದರು.

ಶ್ರೀ ಕುವೆಂಪುರವರು ಭಾಷಣ ಮಾಡಿ, ಶ್ರೀ ಕೃಷ್ಣಶಾಸ್ತ್ರಿಗಳು ಹೇಳಿದ ರೀತಿಯ ಪರಿಸ್ಥಿತಿ ಈಗ ಮುಗಿದುಹೋಯಿತೆಂದೂ, ಇನ್ನು ಮುಂದೆ ಅದು ಮರುಕಳಿಸುವುದಿಲ್ಲವೆಂದೂ ಭರವಸೆಯಿತ್ತರು. ಈ ಬಗ್ಗೆ ವಿವರಿಸುತ್ತಾ, ನೂತನ ಪ್ರಾಂತಗಳ ಉದಯವಾದನಂತರ ಕನ್ನಡಕ್ಕೆ ಪ್ರಾಮುಖ್ಯತೆ ಬರುವುದೆಂದು ಹೇಳಿದರು.

ಕನ್ನಡದ ಪ್ರಾಧಾನ್ಯದ ಬಗ್ಗೆ ವಿಶ್ವವಿದ್ಯಾಲಯವನ್ನೂ ಮತ್ತು ಸರ್ಕಾರವನ್ನೂ ದೂರಬೇಕಾಗಿಲ್ಲ. ಅದರ ಈಗ ಜನರು ಮುಂದೆ ಬರಬೇಕಾಗಿದೆ. ಕನ್ನಡ ಸಾಹಿತ್ಯಕ್ಕಾಗಿ ಪ್ಲಕಾರ್ಡುಗಳನ್ನು ಹಿಡಿದು ಓಡಾಡಿದ ವಿದ್ಯಾರ್ಥಿಗಳು ಈಗ ಹಿಂದೆಗೆದಿದ್ದಾರೆ. ಆದ್ದರಿಂದ ಜನ ಮುಂದೆ ಬಂದು ಕನ್ನಡದ ಏಳಿಗೆಗೆ ಸಹಕರಿಸಬೇಕು—ಎಂಬುದಾಗಿ ಅವರು ಕೋರಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫೫ ಸ್ತೋತ್ರ ಮತ್ತು ವಾದ್ಯ. ೭-೧೫ ದೇವರ ನಾಮ. ೭-೩೦ ಗಾನ ವಿಹಾರ ೮-೧೫ ರಿಲೇ. ಮಧ್ಯಾಹ್ನ ೧೨ ಸಂಗೀತ, ೧೨-೩೦ ವೀಣಾವಾದನ ೧ ರಿಲೇ. ಸಂಜೆ ೫-೩೦ ಗೋಷ್ಠಿ. ೬-೧೫ ಪ್ರೌಢಶಾಲೆಗಾಗಿ. ಸಂಜೆ ೫-೩೦ ಪೆಚ್. ಎಸ್. ಭಾಗ್ಯಲಕ್ಷ್ಮಿ—ವೀಣೆ. ೭-೧೫ ಜಾನಪದ ಗೀತೆ ೭-೩೦ ಮತ್ತು ೮ ಹೇಮಲತಾ ಬಳ್ಳಾರಿ—ಹಿಂದಿ ಗೀತೆ ಮತ್ತು ಭಜನೆ. ೮-೧೫ ಕ್ರೀಡಾ ರಂಗದಿಂದ. ೮-೩೦ ಕನ್ಸರ್ಟ್. ೯-೧೫ ವಿಜ್ಞಾನ ಪ್ರಪಂಚ. ೯-೩೦ ಟಿ. ವಿ. ಗೋಪಾಲಕೃಷ್ಣನ್—ವಯಲಿನ್ ಸೋಲೋ.

ವಾರ ಭವಿಷ್ಯ

ತಾ| ೬-೯-೧೯೫೬ರಿಂದ ೨೨-೯-೧೯೫೬ರ ವರೆಗೆ

ಮೇಷ — ಆರೋಗ್ಯ ತೃಪ್ತಿಕರ ಆರ್ಥಿಕ ಸ್ಥಿತಿ ಸಮಾಧಾನಕರ. ಸಾಮಾಜಿಕ ಕ್ಷೇತ್ರದಲ್ಲಿ ಉತ್ಸಾಹ ಶುಭ ಕಾರ್ಯಗಳು ಜರುಗುವುವು ವ್ಯಾಪಾರ ವ್ಯವಹಾರಗಳಲ್ಲಿ ಅಲ್ಪ ಪ್ರಗತಿ ನೌಕರಿಯಲ್ಲಿ ಪ್ರಶಂಸೆ

ವೃಷಭ — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಮಿತ್ರರಿಂದ ದ್ರೋಹ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ನಿರುತ್ಸಾಹ. ಪ್ರವಾಸ ಸಂಭವ

ಮಿಥುನ — ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವೃಥಾ ವಿವಾದ ವ್ಯಾಪಾರ ವ್ಯವಹಾರಗಳಲ್ಲಿ ಅಪಯಶಸ್ಸು ಉದ್ಯೋಗದಲ್ಲಿ ಸಮಸ್ಯೆ ಕುಟುಂಬದಲ್ಲಿ ಅಶಾಂತಿ

ಕರ್ಕ — ಆರೋಗ್ಯ ಸಮರ್ಪಕ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ಸಮಾವೇಶ ಪ್ರವಾಸ ಸುಖಕರವಾಗಿರುವುದು

ಸಿಂಹ. ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಮಿತ್ರರಿಂದ ವಂಚನೆ ವ್ಯಾಪಾರ ವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ನಿರುತ್ಸಾಹ ಕಾರ್ಯ ಸಾಧನೆಯಲ್ಲಿ ವಿಳಂಬ

ಕನ್ಯಾ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅಸಮರ್ಪಕ ಸ್ನೇಹಿತರಿಂದ ಸಹಾಯ ದೊರೆಯದು ವ್ಯಾಪಾರವ್ಯವಹಾರಗಳಲ್ಲಿ ತೊಂದರೆ ಉದ್ಯೋಗದಲ್ಲಿ ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ತುಲಾ — ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ಉದ್ಯೋಗದಲ್ಲಿ ನಿರುತ್ಸಾಹ ವಿವಾದ ಸಂಭವ ಪ್ರವಾಸ ...

ವೃಶ್ಚಿಕ — ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ಶುಭ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ... ಸುಖಕರ ಪ್ರವಾಸ

ಗಣಪತಿ ಉತ್ಸವದ ಕಾರ್ಯಕ್ರಮ

... ರಾಮ ದೇವಸ್ಥಾನದಲ್ಲಿ ಈ ರಾತ್ರಿ ೭॥ ಗಂಟೆಗೆ ವಿ॥ ಪಿಚ್ ಟಿ ರಾಮಸ್ವಾಮಿಯವರ ಸಂಗೀತವೂ ನಾಳೆ ರಾತ್ರಿ ವಿ॥ ನಂಜುಂಡಸ್ವಾಮಿಯವರ ಸಂಗೀತವೂ ವಿ॥ ... ಪ್ರಸ್ತುತ ... ಯವರ ಪಿಟೀಲು ವಿ॥ ಪಿಚ್ ಟಿ ನಾಗಣ್ಣನವರ ಮೃದಂಗ ಮತ್ತು ವಿ॥ ... ನವರ ... ದೊಡನೆ ನೆರವೇರುವುವು

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ವೀರಶೈವ ಸಜ್ಜನ ಸಂಘದವರು ಶ್ರೀ ಕಂಠಿ ಸುಬ್ಬಣ್ಣನವರ ಕಲ್ಯಾಣ ಮಂದಿರದಲ್ಲಿ ಈ ಸಂಜೆ ೬-೩೦ಕ್ಕೆ ಗಣಪತಿ ಮಂಗಳಾರತಿಯನ್ನೂ ಕೀರ್ತನ ರತ್ನಂ ಕೋಣನೂರು ಸೀತಾರಾಮ ಶಾಸ್ತ್ರಿಗಳಿಂದ ಶ್ರೀ ಗಣೇಶ ಮಹಿಮಾ ಎಂಬ ಹರಿಕಥೆಯನ್ನೂ ಏರ್ಪಡಿಸಿರುವರು

ಅಂಕ್ಕರ್ ಲಂಚ್ ಹೋಮಿನ ಶ್ರೀ ಟಿ ವಿ ರಾಜುಅಯ್ಯರ್‌ರವರು ನಾಳೆ ಸಂಜೆ ೬॥ ಗಂಟೆಗೆ ತಮ್ಮ ಹೋಟೇಲಿನಲ್ಲಿ ಗಣಪತಿ ಮಂಗಳಾರತಿ ಅಂಗವಾಗಿ ವಿ॥ ಪೀಲಮ್ಮ ಕಡಾಂಬಿಯವರ ಗಾಯನವನ್ನು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಡಿಸಿದ್ದಾರೆ

ಧನು :—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕೈಗೊಂಡ ಕಾರ್ಯಗಳಲ್ಲಿ ಜಯ ನೌಕರಿಯಲ್ಲಿ ಪ್ರಶಂಸೆ

ಮಕರ — ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವೃಥಾ ಕಲಹ ಸಂಭವ ವ್ಯಾಪಾರವ್ಯವಹಾರಗಳಲ್ಲಿ ಉದ್ಯೋಗದಲ್ಲಿ ಪ್ರಗತಿ ಕಮ್ಮಿ ಮಿತ್ರರಿಂದ ವಂಚನೆ

ಕುಂಭ — ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಪ್ರಗತಿ ಉದ್ಯೋಗದಲ್ಲಿ ಅನಿರೀಕ್ಷಿತ ಘಟನೆ ವರ್ಗಾವಣೆ ಸಂಭವ

ಮೀನ — ಆರೋಗ್ಯ ಅತೃಪ್ತಿಕರ ಆರ್ಥಿಕ ಪರಿಸ್ಥಿತಿ ಅಸಮರ್ಪಕ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ನಿರುತ್ಸಾಹ ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ

ವಿವಾಹ ಮಹೋತ್ಸವಗಳು

ಮೈಸೂರು ರಾಜಪ್ರಮುಖರ ಕಛೇರಿಯಲ್ಲಿರುವ ಶ್ರೀ ಎಂ ಆರ್ ಸುಬ್ಬಣ್ಣನವರು ತಮ್ಮ ಕುಮಾರಿ ಸೌ॥ ಎಂ ಎಸ್ ವಿಜಯಲಕ್ಷ್ಮಿಯನ್ನು ಶ್ರೀ ಎಂ ಶಂಕರಪ್ಪನವರ ಪುತ್ರ ಶ್ರೀ ಎಸ್ ನಾರಾಯಣಮೂರ್ತಿಯವರಿಗೆ ಕೊಟ್ಟು ಕಳೆದ ಗುರುವಾರ ವಿವಾಹವನ್ನು ನೆರವೇರಿಸಿದರು

... ನಗೂಡಿನ ನಿವೃತ್ತ ಓವರ್‌ಸಿಯರ್ ಶ್ರೀ ಎ. ಕೆ ಕೃಷ್ಣಯ್ಯಂಗಾರ್ಯರವರು ತಮ್ಮ ಕುಮಾರ ಶ್ರೀ ಎ ಕೆ ರಂಗಗೋಪಾಲರವರಿಗೆ ಮದ್ರಾಸಿನಲ್ಲಿರುವ ಪ ಲಘಾಟ್ ಪರಮೇಶ್ವರಯ್ಯರ್‌ರವರ ಪುತ್ರಿ ಸೌ॥ ಕಲ್ಯಾಣಿಯನ್ನು ತಂದುಕೊಂಡು ಮದ್ರಾಸಿನಲ್ಲಿ ಮೊನ್ನೆ ವಿವಾಹವನ್ನು ನೆರವೇರಿಸಿದರು

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸ

ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸಗಳ ಅಂಗವಾಗಿ ನಾಳೆಯಿಂದ ಬುಧವಾರದವರೆಗೆ ದಿನವೂ ಸಂಜೆ ೫॥ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ "ಆಧುನಿಕ ಭೌತಶಾಸ್ತ್ರದ ಕೆಲವು ವಿಚಾರಗಳು" ಎಂಬ ವಿಷಯವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀ ಟಿ ಎ ಶ್ರೀಕಂಠಯ್ಯನವರು ಉಪನ್ಯಾಸ ಮಾಡುವರು ಪ್ರೊ॥ ಡಿ ಎಲ್ ನರಸಿಂಹಾಚಾರ್ಯರು ಅಧ್ಯಕ್ಷತೆ ವಹಿಸುವರು.

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಎಮ್ಮೆಗಳಿಗೆ ರೋಗ

ಹೆಗ್ಗಡದೇವನಕೋಟೆ ತಾಲ್ಲೂಕಿನ ಕಿತ್ತೂರು ಮತ್ತು ಇತರ ಗ್ರಾಮಗಳಲ್ಲಿ ಎಮ್ಮೆಗಳಿಗೆ ಉಚ್ಚಲು ರೋಗವು ತಲೆದೋರಿ ಹಲವಾರು ಜಾನುವಾರುಗಳು ಸತ್ತುಹೋದವೆಂದೂ ಪಶುವೈದ್ಯ ಇಲಾಖೆಯವರು ಈ ಬಗ್ಗೆ ಕೂಡಲೇ ಗಮನ ಕೊಟ್ಟು ರೋಗವನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕೆಂದೂ ಕೋರಲಾಗಿದೆ

○ ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಆ॥ ವಿ॥ ವಿ ವೆಂಕಟಸುಬ್ಬ ... ಯರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಾಡಾಗಿದೆ

SRI GAYATHRI
TALKIES

Today Last day
CONQUEROR

From 17.9-56 For 3 days
R K O's Adventurous
Picture in Technicolor
PEARL OF THE
SOUTH PACIFIC
Starring Virginia Mayo &
Denis Morgan

ಶ್ರೀ ಬಾಬಾ ಜನರಲ್ ಸ್ಟೋರ್ಸ್
ನಲ್ಲಿ ಅಂಗಡಿ, ದಿವಾನ್ಸ್ ರೋಡ್ ಮೈಸೂರು
ಮೇಲ್ಕಂಡ ಅಂಗಡಿಯನ್ನು ದಿವಾನ್ಸ್ ರೋಡಿನಲ್ಲೇ ೧೦೦ ಗಜ ಉತ್ತರಕ್ಕೆ ಬದಲಾಯಿಸಲಾಗಿದೆ ಮಾಮೂಲಿನಂತೆ ಅನಂತಪದ್ಮನಾಭ ವ್ರತ ಮತ್ತು ದೀಪಾವಳಿ ಹಬ್ಬಗಳಲ್ಲಿ ಬಾಣ ಬಿರುಸು, ಪಟಾಕಿ ಮತ್ತು ಅನಂತನ ದಾರಗಳು ದೊರೆಯುತ್ತವೆ ಮಾನ್ಯ ಗಿರಾಕಿಗಳು ಎಂದಿನಂತೆ ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ
ಎಸ್ ಕೇಶವಮೂರ್ತಿ, ಪ್ರೊಪ್ರೈಟರ್

Edited, Printed and Published by A. R. Nagarajan at Sadhvi Press D Subbiah Road, Mysore

ಶುಚಿ ಮತ್ತು ರುಚಿ!
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯಾ ರೋಡ್, ಮೈಸೂರು

ಒಡುತ್ತಿದ್ದ ರೈಲಿನಿಂದ ಧುಮುಕಿದ್ದಕ್ಕಾಗಿ ಶಿಕ್ಷೆ

ಮೊನ್ನೆ ೧೧ ಘಂಟೆಯಲ್ಲಿ ಇಲ್ಲಿಂದ ಚಾಮರಾಜನಗರಕ್ಕೆ ಹೊರಟ ರೈಲ ಮೈಸೂರು ಸೌತ್ ನಿಲ್ದಾಣವನ್ನು ಬಿಟ್ಟನಂತರ ವೆಂಕಟಣ್ಣ ಎಂಬುವನು ಅದರಿಂದ ಧುಮುಕಿದುದಕ್ಕಾಗಿ ನೆನ್ನೆ ನಗರ ನ್ಯಾಯಾಧೀಶರು ಅವನಿಗೆ ೫ ರೂ ಜುಲ್ಮಾನೆಯನ್ನು ವಿಧಿಸಿದರು

ಜವಾಹಿರಿ ಅಂಗಡಿಯ ಆರಂಭೋತ್ಸವ

ಸಯ್ಯಾಜಿರಾವ್ ರಸ್ತೆಯಲ್ಲಿರುವ ಬ್ಯಾಂಕರರಾದ ಶ್ರೀ ಎ ಎಸ್ ಧರ್ಮರಶೆಟ್ಟಿ ಅಂಡ್ ಸನ್ಸ್ ರವರು ತಮ್ಮ ನೂತನ ಜವಾಹಿರಿ ಅಂಗಡಿಯ ಆರಂಭೋತ್ಸವವನ್ನು ಮೊನ್ನೆ ನೆರವೇರಿಸಿ, ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಮೈಸೂರಿನಲ್ಲಿ ಪ್ರತಿ ತಿಂಗಳು
17ನೇ ತಾರೀಖು
ವಿಶ್ವ ವಿಖ್ಯಾತವಾಗಿರುವ
ನವರತ್ನ — ಕಲ್ಪ
ಬಿರ್ರಾಪದವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮಾ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು ಫೋನ್ ನಂ 590
— ಭೇಟಿಯ ಕಾಲ —
ಬೆಳಿಗ್ಗೆ 7 3 ರಿಂದ 12 30 ಮತ್ತು
ಮಧ್ಯಾಹ್ನ 1 ರಿಂದ 7 30
ಮೇಲಿನ ಕಾರ್ಯಕ್ರಮವನ್ನು ಗಮನಿಸಿ
ಮತ್ತು ಅವರ ಪರಿಣತ ವೈದ್ಯಕೀಯ
ಸಲಹೆಯನ್ನು ಪಡೆಯಿರಿ
ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು
ವಿಮಾನದಲ್ಲಿ ಸಂಚರಿಸುವರು
ನವರತ್ನ — ಕಲ್ಪ
ಉಪಯೋಗಿಸಿ
ಇದು ವಜ್ರ, ಕೆಂಪು ಮುತ್ತು ಹವಳ, ಪಚ್ಚೆ, ಗೋಮೇಧಿಕ, ನೀಲ ಪದ್ಮರಾಗಿಣಿ ಮುತ್ತು ಪ್ರಶಸ್ತಿ ಪಡೆಂತಾದ 9 ಅಮೂಲ್ಯ ರತ್ನಗಳ ಸಂಯೋಗ ಇದರಿಂದ ನರಗಳ ದೌರ್ಬಲ್ಯ ಅಜೀರ್ಣ ಸಂಬಂಧದ ವ್ಯಾಧಿಗಳು, ಬಿಳೀ ಸೆರಗು, ಮೂಲವ್ಯಾಧಿ ನಾಳವ್ರಣ ಬಹುಮೂತ್ರ, ಅಸ್ತಮಾ ಮತ್ತು ನಿಮ್ಮ ಇತರ ಎಲ್ಲಾ ಸಾಮಾನ್ಯ ಹಾಗೂ ಕ್ಲಿಷ್ಟ ವ್ಯಾಧಿಗಳೂ ಸಂಪೂರ್ಣವಾಗಿ ಗುಣಹೊಂದುವುವು ಅತ್ಯುತ್ತಮ ಆರೋಗ್ಯದಾಯಕ ಔಷಧಿ ಇದೊಂದೇ
NAVRATNA KALPA PHARMACY,
JULLUNDUR CITY (India)

ಇಂದ್ರ ಕೆಫೆ
ಸಯ್ಯಾಜಿರಾವ್ ರಸ್ತೆ, ಮೈಸೂರು.
ಸುಸಜ್ಜಿತವಾದ ಭವ್ಯ ನೂತನ ಫಲಾಹಾರ ಮಂದಿರ
6—9—56ನೇ ಗುರುವಾರ ತೆರೆಯಲಾಗಿದೆ
ಸ್ತ್ರೀಯರಿಗೂ, ಸಂಸಾರಗಳಿಗೂ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ
ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

ನ್ಯೂ ಚಾಮುಂಡೇಶ್ವರಿ ಕೆಫೆ
ಫೋನ್ ನಂ. 541 :: ಇರ್ವಿನ್ ರಸ್ತೆ :: ಮೈಸೂರು
16—9—1956ನೇ ಭಾನುವಾರದಿಂದ
ನಮ್ಮ ಫಲಾಹಾರ ಮಂದಿರವು
ಪ್ರಾರಂಭಿಸಲ್ಪಡುವುದು
— ಫಲಾಹಾರದ ವ್ಯವಸ್ಥೆಯ ಕಾಲ —
ಬೆಳಿಗ್ಗೆ 6 ರಿಂದ 10ರ ವರೆಗೆ ಮತ್ತು ಮಧ್ಯಾಹ್ನ 3 30 ರಿಂದ 7 30ರ ವರೆಗೆ ಮಾತ್ರ
— ಊಟದ ವ್ಯವಸ್ಥೆ ಕಾಲ —
ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಮತ್ತು ರಾತ್ರಿ 7 ರಿಂದ 10 30ರ ವರೆಗೆ
ಮಿತವ್ಯಯಿಯಾದ ತಯಾರಿಕೆ! ಒಮ್ಮೆ ಭೇಟಿ ಕೊಟ್ಟು ಸಂತೃಪ್ತಿ ಹೊಂದಿರಿ!!
ಪಿ. ಟಿ. ಎಂ. ಶಂಕರಯ್ಯ, ಪ್ರೊಪ್ರೈಟರ್

ಪ್ರಭುದೇವಾ ಥಿಯೇಟರ್
(ಪದ್ಮಾ ಟಾಕೀಸ್)
16—9 56ನೇ ಭಾನುವಾರದಿಂದ . ಅಮೋಘ 3ನೇ ವಾರ
ಪ್ರತಿ ದಿನ 3 ಪ್ರದರ್ಶನಗಳು
ಮದರಾಸ್ ಥಿಯೇಟರ್ಸ್‌ರವರ ಭೂಪಾಲ್ ಗೇವಾ ಕಲರ್ ತಮಿಳು ಚಿತ್ರ
ಅಲಿಬಾಬಾ ಮತ್ತು ೪೦ ಜನ ಕಳ್ಳರು
... ಎಂ ಜಿ ರಾಮಚಂದ್ರ ಭಾನುಮತಿ ವೀರಪ್ಪ, ತಂಗವೇಲು, ಸಾರಂಗಪಾಣಿ

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಬಿಡಿ ಪ್ರತಿಗೆ 3 ಕಾಸು

ಬ್ರಾಂಕಾಲ್
ಉತ್ತಮ ಮತ್ತು ಸೊಗಸು
ಸ್ಥಾಪಿತಗಳಿಗೆ ...
ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶಗಳಿಗೆ ಏಜೆಂಟರು
ಸತ್ಯ ಅಂಡ್ ಕಂ.,
71/1. ...
ಬೆಂಗಳೂರು - 2

ಸಂಪುಟ ೧.೦೮] SADHVI : MONDAY 17—9—1956 ಮೈಸೂರು : ಸೋಮವಾರ ೧೭—೯—೧೯೫೬ [ಸಂಚಿಕೆ ೧ ೪೪

ಈಜಿಪ್ಟಿನ ಬಗ್ಗೆ ಬ್ರಿಟರ್ನ್ ಮತ್ತು ಫ್ರಾನ್ಸುಗಳಿಗೆ ರಷ್ಯಾ ಎಚ್ಚರಿಕೆ

ಗ್ರಾಮಾಂತರದಲ್ಲಿ ವಿದ್ಯಾಭ್ಯಾಸದ ವಿಸ್ತರಣೆಗೆ ವಿಶೇಷ ಗಮನ

ವ್ಯವಸಾಯ ಮಂತ್ರಿ ಚನ್ನಬಸಪ್ಪನವರ ಭಾಷಣ

ಮೈಸೂರು ೧೬

ಇಲ್ಲಿನ ಉಪಾಧ್ಯಾಯರುಗಳ ಕಾಲೇಜಿನ ವಿಸ್ತರಣಾ ಸೇವಾ ವಿಭಾಗದವರು ಏರ್ಪಡಿಸಿದ್ದ ವಿದ್ಯಾಭ್ಯಾಸ ಪರದ ಮುಕ್ತಾಯ ಸಮಾರಂಭವು ಶಿಕ್ಷಣ ವಸ್ತು ಪ್ರದರ್ಶನ ಕಟ್ಟಡದಲ್ಲಿ ನೆರವೇರಿತು ರೆವಿನ್ಯೂ ಮತ್ತು ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಂ ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು

ಹಂಪಿ ಜೀವಣ್ಣರಾಯನ ಛತ್ರದಲ್ಲಿ ವಿದ್ಯಾರ್ಥಿಗಳಿಂದ ಪ್ರದರ್ಶನಗಳೂ, ಕ್ರೀಡೆಗಳೂ ಜರುಗಿದುವು.

ಪ್ರಾರ್ಥನೆಯಾದನಂತರ ಉಪಾಧ್ಯಾಯರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎ ಸಿ ದೇವೇಗೌಡರು ಸ್ವಾಗತಭಾಷಣ ಮಾಡಿದರು ಶ್ರೀ ಕೆ ಆರ್ ಎಸ್. ಗುಪ್ತರವರಿಂದ ವರದಿಯಾದನಂತರ ಅಧ್ಯಕ್ಷರು ಬಹುಮಾನಗಳನ್ನು ವಿನಿಯೋಗಿಸಿದರು

ಶ್ರೀ ಚನ್ನಬಸಪ್ಪನವರು ಭಾಷಣ ಮಾಡಿ, ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನವೀಯಬೇಕೆಂದು ತಿಳಿಸಿದರು ಮಕ್ಕಳ ಶಿಕ್ಷಣದ ಬಗ್ಗೆ ಉಪಾಧ್ಯಾಯರುಗಳ ಜವಾಬ್ದಾರಿಯನ್ನು ವಿವರಿಸಿ, ಅದನ್ನು ಉತ್ತಮವಾಗಿ ನಿರ್ವಹಿಸುತ್ತಿರುವ ಮೈಸೂರು ಅಧ್ಯಾಪಕ ವರ್ಗದವರನ್ನು ಅಭಿನಂದಿಸಿದರು

ಈಗಿನ ಆಡಳಿತ ವರ್ಗದವರು ಗ್ರಾಮಾಂತರ ಪ್ರದೇಶಗಳಿಗೆ ಹೆಚ್ಚು ಗಮನ ಕೊಡುವರೆಂದು ತಿಳಿಸಿದರು ಹಳ್ಳಿಗಳಲ್ಲಿ ಜ್ಞಾನ ಪ್ರಸಾರಣೆಯಿಲ್ಲದೆ, ಪ್ರಾಚೀನ ಏಳಿಗೆಯು ಸಾಧ್ಯವಿಲ್ಲವೆಂದೂ ಅವರು ತಿಳಿಸಿದರು ತಾವು ಕಾಲೇಜು ವ್ಯಾಸಂಗ ಮಾಡಿದ ನಂತರ ಉಪಾಧ್ಯಾಯನಾಗಿ ಸೇರಲು ಹಂಬಲ ಪಟ್ಟಿದ್ದುದಾಗಿಯೂ, ಆದರೆ ಪರಿಸ್ಥಿತಿಯು ತಮ್ಮನ್ನು ಬೇರೆ ದಾರಿಗೆ ಕರೆದೊಯ್ಯಿತೆಂದೂ ತಿಳಿಸಿದರು

ಶ್ರೀ ಎ ಶೇಷಯ್ಯಂಗಾರ್ಯರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು ಸೇಂಟ್ ಜೋಸೆಫ್ ಕಾನ್ವೆಂಟ್ ಮತ್ತು ಮಹಾರಾಣಿ ಪ್ರೌಢಶಾಲೆ ವಿದ್ಯಾರ್ಥಿನಿಯರಿಂದ ಮನರಂಜನೆ ಕಾರ್ಯಕ್ರಮಗಳು ನಡೆದುವು

ನಗರದಲ್ಲಿರುವ ೧೮ ಪ್ರೌಢಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ಭಾರಿ ಮೆರವಣಿಗೆಯು ನಾನಾ ಬೀದಿಗಳಲ್ಲಿ ಹೋಯಿತು ವಸ್ತು ಪ್ರದರ್ಶನಾಲಯಕ್ಕೆ ತೆರಳಿತು. ಅಲ್ಲಿ ಪೋಷಕರ ... ಶ್ರೀ ಕೆ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು

... ಹಿರಿಯರ ಟ್ರೈನಿಂಗ್ ಶಾಲೆಯ ವಾರ್ಷಿಕೋತ್ಸವ

... ದಪಿಳಾಪೆ ಮೊಹಲ್ಲಾ ಯಾದವಗಿರಿಯ ... ಹಿರಿಯರ ಟ್ರೈನಿಂಗ್ ಇನ್ಸ್ಟಿಟ್ಯೂಟಿನ ... ವಾರ್ಷಿಕೋತ್ಸವವು ನಾಳೆ ಸಂಜೆ ... ಗಂಟೆಗೆ ಟೌನ್ ಹಾಲಿನಲ್ಲಿ ನೆರವೇರುವುದು ... ಶ್ರೀ ತ್ರಿಪುರಸುಂದರಮ್ಮನವರು ... ಅಧ್ಯಕ್ಷತೆ ವಹಿಸುವರು

ಈಜಿಪ್ಟ್ ಮೇಲೆ ಧಾಳಿ ಬಗ್ಗೆ ಬ್ರಿಟನ್-ಫ್ರಾನ್ಸಿಗೆ ರಷ್ಯಾ ಎಚ್ಚರಿಕೆ

ಮಿಲಿಟರಿ ಧಾಳಿ ನಡೆಸಿದರೆ ಕಾಲುವೆ ಮತ್ತು ಎಣ್ಣೆ ಗಣಿ ನಾಶದ ಸಂಭವ

ಸೂಯೆಜ್ ಕಾಲುವೆಯನ್ನು ಬಲಾತ್ಕಾರದಿಂದ ವಶಪಡಿಸಿಕೊಳ್ಳಲು ಬ್ರಿಟನ್ ಮತ್ತು ಫ್ರಾನ್ಸುಗಳು ಯೋಚಿಸುತ್ತಿರುವುದಾಗಿ ರಷ್ಯಾ ಸರ್ಕಾರದವರು ಆಪಾದಿಸಿ, ಮಧ್ಯ ಮತ್ತು ಹತ್ತಿರ ಪೂರ್ವ ಪ್ರದೇಶಗಳಲ್ಲಿ ಶಾಂತಿಗೆ ಭಂಗ ತಂದರೆ ಅದರಿಂದ ರಷ್ಯದ ಭದ್ರತೆಗೆ ಧಕ್ಕೆಯಾಗುವುದೆಂದು ತಿಳಿಸಿರುತ್ತಾರೆ ಈಜಿಪ್ಟಿನ ಮೇಲೆ ಮಿಲಿಟರಿ ಧಾಳಿಯಾದರೆ ಸೂಯೆಜ್ ಕಾಲುವೆ ಮತ್ತು ಅರಬ್ ರಾಷ್ಟ್ರಗಳಲ್ಲಿರುವ ಎಣ್ಣೆ ಗಣಿಗಳು ನಾಶವಾಗುವುವೆಂದೂ ರಷ್ಯಾ ಸರ್ಕಾರದವರು ಎಚ್ಚರಿಸಿರುತ್ತಾರೆ. ಈಜಿಪ್ಟಿನ ಹತ್ತಿರವೇ ಫ್ರೆಂಚ್ ಸೈನ್ಯಗಳನ್ನು ತಂದಿಟ್ಟಿರುವುದರಿಂದ ಬಿಕ್ಕಟ್ಟು ಇನ್ನೂ ಹೆಚ್ಚಲು ಅವಕಾಶವಾಗಿದೆಯೆಂದೂ, ಅಮೆರಿಕಾ ಸಹಾಯದೊಡನೆ ಬ್ರಿಟನ್ ಮತ್ತು ಫ್ರಾನ್ಸುಗಳು ಈಜಿಪ್ಟಿನ ಮೇಲೆ ಬಲೋದ್ಧಂಡಿಯನ್ನು ಮಾಡುತ್ತಿರುವುದಾಗಿಯೂ ಹೇಳಿದೆ.

ಕಾಲಡಿಯಲ್ಲಿ ಶೃಂಗೇರಿ ಜಗದ್ಗುರುಗಳ ಕಾರ್ಯಕ್ರಮ

ಆದಿಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಡಿಯಲ್ಲಿ ಈಗ ಬಿಡಾರ ಮಾಡಿರುವ ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ವಿದ್ಯಾ ತೀರ್ಥ ಭಾರತೀ ಸ್ವಾಮಿಗಳವರು ತಮ್ಮ ಚಾತುರ್ಮಾಸ್ಯ ಸಂಕಲ್ಪವನ್ನು ಮುಗಿಸಿಕೊಂಡು ಈ ತಿಂಗಳು ೨೦ಕ್ಕೆ ಅಲ್ವಾಯಿಗೆ ಸಮೀಪದಲ್ಲಿರುವ ಪಾರೂರಿಗೆ ತೆರಳುವರು ೨೧ನೇ ತಾರೀಕು ತ್ರಿಪುನಿತ್ತುರಾದಲ್ಲಿ ಕೊಚ್ಚಿ ರಾಜರ ಅರಮನೆಯಲ್ಲಿ ಅವರು ಪೂಜಾ ಸತ್ಕಾರ ಸ್ವೀಕರಿಸುವರು ನಂತರ ಕಾಲಡಿಗೆ ಹಿಂದಿರುಗಿ, ದೊಡ್ಡ ಗುರುಗಳ ಆರಾಧನೆ, ನವರಾತ್ರಿ ಮಹೋತ್ಸವ ಮತ್ತು ಚಂಡೀ ಹೋಮಗಳನ್ನು ನೆರವೇರಿಸುವರು. ಆಮೇಲೆ ದಕ್ಷಿಣ ದೇಶದ ಪ್ರವಾಸ ಕೈಗೊಳ್ಳುವರು ಅವರ ಸಮ್ಮುಖದಲ್ಲಿ ಪ್ರತಿ ದಿನವೂ ವಿದ್ವತ್ಸಭೆ ಮತ್ತು ಉಪನ್ಯಾಸಗಳಾಗುತ್ತಿವೆ

ಶ್ರೀ ಅಗರಂ ರಂಗಯ್ಯನವರಿಗೆ ಶ್ರೀ ಶ್ರೀಗಳವರು ದರ್ಶನವನ್ನಿತ್ತು, ಸಂಭಾಷಣೆ ನಡೆಸಿದರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭.೫ ಮುಖವೀಣೆ, ೭-೧೫ ಎ.ಎಂ ಸರೋಜಾ ಮತ್ತು ಎ ಎಂ ಜಯಲಕ್ಷ್ಮಿ -ದೇವರ ನಾಮ ೭-೩೦ ಗಾಳಿವಿಹಾರ ೮-೧೫ ರೇಡಿಯೋ, ಮಧ್ಯಾಹ್ನ ೧೨ ವೀಣೆ ೧೨-೩೦ ಗಾನಮಂಜರಿ, ೧೨-೪೫ ವನಿತಾ ವಿಹಾರ ೧-೫೦ ವೀಣೆ ೨ ಸಂಗೀತ ೨-೧೫ ಪ್ರೌಢರ ಲಗೀಗಾಗಿ, ಸಂಜೆ ೫-೩೦ ಮತ್ತು ೯-೧೫ ಎ ವಿ ಕೃಷ್ಣಮಾಚಾರ್-ಪಿಟೀಲು ೬-೧೫ ಆರ್ ಕೃಷ್ಣಭಟ್ಟ-ಕಾವ್ಯ ವಾಚನ ೭-೩೦ ಪ್ರಜಾಪ್ರಭುತ್ವ ಮತ್ತು ಸರ್ಕಾರಿ ಅಧಿಕಾರಿ-ಚನ್ನತ ಭಾಷಣ ೮ ಕವಿತೆ ಹುಟ್ಟಿತು-ಬಿ ಸಿ. ರಾಮಚಂದ್ರಶರ್ಮರಿಂದ ವಿಶೇಷ ಕಾರ್ಯಕ್ರಮ ೮ ೩೦ ಭಕ್ತರ ಕಲ್ಯಾಣ ಗೀತೆಗಳು. ೧೦ ಬಿಸಿಲ್ದುದರೆ ಹಿಂದಿ ನಾಟಕದ ಅನುವಾದ ೧೦-೧೫ ಭಜನ್ ಗೀತೆ

ಭಾರತಕ್ಕೆ ಬ್ರಿಟನ್ನಿನ ೨೫ ಜೆಟ್ ವಿಮಾನಗಳು

ಬ್ರಿಟನ್ನಿನ ಫಾಲೆಂಡ್ ನಾಟ್ ಎಂಬ ಸ್ಥಾಪನ ಮತ್ತು ಹಗುರವಾದ ೨೫ ಕಾದಾಟ ವಿಮಾನಗಳನ್ನು ಭಾರತವು ಕೊಳ್ಳಲಿದೆ ಬೆಂಗಳೂರಿನ ಹಿಂದೂಸ್ಥಾನ ವಿಮಾನ ಕಾರ್ಖಾನೆಯಲ್ಲಿ ಅಂತಹ ವಿಮಾನಗಳನ್ನು ತಯಾರಿಸಲಾಗುವುದು

ಮದ್ರಾಸು ಪತ್ತೆದಾರಿ ನಾಯಿಯ ಮರಣ

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಪ್ರಕರಣದ ಸಂಬಂಧದಲ್ಲಿ ಪತ್ತೆ ಹಚ್ಚುವುದಕ್ಕಾಗಿ ಮದ್ರಾಸಿನಿಂದ ಎರಡು ನಾಯಿಗಳನ್ನು ಕರೆತರಲಾಗಿತ್ತಷ್ಟೆ ಆ ಪೈಕಿ ದೇವ ಎಂಬ ನಾಯಿಯೊಂದು ನೆನ್ನೆ ಮೃತಪಟ್ಟಿತು ಮದ್ರಾಸು ಪೊಲೀಸರು ಹೊಂದಿದ್ದ ಆರು ಪತ್ತೆದಾರಿ ನಾಯಿಗಳಲ್ಲಿ ಈ ನಾಯಿಯು ಅತ್ಯುತ್ತಮ ಕೆಲಸ ನಡೆಸುವ ಪ್ರಾಣಿಯೆಂದು ಪ್ರಸಿದ್ಧಿಯಾಗಿತ್ತು

ಅತ್ಯುತ್ತಮ ಚರಖಕ್ಕೆ ೧ ಲಕ್ಷ ರೂ. ಬಹುಮಾನ

ಅತ್ಯುತ್ತಮ ಚರಖಕ್ಕೆ ೧ ಲಕ್ಷ ರೂ ಬಹುಮಾನ ಕೊಡಲಾಗುವುದೆಂದು ಕೇಂದ್ರ ಮಂತ್ರಿ ಕೆ ಸಿ ರೆಡ್ಡಿಯವರು ತಿಳಿಸಿರುತ್ತಾರೆ ಇಂತಹ ಬಹುಮಾನಗಳನ್ನು ಕೊಡುವುದಾಗಿ ಹಿಂದೆಯೂ ಸರ್ಕಾರದವರು ಸೂಚಿಸಿದ್ದರು. ಕೈಯಿಂದಲೇ ತಿರುಗಿಸಬೇಕಾಗುವ ಅಗತ್ಯವಿಲ್ಲದೆ, ಅಲ್ಪ ಪ್ರಮಾಣದ ವಿದ್ಯುಚ್ಛಕ್ತಿಯ ಸಹಾಯದಿಂದ ನೂಲು ತೆಗೆಯುವಂತಹ ಚರಖಗಳನ್ನು ತಯಾರಿಸಲು ಸರ್ಕಾರದವರು ಸೂಚಿಸಿರುವರು.

ಜನ ಸಂಘದ ಅಧ್ಯಕ್ಷ ಘೋಷರ ಬಂಧನ

ಅಮೃತಸರದ ಬಳಿ ಇರುವ ಪಠಾಣ್ ಕೋಟದಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದಕ್ಕೆ ಕಾರಣಕ್ಕಾಗಿ ಅಖಿಲ ಭಾರತ ಜನ ಸಂಘದ ಅಧ್ಯಕ್ಷ ದೇವಪ್ರಸಾದ ಘೋಷರನ್ನು ನೆನ್ನೆ ದಸ್ತಗಿರಿ ಮಾಡಲಾಯಿತು ಅವರನ್ನು ೩೦ನೇ ತಾರೀಖಿನವರೆಗೆ ಜೈಲಿಗೆ ರಿಮಾಂಡ್ ಮಾಡಲಾಗಿದೆ.

ಗಣಪತಿ ಮಂಗಳಾರತಿ

ಅರುಣ ಪತ್ರಿಕೆಯ ಕಛೇರಿಯಲ್ಲಿ ನೆನ್ನೆ ಸಂಜೆ ಗಣಪತಿ ಮಂಗಳಾರತಿಯನ್ನು ನೆರವೇರಿಸಲಾಯಿತು ಅನೇಕ ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಲಾಯಿತು

ನಂಜನಗೂಡು ತಾಲ್ಲೂಕಿನಲ್ಲಿ ಭೂದಾನ ಪಾದಯಾತ್ರೆ

ನಂಜನಗೂಡು ತಾಲ್ಲೂಕಿನಲ್ಲಿನ ಭೂದಾನ ಪಾದಯಾತ್ರೆಯನ್ನು ನಾಳಿದ್ದಿನಿಂದ ೨೬ನೇ ತಾರೀಕಿನವರೆಗೆ ಕೈಗೊಳ್ಳಲಾಗುವುದು ಹಂಚ್ಯಾ, ಹೊಸವೀಡು, ಮಡುವಿನಹಳ್ಳಿ, ಹಾಸ್ಯದಹುಂಡಿ ಮತ್ತು ಹಾಡ್ಯ, ಹುರ, ಮೋಟಕೂಡಿ ಮತ್ತು ಹಲ್ಲರೆ, ಅಂಬಳೆ, ಹಗಿನವಾಳು, ಹುಸರೂರು ಮತ್ತು ತಿರಮಳ್ಳಿ, ಹೆಗ ಡಹಳ್ಳಿ ಮತ್ತು ನಂಜನಗೂಡಿನಲ್ಲಿ ಒಂದೊಂದು ದಿನ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ

ಕನ್ನಡ ಪ್ರದೇಶಗಳ ಐಕ್ಯದ ಸೃಷ್ಟಿ

ಹಾಲ್ಕು ಪ್ರಾಂತೀಯ ಮುಖ್ಯಸ್ಥರ ಅಧಿಕಾರಿಗಳ ಸೇವೆಯಲ್ಲಿ ಸ್ಥಾಪನೆ

ಬೆಂಗಳೂರು ೧೬

ನೂತನ ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದ ಪ್ರಶ್ನೆಯ ಪರಿಶೀಲನೆಗಾಗಿ ಸೇರಿದ್ದ ಅಂತರ ಪ್ರಾಂತೀಯ ಅಧಿಕಾರಿಗಳ ಸಮಿತಿಯು, ಆಡಳಿತ ಸಮಸ್ಯೆಗಳು ಮುಗಿಯುವವರೆಗೆ ಮುಂಬಾಯಿ, ಕೊಡಗು, ಹೈದರಾಬಾದು ಮತ್ತು ಮದ್ರಾಸುಗಳಲ್ಲಿ ಒಟ್ಟೊಟ್ಟು ಮಧ್ಯವರ್ತಿ ಅಧಿಕಾರಿಯನ್ನು ನೇಮಿಸಲು ಶಿಫಾರಸು ಮಾಡಿದೆ. ಆಯಾ ಪ್ರದೇಶದ ಅಧಿಕಾರಿಗಳನ್ನೇ ಈ ಕೆಲಸಕ್ಕೆ ನಿಯೋಜಿಸಲಾಗುವುದು

ಈಜಿಪ್ಟಿಗೆ ವಿ. ಕೆ. ಕೃಷ್ಣಮೆನನ್ನರ ಪ್ರಯಾಣ

ಲಂಡನ್ನಿಗೂ ಭೇಟಿ ಕೊಡುವ ಸಂಭವ

ಈಜಿಪ್ಟಿನ ಅಧ್ಯಕ್ಷರ ಆಹ್ವಾನವನ್ನು ಮನ್ನಿಸಿ ಭಾರತದ ಮಂತ್ರಿ ವಿ ಕೆ ಕೃಷ್ಣಮೆನನ್ನರು ಕೈರೋವಿಗೆ ವಿಮಾನದಲ್ಲಿ ತೆರಳಿದರು. ಕಳೆದ ವಾರವೇ ಅವರಿಗೆ ಆಹ್ವಾನ ಬಂದಿತ್ತಾದರೂ, ಅವರು ಸೂಯೆಜ್ ಸಮಸ್ಯೆ ಬಗ್ಗೆ ಹೆಚ್ಚಿನ ವಿಶ್ವಸಂಸ್ಥೆಗಳಿಗಾಗಿ ಕಾದಿದ್ದರು ಅವರು ಯಾವ ನಿರ್ದಿಷ್ಟ ಯೋಜನೆಯನ್ನೂ ಇಟ್ಟುಕೊಂಡು ಹೋರಟಿಲ್ಲ. ತಾವು ಲಂಡನ್ನಿಗೆ ಭೇಟಿ ಕೊಡುವ ಸಂಭವವಿರುವುದೆಂದೂ, ಆದರೆ ಯಾವಾಗ ಎಂಬುದನ್ನು ಹೇಳಲು ಸಾಧ್ಯವಿಲ್ಲವೆಂದೂ ಮೆನನ್ನರು ತಿಳಿಸಿರುವರು ದೆಹಲಿಯನ್ನು ಬಿಡುವ ಮುಂಚೆ ಅವರು ಬ್ರಿಟಿಷ್ ಹೈಕಮಿಷನರ್ ಮಾಲ್ಕಾಂ ಮಾಕ್ ಡಾನಲ್ಡ್‌ರವರನ್ನು ಕಂಡು ಮಾತುಕತೆ ನಡೆಸಿದರು

ಕಲ್ಲಿದ್ದಲು ಕೆಲಸಗಾರರ ಬೋನಸ್ ವಿರುದ್ಧವಾಗಿ ಮುಷ್ಕರ

ಬಿಹಾರ ಬಂಗಾಳ ಮತ್ತು ಮಧ್ಯ ಪ್ರಾಂತಗಳಲ್ಲಿ ಹುದ್ದೆಗಳು ಕಾರ್ಖಾನೆಗಳಲ್ಲಿರುವ ಲಕ್ಷಾಂತರ ಕಾರ್ಮಿಕರಿಗೆ ೩,೫೦೦ಕ್ಕಿಂತ ಹೆಚ್ಚು ಜನರಿಗೆ ಸಿಬ್ಬಂದಿ ಬೋನಸ್ ನೋಟೀಸನ್ನು ಕೊಡಲಾಗಿದೆ. ಬೆಂಗಳೂರು, ಮುರಾದ್‌ನಗರ, ಅಂಬರ್‌ನಾಥ್, ಔರಂಗಾಬಾದುಗಳಲ್ಲಿರುವ ಕಾರ್ಖಾನೆಗಳ ಕೆಲಸಗಾರರಲ್ಲಿ ಅನೇಕರಿಗೂ ಇದೇ ರೀತಿ ನೋಟೀಸು ಕೊಡಲಾಗಿದೆ. ಈ ಬಗ್ಗೆ ಪ್ರತಿಭಟನೆಗಾಗಿ ಕಾರ್ಮಿಕ ಸಂಘದವರು ಮುಷ್ಕರ ಹೂಡಲು ನಿರ್ಧರಿಸಿದ್ದಾರೆ ರಾಷ್ಟ್ರಾದ್ಯಂತ ೨ ಲಕ್ಷ ಜನರು ಈ ಕೆಲಸದಲ್ಲಿ ನಿರತರಾಗಿರುವರು

ಕಾಮರ್ಸ್ ಪರೀಕ್ಷೆಯಲ್ಲಿ ಶ್ರೀಮತಿ ಕಾಲೇಜು ವಿದ್ಯಾರ್ಥಿನಿಗೆ ಪ್ರಥಮ ಸ್ಥಾನ

ಕಳೆದ ಏಪ್ರಿಲ್‌ನಲ್ಲಿ ನಡೆದ ಸರ್ಕಾರಿ ಕಮರ್ಷಿಯಲ್ ಪರೀಕ್ಷೆಯಲ್ಲಿ ರಾಜಧಾನಿಯ ಪ್ರೈವೆಟ್ ಕಾಲೇಜ್ ಆಫ್ ಕಾಮರ್ಸ್ ಸಂಸ್ಥೆಯ ವಿದ್ಯಾರ್ಥಿನಿ ಶ್ರೀಮತಿ ಆರ್. ಸುಮಿತ್ರಮ್ಮನವರು ಸೀನಿಯರ್ ಲಾ ಅಂಡ್ ಪ್ರಾಕ್ಟೀಸ್ ಆಫ್ ಕಾಮರ್ಸ್‌ನಲ್ಲಿ ಇಡೀ ಸಂಸ್ಥಾನಕ್ಕೆ ಪ್ರಥಮ ಸ್ಥಾನವನ್ನು ಗಳಿಸಿರುವರು. ಅವರು ಜೂನಿಯರ್ ಗ್ರೇಡು ಪರೀಕ್ಷೆಯಲ್ಲೂ ಮೊದಲನೇ ರ್‍ಯಾಂಕನ್ನು ಪಡೆದಿದ್ದರು

ವಾರ ಭವಿಷ್ಯ

೧೬-೯-೫೬ರಿಂದ ೨೨-೯-೫೬ರ ವರೆಗೆ

ಮೇಷ:- ಆರೋಗ್ಯ ತೃಪ್ತಿಕರ. ಆರ್ಥಿಕ ಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಉತ್ಸವ ಶುಭ ಕಾರ್ಯಗಳು ಜರುಗುವುವು. ವ್ಯಾಪಾರವ್ಯವಹಾರಗಳಲ್ಲಿ ಅಲ್ಪ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ

ವೃಷಭ.- ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ಮಿತ್ರರಿಂದ ದ್ರೋಹ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ನಿರುತ್ಸಾಹ. ಪ್ರವಾಸ ಸಂಭವ

ಮಿಥುನ:— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸ್ವಂತ ವಿವಾದ. ವ್ಯಾಪಾರವ್ಯವಹಾರಗಳಲ್ಲಿ ಅಪಯಶಸ್ಸು. ಉದ್ಯೋಗದಲ್ಲಿ ಸಮಸ್ಯೆ. ಕುಟುಂಬದಲ್ಲಿ ಅಶಾಂತಿ.

ಕರ್ಕ:—ಆರೋಗ್ಯ ಸಮರ್ಪಕ. ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುತ್ತದೆ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಪ್ರಶಂಸೆ. ಸುದೂರ ಪ್ರವಾಸ ಸುಖಕರವಾಗಿರುವುದು

ಸಿಂಹ: ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ಮಿತ್ರರಿಂದ ವಂಚನೆ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ನಿರುತ್ಸಾಹ. ಕಾರ್ಯಸಾಧನೆಯಲ್ಲಿ ಸಂಯಮ

ಕನ್ಯಾ.—ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ಸ್ನೇಹಿತರಿಂದ ವಿಚಿತ್ರ ವರ್ತನೆ. ವ್ಯಾಪಾರವ್ಯವಹಾರಗಳಲ್ಲಿ ತೊಂದರೆ. ಉದ್ಯೋಗದಲ್ಲಿ ಕೆಲವರು. ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ತುಲಾ. ಆರೋಗ್ಯ ಸಾಧಾರಣ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ನಿರುತ್ಸಾಹ. ವ್ಯಥೆ ಪಡುವ ಸಂಭವ. ಪ್ರವಾಸ ಯೋಗ

ವೃಶ್ಚಿಕ.—ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ಶುಭ ಕಾರ್ಯಗಳು ಜರುಗುವುವು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ನೌಕರಿಯಲ್ಲಿ ಯಶಸ್ಸು. ಸುಖಕರ ಪ್ರವಾಸ

SRI GAYATHRI

TALKIES

Today Last day

CONQUEROR

From 17-9-56 : For 3 days

R K O's Adventurous Picture in Technicolor

PEARL OF THE SOUTH PACIFIC

Starring:- Virginia Mayo & Denis Morgan

ಗಣಪತಿ ಉತ್ಸವದ ಕಾರ್ಯಕ್ರಮ

ಶ್ರೀ ಕಾಮಾಕ್ಷಿ ಅಗ್ರಹಾರದ ಶ್ರೀ ರಾಮ ಮಂದಿರದಲ್ಲಿ ಈ ರಾತ್ರಿ ೭॥ ಗಂಟೆಗೆ ವಿ॥ ಹೆಚ್. ಟಿ. ರಾಮಸ್ವಾಮಿಯವರ ಸಂಗೀತವೂ, ನಾಳೆ ರಾತ್ರಿ ವಿ॥ ನಂಜುಂಡಸ್ವಾಮಿಯವರ ಸಂಗೀತವೂ ವಿ॥ ಚಿಟ್ಟಿ ಪುಟ್ಟಣ್ಣ ಕೃಷ್ಣಮೂರ್ತಿ ಯವರ ಪಿಟೀಲು, ವಿ॥ ಹೆಚ್. ಟಿ. ನಾಗಣ್ಣನವರ ಮೃದಂಗ ಮತ್ತು ವಿ॥ ಆನಂದರಾವ್ ರವರ ಘಟ ದೊಡನೆ ನೆರವೇರುವುವು

ರಾಜಧಾನಿಯ ಕಬೀರ್ ರಸ್ತೆಯಲ್ಲಿರುವ ವೀರಶೈವ ಸಜ್ಜನ ಸಂಘದವರು ಶ್ರೀ ಕಂಠಿಮಲ್ಲಣ್ಣನವರ ಕಲ್ಯಾಣ ಮಂದಿರದಲ್ಲಿ ಈ ಸಂಜೆ ೬-೩೦ಕ್ಕೆ ಗಣಪತಿ ಮಂಗಳಾರತಿಯನ್ನೂ, ಕೀರ್ತನರತ್ನಂ ಕೊಣನೂರು ಸೀತಾರಾಮಶಾಸ್ತ್ರಿಗಳಿಂದ ಶ್ರೀ ಗಣೇಶ ಮಹಿಮಾ ಎಂಬ ಹರಿಕಥೆಯನ್ನೂ ಏರ್ಪಡಿಸಿರುವರು.

ಅಯ್ಯರ್ ಲಂಚ್ ಹೋಮಿನ ಶ್ರೀ ಡಿ. ವಿ. ರಾಜುಅಯ್ಯರ್‌ರವರು ನಾಳೆ ಸಂಜೆ ೭॥ ಗಂಟೆಗೆ ತಮ್ಮ ಹೋಟೇಲಿನಲ್ಲಿ ಗಣಪತಿ ಮಂಗಳಾರತಿ ಅಂಗವಾಗಿ ವಿ॥ ಸೀಲಮ್ಮ ಕದಾಂಬಿಯವರ ಗಾಯನವನ್ನು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಡಿಸಿದ್ದಾರೆ

ಧನು :—ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ಸಮರ್ಪಕ. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ. ಕೈಗೊಂಡ ಕಾರ್ಯಗಳಲ್ಲಿ ಜಯ. ನೌಕರಿಯಲ್ಲಿ ಪ್ರಶಂಸೆ.

ಮಕರ:— ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಅತೃಪ್ತಿಕರ. ನಷ್ಟ ಕಲಹ ಸಂಭವ. ವ್ಯಾಪಾರವ್ಯವಹಾರಗಳಲ್ಲಿ ಅಷ್ಟು ಉದ್ಯೋಗದಲ್ಲಿ ಪ್ರಗತಿ ಕಮ್ಮಿ. ಮಿತ್ರರಿಂದ ವಂಚನೆ

ಕುಂಭ. ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಪರಿಸ್ಥಿತಿ ಸಾಧಾರಣ. ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಪ್ರಗತಿ. ಉದ್ಯೋಗದಲ್ಲಿ ಅನಿರೀಕ್ಷಿತ ಘಟನೆ ನಡೆಯುವ ಸಂಭವ.

ಮೀನ —ಆರೋಗ್ಯ ಅತೃಪ್ತಿಕರ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ನಿರುತ್ಸಾಹ. ಹೊಸ ಉದ್ಯಮಗಳಿಗೆ ಕೈ ಹಾಕಬೇಡಿ

ಶ್ರೀ ಬಾಬಾ ಜನರಲ್ ಸ್ಟೋರ್ಸ್

ಸಣ್ಣ ಅಂಗಡಿ, ದಿವಾನ್ಸ್ ರೋಡ್ ಮೈಸೂರು

ಮೇಲ್ಕಂಡ ಅಂಗಡಿಯನ್ನು ದಿವಾನ್ಸ್ ರೋಡಿನಲ್ಲೇ ೧೦೦ ಗಜ ಉತ್ತರಕ್ಕೆ ಬದಲಾಯಿಸಲಾಗಿದೆ. ಮಾಮೂಲಿನಂತೆ ಅನಂತಪದ್ಮನಾಭ ವ್ರತ ಮತ್ತು ದೀಪಾವಳಿ ಹಬ್ಬಗಳಲ್ಲಿ ಬಾಣ ಬಿರುಸು, ಪಟಾಕಿ ಮತ್ತು ಅನೇಕ ನೂತನ ಮಾದರಿಗಳು ದೊರೆಯುತ್ತವೆ. ಮಾನ್ಯ ಗಿರಾಕಿಗಳು ಎಂದಿನಂತೆ ಪ್ರೋತ್ಸಾಹಿಸಬೇಕೆಂದು ಕೋರಲಾಗಿದೆ.

ಎಸ್. ಶೇಷಾದ್ರಿ, ಪ್ರೊಪ್ರೈಟರ್

Edited, Printed and Published by A. R. Nagarajan at Sadhvi Press D. Subbiah Road, Mysore

ವಿವಾಹ ಮಹೋತ್ಸವಗಳು

ಮೈಸೂರು ರಾಜಪ್ರಮುಖರ ಕಛೇರಿಯಲ್ಲಿರುವ ಶ್ರೀ ಎಂ. ಆರ್. ಸುಬ್ಬಣ್ಣನವರು ತಮ್ಮ ಕುಮಾರಿ ಸೌ॥ ಎಂ. ಎಸ್. ವಿಜಯಲಕ್ಷ್ಮಿಯನ್ನು ಶ್ರೀ ಎಂ. ಶಂಕರಪ್ಪನವರ ಪುತ್ರ ಶ್ರೀ ಎಸ್. ನಾರಾಯಣಮೂರ್ತಿಯವರಿಗೆ ಕೊಟ್ಟು ಕಳೆದ ಗುರುವಾರ ವಿವಾಹವನ್ನು ನೆರವೇರಿಸಿದರು

ನಂಜನಗೂಡಿನ ನಿವೃತ್ತ ಓವರ್‌ಸಿಯರ್ ಶ್ರೀ ಎಲ್. ಕೆ. ಕೃಷ್ಣಶಾಸ್ತ್ರಿಯವರು ತಮ್ಮ ಕುಮಾರ ಶ್ರೀ ಎಲ್. ಕೆ. ರಾಜಗೋಪಾಲರವರಿಗೆ ಮದ್ರಾಸಿನಲ್ಲಿರುವ ಪಬ್ಲಿಕ್ ವರ್ಕ್ಸ್ ವೆಂಕಟೇಶ್ವರಯ್ಯರ್‌ರವರ ಪುತ್ರಿ ಸೌ॥ ಕಲ್ಯಾಣಿಯನ್ನು ತಂದುಕೊಂಡು ಮದ್ರಾಸಿನಲ್ಲಿ ಮೊನ್ನೆ ವಿವಾಹವನ್ನು ನೆರವೇರಿಸಿದರು

ವಿಶ್ವವಿದ್ಯಾಲಯದ ವಿಶೇಷೋಪನ್ಯಾಸ

ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸಗಳ ಅಂಗವಾಗಿ ನಾಳೆಯಿಂದ ಬುಧವಾರದವರೆಗೆ ದಿನವೂ ಸಂಜೆ ೫॥ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ "ಅರ್ಥ ನಿರ್ಣಯ ಶಾಸ್ತ್ರದ ಕೆಲವು ವಿಚಾರಗಳು" ಎಂಬ ವಿಷಯವಾಗಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಾಧ್ಯಾಪಕರಾದ ಶ್ರೀ ಟಿ. ಎಸ್. ಶ್ರೀಕಂಠಯ್ಯನವರು ಉಪನ್ಯಾಸ ಮಾಡುವರು. ಪ್ರೊ॥ ಡಿ. ಎಲ್. ನರಸಿಂಹಾಚಾರ್ಯರು ಅಧ್ಯಕ್ಷತೆ ವಹಿಸುವರು.

ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಎಮ್ಮೆಗಳಿಗೆ ರೋಗ

ಹೆಗ್ಗಡದೇವನಕೋಟೆ ತಾಲ್ಲೂಕಿನ ಕೆಲವು ಮತ್ತು ಇತರ ಗ್ರಾಮಗಳಲ್ಲಿ ಎಮ್ಮೆಗಳಿಗೆ ಉಚ್ಚೆ ರೋಗವು ತಲೆದೋರಿ ಹಲವಾರು ಪಶುಗಳು ಸತ್ತುಹೋಗಿವೆ. ಪಶು ವೈದ್ಯ ಇಲಾಖೆಯವರು ಈ ಬಗ್ಗೆ ಕೂಡಲೇ ಗಮನ ಕೊಟ್ಟು ರೋಗವನ್ನು ತಡೆಗಟ್ಟಲು ಕ್ರಮ ಕೈಗೊಳ್ಳಬೇಕೆಂದು ಕೋರಲಾಗಿದೆ

ಸಂಸ್ಕೃತ ಮಹಾಪಾಠಶಾಲೆಯಲ್ಲಿ ನಾಳೆ ಸಂಜೆ ೬ ಗಂಟೆಗೆ ಶ್ರೀ ವಿ. ವಿ. ವೆಂಕಟನಾರಾಯಣಾಚಾರ್ಯರ ಸಂಗೀತವು ಸೂಕ್ತ ಪಕ್ಕವಾದ್ಯಗಳೊಡನೆ ಏರ್ಪಾಡಾಗಿದೆ

ರುಚಿ ಮತ್ತು ರುಚಿ!

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್

ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ

ಪ್ರತಿ ಭಾನುವಾರದ

ಸ್ಪೆಷಲ್ ಪೊಟೆಟೊ ಬ್ರೆಡ್

ಶ್ರೀ ಕೃಷ್ಣಾ ಬೇಕರಿ,

ಡಿ. ಸುಬ್ಬಯ್ಯಾ ರೋಡ್, ಮೈಸೂರು

ಓದುತ್ತಿದ್ದ ಕೈಲಿಸಿಂದ ಧೂಮುಕಿದ್ದಕ್ಕಾಗಿ ಶಿಕ್ಷೆ

ಮೊನ್ನೆ ೧೨ ಘಂಟೆಯಲ್ಲಿ ಇಲ್ಲಿಂದ ಚಾಮರಾಜನಗರಕ್ಕೆ ಹೊರಟ ರೈಲು ಮೈಸೂರು ಸೌತ್ ನಿಲ್ದಾಣವನ್ನು ಬಿಟ್ಟನಂತರ ವೆಂಕಟಣ್ಣ ಎಂಬುವನು ಅದರಿಂದ ಧುಮುಕಿದುದಕ್ಕಾಗಿ ನೆನ್ನೆ ನಗರದ ನ್ಯಾಯಾಧೀಶರು ಅವನಿಗೆ ೫ ರೂ ಜುಲ್ಮಾನೆಯನ್ನು ವಿಧಿಸಿದರು

ಜವಾಹಿರಿ ಅಂಗಡಿಯ ಆರಂಭೋತ್ಸವ

ಸಯ್ಯಾಜಿರಾವ್ ರಸ್ತೆಯಲ್ಲಿರುವ ಬ್ಯಾಂಕರಾದ ಶ್ರೀ ಎ. ಎಲ್. ಭಾಸ್ಕರಶೆಟ್ಟಿ ಅಂಡ್ ಸನ್ಸ್‌ರವರು ತಮ್ಮ ನೂತನ ಜವಾಹಿರಿ ಅಂಗಡಿಯ ಆರಂಭೋತ್ಸವವನ್ನು ಮೊನ್ನೆ ನೆರವೇರಿಸಿ, ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವವಿಖ್ಯಾತರಾಗಿರುವ

ನವರತ್ನ—ಕಲ್ಪ

ದಿವ್ಯೌಷಧವನ್ನು ಕಂಡುಹಿಡಿದಿರುವ,

ಕವಿರಾಜ ಪಂಡಿತ ದುರ್ಗಾದತ್ತ ಶರ್ಮ,

ವೈದ್ಯ ವಾಚಸ್ಪತಿಯವರು

ಪ್ರತಿ ತಿಂಗಳು 17ನೇ ತಾರೀಖು ಮೈಸೂರಿಗೆ ಬರುವರು

ಮೈಸೂರು ಧನ್ವಂತರಿ ರಸ್ತೆಯಲ್ಲಿರುವ

ಇಂದ್ರ ಭವನದಲ್ಲಿ

ಭೇಟಿ ಮಾಡಬಹುದು ಫೋನ್ ನಂ 390

-: ಭೇಟಿಯ ಕಾಲ -

ಬೆಳಿಗ್ಗೆ 7-30 ರಿಂದ 12-30 ಮತ್ತು ಮಧ್ಯಾಹ್ನ 4 ರಿಂದ 7-30

ಮೇಲಿನ ಕಾರ್ಯಕ್ರಮವನ್ನು ಗಮನಿಸಿ ಮತ್ತು ಅವರ ಪರಿಣತ ವೈದ್ಯಕೀಯ ಸಲಹೆಯನ್ನು ಪಡೆಯಿರಿ

ಇವರು ಸಕಾಲಕ್ಕೆ ಸರಿಯಾಗಿ ಸ್ಥಳದಲ್ಲಿರಲು ವಿಮಾನದಲ್ಲಿ ಸಂಚರಿಸುತ್ತಾರೆ

ನವರತ್ನ—ಕಲ್ಪ

ಉಪಯೋಗಿಸಿರಿ

ಇದು ವಜ್ರ, ಕೆಂಪು ಮುತ್ತು, ಹವಳ, ಪಚ್ಚೆ, ಗೋಮೇಧಿಕ, ನೀಲ, ಪುಷ್ಯರಾಗಗಳು ಮುತ್ತು ಪ್ರಶಸ್ತಿಲಿಪಿ ಮುಂತಾದ 9 ಅಮೂಲ್ಯ ರತ್ನಗಳ ಸಂಯೋಗ. ಇದರಿಂದ ನರಗಳ ದೌರ್ಬಲ್ಯ, ಹೃದಯ ಸಂಬಂಧದ ವ್ಯಾಧಿಗಳು, ಬಿಳೀ ತೊನ್ನು, ಕೂಲಿ ವ್ಯಾಧಿ, ಸಾಕ್ಷಾತ್ ಬಹುಮೂತ್ರ, ಅಸ್ತಮಾ ಮತ್ತು ಇನ್ನೂ ಇತರೆ ಎಲ್ಲಾ ಸಾಮಾನ್ಯ ರೋಗಗಳು ಪ್ರಮಾದ ಕಾಯಿಲೆಗಳೂ ಸಂಪೂರ್ಣವಾಗಿ ಗುಣ ಹೊಂದುವುವು. ಅತ್ಯುತ್ತಮ ಆರೋಗ್ಯದಾಯಕ ಔಷಧಿ ಇದೊಂದೇ

NAVRATNA KALPA PHARMACY,

JULLUNDUR CITY (India)

ಇಂದ್ರ ಕೆಫೆ

ಸಯ್ಯಾಜಿರಾವ್ ರಸ್ತೆ, ಮೈಸೂರು.

ಸುಸಜ್ಜಿತವಾದ ಭವ್ಯ ನೂತನ ಫಲಾಹಾರ ಮಂದಿರ

6—9—56ನೇ ಗುರುವಾರ ತೆರೆಯಲಾಗಿದೆ

ಸ್ತ್ರೀಯರಿಗೂ, ಸಂಸಾರಿಗಳಿಗೂ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ

ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

ನ್ಯೂ ಚಾಮುಂಡೇಶ್ವರಿ ಕೆಫೆ

ಫೋನ್ ನಂ. 541 :: ಇರ್ವಿನ್ ರಸ್ತೆ :: ಮೈಸೂರು

16—9—1956ನೇ ಭಾನುವಾರದಿಂದ

ನಮ್ಮ ಫಲಾಹಾರ ಮಂದಿರವು

ಪ್ರಾರಂಭಿಸಲ್ಪಡುವುದು

—: ಫಲಾಹಾರದ ವ್ಯವಸ್ಥೆಯ ಕಾಲ —

ಬೆಳಿಗ್ಗೆ 6 ರಿಂದ 10ರ ವರೆಗೆ ಮತ್ತು ಮಧ್ಯಾಹ್ನ 3-30 ರಿಂದ 7-30ರ ವರೆಗೆ ಮಾತ್ರ

— ಊಟದ ವ್ಯವಸ್ಥೆ ಕಾಲ —

ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ಮತ್ತು ರಾತ್ರಿ 7 ರಿಂದ 10-30ರ ವರೆಗೆ

ಶುಚಿರುಚಿಯಾದ ತಯಾರಿಕೆ! ಒಮ್ಮೆ ಭೇಟಿ ಕೊಟ್ಟು ಸಂತೃಪ್ತಿ ಹೊಂದಿರಿ !!

ಸಿ. ಡಿ. ಎಂ. ಶಂಕ್ರಯ್ಯ, ಪ್ರೊಪ್ರೈಟರ್.

ಪ್ರಭುದೇವಾ ಥಿಯೇಟರ್

(ಪದ್ಮಾ ಟಾಕೀಸ್)

16—9—56ನೇ : ಭಾನುವಾರದಿಂದ . ಅಮೋಘ 3ನೇ ವಾರ

ಪ್ರತಿ ದಿನ 3 ಪ್ರದರ್ಶನಗಳು

ಮಾಡರ್ನ್ ಥಿಯೇಟರ್ಸ್‌ರವರ ಪೂರ್ಣ ಗೇವಾ ಕಲರ್ ತಮಿಳು ಚಿತ್ರ

☆ ಅಲಿಬಾಬಾವುಂ ನಲ್ವತ್ತು ತಿರುಡರ್ಗಳುಂ ★

ಪಾತ್ರ:- ಎಂ. ಜಿ. ರಾಮಚಂದ್ರನ್, ಭಾನುಮತಿ, ವೀರಪ್ಪ, ತಂಗವೇಲು, ಸಾರಂಗಪಾಣಿ

ರಿಜಿಸ್ಟರ್ಡ್ ನಂ. 793

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರವಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪ್ರತಿಗೆ 3 ಕಾಸು

ಬ್ರಾಂಕಾಲ್

71/1. ... ಬೆಂಗಳೂರು-2

ಸಂಪುಟ : ೧೮] SADHVI : MONDAY 17—9—1956 ಮೈಸೂರು : ಸೋಮವಾರ ... [ಸಂಚಿಕೆ : ...

ಈಜಿಪ್ಟಿನ ಬಗ್ಗೆ ಬ್ರಿಟನ್ ಮತ್ತು ಫ್ರಾನ್ಸುಗಳಿಗೆ ರಷ್ಯಾ ಎಚ್ಚರಿಕೆ

ಗ್ರಾಮಾಂತರದಲ್ಲಿ ವಿದ್ಯಾಭ್ಯಾಸದ ವಿಸ್ತರಣೆಗೆ ವಿಶೇಷ ಗಮನ

ವ್ಯವಸಾಯ ಮಂತ್ರಿ ಚನ್ನಬಸಪ್ಪನವರ ಭಾಷಣ

ಮೈಸೂರು ೧೭

ಇಲ್ಲಿನ ಉಪಾಧ್ಯಾಯರುಗಳ ಕಾಲೇಜಿನ ವಿಸ್ತರಣಾ ಸೇವಾ ವಿಭಾಗದವರು ಏರ್ಪಡಿಸಿದ್ದ ವಿದ್ಯಾಭ್ಯಾಸ ವಾರದ ಮುಕ್ತಾಯ ಸಮಾರಂಭವು ನೆನ್ನೆ ನಮ್ಮ ಪ್ರದರ್ಶನ ಕಟ್ಟಡದಲ್ಲಿ ನೆರವೇರಿತು. ರೇಷ್ಮೆ ಮತ್ತು ವ್ಯವಸಾಯ ಮಂತ್ರಿ ಶ್ರೀ ಜೆ. ಎಂ. ಚನ್ನಬಸಪ್ಪನವರು ಅಧ್ಯಕ್ಷತೆ ವಹಿಸಿದ್ದರು.

ಸಂಜೆ ಜೀವಣ್ಣರಾಯನ ಕಟ್ಟೆಯಲ್ಲಿ ವಿದ್ಯಾರ್ಥಿಗಳಿಂದ ಪ್ರದರ್ಶನಗಳೂ, ಕ್ರೀಡೆಗಳೂ ಜರುಗಿದುವು.

ಪ್ರಾರ್ಥನೆಯಾದನಂತರ ಉಪಾಧ್ಯಾಯರ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎ. ಸಿ. ದೇವೇಗೌಡರು ಸ್ವಾಗತಭಾಷಣ ಮಾಡಿದರು. ಶ್ರೀ ಕೆ. ಆರ್. ಎಸ್. ಗುಪ್ತರವರಿಂದ ವರದಿಯಾದನಂತರ ಅಧ್ಯಕ್ಷರು ಬಹುಮಾನಗಳನ್ನು ವಿನಿಯೋಗಿಸಿದರು.

ಶ್ರೀ ಚನ್ನಬಸಪ್ಪನವರು ಭಾಷಣ ಮಾಡಿ, ಮಕ್ಕಳ ವಿದ್ಯಾಭ್ಯಾಸಕ್ಕೆ ಹೆಚ್ಚು ಗಮನವೀಯಬೇಕೆಂದು ತಿಳಿಸಿದರು. ಮಕ್ಕಳ ಶಿಕ್ಷಣದ ಬಗ್ಗೆ ಉಪಾಧ್ಯಾಯರುಗಳ ಜವಾಬ್ದಾರಿಯನ್ನು ವಿವರಿಸಿ, ಅದನ್ನು ಉತ್ತಮವಾಗಿ ನಿರ್ವಹಿಸುತ್ತಿರುವ ಮೈಸೂರು ಅಧ್ಯಾಪಕ ವರ್ಗದವರನ್ನು ಅಭಿನಂದಿಸಿದರು.

ಇಂದಿನ ಅನೇಕ ವರ್ಗದವರು ಗ್ರಾಮಾಂತರದ ಶಿಕ್ಷಣಕ್ಕೆ ಹೆಚ್ಚು ಗಮನ ಕೊಡುವರೆಂದು ತಿಳಿಸಿದರು. ಹಳ್ಳಿಗಳಲ್ಲಿ ಜ್ಞಾನ ಪ್ರಸಾರವಿಲ್ಲದೆ, ನಾಡಿನ ಏಳಿಗೆಯು ಸಾಧ್ಯವಿಲ್ಲವೆಂದೂ ಅವರು ನುಡಿದರು. ತಾವು ಕಾಲೇಜು ವ್ಯಾಸಂಗ ಮಾಡಿದನಂತರ ಉಪಾಧ್ಯಾಯರಾಗಿ ಸೇರಲು ಹಂಬಲವಿದ್ದುದಾಗಿಯೂ, ಆದರೆ ಪರಿಸ್ಥಿತಿಯು ತಮ್ಮನ್ನು ಬೇರೆ ದಾರಿಗೆ ಎಳೆದೊಯ್ಯಿತೆಂದೂ ಅವರು ತಿಳಿಸಿದರು.

ಶ್ರೀ ಎ. ಶೇಷಯ್ಯಂಗಾರ್ಯರಿಂದ ವಂದನಾರ್ಪಣೆಯಾದನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು. ಸೇಂಟ್ ಮೇರಿ ಕಾನ್ವೆಂಟ್ ಮತ್ತು ಮಹಾರಾಣಿ ಹೈಸ್ಕೂಲು ವಿದ್ಯಾರ್ಥಿನಿಯರಿಂದ ಮನರಂಜನೆ ಕಾರ್ಯಕ್ರಮಗಳು ಜರುಗಿದುವು.

ನಗರದಲ್ಲಿರುವ ೧೮ ಪ್ರೌಢಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರ ಭಾರಿ ಮೆರವಣಿಗೆಯು ನೆನ್ನೆ ನಾನಾ ಬೀದಿಗಳಲ್ಲಿ ಹೊರಟು ಪತ್ರ ಪ್ರದರ್ಶನಾಲಯಕ್ಕೆ ಸೇರಿತು. ಅಲ್ಲಿ ಸಾರ್ವಜನಿಕ ಸಭೆಯು ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಮಹಿಳೆಯರ ಟೈಲರಿಂಗ್ ಶಾಲೆಯ ವಾರ್ಷಿಕೋತ್ಸವ

ವಾಣಿವಿಲಾಸ ಮೊಹಲ್ಲಾ ಯಾದವಗಿರಿಯಲ್ಲಿರುವ ಮಹಿಳೆಯರ ಟೈಲರಿಂಗ್ ಇನ್‌ಸ್ಟಿಟ್ಯೂಟಿನ ಪ್ರಥಮ ವಾರ್ಷಿಕೋತ್ಸವವು ನಾಳೆ ಸಂಜೆ ೫ ಗಂಟೆಗೆ ಟೌನ್‌ಹಾಲಿನಲ್ಲಿ ನೆರವೇರುವುದು. ಶ್ರೀಮನ್ಮಹಾರಾಣಿ ಶ್ರೀ ತ್ರಿಪುರಸುಂದರಮ್ಮಣ್ಣಿಯವರು ಅಧ್ಯಕ್ಷತೆ ವಹಿಸುವರು.

ಈಜಿಪ್ಟ್ ಮೇಲೆ ಧಾಳಿ ಬಗ್ಗೆ ಬ್ರಿಟನ್-ಫ್ರಾನ್ಸಿಗೆ ರಷ್ಯಾ ಎಚ್ಚರಿಕೆ

ಮಿಲಿಟರಿ ಧಾಳಿ ನಡೆದರೆ ಕಾಲುವೆ ಮತ್ತು ಎಣ್ಣೆ ಗಣಿ ನಾಶದ ಸಂಭವ

ಸೂಯೆಜ್ ಕಾಲುವೆಯನ್ನು ಬಲಾತ್ಕಾರದಿಂದ ಕಿತ್ತುಕೊಳ್ಳಲು ಬ್ರಿಟನ್ ಮತ್ತು ಫ್ರಾನ್ಸುಗಳು ಯೋಚಿಸುತ್ತಿರುವುದಾಗಿ ರಷ್ಯಾ ಸರ್ಕಾರದವರು ಆಪಾದಿಸಿ, ಮಧ್ಯ ಮತ್ತು ಹತ್ತಿರ ಪೂರ್ವ ಪ್ರದೇಶಗಳಲ್ಲಿ ಶಾಂತಿಗೆ ಭಂಗ ಬಂದರೆ ಅದರಿಂದ ರಷ್ಯದ ಭದ್ರತೆಗೆ ಧಕ್ಕೆಯಾಗುವುದೆಂದು ತಿಳಿಸಿದ್ದಾರೆ. ಈಜಿಪ್ಟಿನ ಮೇಲೆ ಮಿಲಿಟರಿ ಧಾಳಿ ನಡೆದರೆ ಸೂಯೆಜ್ ಕಾಲುವೆ ಮತ್ತು ಅರಬ್ ರಾಷ್ಟ್ರಗಳಲ್ಲಿರುವ ಎಣ್ಣೆ ಗಣಿಗಳು ನಾಶವಾಗುವುವೆಂದೂ ರಷ್ಯಾ ಸರ್ಕಾರದವರು ಎಚ್ಚರಿಸಿದ್ದಾರೆ. ಈಜಿಪ್ಟಿನ ಹತ್ತಿರವೇ ಫ್ರೆಂಚ್ ಸೈನ್ಯಗಳನ್ನು ತಂದಿಟ್ಟಿರುವುದರಿಂದ ಬಿಕ್ಕಟ್ಟು ಇನ್ನೂ ಹೆಚ್ಚಲು ಅವಕಾಶವಾಗಿದೆಯೆಂದೂ, ಅಮೆರಿಕಾ ಸಹಾಯದೊಡನೆ ಬ್ರಿಟನ್ ಮತ್ತು ಫ್ರಾನ್ಸುಗಳು ಈಜಿಪ್ಟಿನ ಮೇಲೆ ಬಲೋದ್ಯಂದಿಯನ್ನು ಮಾಡುತ್ತಿರುವುದಾಗಿಯೂ ಸೂಚಿಸಲಾಗಿದೆ.

ಕಾಲಡಿಯಲ್ಲಿ ಶೃಂಗೇರಿ ಜಗದ್ಗುರುಗಳ ಕಾರ್ಯಕ್ರಮ

ಆದಿಶಂಕರಾಚಾರ್ಯರ ಜನ್ಮಸ್ಥಳವಾದ ಕಾಲಡಿಯಲ್ಲಿ ಈಗ ಬಿಡಾರ ಮಾಡಿರುವ ಶೃಂಗೇರಿ ಜಗದ್ಗುರುಗಳಾದ ಶ್ರೀ ಶ್ರೀ ವಿದ್ಯಾ ತೀರ್ಥ ಭಾರತೀ ಸ್ವಾಮಿಗಳವರು ತಮ್ಮ ಚಾತುರ್ಮಾಸ್ಯ ಸಂಕಲ್ಪವನ್ನು ಮುಗಿಸಿಕೊಂಡು ಈ ತಿಂಗಳು ೨೦ಕ್ಕೆ ಆಲ್ವಾಯಿಗೆ ಸಮಾಪವಿರುವ ಪಾಲೂರಿಗೆ ತೆರಳುವರು. ೨೧ನೇ ತಾರೀಕು ತ್ರಿಪುನಿತ್ತುರಾದಲ್ಲಿ ಕೊಚ್ಚಿ ರಾಜರ ಅರಮನೆಯಲ್ಲಿ ಅವರು ಪೂಜಾ ಸತ್ಕಾರ ಸ್ವೀಕರಿಸುವರು. ನಂತರ ಕಾಲಡಿಗೆ ಹಿಂದಿರುಗಿ, ದೊಡ್ಡ ಗುರುಗಳ ಆರಾಧನೆ, ನವರಾತ್ರಿ ಮಹೋತ್ಸವ ಮತ್ತು ಚಂಡೀ ಹೋಮಗಳನ್ನು ನೆರವೇರಿಸುವರು. ಆಮೇಲೆ ದಕ್ಷಿಣ ದೇಶದ ಪ್ರವಾಸ ಕೈಗೊಳ್ಳುವರು. ಅವರ ಸಮ್ಮುಖದಲ್ಲಿ ಪ್ರತಿ ದಿವಸವೂ ವಿದ್ವತ್ಸಭೆ ಮತ್ತು ಉಪನ್ಯಾಸಗಳು ನಡೆಯುತ್ತಿವೆ.

ಶ್ರೀ ಆಗರಂ ರಂಗಯ್ಯನವರಿಗೆ ಶ್ರೀ ಶ್ರೀಗಳವರು ದರ್ಶನವನ್ನಿತ್ತು, ಸಂಭಾಷಣೆ ನಡೆಸಿದರು.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ಮುರಲಿ, ೭-೧೫ ಎ. ಎಂ. ಸರೋಜಾ ಮತ್ತು ಎ. ಎಂ. ಜಯಲಕ್ಷ್ಮಿ-ದೇವರ ನಾಮ. ೭-೩೦ ಗಾನವಿಹಾರ. ೮-೧೫ ರೆಕಾರ್ಡ್. ಮಧ್ಯಾಹ್ನ ೧೨ ವಾರ್ತೆ ೧೨-೩೦ ಗಾನಮಂಜರಿ. ೧೨-೪೫ ವನಿತಾ ವಿಹಾರ. ೧-೫೦ ವಾರ್ತೆ. ೨ ಸಂಗೀತ ೩-೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೫-೩೦ ಮತ್ತು ೬-೧೫ ಎ. ವಿ. ಕೃಷ್ಣಮಾಚಾರ್-ಪಿಟೀಲು. ೬-೧೫ ಆರ್. ಕೃಷ್ಣಭಟ್ಟ-ಕಾವ್ಯ ವಾಚನ ೭-೩೦ ಪ್ರಜಾಪ್ರಭುತ್ವ ಮತ್ತು ಸರ್ಕಾರಿ ಅಧಿಕಾರಿ-ಶಿವಪ್ಪರ ಭಾಷಣ ೮ ಕವಿತೆ ಹುಟ್ಟಿತು-ಬಿ. ಸಿ. ರಾಮಚಂದ್ರಶರ್ಮರಿಂದ ವಿಶೇಷ ಕಾರ್ಯಕ್ರಮ ೮-೩೦ ಉತ್ತರ ಕಲ್ಯಾಣ: ಗೀತೆಗಳು. ೧೦ ಬಿಸಿಲ್ಗುದುರೆ ಹಿಂದಿ ನಾಟಕದ ಅನುವಾದ. ೧೧-೧೫ ಬಾನುಲಿ ಗೀತೆ.

ಭಾರತಕ್ಕೆ ಬ್ರಿಟನ್ನಿನ ೨೫ ಜೆಟ್ ವಿಮಾನಗಳು

ಬ್ರಿಟನ್ನಿನ ಫಾಲೆಂಡ್ ನ್ಯಾಟ್ ಎಂಬ ಸ್ವಲ್ಪ ಮತ್ತು ಹಗುರವಾದ ೨೫ ಜೆಟ್ ವಿಮಾನಗಳನ್ನು ಭಾರತವು ಕೊಳ್ಳಲಿದೆ. ಬೆಂಗಳೂರಿನ ಹಿಂದೂಸ್ತಾನ್ ವಿಮಾನ ಕಾರ್ಖಾನೆಯಲ್ಲಿ ಅಂತಹ ವಿಮಾನಗಳನ್ನು ತಯಾರಿಸಲಾಗುವುದು.

ಮದ್ರಾಸು ಪತ್ತೆದಾರಿ ನಾಯಿಯ ಮರಣ

ವೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಪ್ರಕರಣದ ಸಂಬಂಧದಲ್ಲಿ ಪತ್ತೆ ಹಚ್ಚುವುದಿಗಾಗಿ ಮದ್ರಾಸಿನಿಂದ ಎರಡು ನಾಯಿಗಳನ್ನು ಕರೆತರಲಾಗಿತ್ತಷ್ಟೆ. ಆ ಪೈಕಿ ದೇವ ಎಂಬ ನಾಯಿಯೊಂದು ನೆನ್ನೆ ಮೃತಪಟ್ಟಿತು. ಮದ್ರಾಸು ಪೊಲೀಸರು ಹೊಂದಿದ್ದ ಆರು ಪತ್ತೆದಾರಿ ನಾಯಿಗಳಲ್ಲಿ ಈ ನಾಯಿಯು ಅತ್ಯುತ್ತಮ ಕೆಲಸ ನಡೆಸುವ ಪ್ರಾಣಿಯೆಂದು ಪ್ರಸಿದ್ಧಿಯಾಗಿತ್ತು.

ಅತ್ಯುತ್ತಮ ಚರಖಕ್ಕೆ ೧ ಲಕ್ಷ ರೂ. ಬಹುಮಾನ

ಅತ್ಯುತ್ತಮ ಚರಖಕ್ಕೆ ೧ ಲಕ್ಷ ರೂ. ಬಹುಮಾನ ಕೊಡಲಾಗುವುದೆಂದು ಕೇಂದ್ರ ಮಂತ್ರಿ ಕೆ. ಸಿ. ರೆಡ್ಡಿಯವರು ತಿಳಿಸಿರುತ್ತಾರೆ. ಇಂತಹ ಬಹುಮಾನಗಳನ್ನು ಕೊಡುವುದಾಗಿ ಹಿಂದೆಯೂ ಸರ್ಕಾರದವರು ಸೂಚಿಸಿದ್ದರು. ಕೈಯಿಂದಲೇ ತಿರುಗಿಸಬೇಕಾಗುವ ಅಗತ್ಯವಿಲ್ಲದೆ, ಅಲ್ಪ ಪ್ರಮಾಣದ ವಿದ್ಯುಚ್ಛಕ್ತಿಯ ಸಹಾಯದಿಂದ ನೂಲು ತೆಗೆಯುವಂತಹ ಚರಖಗಳನ್ನು ತಯಾರಿಸಲು ಸರ್ಕಾರದವರು ಸೂಚಿಸಿರುವರು.

ಜನ ಸಂಘದ ಅಧ್ಯಕ್ಷ ಘೋಷರ ಬಂಧನ

ಅಮೃತಸರದ ಬಳಿ ಇರುವ ಚಿಯಂತಿಪುರದಲ್ಲಿ ಪ್ರತಿಬಂಧಕಾಜ್ಞೆಯನ್ನು ಉಲ್ಲಂಘಿಸಿದ ಕಾರಣಕ್ಕಾಗಿ ಅಖಿಲ ಭಾರತ ಜನ ಸಂಘದ ಅಧ್ಯಕ್ಷ ದೇವಪ್ರಸಾದ ಘೋಷರನ್ನು ನೆನ್ನೆ ದಸ್ತಗಿರಿ ಮಾಡಲಾಯಿತು. ಅವರನ್ನು ೨೯ನೇ ತಾರೀಕಿನವರೆಗೆ ಜೈಲಿಗೆ ರಿಮಾಂಡ್ ಮಾಡಲಾಗಿದೆ.

ಗಣಪತಿ ಮಂಗಳಾರತಿ

ಅರುಣ ಪತ್ರಿಕೆಯ ಕಛೇರಿಯಲ್ಲಿ ನೆನ್ನೆ ಸಂಜೆ ಗಣಪತಿ ಮಂಗಳಾರತಿಯನ್ನು ನೆರವೇರಿಸಲಾಯಿತು. ಅನೇಕ ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಲಾಯಿತು.

ನಂಜನಗೂಡು ತಾಲ್ಲೂಕಿನಲ್ಲಿ ಭೂದಾನ ಪಾದಯಾತ್ರೆ

ನಂಜನಗೂಡು ತಾಲ್ಲೂಕಿನಲ್ಲಿನ ಭೂದಾನ ಪಾದಯಾತ್ರೆಯನ್ನು ನಾಳಿದ್ದಿನಿಂದ ೨೬ನೇ ತಾರೀಕಿನವರೆಗೆ ಕೈಗೊಳ್ಳಲಾಗುವುದು. ಹಂಪಾಪುರ, ಹೊಸವೀಡು, ಮಾದುವಿನಹಳ್ಳಿ, ಹಾಡ್ಯದಹುಂಡಿ ಮತ್ತು ಹಾಡ್ಯ, ಹುರ, ಮೊಬಳ್ಳಿ ಮತ್ತು ಹಲ್ಲರೆ, ಅಂಬಳೆ, ಹಗಿನವಾಳು, ಹುಸ್ಕೂರು ಮತ್ತು ಶಿರಮಳ್ಳಿ, ಹೆಗ್ಗಡಹಳ್ಳಿ ಮತ್ತು ನಂಜನಗೂಡಿನಲ್ಲಿ ಒಂದೊಂದು ದಿನ ಕಾರ್ಯಕ್ರಮವನ್ನು ಇಟ್ಟುಕೊಳ್ಳಲಾಗಿದೆ.

ಕನ್ನಡ ಪ್ರದೇಶಗಳ ಏಕೀಕರಣದ ವ್ಯಕ್ತಿ

ನಾಲ್ಕು ಪ್ರಾಂತಗಳ ಮುಖ್ಯರಿಗೆ ಅಧಿಕಾರಿಗಳ ನೇಮಕಕ್ಕೆ ತೀರ್ಮಾನ

ಬೆಂಗಳೂರು ೧೭

ನೂತನ ಮೈಸೂರು ಸಂಸ್ಥಾನಕ್ಕೆ ಸಂಬಂಧಿಸಿದ ಪ್ರಶ್ನೆಯ ಪರಿಶೀಲನೆಗಾಗಿ ನೇಮಿಸಿದ್ದ ಅಂತರ ಪ್ರಾಂತೀಯ ಅಧಿಕಾರಿಗಳ ಸಮಿತಿಯು, ಅದರ ಕೆಲಸಗಳು ಮುಗಿಯುವವರೆಗೆ ಬೊಂಬಾಯಿ, ಕೊಡಗು, ಹೈದರಾಬಾದು ಮತ್ತು ಮದ್ರಾಸುಗಳಲ್ಲಿ ಒಬ್ಬೊಬ್ಬ ಮಧ್ಯವರ್ತಿ ಅಧಿಕಾರಿಯನ್ನು ನೇಮಿಸಲು ಶಿಫಾರಸು ಮಾಡಿದೆ. ಆಯಾ ಪ್ರದೇಶದ ಅಧಿಕಾರಿಗಳನ್ನೇ ಈ ಕೆಲಸಕ್ಕೆ ನಿಯೋಜಿಸಲಾಗುವುದು.

ಈಜಿಪ್ಟಿಗೆ ವಿ. ಕೆ. ಕೃಷ್ಣಮೆನನ್ನರ ಪ್ರಯಾಣ

ಲಂಡನ್ನಿಗೂ ಭೇಟಿ ಕೊಡುವ ಸಂಭವ

ಈಜಿಪ್ಟಿನ ಅಧ್ಯಕ್ಷರ ಆಹ್ವಾನವನ್ನು ಮನ್ನಿಸಿ ಭಾರತದ ಮಂತ್ರಿ ವಿ. ಕೆ. ಕೃಷ್ಣಮೆನನ್ನರು ಕೈರೋವಿಗೆ ವಿಮಾನದಲ್ಲಿ ತೆರಳಿದರು. ಕಳೆದ ವಾರವೇ ಅವರಿಗೆ ಆಹ್ವಾನ ಬಂದಿತ್ತಾದರೂ, ಅವರು ಸೂಯೆಜ್ ಸಮಸ್ಯೆ ಬಗ್ಗೆ ಹೆಚ್ಚಿನ ವಿದ್ಯಮಾನಗಳಿಗಾಗಿ ಕಾದಿದ್ದರು. ಅವರು ಯಾವ ನಿರ್ದಿಷ್ಟ ಯೋಜನೆಯನ್ನೂ ಇಟ್ಟುಕೊಂಡು ಹೊರಟಿಲ್ಲ. ತಾವು ಲಂಡನ್ನಿಗೆ ಭೇಟಿ ಕೊಡುವ ಸಂಭವವಿರುವುದೆಂದೂ, ಆದರೆ ಯಾವಾಗ ಎಂಬುದನ್ನು ಹೇಳಲು ಸಾಧ್ಯವಿಲ್ಲವೆಂದೂ ಮೆನನ್ನರು ತಿಳಿಸಿರುವರು. ದೆಹಲಿಯನ್ನು ಬಿಡುವ ಮುಂಚೆ ಅವರು ಬ್ರಿಟಿಷ್ ಹೈಕಮಿಷನರ್ ಮಾಲ್ಕಂ ಮಾಕ್‌ಡಾನಲ್ಡ್‌ರವರನ್ನು ಕಂಡು ಮಾತುಕತೆ ನಡೆಸಿದರು.

ಕಲ್ಲಿದ್ದಲು ಕೆಲಸಗಾರರ ಬೋನಸ್ ವಿರುದ್ಧವಾಗಿ ಮುಷ್ಕರ

ಕೋಲಾರ ಚಿನ್ನದ ಗಣಿ ಮತ್ತು ದೇಶದ ಇತರ ಕಡೆಗಳಲ್ಲಿ ಇರುವ ಕಾರ್ಖಾನೆಗಳಲ್ಲಿರುವ ರೈಲ್ವೆ ಕಾರ್ಮಿಕರಿಗೆ ೨೫ರಿಂದ ೩೦ಕ್ಕೆ ಹೆಚ್ಚು ಜನರಿಗೆ ಸಿಬ್ಬಂದಿ ಬೋನಸ್ ನೋಟೀಸನ್ನು ಕೊಡಲಾಗಿದೆ. ಬೆಂಗಳೂರು, ಮುರಾರ್‌ನಗರ, ಅಂಬರ್‌ನಾಥ್, ಅರವಂಗಾಡಿನಲ್ಲಿರುವ ಕಾರ್ಖಾನೆಗಳ ಕೆಲಸಗಾರರಲ್ಲಿ ಅನೇಕರಿಗೂ ಇದೇ ರೀತಿ ನೋಟೀಸು ಕೊಡಲಾಗಿದೆ. ಈ ಬಗ್ಗೆ ಪ್ರತಿಭಟನೆಗಾಗಿ ಅವರ ಸಂಘದವರು ಮುಷ್ಕರ ಹೂಡಲು ನಿರ್ಧರಿಸಿದ್ದಾರೆ. ರಾಷ್ಟ್ರದ ೨ ಲಕ್ಷ ಜನರು ಈ ಕೆಲಸದಲ್ಲಿ ನಿರತರಾಗಿರುವರು.

ಕಾಮರ್ಸ್ ಪರೀಕ್ಷೆಯಲ್ಲಿ ಶ್ರೀಮತಿ ಕಾಲೇಜು ವಿದ್ಯಾರ್ಥಿನಿಗೆ ಪ್ರಥಮ ಸ್ಥಾನ

ಕಳೆದ ಏಪ್ರಿಲ್‌ನಲ್ಲಿ ನಡೆದ ಸರ್ಕಾರಿ ಕಮರ್ಷಿಯಲ್ ಪರೀಕ್ಷೆಯಲ್ಲಿ ರಾಜಧಾನಿಯ ಶ್ರೀಮತಿ ಕಾಲೇಜ್ ಆಫ್ ಕಾಮರ್ಸ್ ಸಂಸ್ಥೆಯ ವಿದ್ಯಾರ್ಥಿನಿ ಶ್ರೀಮತಿ ಆರ್. ಸುಮಿತ್ರಮ್ಮನವರು ಸೀನಿಯರ್ ಲಾ ಅಂಡ್ ಪ್ರಾಕ್ಟೀಸ್ ಆಫ್ ಕಾಮರ್ಸಿನಲ್ಲಿ ಇಡೀ ಸಂಸ್ಥಾನಕ್ಕೆ ಪ್ರಥಮ ಸ್ಥಾನವನ್ನು ಗಳಿಸಿರುವರು. ಅವರು ಜೂನಿಯರ್ ಗ್ರೇಡು ಪರೀಕ್ಷೆಯಲ್ಲೂ ಮೊದಲನೇ ರ್‍ಯಾಂಕನ್ನು ಪಡೆದಿದ್ದರು

ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನ

ಬರುವ ತಿಂಗಳು ನಡೆಸಲು ನಿರ್ಧಾರ

ಮೈಸೂರು, ೧೬

ಮೈಸೂರು ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆಯು ನೆನ್ನೆ ಶ್ರೀ ಕೆ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು, ಬರುವ ತಿಂಗಳ ಮೂರನೇ ವಾರದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯಕರ್ತರ ಸಮ್ಮೇಳನವನ್ನು ಕರೆಯಬೇಕೆಂದು ನಿರ್ಧರಿಸಲಾಯಿತು. ಇದರ ಆರಂಭೋತ್ಸವವನ್ನು ನೆರವೇರಿಸಲು ಬೊಂಬಾಯಿ ಮುಖ್ಯ ಮಂತ್ರಿ ಮೊರಾರ್ಜೀ ದೇಸಾಯ್ ಅಥವಾ ಅಲ್ಲಿನ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಎಸ್. ಕೆ. ಪಾಟೀಲ್ ಇಲ್ಲವೇ ಮದ್ರಾಸಿನ ಮುಖ್ಯ ಮಂತ್ರಿ ಕಾಮರಾಜ ನಾಡಾರರನ್ನು ಆಹ್ವಾನಿಸಬೇಕೆಂದು ತೀರ್ಮಾನಿಸಲಾಯಿತು.

ಸಭೆಯಲ್ಲಿ ಭಾಗವಹಿಸಿದ್ದ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಮಾತನಾಡಿ, ರಾಜಕೀಯ ಸಂತ್ರಸ್ತರಿಗೆ ಜಮೀನು ಕೊಡುವ ವಿಚಾರವನ್ನು ಪ್ರಸ್ತಾಪಿಸಿ ಜಿಲ್ಲೆಯ ಎಲ್ಲ ತಾಲ್ಲೂಕು ಕಛೇರಿ ಬೋರ್ಡುಗಳ ಮೇಲೆ ದರಖಾಸ್ತಿನ ಜಮೀನುಗಳ ಪಟ್ಟಿಯನ್ನು ಹಾಕಬೇಕೆಂದು ಸೂಚಿಸಲಾಗುವುದೆಂದೂ, ರಾಜಕೀಯದಲ್ಲಿ ನೊಂದವರು ತಮಗೆ ಬೇಕಾದ ಜಮೀನಿನ ನಂಬರನ್ನು ತಾಲ್ಲೂಕು, ಜಿಲ್ಲಾ ಮತ್ತು ಪ್ರದೇಶ ಕಾಂಗ್ರೆಸ್ ಸಮಿತಿಗಳ ಮೂಲಕ ಕಳುಹಿಸಿಕೊಟ್ಟರೆ, ೧ ವಾರದಲ್ಲಿ ಅವರಿಗೆ ಜಮೀನುಗಳನ್ನು ಕೊಡಲಾಗುವುದೆಂದೂ ತಿಳಿಸಿದರು

ಕಬ್ಬಹಳ್ಳಿ ವಿದ್ಯಾರ್ಥಿನಿಲಯ ಸಂಘದ ಆರಂಭ ಭಾಷಣ

ರಾಜಧಾನಿಯ ಕಬ್ಬಹಳ್ಳಿ ವಿದ್ಯಾರ್ಥಿನಿಲಯ ಸಂಘದ ಆರಂಭ ಭಾಷಣವು ನಾಳೆ ಸಂಜೆ ೬ ಗಂಟೆಗೆ ಕ್ಲಬ್ ಹೌಸ್ ಭವನದಲ್ಲಿ ನಡೆಯುವುದು. ಶ್ರೀ ಎಸ್. ನಿಜಲಿಂಗಪ್ಪನವರು ಭಾಷಣ ಮಾಡುವರು. ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚರವರು ಅಧ್ಯಕ್ಷತೆ ವಹಿಸುವರು

ಪೂಣಚ್ಚರವರಿಂದ ಕಿವುಡ ಮೂಕರ ಶಾಲಾ ಸಮಾರಂಭ

ರಾಜಧಾನಿಯ ಕಿವುಡ ಮೂಕರ ಬಾಲಿಕರ ಶಾಲೆಯಲ್ಲಿ ಸುವರ್ಣ ಮಹೋತ್ಸವದ ವಿಭಾಗದ ಶಂಕುಸ್ಥಾಪನೆಯನ್ನು ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚರವರು ನಾಳೆ ಬೆಳಿಗ್ಗೆ ೧೦ ಗಂಟೆಗೆ ನೆರವೇರಿಸುವರು. ಇದರ ವೆಚ್ಚವನ್ನು ಕೇಂದ್ರ ಸರ್ಕಾರದವರು ಕೊಟ್ಟಿರುವರು.

ಪ್ರವಾಹದಿಂದ ೭೫೦ ಹಳ್ಳಿಗಳಿಗೆ ತೊಂದರೆ

ಉತ್ತರ ಪ್ರದೇಶದ ರಪ್ತಿ, ಚೋಟಿ ಗಂಡಕಿ, ಗಾಗ್ರ ಮತ್ತು ಕುವಂದ್ ಎಂಬ ನದಿಗಳಲ್ಲಿ ಮಳೆಯ ಪರಿಣಾಮವಾಗಿ ಹೆಚ್ಚು ಪ್ರವಾಹವು ಬಂದು ೭೮೦ ಹಳ್ಳಿಗಳಿಗೆ ನೀರು ನುಗ್ಗಿದೆ. ಮಿರ್ಜಾಪುರ ಎಂಬಲ್ಲಿ ೧೫೨ ಗಂಟೆಯಿಂದಲೂ ಎಡೆಬಿಡದೆ ಮಳೆ ಬರುತ್ತಿದ್ದು ೩೦೦ ಮನೆಗಳು ಉರುಳಿವೆ. ಜಿಲ್ಲೆಯಲ್ಲಿ ೧,೦೦೦ ಮನೆಗಳು ನಷ್ಟವಾಗಿವೆ.

ಲೋಕ ಸಭೆಯಲ್ಲಿ ಓಟು ರಿಕಾರ್ಡು ಮಾಡುವ ಯಂತ್ರ

ಲೋಕ ಸಭೆಯಲ್ಲಿ ಓಟು ರಿಕಾರ್ಡು ಮಾಡುವ ಯಂತ್ರವನ್ನು ಬರುವ ವರ್ಷದ ಆದಿಯಲ್ಲಿ ಸ್ಥಾಪಿಸಲಾಗುವುದು.

ಭತ್ತದ ಬೆಲೆ ವಿಪರೀತವಾಗಿದೆ

ಶ್ರೀರಂಗಪಟ್ಟಣದಲ್ಲಿ ದಾಸ್ತಾನುಗಾರರು ಭತ್ತವನ್ನು ಪಲ್ಲಕ್ಕೆ ೩೫ ರೂ.ನಂತೆ ಮಾರುತ್ತಿರುವರೆಂದೂ, ಇದರಿಂದ ಬಡವರಿಗೆ ತುಂಬಾ ತೊಂದರೆಯಾಗಿರುವುದಾಗಿಯೂ, ಅಕ್ಕಿಯ ಬೆಲೆಯು ಪಲ್ಲಕ್ಕೆ ೬೨ ರೂ. ಆಗಿದೆಯೆಂದೂ ಮೈಸೂರು ಬೆಂಗಳೂರುಗಳಲ್ಲಿ ಕೊಡುತ್ತಿರುವಂತೆ ಇಲ್ಲೂ ಸರ್ಕಾರದವರು ರೂ.೧೬ ಸೇರಿನಂತೆ ಅಕ್ಕಿ ಮಾರಾಟದ ವ್ಯವಸ್ಥೆ ಮಾಡಬೇಕೆಂದೂ ಅಲ್ಲಿನ ನಿವಾಸಿಯೊಬ್ಬರು ಪತ್ರ ಬರೆದು ತಿಳಿಸಿದ್ದಾರೆ

ಸಾಹಿತ್ಯ ಕೂಟ

ಚಾಮರಾಜನಗರದ ಶ್ರೀ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಸಂಸ್ಥೆಯ ಆಶ್ರಯದಲ್ಲಿ ಕಳೆದ ೧೩ರಂದು ಒಂದು ಸಾಹಿತ್ಯ ಕೂಟವನ್ನು ಏರ್ಪಡಿಸಲಾಗಿದ್ದಿತು. ಸ್ಥಳೀಯ ಪ್ರೌಢಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ತಳಸಿಂಗರಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಕನ್ನಡ ಸಾಹಿತ್ಯ ಪರಿಷತ್ತಿನ ಕಾರ್ಯದರ್ಶಿ ಶ್ರೀ ಸಿ. ಕೆ. ನಾಗರಾಜರಾಯರು "ರನ್ನನ ಗದಾಯುದ್ಧ" ದ ವಿಷಯವಾಗಿ ವಿಮರ್ಶಾತ್ಮಕ ಭಾಷಣ ಮಾಡಿದರು. ಚಿ|| ವಿಜಯಕುಮಾರಿಯಿಂದ ಪ್ರಾರ್ಥನೆ ಮತ್ತು ಶ್ರೀ ರಾಮಸ್ವಾಮಿಯವರಿಂದ ರಾಘವಾಂಕ ಕವಿಯ ಗದಾಯುದ್ಧದ ಕಾವ್ಯ ವಾಚನವಾಯಿತು. ಶ್ರೀ ನಾಗಪ್ಪನವರಿಂದ ವಂದನಾರ್ಪಣೆ, ಮಹಾ ಮಂಗಳಾರತಿ ಮತ್ತು ರಾಷ್ಟ್ರಗೀತೆ ಆದ ನಂತರ ಸಭೆ ಮುಕ್ತಾಯವಾಯಿತು.

ಸೂಯೆಜ್ ಕಾಲುವೆ ಕೆಲಸದಿಂದ ೯೩ ಮಂದಿ ಚಾಲಕರ ನಿರ್ಗಮನ

ಸೂಯೆಜ್ ಕಾಲುವೆಯಲ್ಲಿ ಕೆಲಸಕ್ಕಿದ್ದ ೯೩ ಮಂದಿ ಚಾಲಕರೂ ೪೦೦ ವಿದೇಶಿ ನೌಕರರು ಮೊನ್ನೆ ಕೆಲಸ ಬಿಟ್ಟು ನಿರ್ಗಮಿಸಿದರು. ಇದರೂ ಹಡಗುಗಳ ಸಂಚಾರಕ್ಕೆ ಅಡ್ಡಿಯಿಲ್ಲದೆ ನಿತ್ಯದ ಸಂಚಾರಕ್ಕಿಂತ ಹೆಚ್ಚಾಗಿ, ಮೊನ್ನೆ ೪೧ ಮತ್ತು ಶುಕ್ರವಾರ ೫೦ ಹಡಗುಗಳು ಕಾಲುವೆ ಮೂಲಕ ಹೋದುವು. ಗುರುವಾರ ೪೩ ಮತ್ತು ಬುಧವಾರ ೪೦ ಹಡಗುಗಳು ಪ್ರಯಾಣ ಮಾಡಿದ್ದುವು. ಈಗಿನ ಸಂಚಾರದ ಮಟ್ಟವನ್ನೇ ಮುಂದೆಯೂ ಇಟ್ಟುಕೊಂಡು ಬರಲು ಸಾಧ್ಯವೆಂಬ ಭರವಸೆಯನ್ನು ಈ ಕಾಲುವೆಯ ಈಗಿನ ಮೇಲ್ವಿಚಾರಕರು ಹೊಂದಿರುವರು.

ಕಾಶಿಯಲ್ಲಿ ಮಳೆಯಿಂದ ೧,೦೦೦ ಮನೆಗಳು ನೆಲಸಮ

ಕಾಶಿ ನಗರದಲ್ಲಿ ಕಳೆದ ಒಂದು ವಾರದಿಂದ ವಿಪರೀತ ಮಳೆಯ ಪರಿಣಾಮವಾಗಿ ೧,೦೦೦ ಮನೆಗಳು ನೆಲಸಮವಾಗಿವೆ. ೪೦೦ ಟೆಲಿಫೋನುಗಳು ಕೆಟ್ಟುಹೋಗಿ, ಅವುಗಳ ಅನೇಕ ಕಂಬಗಳು ಉರುಳಿವೆ.

ಪುರಾಣ ವಾಚನ

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಸಂಸ್ಕೃತ ಕಾಲೇಜಿನಲ್ಲಿ ವಿ|| ಅಧ್ಯಾಪಕ ಟಿ. ಎಸ್. ವಿಶ್ವೇಶ್ವರದೀಕ್ಷಿತರು ಅನಂತಪದ್ಮನಾಭ ಕಥೆ ಎಂಬ ವಿಷಯವಾಗಿ ಪುರಾಣವಾಚನ ಮಾಡುವರು.

ರಾಜಪ್ಪಶೆಟ್ಟಿಯವರಿಗೆ ಕೇಂದ್ರ ವಾರ್ತಾ ಇಲಾಖೆ ಉದ್ಯೋಗ

ಲೋಕ ಸಭೆಯ ಸಂಶೋಧನೆ ಮತ್ತು ರೆಫರೆನ್ಸ್ ಶಾಖೆಯಲ್ಲಿ ಅನುವಾದಕರಾಗಿದ್ದ ಮೈಸೂರಿನ ಶ್ರೀ ಆರ್. ರಾಜಪ್ಪಶೆಟ್ಟಿಯವರನ್ನು ಕೇಂದ್ರ ವಾರ್ತಾ ಮತ್ತು ಪ್ರಚಾರ ಇಲಾಖೆಯ ಸಹಾಯಕ ಸಂಶೋಧನಾ ಅಧಿಕಾರಿಯಾಗಿ ನೇಮಿಸಲಾಗಿದೆ. ಅವರು ಕಳೆದ ೧೧ ರಂದು ಅಧಿಕಾರವನ್ನು ವಹಿಸಿಕೊಂಡರು. ಅವರು ಮೈಸೂರು ವಿಶ್ವವಿದ್ಯಾಲಯದಲ್ಲಿ ರಾಜ್ಯ ಶಾಸ್ತ್ರದ ಉಪನ್ಯಾಸಕರಾಗಿಯೂ, ಆಕಾಶವಾಣಿಯಲ್ಲಿ ಬಾನುಲಿ ನಾಟಕ ಕರ್ತೃಗಳಾಗಿಯೂ ಕೆಲಸ ಮಾಡಿದ್ದರು.

ಅಲಿಘಡ ವಿದ್ಯಾರ್ಥಿಗಳ ನಡತೆಗಾಗಿ ಅಧಿಕಾರಿಯ ವಿಷಾದ

ಉತ್ತರ ಪ್ರದೇಶದ ಗವರ್ನರ್ ಕೆ. ಎಂ. ಮುನ್ಷಿಯವರಿಗೆ ಅಲಿಘಡ ವಿಶ್ವವಿದ್ಯಾಲಯದ ಪ್ರೋ ವೈಸ್ ಚಾನ್ಸೆಲರರು ಪತ್ರ ಬರೆದು, ಕಳೆದ ಆಗಸ್ಟ್ ೩೧ ಮತ್ತು ಸೆಪ್ಟೆಂಬರ್ ೧ ರಲ್ಲಿ ವಿಶ್ವವಿದ್ಯಾಲಯದ ಕೆಲವು ವಿದ್ಯಾರ್ಥಿಗಳು ಮುನ್ಷಿಯವರ ಬಳಿ ತೋರಿದ ವರ್ತನೆಗಾಗಿ ಕ್ಷಮಾಪಣೆಯನ್ನು ಕೋರಿರುತ್ತಾರೆ. ಅಲಿಘಡದಲ್ಲಿ ಆರಂಭವಾದ ಘಟನೆಗಳು ಇಡೀ ಭಾರತಕ್ಕೆ ವ್ಯಾಪಿಸಿದುವೆಂದೂ, ವಿಶ್ವವಿದ್ಯಾಲಯವು ಪಡೆದಿದ್ದ ವಿಶ್ವಾಸವನ್ನು ಪುನಃ ಪಡೆಯಲು ಎಲ್ಲರೂ ಶಕ್ತಿಮೀರಿ ಕೆಲಸ ಮಾಡಬೇಕಾಗಿದೆಯೆಂದೂ ಮುನ್ಷಿಯವರು ತಿಳಿಸಿರುತ್ತಾರೆ.

ವಿದ್ಯಾಭ್ಯಾಸ ವಾರಾಚರಣೆಯಲ್ಲಿ ಪೋಷಕರಿಗೆ ನಿರಾಶೆ

ದಸರಾ ವಸ್ತು ಪ್ರದರ್ಶನದ ಕಟ್ಟಡದಲ್ಲಿ ಇತ್ತೀಚೆಗೆ ನಡೆದ ವಿದ್ಯಾಭ್ಯಾಸ ವಾರದ ಸಮಯದಲ್ಲಿ ಬಾಲಕರ ವಿವಿಧ ವಿನೋದಾವಳಿ, ಮನರಂಜನೆ, ಉಪಾಧ್ಯಾಯರ ಪ್ರಾಜೆಕ್ಟ್ ಕೆಲಸಗಳನ್ನು ನೋಡಲು ಹೋದ ಪೋಷಕರಿಗೂ, ಸಾರ್ವಜನಿಕರಿಗೂ ನಿರಾಶೆಯಾಯಿತೆಂದೂ, ಜನರು ಕೂಡಲು ವ್ಯವಸ್ಥೆಯಿರಲಿಲ್ಲವೆಂದೂ, ಧ್ವನಿವರ್ಧಕ ಯಂತ್ರಗಳು ಕೆಲಸ ಮಾಡದೆ ಅವ್ಯವಸ್ಥೆಯಾಗಿತ್ತೆಂದೂ ಹೆಚ್ಚು ಜನರು ಸೇರುವ ಕಡೆ ಯೋಗ್ಯ ವ್ಯವಸ್ಥೆಯನ್ನು ಮಾಡಬೇಕೆಂದೂ ಕೋರಿ ನಿವೃತ್ತ ಶಾಲಾ ಉಪಾಧ್ಯಾಯರೊಬ್ಬರು ಪತ್ರ ಬರೆದು ತಿಳಿಸಿರುತ್ತಾರೆ.

ಅನಂತನ ವ್ರತ ಕಥಾ ಕಾವ್ಯವಾಚನ

ಜಯನಗರದಲ್ಲಿರುವ ಪೌರಾಣಿಕ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ಅನಂತ ಚತುರ್ದಶಿ ಪ್ರಯುಕ್ತ ನಾಳೆ ಸಂಜೆ ೬|| ಗಂಟೆಗೆ ಶ್ರೀಮತಿ ವಸುಂಧರಾದೇವಿಯವರಿಂದ ಶ್ರೀ ಅನಂತಪದ್ಮನಾಭ ವ್ರತ ಕಥೆಯ ಕಾವ್ಯ ವಾಚನವಿದೆ. ಶ್ರೀ ಕೃಷ್ಣಗಿರಿ ಕೃಷ್ಣರಾಯರು ವ್ಯಾಖ್ಯಾನ ಮಾಡುವರು

Edited, Printed and Published by A. R. Nagarajan at Sadhvi Press D. Subbiah Road, Mysore

ಹಾಸಿಗೆ-ದಿಂಬು

ಮದ್ರಾಸಿನಲ್ಲಿ ತಯಾರಿಸಿ [illegible] ಮಾರುತ್ತೇವೆ

ಬಾಂಬೂಸ್ಟಾರ್ ಕಂಪನಿ,

[illegible] ಮೈಸೂರು

ಫಲಪುಷ್ಪಗಳ ಪ್ರದರ್ಶನ

ಕರ್ಜನ್ ಪಾರ್ಕ್, ಮೈಸೂರು

22-9-56 .... ಪ್ರವೇಶ ಧನ 0-8-0

23, 24 ಮತ್ತು 25 9-56 .... ಪ್ರವೇಶ ಧನ 0-4-0

ಕೆ. ಬೀಜುಶೆಟ್ಟಿ.
ಗೌ|| ಕಾರ್ಯದರ್ಶಿ

SREE GANESH TALKIES

FAIR WIND

(Extended for tomorrow also)

On 19-9-56 : For one day only

DANCE LITTLE LADY

From 20-9-56 : For 2 days

Woman of the North Country

(True Color)

ಮೈಸೂರಿನಲ್ಲಿ ಪ್ರತಿ ತಿಂಗಳು 17ನೇ ತಾರೀಖು

ವಿಶ್ವ ವಿಖ್ಯಾತರಾಗಿರುವ

ನವರತ್ನ—ಕಲ್ಪ

ನಿತ್ಯೌಷಧವನ್ನು ಕಂಡುಹಿಡಿದಿರುವ,
ಕವಿರಾಜ ಪಂಡಿತ
ದುರ್ಗಾದತ್ತ ಶರ್ಮ,
ವೈದ್ಯ ವಾಚಸ್ಪತಿಯವರು
ಪ್ರತಿ ತಿಂಗಳು 17ನೇ ತಾರೀಖು
ಮೈಸೂರಿಗೆ ಬರುವರು
ಮೈಸೂರು ಧನ್ವಂತರಿ ರಸ್ತೆಯಲ್ಲಿರುವ
ಇಂದ್ರ ಭವನದಲ್ಲಿ
ಭೇಟಿ ಮಾಡಬಹುದು : ಫೋನ್ ನಂ 590
—: ಭೇಟಿಯ ಕಾಲ :—
ಬೆಳಿಗ್ಗೆ 7-30 ರಿಂದ 12-30 ಮತ್ತು
ಮಧ್ಯಾಹ್ನ 4 ರಿಂದ 7-30
ರೋಗಿಗಳ [illegible] ಗಮನಿಸಿ
ಮತ್ತು ಅವರ [illegible] ವೈದ್ಯಕೀಯ
ಸಲಹೆಯನ್ನು ನೀಡುವರು
[illegible]

ನವರತ್ನ — ಕಲ್ಪ
ಉಪಯೋಗಗಳು
[illegible] 9 [illegible]

NAVRATNA KALPA PHARMACY,
JULLUNDUR CITY (India)

ಮೈಸೂರು ಜಿಲ್ಲಾ ಬಸ್ ಮಾಲೀಕರ ಸಂಘ, ಮೈಸೂರು

ಮೈಸೂರು ಜಿಲ್ಲಾಧಿಕಾರಿಗಳ G. 2. P. R. 98/55-56 dated 13-9-56 ರ ನೋಟಿಫಿಕೇಷನ್ ಪ್ರಕಾರ ಈ ಕೆಳಗೆ ಕಂಡ ಬಸ್ಸುಗಳ ಪರಿಶೀಲನೆಯು (Inspection) 24-9-56 ಮತ್ತು 25-9-56 ನೆಯ ಎರಡು ದಿನಗಳಲ್ಲೂ ಬೆಳಿಗ್ಗೆ 8—30 ಗಂಟೆಗೆ ನಡೆಯುತ್ತಾದ್ದರಿಂದ ಬಸ್ಸು ಮಾಲೀಕರುಗಳೆಲ್ಲರೂ ಆ ದಿನ ತಮ್ಮ ಬಸ್ಸುಗಳನ್ನು ಇನ್ಸ್ಪೆಕ್ಷನ್ನಿಗೆ ಹಾಜರ್ಪಡಿಸಬೇಕಾಗಿ ಕೋರಲಾಗಿದೆ.

MYM. 196, 227, 637, 620, 630, 618, 1020, 940, 978 913, 438, 1259, 327, 912, 194, 1363, 732, 1426 1411, 256, 576, 744, 1037, 489, 273, 635, 769 556, 621, 1127, 1295, 1022, 1263, 1269, 1408 1485, 107, 1152, 1442, 412, 1537, 1021, 192 640, 219, 242, 1008, 708, 269, 198, 175, 668 562, 1468, 440, 441.

MYC. 6946 MYB. 373 MYH. 392

ಎ. ಆರ್. ನರಸಿಂಹಯ್ಯಂಗಾರ್, ಗೌ|| ಕಾರ್ಯದರ್ಶಿ

ಹರಾಜು ನೋಟೀಸು

ಈ ಕೆಳಗೆ ನಮೂದಿಸಿರುವ ಸಾಮಾನುಗಳನ್ನು ಅವುಗಳ ಮುಂದೆ ನಮೂದಿಸಿರುವ ಸ್ಥಳ ಮತ್ತು ತಾರೀಖುಗಳಲ್ಲಿ ಬಹಿರಂಗವಾಗಿ ಹರಾಜು ಮಾರಾಟ ಮಾಡಲಾಗುತ್ತದೆ.

1. ಸುಮಾರು 50 ಟನ್ ಮಿಶ್ರವಾದ ತೇಗದ ಮರ ಮತ್ತು ಇತರ ಮರದ ಸರೋಟು ತುಂಡುಗಳನ್ನೂ 2. ಸುಮಾರು 30 ಟನ್ ಮಿಶ್ರವಾದ ಗರಗಸದ ಮತ್ತು ಹತ್ತರಿ ಚೂಟ್ಟುಗಳನ್ನೂ	20—9—56 ನೇ ಗುರುವಾರ ಬೆಳಿಗ್ಗೆ 10 ಘಂಟೆಗೆ ಮೈಸೂರುಸೌತ್ ಸದರ್ನ್ ರೈಲ್ವೆ ವರ್ಕ್‌ಷಾಪ್ ಆವರಣದಲ್ಲಿ
3. ಸುಮಾರು 20 ಟನ್ ಜಾತಿಯ ಮರದ ಪೆಟ್ಟಿಗೆ ಮತ್ತು ಹಲಗೆಗಳನ್ನೂ	20.9.56ನೇ ಗುರುವಾರ ಬೆಳಿಗ್ಗೆ 11 ಗಂಟೆಗೆ ಮೈಸೂರುಸೌತ್ ಸದರ್ನ್ ರೈಲ್ವೆ ಸೆಂಟ್ರಲ್ ಸ್ಟೋರ್ಸ್ ಆವರಣದಲ್ಲಿ

ಈ ಹರಾಜಿಗೆ ಅನ್ವಯಿಸುವ ನಿಬಂಧನೆಗಳ ನಮೂನೆಯನ್ನು ಕೆಳಗೆ ನಮೂದಿಸಿರುವ ಆಫೀಸಿನಲ್ಲಿ ಪಡೆಯಬಹುದು.

ಅಸಿಸ್ಟೆಂಟ್ ಕಂಟ್ರೋಲರ್ ಆಫ್ ಸ್ಟೋರ್ಸ್,
ಸದರ್ನ್ ರೈಲ್ವೆ ಮೈಸೂರು ಸೌತ್

ರಿಜಿಸ್ಟ್ರೇಷನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಇಂದಿನ ಪತ್ರಿಕೆ 3 ಕಾಸು

ಚಂದಾ ದರ

ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ

ಅಂಚೆ ಮೂಲಕ
ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೭] SADHVI : TUESDAY 18—9—1956 ಮೈಸೂರು : ಮಂಗಳವಾರ ೧೮—೯—೧೯೫೬ [ಸಂಚಿಕೆ : ೪೫

ದಕ್ಷಿಣ ಭಾರತಕ್ಕೆ ಶೀಘ್ರದಲ್ಲೇ ೩೫ ಲಕ್ಷ ಟನ್ ಅಕ್ಕಿ-ಗೋಧಿ

ದಕ್ಷಿಣ ಭಾರತಕ್ಕೆ ೨೦ ಲಕ್ಷ ಟನ್ ಅಕ್ಕಿ ಮತ್ತು ೧೫ ಲಕ್ಷ ಟನ್ ಗೋಧಿ

ಕೇಂದ್ರ ಉಪ ಮಂತ್ರಿ ಎಂ. ವಿ. ಕೃಷ್ಣಪ್ಪ ನವರ ಸೂಚನೆ

ಬೆಂಗಳೂರು ೧೮

ಕೇಂದ್ರ ಆಹಾರ ಉಪ ಮಂತ್ರಿ ಶ್ರೀ ಎಂ. ವಿ. ಕೃಷ್ಣಪ್ಪನವರು ಇಲ್ಲಿನ ಪೌರಸಭಾ ಆಹಾರ ಡಿಪೋವನ್ನು ನೆನ್ನೆ ಆರಂಭಿಸುತ್ತಾ ಮಾತನಾಡಿ, ಅತಿ ಶೀಘ್ರದಲ್ಲೇ ದಕ್ಷಿಣ ಭಾರತದ ರೇವುಗಳಿಗೆ ೧೫ ಲಕ್ಷ ಟನ್ ಅಮೆರಿಕಾ ಗೋಧಿ ಮತ್ತು ೨೦ ಲಕ್ಷ ಟನ್ ಬರ್ಮಾ ಅಕ್ಕಿಯು ಬರಲಿರುವುದಾಗಿಯೂ, ಈ ಹೆಚ್ಚಿನ ರಿಸರ್ವ್ ದಾಸ್ತಾನಿನ ಪರಿಣಾಮವಾಗಿಯೂ ಮತ್ತು ಭತ್ತ ಬೆಳೆಯುವ ಪ್ರದೇಶದಲ್ಲಿ ಉತ್ತಮ ಪರಿಸ್ಥಿತಿಯ ಸನ್ನಿವೇಶದಿಂದಲೂ ಆಹಾರ ಧಾನ್ಯಗಳ ಪರಿಸ್ಥಿತಿ ಅಗತ್ಯವಿಲ್ಲದ ಬೆಲೆಯು ಇಳಿಯುವ ಪ್ರವೇಯವಿರುವುದೆಂದೂ ತಿಳಿಸಿದರು. ದಾಸ್ತಾನನ್ನು ಹೊರಗೆ ತೆಗೆಯದಿರುವುದರಿಂದ ವರ್ತಕರಿಗೆ ನಷ್ಟವೆಂದೂ, ಅವರುಗಳು ತಮ್ಮ ವ್ಯವಹಾರಗಳಲ್ಲಿ ನ್ಯಾಯವಾಗಿ ವರ್ತಿಸಬೇಕೆಂದೂ ಸಚಿವರು ಸೂಚಿಸಿದರು.

ನೆಹರೂರವರಿಗೆ ಅಮೆರಿಕ ಮತ್ತು ಬ್ರಿಟನ್ ನಾಯಕರ ಪತ್ರ

ಪ್ರಧಾನಿ ನೆಹರೂರವರಿಗೆ ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರು ಸೂಯೆಜ್ ವಿಷಯವಾಗಿ ಪತ್ರ ಬರೆದಿದ್ದಾರೆ. ಬ್ರಿಟನ್ನಿನ ಪ್ರಧಾನಿ ಈಡನ್ನರೂ ನೆಹರೂರವರ ಎರಡು ಪತ್ರಗಳಿಗೆ ಉತ್ತರವಿತ್ತಿದ್ದಾರೆ. ಭಾರತದಲ್ಲಿರುವ ರಷ್ಯಾ ರಾಯಭಾರಿ ಮೆನ್ಶಿಕಾವ್‌ರವರು ನೆನ್ನೆ ನೆಹರೂರವರನ್ನು ಭೇಟಿ ಮಾಡಿ, ಸೂಯೆಜ್ ಬಗ್ಗೆ ರಷ್ಯಾ ನಿಲುವನ್ನು ವಿವರಿಸಿದರು.

ಶ್ರೀರಂಗಪಟ್ಟಣ ಪಂಚಾಯಿತಿ ಅಧ್ಯಕ್ಷರುಗಳ ಸಭೆ

ಶ್ರೀರಂಗಪಟ್ಟಣ ತಾಲ್ಲೂಕು ಗ್ರಾಮ ಪಂಚಾಯಿತಿ ಅಧ್ಯಕ್ಷರುಗಳ ಸಭೆಯು ಮೊನ್ನೆ ಅಗ್ರಹಾರದ ಶ್ರೀ ಸಿ. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆದು, ಕೂಡಲೇ ಈ ತಾಲ್ಲೂಕು ಪಂಚಾಯಿತಿ ಸದಸ್ಯರ ಸಮ್ಮೇಳನವನ್ನು ನಡೆಸಬೇಕೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು. ಸಂಚಾಲಕರಾದ ಶ್ರೀ ಎಂ. ಪುಟ್ಟೇಗೌಡರು ಸಭೆಯ ಉದ್ದೇಶವನ್ನು ವಿವರಿಸಿದರು. ಶ್ರೀಗಳಾದ ಎಂ. ಜಯರಾಮಗೌಡರು ಮತ್ತು ಬಿ. ಚನ್ನಪ್ಪನವರು ಭಾಷಣ ಮಾಡಿ, ಸಮ್ಮೇಳನ ನಡೆಸುವುದಕ್ಕೆ ಸರ್ವರ ಸಹಕಾರವನ್ನು ಕೋರಿದರು. ಸಮ್ಮೇಳನದ ಸ್ವಾಗತ ಸಮಿತಿಯನ್ನು ರಚಿಸಿ ಅದಕ್ಕೆ ಶ್ರೀ ಹೆಚ್. ಟಿ. ಸುಬ್ಬಣ್ಣನವರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಂ. ಪುಟ್ಟೇಗೌಡರನ್ನು ಉಪಾಧ್ಯಕ್ಷರನ್ನಾಗಿಯೂ, ಶ್ರೀಗಳಾದ ಎಂ. ಜಯರಾಮಗೌಡರು ಹೆಚ್. ಟಿ. ಮಾಯಿಗೌಡರನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀಗಳಾದ ಎ. ಜಿ. ರಾಮಚಂದ್ರ ಮತ್ತು ಹೆಚ್. ತಮ್ಮಣ್ಣಗೌಡರನ್ನು ಕೋಶಾಧಿಕಾರಿಗಳನ್ನಾಗಿಯೂ ಆರಿಸಲಾಯಿತು.

ಕಪಿಲಾ ಗಿರಣಿ ಕಾರ್ಮಿಕರ ಮುಷ್ಕರದ ಮುಕ್ತಾಯ

ಕಾರ್ಮಿಕರಿಗೂ, ಮಾಲೀಕರಿಗೂ ಒಪ್ಪಂದ

ಮೈಸೂರು ೧೮

ಕಳೆದ ೧೦ನೇ ತಾರೀಖಿನಿಂದ ಮುಷ್ಕರ ಹೂಡಿದ್ದ ನಂಜನಗೂಡಿನ ಕಪಿಲಾ ಹತ್ತಿ ಗಿರಣಿ ಕಾರ್ಮಿಕರು ನೆನ್ನೆ ತಮ್ಮ ಮುಷ್ಕರವನ್ನು ಮುಕ್ತಾಯಗೊಳಿಸಿ, ಇಂದಿನಿಂದ ಕೆಲಸಕ್ಕೆ ಹಿಂದಿರುಗಿದರು. ಸಂಸ್ಥಾನದ ಐ. ಎನ್. ಟಿ. ಯು. ಸಿ. ಅಧ್ಯಕ್ಷ ಶ್ರೀ ಜಿ. ಎ. ರಾಮಾಚಾರ್ ಮತ್ತು ಇಲ್ಲಿನ ಅಸಿಸ್ಟೆಂಟ್ ಲೇಬರ್ ಕಮಿಷನರ್‌ರವರ ಮಧ್ಯಸ್ಥಿಕೆಯ ಪರಿಣಾಮವಾಗಿ ಒಡಂಬಡಿಕೆಯಾಯಿತು.

ಅದರ ಪ್ರಕಾರ ಪುನರ್ವಿಮರ್ಶಿತ ವರದ ವೇತನಗಳನ್ನು ಈ ತಿಂಗಳ ೨೭ನೇ ತಾರೀಖಿನೊಳಗಾಗಿ ಕೊಡಲು ಆಡಳಿತ ವರ್ಗದವರು ಒಪ್ಪಿರುವರು ೩ ವರ್ಷ ಸರ್ವಿಸ್ ಆದವರಿಗೆ ೩ ಬಡ್ತಿ; ೨ ರಿಂದ ೩ ವರ್ಷ ಸರ್ವಿಸ್ಸಿನವರಿಗೆ ೨ ಬಡ್ತಿ ಮತ್ತು ಒಂದು ವರ್ಷದವರಿಗೆ ೧ ಬಡ್ತಿ ಕೊಡಲು ಸಮ್ಮತಿಸಿ ಪರಿ ವೇತನಗಳನ್ನು ಬರುವ ೧೦ನೇ ತಾರೀಖಿನೊಳಗಾಗಿ ಕೊಡಲು ಒಪ್ಪಿರುವರು. ಮುಷ್ಕರದಲ್ಲಿ ಭಾಗವಹಿಸಿದ್ದವರ್ಯಾರನ್ನೂ ಕೆಲಸದಿಂದ ವಜಾ ಮಾಡುವುದು ಮುಂತಾದ ಕ್ರಮಗಳಿಗೆ ಒಳಪಡಿಸುವುದಿಲ್ಲವೆಂದೂ, ಮುಷ್ಕರದ ಕಾಲದ ಗೈರು ಹಾಜರಿಯನ್ನು ಗಣನೆಗೆ ತೆಗೆದುಕೊಳ್ಳುವುದಿಲ್ಲವೆಂದೂ ಭರವಸೆಯಿಯಲಾಗಿದೆ ಆದರೆ ಮುಷ್ಕರದ ಕಾಲದ ವೇತನವನ್ನು ಮಾತ್ರ ಕೊಡುವುದಿಲ್ಲ.

ಮದ್ರಾಸ್ ಸರ್ಕಾರದಿಂದ ಮಕ್ಕಳ ಪೋಷಣೆ

ಸ್ವೀಡ ಮತ್ತು ನಾರ್ವೆಗಳಲ್ಲಿರುವಂತೆ, ಬಾಣಂತಿಯರು ಮತ್ತು ಮಕ್ಕಳನ್ನು ಸರ್ಕಾರದ ವೆಚ್ಚದಲ್ಲಿ ಪೋಷಿಸುವ ವಿಷಯವನ್ನು ಮದ್ರಾಸ್ ಸರ್ಕಾರದವರು ಪರಿಶೀಲಿಸುತ್ತಿರುವರೆಂದೂ, ಮಕ್ಕಳಿಗೆ ೫೧ ವರ್ಷ ವಯಸ್ಸು ಪೂರ್ತಿಸುವವರೆಗೆ ಸರ್ಕಾರದವರು ಪಾಲನೆ ಮಾಡುವರೆಂದೂ ಹೇಳಲಾಗಿದೆ.

ಮೋದಿಯವರಿಂದ ೩ನೇ ತಾ|| ಪದ್ಮಶ್ರೀ ಪ್ರಶಸ್ತಿ ಸ್ವೀಕಾರ

ಕರ್ನಾಟಕದ ಸುಪ್ರಸಿದ್ಧ ನೇತ್ರ ವೈದ್ಯರಾದ ಡಾ|| ಎಂ. ಸಿ. ಮೋದಿಯವರು ಬರುವ ತಿಂಗಳು ೮ನೇ ತಾರೀಖು ದೆಹಲಿಗೆ ಪ್ರಯಾಣ ಮಾಡುವರು. ಅಕ್ಟೋಬರ್ ೩ನೇ ತಾರೀಖು ರಾಷ್ಟ್ರಾಧ್ಯಕ್ಷರು ಸಮಾರಂಭವೊಂದರಲ್ಲಿ ಅವರಿಗೆ ಪದ್ಮಶ್ರೀ ಪ್ರಶಸ್ತಿಯನ್ನು ಒಪ್ಪಿಸುವರು

ಬೈಸಿಕಲ್ಲುಗಳ ಕಳುವಿನ ಅಪಾದನೆ ಮೇಲೆ ಗುಮಾಸ್ತರ ಬಂಧನ

ಬೆಂಗಳೂರಿನ ಅಕೌಂಟೆಂಟ್ ಜನರಲ್ಲರ ಕಛೇರಿಯಲ್ಲಿದ್ದ ಒಬ್ಬ ಪದವೀಧರ ಗುಮಾಸ್ತರು, ಹಲವು ಬೈಸಿಕಲ್ಲುಗಳ ಕಳುವಿನ ಸಂಬಂಧದಲ್ಲಿ ವಸ್ತಗಿರಿ ಮಾಡಲ್ಪಟ್ಟಿರುವರೆಂದೂ, ಬಂಧಿತರು ಕೊಟ್ಟ ಸುದ್ದಿಯ ಮೇಲೆ ಪೊಲೀಸರು ೧೫ ಬೈಸಿಕಲ್ಲುಗಳನ್ನು ಪತ್ತೆ ಹಚ್ಚಿರುವರೆಂದೂ ವರದಿಯಾಗಿದೆ.

ಟೌನ್ ಪೌರಸಭಾಧ್ಯಕ್ಷರು ಮತ್ತು ಉಪಾಧ್ಯಕ್ಷರ ಗೋಷ್ಠಿ

ವ್ಯವಸಾಯ ಸಚಿವರಿಂದ ಪ್ರಾರಂಭೋತ್ಸವ

ನಂಜನಗೂಡು ೧೮

ಮೈಸೂರು ಜಿಲ್ಲಾ ಟೌನ್ ಪೌರಸಭೆಗಳ ಅಧ್ಯಕ್ಷ ಉಪಾಧ್ಯಕ್ಷರುಗಳ ಗೋಷ್ಠಿಯು ಮೊನ್ನೆ ಇಲ್ಲಿ ಮೈಸೂರು ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ವ್ಯವಸಾಯ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ಅದರ ಆರಂಭೋತ್ಸವವನ್ನು ನೆರವೇರಿಸಿದರು

ಸಚಿವರು ಭಾಷಣ ಮಾಡಿ, ಸ್ಥಳೀಯ ಸಂಸ್ಥೆಗಳಲ್ಲಿ ರಾಜಕೀಯ ಪಂಗಡಗಳು ಇರುವುದು ಸರಿಯಲ್ಲವೆಂದು ತಿಳಿಸಿದರು. ಪೌರಸಭೆಗಳು ಮತ್ತು ಸ್ಥಳೀಯ ಸಂಸ್ಥೆಗಳಿಗೆ ಹೆಚ್ಚು ಹೆಚ್ಚು ಅಧಿಕಾರವನ್ನು ಕೊಡುವುದು ಅಗತ್ಯವೆಂದು ಅವರು ಸೂಚಿಸಿದರು. ಟೌನ್ ಪೌರಸಭೆಗಳು ತಮ್ಮ ಸೇವೆಯನ್ನು ತಮ್ಮ ಊರಿಗೆ ವಿಸ್ತರಿಸಲು ಮಾಡದೆ, ಸೆರೆ ಹಳ್ಳಿಗಳಿಗೂ ವಿಸ್ತರಿಸಬೇಕೆಂದು ನುಡಿದರು.

ಅಧ್ಯಕ್ಷರು ಮಾತನಾಡಿ, ನಿತ್ಯ ಕಾರ್ಯಗಳಲ್ಲಿ ಪೌರಸಭೆಗಳಿಗೆ ಸರ್ಕಾರದವರು ಅಡ್ಡಿಯಾಗಬಾರದೆಂದು ತಿಳಿಸಿದರು.

ಇಲ್ಲಿನ ಪೌರಸಭಾಧ್ಯಕ್ಷ ಶ್ರೀ ವೆಂಕಟಸುಬ್ಬೈರವರು ಸ್ವಾಗತ ಬಯಸಿದರು. ಉಪಾಧ್ಯಕ್ಷ ಶ್ರೀ ವೈ. ಕೆ. ಎಸ್. ಲಕ್ಷ್ಮೀನಾರಾಯಣಶೆಟ್ಟರು ಧನ್ಯವಾದವನ್ನು ಅರ್ಪಿಸಿದರು.

ತಾಲ್ಲೂಕು ಕಛೇರಿಗಳಲ್ಲಿ ಸಾರ್ವಜನಿಕ ಸಂಪರ್ಕಾಧಿಕಾರಿಗಳು

ಮೈಸೂರು ೧೮

ತಾಲ್ಲೂಕು ಕಛೇರಿಗಳಿಗೆ ಬರುವ ರೈತರುಗಳ ಸಹಾಯಕ್ಕಾಗಿ ಒಬ್ಬೊಬ್ಬ ಸಾರ್ವಜನಿಕ ಸಂಪರ್ಕಾಧಿಕಾರಿಗಳನ್ನು ನೇಮಿಸಲು ತಾವು ಆಜ್ಞೆ ಮಾಡಿರುವುದಾಗಿ ರೆವಿನ್ಯೂ ಮಂತ್ರಿ ಶ್ರೀ ಹೆಚ್. ಎಂ. ಚನ್ನಬಸಪ್ಪನವರು ತಿಳಿಸಿರುತ್ತಾರೆ

ಸೂಯೆಜ್ ಬಳಕೆಗಾರರ ಸಂಸ್ಥೆಗೆ ೧೦ ರಾಷ್ಟ್ರಗಳ ವಿರೋಧ

ಲಂಡನ್ನಿನಲ್ಲಿ ನಾಳೆ ಸೇರುವ ೧೮ ರಾಷ್ಟ್ರಗಳ ಸಮ್ಮೇಳನಕ್ಕೆ ಆಹ್ವಾನಿತರಾಗಿರುವವರ ಪೈಕಿ ೧೦ ರಾಷ್ಟ್ರಗಳವರು ಸೂಯೆಜ್ ಕಾಲುವೆ ಬಳಕೆಗಾರರ ಸಂಸ್ಥೆಗೆ ವಿರೋಧವಾಗಿರುವರೆಂದೂ, ೧೫ ರಾಷ್ಟ್ರಗಳು ಸಮ್ಮೇಳನಕ್ಕೆ ಬರಲು ಒಪ್ಪಿವೆಯೆಂದೂ, ಇಥಿಯೋಪಿಯಾ, ಟರ್ಕಿ ಮತ್ತು ಸ್ಪೇನುಗಳು ಇನ್ನೂ ಆಹ್ವಾನವನ್ನು ಸ್ವೀಕರಿಸಿಲ್ಲವೆಂದೂ ವರದಿಯಾಗಿದೆ ಈಜಿಪ್ಟಿನ ಸಾರ್ವಭೌಮಾಧಿಕಾರಕ್ಕೆ ಚ್ಯುತಿ ತರಲು ಪ್ರಯತ್ನಗಳಾಗುತ್ತಿವೆಯೆಂಬ ಭಯವು ಮಧ್ಯ ಪೂರ್ವದಲ್ಲಿ ಉಂಟಾಗಿರುವುದನ್ನು ತಪ್ಪಿಸಲು ಬಳಕೆಗಾರರ ಸಂಸ್ಥೆಯ ಯೋಜನೆಯನ್ನು ಬದಲಾಯಿಸಲು ಬ್ರಿಟನ್ನು ಆಲೋಚಿಸುತ್ತಿರುವುದೆಂದು ಗೊತ್ತಾಗಿದೆ. ಈಜಿಪ್ಟಿನ ಅಧ್ಯಕ್ಷರ ಮನೋಗತವನ್ನು ಅರಿಯುವ ಅಮೆರಿಕದ ರಾಯಭಾರಿಯು ಮಧ್ಯ

ಕೆಂಗೇರಿಯಲ್ಲಿ ಅಗ್ನೇಯ ಏಷ್ಯಾ ಯುವಕರ ಕೂಟ

ಮುಖ್ಯಮಂತ್ರಿ ಕಡಿದಾಳ್ ಮಂಜಪ್ಪನವರ ಭಾಷಣ

ಬೆಂಗಳೂರು ೧೮

ಅಗ್ನೇಯ ಏಷ್ಯಾ ಯುವಕರ ಕೂಟದ ಆರಂಭೋತ್ಸವವು ಮೊನ್ನೆ ಕೆಂಗೇರಿಯಲ್ಲಿ ಮುಖ್ಯಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿತು ಅವರು ದೇಹಶ್ರಮದ ಪ್ರಾಮುಖ್ಯತೆಯನ್ನು ಒತ್ತಿಹೇಳಿದರು. ಭಾರತದ ಆರ್ಥಿಕ ಸಮಸ್ಯೆಯನ್ನು ಪರಿಹರಿಸಲು ಮನುಷ್ಯ ಶಕ್ತಿಯನ್ನು ಸಾಕಷ್ಟು ಉಪಯೋಗಿಸಿಲ್ಲವೆಂದು ಅವರು ಹೇಳಿದರು.

ಕೇಂದ್ರ ವಿದ್ಯಾ ಉಪ ಮಂತ್ರಿ ಡಾ|| ಶ್ರೀಮಾಲಿಯವರು ಅದರ ಆರಂಭೋತ್ಸವವನ್ನು ನೆರವೇರಿಸಿದರು. ಭಾರತ, ಸಯಾಂ, ಬರ್ಮಾ, ಮಲಯ, ಇಂಡೊನೇಷ್ಯಾ, ಪಾಕಿಸ್ತಾನ, ಅಮೆರಿಕಾ, ಹಾಲೆಂಡ್, ಫ್ರಾನ್ಸ್ ಮತ್ತು ಸ್ವಿಟ್ಸರ್‌ಲೆಂಡುಗಳ ಯುವಕ ಮುಖಂಡರು ಅದರಲ್ಲಿ ಭಾಗವಹಿಸಿರುವರು.

ಶಾಸನ ಸಭೆಗಳ ಮುಂದೆ ಆಯುರ್ವೇದ ವಿದ್ಯಾರ್ಥಿಗಳ ಪ್ರದರ್ಶನ

ಮೈಸೂರು ೧೮

ಕಳೆದ ತಿಂಗಳು ೨೦ನೇ ತಾರೀಖಿನಿಂದ ಮುಷ್ಕರ ಹೂಡಿರುವ ನಗರದ ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳು ನಾಳೆ ಇಲ್ಲಿಂದ ಬೆಂಗಳೂರಿಗೆ ಹೋಗಿ ನಾಳಿದ್ದು ಅಲ್ಲಿ ಆರಂಭವಾಗಲಿರುವ ಶಾಸನ ಸಭೆ ಮತ್ತು ವಿಧಾನ ಪರಿಷತ್ತುಗಳ ಸದಸ್ಯರ ಮುಂದೆ ತಮ್ಮ ಬೇಡಿಕೆಗಳನ್ನು ಮಂಡಿಸಿ ಅವುಗಳನ್ನು ಈಡೇರಿಸಿಕೊಡುವಂತೆ ಕೋರುವರೆಂದು ತಿಳಿದುಬಂದಿದೆ.

ಬೇಲೂರು ಕೊಲೆ ಅಪಾದಿತ ಕೃಷ್ಣನ ಬಂಧನದ ವಿವರ

ಕೋರ್ಟಿನಲ್ಲಿ ಇನ್ಸ್‌ಪೆಕ್ಟರ ವಿವರಣೆ

ಬೆಂಗಳೂರು ೧೮

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯ ಮೊದಲನೇ ಅಪಾದಿತ ಕೃಷ್ಣನನ್ನು ಬಂಧಿಸಿದ ವಿವರಗಳನ್ನು ಇನ್ಸ್‌ಪೆಕ್ಟರ್ ಬಸವರಾಜಯ್ಯನವರು ನೆನ್ನೆ ತಮ್ಮ ಸಾಕ್ಷ್ಯದ ಸಮಯದಲ್ಲಿ ತಿಳಿಸಿದರು. ಇದುವರೆಗೆ ೩೩ ಮಂದಿ ಸಾಕ್ಷಿಗಳನ್ನು ವಿಚಾರಿಸಲಾಗಿದೆ.

ಇನ್ಸ್‌ಪೆಕ್ಟರ್ ಬಸವರಾಜಯ್ಯನವರು ತಮ್ಮ ಸಾಕ್ಷ್ಯದಲ್ಲಿ ಜುಲೈ ೯ನೇ ತಾರೀಖು ತನ್ನ ಎಂಬುವನ ಸಹಾಯದಿಂದ ತಾವು ಕೃಷ್ಣನನ್ನು ಬಂಧಿಸಿದುದಾಗಿ ತಿಳಿಸಿದರು.

ರಾಮಣ್ಣ ಎಂಬ ಮತ್ತೊಬ್ಬರು ಸಾಕ್ಷ್ಯ ನುಡಿದು, ಕೃಷ್ಣನ ಮನೆಯಲ್ಲಿ ಒಂದು ಪಿಸ್ತೂಲ್ ಪಾತ್ರೆ ಮತ್ತು ಒಂದು ಟ್ರಂಕುಗಳಲ್ಲಿ ಅನೇಕ ಚಿನ್ನದ ವಸ್ತುಗಳಿದ್ದುದನ್ನು ತಿಳಿಸಿದರು.

ಪೂರ್ವದವರ ಭಯ ನಿವಾರಣೆಗಾಗಿ ಬೇರೊಂದು ಸೂತ್ರವನ್ನು ಸಿದ್ಧಗೊಳಿಸುತ್ತಿರುವರೆಂದೂ ಹೇಳಲಾಗಿದೆ.

ಪ್ರಜಾ ಪ್ರಭುತ್ವದ ಬೆಳವಣಿಗೆಗೆ ಮಹಿಳೆಯ ಸ್ಥಾನ ಹೆಚ್ಚಬೇಕು

ಮಹಾರಾಣಿ ತ್ರಿಪುರಸುಂದರಮ್ಮಣ್ಣಿ ಯವರ ಭಾಷಣ

ಮೈಸೂರು ೧೮

ಶ್ರೀಮನ್ಮಹಾರಾಣಿ ಶ್ರೀ ತ್ರಿಪುರಸುಂದರಮ್ಮಣ್ಣಿ ... ಮಹಿಳಾ ಸಮಾಜದ ... ಶ್ರೋತ್ಸವದ ಅಧ್ಯಕ್ಷ ಭಾಷಣ ಮಾಡಿ, ಅಭಿವೃದ್ಧಿ ... ಮಹಿಳೆಯರ ಪ್ರಗತಿ(ಅಭಿವೃದ್ಧಿ) ಸಂಸ್ಥೆಗಳು ... ವೃದ್ಧಿ ಹೊಂದಬೇಕೆಂದೂ, ಮಹಿಳೆಯರ ಸ್ಥಾನಮಾನಗಳು ಸರಿಯಾಗಿ ದೊರೆತರೆ ಪ್ರಜಾಪ್ರಭುತ್ವವು ಮುಂದುವರಿಯಲು ಸಾಧ್ಯವೆಂದೂ ತಿಳಿಸಿದರು

ಶ್ರೀಮತಿಗಳು ವಿ ಸಿ ನಾಗಮಣಿ ಮತ್ತು ಕೆ ಜಯಮ್ಮನವರಿಂದ ಪ್ರಾರ್ಥನೆಯಾದನಂತರ ಸದನದ ಅಧ್ಯಕ್ಷಿಣಿ ಶ್ರೀಮತಿ ಹೆಚ್ ಟಿ ಶಾಂತರವರು ಸ್ವಾಗತ ಬಯಸಿ, ಶ್ರೀಮನ್ಮಹಾರಾಣಿಯವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು ವಿದ್ಯಾರ್ಥಿನಿಯರ ವಸ್ತುಪ್ರದರ್ಶನ(?)ವು ನಡೆಯಿತು ಕಾರ್ಯದರ್ಶಿನಿ ಶ್ರೀಮತಿ ಕೆ ವಿಶಾಲಾಕ್ಷಮ್ಮನವರು ವಾರ್ಷಿಕ ವರದಿಯನ್ನು ಒಪ್ಪಿಸಿದರು. ವಿವಿಧ ಸ್ಪರ್ಧೆಗಳಲ್ಲಿ ಜಯಶೀಲರಾದವರಿಗೆ ಮಹಾರಾಣಿಯವರು ಬಹುಮಾನ ವಿನಿಯೋಗ ಮಾಡಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಇಂದಿನ ಮಹಿಳೆಯರು ಹಲವು ವಿಚಾರಗಳಲ್ಲಿ ಪ್ರಾಚೀನರಿಗಿಂತಲೂ ಮುಂದುವರಿದಿರುವರೆಂದೂ, ಇತರ ವಿಷಯಗಳಲ್ಲಿ ಹಿ ದಿನವರೇ ಹಿಗ್ಗಿನವರಿಗಿ ... ಸ್ಥಿತಿಯಲ್ಲಿದ್ದರೆಂದೂ ತಿಳಿಸಿದರು ಭಾರತೀಯ ... ಸ್ತ್ರೀ ರೂಪದಲ್ಲಿ ... ವುದನ್ನು ಅವರು ಮೆಚ್ಚಿ ಮಹಿಳೆಯ ... ಪ್ರಾಚೀನ ಸ್ಥಾನದ ... ನಿವದೆ ಸವು ಬೇರೊಂದು ... ಎಂದು ತಿಳಿಸಿ ... ಪ್ರಾಚೀನ ಮಹಿಳೆಯರ ಏಳಿಗೆಗೆ ಹಚ್ಚ ... ಅದನ್ನು ಸರಿಯಾಗಿ ಉಪಯೋಗಿಸಿ, ದೊಡ್ಡ ... ವೇದಗಳ ಕಾಲದಲ್ಲೂ ಈಗಲೂ ಪ್ರತಿಯೊಂದು ಕ್ಷೇತ್ರದಲ್ಲೂ ಮಹಿಳೆಯರು ಬೆಳಗಿರುವರೆಂದೂ ಅವರು ನುಡಿದರು

ಕಾಲಕ್ರಮದಲ್ಲಿ ಗಂಡಸರ ಭಾವನೆಗಳು ವ್ಯತ್ಯಸ್ತವಾಗಿ ಮಹಿಳೆಯರ ಸ್ಥಾನಮಾನಗಳು ಕಡಿಮೆಯಾದುವೆಂದೂ, ಅವರ ಏಳಿಗೆಗೆ ಅಡ್ಡಿ ಆತಂಕಗಳು ಬಂದುವೆಂದೂ, ಮಹಿಳೆಯರು ಗಂಡಸರ ಸೂತ್ರದ ಬೊಂಬೆಗಳಾಗಬೇಕಾಯಿತೆಂದೂ ಅವರು ಹೇಳಿ, ಈಚೆಗೆ ಮಹಿಳೆಯರ ಉದ್ಧಾರದ ಕ್ರಮವನ್ನು ವರ್ಣಿಸಿ, ಬಾಲ್ಯ ವಿವಾಹ, ಸಹಗಮನ ಮುಂತಾದ ಕೆಟ್ಟ ಪದ್ಧತಿಗಳು ತಪ್ಪಲು ಅವಕಾಶವಾಯಿತೆಂದು ತಿಳಿಸಿದರು

ಈಚೆಗೆ ಸ್ವಾತಂತ್ರ್ಯವು ಬಂದಮೇಲೆ ಮಹಿಳೆಯರ ಏಳಿಗೆ ಕ್ರಮಗಳು ಹೆಚ್ಚಿವೆಯೆಂದು ನಿರೂಪಿಸಿ, ಮಹಿಳೆಯರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ, ವಿದ್ಯಾವತಿಯರಿಗೆ ಉದ್ಯೋಗಗಳು ಸಿಗುತ್ತಿರುವುದನ್ನು ಅವರು ಜ್ಞಾಪಿಸಿದರು

ಮಹಿಳೆಯರ ಸಂಸ್ಥೆಗಳು ಕೇವಲ ವಿಹಾರ ಮತ್ತು ಆಟಪಾಟಗಳಿಗಾಗಿ ಕಾಲಹರಣ ಮಾಡುವುದರ ಬದಲು ತಮ್ಮ ಶ್ರೇಯಸ್ಸಾಧನೆಯ ಕಡೆಗೆ ಗಮನ ಕೊಡಬೇಕೆಂದು ತಿಳಿಸಿದರು ಅವರಲ್ಲಿ ಧರ್ಮಶ್ರದ್ಧೆಯು ಉಂಟಾಗಬೇಕೆಂದೂ, ... ದು, ಭಾರತದ ಏಳಿಗೆಗೆ ಸ್ತ್ರೀ ಪುರುಷರು ಹೆಚ್ಚು ಆಸಕ್ತಿಯಿಂದ ದುಡಿಯಬೇಕೆಂದು ತಿಳಿಸಿದರು

ಸಂಘದ ಉಪಾಧ್ಯಕ್ಷಿಣಿ ಶ್ರೀಮತಿ ಕೆ ವೆಂಕಟಸುಬ್ಬಮ್ಮನವರಿಂದ ವಂದನಾರ್ಪಣೆಯಾಗಿ ಅಭಿನಯ ಗೀತೆ, ಭರತ ನಾಟ್ಯ, ಕನ್ನಡ ನಾಟಕಗಳಾದುವು ರಾಷ್ಟ್ರಗೀತೆಯಾದನಂತರ ಸಮಾರಂಭವು ಮುಕ್ತಾಯವಾಯಿತು

ಸಮಾರಂಭದಲ್ಲಿ ರಾಜಕುಮಾರಿ ಗಾಯತ್ರಿ ದೇವಿಯವರೂ ಭಾಗವಹಿಸಿದ್ದರು

ನಗರದಲ್ಲಿ ೩/೪ ಅಂಗುಲ ಮಳೆ

ನಗರದಲ್ಲಿ ನೆನ್ನೆ ಮತ್ತು ಈ ದಿನ ಬೆಳಗಿನ ... ಸಾಧಾರಣವಾದ ... ಟ್ಟು ೮೦ ಸೆಂಟು ಮಳೆ ...

ಜಿಲ್ಲೆಯಲ್ಲಿ ಅಭಾವ ಪರಿಹಾರ ಕಾರ್ಯ

ಕಾಂಗ್ರೆಸ್ ಸಮಿತಿ ಸಭೆಯಲ್ಲಿ ಸಚಿವರ ಭರವಸೆ

ಮೈಸೂರು ೧೮

ಮೊನ್ನೆ ಇಲ್ಲಿ ನಡೆದ ಜಿಲ್ಲಾ ಕಾಂಗ್ರೆಸ್ ಸಮಿತಿ ಸಭೆಯಲ್ಲಿ ವ್ಯವಸಾಯ ಮಂತ್ರಿ ಶ್ರೀ ಹೆಚ್ ಎಂ ಚೆನ್ನಬಸಪ್ಪನವರು ಮಾತನಾಡಿ, ಜಿಲ್ಲೆಯ ಹಲವು ಭಾಗಗಳಲ್ಲಿರುವ ಅಭಾವ ಪರಿಸ್ಥಿತಿಯನ್ನು ಪ್ರಸ್ತಾಪಿಸಿದರು ಅಭಾವ ಪರಿಹಾರ ಕಾರ್ಯವನ್ನು ಮುಂದುವರಿಸಬೇಕೆಂದೂ, ಜನತೆಗಾಗಿ ಆಕ್ಷೇಪಣೆಗಳನ್ನು ತೆರೆಯಬೇಕೆಂದೂ ಸರ್ಕಾರವನ್ನು ಕೋರುವ ನಿರ್ಣಯವನ್ನು ಸಮಿತಿಯಲ್ಲಿ ತರಲಾಗಿತ್ತು. ಸಾಧ್ಯವಾದ ಕಡೆಗಳಲ್ಲೆಲ್ಲಾ ಪರಿಸ್ಥಿತಿಗೆ ಅನುಗುಣವಾಗಿ ಪರಿಹಾರದ ವ್ಯವಸ್ಥೆ ಮಾಡಲಾಗುವುದೆಂದು ಸಚಿವರು ಭರವಸೆಯಿತ್ತರು

ಜಿಲ್ಲೆಯಲ್ಲಿ ಕಾಂಗ್ರೆಸ್ ಕಾರ್ಯಕರ್ತರು ರಚನಾತ್ಮಕ ಕೆಲಸಕಾರ್ಯಗಳನ್ನು ನಡೆಸಲು ಅನುಕೂಲವಾಗುವಂತೆ ಕ್ರಮ ಕೈಗೊಳ್ಳುವ ವಿಚಾರಕ್ಕಾಗಿ ಶ್ರೀಗಳಾದ ಕೆ ಪುಟ್ಟಸ್ವಾಮಿ, ಪಿ ವೆಂಕಟರಮಣ, ಡಿ ಸೂರ್ಯನಾರಾಯಣ (ಸಂಚಾಲಕ), ಎಂ ಎಲ್ ನಂಜರಾಜಅರಸ್ ಡಿ ಎಂ ಸಿದ್ದಯ್ಯ, ಪುಟ್ಟತೊನ್ನಪ್ಪ ಬಿ ಜೆ ವೆಂಕಟಪ್ಪ ಹರಿಸರ್ವೋತ್ತಮರಾವ್ ಮತ್ತು ಕೆ ಎ ನಾರಾಯಣರಾಯರ ಉಪಸಮಿತಿಯೊಂದನ್ನು ರಚಿಸಲಾಯಿತು

ಉಪನ್ಯಾಸ

ಗಣಪತಿ ಮಂಗಳಾರತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಇಲ್ಲಿನ ಸಂಸ್ಕೃತ ಪಾಠಶಾಲೆಯ ... ಜನ ಸಂಸ್ಕೃತ ಪ್ರಾಧ್ಯಾಪಕ ಶ್ರೀ ವಿ ಟಿ ... ರವರಿಂದ ಸಂಸ್ಕೃತ ವಿದ್ಯೆ ... ಬಗ್ಗೆ ಉಪನ್ಯಾಸವಿದೆ

ಹೆಸ್ಸರಿಸೆಂಟು ಲಾಟರಿ ನಡೆಸುತ್ತಿದ್ದುದಕ್ಕೆ

ಶಿಕ್ಷೆ

ಲಾಡಿ ಪುಟ್ಟ ಎಂಬುವನು ಪೆಸ್ಸರಸೆಂಟು ಲಾಟರಿ ನಡೆಸುತ್ತಿದ್ದನೆಂದು ದೇವರಾಜ ಪೊಲೀಸರು ಹೂಡಿದ್ದ ಮೊಕದ್ದಮೆಯಲ್ಲಿ ನೆನ್ನೆ ನಗರದ ದ್ವಿತೀಯ ನ್ಯಾಯಾಧೀಶರು ಆಪಾದಿತನಿಗೆ ... ರೂ ಜುಲ್ಮಾನೆ ವಿಧಿಸಿದರು

ಕತ್ತಿಯೂ ಕೋವಿಯೂ ತಮ್ಮ ಗುರಿಯನ್ನು ತಪ್ಪಬಹುದು ! ರವಿಯೂ ಪಶ್ಚಿಮದಲ್ಲಿ ಉದಯಿಸಬಹುದು !!

ಆದರೆ ಡಾ॥ ರಾಜಾರವರ ನೂತನ ಮತ್ತು ಆಶ್ಚರ್ಯಕರವಾದ ಚಿಕಿತ್ಸೆಯು ಮಾತ್ರ ಒಂದೇ ವಾರದ ಅವಧಿಯಲ್ಲಿ ನಿರಾಶೆಯನ್ನು ಹೋಗಲಾಡಿಸಿ ಸಂತೋಷವನ್ನುಂಟುಮಾಡಲು ತಪ್ಪುವುದಿಲ್ಲ

ಅದುದರಿಂದ ಸಪಯಾವನವನ್ನೂ, ಅದ್ಭುತ ಶಕ್ತಿಯನ್ನೂ, ಆರೋಗ್ಯವನ್ನೂ ಹೊಂದಲು ಲೈಂಗಿಕ ವೈದ್ಯದಲ್ಲಿ ಹೆಸರಾಂತ ಡಾ ಎ ಎ ರಾಜಾರವರ ಸಲಹೆಯನ್ನು ಪಡೆಯಿರಿ

ಭಾರತದ ಹೆಮ್ಮೆಯಾದ ಡಾ॥ ರಾಜಾರವರು ಇತರ ವಿಧಾನದ ಚಿಕಿತ್ಸೆಗಳಿಗಿಂತಲೂ ಅದ್ಭುತವಾದ ಭಾರತದಲ್ಲಿ ಪ್ರಪ್ರಥಮವಾಗಿ ಸಹಸ್ರಾರು ಜನಗಳಿಗೆ ಚಿಕಿತ್ಸೆ ನಡೆಸಿದ ತಮ್ಮ ವಿಶೇಷ ಅನುಭವ ಮತ್ತು ಸಂಶೋಧನೆಯಿಂದ ರೋಗಿಗಳಿಗೆ ಹೊಸ ಜೀವನವನ್ನು ... ಉಂಟುಮಾಡಿರುವರು ದೊಡ್ಡ ಜಮೀನುದಾರರುಗಳೂ, ನವಾಬರುಗಳೂ, ರಾಜರುಗಳೂ, ಉನ್ನತ ಸ್ಥಾನದಲ್ಲಿರುವ ವ್ಯಕ್ತಿಗಳು ಇವರ ಚಿಕಿತ್ಸೆಯನ್ನು ಮೆಚ್ಚಿದ್ದಾರೆ

ಅದ್ದರಿಂದ ಡಾ॥ ರಾಜಾರವರನ್ನು ಭೇಟಿ ಮಾಡಿ ನವ ಯೌವನ ದೇಹಶಕ್ತಿ ಮತ್ತು ಚೈತನ್ಯವನ್ನು ಸಂಪಾದಿಸಿ

ದೌರ್ಬಲ್ಯವನ್ನು ಕಳೆದುಕೊಂಡವರು ತಮ್ಮ ದುರದೃಷ್ಟದಿಂದ ಪಾರಾಗಲು ಇದು ಸುವರ್ಣ ಸುಸಮಯ

ಕಾಲ ಬೆಳಿಗ್ಗೆ 8 ಘಂಟೆಯಿಂದ ಮಧ್ಯಾಹ್ನ 2 ಘಂಟೆವರೆಗೆ ಮತ್ತು ಮಧ್ಯಾಹ್ನ 4 ರಿಂದ ರಾತ್ರಿ 9 ಘಂಟೆ ವರೆಗೆ

ರಾಜಾ ಮೆಡಿಕಲ್ ಹಾಲ್,

ಎಚ್ ನಂ 1 745 ಅಶೋಕಾ ರಸ್ತೆ, ಮೈಸೂರು (ಮೈಸೂರು ಬ್ಯಾಂಕ್ ಬಳಿ ಎಡ ಭಾಗದಿಂದ 3ನೇ ಕಟ್ಟಡ)

ಸರ್ಕಾರದ ಭರವಸೆ ಬಂದಿದ್ದರೂ ಮುಷ್ಕರ ನಡೆಸುವುದು ಸರಿಯಲ್ಲ

ಆಯುರ್ವೇದ ಕಾಲೇಜು ವಿದ್ಯಾರ್ಥಿಯೊಬ್ಬರ ಹೇಳಿಕೆ

ಮೈಸೂರು ೧೮

ಇಲ್ಲಿನ ಆಯುರ್ವೇದ ಕಾಲೇಜಿನ ವಿದ್ಯಾರ್ಥಿಯೊಬ್ಬರು ಪತ್ರ ಬರೆದು ಕಾಲೇಜಿನ ಅಭಿವೃದ್ಧಿಗಾಗಿ ಸರ್ಕಾರದವರು ಭರವಸೆಯಿತ್ತಿದ್ದರೂ ಮುಷ್ಕರವನ್ನು ಮುಂದುವರಿಸಲು ವಿದ್ಯಾರ್ಥಿಗಳ ಮುಖಂಡರು ಪ್ರಯತ್ನಿಸುತ್ತಿರುವುದನ್ನು ಟೀಕಿಸಿದ್ದಾರೆ. ವಿದ್ಯಾರ್ಥಿಯಲ್ಲದ ಮುಖಂಡರು ಹಲವು ವಿದ್ಯಾರ್ಥಿಗಳನ್ನು ಸೇರಿಸಿಕೊಂಡು ಮುಷ್ಕರವನ್ನು ಮುಂದುವರಿಸುವ ನಿರ್ಧಾರ ಮಾಡಿರುವರೆಂದೂ, ಸಾರ್ವಜನಿಕರಾರೂ ಅವರಿಗೆ ಸಹಾಯ ನೀಡದೆ ಮುಷ್ಕರವನ್ನು ವಾಪಸು ತೆಗೆದುಕೊಳ್ಳಲು ತಮ್ಮ ಪ್ರಭಾವ ಬೀರಬೇಕೆಂದೂ ಸೂಚಿಸಿದ್ದಾರೆ.

ಸಂಗೀತ ಶಾಲಾ ಸಮಿತಿ ಸ್ಥಾಪನೆ

ಹಳೇ ಅಗ್ರಹಾರದ ಉತ್ತರಾದಿಮಠದ ಬೀದಿಯಲ್ಲಿ ಕೆಲವು ವರ್ಷಗಳ ಹಿಂದೆ ಏರ್ಪಾಡಾದ ಶ್ರೀ ದತ್ತಾತ್ರೇಯ ಸಂಗೀತ ವಿದ್ಯಾ ಶಾಲೆಯ ಕಾರ್ಯ ನಿರ್ವಹಣ ಸಮಿತಿಯನ್ನು ಮೊನ್ನೆ ರಚಿಸಲಾಯಿತು ಶ್ರೀ ಬಿ ಜಿ ದಾಸರು ಅದರ ಅಧ್ಯಕ್ಷರಾಗಿಯೂ, ಶ್ರೀ ಸಿ ಎಲ್ ಗೋಪಾಲಸ್ವಾಮಿ ನಾಯ್ಡುರವರು ಉಪಾಧ್ಯಕ್ಷರಾಗಿಯೂ, ಬಿ ಎಂ ಮುನಿವೆಂಕಟಪ್ಪನವರು ಕಾರ್ಯದರ್ಶಿ ಮತ್ತು ಕೋಶಾಧ್ಯಕ್ಷರಾಗಿಯೂ ಶ್ರೀ ಎಂ ಎ ಲಕ್ಷ್ಮೀನರಸಿಂಹಯ್ಯನವರು ಸಹಕಾರ್ಯದರ್ಶಿಯಾಗಿಯೂ ಚುನಾಯಿತರಾದರು. ಶ್ರೀಮತಿಯರಾದ ಸಿ ಎಲ್ ಜಗನ್ನಾಥ ಮತ್ತು ಎಲ್ ಯಶೋದಮ್ಮ ಮತ್ತು ಶ್ರೀಗಳಾದ ಎಂ. ಎಲ್ ತಿಮ್ಮಯ್ಯ ಮತ್ತು ಬಿ ಎಂ ಶಿವಪ್ಪನವರು ಸದಸ್ಯರಾಗಿ ಆರಿಸಲ್ಪಟ್ಟರು ಶ್ರೀಮತಿ ಸಿ ಎಲ್ ಜಗನ್ನಾಥರವರಿಂದ ಸಂಗೀತವು ಏರ್ಪಟ್ಟಿತ್ತು

ಬೆಂಗಳೂರಿನಲ್ಲಿ ಪ್ರಾದೇಶಿಕ ರಾಷ್ಟ್ರೀಯ ಉಳಿತಾಯ ಸಮ್ಮೇಳನ

ಪ್ರಾದೇಶಿಕ ರಾಷ್ಟ್ರೀಯ ಉಳಿತಾಯ ಸಮ್ಮೇಳನವು ಬೆಂಗಳೂರಿನಲ್ಲಿ ಸೆಪ್ಟೆಂಬರ್ ೨೭ರಿಂದ ೨೯ ರವರೆಗೆ ನಡೆಯುವುದು ಈ ಸಮ್ಮೇಳನವನ್ನು ಮೈಸೂರು ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಉದ್ಘಾಟಿಸುವರು ಭಾರತ ಸರ್ಕಾರದ ರೆವಿನ್ಯೂ ಮತ್ತು ರಕ್ಷಣಾ ವೆಚ್ಚದ ಶಾಖೆಯ ಮಂತ್ರಿ ಶ್ರೀ ಎ ಸಿ ಗುಹಾರವರು ಅಧ್ಯಕ್ಷತೆ ವಹಿಸುವರು

ಪ್ರತಿ ಜಿಲ್ಲೆಯಲ್ಲೂ ಒಂದೊಂದು ಪುಸ್ತಕ ಭಂಡಾರ

ದ್ವಿತೀಯ ಯೋಜನೆಯ ಅವಧಿಯೊಳಗೆ ಹಿಂದುಸ್ಥಾನದ ಪ್ರತಿ ಜಿಲ್ಲೆಯಲ್ಲೂ ಒಂದೊಂದು ಪುಸ್ತಕ ಭಂಡಾರವನ್ನು ವ್ಯವಸ್ಥೆ ಮಾಡಲಾಗುವುದೆಂದು ಗೊತ್ತಾಗಿದೆ ಈಗ ಒಟ್ಟು ೩೦೦ ಜಿಲ್ಲೆಗಳ ... ಪುಸ್ತಕ ಭಂಡಾರಗಳಿವೆ

ಬೆಂಗಳೂರು ಆಕಾಶವಾಣಿ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭ ಸಂಗೀತ ೭-೧೫ ಮತ್ತು ೮-೧೫ ದೇವರ ನಾಮಗಳು. ೭-೩೦ ಹಿಂದುಸ್ಥಾನಿ ಮಧ್ಯಾಹ್ನ ೧೨ ಮತ್ತು ೧-೩೦ ಎ ನರಸಿಂಹಮೂರ್ತಿ ಸಂಗೀತ ೧೨-೩೦ ವಾದ್ಯ ಸಂಗೀತ, ೧ ಜಯಲಕ್ಷ್ಮಿ ವಾಸುದೇವ್ ಸಂಗೀತ ೩-೧೫ ಪ್ರೌಢಶಾಲೆಗಳಿಗಾಗಿ ಸಂಜೆ ೫-೩೦ ಮತ್ತು ೮ ಬಿ ... ನಾಗೇಶ್ವರ ೬-೧೫ ... ಗೀತಾವಳಿ ೭-೩೦ ವಾರ್ತೆ ಮತ್ತು ... ೮ ೩೦ ರಾಷ್ಟ್ರೀಯ ಕಾರ್ಯಕ್ರಮ ೮-೪೦ ... ೯-೧೫ ಕೆ ಎಸ್ ... ಸಂಗೀತ

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ ಮುತ್ತು

ಕೊಯಮತ್ತೂರು ಹತ್ತಿ	[illegible]	[illegible]
ತಪ್ಪಡಿ	[illegible]	[illegible]
ಕಡ್ಡಿ	[illegible]	[illegible]
...	[illegible]	
ರಾಗಿ	[illegible]	[illegible]
ಜೋಳ	[illegible]	[illegible]
ಕಡಲೆ	[illegible]	[illegible]
...	[illegible]	[illegible]
ಕಡಲೆಕಾಯಿ	[illegible]	[illegible]
ಎಳ್ಳು	[illegible]	[illegible]
ಹುರುಳಿ	[illegible]	[illegible]
ಹುಣಸೆ	[illegible]	[illegible]
ಬೆಲ್ಲ	[illegible]	[illegible]
...	[illegible]	[illegible]
...	[illegible]	
...	[illegible]	[illegible]

ಹಳ್ಳಿಯ ಅನುಭವವುಳ್ಳ ಹ್ಯಾಂಡ್ ಕಂಪೋಸಿಟರುಗಳೂ ಮತ್ತು ಪ್ರಿಂಟರ್, ಬೈಂಡರ್ ಎರಡರಲ್ಲೂ ಅನುಭವವುಳ್ಳವರು

ತಕ್ಷಣ ಬೇಕಾಗಿದ್ದಾರೆ

@ ರಘುವೀರ್ ಪ್ರೆಸ್, ಮೈಸೂರು

Edited, Printed and Published by A R Nagarajan at Sadhvi Press D Subbiah Road, Mysore

Beware of S. S. L. C. Exam. Fast Approaching!

Are you weak in ENGLISH? Are you weak in MATHS?

If so no more worries left to you!

Specialised Tuition offered in the above two subjects

Surprisingly low fees! Separate Class for ladies

A pass to the weak — A class to the intelligent

Private & regular students may join at once

NALANDA TUTORIAL COLLEGE,

Sivarampet Mysore

ಮೈಸೂರು ಜಿಲ್ಲಾ ಬಸ್ ಮಾಲೀಕರ ಸಂಘ, ಮೈಸೂರು

ಮೈಸೂರು ಜಿಲ್ಲಾಧಿಕಾರಿಗಳ G 2 P R. 93/55-56 dated 13 9 56 ರ ನೋಟಿಫಿಕೇಷನ್ ಪ್ರಕಾರ ಈ ಕೆಳಗೆ ಕಂಡ ಬಸ್ಸುಗಳ ಪರಿಶೀಲನೆಯು (Inspection) 24 9-56 ಮತ್ತು 25 9 56 ನೇಯ ಎರಡು ದಿನಗಳೂ ಬೆಳಿಗ್ಗೆ 8—30 ಗಂಟೆಗೆ ... ದ್ದರಿಂದ ಬಸ್ಸು ಮಾಲೀಕರುಗಳೆಲ್ಲರೂ ಆ ದಿನ ತಮ್ಮ ಬಸ್ಸುಗಳನ್ನು ಇನ್‌ಸ್ಪೆಕ್ಷನ್‌ಗೆ ಹಾಜರ್ಪಡಿಸಬೇಕಾಗಿ ಕೋರಲಾಗಿದೆ.

MYM 106, 227, 687, 620, 690, 618, 1020, 940, 978, 913, 438, 1259, 327, 912, 194, 1363, 732, 1426, 596, 621, 1127, 1295, 1022, 1263, 1269, 1408, 1485, 107, 1152, 1442, 412, 1537, 1021, 192, 640, 219, 242, 1005, 708, 269, 198, 175, 608, 962, 1468, 440, 141

MYC 6946 MYB 373 MYH 392

ಎ ಆರ್ ನರಸಿಂಹಯ್ಯಂಗಾರ್, ಗೌ॥ ಕಾರ್ಯದರ್ಶಿ

ರಿಜಿಸ್ಟರ್ ನಂ. 792

ಬಿಡಿ ಪ್ರತಿಗೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶಗಳಿಗೆ ಏಜೆಂಟರು
ಸತ್ಯ ಅಂಡ್ ಕೋ.,
ಔಷಧ ವ್ಯಾಪಾರಿಗಳು
71/1 ...
ಶ್ರೀನಿವಾಸ ಬಜಾರ್ ರಸ್ತೆ,
ಬೆಂಗಳೂರು -2

ಸಾಧ್ವಿ

ಸಂಪುಟ : ೧೫] SADHVI : WEDNESDAY 19—9—1956 ಮೈಸೂರು : ಬುಧವಾರ ೧೯—೯—೧೯೫೬ [ಸಂಚಿಕೆ : ೪೬

ರಾಷ್ಟ್ರಾಧ್ಯಕ್ಷರಿಂದ ಹೊಸ ಮೈಸೂರಿನ ಆರಂಭೋತ್ಸವ

ಬೇಲೂರು ಕೊಲೆ ಮೊಕದ್ದಮೆ

ಕೃಷ್ಣನ ಉಪ ಪತ್ನಿ ಜಯಮ್ಮನ ಸಾಕ್ಷಿ

ಬೆಂಗಳೂರು ೧೮

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯಲ್ಲಿ ನೆನ್ನೆ ೧ನೇ ಆಪಾದಿತ ಕೃಷ್ಣನ ಉಪ ಪತ್ನಿ ಜಯಮ್ಮನು ಸಾಕ್ಷ್ಯ ವಿತ್ತಳು

ಕೃಷ್ಣನು ತನಗೆ ಎರಡನೇ ಗಂಡನಾಗಬೇಕೆಂದೂ, ಅವನು ಪಾಲು ವಾರಿಕೊಂಡಿದ್ದು ತನಗೆ ಪರಿಚಯವಾದ ಮೇಲೆ ತನ್ನ ವಿವಾಹವಾದ ಗಂಡ ಮುನಿಯಪ್ಪನನ್ನು ಬಿಟ್ಟು ಕೃಷ್ಣನನ್ನು ಸೇರಿದುದಾಗಿಯೂ ಆಕೆ ತಿಳಿಸಿ ಹೇಳಿಕೆ ನೀಡಿದಳು.

೨ನೇ ಆಪಾದಿತ ಮುನಿಸ್ವಾಮಿ ಮತ್ತು ೩ನೇ ಆಪಾದಿತ ಗೋವಿಂದರೆಡ್ಡಿ ಕೃಷ್ಣನಿಗೆ ಅಣ್ಣ ತಮ್ಮ ಸೋದರರಾಗಬೇಕು ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆಯಲ್ಲಿ ಅಪಾರ ಹಣ ಮತ್ತು ಆಭರಣವಿದ್ದುದಾಗಿಯೂ, ಅವರನ್ನು ಕೊಂದು ಅವನ್ನು ತರಬೇಕೆಂದೂ, ಅವರು ಮಾತನಾಡುತ್ತಿದ್ದರು ಒಂದು ದಿನ ೨ನೇ ಆಪಾದಿತನು ಚಿಂತಾಮಣಿಯ ಚನ್ನನನ್ನು ಕರೆತಂದನು. ಅವರಿಬ್ಬರೂ, ಕೃಷ್ಣನೂ ಆ ರಾತ್ರಿ ಬೇಲೂರರ ಮನೆಗೆ ಹೋಗಿದ್ದರು ನಾಯಿಗಳು ಬೊಗಳಿದುದರಿಂದ ಅವರ ಕೆಲಸವಾಗಲಿಲ್ಲ ಆಮೇಲೆ ಗೋವಿಂದರೆಡ್ಡಿ ಬಂದು ಕೃಷ್ಣನನ್ನು ವಿಚಾರಿಸಿದ.

೧೫ ದಿನಗಳನಂತರ ಮುನಿಸ್ವಾಮಿ ಮತ್ತು ಗೋವಿಂದರೆಡ್ಡಿಯರು ಕೃಷ್ಣನಿಗೆ ಪುನಃ ಬೇಲೂರರ ಮನೆಗೆ ಹೋಗಬೇಕೆಂದು ತಿಳಿಸಿದರು ಮಂಗಳವಾರ ರಾತ್ರಿ ಹೋಗಬೇಕೆಂದು ಮಾತನಾಡಿಕೊಳ್ಳುತ್ತಿದ್ದಾಗ ನಾನು ಪ್ರವೇಶಿಸಿ ಗೋವಿಂದರೆಡ್ಡಿಯು ದೊಡ್ಡವನಾಗಿದ್ದುಕೊಂಡು ಹುಡುಗರನ್ನು ಕೆಟ್ಟ ಮಾರ್ಗಗಳಿಗೆ ಪ್ರೇರೇಪಿಸಬಾರದೆಂದು ಹೇಳಿದೆ. ಆದರೆ ಕೃಷ್ಣನು ಎಚ್ಚರಿಸಿದ ಮೇಲೆ ನಾನು ಸುಮ್ಮನಾದೆ

ಮಂಗಳವಾರ ರಾತ್ರಿ ೭||ಗೆ ಕೃಷ್ಣನು ಪೂಜೆ ನಡೆಸಿ, ಮೋಟಾರು ಸೈಕಲ್ಲಿನಲ್ಲಿ ಹೊರಟ ಮಾರನೆ ಮುಂಜಾನೆ ಅವನೂ ಮುನಿಸ್ವಾಮಿಯೂ ಬಂದು ದೇವರ ಮನೆಗೆ ಹೋದರು.

ಕೃಷ್ಣನೂ ಮುನಿಸ್ವಾಮಿಯೂ ತಾವು ತಂದ ಆಭರಣಗಳನ್ನು ಟ್ರಂಕಿನಲ್ಲಿ ಹಾಕಿದರು. ಕೃಷ್ಣನು ಮುನಿಸ್ವಾಮಿಗೆ ೧ ಹಾರ ಮತ್ತು ೧ ಹಾರ ಕೊಟ್ಟನು ಇಬ್ಬರೂ ರಕ್ತವಾದ ಬಟ್ಟೆಗಳನ್ನು ತೆಗೆದು ಹೊಸದನ್ನು ಹಾಕಿಕೊಂಡರು ರಕ್ತದ ಬಟ್ಟೆಯನ್ನು ಮನೆ ಕಾಂಪೌಂಡಿನ ಒಂದು ಪೊದೆಯಲ್ಲಿ ಮುಚ್ಚಿಟ್ಟರು ಕೃಷ್ಣನು ಮುನಿಸ್ವಾಮಿಗೆ ಹಲವು ಆಭರಣ ಮತ್ತು ಸ್ವಲ್ಪ ಹಣವನ್ನು ಕೊಟ್ಟನು ಅವನು ಹೋದನು

ಗೋವಿಂದರೆಡ್ಡಿಯು ಗುರುವಾರ ಮನೆಗೆ ಬಂದನು ಆಗ ಕೃಷ್ಣನು ಇದ್ದ ತಂದಿದ್ದ ಒಡವೆಗಳನ್ನು ಒಂದು ಸಿತ್ರಾಳೆ ಪಾತ್ರೆಯಲ್ಲಿ ಹಾಕಲಾಗಿತ್ತು ಅವನ್ನು ತೆಗೆದು ಕೃಷ್ಣನು ಗೋವಿಂದರೆಡ್ಡಿಗೆ ತೋರಿಸಿ ಅವನಿಗೆ ಒಂದು ಸರ, ೨ ಜೊತೆ ಬಳೆ ಮತ್ತು ಸ್ವಲ್ಪ ಹಣವನ್ನು ಕೊಟ್ಟನು

ಮಾರನೇ ದಿನ ಕೃಷ್ಣನು ಪೇಟೆಗೆ ಹೋಗಿ ಕೊಳ ಮಂಚ, ಹೊಸ ಬಲ್ಬ್‌ಗಳು ಮತ್ತು ಹೊಸ ಉಣ್ಣೆ ಸೂಟು ಕೊಂಡು ತಂದ ಶನಿವಾರ ಬೆಳಿಗ್ಗೆ ಅವನು ಮನೆ ಬಿಟ್ಟು ಹೋದನು ಮಧ್ಯಾಹ್ನ ೩ ಗಂಟೆಗೆ ಪೋಲೀಸರು ಮನೆಗೆ ಬಂದು ಆಭರಣಗಳ ಮತ್ತು ರಕ್ತದ ಬಟ್ಟೆಗಳ ಜಫ್ತಿ ಮಾಡಿದರು (ಆಕೆಯು ಕೋರ್ಟಿನ ಮುಂದೆ ತಂದ ಆಭರಣಗಳನ್ನೂ, ಮನೆ ಶೋಧನೆಗಾಗಿ ಬಂದ ಇನ್ಸ್‌ಪೆಕ್ಟರ್ ಸಿದ್ದೇಗೌಡ, ಒಂದು ಬಾರಿ ಮನೆಗೆ ಬಂದಿದ್ದ ಚೆನ್ನ ಮತ್ತು ಚೆನ್ನನನ್ನು ಶೋಧಮಾಡಿದ ವೇಣುಗೋಪಾಲಾಚಾರಿಯನ್ನು ಗುರುತಿಸಿದಳು) ಪೋಲೀಸರು ಮಹಜರಿಗೆ ರುಜು ಮಾಡಿದೆ

ನನ್ನ ಮನೆಯಲ್ಲಿ ಮಡಕುವ ಜಾಲುವಿತ್ತು ಅದರಿಂದ ತರಕಾರಿ ಹಚ್ಚುತ್ತಾ ಇತ್ತು ಕೃಷ್ಣನು ಅಯ್ಯಂಗಾರ್ಯರ ಮನೆಗೆ ಹೋದಾಗಿನಿಂದ ಅದನ್ನು ನಾನು ನೋಡಿರಲಿಲ್ಲ ಆರು ದಿನಗಳ ನಂತರ ಬಾವಿಯಿಂದ ಅದನ್ನು ತೆಗೆದುದನ್ನು ನೋಡಿದೆ ಟ್ರಂಕಿನಲ್ಲಿ ೩,೮೦೦ ರೂ ನೋಟು, ಒಬ್ಬ ಸೇಟಿಗೆ ಸೇರಿದ ಒಡವೆ ಮತ್ತು ನನಗೆ ಸೇರಿದ ಹಲವು ಸಣ್ಣ ನಗಗಳು ಇದ್ದುವು

ಪಾಟೀಸವಾಲಿಗೆ ಉತ್ತರವಿತ್ತು ಜಯಮ್ಮನು ಈ ರೀತಿ ತಿಳಿಸಿದಳು ಕೊಲೆ ಮಾಡುವಂತೆ ಪ್ರೇರೇಪಿಸಿದನೆಂದು ನಾನು ಗೋವಿಂದರೆಡ್ಡಿ ಮೇಲೆ ದೂರು ಕೊಡಲಿಲ್ಲ ಯಾರಿಗಾದರೂ ಈ ವಿಚಾರ ತಿಳಿಸಿದರೆ ನನ್ನ ತಲೆ ಒಡೆಯುವುದಾಗಿ ಕೃಷ್ಣನು ಹೇಳಿದ್ದ ನನಗೆ ಜೀವದ ಭಯ ಇತ್ತು ಮನೆ ಬಿಟ್ಟು ಹೋಗಲು ನಾನು ಪ್ರಯತ್ನಿಸಲಿಲ್ಲ ನನ್ನ ತಾಯಿ ಇದ್ದಾಳೆ ಸಹೋದರರು ಇಲ್ಲಿ ವಾಸವಾಗಿದ್ದಾರೆ ಮನೆಯಲ್ಲಿ ನಡೆದ ಮಾತುಗಳನ್ನು ಅವರಿಗೆ ತಿಳಿಸಲಿಲ್ಲ

ಕೃಷ್ಣನು ಗೋವಿಂದರೆಡ್ಡಿ ಮತ್ತು ಮುನಿಸ್ವಾಮಿಗೆ ಆಭರಣಗಳನ್ನು ಕೊಟ್ಟುದನ್ನು ನಾನು ಬಾಗಿಲ ಸಂದಿಯಿಂದ ನೋಡಿದೆ

ರಾಷ್ಟ್ರಾಧ್ಯಕ್ಷರಿಂದ ನೂತನ ಮೈಸೂರಿನ ಆರಂಭೋತ್ಸವ

ಬೆಂಗಳೂರು ೧೮

ನೂತನ ಮೈಸೂರು ಸಂಸ್ಥಾನದ ಆರಂಭೋತ್ಸವವನ್ನು ಬರುವ ನವೆಂಬರ್ ೧ ರಂದು ರಾಷ್ಟ್ರಾಧ್ಯಕ್ಷ ಡಾ|| ರಾಜೇಂದ್ರ ಪ್ರಸಾದರು ನೆರವೇರಿಸುವರೆಂದು ನೆನ್ನೆ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ತಿಳಿಸಿರುವರು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೬-೫ ಸಂಗೀತ ೭-೧೫ ದೇವರ ನಾಮ ೭-೩೦ ಮತ್ತು ೮-೧೫ ಫಿಲ್ಮ್ ಕೆ ೦-ಮನಸ್ಸಿಮ-ಹರಿಶ್ಚಂದ್ರ ಶಿವ್ಯ ವಾಚನ ವ್ಯಾಖ್ಯಾನ ೧೨ ಕೆ ಎಂ ಸರೋಜಿನಿ ರಂಗನ್ ೧೨-೩೦ ಪಿಟೀಲು ವಾದನ ೧ ಸಂಗೀತ ೧-೫೦ ಸಿತಾರ್ ೫-೧೫ ಪ್ರೌಢಶಾಲೆ ಗಾನ ಸಂಜೆ ೫-೩೦ ಎಂ ಪಿ ರಾಜ ಪಿಟೀಲು ೬-೧೫ ಜಾನಪದ ಗೀತೆ. ೭-೩೦ ತಾಳ ವಾದ್ಯ ೮ ಟಿ ಚೌಡಯ್ಯ-ಪಿಟೀಲು ೮-೩೦ ರಾಷ್ಟ್ರಾಧ್ಯಕ್ಷರಿಂದ ಕಲಾವಿದರಿಗೆ ಪ್ರಶಸ್ತಿಗಳ ಹಂಚಿಕೆ ವರದಿ ಪ್ರಸಾರ, ೯-೧೫ ಅಮೇರಿಕದ ವಾರ್ತಾಪತ್ರಿಕೆಗಳು-- ಇಂಗ್ಲಿಷ್ ಭಾಷಣ ೯-೩೦ ಅಖಿಲ ಭಾರತ ನಾಟಕ ಕಾರ್ಯಕ್ರಮ

ನೂತನ ಮೈಸೂರು ಸಂಸ್ಥಾನದ ಪ್ರಮುಖ ಅಧಿಕಾರಿಗಳು

ಹೈದರಾಬಾದಿನ ಪಿ. ವಿ. ರಾಯರು ಶ್ರೇಷ್ಠ ಕಾರ್ಯದರ್ಶಿ

ಬೆಂಗಳೂರು ೧೮

ಅಂತರ ಪ್ರಾಂತ ಸಚಿವರ ಸಮಿತಿಯು ನೆನ್ನೆ ನೂತನ ಮೈಸೂರು ಸಂಸ್ಥಾನದ ಪ್ರಮುಖ ಅಧಿಕಾರಿಗಳ ಪಟ್ಟಿಯನ್ನು ಅನುಮೋದಿಸಿತು. ಮುಂಬಾಯಿ ಮತ್ತು ಹೈದರಾಬಾದುಗಳಿಂದ ಸ್ವಲ್ಪವಾಗಿಯೂ, ಮೈಸೂರು ಪ್ರಾಂತದಿಂದ ಹೆಚ್ಚಾಗಿಯೂ ಅಧಿಕಾರಿಗಳನ್ನು ತೆಗೆದುಕೊಳ್ಳಲಾಗಿದೆ ಮದ್ರಾಸಿನಿಂದಲಾಗಲಿ ಅಥವಾ ಕೊಡಗಿನಿಂದಾಗಲಿ ತೆಗೆದುಕೊಂಡಿಲ್ಲವೆಂದು ಹೇಳಲಾಗಿದೆ

ಹೈದರಾಬಾದ್ ಸರ್ಕಾರದ ಶ್ರೇಷ್ಠ ಕಾರ್ಯದರ್ಶಿ ಪಿ ವಿ ಆರ್ ರಾಯರು ನೂತನ ಮೈಸೂರಿನ ಶ್ರೇಷ್ಠ ಕಾರ್ಯದರ್ಶಿಯಾಗುವರು ಮುಂಬಾಯಿ ರೆವಿನ್ಯೂ ಬೋರ್ಡಿನ ಕಮಿಷನರ್ ಪಿ ಆರ್ ನಾಯಕರವರು ಇಲ್ಲಿನ ಹಣಕಾಸಿನ ಕಾರ್ಯದರ್ಶಿಯಾಗುವರು ಹೈದರಾಬಾದಿನ ಶ್ರೀ ಪಿ ವೀರಪ್ಪನವರು ಇಲ್ಲಿನ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲರಾಗುವರು ಇತರ ಅಧಿಕಾರಿಗಳನ್ನು ಈ ರೀತಿ ನೇಮಕವಾಗಿದೆ -

ಯೋಜನೆ ಮತ್ತು ಅಭಿವೃದ್ಧಿ ಇಲಾಖೆ ಕಾರ್ಯದರ್ಶಿ ಶ್ರೀ ಎಸ್. ಪುಟ್ಟರಂಗಸ್ವಾಮಿ (ಅವರು ಡಿವಿಷನಲ್ ಡೆವಲಪ್‌ಮೆಂಟ್ ಕಮಿಷನರ್ ಆಗುವರು), ರೆವಿನ್ಯೂ ಕಾರ್ಯದರ್ಶಿ-ಶ್ರೀ ಕೆ ವೆಂಕಟಗಿರಿರಾವ್, ಗೃಹ ಶಾಖಾ ಕಾರ್ಯದರ್ಶಿ ಬೊಂಬಾಯಿ ರಸ್ತೆ ಸಂಚಾರ ಸಂಸ್ಥೆಯ ಉಪಾಧ್ಯಕ್ಷ ಶ್ರೀ ಆರ್ ರೆಬೆಲ್ಲೋ, ವಿದ್ಯಾಭ್ಯಾಸ ಕಾರ್ಯದರ್ಶಿ-ಶ್ರೀ ಆರ್ ಜೆ ರೇಗೋ, ವಾಣಿಜ್ಯ ಮತ್ತು ಕೈಗಾರಿಕೆ ಕಾರ್ಯದರ್ಶಿ, ಶ್ರೀ ಬಿ ಎಂ. ಕೃಷ್ಣ, ಸ್ಥಳೀಯ ಸಂಸ್ಥೆ ಮತ್ತು ಆರೋಗ್ಯ ಕಾರ್ಯದರ್ಶಿ ಹೈದರಾಬಾದಿನ ಶ್ರೀ ರಜ್ವಿ, ಮರಾಮತ್ತು ಶಾಖಾ ಕಾರ್ಯದರ್ಶಿ ಶ್ರೀ ಡಿ. ಕೆ ಶ್ರೀನಿವಾಸಾಚಾರ್

ಶ್ರೀಗಳಾದ ಎಸ್ ಮಾಧವರಾವ್, ಎಸ್ ಎನ್ ಹಿರಣ್ಣಯ್ಯ, ಕೆ ಪಿ ರಾಮನಾಥಯ್ಯ ಮತ್ತು ಕೆ ತಿಪ್ಪೇರುದ್ರಯ್ಯನವರು ಡಿವಿಜನಲ್ ಕಮಿಷನರಾಗುವರು

ಶ್ರೀ ವೀರಪ್ಪನವರ ಆಯ್ಕೆ ಬಗ್ಗೆ ಆಂಧ್ರ ಮತ್ತು ಮೈಸೂರು ಸರ್ಕಾರಗಳಿಗೆ ಸ್ವಲ್ಪ ಭಿನ್ನಾಭಿಪ್ರಾಯವಿದೆ ಶ್ರೀ ವೀರಪ್ಪನವರ ಇಚ್ಛೆ ಮತ್ತು ಭಾರತ ಸರ್ಕಾರದ ತೀರ್ಮಾನಗಳ ಮೇಲೆ ಇದು ನಿಶ್ಚಯವಾಗಬೇಕಾಗಿದೆ ಮೈಸೂರಿನ ಐ ಜಿ ಪಿ ಶ್ರೀ ತಿಮ್ಮರಾಜ ಅರಸರ ಬಗ್ಗೆ ಇತ್ಯರ್ಥ ಮಾಡಿಲ್ಲ ಅವರು ಕೇಂದ್ರ ಸಿ. ಐ. ಡಿ ಇಲಾಖೆಗೆ ಹೋಗಬಹುದು

ಡಿವಿಜನಲ್ ಕಮಿಷನರುಗಳು ಈಗಿನ ರೆವಿನ್ಯೂ ಕಮಿಷನರ್, ಸ್ಥಳೀಯ ಸಂಸ್ಥೆ ಕಮಿಷನರ ಎಲ್ಲ ಮತ್ತು ಐ ಜಿ ಪಿ ಯವರ ಹಲವು ಅಧಿಕಾರಗಳನ್ನು ನಿರ್ವಹಿಸುವರು

ನೂತನ ಕನ್ನಡ ಸಂಸ್ಥಾನದ ನಾಲ್ಕು ಡಿವಿಜನ್ನುಗಳು

ಬೆಂಗಳೂರು ೧೮

ಅಂತರ ಸಂಸ್ಥಾನ ಸಚಿವರ ಸಮಿತಿಯ ತೀರ್ಮಾನದ ಪ್ರಕಾರ, ಬೆಂಗಳೂರು, ಮೈಸೂರು, ಬೆಳಗಾಂ ಮತ್ತು ಗುಲ್ಬರ್ಗಗಳು ನೂತನ ಮೈಸೂರು ಸಂಸ್ಥಾನದ ನಾಲ್ಕು ಡಿವಿಜನ್ನುಗಳಾಗಿ, ಆಯಾ ಊರುಗಳೇ ಕೇಂದ್ರಗಳಾಗುತ್ತವೆ ಇದು ಹಂಗಾಮಿ ಏರ್ಪಾಡು

ಬೆಂಗಳೂರು ಡಿವಿಜನ್ನಿನಲ್ಲಿ ಬೆಂಗಳೂರು, ತುಮಕೂರು, ಕೋಲಾರ, ಚಿತ್ರದುರ್ಗ ಮತ್ತು ಬಳ್ಳಾರಿ ಜಿಲ್ಲೆಗಳು, ಮೈಸೂರಿನಲ್ಲಿ ಮೈಸೂರು, ಮಂಡ್ಯ ಹಾಸನ ಚಿಕ್ಕಮಗಳೂರು, ಶಿವಮೊಗ್ಗ, ಮಂಗಳೂರು ಮತ್ತು ಕೊಡಗು ಜಿಲ್ಲೆಗಳು, ಬೆಳಗಾಮಿನಲ್ಲಿ ಧಾರವಾಡ, ಬೆಳಗಾಂ, ಬಿಜಾಪುರ ಮತ್ತು ಕಾರವಾರ ಜಿಲ್ಲೆಗಳು ಮತ್ತು ಗುಲ್ಬರ್ಗದಲ್ಲಿ ಹೈದರಾಬಾದು ಕರ್ನಾಟಕದ ಎಲ್ಲಾ ಕನ್ನಡ ಭಾಗಗಳು ಇರುತ್ತವೆ

ನೂತನ ಮೈಸೂರಿಗೆ ಕೆ. ಸಿ. ರೆಡ್ಡಿಯವರು ಮುಖ್ಯ ಮಂತ್ರಿ?

ನೂತನ ಮೈಸೂರು ಸಂಸ್ಥಾನದ ಮುಖ್ಯ ಮಂತ್ರಿ ಸ್ಥಾನಕ್ಕೆ ಒಮ್ಮತದ ಆಯ್ಕೆಯು ಸಂಭವವಿಲ್ಲವೆಂದೂ, ಆದ್ದರಿಂದ ಕೇಂದ್ರ ಉತ್ಪಾದನಾ ಮಂತ್ರಿ ಕೆ. ಸಿ ರೆಡ್ಡಿಯವರ ಹೆಸರನ್ನು ಕೇಂದ್ರದವರು ಸೂಚಿಸಲಿರುವರೆಂದೂ ಹೇಳಲಾಗುತ್ತಿದೆ ಶ್ರೀಗಳಾದ ಎಸ್. ಚನ್ನಯ್ಯ, ಎಸ್. ನಿಜಲಿಂಗಪ್ಪ ಮತ್ತು ಕಡಿದಾಳ್ ಮಂಜಪ್ಪನವರಲ್ಲದೆ, ಮಾಜಿ ಮುಖ್ಯ ಮಂತ್ರಿ ಶ್ರೀ ಹನುಮಂತಯ್ಯನವರೂ ಆ ಸ್ಥಾನಕ್ಕೆ ಸ್ಪರ್ಧಿಸಬಹುದೆಂದೂ ವರದಿಯಾಗಿದೆ

ಚಿನ್ನದ ಗಣಿಯಲ್ಲಿ ೧೨,೦೦೦ ಕಾರ್ಮಿಕರ ಮುಷ್ಕರ

ಕೋಲಾರದ ಚಾಂಪಿಯನ್ ರೀಫ್ ಮತ್ತು ಮೈಸೂರು ಗಣಿಗಳ ಸುಮಾರು ೧೨,೦೦೦ ಕಾರ್ಮಿಕರು ನೆನ್ನೆ ಕೆಲಸಕ್ಕೆ ಹೋಗದೆ ರಾಬರ್ಟ್‌ಸನ್ ಪೇಟೆ, ಆಂಡರ್‌ಸನ್ ಪೇಟೆ ಮತ್ತು ಊರಿಗಾಂಗಳಲ್ಲಿ ಪ್ರದರ್ಶನ ನಡೆಸಿದರು. ಇತ್ಯರ್ಥವಾಗದೆ ಉಳಿದಿರುವ ಬೇಡಿಕೆಗಳ ಬಗ್ಗೆ ತಡ ಮಾಡುತ್ತಿರುವುದೇ ಮುಷ್ಕರಕ್ಕೆ ಕಾರಣ

ಕಮ್ಯೂನಿಸ್ಟ್ ಪಕ್ಷದ ಬಹಿರಂಗ ಸಭೆ

ನಗರದ ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನಾಳೆ ಸಂಜೆ ೬ ಘಂಟೆಗೆ ಬಹಿರಂಗ ಸಭೆಯೊಂದನ್ನು ಟೌನ್‌ಹಾಲ್ ಮೈದಾನದಲ್ಲಿ ಏರ್ಪಡಿಸಲಾಗಿದೆ ಶ್ರೀ ಎನ್. ಎಲ್ ಉಪಾಧ್ಯಾಯರವರು ಅಧ್ಯಕ್ಷತೆ ವಹಿಸುವರು. ಶ್ರೀ ಬಿ ವಿ ಕಕ್ಕಿಲಾಯ ಮುಂತಾದವರು ಭಾಷಣ ಮಾಡುವರು

○ ಶಾರದಾವಿಲಾಸ ಕಾಲೇಜಿನಲ್ಲಿ ಏರ್ಪಟ್ಟಿರುವ ಸಿ ನರಸಿಂಹಯ್ಯನವರ ಸ್ಮಾರಕ ಚರ್ಚೆಯಲ್ಲಿ ಭಾಗವಹಿಸುವ ಪ್ರತಿನಿಧಿಗಳ ಹೆಸರನ್ನು ಕೊಡುವ ತಾರೀಖನ್ನು ಇದೇ ತಿಂಗಳು ೩೦ರವರೆಗೆ ಮುಂದುವರಿಸಲಾಗಿದೆ

○ ರಾಜಧಾನಿಯ ವಿಶ್ವವಿದ್ಯಾಲಯದ ಕಚೇರಿಯು ಇರುವ ಲ್ಯಾಂಫರ್ಡ್ ಭವನದಲ್ಲಿ ಹೊಸ ಯೂನಿಯನ್ ಕಚೇರಿಯನ್ನು ತೆರೆಯಲಾಗಿದೆ

ಕಬ್ಬಹಳ್ಳಿ ವಿದ್ಯಾರ್ಥಿನಿಲಯ ಸಂಘದ ಆರಂಭ ಭಾಷಣ

ಎಸ್. ನಿಜಲಿಂಗಪ್ಪ ಮತ್ತು ಸಿ. ಎಂ. ಪೂಣಚ್ಚರವರ ಭಾಷಣ

ಮೈಸೂರು ೧೯

ಲೋಕಸಭಾ ಸದಸ್ಯರಾದ ಶ್ರೀ ಎಸ್. ನಿಜಲಿಂಗಪ್ಪನವರು ನಿನ್ನೆ ಇಲ್ಲಿನ ಕ್ರಾಫರ್ಡ್ ಭವನದಲ್ಲಿ ಕಬ್ಬಹಳ್ಳಿ ವಿದ್ಯಾರ್ಥಿನಿಲಯ ಸಂಘದ ಆರಂಭ ಭಾಷಣವನ್ನು ಮಾಡಿದರು. ಕೊಡಗಿನ ಮುಖ್ಯಮಂತ್ರಿ ಶ್ರೀ ಸಿ. ಎಂ. ಪೂಣಚ್ಚನವರು ಅಧ್ಯಕ್ಷತೆ ವಹಿಸಿದ್ದರು.

ಉಪಹಾರ ಮತ್ತು ಪ್ರಾರ್ಥನೆಯಾದನಂತರ, ಉಪಾಧ್ಯಾಯರುಗಳ ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ಎ. ಸಿ. ದೇವೇಗೌಡರು ಸ್ವಾಗತ ಭಾಷಣ ಮಾಡಿದರು. ಸಂಘದ ಕಾರ್ಯದರ್ಶಿ ಶ್ರೀ ಎಂ. ಎಲ್. ಶಿವಾನಂದರವರು ಸಂದೇಶಗಳನ್ನು ಓದಿದರು. ನಂತರ ಮಾಸ್ಟರ್ ನರಸಿಂಹ ಮತ್ತು ನಾರಾಯಣ್‌ರವರ ವಾದ್ಯಗೋಷ್ಠಿಯು ನೆರವೇರಿತು. ಶ್ರೀ ಕೆ. ಆರ್. ಲಿಂಗಪ್ಪನವರು ಕುವೆಂಪು, ಬೇಂದ್ರೆ ಮತ್ತು ಮಲ್ಲಪ್ಪನವರ ಭಾವಗೀತೆಗಳನ್ನು ಹಾಡಿದರು.

ಶ್ರೀ ನಿಜಲಿಂಗಪ್ಪನವರು ತಮ್ಮ ಭಾಷಣದಲ್ಲಿ, ಬಡ ಮಕ್ಕಳ ಅನುಕೂಲಕ್ಕಾಗಿ ಕಬ್ಬಹಳ್ಳಿಯ ಸಾಹುಕಾರ್ ಚನ್ನಬಸಪ್ಪನವರೂ, ಅವರ ಮಕ್ಕಳು ಕೆ. ಸಿ. ಸುಬ್ಬಣ್ಣನವರೂ ಮಾಡಿದ ಉದಾರ ಸಹಾಯವನ್ನು ಪ್ರಶಂಸಿಸಿದರು. ಇನ್ನು ಮುಂದೆ ಮತೀಯ ವಿದ್ಯಾರ್ಥಿನಿಲಯಗಳಿಗೆ ಅವಕಾಶವಿಲ್ಲವೆಂದು ತಿಳಿಸಿ, ಕಬ್ಬಹಳ್ಳಿ ವಿದ್ಯಾರ್ಥಿನಿಲಯವು ಸಾರ್ವಜನಿಕ ವಿದ್ಯಾರ್ಥಿನಿಲಯವಾಗಿ ಪರಿಣಮಿಸಬೇಕೆಂದು ಹೇಳಿದರು.

ವಿದ್ಯಾರ್ಥಿಗಳು ತಮ್ಮ ಜೀವನದ ಧ್ಯೇಯವಾಗಿ ವಿದ್ಯಾಭ್ಯಾಸವನ್ನೂ ತಮ್ಮ ಉನ್ನತ ಧ್ಯೇಯ ಸರ ಆದರ್ಶಗಳನ್ನು ಇಟ್ಟುಕೊಳ್ಳಬೇಕೆಂದೂ, ವೈಜ್ಞಾನಿಕ ಮನೋಧರ್ಮ ಮತ್ತು ವಿಜ್ಞಾನ ಸಂಪಿತ ಆದರ್ಶಗಳನ್ನು ಹೊಂದಬೇಕೆಂದೂ ತಿಳಿಸಿದರು.

ಭಾರತವು ಇಂದಿನ ವಿಜ್ಞಾನ ಯುಗದಲ್ಲಿ ಮಹತ್ತರವಾದ ಪಾತ್ರವನ್ನು ವಹಿಸಬೇಕಾಗಿರುವುದೆಂದೂ, ಎರಡು ಪರಸ್ಪರ ವಿರೋಧ ಶಕ್ತಿಗಳಾದ ಬಣಗಳ ಮತ್ತು ದೇಶಗಳ ವೈಮನಸ್ಯದಿಂದ ಉಂಟಾಗುವ ತೊಂದರೆಯಿಂದ ಜಗತ್ತನ್ನು ಪಾರು ಮಾಡುವ ಭಾರವು ಭಾರತಕ್ಕೆ ಸೇರಿರುವುದೆಂದೂ ಹೇಳಿದರು.

ವಿದ್ಯಾರ್ಥಿಗಳು ಮತ್ತು ಯುವಕರಲ್ಲಿ ಹೇಡಿತನವಿರಬಾರದು, ಮನಸ್ಸಿನ ದೃಢತೆಯಿರಬೇಕು, ತಮಗೆ ಸತ್ಯವೆಂದು ಕಂಡುಬಂದುದನ್ನು ಧೈರ್ಯದಿಂದ ಸಾಧಿಸಬೇಕು, ಅನ್ಯಾಯವನ್ನು ಎದುರಿಸಬೇಕು-ಎಂಬುದಾಗಿ ಅವರು ತಿಳಿಸಿದರು.

ಶ್ರೀ ಸ್ಟೀವನ್‌ಸನ್ ಮತ್ತು ಪಾರ್ಟಿಯವರ ಗಾನ ಗೋಷ್ಠಿಯಾದನಂತರ, ಶ್ರೀ ಪೂಣಚ್ಚರವರು ಮಾತನಾಡಿ, ಈಗಿನ ವಿದ್ಯಾಭ್ಯಾಸವು ನಮ್ಮ ಪ್ರಾಚೀನ ಸಂಸ್ಕೃತಿಯ ಆಧಾರದ ಮೇಲೆ ನಡೆದರೆ ಅದು ಶೋಭಿಸುವುದೆಂದು ತಿಳಿಸಿದರು. ಪೂರ್ವದಿಂದಲೂ ನಡೆದುಬಂದಿರುವ ಪದ್ಧತಿಗಳನ್ನು ಅಲ್ಲಗಳೆಯಬಾರದೆಂದೂ, ಅವು ಮುಂದಿನ ಪೀಳಿಗೆಯ ಏಳಿಗೆಗಾಗಿಯೇ ಆಗಿರುವುವೆಂಬುದನ್ನು ಮನಗಾಣಬೇಕೆಂದೂ ಅವರು ಹೇಳಿದರು.

ಸಂಘದ ಮತ್ತೊಬ್ಬ ಕಾರ್ಯದರ್ಶಿ ಡಿ. ಎಸ್. ಬಸವರಾಜ್‌ರವರಿಂದ ವಂದನಾರ್ಪಣೆಯಾಗಿ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

"ರುದ್ರಿ ಮನೆ"

ಚಾಮುಂಡಿಪುರದಲ್ಲಿರುವ ಮಹಾಮನೆ ಪ್ರಕಟಣಾಲಯದವರು ತಮ್ಮ ೧೩ನೇ ಗ್ರಂಥವಾದ ಮೇಲ್ಕಂಡ ಹೆಸರಿನ ಕನ್ನಡ ನಾಟಕದ ಪ್ರತಿಯೊಂದನ್ನು ನಮಗೆ ಕಳುಹಿಸಿರುವರು. ಶ್ರೀ ಸ್ವಾಮಿ ಮಹಾಮನೆಯವರು ಇದರ ಲೇಖಕರು. ಸಾಮಾಜಿಕ ಸುಗುಣ ದುರ್ಗುಣಗಳನ್ನು ಚಿತ್ರಿಸುವ ನಾಟಕವಿದು. ಬೆಲೆ ೧ ರೂ. ಚಾಮುಂಡಿಪುರದ ೨ನೇ ನಂಬರ್ ಮನೆಯಲ್ಲಿರುವ ಪ್ರಕಟಣಾಲಯದಲ್ಲಿ ದೊರೆಯುವುದು.

ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಸಮಿತಿ ಸಭೆ ಆರಂಭ

ಮದ್ರಾಸಿನ ಮುಖಂಡ ಪಿ. ರಾಮಮೂರ್ತಿಯವರ ಭಾಷಣ

ಮೈಸೂರು ೧೯

ಭಾರತದ ಕಮ್ಯೂನಿಸ್ಟ್ ಪಕ್ಷದ ಕರ್ನಾಟಕ ಪ್ರಾಂತ ಸಮಿತಿಯ ಸಭೆಯು [illegible] ನಿನ್ನೆ ನಗರದಲ್ಲಿ ಸೇರಿತು. ಇಂದು ಮತ್ತು ನಾಳೆಯೂ ಅದು ನಡೆಯುವುದು. ೪೦ ಮಂದಿ ಪ್ರತಿನಿಧಿಗಳು ಪ್ರಾಂತದ ನಾನಾ ಭಾಗಗಳಿಂದ ಆಗಮಿಸಿರುವರು. ಪಕ್ಷದ ಕಾರ್ಯದರ್ಶಿ ಶ್ರೀ ಎನ್. ಎಲ್. ಉಪಾಧ್ಯಾಯರು ಪ್ರಾಂತದ ಪರಿಸ್ಥಿತಿ ಬಗ್ಗೆ ವರದಿಯನ್ನು ಚರ್ಚೆಗಾಗಿ ಒಪ್ಪಿಸಿದರು.

ಮಹಾ ಚುನಾವಣೆಗಳ ಸಂಬಂಧದಲ್ಲಿ ಪಕ್ಷವು ಜನತೆಯ ಮುಂದೆ ಸಾಮಾನ್ಯ ಜನರ ಮೇಲೆ ಕಡಿಮೆ ತೆರಿಗೆ ಹಾಕಿ ಕೈಗಾರಿಕೆಗಳನ್ನು ನಡೆಸುವುದು, ಪ್ರಗತಿಪರ ಭೂ ಸುಧಾರಣೆ ಮತ್ತು ಆಡಳಿತವನ್ನು ಪ್ರಜಾಸತ್ತಾತ್ಮಕವಾಗಿ ಮಾಡುವುದು-ಈ ಕಾರ್ಯಕ್ರಮವನ್ನು ಮುಂದಿಡಲಿದೆ.

ಭಾರತದ ಕಮ್ಯೂನಿಸ್ಟ್ ಪಕ್ಷದ ಪ್ರಧಾನ ಸಮಿತಿ ಸದಸ್ಯರೂ, ಮದ್ರಾಸ್ ಕಮ್ಯೂನಿಸ್ಟ್ ಮುಖಂಡರೂ ಆದ ಶ್ರೀ ಪಿ. ರಾಮಮೂರ್ತಿಯವರು ಮಾತನಾಡಿ, ಬರುವ ಮಹಾ ಚುನಾವಣೆಗಳು ರಾಷ್ಟ್ರದಲ್ಲಿ ಪ್ರಾಮುಖ್ಯ ರಾಜಕೀಯ ಹೋರಾಟವಾಗಿ ಪರಿಣಮಿಸುವುವೆಂದು ಹೇಳಿದರು. ಕಮ್ಯೂನಿಸ್ಟ್ ಪಕ್ಷವು ಪ್ರಧಾನ ವಿರೋಧ ಸಂಘಟನವಾಗಿರುವುದೆಂದೂ, ಅದರ ಪ್ರಭಾವದಿಂದ ಸರ್ಕಾರದ ಪ್ರಗತಿ ವಿರೋಧದ ವಿದೇಶಾಂಗ ಮತ್ತು ಒಳಾಡಳಿತ ನೀತಿಗಳಲ್ಲಿ ಸುಧಾರಣೆಯಾಗಿರುವುವೆಂದೂ, ಚುನಾವಣೆಗಳಲ್ಲಿ ಭಾಗವಹಿಸಲು ದೇಶಾದ್ಯಂತ ಎಲ್ಲಾ 'ಪ್ರಜಾಸತ್ತಾತ್ಮಕ ವಿರೋಧ ಪಕ್ಷ'ಗಳನ್ನೂ ಅದು ಒಂದುಗೂಡಿಸಲೆತ್ನಿಸುವುದೆಂದೂ ಅವರು ಹೇಳಿದರು.

ಎಂ. ವಿಶ್ವೇಶ್ವರಯ್ಯನವರ ಹುಟ್ಟುಹಬ್ಬದ ಆಚರಣೆ

ಡಿ. ಬನುಮಯ್ಯ ಕಾಮರ್ಸ್ ಕಾಲೇಜಿನ ವಿದ್ಯಾರ್ಥಿ ಸಂಘದವರು ಕಳೆದ ಸೋಮವಾರ ಭಾರತರತ್ನ ಎಂ. ವಿಶ್ವೇಶ್ವರಯ್ಯನವರ ಹುಟ್ಟುಹಬ್ಬವನ್ನು ಶ್ರೀ ಜೆ. ಸುಬ್ಬರಾಯರ ಅಧ್ಯಕ್ಷತೆಯಲ್ಲಿ ಆಚರಿಸಿದರು. ಶ್ರೀ ಎಂ. ಎ. ದೊರೆಸ್ವಾಮಿ ಅಯ್ಯಂಗಾರ್ಯರು ವಿಶ್ವೇಶ್ವರಯ್ಯನವರ ವಿಷಯವಾಗಿ ಭಾಷಣ ಮಾಡಿದರು. ಸಂಘದ ಅಧ್ಯಕ್ಷರಾದ ಶ್ರೀ ಬಿ. ಸತ್ಯನಾರಾಯಣರವರು ವಂದನಾರ್ಪಣೆ ಮಾಡಿದರು.

ಹೆಗ್ಗಡದೇವನಕೋಟೆ ತಾಲ್ಲೂಕು ಹಂಪಾಪುರ ಹೋಬಳಿ, ಗ್ರಾಮಾಂತರ ಕೈಗಾರಿಕಾ ಸಹಕಾರ ಸಂಘದಲ್ಲಿ ಕಳೆದ ಶನಿವಾರ ಸಂಘದ ಸೆಕ್ರೆಟರಿ ಶ್ರೀ ಕೆ. ಶ್ರೀನಿವಾಸರವರ ಅಧ್ಯಕ್ಷತೆಯಲ್ಲಿ ಭಾರತರತ್ನ ಮೋಕ್ಷಗುಂಡಂ ವಿಶ್ವೇಶ್ವರಯ್ಯನವರ ೯೬ನೇ ವರ್ಷ ವರ್ಧಂತ್ಯುತ್ಸವವನ್ನು ಆಚರಿಸಲಾಯಿತು. ಶ್ರೀ ಕೆ. ಶ್ರೀನಿವಾಸ, ಜಿ. ವಿ. ಶ್ರೀನಿವಾಸಮೂರ್ತಿ ಮತ್ತು ಶ್ರೀ ಎಲ್. ಎ. ಶಿವಾನಂದಮ್‌ರವರು ವಿಶ್ವೇಶ್ವರಯ್ಯನವರ ಗುಣಗಾನ ಮಾಡಿದರು. ಎಲ್ಲರಿಗೂ ಸಿಹಿತಿಂಡಿಯನ್ನು ಹಂಚಲಾಯಿತು.

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ ಮುತ್ತು

ಕೊಯಮತ್ತೂರು ಸಣ್ಣ	೪೯	೪	೦	೪೬	೮	೦
ರತ್ನಚೂಡಿ	೪೧	೨	೦	೪೪	೦	೦
ಅಕ್ಕಿ	೪೭	೦	೦	೪೮	೦	೦
ಕೆಂಬೂತಿ	೪೨	೧೨	೦			
ಸಾವೆ	೨೦	೧೨	೦			
ರಾಗಿ	೪೪	೮	೦			
ಜೋಳ	೪೨	೧೨	೦	೪೪	೪	೦
ಕಂಬು	೨೭	೧೪	೦	೨೮	೦	೦
ಕಡಲೇಕಾಯಿ	೧೪	೨	೦	೨೧	೦	೦
ಎಳ್ಳು	೭೮	೨	೦	೯೩	೧೨	೦
ಹರಳುಬೀಜ	೪೪	೦	೦			
ಹುರುಳಿ	೩೨	೧೦	೦			
ಹೆಸರು	೫೪	೬	೦			
ಹಲಸಂದೆ	೪೯	೮	೦	೫೨	೧೪	೦
ಉಪ್ಪು	೩೪	೮	೦			
ಕಡಲೆ	೫೪	೦	೦			
ಧನಿಯ	೨೪	೨	೦	೨೭	೬	೦
ಹುಣಸೇಹಣ್ಣು	೪	೧೨	೦	೫	೧೨	೦
ಸೀಗೇಕಾಯಿ	೯	೨	೦			
ಮೆಣಸಿನಕಾಯಿ	೧೪	೬	೦	೨೨	೬	೦
ತೆಂಗಿನಕಾಯಿ ೧೦೦೦	೧೩೪	೦	೦	೨೧೬	೮	೦

ಬಂಗಾಳದ ೭೫ ಸಾವಿರ ಉಪಾಧ್ಯಾಯರಿಗೆ ಹೆಚ್ಚು ಸಂಬಳ

ಪಶ್ಚಿಮ ಬಂಗಾಳದ ಪ್ರಾಥಮಿಕ ಶಾಲೆಗಳ ೭೪,೩೭೦ ಮಂದಿ ಉಪಾಧ್ಯಾಯರುಗಳಿಗೆ ಬರುವ ತಿಂಗಳಿಂದ ತಲಾ ೫ ರೂ. ಹೆಚ್ಚು ಸಂಬಳವನ್ನು ಕೊಡಲಿರುವರು. ಇದಕ್ಕೆ ೩ ಕೋಟಿ ರೂ. ಅಧಿಕ ವೆಚ್ಚವಾಗುವುದು. ಕೇಂದ್ರದವರು ಇದರಲ್ಲಿ ಅರ್ಧ ಭಾಗವನ್ನು ವಹಿಸುವರು. ಅಲ್ಲದೆ ಸರ್ಕಾರಿ ನೌಕರರುಗಳಿಗೆ ಕಡಿಮೆ ದರದಲ್ಲಿ ಅಕ್ಕಿಯನ್ನೂ ಒದಗಿಸಲಾಗುವುದು.

ವಿಜ್ಞಾನ ಸಂಘದ ಅಧಿಕಾರ ವರ್ಗ

ಯುವರಾಜಾ ಕಾಲೇಜಿನ 'ವಿಜ್ಞಾನ ಸಂಘ'ದ ಸಭೆಯು ಮೊನ್ನೆ ನಡೆದು, ಶ್ರೀ ಹೆಚ್. ಎನ್. ಚಾಮಯ್ಯನವರು ಅಧ್ಯಕ್ಷರಾಗಿಯೂ, ಶ್ರೀ ಎ. ಎನ್. ರಾಮಚಂದ್ರರವರು ಕಾರ್ಯದರ್ಶಿಗಳಾಗಿಯೂ, ಶ್ರೀಗಳಾದ ಸಿ. ಎಸ್. ಚಂದ್ರಶೇಖರಮೂರ್ತಿ, ಹೆಚ್. ಎಸ್. ನಿಂಗಪ್ಪ, ಹೆಚ್. ಎಂ. ಸ್ವಾಮಿ, ಎನ್. ಕೆ. ಚನ್ನರಾಜಪ್ಪ ಮತ್ತು ಮಲ್ಲಿಕಾರ್ಜುನಪ್ಪನವರು ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿಯೂ ಚುನಾಯಿತರಾಗಿದ್ದಾರೆ.

ಧಾನ್ಯ ವರ್ತಕರ ಸಂಘದ ಅಧಿಕಾರ ವರ್ಗ

ಮೈಸೂರು ಸಂತೆಪೇಟೆ ಧಾನ್ಯ ವರ್ತಕರುಗಳ ಸಂಘದ ವಾರ್ಷಿಕೋತ್ಸವವು ಕಳೆದ ಭಾನುವಾರ, ಡಿ. ಬನುಮಯ್ಯನವರ ಶಾಲಾ ಆವರಣದಲ್ಲಿ ಶ್ರೀ ಬಿ. ಎಸ್. ಸುಬ್ಬಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ಹಲವಾರು ವಿಷಯಗಳ ಚರ್ಚೆ ನಡೆದನಂತರ, ಮುಂದಿನ ಸಾಲಿನ ಅಧಿಕಾರ ವರ್ಗದ ಚುನಾವಣೆ ನಡೆದು ಪೌರಸಭಾ ಸದಸ್ಯರಾದ ಶ್ರೀ ಚಾಡಯ್ಯನವರನ್ನು ಅಧ್ಯಕ್ಷರಾಗಿಯೂ, ಶ್ರೀ ಬಿ. ಎಸ್. ಸುಬ್ಬಣ್ಣನವರನ್ನು ಉಪಾಧ್ಯಕ್ಷರಾಗಿಯೂ, ಶ್ರೀ ಪಿ. ಎನ್. ಸುಬ್ಬರಾಯಪ್ಪನವರನ್ನು ಕಾರ್ಯದರ್ಶಿಯಾಗಿಯೂ, ಶ್ರೀ ಎ. ನಾಗಪ್ಪನವರನ್ನು ಖಜಾಂಚಿಯಾಗಿಯೂ ಸರ್ವಾನುಮತದಿಂದ ಆರಿಸಲಾಯಿತು.

ಸ್ವಾಗತ ಸಮಾರಂಭ

ಓರಿಯಂಟಲ್ ಲೈಫ್ ಇನ್ಷೂರೆನ್ಸ್ ಏಜೆಂಟರಾದ ಶ್ರೀ ಎಂ. ವಿ. ಗಂಗಾಧರಯ್ಯನವರು ತಮ್ಮ ಕುಮಾರ ಶ್ರೀ ಎಂ. ಜಿ. ಸೋಮಶೇಖರ್‌ರವರಿಗೆ ದಿಂಡಿಗಲ್ಲಿನ ಶ್ರೀ ಎಂ. ಎಲ್. ವಿ. ಎಸ್. ಗೋವಿಂದಸ್ವಾಮಿ ಚೆಟ್ಟಿಯಾರರ ಮಗಳು ಸೌ|| ಸೆಲ್ವರಾಣಿಯವರನ್ನು ತಂದುಕೊಂಡು ವಿವಾಹ ನಡೆಸಿದ ಸಂದರ್ಭದಲ್ಲಿ ಮೊನ್ನೆ ಸ್ವಾಗತ ಸಮಾರಂಭವನ್ನು ಏರ್ಪಡಿಸಿದ್ದರು.

ಗಣಪತಿ ಉತ್ಸವದ ಕಾರ್ಯಕ್ರಮ

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಪಾಠಶಾಲಾ ವಿದ್ಯಾರ್ಥಿಗಳಿಂದ ಅಲಂಕಾರ ಮತ್ತು ವ್ಯಾಕರಣ ಶಾಸ್ತ್ರಗಳ ವಿಷಯವಾಗಿ ವಾಕ್ಯಾರ್ಥ ಇದೆ.

ನ್ಯೂ ಡಿಪೇಟಿ ಪ್ರಾಥಮಿಕ ಬಾಲಕರ ಶಾಲೆಯಲ್ಲಿ ಕಳೆದ ೧೩ನೇ ತಾರೀಖು ಗಣಪತಿ ಮಂಗಳಾರತಿಯನ್ನು ನೆರವೇರಿಸಲಾಯಿತು. ಶಾಲಾ ಇನ್ಸ್‌ಪೆಕ್ಟರ್ ಶ್ರೀ ಗುರುರಾಜಾಚಾರ್ಯರು ಅಧ್ಯಕ್ಷತೆ ವಹಿಸಿದ್ದರು. ಶ್ರೀಮತಿ ಎಸ್. ಪದ್ಮಮ್ಮನವರಿಂದ ಪ್ರಾರ್ಥನೆ, ಶ್ರೀ ಸುಬ್ಬಣ್ಣನವರಿಂದ ಸ್ವಾಗತ ಮತ್ತು ಶಾಲಾ ಮಕ್ಕಳಿಂದ ನೃತ್ಯಗಳಾದುವು.

ಮಹಾರಾಜಾ ಹೈಸ್ಕೂಲಿಗೆ ಸೀನಿಯರ್ ಛಾಂಪಿಯನ್‌ಷಿಪ್

ಉಪಾಧ್ಯಾಯರ ಕಾಲೇಜಿನ ಆಶ್ರಯದಲ್ಲಿ ಏರ್ಪಡಿಸಿದ್ದ ಎಜುಕೇಷನಲ್ ವಾರಾಚರಣೆ ಸಂಬಂಧದಲ್ಲಿ ನಡೆದ ಕ್ರೀಡಾ ಸ್ಪರ್ಧೆಗಳಲ್ಲಿ ಮಹಾರಾಜಾ ಹೈಸ್ಕೂಲು ವಿದ್ಯಾರ್ಥಿ ಶ್ರೀ ಕೆ. ಎಸ್. ರಾಮರಾಜೆ ಅರಸ್‌ರವರು ಬಹುಮಾನವನ್ನು ಪಡೆದು ಸೀನಿಯರ್ ಛಾಂಪಿಯನ್‌ಷಿಪ್ ಗಳಿಸಿದರು.

ಹಾಸಿಗೆ-ದಿಂಬು
ಮಿತದರದಲ್ಲಿ ಹತ್ತಿಯಿಂದ ತಯಾರು ಮಾಡುತ್ತೇವೆ
ಬಾಷುಸಾಬ್ ಕಂಪೆನಿ,
ಗಾಯತ್ರಿ ಟಾಕೀಸ್ ಎದುರು, ಮೈಸೂರು

THE
NATIONAL INSTITUTE
OF COMMERCE
1677 Old Mysore Bank Road,
MYSORE
Offers excellent coaching in
TYPEWRITING, SHORTHAND,
ACCOUNTANCY Etc.,
Well equipped and
is centrally located
ADMISSIONS RECEIVED
JOIN NOW

Edited, Printed and Published by A. R. Nagarajan at Sadhvi Press D. Subbiah Road, Mysore

ಯೌವನದ ಸೌಂದರ್ಯ
ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು
ಪ್ರತಿಯೊಬ್ಬರ ನೆಚ್ಚಿನ ಆಸೆ
★
ಮೈಸೂರು
ಸ್ಯಾಂಡಲ್ ಸಾಬೂನು
★
ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು
ಒಂದು ನಿಶ್ಚಿತ ಸಾಧನ
★
ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ
ಇದರಲ್ಲಿ ಸೇರಿಸಲಾಗಿದೆ.
★
ಒಮ್ಮೆ ಉಪಯೋಗಿಸಿ ನೋಡಿ
★
ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ
— ದೊರೆಯುತ್ತದೆ —
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.
ಏಜೆಂಟರು : ಬಿ. ಎಸ್. ಬಿ. ಎಂ. ಎ.

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿಯ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೫] SADHVI : THURSDAY 20—9—1956 ಮೈಸೂರು : ಗುರುವಾರ ೨೦—೯—೧೯೫೬ [ಸಂಚಿಕೆ : ೪೭

ಸೂಯೆಜ್ ಬಗ್ಗೆ ೬ ರಾಷ್ಟ್ರಗಳ ಸಭೆಗಾಗಿ ಬುಲ್ಗಾನಿನ್ ಕರೆ

ಮಾರಾಟ ತೆರಿಗೆ ಶಾಸನದ ಉಲ್ಲಂಘನೆಗೆ ಶಿಕ್ಷೆ ವಜಾ

ಮೈಸೂರು ವರ್ತಕರ ದಂಡ ರದ್ದು

ಬೆಂಗಳೂರು ೨೦

ಹೈಕೋರ್ಟಿನಲ್ಲಿ ನೆನ್ನೆ ಶ್ರೀಮಾನ್ ನ್ಯಾಯಾಧೀಶ ಶ್ರೀ ಆರ್ ವೆಂಕಟರಾಮಯ್ಯ ಮತ್ತು ಜಿ॥ ಹೊಂಬೇಗೌಡರು ಮಾರಾಟ ತೆರಿಗೆ ಶಾಸನದ ಉಲ್ಲಂಘನೆಗಾಗಿ ಮೈಸೂರಿನ ವರ್ತಕರಾದ ಶ್ರೀ ಅಬ್ದುಲ್ ಕರೀಂಖಾನ್ ಸಾಹೇಬರಿಗೆ ೩ ಪ್ರಕರಣಗಳಲ್ಲಿ ವಿಧಿಸಲಾಗಿದ್ದ ತಲಾ ೫೦ ರೂ ದಂಡವನ್ನು ರದ್ದುಗೊಳಿಸಿದರು. ಶ್ರೀ ಕರೀಂ ಸಾಹೇಬರು ೧೯೫೪ರ ಮಾರ್ಚ್ ೩೧, ಜೂನ್ ೩೦ ಮತ್ತು ಸೆಪ್ಟೆಂಬರ್ ೩೦ರಲ್ಲಿ ಒಟ್ಟು ಮಾರಾಟದ ರಿಟರ್ನ್‌ಗಳನ್ನು ಒದಗಿಸಲಿಲ್ಲವೆಂದು ಅವರಿಗೆ ದಂಡ ಹಾಕಲಾಗಿತ್ತು. ಏಪ್ರಿಲ್ ಅಥವಾ ತ್ರೈಮಾಸಿಕ ರಿಟರ್ನ್ ಕೊಡಲು ವರ್ತಕರಿಗೆ ಅವಕಾಶವಿರುವುದೆಂದು ಹೈಕೋರ್ಟಿನವರು ಅಭಿಪ್ರಾಯಪಟ್ಟು, ೪೦ ಸಾವಿರ ರೂ ಟರ್ನ್ ಓವರ್‌ಗಿಂತ ಹೆಚ್ಚಾದರೆ ೩ ತಿಂಗಳಲ್ಲಿ ಒದಗಿಸಬೇಕೆಂಬುದನ್ನು ಒಪ್ಪಿದರೂ, ಅಷ್ಟು ಮೊತ್ತದ ವ್ಯಾಪಾರವಾಗಿರುವುದೆಂಬುದನ್ನು ಯಾರು ನಿರ್ಧರಿಸಬೇಕೆಂದು ಕೇಳಿ, ಕ್ರಿಮಿನಲ್ ತನಿಖೆ ನಡೆದಿರುವ ಈ ಮೊಕದ್ದಮೆಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಪ್ರಾಸಿಕ್ಯೂಷನ್ನಿನವರೇ ರುಜುವಾತುಗೊಳಿಸಬೇಕಾಗಿತ್ತೆಂದು ಹೇಳಿದ್ದಾರೆ

ದಂಡದ ಹಣವನ್ನು ವಾಪಸು ಕೊಡುವಂತೆಯೂ ಆಜ್ಞಾಪಿಸಲಾಗಿದೆ. ಅಡ್ವೊಕೇಟ್ ಜನರಲ್ಲರು ಈ ಆಜ್ಞೆಯ ಪರಿಣಾಮವಾಗಿ ಪ್ರಾಸಿಕ್ಯೂಷನ್ನುಗಳನ್ನು ವಾಪಸು ತೆಗೆದುಕೊಳ್ಳುವುದಾಗಿ ಬರವಸೆಯಿತ್ತ ನಂತರ ದಾ ಪ್ಯಾರಾ ೧೩೬ ನೇ ವಿಧಿ ಪ್ರಕಾರ ಹೂಡಲಾಗಿದ್ದ ಮತ್ತೊಂದು ಅರ್ಜಿಯನ್ನು ವಜಾ ಮಾಡಲಾಯಿತು

ಅಮೆರಿಕಕ್ಕೆ ಆರ್. ಕೆ. ನಾರಾಯಣ್

ನಗರದ ಸುಪ್ರಸಿದ್ಧ ಇಂಗ್ಲಿಷ್ ಕಥೆಗಾರರಾದ ಶ್ರೀ ಆರ್. ಕೆ. ನಾರಾಯಣ್‌ರವರು 'ರಾಕ್‌ಫೆಲ್ಲರ್ ಫೌಂಡೇಷನ್ನಿನ ಗ್ರ್ಯಾಂಟನ್ನು ಸ್ವೀಕರಿಸಿ, ಅಮೆರಿಕಾ ಮತ್ತು ಐರೋಪ್ಯ ರಾಷ್ಟ್ರಗಳಲ್ಲಿ ಸಂಚರಿಸಲು ಈ ತಿಂಗಳಲ್ಲಿ ವಾಷಿಂಗ್ಟನ್ನಿಗೆ ಪ್ರಯಾಣ ಮಾಡುವರು. ಅಮೆರಿಕದಲ್ಲಿ ಅವರು ಗ್ರಂಥಕರ್ತರು, ಪ್ರಕಟಣಕಾರರು ಮೊದಲಾದವರನ್ನು ಭೇಟಿ ಮಾಡುವರು. ಕಾದಂಬರಿಕಾರರಿಗೆ ರೇಡಿಯೊ, ಟೆಲಿವಿಷನ್ ಮತ್ತು ಫಿಲಂಗಳು ಹೇಗೆ ಸಹಾಯವಾಗುವುವೆಂಬುದನ್ನು ಅವರು ಪರಿಶೀಲಿಸುವರು.

ಚಿನ್ನದ ಗಣಿ ಮುಷ್ಕರ ಮುಕ್ತಾಯ

ಕೋಲಾರದ ಚಿನ್ನದ ಗಣಿಯ ೧೨ ಸಾವಿರ ಕಾರ್ಮಿಕರ ಮುಷ್ಕರವು ನೆನ್ನೆ ಮುಕ್ತಾಯವಾಗಿ ವರೆಲ್ಲರೂ ಕೆಲಸಕ್ಕೆ ಹಿಂದಿರುಗಿದರು.

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ಗಂಟೆಗೆ ಇಲ್ಲಿನ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಯುವರಾಜಾ ಕಾಲೇಜಿನ ಪ್ರಿನ್ಸಿಪಾಲರಾದ ಡಾ॥ ಸೀಬಯ್ಯನವರು 'ಪರಮಾಣು ಶಕ್ತಿ' ಬಗ್ಗೆ ವಿಷಯವಾಗಿ ಉಪನ್ಯಾಸ ಮಾಡುವರು

ಅಂಗವಿಕಲರ ಸಂಸ್ಥೆಗಳಿಗೆ ಸಹಾಯ ಅಗತ್ಯ

ಕೊಡಗು ಮುಖ್ಯ ಮಂತ್ರಿ ಪೂಣಚ್ಚರವರ ಭಾಷಣ

ಮೈಸೂರು ೨೦

ಇಲ್ಲಿನ ಕುರುಡ ಮೂಗರ ಶಾಲೆಯ ವ್ಯಾಯಾಮಗೃಹದ ಕಟ್ಟಡದ ಶಂಕು ಸ್ಥಾಪನೆಯನ್ನು ನೆನ್ನೆ ಕೊಡಗಿನ ಮುಖ್ಯ ಮಂತ್ರಿ ಶ್ರೀ ಸಿ. ಎಂ. ಪೂಣಚ್ಚರವರು ನೆರವೇರಿಸಿದರು. ಶಾಲೆಯ ಸುವರ್ಣ ಮಹೋತ್ಸವದ ಸಮಯದಲ್ಲಿ ಕೊಡಗು ಸರ್ಕಾರದವರು ಈ ಕಟ್ಟಡದ ನಿರ್ಮಾಣಕ್ಕಾಗಿ ಆರು ಸಾವಿರ ರೂ ಗಳನ್ನು ಕೊಟ್ಟಿದ್ದಾರೆ

ಶ್ರೀ ಪೂಣಚ್ಚರವರಿಗೆ ಗೌರವ ರಕ್ಷೆ ನೀಡಿದಾದನಂತರ ವ್ಯಾಯಾಮ ಮತ್ತು ಸ್ಕೌಟು ಪ್ರದರ್ಶನಗಳಾದುವು. ಪ್ರಾರ್ಥನೆಯಾದ ಮೇಲೆ, ಶಾಲಾ ಸೂಪರಿಂಟೆಂಡೆಂಟರಾದ ಶ್ರೀ ಸಾರಂಗಪಾಣಿಯವರು ವರದಿಯನ್ನು ಒಪ್ಪಿಸಿದರು. ಗೋಷ್ಠಿ ಗಾನವಾದನಂತರ ಶಾಲೆಯ ವ್ಯವಸ್ಥಾ ಸಮಿತಿ ಅಧ್ಯಕ್ಷರಾದ ಸರ್ದಾರ್ ಕೆ. ಬಸವರಾಜೆ ಅರಸರು ಕೊಡಗು ಮುಖ್ಯ ಮಂತ್ರಿಯವರಿಗೆ ಬಿನ್ನವತ್ತಳೆಯನ್ನು ಅರ್ಪಿಸಿದರು.

ಶ್ರೀ ಪೂಣಚ್ಚರವರು ಭಾಷಣ ಮಾಡಿ ಅಂಗವಿಕಲರಿಗೆ ಸೇವೆ ಮತ್ತು ಸಹಾಯ ಮಾಡಬೇಕಾದುದು ಎಲ್ಲರ ಧರ್ಮವೆಂದು ತಿಳಿಸಿದರು. ಅಂತಹವರ ಏಳಿಗೆಗಾಗಿ ಇರುವ ಸಂಸ್ಥೆಗಳನ್ನು ಅಭಿವೃದ್ಧಿ ಪಡಿಸಬೇಕೆಂದೂ, ಈಗ ಮಾಡಿರುವುದರ ಸ್ಮಾರಕವೂ ವಿಶೇಷವಾಗಿ ಮುಂದೆ ಮಾಡುವ ಕೆಲಸವಿರುವುದೆಂದೂ ಹೇಳಿದರು. ಕಟ್ಟಡಕ್ಕಾಗಿ ಸುರಮುಟ್ಟುಗಳನ್ನು ಕೊಡಗು ಸರ್ಕಾರದವರು ಒದಗಿಸುವರೆಂದೂ ಅವರು ತಿಳಿಸಿದರು.

ಶ್ರೀ ಕೆ ಭೀಮಸೇನರಾಯರಿಂದ ವಂದನಾರ್ಪಣೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಪೋಲೀಸು ಠಾಣೆಗಳಲ್ಲಿ ಉದ್ಯಾನವನ ಪ್ರದರ್ಶನ

ರಾಜಧಾನಿಯ ನಜರ್‌ಬಾದ್ ಮತ್ತು ಕೃಷ್ಣರಾಜ ಪೋಲೀಸು ಠಾಣೆಗಳ ಆವರಣದಲ್ಲಿ ಇಂದು ಮತ್ತು ನಾಳೆ ಉದ್ಯಾನವನ ಪ್ರದರ್ಶನವನ್ನು ಏರ್ಪಡಿಸಲಾಗಿದೆ. ಸಾರ್ವಜನಿಕರು ನೋಡಬಹುದಾಗಿದೆ.

ಭೂಗೋಳ ಶಾಸ್ತ್ರ ಸಂಘದ ಆರಂಭ ಭಾಷಣ

ಇಲ್ಲಿನ ಮಹಾರಾಜಾ ಕಾಲೇಜು ಭೂಗೋಳ ಶಾಸ್ತ್ರ ಸಂಘದ ಆರಂಭ ಭಾಷಣವನ್ನು ನಾಳೆ ಸಂಜೆ ೫॥ ಗಂಟೆಗೆ ಲಿವರ್‌ಪೂಲ್ ವಿಶ್ವವಿದ್ಯಾಲಯದ ಪ್ರೊ॥ ಆರ್. ಡಬ್ಲ್ಯು. ಸ್ಟೀಲ್‌ರವರು ಮಾಡುವರು. ಸಂಘದ ಅಧ್ಯಕ್ಷರಾದ ಡಾ॥ ಜಿ. ಕೆ. ಫೆರ್ನಾಂಡಿಸ್‌ರವರು ಅಧ್ಯಕ್ಷತೆ ವಹಿಸುವರು.

ಮಹಾರಾಜರೊಡನೆ ಯಲ್ಲಪ್ಪಶಾಸ್ತ್ರಿಗಳ ಭೇಟಿ

೩೦ ಭೂವಲಯ ಗ್ರಂಥದ ಕರ್ತೃಗಳಾದ ಪಂಡಿತ ಯಲ್ಲಪ್ಪ ಶಾಸ್ತ್ರಿಗಳು ಈ ದಿನ ಬೆಳಿಗ್ಗೆ ಅರಮನೆಯಲ್ಲಿ ಶ್ರೀಮನ್ಮಹಾರಾಜರನ್ನು ಭೇಟಿ ಮಾಡಿ, ಗ್ರಂಥದ ವೈಶಿಷ್ಟ್ಯಗಳನ್ನು ವಿವರಿಸಿದರು.

ಸೂಯೆಜ್ ಬಗ್ಗೆ ಆರು ರಾಷ್ಟ್ರಗಳ ಸಮ್ಮೇಳನಕ್ಕೆ ರಷ್ಯಾ ಕರೆ

ಸೂಯೆಜ್ ಕಾಲುವೆ ಪ್ರಶ್ನೆಯ ಪರಿಶೀಲನೆಗಾಗಿ ಬ್ರಿಟನ್, ಫ್ರಾನ್ಸ್, ಅಮೆರಿಕಾ, ಈಜಿಪ್ಟ್, ಭಾರತ ಮತ್ತು ರಷ್ಯಗಳ ನಾಯಕರ ಸಮ್ಮೇಳನವನ್ನು ಕರೆಯುವಂತಾಗಬೇಕೆಂದೂ, ಅಂತಹ ಸಮ್ಮೇಳನವು ಎಲ್ಲಿಯಾದರೂ, ಯಾವಾಗಲಾದರೂ ನಡೆದಲ್ಲಿ ತಾವು ಅದರಲ್ಲಿ ಭಾಗವಹಿಸಲು ಸಿದ್ಧವಾಗಿರುವುದಾಗಿಯೂ ರಷ್ಯದ ಪ್ರಧಾನಿ ಬುಲ್ಗಾನಿನ್ನರು ತಿಳಿಸಿರುತ್ತಾರೆ.

ಮಧ್ಯ ಪ್ರದೇಶದಲ್ಲಿ ಕೋಮುವಾರು ಗಲಭೆಯಿಂದ ೫ ಮರಣ

ನಾಗಪುರಕ್ಕೆ ೨೦೦ ಮೈಲಿ ದೂರವಿರುವ ಖಾಂಗಾವ್ ಎಂಬಲ್ಲಿ ಮೊನ್ನೆ ಕೋಮುವಾರು ಗಲಭೆಯಲ್ಲಿ ಗಾಯಗೊಂಡ ೪೫ ಜನರ ಪೈಕಿ ೫ ಮಂದಿ ಆಸ್ಪತ್ರೆಯಲ್ಲಿ ಮೃತಪಟ್ಟಿರುತ್ತಾರೆ. ನೆನ್ನೆ ರಾತ್ರಿ ಊರಿನಲ್ಲಿ ಕರ್ಫ್ಯೂವನ್ನು ವಿಧಿಸಲಾಯಿತು. ಗಣಪತಿ ಉತ್ಸವದ ಕಾಲದಲ್ಲಿ ಹೊರಭಾಗ ಕಲ್ಲೆಸೆಟವನ್ನು ಬೇರೆಬೇರೆ ಗಲಭೆಗಳಾದುವು. ಅಲ್ಲಿ ಈಗ ಪ್ರತಿಬಂಧಕಾಜ್ಞೆಯನ್ನು ಹಾಕಲಾಗಿದೆ. ಮಧ್ಯ ಭಾರತದ ಸಾಗರ ಎಂಬಲ್ಲಿ ಕಳೆದ ಸೋಮವಾರ, ಭಗವದ್ಗೀತೆ ಮತ್ತು ರಾಷ್ಟ್ರ ವಿರೋಧದ ಚಳುವಳಿ ಬಗ್ಗೆ ಪ್ರತಿಭಟನಾ ಪ್ರದರ್ಶನವು ನಡೆಯಿತು. ಗಲಭೆಯೂ ಆಗಿ ಅಲ್ಲಿ ೪೦ ಮಂದಿಯನ್ನು ಬಂಧಿಸಲಾಗಿದೆ.

ಧಾರವಾಡ ರೇಡಿಯೊದಲ್ಲಿ ರಾಷ್ಟ್ರೀಯ ನಾಟಕ ಪ್ರಸಾರ

ಈ ರಾತ್ರಿ ೯-೩೦ ಗಂಟೆಗೆ ಪ್ರಾಥಮಿಕ ಆಕಾಶವಾಣಿ ರಾಮಚಂದ್ರರವರ ಸುಪ್ರಸಿದ್ಧ ಗುಜರಾತಿ ರಂಗ ನಾಟಕ "ಭರ್ತೃಹರಿ" ಯನ್ನು ಕನ್ನಡದಲ್ಲಿ ಧಾರವಾಡ ರೇಡಿಯೊ ಕೇಂದ್ರದಿಂದ ಪ್ರಸಾರ ಮಾಡಲಾಗುತ್ತದೆ. ಅದನ್ನು ಕನ್ನಡಿಸಿದವರು ಕಾಶೀನಾಥ ಸಾರಂಗಮಠರವರು. ಭೂಮಿಕೆಯಲ್ಲ ಉತ್ತರ ಕರ್ನಾಟಕದ ಹೆಸರಾಂತ ಕಲಾವಿದರಾದ ಮಹಾಂತೇಶ ಶಾಸ್ತ್ರಿ, ಶ್ರೀಪಾದ ಗರುಡ, ವನಮಾಲಾ ಕವಲಿ, ಪ್ರಭಾ ದಂಡೀಗೇರಿ, ಎಚ್. ಆರ್ ಬೆಣ್ಣೂರ ಮೊದಲಾದವರಿದ್ದಾರೆ. ಈ ಕಾರ್ಯಕ್ರಮವನ್ನು ೪೦೫ ೪ ಮೀಟರಿನಲ್ಲಿ ಕೇಳಬಹುದು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೩೫ ಗಾಂಧಿ ಚರ್ಚೆ. ೭-೧೫ ಭಜನೆ ಮತ್ತು ಶಬ್ದ-ದೇವರ ನಾಮ. ೭-೩೦ ಹಿಂದಿ ಪಾಠ. ೮ ೧೫ ವಿಶೇಷ. ಮಧ್ಯಾಹ್ನ ೧೨ ಸಂಗೀತ ೧೨-೩೦ ವಾದ್ಯ ವೃಂದ. ೧೨-೪೫ ವನಿತಾ ವಿಹಾರ ೧-೫೦ ನಾಗಸ್ವರ ೨-೧೫ ಪ್ರೌಢಶಾಲೆಗಳಿಗಾಗಿ. ಸಂಜೆ ೫-೩೦ ಆನ ಕಿವ್ಯ ಸಂಗೀತ. ೬-೧೫ ಕನ್ನಡ ಗೀತೆಗಳು ೬-೩೦ ಕೇಂದ್ರದ ಪ್ರಗತಿ-ಕನ್ನಡ ಭಾಷಣ ೭ ಮದ್ರಾಸಿನ ಶಾಂತಿ-ವಿಸ್ತರಣ ವೇಂಕಟಸ್ವಾಮಿ ನಾಯ್ಡು ಪಿಟೀಲು. ೯-೧೫ ರಿಕಾರ್ಡ್. ೯-೩೦ ಸಾಹಿತ್ಯ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ. ೧೦ ರಿಕಾರ್ಡ್. ೧೦-೧೫ ಉರ್ದು ಗೀತೆ.

ಶಾಸನ ಸಭೆಗಳ ಸಮಾವೇಶ

ದಿವಂಗತ ಕೆ. ಟಿ. ಭಾಷ್ಯಂರವರ ಗೌರವಕ್ಕಾಗಿ ಸಭೆ ಮುಂದಕ್ಕೆ

ಸ್ವಂ. ಸು. ಪೋ॥] ಬೆಂಗಳೂರು ೨೦

ಈ ದಿನ ಉಭಯ ಶಾಸನ ಸಭೆಗಳೂ ಆರಂಭವಾಗಿ ಎರಡರಲ್ಲೂ ದಿವಂಗತ ಕೆ. ಟಿ. ಭಾಷ್ಯಂರವರ ನಿಧನಕ್ಕೆ ಸಂತಾಪವನ್ನು ಸೂಚಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಸಭೆಗಳು ೧ ದಿನ ಮುಂದುವರಿದುವು. ಕೆಳಮನೆ ಸಭೆಯಲ್ಲಿ ಶ್ರೀ ಎ. ಜಿ ರಾಮಚಂದ್ರರಾಯರೂ, ಮೇಲು ಸಭೆಯಲ್ಲಿ ಶ್ರೀ ಸದಿದಾಳ್ ಮುಂಜಪ್ಪನವರೂ ಸಂತಾಪ ಸೂಚಕ ನಿರ್ಣಯಗಳನ್ನು ಮಂಡಿಸಿದರು.

ಶ್ರೀಗಳಾದ ಹೆಚ್. ಎಂ. ಚನ್ನಬಸಪ್ಪ, ಶಾಂತಪ್ಪ ಮತ್ತು ಬಳ್ಳಾರಿಯ ಸಣ್ಣಬಸವನಗೌಡರವರು ಸದಸ್ಯರಾಗಿ ಪ್ರಮಾಣವಚನವನ್ನು ಸ್ವೀಕರಿಸಿದರು

ಮಾಜಿ ಮುಖ್ಯ ಮಂತ್ರಿ ಶ್ರೀ ಕೆ. ಹನುಮಂತಯ್ಯನವರು ಕಾಂಗ್ರೆಸ್ ಪಕ್ಷದ ಹಿಂಭಾಗದ ಸ್ಥಾನದಲ್ಲಿ ಕುಳಿತಿದ್ದರು. ಅವರು ರುಮಾಲು, ಕರಿಯ ಅಂಗಿ ಮತ್ತು ಪಂಚೆಯ ಧರಿಸಿದ್ದರು.

ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಪ್ರದರ್ಶನ

ಮೈಸೂರಿನ ಆಯುರ್ವೇದ ಕಾಲೇಜಿನ ೧೦೦ ವಿದ್ಯಾರ್ಥಿಗಳು ನೆನ್ನೆ ಮಧ್ಯ ರಾತ್ರಿ ಇಲ್ಲಿಗೆ ಬಂದು ಇಂದು ನಗರದಲ್ಲಿ ಮೆರವಣಿಗೆ ನಡೆಸಿದರು. ಅವರನ್ನು ಕೃಷ್ಣರಾಜೇಂದ್ರ ಸರ್ಕಲ್ ಬಳಿ ಪೋಲೀಸರು ತಡೆದರು. ಆ ಬಳಿಕ ಹಲವರು ಶಾಸನ ಸಭಾ ಭವನದ ಬಳಿ ಹೋಗಿ ಹನುಮಂತಯ್ಯ, ಭೀಮಪ್ಪನಾಯಕ್ ಮುಂತಾದವರನ್ನು ಭೇಟಿ ಮಾಡಿದರು. ಮುಂದೆ ಮುಖ್ಯ ಮಂತ್ರಿಯವರನ್ನು ಭೇಟಿ ಮಾಡಲಾಗಿ ಅವರು ವಿದ್ಯಾರ್ಥಿಗಳಲ್ಲಿ ಸಹಾನುಭೂತಿ ವ್ಯಕ್ತಪಡಿಸಿ, ಮುಷ್ಕರವನ್ನು ನಿಲ್ಲಿಸುವಂತೆ ಸೂಚಿಸಿದರು.

ಲಂಡನ್ನಿನಲ್ಲಿ ೧೮ ರಾಷ್ಟ್ರಗಳ ಸೂಯೆಜ್ ಸಮ್ಮೇಳನ

ಬಳಕೆಗಾರರ ಸಂಸ್ಥೆ ಬಗ್ಗೆ ಪಾಕಿಸ್ತಾನದ ವಿರೋಧ

ಸೂಯೆಜ್ ಕಾಲುವೆ ಬಳಕೆಗಾರರ ಸಂಸ್ಥೆಯ ಸ್ಥಾಪನೆ ಸಂಬಂಧವಾಗಿ ೧೮ ರಾಷ್ಟ್ರಗಳ ಸಮ್ಮೇಳನವು ನೆನ್ನೆ ಲಂಡನ್ನಿನಲ್ಲಿ ಆರಂಭವಾಯಿತು. ಬ್ರಿಟನ್ನಿನ ವಿದೇಶಾಂಗ ಮಂತ್ರಿ ಸೆಲ್ವಿನ್ ಲಾಯ್ಡರು ಮಾತನಾಡಿ, ಸೂಯೆಜ್ ಕಾಲುವೆಯನ್ನು ಒಂದು ರಾಷ್ಟ್ರ ಅಥವಾ ಒಬ್ಬ ಮನುಷ್ಯನು ಹತೋಟಿ ಇಟ್ಟುಕೊಳ್ಳುವುದಕ್ಕೆ ಬ್ರಿಟನ್ನಿನ ವಿರೋಧವಿದೆಯೆಂದು ತಿಳಿಸಿದರು. ಎಲ್ಲ ದಲೆಸ್‌ರವರು ಈಜಿಪ್ಟಿನ ವರ್ತನೆಯಿಂದ ಕಷ್ಟ ಪರಿಸ್ಥಿತಿಯುಂಟಾಗಿರುವುದೆಂದು ತಿಳಿಸಿದರು

ಪಾಕಿಸ್ತಾನದ ವಿದೇಶಾಂಗ ಮಂತ್ರಿ ಫಿರೋಜ್ ಖಾನ್ ನೂನರು ಮಾತನಾಡಿ, ಬಳಕೆಗಾರರ ಸಂಸ್ಥೆಯ ಸ್ಥಾಪನೆ ವಿಷಯವನ್ನು ಕೈಬಿಟ್ಟು ಈಜಿಪ್ಟಿನೊಡನೆ ಸಂಧಾನವನ್ನು ಆರಂಭಿಸಬೇಕೆಂದು ತಿಳಿಸಿದರು. ಸಂಧಾನ ನಡೆಸುವಂತೆ ಸ್ವೀಡನ್, ಇರಾನ್ ಮತ್ತು ಸ್ಪೇನುಗಳು ತಿಳಿಸಿದುವು.

ಪುಸ್ತಕ ಭಂಡಾರದ ಶಂಕುಸ್ಥಾಪನೆ

ಮೈಸೂರು ೨೦

ಜಿಲ್ಲಾ ವಯಸ್ಕರ ಶಿಕ್ಷಣ ಸಮಿತಿಯ ಆಶ್ರಯದಲ್ಲಿ ಮೊನ್ನೆ ಹುಣಸೂರು ತಾಲ್ಲೂಕು ಹುಲ್ಲಹಳ್ಳಿ ಗ್ರಾಮದಲ್ಲಿ ಪುಸ್ತಕ ಭಂಡಾರದ ಕಟ್ಟಡದ ಶಂಕುಸ್ಥಾಪನೆಯು ಜಿಲ್ಲಾಧಿಕಾರಿಗಳಾದ ಶ್ರೀ ಎಂ. ಎಸ್. ಶಂಕರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀಮತಿ ಕಮಲಾಬಾಯಿಯವರಿಂದ ಪ್ರಾರ್ಥನೆಯನಂತರ, ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಕಾರ್ಯದರ್ಶಿ ಶ್ರೀ ಕೆ.ಎಸ್. ಸೂರ್ಯನಾರಾಯಣರಾಯರಿಂದ ಶಂಕುಸ್ಥಾಪನೆಯಾಯಿತು. ಉತ್ತಮ ಪುಸ್ತಕ ಭಂಡಾರಕ್ಕಾಗಿ ಗಾವಡಗೆರೆ ಸುಬ್ಬರಾಯರು ಬಹುಮಾನವಾಗಿ ಕೊಟ್ಟಿದ್ದ ಷೀಲ್ಡನ್ನು ಶ್ರೀ ಹೆಚ್. ಕೆ. ಕುಮಾರಸ್ವಾಮಿಯವರು ಪುಸ್ತಕ ಭಂಡಾರದ ಸಮಿತಿ ಅಧ್ಯಕ್ಷರಿಗೆ ಕೊಟ್ಟರು

ಉತ್ತಮವಾಗಿ ಕೆಲಸ ಮಾಡಿದ ಪುಸ್ತಕ ಭಂಡಾರದ ಅಧಿಕಾರಿ ಶ್ರೀ ನಾರಾಯಣರಾವ್ ರವರಿಂ ಮತ್ತು ತಾಲ್ಲೂಕು ಸಂಚಾಲಕರಾಗಿ ಉತ್ತಮ ಸೇವೆ ಸಲ್ಲಿಸಿದ ಶ್ರೀ ಎಂ. ಎಸ್. ಸೂರ್ಯನಾರಾಯಣರಾಯರಿಗೆ ಗ್ರಾಮಸ್ಥರು ರಜತ ಪಾತ್ರೆಗಳನ್ನು ಬಹುಮಾನವಾಗಿ ಇತ್ತರು.

ಆಯುರ್ವೇದ ಕಾಲೇಜಿನ ಅಭಿವೃದ್ಧಿಗಾಗಿ ಕ್ರಮಗಳು

ಸಂಸ್ಥಾನದ ಸ್ಥಳೀಯ ಸಂಸ್ಥೆಗಳ ಕಮಿಷನರ್ ಮತ್ತು ಭಾರತೀಯ ವೈದ್ಯದ ಕೇಂದ್ರ ಸಮಿತಿಯ ಅಧ್ಯಕ್ಷ ಶ್ರೀ ಎಂ ಕೆ ಅಪ್ಪಾಜಪ್ಪನವರ ಅಧ್ಯಕ್ಷತೆಯಲ್ಲಿ ಕಳೆದ ಸೋಮವಾರ ಕೇಂದ್ರ ಸಮಿತಿ ಸಭೆಯು ಜರುಗಿ, ಮೈಸೂರು ಆಯುರ್ವೇದ ಕಾಲೇಜಿನ ಅಭಿವೃದ್ಧಿಯ ಹಲವಾರು ವಿಷಯಗಳನ್ನು ದೀರ್ಘವಾಗಿ ಚರ್ಚಿಸಿ, ಎಲ್ಲಾ ವಿಧವಾಗಿಯೂ ಕಾಲೇಜನ್ನು ಉತ್ತಮಪಡಿಸುವ ಬಗ್ಗೆ ಹಲವು ಉಪಯುಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಶಿಫಾರಸು ಮಾಡಲಾಯಿತು ಕಾಲೇಜಿನ ಅಭಿವೃದ್ಧಿ ಬಗ್ಗೆ ವಿದ್ಯಾರ್ಥಿಗಳು ಹಲವಾರು ಕುಂದುಕೊರತೆಗಳನ್ನು ಸೂಚಿಸಿದ್ದುದನ್ನು ಪರಿಶೀಲಿಸಲಾಯಿತು.

ಪ್ರಾಕೃತ ವಸ್ತು ಸಂಶೋಧನಾ ಸಲಹಾ ಮಂಡಲಿಗೆ ಕೆ. ಎ. ನೀಲಕಂಠಶಾಸ್ತ್ರಿಗಳು

ಹನ್ನೆರಡು ಮಂದಿ ಸದಸ್ಯರಿರುವ ಪ್ರಾಕೃತ ವಸ್ತು ಸಂಶೋಧನೆಯ ಕೇಂದ್ರ ಸಲಹಾ ಮಂಡಲಿಗೆ ಮೈಸೂರಿನ ಇಂಡಾಲಜಿ ಪ್ರೊಫೆಸರ್ ಕೆ. ಎ ನೀಲಕಂಠಶಾಸ್ತ್ರಿಯವರನ್ನು ದಿವಂಗತ ಎಂ. ಎಸ್. ವತ್ಸರವರ ಸ್ಥಾನದಲ್ಲಿ ಭಾರತ ಸರ್ಕಾರದವರು ಸದಸ್ಯರಾಗಿ ನಾಮಕರಣ ಮಾಡಿದ್ದಾರೆ

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ ವಗೈರೆ

ಕೊಯಮುತ್ತೂರುಸಣ್ಣ	೪೩	೮	೦	೪೬	೧೨	೦
ರತ್ನಚೂಡಿ	೪೨	೧೨	೦	೪೪	೧೪	೦
ಅಕ್ಕಿ	೪೪	೨	೦	೪೫	೧೦	೦
ಕಂಬಾರಿ	೪೩	೧೪	೦			
ರಾಗಿ	೩೪	೦	೦	೩೯	೮	೦
ರಾಗಿ	೪೧	೪	೦	೪೨	೮	೦
ಜೋಳ	೪೨	೧೨	೦	೪೫	೧೦	೦
ಕಡಲೆ	೨೫	೨	೦			
ಕಡಲೆಕಾಯಿ	೧೪	೦	೦	೨೦	೧೦	೦
ಎಳ್ಳು	೭೫	೦	೦	೮೫	೪	೦
ಹುರುಳಿ	೪೧	೦	೦	೪೪	೦	೦
ಹೆಸರು	೪೯	೮	೦			
ಹಲಸಂದೆ	೫೫	೨	೦			
ಉದ್ದು	೩೬	೮	೦			
ಧನಿಯ	೨೪	೮	೦	೨೬	೧೨	೦
ಹುಣಸೇಹಣ್ಣು	೪	೯	೦	೬	೪	೦
ಮೆಣಸಿನಕಾಯಿ	೨೧	೦	೦	೨೪	೧೨	೦
ತೆಂಗಿನಕಾಯಿ ೧೦೦೦	೧೯೦	೦	೦	೨೦೬	೪	೦

Edited, Printed and Published by
A. R. Nagarajan at Sadhvi Press
D. Subbiah Road, Mysore

ಹಿಂದಿ ತರಗತಿಗಳು

ಬರುವ ಫೆಬ್ರವರಿಯಲ್ಲಿ ನಡೆಯುವ ದಕ್ಷಿಣ ಭಾರತ ಹಿಂದಿ ಪ್ರಚಾರ ಸಭಾ ಪ್ರಥಮಾ, ಮಧ್ಯಮಾ, ರಾಷ್ಟ್ರ ಭಾಷಾ ಮತ್ತು ಏಪ್ರಿಲಿನಲ್ಲಿ ನಡೆಯುವ ಮೈಸೂರು ಹಿಂದೀ ಸಾಹಿತ್ಯ ಪರಿಷತ್ತಿನ ವಿವಿಧ ಪರೀಕ್ಷೆಗಳಿಗೆ ಇಂದಿನಿಂದ ತರಗತಿಗಳು ಮಾದರಿಶಾಲೆಯ ಸೇವಾಸಂಘದ ಆಶ್ರಯದಲ್ಲಿ ಪ್ರಾರಂಭವಾಗುವುವು ಬಾಲಕಬಾಲಕಿಯರು ಕೂಡಲೇ ಸೇರಬೇಕೆಂದು ಕೋರಿದೆ. ಸಂಜೆ ೫-೩೦ ರಿಂದ ಪಾಠಗಳು ನಡೆಯುವುವು.

ರಣಜಿತ್ 20-9-56 ರಿಂದ ಅಮೋಘ ಪ್ರಾರಂಭ
ಜಿಪ್ಸಿ ಫಿಲಂಸ್‌ರವರ ಹಿಂದಿ ಚಿತ್ರ
★ ಚಂದ್ರಕಾಂತ ★
ತಾರಾಗಣ : ಬೀನಾರಾಯ್, ಹೀರಾಲಾಲ್, ಭರತ್‌ಭೂಷಣ್, ಬಿ. ಎಂ. ವ್ಯಾಸ್ ಮತ್ತು ಗಾಡಿವಾಲ
ದಿಗ್ದರ್ಶನ: ಕ. ಪಿ. ಜಿಪ್ಸಿ – ಸಂಗೀತ: ಎಸ್. ದತ್ತ

ಚಾಮುಂಡೇಶ್ವರಿ ಟಾಕೀಸ್
21—9—56 ರಿಂದ ಒಂದು ವಾರ ಮಾತ್ರ
ಕೃಷ್ಣಾ ಪಿಕ್ಚರ್ಸ್‌ರವರ ತಮಿಳು ಚಿತ್ರ ★ ಕಾವೇರಿ ★
ನಟವರ್ಗ :- ಶಿವಾಜಿ ಗಣೇಶ್, ಲಲಿತ, ಪದ್ಮಿನಿ, ರಾಗಿಣಿ, ಎ. ಎಸ್ ಕೃಷ್ಣನ್, ಟಿ ಎಂ. ಮಧುರಂ ಮುಂತಾದವರು
ಮುಂದಿನ ಬರೋಣ : ★ ನಾಳೈ ಓರು ನಾಳ್ ★ (ತಮಿಳು)

TENDER NOTIFICATION

Sealed tenders are invited from reputed firms dealing with heavy fabrication work for supplying two pressed steel tanks of standard make of 4800 Gals capacity each, together with a M.S. staging of 82 feet height and erecting them in the premises of the Institute.

Firms interested in the execution of this job, may kindly obtain tender papers from the undersigned on payment of Rs 5/-per set which is non refundable. Completed tenders together with an earnest deposit of Rs 1250/- in cash or by Bank draft will have to be sent to the officer mentioned below so as to reach him on or before the 29th September 1956 12—30 P M. Tenders received will be opened at 12—45 P M. the same day in the presence of the tenderers or their representatives who may be present at that time.

The Director, C.F.T.R.I. Mysore reserves the right not to accept the lowest or any tender received without assigning reasons therefor. The supplies and erection work will have to be completed within 4 months from the date of award, failing which a penalty of Rs 20/- would be levied per day for any extra time taken by the contractor.

ADMINISTRATIVE OFFICER,
Central Food Technological Research Institute,
T T Mohalla, Mysore

MYSORE DASARA EXHIBITION 1956

FLOODLIGHT TOURNAMENTS

Open to students of all the High Schools, Colleges and to recognised Institutions and Clubs, will be organised during the ensuing Dasara Exhibition The competitors should forward the applications together with the entrance fee through their *respective institutions.*

SPORTS ITEMS

Mens' Events	*Entrance fee*
1. Basket ball	Rs. 5 per team
2. Volley ball	5 do
3 Kho-Kho	3 do
4. Kabadi	3 do
5 Amateur Wrestling	1 per head
6 Body Beautiful (Mr. Mysore)	1 do
7 Weight Lifting	1 do
Ladies' Events	
1 Throw ball	3 per team
2 Tennicoit	3 do
3 Kho-Kho	3 do
4. Basket ball (Addition)	3 do

ATHLETICS EVENTS

Men's Events
1. 100 meters run
2. 200 do
3. 400 do
4 800 do
5. 1500 do
6. Long Jump
7 High Jump
8. Shot put
9. Discuss throw
10. 4 x 200 relay race

Annas four per head per event

Women's Events
1 50 meters run
2. 100 do
3. Shot put
4. Discuss throw
5. Long Jump
6. Basket ball shooting
7. Potato race
8. Musical chair

Annas four per head per event

Last date for receipt of applications together with entrance fee is 30th Sept. 1956 before 5 p m. Entries will not be received after the due date under any circumstances.

For particulars please apply to :—

THE GENERAL SECRETARY,
DASARA EXHIBITION COMMITTEE,
MYSORE

ಲಕ್ಷ್ಮಿ ★ 21—9—56 ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನಗಳು
ದೇವರ್ ಫಿಲಂಸ್‌ರವರ ತಮಿಳು ಚಿತ್ರ
★ ತಾಯಿಕ್ಕುಪಿನ್ ತಾರಮ್ ★
ಪಾತ್ರ :— ಎಂ. ಜಿ. ರಾಮಚಂದ್ರನ್, ಪಿ. ಭಾನುಮತಿ, ಕಣ್ಣಾಂಬ, ಸುರಬಿ ಬಾಲಸರಸ್ವತಿ, ಟಿ. ಎಸ್. ಬಾಲಯ್ಯ ಮುಂತಾದವರು

ಟೆಲಿಫೋನ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಇಂದಿನ ಪತ್ರಿಕೆ 3 ಕಾಸು

ಬ್ರಾಂಕಾಲ್
ಜುಬ್ಬಸ ಮತ್ತು ಗೂರಲು ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು ಹೊರಗಿನ ಪ್ರದೇಶಗಳಿಗೆ ಏಜೆಂಟರುಗಳು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
71/1, ಅವಿನ್ಯೂ ರಸ್ತೆ
ಶ್ರೀನಿವಾಸ ಬಿಲ್ಡಿಂಗ್,
ಬೆಂಗಳೂರು-2

[ಸಂಪುಟ : ೧೫] SADHVI : FRIDAY 21—9—1956 ಮೈಸೂರು : ಶುಕ್ರವಾರ ೨೧—೯—೧೯೫೬ [ಸಂಚಿಕೆ : ೪೬]

ಸಂಸ್ಥಾನದಲ್ಲಿ ಪುನಃ ಜೂನ್‌ನಿಂದಲೇ ಶಿಕ್ಷಣ ವರ್ಷಾರಂಭ

ಮತ್ತೆ ಜೂನ್ ತಿಂಗಳಿಂದಲೇ ವಿದ್ಯಾಭ್ಯಾಸ ವರ್ಷಾರಂಭ

ಮಂತ್ರಿಮಂಡಲಕ್ಕೆ ಶಾಸನಸಭಾ ಕಾಂಗ್ರೆಸ್ ಪಕ್ಷದ ಸೂಚನೆ

ಬೆಂಗಳೂರು ೨೦

ಸರ್ವೋದಯ ದಿನದಿಂದ ವಿದ್ಯಾಭ್ಯಾಸದ ವರ್ಷವು ಆರಂಭವಾಗಬೇಕೆಂದು ಸರ್ಕಾರದವರು ಮಾಡಿದ್ದ ಏರ್ಪಾಡನ್ನು ಬದಲಾಯಿಸಿ ಇನ್ನು ಮುಂದೆ ಜೂನ್ ತಿಂಗಳಿಂದಲೇ ನಡೆಸುವಂತೆ ನೆನ್ನೆ ಸಂಸ್ಥಾನದ ಶಾಸನಸಭಾ ಕಾಂಗ್ರೆಸ್ ಪಕ್ಷದ ಸಭೆಯು ಮಂತ್ರಿಮಂಡಲಕ್ಕೆ ಸೂಚನೆಯಿತ್ತಿತು. ಈ ಬಗ್ಗೆ ಸರ್ಕಾರದವರು ಶೀಘ್ರದಲ್ಲೇ ಆಜ್ಞೆ ಹೊರಡಿಸುವರು. ಹನುಮಂತಯ್ಯನವರ ಮಂತ್ರಿಮಂಡಲದ ವಿದ್ಯಾ ಸುಧಾರಣೆಗಳಲ್ಲಿ ಬೇರಾವ ಮಾರ್ಪಾಡನ್ನೂ ಪಕ್ಷವು ಸೂಚಿಸಿಲ್ಲ.

ಇತರ ಕನ್ನಡ ಪ್ರದೇಶಗಳು ಸಂಸ್ಥಾನಕ್ಕೆ ಸೇರಲಿರುವುದರಿಂದ ವಿದ್ಯಾಭ್ಯಾಸ ವರ್ಷಾರಂಭದ ವ್ಯತ್ಯಾಸದಿಂದ ತೊಂದರೆಯಾಗುವುದೆಂಬುದನ್ನು ಮನಗಂಡು ಮೇಲ್ಕಂಡಂತೆ ಪಕ್ಷದ ಕಾರ್ಯಕಾರಿ ಸಮಿತಿಯು ಬದಲಾವಣೆಯನ್ನು ಸೂಚಿಸಿತು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ ೭-೫ ದಿಲ್ಲುಬಾ. ೭-೧೫ ಮತ್ತು ೮-೧೫ ಪಿ. ಆರ್. ಸುಂದರರಾಜನ್—ದೇವರ ನಾಮ ೭-೩೦ ರಿಕಾರ್ಡು. ಮಧ್ಯಾಹ್ನ ೧೨ ಸಂಗೀತ. ೧೨-೩೦ ರಿಕಾರ್ಡು. ೧೨-೪೫ ಬಾಲಗಣ್ ೧ ೫೦ ದಿಲ್ಲುಬಾ. ಸಂಜೆ ೫ ೩೦ ಮತ್ತು ೮ ವಸುಮತಿ ರಾಮಚಂದ್ರನ್—ಸಂಗೀತ. ೬-೧೫ ವಚನಗಾನ. ೭ ೩೦ ಮತ್ತು ೮ ೪೦ ಎಸ್. ಶ್ರೀನಿವಾಸಶಾಸ್ತ್ರಿಗಳ ಬಗ್ಗೆ ಕನ್ನಡ ಮತ್ತು ಇಂಗ್ಲಿಷ್ ಭಾಷಣ. ೮-೨೦ ರೇಡಿಯೋ ನ್ಯೂಸ್ ರೀಲ್. ೯-೧೫ ವರ ಪರೀಕ್ಷೆ ಟಿ ಎಸ್. ರಾಮಚಂದ್ರರಾಯರಿಂದ ಪ್ರಸಂಗ. ೯-೩೦ ರಾಷ್ಟ್ರೀಯ ಕಾರ್ಯಕ್ರಮ-ಸಂಗೀತ

ಹಣ್ಣಿನ ಮಿಠಾಯಿಗಳ ತಯಾರಿಕೆ

ಮೈಸೂರು ೨೦

ಬಾಳೆ, ಸೀಬೆ, ಕಿತ್ತಳೆ, ಮಾವು, ಹಲಸಿನ ಹಣ್ಣು ಮುಂತಾದ ಹಣ್ಣುಗಳಿಂದ ಮಿಠಾಯಿ (ಟಾಫಿ)ಗಳನ್ನು ತಯಾರಿಸುವ ಬಗ್ಗೆ ಇಲ್ಲಿರುವ ಕೇಂದ್ರ ಆಹಾರ ಸಂಶೋಧನಾಲಯದಲ್ಲಿ ಯಶಸ್ವಿಯಾದ ಪ್ರಯೋಗ ನಡೆಸಲಾಗಿದೆ. ಹಣ್ಣುಗಳಿಂದ ತಯಾರಿಸಿದ ಮಿಠಾಯಿಗಳು ಪೌಷ್ಟಿಕಾಂಶಗಳನ್ನು ಒಳಗೊಂಡಿರುವುವು. ವಾಣಿಜ್ಯರೀತಿಯಲ್ಲಿ ಹಣ್ಣುಗಳಿಂದ ಮಿಠಾಯಿಗಳನ್ನು ತಯಾರಿಸಲು ಆಸಕ್ತಿಯುಳ್ಳವರು ಹೆಚ್ಚಿನ ವಿವರಗಳಿಗೆ ಸಂಶೋಧನಾ ಅಭಿವೃದ್ಧಿ ಸಂಸ್ಥೆಯ ನಿರ್ದೇಶಕರಿಗೆ ಪತ್ರ ವ್ಯವಹಾರ ನಡೆಸಬಹುದು.

ಸೋಮವಾರ ನಗರದಲ್ಲಿ ನೀರು ನಿಲ್ಲುವುದು

ನಾಳಿದ್ದು ವಿದ್ಯುಚ್ಛಕ್ತಿ ಇರುವುದಿಲ್ಲವಾದ್ದರಿಂದ ಆ ದಿನ ಬೆಳಿಗ್ಗೆಯಿಂದ ಮಧ್ಯಾಹ್ನ ೩ ಘಂಟೆಯವರೆಗೆ ನಗರದಲ್ಲಿ ನೀರು ಸರಬರಾಜು ಇರುವುದಿಲ್ಲವೆಂದು ಈ ಮೂಲಕ ತಿಳಿಯಪಡಿಸಲಾಗಿದೆ

ಕಮ್ಯೂನಿಸ್ಟ್ ಪಕ್ಷದವರ ಬಹಿರಂಗ ಸಭೆ

ಮೈಸೂರು ೨೦

ಕಮ್ಯೂನಿಸ್ಟ್ ಪಕ್ಷದ ಆಶ್ರಯದಲ್ಲಿ ನೆನ್ನೆ ಟೌನ್‌ಹಾಲ್ ಮೈದಾನದಲ್ಲಿ ಬಹಿರಂಗ ಸಭೆಯು ಕರ್ನಾಟಕ ಪಕ್ಷದ ಪ್ರಧಾನ ಕಾರ್ಯದರ್ಶಿ ಶ್ರೀ ಎ. ಎಲ್. ಉಪಾಧ್ಯಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ರಾಜ್ಯ ಸಭೆಯ ಮಾಜಿ ಕಮ್ಯೂನಿಸ್ಟ್ ಸದಸ್ಯರಾದ ಶ್ರೀ ಬಿ ವಿ. ಕಕ್ಕಿಲ್ಲಾಯರವರು ಭಾಷಣ ಮಾಡಿ, ಕರ್ನಾಟಕ ಪ್ರಾಂತದ ಉದಯವು ಸಮ್ಮತದಲ್ಲೇ ಆಗಲಿರುವುದನ್ನು ಸ್ವಾಗತಿಸಿದರು. ಕರ್ನಾಟಕದ ಎಲ್ಲ ಶ್ರಮ ಜೀವಿಗಳು ಮತ್ತು ರೈತ ಜನರು ಒಂದಾಗಿ ನೂತನ ಪ್ರಾಂತದಲ್ಲಿ ತಮ್ಮ ಶ್ರೇಯಸ್ಸನ್ನು ಸಾಧಿಸಿಕೊಳ್ಳಬೇಕೆಂದು ತಿಳಿಸಿದರು. ರಾಜ ಮಹಾರಾಜರುಗಳಿಗೆ ಕೊಡುತ್ತಿರುವ ಭತ್ಯಗಳು ಹೋಗಬೇಕೆಂದೂ ಸರ್ಕಾರಿ ನೌಕರರ ಮತ್ತು ಜವಾನರುಗಳ ಸಂಬಳಗಳು ಹೆಚ್ಚಬೇಕೆಂದೂ ಹೇಳಿ, ಬಡ ಜನತೆಯ ಪರಿಹಾರಕ್ಕೆ ಇಂದಿನ ಸರ್ಕಾರವು ಪ್ರಯತ್ನಿಸಿಲ್ಲವೆಂದು ನುಡಿದರು.

ಅಧ್ಯಕ್ಷರು ತಮ್ಮ ಭಾಷಣದಲ್ಲಿ, ಮೈಸೂರಿನ ಮಂತ್ರಿಮಂಡಲಗಳ ಬದಲಾವಣೆಯಾದುದನ್ನು ಪ್ರಸ್ತಾಪಿಸಿ, ಪದೇಪದೇ ಆಗುವ ಈ ಬದಲಾವಣೆಗಳಿಂದ ಜನ ಸಾಮಾನ್ಯರಿಗೆ ವಿಶೇಷ ತೊಂದರೆಯೆಂದು ತಿಳಿಸಿದರು.

ಕಾವ್ಯ ವಾಚನ

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿ ವಿ॥ ಗೌರಮ್ಮ ನಾಗರಾಜ್‌ರವರು ಜೈಮಿನಿ ಭಾರತದ ಭಕ್ತ ಮಯೂರಧ್ವಜ ಎಂಬ ವಿಷಯವಾಗಿ ಕಾವ್ಯ ವಾಚನ ಮಾಡುವರು ಶಾರದಾವಿಲಾಸ ಹೈಸ್ಕೂಲಿನ ಶ್ರೀ ಕೆ ಗಣಪತಿಭಟ್ಟರು ವ್ಯಾಖ್ಯಾನ ಮಾಡುವರು

ಹೊರದೇಶಕ್ಕೆ ಕೇಂದ್ರ ಸರ್ಕಾರದ ರಹಸ್ಯಗಳ ಮಾರಾಟವೇ?

ವಿದೇಶಾಂಗ ಇಲಾಖೆಯ ಗುಮಾಸ್ತರೊಬ್ಬರ ಬಂಧನ

ಕೇಂದ್ರ ಸರ್ಕಾರದ ವಿದೇಶಾಂಗ ಕಛೇರಿಯ ಹಲವು ಕಡತಗಳು ಒಂದು ವಾರದ ಕೆಳಗೆ ಮಾಯವಾದ ಸಂಬಂಧವಾಗಿ, ಕಛೇರಿಯ ಗುಮಾಸ್ತರೊಬ್ಬರ ಮನೆಯನ್ನು ಪೋಲೀಸರು ಶೋಧಿಸಿ, ಕಳ್ಳತನವಾಗಿದ್ದ ಹಲವು ಫೈಲುಗಳನ್ನು ವಶಪಡಿಸಿಕೊಂಡು, ಆತನನ್ನೂ ಮತ್ತು ಆತನ ಪತ್ನಿಯನ್ನೂ ದಸ್ತಗಿರಿ ಮಾಡಿರುವರೆಂದು ವರದಿ ಬಂದಿದೆ. ಸರ್ಕಾರದ ರಹಸ್ಯಗಳನ್ನು ಗುಮಾಸ್ತನು ಅನ್ಯ ದೇಶಕ್ಕೆ ಮಾರಾಟ ಮಾಡಿದನೆಂದೂ ಆಪಾದಿಸಲಾಗಿದೆ.

೧೦೦ ರೂ. ಲಂಚ ಪಡೆಯುತ್ತಿದ್ದ ಸಬ್‌ಇನ್ಸ್‌ಪೆಕ್ಟರನ ಬಂಧನ

ಬೆಂಗಳೂರು ಕ್ಲೀವ್‌ಲ್ಯಾಂಡ್ ಪೋಲೀಸು ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಬಚ್ಚೇಗೌಡ ಎಂಬಾತನು ಮೊನ್ನೆ ರಾತ್ರಿ ಒಬ್ಬ ಮನುಷ್ಯನಿಂದ ೧೦೦ ರೂ. ಲಂಚ ಪಡೆಯುತ್ತಿದ್ದಾಗ ಇನ್ಸ್‌ಪೆಕ್ಟರನನ್ನು ಲಂಚ ನಿರೋಧ ಇಲಾಖೆಯವರು ಬಂಧಿಸಿದರು

ದಸರಾಕ್ಕಾಗಿ ಮೈಸೂರಿಗೆ ೧೦ ಸಾವಿರ ಪಲ್ಲ ಅಕ್ಕಿ

ಮೈಸೂರಿನಲ್ಲಿ ದಸರಾ ಉತ್ಸವ ಸಮಯದಲ್ಲಿ ಪ್ರೇಕ್ಷಕರಾಗಿ ಬರುವವರ ಸಲುವಾಗಿ ಇದೇ ೨೫ನೇ ತಾರೀಕು ಮದ್ರಾಸಿನಿಂದ ಮೈಸೂರಿಗೆ ವಿಶೇಷ ರೈಲಿನಲ್ಲಿ ೧೧,೦೦೦ ಪಲ್ಲ ಉತ್ತಮ ರಕಂ ಅಕ್ಕಿಯನ್ನು ಕಳುಹಿಸಲಾಗುವುದೆಂದು ಕೇಂದ್ರ ಆಹಾರ ಉಪ ಮಂತ್ರಿ ಎಂ ವಿ. ಕೃಷ್ಣಪ್ಪನವರು ತಿಳಿಸುತ್ತಾರೆ. ಮೈಸೂರು ಸಂಸ್ಥಾನದಲ್ಲಿ ಸರ್ಕಾರದ ಮುಖ್ಯ ಗೋದಾಮುಗಳಲ್ಲಿ ೮೦ ಸಾವಿರ ಪಲ್ಲ ಅಕ್ಕಿಯಿರುವುದಾಗಿಯೂ, ಇದಲ್ಲದೆ ಪ್ರತ್ಯೇಕವಾಗಿ ಬೆಂಗಳೂರಿಗೆ ೫,೦೦೦ ಪಲ್ಲ ಅಕ್ಕಿ ಒದಗಿಸಲಾಗುವುದೆಂದೂ ಅವರು ಸೂಚಿಸಿರುವರು

ಈಜಿಪ್ಟಿನೊಡನೆ ಪುನಸ್ಸಂಧಾನ

ಸೂಯೆಜ್ ಕಾಲುವೆ ಬಳಕೆಗಾರರ ಸಂಘವನ್ನು ಸ್ಥಾಪಿಸುವ ಸಂಸ್ಥೆಯೊಂದನ್ನು ಏರ್ಪಡಿಸಲು ಲಂಡನ್ನಿನಲ್ಲಿ ಸೇರಿರುವ ೧೮ ರಾಷ್ಟ್ರಗಳು ಯೋಜನೆಯನ್ನು ಸಿದ್ಧಗೊಳಿಸಿವೆ. ಕಾಲುವೆ ರಾಷ್ಟ್ರೀಕರಣದ ಬಗ್ಗೆ ಈಜಿಪ್ಟಿನೊಡನೆ ಪುನಃ ಸಂಪರ್ಕ ಇಟ್ಟುಕೊಳ್ಳಲೂ, ಈ ವಿಷಯವನ್ನು ವಿಶ್ವಸಂಸ್ಥೆಗೆ ಒಪ್ಪಿಸಲೂ ಆಲೋಚಿಸಲಾಗಿದೆ. ಸಂಘವು ಬೇಗನೆ ಆರಂಭವಾಗುವುದೆಂದು ಬ್ರಿಟನ್ನು ಭಾವಿಸಿದೆ. ೧೮ ರಾಷ್ಟ್ರಗಳ ಯೋಜನೆ ಮೇರೆ ಸಂಧಾನ ನಡೆಯುವುದೆಂದೂ ಹೇಳಲಾಗಿದೆ

ಮಳೆಯಿಂದ ಬಸ್ ಪ್ರಯಾಣಿಕರಿಗೆ ತೊಂದರೆ

ಕೆ ಆರ್. ನಗರ ಕಡೆ ವಿಪರೀತ ಮಳೆಯಾಗಿ, ಕಳೆದ ಮಂಗಳವಾರ ಅಲ್ಲಿಂದ ಚೆಮ್ಮಿಗೆಗೆ ಹೊರಟ ಸಂಗಮೇಶ್ವರ ಮೋಟಾರು ಸರ್ವಿಸಿನ ಬಸ್ಸು ೩೦ ನೇ ಮೈಲಿ ಕಲ್ಲಿನಿಂದ ಎರಡು ಫರ್ಲಾಂಗ್ ಬಳಿ ನಿಂತಿತು. ರಸ್ತೆಯಲ್ಲಿ ಅಪಾರವಾದ ನೀರು ನಿಂತು ಬಸ್ಸು ಹೋಗಲು ಸಾಧ್ಯವಾಗಲಿಲ್ಲ. ಬಸ್ಸಿನ ಚಕ್ರಗಳಿಗೂ ನೀರು ವ್ಯಾಪಿಸಲು ಪ್ರಯಾಣಿಕರು ಇಳಿದು ಬಸ್ಸನ್ನು ಸುರಕ್ಷಿತ ಸ್ಥಳಕ್ಕೆ ತಂದರು. ಅವರ ಮೇಲಿದ್ದ ೮-೧೦ ಮಣ ರೇಷ್ಮೆ ಗಂಟುಗಳು ಹಾಳಾದುವು. ನಾಗಬಸವಯ್ಯ ಎಂಬ ಒಬ್ಬ ಹುಡುಗನು ನೀರಿನ ಪ್ರವಾಹದ ರಭಸಕ್ಕೆ ಸಿಕ್ಕಿ ತೇಲಿಕೊಂಡು ಹೋಗಿ ಪಕ್ಕದಲ್ಲೇ ಒಂದು ಮರದ ಬೇರಿನ ಸಹಾಯದಿಂದ ರಕ್ಷಿಸಲ್ಪಟ್ಟನು ಜನರು ಛಳಿಯಿಂದ ನಡುಗುತ್ತಿದ್ದು ಬಹಳ ಪ್ರಯಾಸಪಡಬೇಕಾಯಿತು

ಅಕ್ಟೋಬರ್ ೨ರಿಂದ ೮೨೩ ಜೋಡಿ ಗ್ರಾಮಗಳು ಸರ್ಕಾರಕ್ಕೆ

ಬೆಂಗಳೂರು ೨೦

ಬರುವ ತಿಂಗಳು ೨ ರಿಂದ ಸಂಸ್ಥಾನದ ೮೨೩ ಜೋಡಿ ಗ್ರಾಮಗಳು ಸರ್ಕಾರದ ವಶಕ್ಕೆ ಬರುವುವು. ಬೆಂಗಳೂರು ಜಿಲ್ಲೆಯ ೧೧೩, ಕೋಲಾರದಲ್ಲಿ ೩೧, ತುಮಕೂರಿನಲ್ಲಿ ೩೮, ಮೈಸೂರಿನಲ್ಲಿ ೧೧೨, ಮಂಡ್ಯದಲ್ಲಿ ೮೦, ಹಾಸನದಲ್ಲಿ ೪೨, ಚಿಕ್ಕಮಗಳೂರಲ್ಲಿ ೩, ಶಿವಮೊಗ್ಗದಲ್ಲಿ ೭ ಮತ್ತು ಚಿತ್ರದುರ್ಗದಲ್ಲಿ ೧೧ ಜೋಡಿ ಗ್ರಾಮಗಳು ಸರ್ಕಾರಕ್ಕೆ ಸೇರಲಿವೆ. ಉಳಿದುವೂ ಶೀಘ್ರದಲ್ಲೇ ಸರ್ಕಾರಕ್ಕೆ ಸೇರುವುವು

ಬಿ. ಟಿ. ಸಿ. ರಾಷ್ಟ್ರೀಕರಣಕ್ಕೆ ೧೪ ಲಕ್ಷ ರೂ. ಪರಿಹಾರ

ಶಾಸನಸಭೆಯಲ್ಲಿ ಮಸೂದೆ ಮಂಡನೆ

[ಸ್ವಂ ವ. ಫೋ.] ಬೆಂಗಳೂರು ೨೦

ಈ ದಿನ ವಿಧಾನ ಸಭೆಯಲ್ಲಿ ಬೆಂಗಳೂರು ಟ್ರಾನ್ಸ್‌ಪೋರ್ಟ್ ಕಂಪೆನಿಯ ರಾಷ್ಟ್ರೀಕರಣದ ಮಸೂದೆಯನ್ನು ಮಂಡಿಸಲಾಯಿತು. ೧೪,೫೩,೦೦೦ ರೂ. ಪರಿಹಾರ ಹಣ್ಣ ಕೊಡಲು ಸರ್ಕಾರದವರು ಸೂಚಿಸಿದ್ದಾರೆ ರಾಷ್ಟ್ರೀಕರಣದಿಂದ ವರ್ಷಕ್ಕೆ ೨೨ ಲಕ್ಷ ರೂ. ಹೆಚ್ಚುವಾಗುವುದೆಂದೂ, ಒಳ್ಳೆಯ ಸವಲತ್ತು ಬರುವುದೆಂದೂ ಮಸೂದೆಯಲ್ಲಿ ತಿಳಿಸಲಾಗಿದೆ.

ಸಭೆಯ ಆರಂಭದಲ್ಲಿ ವಿರೋಧ ಪಕ್ಷದ ನಾಯಕ ಶ್ರೀ ಜೆ ಎಂ ಇಮಾಮರು ಮಂತ್ರಿಮಂಡಲದ ಬದಲಾವಣೆ ಬಗ್ಗೆ ಶ್ರೀ ಹನುಮಂತಯ್ಯನವರು ಹೇಳಿಕೆ ಕೊಡಬೇಕೆಂದೂ ಸಭಾತ್ಯಾಗ ಮಾಡಬೇಕೆಂದೂ ಹೇಳಿದರು. ಅಧ್ಯಕ್ಷರು ಹಾಗೆ ಮಾಡಬೇಕೆಂಬ ವಿಧಿಯಿಲ್ಲವೆಂದೂ, ಇಷ್ಟವಿದ್ದರೆ ಹೇಳಿಕೆ ಕೊಡಬಹುದೆಂದೂ ತಿಳಿಸಿದರು. ಶ್ರೀ ಹನುಮಂತಯ್ಯನವರು ಆಗ ಹಾಜರಿದ್ದರು.

ರಾಜೋಲಿಬಂಡಾ ಯೋಜನೆ ಹಳ್ಳಿಗಳ ವರ್ಗದ ಪ್ರಶ್ನೆ

ಹೈದರಾಬಾದು ಮುಖ್ಯ ಮಂತ್ರಿ ಹೇಳಿಕೆಗೆ ಕಡಿದಾಳ್ ಮಂಜಪ್ಪನವರ ನಿರಾಕರಣೆ

[ಸ್ವಂ ವ ಫೋ.] ಬೆಂಗಳೂರು ೨೦

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಈ ದಿನ ಹೇಳಿಕೆಯೊಂದನ್ನಿತ್ತು, ರಾಯಚೂರು ಜಿಲ್ಲೆಯ ರಾಜೋಲಿಬಂಡ ಯೋಜನೆ ಬಳಿಯ ಹಳ್ಳಿಗಳನ್ನು ಆಂಧ್ರಕ್ಕೆ ವರ್ಗಾಯಿಸಲು ತಾವು ಅನುಕೂಲವಾಗಿರುವುದಾಗಿ ಹೈದರಾಬಾದಿನ ಮುಖ್ಯ ಮಂತ್ರಿಯವರು ಹೇಳಿರುವುದನ್ನು ನಿರಾಕರಿಸಿದ್ದಾರೆ. ಈ ರೀತಿ ತಾವು ಆಶ್ವಾಸನೆ ನೀಡಿಲ್ಲವೆಂದೂ, ಈ ವಿಚಾರವನ್ನು ಅಂತರ ಪ್ರಾಂತೀಯ ಸಚಿವರ ಸಮಿತಿಯು ಪರಿಶೀಲಿಸಬೇಕಾಗಿದೆಯೆಂದೂ ಅವರು ತಿಳಿಸಿದ್ದಾರೆ.

ಮಹಾರಾಜರಿಂದ ಪುಷ್ಪ ಪ್ರದರ್ಶನದ ಆರಂಭೋತ್ಸವ

ಮೈಸೂರು ೨೦

ಶ್ರೀಮನ್ಮಹಾರಾಜರು ಇದೇ ತಿಂಗಳು ೨೫ನೇ ತಾರೀಕು ಮಂಗಳವಾರ ಸಂಜೆ ೫॥ ಗಂಟೆಗೆ ಕರ್ಜನ್ ಪಾರ್ಕಿನಲ್ಲಿ ಪುಷ್ಪ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸುವರು. ನಗರದ ಫಲಪುಷ್ಪ ಸಂಘದವರು ಸಮಾರಂಭವನ್ನು ಏರ್ಪಡಿಸಿರುವರು.

ಹರಿ ಕಥಾ ಕಾಲಕ್ಷೇಪ

ಅಶೋಕಾ ರಸ್ತೆಯಲ್ಲಿರುವ ಶ್ರೀ ಲಲಿತಾಂಬಾ ಮೆಟಲ್ ಸ್ಟೋರಿನ ಮುಂಭಾಗದ ಚಪ್ಪರದಲ್ಲಿ ನಾಳೆ ರಾತ್ರಿ ೯॥ ಗಂಟೆಗೆ ವಿ॥ ತಲಕಾಡು ಮಾಯಿಗೌಡರಿಂದ ಕಥಾ ವಾಚನವೂ ವಿ॥ ಎನ್. ವಿ. ಹಿರಣ್ಣಯ್ಯನವರ ವ್ಯಾಖ್ಯಾನದ ಸಮೇತ ಹೆಂಗಿತ್ತೀಯ ವರ್ತಕರ ಸಂಘದ ಅಧ್ಯಕ್ಷ ಶ್ರೀ ರಂಗಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಬೇಲೂರು ಕೊಲೆ ಮೊಕದ್ದಮೆ

ಮಾಜಿ ಖೈದಿ ಚನ್ನನ ಸಾಕ್ಷ್ಯ

ಬೆಂಗಳೂರು ೨೦

ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯಲ್ಲಿ ನೆನ್ನೆ ಮಾಜಿ ಖೈದಿ ಚಿಕ್ಕನಾಯಕನಹಳ್ಳಿ ಚನ್ನನು ಸಾಕ್ಷ್ಯ ನುಡಿದನು

ಆತನು ಸಾಕ್ಷ್ಯದಲ್ಲಿ ೩ ವರ್ಷಗಳ ಹಿಂದೆ ಸೆಂಟ್ರಲ್ ಜೈಲಿನಲ್ಲಿದ್ದಾಗ ಮುನಿಸ್ವಾಮಿಗೂ ತನಗೂ ಸ್ನೇಹವಾಯಿತೆಂದೂ, ಆಮೇಲೆ ತಾನು ಬಳ್ಳಾರಿಯ ಜೈಲಿನಲ್ಲಿದ್ದು ಕಳೆದ ಮೇ ತಿಂಗಳು ೧೬ರಂದು ಬಿಡುಗಡೆಯಾಗಿ ೧೮ ನೇ ತಾರೀಕು ಬೆಂಗಳೂರಿಗೆ ಬಂದುದಾಗಿಯೂ ತಿಳಿಸಿದನು. ರೈಲ್ವೆ ಸ್ಟೇಷನ್ನಿನಲ್ಲಿ ಮುನಿಸ್ವಾಮಿಯು ಸಿಕ್ಕಿದನೆಂದೂ, ಇಬ್ಬರೂ ಬಳ್ಳಾರಿಗೆ ಹೋಗಿದ್ದುದಾಗಿಯೂ ತಿಳಿಸಿದನು ವಾಪಸು ಬಂದನಂತರ ಮುನಿಸ್ವಾಮಿಯು ಕೃಷ್ಣನ ಪರಿಚಯ ಮಾಡಿಕೊಟ್ಟನು. ಗಾಂಧಿನಗರದ ಒಂದು ಮನೆಯಲ್ಲಿ ಕಳವು ಮಾಡಿದರೆ ೧೨,೦೦೦ ರೂ ನಗದು ಮತ್ತು ಆಭರಣಗಳು ದೊರೆಯುವುದೆಂದು ಕೃಷ್ಣನು ಹೇಳಿದನು. ಮುಂದುವರಿದು ಸಾಕ್ಷಿಯು ಈ ರೀತಿ ನುಡಿದನು:—

ಮೂವರೂ ರಾತ್ರಿ ಆ ಮನೆಗೆ ಹೋದೆವು ಕಾಂಪೌಂಡ್ ಹಾರಿ ಒಳಗೆ ಹೋದಾಗ ನಾಯಿ ಬೊಗಳಿ, ಯಾರೋ ಕೂಗಲಾಗಿ ಓಡಿಹೋಗಿ ನಾನು ಚಿಕ್ಕನಾಯಕನಹಳ್ಳಿಗೆ ಹಿಂದಿರುಗಿದೆನು

ಜೂನ್ ೮ನೇ ತಾರೀಕು ಬೆಂಗಳೂರಿಗೆ ವಾಪಸು ಬಂದಾಗ, ಗಾಂಧಿ ನಗರದಲ್ಲಿ ಕೊಲೆ ವಿಚಾರವು ನನಗೆ ಗೊತ್ತಾಯಿತು. ೧೫ ದಿನಗಳ ಹಿಂದೆ ನಾನು ಕಾಂಪೌಂಡು ಹಾರಿದ್ದ ಮನೆಯಲ್ಲಿ ಘಟನೆ ನಡೆದಿತ್ತು ಕೃಷ್ಣ ಮತ್ತು ಮುನಿಸ್ವಾಮಿಗಳೇ ಈ ಕೆಲಸ ಮಾಡಿರಬೇಕೆಂದು ಭಾಸವಾಯಿತು ಆ ರಾತ್ರಿ ಪೋಲೀಸು ದಫೇದಾರನೊಬ್ಬನು ನನ್ನನ್ನು ಠಾಣೆಗೆ ಕರೆದೊಯ್ದನು ಪೋಲೀಸರಿಗೆ ಕೃಷ್ಣನ ಮನೆಯನ್ನೂ, ಕೃಷ್ಣನು ಅಲ್ಲಿಗೆ ಬಂದಾಗ ಅವನನ್ನೂ ತೋರಿಸಿದೆನು.

ಮೊಕದ್ದಮೆಯಲ್ಲಿ ಮೂರನೇ ಆಪಾದಿತ ಗೋವಿಂದರೆಡ್ಡಿಯ ಪರವಾಗಿ ಮದ್ರಾಸಿನ ವಕೀಲರಾದ ಬಿ ಟಿ ಸುಂದರರಾಜನ್ ಮತ್ತು ಎಸ್. ಕೃಷ್ಣಮೂರ್ತಿಯವರು ವಾದಿಸಲಿರುವರು.

ನೆನ್ನೆ ಚನ್ನನಲ್ಲದೆ ಇನ್ನೈದು ಜನರೂ, ಇಂದು ೧೧ ಮಂದಿಯೂ ಸಾಕ್ಷ್ಯವಿತ್ತರು ಇದುವರೆಗೆ ೫೫ ಮಂದಿಗಳ ಸಾಕ್ಷ್ಯವಾಗಿದೆ.

ಇಂದು ಬಾಪೂ ಜ್ಯೋತಿ ಜಾಧವ ಎಂಬ ಸಿವಿಲ್ ಪ್ರದೇಶದ ಚಿನ್ನ ಕರಗಿಸುವ ಅಂಗಡಿ ಕೆಲಸಗಾರನು ಸಾಕ್ಷ್ಯವಿತ್ತು, ಕಳೆದ ಜೂನ್ ೮ನೇ ತಾರೀಕು ಕೃಷ್ಣನು ಮೂರು ಚಿನ್ನದ ಸರಗಳನ್ನು ಕರಗಿಸಲು ಕೊಟ್ಟನೆಂದೂ, ತಾನು ಅವನ್ನು ಕರಗಿಸಿ ಸುಮಾರು ೧೧ ತೊಲದ ಗಟ್ಟಿಯನ್ನು ವಾಪಸು ಕೊಟ್ಟುದಾಗಿಯೂ ಅದಕ್ಕೆ ರುಸುಂ ಪಡೆದುದಾಗಿಯೂ ಹೇಳಿದನು. ಈ ವ್ಯವಹಾರವನ್ನು ಅಂಗಡಿ ಲೆಕ್ಕದ ಪುಸ್ತಕದಲ್ಲಿ ಬರೆದುದಾಗಿ ತಿಳಿಸಿದನು. ೧೧ನೇ ತಾರೀಕು ಪೋಲೀಸು ಠಾಣೆಯಲ್ಲಿ ಕೃಷ್ಣನನ್ನು ಗುರುತಿಸಿದುದಾಗಿ ನುಡಿದನು. ಅಂಗಡಿಯ ಮಾಲೀಕ ಶ್ರಿ ಬಾಪೂರಾವ್ ಎಂಬುವನು ಹಿಂದಿನ ಸಾಕ್ಷಿಯ ಹೇಳಿಕೆಯನ್ನು ಪುಷ್ಟೀಕರಿಸಿದರು ಪಾಟೀಸವಾಲು ಮತ್ತು ಮರು ಸವಾಲಿನಲ್ಲಿ ಚಿನ್ನದ ಸರಗಳನ್ನು ತಂದವನ ರುಜು ತೆಗೆದುಕೊಳ್ಳಲಿಲ್ಲವೆಂದೂ, ಸಾಮಾನ್ಯವಾಗಿ ರುಜುಗಳನ್ನು ತೆಗೆದುಕೊಳ್ಳುವುದಿಲ್ಲವೆಂದೂ ಸಾಕ್ಷಿಯು ನುಡಿದನು.

ಸಿವಿಲ್ ಪ್ರದೇಶದ ಒಂದು ಜವಾಹಿರಿ ಅಂಗಡಿಯಲ್ಲಿ ಗುಮಾಸ್ತೆ ಶ್ರೀ ಮಾಣಿಕ್ಯಂ ಆಚಾರಿ ಎಂಬ ಸಾಕ್ಷಿಯು ಜೂನ್ ೮ ನೇ ತಾರೀಕು ಮಧ್ಯಾಹ್ನ ಪಾಂಡುರಂಗ ಎಂಬ ವೃತ್ತಿ ಶಿಕ್ಷಣಶಾಲೆಯ ವಿದ್ಯಾರ್ಥಿಯಿಂದ ಸುಮಾರು ೧೧ ತೊಲ ಚಿನ್ನವನ್ನು ೧೧೭೮-೧-೦ ರೂ ಗೆ ಕೊಂಡುದಾಗಿ ಹೇಳಿದರು ವಿದ್ಯಾರ್ಥಿಯು ತನ್ನ ಸಾಕ್ಷ್ಯದಲ್ಲಿ ತಾನು ಬರುವಾಗ ವೇಳೆ ಚಿನ್ನ ಬೆಳ್ಳಿ ವ್ಯಾಪಾರ ಮಾಡುತ್ತಿರುವುದಾಗಿ ಹೇಳಿ, ಕಳೆದ ಜೂನ್ ೮ ರಂದು ಕೃಷ್ಣನು ತನಗೆ ದಾರಿಯಲ್ಲಿ ಸಿಕ್ಕಿ, ಅವನಿಂದ ಚಿನ್ನವನ್ನು ಪಡೆದು, ಜವಾಹಿರಿ ಅಂಗಡಿಯಲ್ಲಿ ಮಾರಿ ೧೧೭೬ ರೂ ಕೊಟ್ಟುದಾಗಿ ತಿಳಿಸಿದನು.

ಹಾಸಿಗೆ - ದಿಂಬು

ವಿಶಿಷ್ಟವಾಗಿ ಹತ್ತಿಯಿಂದ ತಯಾರು ಮಾಡುತ್ತೇವೆ

ಬಾಡುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

ಸೂಯೆಜ್ ಬಳಕೆಗಾರರ ಸಂಸ್ಥೆಗೆ ಅರಬ್ಬರ ತಿರಸ್ಕಾರ

ಅರಬ್ ಲೀಗಿನ ರಾಜಕೀಯ ಸಂಸ್ಥೆಯು ಬ್ರಿಟನ್, ಫ್ರಾನ್ಸ್ ಮತ್ತು ಅಮೇರಿಕಗಳ ಸೂಯೆಜ್ ಕಾಲುವೆ ಬಳಕೆಗಾರರ ಸಂಸ್ಥೆಯ ಯೋಜನೆಯನ್ನು ತಿರಸ್ಕರಿಸಿದೆ. ಲೀಗಿನಲ್ಲಿ ಈಜಿಪ್ಟ್, ಇರಾಕು, ಸೌದಿ ಅರೇಬಿಯಾ ... ಲೆಬನಾನ್, ಜೋರ್ಡಾನ್, ಯೆಮೆನ್ ಲಿಬ್ಯಾ ಮತ್ತು ಸುಡಾನು ಗಳು ಸದಸ್ಯ ರಾಷ್ಟ್ರಗಳು.

ಸಾಮೂಹಿಕ ಯೋಜನೆಗಾಗಿ ಪ್ರತ್ಯೇಕ ಮಂತ್ರಿ ಇಲಾಖೆ

ಕೇಂದ್ರ ಸರ್ಕಾರದಲ್ಲಿ ಸಾಮೂಹಿಕ ಯೋಜನೆ ಇಲಾಖೆಯನ್ನು ಹೊಸದಾಗಿ ಏರ್ಪಡಿಸಿ, ಯೋಜನೆಯ ಡೈರೆಕ್ಟರ್ ಎಸ್. ಕೆ. ಡೇಯವರನ್ನು ಸಂಪುಟಯಾಗಿ ನೇಮಿಸಲಾಗಿದೆ. ಅವರಿಗೆ ಮಂತ್ರಿಮಂಡಲದ ಸದಸ್ಯರ ಸಮಾನದ ಸ್ಥಾನವಿರುತ್ತದೆ. ಪಾರ್ಲಿಮೆಂಟರಿ ಕಾರ್ಯದರ್ಶಿ ಹನುಮಂತರಾವ್ ಕಾರವರನ್ನು ಇಲಾಖೆಯ ಉಪಮಂತ್ರಿಯಾಗಿ ತೆಗೆದುಕೊಳ್ಳಲಾಗಿದೆ.

ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಡಾನ್ಸ್

ಮೇಲ್ಕಂಡ ಶಾಲೆಯ ಆರಂಭೋತ್ಸವವು ನೆನ್ನೆ ಹಳೇ ಮೈಸೂರು ಬ್ಯಾಂಕ್ ರಸ್ತೆಯಲ್ಲಿ ನೆರವೇರಿತು ವ್ಯವಸ್ಥಾಪಕರು ಇಷ್ಟಮಿತ್ರರನ್ನು ಆಹ್ವಾನಿಸಿ ಸತ್ಕರಿಸಿದರು

ಹಿಂದಿ ತರಗತಿ

ಗುಂಡ್ಲುಪೇಟೆಯ ಬಾಲಕರ ಮಾಧ್ಯಮಿಕ ಶಾಲೆಯಲ್ಲಿ ಒಂದು ಉಚಿತ ಹಿಂದಿ ತರಗತಿಯನ್ನು ಹಿಂದೀ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ನಡೆಸಲಾಗುತ್ತಿದೆ.

ಒಲಂಪಿಯಾ ಟಾಕೀಸ್

21—9—56 ರಿಂದ : ಜಯಭೇರಿ 3ನೇ ವಾರ

ಜೆಮಿನಿ ಫಿಲಂಸ್‌ರವರ ಅದ್ಭುತ ಹಿಂದಿ ಚಿತ್ರ

ಜಾಗ್ತೇ ರಹೋ

ಪಾತ್ರ - ರಾಜಕಪೂರ್, ಪ್ರದೀಪ್‌ಕುಮಾರ್, ನರ್ಗೀಸ್, ಮೋತಿಲಾಲ್, ಸ್ಮೃತಿಬಿಸ್ವಾಸ್,

ಭಾರತದ ನೂತನ ಭೂಪಟ

ಇದೇ ನವೆಂಬರ್ ೧ರಿಂದ ರಾಜ್ಯಗಳು ಪುನರ್ವ್ಯವಸ್ಥೆಗೊಂಡನಂತರ. ಭಾರತವು ೧೪ ರಾಜ್ಯಗಳನ್ನೊಳಗೊಂಡಿರುವುದು ಆ ರಾಜ್ಯಗಳಾವುವೆಂದರೆ :- ಅಸ್ಸಾಂ, ಬಿಹಾರ, ಮುಂಬೈ, ಜಮ್ಮು ಮತ್ತು ಕಾಶ್ಮೀರ, ಕೇರಳ, ಮಧ್ಯಪ್ರದೇಶ, ಮದರಾಸು, ಮೈಸೂರು, ಒರಿಸ್ಸಾ, ಪಂಜಾಬು, ರಾಜಾಸ್ಥಾನ, ಉತ್ತರ ಪ್ರದೇಶ ಆಂಧ್ರ ಮತ್ತು ಪಶ್ಚಿಮ ಬಂಗಾಳ ಇವುಗಳ ಜೊತೆಗೆ ಕೇಂದ್ರದ ಆಳ್ವಿಕೆಗೆ ಒಳಪಡುವ ಆರು ಭೂಪ್ರದೇಶಗಳಿರುವುವು ಇವುಗಳಾವುವೆಂದರೆ: ಅಂಡಮಾನ್ ಮತ್ತು ನಿಕೊಬಾರ್ ದ್ವೀಪಗಳು, ದೆಹಲಿ, ಹಿಮಾಚಲ ಪ್ರದೇಶ, ಲಕ್ಷದ್ವೀಪಗಳು ಮತ್ತು ಅಮಿನ್ ದಿವಿ ದ್ವೀಪಗಳು, ಮಣಿಪುರ ಮತ್ತು ತ್ರಿಪುರ, ರಾಜಪ್ರಮುಖರ ಸ್ಥಾನಗಳೂ ಹಾಗೂ 'ಎ' 'ಬಿ' ಮತ್ತು 'ಸಿ' ವರ್ಗದ ರಾಜ್ಯಗಳೆಂಬ ತಾರತಮ್ಯವೂ ರದ್ದಾಗುವುವು. ರಾಜ್ಯಗಳ ವಿಸ್ತೀರ್ಣ ಹಾಗೂ ಜನಸಂಖ್ಯೆ ಈ ರೀತಿ ಇರುವುವು:—

ರಾಜ್ಯ	ವಿಸ್ತೀರ್ಣ (ಚದುರ ಮೈಲಿಗಳಲ್ಲಿ)	ಜನಸಂಖ್ಯೆ (೧೦ ಲಕ್ಷಗಳಲ್ಲಿ)
ಆಂಧ್ರ	೧,೧೦,೭೫೦	೩೨-೩
ಅಸ್ಸಾಂ	೮೪,೯೭೪	೯-೦
ಬಿಹಾರ್	೬೭,೮೩೪	೩೮ ೯೩
ಮುಂಬೈ	೧,೮೮,೩೪೦	೪೭-೮
ಜಮ್ಮು ಮತ್ತು ಕಾಶ್ಮೀರ	೯೨,೭೮೦	೪-೪
ಕೇರಳ	೧೪,೯೮೦	೧೩ ೬
ಮಧ್ಯಪ್ರದೇಶ	೧,೭೧,೨೦೦	೨೬-೧
ಮದರಾಸು	೫೦ ೧೭೦	೩೦-೦
ಮೈಸೂರು	೭೨,೭೩೦	೧೯ ೦
ಒರಿಸ್ಸಾ	೬೦,೧೪೦	೧೪-೬
ಪಂಜಾಬು	೪೭,೬೧೫	೧೬-೦
ರಾಜಾಸ್ಥಾನ	೧,೩೨,೩೦೦	೧೬-೦
ಉತ್ತರಪ್ರದೇಶ	೧,೧೩,೪೧೦	೬೩ ೨
ಪಶ್ಚಿಮಬಂಗಾಳ	೩೩,೭೭೯	೨೬-೧೬

ಜನ ಸಂಘದ ಅಧ್ಯಕ್ಷರ ಬಂಧನದ ಖಂಡನೆ

ಅಖಿಲ ಭಾರತ ಜನ ಸಂಘದ ಅಧ್ಯಕ್ಷ ದೇವಿ ಪ್ರಸಾದ ಘೋಷರನ್ನು ಅಮೃತಸರ ಜಿಲ್ಲೆಯಲ್ಲಿ ಬಂಧಿಸಿದುದಕ್ಕಾಗಿ ಮೈಸೂರು ನಗರದ ಸಂಘದ ಶಾಖೆಯವರು ಪ್ರತಿಭಟಿಸಿರುತ್ತಾರೆ. ಚುನಾವಣೆಗಳು ಹತ್ತಿರ ಬಂದಂತೆಲ್ಲಾ ಇಂದಿನ ಸರ್ಕಾರದವರು ಮೂರ್ಖತನದಿಂದ ವರ್ತಿಸುತ್ತಿರುವುದಾಗಿ ಖಂಡಿಸಲಾಗಿದೆ ಘೋಷರು ಈ ತಿಂಗಳು ೨೯-೩೦ರಲ್ಲಿ ಬೆಂಗಳೂರಿಗೆ ಭೇಟಿ ಕೊಟ್ಟು, ಸಂಸ್ಥಾನ ಸಂಘದ ಸಮ್ಮೇಳನದಲ್ಲಿ ಭಾಗವಹಿಸಬೇಕಾಗಿತ್ತೆಂದು ತಿಳಿದುಬಂದಿದೆ ಅವರಿಗೆ ೫೦ ಸಾವಿರ ರೂ.ಗಳ ಜಾಮೀನು ಕೇಳಿದುದನ್ನೂ ಖಂಡಿಸಲಾಗಿದೆ

ಗಾಂಧಿ ಸ್ಮಾರಕ ನಿಧಿಯಿಂದ ಸಂಸ್ಥೆಗಳಿಗೆ ಧನ ಸಹಾಯ

ಮಹಾತ್ಮ ಗಾಂಧೀಜಿಯವರ ತತ್ವಾನುಸಾರ ರಚನಾತ್ಮಕ ಕಾರ್ಯಗಳನ್ನು ನಡೆಸುತ್ತಿರುವ ಸಂಘ ಸಂಸ್ಥೆಗಳಿಗೆ ಗಾಂಧಿ ಸ್ಮಾರಕ ನಿಧಿಯಿಂದ ಧನ ಸಹಾಯ ಪಡೆಯುವ ಅವಕಾಶವಿದೆಯೆಂದು, ೫೬-೫೭ನೇ ಸಾಲಿನಲ್ಲಿ ಸಹಾಯ ಪಡೆಯಲಿಚ್ಛಿಸುವ ಅಂತಹ ಸಂಸ್ಥೆಗಳು ಅರ್ಜಿಗಳನ್ನು ಪ್ರತಿನಿಧಿ, ಗಾಂಧಿ ಸ್ಮಾರಕ ನಿಧಿ, ಮೈಸೂರು ಸಂಸ್ಥಾನ ಶಾಖೆ, ಪ್ರಭಾ, ಎರಡನೇ ಮೇನ್ ರಸ್ತೆ, ವಾಣಿವಿಲಾಸ ಮೊಹಲ್ಲ, ಮೈಸೂರು. ಈ ವಿಳಾಸಕ್ಕೆ ಇದೇ ತಿಂಗಳು ೨೫ನೇ ತಾರೀಖಿನೊಳಗಾಗಿ ಕಳುಹಿಸಬೇಕಾಗಿಯೂ ಕೋರಲಾಗಿದೆ ಅರ್ಜಿಗಳ ಜೊತೆಯಲ್ಲಿ ಸಂಸ್ಥೆಯ ಅಂಗರಚನೆ, ಕೆಲಸಕಾರ್ಯದ ವರದಿ, ಆಯವ್ಯಯ, ಅಧಿಕಾರ ವರ್ಗದ ಪಟ್ಟಿ. ಕಳೆದ ಸಾಲಿನ ಆಡಿಟ್ ವರದಿ-ಇತ್ಯಾದಿ ವಿವರಗಳನ್ನು ಕಳುಹಿಸಬೇಕಾಗಿ, ಗಾಂಧಿ ಸ್ಮಾರಕ ನಿಧಿಯ ಮೈಸೂರು ಸಂಸ್ಥಾನ ಶಾಖೆಯ ಪ್ರತಿನಿಧಿ ಬಿ ಆರ್. ಪ್ರಾಣೇಶರಾಯರು ತಿಳಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ	೩೫ ೧೪ ೦	
ರತ್ನಚೂಡಿ	೩೩ ೨ ೦	
ರಾಗಿ	೨೯ ೮ ೦	೨೮ ೧೦ ೦
ಕಡ್ಲೆ	೩೪ ೦ ೦	೩೪ ೪ ೦
ರಾಗಿ	೩೯ ೧೨ ೦	೩೩ ೧೨ ೦
ಜೋಳ	೩೩ ೦ ೦	೩೪ ೧೦ ೦
ಕಾಳು	೨೮ ೮ ೦	
ನವಣೆ	೨೭ ೧೦ ೦	
ಕಡಲೆಕಾಯಿ	೯೩ ೮ ೦	೨೧ ೮ ೦
ಎಳ್ಳು	೭೫ ೦ ೦	೫೫ ೮ ೦
ಹುರುಳಿ	೩೦ ೦ ೦	೩೨ ೪ ೦
ಕಡಲೆ	೫೦ ೧೦ ೦	
ಹಲಸಂದೆ	೫೨ ೨ ೦	೫೩ ೧೨ ೦
ಧನಿಯ	೨೪ ೨ ೦	೨೭ ೯೪ ೦
ಹುಣಸೇಹಣ್ಣು	೪ ೧೦ ೦	
ತೆಂಗಿನಕಾಯಿ ೧೦೦೦	೯೬೦ ೮ ೦	೨೧೪ ೮ ೦

SRI GAYATHRI TALKIES

To-day . Last Day

ATHENA

Grand Gala Opening From 22-9-56

THE KING'S THIEF

(Cinemascope & Technicolor)

With:— Ann Blyth and Edmund Burdof

Edited, Printed and Published by A. R. Nagarajan at Sadhvi Press D Subbiah Road, Mysore

NEW BOMBAY SWEET MART

SRIRAMPET, MYSORE

ಇಂಡಿಯಾದಲ್ಲಿ ಪ್ರಖ್ಯಾತಿ ಹೊಂದಿರುವ ದೆಹಲಿಯವರ ನೇತೃತ್ವದಲ್ಲಿ ಶುಚಿರುಚಿಯಾದ ತುಪ್ಪದಿಂದ ತಯಾರಿಸಲ್ಪಡುವ ಸಿಹಿ ಮತ್ತು ಖಾರ ತಿಂಡಿಗಳನ್ನು ಸೇವಿಸಬೇಕಾದರೆ, ಶ್ರೀರಾಂಪೇಟೆಯಲ್ಲಿ ಪ್ರಾರಂಭವಾಗಿರುವ ನ್ಯೂ ಬಾಂಬೆ ಸ್ವೀಟ್ ಮಾರ್ಟ್‌ಗೆ ದಯವಿಟ್ಟು ಬನ್ನಿ, ಸೇವಿಸಿ, ಆನಂದಪಡಿ.

ನ್ಯೂ ಬಾಂಬೆ ಸ್ವೀಟ್ ಮಾರ್ಟ್,

ಶ್ರೀರಾಮಪೇಟೆ, ಮೈಸೂರು

ಲಕ್ಷ್ಮಿ ★ 21—9—56 ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನಗಳು

ದೇವರ್ ಫಿಲಂಸ್‌ರವರ ತಮಿಳು ಚಿತ್ರ

★ ತಾಯಿಕ್ಕುಪಿನ್ ತಾರಮ್ ★

ಪಾತ್ರ:— ಎಂ. ಜಿ. ರಾಮಚಂದ್ರ, ಪಿ. ಭಾನುಮತಿ, ಕಣ್ಣಾಂಬ,

ಸುರಬಿ ಬಾಲಸರಸ್ವತಿ, ಟಿ. ಎಸ್. ಬಾಲಯ್ಯ ಮುಂತಾದವರು

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ

ಏಜಂಟರುಗಳ ಮೂಲಕ ತಿಂಗಳಿಗೆ ಒಂದು ರೂ.

ಅಂಚೆ ಮೂಲಕ ತಿಂಗಳಿಗೆ ಒಂದು ರೂ.

ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೦೩] SADHVI : SATURDAY 22—9—1956 ಮೈಸೂರು : ಶನಿವಾರ ೨೨—೯—೧೯೫೬ [ಸಂಚಿಕೆ : ೮೯]

ಸಂಸ್ಥಾನದಲ್ಲಿ ಪುನಃ ಲೋವರ್ ಸೆಕೆಂಡರಿ ಪರೀಕ್ಷೆ ಜಾರಿ

ಉದ್ಯಾನವನಗಳ ಸ್ಪರ್ಧೆಯಲ್ಲಿ ಬಹುಮಾನ ಪಡೆದವರು

ಮೈಸೂರು ೨೨

ನಗರದ ಫಲಪುಷ್ಪ ಸಂಘ ಶಾಖೆಯ ಆಶ್ರಯದಲ್ಲಿ ನಡೆದ ಉದ್ಯಾನವನಗಳ ಸ್ಪರ್ಧೆಯಲ್ಲಿ ಳಗೆ ಕಂಡವರಿಗೆ ಬಹುಮಾನ ದೊರೆಯಿತು ದೆ:-

ಅಲಂಕಾರದ (ಭಾರಿ) ತೋಟ : ಶ್ರೀಮತಿ ಲೀಲಾವತಿ ಅಂಜನಪ್ಪ ಮತ್ತು ಶ್ರೀ ಟಿ ಕಾಂತರಾಜಪ್ಪ–ಪ್ರಥಮ ಮತ್ತು ದ್ವಿತೀಯ ಬಹುಮಾನಗಳು; ನಾಗವೇಣಿ ಬಸವರಾಜ್ ಮತ್ತು ಶ್ರೀ ದರಿ ಪ್ರಸಾದರವರಿಗೆ ವಿಶೇಷ ಬಹುಮಾನ

ಅಲಂಕಾರದ (ಮಧ್ಯಮ) ತೋಟ : ಶ್ರೀ ತಿ ಟಿ ದಾಕ್ಷಾಯಿಣಿ ಮತ್ತು ಶ್ರೀಮತಿ ಲೀ ಇಂ.ವಿ–ಪ್ರಥಮ ಬಹುಮಾನ. ಶ್ರೀಗಳಾದ ಎ ನರಸಿಂಹರಾವ್ ಮತ್ತು ಡಾ॥ ಬಸವ ಜ ಅರಸ್–ದ್ವಿತೀಯ ಬಹುಮಾನ ಮತ್ತು ಡಾ॥ ಪರಶ್ಶಿವಸ್ವಾಮಿ ಮತ್ತು ಶ್ರೀ ಎಂ ಎ ಂದರ್ ವಿಶೇಷ ಬಹುಮಾನ

ಅಲಂಕಾರದ (ಕುಟೀರ) ತೋಟ : ಶ್ರೀ ಬಿ ಂ. ಎಲ್ ಮೂರ್ತಿ ಮತ್ತು ಶ್ರೀ ಹೆಚ್. ಎಸ್. ವ್ ಪ್ರಥಮ ಮತ್ತು ದ್ವಿತೀಯ ಬಹುಮಾನ ಳು ಶ್ರೀಗಳಾದ ಜಿ ಎಂ. ಮೈತ್ರಿ, ಟಿ ಎಸ್. ರ್ಯ ಮತ್ತು ಎಸ್. ಸಿ ಚಟರ್ಜಿ: ವಿಶೇಷ ಬಹುಮಾನ.

ವಿಶೇಷ ಬಹುಮಾನಗಳು: ಅಭಿನವ ಶಂಕರಾಲಯ, ಹೋಟೆಲು ಮೆಟ್ರೋಪೋಲ್, ನಜರ್‌ಬಾದ್ ಮತ್ತು ಕೃಷ್ಣರಾಜಾ ಪೊಲೀಸು ಠಾಣೆಗಳು, ಮಂತ್ರಿಗಳ ವಾಸ ಗೃಹದ ಕಂಪೌಂಡು ಮತ್ತು ಕೇಂದ್ರ ಆಹಾರ ಸಂಶೋಧನಾಲಯ.

ತರಕಾರಿ ತೋಟಗಳು (ದೊಡ್ಡವು) : ಶ್ರೀ ಶಾಂತರಾಜಪ್ಪ ಮತ್ತು ಶ್ರೀಮತಿ ಲೀಲಾವತಿ ಅಂಜನಪ್ಪ–ಪ್ರಥಮ ಮತ್ತು ದ್ವಿತೀಯ ಬಹುಮಾನಗಳು. ಶ್ರೀ ರಂಗಾಚಾರ್ ವಿಶೇಷ ಬಹುಮಾನ

ತರಕಾರಿ (ಮಧ್ಯಮ) ತೋಟ : ಶ್ರೀ ವಿ ಎಂ. ಟರ್ ಮತ್ತು ಶ್ರೀ ಟಿ ಎಂ. ನರಸಿಂಹರಾವ್ ಮೊದಲನೇ ಮತ್ತು ಎರಡನೇ ಬಹುಮಾನಗಳು ಮತಿ ಟಿ. ಜಿ. ದಾಕ್ಷಾಯಿಣಿ ವಿಶೇಷ ಬಹುಮಾನ.

ತರಕಾರಿ (ಕುಟೀರ) ತೋಟ : ಶ್ರೀ ಹೆಚ್ ರಾವ್ ಪ್ರಥಮ, ಶ್ರೀ ಎಸ್ ಶ್ರೀಕಂಠ ಮತ್ತು ಶ್ರೀ ಕೆ. ವಿ ರಾಜರತ್ನಂ ದ್ವಿತೀಯ ಬಹುಮಾನಗಳು ಶ್ರೀ ವಿ. ನಾರಾಯಣರಾವ್ ವಿಶೇಷ ಬಹುಮಾನ.

ರಾಜಕುಮಾರಿ ಲೀಲಾವತಿಯವರು ಮತ್ತು ಮೈಸೂರು ಜೈಲು ಸೂಪರಿಂಟೆಂಡೆಂಟರಿಗೆ ವಿಶೇಷ ಬಹುಮಾನಗಳು ಬಂದಿವೆ.

ನಾಳೆ ಶಾಲೆಗಳು ನಗರದಲ್ಲಿ ಸರ್ಕಾರಿ ಸಂಸ್ಥೆಗಳಿಗೆ ರಜಾ

ನಗರದ ಪೌರಸಭಾ ಉಪ ಚುನಾವಣೆ ನಿಮಿತ್ತವಾಗಿ ಇದೇ ತಿಂಗಳು ೨೭ನೇ ತಾರೀಕು ಸಾರ್ವಜನಿಕ ಸಂಸ್ಥೆಗಳಿಗೂ ರಜಾ ಕೊ

ವಿಶ್ವವಿದ್ಯಾಲಯಕ್ಕೆ ಪೂರ್ಣ ಸ್ವಾತಂತ್ರ್ಯ

ವಿದ್ಯಾರ್ಥಿಗಳ ದೇಹಶ್ರಮ ಕೂಡದೆಂದು ಶಾಸನಸಭಾ ಜಂಟಿ ಸಮಿತಿ ಶಿಫಾರಸು

ಬೆಂಗಳೂರು ೨೨

ಮೈಸೂರು ವಿಶ್ವವಿದ್ಯಾಲಯವು ಸರ್ಕಾರದ ಅಂಕೆಗೆ ಒಳಪಡದೆ ಸ್ವತಂತ್ರವಾಗಿ ಪಾಠ ಪ್ರವಚನ ಮತ್ತು ಆಡಳಿತ ನಡೆಸಲು ಸಾಧ್ಯವಾಗುವಂತ ಶಾಸನ ಸಭಾ ಜಂಟಿ ಚುನಾಯಿತ ಸಮಿತಿಯು ವಿಶ್ವವಿದ್ಯಾಲಯ ಶಾಸನದ ತಿದ್ದುಪಡಿ ಮಸೂದೆ ಬಗ್ಗೆ ಸರ್ವಾನುಮತದ ಅಭಿಪ್ರಾಯವನ್ನು ವ್ಯಕ್ತಪಡಿಸುವುದಾಗಿ ಗೊತ್ತಾಗಿದೆ

ಸಮಿತಿಯ ಶಿಫಾರಸಿನ ಪ್ರಕಾರ, ಪದವೀಧರರಾಗುವ ಮುಂಚೆ ವಿದ್ಯಾರ್ಥಿಗಳು ಕಡ್ಡಾಯದ ದೇಹಶ್ರಮ ಪಡಬೇಕೆಂಬ ವಿಧಿಯನ್ನು ತೆಗೆದುಹಾಕಲಾಗುವುದು ಅಲ್ಲದೆ ವಿಶ್ವವಿದ್ಯಾಲಯವು ಸ್ವತಂತ್ರವಾಗಿ 'ಹುದ್ದೆಗಳ ಸಮಿತಿ' ಯನ್ನು ನೇಮಿಸಿಕೊಳ್ಳಲೂ ಅವಕಾಶವಿದೆ ಇನ್ನು ಮುಂದೆ ವಿಶ್ವವಿದ್ಯಾಲಯಕ್ಕೆ ಸರ್ಕಾರದವರು ಪ್ರತಿ ವರ್ಷವೂ ಗೊತ್ತಾದ ವರಮಾನವನ್ನು ತೆಗೆದಿಡಬೇಕಾಗುವುದು.

ಕರಾಚಿಯಲ್ಲಿ ನೆಹರೂ ಪ್ರತಿಮೆ ದಹನ

ಮತೀಯ ಮುಖಂಡರ ಬಗ್ಗೆ ಬೊಂಬಾಯಿ ಪುಸ್ತಕದ ಬಗ್ಗೆ ಪ್ರತಿಭಟನಾ ಕ್ರಮ

ಬೊಂಬಾಯಿಯ ಪುಸ್ತಕ ಸಂಸ್ಥೆಯೊಂದು ಪ್ರಕಟಿಸಿದ್ದ ಮತೀಯ ಮುಖಂಡರ ಜೀವನ ಚರಿತ್ರೆ ಎಂಬ ಗ್ರಂಥದಲ್ಲಿ ಮಹಮದ್ ಪೈಗಂಬರರ ವಿಚಾರವಾಗಿ ನಮೂದಾಗಿದ್ದ ಅಂಶವನ್ನು ಕುರಿತು ಪ್ರತಿಭಟಿಸಲು ನೆನ್ನೆ ಕರಾಚಿಯಲ್ಲಿ ಜನರ ಗುಂಪುಗಳು 'ಹಿಂದೂಸ್ಥಾನ ಸಾಯಲಿ' ಎಂದು ಕೂಗುತ್ತಾ ಪ್ರದರ್ಶನಗಳನ್ನು ನಡೆಸಿ, ನೆಹರೂರವರ ಪ್ರತಿಮೆಯ ಮೆರವಣಿಗೆ ಮಾಡಿ ಅದನ್ನು ಸುಟ್ಟುದಾಗಿ ಗೊತ್ತಾಗಿದೆ. ಕರಾಚಿಯಲ್ಲಿರುವ ಭಾರತದ ಹೈಕಮಿಷನರರ ಕಛೇರಿ ಮತ್ತು ಕಛೇರಿ ಅಧಿಕಾರಿಗಳ ಗೃಹಗಳ ಮುಂದೆ ಪ್ರದರ್ಶನಗಳಾದುವು. ಅಲ್ಲಿನ ಮುಸ್ಲಿಂ ಲೀಗಿನ ಮುಖಂಡರು ಅದರ ನಾಯಕತ್ವ ವಹಿಸಿದ್ದರು.

ವಿದ್ಯಾವರ್ಧಕ ಪ್ರೌಢ ಶಾಲೆಯ ವಾರ್ಷಿಕೋತ್ಸವ

ರಾಜಧಾನಿಯ ವಿದ್ಯಾವರ್ಧಕ ಪ್ರೌಢ ಶಾಲೆಯ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಪತ್ರ ಪ್ರದರ್ಶನದ ಕಟ್ಟಡದಲ್ಲಿ ನೆರವೇರುವುದು. ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ಅಧ್ಯಕ್ಷತೆ ವಹಿಸುವರು.

ರಾಜನೀತಿಶಾಸ್ತ್ರ ಸಂಘದ ಆರಂಭ ಭಾಷಣ

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನಾಳೆ ಮಧ್ಯಾಹ್ನ ೪ ಗಂಟೆಗೆ ಮಹಾರಾಜಾ ಕಾಲೇಜಿನ ರಾಜನೀತಿ ಶಾಸ್ತ್ರ ಸಂಘದ ಆರಂಭ ಭಾಷಣವನ್ನು ಮಾಡುವರು. ವೈಸ್ ಚಾನ್ಸಲರ್ ಡಾ॥ ಕೆ. ವಿ. ಪುಟ್ಟಪ್ಪನವರು ಅಧ್ಯಕ್ಷತೆ ವಹಿಸುವರು.

ಪುನಃ ಲೋವರ್ ಸೆಕೆಂಡರಿ ಪರೀಕ್ಷಾ ವ್ಯವಸ್ಥೆ

ಬೆಂಗಳೂರು ೨೨

೮ ವರ್ಷಗಳ ಪ್ರಾಥಮಿಕ ವಿದ್ಯಾಭ್ಯಾಸ ಕ್ರಮದಲ್ಲಿ ಒಂದು ಪಬ್ಲಿಕ್ ಪರೀಕ್ಷೆ ನಡೆಯಬೇಕಾದುದು ಅಗತ್ಯವೆಂದು ವಿದ್ಯಾಭ್ಯಾಸ ಪ್ರವೀಣರು ಅಭಿಪ್ರಾಯಪಟ್ಟುದರ ಮೇರೆ ಸಂಸ್ಥಾನ ಶಾಸನ ಸಭಾ ಕಾಂಗ್ರೆಸ್ ಪಕ್ಷವು ಲೋವರ್ ಸೆಕೆಂಡರಿ ಪರೀಕ್ಷೆಯನ್ನು ಮತ್ತೆ ಜಾರಿಗೆ ತರಬೇಕೆಂದು ಸೂಚಿಸಿರುವುದರಿಂದ ಈ ಬಗ್ಗೆ ಸರ್ಕಾರದವರು ವ್ಯವಸ್ಥೆ ಮಾಡಲಿರುವರು.

ಮುಖ್ಯಮಂತ್ರಿಯ ಖಾಸಗಿ ಕಾರ್ಯದರ್ಶಿಯೆಂದು ಹೇಳಿ ಮೋಸವೇ

ಬೆಂಗಳೂರಿನಲ್ಲಿ ಯಾರೋ ಒಬ್ಬಾತನು ತಾನು ಮುಖ್ಯ ಮಂತ್ರಿಯವರ ಆಪ್ತ ಕಾರ್ಯದರ್ಶಿಯೆಂದು ನಟಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆಂದೂ, ಮಂತ್ರಿಗಳು ಅಥವಾ ಉನ್ನತಾಧಿಕಾರಿಗಳ ಹೆಸರನ್ನು ಹೇಳಿಕೊಂಡು ಟೆಲಿಫೋನ್ ಮೂಲಕ ಅಥವಾ ಖುದ್ದಾಗಿ ಮಾತನಾಡುವ ಪ್ರಕರಣಗಳಲ್ಲಿ ಸಾರ್ವಜನಿಕರು ಎಚ್ಚರಿಕೆಯಿಂದ ಇರಬೇಕೆಂದೂ ಸರ್ಕಾರಿ ಪ್ರಕಟಣೆಯೊಂದು ತಿಳಿಸಿದೆ

ಟಿಪ್ಪೂಸುಲ್ತಾನರ ಅವಶೇಷಗಳು ಭಾರತಕ್ಕೆ

ಮದರಾಸಿನಲ್ಲಿರುವ ಡ್ಯೂಕ್ ಆಫ್ ವೆಲಿಂಗ್ಟನ್ನರ ಭಾವಚಿತ್ರವನ್ನು ಲಂಡನ್ನಿಗೆ ವಾಪಸು ಕೊಟ್ಟು, ಅಲ್ಲಿರುವ ಟಿಪ್ಪೂಸುಲ್ತಾನರ ಹಲವು ಅವಶೇಷಗಳನ್ನು ಭಾರತ ಸರ್ಕಾರದವರು ಪಡೆಯಲಿರುವರೆಂದು ವರದಿಯಾಗಿದೆ. ಅವುಗಳಲ್ಲಿ ಟಿಪ್ಪೂರವರ ಮಕ್ಕಳು ಮತ್ತು ಇತರ ಪ್ರಮುಖರ ೧೮ ಭಾವಚಿತ್ರಗಳೂ ಮತ್ತು ಟಿಪ್ಪೂಸುಲ್ತಾನರು ಇಟ್ಟುಕೊಂಡಿದ್ದ ಒಂದು ಗಡಿಯಾರ ಮತ್ತು ಹಲವು ಉಡುಪುಗಳೂ ಇವೆ

ಕೋಲಾರ ಮತ್ತು ಬೆಂಗಳೂರುಗಳಲ್ಲಿ ರಕ್ಷಣಾ ಕಾರ್ಮಿಕರ ಮುಷ್ಕರ

ಪೂನಾ ಬಳಿ ಕಿರ್ಕಿಯ ಮದ್ದುಗುಂಡು ಕಾರ್ಖಾನೆಯ ೧೭ ಸಾವಿರ ಕಾರ್ಮಿಕರ ಪೈಕಿ ೮ ಸಾವಿರ ಜನರು ಸಿಬ್ಬಂದಿ ಕಡಿತಾ ಬಗ್ಗೆ ಪ್ರತಿಭಟನೆಗಾಗಿ ನೆನ್ನೆ ಮುಷ್ಕರ ಹೂಡಿದರು. ಬೆಂಗಳೂರಿನ ಕಮಾಂಡ್ ವರ್ಕ್‌ಷಾಪಿನ ಕಾರ್ಮಿಕರೂ ಅನಿರ್ದಿಷ್ಟಕಾಲದ ಮುಷ್ಕರ ಹೂಡಿರುತ್ತಾರೆ. ೩,೦೦೦ ಕಾರ್ಮಿಕರು ನೆನ್ನೆ ಬೆಂಗಳೂರಿನಲ್ಲಿ ಮೆರವಣಿಗೆ ನಡೆಸಿದರು.

ಹೊಸ ಮಾದರಿಯ ೧ ರೂ. ನೋಟು

ಭಾರತ ಸರ್ಕಾರದವರು ಶೀಘ್ರದಲ್ಲೇ ಹೊಸ ಮಾದರಿಯ ಒಂದು ರೂಪಾಯಿ ನೋಟುಗಳನ್ನು ಚಲಾವಣೆಗೆ ಕೊಡಲಿರುವರು. ನೋಟಿನ ಈಗಿನ ಸ್ವರೂಪವನ್ನು ಬದಲಾಯಿಸುವುದಿಲ್ಲ. ನೋಟಿನ ನಂಬರ್ ಕೊನೆಯಲ್ಲಿ 'ಎ' ಎಂದು ಇಂಗ್ಲಿಷಿನಲ್ಲಿ ಕೆಂಪು ಬಣ್ಣದಲ್ಲಿ ಮುದ್ರಿಸಲಾಗುವುದು

ಮನೆ ಬಾಡಿಗೆ ಹತೋಟಿ ಶಾಸನದ ಅವಧಿ ಇನ್ನೆರಡು ವರ್ಷ

ಬೆಂಗಳೂರು ೨೨

ಸಂಸ್ಥಾನದಲ್ಲಿ ಜಾರಿಯಲ್ಲಿರುವ ಮನೆ ಬಾಡಿಗೆ ಹತೋಟಿ ಶಾಸನದ ಅವಧಿಯು ಇದೇ ಡಿಸೆಂಬರ್ ಎಂಬತ್ತಕ್ಕೆ ಮುಗಿಯುತ್ತದೆ. ಶಾಸನವನ್ನು ಇನ್ನೆರಡು ವರ್ಷಕ್ಕೆ ವಿಸ್ತರಿಸಲು ಮಸೂದೆಯನ್ನು ಶಾಸನ ಸಭೆಯಲ್ಲಿ ಮಂಡಿಸಲಾಗಿದೆ. ನಗರಗಳಲ್ಲಿ ವಾಸ ಮತ್ತು ಇತರ ಉದ್ದೇಶಗಳಿಗಾಗಿ ಮನೆಗಳ ಅಭಾವವು ಇರುವುದರಿಂದಲೂ; ಹೊಸ ಸಂಸ್ಥಾನದ ರಚನೆಯಿಂದ ಈ ಸಮಸ್ಯೆಯು ಇನ್ನೂ ಹೆಚ್ಚಾಗುವುದರಿಂದಲೂ ಶಾಸನದ ಅವಧಿಯನ್ನು ಹೆಚ್ಚಿಸಲಾಗುವುದು.

ಸೂಯೆಜ್ ಬಳಕೆಗಾರರ ಸಂಸ್ಥೆಯ ಸ್ಥಾಪನೆ

ಸೂಯೆಜ್ ಕಾಲುವೆ ಬಳಕೆಗಾರರ ಸಹಕಾರ ಸಂಘವನ್ನು ಸ್ಥಾಪಿಸುವ ಬಗ್ಗೆ ಘೋಷಣೆಗೆ ನೆನ್ನೆ ಲಂಡನ್ನಿನಲ್ಲಿ ಸೇರಿದ್ದ ೧೮ ರಾಷ್ಟ್ರಗಳ ಸಮ್ಮೇಳನವು ಅಂಗೀಕಾರವಿತ್ತಿತು. ಸಂಸ್ಥೆಯ ಸ್ಥಾಪನೆಯ ಉದ್ದೇಶ ಮತ್ತು ಅದರ ಗುರಿಯನ್ನು ಸೂಚಿಸುವ ಮತ್ತೊಂದು ಘೋಷಣೆಯೂ ಅಂಗೀಕರಿಸಲ್ಪಟ್ಟಿತು. ಅದರ ಪ್ರಕಾರ ಸೂಯೆಜ್ ಪ್ರಶ್ನೆಯನ್ನು ವಿಶ್ವಸಂಸ್ಥೆಗೆ ಕೊಂಡೊಯ್ಯಲು ಅವಕಾಶವಿದೆ. ಅಮೆರಿಕಾ, ಬ್ರಿಟನ್ ಮತ್ತು ಇತರರು ಈ ಸಂಘಕ್ಕೆ ಸೇರಿವೆ. ಇತರ ರಾಷ್ಟ್ರಗಳಿಗೆ ಕಾಲಾವಕಾಶ ಕೊಡಲಾಗಿದೆ.

ಈಜಿಪ್ಟ್ ಮೇಲಿನ ಆಕ್ರಮಣ ಎದುರಿಸಲು ಚೀಣದ ನೆರವು

ಈಜಿಪ್ಟಿನ ಮೇಲೆ ಧಾಳಿ ನಡೆಯಲು ಚೀಣವು ಅವಕಾಶವೀಯುವುದಿಲ್ಲವೆಂದು ಅಲ್ಲಿನ ಪ್ರಧಾನಿ ಚೌ ಎನ್ ಲೈಯವರು ಸರ್ಕಾರದ ಮುಖಂಡರ ಸಭೆಯಲ್ಲಿ ನೆನ್ನೆ ತಿಳಿಸಿದರು: ಈಜಿಪ್ಟಿಗೆ ತೊಂದರೆಯೇನಾದರೂ ಸಂಭವಿಸಿದರೆ ಅದನ್ನು ತಡೆಗಟ್ಟಲು ಚೀಣದ ಮುಖಂಡರು ತಾವು ತಾನೆಂದು ಮುಂದೆ ಬಂದಿರುತ್ತಾರೆ. ಆ ಸೈನ್ಯ ಚೀಣದ ಅತ್ಯಂತ ಚಾಣಾಕ್ಷರಾದ ಮುಖಂಡರ ವಶದಲ್ಲಿರುವುದು.

ಕನ್ನಡ ಚಲನಚಿತ್ರಕ್ಕೆ ಪ್ರಶಸ್ತಿ

ಮೊನ್ನೆ ಪ್ರಧಾನಿ ನೆಹರೂರವರು ದೆಹಲಿಯ ಸಮಾರಂಭವೊಂದರಲ್ಲಿ ಬಂಗಾಳಿ ಚಲನಚಿತ್ರ ಪಥೇರ್ ಪಾಂಚಾಲಿ ಎಂಬುದಕ್ಕೆ ರಾಷ್ಟ್ರಪತಿಯ ಚಿನ್ನದ ಪದಕವನ್ನು ಕೊಟ್ಟರು. ಕನ್ನಡದ ಮಹಾಕವಿ ಕಾಳಿದಾಸ ಚಿತ್ರಕ್ಕೆ ಅರ್ಹತೆ ಪ್ರಶಸ್ತಿ ಪತ್ರವು ದೊರೆತಿದೆ.

ಬಿ. ಟಿ. ಸಿ. ರಾಷ್ಟ್ರೀಕರಣದ ನಂತರ ೧,೧೦೦ ಬಸ್ಸುಗಳು

ಸ್ವಂ. ವ. ಸಂ.] ಬೆಂಗಳೂರು ೨೨

ಈ ದಿನ ವಿಧಾನ ಸಭೆಯಲ್ಲಿ ಬಿ. ಟಿ. ಸಿ. ರಾಷ್ಟ್ರೀಕರಣದ ಮಸೂದೆಯು ಚರ್ಚೆಯಾಯಿತು. ಗೃಹ ಮಂತ್ರಿಯವರು ಮಾತನಾಡಿ ಸರ್ಕಾರದ ಉದ್ದೇಶವು ಜನರಿಗೆ ಅಲ್ಪ ವೆಚ್ಚದಲ್ಲಿ ದಕ್ಷತೆಯುಳ್ಳ ವಿಚಾರವನ್ನು ಮಾಡುವುದೇ ಆಗಿದೆಯೆಂದರು ಬಸ್ ಸಂಚಾರದ ರಾಷ್ಟ್ರೀಕರಣ ಸ್ಥಿತಿಯಲ್ಲಿ ಒಟ್ಟು ೧,೧೦೦ ಬಸ್ಸುಗಳಿರುವುವೆಂದೂ ತಿಳಿಸಿದರು.

ನೂತನ ಕನ್ನಡ ಪ್ರಾಂತಕ್ಕೆ ಎಲ್ಲ ಸಂಗಡಗಳ ಬೆಂಬಲ

ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ನಿರ್ಣಯ

ಮೈಸೂರು ೨೨

ಮೊನ್ನೆಗೆ ಮುಕ್ತಾಯವಾದ ಕರ್ನಾಟಕದ ಕಮ್ಯೂನಿಸ್ಟ್ ಪಕ್ಷದ ಸಮಿತಿ ಸಭೆಯು ನಿರ್ಣಯವೊಂದನ್ನು ಮಾಡಿ, ನೂತನ ಕನ್ನಡ ಪ್ರಾಂತ್ಯದ ರಚನೆಯನ್ನು ಸ್ವಾಗತಿಸಿತು. ನೂತನ ಪ್ರಾಂತವನ್ನು ಎಲ್ಲಾ ರೀತಿಯಲ್ಲೂ ಬಲಪಡಿಸಲು ಮತ್ತು ಸಮೃದ್ಧಿಗೊಳಿಸಲು ಸರ್ವ ಸಂಗಡಗಳೂ ಒಂದುಗೂಡಿ ಶ್ರಮಿಸಬೇಕೆಂದು ಸೂಚಿಸಿತು

ಕನ್ನಡ ಸಂಸ್ಥಾನದ ಎಲ್ಲಾ ಸರ್ಕಾರಿ ನೌಕರರಿಗೂ ಬೊಂಬಾಯಿ ಸಂಸ್ಥಾನದಲ್ಲಿರುವಂತೆ ಸಂಬಳದ ಮಟ್ಟವನ್ನು ಜಾರಿಗೆ ತರಬೇಕೆಂದೂ, ಜನರಿಗಿರುವ ಯಾವ ಸೌಲಭ್ಯಗಳೂ ಕಡಿಮೆಯಾಗಬಾರದೆಂದೂ ಒತ್ತಾಯಪಡಿಸಲಾಯಿತು.

ಪ್ರಾಂತದಲ್ಲಿ ಕೂಡಲೇ ಭೂ ಸುಧಾರಣೆಗಳನ್ನು ಜಾರಿಗೆ ತರಬೇಕು, ಲಂಚ ಮುಂತಾದವುಗಳನ್ನೂ, ಜಾತೀಯ ಮನೋಭಾವನೆಯನ್ನೂ ತೊಡೆದು ಹಾಕಬೇಕು, ಕಾಸರಗೋಡು, ಹುದಲಿಸಿಂಗ, ಜತ್ ಮುಂತಾದ ಕನ್ನಡ ಪ್ರದೇಶಗಳ ಭವಿಷ್ಯದ ಬಗ್ಗೆ ಗಡಿ ಸಮಿತಿ ರಚಿಸಿ ಅವುಗಳು ಕನ್ನಡ ಪ್ರಾಂತಕ್ಕೆ ಸೇರುವಂತಾಗಬೇಕೆ-ಎಂಬ ನಿರ್ಣಯಗಳನ್ನು ಮಾಡಲಾಯಿತು

ನವೆಂಬರ್ ೧ನೇ ತಾರೀಕು ನೂತನ ಪ್ರಾಂತದ ಉದ್ಘಾಟನಾ ದಿನಾಚರಣ ಮಾಡುವಂತೆ ಪಕ್ಷದ ಶಾಖೆಗಳಿಗೆ ಸೂಚಿಸಲಾಯಿತು.

ಆಹಾರ ಧಾನ್ಯಗಳ ಬೆಲೆ ಹೆಚ್ಚುತ್ತಿರುವಾಗ ಜನತೆಗೆ ಸಾಧ್ಯವಾದಷ್ಟು ಪರಿಹಾರ ದೊರೆಯುವಂತಾಗಲು ಹೆಚ್ಚು ಡಿಪೋಗಳನ್ನು ತೆರೆಯುವಂತೆ ಒತ್ತಾಯಪಡಿಸಲಾಯಿತು.

ಸೂಯೆಜ್ ಬಗ್ಗೆ ಈಜಿಪ್ಟಿನ ನಿಲುವನ್ನು ಪ್ರಶಂಸಿಸಿ, ಈ ಸಂಬಂಧವಲ್ಲಿ ಭಾರತದ ನೀತಿಗೆ ಬೆಂಬಲ ನೀಡಬೇಕೆಂದು ತಿಳಿಸಲಾಯಿತು

ರೈತರ ಮತ್ತು ಕಾರ್ಮಿಕರ ಸಂಘಟನೆಗೆ ಕೆಲಸ ಮಾಡಬೇಕೆಂದೂ, ಆಯುರ್ವೇದ ಕಾಲೇಜು ವಿದ್ಯಾರ್ಥಿಗಳ ಮುಷ್ಕರಕ್ಕೆ ಬೆಂಬಲವೀಯಬೇಕೆಂದೂ ಸೂಚಿಸುವ ನಿರ್ಣಯಗಳಾದುವು

ಪಕ್ಷದ ಕಾರ್ಯದರ್ಶಿಗಳಾದ ಶ್ರೀ ಎ.ಎಲ್ ಉಪಾಧ್ಯಾಯರು ಮಾತನಾಡಿ, ಕಾಂಗ್ರೆಸ್ಸಿನ ವಿರೋಧವಾಗಿ ಎಲ್ಲ ಪ್ರಜಾ ಸತ್ತಾತ್ಮಕ ಪಕ್ಷಗಳೂ ಪ್ರಬಲವಾದ ರಂಗವನ್ನು ರಚಿಸಬೇಕೆಂದು ತಿಳಿಸಿದರು

ಜಿಲ್ಲಾ ಸಮಿತಿ ಕಾರ್ಯದರ್ಶಿ ಶ್ರೀ ಎಸ್ ಸೋಮಸುಂದರ ಶರ್ಮರವರು ವಂದನಾರ್ಪಣೆ ಮಾಡಿದರು ೩ ದಿನಗಳ ಸಭೆಯಲ್ಲಿ ೪೦ ಮಂದಿ ಪ್ರತಿನಿಧಿಗಳು ಭಾಗವಹಿಸಿದ್ದರು

ರೇಷ್ಮೆ ಕಾರ್ಖಾನೆ ಕಾರ್ಮಿಕರ ಸಂಘದ ಅಧಿಕಾರ ವರ್ಗ

ರಾಜಧಾನಿಯ ಸರ್ಕಾರಿ ರೇಷ್ಮೆ ನೆಯ್ಗೆ ಕಾರ್ಖಾನೆ ಕಾರ್ಮಿಕರ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ಶನಿವಾರ ನಡೆದು, ಸಂಘದ ಕಾರ್ಯಕಾರಿ ಸಮಿತಿಗೆ ಚುನಾವಣೆ ನಡೆಯಿತು. ಶ್ರೀ ಎ ರಾಮಣ್ಣನವರು ಅಧ್ಯಕ್ಷರಾಗಿಯೂ, ಶ್ರೀ ಎಂ. ಕೆ ಮೆಹಬೂಬ್ ಖಾನರವರು ಉಪಾಧ್ಯಕ್ಷರಾಗಿಯೂ, ಎ ಮಹಮದ್ ಪೀರ್‌ರವರು ಕಾರ್ಯದರ್ಶಿಯಾಗಿಯೂ ಮತ್ತು ದೊಡ್ಡಸಿದ್ದಯ್ಯನವರು ಸಹಕಾರ್ಯದರ್ಶಿಯಾಗಿಯೂ ಚುನಾಯಿಸಲ್ಪಟ್ಟರು. ಶ್ರೀ ಹೆಚ್. ಮಾರುತಿಯವರು ಖಜಾಂಚಿಯಾಗಿರುತ್ತಾರೆ.

ಶುಚಿ ಮತ್ತು ರುಚಿ!

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್

ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ

ಪ್ರತಿ ಭಾನುವಾರದ

ಸ್ಪೆಷಲ್ ಪೊಟೆಟೋ ಬ್ರೆಡ್

ಶ್ರೀ ಕೃಷ್ಣಾ ಬೇಕರಿ,

ಡಿ ಸುಬ್ಬಯ್ಯ ರೋಡ್, ಮೈಸೂರು

(ನಮ್ಮ ಅಂಗಡಿಯ ಶಾಖೆಯನ್ನು ಬೇರೆ ಎಲ್ಲೂ ತೆಗೆದಿಲ್ಲ)

ಪಶ್ಚಿಮ ಬಂಗಾಳದಲ್ಲಿ ಬಾಲಕರ ಧೂಮಪಾನದ ವಿರುದ್ಧ ಕ್ರಮ

ಪಶ್ಚಿಮ ಬಂಗಾಳದ ಎಲ್ಲಾ ಶಾಲೆಗಳಲ್ಲೂ ೧೬ ವರ್ಷಕ್ಕೆ ಕಡಿಮೆಯಿರುವ ಬಾಲಕರು ಬೀಡಿ, ಸಿಗರೇಟು ಅಥವಾ ಸಿಗಾರನ್ನು ಹೊಂದಿದ್ದರೆ ಅದನ್ನು ಕಿತ್ತುಕೊಂಡು ನಾಶಪಡಿಸಲು ಶಾಲಾ ಮುಖ್ಯೋಪಾಧ್ಯಾಯರಿಗೆ ಸರ್ಕಾರವು ಅಧಿಕಾರ ಕೊಟ್ಟಿರುವುದು ಸಾರ್ವಜನಿಕ ಸ್ಥಳಗಳಲ್ಲಿ ಅಂತಹವರು ಧೂಮಪಾನ ಮಾಡುತ್ತಿದ್ದುದನ್ನು ಕಂಡರೆ ಪೊಲೀಸರು ಅವರಿಂದ ಬೀಡಿಗಳನ್ನು ಕಿತ್ತುಕೊಳ್ಳಲು ಸೂಚಿಸಲಾಗಿದೆ ಮುಂದಿನ ಜನವರಿ ೧ ರಿಂದ ಈ ಆಜ್ಞೆಯು ಜಾರಿಗೆ ಬರುವುದು

ನಾಟ್ಯ ಗಣಪತಿ ಕಲಾನಿಕೇತನದ ವಾರ್ಷಿಕೋತ್ಸವ

ಮೇಲ್ಕಂಡ ಕಲಾನಿಕೇತನದ ವಾರ್ಷಿಕೋತ್ಸವವು ಕಳೆದ ಮಂಗಳವಾರ ಶ್ರೀರಾಮಪೇಟೆಯಲ್ಲಿರುವ ಶ್ರೀ ಪ್ರಸನ್ನ ಮಾರುತಿ ಮಂದಿರದಲ್ಲಿ ಶ್ರೀ ಎಂ. ಸಿ. ಮಹದೇವಸ್ವಾಮಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು ಶ್ರೀ ಶ್ರೀನಿವಾಸಾಚಾರ್ಯರಿಂದ ದೇವರನಾಮವಾದನಂತರ ಕಲಾನಿಕೇತನದ ಅಧ್ಯಕ್ಷರಾದ ಶ್ರೀ ಎಸ್. ಮಾರುತಿರಾಯರಿಂದ ಸ್ವಾಗತ ಭಾಷಣ ಮತ್ತು ಕುಮಾರಿ ವತ್ಸಲ, ಕುಮಾರಿ ಪ್ರಫುಲ್ಲ ಮತ್ತು ಮಾಸ್ಟರ್ ಕುಮಾರ್‌ರವರಿಂದ ನೃತ್ಯ ಪ್ರದರ್ಶನಗಳು ನಡೆದುವು ಕಾರ್ಯದರ್ಶಿ ಶ್ರೀ ಎಸ್. ವಿಶ್ವೇಶ್ವರಯ್ಯನವರು ವಾರ್ಷಿಕ ವರದಿಯನ್ನು ಓದಿದರು. ಅಧ್ಯಕ್ಷರು ಭಾಷಣ ಮಾಡಿ ತರುಣ ಕಲಾವಿದರು ದೇಶದ ಏಳಿಗೆಗಾಗಿ ಮಾಡಬೇಕಾದ ಕಾರ್ಯಗಳನ್ನು ವಿವರಿಸಿದರು.

ಮೆಡಿಕಲ್ ಕಾಲೇಜು ಸಂಘದ ವಾರ್ಷಿಕ ಕೂಟ

ರಾಜಧಾನಿಯ ಮೆಡಿಕಲ್ ಕಾಲೇಜು ಸಂಘದ ವಾರ್ಷಿಕ ಸಂತೋಷ ಕೂಟವು ನಾಳೆ ಸಂಜೆ ೫॥ ಗಂಟೆಗೆ ಕಾಲೇಜಿನಲ್ಲಿ ನಡೆಯುವುದು. ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸುವರು

ಶ್ರೀ ವೆಂಕಟೇಶ ಸಭೆಯ ವಾರ್ಷಿಕ ಅಧಿವೇಶನ

ಮೇಲ್ಕಂಡ ಸಭೆಯ ೩೮ ನೇ ವರ್ಷದ ಸಾಧಾರಣ ಸಭೆಯು ನಾಳೆ ಮಧ್ಯಾಹ್ನ ೪ ಘಂಟೆಗೆ ಶ್ರೀ ಪರಕಾಲ ಮಠದಲ್ಲಿ ನಡೆಯುತ್ತಾದ್ದರಿಂದ ಆಸ್ತಿಕ ಮಹಾಜನರೆಲ್ಲರೂ ಸಕಾಲಕ್ಕೆ ದಯಮಾಡಿಸಬೇಕಾಗಿ ಕೋರಲಾಗಿದೆ

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ನಾಗಸ್ವರ ೭-೧೫ ಬೌದ್ಧ ಸಾಹಿತ್ಯ ದರ್ಶನ ೭.೩೦ ಕೆ ಎಸ್. ಇಂದಿರ ದೇವರ ನಾಮ. ೮-೧೫ ಉದಯ ಸಂಗೀತ. ೮-೩೦ ಬಿ.ವಿ ಸೀತ ಗಾಯನ. ೯-೩೦ ಬಾಲಜಗತ್ ಮಧ್ಯಾಹ್ನ ೧೨ ಮತ್ತು ೨ ೧೫ ಎಸ್. ಚನ್ನಕೇಶವಯ್ಯ-ಸಂಗೀತ ೧೨ ೩೦ ವಾದ್ಯವೃಂದ ೧ ನಿಮ್ಮ ಮೆಚ್ಚಿನ ಗೀತೆಗಳು ೧-೩೦ ವೇಣುಗಾನ. ಸಂಜೆ ೫ ಪಾಶ್ಚಾತ್ಯ ಸಂಗೀತ ೫-೩೦ ಮತ್ತು ೧೦ ವೇದಮ್ಮ ಸಿಂಗ್ರಾಚಾರಿ-ಗಾಯನ. ೬-೧೫ ಭಕ್ತಿಗೀತೆ ೭-೩೦ ಗೀತಾವಳಿ. ೮ ನಾಟಕ ೮-೩೦ ಪ್ರಸಕ್ತ ವಿಚಾರಗಳ ಬಗ್ಗೆ ಭಾಷಣ-ದೆಹಲಿ ರಿಲೆ. ೮ ೪೫ ರಿಕಾರ್ಡು ೯ ೧೫ ಚಿತ್ರ ಸಂಗೀತ ೯-೩೦ ಬಿ. ಶಂಕರರಾವ್-ಕೊಳಲು.

ಅಸ್ಸಾಮಿನಲ್ಲಿ ಭೂಕಂಪ

ಅಸ್ಸಾಮಿನ ರಾಜಧಾನಿ ಷಿಲ್ಲಾಂಗಿನಲ್ಲಿ ಮೊನ್ನೆ ಮುಂಜಾನೆ ಎರಡು ಬಾರಿ ಭೂಕಂಪಗಳಾದುವು ಪ್ರಾಂತದ ಉತ್ತರ ಭಾಗ, ಈಶಾನ್ಯ ಗಡಿ ಪ್ರದೇಶ ಮತ್ತು ಮಣಿಪುರ ಸಂಸ್ಥಾನಗಳಲ್ಲೂ ಭೂಕಂಪವಾಗಿದೆ ಸಿಲ್ಚಾರಿನಲ್ಲಿ ಭೂಮಿ ನಡುಗಿ ಜನರು ಬೀದಿಗೆ ಓಡಿಬಂದರು ಕರೀಂಗಂಜಿನಲ್ಲೂ ಸ್ವಲ್ಪ ಮಟ್ಟಿಗೆ ಆಯಿತು ಬರ್ಮದ ಉತ್ತರ ಚಿಂದ್ವಿನ್ ಪ್ರದೇಶದಲ್ಲೂ ಭೂಮಿ ಅದುರಿತು. ಸಾವುನೋವುಗಳ ವರದಿಯಾಗಿಲ್ಲ.

ಬಹಿರಂಗ ಚುಂಬನ ಅಸಭ್ಯಕರವಲ್ಲ

ಬಹಿರಂಗ ಪ್ರದೇಶದಲ್ಲಿ ಚುಂಬಿಸುವುದು ಅಸಭ್ಯವಲ್ಲವೆಂದು ಬೊಂಬಾಯಿ ಹೈಕೋರ್ಟಿನ ನ್ಯಾಯಾಧೀಶರಾದ ಗಜೇಂದ್ರಗಡಕರ್‌ರವರು ಅಭಿಪ್ರಾಯಪಿತ್ತು, ಅಹಮದಾಬಾದಿನಲ್ಲಿ ಮುಸ್ಲಿಂ ಯುವಕನೊಬ್ಬನು ಹಿಂದೂ ಯುವತಿಯನ್ನು ಉದ್ಯಾನವನದಲ್ಲಿ ಚುಂಬಿಸಿದುದಕ್ಕಾಗಿ ಅವನಿಗೆ ವಿಧಿಸಿದ್ದ ೨೦೦ ರೂ. ದಂಡ ಮತ್ತು ಯುವತಿಗೆ ಕೊಡಲಾಗಿದ್ದ ಎಚ್ಚರಿಕೆ ಶಿಕ್ಷೆಯನ್ನು ರದ್ದುಪಡಿಸಿರುತ್ತಾರೆ.

ಹಿರಿಯ ಶಾಸನಸಭೆಗೆ ಉಪ ಚುನಾವಣೆ ಫಲಿತಾಂಶ

ಕೆ. ಟಿ. ಭಾಷ್ಯಂರವರ ನಿಧನದ ಪ್ರಯುಕ್ತ ತೆರವಾದ ಹಿರಿಯ ಶಾಸನಸಭಾ ಸದಸ್ಯ ಸ್ಥಾನಕ್ಕೆ ಚಿತ್ರದುರ್ಗದ ವಕೀಲರಾದ ಶ್ರೀ ಹೆಚ್ ಸಿ ಬೋರಯ್ಯನವರು ಅವಿರೋಧವಾಗಿ ವಿಧಾನ ಸಭಾ ಕ್ಷೇತ್ರದಿಂದ ಆರಿಸಲ್ಪಟ್ಟಿರುತ್ತಾರೆ. ಅವರು ಕಾಂಗ್ರೆಸ್ ಉಮೇದುವಾರರು

ಬಸವಾಪುರದಲ್ಲಿ ಶನಿಮಹಾತ್ಮರ ಪಲ್ಲಕ್ಕಿ ಉತ್ಸವ

ಚಾಮರಾಜನಗರ ತಾಲ್ಲೂಕು ಬಸವಾಪುರದಲ್ಲಿ ಶನಿಮಹಾತ್ಮರ ಪೂಜೆಯ ಅಂಗವಾಗಿ ಈ ರಾತ್ರಿ ಪಲ್ಲಕ್ಕಿ ಉತ್ಸವವು ವಿದ್ಯುದ್ದೀಪಾಲಂಕಾರಗಳೊಡನೆಯೂ, ಪಿಯುಂಬಟ್ಟ ಕೃಷ್ಣಪ್ಪನವರ ಮತ್ತು ಸಿ. ಚನ್ನಯ್ಯನವರ ನಾಗಸ್ವರ, ಕೊರನಾಡ್ ಪಳನಿವೇಲು ಪಿಳ್ಳೆಯವರ ಶಿಷ್ಯ ಪಿ ಮುನಿಸ್ವಾಮಿ ಮತ್ತು ಆರ್. ರಂಗಸ್ವಾಮಿಯವರ ತಬಲ ಮತ್ತು ಬೆಂಗಳೂರು ವಿ ನಾರಾಯಣಸ್ವಾಮಪ್ಪನವರ ತನಿ ತಬಲದೊಡನೆಯೂ ನಡೆಯುವುದು.

○ಭಾರತದ ಬಿ. ಆರ್ ಸೇನರವರು ವಿಶ್ವಸಂಸ್ಥೆಯ ಆಹಾರ ಮತ್ತು ವ್ಯವಸಾಯ ಸಂಸ್ಥೆಯ ಡೈರೆಕ್ಟರ್ ಜನರಲ್ಲರಾಗಿ ಚುನಾಯಿತರಾಗಿದ್ದಾರೆ

ಉತ್ತಮವಾದ ಕಟ್ಟಡದ ಪ್ಲಾನುಗಳು ಮತ್ತು ಬ್ಲೂ ಪ್ರಿಂಟ್

ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್ ಸಲಾಕಿ ಎಸ್ಟಿಮೇಟ್ ಮಾಡಿಕೊಡುವುದಕ್ಕೂ

ಗಾಯತ್ರಿ ಟಾಕೀಸ್ ಎದುರು

ಹ್ಯಾಟ್ ಅಂಗಡಿಯಲ್ಲಿ

ಬಿ. ಮುನಿಸ್ವಾಮಪ್ಪ,

ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್

ಇವರಲ್ಲಿ ವಿಚಾರಿಸಿರಿ

Edited, Printed and Published by A. R. Nagarajan at Sadhvi Press D. Subbiah Road, Mysore

ಗಣಪತಿ ಉತ್ಸವದ ಕಾರ್ಯಕ್ರಮ

ಮೈಸೂರು ೨೨

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಆ॥ ವಿ॥ ಬಿ. ಎಂ. ಶಿವಪ್ಪನವರ ಗಾಯನವು ಆ॥ ವಿ॥ ಹೆಚ್ ವಿ. ರಾಮರಾಯರ ಪಿಟೀಲು ಮತ್ತು ಆ॥ ವಿ॥ ಡಿ ಚಂದ್ರಶೇಖರಯ್ಯನವರ ಮೃದಂಗದೊಡನೆ ನಡೆಯುವುದು

ಸರಾಫ್ ವರ್ತಕರ ಸಂಘದವರು ಅಶೋಕಾ ರಸ್ತೆಯಲ್ಲಿರುವ ತಮ್ಮ ಸಂಘದಲ್ಲಿ ನಾಳೆ ಸಂಜೆ ೬॥ ಗಂಟೆಗೆ ವಿದುಷಿಯರಾದ ರತ್ನ ಮತ್ತು ಸುಶೀಲರವರ ಸಂಗೀತವನ್ನು ವಿ॥ ಎಸ್. ಮಹದೇವಪ್ಪನವರ ಪಿಟೀಲು ಮತ್ತು ವಿ॥ ರಾಜಗೋಪಾಲರಾಯರ ಮೃದಂಗದೊಡನೆ ಏರ್ಪಡಿಸಿರುತ್ತಾರೆ.

ಶಾರದಾ ವಿಲಾಸ ಕಾಲೇಜಿನ ಇಂಟರ್ ಬಿ ವಿದ್ಯಾರ್ಥಿಗಳು ಗಣಪತಿ ಮಂಗಳಾರತಿಯನ್ನು ಮೊನ್ನೆ ಶ್ರೀ ಕೆ ವಿ ಶ್ರೀನಿವಾಸಮೂರ್ತಿಯವರ ಅಧ್ಯಕ್ಷತೆಯಲ್ಲಿ ನೆರವೇರಿಸಿದರು.

ಜೂನಿಯರ್ ಇಂಟರ್ ಎ. ತರಗತಿಯವರು ಪ್ರಿನ್ಸಿಪಾಲ್ ಶ್ರೀ ಎಂ. ಎಸ್. ರಾಮಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮಂಗಳಾರತಿಯನ್ನು ಕಳೆದ ೧೮ನೇ ತಾರೀಕು ನೆರವೇರಿಸಿದರು

ಒಂಟಿಕೊಪ್ಪಲು ಮಾತೃ ಮಂಡಲಿಯ ಆಶ್ರಯದಲ್ಲಿ ಗಣಪತಿ ಉತ್ಸವವು ಕಳೆದ ೧೬ನೇ ತಾರೀಕು ನೆರವೇರಿತು. ಶ್ರೀಮತಿ ಗುಂಡಮ್ಮನವರು ಸುಶ್ರಾವ್ಯರಾಗಿ ಹಾಡಿದರು ಶ್ರೀಮತಿ ಸುನಂದಮ್ಮನವರು ಸ್ವಾಗತ ಬಯಸಿದರು. ಶ್ರೀಮತಿ ಪಾರ್ವತಿ ರಾಮಯ್ಯಂಗಾರ್ಯರಿಂದ ವಂದನಾರ್ಪಣೆಯಾಯಿತು

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ	[illegible]	೦	೦		
ರತ್ನಚೂಡಿ	[illegible]	೦	೦	[illegible]	[illegible]
ಕಡ್ಡಿ	[illegible]	[illegible]	೦	[illegible]	[illegible]
ಕಾರು	[illegible]	೦	೦	[illegible]	[illegible]
ಸಿಟಾರ್ ಸಣ್ಣ	[illegible]	[illegible]	೦		
ರಾಗಿ	[illegible]	೦	೦	[illegible]	[illegible]
ಜೋಳ	[illegible]	[illegible]	೦	[illegible]	[illegible]
ಕಡಲೆ	[illegible]	೧೦	೦	[illegible]	೧೦
ಕಡಲೆಕಾಯಿ	೧೦	೦	೦	[illegible]	[illegible]
ಎಳ್ಳು	[illegible]	[illegible]	೦	[illegible]	೦
ಹುರುಳಿ	[illegible]	[illegible]	೦	[illegible]	[illegible]
ಹೆಸರು	[illegible]	[illegible]	೦		
ಹಲಸಂದೆ	[illegible]	[illegible]	೦	[illegible]	[illegible]
ಧನಿಯ	[illegible]	[illegible]	೦	[illegible]	[illegible]
ಕಡಲೆ	[illegible]	[illegible]	೦		
ಮೆಣಸಿನಕಾಯಿ	[illegible]	೦	೦	[illegible]	೦
ಬೆಲ್ಲ	[illegible]	೦	೦		
ತೆಂಗಿನಕಾಯಿ ೧೦೦೦	[illegible]	[illegible]	೦	[illegible]	[illegible]

ತಕ್ಷಣ ಬೇಕಾಗಿದೆ

ಮೈಸೂರು ಸಿಟಿ ಮಂಡಿ ಮೊಹಲ್ಲಾ IIನೆ ಈದಿಗಾ ಬಡಾವಣೆಯಲ್ಲಿರುವ ಕಬೀರ್ ಶ್ರೀರಾಮ ಮಂದಿರದಲ್ಲಿ ದೇವರ ಪೂಜೆ ಮಾಡುವ ಅರ್ಚಕರು ಬೇಕಾಗಿದೆ. ಇಷ್ಟವುಳ್ಳವರು ಮಂದಿರಕ್ಕೆ ಬಂದು ವಿಚಾರಿಸಬಹುದು.

SREE GANESH

TALKIES

From 22-9-56 : For 3 days

HELL'S ISLAND

(In Vistavision-Technicolor)

With:- John Payne and Mary Murphy

(*A colorful Tropic Isle adventure thriller*)

From 25-9-56 : For 2 days

ROAD TO MOROCCO

(Re-issue)

With:- Bing Crosby & Bob Hope

From 27-9-56 : For 2 days

Anything Can Happen

With:- Jose Ferrar & Kim Hunter

(*An Academy Award Winner*)

THE NATIONAL INSTITUTE OF COMMERCE

1677. Old Mysore Bank Road, Mysore

Offers excellent coaching in

TYPEWRITING, SHORTHAND, ACCOUNTANCY Etc.

Well equipped and is centrally located

ADMISSIONS RECEIVED: JOIN NOW

THE CHAMPION METROPOLITAN COLLEGE OF COMMERCE,

"Co-operators' Home", 100' Road, Mysore

ADMISSIONS

APPLICATIONS for admission to classes in Shorthand, Typewriting and Hindi ONLY, leading to September 1957 Examinations are now being received in the mornings and evenings.

Sd/- M. S. PUTTANNA,
Vice-Principal.

ರಿಜಿಸ್ಟರ್ ನಂ. 792

ಬೆಂಗಳೂರು ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ ಸಾಧ್ವಿ ದಿನ ಪತ್ರಿಕೆಗೆ ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ ದರಗಳಿಗೆ ಬರೆಯಿರಿ

ಒಂದಿನ ಪತ್ರಿಕೆ ೧ ಆಣೆ

ಬ್ರಾಂಕಾಲ್
ಉಬ್ಬಸ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು ಕೊಡಗು ಪ್ರದೇಶಗಳಿಗೆ ಏಜೆಂಟರು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
73/1. ಅವೆನ್ಯೂ ರೋಡ್
ಶ್ರೀ ರಾಮ ಬಜಾರ್ ಬೀದಿ,
ಬೆಂಗಳೂರು–2

ಸಂಪುಟ : ೧೫] SADHVI : SUNDAY 23—9—1956 ಮೈಸೂರು : ಭಾನುವಾರ ೨೩—೯—೧೯೫೬ [ಸಂಚಿಕೆ : ೩೦]

ದೆಹಲಿಯಲ್ಲಿ ಅಂತರರಾಷ್ಟ್ರೀಯ ಗೂಢಚರ್ಯೆ ತಂಡ

ದೆಹಲಿಯಲ್ಲಿ ಅಂತರರಾಷ್ಟ್ರೀಯ ಗೂಢಚರ್ಯೆ ಗುಂಪು

ರಹಸ್ಯ ಕಾಗದಪತ್ರಗಳ ಕೈಸೇರಿಕೆ ಸಂಬಂಧದಲ್ಲಿ ನೌಕರನ ತಪ್ಪೊಪ್ಪಿಗೆ

ಕೇಂದ್ರ ಸರ್ಕಾರದ ವಿದೇಶಾಂಗ ಇಲಾಖೆಯಲ್ಲಿ ಸೂಯೆಜ್ ಬಿಕ್ಕಟ್ಟಿಗೆ ಸಂಬಂಧಿಸಿದ ಅತ್ಯುನ್ನತ ಮಟ್ಟದ ಹಲವು ರಹಸ್ಯ ಕಾಗದಪತ್ರಗಳನ್ನು ಕಳುವು ಮಾಡಿದನೆಂಬ ಆಪಾದನೆ ಮೇಲೆ ಬಂಧಿತನಾಗಿರುವ ಇಲಾಖಾ ನೌಕರ ಕಾದಿಲ್ ಕಪೂರ್ ಎಂಬಾತನು ನವ ದೆಹಲಿ ನ್ಯಾಯಾಧೀಶರ ಮುಂದೆ ತಾನು ಮಾಡಿರುವ ಅಪರಾಧವನ್ನು ಒಪ್ಪಿಕೊಂಡುದಾಗಿ ವರದಿಯಾಗಿದೆ. ಪ್ರಕರಣದಲ್ಲಿ ಇಲಾಖೆಯ ಹಲವು ಅಧಿಕಾರಿಗಳೂ ಸೇರಿರುವರೆಂದೂ, ಈ ಸಂಬಂಧದಲ್ಲಿ ಅಂತರರಾಷ್ಟ್ರೀಯ ಗೂಢಚರ್ಯೆಯ ಗುಂಪೊಂದು ಕೆಲಸ ಮಾಡುತ್ತಿರುವುದಾಗಿ ಪೊಲೀಸರು ಅನುಮಾನಪಡುತ್ತಿರುವರೆಂದೂ ಹೇಳಲಾಗಿದೆ. ಈ ಗುಂಪು ಬುಡಮೇಲು ಚಟುವಟಿಕೆಗಳಲ್ಲಿ ತೊಡಗಿರುವುದಾಗಿಯೂ ಗೊತ್ತಾಗಿದೆ.

ನೆನ್ನೆ ಕಾದಿಲಾಲನನ್ನೂ, ಅವನ ಪತ್ನಿಯನ್ನೂ ಕೋರ್ಟಿಗೆ ಕರೆತರಲಾಯಿತು. ಆಕೆಯ ವಿಷಯದಲ್ಲಿ ೧ ವರ್ಷದ ಮುಚ್ಚಳಿಕೆ, ನ್ಯಾಯಾಧೀಶರು ಆಕೆಯನ್ನು ೫೦೦೦ ರೂ ಜಾಮೀನು ಮತ್ತು ಅದೇ ಮೊಬಲಗಿನ ಸ್ವಂತ ಮುಚ್ಚಳಿಕೆ ಮೇಲೆ ಬಿಡುಗಡೆ ಮಾಡಬಹುದೆಂದು ತಿಳಿಸಿದ್ದರೂ, ಜಾಮೀನುದಾರರು ಸಿಗದೆ ಆಕೆಯು ಜೈಲಿಗೆ ಕಳುಹಿಸಲ್ಪಟ್ಟಳು. ಗಂಡನ ಜಾಮೀನು ಅರ್ಜಿಯನ್ನು ನಿರಾಕರಿಸಿ, ೨ ವಾರ ಜೈಲಿಗೆ ರಿಮಾಂಡ್ ಮಾಡಲಾಯಿತು. ಬರುವ ೬ನೇ ತಾರೀಖು ವಿಚಾರಣೆ ಇದೆ.

ವಿದೇಶೀ ಏಜೆಂಟನಿಗೆ ತಾನು ರಹಸ್ಯ ಕಾಗದ ಪತ್ರ ಮತ್ತು ಫೈಲುಗಳನ್ನು ಕೊಟ್ಟುದಾಗಿ ಕಾದಿಲಾಲನು ತಿಳಿಸಿದನು. ತೆಗೆದುಕೊಂಡವನು ದೇಶವನ್ನು ಬಿಟ್ಟುಹೋಗಿರುವನೆಂದೂ, ಇನ್ನಿಬ್ಬರು ವಿದೇಶೀ ರಾಜತಾಂತ್ರಿಕ ಅಧಿಕಾರಿಗಳೂ ಇತ್ತೀಚೆಗೆ ಭಾರತದಿಂದ ತೆರಳಿರುವರೆಂದೂ ಗೊತ್ತಾಗಿದೆ.

ಕಾಗದಪತ್ರಗಳು ಸೂಯೆಜ್ ಬಿಕ್ಕಟ್ಟಿಗೆ ಸಂಬಂಧಿಸಿದುವೆಂದೂ, ಕೃಷ್ಣಮೆನನ್ನರು ಕೈರೋವಿಗೆ ಹೋದಾಗ ಅವು ಕೈಸೇರಿದವೆಂದೂ ಪತ್ರಿಕೆಯು ಹೇಳಿದೆ... [illegible]

ರಷ್ಯದಲ್ಲಿ ೪೦ ಸಾವಿರ ಶತಾಯುಗಳು

ರಷ್ಯದಲ್ಲಿ ೪೦ ಸಾವಿರಕ್ಕೂ ಹೆಚ್ಚು ಮಂದಿ ಶತಾಯುಗಳಿರುವರೆಂದು ಗೊತ್ತಾಗಿದೆ. ಜಾರ್ಜಿಯ ಮತ್ತು ಅರ್ಮೇನಿಯಗಳಲ್ಲಿರುವ ಬೆಟ್ಟಗುಡ್ಡಗಳಲ್ಲಿ ಕುರಿ ಕಾಯುವವರು ಮತ್ತು ರೈತರು ಮುಪ್ಪು ಇಲ್ಲದೆ ನೂರು ವರ್ಷ ಬಾಳುವ ಸಂಭವವು ಹೆಚ್ಚಾಗಿರುವುದೆಂದೂ, ಹೊಸ ಮದ್ಯ ಮತ್ತು ಬೆಟ್ಟದ ಗಾಳಿ ಸೇವನೆಯು ಅವರಿಗೆ ದೀರ್ಘಾಯುಷ್ಯವನ್ನು ಕೊಡುವುದೆಂದೂ ಹೇಳಲಾಗಿದೆ. ಅಲ್ಲಿ ಯಗೊ ಜಿರೋಯೆವ್ ಎಂಬುವರು ಇತ್ತೀಚೆಗೆ ತಮ್ಮ ೧೫೦ನೇ ವರ್ಷೋತ್ಸವವನ್ನು ನಡೆಸಿಕೊಂಡರು. ೧೫೨ ವರ್ಷದ ಜೊಡಾಗುಸ್ಸಿನೇವ್ ಎಂಬುವರು ಇವರೆಲ್ಲರಿಗಿಂತ ಅತ್ಯಂತ ವಯೋವೃದ್ಧರಾಗಿರುವರು.

ನಗರಕ್ಕೆ ಬರ್ಮಾ ಅಕ್ಕಿ ಸರಬರಾಜು

ಪೌರಸಭಾ ಆಹಾರ ಡಿಪೋ ತೆರೆಯಲು ಜಿಲ್ಲಾಧಿಕಾರಿಗಳ ಸಲಹೆ

ಮೈಸೂರು ೨೨

ನಗರದಲ್ಲಿ ಕಳೆದ ಹಲವಾರು ತಿಂಗಳಿಂದಲೂ ಉತ್ತಮ ರಕಮಿನ ಅಕ್ಕಿಯ ಬೆಲೆಯು ಪಲ್ಲಕ್ಕೆ ೩೯–೪೦ ರೂ ವರೆಗೆ ಏರಿದ್ದು ಮಧ್ಯಮ ಮತ್ತು ಕೆಳ ವರ್ಗದ ಜನರಿಗೆ ವಿಪರೀತ ಕಷ್ಟವಾಗಿರುವುದನ್ನು ತಪ್ಪಿಸುವ ಸಲುವಾಗಿ ಪೌರಸಭೆಯವರು ಆಹಾರ ಡಿಪೋಗಳನ್ನು ಏರ್ಪಡಿಸುವುದರ ಅಗತ್ಯವನ್ನು ಸೂಚಿಸಿ ಜಿಲ್ಲಾಧಿಕಾರಿಗಳು ಪೌರಸಭಾಧ್ಯಕ್ಷರಿಗೆ ಪತ್ರವೊಂದನ್ನು ಬರೆದಿದ್ದಾರೆ.

ಬಹಿರಂಗ ಮಾರುಕಟ್ಟೆಯಲ್ಲಿ ಬೆಲೆ ಹೆಚ್ಚುತ್ತಿರುವುದನ್ನು ತಗ್ಗಿಸಲು ಸರ್ಕಾರದವರು ಬರ್ಮಾ ಅಕ್ಕಿಯನ್ನು ನಗರ ಮತ್ತು ಹಳ್ಳಿಗಳಿಗೆ ಒದಗಿಸಿರುವರೆಂದೂ, ನಗರದಲ್ಲಿ ಈಗಾಗಲೇ ೪,೦೦೦ ಪಲ್ಲಕ್ಕೂ ಹೆಚ್ಚು ಅಕ್ಕಿಯ ದಾಸ್ತಾನು ಇರುವುದಾಗಿಯೂ ಅವರು ತಿಳಿಸಿರುವರು.

ಈ ಸಾರಿ ದಸರಾ ವೇಳೆಗೆ ಹೆಚ್ಚು ಜನರು ಬರುವ ನಿರೀಕ್ಷೆಯಿರುವುದೆಂದೂ, ಅದಕ್ಕಾಗಿಯೂ ಸಹ ಹೆಚ್ಚು ಕಡೆ ಆಹಾರ ಡಿಪೋಗಳನ್ನು ತೆರೆಯುವುದು ಅವಶ್ಯಕವೆಂದು ಸೂಚಿಸಿ, ಜನರಿಗೆ ರೂ. ಗೆ ೨ ಸೇರಿನಂತೆ ಅಕ್ಕಿ ಒದಗಿಸಲು ಸರ್ಕಾರದವರು ತಮ್ಮ ಗೋಡೌನಿನಿಂದ ಪಲ್ಲಕ್ಕೆ ೪೬–೧೨–೮ ರೂ. ಸಂತೆಬದಿಗಿಸುವರೆಂದೂ ತಿಳಿಸಿರುತ್ತಾರೆ.

ನವರಾತ್ರಿಯಲ್ಲಿ ಮೈಸೂರಿನಲ್ಲಿ ಕುದುರೆ ಜೂಜು

ಬರುವ ನವರಾತ್ರಿ ಸಂದರ್ಭದಲ್ಲಿ ರಾಜಧಾನಿಯಲ್ಲಿ ಅಕ್ಟೋಬರ್ ೧೦, ೧೩, ೧೮ ಮತ್ತು ೨೦ನೇ ತಾರೀಖುಗಳಲ್ಲಿ ಕುದುರೆ ಪಂದ್ಯಗಳು ಏರ್ಪಾಡಾಗಿವೆ. ಕಡೇ ದಿನ ಮಹಾರಾಜರ ಚಾಲೆಂಜ್ ಕಪ್ ಪಂದ್ಯವು ನಡೆಯುವುದು. ಮಹಾರಾಜರು ಆ ದಿನ ಖುದ್ದು ಹಾಜರಿದ್ದು ಕಪ್ ಬಹುಮಾನವನ್ನು ಹಂಚುವರು.

ವಿಹಾರಕ್ಕೆ ಹೊರಟ ವಿದ್ಯಾರ್ಥಿನಿಯ ದುರಂತ

ಬೆಂಗಳೂರಿನ ಸೇಂಟ್ ತೆರೆಸಾ ಕಾನ್ವೆಂಟ್ ಶಾಲೆಯ ರಾಧಾ ಎಂಬ ೧೨ ವರ್ಷದ ಬಾಲಕಿಯು ನೆನ್ನೆ ಚನ್ನಪಟ್ಟಣದ ಬಳಿ ಬಸ್ಸಿನಿಂದ ಕೆಳಗೆ ಬಿದ್ದು ಚಕ್ರಕ್ಕೆ ಸಿಕ್ಕಿ ಮೃತಪಟ್ಟಳೆಂದು ವರದಿಯಾಗಿದೆ. ವಿದ್ಯಾರ್ಥಿನಿಯರು ಬಸ್ಸೊಂದರಲ್ಲಿ ಶ್ರೀರಂಗಪಟ್ಟಣಕ್ಕೆ ವಿಹಾರಾರ್ಥವಾಗಿ ಹೊರಟಿದ್ದಾಗ, ಅದರ ಬಾಗಿಲು ಇದ್ದಕ್ಕಿದ್ದಂತೆ ತೆರೆದು ಬಾಲಕಿಯು ಕೆಳಗೆ ಬಿದ್ದುಬಿಟ್ಟಳು.

ಕಲಾವಿದರ ಸಮ್ಮೇಳನಕ್ಕೆ ಪ್ರತಿನಿಧಿಗಳಾಗಿ ಆಯ್ಕೆ

ಈ ದಿನ ಬೆಂಗಳೂರಿನಲ್ಲಿ ನಡೆಯುವ ಕಲಾವಿದರ ಸಮ್ಮೇಳನದಲ್ಲಿ ಭಾಗವಹಿಸಲು ನಗರದ ಮೈಸೂರಿನ ರಂಗಭೂಮಿಯ ಕಲಾವಿದರ ಸಂಘದ ಅಸೋಸಿಯೇಷನ್ನಿನಿಂದ ಶ್ರೀಗಳಾದ ಎಚ್. ಎಂ. ಬಸವರಾಜ್, ಕೆ. ರಾಮಣ್ಣ, ಎಚ್.ಎಲ್. ಸ್ವಾಮಿ ಮತ್ತು ಜಿ. ವಿ. ರಾಮನಾಥರವರುಗಳನ್ನು ಆರಿಸಲಾಗಿದೆ.

ಕೋಲಾರದ ಚಿನ್ನದ ಗಣಿ ರಾಷ್ಟ್ರೀಕರಣಕ್ಕಾಗಿ ಹೆಚ್ಚು ಪರಿಹಾರ

ದೆಹಲಿಗೆ ಎ. ಜಿ. ರಾಮಚಂದ್ರರಾಯರ ತುರ್ತು ಭೇಟಿ

ಬೆಂಗಳೂರು ೨೨

ಕೇಂದ್ರ ಸರ್ಕಾರದ ತುರ್ತು ಕರೆ ಮೇರೆ ನೆನ್ನೆ ವಿದ್ಯಾ ಮಂತ್ರಿ ಶ್ರೀ ಎ. ಜಿ. ರಾಮಚಂದ್ರರಾಯರು ದೆಹಲಿಗೆ ವಿಮಾನದಲ್ಲಿ ಪ್ರಯಾಣ ಮಾಡಿದರು. ಕೋಲಾರದ ಚಿನ್ನದ ಗಣಿ ಕಂಪೆನಿಗೂ, ಮೈಸೂರು ಸರ್ಕಾರಕ್ಕೂ ಪರಿಹಾರದ ಮೊತ್ತದ ಬಗ್ಗೆ ಕಡೇ ಘಳಿಗೆಯ ಒಪ್ಪಂದ ಮಾಡಿಸಲು ಪ್ರಯತ್ನಿಸಲಾಗುತ್ತಿದೆ. ಕಂಪೆನಿಯವರು ೧೫೦ ಲಕ್ಷ ರೂ. ಪರಿಹಾರ ತೆಗೆದುಕೊಳ್ಳಲು ಈಗ ಸಿದ್ಧವಾಗಿರುವಂತೆ ಕಾಣಬರುತ್ತದೆ.

ಬಿ. ಟಿ. ಸಿ. ರಾಷ್ಟ್ರೀಕರಣದ ಮಸೂದೆಗೆ ಒಪ್ಪಿಗೆ

ಬೆಂಗಳೂರು ೨೨

ನೆನ್ನೆ ವಿಧಾನ ಸಭೆಯು ಬಿ ಟಿ ಸಿ. ರಾಷ್ಟ್ರೀಕರಣದ ಮಸೂದೆಯನ್ನು ಸರ್ವಾನುಮತದಿಂದ ಒಪ್ಪಿತು. ಪರಿಹಾರ ದ್ರವ್ಯವನ್ನು ೧೪,೧೫,೦೦೦ ರೂ ನಿಂದ ೧೬,೫೦,೦೦೦ ರೂ ಗೆ ಹೆಚ್ಚಿಸಲು ಗೃಹ ಮಂತ್ರಿಯವರು ತಿದ್ದುಪಡಿ ಸೂಚಿಸಿ, ಅದನ್ನು ಅಂಗೀಕರಿಸಲಾಯಿತು. ಬರುವ ತಿಂಗಳ ೧ ರಿಂದ ರಾಷ್ಟ್ರೀಕರಣವು ಆಗುವ ಬಗ್ಗೆ ಸಭೆಯು ಹೆಚ್ಚು ಕಾಲ ಕಳೆಯದೆ ಮಸೂದೆಯ ಚರ್ಚೆಯನ್ನು ನೆನ್ನೆಯೇ ಮುಗಿಸಿತು.

ಚಾಂಪಿಯನ್ ಮೆಟ್ರೊಪಾಲಿಟನ್ ಕಾಲೇಜಿನ ಕಾಮರ್ಸ್ ಸಂಘ

ರಾಜಧಾನಿಯ ಚಾಂಪಿಯನ್ ಮೆಟ್ರೊಪಾಲಿಟನ್ ಕಾಲೇಜಿನ ಕಾಮರ್ಸ್ ಸಂಘದ ಅಧ್ಯಕ್ಷರಾಗಿ ಶ್ರೀ ಎಂ. ಜಿ ನಾಮಣಾಯರು ಆರಿಸಲ್ಪಟ್ಟಿದ್ದಾರೆ. ಶ್ರೀಗಳಾದ ಪ್ರಭಾಕರ ರಾವ್, ಎಚ್ ಕೃಷ್ಣಮೂರ್ತಿ ಮತ್ತು ಸಿ ತಿಮ್ಮಣ್ಣನವರು ಸಹಾಯಕರಾಗಿಯೂ, ಶ್ರೀ ಹೆಚ್. ಜಿ ಗೋವಿಂದರಾಯರು ಕಾರ್ಯದರ್ಶಿಯಾಗಿಯೂ ಚುನಾಯಿತರಾಗಿರುವರು.

ಶ್ರೀರಂಗಪಟ್ಟಣದ ಉತ್ತರದ ಬಳಿ ವೀರಶೈವರ ರುದ್ರ ಭೂಮಿ

ರಾಜಧಾನಿಯ ಮಂಡಿ ಮೊಹಲ್ಲಾ ನಿವಾಸಿ ಶ್ರೀ ಎಂ. ಎಸ್. ನಂಜಪ್ಪನವರು ಸಂಸ್ಥಾನದ ಮುಖ್ಯ ಮಂತ್ರಿಯವರಿಗೆ ಮನವಿ ಪತ್ರವೊಂದನ್ನು ಬರೆದು ಶ್ರೀರಂಗಪಟ್ಟಣದ ಹಳೇ ಉತ್ತರದ ಬಳಿ ಇರುವ ರುದ್ರ ಭೂಮಿಯಲ್ಲಿ ವೀರಶೈವ ಮತಸ್ಥರು ಶವ ಸಂಸ್ಕಾರ ಮಾಡುವುದಕ್ಕೂ ಮಂಟಪ, ಸಮಾಧಿ ಮಂದಿರ ಮುಂತಾದುವುಗಳ ನಿರ್ಮಾಣಕ್ಕೂ ಉಂಟಾಗಿರುವ ಅಡ್ಡಿ ಆತಂಕಗಳನ್ನು ನಿವಾರಿಸುವಂತೆ ಕೋರಿದ್ದಾರೆ. ರುದ್ರ ಭೂಮಿಯನ್ನು ಸರ್ವೆ ಮಾಡಿಸಿ, ಸದರಿ ಜಮೀನಿನಲ್ಲಿ ವ್ಯವಸಾಯ ಮಾಡದಂತೆ ಆಜ್ಞೆಯಾಗಿ ಕೋರಿದ್ದಾರೆ. ಗುತ್ತಿಗೆದಾರರು ಸಮಾಧಿಗಳನ್ನು ಮಟ್ಟ ಮಾಡಿ ಗೊಬ್ಬರಗೋಡು ಹಾಕುತ್ತಿರುವುದಾಗಿಯೂ, ವೀರಶೈವರಲ್ಲಿ ಅನೇಕರಿಗೆ ಕಿರುಕುಳಗಳೂ ಆಗುವುದಾಗಿಯೂ ತಿಳಿಸಿದ್ದಾರೆ.

ಗಣಪತಿ ಉತ್ಸವದ ಕಾರ್ಯಕ್ರಮ

ಮೈಸೂರು ೨೨

ಗಣಪತಿ ಉತ್ಸವದ ಅಂಗವಾಗಿ ಮಹಾರಾಜಾ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಈ ಸಂಜೆ ೬ ಗಂಟೆಗೆ ಶಾಲಾ ವಿದ್ಯಾರ್ಥಿಗಳಿಂದ ತರ್ಕಶಾಸ್ತ್ರ ಮತ್ತು ಶಕ್ತಿ ವಿಶಿಷ್ಟಾದ್ವೈತ ಎಂಬ ವಿಷಯವಾಗಿ ವಾಕ್ಯಾರ್ಥವೂ, ನಾಳೆ ಸಂಜೆ ೬ಕ್ಕೆ ಮಹಾರಾಜರ ಉಪ ಕಾರ್ಯದರ್ಶಿ ಶ್ರೀ ಜಿ. ಗುರುಮೂರ್ತಿಶಾಸ್ತ್ರಿಗಳಿಂದ ಗೀತಾ ರಹಸ್ಯದ ಬಗ್ಗೆ ಉಪನ್ಯಾಸವೂ ಇವೆ.

ಸಿಟಿ ಕೋ ಆಪರೇಟಿವ್ ಬ್ಯಾಂಕಿನಲ್ಲಿ ನಾಳೆ ೬॥ ಗಂಟೆಗೆ ಗಣಪತಿ ಮಂಗಳಾರತಿ ಅಂಗವಾಗಿ ವಿ॥ ಟಿ. ಕೆ. ವೇಣುಗೋಪಾಲದಾಸರಿಂದ ಹರಿಕಥೆಯು ನಡೆಯುವುದು.

ಕೃಷ್ಣರಾಜ ಮೊಹಲ್ಲಾ ಶಾಲಾ ಬೀದಿಯಲ್ಲಿರುವ ಶ್ರೀ ಮುದ್ದು ಗಣಪತಿ ದೇವಾಲಯದಲ್ಲಿ ಪೌರಸಭಾ ಸದಸ್ಯ ಶ್ರೀ ಬಿ. ಜಿ. ದಾಸರ ಅಧ್ಯಕ್ಷತೆಯಲ್ಲಿ ಈ ರಾತ್ರಿ ೮ ಘಂಟೆಗೆ ವಿ॥ ಎಂ ಎಲ್. ನಾರಾಯಣದಾಸರಿಂದ ಕೃಷ್ಣಗಾರುಡಿ ಎಂಬ ಹರಿಕಥೆಯೂ, ನಾಳೆ ರಾತ್ರಿ ಚಿಕ್ಕ ಗಣಪತಿ ಉತ್ಸವವೂ ಏರ್ಪಾಡಾಗಿವೆ.

ತುಮಕೂರಿನಲ್ಲಿ ಪ್ರದೇಶ ಕಾಂಗ್ರೆಸ್ ಸಮಿತಿ ಸಭೆ

ಮೈಸೂರು ಪ್ರದೇಶ ಕಾಂಗ್ರೆಸ್ ಸಮಿತಿ ಸಭೆಯು ಇದೇ ತಿಂಗಳು ೩೦ನೇ ತಾರೀಖು ತುಮಕೂರಿನಲ್ಲಿ ಸೇರಿ ಇಡೀ ಕರ್ನಾಟಕಕ್ಕೆಲ್ಲಾ ಒಂದೇ ಪ್ರದೇಶ ಸಮಿತಿಯ ರಚನೆ ವಿಷಯವನ್ನು ಚರ್ಚಿಸುವುದು.

ಸಾದಿ ಅರೇಬಿಯದಲ್ಲಿ ನೆಹರೂ ಮತ್ತು ನಾಸೆರ್ ಭೇಟಿ

ಸಾದಿ ಅರೇಬಿಯಕ್ಕೆ ನಾಳೆ ಪ್ರಯಾಣ ಮಾಡಲಿರುವ ಪ್ರಧಾನಿ ನೆಹರೂರವರು ದೊರೆ ಇಬ್ನ್ ಸಾದರ ನಿವಾಸ ಸ್ಥಳವಾದ ರಿಯಾದ್ ಎಂಬಲ್ಲಿ ಈಜಿಪ್ಟಿನ ಅಧ್ಯಕ್ಷ ನಾಸೆರ್‌ರವರೊಡನೆ ಮಾತುಕತೆ ನಡೆಸುವರೆಂದು ವರದಿಯಾಗಿದೆ. ಅಲ್ಲಿ ಇತೀ ಅರಬ್ ಪ್ರಪಂಚದ ಮೂವರು ಮುಖ್ಯಸ್ಥರಾದ ನಾಸರ್, ಸಿರಿಯಾ ಅಧ್ಯಕ್ಷ ಕುವತ್ಲಿ ಮತ್ತು ಇಬ್ನ್ ಸಾದರು ಇಂದಿನಿಂದ ೨ ದಿವಸಗಳ ಸಮ್ಮೇಳನ ನಡೆಸುವರು. ಸಾದಿ ಅರೇಬಿಯಾ ದೊರೆ ಆಹ್ವಾನವನ್ನು ಮನ್ನಿಸಿ ನೆಹರೂರವರು ನಾಳೆ ಅಲ್ಲಿಗೆ ಭೇಟಿಯಾಗುವರು.

ಅಲಿಘಡದ ವಿಶ್ವವಿದ್ಯಾಲಯದ ವಿದ್ಯಾರ್ಥಿಗಳ ಉಚ್ಚಾಟನೆ

ಅಲಿಘಡದ ಮುಸ್ಲಿಂ ವಿಶ್ವವಿದ್ಯಾಲಯದ ವಿದ್ಯಾರ್ಥಿ ಸಂಘದ ಅಧ್ಯಕ್ಷ ಮಲ್‌ಖಾನ್ ಮಹಮದ್ ಖಾನರೂ ಸೇರಿ ೯ ಮಂದಿ ಕಾಲೇಜು ವಿದ್ಯಾರ್ಥಿಗಳನ್ನು ವಿಶ್ವವಿದ್ಯಾಲಯದ ಅಧಿಕಾರಿಗಳು ಉಚ್ಚಾಟನೆ ಮಾಡಿದ್ದಾರೆ. ೧೫ ಮಂದಿ ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ೪ ರಿಂದ ೬ ವಾರಗಳವರೆಗೆ ಸಸ್ಪೆಂಡ್ ಮಾಡಲಾಗಿದೆ. ವಿವಾದಾತ್ಮಕ ಮುಖಬಂಧದ ಗ್ರಂಥದ ಪ್ರಕಟಣೆ ಸಂಬಂಧವಾಗಿ ವಿದ್ಯಾರ್ಥಿಗಳು ಈಚೆಗೆ ನಡೆಸಿದ ವಿರೋಧ ಪ್ರದರ್ಶನ ಮತ್ತು ಚಳುವಳಿಯ ಬಗ್ಗೆ ಇವರುಗಳ ಮೇಲೆ ಕ್ರಮ ಕೈಗೊಳ್ಳಲಾಗಿದೆ.

ವಾರ ಭವಿಷ್ಯ

ತಾ॥ ೧೬-೯-೫೬ರಿಂದ ೨೨-೯-೫೬ರ ವರೆಗೆ

ಮೇಷ:— ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಶುಭ ಕಾರ್ಯಗಳು ಜರುಗುತ್ತವೆ. ನೌಕರಿಯಲ್ಲಿ ಪ್ರಶಂಸೆ.

ವೃಷಭ:— ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅಸಮರ್ಪಕ ಮಿತ್ರರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ನಿರುತ್ಸಾಹ.

ಮಿಥುನ:— ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಮರ್ಪಕ ಆಪ್ತರಿಂದ ನೆರವು. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ನಿರುತ್ಸಾಹ

ಕರ್ಕ:— ಆರೋಗ್ಯ ಉತ್ತಮ ಆರ್ಥಿಕ ಸ್ಥಿತಿ ತೃಪ್ತಿಕರ. ಹುವಾರ್ಕ ವಿದ್ಯಾರ್ಥಿನರ ಜಂಟಿಯ. ಉದ್ಯೋಗದಲ್ಲಿ ನಿರುತ್ಸಾಹ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು.

ಸಿಂಹ:— ಆರೋಗ್ಯ ಅತೃಪ್ತಿಕರ. ಆರ್ಥಿಕ ಸ್ಥಿತಿ ಬಿಗಡಾಯಿಸುವುದು. ವೃಥಾ ವ್ಯವಹಾರ ಸಂಭವ ಪ್ರಯಾಣಕ್ಕೆ ಅಡ್ಡಿ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಕಿರುಕುಳ.

ಕನ್ಯಾ:— ಆರೋಗ್ಯದ ಬಗ್ಗೆ ಎಚ್ಚರಿಕೆ ಅಗತ್ಯ ಆರ್ಥಿಕ ಪರಿಸ್ಥಿತಿ ಸಾಧಾರಣ. ಕೈಗೊಂಡ ಕಾರ್ಯಗಳಿಗೆ ವಿಘ್ನ. ವ್ಯಾಪಾರ ವ್ಯವಹಾರಗಳಲ್ಲಿ ಅಡ್ಡಿ. ಉದ್ಯೋಗದಲ್ಲಿ ಸಮಸ್ಯೆ

ತುಲಾ:— ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ಉದ್ಯೋಗದಲ್ಲಿ ಪ್ರಗತಿ. ಕಮ್ಮಿ

ವೃಶ್ಚಿಕ:— ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸಾಮಾಜಿಕ ಕ್ಷೇತ್ರದಲ್ಲಿ ಯಶಸ್ಸು ಪ್ರವಾಸ ಸುಖಕರವಾಗಿರುವುದು ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ.

ಧನು:— ಆರೋಗ್ಯ ಉತ್ತಮ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ. ಮಿತ್ರರಿಂದ ಸಹಾಯ. ಹೊಸ ಉದ್ಯಮಗಳಿಗೆ ಸಕಾಲ.

ಮಕರ:— ಆರೋಗ್ಯ ಚೆನ್ನಾಗಿರಲಾರದು. ಆರ್ಥಿಕ ಬಿಕ್ಕಟ್ಟು ಹೆಚ್ಚುವುದು. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ನೌಕರಿಯಲ್ಲಿ ಕಿರುಕುಳ ಕಾರ್ಯಸಾಧನೆಯಲ್ಲಿ ಸಂಯಮ ಅಗತ್ಯ.

ಕುಂಭ:— ಆರೋಗ್ಯದ ಬಗ್ಗೆ ಎಚ್ಚರಿಕೆ ಅವಶ್ಯಕ. ಆರ್ಥಿಕ ಪರಿಸ್ಥಿತಿ ಅಸಮರ್ಪಕ. ಮಿತ್ರರಿಂದ ದ್ರೋಹ. ಕುಟುಂಬದಲ್ಲಿ ಕಲಹ. ವ್ಯಾಪಾರವ್ಯವಹಾರಗಳಲ್ಲಿ ಸಾಧಾರಣ ಫಲಗಳು

ಮೀನ:— ಆರೋಗ್ಯ ಚೆನ್ನಾಗಿರುವುದಿಲ್ಲ. ಆರ್ಥಿಕ ಪರಿಸ್ಥಿತಿ ಬಿಗಡಾಯಿಸುವುದು ವೃಥಾ ವೈಮನಸ್ಯ. ವ್ಯಾಪಾರವ್ಯವಹಾರಗಳಲ್ಲಿ ನಷ್ಟ. ಉದ್ಯೋಗದಲ್ಲಿ ನಿರುತ್ಸಾಹ.

Edited, Printed and Published by A. R. Nagarajan at Sadhvi Press D. Subbiah Road, Mysore

ಉದ್ಯಾನವನ ಮತ್ತು ತರಕಾರಿ ತೋಟಗಳ ಸ್ಪರ್ಧೆ

ನಾನಾ ಶಾಲೆಗಳಿಗೆ ಬಹುಮಾನ

ಮೈಸೂರು ೨೩

ನಗರದ ಫಲಪುಷ್ಪ ಸಂಘದವರು ಏರ್ಪಡಿಸಿದ್ದ ಶಾಲಾ ಉದ್ಯಾನವನ ಮತ್ತು ತರಕಾರಿ ತೋಟಗಳ ಪ್ರದರ್ಶನಗಳಲ್ಲಿ ಕೆಳಗೆ ಕಂಡ ಶಾಲೆಗಳಿಗೆ ಬಹುಮಾನಗಳು ಬಂದಿವೆ :—

ಅಲಂಕಾರದ ತೋಟಗಳು—ಪ್ರಥಮ ಬಹುಮಾನ : ಮೈಸೂರಿನ ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್ ಹೈಸ್ಕೂಲು, ಹಾರ್ಡ್ವಿಕ್ ಮತ್ತು ಬಾಡಿಗಾರ್ಡ್ ಲೈನು ಮಾಧ್ಯಮಿಕ ಶಾಲೆಗಳು, ಬನ್ನೂರಿನ ಉರ್ದು ಮಾಧ್ಯಮಿಕ ಶಾಲೆ, ಕಾನ್ವೆಂಟ್ ಪ್ರಾಥಮಿಕ ಶಾಲೆ.

ಎರಡನೇ ಬಹುಮಾನ : ಹಾರ್ಡ್ವಿಕ್ ಹೈಸ್ಕೂಲು, ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್, ಸರ್ಕಾರಿ ಕನ್ನಡ ಪ್ರಾಕ್ಟೀಸಿಂಗ್ ಬಾಲಕರ ಶಾಲೆ ಮತ್ತು ಸುಣ್ಣದಕೇರಿ ಹೊಸ ಕನ್ನಡ ಬಾಲಕಿಯರ ಮಾಧ್ಯಮಿಕ ಶಾಲೆ, ನಂಜನಗೂಡಿನ ಕನ್ನಡ ಬಾಲಕರ ಮಾಧ್ಯಮಿಕ ಶಾಲೆ ಮತ್ತು ಟಿ. ನರಸೀಪುರದ ಕನ್ನಡ ಪ್ರಾಥಮಿಕ ಬಾಲಕಿಯರ ಶಾಲೆ

ತರಕಾರಿ ತೋಟಗಳು—ಪ್ರಥಮ ಬಹುಮಾನ: ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್ ಹೈಸ್ಕೂಲು, ಸರ್ಕಾರಿ ಜನಾನಾ ನಾರ್ಮಲ್ ಸ್ಕೂಲು, ಗುಡ್ ಷೆಪರ್ಡ್ ಕಾನ್ವೆಂಟ್ ಕನ್ನಡ ಮಾಧ್ಯಮಿಕ ಶಾಲೆ, ಮೂರನೇ ಇನ್ಫೆಂಟ್ರಿ ಲೈನಿನ ಕನ್ನಡ ಮಾಧ್ಯಮಿಕ ಶಾಲೆ, ನಜರ್‌ಬಾದ್ ಕನ್ನಡ ಪ್ರಾಥಮಿಕ ಬಾಲಕರ ಶಾಲೆ, ನಂಜನಗೂಡು ತಾಲ್ಲೂಕು ನಗರ್ಲೆಯ ಮಾಧ್ಯಮಿಕ ಶಾಲೆ

ಎರಡನೇ ಬಹುಮಾನ . ರಾಮಕೃಷ್ಣಾ ಹೈಸ್ಕೂಲು, ನಿಜಾಮಿಯಾ ಉರ್ದು ಪ್ರಾಥಮಿಕ ಬಾಲಕರ ಶಾಲೆ, ಕ್ರೈಸ್ಟ್ ದಿ ಕಿಂಗ್ ಕಾನ್ವೆಂಟ್ ಮಾಧ್ಯಮಿಕ ಶಾಲೆ ; ಹಳೇ ಅಗ್ರಹಾರದ ಕನ್ನಡ ಬಾಲಕಿಯರ ಮಾಧ್ಯಮಿಕ ಶಾಲೆ, ಗುಂಡ್ಲುಪೇಟೆ ಪೌರಸಭಾ ಹೈಸ್ಕೂಲು, ಬನ್ನೂರಿನ ಮಿಶ್ರ ಕನ್ನಡ ಪ್ರಾಥಮಿಕ ಶಾಲೆ ಮತ್ತು ನ್ಯೂ ಟೈಪ್ ಉರ್ದು ಮಾಧ್ಯಮಿಕ ಶಾಲೆ.

ವಿಶೇಷ ಬಹುಮಾನ : ಮೂರನೇ ಇನ್ಫೆಂಟ್ರಿಯ ಕನ್ನಡ ಪ್ರಾಥಮಿಕ ಬಾಲಕಿಯರ ಶಾಲೆ

ನಂಜನಗೂಡಿನ ಜನತಾ ಕಾಲೇಜಿನ ವಿದ್ಯಾಪೀಠ ಮತ್ತು ಟಿ ನರಸೀಪುರದ ವಿದ್ಯೋದಯ ಹೈಸ್ಕೂಲುಗಳಿಗೆ ಶಾಲಾ ಫಾರಂಗಳಿಗಾಗಿ ಪ್ರಥಮ ಮತ್ತು ದ್ವಿತೀಯ ಬಹುಮಾನಗಳು ಬಂದಿವೆ

ರಸ್ತೆ ಘಟನೆಗಳನ್ನು ತಪ್ಪಿಸಲು ಸಂಚಾರ ಹತೋಟಿ ಶಾಸನ

ಬೆಂಗಳೂರು ೨೨

ರಸ್ತೆಗಳ ಅಪಘಾತಗಳನ್ನು ತಪ್ಪಿಸಲು ಸಂಚಾರದ ಹತೋಟಿಗಾಗಿ ಮಸೂದೆಯೊಂದನ್ನು ವಿಧಾನ ಪರಿಷತ್ತು ನೆನ್ನೆ ಅಂಗೀಕರಿಸಿತು. ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಮಾತನಾಡಿ ಈಚೆಗೆ ವಾಹನ ಸಂಚಾರವು ಹೆಚ್ಚಿ, ಘಟನೆಗಳೂ ವಿಪರೀತವಾಗಿರುವುದೆಂದೂ ೧೯೫೫ರಲ್ಲಿ ೧,೦೭೩ ಮಂದಿಗೆ ಗಾಯ ಮತ್ತು ೧೦೭ ಜನರ ಸಾವುಗಳಾದವೆಂದೂ, ವಾಹನಗಳೂ, ಪಾದಚಾರಿಗಳೂ ನಿಯಮ ಪಾಲನೆ ಮಾಡುತ್ತಿಲ್ಲವೆಂದೂ ಹೇಳಿದರು.

ಮಹಿಳೆಯರ ಹೊಲಿಗೆ ಶಾಲೆಯ ವಾರ್ಷಿಕೋತ್ಸವ

ಶ್ರೀಮನ್ಮಹಾರಾಣಿಯವರ ಭಾಷಣ

ಮೈಸೂರು ೨೩

ಶ್ರೀಮನ್ಮಹಾರಾಣಿಯವರು ಕಳೆದ ಬುಧವಾರ ಟೌನ್‌ಹಾಲಿನಲ್ಲಿ ನಗರದ ವಾಣೀವಿಲಾಸ ಮೊಹಲ್ಲೆಯ ಮಹಿಳಾ ಹೊಲಿಗೆ ಶಾಲೆಯ ಪ್ರಥಮ ವಾರ್ಷಿಕೋತ್ಸವದ ಅಧ್ಯಕ್ಷತೆ ವಹಿಸಿದ್ದರು ಅವರು ಭಾಷಣ ಮಾಡಿ, ಮಹಿಳೆಯರಿಗಾಗಿ ವಾಣಿಜ್ಯ ಶಿಕ್ಷಣ ಕೇಂದ್ರಗಳನ್ನು ಸರ್ಕಾರದವರೂ, ಸಾರ್ವಜನಿಕರೂ ಏರ್ಪಡಿಸಬೇಕೆಂದು ತಿಳಿಸಿದರು. ಮಹಿಳೆಯರು ಸ್ವಾಭಾವಿಕವಾಗಿಯೇ ಕಲಾಸಕ್ತರಾಗಿರುವುದರಿಂದ ಅವರುಗಳಿಗೆ ಲಲಿತಕಲೆಗಳ ಅಭ್ಯಾಸಕ್ಕೆ ವ್ಯವಸ್ಥೆ ಮಾಡಬೇಕೆಂದು ಶಾಲೆಯವರಿಗೆ ಸೂಚಿಸಿದರು ಗೃಹ ಕೈಗಾರಿಕೆಗಳಲ್ಲಿ ಕಲಾ ಕೌಶಲ್ಯಗಳೂ ಕಾಣಬರಬೇಕೆಂದು ಅವರು ಅಭಿಪ್ರಾಯಪಟ್ಟರು.

ಸಮಿತಿಯ ಅಧ್ಯಕ್ಷಿಣಿ ಶ್ರೀಮತಿ ಬಿ ರಾಮೇಶ್ವರಮ್ಮ ಚುಪ್ಪುಸ್ವಾಮಿಯವರು ಸ್ವಾಗತ ಭಾಷಣ ಮಾಡಿ, ಅನಕ್ಷರಸ್ಥ ಮಹಿಳೆಯರಿಗೆ ಸ್ವಾವಲಂಬನವನ್ನು ಕಲಿಸಿ, ಅವರಿಗೆ ಉದ್ಯೋಗ ಕಲ್ಪಿಸುವ ಉದ್ದೇಶದಿಂದ ಹೊಲಿಗೆ ತರಗತಿಗಳನ್ನು ತೆರೆಯಲಾಗಿದೆಯೆಂದು ತಿಳಿಸಿದರು. ಮಹಿಳೆಯರಿಗೆ ಉದ್ಯೋಗ ಕಲ್ಪಿಸಲು ಸಾಮೂಹಿಕ ಅಭಿವೃದ್ಧಿಗಳ ಯೋಜನೆಗಳನ್ನು ಕೇಂದ್ರ ಸಾಮಾಜಿಕ ಯೋಗಕ್ಷೇಮ ಸಮಿತಿಯವರು ವ್ಯವಸ್ಥೆ ಮಾಡಬೇಕೆಂದು ಅವರು ಸಲಹೆ ಮಾಡಿದರು.

ಶ್ರೀಮತಿ ಪಾರ್ವತಮ್ಮ ರಾಮಸ್ವಾಮಿಯವರು ವಾರ್ಷಿಕ ವರದಿಯನ್ನು ಒಪ್ಪಿಸಿ, ಈಗ ೫೦ ಮಂದಿ ವಿದ್ಯಾರ್ಥಿನಿಯರು ಶಿಕ್ಷಣ ಪಡೆಯುತ್ತಿರುವರೆಂದೂ, ಸ್ಥಳ ಸೌಕರ್ಯವಿಲ್ಲದಿರುವುದರಿಂದ ಹೆಚ್ಚು ಮಂದಿ ಮಹಿಳೆಯರನ್ನು ಸೇರಿಸಿಕೊಳ್ಳುವಂತಿಲ್ಲವೆಂದೂ ನುಡಿದರು. ಶಾಲೆಯ ಕೆಲಸ ಕಾರ್ಯಗಳ ವಿಸ್ತರಣೆಗಾಗಿ ಹೆಚ್ಚು ಸಹಾಯ ದೊರೆಯುವಂತಾಗಬೇಕೆಂದು ಅವರು ಪ್ರಾರ್ಥಿಸಿದರು.

ಮಹಾರಾಣಿಯವರು ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಬಹುಮಾನಗಳನ್ನು ಹಂಚಿದರು ಶಾಲಾ ವಿದ್ಯಾರ್ಥಿನಿಯರಿಂದ ವೀಣಾ ವಾದನವು ಏರ್ಪಾಡಾಗಿತ್ತು

ಪೌರಸಭಾ ಆಹಾರ ಡಿಪೊ ತೆರೆಯುವ ಬಗ್ಗೆ ವಿಶೇಷ ಸಭೆ

ನಗರದಲ್ಲಿ ಪೌರಸಭೆಯ ಆಶ್ರಯದಲ್ಲಿ ಆಹಾರ ಡಿಪೊವನ್ನು ತೆರೆಯುವ ವಿಷಯದ ಶೀಲನೆಗಾಗಿ ನಾಳೆ ಮಧ್ಯಾಹ್ನ ೪ ಗಂಟೆಗೆ ಪೌರಸಭೆಯ ವಿಶೇಷ ಅಧಿವೇಶನವು ನಡೆಯುವುದು.

ನಗರದ ೪೦ ವಾರ್ಡುಗಳಲ್ಲೂ ಒಂದೊಂದು ಧಾನ್ಯದ ಡಿಪೊ

ಪ್ರಜಾ ಸಮಾಜವಾದಿ ಪಕ್ಷದ ಒತ್ತಾಯ

ಮೈಸೂರು ೨೩

ನಗರದ ಪ್ರಜಾ ಸಮಾಜವಾದಿ ಪಕ್ಷದ ಕಾರ್ಯಕಾರಿ ಸಮಿತಿ ಸಭೆಯು ಮೊನ್ನೆ ಶ್ರೀ ಎಂ ಆರ್ ಶ್ರೀನಿವಾಸಯ್ಯಂಗಾರ್ಯರ ಅಧ್ಯಕ್ಷತೆಯಲ್ಲಿ ನಡೆಯಿತು. ನಗರದ ೪೦ ವಾರ್ಡುಗಳಲ್ಲೂ ಒಂದೊಂದು ಆಹಾರ ಡಿಪೊವನ್ನು ಪುರಸಭೆಯವರು ಏರ್ಪಡಿಸಿ ಸಾರ್ವಜನಿಕರಿಗೆ ಸುಲಭ ಬೆಲೆಯಲ್ಲಿ ಉತ್ತಮವಾದ ಅಕ್ಕಿಯನ್ನು ಒದಗಿಸಬೇಕೆಂದು ಕೋರುವ ನಿರ್ಣಯ ಮಾಡಲಾಯಿತು. ಪೌರಸಭೆಯ ಉಪ ಚುನಾವಣೆಯಲ್ಲಿ ಪಕ್ಷದ ಸದಸ್ಯರೆಲ್ಲರೂ ತಮ್ಮ ಉಮೇದುವಾರರಿಗೆ ಜಯವಾಗುವಂತೆ ಶ್ರಮಿಸಬೇಕೆಂದು ಕೋರಲಾಯಿತು

ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಚುನಾವಣಾ ಸಮಿತಿ

ನಗರದಲ್ಲಿ ಇತ್ತೀಚೆಗೆ ಸೇರಿದ್ದ ಕರ್ನಾಟಕ ಕಮ್ಯೂನಿಸ್ಟ್ ಪಕ್ಷದ ಸಮಿತಿ ಸಭೆಯಲ್ಲಿ ಚುನಾವಣೆಗಳ ವಿಷಯಗಳು ಪರಿಶೀಲಿಸಲ್ಪಟ್ಟು, ಕ್ಷೇತ್ರಗಳ ಪುನರ್ವಿಂಗಡಣೆಯಾದನಂತರ ಈ ವಿಚಾರವಾಗಿ ಅಖೈರು ತೀರ್ಮಾನ ಕೈಗೊಳ್ಳಲು ನಿರ್ಧರಿಸಲಾಯಿತು ಅದಕ್ಕಾಗಿಯೂ, ಇತರ ಪಕ್ಷಗಳೊಡನೆ ಮಾತುಕತೆ ನಡೆಸಲೂ ಶ್ರೀ ಎ. ಎಲ್ ಉಪಾಧ್ಯಾಯರ ಸಂಚಾಲಕತ್ವದಲ್ಲಿ ಶ್ರೀಗಳಾದ ಆರ್. ಎಂ ಬೈರಾರೆಡ್ಡಿ, ಟಿ. ಕೆ. ಗಂಗಿರೆಡ್ಡಿ, ಎಂ. ಎಸ್. ರಾಮರಾವ್, ಎಂ. ಎಸ್. ಕೃಷ್ಣನ್, ಎಂ ಸಿ ನರಸಿಂಹನ್, ಸಿ ಬಿ ಮೊನ್ನಯ್ಯ, ಡಾ॥ ನಂಜುಂಡೇಶ್ವರ್, ಬಿ ವಿ. ಕಕ್ಕಿಲಾಯ, ಎ ಕೃಷ್ಣಶೆಟ್ಟಿ. ಎಸ್ ಕೆ ಉಪಾಧ್ಯಾಯ, ಶ್ರೀನಿವಾಸಗುಡಿ ಮತ್ತು ಗಂಗಾಧರ ನಮೋಶಿಯವರನ್ನು ಒಳಗೊಂಡ ಸಮಿತಿಯನ್ನು ರಚಿಸಲಾಯಿತು.

ರುಚಿ ಮತ್ತು ಶುಚಿ !

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್

ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತ ಪ್ರತಿ ಭಾನುವಾರದ

ಸ್ಪೆಷಲ್ ಪೊಟೆಟೊ ಬ್ರೆಡ್

ಶ್ರೀ ಕೃಷ್ಣಾ ಬೇಕರಿ,

ಡಿ ಸುಬ್ಬಯ್ಯಾ ರೋಡ್, ಮೈಸೂರು

(ನಮ್ಮ ಅಂಗಡಿಯ ಶಾಖೆಯನ್ನು ಬೇರೆ ಎಲ್ಲೂ ತೆರೆದಿಲ್ಲ)

ಫೋನ್ ನಂ. 541

ನ್ಯೂ ಚಾಮುಂಡೇಶ್ವರಿ ಕೆಫೆ

ಭೋಜನ, ವಸತಿ ಮತ್ತು ಫಲಾಹಾರ ಮಂದಿರ,

ಇರ್ವಿನ್ ರಸ್ತೆ, ಮೈಸೂರು

ನೂತನವಾಗಿ ಪ್ರಾರಂಭಿಸಿರುವ ಫಲಾಹಾರ ಮಂದಿರಕ್ಕೂ, ಮೈಸೂರು ಮತ್ತು ಬೊಂಬಾಯಿ ರೀತಿಯ ರುಚಿರುಚಿಯಾದ ಊಟಗಳಿಗೂ ಮತ್ತು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿರುವ ಒಳ್ಳೆ ಗಾಳಿ ಬೆಳಕುಗಳುಳ್ಳ ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿರಿ

ಸಿ. ಟಿ. ಯಂ. ಚಂದ್ರಯ್ಯ, ಪ್ರೊಪ್ರೈಟರ್

ಪ್ರಭುದೇವಾ ಥಿಯೇಟರ್ (ಪದ್ಮಾ ಟಾಕೀಸ್)

23—9 56ನೇ ಭಾನುವಾರದಿಂದ : ಅಮೋಘ 4ನೇ ವಾರ

ಮಾಡರ್ನ್ ಥಿಯೇಟರ್ಸ್‌ರವರ ಪೂರ್ಣ ಗೇವಾ ಕಲರ್ ತಮಿಳು ಚಿತ್ರ

★ ಆಲಿಬಾಬಾ ಮತ್ತು ೪೦ ಜನ ಕಳ್ಳರು ★

ಪಾತ್ರ - ಎಂ. ಜಿ. ರಾಮಚಂದ್ರನ್, ಭಾನುಮತಿ, ವೀರಪ್ಪ, ತಂಗವೇಲು, ಸಾರಂಗಪಾಣಿ

ಲಕ್ಷ್ಮಿ ★ 21—9—56 ರಿಂದ : ಅಮೋಘ ಪ್ರಾರಂಭ : ಪ್ರತಿ ದಿನ ಮೂರು ಪ್ರದರ್ಶನಗಳು

ದೇವರ್ ಫಿಲಂಸ್‌ರವರ ತಮಿಳು ಚಿತ್ರ

ಎಂ. ಜಿ. ರಾಮಚಂದ್ರನ್, ಪಿ. ಭಾನುಮತಿ, ಕನ್ನಾಂಬ, ಸುರಬಿ ಬಾಲಸರಸ್ವತಿ, ಟಿ ಎಸ್ ಬಾಲಯ್ಯ ಮುಂತಾದವರು ಪಾತ್ರವಹಿಸಿರುವ,

★ ತಾಯಿಕ್ಕು ಪಿನ್ ತಾರಮ್ ★

ಟೆಲಿಫೋನ್ ನಂ. 792

ಇಂದಿನ ಪತ್ರಿಕೆ 3 ಕಾಸು

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಚಂದಾ ದರ
ಏಜಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಪುಸ್ತಕ : ೦೫] SADHVI : MONDAY 24—9—1956 ಮೈಸೂರು : ಸೋಮವಾರ ೨೪—೯—೧೯೫೬ [ಸಂಚಿಕೆ : ೫೦]

ಪ॥ ರಾಷ್ಟ್ರಗಳಿಂದ ಭದ್ರತಾ ಸಮಿತಿಗೆ ಸೂಯೆಜ್ ವಿವಾದ

ಭಾರತದಲ್ಲಿ ವಿದ್ಯಾವಂತರ ಸಮಸ್ಯೆ

ವಿದ್ಯಾವರ್ಧಕ ಪ್ರೌಢಶಾಲಾ ಸಂಘದಲ್ಲಿ ಮುಖ್ಯ ಮಂತ್ರಿಗಳ ಭಾಷಣ

ಮೈಸೂರು ೨೪

ರಾಜಧಾನಿಯ ವಿದ್ಯಾವರ್ಧಕ ಪ್ರೌಢಶಾಲೆ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವವು ನೆ... ವಸ್ತು ಪ್ರದರ್ಶನದ ಕಟ್ಟಡದಲ್ಲಿ ನಡೆಯಿತು. ...ಧ್ಯಕ್ಷತೆ ವಹಿಸಬೇಕಾಗಿದ್ದ ವಿದ್ಯಾ ಮಂತ್ರಿ ಶ್ರೀ ... ಜಿ. ರಾಮಚಂದ್ರರಾಯರು ದೆಹಲಿಗೆ ಪ್ರಯಾಣ ಮಾಡಿದ ನಿಮಿತ್ತ, ಮುಖ್ಯ ಮಂತ್ರಿ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸಿದ್ದರು

ಶ್ರೀ ಮಂಜಪ್ಪನವರಿಗೆ ಭಾರತ ಸೇವಾ ದಳದ ...ದಳ ಗೌರವ ರಕ್ಷೆಯಿತ್ತನಂತರ ಸಭೆಯು ಆರಂಭವಾಯಿತು. ವಿಧಾನ ಸಭಾ ಸದಸ್ಯರೂ, ... ಸಮಿತಿಯ ಕಾರ್ಯದರ್ಶಿಯವರೂ ಆದ ಶ್ರೀ ಕೆ ಪುಟ್ಟಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು.

ಅಧ್ಯಕ್ಷರು ಭಾಷಣ ಮಾಡಿ, ಈಗಿನ ವಿದ್ಯಾರ್ಥಿಗಳಲ್ಲಿ ತಾವೇ ಪ್ರಾಜ್ಞರೆಂಬ ಭಾವನೆಯು ಮೂಡಿದೆಯೆಂದು ತಿಳಿಸಿದರು. ದೇಶದಲ್ಲಿ ...ತುರ್ತಾಗಿ ಮಾಡಬೇಕಾದ ಅನೇಕ ಕಾರ್ಯಗಳಿವೆಯೆಂದೂ, ಸ್ವಾತಂತ್ರ್ಯ ಬಂದು ಹಲವಾರು ವರ್ಷಗಳಾದರೂ, ಇನ್ನೂ ತೃಪ್ತಿಕರ ಪ್ರಗತಿ ಸಾಧನೆಯಾಗಿಲ್ಲವೆಂದೂ ತಿಳಿಸಿದರು. ವಿದ್ಯಾಭ್ಯಾಸವನ್ನು ವಿಸ್ತರಿಸಿದರೆ ಉತ್ತಮವೆಂಬ ಅಭಿಪ್ರಾಯದಿಂದ ಹೆಚ್ಚು ಶಾಲೆಗಳನ್ನು ತೆರೆಯಲಾಗುತ್ತಿದೆಯೆಂದೂ, ಆದರೆ ವಿದ್ಯಾವಂತರದೇ ಒಂದು ದೊಡ್ಡ ಸಮಸ್ಯೆಯಾಗಿರುವುದೆಂದೂ ತಿಳಿಸಿದರು. ಅವರಲ್ಲಿ ನಿರುದ್ಯೋಗವು ಹೆಚ್ಚಾಗಿರುವುದೂ, ಅದಕ್ಕೆ ಮುಖ್ಯವಾದ ಕಾರಣವೆಂದರೆ ವಿದ್ಯಾವಂತರಲ್ಲಿ ಯಾವ ಕೆಲಸಕ್ಕಾದರೂ ಸಿದ್ಧ ಎಂಬ ಮನೋಭಾವವು ಇಲ್ಲದಿರುವುದೇ ಆಗಿದೆ ಎಂದೂ ತಿಳಿಸಿದರು. ತಾವು ದನ ಕಾಯುವ ಕೆಲಸವನ್ನು ಮಾಡಿ ಈಗ ಮಂತ್ರಿಯ ಕೆಲಸವನ್ನು ನಿರ್ವಹಿಸುತ್ತಿರುವುದಾಗಿ ಹೇಳಿದರು. ಆದ್ದರಿಂದ ವಿದ್ಯಾರ್ಥಿಗಳಲ್ಲಿ ಯಾವ ಕೆಲಸವನ್ನಾದರೂ ಮಾಡುವ ಮನಸ್ಸನ್ನು ಬೆಳೆಯಬೇಕೆಂದು ಸೂಚಿಸಿದರು. ದೇಶದಲ್ಲಿ ಜನ ಸಂಖ್ಯೆಯು ಹೆಚ್ಚುತ್ತಿರುವುದೆಂದೂ, ಅದಕ್ಕೆ ತಕ್ಕಂತೆ ಉದ್ಯೋಗಗಳು ಕಲ್ಪಿತವಾಗಬೇಕಾಗಿರುವುದೆಂದೂ ಹೇಳಿ, ವಿದ್ಯಾರ್ಥಿಗಳು ತಮ್ಮಲ್ಲಿ ಸತ್ಯ, ಪ್ರಾಮಾಣಿಕತೆ, ನೀತಿವಂತಿಕೆಗಳನ್ನು ಬೆಳೆಸಿಕೊಳ್ಳಬೇಕೆಂದು ಸೂಚಿ...

ವಸ್ತು ಪ್ರದರ್ಶಕರ ಸಂಘ

...ದೇ ಅಕ್ಟೋಬರ್ ೫ರಿಂದ ೩೧ರವರೆಗೆ ನಡೆಯುವ ದಸರಾ ವಸ್ತು ಪ್ರದರ್ಶನದಲ್ಲಿ ಸ್ಟಾಲ್ ...ಲ್ದಾರುಗಳು ತಮಗೆ ಬೇಕಾಗುವ ಸೌಲಭ್ಯಗ... ವಾರ ಮುಂಚಿತವಾಗಿ ಮೇಲ್ಕಂಡವರಿಗೆ ತಮ್ಮ ಆವಶ್ಯಕತೆಗಳ ಬಗ್ಗೆ ಅರ್ಜಿ ...ಕೊಂಡರೆ ಸೂಕ್ತವಾದ ಸಹಾಯವನ್ನು ...ಲಾಗುವುದೆಂದು ಸಂಘದ ಕಾರ್ಯದರ್ಶಿ ಶ್ರೀ ...ಎಸ್. ಗುರುಮೂರ್ತಿಯವರು ತಿಳಿಸಿರು...

ಭದ್ರತಾ ಸಮಿತಿಗೆ ಸೂಯೆಜ್ ವಿವಾದ

ಬ್ರಿಟನ್ ಮತ್ತು ಫ್ರಾನ್ಸುಗಳ ಕ್ರಮ

ಸೂಯೆಜ್ ಕಾಲುವೆ ವಿವಾದವನ್ನು ಬ್ರಿಟನ್ ಮತ್ತು ಫ್ರಾನ್ಸುಗಳು ವಿಶ್ವಸಂಸ್ಥೆಯ ಭದ್ರತಾ ಸಮಿತಿಗೆ ಒಪ್ಪಿಸಿವೆ. ನಾಳಿದ್ದು ಈ ವಿಷಯವನ್ನು ಪರಿಶೀಲನೆಗೆ ತೆಗೆದುಕೊಳ್ಳಬೇಕೆಂದು ಸಮಿತಿಯ ಅಧ್ಯಕ್ಷರಿಗೆ ಸೂಚಿಸಲಾಗುವುದು. ಸೂಯೆಜ್ ಕಾಲುವೆ ಕಂಪೆನಿಯನ್ನು ಈಜಿಪ್ಟ್ ಸ್ವಾಧೀನ ಮಾಡಿರುವುದನ್ನು ಇಲ್ಲಿ ಚರ್ಚಿಸಲು ಕೋರಲಾಗಿದೆ. ಈಜಿಪ್ಟಿನ ಕ್ರಮದಿಂದ ಅಂತರ ರಾಷ್ಟ್ರೀಯ ಸಂಚಾರ ವ್ಯವಸ್ಥೆಯು ಕೆಟ್ಟಿದೆಯೆಂದೂ, ಇದರಿಂದಲೂ ಈ ವ್ಯವಸ್ಥೆಯು ಹಾಳಾಗಬಹುದೆಂದೂ ತಿಳಿಸಲಾಗಿದೆ.

ದೆಹಲಿಯಲ್ಲಿ ಗೂಢಚರ್ಯೆ ತಂಡದ ವರದಿಯ ನಿರಾಕರಣೆ

ದೆಹಲಿಯಲ್ಲಿ ಅಂತರ ರಾಷ್ಟ್ರೀಯ ಗೂಢಚಾರರ ಗುಂಪು ಇರುವುದೆಂಬ ವರದಿಗಳು ಉತ್ಪ್ರೇಕ್ಷಿತವೆಂದೂ, ಅವಕ್ಕೆ ಆಧಾರವಿಲ್ಲವೆಂದೂ ಭಾರತ ಸರ್ಕಾರದ ವಿದೇಶಾಂಗ ಇಲಾಖಾಧಿಕಾರಿಯೊಬ್ಬರು ತಿಳಿಸಿರುತ್ತಾರೆ.

ಬೊಲಿವಿಯಾ ಅಧ್ಯಕ್ಷರನ್ನು ಉರುಳಿಸಲು ಸಿತೂರಿ

ದಕ್ಷಿಣ ಅಮೆರಿಕದ ಬೊಲಿವಿಯಾ ರಾಜ್ಯದ ಅಧ್ಯಕ್ಷ ಹರ್ಮನ್ ಸೈಲ್ಸ್ ಜ್ವಾಜೊರವರ ಸರ್ಕಾರವನ್ನು ಉರುಳಿಸಲು ಅಲ್ಲಿನ ವಿರೋಧ ಪಕ್ಷ ಪ್ರಯತ್ನ ನಡೆಸಿರುವುದಾಗಿ ಸರ್ಕಾರದವರು ಆರೋಪಿಸಿದ್ದಾರೆ. ಈ ಸಂಬಂಧವಾಗಿ ಮೊನ್ನೆ ಅಲ್ಲಿ ಆದ ಗಲಭೆಗಳಲ್ಲಿ ಅನೇಕರು ಮಡಿದರು ಅಥವಾ ಗಾಯಗೊಂಡಿರುವುದಾಗಿ ಗೊತ್ತಾಗಿದೆ. ಅಲ್ಲಿನ ಫ್ಯಾಸಿಸ್ಟರು ಬುಡಮೇಲು ಚಳುವಳಿಯಲ್ಲಿ ತೊಡಗಿದ್ದುದಾಗಿ ಆಪಾದಿಸಲಾಗಿದೆ.

ವಿಶಾಲ ಮೈಸೂರಿನ ರಂಗಭೂಮಿ ಕಲಾವಿದರ ಕೇಂದ್ರ ಸಂಘದ ಸ್ಥಾಪನೆ

ಬೆಂಗಳೂರಿನ ಗುಬ್ಬಿ ಥಿಯೇಟರಿನಲ್ಲಿ ನೆನ್ನೆ ವಿಶಾಲ ಮೈಸೂರಿನ ರಂಗಭೂಮಿ ಕಲಾವಿದರ ಸಂಘದ ಆರಂಭ ಸಮಾರಂಭವು ಮಾಜಿ ನ್ಯಾಯಾಧೀಶ ಶ್ರೀ ಬಿ ವಾಸುದೇವಮೂರ್ತಿಯವರ ಅಧ್ಯಕ್ಷತೆಯಲ್ಲಿ ನೆರವೇರಿತು. ನಾಟಕರತ್ನ ಶ್ರೀ ಜಿ ಹೆಚ್. ವೀರಣ್ಣನವರು ಉದ್ಘಾಟನೆ ಮಾಡಿದರು. ವ್ಯವಸ್ಥಾಪಕರಾದ ಶ್ರೀ ಪಿ ಬಿ ಪೀತಾಂಬರರಾಯರು ಸಂಘದ ಉದ್ದೇಶಗಳನ್ನು ವಿವರಿಸಿದನಂತರ ಸಂಘದ ಕಾರ್ಯ ಚಟುವಟಿಕೆಗಳನ್ನು ವ್ಯವಸ್ಥೆಗೊಳಿಸುವ ಸಲುವಾಗಿ ಶ್ರೀ ಬಿ ವಾಸುದೇವಮೂರ್ತಿಯವರ ಅಧ್ಯಕ್ಷತೆಯಲ್ಲಿ ಶ್ರೀಗಳಾದ ಜಿ ಹೆಚ್ ವೀರಣ್ಣ, ಜಿ. ನಾಗೇಶರಾವ್, ಮೈಸೂರಿನ ನಾಟಕ ಅಸೋಸಿಯೇಷನ್ನಿನ ಕಾರ್ಯದರ್ಶಿ ಕೆ. ರಾಮಣ್ಣ, ಬೆಳ್ಳಾವೆ ನರಹರಿಶಾಸ್ತ್ರಿ, ಪರ್ವತವಾಣಿ, ಪಿ ಕಾಳಿಂಗರಾವ್ ಶ್ರೀಮತಿಯರುಗಳಾದ ಜಯಮ್ಮ, ಕುಂತಳಾದೇವಿ, ಸ್ವರ್ಣಮ್ಮ ಮುಂತಾದ ಇಪ್ಪತ್ತು ಮಂದಿಯ ಸಮಿತಿಯೊಂದನ್ನು ರಚಿಸಲಾಯಿತು. ಶ್ರೀ ಬಿ ಪಿ. ಪೀತಾಂಬರರಾಯರು ವ್ಯವಸ್ಥಾಪಕರಾಗಿರುತ್ತಾರೆ

ಮೈಸೂರಿಗೆ ಭಾರತದ ಶ್ರೇಷ್ಠ ನ್ಯಾಯಾಧೀಶರ ಭೇಟಿ

ಬೆಂಗಳೂರು ೨೪

ಭಾರತದ ಶ್ರೇಷ್ಠ ನ್ಯಾಯಾಧೀಶರಾದ ಎಸ್ ಆರ್ ದಾಸ್‌ರವರು ಬರುವ ತಿಂಗಳು ಪ್ರಥಮ ವಾರದಲ್ಲಿ ಸಂಸ್ಥಾನಗಳ ಹೈಕೋರ್ಟುಗಳಲ್ಲಿ ಪರಿಶೀಲನೆ ನಡೆಸುವರು. ಅವರು ಬೆಂಗಳೂರಿಗೆ ೧೧ನೇ ತಾರೀಖು ಆಗಮಿಸಿ, ೧೩ ಮತ್ತು ೧೪ನೇ ತಾರೀಖುಗಳಲ್ಲಿ ರಾಜಧಾನಿಯಲ್ಲಿ ನಡೆಯುವ ದಸರಾ ಉತ್ಸವಗಳಲ್ಲಿ ಭಾಗವಹಿಸುವರು

ಕಾಂಗ್ರೆಸ್ ಉಮೇದುವಾರರಿಂದ ನಿಷ್ಠೆಯ ಪ್ರತಿಜ್ಞೆ

ಬರುವ ಮಹಾ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನ ಪರವಾಗಿ ಆಯ್ಕೆಯಾಗದಿದ್ದರೆ, ಅಧಿಕೃತ ಉಮೇದುವಾರರ ವಿರುದ್ಧವಾಗಿ ತಾವು ಸ್ಪರ್ಧಿಸದೆ, ಅಂತವರಿಗೆ ಪೂರ್ಣ ಬೆಂಬಲ ಕೊಡುವುದಾಗಿ ಪ್ರಾರ್ಥಿಗಳಾಗಿಯೇ ಸಂಸ್ಥೆಯ ಟಿಕೆಟ್ಟನ್ನು ಬಯಸುವ ಕಾಂಗ್ರೆಸ್ ಸದಸ್ಯರು ಪ್ರತಿಜ್ಞೆಯನ್ನು ಮಾಡಬೇಕೆಂದು ಹೈಕಮಾಂಡಿನವರು ಸೂಚಿಸಿರುವರೆಂದು ವರದಿಯಾಗಿದೆ

ನಾಗಾ ದಂಗೆಕೋರರ ಶರಣಾಗತಿ

ಅಸ್ಸಾಮಿನ ಸೈನ್ಯಾಧಿಪತಿ ಕಾಚಾರ್‌ರವರ ಕಚೇರಿಯ ಪ್ರಕಾರ ದಕ್ಷಿಣ ಅಂಗಾಮಿ ಪ್ರದೇಶದಲ್ಲಿರುವ ಜಲಾಸೂ ಎಂಬ ಹಳ್ಳಿಯ ಜನರು ಮತ್ತು ದಂಗೆಕೋರ ನಾಗಾ ಗುಂಪಿನವರು ತಮ್ಮ ಶಸ್ತ್ರಾಸ್ತ್ರಗಳನ್ನು ಅಧಿಕಾರಿಗಳಿಗೆ ಒಪ್ಪಿಸಿದ್ದಾರೆ. ಶಸ್ತ್ರಾಸ್ತ್ರವನ್ನೊಪ್ಪಿಸಿದ ಜನರನ್ನು ಕ್ಷಮಿಸಿ ಬಿಡುಗಡೆ ಮಾಡಲಾಗಿದೆ.

ಬಾರ್ ಕೌನ್ಸಿಲ್ಲಿಗೆ ನಾಮಕರಣ

ಜಸ್ಟಿಸ್ ಶ್ರೀ ನಿಟ್ಟೂರ್ ಶ್ರೀನಿವಾಸರಾಯರು, ಬೆಂಗಳೂರು ಅಡ್ವೊಕೇಟುಗಳಾದ ಶ್ರೀ ಎ ಕೆ. ಗೋವಿಂದರಾಜುಲು ಮತ್ತು ಶ್ರೀ ಸಿ ಶ್ರೀನಿವಾಸಯ್ಯಂಗಾರ್ ಮತ್ತು ಚಿತ್ರದುರ್ಗದ ಅಡ್ವೊಕೇಟ್ ಶ್ರೀ ಬಿ ಮರುಳಪ್ಪನವರನ್ನು ಮೈಸೂರಿನ ಬಾರ್ ಕೌನ್ಸಿಲ್ಲಿನ ಸದಸ್ಯರಾಗಿ ಹೈಕೋರ್ಟಿನವರು ನಾಮಕರಣ ಮಾಡಿರುತ್ತಾರೆ.

LATEST NEWS

ಇದೇ ಕಡೆಯ ಜಂಬೂಸವಾರಿ

ಪ್ರಂ.ಸು. ತಂತಿ] ಬೆಂಗಳೂರು ೨೪

ಈ ಸಾರಿ ನಡೆಯುವ ದಸರಾ ಜಂಬೂಸವಾರಿಯೇ ಕಡೆಯದೆಂದು ತಿಳಿದುಬಂದಿದೆ

○ ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯಲ್ಲಿ ಈ ದಿನ ಬಳ್ಳಾರಿ ಡೆಪ್ಯುಟಿ ಜೈಲರ್ ಶ್ರೀ ರಾಮಯ್ಯನಾಯ್ಡರವರೂ ಸೇರಿ ನಾಲ್ಕು ಜನರ ಸಾಕ್ಷ್ಯಗಳಾದುವು

ಆಯುರ್ವೇದ ಕಾಲೇಜು ವರ್ಗಾವಣೆ ?

ಆರೋಗ್ಯ ಮಂತ್ರಿ ಶ್ರೀ ಟಿ ಚನ್ನಯ್ಯನವರು ಮೈಸೂರು ಆಯುರ್ವೇದ ಕಾಲೇಜಿನ ವರ್ಗಾವಣೆ ಬಗ್ಗೆ ಭಿನ್ನಾಭಿಪ್ರಾಯವಿದೆ ಎಂದೂ, ಆ ಬಗ್ಗೆ ಮಂಡ್ಯದ ಸ್ವಾಮಿ ಶ್ರೀ ಶ್ರೀನಿವಾಸಮೂರ್ತಿಯವರೂ ತಮ್ಮ ಅಭಿಪ್ರಾಯವನ್ನಿತ್ತಿರುವರೆಂದೂ, ಬೆಂಗಳೂರಿಗೆ ಕಾಲೇಜನ್ನು ವರ್ಗಾಯಿಸುವ ವಿಷಯವು ಪರಿಶೀಲನೆಯಲ್ಲಿರುವುದೆಂದೂ ಈ ದಿನ ವಿಧಾನ ಸಭೆಯಲ್ಲಿ ತಿಳಿಸಿದರು

ಪಾಕಿಸ್ತಾನಕ್ಕೆ ಭಾರತದ ಪ್ರತಿಭಟನೆ

ಭಾರತದ ಧ್ವಜಕ್ಕಾದ ಅವಮಾನದ ಪ್ರತಿಧ್ವನಿ

ಮಹೀಯ ಮುಜುಂಡರು ಎಂಬ ಪುಸ್ತಕದ ಪ್ರಕಟಣೆಯನ್ನು ಪ್ರತಿಭಟಿಸಲು ಕರಾಚಿಯಲ್ಲಿ ಇತ್ತೀಚೆಗೆ ಅಲ್ಲಿರುವ ಭಾರತದ ಹೈಕಮಿಷನರ ಕಛೇರಿ ಮತ್ತು ಕಛೇರಿ ಅಧಿಕಾರಿಗಳ ಮನೆ ಮುಂದೆ ನಡೆಸಿದ ಪುಂಡಾಟಕ್ಕಾಗಿ ಭಾರತ ಸರ್ಕಾರದವರು ಪಾಕಿಸ್ತಾನಕ್ಕೆ ಬಲವಾದ ಪ್ರತಿಭಟನೆಯನ್ನು ಸೂಚಿಸಿರುತ್ತಾರೆ. ಗಲಭೆಯಲ್ಲಿ ಭಾರತದ ಧ್ವಜವನ್ನು ಅವಮಾನಪಡಿಸಲಾಯಿತೆಂದೂ, ನೆಹರೂರವರ ಪ್ರತಿಮೆಯನ್ನು ಸುಡಲಾಯಿತೆಂದೂ, ಅಲ್ಲದೆ ಭಾರತದ ಅಧಿಕಾರಿಯೊಬ್ಬರ ಮನೆಗೆ ಬಲವಂತ ಪ್ರವೇಶದ ಪ್ರಯತ್ನವೂ ನಡೆದಿತ್ತೆಂದೂ ತಿಳಿಸಲಾಗಿದೆ.

ನಾಗಾ ದಂಗೆಕೋರರ ಕ್ರೌರ್ಯದಿಂದ ೧೦೦ ಮಂದಿಗೆ ಮೃತ್ಯು

ಅಸ್ಸಾಮಿನ ಗುಡ್ಡಗಾಡಿನ ಪ್ರದೇಶದಲ್ಲಿರುವ ಲುಂಗ್ ಕುಂ ಎಂಬ ಹಳ್ಳಿಯ ೧೦೦ ಮಂದಿ ಮುಖ್ಯವಾಗಿ ಹೆಂಗಸರು ಮಕ್ಕಳು ದಂಗೆಕೋರರ ದಬ್ಬಾಳಿಕೆಯ ಪರಿಣಾಮವಾಗಿ ಮೃತಪಟ್ಟಿರುವುದಾಗಿ ವರದಿಯಾಗಿದೆ. ಅನೇಕ ವರ್ಷಗಳ ದ್ವೇಷಕ್ಕಾಗಿ ದಂಗೆಕೋರರು ತಮ್ಮ ಸೇಡನ್ನು ತೀರಿಸಿಕೊಳ್ಳಲು ಊರನ್ನು ಆಕ್ರಮಿಸಿ, ಹಲವಾರು ಮನೆಗಳನ್ನೂ, ಧಾನ್ಯದ ಕಣಜಗಳನ್ನೂ ಸುಟ್ಟು ಹಾಕಿ ಬೆಲೆಯುಳ್ಳ ಪದಾರ್ಥಗಳನ್ನು ಲೂಟಿಮಾಡಿರುವರಲ್ಲದೆ, ಹಳ್ಳಿಯವರಿಗೆ ಆಹಾರ ಮತ್ತು ನೀರು ದೊರೆಯದಂತೆ ಮಾಡಿದರು. ಊರಿನ ಜನರು ಅವರ ಹಾವಳಿಯನ್ನು ತಡೆಯಲಾರದೆ ಕಾಡಿಗೆ ಹೋಗಿ ಅನ್ನವಿಲ್ಲದೆ ಮೃತಪಟ್ಟುದಾಗಿ ಗೊತ್ತಾಗಿದೆ

ಮೈಸೂರು ಜಿಲ್ಲಾ ಕೊಕ್ಕೊ ಮತ್ತು ಕಬಡಿ ಸಂಘ

ಕೊಕ್ಕೊ ಮತ್ತು ಕಬಡ್ಡಿ ಕ್ರೀಡಾಭಿಮಾನಿಗಳ ಸಭೆಯೊಂದು ಮೊನ್ನೆ ನಗರದಲ್ಲಿ ನಡೆದು, ಜಿಲ್ಲಾ ಸಂಘವೊಂದನ್ನು ಸ್ಥಾಪಿಸಲು ನಿರ್ಧರಿಸಿ, ಅದಕ್ಕೆ ಕೆಳಕಂಡ ಅಧಿಕಾರ ವರ್ಗವನ್ನು ಆರಿಸಲಾಯಿತು :—ಡಾ॥ ಕೆ. ಎಂ. ವೆಂಕಟರಾಮಯ್ಯ—ಅಧ್ಯಕ್ಷರು; ಶ್ರೀಗಳಾದ ಎಲ್. ನರಸಪ್ಪ ಮತ್ತು ಎಂ. ಎಸ್. ರಾಮಸ್ವಾಮಿ ಉಪಾಧ್ಯಕ್ಷರು; ಶ್ರೀಗಳಾದ ಎಂ. ಎಂ. ಶ್ರೀನಿವಾಸಶೆಟ್ಟಿ ಮತ್ತು ಲಕ್ಷ್ಮೀನಾರಾಯಣಪ್ಪ-ಕಾರ್ಯದರ್ಶಿಗಳು, ಶ್ರೀಗಳಾದ ವೀರರಾಜೇ ಅರಸು, ಬಿ ಎಂ. ಶಂಕರನಾರಾಯಣ, ಬಿ ಎಲ್ ರಾಮಸ್ವಾಮಿ ಮತ್ತು ಡಿ ಎಂ. ದೇವರಾಜಮೂರ್ತಿ-ವೈಯಕ್ತಿಕ ಸದಸ್ಯರು ಮತ್ತು ಮಹಾರಾಜಾ ಕಾಲೇಜು, ಯುವರಾಜಾ ಕಾಲೇಜು, ಸಿ. ಪಿ. ಸಿ ವೃತ್ತಿ ಶಿಕ್ಷಣ ಶಾಲೆ, ನ್ಯಾಷನಲ್ ಇನ್ಸ್ಟಿಟ್ಯೂಟ್ ಆಫ್ ಇಂಜನಿಯರಿಂಗ್, ಪಯನಿಯರ್ಸ್ ಕ್ಲಬ್ ಮತ್ತು ನ್ಯಾಷನಲ್ ಎಂಗ್ಲೆಟರ್ಸ್ ಕ್ಲಬ್‌ಗಳು ಟೀಮು ಸದಸ್ಯರು. ಎಲ್ಲಾ ಟೀಮುಗಳವರೂ ೩೦ನೇ ತಾರೀಖಿನೊಳಗೆ ಅಡ್ಮಿಷನ್ ಮತ್ತು ಅಫಿಲಿಯೇಷನ್ ಬಾಬ್ತು ೫ ರೂ. ಶುಲ್ಕವನ್ನು ಕಳುಹಿಸಬೇಕೆಂದು ಕೋರಲಾಯಿತು.

ರೋಗಗಳನ್ನು ಗುಣಪಡಿಸು ವುದರಲ್ಲಿ ವೈದ್ಯರ ಪಾತ್ರ

ಮುಖ್ಯ ಮಂತ್ರಿ ಕಡಿದಾಳ್ ಮಂಜಪ್ಪನವರ ಭಾಷಣ

ಮೈಸೂರು ೨೪

ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ನಿನ್ನೆ ಇಲ್ಲಿನ ಮೆಡಿಕಲ್ ಕಾಲೇಜಿನ ಸಂಘದ ವಾರ್ಷಿಕ ಸಮಾರಂಭದ ಅಧ್ಯಕ್ಷತೆಯನ್ನು ವಹಿಸಿದ್ದರು. ಅವರು ಭಾಷಣ ಮಾಡಿ, ವಿದ್ಯಾರ್ಥಿಗಳ ನಿಜವಾದ ಜೀವನವು ಕಾಲೇಜುಗಳನ್ನು ಬಿಟ್ಟನಂತರ ಆರಂಭವಾಗುವುದೆಂದೂ ಹೊರಗಿನ ಪರಿಸ್ಥಿತಿಯಲ್ಲಿ ಅವರು ಉತ್ತೀರ್ಣರಾಗಬೇಕೆಂದೂ ತಿಳಿಸಿದರು.

ಪ್ರಾರ್ಥನೆಯಾದನಂತರ, ಕಾಲೇಜಿನ ಪ್ರಿನ್ಸಿಪಾಲ್ ಶ್ರೀ ವೈ. ಅಪ್ಪಾಜಿಯವರು ಸ್ವಾಗತ ಭಾಷಣ ಮಾಡಿ ಇಡೀ ಭಾರತಕ್ಕೆ ಒಂದೇ ವಿಧವಾದ ವೈದ್ಯ ಪದ್ಧತಿಯಿರಬೇಕೆಂದು ಸಲಹೆ ಮಾಡಿದರು. ಪ್ರಪಂಚದಲ್ಲಿ ನಾನಾ ವಿಧವಾದ ವೈದ್ಯ ಪದ್ಧತಿಗಳಿವೆಯೆಂದೂ ತಿಳಿಸಿದರು. ಕಾರ್ಯದರ್ಶಿಯವರ ವರದಿ ಮಾಡಿದನಂತರ ಕನ್ನಡ ಮತ್ತು ... ಆಕರ್ಷಣೀಯ ವಾಚನಗಳಾದುವು.

ಮುಖ್ಯಮಂತ್ರಿಯವರು ತಮ್ಮ ಭಾಷಣದಲ್ಲಿ ವೈದ್ಯರು ಮತ್ತು ವಕೀಲರ ಉದ್ಯೋಗಗಳು ಅತ್ಯಂತ ಘನತರವಾದುವೆಂದೂ, ವೈದ್ಯರು ರೋಗಗಳನ್ನು ಗುಣಪಡಿಸುವರೆ ವಕೀಲರು ಸಮಾಜದ ರೋಗಗಳನ್ನು ಪರಿಹರಿಸುವರೆಂದು ತಿಳಿಸಿದರು. ಉಭಯರೂ ಸಾರ್ವಜನಿಕ ಜೀವನದ ಮೇಲೆ ಹೆಚ್ಚು ಪ್ರಭಾವ ಹೊಂದಿರುವರೆಂದು ಅವರು ಅಭಿಪ್ರಾಯಪಟ್ಟರು.

ವೈದ್ಯರುಗಳು ವಸ್ತ್ರ ವೈದ್ಯ ಪದ್ಧತಿಯು ಪ... ಹೊಸ ವಾಕ್ಸಿನಿಗಿಂತ ಹಳೇ ರೋಗ... ... ... ವೈದ್ಯರುಗಳು ರೋಗಗಳನ್ನು ... ... ತಮಗೆ ಗೊತ್ತಿರುವುದು ... ಅವರು ಹೇಳಿದರು.

... ... ಒಂದೇ ಆದರೂ ಅದರಲ್ಲಿ ... ಮಾರ್ಗಗಳಿವೆಯೆಂದು ಸೂಚಿಸಿ ... ... ರೋಗಗಳನ್ನು ಗುಣಪಡಿಸಲು ಪ್ರಯತ್ನಿಸಬೇಕೆಂದೂ ಅಭಿಪ್ರಾಯಪಟ್ಟರು.

ಸರ್ಕಾರದವರು ಈಗ ನಾನಾ ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಬೇಕಾಗಿರುವುದೆಂದೂ, ಕಡ್ಡಾಯದ ಪ್ರಾಥಮಿಕ ಶಿಕ್ಷಣ, ಆಹಾರ ಮತ್ತು ಬಟ್ಟೆ ಸಮಸ್ಯೆಗಳನ್ನು ನಿವಾರಿಸಬೇಕಾಗಿರುವುದೆಂದೂ, ಇದರಲ್ಲಿ ಸರ್ಕಾರದವರು ತಮಗೆ ಸಾಧ್ಯವಾದುದೆಲ್ಲವನ್ನೂ ಮಾಡುವುದಾಗಿಯೂ ತಿಳಿಸಿದರು.

ಇಲ್ಲಿನ ಆಯುರ್ವೇದ ಕಾಲೇಜು ವಿದ್ಯಾರ್ಥಿಗಳು ಮುಷ್ಕರ ಹೂಡಿರುವುದನ್ನು ಪ್ರಸ್ತಾಪಿಸಿ ಸತ್ಯಾಗ್ರಹ, ಉಪವಾಸ ಮುಂತಾದ ಉತ್ತಮ ಸಾಧನಗಳನ್ನು ಹಿಂದೆ ಒಳ್ಳೆಯ ಉದ್ದೇಶಗಳಿಗಾಗಿ ಉಪಯೋಗಿಸಲಾಗುತ್ತಿತ್ತೆಂದೂ, ಈಗ ಅದು ಸರ್ವಸಾಮಾನ್ಯವಾಗಿ ಬಿಟ್ಟಿದೆಯೆಂದೂ, ಇದೇ ರೀತಿ ಬೆಳೆದರೆ ಮುಂದೆ ಮನೆಗಳಲ್ಲಿ ಗೃಹಿಣಿಯರೂ ಸಹ ಈ ಅಸ್ತ್ರ ಪ್ರಯೋಗ ಮಾಡಬಹುದೆಂದು ತಿಳಿಸಿದರು. ಈ ಪ್ರಗತಿ ಸಾಧನೆಗೆ ಶ್ರಮ ಬದ್ಧವಾಗಿ ನಡೆಯುವುದೇ ಉತ್ತಮ ಮಾರ್ಗವೆಂದು ಸೂಚಿಸಿದರು.

... ... ಸ್ಥಾನದ ವಿಚಾರವನ್ನು ಪ್ರಸ್ತಾಪಿಸಿ, ... ಸಂಸ್ಥಾನದ ಕಡೆಯ ... ... ಸರ್ಕಾರದವರು ಹೊಸ ... ... ಎದುರಿಸಬೇಕಾಗಿದೆಯೆಂದು ನುಡಿದರು.

... ... ವಂದನಾರ್ಪಣೆ ... ...

ಅಖಿಲ ಭಾರತ ಜನಸಂಘದ ಅಧ್ಯಕ್ಷರ ಬಿಡುಗಡೆ

ಅಖಿಲ ಭಾರತ ಜನಸಂಘದ ಅಧ್ಯಕ್ಷರಾದ ... ... ನಿನ್ನೆ ... ... ಬಿಡುಗಡೆ ಮಾಡಲಾಯಿತು.

ಅನಾಥಾಲಯದವರುಗಳ ಸಭೆ

ಮೈಸೂರು ೨೪

ಇದೇ ಅಕ್ಟೋಬರ್ ೨ರಿಂದ ಸರ್ಕಾರದವರು ಜೋಡಿ ಗ್ರಾಮಗಳನ್ನು ತಮ್ಮ ವಶಕ್ಕೆ ತೆಗೆದು ಕೊಳ್ಳುವ ವಿಷಯವನ್ನು ಕುರಿತು ಚರ್ಚಿಸಲು ಈ ತಿಂಗಳು ೩೦ನೇ ತಾರೀಕು ಭಾನುವಾರ ಸಂಜೆ ೬ ಗಂಟೆಗೆ ನಗರದಲ್ಲಿರುವ ಗಂಧನಹಳ್ಳಿ ... ಗೌಡರ ಶ್ರೀ ಕೃಷ್ಣರಾಯರ ಮನೆಯಲ್ಲಿ ಇನಾಂದಾರರ ಸಭೆಯು ಸೇರುವುದು. ಪ್ರತ್ಯೇಕ ಆಹ್ವಾನಗಳನ್ನು ಕಳುಹಿಸಲು ಸಾಧ್ಯವಿಲ್ಲದುದರಿಂದ ಇನಾಂದಾರ್ ಸಂಘದ ಸದಸ್ಯರು ಸಭೆಗೆ ಬರುವಂತೆ ಸಮಿತಿ ಸದಸ್ಯರಾದ ಶ್ರೀ ಪಿ ವೆಂಕಟಸುಬ್ಬಯ್ಯನವರು ಪ್ರಾರ್ಥಿಸಿದ್ದಾರೆ. ಜೋಡಿ ಗ್ರಾಮಗಳನ್ನು ತಮ್ಮ ವಶಕ್ಕೆ ತೆಗೆದು ಕೊಳ್ಳುವ ಮುಂಚೆ ತಕ್ಕಷ್ಟು ಕಾಲಾವಕಾಶ ಕೊಟ್ಟಿಲ್ಲವೆಂದೂ, ಅಕ್ಟೋಬರ್ ೨ನೇ ತಾರೀಕು ಅಶುಭ ಪಕ್ಷದ ಮಂಗಳವಾರವಾದುದರಿಂದ ಅಪ್ರಶಸ್ತ ದಿನವೆಂದೂ ಅವರು ಅಭಿಪ್ರಾಯಪಟ್ಟಿರುತ್ತಾರೆ.

ಸಮಾಜವಾದಿ ಪಕ್ಷದ ಸಭೆ

ಸಮಾಜವಾದಿ ಪಕ್ಷದ ನಗರ ಶಾಖಾ ಸಮಿತಿಯ ಕಾರ್ಯಕಾರಿ ಸಮಿತಿ ಸಭೆಯು ನೆನ್ನೆ ಶ್ರೀ ಕೆ ಎಸ್ ಸೋಮಸುಂದರಂರವರ ಅಧ್ಯಕ್ಷತೆಯಲ್ಲಿ ನಡೆಯಿತು. ನಗರದ ನಾನಾ ಸೊಸೈಟಿಗಳು ಮತ್ತು ಸಂಘಗಳವರು ಅಕ್ಕಿ ವ್ಯಾಪಾರವನ್ನು ಕೈಗೊಂಡಿದ್ದರೂ ಸಾರ್ವಜನಿಕರಿಗೆ ಸರಿಯಾಗಿ ಸುಲಭ ಬೆಲೆಯಲ್ಲಿ ಧಾನ್ಯವು ಸಿಗುತ್ತಿಲ್ಲವೆಂದೂ, ಆದ್ದರಿಂದ ನಗರದ ಎಲ್ಲಾ ವಾರ್ಡುಗಳಲ್ಲೂ ಅಕ್ಕಿಯನ್ನು ಒದಗಿಸುವಂತೆ ಪುರಸಭೆಯವರು ಏರ್ಪಡಿಸಬೇಕೆಂದೂ ಕೋರುವ ನಿರ್ಣಯ ಮಾಡಲಾಯಿತು. ವರ್ತಕರು ಮುಚ್ಚಿಟ್ಟಿರುವ ಆಹಾರ ದಾಸ್ತಾನನ್ನು ಹೊರಗೆ ತರುವಂತೆ ಮಾಡಬೇಕೆಂದೂ ಬ್ಯಾಂಕಿನವರು ಆಹಾರ ದಾಸ್ತಾನುದಾರರಿಗೆ ಕೊಟ್ಟಿರುವ ಮುಂಗಡ ಹಣವನ್ನು ವಾಪಸು ತೆಗೆದುಕೊಳ್ಳುವ ಬಗ್ಗೆ ಸರ್ಕಾರದವರ ಜಾರಿ ... ... ಜಾರಿಗೊಳಿಸಬೇಕೆಂದೂ ಸಮಿತಿಯು ಒತ್ತಾಯಪಡಿಸಿದೆ.

ಪಕ್ಷದ ಶಾಖೆಯಲ್ಲಿ ಇಬ್ಬರು ಕಾರ್ಯದರ್ಶಿಗಳಿರಬೇಕೆಂದು ನಿರ್ಧರಿಸಿ, ಶ್ರೀ ... ವಿಶ್ವನಾಥ್ ಮತ್ತು ಶ್ರೀ ಟಿ ವಿ ಶ್ರೀನಿವಾಸರಾಯರನ್ನು ಆ ಸ್ಥಾನಗಳಿಗೆ ನೇಮಿಸಲಾಯಿತು. ಮೈಸೂರು ನಗರವು ನೂತನ ಸಂಸ್ಥಾನದ ... ... ಕೇಂದ್ರವಾಗುವುದನ್ನು ಸಭೆಯು ಸ್ವಾಗತಿಸಿತು.

ಭಾರತಕ್ಕೆ ಇಥಿಯೋಪಿಯಾ ಚಕ್ರವರ್ತಿಯ ಭೇಟಿ

ಇಥಿಯೋಪಿಯಾದೇಶದ ಚಕ್ರವರ್ತಿ ಹೇಲಿ ಸೆಲಾಸಿಯವರು ಬರುವ ತಿಂಗಳು ೨೭ರಿಂದು ಭಾರತಕ್ಕೆ ... ನವೆಂಬರ್ ೧೭ರವರೆಗೆ ಇಲ್ಲಿ ಪ್ರವಾಸ ಕೈಗೊಳ್ಳುವರು. ಅವರು ನವೆಂಬರ್ ೨ ಮತ್ತು ೩ನೇ ತಾರೀಕು ಬೆಂಗಳೂರು ಮತ್ತು ಮೈಸೂರುಗಳಿಗೂ ಭೇಟಿಯೀಯುವರು. ಬೆಂಗಳೂರಿನಲ್ಲಿ ಹಿಂದೂಸ್ಥಾನ ವಿಮಾನ ಕಾರ್ಖಾನೆ, ಭಾರತ ವಿಜ್ಞಾನ ಮಂದಿರ ಮತ್ತು ಟೆಲಿಫೋನ್ ಕಾರ್ಖಾನೆಗಳಿಗೂ, ಮೈಸೂರಿನಲ್ಲಿ ಗಂಧದೆಣ್ಣೆ ಕಾರ್ಖಾನೆಗೂ ಅವರು ಭೇಟಿಯೀಯುವರು. ಕೃಷ್ಣರಾಜಸಾಗರವನ್ನೂ ಅವರು ಸಂದರ್ಶಿಸುವರು.

ಚಿರತೆಖಾನೆ ಗರಡಿ ಸಮಾರಂಭ

ಲಷ್ಕರ್ ಮೊಹಲ್ಲಾದಲ್ಲಿರುವ ಹಕೀಂ ಜನರ ಚಿರತೆಖಾನೆ ಗರಡಿಯಲ್ಲಿ ಕಳೆದ ಗುರುವಾರ ಸಮಾರಂಭವೊಂದು ಪೌರಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರ ಅಧ್ಯಕ್ಷತೆಯಲ್ಲಿ ಜರುಗಿತು. ಲೇಟ್ ವೆಂಕಟರಮಣಯ್ಯನವರ ಮಕ್ಕಳಾದ ಶ್ರೀ ವಿ. ಗರಿಯಪ್ಪನವರಿಗೆ ಉಸ್ತಾದ್ ಗರಿಯನ್ನೂ, ಶ್ರೀ ... ಯ್ಯನವರ ಮಕ್ಕಳಾದ ಶ್ರೀ ಜಿ ಜವರಪ್ಪನವರಿಗೆ ಖಲೀಫ್ ಗರಿಯನ್ನೂ ಕೊಡಲಾಯಿತು. ಪ್ರಾರಂಭದಲ್ಲಿ ಪೌರಸಭಾ ಸದಸ್ಯ ಶ್ರೀ ಎಂ. ಕೆ. ಲಿಂಗಯ್ಯನವರು ಭಾಷಣ ಮಾಡಿದರು. ಶ್ರೀ ಗರಿಯಪ್ಪ ಮತ್ತು ಜವರಪ್ಪನವರಿಗೆ ವಿವಿಧ ಗರಡಿಗಳವರು ಹೂ ಮಾಲಿಕೆಗಳನ್ನು ಹಾಕಿದರು. ಶ್ರೀ ಎಂ ಎಸ್ ತಿಮ್ಮಯ್ಯನವರು ವಂದನಾರ್ಪಣೆ ಮಾಡಿದರು.

ಮಧ್ಯ ಅಮೆರಿಕಾ ರಾಷ್ಟ್ರದ ಅಧ್ಯಕ್ಷರ ಮೇಲೆ ಗುಂಡಿನೇಟು

ಮಧ್ಯ ಅಮೆರಿಕಾ ಖಂಡದ ನಿಕರಾಗುವ ದೇಶದ ಅಧ್ಯಕ್ಷ ಅನಸ್ಟಾಸಿಯೋ ಸೊಮೊಜಾರವರ ಮೇಲೆ ಯಾರೋ ನಾಲ್ಕು ಬಾರಿ ಗುಂಡು ಹಾರಿಸಿರುವುದಾಗಿ ಅಮೆರಿಕಾ ಅಧ್ಯಕ್ಷ ಐಸೆನ್‌ಹೋವರರಿಗೆ ಅಲ್ಲಿರುವ ಅಮೆರಿಕಾ ರಾಯಭಾರಿಯು ತಿಳಿಸಿರುತ್ತಾರೆ.

ಇಂಗ್ಲಿಷ್ ಚಿತ್ರದಲ್ಲಿ ವೈಜಯಂತಿಮಾಲಾ ಅಭಿನಯ

ಸುಪ್ರಸಿದ್ಧ ತಮಿಳು ಮತ್ತು ಹಿಂದಿ ಚಲನ ಚಿತ್ರ ನಟಿಯಾದ ಮದ್ರಾಸಿನ ವೈಜಯಂತಿಮಾಲಾರವರು ಇಂಗ್ಲಿಷು ಮತ್ತು ಹಿಂದಿಯಲ್ಲಿ ತಯಾರಾಗುವ ರಾಜಭಕ್ತಿ ಮತ್ತು ತೀಫ್ ಆಫ್ ಬಾಗ್‌ದಾದ್ ಎಂಬ ಚಿತ್ರಗಳಲ್ಲಿ ಪಾತ್ರ ವಹಿಸುವರು.

ಕಬೀರ್ ರಸ್ತೆಯ ಶ್ರೀರಾಮ ಮಂದಿರದ ಧರ್ಮದರ್ಶಿಗಳು

ಮಂಡಿ ಮೊಹಲ್ಲಾ ಎರಡನೇ ಕುದಿಗಾ ಕಬೀರ್ ರಸ್ತೆಯಲ್ಲಿರುವ ಶ್ರೀರಾಮ ಮಂದಿರದ ಮೇಲ್ವಿಚಾರಣೆಗಾಗಿ ಧರ್ಮದರ್ಶಿಗಳ ಸಮಿತಿಯೊಂದನ್ನು ರಚಿಸಿ ರಿಜಿಸ್ಟರ್ ಮಾಡಲಾಗಿದೆ. ಅದರಲ್ಲಿ ಕೆಳಗೆ ಕಂಡ ಮಹನೀಯರು ಇದ್ದಾರೆ —ಶ್ರೀಗಳಾದ ಎ ಜಿ ನಾಗಪ್ಪ—ಅಧ್ಯಕ್ಷರು, ಎಂ ಜಿ ಪುಟ್ಟರಾಜಪ್ಪ—ಕಾರ್ಯದರ್ಶಿ, ಬಿ ಬೋರಯ್ಯ, ಟಿ ಎಲ್ ಎಸ್ ಉಪಾಧ್ಯಾಯ, ಎಸ್ ಪಿ ಶೇರ್, ಜಿ ಗಂಗಪ್ಪ, ಮಹಮದ್ ಯೂಸೂಫ್ ಸಾಹೇಬ್, ಎಂ ಲಕ್ಷ್ಮಣರಾವ್, ಬಿ ಕೆ ಪುಟ್ಟರಾಜು, ಆರ್ ಕೆಂಚೇಗೌಡ, ಟಿ ರಂಗಯ್ಯ, ಎಸ್ ಅಣ್ಣಯ್ಯ, ಆರ್ ಮಾದಪ್ಪಶೆಟ್ಟಿ, ಕಮಲ್‌ದಾಸ್, ಪುಟ್ಟರಾಜು ಮತ್ತು ಪುಟ್ಟಸ್ವಾಮಿನವರು.

ಸಂಗೀತ

ಗಣಪತಿ ಮಂಗಳಾರತಿ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಮಹಾರಾಜಾ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಆ|| ವಿ|| ಬಿ ಎಂ ಶಿವಪ್ಪನವರ ಸಂಗೀತವು ಆ||ವಿ ಎಚ್ ವಿ ರಾಮರಾಯರ ಪಿಟೀಲು ಮತ್ತು ವಿ|| ಡಿ ಚಂದ್ರಶೇಖರಯ್ಯನವರ ಮೃದಂಗದೊಡನೆ ನಡೆಯುವುದು.

ಕಾಂಗ್ರೆಸ್ ಪ್ರಾಥಮಿಕ ಸದಸ್ಯತನ

ಕಾಂಗ್ರೆಸ್ ಸಂಸ್ಥೆಗೆ ಪ್ರಾಥಮಿಕ ಸದಸ್ಯರನ್ನು ಸೇರಿಸಲು ಇದೇ ಅಕ್ಟೋಬರ್ ೨ನೇ ತಾರೀಕು ಕಡೆಯ ದಿನವಾಗಿರುವುದೆಂದೂ, ಆದ್ದರಿಂದ ಕಾಂಗ್ರೆಸ್ಸಿನ ಪ್ರಾಥಮಿಕ ಮತ್ತು ಸಕ್ರಿಯಾ ಸದಸ್ಯರಾಗುವವರು ಈ ತಿಂಗಳು ೩೦ರೊಳಗೆ ಸೇರಬೇಕೆಂದೂ ಚಾಮುಂಡಿಪುರಂ ನಗರ ಕಾಲ್ಲೂಕಿನ ಕಾಂಗ್ರೆಸ್ ಸಮಿತಿ ಕಾರ್ಯದರ್ಶಿಯವರು ತಿಳಿಸಿರುತ್ತಾರೆ. ಸದರಿ ಸಮಿತಿಯ ಸಭೆಯು ಇದೇ ೨೯ನೇ ತಾರೀಕು ಶನಿವಾರ ಮಧ್ಯಾಹ್ನ ೩ ಗಂಟೆಗೆ ಸೇರುವುದು.

ಅಖಿಲ ಮೈಸೂರು ಹಿಂದಿ ಚರ್ಚಾ ಸ್ಪರ್ಧೆ

... ದಲ್ಲಿರುವ ಹಿಂದಿ ಪ್ರಚಾರ ಸಭೆಯವರು ಹಿಂದಿ ಭಾಷೆಯಲ್ಲಿ ವಿದ್ಯಾರ್ಥಿಗಳ ವಾಕ್‌ಶಕ್ತಿ ಪ್ರೋತ್ಸಾಹ ಕೊಡುವ ಉದ್ದೇಶದಿಂದ ಇದೇ ತಿಂಗಳು ೩೦ರಂದು ಅಖಿಲ ಮೈಸೂರು ಹಿಂದಿ ಚರ್ಚಾ ಸ್ಪರ್ಧೆಯನ್ನು ಏರ್ಪಡಿಸಿದ್ದಾರೆ. ಜೂನಿಯರ್ ಸ್ಪರ್ಧೆಯು ಬೆಳಗ್ಗೆ ... ಗಂಟೆಗೂ, ಸೀನಿಯರ್ ಸ್ಪರ್ಧೆಯು ಮಧ್ಯಾಹ್ನ ೪ ಗಂಟೆಗೂ ನಡೆಯುವುದು. ಶ್ರೀ ಎಂ ಆರ್ ಸಿ ಬಸಪ್ಪನವರು ಒಂದು ನಿರಂತರ ಪರ್ಯಾಯ ಫಲಕವನ್ನು ಸೀನಿಯರ್ ಸ್ಪರ್ಧೆಗೂ, ಮಹಾರಾಜಾ ಕಾಲೇಜಿನ ತೆಲುಗು ಅ|| ಪ್ರೊ|| ಶ್ರೀ ಕೆ ಸುಬ್ಬರಾಮಪ್ಪನವರು ಮತ್ತೊಂದು ಫಲಕವನ್ನು ಜೂನಿಯರ್ ಸ್ಪರ್ಧೆಗೂ ಕೊಟ್ಟಿರುತ್ತಾರೆ.

"ಸುಖ—ಶಾಂತಿ"

ಮೈಸೂರು ವಿಶ್ವವಿದ್ಯಾಲಯದ ನಿವೃತ್ತ ಸಂಸ್ಕೃತ ಅಧ್ಯಾಪಕರಾದ ಶ್ರೀ ಆರ್ ಎಸ್. ಸೂರ್ಯನಾರಾಯಣಶರ್ಮರವರು ಮೇಲ್ಕಂಡ ಶಿರೋನಾಮೆಯಲ್ಲಿ ಪ್ರಕಟಿಸಿರುವ ಗ್ರಂಥವು ನಮ್ಮ ಹಸ್ತಗತವಾಗಿದೆ. ಅದರಲ್ಲಿ ಮಾನವ ಸುಖಶಾಂತಿ ಬಗ್ಗೆ ಸುಲಭ ಶೈಲಿಯಲ್ಲಿ ಗಹನವಾದ ವಿಚಾರಗಳನ್ನು ತಿಳಿಸಲಾಗಿದೆ. ಇದು ಗ್ರಂಥಕರ್ತರು ಪ್ರಕಟಿಸುತ್ತಿರುವ ಪ್ರಜಾ ಸಾಮ್ರಾಜ್ಯ ಮಾಲಿಕೆಯ ೩ನೇ ಪುಷ್ಪ. ಶ್ರೀರಾಂಪೇಟೆಯ ... ನೇ ನಂಬರು ಬಸ್ಸಪ್ಪನವರ ಅಗ್ರಹಾರದಲ್ಲಿ ಗ್ರಂಥವು ದೊರೆಯುವುದು.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ... ಕ್ಲಾರಿಯೊನೆಟ್ ... ಕಮಲಾ ಜಗನ್ನಾಥ ಗೀತಾವಳಿ ... ... ಸಂಗೀತ ... ... ಪಿಟೀಲು ... ... ಕ್ಲಾರಿಯೊನೆಟ್ ... ... ಲೇಗಾಗಿ ಸಂಜೆ ... ... ಕೇಶವಮೂರ್ತಿ—ಸಂಗೀತ ... ಎ. ಎಸ್ ಮಂಜುನಾಥಯ್ಯ ಕಾವ್ಯ ವಾಚನ ... ವಿಜ್ಞಾನದ ಮುನ್ನೋಟ ... ಜೀವನದ ವಿನೋದ ... ... ಅಯ್ಯರ್—ಸಂಗೀತ ... ಟಿ ಚೌಡಯ್ಯ—ಪಿಟೀಲು ... ಚಿತ್ರ ಸಂಗೀತ ... ಉರ್ದು ಗೀತೆ

ಹಾಸಿಗೆ - ದಿಂಬು

ಮಿತವ್ಯಯದಲ್ಲಿ ಹತ್ತಿ ದಿಂಬು ತಯಾರು ಮಾಡುತ್ತೇವೆ

ಬಾಹುಸಾರ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

Edited, Printed and Published by ... R N... ...jan at Sadhvi Press D... Subbiah Road, Mysore

ಫೋನ್ ನಂ 541

ನ್ಯೂ ಚಾಮುಂಡೇಶ್ವರಿ ಕೆಫೆ

ಭೋಜನ, ವಸತಿ ಮತ್ತು ಫಲಾಹಾರ ಮಂದಿರ,

ಇರ್ವಿನ್ ರಸ್ತೆ, ಮೈಸೂರು

ನೂತನವಾಗಿ ಪ್ರಾರಂಭಿಸಿರುವ ಫಲಾಹಾರ ಮಂದಿರಕ್ಕೂ, ಮೈಸೂರು ಮತ್ತು ಬೆಂಗಳೂರಿನ ರೀತಿಯ ಸುಚಿರುಚಿಯಾದ ಊಟಗಳಿಗೂ ಮತ್ತು ಆಧುನಿಕ ರೀತಿಯಲ್ಲಿ ಸಜ್ಜುಗೊಳಿಸಿರುವ ಒಳ್ಳೆ ಗಾಳಿ ಬೆಳಕುಗಳುಳ್ಳ ಕೊಠಡಿಗಳಿಗೂ ಒಮ್ಮೆ ಭೇಟಿ ಕೊಟ್ಟು ಪರೀಕ್ಷಿಸಿ.

ಸಿ. ಬಿ. ಎಂ. ಚಂದ್ರು ಪ್ರೊಪ್ರೈಟರ್

ಇಂದ್ರ ಕೆಫೆ

ಸಯ್ಯಾಜಿರಾವ್ ರಸ್ತೆ, ಮೈಸೂರು

ಸುಸಜ್ಜಿತವಾದ ಭವ್ಯ ನೂತನ ಫಲಾಹಾರ ಮಂದಿರ

6—9—56ನೇ ಗುರುವಾರ ತೆರೆಯಲಾಗಿದೆ

ಸ್ತ್ರೀಯರಿಗೂ, ಕುಟುಂಬಗಳಿಗೂ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ

ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

ಸಂ(?) : ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಂಪುಟ : [illegible]] SADHVI : TUESDAY 25—9—1956 ಮೈಸೂರು : ಮಂಗಳವಾರ [illegible] [ಸಂಚಿಕೆ : [illegible]]

ಬ್ರಾಂಕಾಲ್
[illegible]
ಸತ್ಯ ಅಂಡ್ ಕೋ.,
[illegible]
7/1 [illegible]
ಬೆಂಗಳೂರು —2

ಎಲ್ಲ ವಾರ್ಡುಗಳಲ್ಲೂ ನಗರ ಪೌರಸಭಾ ಅಕ್ಕಿ ಡಿಪ್ಪೊಗಳು

ದಾವಣಗೆರೆಯಲ್ಲಿ ಮೈಸೂರು ರಾಜಪ್ರಮುಖರು

ಆಸ್ಪತ್ರೆ ಕಟ್ಟಡದ ಶಂಕುಸ್ಥಾಪನೆ ಮತ್ತು ಕಾಲೇಜಿನ ಆರಂಭೋತ್ಸವ

ದಾವಣಗೆರೆ ೨೪

ಶ್ರೀಮನ್ಮಹಾರಾಜರು ನೆನ್ನೆ ಇಲ್ಲಿನ ಪತ್ರಿ[illegible] ಶ್ರೀ [illegible] ಶಂಕುಸ್ಥಾಪನೆ, ರಾಜನಹಳ್ಳಿ ಮದ್ದೂರಾಯಪ್ಪನವರ [illegible] ಕಾಲೇಜು ಮತ್ತು ಬ್ರಹ್ಮಪ್ಪ ದೇವೇಂದ್ರಪ್ಪ [illegible]ನವರ ನಾಮಾಂಕಿತವ ಇಂಜನಿಯರಿಂ[ಗ್] ಕಾಲೇಜು ಕಟ್ಟಡಗಳ ಪ್ರಾರಂಭೋತ್ಸವ[ವ]ನ್ನು ನೆರವೇರಿಸಿದರು. ಅಲ್ಲದೆ ಇಲ್ಲಿನ [illegible] ಕಾರ್ಮಿಕರ ಸಹಕಾರ [illegible] ಗಿರಣಿ ಕಟ್ಟಡದ ಶಂಕುಸ್ಥಾಪನೆಯನ್ನೂ ಅವರು ನೆರವೇರಿಸಿದರು

[illegible] ನಗರದ ಪ್ರಜಾ ಸಮಾಜವಾದಿ ಪಕ್ಷದ ಆಶ್ರ[ಯ]ದಲ್ಲಿ, ನಾಳೆ ಸಂಜೆ ೭ ಗಂಟೆಗೆ ಮಂಡಿ [illegible] ಮುಸಾಫಿರ್ ಖಾನಾ [illegible] ಸದಸ್ಯ ಶ್ರೀ ಮಹಮದ್ ಸೇಠರ ಅಧ್ಯಕ್ಷತೆ[ಯ]ಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಿದೆ. [illegible] ನಡೆಯುವ [illegible] ಪೌರಸಭಾ [illegible] ಚುನಾವಣೆಯ ಬಗ್ಗೆ ಅನೇಕರು ಭಾಷಣ ಮಾಡುವರು

ಮಾಜಿ ಮುಖ್ಯ ಮಂತ್ರಿಗಳಿಂದ [illegible] ರೂ. ಭತ್ಯ ವಾಪಸು

ವಿಧಾನ ಸಭೆಯಲ್ಲಿ ಕಡಿದಾಳ್ ಮಂಜಪ್ಪನವರ ಹೇಳಿಕೆ

[ಸ್ವಂ ವ] ಫೋನ್] ಬೆಂಗಳೂರು ೨೪

ಈ ದಿನ ವಿಧಾನಸಭೆಯಲ್ಲಿ ಶ್ರೀ [illegible] ನಾಗಯ್ಯರೆಡ್ಡಿ [illegible]ಯವರ ಪ್ರಶ್ನೆಗೆ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಉತ್ತರವಿತ್ತು, [illegible] ಶ್ರೀ ಕೆ. ಹನುಮಂತಯ್ಯನವರು [illegible] ಹೋಗಿದ್ದಾಗ ಅಲ್ಲಿ [illegible] ತಮ್ಮ ಭತ್ಯವಾಗಿ ಪಡೆ[ದಿದ್ದ] [illegible] ರೂ ಗಳನ್ನು ಸರ್ಕಾರಕ್ಕೆ ವಾಪಸು ಕೊ[ಟ್ಟಿ]ರುವರೆಂದು ಹೇಳಿದರು. [illegible] ಬೇರೆ ಯಾ[ರಾ]ದರೂ [illegible] ಬರಬೇಕಾಗಿದ[ೆ] [illegible] ಕೇಳಲಾಗಿ ಅದನ್ನು [illegible] ಇಲ್ಲವೆಂದು ಶ್ರೀ ಕಡಿದಾಳ್ ಮಂಜಪ್ಪನವರು [ತಿಳಿಸಿ]ದರು

[illegible] ಪ್ರೊಬೇಷನರುಗಳನ್ನು ತೆಗೆದುಕೊಳ್ಳುವ ವಿ[ಷ]ಯದ ಬಗ್ಗೆ ಪ್ರಶ್ನೆಗಳನ್ನು ಮಾಡಲಾಯಿತು. [illegible] ಪ್ರಾಂತವ ರಚನೆಯು ಸಮೀಪಿಸಿದ [illegible] ಈ ವಿಚಾರವನ್ನು ಪರಿಶೀಲಿಸುವುದರ ಔಚಿತ್ಯ[ವ]ನ್ನು ಕುರಿತು ಕೇಂದ್ರದವರು ಪತ್ರ ಬರೆದಿದ್ದ[ರೂ], ಅದರ ಮೇಲೆ ಸಾರ್ವಜನಿಕ ಆರೋಗ್ಯ [ಮತ್ತು] ವೈದ್ಯ ಇಲಾಖೆಗಳಿಗೆ ಮಾತ್ರ ಪ್ರೊಬೇ[ಷನ]ರುಗಳನ್ನು ತೆಗೆದುಕೊಂಡು ಉಳಿದ ಇಲಾಖೆ[ಗಳ]ವರ ವಿಷಯವನ್ನು ಕೈ ಬಿಡಲಾಯಿತೆಂದೂ [ತಿಳಿ]ಸಿದರು

[ಪಿ]. ವಿ ಆರ್. ರಾಯರ ಆಗಮನ

[ಹೈ]ದರಾಬಾದಿನ ಶ್ರೀ [illegible] ಪಿ ವಿ ಆರ್ ರಾಯರು ಈ ದಿನ ಇಲ್ಲಿಗೆ [ಬಂ]ದಿದ್ದರು. ಅವರು ಈ ದಿನ ಮುಖ್ಯ ಮಂತ್ರಿ [ಕ]ಡಿದಾಳ್ ಮಂಜಪ್ಪನವರನ್ನು ಭೇಟಿ [illegible] ನೂತನ ಸಂಸ್ಥಾನ ಸರ್ಕಾರಕ್ಕೆ ಅವರೇ [illegible] ಕಾರ್ಯದರ್ಶಿಯಾಗುವರು

ನಾನ್ ಗೆಜೆಟೆಡ್ ನೌಕರರಿಗೆ ತಾತ್ಕಾಲಿಕ ಪರಿಹಾರ

ವಿಧಾನ ಪರಿಷತ್ತಿನಲ್ಲಿ ವಿದ್ಯಾ ಮಂತ್ರಿ ರಾಮಚಂದ್ರರಾಯರ ಹೇಳಿಕೆ

ಬೆಂಗಳೂರು ೨೪

ನೆನ್ನೆ ವಿಧಾನ ಪರಿಷತ್ತಿನಲ್ಲಿ ವಿದ್ಯಾ ಮತ್ತು [ಕೈಗಾರಿ]ಕಾ(?) ಮಂತ್ರಿ ಶ್ರೀ ಎ ಜಿ ರಾಮಚಂದ್ರರಾಯರು ನೂತನ ಮೈ. ಸಂಸ್ಥಾನದ ನಾನ್ ಗೆಜೆಟೆಡ್ ನೌಕರರಿಗೆ [illegible] ತಾತ್ಕಾಲಿಕ ಪರಿಹಾರ [illegible] ಈ ಬಗ್ಗೆ ಕೇಂದ್ರ ಸರ್ಕಾರದ [illegible] [illegible] ಮುಂಚೆ [illegible] ಈ ವಿಚಾರವನ್ನು ಕೇಂದ್ರ ಸರ್ಕಾರದ [illegible] ಸಮಿತಿ ಮುಂ[ದೆ] ಇಡಬೇಕಾಗುವುದೆಂದೂ ಅವರು ಸೂಚಿಸಿ[ದರು]

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಿಗ್ಗೆ [illegible] ಗೋಟೆ(?) ವಾದ್ಯ [illegible] ಮತ್ತು [illegible] ವಿ ಎಲ್ ಶ್ಯಾಮಲಾ ದೇವರನಾಮ [illegible] ಹಿಂದಿ ಪಾಠ [illegible] ಸಂಗೀತ [illegible] ಗೋಟುವಾದ್ಯ [illegible] ವೆಂಕಟಪ್ಪ ನಾಗಸ್ವರ [illegible] ಎಸ್ ಮುನಿಯಪ್ಪ(?) ದೇವರನಾಮ [illegible] ಹಾಡು ಮತ್ತು ನಮ್ಮವರು [illegible] ದೆಹಲಿಯಿಂದ [illegible] [illegible] ನರಸಿಂಹಾಚಾರ್ [illegible] ರಿಪೋರ್ಟ್.

ಸಾದಿ ಅರೇಬಿಯದಲ್ಲಿ ನೆಹರೂ

ಪ್ರಧಾನಿ ನೆಹರೂರವರ ನೆನ್ನೆ ಸಾದಿ ಅರೇಬಿಯದ ರಾಜಧಾನಿ ರಿಯಾದನ್ನು ತಲುಪಿದರು. ಅವರು ನೆನ್ನೆ ಬೆಳಿಗ್ಗೆ ದೆಹಲಿಯನ್ನು ಬಿಟ್ಟಾಗ ಪತ್ರಿಕಾ ಪ್ರತಿನಿಧಿಗಳೊಡನೆ ಸಂಭಾಷಿಸಿ, ಬ್ರಿಟನ್ ಮತ್ತು ಫ್ರಾನ್ಸುಗಳು ಸೂಯೆಜ್ ಪ್ರಶ್ನೆಯನ್ನು ವಿಶ್ವಸಂಸ್ಥೆಗೆ ಒಯ್ದುದುದು ಉತ್ತಮವಾಯಿತೆಂದು ಸೂಚಿಸಿದರು. ಈ ವಿಚಾರವಾಗಿ ವಿಶ್ವಸಂಸ್ಥೆಯಲ್ಲದೆ, ಬೇರೆ ಮಾರ್ಗಗಳಿಂದಲೂ ಮಧ್ಯಸ್ಥಿಕೆ ಪ್ರಯತ್ನ ನಡೆಸುವುದ[ಕ್ಕೆ] ಭದ್ರತಾ ಸಮಿತಿಯ [illegible] ಆಗುವುದಿಲ್ಲವೆಂದೂ, ಮಧ್ಯಸ್ಥಿಕೆಯೇ [illegible] ಉಪಯೋಗಿಸಬೇಕೆಂದೂ ಅವರು ಸೂಚಿಸಿದರು

ಮಹಾರಾಜಾ ಕಾಲೇಜಿನ ಮಿಡ್ ಸೆಷನ್ ಪರೀಕ್ಷೆ ನಡೆಯಲಿಲ್ಲ

ಮೈಸೂರು ೨೪

ಮಹಾರಾಜಾ ಕಾಲೇಜಿನಲ್ಲಿ ನೆನ್ನೆ ನಡೆಯಬೇಕಾಗಿದ್ದ ಮಿಡ್ ಸೆಷನ್ ಪರೀಕ್ಷೆಯನ್ನು ಇನ್ ಚಾರ್ಜ್ ಪ್ರಿನ್ಸಿಪಾಲರು ಸಕಾರಣದಲ್ಲಿ ಬರದ್ದು(?) [illegible] ಮುಂದೆ [illegible] ಬೇಕಾಯಿತೆಂದೂ, ಇಂತಹ ಪ್ರಸಂಗವು ಹಿಂದೆಂದೂ ನಡೆದಿರಲಿಲ್ಲವೆಂದು [illegible] ಪ್ರಶ್ನೆ ಪತ್ರಿಕೆಗಳು ಅವರ ವಶದಲ್ಲಿದ್ದವೆಂದೂ ಅವರು ಪರೀಕ್ಷಾರಂಭ ಸಮಯಕ್ಕೆ ಸ್ವಲ್ಪ ಮುಂಚೆ ಮನೆಗೆ ಹೋಗಿದ್ದರೆಂದೂ ಹೇಳಲಾಗಿದೆ

ಪೌರಸಭೆಯವರಿಂದ ಅಕ್ಕಿ ಡಿಪೋ ವ್ಯವಸ್ಥೆ

ವಿಶೇಷ ಅಧಿವೇಶನದಲ್ಲಿ ತೀರ್ಮಾನ

ಮೈಸೂರು ೨೪

ನಗರದ ನಾನಾ ಭಾಗಗಳಲ್ಲಿ ಹೆಚ್ಚು ಅಕ್ಕಿ ಡಿಪೋಗಳನ್ನು ತೆರೆದು ದಿನ [illegible] ಅಕ್ಕಿಯನ್ನು ಒದಗಿಸುವ ಬಗ್ಗೆ ವಿಚಾರ ಮಾಡುವ ಔಚಿತ್ಯವನ್ನು ಕುರಿತು ಜಿಲ್ಲಾಧಿಕಾರಿಗಳು ಒರೆದಿದ್ದ ಪತ್ರವನ್ನು ನೆನ್ನೆ ನಗರದ ಪೌರಸಭೆಯ ವಿಶೇಷ ಅಧಿವೇಶನದಲ್ಲಿ ಪರಿಶೀಲಿಸಲಾಯಿತು. ಶ್ರೀ [illegible] ಗೋಡ್ವೇ(?) ಸೂಪರಿಂಟೆಂಡೆಂಟರು ಮತ್ತು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರು ಸಭೆಯಲ್ಲಿ ಭಾಗವಹಿಸಿದ್ದರು. ಈಗ ಮಾರಾಟ ಮಾಡುತ್ತಿರುವ ಸರ್ಕಾರದ ಅಕ್ಕಿಯನ್ನು ಸಭೆಯಲ್ಲಿ ಪ್ರದರ್ಶಿಸಲಾಯಿತು

ಅಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಭಾಷಣ ಮಾಡಿ ಬೆಂಗಳೂರು ಪೌರಸಭೆಯವರಂತೆ ಇಲ್ಲಿಯವರೂ ಅಕ್ಕಿ ಮಾರಾಟದ ವ್ಯವಸ್ಥೆಯನ್ನು ಕೈಗೊಳ್ಳಬೇಕೆಂದು ಕಳೆದ ವಾರ [illegible] ಮುಖ್ಯ ಮಂತ್ರಿಯವರು ತಮಗೆ ತಿಳಿಸಿದ ವಿಷಯವನ್ನು ಸಭೆಯ ಗಮನಕ್ಕೆ ತಂದರು

ಪೌರಸಭೆಯವರು ಈ ವ್ಯವಸ್ಥೆಯನ್ನು ಕೈಗೊಳ್ಳಬೇಕಾದರೆ ಸರ್ಕಾರದವರು ಉತ್ತಮ ದರ್ಜೆಯ(?) ಅಕ್ಕಿಯನ್ನು ಒದಗಿಸಬೇಕೆಂದು ಹೇಳಿ, ಪೌರಸಭೆಯು ಎಷ್ಟು ಮಟ್ಟಿನ ಜವಾಬ್ದಾರಿ ನಿರ್ವಹಿಸಬೇಕೆಂಬುದನ್ನೂ, ಕೆಟ್ಟ ಅಕ್ಕಿಯನ್ನು ಮಾರಿ ಜನರಿಂದ ವೃಥಾ ನಿಷ್ಠುರಕ್ಕೆ ಸಿಗುವ ವಿಚಾರವನ್ನೂ ಪರಿಶೀಲಿಸಬೇಕೆಂದು ಅಧ್ಯಕ್ಷರ [illegible] ಸಿದರು

ಶ್ರೀಗಳಾದ ಬಿ ಕೆ ರಾಮಕೃಷ್ಣಯ್ಯ, ಸಿ. ಎಲ್. ನಾರಾಯಣರಾವ್, ಶ್ರೀಕಂಠಶರ್ಮ, ಬಿ [illegible] ದಾಸ್, ನೂರ್ ಮುಸೇನ್(?), ಎಸ್ ಲಿಂಗಣ್ಣ ಮುಂತಾದವರು ಮಾತನಾಡಿ, ತಮ್ಮ ಅಭಿಪ್ರಾಯಗಳನ್ನಿತ್ತರು. ಜನರಿಗೆ ಆಹಾರವನ್ನು ಸುಲಭ ಬೆಲೆಯಲ್ಲಿ ಒದಗಿಸುವ ಏರ್ಪಾಡನ್ನು ಸದಸ್ಯರು ಸ್ವಾಗತಿಸಿದರೂ, ಉತ್ತಮ ದರ್ಜೆಯ ಅಕ್ಕಿಯ ಮಾರಾಟದ ವ್ಯವಸ್ಥೆ ಯಾಗದಿದ್ದರೆ ಅದನ್ನು ಕೊಂಡು ಮಾರುವ ಸಂಸ್ಥೆಗಳಿಗೆ ಆಗಬಹುದಾದ ತೊಂದರೆಯನ್ನು ಸೂಚಿಸಿದರು. ಅಲ್ಲದೆ, ಕೇಂದ್ರ ಗೋಡೌನಿನ ಅಧಿಕಾರಿಗಳು ಅಕ್ಕಿಯನ್ನು [illegible] ದುಕೊಂಡು ಜನರಿಗೆ ಹಂಚಲು ಹೋಗುತ್ತಿರುವ ಸಂಸ್ಥೆಗಳ ಪ್ರತಿನಿಧಿಗಳ ಬಗ್ಗೆ ತೋರುತ್ತಿರುವ ವರ್ತನೆಗಾಗಿ ಆಕ್ಷೇಪಿಸಲಾಯಿತು

ಈಗ ಎಲ್ಲಾ ವಾರ್ಡುಗಳಲ್ಲಿಯೂ ಆಹಾರ ಫೇರ್ ಪ್ರೈಸ್ ಡಿಪೋಗಳ ಕೊರತೆಯಿಲ್ಲವಂತೆ ಅಕ್ಕಿಯ ಡಿಪೋಗಳನ್ನು ಏರ್ಪಡಿಸುವುದಕ್ಕೆ ಪೌರಸಭೆಯು ಸಮ್ಮತಿಸಿತು. ಆದರೆ ಉತ್ತಮ ದರ್ಜೆ(?) ಅಕ್ಕಿಯನ್ನ ಸರಬರಾಜು ಮಾಡಬೇಕೆಂದು ಸರ್ಕಾರಕ್ಕೆ ಸೂಚಿಸಬೇಕೆಂದೂ, ಮತ್ತು ಮಾರಾಟವಾಗದ ಅಕ್ಕಿಯನ್ನು ಸರ್ಕಾರದವರು ವಾಪಸು ತೆಗೆದುಕೊಳ್ಳಬೇಕೆಂದೂ, ಹಾಗಿದ್ದರೆ ಮಾತ್ರ ಹಂಚಿಕೆ ಜವಾಬ್ದಾರಿಯನ್ನು ಪುರಸಭೆಯು ವಹಿಸಿಕೊಳ್ಳುವುದೆಂದೂ ಸೂಚಿಸಲಾಯಿತು

ಚಿನ್ನದ ಗಣಿ ರಾಷ್ಟ್ರೀಕರಣ

[illegible]

ಬೆಂಗಳೂರು ೨೪

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಬಗ್ಗೆ ನೆನ್ನೆ [illegible] ಸಂಸ್ಥಾನ [illegible] ಶ್ರೀ ಎ ಜಿ ರಾಮಚಂದ್ರರಾಯರು [illegible] ಪ್ರತಿನಿಧಿಗಳನ್ನೂ [illegible] ಸರ್ಕಾರದ ಅಧಿಕಾರಿಗಳನ್ನೂ [illegible] ಒಂದು [illegible] ದೂ, ಈ ಬಗ್ಗೆ ಈಗ [illegible] ಸಭಾಧಿವೇಶನದಲ್ಲೇ ಒಂದು ಮಸೂದೆಯನ್ನು [illegible] ಗುವುದೆಂದೂ, [illegible] ಮಾತುಕತೆಗಳಿಗಾಗಿ [illegible] ಶ್ರೀ ಎ. ಜಿ. ರಾಮಚಂದ್ರರಾಯರು ನೆನ್ನೆ ದೆಹಲಿಗೆ [illegible] ಹಿಂದಿರುಗಿದರು. ಗಣಿ [illegible] ಪರಿಹಾರ, ಗಣಿ ಭವಿಷ್ಯ ಮತ್ತು [illegible] ಈ ಎಲ್ಲ ವಿಷಯಗಳ ಬಗ್ಗೆಯೂ [illegible] ಯಾಗಿರುವುದೆಂದು ಅವರು ತಿಳಿಸಿರುವರು.

ಗೋವಿಂದರೆಡ್ಡಿ [illegible] ದಸ್ತಗಿರಿ ಬಗ್ಗೆ ವಿವರಣೆ

ಬೇಲೂರು ಕೊಲೆ ಮೊಕದ್ದಮೆಯಲ್ಲಿ ಇನ್ಸ್‌ಪೆಕ್ಟರ ಸಾಕ್ಷ್ಯ

ಬೆಂಗಳೂರು ೨೪

ಬೇಲೂರು ಶ್ರೀನಿವಾಸಯ್ಯಂಗಾರ್ಯರ(?) ಕೊಲೆ ಮೊಕದ್ದಮೆಯಲ್ಲಿ ನೆನ್ನೆ [illegible] ಗೋವಿಂದರೆಡ್ಡಿಯ [illegible] ವಿಚಾರವನ್ನು ಇನ್ಸ್‌ಪೆಕ್ಟರ್ [illegible] ವಿವರಿಸಿದರು

[illegible] ತಾರೀಖು [illegible] ಎಸ್. [illegible]ರಿಂದ ತಮಗೆ ಫೋನ್ ಬಂದ ಪ್ರಕಾರ [illegible] ಗೋವಿಂದರೆಡ್ಡಿಯ ಮನೆಗೆ ಹೋದಾಗ [illegible] ಮನೆಯಲ್ಲಿಲ್ಲವೆಂಬುದು ಗೊತ್ತಾಗಿ [illegible] ಮೇಲೆ [illegible] ತಿಳಿಯದು [illegible] ಮಾರನೇ ದಿನ ಸಂಜೆ [illegible] ಗೋವಿಂದರೆಡ್ಡಿಯು [illegible] ಒಂದು ಗಲ್ಲಿಯಿಂದ ಬರುತ್ತಿದ್ದುದು ತಿಳಿದು ಅಲ್ಲಿ [illegible] ಅವನನ್ನು ದಸ್ತಗಿರಿ ಮಾಡಿದುದಾಗಿಯೂ ಸಾಕ್ಷಿಯು ತಿಳಿಸಿದರು.

ವಿಧಾನ ಪರಿಷತ್ತಿನ ಅಧ್ಯಕ್ಷರಾಗಿ ಟಿ. ಸುಬ್ರಹ್ಮಣ್ಯರವರ ಆಯ್ಕೆ

[ಸ್ವಂ ವ] ಫೋನ್] ಬೆಂಗಳೂರು ೨೪

ಈ ದಿನ ವಿಧಾನ ಪರಿಷತ್ತಿನಲ್ಲಿ ಅಧ್ಯಕ್ಷ[ರ] ಚುನಾವಣೆ ನಡೆದು ಶ್ರೀ ಟಿ ಸುಬ್ರಹ್ಮಣ್ಯರವರು ಅವಿರೋಧವಾಗಿ ಆರಿಸಲ್ಪಟ್ಟರು. ಶ್ರೀ [illegible] ಭಾಷ್ಯಂರವರ ನಿಧನದ ಪ್ರಯುಕ್ತ ಆ ಸ್ಥಾನ [ಖಾಲಿ]ಯಾಗಿತ್ತು. ಶ್ರೀ ಸುಬ್ರಹ್ಮಣ್ಯರವರೊಬ್ಬರ ಹೆಸರನ್ನು ಮಾತ್ರ ನೆನ್ನೆ ಸೂಚಿಸಲಾಗಿತ್ತು

ಅವರ ಹೆಸರನ್ನು ಶ್ರೀ ಕೆ. ರಂಗಪ್ಪನವರು ಸೂಚಿಸಿ, ಶ್ರೀ ಮರಿಸ್ವಾಮಯ್ಯನವರು ಅನುಮೋದಿಸಿದರು. ಶ್ರೀ ಸುಬ್ರಹ್ಮಣ್ಯರವರನ್ನು ವಿದ್ಯಾ ಮಂತ್ರಿ ಶ್ರೀ ಎ ಜಿ ರಾಮಚಂದ್ರರಾವ್, ಶ್ರೀ ಎ. ಪಿ ಎಲ್. ಶಾಸ್ತ್ರಿ ಮುಂತಾದವರು ಅಭಿನಂದಿಸಿದರು. ಅಧ್ಯಕ್ಷ ಅವಧಿಯಲ್ಲಿ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ಪಾಲಿಸುವುದಾಗಿ ಶ್ರೀ ಸುಬ್ರಹ್ಮಣ್ಯರವರು ತಿಳಿಸಿದರು

ವಿದ್ಯಾವರ್ಧಕ ಪ್ರೌಢಶಾಲಾ ಸಂಘದ ಮುಕ್ತಾಯ ಸಮಾರಂಭ

ಮೈಸೂರು ೨೪

ರಾಜಧಾನಿಯ ವಿದ್ಯಾವರ್ಧಕ ಪ್ರೌಢಶಾಲೆಯ ಸಂಘದ ಮುಕ್ತಾಯ ಸಮಾರಂಭವನ್ನು ಪ್ರದೇಶ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರೂ ಶಾಲಾ ಸಮಿತಿ ಉಪಾಧ್ಯಕ್ಷರೂ ಆದ ಶ್ರೀ ಚನ್ನಯ್ಯನವರು ನೆನ್ನೆ ಮಾಡಿದರು. ಅವರು ತಮ್ಮ ಭಾಷಣದಲ್ಲಿ ವಿದ್ಯಾರ್ಥಿಗಳು ಗಾಂಧೀಜಿಯವರು ಬೋಧಿಸಿರುವ ಅಹಿಂಸಾ ತತ್ವವನ್ನು ಪಾಲಿಸಬೇಕೆಂದೂ, ಸತ್ಯವನ್ನು ನುಡಿಯಬೇಕೆಂದೂ, ಶಿಸ್ತನ್ನು ಕಲಿಯಬೇಕೆಂದೂ, ಕಷ್ಟಪಟ್ಟು ಗಳಿಸಿದ ಸ್ವಾತಂತ್ರ್ಯವನ್ನು ಕಾಪಾಡಲು ಪ್ರಯತ್ನಪಡಬೇಕೆಂದೂ ನುಡಿದರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ನರಸಿಂಗರಾಯರು ಸ್ವಾಗತ ಭಾಷಣ ಮಾಡಿದರು. ಶಾಲಾ ಸಮಿತಿ ಉಪಾಧ್ಯಕ್ಷರಾದ ಶ್ರೀ ಎಂ. ಶಂಕರಯ್ಯನವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಆರಂಭದಲ್ಲಿ ಶ್ರೀ ಎಸ್. ವಿ. ಗಿರಿಜಾಲಕ್ಷ್ಮಿಯಿಂದ ಪ್ರಾರ್ಥನೆ, ವಿದ್ಯಾರ್ಥಿಗಳಿಂದ ವಿವಿಧ ವಿನೋದಾವಳಿ, ಶ್ರೀ ಕಾಶೀರಾಮ್‌ರಿಂದ ಶಾಲಾ ಕ್ರೀಡಾ ವಿಮರ್ಶೆಗಳಾದುವು. ಸಂಘದ ಉಪಾಧ್ಯಕ್ಷ ಶ್ರೀ ಕೆ. ರಾಜಗೋಪಾಲ್‌ರವರು ವಂದನಾರ್ಪಣೆ ಮಾಡಿದಮೇಲೆ ಸಮಾರಂಭವು ಮುಕ್ತಾಯಗೊಂಡಿತು.

ಕಾವ್ಯ ವಾಚನ

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ವಿ॥ ವಿ. ಸುಬ್ರಹ್ಮಣ್ಯಶಾಸ್ತ್ರಿಗಳು ವೇದಾಂತ ಬ್ರಹ್ಮಾನಂದ ಜೋಳಿಗೆಯಲ್ಲಿ ಕೆಲವು ಭಾಗಗಳ ವ್ಯಾಖ್ಯಾನವನ್ನು ಮಾಡುವರು. ಮಹಾ ಪಾಠಶಾಲೆಯ ಅಧ್ಯಾಪಕ ಶ್ರೀ ಬಿ. ಎಸ್. ವೆಂಕಟರಾಮಯ್ಯನವರು ಅಧ್ಯಕ್ಷತೆ ವಹಿಸುವರು.

ಹರಿಕಥೆ

ವಿ॥ ಬ್ರ॥ ಶ್ರೀ ಟಿ. ಕೆ. ವೇಣುಗೋಪಾಲದಾಸರು ನಗರದ ದೇವೀರಮ್ಮಣ್ಣಿ ಅಗ್ರಹಾರದ ವಿಶ್ವೇಶ್ವರ ದೇವಸ್ಥಾನದಲ್ಲಿ ಏರ್ಪಡಿಸಿರುವ ಗಜಗೌರಿ ಎಂಬ ಹರಿಕಥೆಯನ್ನು ನಾಳೆ ಸಂಜೆ ೬ ಘಂಟೆಗೆ ನಡೆಸುವರು. ಮೈಸೂರು ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು.

ಶಾಸ್ತ್ರ ಸಂಘದ ಆರಂಭೋತ್ಸವ

ಇಲ್ಲಿನ ಮಹಾರಾಜಾ ಪ್ರೌಢಶಾಲೆಯನ್ನೂ, ಯುವರಾಜಾ ಕಾಲೇಜಿನ ಕನ್ನಡ ಅಧ್ಯಾಪಕರಾದ ಶ್ರೀ ಎಸ್. ಅನಂತನಾರಾಯಣರು ನೆನ್ನೆ ಶಾಲೆಯ ಶಾಸ್ತ್ರ ಸಂಘದ ಆರಂಭೋತ್ಸವವನ್ನು ನೆರವೇರಿಸಿ, ಬಾಲಕರು ದೇಶದ ಬೆಳವಣಿಗೆ ಬಗ್ಗೆ ಹೆಚ್ಚು ಆಸಕ್ತಿ ವಹಿಸಬೇಕೆಂದು ಸಲಹೆಯಿತ್ತರು. ಶಾಲೆಯ ಮುಖ್ಯೋಪಾಧ್ಯಾಯರಾದ ಶ್ರೀ ಜಿ. ವಿ. ಸೂರ್ಯನಾರಾಯಣರವರು ಅಧ್ಯಕ್ಷತೆ ವಹಿಸಿದ್ದರು. ಈ ಶಾಲೆಯ ಶಾಸ್ತ್ರ ಸಂಘದಲ್ಲಿ ಇತರ ಶಾಲಾ ವಿದ್ಯಾರ್ಥಿಗಳಿಗೂ ಪ್ರವೇಶಾವಕಾಶವಿದೆ.

ಸೋಷಲಿಸ್ಟ್ ಪಾರ್ಟಿ ಸಿದ್ಧಾಂತ ನಿರೂಪಣೆ

ಮೈಸೂರು ಸಂಸ್ಥಾನದ ಸಮಾಜವಾದಿ ಪಕ್ಷದವರು ಮೇಲ್ಕಂಡ ಶಿರೋನಾಮೆಯಲ್ಲಿ ಸಾರ್ವಜನಿಕ ವ್ಯವಹಾರಗಳ ಬಗ್ಗೆ ತಮ್ಮ ನಿಲುವನ್ನು ಪ್ರಕಟಪಡಿಸಿರುತ್ತಾರೆ. ಬಂಡವಾಳಶಾಹಿ, ಕಮ್ಯೂನಿಸಂ, ಸಮಾಜವಾದ ಮುಂತಾದ ತತ್ವಗಳನ್ನು ಅದರಲ್ಲಿ ವಿಮರ್ಶಿಸಲಾಗಿದೆ. ಸಮಾಜದ ವ್ಯವಸ್ಥೆಯಲ್ಲಿ ಸಮತೆ, ಅಂತರಿಕ ಪ್ರಜಾತಂತ್ರ, ಯೋಜನೆ, ಸರ್ಕಾರ ಮತ್ತು ವಿರೋಧ ಪಕ್ಷ, ಸಹಜೀವನ, ವಿದೇಶಾಂಗ ನೀತಿ ಮುಂತಾದುವನ್ನು ವಿವರಿಸಲಾಗಿದೆ. ಇದರ ಬೆಲೆ ೩ ಆ. ಬೆಂಗಳೂರಿನ ಬಳೆಪೇಟೆಯ ಪಕ್ಷದ ಕಛೇರಿಯಲ್ಲಿ ದೊರೆಯುತ್ತದೆ.

ಮಳೆ ಗಾಳಿಯಲ್ಲೂ ಉರಿಯುವ ಬೆಂಕಿ ಕಡ್ಡಿ

ಮಳೆ ಮತ್ತು ಗಾಳಿಯು ಇದ್ದರೂ ಉರಿಯುವ ಬೆಂಕಿ ಕಡ್ಡಿಯನ್ನು ಚೀಣಾದ ಕ್ಯಾಂಟನ್ ನಗರದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ತಯಾರಿಸಲಾಗುತ್ತಿರುವುದೆಂದು ಗೊತ್ತಾಗಿದೆ. ನೀರು ಸೋಕಿದರೂ ಅವು ಉರಿಯಬಲ್ಲವು.

ಬೊಂಬಾಯಿ ಗವರ್ನರರಾಗಿ ಶ್ರೀ ಶ್ರೀಪ್ರಕಾಶ

ಮದರಾಸಿನ ಗವರ್ನರ್ ಶ್ರೀ ಶ್ರೀಪ್ರಕಾಶರವರನ್ನು ಬೊಂಬಾಯಿಯ ಗವರ್ನರರಾಗಿ ನೇಮಿಸಲಾಗುವುದೆಂದು ವರದಿಯಾಗಿದೆ.

ಮೈಸೂರು ವಿದ್ಯಾರ್ಥಿಗೆ ಕೆನಡಾ ದೇಶದ ವೇತನ

ಬ್ರಿಟಿಷ್ ಕೊಲಂಬಿಯ ವಿಶ್ವವಿದ್ಯಾಲಯದ ವರ್ಷಕ್ಕೆ ೬೦೦ ಡಾಲರಿನ ವಿದ್ಯಾರ್ಥಿ ವೇತನವು ಮೈಸೂರು ಸಂಸ್ಥಾನದ ಪಿ. ಓ. ಶೆಟ್ಟಿ ಎಂಬುವರಿಗೆ ದೊರೆತಿದೆ. ಸಾಮೂಹಿಕ ಮತ್ತು ಪ್ರಾದೇಶಿಕ ಯೋಜನೆಗಳ ವ್ಯಾಸಂಗಕ್ಕಾಗಿ ಈ ವೇತನವನ್ನು ಕೊಡಲಾಗುತ್ತದೆ. ವಿಶ್ವವಿದ್ಯಾಲಯವು ನೀಡಿರುವ ಇಂತಹ ವೇತನಗಳನ್ನು ಭಾರತ, ಹಾಂಕಾಂಗ್, ಜಪಾನ್ ಮತ್ತು ಪಶ್ಚಿಮ ಇಂಡೀಸ್‌ಗಳ ವಿದ್ಯಾರ್ಥಿಗಳಿಗೆ ಕೊಡಲಾಗಿದೆ.

ಸೂಯೆಜ್ ಕಾಲುವೆ ಅಂತರ ರಾಷ್ಟ್ರೀಯ ಪಂಚಾಯಿತಿ ಪ್ರಶ್ನೆ

ಫ್ರಾನ್ಸು ರಾಜಿಗೆ ಸಿದ್ಧವಿಲ್ಲ

ಸೂಯೆಜ್ ಕಾಲುವೆಯನ್ನು ಅಂತರ ರಾಷ್ಟ್ರೀಯ ಆಡಳಿತಕ್ಕೆ ಒಳಪಡಿಸಬೇಕೆಂಬ ತತ್ವದ ವಿಚಾರದಲ್ಲಿ ಫ್ರಾನ್ಸು ರಾಜಿಗೆ ಸಿದ್ಧವಾಗಿಲ್ಲವೆಂದು ಅಲ್ಲಿನ ಮಂತ್ರಿಮಂಡಲವು ಘೋಷಿಸಿದೆ. ಲಂಡನ್ನಿನಲ್ಲಿ ೧೮ ರಾಷ್ಟ್ರಗಳ ಸಮ್ಮೇಳನವಾದನಂತರ ಈ ನಿರ್ಧಾರವನ್ನು ತೆಗೆದುಕೊಳ್ಳಲಾಯಿತು.

ಜಪಾನಿನಲ್ಲಿ ಭಾರಿ ಭೂಪಾತ

ದಕ್ಷಿಣ ಜಪಾನಿನಲ್ಲಿರುವ ಸಿಟಿಹಾರ ಎಂಬಲ್ಲಿ ನೆನ್ನೆ ಭಾರಿ ಪ್ರಮಾಣದ ಭೂಪಾತವು ಸಂಭವಿಸಿ, ೪, ಅನೇಕರು ಮಣ್ಣಿನ ರಾಶಿಯಲ್ಲಿ ಹೂತುಹೋದರೆಂದೂ, ಪೋಲೀಸರು ರಕ್ಷಣಾ ಕಾರ್ಯದಲ್ಲಿ ತೊಡಗಿರುವರೆಂದೂ ವರದಿಯಾಗಿದೆ. ೪೦೦ ನಿವಾಸಿಗಳು ಊರನ್ನು ಖಾಲಿ ಮಾಡುವಂತೆ ವ್ಯವಸ್ಥೆಯಾಗಿದೆ.

ನಿಮ್ನ ವರ್ಗದವರ ಮತಾಂತರ ತಪ್ಪಿಸಲು ಮಹಾಸಭಾ ನಿಧಿ

ನಿಮ್ನ ವರ್ಗದವರ ಸಾಮಾಜಿಕ ಏಳಿಗೆಯನ್ನು ಸಾಧಿಸಲು ಮತ್ತು ಹರಿಜನರು ಮತ್ತು ಗಿರಿಜನರಲ್ಲಿ ವಿದೇಶೀ ಪಾದ್ರಿಗಳ ಮತಾಂತರ ಕಾರ್ಯ ಚಟುವಟಿಕೆಯನ್ನು ತಪ್ಪಿಸಲು ೫ ಲಕ್ಷ ರೂ. ಹಣದ ನಿಧಿಯೊಂದನ್ನು ಭಾರತದ ಹಿಂದೂ ಮಹಾಸಭೆಯವರು ಏರ್ಪಡಿಸಲಿರುವರು.

ಚೀಣಕ್ಕೆ ಭಾರತದಿಂದ ೧,೦೦೦ ಎಮ್ಮೆಗಳು

ಚೀಣಕ್ಕೆ ೧,೦೦೦ ಎಮ್ಮೆಗಳನ್ನು ರವಾನಿಸುವಂತೆ ೭ ರಾಷ್ಟ್ರವು ಭಾರತವನ್ನು ಕೇಳಿದೆಯೆಂದು ವರದಿಯಾಗಿದೆ. ಭಾರತದಲ್ಲಿ ೨೦ ಜಾತಿಯ ಎಮ್ಮೆಗಳಿವೆ. ಆ ಪೈಕಿ ಚೀಣರು ತಮಗೆ ಬೇಕಾದುದನ್ನು ಆರಿಸಿಕೊಳ್ಳಲು ಕೇಂದ್ರ ಆಹಾರ ಮತ್ತು ವ್ಯವಸಾಯ ಇಲಾಖೆಯ ಅಧಿಕಾರಿಯು ತಿಳಿಸಿರುತ್ತಾರೆ.

ಮೈಸೂರು ಪೇಟೆ ಧಾರಣೆ

ಭತ್ತ, ಬಂಗಾರ ಸುಣ್ಣ		
ಕೊಯಮುತ್ತೂರು ಸಣ್ಣ	೩೬ ೩ ೦	೩೬ ೧೦ ೦
ರತ್ನಚೂಡಿ	೩೨ ೧೦ ೦	೩೩ ೧೪ ೦
ಕಡ್ಡಿ	೩೧ ೦ ೦	೩೨ ೧೨ ೦
ಕೆಂಬುಡತಿ	೩೩ ೧೪ ೦	೩೩ ೨ ೦
ಕಾಟು	೨೮ ೪ ೦	೨೮ ೧೨ ೦
ರಾಗಿ	೨೮ ೮ ೦	೩೪ ೦ ೦
ಜೋಳ	೩೨ ೧೨ ೦	೩೮ ೪ ೦
ನವಣೆ	೩೬ ೧೨ ೦	
ಕಂಬು	೨೪ ೨ ೦	
ಕಡಲೆಕಾಯಿ	೧೪ ೦ ೦	೨೭ ೮
ಎಳ್ಳು	೬೮ ೨ ೦	೮೬ ೦ ೦
ಹುಚ್ಚೆಳ್ಳು	೪೬ ೮ ೦	
ತೊಗರಿ	೨೯ ೧೦ ೦	೩೨ ೧೪ ೦
ಹೆಸರು	[illegible] ೦ ೦	೫೯ ೪ ೦
ಹುರುಳಿ	೫೨ ೪ ೦	೬೩ ೬ ೦
ಕಡಲೆ	೪೦ ೧೪ ೦	
ಧನಿಯ	೩೩ ೨ ೦	೩೮ ೧೦ ೦
ಮೆಣಸಿನಕಾಯಿ	೧೨ ೪ ೦	೧೩ ೪ ೦
ತೆಂಗಿನಕಾಯಿ ೧೦೦೦ಕ್ಕೆ	೧೪೦ ೬ ೦	೨೪೭ ೦ ೦

ಮಹಾರಾಜರ ಹೆಚ್ಚುವರಿ ಜಮೀನನ್ನು ರೈತರಿಗೆ ಹಂಚಬೇಕು

ಮುಖ್ಯ ಮಂತ್ರಿಯವರಿಗೆ ಮನವಿ

ಮೈಸೂರು ೨೪

ನೆನ್ನೆ ನಗರಕ್ಕೆ ಆಗಮಿಸಿದ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರನ್ನು ಶ್ರೀ ಎ. ರಾಮಣ್ಣನವರು ಭೇಟಿ ಮಾಡಿ, ಶ್ರೀಮನ್ಮಹಾರಾಜರ ಜಮೀನಿನ 'ಪರಭಾರೆ' ವಿಚಾರವಾಗಿ ಮನವಿಯೊಂದನ್ನು ಸಲ್ಲಿಸಿದರು.

ಶ್ರೀಮನ್ಮಹಾರಾಜರ ಸ್ವಂತದ ೧೩ ಸಾವಿರ ಎಕರೆ ಜಮೀನನ್ನು ಅನೇಕ ರೈತರು ಬೇಸಾಯ ಮಾಡುತ್ತಿರುವರೆಂದೂ, ಭೂ ಸುಧಾರಣೆಗೆ ಸಂಬಂಧಿಸಿದಂತೆ ಮಾಡಿರುವ ಕಾನೂನುಗಳು ಮಹಾರಾಜರ ಆಸ್ತಿಗೆ ಅನ್ವಯವಾಗಿಲ್ಲವೆಂದೂ, ಆ ವರ ಜಮೀನುಗಳು ಸ್ವತಃ ರೈತರಲ್ಲದ ಅಥವಾ ಜಮೀನಿನ ಆವಶ್ಯಕತೆಯಿಲ್ಲದವರಿಗೆ ದಾನವಾಗಿ ವಿಲೇವಾರಿಯಾಗುತ್ತಿರುವುವೆಂದೂ, ಇದರಿಂದ ರೈತರುಗಳಿಗೆ ತೊಂದರೆಯಾಗುವ ಸಂಭವವಿರುವುದೆಂದೂ ಶ್ರೀ ರಾಮಣ್ಣನವರು ತಿಳಿಸಿ, ಸರ್ಕಾರದವರು ಶ್ರೀಮನ್ಮಹಾರಾಜರಿಗೆ ಸ್ವಂತಕ್ಕಾಗಿ ಬೇಕಾಗುವಷ್ಟು ಜಮೀನನ್ನು ಬಿಟ್ಟು, ದಾನವಾಗಿ ಕೊಟ್ಟಿರುವ ಮತ್ತು ಇತರ ಜಮೀನನ್ನು ವಶಪಡಿಸಿಕೊಂಡು ಈಗ ವ್ಯವಸಾಯ ಮಾಡುತ್ತಿರುವ ರೈತರಿಗೆ ಹಂಚಬೇಕೆಂದು ಕೋರಿರುತ್ತಾರೆ. ಅಗತ್ಯವಿದ್ದರೆ ಈ ಬಗ್ಗೆ ವಿಶೇಷ ಶಾಸನವನ್ನು ಜಾರಿ ಮಾಡುವಂತೆ ಸಲಹೆ ಮಾಡಲಾಗಿದೆ.

ಮುಖ್ಯ ಮಂತ್ರಿಯವರು ಈ ವಿಚಾರವಾಗಿ ತಾವು ಶ್ರೀಮನ್ಮಹಾರಾಜರೊಡನೆ ಚರ್ಚಿಸುವುದಾಗಿ ತಿಳಿಸಿದರೆಂದು ಹೇಳಲಾಗಿದೆ.

ಬಿಹಾರಿನಲ್ಲಿ ಪ್ರವಾಹದ ಹಾವಳಿ

ಬಿಹಾರಿನ ಬಕ್ಸಾರ್ ಪ್ರದೇಶದಲ್ಲಿ ಕಳೆದ ವಾರ ಪ್ರವಾಹದ ಪರಿಣಾಮವಾಗಿ ೭ ಜನರು ಸತ್ತಿದ್ದು, ೧೨ ಮಂದಿಗೆ ಗಾಯಗಳು ಮುಂತಾದುವು ಉಂಟಾದುವೆಂದು ವರದಿ. ಗೋಡೆ ಕುಸಿದು ಒಬ್ಬ ಹೆಂಗಸೂ ಒಂದು ಮಗುವೂ ಸತ್ತಿರುವರು. ೫೦ ಸಾವಿರ ಜನರಿರುವ ಒಂದು ಪ್ರದೇಶಕ್ಕೆ ಪ್ರವಾಹದ ಹಾನಿ ತಟ್ಟಿದೆ. ಅಲ್ಲಿ ಕೆಲವು ಮನೆಗಳಿಗೆ ನೀರು ನುಗ್ಗಿದೆ. ಬಿಹಾರಿನ ಇತರ ನದಿಗಳು ಇಳಿಮುಖವಾಗುತ್ತಿದ್ದರೂ ಬುಧಿ ಗಂಡಕಿ ನದಿಯು ಉಕ್ಕಿಹರಿಯುತ್ತಿದೆ.

ಅಕ್ಟೋಬರ್ ೧೪ರಂದು ಅಂಬೇಡ್ಕರರಿಗೆ ಬೌದ್ಧ ದೀಕ್ಷೆ

ಭಾರತ ಸರ್ಕಾರದ ಮಾಜಿ ಮಂತ್ರಿ ಡಾ॥ ಬಿ. ಆರ್. ಅಂಬೇಡ್ಕರ್‌ರವರು ಬರುವ ಅಕ್ಟೋಬರ್ ೧೪ರಂದು ನಾಗಪುರದಲ್ಲಿ ಬೌದ್ಧ ಮತವನ್ನವಲಂಬಿಸುವರು. ಬೌದ್ಧ ಭಿಕ್ಷುಗಳು ಈ ಸಮಾರಂಭವನ್ನು ನೆರವೇರಿಸುವರು.

ಇತಿಹಾಸ ಸಂಘದ ಆರಂಭ ಭಾಷಣ

ಮೈಸೂರು ೨೪

ಮಹಾರಾಜಾ ಕಾಲೇಜಿನ ಇತಿಹಾಸ ಸಂಘದ ಆರಂಭ ಭಾಷಣವನ್ನು ನೆನ್ನೆ ಸಂಜೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್. ಚನ್ನಯ್ಯನವರು ಮಾಡಿ, ವಿದ್ಯಾರ್ಥಿಗಳು ದೇಶಾಭಿಮಾನವನ್ನೂ, ಶಿಸ್ತು ಮತ್ತು ಶೀಲಗಳನ್ನೂ ಬೆಳೆಸಿಕೊಂಡು ರಾಷ್ಟ್ರದ ಅಭಿವೃದ್ಧಿಯ ಭಾರವನ್ನು ಹೊರಲು ಸಹಾಯಕವಾಗುವ ಜ್ಞಾನವನ್ನು ಸಂಪಾದಿಸಬೇಕೆಂದು ನುಡಿದರು. ಸಭಿಕರು ಕೇಳಿದ ಪ್ರಶ್ನೆಗಳಿಗೆ ಉತ್ತರವಿತ್ತು, ಕಾಂಗ್ರೆಸ್ಸಿನ ಭವಿಷ್ಯವು ಶುಭ್ರವಾಗಿದೆಯೆಂದು ತಿಳಿಸಿದರು. ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಅವಶ್ಯಕವಾದಾಗ ಎಲ್ಲರೂ ಒಂದಾಗಿ ದೇಶದ ಏಳಿಗೆಯನ್ನು ಸಾಧಿಸುವುದಾಗಿ ತಿಳಿಸಿದರು.

ನೂತನ ಮೈಸೂರಿನ ಮುಖ್ಯ ಮಂತ್ರಿಯು ಯಾರಾಗುವರೆಂಬ ಪ್ರಶ್ನೆಗೆ ಉತ್ತರವಾಗಿ ಈ ವಿಷಯವನ್ನು ಪ್ರಜಾ ಪ್ರಭುತ್ವ ನೀತಿಗೆ ಅನುಗುಣವಾಗಿ ಇತ್ಯರ್ಥಗೊಳಿಸಲಾಗುವುದೆಂದೂ, ಒಮ್ಮತದಿಂದ ಮುಖ್ಯ ಮಂತ್ರಿಯವರನ್ನು ಆರಿಸಲು ಪ್ರಯತ್ನಿಸಲಾಗುವುದೆಂದೂ ಅವರು ಸೂಚಿಸಿದರು. ಮೈಸೂರಿಗೆ ಸೇರಲಿರುವ ಪ್ರದೇಶಗಳ ಪ್ರಜೆಗಳಿಗೆ ಹೃತ್ಪೂರ್ವಕ ಸ್ವಾಗತವನ್ನು ನೀಡಬೇಕೆಂದು ಕೋರಿದರು.

ಪ್ರಾರ್ಥನೆಯನಂತರ, ಉಪಾಧ್ಯಕ್ಷರಾದ ಶ್ರೀ ಎ. ಪಿ. ಶ್ರೀಕಂಠಯ್ಯನವರು ಸ್ವಾಗತ ಭಾಷಣ ಮಾಡಿದರು. ಹಿಂದೂಸ್ತಾನಿ ಗಾಯನವೂ, ಕನ್ನಡ ಗೀತೆಗಳೂ ಆದುವು. ಅಧ್ಯಕ್ಷತೆ ವಹಿಸಿದ್ದ ಶ್ರೀ ಎಂ. ವಿ. ಕೃಷ್ಣರಾಯರು ಭಾಷಣ ಮಾಡಿ ವಿದ್ಯಾರ್ಥಿಗಳಿಗೆ ಹಿತೋಕ್ತಿಯನ್ನಿತ್ತರು. ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಬ್ರಿಟನ್ ಮತ್ತು ಫ್ರಾನ್ಸು ವಿರುದ್ಧ ಕ್ರಮಕ್ಕಾಗಿ ಈಜಿಪ್ಟಿನ ಕರೆ

ಬ್ರಿಟನ್ ಮತ್ತು ಫ್ರಾನ್ಸುಗಳ ವಿರುದ್ಧವಾಗಿ ಕ್ರಮ ಜರುಗಿಸುವ ವಿಷಯವನ್ನು ಪರಿಶೀಲಿಸುವಂತೆ ಭದ್ರತಾ ಸಮಿತಿಗೆ ಈಜಿಪ್ಟು ಸೂಚಿಸಿದೆ.

ತಕ್ಷಣ ಬೇಕಾಗಿದೆ

ಮೈಸೂರು ಸಿಟಿ ಮಂಡಿ ಮೊಹಲ್ಲಾ II ನೇ ಈದಿಗಾ ಬಡಾವಣೆಯಲ್ಲಿರುವ ಕಬೀರ್ ಶ್ರೀರಾಮ ಮಂದಿರದಲ್ಲಿ ದೇವರ ಪೂಜೆ ಮಾಡುವ ಅರ್ಚಕರ ಬೇಕಾಗಿದೆ. ಇಷ್ಟಪಡುವವರು ಮಂದಿರದಲ್ಲಿ ವಿಚಾರಿಸಬಹುದು ಪತ್ರ ದ್ವಾರಾದರೂ ಸರಿ.

Edited, Printed and Published by A. R. Nagarajan at Sadhvi Press D. Subbiah Road, Mysore

ಮೈಸೂರು ದಸರಾ ವಸ್ತು ಪ್ರದರ್ಶನ 1956

(ತಾ॥ 5-10-1956 ರಿಂದ 28-10-1956 ರವರೆಗೆ)

ಈ ವರ್ಷದ ದಸರಾ ವಸ್ತು ಪ್ರದರ್ಶನದ ಮಹಿಳಾ ವಿಭಾಗದ ಅಂಗವಾಗಿ ಈ ಕೆಳಕಂಡ ಸ್ಪರ್ಧೆಗಳನ್ನು ಸ್ತ್ರೀಯರಿಗಾಗಿ ಏರ್ಪಡಿಸಲಾಗಿದೆ:—

(1) ರಂಗೋಲೆ: ಎಳೆ ರಂಗೋಲೆ, ಬಣ್ಣದ ರಂಗೋಲೆ, ಹೂವಿನ ರಂಗೋಲೆ, ಧಾನ್ಯದ ರಂಗೋಲೆ.

(2) ಮಕ್ಕಳ ವಿವಿಧ ವೇಷಗಳು { (1) 5ರಿಂದ 10 ವರ್ಷದೊಳಗಿನ ಬಾಲಕ ಬಾಲಕಿಯರಿಗಾಗಿ (2) 10ರಿಂದ 15 ವರ್ಷದೊಳಗಿನ ಬಾಲಕಿಯರಿಗೆ ಮಾತ್ರ

(3) ಮಕ್ಕಳ ಪ್ರದರ್ಶನ.

(4) ವಸ್ತು ಪ್ರದರ್ಶನದಲ್ಲಿ ಅಡಿಗೆ ಮಾಡುವ ಸ್ಪರ್ಧೆ (Cooking on the spot Competition)

(ಒಂದು ಸಿಹಿ, ಒಂದು ಖಾರ ತಿಂಡಿ, ಕಾಫಿ ಅಥವಾ ಟೀಯನ್ನು ತಯಾರಿಸುವುದು—ಸ್ಪರ್ಧಿಸುವವರು ತಮಗೆ ಬೇಕಾಗುವ ಸಲಕರಣೆ ಮತ್ತು ಪದಾರ್ಥಗಳನ್ನು ತಾವೇ ತರಬೇಕು)

(5) ಮಹಿಳೆಯರ ಕಲಾ ಪ್ರೌಢಿಮಾ ಪ್ರದರ್ಶನ ಸ್ಪರ್ಧೆ (ಮಹಿಳಾ ಸಂಸ್ಥೆಗಳು ಮಾತ್ರ ಭಾಗವಹಿಸಬಹುದು)

20 ವರ್ಷಕ್ಕೆ ಮೇಲ್ಪಟ್ಟ ಮಹಿಳೆಯರಿಗಾಗಿ ಕ್ರೀಡಾ ಸ್ಪರ್ಧೆಗಳು:—

(1) ಮ್ಯೂಸಿಕಲ್ ಚೇರ್ಸ್,
(2) ಅಬ್ಸ್ಟೇಕಲ್ ರೇಸ್,
(3) ಚಮಚ ಮತ್ತು ನಿಂಬೆ ಹಣ್ಣಿನೊಡನೆ ಓಡುವುದು
(4) ಮಡಕೆ ಒಡೆಯುವುದು

ಪ್ರವೇಶ ಧನ:— (ಎಲ್ಲಾ ಸ್ಪರ್ಧೆಗಳಿಗೂ ಸೇರಿ) 0—4—0 ಮಾತ್ರ

ಮೇಲ್ಕಂಡ ಸ್ಪರ್ಧೆಗಳಿಗೆ ಮತ್ತು ಕ್ರೀಡಾ ಸ್ಪರ್ಧೆಗಳಿಗೆ ಸೇರಬಯಸುವ ಮಹಿಳೆಯರು ತಾ॥ 1-10-1956 ರ ಒಳಗೆ, ಪ್ರವೇಶ ಧನದೊಡನೆ ಈ ಕೆಳಗೆ ಕಂಡ ವಿಳಾಸಕ್ಕೆ ಬರೆದು ಹೆಸರುಗಳನ್ನು ತಿಳಿಸಬೇಕಾಗಿ ವಿನಂತಿ.

ಮೈಸೂರು ತಾ॥ 24-9-56

ಪ್ರಧಾನ ಕಾರ್ಯದರ್ಶಿ, ದಸರಾ ವಸ್ತು ಪ್ರದರ್ಶನ ಸಮಿತಿ

ರಿಜಿಸ್ಟರ್ಡ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿ ಪತ್ರಿಕೆ 3 ಕಾಸು

ಚಂದಾ ದರ
ಏಜಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

ಸಂಪುಟ : ೧೨] SADHVI : WEDNESDAY 26—9—1956 ಮೈಸೂರು : ಬುಧವಾರ ೨೬—೯—೧೯೫೬ [ಸಂಚಿಕೆ : ೮೪]

ಬೆಲೆ ಏರಿಕೆ ಪ್ರತಿಭಟನೆಗಾಗಿ ಕಲ್ಕತ್ತದಲ್ಲಿ ಭಾರಿ ಹರತಾಳ

ಬೆಲೆಗಳ ಏರಿಕೆ ವಿರುದ್ಧವಾಗಿ ಕಲ್ಕತ್ತದಲ್ಲಿ ಭಾರಿ ಹರತಾಳ

೧೦ ಲಕ್ಷ ಜನರ ೧ ದಿವಸದ ಮುಷ್ಕರ

ಆಹಾರ ಮತ್ತು ಬಟ್ಟೆ ಮುಂತಾದ ಅವಶ್ಯಕ ಪದಾರ್ಥಗಳ ಬೆಲೆಯು ವಿಪರೀತ ಹೆಚ್ಚಿರುವುದನ್ನು ಪ್ರತಿಭಟಿಸಲು ನೆನ್ನೆ ಕಲ್ಕತ್ತೆಯಲ್ಲಿ ೧೦ ಲಕ್ಷ ಕಾರ್ಮಿಕರು ಮತ್ತು ಮಧ್ಯಮ ವರ್ಗದವರು ೧ ದಿನದ ಮುಷ್ಕರವನ್ನು ನಡೆಸಿದರು. ಅಲ್ಲಿ ವಾಮ ಪಕ್ಷಗಳವರು ಹರತಾಳಕ್ಕೆ ಕರೆಯಿತ್ತಿದ್ದರು.

ಸುಮಾರು ೧,೦೦೦ ಕ್ಕೂ ಹೆಚ್ಚು ಟ್ರಾಂ ಮತ್ತು ಬಸ್ಸುಗಳು ಕೆಲಸ ಮಾಡಲಿಲ್ಲ. ಟ್ಯಾಕ್ಸಿಗಳು ಮತ್ತು ರಿಕ್ಷಾಗಳು ಓಡಾಡಲಿಲ್ಲ. ಸ್ವಯಂಸೇವಕರು ಅಲ್ಲಲ್ಲಿ ನಿಂತು, ಪತ್ರಿಕೆಗಳು ಮತ್ತು ಖೈದ್ಯರ ಕಾರುಗಳನ್ನು ಬಿಟ್ಟು ಉಳಿದವುಗಳನ್ನು ತಡೆದರು. ಜನರು ರೈಲು ರಸ್ತೆ ಮೇಲೆ ಕುಳಿತುದರಿಂದ ಬೆಳಗ್ಗೆ ೭ ಗಂಟೆಗೆ ಹೊರಡಬೇಕಾಗಿದ್ದ ಒಂದು ರೈಲುವಿನಹ ಮತ್ತಾವುಗಳು ಹೊರಡಲಿಲ್ಲ. ಹೊರಗಿನಿಂದ ಬರುವ ರೈಲುಗಳೂ ದೂರದ ಸ್ಟೇಷನ್ನುಗಳಲ್ಲಿ ನಿಂತುವು. ಲೇವಿನಲ್ಲೂ ಕೆಲಸ ನಡೆಯದೆ ಯಾವ ಹಡಗೂ ಹೊರಡಲಿಲ್ಲ. ಪರಿ ವಿಮಾನಗಳ ಸಂಚಾರಕ್ಕೆ ಅಡ್ಡಿಯಾಗಲಿಲ್ಲ. ಪಶ್ಚಿಮ ಬಂಗಾಳಾ ಸರ್ಕಾರದ ಕಛೇರಿಯಲ್ಲೂ, ವ್ಯಾಪಾರ ಸ್ಥಳಗಳಲ್ಲೂ ನೌಕರರು ಇರಲಿಲ್ಲ. ಮುಷ್ಕರದ ಹಿಂದಿನ ದಿನ ೧,೩೦೦ ಜನರನ್ನು ಬಂಧಿಸಲಾಯಿತು.

ತುಂಗಭದ್ರಾ ಬಗ್ಗೆ ಮೈಸೂರು ಮತ್ತು ಆಂಧ್ರಗಳಿಗೆ ಒಪ್ಪಂದ

ತುಂಗಭದ್ರಾ ನೀರಿನ ಹಂಚಿಕೆ ಬಗ್ಗೆ ಮೈಸೂರು ಮತ್ತು ಆಂಧ್ರಗಳಿಗೆ ಒಪ್ಪಂದವಾಗಿರುವುದೆಂದೂ, ಅದರ ಪ್ರಕಾರ ಆ ಜಲಾಶಯದ ನೀರನ್ನು ಮೈಸೂರಿನ ೧,೩೦,೯೦೦ ಎಕರೆ ಮತ್ತು ಆಂಧ್ರದ ೭೭,೧೦೦ ಎಕರೆ ಜಮೀನುಗಳಿಗೆ ಉಪಯೋಗಿಸಲಾಗುವುದೆಂದೂ ಆಂಧ್ರದ ಉಪ ಮುಖ್ಯ ಮಂತ್ರಿ ನೀಲಂ ಸಂಜೀವರೆಡ್ಡಿಯವರು ತಿಳಿಸುತ್ತಾರೆ.

ಬೆಂಗಳೂರು ರೇಡಿಯೊ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಮುಖವೀಣೆ ೭-೧೫ ದೇವರನಾಮಗಳು ೭-೩೦ ಹೆಚ್. ಎಂ. ರಾಮಾರಾವ್-ಕಾವ್ಯವಾಚನ. ಮಧ್ಯಾಹ್ನ ೧೨ ಹೆಚ್. ಮಹಾದೇವಿ-ಕನ್ನಡ ಗೀತೆಗಳು ೧೨-೩೦ ಪಿಟೀಲುವಾದನ ೧ ಹಿಂದಿ ಸಂಗೀತ. ೧-೫೦ ವಾರ್ ಮತ್ತು ಪಿ ಟೀಲು ವಾದನ. ಸಂಜೆ ೬-೩೦ ಹಯಗ್ರೀವಾಚಾರ್-ಹಿಂದೂಸ್ತಾನಿ ಸಂಗೀತ ೭-೧೫ ಜಾನಪದ ಗೀತೆಗಳು. ೭-೩೦ ವಾದ್ಯ ಕಛೇರಿ ಎ ಬಿ ಆರ್. ಗೋವಿಂದಸ್ವಾಮಿ-ಪಿಟೀಲು. ೮-೩೦ ನಿಮ್ಮ ಮೆಚ್ಚಿನ ಗೀತೆಗಳು ೯-೧೫ ಕ್ರೀಡಾ ವಿಮರ್ಶೆ. ೯-೩೦ ರಾತ್ರಿಯ ಮುನ್ನಡಿ-ಕನ್ನಡ ಪ್ರಸಂಗ. ೯-೫೦ ಮಿಸ್ಟಿನ ಹಂಬಲ—ಕನ್ನಡ ನಾಟಕ.

ಕೋಳಿ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ರಜಾ ಶಾಸನಸಭಾ ಉಪ ಚುನಾವಣೆ ಪ್ರಯುಕ್ತ ಕೋಳಿ ನಗರದ ರೆಗ್ಯುಲೇಟೆಡ್ ಮಾರ್ಕೆಟ್ಟಿಗೆ ರಜ ಕೊಡಲಾಗಿದೆ.

ಬೇಲೂರು ಕೊಲೆ ಮೊಕದ್ದಮೆ

ಘಟನೆ ಹಿಂದಿನ ದಿನ ಇಬ್ಬರು ಅಪಾದಿತರ ನಡವಳಿಕೆ ಬಗ್ಗೆ ಸಾಕ್ಷ್ಯ

ಬೆಂಗಳೂರು ೨೬

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಪ್ರಕರಣದಲ್ಲಿ ನೆನ್ನೆ ೫ ಸಾಕ್ಷಿಗಳ ವಿಚಾರಣೆಯಾಯಿತು. ಮೂವರು ಹಿಂದಿನ ದಿನ ಇನ್ಸ್‌ಪೆಕ್ಟರ್ ಪುಟ್ಟಸ್ವಾಮಿಯವರು ಕೇಶವಮೂರ್ತಿ ಗೋವಿಂದರೆಡ್ಡಿ ಬಂಧನ, ಶೋಧನೆ ಮುಂತಾದ ವಿವರಗಳನ್ನು ಪುಷ್ಟೀಕರಿಸಿದರು.

ಮುನಿಸ್ವಾಮಿಚೆಟ್ಟಿ ಎಂಬ ಅಕ್ಕಸಾಲೆಯು ತಾನು ಆಭರಣಗಳನ್ನು ತೂಕ ಮಾಡಿ ಅವುಗಳ ಬೆಲೆಯನ್ನು ಸೂಚಿಸಿದುದಾಗಿ ಹೇಳಿದನು.

ಬಸವರಾಜ್ ಎಂಬ ಮತ್ತೊಬ್ಬ ಸಾಕ್ಷಿಯು ಜೂನ್ ೫ನೇ ತಾರೀಕು ರಾತ್ರಿ ೮ ಗಂಟೆಗೆ ಕೃಷ್ಣನು ತನ್ನ ಶಾಪಿ ಡಿಪ್ಪೊವಿಗೆ ಬಂದು ಅಲ್ಲಿ ಮೊಟಾರು ಸೈಕಲನ್ನು ಬಿಟ್ಟು, ಬೆಳಗಿನ ಝಾವ ಗೇಟು ಹಾರಿ ಬಂದು ಅದನ್ನು ತೆಗೆದುಕೊಂಡು ಹೋಗುವುದಕ್ಕಾಗಿ ತಮ್ಮನ್ನು ಎಬ್ಬಿಸಿದುದಾಗಿ ತಿಳಿಸಿದರು.

ಕೃಷ್ಣ ಮತ್ತು ಗೋವಿಂದರೆಡ್ಡಿಯವರು ಈ ಕೇಸಿನಲ್ಲಿ ಸಿಕ್ಕಿಕೊಂಡಿರುವರೆಂದು ತಮಗೆ ಮೊದಲೇ ಗೊತ್ತಿದ್ದರೆ ತನ್ನ ಡಿಪ್ಪೊವಿಗೆ ಅವರು ಬರುತ್ತಿದ್ದ ವಿಷಯವನ್ನು ತಾವು ಪೋಲೀಸರಿಗೆ ಮುಂಚೆಯೇ ತಿಳಿಸುತ್ತಿದ್ದುದಾಗಿ ಅವರು ನುಡಿದರು.

ಅಕ್ಟೋಬರ್ ೧೫ ರಂದು ಮೈಸೂರಿಗೆ ಹೈದರಾಬಾದು ನೌಕರರು

ಅಕ್ಟೋಬರ್ ೧೫ನೇ ತಾರೀಕು ಹೈದರಾಬಾದಿನ ಮರಾಠವಾಡಾ ಮತ್ತು ಕರ್ನಾಟಕದ ನೌಕರರುಗಳು ಬೊಂಬಾಯಿ ಮತ್ತು ಮೈಸೂರು ಸರ್ಕಾರಿ ನೌಕರಿಗಳಿಗೆ ಹಾಜರಾಗುವರೆಂದು ಗೊತ್ತಾಗಿದೆ.

ಹತ್ತಿ ಗಿರಣಿಗಳಲ್ಲಿ ಅಧಿಕ ಬಟ್ಟೆ ದಾಸ್ತಾನಿನ ಮೇಲೆ ನಿರ್ಬಂಧ

ಒಂದು ತಿಂಗಳ ಸರಾಸರಿ ಉತ್ಪತ್ತಿಗಿಂತ ಹೆಚ್ಚು ಬಟ್ಟೆಗಳನ್ನು ಹತ್ತಿ ಗಿರಣಿಗಳವರು ದಾಸ್ತಾನು ಮಾಡಬಾರದೆಂದು ಭಾರತ ಸರ್ಕಾರದವರು ನಿಷೇಧಾಜ್ಞೆಯನ್ನು ಹೊರಡಿಸಿದ್ದಾರೆ. ಒಟ್ಟು ಬಟ್ಟೆ ವ್ಯಾಪಾರಿಗಳು ೩ ತಿಂಗಳ ದಾಸ್ತಾನಿಗಿಂತ ಹೆಚ್ಚು ಬಟ್ಟೆಗಳನ್ನು ತಮ್ಮ ಬಳಿ ಇಟ್ಟುಕೊಂಡಿರಬಾರದೆಂದೂ ಆಜ್ಞೆ ಮಾಡಲಾಗಿದೆ. ಈ ಆಜ್ಞೆಯನ್ನು ಉಲ್ಲಂಘಿಸಿದವರ ಮೇಲೆ ಕೋರ್ಟಿನಲ್ಲಿ ಕ್ರಮ ಜರುಗಿಸಲಾಗುವುದು. ಬಟ್ಟೆಗಳನ್ನು ಬಚ್ಚಿಡುವುದನ್ನು ತಪ್ಪಿಸಲು ಈ ಕ್ರಮ ಕೈಗೊಳ್ಳಲಾಗಿದೆ.

ನಗರದಲ್ಲಿ ಅಮೆರಿಕಾ ತುಪ್ಪ ಮತ್ತು ಹಾಲಿನ ಹಂಚಿಕೆ

ನಗರದ ಪ್ರಾಥಮಿಕ ಶಾಲಾ ಮಕ್ಕಳಿಗೆ ಹಂಚುವ ಸಲುವಾಗಿ ೨ ವ್ಯಾಗನ್ನಿನಷ್ಟು ಅಮೆರಿಕದ ಹಾಲಿನ ಪುಡಿ ಮತ್ತು ೧ ವ್ಯಾಗನ್ನಿನಷ್ಟು ತುಪ್ಪವನ್ನು ಕೇಂದ್ರ ಸರ್ಕಾರದವರು ಒದಗಿಸುವರೆಂದು ಗೊತ್ತಾಗಿದೆ.

ಅರೇಬಿಯಾ ದೊರೆಯೊಡನೆ ನೆಹರೂರವರ ಸಂಭಾಷಣೆ

ಸೂಯೆಜ್ ವಿವಾದ ಮತ್ತು ಇತರ ವಿಷಯಗಳ ಪರಿಶೀಲನೆ

ಪ್ರಧಾನಿ ನೆಹರೂರವರು ನೆನ್ನೆ ಸಾದಿ ಅರೇಬಿಯಾ ದೊರೆಯೊಡನೆ ೨ ಗಂಟೆ ಕಾಲ ಅವರ ಅರಮನೆಯಲ್ಲಿ ಮಾತುಕತೆ ನಡೆಸಿದರು. ಅದಕ್ಕೆ ಮುಂಚೆ ದೊರೆಗಳ ಉತ್ತರಾಧಿಕಾರಿ ಫೈಸಲ್‌ರವರೊಡನೆ ಸಂಭಾಷಿಸಿದರು. ಸೂಯೆಜ್ ಕಾಲುವೆ ವಿವಾದ ಮುಂತಾದ ಅಂತರರಾಷ್ಟ್ರೀಯ ವಿಚಾರಗಳ ಬಗ್ಗೆ ಚರ್ಚೆಗಳು ನಡೆದುವು. ಸೂಯೆಜ್ ಬಿಕ್ಕಟ್ಟಿನ ಬಗ್ಗೆ ಅರಬ್ ಜನಾಂಗದವರ ಮನೋಗತವನ್ನು ಇಬ್ನ ಸಾದರು ನೆಹರೂರವರಿಗೆ ತಿಳಿಸಿದರೆಂದು ಹೇಳಲಾಗಿದೆ. ನೆಹರೂರವರ ಗೌರವಾರ್ಥವಾಗಿ ದೊರೆಗಳು ಭಾರಿ ಭೋಜನಕೂಟವನ್ನು ಏರ್ಪಡಿಸಿದ್ದರು.

ಪ್ರಧಾನಿ ನೆಹರೂರವರು ಮೊನ್ನೆ ಸಾದಿ ಅರೇಬಿಯಾ ರಾಜಧಾನಿ ರಿಯಾದನ್ನು ತಲಪಿದಾಗ ಅವರಿಗೆ ಅದ್ಭುತ ಸ್ವಾಗತ ನೀಡಲಾಯಿತು. ದೊರೆಯ ಹಿರಿಯ ಮಗ ಫೈಸಲ್‌ರವರು 'ಮರ್ಹಬಾ ನೆಹರೂ ರಸೂಲ್ ಅಲ್ ಸಲಾಂ' (ಶಾಂತಿ ಪ್ರವಾದಿಯಾದ ನೆಹರೂರವರಿಗೆ ಸ್ವಾಗತ) ಎಂದು ಹೇಳುತ್ತಾ ಸ್ವಾಗತ ಬಯಸಿದರು. ವಿಮಾನ ನಿಲ್ದಾಣದಲ್ಲಿ ಅರಬ್ ಮಹಿಳೆಯರು ಘೋಷಾದಲ್ಲಿ ಬಂದಿದ್ದರು. ವಿದೇಶೀ ಪ್ರಮುಖರ ಸ್ವಾಗತಕ್ಕೆ ಮಹಿಳೆಯರು ಬಂದುದು ಇದೇ ಮೊದಲು.

ರಷ್ಯಾ ಮತ್ತು ಬ್ರಿಟನ್ನಿಗೆ ಕೆ. ಸಿ. ರೆಡ್ಡಿಯವರ ಭೇಟಿ

ರಷ್ಯಾ, ಪಶ್ಚಿಮ ಜರ್ಮನಿ ಮತ್ತು ಬ್ರಿಟನ್ನುಗಳಲ್ಲಿ ೩ ವಾರಗಳ ಪ್ರವಾಸ ಕೈಗೊಳ್ಳಲು ಕೇಂದ್ರ ಸರ್ಕಾರದ ಉತ್ಪಾದನಾ ಮಂತ್ರಿ ಕೆ. ಸಿ. ರೆಡ್ಡಿಯವರು ಬರುವ ತಿಂಗಳು ೧೦ ರಂದು ಭಾರತದಿಂದ ತೆರಳುವರೆಂದು ಗೊತ್ತಾಗಿದೆ. ಅವರು ಕಲ್ಲಿದ್ದಲು, ಗೊಬ್ಬರ, ಸರ್ಕಾರದ ಕೈಗಾರಿಕಾ ಉದ್ಯಮಗಳ ಆಡಳಿತ ಮುಂತಾದ ವಿಚಾರಗಳನ್ನು ಪರಿಶೀಲಿಸುವರು. ಈ ದಿನ ಅವರು ಹೈದರಾಬಾದಿಗೆ ಆಗಮಿಸಿ, ಅಲ್ಲಿಂದ ಮೈಸೂರು ಸಂಸ್ಥಾನಕ್ಕೆ ಬಂದು ಇಲ್ಲಿ ೫ ದಿನಗಳವರೆಗೆ ಇರುವರು.

೩೫೦ ಮೂಟೆ ಗೊಬ್ಬರ ಕಳುವು

ಮಂಡ್ಯದ ವ್ಯವಸಾಯ ಇಲಾಖಾ ಗೋಡೌನಿನಿಂದ ೩೫೦ ಮೂಟೆ ಸೀಮೆ ಉಪ್ಪು ಕಳುವಾಗಿರುವುದೆಂದೂ, ಅದರ ಬೆಲೆಯು ೧೧,೦೦೦ ರೂ. ಆಗುವುದೆಂದೂ ವರದಿಯಾಗಿದೆ. ಈ ಸಂಬಂಧದಲ್ಲಿ ಇಬ್ಬರನ್ನು ದಸ್ತಗಿರಿ ಮಾಡಲಾಗಿದೆ.

ಹರಿಕಥಾ ಕಾಲಕ್ಷೇಪ

ಮೈಸೂರು ಸೀತಾವಿಲಾಸ ಅಗ್ರಹಾರದಲ್ಲಿರುವ ಶ್ರೀ ಸೀತಾರಾಮ ದೇವಸ್ಥಾನದಲ್ಲಿ ನಾಳೆಯಿಂದ ಪ್ರತಿ ದಿನ ಸಾಯಂಕಾಲ ೫-೩೦ ಘಂಟೆಗೆ ವೇ॥ ವೇಣುಗೋಪಾಲದಾಸರಿಂದ 'ರುಕ್ಮಾಂಗದ' ಎಂಬ ಹರಿಕಥೆಯನ್ನು ನಡೆಸಲು ಏರ್ಪಡಿಸಿರುತ್ತೆ. ಆಸ್ತಿಕ ಮಹನೀಯರುಗಳು ದಯಮಾಡಿಸಬೇಕೆಂದು ಭಕ್ತಮಂಡಲಿಯವರು ಕೋರಿರುತ್ತಾರೆ.

ವಿಧಾನ ಸೌಧ ಕಟ್ಟಡಕ್ಕಾಗಿ ಜುಲೈವರೆಗೆ ೧¼ ಕೋಟಿ ವೆಚ್ಚ

ಶಾಸನಸಭಾ ಪ್ರಶ್ನೋತ್ತರದಲ್ಲಿ ಮುಖ್ಯ ಮಂತ್ರಿಯವರ ಹೇಳಿಕೆ

ಸ್ವಂ.ವ. ಪ್ರೋ॥] ಬೆಂಗಳೂರು ೨೬

ಈ ದಿನ ವಿಧಾನಸಭೆಯಲ್ಲಿ ಶ್ರೀ ಶಿವಲಿಂಗರೆಡ್ಡಿ ಮತ್ತು ಶ್ರೀ ಬಿ. ನಾರಾಯಣಸ್ವಾಮಿಯವರ ಪ್ರಶ್ನೆಗಳಿಗೆ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಉತ್ತರವಿತ್ತು, ಕಳೆದ ಜುಲೈವರೆಗೆ ವಿಧಾನಸೌಧದ ನಿರ್ಮಾಣಕ್ಕಾಗಿ ೧,೨೫,೧೯,೧೭೮ ರೂ. ವೆಚ್ಚವಾಗಿರುವುದೆಂದೂ, ಸೌಧದ ಮಧ್ಯ ಭಾಗದ ೧೯೨ ಅಡಿ ಎತ್ತರದ ಗೋಪುರಕ್ಕಾಗಿಯೇ ೭,೩೩,೮೮೦ ರೂ. ವೆಚ್ಚ ತಗಲಿದೆಯೆಂದೂ ನುಡಿದರು. ಸೌಧ ನಿರ್ಮಾಣದ ಕಾಂಟ್ರಾಕ್ಟುಗಳನ್ನು ಪುನರ್ವಿಮರ್ಶೆ ಮಾಡಲಾಗುವುದೇ ಎಂಬ ಪ್ರಶ್ನೆಗಾಗಿ, ವೆಚ್ಚದ ಬಗ್ಗೆ ತನಿಖೆ ಸಮಿತಿಯವರು ಆಮೂಲಾಗ್ರ ಪರಿಶೀಲನೆ ನಡೆಸುವರೆಂದು ತಿಳಿಸಲಾಯಿತು. ವಿಧಾನಸೌಧದ ಹಲವು ಕಾರ್ಮಿಕರು ಸಮಿತಿಯ ಮುಂದೆ ಹಾಜರಾಗಲು ಅವಕಾಶ ದೊರೆಯಲಿಲ್ಲವೆಂದು ಸೂಚಿಸಲಾಗಿ ಈ ವಿಚಾರವು ಸರ್ಕಾರಕ್ಕೆ ಗೊತ್ತಿಲ್ಲವೆಂದೂ, ರಹಸ್ಯವಾದ ಸಾಕ್ಷ್ಯವನ್ನು ತೆಗೆದುಕೊಳ್ಳುವುದು ಬಿಡುವುದು ಸಮಿತಿಗೇ ಸೇರಿದ್ದೆಂದೂ ನುಡಿಯಲಾಯಿತು.

ಮೈಸೂರಿನ ಆಯುರ್ವೇದ ಕಾಲೇಜಿನ ವಿಚಾರದ ಪ್ರಶ್ನೆಗೆ ಮುಖ್ಯ ಮಂತ್ರಿಯವರು ಉತ್ತರವಿತ್ತು, ಕಾಲೇಜಿನ ಬಗ್ಗೆ ವಿಚಾರಣಾಗಿದ್ದ ಒಬ್ಬ ಸದಸ್ಯರ ಸಮಿತಿಯು ಮೈಸೂರಿಗೆ ಹೋಗಿ ಅಲ್ಲಿನವರ ಅಭಿಪ್ರಾಯ ತೆಗೆದುಕೊಳ್ಳಬೇಕಾದ ಪ್ರಮೇಯವಿರಲಿಲ್ಲವೆಂದು ಹೇಳಿದರು. ಕಾಲೇಜಿನ ವರ್ಗಾವಣೆ ಬಗ್ಗೆ ಆದಷ್ಟು ಬೇಗನೆ ನಿರ್ಧಾರ ಕೈಗೊಳ್ಳಲಾಗುವುದೆಂದೂ ತಿಳಿಸಲಾಯಿತು.

ಆಹಾರದ ವಿಷಯವಾಗಿ ಪ್ರಶ್ನೆಗಳಿಗೆ ಉತ್ತರವಿತ್ತು, ರೂ. ಗೆ ೨½ ಸೇರಿನಂತೆ ಅಕ್ಕಿ ಒದಗಿಸುವ ಪ್ರಶ್ನೆ ಪರಿಶೀಲನೆಯಲ್ಲಿರುವುದೆಂದೂ, ಎಲ್ಲಾ ತಾಲ್ಲೂಕುಗಳಲ್ಲೂ ಅಕ್ಕಿ ಡಿಪೋಗಳನ್ನು ತೆರೆಯಲಾಗುವುದೆಂದೂ ತಿಳಿಸಲಾಯಿತು.

ಟಿಬೆಟ್ಟಿನಿಂದ ನೇಪಾಳಕ್ಕೆ ಕಪ್ಪಕಾಣಿಕೆ ರದ್ದು

ಚೀನಾ ಮತ್ತು ನೇಪಾಳಗಳಿಗೆ ಕಳೆದ ೨೦ನೇ ತಾರೀಕು ಒಪ್ಪಂದವಾಗಿ ಟಿಬೆಟ್ಟಿನ ಮೇಲೆ ನೇಪಾಳವು ೧೦೦ ವರ್ಷಗಳಿಂದ ಹೊಂದಿದ್ದ ವಿಶೇಷ ಹಕ್ಕನ್ನು ಬಿಟ್ಟುಕೊಟ್ಟಿದೆ. ಟಿಬೆಟ್ಟಿನಿಂದ ವರ್ಷವರ್ಷವೂ ಬರುತ್ತಿದ್ದ ೧೦ ಸಾವಿರ ರೂ. ಕಪ್ಪವನ್ನು ನೇಪಾಳವು ರದ್ದುಮಾಡಿದೆ.

ಅಖಿಲ ಮೈಸೂರು ಹಿಂದೀ ಚರ್ಚಾ ಸ್ಪರ್ಧೆ

ಇದೇ ೩೦ನೇ ತಾರೀಕು ಏರ್ಪಡಿಸಿರುವ ಹಿಂದೀ ಚರ್ಚೆಯ ಜೂನಿಯರ್ ಮತ್ತು ಸೀನಿಯರ್ ಸ್ಪರ್ಧೆಗಳಲ್ಲಿ ಭಾಗವಹಿಸುವ ಅವಧಿಯನ್ನು ನಾಳೆದ್ದು ಸಂಜೆಯವರೆಗೆ ಹೆಚ್ಚಿಸಲಾಗಿದೆ. ಸ್ಪರ್ಧೆಯಲ್ಲಿ ಭಾಗವಹಿಸುವವರು ಆದಷ್ಟು ಜಾಗ್ರತೆ ಪ್ರವೇಶ ಶುಲ್ಕದೊಡನೆ ಅವೇದನ ಪತ್ರಗಳನ್ನು ಹಿಂದೀ ಪ್ರಚಾರ ಸಭೆಯ ಕಾರ್ಯಾಲಯಕ್ಕೆ ತಲುಪಿಸಬೇಕಾಗಿ ಕೋರಲಾಗಿದೆ.

ಉದ್ಯಾನ ಕಲೆಯು ಎಲ್ಲರಿಗೂ ಸಾಧ್ಯವಾದ ಸೌಂದರ್ಯೋಪಾಸನೆ

ಫಲಪುಷ್ಪ ಪ್ರದರ್ಶನದಲ್ಲಿ ಮಹಾರಾಜರ ಭಾಷಣ

ಮೈಸೂರು ೨೬

ನಗರದ ಉದ್ಯಾನ ಕಲಾ ಸಂಘದವರು ಕಳೆದ ೪ ದಿನಗಳಿಂದಲೂ ಕರ್ಜನ್ ಪಾರ್ಕಿನಲ್ಲಿ ನಡೆಸಿದ ಫಲಪುಷ್ಪ ಪ್ರದರ್ಶನದ ಅಂಗವಾಗಿ ನೆನ್ನೆ ಸಂಜೆ ಶ್ರೀಮನ್ಮಹಾರಾಜರು ಬಹುಮಾನಗಳನ್ನು ವಿನಿಯೋಗ ಮಾಡಿದರು

ಶ್ರೀಮತಿ ಗಿರಿಜಮ್ಮನವರಿಂದ ಮಂಗಳಾಚರಣೆಯಾದನಂತರ, ಸಂಘದ ಉಪಾಧ್ಯಕ್ಷರಾದ ಶ್ರೀ ಟಿ. ವೆಂಕಟರಮಣಯ್ಯನವರು ಸ್ವಾಗತ ಭಾಷಣ ಮಾಡಿ ಮೈಸೂರು ನಗರದಲ್ಲಿ ಸಾರ್ವಜನಿಕರ ಸಹಕಾರದಿಂದ ಯಶಸ್ವಿಯಾಗಿ ನಡೆಯುತ್ತಿರುವ ಫಲಪುಷ್ಪ ಪ್ರದರ್ಶನದ ಪ್ರಗತಿಯನ್ನು ವಿವರಿಸಿದರು

ಶ್ರೀಮತಿ ಲೀಲಾವತಿ ಅಂಜನಪ್ಪನವರಿಗೆ ಶ್ರೀಮನ್ಮಹಾರಾಜರವರ ಜಯಚಾಮ ಪಾರಿತೋಷಕವೂ ಮತ್ತು ಇತರ ಅನೇಕ ಬಹುಮಾನಗಳೂ ದೊರೆತುವು.

ಶ್ರೀಮನ್ಮಹಾರಾಜರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು:-

ಗಿಡಮರಗಳ ಮತ್ತು ಇತರ ಸಸ್ಯವರ್ಗಗಳ ಬೆಳವಣಿಗೆಗೂ, ಮನುಷ್ಯನ ಜೀವಕ್ಕೂ ನಿಕಟ ಸಂಬಂಧವಿರುವುದು ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಷಯವಾಗಿದೆ ಮನುಷ್ಯನ ಪ್ರಥಮ ಅವಶ್ಯಕತೆಯೆಂದರೆ ಆಹಾರ ಸಸ್ಯ ವರ್ಗದಿಂದ ದೊರೆಯುವ ಆಹಾರ ಮನುಷ್ಯನಿಗೆ ಎಷ್ಟು ಮುಖ್ಯವೆಂಬುದನ್ನು ಹೆಚ್ಚಾಗಿ ವಿವರಿಸಬೇಕಾಗಿಲ್ಲ. ಆದುದರಿಂದ ಸಸ್ಯ ಪ್ರಾಣದ ಮತ್ತು ಬೆಳವಣಿಗೆಯ ದೃಷ್ಟಿಯಿಂದ ಜೀವವನು ಸಸ್ಯವರ್ಗವನ್ನು ಪೋಷಿಸಬೇಕಾದುದು ಅನಿವಾರ್ಯವೆಂದರೆ ಅತಿಶಯೋಕ್ತಿಯಾಗಲಾರದು

ಅಲ್ಲದೆ ಸಸ್ಯವರ್ಗಕ್ಕೂ ಭೂಮಿಯ ಫಲಶಕ್ತಿಗೂ ವಿಶೇಷ ಸಂಬಂಧವುಂಟು. ಮಳೆಯ ನೀರನ್ನು ತಡೆದು, ಭೂಮಿಗಿಳಿಸಿ ಭೂಮಿಯ ಮೇಲ್ಪದರ ಕೊಚ್ಚಿಕೊಂಡುಹೋಗದೆ ಕಾಪಾಡುವ ಕಾರ್ಯದಲ್ಲಿ ಸಸ್ಯವರ್ಗದ ಪಾತ್ರವು ಬಹಳ ಮುಖ್ಯವಾದುದು ಈ ದೃಷ್ಟಿಯಿಂದ ಸಸ್ಯವರ್ಗದ ರಕ್ಷಣೆ ಮನುಷ್ಯನಿಗೆ ಒಂದು ಕರ್ತವ್ಯವೆಂದೇ ಹೇಳಬಹುದು

ಶ್ರೀಮಾನ್ ವೆಂಕಟರಮಣಯ್ಯನವರು ತಮ್ಮ ಭಾಷಣದಲ್ಲಿ ಉದ್ಯಾನ ಕಲೆಯಿಂದ ಧನಸಂಪತ್ತು, ಹೃದಯೋಲ್ಲಾಸ, ಮತ್ತು ಆರೋಗ್ಯ ಸಾಧನೆ ಇವುಗಳುಂಟಾಗುವುವೆಂದು ಸ್ಪಷ್ಟವಾಗಿ ಹೇಳಿದ್ದಾರೆ ಈ ಅಭಿಪ್ರಾಯವು ಸಮರ್ಥನೀಯವಾದುದು. ಆಹಾರ ಮನುಷ್ಯನ ಪ್ರಥಮ

ವಿಶ್ವದ ಅತ್ಯಂತ ವಯೋವೃದ್ಧ

ಜಗತ್ತಿನಲ್ಲೇ ಅತ್ಯಂತ ವಯೋವೃದ್ಧನೊಬ್ಬನ ವಯಸ್ಸೆಷ್ಟೆಂಬುದನ್ನು ಗೊತ್ತು ಪಡಿಸಲು ನ್ಯೂಯಾರ್ಕಿನ ಪ್ರಮುಖ ವೈದ್ಯರು ತೊಡಗಿರುವರು ವಯೋವೃದ್ಧನು ದಕ್ಷಿಣ ಅಮೆರಿಕದ ಸ್ಥಳೀಯನೆಂದು ಹೇಳಲಾಗಿದೆ. ಅವನು ೪ ಅಡಿ ೪ ಅಂಗುಲ ಎತ್ತರವಿರುವವನು. ಅವನಿಗೆ ಹಲ್ಲುಗಳು ಇಲ್ಲ. ಈಗ ೧೭೭ ವರ್ಷ ವಯಸ್ಸಾಗಿರಬೇಕೆಂದು ಹೇಳಲಾಗಿದೆ. ದಕ್ಷಿಣ ಅಮೆರಿಕದ ವೈದ್ಯರು ಅವನನ್ನು ಪರೀಕ್ಷಿಸಿ, ಅವನು ೧೫೦ ಕ್ಕೂ ಹೆಚ್ಚು ವರ್ಷ ವಯಸ್ಸಿನವನೆಂದು ಹೇಳುತ್ತಾರೆ ೧೭೭೯ರಲ್ಲಿ ಅವನು ಹುಟ್ಟಿದನೆಂದೂ, ಆ ವರ್ಷ ಜಾರ್ಜ್ ವಾಷಿಂಗ್ಟನ್ನರು ಅಮೆರಿಕದ ಪ್ರಥಮ ಅಧ್ಯಕ್ಷರಾಗಿದ್ದರೆಂದೂ ಅವನು ಹೇಳುತ್ತಿರುವನು. ಅವನಿಗೆ ಈಗಾಗಲೇ ೫ ಬಾರಿ ವಿವಾಹವಾಗಿ ಈಗ ಮತ್ತೊಬ್ಬಳ ವಿವಾಹಕ್ಕಾಗಿ ಇದಿರು ನೋಡುತ್ತಿರುವನೆಂದು ಹೇಳಲಾಗಿದೆ

ಬೆಳವಣಿಗೆಗೆ ಎಷ್ಟು ಅವಶ್ಯಕವೋ ಸೌಂದರ್ಯದ ಸಂದರ್ಶನವೂ-ಸಾನ್ನಿಧ್ಯವೂ ಮನುಷ್ಯನ ಆತ್ಮ ಮತ್ತು ಮನೋವಿಕಾಸಕ್ಕೆ ಅಷ್ಟೇ ಅವಶ್ಯಕ ಸೌಂದರ್ಯವೇ ಸತ್ಯ, ಸತ್ಯವೇ ಸೌಂದರ್ಯ ಎಂಬ ತತ್ವದ ಅರ್ಥವನ್ನು ಅರಿಯಬೇಕಾದರೆ ನಾವು ಸೌಂದರ್ಯೋಪಾಸಕರಾಗಲೇಬೇಕು. ಸಾಮಾನ್ಯವಾಗಿ ಎಲ್ಲರಿಗೂ ಸಾಧ್ಯವಾಗುವಂತಹ ಸೌಂದರ್ಯೋಪಾಸನೆ ಎಂದರೆ ಉದ್ಯಾನಕಲೆ ಹೀಗೆ ಉದ್ಯಾನ ನಿರ್ಮಾಣ ಕಾರ್ಯದಲ್ಲಿ ಸಾರ್ವಜನಿಕರು ಅವರವರ ಶಕ್ತ್ಯಾನುಸಾರ ಉದ್ಯುಕ್ತರಾಗಬೇಕೆಂಬುದೇ ನಮ್ಮ ಉದ್ಯಾನಕಲಾ ಸಂಘದ ಮತ್ತು ಇಂದಿನ ಪ್ರದರ್ಶನದ ಉದ್ದೇಶ. ಹಿತಕರವಾದ ವಾಯುಗುಣ, ಫಲವತ್ತಾದ ಭೂಮಿ, ಸಾಕಾದಷ್ಟು ನೀರಾವರಿ ಸೌಕರ್ಯಗಳು ಇವುಗಳಿಂದ ಕೂಡಿರುವ ಮೈಸೂರು ನಗರದಲ್ಲಿ ಉದ್ಯಾನಕಲೆಗೆ ವಾತಾವರಣವು ಬಹಳ ಪ್ರಶಸ್ತವಾಗಿದೆ ಅಲ್ಲದೆ ಇಲ್ಲಿ ಉದ್ಯಾನಕಲಾಭಿಮಾನಿಗಳಿಗೆ ಮೈಸೂರು ಉದ್ಯಾನಕಲಾ ಸಂಘದ ಆದರವೂ, ಸಹಾಯವೂ, ಉತ್ತೇಜನವೂ ಇರುವುದು ಈ ಸೌಲಭ್ಯಗಳನ್ನು ಸಾರ್ವಜನಿಕರು ಸೂಕ್ತ ರೀತಿಯಲ್ಲಿ ಉಪಯೋಗಿಸಿಕೊಂಡು ಉದ್ಯಾನಗಳ ನಿರ್ಮಾಣ ಕಾರ್ಯವನ್ನು ಹೆಚ್ಚುಹೆಚ್ಚಾಗಿ ಕೈಗೊಂಡರೆ, ಉದ್ಯಾನಕಲಾ ಸಂಘದ ಮತ್ತು ನಮ್ಮೆಲ್ಲರ ಆಶಯ ಈಡೇರುವುದರಲ್ಲಿ ಯಾವ ಸಂಶಯವೂ ಇಲ್ಲ

ಧನ್ಯವಾದ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

Edited, Printed and Published by A. R. Nagarajan at Sadhvi Press D. Subbiah Road, Mysore

ಸಂಗೀತ ಕಲಾವಿದರಿಗೆ ಬಿನ್ನವತ್ತಳೆ

ಮೈಸೂರು ೨೬

ನಗರದ ಶ್ರೀ ವರಲಕ್ಷ್ಮಿ ಸಂಗೀತ ಕಲಾ ಶಾಲೆಯ ಸ್ಥಾಪಕರಾದ ಶ್ರೀ ಆರ್ ಚಂದ್ರಶೇಖರಯ್ಯನವರಿಗೆ ಪುರ ನಿವಾಸಿಗಳ ಮತ್ತು ಕಲಾಪ್ರೇಮಿಗಳ ಪರವಾಗಿ ಬಿನ್ನವತ್ತಳೆಯನ್ನು ಸಮರ್ಪಿಸಲು ಸಮಾರಂಭವೊಂದು ನೆನ್ನೆ ಸಹಕಾರ ಭವನದಲ್ಲಿ ನಡೆಯಿತು. ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ಎಸ್ ಚನ್ನಯ್ಯನವರು ಅಗ್ರಾಸನ ವಹಿಸಿದ್ದರು.

ಪ್ರಾರ್ಥನೆಯಾದನಂತರ ಶ್ರೀಮತಿ ಸೀತಾಲಕ್ಷ್ಮಿಯವರು ಸ್ವಾಗತ ಪದ್ಯಗಳನ್ನು ಪಠಿಸಿದರು ಶ್ರೀ ಎಂ ಯಾಮುನಾಚಾರ್ಯರು ಸ್ವಾಗತ ಭಾಷಣ ಮಾಡಿ, ಅತಿಥಿಗಳ ಪರಿಚಯ ಮಾಡಿಕೊಟ್ಟರು ಶ್ರೀಮತಿ ಇಂದಿರಾ ಮತ್ತು ವೃಂದದವರಿಂದ ಗಾಯನವಾಯಿತು ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ಎ. ಕೃಷ್ಣಮೂರ್ತಿರಾಯರು ಬಿನ್ನವತ್ತಳೆಯನ್ನು ಓದಿ ಸುವರ್ಣ ಹಾರದೊಡನೆ ಶ್ರೀ ಚಂದ್ರಶೇಖರಯ್ಯನವರಿಗೆ ಸಮರ್ಪಿಸಿದರು. ಶ್ರೀ ಚಂದ್ರಶೇಖರಯ್ಯನವರು ಸಂಗೀತ, ನಾಟಕ, ಚಿತ್ರಕಲೆ ಮುಂತಾದುವುಗಳಲ್ಲಿ ಪ್ರವೀಣರಾಗಿ, ಅನೇಕ ವಿದ್ಯಾರ್ಥಿಗಳಿಗೆ ಅವನ್ನು ಬೋಧಿಸುತ್ತಿರುವರಲ್ಲದೆ ಪಾರ್ಶ್ವಮಾತ್ರರುಗಳಿಗೂ ಸಹಾ ಕಲಿಸಿ ಯಶಸ್ಸು ಪೊಂದಿರುವುದಕ್ಕಾಗಿಯೂ ಮತ್ತು ಭಾರತದ ಸಂಗೀತ ಅಕಾಡೆಮಿಯ ಕೇಂದ್ರ ಸಮಿತಿಯ ಸದಸ್ಯರಾಗಿ ಆರಿಸಲ್ಪಟ್ಟಿರುವುದಕ್ಕಾಗಿಯೂ ಬಿನ್ನವತ್ತಳೆಯಲ್ಲಿ ಅಭಿನಂದನೆಗಳನ್ನು ಸಲ್ಲಿಸಲಾಯಿತು

ಶ್ರೀಗಳಾದ ಡಿ ಶ್ರೀನಿವಾಸಯ್ಯ, ಡಿ ಆರ್. ಕೃಷ್ಣಮೂರ್ತಿ, ಡಿ ಕೃಷ್ಣಮೂರ್ತಿ ಮುಂತಾದವರು ಭಾಷಣ ಮಾಡಿ ಶ್ರೀ ಚಂದ್ರಶೇಖರಯ್ಯನವರಿಗೆ ಶುಭಾಶಯಗಳನ್ನು ಕೋರಿದರು.

ಸನ್ಮಾನಕ್ಕಾಗಿ ಶ್ರೀ ಚಂದ್ರಶೇಖರಯ್ಯನವರು ಹೃತ್ಪೂರ್ವಕವಾದ ಧನ್ಯವಾದಗಳನ್ನು ಸಲ್ಲಿಸಿ ಮಹಾಜನರು ಸಂಗೀತ ಕಲೆಗೆ ಹೆಚ್ಚಿನ ಪ್ರೋತ್ಸಾಹವನ್ನು ನೀಡಬೇಕೆಂದು ಕೋರಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಗೀತ ಕಲೆಯ ಪ್ರಾಮುಖ್ಯತೆಯನ್ನು ವಿವರಿಸಿ ಮೈಸೂರು ಸಂಸ್ಥಾನದಲ್ಲಿ ಬಹಳ ಹಿಂದಿನ ಕಾಲದಿಂದಲೂ ಸಂಗೀತಕ್ಕೆ ರಾಜ ವಂಶದವರೂ, ಸಾರ್ವಜನಿಕರೂ ನೀಡುತ್ತಿರುವ ಮನ್ನಣೆಯನ್ನು ತಿಳಿಸಿದರು ಪ್ರಜಾಪ್ರಭುತ್ವದ ಈ ಕಾಲದಲ್ಲಿ ಈ ಜವಾಬ್ದಾರಿಯನ್ನು ಮಹಾಜನರು ವಹಿಸಿ, ಸಕಲ ಕಲೆಗಳಿಗೂ ಸೂಕ್ತವಾದ ಉತ್ತೇಜನವನ್ನು ಕೊಡಬೇಕೆಂದು ಕೋರಿದರು

ವಂದನಾರ್ಪಣೆ ಮತ್ತು ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು

ವಿದ್ಯಾ ಗಣಪತಿ ಉತ್ಸವ

ಗಣಪತಿ ಉತ್ಸವದ ಅಂಗವಾಗಿ ನಾಳೆ ಸಂಜೆ ೬ ಗಂಟೆಗೆ ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಮಹಾರಾಜಾ ಕಾಲೇಜಿನ ಶ್ರೀ ಎಸ್ ರಾಮಚಂದ್ರರಾಯರು ವಿಶ್ವಕೋಶರ್ಮಿಯ ಎಂಬ ವಿಷಯವಾಗಿ ಉಪನ್ಯಾಸ ಮಾಡುವರು. ನಾಳಿದ್ದು ವಿದ್ಯಾ ಗಣಪತಿಯ ಉದ್ವಾಸನೆ ಮತ್ತು ಮೆರವಣಿಗೆಗಳು ಇವೆ

ಮೈಸೂರು ಪೇಟೆ ಧಾರಣೆ

ಭತ್ತ ಬಂಗಾರ ಮುತ್ತು ಕೊಯಮತ್ತೂರು ಸಣ್ಣ	[illegible]	[illegible]	೦	[illegible]	[illegible]	[illegible]
ರಸ್ತಾಳಿ	[illegible]	[illegible]	೦	[illegible]	[illegible]	[illegible]
ಕಂಬಾರಿ	[illegible]	[illegible]	[illegible]	[illegible]	[illegible]	[illegible]
ಅಕ್ಕಿ	[illegible]	೦	೦	[illegible]	[illegible]	[illegible]
ರಾಗಿ	[illegible]	[illegible]	೦	[illegible]	[illegible]	[illegible]
ಜೋಳ	[illegible]	[illegible]	೦	[illegible]	[illegible]	[illegible]
ನವಣೆ	[illegible]	೧೦	೦			
ಕಂಬು	[illegible]	[illegible]	೦			
ಕಡಲೆಕಾಯಿ	[illegible]	೦	೦	[illegible]	[illegible]	[illegible]
ಎಳ್ಳು	[illegible]	[illegible]	೦	[illegible]	[illegible]	[illegible]
ಹುರುಳಿ	[illegible]	೦	೦	[illegible]	[illegible]	[illegible]
ಕಡಲೆಬೇಳೆ	[illegible]	[illegible]	[illegible]	[illegible]	[illegible]	[illegible]
ಉದ್ದು	[illegible]	೦	೦			
ಧನಿಯ	[illegible]	೧೦	೦	[illegible]	[illegible]	[illegible]
ಸೀಗೆಕಾಯಿ	[illegible]	೦	೦	[illegible]	೦	[illegible]
ಮೆಣಸಿನಕಾಯಿ	[illegible]	[illegible]	೦	[illegible]	೦	೦
ತೆಂಗಿನಕಾಯಿ ೧೦೦೦	[illegible]	೦	೦	[illegible]	೦	[illegible]

ಹಾಸಿಗೆ-ದಿಂಬು

ಬಹಸ್ಸಿನಲ್ಲಿ ಹತ್ತಿಯಿಂದ ತಯಾರು ಮಾಡುತ್ತೇವೆ

ಬಾಡುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

SRI GAYATHRI TALKIES

From 26-9-56 · For 2 days

M G M's

BETRAYED

(Technicolor)

With:- Lana Turner, Victor Mature & Clarke Gable

ಇಂದ್ರಕೆಫೆ

ಸಯ್ಯಾಜಿರಾವ್ ರಸ್ತೆ, ಮೈಸೂರು.

ಸುಸಜ್ಜಿತವಾದ ಭವ್ಯ ನೂತನ ಫಲಾಹಾರ ಮಂದಿರ

6—9—56ನೇ ಗುರುವಾರ ತೆರೆಯಲಾಗಿದೆ

ಸ್ತ್ರೀಯರಿಗೂ, ಸಂಸಾರಗಳಿಗೂ ಪ್ರತ್ಯೇಕ ಕೊಠಡಿ ವ್ಯವಸ್ಥೆ ಮಾಡಲಾಗಿದೆ

ಮಹಾಜನರ ಪ್ರೋತ್ಸಾಹವನ್ನು ಕೋರಲಾಗಿದೆ

ದಸರಾ ವಸ್ತು ಪ್ರದರ್ಶನ ಸಮಿತಿ ಕಾರ್ಯದರ್ಶಿಗಳವರ ಕಛೇರಿ, ಮೈಸೂರು

ಟೆಂಡರ್ ನೋಟಿಫಿಕೇಷನ್

1956 ನೇ ಅಕ್ಟೋಬರ್ 5 ರಿಂದ 28 ನೇ ತಾರೀಖಿನವರೆಗೆ (ಎರಡು ದಿನಗಳೂ ಸೇರಿ) ನಡೆಯುವ ದಸರಾ ವಸ್ತು ಪ್ರದರ್ಶನ ಕಾಲದಲ್ಲಿ, ವಸ್ತು ಪ್ರದರ್ಶನದ ಆವರಣದ ಪ್ರದೇಶದಲ್ಲಿ 'X' ಬ್ಲಾಕಿನ ಎದುರಿಗೆ 140' x 13' ಅಳತೆಯಲ್ಲಿ ಕಟ್ಟಲಾಗಿರುವ ಹೊಸ ಕಟ್ಟಡದಲ್ಲಿ ಒಂದು ಫಲಾಹಾರ ಮಂದಿರ ಮತ್ತು ಹೋಟೇಲನ್ನು ನಡೆಸಲು ಮೊಹರಾದ ಟೆಂಡರುಗಳನ್ನು 1956 ನೇ ಅಕ್ಟೋಬರ್ 1 ನೇ ತಾರೀಖು ಮಧ್ಯಾಹ್ನ 4 ಘಂಟೆವರೆಗೆ ಸ್ವೀಕರಿಸಲಾಗುವುದು. ಟೆಂಡರುಗಳನ್ನು ಮೊಹರಾದ ಕವರಿನಲ್ಲಿಟ್ಟು, ಕಾರ್ಯದರ್ಶಿ, ದಸರಾ ವಸ್ತು ಪ್ರದರ್ಶನ ಸಮಿತಿ, ಮೈಸೂರು-ಎಂಬ ವಿಳಾಸ ಬರೆಯಬೇಕಲ್ಲದೆ, ಕವರಿನ ಮೇಲೆ " ಫಲಾಹಾರ ಮಂದಿರ ಮತ್ತು ಹೋಟೇಲನ್ನು ನಡೆಸಲು ಟೆಂಡರು " ಎಂದು ಬರೆಯಬೇಕು. ಟೆಂಡರಿನ ಜೊತೆಗೆ 100 ರೂ ಗಳ ನಗದು ಠೇವಣಿಯನ್ನು ಕಳುಹಿಸಬೇಕು ಅಂಗೀಕಾರವಾಗದ ಟೆಂಡರುದಾರರಿಗೆ ಇದನ್ನು ವಾಪಸು ಕೊಡಲಾಗುವುದು. ಹೆಚ್ಚಿನ ವಿವರಗಳಿಗೆ ಬರೆಯಿರಿ:-

ಮೈಸೂರು
25-9-56

ಕಾರ್ಯದರ್ಶಿ,
ದಸರಾ ವಸ್ತು ಪ್ರದರ್ಶನ ಸಮಿತಿ, ಮೈಸೂರು

ಯೌವನದ ಸೌಂದರ್ಯ

ಯೌವನದ ಸೌಂದರ್ಯವನ್ನು ರಕ್ಷಣೆ ಮಾಡುವುದು ಪ್ರತಿಯೊಬ್ಬರ ನೆಚ್ಚಿನ ಆಸೆ

★

ಮೈಸೂರು ಸ್ಯಾಂಡಲ್ ಸಾಬೂನು

★

ನಿಮ್ಮ ಸೊಬಗನ್ನು ಕಾಪಾಡಲು, ವೃದ್ಧಿ ಮಾಡಲು ಒಂದು ನಿಶ್ಚಿತ ಸಾಧನ

★

ಅನೇಕ ಸುಗಂಧ ದ್ರವ್ಯಗಳನ್ನು ಜಾಣತನದಿಂದ ಇದರಲ್ಲಿ ಸೇರಿಸಲಾಗಿದೆ.

★

ಒಮ್ಮೆ ಉಪಯೋಗಿಸಿ ನೋಡಿ

★

ಈ ಸುವಾಸನೆಯ ಸಾಬೂನು ಎಲ್ಲಾ ಪ್ರಮುಖ ವ್ಯಾಪಾರಿಗಳಲ್ಲೂ — ದೊರೆಯುತ್ತದೆ —

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು.

ಮೆಂಬರು : ಐ ಎಸ್. ಟಿ ಎಂ ಎ.

ರಿಜಿಸ್ಟರ್ಡ್ ನಂ. ೭೯೩

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ



ಬ್ರಾಂಕಾಲ್
ಕಾಟ್ಲಸ್ ಮತ್ತು ಗೂರಲು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಕೊಡಗು ಪ್ರದೇಶಗಳಿಗೆ
ಏಜೆಂಟರುಗಳು
ಸತ್ಯ ಅಂಡ್ ಕೋ.,
ಔಷಧಿ ವ್ಯಾಪಾರಿಗಳು
7111, ಚಿಕ್ಕಪೇಟೆ
ಶ್ರೀನಿವಾಸ ಮಂದಿರ ರಸ್ತೆ,
ಬೆಂಗಳೂರು -2

ಬಿಡಿಪ್ರತಿಗೆ ೩ ಕಾಸು

[ಸಂಪುಟ : ೧೫] SADHVI : THURSDAY 27—9—1956 ಮೈಸೂರು : ಗುರುವಾರ ೨೭—೯—೧೯೫೬ [ಸಂಚಿಕೆ : ೫೯]

- ನಗರಕ್ಕೆ ೨೫,೦೦೦ ಪಲ್ಲ ಉತ್ತಮ ಅಕ್ಕಿ ಸರಬರಾಜು -

ಮಹಿಳಾ ಉಳಿತಾಯ ಯೋಜನೆ ಮತ್ತು ಮಕ್ಕಳ ಕೂಟದ ವಾರ್ಷಿಕೋತ್ಸವ

ಶ್ರೀಮನ್ಮಹಾರಾಣಿಯವರ ಅಮೂಲ್ಯ ಭಾಷಣ

ಮೈಸೂರು ೨೬

ಶ್ರೀಮನ್ಮಹಾರಾಣಿ ತ್ರಿಪುರಸುಂದರಮ್ಮಣ್ಣಿಯವರು ನೆನ್ನೆ ಸಂಜೆ ಕೃಷ್ಣರಾಜ ಭವನದಲ್ಲಿ ಮಹಿಳೆಯರ ಉಳಿತಾಯ ಯೋಜನೆ ಮತ್ತು ಮೈಸೂರು ಮಕ್ಕಳ ಕೂಟದ ವಾರ್ಷಿಕೋತ್ಸವದ ಆರಂಭ ಭಾಷಣವನ್ನು ಮಾಡಿದರು. ರಾಜಕುಮಾರಿ ಗಾಯತ್ರೀದೇವಿಯವರೂ ಸಹ ಸಮಾರಂಭದಲ್ಲಿ ಭಾಗವಹಿಸಿದ್ದರು. ನೂರಾರು ಜನ ಮಹಿಳೆಯರೂ, ಮಕ್ಕಳೂ ಸೇರಿದ್ದರು.

ಪ್ರಾರ್ಥನೆಯಾದನಂತರ, ಮಕ್ಕಳ ಕೂಟದ ಅಧ್ಯಕ್ಷಿಣಿ ಶ್ರೀಮತಿ ಲೀಲಾವತಿ ಅಂಜನಪ್ಪನವರು ಸ್ವಾಗತ ಭಾಷಣ ಮಾಡಿ, ಉಳಿತಾಯ ಯೋಜನೆಯಲ್ಲಿ ಮಹಿಳೆಯರು ವಹಿಸುತ್ತಿರುವ ಪಾತ್ರವನ್ನು ವಿವರಿಸಿದರು. ಕಾರ್ಯದರ್ಶಿನಿಯವರಾದ ಶ್ರೀಮತಿ ಜೆಫ್. ಕೈ. ಸರಸ್ವತಿಯವರು ಮಕ್ಕಳಕೂಟದ ವರದಿಯನ್ನು ಒಪ್ಪಿಸಿ ಕೂಟದ ಕಾರ್ಯಕಲಾಪಗಳನ್ನೂ ಮತ್ತು ಉಳಿತಾಯ ಕಾರ್ಯಕ್ರಮದಲ್ಲಿ ಮಕ್ಕಳು ಸಾಧಿಸಿರುವ ಪ್ರಗತಿಯನ್ನೂ ನಿರೂಪಿಸಿದರು. ಸಮಾರಂಭಕ್ಕೆ ಯಶಸ್ಸನ್ನು ಕೋರಿ ಬಂದಿದ್ದ ಶುಭ ಸಂದೇಶಗಳನ್ನು ಶ್ರೀಮತಿ ಕಮಲಂ ಕಳಾ ಪವಾರ್ ರವರು ಓದಿದರು.

ವಿವಿಧ ಸ್ಪರ್ಧೆಗಳಲ್ಲಿ ಜಯಶಾಲಿಗಳಾದವರಿಗೆ ಶ್ರೀಮನ್ಮಹಾರಾಣಿಯವರು ಬಹುಮಾನಗಳನ್ನು ಹಂಚಿದರು.

ಶ್ರೀಮನ್ಮಹಾರಾಣಿಯವರು ತಮ್ಮ ಭಾಷಣದಲ್ಲಿ ಈ ರೀತಿ ತಿಳಿಸಿದರು:—

ದೇಶಾದ್ಯಂತ ಅಧಿಕ ಉಳಿತಾಯ ಯೋಜನೆಯ ಸಂಬಂಧವಾದ ಚಳ್ವಳಿಯ ಸಮಾರಂಭಗಳು ನಡೆಯುವ ಏರ್ಪಾಡು ಸಮಂಜಸವೇ ಸರಿ. ರಾಷ್ಟ್ರದ ಅಭಿವೃದ್ಧಿ ಯೋಜನೆ ಸಾರ್ಥಕವಾಗಬೇಕಾದರೆ ಅಧಿಕ ನೆರವು ಅತ್ಯಗತ್ಯ. ಬಡವರಾಗಲೀ ಬಲ್ಲಿದರಾಗಲೀ ಪ್ರತಿಯೊಬ್ಬ ಪ್ರಜೆಯೂ ಸಹಕರಿಸಿ ಯಥಾಶಕ್ತಿ ಸೇವೆಯನ್ನು ಸಲ್ಲಿಸಬೇಕೆಂಬುದೇ ಈ ಯೋಜನೆಯ ಪ್ರಧಾನವಾದ ಉದ್ದೇಶ. ಜನತೆಯ ಸಂಪೂರ್ಣ ಸಹಕಾರವೇ ಸರ್ಕಾರದ ಶ್ರೇಯಸ್ಸಿಗೆ ಸಾಧನ. ಜನತೆಯಿಂದ ಸಾಲ ಮಾಡಿ ನಮ್ಮ ಅಭಿವೃದ್ಧಿ ಯೋಜನೆಗಳನ್ನು ಕಾರ್ಯಗತ ಮಾಡುವುದು ಅತ್ಯಂತ ನಮಗೆ ಗೌರವವನ್ನು ತರತಕ್ಕದಾಗಿದೆ. ಸ್ತ್ರೀ ಶಕ್ತಿಯು ಆಧಾರವಾಗಿ ಈ ಕಾರ್ಯಕ್ಕೆ ವಿನಿಯೋಗಿಸಲ್ಪಡುತ್ತಿರುವುದು ಯುಕ್ತವೇ ಸರಿ. ಸಂಸಾರದ ಕಾರ್ಯ ನಿರ್ವಹಣೆಯ ಗುರುತರವಾದ ಜವಾಬ್ದಾರಿಯನ್ನು ವಹಿಸಿರುವ ಗೃಹಿಣಿಯರೇ ಉಳಿತಾಯ ಯೋಜನೆಯ ಕ್ಷೇತ್ರದಲ್ಲಿಯೂ ಪ್ರಮುಖ ಪಾತ್ರವನ್ನು ವಹಿಸುವುದು ಅತ್ಯಗತ್ಯವಾಗಿ ಪ್ರಚಾರಗತಕ್ಕದ್ದು ಎಂದು ಕಾಸೂ ಉಳಿತಾಯವಾಗುವುದೆಂದು ನಿರೀಕ್ಷಿಸಬಹುದಾಗಿದೆ. ಮೈಸೂರಿನಲ್ಲಿರತಕ್ಕ ಎಲ್ಲಾ ಮಹಿಳಾ ಸಮಾಜಗಳೂ ಈ ಕಾರ್ಯ-

ಶ್ರೀಮನ್ಮಹಾರಾಣಿಯವರಿಂದ

ಶ್ರೀ ತ್ರಿಪುರಸುಂದರಮ್ಮಣ್ಣಿಯವರು

ವನ್ನು ಮುಂದಿಟ್ಟುಕೊಂಡು ಅಧಿಕ ಉಳಿತಾಯ ಯೋಜನೆಯನ್ನು ಯಶಸ್ವಿಗೊಳಿಸಬೇಕೆಂದು ನನ್ನ ಹಾರೈಕೆ. ಈ ಪವಿತ್ರ ಸನ್ನಿವೇಶದಲ್ಲಿ ಮಕ್ಕಳ ದಿನೋತ್ಸವಗಳಿಂದ ಸಾರ್ವಜನಿಕರ ಗಮನವನ್ನು ಅವರ ಕರ್ತವ್ಯದ ಕಡೆಗೆ ಸೆಳೆಯಲು ಪಂಚವಾರ್ಷಿಕ ಯೋಜನೆಯಲ್ಲಿ ನಿರೀಕ್ಷಿಸಿರುವ ಪ್ರಮಾಣದಲ್ಲಿ ಹಣ ವಸೂಲಾಗುವುದಕ್ಕೆ ಸಹಾಯಕವಾಗಲೆಂದು ಆಶಿಸುತ್ತೇನೆ.

ಜಾತಿ, ನೀತಿ, ಕುಲ ಸಂಬಂಧಗಳ ಭೇದಭಾವಗಳು ಯಾವುದೂ ಇಲ್ಲದೆ, ಪರಿಶುದ್ಧವಾದ, ಸುಖಮಯವಾದ, ಸಹಕಾರ ಮನೋಭಾವದಿಂದ ಕೂಡಿದ ಸಮಾಜ ರಚನೆಯೇ ಭಾರತ ರಾಷ್ಟ್ರದ ಉದ್ದೇಶ. ಇಂತಹ ಭವ್ಯವಾದ ಸಾಮಾಜಿಕ ವ್ಯವಸ್ಥೆಗೆ ಹೊಂದಿಕೊಳ್ಳುವಂತೆ ನಾಡಿನ ಮಕ್ಕಳ ದೈಹಿಕ, ಸಾಮಾಜಿಕ ಶಕ್ತಿಗಳು ಬೆಳೆಯಲು ಅನುಕೂಲಿಸುವಂತೆ ನೋಡಿಕೊಳ್ಳುವ ವಿಚಾರದಲ್ಲಿ ಸಂಸ್ಥಾನದ ವಿದ್ಯಾಭ್ಯಾಸ ಕ್ರಮವನ್ನೇ ಮಾರ್ಪಾಡು ಮಾಡಬಲ್ಲ ಪ್ರಬಲ ಶಕ್ತಿಯುಳ್ಳದ್ದಾಗಿದೆ ಎಂದರೆ ಅತಿಶಯೋಕ್ತಿಯಲ್ಲ.

ಈಗಿನ ವಿದ್ಯಾಭ್ಯಾಸ ಪದ್ಧತಿಯಲ್ಲಿ ಮಕ್ಕಳ ಸಂಖ್ಯೆ ಹೆಚ್ಚು, ಪಠ್ಯ ಪುಸ್ತಕಗಳ ಸಂಖ್ಯೆ ಹೆಚ್ಚು, ವ್ಯಾಸಂಗದ ಅವಧಿ ಕಡಿಮೆ, ಮಕ್ಕಳ ದೇಹ, ಮನಸ್ಸು ಬೆಳೆಯಲು ತಕ್ಕ ಅವಕಾಶವಿಲ್ಲ. ದೇಶಪ್ರೇಮ, ಸಭ್ಯತೆ, ಶೀಲ ಸ್ವಭಾವ, ತ್ಯಾಗ, ಹಿಂದಿನ ಆದರ್ಶ ಸಂಪ್ರದಾಯಗಳಲ್ಲಿ ಭಕ್ತಿ ಬೆಳೆಯಲು ತಕ್ಕ ವಾತಾವರಣವಿಲ್ಲ, ಕೈ ಕೆಲಸ, ಕಾಯಕದ ಘನತೆಯನ್ನು ತಿಳಿಯಲು ಅವಕಾಶವಿಲ್ಲ. ಈ ಎಲ್ಲ ಕಾರಣಗಳಿಂದ ಮಕ್ಕಳ ವಿದ್ಯಾಭ್ಯಾಸ ಪದ್ಧತಿ ಕ್ರಾಂತಿಕಾರಕವಾದ ರೀತಿಯಲ್ಲಿ ಬದಲಾವಣೆ ಆಗಬೇಕಾಗಿದೆ. ಇಷ್ಟರಲ್ಲಿ ಆಹ್ಲಾದಕರವಾದ ಸನ್ನಿವೇಶದಲ್ಲಿ ಸಂತೋಷದಿಂದ ಜ್ಞಾನಾರ್ಜನೆ ಮಾಡುವ ಅವಕಾಶವೆ ಮಕ್ಕಳಿಗೆ ಅನೇಕ ವಿದ್ಯಾ ಸಂಸ್ಥೆಗಳಲ್ಲಿ ಈಗ ದೊರೆಯುತ್ತಿಲ್ಲ. ಈ ಹಿನ್ನೆಲೆಯಲ್ಲಿ ಮೈಸೂರಿನ ಮಕ್ಕಳ ಕೂಟ ಎಷ್ಟು ಘನತರವಾದ ಸೇವೆಯನ್ನು ಸಲ್ಲಿಸುತ್ತಿದೆ ಎನ್ನುವುದು ನಿಮ್ಮೆಲ್ಲರಿಗೂ ತಿಳಿದ ವಿಷಯ. ಸಣ್ಣ ಮಕ್ಕಳು ಸ್ವತಂತ್ರವಾಗಿ, ರಾಷ್ಟ್ರಗೀತೆಯನ್ನೂ, ಭಾವಗೀತೆಗಳನ್ನೂ ಹಾಡುತ್ತ ಆನಂದವಾಗಿ ಆಟವಾಡುವುದರ ಜೊತೆಗೇ ಓದುಬರಹವನ್ನು ಕಲಿಯುವ ಶಿಶುವಿಹಾರಗಳು, ಬಾಲಮಂದಿರಗಳು ಸಹಸ್ರಾರು ಸಂಖ್ಯೆಯಲ್ಲಿ ಸ್ಥಾಪಿತವಾಗಬೇಕಾಗಿದೆ. ಶ್ರಮದಾನದ ವ್ಯಾಯಾಮವನ್ನು, ಉಪಯುಕ್ತವಾದ ಅಂಗಸಾಧನೆಯ ವಿನ್ಯಾಸಗಳನ್ನು, ಕುಲ ವೃತ್ತಿಯ ದೇಶೀಯ ಆಟಗಳನ್ನು ಈ ಮಕ್ಕಳ ಕೂಟದಲ್ಲಿ ಬಳಕೆಗೆ ತರಬೇಕೆಂಬುದು ನನ್ನ ಆಶೆ.

ಮಕ್ಕಳೇ ಮುಂದಿನ ಪ್ರಜೆಗಳು. ಅವರಲ್ಲಿ ಸದ್ಗುಣಗಳು, ಸದಾಚಾರಗಳು ನೆಲೆಸುವಂತೆ ಮಾಡುವುದು ತಾಯಿತಂದೆಗಳ ಕೈಯಲ್ಲಿದೆ. ಈ ಜವಾಬ್ದಾರಿಯನ್ನು ಅರಿತು ನಡೆಯುವುದು ಮಕ್ಕಳಿಗೆ ಅವರ ಮೇಲಿರುವ ಅನುರಕ್ತಿ ಸ್ವತಃ ಜನನಿಯು ಕೇವಲ ಜನ್ಮದಾತೆ ಮಾತ್ರವಲ್ಲದೆ ಆ ವ್ಯಕ್ತಿತ್ವ ಬೆಳೆಸುವವಳು. ಪುರಾಣಗಳಲ್ಲಿ ಧ್ರುವ ಕುಮಾರನಿಗೆ ಆತನ ತಾಯಿಯು ತನ್ನ ಕಷ್ಟಗಳನ್ನು ಸಹಿಸಿಕೊಂಡು ತಪಸ್ಸು ಮಾಡಿ ಸ್ವಾಮಿಯನ್ನು ಮೆಚ್ಚಿಸುವಂತೆ ಪ್ರೇರಿಸಿದ ಹಾಗೆ ಚಿಕ್ಕಂದಿನಿಂದಲೂ ಮಕ್ಕಳಿಗೆ ದೈವ ಭಕ್ತಿ, ಸದಾಚಾರ, ಸದ್ಗುಣಗಳು ನೆಲೆಸುವಂತೆ ಮಾಡುವುದು ತಾಯಿಯರ ಮತ್ತು ಹಿರಿಯರ ಕರ್ತವ್ಯ.

ಶ್ಲೋಕ

ಗರ್ಭಧಾರಣಪೋಷಾಭ್ಯಾಂ
ಪಿತುರ್ಮಾತಾ ಗರೀಯಸೀ॥

ಎಂಬುದಾಗಿ ಪೂರ್ವಿಕರು ಹೇಳಿದ್ದಾರೆ. ತಾಯಿಯ ಮಾತು ಮಕ್ಕಳಿಗೆ ರುಚಿಸುವಷ್ಟು ಮಟ್ಟಿಗೆ ಇತರರ ಮಾತು ರುಚಿಸುವುದಿಲ್ಲವೆನ್ನಬಹುದು. ಆದ್ದರಿಂದ ಈ ಜವಾಬ್ದಾರಿಯನ್ನು ಮನಸ್ಸಿನಲ್ಲಿ ತಂದು ಮಕ್ಕಳನ್ನು ಸದ್ಗುಣಗಳಿಂದ ಪ್ರಜೆಗಳನ್ನಾಗಿ ಮಾಡುವುದಕ್ಕೆ ಅವಶ್ಯಕವಾದ ಸದಾಚಾರ ಕೌಶಲ್ಯಾದಿಗಳನ್ನು ಶ್ರೀ ಚಾಮುಂಡೇಶ್ವರಿಯು ಇನ್ನೂ ಅಧಿಕವಾಗಿ ನಿಮಗೆಲ್ಲಾ ಕರುಣಿಸಿ ಕಾಪಾಡಲೆಂದು ಹಾರೈಸುತ್ತೇನೆ.

ಇದೇ ಸಂಬಂಧವಾಗಿ ವಿವಿಧ ವೇಷ ಸ್ಪರ್ಧೆ, ನೃತ್ಯ, ನಾಟಕ ಲೆಜಿಮ್ ಪ್ರದರ್ಶನ ಮುಂತಾದವು ಏರ್ಪಾಡಾಗಿದ್ದುವು.

ಧನ್ಯವಾದಗಳನಂತರ ರಾಷ್ಟ್ರಗೀತೆಯೊಡನೆ ಸಮಾರಂಭವು ಮುಕ್ತಾಯವಾಯಿತು.

ಜಿಬ್ರಾಲ್ಟರ್ ಬಗ್ಗೆ ಬ್ರಿಟನ್ನಿಗೆ ಹೊಸ ಸಮಸ್ಯೆ

ಭೂಮಧ್ಯ ಸಮುದ್ರದಲ್ಲಿ ಜಿಬ್ರಾಲ್ಟರ್ ಭವಿಷ್ಯದ ವಿಷಯವು ಬ್ರಿಟನ್ನಿಗೆ ಮುಂದಿನ ಹೊಸ ಸಮಸ್ಯೆಯಾಗಬಹುದೆಂದೂ, ಆ ಪ್ರದೇಶದಲ್ಲಿ ರಾಷ್ಟ್ರೀಯ ಭಾವನೆಯು ತೀವ್ರವಾಗಬಹುದೆಂದೂ ಹೇಳಲಾಗಿದೆ. ಸ್ಪೇನಿನ ಸರ್ವಾಧಿಕಾರಿ ಫ್ರಾಂಕೋರವರು ಸೈಪ್ರಸ್ ಮತ್ತು ಸೂಯೆಜ್‌ನ ವಿವಾದವನ್ನು ಪರಿಶೀಲಿಸುತ್ತಿರುವರು.

ಪೊಲೀಸು ಠಾಣೆಗೆ ಬೆಟ್ಟಿಲು ಬಹುಮಾನ

ರಾಜಧಾನಿಯ ಸಜರ್‌ಬಾದ್ ಪೊಲೀಸು ಠಾಣೆಯಲ್ಲಿ ಸುಂದರವಾದ ಹೂ ತೋಟವನ್ನು ಬೆಳೆದ ಸಂದರ್ಭದಲ್ಲಿ ಇಲ್ಲಿನ ಫಲಪುಷ್ಪ ಸಂಘದವರು ಬಹುಮಾನವಿತ್ತಿರುವರಲ್ಲದೆ, ಸಜರ್‌ಬಾದ್ ಯುವಕರ ಸಂಘದವರೂ ಒಂದು ಬೆಳ್ಳಿಯ ಬಟ್ಟಲನ್ನು ಠಾಣೆಗೆ ಬಹುಮಾನವಿತ್ತಿರುವರು.

ನಗರಕ್ಕೆ ೨೫,೦೦೦ ಪಲ್ಲ ಉತ್ತಮ ದರ್ಜೆಯ ಅಕ್ಕಿ

ಕೂಡಲೇ ಡಿಪೋಗಳನ್ನು ತೆರೆಯಲು ಆಹಾರ ಡೈರೆಕ್ಟರರ ಸಲಹೆ

ಮೈಸೂರು ೨೬

ಸಂಸ್ಥಾನದ ಆಹಾರ ಸರಬರಾಜು ಡೈರೆಕ್ಟರಾದ ಶ್ರೀ ಕೆ. ಸಿ. ರಾಮನಾಥಯ್ಯನವರು ನೆನ್ನೆ ನಗರಕ್ಕೆ ಆಗಮಿಸಿ ಇಲ್ಲಿ ಫೇರ್ ಪ್ರೈಸ್ ಡಿಪೋಗಳನ್ನು ತೆರೆಯುವ ಬಗ್ಗೆ ಜಿಲ್ಲಾಧಿಕಾರಿಗಳು, ಪುರಸಭಾಧ್ಯಕ್ಷರು ಮತ್ತು ಇತರ ಅಧಿಕಾರಿಗಳೊಡನೆ ಸಮಾಲೋಚನೆ ನಡೆಸಿದರು. ಮೈಸೂರು ನಗರಕ್ಕೆ ೨೫,೦೦೦ ಪಲ್ಲ ಉತ್ತಮ ದರ್ಜೆಯ ಅಕ್ಕಿಯನ್ನು ಕೊಡಲಾಗುವುದೆಂದೂ ಈಗ ಸೊಸೈಟಿಗಳಲ್ಲಿ ಅಕ್ಕಿ ಮಾರಾಟ ಮಾಡುತ್ತಿರುವ ವಾರ್ಡುಗಳನ್ನು ಬಿಟ್ಟು ಬಾಕಿ ವಾರ್ಡುಗಳಲ್ಲಿ ಕೂಡಲೇ ಡಿಪೋಗಳನ್ನು ತೆರೆಯಲು ಮತ್ತು ಇತರ ಎಲ್ಲಾ ವಾರ್ಡುಗಳಲ್ಲೂ ಅನೇಕ ಶಾಖೆಗಳನ್ನು ಡಿಪೋಗಳನ್ನು ತೆರೆಯಲು ವ್ಯವಸ್ಥೆ ಮಾಡಬೇಕೆಂದೂ ತಿಳಿಸಿದರು. ಇದಕ್ಕಾಗಿ ಪುರಸಭೆಗೆ ೨೫ ಸಾವಿರ ರೂ. ಗಳ ಸಾಲವನ್ನು ಒದಗಿಸುವುದಾಗಿ ಅವರು ಸೂಚಿಸಿದರು.

ನಗರದಲ್ಲಿ ಶಾಸನ ಸಭಾಧಿವೇಶನ

ನವರಾತ್ರಿ ಉತ್ಸವದ ಸಮಯದಲ್ಲಿ ರಾಜಧಾನಿಯಲ್ಲಿ ಬರುವ ತಿಂಗಳು ೭ರಿಂದ ೮ ದಿನಗಳವರೆಗೆ ಸಂಸ್ಥಾನದ ಶಾಸನಸಭಾಧಿವೇಶನವು ನಡೆಯುವುದು. ಟಿನ್ನಪ ಗಣಿ ರಾಷ್ಟ್ರೀಕರಣದ ಮಸೂದೆಯನ್ನು ಇಲ್ಲಿ ಪರಿಶೀಲಿಸಲಾಗುವುದು.

ಅಂತರ ಕಾಲೇಜು ಯುವಜನೋತ್ಸವ

ನಗರದ ವಿಶ್ವವಿದ್ಯಾಲಯದ ಅಂತರ ಕಾಲೇಜು ಯುವಜನೋತ್ಸವ ಸಮಿತಿ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ಮಹಾರಾಜಾ ಕಾಲೇಜಿನಲ್ಲಿ ವೈಸ್‌ಚಾನ್ಸೆಲರ್ ಡಾ॥ ಕೆ. ವಿ. ಪುಟ್ಟಪ್ಪನವರು ಯುವಜನೋತ್ಸವವನ್ನು ಆರಂಭಗೊಳಿಸುವರು. ಇದರ ಅಂಗವಾಗಿ ೩ ದಿನಗಳ ವಿವಿಧ ಕಾರ್ಯಕ್ರಮಗಳಾದ ನಾಟಕ, ಶಾಸ್ತ್ರೀಯ ಸಂಗೀತ, ವಾದ್ಯ ಸಂಗೀತ, ಶಾಸ್ತ್ರೀಯ ನೃತ್ಯ, ರೇಡಿಯೋ ನಾಟಕ ಮತ್ತು ಹಿಂದಿ ಭಾಷಣ ಸ್ಪರ್ಧೆಗಳು ಜರುಗುವುವು.

ಜಾರ್ಡಾನ್ ಮಿಲಿಟರಿ ಠಾಣೆಗಳ ಮೇಲೆ ಇಸ್ರೇಲ್ ಧಾಳಿ

ಹುಸೇ ಪ್ರದೇಶದಲ್ಲಿ ಜಾರ್ಡಾನಿನ ಮಿಲಿಟರಿ ಠಾಣೆಗಳ ಮೇಲೆ ಮೊನ್ನೆ ರಾತ್ರಿ ಇಸ್ರೇಲಿ ಸೈನ್ಯಗಳು ಧಾಳಿ ಮಾಡಿ, ೨೦ ಜನರಿಗೆ ಸಾವು ನೋವುಗಳನ್ನೂ, ಶಸ್ತ್ರಸಜ್ಜಿತ ವಾಹನಗಳಿಗೆ ನಷ್ಟವನ್ನೂ ಉಂಟುಮಾಡಿರುವುದಾಗಿ ವರದಿಯಾಗಿದೆ. ಹಲವಾರು ಠಾಣೆಗಳನ್ನು ಇಸ್ರೇಲಿಗಳು ಒಂದು ರಾತ್ರಿ ಆಕ್ರಮಿಸಿದ್ದರು. ಹುಸೇ ಠಾಣೆಯನ್ನು ನಾಶಪಡಿಸಲಾಯಿತು. ಇಸ್ರೇಲಿನವರ ಕಡೆ ೧೦ ಮಂದಿ ಸತ್ತರೆಂದು ಜಾರ್ಡಾನ್ ಅಧಿಕಾರಿಗಳು ತಿಳಿಸಿರುತ್ತಾರೆ.

ಈ ಬಗ್ಗೆ ಮಾತುಕತೆ ನಡೆಸಲು ವಿಶ್ವಸಂಸ್ಥೆಯ ಪ್ರಧಾನ ಕಾರ್ಯದರ್ಶಿ ಹ್ಯಾಮರ್‌ಶೀಲ್ಡ್ ರು ಜಾರ್ಡಾನ್ ಪ್ರತಿನಿಧಿಗಳನ್ನು ಕರೆದಿದ್ದಾರೆ.

ಬೊಂಬಾಯಿ ಮುಖ್ಯ ಮಂತ್ರಿತ್ವವನ್ನು ಮುರಾರ್ಜಿ ಬಿಡುವುದು ಸಿದ್ಧ

ದ್ವಿ ಭಾಷಾ ಸಂಸ್ಥಾನದ ಮುಖ್ಯಮಂತ್ರಿಯಾಗಲು ಶ್ರೀ ಮೊರಾರ್ಜಿ ದೇಸಾಯಿ ಮುಖ್ಯಮಂತ್ರಿ ಮುರಾರ್ಜಿ ದೇಸಾಯಿಯವರು ಅಪೇಕ್ಷೆ ಹೊಂದಿಲ್ಲವೆಂದೂ, ತಮ್ಮ ಅಧಿಕಾರವನ್ನು ಬಿಡುವ ವಿಷಯವನ್ನು ಅವರು ನೆಹರೂ ಮತ್ತು ಕಾಂಗ್ರೆಸ್ ಹೈಕಮಾಂಡಿಗೆ ತಿಳಿಸಿರುವರೆಂದೂ ಗೊತ್ತಾಗಿದೆ. ಅವರ ಸ್ಥಾನಕ್ಕೆ ಮಂತ್ರಿ ವೈ. ಬಿ. ಚವ್ಹಾಣರವರು ಬರುವ ನಿರೀಕ್ಷೆಯಿದೆ. ಅವರು ಮಹಾರಾಷ್ಟ್ರರು.

ವಿದ್ಯುಚ್ಛಕ್ತಿ ಬಳಕೆಗಾರರ ಸಮ್ಮೇಳನ

ಸಂಸ್ಥಾನದ ವಿದ್ಯುಚ್ಛಕ್ತಿ ಬಳಕೆಗಾರರ ಸಮ್ಮೇಳನವು ಈ ತಿಂಗಳು ಕಡೆಯಲ್ಲಿ ದೊಡ್ಡಬಳ್ಳಾಪುರದಲ್ಲಿ ಸೇರಿ, ಅಧಿಕ [illegible] ವಿದ್ಯುಚ್ಛಕ್ತಿ ಬಳಸುವ ಕೈಗಾರಿಕೆಗಳಿಗೆ ವಿಧಿಸುವ ಹೆಚ್ಚು ದರವನ್ನು ಖಂಡಿಸುವುದು. ಸರ್ಕಾರ ಹೊಸ ದರವನ್ನು ನಿಗದಿಮಾಡುವುದನ್ನೂ, ಇತರ ಕುಂದುಕೊರತೆಗಳನ್ನೂ ಅಲ್ಲಿ ಚರ್ಚಿಸಲಾಗುವುದು.

ಸಂಗೀತ ಕಛೇರಿ

ನಾಳೆ ಬೆಳಿಗ್ಗೆ ಶ್ರೀ ದೊಡ್ಡರಾಮ ದೇವಸ್ಥಾನದಲ್ಲಿ ವಿದ್ಯಾ ಗಣಪತಿ ಮಂಗಳಾರತಿ ಪ್ರಯುಕ್ತ ಮಿ|| ಟಿ. ಪುಟ್ಟಸ್ವಾಮಯ್ಯನವರ ಗಾಯನ, ಮಿ|| ಎಸ್. ಮಹದೇವಪ್ಪನವರ ಪಿಟೀಲು, ಮಿ|| ವಿ. ಎಸ್. ರಾಜಗೋಪಾಲ್‌ರವರ ಮೃದಂಗ ಮತ್ತು ಮಿ|| ಸಿ. ಜಿ. ಲಕ್ಷ್ಮೀನಾರಾಯಣರವರ ಮೋರ್ಚಿಂಗ್ ಸಹಿತ ಈ ಸಂಜೆ ೭ ಗಂಟೆಗೆ ಜರುಗುವುದು. ಪೌರಸಭಾಧ್ಯಕ್ಷ ಶ್ರೀ ಎ. ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು.

ಭದ್ರಾವತಿ ಕಬ್ಬಿಣದ ಕಾರ್ಖಾನೆ ಕಾರ್ಮಿಕರಿಗೆ ಹೆಚ್ಚು ಸಂಬಳ

ಭದ್ರಾವತಿಯ ಕಬ್ಬಿಣ [illegible] ಉಕ್ಕಿನ ಕಾರ್ಖಾನೆ ಕೆಲಸಗಾರರ ಸಂಬಳದ ಶ್ರೇಣಿಯನ್ನು ಪುನರ್ವಿಮರ್ಶೆ ಮಾಡಲು ಸರ್ಕಾರದವರು ನಿರ್ಧರಿಸಿರುತ್ತಾರೆಂದು ಗೃಹ ಮಂತ್ರಿ ಶ್ರೀ ಟಿ. ಸಿದ್ಧವೀರಪ್ಪನವರು ಶಾಸನ ಸಭೆಯಲ್ಲಿ ತಿಳಿಸಿರುತ್ತಾರೆ.

ರೈಲು ನೌಕರರಿಗೆ ಹಬ್ಬದ ದಿನಗಳಿಗಾಗಿ ಸಾಲ

೩ ಮತ್ತು ೪ನೇ ವರ್ಗಗಳ ರೈಲ್ವೆ ನೌಕರರಿಗೆ ಹಬ್ಬದ ಹಿಂದಿನ ದಿನಗಳಲ್ಲಿ ೫೦ ಮತ್ತು ೩೦ ರೂ. ಸಾಲವನ್ನು ಕೊಡಲು ರೈಲ್ವೆ ಬೋರ್ಡಿನವರು ನಿರ್ಧರಿಸಿರುತ್ತಾರೆ. ೩೦೦ ರೂ. ಗಿಂತ ಕಡಿಮೆ ವರಮಾನ ಬರುವವರಿಗೆ ಈ ಸೌಲಭ್ಯವು ದೊರೆಯುವುದು. ಅದನ್ನು ವರ್ಷಕ್ಕೆ ಒಂದು ಬಾರಿ ಕೊಟ್ಟು, ಕಂತುವಾರಾಗಿ ವಾಪಸು ಪಡೆಯಲಾಗುವುದು.

೧ ಮೈಲಿ ಎತ್ತರದ ಭಾರಿ ಕಟ್ಟಡ

ಅಮೇರಿಕದ ಚಿಕಾಗೊ ನಗರದಲ್ಲಿ ಭೂಮಟ್ಟದಿಂದ ೧ ಮೈಲಿ ಎತ್ತರದ, ಭವನವನ್ನು ಉಕ್ಕು ಮತ್ತು ಗಾಜಿನಿಂದಲೇ ನಿರ್ಮಿಸಲು ಅಮೇರಿಕದ ಫ್ರಾಂಕ್ ಲಾಯ್ಡ್ ರೈಟ್ ಎಂಬ ಶಿಲ್ಪಿಯು ಯೋಚಿಸುತ್ತಿರುವನು. ಮಧ್ಯದಲ್ಲಿ ಕೆಳಗಿನಿಂದ ಮೇಲಿನವರೆಗೆ [illegible] ಕಟ್ಟಡವಿದ್ದು, ಅದರ ಸುತ್ತಲೂ ವಾಸದ ಮನೆಗಳಿರುವುವೆಂದು ಹೇಳಲಾಗಿದೆ. ಇದು ಸದ್ಯ [illegible], ಜಗತ್ತಿನಲ್ಲೇ ಅತ್ಯಂತ ಎತ್ತರವಾದ ಎಂಪೈರ್ ಸ್ಟೇಟ್ ಭವನಕ್ಕೆ ೪ರಷ್ಟು ಆಗುವುದೆಂದು ಗೊತ್ತಾಗಿದೆ

ಸುಂಟರಗಾಳಿಯಂತಹ ನೀರಿನ ಕಂಬದಿಂದ ಊರಿಗೆ ನಷ್ಟ

ಬಿಹಾರಿನ ಮಾಂಘೀರ್ ಜಿಲ್ಲೆಯ ಸೂರಜ್‌ಘರಾ ಎಂಬ ಗ್ರಾಮದ ಮೇಲೆ ಕಳೆದ ಸುಮಾರು ಸುಂಟರಗಾಳಿಯಂತೆ ತಿರುಗುತ್ತಿದ್ದ ಭಾರಿ ನೀರಿನ ಕಂಭವೊಂದು ಹಾದು ಹೋಗಲಾಗಿ ಇಡೀ ಊರಿಗೆ ಅಪಾರ ನಷ್ಟವಾಯಿತೆಂದು ಹೇಳಲಾಗಿದೆ. ಮನೆಗಳ ಹೆಂಚಿನ ಛಾವಣಿಗಳು ಹಾರಿಹೋದುವು. ಮರಗಳು ಬುಡಮೇಲಾದುವು. ೯ ಮನೆಗಳು ನೆಲಸಮವಾದುವು. ಅದಕ್ಕೆ [illegible] ಬಂದ ಹೆಂಗಸೊಬ್ಬಳು ಅನಾಮತ್ತು ಭೂಮಿಯಿಂದ ಎತ್ತಲ್ಪಟ್ಟು ದೂರಕ್ಕೆ ಹೋಗಿ ಬಿದ್ದಳು. ವಾತಾವರಣದಲ್ಲಿ ಕಡಿಮೆ ಒತ್ತಡವುಂಟಾದಾಗ ಸಮುದ್ರ, ನದಿ ಅಥವಾ ನೀರಿನ ಜಲಾಶಯಗಳಲ್ಲಿ ಆವಿಯಾದ ನೀರು ಸ್ತಂಭಾಕಾರದ ಮೋಡದಂತೆ ರೂಪುಗೊಂಡು ಗಿರ್ರನೆ ಸುತ್ತುತ್ತಾ ದಾರಿಯಲ್ಲಿ ಸಿಕ್ಕಿದುದನ್ನು ಎತ್ತಿಕೊಂಡು ಹೋಗುವುದು. ಈಚೆಗೆ [illegible] ದಿನಗಳ ಹಿಂದೆ ಜಶೋರ್ ಜಿಲ್ಲೆಯ [illegible] ಕಡೆ ಇಂತಹ ಕಂಬಗಳು ಎದ್ದಿದ್ದವು. [illegible] ಬಂಗಾಳದಲ್ಲಿ ಈ ಪ್ರಸಂಗಗಳು [illegible]

ಜಾತಿ ದ್ವೇಷ ಪ್ರಚೋದನೆ ಬಗ್ಗೆ ಪತ್ರಿಕೆಗಳ ಮೇಲೆ ನಿಷೇಧ

ಪತ್ರಿಕೆಗಳ ಮೂಲಕ [illegible] ದ್ವೇಷ ಪ್ರಚೋದನೆಯನ್ನು [illegible] ಕೇಂದ್ರ ಸರ್ಕಾರದವರು ಶಾಸನ ಮಾಡುವ ವಿಷಯವನ್ನು ಪರಿಶೀಲಿಸುತ್ತಿದ್ದಾರೆಂದು ವರದಿಯಾಗಿದೆ.

ಶ್ರೀ ವಿದ್ಯಾ ಗಣಪತಿ ಪೂಜೆ

ನಂಜನಗೂಡು ಪ್ರೌಢಶಾಲೆಯ ೩ನೇ 'ಎ' ತರಗತಿ ವಿದ್ಯಾರ್ಥಿಗಳು ವಿದ್ಯಾ ಗಣಪತಿ ಮಂಗಳಾರತಿಯನ್ನು ವಕೀಲರಾದ ಶ್ರೀ ಎಸ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಡೆಸಿದರು. ಪ್ರಾರ್ಥನೆಯಾದನಂತರ, ಹೆಡ್ಮಾಸ್ಟರಾದ ಶ್ರೀ ಸಿ. ಕೆ. ಲಕ್ಷ್ಮೀನಾರಾಯಣರಾಯರು ಮಾತನಾಡಿ, ವಿದ್ಯಾರ್ಥಿಗಳು ಶಿಸ್ತು ಮತ್ತು ವಿಧೇಯತೆಯನ್ನು ಕಲಿಯಬೇಕೆಂದೂ, ಈಗಿನ ವಿದ್ಯಾರ್ಥಿಗಳು ತಾವೇ ಬಹಳ ತಿಳಿದವರಂತೆ ಸ್ವೇಚ್ಛಾವರ್ತನೆ ಮಾಡುವುದು ತಪ್ಪದಿದ್ದರೆ ದೇಶಕ್ಕೆ ದೊಡ್ಡ ಹಾನಿಯೆಂದೂ ಹಿತವಚನಗಳನ್ನಿತ್ತರು. ಮಂಗಳಾರತಿ ಮತ್ತು ಸಹ ಉಪಾಧ್ಯಾಯರಾದ ಶ್ರೀ ಬಿ. ನಂಜುಂಡಸ್ವಾಮಿಯವರಿಂದ ವಂದನಾರ್ಪಣೆಯಾಗಿ ಸಮಾರಂಭವು ಮುಕ್ತಾಯವಾಯಿತು.

ಮೋತಿಲಾಲ್ ಟಾಕೀಸ್
28-9-56 ರಿಂದ : ಪ್ರತಿ ದಿನ 3 ಆಟಗಳು
ಜೆಮಿನಿಯವರ ಹಿಂದಿ ಚಿತ್ರ
ಇನ್ಸಾನಿಯತ್
ಪಾತ್ರ : ದಿಲೀಪ್‌ಕುಮಾರ್, ದೇವ್‌ಆನಂದ್, ಬೀನಾರಾಯ್, ಆಗಾ, ಜಿಪ್ಪಿ
ಸಂಗೀತ : ಸಿ. ರಾಮಚಂದ್ರ
ನಿರ್ದೇಶನ : ಎಸ್. ಎಸ್. ವಾಸನ್

Edited, Printed and Published by A. R. Nagarajan at Sadhvi Press D. Subbiah Road, Mysore

THE NATIONAL INSTITUTE OF COMMERCE,
1677, Old Mysore Bank Road, Mysore
FRESH ADMISSIONS for TYPEWRITING and SHORT-HAND are now being received during the mornings & evenings. For particulars apply sharp.

ವುಡ್‌ಲ್ಯಾಂಡ್ಸ್ ★ 28—9—56ನೇ ಶುಕ್ರವಾರದಿಂದ ಅನೇಕ ಪ್ರಾರಂಭ
ಪ್ರತಿದಿನ 3 ಆಟಗಳು ಸಂಜೆ 3, 6-30 ಮತ್ತು 9-30ಕ್ಕೆ
ಜೆಮಿನಿಯವರ ಕಂಪೆನಿಯ ಹಿಂದಿ ಚಿತ್ರ ★ ದೇವ್‌ತಾ ★
ತಾರಾಗಣ : ಅಂಜಲಿದೇವಿ, ಗಣೇಶ್, ವೈಜಯಂತಿಮಾಲಾ, ಬಿಸಿಗುಪ್ತ, ಕುಮಾರಿ ಕಮಲ, ಆಗಾ ಮತ್ತು ತಂಬಿಯಾರ್
ಸಂಗೀತ : ಸಿ. ರಾಮಚಂದ್ರ :: ನಿರ್ದೇಶನ : ಶ್ರೀಧರ್
ಗೀತಾ ಕಲಿಕೆ ನೃತ್ಯಗಳು
ನೋಡಲು ನಾಲ್ಕು ವಾರ ಎಲ್ಲಾ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಚಾಮುಂಡೇಶ್ವರಿ ಟಾಕೀಸ್
28-9-56ರಿಂದ . ಅನೇಕ ಪ್ರಾರಂಭ : ಪ್ರತಿ ದಿನ 3 ಪ್ರದರ್ಶನ
[illegible]

ಪಾಕ್ಷಿಕ — ಒರುನಾಳ್
(ಬಾಳಿನಲ್ಲಿ ಒಂದು ದಿನ)
ನಟವರ್ಗ:— ಶಿವಾಜಿ ಗಣೇಶ್, ಜಿ. ವರಲಕ್ಷ್ಮಿ, ರಾಜಸುಲೋಚನ, ವಿ. ಕೆ. ರಾಮಸ್ವಾಮಿ ಮತ್ತು ಫ್ರೆಂಡ್ ರಾಮಸ್ವಾಮಿ
— ನಡಿಕರ್ ಪಿಕ್ಚರ್ಸ್ ನಿರ್ಮಿತ
ನಾಲ್ಕು ವಾರದ ಎಲ್ಲಾ ಪಾಸ್ [illegible] ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

SRI GANESH TALKIES
FROM 27—9—56 : For 2 Days Only
★ ANYTHING CAN HAPPEN ★
Featuring Jose Ferrer and Kim Hunter
The Most Hilarious Comedy Hit
Gala Release On 29—9—56 :: Daily 3 Shows
PARAMOUNT's
THE COURT JESTER
(In Vistavision - Technicolor)
Starring- Danny Kaye, Glynis John & Angela Lansbury
(The King-sized comedy hit of the year)
All complimentaries are suspended


ಒಲಂಪಿಯಾ
28-9-56 ರಿಂದ : ಅನೇಕ ಪ್ರಾರಂಭ
ಪ್ರತಿದಿನ 3 ಆಟಗಳು.
ಕಳ್ಳನನ್ನು ಅವನು ಹಿಂಬಾಲಿಸುತ್ತಿದ್ದ—
ಅವನೇ ಕಳ್ಳನೆಂದು ಹಿಂಬಾಲಿಸಿದರು
[illegible]
ಸಿ. ಐ. ಡಿ.
ಪಾತ್ರ :— ದೇವಾನಂದ್, ಶಕೀಲ, ಜಾನಿವಾಕರ್, ವಹಿದ ರೆಹಮಾನ್
ಸಂಗೀತ :— ಓ. ಪಿ. ನಯ್ಯಾರ್
ನಿರ್ದೇಶನ :— ರಾಜ್ ಖೋಸ್ಲಾ

ಪ್ರಭುದೇವಾ ಥಿಯೇಟರ್
(ಸದ್ಯಾ ಟಾಕೀಸ್)
29—9—56ನೇ : ಶನಿವಾರದಿಂದ : ಅನೇಕ
ಪ್ರತಿ ದಿನ ಮೂರು ಪ್ರದರ್ಶನಗಳು
ರಾಜರಾಜೇಶ್ವರಿ ಫಿಲಂ ಕಂಪೆನಿಯವರ ತಮಿಳು ಚಿತ್ರ
★ ನಾಗಪಂಚಮಿ
ಪಾತ್ರ:— [illegible], ಕಣ್ಣಾಂಬ, ಎಸ್. ವರಲಕ್ಷ್ಮಿ, ಅಂಜಲಿದೇವಿ, [illegible] ಮುಂತಾದವರು

ಪದ್ಮ ★ 28—9—56 ರಿಂದ : ಅನೇಕ ಪ್ರಾರಂಭ : ದಿನವೂ 3 ಪ್ರದರ್ಶನಗಳು
ವಿಜಯಾ [illegible] ಸುಪ್ರಸಿದ್ಧ ಪೌರಾಣಿಕ ಕನ್ನಡ ಚಿತ್ರ
[illegible] ★
ವಿತರಕರು :— ವಿಜಯ ಪಿಕ್ಚರ್ಸ್ ಸರ್ಕ್ಯೂಟ್ ಬೆಂಗಳೂರು — [illegible]

ಅಂಕ್ಪೋಟೀ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತನ್ನಿತ್ತು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬಿಡಿಸ ಪತ್ರಿಕೆ 3 ಕಾಸು

ಚಂದಾದರ
ಏಜೆಂಟರುಗಳ ಮೂಲಕ
ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ
ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

[ಪುಟ : ೦೫] SADHVI : FRIDAY 28—9—1956 ಮೈಸೂರು : ಶುಕ್ರವಾರ ೨೮—೯—೧೯೫೬ [ಸಂಚಿಕೆ : ೫೫

ಪುರಸಭೆ ಉಪಚುನಾವಣೆಯಲ್ಲಿ ಪಿ.ಎಸ್.ಪಿ.ಯ ಜಯ

ಅರಮನೆಯಲ್ಲಿ ನವರಾತ್ರಿ ಉತ್ಸವದ ಕಾರ್ಯಕ್ರಮ

[illegible] ನೇ ತಾರೀಕು ಮಧ್ಯಾಹ್ನ ೩-೪೫ಕ್ಕೆ ಜಂಬೂ ಸವಾರಿ

ಮೈಸೂರು ೨೮

ಈ ವರ್ಷದ ನವರಾತ್ರಿ ಉತ್ಸವವು ಬರುವ [illegible] ನೇ ತಾರೀಕು ಅರಮನೆಯಲ್ಲಿ ಆರಂಭವಾಗಿ [illegible] ನೇ ತಾರೀಕಿನವರೆಗೆ ನಡೆಯುವುದು. ೫ ನೇ ತಾರೀಕು ಬೆಳಗ್ಗೆ ೧೦-೧೫ಕ್ಕೆ ಮಹಾರಾಜರು ಸಿಂಹಾಸನಾರೋಹಣ ಮಾಡುವರು. ೧೪ ನೇ ತಾರೀಕು ಮಧ್ಯಾಹ್ನ ೩-೪೫ಕ್ಕೆ ಜಂಬೂಸವಾರಿ ಉತ್ಸವವು ಜರುಗುವುದು. ಉತ್ಸವದ ಕಾರ್ಯಕ್ರಮವು ಈ ರೀತಿ ಇದೆ:—

೫ನೇ ತಾರೀಕು ಸಂಜೆ ೬ ಗಂಟೆಗೆ ಪಟ್ಟದ [illegible] ಮತ್ತು ಕುದುರೆಗಳು ಸೋಮೇಶ್ವರ ದೇವಸ್ಥಾನಕ್ಕೆ ಬಿಜಯ ಮಾಡುವುವು. ೭ ಗಂಟೆಗೆ ದರ್ಬಾರ್ ಸಭೆ ನಡೆಯುವುದು. ಮಾರನೇ ದಿವಸದಿಂದ [illegible] ನೇ ತಾರೀಕಿನವರೆಗೂ ಬೆಳಗ್ಗೆ ೮ ಮತ್ತು ಸಂಜೆ ೬ ಗಂಟೆಗೆ ಪಟ್ಟದ ಆನೆ ಕುದುರೆಗಳು ಸೋಮೇಶ್ವರ ದೇವಾಲಯಕ್ಕೆ ಬಿಜಯ ಮಾಡುವುವು. ಸಂಜೆ ೭ ಗಂಟೆಗೆ ರಾಜ ಸಭೆಗಳು ಜರುಗುವುವು.

೧೩ನೇ ತಾರೀಕು ಬೆಳಗ್ಗೆ ೬-೪೫ಕ್ಕೆ ಪಟ್ಟದ [illegible] ಕುದುರೆಗಳು ಮತ್ತು ಆಯುಧಗಳು ಸೋಮೇಶ್ವರ ದೇವಾಲಯಕ್ಕೆ ತೆರಳಿ ೭-೪೫ಕ್ಕೆ ಅರಮನೆಗೆ ಬಿಜಯ ಮಾಡುವುವು. ನಂತರ ಆಯುಧ, [illegible], ಕುದುರೆ ಮೊದಲಾದುವುಗಳ ಪೂಜೆ ನಡೆಯುವುದು. ಸಂಜೆ ೭ ಗಂಟೆಗೆ ರಾಜ ಸಭೆ ಜರುಗುವುದು.

ಮಾರನೇ ದಿನ ಪ್ರಾತಃಕಾಲ ಪೂಜೆ ಬಳಿಕ ನಂತರ ೯-೩೦ಕ್ಕೆ ಆಯುಧ, ಆನೆ, ಕುದುರೆ ಮೊದಲಾದುವು ಬನ್ನಿಮಂಟಪಕ್ಕೆ ಬಿಜಯಮಾಡುವುವು. ಅಂದು ಸಾಯಂಕಾಲ ೩-೪೫ಕ್ಕೆ ಜಂಬೂ ಸವಾರಿಯು ಅರಮನೆಯಿಂದ ಹೊರಡುವುದು.

[illegible]ರಿಯ ಶಾಸನಸಭಾ ಉಪ ಚುನಾವಣೆ ಆಯ್ಕೆ ರದ್ದು

ಹಿರಿಯ ಶಾಸನ ಸಭೆಗೆ ಬೆಂಗಳೂರು ಜಿಲ್ಲಾ [illegible]ತ್ರದಿಂದ ನಡೆದ ಉಪ ಚುನಾವಣೆಯಲ್ಲಿ [illegible]ಬಿಂದ ಶ್ರೀ ಎಸ್. ಆರ್. ಗುರು [illegible] ಶ್ರೀ ಬಿ. ಎಂ. ಕೃಷ್ಣಮೂರ್ತಿಯವರುಗಳ [illegible]ಯನ್ನು ಚುನಾವಣಾ ನ್ಯಾಯಮಂಡಲಿ [illegible] ರದ್ದುಪಡಿಸಿರುತ್ತಾರೆ. ಶ್ರೀ ಆರ್ [illegible]ನವರು ತಕರಾರು ಅರ್ಜಿಯನ್ನು ಸಲ್ಲಿಸಿದ್ದರು.

ಅವಶ್ಯ ಸೇವಾ ತಿದ್ದುಪಡಿ ಮಸೂದೆ

[illegible]ಧಾನ ಸಭೆಯಲ್ಲಿ ಕಳೆದ ಮಂಗಳವಾರ [illegible]ಯೋಗ ಮಂತ್ರಿ ಶ್ರೀ ಎ. ಜಿ. ರಾಮಚಂದ್ರ [illegible]ವರು ವಿದ್ಯುಚ್ಛಕ್ತಿ ಮತ್ತು ನೀರು ಸರಬರಾಜು ಇಲಾಖೆಗಳು ಇತರ ಸಾರ್ವಜನಿಕ ಸೇವಾ [illegible]ಖೆಗಳಂತೆ ಅವಶ್ಯಕ ಸರ್ವಿಸ್ಸಿನವುಗಳೆಂದ [illegible]ಸುವ ತಿದ್ದುಪಡಿ ಮಸೂದೆಯನ್ನು ಮಂಡಿ[illegible]ಸು. ಅದರಂತೆ ಆ ಇಲಾಖೆಯ ನೌಕರರು ಮುಷ್ಕರವನ್ನು ನಡೆಸುವಂತಿಲ್ಲ ನ್ಯಾಯಬದ್ಧವಲ್ಲ.

ಆರ್. ಆರ್. ದಿವಾಕರರಿಂದ ಘಟಿಕೋತ್ಸವದ ಭಾಷಣ

ಮೈಸೂರು ೨೮

ಮೈಸೂರು ವಿಶ್ವವಿದ್ಯಾಲಯದ ಘಟಿಕೋತ್ಸವವು ಬರುವ ತಿಂಗಳು ೧೬ನೇ ತಾರೀಕು ಜರುಗುವುದು. ಬಿಹಾರಿನ ಗವರ್ನರ್ ಆರ್. ಆರ್. ದಿವಾಕರ್‌ರವರು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಭಾಷಣ ಮಾಡುವರು. ಮಹಾರಾಜರು ಅಧ್ಯಕ್ಷತೆ ವಹಿಸುವರು.

ದಸರಾ ಹಬ್ಬದ ಅತಿಥಿಗಳು

ನಗರದಲ್ಲಿ ನಡೆಯುವ ದಸರಾ ಮಹೋತ್ಸವದಲ್ಲಿ ಭಾಗವಹಿಸಲು ಮೈಸೂರು ಶ್ರೀಮನ್ಮಹಾರಾಜರು ಕೇಂದ್ರ ಗೃಹ ಮಂತ್ರಿ ಗೋವಿಂದವಲ್ಲಭ ಪಂತ್, ಕಾಂಗ್ರೆಸ್ ಅಧ್ಯಕ್ಷ ಢೇಬರ್, ಮದ್ರಾಸಿನ ಗವರ್ನರ್ ಶ್ರೀಪ್ರಕಾಶ, ಕೇಂದ್ರ ಸ್ವದೇಶಾ ಮಂತ್ರಿ ಬಿ. ಎಂ. ದಾತಾರ್, ಕಾಂಗ್ರೆಸ್ಸಿನ ಪ್ರಧಾನ ಕಾರ್ಯದರ್ಶಿ ಶ್ರೀ ಪಿ. ವಾರ್ಧರ್ನ ನಾಯರ್, ರೈಲ್ವೆ ಮಂತ್ರಿ ಲಾಲ್ ಬಹಾದೂರ್ ಶಾಸ್ತ್ರಿ, ಶ್ರೀ. ಸಿ. ರಿಷ್ಟಿ, ಹೆಚ್. ಪಿ. ಮೋದಿ, ಡಾ|| ಹೆಚ್. ಜೆ. ಭಾಭಾ, ಜಲಗನ್ನ ಚೆಟ್ಟಿಯಾರ್ ಮುಂತಾದವರನ್ನು ಆಹ್ವಾನಿಸಿರುವರು. ಆರ್. ಆರ್. ದಿವಾಕರರೂ ಸಮಾರಂಭದಲ್ಲಿ ಭಾಗವಹಿಸಲಿರುವರು.

ಶನಿ ದೇವರ ಪಲ್ಲಕ್ಕಿ ಉತ್ಸವ

ಚಾಮರಾಜನಗರದಲ್ಲಿ ನಾಳೆ ಸಂಜೆ ೬|| ಗಂಟೆಗೆ ಶನಿ ದೇವರ ಪಲ್ಲಕ್ಕಿ ಉತ್ಸವವನ್ನು ಅಲ್ಲಿನ ಭಕ್ತಮಂಡಲಿಯವರು ಏರ್ಪಡಿಸಿರುತ್ತಾರೆ. ವಿ|| ಟಿ. ಎಂ. ದಕ್ಷಿಣಾಮೂರ್ತಿ ಮತ್ತು ಸಹೋದರರಿಂದ ನಾಗಸ್ವರವು ವಿ|| ಟಿ. ಎಸ್. ಪೊನ್ನುಸ್ವಾಮಿಯವರ ತಬಲ ಸಾಥ್ ವಿ|| ಕರ್ಪೂರಸ್ವಾಮಿಯವರ ಢೋಲು ಸಮೇತ ಏರ್ಪಾಡಾಗಿದೆ. ಆಂಧ್ರದ ಶ್ರೀ ಪಿ. ಮುನಿಸ್ವಾಮಿಯವರಿಂದ ತಪ್ಪಡೋಲೂ ಇದೆ.

"ಭಾಗ್ಯೋದಯ" ಚಿತ್ರ

ನಗರದಲ್ಲಿ ಪ್ರದರ್ಶಿತವಾಗುತ್ತಿರುವ ಉದಯ ಪ್ರೊಡಕ್ಷನ್ಸ್‌ರವರ 'ಭಾಗ್ಯೋದಯ' ಕನ್ನಡ ಚಿತ್ರದ ಪ್ರೆಸ್ ಷೋವೊಂದನ್ನು ಮೊನ್ನೆ ಅಪೇರಾ ಚಿತ್ರ ಮಂದಿರದಲ್ಲಿ ಶ್ರೀ ಬಿ. ಎಲ್. ಎ. ಶೆಟ್ಟಿಯವರು ಏರ್ಪಡಿಸಿದ್ದರು. ಚಿತ್ರಕ್ಕೆ ಆಗಮಿಸಿದ್ದ ಆಹ್ವಾನಿತರನ್ನು, ಶ್ರೀ ದಿಲೀಪ್‌ಕುಮಾರ್‌ರವರು ಸ್ವಾಗತಿಸಿ, ಚಿತ್ರದ ಕವಿಗಳಾದ ಶ್ರೀ ಕಣಗಲ್ ಪ್ರಭಾಕರಶಾಸ್ತ್ರಿಯವರ ಪರಿಚಯ ಮಾಡಿಕೊಟ್ಟರು. ಸುಖ ಸಂಸಾರದಲ್ಲಿ ನಲಿಯುತ್ತ ನೆಂದಗೋಕುಲವಂತಹ ಸಂಸಾರ, ಹಿರಿಯರ ಸಂಗ-ಮೋಸದಿಂದ ನಾನಾ ಕಷ್ಟಕ್ಕೆ ಗುರಿಯಾಗಿ, ಸರ್ವರ ಬಾಳು ನೀರ್ಗಳೆಯಾಗಿ, ಕಡೆಗೆ ಎಲ್ಲರ ಬಾಳ್ವೆಯು ಭಾಗ್ಯೋದಯವಾಗುವ ಕಥಾ ಚಿತ್ರ 'ಭಾಗ್ಯೋದಯ' ಈಚಿನ ಕನ್ನಡ ಚಿತ್ರಗಳಲ್ಲೊಂದು ಉತ್ತಮ ಚಿತ್ರ. ದಿವಂಗತ ಕಾರ್, ಉದಯಕುಮಾರ್, ಬಾಲಕೃಷ್ಣ, ಜಾನಕಿ, ಲಲಿತರಾವ್-ಇವರ ಉತ್ತಮವಾಗಿ ನಟಿಸಿದ್ದಾರೆ. ಸಂಗೀತ ಚೆನ್ನಾಗಿದೆ. ಚಿತ್ರ ಅಗತ್ಯ ನೋಡತಕ್ಕಂತಹದು.

ರೇಷ್ಮೆ ಫಿಲೇಚರುಗಳು ಸರ್ಕಾರದವರ ವಶಕ್ಕೆ

ವಿಧಾನ ಪರಿಷತ್ತಿನಲ್ಲಿ ಗೃಹ ಸಚಿವರ ಹೇಳಿಕೆ

ಬೆಂಗಳೂರು ೨೮

ವಿಧಾನ ಪರಿಷತ್ತಿನಲ್ಲಿ ನೆನ್ನೆ ಗೃಹ ಮಂತ್ರಿ ಶ್ರೀ ಸಿದ್ಧವೀರಪ್ಪನವರು ಮಾತನಾಡಿ, ರೇಷ್ಮೆ ಕೈಗಾರಿಕೆಯನ್ನು ಸುಭದ್ರ ಸ್ಥಿತಿಯಲ್ಲಿ ತರಲಾಗುವುದೆಂದೂ, ನಾನಾ ಫಿಲೇಚರುಗಳನ್ನು ಅವಶ್ಯಾಗಿಯೇ ತಮ್ಮ ವಶಕ್ಕೆ ತೆಗೆದುಕೊಳ್ಳಲು ಸರ್ಕಾರದವರು ನಿರ್ಧರಿಸಿರುವರೆಂದೂ ತಿಳಿಸಿದರು. ಈ ಬಗ್ಗೆ ಕೂಡಲೇ ೨೦ ೨೫ ಲಕ್ಷ ರೂ. ಗಳನ್ನು ಈ ಕೈಗಾರಿಕೆಯಲ್ಲಿ ಸರ್ಕಾರದವರು ಬಂಡವಳ ಹಾಕಬೇಕಾಗಿರುವುದೆಂದೂ, ಕೇಂದ್ರ ಸರ್ಕಾರದವರೂ ಸಹ ಎಲ್ಲಾ ಸಹಾಯವನ್ನೂ ನೀಡುವರೆಂದೂ ತಿಳಿಸಿ, ರೇಷ್ಮೆ ಅಭಿವೃದ್ಧಿಗೆ ವಿಶಾಲ ಅವಕಾಶವಿರುವುದೆಂದು ನುಡಿದರು. ಈ ಕೈಗಾರಿಕೆಗಳನ್ನು ಸರ್ಕಾರದ ವಶಕ್ಕೆ ತೆಗೆದುಕೊಳ್ಳದಿದ್ದರೆ ಅವು ಪೂರ್ಣವಾಗಿ ಹಾಳಾಗುವುವೆಂದೂ ಹೇಳಿದರು. ಮೈಸೂರು, ಟಿ. ನರಸೀಪುರ, ಚಾಮರಾಜನಗರ, ಕುಪ್ಪೇಗಾಲ, ಸಂತೆಮರಳ್ಳಿ ಮತ್ತು ಮಾಂಬಳ್ಳಿ ಫಿಲೇಚರುಗಳು ಸರ್ಕಾರದ ವಶಕ್ಕೆ ಹೋಗಲಿವೆ.

ಬೇಲೂರರ ಮನೆಯ ಮತ್ತೊಂದು ನಾಯಿ ಪತ್ತೆಯಿಲ್ಲ

ನೆನ್ನೆ ಬೇಲೂರರ ಮನೆ ಕೊಲೆ ಮೊಕದ್ದಮೆಯಲ್ಲಿ ಅವರ ಮಗಳಾದ ಪದ್ಮಳು ಸಾಕ್ಷ್ಯವಿತ್ತು ಘಟನೆ ದಿನ ಮನೆಯಲ್ಲಿದ್ದ ಎರಡು ನಾಯಿಗಳ ಪೈಕಿ ಒಂದು ಅಂದಿನಿಂದಲೂ ಪತ್ತೆಯಿಲ್ಲವೆಂದು ತಿಳಿಸಿದಳು. ಮತ್ತೊಬ್ಬ ಮಗಳು ಪ್ರಸನ್ನಳ ಸಾಕ್ಷ್ಯವೂ ಆಯಿತು.

ಜಿಲ್ಲೆಯಲ್ಲಿ ಹೆಚ್ಚು ಪರಿಹಾರ ಕ್ರಮ ಅಗತ್ಯ

ಎಂ. ಎಸ್. ಗುರುಪಾದಸ್ವಾಮಿಯವರ ಹೇಳಿಕೆ

ಮೈಸೂರು ೨೭

ಲೋಕಸಭಾ ಸದಸ್ಯರಾದ ಶ್ರೀ ಎಂ. ಎಸ್. ಗುರುಪಾದಸ್ವಾಮಿಯವರು ಪತ್ರಿಕಾ ಪ್ರತಿನಿಧಿಯೊಡನೆ ಮೊನ್ನೆ ಸಂಭಾಷಣೆ ನಡೆಸಿ, ಜಿಲ್ಲೆಯ ಕ್ಷಾಮ ಪ್ರದೇಶಗಳಲ್ಲಿ ಕೈಗೊಂಡಿರುವ ಪರಿಹಾರ ಕಾರ್ಯಗಳನ್ನು ಪೂರೈಸಲು ಇನ್ನೂ [illegible] ಲಕ್ಷ ರೂ. ಗ್ರಾಂಟನ್ನು ಕೂಡಲೇ ಮಂಜೂರು ಮಾಡಬೇಕೆಂದು ಸರ್ಕಾರವನ್ನು ಕೋರಿರುವರು. ಪರಿಹಾರ ಕ್ರಮ ಕೈಗೊಂಡಮೇಲೆ ಪರಿಸ್ಥಿತಿ ಉತ್ತಮವಾಗಿರುವುದೆಂದು ತಿಳಿಸಿದರು. ಹಣ ಪಂಚಿಕೆಯು ಸರಿಯಾಗಿ ಆಗಿಲ್ಲವೆಂದೂ, ಚಾಮರಾಜನಗರ, ಗುಂಡ್ಲುಪೇಟೆ ಮುಂತಾದ ಕಡೆಗಳಲ್ಲಿ ಅರ್ಧ ಕ್ಷಾಮ ಸ್ಥಿತಿಯಿರುವುದಾಗಿಯೂ ಅವರು ಸೂಚಿಸಿದರು. ಹಣದ ಉಬ್ಬರದ ಪರಿಣಾಮವಾಗಿ ಬೆಲೆ ಏರಿಕೆಯಾಗಿರುವುದೆಂದು ನುಡಿದರು.

○ ಮಹಾರಾಷ್ಟ್ರದ ಪ್ರಮುಖ ಕೈಗಾರಿಕೋದ್ಯಮಿ ಲಕ್ಷ್ಮಣರಾವ್ ಕಿರ್ಲೋಸ್ಕರ್‌ರವರು ಮೊನ್ನೆ ಪೂನಾದಲ್ಲಿ ನಿಧನ ಹೊಂದಿದರು.

ಪುರಸಭಾ ಉಪಚುನಾವಣೆಯಲ್ಲಿ ಕಾಂಗ್ರೆಸ್ಸಿಗೆ ಪರಾಜಯ

ಪಿ. ಎಸ್. ಪಿ. ಉಮೇದುವಾರ ಗಿರಿಯಪ್ಪನವರ ಆಯ್ಕೆ

ಮೈಸೂರು ೨೮

ನಗರದ ಪುರಸಭೆಯ ಸದಸ್ಯತ್ವಕ್ಕೆ ಶ್ರೀ ಪಿ. ಎಲ್. ಕುಮಾರಸ್ವಾಮಿಯವರು ರಾಜೀನಾಮೆ ಕೊಟ್ಟುದರಿಂದ ಖಾಲಿಯಾಗಿದ್ದ ಸ್ಥಾನಕ್ಕಾಗಿ ೩೦ ನೇ ಡಿವಿಜನ್ನಿನಿಂದ ನೆನ್ನೆ ಚುನಾವಣೆಯು ನಡೆದು, ಪ್ರಜಾ ಸಮಾಜವಾದಿ ಪಕ್ಷದ ಉಮೇದುವಾರರಾದ ಶ್ರೀ ಪಿ. ಗಿರಿಯಪ್ಪನವರು ೫೦೩ ಮತಗಳನ್ನು ಗಳಿಸಿ ಚುನಾಯಿತರಾಗಿರುತ್ತಾರೆ. ಅವರ ಪ್ರತಿಸ್ಪರ್ಧಿ ಕಾಂಗ್ರೆಸ್ ಉಮೇದುವಾರರಾದ ಶ್ರೀ ಚಿಕ್ಕಎಲ್ಲಯ್ಯನವರಿಗೆ ೪೯೭ ಮತಗಳು ಬಂದುವು. ಒಟ್ಟು ೧,೦೦೦ ಮಂದಿ ಮತದಾನ ಮಾಡಿದ್ದರು. ಎಣಿಕೆಯು ಈ ದಿನ ೧೧ ಘಂಟೆಗೆ ಆರಂಭವಾಗಿ ೧೨ ಘಂಟೆಗೆ ಮುಗಿಯಿತು.

ಗುಂಡ್ಲುಪೇಟೆ ಪ್ರೌಢಶಾಲಾ ವಿದ್ಯಾರ್ಥಿ ಸಂಘದ ವಾರ್ಷಿಕೋತ್ಸವ

ಗುಂಡ್ಲುಪೇಟೆಯ ಶ್ರೀ ದೊಡ್ಡಮಂದಿ ಭೋಗಪ್ಪ ಪುರಪ್ರೌಢಶಾಲಾ ವಿದ್ಯಾರ್ಥಿ ಸಂಘದ ೫ನೇ ವಾರ್ಷಿಕೋತ್ಸವವು ನಾಳೆ ಸಂಜೆ ೬ ಗಂಟೆಗೆ ಅಲ್ಲಿನ ಪುರಸಭಾಧ್ಯಕ್ಷ ಶ್ರೀ ಜಿ. ಎ. [illegible] ಮತುಲ್ಲಾಖಾನರ ಅಧ್ಯಕ್ಷತೆಯಲ್ಲಿ ನೆರವೇರುವುದು.

ಬಂಗಾಳಾ ಮತ್ತು ಬಿಹಾರಿನಲ್ಲಿ ಮಳೆಯಿಂದ ೬೭ ಜನರ ಮರಣ

ಪಶ್ಚಿಮ ಬಂಗಾಳಾ ಮತ್ತು ಬಿಹಾರಿನಲ್ಲಿ ಕಳೆದ ಐದಾರು ದಿನಗಳಿಂದ ಎಡೆಬಿಡದೆ ಆದ ಮಳೆಯ ಪರಿಣಾಮವಾಗಿ ೬೭ ಮಂದಿ ಮೃತರಾಗಿರುವರು. ಒಂದು ಕಲ್ಲಿದ್ದಲು ಗಣಿಗೆ ನೀರು ನುಗ್ಗಿ ೩೯ ಜನ ಕಾರ್ಮಿಕರು ಜೀವಸಹಿತ ಹೂತು ಹೋದರು. ಗಣಿಯ ಮೇಲ್ಭಾಗವು ಕುಸಿದು ಬಿದ್ದುದೇ ಅದಕ್ಕೆ ಕಾರಣ. ಮಯೂರಾಕ್ಷಿ ನದಿಯಲ್ಲಿ ೧೪ ಜನರು ಮುಳುಗಿಹೋದರು.

ಪೋಲೀಸನ ಬಂಧನ

ಬೆಂಗಳೂರು ಮೈಸೂರು ರಸ್ತೆಯಲ್ಲಿ ದಿಲ್‌ಖುಷ್ ಎಸ್ಟೇಟಿನ ಮ್ಯಾನೇಜರ್ ಶ್ರೀ ಹಿಮ್ಮತ್‌ಸಿಂಗ್‌ರವರ ಮನೆಯಲ್ಲಿ ಎರಡು ಕೋವಿಯ ಬಂದೂಕವನ್ನು ಕಳವು ಮಾಡಿದನೆಂದು ಪೋಲೀಸು ಕೆಲಸದಿಂದ ವಜಾ ಆಗಿರುವ ಎಸ್ರಪ್ಪ ಎಂಬುವನನ್ನು ಬಂಧಿಸಲಾಗಿದೆ.

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ವೀಣೆ. ೭-೧೫ ಮತ್ತು ೮ ಗಂ ಬಿ. ಎಂ. ಶಿವಪ್ಪ-ದೇವರನಾಮ ೭-೩೦ ಅಕ್ಬರ್ ಖಾನ್-ಸರೋದ್ ಮಧ್ಯಾಹ್ನ ೧೨ ಸಂಗೀತ. ೧೨-೩೦ [illegible]. ೧೨-೪೫ ಬಾಲಜಗತ್. ೧-೫೦ ದಿಲ್ರುಬಾ. ಸಂಜೆ ೫-೩೦ ಮತ್ತು ೮ [illegible]ಕೃಷ್ಣ ಯ್ಯಂಗಾರ್-ಸಂಗೀತ. ೬-೧೫ ವ[illegible]ನಗಾನ. ೭-೩೦ ಎನ್. ಎಸ್. [illegible] ಶಾಸ್ತ್ರಿ-ವಿಶ್ವವಾರ್ತಾ ವಿಮರ್ಶೆ. ೮-೪೦ ಪ್ರಸಾರಗೀತೆ. ೯-೧೫ ನಾವು ಮೆಚ್ಚಿದ ಹುಡುಗಿ-ತ್ರಿವೇಣಿಯವರ ಕಥೆ. ೯-೩೦ ರಾಷ್ಟ್ರೀಯ ಸಂಗೀತ. ಚಿದಾನಂದ ನಗಾರ್ಕರ್ ಮತ್ತು ಶ್ರೀ ಯಾಕೂಬ್ ಅಹಮದ್.

ಬೇಲೂರು ಕೊಲೆ ಮೊಕದ್ದಮೆ

ಮೃತನ ಮಗಳು ರತ್ನನ ಸಾಕ್ಷ್ಯ

ಬೆಂಗಳೂರು ೨೮

ಬೇಲೂರು ಶ್ರೀನಿವಾಸ ಅಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯಲ್ಲಿ ನಿನ್ನೆ ಅವರ ಮಗಳು ೧೪ ವರ್ಷದ ರತ್ನ ಮತ್ತು ಕೊಲೆಯಾದ ರಂಗಮಲಿಂಗನ ಹೆಂಡತಿ ಲಕ್ಷ್ಮಮ್ಮನ ಸಾಕ್ಷ್ಯಗಳು ದುವು

ಕೈ ಬೆರಳಿನ ಗುರುತುಗಳನ್ನು ಅಪಾದಿತರಿಂದ ತೆಗೆದುಕೊಳ್ಳಲು ಅವಕಾಶ ಬೇಡಿ ಪ್ರಾಸಿಕ್ಯೂಷನ್ನಿನವರು ಅರ್ಜಿ ಕೊಟ್ಟಿದ್ದ ಸಂದರ್ಭದಲ್ಲಿ ನೆನ್ನೆ ಮೂವರು ಅಪಾದಿತರೂ ಗುರುತುಗಳನ್ನು ಕೊಡಲು ನಿರಾಕರಿಸಿದರು ನ್ಯಾಯಾಧೀಶರು ಕೈ ಗುರುತು ಕೊಡ ಬೇಕೆ ಕಡ್ಡಾಯಪಡಿಸಲು ಸಾಧ್ಯವಿಲ್ಲವೆಂದು ತಿಳಿಸಿ, ಅವನ್ನು ಕೊಡಬೇಕೆಂದು ಅಪಾದಿತರಿಗೆ ನಿರ್ದೇಶನ ಕೊಡಲು ಕೋರ್ಟಿಗೆ ಅಧಿಕಾರವಿರುವ ವಿಚಾರವನ್ನು ಪರಿಶೀಲಿಸಬೇಕಾಗಿದೆಯೆಂದು ಹೇಳಿದರು

ರತ್ನಳು ತನ್ನ ಸಾಕ್ಷ್ಯದಲ್ಲಿ ಜೂನ್ ೫ರ ರಾತ್ರಿ ತಾನು, ಪ್ರಸನ್ನ ರಂಗಲಕ್ಷ್ಮಿ ಮತ್ತು ಕೊಲೆಯಾದ ಸಂಬಂಧಿಕರೆಲ್ಲರೆ ಹೊರಗಡೆ ಕಾಂಪೌಂಡಿನ ಜಗಲಿಯಲ್ಲಿ ತಮ್ಮ ತಂದೆಯ ಮೊದಲನೆ ಹೆಂಡತಿಯ ಮಚ್ಚು ಹಿಡಿದಿರುವ ಮಗ ಮುತ್ತಣ್ಣನು ಇದ್ದುದಾಗಿ ತಿಳಿಸಿದಳು ಬೇಲೂರು ಶ್ರೀನಿವಾಸಯ್ಯಂಗಾರ್ಯರಿಗೆ ೧ ತಿಂಗಳಿಂದ ಮೂರ್ಛೆ ರೋಗ ಬರುತ್ತಿತ್ತೆಂದೂ, ಮನೆಯ ಗಸ್ತೀಕೊಠಡಿಯಲ್ಲಿ ಬೇಲೂರರು, ಅದರ ಪಕ್ಕದ್ದರಲ್ಲಿ ತನ್ನ ತಾಯಿ, ಅಜ್ಜಿ, ಅಕ್ಕ ಮತ್ತು ತಮ್ಮಂದಿರು ಮತ್ತ ಇನ್ನೆಯದರಲ್ಲಿ ತಾನು ಮತ್ತು ಪ್ರಸನ್ನರವರೂ ಮಲಗಿದ್ದುದಾಗಿಯೂ, ಮಾರನೇ ಬೆಳಿಗ್ಗೆ ಯಾರೋ ಅತ್ತ ಧ್ವನಿ ಕೇಳಿ ತಾನು ಹೊರಗೆ ಬಂದಾಗ ಹೊರಗಡೆ ವರಾಂಡದಲ್ಲಿ ರಾಮಲಿಂಗ, ಒಳಗೆ ತನ್ನ ತಾಯಿ, ಅಜ್ಜಿ ಸಣ್ಣ ಮಕ್ಕಳು ಮತ್ತು ತಂದೆ ಸತ್ತುಬಿದ್ದಿದ್ದುದನ್ನು ರಂಗಲಕ್ಷ್ಮಿ ಗೋಡೆಗೆ ಒರಗಿದ್ದುದನ್ನೂ, ಮೃತರ ಬಳಿ ಹಾರೆ ಮುಂತಾದುವು ಇದ್ದುದನ್ನೂ ನೋಡಿದುದಾಗಿ ಹೇಳಿದಳು ಶಕ್ತಿಯಲ್ಲದ, ಮನೆ ಆಭರಣಗಳ ವಿವರಗಳನ್ನು ತಿಳಿಸಿದುದಾಗಿ ಆಕೆ ನುಡಿದಳು ಕೃಷ್ಣ, ಮುನಿಸ್ವಾಮಿ ಮತ್ತು ಗೋವಿಂದರೆಡ್ಡಿ ಯವರುಗಳಿಂದ ವಶಪಡಿಸಿಕೊಳ್ಳಲಾದ ಆಭರಣಗಳನ್ನು ಸಾಕ್ಷಿಯು ಗುರುತಿಸಿದಳು

ಅಕ್ಟೋಬರ್ ೩೧ರಂದೇ ಮುಂಬೈ ಸರ್ಕಾರದ ಪ್ರಮಾಣ ವಚನ

ಬರುವ ನವೆಂಬರ್ ಒಂದನೇ ತಾರೀಖು ಶುಕ್ರವಾರವಾದ ಕಾರಣ ಅಂದು ಬೊಂಬಾಯಿ ಪ್ರಾಂತ್ಯದ ನೂತನ ಸಚಿವ ಸಂಪುಟದ ಪ್ರಮಾಣ ವಚನ ಕಾರ್ಯಕ್ರಮವನ್ನ ಜರುಗಿಸಿ ಅಕ್ಟೋಬರ್ ೩೧ನೇ ತಾರೀಖು ರಾತ್ರಿಯೇ ಸ್ವೀಕರಿಸುವಂತೆ ವ್ಯವಸ್ಥೆ ಮಾಡಲಾಗಿರುವುದೆಂದು ವರದಿಯಾಗಿದೆ

ಪುಲ್ಲು ಮೆದೆಗೆ ಬೆಂಕಿ ಹಾಕಿದ್ದಕ್ಕಾಗಿ ಇಬ್ಬರಿಗೆ ಸಜಾ

ನಂಜನಗೂಡು ೨೮

ಇದೇ ತಾಲ್ಲೂಕಿನ ಹದಿನ ಮು ಗ್ರಾಮದ ಶಾಳ ಮತ್ತು ಮಾದ ಎಂಬುವರು ಹಲವು ದಿನಗಳ ಹಿಂದೆ ಸುಮಾರು ೧ ಸಾವಿರ ರೂ ಬೆಲೆ ಬಾಳುವ ಹುಲ್ಲು ಮೆದೆಗೆ ಬೆಂಕಿ ಹಾಕಿದ್ದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಅವರಿಬ್ಬರಿಗೂ ತಲಾ ೬ ತಿಂಗಳ ಕಠಿಣ ಸಜಾ ಮತ್ತು ೨೫ ರೂ ದಂಡವನ್ನು ವಿಧಿಸಲಾಗಿದೆ

ಹಾಸಿಗೆ-ದಿಂಬು

ಬಿಡಿವಿನಲ್ಲಿ ಹತ್ತಿಬಿಡಿಸಿ ತಯಾರು ಮಾಡುತ್ತೇವೆ

ಬಾಬುಸಾಬ್ ಕಂಪನಿ,

ಗಾಯತ್ರಿ ಟಾಕೀಸ್ ಎದುರು, ಮೈಸೂರು

Edited, Printed and Published by A R Nagarajan at Sadhvi Press D Subbiah Road, Mysore

೦೬ ನರಸಿಂಹಯ್ಯ ಸ್ಮಾರಕ ಅಂತರ ಕಾಲೇಜು ಚರ್ಚಾಸ್ಪರ್ಧೆ ಸಂಜೆ ೫॥ ಗಂಟೆಗೆ ನಡೆಯುವುದು ಸಿವಿಲ್ ನ್ಯಾಯಾಧೀಶರಾದ ಶ್ರೀ ಬಿ ತಿಮ್ಮಪ್ಪರಾಜ ಅರಸ್‌ರವರ ಅಧ್ಯಕ್ಷತೆ ವಹಿಸುವರು

ಒಲಂಪಿಯಾ

28-9-56 ರಿಂದ ಅಮೋಘ ಪ್ರಾರಂಭ

ಪ್ರತಿದಿನ 3 ಆಟಗಳು

ಕಳ್ಳನನ್ನು ಅವನು ಹಿಂಬಾಲಿಸುತ್ತಿದ್ದರೆ— ಅವನೇ ಕಳ್ಳನೆಂದು ಹಿಂಬಾಲಿಸಿದರು

ಈ ವೈ ನವಿರೇಳುವ ಕಥಾನಕವೇ ಶಕ್ತಿ ದಾಳ

ಸಿ. ಐ. ಡಿ.

ಪಾತ್ರ : ದೇವಾನಂದ್, ಶಕಿಲ ಜಾನಿವಾಕರ್ ಮಹಿದ ರೆಹಮಾನ್

ಸಂಗೀತ ಓ ಪಿ ನಯಾರ್

ದಿಗ್ದರ್ಶನ ರಾಜ್ ಕೋಸ್ಲ

SREE GANESH TALKIES

Gala Release On 29 9-56 Daily 3 Shows

PARAMOUNT's

THE COURT JESTER

(In Vistavision – Technicolor)

Starring Danny Kaye Glynis Johns & Angela Lansbury

(The King sized comedy hit of the year)

All complimentaries are suspended

SRI GAYATHRI TALKIES

Gala Opening From 28-9-56 Only for 3 days

Daily Three Shows — — until further intimation

" As doctors we are the only group in modern society privileged to commit moral ughter with immunity for the Law

Stanley Kramer presents

NOT AS A STRANGER

Starring Olivia de Havilland Robert Mitchum Frank Sinatra Gloria Grahame Broderick Crawford & Charles Bickford

For Adults Only]

ವುಡ್‌ಲ್ಯಾಂಡ್ಸ್ ★ 28—9—56 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ

ಪ್ರತಿ ದಿನ 3 ಆಟಗಳು ಸಂಜೆ 3 6 30,9 30ಕ್ಕೆ

ಜೆಮಿನಿಯವರ ಹಿಂದಿ ಚಿತ್ರ

★ ದೇವತಾ ★

ತಾರಾಗಣ ಅಂಜಲಿದೇವಿ, ಗಣೇಶ್, ವೈಜಯಂತಿಮಾಲಾ, ಬಿಸಿಗುಪ್ತ ಕುಮಾರಿ ಕಮಲ, ಆಗಾ ಮತ್ತು ನಂಬಿಯಾರ್

ಸಂಗೀತ ಸಿ ರಾಮಚಂದ್ರ ನಿರ್ದೇಶನ ಪಟ್ಟಣ್ಣ

ಗೋಪಿ ಕೃಷ್ಣರವರ ನೃತ್ಯಗಳು

ಮೊದಲು ನಾಲ್ಕು ವಾರ ಎಲ್ಲಾ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

ಪ್ರಭಾ ★ ಈ ದಿನದಿಂದ : ಅಮೋಘ ಪ್ರಾರಂಭ ದಿನವಹಿ 3 ಪ್ರದರ್ಶನಗಳು

ಮೂರ್ತಿರವರ ಸುಪ್ರಸಿದ್ಧ ಪೌರಾಣಿಕ ಕನ್ನಡ ಚಿತ್ರ

ಸಂಪತ್ ಅಶ್ವಥ್, ರೇವತಿ, ವಿದ್ಯಾ ಸರೋಜ ಪಾತ್ರವಹಿಸಿರುವ

★ ಕಚ-ದೇವಯಾನಿ ★

ವಿವರಗಳಿಗೆ – ನಂದಿ ಪಿಕ್ಚರ್ಸ್ ಸರ್ಕ್ಯೂಟ್, ಬೆಂಗಳೂರು-೯ ಇವರನ್ನು ಸಂಧಿಸಿರಿ

ನ್ಯೂ ಅಪೇರಾ, ಮೈಸೂರು ★ 28—9—56 ರಿಂದ ಜಯಪ್ರದವಾದ 2ನೇ ವಾರ

ಉದಯರವರ ಭವ್ಯ ನವೀನತೆಯ ಸಾಮಾಜಿಕ ಕನ್ನಡ ಚಿತ್ರ

ರಾಜ್, ರಾಜಾಶಂಕರ್, ಲಲಿತಾರಾವ್ ಲಕ್ಷ್ಮೀದೇವಿ, ನರಸಿಂಹರಾಜು, ಬಾಲಕೃಷ್ಣ ಪಾತ್ರವಹಿಸಿರುವ

★ ಭಾಗ್ಯೋದಯ ★

ಕವಿ ಪ್ರಥಮ ಕಥೆ — ದಿಗ್ದರ್ಶನ ಪಿ. ಬಿ. ಬಾಬು

ಎ ಸಿ ನರಸಿಂಹಮೂರ್ತಿ – A Prakash Release

ಪ್ರಭುದೇವಾ ಥಿಯೇಟರ್ ★ 29-9-56ನೇ : ಶನಿವಾರದಿಂದ : ಅಮೋಘ ಪ್ರಾರಂಭ

(ಪದ್ಮಾ ಟಾಕೀಸ್)

ಪ್ರತಿ ದಿನ ಮೂರು ಪ್ರದರ್ಶನಗಳು

ರಾಜರಾಜೇಶ್ವರಿ ಫಿಲಂ ಕಂಪೆನಿಯವರ ತಮಿಳು ಚಿತ್ರ

ನಾಗಯ್ಯ ಕನ್ನಾಂಬ, ಎಸ್ ವರಲಕ್ಷ್ಮಿ, ಅಂಜಲಿದೇವಿ, ತಂಗವೇಲು ವರದನ್ ಗುಂಡಾ ಪವರು ಪಾತ್ರವಹಿಸಿರುವ

★ ನಾಗಪಂಚಮಿ ★

ಚಾಮುಂಡೇಶ್ವರಿ ಟಾಕೀಸ್ ✸ 28 9 ರಿಂದ ಅಮೋಘ ಪ್ರಾರಂಭ ಪ್ರತಿ ದಿನ 3 ಪ್ರದರ್ಶನ

ಜನ ಸಾಮಾನ್ಯರಿಗೆ ನೀತಿ ಬೋಧಕ ಮತ್ತು ಕಣ್ತೆರೆಸುವ ತಮಿಳು ಚಿತ್ರ

ಮಕ್ಕಾ ಫಿಲಂಸ್‌ರವರ

★ ವಾಳ್ವಿಲೆ ಒರುನಾಳ್ ★

(ಬಾಳಿನಲ್ಲಿ ಒಂದು ದಿನ)

ನಟವರ್ಗ — ಶಿವಾಜಿ ಗಣೇಶ, ಜಿ ವರಲಕ್ಷ್ಮಿ, ರಾಜಸುಲೋಚನ ವಿ ಕೆ ರಾಮಸ್ವಾಮಿ ಮತ್ತು ಫ್ರೆಂಡ್ ರಾಮಸ್ವಾಮಿ

— ಸರೋಜ ಪಿಕ್ಚರ್ಸ್ ರಿಲೀಸ್

ನಾಲ್ಕು ವಾರ ಕಾಲ ಎಲ್ಲಾ ವಿಧದ ಕಾಂಪ್ಲಿಮೆಂಟರಿ ಮತ್ತು ಫ್ರೀ ಪಾಸುಗಳನ್ನು ಮನ್ನಾ ಮಾಡಲಾಗಿದೆ

ರಿಜಿಸ್ಟರ್ ನಂ. 792

ಬಿಡಿ ಪ್ರತಿಗೆ 3 ಕಾಸು

ಸಾಧ್ವಿ

ಸಂಸ್ಥಾನದ ಎಲ್ಲೆಡೆಗಳಲ್ಲೂ
ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹಿರಾತುಗಳನ್ನು
ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಬ್ರಾಂಕಾಲ್
ಉತ್ತಮ ಮತ್ತು ಸೊಗಸು
ವ್ಯಾಧಿಗಳಿಗೆ ಸಿದ್ಧೌಷಧ
ಮೈಸೂರು ಸಂಸ್ಥಾನ ಮತ್ತು
ಹೊರಗು ಪ್ರದೇಶಗಳಿಗೆ
ಏಜೆಂಟರುಗಳು
ಸತ್ಯ ಅಂಡ್ ಕೋ.,
ದಿಜಿಧಿ ವ್ಯಾಪಾರಗಳು
71/1 ...
ಶ್ರೀ ... ರಸ್ತೆ,
ಬೆಂಗಳೂರು –2

ಪುಟ : ೧೮] SADHVI : SATURDAY 29—9—1956 ಮೈಸೂರು : ಶನಿವಾರ ೨೯—೯—೧೯೫೬ [ಸಂಚಿಕೆ : ೫೬

ಮಹಾರಾಜರಿಗೆ ಹೊಸ ಮೈಸೂರಿನ ಗವರ್ನರ್ ಹುದ್ದೆ

ಮಹಾರಾಜರು ನೂತನ ಸಂಸ್ಥಾನದ ಪ್ರಥಮ ಗವರ್ನರ್

ಮುಖ್ಯ ಕೇಂದ್ರ ಸರ್ಕಾರದವರ ಒಪ್ಪಿಗೆ

ಬೆಂಗಳೂರು ೨೮

ನವೆಂಬರ್ ೧ ರಿಂದು ಸ್ಥಾಪಿತವಾಗಲಿರುವ ನೂತನ ಮೈಸೂರು ಸಂಸ್ಥಾನಕ್ಕೆ ಮೈಸೂರು ಮಹಾರಾಜರು ಪ್ರಥಮ ಗವರ್ನರರಾಗುವರು ದಿನಿಂದ ಅವರ ರಾಜಪ್ರಮುಖ ಪದವಿ ತಪ್ಪು ...

ರಾಜ್ಯಾಂಗದ ರೀತ್ಯಾ ಬೇರೆ ಸಂಸ್ಥಾನದವರ ಗವರ್ನರುಗಳಾಗಬೇಕೆಂಬ ವಿಧಿಯಿದೆ. ಮೈಸೂರಿನ ಮತ್ತು ಕರ್ನಾಟಕದ ಪ್ರಜೆಗಳ ಅಭಿಪ್ರಾಯವನ್ನು ಮನ್ನಿಸಿ ಕೇಂದ್ರ ಸರ್ಕಾರದವರು ಮಹಾರಾಜರೇ ಗವರ್ನರರಾಗುವುದಕ್ಕೆ ಅನುಮತಿಸುತ್ತಿರುವರೆಂದು ಗೊತ್ತಾಗಿದೆ. ಈ ವಿಚಾರವನ್ನು ನೆನ್ನೆ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಶ್ರೀ ... ಚನ್ನಯ್ಯನವರು ಮುಖ್ಯ ಮಂತ್ರಿ ಶ್ರೀ ... ಮಂಜಪ್ಪ ಮತ್ತು ತಮ್ಮ ಗೌರವಾರ್ಥವಾಗಿ ಏರ್ಪಡಿಸಿದ್ದ ಸತ್ಕಾರ ಸಮಾರಂಭದಲ್ಲಿ ತಿಳಿಸಿದರು

ಕೆಟ್ಟುಹೋದ ಅಕ್ಕಿ ಬದಲು ಉತ್ತಮ ಅಕ್ಕಿ ಸರಬರಾಜು

ಬೆಂಗಳೂರು ೨೮

ರೂ ೧ಗೆ ೩ ಸೇರಿನಂತೆ ಒದಗಿಸುತ್ತಿರುವ ಅಕ್ಕಿಯ ಪೈಕಿ ಹಲವು ಕಡೆ ಕೆಟ್ಟುಹೋದ ಮಾಲು ಸರಬರಾಜಾಗುತ್ತಿರುವುದನ್ನು ಅವರಿಗೆ ಹ... ಕೇಂದ್ರ ಸರ್ಕಾರದವರು ವಾಪಸು ತೆಗೆದುಕೊಂಡು, ಎಲ್ಲಾ ಕಡೆಗಳಲ್ಲೂ ಉತ್ತಮ ದರ್ಜೆ ಅಕ್ಕಿಯನ್ನು ಒದಗಿಸುವರೆಂದೂ, ಅಲ್ಲದೆ ಕೊಟ್ಟು ... ಸಿದ ಎರಡನೇ ದರ್ಜೆ ಅಕ್ಕಿಯನ್ನು ಬೆಂಗಳೂರಿನಲ್ಲಿ ರೂ ೧ಗೆ ೨॥ ಸೇರಿನಂತೆ ಮಾರಾಟ ಮಾಡಲಾಗುವುದೆಂದೂ, ಇತರ ಕಡೆಗಳಲ್ಲೂ ಬೇಕಾಗುವಷ್ಟು ಈ ಅಕ್ಕಿಯನ್ನು ಸರಬರಾಜು ಮಾಡುವ ವ್ಯವಸ್ಥೆ ಏರ್ಪಾಡಾಗುತ್ತಿರುವುದಾಗಿಯೂ ಸರ್ಕಾರದವರು ಪತ್ರಿಕಾ ಪ್ರಕಟಣೆಯೊಂದರಲ್ಲಿ ತಿಳಿಸಿದ್ದಾರೆ

ಭಾರತದ ಮುಸ್ಲಿಮರಿಗಾಗಿ ಮತ್ತೊಂದು "ಪಾಕಿಸ್ತಾನವೇ" ?

ಭಾರತದಲ್ಲಿರುವ ೪ ಕೋಟಿ ಮುಸ್ಲಿಮರಿಗೆ ಪ್ರತ್ಯೇಕ ರಾಷ್ಟ್ರದ ಸ್ಥಾಪನೆಗೆ ಅವಕಾಶವನ್ನು ಕೋರಲು ಕರಾಚಿಯಲ್ಲಿರುವ ಭಾರತ ರಾಯಭಾರಿ ಹೊರೇಸ್ ಹಿಲ್ಟ್ರೇರವರ ... ಅಲ್ಲಿನ ಮುಸ್ಲಿಂ ಲೀಗಿನ ನಿಯೋಗವೊಂದು ನೆನ್ನೆ ಹೋಗಿತ್ತೆಂದು ವರದಿಯಾಗಿದೆ ... ಲಕ್ನೋದಲ್ಲಿ ಯಹೂದ್ಯರಿಗೆ ರಾಷ್ಟ್ರವನ್ನು ಸ್ಥಾಪಿಸಿಕೊಟ್ಟಂತೆ ಇಲ್ಲಿಯೂ ಆಗಬೇಕೆಂದು ... ನವರು ತಿಳಿಸಿದರೆಂದೂ, ಈ ವಿಚಾರವನ್ನು ಭಾರತ ಸರ್ಕಾರಕ್ಕೆ ತಿಳಿಸುವುದಾಗಿ ರಾಯಭಾರಿಯು ಸೂಚಿಸಿದರೆಂದೂ ಹೇಳಲಾಗಿದೆ. ನಿಯೋಗದವರು ಇರಾನ್, ಚೀನಾ, ಟರ್ಕಿ ಮತ್ತು ... ದೇಶಗಳ ರಾಯಭಾರಿಗಳನ್ನೂ ನೋಡಿದ್ದರು. ಈ ಬಗ್ಗೆ ಯಾರಿಂದಲೂ ಸರಿಯಾದ ಉತ್ತರ ಸಿಕ್ಕದೆ ನಿಯೋಗದವರಿಗೆ ನಿರಾಶೆಯಾಯಿತೆಂದು ಹೇಳಲಾಗಿದೆ

ಪೌರಸಭಾಧಿವೇಶನದಲ್ಲಿ ವಿರೋಧ ಪಕ್ಷದವರ ಸಭಾತ್ಯಾಗ

ಹೊಸ ಸದಸ್ಯರ ಹಾಜರಾತಿ ಬಗ್ಗೆ ಅಧ್ಯಕ್ಷರ ರೂಲಿಂಗಿಗೆ ಪ್ರತಿಭಟನೆ

ಮೈಸೂರು ೨೮

ಈ ದಿನ ಪೌರಸಭೆಯ ಮಾಹೆಯಾನ ಅಧಿವೇಶನವು ಸೇರಿದ್ದಾಗ, ಒಂದನೇ ವಾರ್ಡಿನಿಂದ ನಡೆದ ಉಪ ಚುನಾವಣೆಯಲ್ಲಿ ಆರಿಸಿಬಂದ ಶ್ರೀ ಗಿರಿಯಪ್ಪನವರು ಭಾಗವಹಿಸಿದ್ದ ಬಗ್ಗೆ ವಾದವಿವಾದಗಳಾಗಿ ಕಡೆಗೆ ವಿರೋಧ ಪಕ್ಷದವರು ಸಭಾತ್ಯಾಗ ಮಾಡಿದರು

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಎಸ್ ಲಿಂಗಣ್ಣನವರು ಕ್ರಿಯಾಲೋಪವೆತ್ತಿ, ಸರ್ಕಾರದ ಗೆಜೆಟ್ಟಿನಲ್ಲಿ ಪ್ರಕಟವಾಗುವವರೆಗೂ ಶ್ರೀ ಗಿರಿಯಪ್ಪನವರು ಸಭಾಧಿವೇಶನದಲ್ಲಿ ಭಾಗವಹಿಸುವಂತಿಲ್ಲವೆಂದು ತಿಳಿಸಿದರು

ವಿರೋಧ ಪಂಗಡದ ನಾಯಕ ಶ್ರೀ ಬಿ ಕೆ ರಾಮಕೃಷ್ಣಯ್ಯನವರು ಕ್ರಿಯಾಲೋಪವನ್ನು ವಿರೋಧಿಸಿ ಶ್ರೀ ಗಿರಿಯಪ್ಪನವರು ಚುನಾಯಿತರಾಗಿರುವರೆಂದು ಕಮಿಷನರರು ಘೋಷಿಸಿ ... ಹೊಸ ಸದಸ್ಯರು ಸಭೆಯಲ್ಲಿ ಭಾಗವಹಿಸಬಹುದೆಂದೂ ಗೆಜೆಟ್ ಪ್ರಕಟಣೆ ಮುಖ್ಯವಾದ ... ಕೇವಲ ಔಪಚಾರಿಕವೆಂದೂ ತಿಳಿಸಿದರು

ಅಧ್ಯಕ್ಷರು ಶಾಸನಾದಿ, ಕಮಿಷನರರು ಇವರಿಗೆ ಶ್ರೀ ಗಿರಿಯಪ್ಪನವರ ಆಯ್ಕೆ ವಿಚಾರವನ್ನು ತಿಳಿಯಪಡಿಸಿಲ್ಲವೆಂದು ಹೇಳಿ ಕ್ರಿಯಾಲೋಪವನ್ನು ಎತ್ತಿಹಿಡಿದು ರೂಲಿಂಗ್ ಕೊಟ್ಟರು. ನಂತರ ಶ್ರೀ ಗಿರಿಯಪ್ಪನವರು ಸಭೆಯಿಂದ ಹೊರಟು ಹೋದರು.

ರೂಲಿಂಗ್ ಬಗ್ಗೆ ವಿರೋಧ ಪಕ್ಷದ ೮ ಜನ ಸದಸ್ಯರು ಅತೃಪ್ತಿ ಸೂಚಿಸಿ ಸಭಾತ್ಯಾಗ ಮಾಡಿ ಸ್ವಲ್ಪ ಕಾಲದನಂತರ ಹಿಂದಿರುಗಿದರು

ಹರಿಕಥೆ

ರಾಜಧಾನಿಯ ಕೃಷ್ಣಮೂರ್ತಿಪುರದಲ್ಲಿರುವ ಶ್ರೀ ರಾಮ ಮಂದಿರದಲ್ಲಿ ನಾಳೆ ಸಂಜೆ ೫॥ ಗಂಟೆಗೆ ವಿ॥ ಹರಿನಾರಾಯಣ ದಾಸರು ಶ್ರೀ ಗಜೇಂದ್ರ ವಿಜಯ ಎಂಬ ಕೀರ್ತನೆಯನ್ನು ನಡೆಸುವರು

ನೂತನ ಮುಖ್ಯಮಂತ್ರಿತ್ವಕ್ಕೆ ಕೆ. ಸಿ. ರೆಡ್ಡಿಯವರ ಸ್ಪರ್ಧೆಯಿಲ್ಲ

ಬೆಂಗಳೂರು ೨೮

ಕೇಂದ್ರ ಉತ್ಪಾದನಾ ಮಂತ್ರಿ ಶ್ರೀ ಕೆ ಸಿ ರೆಡ್ಡಿಯವರು ವಿಶಾಲ ಮೈಸೂರಿನ ನಾಯಕ ಚುನಾವಣೆಯಲ್ಲಿ ತಾವು ಸ್ಪರ್ಧಿಸುವುದಿಲ್ಲವೆಂದು ಹೇಳಿಯುತ್ತಾ ಈಗ ತಾವಿರುವ ಸ್ಥಾನದಿಂದಲೇ ತಮಗೆ ತೃಪ್ತಿಯಾಗಿರುವುದೆಂದೂ ಅವರು ತಿಳಿಸಿರುವರು

ನೂತನ ಸಂಸ್ಥಾನದ ನಾಯಕತ್ವಕ್ಕೆ ಶ್ರೀಗಳಾದ ಎಸ್ ನಿಜಲಿಂಗಪ್ಪ, ಎಸ್ ಚನ್ನಯ್ಯ, ಹೆಚ್ ಸಿ ದಾಸಪ್ಪ ಮತ್ತು ಕಡಿದಾಳ್ ಮಂಜಪ್ಪನವರ ಹೆಸರುಗಳು ಸೂಚನೆಯಾಗುತ್ತಿವೆ

ಕೇಂದ್ರ ಮಂತ್ರಿ ಶ್ರೀ ಬಿ ಎನ್. ದಾತಾರ್‌ರವರ ಹೆಸರನ್ನೂ ಸೂಚಿಸಲಾಗುತ್ತಿದೆಯೆಂದು ಶ್ರೀ ಕೆ ಸಿ ರೆಡ್ಡಿಯವರು ತಿಳಿಸಿರುವರು. ನಾಯಕರ ಚುನಾವಣೆಯು ಸರ್ವಾನುಮತದಿಂದ ಆಗಲು ಪ್ರಯತ್ನಿಸುತ್ತಿರುವುದಾಗಿ ಅವರು ತಿಳಿಸಿದ್ದಾರೆ

ನೂತನ ಸಂಸ್ಥಾನದಲ್ಲಿ ವಿವಿಧ ಇಲಾಖಾಧಿಕಾರಿಗಳು

ವಿಧಾನ ಸಭೆಯಲ್ಲಿ ಕಡಿದಾಳ್ ಮಂಜಪ್ಪನವರ ಹೇಳಿಕೆ

ಬೆಂಗಳೂರು ೨೮

ವಿಧಾನ ಸಭೆಯಲ್ಲಿ ನೆನ್ನೆ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿಕೆಯನ್ನಿತ್ತು, ನೂತನ ಮೈಸೂರಿನಲ್ಲಿ ನಾನಾ ಇಲಾಖೆಗಳ ಮುಖ್ಯಾಧಿಕಾರಿಗಳ ಹೆಸರುಗಳನ್ನು ತಿಳಿಸಿದರು. ... ಮಂದಿ ಐ ಎ ಎಸ್ ಮತ್ತು ... ಐ ಪಿ ಎಸ್ ಅಧಿಕಾರಿಗಳಿರುವರು. ಇಲಾಖಾಧಿಕಾರಿಗಳ ನೇಮಕವು ಈ ರೀತಿ ಆಗುವುದೆಂದು ತಿಳಿಸಲಾಗಿದೆ –

ಕೈಗಾರಿಕೆ ಮತ್ತು ವಾಣಿಜ್ಯ ಡೈರೆಕ್ಟರ್ ಶ್ರೀ ಕೆ ನಾರಾಯಣಸ್ವಾಮಿ (ಮೈಸೂರು); ವೈದ್ಯ ಇಲಾಖೆ ಡೈರೆಕ್ಟರ್ ಡಾ॥ ಬಿ ವೆಂಕಟಸುಬ್ಬರಾವ್ (ಮೈಸೂರು); ಆರೋಗ್ಯ ಇಲಾಖೆ ಡಾ॥ ಪಿ ಸೋಮಸುಂದರಂ (ಹೈದರಾಬಾದು), ವ್ಯವಸಾಯ ಡೈರೆಕ್ಟರ್ ಶ್ರೀ ಹೆಚ್ ಎಸ್ ಮಲ್ಲರಾಜಅರಸ್ (ಮೈಸೂರು); ಪಶುವೈದ್ಯ ಡೈರೆಕ್ಟರ್ ಡಾ॥ ಕೆ ಎಸ್ ... (ಮದ್ರಾಸು) ಕಾರ್ಮಿಕ ಕಮಿಷನರ್ ಶ್ರೀ ಎಂ ಮಲ್ಲೇಶಯ್ಯ (ಮೈಸೂರು); ಸಹಕಾರಿ ಸಂಘಗಳ ರಿಜಿಸ್ಟ್ರಾರ್ ... ಡೈರೆಕ್ಟರ್ ಶ್ರೀ ಗುರುಬಸಪ್ಪ (ಮೈಸೂರು)

ಚೀಫ್ ಇಂಜನಿಯರುಗಳು ಶ್ರೀ ಹೆಚ್ ಅನಂತಾಚಾರ್ ಮತ್ತು ಶ್ರೀ ಟಿ ರಾಮಸ್ವಾಮಿ ಅಯ್ಯಂಗಾರ್ (ಮೈಸೂರು), ಶ್ರೀ ಟಿ ಎಸ್ ... (ಹೈದರಾಬಾದು ತುಂಗಭದ್ರಾ ಯೋಜನೆ ಅಧಿಕಾರಿ) ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್ : ಶ್ರೀ ... (ಮೈಸೂರು), ವಾರ್ತಾ ಇಲಾಖಾಧಿಕಾರಿ ಶ್ರೀ ಬಿ ಎನ್ ಶ್ರೀನಿವಾಸ್.

ಅಬ್ಕಾರಿ ಕಮಿಷನರ್ ಮತ್ತು ಮಾರಾಟ ತೆರಿಗೆ ಅಧಿಕಾರಿ : ಶ್ರೀ ಜಿ ಎನ್ ... ರಾವ್ (ಮೈಸೂರು), ದಕ್ಷಿಣ ಅರಣ್ಯ ಅಧಿಕಾರಿ ಶ್ರೀ ಎಂ. ಕೆ ಅಪ್ಪಯ್ಯಪ್ಪ (ಮೈಸೂರು), ಉದ್ಯಾನವನಗಳ ಸೂಪರಿಂಟೆಂಡೆಂಟ್ : ಡಾ॥ ... (ಮೈಸೂರು);

ವಿದ್ಯಾ ಇಲಾಖಾಧಿಕಾರಿಗಳು ಶ್ರೀ ... ...

ಈ ಎಲ್ಲ ನೇಮಕಗಳನ್ನೂ ಸೀನಿಯಾರಿಟಿ ಮತ್ತು ಹಿಂದಿನ ಸೇವೆಯ ಆಧಾರದ ಮೇಲೆ ಮಾಡಲಾಗಿರುವುದೆಂದು ಮುಖ್ಯ ಮಂತ್ರಿಯವರು ಹೇಳಿದರು

ವಿಧಾನ ಪರಿಷತ್ತಿಗೆ ತಿಮ್ಮಾಬೋವಿ ಉಪಾಧ್ಯಕ್ಷರು

(ಸ್ವಂ ಸು ಪ್ರೋ) ಬೆಂಗಳೂರು ೨೮

ಈ ದಿನ ಹಿರಿಯ ಶಾಸನ ಸಭೆಯಲ್ಲಿ ಉಪಾಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದು ಒಬ್ಬರೇ ಅಭ್ಯರ್ಥಿಯಾಗಿದ್ದ ಶ್ರೀ ಎಲ್ ಹೆಚ್ ತಿಮ್ಮಾಬೋವಿಯವರು ಆರಿಸಲ್ಪಟ್ಟರು

೦ ಬರುವ ತಿಂಗಳು ೯ನೇ ತಾರೀಖು ಅಂತರ ಸಂಸ್ಥಾನಗಳ ಕೌನ್ಸಿಲ್ ಸಭೆಯು ಮೈಸೂರಿನಲ್ಲಿ ನಡೆಯುವುದು

ಚಿನ್ನದ ಗಣಿಗಳಿಗೆ ೧೬ ಲಕ್ಷ ರೂ. ಪರಿಹಾರ

ಬೆಂಗಳೂರು ೨೮

ಕೋಲಾರದ ಚಿನ್ನದ ಗಣಿಗಳ ರಾಷ್ಟ್ರೀಕರಣದ ಪರಿಣಾಮವಾಗಿ ಕಂಪೆನಿಯವರಿಗೆ ೧೬ ಲಕ್ಷ ರೂ ಪರಿಹಾರವನ್ನು ದ್ರವ್ಯ ಮತ್ತು ಸಾಲ ಪತ್ರದ ರೂಪವಾಗಿ ಕೊಡಲು ಸರ್ಕಾರದವರು ಅಪ್ಪೆಂಗಿ ನಿರ್ಧರಿಸಿರುತ್ತಾರೆಂದು ಗೊತ್ತಾಗಿದೆ. ಇಂದು ವಿಧಾನ ಸಭೆಯಲ್ಲಿ ರಾಷ್ಟ್ರೀಕರಣದ ಮಸೂದೆಯನ್ನು ಮಂಡಿಸಲಾಗುವುದು. ಅದರ ಬಗ್ಗೆ ೧೫ ದಿನಗಳಲ್ಲಿ ವರದಿ ಒಪ್ಪಿಸುವಂತೆ ಜಂಟಿ ಸಮಿತಿಗೆ ಸೂಚಿಸಿ, ಬರುವ ತಿಂಗಳು ೨೦ ರೊಳಗೆ ಶಾಸನ ಮಾಡುವ ಏರ್ಪಾಡಾಗಿರುವುದಾಗಿ ಹೇಳಲಾಗಿದೆ

ಆದ ಕಾರಣ ಬರುವ ೧ನೇ ತಾರೀಖಿಗೆ ಮುಂದುವರಿಯಬೇಕಾದ ಶಾಸನ ಸಭಾಧಿವೇಶನವು ೧೬ಕ್ಕೆ ಪುನ: ಇಲ್ಲಿ ಸೇರಿ ೩-೪ ದಿನಗಳವರೆಗೆ ಈ ವಿಷಯವಾಗಿ ಪರಿಶೀಲನೆ ನಡೆಸಲಿದೆ

ಸಣ್ಣ ಕೈಗಾರಿಕೆಗಳ ಮೇಲಿನ ವಿದ್ಯುಚ್ಛಕ್ತಿ ದರದ ಪರಿಶೀಲನೆ

ರೆವಿನ್ಯೂ ಮಂತ್ರಿ ಚನ್ನಬಸಪ್ಪನವರ ಭರವಸೆ

ಬೆಂಗಳೂರು ೨೮

ರೆವಿನ್ಯೂ ಸಚಿವ ಶ್ರೀ ಹೆಚ್ ಎಂ ಚನ್ನಬಸಪ್ಪನವರು ನೆನ್ನೆ ವಿಧಾನ ಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಉತ್ತರವಿತ್ತು, ಸಣ್ಣ ಕೈಗಾರಿಕೆಗಳಿಗೆ ಪರಿಹಾರ ಒದಗಿಸುವುದಕ್ಕಾಗಿ ವಿದ್ಯುಚ್ಛಕ್ತಿ ದರವನ್ನು ಪುನರ್ವಿಮರ್ಶೆ ಮಾಡುವುದಾಗಿ ತಿಳಿಸಿದರು. ಸಂಸ್ಥಾನದಲ್ಲಿರುವ ೩,೫೦೪ ಹಿಟ್ಟಿನ ಗಿರಣಿಗಳ ಪೈಕಿ ೧೯೭ ಗಿರಣಿಗಳು ಹೆಚ್ಚಿನ ದರವನ್ನು ಕೊಡಲಾಗದೆ ಕೆಲಸ ನಿಲ್ಲಿಸಿರುವುವೆಂದೂ, ಈಗಿನ ದರವು ಡಿಸೆಂಬರ್ ೧೯೫೫ರಿಂದ ಜಾರಿಯಲ್ಲಿರುವುದೆಂದೂ, ಅನಂತರ ಪರಿಸ್ಥಿತಿಯನ್ನು ಪರಿಶೀಲನೆ ಮಾಡುವುದಾಗಿಯೂ ಸಚಿವರು ತಿಳಿಸಿದರು. ದರವು ದುಬಾರಿಯೆಂದು ಸರ್ಕಾರಕ್ಕೆ ಅನೇಕ ದೂರುಗಳು ಬಂದಿರುವುದಾಗಿ ಅವರು ಒಪ್ಪಿ, ಅರ್ಜಿಯಾಗಿದ್ದರೆ ಅದನ್ನು ಶೀಘ್ರವಾಗಿ ಪರಿಶೀಲನೆ ಮಾಡಬೇಕಾದುದೆಂದು ಅಭಿಪ್ರಾಯಪಟ್ಟರು

'ರಂಭಾಪ್ರೇಮ' ಚಿತ್ರ ಪ್ರದರ್ಶನದ ಆರಂಭೋತ್ಸವ

ಮೈಸೂರು ೨೮

ಲೋಕಸಭಾ ಸದಸ್ಯರಾದ ಶ್ರೀ ಎಂ. ಎಸ್ ಗುರುಪಾದಸ್ವಾಮಿಯವರು, ನೆನ್ನೆ ಬೆಳಿಗ್ಗೆ ನಗರದ ರಾಜಕಮಲ್ ಚಿತ್ರಮಂದಿರದಲ್ಲಿ 'ರಂಭಾಪ್ರೇಮ' ಎಂಬ ತಮಿಳು ಚಿತ್ರ ಪ್ರದರ್ಶನದ ಆರಂಭೋತ್ಸವವನ್ನು ನೆರವೇರಿಸಿದರು. ಸಮಾರಂಭಕ್ಕೆ ಆಹ್ವಾನಿತರಾಗಿದ್ದ ... ಮತ್ತು ... ಮಹನೀಯರನ್ನು ಚಿತ್ರದ ಮಾಲೀಕರಾದ ಶ್ರೀ ಜಿ ಪಿ ನಾಗವರ್ಮ ಮತ್ತು ವ್ಯವಸ್ಥಾಪಕರಾದ ಶ್ರೀ ಪ್ರಸಾದ್‌ರವರು ಸ್ವಾಗತಿಸಿದರು. ಎಲ್ಲರಿಗೂ ಸಿಹಿ ತಿಂಡಿಯನ್ನು ಹಂಚಲಾಯಿತು.

ಬೇಲೂರು ಕೊಲೆ ಮೊಕದ್ದಮೆ

ರತ್ನ ಮತ್ತು ಪ್ರಸನ್ನರ ಸಾಕ್ಷ್ಯ

ಬೆಂಗಳೂರು ೨೭

ಬೇಲೂರು ಶ್ರೀನಿವಾಸಯ್ಯಂಗಾರ್ಯರ ಮನೆ ಕೊಲೆ ಮೊಕದ್ದಮೆಯಲ್ಲಿ ನೆನ್ನೆ ಅವರ ಮಗಳು ರತ್ನಳು ತನ್ನ ಸಾಕ್ಷ್ಯವನ್ನು ಮುಂದ ವರಿಸಿ, ಮನೆಯಲ್ಲಿ ಸಿಕ್ಕಿದ ? ಸಿನಿಮಾ ಟಿಕೆಟ್ಟುಗಳು ಹಿಮಾಲಯ ಟಾಕೀಸಿನ ಎಂಟನೇ ಸಿನಿಮಾದವೆಂದೂ, ತಮ್ಮ ಮನೆಯವರಾರೂ ಆ ಸಿನಿಮಾಕ್ಕೆ ಹೋದವರಲ್ಲವೆಂದೂ ಹೇಳಿದಳು. ತಮ್ಮ ಮನೆಯಲ್ಲಿ ದಾಸ್ ಎಂಬ ಒಬ್ಬ ಡ್ರೈವರನು ಇದ್ದು ಜೂನ್ ೬ ನೇ ತಾರೀಖು ಸಂಜೆ ಕೆಲಸ ಬಿಟ್ಟನೆಂದೂ ತಿಳಿಸಿದಳು. ಪಾಟಿಸವಾಲಿನಲ್ಲಿ ಶ್ರೀನಿವಾಸ ಎಂಬುವನೊಬ್ಬನು ತಮ್ಮ ಮನೆಯಲ್ಲಿ ಕೆಲಸಕ್ಕಿದ್ದನೆಂದೂ, ಅವನ ಮೇಲೆ ಮನೆಯಲ್ಲಿ ಕಳುವಾಗಿ ಮೊಕದ್ದಮೆ ಹೂಡಲಾಗಿತ್ತೆಂದೂ ಆಕೆಯು ತಿಳಿಸಿದ್ದಲ್ಲದೆ, ಅಲಮೇಲಮ್ಮ ಎಂಬ ಒಬ್ಬ ಅಡಿಗೆಯವಳೂ ಕೆಲಸಕ್ಕಿದ್ದು ಜನೇ ತಾರೀಖು ಬಿಟ್ಟುಬಿಟ್ಟಳೆಂದು ಹೇಳಿದಳು.

ಪ್ರಸನ್ನನು ತನ್ನ ಸಾಕ್ಷ್ಯದಲ್ಲಿ ತಮ್ಮ ಅಕ್ಕ ರತ್ನಳು ಹೇಳಿದ ವಿಷಯಗಳನ್ನು ಪುಷ್ಟೀಕರಿಸಿದಳು. ಪಾಟಿಸವಾಲಿನಲ್ಲಿ, ತಮ್ಮ ಭಾವ ಪಾರ್ಥಸಾರಥಿಯವರು ೬ ನೇ ತಾರೀಖು ಬೆಳಿಗ್ಗೆ ೧೧ ಘಂಟೆಯಲ್ಲಿ ಮನೆಯಲ್ಲಿದ್ದುದನ್ನು ನೋಡಿದ್ದಾಗಿ ತಿಳಿಸಿದನು. ಸಾಕ್ಷ್ಯ ನೀಡುವಾಗ ಆಕೆಯು ಕಣ್ಣೀರಿಟ್ಟಳು.

ಮಕ್ಕಳಿಲ್ಲದ ಮಹಿಳೆಯಿಂದ ಮಗುವಿನ ಅಪಹಾರ

ಗ್ವಾಲಿಯರಿನ ಹೆರಿಗೆ ಆಸ್ಪತ್ರೆಯಲ್ಲಿ ಆಗತಾನೆ ಜನಿಸಿದ ಗಂಡು ಶಿಶುವೊಂದರ ಅಪಹಾರಕ್ಕಾಗಿ ೨೦ ವರ್ಷ ವಯಸ್ಸಿನ ಶಾಂತಾಬಾಯಿ ಎಂಬಾಕೆಗೆ ೧ ದಿನ ಸಜಾ ಮತ್ತು ೧೦೧ ರೂ ದಂಡವನ್ನು ವಿಧಿಸಲಾಗಿದೆ. ತನಗೆ ಮಕ್ಕಳಿಲ್ಲದೆ ಇದ್ದುದರಿಂದ ಮಗುವನ್ನು ಅಪಹರಿಸಿದುದಾಗಿ ಆಕೆಯು ಕೋರ್ಟಿಗೆ ತಿಳಿಸಿದಳು. ನೆರೆ ಮನೆಯ ಹೆಂಗಸಿಗೆ ಗಂಡು ಮಗುವಾದ ಸುದ್ದಿ ಕೇಳಿ ಆಕೆ ಧಿಯು ಆಸ್ಪತ್ರೆಗೆ ಹೋಗಿ ತಾಯಿಯ ಕೈಯಲ್ಲಿ ೧ ರೂ ಇತ್ತು ಮಗುವಿನ ತಂದೆ ಹೊರಗೆ ಡೆಯುವುದಾಗಿ ತಿಳಿಸಿ, ಶಿಶುವನ್ನು ತೆಗೆದುಕೊಂಡುಹೋದಳೆಂದೂ, ಎಷ್ಟು ಹೊತ್ತಾದರೂ ಬಾರದೇ ಇದ್ದುದರಿಂದ ಗಾಬರಿ ವ್ಯಕ್ತಪಡಿಸಲು ಪೋಲೀಸರಿಗೆ ಸುದ್ದಿ ಮುಟ್ಟಿ, ಅವರು ಟಾಂಗಾ ಗಾಡಿಯವನೊಬ್ಬನ ಸಹಾಯದಿಂದ ಶಾಂತಾಬಾಯಿಯನ್ನು ಬಂಧಿಸಿ, ಮಗುವನ್ನು ತಾಯಿಗೆ ಒಪ್ಪಿಸಿದರೆಂದೂ ವರದಿಯಾಗಿದೆ.

ಸಹಾಯಾರ್ಥ ಚಲನಚಿತ್ರ ಪ್ರದರ್ಶನ

ಚಾಮುಂಡಿಪುರದ ಶ್ರೀ ಗಣೇಶ ಮಿತ್ರ ಮಂಡಲಿ ಸಹಾಯಾರ್ಥವಾಗಿ ನಾಳೆ ಬೆಳಿಗ್ಗೆ ೧೦॥ ಗಂಟೆಗೆ ನ್ಯೂ ಆಪೇರಾ ಸಿನಿಮಾ ಮಂದಿರದವರು ಏಕ್ ದೋ-ತೀನ್ ಎಂಬ ಚಿತ್ರ ಪ್ರದರ್ಶನವನ್ನು ಏರ್ಪಡಿಸಿರುವರು.

ಹಿಂದಿ ಚರ್ಚಾ ಸ್ಪರ್ಧೆ

ನಗರದ ಹಿಂದಿ ಪ್ರಚಾರ ಸಭೆಯ ಆಶ್ರಯದಲ್ಲಿ ನಾಳೆ ಬೆಳಿಗ್ಗೆ ೯ ಗಂಟೆಗೆ ಇಲ್ಲಿನ ಸಹಕಾರ ಭವನದಲ್ಲಿ ಅಖಿಲ ಮೈಸೂರು ಹಿಂದಿ ಜೂನಿಯರ್ ಚರ್ಚಾ ಸ್ಪರ್ಧೆಯು ಜರುಗುವುದು. ಶ್ರೀ ಟಿ ಎಸ್ ಸುದರ್ಶನಾಚಾರ್ಯರು ಅಧ್ಯಕ್ಷತೆ ವಹಿಸುವರು. ಮಧ್ಯಾಹ್ನ ನಾಲ್ಕು ಗಂಟೆಗೆ ಸೀನಿಯರ್ ಚರ್ಚಾ ಸ್ಪರ್ಧೆಯು ಕರ್ನಾಟಕ ಪ್ರಾಂತೀಯ ಹಿಂದಿ ಪ್ರಚಾರ ಸಭೆಯ ಕಾರ್ಯದರ್ಶಿ ಶ್ರೀ ಎಸ್ ಶ್ರೀಕಂಠಮೂರ್ತಿಯವರ ಅಧ್ಯಕ್ಷತೆಯಲ್ಲಿ ಏರ್ಪಾಡಾಗಿದೆ.

ಸ್ಕೌಟುಗಳ ಬಹುಮಾನ ವಿನಿಯೋಗ ಸಮಾರಂಭ

ಮೈಸೂರು ನಗರ ಜಿಲ್ಲಾ ಸ್ಕೌಟು ಸಂಘದ ಆಶ್ರಯದಲ್ಲಿ ನಾಳೆ ಸಂಜೆ ೫ ಗಂಟೆಗೆ ನಗರದ ಸ್ಕೌಟು ರ್‍ಯಾಲಿಯ ಬಹುಮಾನ ವಿನಿಯೋಗ ಸಮಾರಂಭವು ಸ್ಕೌಟು ಕೇಂದ್ರದಲ್ಲಿ ನೆರವೇರುವುದು. ಶ್ರೀಮತಿ ಪಾರ್ವತಮ್ಮ ಮಲ್ಲಾರಾಧ್ಯರವರು ಬಹುಮಾನಗಳನ್ನು ಹಂಚುವರು. ಶ್ರೀ ಜಿ ಬಿ ಮಲ್ಲಾರಾಧ್ಯರು ಭಾಷಣ ಮಾಡುವರು. ಪೌರ ಸಭಾಧ್ಯಕ್ಷ ಶ್ರೀ ಎ ಕೃಷ್ಣಮೂರ್ತಿರಾಯರು ಅಧ್ಯಕ್ಷತೆ ವಹಿಸುವರು.

ಉತ್ತಮವಾದ ಕಟ್ಟಡದ
ಪ್ಲಾನುಗಳು ಮತ್ತು ಬ್ಲೂಪ್ರಿಂಟ್
ಮಾಡಿಕೊಡುವುದಕ್ಕೂ ಮತ್ತು ಸಿಮೆಂಟ್
ಸಲಾಕಿ ಎಸ್ಟಿಮೇಟ್ ಮಾಡಿಕೊಡುವುದಕ್ಕೂ
ಗಾಯತ್ರಿ ಟಾಕೀಸ್ ಎದುರು
ಹ್ಯಾಟ್ ಅಂಗಡಿಯಲ್ಲಿ
ಬಿ ಮುನಿಸಾಮಪ್ಪ,
ಡಿಸೈನರ್ ಮತ್ತು ಲೈಸೆನ್ಸ್ ಹೋಲ್ಡರ್
ಇವರಲ್ಲಿ ವಿಚಾರಿಸಿರಿ

ಕಾಲೇಜ್ ಕ್ರಾನಿಕಲ್
(ಸಂಪಾದಕ ಜಿ ಆರ್ ಮಲ್ಲಾರಾಧ್ಯ)
ಅಂತರ ಕಾಲೇಜು ಯುವಜನೋತ್ಸವ
ಸ್ಪರ್ಧಿಗಳಿಗೆ ಸುಸ್ವಾಗತ ಬಯಸುತ್ತೇವೆ
ಕಾಲೇಜ್ ಕ್ರಾನಿಕಲ್ ವಿದ್ಯಾರ್ಥಿಗಳಿಂದ,
ವಿದ್ಯಾರ್ಥಿಗಳ ಪ್ರಗತಿಗೆ ಮೀಸಲಾದ
ವೈಶಿಷ್ಟ ಮಾಸಿಕ
ವಿವರಗಳಿಗೆ —
ಮ್ಯಾನೇಜರ್, ಕಾಲೇಜ್ ಕ್ರಾನಿಕಲ್,
ಬಳೆಪೇಟೆ ಬೆಂಗಳೂರು ೨

THE NATIONAL INSTITUTE OF COMMERCE,
1677, Old Mysore Bank Road Mysore
FRESH ADMISSIONS for TYPEWRITING and SHORT-
HAND are now being received during the mornings & evenings
For particulars, apply sharp

ರಾ ಜ ಭ ವ ನ
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು
ಒಳ್ಳೆಯ ಕಾಫಿ ಮತ್ತು ಬೆಣ್ಣೆ ಕಾಯಿಸಿದ ತುಪ್ಪದಿಂದ ತಯಾರಿಸಿದ ತಿಂಡಿಗಳನ್ನು
ಮರೆಯದಿರಿ. ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಏರ್ಪಡಿಸಿದೆ

ತಕ್ಷಣ ಬೇಕಾಗಿದೆ

ಮೈಸೂರು ಸಿಟಿ ಮಂಡಿ ಮೊಹಲ್ಲಾ II ನೇ ಕ್ರಾಸ್ ಬಜಾರಿನಲ್ಲಿರುವ ಕಬೀರ್ ಶ್ರೀರಾಮ ಮಂದಿರದಲ್ಲಿ ದೇವರ ಪೂಜೆ ಮಾಡುವ ಅರ್ಚಕರು ಬೇಕಾಗಿದೆ. ಇಷ್ಟವುಳ್ಳವರು ಪತ್ರದಿಂದಲ್ಲಿ ವಿಚಾರಿಸಬಹುದು. ನೇರವಾದರೂ ಸರಿ.

Edited, Printed and Published by A. R. Nagarajan at Sadhvi Press D. Subbaiah Road, Mysore

ಶುಚಿ ಮತ್ತು ರುಚಿ!
ಬ್ರೆಡ್, ಬನ್ನು, ಬಿಸ್ಕತ್ತು ಮತ್ತು
ನೀಲಗಿರಿ ಬಟರ್
ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ
ಪ್ರತಿ ಭಾನುವಾರದ
ಸ್ಪೆಷಲ್ ಪೊಟೆಟೊ ಬ್ರೆಡ್
ಶ್ರೀ ಕೃಷ್ಣಾ ಬೇಕರಿ,
ಡಿ ಸುಬ್ಬಯ್ಯಾ ರೋಡ್, ಮೈಸೂರು
(ನಮ್ಮ ಅಂಗಡಿಯ ಶಾಖೆಯನ್ನು ಬೇರೆ ಎಲ್ಲೂ ತೆರೆದಿಲ್ಲ)

ವುಡ್‌ಲ್ಯಾಂಡ್ಸ್ ★ 28—9—56 ನೇ ಶುಕ್ರವಾರದಿಂದ
ಅಮೋಘ ಪ್ರಾರಂಭ
ದಿನ ಪ್ರದರ್ಶನಗಳು ಸಂಜೆ 3, 6 10, 9 30ಕ್ಕೆ
ನಾಂದಿ ಕಂಪನಿಯ
ಹಿಂದಿ ಚಿತ್ರ
★ ದೇವ್ ತಾ ★
ತಾರಾಗಣ ಜೆಮಿನಿ ಗಣೇಶ್, ವೈಜಯಂತಿಮಾಲಾ, ಜಮುನಾ,
ಕುಮಾರಿ ಕಮಲ, ಅಘ ಮತ್ತು ನಂಬಿಯಾರ್
ಸಂಗೀತ ಸಿ ರಾಮಚಂದ್ರ ನಿರ್ದೇಶನ ಪುಲ್ಲಯ್ಯ
ಗೋಪಾಕೃಷ್ಣನವರ ನೃತ್ಯಗಳು
ಮೊದಲು ನಾಲ್ಕು ವಾರ ಎಲ್ಲಾ ಕಾಂಪ್ಲಿಮೆಂಟರಿ ಮತ್ತು
ಫ್ರೀ ಪಾಸುಗಳನ್ನು ಮನ್ನಾ ಮಾಡಿದೆ

SREE GANESH TALKIES
Gala Release From To-day Daily 3 Shows
"...THE FUNNIEST...!" — LIFE MAGAZINE
GRAND ENTERTAINMENT! — Cue Magazine
PICTURE OF THE MONTH! — American Magazine

ನ್ಯೂ ಆಪೇರಾ, ಮೈಸೂರು ★ 28—9—56 ರಿಂದ ಜಯಪ್ರದವಾದ 2ನೇ ವಾರ
ಉದಯರವರ ಭವ್ಯ ನವೀನತೆಯ ಸಾಮಾಜಿಕ ಕನ್ನಡ ಚಿತ್ರ
ಜಾನಕಿ, ರಮಾದೇವಿ ಎಲಿಸಬೆತ್ ಲಕ್ಷ್ಮೀದೇವಿ
ಉದಯಕುಮಾರ್, ದಿಕ್ಕಿ ಮಾಧವರಾವ್,
ನರಸಿಂಹರಾಜು ಬಾಲಕೃಷ್ಣ ಪಾತ್ರವಹಿಸಿರುವ
★ ಭಾಗ್ಯೋದಯ ★
ಕವಿ ಪ್ರಭಾಕರಶಾಸ್ತ್ರಿ — ದಿಗ್ದರ್ಶನ ಎ. ವಿ ಬಾಬು
ನಿರ್ಮಾಪಕರು ಎಸ್ ಬಿ ಪಿಕ್ಚರ್ ಮತ್ತು
ಎ ಸಿ ಸಚ್ಚಿದಾನಂದಮೂರ್ತಿ -- A Prakash Release

ರಾಜಕಮಲ್ ಟಾಕೀಸ್, ಮೈಸೂರು ● 28-9-56ರಿಂದ : ಅಮೋಘ ಪ್ರಾರಂಭ
ದಿನವಹಿ ಮೂರು ಪ್ರದರ್ಶನಗಳು
ಚಲನಚಿತ್ರ ಕ್ಷೇತ್ರದ ಪ್ರಖ್ಯಾತ ನಟನಟಿಯರು
ಪಾತ್ರವಹಿಸಿರುವ, ಕಾರ್ಲೈಲ್‌ನ ಪ್ರಣಯ,
ಹಾಸ್ಯಮಯ ತಮಿಳು ಚಿತ್ರ
★ ರಂಭಾ ಪ್ರೇಮ ★
ಪಿ ಭಾನುಮತಿ, ಎಂ ಜಿ ರಾಜನ್, ಬಿ ವಿ ಸರೋಜ, ತಂಗವೇಲು, ನಂಬಿಯಾರ್, ಟಿ ಎಸ್ ಬಾಲಯ್ಯ ಮುಂತಾದವರು

ಪ್ರಭು ದೇವಾ ಥಿಯೇಟರ್ ★ 29-9-56ನೇ : ಶನಿವಾರಗಿಂದ . ಅಮೋಘ ಪ್ರಾರಂಭ
(ಪದ್ಮಾ ಟಾಕೀಸ್)
ಪ್ರತಿ ದಿನ ಮೂರು ಪ್ರದರ್ಶನಗಳು
ರಾಜರಾಜೇಶ್ವರಿ ಫಿಲಂ ಕಂಪೆನಿಯವರ ತಮಿಳು ಚಿತ್ರ
ನಾಗಯ್ಯ, ಕನ್ನಾಂಬ, ಎಸ್ ವರಲಕ್ಷ್ಮಿ, ಅಂಜಲಿದೇವಿ,
ತಂಗವೇಲು, ವರದನ್ ಮುಂತಾದವರು ಪಾತ್ರವಹಿಸಿರುವ
★ ನಾಗಪಂಚಮಿ ★

ರಿಜಿಸ್ಟರ್ ನಂ. 792

ಸಂಸ್ಥಾನದ ಎಲ್ಲೆಡೆಗಳಲ್ಲೂ ಪ್ರಚಾರದಲ್ಲಿರುವ
ಸಾಧ್ವಿ ದಿನ ಪತ್ರಿಕೆಗೆ
ನಿಮ್ಮ ಜಾಹೀರಾತುಗಳನ್ನು ಕೊಟ್ಟು ಪ್ರಯೋಜನ ಪಡೆಯಿರಿ
ದರಗಳಿಗೆ ಬರೆಯಿರಿ

ಸಾಧ್ವಿ

ಬಿಡಿ ಪತ್ರಿಕೆ 6 ಕಾಸು

ಚಂದಾ ದರ

ವಿತಂಟರುಗಳ ಮೂಲಕ ತಿಂಗಳಿಗೆ ಎಂಟಾಣೆ
ಅಂಚೆ ಮೂಲಕ ತಿಂಗಳಿಗೆ ಒಂದು ರೂ.
ಬಿಡಿ ಪತ್ರಿಕೆ ಮೂರು ಕಾಸು

[ಪುಟ : ೦೫] SADHVI : SUNDAY 30—9—1956 ಮೈಸೂರು : ಭಾನುವಾರ ೩೦—೯—೧೯೫೬ [ಸಂಚಿಕೆ : ೩೬

ಪಶ್ಚಿಮ ಬಂಗಾಳಾದಲ್ಲಿ ಪ್ರವಾಹದಿಂದ ೧೦೦ ಮರಣ

ಹಣದ ದುರುಪಯೋಗಕ್ಕಾಗಿ ರೈಲ್ವೆ ಇನ್ಸ್‌ಪೆಕ್ಟರಿಗೆ ಸಜಾ

ಇಲ್ಲದ ಕೂಲಿಗಳ ಹೆಸರಲ್ಲಿ ಸಂಬಳ ಪಡೆದ ಅಪಾದನೆ

ಮೈಸೂರು ೩೦

ಬೆಂಗಳೂರಿನಲ್ಲಿ ರೈಲ್ವೆ ಇಲಾಖೆಯ ಪರ್ಮನೆಂಟ್ ವೇ ಇನ್ಸ್‌ಪೆಕ್ಟರಾಗಿದ್ದ ಎ ಸೀತಾರಾಮ್ ಎಂಬುವರು ಅದೇ ಇಲಾಖೆಯ ಮೇಸ್ತ್ರಿಗಳಾದ ಮಹದೇವಶಾಸ್ತ್ರಿ ಮತ್ತು ವೆಂಕಟಯ್ಯ ಎಂಬುವರ ಸಹಾಯದಿಂದ ಕಳೆದ ಜುಲೈ ೩ನೇ ಜನವರಿ ೧೦ನೇ ತಾರೀಖಿನಿಂದ ಮಾರ್ಚಿ ೩೧ ವರೆಗೆ ಕೆಲಸಕ್ಕಿಲ್ಲದಿದ್ದ ಕೂಲಿಗಳ ಹೆಸರನ್ನು ಸೂಚಿಸಿ ಅವರ ರುಜುಗಳನ್ನು ಫೋರ್ಜರಿ ಮಾಡಿ ಸಂಬಳ ಪಡೆದರೆಂದು ಹೂಡಲಾಗಿದ್ದ ಮೊಕದ್ದಮೆಯಲ್ಲಿ ಬೆಂಗಳೂರು ನಗರ ನ್ಯಾಯಾಧೀಶರು ಮೇಸ್ತ್ರಿಗಳಿಬ್ಬರನ್ನೂ ಖುಲಾಸೆ ಮಾಡಿ ಸೀತಾರಾಮರಾಯರನ್ನು ಶಿಕ್ಷೆಗೆ ಗುರಿಪಡಿಸಿರು. ಸದರಿ ನೌಕರರಿಗೆ ಇಲ್ಲಿಗೆ ವರ್ಗವಾಗಿರುವುದರಿಂದ ಮೊಕದ್ದಮೆಯನ್ನು ಇಲ್ಲಿನ ಸೆಷನ್ಸ್ ನ್ಯಾಯಾಲಯಕ್ಕೆ ವರ್ಗಾಯಿಸಲಾಗಿದ್ದು ನ್ಯಾಯಾಧೀಶರಾದ ಶ್ರೀ ಮುನಿಸ್ವಾಮಯ್ಯನವರು ವಿಚಾರಣೆ ನಡೆಸಿ, ಅಪಾದಿತರಿಗೆ ೩ ವರ್ಷ ಸಜಾ ಮತ್ತು ೩೦೦ ರೂ ಜುಲ್ಮಾನೆ, ತಪ್ಪಿದರೆ ಮತ್ತೆ ೩ ತಿಂಗಳು ಸಾದಾ ಶಿಕ್ಷೆಯನ್ನು ವಿಧಿಸಿದರು

ಗಣಪತಿ ಉತ್ಸವದ ಕಾರ್ಯಕ್ರಮ

ವಾಣಿವಿಲಾಸ ರಸ್ತೆಯ ಶ್ರೀ ಕ್ಯಾತನಹಳ್ಳಿ ಸಿಂಗಯ್ಯನವರ ಸಂಸ್ಕೃತ ಪಾಠಶಾಲೆಯಲ್ಲಿ ಶ್ರೀ ಗಣಪತಿ ವಿಸರ್ಜನಾ ಮಹೋತ್ಸವವು ಈ ಸಂಜೆ ೬॥ ಗಂಟೆಗೆ ಏರ್ಪಡಿಸಲಾಗಿದೆ. ಎಂ. ಸಿ. ಮಹದೇವಸ್ವಾಮಿಯವರು ಅಧ್ಯಕ್ಷತೆ ವಹಿಸುವರು. ಓರಿಯಂಟಲ್ ಲೈಬ್ರೆರಿಯ [illegible] ಹೆಚ್. ದೇವೀರಪ್ಪನವರು ಭಾಷಣ ಮಾಡುವರು. ೧॥ ವಿ॥ ಬಿ ಎಸ್ ಎಸ್. ಕೌಶಿಕ್ ಮತ್ತು ಕೆ ವೆಂಕಟಸುಬ್ಬಯ್ಯನವರಿಂದ ಹರಿಕಾವ್ಯ ವಾಚನ ಮತ್ತು ವ್ಯಾಖ್ಯಾನಗಳು ನಡೆಯುವುವು. ನಾಳೆ ಸಂಜೆ ೬॥ಗೆ ರಾ॥ ಎಂ ಲಿಂಗಯ್ಯನವರ ಅಧ್ಯಕ್ಷತೆಯಲ್ಲಿ ಶ್ರೀ ಎ. ಗಂಗಾಧರರಾವ್‌ರವರು ಭಾಷಣ ಮಾಡುವರು. ವಿ॥ ಗಿರಿಜಮ್ಮನವರ ಸಂಗೀತವು ಏರ್ಪಾಡಾಗಿದೆ

ಯುವರಾಜಾ ಕಾಲೇಜಿನ ಸಂಸ್ಕೃತ ಅಸಿಸ್ಟೆಂಟ್ ಪ್ರೊಫೆಸರ್

ಇಲ್ಲಿನ ಯುವರಾಜಾ ಕಾಲೇಜಿನಲ್ಲಿ ಸಂಸ್ಕೃತ ಅಧ್ಯಾಪಕರಾಗಿರುವ ಶ್ರೀ ಎಸ್ ರಂಗಾಚಾರ್ಯರು ಎರಡು ವರ್ಷ ಅವಧಿಗೆ ಪ್ರೊಬೇಷನರಿ ಅಸಿಸ್ಟೆಂಟ್ ಪ್ರೊಫೆಸರಾಗಿ ನೇಮಿಸಲಾಗಿದೆ

ಆರಂಭ ಭಾಷಣ

ಮಹಾರಾಣಿಯರ ಮೆಟ್ರಿಕ್ಯುಲೇಷನ್ ಕಾಲೇಜಿನ [illegible] ಸಂಘದ ಆರಂಭ ಭಾಷಣವನ್ನು ಸಂಜೆ ೬ ಗಂಟೆಗೆ ಶಾರದಾವಿಲಾಸ ಕಾಲೇಜು ಪ್ರಿನ್ಸಿಪಾಲ್ ಶ್ರೀ ಟಿ ಎಸ್ ರಾಜಗೋಪಾಲಯ್ಯಂಗಾರ್ಯರು ಮಾಡುವರು

೧೯೭೦ರಿಂದ ಸಂಸ್ಥಾನದಲ್ಲಿ ಗುಂಡಿನೇಟಿನ ಪ್ರಕರಣಗಳು

ವಿಧಾನ ಸಭೆಯಲ್ಲಿ ಸಚಿವರ ವಿವರಣೆ

ಬೆಂಗಳೂರು ೨೯

೧೯೪೭ ರಿಂದ ಇದುವರೆಗೆ ಸಂಸ್ಥಾನದಲ್ಲಿ ೩೩ ಸಾರಿ ಪೊಲೀಸರು ಗುಂಡನ್ನು ಹಾರಿಸಿದರೆಂದೂ ಇವುಗಳಿಂದ ೩೭ ಮಂದಿ ಮೃತಪಟ್ಟು, ೭೭ ಜನರಿಗೆ ಗಾಯವಾದುದಾಗಿಯೂ ವಿಧಾನ ಸಭೆಯಲ್ಲಿ ಮೊನ್ನೆ ಸಚಿವ ಶ್ರೀ ಹೆಚ್ ಸಿದ್ದವೀರಪ್ಪನವರು ತಿಳಿಸಿದರು. ಕಾಂಗ್ರೆಸ್ಸು ಅಧಿಕಾರಕ್ಕೆ ಬರುವ ಮುಂಚೆ ೧೯೪೭ ಜುಲೈನಿಂದ ಸೆಪ್ಟೆಂಬರ್‌ವರೆಗೆ ೧೫ ಬಾರಿ ಗುಂಡಿನ ಪ್ರಕರಣಗಳಾಗಿ, ೩೩ ಮಂದಿ ಮಡಿದು ೫೩ ಜನರು ಗಾಯಗೊಂಡರೆಂದು ಅವರು ಹೇಳಿದರು. ಕಾಂಗ್ರೆಸ್ಸು ಅಧಿಕಾರಕ್ಕೆ ಬಂದಮೇಲೆ ೮ ಬಾರಿ ಗುಂಡನ್ನು ಹಾರಿಸಲಾಯಿತೆಂದೂ, ಎಲ್ಲಾ ಸಂದರ್ಭಗಳಲ್ಲೂ ಸಕಾರಣವಾಗಿ ಗುಂಡಿನ ಪ್ರಕರಣಗಳು ಜರುಗಿದುವೆಂದೂ ಮತಿವರು. ಪೊಲೀಸು ನೌಕರರ ಮುಷ್ಕರದ ಕಾಲದಲ್ಲಿ ಮಿಲಿಟರಿಯವರು ಗುಂಡು ಹಾರಿಸಿದಾಗ ಗಾಯಗೊಂಡವರ ಸಂಖ್ಯೆ ತಿಳಿಸಲು ಸಚಿವರು ನೋಟೀಸನ್ನು ಕೇಳಿದರು

ಮೃತಪಟ್ಟ ಅಧಿಕಾರಿಗಳಿಗೆ ಹುಕ್ಕ ಸಹಾಯ

ಮುಖ್ಯ ಮಂತ್ರಿಗಳ ಆಪ್ತ ಕಾರ್ಯದರ್ಶಿಗಳಾಗಿದ್ದ ದಿವಂಗತ ಟಿ ರಂಗಮಲ್ಲಯ್ಯನವರನ್ನು ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ಆಗಿ ಸಹಾಯಂ ಮಾಡಲಾಗಿದೆಯೆಂದು ಸರ್ಕಾರಿ ಪ್ರಕಟಣೆಯೊಂದು ತಿಳಿಸಿದೆ. ಅವರು ಕೃಷ್ಣರಾಜಸಾಗರದ ವಿಶ್ವೇಶ್ವರಯ್ಯ ನಾಲೆಯಲ್ಲಿ ಬಿದ್ದು ಆತ್ಮಹತ್ಯೆ ಮಾಡಿಕೊಂಡು ಈಗಾಗಲೇ ೧ ವರ್ಷವಾಗುತ್ತ ಬಂದಿದೆ

ನೂತನ ಸಂಸ್ಥಾನದ ಅರಣ್ಯಾಧಿಕಾರಿಗಳು

ಸಂಸ್ಥಾನದ ಮುಖ್ಯ ಅರಣ್ಯಾಧಿಕಾರಿಗಳಾದ ಶ್ರೀ ಎಂ ಮುತ್ತಣ್ಣನವರು ನೂತನ ಮೈಸೂರಿನ ಅರಣ್ಯ ಇಲಾಖಾ ಮುಖ್ಯಾಧಿಕಾರಿಗಳಾಗುವರು.

ಮೈಸೂರಿನ ಸಂಪರ್ಕಾಧಿಕಾರಿಯಾಗಿ ಹೈದರಾಬಾದಿನವರ ನೇಮಕ

ಹೈದರಾಬಾದು ವಿದ್ಯಾ ಇಲಾಖೆಯ ಡೆಪ್ಯುಟಿ ಕಾರ್ಯದರ್ಶಿಯವರಾದ ಶ್ರೀ ಆರ್ ಶ್ರೀನಿವಾಸರವರನ್ನು ಮೈಸೂರು ಸರ್ಕಾರದ ಸಂಪರ್ಕಾಧಿಕಾರಿಯಾಗಿ ನೇಮಿಸಲಾಗಿದೆ. ಅವರು ಪ್ರಾಂತ ಪುನರ್ವಿಂಗಡಣೆ ಅಂಶಗಳನ್ನು ಪರಿಶೀಲಿಸುವರು

ಶಾಸನ ಸಭೆಗಳಿಂದ ಸೆನೆಟ್ಟಿಗೆ ಚುನಾವಣೆ

ವಿಧಾನ ಪರಿಷತ್ತಿನಿಂದ ಸೆನೆಟ್ಟಿಗೆ ಶ್ರೀಗಳಾದ ವೈ ಧರ್ಮಪ್ಪ, ಎಚ್ ಸಿ. ದೊರೆಯ್ಯ ಮತ್ತು ಎಲ್ ಹೆಚ್ ತಿಮ್ಮಾಬೋವಿಯವರೂ, ವಿಧಾನ ಸಭೆಯಿಂದ ಶ್ರೀಗಳಾದ ಎ ಕಿ ನಾಗಯ್ಯರೆಡ್ಡಿ, ಬಿ ನಾರಾಯಣಸ್ವಾಮಿ, ಎ. ಹುಚ್ಚಮಾಸ್ತಿಗೌಡ, ಕೆ ಪ್ರಭಾಕರ್, ಟಿ ಸಿ. ತಿಂಮಪ್ಪ, ಜಿ ಎ ತಿಮ್ಮಪ್ಪಗೌಡ, ಬಿ ಹುಚ್ಚೇಗೌಡ ಮತ್ತು ಮೂಲ್ಕ ಗೋವಿಂದರೆಡ್ಡಿ ಮತ್ತು ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರೂ ಆರಿಸಿ ಬಂದಿರುವರು

ಅಖಿಲ ಭಾರತ ನಿಮ್ನವರ್ಗದ ರೈಲ್ವೆ ನೌಕರರ ಸಭೆ

ಮೈಸೂರು ೩೦

ಅಖಿಲ ಭಾರತ ನಿಮ್ನವರ್ಗದ ರೈಲು ನೌಕರರ ಯೋಗಕ್ಷೇಮ ಸಂಸ್ಥೆಯ ಕಾರ್ಯಕಾರಿ ಸಮಿತಿ ಸಭೆಯು ಕಳೆದ ೨೮, ೨೯, ಮತ್ತು ೩೦ನೇ ತಾರೀಖುಗಳಲ್ಲಿ ನಗರದಲ್ಲಿ ದಕ್ಷಿಣ ರೈಲ್ವೆಯ ಶ್ರೀ ಜಿ ಎ ಕಲ್ಯಾಣಸುತ್ತುರವರ ಅಧ್ಯಕ್ಷತೆಯಲ್ಲಿ ನಡೆಯಿತು. ಸೆಂಟ್ರಲ್ ರೈಲ್ವೆಯ ಕೆ. ಎ ಖಾರೆ, ಕೆ ಬಿ. ಭಂಲೋರಿಯಾ, ಪಿ ವೈ. ಕಾಲ್ಬೈಕರ್ ಜಿ ಎಂ ನಿಕಂ, ಎಂ ಎಸ್ ಜಾಧವ್, ಕೆ ಆರ್. ಉಬಳೆ, ಪೂರ್ವ ರೈಲ್ವೆಯ ಎಂ ಎಂ ಮಂಡಲ್, ಬಿ ಸಿ ಬಿಸ್ವಾಸ್. ಉತ್ತರದ ಸಖರಾಮ್, ಈಶಾನ್ಯ ರೈಲ್ವೆಯ ರಾಮನಾಥ್ ಹರಿಜನ, ದಕ್ಷಿಣ ರೈಲ್ವೆಯ ಎಸ್ ದೊರೆಯ್ಯ, ಆಗ್ನೇಯ ರೈಲ್ವೆಯ ಎ ಬಿ ವೈದ್ಯ ಮತ್ತು ಕೇಲರ್ ಇವರುಗಳು ಭಾಗವಹಿಸಿದ್ದರು

ಸಂಸ್ಥೆಯ ಕರಡು ಅಂಗರಚನೆಯನ್ನು ಸಭೆಯು ಅಂಗೀಕರಿಸಿತು ಮತ್ತು ರೈಲ್ವೆ ನೌಕರರ ಹಿತರಕ್ಷಣೆ ವಿಚಾರವಾದ ಹಲವು ನಿರ್ಣಯಗಳನ್ನು ಚರ್ಚಿಸಿತು

ಕಾವ್ಯ ವಾಚನ

ಜಯನಗರದಲ್ಲಿರುವ ಪೌರಾಣಿಕ ಸಾರಂಗ್ರಾಮ ಶ್ರೀಕಂಠಶಾಸ್ತ್ರಿಗಳ ಮನೆಯಲ್ಲಿ ವಿ॥ ಬಿ. ಎಸ್ ಎಸ್. ಕೌಶಿಕ್ ಮತ್ತು ಅವರ ಶಿಷ್ಯರಾದ ಶ್ರೀಮತಿಗಳು ಎಂ ಶಾಂತಲಕ್ಷ್ಮಿ ಮತ್ತು ಎಸ್ ವಿ ಪರಿಮಳ ಇವರುಗಳಿಂದ ರಾಮ ಮುದ್ರಿಕಾ ಪ್ರದಾನ ಎಂಬ ಕಾವ್ಯ ವಾಚನವೂ ಮತ್ತು ವಿದ್ವಾನ್ ಕೃಷ್ಣಗಿರಿ ಕೃಷ್ಣರಾಯರಿಂದ ವ್ಯಾಖ್ಯಾನವೂ ನಾಳೆ ಸಾಯಂಕಾಲ ೬॥ ಗಂಟೆಗೆ ಏರ್ಪಾಡಾಗಿವೆ

ಈ ದಿನದಿಂದ ಪ್ರಾದೇಶಿಕ ಕನ್ನಡ ಸುದ್ದಿ ಪ್ರಸಾರ

ಈ ದಿನದಿಂದ ಬೆಂಗಳೂರು ರೇಡಿಯೋವಿನಲ್ಲಿ ಸಂಜೆ ೬-೧೦ರಿಂದ ೬-೨೦ರ ವರೆಗೆ ಪ್ರಾದೇಶಿಕ ಕನ್ನಡ ಸುದ್ದಿಗಳ ಪ್ರಸಾರವು ನಿತ್ಯವೂ ನಡೆಯುವುದು. ಬೆಳಗ್ಗೆ ಮತ್ತು ಸಂಜೆ ೭-೪೫ಕ್ಕೆ ದೆಹಲಿ ಕನ್ನಡ ಪ್ರಸಾರದ ಜೊತೆಗೆ ಇದೂ ಇರುವುದು

ಬೆಂಗಳೂರು ರೇಡಿಯೋ ನಾಳೆ ಕಾರ್ಯಕ್ರಮ

ಬೆಳಗ್ಗೆ ೭-೫ ಸಂಗೀತ ೭-೨೫ ದೇವರ ನಾಮ ೭-೩೦ ಗಾನ ವಿಹಾರ ೮ ೧೫ ಆರೋಗ್ಯ ಮತ್ತು ಆಹಾರ [illegible] ಎಸ್. ಇಂದಿರ-ಸಂಗೀತ, ೧೨-೩೦ ವೀಣಾ ವಾದನ. ೧ ಗಾನ ಮಂಜರಿ. ೧-೫೦ ಕೊಳಲು. ೨-೧೫ ಪ್ರೋತೃಗಳಿಗಾಗಿ. ಸಂಜೆ ೫-೩೦ ಹೆಚ್. ಎಸ್. ಶ್ರೀನಿವಾಸಮೂರ್ತಿ-ವೀಣೆ ೬-೩೦ ಅನ್ನಿ ಬೆಸೆಂಟ್. ಪ್ರಸಂಗ. ೮ ಪಿ. ವಾಲ್ಕರ್-ಹಿಂದಿ ಭಜನೆ. ೮-೧೫ ಶ್ರೋತೃ ವಿನಂತಿ ೮ ೩೦ ದೆಹಲಿಯಿಂದ. ೯-೧೫ ವಾಲ್ಮೀಕಿ ರಾಮಾಯಣ ಭಾಷಣ. ೯-೩೦ ಕಥಾ ಕಾಲಕ್ಷೇಪ ಎಂ ಎಸ್ ಮೂರ್ತಿ ರಾವರಿಂದ

ಬಿ. ಎಗ್. ಡಾಕಾರ್‌ರವರಿಂದ ವಸ್ತು ಪ್ರದರ್ಶನದ ಆರಂಭ

ಮೈಸೂರು ೩೦

ಈ ವರ್ಷದ ದಸರಾ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ಕೇಂದ್ರ ಗೃಹ ಮಂತ್ರಿ ಖಾತೆಯ ಸಚಿವ ಶ್ರೀ ಬಿ ಎಗ್ ಡಾಕಾರ್‌ರವರು ೭ ನೇ ಅಕ್ಟೋಬರ್ ತಾರೀಖು ಸಂಜೆ ೫ ಘಂಟೆಗೆ ವಸ್ತು ಪ್ರದರ್ಶನ ರಂಗಮಂಟಪದಲ್ಲಿ ನೆರವೇರಿಸುವರು. ಸಂಸ್ಥಾನದ ಮುಖ್ಯ ಮಂತ್ರಿ ಶ್ರೀ ಕಡಿದಾಳ್ ಮಂಜಪ್ಪನವರು ಅಧ್ಯಕ್ಷತೆ ವಹಿಸುವರು

ಹರಿ ಕಥೆ

ಹಳ್ಳದಕೇರಿ ಶ್ರೀ ಪ್ರಸನ್ನ ರಾಮ ಮಂದಿರದಲ್ಲಿ ಈ ರಾತ್ರಿ ೮ ಗಂಟೆಗೆ ವಿಜಾದಶಿ ಪ್ರಯುಕ್ತ ಶ್ರೀ ಮು ಕ ಬಾ ಗಿ ಲು ನಾರಾಯಣದಾಸರಿಂದ ಕೃಷ್ಣ ಗಾರುಡಿ ಎಂಬ ಹರಿಕಥೆಯು ನಡೆಯುವುದು

ಹರಿಕಥೆ ಮತ್ತು ನೃತ್ಯ

ಚಲುವಾಂಬಾ ಅಗ್ರಹಾರದ ಹಂಪಿಕೇರಿ ಶ್ರೀ ಪ್ರಸನ್ನ ವೆಂಕಟರಮಣಸ್ವಾಮಿ ದೇವಸ್ಥಾನದಲ್ಲಿ ನೆನ್ನೆಯಿಂದ ನಿತ್ಯವೂ ಸಂಜೆ ೮ ಗಂಟೆಯಿಂದ ೬ರ ವರೆಗೆ ಧಾರವಾಡದ ವಿ॥ ಲಕ್ಷ್ಮೀಬಾಯಿ ದೇಶಪಾಂಡೆಯವರ ಹರಿಕಥೆಯೂ ಮತ್ತು ಕುಮಾರಿ ಗೀತಾದೇವಿಯವರಿಂದ ಸಂಗೀತ ಮತ್ತು ನೃತ್ಯ ಪ್ರದರ್ಶನವೂ ಏರ್ಪಾಡಾಗಿದೆ

ಪಶ್ಚಿಮ ಬಂಗಾಳದಲ್ಲಿ ಪ್ರವಾಹದಿಂದ ೧೦೦ ಜನರ ಮರಣ

ಪಶ್ಚಿಮ ಬಂಗಾಳದಲ್ಲಿ ಈ ವಾರ ವಿಪರೀತ ಮಳೆ ಮತ್ತು ಪ್ರವಾಹದಿಂದ ೧೦೦ ಜನರು ಮೃತಪಟ್ಟರೆಂದು ವರದಿಯಾಗಿದೆ. ಪ್ರಾಂತದ ೫ ಮುಖ್ಯ ನದಿಗಳು ಮತ್ತು ಉಪ ನದಿಗಳಲ್ಲಿ ವಿಪರೀತ ಪ್ರವಾಹ ಬಂದು ೮ ಜಿಲ್ಲೆಗಳ ವಿಶಾಲ ಪ್ರದೇಶಗಳಿಗೆ ನೀರು ನುಗ್ಗಿದೆ. ಬೆಳೆಯುತ್ತಿರುವ ಪ್ರದೇಶಗಳು ನೀರಿನಿಂದ ಆವೃತವಾಗಿವೆ. ಸಂಚಾರ ಸೌಕರ್ಯಗಳು ಕಡಿದು, ವಿವಿಧ ಶಿಬಿರಗಳಲ್ಲಿರುವ ಲಕ್ಷಾಂತರ ಮಂದಿ ನಿರಾಶ್ರಿತರು ತೊಂದರೆಗೀಡಾಗಿದ್ದಾರೆ. ಹಳ್ಳಿಗಳಲ್ಲಿ ೧ ಸಾವಿರಕ್ಕೂ ಹೆಚ್ಚು ಮನೆಗಳು ನೆಲಸಮವಾಗಿವೆ. ನೀರಿನ ಮಧ್ಯೆ ಸಿಕ್ಕಿರುವ ಜನರ ರಕ್ಷಣೆಗಾಗಿ ದೋಣಿಗಳನ್ನು ಕಳುಹಲಾಗಿದೆ.

ಗುಂಡಿನೇಟಿನ ಪರಿಣಾಮವಾಗಿ ನಿಕರಾಗುವ ಅಧ್ಯಕ್ಷರ ಮರಣ

ಮಧ್ಯ ಅಮೆರಿಕದ ನಿಕರಾಗುವ ರಾಷ್ಟ್ರದ ಅಧ್ಯಕ್ಷ ಜನರಲ್ ಅನಸ್ತಾಸಿಯೋ ಸೊಮೊಜಾರವರು ಗುಂಡಿನೇಟಿನ ಪರಿಣಾಮವಾಗಿ ನೆನ್ನೆ ನಿಧನ ಹೊಂದಿದರು. ಕಳೆದ ವಾರ ಅ ರಾಷ್ಟ್ರದ ಲಿಯೋನ್ ಎಂಬ ನಗರಕ್ಕೆ ಅಧ್ಯಕ್ಷರು ಭೇಟಿ ಕೊಟ್ಟಿದ್ದಾಗ ರಿಗೊಬರ್ಟೊ ಲೋಪೆಜ್ ಎಂಬುವನು ಅವರ ಮೇಲೆ ಗುಂಡು ಹಾರಿಸಿದ್ದನು. ಹಂತಕನನ್ನು ಜನರು ಸ್ಥಳದಲ್ಲೇ ಹೊಡೆದು ಸಾಯಿಸಿದ್ದರು

○ ಬಿ ಟಿ ಸಿ ರಾಷ್ಟ್ರೀಕರಣದ ಮಸೂದೆಗೆ ರಾಷ್ಟ್ರಪತಿಯವರ ಅನುಮತಿ ದೊರೆತಿದೆ

ವಾರ ಭವಿಷ್ಯ

ತಾ|| ೩೦-೯-೫೬ರಿಂದ ೬-೧೦-೫೬ರ ವರೆಗೆ

ಮೇಷ :—ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರಶಂಸೆ ಮಿತ್ರರಿಂದ ನೆರವು

ವೃಷಭ —ಆರೋಗ್ಯ ಚೆನ್ನಾಗಿರಲಾರದು ಆರ್ಥಿಕ ಪರಿಸ್ಥಿತಿ ಅಸಮರ್ಪಕ ಶತ್ರುಗಳಿಂದ ತೊಂದರೆ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು ನೌಕರಿಯಲ್ಲಿ ನಿರುತ್ಸಾಹ.

ಮಿಥುನ —ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ ಆರ್ಥಿಕ ಪರಿಸ್ಥಿತಿ ಸಾಧಾರಣ ವ್ಯಥಾ ಕಲಹ ವ್ಯಾಪಾರವ್ಯವಹಾರಗಳಲ್ಲಿ ಅಭಿವೃದ್ಧಿ ಉದ್ಯೋಗದಲ್ಲಿ ಪ್ರಗತಿ ಕಮ್ಮಿ ಪ್ರವಾಸಯೋಗ

ಕರ್ಕ :—ಆರೋಗ್ಯ ಸಮರ್ಪಕ. ಆರ್ಥಿಕ ಪರಿಸ್ಥಿತಿ ತೃಪ್ತಿಕರ. ಸುವಾರ್ತೆ ವಿದ್ಯಾರ್ಥಿಗಳ ಪರೀಕ್ಷೆಯ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಉದ್ಯೋಗದಲ್ಲಿ ಪ್ರೋತ್ಸಾಹ

ಸಿಂಹ :—ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಅನಿರೀಕ್ಷಿತ ಫಲಗಳು. ಉದ್ಯೋಗದಲ್ಲಿ ಸಮಸ್ಯೆ. ಹೊಸ ಉದ್ಯಮಗಳಿಗೆ ಕೈಹಾಕಬೇಡಿ

ಕನ್ಯಾ.—ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ಮಿತ್ರರಿಂದ ಅಪಕಾರ ವ್ಯಾಪಾರವ್ಯವಹಾರಗಳಲ್ಲಿ ನಷ್ಟ ನೌಕರಿಯಲ್ಲಿ ತೊಡಕು

ತುಲಾ —ಆರೋಗ್ಯ ತೃಪ್ತಿಕರ ಆರ್ಥಿಕ ಪರಿಸ್ಥಿತಿ ಸಾಧಾರಣ ಮಿತ್ರರಿಂದ ವಂಚನೆ ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ ಉದ್ಯೋಗದಲ್ಲಿ ಅನಿರೀಕ್ಷಿತ ಪರಿಸ್ಥಿತಿ.

ವೃಶ್ಚಿಕ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಥಾ ವಿವಾದ ಉದ್ಯೋಗದಲ್ಲಿ ನಿರುತ್ಸಾಹ ವ್ಯಾಪಾರವ್ಯವಹಾರಗಳಲ್ಲಿ ನಷ್ಟ

ಧನು —ಆರೋಗ್ಯ ಉತ್ತಮ ಆರ್ಥಿಕ ಪರಿಸ್ಥಿತಿ ತೃಪ್ತಿಕರ ಸಾಮಾಜಿಕ ಕ್ಷೇತ್ರದಲ್ಲಿ ಉನ್ನತಿ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ನೌಕರಿಯಲ್ಲಿ ಪ್ರಶಂಸೆ ನೂತನ ಪರಿಚಯ

ಮಕರ —ಆರೋಗ್ಯ ಸಾಧಾರಣ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವುದು ಶುಭ ಕಾರ್ಯಗಳು ಜರುಗುವುವು ವ್ಯಾಪಾರವ್ಯವಹಾರಗಳಲ್ಲಿ ಯಶಸ್ಸು. ನೌಕರಿಯಲ್ಲಿ ಪ್ರಗತಿ

ಕುಂಭ.—ಆರೋಗ್ಯದ ಬಗ್ಗೆ ಎಚ್ಚರಿಕೆಯಿರಲಿ. ಆರ್ಥಿಕ ಪರಿಸ್ಥಿತಿ ಸಮರ್ಪಕ ಮಿತ್ರರಿಂದ ಉಪಕಾರ. ವ್ಯಾಪಾರವ್ಯವಹಾರಗಳಲ್ಲಿ ಪ್ರಗತಿ ಕಮ್ಮಿ ನೌಕರಿಯಲ್ಲಿ ನಿರುತ್ಸಾಹ.

ಮೀನ —ಆರೋಗ್ಯ ಚೆನ್ನಾಗಿರುವುದಿಲ್ಲ ಆರ್ಥಿಕ ಪರಿಸ್ಥಿತಿ ಅತೃಪ್ತಿಕರ ವ್ಯಾಪಾರವ್ಯವಹಾರಗಳಲ್ಲಿ ಅಭಿವೃದ್ಧಿ ನೌಕರಿಯಲ್ಲಿ ತೊಡಕು. ಪ್ರವಾಸ ಸಂಭವ ವ್ಯಥಾ ವೈಮನಸ್ಯ

ಅಂಗಡಿ ಸಿಬ್ಬಂದಿ ಕಾನೂನಿನಿಂದ ಸಣ್ಣ ಮಾಲೀಕರಿಗೆ ತೊಂದರೆ

ಅಂಗಡಿ ಸಿಬ್ಬಂದಿ ಕಾನೂನಿನ ಪ್ರಕಾರ ಅಂಗಡಿಗಳ ಮಾಲೀಕರಿಗೆ ಇನ್ಸ್‌ಪೆಕ್ಟರು ನೋಟೀಸು ಕೊಟ್ಟು ನೌಕರರ ಬಗ್ಗೆ ಲೆಕ್ಕಪತ್ರವೇ ಮುಂತಾದುವನ್ನು ತಂದೊಪ್ಪಿಸಬೇಕೆಂದು ಸೂಚಿಸುತ್ತಿರುವುದರಿಂದ ಸಣ್ಣ ಪುಟ್ಟ ಅಂಗಡಿಗಳವರಿಗೆ ತುಂಬಾ ತೊಂದರೆಯಾಗಿದೆಯೆಂದೂ ಅದು ತಪ್ಪಬೇಕೆಂದೂ ನಗರದ ಪ್ರಜಾ ಮಂಡಲದ ಶ್ರೀ ಎ ಎಸ್ ವೆಂಕಟಸುಬ್ಬಯ್ಯಶರ್ಮರವರು ಕೋರಿ ಪತ್ರ ಬರೆದಿರುತ್ತಾರೆ

ಬಾಯಿಕಾಯಿ ಹಲಗೆಗಳು ದೊರೆಯುತ್ತವೆ

ಉತ್ತಮವಾದ ಬಾಯಿಕಾಯಿ ಹಲಗೆಗಳು ಬೇಕಾದವರಿಗೆ ದೊರೆಯುತ್ತವೆ ಕೂಡಲೇ ವಿಚಾರಿಸಿ

ಸಾಧ್ವಿ ಆಫೀಸ್, ಮೈಸೂರು

Edited Printed and Published by A R Nagarajan at Sadhvi Press D Subbiah Road, Mysore

ರೆವಿನ್ಯೂ ಮತ್ತು ಸ್ಥಳೀಯ ಸಂಸ್ಥೆ ಕಮಿಷನರ ಹುದ್ದೆಗಳ ರದ್ದು

ಬೆಂಗಳೂರು ೨೯

ನೂತನ ಸಂಸ್ಥಾನದಲ್ಲಿ ನಾಲ್ಕು ಡಿವಿಜನಲ್ ಕಮೀಷನರುಗಳ ನೇಮಕವಾಗಿ ಅವರುಗಳೇ ರೆವಿನ್ಯೂ ಕಮೀಷನರ್ ಮತ್ತು ಸ್ಥಳೀಯ ಸಂಸ್ಥೆ ಕಮಿಷನ್ ... ಗಳನ್ನು ನಿರ್ವಹಿಸಲಿರುವುದರಿಂದ ಈಗ ರೆವಿನ್ಯೂ ಕಮಿಷನರ್ ಮತ್ತು ಸ್ಥಳೀಯ ಸಂಸ್ಥೆ ಕಮಿಷನರ್ ಹುದ್ದೆಗಳು ನವೆಂಬರ್ ೧ ರಿಂದ ರದ್ದಾಗಲಿರುವುವೆಂದು ಗೊತ್ತಾಗಿದೆ

ಜಿಲ್ಲಾಧಿಕಾರಿಗಳು ಎಂದಿನಂತೆ ತಮ್ಮ ಕರ್ತವ್ಯಗಳನ್ನು ನೂತನ ವ್ಯವಸ್ಥೆಯಲ್ಲೂ ಮುಂದುವರಿಸಿಕೊಂಡುಹೋಗುವರು

ಲೋಕಸಭಾಧ್ಯಕ್ಷರು ಮತ್ತು ಸೀತಾರಾಮರಾಯರಿಗೆ ಬಿರುದು

ಉಡುಪಿ ಭಂಡಾರಕೇರಿ ಸ್ವಾಮಿಗಳಿಂದ ಪ್ರಶಸ್ತಿ ಪ್ರದಾನ

ಮದ್ರಾಸಿನ 'ದಾಸಪ್ರಸಾದ' ಭವನದಲ್ಲಿ ಚಾತುರ್ಮಾಸ್ಯ ಸಂಕಲ್ಪವನ್ನು ನೆರವೇರಿಸಿದ ಉಡುಪಿ ಭಂಡಾರಕೇರಿ ಮಠದ ಶ್ರೀ ಶ್ರೀ ವಿದ್ಯಾಮಾನ್ಯತೀರ್ಥ ಶ್ರೀಪಾದಂಗಳವರು ಕಳೆದ ೨೦ನೇ ತಾರೀಖು ತಮ್ಮ ಚಾತುರ್ಮಾಸ್ಯ ಸಂಕಲ್ಪವನ್ನು ಪರಿಸಮಾಪ್ತಿಗೊಳಿಸಿದರು ಕಳೆದ ೨೦ರಂದು ಶ್ರೀ ಶ್ರೀಗಳವರು ಸಭೆ ನಡೆಸಿದ್ದರು ಶ್ರೀ ಮತಿ ಸರಸ್ವತಿ ಬಾಯಿ ಮತ್ತು ಮೈಸೂರು ಆ|| ವಿ|| ಕೆ ವಾಸುದೇವಾಚಾರ್ಯರಿಂದ ಸುಶ್ರಾವ್ಯವಾದ ಗಾಯನವು ಏರ್ಪಾಡಾಗಿತ್ತು.

ಶ್ರೀ ಶ್ರೀಗಳವರು ಭಾಷಣ ಮಾಡಿ, ಧರ್ಮದ ಮಹತ್ವವನ್ನು ವಿವರಿಸಿದರು ಅಲ್ಲದೆ ಲೋಕಸಭಾಧ್ಯಕ್ಷ ಶ್ರೀ ಅನಂತಶಯನಂ ಅಯ್ಯಂಗಾರ್ಯರಿಗೆ ಲೋಕಸೇವಾಧುರೀಣ ಎಂದು ಕೆತ್ತಿರುವ ಚಿನ್ನದ ಪದಕವನ್ನು ದಯಪಾಲಿಸಿದರು ಅಭಿನಂದನಾ ಪತ್ರಿಕೆಯನ್ನೂ ಅರ್ಪಿಸಲಾಯಿತು ನಂತರ ಶ್ರೀ ಕೆ ಸೀತಾರಾಮರಾಯರಿಗೆ ಧರ್ಮಭೂಷಣ ಎಂಬ ಬಿರುದನ್ನು ಕೆತ್ತಿದ ಚಿನ್ನದ ಪದಕವನ್ನು ಶ್ರೀ ಶ್ರೀಗಳವರು ಇತ್ತರು

ಶ್ರೀ ಶ್ರೀಗಳವರಿಗೆ ಅಖಿಲ ಭಾರತ ಮಾಧ್ವ ಸಮುದಾಯದವರ ಪರವಾಗಿ ಶ್ರೀ ಪ ಶ್ರೀನಿವಾಸ ಯವರು ಅಭಿನಂದನಾ ಪತ್ರಿಕೆಯನ್ನು ಸಮರ್ಪಿಸಿದರು

ಕಥಾ ಕಾಲಕ್ಷೇಪ

ರಾಮಾನುಜಾ ರಸ್ತೆಯಲ್ಲಿರುವ ಕರುಣ ಕಂಫದ ಆಶ್ರಯದಲ್ಲಿ ವಿದ್ಯಾ ಗಣಪತಿ ಮಂಗಳಾರತಿಯ ಅಂಗವಾಗಿ ಈ ರಾತ್ರಿ ೯ ಗಂಟೆಗೆ ವಿ|| ಪಿ ರಾಮಸ್ವಾಮಿ ನಾಯ್ಡುರವರು ಚಿತ್ರಶೇಖರ ಎಂಬ ಕಥಾ ಕಾಲಕ್ಷೇಪವನ್ನು ಮಾಡುವರು ಪೌರಸಭಾ ಕಮೀಷನರ್ ಶ್ರೀ ಎ. ವಿಶ್ವನಾಥ್‌ರವರು ಅಧ್ಯಕ್ಷತೆ ವಹಿಸುವರು

ಈ ಸಂಜೆ ೭ ಗಂಟೆಗೆ ಕಬೀರ್ ರಸ್ತೆಯಲ್ಲಿರುವ ಶ್ರೀ ಪಾಂಡುರಂಗ ದೇವಸ್ಥಾನದಲ್ಲಿ ಏಕಾದಶಿ ಪ್ರಯುಕ್ತ ವಿ|| ಬಿ ಎಂ ಬಸವಣ್ಣನವರು *ಶಿವನೀಲಕಂಠರ್* ಎಂಬ ಹರಿಕಥೆಯನ್ನು ಮಾಡುವರು

ಗಣಪತಿ ವಾರ್ಷಿಕೋತ್ಸವ

ಸ್ವಂ ವ] ನಂಜನಗೂಡು ೨೯

ಇಲ್ಲಿನ ಜ್ಯೂಬಿಲಿ ಸಂಸ್ಕೃತ ಪಾಠಶಾಲೆಯಲ್ಲಿ ಮೊನ್ನೆ ವಿದ್ಯಾ ಗಣಪತಿಯ ವಾರ್ಷಿಕೋತ್ಸವವು ಸಬ್ ಡಿವಿಜನ್ ಅಧಿಕಾರಿಗಳಾದ ಶ್ರೀ ಬಿ ಸಿ ಚನ್ನರಾಜೆ ಅರಸರವರ ಅಧ್ಯಕ್ಷತೆಯಲ್ಲಿ ನಡೆಯಿತು ಅವರು ಭಾಷಣ ಮಾಡಿ ಪುರಾತನವಾದ ಸಂಸ್ಕೃತ ಭಾಷೆಯನ್ನು ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಅಭ್ಯಾಸ ಮಾಡಿ ನಾಡಿನ ಸಂಸ್ಕೃತಿಯನ್ನು ಉದ್ಧಾರ ಮಾಡಬೇಕೆಂದು ತಿಳಿಸಿದರು

ವಿದ್ಯಾರ್ಥಿಗಳಿಂದ ಸಂಸ್ಕೃತ ಭಾಷೆಯಲ್ಲಿ ವಿವಿಧ ವಿನೋದಾವಳಿಯು ಏರ್ಪಾಡಾಗಿತ್ತು ಕಾರ್ಯದರ್ಶಿ ಶ್ರೀ ವೆಂಕಟರಾಮಯ್ಯನವರು ವಾರ್ಷಿಕ ವರದಿಯನ್ನು ಒಪ್ಪಿಸಿ ಶಾಲೆಯು ೧೮೮೭ರಲ್ಲಿ ಸ್ಥಾಪಿತವಾಯಿತೆಂದು ತಿಳಿಸಿದರು ಸರ್ಕಾರದವರು ೮೦೦ ರೂ ಗ್ರ್ಯಾಂಟು ಕೊಡುತ್ತಾರೆಂದೂ, ಕಟ್ಟಡದ ರಿಪೇರಿ ಖರ್ಚಿಗೆ ಶ್ರೀ ಬಿ ವಿ ಪಂಡಿತರು ೧,೦೦೦ ರೂ ಮತ್ತು ದೀಪ ಹಾಕಿಸುವುದಕ್ಕೆ ಕೆಲವು ಮಹನೀಯರು ೧೦೦ ರೂ. ಕೊಟ್ಟಿದ್ದಾರೆಂದೂ ತಿಳಿಸಿದರು ಶ್ರೀ ಹೆಚ್ ಎಸ್ ವರದದೇಶಿಕಾಚಾರ್ಯರು 'ಮಹರ್ಷಿಗಳ ಮನೋಧರ್ಮ" ಎಂಬ ವಿಷಯವಾಗಿ ಉಪನ್ಯಾಸ ಮಾಡಿದರು ಶಾಲೆಯ ಆಚಾರ್ಯರಾದ ವೆಂಕಟರಮಣಾಚಾರ್ಯರಿಂದ ವಂದನಾರ್ಪಣೆ ಆದನಂತರ ಮಹಾ ಮಂಗಳಾರತಿ ನಡೆಯಿತು

ಕ್ರಮೇಣ ಮಾಟರ್‌ಗೇಜ್ ರೈಲುಗಳು ರದ್ದು

ರಾಜ್ಯದಲ್ಲಿ ಮಾಟರ್‌ಗೇಜು ರೈಲನ್ನು ಕ್ರಮೇಣ ರದ್ದುಗೊಳಿಸಲಾಗುವುದೆಂದು ರೈಲ್ವೆ ಬೋರ್ಡಿನ ಸದಸ್ಯ ಕೈಲಾಸ ಬಿಹಾರಿ ಮಾಥುರ್‌ರವರು ತಿಳಿಸುತ್ತಾರೆ

ಅಕ್ಟೋಬರ್ ೩ ರಂದು ೩ ಜಿಲ್ಲೆಗಳಲ್ಲಿ ಇನಾಂಗಳ ರದ್ದು

ಬರುವ ತಿಂಗಳು ೩ನೇ ತಾರೀಖಿನಿಂದ ಮೈಸೂರು ಮಂಡ್ಯ ಮತ್ತು ತುಮಕೂರು ಜಿಲ್ಲೆಗಳಲ್ಲಿ ಮೊದಲು ಇನಾಂಮುಗಳು ರದ್ದಾಗುವುವು

ನಗರದಲ್ಲಿ ಶಾಸನ ಸಭಾಧಿವೇಶನವಿಲ್ಲ

ಅಕ್ಟೋಬರ್ ೨ ನೇ ತಾರೀಖಿನಿಂದ ರಾಜಧಾನಿಯಲ್ಲಿ ನಡೆಸಬೇಕೆಂದು ಆಲೋಚಿಸಲಾಗಿದ್ದ ಶಾಸನಸಭಾಧಿವೇಶನವು ಸೇರುವುದಿಲ್ಲವೆಂದು ತಿಳಿದುಬಂದಿದೆ

ಶುಚಿ ಮತ್ತು ರುಚಿ!

ಬ್ರೆಡ್, ಬನ್ನು, ಬಿಸ್ಕತ್ತು ಮತ್ತು ನೀಲಗಿರಿ ಬಟರ್

ಮನೆಗಳಿಗೆ ಬ್ರೆಡ್ ಸಪ್ಲೈ ಮಾಡಲಾಗುತ್ತೆ

ಪ್ರತಿ ಭಾನುವಾರದ

ಸ್ಪೆಷಲ್ ಪೊಟಟೊ ಬ್ರೆಡ್

ಶ್ರೀ ಕೃಷ್ಣಾ ಬೇಕರಿ,

ಡಿ ಸುಬ್ಬಯ್ಯಾ ರೋಡ್, ಮೈಸೂರು

(ನಮ್ಮ ಅಂಗಡಿಯ ಶಾಖೆಯನ್ನು ಬೇರೆ ಎಲ್ಲೂ ತೆಗೆದಿಲ್ಲ)

Prof: DEVAL'S CIRCUS

ಪ್ರೊ|| ದೇವಾಲ್ಸ್ ಸರ್ಕಸ್

ಜೀವಣ್ಣರಾಯನ ಕಟ್ಟೆಯಲ್ಲಿ ಹಾಕಿರುವ ಡೇರಾದಲ್ಲಿ

6-10-56ನೇ ಶನಿವಾರ ರಾತ್ರಿ 9ಕ್ಕೆ ಅಮೋಘ ಪ್ರಾರಂಭ

7—10—56 ರಿಂದ ಪ್ರತಿ ದಿನ ಮೂರು ಪ್ರದರ್ಶನಗಳು

ಮಧ್ಯಾಹ್ನ 3 ಗಂಟೆಗೆ, ಸಂಜೆ 6-30 ಮತ್ತು ರಾತ್ರಿ 9-30ಕ್ಕೆ



ಹಿಂದುಳಿದ ಪಂಗಡದ ... ಮೂಲೆ ಪಾಲು

ಹಿಂದುಳಿದ ಪಂಗಡಗಳ ಸಮಿತಿ ... ನ್ನು ಭಾರತ ಸರ್ಕಾರದವರು ಮೂಲೆಗೊ... ರೆಂದೂ, ಈ ವಿಚಾರವನ್ನು ಸಮಿತಿ... ಯಾಗಿ ಪರಿಶೀಲಿಸಬೇಕಾಗಿರುವುದರಿಂದ ... ಯನ್ನು ಪುನಃ ಹೊಸದಾಗಿ ಸರ್ಕಾರದ... ಮರ್ಶಿಸುವರೆಂದೂ ವರದಿ ಬಾಗಿದೆ. ಹಿಂ... ಪಂಗಡ ಎಂಬುದನ್ನು ನಿರ್ದಿಷ್ಟಗೊಳಿ... ಜೇಲಿ ಹಿಂದುಳಿದವರಿಗೆ, ಹಣಕಾಸು ... ಇತರ ವಿಧವಾದ ಸಹಾಯ ನೀಡಲು ... ಸರ್ಕಾರದವರು ಸಂಸ್ಥಾನ ಸರ್ಕಾರ... ಚಣೆ ನಡೆಸಲಿರುವರು ಸಮಿತಿಯ... ಪ್ರಕಾರ ದೇಶದ ಮೂರನೇ ಎರಡು ... ನರು ಹಿಂದುಳಿದವರಾಗಿರುವರು ಅಲ್ಲ... ಹಲವು ಸೂಚನೆಗಳು ದೇಶದ ಐಕ್ಯತೆ... ವನೆಗೆ ವಿರೋಧವಾಗಿರುವುವೆಂದು ಹೇ...

ಗಣಪತಿ ಮಂಗಳಾರತಿ

ಹಳೇ ಅಗ್ರಹಾರದ ಸಾಪಲಿ ಬೀದಿ... ವ ಕಿರಿಯ ತರುಣರ ಆಶ್ರಯದಲ್ಲಿ ... ೬|| ಗಂಟೆಗೆ ವಿದ್ಯಾ ಗಣಪತಿ ಮಂಗಳಾ... ನ್ನು ಏರ್ಪಡಿಸಲಾಗಿದೆ ಶಾರದಾವಿಲಾ... ಲೇಜಿನ ಕನ್ನಡ ಪ್ರಾಧ್ಯಾಪಕರಾದ ಶ್ರೀ... ಎಂ ಶಂಕರನಾರಾಯಣರಾಯರು ... ಮಾಡುವರು ಶ್ರೀ ಸಿ ಕೃಷ್ಣಮೂರ್ತಿ... ವೀಣಾ ವಾದನವು ನಡೆಯುವುದು

ವಸ್ತು ಪ್ರದರ್ಶನದಲ್ಲಿ ಮಕ್ಕಳ ದಿನ...

ದಸರಾ ವಸ್ತು ಪ್ರದರ್ಶನದ ಅಂಗವಾ... ದಿನಂತೆ ಮಕ್ಕಳ ದಿನಾಚರಣೆಯನ್ನು ... ಲಾಗುವುದು ಭಾಗವಹಿಸಲಿಚ್ಛಿಸುವ ... ಕರುಗಳು ಮತ್ತು ಮಕ್ಕಳ ಕೂಟದವರು ... ೩ನೇ ತಾರೀಕಿನೊಳಗೆ ಪ್ರದರ್ಶನದ ಸ... ಯರ್ದರ್ಶಿಯವರಿಗೆ ತಿಳಿಸುವಂತೆ ಸೂ... ಗಿದೆ

ಸ್ಕೌಟು ದಳದ ಆರಂಭ ಭಾಷ...

ರಾಜಧಾನಿಯಲ್ಲಿರುವ ಶ್ರೀ ಶಿವರಾ... ಕ್ಷೇತ್ರಶಾಲಾ ಸ್ಕೌಟು ದಳದ ಆರಂಭ... ವನ್ನು ಶಾಲಾ ಮುಖ್ಯೋಪಾಧ್ಯಾಯ... ಎ ಟಿ ಕೃಷ್ಣನವರ ಅಧ್ಯಕ್ಷತೆಯಲ್ಲಿ ನೆ... ಬಿ ಟಿ ಶ್ರೀನಿವಾಸಯ್ಯಂಗಾರ್ಯರು ಮಾ... ಸ್ಕೌಟ್ ಮಾಸ್ಟರ್ ಶ್ರೀ ಎಸ್. ಆರ್ ... ರಾಜರವರು ವಂದನಾರ್ಪಣೆ ಮಾಡಿ...

ಜೀವನದ ಹರ್ಷವನ್ನು ಸವಿ...

ಹಿಂದರಿಗೆ ತಾರುಣ್ಯ !

ವೃದ್ಧರಿಗೆ ಯೌವನ !!

ಯುವಕರಿಗೆ ಅಸಮಾನ ...

ಆರೋಗ್ಯ, ಐಶ್ವರ್ಯ, ದೇಹದಾರ್ಢ್ಯ... ಲವಲವಿಕೆಯನ್ನು ಹೊಂದಿ ದೀರ್ಘ ... ಲ್ಲಾ ಆನಂದಗಳನ್ನೂ ಅನುಭವಿಸಬೇ... ಹೊನವರ ಸುಪುತ್ರರವಾದ ... ಅನೇಕ ಭಾಗಗಳಲ್ಲಿರುವ ಕೆಟ್ಟುಹೋದ ... ಸಂತಪ್ತ, ಅಪಾಶ ಶಕ್ತಿಯ ಅಭಾವ, ... ಕು, ಸ್ವಪ್ನಸ್ಖಲನ, ಮೂಲವ್ಯಾಧಿ, ... ಬರ್ಲ್ಯ. ಸಿಫ್ಲಿಸ್, ಗೊನೋರಿಯಾ, ... ಯು, ಅಂಡ ವಾಯು ಎಲ್ಲ ವಿಧವಾದ ... ಮೂತ್ರ ರೋಗಗಳಿಗೂ ... ಇವುಗಳನ್ನು ಕೂಡಲೇ ಗುಣಪಡಿಸಲು ... ಪರಾಗಿರುವ ಡಾ|| ರಾಜಾರಾವರನ್ನು (... ವೀಲು) ಪ್ರತಿದಿನ ಬೆಳಿಗ್ಗೆ 8 ರಿಂದ 12 ... ಧ್ಯಾಹ್ನ 4 ರಿಂದ 8ರ ವರೆಗೆ ಭೇಟಿ ಮಾ... ರು ಶ್ರೀ ಧರುಷರಿಬ್ಬರ ಗುಪ್ತ ... ವಾಯಲಿಗೆಳಿಗೂ ಪ್ರತ್ಯೇಕ ಚಿಕಿತ್ಸೆ... ಹುಡರು ಪೂರಕ್ಕೆ ನೂರು ... ವುದು

ಅವರ ಸಲಹೆ ಪಡೆಯುವುದರಿಂದ ... ಸವನ್ನು ಪಡೆದಂತೆಯೇ ಚಿಕಿತ್ಸೆಗಳನ್ನು ... ದಲಾಗುವುದು ಕೆಳಗಿನ ವಿಳಾಸದಲ್ಲಿ ... ವಿರಿ —

ರಾಜಾ ಮೆಡಿಕಲ್ ಹಾ...

ರಿ ನ್ ನಂ 1-740 ಅರೋಗ್ಯ...

(ಮೈಸೂರು ಬ್ಯಾಂಕ್ ಬಳಿ ... ಮೂರನೇ ಕಟ್ಟಡ)

ಮೈಸೂರು